ಡಾ. ಎಂ. ಎಂ. ಕಲಬುರ್ಗಿ
ಸಮಗ್ರ ಸಾಹಿತ್ಯ

ಸಂಪುಟ ೩೦

ಜೀವನ ಚರಿತ್ರೆ ಸಾಹಿತ್ಯ : ಭಾಗ-೨



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ–೩೦ : ಜೀವನ ಚರಿತ್ರೆ ಸಾಹಿತ್ಯ : ಭಾಗ–೨

❖

• ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ : ಸಂಪುಟ – ೨

ಭಾಗ : ಒಂದು

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

❖

ಸಂಪಾದಕರು

ಡಾ. ಮಲ್ಲಿಕಾರ್ಜುನ ಮೇತ್ರಿ

ವಿಜಯಪುರ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೨೦

COMPLETE WORK OF DR. M.M.KALBURGI
VOLUME - 30 : JEEVAN CHARITRE SAHITY : BHAGA-2
Edited by : Dr. Mallikarjun Metri, Vijayapur

Published by : Dr. P.G. Halakatti Research Centre
B.L.D.E. Association, Vijayapur, Karnatak

©

First Edition : 2020
Pages : xl +678=718

Copies: 1000
Price Rs: 450/-

❖❖

Cover page design : K.K. Makali, Hampi.
Type set : Dr. Hanumanth Melinamani, Dr. Sarsawatidevi Bhagawati, Dharwad.
Printer : The PrintPoint, No. 9/8 6th Cross, 4th Main, Rajajinagar, Industrial Town, Bangalore-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೩೦-ಜೀವನ ಚರಿತ್ರೆ ಸಾಹಿತ್ಯ : ಭಾಗ-೨

ಸಂಪಾದಕರು : ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ: ೨೦೨೦
ಪುಟಗಳು: xl + ೬೭೮=೭೧೮

ಪ್ರತಿಗಳು: ೧೦೦೦
ಬೆಲೆ ರೂ: ೪೫೦/-

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ: ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಧಾರವಾಡ
ಮುದ್ರಣ: **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು-೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸಲಹಾ ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

ಡಾ. ಗುರುಲಿಂಗ ಕಾಪಸೆ, ಧಾರವಾಡ

ಡಾ. ವೀರಣ್ಣ ರಾಜೂರ, ಧಾರವಾಡ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

ಡಾ. ಬಿ.ವ್ಹಿ. ಶಿರೂರ, ಹುಬ್ಬಳ್ಳಿ

ಡಾ. ಎಂ.ಎಸ್. ಮದಭಾವಿ, ವಿಜಯಪುರ

ಡಾ. ಎಸ್.ಕೆ. ಕೊಪ್ಪಾ, ಇಂಡಿ

ಡಾ. ಗುರುಪಾದ ಮರಿಗುದ್ದಿ, ಸಂಕೇಶ್ವರ

ಡಾ. ಕೆ. ರವೀಂದ್ರನಾಥ, ಹಂಪಿ

ಡಾ. ಎಫ್. ಟಿ. ಹಳ್ಳಿಕೇರಿ, ಹಂಪಿ

ಡಾ. ವಿ. ಎಸ್. ಮಾಳಿ, ಹಾರೂಗೇರಿ

ಡಾ. ಪಿ. ಕೆ. ರಾಠೋಡ, ಧಾರವಾಡ

ಡಾ. ಮಲ್ಲಿಕಾರ್ಜುನ ಮೇತ್ರಿ, ವಿಜಯಪುರ

ಶ್ರೀ ಶಶಿಧರ ತೋಡ್ಕರ, ಧಾರವಾಡ

ಡಾ. ವಿ. ಡಿ. ಐಹೊಳ್ಳಿ, ವಿಜಯಪುರ

ಡಾ. ಸರಸ್ವತಿದೇವಿ ಭಗವತಿ, ಧಾರವಾಡ

ಡಾ. ಹನುಮಂತ ಮೇಲಿನಮನಿ, ಧಾರವಾಡ

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ. ಎಂ. ಎಂ. ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ(ತಾ. ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ

ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು

ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೂಡಲಸಂಗಮ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟೀಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ-ನಡುಗನ್ನಡ-ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು-ನುಡಿ-ಸಂಸ್ಕೃತಿ-ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ-ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ-ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ-ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ

ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ' ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು, ವ್ಯಾಖ್ಯಾನಮುಖಿ

ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೭ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ,

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ–೧, ೧೮. ಶಾಸನ ವ್ಯಾಸಂಗ–೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ–ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):

ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ್ಧ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ–೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ–೨, ೯೧. ಬಸವ ಮಾರ್ಗ–೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧–೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ–೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು–ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ–ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದು ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ–ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್. ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ

ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಶ್ರೀ ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣಕೊಲ್ಹಾರ ಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ಹೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ–ವರದಿಗಳು, ಆಡಿಯೋ–ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ **–ಸಂ. ಡಾ. ಎಸ್.ಕೆ. ಕೊಪ್ಪಾ**

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ **–ಸಂ. ಶಶಿಧರ ತೋಡ್ಕರ**

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ

೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ನೀರು ನೀರಡಿಸಿತ್ತು (ಕವನ ಸಂಕಲನ)

೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)

೩. ಕೆಟ್ಟಿತ್ತು ಕಲ್ಯಾಣ (ನಾಟಕ)

೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)

೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ **–ಸಂ. ಡಾ. ಎಸ್. ಕೆ. ಕೊಪ್ಪಾ**

೧. ಶಾಸನ ಸಂಪದ

೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ

೪. ಧಾರವಾಡ ತಾಲೂಕಿನ ಶಾಸನಗಳು

೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ **–ಸಂ. ಡಾ. ಪಂಡಿತ ರಾಠೋಡ**

೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ **–ಸಂ. ಡಾ. ಪಂಡಿತ ರಾಠೋಡ**

೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ

೨. ವಚನ ಸಾಹಿತ್ಯ ಆಕರ ಕೋಶ

೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ **–ಸಂ. ಡಾ. ವೀರಣ್ಣ ರಾಜೂರ**

೧. ಬಸವಸ್ತೋತ್ರದ ವಚನಗಳು

೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಲಿಂಗ ಕಾಪಸೆ**

೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ

೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ **–ಸಂ. ಡಾ. ವೀರಣ್ಣ ರಾಜೂರ**

೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ **–ಸಂ. ಡಾ. ವೀರಣ್ಣ ರಾಜೂರ**

೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ **–ಸಂ. ಡಾ. ವೀರಣ್ಣ ರಾಜೂರ**

೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ **–ಸಂ. ಡಾ. ವೀರಣ್ಣ ರಾಜೂರ**

೧. ಪರಮಾನಂದ ಸುಧೆ

೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ
೨. ಶಬ್ದಮಣಿದರ್ಪಣ ಸಂಗ್ರಹ
೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ
೪. ಆದಯ್ಯನ ಲಘುಕೃತಿಗಳು
೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ
೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ
೨. ಸಿದ್ಧಮಂಕ ಚರಿತೆ
೩. ಗುಂಡಬಸವೇಶ್ವರ ಪುರಾಣ
೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ **–ಸಂ. ಡಾ. ಹನುಮಂತ ಮೇಲಿನಮನಿ**

೧. ಹೊಸಕುಮಾರರಾಮನ ಸಾಂಗತ್ಯ
೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ **–ಸಂ. ಡಾ. ಹನುಮಂತ ಮೇಲಿನಮನಿ**

೧. ಕೊಮಾರ ರಾಮಯ್ಯನ ಚರಿತ್ರೆ
೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ **–ಸಂ. ಡಾ. ಸರಸ್ವತಿದೇವಿ ಭಗವತಿ**

೧. ಸಿರುಮಣ ನಾಯಕನ ಸಾಂಗತ್ಯ
೨. ಸಿರುಮನ ಚರಿತೆ
೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ
ಮಂಜಪ್ಪ, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ

೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು(ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ

ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ

ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ **–ಸಂ. ಡಾ. ಕೆ. ರವೀಂದ್ರನಾಥ**
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ **–ಸಂ. ಡಾ. ಕೆ. ರವೀಂದ್ರನಾಥ**
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ **–ಸಂ. ಡಾ. ಕೆ. ರವೀಂದ್ರನಾಥ**
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಚಿತ್ರ **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಪತ್ರ–ವರದಿಗಳು **–ಡಾ. ವಿ.ಡಿ. ಐಹೊಳ್ಳಿ**

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ **–ಸಂ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ**
ಆಡಿಯೋ–ವಿಡಿಯೋ **–ಡಾ. ವಿ.ಡಿ. ಐಹೊಳ್ಳಿ**

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು, ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು–ಪುನರುಕ್ತಿಕಾರಣವಾಗಿ– ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ

ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು–ಅವು ಆಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ–ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು–ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು–ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ–ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ–ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ–ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು

ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ ಸಹಾಯ ಮಾಡಿದವರು ಕನ್ನಡ ಮತ್ತು ಸಂಸ್ಕೃತಿ ಖಾತೆಯ ಸಚಿವರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ

ಮಾನ್ಯ ಶ್ರೀ ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ-ವಿಶ್ವಾಸ-ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಶ್ರೀ ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಹಾಗೂ ಈ ಯೋಜನೆಯ ಕಾರ್ಯದರ್ಶಿಗಳಾದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ-ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ-ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಬಿ.ಸಿ. ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ

ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಮಲ್ಲಿಕಾರ್ಜುನ ಮೇತ್ರಿ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಮಲ್ಲಿಕಾರ್ಜುನ ಮೇತ್ರಿ

ಹಲವು ಶಕ್ತಿಗಳ ಸಂಗಮವಾಗಿದ್ದ ಡಾ. ಎಂ. ಎಂ. ಕಲಬುರ್ಗಿಯವರದು ಶ್ರೇಷ್ಠ ಸಾಧನೆ. ಕನ್ನಡ ನಾಡಿಗೆ ಅವರ ಕೊಡುಗೆ ಅಪಾರ. ಅಪರೂಪರಲ್ಲಿ ಅಪರೂಪರಾಗಿದ್ದ ಅವರು ಶ್ರೇಷ್ಠ ಸಂಶೋಧಕರಾಗಿ, ಸಂಪಾದಕರಾಗಿ, ಹತ್ತಾರು ಸಂಸ್ಥೆಗಳ ಮಾರ್ಗದರ್ಶಕರಾಗಿ ಮಾಡಿದ ಕಾರ್ಯಗಳು **"ಕಲಬುರ್ಗಿ ಕಾರ್ಯ"** ಎಂದು ಬೆರಳು ಮಾಡಿ ಸದಾ ದಿಕ್ಸೂಚಿಯಾಗುವಂಥವುಗಳು. ಇದನ್ನು ನಾವು **"ಕಲಬುರ್ಗಿ ಮಾರ್ಗ"** ಎನ್ನುವಷ್ಟು ಥಾಳವಾದ ಬೆಳಕು ಅಲ್ಲಿದೆ. ಶಾಸ್ತ್ರ ನೆಲೆ ದಾಟಿ ವೈಜ್ಞಾನಿಕತೆಗೆ ಸಾಗುವ, ವರ್ತಮಾನಕ್ಕೆ ಸಂವಾದಿಯಾಗಿ ಉತ್ತರಿಸುವ ಉತ್ತಮ ಬರಹಗಳು ಅವರಿಂದ ನಾಡಿಗೆ ದೊರೆತಿವೆ. ತಾವು ದುಡಿಯುತ್ತ, ಇತರರನ್ನು ದುಡಿಸುವ ಗುರುಗಳು ಅವರಾಗಿದ್ದರು. ಶಿಸ್ತುಬದ್ಧಜೀವನ, ಕರುಳು-ಬಳ್ಳಿ ಕಕ್ಕುಲಾತಿ ಚಿರಂತನ. ಸಮಾಜಮುಖಿಯಾಗಿ ಸದಾ ಚಿಂತನಶೀಲರಾಗಿದ್ದ ಕಲಬುರ್ಗಿ ಗುರುಗಳು ಅರ್ಪಣಾ ಭಾವದಿಂದ ಸಮಾಜ-ಸಾಹಿತ್ಯಕ್ಕೆ ದುಡಿದು ಮರೆಯಾದವರನ್ನು "ಮರೆಯದ ಮಾಣಿಕ್ಯ"ವೆಂದು ತಿಳಿಯುತ್ತಿದ್ದರು. ಅವರ ಕುರಿತಾದ ಕಾರ್ಯ ನಾವು ಮಾಡದೆ ಹೋದರೆ ಅನ್ಯಾಯವೆಂಬ ಭಾವನೆ ಅವರದಾಗಿತ್ತು. ಈ ಆಶಯದ ನೆರಳಿನಲ್ಲಿ ಫ. ಗು. ಹಳಕಟ್ಟಿ, ಹರ್ಡೇಕರ ಮಂಜಪ್ಪ, ಸಿರಸಂಗಿ ಲಿಂಗರಾಜ, ಶಿ. ಶಿ. ಬಸವನಾಳ, ವಾರದ ಮಲ್ಲಪ್ಪ, ಅರಟಾಳ ರುದ್ರಗೌಡರು, ಹಾಲಭಾವಿ ವೀರಭದ್ರಪ್ಪ ಮುಂತಾದವರು ಪ್ರಮುಖರಾಗಿ ನಿಲ್ಲುತ್ತಾರೆ. ಇವರೆಲ್ಲ ಕನ್ನಡ ನಾಡಿನ ಪುಣ್ಯಪುರುಷರು.

ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರ ಕುರಿತಾಗಿ ಅಪಾರ ಗೌರವ ಹೊಂದಿದ್ದ ಡಾ. ಕಲಬುರ್ಗಿಯವರು ಮಂಜಪ್ಪನವರನ್ನು "ಹಣೆಯ ಮೇಲೆ ಬಸವ ಪ್ರಜ್ಞೆ-ಮೈಮೇಲೆ ಗಾಂಧಿಪ್ರಜ್ಞೆಗಳನ್ನು ಸಂಕೇತಿಸುವಂತೆ ವಿಭೂತಿ-ಖಾದಿ ವಿಭೂಷಿತರಾಗಿ ಬಾಳಿದವರು" ಎಂದು ತಿಳಿಸುತ್ತಾರೆ. ಮಂಜಪ್ಪನವರ ಕುರಿತಾಗಿ ಉನ್ನತ ಸಂಶೋಧನೆ ನಾನು ಮಾಡುವ ಸಂದರ್ಭದಲ್ಲಿ ಹಲವು ರೀತಿಯಲ್ಲಿ ಮಾರ್ಗದರ್ಶನ ಮಾಡಿದವರು ಡಾ. ಕಲಬುರ್ಗಿಯವರು. 'ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ' ಗೌರವ ಗ್ರಂಥ ಸಿದ್ಧಪಡಿಸುವ ಸಂದರ್ಭದಲ್ಲಿ ಮಂಜಪ್ಪನವರ ಸಮಗ್ರ ಸಾಹಿತ್ಯದ ಎರಡನೆಯ ಸಂಪುಟ ತರುವ ವಿಚಾರ ಹೊಳೆದು ಮಂಜಪ್ಪನವರ ಕೃತಿಗಳನ್ನು ಶೋಧಿಸತೊಡಗಿದರು. ಗ.ಸ. ಹಾಲಪ್ಪನವರು ಸಂಪಾದಿಸಿದ ಮೊದಲ ಸಂಪುಟದಿಂದ ಹೊರಗುಳಿದ

ಹಲವು ಕೃತಿಗಳು ಅವರಿಗೆ ದೊರೆತವು. ನಾನು ಪಿಎಚ್.ಡಿ. ಮಾಡುವ ಸಂದರ್ಭದಲ್ಲಿ ನನ್ನಿಂದಲು ಶೋಧ ಕಾರ್ಯ ಮಾಡಿಸಿದರು. ನನಗೂ ಕೂಡ ಮೊದಲ ಸಂಪುಟದಿಂದ ಹೊರಗುಳಿದ ಕೆಲವು ಕೃತಿಗಳು, ವಾರ್ಷಿಕ ಸಂಚಿಕೆಗಳು ದೊರೆತವು. ಗುರುಗಳು ಹಾಗೂ ನಾನು ಶೋಧಿಸಿದ ಒಟ್ಟು ಮಂಜಪ್ಪನವರ ಕೃತಿಗಳನ್ನು ಜೋಡಿಸಿ **"ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ – ೨"** ಕೃತಿಯನ್ನು ಸಂಪಾದಿಸಿ ಪ್ರಕಟಗೊಳಿಸಲಾಯಿತು. ಗುರುಗಳೊಂದಿಗೆ ಈ ಕೃತಿಯ ಸಂಪಾದಕನಾಗಿ ಕಾರ್ಯಮಾಡುವ ಅವಕಾಶ ಬಂದುದು ನನ್ನ ಬದುಕಿನ ಭಾಗ್ಯ.

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಗೊಳ್ಳುವ ಈ ಸಂದರ್ಭದಲ್ಲಿ ಈ ಸಂಪುಟ ಮತ್ತೆ ಬೆಳಕು ಕಾಣುತ್ತಿರುವದು ಸಂತಸದ ಸಂಗತಿ. ಗುರುಗಳು ಇಲ್ಲದೆ ಇರುವದು ನೋವಿನ ಸಂಗತಿ. ಅವರಿದ್ದಿದ್ದರೆ ಆ ಮಾತು ಧ್ವನಿಸುತ್ತಲೇ ಇರುತ್ತದೆ...... ಈ ದುಃಖದ ಮಧ್ಯದಲ್ಲಿ ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ – ೨ ಕೃತಿಯನ್ನು ಭಾಗ : ೧ ಮತ್ತು ಭಾಗ : ೨ ಎಂದು ವಿಭಾಗಿಸಿ ಪ್ರಕಟಗೊಳಿಸಲಾಗುತ್ತಿದೆ. ಇದರ ಮೊದಲ ಭಾಗದಲ್ಲಿ ಮಂಜಪ್ಪನವರ ಆತ್ಮಚರಿತ್ರೆ, ರಾಷ್ಟ್ರೀಯ ಸಾಹಿತ್ಯ ಕೃತಿಗಳು, ಸಾಮಾಜಿಕ ಸಾಹಿತ್ಯ ಕೃತಿಗಳು ಹಾಗೂ ಮಕ್ಕಳ ಸಾಹಿತ್ಯ ಕೃತಿಗಳನ್ನು ಸೇರ್ಪಡಿಸಲಾಗಿದೆ. ಇದರ ಎರಡನೆಯ ಭಾಗದಲ್ಲಿ ಸೃಜನ ಹಾಗೂ ಸಂಪಾದನ ಸಾಹಿತ್ಯ ಕೃತಿಗಳು ಅನುಬಂಧ–೧ ವಾರ್ಷಿಕ ವಿಶೇಷ ಸಂಚಿಕೆಗಳು ಹಾಗೂ ಅನುಬಂಧ–೨ ಹಾಗೂ ೩ ನ್ನು ಸೇರ್ಪಡಿಸಲಾಗಿದೆ.

ಕರ್ನಾಟಕ ಗಾಂಧಿ, ನಿರಂಜನ ಶರಣ, ರಾಷ್ಟ್ರಧರ್ಮದ್ರಷ್ಟಾರ, ಖಾದಿ ಪಿತಾಮಹ, ನ್ಯಾಯ ನಿಷ್ಠುರಿ, ಬಸವ ಅನುಯಾಯಿ ಹೀಗೆ ಏನೆಲ್ಲ ಅನ್ವಯಿಕಗಳಿಗೆ ಬದ್ಧವಾದ ವ್ಯಕ್ತಿತ್ವ ಹೊಂದಿದ ಹರ್ಡೇಕರ ಮಂಜಪ್ಪನವರು ಕರ್ನಾಟಕದ ಐತಿಹಾಸಿಕ ಪುರುಷರಲ್ಲಿ ಅಗ್ರಗಣ್ಯರು. "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಎಂಬ ಹೆಸರಿನ ತಮ್ಮ ಆತ್ಮಕಥೆ ಬರೆಯುವ ಮೂಲಕ ಕನ್ನಡದಲ್ಲಿ ಆತ್ಮಕಥೆ ಬರಹಗಳಿಗೆ ಶ್ರೀಕಾರ ಹಾಕಿದವರು ಹರ್ಡೇಕರ ಮಂಜಪ್ಪನವರು. ಈ ಕಾರಣವೇ ಇವರನ್ನು ಕನ್ನಡ ಆತ್ಮಕಥೆ ಸಾಹಿತ್ಯದ ಆದ್ಯರೆಂದು ಕರೆಯಲಾಗುತ್ತದೆ. ಇದು ಕನ್ನಡ ನಾಡಿನ ಒಂದು ಕಾಲಘಟ್ಟದ ಇತಿಹಾಸದ ಕಥನದಂತೆ ಚಿತ್ರಿಸಲಾಗಿದೆ. ಮಂಜಪ್ಪನವರನ್ನು ಕುರಿತು ಡಾ. ಕಲಬುರ್ಗಿಯವರು "ಮಂಜಪ್ಪನವರು ಒಬ್ಬ ವ್ಯಕ್ತಿಯಲ್ಲ, ಒಂದು ತತ್ವ, ಧೋರಣೆಯಲ್ಲಿ ಬಸವಣ್ಣನವರಷ್ಟು ಪ್ರಾಚೀನ, ಗಾಂಧೀಜಿಯವರಷ್ಟು ಆಧುನಿಕರಾಗಿದ್ದ ಅವರು ಏಕಕಾಲಕ್ಕೆ ಲಿಂಗಾಯತನೂ ಭಾರತೀಯನೂ ಆಗುವದು ಹೇಗೆ? ಎಂಬುದನ್ನು ಬದುಕಿ ತೋರಿದವರು" ಎಂದು ತಿಳಿಸುವ ಮೂಲಕ ಮಂಜಪ್ಪನವರ ವ್ಯಕ್ತಿತ್ವದ ದರ್ಶನ ಮಾಡಿಸುತ್ತಾರೆ. ಹೌದು ಮಂಜಪ್ಪನವರು ರಾಷ್ಟ್ರಧರ್ಮ ಹಾಗೂ ಶರಣ ಧರ್ಮದ ತಾತ್ವಿಕ ನೆರಳಲ್ಲಿ ಬದುಕಿ ನಾಡಿಗೆ ಕೊಡುಗೆ ನೀಡಿದವರು. ಬ್ರಹ್ಮಚಾರಿಗಳಾಗಿದ್ದುಕೊಂಡು ಸಮಾಜ ಸೇವೆ – ಸಾಹಿತ್ಯ ಸೇವೆ ಮಾಡಿದವರು. ಬನವಾಸಿಯಲ್ಲಿ ಜನಿಸಿ, ಶಿರಸಿಯಲ್ಲಿ ಮಾಸ್ತರರಾಗಿ, ದಾವಣಗೆರೆಯಲ್ಲಿ ಪತ್ರಿಕಾ ಮಾಧ್ಯಮದ ರೂವಾರಿಯಾಗಿ, ಸಂಪಾದಕರಾಗಿ, ಲೇಖಕರಾಗಿ ಬಾಳಿದವರು. ಮುಂದೆ ಕೃಷ್ಣಾತೀರದ ಆಲಮಟ್ಟಿಯಲ್ಲಿ ನೆಲೆನಿಂತು ವೀರಶೈವ ವಿದ್ಯಾಲಯದ ಸ್ಥಾಪಕರಾಗಿ, ಮುದ್ರಣಾಲಯದ ಸ್ಥಾಪಕರಾಗಿ ಮಾಡಿದ ಕೆಲಸಗಳು ವಿಶೇಷವಾಗಿವೆ.

ಮಂಜಪ್ಪನವರ ಆತ್ಮಕಥೆ ಓದುತ್ತ ನಡೆದಂತೆ ಭಾರತ ಸ್ವಾತಂತ್ರ್ಯ ಹೋರಾಟದ ಹೆಜ್ಜೆಗಳು ಕಾಣತೊಡಗುತ್ತವೆ. ಮಹಾತ್ಮಾಗಾಂಧೀಜಿಯವರನ್ನು ಆದರ್ಶವಾಗಿ ಹೊಂದಿದ ಮಂಜಪ್ಪನವರು ಅವರ ತತ್ವಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿದವರು. ಸತ್ಯಾಗ್ರಹದ ತತ್ವಗಳನ್ನು ತಪ್ಪದೆ ಪಾಲಿಸುತ್ತ ಕರ್ನಾಟಕದಲ್ಲಿ ಅವುಗಳ ಪ್ರಸಾರಕ್ಕೆ ದುಡಿದರು. ತೆರೆದಿಟ್ಟ ಪುಸ್ತಕದಂತೆ ತಮ್ಮ ಬದುಕಿನ ಪುಟಗಳನ್ನು ಆತ್ಮಕಥೆಯಲ್ಲಿ ಚಿತ್ರಿಸಿದ ಮಂಜಪ್ಪನವರು ಅಂದಿನ ಸಮಾಜದ ಆಗು ಹೋಗುಗಳನ್ನು, ಕರ್ನಾಟಕ ಇತಿಹಾಸದಲ್ಲಿ ನಡೆದ ಘಟನೆಗಳನ್ನು ಬರೆದಿದ್ದಾರೆ. ಇವರ ಆತ್ಮಕಥೆ ಸಮಕಾಲೀನ ಸಮಾಜದ ಚಿತ್ರಣ ತಿಳಿಸುವ ಮೂಲಕ ಮೌಲಿಕವಾಗುತ್ತದೆ.

ಬಸವಣ್ಣನವರ ಜೀವನ ಹಾಗೂ ತತ್ವಗಳಿಗೆ ಮಾರುಹೋದ ಮಂಜಪ್ಪನವರು ಬಸವತತ್ವಕ್ಕೆ ಅನುಸಾರಿಯಾಗಿ ಬಾಳಿನುದ್ದಕ್ಕೂ ಬದುಕಿದರು. ದಾವಣಗೆರೆಯಲ್ಲಿ ಇದ್ದಾಗ ಬಸವ ಜಯಂತಿಯನ್ನು ಆರಂಭಿಸಿದ ಇವರು ಶ್ರಾವಣಮಾಸ ಉಪನ್ಯಾಸಮಾಲೆ, ಅಕ್ಕನ ಜಯಂತಿ, ಭಜನಾ ಸಂಘ ಸ್ಥಾಪನೆ ಮುಂತಾದವುಗಳನ್ನು ಪ್ರಾರಂಭಿಸಿದರು. ಸಮಾಜದಲ್ಲಿ ಸಂಘಟನೆ ಇರಬೇಕೆಂದು ಬಯಸುತ್ತಿದ್ದ ಮಂಜಪ್ಪನವರು ವೀರಶೈವ ತರುಣ ಸಂಘ, ಖಾದಿ ಪ್ರಚಾರ ಸಂಘಗಳನ್ನು ಸ್ಥಾಪಿಸಿದರು. ಸ್ವತಃ ನಾಡಿನೆಲ್ಲೆಡೆ ಹಳ್ಳಿ – ಹಳ್ಳಿಗೆ ಹೋಗಿ ಶುದ್ಧ ಜೀವನ, ಶಿಕ್ಷಣದ ಮಹತ್ವ, ಗಾಂಧಿ ಹಾಗೂ ಬಸವತತ್ವಗಳನ್ನು ಪ್ರಚಾರ ಮಾಡಿ ಜನರಲ್ಲಿ ಜಾಗೃತಿ ಮೂಡಿಸಿದರು.

ವೈಯಕ್ತಿಕ ಬದುಕಿಗೆ ಏನನ್ನೂ ಬಯಸದ ಮಂಜಪ್ಪನವರು ಬದುಕಿನಲ್ಲಿ ನೋವನ್ನೇ ಹೆಚ್ಚು ಅನುಭವಿಸಿದವರು. ಸಾಮಾಜಿಕ ಕಾರ್ಯಗಳಿಗೆ ತಮ್ಮನ್ನು ಅರ್ಪಿಸಿಕೊಂಡ ಮಂಜಪ್ಪನವರು ತಮ್ಮ ಆತ್ಮಕಥೆಯಲ್ಲಿ ದಾವಣಗೆರೆಯಲ್ಲಿ ಇದ್ದಾಗಿನ ಒಂದು ಘಟನೆಯನ್ನು ಹೀಗೆ ವಿವರಿಸುತ್ತಾರೆ. "ಆಗ ನನಗೆ ಊಟಕ್ಕೆ ಕೂಡಾ ಅಭಾವ. ಶ್ರೀ ಬಾಳಪ್ಪನವರಿಂದಲೇ ಆಗಾಗ್ಗೆ ಒಂದೆರಡು ರೂಪಾಯಿಗಳನ್ನು ತೆಗೆದುಕೊಂಡು ಜೀವಿಸುತ್ತಿದ್ದೆನು. ಅವರನ್ನು ಕೇಳುವದು ಕೂಡಾ ತುಂಬ ಸಂಕೋಚ. ಯಾರು ಇಲ್ಲದಾಗ ಕೇಳುತ್ತಿದ್ದೇನು. ಒಂದು ದಿನ ಮಧ್ಯಾಹ್ನದವರೆಗೂ ಅಂಗಡಿಯಲ್ಲಿ ಕುಳಿತೆನು. ಅನೇಕರು ಅಂಗಡಿಯಲ್ಲಿದ್ದರು. ಶ್ರೀ ಬಾಳಪ್ಪನವರಲ್ಲಿ ರೂಪಾಯಿ ಕೇಳಲಾಗಲಿಲ್ಲ. ಆ ಹಿಂದಿನ ರಾತ್ರಿ ಊಟ ಇರಲಿಲ್ಲ. ಬಾಳಪ್ಪ ಊಟಕ್ಕೆ ಹೋದರು. ನಾನು ಬಹು ವ್ಯಸನದಿಂದ ಗುಡಿಸಲಿನ ಕಡೆಗೆ ಹೊರಟೆನು. ಅಲ್ಲಿ ಊಟಕ್ಕೇನೂ ಇರಲಿಲ್ಲ. ತುಂಬಾ ದುಃಖದಿಂದ ಹೋಗುತ್ತಿರುವಾಗ ದಾರಿಯಲ್ಲಿ ಅರ್ಧ ಆಣೆ ದೊರಕಿತು. ಆಗ ನನಗಾದ ಸಂತೋಷಕ್ಕೆ ಎಣೆ ಇಲ್ಲ. ನನ್ನ ಗುಡಸಲಿನ ಹತ್ತಿರವಿದ್ದ ಒಂದು ಚಿಕ್ಕ ಅಂಗಡಿಗೆ ಹೋಗಿ ಅರ್ಧಸೇರು ಜೋಳವನ್ನು ತೆಗೆದುಕೊಂಡು ಬೀಸಿಸಿ ಆ ದಿನ ರೊಟ್ಟಿಯ ಮೇಲೆಯೇ ಇದ್ದೆನು" ಎಂದು ತಿಳಿಸುವ ಈ ಸಂದರ್ಭ ಅವರು ಪಟ್ಟ ಕಷ್ಟಕ್ಕೆ ನಿದರ್ಶನವಾಗಿ ನಿಲ್ಲುತ್ತದೆ. ಇಂಥ ಹತ್ತಾರು ಘಟನೆಗಳ ಸಂಗಮವಾಗಿ ಇವರ ಆತ್ಮಕಥೆ ಇದೆ.

ಬೆಳಗಾವಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡ ಮಂಜಪ್ಪನವರು ಕನ್ನಡದಲ್ಲಿ ತಾವು ಬರೆದ **"ಬಸವ ಚರಿತೆ"** ಕೃತಿಯನ್ನು ಆಧರಿಸಿ ಲಕ್ಷ್ಮಣರಾವ ಭಿಡೆ ಎಂಬುವವರಿಂದ **"ಸತ್ಯಾಗ್ರಹಿ ಬಸವೇಶ್ವರ"** ಎಂಬ ಹೆಸರಿನಲ್ಲಿ ಕೃತಿಯನ್ನು ಹಿಂದಿ ಹಾಗೂ ಮರಾಠಿಯಲ್ಲಿ ಬರೆಯಿಸಿ

ಸಾಬೋಜಿ ಗಂಗಾಧರಪ್ಪನವರಿಂದ ಆರ್ಥಿಕ ಸಹಾಯ ಪಡೆದು ಪ್ರಕಟಗೊಳಿಸಿ ಗಾಂಧಿಜಿಯವರನ್ನೊಳಗೊಂಡಂತೆ ಅಧಿವೇಶನದಲ್ಲಿ ಪಾಲ್ಗೊಂಡ ಪರಪ್ರಾಂತದ ಪ್ರಮುಖರಿಗೆ ನೀಡಿದರು. ಆ ಮೂಲಕ ಬಸವಣ್ಣನವರ ತತ್ವಗಳೂ ಎಲ್ಲೆಡೆ ಪ್ರಸಾರಗೊಳ್ಳುವಂತೆ ಮಾಡಿದ ಕೀರ್ತಿ ಮಂಜಪ್ಪನವರಿಗೆ ಸಲ್ಲುತ್ತದೆ.

ಎಲ್ಲ ರೀತಿಯಿಂದಲೂ ಹಿಂದುಳಿದ ಕುಟುಂಬದಲ್ಲಿ ಜನಿಸಿದ ಮಂಜಪ್ಪನವರು ಸಾಮಾಜಿಕವಾಗಿ ನಿಂದೆಗೆ ಗುರಿಯಾದವರು. ಇದರಿಂದ ಖಿನ್ನತೆಗೆ ಒಳಗಾಗಿ ಮರುಗಿದವರು. ಪುನಶ್ಚೇತನ ಪಡೆದುಕೊಂಡು ಛಲ ಹಾಗೂ ಧೈರ್ಯದಿಂದ ಮುನ್ನುಗ್ಗಿ ಅವರು ಮಾಡಿದ ಸಾಧನೆ ಯಾರಿಗಾದರೂ ಬೆರಗನ್ನು ಮೂಡಿಸುತ್ತದೆ. ಬದುಕಿನಲ್ಲಿ ಯಾವ ಫಲಾಪೇಕ್ಷೆ ಹೊಂದದೆ ಸದಾ ಸಮಾಜಮುಖಿಯಾಗಿ ಕೆಲಸ ಮಾಡಿದ ಮಂಜಪ್ಪನವರು – "ಮನುಷ್ಯ ತನ್ನ ಸಹಜವಾದ ಗುಣಸ್ವಭಾವಗಳನ್ನು ಅನುಸರಿಸಿ ಕಾರ್ಯ ಮಾಡಬೇಕೇ ವಿನಃ ಜನಾನುರಾಗ ಪ್ರಾಪ್ತಿಗಾಗಿ ತನಗೆ ಸಹಜವಲ್ಲದ ಕಾರ್ಯಗಳನ್ನು ಮಾಡುವದು ವಿಹಿತವಲ್ಲ" ಎಂಬ ನಿಲುವನ್ನು ಹೊಂದಿದವರಾಗಿದ್ದರು. ನ್ಯಾಯ ನಿಷ್ಠುರರಾಗಿ ತತ್ವಬದ್ಧರಾಗಿ, ಸಮಯಕ್ಕೆ ಮೌಲ್ಯ ಒದಗಿಸಿ ಕಾರ್ಯ ಮಾಡಿದರು. ಇದರಿಂದಾಗಿಯೇ ರಾಷ್ಟ್ರೀಯ, ಸಾಮಾಜಿಕವಾದ ಹತ್ತಾರು ಕಾರ್ಯಮಾಡಲು, ಕೃತಿಗಳನ್ನು ರಚಿಸಲು ಅವರಿಗೆ ಸಾಧ್ಯವಾಯಿತು.

೧೯೩೭ರಲ್ಲಿ ಪ್ರಕಟಗೊಂಡ ಮಂಜಪ್ಪನವರ ಆತ್ಮಕಥೆ ಕೃತಿ ಅವರ ಬದುಕಿನ ೧೯೦೬ ರಿಂದ ೧೯೩೬ರ ವರೆಗಿನ ೩೦ ವರುಷಗಳ ಚಿತ್ರಣವನ್ನು ಒಳಗೊಂಡಿದೆ. ಇದರ ಮುಂದುವರಿದ ಭಾಗವನ್ನು ಶ್ರೀ ಯಲಗೂರೇಶ ಸಂಕನಾಳ ಬರೆದಿದ್ದಾರೆ. ಈ ಕಥನ ೧೯೩೭ ರಿಂದ ಮಂಜಪ್ಪನವರ ನಿಧನದ (೩ ಜನೇವರಿ ೧೯೪೭) ವರೆಗೆ ಇದೆ. ಯಲಗೂರೇಶ ಸಂಕನಾಳ ಅವರು ಇದನ್ನು ಶ್ರೀ ಮಹಾಂತಪ್ಪ ರುದ್ರಪ್ಪ ಬಳ್ಳೊಳ್ಳಿ, ಸಾ. ಆಲಮಟ್ಟಿ, ಮಂಜಪ್ಪನವರ ಸಂಪಾದಕತ್ವದಲ್ಲಿ ಬರುತ್ತಿದ್ದ 'ಶರಣ ಸಂದೇಶ' ಪತ್ರಿಕೆಗಳ ವಿವಿಧ ಸಂಚಿಕೆಗಳ ಸಹಾಯದಿಂದ ರಚಿಸಿದ್ದಾರೆ. ಮಂಜಪ್ಪನವರ ಬದುಕಿನ ಕೊನೆಯ ದಶಕದ ಕಥೆಯನ್ನು ಇದು ಸಾದರಪಡಿಸುತ್ತದೆ.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬದುಕಿದ ಮಂಜಪ್ಪನವರು ದೇಶ ಸ್ವತಂತ್ರವಾಗಬೇಕೆಂಬ ಹಿರಿಯಾಸೆ ಹೊಂದಿದ್ದರು. ಈ ಕಾಲದಲ್ಲಿ ಅವರು ರಾಷ್ಟ್ರಕಾರ್ಯವನ್ನು, ಸಮಾಜ ಕಾರ್ಯವನ್ನು, ಸಾಹಿತ್ಯ ಕಾರ್ಯವನ್ನು ಹತ್ತಾರು ಸಂಕಷ್ಟಗಳ ಮಧ್ಯದಲ್ಲಿ ಮಾಡಿದರು. ಸ್ಥಿತಪ್ರಜ್ಞರಾಗಿದ್ದ ಮಂಜಪ್ಪನವರು ಮಾನ – ಸನ್ಮಾನಗಳು ದೊರೆತಾಗ ಹಿಗ್ಗದೆ, ಕಷ್ಟಗಳು ಬಂದಾಗ ಕುಗ್ಗದೆ ಮೌಲಿಕ ಬದುಕನ್ನು ಹೊಂದಿ ಅಂದಿನ ಕರ್ನಾಟಕದ ಪ್ರಮುಖರೆನಿಸಿಕೊಂಡರು.

"ಧೀರರಾಗಿರಿ ಪವಿತ್ರರಾಗಿರಿ
ಸ್ವತಂತ್ರ ರಾಷ್ಟ್ರದ ವೀರರಾಗಿರಿ
ಇದು ನನ್ನ ಕಡೆಯ ಮನವಿ"

ಎಂದು ಜನತೆಗೆ ಕಡೆಯದಾಗಿ ಕರೆ ನೀಡಿ ೧೯೪೭ ಜನವರಿ ೩ ರಂದು ಮಂಜಪ್ಪನವರು ದೈವಾಧೀನರಾದರು. ಅವರು ಭೌತಿಕವಾಗಿ ದೂರಾದರೂ ಅವರು ಮಾಡಿದ ಕಾರ್ಯಗಳು ಸದಾ ಕನ್ನಡಿಗರೊಂದಿಗೆ ಇರುತ್ತವೆ.

ಮಂಜಪ್ಪನವರು ಸಮಾಜಮುಖಿ ಸಾಹಿತಿಗಳಾಗಿ ಪ್ರಕಟಿಸಿದ ಕೃತಿಗಳು ವೈವಿಧ್ಯಮಯ. ರಾಷ್ಟ್ರ ಧರ್ಮ ದ್ರಷ್ಟಾರರಾಗಿ ರಾಷ್ಟ್ರೀಯ ಸಾಹಿತ್ಯವನ್ನು ರಚಿಸಿದ ಮಂಜಪ್ಪನವರು ಕನ್ನಡ ರಾಷ್ಟ್ರೀಯ ಸಾಹಿತ್ಯ ಪಿತಾಮಹರೆನಿಸಿಕೊಂಡಿದ್ದಾರೆ. ರಾಷ್ಟ್ರೀಯ ಚಿಂತನೆಗಳು ಅವರ ಉಸಿರಾಗಿದ್ದವು. ಆನ್ವಯಿಕವಾಗಿ, ಸೈದ್ಧಾಂತಿಕವಾಗಿ ರಾಷ್ಟ್ರೀಯ ಪುರುಷರಾಗಿದ್ದ ಮಂಜಪ್ಪನವರು ತಮ್ಮ ಹಲವಾರು ಕೃತಿಗಳಲ್ಲಿ ಅದನ್ನು ಪ್ರತಿಪಾದಿಸಿದರು. ಡಾ. ಬಿ. ವ್ಹಿ. ಮಲ್ಲಾಪುರ ಅವರು ಹೇಳುವಂತೆ "ಅಡಿಯಿಂದ ಮುಡಿಯವರೆಗೆ ಮಂಜಪ್ಪನವರಲ್ಲಿ ಹರಿದಾಡುತ್ತಿದ್ದುದು ರಾಷ್ಟ್ರೀಯ ಪ್ರಜ್ಞೆಯಾದುದರಿಂದ ಅವರ ಎಲ್ಲ ಬಗೆಯ ಸಾಹಿತ್ಯ ಕೃತಿಗಳಲ್ಲಿ ಅದು ಮಿಡಿಯುತ್ತದೆ. ಇನ್ನು ರಾಷ್ಟ್ರೀಯ ಕೃತಿಗಳಲ್ಲಿ ಅದರ ತುಡಿತ ಇನ್ನು ಹೆಚ್ಚು. ಆದುದರಿಂದ ಮಂಜಪ್ಪನವರು ನಿಜವಾದ ಅರ್ಥದಲ್ಲಿ ರಾಷ್ಟ್ರಧರ್ಮ ದ್ರಷ್ಟಾರರು. ರಾಷ್ಟ್ರೀಯ ಸಾಹಿತ್ಯ ನಿರ್ಮಾಣದಲ್ಲಿ ಅವರಂಥವರು ಕರ್ನಾಟಕದಲ್ಲಿ ಇಲ್ಲವೆಂದರೂ ಸಲ್ಲುತ್ತದೆ."

ಈ ವಿಚಾರಗಳು ಮಂಜಪ್ಪನವರ ರಾಷ್ಟ್ರೀಯ ಚಿಂತನೆ ಹಾಗೂ ಬರಹಗಳಿಗೆ ನಿದರ್ಶನವಾಗಿ ನಿಲ್ಲುತ್ತವೆ. ರಾಷ್ಟ್ರದ ಸ್ವಾತಂತ್ರ್ಯ ಹಾಗೂ ಮುನ್ನಡೆ ಕುರಿತು ಹೊಂಗನಸುಗಳನ್ನು ಹೊಂದಿದ್ದ ಮಂಜಪ್ಪನವರು ತಾವು ಬರೆದ ಕೃತಿಗಳಲ್ಲಿ, ಪ್ರಕಟಗೊಳಿಸಿದ ಪತ್ರಿಕೆಗಳಲ್ಲಿ ದಾಖಲಿಸಿದ್ದಾರೆ. ಭಾರತೀಯರ ದೇಶಭಕ್ತಿ, ಸತ್ಯಾಗ್ರಹ, ಎಚ್ಚತ್ತ ಹಿಂದುಸ್ತಾನ, ಖಾದಿಶಾಸ್ತ್ರ, ಸ್ವಾಮಿ ರಾಮತೀರ್ಥರ ಉಪನ್ಯಾಸಗಳು, ಹಿಂದುತ್ವ, ಕೇರ್ ಹಾರ್ಡಿಯವರ ಭಾರತ ಪರ್ಯಟನ ಹಾಗೂ ಮಹಾತ್ಮಾಗಾಂಧಿಯವರ ಚರಿತ್ರೆ ಹಾಗೂ ಲೇಖನ – ಭಾಷಣಗಳು ಕೃತಿಗಳಲ್ಲಿ ರಾಷ್ಟ್ರೀಯ ಚಿಂತನೆಯ ಪ್ರಖರತೆಯನ್ನು ನಾವು ಕಾಣಬಹುದಾಗಿದೆ. ಇವುಗಳಲ್ಲಿ 'ಖಾದಿಶಾಸ್ತ್ರ' ಎಂಬ ಕೃತಿ ಈ ಸಂಪುಟದಲ್ಲಿದ್ದು ಇದೊಂದು ಮಹತ್ವದ ಬರಹವಾಗಿದೆ.

ಖಾದಿಶಾಸ್ತ್ರ ಮಂಜಪ್ಪನವರ ಸಂಶೋಧನಾತ್ಮಕ ರಾಷ್ಟ್ರೀಯ ಸಾಹಿತ್ಯಕೃತಿ. ಅವರ ರಾಷ್ಟ್ರೀಯ ಸಾಹಿತ್ಯದಲ್ಲಿ ಅಗ್ರಗಣ್ಯವಾದುದು. ಕರ್ನಾಟಕದ ಖಾದಿ ಪುರುಷರು ಎಂಬ ಆನ್ವಯಿಕ ಹೊಂದಿದ್ದ ಮಂಜಪ್ಪನವರು ಕರ್ನಾಟಕದಲ್ಲಿ ಖಾದಿ ತತ್ವ ಬೆಳೆಯಲು ಬಹುವಾಗಿ ಶ್ರಮಿಸಿದರು. ಮಹಾತ್ಮಾಗಾಂಧಿಯವರ ಜೀವನ ಹಾಗೂ ತತ್ವಗಳಿಗೆ ಬದ್ಧರಾಗಿದ್ದ ಮಂಜಪ್ಪನವರು ಖಾದಿತತ್ವವನ್ನು ಕರ್ನಾಟಕದಲ್ಲಿ ಚಳುವಳಿ ಮುಖಾಂತರ ಬೆಳೆಯಲು ದುಡಿದರು. ಅನೇಕ ಪ್ರದೇಶಗಳಲ್ಲಿ ಸುತ್ತಾಡಿ **'ರೊಟ್ಟಿಯಷ್ಟೆ ಬಟ್ಟೆ ಮುಖ್ಯ' 'ನಿಮ್ಮ ಬಟ್ಟೆ ನೀವೆ ಸಿದ್ಧಪಡಿಸಿಕೊಳ್ಳಿರಿ'** ಎಂಬ ಧ್ಯೇಯವಾಕ್ಯಗಳನ್ನು ಹೊಂದಿ ಪ್ರಚಾರಮಾಡಿದರು. ಖಾದಿ ತತ್ವ ಉದ್ಯೋಗದ ತತ್ವ, ಈ ಕಾರಣ ಇದರ ಮಹತ್ವ ಅರಿತು ಜನರು ನಡೆಯಬೇಕು. ಇದರಿಂದ ನಿರುದ್ಯೋಗ ಸಮಸ್ಯೆ ದೂರವಾಗುತ್ತದೆ. ಜೊತೆಗೆ ಬಡತನವು ಇಲ್ಲವಾಗುತ್ತದೆ. ಖಾದಿ ಕಾರ್ಯದಲ್ಲಿ ಪ್ರತಿ ಭಾರತೀಯರು ತೊಡಗಿಕೊಂಡರೆ ಅಭಿವೃದ್ಧಿ ಸಾಧ್ಯ ಎಂಬುದನ್ನು ಮಂಜಪ್ಪನವರು ಸಾರಿ–ಸಾರಿ ಹೇಳಿದರು. ಪ್ರತಿ ಮನೆಯಲ್ಲಿ ಅಡಿಗೆಯ ಕಾರ್ಯ ಹೇಗೆ ನಡೆಯುತ್ತದೆ. ಹಾಗೆಯೇ ಖಾದಿ ಕಾರ್ಯಗಳು ನಡೆಯಬೇಕೆಂಬ ಆಶಯ ಮಂಜಪ್ಪನವರದಾಗಿತ್ತು. ಕುಟುಂಬ ಆರ್ಥಿಕವಾಗಿ ಮುಂದುವರಿಯಲು ಖಾದಿತತ್ವ ಪರಿಪಾಲನೆ ಊರುಗೋಲು ಇದ್ದಂತೆ. ಕುಟುಂಬ ಅಭಿವೃದ್ಧಿಯಾದರೆ ಸಮಾಜ– ರಾಷ್ಟ್ರದ ಅಭಿವೃದ್ಧಿ ತಾನೇ ತಾನಾಗಿ ಆಗುತ್ತದೆಂಬ ನಂಬಿಕೆ ಅವರದಾಗಿತ್ತು. ಖಾದಿತತ್ವದ ಹಿಂದೆ ಮಂಜಪ್ಪನವರ ಸಾಮಾಜಿಕ

-ರಾಷ್ಟ್ರೀಯ ಕಳಕಳಿ ಅಪಾರವಾಗಿತ್ತೆಂದು ತೋರುತ್ತದೆ. ಈ ಎಲ್ಲ ಚಿಂತನೆಗಳಿಗೆ ಬದ್ಧವಾಗಿ "ಖಾದಿಶಾಸ್ತ್ರ" ಎಂಬ ಕೃತಿ ಇದೆ. ಇದೊಂದು ರಾಷ್ಟ್ರೀಯ ಚಿಂತನೆಯ ಮಹತ್ವದ ಕೃತಿ. ಇಲ್ಲಿ ಖಾದಿಯ ಪ್ರಾಚೀನತೆ, ಕೈ ರಾಟಿ, ಕೈ ಮಗ್ಗದ ಮಹತ್ವ, ಖಾದಿಯೂ ಗಿರಣಿ ಬಟ್ಟೆಯೂ, ಖಾದಿಯ ಪಾವಿತ್ರ್ಯತೆ ಕುರಿತಾಗಿ ಮಂಜಪ್ಪನವರು ಬರೆದಿದ್ದಾರೆ. ಹಲವು ಆಕರ ಸಾಮಗ್ರಿ ಬಳಸಿಕೊಂಡು ಸಂಶೋಧನಾತ್ಮಕವಾಗಿ ಇದನ್ನು ರಚಿಸಲಾಗಿದೆ. ಸ್ವದೇಶಿ ತತ್ವವನ್ನು ಪುಷ್ಟೀಕರಿಸುವ ಈ ಕೃತಿ ಕನ್ನಡ ಸಾಹಿತ್ಯದಲ್ಲಿ ಅಪರೂಪವೆಂದೇ ಹೇಳಬಹುದು. ಇಂದಿನ ಕೌಶಲ್ಯಾಭಿವೃದ್ಧಿಗೆ ಕನ್ನಡಿಯಾಗುವ ಖಾದಿಶಾಸ್ತ್ರ ಕೃತಿ ತನ್ನ ಮೌಲಿಕ ಬರಹದಿಂದ ನಮ್ಮೆಲ್ಲರ ಗಮನ ಸೆಳೆಯುತ್ತದೆ. ನಿರುದ್ಯೋಗಿಯಾಗಿ ತಿರುಗಾಡುವವರಿಗೆ ಮಾರ್ಗದರ್ಶನ ಮಾಡುತ್ತದೆ. ಸಾಂಘಿಕ ಬದುಕಿಗೆ ಪ್ರೋತ್ಸಾಹ ನೀಡುತ್ತದೆ.

ಮಂಜಪ್ಪನವರ ಸಾಮಾಜಿಕ ಸಾಹಿತ್ಯ ಕೃತಿಗಳು ಆ ಕಾಲ ಸಂದರ್ಭದ ಸಮಾಜವನ್ನು ವಿಮರ್ಶಾತ್ಮಕವಾಗಿ ಚಿತ್ರಿಸುತ್ತವೆ. ಕೃತಿಯೊಂದು ಸಮಾಜದ ಪ್ರತಿಬಿಂಬವಾಗಿ ಅದರ ಗತಿಬಿಂಬ ತಿಳಿಸುತ್ತದೆ. ಜಿ. ಎಸ್. ಶಿವರುದ್ರಪ್ಪನವರು ಹೇಳುವಂತೆ "ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯು ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವದರಿಂದ, ಮತ್ತು ತನ್ನ ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷೆಯ ಮೂಲಕವೇ ತನ್ನ ಸಮಾಜದೊಂದಿಗೆ ಕೃತಿ ಮುಖೇನ ವ್ಯವಹರಿಸುತ್ತಾನೆ" ಎನ್ನುವ ಸಂಗತಿಗಳು ಸಾಹಿತಿ - ಸಾಹಿತ್ಯ ಹಾಗೂ ಸಮಾಜದ ಸಂಬಂಧಗಳನ್ನು ತಿಳಿಸುತ್ತವೆ. ಇದಕ್ಕನುಗುಣವಾಗಿಯೇ ಮಂಜಪ್ಪನವರ ಸಾಮಾಜಿಕ ಸಾಹಿತ್ಯ ಇರುವದುಂಟು. ಮಂಜಪ್ಪನವರು ಸಮಕಾಲೀನ ಸಮಾಜದಲ್ಲಿ ತುಂಬಿಕೊಂಡಿರುವ ಹಲವಾರು ನ್ಯೂನ್ಯತೆಗಳನ್ನು ದಾಖಲಿಸಿ ಹೊಸ ಸಮಾಜ ಹೇಗಿರಬೇಕೆಂಬ ಸಲಹೆಗಳನ್ನು ತಮ್ಮ ಕೃತಿಗಳಲ್ಲಿ ನೀಡಿದ್ದಾರೆ.

ಕಲಾ ನಿಷ್ಠನಾಗಿ, ಕಾಲ ನಿಷ್ಠನಾಗಿ, ವಿಚಾರನಿಷ್ಠನಾಗಿ ಲೇಖಕನೊಬ್ಬ ಸಮಾಜವನ್ನು ದೃಷ್ಟಿಸುತ್ತಾನೆ. ಈ ವೇಳೆಯಲ್ಲಿ ಅವನಿಗೆ ಸಮಾಜದಲ್ಲಿರುವ ಜೀವನ ಪದ್ಧತಿ, ಆಚರಣೆ, ಸಾಂಸ್ಕೃತಿಕತೆ, ಗುಂಪುಗಳು, ಗಲಭೆಗಳು ಎಲ್ಲವೂ ಗೋಚರಿಸುತ್ತವೆ. ಎಲ್ಲವನ್ನು ಅರಗಿಸಿಕೊಂಡು ತನ್ನ ವಿಚಾರಕ್ಕೆ ಒಗ್ಗುವ ಬರಹವನ್ನು ಬರಹಗಾರ ಕೊಡುತ್ತಾನೆ. ಮಂಜಪ್ಪನವರು ಈ ದಾರಿಯಲ್ಲಿಯೇ ಸಾಗಿ ವಿಚಾರನಿಷ್ಠರಾಗಿ ಸಮಾಜವನ್ನು ಅವಲೋಕಿಸಿದವರು. ಸಮಾಜದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಏರು-ಪೇರುಗಳನ್ನು ಚಿತ್ರಿಸುತ್ತ, ವಿಶ್ಲೇಷಣೆ ಮಾಡುತ್ತ ನವಸಮಾಜ ನಿರ್ಮಾಣಕ್ಕೆ ಮಾರ್ಗದರ್ಶನ ಮಾಡುತ್ತಾರೆ.

ವಿಚಾರ ಸಾಹಿತ್ಯದ ದಾರಿಯಲ್ಲಿ ಮೂಡಿಬಂದ ಮಂಜಪ್ಪನವರ ಸಾಮಾಜಿಕ ಸಾಹಿತ್ಯ ಕೃತಿಗಳು ತಮ್ಮದೇ ಆದ ಆಲೋಚನೆಗಳಿಂದ ಗಮನ ಸೆಳೆಯುತ್ತವೆ. ಪ್ರಸ್ತುತ ಸಂಪುಟದಲ್ಲಿ ಈ ನೆಲೆಯ ಕೃತಿಗಳಿವೆ. ಅವುಗಳೆಂದರೆ ಪತಿತೋದ್ಧಾರ, ಅಹಿಂಸೆ, ಆಧುನಿಕ ಜರ್ಮನಿ, ವೀರಶೈವ ಮತತತ್ವ, ವೀರಶೈವ ಸಮಾಜ ಸುಧಾರಣೆ ಹಾಗೂ ವೀರಶೈವ ಏಕೀಕರಣ ಎಂಬ ಕೃತಿಗಳು. ಇವೆಲ್ಲವು ಮಂಜಪ್ಪನವರಲ್ಲಿರುವ ಸಮಸಮಾಜದ ಪರಿಕಲ್ಪನೆಯನ್ನು, ಅಹಿಂಸಾ ಮನೋಧರ್ಮವನ್ನು, ವೀರಶೈವ ಸಮಾಜದ ಸುಧಾರಣೆಗೆ ಬೇಕಾದ ಮಾರ್ಗಗಳನ್ನು ತಿಳಿಸಿಕೊಡುತ್ತವೆ.

'ಪತಿತೋದ್ಧಾರ' ಎಂಬುದು ಮಂಜಪ್ಪನವರು ಬರೆದ ಮೊದಲ ಕೃತಿ. ಅಸ್ಪೃಶ್ಯರ ಏಳ್ಗೆಯ ಸಂಗತಿಗಳನ್ನು ತಿಳಿಸುವ ಈ ಕೃತಿ ಭಾರತದಲ್ಲಿ ಬಹುಕಾಲದಿಂದಲೂ ರೂಢಿಯಲ್ಲಿರುವ ಶೂದ್ರ ಸಮಸ್ಯೆಗೆ ಪರಿಹಾರಗಳನ್ನು ಹುಡುಕುತ್ತದೆ. ಹಿಂದೂ ಜನಾಂಗದ ಭಾಗವಾಗಿರುವ ಅಸ್ಪೃಶ್ಯರ ಕುರಿತಾಗಿ ಸಮಾಜ ಸುಧಾರಣೆ, ಅಂತ್ಯಜರ ದುಸ್ಥಿತಿ, ಹಿಂದು ಜನಾಂಗದ ಕ್ಷೀಣತೆ ಎಂಬ ಮೂರು ಪ್ರಕರಣಗಳಲ್ಲಿ ವಿವರಿಸುತ್ತಾರೆ. ಇದಕ್ಕೆ ಪೂರಕವಾಗಿ ಹಲವಾರು ಸಮಾಜಸುಧಾರಕರ ವಿಚಾರಗಳನ್ನು ಪೂರಕವಾಗಿ ಬಳಸಿಕೊಳ್ಳುತ್ತಾರೆ. ಅಸ್ಪೃಶ್ಯರು ಕೂಡಾ ಮನುಷ್ಯರೆ ಎಂದು ಮೊದಲು ತಿಳಿದುಕೊಳ್ಳಬೇಕು. ಅವರಿಗೆ ಮುಟ್ಟದೆ ಇರುವ ಬಹಿಷ್ಕಾರ ತೆಗೆದುಹಾಕಬೇಕು. ಅವರು ಶಿಕ್ಷಣವಂತರಾಗಿ ಬೆಳೆಯಬೇಕು. ಅವರಲ್ಲಿ ಹಾಸು ಹೊಕ್ಕಾಗಿರುವ ದುಶ್ಚಟಗಳನ್ನು ಕುರಿತು ಜಾಗ್ರತೆ ಮೂಡಿಸಿ ಅವುಗಳಿಂದ ದೂರವಿರಲು ಸೂಚಿಸಬೇಕು. ಮಾನವೀಯ ಗುಣದಿಂದ ಅವರನ್ನು ಸಮ ಸಮಾಜಕ್ಕೆ ಒಗ್ಗಿಕೊಳ್ಳುವಂತೆ ಮಾಡಬೇಕು. ಹೀಗೆ ಹತ್ತಾರು ವಿಚಾರಗಳನ್ನು ಬಿತ್ತರಿಸುವ ಈ ಕೃತಿ ಜಾತಿ ವ್ಯವಸ್ಥೆ ಕಠಿಣವಾಗಿದ್ದ ಕಾಲದಲ್ಲಿ ಅದರ ವಿರುದ್ಧದ ಧ್ವನಿಯಾಗಿ ವಿಚಾರಗಳನ್ನು ಸಕಾರಾತ್ಮಕವಾಗಿ ತಿಳಿಯಪಡಿಸುತ್ತದೆ.

'ಅಹಿಂಸೆ' ಎಂಬ ಪುಟ್ಟ ಕೃತಿ ಗಾಂಧೀಜಿಯವರ ಸತ್ಯಾಗ್ರಹ ತತ್ವಗಳಲ್ಲಿ ಒಂದಾಗಿರುವ ಅಹಿಂಸೆಯ ಪ್ರತಿಪಾದನೆ ಮಾಡುವ ವಿಚಾರಗಳನ್ನು ಒಳಗೊಂಡಿದೆ. "ನತತ್ಪರಸ್ಯ ಸಂಧಧ್ಯಾತ್ಪ್ರತಿಕೂಲಂ ಯದಾತ್ಮನಃ" ('ಯಾವುದನ್ನನುಭವಿಸಲು ತನಗೆ ದುಃಖವಾಗುತ್ತದೆಯೋ ಅದನ್ನು ತಾನು ಅನ್ಯರಿಗುಂಟು ಮಾಡಬಾರದು') ಎಂಬ ತಾತ್ವಿಕತೆ ಹೊಂದಿದ ಈ ಕೃತಿ ನಾಲ್ಕು ಅಧ್ಯಾಯಗಳಲ್ಲಿ ನರಹತ್ಯೆ, ಗೋವಧೆ, ಪಶುಬಲಿ ಹಾಗೂ ಪ್ರೇಮಜಲ ಕುರಿತಾದ ವಿಚಾರಗಳನ್ನು ಬಿತ್ತರಿಸುತ್ತದೆ. ಮನುಷ್ಯ ಮಾನವೀಯ ಮೌಲ್ಯಗಳನ್ನು ಒಳಗೊಂಡು ಬದುಕಬೇಕು. ಸಕಲ ಜೀವರಾಶಿಗಳಲ್ಲಿ ದಯೆಯನ್ನು ಹೊಂದಬೇಕು. "ಯಾವ ಪ್ರಾಣಿಯ ದೇಹಕ್ಕಾಗಲಿ ಅಥವಾ ಮನಸ್ಸಿಗಾಗಲಿ ನೋವನ್ನು ಕೂಡಾ ಉಂಟು ಮಾಡದಿರುವುದೇ ಅಹಿಂಸೆ." ಇದನ್ನು ಅರಿತು ನಾವೆಲ್ಲ ಬಾಳಬೇಕು. ಅಹಿಂಸೆ ಎಂಬುದು ಅಂತಃಕರಣದಲ್ಲಿ ತುಂಬಿದ ಪ್ರೇಮ ಜಲ. ಇದು ಸರ್ವರಲ್ಲಿ ಹರಿದಾಡಬೇಕು. ಈ ಮಾರ್ಗದಲ್ಲಿ ನಡೆಯುವವರು ಭಗವಂತನ ಪ್ರೀತಿಗೆ ಪಾತ್ರರಾಗುತ್ತಾರೆಂದು ಬೋಧನೆ ಮಾಡುತ್ತದೆ. ಪ್ರೇಮತ್ವವೆಂಬುದು ಮನುಷ್ಯನಲ್ಲಿರುವ ಶ್ರೇಷ್ಠ ಮೌಲ್ಯ. ಇದು ಅಂತರಂಗ – ಬಹಿರಂಗ ಶುದ್ಧಿಗೆ ಕಾರಣವಾಗಬಲ್ಲುದು. ಇದನ್ನರಿತು ನಾವೆಲ್ಲ ನಡೆಯಬೇಕೆಂಬ ಸಂದೇಶವನ್ನು ಈ ಕೃತಿ ನೀಡುತ್ತದೆ.

ಜರ್ಮನ ದೇಶದ ವೈವಿಧ್ಯಮಯ ಚಿತ್ರಣಗಳನ್ನು ನೀಡುವ ಕೃತಿ **"ಆಧುನಿಕ ಜರ್ಮನಿ"** ಎಂಬುದಾಗಿದೆ. ಒಂದು ದೇಶ ಇನ್ನೊಂದು ದೇಶದಿಂದ ಕಲಿಯಬೇಕಾದುದು ಬಹಳಷ್ಟಿರುತ್ತದೆ. ಇದಕ್ಕೆ ನಿದರ್ಶನವಾಗಿದೆ ಈ ಕೃತಿ. ಕೈಸರ ಚಕ್ರವರ್ತಿ ಚರಿತ್ರೆ (ಎರಡನೆಯ ವಿಲ್ಯಂ), ಜರ್ಮನಿಯ ಪೂರ್ವ ವೃತ್ತಾಂತ, ಜರ್ಮನದೇಶದ ವಿದ್ಯಾಭ್ಯಾಸ, ಕೈಗಾರಿಕೆ, ಒಕ್ಕಲುತನ, ವ್ಯಾಪಾರ, ರಾಷ್ಟ್ರೀಯ ಸಾಮರ್ಥ್ಯ ಹಾಗೂ ಸಂಘಶಕ್ತಿ ಸಂಗತಿಗಳನ್ನು ಇದು ತಿಳಿಸುತ್ತದೆ. **"ಸಂಘಟನೆಯೇ ಶಕ್ತಿ"** ಎಂಬ ಮೂಲ ಮಂತ್ರ ಹೊಂದಿದ ಜರ್ಮನ ದೇಶ ಅಭಿವೃದ್ಧಿ ಪಥದಲ್ಲಿ ಮುಂಚೂಣಿಯಲ್ಲಿದೆ. ಸಂಘಟನೆಯಿಂದ ಏನೆಲ್ಲ ಸಾಧಿಸಲು ಸಾಧ್ಯವೆಂಬುದನ್ನು ಬಲವಾಗಿ ಪ್ರತಿಪಾದಿಸುವ ಈ ಕೃತಿ ಜರ್ಮನ ದೇಶದ ವೈವಿಧ್ಯಮಯ ಬೆಳವಣಿಗೆಗಳನ್ನು ಚಿತ್ರಿಸುತ್ತದೆ.

ಪ್ರಸ್ತುತ ಸಂಪುಟದಲ್ಲಿರುವ ವೀರಶೈವ ಮತತತ್ವ, ವೀರಶೈವ ಸಮಾಜ ಸುಧಾರಣೆ ಹಾಗೂ ವೀರಶೈವ ಏಕೀಕರಣ ಕೃತಿಗಳು, ವೀರಶೈವ ಧರ್ಮ, ತತ್ವ ಹಾಗೂ ಸಮಾಜದ ಮೇಲೆ ಬೆಳಕು ಚೆಲ್ಲುವ ಕೃತಿಗಳಾಗಿವೆ. ಸಮಸಮಾಜದ ಕನಸನ್ನು ಕಂಡಿದ್ದ ಮಂಜಪ್ಪನವರಿಗೆ ಸಮಾಜದಲ್ಲಿರುವ ವೈವಿಧ್ಯಮಯ ಧರ್ಮಗಳು, ಧರ್ಮದೊಳಗಿರುವ ವಿವಿಧ ಜಾತಿಗಳು, ಜಾತಿಗಳೊಳಗಿರುವ ಒಳಪಂಗಡಗಳು ದಿಗಿಲುಗೊಳಿಸಿದ್ದವು. ಇವುಗಳಲ್ಲಿರುವ ತಾರತಮ್ಯ ನಾ ಹೆಚ್ಚು ಎಂಬ ಭಾವ ಸಮಾಜದ ಏಕತೆಗೆ ಸಂಘಟನಾ ಶಕ್ತಿಗೆ ಪೂರಕವಲ್ಲವೆಂಬ ವಿಚಾರ ಮಂಜಪ್ಪನವರದಾಗಿತ್ತು. ಬದುಕಿನ ಆರಂಭದ ದಶಕಗಳಲ್ಲಿ ಆರ್ಯ ಸಮಾಜದತ್ತ ಒಲವು ಹೊಂದಿದ ಮಂಜಪ್ಪನವರು ನಂತರ ವೀರಶೈವ ಧರ್ಮದತ್ತ ವಾಲಿದರು. ವೀರಶೈವ ಧರ್ಮದ ಕುರಿತು ಆಳವಾದ ಅಧ್ಯಯನ ಮಾಡಿದ ಅವರು ಹಲವಾರು ನ್ಯೂನತೆಗಳನ್ನು ಗುರುತಿಸಿದರು. ಈ ಸಮಾಜದಲ್ಲಿ ಸುಧಾರಣೆಯಾಗಲು ಕೃತಿಗಳನ್ನು ರಚಿಸಿದರು.

'ವೀರಶೈವ ಮತತತ್ವ' ಕೃತಿ ಜನಸಾಮಾನ್ಯರಿಗೆ ವೀರಶೈವ ಧರ್ಮದ ಸಿದ್ಧಾಂತಗಳನ್ನು ಪರಿಚಯಿಸುವ ಉದ್ದೇಶ ಹೊಂದಿದ್ದಾಗಿದ್ದು – ವೀರಶೈವ ಸಿದ್ಧಾಂತ ಶಿಖಾಮಣಿಯನ್ನು ಆಕರವಾಗಿಸಿಕೊಂಡು ವಿಚಾರಗಳನ್ನು ಪ್ರಸ್ತುತಪಡಿಸುತ್ತದೆ. ವೀರಶೈವರ ಲಕ್ಷಣ, ಭಕ್ತನ ಆಚರಣೆ, ಮಹೇಶ್ವರನ ಸ್ಥಿತಿ, ಮನಶುದ್ಧಿಗೆ ಸಾಧನ, ಅಂತರ್ಜ್ಞಾನ, ಸರ್ವತ್ರ ಲಿಂಗಭಾವ, ಗುರುಪ್ರಕಾಶ, ನಿಷ್ಕಾಮ ಕರ್ಮ, ಲೋಕಸೇವೆ, ಆತ್ಮೋದ್ಧಾರ, ದೇಹವೇ ದೇವಾಲಯ ಹಾಗೂ ಲಿಂಗಾಂಗ ಸಾಮರಸ್ಯ ಕುರಿತಾದ ವಿಚಾರಗಳನ್ನು ಪ್ರಸ್ತುತ ಪಡಿಸುತ್ತದೆ. ಧರ್ಮವೆಂಬುದು ಒಂದು ವ್ಯವಸ್ಥೆ. ವೀರಶೈವ ಧರ್ಮವು ಒಂದು ವ್ಯವಸ್ಥೆಯನ್ನು ತಿಳಿಸುತ್ತದೆ. ಸಾಮಾನ್ಯ ಮನುಷ್ಯನೊಬ್ಬ ಸಾಧಕನಾಗಿ ಹಂತ–ಹಂತವಾಗಿ ಹೇಗೆ ಮೇಲಕ್ಕೇರುತ್ತಾ ಹೋಗಬೇಕೆಂಬ ಆಲೋಚನೆಗಳನ್ನು ತಿಳಿಸುತ್ತದೆ.

ವೀರಶೈವ ಧರ್ಮ ಪ್ರತಿಪಾದಿಸುವ ಷಟ್‌ಸ್ಥಲ ಸಿದ್ಧಾಂತಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಿತಿಗಳು ಭಕ್ತನೊಬ್ಬ ಲಿಂಗಾಂಗ ಸಾಮರಸ್ಯ ಹೊಂದುವುದಕ್ಕೆ ಮಾರ್ಗವಾಗಿ ನಿಲ್ಲುತ್ತವೆ. ಧರ್ಮದ ತತ್ವದಡಿಯಲ್ಲಿ ನಾವು ಅರಳುವ ಹೂವಾಗಿ ಪರಿಮಳ ಹರಡಬೇಕು ಎಂಬ ಸೈದ್ಧಾಂತಿಕತೆಯನ್ನು ಈ ಕೃತಿ ತಿಳಿಸುತ್ತದೆ. ಇದರ ಮುಂದಿನ ಹೆಜ್ಜೆಯಾಗಿ 'ವೀರಶೈವ ಸಮಾಜ ಸುಧಾರಣೆ' ಕೃತಿಯನ್ನು ರಚಿಸಿದ್ದಾರೆ. ಈ ಕೃತಿಯ ಪೀಠಿಕೆಯಲ್ಲಿ ಮಂಜಪ್ಪನವರು "ನಮ್ಮ ಸಮಾಜದ ಪ್ರಮುಖ ಮುಂದಾಳುಗಳು ನಾವು ಸುಧಾರಿಸಿಕೊಳ್ಳಬೇಕಾದ ಅನೇಕ ಸಂಗತಿಗಳನ್ನು ಆಗಾಗ್ಗೆ (ವೀರಶೈವ) ಮಹಾಸಭೆಗಳಲ್ಲಿಡುತ್ತಾ ಬಂದಿದ್ದಾರೆ. ಆ ವಿಷಯಗಳು ಪುನಃ ಪುನಃ ಸಮಾಜದ ಮುಂದೆ ಬರುವದು ಸುಧಾರಣೆಗೆ ಅವಶ್ಯವಾಗಿರುವದರಿಂದ ಆ ಸಂಗತಿಗಳನ್ನೇ ಈ ಕಾಲಕ್ಕೆ ತಕ್ಕಂತೆ ಎಂಟು ಪ್ರಕರಣಗಳನ್ನಾಗಿ ವಿಂಗಡಿಸಿ ಈ ಚಿಕ್ಕ ಪುಸ್ತಕದ ಮೂಲಕ ನಮ್ಮ ಸಮಾಜ ಬಾಂಧವರ ಮುಂದೆ 'ಇಟ್ಟಿದ್ದೇವೆ" ಎಂಬುದಾಗಿ ತಿಳಿಸಿದ್ದಾರೆ. ಈ ವಿಚಾರಗಳು ಕೃತಿ ಬರವಣಿಗೆ ಹಾಗೂ ಪ್ರಕಟಣೆಯ ಸ್ಪಷ್ಟತೆಯನ್ನು ನಮ್ಮ ಗಮನಕ್ಕೆ ತರುತ್ತವೆ. ಕೃತಿಯಲ್ಲಿ ಪೂರ್ವಕಾಲದ ವೀರಶೈವ ಸಮಾಜ, ಸಮಾಜದಲ್ಲುಂಟಾದ ಜಾಗೃತಿ, ಸಂಪದಭಿವೃದ್ಧಿಯ ಶಿಕ್ಷಣ, ಗುರುವರ್ಗ, ಭಕ್ತವರ್ಗ, ಮುಂದಾಳುಗಳು, ಸಂಪದಭಿವೃದ್ಧಿ ಸಾಧನ, ಮತ್ತು ಭರತಖಂಡದಲ್ಲುಂಟಾದ ಜಾಗೃತಿ ಕುರಿತಾದ ವಿಚಾರಗಳಿವೆ. ಇವೆಲ್ಲವು ವೀರಶೈವ ಸಮಾಜ ಮುನ್ನಡೆಗೆ ಬೇಕಾದ ಸಂಗತಿಗಳನ್ನು ತಿಳಿಸುತ್ತವೆ. ಆ ಕಾಲದ ಸಮಾಜ ಮುಖಂಡರಾದ ಕೆ. ಪಿ. ಪುಟ್ಟಣಶೆಟ್ಟಿ, ಶ್ರೀಮಂತ ಸರದೇಸಾಯಿ,

ವಂಟಮೂರಿ ಲಖಮನಗೌಡರು, ಮೆಣಸಿನಕಾಯಿ ಶಾಂತವೀರಪ್ಪನವರು, ಎಸ್. ಎಸ್. ಬಸವನಾಳ, ಆರ್. ಎಲ್. ಜವಳಿ, ಗುರುಲಿಂಗಪ್ಪ ಗಿಲಗಂಚಿ, ಅರಟಾಳ ರುದ್ರಗೌಡರು, ವಾರದ ಮಲ್ಲಪ್ಪನವರು, ಫ. ಗು. ಹಳಕಟ್ಟಿ, ಶಿರಸಂಗಿ ಲಿಂಗರಾಜರು, ಸರ್. ಸಿದ್ಧಪ್ಪ ಕಂಬಳಿ, ಸಿದ್ಧರಾಮಪ್ಪ ಪಾವಟೆ, ವೀರಪ್ಪನವರು ಬಿಳಿಅಂಗಡಿ ಮುಂತಾದವರ ವಿಚಾರಗಳನ್ನು ಆಧಾರವಾಗಿ ಮಂಜಪ್ಪನವರು ಬಳಸಿಕೊಂಡಿದ್ದಾರೆ. ವೀರಶೈವ ಸಮಾಜ ಸುಧಾರಣೆಯಾಗಬೇಕೆಂಬ ಹಂಬಲ ಈ ಕೃತಿಯುದ್ದಕ್ಕೂ ಶ್ರುತಿಯಾಗಿ ನಿಲ್ಲುತ್ತದೆ.

'ವೀರಶೈವ ಏಕೀಕರಣ' ಎಂಬ ಕೃತಿ ವೀರಶೈವರಲ್ಲಿರುವ ಒಳಪಂಗಡಗಳು ಒಂದಾಗಿ ಭೇದ ಮರೆತು ಬಾಳಲು ಮಾರ್ಗದರ್ಶನ ಮಾಡುತ್ತದೆ. ಶಿವಪ್ಪ, ಲಿಂಗಪ್ಪ ಎಂಬಿಬ್ಬರ ಮಧ್ಯದಲ್ಲಿ ನಡೆಯುವ ಸಂಭಾಷಣೆ ರೂಪದಲ್ಲಿ ಕೃತಿಯುಂಟು. ಸಮಾಜದಲ್ಲಿ ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆ ಎಂದುಕೊಂಡು ಭೇದ ರೂಪವಾಗಿ ಬದುಕುತ್ತಿದ್ದಾರೆ. ಶರಣರ ವಿಚಾರಗಳನ್ನು ಪೂರಕಶಕ್ತಿಯಾಗಿ ಪಡೆದುಕೊಂಡ ಈ ಕೃತಿ ವೀರಶೈವ – ಲಿಂಗಾಯತರೆಲ್ಲ ತಾವು ಹೆಚ್ಚು ಎಂದು ಬದುಕದೆ ಸಮಾನತೆಯಿಂದ ಬಾಳಲು ಕರೆ ನೀಡುತ್ತದೆ. ಎಲ್ಲರಲ್ಲಿ ಪರಸ್ಪರ ಊಟ – ಸಂಬಂಧಗಳು ಬೆಳೆಯಬೇಕು. ಸಂಘಟನೆಯಲ್ಲಿ ಶಕ್ತಿ ಉಂಟು ಎಂಬುದನ್ನು ಕಾಳಜಿ ಪೂರ್ವಕವಾಗಿ ತಿಳಿಸುತ್ತದೆ.

ಮಂಜಪ್ಪನವರ ಸಾಹಿತ್ಯ ಕೃಷಿ 'ಮಕ್ಕಳ ಸಾಹಿತ್ಯ'ದಿಂದಲೇ ಆರಂಭವಾಯಿತೆಂದು ಅವರ ಆತ್ಮಕಥೆ ದೃಢಪಡಿಸುತ್ತದೆ. ಅವರು ಶಿರಸಿಯಲ್ಲಿ ಮಾಸ್ತರರಾಗಿದ್ದಾಗ ಚಿಕ್ಕ-ಚಿಕ್ಕ ಪದ್ಯಗಳನ್ನು ರಚಿಸಿ ಹುಡುಗರಿಗೆ ಕಲಿಸುತ್ತಿದ್ದುದಾಗಿ ಹೇಳಿಕೊಂಡಿದ್ದಾರೆ. ಮುಂದೆ ಕಾಲಾನಂತರದಲ್ಲಿಯೂ ಹಲವು ಮಕ್ಕಳ ಸಾಹಿತ್ಯದ ಕೃತಿಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಪ್ರಸ್ತುತ ಸಂಪುಟದಲ್ಲಿ- ಅರವತ್ಮೂರು ಪುರಾತನರ ಚರಿತ್ರೆ, ತ್ಯಾಗವೀರ ಲಿಂಗರಾಜರ ಚರಿತ್ರೆ, ಭಗವಾನ ಬುದ್ಧನ ಚರಿತ್ರೆ, ವೀರಶೈವ ಮತಬೋಧೆ, ಅಣ್ಣನ ಅರ್ಪಣಯೋಗ ಮತ್ತು ಮಡಿವಾಳ ಮಾಚಿದೇವನ ಉಪದೇಶ ಎಂಬ ಆರು ಕೃತಿಗಳು ಇವೆ. ಇವೆಲ್ಲವು ಮಕ್ಕಳ ಮನಸ್ಸನ್ನು ಅರಳಿಸಿ, ಕೂತೂಹಲ ಕೆರಳಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ಬೆಳಸುವ ಕೃತಿಗಳಾಗಿವೆ. ಮಕ್ಕಳ ಸಾಹಿತ್ಯ ಕೃತಿಗೆ ಇರಬೇಕಾದ ಹಲವಾರು ಲಕ್ಷಣಗಳ ಕೊರತೆಗಳನ್ನು ಇವು ಹೊಂದಿವೆ. ಮಂಜಪ್ಪನವರ ಈ ಕೃತಿಗಳಲ್ಲಿ ಆತ್ಮೀಯವಾದ ಶೈಲಿ, ಅಲ್ಲಲ್ಲಿ ತಮ್ಮಾ, ತಂಗಿ, ಶಿಷ್ಯ ಎಂಬ ಸಂಬೋಧನೆಗಳು, ಚಿಕ್ಕ ಚಿಕ್ಕ ವಾಕ್ಯಗಳು, ಉಪದೇಶ ಪರವಾದ ಮಾತುಗಳು ಸಹೃದಯರ ಗಮನ ಸೆಳೆಯುತ್ತವೆ. ವಸಾಹತು ಕಾಲದಲ್ಲಿ ರಾಷ್ಟ್ರೀಯ ಹಾಗೂ ಸಾಮಾಜಿಕ ಸಾಹಿತ್ಯಕ್ಕೆ ವಿಶೇಷ ಕೊಡುಗೆ ನೀಡಿದ ಮಂಜಪ್ಪನವರು ಮಕ್ಕಳ ಸಾಹಿತ್ಯಕ್ಕೂ ಮರೆಯಲಾಗದ ಕೊಡುಗೆ ನೀಡಿದ್ದಾರೆ. ಈ ಕಾರಣದಿಂದ ಸ್ವಾತಂತ್ರ್ಯ ಪೂರ್ವದ ಮಕ್ಕಳ ಸಾಹಿತ್ಯದ ಇತಿಹಾಸದಲ್ಲಿ ಮಂಜಪ್ಪನವರಿಗೆ ಅಗ್ರಸ್ಥಾನ ಉಂಟು.

'ಅರವತ್ಮೂರು ಪುರಾತನರ ಚರಿತ್ರೆ' ಎಂಬ ಕೃತಿ – ಭಕ್ತಿಯನ್ನು ಶಕ್ತಿಯಾಗಿಸಿಕೊಂಡು ಶ್ರೇಷ್ಠತೆ ಮೆರೆದು ಬಾಳಿದವರ ಚರಿತ್ರೆಗಳನ್ನು ಒಳಗೊಂಡ ಕೃತಿಯಾಗಿದೆ. ಚೋಳ ದೇಶದ ಪ್ರಸಿದ್ಧ ಶಿವಭಕ್ತರಾದ ಕಲಿಗಣನಾಥ, ರುದ್ರಪಶುಪತಿ, ಮುರುಘರು, ಚೊಕ್ಕನಯನಾರು, ತಿರುನೀಲಕಂಠರು, ಕಾರಿಕಾಲಾಂಬೆ, ನರಸಿಂಗಮೊನೆಯರು ಮುಂತಾದ ಅರವತ್ಮೂರು ಪುರಾತನರ ಸಂಕ್ಷಿಪ್ತ ಚರಿತ್ರೆ ಈ ಕೃತಿಯಲ್ಲಿ

ಉಂಟು. ಮಂಜಪ್ಪನವರೆ ತಿಳಿಸುವಂತೆ "ಶ್ರೀ ಕಲಿಗಣನಾಥಾದಿ ಅರವತ್ಮೂರು ಪುರಾತನರು ಶಿವಭಕ್ತರಿಗೆ ಪೂರ್ವಕಾಲದಿಂದಲೇ ಪೂಜ್ಯರಾಗಿದ್ದಾರೆ. ಇವರ ವಿಷಯವಾಗಿ ಅಗಸ್ತ್ಯ ಋಷಿಗಳು, ಉಪಮನ್ಯುಮುನಿಗಳು ಸಂಸ್ಕೃತದಲ್ಲಿಯೂ ಶಕ್ಕಳಾರ ನಾಯರೆಂಬುವವರು ಪೆರಿಯ ಪುರಾಣವೆಂದು ತಮಿಳಿನಲ್ಲಿಯೂ ಸುರಂಗಕವಿ, ನಿಜಗುಣರು, ಬೊಮ್ಮರಸರು ಕನ್ನಡ ಪದ್ಯದಲ್ಲಿಯೂ, ಶ್ರೀ. ಎಸ್. ಸಿ. ಚೆನ್ನವೀರಪ್ಪನವರು, ಶ್ರೀ ಮಿರ್ಜಿ ಮಹಾರುದ್ರಪ್ಪನವರು ಕನ್ನಡ ವಚನ ರೂಪದಲ್ಲಿಯೂ ಬರೆದಿದ್ದಾರೆ" ಎನ್ನುತ್ತಾರೆ. ಇವೆಲ್ಲವೂ ದೀರ್ಘವಾದ ಕೃತಿಗಳಾಗಿರುವದರಿಂದ ಮಕ್ಕಳನ್ನೊಳಗೊಂಡಂತೆ ಎಲ್ಲರಿಗೂ ಪುರಾತನರ ಕುರಿತು ತಿಳಿದುಕೊಳ್ಳಲು ಅತ್ಯಂತ ಸಂಕ್ಷಿಪ್ತ ರೂಪದಲ್ಲಿ 'ಅರವತ್ಮೂರು ಪುರಾತನರ' ಕುರಿತು ಇಲ್ಲಿ ದಾಖಲಿಸಿದ್ದಾರೆ. ಎಲ್ಲರ ಚರಿತ್ರೆಯಲ್ಲೂ ಶಿವಸ್ಮರಣೆ – ಶಿವಮಹಿಮೆಯ ಶ್ರೇಷ್ಠತೆಯನ್ನು ಕೊಂಡಾಡಲಾಗಿದೆ. ಪುರಾತನರೆಲ್ಲರೂ ಮನಃಪೂರ್ವಕವಾದ ಶಿವಲಿಂಗ ಪೂಜಕರಾಗಿ ಮುಕ್ತಿಗೆ ಪಾತ್ರರಾದರೆಂದು ತಿಳಿಸಲಾಗಿದೆ.

'ಲಿಂಗರಾಜರ ಚರಿತ್ರೆ' ಮಕ್ಕಳಿಗೆ ಮಾರ್ಗದರ್ಶಿಯಾಗಬಲ್ಲ ಕಥನ ರೂಪದ ದೀರ್ಘಕೃತಿ. ಲಿಂಗರಾಜರು ತಮ್ಮ ಸಂಸ್ಥಾನದ ಆಸ್ತಿಯನ್ನೆಲ್ಲ ಧರ್ಮಾರ್ಥ ಕಾರ್ಯಕ್ಕೆ ಉಪಯೋಗಿಸಿದವರು. ಇವರೊಬ್ಬ ಐತಿಹಾಸಿಕ ವ್ಯಕ್ತಿಗಳಾಗಿದ್ದು, ತಮಗೆ ಸಂತಾನ ಭಾಗ್ಯ ಇಲ್ಲದ ಕಾರಣದಿಂದ ಸಂಸ್ಥಾನದ ಖರ್ಚು ಹೋಗಿ ಉಳಿದ ಹಣವನ್ನು ಲಿಂಗಾಯತರ ವಿದ್ಯಾಭಿವೃದ್ಧಿಗೆ, ಒಕ್ಕಲುತನದ ಅಭಿವೃದ್ಧಿಗೆ ವಿನಿಯೋಗಿಸುವಂತೆ ತಿಳಿಸಿದವರು. ದಾನ ಪುರುಷರಾದ ಲಿಂಗರಾಜರ ಚರಿತ್ರೆಯನ್ನು ಮಂಜಪ್ಪನವರು ಹೃದ್ಯವಾಗಿ ರಚಿಸಿದ್ದಾರೆ. ಈ ಕೃತಿ ರಚನೆಗೆ ವಿಜಯಪುರದ ಶ್ರೀ ಲಕ್ಕಪ್ಪ ಅವ್ವಪ್ಪ ಶಿರಹಟ್ಟಿ, ಶಿಗ್ಲಿಯ ಬಸವಪ್ಪ, ಕಮತಗಿಯ ಚನ್ನಮಲ್ಲಪ್ಪ, ಉಕ್ಕಲಿಯ ಭೀಮನಗೌಡರಿಂದ ವಿಚಾರಗಳ ಸಹಾಯ ಪಡೆದಿರುವದುಂಟು. ಹದಿನಾಲ್ಕು ಭಾಗಗಳಲ್ಲಿ ರಚನೆಗೊಂಡ ಈ ಕೃತಿ ಮಕ್ಕಳ ಮಟ್ಟವನ್ನು ಮೀರಿದ ದೀರ್ಘಕೃತಿ ಎನಿಸಿದರೂ ಸರಳವಾದ ಭಾಷೆ – ನಿರೂಪಣೆಗಳಿಂದ ಗಮನಸೆಳೆಯುತ್ತದೆ.

ಮಕ್ಕಳಿಗೆ ಐತಿಹಾಸಿಕ, ಧಾರ್ಮಿಕ ಮಹಾಪುರುಷರ ಚರಿತ್ರೆ – ತತ್ವಗಳು ತಿಳಿದಿರಬೇಕು ಎಂಬ ಹಂಬಲ ಮಂಜಪ್ಪನವರದು. ಈ ಕಾರಣವೇ ಬಸವೇಶ್ವರ, ಬುದ್ಧ, ಗಾಂಧಿ ಮುಂತಾದವರ ಚರಿತ್ರೆಗಳನ್ನು ಮಂಜಪ್ಪನವರು ರಚಿಸಿ ಪ್ರಕಟಗೊಳಿಸಿ ಪ್ರಸಾರ ಮಾಡಿದರು. ಇದರ ಫಲದ ಒಂದು ರೂಪ **ಭಗವಾನ ಬುದ್ಧನ ಚರಿತ್ರೆ.** ಈ ಕೃತಿಯು ಬುದ್ಧನ ಜೀವನ ಹಾಗೂ ಸಂದೇಶಗಳನ್ನು ತಿಳಿಯಪಡಿಸುತ್ತದೆ. ಬುದ್ಧನ ಜನನ, ಬಾಲ್ಯ, ಸಂಸಾರ ತ್ಯಾಗ, ತಪಸ್ಸು, ಉಪದೇಶ, ಶಿಷ್ಯಬಳಗ, ಬೋಧ ಪದ್ಧತಿ ಹಾಗೂ ಪರಿನಿರ್ವಾಣದ ವಿಚಾರಗಳನ್ನು ತಿಳಿಸುತ್ತದೆ. ಇದು ಕೂಡ ಸ್ವಲ್ಪ ದೀರ್ಘವಾದ ಕೃತಿಯಾಗಿದ್ದು ಓದಿಸಿಕೊಂಡು ಹೋಗುವ ಸರಳ ಬರವಣಿಗೆ ಹೊಂದಿದೆ.

ಧರ್ಮ ಬೋಧನೆಯ ಮಕ್ಕಳ ಸಾಹಿತ್ಯ ಕೃತಿಗಳಲ್ಲಿ ಮಂಜಪ್ಪನವರ **'ವೀರಶೈವ ಮತಬೋಧೆ'** ಎಂಬುದು ಮಹತ್ವದ ಕೃತಿ. ಈ ಕೃತಿ ರಚನೆಯ ವಿಚಾರವನ್ನು ಅವರು ಹೀಗೆ ವಿವರಿಸುತ್ತಾರೆ. "ವೀರಶೈವ ಬಾಲಕರಿಗೆ ನಮ್ಮ ಮತದ ಕೆಲವು ಮುಖ್ಯ ಸಂಗತಿಗಳಾದರು ಮೊದಲು ತಿಳಿದಿರಬೇಕಾದುದು ಅಗತ್ಯವಾದುದಾಗಿದೆ. ಆದರೆ ಈ ಪ್ರಕಾರ ತಿಳಿಸುವ ಪುಸ್ತಕಗಳು ಮಾತ್ರ ಈವರೆಗೆ ಇಲ್ಲದಿದ್ದುದರಿಂದ ಈ ಪುಸ್ತಕವನ್ನು ಬಾಲಕರಿಗಾಗಿಯೇ ಬರೆದು ಆದಷ್ಟು ಸುಲಭವಾದ ಭಾಷೆಯಲ್ಲಿ ವೀರಶೈವ ಮತದ ಮುಖ್ಯ ಮುಖ್ಯ ಸಂಗತಿಗಳನ್ನು ವಿವರಿಸಿದ್ದಾಗಿದೆ. ಈ ಪುಸ್ತಕವು

ಧರ್ಮಾಭಿಮಾನಿಗಳ ಸಹಾಯದಿಂದ ಶಾಲೆಯಲ್ಲಿರುವ ವೀರಶೈವ ಬಾಲಕರು ಓದುವಂತೆ ವ್ಯವಸ್ಥೆಯಾಗಬೇಕು" ಅವರ ಈ ಕಳಕಳಿ ಮಾತುಗಳು ಮಕ್ಕಳಿಗೆ ಧರ್ಮಸಂಗತಿಗಳು ಗೊತ್ತಿರಬೇಕು ಎಂಬುದಾಗಿದೆ. ಧಾರ್ಮಿಕ ಶಿಕ್ಷಣ ಏಕೆ ಬೇಕು? ನಮ್ಮ ಧರ್ಮ ಯಾವುದು? ವೀರಶೈವ ಮತವೆಂದರೇನು? ಅಷ್ಟಾವರಣಗಳು, ಪಂಚಾಚಾರಗಳು, ಷಟ್‌ಸ್ಥಲಗಳು ಹಾಗೂ ಬಸವಣ್ಣನವರ ನೀತಿಯ ಐದು ವಚನಗಳು – ಕುರಿತಾಗಿ ಕೃತಿಯಲ್ಲಿ ವಿಚಾರಗಳಿದ್ದು ಮಕ್ಕಳ ಮನಕ್ಕೆ ಮುಟ್ಟುವ ಸರಳ ಭಾಷೆಯಲ್ಲಿ ವಿವರಿಸಲಾಗಿದೆ.

'ಅಣ್ಣನ ಅರ್ಪಣಯೋಗ' ಎಂಬ ಚಿಕ್ಕ ಕೃತಿ ಪ್ರಶ್ನೋತ್ತರ ರೂಪದಲ್ಲಿದ್ದು ಅರ್ಪಣಯೋಗದ ಕುರಿತು ತಿಳಿಸುತ್ತದೆ. ಅರ್ಪಣಯೋಗ ಭಕ್ತಿಯೋಗದಲ್ಲಿ ವಿಕಾಸ ಹೊಂದಿದ್ದು ಶರಣರ ತ್ರಿವಿಧ ದಾಸೋಹ ನೀತಿಯನ್ನು ಪ್ರತಿಪಾದಿಸುತ್ತದೆ. ಈ ನೀತಿಯನ್ನು ಬಸವಣ್ಣನವರು ಹೆಚ್ಚು ಪ್ರಚಾರಕ್ಕೆ ತಂದರು. ಈ ಕಾರಣವೇ ಈ ಕೃತಿಗೆ ಅಣ್ಣನವರ ಅರ್ಪಣಯೋಗವೆಂದು ಹೆಸರಿಡಲಾಗಿದೆ. ಅರ್ಪಣಯೋಗ ಓದಿದಿರಾ ಎಂದು ಮಕ್ಕಳಿಗೆ ಕೇಳುವ ಮಂಜಪ್ಪನವರು 'ನಿಮ್ಮ ತನು–ಮನ–ಧನಗಳನ್ನು ಲೋಕ ಸೇವೆಗೆ ಸವಿಸಿರಿ' ಎಂಬ ಕರೆಯನ್ನು ನೀಡುತ್ತಾರೆ.

'ಶರಣ ಮಡಿವಾಳ ಮಾಚಿದೇವರ ಉಪದೇಶ' ಎಂಬುದು ಕಾಯಕ ತತ್ವದ ಮಹತ್ವವನ್ನು ತಿಳಿಸುವ ಕೃತಿ. ತೀರ ಸಣ್ಣದಾದ ಈ ಕೃತಿ ಮಾಚಿದೇವರ ಜೀವನ ಹಾಗೂ ವಚನಗಳ ಸಂದೇಶಗಳನ್ನು ಸಾರುತ್ತದೆ. ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಥನ ಹಾಗೂ ಉಪದೇಶದ ನಿರೂಪಣೆಯಲ್ಲಿ ಕೃತಿಯನ್ನು ರಚಿಸಲಾಗಿದೆ. ಶರಣರ ಬದುಕನ್ನು ಕುರಿತು ಮಕ್ಕಳು ತಿಳಿದುಕೊಳ್ಳಬೇಕೆಂಬ ಭಾವ ಇದರಲ್ಲಿದೆ.

ಪೂಜ್ಯನೀಯರು, ವಿದ್ಯಾಗುರುಗಳು ಆಗಿರುವ ಡಾ. ಎಂ.ಎಂ.ಕಲಬುರ್ಗಿಯವರನ್ನು ಕಳೆದುಕೊಂಡು ನಾವೆಲ್ಲ ಅನಾಥ ಪ್ರಜ್ಞೆಯನ್ನು ಅನುಭವಿಸುತ್ತಿದ್ದೇವೆ. ನಾನು ಓದು ಬರಹ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಮಾರ್ಗ ತೋರಿದವರು. ಅವರ ಸಮಗ್ರ ಸಾಹಿತ್ಯ ಪ್ರಕಟಣೆ ಯೋಜನೆಯಲ್ಲಿ ನಾನು ಪಾಲ್ಗೊಳ್ಳಲು ಅವಕಾಶ ಮಾಡಿಕೊಟ್ಟ ವಿದ್ಯಾಗುರುಗಳಾದ ಡಾ. ವೀರಣ್ಣ ರಾಜೂರ ಅವರಿಗೆ, ಹಿರಿಯರಾದ ಡಾ. ಎಂ.ಎಸ್.ಮದಭಾವಿ ಹಾಗೂ ಕೃಷ್ಣ ಕೊಲ್ಹಾರಕುಲಕರ್ಣಿ ಅವರಿಗೆ ಅನಂತ ಕೃತಜ್ಞತೆಗಳು.

❖❖

ಲಿಂಗಾಯತ ನೂತನ ಸಾಹಿತ್ಯರತ್ನ ಮಾಲೆ : ೩೧

ರಾಷ್ಟ್ರಧರ್ಮದ್ರಷ್ಟಾರ : ಹರ್ಡೇಕರ ಮಂಜಪ್ಪ

ಸಂಪುಟ : ೨

(ಹರ್ಡೇಕರ ಮಂಜಪ್ಪನವರ ಸಮಗ್ರ ಕೃತಿಗಳ ಸಂಗ್ರಹ, ವರ್ಗೀಕರಣ
ಮತ್ತು ವಿಮರ್ಶಾತ್ಮಕ ಟಿಪ್ಪಣಿ)

ಸಂಪಾದಕರು
ಎಂ. ಎಂ. ಕಲಬುರ್ಗಿ
ಮಲ್ಲಿಕಾರ್ಜುನ ಸಂ ಮೇತ್ರಿ

ಪ್ರಕಾಶಕರು
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ಎಡಯೂರು ತೋಂಟದಾರ್ಯ ಸಂಸ್ಥಾನಮಠ, ಗದಗ
೨೦೦೬

*

ಅನಿಕೇತನ

ಎಂ. ಎಂ. ಕಲಬುರ್ಗಿ

ಮಲ್ಲಿಕಾರ್ಜುನ ಮೇತ್ರಿ

ಹಣೆಯ ಮೇಲೆ ಬಸವಪ್ರಜ್ಞೆ-ಮೈಮೇಲೆ ಗಾಂಧಿಪ್ರಜ್ಞೆಗಳನ್ನು ಸಂಕೇತಿಸುವಂತೆ ವಿಭೂತಿ-ಖಾದಿ ವಿಭೂಷಿತರಾಗಿದ್ದ ಶ್ರೀ ಹರ್ಡೇಕರ ಮಂಜಪ್ಪನವರ ಸಮಗ್ರಸಾಹಿತ್ಯದ ದ್ವಿತೀಯ ಸಂಪುಟವಿದು. ಇಂದಿಗೆ ಸರಿಯಾಗಿ ನಾಲ್ಕು ದಶಕಗಳ ಹಿಂದೆ ೧೯೬೭ರಲ್ಲಿ ಡಾ. ಗ. ಸ. ಹಾಲಪ್ಪನವರು "ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ" ಹೆಸರಿನ ಬೃಹತ್ ಸಂಪುಟ ಪ್ರಕಟಿಸಿದರು. ಅದರ ಮುಂದುವರಿಕೆಯಾಗಿ ಈ ಸಂಪುಟ ಪ್ರಕಟವಾಗುತ್ತಲಿದ್ದು, ಅದನ್ನು ಪ್ರಥಮ ಸಂಪುಟವೆಂದು ಪರಿಗಣಿಸಿ, ಇದನ್ನು "ದ್ವಿತೀಯ ಸಂಪುಟ"ವೆಂದು ನಾವು ಕರೆದಿದ್ದೇವೆ. ಮಂಜಪ್ಪನವರ ಉಳಿದ ಪುಸ್ತಕಗಳನ್ನು ಶೋಧಿಸಿ, ಭವಿಷತ್ತಿನಲ್ಲಿ "ತೃತೀಯ ಸಂಪುಟ"ವನ್ನು ಹೊರತರುವುದು ಕನ್ನಡಿಗರ ಕರ್ತವ್ಯವಾಗಿದೆ.

ಮಂಜಪ್ಪನವರು ಲಿಂಗೈಕ್ಯರಾದುದು ೧೯೪೭ರಲ್ಲಿ. ಆ ಬಳಿಕ ಅವರನ್ನು, ಅವರ ಸಾಹಿತ್ಯವನ್ನು ಕುರಿತು ಸಣ್ಣ-ದೊಡ್ಡ ಅಧ್ಯಯನ ತಲೆಮಾರಿನಿಂದ ತಲೆಮಾರಿಗೆ ಸಾಗಿಬಂದಿದೆ. ಡಾ. ಶಿ. ಚೆ. ನಂದಿಮಠ, ಕುವೆಂಪು ಮೊದಲಾದ ಹಿರಿಯ ತಲೆಮಾರಿನವರು ಮಂಜಪ್ಪನವರನ್ನು ಕುರಿತು "ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪಣ್ಣನವರ ಸ್ಮಾರಕಗ್ರಂಥ" ಕೃತಿಯನ್ನು ೧೯೫೧ರಲ್ಲಿ ಬೆಳಕಿಗೆ ತಂದರು. ಎರಡನೆಯ ತಲೆಮಾರಿನಲ್ಲಿ ಡಾ. ಗ. ಸ. ಹಾಲಪ್ಪನವರು "ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ" ಹೆಸರಿನ ಬೃಹತ್ ಗ್ರಂಥ ಪ್ರಕಟಿಸಿದರು. ಶಿವಾನಂದ ಗುಬ್ಬಣ್ಣನವರ "ರಾಷ್ಟ್ರಧರ್ಮನಿಷ್ಠ ಹರ್ಡೇಕರ ಮಂಜಪ್ಪ" ಒಂದರ್ಥದಲ್ಲಿ ಈ ಪರಿಸರದ ಗ್ರಂಥವೇ ಆಗಿದೆ. ೧೯೮೮ ಹರ್ಡೇಕರ ಅವರ ಜನ್ಮಶತಮಾನೋತ್ಸವ ವರ್ಷ. ಕರ್ನಾಟಕ ಸರಕಾರ ಈ ಆಚರಣೆಯ ಅಂಗವಾಗಿ ಗೌರವಗ್ರಂಥ ಸಿದ್ಧಪಡಿಸುವ ಹೊಣೆಯನ್ನು ಡಾ. ಎಂ. ಎಂ. ಕಲಬುರ್ಗಿ ಅವರಿಗೆ ವಹಿಸಿಕೊಟ್ಟಿತು. ಮೂರನೆಯ ತಲೆಮಾರಿನ ಅಭ್ಯಾಸಿಯಾಗಿ ಅವರು ೪೫೦ ಪುಟಗಳ "ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ" ಗ್ರಂಥವನ್ನು ಸಂಪಾದಿಸಿಕೊಡುವ ಮೂಲಕ ಮಂಜಪ್ಪನವರ ಮಹತ್ವವನ್ನು ಕಿರಿಯ ತಲೆಮಾರಿನವರಲ್ಲಿ ಜೀವಂತವಾಗಿಟ್ಟರು. ಅದರ ಫಲವೆನ್ನುವಂತೆ ಡಾ. ಮಲ್ಲಿಕಾರ್ಜುನ ಮೇತ್ರಿಯವರು "ಕರ್ನಾಟಕ ಗಾಂಧಿ' ಹೆಸರಿನ ಪಿಎಚ್.ಡಿ. ಪ್ರಬಂಧವನ್ನು ರಚಿಸಿದರು.

"ಕರ್ನಾಟಕ ಗಾಂಧೀ ಹರ್ಡೇಕರ ಮಂಜಪ್ಪ" ಗೌರವಗ್ರಂಥ ಸಿದ್ಧಪಡಿಸುವ ಸಂದರ್ಭದಲ್ಲಿ, ಈ ಎರಡನೆಯ ಸಂಪುಟವನ್ನು ರೂಪಿಸುವ ಅಭೀಪ್ಸೆ ಡಾ. ಕಲಬುರ್ಗಿಯವರಲ್ಲಿ ಮೂಡಿತು. ಆಗ ಅವರಿಗೆ ಕಾಡಿದ ಮೊದಲ ಪ್ರಶ್ನೆ, ಹರ್ಡೇಕರ ಅವರ ಕೃತಿ ಸಂಖ್ಯಾನಿರ್ಣಯ ಮತ್ತು ಅವುಗಳ ಶೋಧ. ಮಂಜಪ್ಪನವರೇ ಕೃತಿನಾಮವನ್ನು ಕೆಲವೊಮ್ಮೆ ಆವೃತ್ತಿಯಿಂದ ಆವೃತ್ತಿಗೆ ಸ್ವಲ್ಪ

ವ್ಯತ್ಯಾಸಗೊಳಿಸಿದ್ದಾರೆ. ಸಾಲದುದಕ್ಕೆ ಮುಂದಿನ ಅಭ್ಯಾಸಿಗಳು ಬೇರೊಬ್ಬರ ಕೃತಿಗಳನ್ನು ಅವರ ತಲೆಗೆ ಕಟ್ಟಿದ್ದಾರೆ. ಹೀಗಾಗಿ ಅವರ ಕೃತಿ ಸಂಖ್ಯಾನಿರ್ಣಯ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಪರಿಹಾರಕ್ಕೆ ಪ್ರಯತ್ನಿಸಿ ಡಾ. ಕಲಬುರ್ಗಿಯವರು "ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ –ಸಂಪುಟದಲ್ಲಿ ೪೦ ಗ್ರಂಥಗಳನ್ನು ಅಳವಡಿಸಲಾಗಿದೆ. ಅಲ್ಲಿಯೇ ಮಂಜಪ್ಪನವರ ಕೃತಿ ಸಂಖ್ಯೆ ೫೦ ಎಂಬ ಸೂಚನೆ ಇದೆ. ಮಂಜಪ್ಪನವರನ್ನು ಕುರಿತು ಪಿಎಚ್. ಡಿ. ಅಧ್ಯಯನ ಮಾಡಿರುವ ಶ್ರೀ ಶಿವಾನಂದ ಗುಬ್ಬಣ್ಣನವರ ಪ್ರಕಾರ ಅವರ ಕೃತಿ ಸಂಖ್ಯೆ ೫೫. ಆದರೆ ನನ್ನ ಶೋಧದ ಪ್ರಕಾರ ಅವರು ಬರೆದ ಕೃತಿಗಳು ೮೦" ಎಂದು ಒಂದು ಕರಪತ್ರದಲ್ಲಿ ಸ್ಪಷ್ಟಪಡಿಸಿದುದಲ್ಲದೆ, "ಮಂಜಪ್ಪನವರ ಸಾಹಿತ್ಯ : ಸ್ವರೂಪ–ಸಂಖ್ಯೆ" ಲೇಖನ ಬರೆದು, ತಾವು ಸಂಪಾದಿಸಿದ ಗೌರವಗ್ರಂಥದಲ್ಲಿ ಪ್ರಕಟಿಸಿದರು. ಅದರಲ್ಲಿ ಡಾ. ಹಾಲಪ್ಪನವರ ಸಂಪುಟದಲ್ಲಿ ಸೇರ್ಪಡೆಯಾದ ಗ್ರಂಥ, ಸೇರ್ಪಡೆಯಾಗದ ಗ್ರಂಥ ಎಂಬ ಎರಡು ಪಟ್ಟಿಗಳನ್ನೇ ಸಿದ್ಧಪಡಿಸಿ, ಸೇರ್ಪಡೆಯಾಗದ ಗ್ರಂಥಗಳ ಶೋಧ ನಡೆಸಿದರು. ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ಹರಿಹರ, ದಾವಣಗೇರಿ, ಆಲಮಟ್ಟಿ, ಬಾಗಲಕೋಟ, ಸಿಂದಗಿ, ಹುನಗುಂದ, ಬಂಥನಾಳಗಳಲ್ಲಿ ಪ್ರಯತ್ನಿಸಿದ ಫಲವಾಗಿ ಕೆಲವು ಗ್ರಂಥಗಳು ಲಭ್ಯವಾದವು. ಬಳಿಕ ಪಿಎಚ್. ಡಿ. ಅಧ್ಯಯನ ಕೈಕೊಂಡ ಡಾ. ಮಲ್ಲಿಕಾರ್ಜುನ ಮೇತ್ರಿಯವರು ಕೆಲವು ಗ್ರಂಥಗಳನ್ನು ಹುಡುಕಿದರು. ಹೆಚ್ಚಿನದಾಗಿ ಒಂದಿಷ್ಟು ಪತ್ರಿಕೆ, ವರದಿಗಳೂ ಲಭಿಸಿದವು. ಇವೆಲ್ಲವನ್ನು ಸಂಯೋಜಿಸಿ, ವರ್ಗೀಕರಿಸಿ, ಪ್ರಕಟಿಸುತ್ತಿರುವುದರ ಫಲ, ಈ ಸಂಪುಟ. ಪುನರುಕ್ತವಾದರೂ ಓದುಗರಿಗೆ ಅಗತ್ಯವೆಂಬ ದೃಷ್ಟಿಯಿಂದ "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಹೆಸರಿನ ಅವರ ಆತ್ಮಚರಿತ್ರೆಯೂ ಇಲ್ಲಿ ಒಳಗೊಂಡಿದೆ. ಒಟ್ಟಾರೆ ಈ ಸಂಪುಟದಲ್ಲಿ ಸೇರ್ಪಡೆಯಾದ ಗ್ರಂಥ, ಪತ್ರಿಕೆ, ವರದಿಗಳು ಹೀಗಿವೆ:

ಭಾಗ ೧ : ಆತ್ಮಚರಿತ್ರೆ

೧. ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ (ಕ್ರೌನ್ V – ೧೬೦)
(ಆತ್ಮಚರಿತ್ರೆಯ ಮುಂದುವರಿದ ಭಾಗ ಸಹಿತ)

ಭಾಗ ೨ : ರಾಷ್ಟ್ರೀಯ ಸಾಹಿತ್ಯ

೨. ಖಾದಿಶಾಸ್ತ್ರ (ಕ್ರೌನ್ VI – ೧೧೦)

ಭಾಗ ೩ : ಸಾಮಾಜಿಕ ಸಾಹಿತ್ಯ

೩. ಪತಿತೋದ್ಧಾರ* (ಕಿಸೆ ಆವೃತ್ತಿ VI – ೪೧)
೪. ಅಹಿಂಸೆ (ಕ್ರೌನ್ ೨೨)
೫. ಆಧುನಿಕ ಜರ್ಮನಿ (ಕ್ರೌನ್ II – ೪೨)
೬. ವೀರಶೈವ ಮತತತ್ವ (ಕ್ರೌನ್ VI – ೪೨)
೭. ವೀರಶೈವ ಸಮಾಜ ಸುಧಾರಣೆ (ಕ್ರೌನ್ VI – ೭೭)
೮. ವೀರಶೈವ ಏಕೀಕರಣ (ಕಿಸೆ ಆವೃತ್ತಿ – ೨೯)

---

* ಈ ಪುಸ್ತಕದ ಮುಖಪುಟ ಒಳಪುಟಗಳ ಮೇಲೆ ವೆಂಕಟೇಶ ಸಿರಶೀಕರ ಎಂದು ಲೇಖಕರ ಹೆಸರು ಮುದ್ರಣಗೊಂಡಿದೆ.(ಕರ್ನಾಟಕ ಗಾಂಧಿ–ಮಲ್ಲಿಕಾರ್ಜುನ ಮೇತ್ರಿ, ಪುಟ. ೨೦ ಅ.ಟಿ. ನೋಡಿ)

ಭಾಗ ೪ : ಮಕ್ಕಳ ಸಾಹಿತ್ಯ

೯. ಅರವತ್ಮೂರು ಪುರಾತನರ ಚರಿತ್ರೆ (ಕಿಸೆ ಆವೃತ್ತಿ IV – ೬೩)

೧೦. ತ್ಯಾಗವೀರ ಲಿಂಗರಾಜರ ಚರಿತ್ರೆ (ಕ್ರೌನ್ IV – ೯೨)

೧೧. ಭಗ್ಗವಾನ ಬುದ್ಧ ಚರಿತ್ರೆ (ಕ್ರೌನ್ VI – ೭೪+೮)

೧೨. ವೀರಶೈವ ಮತಬೋಧೆ (ಡೆಮ್ಮಿ IV + ೩೪+೨)

೧೩. ಅಣ್ಣನ ಅರ್ಪಣಯೋಗ (ಕಿಸೆ ಆವೃತ್ತಿ II – ೩೨)

೧೪. ಮಡಿವಾಳ ಮಾಚಿದೇವನ ಉಪದೇಶ (ಕಿಸೆ ಆವೃತ್ತಿ II – ೧೨)

ಭಾಗ ೫ : ಸೃಜನ – ಸಂಪಾದನ ಸಾಹಿತ್ಯ

೧೫. ಜನಸೇವಕನ ವಚನಗಳು (ಕಿಸೆ ಆವೃತ್ತಿ – ೧೦)

೧೬. ಪ್ರಮಥಾಚಾರ ದೀಪಿಕೆ (ಕ್ರೌನ್ IX – ೪೯)

೧೭. ವಚನಕಾರರ ಸಮಾಜರಚನೆ (ಡೆಮ್ಮಿ XII – ೪೬)

೧೮. ಬಸವ ಸಂದೇಶ (ಕಿಸೆ ಆವೃತ್ತಿ –೨೨)

೧೯. ಭಕ್ತಿಯ ಬೆಳಕು (ಕಿಸೆ ಆವೃತ್ತಿ – ೩೨)

೨೦. ಮಹಾನುಭಾವರಾದ ಬಸವಣ್ಣನವರ ಉಪಮೆಗಳು (ಕ್ರೌನ್ IV – ೨೪)

೨೧. ಸುಬೋಧಸಾರ (ಕ್ರೌನ್ – ೧೩೬)

೨೨. Social structure of the Veerashaiva saints* ಕ್ರೌನ್ XII – ೭೨)

---

* ಇದು ಮಂಜಪ್ಪನವರು ಸಂಪಾದಿಸಿದ್ದ "ವಚನಕಾರರ ಸಮಾಜ ರಚನೆ" ಪುಸ್ತಕದ ಇಂಗ್ಲಿಷ್ ಅನುವಾದ. ಅನುವಾದಕರು ಶ್ರೀ ಸ್ವಾಮಿರಾವ್ ಬೋಂದಾಡೆ. ಇದಲ್ಲದೆ ಮಂಜಪ್ಪನವರ ವೀರಶೈವ ಮತಬೋಧೆ(ಮರಾಠಿ, ತೆಲಗು), ಬುದ್ಧಿಯ ಮಾತು(ಮರಾಠಿ), ಸ್ತ್ರೀನೀತಿ ಸಂಗ್ರಹ(ಮರಾಠಿ), ಬಸವ ಬೋಧಾಮೃತ(ಮರಾಠಿ, ಲೋಹಾರ ರಂಗನಾಥ ಅವರು ಮರಾಠಿಗೆ ಅನುವಾದಿಸಿರುವ "ಸಟೀಕ ವ ಸಾರ್ಥ ಬಸವಬೋಧೆ" ಇವರಿಂದ ಭಿನ್ನವೇ?), ಬಸವ ಚರಿತ್ರೆ("Basava TheDimention of Universal man")ಅಹಿಂಸೆ(ಉರ್ದು. ಮಂಜಪ್ಪನವರು ರಾಯಚೂರಿನಲ್ಲಿ ಮಾಡಿದ ಭಾಷಣವನ್ನು ಶ್ರೀ ಕಿಶನ್ ರಾವ್ ವಕೀಲರು ಉರ್ದು ಭಾಷೆಯಲ್ಲಿ ಬರೆದುಕೊಂಡಿದ್ದರು. ಅಪ್ರಕಟಿತ)ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ ಪುಸ್ತಕದ ೯೩ನೆಯ ಪುಟದಲ್ಲಿ "ಕೆಲವು ಚಿಕ್ಕ ಪುಸ್ತಕಗಳು ಉರ್ದು ಮತ್ತು ಹಿಂದಿ ಭಾಷೆಗಳಲ್ಲಿ ಅನುವಾದಿಸಲ್ಪಟ್ಟವು" ಎಂದು ಹೇಳಲಾಗಿದೆ.

ಮಂಜಪ್ಪನವರು ಅನ್ಯರಿಂದ ಬರೆಯಿಸಿ ಪ್ರಕಟಿಸಿದ ಗ್ರಂಥಗಳು ಹೀಗಿವೆ: ೧. ಸತ್ಯಾಗ್ರಹಿ ಬಸವೇಶ್ವರ(ಹಿಂದಿ, ಮರಾಠಿ–ಈ ಎರಡೂ ಭಾಷೆಗಳಲ್ಲಿ ಬರೆದವರು ಶ್ರೀ ಲಕ್ಷ್ಮಣ ಭಿಡೆ.) ಇವುಗಳಲ್ಲಿ ಹಿಂದಿ ಕೃತಿಯನ್ನು ೧೯೨೪ರಲ್ಲಿ ಗಾಂಧಿ, ಸರೋಜಿನಿ ನಾಯ್ಡು ಅವರಿಗೆ ಬೆಳಗಾವಿ ಅಧಿವೇಶನದಲ್ಲಿ ಕೊಡಲಾಯಿತು. ಇದೇ ಭಿಡೆಯವರು ಮಂಜಪ್ಪನವರ "ಶ್ರೀ ಬಸವೇಶ್ವರನ ಚರಿತ್ರೆಯು" ಪುಸ್ತಕವನ್ನಾಧರಿಸಿ "ವೀರಶೈವ ಮತೋದ್ಧಾರಕ ಶ್ರೀ ಬಸವೇಶ್ವರ" ಹೆಸರಿನ ಲೇಖನವನ್ನು "ಚಿತ್ರಮಯ ಜಗತ್" ಮಾಸಿಕ ೧೯೨೫ ಜುಲೈದಲ್ಲಿ ಪ್ರಕಟಿಸಿದ್ದರು. ಇದನ್ನು ಚನ್ನಪ್ಪ ಫಕೀರಪ್ಪ ಪಾಟೀಲ, ಅ. ಮಾಸ್ತರ ಚಚಡಿ ಅವರು ಕನ್ನಡಕ್ಕೆ ಅನುವಾದಿಸಿ ೧೯೨೬ರಲ್ಲಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ೨. ಬಾರಹವೇ ಶತಾಬ್ದಿಕಾ ಕರ್ನಾಟಕಕಾ ಸತ್ಯಾಗ್ರಹಿ(ಹಿಂದಿ), ೩. ವಿವೇಕಾನಂದ(ಸಿಂದಗಿ ಸಿದ್ದಣ್ಣ), ೪. ಪುಲಿಕೇಶಿ(ಕಲ್ಯಾಣಪ್ಪ ಬ್ಯಾಳಿ), ೫. ರಾಷ್ಟ್ರಗೀತೆ(ಕಲ್ಯಾಣಪ್ಪ ಬ್ಯಾಳಿ).

ಅನುಬಂಧ : ೧

೧. ಆರ್ಯತೇಜ (ಕ್ರೌನ್ II – ೬೨)

೨. ಶಿಕ್ಷಣ (ಡೆಮ್ಮಿ – ೬೨)

೩. ವ್ಯಾಪಾರ ಶಿಕ್ಷಕ (ಕ್ರೌನ್ – VII-IV +೫೨)

ಅನುಬಂಧ : ೨

ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು

ಹರ್ಡೇಕರ ಮಂಜಪ್ಪನವರ ಕೃತಿಗಳು

ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಇದು ಈ ಸಂಪುಟದ ವಿನ್ಯಾಸ ಇಲ್ಲಿ ಪ್ರತಿಯೊಂದು ವಿಭಾಗದ ಆರಂಭದಲ್ಲಿ ನಮ್ಮ ಟಿಪ್ಪಣಿ ಸೇರಿಸಿದ್ದು, ಇದು ಓದುಗರಿಗೆ ಪ್ರವೇಶದಂತೆ ನೆರವಾಗುವುದೆಂದು ಬೇರೆ ಹೇಳಬೇಕಿಲ್ಲ.

ಈ ೨ನೆಯ ಸಂಪುಟದಲ್ಲಿ ಸೇರದ ಅಂದರೆ ನಮಗೆ ಲಭ್ಯವಾಗದ ಹರ್ಡೇಕರ ಅವರ ಪುಸ್ತಕಗಳು ಹೀಗಿವೆ :

೧. ಅಪ್ಪಾಸಾಹೇಬ ವಾರದ (೧೯೦೯)
೨. ಏಕಲವ್ಯ
೩. ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ
೪. ಕೈ. ಅಪ್ಪಾಸಾಹೇಬ ವಾರದ (ವಿಸ್ತೃತ ಆವೃತ್ತಿ ೧೯೧೭)
೫. ಖಾದಿ
೬. ಚೆನ್ನಬಸವಣ್ಣನವರ ಉಪದೇಶ
೭ ದೀನಬಂಧು ಆಂಡ್ರೂಸ್
೮. ದೇವಯಾನಿ (ಇದು ಮತ್ತು 'ಕಚದೇವನ ಕಥೆ' ಒಂದೇ ಇರಬಹುದೆ?)
೯. ಬಸವೇಶ್ವರನ ನೈತಿಕ ವಚನಗಳು
೧೦. ಬ್ರಹ್ಮಚರ್ಯ
೧೧. ಮಹಾದೇವಿಯಕ್ಕನ ಚರಿತ್ರೆ (ಇದು "ಅಕ್ಕನ ಉಪದೇಶ" ಒಂದೇ ಇರಬಹುದೆ?)
೧೨. ಮಹಾತ್ಮಾಗಾಂಧಿ ಪ್ರಣೀತ ಸತ್ಯಾಗ್ರಹಧರ್ಮ
೧೩. ಲಿಂಗವಂತರ ಪ್ರಾಚೀನತ್ವ (ಇದು ಮತ್ತು 'ಮಹಾತ್ಮಾಗಾಂಧಿ ಪ್ರಣೀತ ಸತ್ಯಾಗ್ರಹಧರ್ಮ' ಒಂದೇ ಇರಬಹುದೇ?)
೧೪. ಸತ್ಯಾಗ್ರಹ ಪದ್ಯಾವಳಿ
೧೫. ಸಿದ್ಧರಾಮ ಶಿವಯೋಗಿಗಳ ಉಪದೇಶ
೧೬. ಸುಕಲಾದೇವಿ

೧೯. ಋಗ್ವೇದ ಸಾರ (ಇದು ಅಲಭ್ಯ ಹಸ್ತಪ್ರತಿ)*

೨೦. ಹಳ್ಳಿಯ ಸಂಚಾರ (ಇದು ಅಲಭ್ಯ ಹಸ್ತಪ್ರತಿ)

೨೧. ಸತ್ಯಾಗ್ರಹ ಪ್ರಕಾಶಿಕೆ (ಇದು ಅಲಭ್ಯ ಹಸ್ತಪ್ರತಿ)

ಇವುಗಳೊಂದಿಗೆ ದಾವಣಗೇರಿಯಲ್ಲಿ ಮುದ್ರಿಸಿ ಹಂಚಿದ ಕರಪತ್ರ ಸ್ವರೂಪದ ಕಿರುಕೃತಿಗಳಾಗಿರಬಹುದಾದ ೨೨. ನಿಜಗುಣಾರ್ಯ, ಸರ್ಪಭೂಷಣ ಶಿವಯೋಗಿಗಳ ಪದ್ಯ ೨೩. ಬಸವೇಶ್ವರರ ನಾಲ್ಕಾರು ನೈತಿಕ ವಚನ – ಇವುಗಳನ್ನೂ ಪರಿಗಣಿಸಬಹುದಾಗಿದೆ. ಮಂಜಪ್ಪನವರ ವಾಸಸ್ಥಳಗಳಲ್ಲಿ, ಸಂಚರಿಸಿದ ಪ್ರದೇಶಗಳಲ್ಲಿ ಹುಡುಕಿದರೂ ಇವು ಲಭ್ಯವಾಗಲಿಲ್ಲ. ಮುಂದಿನ ತಲೆಮಾರಿನ ವಿದ್ವಾಂಸರು ಇವುಗಳನ್ನೂ, ಇರಬಹುದಾದ ಬೇರೆ ಕೃತಿಗಳನ್ನೂ ಶೋಧಿಸಿ ಹೊಸ ಸಂಪುಟವನ್ನು ರೂಪಿಸಿದರೆ ಮಾತ್ರ ಮಂಜಪ್ಪನವರ ಸಮಗ್ರಸಾಹಿತ್ಯ ಪ್ರಕಟನೆಗೆ ಪೂರ್ಣವಿರಾಮ ಪ್ರಾಪ್ತವಾಗುತ್ತದೆ.

ಮಂಜಪ್ಪನವರು ಪುಸ್ತಕ ರಚನೆಯಲ್ಲದೆ ಆರು ಪತ್ರಿಕೆಗಳ ಸಂಪಾದಕರಾಗಿಯೂ ಗಣ್ಯ ಕೆಲಸ ಮಾಡಿದ್ದಾರೆ.

೧. ಧನುರ್ಧಾರಿ (ವಾರಪತ್ರಿಕೆ ೧೯೦೬ ರಿಂದ ೧೯೧೪)

೨. ಖಾದಿ ವಿಜಯ (ಮಾಸಪತ್ರಿಕೆ ೧೫ ಅಗಷ್ಟ ೧೯೨೮ ರಿಂದ ೧೯೨೯)

೩. ಉದ್ಯೋಗ (ಮಾಸಪತ್ರಿಕೆ ೧೫ ಫೆಬ್ರುವರಿ ೧೯೩೦ ರಿಂದ ೧೯೩೨)

೪. ಶರಣಸಂದೇಶ (ವಾರಪತ್ರಿಕೆ ೧೭ ಅಗಷ್ಟ ೧೯೩೧ ರಿಂದ ೧೯೪೬)

೫. ವಿದ್ಯಾಲಯ ಪತ್ರಿಕೆ (ಖಾಸಗಿ ಪತ್ರಿಕೆ)

೬. ಬಾಲಸಂಗಯ್ಯ (ಖಾಸಗಿ ಪತ್ರಿಕೆ)

ಮಂಜಪ್ಪನವರ ಗ್ರಂಥಸಾಹಿತ್ಯದ ಬಗ್ಗೆ ಒಂದಿಷ್ಟು ಅಭ್ಯಾಸಮಾಡಿರುವ ವಿದ್ವಾಂಸರು, ಅವರ ಪತ್ರಿಕಾಸಾಹಿತ್ಯವನ್ನು ಉಪೇಕ್ಷಿಸಿದ್ದಾರೆ. ಸಾಮಾನ್ಯೀಕರಣ ಧೋರಣೆಯ ಸಾಹಿತ್ಯಕ್ಕಿಂತ ನಿರ್ದಿಷ್ಟೀಕರಣ ಧೋರಣೆಯ ಪತ್ರಿಕಾಸಾಹಿತ್ಯವು ಸಮಾಜದ ಶುದ್ಧೀಕರಣ, ನವೀಕರಣಗಳಿಗೆ ಸಂಬಂಧಿಸಿದಂತೆ ಮುಖ್ಯಪಾತ್ರವಹಿಸುತ್ತದೆ. ಚಿಂತಕರಾಗಿರುವ ಮಂಜಪ್ಪನವರ ಕಾಣಿಕೆ ಈ ಕ್ಷೇತ್ರಕ್ಕೆ ತುಂಬ ಬೆಲೆಯುಳ್ಳದಾಗಿರುವುದರಿಂದ, ಇವುಗಳ ಎಲ್ಲ ಸಂಚಿಕೆಗಳ ಶೋಧ–ಅಧ್ಯಯನ ಭವಿಷತ್ತಿನಲ್ಲಿ ಜರುಗುವುದು ಅವಶ್ಯವಿದೆ.

* * *

ಮಂಜಪ್ಪನವರದು ಸರ್ವಜ್ಞನಂತೆ ಅನಿಕೇತನ ಪ್ರಜ್ಞೆ, ಪರಿವ್ರಾಜಕ ಪ್ರವೃತ್ತಿ. ಹುಟ್ಟಿದ್ದು ಬನವಾಸಿಯಲ್ಲಿ (೧೮೮೬) ಅದನ್ನು ಬಿಟ್ಟು, ಪ್ರಾಥಮಿಕ ಶಿಕ್ಷಕನಾದದ್ದು ಶಿರಸಿಯಲ್ಲಿ. ಅದನ್ನು ಬಿಟ್ಟು, ಪತ್ರಿಕೆ ಆರಂಭಿಸಿದ್ದು ದಾವಣಗೆರೆಯಲ್ಲಿ. ಅದನ್ನು ಬಿಟ್ಟು 'ಸತ್ಯಾಗ್ರಹ ಆಶ್ರಮ' ಸ್ಥಾಪಿಸಿ

---

* ೪೦೦ ಪು ವ್ಯಾಪ್ತಿಯ ಈ ಹಸ್ತಪ್ರತಿ ಇಂದು ಕಳೆದು ಹೋಗಿದ್ದರೂ, ಇದರ ಒಂದು ಭಾಗ "ವಿಶ್ವೋತ್ಪತ್ತಿಯ ವಿವೇಚನೆ" ಎಂಬುದು "ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ"ದಲ್ಲಿ ಪ್ರಕಟವಾಗಿದೆ.

ಕೆಲವು ದಿನ ವಾಸವಾದದ್ದು ಹರಿಹರದಲ್ಲಿ. ಅದನ್ನೂ ಬಿಟ್ಟು, 'ವೀರಶೈವ ವಿದ್ಯಾಲಯ' ಆರಂಭಿಸಿದ್ದು-ಲಿಂಗೈಕ್ಯರಾದದ್ದು ಆಲಮಟ್ಟಿಯಲ್ಲಿ. ನಿಧನರಾದ ಬಳಿಕವೂ ಈ ಸ್ಥಳಾಂತರ ಪ್ರಕ್ರಿಯೆ ಅವರ ಬೆನ್ನು ಬಿಡಲಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಮುಳುಗಲಿದ್ದ ಕಾರಣ, ಅಸ್ಥಿಸಹಿತ ಅವರ ಸಮಾಧಿಯನ್ನು ಅಲ್ಲಿಯೇ ಮತ್ತೊಂದು ಜಾಗಕ್ಕೆ ಸ್ಥಳಾಂತರಿಸಲಾಯಿತು. ಹೀಗೆ ವಿಧಿ, ಅವರನ್ನು ಬದುಕಿರುವಾಗಲೂ ಸತ್ತ ಮೇಲೆಯೂ ಒಂದು ಕಡೆ ನಿಲ್ಲಗೊಡಲಿಲ್ಲ.

ಕರ್ನಾಟಕದ ಒಳ ಹೊರಗೆ ಅವರಷ್ಟು ಸಂಚರಿಸಿದವರು ಮತ್ತೊಬ್ಬರಿಲ್ಲ. ಪುಣೆಯಲ್ಲಿ ಲೋಕಮಾನ್ಯ ಟಿಳಕ (೧೯೧೪) ವಿಜಾಪುರದಲ್ಲಿ ರಾಜಗೋಪಾಲಾಚಾರ್ಯ (೧೯೨೩), ಸಾಬರಮತಿಯಲ್ಲಿ ಮಹಾತ್ಮಾಗಾಂಧಿ (೧೯೨೪)ಯವರನ್ನು ಕಂಡರು. ೧೯೨೪ರಂದು ಬೆಳಗಾವಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ, ೧೯೩೪ರಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗಾಂಧಿಜೀಯವರ ಜೊತೆ ದಿನಗಳೆದರು. ಟಿಳಕರಿಂದ ಪ್ರಭಾವಿತರಾಗಿ, ಗಾಂಧೀಜಿಯವರನ್ನು ಆದರ್ಶವಾಗಿಟ್ಟುಕೊಂಡು, ಬಸವಣ್ಣನವರ ಬೆಳಕಿನಲ್ಲಿ ಮುನ್ನಡೆದ ಮಂಜಪ್ಪನವರು ತಮ್ಮ ಬದುಕನ್ನು ಒಂದು ವ್ರತವೆಂದೇ ಪರಿಭಾವಿಸಿದ್ದರು. ಇಂಥ ಬದುಕಿನ ರೀತಿ-ನೀತಿಗಳನ್ನು ವಿವರಿಸುವ ಅವರ "ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ" ಹೆಸರಿನ ಆತ್ಮಚರಿತ್ರೆಯು ಗಾಂಧೀಜಿಯವರ ಆತ್ಮಚರಿತ್ರೆ ಓದಿದ ಅನುಭವ ನೀಡುತ್ತದೆ. ಪ್ರಾಮಾಣಿಕತೆಯನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ಕೃತಿ ವ್ಯಕ್ತಿಚರಿತ್ರೆಯಾಗಿ ಉಳಿಯದೆ, ಪರಿಸರದ ಚರಿತ್ರೆಯಾಗಿ ಬೆಳೆದಿದೆ. ಇಂದಿಗೂ ತನ್ನ ಮೌಲ್ಯ-ಆಕರ್ಷಣೆ ಉಳಿಸಿಕೊಂಡಿದೆ.

೨೦ನೆಯ ಶತಮಾನ, ಭಾರತವು ಧರ್ಮದ ನೆಲೆಯಿಂದ ರಾಷ್ಟ್ರಧರ್ಮದ ನೆಲೆಗೆ ಸರಿಯುತ್ತಲಿದ್ದ ಸಂದರ್ಭ. ಲಿಂಗಾಯತರಲ್ಲಿ ಸಮಾಜಪ್ರಜ್ಞೆ ಎಚ್ಚರಗೊಂಡಿದ್ದ ಆ ಕಾಲದಲ್ಲಿ ಸಹಜವಾಗಿಯೇ ಸಮಾಜಮುಖಿಯಾಗಿದ್ದ ಮಂಜಪ್ಪನವರು ರಾಷ್ಟ್ರಪ್ರಜ್ಞೆಗೂ ವಿಸ್ತರಿಸಿಕೊಂಡುದು ಅವರ ಮುಕ್ತದೃಷ್ಟಿಯನ್ನು ದ್ಯೋತಿಸುತ್ತದೆ. ಗಾಂಧೀಜಿಯವರ ಬದುಕಿನಿಂದ, ಸಮಕಾಲೀನ ಕನ್ನಡ, ಮರಾಠಿ, ಹಿಂದಿ ಬರವಣಿಗೆಗಳಿಂದ ಈ ಪ್ರಜ್ಞೆಯನ್ನು ಬೆಳೆಸಿಕೊಂಡಿದ್ದರೂ ಅದರ ಬಗ್ಗೆ ತಮ್ಮದೇ ಆದ ದೃಷ್ಟಿಕೋನ ಹೊಂದಿದ್ದರು. "ಭಾರತೀಯರ ದೇಶಭಕ್ತಿ" ಮೊದಲಾದ ಗ್ರಂಥಗಳು ಈ ಮಾತಿಗೆ ನಿದರ್ಶನವೆನಿಸಿವೆ. ಇವರ 'ಖಾದಿಶಾಸ್ತ್ರ' ಸ್ವದೇಶೀ ಪ್ರಜ್ಞೆಯ ಒಂದು ಭಾಗವಾಗಿದ್ದು, ಖಾದಿಯ ಮಹತ್ವವನ್ನು ಭೌತಿಕ, ಅಭೌತಿಕ ನೆಲೆಗಳಲ್ಲಿ ಪ್ರತಿಪಾದಿಸುತ್ತದೆ. ಖಾದಿಯ ಮಹತ್ವವನ್ನು ದಾರ್ಶನಿಕ ನೆಲೆಯಲ್ಲಿ ಅರ್ಥಮಾಡಿಕೊಂಡವರೆಂಬ ಕಾರಣದಿಂದಾಗಿ ಆಲೂರ ವೆಂಕಟರಾಯರು ಈ ಗ್ರಂಥವನ್ನು ಮಂಜಪ್ಪನವರಿಂದ ಬರೆಯಿಸಿ, ತಮ್ಮ 'ನವಜೀವನಗ್ರಂಥಮಾಲೆ'ಯಲ್ಲಿ ಪ್ರಕಟಿಸಿದರು.

ಮಂಜಪ್ಪನವರು ಬರೆದ ಸಾಮಾಜಿಕ ಸಾಹಿತ್ಯವು ಕರ್ನಾಟಕದಲ್ಲಿ ಹುಟ್ಟಿದ ಈ ಬಗೆಯ ಸಾಹಿತ್ಯದ ಬೆಲೆಯುಳ್ಳ ಭಾಗವಾಗಿದೆ. ಇಲ್ಲಿ ಮಾನವಿಕ ನೆಲೆಯ 'ಅಹಿಂಸೆ' ಕೃತಿಯನ್ನು ಬಿಟ್ಟರೆ, 'ಪತಿತೋದ್ಧಾರ' ನೇರವಾಗಿ ಸಾಮಾಜಿಕ ನೆಲೆಯ, ವೀರಶೈವ ಮತತತ್ತ್ವ, ವೀರಶೈವ ಸಮಾಜಸುಧಾರಣೆ, ವೀರಶೈವ ಏಕೀಕರಣ ಕೃತಿಗಳು ವೀರಶೈವ ಸಾಮಾಜಿಕ ನೆಲೆಯ ರಚನೆಗಳಾಗಿವೆ. 'ಆಧುನಿಕ ಜರ್ಮನಿ'ಯು ವಿದೇಶೀ ಸಾಮಾಜಿಕ ಜೀವನ ಪದ್ಧತಿ, ಅಲ್ಲಿಯ ಪುನರುಜ್ಜೀವನ ತಿಳಿಸುತ್ತದೆ. ಅಹಿಂಸೆಯನ್ನು, ಪತಿತರನ್ನು, ವೀರಶೈವರನ್ನು, ವಿದೇಶಿಯರನ್ನು ಕುರಿತು ನಡೆಸಿದ ಇಲ್ಲಿಯ

ಚಿಂತನೆಯಲ್ಲಿ ಸಾಮಾಜಿಕತೆಯ ಒಂದು ಏಕಸೂತ್ರತೆ ಕಂಡುಬರುತ್ತದೆ. ಮಾನವೀಯತೆಯಿಂದ ಸಾಮಾಜಿಕತೆಯನ್ನು ಬಿಡಿಸಿ ನೋಡಿದ ವೈಜ್ಞಾನಿಕತೆ, ಸುಧಾರಣೆಗಾಗಿ ಸೂಚಿಸಿದ ಮಾರ್ಗೋಪಾಯಗಳು ಇಂದಿಗೂ ತಮ್ಮ ಬೆಲೆ ಉಳಿಸಿಕೊಂಡಿವೆ.

ರಾಷ್ಟ್ರೀಯ ಪ್ರಜ್ಞೆ, ಸಾಮಾಜಿಕ ಪ್ರಜ್ಞೆಯ ಚಿಂತಕರಾದ ಮಂಜಪ್ಪನವರಿಗೆ ಮಕ್ಕಳನ್ನು ಈ ದಿಸೆಯಲ್ಲಿ ಬೆಳೆಸಬೇಕೆಂಬ ಅದಮ್ಯ ಆಸೆಯಿದ್ದಿತು. ಅದಕ್ಕಾಗಿ ಆಲಮಟ್ಟಿಯಲ್ಲಿ ಒಂದು ವಿದ್ಯಾಲಯವನ್ನೇ ತೆರೆದರು. ಇದಕ್ಕೆ ಸಂಬಂಧಪಟ್ಟ ಪಠ್ಯಕ್ರಮವನ್ನು ರೂಪಿಸಿದರು. ಹಲವು ಕೃತಿಗಳನ್ನು ರಚಿಸಿದರು. ಅವರಿಗೆ ಈ ದಿಸೆಯಲ್ಲಿ ಬೌದ್ಧ ಮತ್ತು ವೀರಶೈವ ಜೀವನ ಮಾದರಿಗಳು ಮುಖ್ಯವೆನಿಸಿದ್ದ ಕಾರಣ, ಮಕ್ಕಳಿಗಾಗಿ ಭಗವಾನ ಬುದ್ಧ ಚರಿತ್ರೆ, ಅಣ್ಣನವರ ಅರ್ಪಣಯೋಗ, ಮಡಿವಾಳ ಮಾಚಿದೇವನ ಉಪದೇಶ, ತ್ಯಾಗವೀರ ಲಿಂಗರಾಜರ ಚರಿತ್ರೆ ಮೊದಲಾದವುಗಳನ್ನು ಬರೆದರು. ಸರಳಭಾಷೆಯಲ್ಲಿ ಜೀವನಮೌಲ್ಯವನ್ನು ತಿಳಿಸಿಕೊಡುವ ಈ ಕೃತಿಗಳಿಂದಾಗಿ, ಮಂಜಪ್ಪನವರು ಮಕ್ಕಳ ಸಾಹಿತ್ಯ ಕ್ಷೇತ್ರದಲ್ಲಿಯೂ ಮೊದಲಿಗರೆನಿಸಿದರು.

ಮಂಜಪ್ಪನವರದು ಸೃಜನಶೀಲ ಮನಸ್ಸು, ಹೊಸದನ್ನು ಚಿಂತಿಸುವುದು, ಹೊಸದನ್ನು ಕಾಣುವುದು, ಹೊಸದನ್ನು ಬರೆಯುವುದು ಅವರ ವ್ಯಕ್ತಿತ್ವದ ಭಾಗವೇ ಆಗಿದ್ದಿತು. ಈ ದಿಕ್ಕಿನಲ್ಲಿ ನಡೆಸಿದ ಪ್ರಯೋಗಗಳಿಂದಾಗಿ ಜನಸೇವಕನ ವಚನಗಳು, ವಚನಕಾರರ ಸಮಾಜರಚನೆ ಇತ್ಯಾದಿ ಕೃತಿಗಳು ಇವರಿಂದ ಮೂಡಿಬಂದವು. ಜಂಗಮನಾಗದವ ವಚನ, ನಿಜವಾದ ವಚನ ಬರೆಯಲಾರ. ಹೀಗಾಗಿ ಜಂಗಮಪ್ರಜ್ಞೆ ಕಾಣಿಸಿಕೊಂಡ ಯಾವುದೇ ಕಾಲಸಂದರ್ಭದಲ್ಲಿ ವಚನಸಾಹಿತ್ಯ ಹುಟ್ಟುತ್ತ ಬಂದಿದೆ. ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಗಾಂಧೀಜಿ ಮೊದಲಾದವರಿಂದ ಜಂಗಮಪ್ರಜ್ಞೆ ಭಾರತದಲ್ಲಿ ಜಾಗೃತವಾಗಿದ್ದಿತು. ಈ ಆಂದೋಲನದ ಭಾಗವೇ ಆಗಿದ್ದ ಕನ್ನಡಿಗ ಮಂಜಪ್ಪನವರ ಮೂಲಕ ವಚನಸೃಷ್ಟಿಕ್ರಿಯೆ ಜರುಗಿತು. ಆಧುನಿಕ ಕಾಲದಲ್ಲಿ ಇದು ಒಂದು ಸಾಹಿತ್ಯ ಪ್ರಕಾರವಾಗಿ ಬೆಳೆದಿದ್ದು, ಈ ಪ್ರಯೋಗದ ಮೊದಲಿಗರು ಮಂಜಪ್ಪನವರೆಂಬುದನ್ನು ಇಲ್ಲಿ ಅವಶ್ಯ ನೆನೆಯಬೇಕು. ಇಂಥ ನೇರ ಸೃಜನಕೃತಿಯನ್ನು ಬಿಟ್ಟರೂ ಭಕ್ತಿಯ ಬೆಳಕು, ಬಸವ ಸಂದೇಶ, ಮಹಾನುಭಾವರಾದ ಬಸವಣ್ಣನವರ ಉಪಮೆಗಳು–ಈ ಸ್ವತಂತ್ರ ಕೃತಿಗಳಲ್ಲಿಯೂ ಮಂಜಪ್ಪನವರ ಸೃಜನಶೀಲತೆಯನ್ನು ಕಾಣಬಹುದಾಗಿದೆ. "ವಚನಕಾರರ ಸಮಾಜ ರಚನೆ" ವಿದ್ವಾಂಸರ ಅಭಿಪ್ರಾಯಗಳ ಸಂಕಲನವಾಗಿದ್ದು, ಇದರ ಅನುವಾದವಾಗಿದೆ "Social Structure of the Veerashaiva Saints" ಕೃತಿ. ಈ ಸಂಕಲನ, ಶ್ರೀ ಬೋಂದಾಡೆಯವರ ಮೂಲಕ ಮಾಡಿಸಿದ ಈ ಅನುವಾದಗಳು ವಚನಕಾರರನ್ನು ಆಧುನಿಕ ದೃಷ್ಟಿಯಿಂದ ನೋಡಬೇಕೆಂಬ, ಅವರ ವಿಚಾರಗಳನ್ನು ಲೋಕ ವಿಸ್ತಾರಗೊಳಿಸಬೇಕೆಂಬ ಧೋರಣೆಯ ಕೃತಿಯಾಗಿವೆ. "ಸುಬೋಧಸಾರ" ಮುಪ್ಪಿನ ಷಡಕ್ಷರಿಗಳ ಮೌಲಿಕ ಕೃತಿ. ಆಧ್ಯಾತ್ಮಿಕ ಭಾವಗೀತೆಯಾಗಿರುವ ಇದನ್ನು ಹರ್ಡೇಕರ ಅವರು ಸಂಪಾದಿಸಿ ಪ್ರಕಟಿಸಿದುದು, ಅವರ ಬಹುಮುಖಿ ಆಸಕ್ತಿಗಳಿಗೆ ನಿದರ್ಶನವೆನಿಸಿದೆ. "ಪ್ರಮಥಾಚಾರದೀಪಿಕೆ" ವಚನಗಳ ಬೆಳಕಿನಲ್ಲಿ ಬರೆದ ಅಥಣಿ ಶಿವಯೋಗಿಗಳ ಜೀವನ ಚರಿತ್ರೆಯಾಗಿದ್ದು, ಒಂದು ವಿಶಿಷ್ಟ ಪ್ರಯೋಗವಾಗಿದೆ.

ಮಂಜಪ್ಪನವರದು ಸಮಗ್ರದೃಷ್ಟಿ. ಕೇವಲ ಧಾರ್ಮಿಕ, ನೈತಿಕ, ರಾಷ್ಟ್ರೀಯ, ಸಾಮಾಜಿಕ ಆಯಾಮಗಳಲ್ಲದೆ ಶೈಕ್ಷಣಿಕ, ವಾಣಿಜ್ಯ ಆಯಾಮಗಳಲ್ಲಿಯೂ ಬದುಕು ಬಂಧುರವಾಗಬೇಕೆಂಬುದು

ಅವರ ಅಭಿಪ್ರಾಯವಾಗಿದ್ದಿತು. ಈ ಉದ್ದೇಶದಿಂದ ಆರಂಭಿಸಿದ್ದ ಆಲಮಟ್ಟಿಯ ವೀರಶೈವ ವಿದ್ಯಾಲಯದ ವರದಿ ಮತ್ತು ಮಕ್ಕಳಿಗಾಗಿ ಬರೆದ ಮಾದರಿ ಪಾಠಗಳನ್ನೊಳಗೊಂಡಿದೆ "ಆರ್ಯತೇಜ". "ಶಿಕ್ಷಣ"ವೆನ್ನುವುದು ವಾರ್ಷಿಕ ಸಂಚಿಕೆ ಸ್ವರೂಪದ ಕೃತಿಯಾಗಿವೆ. "ವ್ಯಾಪಾರ ಶಿಕ್ಷಕ"ವೆಂಬುದು ಮಂಜಪ್ಪನವರ 'ಶರಣಸಂದೇಶ' ಪತ್ರಿಕೆಯ ವಾಣಿಜ್ಯ ವಿಶೇಷಾಂಕ. ಇದು ಕನ್ನಡಿಗರ ವ್ಯಾಪಾರ ಕ್ಷೇತ್ರದ ಹಿನ್ನಡೆ, ಮುನ್ನಡೆಗಳ ಮೇಲೆ ಬೆಳಕು ಬೀರುವ ಇದು, ಸಮಕಾಲೀನ ವಾಣಿಜ್ಯ ಕ್ಷೇತ್ರದ ಒಂದು ಚಿತ್ರವನ್ನು ಕಟ್ಟಿಕೊಡುತ್ತದೆ.

ಹೀಗೆ ವೈವಿಧ್ಯಪೂರ್ಣ ಬರವಣಿಗೆಯಲ್ಲಿ ವಿಸ್ತರಿಸಿಕೊಂಡಿದ್ದ ಮಂಜಪ್ಪನವರದು ಭಾವಪ್ರಧಾನ ಸೃಜನಸಾಹಿತ್ಯವಲ್ಲ, ವಿಚಾರ ಪ್ರಧಾನ ಸೃಜನಸಾಹಿತ್ಯ. ಸಮಾಜದ ಕಣ್ಣು ತೆರೆಯಿಸುವಲ್ಲಿ ಭಾವಪ್ರಧಾನ ಸಾಹಿತ್ಯದ್ದು ಪರ್ಯಾಯದಾರಿ, ವಿಚಾರ ಪ್ರಧಾನ ಸಾಹಿತ್ಯದ್ದು ನೇರದಾರಿ. ಅದು ಮಂತ್ರವೈದ್ಯ, ಇದು ಶಸ್ತ್ರವೈದ್ಯ. ಹೀಗಾಗಿ ಸಮಾಜವನ್ನು ಎಚ್ಚರಿಸುವಲ್ಲಿ, ಮೌಲ್ಯ ಸ್ಥಾಪಿಸುವಲ್ಲಿ ಇದರ ಪಾತ್ರ ದೊಡ್ಡದು.

ಮಂಜಪ್ಪನವರ ಮುಖ್ಯ ಉದ್ದೇಶ ಸಾಹಿತ್ಯ ಬರೆಯುವುದಲ್ಲ, ಸಮಾಜವನ್ನು ಸರಿಪಡಿಸುವುದು. ಹಾಗೆ ಸರಿಪಡಿಸುವುದಕ್ಕಾಗಿ ಅವರು ಮಾಧ್ಯಮವಾಗಿ ಬಳಸಿದ ಬರವಣಿಗೆ ಸಾಹಿತ್ಯವಾಯಿತು. ರಾಷ್ಟ್ರಜೀವನ ಗ್ರಂಥಮಾಲೆ, ಸತ್ಯಾಗ್ರಹ ಗ್ರಂಥಾವಳಿ, ಜ್ಞಾನೋದಯ ಗ್ರಂಥಮಾಲೆ, ಜನಜಾಗೃತಿ ಗ್ರಂಥಮಾಲೆ, ಮಕ್ಕಳ ಸಾಹಿತ್ಯಮಾಲೆ, ಪ್ರಗತಿ ಗ್ರಂಥಮಾಲೆ, ವೀರಶೈವ ವಿದ್ಯಾಲಯ ಗ್ರಂಥಮಾಲೆ ಈ ಹೆಸರುಗಳೇ ಅವರ ಧೋರಣೆಯನ್ನು ಬಿಂಬಿಸುತ್ತವೆ. ಈ ಧ್ಯೇಯ – ಧೋರಣೆಗಳನ್ನು ಬಾಳಿದ, ಬರೆದ ಮಂಜಪ್ಪನವರು ವೀರಶೈವ ಸಮಾಜ ತನ್ಮೂಲಕ ಕರ್ನಾಟಕ ರಾಜ್ಯವು ಭಾರತಕ್ಕೆ ನೀಡಿದ ವಿಶಿಷ್ಟ ಕೊಡುಗೆಯಾಗಿದ್ದಾರೆ. "ಅಖಿಲ ಭಾರತ ಮಹಾಪುರುಷರಾಗುವುದಕ್ಕೆ ಯೋಗ್ಯರಾದ ಇವರ ಲಾಭವನ್ನು ನಮ್ಮ ಸಮಾಜ ಸರಿಯಾಗಿ ಮಾಡಿಕೊಳ್ಳದೇ ಇದ್ದುದು ಅದರ ದುರ್ದೈವ" ಎಂಬ ಶಂಬಾ ಜೋಶಿಯವರೊಂದಿಗೆ ದನಿಗೂಡಿಸಿ, ಮುಗಿಯಲಾರದ ಈ ಮಾತುಗಳನ್ನು ಮುಗಿಸುತ್ತೇವೆ.

* * *

ಈ ಸಂಪುಟದ ಸಂಪಾದನೆ ನಮ್ಮ ಜೀವಮಾನದ ಒಂದು ಸಾರ್ಥಕ ಸಂದರ್ಭವೆಂದು ಭಾವಿಸುತ್ತೇವೆ. ಡಾ. ಹಾಲಪ್ಪ ಅವರ ಕಾರ್ಯದ ಮುಂದುವರಿಕೆಯಾಗಿದ್ದರೂ, ಅಲ್ಲಿ ಕೈಬಿಟ್ಟಿರುವ ಪ್ರತಿಯೊಂದು ಪುಸ್ತಕದ ಮುಖಪುಟ, ಪ್ರಸ್ತಾವನೆ, ಅಪೂರ್ವ ಭಾವಚಿತ್ರ, ಬೆನ್ನುಪುಟದ ಬರವಣಿಗೆ ಇತ್ಯಾದಿಗಳನ್ನು ಉಳಿಸಿಕೊಳ್ಳುವ ಮೂಲಕ ನಾವು ಮಂಜಪ್ಪನವರ ಕೃತಿಗಳನ್ನು ಮೂಲರೂಪದಲ್ಲಿ ಸಹೃದಯರ ಕೈಗಿಡುತ್ತಲಿದ್ದೇವೆ.

ನಾವು ಕಷ್ಟಪಟ್ಟು ಸಂಗ್ರಹಿಸಿದ ಪುಸ್ತಕಗಳು ಸಂಪುಟ ರೂಪದಲ್ಲಿ ಪ್ರಕಟವಾಗುತ್ತಲಿರುವುದು ನಮಗೆ ವಿಶೇಷ ಸಂತೋಷವನ್ನುಂಟುಮಾಡಿದೆ. ಪ್ರಕಟಿಸುವ ಮೂಲಕ ಈ ಸಂತೋಷವನ್ನು ನಮ್ಮದನ್ನಾಗಿಸಿದ ಗದುಗಿನ ಶ್ರೀ ಎಡೆಯೂರು ತೋಂಟದಾರ್ಯ ಸಂಸ್ಥಾನ ಮಠದ "ಲಿಂಗಾಯತ ಅಧ್ಯಯನ ಸಂಸ್ಥೆ"ಯ ಅಧ್ಯಕ್ಷರಾದ ಪೂಜ್ಯ ಶ್ರೀ ತೋಂಟದ ಸಿದ್ಧಲಿಂಗಸ್ವಾಮೀಜಿ ಅವರಿಗೆ ನಮ್ಮ

ಭಕ್ತಿಪೂರ್ವಕ ಪ್ರಣಾಮಗಳು. ಈ ಅಪರೂಪದ ಪುಸ್ತಕಗಳನ್ನು ನೀಡಿದ ಬೇರೆ ಬೇರೆ ಸ್ಥಳದ ಅವುಗಳ ಒಡೆಯರಿಗೆ, ಅಚ್ಚಿನ ಕಾರ್ಯದಲ್ಲಿ ನೆರವಾದ ಪ್ರೊ. ಸದಾನಂದ ಕನವಳ್ಳಿ, ಡಾ. ಎಚ್. ಎಸ್. ಮೇಲಿನಮನಿ ಅವರಿಗೆ, ಶ್ರೀ ಮಂಜಪ್ಪನವರ ಪ್ರಮುಖ ಸ್ಮಾರಕಗಳ ಹಾಗೂ ಸಮಾಧಿ ಸ್ಥಳಾಂತರದ ಫೋಟೋಗಳನ್ನು ಪೂರೈಸಿದ ಡಾ. ಹೆಚ್. ಚಂದ್ರಶೇಖರ ಅವರಿಗೆ, ಶ್ರಮವಹಿಸಿ ಪ್ರೀತಿಯಿಂದ ಮುದ್ರಿಸಿಕೊಟ್ಟ ಬೆಂಗಳೂರಿನ ಪ್ರಿಂಟ್‌ಪಾರ್ಕ್ ಮುದ್ರಣಾಲಯದ ಒಡೆಯರಾದ ಶ್ರೀ ಜಿ. ಬಿ. ಪಾಟೀಲ, ಪುಸ್ತಕ ವಿನ್ಯಾಸದಲ್ಲಿ ಶ್ರಮವಹಿಸಿದ ಪ್ರೀತಿಯ ಬಸೂ ಅವರಿಗೆ ಧನ್ಯವಾದಗಳು.

– ಎಂ. ಎಂ. ಕಲಬುರ್ಗಿ

– ಮಲ್ಲಿಕಾರ್ಜುನ ಮೇತ್ರಿ

❖❖

*

ಅನುಕ್ರಮಣಿಕೆ

ಅನುಬಂಧ

೧. ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು

೨. ಹರ್ಡೇಕರ ಮಂಜಪ್ಪನವರ ಕೃತಿಗಳು

೩. ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

೪. ಹರ್ಡೇಕರ ಮಂಜಪ್ಪನವರ ಸ್ಮಾರಕದ ಪ್ರಮುಖ ಛಾಯಾಚಿತ್ರ


❖❖

ಭಾಗ : ೧

❖

ಆತ್ಮಚರಿತ್ರೆ

* **ಟಿಪ್ಪಣಿ**
❖ **ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ**
(ಆತ್ಮಚರಿತ್ರೆಯ ಮುಂದುವರಿದ ಭಾಗ ಸಹಿತ)



ಹಾಳು ಬಿದ್ದಿರುವ ವೀರಶೈವ ವಿದ್ಯಾಲಯದ ಇಂದಿನ ದೃಶ್ಯ, ಆಲಮಟ್ಟಿ(೧೯೮೯)

*

ಟಿಪ್ಪಣಿ

ವ್ಯಕ್ತಿಕೇಂದ್ರಿತ ಬದುಕು ಸಮಾಜಕೇಂದ್ರಿತವಾಗಿ ವಿಸ್ತರಿಸಿಕೊಂಡರೆ ವ್ಯಕ್ತಿ ಶಕ್ತಿಯಾಗುತ್ತಾನೆ, ಲೋಕಮಾನ್ಯನಾಗುತ್ತಾನೆ. ಸಮರ್ಪಣಭಾವದ ಇಂಥವರು ಸಮಾಜವನ್ನು ನಾಡನ್ನು ಕಟ್ಟಬಲ್ಲರು. ಬದುಕನ್ನು ಬೆಳಸಬಲ್ಲರು, ಇವರನ್ನು ಕುರಿತು ತಿಳಿದುಕೊಳ್ಳಲು ಜನಸಮುದಾಯದಲ್ಲಿ ಕುತೂಹಲ ಹೆಚ್ಚುತ್ತದೆ. ಈ ಕಾರಣ ಅವರ ಜೀವನ ಚರಿತ್ರೆಗಳು ಹುಟ್ಟುತ್ತವೆ. ಕೆಲವು ಸಲ ಈ ಲೋಕಮಾನ್ಯರು ತಮ್ಮನ್ನು ಕುರಿತು ತಾವೇ ಬರೆಯುತ್ತಾರೆ. ತುಂಬ ಅರ್ಥಪೂರ್ಣವೆನಿಸುವ ಅದು ಆತ್ಮಚರಿತ್ರೆಯಾಗುತ್ತದೆ.

ಕಂಡುಂಡ ಅನುಭವಗಳನ್ನು ಆತ್ಮಸಾಕ್ಷಿಯಾಗಿ ನೆನೆದು ಅಕ್ಷರರೂಪಕ್ಕೆ ತರುವುದೇ ಆತ್ಮಕಥೆ. ತಾನು ಜೀವನದಲ್ಲಿ ಕಂಡ ಅದರ್ಶ, ಅದನ್ನು ವಾಸ್ತವಗೊಳಿಸುವಲ್ಲಿ ಸಂಭವಿಸುವ ಸಫಲತೆ ವಿಫಲತೆಗಳನ್ನು ತೂಗಿ ತೂಗಿ ದಾಖಲಿಸುವದು ಇಲ್ಲಿ ನಡೆಯುತ್ತದೆ. ಇದು ಅಷ್ಟು ಸರಳ ಕೆಲಸವಲ್ಲ. 'ಹಗ್ಗದ ಮೇಲಿನ ಹೆಜ್ಜೆ'ಗಳಂತೆ ತೂಕ ತಪ್ಪದ ಹಾಗೆ ಇಲ್ಲಿ ನಡೆಯಬೇಕು. ಆತ್ಮಕಥೆಗಾರನೊಬ್ಬನಲ್ಲಿ "ವಿಷಯಗಳನ್ನು ಸಂಯೋಜಿಸುವ, ಗ್ರಹಿಸುವ, ಆತ್ಮಶೋಧನೆ ಮಾಡಿಕೊಳ್ಳುವ ಶಕ್ತಿ ಇರಬೇಕು. ನಿಷ್ಪಕ್ಷಪಾತವಾದ ವಾಸ್ತವಿಕ ಕಲಾಪ್ರವೃತ್ತಿ, ಆಲಿಪ್ತತೆ, ಕುತೂಹಲ ಈ ಗುಣಗಳನ್ನು ಅವನು ಹೊಂದಿರಬೇಕು."[೧] ಈ ಅಂಶಗಳನ್ನು ಒಳಗೊಂಡ ಆತ್ಮಚರಿತ್ರೆ ಸದೃಢ ಸಶಕ್ತವಾಗಿ ನಿಲ್ಲುತ್ತದೆ.

ಆತ್ಮ ಚರಿತ್ರೆಯ ನಾಯಕ ಬರಹಗಾರನೇ ಆಗಿರುವುದರಿಂದ ತಾನು ಜೀವನದಲ್ಲಿ ಇದುವರೆಗೆ ಇಟ್ಟ ಹೆಜ್ಜೆ ಗುರುತುಗಳನ್ನು-ತೊಟ್ಟ ರೂಪಗಳನ್ನು ಪಡೆಮೂಡಿಸಬೇಕಾಗುತ್ತದೆ. ಇದರೊಟ್ಟಿಗೆ ತಾನು ಬದುಕಿದ ಪರಿಸರದ ಚಿತ್ರಣ. ಅದಕ್ಕೆ ತಾನೊಡ್ಡಿದ ಪ್ರತಿಕ್ರಿಯೆ ದಾಖಲಿಸುವುದು ಇಲ್ಲಿ ಮುಖ್ಯ.

"ಹಳೆಯ ನೆನಪುಗಳನ್ನು ಮೆಲುಕು ಹಾಕುವುದು ಒಂದು ಆನಂದಾನುಭವವಾಗುತ್ತದೆ. ಅದರಲ್ಲಿಯೂ ಬಾಳಿನಲ್ಲಿ ಅನೇಕ ಕಷ್ಟ ಸುಖಗಳನ್ನನುಭವಿಸಿ ಯಶಸ್ವಿಯಾಗಿ ಜೀವನ ಗುರಿಯನ್ನು ಮುಟ್ಟಿದ, ಮಾಗಿದ ಜೀವವೊಂದು ವೃದ್ಧಾಪ್ಯದಲ್ಲಿ ಹಳೆಯ ನೆನಪುಗಳನ್ನು ಮೆಲುಕು ಹಾಕುವಾಗ

೧. ಕನ್ನಡ ವಿಶ್ವಕೋಶ : ಸಂಪುಟ, ಒಂದು, ಪುಟ. ೨೩೩.

ತೃಪ್ತಿಮೂಡುತ್ತದೆ. ತಮಗಾದ ಆನಂದವನ್ನು ಇತರರೊಡನೆ ಹಂಚಿಕೊಂಡಾಗ ಅದು ಬಹುಗುಣವಾಗುತ್ತದೆ. ಬೇರೊಬ್ಬರ ಅನುಭವಗಳು ತಮ್ಮವೇ ಆಗಬಹುದಾದ ಸಾಧ್ಯತೆಯಿರುವುದರಿಂದ ಅವುಗಳನ್ನು ಕೇಳುವ ಅಥವಾ ಓದುವ ಭಾವುಕರ ಚೇತನ ಹಿಗ್ಗಲವಕಾಶವುಂಟು- ಈ ಅನುಭವ ಪರಂಪರೆಯೇ ಆತ್ಮಕಥೆ."[೨]

ಆತ್ಮಕಥೆಯಲ್ಲಿ ನಾಯಕ ಬದುಕಿನ ಸರ್ವಮುಖಗಳನ್ನು ದಾಖಲಿಸುವುದು ಅವಶ್ಯಕ. ಸೋಲು-ಗೆಲುವು, ಸರಸ-ವಿರಸಗಳು ಇಲ್ಲಿ ಮನೆ ಮಾಡಿರುತ್ತವೆ. ಈ ಕಾರಣ ಆತ್ಮಕಥೆಗಾರನೊಬ್ಬ ಪ್ರಾಮಾಣಿಕತನದಿಂದ ತನ್ನನ್ನು ತಾನು ನೋಡಿಕೊಂಡು ಬರೆಯಬೇಕಾಗುತ್ತದೆ. ಈ ಬರವಣಿಗೆಗೆ ನೆನಪಿನಾಳದ ಆಲೋಚನೆ, ದಿನವಹಿ, ಪ್ರಮುಖವಾದ ಟಿಪ್ಪಣಿ, ಕಾಯ್ದಿಟ್ಟ ಪತ್ರ-ಪತ್ರಿಕೆಯ ತುಣುಕು. ಒಡನಾಡಿಗಳ ಹೇಳಿಕೆ ಮುಂತಾದವು ಸಹಾಯಕ ಸಾಮಗ್ರಿಯಾಗಿ ನಿಲ್ಲುತ್ತವೆ.

ಆತ್ಮಕಥೆ ಎಂಬ ಪದಕ್ಕೆ ಇಂಗ್ಲೀಷನಲ್ಲಿ 'Auto biography' ಎನ್ನುವುದುಂಟು. ಈ ಪದವನ್ನು ಇಂಗ್ಲೀಷ್ ಕವಿ ರಾಬರ್ಟ ಸೆದೆ ಎಂಬುವವನು ೧೮೦೯ರಲ್ಲಿ ಮೊಟಮೊದಲು ಬಾರಿಗೆ ಬಳಸಿದ. ಈ ಪದ, ಬಳಕೆಗಿಂತ ಪೂರ್ವದಲ್ಲಿಯೇ ಆತ್ಮಕಥೆಗಳ ಉಗಮ ವಿಕಾಸ ಆಗಿದ್ದುಂಟು. "ಯುರೋಪ ಖಂಡದಲ್ಲಿ ಆತ್ಮಕಥೆಯ ಹುಟ್ಟು ಬೆಳವಣಿಗೆ ಆಗುವುದಕ್ಕೆ ಒಂದು ಕಾರಣ, ಕ್ರೈಸ್ತಮತದ ಮುಖ್ಯ ಅಂಶಗಳಲ್ಲೊಂದಾದ ಪಾಪ ನಿವೇದನೆ, ಇದರಿಂದ ಆತ್ಮಪರಿಶೋದನೆಯ ಸ್ವಭಾವ ಬೆಳೆದು, ಯುರೋಪಿನಲ್ಲಿ ಬಹಳ ಹಿಂದೆಯೇ ಆತ್ಮಚರಿತ್ರಾಂಶವುಳ್ಳ ಅನೇಕ ಕೃತಿಗಳು ಬರೆಯಲ್ಪಟ್ಟವು. ನಮಗೆ ದೊರೆತ ಗ್ರಂಥಗಳ ಆಧಾರದ ಮೇಲೆ ಹೇಳುವುದಾದರೆ ಕ್ರಿ. ಪೂ. ೧೨೧-೮೦ರಲ್ಲಿ ಜೀವಿಸಿದ್ದ ಮರ್ಕಾಸ್ ಅರೀಲಿಯಸ್ ಎಂಬ ರಾಜನ ಮೆಡಿಟೇಷನ್ಸ ಎಂಬ ಕೃತಿಯೇ ಆತ್ಮಕಥೆಯ ಗುಂಪಿಗೆ ಸೇರುವ ಬರವಣಿಗೆಗಳಲ್ಲಿ ಅತ್ಯಂತ ಹಳೆಯದು. ಮುಂದೆ ಸೇಂಟ ಅಗಸ್ಟೇನ್ (ಕ್ರಿ. ಶ. ೩೫೪-೪೩೦) ಬರೆದ ಕನ್‌ಫೆಷೆನ್ಸ್ ಎಂಬ ಕೃತಿ ಈ ಮಾರ್ಗದಲ್ಲಿ ಒಂದು ಮುಖ್ಯ ಮೈಲುಗಲ್ಲು."[೩] ಇವುಗಳ ನಂತರದ ಕಾಲಾವಧಿಯಲ್ಲಿ ಈ ಪ್ರಕಾರದ ಸಾಹಿತ್ಯವು ಹೆಚ್ಚು ಮೂಡಿ ಬಂದಿರುವುದುಂಟು. ೧೮,೧೯ ಮತ್ತು ೨೦ನೆಯ ಶತಮಾನಗಳಲ್ಲಿ ನೂರಾರು ಆತ್ಮಕಥೆಗಳು ಪ್ರಕಟಗೊಂಡಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಪ್ರಾಂಕ್ಲಿನ್, ರೂಸೋ, ಎಡ್ಮಂಡಗಾಸ್, ಮಿಲ್, ಟ್ರೋಲೋಪ್, ಟಾಲಸ್ಟಾಯ್, ಗಾಂಧೀಜಿ ಮುಂತಾದವರ ಆತ್ಮಕಥೆಗಳು.

ಕನ್ನಡದಲ್ಲಿ ಸ್ವತಂತ್ರ ಆತ್ಮಕತೆ ಬರವಣಿಗೆಗೆ ಶ್ರೀಕಾರ ಹಾಕಿದವರು, ಕರ್ನಾಟಕ, ಗಾಂಧಿ ಹರ್ಡೇಕರ ಮಂಜಪ್ಪನವರು. ಈಗ ಅಧಿಕೃತವಾಗಿ ಪ್ರಕಟಗೊಂಡ ಆತ್ಮಕಥೆಗಳಲ್ಲಿ ಮಂಜಪ್ಪನವರ ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ (೧೯೩೬) ಎಂಬ ಕೃತಿಯೇ ಮೊದಲಿನದು. ಈ ಕಾರಣ ಇವರು ಕನ್ನಡ ಆತ್ಮಕಥೆ ಸಾಹಿತ್ಯದ ಆದ್ಯರು ಎಂದು ಅಭಿಮಾನದಿಂದ ಹೇಳಬಹುದು.

ಈ ಪೂರ್ವದಲ್ಲಿ ಬೇರೆ ಭಾಷೆಯಿಂದ ಕನ್ನಡಕ್ಕೆ ತರ್ಜುಮೆಗೊಂಡ ಆತ್ಮಕಥೆಗಳು ಮಾರ್ಗತೋರಿದವು. ಇವುಗಳಲ್ಲಿ ಮುಖ್ಯವಾದುದು ನಿಟ್ಟೂರ ಶ್ರೀನಿವಾಸರಾಯರು ಭಾಷಾಂತರಿಸಿದ ಗಾಂಧೀಜಿಯವರ ಆತ್ಮಕಥೆ. ಇದು ಕನ್ನಡದ ಬಹಳಷ್ಟು ಲೇಖಕರ ಮೇಲೆ ಪ್ರಭಾವ ಬೀರಿತು.

---

೨. ಬದುಕು-ಮೆಲಕು, ಎಚ್. ಕೆ. ವೀರಣ್ಣಗೌಡ, ಪುಟ. ಮುನ್ನುಡಿ, ದೇಜಗೌ.
೩. ಕನ್ನಡ ವಿಶ್ವಕೋಶ : ಸಂಪುಟ, ಒಂದು, ಪುಟ. ೨೩೨.

ಕನ್ನಡದಲ್ಲಿ ಜರುಗಿದ ಇಂಥ ಪ್ರಯತ್ನಗಳಿಂದಾಗಿ ಅನೇಕ ಆತ್ಮಕಥೆಗಳು ಮೂಡಿಬಂದದ್ದನ್ನು ಕಾಣುತ್ತೇವೆ. ಅವುಗಳಲ್ಲಿ ಮುಖ್ಯವಾದವು ಅಲೂರ ವೆಂಕಟರಾಯರ 'ನನ್ನ ಜೀವನಸ್ಮೃತಿಗಳು', ಶಿವರಾಮಕಾರಂತರ 'ಹುಚ್ಚುಮನಸ್ಸಿನ ಹತ್ತು ಮುಖಗಳು', ಡಿ. ವಿ. ಜಿ. ಯವರ 'ಜ್ಞಾಪಕ ಚಿತ್ರಶಾಲೆ', ಮಾಸ್ತಿಯವರ 'ಭಾವ', ಸರ್. ಎಂ. ವಿಶ್ವೇಶ್ವರಯ್ಯನವರ "Memoirs of my working life" ದೇಜಗೌ, ಅವರ 'ಹೋರಾಟದ ಬದುಕು' ಮತ್ತು 'ಕುಲಪತಿಯ ದಿನಚರಿ', ಅ.ನ.ಕೃ ಅವರ 'ಬರಹಗಾರನ ಬದುಕು', ಶ್ರೀರಂಗರ 'ಸಾಹಿತಿಯ ಆತ್ಮಜಿಜ್ಞಾಸೆ, ಬಸವರಾಜ ಕಟ್ಟಿಮನಿಯವರ 'ಕುಂದರನಾಡಿನ ಕಂದ' ಬೀಚಿಯವರ ಭಯಗ್ರಫಿ,' ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಸ. ಸ. ಮಾಳವಾಡ ಅವರ 'ದಾರಿಸಾಗಿದೆ'– ಮುಂತಾದವು. ೧೯೪೭ರಲ್ಲಿ ಧಾರವಾಡದ ಮಿಂಚಿನಬಳ್ಳಿ ಪ್ರಕಾಶನದಿಂದ ಪ್ರಕಟಗೊಂಡ ಸಾಹಿತ್ಯಜ್ಞರ ಆತ್ಮಕಥನ ಗಮನಾರ್ಹಕೃತಿ. ಇಲ್ಲಿ ಗೋವಿಂದ ಪೈ, ಆರ್. ವ್ಹಿ. ಜಹಾಗೀರದಾರ, ದೇವುಡು ನರಸಿಂಹಶಾಸ್ತ್ರಿ, ರಂ. ಶ್ರೀ. ಮುಗಳಿ, ಸಿ. ಕೆ. ವೆಂಕಟರಾಮಯ್ಯ, ವಿ. ಕೃ. ಗೋಕಾಕ, ಚೆನ್ನಪ್ಪ ಉತ್ತಂಗಿ, ಬೆಟಗೇರಿ ಕಷ್ಣಶರ್ಮ, ಎ. ಆರ್. ಕೃಷ್ಣಶಾಸ್ತ್ರಿ, ದ. ರಾ. ಬೇಂದ್ರೆ, ಶಂ. ಬಾ. ಜೋಶಿ ಹೀಗೆ ಹನ್ನೊಂದು ಜನರ ಜೀವನಾನುಭವಗಳ ಸಂಗಮವಿದೆ. ಅಲ್ಲದೆ ಅಭಿನಂದನ ಗ್ರಂಥಗಳಲ್ಲಿ ಅನೇಕ ಗಣ್ಯರು ಆತ್ಮಕಥೆಗಳನ್ನು ಬರೆದದ್ದುಂಟು.

ವಿಚಾರ ಸಾಹಿತ್ಯದ ಒಂದು ಅಂಗವಾಗಿ 'ಆತ್ಮಕಥೆ' ನಿಲ್ಲುತ್ತದೆ. ವ್ಯಕ್ತಿ ತಾನು ಕಂಡುಂಡ ಅನುಭವಗಳೊಟ್ಟಿಗೆ ಸಮಕಾಲೀನ ಸಮಾಜದ ಚಿತ್ರಣ, ಐತಿಹಾಸಿಕ ಸಂಗತಿಗಳನ್ನು ಉಲ್ಲೇಖಿಸುವುದರಿಂದ ವಿಚಾರ ಸಾಹಿತ್ಯದ ಸರಣಿಯಲ್ಲಿ ಇದಕ್ಕೆ ಸ್ಥಾನವುಂಟು. ಹರ್ಡೇಕರ ಮಂಜಪ್ಪನವರ ಆತ್ಮಕಥೆ ಈ ಲಕ್ಷಣಕ್ಕೆ ನಿದರ್ಶನವೆನಿಸುವ ಕಾರಣ ಶ್ರೇಷ್ಠ ಆತ್ಮಕಥೆಯಾಗಿ ನಿಲ್ಲುತ್ತದೆ.

ಭಾರತ, ಪಾರತಂತ್ರ್ಯದ ಕರಾಳ ಛಾಯೆಯಲ್ಲಿ ನಲಗುತ್ತಲಿದ್ದ ದಿನಗಳವು. ಆ ಸಂದರ್ಭದಲ್ಲಿ ಗಾಂಧೀಜಿಯವರ ಉನ್ನತ ಆದರ್ಶಗಳಿಗೆ ಒಳಗಾದವರು ಅನೇಕರುಂಟು. ಅವರಲ್ಲಿ ಮುಖ್ಯರಾದ ಹರ್ಡೇಕರ ಮಂಜಪ್ಪನವರು ಗಾಂಧೀಜಿಯವರ ಬದುಕಿಗೆ ಮಾರುಹೋಗಿ, ಅವರ ತತ್ವಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು. ಈ ನಾಡಿನಲ್ಲಿ 'ಕರ್ನಾಟಕ ಗಾಂಧಿ' ಎಂದು ಪ್ರಸಿದ್ಧಿಪಡೆದರು. ಗಾಂಧೀಜಿಯವರೆಂದರೆ ಮಂಜಪ್ಪನವರಿಗೆ ಎಲ್ಲಿಲ್ಲದ ಅಭಿಮಾನ. ಇದಕ್ಕನುಗುಣವಾಗಿ ೧೯೩೭ರಲ್ಲಿ ಗಾಂಧೀಜಿಯವರ ಹುಟ್ಟುಹಬ್ಬದ ದಿನದಂದು ತಮ್ಮ ಆತ್ಮಕಥೆ 'ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ' ರಚಿಸಿ, ಆಲಮಟ್ಟಿ ವೀರಶೈವ ವಿದ್ಯಾಲಯದಿಂದ ಪ್ರಕಟಗೊಳಿಸಿದರು. ಈ ಕೃತಿಯ ನಿವೇದನೆಯಲ್ಲಿ ತಮ್ಮ ಸಾರ್ವಜನಿಕ ಜೀವನ ವಿಕಾಸಕ್ಕೆ ನೆರವಾದ ಮಹನಿಯರುಗಳಿಗೆ ಕೃತಜ್ಞತೆಗಳನ್ನು ತಿಳಿಸುವದರೊಂದಿಗೆ, ಅಲ್ಲಿ ಪ್ರಸ್ತಾಪಿಸಲ್ಪಟ್ಟ ಯಾವುದೆ ವಿಚಾರಗಳನ್ನು ಯಾರೂ ಸಾರ್ವಜನಿಕವಾಗಿ ಲೇಖನ ಹಾಗೂ ಭಾಷಣಗಳಲ್ಲಿ ಪ್ರಸ್ತಾಪ ಮಾಡಬಾರದೆಂದು ಕೇಳಿಕೊಂಡಿದ್ದಾರೆ.

ಮಂಜಪ್ಪನವರ ಆತ್ಮಚರಿತ್ರೆ ವೈಯಕ್ತಿಕ ಸಂಗತಿಗಳೊದಿಗೆ ಆ ಕಾಲದ ಸಾಮಾಜಿಕ, ರಾಜಕೀಯ ಜನಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ಅಂದಿನ ಪರಿಸರದ ಆಗುಹೋಗುಗಳಿಗೆ ಮಂಜಪ್ಪನವರ ಪ್ರತಿಸ್ಪಂದನವನ್ನು ಕೂಡ ಇದು ದಾಖಲಿಸುತ್ತದೆ. ಈ ಕಾರಣವಾಗಿ ಇದು ಚಾರಿತ್ರಿಕ ಮಹತ್ವವನ್ನು ಗಳಿಸುತ್ತದೆ. ೧೮೮೬ರಲ್ಲಿ ಮಂಜಪ್ಪನವರು ಜನಿಸಿದ್ದು, ಈ ಕೃತಿಯಲ್ಲಿ ೧೯೦೬ರ ನಂತರದ ಅಂದರೆ ಅವರ ೨೦ನೆಯ ವಯಸ್ಸಿನ ತರುವಾಯದ ಘಟನೆಗಳೇ ಬಂದಿವೆ. ಆರಂಭದಲ್ಲಿ ಸಂಕ್ಷಿಪ್ತವಾಗಿ ತಮ್ಮ ಜನನ ಬಾಲ್ಯಗಳಗಳನ್ನು ಪರಿಚಯಿಸಿ ಪತ್ರಿಕೋದ್ಯಮ ಪ್ರವೇಶಮಾಡಿದ

ನಂತರದ ವಿಚಾರಗಳನ್ನು ಹೆಚ್ಚಾಗಿ ಪ್ರಸ್ತಾಪಿಸಿದ್ದಾರೆ. ಮಾಸ್ತರ ಮಂಜಪ್ಪನವರ ಮೇಲೆ ಮರಾಠಿ ಪತ್ರಿಕೆಗಳು ಮಾಡಿದ ಪ್ರಭಾವ, ಸ್ವಂತ ಪತ್ರಿಕೆ ಹೊರಡಿಸಬೇಕೆಂಬ ಸಂಕಲ್ಪ. ಸಾಮಾಜಿಕ ಕೆಲಸಕ್ಕೆ ಅಡ್ಡಿಯಾಗಬಾರದೆಂದು ಲಗ್ನವಾಗದೆ ಉಳಿಯುವ ವಿಚಾರ. ಮುಂತಾದವು ಸರಳ ವಿವರಣೆಯೊಂದಿಗೆ ಬಂದಿವೆ.

ದಾವಣಗೆರೆಯಲ್ಲಿ ಮಂಜಪ್ಪನವರು ಸಮಾಜಮುಖಿಯಾಗಿ ಪ್ರವಹಿಸುತ್ತ, ಭಜನಾಸಂಘ, ಶ್ರಾವಣಮಾಸೋಪನ್ಯಾಸ ಮಾಲೆ, ಬಸವಜಯಂತಿ, ಅಕ್ಕನ ಜಯಂತಿ ಪ್ರಾರಂಭಿಸಿದ ಘಟನೆಗಳು, ಲೋಕಮಾನ್ಯ ಟಿಳಕರ ದರ್ಶನದ ವಿವರಣೆಗಳು, ಪುಸ್ತಕ ರಚನೆಗೆ ತೊಡಗಿಕೊಂಡದ್ದು ವೀರಶೈವ ತರುಣ ಸಂಘ ಸ್ಥಾಪನೆ, ಸತ್ಯಾಗ್ರಹದ ತತ್ವಪ್ರಸಾರ, ಖಾದಿ ಚಟುವಟಿಕೆಗಳು, ಗಾಂಧೀಜಿಯವರಲ್ಲಿಗೆ ಪ್ರಯಾಣ, ವಿಜಾಪುರ ಬಾಗಲಕೋಟೆ ಜಿಲ್ಲೆಗಳ ಹಳ್ಳಿಗಳಿಗೆ ಭಾಷಣದ ಮಾಮಲೇದಾರರಾಗಿ ಬಂಥನಾಳ ಶ್ರೀಗಳೊಂದಿಗೆ ಸಂಚಾರ, ಮೊಗಲಾಯಿ ನಾಡಿನಲ್ಲಿ ಪ್ರವಾಸ ಮಾಡಿರುವುದು. ಅಲ್ಲಲ್ಲಿ ರಾಟಿ ಸಂಘಗಳ ಸ್ಥಾಪನೆಗೆ ಮುಂದಾದದ್ದು, ಆಲಮಟ್ಟಿಯಲ್ಲಿ ವೀರಶೈವ ವಿದ್ಯಾಲಯ ಸ್ಥಾಪಿಸಿದುದು ಮತ್ತು ಅಲ್ಲಿಯ ಶಿಕ್ಷಣಪದ್ಧತಿಯ ವಿಧಿ. ವಿಧಾನಗಳ ವಿವರಣೆ, ಮುದ್ರಣಾಲಯದ ಸ್ಥಾಪನೆ, ಗ್ರಂಥ ಪ್ರಕಟಣೆ ಪ್ರಸಾರದ ವಿಚಾರಗಳನ್ನು ತಿಳಿಸಿದ್ದಾರೆ. ಈ ಕೃತಿಯ ಕೊನೆಯಲ್ಲಿ 'ನನ್ನ ಕೆಲವು ವಿಚಾರಗಳು', ಎಂಬ ಶೀರ್ಷಿಕೆಯಡಿ ಧಾರ್ಮಿಕ, ಸಾಮಾಜಿಕ, ನೈತಿಕ, ರಾಜಕೀಯ ಹಾಗೂ ವೈಯಕ್ತಿಕ ಗುಣಸ್ವಭಾವ ಮತ್ತು ಅನುಭವಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ವಿಚಾರಗಳು ಮಂಜಪ್ಪನವರು ಸ್ಪಷ್ಟ ವಿಚಾರವಾದಿಗಳಾಗಿದ್ದರೆಂಬುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತವೆ. ಬದುಕಿನ ಆಂತರಿಕ ಹಾಗೂ ಬಾಹ್ಯಸ್ವರೂಪಗಳನ್ನು ಒಳಗೊಂಡ ಮಂಜಪ್ಪನವರ ಈ ಆತ್ಮಕಥೆಯಲ್ಲಿ ಸಮಾಜಮುಖಿ ಕೆಲಸದ ವಿವರಣೆಗಳು ಅಧಿಕವಾಗಿವೆ.

ಜೀವನವೆಂಬುದು ಬೇವು-ಬೆಲ್ಲವೆಂದು ಮಂಜಪ್ಪನವರ ಆತ್ಮಕಥೆ ಓದಿದಾಗ ಅಕ್ಷರಶಃ ಸತ್ಯವೆನಿಸುತ್ತದೆ. ಶಿಕ್ಷಕರಾಗಿದ್ದ ಮಂಜಪ್ಪನವರು ಒಂದಿಷ್ಟು ಸುಖಿಯಾಗಿದ್ದರು. ಸಮಾಜದ ಶಿಕ್ಷಕರಾಗುತ್ತಲೇ ಅನೇಕ ರೀತಿಯ ಕಷ್ಟಗಳನ್ನು ಅನುಭವಿಸಿದರು. ನಿಂದೆಗೆ ಗುರಿಯಾದರು. ದಾವಣಗೆರೆಯಲ್ಲಿ ಇದ್ದ ದಿನಗಳಲ್ಲಿ ಅವರು ಎದುರಿಸಿದ ಕಷ್ಟಗಳು ಕಂಬನಿ ಹರಿಸುವಂತೆ ಮಾಡುತ್ತವೆ. ಊಟಕ್ಕೆ ಗತಿ ಇಲ್ಲದ ಒಂದು ಸಂದರ್ಭದ ವಿಚಾರಗಳನ್ನು ಅವರ ಮಾತುಗಳಲ್ಲೇ ನೋಡಿ-"ಆಗ ನನಗೆ ಊಟಕ್ಕೆ ಕೂಡ ಅಭಾವ. ಶ್ರೀ ಬಾಳಪ್ಪನವರಿಂದಲೇ ಆಗಾಗ್ಗೆ ಒಂದೆರಡು ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಜೀವಿಸುತ್ತಿದ್ದೆನು. ಅವರನ್ನು ಕೇಳುವುದು ಕೂಡ ತುಂಬ ಸಂಕೋಚ. ಯಾರೂ ಇಲ್ಲದಾಗ ಕೇಳುತ್ತಿದ್ದೆನು. ಒಂದು ದಿನ ಮಧ್ಯಾಹ್ನದವರೆಗೂ ಅಂಗಡಿಯಲ್ಲಿ ಕುಳಿತೆನು. ಅನೇಕರು ಅಂಗಡಿಯಲ್ಲಿದ್ದರು. ಶ್ರೀ ಬಾಳಪ್ಪನವರಲ್ಲಿ ರೂಪಾಯಿ ಕೇಳಲಾಗಲಿಲ್ಲ. ಆ ಹಿಂದಿನ ರಾತ್ರಿ ಊಟ ಇರಲಿಲ್ಲ. ಬಾಳಪ್ಪ ಊಟಕ್ಕೆ ಹೋದರು. ನಾನು ಬಹು ವ್ಯಸನದಿಂದ ಗುಡಿಸಲಿನ ಕಡೆ ಹೊರಟೆನು. ಅಲ್ಲಿ ಊಟಕ್ಕೇನೂ ಇರಲಿಲ್ಲ. ತುಂಬಾ ದುಃಖದಿಂದ ಹೋಗುತ್ತಿರುವಾಗ ದಾರಿಯಲ್ಲಿ ಅರ್ಧ ಆಣೆ ದೊರಕಿತು. ಆಗ ನನಗಾದ ಸಂತೋಷಕ್ಕೆ ಎಣೆ ಇಲ್ಲ. ನನ್ನ ಗುಡಸಲಿನ ಹತ್ತಿರವಿದ್ದ ಒಂದು ಚಿಕ್ಕ ಅಂಗಡಿಗೆ ಹೋಗಿ ಅರ್ಧಸೇರು ಜೋಳವನ್ನು ತೆಗೆದುಕೊಂಡು ಬೀಸಿಸಿ ಆ ದಿನ ರೊಟ್ಟಿಯ ಮೇಲೆಯೇ ಇದ್ದೆನು." ನಮ್ಮ ಅಂತರಂಗವನ್ನು ಈ ಸಂದರ್ಭ ಸಹಜವಾಗಿಯೇ ಹಿಂಡುತ್ತದೆ. ಇಂತಹ ಅನೇಕ ಘಟನೆಗಳ ಸಂಗಮ ಮಂಜಪ್ಪನವರ ಆತ್ಮಚರಿತ್ರೆ.

ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಕುಟುಂಬವೊಂದರಲ್ಲಿ ಜನಿಸಿದ ಮಂಜಪ್ಪನವರು ಬಾಲ್ಯದಲ್ಲಿಯೇ ಸಾಮಾಜಿಕ ಭೇದಕಾರಣವಾಗಿ, ಅನ್ಯಾಯ ಅಪಮಾನಗಳಿಗೆ ಗುರಿಯಾಗುತ್ತಾರೆ. ತಾನು ಶಾಸ್ತ್ರಿಯಾಗಲು ಯೋಗ್ಯನಲ್ಲವೇ? ಎಂದು ಪ್ರಶ್ನಿಸಿಕೊಳ್ಳುತ್ತಾರೆ. ಆ ನಂತರದ ದಿನಗಳಲ್ಲಿಯೂ ಇಂಥ ಪ್ರಸಂಗ ಬಂದಾಗ ಬಹುಖಿನ್ನರಾಗುತ್ತಾರೆ. ಇಂಥ ವ್ಯವಸ್ಥೆಯ ಮಧ್ಯದಲ್ಲಿಯೇ ಅವರು ಬೆಳೆದು, ಮಾಡಿದ ಸಾಧನೆ ಬೆರಗನ್ನುಂಟುಮಾಡುತ್ತದೆ. ಇದಕ್ಕೆ ಊರುಗೋಲಾಗಿ ನಿಂತುವು. ಅವರಲ್ಲಿರುವ ಛಲ ಮತ್ತು ಧೈರ್ಯಶಾಲಿ ಮನೋಭಾವ ನಿಜವಾದ ಅರ್ಥದಲ್ಲಿ ನಿರಂಜನ ಶರಣರೆನಿಸಿದ ಮಂಜಪ್ಪನವರು ಜನಹಿತಕ್ಕೆ ಯಾವತ್ತೂ ತಮ್ಮನ್ನು ತೊಡಗಿಸಿಕೊಂಡರು. ಯಾರನ್ನೂ ಮೆಚ್ಚಿಸುವುದಕ್ಕಾಗಲಿ, ಯಾವುದೇ ಫಲಕ್ಕಾಗಿಯಾಗಲಿ ಅವರೆಂದೂ ಕೆಲಸ ಮಾಡಲಿಲ್ಲ. ತಮ್ಮ ವಿವೇಕದನ್ವಯ ಬದುಕಿನುದ್ದಕ್ಕೂ ನಡೆದು ಬಹುಮುಖಿ ಸೇವೆಮಾಡಿದರು. ಮನುಷ್ಯ ತನ್ನ ಸಹಜವಾದ ಗುಣಸ್ವಭಾವಗಳನ್ನು ಅನುಸರಿಸಿ ಕಾರ್ಯಮಾಡಬೇಕು ವಿನಃ ಜನಾನುರಾಗ ಪ್ರಾಪ್ತಿಗಾಗಿ–ತನಗೆ ಸಹಜವಲ್ಲದೆ ಕಾರ್ಯಗಳನ್ನು ಮಾಡುವುದು ವಿಹಿತವಲ್ಲ ಎಂಬ ಸ್ಪಷ್ಟ ನಿಲುವು ಮಂಜಪ್ಪನವರದಾಗಿತ್ತು. ಯಾವುದೇ ಮುಚ್ಚುಮರೆ ಇಲ್ಲದಂತೆ ಪಾರದರ್ಶಕವಾಗಿ ಬದುಕಿದರೆ ಆ ಬದುಕು ಮೌಲಿಕವಾಗಿರುತ್ತದೆಂದು ನಂಬಿದ ಅವರು, ತಮ್ಮ ಆತ್ಮಚರಿತ್ರೆಯನ್ನು 'ತೆರೆದಿಟ್ಟ ಪುಸ್ತಕ'ದಂತೆ ನಿರೂಪಿಸಿದ್ದಾರೆ.

> "ನ್ಯಾಯ ನಿಷ್ಠುರಿ: ದಾಕ್ಷಿಣ್ಯಪರ ನಾನಲ್ಲ,
> ಲೋಕವಿರೋಧಿ: ಶರಣನಾರಿಗಂಜುವನಲ್ಲ,
> ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ"

ಎಂಬ ಬಸವಣ್ಣನವರ ವಚನ ಅವರಿಗೆ ತುಂಬ ಮೆಚ್ಚುಗೆಯಾಗಿತ್ತು. ಈ ವಚನಾರ್ಥಕ್ಕೆ ಅನುಗುಣವಾದ ಗುಣ ಸ್ವಭಾವ ಅವರದಾಗಿತ್ತು.

"ಮಂಜಪ್ಪನವರ ಆತ್ಮಕಥೆಯಲ್ಲಿ ಕವಿಯ ದೃಷ್ಟಿ ಮತ್ತು ವಿಮರ್ಶಾತ್ಮಕ ತುಲನಾತ್ಮಕ ವಿವೇಚನೆಗಳೆರಡನ್ನೂ ಕಾಣಬಹುದು. ಅಲ್ಲಿ ಅನುಭವಗಳನ್ನು ವರ್ಣಿಸುವ ರೀತಿ ತೃಪ್ತಿಕರವಾಗಿದೆ. ತಿಲಕರ ಹಾಗೂ ಗಾಂಧೀಜಿಯವರ ವಿಚಾರಗಳನ್ನು ಟೀಕಿಸುವ ಇವರ ತರ್ಕಬದ್ಧವಾದ ಸರಣಿ ಮತ್ತು ಭಿನ್ನಾಭಿಪ್ರಾಯಗಳನ್ನು ತಿಳಿಸುವ ಭಾಷೆ ಸೌಹಾರ್ದಯುತ, ಸ್ನೇಹಮಯವೂ ಆಗಿದೆ. ಇಲ್ಲಿ ಭಾವಾವೇಶದ ಕಾವನ್ನಾಗಲಿ, ಅಸಹನೆಯ ಹುಚ್ಚನ್ನಾಗಲಿ ಕಾಣುವಂತಿಲ್ಲ. ಅಂತೆಯೇ ಇದು ಹಾಲು ಸಕ್ಕರೆಯಂತಿದೆ. ಗಾಂಧೀಜಿವರ ಆತ್ಮಕಥೆಯಂತೆ ಪರಿಪಕ್ವ ಅನುಭವದ ಸಾರವಾಗಿದೆ."[೪] ಗಾಂಧೀಜಿಯವರ ಬದುಕು ಮತ್ತು ಆದರ್ಶಗಳಿಗೆ ಮಾರುಹೋಗಿ ಅವರಂತೆಯೇ ತಮ್ಮ ಜೀವನ ವಿಧಾನ ಅಳವಡಿಸಿಕೊಂಡು ಬದುಕಿದ ಮಂಜಪ್ಪನವರ ಆತ್ಮಕಥೆ ಗಾಂಧೀಜಿಯವರ ಆತ್ಮಕಥೆಯನ್ನು ನೆನಪಿಗೆ ತರುವುದು ಸಹಜ. ಆದರೆ ಮಂಜಪ್ಪನವರು ತಮಗೆ ಆತ್ಮಕಥೆ ಬರೆಯಲು ಗಾಂಧೀಜಿಯವರ ಆತ್ಮಕಥೆ ಪ್ರೇರಣೆ–ಎಂಬುದನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ ಗಾಂಧೀಜಿ ಹಾಗೂ ಬಸವಣ್ಣನವರ ತತ್ವಗಳನ್ನು ಒಪ್ಪಿಕೊಂಡ ಮಂಜಪ್ಪನವರು ಅವುಗಳನ್ನು ತೂಗಿನೋಡದೆ ಎಂದೂ ಒಪ್ಪಿಕೊಳ್ಳುತ್ತಿರಲಿಲ್ಲ. ಮಂಜಪ್ಪ–ಮಂಜಪ್ಪನವರಾಗಿಯೇ ಬದುಕಿದರೆಂಬುದು ಅವರ ಆತ್ಮಕಥೆ ಸಾಬೀತುಪಡಿಸುತ್ತದೆ.

೪. ಹರ್ಡೇಕರ ಮಂಜಪ್ಪನವರ ಆತ್ಮಚರಿತ್ರೆ, ಸಂ. ಗ.ಸ. ಹಾಲಪ್ಪ, ಪುಟ, ೬

೧೯೧೦ರಿಂದಲೇ ದಿನಚರಿ ಬರೆಯುವ ರೂಢಿ ಇಟ್ಟುಕೊಂಡಿದ್ದ ಮಂಜಪ್ಪನವರು, ತಮ್ಮ ಆತ್ಮಕಥೆಗೆ ಅದನ್ನೆ ಮೂಲ ಆಕರ ಸಾಮಗ್ರಿಯಾಗಿಸಿಕೊಂಡರು. ಅಲ್ಲದೆ ನೆನೆಪಿನ ಗಣಿಯಿಂದ ಬಂದ ಅನುಭವಗಳನ್ನು ಅಲ್ಲಲ್ಲಿ ಮೆಲಕುಹಾಕಿದ್ದನ್ನು ನೋಡುತ್ತೇವೆ. ೧೯೩೮ರ ವರೆಗೆ ಮಂಜಪ್ಪನವರ ಬದುಕನ್ನು ಚಿತ್ರಿಸುವ ಈ ಆತ್ಮಕಥೆಯ ಮುಂದಿನ ಭಾಗವನ್ನು ಅಂದರೆ ೧೯೪೭ ಜನವರಿ ೩ ರಂದು ಮಂಜಪ್ಪನವರು ನಿಧನರಾಗುವವರೆಗಿನ ಆತ್ಮ ಚರಿತ್ರೆಯನ್ನು ಮಂಜಪ್ಪನವರು ಬರೆದಂತೆಯೇ ಶ್ರೀಯಲಗೂರೇಶ ಬರೆದಿದ್ದಾರೆ. ಇದು ಡಾ. ಎಂ. ಎಂ. ಕಲಬುರ್ಗಿ ಅವರು ಸಂಪಾದಿಸಿದ 'ಕರ್ನಾಟಕ ಗಾಂಧೀ ಹರ್ಡೇಕರ ಮಂಜಪ್ಪ'ಕೃತಿಯಲ್ಲಿ ಪುಟ ೧೦೩ ರಿಂದ ೧೨೨ರ ವರೆಗೆ ಪ್ರಕಟಗೊಂಡಿದೆ. ಶ್ರೀ ಯಲಗೂರೇಶ ಸಂಕನಾಳ ಅವರು ಇದನ್ನು ೯೨ ವರ್ಷದ ವಯೋವೃದ್ಧ ಶ್ರೀ ಮಹಾಂತಪ್ಪ ರುದ್ರಪ್ಪ ಬಳ್ಳೊಳ್ಳಿ. ಸಾ. ಆಲಮಟ್ಟಿ, ಶರಣ ಸಂದೇಶ ಪತ್ರಿಕೆಯ ಸಂಚಿಕೆ ಮತ್ತು ಗ. ಸ. ಹಾಲಪ್ಪ. ಅವರು ಸಂಪಾದಿಸಿದ ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ' ಇತ್ಯಾದಿಗಳ ಸಹಾಯದಿಂದ ರಚಿಸಿರುವುದಾಗಿ ತಿಳಿಸಿದ್ದಾರೆ. ಈ ಭಾಗವನ್ನು ಮಂಜಪ್ಪನವರ ಆತ್ಮಕಥೆಯೊಂದಿಗೆ ಸೇರಿಸಿ ಅದು ಪೂರ್ಣವಾಗುವಂತೆ ನೋಡಿಕೊಳ್ಳಲಾಗಿದೆ.

ಯಲಗೂರೇಶ ಸಂಕನಾಳ ಅವರು ಬರೆದ ವಿವರಣೆಯಲ್ಲಿ ಮಂಜಪ್ಪನವರು ತಮ್ಮ ಬದುಕಿನ ಕೊನೆಯ ಹತ್ತು ವರ್ಷಗಳಲ್ಲಿ ಮಾಡಿದ ಸಾಧನೆಗಳ ವಿವರಣೆಯಿದೆ. ಈ ವೇಳೆಯಲ್ಲಿ ಅವರು ಪುಸ್ತಕ ರಚನೆ, ಪ್ರಕಟಣೆ, ಪ್ರಸಾರ ಕಾರ್ಯಗಳನ್ನು ವಿಶೇಷ ಮಾಡಿರುವುದು ತಿಳಿಯುತ್ತದೆ. ಶರಣಸಂದೇಶ ಪತ್ರಿಕೆಯನ್ನು ಎಂಥ ಸಂಕಷ್ಟದಲ್ಲೂ ನಿಲ್ಲದಂತೆ ನೋಡಿಕೊಂಡು ನಡೆಸಿದ ರೋಮಾಂಚನಕಾರಿ ವಿವರಗಳು ಇಲ್ಲಿವೆ. ಪ್ರಗತಿ ಗ್ರಂಥ ಪ್ರಚಾರಕ ಸಮಿತಿಯ ಉದ್ದೇಶ, ನಿಯಮ ಹಾಗೂ ಕಾರ್ಯಸೂಚಿಯ ವಿವರಣೆಗಳು ಇಲ್ಲಿ ಎಡೆಪಡೆದಿವೆ. ಅಂದಿನ ರಾಜಕೀಯ ಸಾಮಾಜಿಕ ಜೀವನಕ್ಕೆ ಮಂಜಪ್ಪನವರ ಪ್ರತಿಕ್ರಿಯೆಗಳು ಏನೆಂಬುದೂ ಇಲ್ಲಿ ದೊರೆಯುತ್ತದೆ.

ಮಂಜಪ್ಪನವರ ಆತ್ಮಕಥೆ ಕನ್ನಡ ಆತ್ಮಕಥೆ ಸಾಹಿತ್ಯದ ಆದ್ಯಕೃತಿ-ಅಗ್ರಗಣ್ಯ ಕೃತಿ. ಭಾರತದಲ್ಲಿ ಮಹಾತ್ಮಾಗಾಂಧೀಜಿಯವರ ಆತ್ಮಕಥೆ ಪಡೆದ ಪ್ರಮುಖಸ್ಥಾನ. ಕರ್ನಾಟಕಗಾಂಧೀ ಹರ್ಡೇಕರ ಮಂಜಪ್ಪನವರ ಆತ್ಮಕಥೆಗೆ ಕರ್ನಾಟಕದಲ್ಲಿ ಸಲ್ಲುತ್ತದೆ. ಸಮಕಾಲೀನ ಕರ್ನಾಟಕದಲ್ಲಿ ನಡೆದ ಅನೇಕ ಮಹತ್ವದ ವಿಚಾರಗಳನ್ನು ಅದು ದಾಖಲಿಸುತ್ತದೆ. ಒಂದರ್ಥದಲ್ಲಿ ಕನ್ನಡನಾಡಿನ ಚರಿತ್ರೆಯಾಗಿ ನಿಲ್ಲುವ ಅದು, ಸಹೃದಯರಿಗೆ ಛಲ ಹಾಗೂ ಧೈರ್ಯದಿಂದ ಬದುಕನ್ನು ರೂಪಿಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ.

❖❖

ಖಾಸಗಿ ಪತ್ರದಂಥ ಪುಸ್ತಕ

ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ

(ಕ್ರಿ. ಶ. ೧೯೦೭ ರಿಂದ ೧೯೩೭)

ಹಾಗೂ

ಮುಂದುವರಿದ ಚರಿತ್ರೆ

ಹರ್ಡೇಕರ ಮಂಜಪ್ಪ

ಇದರ ಮುದ್ರಣ ಮತ್ತು ಪ್ರಕಟನೆಗಳ ಸರ್ವಾಧಿಕಾರಗಳನ್ನು
ಲೇಖಕರು ಕಾದಿಟ್ಟುಕೊಂಡಿದ್ದಾರೆ.

ಈ ಪುಸ್ತಕವು
ಆಲಮಟ್ಟಿ ಬಸವಲಿಂಗ ಮುದ್ರಣ ಮಂದಿರದಲ್ಲಿ
ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಇವರಿಂದ ವೀರಶೈವ ವಿದ್ಯಾಲಯದಲ್ಲಿ ಪ್ರಕಟಿಸಲ್ಪಟ್ಟಿತು.

*

ಅರ್ಪಣಾ ಪತ್ರಿಕಾ

ನನ್ನ
ಕಳೆದ ಮೂವತ್ತು ವರುಷಗಳ
ಸಾರ್ವಜನಿಕ ಕಾರ್ಯಗಳಿಗೋಸ್ಕರ ಸಹಾಯಮಾಡಿದ
ಪ್ರಮುಖ ಮಹಾಶಯರಿಗೆ
ನನ್ನ ಕಾರ್ಯಗಳ ವರದಿಯಾದ
ಈ ಪುಸ್ತಕ ರೂಪದ ಕಾಣಿಕೆಯನ್ನು
ಮಹಾತ್ಮಾಗಾಂಧೀಯವರ
೬೯ ನೆಯ ವರ್ಷವರ್ಧಂತಿಯ ಶುಭದಿನದಲ್ಲಿ
(ತಾ. ೨.೧೦.೧೯೩೭)
ಕೃತಜ್ಞತಾಪೂರ್ವಕ ಸಮರ್ಪಿಸಿದ್ದೇನೆ.

ಈ
ಕಾಣಿಕೆ ಪುಸ್ತಕವು
"ಖಾಸಗಿ" ಪತ್ರವೆಂದೇ
ಇದನ್ನು ಹೊಂದಿದ ತಾವು ಮತ್ತು ಓದಿದ ಮಹಾಶಯರು
ಪರಿಗಣಿಸಿ
ಇದನ್ನು ಅಥವಾ ಇದರಲ್ಲಿಯ ಯಾವುದೊಂದು ಭಾಗವನ್ನು
ಇಲ್ಲವೆ ಇದರಲ್ಲಿಯ ಸಂಗತಿಗಳನ್ನು
ಸಾರ್ವಜನಿಕವಾಗಿ
ಲೇಖನ ಅಥವಾ ಭಾಷಣಗಳಲ್ಲಿ ಪ್ರಸ್ತಾಪಿಸಬಾರದಾಗಿ
ಪ್ರಾರ್ಥನೆ.

*

ಮುನ್ನುಡಿ

ಇನ್ನೊಂದು ನನ್ನ ಸಾರ್ವಜನಿಕ ಕೆಲಸಗಳ ಸಾಮಾನ್ಯವಾದ ವರದಿಯು. ಮೂವತ್ತು ವರುಷಗಳ ನನ್ನ ಆತ್ಮವೃತ್ತವೆಂದರೂ ಅನ್ನಬಹುದು. ಇದರಲ್ಲಿಯ ಸಂಗತಿಗಳೇನು ಸಕಲರಿಗೂ ತಿಳಿಸಲ್ಪಡತಕ್ಕಷ್ಟು ಮಹತ್ವದವುಗಳಾಗಿಲ್ಲ. ಆದರೆ ನನಗೆ ಅನೇಕ ರೀತಿಗಳಿಂದ ಆಯಾಯ ಕಾರ್ಯಗಳಲ್ಲಿ ಸಹಾಯಮಾಡಿದ ಕೆಲವು ಮಹಾಶಯರಿಗೆ ತಿಳಿಸದೆ ಇರತಕ್ಕಷ್ಟು ಕ್ಷುದ್ರವಾದವುಗಳೂ ಅಲ್ಲ. ಆ ಮಹಾಶಯರಿಗೆ ತಾವು ಮಾಡಿದ ಅಲ್ಪ ಸಹಾಯವಾದರೂ ಎಷ್ಟೋ ಫಲಕಾರಿಯಾಯಿತೆಂದೇ ಸಮಾಧಾನಪಡುವಷ್ಟರಮಟ್ಟಿಗೆ ಅವು ಇವೆಯೆಂದೇ ನನ್ನ ನಂಬಿಕೆ. ಅಂತೆಯೇ ಅಂತಹ ಮಹಾಶಯರಿಗೆ ಮಾತ್ರ ನಾನು ಮಾಡಿದ ಕಾರ್ಯಗಳನ್ನು ಈ ಪುಸ್ತಕ ರೂಪದ ಖಾಸಗಿ ಪತ್ರದಿಂದ ವೇದ್ಯಗೊಳಿಸಿದ್ದೇನೆ. ಇದೇ ಆ ಮಹಾಶಯರ ಉದಾರವಾದ ಸಹಾಯಕ್ಕೆ ಕೃತಜ್ಞತೆಯಿಂದ ಒಪ್ಪಿಸಿದ ನನ್ನ ಕಾಣಿಕೆ.

ಇದರಲ್ಲಿ ನಾವು ಸಾರ್ವಜನಿಕ ಕಾರ್ಯವನ್ನು ಪ್ರಾರಂಭಿಸಿದ ೧೯೦೬ನೆಯ ಇಸುವಿಯಿಂದ ೧೯೩೬ನೆಯ ಇಸವಿಯ ವರೆಗಿನ ೩೦ ವರುಷಗಳ ಮುಖ್ಯ ಮುಖ್ಯ ಸಂಗತಿಗಳಿವೆ. ಇವುಗಳನ್ನು (೧) ಕಾರ್ಯಾರಂಭ (೨) ವೀರಶೈವ ಸಮಾಜಕಾರ್ಯ (೩) ಸತ್ಯಾಗ್ರಹ ತತ್ವ ಪ್ರಸಾರ (೪) ಆಶ್ರಮವಾಸ (೫) ಹಳ್ಳಿಗಳ ಸಂಚಾರ (೬) ವೀರಶೈವ ವಿದ್ಯಾಲಯದ ಕಾರ್ಯ–ಎಂಬ ಆರು ಭಾಗಗಳಲ್ಲಿ ವಿವರಿಸಿ ಆಮೇಲೆ ಧಾರ್ಮಿಕ, ಸಾಮಾಜಿಕ, ನೈತಿಕ, ರಾಜಕೀಯ ವಿಷಯಗಳಲ್ಲಿರುವ ನನ್ನ ಕೆಲವು ವಿಚಾರಗಳನ್ನು ಕೊನೆಯಲ್ಲಿ ನನ್ನ ಕೆಲವು ಗುಣಸ್ವಭಾವ, ಅನುಭವ ಮತ್ತು ಅಭಿರುಚಿಗಳನ್ನು ತಿಳಿಸಿದ್ದೇನೆ. ಕ್ರಿ. ಶ. ೧೯೧೦ನೆಯ ಇಸವಿಯಿಂದಲೂ ನಾನು ಪ್ರತಿವರುಷ ಡೈರಿಯನ್ನಿಟ್ಟು ಅದರಲ್ಲಿ ಬರೆದಿಡುವ ಪದ್ಧತಿಯಿರುವುದರಿಂದ ಈ ನನ್ನ ಬರವಣಿಗೆಗೆ ಅವು ತುಂಬಾ ಸಹಾಯವಾಗಿವೆ. ಆ ಮುಂಚಿನ ಕೆಲವು ಸಂಗತಿಗಳನ್ನು ಜ್ಞಾಪಕದ ಮೇಲಿಂದಲೆ ಬರೆದಿದ್ದೇನೆ.

ನಾನು ಮಾಡಿದ ಅತ್ಯಲ್ಪ ಸಾರ್ವಜನಿಕ ಕಾರ್ಯಗಳು ಮುಖ್ಯವಾಗಿ ಭಾಷಾ ವಿಷಯಕ, ನೈತಿಕ, ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳಿಗೆ ಸಂಬಂಧಿಸಿದವು. ಇವುಗಳಲ್ಲಿ ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳೇ ಭಿನ್ನಾಭಿಪ್ರಾಯಕ್ಕೆ ಒಳಪಟ್ಟವುಗಳಾಗಿವೆ. ಹಿಂದುಸ್ಥಾನದ ಈಗಿನ ಈ ಹೀನ ದೀನ ಸ್ಥಿತಿಗಳಿಗೆ ಈ ಮೂರು ವಿಷಯಗಳಲ್ಲಿರುವ ಕುಂದುಕೊರತೆಗಳೇ ಮುಖ್ಯ ಕಾರಣವಾಗಿವೆಯೆಂದು ನನ್ನ ತಿಳುವಳಿಕೆ.

ಇವುಗಳಲ್ಲಿ ಸಾಮಾಜಿಕ ಸಂಗತಿಗಳು ಧಾರ್ಮಿಕವಾಗಿಯೇ ಹಿಂದುಗಳಿಂದ ಪರಿಗಣಿಸಲ್ಪಡುತ್ತವೆ. ಆದಕಾರಣ ರಾಜಕೀಯ ಮತ್ತು ಧಾರ್ಮಿಕ ಈ ಉಭಯ ವಿಷಯಗಳೇ ಈ ದೇಶದ ಉನ್ನತಾವನತಿಗಳಿಗೆ ಹೆಚ್ಚಾಗಿ ಸಂಬಂಧಪಟ್ಟಿವೆಯೆಂದು ನಾನು ತಿಳಿದಿದ್ದೇನೆ. ಇವುಗಳಲ್ಲಿ ಯಾವುದಾದರೂ ಒಂದು ಸುಧಾರಣೆಯಾದರೆ ಇನ್ನೊಂದು ತಾನೇ ಸುಧಾರಿಸಲ್ಪಡುತ್ತದೆಂದು ನನಗೆ ತೋರುವುದಿಲ್ಲ. ಆದಕಾರಣ ರಾಜಕೀಯ ಮತ್ತು ಧಾರ್ಮಿಕ ಈ ಉಭಯ ವಿಷಯಗಳ ಕುಂದುಕೊರತೆಗಳನ್ನೂ ನಿವಾರಣೆ ಮಾಡಲು ಒಂದೇ ಕಾಲದಲ್ಲಿ ಪ್ರಯತ್ನ ಮಾಡಬೇಕೆಂದೇ ನನ್ನ ತಿಳುವಳಿಕೆ.

ಹಿಂದುಸ್ಥಾನವು ಈಗ ಈ ಉಭಯ ವಿಷಯಗಳಲ್ಲಿಯೂ ಶೋಚನೀಯ ಸ್ಥಿತಿಗೀಡಾಗಿದೆ. ಆದುದರಿಂದ ಯಾವುದರ ಕಡೆಗೆ ಉಪೇಕ್ಷೆ ಮಾಡಿದರೂ ಅದು ಅಪಾಯಕರವೇ ಸರಿ. ಆದರೆ ಈ ಉಭಯ ವಿಷಯಗಳ ಸುದಾರಣೆಯ ಪ್ರಯತ್ನಗಳು ಮಾತ್ರ ಬೇರೆ ಬೇರೆ ಸಂಸ್ಥೆಗಳಿಂದಲೇ ಜರುಗಬೇಕೆ ವಿನಾ ರಾಜಕೀಯ ಕಾರ್ಯಕಲಾಪಗಳಲ್ಲಿ ಧಾರ್ಮಿಕ ಸಂಗತಿಗಳಾಗಲಿ ಅಥವಾ ಧಾರ್ಮಿಕರ ಸುಧಾರಣೆಯ ಕಾರ್ಯಗಳು ರಾಜಕೀಯ ಸಂಸ್ಥೆಗಳಿಂದಾಗಲಿ ಜರುಗುವುದು ಹಿತಕರವಲ್ಲ. ರಾಜಕೀಯ ಸ್ವಾತಂತ್ರ್ಯ ದೊರೆತ ಮೇಲೂ ಧಾರ್ಮಿಕ ಸುಧಾರಣೆಯ ಕಾರ್ಯಗಳು ಇದ್ದೇ ಇರುವುವು.

ರಾಜಕೀಯ ಪಾರತಂತ್ರ್ಯದಿಂದ ಹಿಂದುಸ್ಥಾನವು ಕಳೆದೊಂದು ಸಾವಿರ ವರುಷಗಳಿಂದಲೂ ದಿನೆ ದಿನೆ ದಾರಿದ್ರ್ಯಾದಿ ಅನೇಕ ಕಷ್ಟ ನಷ್ಟಗಳಿಗೆ ಈಡಾಗುತ್ತಾ ಬಂದಿರುವಂತೆಯೇ ಅನೇಕ ಸಾವಿರ ವರುಷಗಳಿಂದಲೂ ನಾನಾ ಧಾರ್ಮಿಕ ದೋಷಗಳ ಮೂಲಕ ಹಿಂದೂ ಜನಾಂಗದ ಬಹು ಭಾಗವು ಅನೇಕ ಅನಿರ್ವಚನೀಯ ದುಃಖ ಪರಂಪರೆಗಳಿಗೂ ಒಳಗಾಗುತ್ತಾ ಬಂದಿದೆ. ಹಿಂದೂ ದೇಶವು ನನ್ನ ತಾಯಿ ಹಿಂದೂ ಧರ್ಮವು ನನ್ನ ತಂದೆ ಇವರಲ್ಲಿ ಯಾರ ದುಃಖವನ್ನು ನಿರ್ಲಕ್ಷಿಸುವುದೂ ಸರಿಯಲ್ಲ. ನಾನು ಹುಟ್ಟಿದ ದೇಶದಿಂದಲೂ ನಾನು ಅನುಸರಿಸಿದ ಧರ್ಮದಿಂದಲೂ ನನ್ನ ಜೀವಿತವು ರೂಪಗೊಂಡಿದೆ. ಆದ ಕಾರಣ ಅವುಗಳ ಸೇವೆಗಾಗಿ ನನ್ನ ಶಕ್ತಿಯನ್ನು ಸಮರ್ಪಿಸಿಬಿಡುವುದೇ ಅವುಗಳ ಋಣದಿಂದ ಮುಕ್ತನಾಗುವ ಮಾರ್ಗವೆಂದು ನನ್ನ ತಿಳುವಳಿಕೆ, ಅದೇ ನನಗೆ ಪರಮ ಧರ್ಮ, ಅದೇ ನನಗೆ ಪರತರಮೋಕ್ಷ.

ಇವುಗಳ ಸೇವೆಯ ರೀತಿನೀತಿಗಳಾದರೂ ಮಹಾತ್ಮಗಾಂಧಿಯವರು ೧೯೨೦ನೆಯ ಇಸವಿಯಲ್ಲಿ ಮಾಡಿದ ಅತ್ಯದ್ಭುತವಾದ ವಿಚಾರಕ್ರಾಂತಿಯ ಕಾಲಕ್ಕೆ ನನ್ನಲ್ಲಿ ಒಂದು ತರವಾಗಿ ದೃಢಪಟ್ಟವು. ಅಂದಿನಿಂದ ಅವುಗಳನ್ನನುಸರಿಸಿ ನಾನು ಸಾರ್ವಜನಿಕ ಕಾರ್ಯಗಳನ್ನು ಮಾಡಲು ಪ್ರಯತ್ನಿಸುತ್ತಾ ಬಂದಿದ್ದೇನೆ. ನನ್ನ ಅನೇಕ ಕಾರ್ಯ ಪದ್ಧತಿಗಳು ಕೆಲವರಿಗೆ ಅಯುಕ್ತವಾಗಿ ತೋರಬಹುದು. ಆದರೆ ನಾನು ಮಾತ್ರ ನನ್ನ ಸದಸದ್ವಿವೇಕಬುದ್ಧಿಗೆ ಯುಕ್ತವೆಂದು ತೋರಿದ ರೀತಿಯಲ್ಲಿಯೇ ನಡೆಯುತ್ತಾ ಬಂದಿದ್ದೇನೆ. ಅದನ್ನೇ ತಮ್ಮ ಮುಂದೆಯೂ ಇಟ್ಟಿದ್ದೇನೆ.

ಒಂದು ಬಡ ಕುಟುಂಬದಲ್ಲಿ ಹುಟ್ಟಿದ ವ್ಯಕ್ತಿಯು ಹಣದ ಬಲವಿಲ್ಲದೆ, ವಿದ್ಯೆಯನ್ನೂ ಹೆಚ್ಚು ಸಂಪಾದಿಸದೆ, ಮಹಾ ಸಾಹಸಿಯಾಗಿರದಿದ್ದರೂ ಸಾರ್ವಜನಿಕ ಕಾರ್ಯವೇ ತನ್ನ ಧ್ಯೇಯವೆಂದು ತಿಳಿದು ಪ್ರಾಮಾಣಿಕತೆಯಿಂದ ಪ್ರಯತ್ನಿಸುತ್ತಾ ಇದ್ದರೆ, ಜನಸೇವೆಯು ಸ್ವಲ್ಪಾದರೂ ಆಗುವುದರಲ್ಲಿ

ಅಭ್ಯಂತರವಿಲ್ಲವೆಂದೂ ಇಂತಹ ಸೇವಕರಿಗೆ ಮಾಡಲ್ಪಡುವ ಅಲ್ಪ ಸಹಾಯವಾದರೂ ವ್ಯರ್ಥವಾಗುವುದಿಲ್ಲವೆಂದೂ ಸಹಾಯಕರಾದ ಮಹಾಶಯರಿಗೆ ವೇದ್ಯವಾಗದೆ ಇರಲಾರದು.

ಸಕಲ ಸಂಗತಿಗಳಲ್ಲಿಯೂ ಹೀನಾವಸ್ಥೆಗೆ ಬಂದಿರತಕ್ಕ ಈ ನಮ್ಮ ದೇಶದಲ್ಲಿ ಈಗ ಅತ್ಯಲ್ಪ ಕಾರ್ಯಗಳು ಈ ನನ್ನ ಎಲ್ಲಾ ಸಹಾಯಕರಿಗೂ ಸಂಪೂರ್ಣ ಒಪ್ಪಿಗೆಯಾಗಬಹುದೆಂದೇನೂ ನಾನು ತಿಳಿದಿಲ್ಲ. ಅನೇಕರಿಗೆ ಅನೇಕ ಕಾರ್ಯಗಳು. ಅಯುಕ್ತವಾಗಿಯೂ ತೋರಬಹುದು. ಹೀಗಿದ್ದರೂ ತಾವು ಮಾಡಿದ ಸಹಾಯವು ಮಾತ್ರ ವ್ಯರ್ಥವಾಯಿತೆಂದು ಪ್ರಾಯಶಃ ಯಾರಿಗೂ ಅನಿಸಲಾರದೆಂದೇ ನನ್ನ ನಂಬಿಕೆ. ಒಂದು ವೇಳೆ ಯಾರಿಗಾದರೂ ಅಪಾತ್ರದಲ್ಲಿ ಸಹಾಯಮಾಡಿದ್ದಾಯಿತೆಂದು ಅನಿಸಿದರೆ ಅವರಿಗೆ ನಾನು ಈ ಮೂಲಕ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆ. ಮನುಷ್ಯನು ತನ್ನ ಸಹಜವಾದ ಗುಣ ಸ್ವಭಾವಗಳಿಗನುಸರಿಸಿ ಕಾರ್ಯವನ್ನು ಮಾಡಬೇಕೆ ವಿನಾ ಜನಾನುರಾಗಪ್ರಾಪ್ತಿಗಾಗಿಯೇ ತನಗೆ ಸಹಜವಲ್ಲದ ಕಾರ್ಯಗಳನ್ನು ಮಾಡುವುದು ವಿಹಿತವಲ್ಲ. ಅದೊಂದು ರೀತಿಯ ಆತ್ಮಹತ್ಯವೆಂದೇ ನನ್ನ ತಿಳುವಳಿಕೆ. ಆದುದರಿಂದಲೇ ಈ ಪುಸ್ತಕದ ಕೊನೆಯಲ್ಲಿ ನಾನು ನನ್ನ ಕೆಲವು ವಿಚಾರಗಳನ್ನೂ ಗುಣ ಸ್ವಭಾವಗಳನ್ನೂ ತಮ್ಮ ಅವಗಾಹನೆಗೆ ತಂದಿದ್ದೇನೆ.

ಕಳೆದ ವರ್ಷ ಮಹಾತ್ಮಾ ಗಾಂಧಿಯವರ ವರ್ಧಂತಿಯ ಕಾಲಕ್ಕೇನೇ ಇದನ್ನು ತಮ್ಮ ಕೈಗೆ ಕೊಡಬೇಕೆಂದು ಯೋಚಿಸಿದ್ದೇನು. ಆದರೆ ಬೇರೆ ಬೇರೆ ಕೆಲಸಗಳ ಮೂಲಕ ಆಗಲಿಲ್ಲ. ಈ ಸಾರೆಯಾದರೂ ಅದೇ ಕಾಲಕ್ಕೆ ಈ ಕಾಣಿಕೆಯನ್ನು ಅರ್ಪಿಸಿದ್ದೇನೆ. ತಾವು ಇದ್ನು ಸ್ವೀಕರಿಸಿ ನನ್ನ ಅಲ್ಪ ಸೇವೆಯಿಂದ ಸಮಾಧಾನ ಹೊಂದುವಿರೆಂದು ನಂಬಿರುವೆ.

ಗಾಂಧಿ ಸಪ್ತಾಹ

ತಾ. ೨೬-೯-೩೭

ತಮ್ಮ ವಿಧೇಯ

ಹರ್ಡೇಕರ ಮಂಜಪ್ಪ

❖❖

॥ಓಂ॥

ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ

ಸಾರ್ವಜನಿಕ ಕಾರ್ಯಾರಂಭ

(ಕ್ರಿ. ಶ. ೧೯೦೬-೧೯೧೧)

ಕ್ರಿ. ಶ. ೧೯೦೬ನೆಯ ಇಸವಿಯಲ್ಲಿ ನಾನು ಸಾರ್ವಜನಿಕ ಕಾರ್ಯವನ್ನು ಪ್ರಾರಂಭಿಸಿದೆನು. ಆದಕಾರಣ ಅನಂತರದ ಸಂಗತಿಗಳನ್ನೇ ತಿಳಿಸಬೇಕಾದುದು ಯುಕ್ತವಿದ್ದರೂ ಆ ಸಾರ್ವಜನಿಕ ಕಾರ್ಯಾರಂಭಕ್ಕೆ ಯಾವುದು ಕಾರಣವಾಯಿತೆಂಬುದನ್ನೂ ಸ್ವಲ್ಪ ತಿಳಿಸಬೇಕಾದುದು ಅವಶ್ಯಕವಷ್ಟೆ. ಅಂತೆಯೇ ಆ ಮುಂಚಿನ ಕೆಲವು ಸಂಗತಿಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿದ್ದೇನೆ.

ಪೂರ್ವ ವೃತ್ತಾಂತ : ನನ್ನ ಅಣ್ಣನವರು ಕಾರವಾರ ಜಿಲ್ಲಾ ಶಿರಸಿಯ ತಾಲೂಕು ಕಛೇರಿಯಲ್ಲಿ ಕಾರಕೂನರಾಗಿದ್ದರು. ಅವರಿಗೆ ತಿಂಗಳಿಗೆ ೧೫ರೂ. ಸಂಬಳ ದೊರೆಯುತ್ತಿತ್ತು. ಅವರೇ ಮನೆತನವನ್ನು ಸಾಗಿಸುವವರಾಗಿದ್ದರು. ಅಂತೆಯೇ ನಾನು ನಮ್ಮ ಊರಾದ ಬನವಾಸಿಯನ್ನು ಬಿಟ್ಟು ಕ್ರಿ. ಶ. ೧೯೦೩ರಲ್ಲಿ ಶಿರಸಿಗೆ ಹೋಗಿದ್ದೆನು. ಅದೇ ವರುಷ ನಾನು ಕನ್ನಡ ಮುಲುಕಿ ಪರೀಕ್ಷೆಯಲ್ಲಿ ತೇರ್ಗಡೆಯಾದುದರಿಂದ ನಾನು ಜಾಣನೆಂದೇ ನನ್ನ ಸಂಗಡಿಗರು ಹೇಳಲಾರಂಭಿಸಿದರು. ಏಕೆಂದರೆ, ನಾನು ಮೊದಲನೆಯ ಸಾರೆಯೇ ತೇರ್ಗಡೆಯಾದೆನು. ಆಗ ನನಗೆ ೧೭ ವರುಷ.

ಆಗ ಶಿರಸಿಯ ಕನ್ನಡಶಾಲಾ ಹೆಡ್‌ಮಾಸ್ತರರು ಕೈ, ಸಂಗನಬಸಯ್ಯನವರು ಎಂಬುವವರಿದ್ದರು. ನಾನು ಮುಲಕಿ ತೇರ್ಗಡೆಯಾದುದನ್ನು ಕೇಳಿ ಅವರಿಗೆ ಬಹು ಸಂತೋಷವಾಯಿತು. ಏಕೆಂದರೆ, ಆ ಜಿಲ್ಲೆಯಲ್ಲಿಯೇ ಮುಲಕಿ ಪರೀಕ್ಷೆ ತೇರ್ಗಡೆಹೊಂದಿದ ಯಾವ ಲಿಂಗಾಯತ ಹುಡುಗನೂ ಇರಲಿಲ್ಲ. ನನಗೆ ಮಂಜು ಎಂದು ಬಹು ಪ್ರೀತಿಯಿಂದ ಕರೆಯುತ್ತಾ ಕೂಡಲೆ ಕನ್ನಡ ಶಾಲೆಯಲ್ಲಿ ನನ್ನನ್ನು ಅಧ್ಯಾಪಕನನ್ನಾಗಿ ನಿಯಮಿಸಿಕೊಂಡರು. ನನಗೆ ತಿಂಗಳಿಗೆ ೭ರೂ. ಸಂಬಳ ದೊರೆಯುತ್ತಿತ್ತು. ರಾತ್ರಿ ಎರಡು ವಿದ್ಯಾರ್ಥಿಗಳಿಗೆ ಪಾಠ ಹೇಳಲಾರಂಭಿಸಿದೆನು. ಅವರಿಂದ ತಿಂಗಳಿಗೆ ೪ ರೂ. ದೊರೆಯುತ್ತಿತ್ತು.

ನಾನು ಹುಡುಗರ ಆಟದ ಸಂಬಂಧವಾಗಿಯೂ ಕವಾಯತಿ (ಡ್ರಿಲ್) ಸಂಬಂಧವಾಗಿಯೂ ಚಿಕ್ಕ ಚಿಕ್ಕ ಪದಗಳನ್ನು ಕಟ್ಟಿ ನನ್ನ ಕಡೆಗಿದ್ದ ಕನ್ನಡ ಒಂದನೆಯ ತರಗತಿಯ ಹುಡುಗರಿಗೆ ಬಹು ಹುರುಪುಕೊಟ್ಟು ಕಲಿಸುತ್ತಿದ್ದೆನು. ಒಂದು ವರುಷದಲ್ಲಿಯೇ ನಾನು ಹೆಡ್‌ಮಾಸ್ತರರ ಹೆಚ್ಚಿನ ಮೆಚ್ಚಿಗೆಗೆ ಪಾತ್ರನಾದುದರಿಂದ ನನ್ನ ಕಡೆಗೆ ೨ ನೆಯ ನಂಬರದ ಪ್ರತ್ಯೇಕ ಶಾಲೆಯನ್ನೇ ಕೊಟ್ಟರು.

ಕ್ರಿ. ಶ. ೧೯೦೫ರಲ್ಲಿ ನಾನು ಪ್ರತ್ಯೇಕ ಶಾಲೆಯ ಅಧ್ಯಾಪಕನಾದೆನು. ಅಲ್ಲಿ ನಾನೊಬ್ಬನೇ ಅಧ್ಯಾಪಕ. ನನ್ನ ಶಾಲೆಯ ಹತ್ತಿರವೇ ಕೈ. ಹಾಳಕರ ಎಂಬ ವಕೀಲರ ಮನೆಯಿತ್ತು. ಅವರ

ತಮ್ಮಂದಿರೂ ವಕೀಲರು. ಅವರು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಮುಂಬೈಯಲ್ಲಿ ವಕೀಲಿ ಮಾಡುತ್ತಿದ್ದರು. ಅವರು ಆರ್ಯ ಸಮಾಜದವರಾಗಿದ್ದರು. ಮುಂಬೈ ಆರ್ಯ ಸಮಾಜದ ಕಾರ್ಯದರ್ಶಿಗಳೂ ಇದ್ದರು. ಬೇಸಿಗೆಯ ಸೂಟಿಯಲ್ಲಿ ಅವರು ಶಿರಸಿಗೆ ತಮ್ಮ ಅಣ್ಣಂದಿರಲ್ಲಿ ಬಂದಾಗ ನನಗೆ ಅವರ ಪರಿಚಯವಾಯಿತು.

ಶ್ರೀ ಸ್ವಾಮಿ ದಯಾನಂದರ ಸತ್ಯಾರ್ಥ ಪ್ರಕಾಶ ಎಂಬ ಗ್ರಂಥವನ್ನು ಕನ್ನಡದಲ್ಲಿ ಬರೆಯಿಸಬೇಕೆಂದು ಅವರು ಯೋಚಿಸಿದ್ದರು. ನಾನು ಕನ್ನಡದಲ್ಲಿ ಪದ್ಯಗಳನ್ನು ಮಾಡುವುದು ಅವರ ಅಣ್ಣಂದಿರರಿಗೆ ಗೊತ್ತು ಏಕೆಂದರೆ, ಅವರು ಮುನ್ಸಿಪಾಲ್ಟಿ ಮೆಂಬರರರಾಗಿದ್ದರು. ನನ್ನ ಶಾಲೆಗೆ ಆಗಾಗ್ಗೆ ಬಂದು ಪರೀಕ್ಷೆ ತೆಗೆದುಕೊಳ್ಳುತ್ತಿದ್ದರು. ಆದುದರಿಂದ ಮುಂಬೈ ವಕೀಲರನ್ನು ಶಾಲೆಗೆ ಕರೆದುಕೊಂಡು ಬಂದು ಅವರ ಕೆಲಸವನ್ನು ಮಾಡಿಕೊಡಲು ನನಗೆ ತಿಳಿಸಿದರು. ನನಗೆ ಬಹು ಸಂತೋಷವಾಯಿತು. **'ಸತ್ಯಾರ್ಥ ಪ್ರಕಾಶ'** ಗ್ರಂಥವನ್ನು ಹಿಂದಿಯಲ್ಲಿ ಓದಿ ಅದರ ಅರ್ಥವನ್ನು ಅವರು ಕನ್ನಡದಲ್ಲಿ ತಿಳಿಸುತ್ತಿದ್ದರು. ನಾನು ಅವರು ಹೇಳಿದ ಅಭಿಪ್ರಾಯವನ್ನು ಸರಿಯಾಗಿ ಬರೆಯುತ್ತಿದ್ದೆನು. ಹೀಗೆ ಪ್ರತಿನಿತ್ಯ ಒಂದೆರಡು ತಾಸು ಈ ಕೆಲಸವನ್ನು ಮಾಡಿ ಶಾಲೆಯನ್ನು ಬಿಟ್ಟ ನಂತರ ನಾವಿಬ್ಬರೇ ತಿರುಗಾಡಲಿಕ್ಕೆ ಹೋಗುತ್ತಿದ್ದೇವು.

ಆಗ ಅವರು ಆರ್ಯ ಸಮಾಜದ ಸಂಗತಿಗಳನ್ನೂ ಗುರುಕುಲದಲ್ಲಿ ಕಲಿಸುವ ಪದ್ಧತಿಗಳನ್ನೂ ಹೇಳುತ್ತಿದ್ದರು. ಸತ್ಯಾರ್ಥ ಪ್ರಕಾಶದ ಸಾಧಾರಣ ಒಂದು ನೂರು ಪುಟಗಳ ವರೆಗೆ ಕನ್ನಡದಲ್ಲಿ ಬರೆದೆನು. ಅವರು ಮುಂಬೈಗೆ ಹೋದರು. ಅದನ್ನು ಪೂರ್ತಿಗೊಳಿಸಬೇಕೆಂದು ಅವರಿಗೆ ಹೆಚ್ಚಾದ ಅಭಿಲಾಷೆ, ನಾನು ಮುಂಬೈಗೆ ಬಂದರೆ ಒಳ್ಳೆಯದೆಂದೇ ಅವರ ಅಭಿಪ್ರಾಯ. ನಾನಾದರೂ ಅವರ ಸಂಗಡ ಹೋಗಬೇಕೆಂಬ ಉದ್ದೇಶದವನೇ ಆಗಿದ್ದೆನು. ಏಕೆಂದರೆ, ಅಲ್ಲಿ ಸಂಸ್ಕೃತವನ್ನು ಎಲ್ಲರಿಗೂ ಕಲಿಸುತ್ತಾರೆಂತಲೂ ವೇದಗಳನ್ನು ಕೂಡಾ ಓದಬಹುದೆಂತಲೂ ಅವರು ಹೇಳಿದ್ದರು. ನನಗೆ ಸಂಸ್ಕೃತವನ್ನು ಕಲಿತು ಶಾಸ್ತ್ರಿಯಾಗಬೇಕೆಂಬ ಕುತೂಹಲವಿತ್ತು. ಬನವಾಸಿಯಲ್ಲಿ ನಾನು ಕನ್ನಡ ೬ ನೆಯ ತರಗತಿಯಲ್ಲಿ ಕಲಿಯುತ್ತಿದ್ದಾಗ ನಿಬಂಧ ಚೆನ್ನಾಗಿ ಬರೆಯುತ್ತೇನೆಂದು ಕೈ ಮಂಗೇಶರಾವ ಎಂಬ ಸಾರಸ್ವತ ಬ್ರಾಹ್ಮಣ ಹೆಡ್‌ಮಾಸ್ತರರು ನನಗೆ ತಮ್ಮ ಮನೆಯಲ್ಲಿ ಅಮರಕೋಶವನ್ನು ಕಲಿಸಲು ಪ್ರಾರಂಭಿಸಿದ್ದರು. ಕೆಲವು ಬ್ರಾಹ್ಮಣರು ಆ ಶೂದ್ರರ ಹುಡುಗಗೆ ಅಮರಕೋಶ ಕಲಿಸಬೇಡಿರೆಂದು ಹೇಳಿದ್ದರಿಂದ ಅವರು ನನಗೆ ಆ ಸಂಗತಿಯನ್ನು ತಿಳಿಸಿ, ಹೇಳಿಕೊಡುವುದನ್ನು ಬಿಟ್ಟಿದ್ದರು.

ಆದುದರಿಂದ ನಾನು ಸಂಸ್ಕೃತ ಕಲಿತು ಶಾಸ್ತ್ರಿಯಾಗಬೇಕೆಂದು ಯೋಚಿಸಿದ್ದೆನು. ಮುಂಬೈ ವಕೀಲರು ನನ್ನ ಶಿಕ್ಷಣದ ಭಾರವನ್ನು ವಹಿಸಲೂ ಸಿದ್ದರಿದ್ದರು. ನನ್ನ ಅಣ್ಣನವರು ನನ್ನನ್ನು ಕಳುಹಿಸುವುದಿಲ್ಲವೆಂದು ನಾನು ಅವರ ಸಂಗಡ ಹೋಗುವ ಪ್ರಯತ್ನ ಮಾಡಲಿಲ್ಲ. ಆಗ ವಂಗಭಂಗದ ಚಟುವಟಿಕೆ ಅದ್ಭುತವಾಗಿ ನಡೆದಿತ್ತು. ನನಗೆ ವ್ಯಾಖ್ಯಾನ ಕೊಡುವುದರಲ್ಲಿ ಹೆಚ್ಚು ಅಭಿರುಚಿ. ಸಾರ್ವಜನಿಕ ಗಣಪತಿಯ ಉತ್ಸವವು ಆ ಊರಲ್ಲಿ ನಡೆಯುತ್ತಿತ್ತು. ಅದರಲ್ಲಿ ನಾನು ಬಾಲ್ಯ ವಿವಾಹದ ವಿರುದ್ಧವಾಗಿ ಒಂದು ವ್ಯಾಖ್ಯಾನ ಮಾಡಿದ್ದೆನು. ಕ್ರಿ. ಶ. ೧೯೦೫ರಲ್ಲಿ ಗೋಕರ್ಣಕ್ಕೆ ಶಿವರಾತ್ರೆಯ ಉತ್ಸವಕ್ಕಾಗಿ ನಾನು ಹೋದಾಗ ಅಲ್ಲಿ ಪೈಸಾಫಂಡಿನ ಪ್ರಚಾರಕರು ಒಂದು ಸಭೆಯನ್ನು

ಕೂಡಿಸಿ ವ್ಯಾಖ್ಯಾನ ಕೊಡುತ್ತಿದ್ದರು. ನಾನು ೪-೫ ನಿಮಿಷ ಸ್ವದೇಶಿಯ ವಿಚಾರವಾಗಿ ವ್ಯಾಖ್ಯಾನ ಮಾಡಿದ್ದೆನು.

ನನ್ನ ಅಣ್ಣನವರಿಗೆ ಮರಾಠಿ ಚೆನ್ನಾಗಿ ಬರುತ್ತಿದ್ದಿತು. ಆಗ ಪುಣೆಯಲ್ಲಿ ಹೊರಡುತ್ತಿದ್ದ ಕಾಳ ಎಂಬ ಬಹು ಪ್ರಸಿದ್ಧವಾದ ವಾರಪತ್ರಿಕೆಯನ್ನು ತರಿಸುತ್ತಿದ್ದರು. ನಾನು ಅದನ್ನು ಓದುತ್ತಿದ್ದೆನು. ಆದರೆ ಸಂಪೂರ್ಣ ಅರ್ಥವಾಗುತ್ತಿರಲಿಲ್ಲ. ಸ್ವದೇಶಿ ಪದಾರ್ಥಗಳನ್ನೇ ಉಪಯೋಗಿಸಿರೆಂಬ ವಿಷಯವನ್ನು ಕುರಿತು ಒಂದು ಪದ (ಕವಿತೆ) ವನ್ನು ಮಾಡಿ ಮೈಸೂರು ಸ್ಟಾರ ಪತ್ರಿಕೆಗೆ ಕಳುಹಿಸಿದ್ದೆನು. ಅದರ ಕೆಳಗೆ ಮಂಜುನಾಥ ಶಾಸ್ತ್ರಿ ಎಂಬ ಹೆಸರನ್ನು ಹಾಕಿದ್ದೆನು. ಇದರ ಮೇಲಿಂದ ನನಗೆ ಆಗ ಶಾಸ್ತ್ರಿಯಾಗಬೇಕೆಂಬ ಲವಲವಿಕೆ ಎಷ್ಟಿತ್ತೆಂಬುದು ಗೊತ್ತಾಗುತ್ತದೆ. ಅಂತು ನಾನು ಒಮ್ಮೆ ಲೇಖನದಲ್ಲಿ ಶಾಸ್ತ್ರಿಯಾಗೇ ಬಿಟ್ಟಿದ್ದೇನೆ!

ಕಾರ್ಯ ನಿರ್ದೇಶ : ನನ್ನ ಶಾಲೆಯ ಹತ್ತಿರ ಶೇಷಗಿರಿ ಶಾನಭೋಗರೆಂಬುವವರಿದ್ದರು. ಅವರು "ಕೇಸರೀ" ಪತ್ರಿಕೆಯ ಭಕ್ತರು. ಅವರ ಮಾತೃಭಾಷೆ ಕೊಂಕಣಿ, ಮರಾಠಿ ಚೆನ್ನಾಗಿ ಬಲ್ಲರು. ಪ್ರತಿನಿತ್ಯ ಅವರಲ್ಲಿ ವಂಗಭಂಗದ ಚಟುವಟಿಕೆಗಳನ್ನು ಕುರಿತು ಮಾತನಾಡುತ್ತಿದ್ದೆವು. ನನ್ನ ಅಣ್ಣನವರ ಮನಸ್ಸಿನ ಮೇಲೆ ವಂಗಭಂಗದ ಚಟುವಟಿಕೆಯು ವಿಶೇಷ ಪರಿಣಾಮಕಾರಿಯಾಯಿತು. ಅವರು ಸರಕಾರಿ ನೌಕರಿಯನ್ನು ಬಿಟ್ಟು ವರ್ತಮಾನ ಪತ್ರಿಕೆಯನ್ನು ತೆಗೆಯಬೇಕೆಂದು ಯೋಚಿಸಿದರು. ನಾನು ಸ್ವಲ್ಪ ಬರಹಗಾರನೆಂಬುದು ಅವರಿಗೆ ಗೊತ್ತಿದ್ದುದರಿಂದ ಅವರ ಯೋಚನೆಯ ಬಲಪಟ್ಟಿರಬೇಕು. ನನಗೆ ಬರೆಯುವುದು ಮತ್ತು ವ್ಯಾಖ್ಯಾನ ಮಾಡುವುದು ಬಹು ಇಷ್ಟ. ಆಗಲೇ ಕನ್ನಡ ಒಂದನೆಯ ಪುಸ್ತಕಕ್ಕೆ ಶಬ್ದಾರ್ಥವನ್ನು ಬರೆದು ಕುಮಠೆಯಲ್ಲಿ ಅಚ್ಚು ಮಾಡಿಸಿದ್ದೆನು. ಅಣ್ಣನವರ ಯೋಚನೆ ನನಗೆ ಬಹು ಒಪ್ಪಿಗೆಯಾಯಿತು. ಆ ನನ್ನ ಕೇಸರೀ ಶೇಷಗಿರಿರಾಯರಂತೂ ನಮ್ಮ ಯೋಚನೆಯನ್ನು ಬಹುಪುಷ್ಟೀಕರಿಸಿದರು.

ಆದರೆ ನಮ್ಮಲ್ಲಿ ಪ್ರಿಂಟಿಂಗ್ ಪ್ರೆಸ್ ಇಲ್ಲ. ಪ್ರೆಸ್ಸಿನ ತಿಳುವಳಿಕೆಯೂ ಇಲ್ಲ. ಹಣವಂತೂ ಮೋದಲೇ ಇಲ್ಲ. ಪತ್ರಿಕೆಯನ್ನು ಹೊರಡಿಸಬೇಕೆಂಬ ಉತ್ಕಟೇಚ್ಛೇ. ದಾವಣಗೆರೆಯಲ್ಲಿ ಮಾಗಾನಹಳ್ಳಿ ದೊಡ್ಡಪ್ಪನವರೆಂಬ ಒಬ್ಬ ದೊಡ್ಡ ಮನುಷ್ಯರಿದ್ದರು. ಅವರಿಗೂ ನಮ್ಮ ಬನವಾಸಿಯಲ್ಲಿ ಕೊಪ್ಪದ ಮುರಿಗೆಪ್ಪನವರೆಂಬುವವರಿಗೂ ಬಾಂಧವ್ಯವಿತ್ತು. ಆದುದರಿಂದ ನನ್ನ ಅಣ್ಣನವರಿಗೆ ಆ ದಾವಣಗೆರೆ ಶೆಟ್ಟರ ಪರಿಚಯ. ಅವರು ಒಮ್ಮೆ ದಾವಣಗೆರೆಗೆ ಹೋಗಿ ಬಂದಿದ್ದರು. ಆದಕಾರಣ ಅವರ ಸಹಾಯದಿಂದ ದಾವಣಗೆರೆಯಲ್ಲಿ ಪತ್ರಿಕೆಯನ್ನು ಹೊರಡಿಸಬೇಕೆಂದು ಅಣ್ಣನವರು ಗೊತ್ತುಮಾಡಿದರು.

ಅದು ಮೈಸೂರು ಸೀಮೆ, ಪ್ರೆಸ್ ಆ್ಯಕ್ಟ್ ಮೊದಲಾದ ತೊಂದರೆಗಳಾವುವೂ ಇಲ್ಲ. ಅಲ್ಲಿ ಹೊರಡುವ ಪತ್ರಿಕೆ ಬ್ರಿಟಿಷ್ ಕರ್ನಾಟಕದಲ್ಲಿಯೂ ಬೇಕಾದ ಹಾಗೆ ಪ್ರಸಾರವಾಗುತ್ತದೆ. ಆದಕಾರಣ ಅಲ್ಲಿಗೆ ಹೋಗುವುದೇ ಬಹು ಅನುಕೂಲವೆಂದು ನಿರ್ಧರಿಸಿ ದಾವಣಗೆರೆಯವರ ಸಂಗಡ ಯೋಚಿಸಿ ಗೊತ್ತುಪಡಿಸಿದರು. ಪತ್ರಿಕೆಗೆ ಯಾವ ಹೆಸರಿಡಬೇಕೆಂಬುದನ್ನು ಯೋಚಿಸುತ್ತಿದ್ದಾಗ ಒಂದು ದಿನ ಆ ನಮ್ಮ ಕೇಸರೀ ಭಕ್ತರ ಮನೆಯಲ್ಲಿ **'ಧನುರ್ಧಾರಿ'** ಎಂಬ ಹೆಸರಿಡಬೇಕೆಂದು ಗೊತ್ತಾಯಿತು.

ಕಾರ್ಯದ ಸಿದ್ಧತೆ: ಕ್ರಿ. ಶ. ೧೯೦೬ನೆಯ ಫೆಬ್ರುವರಿ ತಿಂಗಳಲ್ಲಿ ಪತ್ರಿಕೆಯ ಸಂಬಂಧವಾದ ಒಂದು ಪ್ರಕಟನೆಯನ್ನು ಕುಮುಠೆಯಿಂದ ಅಚ್ಚುಮಾಡಿ ತರಿಸಿ ಪ್ರಕಟಿಸಿದೆವು. ಲಿಂಗೈಕ್ಯರಾದ ಶ್ರೀ

ಹಾನಗಲ್ ಕುಮಾರಸ್ವಾಮಿಗಳವರು ಆಗ ಶಿರಸಿಗೆ ಆಗಮಿಸಿದ್ದರು. ಆ ಭಾಗದ ವೀರಶೈವರ ಒಂದು ಸಭೆಯನ್ನು ಬನವಾಸಿಯಲ್ಲಿ ಕೂಡಿಸಲು ಗೊತ್ತು ಮಾಡಿ ಆ ಸಭೆಗಾಗಿಯೇ ಅವರು ಹೊರಟಿದ್ದರು. ನಾನೂ ಆ ಸಭೆಗೆ ಹೋಗಿ ಕನ್ಯಾ ವಿಕ್ರಯ ನಿಷೇಧ ಎಂಬ ವಿಷಯದಲ್ಲಿ ವ್ಯಾಖ್ಯಾನ ಮಾಡಿದೆನು ಅಲ್ಲಿ ಧನುರ್ಧಾರಿ ಪತ್ರಿಕೆಗೆ ಕೆಲವರು ಚಂದಾದಾರರಾಗಲು ಇಷ್ಟಪಟ್ಟರು. ಈ ಕಾರ್ಯಕ್ಕೆ ಪ್ರೋತ್ಸಾಹಿಸಿರೆಂದು ಸ್ವಾಮಿಗಳವರೂ ಕೆಲವು ಪ್ರಮುಖರಿಗೆ ತಿಳಿಸಿದರು.

ನಾನು ಮಾಸ್ತರ ಕೆಲಸಕ್ಕೆ ರಾಜೀನಾಮೆ ಕೊಟ್ಟೆನು. ಇದು ನನ್ನ ಪೂಜ್ಯ ಹೆಡ್‌ಮಾಸ್ತರರಿಗೆ ಸರಿ ತೋರಲಿಲ್ಲ. ಅವರು ಈ ಕೆಲಸ ಬೇಡವೆಂದೂ ಟ್ರೈನಿಂಗ ಕಾಲೇಜಿಗೆ ಹೋಗೆಂದೂ ಹೇಳಿದರು. ನನಗೆ ಅದು ಒಪ್ಪಿಗೆಯಾಗಲಿಲ್ಲ. ನಾನು ಕೆಲಸ ಬಿಟ್ಟಿದ್ದು ಅವರಿಗೆ ವಿಷಾದ. ನನಗೇನೋ ಬಹು ಸಂತೋಷ. ನಾವು ಆಗ ಸ್ವದೇಶಿ ವ್ರತವನ್ನು ಕೈಕೊಂಡಿದ್ದೆವು. ಈ ದೇಶದ ಗಿರಣಿಗಳಲ್ಲಾಗುವ ಬಟ್ಟೆಗಳನ್ನೇ ಉಪಯೋಗಿಸುತ್ತಿದ್ದೆವು. ಆಮದಾಬಾದದ ಗಿರಣಿ ಬಟ್ಟೆಯನ್ನು ಉಪಯೋಗಿಸುತ್ತಿದ್ದುದೇ ಹೆಚ್ಚು.

ಆಗ ನನಗಿದ್ದ ವಿದ್ಯೆಯ ಯೋಗ್ಯತೆಯೆಂದರೆ ಕನ್ನಡ ಮುಲಕಿ ಪರೀಕ್ಷೆಯಲ್ಲಿ ತೇರ್ಗಡೆಯಾದುದು! ಮರಾಠಿ ತಕ್ಕ ಮಟ್ಟಿಗೆ ಬರುತ್ತಿತ್ತು. ಕೇಸರಿ ಮತ್ತು ಕಾಳ ಪತ್ರಿಕೆಗಳಲ್ಲಿಯ ಲೇಖನಗಳನ್ನು ಭಾಷಾಂತರ ಮಾಡಿ ಪ್ರಕಟಿಸುವುದೇ ನಮ್ಮ ಮುಖ್ಯ ಉದ್ದೇಶವಾಗಿತ್ತು. ಆ ಪತ್ರಿಕೆಗಳಲ್ಲಿಯ ಲೇಖನಗಳನ್ನು ಓದಿದರೆ ಅವುಗಳ ತಾತ್ಪರ್ಯವೇನೆಂಬುದನ್ನು ತಿಳಿಸುವಷ್ಟು ಮರಾಠಿ ಭಾಷೆಯ ಜ್ಞಾನವಿತ್ತು. ಇಂಗ್ಲೀಷ್ ಕಲಿಯಬೇಕೆಂದು ಅಂಕಲೆ ಮೊದಲನೆಯ ಭಾಷಾಂತರದ ೫-೬ ಪಾಠಗಳನ್ನು ಕಲಿತಿದ್ದೆನು!! ಇಷ್ಟು ವಿದ್ಯೆಯಿಂದ ಪತ್ರಿಕೆಯನ್ನು ನಡೆಯಿಸಲು ಸಿದ್ದನಾಗಿದ್ದೆನು! ಮೊದಲನೆಯ ಸಂಚಿಕೆಗಾಗಿ ಅಗ್ರಲೇಖನವನ್ನೂ ಬರೆದಿಟ್ಟೆನು. ಅದರಲ್ಲಿ ಪತ್ರಿಕೆಯ ಉದ್ದೇಶ ಮೊದಲಾದವುಗಳನ್ನು ಕಾಣಿಸಿದ್ದೆನು.

ಪ್ರಥಮ ಪ್ರಯಾಣ : ಕ್ರಿ. ಶ. ೧೯೦೬ನೆಯ ಏಪ್ರಿಲ್ ತಿಂಗಳ ಕೊನೆಯಲ್ಲಿ ಒಂದು ದಿನ ಶಿರಸಿಯಿಂದ ಹಾವೇರಿಗೆ ಹೊರಟೆನು. ಆಗ ನನಗೆ ೨೧ನೆಯ ವರುಷ ಪ್ರಾರಂಭ. ಕಾರವಾರ ಜಿಲ್ಲೆಯನ್ನು ಬಿಟ್ಟು ಹೊರಗೆ ಬಂದುದು ಅದೇ ಮೊದಲು. ಶಿರಸಿಯಿಂದ ಕುದುರೆ ಟಾಂಗಾದಲ್ಲಿ ಹಾವೇರಿಗೆ ಬಂದೆನು. ನಾನು ಬರೆದು ಅಚ್ಚು ಮಾಡಿಸಿದ್ದ ಕನ್ನಡ ೧ನೆಯ ಪುಸ್ತಕದ ಶಬ್ದಾರ್ಥದ ಕೆಲವು ಪ್ರತಿಗಳನ್ನು ಅಲ್ಲಿ ಕೈ ಮಾಗಾವಿ ಸಿದ್ದಪ್ಪನವರಿಗೆ ಮಾರಿದೆನು. ಆಗ ಅವರು ಒಂದು ಚಿಕ್ಕ ಸ್ಟೇಶನರಿ ಅಂಗಡಿಯನ್ನಿಟ್ಟುಕೊಂಡಿದ್ದರು.

ಉಗಿಯ ಬಂಡಿಯನ್ನು ನೋಡಿದ್ದು ಅದೇ ಮೊದಲು. ಗಾಡಿಯಲ್ಲಿ ಕುಳಿತು ಹುಬ್ಬಳ್ಳಿಗೆ ಹೋದೆನು. ಗಾಡಿಯಲ್ಲಿ ಕುಳಿತಾಗ ಅದು ವೇಗವಾಗಿ ಹೋಗುತ್ತಿದ್ದುದು ನನಗೆ ಎಷ್ಟೋ ಕೌತುಕವಾಗಿ ತೋರಿತು. ಹುಬ್ಬಳ್ಳಿಯನ್ನು ನೋಡಿ ಬೆರಗಾದೆನು. ಅಂಥ ದೊಡ್ಡ ಸ್ಥಳವನ್ನು ನಾನೆಂದೂ ನೋಡಿರಲಿಲ್ಲ. ಅಲ್ಲಿ ಕೈ, ಬಾಳೀಕಾಯಿ ವೀರಪ್ಪ ಎಂಬ ಒಬ್ಬ ನನ್ನ ಸ್ನೇಹಿತನಿದ್ದನು. ಆತನಲ್ಲಿ ೩ ದಿನ ಇದ್ದೆನು. ಕೈ. ನೀಲಿ ರಾಚಪ್ಪಣ್ಣನವರ ಸಹಾಯದಿಂದ ೧೫-೨೦ ಚಂದಾದಾರರನ್ನು ಗೊತ್ತುಮಾಡಿಕೊಂಡೆನು. ಅವರು ನಮ್ಮ ಪ್ರಯತ್ನವನ್ನು ಮೆಚ್ಚಿ ಪ್ರೋತ್ಸಾಹಿಸಿದರು. ಅಲ್ಲಿಂದ ನಾನು ದಾವಣಗೆರೆಗೆ ಹೋದೆನು.

ದಾವಣಗೆರೆಗೆ ಹೋದುದು ಸಂತೆಯ ದಿನ. ಆ ದಿನ ಭಾನುವಾರ, ಮೊದಲು ಪರಿಚಯವಿದ್ದ ಕೈ, ಮಾಗಾನಹಳ್ಳಿ ದೊಡ್ಡಪ್ಪನವರ ಮನೆಗೆ ಹೋದೆನು. ಆಗ ನನ್ನಲ್ಲಿ ನಾಲ್ಕು ರೂ. ಗಳಿದ್ದವು.

ಒಂದು ದಿನ ದೊಡ್ಡಪ್ಪನವರು ನೀನು ಪತ್ರಿಕೆಯನ್ನು ಹೇಗೆ ನಡೆಯಿಸುವಿರಿ? ನಿನಗೆ ಬರೆಯಲಿಕ್ಕೆ ಬರುತ್ತದೆಯೋ? ಎಂದು ಕೇಳಿದರು. ಆಗ ನಾನು ಬರೆದು ತಂದಿದ್ದ ಮೊದಲನೆಯ ಸಂಚಿಕೆಯ ಅಗ್ರ ಲೇಖನವನ್ನು ಓದಿ ತೋರಿಸಿ ಮರಾಠಿ ಕೇಸರೀ ಪತ್ರಿಕೆಯ ಭಾಷಾಂತರ ಮಾಡುವುದೇ ನಮ್ಮ ಮುಖ್ಯ ಉದ್ದೇಶವೆಂದು ಹೇಳಿದೆನು. ಹಾಗಾದರೆ ಒಂದು ಲೇಖನವನ್ನು ಭಾಷಾಂತರಮಾಡಿ ಓದಿ ಹೇಳು ನೋಡ್ಡೋಣವೆಂದು ತಿಳಿಸಿದರು. ಕೇಸರೀ ಪತ್ರಿಕೆಯಲ್ಲಿಯ ಒಂದು ಲೇಖನವನ್ನು ಸ್ವಲ್ಪ ಭಾಷಾಂತರಮಾಡಿ ಓದಿ ಹೇಳಿದೆ, ಅವರು ಹೀಗೆ ಹೇಳಿದರು.

ವಿಷಯವೇನೋ ಚೆನ್ನಾಗಿದೆ. ಆದರೆ ಉತ್ತರ ದೇಶದ ಭಾಷೆ ಒರಟು, ನಮ್ಮ ಸ್ಟಾರ್ ಪತ್ರಿಕೆಯ ಭಾಷೆಯಲ್ಲ. ಆಗ ಮೈಸೂರಲ್ಲಿ ಮೈಸೂರ್ ಸ್ಟಾರ್ ಎಂಬ ಪತ್ರಿಕೆ ಪ್ರಕಟವಾಗುತ್ತಿತ್ತು. ಅದು ಭಾಷೆಯಲ್ಲಿ ಬಹು ಹೆಚ್ಚಿನ ತರಗತಿಯ ಪತ್ರಿಕೆ. ಅಲ್ಲದೆ ಲಿಂಗಾಯತರಲ್ಲಿ ಬಹು ಪ್ರಸಿದ್ಧವಾದ ಪತ್ರಿಕೆ. ಡಾವಣಗೆರೆಯಲ್ಲಿ ಕೆಲವರು ವರ್ತಮಾನ ಪತ್ರಕ್ಕೇನೇ ಸ್ಟಾರ್ ಎಂದು ಹೇಳುತ್ತಿದ್ದರು. ನಿಮ್ಮ ಸ್ಟಾರ್ ಇನ್ನೂ ಎಂದು ಹೊರಡುವುದೆಂದು ಕೆಲವರು ಕೇಳುತ್ತಿದ್ದರು. ಅಷ್ಟು ಅದು ಲಿಂಗಾಯತರಲ್ಲಿ ಘನತೆಯನ್ನು ಹೊಂದಿತ್ತು.

ಪತ್ರಿಕೆಯ ಪೂರ್ವಸಿದ್ಧತೆ : ಡಾವಣಗೆರೆಯಲ್ಲಿ ಎನ್. ರುದ್ರಪ್ಪ ಎಂಬುವವರು ಅಲ್ಲಿಯ ಕನ್ನಡ ಶಾಲೆಯ ಮಾಸ್ತರರು, ಅವರು ವಾಗ್ದೇವೀ ವಿಲಾಸ ಎಂಬ ಕೈ ಪ್ರೆಸ್ ಇಟ್ಟುಕೊಂಡು ಪುಸ್ತಕ ಮತ್ತು ಚಿಲ್ಲರೆ ಕೆಲಸಗಳನ್ನು ಮಾಡುತ್ತಿದ್ದರು. ಅವರಿಗೂ ನಮ್ಮ ಸಹಾಯಕರಾದ ಕೈ ದೊಡ್ಡಪ್ಪನವರಿಗೂ ತುಂಬಾ ವಿಶ್ವಾಸ. ಅವರ ಪ್ರೆಸ್ಸನ್ನು ನಮಗೆ ಒಂದು ವರುಷಕ್ಕೆ ೩೦೦ರೂ. ಬಾಡಿಗೆ ಮೇರೆಗೆ ಕೊಡಬೇಕೆಂದೂ ಆ ಹಣಕ್ಕೂ ಪ್ರೆಸ್ಸಿಗೂ ದೊಡ್ಡಪ್ಪನವರು ಹೊಣೆಗಾರರಾಗಿರಬೇಕೆಂದೂ ಗೊತ್ತಾಗಿತ್ತು. ನಾವು ಆ ಪ್ರೆಸ್ಸಿನಲ್ಲಿಯೇ ದುಡಿದು ಅವರಿಗೆ ಬಾಡಿಗೆ ಮುಟ್ಟಿಸಬೇಕೆಂದು ಯೋಚಿಸಿದ್ದೆವು. ಅಲ್ಲಿ ಅದೊಂದೇ ಪ್ರೆಸ್ ಇತ್ತು. ವರುಷಕ್ಕೆ ೫-೬ ನೂರು ರೂ. ಕೆಲಸ ಅಲ್ಲಿ ಜರುಗುತ್ತಿತ್ತು. ನಮ್ಮ ವೆಚ್ಚ ಹೋಗಿ ಅವರಿಗೆ ೩೦೦ ರೂ.ಗಳನ್ನು ಕೊಡಲು ಅಡ್ಡಿಯಿಲ್ಲವೆಂತಲೂ ಪತ್ರಿಕೆಯ ಕಾರ್ಯ ಸರಾಗವಾಗಿ ಸಾಗುವುದೆಂತಲೂ ನಮ್ಮ ಯೋಜನೆ. ಮೊದಲು ಕೆಲಸಕ್ಕೆ ದೊಡ್ಡಪ್ಪನವರು ಅಲ್ಪ ಸ್ವಲ್ಪ ಹಣ ಸಹಾಯ ಮಾಡಲು ಒಪ್ಪಿದರು. ಅವರ ಈ ಉದಾರವಾದ ಸಹಾಯದಿಂದಲೇ ನಾವು ಅಲ್ಲಿಗೆ ಹೋದುದು.

ನಾನು ಮೊದಲು ಮಾಸ್ತರ ಕೆಲಸವನ್ನು ಬಿಟ್ಟು ಪತ್ರಿಕೆಯ ಪೂರ್ವ ಸಿದ್ಧತೆಗಾಗಿಯೇ ಡಾವಣಗೆರೆಗೆ ಬಂದಿದ್ದೆನು. ಇಲ್ಲಿಯ ಕೆಲಸಗಳೆಲ್ಲಾ ಸರಿಯಾದನಂತರ ಅಣ್ಣನವರು ತಮ್ಮ ಕೆಸಲಕ್ಕೆ ರಾಜೀನಾಮೆ ಕೊಡಬೇಕೆಂದು ಮೊದಲೇ ಗೊತ್ತಾಗಿತ್ತು. ಏಕೆಂದರೆ ಇಲ್ಲಿಯ ಕಾರ್ಯವಾಗದಿದ್ದರೆ ಅವರ ನೌಕರಿ ಹೋಗಬಾರದು. ಅದು ದೊರೆಯುವುದು ಕಷ್ಟವಾಗಿತ್ತು. ಆದಕಾರಣ ನಾನು ಪತ್ರಿಕೆಗೆ ಬೇಕಾದ ಸಿದ್ಧತೆಗಳನ್ನು ಮಾಡತೊಡಗಿದೆನು. ಹಾವೇರಿಯಲ್ಲಿ ಒಬ್ಬ ಕಂಪಾಜೀಟರನನ್ನು (ಅಕ್ಷರ ಸಂಯೋಜಕ) ಗೊತ್ತು ಮಾಡಿದ್ದೆನು. ಆತನನ್ನು ಕರೆಯಿಸಿ ನನಗೆ ಆ ಉದ್ಯೋಗ ಬರುವುದಿಲ್ಲವೆಂಬುದು ಆತನಿಗೆ ತಿಳಿಯದಂತೆ ಆತನು ಮಾಡುವುದನ್ನು ನೋಡಿ ಸ್ವಲ್ಪ ಕಲಿತುಕೊಂಡೆನು. ಪ್ರತಿಕೆಯನ್ನು ಹೊರಡಿಸುವಾಗ ಸರಕಾರದ ಅಪ್ಪಣೆಯನ್ನು ಹೊಂದಬೇಕೇ ಹೇಗೆಂಬುದನ್ನು ತಿಳಿದುಕೊಳ್ಳಲು ಅಲ್ಲಿ ಮುಖಂಡರಾಗಿದ್ದ ಕೈ ಹೊಸೂರು ಸುಬ್ಬರಾಯರಲ್ಲಿ ಹೋದೆನು. ಅವರು

ನಮ್ಮ ಪ್ರಯತ್ನವನ್ನು ಶ್ಲಾಘಿಸಿದರು. ಡೆಪ್ಯೂಟಿ ಕಮಿಶನರ್ (ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟ್) ರ ಹತ್ತಿರ ಡಿಕ್ಲರೇಶನ್ ಕೊಡಬೇಕೆಂದೂ ಇಲ್ಲಿಯ ಡೆಪ್ಯೂಟಿ ಕಮಿಶನರರಿಗೂ ಕೂಡಾ ಈ ಸಂಗತಿ ಗೊತ್ತಿರುವ ಸಂಭವವಿಲ್ಲವೆಂದು ಅವರು ತಿಳಿಸಿ ಡಿಕ್ಲರೇಶನ್ ಬರೆದು ಕೊಟ್ಟು ತಮ್ಮಲ್ಲಿದ್ದ ಒಂದು ಇಂಗ್ಲೀಷ ಪುಸ್ತಕವನ್ನೂ ನನ್ನ ಕಡೆಗೆ ಕೊಟ್ಟರು. ಇದನ್ನು ನೀವು ಸಂಗಡನೇ ತೆಗೆದುಕೊಂಡು ಹೋಗಿರೆಂದೂ ಅಲ್ಲಿ ಕೇಳಿದರೆ ಇದನ್ನು ತೋರಿಸಿರೆಂದೂ ತಿಳಿಸಿದರು. ಆ ಪ್ರಕಾರ ಆ ಪುಸ್ತಕವನ್ನು ತೆಗೆದುಕೊಂಡು ಒಂದು ದಿನ ದಾವಣಗೆರೆಯ ಜಿಲ್ಲಾ ಸ್ಥಳವಾದ ಚಿತ್ರದುರ್ಗಕ್ಕೆ ಹೋದೆನು.

ವಿನೋದಕರ ನೋಟ: ನಾನು ಆಗ ೨೧ ವರುಷದ ಎಳೆತರುಣ. ಒಂದು ಟಾಂಗಾದಲ್ಲಿ ಕುಳಿತು ಆ ದೊಡ್ಡ ಇಂಗ್ಲೀಷ್ ಪುಸ್ತಕವನ್ನು ತೆಗೆದುಕೊಂಡು ಕೋರ್ಟಿಗೆ ಹೋದೆನು. ಟಾಂಗಾ ಕೋರ್ಟಿನ ಹತ್ತಿರ ಹೊಡಿಸಿ ಆ ಪುಸ್ತಕವನ್ನು ಕೈಯಲ್ಲಿ ಹಿಡಿದುಕೊಂಡು ಜಿಲ್ಲಾ ಕೋರ್ಟಿನಲ್ಲಿ ಹೋಗಲು ನನಗೆ ಒಂದು ವಿಚಿತ್ರವಾದ ದೃಶ್ಯವೆ ತೋರಿತು. ನನ್ನನ್ನು ನೋಡಿ ಅಲ್ಲಿದ್ದವರಿಗೂ ಇದೊಂದು ವೇಷವೇನೋ ಎಂಬಂತೆ ತೋರಿರಬೇಕು. ಎಲ್ಲರೂ ನನ್ನನ್ನೇ ನೋಡಲಾರಂಭಿಸಿದರು. ನಾನು ಕರಿಯ ರುಮಾಲವನ್ನು ಆಗ ಕಟ್ಟಿದ್ದೆನು. ಆ ದೇಶದಲ್ಲಿಯೇ ಕರಿಯ ರುಮಾಲನ್ನು ಕಟ್ಟುವುದಿಲ್ಲ. ಅಲ್ಲಿರತಕ್ಕವರೆಲ್ಲರೂ ಬಿಳಿಯ ಪಟಕಾ ಹಿಂದೆ ಮುಡಿಮಾಡಿ ಕಟ್ಟಿದ್ದರು. ನನಗೆ ಅದು ವಿಚಿತ್ರವಾಗಿ ತೋರಿತು. ಆಗ ಡೆಪ್ಯೂಟಿ ಕಮೀಶನರರು ಬಂದಿರಲಿಲ್ಲ. ಒಬ್ಬ ಕಾರಕೂನರು ನನ್ನನ್ನು ಮಾತನಾಡಿಸಿ ಈಗ ಸಾಹೇಬರು ಬರುತ್ತಾರೆ. ಕುಳಿತುಕೊಳ್ಳಿರೆಂದು ಹೇಳಿದರು.

ಸ್ವಲ್ಪ ಹೊತ್ತಿನಲ್ಲಿ ಸಾಹೇಬರು ಬಂದರು. ನಾನು ಬಂದ ಕಾರಣವನ್ನು ಸಾಹೇಬರಿಗೆ ಆ ಕಾರಕೂನರು ತಿಳಿಸಿದರು. ನನ್ನನ್ನು ಕರೆಯಿಸಿ ಪತ್ರಿಕೆ ಪ್ರಕಟ ಮಾಟುವುದಾದರೆ ನಾವೇನು ಮಾಡಬೇಕಾಗುವುದು? ಅವರು ಪ್ರೆಸ್ ಇಟ್ಟಿದ್ದಾರಷ್ಟೆ. ಪ್ರಕಟಿಸಲಿ ಎಂದೂ ಕಾರಕೂನರ ಹತ್ತಿರ ಹೇಳಿದರು. ಆಗ ನಾನು ಆ ಇಂಗ್ಲೀಷ್ ಪುಸ್ತಕವನ್ನು ಕೊಟ್ಟು ಅದರಲ್ಲಿದ್ದ ಸೆಕ್ಶನ್ ತೋರಿಸಿದೆನು. ಅದರಿಂದ ಅವರು ನಾನು ಇಂಗ್ಲೀಷ್ ಬಲ್ಲ ವಿದ್ಯಾವಂತನೆಂದೇ ಊಹಿಸಿರಬೇಕು. ನೀವು ಈ ಪುಸ್ತಕವನ್ನು ತಂದದ್ದು ಒಳ್ಳೆಯದಾಯಿತು. ಎಂದು ಹೇಳಿ ಆ ಪ್ರಕಾರ ಡಿಕ್ಲರೇಶನ್ ಕೊಡಿರೆಂದು ಹೇಳಿದರು. ನಾನು ಬರೆಯಿಸಿಕೊಂಡು ಹೋಗಿದ್ದುದನ್ನು ಕೊಟ್ಟೆನು.

ಆ ಮೇಲೆ ಶಿರಸಿಯಿಂದ ಅಣ್ಣನವರು ಬಂದರು. ಪ್ರೆಸ್ಸಿನ ಸಂಬಂಧವಾದ ಎಲ್ಲ ಕಾಗದ ಪತ್ರಗಳೂ ಅವರ ಹೆಸರಿನಲ್ಲಿಯೇ ಆಗಬೇಕೆಂದು ಗೊತ್ತಾಯಿತು. ಆಗ ನಮಗೆ ಮತ್ತೊಂದು ಯೋಚನೆ ಬಂದಿತು. ನಾನು ಎಡಿಟರನಾದೆನು. ಅವರು ಪ್ರೆಸ್ಸಿನವರಾದರು. ಪತ್ರಿಕೆಯ ಯಾವುದಾದರೊಂದು ಲೇಖನದ ವಿಷಯದಲ್ಲಿ ವ್ಯಾಜ್ಯವಾದರೆ ಇಬ್ಬರೂ ಶಿಕ್ಷೆಹೊಂದಬೇಕಾಗುವುದು. ಆಗ ಪತ್ರಿಕೆಯೇ ನಿಲ್ಲುವುದು. ಆದಕಾರಣ ಹೀಗೆ ಮಾಡಿಕೊಳ್ಳಬಾರದು. ಶಿಕ್ಷೆ ಯಾದರೆ ಒಬ್ಬರಿಗೇನೇ ಆಗಬೇಕು. ಇನ್ನೊಬ್ಬರು ಪತ್ರಿಕೆಯನ್ನು ನಡೆಯಿಸಬೇಕೆಂದು ಯೋಚಿಸಿ ಅಣ್ಣನವರೇ ಎಡಿಟರರಾಗಬೇಕೆಂದು ನಾನು ಬೈಲಿಗೆ ಬರಬಾರದೆಂದು ಗೊತ್ತುಮಾಡಿದೆವು. ಅನಂತರ ಅಣ್ಣನವರು ಶಿರಸಿಗೆ ಹೋಗಿ ತಮ್ಮ ಕೆಸಲಕ್ಕೆ ರಾಜೀನಾಮೆಕೊಟ್ಟು ಚಿತ್ರದುರ್ಗಕ್ಕೆ ಹೋಗಿ ಡಿಕ್ಲರೇಶನ್ ಕೊಟ್ಟು ಬಂದರು. ಇಷ್ಟೆಲ್ಲಾ ಕಾರ್ಯವಾಗಲು ೩-೪ ತಿಂಗಳುಗಳು ಹಿಡಿದವು.

ಧನುರ್ಧಾರಿ ಪ್ರಕಟವಾಯಿತು: ಕ್ರಿ. ಶ. ೧೯೦೬ನೆಯ ಸೆಪ್ಟೆಂಬರ್ ತಿಂಗಳಲ್ಲಿ ಧನುರ್ಧಾರಿ ಪತ್ರಿಕೆಯು ಪ್ರಕಟವಾಯಿತು. ಪುಣೆಯ ಕೇಸರೀ ಪತ್ರಿಕೆ ಮಂಗಳವಾರ ಪ್ರಕಟವಾಗುತ್ತಿದ್ದುದರಿಂದ

ಧನುರ್ಧಾರಿಯನ್ನು ಪ್ರತಿ ಶುಕ್ರವಾರ ಪ್ರಕಟಿಸುವಂತೆ ಗೊತ್ತು ಮಾಡಿದ್ದೆವು. ಅದರಿಂದ ಅದೇ ವಾರದ ಲೇಖನವನ್ನು ಪ್ರಕಟಿಸಲು ಅನುಕೂಲವಾಗಿತ್ತು. ರಾಯಲ್ ಸೈಜಿನ ನಾಲ್ಕು ಪುಟಗಳ ಪತ್ರಿಕೆ. ಮೊದಲನೆಯ ಸಂಚಿಕೆಯನ್ನು ಅಲ್ಲಿಯ ಕೆಲವು ಪ್ರಮುಖರ ಮನೆಗೆ ಹೋಗಿ ನಾನೇ ಕೊಟ್ಟು ಬಂದೆನು. ಅವರಲ್ಲಿ ಶ್ರೀ ಬೊಂದಾಡೆ ಬಾಳಪ್ಪನವರೂ ಒಬ್ಬರು. ಇವರು ಶಿರಸಿಯಲ್ಲಿದ್ದ ಶಾನಭೋಗ ಶೇಷಗಿರಿಯರಂತೆ ಕೇಸರಿ ಪತ್ರಿಕೆಯ ಭಕ್ತರು. ಆರ್ಯ ಸಮಾಜದ ಸಂಗತಿಗಳನ್ನೂ ತಿಳಿದಿದ್ದರು. ಆದುದರಿಂದ ಇವರ ಪರಿಚಯವು ದಿನೆ ದಿನೆ ಹೆಚ್ಚು ಪ್ರೇಮ ವಿಶ್ವಾಸಗಳಿಗೆ ಕಾರಣವಾಯಿತು. ಇವರ ಸ್ನೇಹಿತರಾಗಿದ್ದ ಕೈ. ಮಾನಾನಹಳ್ಳಿ ದೊಡ್ಡ ಬಸಪ್ಪ ಎಂಬ ಬಹು ತೀಕ್ಷ್ಣ ಬುದ್ದಿಯ ವ್ಯಾಪಾರಿಗಳು ಕೂಡಾ ಈ ಪತ್ರಿಕಾ ಕಾರ್ಯಕ್ಕೆ ಸಹಾನುಭೂತಿಯುಳ್ಳವರಾಗಿದ್ದರು.

ಮೊದಲನೆಯ ಹೋರಾಟ : ಕ್ರಿ. ಶ. ೧೯೦೬ರಲ್ಲಿ ದಾದಾಭಾಯಿ ನವರೋಜಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರಿಯ ಸಭೆಯು ಕಲಕತ್ತಾ ಪಟ್ಟಣದಲ್ಲಿ ಕೂಡುವುದಿದ್ದೀತು. ದಿವಂಗತ ಬಾಬು ಸುರೇಂದ್ರನಾಥ ಬ್ಯಾನರ್ಜಿಯವರು ಆಗ ಬಂಗಾಲದ ಅನಭಿಷಿಕ್ತ ರಾಜರಾಗಿಯೇ ಇದ್ದರು. ವಂಗಭಂಗದ ಅದ್ಭುತವಾದ ಆಂದೋಲನ ಸೂತ್ರವು ಅವರ ಕೈಯಲ್ಲಿಯೇ ಇತ್ತು. ಅವರೇ ನಾನಾ ಪ್ರಯತ್ನಗಳಿಂದ ದಾದಾಭಾಯಿಯವರನ್ನು ಅಧ್ಯಕ್ಷರನ್ನಾಗಿ ಮಾಡಲು ಪ್ರಯತ್ನಿಸಿದರು. ಆಗ ದೇಶದಲ್ಲಿ ಗೋಖಲೆ ಪಂಗಡ ಅಥವಾ ಸೌಮ್ಯ ಪಂಗಡ ಮತ್ತು ಟಿಳಕ ಪಂಗಡ ಅಥವಾ ಉಗ್ರ ಪಂಗಡ ಎಂಬೆರಡು ರಾಜಕೀಯ ಪಂಗಡಗಳಿದ್ದವು. ಬ್ಯಾನರ್ಜಿಯವರು ಗೋಖಲೆ ಪಂಗಡದವರು. ಅಧ್ಯಕ್ಷರ ಚುನಾವಣೆಯ ವಿಷಯದಲ್ಲಿ ತುಂಬಾ ವಾದ ವಿವಾದಗಳು ನಡೆದಿದ್ದವು.

ಆಗ ಮದ್ರಾಸಿನಲ್ಲಿದ್ದ ಶ್ರೀ ಹೆಚ್. ಚೆನ್ನಕೇಶವ ಅಯ್ಯಂಗಾರ್ಯರು ರಾಷ್ಟ್ರೀಯ ಸಭೆಯನ್ನು ಒಂದು ಕತ್ತೆಗೆ ಹೋಲಿಸಿ ಬ್ಯಾನರ್ಜಿಯವರು ಅದನ್ನು ಮಾರುವವರನ್ನಾಗಿ ಮಾಡಿ ಇಸೋಪ್‌ನ ಕಥೆಯಲ್ಲಿರುವಂತೆ ರಾಷ್ಟ್ರೀಯ ಸಭೆಯನ್ನು ಹಾಳುಮಾಡುತ್ತಿದ್ದಾರೆಂದು ಒಂದು ವ್ಯಂಗಚಿತ್ರದ ಲೇಖನವನ್ನು ಬೆಂಗಳೂರು ವಿಕಟಪ್ರತಾಪ ಎಂಬ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದರು.

ಅದನ್ನು ನೋಡಿ ನಮಗೆ ತುಂಬಾ ಸಂತಾಪ. ಅದರ ವಿರುದ್ಧವಾಗಿ ಧನುರ್ಧಾರಿಯಲ್ಲಿ ತೀಕ್ಷ್ಣವಾದ ಒಂದು ಲೇಖನವನ್ನು ಪ್ರಕಟಿಸಿದೆವು. ಅದನ್ನು ನೋಡಿ ನಿಮ್ಮ ಖಂಡನೆಗಳನ್ನು ನಿಲ್ಲಿಸಿರಿ ಎಂದು ತಂತೀಮೂಲಕ ಅವರು ತಿಳಿಸಿದರು. ಅದರಿಂದ ನಮಗೆ ಮತ್ತೂ ಹುರುಪು ಬಂದಿತು. ಹಾಗೆ ತಂತಿ ಬಂದುದನ್ನು ಕೂಡಾ ಮುಂದಣ ವಾರ ಪ್ರಕಟಿಸಿದೆವು. ಆ ಮಹಾಶಯರು ಒಂದು ವಿಸ್ತಾರವಾದ ಪತ್ರವನ್ನು ಬರೆದು ರಾಷ್ಟ್ರೀಯಸಭೆಯನ್ನು ದೂಷಿಸಿಲ್ಲವೆಂದೂ ಇಂಗ್ಲೀಷಿನಲ್ಲಿ ಹೀಗೆ ಬುದ್ದಿ ಹೇಳುವ ಲೇಖನ ಪ್ರಕಟಿಸುವ ಪರಿಪಾಠವುಂಟೆಂದೂ ತಿಳಿಸಿದರು. ಹಿಂದುಗಳಿಗೆ ಕತ್ತೆಯು ಹೀನವಾದ ಪ್ರಾಣಿಯೆಂಬ ಕಲ್ಪನೆಯಿದೆ. ಆದಕಾರಣ ಕತ್ತೆಗೆ ಹೋಲಿಸದೆ ಕುದುರೆಗೆ ಹೋಲಿಸಬೇಕೆಂಬುದೇ ನಮ್ಮ ವಾದವಾಗಿತ್ತು. ಕೊನೆಗೆ ನಮ್ಮದೇ ಸರಿಯೆಂದು ನಾವು ತಿಳಿದುಕೊಂಡೆವು. ಜನರಿಗೂ ಇದೇ ಸರಿಯೆಂದು ತೋರಿತು. ಈ ಹೋರಾಟದಿಂದ ಪತ್ರಿಕೆ ಸ್ವಲ್ಪ ಮುಂದೆ ಬಂತು ಹುಡುಗರು ಒಳ್ಳೇ ಗಟ್ಟಿಗರೆಂದೂ ನಮ್ಮ ಪರಿಚಯದವರು ಆಡಿಕೊಂಡರು.

ಜೀನಗಾರರ ಕೆಲಸ ಮಾಡುತ್ತಿದ್ದ ಒಬ್ಬ ಚಿತ್ರಗಾರನಲ್ಲಿ ದಾದಾಭಾಯಿ ನವರೋಜಿಯವರ ಬ್ಲಾಕ್ ಮಾಡಿಸಿ ಪತ್ರಿಕೆಯಲ್ಲಿ ಪ್ರಕಟಿಸಿದೆವು. ಅದು ಲೈನ್ ಬ್ಲಾಕ್ ಅದೆಷ್ಟು ಚೆನ್ನಾಗಿತ್ತೊ! ನಮಗೆ

ಬ್ಲಾಕ್‌ಗಳನ್ನು ಮಾಡಿಸುವ ವಿಷಯದಲ್ಲಿ ಎಷ್ಟು ಪರಿಜ್ಞಾನವಿತ್ತೆಂಬುದನ್ನು ಅದು ಚೆನ್ನಾಗಿ ತೋರಿಸುವುದು. ಆ ಬ್ಲಾಕ್ ಮಾಡಿದಾತನು ಕಮ್ಮಾರರ ಕೆಲಸಮಾಡುತ್ತಿದ್ದನು. ನಮಗೆ ಉತ್ಸಾಹವೇನೋ ವಿಪರೀತ. ಆದರೆ ಅದಕ್ಕೆ ತಕ್ಕ ಜ್ಞಾನವಾಗಲಿ ಅಥವಾ ಹಣವಾಗಲಿ ಇರಲಿಲ್ಲ. ನಾನೇನೋ ಕೇವಲ ಓದು ಬರವಣಿಗೆಗಳಲ್ಲಿಯೇ ಇರುತ್ತಿದ್ದೆನು. ಪ್ರೆಸ್ಸಿನ ಕೆಲಸಗಳೆಲ್ಲಾ ಅಣ್ಣನವರ ಮೇಲೆಯೇ ಅವಲಂಬಿಸಿದ್ದವು. ಅವರಿಗೆ ಯಂತ್ರ ಕಲೆಯಲ್ಲಿ ಚೆನ್ನಾಗಿ ಗತಿಯುಂಟು. ನಾನು ಪುಣೆಯ 'ಜ್ಞಾನಪ್ರಕಾಶ' ದಿನ ಪತ್ರಿಕೆಯಿಂದ ಸುದ್ದಿಗಳನ್ನೂ ಕೇಸರೀ ಮತ್ತು ಕಾಳ ಪತ್ರಿಕೆಗಳಿಂದ ಲೇಖನಗಳನ್ನೂ ಭಾಷಾಂತರಿಸುವ ಕೆಲಸ ಮಾಡುತ್ತಿದ್ದೆನು. ದಿವಂಗತ ಬಿಜಂಟ ಅಮ್ಮನವರ ಒಂದು ಭಾಷಣದ ಮೇಲೆ ನಮ್ಮ ಪರಿಚಯದ ಕೈ. ಮಾಗಾನಹಳ್ಳಿ ದೊಡ್ಡ ಬಸಪ್ಪನವರು ಒಂದು ಕಟುವಾದ ಲೇಖನವನ್ನು ಬರೆದುಕೊಟ್ಟರು. ಅದನ್ನು ಪ್ರಕಟಿಸಲು ಅದು ಕೂಡಾ ಅನೇಕರಲ್ಲಿ ಜಾಗೃತಿಯನ್ನುಂಟುಮಾಡಿತು. ಅಂತು ಒಂದು ವರ್ಷದಲ್ಲಿ ಪತ್ರಿಕೆಯು ಎಷ್ಟೋ ಪ್ರಸಿದ್ಧಿಗೆ ಬಂದಿತು. ಸಾಧಾರಣ ೭೦೦ ಜನ ಚಂದಾದಾರರಾಗಿದ್ದರು.

ಬಲವಾದ ವಿಘ್ನ ಬಂದಿತು: ಪ್ರೆಸ್ಸಿನ ಬಾಡಿಗೆ ಪೂರೈಸಿತು. ಒಂದು ವರ್ಷದಲ್ಲಿ ಹೆಚ್ಚಿನ ಆದಾಯವೇನೂ ಆಗಲಿಲ್ಲ. ಆದಾಯ ವೆಚ್ಚಗಳಿಗೆ ಸರಿಹೋಯಿತು. ಪತ್ರಿಕೆಯ ಧೋರಣೆ ಉಗ್ರವಾಗಿ ತೋರಿದ್ದರಿಂದ ಅದರ ಯಜಮಾನರು ಪ್ರೆಸ್ಸನ್ನು ಮುಂದಿನ ವರ್ಷ ಕೊಡಲು ಇಷ್ಟವಿಲ್ಲದೆ ಬಾಡಿಗೆಯನ್ನು ಹೆಚ್ಚು ಹೇಳಿದರು. ಬಾಡಿಗೆಯನ್ನು ಹೆಚ್ಚಿಗೆ ಕೊಡುವುದು ನಮಗೆ ಶಕ್ಯವಿರಲಿಲ್ಲ. ಪತ್ರಿಕೆಯನ್ನು ಮುದ್ರಿಸಿಕೊಡಲು ಅವರು ಒಪ್ಪಲಿಲ್ಲ. ಆದುದರಿಂದ ಪತ್ರಿಕೆ ನಿಂತು ಹೋಯಿತು.

ನಮ್ಮಲ್ಲಿ ನೂರಾರು ರೂ. ಗಳು ಕೂಡಾ ಇರಲಿಲ್ಲ ಎಂದ ಮೇಲೆ ಪ್ರೆಸ್ಸನ್ನು ಹೊಸದಾಗಿ ತರುವುದು ಹೇಗೆ ತಾನೇ ಶಕ್ಯ? ಅಷ್ಟರಲ್ಲಿ ಅಲ್ಲಿ ಪ್ಲೇಗ್ ಪ್ರಾರಂಭವಾಯಿತು. ಯಾರಿಂದಲೂ ಯಾವ ವಿಧವಾದ ಸಹಾಯವೂ ಆಗುವಂತೆ ತೋರಲಿಲ್ಲ. ನಾನೊಬ್ಬನೇ ದಾವಣಗೆರೆಯಲ್ಲಿ ಉಳಿದೆನು. ಹುಡುಗರು ಏನೇನೋ ಮಾಡಿ ಹೋದರೆಂದು ಅಪಹಾಸ್ಯಕ್ಕಿಡಾಗಬೇಕಾಯಿತಲ್ಲಾ! ಎಂದು ನನಗೆ ವಿಶೇಷ ಚಿಂತೆ. ಎಷ್ಟೆ ದಿನವಾದರೂ ಇಲ್ಲಿಗೆ ಪ್ರೆಸ್ ತಂದು ಪತ್ರಿಕೆಯನ್ನು ಹೊರಡಿಸಲೇಬೇಕೆಂದು ನನ್ನ ಹಟ. ಅದಕ್ಕಾಗಿ ದಾವಣಗೆರೆಯನ್ನು ಬಿಟ್ಟು ಬೇರೆ ಕಡೆ ಹೋಗಲಿಲ್ಲ.

ಶ್ರೀ ಬೊಂದಾಡೆ ಬಾಳಪ್ಪನವರಿಂದಲೇ ನನಗೆ ಸಹಾಯವಾಗುವದೆಂಬ ಆಸೆ. ಅವರಿಗೂ ನನ್ನ ವಿಷಯದಲ್ಲಿ ಪ್ರೇಮ ವಿಶ್ವಾಸಗಳಿದ್ದವು. ಪ್ಲೇಗಿನ ಕಾಲದಲ್ಲಿ ಹೊರಗೆ ಗುಡಿಸಲನ್ನು ಹಾಕಿಸಲು ನನ್ನಲ್ಲಿ ರೂ. ಗಳಿರಲಿಲ್ಲ. ಸೊಪ್ಪಿ(ಕಣಕಿ) ತರಿಸಿ ಕಟ್ಟಿಸಿದೆನು. ಅದು ದೊಡ್ಡದಾದುದರಿಂದ ಅಷ್ಟಕ್ಕೂ ಸೊಪ್ಪಿಗೆ ಕಾಸಿಲ್ಲ. ಆಗ ಅರ್ಧವನ್ನೇ ಕಟ್ಟಿಸಿ ಮರೆ ಮಾಡಿಸಿದೆನು. ನಾನು ಪ್ಲೇಗಿನಲ್ಲಿ ಊರಿಗೆ ಹೋಗದೆ ಅಲ್ಲಿಯೇ ಉಳಿದುದರಿಂದ ಪ್ರೆಸ್ ತರುವೆನೆಂದೇ ಕೆಲವರಿಗೆ ತಿಳಿಯಿತು. ನಾನೂ ಕೂಡಾ ಅಣ್ಣನವರು ಪ್ರೆಸ್ ತರಲು ಊರಿಗೆ ಹೋಗಿದ್ದಾರೆಂದೇ ಜನರಲ್ಲಿ ಹೇಳುತ್ತಿದ್ದೆನು.

ನಾನು ಶ್ರೀ ಬಾಳಪ್ಪನವರಿಗೆ ೪೦೦ ರೂ. ಗಳನ್ನು ಸಾಲವಾಗಿ ಕೊಡಲು ಕೇಳಿದೆನು. ಅದರಲ್ಲಿ ನಿಮ್ಮ ಪಾಲು ಬೇಕಾಗಿದ್ದರೂ ಇಡಬಹುದು. ಇಲ್ಲವೆ ಪ್ರೆಸ್ ನಿಮ್ಮ ಹೆಸರಿಗೇನೇ ಇದ್ದರೂ ಇರಲಿ, ನಾವು ಪತ್ರಿಕೆಯೊಂದನ್ನು ಮಾತ್ರ ಅಚ್ಚು ಮಾಡಿಕೊಳ್ಳುವೆವು. ಹೇಗಾದರೂ ಮಾಡಿ ನೀವು ಇಷ್ಟು ಸಹಾಯವನ್ನು ಮಾಡಲೇಬೇಕೆಂದು ನಾನು ಅವರನ್ನು ಕೇಳಿಕೊಂಡಿದ್ದೆನು.

ಹಾವೇರಿಯಲ್ಲಿ ನಾನು ಒಂದು ಕಟ್ಟಿಗೆ ಪ್ರೆಸ್ ನೋಡಿದ್ದೆನು. ಅಂತಹ ಪ್ರೆಸ್ ಮಾಡಿಸಿ ನೂರಾರು ರೂ.ಗಳ ಮೊಳೆಗಳನ್ನು ತರಿಸಿ ಅಂತೂ ಪತ್ರಿಕೆಯನ್ನು ಹೊರಡಿಸಲೇಬೇಕೆಂಬ ಹಟದಿಂದ ಅಲ್ಲಿ ಕಾಲಕಳೆಯುತ್ತಿದ್ದೆನು. ಶ್ರೀ ಬಾಳಪ್ಪನವರು ದೊಡ್ಡ ಕುಟುಂಬಿಗಳು. ದೊಡ್ಡದಾದ ಸ್ಟೇಶನರಿ ಅಂಗಡಿಯನ್ನು ನಡೆಯಿಸುತ್ತಿದ್ದರು. ಅವರಿಗೇನೋ ನನಗೆ ಸಹಾಯಮಾಡಬೇಕೆಂಬ ಇಷ್ಟ. ಆದರೆ ಮನೆಯಲ್ಲಿಯ ಸಹೋದರ ಮತ್ತು ಅವರ ಭಾವಂದಿರ ಇಷ್ಟವಿರಲಿಲ್ಲ. ನಮಗೇನೇ ವ್ಯಾಪರಕ್ಕೆ ಹಣವಿನ ಕೊರತೆ, ಹೀಗಿರುವಾಗ ಇದೊಂದು ಪೇಚಾಟವೇಕೆಂದು ಅವರು ಹೇಳುತ್ತಿದ್ದರು.

ಅರ್ಧ ಆಣೆಯ ಅನುಗ್ರಹ ! : ಆಗ ನನಗೆ ಊಟಕ್ಕೆ ಕೂಡಾ ಅಭಾವ. ಶ್ರೀ ಬಾಳಪ್ಪನವರಿಂದಲೇ ಆಗಾಗ್ಗೆ ಒಂದೆರಡು ರೂ. ಗಳನ್ನು ತೆಗೆದುಕೊಂಡು ಹೋಗಿ ಜೀವಿಸುತ್ತಿದ್ದೆನು. ಅವರನ್ನು ಕೇಳುವುದಕ್ಕೂ ಕೂಡಾ ಬಹು ಸಂಕೋಚ. ಯಾರೂ ಇಲ್ಲದಾಗ ಹೇಳುತ್ತಿದ್ದೆನು. ಒಂದು ದಿನ ಮಧ್ಯಾಹ್ನದ ವರೆಗೂ ಅಂಗಡಿಯಲ್ಲಿ ಕುಳಿತೆನು. ಅನೇಕರು ಅಂಗಡಿಯಲ್ಲಿದ್ದರು. ಶ್ರೀ ಬಾಳಪ್ಪನವರಲ್ಲಿ ರೂ. ಕೇಳಲಾಗಲಿಲ್ಲ. ಆ ಹಿಂದಿನ ರಾತ್ರಿ ಊಟ ಇರಲಿಲ್ಲ. ಶ್ರೀ ಬಾಳಪ್ಪನವರು ಊಟಕ್ಕೆ ಹೋದರು. ನಾನು ಬಹು ವ್ಯಸನದಿಂದ ಗುಡಿಸಲಿಗೆ ಹೊರಟೆನು. ಇಲ್ಲಿ ಊಟಕ್ಕೇನೂ ಇರಲಿಲ್ಲ. ತುಂಬಾ ದುಃಖದಿಂದ ಹೋಗುತ್ತಿರುವಾಗ ದಾರಿಯಲ್ಲಿ ಅರ್ಧ ಆಣೆ ದೊರಕಿತು! ಆಗ ನನಗಾದ ಸಂತೋಷಕ್ಕೆ ಎಣೆಯಿಲ್ಲ. ನನ್ನ ಗುಡಿಸಲಿನ ಹತ್ತಿರ ಇದ್ದ ಒಂದು ಚಿಕ್ಕ ಅಂಗಡಿಗೆ ಹೋಗಿ ಅರ್ಧ ಸೇರು ಜೋಳವನ್ನು ತೆಗೆದುಕೊಂಡು ಬೀಸಿಸಿ ಆ ದಿನ ರೊಟ್ಟಿಯ ಮೇಲೆಯೇ ಇದ್ದೆನು. ಮರು ದಿನ ಶ್ರೀ ಬಾಳಪ್ಪನವರಿಂದ ಒಂದು ರೂ. ತೆಗೆದುಕೊಂಡು ಬಂದೆನು. ಆದರೆ ಈ ಸಂಗತಿಯನ್ನೇನೂ ಅವರಿಗೆ ತಿಳಿಸಲಿಲ್ಲ.

ಹಣಸಹಾಯ : ಪತ್ರಿಕೆಯನ್ನು ಹೊರಡಿಸಲೇಬೇಕೆಂಬ ಹಟ ಮಾತ್ರ ಕಡಿಮೆಯಾಗಿಲಿಲ್ಲ. ಆ ಕಾಲಕ್ಕೆ ದೇಶದಲ್ಲಿ ರಾಜಕೀಯ ಚಟುವಟಿಕೆ ಬಹು ಪ್ರಚಂಡವಾಗಿ ನಡೆದಿತ್ತು. ಸೌಮ್ಯ ಮತ್ತು ಉಗ್ರ ಪಂಗಡಗಳಲ್ಲಿ ವಿರೋಧವು ಹೆಚ್ಚುತ್ತಿತ್ತು. ಸರಕಾರವು ಉಗ್ರ ಪಂಗಡದ ಮೇಲೆ ದಬ್ಬಾಳಿಕೆಯನ್ನು ಹೆಚ್ಚಾಗಿಯೇ ನಡೆಸಿತ್ತು. ಇಂತಹ ಸಮಯದಲ್ಲಿ ನಮ್ಮ ಪತ್ರಿಕೆ ಇಲ್ಲವಾಯಿತಲ್ಲಾ! ಎಂದು ನನಗೆ ಬಹು ಚಿಂತೆ. ಅನೇಕ ಯೋಚನೆಗಳನ್ನು ಮಾಡುತ್ತಿದ್ದೆನು.

ಪತ್ರಿಕೆ ಹೊರಡುತ್ತಿದ್ದಾಗ ಧಾರವಾಡದಲ್ಲಿ ನಾದಾಜಿ ಅಬಾಜಿ ಖರೆ ಎಂಬವರ ಅಧ್ಯಕ್ಷತೆಯಲ್ಲಿ ಔದ್ಯೋಗಿಕ ಸಭೆಕೂಡಿತ್ತು. ಆಗ ನಾನು ಧಾರವಾಡದ ಸಭೆಗೆ ಹೋಗಿ ಅಲ್ಲಿ ಕಂಬಳಿ ಉದ್ಯೋಗದ ಸಂಬಂಧವಾಗಿ ಭಾಷಣ ಮಾಡಿದ್ದೆನು. ಆಗ ಕೈ ಗದಿಗಯ್ಯ ಹೊನ್ನಾಪುರಮಠ ಮತ್ತು ಕರಿಗುದರಿ ವಕೀಲರ ಪರಿಚಯವಾಗಿತ್ತು. ಅವರು ನಮ್ಮ ಪ್ರಯತ್ನವನ್ನು ಬಹು ಕೊಂಡಾಡಿದ್ದರು. ಅದಕ್ಕೆ ಅವರಲ್ಲಿಗೆ ಹೋದರೆ ನನಗೆ ಹಣವಿನ ಸಹಾಯವಾಗಬಹುದೇ? ಎಂಬ ಒಂದು ಯೋಚನೆ ಹೊಳೆಯಿತು. ಮೊದಲು ಶ್ರೀ ಬಾಳಪ್ಪನವರಲ್ಲಿ ನಿಶ್ಚಯ ಮಾಡಿಕೊಂಡು ಅನಂತರ ಮುಂದಿನ ಯೋಚನೆ ಮಾಡಬೇಕೆಂದು ನಿರ್ಧರಿಸಿದೆನು.

ಕೈ ಚೆನ್ನಗಿರಿ ವಿರೂಪಾಕ್ಷಪ್ಪನವರ ಛತ್ರದ ಕಟ್ಟೆಯ ಮೇಲೆ ಒಂದು ದಿನ ಶ್ರೀ ಬಾಳಪ್ಪನವರಲ್ಲಿ ನೀವು ನನಗೆ ೪೦೦. ರೂ. ಗಳನ್ನು ಸಹಾಯ ಮಾಡಲೇಬೇಕೆಂದೂ ನಾನು ಇಲ್ಲಿ ಪತ್ರಿಕೆಯನ್ನು

ಹೊರಡಿಸದೆ ಬಿಡುವುದೇ ಇಲ್ಲವೆಂದೂ ಬಹು ನಿಶ್ಚಯವಾಗಿ ಅತ್ಯಂತ ವ್ಯಸನದಿಂದ ಹೇಳಿದೆನು. ಅದು ಅವರ ಮನಸ್ಸಿನ ಮೇಲೆ ಏನೋ ಪರಿಣಾಮವನ್ನುಂಟುಮಾಡಿತು. ಅವರು ಮನೆಯರವರಿಗೆ ಯಾವ ಸಮಾಧಾನವನ್ನು ಹೇಳಿದರೋ ಕಾಣೆ. ಪಾಲಿನಿಂದ ಪ್ರೆಸ್ ಹಾಕಲು ೪೦೦ ರೂ. ಕೊಡುವುದಾಗಿ ಕೆಲವು ದಿನಗಳ ನಂತರ ತಿಳಿಸಿದರು. ನನಗೆ ಅತ್ಯಾನಂದವಾಯಿತು. ಈ ಸಂಗತಿಯನ್ನು ಅಣ್ಣನವರಿಗೆ ತಿಳಿಸಿದೆನು. ಅವರು ಒಂದು ಪ್ರೆಸ್ ಕೊಂಡುಕೊಳ್ಳುವ ಪ್ರಯತ್ನ ನಡೆಯಿಸಿದರು. ಶಿವಮೊಗ್ಗೆಯಲ್ಲಿ ಒಂದು ಹಳೆ ತರದ ಶಿಲಿಂಡರ್ ಮಶಿನ್ ಹಳೆಯದು ಮತ್ತು ಹಳೆ ಮೊಳೆಗಳು ೪೦೦ ರೂ. ಗಳಿಗೆ ದೊರೆತವು. ಅವುಗಳನ್ನು ತೆಗೆದುಕೊಂಡು ಬಂದು ೧೯೦೮ರಲ್ಲಿ ಪುನಃ ಪತ್ರಿಕೆಯನ್ನು ಹೊರಡಿಸಿದೆವು. ಆ ಪ್ರೆಸ್ಸಿಗೆ ಸಚ್ಚಿದಾನಂದ ಎಂಬ ಹೆಸರನ್ನಿಟ್ಟಿದ್ದೆವು. ಆ ಪತ್ರಿಕೆ ಹೊರಟ ದಿನವು ನಮಗೊಂದು ಮಹಾವಿಜಯೋತ್ಸವದಂತೆ ಸಂತೋಷಕರವಾದುದಾಗಿತ್ತು.

ಎಡಿಟರ್, ಮ್ಯಾನೇಜರ್, ಕಂಪಾಜಟರ್, ಎಲ್ಲರೂ ನಾವೇ! ಪ್ರೆಸ್ ಮತ್ತು ಟೈಪುಗಳು ಬಹು ಹಳೆಯವು ಸರಿಯಾಗಿ ಕೆಲಸ ನಡೆಯುತ್ತಿರಲಿಲ್ಲ. ಕಾರ್ಡ ಬೋರ್ಡುಗಳನ್ನು ಕತ್ತಿರಿಸಿಯೇ ನಾವು ಕಂಪೋಜಿಗೆ ಲೆಡ್ ಮಾಡಿಕೊಂಡಿದ್ದೆವು! ಪೇಟೆಯ 'ಮೀನ್‌ಸರೀಸ್' ನಮ್ಮ 'ರೂಲರ್ ಕಾಂಪೋಜಶನ್', ಮಸಿ, ಸರಿಯಾಗಿ ಹತ್ತದಿದ್ದಲ್ಲಿ ಅಂಗೈಯಿಂದ ಮಸಿ ಹಚ್ಚುತ್ತಿದ್ದುದೂ ಉಂಟು! ಇಷ್ಟೆಲ್ಲಾ ಶ್ರಮಪಟ್ಟರೂ ವಾರಕ್ಕೊಮ್ಮೆ ಪತ್ರಿಕೆ ಪ್ರಕಟವಾದರೆ ಆ ಶ್ರಮವೇನೂ ನಮಗೆ ತೋರುತ್ತಿರಲಿಲ್ಲ.

ಕಣ್ಣೀರು ಸುರಿಸಿದುದು : ಕ್ರಿ. ಶ. ೧೯೦೮ರಲ್ಲಿ ರಾಜಕಾರಣಕ್ಕೆ ಬಹು ಭೀಕರ ಸ್ವರೂಪ ಪ್ರಾಪ್ತವಾಗಿತ್ತು. ಬಂಗಾಲವು ಬೇಯುತ್ತಿತ್ತು. ಕ್ರಾಂತಿಕಾರರ ಕೊಲೆ ಸುಲಿಗೆಗಳು ಪ್ರಾರಂಭವಾಗಿದ್ದವು ಬಾಂಬಿನ ಭೀಕರ ಸ್ಥಿತಿಯು ಬಂಗಾಲದಲ್ಲಿ ವ್ಯಾಪಿಸಿತ್ತು. ಸೂರತ ಕಾಂಗ್ರೆಸ್ಸಿನಲ್ಲಾದ ಕಲಹವು ರಾಜಕಾರಣದಲ್ಲಿ ಬಹುಪ್ರಚಂಡವಾಗಿ ಬೆಳೆಯುತ್ತ ಸೌಮ್ಯ ಪಕ್ಷವು ಕಳೆಗುಂದಿತ್ತು. ಲಾಲ, ಬಾಲ, ಪಾಲರು (ಲಾಲಾ ಲಜಪತರಾವ, ಬಾಲಗಂಗಾಧರ ಟಿಳಕ, ಬಿಪಿನ ಚಂದ್ರಪಾಲ) ಹಿಂದೀ ರಾಜಕಾರಣದಲ್ಲಿಯ ದಿವ್ಯ ತ್ರಿಮೂರ್ತಿಗಳಾಗಿದ್ದರು. ಇವರ ಭಾಷಣ ಮತ್ತು ಲೇಖನಗಳನ್ನು ಓದಲು ನನಗೆ ಬಹು ಹುರುಪು. ಅವುಗಳನ್ನು ತಪ್ಪದೆ ಧನುರ್ಧಾರಿಯಲ್ಲಿ ಪ್ರಕಟಿಸುತ್ತಿದ್ದೆ.

ಕಾಳ ಪತ್ರಿಕಾಕರ್ತರಾಗಿದ್ದ ಕೈ. ಶಿವರಾಮ ಮಹಾದೇವ ಪರಾಂಜಪೆಯವರನ್ನು ಸರಕಾರದವರು ಹಿಡಿದು ಶಿಕ್ಷಿಸಲು ನನಗೆ ಬಹು ದುಃಖವಾಯಿತು. ಅನಂತರ ಲೋಕಮಾನ್ಯ ಟಿಳಕರನ್ನು ಹಿಡಿದರು. ಅವರಿಗೆ ೬ ವರ್ಷಗಳ ಶಿಕ್ಷೆಯಾಯಿತೆಂಬ ಸುದ್ದಿ ನಮಗೆ ಮಧ್ಯಾಹ್ನ ೧೨ ಗಂಟೆ ಸಮಯದಲ್ಲಿ ತಿಳಿಯಿತು. ಆಗ ನಾನು ಹಿತ್ತಲ ಕಡೆ ಹೋಗಿ ಬಿಕ್ಕಿ ಬಿಕ್ಕಿ ಅತ್ತೆನು. ಆ ದಿನ ಮಧ್ಯಾಹ್ನ ಊಟ ಮಾಡಲಿಲ್ಲ. ಟಿಳಕರು ಇನ್ನು ಬದುಕಿ ತಿರುಗಿ ಬರುವುದಿಲ್ಲವೆಂದೇ ನನ್ನ ತಿಳುವಳಿಕೆ, ಅವರ ವಿಷಯವಾಗಿ ನನಗೆ ವಿಶೇಷವಾದ ಭಕ್ತಿಯಿದ್ದಿತು.

ಪತ್ರಿಕೆಯ ಮೇಲೆ ದಬ್ಬಾಳಿಕೆ : ಬ್ರಿಟಿಷ್ ಹಿಂದುಸ್ಥಾನದಲ್ಲಾದ ಈ ರಾಜಕೀಯ ಪ್ರಚಂಡ ಚಟುವಟಿಕೆಯ ಪರಿಣಾಮವು ದೇಶಿ ಸಂಸ್ಥಾನಗಳ ಮೇಲೆಯೂ ಆಗದೆ ಹೋಗಲಿಲ್ಲ. ಆಗ ಮೈಸೂರ ದಿವಾನರು ದಿವಂಗತ ವ್ಹಿ. ಪಿ. ಮಾಧವರಾಯರು. ಮೈಸೂರು ಸೀಮೆಯಲ್ಲಿಯೂ ಪ್ರೆಸ್ ಕಾನೂನು ಏರ್ಪಟ್ಟಿತು. ಅದು ಬ್ರಿಟಿಶ್ ಹಿಂದೂಸ್ಥಾನದ ಕಾನೂನಿಗಿಂತ ಕಠಿಣವಾದುದಾಗಿದ್ದಿತು. ಈ ಕಾನೂನನ್ನು ಮಾಡುವ ಅವಶ್ಯಕತೆಯ ಸಂಬಂಧವಾಗಿ ದಿವಾನರು ಭಾಷಣಮಾಡುವಾಗ

ಒಂದು ಪತ್ರಿಕೆಯ ವಿಚಾರವಾಗಿ ಲಕ್ಷಿಸಬೇಕಾಗಿದೆ ಎಂದು ಹೇಳಿದುದು ಧನುರ್ಧಾರಿ ಪತ್ರಿಕೆಯ ಸಂಬಂಧವಾಗಿಯೇ ಸರಿಯೆಂದು ಆಗ ಕೆಲವರು ಹೇಳಿದುದು ನಿಜವೆಂದೇ ನಮಗೆ ಸ್ವಲ್ಪದಿಗಳಲ್ಲಿಯೇ ಮನವರಿಕೆಯಾಯಿತು.

ಕ್ರಿ. ಶ. ೧೯೩೪ರಲ್ಲಿ ಒಂದು ದಿನ ದಾವಣಗೆರೆ ಪೋಲೀಸ್ ಇನಸ್ಪೆಕ್ಟರರು ನಮ್ಮ ಚಂದಾದಾರರಲ್ಲಿಯ ಕೆಲವರ ಕಡೆಗೆ ಹೋಗಿ ಹಿಂದಿನ ಕೆಲವು ಸಂಚಿಕೆಗಳನ್ನು ತೆಗೆದುಕೊಂಡು ಹೋದರೆಂಬುದು ನಮಗೆ ಗೊತ್ತಾಯಿತು. ನಾವು ಅದೇ ವಾರದ ಪತ್ರಿಕೆಯಲ್ಲಿ ಹೀಗೆ ಪ್ರಕಟಿಸಿದೆವು– ಇಲ್ಲಿಯ ಪೋಲೀಸರು ನಮ್ಮ ಪತ್ರಿಕೆಯ ಹಿಂದಣ ಸಂಚಿಕೆಗಳನ್ನು ಕೆಲವರಿಂದ ತೆಗೆದುಕೊಂಡು ಹೋಗಿದ್ದಾರೆಂದು ತಿಳಿಯುತ್ತದೆ. ಮುಂದಿನ ವಾರದ ಪತ್ರಿಕೆಯೇನಾಗುವದೋ.

ಆ ಮೇಲೆ ಕೆಲವು ದಿವಸಗಳಲ್ಲಿಯೇ ಒಂದು ದಿನ ಬೆಳಿಗ್ಗೆ ಒಬ್ಬ ಜಮಾದಾರರು ಬಂದು ಡೆಪ್ಟಿ ಕಮೀಶನರು ಬಂದಿದ್ದಾರೆ. ನಿಮ್ಮನ್ನು ಕರೆದುಕೊಂಡು ಬರಲು ಸಾಹೇಬರು (ಅಸಿಸ್ಟಂಟ್ ಕಮೀಶನರು) ಹೇಳಿದ್ಧಾರೆ. ಬನ್ನಿರಿ ಎಂದು ಅಣ್ಣನವರನ್ನು ಕರೆದರು. ಆಗ ನಾವು ಪತ್ರಿಕೆಯ ಮೇಲೆ ಏನೋ ಬಂದಿತೆಂದು ತಿಳಿದೆವು. ಅಣ್ಣನವರು ಕಚೇರಿಯಲ್ಲಿದ್ದವರು. ಕಾನೂನು ಬಲ್ಲರು. ಆ ಜಮಾದಾರರು ಪೋಲೀಸ್ ಡ್ರೆಸ್ ಹಾಕಿಕೊಳ್ಳದೆ ಬಂದದ್ದನ್ನು ನೋಡಿ ಅವರಿಗೆ ನಾನು ಬರುವುದಿಲ್ಲ. ನೀವು ಪೋಲೀಸ್ ಆಫೀಸರರೆಂದು ನಾನು ನಂಬುವುದಿಲ್ಲ ಎಂದು ಹೇಳಿದರು. ಅವರು ಹಾಗೆಯೇ ಹೋದರು. ಆ ಮೇಲೆ ಬೇರೊಬ್ಬರು ಪೋಲೀಸ್ ಡ್ರೆಸ್ ಹಾಕಿಕೊಂಡು ಕರೆಯಲು ಬಂದರು.

ಅಣ್ಣನವರು ಹೋದಮೇಲೆ ಡೆಪ್ಟಿ ಕಮೀಶನರು ಇವರನ್ನು ಆದರದಿಂದಲೇ ಕಂಡು ಮಹಾರಾಜ ಸರಕಾರದಿಂದಾದ ಅಪ್ಪಣೆಯನ್ನು ಓದಿ ಹೇಳಿದರು. ಅದರಲ್ಲಿ ಧನುರ್ಧಾರಿ ಪತ್ರಿಕೆಯ ಹಿಂದಿನ ಲೇಖನಗಳನ್ನು ನಿರ್ದೇಶಿಸಿ ಇವು ಮೈಸೂರು ಪ್ರೆಸ್ ಆ್ಯಕ್ಟಿನಂತೆ ಅಪರಾಧಕರವಾಗಿವೆ. ಇನ್ನು ಮೇಲೆ ಇಂಥ ಲೇಖನಗಳನ್ನು ಪ್ರಕಟಿಸಬಾರದು. ಹಾಗೆ ಪ್ರಕಟಿಸಿದ್ದಾದರೆ ಪ್ರೆಸ್ ಕಾನೂನಿನಂತೆ ಶಿಕ್ಷೆಗೆ ಗುರಿ ಮಾಡಲಾಗುವುದೆಂದು ಈ ಮೂಲಕ ಎಚ್ಚರಿಸಲಾಗಿದೆ. ಎಂದು ತಿಳಿಸಿದರು.

ಅನಂತರ ಡೆಪ್ಟಿ ಕಮೀಶನರು ಇದರ ಮೇಲೆ ನೀವು ನಿಮ್ಮ ಪತ್ರಿಕೆಯಲ್ಲಿ ಏನು ಬರೆಯುತ್ತೀರೆಂಬುದನ್ನು ಹೇಳಬಲ್ಲಿರಾ? ಎಂದು ಅಣ್ಣನವರನ್ನು ಕೇಳಿದರು. ನಾನು ಸಂಪಾದಕತ್ವವನ್ನು ವಹಿಸಿ ಬರೆಯುತ್ತ ಕುಳಿತಾಗ ಏನು ಬರೆಯುವೆನೋ? ಅದನ್ನು ನಾನು ಈಗ ಹೇಳಲಾರೆನೆಂದು ಅವರಿಗೆ ತಿಳಿಸಿದರು. ಆ ಮೇಲೆ ಮುಂದಿನ ವಾರದಲ್ಲಿ ಪತ್ರಿಕೆಯ ಸ್ಥಿತ್ಯಂತರ ಎಂಬ ಅಗ್ರಲೇಖನವನ್ನು ಬರೆದು ಎಲ್ಲ ಸಂಗತಿಗಳನ್ನು ವಾಚಕರಿಗೆ ತಿಳಿಸಿದೆವು. ಆ ಎಲ್ಲಾ ಲೇಖನಗಳು ಬ್ರಿಟಿಶ್ ಇಂಡಿಯಾದಲ್ಲಿ ಪ್ರಕಟವಾದ ಪತ್ರಿಕೆಗಳಲ್ಲಿದ್ದವುಗಳ ಭಾಷಾಂತರಗಳು. ಆ ಲೇಖನಗಳ ವಿಷಯದಲ್ಲಿ ಆ ಸರಕಾರದಿಂದ ಯಾವ ಆಕ್ಷೇಪಣೆಯೂ ಮಾಡಲ್ಪಟ್ಟಿಲ್ಲ. ಹೀಗಿರುವಾಗ ನಮ್ಮ ಸರಕಾರಕ್ಕೇನೆ ಆಕ್ಷೇಪವಾಗಿ ತೋರಿದುದು ದುರ್ದೈವದ ಸಂಗತಿ ಎಂದು ಆ ಲೇಖನದಲ್ಲಿ ತಿಳಿಸಿದ್ದಾಯಿತು.

ಪತ್ರಿಕೆಯ ಮೇಲಿನ ಈ ದಬ್ಬಾಳಿಕೆಯಿಂದ ನಮ್ಮ ಮುಖ್ಯ ಉದ್ದೇಶಕ್ಕೇನೇ ಭಂಗಬಂದಿತು. ಅಲ್ಲಿಂದ ಬ್ರಿಟಿಷ್ ಭಾಗದಲ್ಲಿ ಬಂದು ಪತ್ರಿಕೆ ಹೊರಡಿಸಲು ನಮಗೆ ಶಕ್ಯವಿರಲಿಲ್ಲ. ನಮಗೆ ಜನ

ಸಹಾಯವಾಗಲಿ ಅಥವಾ ಧನ ಸಹಾಯವಾಗಲಿ ಆಗುವಂತಿರಲಿಲ್ಲ. ಅಲ್ಲದೆ ಆಗಿನ ರಾಜಕೀಯ ವಾತಾವರಣ ಬಹು ನಿರಾಶಾಜನಕವಾಗಿತ್ತು. ಲೋಕಮಾನ್ಯ ಟಿಳಕರೇ ಮೊದಲಾದ ಪ್ರಮುಖರು ಕಾರಾಗೃಹವಾಸಿಗಳಾಗಿದ್ದರು. ಸರಕಾರವು ದಬ್ಬಾಳಿಕೆಯಿಂದ ಚಟುವಟಿಕೆ ಹಬ್ಬದಂತೆ ಮಾಡಿ ಮೂರ್ಲೆ-ಮಿಂಟೋ ಸುಧಾರಣೆಯನ್ನು ಮುಂದೆ ಮಾಡಿತ್ತು. ಈ ಎಲ ಸ್ಥಿತಿಗಳನ್ನು ನೋಡಿ ನಾವು ದಾವಣಗೇರಿಯಲ್ಲಿಯೇ ಸರಕಾರದ ಕಟ್ಟಿನೊಳಗೆ ಪತ್ರಿಕೆಯನ್ನು ನಡೆಯಿಸಬೇಕೆಂದು ಯೋಚಿಸಿದೆವು.

ಅಣ್ಣನವರ ವೀರವಾಣಿ : ಆಗ ದಾವಣಗೆರೆಯಲ್ಲಿ ಪೊಲೀಸ್ ಇನಸ್ಪೆಕ್ಟರರು ಬಸವಂತ ಕಾಳೋಜಿ ಎಂಬುವವರಿದ್ದರು. ಇವರು ಪೊಲೀಸ್ ಅಧಿಕಾರದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದವರು. ಧನುರ್ಧಾರಿ ಪತ್ರಿಕೆಯ ಹಿಂದಣ ಸಂಚಿಕೆಗಳನ್ನು ಕಳಿಸಲು ಸರಕಾರದಿಂದ ಇವರಿಗೆ ಆಂತರಿಕವಾದ ಅಪ್ಪಣೆಯಾಗಿತ್ತು. ಆ ಪತ್ರಿಕೆಗಳು ಸರಕಾರಕ್ಕೆ ಮುಟ್ಟುವ ಮುಂಚೆಯೇ ಧನುರ್ಧಾರಿಯಲ್ಲಿ ಪೋಲೀಸರು ಪತ್ರಿಕೆಗಳನ್ನು ತೆಗೆದುಕೊಂಡು ಹೋದ ಸುದ್ದಿ ಪ್ರಕಟವಾಗಿತ್ತು. ಅದನ್ನು ಸರಕಾರದವರು ನೋಡಿ ದಾವಣಗೆರೆ ಪೊಲೀಸ್ ಅಧಿಕಾರಿಗಳ ಕಾರ್ಯ ಪದ್ಧತಿಯನ್ನು ಖಂಡಿಸಿ ಎಚ್ಚರಿಕೆ ಕೊಟ್ಟಿದ್ದರಂತೆ. ಅದರಿಂದ ಬಸವಂತ ಕಾಳೋಜಿಯವರಿಗೆ ನಮ್ಮ ಮೇಲೆ ಬಹು ಕೋಪ.

ಇವರು ಒಂದು ದಿನ ಮಧ್ಯಾಹ್ನ ನಮ್ಮ ಆಫೀಸಿಗೆ ಬಂದರು. ನಾನು ಮತ್ತು ಅಣ್ಣನವರು ಕುಳಿತಿದ್ದೆವು. ಅವರು ಬಂದೊಡನೆ ಬನ್ನಿರೆಂದು ಕರೆದದ್ದಾಯಿತು. ಆದರೆ ಅಲ್ಲಿ ಸಾಮಾನ್ಯವಾಗಿ ಜನರು ಎಷ್ಟು ವಿಧೇಯರಾಗಿ ಅವರನ್ನು ಕಾಣುತ್ತಿದ್ದರೋ ಹಾಗೇನೂ ನಾವು ಕಾಣಲಿಲ್ಲ. ನಾನು ಕುರ್ಚಿಯ ಮೇಲೆ ಕುಳಿತು ಬರೆಯುತ್ತಿದ್ದವನು ಏಳಲಿಲ್ಲ. ಇದು ಅವರಿಗೆ ಬಹು ಅಸಮಾಧಾನ. ಪತ್ರಿಕೆಯಲ್ಲಿ ಪ್ರಕಟವಾದ ಸಮಾಚಾರವನ್ನು ಪ್ರಸ್ತಾಪಿಸಿ ನಿಮ್ಮನ್ನು ಬೇಡಿ ಹಾಕಿ ತೆಗೆದುಕೊಂಡು ಹೋಗದಿದ್ದರೆ ನಾನು ಬಸವಂತ ಕಾಳೋಜಿ ಅಲ್ಲ; ನಾನು ಶಿವಾಜಿ ವಂಶದವನು ಎಂದು ಬಹು ಕೋಪದಿಂದ ಹೇಳಿದರು. ಆಗ ಅಣ್ಣನವರು ನಿಮ್ಮ ಈ ಅಂಜಿಕೆಗೆ ನಾವು ಹೆದರುವುದಿಲ್ಲ. ನಮ್ಮ ಒಂದು ಕಾಲು ಜೈಲಿನಲ್ಲಿ, ಒಂದು ಕಾಲು ಮನೆಯಲ್ಲಿ ಅದೆಯೆಂಬುದು ನಿಮಗೆ ಗೊತ್ತಿದ್ದಂತೆ ಕಾಣುವುದಿಲ್ಲ ಎಂದು ಆವೇಶದಿಂದಲೇ ಹೇಳಿದರು. ಆಗ ನಾವು ಜೈಲಿಗೆ ಹೋಗಲು ಅಂಜುತ್ತಿರಲಿಲ್ಲ. ಆದರೆ ಅಲ್ಲಿಯ ಪ್ರೆಸ್ ಕಾನೂನಿನಂತೆ ಸರಕಾರಕ್ಕೆ ಪ್ರೆಸ್ ಸೇರಿಸಿಕೊಂಡು ತಮ್ಮ ಸೀಮೆಯಿಂದ ಹೊರಗೆ ಹಾಕುವ ಶಿಕ್ಷೆ ವಿಧಿಸಲು ಬರುವಂತಿತ್ತು. ಅದಕ್ಕಾಗಿ ಪ್ರೆಸ್ ಕಾನೂನಿಗೆ ವಿರೋಧವಾಗದಂತೆ ಪತ್ರಿಕೆಯನ್ನು ನಡೆಸುತ್ತಿದ್ದೆವು.

ನನ್ನ ಹೊಣೆಗಾರಿಕೆ : ಕ್ರಿ. ಶ. ೧೯೧೦ ರಿಂದ ಪತ್ರಿಕೆಯ ಚಂದಾದಾರರ ಸಂಖ್ಯೆ ಕಡಿಮೆಯಾಯಿತು. ೪-೫ ನೂರು ಪತ್ರಿಕೆಗಳು ಮಾತ್ರ ಪ್ರಕಟವಾಗುತ್ತಿದ್ದವು. ಅಣ್ಣನವರಿಗೆ ಇಲ್ಲಿ ಹೆಚ್ಚಿನ ಕಾರ್ಯ ನಡೆಯುವ ಲಕ್ಷಣ ತೋರಲಿಲ್ಲ. ಅವರು ಶಿರಸಿಯಲ್ಲಿಯೇ ಹೆಚ್ಚು ಕಾಲ ಇರಲಾರಂಭಿಸಿದರು. ಅಲ್ಲಿಯೂ ಒಂದು ಪ್ರೆಸ್ ಸ್ಥಾಪಿಸಬೇಕೆಂದು ಅವರ ಯೋಚನೆ. ದಾವಣಗೆರೆಯಲ್ಲಿಯ ಕಾರ್ಯ ಹೆಚ್ಚಾಗಿ ನನ್ನ ಮೇಲೆಯೇ ಬಿದ್ದಿತು. ಪ್ರೆಸ್ಸಿನಿಂದ ಆದಾಯವೇ ಇಲ್ಲ ಎಂದ ಮೇಲೆ ಶ್ರೀ ಬಾಳಪ್ಪನವರಿಗೆ ಪಾಲು ಕೊಡುವುದೇನು? ಅವರು ಮೊದಲು ಕೊಟ್ಟ

ನಾಲ್ಕು ನೂರು ರೂ.ಗಳು ಅವರಿಗೆ ಪುನಃ ದೊರೆಯುವುದು ಕಷ್ಟವಾಯಿತು. ನಮ್ಮಿಬ್ಬರಲ್ಲಿ ದಿನೆ ದಿನೆ ಪ್ರೇಮ ವಿಶ್ವಾಸಗಳು ಹೆಚ್ಚುತ್ತ ಹೋದುದರಿಂದ ಆ ಹಣವಿನ ಸಂಬಂಧವಾಗಿ ಅವರು ಹೆಚ್ಚು ಪ್ರಸ್ತಾಪಿಸುತ್ತಿರಲಿಲ್ಲ. ನನಗೇನೋ ಅವರ ಹಣವನ್ನು ಮುಟ್ಟಿಸಬೇಕೆಂಬ ಚಿಂತೆಯು ಇದ್ದೇ ಇತ್ತು.

ನಾನು ಅಷ್ಟರಲ್ಲಿ ಕನ್ನಡ ಭಾಷೆಯನ್ನು ಎಷ್ಟೋಮಟ್ಟಿಗೆ ಸುಧಾರಿಸಿಕೊಂಡಿದ್ದೆನು. ಚ. ವಾಸುದೇವಯ್ಯನವರು ಬರೆದ ಆರ್ಯಕೀರ್ತಿ ಎಂಬ ಪುಸ್ತಕದ ಎರಡೂ ಭಾಗಗಳನ್ನು ಅನೇಕ ಸಾರೆ ಓದಿದೆನು. ಕಳೆದ ನಾಲ್ಕು ವರುಷಗಳಲ್ಲಿ ಅದೊಂದೇ ಕನ್ನಡ ಪುಸ್ತಕವನ್ನು ನಾನು ಭಾಷೆಗಾಗಿ ಓದಿದ್ದು, ಮರಾಠಿ ಪುಸ್ತಕಗಳನ್ನು ಓದುತ್ತಿದ್ದುದೇ ಹೆಚ್ಚು ಮರಾಠಿ ಪತ್ರಿಕೆಗಳನ್ನು ಕತ್ತರಿಸಿ ಅಥವಾ ಕೈಯಿಂದ ಬರೆದು ಸಂಗ್ರಹಿಸಿಡುವ ರೂಢಿ ಹೆಚ್ಚು. ಕೈ ಚಿಪಳೂಣಕರರ ನಿಬಂಧಗಳನ್ನು ಓದಿ ಅವುಗಳಲ್ಲಿಯ ಬಹು ಭಾಗವನ್ನು ಕನ್ನಡದಲ್ಲಿ ಬರೆದಿಟ್ಟೆನು. ಜಾನ್ ಸ್ಟುವರ್ಟ ಮಿಲ್, ಹರ್ಬರ್ಟಸ್ಪೆನ್ಸರ್, ಮ್ಯಾಕ್ಸ ಮುಲ್ಲರ್ ಇವರ ಗ್ರಂಥಗಳನ್ನು ಓದುವ ಅಭಿರುಚಿ ಹೆಚ್ಚು. ಧರ್ಮಶಾಸ್ತ್ರ ಮತ್ತು ಸಮಾಜಶಾಸ್ತ್ರಗಳ ಪುಸ್ತಕಗಳೇ ನನಗೆ ಹೆಚ್ಚು ಸೇರುತ್ತಿದ್ದುದು. ಆ ಎಲ್ಲ ಆ ಪುಸ್ತಕಗಳೂ ಮರಾಠಿ ಭಾಷೆಯಲ್ಲಿದ್ದವು. ನನಗೆ ಪುನರ್ಜನ್ಮದ ವಿಷಯವಾಗಿ ಸಂಶಯ. ಆದುದರಿಂದ ಆ ಸಂಬಂಧವಾದ ಸಂಗತಿಗಳನ್ನು ತಿಳಿದುಕೊಳ್ಳಲು ವಿಶೇಷವಾದ ಲವಲವಿಕೆಯಿದ್ದಿತು.

ವೀರಶೈವ ಮತ ಸಂಬಂಧವಾಗಿ ನನಗೆ ಹೆಚ್ಚಿನ ಸಂಗತಿಗಳೇನೂ ಗೊತ್ತಿರಲಿಲ್ಲ. ವೀರಶೈವ ಸಮಾಜದಲ್ಲಿ ಜಾತಿ, ಆಚಾರಗಳ ಗೊಂದಲ ಹೆಚ್ಚು. ಆರ್ಯ ಸಮಾಜವೇ ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೆನು. ಆಗ ಡಾವಣಗೆರೆಯಲ್ಲಿದ್ದ ಕೈ. ನಿಡಗುಂದಿ ಮಡಿವಾಳಪ್ಪನವರು, ಕೈ, ಕಂಚಿಕೆರೆ ಮಹಾಲಿಂಗಪ್ಪನವರು ನನಗೆ ಹೆಚ್ಚು ಪರಿಚಯದವರು. ಮಹಾಲಿಂಗಪ್ಪನವರು ವೀರಶೈವ ಮತ ತತ್ವಗಳನ್ನು ಚೆನ್ನಾಗಿ ತಿಳಿದವರೂ ಒಳ್ಳೆಯ ಕವಿಗಳೂ ಆಗಿದ್ದರು. ಇವರು ವೀರಶೈವ ಮತವು ಬಹು ಶ್ರೇಷ್ಠವಾದುದು ಮತ್ತು ಬಸವೇಶ್ವರನು ಮಹತ್ವದ ಸುಧಾರಣೆಗಳನ್ನು ಮಾಡುವುದರಿಂದ ಅವುಗಳನ್ನೆಲ್ಲಾ ಓದಿರೆಂದು ನನಗೆ ಆಗಾಗ್ಗೆ ಹೇಳುತ್ತಿದ್ದರು. ಆದರೆ ನನಗೆ ಆರ್ಯ ಸಮಾಜದಷ್ಟು ವೀರಶೈವ ಸಮಾಜವು ಉದಾರವಾದುದೆಂದು ತೋರಲಿಲ್ಲ. ಆರ್ಯ ಸಮಾಜವನ್ನೇ ಪ್ರತಿಪಾದಿಸುವ ಎದೆಗಾರಿಕೆಯೂ ಇರಲಿಲ್ಲ. ಅಸ್ಪೃಶ್ಯತಾ ನಿವಾರಣೆಯನ್ನು ಕುರಿತು ಆರ್ಯ ಸಮಾಜದ ಕಡೆಗೆ ಒಲವಿದ್ದ ಶ್ರೀ ಗಣಪತರಾವ ಬಾಡ ಎಂಬುವವರು ನನ್ನಿಂದ ಒಂದು ಚಿಕ್ಕ ಪುಸ್ತಕವನ್ನು ಬರೆಯಿಸಿದ್ದರು. ಅದಕ್ಕೆ **'ಪತಿತೋದ್ಧಾರ'** ಎಂಬ ಹೆಸರನ್ನಿಟ್ಟಿತ್ತು. ನನ್ನ ಹೆಸರಿನಿಂದಲೇ ಅದು ಪ್ರಕಟವಾಗಬೇಕೆಂದು ಅವರು ಬಹು ಆಗ್ರಹಪಟ್ಟರು. ನನ್ನ ಹೆಸರನ್ನು ಹಾಕುವ ಧೈರ್ಯ ನನಗಿರಲಿಲ್ಲ. ಧಾರ್ಮಿಕ ಮತ್ತು ಸಾಮಾಜಿಕ ಸಂಗತಿಗಳಲ್ಲಿ ಬುದ್ಧಿಯ ಹೊಯಿದಾಟವು ಆಗ ವಿಶೇಷವಾಗಿದ್ದಿತು.

ಲಗ್ನವಾಗಬಾರದೆಂಬ ನಿಶ್ಚಯ : ಮೊದಲಿನಿಂದಲೂ ಸಾರ್ವಜನಿಕ ಕಾರ್ಯದ ಕಡೆಗೆ ನನ್ನ ಒಲವು ಹೆಚ್ಚು. ಲಗ್ನವು ನನ್ನ ಕಾರ್ಯಕ್ಕೆ ವಿಘ್ನವೆಂದೇ ನನ್ನ ತಿಳುವಳಿಕೆ. ಇದಕ್ಕೇ ಬಡತನವೇ ಮುಖ್ಯ ಕಾರಣ. ೧೭ನೆಯ ವರುಷದಲ್ಲಿಯೇ ಶಾಲಾಧ್ಯಾಪಕನಾದೆನು. ಆಗ ನನಗೆ ಅಂತಿಂತಹ ಜನರ ಗೆಳೆತನವಾಗುವುದು ಶಕ್ಯವಿಲ್ಲವಾಯಿತು. ಯೌವನಕ್ಕೆ ಬರುವುದರೊಳಗಾಗಿ ಎಡಿಟರನಾದೆನು! ಆಗ ಸಾಧಾರಣ ನಡತೆಯವರ ಸ್ನೇಹವಾಗುವಂತೆಯೇ ಇಲ್ಲ. ನನಗೇನೋ ಮಹಾತ್ವಾಕಾಂಕ್ಷೆ. ವಿಶೇಷವಾದ ಬಡತನ. ಆದುದರಿಂದ ಲಗ್ನದ ಕಡೆಗೆ ನನ್ನ ಮನಸ್ಸು ತಿರುಗಲಿಲ್ಲ. ನನ್ನ ಅಕ್ಕನ

ಮಗಳೊಬ್ಬಳಿದ್ದಳು. ಅವಳನ್ನು ನನಗೆ ಲಗ್ನ ಮಾಡಬೇಕಾಗಿ ಮನೆಯವರು ಪ್ರಸ್ತಾಪಿಸಿದರು. ನಾನು ಅದನ್ನು ನಿರಾಕರಿಸಲು ಅವರು ಹೆಚ್ಚು ಆಗ್ರಹ ಮಾಡಲಿಲ್ಲ. ನನ್ನ ಗುಣ ಸ್ವಭಾವಗಳೂ ಅವರಿಗೆ ಲಗ್ನವಾಗದಂತಹುವುಗಳಾಗಿಯೇ ತೋರಿದವು.

ನನ್ನ ತಾಯಿಯವರು ಆಗಾಗ್ಗೆ ಹೀಗೆ ಹೇಳುತ್ತಿದ್ದರು. "ಈತನ ಮಾವ ಮಂಜಣ್ಣ ಎಂಬುವವನಿದ್ದನು. ಆತನು ಸಾಧು ಆಗಿ ಹೋದನು. ಇವನಿಗೂ ಅದೇ ಹೆಸರಿದೆ. ಇವನೂ ಸಾಧು ಆಗಿ ಹೋಗುವನು. ಯಾಕೆ ಅವನಿಗೆ ಲಗ್ನದ ಒತ್ತಾಯ ಮಾಡುತ್ತೀರಿ?" ಆ ನನ್ನ ಮಾವಂದಿರನ್ನು ಚಿಕ್ಕಂದಿನಲ್ಲಿ ನೋಡಿದ ಸ್ವಲ್ಪ ಗುರುತಿದೆ. ಅವರು ಆ ಭಾಗದಲ್ಲಿ ಪ್ರಸಿದ್ಧ ಶಿಕ್ಷಕರೂ ವೇದಾಂತಿಗಳೂ ಆಗಿದ್ದರು. ನನ್ನ ತಾಯಿಯವರು ಹಾಗೆ ಹೇಳುತ್ತಿದ್ದುದರಿಂದ ನನಗೂ ನನ್ನ ಮಾವಂದಿರಂತೆ ಆಗುವೆನೇನೋ ಎಂಬ ಕಲ್ಪನೆ. ಆದುದರಿಂದ ೧೯೧೦ ನೆಯ ಇಸವಿಯವರೆಗೂ ನಾನು ಲಗ್ನದ ವಿಚಾರವಾಗಿ ಸ್ವಲ್ಪವೂ ಲಕ್ಷಿಸಿರಲಿಲ್ಲ.

ಕ್ರಿ. ಶ. ೧೯೧೦ರಲ್ಲಿ ಮಾತ್ರ ನನ್ನ ಮನಸ್ಸು ಬೇರೆಯಾಗಹತ್ತಿತು. ಆಗ ನನಗೆ ೨೫ನೆಯ ವರುಷ. ಯೌವನದ ಮನೋ ವಿಕಾರಗಳುಂಟಾಗಲಾರಂಭಿಸಿದವು. ಜೀವನಕ್ಕೆ ಸಾಕಾಗುವಷ್ಟು ಪತ್ರಿಕೆಯ ಕೆಲಸವೂ ನಡೆದಿತ್ತು. ಲಗ್ನವಾಗಲೇ? ಎಂಬ ವಿಚಾರ ಆಗಾಗ್ಗೆ ಬರಲಾರಂಭವಾಯಿತು. ಲಗ್ನವಾದರೆ ಮುಂದೆ ನನ್ನಿಂದ ಸಾರ್ವಜನಿಕ ಕಾರ್ಯ ಮಾತ್ರ ಆಗುವುದಿಲ್ಲವೆಂದೇ ನನಗೆ ದೃಢನಂಬಿಕೆ. ಆದುದರಿಂದ ಲಗ್ನವಾಗಲೇಬಾರದೆಂದು ೧೯೧೦ನೆಯ ಜುಲೈ ೨೪ನೆಯ ತಾರೀಖಿನ ದಿವಸ ನಿರ್ಧರಿಸಿ ೨೫ನೆಯ ತಾರೀಖಿನಿಂದಲೇ ನನ್ನ ಆಹಾರದಲ್ಲಿ ಮಹತ್ವವಾದ ವ್ಯತ್ಯಾಸವನ್ನು ಮಾಡಿದೆನು.

ತಾ. ೨೫ ರಿಂದ ಉಪ್ಪು, ಹುಳಿ, ಕಾರ, ಗೋದಿ, ಮೊದಲಾದ ಪೌಷ್ಟಿಕ ಮತ್ತು ವಿಕಾರಜನ್ಯ ಪದಾರ್ಥಗಳನ್ನೆಲ್ಲಾ ಬಿಟ್ಟು ಬಿಟ್ಟೆನು. ಅನ್ನ, ಹಾಲು, ನೆನೆಯಿಟ್ಟ ಹೆಸರುಬೇಳೆ, ಈ ಮೂರನ್ನೇ ತೆಗೆದುಕೊಳ್ಳಲಾರಂಭಿಸಿದೆ. ಒಂದು ವಾರದಲ್ಲಿ ಬಹು ನಿಃಶಕ್ತಿಯಾಯಿತು. ಆ ಮೇಲೆ ಸ್ವಲ್ಪ ತುಪ್ಪ ಮತ್ತು ಹಸಿ ತರಕಾರಿಗಳನ್ನು ತೆಗೆದುಕೊಳ್ಳಲಾರಂಭಿಸಿದೆನು. ಮನೆಯಲ್ಲಿ ನಾನೊಬ್ಬನೆ. ನನಗೆ ಅಡಿಗೆ ಮಾಡಿಕೊಳ್ಳುವುದು ಚೆನ್ನಾಗಿ ಗೊತ್ತು. ನನ್ನ ಈ ಊಟದ ಏರ್ಪಾಟು ನಿರಾತಂಕವಾಗಿ ನಡೆಯಿತು. ಮೂರು ಮುಷ್ಟೀ ಅಕ್ಕಿಯ ಅನ್ನ, ಹತ್ತು ತೊಲಿ ಹಾಲು, ಅರ್ಧ ಮುಷ್ಟಿಯಷ್ಟು ಹೆಸರು ಬೇಳೆ, ಸ್ವಲ್ಪ ತುಪ್ಪ ಮತ್ತು ಹಸಿ ಸೊಪ್ಪು, ತರಕಾರಿಗಳೇ ನನ್ನ ನಿತ್ಯದ ಆಹಾರ.

ಹೊತ್ತು ಮುಳುಗುವುದರೊಳಗಾಗಿಯೇ ಊಟಮಾಡಿ ಆ ಮೇಲೆ ತಿರುಗಾಡಲಿಕ್ಕೆ ಹೋಗುವುದು. ಅನಂತರ ಶ್ರೀ ಬಾಳಪ್ಪನವರ ಅಂಗಡಿಗೆ ಬರುವುದು, ಅಲ್ಲಿಂದ ಮನೆಗೆ ಬಂದು ರಾತ್ರೆ ೧೧ ಗಂಟೆಯವರೆಗೆ ಓದುವುದು ಅಥವಾ ಬರೆಯುವುದು, ಆ ಬಳಿಕ ಆ ದಿನದ ಡೈರಿ ಬರೆದು ಮಲಗುವುದು, ಇವು ನನ್ನ ನಿತ್ಯದ ಕೆಲಸಗಳು, ಬ್ರಹ್ಮಚರ್ಯ ರಕ್ಷಣೆಗೆ ಅಗತ್ಯವಾದ ಸಂಗತಿಗಳನ್ನು ತಿಳಿದುಕೊಳ್ಳಲು ಕೆಲಸು ಪುಸ್ತಕಗಳನ್ನು ಓದಿದ್ದೆನು. ರಾತ್ರಿ ಊಟವು ಬ್ರಹ್ಮಚರ್ಯ ರಕ್ಷಣೆಗೆ ಬಹು ಘಾತಕವಾದುದೆಂದು ನನಗೆ ಜೈನ ಉಪಾಧ್ಯಾಯರಿಂದ ತಿಳಿದಿದ್ದಿತು. ನಾನು ಇದನ್ನು ಮಹಾವ್ರತದಂತೆ ಆಚರಿಸುತ್ತಿದ್ದೆನು.

❖❖

ವೀರಶೈವ ಸಮಾಜಕಾರ್ಯ

(ಕ್ರಿ.ಶ. ೧೯೧೧-೧೯೧೪)

ದಾವಣಗೆರೆಯಲ್ಲಿ ನಾಲ್ಕು ವರುಷಗಳವರೆಗಿದ್ದರೂ ವೀರಶೈವರ ಅಲ್ಲಿಯ ಯಾವ ಸಾರ್ವಜನಿಕ ಕಾರ್ಯದಲ್ಲಿಯೂ ನಾನು ಹೋಗಿರಲಿಲ್ಲ. ೧೯೧೮ರಲ್ಲಿ ಧರ್ಮಪ್ರಚಾರಣೀ ಸಭೆಯು ಅಲ್ಲಿ ಜರುಗಿತ್ತು. ಆ ಸಭೆಗೆ ಒಂದು ದಿನ ಹೋಗಿದ್ದೆನು. ಆದರೆ ಅಲ್ಲಿಯ ಯಾವ ಕೆಲಸದಲ್ಲಿಯೂ ಭಾಗವಹಿಸಿರಲಿಲ್ಲ. ಅಣ್ಣನವರೇ ಸ್ವಾಮಿಗಳಲ್ಲಿ ಹೋಗುತ್ತಿದ್ದರು ಮತ್ತು ಮಠದ ಕಾರ್ಯಗಳನ್ನೇನಾದರೂ ಮಾಡುತ್ತಿದ್ದರು. ನನಗೆ ಆರ್ಯ ಸಮಾಜದ ವಿಚಾರಗಳೇ ಸರಿತೋರಿದ್ದರಿಂದ ನಮ್ಮ ಸಮಾಜದಲ್ಲಿ ಸೇರಿ ಕೆಲಸಮಾಡಲು ಇಷ್ಟವಿರಲಿಲ್ಲ.

ನನ್ನ ತುಂಬಾ ಪರಿಚಯದವರಾಗಿದ್ದ ಕೈ. ಮಾಗಾನಹಳ್ಳಿ ದೊಡ್ಡ ಬಸಪ್ಪ, ಎಂಬುವವರಂತೂ ವೀರಶೈವರ ನಡೆನುಡಿಗಳನ್ನು ತೀವ್ರವಾಗಿ ಖಂಡಿಸುತ್ತಿದ್ದರು. ಜಂಗಮರೆಂದರೆ ಅವರಿಗೆ ಬೆಂಕಿ. ನಮ್ಮ ಸಮಾಜವನ್ನು ಹಾಳುಮಾಡುತ್ತಿದ್ದವರೇ ಈ ಗಣಂಗಳೆಂದು ಮನಬಂದರಂತೆ ಹೇಳಲು ಅವರು ಹಿಂಜರಿಯುತ್ತಿರಲಿಲ್ಲ. ಆ ಊರ ವೀರಶೈವರಲ್ಲಿ ದೊಡ್ಡ ಮನೆತನಕ್ಕೆ ಸೇರಿದವರೂ ಬುದ್ಧಿವಂತರೂ, ಧನಿಕರ ಮಕ್ಕಳೂ ಆಗಿದ್ದುದರಿಂದ ಎಲ್ಲರೂ ಆತನೇನು ಹುಚ್ಚ, ಎಂದು ಅವರ ಬೈಗಳಕ್ಕೂ ಮಹತ್ವ ಕೊಡುತ್ತಿರಲಿಲ್ಲ. ನಾನೂ ಇವರ ಪಂಗಡದವನೇ ಆಗಿದ್ದೆನು. ಏಕೆಂದರೆ, ಮಠಕ್ಕೆ ಹೋಗುತ್ತಿರಲಿಲ್ಲ. ಆದರೆ ಅವರಂತೆ ನಿಂದೆಯೂ ಇಲ್ಲ; ಅಣ್ಣನವರಂತೆ ಸಮಾಜ ಕೆಲಸದಲ್ಲಿ ಸೇರುತ್ತಿದ್ದುದೂ ಇಲ್ಲ. ಉದಾಸೀನ ವೃತ್ತಿಯವನಾಗಿದ್ದೆನು.

ನನ್ನ ಪರಿಚಯದ ಇಬ್ಬರು ಜಿನ್ನಿಂಗ್ ಫ್ಯಾಕ್ಟರಿ ಹಾಕಿದ್ದರು. ಅವರಲ್ಲಿ ಕಲಹ ಬಂದಿತು. ಆಗ ನನ್ನನ್ನು ಮಧ್ಯಸ್ಥನನ್ನಾಗಿ ಇಟ್ಟುಕೊಂಡಿದ್ದರು. ಅದಕ್ಕಾಗಿ ಜಿನ್ನಿಂಗ್ ಫಾಕ್ಟರಿಯ ಸಾಮಾನುಗಳನ್ನು ತರುವಾಗ ನಾನೂ ಇರಬೇಕಾಯಿತು. ಅಂತೆಯೇ ೧೯೧೧ ರಲ್ಲಿ ಅವರ ಸಂಗಡ ಮುಂಬೈಗೆ ಹೋದೆನು. ಅದೇ ಮುಂಬೈಗೆ ಹೋದುದು ಮೊದಲು, ಅಲ್ಲಿಯ ಆರ್ಯ ಸಮಾಜದ ಸಂಗತಿಯನ್ನು ಮೊದಲೇ ಶಿರಸಿಯಲ್ಲಿ ಕೇಳಿದ್ದೆನಷ್ಟೆ. ಅದಕ್ಕಾಗಿ ಅಲ್ಲಿಗೆ ಹೋದ ಮೇಲೆ ಆರ್ಯ ಸಮಾಜಕ್ಕೆ ಹೋಗಲೇಬೇಕೆಂಬ ಲವಲವಿಕೆ ಹೆಚ್ಚಾಯಿತು. ನನ್ನ ಪರಿಚಯದ ಹಾಳಕರ್ ವಕೀಲರು ಅಲ್ಲಿರಲಿಲ್ಲ. ಅವರು ರಂಗೂನದಲ್ಲಿದ್ದರು. ಒಂದು ಭಾನುವಾರ ದಿವಸ ಆರ್ಯ ಸಮಾಜದ ಮಂದಿರಕ್ಕೆ ಹೋದೆವು. ಅಲ್ಲಿ ಭಜನೆ, ವ್ಯಾಖ್ಯಾನಗಳು ಜರುಗಿದವು. ನನಗೆ ಅವು ಬಹು ಪ್ರಿಯವಾಗಿ ತೋರಿದವು.

ನಮ್ಮ ಮಠಗಳಲ್ಲಿ ಹೀಗೇಕೆ ಸ್ವಾಮಿಗಳು ಮಾಡಬಾರದೆಂದು ನನ್ನ ಸಂಗಡಿಗರೊಂದಿಗೆ ಆ ದಿನ ಹೆಚ್ಚಾಗಿ ಚರ್ಚಿಸಿದೆನು. ಊರಿಗೆ ಬಂದನಂತರ ನನ್ನ ತುಂಬಾ ವಿಶ್ವಾಸದ ಕೈ ನಿಡಗುಂದಿ ಮಡಿವಾಳಪ್ಪನವರು ಮತ್ತು ಕೈ ಕಂಚಿಕೆರೆ ಮಹಾಲಿಂಗಪ್ಪನವರು ಇವರಲ್ಲಿ ಆರ್ಯ ಸಮಾಜದವರ ಕಾರ್ಯವನ್ನು ತಿಳಿಸಿ ಮಠದಲ್ಲಿ ಹೀಗೇಕೆ ಮಾಡಬಾರದಾಗಿ ವಾದಿಸಿದೆನು. ಮಡಿವಾಳಪ್ಪನವರು ಅಲ್ಲಿ ಪ್ರಸಿದ್ಧ ಸಂಗೀತಕಾರರು. ಅವರು ತಾವು ಭಜನೆಗೆ ಬರುವುದಾಗಿ ಒಪ್ಪಿದರು. ಇಲ್ಲಿಯ ವಿರಕ್ತಮಠದ ಸ್ವಾಮಿಗಳೂ ಭಜನೆಗೆ ಬಹು ಪ್ರಿಯರಿದ್ದಾರೆ. ಅವರಾದರೂ ಒಪ್ಪಬಹುದು. ಹೋಗಿ ಕೇಳಬೇಕೆಂದು ತಿಳಿಸಿದರು.

ಭಜನಾ ಸಂಘ ಸ್ಥಾಪನೆ : ನಾನು ವಿರಕ್ತ ಮಠಕ್ಕೆ ಹೋದೆನು. ಅಲ್ಲಿ ಸಂಸ್ಕೃತ ಪಾಠಶಾಲೆಯ ಅಧ್ಯಾಪಕರಾಗಿದ್ದ ಕೈ ಗುರುಮೂರ್ತಿ ಶಾಸ್ತ್ರಿಗಳಲ್ಲಿ ಮೊದಲು ಈ ಸಂಗತಿಯನ್ನು ಪ್ರಸ್ತಾಪಿಸಿದೆನು. ಅವರು ಅಗತ್ಯವಾಗಿ ಆಗಬೇಕೆಂದೂ ಸ್ವಾಮಿಗಳು ಇಂತಹ ಕಾರ್ಯಕ್ಕೆ ಬಹು ಉತ್ಸಾಹಿಗಳೆಂದೂ ಹೇಳಿ ಸ್ವಾಮಿಗಳ ಕಡೆಗೆ ಹೋಗೋಣವೆಂದರು. ಸ್ವಾಮಿಗಳಲ್ಲಿ ವಿಜ್ಞಾಪಿಸಿಕೊಳ್ಳಲು ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಸಂತೋಷದಿಂದ ಈ ಕಾರ್ಯ ಮಾಡೋಣವೆಂದು ಆಗಲೇ ನಿಡಗುಂದಿ ಮಡಿವಾಳಪ್ಪನವರನ್ನು ಕರೆಯಿಸಿದರು. ಭಜನಾ ಸಂಘ ಸ್ಥಾಪನೆಯ ಯೋಚನೆ ನಿರ್ಧಾರವಾಯಿತು.

ತಾ. ೨೬-೦೬-೧೯೧೧ನೆಯ ದಿವಸ ಭಜನಾ ಸಂಘ ಸ್ಥಾಪನೆಯಾಗಿ ಪ್ರತಿ ಸೋಮವಾರ ಸಾಯಂಕಾಲ ಮಠದಲ್ಲಿ ಸೇರಿ ನಿಜಗುಣಾರಾಧ್ಯರ, ಸರ್ಪಭೂಷಣ ಶಿವಯೋಗಿಗಳ ಪದಗಳನ್ನು ಹೇಳುವುದು ಪ್ರಾರಂಭವಾಯಿತು. ಕೆಲವು ಪದ್ಯಗಳನ್ನು ಆರಿಸಿ ಪ್ರತ್ಯೇಕವಾಗಿ ಅಚ್ಚು ಮಾಡಿ ಹಂಚಿದ್ದಾಯಿತು. ಸ್ವಾಮಿಗಳ ಸಾರ್ವಜನಿಕ ಕಾರ್ಯೋತ್ಸಾಹ ನೋಡಿ ನನಗೆ ಅವರಲ್ಲಿ ವಿಶೇಷವಾದ ಭಕ್ತಿಯುಂಟಾಯಿತು.

ಶ್ರಾವಣ ಮಾಸೋಪನ್ಯಾಸಮಾಲಾ ಸ್ಥಾಪನೆ : ಶ್ರೀಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ವೈರಾಗ್ಯಶೀಲರೂ ಸಮಾಜ ಕಾರ್ಯಾಧ್ಯಕ್ಷರೂ ಆಗಿದುದರಿಂದ ಅವರಲ್ಲಿ ದಾವಣಗೆರೆ ಜನಗಳ ಭಕ್ತಿ ವಿಶೇಷ, ಸ್ವಾಮಿಗಳ ಅಪ್ಪಣೆಯಂತೆ ನಡೆಯಲು ಯಾವಾಗಲೂ ಸಿದ್ದರು. ಸಮಾಜ ಕಾರ್ಯವನ್ನೇನಾದರೂ ಮಾಡುವ ವಿಚಾರದಲ್ಲಿ ನಾನು ನನ್ನ ಯೋಚನೆಯನ್ನು ಸ್ವಾಮಿಗಳವರಲ್ಲಿ ಅರಿಕೆ ಮಾಡಕೊಂಡರೆ ಅದನ್ನು ಪೂಜ್ಯರೂ ತಕ್ಷಣವೇ ಮಾಡಿಸುತ್ತಿದ್ದರು. ಶ್ರಾವಣ ಮಾಸದಲ್ಲಿ ಪ್ರತಿ ಸೋಮವಾರ ಬೇರೆ ಬೇರೆ ಕಡೆಯಿಂದ ವಿದ್ವಾಂಸರನ್ನು ಕರೆಯಿಸಿ ವ್ಯಾಖ್ಯಾನ ಮಾಡಿಸಿದರೆ ಹೆಚ್ಚು ಪ್ರಯೋಜನವೆಂದು ಅರಿಕೆ ಮಾಡಿಕೊಂಡೆನು. ಇದು ಸ್ವಾಮಿಗಳಿಗೆ ವಿಹಿತವಾಗಿ ತೋರಿ ಅದರ ಎಲ್ಲ ಸಿದ್ದತೆಗಳನ್ನೂ ಮಾಡಿಸಿದರು.

ಈ ಶ್ರಾವಣ ಮಾಸದ ಉಪನ್ಯಾಸ ಮಾಲೆಯೂ ಮೊದಲು ಸಣ್ಣದಾಗಿ ಪ್ರಾರಂಭವಾದರೂ ಅದು ಮುಂದೆ ದೊಡ್ಡದಾಯಿತು. ಶ್ರಾವಣ ಮಾಸ ಸಂಪೂರ್ಣ ಪ್ರತಿನಿತ್ಯ ವ್ಯಾಖ್ಯಾನ ಜರುಗುವಂತಹ ಅಭಿವೃದ್ಧಿಯನ್ನು ಹೊಂದಿತು. ಊರಲ್ಲಿ ಆಚಾರಗಳ ಅನೇಕ ಕಟ್ಟುಗಳುಂಟಾದವು. ಇದು ಕೆಲವರಿಗೆ ಅಪ್ರಿಯ, ನಾನೇ ಇದಕ್ಕೆಲ್ಲಾ ಕಾರಣನೆಂದು ನನ್ನ ವಿರುದ್ಧವಾಗಿ ಸ್ವಾಮಿಗಳಲ್ಲಿ ಕೆಲವರು ಏನೇನೋ

ಹೇಳಲು ಪ್ರಾರಂಭವಾಯಿತು. ಸ್ವಾಮಿಗಳು ಅಂತಹ ಯಾವ ಮಾತುಗಳನ್ನು ಚಿತ್ತದಲ್ಲಿ ತಂದುಕೊಳ್ಳದಿದ್ದುದರಿಂದ ಸ್ಥಳೀಯ ವೀರಶೈವರು ಜಾಗೃತಿಯಾಗಲು ಅನೇಕ ಕಾರ್ಯಗಳನ್ನು ಮುಂದುವರಸಿದ್ದಾಯಿತು.

ಧಾರ್ಮಿಕ ಗ್ರಂಥಾಧ್ಯಯನ : ಕ್ರಿ. ಶ. ೧೯೧೧ರಿಂದ ಧಾರ್ಮಿಕ ಪುಸ್ತಕಗಳನ್ನು ಹೆಚ್ಚು ಓದಲಾರಂಭಿಸಿದೆನು. ವೀರಶೈವ ಮತತತ್ವಗಳನ್ನೂ ತಿಳಿದುಕೊಳ್ಳಹತ್ತಿದೆನು. ಜುಲೈ ೨೫ನೆಯ ತಾರಿಖು ನನಗೆ ಬಹು ಮುಖ್ಯ ದಿನ. ನಾನು ಕೈಕೊಂಡವ್ರತದ ವರ್ಧಂತಿ ದಿನವೇ ಆಗಿತ್ತು. ಆ ದಿನ ಪ್ರತಿ ನಿತ್ಯದ ಆಹಾರಕ್ಕಿಂತಲೂ ಕಡಿಮೆ ತೆಗೆದುಕೊಳ್ಳುತ್ತಿದ್ದೆನು. ಅಕ್ಕಿಆಲೂರಿಗೆ ಹೋದಾಗ ಒಂದು ಬಿಡದಿ ಮನೆಯಲ್ಲಿ ನಾನಿದ್ದೆನು. ಎಲ್ಲರೂ ಊಟಕ್ಕೆ ಹೋಗಿದ್ದರು. ಆ ಬಿಡದಿ ಮನೆಯ ಕಾಗೂಡಿನಲ್ಲಿ ಕೋರಿಕಾಗದದಲ್ಲಿ ಬರೆದ ಒಂದು ಪುಸ್ತಕವಿತ್ತು. ಅದನ್ನು ತೆಗೆದುಕೊಂಡು ನೋಡಲು ಅದರಲ್ಲಿ ಅನೇಕ ಕೈಬರವಣಿಗೆಯ ಚಿತ್ರಗಳಿದ್ದವು. ಯೋಗಶಾಸ್ತ್ರ, ವೈದ್ಯಶಾಸ್ತ್ರ, ಸಾಮುದ್ರಿಕ ಮೊದಲಾದ ಶಾಸ್ತ್ರಗಳ ಸಂಬಂಧವಾಗಿ ಅದರಲ್ಲಿ ಅನೇಕ ಸಂಗತಿಗಳಿದ್ದವು.

ನಾನು ಯೋಗಶಾಸ್ತ್ರದ ಸಂಗತಿಗಳನ್ನು ಓದಿದೆನು. ಊರ್ಧ್ವರೇತು ಆಗಲು ೮ನೆಯ ವರ್ಷದಿಂದಲೇ ಮೂತ್ರೇಂದ್ರಿಯವನ್ನು ಹೇಗೆ ಬೆಳೆಯಿಸಬೇಕು? ೧೨-೧೬-೨೫ ವರುಷಗಳಲ್ಲಿ ಮೂರು ತರದ ಕೈಕರಣಗಳನ್ನು ಹೇಗೆ ಪ್ರಯೋಗಿಸಬೇಕು? ಇಂದ್ರಿಯ ಪಟುತ್ವವಿಲ್ಲದಿದ್ದರೆ ಯಾವ ನಾಡಿಯನ್ನು ಹೇಗೆ ಬಲಪಡಿಸಬೇಕು? ಯಾವ ಯಾವ ಆಹಾವ ಸೇವಿಸಬೇಕು? ಚಿಗರಿ ಚರ್ಮದ ಮೇಲೆಯೇ ಮಲಗುವುದರಿಂದ ವೀರ್ಯ ರಕ್ಷಣೆಗೆ ಯಾವ ಯಾವ ಅನುಕೂಲಗಳಾಗಿವೆ? ಈ ಮೊದಲಾದ ಸಂಗತಿಗಳನ್ನೆಲ್ಲಾ ಕೆಲವು ಚಿತ್ರಗಳನ್ನು ಕೂಡಾ ಬರೆದು ಬಹು ವಿವರವಾಗಿ ತಿಳಿಸಿದ್ದರು. ಅದರಲ್ಲಿಯ ಕೆಲವು ಸಂಗತಿಗಳನ್ನು ಬರೆದುಕೊಂಡು ಎಲ್ಲವನ್ನೂ ಓದಬೇಕೆಂದು ಯೋಚಿಸಿದ್ದೆನು. ಅಷ್ಟರಲ್ಲಿ ಊಟಕ್ಕೆ ಕರೆದರು. ಊಟ ಮಾಡಿ ಬರುವುದರಲ್ಲಿ ಆ ಪುಸ್ತಕವೇ ಅಲ್ಲಿರಲಿಲ್ಲ. ನಾನು ಕೈಕೊಂಡ ವ್ರತಕ್ಕೆ ಅದರಲ್ಲಿಯ ಅನೇಕ ಸಂಗತಿಗಳು ಬಹು ಪ್ರಯೋಜನವಾದವು. ಚಿಗರಿ ಚರ್ಮದ ಮೇಲೆ ಮಲಗುವುದು ನನ್ನ ರೂಢಿಯಾಗಿಯೇ ಪರಿಣಮಿಸಿತು. ಅದರಲ್ಲಿಯ ಕೆಲವು ಸಂಗತಿಗಳ ಪ್ರಯೋಗವು ಬಹು ಜನ ತರುಣರಿಗೆ ಹಿತಕರವಾಯಿತೆಂದು ನನ್ನ ಈ ವರೆಗಿನ ಅನುಭವದಿಂದ ಗೊತ್ತಾಗಿದೆ.

ನಾನು ದೈವವಾದಿಯಲ್ಲ : ನಾನು ಪುನರ್ಜನ್ಮವನ್ನು ನಂಬುವವನಲ್ಲ. ನನ್ನ ಧಾರ್ಮಿಕ ತಿಳುವಳಿಕೆಯೇ ವಿಲಕ್ಷಣವಾದುದು, ಪುನರ್ಜನ್ಮವನ್ನು ಸಿದ್ಧಮಾಡಿಕೊಡಿರೆಂದು ಅನೇಕರಲ್ಲಿ ವಾದಿಸಿದೆನು. ಹರಿಹರದ ಶ್ರೀ ನಾಡಿಗ ದತ್ತಾತ್ರೇಯರಾಯರು ನನ್ನ ತುಂಬಾ ಪರಿಚಯದವರು. ಅವರು ಧಾರ್ಮಿಕ ವಿಷಯಗಳನ್ನು ಚೆನ್ನಾಗಿ ಓದಿಕೊಂಡವರು. ಒಳ್ಳೆಯ ಕನ್ನಡ ಲೇಖಕರು. ಶ್ರೀ ಮಹಾಭಾಗವತರು (ಶ್ರೀ ಜಗದ್ಗುರು ಶಂಕರಾಚಾರ್ಯ-ಡಾ ಕುರ್ತಕೋಟಿಯವರು) ಆಗ ಹರಿಹರಕ್ಕೆ ಬರುತ್ತಿದ್ದುದು ಹೆಚ್ಚು. ನನ್ನ ಸ್ನೇಹಿತರಾದ ಶ್ರೀ ದತ್ತಾತ್ರೇಯರಾಯರು ಅವರ ಪಾಂಡಿತ್ಯವನ್ನು ಕುರಿತು ಅನೇಕ ಸಾರೆ ನನಗೆ ತಿಳಿಸಿದ್ದರು. ಆದ ಕಾರಣ ಹರಿಹರದಲ್ಲಿ ಒಂದು ದಿನ ಶ್ರೀ ಮಹಾ ಭಾಗವತರಲ್ಲಿ ಪುನರ್ಜನ್ಮದ ವಿಷಯವಾಗಿ ತುಂಬಾ ಚರ್ಚಿಸಿದೆನು. ಕೊನೆಗೆ ಅವರು ಹೀಗೆ

ಹೇಳಿದರು. ಪುನರ್ಜನ್ಮ ಇದೆಯೆಂಬುದಕ್ಕೂ ಎಷ್ಟು ಆಧಾರಗಳು ತೋರುತ್ತವೋ ಅಷ್ಟೇ ಇಲ್ಲ ಎಂಬುದಕ್ಕೂ ಆಧಾರಗಳನ್ನು ಕೊಡಬಹುದು. ಇದು ಅವರರವ ನಂಬಿಕೆಗೆ ಸಂಬಂಧಪಟ್ಟ ಸಂಗತಿ.

ಶ್ರೀ ಬಸವ ಜಯಂತಿಯ ಪ್ರಾರಂಭ: ಧಾರ್ಮಿಕ ನಾನಾ ವಿಚಾರಗಳ ಹೊಯಿದಾಟ ನಡೆದಿದ್ದರೂ ಮಠಕ್ಕೆ ಹೋಗುವದೂ ಅನೇಕ ಯೋಚನೆಗಳನ್ನು ಮಾಡುವುದೂ ತಪ್ಪಿರಲಿಲ್ಲ. ಪತ್ರಿಕೆಯ ಕಾರ್ಯ ಸ್ವಲ್ಪ ಪ್ರಮಾಣದಲ್ಲಿಯೇ ನಡೆದಿತ್ತು. ಶ್ರೀ ಬಾಳಪ್ಪನವರಂತೂ ತಮ್ಮ ಹಣ ಬರುವ ಆಸೆಯನ್ನೇ ಹಿಡಿದಿರಲಿಲ್ಲ. ಅವರು ಹರಿಹರದಲ್ಲಿ ಕಬ್ಬಿನ ದೊಡ್ಡ ವ್ಯವಸಾಯ ನಡೆಸುವ ಕಾರ್ಯದಲ್ಲಿದ್ದರು. ಆಗ ಮೈಸೂರು ದಿವಾನರಾಗಿದ್ದ ಸರ್ ಎಂ. ವಿಶ್ವೇಶ್ವರಯ್ಯನವರ ಹಸ್ತದಿಂದ ಅವರು ಯಾಂತ್ರಿಕ ನೀರಾವರಿ ಕಬ್ಬಿನ ಬೆಳೆಯ ಮಹಾ ಕಾರ್ಯವನ್ನು ೧೯೧೩ರಲ್ಲಿ ಪ್ರಾಂಭಿಸಿದರು. ಆ ದಿನ ನಾನು ಹರಿಹರದ ಅವರ ಹೊಲದಲ್ಲಿಯೇ ಇದ್ದೆನು. ಅದು ತುಂಗಭದ್ರಾ ನದಿಯ ತೀರ, ಆ ರಾತ್ರೆ ಅಲ್ಲಿ ಒಂದು ವಿಚಾರ ಹೊಳೆಯಿತು. "ದಾವಣಗೆರೆಯನ್ನು ಬಿಟ್ಟು ಈ ನದಿಯ ದಂಡೆಯಲ್ಲಿ ಒಂದು ಆಶ್ರಮ ಮಾಡಕೊಂಡು ಧಾರ್ಮಿಕ ಸಂಗತಿಗಳನ್ನು ಆಚರಿಸಿ ಅನುಭವದಲ್ಲಿ ತಂದುಕೊಳ್ಳಬೇಕು."

ಆ ಮೇಲೆ ದಾವಣಗೆರೆಗೆ ಹೋಗಲು ಮತ್ತೆ ಪ್ರತಿ ನಿತ್ಯದ ಕಾರ್ಯ ಪ್ರಾರಂಭವಾಯಿತು. ಕೈ ಕಂಚಿಕೆರೆ ಮಹಾಲಿಂಗಪ್ಪನವರು ಅನೇಕ ಸಂಗತಿಗಳನ್ನು ತಿಳಿಸಿದ್ದರಿಂದ ಬಸವೇಶ್ವರನ ಬಗ್ಗೆ ನನಗೆ ಹೆಚ್ಚು ಆದರವುಂಟಾಗಿತ್ತು. ಲಿಂಗಾಯತರಲ್ಲಿ ಜಾತಿಗಳಿಲ್ಲ. ಇತ್ತೀಚೆಗೆ ಮಾಡಿಕೊಂಡಿದ್ದಾರೆ. ಬಸವೇಶ್ವರನು ಹರಳಯ್ಯ ಮಧುವಯ್ಯ ಇವರಿಗೆ ಶರೀರಸಂಬಂಧ ಮಾಡಿಸಿದ್ದನು ಎಂದು ಅವರು ಬಹು ವಿರಾವೇಶದಿಂದಲೂ ಅನೇಕ ಕಥೆಗಳಿಂದಲೂ ಮಠದಲ್ಲಿ ಆಗಾಗ್ಗೆ ನನ್ನ ಸಂಗಡ ವಾದಿಸುತ್ತಿದ್ದರು. ಬಸವೇಶ್ವರನ ವಚನಗಳನ್ನು ಓದಬೇಕೆಂದು ಬಹು ಪರಿಶ್ರಮಪಟ್ಟು ಒಂದು ಪುಸ್ತಕವನ್ನು ತರಿಸಿದೆನು. ಅದು ಬಳ್ಳಾರಿಯಲ್ಲಿ ಅಚ್ಚಾದುದು. ನನಗೆ ಅನೇಕ ವಚನಗಳ ಅರ್ಥವೇ ತಿಳಿಯಲಿಲ್ಲ. ಒಂದು ದಿನ ಬ್ರಾಹ್ಮಣರು ಹೇಗೆ ರಾಮನವಮಿಯನ್ನು ಮಾಡುತ್ತಾರೆಯೋ ಹಾಗೆಯೇ ನಾವು ಬಸವೇಶ್ವರ ಜಯಂತಿಯನ್ನೇಕೆ ಮಾಡಬಾರದು? ಎಂಬ ಕಲ್ಪನೆ ಬಂದಿತು.

ಈ ಸಂಗತಿಯನ್ನು ಮಹಾಲಿಂಗಪ್ಪನವರಲ್ಲಿ ತಿಳಿಸಿದೆನು. ಅವರು ಇದಕ್ಕೆ ಒಪ್ಪಿದರು. ಮಣ್ಣೆತ್ತಿನ ಅಮವಾಸಿಯೆಂದು ನಮ್ಮಲ್ಲಿ ಮಾಡುತ್ತಾರೆ. ಆ ದಿನ ಮಣ್ಣಿನ ಬಸವಣ್ಣನನ್ನು ಮಾಡಿ ಪೂಜಿಸುತ್ತಾರೆ. ಅದೇ ದಿನ ಬಸವೇಶ್ವರರು ಹುಟ್ಟಿರಬಹುದೆಂದು ಅವರು ಹೇಳಿದರು. ಅದು ನನಗೆ ಸರಿತೋರಲಿಲ್ಲ ಮತ್ತು ಅದು ಮಳೆಗಾಲ. ಜಯಂತಿ ಉತ್ಸವಕ್ಕೆ ಅನುಕೂಲವಲ್ಲವೆಂದು ಬಸವೇಶ್ವರ ಜನ್ಮ ದಿನವನ್ನು ಹುಡಕಲಿಕ್ಕಾರಂಭಿಸಿದೆನು. ಒಂದು ದಿನ ಮಡಿವಾಳಪ್ಪನವರನ್ನು ಕರೆದುಕೊಂಡು ಅಲ್ಲಿಯ ಪ್ರಸಿದ್ಧ ಶಾಸ್ತ್ರಿಗಳಾಗಿದ್ದ ಕೈ. ಚಂದ್ರಶೇಖರ ಶಾಸ್ತ್ರಿಗಳ ಕಡೆಗೆ ಹೋಗಿ ಕೇಳಿದೆನು. ಬಸವೇಶ್ವರರ ಜನ್ಮದಿನವು ಎಲ್ಲಿಯೂ ಉಕ್ತವಾಗಿದ್ದಂತೆ ಕಾಣುವುದಿಲ್ಲವೆಂದು ಅವರು ಹೇಳಿ ಬಸವೇಶ್ವರನ ಜಯಂತಿಯನ್ನು ಮಾಡುವುದಕ್ಕಿಂತ ರೇಣುಕಾಚಾರ್ಯರ ಜಯಂತಿ ಮಾಡಿದರೆ ಒಳ್ಳೆಯದೆಂದು ತಿಳಿಸಿದರು. ಅವರು ಹಾಗೇಕೆ ಹೇಳಿದರೆಂಬುದು ಆಗ ನನಗೆ ತಿಳಿಯಲಿಲ್ಲ. ಅವರು ಕಾಶಿಗೆ ಹೋಗಿ ಕಲಿತುಕೊಂಡು ಬಂದ ಆ ಕಾಲದ ಪ್ರಸಿದ್ಧ ಶಾಸ್ತ್ರಿಗಳಲ್ಲಿ ಒಬ್ಬರು.

ನಾನು ಮೈಸೂರಿಗೆ ಕೈ. ಎನ್. ಆರ್. ಕರಿಬಸವ ಶಾಸ್ತ್ರಿಗಳಿಗೆ ಈ ವಿಚಾರವಾಗಿ ಪತ್ರ ಬರೆದೆನು. ವೀರಶೈವ ಮತತತ್ವಗಳ ಸಂಬಂಧವಾಗಿ ಆ ಮುಂಚೆ ಅವರ ಸಂಗಡ ಒಂದೆರಡು

ಸಾರೆ ಪತ್ರ ವ್ಯವಹಾರ ಮಾಡಿದ್ದೆನು. ಅವರು ವ್ಯಾಸೋಕ್ತ ಬಸವಪುರಾಣದಲ್ಲಿ ಬಸವೇಶ್ವರನ ಜನನಕಾಲದಲ್ಲಿದ್ದ ಗ್ರಹಗಳ ಶ್ಲೋಕವನ್ನು ಬರೆದು ಕಳುಹಿಸಿದರು. ಅದನ್ನು ನೋಡಿ ನನಗೆ ಬಹು ಸಂತೋಷವಾಯಿತು. ಹರಪನಹಳ್ಳಿಯಲ್ಲಿ ಪ್ರಸಿದ್ಧ ಜ್ಯೋತಿಷ್ಯಜ್ಞರಾದ ಕೈ. ಆರ್. ಶಾಂತಪ್ಪಾಜಿಯವರ ಕಡೆಗೆ ಅದನ್ನು ಕಳುಹಿಸದೆನು. ಅವರು ವಿವರವಾಗಿ ಅದನ್ನು ಬರೆದು ಕಳುಹಿಸಿದರು. ಈ ಸಂಗತಿಗಳನ್ನೆಲ್ಲಾ ಪೂಜ್ಯರಾದ ಸ್ವಾಮಿಗಳಲ್ಲಿ ಆಗಾಗ್ಗೆ ಅರಿಕೆ ಮಾಡಿಕೊಳ್ಳುತ್ತಲೇ ಇದ್ದನು. ವೈಶಾಖ ಶುದ್ಧ ೪ ದಿನ ರೋಹಿಣಿ ನಕ್ಷತ್ರದಲ್ಲಿ ಎಂಬುದಾಗಿದ್ದಿತು. ಆ ದಿವಸ ಸಮೀಪಿಸಿತು. ಆದರೂ ಸ್ವಾಮಿಗಳು ಊರಲ್ಲಿಯ ಜನರಿಗೆ ಅಪ್ಪಣೆ ಮಾಡಿದ್ದರಿಂದ ೧೯೧೩ನೆಯ ಇಸವಿಯಲ್ಲಿ ದಾವಣಗೆರೆ ಮಟ್ಟಿಗೆ ಬಹು ಸಂಕ್ಷಿಪ್ತವಾಗಿ ಬಸವಜಯಂತಿಯು ಜರುಗಿತು.

ಬಸವೇಶ್ವರನ ವಚನದಲ್ಲಿಯ ನಾಲ್ಕಾರು ನೈತಿಕ ವಚನಗಳನ್ನೇ ಒಂದು ಚಿಕ್ಕ ಪ್ರಕಟನೆಯಾಗಿ ಮುದ್ರಿಸಿ ಹಂಚಿದೆವು. ಆ ದಿನ ಕೈ. ಹೊಳೆಹೊನ್ನೂರು ಪಟ್ಟಾಧ್ಯಕ್ಷರು ಜಯಂತಿಯನ್ನು ನಕ್ಷತ್ರದ ಮೇಲೆಯೇ ಮಾಡುವುದುತ್ತಮ; ಮಿತಿ ಸರಿಬರುತ್ತಾ ಇರುವುದಿಲ್ಲ. ಎಲ್ಲ ರಥೋತ್ಸವಗಳೂ ನಕ್ಷತ್ರದ ಮೇಲಿಂದಲೇ ಜರುಗುತ್ತಿರುತ್ತವೆಂದು ತಿಳಿಸಿದರು. ಅವರ ಸೂಚನೆ ಎಲ್ಲರಿಗೂ ಒಪ್ಪಿಗೆಯಾಯಿತು. ೧೯೧೪ರಿಂದ ನಕ್ಷತ್ರದ ಮೇಲಿಂದಲೇ ಜಯಂತಿಯು ನಡೆಯಲಾರಂಭವಾಯಿತು. ಚೈತ್ರ ಶುದ್ಧ ೧ನೆಯ ದಿವಸ ಪಂಚಾಂಗ ಶ್ರವಣಕ್ಕೆ ಮಠದಲ್ಲಿ ಕೂಡಿದಾಗ ಬಸವ ಜಯಂತಿ ಎಂದು ಬರುತ್ತದೆಂಬುದನ್ನು ನೋಡಿ ಮರುದಿನವೇ ಮೈಸೂರು ಸ್ಟಾರ್ ಪತ್ರಿಕೆಗೆ ತಿಳಿಸುವುದು ಕೆಲವು ವರುಷಗಳವರೆಗೆ ಒಂದು ಪದ್ಧತಿಯೇ ಆಗಿದ್ದಿತು.

ಇತರ ಕಾರ್ಯಕಲಾಪ: ಜನರಲ್ಲಿ ಪ್ರಾಥಮಿಕ ಶಿಕ್ಷಣ ಪ್ರಸಾರವಾಗುವುದೇ ಎಲ್ಲಾ ಸುಧಾರಣೆಗಳಿಗೂ ಮೂಲವೆಂದು ನನ್ನ ತಿಳುವಳಿಕೆ. ಆದಕಾರಣ ಆ ಸಂಬಂಧವಾಗಿ ಲೇಖನ ಭಾಷಣಗಳನ್ನು ಆ ಕಾಲದಲ್ಲಿ ಹೆಚ್ಚು ಪ್ರಸಾರ ಮಾಡುತ್ತಿದ್ದೆನು. ಬೆಳಗಾವಿಯಲ್ಲಿ ಕೂಡಿದ ವೀರಶೈವ ಮಹಾಸಭೆಗೆ ಹೋಗಿ ಶಿಕ್ಷಣ ವಿಷಯವಾಗಿಯೇ ಭಾಷಣಮಾಡಿದ್ದೆನು. ಮೈಸೂರು ದಿವಾನರು ಸರ್. ಎಂ. ವಿಶ್ವೇಶ್ವರಯ್ಯನವರು ದಾವಣಗೆರೆಗೆ ಬಂದಾಗ ಪ್ರತ್ಯೇಕ ಸಂಭಾಷಣೆಗಾಗಿ ಹೋಗಿ ಪ್ರಾಥಮಿಕ ಶಿಕ್ಷಣವು ಸಂಸ್ಥಾನದಲ್ಲಿ ಉಚಿತವಾಗಿಯೂ ಬಲಾತ್ಕಾರವಾಗಿಯೂ ದೊರೆಯುವಂತೆ ಮಾಡಬೇಕೆಂದು ಹೇಳಿದ್ದೆನು.

ದಕ್ಷಿಣಾಫ್ರಿಕೆಯಲ್ಲಿ ಮಹಾತ್ಮಾ ಗಾಂಧಿಯವರು ಪ್ರಾರಂಭಿಸಿದ್ದ ಸತ್ಯಾಗ್ರಹಕ್ಕೆ ದಾವಣಗೆರೆಯಲ್ಲಿ ನೂರಾರು ರೂ. ಗಳನ್ನು ಕೂಡಿಸಿ ಕಳಿಸುವ ಕಾರ್ಯವನ್ನು ಮಾಡಿದೆನು. ದಾವಣಗೆರೆ ಸ್ವಾಮಿಗಳ ಅಪ್ಪಣೆಯ ಪ್ರಕಾರ ಅಥಣಿಗೆ ಹೋಗಿ ಮಹಾ ತಪಸ್ವಿಗಳ ದರ್ಶನವನ್ನೂ ಪುಣೆಗೆ ಹೋಗಿ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳ ದರ್ಶವನ್ನೂ ಹೊಂದಿದ್ದು ಇದೇ ಕಾಲದಲ್ಲಿ.

ಶಿರಸಿಯಲ್ಲಿ ಇಂಗ್ಲೀಷ ಕಲಿಯಲು ಪ್ರಾರಂಭಿಸಿದ್ದನ್ನು ಬಿಟ್ಟನಂತರ ದಾವಣಗೆರೆಯಲ್ಲಿ ಶ್ರೀ ನರಸಿಂಗರಾವ ಎಂಬ ಒಬ್ಬ ಶಿಕ್ಷಕರಿಂದ ೧೯೧೩ರಲ್ಲಿ ಒಟ್ಟು ೪೩ ದಿವಸ ಹೇಳಿಸಿಕೊಂಡೆನು. ಅವರು ಪ್ರತಿ ನಿತ್ಯ ಮನೆಗೆ ಬಂದು ಒದು ತಾಸು ಹೇಳಿಕೊಡಬೇಕೆಂದು ಗೊತ್ತಾಗಿತ್ತು. ಅವರು ಬಂದ ಕಾಲದಲ್ಲಿ ಯಾರಾದರೂ ಇದ್ದರೆ ಇಲ್ಲವೆ ಕೆಲಸ ವಿಶೇಷವಿದ್ದರೆ ಆ ದಿನ ಪಾಠ ನಡೆಯುತ್ತಿರಲಿಲ್ಲ.

ಆ ಮೇಲೇ ನಾನೇ ಹಾಗೂ ಹೀಗೂ ಪ್ರಯತ್ನ ಮಾಡಿದೆನು. ಸ್ಪೆಲಿಂಗ್ ಪಾಠ ಮಾಡುವುದು. ನನಗೆ ಬಹು ಹಿಂಸೆ. ಓದಲಿಕ್ಕೆ ಬರುವಷ್ಟು ಮಾತನಾಡಲಿಕ್ಕೆ ಬರುವದಿಲ್ಲ. ಮಾತನಾಡಲಿಕ್ಕೆ ಬರುವಷ್ಟು ಬರೆಯಲಿಕ್ಕೆ ಬರುವುದಿಲ್ಲ. ಸ್ಪೆಲಿಂಗ್ ತಪ್ಪಿಲ್ಲದೆ ನಾಲ್ಕಾರು ಸಾಲುಗಳನ್ನು ಕೂಡ ಬರೆಯಲಾರೆನು. ಇಂಗ್ಲೀಷ್ ಕಲಿಯಲು ನಾನು ಆ ಮೆಲೆ ಪುನಃ ಪ್ರಯತ್ನ ಮಾಡಲೇ ಇಲ್ಲ. ಅದು ನನಗೆ ಸರಿಯಾಗಿ ಬಾರದಿದ್ದುದಕ್ಕೆ ಪಶ್ಚಾತ್ತಾಪವೂ ಆಗಲಿಲ್ಲ.

ಮನಸ್ಸಿನ ಮೇಲೆ ಆಘಾತವು : ಅಣ್ಣನವರು ಶಿರಸಿಯಲ್ಲಿಯೇ ಇರಲಾರಂಭಿಸಿದ್ದರು. ಅಲ್ಲಿ ಏರ್ಪಟ್ಟ ಸುಬೋಧಿನೀ ಪ್ರೆಸ್ ದಿನೆ ದಿನೆ ಅಭಿವೃದ್ಧಿಯಾಗುತ್ತಾ ಇತ್ತು. ತಾಯಿಯವರು ೧೯೧೩ರಲ್ಲಿ ನನ್ನ ಹತ್ತಿರವೇ ಇದ್ದರು. ಆಗ ಅವರಿಗೆ ಸುಮಾರು ೬೩ ವರುಷ. ನನ್ನ ಅಕ್ಕನ ಮಗ ನಾಗಪ್ಪ ಎಂಬ ೧೨-೧೩ ವರುಷಗಳ ಬಹು ಜಾಣನೂ ಕಾರ್ಯದಕ್ಷನೂ ಆದ ಹುಡುಗನು ವಿದ್ಯೆ ಕಲಿಯಲಿಕ್ಕಾಗಿ ನನ್ನಲ್ಲಿಗೆ ಬಂದಿದ್ದನು. ಆಗ ಆ ಊರಲ್ಲಿ ಪ್ಲೇಗ್ ಇದ್ದಿತು. ನಮ್ಮ ಮನೆಯ ನೆಲೆಯಲ್ಲಿಯೇ ಇದ್ದ ಕೈ. ಡೊಗ್ಗಳ್ಳಿ ಬಸವಣ್ಣೆಪ್ಪ ಎಂಬುವವರು ನನಗೆ ತುಂಬಾ ಆಪ್ತರು. ಅವರ ಸಹಾಯದಿಂದ ಅವರ ಬಂಗಲೆಯ ಹತ್ತಿರವೇ ಇದ್ದೆನು. ಆ ಹುಡುಗನು ಪ್ಲೇಗಿನಿಂದ ಮೃತಪಟ್ಟನು. ನನಗೆ ಆ ಮನಸ್ಸಿನ ಮೇಲೆ ವಿಶೇಷವಾದ ಆಘಾತವಾಯಿತು.

ನನ್ನ ತಾಯಿಯ ದುಃಖ ವಿಪರೀತ, ಸ್ಮಶಾನಕ್ಕೆ ಹುಡುಗನನ್ನು ತೆಗೆದುಕೊಂಡು ಹೋಗಲು ಯಾರೂ ಬರಲಿಲ್ಲ. ನಾನು ಮತ್ತು ನನ್ನ ತಾಯಿ ಆ ಹುಡುಗನನ್ನು ಒಂದೆತ್ತಿನ ಬಂಡಿಯಲ್ಲಿ ಹಾಕಿಕೊಂಡು ಸ್ಮಶಾನಕ್ಕೆ ತೆಗೆದುಕೊಂಡು ಹೋದೆವು. ನಾನೆಲ್ಲಿ ಸಾಯುತ್ತೇನೋ! ಎಂದು ನನ್ನ ತಾಯಿಯವರಿಗೆ ತುಂಬಾ ದುಃಖ ತಾನೇಕೆ ಸಾಯುವುದಿಲ್ಲವಲ್ಲಾ! ಎಂದು ಅವರು ಹಲಬುತ್ತಿದ್ದರು. ಆ ಸ್ಥಳವನ್ನು ಬಿಟ್ಟು ಬೇರೊಂದು ಕಡೆ ಚಿಕ್ಕದಾದ ಗುಡಿಸಿಲಿನಲ್ಲಿ ಬಹು ತೊಂದರೆಯಿಂದ ಕಾಲಕಳೆದೆವು. ಆಗ ಧಾರ್ಮಿಕ ವಿಚಾರ ಕ್ರಾಂತಿ ವಿಶೇಷ ಭವಗದ್ಗೀತೆಯನ್ನು ಆಗಿನಿಂದಲೇ ಓದುವುದಕ್ಕೆ ಪ್ರಾರಂಭಿಸಿದೆನು. ಈವರೆಗೂ ಅದು ನನ್ನ ಸಂಗಡಲೇ ಇರತಕ್ಕ ಬಹು ಪ್ರೇಮದ ಪುಸ್ತಕ, ಆಗ ಧಾರ್ಮಿಕ ವಿಚಾರವಾಗಿ ಒಂದು ಪುಸ್ತಕವನ್ನು ಬರೆದೆನು. ಅದರಲ್ಲಿಯ ವಿಚಾರ ಸರಣಿಯು ನನಗೆ ಈಗಲೂ ಸರಿಯಾಗಿಯೇ ತೋರುತ್ತದೆ. ಅದನ್ನು ಮುಂದೆ ಪ್ರಕಟಮಾಡಬೇಕೆಂದೇ ಈ ವರೆಗೂ ಕಾದಿಟ್ಟುಕೊಂಡು ಬಂದಿದ್ದೇನೆ.

ನನ್ನ ಆಚಾರ ವಿಚಾರಗಳಲ್ಲಿ ಬಹು ತೀಕ್ಷ್ಣತೆಗಳುಂಟಾದವು ಆಹಾರದಲ್ಲಿ ಮತ್ತೂ ಮಿತವಾದೆನು ತಾಯಿಯವರಿಗೆ ಇದು ಸರಿ ತೋರಲಿಲ್ಲ. ಅವರಿಗಾಗಿ ಅಡಿಗೆ ಬೇರೆ, ನನ್ನ ಅಡಿಗೆ ಬೇರೆ ಅದಕ್ಕಾಗಿ ನಾನೂ ಉಪ್ಪು ಕಾರಗಳನ್ನು ಬಿಟ್ಟು ನಿನ್ನಂತೆಯೇ ಊಟ ಮಾಡುತ್ತೇನೆಂತಲೂ, ಇಲ್ಲದಿದ್ದರೆ ನನ್ನಂತೆ ಊಟ ಮಾಡೆಂತಲೂ, ನನಗೆ ಎರಡು ತರದ ಅಡಿಗೆ ಮಾಡಲಿಕ್ಕಾಗುವುದಿಲ್ಲವೆಂತಲೂ, ಏನೇನೋ ಹಂಚಿಕೆಯಿಂದ ನಾನು ಸರಿಯಾಗಿ ಊಟಮಾಡಬೇಕೆಂದು ಪ್ರಯತ್ನಿಸಿದರು. ನನ್ನ ಅಡಿಗೆ ನಾನು ಮಾಡಿಕೊಳ್ಳುತ್ತೇನೆ. ಬೇಕಾದರೆ ನಿನಗೂ ನಿನ್ನ ಅಡಿಗೆ ಮಾಡಿಕೊಡುವೆನೆಂದು ಹೇಳಿ ಅವರ ಮನೋಗತವನ್ನು ಬೈಲಿಗೆ ಹಾಕಿದೆನು. ನೀನು ಹಟಮಾರಿಯೆಂಬುದು ನನಗೆ ಗೊತ್ತು ಎಂದು ಹೇಳಿ ಆ ಮೇಲೆ ನನ್ನ ಊಟದ ವಿಚಾರದಲ್ಲಿ ಅವರು ಸ್ವಲ್ಪವೂ ಪ್ರಸ್ತಾಪಿಸಲಿಲ್ಲ. ನನ್ನದೊಂದು ಮಹಾವ್ರತವೆಂತಲು ಆ ವ್ರತವನ್ನು

ನಾನೇಕೆ ಕೆಡಿಸಿ ಪಾಪ ಮಾಡಲೆಂತಲೂ ಹೇಳುತ್ತ ಬಹು ಪ್ರೇಮಾದರಗಳಿಂದ ನನ್ನ ಅಡಿಗೆಯನ್ನು ಪ್ರತ್ಯೇಕ ಮಾಡಿಡುತ್ತಿದ್ದರು.

ಆ ಮುಪ್ಪಿನಲ್ಲಾದರೂ ಅವರು ಎಲ್ಲ ಕೆಲಸಗಳ್ನು ಮಾಡುವಷ್ಟು ಶಕ್ತಿಯುಳ್ಳವರೂ ಉತ್ಸಾಹವುಳ್ಳವರೂ ಇದ್ದರು. ಬಹುಶುಚಿ, ಸಾಮಾನುಗಳನ್ನು ಓರಣವಾಗಿಡುವ ಪದ್ಧತಿ ಬಹು ಅನುಕರಣೀಯವಾದುದು. ನಾನು ೧೯೧೧ರಲ್ಲಿ ಪ್ರಾಣಾಯಾಮ, ದೇವರು ಮತ್ತು ಜನ್ಮಾಂತರಗಳ ಸಂಬಂಧವಾದ ಯೋಚನೆ, ಇವುಗಳ ಕಡೆಗೆ ಹೆಚ್ಚು ಲಕ್ಷಿಸಿದ್ದೆನು.

ಲೋಕಮಾನ್ಯರ ದರ್ಶನ : ಲೋಕಮಾನ್ಯ ಟಿಳಕರು ೧೯೧೪ರಲ್ಲಿ ಬಿಡುಗಡೆಯಾದರು. ಅವರ ದರ್ಶನಕ್ಕೆ ಹೋಗಬೇಕೆಂದು ಯೋಚಿಸಿದೆನು. ಅವರು ಪ್ರಕಟಿಸಿರುವ **"ಗೀತಾರಹಸ್ಯ"** ಗ್ರಂಥವನ್ನು ಕನ್ನಡದಲ್ಲಿ ಮಾಡಲು ಅವರ ಅಪ್ಪಣೆಯನ್ನು ಹೊಂದಬೇಕೆಂಬುದೊಂದು ಉದ್ದೇಶ. ಪುನರ್ಜನ್ಮದ ಬಗ್ಗೆ ಅವರಿಂದ ತಿಳಿದುಕೊಳ್ಳಬೇಕೆಂಬುದೇ ಮುಖ್ಯವಾದ ಉದ್ದೇಶವಾಗಿತ್ತು. ಶ್ರೀ. ವ್ಹಿ. ಬಿ. ಪುರಾಣಿಕರು ('ಲೋಕಮತ ಪತ್ರಿಕಾ' ಸಂಪಾದಕರು) ದಾವಣಗೆರೆಗೆ ಆಗಾಗ್ಗೆ ಬರುತ್ತಿದ್ದುದರಿಂದ ೧೯೧೩ರಲ್ಲಿಯೇ ಅವರ ಪರಿಚಯವಾಗಿತ್ತು. ಅವರು ಆಗ ಪುಣೆ ಫರ್ಗ್ಯುಸನ್ ಕಾಲೇಜಿನಲ್ಲಿ ಕಲಿಯುತ್ತಿದ್ದರು.

೧೯೧೪ನೆಯ ಇಸವಿಯಲ್ಲಿ ಸಾರ್ವಜನಿಕ ಗಣಪತಿ ಉತ್ಸವದ ಕಾಲಕ್ಕೆ ಟಿಳಕರ ದರ್ಶನಕ್ಕಾಗಿ ಪುಣೆಗೆ ನಾನು ನನ್ನ ಅಣ್ಣನವರು. ಹೋದೆವು. ಅವರ ಮನೆಗೆ ಹೋಗುವವರ ಹೆಸರನ್ನು ಪೋಲಿಸರು ಬರೆದುಕೊಳ್ಳುತ್ತಿದ್ದರೆಂದು ಅಗ ಅಲ್ಲಿ ಸುದ್ದಿ. ನಾವು ಹೋದಾಗ ಟಿಳಕರು ಆರಾಮ ಕುರ್ಚಿಯ ಮೇಲೆ ಕುಳಿತಿದ್ದರು. ಯಾರೋ ಒಬ್ಬರು ಅವರ ದರ್ಶನಕ್ಕೆ ಬಂದಿದ್ದರು. ಅವರು ತೆಂಗಿನಕಾಯಿ ಮತ್ತು ಹೂವುಗಳನ್ನು ತಂದಿದ್ದರು. ನಾವು ಲಿಂಬೆ ಹಣ್ಣುಗಳನ್ನು ಮಾತ್ರ ತೆಗೆದುಕೊಂಡು ಹೋಗಿದ್ದೆವು. ಅವುಗಳನ್ನು ಕೊಟ್ಟು ವಂದಿಸಿ ಕುಳಿತುಕೊಂಡೆವು. ಅವರು ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹೇಳಿದರು. ನಾವು ಮೇಲೆ ಕುಳಿತುಕೊಳ್ಳಲಿಲ್ಲ. ನನಗೆ ಮರಾಠಿ ಚೆನ್ನಾಗಿ ಮಾತನಾಡಲು ಬರುತ್ತಿರಲಿಲ್ಲ. ಆದರೂ ಅಭಿಪ್ರಾಯವನ್ನು ತಿಳಿಸುವಷ್ಟು ಬಂದೇ ಬರುತ್ತಿತ್ತು. ನಾವು ಕರ್ನಾಟಕದವರೆಂಬುದೂ ಅವರಿಗೆ ಗೊತ್ತಾಯಿತು.

ನಾನು ಪುನರ್ಜನ್ಮದ ವಿಷಯವಾಗಿ ಪ್ರಸ್ತಾಪಿಸಿದೆನು. ಅವರು ಧನಿಕರಾಗುವುದಕ್ಕೂ ರಾಜನಾಗುವುದಕ್ಕೂ ಪ್ರಚಂಡ ಮೇಧಾವಿಯಾಗುವುದಕ್ಕೂ ಜೀವನಿಗಿರುವ ಅನೇಕ ಜನ್ಮಗಳ ಸಂಸ್ಕಾರವೇ ಕಾರಣವೆಂಬ ಸಾಮಾನ್ಯ ದೃಷ್ಟಾಂತಗಳನ್ನು ಹೇಳಿದರು. ರಾಜರೂ ಧನಿಕರೂ ಇಲ್ಲದ ಕಾಲವು ಕೂಡಾ ಬರುವಂತೆ ಮನುಷ್ಯನಿಗೆ ಮಾಡಲು ಶಕ್ಯವಿದೆಯೆಂಬ ಮೊದಲಾದ ಸಂಗತಿಗಳನ್ನು ನಾನು ಹೇಳಿದೆನು. ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಸರಿಯಾಗಿ ಬರೆದುಕೊಡಿರಿ. ಅದಕ್ಕೆ ನಾನು ಉತ್ತರವಾಗಿ ಬರೆದು ತಿಳಿಸುತ್ತೇನೆಂದು ಟಿಳಕರು ಹೇಳಿ ನನ್ನನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಕಾಗದ, ಮಸಿ, ಲೆಕ್ಕಣಿಕೆಗಳನ್ನು ಕೊಟ್ಟು ಲೆಕ್ಕಣಿಕೆ ಸರಿಯಾಗಿದೆಯೋ ಇಲ್ಲವೋ ಎಂಬುದ್ನು ತಾವೇ ನೋಡಿ. ಇಲ್ಲಿಯೇ ಕುಳಿತು ಬರೆದುಕೊಂಡು ಬನ್ನಿರೆಂದು ಹೇಳಿಹೋದರು. ಅವರ ಆ ರೀತಿ, ಆದರಗಳನ್ನು ನೋಡಿ ನನಗೆ ಬಹು ಆಶ್ಚರ್ಯವಾಯಿತು ಮತ್ತು ಅವರ ವಿಷಯದಲ್ಲಿ ಭಕ್ತಿಯು ಹೆಚ್ಚಾಯಿತು.

ನನ್ನ ಪ್ರಶ್ನೆಗಳನ್ನೆಲ್ಲಾ ಒಂದೊಂದಾಗಿ ಬರೆದೆನು. ಗೀತಾರಹಸ್ಯವನ್ನು ಕನ್ನಡದಲ್ಲಿ ಮಾಡಲು ಅಪ್ಪಣೆ ಕೊಡಬೇಕಾಗಿಯೂ ಅದರಲ್ಲಿ ಕೇಳಿಕೊಂಡಿದ್ದೆನು. ಆ ಬರವಣಿಗೆಯನ್ನು ಅವರ ಕಡೆ ಕೊಟ್ಟುಬಂದೆನು. ಆ ನನ್ನ ಬರವಣಿಗೆಯಿಂದ ನನ್ನ ಮರಾಠಿ ಜ್ಞಾನ ಅವರಿಗೆ ಗೊತ್ತಾಗಿರಬಹುದು. ಅಂತೆಯೇ ಗೀತಾರಹಸ್ಯದ ವಿಚಾರವಾಗಿ ಅವರು ಬರೆಯಲಿಲ್ಲ. ಬೇರೆ ಪ್ರಶ್ನೆಗಳಿಗೂ ಉತ್ತರ ಬರೆಯಿಸಲಿಲ್ಲ. ನಾನೂ ಪುನಃ ಹೋಗಲಿಲ್ಲ, ನನಗೆ ಅವರ ದರ್ಶನ ಮತು ಪುನರ್ಜನ್ಮದ ಬಗ್ಗೆ ಅವರ ಪ್ರತಿಪಾದನೆಯ ರೀತಿ ಬೇಕಾಗಿದ್ದವು. ಅವು ದೊರೆತದ್ದರಿಂದ ಅಷ್ಟೇ ಸಾಕಾಯಿತು.

೧೯೧೪ರಲ್ಲಿ ಮದ್ರಾಸಿನಲ್ಲಿ ಕೂಡಿದ್ದ ರಾಷ್ಟ್ರಿಯ ಸಭೆಗೆ ಹೋದೆನು. ಎಲ್ಲ ಕಾರ್ಯಗಳೂ ಇಂಗ್ಲೀಷಿನಲ್ಲಿ ನಡೆಯುತ್ತಿದ್ದವು. ನನಗೇನೂ ಆ ಸಂಗತಿಗಳು ಚೆನ್ನಾಗಿ ತಿಳಿಯುತ್ತಿರಲಿಲ್ಲ. ಹರಿಹರದ ದಿವಂಗತ ಆರ್. ಟಿ. ಮಹದೇವರಾಯರು (ರಿಟಾಯರ್ಡ ಅಸಿಸ್ಟಂಟ್ ಕಮಿಶನರ್) ನನಗೆ ಆ ಸಂಗತಿಗಳನ್ನು ತಿಳಿಸುತ್ತಿದ್ದರು.

ಧನುರ್ಧಾರಿ ನಿಂತಿತು : ಪತ್ರಿಕೆಯ ಪ್ರಸಾರವು ದಿನೆ ದಿನೆ ಕಡಿಮೆಯಗುತ್ತಾ ಬಂದಿತ್ತು. ಕರ್ನಾಟಕದಲ್ಲಿ ಪತ್ರಿಕೆಗಳೂ ಹೆಚ್ಚುತ್ತಾ ಇದ್ದವು. ಅವು ಸರಿಯಾಗಿ ಅಚ್ಚಾಗುತ್ತಿದ್ದವು. ನನ್ನ ಪತ್ರಿಕೆಯು ಸರಿಯಾಗಿ ಅಚ್ಚಾಗುತ್ತಿರಲಿಲ್ಲ. ಇದನ್ನು ಒಳ್ಳೇ ಸ್ಥಿತಿಗೆ ತರಬೇಕೆಂಬ ಯೋಚನೆಯೇನೋ ಇತ್ತು. ಆದರೆ ಹಣವಿದ್ದರಲ್ಲೆ? ಶ್ರೀ ಬಾಳಪ್ಪನವರ ಸಾಲವೇ ತೀರಿರಲಿಲ್ಲ. ಎಂದಮೇಲೆ ಅವರನ್ನು ಕೇಳುವಂತಿರಲಿಲ್ಲ. ಶ್ರೀ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳಲ್ಲಿ ಪ್ರಾರ್ಥಿಸಿಕೊಳ್ಳಲು ಅವರು ಸ್ವಲ್ಪ ಹಣವನ್ನು ಆಶೀರ್ವದಿಸಿದರು. ಅಷ್ಟರಿಂದಲೇ ಹೊಸ ಮಶಿನ್, ಟೈಪುಗಳನ್ನು ತರಲು ಶಕ್ಯವಿರಲಿಲ್ಲ. ಆದಕಾರಣ ಪತ್ರಿಕೆಯನ್ನು ನಿಲ್ಲಿಸಿ ಜೀವನಾಂಶಕ್ಕಾಗಿ ಚಿಲ್ಲರೆ ಕೆಲಸವನ್ನು ಅಚ್ಚು ಮಾಡುತ್ತಾ, ವರುಷಕ್ಕೆ ಒಂದರಂತೆ ಒಳ್ಳೆಯ ಕನ್ನಡ ಪುಸ್ತಕಗಳನ್ನಾದರೂ ಬರೆದು ಪ್ರಕಟಿಸಬೇಕೆಂದು ಯೋಚಿಸಿದೆನು. ಆಗ ಕನ್ನಡದಲ್ಲಿ ಆಧುನಿಕ ವಿಚಾರದ ಒಳ್ಳೆಯ ಪುಸ್ತಕಗಳ ಕೊರತೆ ಹೆಚ್ಚಾಗಿದ್ದಿತು.

ಮೊದಲನೆಯ ಪುಸ್ತಕ : ೧೯೧೫ ನೆಯ ಇಸವಿಯಲ್ಲಿ **ಸ್ವಕರ್ತವ್ಯ ಸಿದ್ಧಾಂತ** ಎಂಬ ಪುಸ್ತಕವನ್ನು ಬರೆದು ಬೆಂಗಳೂರು ಒಕ್ಕಲಿಗರ ಪ್ರೆಸ್‌ದಲ್ಲಿ ಒಂದು ಸಾವಿರ ಪ್ರತಿಗಳನ್ನು ಅಚ್ಚು ಮಾಡಿಸಿದೆನು. ಒಂದುನೂರು ರೂ. ವೆಚ್ಚವಾಯಿತು. ಇದೇ ನಾನು ಹಾಕಿದ ಬಂಡವಾಳ. ಈ ಪುಸ್ತಕವು ಬಹು ಜನಪ್ರಿಯವಾಯಿತು. ಇದಕ್ಕೆ ಎಂಟು ಅಣೆ ಕ್ರಯ ಇಟ್ಟಿದ್ದೆನು. ಒಂದು ವರುಷದಲ್ಲಿಯೇ ಇದರ ವೆಚ್ಚ ಬಂದದ್ದಲ್ಲದೆ, ಮತ್ತೊಂದು ಪುಸ್ತಕಕ್ಕೆ ಬೇಕಾಗುವಷ್ಟು ಹಣವೂ ದೊರಕಿತು. ಅದರಿಂದ ನಾನು ಈ ಕೆಲಸವನ್ನು ಹೆಚ್ಚಿಸುತ್ತಾ ಬಂದೆನು.

೧೯೧೫ರಲ್ಲಿ ನಾನು ಬೆಂಗಳೂರಿಗೆ ಹೋದಾಗ ಮಹಾತ್ಮಾಗಾಂಧೀಜಿಯವರ ದರ್ಶನವಾಯಿತು. ಸರ್. ಕೆ. ಪಿ. ಪುಟ್ಟಣ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಘನವಾದ ಸಭೆ ಸೇರಿತ್ತು. ಗಾಂಧೀಜಿಯವರ ಭಾಷಣವಾಯಿತು. ಆಗ ಗುಜರಾತಿ ಪದ್ಧತಿಯಂತೆಯೇ ಅವರ ಉಡುಪಿದ್ದಿತು.

೧೯೧೬ರಲ್ಲಿ ನಾನು ಶಿರಸಿಗೆ ಹೋಗಿದ್ದೆನು. ಅಲ್ಲಿ ಒಂದು ವಾರದಲ್ಲಿ ಬುದ್ಧಿಯ ಮಾತು ಎಂಬ ಪುಸ್ತಕವನ್ನು ಬರೆದೆನು. ಆ ಒಂದು ವಾರದಷ್ಟು ಜನರಿಗೆ ಪ್ರಯೋಜನಕಾರಿಯಾದ ನನ್ನ

ಕಾಲವು ನನ್ನ ಆಯುಷ್ಯದಲ್ಲಿ ಬೇರೆ ಯಾವ ವಾರ, ತಿಂಗಳು ಅಥವಾ ವರ್ಷವೂ ಇಲ್ಲವೆಂದು ಹೇಳಬಹುದು. ಏಕೆಂದರೆ ಆ ಪುಸ್ತಕವು ಅಷ್ಟು ಜನಪ್ರಿಯವಾಯಿತು.

ವಿರೋಧದ ಒಂದು ಗುಂಪು : ಮಠದಲ್ಲಿ ಸ್ಥಳೀಯ ವೀರಶೈವ ಸಮಾಜದ ಅನೇಕ ಕೆಲಸಗಳು ನಡೆಯುತ್ತಲೇ ಇದ್ದವು. ವೀರಶೈವ ಹಿತೋಪದೇಶಕ ಸಂಘ ಎಂಬುದಾಗಿಯೂ ಒಂದು ಸಂಘವನ್ನು ಸ್ಥಾಪಿಸಿದ್ದಾಗಿತ್ತು. ಡಾವಣಗೆರೆ ಹಿರೇಮಠದ ಕೈ ರುದ್ರಶಾಸ್ತ್ರಗಳವರು ಈ ಸಂಘದ ಕಾರ್ಯವನ್ನು ನಡೆಸುತ್ತಿದ್ದರು. ಪುರಾಣ ಮತ್ತು ವ್ಯಾಖ್ಯಾನಗಳ ಮೂಲಕ ಧಾರ್ಮಿಕ ಜಾಗೃತಿಯನ್ನುಂಟುಮಾಡುವುದೇ ಈ ಸಂಘದ ಉದ್ಧೇಶವಾಗಿತ್ತು. ಈ ಪ್ರಕಾರ ಮಠದಲ್ಲಿ ಸಾರ್ವಜನಿಕ ಕಾರ್ಯಗಳೂ ಹೆಚ್ಚಾಗುತ್ತಾ ಬಂದುದು ಮತ್ತು ನಾನು ಮುಂದೆ ಬಂದುದು? ನನ್ನ ಸ್ನೇಹಿತರಾದ ಕೈ ಮಾಗಾನಹಳ್ಳಿ ದೊಡ್ಡಬಸಪ್ಪನವರಿಗೆ ಸಹನವಾಗಲಿಲ್ಲ.

ನಾನು ಮುಂದೆ ಬರುವುದಕ್ಕಾಗಿ ಜಂಗಮರ ಹೆಚ್ಚಳವನ್ನು ಮಾಡಲಿಕ್ಕೆ ಹತ್ತಿದ್ದೇನೆಂದು ನನ್ನ ಮೇಲೆ ಅವರ ಕೋಪ. ಮಠದಲ್ಲಿಯ ಕಾರ್ಯಕ್ಕೆ ವಿರೋಧವಾಗುವ ರೀತಿಯಲ್ಲಿ ನವರಾತ್ರಿಯ ಕಾಲಕ್ಕೆ ೯ದಿನ ಅಲ್ಲಿಯ ಶ್ರೀ ಬಕ್ಕೇಶ್ವರ ಚೌಕಿಯಲ್ಲಿ ವ್ಯಾಖ್ಯಾನ ಮಾಲೆಯನ್ನು ಏರ್ಪಡಿಸಿದರು. ನನಗೂ ಅಲ್ಲಿಗೆ ವ್ಯಾಖ್ಯಾನಕ್ಕೆ ಬರಲು ತಿಳಿಸಿದರು. ನಾನು ಹೋದಾಗ ವ್ಯಾಖ್ಯಾನ ಮಾಡಲಿಕ್ಕೂ ಹೇಳಿದರು. ನನ್ನ ವಿಚಾರಸರಣಿ ಅವರಿಗೆ ಸರಿಬರಲಿಲ್ಲ. ನನಗೆ ಹೇಗಾದಗೂ ಅವಮಾನಮಾಡಬೇಕೆಂಬುದೇ ಅವರ ಉದ್ದೇಶ. ಮರುದಿನ ನಾವಿಬ್ಬರೂ ಶ್ರೀ ಬಾಳಪ್ಪನವರ ಅಂಗಡಿಯಲ್ಲಿ ಸೇರಿದೆವು. ಆಗ ನನಗೆ ಮನಬಂದಂತೆ ಬೈದರು. ನಾನೆಂದೂ ಹಾಗೆ ಬೈಸಿಕೊಂಡಿರಲಿಲ್ಲ. ಅವರ ಬೈಗಳ ಮೇಲಿಂದಲೇ ಅವರ ಉದ್ದೇಶ ಆಗ ನನಗೆ ಗೊತ್ತಾದುದು. ನಾನು ಪಿಟ್ಟೆಂದು ಮಾತನಾಡದೆ ಸಣ್ಣ ಹುಡುಗರಂತೆ ಅಳುತ್ತಾ ಮನೆಗೆ ಬಂದೆನು. ಆ ದಿನ ಮಧ್ಯಾಹ್ನ ಊಟಮಾಡಲಿಲ್ಲ.

ಮಠಕ್ಕೆ ಸ್ವಾಮಿಗಳ ದರ್ಶನಕ್ಕೆ ಹೋದೊಡನೆ ದುಃಖವನ್ನು ತಡೆಯಲಿಕ್ಕಾಗದೆ, ಅಲ್ಲಿಯೂ ಬಿಕ್ಕಿ ಬಿಕ್ಕಿ ಅತ್ತೆನು. ಅಷ್ಟರಲ್ಲಿಯೇ ಆ ಸಂಗತಿಯು ಸ್ವಾಮಿಗಳಿಗೆ ಗೊತ್ತಾಗಿದ್ದಿತು. ಆ ದಿನವೆಲ್ಲಾ ಎಲ್ಲೆಲ್ಲಿಯೂ ನನ್ನ ಪರಿಚಯದವರಲ್ಲಿ ಇದೇ ಮಾತು. ಆತನಿಗೆ ಹುಚ್ಚಾ ಎಂದು ಎಲ್ಲರೂ ಹೇಳುವುದಿಲ್ಲವೆ? ಎಲ್ಲರಿಗೂ ಹೀಗೇ ಬೈಯುತ್ತಾನೆ. ನೀವೇಕೆ ಮನಸ್ಸಿಗೆ ಹಚ್ಚಿಕೊಳ್ಳುವಿರೆಂದು ಅನೇಕರು ನನಗೆ ಸಮಾಧಾನಮಾಡಿದರು.

ಮಠದಲ್ಲಿ ವ್ಯಾಖ್ಯಾನ ಜರುಗಿದನಂತರ ಉಪಸಂಹಾರದ ಭಾಷಣಮಾಡುವುದು ಪ್ರಾಯಶಃ ನನ್ನ ಕಡೆಗೇ ಇರುತ್ತಿತ್ತು. ಅಲ್ಲಿಯ ಪೆನ್‌ಷನರ್ ಹೆಡ್‌ಮಾಸ್ತರ್ ಕೈ ಗುರುಶಾಂತಪ್ಪನವರ ಭಾಷಣವಾದ ಮೇಲೆ ನಾನು ಉಪಸಂಹಾರದ ಭಾಷಣ ಮಾಡುವಾಗ ಇವರು ಉಪದೇಶಕ್ಕೆ ಆಯೋಗ್ಯರೆಂದು ಸರಕಾರದವರು ಪೆನ್‌ಷನ್ ಕೊಟ್ಟಿದ್ದರೂ ಇವರ ಉಪದೇಶ ಪದ್ಧತಿಯು ಎಷ್ಟು ಶ್ರೇಷ್ಠತರವಾದುದಾಗಿದೆ ಯೆಂಬುದು ಸಭಿಕರಿಗೆ ಗೊತ್ತಾಗಿರಬಹುದು. ಎಂದು ಹೇಳಿದ್ದೆನು. ಅಯೋಗ್ಯ ಎಂಬ ಶಬ್ದವನ್ನು ಉಪಯೋಗಿಸಿದದು ತಪ್ಪು. ಅದನ್ನು ತಿರುಗಿ ತೆಗೆದುಕೊಂಡು ಹೆಡ್‌ಮಾಸ್ತ್‌ರ್‌ರ ಕ್ಷಮಾರ್ಪಣೆ ಕೇಳಬೇಕೆಂದು ಕೆಲವರು ತುಂಬಾ ಗಲಾಟೆ ಎಬ್ಬಿಸಿದರು. ಕೈ ದೊಡ್ಡ ಬಸವಪ್ಪನವರು ಅದಕ್ಕೆ ಮುಖಂಡರು. ನಾನು ಹೇಳಿದ್ದೇ ಸರಿಯೆಂದೂ, ಹೆಡ್‌ಮಾಸ್ತರರಿಗೆ ಕುಂದು ತರುವುದಕ್ಕಲ್ಲ; ಸರಕಾರಕ್ಕೆ ಕುಂದು ತರುವಂತೆ ಇದೆ ಎನ್ನಬಹುದೆಂದೂ ಹೀಗೆ ಹೇಳಿದ್ದರಲ್ಲಿ ಹೆಡ್ ಮಾಸ್ತ್‌ರರ

ಘನತೆಯನ್ನು ಹೆಚ್ಚಿಸುವುದೇ ನನ್ನ ಉದ್ದೇಶವೆಂದೂ ಸಭೆಯಲ್ಲಿ ವಾದಿಸಿದೆನು. ಹೀಗಿದ್ದರೂ ಅವರ ಮನಸ್ಸು ನೊಂದಿದ್ದರೆ ನಾನು ಆ ಶಬ್ದ ತಿರುಗಿ ತೆಗೆದುಕೊಂಡು, ಅವರ ಕ್ಷಮೆಯನ್ನು ಕೇಳಿಕೊಳ್ಳುತ್ತೇನೆಂತಲೂ ಹೇಳಿದೆನು. ಇದರಿಂದ ತಮಗೆ ಜಯವಾಯಿತೆಂದು ಗಲಾಟೆ ಎಬ್ಬಿಸಿದವರು ಸಮಾಧಾನಪಟ್ಟರು.

ವೀರಶೈವ ತರುಣಸಂಘ ಸ್ಥಾಪನೆ : ಕ್ರಿ. ಶ. ೧೯೧೦ರಲ್ಲಿ ನಾನು ನನ್ನ ಮೂರನೆಯ ಪುಸ್ತಕವನ್ನು ಬರೆಯಲಾರಂಭಿಸಿದೆನು. ಕೈ ಅಪ್ಪಾಸಾಹೇಬ ವಾರದ ಇವರ ಜೀವನ ಚರಿತ್ರೆಯನ್ನು ಬರೆಯಬೇಕೆಂದು ಯೋಚಿಸಿ ಅದಕ್ಕೆ ಬೇಕಾದ ಸಂಗತಿಗಳನ್ನು ಕೂಡಿಸುತ್ತಿದ್ದೆನು. ಕ್ರಿ. ಶ. ೧೯೦೯ರಲ್ಲಿ ಬಳ್ಳಾರಿಯಲ್ಲಿ ಕೂಡಿದ್ದ ವೀರಶೈವ ಮಹಾಸಭೆಗೆ ನಾನು ಹೋಗಿದ್ದೆನು. ಆಗ ಧನುರ್ಧಾರಿ ಪತ್ರಿಕೆ ಹೊರಡುತ್ತಿತ್ತು. ಅಪ್ಪಾ ಸಾಹೇಬರ ಚರಿತ್ರೆಯನ್ನು ಸಣ್ಣದಾಗಿ ಆಗಲೇ ಬರೆದು ಅಚ್ಚು ಮಾಡಿಕೊಂಡು ಪುಸ್ತಕವಾದರೆ ಒಳ್ಳೆಯದೆಂದು ಕೆಲವರು ಹೇಳಿದ್ದರು. ಅದಕ್ಕಾಗಿ ಆ ಕೆಲಸವನ್ನು ಆಗ ಪ್ರಾರಂಭಿಸಿದ್ದೆನು.

ಸೊಲ್ಲಾಪುರಕ್ಕೆ ಹೋಗಿ ಶ್ರೀಯುತ ಪಾಟೀಲ ಮಲ್ಲಿಕಾರ್ಜುನಪ್ಪನವರಿಂದ ಅನೇಕ ಸಂಗತಿಗಳನ್ನು ತಿಳಿದುಕೊಂಡೆನು. ಚರಿತ್ರೆಗೆ ಅಗತ್ಯವಾಗಿದ್ದ ಕೆಲವು ಸಂಗತಿಗಳನ್ನು ಬರೆದುಕೊಂಡು ಪುಣೆಗೆ ಹೋದೆನು. ನನ್ನ ತುಂಬಾ ಪರಿಚಯದ ಶ್ರೀ ಪುರಾಣಿಕರು ಆಗ ಕಾಲೇಜಿನಲ್ಲಿ ಕಲಿಯುತ್ತಿದ್ದರು. ಅವರನ್ನು ಕಾಣಲಿಕ್ಕೂ ಕೆಲವು ಪುಸ್ತಕಗಳನ್ನು ತರಲಿಕ್ಕೂ ಹೋಗಿದ್ದೆನು. ಇವರ ಮೂಲಕ ಶ್ರೀ ಶಿವಮೂರ್ತಿಸ್ವಾಮಿ ಹಿರೇಮಠ (ಹಾವೇರಿಯಲ್ಲಿ ಈಗ ವಕೀಲರಾಗಿರುವರು) ಶ್ರೀ ಕೇಸರಿಯವರು (ಧಾರವಾಡದಲ್ಲಿ ವಕೀಲರಾಗಿರುವರು) ನನಗೆ ತುಂಬಾ ಪರಿಚಯದವರಾಗಿದ್ದರು.

ವೀರಶೈವ ತರುಣರ ಒಂದು ಸಂಘವನ್ನು ಸ್ಥಾಪಿಸಿ, ಅದರ ಮೂಲಕ ಸಮಾಜ ಜಾಗೃತಿಯ ಕೆಲಸ ನಡೆಯಿಸಿದರೆ ಒಳ್ಳೆಯದಾಗುತ್ತದೆಂದು ಅವರಲ್ಲಿ ಪ್ರಸ್ತಾಪಿಸಿದೆನು. ಅವರೆಲ್ಲರೂ ಅದು ಒಳ್ಳೆಯದೆಂದೋ ಕ್ರೈಸ್ತರಲ್ಲಿ ಇಂಥ ತುರಣ ಸಂಘವಿದೆಯೆಂದೂ ತಿಳಿಸಿದರು. ದಾವಣಗೆರೆ ಸ್ವಾಮಿಗಳಲ್ಲಿ ಅರಿಕೆ ಮಾಡಿಕೊಂಡರೆ ಈ ಕಾರ್ಯವನ್ನು ಮಾಡಿಸುತ್ತಾರೆಂಬುದು ನನಗಂತೂ ತುಂಬಾ ನಂಬಿಕೆ. ಆದುದರಿಂದ ಇದೇ ಬಸವ ಜಯಂತಿಯ ಕಾಲಕ್ಕೆ ವೀರಶೈವ ತರುಣ ಸಮ್ಮೇಳನವನ್ನು ದಾವಣಗೆರೆಯಲ್ಲಿ ಕೂಡಿಸೋಣವೆಂದು ಅಲ್ಲಿಯೇ ನಿರ್ಧರಿಸಿದೆನು. ಸ್ವಾಮಿಗಳನ್ನು ಕೇಳಿ ಆಮೇಲೆ ತಿಳಿಸಲು ಅವಕಾಶವಿರಲಿಲ್ಲ. ಕಾಲೇಜ ವಿದ್ಯಾರ್ಥಿಗಳೆಲ್ಲಾ ಸೂಟಿಯಿಂದ ತಮ್ಮ ತಮ್ಮ ಊರಿಗೆ ಹೋಗಿಬಿಡುತ್ತಿದ್ದರು. ಆದಕಾರಣ ಪುಣೆಯಲ್ಲಿಯೇ ಇಂಗ್ಲೀಷಿನಿಂದ ಒಂದು ಪ್ರಕಟಣೆಯನ್ನು ಹೊರಡಿಸಿ ಹಂಚಿದೆವು. ಈ ಸಂಗತಿಯನ್ನು ಸ್ವಾಮಿಗಳಿಗೆ ಅರಿಕೆ ಮಾಡಿಕೊಂಡೆನು. ಊರಿಗೆ ಬಂದು ಎಲ್ಲ ಪ್ರಮುಖರಿಗೂ ತಿಳಿಸಲು ತುಂಬಾ ಸಂತೋಷಪಟ್ಟು, ಎಲ್ಲ ಸಿದ್ದತೆಗಳನ್ನು ಮಾಡಿದರು. ಕೈ ಪಲ್ಲಾಗಟ್ಟಿ ಗುರುಸಿದ್ದಪ್ಪನವರು ಈ ಕಾರ್ಯದಲ್ಲಿ ಬಹು ಮುಂದಾಳುಗಳಾಗಿದ್ದರು.

ಕೈ ಧಾರವಾಡದ ಹೊನ್ನಾಪುರಮಠ ವಕೀರಲು ನನಗೆ ಮೊದಲಿನಿಂದಲೂ ಪರಿಚಯ. ಅವರು ಉದಾರ ವಿಚಾರಿಗಳೂ ಒಳ್ಳೇ ವ್ಯಾಖ್ಯಾತರೂ ಆಗಿದ್ದರು. ಆದುದರಿಂದ ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಲು ಅವರಿಗೆ ಬರೆದುಕೊಂಡೆನು. ಅವರು ಸಂತೋಷದಿಂದ ಒಪ್ಪಿಕೊಂಡರು. ೧೯೧೦ನೆಯ ಇಸವಿ ಬಸವ ಜಯಂತಿಯ ದಿನ ವೀರಶೈವ ತರುಣ ಸಮ್ಮೇಳನವು ದಾವಣರೆಗೆಯಲ್ಲಿ ಬಹು ಪರಿಣಾಮಕಾರಿಯಗಿ ಜರುಗಿತು. ಈ ಕಾರ್ಯದಲ್ಲಿ ತನ್ನ ವಿರುದ್ಧವಾಗಿದ್ದ ಕೆಲವು ತರುಣರು

ಮುಂದಾಳುಗಳಾಗಿ ಬರಲಿಲ್ಲ. ಅವರಿಗೆ ನಾನು ಕೆಲವು ತರುಣರನ್ನೇ ಮುಂದೆ ತರುತ್ತಿದ್ದೇನೆಂಬ ಕಲ್ಪನೆ. ಇದರಿಂದ ನನ್ನ ವಿರುದ್ಧ ಗುಂಪು ಹೆಚ್ಚಿತು.

ಮಹಾಸಭೆಯ ಕಾರ್ಯ : ವರ್ಷಕ್ಕೊಂದು ಪುಸ್ತಕವನ್ನು ಪ್ರಕಟಮಾಡಬೇಕೆಂದು ಗೊತ್ತುಮಾಡಿದಂತೆ. ೧೯೧೦ರಲ್ಲಿ ಅಪ್ಪಾಸಾಹೇಬರ ಚರಿತ್ರೆಯನ್ನು ಬರೆದು ಶಿರಸಿಯ ನಮ್ಮ ಸುಭೋದಿನಿ ಪ್ರೆಸ್ಸಿನಲ್ಲಿಯೇ ಅಚ್ಚು ಮಾಡಿಸಿದೆನು. ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾ ಸ್ವಾಮಿಗಳವರ ಅಪ್ಪಣೆಯ ಪ್ರಕಾರ ದಾವಣಗೆರೆಯಲ್ಲಿ ೮ನೆಯ ವೀರಶೈವ ಮಹಾಸಭೆ ಜರುಗುವುದು ನಿರ್ಧಾರವಾಯಿತು. ಈ ಕಾರ್ಯದಲ್ಲಿ ನಾನೂ ಒಬ್ಬ ಮುಂದಾಳಾಗಿಯೇ ಇದ್ದೆನು. ಸ್ಥಳೀಯ ಪ್ರಮುಖರೊಂದಿಗೆ ನಾನೂ ನನ್ನ ಕೆಲಸವನ್ನು ಮಾಡುತ್ತಿದ್ದೆನು. ಇದು ನನ್ನ ವಿರುದ್ದವಾದ ಗುಂಪಿಗೆ ತುಂಬಾ ಅಸೂಯೆ. ಸ್ಥಳೀಯ ಪ್ರಮುಖರೇನೂ ಅವರ ಮಾತಿಗೆ ಲಕ್ಷಿಸಲಿಲ್ಲ.

ಸ್ವಾಗತ ಮಂಡಲದಲ್ಲಿ ನನ್ನ ಹೆಸರನ್ನು ಹಾಕಬಾರದಾಗಿ ಕೆಲವರು ಪ್ರಯತ್ನಿಸುತ್ತಿದ್ದಾರೆಂದು ನನಗೆ ಗೊತ್ತಾಯಿತು. ಆದುದರಿಂದ ಸ್ವಾಗತ ಮಂಡಲವು ಏರ್ಪಡುವ ದಿನ ನಾನು ಮಠಕ್ಕೆ ಹೋಗಲಿಲ್ಲ. ನನ್ನ ಹೆಸರನ್ನು ಹಾಕಬಾರದೆಂದೇ ನಿರ್ಧಾರವಾಯಿತು. ಅದು ಕೆಲವರಿಗೆ ಬಹು ವಿಷಾದಕರ. ಮಧ್ಯರಾತ್ರೆಯಲ್ಲಿಯೇ ನನ್ನ ಕಡೆ ಬಂದು ಈ ಸಂಗತಿಯನ್ನು ಬಹು ವಿಷಾದದಿಂದ ತಿಳಿಸಿ, ತಾವು ಕೆಲವರು ಮಹಾಸಭೆಯ ಕಾರ್ಯದಲ್ಲಿ ಸೇರುವುದಿಲ್ಲವಾಗಿ ಸೂಚಿಸಿದರು. ನಾನು ಮಾಹಸಭೆಯ ಕಾರ್ಯದಲ್ಲಿ ಬರಬಾರದೆಂದೇ ನನ್ನ ವಿರೋಧಿಗಳ ಉದ್ಧೇಶ. ನಾವು ಹಾಗೆ ಮಾಡಿದರೆ ಅವರ ಉದ್ದೇಶ ನೆರೆವೇರಿದಂತಾಯಿತು. ನಾವು ಕೆಲಸದಲ್ಲಿ ಸೇರಲೇಬೇಕು. ಯಾರಾದರೂ ಬೇಡವೆಂದು ಹೇಳುವರೋ ಹೇಗೆ ನೋಡೋಣ – ಎಂದು ನಾನು ಅವರಿಗೆ ಸಮಾಧಾನ ಹೇಳಿ ಮರುದಿನ ಮಠಕ್ಕೆ ಹೋದೆನು. ಪ್ರಮುಖರಲ್ಲಿ ಯಾರಿಗೂ ಅದು ಒಪ್ಪಿಗೆಯಾಗಿರಲಿಲ್ಲ. ವೃಥಾ ಒಂದು ಪಂಗಡವನ್ನು ಉಂಟುಮಾಡಬಾರದೆಂದೇ ಅವರ ಮಾತಿಗೆ ಒಪ್ಪಿದ್ದರು. ಸ್ವಾಗತಮಂಡಲದಲ್ಲಿ ನನ್ನ ಹೆಸರು ಹಾಕಿದ್ದರೆ ಎಷ್ಟು ಕೆಲಸವನ್ನು ಮಾಡಬಹುದಾಗಿತ್ತೋ ಅದಕ್ಕೂ ಹೆಚ್ಚಾಗಿಯೇ ನಾನು ಕೆಲಸಮಾಡಿದೆನು. ಪ್ರಮುಖರೆಲ್ಲರೂ ನನ್ನಿಂದ ಆಗತಕ್ಕ ಎಲ್ಲ ಕೆಲಸಗಳನ್ನೂ ಮಾಡಿಸಿದರು.

ಬೇರೆ ಕಾರ್ಯಗಳು : ನಾನು ಸಾರ್ವಜನಿಕ ಕಾರ್ಯದವನೆಂದು ಊರಲ್ಲಿ ಎಲ್ಲರಿಗೂ ಗೊತ್ತು. ಎಲ್ಲ ಸಮಾಜದವರಿಗೆ ಸಂಬಂಧಿಸಿರುವ ಒಂದು ಕಾರ್ಯವನ್ನೂ ಏರ್ಪಡಿಸಿದೆನು. **'ಜ್ಞಾನ ಪ್ರಸಾರಕ ಸಂಘ'** ಎಂಬ ಒಂದು ಸಂಘವನ್ನು ಸ್ಥಾಪಿಸಿ ಎಲ್ಲರನ್ನೂ ವಿಶೇಷವಾಗಿ ತರುಣರನ್ನು ಕೂಡಿಸಿ ಬೇರೆ ಬೇರೆ ವಿಷಯಗಳ ಸಂಬಂಧವಾಗಿ ವ್ಯಾಖ್ಯಾನ ಮತ್ತು ಸಂಭಾಷಣೆಗಳು ಜರುಗುವಂತೆ ಮಾಡಿದೆನು. ಮರಾಠಿ ವರ್ತಮಾನ ಪತ್ರಿಕೆ ಮತ್ತು ಪುಸ್ತಕಗಳನ್ನು ಓದುವಷ್ಟು ಮರಾಠಿಯನ್ನು ತರುಣರಿಗೆ ಕಲಿಸಲು ಶ್ರೀ ಶಿವಯೋಗಿಶ್ವರ ಮರಾಠಿ ಶಾಲೆಯನ್ನು ಏರ್ಪಡಿಸಿ ಶ್ರೀ ನಾರಾಯಣರಾವ ಶರ್ಮಾ ಇವರನ್ನು – ಅಧ್ಯಾಪಕರನ್ನಾಗಿ ಗೊತ್ತುಮಾಡಿದ್ದೆನು. ಇದು ಬಹು ದಿನ ನಡೆಯಲಿಲ್ಲ. ದಾವಣಗೆರೆ ಸ್ವಾಮಿಗಳು ಧಾರವಾಡದಲ್ಲಿ ಬೋರ್ಡಿಂಗ್ ಸ್ಥಾಪಿಸುವುದು ಗೊತ್ತಾಗಿ ಆ ಕಾರ್ಯ ನಡೆದಿತ್ತು. ಅವರ ಅಪ್ಪಣೆಯಂತೆ ಅಲ್ಲಿಯ ಕಾರ್ಯಕ್ಕೂ ಹೋಗುತ್ತಿದ್ದೆನು. ಸ್ವಾಮಿಗಳು ಕೂಡಾ ಮಹಾಸಭೆಯನಂತರ ಧಾರವಾಡದ ಕಾರ್ಯದ ಕಡೆಗೇನೇ ಹೆಚ್ಚು ಗಮನಿಸಿದರು.

ನಾನು ಸಚ್ಚಿದಾನಂದ ಪ್ರೆಸ್ ಕೂಡಾ ೪೦೦ ರೂ. ಗಳಿಗೆ ಮಾರಿ ಶ್ರೀ ಬೊಂದಾಡೆಯವರಿಗೆ ರೂ. ಗಳನ್ನು ಕೊಟ್ಟೆನು. ಕೇವಲ ಪುಸ್ತಕ ಬರೆಯುವದೊಂದೇ ಉದ್ಯೋಗ. ಪುಸ್ತಕಗಳನ್ನು ಮಾರುವುದರಿಂದ ಬರುವ ಆದಾಯವೇ ಜೀವನಕ್ಕೆ ಆಧಾರ. ಸ್ಥಳಾಂತರದ ವಿಚಾರಗಳು ೧೯೧೮ರಲ್ಲಿ ಹೆಚ್ಚು. ಜ್ಞಾನ ಪ್ರಸಾರಕ ಸಂಘದಿಂದ ಗಾಂಧೀಜಿಯವರ ವರ್ಧಂತ್ಯುತ್ಸವವನ್ನು ಪ್ರಾರಂಭಿಸಿದೆನು. ದಿವಂಗತ ತವನಪ್ಪನವರ ದೇವೆಂದ್ರಪ್ಪನವರು ಮತ್ತು ಲಕ್ಷ್ಮಣರಾವ ಶಿರೂರು ಈ ಉಭಯ ಪ್ರಸಿದ್ಧ ವರ್ತಕರು ಈ ಕಾರ್ಯಕ್ಕೆ ತುಂಬಾ ಸಹಾಯಕರು. ೧೯೧೮ರಲ್ಲಿ ಬೀರೂರು ವೀರಶೈವ ಮಹಾಸಭೆಗೆ ಹೋಗಿದ್ದರೂ ನಾನು ಅಲ್ಲಿ ಯಾವ ಕಾರ್ಯವನ್ನೂ ವಹಿಸಲಿಲ್ಲ. ದಾವಣಗೆರೆಯವರಾದ ನಾವು ವಿರೋಧ ಪಕ್ಷದವರೇ ಆಗಿದ್ದೆವು.

ಮಹಾಯುದ್ಧದಿಂದ ಕಾಗದದ ಬೆಲೆ ವಿಪರೀತ ಹೆಚ್ಚಾಗಿತ್ತು. ಆದುದರಿಂದ ೧೯೧೮ರಲ್ಲಿ ಒಂದು ಚಿಕ್ಕ ಪುಸ್ತಕವನ್ನು ಬರೆದೆನು. ವರ್ಷಕ್ಕೊಂದು ಪುಸ್ತಕ ಪ್ರಕಟವಾಗುವ ಪದ್ಧತಿ ತಪ್ಪಬಾರದೆಂದೇ ಅದನ್ನು ಪ್ರಕಟಿಸಿದ್ದು, ಜರ್ಮನಿಯ ಕಡೆಗೇನೇ ಜನರ ಒಲವು ಹೆಚ್ಚಿದ್ದುದರಿಂದ ಆಧುನಿಕ ಜರ್ಮನಿ ಎಂಬ ಹೆಸರಿನ ಕೈಸರರ ಸಂಕ್ಷಿಪ್ತ ಚರಿತ್ರೆ ಮತ್ತು ಜರ್ಮನಿಯ ಬೇರೆ ಕೆಲವು ಸಂಗತಿಗಳುಳ್ಳ ಪುಸ್ತಕವನ್ನು ಬೆಳಗಾವಿ ಮಹಾವೀರ ಮುದ್ರಣಾಲಯದಲ್ಲಿ ಮುದ್ರಿಸಿ ಪ್ರಕಟಿಸಿದೆನು.

❖❖

ಸತ್ಯಾಗ್ರಹ ತತ್ವಪ್ರಸಾರ

(ಕ್ರಿ. ಶ. ೧೯೧೯- ೧೯೨೩)

ಕ್ರಿ. ಶ. ೧೯೧೫ರಲ್ಲಿ ಧನುರ್ಧಾರಿ ಪತ್ರಿಕೆಯನ್ನು ನಿಲ್ಲಿಸಿದರು. ೧೯೧೭ರಲ್ಲಿ ಮುದ್ರಣಾಲಯವನ್ನು ತೆಗೆದರು. ನನಗೆ ರಾಷ್ಟ್ರ ಕಾರ್ಯದ ಕಡೆಗಿದ್ದ ಅಭಿರುಚಿಯೇನೂ ಹೋಗಿರಲಿಲ್ಲ. ಸಾಂಪತ್ತಿಕ ಅನಾನುಕೂಲಗಳಿಂದಲೇ ಅವುಗಳನ್ನು ನಿಲ್ಲಿಸಿ ಗ್ರಂಥರಚನೆಯೊಂದರಿಂದಲೇ ಕಾಲಕ್ಷೇಪ ಮಾಡುತ್ತಿದ್ದೆನು. ೧೭೧೭ರಲ್ಲಿ ಬಿಜಂಟ್ ಅಮ್ಮನವರು ಹೂಡಿದ್ದ ಹೋಮ್ ರೂಲ್ ಚಟುವಟಿಕೆಯು ನನಗೆ ಎಷ್ಟೋ ಹುರುಪು ಕೊಟ್ಟಿತ್ತು. ಆದರೂ ನನಗೆ ಹುರುಪಿನತಕ್ಕ ಅನುಕೂಲವಿರಲಿಲ್ಲ.

ನಾನು ಆಗ ದಾವಣಗೆರೆಯವನೇ ಆಗಿಹೋಗಿದ್ದೆನು. ಆ ಊರನ್ನು ಬಿಟ್ಟು ಬೆಂಗಳೂರಿಗೆ ೧೯೧೯ರಲ್ಲಿ ಹೋಗುವ ವಿಚಾರವುಂಟಾಯಿತು. ಕೈ ಎಂ. ಬಸವಯ್ಯನವರ ನೇತೃತ್ವದಲ್ಲಿ ಪತ್ರಿಕೆ ಹೊರಟರೆ ಸಹಾಯಮಾಡುವುದಾಗಿಯೂ ಕೆಲವರು ಹೇಳಿದರು. ನನಗೆ ಅವರ ಬ್ರಾಹ್ಮಣೇತರ ಚಟುವಟಿಕೆ ಸಮ್ಮತವಿರಲಿಲ್ಲ

ಶ್ರೀ ಬಾಳಪ್ಪನವರು ತಮ್ಮ ಬಂಗಲೆಯ ಹತ್ತಿರ ನನಗಾಗಿಯೇ ಒಂದು ಚಿಕ್ಕ ಬಂಗಲೆಯನ್ನೇ ಕಟ್ಟಿಸಿದರು. ಅದಕ್ಕೆ ಈಗಲೂ ನನ್ನ ಹೆಸರು! ನಾನೂ ಅವರ ಮನೆತನದ ೩೦-೪೦ ಜನರಲ್ಲಿ ಒಬ್ಬನಾಗಿದ್ದೆನು. ಮೈಸೂರು ಪ್ರಾಂತದಲ್ಲಿಯೇ ನಾನು ವಾಸವಾಗಿದ್ದುದರಿಂದ ಬ್ರಿಟಿಷ್ ರಾಜಕಾರಣದ ಪರಿಣಾಮವು ಮೊದಲಿನಂತೆ ಮನಸ್ಸಿನಮೇಲೆ ಪ್ರತ್ಯಕ್ಷವಾಗಿ ಮೂಡುತ್ತಿರಲಿಲ್ಲ. ೧೯೧೯ರಲ್ಲಿ ಮಹಾತ್ಮ ಗಾಂಧಿಯವರ ಚಟುವಟಿಕೆಯು ಪ್ರಾರಂಭವಾಯಿತು. ಆಗ ನಾನು ಅವರ ಜೀವನ ಚರಿತ್ರೆ ಮತ್ತು ಕೆಲವು ವ್ಯಾಖ್ಯಾನಗಳ ಒಂದು ಪುಸ್ತಕವನ್ನು ಬರೆದು ಪ್ರಕಟಿಸಿದೆನು. ಅದು ಕೂಡಾ ಬಹುಜನಪ್ರಿಯವಾಯಿತು.

ನನ್ನ ಯಾವ ಪುಸ್ತಕಗಳೂ ಮೂಲೆಗೆ ಬೀಳದೆ ಲಾಭದಾಯಕವಾಗಿಯೇ ಪರಿಣಮಿಸಿದವು. ವರ್ಷಕ್ಕೆ ಒಂದು ಹೊಸ ಪುಸ್ತಕವನ್ನು ಪ್ರಕಟಿಸುವ ನನ್ನ ಉದ್ದೇಶವು ನಿರಾತಂಕವಾಗಿ ಸಾಗಿತ್ತು. ಆ ಪುಸ್ತಕಗಳ ವಿಕ್ರಯದಿಂದಲೇ ನನ್ನ ಮತ್ತು ನನ್ನ ತಾಯಿಯ ಜೀವನ ನಡೆಯುತ್ತಿತ್ತು. ಇದು ನನ್ನ ಕೆಲವು ಹಿತಚಿಂತಕರಿಗೆ ಸರಿತೋರಲಿಲ್ಲ. ಇಷ್ಟು ಬಡತನದಿಂದ ಹೀಗೇಕೆ ಜೀವಿಸುವುದು? ಅಂಗಡಿಯಲ್ಲಿ ನಿಮ್ಮ ಪಾಲು ಇಡುತ್ತೇವೆ. ಪ್ರತಿನಿತ್ಯ ಅಂಗಡಿಯಲ್ಲಿ ೪-೬ ತಾಸು ಕೆಲಸಮಾಡಿದರೆ ಸಾಕು. ವರುಷಕ್ಕೆ ನಿಮ್ಮ ಪಾಲಿಗೆ ಒಂದು ಸಾವಿರ ರೂ. ಕಟ್ಟಿಟ್ಟ ಗಂಟು ಎಂದು ಹೇಳುತ್ತಿದ್ದರು. ಹೀಗೆ

ಹೇಳಿ ಆಗ್ರಹಮಾಡಿದವರಲ್ಲಿ ಕೈ ಅಂಗಡಿ ಬಸಪ್ಪನವರು ನೆಗಳೂರು ಇವರು ಪ್ರಮುಖರು. ನನಗೆ ವ್ಯಾಪಾರ ಮೊದಲಾದ ಹಣಗಳಿಸುವ ಉದ್ಯೋಗ ಬೇಕಾಗಿರಲಿಲ್ಲ. ವರುಷಕ್ಕೆ ನೂರಾರು ರೂ. ದೊರೆಯುತ್ತಿದ್ದ ಪುಸ್ತಕ ಬರೆಯುವ ಕೆಲಸವೇ ಬಹು ಪ್ರಿಯವಾಗಿತ್ತು.

ಮುಖ ಮತ್ತು ಕೈಗಳನ್ನು ನೋಡಿ ಜನ್ಮದಿನವನ್ನು ಕಂಡು ಹಿಡಿದು ಜಾತಕ ಬರೆಯುವ ಕೈ. ರಾಮಕೃಷ್ಣ ಜೋಯಿಸಿ ಎಂಬ ಅರೆಪಂಚಾಂಗದ ಒಬ್ಬ ಜ್ಯೋತಿಷ್ಯಜ್ಞರು ೧೯೧೯ರಲ್ಲಿ ಬಂದಿದ್ದರು. ನನಗೆ ಫಲ ಜ್ಯೋತಿಷ್ಯದಲ್ಲಿ ಎಳ್ಳಷ್ಟೂ ವಿಶ್ವಾಸವಿರಲಿಲ್ಲ. ಅವರು ನನ್ನ ಮುಖ ಮತ್ತು ಕೈಗಳನ್ನು ನೋಡಿ ನನ್ನ ಜಾತಕವನ್ನು ಬರೆದರು. ನನಗೆ ಕೆಲವು ಲಕ್ಷಣಗಳನ್ನು ಕೂಡ ಹೇಳಿಕೊಟ್ಟರು. ನಾನು ಆ ಪ್ರಕಾರ ಪರೀಕ್ಷಿಸಲು ಅವು ನಿಜವಾದವು. ಆದುದರಿಂದ ನನ್ನ ವಿಚಾರದಲ್ಲಿಯೇ ಎಷ್ಟೊ ವ್ಯತ್ಯಾಸವಾಯಿತು. ಮನುಷ್ಯನ ಜನನವು ಇಂತಹ ದಿನ ಇಷ್ಟು ಹೊತ್ತಿಗೇನೇ ಆಗಬೇಕೆಂದು ಮುಂಚೆಯೇ ಗರ್ಭದಲ್ಲಿ ನಿಶ್ಚಯವಾಗಿ ಆ ಪ್ರಕಾರ ರೇಖೆಗಳುಂಟಾಗುತ್ತವೆಯೇ? ಹಾಗಾದರೆ ಮರಣಕ್ಕೂ ಸಂಬಂಧವಿರಬೇಕಾಯಿತೆ? ಎಂಬ ಯೋಚನೆಯುಂಟಾಯಿತು. ತಾ. ೧೫-೦೨-೧೯೧೯ ನೆಯ ದಿವಸ ನನ್ನ ಜಾತಕವನ್ನು ಈ ಪ್ರಕಾರ ನಿಶ್ಚಯಿಸಿಕೊಟ್ಟರು.

ತಾ. ೧೮-೦೨-೧೮೮೬ ಮಾಘ ಶು. ೧೫ ಗುರುವಾರ

ರಾತ್ರಿ ೯॥ ಗಂಟೆ

			ಶ.
ಬು.ಶು. ರ.ಕೇ.			
			ರಾ.ಚ.
		ಲ.	ಕು.ಗು.

ಇದು ನನ್ನ ಜನ್ಮ ದಿನಕ್ಕೆ ಸಂಪೂರ್ಣ ಸರಿಯಾದುದು. ಆಗ ನನ್ನ ಸಂಬಂಧವಾಗಿ ೨೧ ಸಂಗತಿಗಳನ್ನು ಅವರು ಹೇಳಿದ್ದರು. ಅವುಗಳಲ್ಲಿ ಈ ಮುಂದಿನವು ಮುಖ್ಯವಾದವುಗಳು.

(೧) ಲಗ್ನವಾಗುವುದೇ ಇಲ್ಲ (೨) ೪೦ನೆಯ ವರುಷದಲ್ಲಿ ಕಾರಾಗೃಹವಾಸ (೩) ೪೦ನೆಯ ವರುಷದ ಕೊನೆಗೆ ಮಾತೃವಿಯೋಗ (೪) ಆಮೇಲೆ ಒಬ್ಬ ಪೂಜ್ಯ ಗುರೂಪದೇಶದಿಂದ ಸನ್ಯಾಸ ಸ್ವೀಕಾರ, (೫) ಆ ಮೇಲೆ ಮಂಗಳದೇಶೆಯಲ್ಲಿ ಕ್ಷೇತ್ರಪರ್ಯಟನೆ, ಪರ್ವತ ಗುಡ್ಡಗಳ ವಾಸ. ಇವೆಲ್ಲ ನನಗೆ ನಿಜವಾಗಿ ತೋರದಿದ್ದರೂ ಅವರು ಹೇಳಿದ ಇನ್ನಿತರ ಸಂಗತಿಗಳ ಮೇಲಿಂದ ಎಷ್ಟೊ ಸಂಶಯಕ್ಕೆ ಮಾತ್ರ ಅವಕಾಶವಾಯಿತು. ಮನುಷ್ಯನು ತನ್ನ ಭವಿಷ್ಯವನ್ನು ತಿಳಿದುಕೊಳ್ಳಲಿಕ್ಕಾಗಿಯೂ ಅನೇಕ ಕಾಲದಿಂದ ಪ್ರಯತ್ನಿಸುತ್ತಾ ಬಂದದ್ದರ ಗುರುತೇ ಈ ಶಾಸ್ತ್ರವಾಗಿದೆ. ಇದರಲ್ಲಿ ಎಷ್ಟಾದರೂ ಸತ್ಯ ಸಂಗತಿಗಳಿರಬೇಕೆಂದೇ ನನಗೆ ತೋರಿತು. ಇನ್ನೂ ೫-೬ ವರುಷ ಮರಣವೇನೂ ಇಲ್ಲವೆಂದೇ ತಾಯಿಯವರಿಗೆ ಹೇಳುತ್ತಾ ನಾನು ಅವರಿಗೆ ಸಮಾಧಾನಪಡಿಸುತ್ತಿದ್ದೆನು.

ಖಾದಿ ಚಟುವಟಿಕೆ : ೧೯೨೦ರಲ್ಲಿ ಗಾಂಧೀಜಿಯವರ ಅಸಹಕಾರ ಚಟುವಟಿಕೆಯು ಅದ್ಭುತವಾಗಿ ಪ್ರಾರಂಭವಾಯಿತು. ಮೈಸೂರು ಪ್ರಾಂತದವರಾದ ನಮಗೆ ಖಾದಿಯ ವಿನಾ ಇನ್ನಾವ ವಿಷಯಗಳೂ ಸಂಬಂಧಿಸಿರಲಿಲ್ಲ. ಗಾಂಧೀಜಿಯವರನ್ನು ಧಾರ್ಮಿಕ ಮಹಾ ಪುರುಷರೆಂದೇ ನಾನು ತಿಳಿದುಕೊಂಡು ಅವರ ತತ್ವಗಳನ್ನು ಅಧ್ಯಯನ ಮಾಡುತ್ತಿದ್ದೆನು. ದಾವಣಗೆರೆ ಜ್ಞಾನಪ್ರಸಾರಕ ಸಂಘದ ಪರವಾಗಿ ಖಾದಿ ಚಟುವಟಿಕೆಯನ್ನು ಪ್ರಾರಂಭಿಸಿದೆನು. ಈ ಕಾರ್ಯದಲ್ಲಿ ಕೈ ಶಿರೂರು ಲಕ್ಷ್ಮಣರಾಯರು ಬಹು ಮುಂದಾಳುಗಳಾಗಿ ಬಂದರು. ಇವರು ಅಲ್ಲಿಯ ಪ್ರಸಿದ್ಧ ವರ್ತಕರಿದ್ದುದರಿಂದ ಹೆಚ್ಚು ಪರಿಣಾಮಕಾರಿಯಾಯಿತು.

೧೯೨೦ನೆಯ ಆಗಷ್ಟ ೧ನೆಯ ತಾರೀಖಿನ ದಿವಸ ನಾನು ಗಿರಣಿಯ ಎಲ್ಲ ಬಟ್ಟೆಗಳನ್ನೂ ಬಿಟ್ಟು ಖಾದಿಯನ್ನೇ ಧರಿಸಲಾರಂಭಿಸಿದೆನು. ಶ್ರೀ ಬಾಳಪ್ಪನವರೂ ಖಾದಿಯ ಭಕ್ತರಾದರು. ಅಂದು ಗಾಂಧೀಜಿಯವರು ಅಸಹಕಾರ ಪ್ರಾರಂಭಿಸಿದರು. ದಾವಣಗೆರೆಯಲ್ಲಿಯೂ ಶಿರೂರು ಲಕ್ಷ್ಮಣರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪರದೇಶಿ ಬಟ್ಟೆ ಸುಡುವ ಸಮಾರಂಭ ಜರುಗಿತು. ಬಟ್ಟೆಯನ್ನು ಸುಡಬೇಕೆಂಬ ಗಾಂಧೀಜಿಯವರ ಅಭಿಪ್ರಯ ನನಗೆ ಮಾನ್ಯವಿರಲಿಲ್ಲ. ಆದುದರಿಂದ ನಾನು ಸುಡಲಿಕ್ಕೆ ಕೊಡದೆ ಬಡವರಿಗೆ ಕೊಟ್ಟು ಬಿಟ್ಟೆನು. ದೀನಬಂಧು ಆಂಡ್ರ್ಯೋಜ್‌ರವರು ಸುಡಬಾರದಾಗಿ ಹೇಳುತ್ತಿದ್ದ ಅಭಿಪ್ರಾಯವೇ ನನಗೆ ಒಪ್ಪಿಗೆಯಾಗಿತ್ತು.

ಶಿರಸಿಯಲ್ಲಿದ್ದ ಸುಬೋಧಿಸಿ ಮುದ್ರಣಾಲಯವನ್ನು ೧೯೨೦ರಲ್ಲಿ ಅಣ್ಣನವರು ಹುಬ್ಬಳ್ಳಿಗೆ ತರಲು ನಿಶ್ಚಯಿಸಿದರು. ಅಲ್ಲಿ ಅದನ್ನು ಲಿಂಗರಾಜ ಮುದ್ರಣಾಲಯವೆಂಬ ಹೆಸರಿನಿಂದ ಇಟ್ಟದ್ದಾಯಿತು. ಆಗ ಕೆಲವು ದಿನ ಅಲ್ಲಿಯೇ ಇರುವ ಪ್ರಸಂಗ ಬಂದಿತು. ನನಗೆ ಸ್ಟೌವ್ ಹಚ್ಚುವುದು ಗೊತ್ತಿಲ್ಲ. ಅನ್ನ ಮಾಡಿಕೊಳ್ಳಲು ಅದು ಅನುಕೂಲವೆಂದು ಅದಕ್ಕೆ ಬೆಂಕಿ ಹಚ್ಚುವಾಗ ಒಮ್ಮೆಲೆ ಭಯಂಕರ ಉರಿ ಎದ್ದಿತು. ನನ್ನ ಮುಖಸುಟ್ಟು ಅನರ್ಥವಾಗುವಂತಿತ್ತು. ಆದರೆ ಏನೂ ಅಪಾಯ ಸಂಭವಿಸಲಿಲ್ಲ. ಆ ವರುಷ **'ಆರೋಗ್ಯ ಜೀವನ'** ಎಂಬ ಲಂಘನ ಚಿಕಿತ್ಸಾ ಪ್ರಾಧಾನ್ಯವಾದ ಪುಸ್ತಕವನ್ನು ಬರೆದು ಪ್ರಕಟಿಸಿದೆನು. ಅದು ಕೂಡಾ ಬಹು ಜನಪ್ರಿಯವಾಯಿತು.

೧೯೨೦ರಲ್ಲಿ ಬ್ರಾಹ್ಮಣೇತರ ಚಟುವಟಿಕೆಯ ಕರ್ನಾಟಕದಲ್ಲಿ ಹೆಚ್ಚು. ವೀರಶೈವ ಸಮಾಜವೇ ಅದಕ್ಕೆ ಮುಂದಾಳಾಗಿ ನಿಂತಿತ್ತು. ಹುಬ್ಬಳ್ಳಿಯಲ್ಲಿ ಬ್ರಾಹ್ಮಣೇತರ ಪ್ರಚಂಡ ಸಭೆಸೇರಿತ್ತು. ಆಗ ನಾನು ಅಲ್ಲಿಯೇ ಇದ್ದರೂ ಆ ಸಭೆಗೆ ಹೋಗಲಿಲ್ಲ. ಜಾತಿ ವಿಶಿಷ್ಟವಾದ ಇಂಥ ರಾಜಕೀಯ ಸಭೆಯು ಇರಬಾರದೆಂದೇ ನನ್ನ ತಿಳುವಳಿಕೆ. ಖಾದಿಯ ವಿಷಯದಲ್ಲಿಯೂ ವೀರಶೈವ ಸಮಾಜ ವಿರೋಧವಾಗಿತ್ತು. ಅದು ಬ್ರಾಹ್ಮಣರ ಚಟುವಟಿಕೆಯೆಂದೇ ವೀರಶೈವ ಸಮಾಜದ ಪ್ರಮುಖರು ಸಾರುತ್ತಿದ್ದರು. ನನ್ನನ್ನೂ ಬ್ರಾಹ್ಮಣರ ಗುಂಪಿಗೆ ಸೇರಿಸಿದ್ದರು. ನಾನು ಖಾದಿಯ ಭಕ್ತನು. ಅಂಗಿಯನ್ನು ಕೂಡ ಹಿಂದಿನ ಪದ್ಧತಿಯಂತೆ (ಕಂಠಿಕಮಾನ–ಕಸಿಯ ನಿಲುವಂಗಿ) ಹೊಲಿಸಿದ್ದೆನು. ಕಂಬಳಿಯ ಟೊಪ್ಪಿಗೆಯನ್ನು ಮಾಡಿಸಿ ಹಾಕಿಕೊಳ್ಳುತ್ತಿದ್ದೆನು. ಬಿಳಿಯ ಟೊಪ್ಪಿಗೆಯನ್ನು ಎಂದೂ ಹಾಕಿಕೊಳ್ಳಲಿಲ್ಲ.

ನಾನು ಖಾದಿ ಚಟುವಟಿಕೆ ಮಾಡುತ್ತಿದ್ದುದನ್ನು ನೋಡಿ ನನ್ನ ತಾಯಿಯವರಿಗೆ ಸಮಾಧಾನವಿಲ್ಲ. ಎಲ್ಲಿ ಸರಕಾರದವರು ನನ್ನನ್ನು ಹಿಡಿಯುವರೋ ಎಂದು ಅವರಿಗೆ ಭಯ. ದೇವರು ತನ್ನ ಕಣ್ಣು ಮುಚ್ಚುವದಿಲ್ಲವಲ್ಲಾ! ಎಂದು ಅವರು ಹಂಬಲಿಸುತ್ತಿದ್ದುದು. ನನಗಾದರೂ ಅಷ್ಟೇ ಬೇಕಾಗಿತ್ತು.

ತಾಯಿಯ ಮೇಲೆ ಭಕ್ತಿಯಿಲ್ಲವೆಂದಲ್ಲ. ಹೆಚ್ಚಾದ ಭಕ್ತಿಯಿಂದಲೇ ನನಗೆ ಹಾಗೇ ಅನಿಸುತ್ತಿತ್ತು. ನಾನು ಅವರ ಕಣ್ಣು ಮುಂದೆ ಸತ್ತರೆ ಅವರಿಗೆ ಮಹಾ ವ್ಯಥೆಯಾಗುತ್ತದೆಂದು ಊರಲ್ಲಿ ಪ್ಲೇಗ ಪ್ರಾರಂಭವಾದೊಡನೆ ಮೈಲಿ ಚುಚ್ಚಿಸಿಕೊಳ್ಳುತ್ತಿದ್ದೆನು. ೧೯೧೩ರಲ್ಲಿ ನನ್ನ ಪ್ರಿಯ ನಾಗಪ್ಪನು ಮೃತಪಟ್ಟಮೇಲೆ ಈ ವಿಷಯದಲ್ಲಿ ಬಹು ಎಚ್ಚರಿಕೆಯಿಂದಿದ್ದೆನು.

ಒಂದು ಸಾರೆಯಲ್ಲ; ನಾಲ್ಕೈದು ಸಾರೆ ಹೀಗೆ ಮೈಲಿ ಚುಚ್ಚಿಸಿಕೊಳ್ಳಬೇಕಾಯಿತು. ಒಮ್ಮೆ ಮೈಲಿ ಚುಚ್ಚಿಸಿಕೊಂಡಾಗಲೇ ನೀರನ್ನು ಸೇದಿದ್ದರಿಂದ ಎಡಗೈ ಎಷ್ಟೋ ಬಲಹೀನವಾಯಿತು. ಆ ಮೇಲೆ ಎಡಗಡೆ ಸೊಂಟಕ್ಕೆ ಚುಚ್ಚಿಸಿಕೊಂಡೆನು. ಹೀಗಾಗಿ ಆ ಭಾಗವೇ ನನಗೆ ಏಕೋ ನಿರ್ಬಲವಾಯಿತು. ಆಗ ಪ್ಲೇಗ ಮೈಲಿ ಚುಚ್ಚುವಾಗ ಬಹು ಒರಟುತನವಿತ್ತು. ನನ್ನನ್ನು ಜೈಲಿಗೆ ಹಿಡಿದುಕೊಂಡು ಹೋದರೂ ತಾಯಿಯವರಿಗೆ ವ್ಯಥೆ. ನಾನಿಲ್ಲದಿದ್ದಾಗ ಎಲ್ಲಿ ಸತ್ತುಹೋಗುವಳೋ ಎಂದು ನನಗೆ ದಿಗಿಲು. ಮುಪ್ಪಾಗಿದ್ದಳು ಜಾಗ್ರತೆ ಮೃತಪಟ್ಟರೆ ಅವಳಿಗೂ ಹಿತ. ನನಗೂ ನಿಶ್ಚಿಂತೆಯೆಂದು ನನ್ನ ಯೋಚನೆ.

ಗ್ರಂಥರಚನೆ : ೧೯೨೧ರಲ್ಲಿ ಗ್ರಂಥ ರಚನೆಯೇ ನನ್ನ ಮುಖ್ಯ ಉದ್ಯೋಗವಾಯಿತು. ನನ್ನ ಪುಸ್ತಕಗಳೂ ಜನಪ್ರಿಯವಾಗಿದ್ದುದರಿಂದ ರಾಷ್ಟ್ರ ಜೀವನ ಎಂಬ ಒಂದು ಗ್ರಂಥಮಾಲೆಯನ್ನು ಪ್ರಾರಂಭಿಸಿ ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳನ್ನೆಲ್ಲಾ ಪ್ರಕಟಿಸಬೇಕೆಂದು ಯೋಚಿಸಿದೆನು. ಈ ಗ್ರಂಥಮಾಲೆಯಿಂದ ವರ್ಷಕ್ಕೆ ನಾಲ್ಕು ಪುಸ್ತಕಗಳನ್ನು ಪ್ರಕಟಿಸಬೇಕೆಂದು ನಿರ್ಧರಿಸಿದೆನು. ಮೊದಲು ೨೫ ರೂ. ಗಳನ್ನು ಕೊಡುವವರು ಪ್ರೋತ್ಸಾಹಕರೆಂದು ಗೊತ್ತುಮಾಡಲು ೧೯ ಜನರು ಪ್ರೋತ್ಸಾಹಕರಾದರು. ಗ್ರಂಥಮಾಲೆಯ ಕಾರ್ಯ ನಿಂತನಂತರ, ಅವರ ಹಣ ಅವರಿಗೆ ತಿರುಗಿ ಕೊಡುವುದು. ಆ ೨೫ ರೂ. ಗಳ ಬಡ್ಡಿಗಾಗಿ ಪುಸ್ತಕವನ್ನು ಉಚಿತವಾಗಿ ಕೊಡುವುದು. ಈ ಕಾರ್ಯಕ್ಕೆ ಹಿರೇಕೇರೂರು ಕುಬಸದ ಶ್ರೀ ದೊಡ್ಡ ಅಡಿವೆಪ್ಪನವರು ಒಂದು ಸಾವಿರ ರೂ. ವರೆಗೆ ಬಡ್ಡಿಯಿಲ್ಲದೆ ಸಹಾಯಮಾಡುವುದಾಗಿ ಹೇಳಿದರು. ಅವರಿಂದ ೭೦೦ರೂ. ಗಳ ಸಹಾಯವನ್ನು ಹೊಂದಿದೆನು.

'ಭಾರತೀಯರ ದೇಶ ಭಕ್ತಿ' ಎಂಬ ಒಂದು ಹೊಸ ವಿಚಾರ ಸರಣಿಯ ಪುಸ್ತಕವನ್ನು ೧೯೨೧ರಲ್ಲಿಯೇ ಬರೆದು ಪ್ರಕಟಿಸಿದೆನು. ಇದು ಕನ್ನಡ ಭಾಷೆಯಲ್ಲಿಯೇ ಹೊಸ ತರದ ಪುಸ್ತಕ ದೇಶ ಭಕ್ತಿಯನ್ನು ಒಂದು ತತ್ವಜ್ಞಾನ ದೃಷ್ಟಿಯಿಂದ ವಿವೇಚಿಸಿ ಬರೆದೆನು. ಇದಕ್ಕಾಗಿ ಹೆಚ್ಚು ಪುಸ್ತಕಗಳನ್ನು ಓದಬೇಕಾಯಿತು. ನನ್ನ ರಾಜಕೀಯ, ಸಾಮಾಜಿಕ ವಿಚಾರಗಳನ್ನೆಲ್ಲಾ ಅದರಲ್ಲಿ ಪ್ರತಿಪಾದಿಸಿದೆನು. ನನ್ನ ಎಲ್ಲಾ ಪುಸ್ತಕಗಳಲ್ಲಿ ಅದೊಂದು ಪರಿಶೋಧಾತ್ಮಕವಾದ ಹೆಚ್ಚಿನ ತರಗತಿಯ ಪುಸ್ತಕವು.

ಆ ಕಾಲದಲ್ಲಿ ವೀರಶೈವ ಸಮಾಜವು ಬ್ರಾಹ್ಮಣೇತರ ಪಕ್ಷದಲ್ಲಿ ಸೇರಿ ಬಹು ಚಟುವಟಿಕೆಯನ್ನು ನಡೆಯಿಸಿದ್ದಿತು. ವೀರಶೈವರು ಬ್ರಾಹ್ಮಣೇತರ ಪಕ್ಷದಲ್ಲಿ ಸೇರುವುದು ಸಾಮಾಜಿಕ ಮತ್ತು ರಾಜಕೀಯ ಈ ಉಭಯ ದೃಷ್ಟಿಗಳಿಂದಲೂ ಸಮಾಜಕ್ಕೆ ಕ್ಷೇಮವಲ್ಲವೆಂದೇ ನನ್ನ ದೃಢ ವಿಶ್ವಾಸ. ಅದಕ್ಕಾಗಿ ವೀರಶೈವ ಸಮಾಜ ಸುಧಾರಣೆ ಎಂಬ ಪುಸ್ತಕವನ್ನು ೧೯೨೧ರಲ್ಲಿ ಬರೆದು ಪ್ರಕಟಿಸಿದೆನು.

ಅದರಿಂದ ವೀರಶೈವ ಸಮಾಜದ ಅನೇಕ ಬ್ರಾಹ್ಮಣೇತರ ಪಕ್ಷದ ಮುಖಂಡರು ನನ್ನನ್ನು ವಿರೋಧಿಸಿದರು. ಸಾರ್ವಜನಿಕ ಕಾರ್ಯಮಾಡುವ ವೀರಶೈವರಲ್ಲಿ ಪ್ರಾಯಶಃ ನಾನೊಬ್ಬನೇ ಆಗ ಖಾದಿ ಚಟುವಟಿಕೆಯಲ್ಲಿ ಮುಂದರಿದಿದ್ದನೆಂದು ಹೇಳಬಹುದು. ಆದುದರಿಂದ ಅನೇಕರಿಗೆ ಇದು ಸಮಾಜದ್ರೋಹದ ಕೆಲಸವಾಗಿಯೂ ತೋರಿತು.

ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳ ನಾಲ್ಕು ಭಾಗಗಳನ್ನು ೧೯೨೧ರಲ್ಲಿ ಪ್ರಕಟಿಸಿದೆನು. ನನ್ನ ಸ್ನೇಹಿತರಾದ ಹರಿಹರದ ಶ್ರೀ ನಾಡಿಗ ದತ್ತಾತ್ರೇಯರಾಯರು ಶ್ರೀ ಸ್ವಾಮಿ ರಾಮತೀರ್ಥರ ಉಪನ್ಯಾಸಗಳ ಮೊದಲನೆಯ ಭಾಗಕ್ಕೆ ತುಂಬಾ ನೆರವಾದರು. ಕೆಲವು ಉಪನ್ಯಾಸಗಳನ್ನು ಅವರೂ ಭಾಷಾಂತರಗೊಳಿಸಿದರು. ಶ್ರೀ ಸ್ವಾಮೀಜಿಯವರ ವ್ಯಾಖ್ಯಾನಗಳು ನನ್ನ ಮನಸ್ಸಿನ ಮೇಲೆ ಹೆಚ್ಚು ಪರಿಣಾಮಕಾರಿಯಾಗಿ ನನ್ನ ಜೀವನದಲ್ಲಿಯೇ ಬಹು ಸಾಹಸೋತ್ಸಾಹಗಳನ್ನುಂಟುಮಾಡಿದವು.

ಒಂದೇ ವರುಷದಲ್ಲಿ ಆರು ಪುಸ್ತಕಗಳನ್ನು ಬೆಂಗಳೂರಲ್ಲಿ ಅಚ್ಚು ಮಾಡಿಸಬೇಕಾದುದರಿಂದ ನಾನು ಆ ವರುಷ ಅಲ್ಲಿಯೇ ಇರಬೇಕಾದಂತಹ ಪ್ರಸಂಗವೂ ಬಂದಿತ್ತು. ಶ್ರೀ ಬಾಳಪ್ಪನವರ ಚಿಕ್ಕ ತಮ್ಮ ಪ್ರಿಯ ಸ್ವಾಮಿರಾಯರು (ಈಗ ಬೆಳಗಾವ ಲಿಂಗರಾಜ ಕಾಲೇಜಿನಲ್ಲಿ ಪ್ರೋಫೆಸರ್‌ರಾಗಿದ್ದಾರೆ) ಆಗ ತಾನೇ ಬೆಂಗಳೂರಿಗೆ ತಮ್ಮ ಅಣ್ಣನವರೊಂದಿಗೆ (ದಾವಣಗೆರೆಯಲ್ಲಿ ವಕೀಲರಾಗಿರುವ ಪ್ರಿಯ ಬೊಂದಾಡೆ ಹನುಮಂತರಾಯರು) ಕಾಲೇಜ ಶಿಕ್ಷಣಕ್ಕಾಗಿ ಹೋಗಿದ್ದರು. ಆಗ ಅವರಿಗೆ ೧೫ ವರುಷ.

ಅವರಿಗೆ ನನ್ನಲ್ಲಿ ಬಹು ಪ್ರೀತಿ ವಿಶ್ವಾಸ. ನನಗೆ ಅವರಲ್ಲಿ ಬಂಧು ಪ್ರೇಮ. ತಮ್ಮ ತಾಯಿಯವರನ್ನು ಬಿಟ್ಟು ಅಲ್ಲಿಗೆ ಹೋಗಲು ಅವರಿಗೆ ತುಂಬಾ ಅಸಮಾಧಾನ. ನಾನಿದ್ದರೆ ಅವರಿಗೆ ಎಷ್ಟೋ ಸಮಾಧಾನ. ಅವರ ಗುಣ ಶೀಲಾಚಾರಗಳನ್ನೂ ಜಾಣ್ಮೆಯನ್ನೂ ನೋಡಿ ನನಗೂ ಅವರ ನೆರೆಯಲ್ಲಿರಲು ಇಷ್ಟ. ನಾನು ೧೯೧೯ರಲ್ಲಿ ದಾವಣಗೆರೆ ಎ. ವ್ಹಿ. ಸ್ಕೂಲಿನಲ್ಲಿ ಅಲ್ಲಿಯ ಹೆಡ್‌ಮಾಸ್ತರರ ಅಪೇಕ್ಷೆಯಂತೆ ನಾ. ಗೋಖಲೆಯವರ ಜೀವನ ಚರಿತ್ರೆಯನ್ನು ಕುರಿತು ವ್ಯಾಖ್ಯಾನಮಾಡಿದ್ದೆನು. ಆ ವ್ಯಾಖ್ಯಾನ ಮುಗಿದ ಮೇಲೆ ಹೆಡ್‌ಮಾಸ್ತರರು ಈ ವರೆಗಿನ ವ್ಯಾಖ್ಯಾನದಲ್ಲಿ ನಿಮಗೆ ಪ್ರಿಯವಾದ ಸಂಗತಿಯನ್ನು ಎದ್ದು ತಿಳಿಸಿರೆಂದು ವಿದ್ಯಾರ್ಥಿಗಳಿಗೆ ಹೇಳಿದರು. ಆಗ ಪ್ರಿಯ ಸ್ವಾಮಿರಾಯರಿಗೆ ೧೩ ವರುಷ. ಅವರು ಎದ್ದು ನಿಂತು ಹೀಗೆ ಹೇಳಿದ್ದರು.

ಗೋಖಲೆಯವರು ಹೇಗೆ ತಾವು ಹೇಳಿಕೊಡಬೇಕಾದ ಪಾಠವನ್ನು ಮನೆಯಲ್ಲಿ ಚೆನ್ನಾಗಿ ನೋಡಿಕೊಂಡು ಬರುತ್ತಿದ್ದರೋ ಹಾಗೆಯೇ ನಮ್ಮ ಮಾಸ್ತರರು ನಮಗೆ ಕಲಿಸುವುದನ್ನು ತಾವು ಮನೆಯಲ್ಲಿ ಸರಿಯಾಗಿ ತಿಳಿದುಕೊಂಡು ಬರಬೇಕು. ಇವರ ಈ ದಿಟ್ಟತನ, ಜಾಣ್ಮೆ ಮೊದಲಾದವುಗಳನ್ನು ನೋಡಿ ಅಂದಿನಿಂದಲೇ ನಾನು ಹೆಚ್ಚು ಪ್ರೀತಿಸಲಾರಂಭಿಸಿದ್ದೆನು. ಎರಡು ವರುಷಗಳಲ್ಲಿ ಎಷ್ಟೋ ಹೆಚ್ಚು ನನಗೆ ಅವರೊಂದು ಪ್ರೇಮಾದರಗಳ ಮೂರ್ತಿಯಾಗಿಯೇ ತೋರುತ್ತಿದ್ದರು. ಆ ಬೊಂದಾಡೆ ಬಂಧುಗಳು ನಾನು ಅಲ್ಲಿ ನಡೆಸಿರುವ ಮುದ್ರಣ ಕಾರ್ಯಕ್ಕೂ ಎಷ್ಟೋ ನೆರವಾಗಿದ್ದರು. ಗ್ರಂಥ ರಚನೆಯ ಆ ವರುಷವು ನನ್ನ ಆಯುಷ್ಯದಲ್ಲಿ ಬಹು ಸಂತೋಷಕರವಾದ ಮತ್ತು ಪ್ರಯೋಜನಕರವಾದ ವರುಷವಾಗಿದ್ದಿತ್ತು.

ಸಮಾಜ ಕಾರ್ಯದಲ್ಲಿ ನಾನು ೨-೩ ವರುಷಗಳಿಂದಲೂ ಹೆಚ್ಚಾಗಿ ಲಕ್ಷಿಸಿರಲಿಲ್ಲ. ಆದರೂ ವೀರಶೈವ ತರುಣ ಸಮ್ಮೇಳನದ ಕಡೆಗೆ ಮಾತ್ರ ವಿಶೇಷ ಗಮನ. ಬೆಳಗಾವಿಯಲ್ಲಿ ಬ್ಯಾರಿಷ್ಟರ್ ರುದ್ರಪ್ಪನವರ ಅಧ್ಯಕ್ಷತೆಯಲ್ಲಿಯೂ ಹುಬ್ಬಳ್ಳಿಯಲ್ಲಿ ರಾ. ಸಾ. ಹಳಕಟ್ಟಿಯವರ ಅಧ್ಯಕ್ಷತೆಯಲ್ಲಿಯೂ ತರುಣ ಸಮ್ಮೇಳನ ಕೂಡಿದಾಗ ಅದರಲ್ಲಿ ಹೆಚ್ಚಾಗಿ ಸೇರಿದ್ದೆನು. ಹುಬ್ಬಳ್ಳಿಯ ಸಮ್ಮೇಳನವು ೧೯೨೧ರಲ್ಲಿ ಕೂಡಿದ್ದಿತು. ವೀರಶೈವರ ಒಳಪಂಗಡಗಳನ್ನು ಒಂದುಮಾಡುವ ಸಂಬಂಧವಾದ ಗೊತ್ತುವಳಿಯು ಸಮ್ಮೇಳನದ ಮುಂದೆ ಬರುವಂತೆ ಮಾಡಿದೆನು. ಒಳಪಂಗಡಗಳ ಏಕೀಕರಣಕ್ಕೆ ತರುಣರು ಮುಂದೆ ಬರಬಹುದೆ? ಎಂಬುದನ್ನು ಪರೀಕ್ಷಿಸುವುದೇ ನನ್ನ ಉದ್ದೇಶವಾಗಿದ್ದಿತು. ಆ ಗೊತ್ತುವಳಿಯು ಆಗ ತೀರ್ಮಾನವಾಗಲಿಲ್ಲ. ಒಳಪಂಗಡಗಳ ಏಕೀಕರಣಕ್ಕೆ ತರುಣರಲ್ಲಿ ಕೂಡಾ ಆಗ ಬಹುಮತ ದೊರೆಯುಂತಿರಲಿಲ್ಲ.

ಸತ್ಯಾಗ್ರಹ ತತ್ವಪ್ರಚಾರ : ಗಾಂಧೀಜಿಯವರ ಚಟುವಟಿಕೆಯು ೧೯೨೧ರಲ್ಲಿ ಅದ್ಭುತವಾಗಿ ನಡೆದಿತ್ತು. ೧೯೨೨ರಲ್ಲಿ ಅದು ಪ್ರಚಂಡ ಸ್ವರೂಪಕ್ಕೆ ಬಂದಿತು. ಮಾರ್ಚ ೧೮ನೆಯ ತಾರೀಖಿನ ದಿವಸ ಗಾಂಧೀಜಿಯವರಿಗೆ ೬ ವರುಷಗಳ ಶಿಕ್ಷೆಯಾಯಿತು. ಆಗ ನನಗೆ ವಿಶೇಷ ದುಃಖವಾಯಿತು. ಆದರೆ ಟಿಳಕರನ್ನು ಹಿಡಿದಾಗ ಅತ್ತಂತೆ ಅಳಲಿಲ್ಲ. ಸ್ವಾಮಿ ರಾಮತೀರ್ಥರ ವ್ಯಾಖ್ಯಾನಗಳ ಅಧ್ಯಯನದಿಂದ ಮಾನಸಿಕ ಉನ್ನತಿಯು ಎಷ್ಟೋ ಹೆಚ್ಚಿತ್ತು. ಸ್ವಾಮೀಜಿಯವರ ಉಪದೇಶವೇ ಒಂದು ಮೂರ್ತಿಯಾಗಿ ಗಾಂಧೀಜೀಯವರಿದ್ದಾರೆಂದು ನನ್ನ ಕಲ್ಪನೆ. ಗಾಂಧೀಜಿಯವರಲ್ಲಿ ಅಂಥ ಭಕ್ತಿಭಾವಗಳು ನೆಲೆಸಿದ್ದರಿಂದ ಅವರು ಯುಗಪುರುಷರೆಂದು ತಿಳಿದು ಅವರ ಶಕೆಯನ್ನು ಪ್ರಾರಂಭಿಸಿ ಪತ್ರಗಳಲ್ಲಿಯೂ ಪುಸ್ತಕಗಳಲ್ಲಿಯೂ ಬರೆಯಲಾರಂಭಿಸಿದೆನು.

೧೯೨೨ನೆಯ ಮಾರ್ಚ ೧೮ನೆಯ ತಾರೀಖು ಗಾಂಧಿ ಶಕೆಯ ಪ್ರಥಮ ದಿನವೆಂದು ಪ್ರಾರಂಭಿಸಿದೆನು. ಅವರು ಇನ್ನು ಸತ್ಯಾಗ್ರಹದಿಂದ ಕಾರಾಗೃಹದಲ್ಲಿಯೇ ದೇಹ ತ್ಯಾಗಮಾಡುವರೆಂತಲೂ ಅವರ ತತ್ವಗಳನ್ನು ಪ್ರಸಾರಗೊಳಿಸಬೇಕೆಂತಲೂ ಯೋಚಿಸಿ ಸಂಚಾರ ಹೊರಟೆನು. ಧಾರವಾಡ ಮತ್ತು ವಿಜಾಪುರ ಜಿಲ್ಲೆಗಳಲ್ಲಿ ಬ್ರಾಹ್ಮಣೇತರ ಪಕ್ಷವು ಬಹು ಪ್ರಬಲವಾಗಿದ್ದುದರಿಂದ ನಾನು ಕಾರವಾರ ಜಿಲ್ಲೆಗೆ ಹೋಗಿ ಅಲ್ಲಿ ಗಾಂಧೀಜಿಯವರ ತತ್ವಗಳನ್ನು ಕುರಿತು ವ್ಯಾಖ್ಯಾನಮಾಡಿ ಆರ್ಯ ಸಮಾಜದಂತೆ ಸತ್ಯಾಗ್ರಹ ಸಮಾಜವನ್ನೇ ಏರ್ಪಡಿಸಬೇಕೆಂದು ಯೋಚಿಸಿದೆನು.

ಶಿರಸಿ, ಕುಮಟಾ, ಹೊನ್ನಾವರ, ಗೋಕರ್ಣ, ಅಂಕೋಲಾ, ಗೆರುಸಪ್ಪೆ, ಸಿದ್ದಾಪುರ ಇಷ್ಟು ಸ್ಥಳಗಳಿಗೆ ಹೋಗಿ ಗಾಂಧೀಜಿಯಯವರ ಒಂಭತ್ತು ತತ್ವಗಳನ್ನು ಕುರಿತು ಪ್ರಚಾರ ಮಾಡಿದೆನು. ಗಾಂಧೀಜಿಯವರು ಸಾಬರಮತಿ ಆಶ್ರಮದಲ್ಲಿ ೧೯೧೫ರಲ್ಲಿ ಗೊತ್ತುಮಾಡಿದ್ದ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಅಸ್ತೇಯ, ಅಪರಿಗ್ರಹ, ಅಸ್ವಾದ, ನಿರ್ಭಯ, ಸ್ವದೇಶಿ ಮತ್ತು ಅಸ್ಪೃಶ್ಯತಾನಿವಾರಣೆ ಈ ಒಂಭತ್ತು ತತ್ವಗಳು ಯಾರಿಗೆ, ಮಾನ್ಯವೋ ಮತ್ತು ಖಾದಿ, ಅಸ್ಪೃಶ್ಯತಾನಿವಾರಣೆ, ಪಶು, ಪಕ್ಷಿ ಮನುಷ್ಯರನ್ನು ಹಿಂಸಿಸದಿರುವುದು, ಇವು ಯಾರ ಆಚರಣೆಯಲ್ಲಿವೆಯೋ ಅವರು ಸತ್ಯಾಗ್ರಹ ಸಮಾಜದ ಸದಸ್ಯರು. ಅವರ ಧಾರ್ಮಿಕ ಅಚಾರ ವಿಚಾರಗಳು ಹೇಗೇ ಇರಲಿ. ಅವರೆಲ್ಲರೂ ಸತ್ಯಾಗ್ರಹ ಸವಾಜದಲ್ಲಿ ಸೇರಲು ಅಡ್ಡಿಯಿಲ್ಲವೆಂದು ಅದರ ನಿಯಮ ಕಾರ್ಯಕ್ರಮ

ಮೊದಲಾದವುಗಳನ್ನೆಲ್ಲಾ ಗೊತ್ತುಮಾಡಿ ಸಂಚಾರದಲ್ಲಿ ಅನೇಕರ ಸಲಹೆ ಸೂಚನೆಗಳನ್ನು ಕೇಳಿ ಒಂದು ತೀರ್ಮಾನಕ್ಕೆ ಬಂದೆನು.

ನನಗೆ ಪ್ರಾಥಮಿಕ ಶಿಕ್ಷಣವನ್ನು ಕೊಟ್ಟಿದ್ದ ಕೈ. ತಿಪ್ಪಯ್ಯ ಮಾಸ್ತರೆಂಬುವವರು ಸಿದ್ದಾಪುರದಲ್ಲಿದ್ದರು. ಅವರು ಶೀಘ್ರ ಕವಿಗಳಲ್ಲಿ ಪ್ರಸಿದ್ಧರು. ಆಗ ಮುಪ್ಪಿನವರಾಗಿದ್ದರು. ನನ್ನ ವಿಚಾರಸರಣಿ ಮತ್ತು ಕಾರ್ಯ ಅವರಿಗೆ ಅತ್ಯಾನಂದವನ್ನುಂಟುಮಾಡಿದವು. ನನ್ನ ವ್ಯಾಖ್ಯಾನ ಕೇಳಿದನಂತರ ಆ ಒಂಬತ್ತು ತತ್ವಗಳ ಒಂದು ವೃತ್ತವನ್ನು ಮಾಡಿಕೊಟ್ಟದ್ದಲ್ಲದೆ ಒಂದೊಂದು ತತ್ವಗಳ ಮೇಲೆಯೂ ಪದಗಳನ್ನು ಮಾಡಿಕೊಟ್ಟರು.

ಈ ಪ್ರಕಾರ ಒಂದು ಸಮಾಜವಾದರೆ ಗಾಂಧೀಜಿಯವರ ತತ್ವಗಳು ಪ್ರಸಾರವಾಗುತ್ತವೆಂತಲೂ ಇದಕ್ಕೆ ರಾಜಕೀಯ ಯಾವ ಸ್ವರೂಪವೂ ಇಲ್ಲದಿದ್ದುದರಿಂದ ಜನಗಳು ಭಯಪಡುವಕಾರಣವಿಲ್ಲವೆಂತೂ ಯೋಚಿಸಿದೆನು. ಆ ಜಿಲ್ಲೆಯಿಂದ ಬಂದನಂತರ ನಂದಗಡದ ಕೈ ಹನುಮಂತ ನಾಯಿಕರ ಅಗ್ರಹದ ಮೇರೆಗೆ ನಂದಗಡ, ಹಲಸಿಗೆ, ಬೀಡಿ ಮೊದಲಾದ ೪–೬ ಗ್ರಾಮಗಳಿಗೆ ಹೋಗಿ ಗಾಂಧೀ ತತ್ವಗಳ ಪ್ರಚಾರಮಾಡಿ ಬಂದೆನು. ನಂದಗಡದಿಂದ ಖಾನಾಪುರ ಸ್ಟೇಶನ್ನಿಗೆ ಬರುವಾಗ ಬಂಡಿಯಲ್ಲಿದ್ದ ನಾನು ಹಿಡಿಯುತ್ತಿದ್ದ ಬಡಗಿಯು ಬಿದ್ದು ಹೋಗಿತ್ತು. ಅದು ಕಳೆದುದಿಂದ ನಾಲ್ಕಾರು ದಿವಸ ನನಗೆ ವಿಶೇಷ ವ್ಯಥೆಯಾಯಿತು. ನಾನು ಆಗ ಕೈಯಲ್ಲಿ ಬಡಗಿಯನ್ನು ಹಿಡಿಯುವ ರೂಢಿಯಿದ್ದಿತು. ಆ ಬಡಗಿಯು ೧೫–೧೬ವರುಷ ನನ್ನಲ್ಲಿತ್ತು. ಆ ದೀರ್ಘಕಾಲದ ಸಂಬಂಧವು ಅಷ್ಟು ನನಗೆ ತಾಪವನ್ನುಂಟುಮಾಡಿದ್ದನ್ನು ನೋಡಿ ನಾನು ಆ ವಿಚಾರವಾಗಿ ಎಷ್ಟೊ ಯೋಚಿಸಿಬಿಟ್ಟೆನು. ಅಂದಿನಿಂದಲೇ ಕೈಯಲ್ಲಿ ಬಡಗಿ ಹಿಡಿಯುವುದನ್ನು ಬಿಟ್ಟು ಬಿಟ್ಟೆನು.

ಭಯಂಕರ ಗಂಡಾಂತರ : ನಾನು ಗಾಂಧೀ ತತ್ವ ಪ್ರಚಾರದ ಕಾರ್ಯ ಮಾಡುತ್ತಿದ್ದರೂ ಶ್ರೀಮನ್ನಿರಂಜನ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಮೊದಲಿನಂತೆಯೇ ನನ್ನ ಮೇಲೆ ಕೃಪೆಯುಳ್ಳವರಿದ್ದುದರಿಂದ ಆಗಾಗ್ಗೆ ಧಾರವಾಡದ ಬೋರ್ಡಿಂಗಿನಲ್ಲಿ ನಡೆಯುತ್ತಿದ್ದ ಸಮಾಜ ಕಾರ್ಯಕ್ಕೆ ಕರೆಯಿಸುತ್ತಿದ್ದರು. ೧೯೨೨ರಲ್ಲಿ ಅನೇಕ ವಿದ್ಯಾರ್ಥಿಗಳೊಡನೆ ಮೊಗಲಾಯಿ ಪ್ರಾಂತದ ಇಟಗಿ ಸಭೆಗೆ ನಾನೂ ಸ್ವಾಮಿಗಳವರ ಸಂಗಡ ಹೋದೆನು. ಶ್ರೀಮನ್ನಿರಂಜನ ಶ್ರೀ ಶಾಂತವೀರಸ್ವಾಮಿಗಳು ಗುರುಮಠಕಲ್ಲ ಈ ಪೂಜ್ಯರ ಆಶ್ರಯದಲ್ಲಿ ಆ ಭಾಗದ ವೀರಶೈವರ ಸಭೆ ಸೇರಿತ್ತು. ನಾನು ನೈಜಾಮ ಭಾಗದಲ್ಲಿ ಹೋದದ್ದು ಅದೇ ಮೊದಲು. ಆ ಸಭೆಗೆ ಬಹು ಜನರು ಸೇರಿದ್ದರು. ಹೈದರಾಬಾದದ ಪ್ರಸಿದ್ಧ ವಕೀಲರಾಗಿದ್ದ ಕೈ ಬಾಪುರಾವ ಇವರು ಅಧ್ಯಕ್ಷರಾಗಿದ್ದರು. ನಾನು ಆಗ ಕೆಸಿಯ ನಿಲುವಂಗಿಯನ್ನು ಹಾಕಿಕೊಳ್ಳುತ್ತಿದ್ದೆನು. ಮತ್ತು ಎಲ್ಲಾ ಬಟ್ಟೆಗಳೂ ಕೈನೂಲಿನವು. ಅಲ್ಲಿಯ ಜನರ ಉಡುಪಿಗೂ ಆ ನನ್ನ ಉಡುಪಿಗೂ ಬಹು ಹೋಲುತ್ತಿತ್ತು. ನನ್ನ ವ್ಯಾಖ್ಯಾನಗಳು ಅಲ್ಲಿಯ ಜನರಿಗೂ ಬಹು ಪ್ರಿಯವಾದವು. ನಾನೊಬ್ಬ ತಮಾಷೆ ಮನುಷ್ಯನಾಗಿಯೇ ಅವರಿಗೆ ತೋರಿದೆನು. ಆ ಭಾಗದ ಅನೇಕ ಪ್ರಮುಖರ ಪರಿಚಯವಾಯಿತು. **"ಸ್ತ್ರೀ ನೀತಿ ಸಂಗ್ರಹ"** ಎಂಬ ಪುಸ್ತಕವನ್ನು ಹೆಣ್ಣು ಮಕ್ಕಳಿಗಾಗಿಯೇ ಬರೆದು ಪ್ರಕಟಿಸಿದೆನು. ಸ್ವಾಮಿ ರಾಮತೀರ್ಥರ ೫ನೆಯ ಭಾಗವೂ ಪ್ರಕಟವಾಯಿತು. ಇದೇ ವರುಷ ಬಾಗಲಕೋಟೆಯಲ್ಲಿ ವೀರಶೈವ ತರುಣ ಸಮ್ಮೇಲನ ಮಾಡಲು ಪ್ರಯತ್ನಿಸಿದೆನು. ಅದು ಅಲ್ಲಿಯ ಉತ್ಸಾಹಿ ಜನರಿಂದ ಬಹು ಸೊಗಸಾಗಿ ಜರುಗಿತು.

ಶ್ರೀಮಾನ್ ಕಂಬಳಿಯವರು (ಸರ್ ದಿವಾನ ಬಹದ್ದೂರ ಕಂಬಳಿಯವರು) ಆ ಸಮ್ಮೇಲನದ ಅಧ್ಯಕ್ಷರಾಗಿದ್ದರು. ತರುಣ ಸಂಘದಿಂದ ಪ್ರಬೋಧ ಎಂಬ ಮಾಸಪತ್ರಿಕೆ ಪ್ರಕಟವಾಗುತ್ತಿದ್ದಿತು. ಅದರ ಪ್ರಸಾರಕ್ಕಾಗಿ ಕೆಲವು ಸ್ಥಳಗಳಿಗೆ ಹೋಗಬೇಕೆಂದು ಮೊದಲು ಶಿರೂರು, ಕಮತಗಿ ಮೊದಲಾದ ಸ್ಥಳಗಳಿಗೆ ಹೋದೆನು. ನನ್ನ ಸಂಗಡ ೪-೫ ಶರಣರು (ಶ್ರೀ ಕಿಣಗಿ ವಕೀಲರು, ಕಂಠಿ ಸಿದ್ದಲಿಂಗಪ್ಪನವರು, ಬಾಳಿಕಾಯಿ ಬಸಪ್ಪನವರು, ಕೈ ಶೆಟ್ಟರ ಸಂಗಪ್ಪನವರು) ಇದ್ದರು.

ಐಹೊಳೆಗೆ ಹೋದಾಗ ಎಲ್ಲರೂ ನದಿಗೆ ಸ್ನಾನಕ್ಕೆ ಹೋದೆವು. ಹೋಗುವಾಗ ಸ್ವಾಮಿ ರಾಮತೀರ್ಥರು ಆಸನ ಹಾಕಿ ನದಿಯಲ್ಲಿ ದೇಹ ಬಿಟ್ಟ ಪ್ರಸಂಗವನ್ನು ಹೇಳುತ್ತಿದ್ದೆನು. ನದಿಯಲ್ಲಿ ನಾನು ಬಟ್ಟೆತೊಳೆಯುತ್ತಿದ್ದಾಗ ಅವರು ಹೀಗೆ ಮಾತನಾಡಿದರು ನದಿ ಬರುತ್ತಾ ಇದೆ. ಹೆಚ್ಚಾಗಿ ಬಂದರೆ ನಾವೆಲ್ಲರೂ ಮುಳುಗಿಹೋಗುತ್ತೇವೆ. ಪತ್ರಿಕೆಯಲ್ಲಿ ಕಪ್ಪು ಗೆರೆಯ ಲೇಖನ ಪ್ರಕಟವಾಗುತ್ತವೆ. ಆದರೆ ಅವರ (ನನ್ನ) ಹೆಸರು ಹಾಕುತ್ತಾರೇ ವಿನಾ ನಮ್ಮ ಹೆಸರನ್ನೇನೂ ಹಾಕುವುದಿಲ್ಲ.

ಹೀಗೆ ಮಾತನಾಡಿದ್ದನ್ನು ಕೇಳಿ ನನಗೆ ಈಸುವುದಕ್ಕೆ ಬರುತ್ತದೆ. ನಾನೇನೂ ಸಾಯುವುದಿಲ್ಲವೆಂದು ಅವರಿಗೆ ಹಾಸ್ಯವಾಗಿಯೇ ಹೇಳಿದೆನು. ಅವರು ಸ್ನಾನಮಾಡಲಾರಂಭಿಸಿದರು. ನಾನು ಬಟ್ಟೆಯನ್ನು ತೊಳೆಯುತ್ತಿದ್ದೆ. ಅವರು ಸ್ವಲ್ಪ ದೂರದಲ್ಲಿದ್ದರು. ನಾನು ಬಟ್ಟೆಯನ್ನು ಒಂದು ಕಲ್ಲಮೇಲೆ ನಿಂತು ಒಗೆಯುತ್ತಿದ್ದಾಗ ನನ್ನ ಮೊಳಕ್ಕೆ ಮೊಳಕಾಲಿಗೆ ಬಲವಾಗಿ ತಾಕಿತು. ಅಷ್ಟೇ ಜ್ಞಾನಪಕ. ಮೂರ್ಛೆಬಂದು ಆ ಬಂಡೆಗಲ್ಲಿಂದ ಕೆಳಗೆ ನೀರಲ್ಲಿ ಬಿದ್ದು ಬಿಟ್ಟಿದ್ದೇನೆ. ನನಗೆ ಸ್ಮೃತಿಯಿಲ್ಲ, ನನಗೆ ಈಸಲಿಕ್ಕೆ ಬರುತ್ತದೆಂಬುದನ್ನು ತೋರಿಸುತ್ತಿದ್ದೇನೆಂದು ಅವರು ಮೊದಲು ತಿಳಿದರು. ಮುಳುಗುತ್ತಿದ್ದುದನ್ನು ನೋಡಿ ಕೈ . ಶೆಟ್ಟರ ಸಂಗಪ್ಪ ಮಾಸ್ತರರು ಏಕೋ ಘಾತವಾಯಿತೆಂದು ಓಡಿಬಂದು ನೋಡಲು ನಾನು ಅಂತ್ಯಾವಸ್ಥೆಗೆ ಬಂದಿದ್ದೆನೆಂತೆ ಎಲ್ಲರೂ ಎತ್ತಿ ಮೇಲೆ ಹಾಕಿ ಉಪಚಾರ ಮಾಡಿದಮೇಲೆ ನನಗೆ ಸ್ಮೃತಿ ಬಂದಿತು. ಅವರು ಸ್ವಲ್ಪ ಉಪೇಕ್ಷೆ ಮಾಡಿದ್ದರೆ ಇದನ್ನು ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ಅವರು ೮-೧೦ ನಿಮಿಷಗಳ ಹಿಂದೆ ಮಾತನಾಡಿದುದು ಸತ್ಯವಾಗಿಯೇ ಪರಿಣಮಿಸುತ್ತಿತ್ತು.! ಭಾವೀ ದೃಶ್ಯ ಮನಸ್ಸಿಗೆ ಮುಂಚೆಯೇ ತೋರಿಕೆ? ಅಂತು ಪ್ರಸಂಗವೇನೋ ಹೀಗೆ ಭೀಕರವಾಗಿಯೇ ಸಂಭವಿಸಿತು.

ಸತ್ಯಾಗ್ರಹ ಸಮಾಜ ಸ್ಥಾಪನೆ : ಗಾಂಧೀಜಿಯವರ ಸತ್ಯಾಗ್ರಹಾಶ್ರಮದ ತತ್ವಗಳೇ ಅವರ ಧರ್ಮತತ್ವಗಳೆಂದು ನಾನು ತಿಳಿದು ಸತ್ಯಾಗ್ರಹವನ್ನು ಒಂದು ಧರ್ಮವನ್ನಾಗಿಯೇ ಪರಿಗಣಿಸಿದೆನು. ಆದುದರಿಂದ ಈ ತತ್ವಗಳಿಗೂ ಹಿಂದು ಧರ್ಮ, ಮುಸಲ್ಮಾನ ಧರ್ಮ, ಕ್ರೈಸ್ತ ಧರ್ಮ ಮತ್ತು ಬೌದ್ಧ ಧರ್ಮಗಳಲ್ಲಿಯ ಕೆಲವು ತತ್ವಗಳಿಗೂ ಹೋಲಿಸಿ ಒಂದು ಪುಸ್ತಕವನ್ನು ಬರೆದಿದ್ದೆನು. ಅದಕ್ಕೆ **"ಮಹಾತ್ಮಾಗಾಂಧಿ ಪ್ರಣೀತ ಸತ್ಯಾಗ್ರಹ ಧರ್ಮ"** ವೆಂತಲೂ ಇದನ್ನು ಒಪ್ಪುವವರು ಸತ್ಯಾಗ್ರಹ ಸಮಾಜದವರೆಂತಲೂ ನನ್ನ ವ್ಯಾಖ್ಯೆ. ಕೈನೂಲಿನ ಬಟ್ಟೆಯನ್ನೇ ಉಪಯೋಗಿಸಬೇಕೆಂಬುದಕ್ಕೆ ಧಾರ್ಮಿಕ ನಿಯಮವಿದ್ದುದು ನನಗೆ ಯಾವ ಧರ್ಮ ಗ್ರಂಥದಲ್ಲಿಯೂ ದೊರೆಯಲಿಲ್ಲ. ವೀರಶೈವಗಳ ೬೪ ಶೀಲಗಳಲ್ಲಿ ಮಾತ್ರ ೨೧ನೆಯ ಶೀಲವು ಕೊಂಬಿನ ಲಾಳಿಯನ್ನು ಮುಟ್ಟಿಸದೆ ಲಿಂಗವಂತರಿಂದಲೇ ನೇಯಿಲ್ಪಟ್ಟ ಬಟ್ಟೆಯನ್ನು ಲಿಂಗಾಯತರು ಧರಿಸಬೇಕೆಂಬುದಾಗಿದ್ದುದನ್ನು ನೋಡಿ ನನಗೆ ಪರಮ ಸಂತೋಷವಾಯಿತು. ಅದೊಂದರು ಹೊಸ ಶೋಧವನ್ನೇ ಮಾಡಿದಷ್ಟು ನನಗೆ ಆನಂದ.

ಲಿಂಗಾಯತ ಸಮಾಜವು ಖಾದಿಗೆ ವಿರೋಧವಾಗಿತ್ತಷ್ಟೆ. ಅದಕ್ಕೆ ತಿಳಿಸಲು ಇದೊಂದು ಬಲವಾದ ಆಧಾರ ದೊರೆಯಿತೆಂದು ಅದನ್ನು ಕೂಡಿಸಿ **"ಸತ್ಯಾಗ್ರಹ ಧರ್ಮ"** ಎಂಬ ಪುಸ್ತಕವನ್ನು ೧೯೨೨ರಲ್ಲಿ ಪ್ರಕಟಿಸಿದೆನು. ಅದರಲ್ಲಿಯೇ ಈ ಪ್ರಕಾರವಾಗಿಯೂ ಸ್ಪಷ್ಟ ತಿಳಿಸಿದೆನು.

ಮಹಾತ್ಮರಿಂದ ಪ್ರಣೀತವಾದ ಈ ಸತ್ಯಾಗ್ರಹ ಧರ್ಮವನ್ನು ನಾನು ಅನುಸರಿಸತಕ್ಕವನಾಗಿದ್ದರೂ ಮಹಾತ್ಮರ ಎಲ್ಲಾ ಅಭಿಪ್ರಾಯಗಳೂ ನನಗೆ ಮಾನ್ಯವಾಗಿವೆಯೆಂದು ತಿಳಿಯಬಾರದು. ಹಿಂದು ಧರ್ಮದ ವಿಷಯದಲ್ಲಿರುವ ಮಹಾತ್ಮರ ಅಭಿಪ್ರಾಯಗಳಲ್ಲಿ ಅನೇಕ ಸಂಗತಿಗಳು ನನಗೆ ಸಮ್ಮತವಿಲ್ಲ. ಮತ್ತು ರಾಷ್ಟ್ರೀಯ ಸಭೆಯ ಧ್ಯೇಯ(Creed)ದಲ್ಲಿ ಸ್ವರಾಜ್ಯ ಸ್ಪಷ್ಟೀಕರಣದ ವಿಷಯದಲ್ಲಿರುವ ಮಹಾತ್ಮರ ಅಭಿಪ್ರಾಯವು ನನಗೆ ಒಪ್ಪಿಗೆಯಿಲ್ಲ. ಆದುದರಿಂದ ನಾನು ರಾಷ್ಟ್ರೀಯ ಸಭೆಗೆ ಮೆಂಬರನಾಗಿಲ್ಲ.

ಈ ಪ್ರಕಾರ ರಾಷ್ಟ್ರಿಯ ಸಭೆಯ ಸಂಬಂಧವಿಲ್ಲದ ಕೇವಲ ನೈತಿಕ ಮತ್ತು ಆತ್ಮೀಯ ತತ್ವಗಳನ್ನು ಪ್ರಸಾರಗೊಳಿಸುವ ಸತ್ಯಾಗ್ರಹ ಸಮಾಜವನ್ನು ಗಾಂಧೀಜಿಯವರ ೫೪ನೆಯ ವರ್ಷ ವರ್ಧಂತಿಯ ದಿವಸ (ಶಾ. ಶ. ೧೮೪೪ನೆಯ ಭಾದ್ರಪದ ಬಹುಳ ೧೨ ಸೋಮವಾರ ತಾ. ೧೮.೦೯.೨೨) ಹುಬ್ಬಳ್ಳಿಯಲ್ಲಿ ಸ್ಥಾಪಿಸಿದೆನು. ಗಾಂಧೀಜಿಯವರನ್ನು ಹಿಡಿದು ಕಾರಾಗೃಹದಲ್ಲಿಟ್ಟಿದ್ದು ಮಾರ್ಚ ೧೮ನೆಯ ತಾರೀಖಿನ ದಿನ. ಆದಕಾರಣ ಪ್ರತಿ ತಿಂಗಳ ೧೮ನೆಯ ತಾರೀಖನ್ನು ಗಾಂಧಿ ದಿನವನ್ನಾಗಿ ಆಚರಿಸುವ ರೂಢಿಯು ದೇಶದಲ್ಲಿ ಪ್ರಾರಂಭವಾಗಿತ್ತು. ಆ ಪ್ರಕಾರ ಸತ್ಯಾಗ್ರಹ ಸಮಾಜ ಸ್ಥಾಪನೆಯ ದಿನ ಆ ಚಟುವಟಿಕೆಯೂ ಹುಬ್ಬಳ್ಳಿಯಲ್ಲಿ ನಡೆದಿತ್ತು. ಡಾ. ಹರ್ಡಿಕರರು ಈ ಸಮಾಜ ಸ್ಥಾಪನೆಯ ಸಮಾರಂಭಕ್ಕೆ ಬಹು ಸಹಾಯಮಾಡಿದರು. ಈ ಸಮಾಜಕ್ಕೆ ಹುಬ್ಬಳ್ಳಿಯ ಶ್ರೀ ಶಹಾ ವಿಸನಜಿ ಶೇಟರು. ಅಧ್ಯಕ್ಷರಾಗಿಯೂ ಶ್ರೀ ಅಲೂರ ನಾಗಪ್ಪನವರು ಶಿರಸಿ ಇವರು ಕೋಶಾಧ್ಯಕ್ಷರಾಗಿಯೂ ಶ್ರೀ. ಹೆಚ್. ನಾರಾಯಣ ಶರ್ಮರವರು ಮತ್ತು ನಾಮ ಕಾರ್ಯದರ್ಶಿಗಳಾಗಿಯೂ ನೇಮಕವಾದೆವು.

ಪೃಥ್ವಿಯ ನಕ್ಷೆಯಲ್ಲಿ ಮಧ್ಯ ರಾಟಿಯನ್ನು ಚಿತ್ರಿಸಿದ್ದುದೇ ಈ ಸಮಾಜದ ಚಿಹ್ನವೆಂದು ಗೊತ್ತುಮಾಡಿದೆನು. ಇಂಗ್ಲೀಷಿನಲ್ಲಿಯೂ ಈ ಸಮಾಜದ ಉದ್ದೇಶ, ನಿಯಮಗಳನ್ನು ಮುದ್ರಿಸಿ ಪ್ರಕಟಮಾಡಿದೆನು. ಈ ಪ್ರಕಾರ ಈ ಸಮಾಜದ ಎಲ್ಲರ ಕಾರ್ಯಕ್ರಮಗಳನ್ನು ಗೊತ್ತುಪಡಿಸಿದಮೇಲೆ ಈ ತತ್ವಗಳನ್ನು ಪ್ರಸಾರಗೊಳಿಸಲು ಪ್ರಚಾರಕರು ಬೇಕಾಗುವುದರಿಂದ ಅಂಥವರ ಸಿದ್ಧತೆಗಾಗಿ ಒಂದು ಆಶ್ರಯವನ್ನು ಸ್ಥಾಪಿಸಬೇಕೆಂತಲೂ ಯೋಚಿಸಿ ಆ ಪ್ರಯತ್ನವನ್ನು ಮಾಡಲಾರಂಭಿಸಿದೆನು.

❖❖

ಆಶ್ರಮ ವಾಸ

(ಕ್ರಿ. ಶ. ೧೯೨೩-೧೯೨೫)

ಸತ್ಯಾಗ್ರಹದ ಒಂಭತ್ತು ತತ್ವಗಳನ್ನು ಪ್ರಸಾರಮಾಡುವಂತಹ ಒಳ್ಳೆಯ ಪ್ರಚಾರಕರನ್ನು ತಯಾರು ಮಾಡಲು ಒಂದು ಆಶ್ರಮವನ್ನು ಸ್ಥಾಪಿಸಬೇಕೆಂತಲೂ ಅಲ್ಲಿ ತಮ್ಮ ನಡೆ ನುಡಿಗಳಿಂದ ತಯಾರಾದವರು ದೇಶದಲ್ಲಿ ಸಂಚರಿಸಿ ಈ ತತ್ವಗಳನ್ನು ಪ್ರಸಾರ ಮಾಡಿದರೆ ಬಹು ಪ್ರಯೋಜನವಾಗುವುದೆಂತಲು ಯೋಚಿಸಿ ಗಾಂಧೀಜಿ ಆಶ್ರಮವನ್ನು ಸ್ಥಾಪಿಸಲು ೧೯೨೩ರಲ್ಲಿ ಪ್ರಯತ್ನಿಸಿದೆನು. ನನ್ನ ಯಾವ ಕಾರ್ಯಕ್ಕಾದರೂ ಶ್ರೀ ಬಾಳಪ್ಪನವರ ಸಹಾಯ ಸಲಹೆಗಳು ಬೇಕೇ ಬೇಕಾಗಿದ್ದವು. ಹರಿಹರದ ತುಂಗಭದ್ರಾ ತೀರದಲ್ಲಿ ಅವರ ಭೂಮಿ ಇದ್ದಿತು. ಅಲ್ಲಿ ಆಶ್ರಮ ಸ್ಥಾಪಿಸಬೇಕೆಂದು ಗೊತ್ತು ಮಾಡಿದ್ದೆನು. ಹತ್ತು ವರುಷಗ ಹಿಂದೆ ಹೊಳೆದ ಯೋಚನೆ ಆಗ ಕಾರ್ಯ ರೂಪದಲ್ಲಿ ಬರಲು ಪ್ರಾರಂಭವಾಯಿತು. ಆಗ ಕರ್ನಾಟಕದಲ್ಲಿ ಆಶ್ರಮದ ವಿಚಾರವೇ ಇಲ್ಲದಿದ್ದುದರಿಂದಲೂ ದೇಶದಲ್ಲಿ ಅದ್ಭುತ ಜಾಗೃತಿಯುಂಟಾಗಿದ್ದುದರಿಂದಲೂ ಗಾಂಧೀಜಿಯವರ ತತ್ವ ಪ್ರಸಾರದ ಆಶ್ರಮಕ್ಕೆ ಅನೇಕರು ಬರಬಹುದೆಂದು ನನ್ನ ಯೋಚನೆ.

ಸತ್ಯಾಗ್ರಹಾಶ್ರಮ ಸ್ಥಾಪನೆ : ಹರಿಹರ ಸ್ಟೇಸನ್ನಿನಿಂದ ಮೂರು ಮೈಲುಗಳ ದೂರದಲ್ಲಿ ತುಂಗಭದ್ರೆಯ ದಂಡೆಗೆ ಶ್ರೀ ಬಾಳಪ್ಪನವರ ಭೂಮಿಯಲ್ಲಿ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿ ತಾ. ೨೫.೦೧.೧೯೨೩ ನೆಯ ದಿವಸ ಈ ಕಾರ್ಯವನ್ನು ಪ್ರಾರಂಭಿಸಿದೆನು. ಆಶ್ರಮವಾಸಿಗಳು ಅಪರಿಗ್ರಹ ವ್ರತವನ್ನು (ಎಂದರೆ ಆದಷ್ಟು ಕಡಿಮೆ ಸಾಮಾನುಗಳನ್ನು ಉಪಯೋಗಿಸುವ ವ್ರತ) ಕೈಕೊಳ್ಳುವುದರಿಂದ ಬಹು ಚಿಕ್ಕ ಮಂಟಪಗಳನ್ನು ಕಟ್ಟಿಸಬೇಕೆಂದು ಯೋಚಿಸಿ ೭ ಅಡಿ ಅಗಲ ೯ ಅಡಿ ಉದ್ದ ಇರತಕ್ಕ ಕಲ್ಲು ಹಾಸಿಗೆಯ ಇಟ್ಟಂಗಿ ಗೋಡೆಯ ಎರಡು ಬೇರೆ ಬೇರೆ ಕಟ್ಟಡಗಳನ್ನು ಕಟ್ಟಿಸಿದೆನು. ಇವುಗಳಿಗೆ ೩೭೫ರೂ. ೧೪ ಅಣೆ ಒಟ್ಟು ವೆಚ್ಚವಾದವು. ಶಿರಸಿಯ ಶ್ರೀ ಆಲೂರು ನಾಗಪ್ಪ ಶೆಟ್ಟರು, ಶ್ರೀ ಬಾಳಪ್ಪನವರೂ ಈ ಕಟ್ಟಡಗಳಿಗೆ ಹೆಚ್ಚು ಧನಸಹಾಯ ಮಾಡಿದರು.

ನಾನು ಆಶ್ರಮಕ್ಕೆ ಹೋಗುವ ಸಿದ್ದತೆಗಳನ್ನು ಮಾಡಲಾರಂಭಿಸಿದೆನು. ಊರಲ್ಲಿ ನನ್ನ ಕಾರ್ಯ ಸಂಬಂಧಗಳನ್ನು ಬಿಡಹತ್ತಿದೆನು. ತಾ. ೧೫.೦೨.೧೯೨೩ರಲ್ಲಿ ಜ್ಞಾನ ಪ್ರಸಾರಕ ಸಂಘಕ್ಕಿದ್ದ ಸಂಬಂದವನ್ನು ಬಿಟ್ಟೆನು. ರಾಟಿಯಲ್ಲಿ ನೂಲು ತೆಗೆಯಲು ಕಲಿತೆನು. ಕಂಡಕಂಡವರಲ್ಲಿ ಅಥವಾ

ಅಂಗಡಿಗಳಲ್ಲಿ ಸಾಲ ಮಾಡುವ ಪದ್ಧತಿಯೇ ಇಲ್ಲ. ಆದುದರಿಂದ ಕೊಡುಕೊಳುವ ವ್ಯವಹಾರವೇನೂ ಇರಲಿಲ್ಲ. ಶ್ರೀ ಬಾಳಪ್ಪನವರಿಗೆ ಮಾತ್ರವೇ ನಾನು ಸಾಲಗಾರ. ರಾಷ್ಟ್ರಜೀವನ ಗ್ರಂಥಮಾಲೆಯನ್ನು ನಿಲ್ಲಿಸಿ ಅವರ ರೂ.ಗಳನ್ನು ತಿರುಗಿ ಕೊಟ್ಟೆನು. ಶ್ರಿ ಹಿರೇಕೆರೂರು ಅಡಿವೆಪ್ಪನವರಿಗೆ ಕೊಡಬೇಕಾದ ಹಣವಿಗಾಗಿ ನನ್ನ ಎಲ್ಲ ಪುಸ್ತಕಗಳನ್ನೂ ಶ್ರಿ ಬಾಳಪ್ಪನವರ ಕಡೆಗೆ ಕೊಟ್ಟೆನು.

ಶ್ರೀ ರಾಜಗೋಪಾಲಾಚಾರ್ಯರು ಆಗ ದಾವಣಗೆರೆಗೆ ಬರುವವರಿದ್ದರು. ಅವರಿಗೆ ಸ್ವರಾಜ್ಯ ಫಂಡಿಗೆಂದು ಕೊಡಲು ೩೫೦ ರೂ. ಗಳನ್ನು ಶ್ರೀ ಶಿರೂರು ಲಕ್ಷ್ಮಣರಾಯರು ಶ್ರೀ ಶೇಟ ರುಸ್ತುಮಜಿಯವರು ನಾನು ಕೂಡಿ ಕೂಡಿಸಿದ್ದೆವು. ಅವರು ಬಾರದೆ ಮೌಲಾನ ಮೋಜಮ್ ಅಲಿಯವರು ಬಂದದ್ದರಿಂದ ೧೫೧. ರೂ. ಕೊಟ್ಟು ಬಾಕಿ ಹಣವನ್ನು ಅಲ್ಲಿಯ ಖಾದಿ ಕೆಲಸಕ್ಕಾಗಿ ಇಟ್ಟುಕೊಳ್ಳಬೇಕೆಂದು ಗೊತ್ತುಮಾಡಿದ್ದಾಯಿತು.

ಈ ಪ್ರಕಾರ ಒಂದು ತರದ ಸನ್ಯಾಸ ವ್ರತ ಸ್ವೀಕರಿಸುವ ಸಿದ್ದತೆಯಲ್ಲಿಯೇ ಇದ್ದುದನ್ನು ನೋಡಿ ನನ್ನ ತಾಯಿಯವರಿಗೆ ವ್ಯಸನ. ನನ್ನ ಭಾವಿ ಆಶ್ರಮದ ಸುತ್ತ ೧ ಮೈಲುಗಳಲ್ಲಿ ಒಬ್ಬರಾದರೂ ಇಲ್ಲ. ಇಲ್ಲಿ ನಾನೊಬ್ಬನೇ ಇರುವುದು. ನನ್ನ ತಾಯಿಯವರಿಗೆ ಇಷ್ಟವಿಲ್ಲ. ಅವರು ಹೇಳಿದರೆ ನಾನು ಕೇಳುವುದಿಲ್ಲವೆಂಬುದು ಅವರಿಗೆ ಗೊತ್ತು. ನಾನು ಅವರನ್ನು ಹುಬ್ಬಳ್ಳಿಗೆ ನನ್ನ ಅಣ್ಣನವರ ಕಡೆಗೆ ಕಳುಹಿಸಬೇಕೆಂದು ಗೊತ್ತುಮಾಡಿದೆನು. “ನಾನೂ ಆಶ್ರಮದಲ್ಲಿ ನಿನ್ನ ಸಂಗಡಲೇ ಇರತಕ್ಕವಳೆಂದು” ಅವರ ಆಗ್ರಹ. ಅಲ್ಲಿಯ ನಿಯಮಗಳಂತೆ ನಡೆಯಲೂ ಸಿದ್ದ. ಖಾದಿಯನ್ನೇ ಉಪಯೋಗಿಸಲು ಆಗಲೇ ಪ್ರಾರಂಭಿಸಿದ್ದರು. ಆಗ ಅವರಿಗೆ ೭೩ ವರುಷ. ತಾ: ೨೫.೦೩.೧೯೨೩ನೆಯ ದಿವಸ ಅವರನ್ನು ಹುಬ್ಬಳ್ಳಿಗೆ ಕಳುಹಿಸಿದೆನು.

ಆಶ್ರಮ ಪ್ರವೇಶ : ಮೊದಲೇ ಗೊತ್ತು ಮಾಡಿದಂತೆ ರಾಮನವಮಿಯ ದಿನ (ತಾ. ೨೬.೦೩.೧೯೨೩ನೆಯ ದಿನ) ಮಧ್ಯಾಹ್ನ ೧೧ ಗಂಟೆಗೆ ಸತ್ಯಾಗ್ರಹ ಆಶ್ರಮ ಪ್ರವೇಶದ ಸಮಾರಂಭ ಜರುಗಿತು. ದಾವಣಗೆರೆ ಮತ್ತು ಹರಿಹರಗಳಿಂದ ೧೬ ಜನರು ಈ ಸಮಾರಂಭಕ್ಕೆ ಬಂದಿದ್ದರು. ನಾನು ನನ್ನ ಭಾಷಣದಲ್ಲಿ ೧೬ ವರುಷ ಹತ್ತು ತಿಂಗಳು ೨೧ ದಿನ ದಾವಣಗೆರೆಯ ಸಂಬಂಧ ನನಗಿದ್ದುದು ಇಂದು ತೊಲಗಿತೆಂದು ಹೇಳುವಾಗ ಕಣ್ಣೀರು ಬಂದವು. ಅಷ್ಟು ನನಗೆ ಆ ಊರ ಸಂಬಂಧ ಬೆಳೆದಿತ್ತು. ಹೆಚ್ಚಾಗಿ ಶ್ರೀ ಬಾಳಿಪ್ಪನವರ ಕುಟುಂಬದವರು ಮತ್ತೆ ಕೆಲವು ಬಂಧು ಪ್ರೇಮದ ಹಿತಚಿಂತಕರು ತಮ್ಮ ಪ್ರೇಮಾದರಗಳಿಂದ ನನ್ನನ್ನು ಅಷ್ಟು ತಮ್ಮವನನ್ನಾಗಿ ಮಾಡಿಕೊಂಡಿದ್ದರು. ಕೈ. ಕಣವಿ ಬಸಪ್ಪ ಎಂಬುವವರಿಗೆ ಆಗ ಬಹು ವಿಷಾದವಾಯಿತು. ಶ್ರೀ ಬಾಳಪ್ಪನವರು ನನ್ನ ಗುಣಸ್ವಭಾವಗಳನ್ನು ಆಗ ಕೂಡಿದವರಿಗೆ ತಿಳಿಸಿದರು. ಆ ದಿನ ಸಾಯಂಕಾಲ ನನ್ನನ್ನು ಅಲ್ಲಿಯೇ ಬಿಟ್ಟು ಹೋಗುವಾಗ ಅವರಿಗೂ ಎಷ್ಟೋ ವಿಷಾದ ನನಗೂ ವ್ಯಸನ.

ಆಶ್ರಮ ಜೀವನ : ಅದೇ ದಿನವೇ ನಾನು ಅಂಗಿ ಹಾಕಿಕೊಳ್ಳುವುದನ್ನೂ ತಲೆಯ ಮೇಲೆ ಟೊಪ್ಪಿಗೆ ಹಾಕಿಕೊಳ್ಳುತ್ತಿದ್ದುದನ್ನೂ ಕಾಲಿನಲ್ಲಿ ಜೋಡು ಮೆಟ್ಟುತ್ತಿದ್ದುದನ್ನೂ ಬಿಟ್ಟುಬಿಟ್ಟೆನು. ಅಡವಿಯಲ್ಲಿರುವವನಾದುದರಿಂದ ಯಾವ ಲೋಹದ ಸಾಮಾನುಗಳು ಇರಬಾರದೆಂದು ಲಿಂಗ ಧರಿಸುವ ಬೆಳ್ಳಿಯ ಲಿಂಗದ ಕಾಯಿಯನ್ನು ತೆಗೆದು ಗಂಧದ ಕಾಯಿಯನ್ನು ಧರಿಸಲಾರಂಭಿಸಿದೆನು. ಹತ್ತು ವರುಷಗಳಿಂದಲೂ ಉಪಯೋಗಿಸುತ್ತಿದ್ದ ಬಿ. ಟೈಮಸೀಸ್ (೧/ರೂ. ಕ್ರಯ ಕೊಟ್ಟಿದ್ದು)

ಒಂದು ಚಿಕ್ಕ ಕನ್ನಡಿ ಇವೆರಡೇ ಬೇರೆ ಪದಾರ್ಥಗಳು ಭಜನೆಗಾಗಿ ಒಂದು ಏಕದಾರಿಯನ್ನು ತಂದಿದ್ದೆನು. ೨೬೫ ಪುಸ್ತಕಗಳು, ಇವುಗಳಲ್ಲಿ ೧೪೨ ಮರಾಠಿ, ೨೬ ಹಿಂದಿ, ೭೨ ಕನ್ನಡ, ೨೫ ಇಂಗ್ಲೀಷ್, ಪುಸ್ತಕಗಳಿದ್ದವು. ಇವುಗಳ ಒಟ್ಟು ಕ್ರಯ ೨೭೯ ರೂ. ೨ಆಣೆ, ೨ ರಾಟಿ ಒಂದು ಬೀಸುವಕಲ್ಲು, ೮-೧೦ ಅಡಿಗೆಯ ಚಿಕ್ಕ ಪಾತ್ರೆಗಳು, ೪-೬ ಚಿಕ್ಕ ದೊಡ್ಡ ಡಬ್ಬಿಗಳು. ಇಷ್ಟೇ ನನ್ನ ಸಂಗಡಿದ್ದ ಸಾಮಾನುಗಳು.

ಒಂದೇ ವಾರಕ್ಕೆ ಬೇಕಾಗುವಷ್ಟು ಅಕ್ಕಿ, ಹೆಸರುಬೇಳೆಗಳನ್ನು ತಂದಿಡುವುದು. ಅವಲಕ್ಕಿ, ಬೆಲ್ಲ ಸೇಂಗಾ, ಕೊಬ್ಬರಿ ಇವುಗಳನ್ನು ಅತಿಥಿಗಳು ಬಂದರೆ ಕೊಡಲು ತರಿಸಿಟ್ಟಿದ್ದೆನು. ಆಶ್ರಮ ಪ್ರವೇಶದ ದಿನದಿಂದಲೇ ದಿನಚರ್ಯವನ್ನು ಈ ಪ್ರಕಾರ ಗೊತ್ತು ಮಾಡಿಕೊಂಡಿದ್ದೆನು. ಬೆಳಗಿನ ೪ ಗಂಟೆಗೆ ಎಳುವುದು ೪ ರಿಂದ ೬ ಭಜನೆ ಮತ್ತು ಸ್ನಾನ. ೬-೮ ಪುಸ್ತಕ ಬರೆಯುವ ಕೆಲಸ. ೮-೯ ತೋಟದ ಕೆಲಸ. ೯-೧೦ ನೂಲುವುದು. ೧೦-೧೧ ಊಟ. ೧೧-೧ ಟಪಾಲು ಬರೆಯುವುದು ಮತ್ತು ಪತ್ರಿಕಾವಾಚನ ೧-೩ ನೂಲುವುದು. ೩-೪ ಲೇಖನ ೪-೫ ತೋಟದ ಕೆಲಸ. ೫-೬ ಊಟ ವಿಶ್ರಾಂತಿ ೬-೭ ಭಜನೆ. ೭-೯ ಪುಸ್ತಕ ಬರೆಯುವುದು, ೯-೪ ನಿದ್ರೆ. ಋತುಮಾನದಂತೆ ಇದರಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತಿದ್ದಿತು. ಆಶ್ರಮಕ್ಕೆ ಯಾರಾದರೂ ಬಂದರೆ ಆಗಲೂ ಕಾರ್ಯಕ್ರಮ ಬೇರೆಯಾಗುತ್ತಿತ್ತು. ಆದರೆ ನೂಲುವುದು ಮತ್ತು ಸಾಯಂಕಾಲದ ಊಟ ಇವು ಮಾತ್ರ ತಪ್ಪದೇ ನಡೆಯತಕ್ಕವುಗಳಾಗಿದ್ದವು.

ಆಶ್ರಮವೆಂದರೇನೆಂಬುದನ್ನು ನೋಡಲು ಸುತ್ತಲಿನ ಅನೇಕ ಗ್ರಾಮದವರು ಮೊದಲು ಮೊದಲು ಬಂದು ನೋಡಿ, ಇದೊಂದು ಸಾಧುಗಳ ಮಠವೆಂದು ತಿಳದವರೇ ಹೆಚ್ಚು. ಕೆಲವು ಲಂಬಾಣಿ ಹುಡುಗರಿಗೆ ಶಿಕ್ಷಣ ಕೊಡಲು ಪ್ರಯತ್ನಿಸಿದೆನು. ಯಾವ ಹುಡುಗರೂ ಕ್ರಮವಾಗಿ ಬಂದು ಕಲಿಯಲಿಲ್ಲ. ಸುತ್ತಲಿನ ಕೆಲವು ಹಳ್ಳಿಯವರು ತಮ್ಮ ಹುಡುಗರಿಗೆ ಕಲಿಸಿರೆಂದು ಕಳಿಸಿಕೊಟ್ಟ ಹುಡುಗರು ೮-೧೦ ದಿನ ಬಂದು ಬಿಟ್ಟುಬಿಟ್ಟರು. ಅಲ್ಲಿಯ ರೀತಿ ಮಾತುಕಥೆ ಆ ಹುಡುಗರಿಗೆ ಸರಿಬರುತ್ತಿರಲಿಲ್ಲ. ಅವರಿಗೆ ಸರಿಯಾಗಿದ್ದುಕೊಂಡು ಕಲಿಸುವ ರೀತಿ ನನಗೆ ಬರಲಿಲ್ಲ. ನಾನು ನನ್ನ ಬೇರೆ ಕೆಲಸಗಳಲ್ಲಿಯೇ ಆಸಕ್ತನು. ಹೊತ್ತಿಗೆ ಸರಿಯಾಗಿ ಸ್ವಲ್ಪ ಕಾಲ ಅವರಿಗೆ ಹೇಳಿಕೊಡುತ್ತಿದ್ದೆನು. ಬೇರೆ ಕಾಲದಲ್ಲಿ ಅಲ್ಲಿರಲು ಬೇಸರ ಬರುತ್ತಿತ್ತು.

ಹರಿಹರದಿಂದ ಒಬ್ಬಿಬ್ಬ ತರುಣರು ಆಶ್ರಮದಲ್ಲಿದ್ದು ಮುಂದೆ ಪ್ರಚಾರಕಾರಗಬೇಕೆಂದು ಬಂದರು. ಅವರು ಕೂಡಾ ಅಲ್ಲಿ ವಾಸವಾಗಿರಲು ಒಪ್ಪಲಿಲ್ಲ. ನಾಲ್ಕಾರು ದಿನಗಳಲ್ಲಿಯೇ ಅದು ಅವರಿಗೆ ಒಂದು ಕಾರಾಗೃಹವಾಗಿಯೇ ಪರಣಮಿಸಿತು. ಯಾವ ಚಟಗಳಿಗೂ ಅವಕಾಶವಿಲ್ಲ. ತಪ್ಪದೇ ಏನಾದರೊಂದು ಕೆಲಸ ಮಾಡುತ್ತಿರಬೇಕು. ಅನ್ಯರ ಸಹವಾಸವಂತೂ ಶೂನ್ಯ ನಾನಾದರೋ ಹೆಚ್ಚು ಮಾತಾಡುವ ಸ್ವಭಾವದವನಲ್ಲ, ಕೆಲಸದ ಮಟ್ಟಿಗೆ ಮಾತನಾಡಿ ನಾನು ನನ್ನ ಕೆಲಸದಲ್ಲಿಯೇ ಇರುತ್ತಿದ್ದೆನು. ಹೋರಗಿನಿಂದ ಬರತಕ್ಕ ತರುಣರಲ್ಲಿ ಇಷ್ಟೆಲ್ಲಾ ಸಹಿಸುವ ಸಿದ್ಧತೆಯಿದ್ದರೇನೇ ಅಲ್ಲಿರುವುದು ಅವರಿಗೆ ಶಕ್ಯ.

ನನ್ನ ತಾಯಿಯುವರಿಗೆ ನನ್ನ ಕಡೆಗೇ ಮನಸು. ನಾನು ಹೇಗಿದ್ದೇನೆ? ಆಶ್ರಮ ಹೇಗಿದೆ? ಈ ಎಲ್ಲಾ ಸಂಗತಿಗಳನ್ನು ನೋಡಿಕೊಂಡು ಬರಲು ತಾ. ೩.೪.೧೯೨೩ನೆಯ ದಿವಸ ಒಬ್ಬರನ್ನು

ಕಳಿಸಿಕೊಟ್ಟರು. ಇಲ್ಲಿಯ ಸ್ಥಿತಿಯನ್ನು ಕೇಳಿ ತಾವೂ ಅಶ್ರಮದಲ್ಲಿಯೇ ವಾಸವಾಗಿರುವುದನ್ನು ನಿರ್ಧರಿಸಿ ತಾ. ೨೨.೪.೧೯೨೩ ನೆಯ ದಿನ ಆಶ್ರಮಕ್ಕೆ ಬಂದು ಅಲ್ಲೇ ಇರಲಾರಂಭಿಸಿದರು.

ಪ್ರಚಾರ ಕಾರ್ಯ : ಆಶ್ರಮದ ಸುತ್ತಲೂ ೩ ಮೈಲುಗಳೊಳಗಿರತಕ್ಕ ಎಲ್ಲ ಗ್ರಾಮಗಳಿಗೂ ಪ್ರಚಾರಕಾರ್ಯಕ್ಕಾಗಿ ಹೋಗಬೇಕೆಂದು ಯೋಚಿಸಿ ನದಿಹಳ್ಳಲ್ಲಿ ಎಂಬ ಗ್ರಾಮಕ್ಕೆ ತಾ. ೯.೪.೧೯೨೩ನೆಯ ದಿವಸ ಹೋದೆನು. ಹೋಗುವಾಗ ಸಂಗಡ ಏಕತಾರಿಯನ್ನು ತೆಗೆದುಕೊಂಡು ಹೋಗುತ್ತಿದ್ದೆನು. ಆ ಹಳ್ಳಿಯ ಮುಖ್ಯವಾದ ಒಂದು ಗುಡಿಯಲ್ಲಿ ಹೋಗಿ ಏಕತಾರಿ ಬಾರಿಸುತ್ತಾ ಸತ್ಯಾಗ್ರಹ ತತ್ವದ ಪದಹೇಳಲು ಪ್ರಾರಂಭಿಸುತ್ತಿದ್ದೆನು. ಆಗ ಕೆಲವರು ಕೂಡಿದ ಮೇಲೆ ಆ ಊರ ಸ್ಥಿತಿಗತಿಗಳನ್ನು ಕೇಳಿಕೊಂಡು ಖಾದಿ ಪ್ರಸಾದರದ ವಿಚಾರವಾಗಿ, ದುಶ್ಚಟಗಳನ್ನು ಬಿಡುವ ಸಂಬಂಧವಾಗಿ ಉಪದೇಶಮಾಡಿ ತಿರುಗಿ ಆಶ್ರಮಕ್ಕೆ ಬರುತ್ತಿದ್ದೆನು. ಹರಿಹರದ ನಾಯಿಕ ಎಂಬ ಒಬ್ಬ ತರುಣರೂ ಆಗ ನನ್ನ ಸಂಗಡ ಕೆಲವು ಸಾರೆ ಬಂದಿದ್ದರು.

ಪೂಜ್ಯರ ಆಗಮನ : ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಕೃಪೆಯಂತೂ ನಾನೆಲ್ಲಿದ್ದರೂ ಇದ್ದುದೆ. ಅಂತೆಯೇ ಧಾರವಾಡ ಬೋರ್ಡಿಂಗಿನ ೪೩ ವಿದ್ಯಾರ್ಥಿಗಳನ್ನು ಕರೆದುಕೊಂಡು ತಾ. ೨೪.೦೪.೧೯೨೩ನೆಯ ದಿವಸ ಆಶ್ರಮಕ್ಕೆ ಆಗಮಿಸಿ ಪುರಾಣ ಪ್ರವಚನಗಳನ್ನು ನಡೆಯಿಸಿ ಆನಂದವನ್ನು ಪ್ರದರ್ಶಿಸಿದರು. ಲಿಂಗೈಕ್ಯರಾದ ಶ್ರೀ ಹಾನಗಲ್ ಕುಮಾರಸ್ವಾಮಿಗಳೂ ತಾ. ೦೩.೦೬.೧೯೨೩ನೆಯ ದಿವಸ ಆಶ್ರಮಕ್ಕೆ ಆಗಮಿಸಿ ಕಾರ್ಯಕ್ರಮಗಳನ್ನೆಲ್ಲಾ ಕೇಳಿ ಸಂತೋಷಪಟ್ಟು ಆಶ್ರಮಕ್ಕೆ ಒಂದು ನೂರು ರೂ. ಆಶೀರ್ವದಿಸುವುದಾಗಿ ಅಪ್ಪಣೆ ಕೊಡಿಸಿದರು. ಈ ಪ್ರಕಾರ ಆಶ್ರಮದ ಕಾರ್ಯವೇನೋ ಯೋಗ್ಯವಾದುದಾಗಿಯೇ ಬಹು ಜನರಿಗೆ ತೋರಿತು.

ಬೆಂಗಳೂರು, ವಿಜಾಪುರ, ಬಾಗಲಕೋಟೆ, ಬೀಳಗಿ, ಗಲಗಲಿ ಮೊದಲಾದ ಸ್ಥಳಗಳಿಗೆ ಹೋಗಿ ಸತ್ಯಗ್ರಹ ತತ್ವ ಪ್ರಚಾರಮಾಡಿದೆನು. ಯೋಗ್ಯರಾದ ತರುಣರು ಆಶ್ರಮದಲ್ಲಿರಲು ದೊರೆಯುವರೇ? ನೋಡಬೇಕೆಂಬುದೇ ಆ ಪ್ರವಾಸದ ಮುಖ್ಯೋದ್ದೇಶವಾಗಿತ್ತು. ಆ ವರುಷ ವಿಜಾಪುರದಲ್ಲಿ ಜರುಗಿದ ವೀರಶೈವ ತರುಣ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಬೇಕೆಂದು ಅಲ್ಲಿಯ ಸ್ವಾಗತ ಸಂಘದವರು ಅಪೇಕ್ಷಿಸಿದರು. ನಾನು ಅದಕ್ಕೆ ಒಪ್ಪಿಕೊಳ್ಳಲಿಲ್ಲ. ಆದರೆ ತರುಣ ಸಮ್ಮೇಳನಕ್ಕೇನೊ ಹೋದೆನು. ಆಶ್ರಮಕ್ಕೆ ಬರುವಂತಹ ತರುಣರೇನೂ ನನಗೆ ಅಲ್ಲಿ ಕಾಣಲಿಲ್ಲ.

ಗ್ರಂಥ ರಚನೆ : ಆಶ್ರಮದಲ್ಲಿ ಓದಲಿಕ್ಕೂ ಬರೆಯಲಿಕ್ಕೂ ಹೆಚ್ಚಾದ ಅವಕಾಶ ದೊರೆಯುತ್ತಿತ್ತು. ಆದುದರಿಂದ ಬರವಣಿಗೆಯ ಕೆಲಸ ಹೆಚ್ಚು ಜರುಗಿತು. **'ಸತ್ಯಾಗ್ರಹ, ಬ್ರಹ್ಮಚರ್ಯ, ಅಹಿಂಸೆ, ಖಾದಿ, ಸತ್ಯಾಗ್ರಹ ಪದ್ಯಾವಳಿ'** ಈ ಐದು ಚಿಕ್ಕ ಪುಸ್ತಕಗಳನ್ನು ಪ್ರಕಟಗೊಳಿಸಿದೆನು. ಸತ್ಯಾಗ್ರಹ ಧರ್ಮದ ಇವು ಒಂದೊಂದು ತತ್ವಗಳು. ಜನರಿಗೆ ಸ್ಪಷ್ಟ ತಿಳಿಯುವಂತೆ ಸಂವಾದರೂಪದಲ್ಲಿ ಇವುಗಳನ್ನು ಬರೆದಿದ್ದೆನು. ಬ್ರಹ್ಮಚರ್ಯ ಎಂಬ ಪುಸ್ತಕಕ್ಕೆ ಶ್ರೀಮನ್ನಿರಂಜನ ಗುರುಮಠಕಲ್ಲ ಶ್ರೀ ಶಾಂತವೀರ ಸ್ವಾಮಿಗಳು ಧನಸಹಾಯಮಾಡಿದರು. **ಖಾದಿ** ಮತ್ತು **ಅಹಿಂಸಾ** ಎಂಬ ಪುಸ್ತಕಗಳಿಗೆ ಅನುಕ್ರಮವಾಗಿ ಶ್ರೀ ಶೇಟ ರುಸ್ತುಮಜಿ ಭಾಯಿ ಪುಣೆಗಾರ ಎಂಬ ಪಾರ್ಶಿ ಮಿತ್ರರು ಮತ್ತು ಬಾಗಲಕೋಟೆ ಕಚ್ಚಿದ ಸಾವೋ ಸ್ವಾಲ ಮಂಡಲಿಯವರು ಧನ ಸಹಾಯ ಮಾಡಿದರು. ಈ ಪ್ರಕಾರ ಸತ್ಯಾಗ್ರಹ ತತ್ವಗಳ ಪುಸ್ತಕಗಳಲ್ಲದೆ ೧೯೦೭ರಲ್ಲಿ **'ಜ್ಞಾನ ಪ್ರಕಾಶ'** ಪತ್ರಿಕೆಯಲ್ಲಿ ಪ್ರಕಟವಾಗಿದ್ದ

ಕೇರ್ ಹಾರ್ಡಿ ಎಂದ ಕೂಲಿಕಾರರ ಪಕ್ಷದ ಪಾರ್ಲಿಮೆಂಟ್ ಮೆಂಬರರ ಭಾರತ ಪ್ರವಾಸದ ಸಂಗತಿಗಳನ್ನೆಲ್ಲಾ ಕೂಡಿಸಿ **ಕೇರ ಹಾರ್ಡಿಯವರ ಭಾರತ ಪರ್ಯಟನ** ಎಂಬ ಪುಸ್ತಕವನ್ನು ಬರೆದು ಪ್ರಕಟಗೊಳಿಸಿದೆನು. ಭಗವಾನ್ ಬುದ್ದನ ನೈತಿಕ ತತ್ವಜ್ಞಾನ ನಮಗೆ ಬಹು ಪ್ರಿಯವಾಗಿದ್ದುದರಿಂದ **'ಭಗವಾನ್ ಬುದ್ದನ ಚರಿತ್ರೆ'**ಯನ್ನೂ ಬರೆದು ೧೯೨೩ರಲ್ಲಿಯೇ ಪ್ರಕಟಿಸಿದೆನು. ಈ ಪ್ರಕಾರ ಆ ವರುಷ ಗ್ರಂಥ ಪ್ರಸಾರದ ಕಾರ್ಯ ಎಷ್ಟೋ ತೃಪ್ತಿಕರವಾಗಿ ಜರುಗಿತು.

೧೯೧೫ ರಿಂದ ೧೯೨೩ರ ಅಂತ್ಯದವರೆಗೆ ಒಟ್ಟು ೧೫ ಪುಸ್ತಕಗಳನ್ನು ಬರೆದು ೩೩ ಸಾವಿರ ಪ್ರತಿಗಳನ್ನು ಪ್ರಸಾರಗೊಳಿಸಿದ್ದೆನು! **ಬುದ್ಧ ಚರಿತ್ರೆ**ಯಲ್ಲಿ ಈ ಸಂಗತಿಯನ್ನು ಆಗ ಪ್ರಕಟಿಸಿದೆ. ಇದರಿಂದ ನನ್ನ ಪುಸ್ತಕಗಳು ಬಹು ಜನಪ್ರಿಯವಾಗುತ್ತಿವೆಯೆಂದು ನನಗೆ ತುಂಬಾ ನಂಬಿಕೆ. **ಬುದ್ಧ ಚರಿತ್ರೆ**ಯಂತೆ **ಬಸವ ಚರಿತ್ರೆ**ಯನ್ನು ಐತಿಹಾಸಿಕ ರೂಪದಲ್ಲಿ ಬರೆಯಬೇಕೆಂದು ಯೋಚಿಸಿ ೧೯೨೩ನೆಯ ಬಸವ ಜಯಂತಿಯ ದಿವಸ ಈ ಕಾರ್ಯವನ್ನು ಪ್ರಾರಂಭಿಸಿದೆನು. ಆ ವರೆಗೆ ಬಸವಣ್ಣನವರ ವಿಚಾರವಾಗಿ ಪುರಾಣಗಳಿದ್ದವೇ ವಿನಾ ಚರಿತ್ರೆಯಿರಲಿಲ್ಲ. ಬಸವಣ್ಣನವರು ಐತಿಹಾಸಿಕ ಮಹಾಪುರುಷರೆಂದು ತಿಳಿಯುವುದು ಕೂಡಾ ತಪ್ಪೆಂದೇ ಕೆಲವರ ಭಾವನೆ! ನಂದಿಯ ಅವತಾರವೇ ವಿನಾ ಮನುಷ್ಯ ವರ್ಗದವರಲ್ಲದೆಂದೇ ಅವರ ಹೇಳಿಕೆ. ಈ ಸಂಬಂಧವಾಗಿ ಸಂಶೋಧನಾತ್ಮಕ ದೃಷ್ಟಿಯಿಂದ ಬರೆಯಲುಬೇಕಾದ ಸಂಗತಿಗಳ ಸಂಗ್ರಹಕ್ಕಾಗಿ ಬಾಗೇವಾಡಿ ಮೊದಲಾದ ಸ್ಥಳಗಳಿಗೆ ಹೋಗಿ ಬಂದೆನು. ವಿಜಾಪುರ, ಬಾಗಲಕೋಟೆ, ಗದಗ ಮೊದಲಾದ ಸ್ಥಳಗಳಲ್ಲಿ ಭಾಷಣ ಮೂಲಕ ನನ್ನ ವಿಚಾರಗಳನ್ನು ತಿಳಿಸಿ ಜನರ ಆಕ್ಷೇಪಣೆಗಳ ರೀತಿಗಳನ್ನು ತಿಳಿದುಕೊಂಡು ಅವುಗಳಿಗೆಲ್ಲಾ ಸಮಾಧಾನಕರವಾದ ಪದ್ಧತಿಯಲ್ಲಿ **ಬಸವ ಚರಿತ್ರೆ**ಯನ್ನು ಬರೆಯಲಾರಂಭಿಸಿದೆನು.

ವಿರೋಧಿಗಳ ಬಲವಾದ ಆಘಾತ : ಆಶ್ರಮ ವಾಸವು ನನಗೆ ತುಂಬಾ ಫಲಕಾರಿಯಾಗಿಯೇ ತೋರಿತು. ಆದರೆ ನಾನು ತಿಳಿದಂತೆ ಮಾತ್ರ ಯಾರೂ ಬರಲಿಲ್ಲ. ಅದರಿಂದ ನನ್ನ ಕಾರ್ಯಕ್ಕೇನೂ ಚ್ಯುತಿಯುಂಟಾಗಿರಲಿಲ್ಲ. ನಾನು ಈ ಪ್ರಕಾರ ಆಶ್ರಮದಲ್ಲಿದ್ದು ಕಾರ್ಯವನ್ನು ನಡೆಯಿಸಿರುವುದು ಡಾವಣಗೆರೆಯಲ್ಲಿ ಕೆಲವು ವಿರೋಧಿಗಳಿಗೆ ಸಹನವಾಗಲಿಲ್ಲ. ನಾನು ಆ ಊರನ್ನೇ ಬಿಟ್ಟು ಬಂದದ್ದರಿಂದ ಅವರಿಗೆ ನನ್ನ ವಿರುದ್ಧವಾಗಿ ಚಟುವಟಿಕೆ ನಡೆಯಿಸಲು ಎಷ್ಟೋ ಅನುಕೂಲವಾಯಿತು. ಆ ಸ್ಥಳದ ಮಟ್ಟಿಗೇನೇ ಇದ್ದ ನನ್ನ ಸಂಬಂಧವಾದ ಅವರ ವಿಚಾರವನ್ನು ದೇಶದಲ್ಲೆಲ್ಲಾ ಪ್ರಸಾರಗೊಳಿಸಿ ನನ್ನ ಬಗ್ಗೆ ಜನರಲ್ಲಿ ದುರಭಿಪ್ರಾಯವುಂಟಾಗುವಂತೆ ಮಾಡಬೇಕೆಂದು ಒಡನಾಡಿ ಎಂಬ ಹೆಸರಿನಿಂದ ಮೈಸೂರು ಸ್ಟಾರ್ ಪತ್ರಿಕೆಯಲ್ಲಿ ತಾ. ೧೭.೦೬.೧೯೨೩ ದಿವಸ ಒಂದು ಭಯಂಕರ ದೋಷಾರೋಪಣೆಯ ಲೇಖನವನ್ನು ಪ್ರಕಟಗೊಳಿಸಿದರು.

ನಾನು ತಾ. ೧೮.೦೬.೧೯೨೩ನೆಯ ದಿವಸ ಡಾವಣಗೆರೆಗೆ ಹೋಗಿದ್ದೆನು. ನನ್ನ ಹಿತಚಿಂತಕರು ಆ ಲೇಖನವನ್ನು ನನಗೆ ತಂದುತೋರಿಸಿ ಕಣ್ಣೀರುದುರಿಸಿ ಊರಲ್ಲಿ ಬಹು ಜನರಿಗೆ ತುಂಬಾ ಖೇದವಾಗಿದೆಯೆಂದು ಹೇಳಿದರು. ನಾನು ಓದಿದೆನು. ಬರೆದವರಾರೆಂಬುದೂ ನಮಗೆ ಗೊತ್ತೇ ಗೊತ್ತು. ಆಗೇನೂ ನನ್ನ ಮನಸಿಗೆ ಅಷ್ಟು ವ್ಯಥೆಯಾಗಲಿಲ್ಲ. ಹಾಗೇ ಸಾಯಂಕಾಲಕ್ಕೆ ಆಶ್ರಮಕ್ಕೆ ಬಂದೆನು. ಆ ದಿನ ರಾತ್ರೆ ಸರಿಯಾಗಿ ನಿದ್ರೆ ಬರಲಿಲ್ಲ. ಅದಕ್ಕೆ ಉತ್ತರ ಬರೆಯಬೇಕೆಂದು ಹಿಂದಿನ ಡೈರಿಗಳನ್ನು ತೆಗೆದು ಎಲ್ಲಾ ಸಂಗತಿಗಳನ್ನು ಕೂಡಿಸಿದೆನು. ಅದು ಅನೇಕರಿಗೆ ಸಂಬಂಧಪಡುವುದರಿಂದ

ತುಂಬಾ ಗಲಾಟೆಯಾಗಿ ಇದೊಂದು ದೊಡ್ಡವಾದದ ವಿಷಯವೇ ಆಗಬಹುದುದೆಂದು ಆಗಾಗ್ಗೆ ಯೋಚನೆ ಬರುತ್ತಿದ್ದಿತು. ಅವರಿಗೆ ಯಾವ ಉತ್ತರವನ್ನೂ ಬರೆಯದೆ ಸುಮ್ಮನೆ ಇರುವುದೇ ಲೇಸು. ಅವರೇ ಬೇಕಷ್ಟು ಬರೆಯಲೆಂದು ನಿರ್ಧರಿಸಿ ಉತ್ತರ ಬರೆಯುವುದನ್ನು ಬಿಟ್ಟೆನು. ಆದರೆ ಮನಸ್ಸಿನ ಮೇಲೆ ಹೆಚ್ಚಾದ ಆಘಾತವಾದುದರಿಂದ ಆಗಾಗ್ಗೆ ಅದೇ ಯೋಚನೆ ಬರುತ್ತಿತ್ತು.

ತಾ. ೨೧.೦೬.೧೯೨೩.ನೆಯ ದಿವಸ ಈ ಸಂಬಂಧವಾದ ಯೋಚನೆ ಸಂಪೂರ್ಣ ನಿವಾರಣೆಯಾಯಿತು. ಆ ಲೇಖನವನ್ನು ಓದಿ ಅನೇಕರು ವಿಷಾದಿಸಿ ಪತ್ರ ಬರೆದರು. ಅವರಲ್ಲಿ ನರಗುಂದದ ಕೈ ಕುದರಿಮೋತಿ ಚೆನ್ನಬಸಪ್ಪನವರೆಂಬ ೭೦ ವರುಷಗಳ ಅತ್ಯಂತ ಉತ್ಸಾಹಿ ಯಜಮಾನರ ಪತ್ರವು ಹೃದಯದ್ರಾವಕವಾಗಿತ್ತು. ಅವರು ಅದನ್ನು ಓದಿದ ದಿನ ರಾತ್ರೆ ಸರಿಯಾಗಿ ನಿದ್ರೆ ಮಾಡದೆ ಕಣ್ಣೀರುದುರಿಸಿದ ಭೀಕರ ಸ್ಥಿತಿಯನ್ನು ಬರೆದಿದ್ದರು. ಅವರಿಗೆ ನನ್ನಲ್ಲಿ ಅತ್ಯಧಿಕವಾದ ವಾತ್ಸಲ್ಯ, ನನ್ನ ಪುಸ್ತಕಗಳ ಪ್ರಸಾರಕರಲ್ಲಿ ಅಗ್ರಗಣ್ಯರು. ಹಿರೇಕೆರೂರು, ಹಾವೇರಿ ಮೊದಲಾದ ಕೆಲವು ಸ್ಥಳಗಳಿಂದ ನನ್ನ ಹಿತಚಿಂತಕರು ಅದಕ್ಕೆ ಉತ್ತರವಾಗಿ ತಮ್ಮ ಹೆಸರಿನಿಂದ ಪ್ರಕಟಿಸುವೆನೆಂದು ತಿಳಿಸಿದರು. ನಾನು ಅವರಿಗೂ ಕೂಡಾ ಉತ್ತರ ಬರೆಯಬೇಡಿರೆಂದು ತಿಳಿಸಿದೆನು.

ದಾವಣಗೆರೆಯ ನನ್ನ ಹಿತಚಿಂತಕರಲ್ಲಿ ಆರು ಜನರು ತಮ್ಮ ಹೆಸರುಹಾಕಿ ಒಡನಾಡಿ ಎಂಬವರ ಲೇಖನವನ್ನು ಖಂಡಿಸಿ ತಾ. ೨೯.೦೭.೧೯೨೩ನೆಯ ಮೈಸೂರು ಸ್ಟಾರ್‌ದಲ್ಲಿಯೇ ಒಂದು ಲೇಖನವನ್ನು ಪ್ರಕಟಗೊಳಿಸಿದರು. ಆಗ ಇದೊಂದು ಮುಖ್ಯ ಚರ್ಚೆಯ ವಿಷಯವೇ ಆಯಿತು. ಬನವಾಸಿ ಮತ್ತು ಶಿರಸಿ ಈ ಸ್ಥಳಗಳ ೧೪ ಜನ ವೀರಶೈವ ಪ್ರಮುಖರು ಒಡನಾಡಿಯು ಮಾಡಿದ ದೋಷಾರೋಪಣೆ ಮಿಥ್ಯವಾದದೆಂದು ಪ್ರಕಟಿಸಿದರು. ಇದೊಂದು ಆಗ ಬಹುಚರ್ಚೆಯ ವಿಷಯವಾಗಿದ್ದುದರಿಂದ ಹುಬ್ಬಳ್ಳಿಯ ವಾರ್ತಾ ಪ್ರಸಾರಕ ಸಂಘದವರೂ ಈ ಸಂಗತಿಯನ್ನು ಪ್ರಸಾರಗೊಳಿಸಿದರು. ನಮ್ಮ ಜನರ ಒಳಪಂಗಡಗಳ ಮೇಲು ಕೀಳಿನ ಈ ದ್ವೇಷವನ್ನು ನೋಡಿ ನನಗೆ ಬಹು ವಿಷಾದವಾಯಿತು.

ಆಶ್ರಮಕ್ಕೆ ಅಪಾಯ : ನಾನು ಆಶ್ರಮದಲ್ಲಿ ವಾಸಿಸುವವನಾಗಿದ್ದರೂ ಆ ಸ್ಥಳವನ್ನು ಬಿಟ್ಟು ಬೇರೆ ಕಡೆ ಹೋಗುತ್ತಿರಲಿಲ್ಲವೆಂದಲ್ಲ. ಅಲ್ಲಲ್ಲಿ ವ್ಯಾಖ್ಯಾನಕ್ಕೋಸ್ಕರ ಸಂಚರಿಸುವುದು ಇದ್ದೇ ಇತ್ತು. ಆಗ ನನ್ನ ತಾಯಿಯವರ ಹತ್ತಿರ ಇರಲು ಕೂಲಿಯವರನ್ನೋ ಅಥವಾ ಶ್ರೀ ಬಾಳಪ್ಪನವರ ಆಳುಗಳನ್ನೋ ಗೊತ್ತುಮಾಡಿ ನಾನು ಹೋಗುತ್ತಿದ್ದೆನು. ಬಾಗಲಕೋಟೆಯಲ್ಲಿಯ ಯಜ್ಞದಲ್ಲಾಗುವ ಹಿಂಸೆಯನ್ನು ಬಿಡಿಸಲು ಪ್ರಯತ್ನಿಸುವುದಕ್ಕಾಗಿ ಅಲ್ಲಿಯ ಗುಜರ ಬಂಧುಗಳು ಕರೆಯಲು ಬಂದದ್ದರಿಂದ ಬಾಗಲಕೋಟೆಗೆ ಹೋದೆನು. ಆಗ ಮಳೆ ವಿಶೇಷವಾಗಿ ಸುರಿಯುತ್ತಿತ್ತು. ಬಾಗಲಕೋಟೆಗೆ ಬಂದು ಈಗ ಆ ವಿಷಯ ಚರ್ಚಿಸಿದರೆ ಫಲವಿಲ್ಲವೆಂದು ಅವರಿಗೆ ತಿಳಿಸಿ ತಾ. ೦೬.೦೭.೧೯೨೩ನೆಯ ದಿನ ಬೇರೆ ವಿಷಯದ ಮೇಲೆ ವ್ಯಾಖ್ಯಾನಮಾಡಿ ಆಶ್ರಮಕ್ಕೆ ಹೋದೆನು. ಹೊಳೆ (ನದಿ) ಏರುತ್ತಿದ್ದುದರಿಂದ ನನಗೆ ಅತ್ತ ಕಡೆಗೇನೇಲಕ್ಷ. ತಾ. ೯ನೆಯ ದಿನ ವಿಶೇಷ ಮಳೆಯಾಯಿತು. ಕಲ್ಲು ಹಾಸಿಗೆಯ ಆ ಮಂಟಪಗಳಲ್ಲಿಯೂ ನೀರು, ಸಂದಿಗಳಿಂದ ರಾತ್ರೆ ಎಲ್ಲಾ ಸೋರಿತು. ನಾನು ನನ್ನ ತಾಯಿಯವರು ನಾಲ್ಕೇ ಅಡಿ ಸ್ಥಳದಲ್ಲಿ ಕುಳಿತು ರಾತ್ರೆಯನ್ನೆಲ್ಲಾ ಕಳೆದೆವು.

ಅದು ಹೊಸ ಸ್ಥಳ ನೀರು ಎಲ್ಲಿಯವರೆಗೆ ಬರುತ್ತದೋ ನಮಗೆ ಗೊತ್ತಿಲ್ಲ. ಕಟ್ಟಡಗಳು ದಂಡೆಯಲ್ಲಿಯೇ ಇದ್ದವು. ೬೦ ವರುಷಗಳಿಂದಲೂ ಇಲ್ಲಿ ನೀರು ಬಂದದ್ದನ್ನು ಯಾರೂ ನೋಡಿಲ್ಲವೆಂಬ ಸುತ್ತಲಿನ ಜನರ ಹೇಳಿಕೆಯ ಮೇರೆಗೆ ಅಲ್ಲಿ ಕಟ್ಟಿದ್ದಿತು. ಕಟ್ಟಡದ ಮೇಲೆಯೂ ಹೋಗಲು ಬರುವಂತೆ ಮೆಟ್ಟಿಲುಗಳನ್ನು ಮಾಡಿಸಿದ್ದೆ. ಆ ರಾತ್ರೆ ಹೊಳೆ ವಿಶೇಷವಾಗಿ ಬಂದಿತು. ಬೆಳಗಾಗುವದರೊಳಗಾಗಿ ಸುತ್ತಲೂ ಹೊಳೆ ವ್ಯಾಪಿಸುತ್ತದೋ ಏನೋ ಎಂಬ ಚಿಂತೆ. ಮುಪ್ಪಿನ ತಾಯಿಯು ತಂಡಿಯಿಂದ ಬಹು ವ್ಯಥೆಪಟ್ಟಳು. ಬೆಳಗಾದ ಮೇಲೆ ಹೊಳೆ ಏರುವ ಲಕ್ಷಣವನ್ನು ನೋಡಿ ಇಲ್ಲಿರುವುದು ಕ್ಷೇಮಕರವಲ್ಲದೆಂದು ಯೋಚಿಸಿ ಶ್ರೀ ಬಾಳಪ್ಪನವರ ಸ್ಥಳಕ್ಕೆ (ಅಲ್ಲಿಂದ ೧ ಮೈಲು ದೂರ) ಹೋಗಿ ಒಂದು ಬಂಡಿಯನ್ನು ತೆಗೆದುಕೊಂಡು ಬರುವುದರೊಳಗಾಗಿ ಹೊಳೆಯು ಕಟ್ಟಡದ ಅಡಿಗೆ ಬಂದಿತು. ಎಲ್ಲಾ ಪುಸ್ತಕಗಳನ್ನೂ ತಾಯಿಯವರನ್ನೂ ಮೊದಲು ಕಳುಹಿಸಿದೆನು. ಒಂದು ತಾಸು ತಡವಾಗಿದ್ದರೆ ಬಂಡಿಯೇ ಬರುವುದು ಶಕ್ಯವಿರಲಿಲ್ಲ. ನೀರಲ್ಲಿ ತಾಯಿಯವರನ್ನು ದಾಟಿಸುವುದೂ ಶಕ್ಯವಿರಲಿಲ್ಲ. ಕಟ್ಟಡದಲ್ಲಿ ಮೂರು ಅಡಿ ನೀರು ನಿಂತಿತು. ಇದರಿಂದ ಈ ಸ್ಥಳವು ವಾಸಕ್ಕೆ ಅನುಕೂಲವಲ್ಲವೆಂದೇ ತೋರಿ ತುಂಬಾ ವ್ಯಥೆಯಾಯಿತು.

ಪ್ರಥಮ ವಾರ್ಷಿಕ ಸಮಾರಂಭ : ಸತ್ಯಾಗ್ರಹ ಸಮಾಜವನ್ನು ಸ್ಥಾಪಿಸಿ ಭಾದ್ರಪದ ಬ ೧೨ ಗೆ ಒಂದು ವರುಷವಾಯಿತು. ಆದಕಾರಣ ಅದರ ಪ್ರಥಮ ವಾರ್ಷಿಕ ಸಮಾರಂಭವನ್ನು ತಾ. ೭-೧೦.೧೯೨೩ನೆಯ ದಿವಸ ಗದಗಿನಲ್ಲಿ ಶ್ರೀ ದಿವಾಕರ ರಂಗನಾಥರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಿದ್ದಾಯಿತು. ಈ ಸಮಾರಂಭಕ್ಕೆ ಅನೇಕರು ಸೇರಬಹುದೆಂದು ನಾನು ಮೊದಲು ಯೋಚಿಸಿದ್ದೆನು. ಒಂದು ವರುಷದ ಅನುಭವದಿಂದ ಇಂಥ ಕಟ್ಟು ನಡತೆಯವರು ದೊರೆಯುವುದು ಅಪರೂಪವೆಂದೇ ತೋರಿತು. ಆಶ್ರಮದಲ್ಲಿರುವವರಂತೂ ದೊರೆಯುವುದು ದುರ್ಲಭವೆಂದೇ ಗೊತ್ತಾಯಿತು. ವಿಜಾಪುರ ಜಿಲ್ಲಾ ಅಥರಗಾ ಎಂಬ ಗ್ರಾಮದಿಂದ ಪ್ರಿಯ ಶಿವಲಿಂಗಪ್ಪ ಗುಣಕಿ ಎಂಬ ತರುಣರು ತಾ. ೧೨.೧೦.೧೯೨೩.ಕ್ಕೆ ಬಂದರು. ಆಗ ಎಷ್ಟೋ ಸಮಾಧಾನವಾಯಿತು. ಆದರೆ ಮುಂದೆ ಇಬ್ಬರೂ ತಾ. ៩.೧೨.೧೯೨೩ನೆಯ ದಿವಸ ಹೋಗಿಬಿಟ್ಟರು. ಇವರಿರುವಾಗ ನಾವು ಹೀಗೆ ನಡೆಯುತ್ತಿದ್ದೆವು.

ಆಶ್ರಮವಾಸಿಗಳಾಗಿ ಮೊದಲು ತಮ್ಮ ನಡೆನುಡಿಗಳನ್ನು ತಿದ್ದಿಕೊಂಡು ಜನಸೇವೆಗೆ ಸಮಾಜದಲ್ಲಿ ಸೇರಬೇಕು. ನಾವು ತಯಾರಾದುದಕ್ಕೆ ಸಮಾಜ ಸೇವೆಯೇ ಒರೆಗಲ್ಲು. ಆದಕಾರಣ ಆಶ್ರಮದಲ್ಲಿರುವ ನಾವೆಲ್ಲರೂ ಮೇಲುಕೀಳೆಂದು ತಿಳಿಯದೆ ಯಾವ ಉದ್ಯೋಗದಲ್ಲಿಯೂ ಕುಂದು ಹೆಚ್ಚುಗಳನ್ನು ಎಣಿಸದೆ ನಡೆಯುವುದು. ಬೀಸುವುದು. ನೂಲು ಮಾಡುವುದು, ಅಡಿಗೆ ಮಾಡಿಕೊಳ್ಳುವುದು ಇವೆಲ್ಲ ನಮ್ಮ ಕೆಲಸಗಳಾಗಿದ್ದವು. ಪ್ರತಿನಿತ್ಯ ಹೊಳೆಯ ದಂಡೆಯಲ್ಲಿಯೇ ಏರ್ಪಡಿಸಿದ್ದ ಚಿಕ್ಕದಾದ ತೋಟಕ್ಕೆ ಹೊಳೆಯಿಂದ ನೀರನ್ನು ತಂದು ಹಾಕುತ್ತಿದ್ದೆವು, ಮೆಂತೆ, ಗೋಳಿ, ಮೊದಲಾದ ಸೊಪ್ಪುಗಳನ್ನು ಬೆಳೆಯುತ್ತಿದ್ದೆವು. ಹದಿನಾರು ರೂ. ಕೊಟ್ಟು ಒಂದು ಆಕಳನ್ನು ತಂದುಕೊಂಡಿದ್ದೆವು. ಹುಲ್ಲು ಕೊಯಿದು ತರುವ, ಅದನ್ನು ಮೇಯಿಸುವ, ಹಿಂಡಿಕೊಳ್ಳುವ ಮೊದಲಾದ ಕೆಲಸಗಳನ್ನು ಮಾಡುತ್ತಿದ್ದೆವು. ಹೀಗೆ ಜೀವನಕ್ಕೆ ಅವಶ್ಯಕವಾದ ಎಲ್ಲ ಕಾರ್ಯಗಳನ್ನೂ ಮಾಡಿಕೊಳ್ಳಬೇಕೆಂಬುದೇ ಆಶ್ರಮದ ಕಟ್ಟಪ್ಪಣೆ. ಈ ರೀತಿಯಲ್ಲಿದ್ದುಕೊಂಡು ಆತ್ಮೋನ್ನತಿಯನ್ನೂ ದೇಶಸೇವೆಯನ್ನೂ ಸಾಧಿಸಬೇಕೆಂಬುದೇ ಆಶ್ರಮ ಸ್ಥಾಪನೆಯ ಮುಖ್ಯೋದ್ದೇಶ.

ತಿಂಗಳಿಗೆ ೨॥, ರಿಂದ ೨॥। ರೂ. ಗಳ ವರೆಗೆ ನಮ್ಮ ಊಟದ ವೆಚ್ಚ ಬರುತ್ತಿತ್ತು. ಒಬ್ಬ ಪ್ರಚಾರಕರು ಆಶ್ರಮದಲ್ಲಿರಲು ಬಂದರೆ ಅವರ ಊಟ, ಬಟ್ಟೆ, ಪುಸ್ತಕ ಪ್ರವಾಸಗಳಿಗಾಗಿ ವರುಷಕ್ಕೆ ೭೫ರೂ. ಮಾತ್ರ ವೆಚ್ಚಕ್ಕೆ ಕೊಡಬೇಕೆಂದು ಗೊತ್ತುಮಾಡಿದ್ದೆನು. ಈ ಪ್ರಕಾರ ವರ್ಷಾಶನ ಕೊಡಲು ಶ್ರೀ ಶಿರೂರು ಲಕ್ಷ್ಮಣರಾಯರು, ದಿವಂಗತ ಶ್ರೀ ತವನಪ್ಪನವರ ದೇವೇಂದ್ರಪ್ಪನವರು ಒಪ್ಪಿದ್ದರು. ಇಬ್ಬರು ಪ್ರಚಾರಕರಾಗಿರಲು ಕೂಡಾ ಬಂದು ಒಂದೆರಡು ತಿಂಗಳುಗಳಲ್ಲೇ ಹೋಗಿಬಿಟ್ಟರು. ಈ ವಿಧವಾದ ಆಚರಣೆಯಲ್ಲಿದ್ದುಕೊಂಡು ದೇಶಸೇವೆ ಮಾಡಲು ಇಷ್ಟಪಡುವ ಸುಶಿಕ್ಷಿತ ತರುಣರು ಆ ವರುಷ ಯಾರೂ ಸ್ಥಿರವಾಗಿನಿಲ್ಲಲಿಲ್ಲ.

ಸರಕಾರದವರು ಹಿಡಿಯುವರೆಂಬ ಸುದ್ದಿ : ೧೯೨೨-೨೩ ಈ ಎರಡು ವರುಷ ಮುಂಬೈ ಕರ್ನಾಟಕದಲ್ಲಿಯ ನೂರಾರು ಸ್ಥಳಗಳಿಗೆ ಹೋಗಿ ಗಾಂಧೀಜಿಯವರ ಒಂಬತ್ತು ತತ್ವಗಳ ಸಂಬಂಧವಾಗಿ ಎಷ್ಟೋ ಜಾಗ್ರುತಿಯನ್ನುಂಟುಮಾಡಿದ್ದೆನು. ಖಾದಿಯ ವಿಷಯವಂತು ನನಗೆ ಬಹು ಪ್ರೇಮಾದರಗಳುಳ್ಳದ್ದು. ಧಾರ್ಮಿಕ ಮತ್ತು ನೈತಿಕ ದೃಷ್ಟಿಗಳಿಂದ ನನ್ನ ವಿವೇಚನವು ಬಹು ಜನಪ್ರಿಯವಾಗಿಯೂ ಇದ್ದಿತು. ಇದರಿಂದ ಆ ಕಾಲದಲ್ಲಿ ನನ್ನ ವ್ಯಾಖ್ಯಾನ ಬಹು ಜನರಿಗೆ ಹುರುಪುಕೊಟ್ಟಿತು. ಗಾಂಧೀಜಿಯವರ ಅದ್ಭುತವಾದ ಆತ್ಮ ಬಲದಿಂದ ಆಗ ರಾಷ್ಟ್ರದಲ್ಲಿಯೇ ಅಂತಹ ನವ ಚೈತನ್ಯ ಉಂಟಾಗಿದ್ದಿತು. ವಿಜಾಪುರದಲ್ಲಿ ಈ ಒಂಭತ್ತು ತತ್ವಗಳಮೇಲೆ ಮೂರು ದಿವಸ ಬಹು ವಿಸ್ತಾರವಾಗಿ ಭಾಷಣಮಾಡಿದೆನು. ಶ್ರೀಮಾನ್ ದೇಶಪಾಂಡೆ ಗಂಗಾಧರರಾಯರು ನನ್ನ ಮೇಲಣ ವಾತ್ಸಲ್ಯದಿಂದ ಕೊನೆಯದಿನ ನನಗೆ **'ಕರ್ನಾಟಕದ ಗಾಂಧೀ'** ಎಂದು ಹೇಳಿದರು. ಎಲ್ಲೆಲ್ಲಿಯೂ ಆ ಮೇಲೆ ಹಾಗೇ ಕೆಲವರು ಹೇಳಲಾರಂಭಿಸಿದರು. ಆಗ ಲಿಂಗಾಯತರಲ್ಲಿ ನಾನೇ ಖಾದಿ ಪ್ರಚಾರಕ್ಕೆ ಸ್ವಲ್ಪ ಮುಂದೆ ಬಂದದ್ದರಿಂದ ಬ್ರಾಹ್ಮಣರು ಹೇಗೆ ಆತನನ್ನು ಉಬ್ಬಿಸಿ ಮೇಲಕ್ಕೆತ್ತಿ ಜೈಲಿನಲ್ಲಿ ಹಾಕಿಸುತ್ತಾರೆ ನೋಡಿರೆಂತಲೂ ಕೆಲವರು ಆಡಿಕೊಂಡರು. ನನಗೆ ಆಗ ಯಾರೂ ಉಬ್ಬಿಸಲೂ ಇಲ್ಲ. ನಾನು ಉಬ್ಬಲೂ ಇಲ್ಲ. ನನಗೆ ಅನೇಕ ನಮ್ಮ ಸಮಾಜದ ಪ್ರಮುಖರು ಗಾಂಧೀ ಚಳವಳಿಯಲ್ಲಿ ಸೇರಬೇಡವೆಂದು ಹೇಳಿದರು. ಅವರೆಲ್ಲರೂ ನನ್ನ ಹಿತವನ್ನೇ ಚಿಂತಿಸಿ ಹಾಗೆ ಹೇಳಿರಬೇಕು. ಆದರೆ ನನಗೆ ಅವರ ಸಲಹೆ ಒಪ್ಪಿಗೆಯಾಗಲಿಲ್ಲ.

೧೯೨೩ನೆಯ ಡಿಸೆಂಬರ ತಿಂಗಳಲ್ಲಿ ಧಾರವಾಡ ಜಿಲ್ಲಾ ರಾಷ್ಟ್ರಿಯ ಸಭೆಯು ಹಾವೇರಿಯಲ್ಲಿ ಕೂಡುವುದಿದ್ದಿತು. ಅದಕ್ಕೆ ನಾನು ಅಧ್ಯಕ್ಷನಾಗಬೇಕೆಂದು ಶ್ರೀಮಾನ್ ರಂಗನಾಥರಾವ ದಿವಾಕರರು ನನಗೆ ತಿಳಿಸಿದರು. ನಾನು ರಾಷ್ಟ್ರಿಯ ಸಭೆಯ ಸದಸ್ಯನೇ ಅಲ್ಲ; ಹೀಗಿರುವಾಗ ಜಿಲ್ಲಾ ಸಭೆಯ ಅಧ್ಯಕ್ಷನಾಗಲು ಬರುವುದಿಲ್ಲವೆಂದೇ ನನ್ನ ತಿಳುವಳಿಕೆಯೆಂದು ಅವರಿಗೆ ತಿಳಿಸಿದೆನು. ರಾಷ್ಟ್ರಿಯ ಸಭೆಯ ಸದಸ್ಯರಲ್ಲದಿದ್ದರೂ ನಿಮ್ಮನ್ನು ನಾವು ಅಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತೇವೆ. ನೀವು ಒಪ್ಪಬೇಕಾಗಿ ತಿಳಿಸಲು ನಾನು ತಾ. ೦೩.೧೧.೧೯೨೩ನೆಯ ದಿವಸ ತಂತಿಯ ಮೂಲಕ ಒಪ್ಪಿಗೆಯನ್ನು ತಿಳಿಸಿದೆನು. ಆ ಮೇಲೆ ವಿಜಾಪುರದಲ್ಲಿ ಶ್ರೀಮಾನ್ ರಾಜಗೋಪಾಲಚಾರ್ಯರ ಅಧ್ಯಕ್ಷತೆಯಲ್ಲಿ ತಾ. ೧೮.೧೧.೧೯೨೩ನೆಯ ದಿವಸ ಸೇರಿದ ಪ್ರಾಂತಿಕ ಸಭೆಗೆ ಹೋಗಿ ಅಲ್ಲಿಯೂ ಬಹಿರಂಗವಾದ ಪ್ರಚಂಡ ಸಭೆಯಲ್ಲಿ ಭಾಷಣ ಮಾಡಿದ ನಂತರ ನನ್ನನ್ನು ಸರಕಾರದವರು ಹಿಡಿಯುವರೆಂದು ವಿಜಾಪುರದಲ್ಲಿ ಕೆಲವರು ನನಗೆ ತಿಳಿಸಿದರು. ಆ ಪ್ರಾಂತಿಕ ಸಭೆಗೆ ಸೌ. ಸರೋಜಿನಿದೇವಿಯವರು. ಮೌ. ಮಹಮ್ಮದಅಲ್ಲಿಯವರು ಬಂದಿದ್ದರು. ಶ್ರೀ ರಾಜಗೋಪಾಲಾಚಾರ್ಯರಿಗೆ ಕನ್ನಡ

ಬರುತ್ತಿದ್ದುದನ್ನು ನೋಡಿ ನನಗೆ ಪರಮ ಸಂತೋಷವಾಯಿತು. ನಾನು ಆಶ್ರಮದ ಎಲ್ಲಾ ಸಂಗತಿಗಳನ್ನೂ ತಿಳಿಸಿ ತರುಣರು ಬರುವಂತೆ ಕಾಣುವುದಿಲ್ಲವಾಗಿ ಹೇಳಿದೆನು. ಎಲ್ಲ ಕಡೆಗೂ ಈ ಕೊರತೆಯಿದ್ದೇ ಇದೆಯೆಂದು ತಿಳಿಸಿದರು.

ನಾನು ಅಧ್ಯಕೀಯ ಭಾಷಣವನ್ನು ಆಗ ಅಲ್ಲಿಯೇ ಬರೆದು ಅಚ್ಚು ಮಾಡಿಸಿದೆನು. ಶ್ರೀ ಅಂಗಡಿ ವಕೀಲರಲ್ಲಿಯೇ ನಾನು ಆಗ ಇರುವ ರೂಢಿ. ಶ್ರೀ ಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳವರು ಆಗಲೇ ಅಹಿಂಸಾ ವಿಚಾರವಾಗಿ ನನ್ನ ಸಂಗಡ ಪ್ರಸ್ತಾಪಿಸಿದರು. ಇದೇ ಇವರ ಪ್ರಥಮ ದರ್ಶನ. ಮಹಾತೇಜೋಮೂರ್ತಿಗಳೆಂದೇ ನಾನು ಗ್ರಹಿಸಿದೆನು. ಹುಬ್ಬಳ್ಳಿ ಸ್ಟೇಶನ್ನಿನಲ್ಲಿ ಹುಬ್ಬಳ್ಳಿಯ ಕೈ ವಕೀಲ ಜೋಶಿಯವರು ನನಗೆ ಎಚ್ಚರಿಕೆಯನ್ನು ಕೊಟ್ಟರು. ಭಾಷಣದಲ್ಲಿ ಎಚ್ಚರಿಕೆ ಇರಲಿ, ಪ್ರಿಂಟ್ ಮಾಡಿಸಿದ್ದೀರೋ ಇಲ್ಲವೋ? ಸುಮ್ಮನೆ ಜೈಲಿಗೆ ಹೋದರೆ ಫಲವಿಲ್ಲ. ಇಲ್ಲಿ ಕೆಲಸ ಮಾಡುವವರು ಬೇಕು ಎಂದು ನನಗ ಹೇಳಿದರು.

ತಾ. ೨೩.೧೧.೧೯೨೩. ನೆಯ ದಿನ ಸಾಯಂಕಾಲಕ್ಕೆ ಹಾವೇರಿಗೆ ಬಂದೆನು. ಮರುದಿನ ಜಿಲ್ಲಾ ಸಭೆ ಪ್ರಾರಂಭವಾಯಿತು. ಪೋಲೀಸ್ ಬಂದೋಬಸ್ತ ಹೆಚ್ಚಿತ್ತು. ನಾನು ಅನೇಕ ಕಡೆಗಳಲ್ಲಿ ಹೇಗೆ ಗಾಂಧಿ ತತ್ವವನ್ನು ಕುರಿತು ವ್ಯಾಖ್ಯಾನಮಾಡುತ್ತಿದ್ದೆನೋ ಹಾಗೆಯೇ ಅದನ್ನು ಬರೆದಿದ್ದೆನು ಖಾದಿಯ ವಿಷಯದಲ್ಲಿ ಹೆಚ್ಚು ವಿವೇಚಿಸಿ ಶ್ರದ್ಧಾಮಯೋಯಂ ಎಂಬ ಗೀತೋಕ್ತಿಯಂತೆ ಇವುಗಳಲ್ಲಿ ಸಂಪೂರ್ಣ ಶ್ರದ್ಧೆಯನ್ನಿಟ್ಟು ಆಚರಿಸಿದರೇನೇ ರಾಷ್ಟ್ರೋನ್ನತಿಯಾಗುವುದೆಂದು ಕೊನೆಗೆ ತಿಳಿಸಿದ್ದೆನು. ಬ್ರಾಹ್ಮಣ ಮತ್ತು ಜಂಗಮ ಆರಾಧನೆಯಗಳಿಗಿಂತ ಅಸ್ಪೃಶ್ಯರ ಆರಾಧನೆಯೇ ದೇಶಕ್ಕೆ ಹೆಚ್ಚು ಕ್ಷೇಮಕರವೂ ಮಹಾ ಪುಣ್ಯಪ್ರದವೂ ಎಂದು ಉಪಸಂಹಾರದ ಭಾಷಣದಲ್ಲಿ ಹೇಳಿ ಅಸ್ಪೃಶ್ಯರ ಆರಾಧನೆ (ಊಟಕ್ಕೆ ಹಾಕುವುದು) ಎಲ್ಲ ಶುಭಕಾರ್ಯಗಳಲ್ಲಿ ಜರುಗಬೇಕೆಂದೂ ಸೂಚಿಸಿದೆನು. ಸಭೆಯು ಯಶಸ್ವಿಯಾಗಿಯೇ ಜರುಗಿತು. ಸರಕಾರದವರು ಆ ದಿನ ನನ್ನನ್ನು ಹಿಡಿಯುವರೆಂಬ ಸಂಗತಿ ನಿರಾಧಾರವಾದುದೆಂದೇ ಮನವರಿಕೆಯಾಯಿತು.

ಆಮೇಲೆ ಸಾಂಸಿಯಲ್ಲಿ ಶ್ರೀ ಪೂಜ್ಯ ಮೃತ್ಯುಂಜಯ ಮಹಾಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸ್ಥಳೀಯ ವೀರಶೈವ ತುರಣಸಂಘದ ವಾರ್ಷಿಕ ಸಭೆ ಇದ್ದಿತು. ಅಲ್ಲಿಗೆ ಹೋಗಿ ಅನಂತರ ಆಶ್ರಮಕ್ಕೆ ಬಂದೆನು.

ಅದೇ ಕಾಲದಲ್ಲಿ ಇನ್ನೊಂದು ಕೆಲಸವನ್ನು ಕೈಕೊಳ್ಳಬೇಕಾಯಿತು. ಶ್ರೀ ಪುರಾಣಿಕರು ಹತ್ತು ವರುಷಗಳಿಂದಲೂ ತುಂಬಾ ಪರಿಚಯದವರಾಗಿ ದಿನೆ ದಿನೆ ನಾವು ಹೆಚ್ಚು ಪರಸ್ಪರ ಪ್ರೇಮಾದರಗಳುಳ್ಳವರಾಗುತ್ತಾ ಬಂದಿದ್ದೆವು. ಅವರು ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗದಿದ್ದುದರಿಂದ ಏನಾದರೊಂದು ಕಾರ್ಯವನ್ನು ಕೈಕೊಳ್ಳಬೇಕಾಗಿದ್ದಿತು. ಆಗ ಅವರಿಗೆ ಪ್ರಿಂಟಿನ ವಿಚಾರವಾಗಿ ಎಷ್ಟೋ ಗೊತ್ತಾಗಿದ್ದಿತು. ಪತ್ರಿಕೆಯನ್ನು ಹೊರಡಿಸಬೇಕೆಂದೇ ಉಭಯರ ಆಲೋಚನೆಯಿಂದ ನಿರ್ಧಾರವಾಯಿತು. ತಾ. ೧೧.೧೨.೧೯೨೩ನೆಯ ದಿವಸ ಅಣ್ಣನವರು ಆಶ್ರಮಕ್ಕೆ ಬಂದು ಅಲ್ಲಿಯ ಸ್ಥಿತಿಗಳನ್ನೆಲ್ಲಾ ನೋಡಿ ಸಮಾಧಾನಪಟ್ಟರು. ಆಗ ಶ್ರೀ ಪುರಾಣಿಕರೂ ಬಂದಿದ್ದರು. ಪತ್ರಿಕೆಯ ಯೋಚನೆಯು ಆ ದಿನ ನಿಶ್ಚಯವಾಗಿ ಲೋಕಮತ ಎಂಬ ಹೆಸರನ್ನಿಡಬೇಕೆಂತಲೂ ಗೊತ್ತಾಯಿತು. ಅದಕ್ಕಾಗಿ ಕೆಲವು ಕಡೆ ಹಣವನ್ನು ಕೂಡಿಸಿ ದಾವಣಗೆರೆಯಲ್ಲಿ ಮೊದಲು ಧನುರ್ಧಾರಿ

ಪತ್ರಿಕೆಯನ್ನು ಅಚ್ಚು ಮಾಡುತ್ತಿದ್ದ ಕೈ ಪ್ರೆಸ್ ತೆಗೆದುಕೊಂಡು ಲೋಕಮತ ಪತ್ರಿಕೆ ಹೊರಡಲು ಅನುಕೂಲಪಡಿಸಿದ್ದಾಯಿತು. ಆ ಕಾಲಕ್ಕೆ ವೀರಶೈವ ನ್ಯೂಜ್ ಪೇಪರ್ ಕಂಪನಿ ಲಿಮಿಟೆಡ್ ಎಂಬ ಕಂಪನಿಯನ್ನು ಸ್ಥಾಪಿಸಬೇಕೆಂದು ಯೋಚಿಸಿ ಪ್ರಮುಖರ ಸಂಗಡ ಪತ್ರವ್ಯವಹಾರ ನಡೆಸಿದ್ದೆನು. ಆ ಕಾರ್ಯಕ್ಕೆ ಯೋಗ್ಯ ಸಹಾಯ ದೊರೆಯುವ ಸಂಭವ ತೋರದಿದ್ದುದರಿಂದ ಆ ವಿಷಯವನ್ನು ಅಷ್ಟಕ್ಕೇ ಬಿಟ್ಟೆನು.

ಗಾಂಧೀಜಿಯವರಲ್ಲಿ ವಾಸ : ಗಾಂಧೀಜಿಯವರು ೧೯೨೪ನೆಯ ಮಾರ್ಚ ತಿಂಗಳಲ್ಲಿ ಬಿಡುಗಡೆಹೊಂದಿದರು. ಆಗ ಅವರ ಕಡೆ ಹೋಗಿ ಕೆಲವು ದಿನ ವಾಸವಾಗಿರಬೇಕೆಂದು ಯೋಚಿಸಿದೆನು. ತಾಯಿಯವರನ್ನು ಬಿಟ್ಟು ಅಷ್ಟು ದೂರ ಹೋದರೆ ಹೇಗೆ ಎಂಬ ಯೋಚನೆಯೂ ಆಗಾಗ್ಗೆ ಬರುತ್ತಿತ್ತು. ಹಿಂದೆ ಬಂದಿದ್ದ ರಾಮಕೃಷ್ಣ ಜೋಯಿಸರು ಈ ವರುಷ ಮತ್ತೆ ಬಂದಿದ್ದರು. ಅವರ ಹೇಳಿಕೆಯಲ್ಲಿ ಸ್ವಲ್ಪ ವಿಶ್ವಾಸ. ಅವರು ತಾ. ೦೭.೦೨.೧೯೨೪ನೆಯ ದಿವಸ ಹೀಗೆ ಹೇಳಿದರು (೧) ಒಂದು ವರುಷದಲ್ಲಿ ಕಾರಾಗೃಹ ವಾಸ (೨) ಒಂದು ವರುಷ ಸ್ವಲ್ಪ ಕಾಲದಲ್ಲಿಯೇ ಮಾತೃವಿಯೋಗ, ಅರುಣೋದಯ ಕಾಲದಲ್ಲಿ ಧ್ಯಾನ ನಡೆದಾಗ ಪ್ರಾಣೋತ್ಕ್ರಮಣ (೩) ೪೫ನೆಯ ವರುಷದಲ್ಲಿ ವನ, ಮಂಟಪ, ಮಂದಿರಗಳು ಪ್ರಯತ್ನವಿಲ್ಲದೆ ದೊರೆಯುತ್ತವೆ. ಅದರಲ್ಲಿ ತಪಸ್ಸಿದ್ಧಿ, ಗುರೂಪದೇಶ, (೪) ೪೮ನೆಯ ವರುಷಕ್ಕೆ ಮರಣ. ತಾಯಿಯವರು ಇನ್ನೊಂದು ವರುಷವಾದರೂ ಬದುಕಬಹುದೆಂದು ನಂಬಿಕೆ. ಅದಕ್ಕಾಗಿ ಗಾಂಧೀಜಿಯವರಲ್ಲಿ ಒಂದು ತಿಂಗಳಾದರೂ ಹೋಗಬೇಕೆಂದು ವಿಶೇಷವಾದ ಇಚ್ಛೆ. ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿ ಕೂಡುವುದಿದೆಯೆಂದು ಗೊತ್ತಾದಮೇಲೆ ಆ ಕಾಲಕ್ಕೆ ಹೋದರೆ ಬೇರೆ ಪ್ರಮುಖರನ್ನೂ ನೋಡಿದಂತಾಗುತ್ತದೆಂದು ಯೋಚಿಸಿ ಆಗ ಹೋಗುವುದನ್ನು ನಿರ್ಧರಿಸಿದೆನು. ಶ್ರೀ ಬಾಳಪ್ಪನವರ ಚಿಕ್ಕ ತಮ್ಮಂದಿರಲ್ಲಿ ವಿಶೇಷ ಪ್ರೇಮವುಳ್ಳವನಾಗಿದ್ದೆನಷ್ಟೆ. ಆದುದರಿಂದ ಅವರ ಭವಿಷ್ಯವನ್ನೂ ತಾ. ೭.೦೨.೧೯೨೪ನೆಯ ದಿವಸ ಅದೇ ಜ್ಯೋತಿಷಜ್ಞರಿಂದ ಕೇಳಿಕೊಂಡೆನು. ಪ್ರಿಯ ಸ್ವಾಮಿರಾಯರ ವಿಚಾರವಾಗಿ ಹೇಳೀದ್ದರಲ್ಲಿ ಪರದೇಶ ಗಮನವು ಇವರಿಂದ ಸಂಭವಿಸುತ್ತದೆಂದು ತಿಳಿಸಿದ್ದರು. ತಾಯಿಯವರನ್ನು ಬಿಟ್ಟು ಬೆಂಗಳೂರಿಗೆ ಹೋಗದವರು ಪರದೇಶಕ್ಕೆ ಹೋಗುವುದುಂಟೆ? ಎಂದು ಹಾಸ್ಯಮಾಡಿದ್ದೆ. ಈ ಜ್ಯೋತಿಷ್ಯ ನಂಬಿ ತಾಯಿಯವರನ್ನು ಬಿಟ್ಟು ಹೋದರೆ ಎಲ್ಲಿ ಮಳ್ಳನೆಂದು ಹೇಳುವರೋ ಎಂಬ ಯೋಚನೆ. ಆಗ ಅಶಕ್ಯವೆಂದು ತೋರಿದ್ದ ಪರದೇಶ ಗಮನವು ಪ್ರಿಯ ಸ್ವಾಮಿರಾಯರಿಂದ ಮುಂದೆ ಸಂಭವಿಸಿ ಅಲ್ಲಿ ಉತ್ತೀರ್ಣರಾಗಿಯೂ ಈಗ ಬಂದಿರುವುದೇನೋ ನಿಜ. ಆದರೆ ಆಗ ಅದು ಶಕ್ಯವೆಂಬ ಕಲ್ಪನೆ ಕೂಡಾ ಬರುವಂತಿರಲಿಲ್ಲ.

ನಾನು ಒಂದು ತಿಂಗಳಲ್ಲಿಯೇ ಬರುತ್ತೇನೆ. ನೀನೇನೂ ಈಗಲೇ ಖಂಡಿತ ಸಾಯುವುದಿಲ್ಲವೆಂದು ಜೋಯಿಸರು ಹೇಳಿದ್ದಾರೆ. ಎಂದು ತಾಯಿ ಅವರಿಗೆ ಸಮಾಧಾನಗೊಳಿಸಿ ಗಾಂಧೀಜಿಯವರ ಕಡೆ ಹೋಗಲು ಸಿದ್ಧನಾದೆನು. ಶ್ರೀ ದೇಶಪಾಂಡೆ ಗಂಗಾಧರರಾಯರಿಂದ ಒಂದು ಪತ್ರವನ್ನು ತೆಗೆದುಕೊಂಡು ಸಾಬರಮತಿಗೆ ಹೋದೆನು. ಶ್ರೀ ಕಾಕಾ ಕಾಲೇಲಕರನ್ನು ಮೊದಲು ಕಂಡು ಒಂದು ಪ್ರತ್ಯೇಕವಾದ ಕೋಣೆಯಲ್ಲಿ ಉಳಿದೆನು. ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿ ಕೂಡುವುದು ಇನ್ನು ೧೫ ದಿನ ತಡವಿತ್ತು. ಗಾಂಧೀಜಿಯವರಲ್ಲಿ ಪ್ರಸ್ತಾಪಿಸಲು ಮುಂಚೆ ಹೋದರೇನೇ ಬಿಡುವು

ದೊರೆಬಹುದೆಂದು ಹೋಗಿದ್ದೆ. ಆಗಲು ಕೂಡಾ ವರ ಸಂಗಡ ಮಾತನಾಡಲು ಸಮಯ ದೊರೆಯುವುದೇ ದುರ್ಲಭವಾಗಿತ್ತು. ಹಿಂದುಸ್ಥಾನದ ನಾನಾ ಭಾಗಗಳಿಂದ ಪ್ರಮುಖರು ಅವರಲ್ಲಿ ಪ್ರಸ್ತಾಪಿಸಲು ಬಂದೇ ಬರುತ್ತಿದ್ದರು.

ನಾನು ಪ್ರತಿ ನಿತ್ಯ ಎರಡೂ ಹೊತ್ತು ಗಾಂಧೀಜೀಯವರಲ್ಲಿ ಪ್ರಾರ್ಥನೆಗೆ ಹೋಗುವುದು, ಪ್ರಾತಃಕಾಲ ಅವರು ತಿರುಗಾಡಲು ಹೋಗುವಾಗ ಅವರ ಸಂಗಡ ಹೋಗುವುದು. ಮಧ್ಯಾಹ್ನ ಅವರು ಕೆಲಸ ನಡೆಸಿರುವಾಗ ದೂರದಲ್ಲಿ ಸುಮ್ಮನೆ ಕುಳಿತುಕೊಳ್ಳುವುದು, ಇವು ನನ್ನ ನಿತ್ಯ ಕ್ರಮ ಶ್ರೀ ಮಜಲಿ ವಕೀಲರಿಗೆ ಆಗ ಸ್ವಲ್ಪ ಬುದ್ದಿ ಬ್ರಮಣೆಯಿತ್ತು. ಗಾಂಧೀಜಿಯವರನ್ನು ನೋಡುತ್ತಾ ಕುಳಿತಿದ್ದರೆ ಅವರಿಗೆ ಸಮಾಧಾನ. ಅದಕ್ಕಾಗಿ ಮಧ್ಯಾಹ್ನ ಅವರನ್ನು ಸಂಗಡ ಕರೆದುಕೊಂಡು ಹೋಗಿ ಅಲ್ಲಿ ಕುಳಿತುಕೊಳ್ಳಬೇಕಾಗಿತ್ತು. ನನ್ನ ಇಲ್ಲಿಯ ಕಾರ್ಯಕ್ರಮಗಳಂತೆಯೇ ಅಲ್ಲಿಯೂ ನಡೆಯಲು ತುಂಬಾ ಅನುಕೂಲ. ನನಗೆ ಅದೊಂದು ಬೇರೆ ಆಶ್ರಮವಾಗಿ ತೋರಲಿಲ್ಲ. ಅಲ್ಲಿ ನನಗೆ ಅಷ್ಟು ಸ್ವಾತಂತ್ರ್ಯವಿತ್ತು. ನಾನೂ ಒಬ್ಬ ಆಶ್ರಮವಾಸಿಯಾಗಿಯೇ ಪರಿಣಮಿಸಿದ್ದೆನು.

ಒಂದು ದಿನ ಮುಂಜಾನೆ ತಿರುಗಾಡಲು ಹೋಗುವಾಗ ನನ್ನ ಸಂಭಾಷಣೆ ಜರುಗತಕ್ಕದ್ದೆಂದು ಗೊತ್ತಾಗಿತ್ತು. ಆ ಪ್ರಕಾರ ಪ್ರಾತಃಕಾಲದ ಭಜನೆ ಮುಗಿದನಂತರ ನಾನು ಗಾಂಧೀಜಿಯವರ ಕಡೆ ಹೋದೆನು. ಆಗ ಬೇರೆ ಕೆಲವು ಪ್ರಮುಖರು ಬಂದು ಮಾತನಾಡಲುಪಕ್ರಮಿಸಿದರು. ನಾನು ನಾಳೆ ಮಾತನಾಡಿದರಾಯಿತೆಂದು ತಿರುಗಿಕೋಣೆಗೆ ಬಂದೆನು. ಕೂಡಲೆ ಗಾಧೀಜಿಯವರು ಕರೆಯಿಸಿದರು. ನಾನು ಹೋದೊಡನೆ ನಿಮಗಾಗಿ ಈ ಕಾಲ ಕಾದಿಟ್ಟಿದ್ದೇನೆ. ಏನು ನಿಮ್ಮ ವಿಚಾರ ತಿಳಿಸಿರಿ ಎಂದರು. ಹಾಗೆ ಮಾತನಾಡುತ್ತಾ ತಿರುಗಾಡಲು ಹೊರಟರು. ನಾನು ಹಿಂದುಸ್ಥಾನಿ ಭಾಷೆಯಿಂದ ಮಾತನಾಡಿದೆನು. ಅದು ಎತ್ತೆತ್ತಲಾಗಿಯೋ ಇರುತ್ತಿತ್ತು. ಅಂತು ಅವರಿಗೆ ನನ್ನ ಉದ್ಧೇಶ ತಿಳಿಯುತ್ತಿತ್ತು. ಅವರು ಹೇಳುವುದು ನನಗೆ ಚೆನ್ನಾಗಿಯೇ ತಿಳಿಯುತ್ತಿತ್ತು. ಬಹು ದಿನಗಳಿಂದ ನನ್ನ ಮನಸ್ಸಿನಲ್ಲಿ ಕಟೆಯುತ್ತಿದ್ದ ಪುನರ್ಜನ್ಮದ ವಿಷಯವನ್ನೇ ಮೊದಲು ಕೇಳಿದೆನು., ಅವರು ಹೀಗೆ ಹೇಳಿದರು.

ಈ ಸಾಬರಮತಿ ನದಿ ಹರಿಯುತ್ತಿರುವುದು ನನಗೆ ಎಷ್ಟು ನಿಶ್ಚಯವೆಂದು ತೋರುತ್ತದೆಯೋ ಅಷ್ಟೇ ಪುನರ್ಜನ್ಮ ವಿದೆಯೆಂದೂ ನನಗೆ ನಿಶ್ಚಯವಾದ ನಂಬಿಕೆ. ನನಗೂ ಇಂಥ ನಂಬಿಕೆ ಹುಟ್ಟುವಂತೆ ತಾವು ತಿಳಿಸಬೇಕೆಂದು ಕೇಳಿದೆನು. ಟಿಳಕರಂತೆ ಇವರು ಏನಾದರೂ ಸಮಾಧಾನಕರವಾಗಲು ಕೆಲವು ಸಂಗತಿಗಳನ್ನು ತಿಳಸಬಹುದೆಂದೇ ನನ್ನ ಕಲ್ಪನೆ. ಅವರು ಒಂದೇ ವಾಕ್ಯದಲ್ಲಿ ಮುಗಿಸಿಬಿಟ್ಟರು. ಬುದ್ದಿವಾದದಿಂದ ನಾನು ಇದನ್ನು ಸಿದ್ದಮಾಡಿಕೊಡಲಾರೆನು. ಆದುದರಿಂದ ಆ ವಿಷಯವನ್ನೇ ಬಿಟ್ಟು ಬಿಟ್ಟು ಸತ್ಯಾಗ್ರಹದ ಒಂಭತ್ತು ತತ್ವಗಳಲ್ಲಿ ಅಸ್ತೇಯ ಸಂಬಂಧವಾಗಿ ನನಗಿದ್ದ ಸಂಶಯವನ್ನು ಕೇಳಿದೆನು. ಅನ್ಯರಿಗೆ ನಿರುಪಯೋಗವಾಗಿದ್ದರೂ ಅದಕ್ಕೆ ಪ್ರತಿಫಲ ಕೊಡದೆ ನಾವು ಉಪಯೋಗಿಸಿದರೆ ಕಳ್ಳತನವೇ ಸರಿಯೆಂದೂ ಆಸ್ವಾದ ವ್ರತಕ್ಕೆ ಉಪ್ಪು ಬಿಡಬೇಕಾದ ಕಾರಣವೇನೂ ಇಲ್ಲವೆಂದೂ ಮೊದಲಾದ ಸಂಗತಿಗಳನ್ನು ತಿಳಿಸಿದರು. ನನಗೆ ಬೇಕಾದುದು ಮುಖ್ಯವಾಗಿ ಪುನರ್ಜನ್ಮದ ವಿಷಯ. ಅದು ಬುದ್ದಿವಾದದಿಂದ ತಿಳಿಸಲಿಕ್ಕೆ ಬರುವುದಿಲ್ಲವೆಂದಮೇಲೆ ನಂಬಿಗೆಗೆ ಸಂಬಂಧವಾದದೇ ಸರಿಯೆಂದಂತಾಯಿತು. ಅಂದಿನಿಂದ ನಾನು ಆ ವಿಷಯವಾಗಿ

ಯಾರಲ್ಲಿಯೂ ಪ್ರಸ್ತಾಪಿಸಲೇ ಇಲ್ಲ. ಬುದ್ಧಿ ಗ್ರಾಹ್ಯವಾದ ವಿಷಯವಲ್ಲವೆಂದಮೇಲೆ ವಾದ ವಿವಾದದಿಂದ ದೃಢಪಡತಕ್ಕದ್ದಲ್ಲವೆಂದೇ ನಿಶ್ಚಯಿಸಿ ನಾನು ಆ ಮುಚೆ ಒಂದು ತೀರ್ಮಾನಕ್ಕೆ ಬಂದದ್ದೇ ನಿಜವೆಂದು ತಿಳಿದೆನು.

ಆಲ್ ಇಂಡಿಯಾ ಕಾಂಗ್ರೆಸ್ ಕಮೀಟಿಯ ಕೂಡಿತು. ಅದಕ್ಕೂ ನಾನು ಹೋಗಿದ್ದೆನು. ಮೌಲಾನಾ ಮಹಮ್ಮದ ಅಲ್ಲಿಯವರು ಗಾಂಧೀಜಿಯವರಲ್ಲಿ ಪ್ರಸ್ತಾಪಿಸಿದ ಸಂಗತಿಗಳಿಂದ ಅನೇಕರು ಕಣ್ಣೀರುದುರಿಸಿದಂತೆ ನನ್ನ ಕಣ್ಣಲ್ಲಿಯೂ ನೀರು ಬಂದಿತು. ದೇಶಬಂಧು ದಾಸರ ವೀರಾವೇಶದ ಭಾಷಣವನ್ನು ಅಲ್ಲಿ ಕೇಳಿದೆನು. ಅನಂತರ ಒಂದು ವಾರ ಆಶ್ರಮದಲ್ಲಿದ್ದು ಅಲ್ಲಿಂದ ಹೊರಟೆನು. ಸಾಬರಮತಿ ಆಶ್ರಮದಲ್ಲಿ ಸರಿಯಾಗಿ ಮೂರು ವಾರ ಇದ್ದೆನು. ಗಾಂಧೀಜಿಯವರ ಅವಿಶ್ರಾಂತವಾದ ಕಾರ್ಯಾಸಕ್ತಿಯು ನನ್ನ ಮನಸಿನ ಮೇಲೆ ಹೆಚ್ಚಾದ ಪರಿಣಾಮವನ್ನುಂಟುಮಾಡಿತು. ಅವರ ಸಂಭಾಷಣಗಳಲ್ಲಿ ಅವರ ಹೃದಯವು ಸ್ಪಷ್ಟಕಾಣುತ್ತಿತ್ತು.

ಗಾಂಧೀಜಿಯವರಲ್ಲಿ ವಾಸವಾಗಿದ್ದುದು ನನ್ನ ಧನ್ಯತೆಯೆಂದು ನನಗೆ ಬಹು ಸಂತೋಷ ನಾನೆಂತಹ ಕ್ಷುದ್ರ ಮನುಷ್ಯನು? ನನ್ನ ಸ್ಥಳವೆಲ್ಲಿ? ನನ್ನ ವಿದ್ಯೆ ಎಷ್ಟು? ಜಗತ್ತಿಗೆ ಪೂಜ್ಯನಾಗಿರುವ ಈ ಮಹಾತ್ಮನ ಹತ್ತಿರ ಇರತಕ್ಕ ಪ್ರಸಂಗ ನನಗೆ ಸಂಭವಿಸಿದುದು ಎಷ್ಟು ಹೆಚ್ಚಿನದೆಂದೇ ನನಗೆ ಅಲ್ಲಿ ಆಗಾಗ್ಗೆ ಅನಿಸುತ್ತಿತ್ತು. ದಿವಂಗತ ಮದನ ಲಾಲ ಗಾಂಧಿಯವರ ಕಡೆಗೆ ಆಗಾಗ್ಗೆ ಹೋಗುತ್ತಿದ್ದೆನು. ಅವರು ಹತ್ತಿಪ್ಪತ್ತು ರಾಟಗಳನ್ನಿಟ್ಟುಕೊಂಡು ರಾಟಿಯ ನಾನಾ ಪ್ರಯೋಗಗಳನ್ನು ನಡೆಯಿಸಿದ್ದರು. ತಕಲಿ (ಬಿರಕಿ) ಯ ನಾನಾ ತರಹಗಳನ್ನು ಪ್ರಯೋಗಕ್ಕಾಗಿಟ್ಟುಕೊಂಡಿದ್ದರು. ನಾನು ಹೋಗಿಬರುವೆನೆಂದು ಹೇಳುವುದಕ್ಕಾಗಿ ಹೋಗಿದ್ದೆ. ತಮ್ಮ ಜ್ಞಾಪಕಕ್ಕೋಸ್ಕರ ನನಗೇನು ಕೊಡುವಿರೆಂದು ಕೇಳಿದೆನು. ಅವರು ಇಟ್ಟಂಗಿಯಲ್ಲಿ ಮಾಡಿಟ್ಟಿದ್ದ ಒಂದು ತಕಲಿಯನ್ನು ಕೊಟ್ಟರು. ನನ್ನ ಪ್ರವಾಸದಲ್ಲಿ ಈಗಲೂ ಇರತಕ್ಕದ್ದು ಅದೆ. ವಿಜಾಪುರ ಜಿಲ್ಲಾ ಬೇವೂರಲ್ಲಿ ನನ್ನ ಒಬ್ಬ ಮಿತ್ರರು ಅದನ್ನು ಅಲ್ಲಿ ಬಿಟ್ಟು ಬಂದಿದ್ದರು. ಅದು ಒಬ್ಬ ಶಾಲೆಯ ಹುಡುಗನಿಗೆ ದೊರಕಿತ್ತು. ಅದು ಕಳೆದಾಗ ನನಗೆ ತುಂಬಾ ಖೇದವಾದುದರಿಂದ ಆಲೂರಲ್ಲಿ ಈ ಸಂಗತಿಯನ್ನು ತಿಳಿಸಿ ಅಲ್ಲಿಯ ಪ್ರಿಯ ಬ್ಯಾಳಪ್ಪನವರ ಪರಪ್ಪನವರು ಶೋಧಮಾಡಿ ಕಳಿಸಿಕೊಟ್ಟರು.

ಆ ಬಿರಕಿಯಲ್ಲಿ ನೂಲು ತೆಗೆಯುತ್ತ ಸಾಬರಮತಿ ಸ್ಟೇಶನ್ನಿನಲ್ಲಿ ಕುಳಿತಾಗ ನನ್ನ ಸಂಗಡಿದ್ದ ಕಾಠೇವಾಡದವರು ಗಾಡಿ ಬಂದಿತು ಹತ್ತಿರೆಂದು ಹೇಳಿದರು. ನಾನು ಆ ನೂಲು ತೆಗೆಯುವ ಗುಂಗಿನಲ್ಲಿಯೇ ಇದ್ದೆನು. ಗಾಡಿ ಹತ್ತಿ ಸ್ವಲ್ಪ ಹೊತ್ತಿನಮೇಲೆ ನೆರೆಯಲ್ಲಿದ್ದವರಿಗೆ ನೀವು ಯಾವ ಊರಿಗೆ ಹೋಗುವಿರೆಂದು ಕೇಳಲು ಅವರು ಕಾಠೇವಾಡದ ಯಾವುದೋ ಊರ ಹೆಸರು ಹೇಳಿದರು. ನಾನು ಬಡೋದೆಗೆ ಹೋಗುವವನೆಂದು ತಿಳಿಸಿದೆನು. ಹೀಗೆ ಬೇರೆ ಗಾಡಿಯಲ್ಲಿ ಕುಳಿತಿದ್ದರಿಂದ ಮುಂದಿನ ಆದರಿಂದ ಎಂಬ ಸ್ಟೇಶನ್ನಿನಲ್ಲಿ ಇಳಿದು ಅಲ್ಲಿಯ ಟಿಕೆಟ್ ಮಾಸ್ತರರಿಗೆ ತಿಳಿಸಿದೆನು. ಅವರು ಬಹು ಆದುದರಿಂದ ನನಗೆ ಇರಲು ಅನುಕೂಲ ಮಾಡಿಕೊಟ್ಟರು. ಮತ್ತೊಂದು ಗಾಡಿ ಬಂದನಂತರ ತಿರುಗಿ ಸಾಬರಮತಿಯಮೇಲಿಂದ ಬಡೋದೆಗೆ ಬಂದೆನು.

ಬಡೋದೆಯ ಕಲಾಭವನ ಮತ್ತು ಲೈಬ್ರರಿ ಇವುಗಳನ್ನು ನೋಡಬೇಕೆಂಬುದೇ ನನ್ನ ಉದ್ದೇಶವಾಗಿದ್ದಿತು. ಅವುಗಳನ್ನು ನೋಡಿ ಕಲಾಭವನದಂತಹದ ಕೈಗಾರಿಕೆಯ ಶಿಕ್ಷಣಾಲಯ ಹುಬ್ಬಳ್ಳಿಯಂತಹ ಸ್ಥಳದಲ್ಲಾದರೆ ಕರ್ನಾಟಕಕ್ಕೆ ಬಹು ಪ್ರಯೋಜನವೆಂದು ಯೋಚಿಸಿದೆನು. ಶಿರಸಂಗಿ ಫಂಡಿನವರು ಇಂತಹ ಶಿಕ್ಷಣಾಲಯವನ್ನು ಸ್ಥಾಪಿಸಿದರೆ ವೀರಶೈವ ಸಮಾಜಕ್ಕೆ ಬಹು ಪ್ರಯೋಜನವಾಗುವುದೆಂದು ಇಲ್ಲಿಗೆ ಬಂದನಂತರ ಅನೇಕರಲ್ಲಿ ಪ್ರಸ್ತಾಪಿಸಿದೆನು. ಈ ಪ್ರವಾಸವೇನೋ ನನಗೆ ಹಿತಕರವಾಯಿತು.

ಸಮರ್ಥರಾದ ಸಂಗಡಿಗರು : ಸತ್ಯಾಗ್ರಹಾಶ್ರಮದಿಂದ ಬಂದ ಸ್ವಲ್ಪ ದಿನಗಳಲ್ಲಿಯೇ ಶ್ರೀ ಲಕ್ಷ್ಮಣರಾವ ಭಿಡೆ ಎಂಬ ಸಾತಾರೆಯ ತರುಣರು ಆಶ್ರಮದಲ್ಲಿರಲು ಬಂದರು. ಇವರಿಗೆ ಕನ್ನಡ ಬರುತ್ತಿರಲಿಲ್ಲ. ಚಿತ್ಪಾವನ ಬ್ರಾಹ್ಮಣರು. ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳು ಚೆನ್ನಾಗಿ ಬರುತ್ತಿದ್ದವು. ಮರಾಠಿಯಂತೂ ಮಾತೃಭಾಷೆ. ಆಶ್ರಮದಲ್ಲಿರುವವರಿಗೆ ಕನ್ನಡ ಬರಲೆಬೇಕೆಂಬ ನಿಯಮವಿತ್ತು. ಆದುದರಿಂದ ಅವರು ಕನ್ನಡವನ್ನು ಕಲಿಯಲಾರಂಭಿಸಿದರು. ಆಸ್ರಮ ವಾಸಕ್ಕೆ ಅವರಲ್ಲಿ ಎಲ್ಲತರದ ಯೋಗ್ಯತೆಗಳೂ ತೃಪ್ತಿಕರವಾಗಿದ್ದವು. ವಿದ್ಯೆಯಲ್ಲಿ ನನಗಿಂತ ಅವರು ಎಷ್ಟೋ ಮೇಲು, ನನಗೆ ಅವರು ಸಂಗಡಿಗರಾದುದರಿಂದ ಬಹು ಪ್ರಯೋಜನವಾಯಿತು.

೧೯೨೪ನೆಯ ಬೆಳಗಾಂವ ಕಾಂಗ್ರೆಸ್ಸ್ ಅಧಿವೇಶನಕ್ಕಾಗಿ **'ಬಸವೇಶ್ವರ ಸೇವಾದಳ'** ಎಂಬ ಒಂದು ಸ್ವಯಂ ಸೇವಕ ದಳವನ್ನು ಏರ್ಪಡಿಸಿ ಆಶ್ರಮದಲ್ಲಿ ಮೂರು ವಾರ ಅವರನ್ನಿಟ್ಟುಕೊಂಡು ಬೆಳಗಾವ ಕಾಂಗ್ರೆಸ್ಸಿಗೆ ಕರೆದುಕೊಂಡು ಹೋದೆನು. ಆಗ ನಾನು **'ಬಸವ ಚರಿತ್ರೆ'**ಯನ್ನು ಬರೆದು ಪ್ರಕಟಿಸಿದ್ದೆನು. ಪೌರಾಣಿಕ ವಿಚಾರ ಸರಣಿಯವರಿಗೆ ಅದು ಸರಿತೋರದಿದ್ದವರೂ ಆಧುನಿಕ ವಿಚಾರಸರಣಿಯವರಿಗೆ ಪ್ರಿಯವಾಗಿದ್ದಿತು. ಅದರ ಮೇಲಿಂದಲೇ ಸತ್ಯಾಗ್ರಹಿ ಬಸವೇಶ್ವರ ಎಂಬ ಒಂದು ಚಿಕ್ಕ ಪುಸ್ತಕವನ್ನು ಹಿಂದಿ ಮತ್ತು ಮರಾಠಿ ಭಾಷೆಗಳಲ್ಲಿ ಶ್ರೀ ಬಿಡೆ ಲಕ್ಷ್ಮಣರಾಯರಿಂದ ಬರೆಯಿಸಿ ಅಚ್ಚು ಮಾಡಿಸಿ ಕಾಂಗ್ರೇಸ್ ಅಧಿವೇಶನ ಕಾಲದಲ್ಲಿ ಪರ ಪ್ರಾಂತಗಳಿಂದ ಬಂದ ಪ್ರಮುಖರಿಗೆಲ್ಲಾ ಉಚಿತವಾಗಿ ಕೊಡಿಸಿದೆನು. ಇವುಗಳ ಅಚ್ಚಿನ ವೆಚ್ಚವನ್ನು ಕೈ ಸಾಬೋಜಿ ಗಂಗಾಧರಪ್ಪನವರು ವಹಿಸಿದ್ದರು.

ಗಾಂಧೀಜಿಯವರು ಬೆಳಗಾವಿಗೆ ರಾಷ್ಟ್ರಿಯ ಸಭೆಯ ಅಧ್ಯಕ್ಷರಾಗಿ ಬಂದಾಗ ಅವರ ಬಿಡದಿಯ ಹತ್ತಿರವೇ ನಾನೂ ಇರಲು ಅನುಕೂಲ ಮಾಡಿಕೊಂಡಿದ್ದೆನು. ನಾನು ಗಾಂಧೀಜಿಯವರಿಗೆ ಸ್ವಲ್ಪ ಪರಿಚಯದವನಾಗಿಯೇ ಇದ್ದೆನು. ನನ್ನ ಅನೇಕ ಮಿತ್ರರಿಗೂ ಹಿತಚಿಂತಕರಿಗೂ ಗಾಂಧೀಜಿಯವರ ದರ್ಶನ ಮಾಡಿಸಬೇಕೆಂಬ ಕುತೂಹಲ ನನಗೆ ಹೆಚ್ಚು. ಅವರಿಗೂ ಗಾಂಧೀಜಿಯವರನ್ನು ನೋಡಬೇಕೆಂಬ ಇಚ್ಛೆ. ನನ್ನ ಪ್ರಿಯ ಸ್ವಾಮಿರಾಯರಿಗೆ ತೋರಿಸಬೇಕೆಂದು ಹೆಚ್ಚು ಲವಲವಿಕೆ. ಅವರು ಯಂಗ ಇಂಡಿಯಾ ಪತ್ರಿಕೆಯ ಮೂಲಕ ಗಾಂಧೀಜಿಯವರ ಎಲ್ಲ ತತ್ವಗಳನ್ನೂ ಬಹು ಚೆನ್ನಾಗಿ ತಿಳಿದುಕೊಂಡಿದ್ದರು ಅವರೂ ಖಾದಿ ಭಕ್ತರಾಗಿದ್ದರು. ಪ್ರಾತಃಕಾಲದ ಭಜನೆಯ ಕಾಲಕ್ಕೆ ಹೆಚ್ಚು ಗಲಾಟೆಯಿರುವುದಿಲ್ಲವೆಂದು ಅವರನ್ನು ಒಂದು ದಿನ ಆ ಕಾಲದಲ್ಲಿ ಕರೆದುಕೊಂಡು ಹೋದೆನು. ಬಹು ಜನರಿಗೆ ಗಾಂಧೀಜಿಯವರ ದರ್ಶನದ ಕೊರತೆಯಾಯಿತು. ಆಗ ಒಂದು ವೀರಶೈವರ ಪರಿಷತ್ ಕೂಡಿಸಿ ಗಾಂಧೀಜಿಯವರನ್ನು ಅಲ್ಲಿಗೆ ಬರಮಾಡಿಕೊಂಡರೆ ಅನುಕೂಲವೆಂದು

ಯೋಚಿಸಿ ಗಾಂಧೀಜಿಯವರಿಗೆ ಹೇಳಿಕೊಂಡೆನು. ಗಂಗಾಧರರಾಯರೇ ಕಾರ್ಯಕ್ರಮ ಗೊತ್ತು ಮಾಡುವವರೆಂದು ಅವರು ತಿಳಿಸಿದರು. ಆಗ ಶ್ರೀ ಗಂಗಾಧರರಾಯರಿಗೆ ತಿಳಿಸಲು ಅವರು ಒಪ್ಪಿ ಆ ಪ್ರಕಾರ ವ್ಯವಸ್ಥೆ ಮಾಡಿಸಲು ಹೇಳಿದರು. ಸತ್ಯಾಗ್ರಹಿ ಬಸವೇಶ್ವರ ಎಂಬ ಹಿಂದಿ ಪುಸ್ತಕವನ್ನು ಆ ಮುಂಚೆಯೇ ನಾನು ಗಾಂಧೀಜಿಯವರಿಗೆ ಕೊಟ್ಟು ಖಾದಿಯು ನಮ್ಮ ಮತತ್ವಗಳಲ್ಲಿಯೇ ಒಂದಾಗಿದೆಯೆಂಬುದನ್ನು ತಿಳಿಸಿದ್ದೆನು.

ಗಾಂಧೀಜಿಯವರನ್ನು ಕರೆದುಕೊಂಡುಬರುವಾಗ ಸೌ. ಸರೋಜಿನಿದೇವಿಯವರಿಗೂ ಬರಲು ಅರಿಕೆಮಾಡಿಕೊಂಡೆನು. ಅವರೂ ಸಂತೋಷದಿಂದ ಸಿದ್ಧರಾದರು. ಸಭೆಗೆ ವಿಶೇಷವಾಗಿ ಜನರೂ ಬಂದರು. ಶ್ರೀಮಾನ್ ಪಾವಟೆ ಸಿದ್ದರಾಮಪ್ಪನವರು ಸ್ವಾಗತಪರ ಭಾಷಣ ಮಾಡಿದರು. ಗಾಂಧೀಜಿಯವರೂ ಸೌ. ಸರೋಜಿನಿದೇವಿಯವರೂ ಖಾದಿ ಪ್ರಸಾರದಬಗ್ಗೆ ವೀರಶೈವರಿಗೆ ಬೋಧಮಾಡಿದರು.

ಮಾತೃವಿಯೋಗ : ೧೯೨೫ನೆಯ ಮಾರ್ಚ ತಿಂಗಳ ೨೭ನೆಯ ತಾರೀಖಿನ ದಿವಸ (ಚೈತ್ರ ಶುದ್ಧ ೩) ತಾಯಿಯವರು ಬೆಳಗಿನ ೩ ಗಂಟೆ ಸಮಯದಲ್ಲಿ ದೇಹಬಿಟ್ಟರು. ಯುಗಾದಿ ಹಬ್ಬದ ದಿನ ಸಾಯಂಕಾಲ ಏಕೋ ಮೈ ನಡಗುತ್ತದೆಂದು ಹೇಳಿ ಮಲಗಿದರು. ಸ್ವಲ್ಪ ಜ್ವರವೂ ಬಂದಿತು. ಅವರು ಎಂದೂ ಹೀಗೆ ಜ್ವರದಿಂದ ನರಳುವವರಲ್ಲ. ಒಂದೇ ದಿನದಲ್ಲಿ ಬಹು ಕ್ಷೀಣವಾದಂತೆ ತೋರಿತು. ಕೂಡಲೆ ಹುಬ್ಬಳ್ಳಿಗೆ ತಿಳಿಸಿದೆನು. ಅಣ್ಣನವರು, ಶ್ರೀ ಪುರಾಣಿಕರು ಬಂದರು. ಎರಡನೆಯ ದಿನದಲ್ಲಿಯೇ ತುಂಬಾ ಅಶಕ್ತರಾಗಿ ಹಾಸಿಗೆ ಹಿಡಿದರು. ಮುಪ್ಪಿನ ಮರಣವನ್ನು ನಾನು ಬಹು ಕೌತುಕದಿಂದ ನಿರೀಕ್ಷಿಸಿದೆನು. ಪ್ರಾಣೋತ್ಕ್ರಮಣದವರೆಗೂ ನಾನು ಹತ್ತಿರವೇ ಕುಳಿತುಕೊಂಡು ಅವರ ದೇಹದಲ್ಲಿ ಕ್ಷಣ ಕ್ಷಣಕ್ಕೂ ಆಗುತ್ತಿದ್ದ ವ್ಯತ್ಯಾಸವನ್ನು ನೋಡಿದೆನು. ನಾವಿಬ್ಬರೂ ಮಕ್ಕಳು ಹತ್ತಿರವೇ ಇದ್ದಾಗ ಆಶ್ರಮದಲ್ಲಿ ತಮಗೆ ಮರಣ ಸಂಭವಿಸುತ್ತಿದ್ದುದಕ್ಕೆ ಅವರಿಗೂ ಸಮಾಧಾನ. ಪಾದಗಳಿಂದ ದೇಹವು ತಣ್ಣಗಾಗುತ್ತಾ ಬರುತ್ತಿದ್ದುದನ್ನು ನೋಡಿ ನನಗೆ ಬಹು ಆಶ್ಚರ್ಯ, ಭಜನೆ ನಡೆದಾಗ ಶಾಂತ ವಾತಾವರಣವಿದ್ದಾಗ ದೇಹ ಬಿಟ್ಟರು. ಆಶ್ರಮದಲ್ಲಿ ಬಿಲ್ವ ವೃಕ್ಷದ ಕೆಳಗೆ ಅಂತ್ಯವಿಧಿಯನ್ನು ನಡೆಯಿಸಿದ್ದಾಯಿತು. ನನಗೆ ಆ ದಿನ ಮನಸ್ಸಿನಲ್ಲಿ ಯಾವ ಹೊಯಿದಾಟವೂ ಆಗಲಿಲ್ಲ. ಅಣ್ಣನವರು ಹುಬ್ಬಳ್ಳಿಗೆ ಹೋದರು. ಮರುದಿನದಿಂದ ಏನೋ ಮರೆತಂತೆ ತಟ್ಟನೆ ಅವರ ನೆನಪಾಗಲಾರಂಭಿಸಿತು. ಅನಂತರ ೨-೩ ದಿನಗಳಲ್ಲಿ ಆ ವಿಧವಾದ ಜ್ಞಾನಪಕವೂ ಬರೆದಂತಾಯಿತು.

ಆಗ ನನಗೆ ೪೦ ನೆಯ ವರುಷ ಪ್ರಾರಂಭ. ತಾಯಿಯವರು ಮಲಗಿದೊಡನೆ ನನಗೆ ಅವರ ಮರಣ ಸಮೀಪಿಸಿತೆಂದೇ ಕಲ್ಪನೆ, ಅಂತೆಯೇ ಅಣ್ಣನವರನ್ನು ಅಷ್ಟು ಜಾಗ್ರತೆ ಕರೆಯಿಸಿಕೊಂಡೆನು. ರಾಮಕೃಷ್ಣ ಜ್ಯೋತಿಷಜ್ಞರ ಅಭಿಪ್ರಾಯವನ್ನು ಈ ವಿಷಯದಲ್ಲಿ ನಾನು ಹೆಚ್ಚು ಲಕ್ಷಿಸುತ್ತಿದ್ದೆನು. ಮುಂಜಾಗ್ರತೆಯಾಗಿದ್ದರೆ ಅದರಿಂದ ಬಾಧಕವೇನೂ ಇಲ್ಲ. ಎಷ್ಟೋ ಅನುಕೂಲವೆಂದೇ ನನ್ನ ತಿಳಿವಳಿಕೆ., ಅದು ಬಹು ಅನುಕೂಲವಾಗಿಯೂ ಪರಿಣಮಿಸಿತು. ಒಂದಕ್ಷರ ಕೂಡಾ ವ್ಯತ್ಯಾಸವಾಗದಂತೆ ಅವರ ಭವಿಷ್ಯವು ಈ ವಿಷಯದಲ್ಲಿ ಸರಿಬಂದಿತು. ನಾನು ಕಾರಾಗೃಹವಾಸವನ್ನೇನೂ ಅವರ ಹೇಳಿಕೆಯಂತೆ ಅನುಭವಿಸಲಿಲ್ಲ. ಆಶ್ರಮವಾಸವೇ ಕಾರಾಗೃಹ ವಾಸವಾಗಿದ್ದಿತೋ ಏನೋ?

❖❖

ಹಳ್ಳಿಗಳ ಸಂಚಾರ

(ಕ್ರಿ. ಶ. ೧೯೨೫-೧೯೨೭)

ತಾಯಿಯವರು ತೀರಿದನಂತರ ನಾನು ಸಂಪೂರ್ಣ ಸ್ವತಂತ್ರನಾದೆನು. ಅವರ ವಾತ್ಸಲ್ಯವು ನನ್ನನ್ನು ಎಷ್ಟೋ ಪ್ರತಿಬಂಧಗೊಳಿಸಿತ್ತು. ನಾನು ಎಷ್ಟುಕಾಲ ಎಲ್ಲಿ ಹೋದರೂ ಯಾರ ಯೋಚನೆಯೂ ಇಲ್ಲದಂತಾಯಿತು. ೧೯೨೫ರಲ್ಲಿ ಆಶ್ರಮದೊಳಗೆಲ್ಲಾ ನೀರು ಬಂದಂತೆ ೧೯೨೬ರಲ್ಲಿಯೂ ಸ್ವಲ್ಪ ಬಂದಿತ್ತು. ಮಳೆಗಾಲದಲ್ಲಿ ಆ ಸ್ಥಳವು ಅನುಕೂಲವಲ್ಲವೆಂದೇ ನಿಶ್ಚಯಿಸಿದ್ದೆನು. ಮಳೆಗಾಲ ಬಂದೊಡನೆ ಆಶ್ರಮದಲ್ಲಿಯ ಪುಸ್ತಕ ಮೊದಲಾದವುಗಳನ್ನು ತೆಗೆದು ಬೇರೆ ಕಡೆ ಒಯ್ಯುವುದು ತುಂಬಾ ಅನಾನುಕೂಲದ್ದಾಗಿತ್ತು. ಆದಕಾರಣ ಆ ಸ್ಥಳವನ್ನೇ ಬಿಡಬೇಕೆಂದು ಗೊತ್ತುಮಾಡಿದೆನು.

ಬೆಳಗಾವ ಕಾಂಗ್ರೇಸ್ ಅಧಿವೇಶನ ಮುಗಿದನಂತರ ಯಾರೋ ಮುಂಬೈ ಕ್ರಾನಿಕಲ್ ಪತ್ರಿಕೆಯಲ್ಲಿ ನನ್ನ ಚಿತ್ರ ಹಾಕಿಸಿ ಕರ್ನಾಟಕದಲ್ಲಿ **ನಾನೊಬ್ಬ ಲಿಂಗಾಯತ ಪ್ರಮುಖನು ರಾಷ್ಟ್ರಕಾರ್ಯ ಮಾಡುತ್ತಿದ್ದೇನೆಂದು ಬರೆದಿದ್ದರಂತೆ.** ಅದು ಡಾವಣಗೆರೆಯೂ ನನ್ನ ವಿರುದ್ಧ ಪಂಗಡದವರಿಗೆ ಸಹನವಾಗದೆ ಹಿಂದಿನಂತೆ ಮತ್ತೆ ಪ್ರಕಟಿಸಿದರು. ನಮ್ಮ ಜನರ ಜಾತಿಯ ದುರಾಭಿಮಾನವು ಮೊದಲಿನಿಂದಲೂ ಆಗಾಗ್ಗೆ ನನ್ನ ಕಾರ್ಯಕ್ಕೆ ವಿಘ್ನವನ್ನೂ ನಿರುತ್ಸಾಹವನ್ನೂ ಉಂಟುಮಾಡುತ್ತಿತ್ತು. ಆಗ ಲಿಂಗಾಯತ ವಿಧ್ಯಾರ್ಥಿಗಳನ್ನೇ ಕೂಡಿಸಿ ಅವರಿಗೆ ರಾಷ್ಟ್ರಿಯ ಶಿಕ್ಷಣದ ಪ್ರಕಾರ ಶಿಕ್ಷಣಕೊಡಬೇಕೆಂದೂ ಒಳಪಂಗಡಗಳ ಕೊಳೆಯನ್ನು ತೆಗೆಯಬೇಕೆಂದೂ ಯೋಚಿಸಿ ಮುಂದೆ ಶ್ರಾವಣ ಮಾಸದಲ್ಲಿ ಅಥಣಿಗೆ ಹೋದಾಗ ಅವರಾದಿ ಶ್ರೀಪಟ್ಟಾಧ್ಯಕ್ಷರಿಂದ ಲಘು ದೀಕ್ಷೆಯನ್ನು ಹೊಂದಿ, ಆ ಮುಂಚೆಯೇ ಗೊತ್ತಾದ ಪ್ರಕಾರ ಇಂಡಿ ತಾಲೂಕು ಬಂಥನಾಳಕ್ಕೆ ಪ್ರವಚನಕ್ಕೋಸ್ಕರ ಹೋದೆನು.

ಸಂಚಾರ : ಶ್ರಾವಣ ಶುದ್ಧ . ೬ ಇಂದ (೧೯೨೫ನೆಯ ಇಸವಿ) ಭಾದ್ರಪದ ಶುದ್ಧ ೬ ವರೆಗೆ ಒಂದು ತಿಂಗಳು ಇಂಡಿ ತಾಲೂಕು ಬಂಥನಾಳದಲ್ಲಿ ಬಸವಣ್ಣನವರ ವಚನ ಪ್ರವಚನ ನಡೆಯಿಸಿದೆನು. ವೀರಶೈವರಲ್ಲಿಯ ಒಳಪಂಗಡಗಳನ್ನು ತೆಗೆದುಹಾಕುವುದರ ಕಡೆಗೇನೇ ಹೆಚ್ಚು ಒತ್ತಿ ಹೇಳಲಾರಂಭಿಸಿದೆನು. ಎಲ್ಲರೂ ದೀಕ್ಷೆಯಾಗುವುದೇ ಇದಕ್ಕೆ ಒಂದು ಮುಖ್ಯೋಪಾಯವೆಂದು, ಅಲ್ಲಿ ಸಾಧಾರಣ ೨೦೦ ಲಿಂಗಾಯತ ಸ್ತ್ರೀ ಪುರುಷರಿಗೆ ಲಘು ದೀಕ್ಷೆಯನ್ನು ಪ್ರವಚನದ ಸಮಾಪ್ತಿಯ ಕಾಲಕ್ಕೆ ಮಾಡಿಸಿದ್ದಾಯಿತು.

ಬಂಥನಾಳ ಶ್ರೀಮನ್ನಿರಂಜನ ಶ್ರೀ ಸಂಗನಬಸವ ಸ್ವಾಮಿಗಳು ತಮ್ಮ ಪಂಕ್ತಿಗೆ ಬರಬೇಕೆಂದು ಆಗ್ರಹದ ಅಪ್ಪಣೆಮಾಡಿದರು. ಅವರೂ ಕಾರ ಬಿಟ್ಟು ಕಲ್ಲುಪ್ಪನ್ನೇ ಉಪಯೋಗಿಸುವೆವೆಂದು ತಿಳಿಸಿದರು. ನಾನು ಅವರ ಸಂಗಡಲೇ ಆ ಭಾಗದಲೆಲ್ಲಾ ಸಂಚರಿಸಬೇಕೆಂದು ಯೋಚಿಸಿದ್ದೆನು. ನನ್ನ ಪ್ರತ್ಯೇಕವಾದ ಊಟದ ಕಟ್ಟು ಇನ್ನು ಅನಾನುಕೂಲವಾಗಬಹುದೆಂದೂ ನನಗೆ ೪೦ ವರುಷಗಳಾದುದರಿಂದ ಇನ್ನು ಈ ವಿಚಾರದಲ್ಲಿ ಅಷ್ಟು ಬಿಗುವಾಗಿರಬೇಕಾದುದೇನೂ ಕಾರಣವಿಲ್ಲವೆಂದೂ ಯೋಚಿಸಿ ೧೫ ವರುಷಗಳಿಂದ ಇದ್ದ ನನ್ನ ಆಹಾರ ಪ್ರತಿಬಂಧವನ್ನು ಆಗ ತೆಗೆದು ಹಾಕಿದೆನು.

ಅನಂತರ ವಿಜಾಪುರ ಜಿಲ್ಲೆಯ ೭ ತಾಲೂಕುಗಳ ೫೫ ಹಳ್ಳಿಗಳಲ್ಲಿ ಐದು ತಿಂಗಳೂ ಸಂಚರಮಾಡಿದೆನು. ಇವುಗಳಲ್ಲಿ ಶ್ರೀ ಬಂಥನಾಳ ಸ್ವಾಮಿಗಳವರ ಸಂಗಡ ಸಂಚರಿಸಿದ ಹಳ್ಳಿಗಳೇ ಹೆಚ್ಚು. ತಂಬಾಕು ಮತ್ತು ಚಹಾ ಬಿಡಿಸುವುದು, ಖಾದಿ ಧರಿಸುವಂತೆ ಮಾಡುವುದು, ಇವೇ ನಮ್ಮ ವಿಧಾಯಕ ಕಾರ್ಯಕ್ರಮ. ಕೆಲವು ಕಡೆ ಲಿಂಗಾಯತರಲ್ಲಿಯ ಒಳಪಂಗಡಗಳನ್ನು ಕಳೆಯಲು ಲಘುದೀಕ್ಷಾ ಸಮಾರಂಭವನ್ನು ಜರುಗಿಸಿದ್ದಾಯಿತು. ನೂರಾರು ವ್ಯಾಖ್ಯಾನಗಳಾದವು. ಸಾವಿರಾರು ಜನರು ತಂಬಾಕು ಮತ್ತು ಚಹಾ ಬಿಡುವುದಾಗಿ ಪ್ರತಿಜ್ಞೆ ಮಾಡಿದರು. ಒಂದು ಹಳ್ಳಿಗೆ ಹೋದೊಡನೆ ತಂಬಾಕು ಬಿಡಿಸುವವರು ಬಂದರೆಂದು ಜನರು ಹೇಳುವಷ್ಟು ಈ ವಿಷಯದಲ್ಲಿ ಕೆಲವು ಕಡೆ ಜಾಗೃತಿಯನ್ನು ಮಾಡಿದ್ದಾಯಿತು. ಮಹಾಸ್ವಾಮಿಗಳ ವಿಷಯದಲ್ಲಿ ಕೆಲವು ಕಡೆ ಮೊದಲೇ ವಿಶೇಷವಾದ ಭಕ್ತಿಯಿದ್ದಿತು. ಈ ಉಪದೇಶದಿಂದ ಜನರಲ್ಲಿ ಹೆಚ್ಚಾದ ಪರಿಣಾಮವು ತಾತ್ಕಾಲದಲ್ಲೇನೋ ಆಗಿ ಚಿಲಿಮೆ, ತಂಬಾಕು, ಚಂಚಿ, ಬೀಡಿಗಳು, ರಾಸಿಯಾಗಿ ದೊರೆತವು, ಅವುಗಳ ಹೋಳಿಯನ್ನು ಕೂಡಾ ಬಂಥನಾಳದಲ್ಲಿ ಮಾಡಿದೆವು. ಕೆಲವು ಹಳ್ಳಿಗಳಲ್ಲಿ ತಂಬಾಕಿನ ವ್ಯಾಪಾರವೇ ಇಲ್ಲದಂಥ ಸ್ಥಿತಿ ಸ್ವಲ್ಪ ದಿನಗಳವರೆಗಿತ್ತು. ಇಂಡಿ, ಸಿಂದಿಗಿ, ಬಾಗೇವಾಡಿ ಈ ಮೂರು ತಾಲೂಕುಗಳಲ್ಲಿ ಮಹಾ ಸ್ವಾಮಿಗಳವರ ಸಂಗಡ ಸಂಚರಿಸ್ಕಿದೆನು.

ಹುನಗುಂದ ತಾಲೂಕಿನಲ್ಲಿ ಸರ್ಕಲ್ ಇನಸ್ಪೆಕ್ಟರಾಗಿದ್ದ ಕೈ ಕಡಿ ಮುರಿಗೆಪ್ಪನವರು ನನ್ನ ಸಂಚಾರಕ್ಕೆ ಬಹು ಸಹಾಯ ಮಾಡಿದರು. ಅವರು ಮಾಡಿಕೊಟ್ಟ ಸೌಲಭ್ಯಗಳಿಂದ ನಾನು ವ್ಯಾಖ್ಯಾನದ ಮಾಮಲೇದಾರ ಎಂಬುದಾಗಿಯೂ ಕೆಲವರಿಗೆ ತೋರಿತು. ಈ ತಾಲೂಕಿನ ಪ್ರವಾಸದಲ್ಲಿ ಶ್ರೀ ಬಳೂಟಗಿ ಬಸವಶೆಟ್ಟೆಪ್ಪನವರು ನನ್ನ ಸಂಗಡಲೇ ಇದ್ದು ತುಂಬಾ ಸಹಾಯಮಾಡಿದರು. ಮುದ್ದೇಬಿಹಾಳ ತಾಲೂಕಿನ ಸಂಚಾರದಲ್ಲಿ ಶ್ರೀ ಮೊಟಗಿ ಸಂಗಣ್ಣನವರು ತುಂಬಾ ಅನುಕೂಲಪಡಿಸಿದರು. ಈ ಹಳ್ಳಿ ಸಂಚಾರದಲ್ಲಿ ನಾನು ಲಕ್ಷಿಸುತ್ತಿದ್ದ ಮುಖ್ಯ ಸಂಗತಿಗಳು ಈ ಕೆಳಗೆ ಕೊಟ್ಟಂತೆ ಇದ್ದವು.

(೧) ಹಳ್ಳಿಯ ಜನಸಂಖ್ಯೆ (೨) ಶಾಲೆ (೩) ತಂಬಾಕು ಮತ್ತು ಚಹಾ ವ್ಯಸನ (೪) ರಾಟಿ (೫) ಯಾವ ಕೈಕಸಬುಗಳು ನಡೆಯುತ್ತವೆ (೬) ಸ್ವಚ್ಛತೆ (೭) ಊರಲ್ಲಿಯ ಪ್ರಮುಖರು (೮) ಕಾರ್ಯಮಾಡುವ ಉತ್ಸಾಹಿಗಳು. ಈ ಎಲ್ಲ ಸಂಗತಿಗಳನ್ನು ತಿಳಿದುಕೊಂಡು ಕ್ರಮವಾಗಿ ಬರೆದಿಡುತ್ತಿದ್ದೆನು. ಹೀಗೆ **ಹಳ್ಳಿಯ ಸಂಚಾರ**ವೆಂಬ ಒಂದು ಪ್ರತ್ಯೇಕವಾದ ಕೈ ಬರವಣಿಗೆಯ ಪುಸ್ತಕವನ್ನೇ ಮಾಡಿಟ್ಟೆನು. ಹಳ್ಳಿಯ ಸಂಬಂಧವಾದ ಕೆಲವು ಸಂಗತಿಗಳಾದರೂ ನನಗೆ ಆಗ ತಿಳಿದವು.

ಚಿತ್ರಗಿಯಷ್ಟು ಹೊಸಲು ಊರು ಮತ್ತೊಂದು ತೋರಲಿಲ್ಲ. ಊರ ಸುತ್ತಲೂ ಮಲವಿಸರ್ಜನೆ ಅತ್ಯಧಿಕ. ಚಾಂದಕೋಟಿ ಹಳ್ಳಿಯಷ್ಟು ಬೇರೆ ಹಳ್ಳಿ ಸ್ವಚ್ಚವಾಗಿ ತೋರಲಿಲ್ಲ. ಹುನಗುಂದ ತಾಲೂಕು ಮರೋಳ ಎಂಬ ೬೦೦ ಜನಸಂಖ್ಯೆಯ ಹಳ್ಳಿಯಲ್ಲಿ ಸರಕಾರಿ ಶಾಲೆ ಇರಲಿಲ್ಲ. ಗಾವಠಿ ಶಾಲೆಯಲ್ಲಿ ಗುರುಬಸವ್ವ ಎಂಬ ೧೦ ವರುಷಗಳ ಹುಡುಗಿ ೫ನೆಯ ತರಗತಿಯಲ್ಲಿ ಓದುತ್ತಿದ್ದಳು. ಅವಳ ಕೈಯಲ್ಲಿ ನನ್ನ **ಸ್ತ್ರೀ ನೀತಿ ಸಂಗ್ರಹ** ಎಂಬ ಪುಸ್ತಕವಿತ್ತು! ಇಂತಹ ಹಳ್ಳಿಯಲ್ಲಿ ನನ್ನ ಪುಸ್ತಕ ಬಂದುದು ನೋಡಿ ನನಗೆ ಎಷ್ಟೋ ಆನಂದ ಮತ್ತು ಆಶ್ಚರ್ಯ. ಈ ತಂಗಿಯಷ್ಟು ಜಾಣಳಾದ ಹೆಣ್ಣು ಹುಡಿಗಿಯರನ್ನು ಯಾವ ಹಳ್ಳಿಯ ಶಾಳೆಯಲ್ಲಿಯೂ ಕಾಣಿಲಿಲ್ಲ. ಹಳ್ಳಿಗಳ ಶಾಲೆಗೆ ಹೆಣ್ಣು ಹುಡುಗಿಯರು ಕಲಿಯಲಿಕ್ಕೆ ಹೋಗುವುದೇ ಕಡಿಮೆ. ದೇವರ ಹಿಪ್ಪರಗಿಯಲ್ಲಿ ಕೋರಿ ಗುರುಸಿದ್ದಪ್ಪ ಎಂಬ ಹುಡುಗನಷ್ಟು ಕಸುವಿನ ಮತ್ತು ನಿಲುವಾಗಿ ಬೆಳೆದ ಬೇರೊಂದು ಹುಡುಗನನ್ನು ಆ ಸಂಚಾರದಲ್ಲಿ ಕಾಣಲಿಲ್ಲ.

ಅನೇಕ ದುಷ್ಟ ಚಟ, ವ್ಯಭಿಚಾರಗಳಿಂದ ಬಳಲಿದ ಕೆಲವು ತರುಣರನ್ನೂ ನೋಡಿದೆನು. ಗುಡೂರಲ್ಲಿ ಹಿತ್ತಾಳೆ ಪಾತ್ರೆ, ಮತ್ತು ಬಳಿಗಳು ಆಗುತ್ತಿದ್ದುದನ್ನು ನೋಡಿ ತುಂಬಾ ಆಶ್ಚರ್ಯವಾಯಿತು. ಬೀಳಗಿ ಪೇಠಾ ಖಜ್ಜಿ ಡೋಣಿಯಲ್ಲಿದ್ದಷ್ಟು ರಾಟಿಯ ಉದ್ಯೋಗವನ್ನು ಇನ್ನೆಲ್ಲಿಯೂ ಕಾಣಲಿಲ್ಲ. ಇದು ಒಂದು ಸಾವಿರ ಜನ ಸಂಖ್ಯೆಯುಳ್ಳ ಗ್ರಾಮ. ೧೫೦ ರಾಟಿಗಳು ನಡೆಯುತ್ತಿದ್ದವು. ಬಹು ಸೊಗಸಾದ ನೂಲನ್ನೂ ತೆಗೆಯುವ ಹೆಣ್ಣು ಮಕ್ಕಳಿದ್ಧಾರೆ. ತಾಯವ್ವ ಎಂಬ ಹೆಣ್ಣುಮಗಳು ತನ್ನ ಕೈನೂಲಿನಿಂದಲೇ ಸೀರೆಯನ್ನು ನೇಯಿಸಿಕೊಂಡಿದ್ದಳು. ಬ್ಯಾಟರಿ ಹಚ್ಚಿ ಬೀಡಿ ಸೇದಿದ್ದನ್ನು ನಾನು ಇದೇ ಗ್ರಾಮದಲ್ಲಿ ಕಂಡೆನು. ಈ ಪ್ರಕಾರ ಹಳ್ಳಿಯ ನಾನಾ ರೀತಿಗಳನ್ನು ನೋಡಿದೆನು. ಜನರ ಜೀವನದ ಅಂತಸ್ತು, ಬಡತನ, ಅಜ್ಞಾನ ಮೊದಲಾದವುಗಳ ಬಗ್ಗೆ ನನಗೆ ಎಷ್ಟೋ ತಿಳುವಳಿಕೆ ಬಂದಿತು.

ಗವಿಯಲ್ಲಿ ವಾಸ : ಬಸವಾದಿ ವಚನಕಾರರ ವಚನಗಳ ಅರ್ಥಮಾಡುವ ರೀತಿಯನ್ನು ಅರಿತುಕೊಳ್ಳಬೇಕೆಂಬ ಕುತೂಹಲವು ನನಗೆ ಬಸವಣ್ಣನವರ ಚರಿತ್ರೆಯನ್ನು ಬರೆಯುವ ಕಾಲದಲ್ಲಿಯೇ ಉಂಟಾಗಿತ್ತು. ಕೈ ಕಿಣಗಿ ಬಸವಲಿಂಗಪ್ಪನವರು ವಚನಶಾಸ್ತ್ರ ಅರ್ಥಮಾಡುವುದರಲ್ಲಿ ಬಹು ಪ್ರಸಿದ್ದರಾಗಿದ್ದರು. ೧೯೨೫ನೆಯ ಜೂನ ತಿಂಗಳಲ್ಲಿ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳು ಅವರಿಂದ ಧಾರವಾಡದಲ್ಲಿ ವಚನ ಪ್ರವಚನ ನಡೆಯುವಂತೆ ವ್ಯವಸ್ಥೆ ಮಾಡಿಸಿದ್ದರು. ಆಗ ನಾನು ಅಲ್ಲಿಯೇ ಇದ್ದು **ಶೂನ್ಯಸಂಪಾದನೆ**ಯ ಒಂದೆರಡು ಸಂಪಾದನೆಗಳ ಅರ್ಥವನ್ನು ಅವರಿಂದ ತಿಳಿದುಕೊಂಡಿದ್ದೆನು. ಬಸವಣ್ಣನವರ ವಚನ ಪ್ರವಚನವು ಅವರಿಂದ ಪ್ರತಿ ನಿತ್ಯ ಜರುಗುತ್ತಿದ್ದಿತು.

ಶಿವಾನುಭವಿಗಳಾದ ಆ ಬಸವಲಿಂಗಪ್ಪನವರು ತಾ. ೨೪.೦೬.೨೫ ನೆಯ ದಿವಸ ನನಗೆ **ಸಟೀಕೆ ಬಸವಣ್ಣವನರ ವಚನ**ಗಳ ಒಂದು ಕೈ ಬರವಣಿಗೆಯ ಪ್ರತಿಯನ್ನು ಕೊಟ್ಟು ಈಗಿನ ರೀತಿಗೆ ತಕ್ಕಂತೆ ಅರ್ಥವಿವರಣೆ ಮಾಡಿ ಮುದ್ರಿಸಿರೆಂದು ಹೇಳಿದ್ದರು. ಅವುಗಳಲ್ಲಿ ೧೦೮ ವಚನಗಳನ್ನು ಬೇರೆ ಬೇರೆ ವಿಷಯಗಳಿಂದ ಆಯ್ದುಕೊಂಡು ಅವುಗಳಿಗೆ ಅರ್ಥವನ್ನು ವಿವರವಾಗಿ ಬರೆಯಬೇಕೆಂಬ ಯೋಜನೆಯಿತ್ತು. ಈ ಹಳ್ಳಿಯ ಪ್ರವಾಸದಲ್ಲಿ ನೋಡಿದ ಇಳಕಲ್ ಹತ್ತಿರ ಇರತಕ್ಕ ಚಿಕ್ಕ ಕೊಡಗಲಿ ಗ್ರಾಮವು ಈ ಕಾರ್ಯಕ್ಕೆ ಅನುಕೂಲವೆಂದು ನಾನು ಅಲ್ಲಿಗೆ ಹೋಗಿ ತಾ. ೨೧.೦೧.೨೬ರಿಂದ

ಇರಲಾರಂಭಿಸಿದೆನು. ಜನರಿಗೆ ಒಂದು ವಚನದ ಅರ್ಥವನ್ನು ಹೇಳುವಾಗ ವಿಶೇಷ ವಿಸ್ತಾರಗೊಳಿಸಬೇಕಾಗಿತ್ತು. ಹಾಗಾದರೇನೇ ನನಗೆ ವಿವರಣೆಯನ್ನು ಬರೆಯಲು ಅನುಕೂಲವಾಗುತ್ತಿತ್ತು. ಅಂತೇಯೇ ಏಕಾಂತವಾಗಿಯೂ ಪ್ರವಚನಕ್ಕೆ ಅನುಕೂಲವಾಗಿಯೂ ಅದೇ ಸ್ಥಳವು ನನಗೆ ಪ್ರಶಸ್ತ ತೋರಿತು. ನನ್ನನ್ನು ಖಿಹೊಳೆಯ ಅಪಾಯದಿಂದ ಪಾರುಮಾಡಿದ ಕೈ ಪ್ರಿಯ ಸಂಗಪ್ಪನವರು ಅಲ್ಲಿ ಶಾಲಾಧ್ಯಾಪಕರಾಗಿದ್ದರು. ಇಳಕಲ್ಲಿನ ನನ್ನ ಅನೇಕ ಹಿತಚಿಂತಕರು. ಪ್ರತಿ ನಿತ್ಯ ಅಲ್ಲಿಗೆ ಪ್ರವಚನಕ್ಕೆ ಬರುತ್ತಿದ್ದರು.

ಅಲ್ಲಿ ನಿಜಗುಣಪ್ಪನ ಗವಿ ಎಂಬ ಒಂದು ಗವಿಯಿದೆ. ೧೮ ಅಡಿ ಉದ್ದ, ಅಗಲ ೧೧ ರಿಂದ ೪ ಅಡಿ ವರೆಗೆ ಕಿರಿದಾಗಿದೆ. ಎತ್ತರ ಸಾಮಾನ್ಯವಾಗಿ ೩ ಅಡಿ ಇದರಲ್ಲಿ ನಾನು ೧೮ ದಿನ ವಾಸವಾಗಿದ್ದು, ಬಸವಣ್ಣನವರ ೧೦೮ ವಚನಗಳಿಗೆ ಟೀಕೆ ಟಿಪ್ಪಣಿಗಳನ್ನು ಬರೆದು **"ಬಸವ ಬೋಧಾಮೃತ"** ಎಂಬ ಹೆಸರನ್ನಿಟ್ಟೆನು. ಅಲ್ಲಿ ಪ್ರತಿನಿತ್ಯ ಸಾಯಂಕಾಲ ೧೮ ದಿನವೂ ಅದೇ ವಚನಗಳನ್ನು ಕುರಿತು ಪ್ರವಚನ ಮಾಡಿದೆನು. ಆ ಗವಿಯಲ್ಲಿ ನಿಜಗುಣರೆಂಬ ಒಬ್ಬ ಶರಣರು ವಾಸವಾಗಿದ್ದರಂತೆ, ಅಂತೆಯೇ ನಿಜಗುಣಪ್ಪನ ಗವಿ ಎಂಬ ಹೆಸರಿದೆ. ಅಲ್ಲಿಂದ ಆಶ್ರಮಕ್ಕೆ ಬಂದೆನು. ಶ್ರೀ ಬಿಡೆ ಲಕ್ಷ್ಮಣರಾಯರು ಇರಲಿಲ್ಲ. ತಾ. ೧೭.೦೩.೨೬ನೆಯ ದಿವಸ ಆಶ್ರಮದಲ್ಲಿ ಕಳವಾಗಿ ಅಡಿಗೆ ಪಾತ್ರೆಗಳೂ ಹೋಗಿದ್ದವು. ಶ್ರೀ ಲಕ್ಷ್ಮಣರಾಯರಿಗೆ ಕನ್ನಡ ಮಾತನಾಡಲು ಅಷ್ಟು ಸರಿಯಾಗಿ ಬರುತ್ತಿರಲಿಲ್ಲ. ಆದ ಕಾರಣ ಕರ್ನಾಟಕದಲ್ಲಿ ಅವರು ಪ್ರಚಾರ ಮಾಡುವಂತಿರಲಿಲ್ಲ. ನಾನು ಯಾವಾಗಲೂ ಆಶ್ರಮದಲ್ಲಿಯೇ ಇರುವುದು ಶಕ್ಯವಿರಲಿಲ್ಲ. ಸಂಚಾರವೇ ಹೆಚ್ಚು, ಅವರೊಬ್ಬರೇ ಅಲ್ಲಿರಲು ಇಷ್ಟಪಡಲಿಲ್ಲ. ಬೇರೆ ಯಾರೂ ಅಲ್ಲಿರಲು ಬರಲಿಲ್ಲ. ಆದಕಾರಣ ಅದನ್ನು ಬಿಟ್ಟು ಜಾಗ್ರತೆ ಬೇರೆ ಕಡೆ ಆಶ್ರಮ ಸ್ಥಾಪಿಸುವ ಅಗತ್ಯ ನನಗೆ ಹೆಚ್ಚು ತೋರಿತು. ಹಳ್ಳಿಯ ಪ್ರವಾಸದಲ್ಲಿ ಶ್ರೀ ಬಂಥನಾಳ ಸ್ವಾಮಿಳಗಿಗೆ ನನ್ನ ಈ ಅಭಿಪ್ರಾಯವನ್ನು ತಿಳಿಸಿದ್ದೆನು. ಆಗ ಒಂದೆರಡು ಸ್ಥಳಗಳನ್ನೂ ನೋಡಿದ್ದೆವು. ಆದರೆ ಅವು ಅನುಕೂಲವಾಗಿರಲಿಲ್ಲ.

ಮೊಗಲಾಯ ಪ್ರವಾಸ : ಗುಲಬರ್ಗಾದಲ್ಲಿ ಬೋರ್ಡಿಂಗ್ ಸ್ಥಾಪಿಸುವುದಿದೆ; ಅದಕ್ಕಾಗಿ ಬರಬೇಕೆಂದು ಗುಲಬರ್ಗಾ ವೀರಶೈವ ಮಹಾಜನರ ಪರವಾಗಿ ಅಲ್ಲಿಯ ವಕೀಲ ಶ್ರೀ ಬಸವಂತರಾಯರು ಆಶ್ರಮಕ್ಕೆ ಕರೆಯಲು ಬಂದರು. ಆ ಪ್ರಕಾರ ಗುಲಬರ್ಗಕ್ಕೆ ಹೋದೆನು. ತಾ. ೨೪.೦೩.೧೯೨೬ರಲ್ಲಿ ಗುಲಬರ್ಗಾದಲ್ಲಿ ಸಭೆ ಜರುಗಿ ೯ ಸಾವಿರ ರೂ. ಗಳ ವಾಗ್ದಾನವಾಯಿತು. ಇದೇ ಕಾರ್ಯಕ್ಕಾಗಿ ಪರ್ವತಾಬಾದ. ಮಹಗಾಂವ, ಗೂಳ್ಯ ಈ ಸ್ಥಳಗಳಿಗೆ ಹೋದೆನು. ಧನಸಹಾಯವು ತೃಪ್ತಿಕರವಾಗಿ ಆಗುವಂತೆ ತೋರಿತು. ಪರ್ವತಾಬಾದದಲ್ಲಿ ಹೆಣ್ಣು ಮಗಳು ಬೀಡಿಯನ್ನು ಸೇದುತ್ತಾ ಮಾರ್ಗದಲ್ಲಿ ಬಂದದ್ದನ್ನು ನೋಡಿದೆನು! ಇದೊಂದು ನನಗೆ ಆಶ್ಚರ್ಯದ ನೋಟವಾಗಿಯೇ ತೋರಿತು. ಅದೊಂದು ಸಾಧಾರಣ ಗ್ರಾಮ, ಬೀಡಿಯ ಪ್ರಸಾರ ಅಲ್ಲಿ ಅಷ್ಟು ವಿಪರೀತ. ಗೂಳ್ಯ ಎಂಬ ಹಳ್ಳಿಯಲ್ಲಿ ಲಕ್ಕಮ್ಮನ ಜಾತ್ರೆಗೆ ೨೫೦-೩೦೦ ಕೋಣಗಳನ್ನು ಕಡಿಯುತ್ತಾರಂತೆ. ಇದೊಂದು ಭಯಂಕರ ಸುದ್ದಿ. ಆಮೇಲೆ ರಾಯಚೂರಿಗೆ ಹೋದೆನು. ಅಲ್ಲಿಯ ಶ್ರೀ ಪಿ. ಕಿಶನ್‌ರಾವ ಎಂಬ ಪ್ರಸಿದ್ಧ ವಕೀಲರು ಮಹಾ ಮೇಧಾವಿಗಳು ನನಗೆ ತುಂಬಾ ಆದರ ಸತ್ಕಾರಗಳನ್ನು ಮಾಡಿದರು. ತಾ. ೧೦.೦೪.೨೬ನೆಯ ದಿವಸ ಅಹಿಂಸೆಯ ಮೇಲೆ ನಾನು

ಸಾಧಾರಣ ೧॥ ತಾಸು ವ್ಯಾಖ್ಯಾ ಮಾಡಿದೆನು. ಅವರು ವ್ಯಾಖ್ಯಾನವನ್ನು ಚಿತ್ತಗೊಟ್ಟು ಕೇಳುತ್ತಿದ್ದರು. ಮರುದಿನ ಅವರ ಮನೆಗೆ ಹೋದಾಗ ನನ್ನ ವ್ಯಾಖ್ಯಾನವನ್ನು ಉರ್ದು ಭಾಷೆಯಲ್ಲಿ ಸಾಧಾರಣ ೭೦ ಪುಟಗಳಲ್ಲಿ ಬರೆದಿಟ್ಟುದನ್ನು ಓದಿ ಹೇಳಿದರು. ಅದನ್ನು ನೋಡಿ ನನಗೆ ಪರಮಾಶ್ಚರ್ಯ. ಅವರ ಸ್ಮರಣಶಕ್ತಿ ಅಗಾಧವಾದುದು. ಐವತ್ತು ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರಾಗಿ ತೋರಿದರು. ತಾವು ಈ ವರೆಗೆ ಕೇಳಿದ ಕೀರ್ತನ, ಭಾಷಣಗಳನ್ನೆಲ್ಲಾ ಹೀಗೆ ಬರೆದಿಟ್ಟುದುಂಟೆಂತಲು ಹೇಳಿದರೂ. ಅಲ್ಲಿಂದ ತುಂಗಭದ್ರೆಗೆ ಹೋಗಿ ಶ್ರೀ ತಾರಾನಾಥರ ಆಶ್ರಮವನ್ನು ನೋಡಿದೆನು. ಆಗ ಅವರಲ್ಲಿದ್ದರು. ನನಗೆ ಮುಂಚೆಯೇ ಅವರ ಸ್ವಲ್ಪ ಪರಿಚಯವಿತ್ತು. ಆ ಬಳಿಕ ಜೇಗರಕಲ್, ಕಲ್ಯಾಣ ಮೊದಲಾದ ಕೆಲವು ಸ್ಥಳಗಳಿಗೆ ಹೋಗಿ ಬಂದೆನು. ಆಶ್ರಮ ಸ್ಥಾಪನೆಗೆ ಯೋಗ್ಯ ಸ್ಥಳವನ್ನು ಹುಡುಕುವುದೇ ಆ ಸಂಚಾರದ ಮುಖ್ಯೋದ್ದೇಶವಾಗಿತ್ತು.

ಚಿಕ್ಕ ಸೂಗೂರು, ಬಸವತೀರ್ಥ ಈ ಸ್ಥಳಗಳು ಸ್ವಲ್ಪ ಅನುಕೂಲವೆಂದು ತೋರಿತು. ಆದರೆ ನದಿ ಇರಲಿಲ್ಲ. ಅಲ್ಲದೆ ಶ್ರೀ ತಾರಾನಾಥರು ಆ ಪ್ರಾಂತದಿಂದ ಹೊರಗೆ ಹೋಗಬೇಕಾದ ಪ್ರಸಂಗವನ್ನು ಕೇಳಿದೆನು. ಮೊಗಲಾಯಿ ಪ್ರಾಂತವು ನನ್ನ ಉದ್ದೇಶದ ಆಶ್ರಮಕ್ಕೆ ಅನುಕೂಲವಲ್ಲವೆಂದೇ ನಿರ್ಧರಿಸಿ ಆ ಭಾಗದ ಶೋಧವನ್ನೇ ಬಿಟ್ಟುಬಿಟ್ಟೆನು.

ರಾಟಿ ಸಂಘಗಳ ಸ್ಥಾಪನೆ : ೧೯೨೦-೨೧ನೆಯ ಇಸವಿಯಲ್ಲಿ ವೀರಶೈವರು ಖಾದಿಗೆ ಹೇಗೆ ವಿರೋಧಿಗಳಾಗಿದ್ದರೋ ಹಾಗೆ ೧೯೨೬ರಲ್ಲಿ ಇರಲಿಲ್ಲ. ತರುಣರಲ್ಲಿ ಎಷ್ಟೋಮಟ್ಟಿಗೆ ಖಾದಿ ಪ್ರಸಾರವಾಗುತ್ತಾ ಇತ್ತು. ಅದಕ್ಕಾಗಿ ಅಲ್ಲಲ್ಲಿ ವೀರಶೈವ ತರುಣ ಸಂಘಗಳನ್ನು ಸ್ಥಾಪಿಸಿ ಅವುಗಳ ಮೂಲಕ ರಾಟಿ ಪ್ರಸಾರದ ಕಾರ್ಯವಾಗಲು ಪ್ರಯತ್ನಿಸಿದೆನು. ಮುದ್ದೇಬಿಹಾಳ, ತಾಳಿಕೋಟೆ, ಸಿಂದಗಿ, ಮಶಿಬಿನಾಳ, ಮಲಘಾಣ, ನರಗುಂದ ಮೊದಲಾದ ೮-೧೦ ಸ್ಥಳಗಳಲ್ಲಿ ವೀರಶೈವ ತರುಣ ಸಂಘ ಮತ್ತು ರಾಟಿ ಸಂಘಗಳು ಏರ್ಪಟ್ಟವು. ಒಂದೆರಡು ವಾರಗಳ ವರೆಗೆ ಆಯಾಯ ಸ್ಥಳಗಳಲ್ಲಿ ಬಸವಣ್ಣನವರ ವಚನ ಪ್ರವಚನ ನಡೆಯಿಸಿ ಕೊನೆಯಲ್ಲಿ ಈ ರಾಟಿ ಪ್ರಸಾರದ ಕಾರ್ಯ ಜರುಗುವ ಏರ್ಪಾಟು ಮಾಡುತ್ತಿದ್ದೆನು. ನರಗುಂದ, ಸಿಂದಗಿ, ಮುದ್ದೇಬಿಹಾಳ ಮೊದಲಾದ ನಾಲ್ಕಾರು ಸ್ಥಳಗಳಲ್ಲಿ ರಾಟಿ ಪ್ರಸಾರದ ಕಾರ್ಯ ಎಷ್ಟೊ ತೃಪ್ತಿಕರವಾಗಿ ಜರುಗಿ ಖಾದಿ ಪ್ರಸಾರವಾಯಿತು. ಅಲ್ಲಲ್ಲಿಯೇ ಆ ಕಾರ್ಯಕ್ಕೆ ಬೇಕಾಗುವಷ್ಟು ಹಣವನ್ನು ಕೂಡಿಸಿ ಅಲ್ಲಿಯ ತರುಣ ಸಂಘದವರ ಕಡೆಗೆ ಕೊಟ್ಟು ಅವರಿಂದ ಕೆಲಸ ಮುಂದುವರಿಯುವಂತೆ ಮಾಡುತ್ತಿದ್ದೆನು.

ಆಶ್ರಮದ ಸ್ಥಾನ ನಿರ್ದೇಶ : ವಿಜಾಪುರ ಜಿಲ್ಲೆಯಲ್ಲಿಯೇ ಒಂದು ಸ್ಥಾನವನ್ನು ಗೊತ್ತುಪಡಿಸಬೇಕೆಂದು ನಿರ್ಧರಿಸಿದೆನು. ಏಕೆಂದರೆ ಆ ಜಿಲ್ಲೆಯಲ್ಲಿಯೇ ವಿಶೇಷ ಪ್ರವಾಸವಾಗಿ ಹೆಚ್ಚು ಜನರ ಪರಿಚಯವಾಗಿದ್ದಿತು. ಶ್ರೀ ಬಂಥನಾಳ ಸ್ವಾಮಿಗಳವರೂ ಇಂಥ ಕಾರ್ಯದಲ್ಲಿ ತುಂಬಾ ಅಭಿರುಚಿಯುಳ್ಳವರಾಗಿದ್ದರು. ಕೃಷ್ಣಾತೀರದ ಆಲಮಟ್ಟಿಯಲ್ಲಿ ಒಂದು ಮಠವಿದೆ. ಆ ಮಠದವರು ನಮಗೆ ತುಂಬಾ ಪರಿಚಯದವರು. ನಾವು ಆಗಾಗ್ಗೆ ಹೋಗುವುದುಂಟು. ಆ ಸ್ಥಳ ಅನುಕೂಲವಾಗಬಹುದೆ? ನೋಡಿರೆಂದು ಶ್ರೀ ಸ್ವಾಮಿಗಳು ನನಗೆ ತಿಳಿಸಿದರು. ನಾನು ತಾ, ೩೦.೧೦.೨೬ನೆಯ ದಿನ ಬೆಳಿಗ್ಗೆ ಆಲಮಟ್ಟಿಗೆ ಬಂದೆನು. ಅಲ್ಲಿಯೆ ಶ್ರೀ ಪಾಟೀಲ ನೂರೊಂದಯ್ಯನವರಿಗೆ ನನ್ನ ಉದ್ದೇಶ ತಿಳಿಸಿದೆನು. ನನ್ನ ಸಂಗಡ ಮಶಿಬಿನಾಳದ ಶ್ರೀಮನ್ನಿರಂಜನ

ಶ್ರೀ ಶಿವಾನಂದ ಸ್ವಾಮಿಗಳೂ ಇದ್ದರು. ಶ್ರೀ ಪಾಟೀಲರಿಗೆ ನನ್ನ ಯೋಜನೆ ಮಾನ್ಯವಾಯಿತು. ಆಶ್ರಮಕ್ಕೆ ಸ್ಥಳವನ್ನು ಕೊಡುವುದಾಗಿ ತುಂಬಾ ಸಂತೋಷದಿಂದ ಹೇಳಿದರು. ನನಗೆ ಎಲ್ಲ ದೃಷ್ಟಿಗಳಿಂದಲೂ ಸ್ಥಳವು ಅನುಕೂಲವೆಂದೇ ತೋರಿತು. ಆದರೆ ಸುತ್ತಲೂ ಮುಳ್ಳು ಕಳ್ಳಿಯು ವಿಪರೀತವಾಗಿದ್ದುದರಿಂದ ವಾಸವಾಗಿರಲು ತಕ್ಕ ಅನುಕೂಲತೆಮಾಡಿಕೊಳ್ಳಬೇಕಾದರೆ ವಿಶೇಷ ವೆಚ್ಚ ಬರಹುದೆಂದು ತೋರಿತು. ಬಾಗಲಕೋಟೆ ಕೈ. ಸಕ್ರೋಜಿ ಲಿಂಗಪ್ಪನವರು. ಈ ವಿಷಯದಲ್ಲಿ ತುಂಬಾ ಅಭಿರುಚಿಯುಳ್ಳವರಾಗಿದ್ದರು. ಅವರ ಕಾರ್ಯ ದಕ್ಷತೆ ನನಗೆ ಬಹು ಪ್ರೀತಿ. ಅವರು ಈ ಕಾರ್ಯಕ್ಕೆ ನೆರವಾದರೆ ನನಗೆ ಬಹು ಸಹಾಯವೆಂದು ನನ್ನ ಯೋಜನೆ ಮತ್ತು ಆಲಮಟ್ಟಿಯ ಸಂಗತಿಯನ್ನು ತಿಳಿಸಿದೆನು. ಅವರು ಎಲ್ಲ ರೀತಿಗಳಿಂದ ಶಕ್ಯವಿರುವ ಸಹಾಯ ಮಾಡಲು ಒಪ್ಪಿದರು. ಧಾರವಾಡಕ್ಕೆ ಬಂದು ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳಲ್ಲಿ ಎಲ್ಲವನ್ನೂ ತಿಳಿಸಿ ಯೋಗ್ಯ ಶಿಕ್ಷಕರ ಬಗ್ಗೆ ಆಲೋಚಿಸಿದೆವು. ಬ್ಯಾಳಿ ಕಲ್ಯಾಣಪ್ಪನವರು ಅನುಕೂಲವೆಂದು ತಿಳಿದು ಅವರನ್ನು ಕೇಳಲು ತಾ. ೧೫.೧೧.೧೯೨೬ನೆಯ ದಿವಸ ಆಶ್ರಮದಲ್ಲಿ ವಿದ್ಯಾಭ್ಯಾಸ ಮಾಡಿಸಲು ತಾವು ಸಿದ್ಧರಿದ್ದೇವೆಂದು ಹೇಳಿದರು.

ಈ ಪ್ರಕಾರ ಸ್ಥಳ, ವ್ಯವಸ್ಥೆ ಮಾಡುವವರು, ಶಿಕ್ಷಕರು ಗೊತ್ತಾದುದರಿಂದ ಕೆಲಸವು ಎಷ್ಟೋ ಮಟ್ಟಿಗೆ ಪೂರೈಸಿತೆಂದೇ ತಿಳಿದು ಮುಂದಿನ ಏರ್ಪಾಟುಗಳಿಗಾಗಿ ಮುಖ್ಯವಾಗಿ ಹಣವನ್ನು ಕೂಡಿಸುವ ಸಂಬಂಧವಾಗಿ ಯೋಚಿಸಲಾರಂಭಿಸಿದೆನು.

ವೀರಶೈವ ವಿದ್ಯಾಲಯ : ವಿಜಾಪುರ ಜಿಲ್ಲೆಯಲ್ಲಿ ಆಲಮಟ್ಟಿಯ ಆಶ್ರಮಕ್ಕೆ ಹಣವು ಎಷ್ಟರಮಟ್ಟಿಗೆ ಸಹಾಯವಾಗಬಹುದೆಂಬುದನ್ನು ಮೊದಲು ತಿಳಿದುಕೊಳ್ಳಬೇಕೆಂದು ಶ್ರೀ ಬಂಥನಾಳ ಸ್ವಾಮಿಗಳವರ ಕಡೆಗೆ ಹೋದೆನು. ತಾ. ३೦.೧೧.೨೬ರಲ್ಲಿ ರಬಿನಾಳದಲ್ಲಿ ಈ ಸಂಬಂಧವಾಗಿ ಅಲೋಚನೆಯಾಯಿತು. ಆಲಮಟ್ಟಿಯ ಆಶ್ರಮಕ್ಕೆ ವೀರಶೈವ ವಿದ್ಯಾಲಯ ಎಂಬ ಹೆಸರನ್ನಿಡಬೇಕೆಂದೇ ನಿರ್ಧಾರವಾಯಿತು. ಅಲ್ಲಿಗೆ ಉಕ್ಕಲಿ, ಮನಗೂಳಿ, ಬಾಗೇವಾಡಿ ಮತ್ತು ಇಂಗಳೇಶ್ವರ ಗ್ರಾಮಗಳ ಪಾಟೀಲರು ಬಂದಿದ್ದರು. ಅವರಿಗೆ ವಿದ್ಯಾಲಯದ ವಿಚಾರವನ್ನು ತಿಳಿಸಿದ್ದಾಯಿತು. ಎಲ್ಲರೂ ಶಕ್ಯವಿರುವ ಎಲ್ಲ ಸಹಾಯಗಳನ್ನು ಮಾಡುವೆವೆಂದು ಹೇಳಿದರು.

ಈ ಸಂಬಂಧವಾಗಿ ವಿಜಾಪುರ ಜಿಲ್ಲೆಯ ಕೆಲವು ಪ್ರಮುಖರ ಒಂದು ಸಭೆಯನ್ನು ಕೂಡಿಸಿ ಆಲೋಚಿಸುವುದು ಅನುಕೂಲವೆಂದು ತೋರಿತು. ರಾ ಸಾ ಹಳಕಟ್ಟಿಯವರು ಈ ಶಿಕ್ಷಣ ಪದ್ಧತಿಗೆ ಒಪ್ಪಿ ಸಹಾಯ ಮಾಡಿದರೆ ಎಷ್ಟೋ ಅನುಕೂಲವೆಂದು ತಾ. ೫.೧೨.೨೬ರಲ್ಲಿ ರಾ ಸಾ ಹಳಕಟ್ಟಿಯವರಲ್ಲಿ ಹೋಗಿ ವಿದ್ಯಾಲಯದ ಯೋಜನೆಯನ್ನು ತಿಳಿಸಿದೆನು. ಅವರು ಒಪ್ಪಿ ಆಲೋಚನಾಸಭೆ ಸೇರುವುದು ಯುಕ್ತವೆಂತಲೂ ತಿಳಿಸಿದರು. ಆಮೇಲೆ ಆಲೋಚನಾ ಸಭೆಯ ಪ್ರಕಟನೆಗಳನ್ನು ವಿಜಾಪೂರ ಜಿಲ್ಲೆಯ ಅನೇಕ ಪ್ರಮುಖರ ಕಡೆಗೆ ಕಳುಹಿಸಿದ್ದಾಯಿತು.

ಆಲೋಚನಾ ಸಭೆ : ಮುಂಚೆಯೇ ಗೊತ್ತಾದ ಮೇರೆಗೆ ಆಲಮಟ್ಟಿಯಲ್ಲಿ ತಾ. ೨೬.೧೨.೨೬ನೆಯ ದಿವಸ ವೀರಶವ್ಯೆ ವಿದ್ಯಾಲಯವನ್ನು ಸ್ಥಾಪಿಸುವ ವಿಚಾರವಾಗಿ ಆಲೋಚನಾ ಸಭೆ ಕೂಡಿತು. ಬಂಥನಾಳ, ಸಿಂದಗಿ, ಮಲಘಾಣಗಳ ಶ್ರೀಗಳವರೂ ಹುನಗುಂದದ ಕುಲಕರ್ಣಿ, ಮಾಮಲೇದಾರರು, ಶ್ರೀ ಎಸ್. ಟಿ. ಪಾಟೀಲ ವಕೀಲರು, ಶ್ರೀ ಬಗಲಿ ವಕೀಲರು, ಉಕ್ಕಲಿ, ಮನಗೂಳಿ, ಬಾಗೇವಾಡಿ

ಗೌಡರು, ಹುನಗುಂದ, ಮುದ್ದೇಬಿಹಾಳ, ಬಾಗಲಕೋಟೆ, ತಾಳಿಕೋಟೆಗಳ ವೀರಶೈವ ತರುಣ ಸಂಘದವರು, ನಿಡಗುಂದಿ, ಚಿಮ್ಮಲಗಿ ಜನರು ಈ ಸಭೆಗೆ ಬಂದಿದ್ದರು. ಶ್ರೀ ಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಎಲ್ಲ ಸಂಗತಿಗಳೂ ಚರ್ಚೆಯಾದವು. ವಿದ್ಯಾಲಯದ ಉದ್ದೇಶ, ಕಾರ್ಯ ಪದ್ಧತಿ, ಶಿಕ್ಷಣ ಕ್ರಮ ಮೊದಲಾದವುಗಳು ಯೋಚಿಸಲ್ಪಟ್ಟು ಬರುವ ವೈಶಾಖ ಮಾಸದಲ್ಲಿ ವಿದ್ಯಾಲಯವನ್ನು ಆಲಮಟ್ಟಿಯಲ್ಲಿ ಸ್ಥಾಪಿಸಬೇಕೆಂದು ಗೊತ್ತಾಯಿತು.

❖❖

ವಿದ್ಯಾಲಯದಲ್ಲಿಯ ಕಾರ್ಯ

(ಕ್ರಿ. ಶ. ೧೯೨೭- ೧೯೩೬)

ವೀರಶೈವ ವಿದ್ಯಾಲಯವನ್ನು ೧೯೨೭ನೆಯ ಮೇ ತಿಂಗಳಲ್ಲಿ ಸ್ಥಾಪಿಸಬೇಕೆಂದೇನೋ ನಿರ್ಧಾರವಾಯಿತು. ಆದರೆ ವಿದ್ಯಾರ್ಥಿಗಳೂ ಅವರ ವಸತಿಯ ಕಟ್ಟಡಕ್ಕೆ ಹಣವೂ ಇಲ್ಲದೆ ಈ ಕಾರ್ಯ ಪ್ರಾರಂಭವಾಗುವದೆಂತು? ವಿದ್ಯಾರ್ಥಿಗಳೂ ಎಷ್ಟರ ಮಟ್ಟಿಗೆ ಬರಬಹುದೆಂಬುದನ್ನು ನೋಡುವುದಕ್ಕಾಗಿ ೧೯೨೭ನೆಯ ಜನವರಿ ತಿಂಗಳಲ್ಲಿ ಕಮತಗಿ, ಹುನಗುಂದ, ಇಳಕಲ್ಲ, ಮುದ್ದೇಬಿಹಾಳ, ತಾಳಿಕೋಟೆ ಮೊದಲಾದ ವಿಜಾಪೂರ ಜಿಲ್ಲೆಯ ಕೆಲವು ಸ್ಥಳಗಳಿಗೆ ಹೋದೆನು. ಒಬ್ಬ ವಿದ್ಯಾರ್ಥಿಯು ವರುಷಕ್ಕೆ ಇನ್ನೂರು ರೂ. ಗಳನ್ನು ಕೊಡಬೇಕೆಂದು ಗೊತ್ತು ಮಾಡಿದ್ದಿತು. ಆ ಹಣದಿಂದಲೇ ಆತನ ಊಟ, ಬಟ್ಟೆ, ಪುಸ್ತಕ, ಪ್ರವಾಸಗಳ ವೆಚ್ಚವು ಸಾಗಬೇಕಾಗಿತ್ತು. ವಿದ್ಯಾರ್ಥಿಗಳು ಖಾದಿಯನ್ನೇ ಧರಿಸಬೇಕೆಂಬ ಕಟ್ಟಪ್ಪಣೆಯಿತ್ತು. ಪ್ರತಿಯೊಬ್ಬ ವಿದ್ಯಾರ್ಥಿಗೂ ಪ್ರತಿನಿತ್ಯ ಮೂರು ತೊಲಿ ತುಪ್ಪ. ಹತ್ತು ತೊಲಿ ಹಾಲು, ವಾರಕ್ಕೊಮ್ಮೆ ಮೃಷ್ಟಾನ್ನದ ಊಟ ಕೊಡಲ್ಪಡುವಂತೆ ಗೊತ್ತಾಗಿತ್ತು. ಊಟೋಪಚಾರ ಮೊದಲಾದವುಗಳಲ್ಲಿ ಹುಡುಗರಿಗೆ ಯಾವ ಕೊರತೆಯೂ ಆಗಬಾರದೆಂದೇ ವರುಷಕ್ಕೆ ೨೦೦ ರೂ. ಗಳ ವೆಚ್ಚ ಬರಬಹುದೆಂದು ನಿರ್ಧರಿಸಿತ್ತು.

ಗಾಂಧೀಜಿಯವರ ಸಲಹೆ : ಆಗ ದೇಶದಲ್ಲಿ ಖಾದಿಯ ಚಟುವಟಿಕೆಯು ವಿಶೇಷವಾಗಿದ್ದಿತು. ಮಹಾತ್ಮಗಾಂಧಿಯವರು ಖಾದಿ ಕಾರ್ಯಕ್ಕಾಗಿ ಅಖಿಲ ಭಾರತ ಪ್ರವಾಸವನ್ನು ಪ್ರಾರಂಭಿಸಿದ್ದರು. ಫೆಬ್ರುವರಿ ತಿಂಗಳಲ್ಲಿ ಸೊಲ್ಲಾಪುರ. ವಳಸಂಗ, ಅಂಕಲಕೋಟೆ ಮೊದಲಾದ ಸ್ಥಳಗಳಿಗೆ ಖಾದಿ ಪ್ರಸಾರದ ಕಾರ್ಯಕ್ಕಾಗಿ ಹೋದೆನು. ಗುಲಬರ್ಗಾಕ್ಕೆ ಗಾಂಧೀಜಿಯವರನ್ನು ಕರೆದುಕೊಂಡು ಹೋಗಬೇಕೆಂದು ಗುಲಬರ್ಗಾದ ಪ್ರಮುಖರು ಯೋಚಿಸಿ ಸೊಲ್ಲಾಪುರಕ್ಕೆ ಕರೆಯಲು ಬಂದಿದ್ದರು. ಗಾಂಧೀಜಿಯವರನ್ನು ಅಲ್ಲಿ ಕಂಡು ಕಾರ್ಯಕ್ರಮವನ್ನು ಗೊತ್ತು ಮಾಡಿ ಗುಲಬರ್ಗಾಕ್ಕೆ ಹೋದೆನು. ಅಲ್ಲಿ ಗಾಂಧೀಜಿಯವರ ವ್ಯಾಖ್ಯಾನವು ಅತಿ ಮಹತ್ವದ್ದಾಗಿಯೇ ಪರಿಣಮಿಸಿತು.

ಮುಸಲ್ಮಾನರ ದೊಂಬೆಯಿಂದ ಶ್ರೀ ಶರಣ ಬಸವೇಶ್ವರ ಗುಡಿಯಲ್ಲಾರ ಅನರ್ಥವನ್ನು ಗಾಂಧೀಜಿಯವರು ಮೊದಲು ನೋಡಿಯೇ ಆಮೇಲೆ ವ್ಯಾಖ್ಯಾನಕ್ಕೆ ಹೋಗುವುದು ಅನುಕೂಲವೆಂದು ಯೋಚಿಸಿ ಆ ಪ್ರಕಾರ ಕಾರ್ಯಕ್ರಮವನ್ನು ಗೊತ್ತುಮಾಡಿಸಿದೆನು. ಅದು ಫಲಕಾರಿಯಾಗಿಯೂ ಪರಿಣಮಿಸಿತು. ಗಾಂಧೀಜಿಯವರು ಅಲ್ಲಾದ ಅತ್ಯಾಚಾರವನ್ನು ನೋಡಿ ಆ ಪ್ರಸಂಗವನ್ನು ತಮ್ಮ

ಭಾಷಣದಲ್ಲಿ ತಂದೇ ಬಿಟ್ಟರು. ಶರಣಬಸವೇಶ್ವರನ ದರ್ಶನಕ್ಕೆ ಗಾಂಧೀಜಿಯವರು ಹೋದಾಗ ಮಂಗಳಾರತಿಯನ್ನು ಮಾಡಿದ ಪೂಜಾರಿಗೆ ನೀವು ದೊಂಬೆಯಾದಾಗ ಎಲ್ಲಿದ್ದಿರೆಂದು ಕೇಳಿದರು. ಅವರು ನಾವು ಓಡಿಹೋಗಿದ್ದವೆಂದು ಹೇಳಿದರು. ಆಗ ಗಾಂಧೀಜಿಯವರು ನೀವು ಇಲ್ಲೆ ಮಲಗಿ ಪ್ರಾಣಕೊಡಬೇಕಾಗಿತ್ತು ಎಂದು ಗಂಭೀರಮುದ್ರೆಯಿಂದ ಹೇಳಿದರು.

ತಾ. ೨೩.೦೩.೨೭ ನೆಯ ದಿನ ಪ್ರಾತಃಕಾಲ ಗಾಂಧೀಜಿಯವರ ಸಂಗಡ ತಿರುಗಾಡಲಿಕ್ಕೆ ಹೋಗಿ ವಿದ್ಯಾಲಯದ ವಿಚಾರಗಳನ್ನು ತಿಳಿಸಿದೆನು. ರಾಷ್ಟ್ರೀಯ ಶಿಕ್ಷಣದ ಪದ್ಧತಿಯಂತೆ ಒಂದೇ ಮತದವರಿಗಾದರೂ ಶಿಕ್ಷಣ ಕೊಡಲು ಅಡ್ಡಿಯಿಲ್ಲವೆಂತಲೂ, ಮೂಲ ಫಂಡನ್ನು ಮಾಡಿಡಬಾರದೆಂತಲೂ ಹೇಳಿದರು.

ಅಲ್ಲಿಂದ ಯಾದಗಿರಿ, ನಾರಾಯಣ ಪೇಟೆ, ಯರಮರಸ, ಶಿರವಾರ ಮೊದಲಾದ ನೈಜಾಮ ಭಾಗದ ಮತ್ತು ಅಥರಗಾ, ಚಡಚಣ, ಮೊದಲಾದ ವಿಜಾಪೂರ ಜಿಲ್ಲೆಯ ಕೆಲವು ಸ್ಥಳಗಳಿಗೆ ವ್ಯಾಖ್ಯಾನಕ್ಕೆ ಹೋಗಿ ತಾ. ೨೬.೦೩.೨೭ ನೆಯ ದಿವಸ ಆಲಮಟ್ಟಿಗೆ ಬಂದೆನು. ವಿದ್ಯಾಲಯಕ್ಕೆ ವಿದ್ಯಾರ್ಥಿಗಳು ಎಷ್ಟು ಸೇರಬಹುದು? ಹಣ ಸಹಾಯವಾಗಬಹುದೇ? ಎಂಬ ಸಂಗತಿಗಳನ್ನು ತಿಳಿದುಕೊಳ್ಳುವುದೂ ಈ ಪ್ರವಾಸದ ಉದ್ದೇಶವಾಗಿತ್ತು. ಆಲಮಟ್ಟಿಗೆ ಈ ಪ್ರವಾಸದಿಂದ ಬಂದೊಡನೆ ಜ್ವರದಿಂದ ಒಂದು ವಾರ ಹಾಸಿಗೆ ಹಿಡಿದೆನು. ನಾನು ೧೯೦೪ರಲ್ಲಿ ಮಾತ್ರ ವಿಷಮ ಜ್ವರದಿಂದ ಮಲಗಿದ್ದೆನು. ಅನಂತರ ೨೩ ವರುಷಗಳಲ್ಲಿ ಇದೇ ಜ್ವರದಿಂದ ಮಲಗಿದುದು. ಮೈಯಲ್ಲಿ ಸ್ವಲ್ಪ ಸ್ವಸ್ಥವಿಲ್ಲವೆಂದು ತೋರಿದೊಡನೆ ಲಂಘನ ಮಾಡುವುದೇ ನನ್ನ ಔಷಧಿ.

ವಿದ್ಯಾಲಯ ಸ್ಥಾಪನೆ : ವಿದ್ಯಾರ್ಥಿಗಳ ವಸತಿಗಾಗಿ ಮೊದಲು ಮೂರು ಕೋಣೆಗಳನ್ನು ಕಟ್ಟಿಸಬೇಕೆಂದು ಯೋಚಿಸಿ ತಾರೀಖು ೨೧.೦೪.೨೭ರಿಂದ ಈ ಕಾರ್ಯವನ್ನು ಪ್ರಾರಂಭಿಸಿದೆನು. ಈ ಕಟ್ಟಡಗಳಿಗೆ ಅಣ್ಣನವರು ೩೦೦ ರೂ. ಗಳನ್ನು, ಶ್ರೀ ನೀಲಿ ಬಶೆಟ್ಟೆಪ್ಪನವರು ಹುಬ್ಬಳ್ಳಿ ಇವರು ೨೦೦ ರೂ. ಗಳನ್ನು, ಶ್ರೀ ನೀಲಿ ಗುರುಪ್ಪನವರು ೨೦೦ ರೂ. ಗಳನ್ನು ಮೊದಲು ಕೊಟ್ಟರು. ಇಷ್ಟು ಹಣದಿಂದ ಹತ್ತೆಂಟು ವಿದ್ಯಾರ್ಥಿಗಳಿಗೂ ನನಗೂ ಇರಲಿಕ್ಕೆ ಅನುಕೂಲವಾಗುವಂತೆ ಮೂರು ಕಟ್ಟಡಗಳನ್ನು ಕಟ್ಟಿಸಿದೆನು.

ವೀರಶೈವರಲ್ಲಿಯ ಒಳಪಂಗಡಗಳ ಮೇಲು ಕೀಳಿನ ಕಲ್ಪನೆಯನ್ನೇ ತೆಗೆದುಹಾಕಲು ಎಲ್ಲ ವೀರಶೈವ ವಿದ್ಯಾರ್ಥಿಗಳೂ ವಿದ್ಯಾಲಯದಲ್ಲಿ ಪ್ರವೇಶವಾಗುವಾಗ ದೀಕ್ಷೆಯನ್ನು ಹೊಂದಬೇಕೆಂದೇ ಒಂದು ನಿಯಮವನ್ನು ಮಾಡಿದ್ದೆನು. ಆ ಪ್ರಕಾರ ತಾ. ೧೨.೦೫.೨೭ನೆಯ ದಿವಸ ವಿದ್ಯಾರ್ಥಿಗಳೂ ಅಧ್ಯಾಪಕರೂ ಅಡಿಗೆಯ ಆಳುಗಳು ನಾವೆಲ್ಲರು ಕೈ. ದೇವರಹಿಪ್ಪರಗಿ ಶ್ರೀಮದ್ಘನಲಿಂಗ ಚಕ್ರವರ್ತಿ ಶ್ರೀ ಸಿದ್ದರಾಮೇಶ ಪಟ್ಟಾಧ್ಯಕ್ಷರಿಂದ ದೀಕ್ಷೆ ಹೊಂದಿದೆವು. ಮರುದಿನ ತಾ. ೧೩.೦೫.೨೭ (ವೈಶಾಖ ಶುದ್ಧ ೧೨) ನೆಯ ದಿವಸ ವಿದ್ಯಾಲಯವು ಸ್ಥಾಪನೆಯಾಯಿತು.

ವಿದ್ಯಾಲಯದ ಉಪಕ್ರಮ ಕಾರ್ಯವೂ ಪೂಜ್ಯ ಶ್ರೀ ಮಹಾದೇವ ಪಂಡಿತರಿಂದ (ಈಗ ಬೆಂಗಳೂರು ಸರ್ವಭೂಷಣ ಶಿವಯೋಗೀಶ್ವರ ಮಠಾಧಿಪತಿಗಳಾದ ಶ್ರೀಮನ್ನಿರಂಜನ ಶ್ರೀ ಮಹಾದೇವ ಸ್ವಾಮಿಗಳು) ಜರುಗಿತು. ವಿಜಾಪುರ ಜಿಲ್ಲೆಯ ಅನೇಕ ಸ್ಥಳಗಳಿಂದ ನೂರಾರು ವೀರಶೈವ

ಪ್ರಮುಖರು ಆಗಮಿಸಿದ್ದರು. ಶ್ರೀಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳು ಈ ವಿದ್ಯಾಲಯಕ್ಕೆ ಅಧಿಪತಿಗಳೆಂತಲೂ ರಾ. ಸಾ ಹಳಕಟ್ಟಿಯುವರು ಉಪಾಧಿಪತಿಗಳೆಂತಲೂ ನಾನು ಸಹಾಯಧಿಪತಿಯೆಂತಲೂ ಮುದ್ದೇಬಿಹಾಳದ ಶ್ರೀ ಮೋಟಗಿ ಸಂಗಣ್ಣನವರು ಕಾರ್ಯದರ್ಶಿಗಳೆಂತಲೂ ಗೊತ್ತಾಯಿತು.

ಮೊದಲು ಹತ್ತು ವಿದ್ಯಾರ್ಥಿಗಳು ಶಿಕ್ಷಣ ಹೊಂದಲು ಬಂದರು. ಶ್ರೀ ಬ್ಯಾಳಿ ಕಲ್ಯಾಣಪ್ಪನವರು ಬಿ. ಎ. ಇವರೇ ಮುಖ್ಯೋಪಾಧ್ಯಾಯರು. ಇವರಿಗೆ ತಿಂಗಳಿಗೆ ೬೦ ರೂ. ವೇತನವನ್ನು ಗೊತ್ತು ಮಾಡಿತು. ವೀರಶೈವ ತತ್ವಜ್ಞಾನದ್ಯೋತಕವಾದ ಷಟ್ಕೋನವನ್ನೇ ಈ ವಿದ್ಯಾಲಯದ ಗುರುತನ್ನಾಗಿ ಮಾಡಿ ಮಧ್ಯದಲ್ಲಿ **"ವಿದ್ಯಯಾಮೃತಮಶ್ನುತೆ"** ಎಂಬ ಉಪನಿಷತ್ ವಾಕ್ಯವನ್ನು ವಿದ್ಯಾಲಯದ ಧ್ಯೇಯ ಸೂಚಕವಾಗಿ ಇಟ್ಟಿದ್ದಾಯಿತು.

ಶಿಕ್ಷಣಪದ್ಧತಿ : ವಿದ್ಯಾರ್ಥಿಗಳು ಪ್ರಾತಃಕಾಲ ಮತ್ತು ಮಧ್ಯಾಹ್ನ ೬-೭ ತಾಸು ಶಿಕ್ಷಣವನ್ನು ಹೊಂದುತ್ತಿದ್ದರು. ನೆಲದ ಮೇಲೆಯೇ ಕುಳಿತುಕೊಂಡು ಓದುವುದು. ಪಾಠ ಪ್ರಾರಂಭದಲ್ಲಿ ಓಂ ಸಹನಾವವತು ಎಂಬ ಉಪನಿಷತ್ ಮಂತ್ರವನ್ನು ಎಲ್ಲ ವಿದ್ಯಾರ್ಥಿಗಳೂ ಹೇಳಬೇಕಾಗುತ್ತಿತ್ತು. ಕನ್ನಡ ಮತ್ತು ಇಂಗ್ಲೀಷ್ ಇವೆರಡೂ ಭಾಷೆಗಳನ್ನು ಅವಶ್ಯಕವಾಗಿ ಕಲಿಯಬೇಕಾಗಿದ್ದಿತು. ಹಿಂದಿ, ಮರಾಠಿ ಹೆಚ್ಚಿನ ತರಗತಿಗೆ ಬಂದ ಮೇಲೆ ಕಲಿಯಬೇಕಾದವುಗಳು. ಸಂಸ್ಕೃತವು ಐಚ್ಛಿಕವಾಗಿದ್ದಿತು.

ಗಣಿತ, ಭೂಗೋಲು, ಇತಿಹಾಸ ಈ ವಿಷಯಗಳೂ ಕಲಿಸಲ್ಪಡುತ್ತಿದ್ದವು. ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳ ಕಡೆಗೆ ಹೆಚ್ಚು ಲಕ್ಷಿಸಲಾಗುತ್ತಿದ್ದಿತು. ರಾಟಿಯಿಂದ ಅಥವಾ ಬಿರಕಿಯಿಂದ ನೂಲನ್ನು ಎಲ್ಲ ವಿದ್ಯಾರ್ಥಿಗಳೂ ತೆಗೆಯಲೇಬೇಕಾಗುತ್ತಿತ್ತು. ಪ್ರಾತಃಕಾಲ ಮತ್ತು ಸಾಯಂಕಾಲ ಭಜನೆಯು ಜರುಗುತ್ತಿತ್ತು. ಆ ಕಾಲಕ್ಕೆ ಉಪನಿಷತ್, ಭಗವದ್ಗೀತೆ, ಶಿವಗೀತೆ, ಶಿವಶರಣರ ತತ್ವಪದಗಳು ಹೇಳಲ್ಪಡುತ್ತಿದ್ದವು. ಊಟ ನಡೆದಾಗ ಶಿವಶಿರಣರ ವಚನಗಳನ್ನು ಹೇಳುವ ಪದ್ಧತಿಯನ್ನು ಉಂಟು ಮಾಡಿತು. ಇದು ಬಹು ಪ್ರಯೋಜನಕಾರಿಯಾದುದರಿಂದ ಸ್ವಲ್ಪ ದಿನಗಳಲ್ಲಿಯೇ ಬೇರೆ ಕಡೆಯ ಅನೇಕ ವೀರಶೈವ ಬೋರ್ಡಿಂಗಗಳಲ್ಲಿ ಈ ಪದ್ಧತಿಯು ಅನುಕರಿಸಲ್ಪಟ್ಟಿತು.

ವಿದ್ಯಾರ್ಥಿಗಳೇ ಊಟಕ್ಕೆ ನೀಡುವ, ಅತಿಥಿಗಳ ಸತ್ಕಾರ ಮಾಡುವ, ತಮ್ಮ ಕೋಣೆಗಳನ್ನು ಜಳಜಳವಾಗಿಟ್ಟುಕೊಳ್ಳುವ ಮೊದಲಾದ ಕೆಲಸಗಳನ್ನು ಸರತಿ ಪ್ರಕಾರ ಮಾಡಬೇಕಾಗುತ್ತಿತ್ತು. ವಿದ್ಯಾರ್ಥಿಯು ಇಲ್ಲಿಯ ಶಿಕ್ಷಣವನ್ನು ಮುಗಿಸಿದ ನಂತರ ತನ್ನ ಮನೆಯಲ್ಲಿ ಮಾಡಬೇಕಾದ ಅನೇಕ ಕೆಲಸಗಳ ಪ್ರತ್ಯಕ್ಷ ಶಿಕ್ಷಣವೂ ಕೊಡಲ್ಪಡುತ್ತಿತ್ತು. ಇವರಿಗಾಗಿ ಒಂದು ವಾಚನಾಲಯವನ್ನು ಏರ್ಪಡಿಸಿ ಪತ್ರಿಕೆಗಳ ಮೂಲಕ ದೇಶವಿದೇಶಗಳ ಈಗಿನ ಸ್ಥಿತಿಗಳೂ ತಿಳಿಯುವಂತೆ ವ್ಯವಸ್ಥೆ ಮಾಡಿತ್ತು. ವಿಧ್ಯಾರ್ಥಿಗಳೇ **"ವಿದ್ಯಾಲಯ ಪತ್ರಿಕಾ"** ಮತ್ತು **"ಬಾಲಸಂಗಯ್ಯ"** ಎಂಬ ಕೈ ಬರವಣಿಗೆಯ ವಾರ ಪತ್ರಿಕೆಗಳನ್ನು ಬರೆಯುತ್ತಿದ್ದರು.

ಪಾಕ್ಷಿಕ ಮತ್ತು ಮಾಸಿಕ ಸಭೆಗಳನ್ನು ಏರ್ಪಡಿಸಿ ವ್ಯಾಖ್ಯಾನವಿವಾದ. ಸಂಭಾಷಣೆಗಳೂ ಜರುಗುವಂತೆ ಮಾಡಿದ್ದಿತು. ವಿದ್ಯಾರ್ಥಿಗಳು ನಡತೆಯ ಕಡೆಗೆ ಹೆಚ್ಚು ಲಕ್ಷಿಸಲಾಗುತ್ತಿದ್ದಿತು. ವಿದ್ಯಾರ್ಥಿಗಳು ಯಾವ ತಪ್ಪನ್ನು ಮಾಡಿದರೂ ಅವರಿಗೆ ಬೈಯಕೂಡದು. ಹೊಡೆಯುವುದಂತೂ

ಇಲ್ಲವೆ ಇಲ್ಲ. ಅವರ ತಪ್ಪನ್ನು ಅವರಿಗೆ ತಿಳಿಕೊಟ್ಟೇ ಅವರನ್ನು ತಿದ್ದುವುದು. ಹೆಚ್ಚಿನ ತಪ್ಪುಗಳಿಗಾಗಿ ನಾನು ಉಪವಾಸವನ್ನು ಮಾಡುವುದು ಇದೇ ವಿದ್ಯಾರ್ಥಿಗಳಿಗೆ ಮಾಡುವ ಹೆಚ್ಚಿನ ಶಿಕ್ಷೆ. ಈ ಪದ್ಧತಿಯೂ ಮೊದಲು ಬಹು ಪರಿಣಾಮಕಾರಿಯಾಯಿತು. ಅನ್ಯರ ವಾಚ್ ಕೆಡಿಸಿದ್ದ ಮತ್ತು ಫೌಂಟನ್ ಪೆನ್ ಕದ್ದಿದ್ದ ವಿದ್ಯಾರ್ಥಿಗಳು ನಾನು ಉಪವಾಸ ಮಾಡಿದ್ದರಿಂದ ಒಂದೆರಡು ತಾಸುಗಳಲ್ಲಿಯೇ ಬಹು ದುಃಖಿಸುತ್ತ ನನ್ನ ಹತ್ತಿರ ಬಂದು ನಿಜಸ್ಥಿತಿಯನ್ನು ತಿಳಿಸಿದರು. ಇದರಿಂದ ತುಂಟ ಹುಡುಗರು ಇಲ್ಲಿ ಬಹು ಜಾಗೃತೆ ಸುದಾರಿಸುತ್ತಾರೆಂದು ಎಷ್ಟೋ ಹೆಸರುವಾಸಿಯಾಯಿತು.

ಹದಿನೈದು ದಿನಗಳಲ್ಲಿ ಎಂಟು ಸಾವಿರ ರೂಪಾಯಿ : ವಿದ್ಯಾಲಯಕ್ಕೆ ಹೆಚ್ಚು ವಿದ್ಯಾರ್ಥಿಗಳು ಬರುವಂತೆ ತೋರಿತು. ಅವರ ವಸತಿಗಾಗಿ ಕಟ್ಟಡಗಳು. ಅವಶ್ಯಕವಾಗಿದ್ದವು. ಒಂದು ಕೋಣೆಯನ್ನು ಕಟ್ಟಲು ಸಾಧಾರಣ ೨೦೦ ರೂ. ಗಳು ಬೇಕಾಗುತ್ತಿದ್ದವು. ಅದರಲ್ಲಿ ನಾಲ್ಕು ವಿದ್ಯಾರ್ಥಿಗಳು ವಾಸವಾಗಿರಲು ಅನುಕೂಲಪಡಿಸುತ್ತಿತ್ತು. ಇಂತಹ ಕಟ್ಟಡಗಳಿಗೆ ಹಣ ಕೂಡಿಸಲು ತಾ. ೧೩.೦೮.೨೮ನೆಯ ದಿವಸ ಸೊಲ್ಲಾಪುರ. ಗುಲಬರ್ಗಾ, ಯಾದಗಿರಿ, ರಾಯಚೂರು, ಶಿರವಾರ ಮೊದಲಾದ ಸ್ಥಳಗಳಿಗೆ ಹೋದೆನು.

ಹದಿನೈದು ದಿನಗಳ ಪ್ರವಾಸದಲ್ಲಿ ಎಂಟು ಸಾವಿರ ರೂ. ಗಳು ಕಟ್ಟಡಗಳಿಗಾಗಿ ಸಹಾಯ ಮಾಡಲ್ಪಟ್ಟವು. ಅವುಗಳಲ್ಲಿ ಆರು ಸಾವಿರ ರೂ. ಗಳು ಕೈ ಮೇಲೆ ಬಂದವು. ಇಪ್ಪತ್ತು ವರುಷಗಳ ಹಿಂದೆ ಒಂದು ರೂ. ದೊರೆಯುವುದು ಯಾರಿಗೆ ಬಹು ಕಷ್ಟದ್ದಾಗಿದ್ದಿತ್ತೋ, ಕಟಗಿಗೆ ಕಾಸಿಲ್ಲದೆ ವರ್ತಮಾನಪತ್ರಿಕೆಗಳಿಂದ ಬೆಂಕಿಯನ್ನು ಮಾಡಿಕೊಂಡು ಅಡಿಗೆಯನ್ನು ಮಾಡಿ ಯಾರು ಜೀವಿಸಬೇಕಾಗಿದ್ದಿತೋ, ಅಂಥ ನನಗೆ ಇಷ್ಟು ಅಲ್ಪ ಅವಧಿಯಲ್ಲಿ ಇಷ್ಟು ಹಣ ಸಹಾಯವಾದುದರಿಂದ ಎಷ್ಟು ಧನ್ಯತೆಯ ಸಂತೋಷವಾಗಿರಬಹುದು?

ಸಹಾಯಕರು : ಈ ವಿದ್ಯಾಲಯದ ಸ್ಥಾಪನೆಗೆ ಆಲಮಟ್ಟಿ ಪಾಟೀಲ ಶ್ರೀ ನೂರೊಂದಯ್ಯನವರು ಸ್ಥಳವನ್ನು ದಾನವಾಗಿ ಕೊಟ್ಟು ಸಹಾಯ ಮಾಡಿದ ನಂತರ ಅದರ ನೆರೆಯಲ್ಲಿರುವ ತಮ್ಮ ಸ್ಥಳವನ್ನು ಶ್ರೀ ಗುಡಗುಂಟಿ ರಾಚಯ್ಯನವರೂ ವಿದ್ಯಾಲಯಕ್ಕೆ ದಾನವಾಗಿ ಕೊಟ್ಟು ಸಹಾಯಮಾಡಿದರು. ಆ ಮೇಲೆ ಕಟ್ಟಡಗಳಿಗೂ ವಿದ್ಯಾಲಯದ ವೆಚ್ಚಕ್ಕೂ ಅನೇಕ ಮಹಾಶಯರು ಹಣ ಸಹಾಯಮಾಡಿದರು. (ಮುಖ್ಯ ಮಹಾಶಯರ ಹೆಸರುಗಳನ್ನು ಮುಂದೆ ಒಂದು ಕಡೆ ಕೊಟ್ಟಿ) ವಿದ್ಯಾಲಯದ ಕಾರ್ಯಗಳಿಗೆ ಈ ಕೆಳಗಿನವರು ನನಗೆ ತುಂಬಾ ಸಹಾಯಕರು

ಕೈ ಸಕ್ರೋಜಿ ಲಿಂಗಪ್ಪನವರು ವಿದ್ಯಾಲಯವೇ ತಮ್ಮ ಸರ್ವಸ್ವವೆಂದು ತಿಳಿದು ದುಡಿದರು. ಎಲ್ಲ ಕಟ್ಟಡಗಳಿಗೂ ಇವರ ಪ್ರತ್ಯಕ್ಷ ಕಾರ್ಯ ದಕ್ಷತೆಯಿಂದಲೇ ಕಟ್ಟಲ್ಪಟ್ಟವು. ತಿಂಗಳುಗಟ್ಟಲೆ ಇಲ್ಲಿದ್ದು ಬಹು ಶ್ರಮದ ಈ ಕೆಲಸವನ್ನು ಮಾಡಿದ್ದಲ್ಲದೆ ಒಂದೂವರೆ ಸಾವಿರ ರೂ. ವೆಚ್ಚ ಮಾಡಿ ವಿದ್ಯಾಲಯಕ್ಕೆ ಒಂದು ಕಟ್ಟಡವನ್ನೂ ಕಟ್ಟಿಸಿಕೊಟ್ಟರು. ತಮ್ಮ ಆಸ್ತಿಯ ಬಹುಭಾಗವು ವಿದ್ಯಾಲಯಕ್ಕೆ ಸಲ್ಲಬೇಕೆಂದು ಮೃತ್ಯುಪತ್ರವನ್ನೂ ಕಟ್ಟಿಸಿಕೊಟ್ಟರು. ಆದರೆ ಅವರ ಆ ಸಂಕಲ್ಪ ಪೂರ್ತಿಯಾಗಲಿಲ್ಲ. ಇವರು ತಾ. ೫.೧.೩೨ ರಲ್ಲಿ ಮೃತಪಟ್ಟಿದ್ದರಿಂದ ವಿದ್ಯಾಲಯದ ಕಾರ್ಯಕ್ಕೆ ಹೆಚ್ಚಿನ ನಷ್ಟವಾಯಿತು.

ಮೋಟಗಿ ಶ್ರೀ ಸಂಗಣ್ಣನವರು ವಿದ್ಯಾಲಯಕ್ಕೆ ಬೇಕಾಗುವ ಊಟೋಪಚಾರದ ಎಲ್ಲ ಸಾಮಗ್ರಿಗಳನ್ನು ಕಳಿಸುವ ಮೊದಲಾದ ಕಾರ್ಯಗಳಲ್ಲಿ ತುಂಬಾ ಸಹಾಯಕರು. ಪ್ರಿಯ ಸಿಂದಗಿ

ಶಿವಲಿಂಗಣ್ಣನು ಅಥರಗಾದಿಂದ ತಾ. ೮.೧೨.೨೭ರಲ್ಲಿ ವಿದ್ಯಾಲಯಕ್ಕೆ ಕಲಿಯಲಿಕ್ಕಾಗಿ ಬಂದ ವಿದ್ಯಾರ್ಥಿಯು. ಈತನು ತನ್ನ ಗುಣಶೀಲಗಳಿಂದಲೂ, ಜಾಣ್ಮೆಯಿಂದಲೂ, ಒಂದು ವರ್ಷದೊಳಗಾಗಿಯೇ ವಿದ್ಯಾಲಯದವನೇ ಆಗಿದ್ದನು. ಹಣಕಾಸುಗಳ ಕಡೆ ಲಕ್ಷಿಸಿ, ಆಪ್ತಕಾರ್ಯದರ್ಶಿಯಾಗಿ ಮುದ್ರಣ ಕಾರ್ಯವಹಿಸಿ ತುಂಬಾ ನೆರವಾದನು.

ವಿದ್ಯಾರ್ಥಿಗಳ ದೇಹಾರೋಗ್ಯದ ವಿಚಾರವಾಗಿ ಬಾಗಲಕೋಟೆಯ ಡಾಕ್ಟರ್ ಬಸಪ್ಪನವರು ಆಗಾಗ್ಗೆ ವಿದ್ಯಾಲಯಕ್ಕೆ ಬಂದು ಯೋಗ್ಯ ಸೂಚನೆಗಳನ್ನು ಮಾಡುತ್ತ ಅನಾರೋಗ್ಯದ ವಿದ್ಯಾರ್ಥಿಗಳಿಗೆ ಉಚಿತವಾಗಿಯೇ ಔಷಧಿಯನ್ನು ಕೊಡುವವರಾಗಿದ್ದಾರೆ.

ಕೈ ಸಕ್ರೋಜಿ ಲಿಂಗಪ್ಪನವರ ತರುವಾಯ ಬಾಗಲಕೋಟೆ ಶ್ರೀ ಕುಪ್ಪಸ್ತ ಶಿವಸಂಗಪ್ಪನವರು ಮತ್ತು ಶ್ರೀ ಹುಲಕುರ್ಕಿ ಬಶೆಟ್ಟೆಪ್ಪನವರು ವಿದ್ಯಾಲಯದ ಅನೇಕ ಕಾರ್ಯಗಳಿಗೆ ತುಂಬಾ ಸಹಾಯಮಾಡುತ್ತಿದ್ದಾರೆ.

ಹಣದ ವಿನಿಯೋಗ : ವಿದ್ಯಾಲಯಕ್ಕೆ ಧನ ಸಹಾಯವೇನೋ ದೊರೆಯುತ್ತದೆಂದು ಕಲ್ಲು ಮಣ್ಣುಗಳಿಗಾಗಿ ವೃಥಾ ವೆಚ್ಚ ಮಾಡುವುದು ನನಗೆ ಇಷ್ಟವಿಲ್ಲದ್ದರಿಂದ ಗಚ್ಚಿನ ಪಕ್ಕಾ ಕಟ್ಟಡಗಳನ್ನು ಕಟ್ಟಿಸಲಿಲ್ಲ. ವಿದ್ಯಾರ್ಥಿಗಳನ್ನೇ ನಂಬಿ ಎಲ್ಲಾ ವಸತಿಯ ಕಟ್ಟಡಗಳನ್ನೇ ಕಟ್ಟಿಸದೆ, ಮೊದಲು ಮುದ್ರಣ ಯಂತ್ರವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದೆನು. ಹಿಂದಕ್ಕೆ ಹರಿಹರದ ಆಶ್ರಮದಲ್ಲಿ ಬಂದಿದ್ದ ಅನುಭವವನ್ನು ಜ್ಞಾಪಿಸಿಕೊಂಡು ಮುದ್ರಣದ ಮೂಲಕವಾಗಿಯಾದರೂ ನನ್ನ ವಿಚಾರ ಪ್ರಸಾರಕ್ಕೆ ಸಾಧನವಿರಬೇಕೆಂದು ಮೊದಲು ಈ ಕಾರ್ಯವನ್ನು ಪ್ರಾರಂಭಿಸಿದೆನು.

ಕೆಲವರಿಗೆ ಇದು ಯುಕ್ತ ತೋರಲಿಲ್ಲ. ಈ ಗುಡ್ಡದಲ್ಲಿ ಮುದ್ರಣ ಕಾರ್ಯ ನಡೆಯುವುದಿಲ್ಲವೆಂತಲೂ, ಅದನ್ನು ಸ್ಥಾಪಿಸದೆ ವಿದ್ಯಾಲಯಕ್ಕೆ ಮೂಲ ಫಂಡನ್ನು ಮಾಡಬೇಕೆಂತಲೂ ಸೂಚಿಸಿದರು. ಕೈ ಸಕ್ರೋಜಿ ಲಿಂಗಪ್ಪನವರು ಮಾತ್ರ ನನ್ನ ಯೋಚನೆಯನ್ನು ಸಮರ್ಥಿಸಿದರು. ಮೂಲ ಫಂಡನ್ನು ಮಾಡಬಾರದೆಂದೇ ನಾನು ಮೊದಲೇ ನಿರ್ಧರಿಸಿದ್ದೆನು. ವಿದ್ಯಾಲಯದ ಕಳೆದ ೯ ವರುಷಗಳ ಆದಾಯ ವೆಚ್ಚಗಳನ್ನು ಸ್ಥೂಲರೂಪದಲ್ಲಿ ಮುಂದೆ ಕೊಟ್ಟಿದೆ.

ಪ್ರವಾಸ : ವಿದ್ಯಾರ್ಥಿಗಳನ್ನು ಪ್ರತಿ ವರುಷ ಮಾಘ ಮಾಸದಲ್ಲಿ ಯಾವುದಾದರೊಂದು ಐತಿಹಾಸಿಕ ಪ್ರಸಿದ್ಧ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿಯ ಸಂಗತಿಗಳನ್ನೆಲ್ಲಾ ಪ್ರತ್ಯಕ್ಷ ತಿಳಿಸಬೇಕೆಂದು ಗೊತ್ತಾಗಿದ್ದಿತು. ಆ ಪ್ರಕಾರ ಮೊದಲನೆಯ ವರುಷ ತಾ. ೧೯.೦೨.೨೮ನೆಯ ದಿವಸ ಕಲ್ಯಾಣದ ಪ್ರವಾಸಕ್ಕೋಸ್ಕರ ೩೧ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿದ್ದೆನು. ಅದರಲ್ಲಿ ೮ ವರುಷದವರಿಂದ ೨೦ ವರ್ಷಗಳೊಳಗಿನವರಿದ್ದರು.

ವಿದ್ಯಾರ್ಥಿಗಳ ದೇಹಾರೋಗ್ಯ ಮತ್ತು ರಕ್ಷಣೆಯ ವಿಷಯದಲ್ಲಿ ನಾನು ಬಹು ಎಚ್ಚರಿಕೆಯುಳ್ಳವನಾಗಿರುವ ಪದ್ಧತಿಯನ್ನು ಇಟ್ಟುಕೊಂಡಿದ್ದೆನು. ಎಲ್ಲೆಲ್ಲಿಯವರೋ ತಮ್ಮ ಮುದ್ದು ಮಕ್ಕಳನ್ನು ಈ ಗುಡ್ಡಕ್ಕೆ ನನ್ನ ನಂಬಿಕೆಯ ಮೇಲೆ ಕಳಿಸಿರುವುದರಿಂದ ಅವರ ರಕ್ಷಣೆಯ ಭಾರವು ನನ್ನ ಮೇಲೆ ಎಲ್ಲಕ್ಕೂ ಹೆಚ್ಚಿನದಿದೆಯೆಂದೇ ನನ್ನ ತಿಳುವಳಿಕೆ. ಅಂತೆಯೇ ವಿದ್ಯಾಲಯದಲ್ಲಿಯೂ

ನದಿಗೆ ಸ್ನಾನಕ್ಕೆ ಹೋದಲ್ಲಿಯೂ ಪ್ರವಾಸದಲ್ಲಿಯೂ ವಿದ್ಯಾರ್ಥಿಗಳ ಕಡೆಗೆ ಬಹು ಹೆಚ್ಚು ಲಕ್ಷಿಸುವ ಪದ್ಧತಿಯು. ಇದು ಕೆಲವು ವಿದ್ಯಾರ್ಥಿಗಳಿಗೆ ಪ್ರತಿಬಂಧಕವಾಗಿಯೂ ತೋರುತ್ತಿತ್ತು.

ಈ ಪ್ರಕಾರ ಹೆಚ್ಚು ಲಕ್ಷಿಸಿದ್ದು ವಿಹಿತವೂ ಕ್ಷೇಮಕರವೂ ಆಯಿತೆಂದೇ ಅನುಭವದಿಂದಲೂ ಗೊತ್ತಾಯಿತು. ಯಾವ ವಿದ್ಯಾರ್ಥಿಗೂ ವಿದ್ಯಾಲಯದಲ್ಲಿ ಈ ವರೆಗೆ ಯಾವ ವಿಧವಾದ ಅಪಾಯವೂ ಸಂಭವಿಸಲಿಲ್ಲ. ಕಲ್ಯಾಣದ ಪ್ರವಾಸದಿಂದ ಬರುವಾಗ ಪ್ರಿಯ ಸಿಂದಗಿ ಶಿವಲಿಂಗಣ್ಣ ಎಂಬ ವಿದ್ಯಾರ್ಥಿಗೆ ಮಾತ್ರ ಹುಟಗಿ ಸ್ಟೇಶನ್ನಿನಲ್ಲಿ ಕಂಬಿಯ ಹತ್ತಿರ ಬಿದ್ದು ಸ್ವಲ್ಪ ಪೆಟ್ಟಾಯಿತು. ಈ ಪ್ರವಾಸದಲ್ಲಿ ವಿಜಾಪೂರದ ಶ್ರೀ ಜತ್ತಿ ಸಿದ್ದಲಿಂಗಪ್ಪನವರು ಮತ್ತು ಶ್ರೀ ಪಟ್ಟಣಶೆಟ್ಟಿ ರೇವಣಸಿದ್ದಪ್ಪನವರು ವಿದ್ಯಾರ್ಥಿಗಳ ಸಂಗಡ ಬಂದು ಬಹು ಅನುಕೂಲಗಳನ್ನು ಮಾಡಿಕೊಟ್ಟರು. ಗುಲಬರ್ಗಾದಲ್ಲಿಯ ಶ್ರೀ ಭೂಮರಡ್ಡಿ ಬಸಪ್ಪನವರು ೨ ಮೋಟಾರುಗಳನ್ನು ಕಲ್ಯಾಣದ ವರೆಗೆ ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವಾಸಕ್ಕೆ ಕೊಟ್ಟು ವಿಶೇಷ ಸಹಾಯ ಮಾಡಿದರು. ಕಲ್ಯಾಣ ಭಾಗದಲ್ಲಿ ಮಹಾಗಾವದ ಪಾಟೀಲ ಶ್ರೀ ಸಂಗಪ್ಪಶೆಟ್ಟರು ಮತ್ತು ಕಮಲಾಪುರದ ಕೈ ಪಾಟೀಲ ರಾಚಪ್ಪಗೌಡರು ವಿದ್ಯಾರ್ಥಿಗಳ ಪ್ರವಾಸಕ್ಕೆ ಹೆಚ್ಚಾದ ಸೌಲಭ್ಯಗಳನ್ನು ಉಂಟು ಮಾಡಿಕೊಟ್ಟರು.

ಎರಡನೆಯ ಪ್ರವಾಸವು ತಾ. ೭.೨.೧೯೨೯ ರಲ್ಲಿ ಬದಾಮಿ, ಪಟ್ಟದಕಲ್ಲು, ಐಹೊಳಿ, ಸಂಗಮ ಮೊದಲಾದ ಐತಿಹಾಸಿಕ ಸ್ಥಳಗಳನ್ನು ನೋಡಲು ಏರ್ಪಟ್ಟಿತು. ಹತ್ತು ಪ್ರೌಢ ವಿದ್ಯಾರ್ಥಿಗಳನ್ನೇ ಕರೆದುಕೊಂಡು ನಡೆಯುತ್ತ ೭ ಸ್ಥಳಗಳಲ್ಲಿ ೯ ಸಭೆಗಳನ್ನು ಸೇರಿಸಿ ವಿದ್ಯಾರ್ಥಿಗಳಿಂದಲೂ ಭಾಷಣ ಮತ್ತು ಸಂಭಾಷಣೆಗಳನ್ನು ಮಾಡಿಸುತ್ತ ಈ ಪ್ರವಾಸವನ್ನು ಮುಗಿಸಿದ್ದಾಯಿತು. ಈ ಪ್ರವಾಸದಲ್ಲಿ ಶ್ರೀ ಬಳುಟಗಿ ಬಸವಶೆಟ್ಟೆಪ್ಪನವರು ವಿದ್ಯಾರ್ಥಿಗಳ ಸಂಗಡ ಇದ್ದು ಎಷ್ಟೋ ಅನುಕೂಲಪಡಿಸಿದರು.

ಮೂರನೆಯ ಪ್ರವಾಸವು ತಾ. ೩.೦೨.೩೦ನೆಯ ದಿವಸ ಹಂಪಿ ನೋಡಲು ಏರ್ಪಟ್ಟಿತು. ಈ ಪ್ರವಾಸದಲ್ಲಿ ೨೦ ವಿದ್ಯಾರ್ಥಿಗಳಿದ್ದರು. ಬಾಗಲಕೋಟೆಯ ಶ್ರೀ ಹಲಕುರ್ಕಿ ಬಶೆಟ್ಟೆಪ್ಪನವರು ಮತ್ತು ಶ್ರೀ ಏಳೆಮ್ಮಿ ವೀರಪ್ಪನವರು ವಿದ್ಯಾರ್ಥಿಗಳ ಸಂಗಡಿದ್ದು ಬಹು ಅನುಕೂಲಪಡಿಸಿದರು. ಚಿತ್ತವಾಡಗಿಯ ಶ್ರೀ ಬೆಲ್ಲದ ಚೆನ್ನಪ್ಪನವರು ವಿದ್ಯಾರ್ಥಿಗಳನ್ನು ತಮ್ಮಲ್ಲಿಟ್ಟುಕೊಂಡು ಸತ್ಕರಿಸಿ ಬಹು ಸೌಲಭ್ಯಗಳನ್ನು ಒದಗಿಸಿಕೊಟ್ಟರು.

ಈ ಪ್ರವಾಸದಲ್ಲಿರುವಾಗ ನನ್ನ ದೇಹದಲ್ಲಿ ಆರೋಗ್ಯವಿರಲಿಲ್ಲ. ಆಲಮಟ್ಟಿಯಲ್ಲಿ ವಾಸವಾದಂದಿನಿಂದಲೂ ಆಗಾಗ್ಗೆ ಮಲೇರಿಯಾ ಜ್ವರವು ಬರುತ್ತಲೆ ಇತ್ತು. ನಾನು ಪ್ರವಾಸದಲ್ಲಿರದೆ ವಿದ್ಯಾರ್ಥಿಗಳನ್ನು ಕಳಿಸುವುದು ಶಕ್ಯವೇ ಇರಲಿಲ್ಲ. ಆದುದರಿಂದ ನಾನು ಪ್ರವಾಸದಲ್ಲಿದ್ದೆನು. ಹಂಪಿಯಿಂದ ತಿರುಗಿ ಬರುವಾಗ ತಾ. ೧೦.೦೨.೩೦ನೆಯ ದಿವಸ ಗಾಡಿಯಲ್ಲಿಯೇ ಜ್ವರದಿಂದ ತುಂಬಾ ಅಸ್ವಸ್ಥವಾಗಿ ಸ್ಮೃತಿಯೂ ತಪ್ಪಿತು. ಗದುಗಿನ ಸ್ಟೇಶನ್ನಿನಲ್ಲಿಯೇ ಇಳಿದೆನು. ಅಲ್ಲಿಯೇ ಡಾಕ್ಟರ್ ಉಮಚಗಿ ಮತ್ತು ಡಾಕ್ಟರ್ ಹುಯಿಲಗೋಳ ಈ ಉಭಯ ಮಹಾಶಯರೂ ಕೂಡಲೆ ಚಿಕಿತ್ಸೆ ಮಾಡಿ ಗುಣಪಡಿಸಿದರು. ಗದಗಿನ ಶ್ರೀ ಬಳ್ಳಾರಿ ಬಸವಪ್ಪನವರು ತಮ್ಮಲ್ಲಿಗೆ ಕರೆದುಕೊಂಡು ಹೋಗಿ ತುಂಬಾ ಉಪಚಾರ ಮಾಡಿದರು. ವಿದ್ಯಾರ್ಥಿಗಳಲ್ಲಿ ಪ್ರಿಯ ಸಿಂದಗಿ ಶಿವಲಿಂಗಣ್ಣನು

ಎಷ್ಟು ನನ್ನ ವಿಚಾರದಲ್ಲಿ ಆತ್ಮೀಯ ಭಾವವುಳ್ಳವನಾಗಿದ್ದನೆಂಬುದು ಆಗ ಆತನು ಶೋಕಿಸಿದ್ದರಿಂದ ಗೊತ್ತಾಯಿತು.

ಮುಂದಣ ಪ್ರವಾಸಗಳೇನು ಅಷ್ಟು ಮಹತ್ವದವುಗಳಿರಲಿಲ್ಲ, ಪ್ರವಾಸದಿಂದ ಬಂದನಂತರ ಪ್ರವಾಸವನ್ನು ಕುರಿತು ಪ್ರೌಢ ವಿದ್ಯಾರ್ಥಿಗಳಿಗೆ ನಿಬಂಧಗಳನ್ನು ಬರೆಯಲು ಹೇಳಿ ಉತ್ತಮ ನಿಬಂಧಗಳಿಗೆ ಬಹುಮಾನಕೊಡಲ್ಪಡುತ್ತಿತ್ತು.

ವಿದ್ಯಾಲಯದ ಪ್ರಯೋಜನ : ಕಳೆದ ೯ ವರ್ಷಗಳಲ್ಲಿ ಸಾಧಾರಣ ೨೦೦ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಹೊಂದಿದರು. ಇವರಲ್ಲಿ ಮುಕ್ಕಾಲು ಪಾಲು ವಿದ್ಯಾರ್ಥಿಗಳು ಒಂದೇ ವರುಷದೊಳಗೆ ಬಿಟ್ಟು ಹೋದರು. ಒಟ್ಟು ಇಲ್ಲಿ ಆರು ವರುಷಗಳ ಶಿಕ್ಷಣ ಕ್ರಮವು ಗೊತ್ತಾಗಿದ್ದಿತು. ಮೂರು ವರುಷ ಶಿಕ್ಷಣ ಹೊಂದಿದವರು ಹತ್ತು ವಿದ್ಯಾರ್ಥಿಗಳು. ಐದು ವಿದ್ಯಾರ್ಥಿಗಳು ಇಲ್ಲಿಯ ಶಿಕ್ಷಣವನ್ನು ಪೂರೈಸಿದರು. ಇವರಲ್ಲಿ ಪ್ರಿಯ ಸಿಂದಿಗಿ ಶಿವಲಿಂಗಣ್ಣ ಎಂಬಾತನು ಎಲ್ಲ ರೀತಿಗಳಿಂದಲೂ ಉತ್ತಮ ವಿದ್ಯಾರ್ಥಿಯೆಂದು ತಾ. ೫.೨.೧೯೩೩ರಲ್ಲಿ ವಿದ್ಯಾಲಯದಿಂದ ಔತಣವನ್ನು ಹೊಂದಿ ೧೯೩೪ನೆಯ ನವಂಬರ ತಿಂಗಳವರೆಗೆ ವಿದ್ಯಾಲಯದಲ್ಲಿದ್ದನು. ಈತನು ಸಾಧಾರಣ ಮೂರು ವರುಷ ಮುದ್ರಣ ಮಂದಿರದ ಮ್ಯಾನೇಜರನಾಗಿಯೂ ಇದ್ದು ತಿಂಗಳಿಗೆ ೨೫ ರೂ. ಪ್ರಕಾರ ವೇತನವನ್ನು ಹೊಂದಿದನು. ಪ್ರಿಯ ಕಮತರ ಗುರಪ್ಪ ಎಂಬ ಉಚಿತವಾಗಿ ಶಿಕ್ಷಣ ಹೊಂದಿದ ವಿದ್ಯಾರ್ಥಿಯು ವಿದ್ಯಾಲಯದಲ್ಲಿಯೇ ಮುದ್ರಣ ಮಂದಿರದ ಕಾರ್ಯವನ್ನು ವೇತನದಿಂದ ನಡೆಯಿಸುತ್ತಿದ್ದಾನೆ.

ಮೂರನೆಯ ವರುಷದಲ್ಲಿ ೫೨ ವಿದ್ಯಾರ್ಥಿಗಳಿದ್ದರು. ಇದೇ ಸಂಖ್ಯೆಯು ಹೆಚ್ಚಿನದು. ಇವರಲ್ಲಿ ಮುಕ್ಕಾಲು ಪಾಲಿಗಿಂತ ಹೆಚ್ಚಾದ ಹುಡುಗರು ತುಂಟತನದ ಸುಧಾರಣೆಗಾಗಿಯೇ ಬಂದಿದ್ದರು. ಒಳ್ಳೆಯ ನಡತೆಯ ಹೆಚ್ಚು ಹುಡುಗರಲ್ಲಿ ಒಬ್ಬಿಬ್ಬ ತುಂಟ ಹುಡುಗರು ಎಷ್ಟೋ ಸುಧಾರಿಸುವುದು ಶಕ್ಯ ಮೊದಲು ಹೀಗೆಯೇ ಸುಧಾರಣೆಯಾದುದು. ಆ ಮೇಲೆ ತುಂಟ ಹುಡುಗರ ಸಂಖ್ಯೆಯೇ ಅತ್ಯಧಿಕವಾಗಲು ಒಳ್ಳೆಯ ನಡತೆಯವರೂ ಕೆಡುವಂತೆ ತೋರಿತು. ಆದುದರಿಂದ ಬಂದ ವಿದ್ಯಾರ್ಥಿಗಳನ್ನೆಲ್ಲಾ ಸೇರಿಸಿಕೊಳ್ಳುವ ಪದ್ಧತಿಯನ್ನು ನಿಲ್ಲಿಸಬೇಕಾಯಿತು.

ವಿದ್ಯಾಲಯದ ಕಟ್ಟು, ಊಟದ ಪದ್ಧತಿ ಅಭ್ಯಾಸದ ರೀತಿ ಇವೆಲ್ಲಾ ತುಂಟ ಹುಡುಗರಿಗೆ ಸರಿಬರುತ್ತಿರಲಿಲ್ಲ. ಅಂತೆಯೇ ಏನಾದರೊಂದು ನಿಮಿತ್ತದಿಂದ ವರುಷಾರುತಿಂಗಳುಗಳೊಳಗಾಗಿಯೇ ಬಿಟ್ಟು ಹೋಗುತಿದ್ದರು. ವಿದ್ಯಾಭ್ಯಾಸದ ಇಚ್ಛೆಯುಳ್ಳ ಒಳ್ಳೆಯ ಹುಡುಗರನ್ನು ಇಲ್ಲಿ ಇಟ್ಟರೇನೇ ಪ್ರಯೋಜನವೇ ವಿನಾ ಉಡಾಳ ಹುಡುಗರನ್ನು ಸುಧಾರಿಸುವ ಶಾಲೆಯೆಂದು ಇಲ್ಲಿಗೆ ಅಂತಹ ಹುಡುಗರನ್ನು ಕಳುಹಿಸಿದರೆ ಯಾವ ಪ್ರಯೋಜನವೂ ಇಲ್ಲದೆ ವಿದ್ಯಾಲಯವನ್ನು ನಡೆಯಿಸುವವರಿಗೆ ವೃಥಾ ಶ್ರಮವೇ ಸರಿಯೆಂದು ೩-೪ ವರುಷಗಳ ಅನುಭವದಿಂದ ಗೊತ್ತಾಯಿತು.

ಒಳ್ಳೆಯ ಹುಡುಗರು ಕಲಿಯಲಿಕ್ಕೆ ಬಂದುದು ಕಡಿಮೆ. ಸರಕಾರಿ ಹೈಸ್ಕೂಲು ಗಳಲ್ಲಿಯ ಶಿಕ್ಷಣದ ಕಡೆಗೇ ಅಂತಹ ಹುಡುಗರನ್ನು ಕಳುಹಿಸುತ್ತಿರುವ ಜನರು ಹೆಚ್ಚು. ವಿಜಾಪುರ, ಧಾರವಾಡ, ಬೆಳಗಾವ, ಕಾರವಾರ, ಸೊಲ್ಲಾಪೂರ. ಈ ಜಿಲ್ಲೆಗಳಿಂದಲೂ ಮೈಸೂರು ಮತ್ತು ನೈಜಾಮ

ಸಂಸ್ಥಾನಗಳಿಂದಲೂ ವಿದ್ಯಾರ್ಥಿಗಳು ಬಂದಿದ್ದರು ಈ ಎಲ್ಲ ಭಾಗಗಳ ವಿದ್ಯಾರ್ಥಿಗಳಲ್ಲಿಯೂ ನೈತಿಕ ಸುಧಾರಣೆಗಾಗಿ ಬಂದ ವಿದ್ಯಾರ್ಥಿಗಳೇ ಹೆಚ್ಚು.

ವಿದ್ಯಾಲಯವನ್ನು ನೋಡಲು ಮೊದಲು ಬೇರೆ ಬೇರೆ ಕಡೆಯಿಂದ ಅನೇಕ ಮಹಾಶಯರು ಬರುತ್ತಿದ್ದರು. ಇಂತಹ ಅತಿಥಿಗಳ ಸಂಖ್ಯೆ ವರುಷಕ್ಕೆ ೫೦೦ ರೂ. ವರೆಗೂ ಇರುತ್ತಿದ್ದಿತು. ಶಿಕ್ಷಣಾಭಿಮಾನಿಗಳೂ ಶಿಕ್ಷಣತಜ್ಞರೂ ಆದ ಅನೇಕ ಮಹಾಶಯರು ಬಂದು ಇಲ್ಲಿಯ ಶಿಕ್ಷಣ ಕ್ರಮವನ್ನೂ ಪರಿಣಾಮವನ್ನೂ ನೋಡಿ ತುಂಬಾ ಸಮಾಧಾನಪಟ್ಟರು. ಒಳ್ಳೆಯ ನಾಗರಿಕನಾಗಲು ಇಲ್ಲಿಯ ಶಿಕ್ಷಣವು ಬಹು ಅನುಕೂಲವಾದುದೆಂದೇ ಎಲ್ಲರ ಅಭಿಪ್ರಾಯಗಳ ಮುಖ್ಯಾಂಶವು. ಜನರಿಗೆ ತಮ್ಮ ಮಕ್ಕಳ ಶಾರೀರಿಕ, ಮಾನಸಿಕ, ಬೌದ್ಧಿಕ ಬೆಳವಣಿಗೆಗಳ ಮಹತ್ವ ಮತ್ತು ಅವುಗಳಿಗಾಗಿ ಇಂತಹ ಆರೋಗ್ಯಕರವಾದ ಏಕಾಂತ ಪ್ರದೇಶದಲ್ಲಿ ಬಾಲ್ಯದಲ್ಲಿದ್ದು, ಶಿಕ್ಷಣ ಹೊಂದುವದರಿಂದಾಗುವ ಪ್ರಯೋಜನಗಳು ತಿಳಿಸಿದರೆ ಮತ್ತು ನನಗಿಂತ ಸಮರ್ಥರು ವಿದ್ಯಾಲಯದ ಇವೇ ಉದ್ದೇಶಗಳನ್ನು ನೆರವೇರಿಸಲು ಮುಂದೆ ಬಂದರೆ ಇನ್ನೂ ಮೇಲಾದರೂ ವಿದ್ಯಾಲಯದಿಂದ ಹೆಚ್ಚಿನ ಪ್ರಯೋಜನವನ್ನು ಹೊಂದಬಹುದು.

ಕಳೆದ ಮೂರು ನಾಲ್ಕು ವರುಷಗಳಿಂದ ಜನರಲ್ಲಿ ಆರ್ಥಿಕ ಅನಾನುಕೂಲವು ಹೆಚ್ಚಾಗುತ್ತಾ ಬಂದಿತು. ವಿದ್ಯಾರ್ಥಿಗಳ ವಾರ್ಷಿಕ ವೆಚ್ಚವನ್ನು ೨೦೦ ರೂ. ಗಳಿಂದ ೧೨೫ ರೂ, ಗಳಿಗೆ ಇಳಿಸಿದ್ದಾಯಿತು. ಹಾಗಾದರೂ ೮-೧೦ ವಿದ್ಯಾರ್ಥಿಗಳಿಗಿಂತ ಹೆಚ್ಚು ಹುಡುಗರು ಅಷ್ಟು ಹಣವನ್ನಾದರೂ ಕೊಟ್ಟು ಬರದಂತಾಯಿತು. ಇಷ್ಟು ಸ್ವಲ್ಪ ವಿದ್ಯಾರ್ಥಿಗಳನ್ನೇ ಇಟ್ಟುಕೊಂಡು ಶಿಕ್ಷಣ ಕೊಟ್ಟರೆ ಅಧ್ಯಾಪಕರ ವೇತನದ ವೆಚ್ಚವು ಹೆಚ್ಚಾಗಿ ಬರುವುದಲ್ಲದೆ ಸ್ವಲ್ಪೇ ಹುಡುಗರಿರುವದರಿಂದ ಅವರಿಗೂ ಅಭ್ಯಾಸಕ್ಕೆ ಉತ್ಸಾಹವಿರುವುದಿಲ್ಲವೆಂದು ಆ ಪದ್ಧತಿಯನ್ನು ಬಿಟ್ಟು ಬಡ ವಿದ್ಯಾರ್ಥಿಗಳನ್ನೇ ಇಟ್ಟುಕೊಂಡು ಅವರಿಗೆ ವರುಷಾರುತಿಂಗಳು ಮುದ್ರಣ ಕಲೆಯನ್ನೇ ಮುಖ್ಯವಾಗಿ ಕಲಿಸಿದರೆ ಅವರ ಜೀವನಕ್ಕಾದರೂ ಅನುಕೂಲವಾಗತ್ತದೆಂದು ಆ ಪದ್ದತಿಯನ್ನು ಕಳೆದೆರಡು ವರುಷಗಳಿಂದ ಪ್ರಾರಂಭಿಸಿದ್ದಾಗಿದೆ. ಈ ವರೆಗೆ ೪-೬ ವಿದ್ಯಾರ್ಥಿಗಳು ಇಲ್ಲಿಂದ ಕಲಿತುಕೊಂಡು ಜೀವನಕ್ಕೆ ಮಾರ್ಗ ಮಾಡಿಕೊಂಡದ್ದರಿಂದ ಇದು ಎಷ್ಟೋ ಅನುಕೂಲವೆಂತಲೂ ಗೊತ್ತಾಗಿದೆ.

ವಿದ್ಯಾಲಯ ಸಂರಕ್ಷಕ ಮಂಡಲ : ಇದು ಸಾರ್ವಜನಿಕ ಸಂಸ್ಥೆಯಾದುದರಿಂದ ಒಂದು ಸ್ಥಿರವಾದ ಮಂಡಲದ ಮೇಲ್ವಿಚಾರಣೆಯಲ್ಲಿರುವುದು ಅತ್ಯಗತ್ಯಗೆಂದು ತೋರಿತು. ನನ್ನ ಭವಿಷ್ಯವನ್ನು ಹೇಳಿದ್ದ ಜ್ಯೋತಿಷ್ಯಜ್ಞರು ೪೮ನೆಯ ವರುಷದಲ್ಲಿ ನನಗೆ ಮರಣವೆಂದು ಹೇಳಿದ್ದರಿಂದ ವಿದ್ಯಾಲಯ ಸಂರಕ್ಷಣೆಯ ಮಂಡಲವನ್ನು ಜಾಗ್ರತೆ ಮಾಡಿಬಿಟ್ಟರೆ ಅನುಕೂಲವೇ ವಿನಾ ಪ್ರತಿಕೂಲವೇನೂ ಅಲ್ಲವೆಂದು ಈ ಕಾರ್ಯವನ್ನು ತಾ. ೪.೫.೩೩ನೆಯ ದಿವಸ ೧೮೬೦ನೆಯ ಇಸವಿ ರಜಿಸ್ಟ್ರೇಶನ್ ಆ್ಯಕ್ಟ್ ಪ್ರಕಾರ ರಜಿಸ್ಟ್ರರ್ ಮಾಡಿಸಿ ಏಳು ಜನ ಟ್ರಸ್ಟಿಗಳ ಕಡೆಗೆ ಈ ಸಂಸ್ಥೆಯನ್ನು ವಹಿಸಿದೆನು. ಅವರಲ್ಲಿಯೇ ನಾನೊಬ್ಬನು ಸಹಾಯಾಧಿಪತಿ ಮತ್ತು ಎಗ್ಜಿಕ್ಯೂಟಿವ್ಹ ಕಮಿಟಿ ಮೆಂಬರನು.

ಟ್ರಸ್ಟಿಗಳು : ಶ್ರೀಮನ್ನಿರಂಜನ ಶ್ರೀ ಬಂಥನಾಳಸ್ವಾಮಿಗಳು (ಅಧಿಪತಿಗಳು), ರಾ ಸಾ ಹಳಕಟ್ಟಿಯವರು (ಉಪಾಧಿಪತಿಗಳು), ಶ್ರೀ ಮೋಟಗಿ ಚೆನ್ನವೀರಪ್ಪನವರು. (ಎಗ್ಜಿಕ್ಯೂಟಿವ್ಹ

ಕಮಿಟಿಮೆಂಬರರು) ಹಾವೇರಿ ವಕೀಲ ಶ್ರೀ ಶಿವಮೂರ್ತಿಸ್ವಾಮಿ ಹಿರೇಮಠ ಇವರು, ಚಿತ್ರದುರ್ಗದ ವಕೀಲ ಶ್ರೀ ನಿಜಲಿಂಗಪ್ಪನವರು ಮತ್ತು ಶಿರವಾರದ ಶ್ರೀ ಪಾಟೀಲ ಬಸವನಗೌಡರು ನೈಜಾಮ ರಾಜ್ಯ.

ವಿದ್ಯಾಲಯದ ಉದ್ದೇಶಗಳು :

೧. ವೀರಶೈವ ಬಾಲ ಬಾಲಕಿಯರಿಗೆ ಆರಂಭದಲ್ಲಿಯೇ ಧಾರ್ಮಿಕ ಮತ್ತು ನೈತಿಕ ಶಿಕ್ಷಣಗಳು ದೊರೆತು ಅವರ ಆತ್ಮೀಯ ಮಾನಸಿಕ ಬೌದ್ಧಿಕ ಮತ್ತು ಶಾರೀರಕ ಬಲಗಳು ಹೆಚ್ಚಿ ಚಾರಿತ್ರ್ಯವು ಪವಿತ್ರತರವಾದುದಾಗುವಂತೆ ಮಾಡಲು ಪ್ರಾಚೀನ ಗುರುಕುಲಗಳ ಪದ್ದತಿಯ ಮೇರೆಗೆ ವಿದ್ಯಾಸಂಸ್ಥೆಗಳನ್ನು ನಾನು ಕಡೆಗಳಲ್ಲಿ ಸ್ಥಾಪಿಸುವುದು.

೨. ವಿದ್ಯಾರ್ಥಿಗಳು ಕನ್ನಡ, ಇಂಗ್ಲೀಷ್, ಸಂಸ್ಕೃತ, ಹಿಂದಿ ಮೊದಲಾದ ದೇಶವಿದೇಶಗಳ ಭಾಷೆಗಳನ್ನು ಕಲಿತು ಸುಸಂಸ್ಕೃತರಾಗಿ, ಒಕ್ಕಲುತನ, ವ್ಯಾಪಾರ, ಕೈಗಾರಿಕೆ ಮೊದಲಾದ ಉದ್ಯೋಗಗಳನ್ನು ಮಾಡಿಕೊಂಡು ಸ್ವತಂತ್ರ ಜೀವನವನ್ನು ನಡೆಸಿಕೊಳ್ಳಲು ಸಮರ್ಥರಾಗುವಂತೆ ಆ ವಿದ್ಯಾ ಸಂಸ್ಥೆಗಳಲ್ಲಿ ಶಿಕ್ಷಣಕೊಡುವುದು.

೩. ಬುದ್ಧಿಶಾಲಿಗಳಾದ ವಿದ್ಯಾರ್ಥಿಗಳನ್ನು ಹೆಚ್ಚಿನ ತರದ ಶಿಕ್ಷಣಗಳಿಗಾಗಿ ದೇಶ ವಿದೇಶಗಳ ಪ್ರಸಿದ್ಧ ವಿದ್ಯಾಸಂಸ್ಥೆಗಳಿಗೆ ಕಳುಹಿಸುವುದು.

೪. ಧರ್ಮೋಪದೇಶಕರನ್ನು ಗ್ರಾಮಾಂತರಗಳಿಗೆ ಕಳುಹಿಸಿ ಪುರಾಣ ಪ್ರವಚನ ಭಾಷಣಾದಿಗಳ ಮೂಲಕ ಸಾಮಾನ್ಯ ಜನರಲ್ಲಿ ಧಾರ್ಮಿಕ, ನೈತಿಕ, ಶೈಕ್ಷಣಿಕ ಮತ್ತು ಸಾಂಪತ್ತಿಕ ಮೊದಲಾದ ವಿಷಯಗಳಲ್ಲಿ ಜ್ಞಾನವನ್ನುಂಟುಮಾಡುವದಲ್ಲದೆ ದೇಶ ವಿದೇಶಗಳಲ್ಲಿ ವೀರಶೈವಧರ್ಮ ಪ್ರಸಾರಣೆಗಾಗಿ ಶಿವದೀಕ್ಷಾ ಸಂಸ್ಕಾರಗಳು ಜರಗುವಂತೆ ಪ್ರಯತ್ನಿಸುವುದು.

೫. ವೀರಶೈವ ವಿದ್ವಾಂಸರಿಗೆ ಬೇರೆ ಬೇರೆ ವಿಷಯಗಳ ಸ್ವಂತ ಅಧ್ಯಯನ ಮತ್ತು ಪರಿಶೋಧನೆಗಳಿಗೆ ಅವಕಾಶವಾಗುವಂತೆ ಗ್ರಂಥ ಭಂಡಾರವನ್ನೆರ್ಪಡಿಸುವದು.

೬. ಮುದ್ರಣ ಯಂತ್ರವನ್ನು ಸ್ಥಾಪಿಸಿ ಜನಾಂಗದ ಶ್ರೇಯಸ್ಸಿಗೆ ಸಾಧನವಾದ ಎಲ್ಲ ವಿಷಯಗಳ ಗ್ರಂಥ ಮತ್ತು ಪತ್ರಿಕೆಗಳನ್ನು ಪ್ರಕಟಿಸುವುದು.

೭. ಬೇರೆ ಬೇರೆ ಭಾಗಗಳ ವೀರಶೈವ ತರುಣರಲ್ಲಿ ಶಕ್ಯವಿದ್ದಷ್ಟು ಜನರನ್ನು ಆಗಾಗ್ಗೆ ವಿದ್ಯಾಲಯಕ್ಕೆ ಬರಮಾಡಿಕೊಂಡು ಸಾಧ್ಯವಾದಷ್ಟು ದಿವಸ ಅವರಿಗೆ ಧಾರ್ಮಿಕ, ನೈತಿಕ, ಶಾರೀರಿಕ ಮೊದಲಾದ ವಿಷಯಗಳ ಶಿಕ್ಷಣವನ್ನು ಕೊಡುವುದು.

೮. ಈ ಸಂಸ್ಥೆಯಿಂದ ಶಕ್ಯವಾದಾಗ ವೀರಶೈವೇತರ ವಿದ್ಯಾರ್ಥಿಗಳಿಗೂ ಕೂಡ ಶಿಕ್ಷಣ ದೊರೆಯುವಂತೆ ಮಾಡುವುದು.

ಧನಸಹಾಯ ಮಾಡಿದ ಮಹನೀಯರು :

ವಿದ್ಯಾಲಯದ ಕಾರ್ಯಗಳಿಗೆ ಇನ್ನೂರು ರೂ. ಗಳಿಂದ ಹೆಚ್ಚಿಗೆ ಸಹಾಯ ಮಾಡಿದ ಮಹಾಶಯರ ಹೆಸರುಗಳನ್ನು ಈ ಕೆಳಗೆ ಕೊಟ್ಟಿದೆ.

ಶ್ರೀಮನ್ನಿರಂಜನ ಶ್ರೀ ಬಂಥನಾಳ ಸ್ವಾಮಿಗಳು ೨೧೩೫ ರೂ. ಕೈ ಪಟ್ಟಣಶೆಟ್ಟಿ ಮಹಂತಪ್ಪನವರು ಇಳಕಲ್ಲ. ಇವರು ಇಳಕಲ್ಲಿನಲ್ಲಿ ತಮ್ಮ ಅಂಗಡಿಯನ್ನು (ಸಾಧಾರಣ ೪ ಸಾವಿರ ರೂ. ಬೆಲೆ ಬಾಳುವ) ಬಡವಿದ್ಯಾರ್ಥಿಗಳ ಔದ್ಯೋಗಿಕ ಶಿಕ್ಷಣದ ಸಹಾಯಾರ್ಥವಾಗಿ ಕೊಟ್ಟಿದ್ದು. ಅದರ ವಾರ್ಷಿಕ ಬಾಡಿಗೆ ಈಗ ೨೦೦ ರೂ. ಬರುತ್ತದೆ. ಆ ಹಣದಿಂದ ಮೂರು ಬಡ ವಿದ್ಯಾರ್ಥಿಗಳು ಮುದ್ರಣ ಕಲೆಯನ್ನು ಕಲಿಯುತ್ತಿದ್ದಾರೆ. ಕೈ. ಬೇವೂರು ಸಜ್ಜನ ಬ್ಯಾಳಪ್ಪನವರ ಬಸಪ್ಪನವರು ೮ ಎಕರೆ ಭೂಮಿಯನ್ನು ಕೊಟ್ಟಿದ್ದಾರೆ. ಶ್ರೀ ಹುನಗುಂದದ ನಾಗರಾಳ ದೊಡ್ಡಪ್ಪನವರು ೭೦೦ ರೂ. (೩೦೦ ರೂ. ಪುಸ್ತಕ ಮುದ್ರಣಕ್ಕೆ) ಶ್ರೀ ಶಿರವಾರದ ಪಾಟೀಲ ಬಸನಗೌಡರು ೫೦೦ ರೂ. ಕೈ. ಗೋಕಾಕದ ಶಿವಲಿಂಗಯ್ಯನವರು ನಂದಿಮಠ ೫೦೦ ರೂ. ಗ್ರಂಥ ಪ್ರಕಟನೆಗೆ.

೫೦೧ ರೂ. ಕಲಬುರ್ಗಿ ಶ್ರಿ ಶರಣ ಬಸವೇಶ್ವರ ಸಂಸ್ಥಾನಾಧಿಪತಿಗಳು. ಶ್ರೀ ಖೇಣಿ ಮಡಿವಾಳಪ್ಪನವರು, ೪೩೧ ರೂ. ಶ್ರೀ ಮನ್ನಿರಂಜನ, ಶಾಂತವೀರ ಸ್ವಾಮಿಗಳು ಗುರುಮಠಕಲ್ಲ ೩೨೨ ರೂ. ರಾ. ಬ. ದೇವಿಹೊಸೂರು ಚೆನ್ನಬಸವಪ್ಪಶೆಟ್ಟರು ೩೦೦ ರೂ. ಶ್ರೀ ಖಾಸ್ಗತಸ್ವಾಮಿ ಮಠ ಸಂಸ್ಥೆ ತಾಳೀಕೋಟೆ ೨೦೦ ರೂ. ಶ್ರೀ ಯಾದಗಿರಿ ಶೃಂಗೇರಿ ಫಕೀರಪ್ಪನವರು ೨೫೦ ರೂ. ಶ್ರೀ ಮಾಗಾವಿ ಚೆನ್ನಬಸವಪ್ಪನವರು ಹಾವೇರಿ ೨೦೦ ರೂ. ಶ್ರೀ ಸಿ. ಎಮ್. ಪಾಟೀಲರು ಅಳ್ಣಾವರ ೩೦೦ ರೂ.

ಈ ಮುಂದಿನ ಮಹಾಶಯರು ಕೋಣೆಗಳನ್ನು ಕಟ್ಟಿಸಲು ೨೨೦ ರೂ. ಪ್ರಕಾರ ಕೊಟ್ಟಿದ್ಧಾರೆ. ಶ್ರೀ ಶಾಂತವೀರಯ್ಯನವರು ಹಿರೇಮಠ ಹುಬ್ಬಳ್ಳಿ, ಡಾಕ್ಟರ್ ಬಸಪ್ಪನವರು ಬಾಗಲಕೋಟೆ. ಶ್ರೀ ವಾಲಿ ತೋಟಪ್ಪನವರು ಮಾರ್ಕಬ್ಬಿನಹಳ್ಳಿ. ಗುಲಬರ್ಗಾದ ಶ್ರೀ ಖೂಬಾ ಶಾಂತಮಲ್ಲಪ್ಪನವರು, ಶ್ರೀ ಜಾಜಿ ಲಕ್ಷ್ಮಯ್ಯನವರು, ಶ್ರೀ ಸ್ವಾದಿ ಶಿವ ಶರಣಪ್ಪನವರು, ಶ್ರೀ ಗಂದಿಗುಡಿ ಶಿವರಣಪ್ಪನವರು, ಸೊಲ್ಲಾಪುರದ ಶ್ರೀ ಕಾಡಾದಿ ನಾಗಪ್ಪನವ್ರು, ಶ್ರೀ ಕನ್ನಾಳಿ ರೇಣಸಿದ್ದಪ್ಪನವರು, ಶ್ರೀ ಉಮ್ರದಕರ ಬಾಳಪ್ಪನವರು, ಶ್ರೀ ಪಾಟೀಲ ಸಿದ್ದಪ್ಪನವರು, ಎರಮರಸ, ಶ್ರೀ ಚೆನ್ನಪ್ಪನವರು ಶಿರವಾರ, ರಾಯಚೂರ ಶ್ರೀ ರಸ್ತಾಪುರ ಮುನಿಯಮಪ್ಪನವರು. ಶ್ರೀ ಎರಮರಸದ ಅಮರಪ್ಪನವರು, ಶ್ರೀಮತಿ ಗಣದಿನ್ನಿ ಅಯ್ಯಮ್ಮನವರು. ಶ್ರೀ ಮಾಚನೂರು ಬಸವನಗೌಡರು, ಯಾದಗಿರಿಯ ಶ್ರೀ ವಕೀಲ ರುದ್ರಪ್ಪನವರು. ಶ್ರೀ ಚೆನ್ನರಾಮರೆಡ್ಡಿಯವರು, ಶ್ರೀ ವಂಕಸಮುದ್ರದ ಚೆನ್ನಪ್ಪನವರು, ಲಿ. ಶ್ರೀ ಕಾನಾಗಡ್ಡಿ ಪರಮಣ್ಣನವರು.

ಇವರೇ ಮೊದಲಾದ ಅನೇಕ ಮಹಾಶಯರು ದೇಣಗಿ ಅಥವಾ ವಾರ್ಷಿಕ ವರ್ಗಣಿ ಮೊದಲಾದ ರೂಪಗಳಿಂದ ಹಣ ಸಹಾಯಮಾಡಿದರು. ಆ ಎಲ್ಲಾ ಸಂಗತಿಗಳೂ ಆಯಾಯ ವರುಷದ ವಿದ್ಯಾಲಯದ ವರದಿಗಳಲ್ಲಿ ಪ್ರಕಟವಾಗುತ್ತಾ ಬಂದಿವೆ. ಸುಧಾರಣ ೧೬ ಸಾವಿರ ರೂ. ಗಳು ಕೈ ಮೇಲೆ ಬಂದವು. ಇವುಗಳಲ್ಲಿ ೧೧ ಸಾವಿರ ರೂ. ಗಳು ಕಟ್ಟಡಗಳಿಗೂ ೪ ಸಾವಿರ ರೂ. ಗಳೂ ಮುದ್ರಣ ಯಂತ್ರಗಳಿಗೂ ವೆಚ್ಚವಾದವು.

ವಿದ್ಯಾರ್ಥಿಗಳಿಂದ ಸಾಧಾರಣ ೨೮ ಸಾವಿರ ರೂ. ಗಳು ಬಂದವು. ಊಟ, ಬಟ್ಟೆ, ಪುಸ್ತಕ, ಪ್ರವಾಸ, ವಾಚನಾಲಯ, ಗ್ರಂಥಭಾಂಡಾರ ಮೊದಲಾದವುಗಳಿಗಾಗಿ ೨೨ ಸಾವಿರ ರೂ.ಗಳು ವೆಚ್ಚವಾದವು, ಅಧ್ಯಾಪಕರಿಗೆ ಸಾಧಾರಣ ೮ ಸಾವಿರ ರೂ. ವೇತವನ್ನು ಕೊಟ್ಟಿದ್ದಾಯಿತು.

ಮುದ್ರಣಾಲಯದಿಂದಾದ ಕಾರ್ಯ : ತಾ. ೧೩.೧೦.೨೯ನೆಯ ದಿವಸ ಮುದ್ರಣ ಮಂದಿರವನ್ನು ಸ್ಥಾಪಿಸಿದ್ದಾಯಿತು. ಈ ಕಾರ್ಯಕ್ಕೆ ಅಣ್ಣನವರು ತುಂಬಾ ಸಹಾಯಮಾಡಿದರು. ಅವರಿಗೆ ಮುದ್ರಣ ಯಂತ್ರಗಳ ಸಂಬಂಧವಾಗಿ ಇನ್ನೂ ಒಂದು ಸಾವಿರ ರೂ. ಕೊಡತಕ್ಕದ್ದಿದೆ. ಈಗ ನಾಲ್ಕು ಸಾವಿರ ರೂ. ಗಳು ಯಂತ್ರಾದಿಗಳೂ ಸಾಧಾರಣ ೪ ಸಾವಿರ ರೂ. ಕಟ್ಟಡಕ್ಕೂ ವೆಚ್ಚವಾಗಿದೆ. ಈ ೯ ಸಾವಿರ ರೂ. ಗಳನ್ನು ಮೂಲ ಫಂಡಿಗೆಂದು ಬ್ಯಾಂಕಿನಲ್ಲಿಡದೆ ಮುದ್ರಣಾಲಯವನ್ನು ಆಗ ಸ್ಥಾಪಿಸಿದ್ದರಿಂದ ಈ ವರೆಗೆ ಎಷ್ಟು ಕಾರ್ಯವಾಯಿತೆಂಬುದು ಈ ಕೆಳಗಿನ ಸಂಗತಿಗಳಿಂದ ಗೊತ್ತಾಗುತ್ತದೆ.

ಮಕ್ಕಳಿಗೆ ದೇಶದ ಮಹಾ ಪುರುಷರು ಜೀವನ ಚರಿತ್ರೆಯು ಗೊತ್ತಾಗಬೇಕೆಂದು ಸುಲಭ ಭಾಷೆಯಲ್ಲಿ ಬರೆದ ಈ ಕೆಳಗಿನ ಹನ್ನೊಂದು ಪುಸ್ತಕಗಳು ದೊಡ್ಡ ಅಕ್ಷರಗಳಲ್ಲಿ ಮುದ್ರಿಸಲ್ಪಟ್ಟು ವಿದ್ಯಾಲಯದ ಮತ್ತು ಬೇರೆ ಶಾಲೆಗಳ ವಿದ್ಯಾರ್ಥಿಗಳಲ್ಲಿ ಪ್ರಚಾರ ಗೊಳಿಸಿದ್ದಾಯಿತು. (೧) ಪುಲಿಕೇಶಿ (೨) ವಿವೇಕಾನಂದ (೩) ಲಜಪತರಾಯ (೪) ಏಕಲವ್ಯ (೫) ಕಚದೇವ (೬) ದೇವಯಾನಿ (೭) ಸುಕಲಾದೇವಿ (೮) ಬಸವಣ್ಣ (೯) ಪ್ರಭುದೇವ (೧೦) ಅಕ್ಕಮಹಾದೇವಿ (೧೧) ಶರಣ ಬಸವೇಶ (೧೨) ವಿದ್ಯಾಲಯ ಭಜನಾವಳಿ (೧೩) ರಾಷ್ಟ್ರಗೀತೆ.

ಇವುಗಳಲ್ಲಿ ೧ ಮತ್ತು ೧೩ ಶ್ರೀ ಬ್ಯಾಳಿ ಕಲ್ಯಾಣಪ್ಪನವರು ೨ ನೆಯದನ್ನು ಪ್ರೀಯ ಸಿಂದಗಿ ಶಿವಲಿಂಗಣ್ಣ ಇವರು ಬರೆದವುಗಳು ಇನ್ನೂಳಿದವುಗಳನ್ನು ನಾನು ಬರೆದನು. ಇವೆಲ್ಲವುಗಳೂ ಎರಡೆರಡು ಸಾವಿರ ಪ್ರತಿ ಅಚ್ಚಾದವು. ಇವು ಮಕ್ಕಳಿಗೆ ಓದಲು ಬಹು ಉಪಯುಕ್ತವಾದವುಗಳು. ಇವುಗಳಲ್ಲಿ ಅಕ್ಕಮಹಾದೇವಿ ಮೊದಲಾದ ಕೆಲವು ಪುಸ್ತಕಗಳನ್ನು ಪುನಃ ಮುದ್ರಿಸಬೇಕಾಯಿತು. ಶ್ರೀ ಮಟ್ಟಿಕಲ್ಲ ರುದ್ರಪ್ಪನವರ ಧನ ಸಹಾಯದಿಂದ ಪ್ರಕಟಮಾಡಿದ ವಿದ್ಯಾಲಯದ ಭಜನಾವಳಿ ಎಂಬ ಪುಸ್ತಕವೂ ಬಹು ಜನಪ್ರಿಯವಾಗಿ ಎರಡು ಸಾರೆ ಅಚ್ಚಾಗಿದೆ.

ಉದ್ಯೋಗ ಎಂಬ ಮಾಸ ಪತ್ರಿಕೆಯನ್ನು ತಾ. ೧೩.೦೨.೩೦ ರಿಂದ ಪ್ರಾರಂಭಿಸಿ ಎರಡು ವರ್ಷ ನಡೆಯಿಸಿದ್ದಾಯಿತು. ಇದು ಕನ್ನಡದಲ್ಲಿಯೇ ಒಂದು ಉಪಯುಕ್ತವಾದ ಹೊಸ ಪತ್ರಿಕೆಯಾಗಿತ್ತು. ಇದಕ್ಕೆ ಚಂದಾದಾರರ ಆಶ್ರಯ ದೊರೆಯದೆ ನಿಂತು ಹೋಯಿತು. ಆದರೆ ತಾ. ೧೭.೦೮.೩೧ನೆಯ ದಿವಸ ಹೊರಡಿಸಿದ **ಶರಣ ಸಂದೇಶ** ಎಂಬ ವಾರ ಪತ್ರಿಕೆಯು ಮಾತ್ರ ಕಳೆದ ಐದು ವರುಷಗಳಿಂದಲೂ ನಡೆಯುತ್ತ ಧಾರ್ಮಿಕ ಸಾಮಾಜಿಕ, ಮತ್ತು ರಾಜಕೀಯ ವಿಷಯಗಳಲ್ಲಿ ಎಷ್ಟೋ ವಿಚಾರ ಕ್ರಾಂತಿಯನ್ನುಂಟುಮಾಡಿತು. ಹಿಂದೂ ಸಮಾಜ ಸುಧಾರಣೆ ಮತ್ತು ಸಂಘಟನೆಗಳ ಸಂಬಂಧವಾಗಿ ವಿವೇಚಿಸುವ ಪತ್ರಿಕೆಯು ಕರ್ನಾಟಕದಲ್ಲಿ ಇದರಂತೆ ಬೇರೊಂದಿಲ್ಲವೆಂದು ಹೇಳಬಹುದು.

ವೀರಶೈವ ಸಮಾಜದಲ್ಲಂತೂ **ಶರಣ ಸಂದೇಶ**ವು ವಿಶೇಷವಾದ ಜಾಗೃತಿಯನ್ನುಂಟುಮಾಡುತ್ತಾ ಇದೆ. ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು ಬಹು ವಿವರವಾಗಿ ವಿಮಾರ್ಶಾತ್ಮಕ ದೃಷ್ಟಿಯಿಂದ ವಿವೇಚಿಸುವ ಪತ್ರಿಕೆಯು ಇದೊಂದೇ ಸರಿ. ವೀರಶೈವರಲ್ಲಿಯ ಒಳ ಪಂಗಡಗಳ ಕೊಳೆಯನ್ನು ತೊಳೆದು ಶುದ್ಧಿ ಮತ್ತು ಸಂಘಟನೆಗಳನ್ನುಂಟುಮಾಡಲು ಹೆಚ್ಚಾದ ಜಾಗೃತಿಯನ್ನು ಉಂಟುಮಾಡುತ್ತಾ ಇದೆ. ಈಗ ಈ ಪತ್ರಿಕೆಯ ೮೦೦ ಪ್ರತಿಗಳು ಪ್ರಕಟವಾಗುತ್ತಲಿವೆ. ಮುಂಬೈ ಕರ್ನಾಟಕದ ವಾರ

ಪತ್ರಿಕೆಗಳಲ್ಲಿ ಇಷ್ಟು ಸಂಖ್ಯೆಯುಳ್ಳವುಗಳು ವಿರಳವೆಂದೇ ಹೇಳಬಹುದು. ಇದರ ವೆಚ್ಚಕ್ಕೆ ತಕ್ಕಷ್ಟು ಆದಾಯವು ಉಂಟು.

ಈ ಪತ್ರಿಕೆಯ ಕಾರ್ಯವಲ್ಲದೆ (೧) ಕಾಯಕವೇ ಕೈಲಾಸ (೨) ವೀರಶೈವ ಮತಭೋಧೆ (೩) ವೀರಶೈವ ಮತತತ್ವ (೪) ಲಿಂಗರಾಜರ ಚರಿತ್ರೆ (೫) ವಿಜಯವಾಣಿ (೬) ಆದಿ ಜನ ಸುಧಾರಣೆ (೭) ದಾಂಪತ್ಯ ಧರ್ಮ (೮) ೬೩ ಪುರಾತನರ ಚರಿತ್ರೆ (೯) ಪ್ರಮಾಥಾಚಾರ ದೀಪಿಕೆ (೧೦) ಬಸವಣ್ಣನವರ ಶುದ್ಧಿ ಮತ್ತು ಸಂಘಟನೆ ಎಂಬ ಪುಸ್ತಕಗಳನ್ನು ಬರೆದು ಪ್ರಕಟಿಸಿದೆನು. ಒಟ್ಟಿಗೆ ವಿದ್ಯಾಲಯದ ಮುದ್ರಣ ಯಂತ್ರವನ್ನು ಸ್ಥಾಪಿಸಿದನಂತರ ಕಳೆದ ಏಳು ವರುಷದಲ್ಲಿ ೨೩ ಪುಸ್ತಕಗಳನ್ನು ಪ್ರಕಟಿಸಿದ್ದಾಯಿತು.

ಗ್ರಂಥಪ್ರಸಾರ : ಈ ೨೩ ಪುಸ್ತಕಗಳಲ್ಲಿ **ವೀರಶೈವ ಮತಬೋಧೆ** ಎಂಬುದು ಬಹು ಜನ ಪ್ರಿಯವಾಗಿದೆ. ಇದು ಈ ವರೆಗೆ ಮೂರುಸಾರೆ ಅಚ್ಚಾಗಿ ೫ ಸಾವಿರ ಪ್ರತಿಗಳು ಪ್ರಸಾರವಾಗಿವೆ. ಇದು ಮರಾಠಿ ಮತ್ತು ತೆಲಗು ಭಾಷೆಗಳಲ್ಲಿ ಬೇರೆಯವರಿಂದ ಭಾಷಾಂತರಿಸಲ್ಪಟ್ಟಿದೆ. ಮಕ್ಕಳಿಗಾಗಿ ಬರೆದು ಪ್ರಕಟಮಾಡಿದ ೧೩ ಪುಸ್ತಕಗಳು ಎರಡೆರಡು ಸಾವಿರ. ಎಂದರೆ ಅವು ೨೬ ಸಾವಿರ ಪ್ರತಿಗಳೂ **ವೀರಶೈವ ಮರಬೋಧೆಯ** ಹೊರತಾಗಿ ಉಳಿದ ೯ ಪುಸ್ತಕಗಳು ಒಂದೊಂದು ಸಾವಿರ ಪ್ರತಿಗಳೇ ಅಚ್ಚಾದುದರಿಂದ ಅವು ಒಟ್ಟಿಗೆ ೯ ಸಾವಿರ ಪ್ರತಿಗಳೂ ಹೀಗೆ ಕಳೆದ ೭ ವರುಷಗಳಲ್ಲಿ ವಿದ್ಯಾಲಯದಿಂದ ಒಟ್ಟು ೪೦ ಸಾವಿರ ಪುಸ್ತಕಗಳು ಅಚ್ಚಾಗಿ ಪ್ರಸಾರವಾದವು. ಇವುಗಳಲ್ಲಿ ಸಾಧಾರಣ ೮ ಸಾವಿರ ಪುಸ್ತಕಗಳು **ಶರಣ ಸಂದೇಶ** ಪತ್ರಿಕೆಯಿಂದಲೂ ಈ ೩೨ ಸಾವಿರ ಪುಸ್ತಕಗಳ ಪ್ರಸಾರದಿಂದಲೂ ಜನಾಂಗಕ್ಕೆ ಎಷ್ಟೋ ಪ್ರಯೋಜನವಾಯಿತೆಂದು ಹೇಳಲು ಅಡ್ಡಿಯಿಲ್ಲ.

ಇವುಗಳೆಲ್ಲಾ ಹೆಚ್ಚಾಗಿ ಚಿಕ್ಕ ಪುಸ್ತಕಗಳೇ ಆಗಿರುವುದರಿಂದಲೂ ಪ್ರಸಾರವಾಗುವ ಉದ್ದೇಶದಿಂದಲೇ ಕಡಿಮೆ ಕ್ರಯವನ್ನಿಟ್ಟಿದ್ದರಿಂದಲೂ ಸಾಂಪತ್ತಿಕ ದೃಷ್ಟಿಯಿಂದಲೇನೂ ಹೆಚ್ಚಿನ ಲಾಭವಾಗಲಿಲ್ಲ. ಇವುಗಳ ವಿಕ್ರಯದಿಂದ ಸಾಧಾರಣ ೨೫೦೦ ರೂ. ಗಳು ಬಂದಿವೆ.

ಶ್ರೀ ಬಸವ ಜಯಂತಿಯು ಕರ್ನಾಟಕದಲ್ಲಿ ಒಂದು ಹೊಸ ಜಾಗೃತಿಯ ಮಹೋತ್ಸವವಾಗಿಯೇ ಪರಿಣಮಿಸಿರುವುದರಿಂದ ಆ ಕಾಲದಲ್ಲಿ ಬಸವ ತತ್ವ ಪ್ರಸಾರಕ್ಕೆ ಒಂದು ಹೊಸ ರೀತಿಯುಂಟಾಗಲೆಂದು ಜಯಂತಿಯ ಕಾಲಕ್ಕೆ ಚಿಕ್ಕ ಚಿಕ್ಕ ಪುಸ್ತಕಗಳನ್ನು ಉಚಿತವಾಗಿ ಹಂಚುವ ಪದ್ಧತಿಯನ್ನು ಕ್ರಿ. ಶ. ೧೯೩೩ರಲ್ಲಿ ಪ್ರಾರಂಭಿಸಿದೆನು. **"ಬಸವ ಸಂದೇಶ"** ಎಂಬ ಬಸವಣ್ಣನವರ ವಚನಗಳಲ್ಲಿ ಆಯ್ದುಕೊಂಡು ೧೦೧ ವಚನಗಳ ಚಿಕ್ಕ ಪುಸ್ತಕವನ್ನು ಮುದ್ರಿಸಿ ಬಸವ ಜಯಂತಿಯ ದಿನವೇ ಎಲ್ಲ ಕಡೆಗೂ ಈ ಪುಸ್ತಕವು ಹಂಚಲ್ಪಡುವಂತೆ ಪ್ರಕಟಿಸಿದೆನು. ಆ ದಿನ ಐವತ್ತು ಸಾವಿರ ಪ್ರತಿಗಳು ಹಂಚಲ್ಪಟ್ಟಿವು. ಸಾವಿರಕ್ಕೆ ಎಂಟು ರೂ. ಬೆಲೆಯನ್ನಿಟ್ಟಿದ್ದಿತು. ಇದು ಕರ್ನಾಟಕದಲ್ಲಿಯೇ ಒಂದು ಅಭೂತ ಪೂರ್ವ ಪ್ರಸಂಗವೆನ್ನಬಹುದು. ಒಂದು ದಿನ ಇಷ್ಟು ಪ್ರತಿಗಳು ಹೀಗೆ ಹಂಚಲ್ಪಟ್ಟ ಒಂದಾದರೂ ಪ್ರಸಂಗವು ಆ ಮುಂಚೆ ಎಂದೂ ಸಂಭವಿಸಿರಲಿಲ್ಲ. ಇದರಿಂದ ಬಸವಣ್ಣನವರ ವಚನಪಾಠವು ಚಿಕ್ಕ ಚಿಕ್ಕ ವಿದ್ಯಾರ್ಥಿಗಳಲ್ಲಿಯೂ ಎಷ್ಟೋ ಪ್ರಸಾರವಾಯಿತು.

ಶ್ರಾವಣ ಮಾಸದಲ್ಲಿಯೂ ಹೀಗೆ ಧಾರ್ಮಿಕ ಪುಸ್ತಕಗಳನ್ನು ಅದೇ ವರುಷ ಹಂಚುವಂತೆ ಜನರಲ್ಲಿ ವಿಜ್ಞಾಪಿಸಿಕೊಂಡು **"ವೀರಶೈವ ಏಕೀಕರಣ"** ಎಂಬ ಪುಸ್ತಕವನ್ನು ಸಂವಾದರೂಪದಲ್ಲಿ ಬರೆದು ಪ್ರಕಟಿಸಿದೆನು. ವೀರಶೈವರಲ್ಲಿಯ ಜಾತಿಯ ಮೇಲುಕೀಳುಗಳ ಕೊಳೆಯನ್ನು ತೆಗೆದುಹಾಕಿರೆಂದೇ ಆ ಪುಸ್ತಕದಲ್ಲಿ ಪ್ರತಿಪಾದಿಸಿದ ವಿಷಯವು. ಆ ಪುಸ್ತಕದ ಹದಿನೈದು ಸಾವಿರ ಪ್ರತಿಗಳು ಹಂಚಲ್ಪಟ್ಟವು.

೧೯೩೪ ನೆಯ ಇಸವಿ ಬಸವ ಜಯಂತಿಯ ಕಾಲಕ್ಕೆ **ಭಕ್ತಿಯ ಬೆಳಕು** ಎಂಬ ಬಸವಣ್ಣನವರ ಕೆಲವು ವಚನಗಳಿಗೆ ಅರ್ಥವನ್ನು ಬರೆದ ಚಿಕ್ಕ ಪುಸ್ತಕವನ್ನು ಪ್ರಕಟಿಸಿದೆನು. ಆ ಪುಸ್ತಕದ ಇಪ್ಪತ್ತು ಸಾವಿರ ಪ್ರತಿಗಳು ಹಂಚಲ್ಪಟ್ಟವು. **ಚೆನ್ನಬಸವಣ್ಣನವರ ಉಪದೇಶ,** ಸಿದ್ದರಾಮ **ಶಿವಯೋಗಿಗಳ ಉಪದೇಶ,** ಎಂಬ ಚಿಕ್ಕ ಪುಸ್ತಕಗಳೂ ಬೇರೆ ಬೇರೆ ಕಾಲದಲ್ಲಿ ಪ್ರಕಟವಾದವು. ಈ ಪ್ರಕಾರ ಸಾಧಾರಣ ಒಂದು ಲಕ್ಷ ಚಿಕ್ಕ ಪುಸ್ತಕಗಳು ಕಳೆದ ನಾಲ್ಕು ವರುಷಗಳಲ್ಲಿ ಪ್ರಸಾರವಾದವು. ವಿದ್ಯಾಲಯದಲ್ಲಿ ಮುದ್ರಣ ಯಂತ್ರವನ್ನು ಸ್ಥಾಪಿಸದೆ ಇದ್ದಿದ್ದರೆ ಇಷ್ಟೆಲ್ಲಾ ಪ್ರಚಾರ ಕಾರ್ಯವಾಗುವುದು ಶಕ್ಯವೇ ಇರಲಿಲ್ಲ.

ಹಿಂದಿನ ಹತ್ತು ವರುಷಗಳ ಗ್ರಂಥಗಳು : ಕ್ರಿ. ಶ. ೧೯೧೫ ರಿಂದ ೧೯೨೫ರ ಅಂತ್ಯದ ವರೆಗೆ ಹತ್ತು ವರುಷಗಳಲ್ಲಿ ಪ್ರಕಟವಾದ ಗ್ರಂಥಗಳ ವಿವರ.

ಸಂಖ್ಯೆ	ಹೆಸರು	ಆವೃತ್ತಿ	ಪ್ರತಿಗಳು
೧.	ಸ್ವಕರ್ತವ್ಯ ಸಿದ್ಧಾಂತ	೨	೨೦೦೦
೨.	ಬುದ್ಧಿಯ ಮಾತು	೭	೧೫೦೦೦
೩.	ವಾರದ ಮಲ್ಲಪ್ಪನವರ ಚರಿತ್ರೆ	೧	೧೦೦೦
೪.	ಸ್ತ್ರೀ ನೀತಿ ಸಂಗ್ರಹ	೩	೬೦೦೦
೫,	ಆರೋಗ್ಯ ಜೀವನ	೨	೩೦೦೦
೬	ಬುದ್ಧ ಚರಿತ್ರೆ	೧	೧೦೦೦
೭	ಗಾಂಧೀ ಚರಿತ್ರೆ	೨	೨೦೦೦
೮.	ರಾಮತೀರ್ಥರ ಉಪನ್ಯಾಸ (ಭಾಗ ೫)	೧	೭೦೦೦
೯.	ಭಾರತೀಯರ ದೇಶಭಕ್ತಿ	೧	೧೦೦೦
೧೦.	ಬಸವ ಚರಿತ್ರೆ	೧	೩೦೦೦
೧೧.	ಆಧುನಿಕ ಜರ್ಮನಿ	೧	೧೦೦೦
೧೨.	ವೀರಶೈವ ಸಮಾಜ ಸುಧಾರಣೆ	೧	೧೦೦೦

೧೩.	ಕೇರಹಾರ್ಡಿ	೧	೧೦೦೦
೧೪.	ಖಾದಿ	೧	೨೦೦೦
೧೫.	ಬ್ರಹ್ಮಚರ್ಯ	೨	೫೦೦೦
೧೬.	ಅಹಿಂಸೆ	೧	೩೦೦೦
೧೭.	ಸತ್ಯಾಗ್ರಹ ಧರ್ಮ	೧	೨೦೦೦
	ಅಂತು		೫೬೦೦೦

ಇವುಗಳಲ್ಲಿ **ಬುದ್ಧಿಯ ಮಾತು, ಸ್ತ್ರೀ ನೀತಿ ಸಂಗ್ರಹ, ಶ್ರೀ ರಾಮತೀರ್ಥರ ಉಪನ್ಯಾಸ, ಬ್ರಹ್ಮಚರ್ಯ, ಆರೋಗ್ಯ ಜೀವನ**, ಈ ಪುಸ್ತಕಗಳು ಜನರಿಗೆ ಹೆಚ್ಚು ಪ್ರಿಯವಾದವು. **ಬುದ್ಧಿಯ ಮಾತು** ಮತ್ತು **ಸ್ತ್ರೀ ನೀತಿ ಸಂಗ್ರಹ** ಇವೆರಡು ಪುಸ್ತಕಗಳಂತೂ ಪ್ರತಿಯೊಬ್ಬ ಬಾಲಕ ಮತ್ತು ಬಾಲಕಿಯರ ಕೈಯಲ್ಲಿ ಅತ್ಯಗತ್ಯವಾಗಿರಬೇಕಾದ ಪುಸ್ತಕಗಳು. ಇವು ಮರಾಠಿ ಭಾಷೆಗೆ ಬೇರೆಯವರಿಂದ ಭಾಷಾಂತರಿಸಲ್ಪಟ್ಟಿವೆ. ಶ್ರೀ ರಾಮತೀರ್ಥರ ಉಪನ್ಯಾಸಗಳೂ ಬಹು ಜನಪ್ರಿಯವಾಗಿವೆ. ಅವುಗಳ ಮುದ್ರಣಕ್ಕೆ ಹೆಚ್ಚು ಹಣ ಬೇಕಾಗುವುದರಿಂದ ಪುನಃ ಮುದ್ರಣವಾಗಿಲ್ಲ. ಬಹು ಜನರು ಅಪೇಕ್ಷಿಸುತ್ತಿದ್ದಾರೆ. ಇವುಗಳನ್ನು ಭಾಷಾಂತರಿಸಿದ್ದಕ್ಕಾಗಿ ಕರ್ನಾಟಕ ಸಾಹಿತ್ಯ ಪರಿಷತ್ತಿನವರು ೪೦ ರೂ. ಗಳನ್ನು ಬಹುಮಾನವಾಗಿ ಕೊಟ್ಟಿದ್ದರು.

ಅಂತು, ಈ ವರೆಗೆ ೪೦ ಚಿಕ್ಕ ದೊಡ್ಡ ಪುಸ್ತಕಗಳನ್ನು ಬರೆದು ಸಾಧಾರಣ ಎರಡು ಲಕ್ಷ ಪ್ರತಿಗಳನ್ನು ಪ್ರಸಾರಗೊಳಿಸಿದೆನು. ಈ ವರೆಗಿನ ನನ್ನ ಸೇವೆಯಲ್ಲಿ ಈ ಲೇಖನ ಕೆಲಸವೇ ಹೆಚ್ಚಿನದು. ಕರ್ನಾಟಕದ ಸಾಧಾರಣ ೨೦೦ ಚಿಕ್ಕ ದೊಡ್ಡ ಸ್ಥಳಗಳಲ್ಲಿ ಒಂದು ಸಾವಿರಕ್ಕಿಂತ ಹೆಚ್ಚು ಸಾರೆ ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಷಯಗಳಲ್ಲಿ ಭಾಷಣ ಮಾಡಿರಬಹುದು.

ಬೇರೆ ಕಾರ್ಯಗಳು : ವಿದ್ಯಾಲಯವನ್ನು ಸ್ಥಾಪಿಸಿದ ನಂತರ ಹೆಚ್ಚಾಗಿ ಇಲ್ಲಿಯೇ ಇರಬೇಕಾಯಿತು. ಮೊದಲನೆಯ ಒಂದು ವರುಷ ವಿದ್ಯಾಲಯವನ್ನು ಬಿಟ್ಟು ಹೋಗಬಾರದೆಂದೇ ಗೊತ್ತು ಮಾಡಿದೆನು. ಅನಂತರ ಧಾರವಾಡದಲ್ಲಿ ತಾ. ೨೬.೦೫.೨೮ ನೆಯ ದಿವಸ ಕೂಡಿದ ಅಖಿಲ ಕರ್ನಾಟಕ ಮೊದಲನೆಯ ಖಾದಿ ಪರಿಷತ್ತಿಗೆ ಅಧ್ಯಕ್ಷನಾಗಿ ನನ್ನ ಭಾಷಣದಲ್ಲಿ ಖಾದಿ ಚಟುವಟಿಕೆಗಾಗಿಯೇ ಒಂದು ಪತ್ಯೇಕ ಪತ್ರಿಕೆಯಿರಬೇಕೆಂದು ತಿಳಿಸಿದೆನು. ಶ್ರೀಮಾನ್ ದೇಶಪಾಂಡೆ ಗಂಗಾಧರರಾಯರಿಗೆ ಈ ಯೋಜನೆಯು ಸರಿತೋರಿ ಆ ಕಾರ್ಯಕ್ಕಾಗಿ ೩೦೦ ರೂ. ಸಹಾಯ ಮಾಡಿದರು. ಶ್ರೀಮಾನ್ ದಿವಾಕರ ರಂಗನಾಥರಾಯರು ಮತ್ತು ನಾನು **ಖಾದಿವಿಜಯ** ಎಂಬ ಮಾಸ ಪತ್ರಿಕೆಯನ್ನು ತಾರೀಖು ೧೩.೦೮.೨೮ರಿಂದ ಹೊರಡಿಸಿ ಒಂದು ವರುಷ ನಡೆಯಿಸಿದೆವು. ಅನಂತರ ಇದಕ್ಕೇನೆ ವ್ಯಾಪಕ ಸ್ವರೂಪವನ್ನೇ ಕೊಟ್ಟು **ಉದ್ಯೋಗ** ಎಂಬ ಪತ್ರಿಕೆಯನ್ನು ಹೊರಡಿಸಿದೆನು.

ಮಹಾತ್ಮಾಗಾಂಧಿಯವರ ಚಟುವಟಿಕೆಯು ೧೯೨೦ನೆಯ ಇಸವಿಯಲ್ಲಿ ವೀರಶೈವ ಸಮಾಜಕ್ಕೆ ಪ್ರಿಯವಾಗಿರಲಿಲ್ಲ. ಆದರೆ ಆ ಸ್ಥಿತಿಯು ಮುಂದೆ ಉಳಲಿಯಲಿಲ್ಲ. ಮುಂದಿನ ಹತ್ತು ವರುಷಗಳಲ್ಲಿ

ಬಹು ವ್ಯತ್ಯಾಸವಾಯಿತು. ವೀರಶೈವ ತರುಣರು ಗಾಂಧೀಜಿಯವರ ರಾಜಕಾರಣದಲ್ಲಿ ಸೇರಿ ರಾಷ್ಟ್ರ ಸೇವೆಗೆ ವೀರ ಮಾರ್ಗವನ್ನೂ ಅನುಸರಿಸಿದರು. ವೀರಶೈವರಲ್ಲಿ ರಾಜಕೀಯ ಚಟುವಟಿಕೆಯು ಹೆಚ್ಚಲೆಂದೇ ಹಾವೇರಿಯಲ್ಲಿ ವೀರಶೈವರ ಮೊದಲನೆಯ ರಾಜಕೀಯ ಪರಿಷತ್ತು ತಾ. ೧೧.೦೮.೧೯೩೦ರಲ್ಲಿ ಜರುಗಿತು. ಅದಕ್ಕೆ ನಾನು ಅಧ್ಯಕ್ಷನಾಗಿ ವೀರಶೈವರು ರಾಷ್ಟ್ರಿಯ ಸಭೆಯಲ್ಲಿ ಸೇರಿ ವಿಧಾಯಕ ಕಾರ್ಯಗಳನ್ನು ಮಾಡಲೇಬೇಕೆಂದು ನನ್ನ ಭಾಷಣದಲ್ಲಿ ಪ್ರತಿಪಾದಿಸಿದೆನು. ಇದು ತರುಣರಿಗೆ ಒಪ್ಪಿಗೆಯಾದರೂ ಹಿರಿಯರಿಗೆ ಸರಿತೋರಲಿಲ್ಲ. ಅನೇಕರು ಇನ್ನೂ ಬ್ರಾಹ್ಮಣೇತರ ಪಕ್ಷದ ಕಡೆಗೇನೇ ಒಲವುಳ್ಳವರಾಗಿದ್ದರು. ವೀರಶೈವರು ಕಾಂಗ್ರೆಸ್ಸಿನಲ್ಲಿ ಸೇರಬೇಕೆಂದೆ ಆ ಪರಿಷತ್ತಿನಲ್ಲಿ ತೀರ್ಮಾನವಾಯಿತು.

ವೀರಶೈವರಲ್ಲಿ ಗಾಂಧೀಜಿಯವರ ತತ್ವಗಳು ಹೆಚ್ಚು ಪ್ರಸಾರವಾಗುತ್ತಿದ್ದುದನ್ನು ನೋಡಿ ಅಖಿಲ ವೀರಶೈವ ಖಾದಿ ಭಂಡಾರ ಎಂಬ ಒಂದು ಖಾದಿ ಕಾರ್ಯಾಲಯವನ್ನು ಸ್ಥಾಪಿಬೇಕೆಂತಲೂ ಅದಕ್ಕೆ ಒಂದು ಲಕ್ಷ ರೂ. ಬಂಡವಾಳವನ್ನು ಕೂಡಿಸಬೇಕೆಂತಲೂ ಯೋಚಿಸಿ ಇಂಥ ಒಂದು ಸಂಘವನ್ನು ೧೯೩೧ರಲ್ಲಿ ಏರ್ಪಡಿಸಿದೆನು. ಇದರ ಕಾರ್ಯಕ್ಕಾಗಿ ಬಾಗಲಕೋಟೆ, ಗದಗ ಹುಬ್ಬಳ್ಳಿ, ಬ್ಯಾಡಗಿ ಮೊದಲಾದ ಕೆಲವು ಸ್ಥಳಗಳಿಗೆ ಹೋಗಿ ಫಂಡ ಕೂಡಿಸಿ ಆಯಾಯ ಹಣ ಅಲ್ಲಲ್ಲಿಯೇ ಸ್ಥಳೀಯ ಜನರ ಮೇಲ್ವಿಚಾರಣೆಯಲ್ಲಿರುವಂತೆ ಮಾಡಿದೆನು.

ಆದರೆ ಈ ಕಾರ್ಯವು ಫಲಕಾರಿಯಾಗಲಿಲ್ಲ. ಜನರು ಒಂದು ಮೇಲ್ವಿಚಾರಣೆಯ ಸಂಘಕ್ಕೆ ಒಳಪಟ್ಟು ಹಣವಿನ ಸೂತ್ರವನ್ನು ಅವರ ಕಡೆಗೆ ಕೊಟ್ಟು ಕೆಲಸ ನಡೆಯಿಸಲು ಒಪ್ಪಲಿಲ್ಲ. ಈ ಕಾರ್ಯದಲ್ಲಿ ನನಗೆ ಕಲ್ಪನಾತೀತ ಸೋಲು ಬಂದಿತು. ನನ್ನನ್ನು ನಂಬಿ ಈ ಕೆಲಸಕ್ಕೆ ಹಣವನ್ನು ಕೊಟ್ಟ ದಾವಣಗೆರೆ ಶ್ರೀ ಬೆಲ್ಲದ ಸಿದ್ದಲಿಂಗಪ್ಪನವರೇ ಮೊದಲಾದ ನಾಲ್ಕಾರು ಜನರ ಸಾಧಾರಣ ನಾಲ್ಕಾರು ನೂರು ರೂ. ಗಳು ನಷ್ಟವಾದವು. ಜನರೇನೋ ನನ್ನ ಮೇಲಿನ ವಿಶ್ವಾಸದಿಂದ ಖಾದಿ ಭಾಂಡಾರದ ಶೇರುಗಳನ್ನು ಕೊಂಡುಕೊಳ್ಳುತ್ತಿದ್ದರು. ಆದರೆ ಹಣದ ವಿನಿಯೋಗವು ತೃಪ್ತಿಕರವಾಗುವಂತೆ ತೋರಲಿಲ್ಲ. ಹಣವಿನ ವಿಚಾರದಲ್ಲಿ ವ್ಯವಹಾರ ದೃಷ್ಟಿಯಿಂದ ಎಷ್ಟರ ಮಟ್ಟಿಗೆ ನಂಬಿಗೆಯಿಟ್ಟು ಜನರ ಕಡೆಗೆ ಕೆಲಸ ವಹಿಸಬೇಕೆಂಬುದು ನನಗೆ ತಿಳಿಯುವುದಿಲ್ಲವೆಂಬುದನ್ನು ಬಾಗಲಕೋಟೆಯ ಶ್ರೀ ಶಾಬಾದಿ ಸೋಮಲಿಂಗಪ್ಪನವರು ತೋರಿಸಿಕೊಟ್ಟರು. ಅನಂತರ ಈ ಕಾರ್ಯವನ್ನು ಅಷ್ಟಕ್ಕೇನೇ ನಿಲ್ಲಿಸಿ ಬಿಟ್ಟೆನು.

ಬೆಳಗಾವ ಜಿಲ್ಲಾ ದಕ್ಷಿಣ ಭಾಗದ ಒಕ್ಕಲಿಗರ ಪರಿಷತ್ತು ಬೈಲಹೊಂಗಲದಲ್ಲಿ ತಾ. ೧೨.೦೪.೩೧ನೆಯ ದಿನ ಜರುಗಿತು. ಅದಕ್ಕೆ ನಾನು ಅಧ್ಯಕ್ಷನಾಗಿ ಒಕ್ಕಲಿಗರ ಸಾಂಪತ್ತಿಕ ಸುಧಾರಣೆಗೆ ಅವರ ದುಂದುಗಾರಿಕೆ, ಕೋರ್ಟು ಕಛೇರಿಗಳ ವ್ಯಾಜ್ಯ. ದುಷ್ಟಚಟ, ಇವು ನಿವಾರಣೆಯಾಗುವುದು ಅತ್ಯವಶ್ಯಕವೆಂದು ತಿಳಿಸಿದೆನು.

ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳಿಗೆ ವಿದ್ಯಾಲಯದ ಧಾರ್ಮಿಕ ಶಿಕ್ಷಣ ಪದ್ಧತಿಯು ಪ್ರಿಯವಾದುದು. ಅಂತೆಯೇ ಆಗಾಗ್ಗೆ ವಿದ್ಯಾಲಯಕ್ಕೆ ಆಗಮಿಸಿ ತಿಂಗಳುಗಟ್ಟಲೆ ವಾಸವಾಗಿದ್ದು ಇಲ್ಲಿ ಶಿವಾನುಭವ ಗೋಷ್ಠಿ ನಡೆಯುವಂತೆ ವ್ಯವಸ್ಥೆ ಮಾಡಿಸಿ ತಮ್ಮ ದಿವ್ಯ ಚಾರಿತ್ರ್ಯದಿಂದಲೂ ಉಪದೇಶದಿಂದಲೂ ವಿದ್ಯಾಲಯದವರಿಗೆ ತುಂಬಾ

ಪ್ರೋತ್ಸಾಹಿಸುತ್ತಿದ್ದರು. ಈ ಮಹಾಪೂಜ್ಯರು ಕ್ರಿ. ಶ. ೧೯೩೨ರಲ್ಲಿ ವಿದ್ಯಾಲಯಕ್ಕೆ ಆಗಮಿಸಿದಾಗ ಇವರ ಅಧ್ಯಕ್ಷತೆಯಲ್ಲಿ ಒಂದು ಆಲೋಚನಾ ಸಭೆ ಸೇರಿ **"ವೀರಶೈವ ತತ್ವ ಪ್ರಚಾರಕ ಸಂಘ"** ಎಂಬ ಒಂದು ಸಂಘವು ತಾ. ೨೦.೦೪.೧೯೩೨ ನೆಯ ದಿವಸ ಸ್ಥಾಪಿಸಲ್ಪಟ್ಟಿತು.

ವೀರಶೈವ ಒಳಪಂಗಡಗಳಲ್ಲಿಯ ಮೇಲು ಕೀಳುಗಳನ್ನು ತೆಗೆದುಹಾಕಿ ವೀರಶೈವ ಮತಕ್ಕೆ ಬರುವ ಶುದ್ಧಾಚಾರ ಶೀಲರನ್ನು ತೆಗೆದುಕೊಳ್ಳುವ ರೂಢಿಯು ಹೆಚ್ಚುವಂತೆ ಜನ ಜಾಗೃತಿಯನ್ನುಂಟುಮಾಡಬೇಕೆಂಬುದೇ ಈ ಸಂಘದ ಉದ್ದೇಶವಾಗಿದ್ದಿತು. ಈ ಸಂಘದಲ್ಲಿ ಸೇರುವವರು ಅಷ್ಟಾವರಣಯುಕ್ತ ವೀರಶೈವರಲ್ಲಿ ಊಟೋಪಚಾರ ಮಾಡಲು ಸಿದ್ಧರಾಗಿಯೂ ಶುದ್ಧಾಚಾರ ಶೀಲರಾದ ಪರಮತೀಯರನ್ನು ಸ್ವಮತದಲ್ಲಿ ತೆಗೆದುಕೊಳ್ಳಲು ಇಷ್ಟವುಳ್ಳವರಾಗಿಯೂ ಇರಬೇಕಾಗಿದ್ದಿತು. ಆ ಪ್ರಕಾರ ಅವರು ಪ್ರತಿಜ್ಞಾ ಪತ್ರಿಕೆಯನ್ನು ಸಂಘಕ್ಕೆ ಬರೆದು ಕೊಡಬೇಕೆಂದೇ ಗೊತ್ತುಮಾಡಿತ್ತು.

ಈ ಸಂಘಕ್ಕೆ ಮಮದಾಪುರ ಶ್ರೀ ಮಹಾದೇವ ಪಂಡಿತರನ್ನು (ಈಗ ಬೆಂಗಳೂರು ಶ್ರೀ ಸರ್ಪಭೂಷಣ ಶಿವಯೋಗಿಶ್ವರ ಮಠಾಧ್ಯಕ್ಷರಾದ ಶ್ರೀ ಮನ್ನಿರಂಜನ ಶ್ರೀ ಮಹಾದೇವ ಸ್ವಾಮಿಗಳು) ಅಧ್ಯಕ್ಷರನ್ನಾಗಿ ಮಾಡಿಕೊಂಡು ನಾನು ಕಾರ್ಯದರ್ಶಿಯಾದೆನು. ಈ ಸಂಘಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರ ಭಾಗಗಳಲ್ಲಿ ಸದಸ್ಯರನ್ನು ಮಾಡಲು ಪ್ರಯತ್ನಸಿದ್ಧಾಯಿತು. ಒಂದು ವರುಷದೊಳಗಾಗಿ ಸಾಧಾರಣ ೨ ಸಾವಿರ ಜನರು ಇದಕ್ಕೆ ಸದಸ್ಯರಾದರು. ಇದರಲ್ಲಿ ಅನೇಕರು ಸ್ತ್ರೀಯರೂ ಇದ್ದರು. ಹತ್ತು ವರ್ಷಗಳ ಹಿಂದೆ ವೀರಶೈವ ತರುಣರ ಸಂಘದಲ್ಲಿ ಯಾವ ಏಕೀಕರಣದ ಗೊತ್ತುವಳಿಯ ತೀರ್ಮಾನವಾಗಿರಲಿಲ್ಲವೋ ಅದಕ್ಕಿಂತಲೂ ಮುಂದುವರಿದ ರೀತಿಯಲ್ಲಿ ಈಗ ಸಾವಿರಾರು ಜನರು ನಡೆಯಲು ಮುಂದೆ ಬಂದುದನ್ನು ನೋಡಿ ನನಗೆ ತುಂಬಾ ಸಮಾಧಾನವಾಯಿತು.

ಶ್ರೀ ಬಸವಣ್ಣನವರ ಚರಿತ್ರೆ ಮತ್ತು ಅವರ ಉಪದೇಶಗಳನ್ನು ಕುರಿತು ಇಂಗ್ಲೀಷಿನಲ್ಲಿ ಒಂದು ಉತ್ತಮವಾದ ಪುಸ್ತಕವನ್ನು ವಿದ್ಯಾಂಸರಿಂದ ಬರೆಯಿಸಬೇಕೆಂದು ಪ್ರಯತ್ನಿಸಿದೆನು. ಇದಕ್ಕೆ ಬೇಕಾಗುವ ಸಾವಿರಾರು ರೂ. ಗಳನ್ನು ಕೊಡಲು ಹುಬ್ಬಳ್ಳಿ ಮೂರು ಸಾವಿರಮಠದ ಶ್ರೀ ಜಗದ್ಗುರು ಗುರುಸಿದ್ಧರಾಜ ಯೋಗೀಂದ್ರ ಮಹಾಸ್ವಾಮಿಗಳವರಲ್ಲಿ ಪ್ರಾರ್ಥಿಸಿಕೊಳ್ಳಲು ಅವರು ಒಪ್ಪಿದರು. ಆದರೂ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳ್ಲಲಿ ಅಂತಹ ಪ್ರಭುತ್ವವುಳ್ಳವರೂ ಈ ಕಾರ್ಯವನ್ನು ವಹಿಸಲು ಇಷ್ಟವುಳ್ಳವರೂ ಆದ ಪಂಡಿತರನ್ನು ಗೊತ್ತು ಹಚ್ಚಿ ಅವರಿಂದ ಈ ಮಹತ್ಕಾರ್ಯವನ್ನು ಮಾಡಸಲಿಕ್ಕಾಗಿಲ್ಲ. ಅನೇಕರಲ್ಲಿ ಹೋಗಿ ಎಷ್ಟೋ ಪ್ರಯತ್ನಿಸಿದರೂ ಇನ್ನೂ ಆ ಕಾರ್ಯ ನೆರವೇರಿಲ್ಲ.

ಮಹಾತ್ಮ ಗಾಂಧೀಯವರು ೧೯೩೪ರಲ್ಲಿ ಅಸ್ಪೃಶ್ಯತಾನಿವಾರಣೆಯ ಮಹಾಕಾರ್ಯಕ್ಕೆ ಕರ್ನಾಟಕಕ್ಕೂ ಆಗಮಿಸಿದ್ದರು. ಆಗ ಧಾರವಾಡ, ಬೆಳಗಾವಿ, ವಿಜಾಪೂರ ಜಿಲ್ಲೆಗಳಲ್ಲಿ ಅವರ ಸಂಚಾರದೊಂದಿಗಿದ್ದೆನು. ಈ ಸಂಚಾರದಲ್ಲಿ ಶ್ರೀಯುತ ದೊಡ್ಡಮೇಟ ಅಂದಾನಪ್ಪನವರು ತಮ್ಮ ಪ್ರಯತ್ನ ವಿಶೇಷದಿಂದ ಗಾಂಧೀಜಿಯವರನ್ನು ಜಕ್ಕಲಿಗೆ ಬರಮಾಡಿಕೊಂಡದ್ದು ನನಗೆ ವಿಶೇಷ ಮಹತ್ವದ್ದಾಗಿ ತೋರಿತು. ಅಲ್ಲಿಗೆ ಸಾಧಾರಣ ೨೧-೩೦ ಸಾವಿರ ಜನರು ಬಂದಿದ್ದರು. ನಾನು ಅಲ್ಲಿಗೆ ಹೋಗುವಾಗ ಮಧ್ಯದ ದಾರಿಯಲ್ಲಿ ನಾನು ಕುಳಿತಿದ್ದ ಮೋಟಾರನ್ನು ೨-೩ ಕಡೆ ತಡೆದರು. ಉಡುಪಿನಿಂದಲೂ ಹೋಲಿಕೆಯಿಂದಲೂ ನಾನು ಗಾಂಧೀಜಿಯವರಿಗೆ ಸ್ವಲ್ಪ

ಹೋಲುತ್ತಿದ್ದುದರಿಂದ ನಾನೇ ಗಾಂಧಿಯೆಂದು ಅವರ ತಿಳುವಳಿಕೆ. ನಾನಲ್ಲವೆಂದು ಎಷ್ಟು ಹೇಳಿದರೂ ತಪ್ಪಿಸಿಕೊಂಡು ಹೋಗಲು ಹೀಗೆ ಹೇಳುತ್ತಾರೆಂದೇ ಅವರು ಹೇಳಿ ತಡೆದೇಬಿಟ್ಟರು. ಆ ಜನಸಂದಣಿಯಿಂದ ಪಾರಾಗಿ ಹೋಗುವುದೇ ಕಷ್ಟವಾಯಿತು.

ಗಾಂಧೀಜಿಯವರು ಅಸ್ಪೃಶ್ಯರಿಗೆ ಹರಿಜನ ಎಂಬ ಹೆಸರಿನ್ನಿಟ್ಟಿದ್ದು ಸರಿಯಲ್ಲವೆಂತಲೂ ಆದಿಜನ ಎಂದು ಹೇಳಬೇಕೆಂತಲೂ ನನ್ನ ತಿಳುವಳಿಕೆ. ಬೆಳಗಾವಿಯಲ್ಲಿ ಈ ಸಂಬಂಧವಾಗಿ ಅವರೊಂದಿಗೆ ಸಂಭಾಷಿಸಿದೆನು. ತಾವು ಹರಿಜನ ಎಂಬುದಾಗಿಯೇ ಹೇಳುತ್ತೇವೆ. ನೀವು ಆದಿಜನ ಎಂದು ಹೇಳಿದರೆ ನನ್ನದೇನೂ ಅಡ್ಡಿಯಿಲ್ಲವೆಂದು ತಿಳಿಸಿದರು. ಇದೊಂದು ಆಗ ಕರ್ನಾಟಕದಲ್ಲಿ ಮುಖ್ಯ ಚರ್ಚೆಯ ವಿಷಯವೇ ಆಗಿದ್ದಿತು. **ಆದಿಜನ ಸುಧಾರಣೆ** ಎಂಬ ಪುಸ್ತಕವನ್ನು ಬರೆದು ಅದೇ ಕಾಲದಲ್ಲಿ ಪ್ರಸಿದ್ಧಗೊಳಿಸಿದೆನು. ಇದರ ಮುದ್ರಣ ವೆಚ್ಚವನ್ನು ಗಜೇಂದ್ರಗಡದ ಶ್ರೀ ಅಂದಾನಪ್ಪ ಕುಂದರಗಿ ಇವರು ವಹಿಸಿದರು. ಬಸವರಾಜ ನವ ಸಂದೇಶ ಮೊದಲಾದ ಕೆಲವು ಪತ್ರಿಕಾಕರ್ತರು ಆದಿಜನ ಎಂಬುದೇ ಯುಕ್ತವೆಂದು ಅದೇ ಪ್ರಕಾರ ಹೇಳಲಾರಂಭಿಸಿದರು.

ಗಾಂಧೀಜಿಯವರು ಬೆಳಗಾವಿಯಲ್ಲಿ **ಶರಣಸಂದೇಶಕ್ಕೆ** ಸತ್ಯದ ವಿನಾ ಬೇರೆ ಧರ್ಮವಿಲ್ಲ ಎಂಬ ಒಂದು ಸಂದೇಶವನ್ನು ಕೊಟ್ಟರು. ವಿಜಾಪುರದಲ್ಲಿ ವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾದ ದರ್ಶನವನ್ನು ಕೊಟ್ಟು ವಿದ್ಯಾಲಯದ ಎಲ್ಲ ಸಂಗತಿಗಳನ್ನೂ ತಿಳಿದುಕೊಂಡು ವಿದ್ಯಾರ್ಥಿಗಳಿಗೂ ಸತ್ಯದ ಸಂದೇಶವನ್ನು ಕೊಟ್ಟರು. ಆಗ ನಡೆದ ಸಂಭಾಷಣೆಯಲ್ಲಿ ಬಸವಣ್ಣನವರು ತುಕಾರಾಮರಂತೆ ಒಬ್ಬ ಸಾಧು ಪುರುಷರಿರಬಹುದೆಂದು ತಾವು ತಿಳಿದಿರುವುದಾಗಿ ಹೇಳಿದರು. ಹಾಗಲ್ಲ; ಅವರು ಗುರುನಾನಕರಂತೆ ಒಬ್ಬ ಮತಸ್ಥಾಪಕರಿದ್ದಾರೆಂದೂ ಈ ಮತದಲ್ಲಿ ವರ್ಣಗಳಿಲ್ಲವೆಂದೂ ನಾನು ಹೇಳಿದೆನು.

ನಿಜಾಮ ಭಾಗದ ಕರ್ನಾಟಕದಲ್ಲಿ ಕನ್ನಡ ಓದುಬರಹಗಳೇ ಬಹು ಕಡಿಮೆ. ಗುಲಬರ್ಗಾ ಭಾಗದಲ್ಲಿ ಮರಾಠಿಯ ಪ್ರಾಬಲ್ಯ ಹೆಚ್ಚು. ಆ ಭಾಗದಲ್ಲಿ ಕನ್ನಡ ಪ್ರಚಾರವಾಗಲು ಗುಲಬರ್ಗಾದಲ್ಲಿ ಒಂದು ಮುದ್ರಣ ಯಂತ್ರವನ್ನು ಸ್ಥಾಪಿಸುವುದು ಪ್ರಯೋಜನಕಾರಿಯೆಂದು ತೋರಿತು. ಇಲ್ಲಿಯ ಮುದ್ರಣ ಕಾರ್ಯದಲ್ಲಿ ಚೆನ್ನಾಗಿ ನುರಿತ ಪ್ರಿಯ ಶಿವಲಿಂಗಣ್ಣನು ಗುಲಬರ್ಗಾದಲ್ಲಿ ಈ ಕಾರ್ಯವನ್ನು ವಹಿಸಿದರೆ ಆತನಿಗೂ ಅನುಕೂಲವೆಂದು ಯೋಚಿಸಿ, ಆತನ ಒಪ್ಪಿಗೆ ಪ್ರಕಾರ ೧೯೩೩ರಲ್ಲಿ ಈ ಕಾರ್ಯವನ್ನು ಮಾಡಿದೆನು. ಆ ಭಾಗದಲ್ಲಿ ೧೧೦೦ ರೂ. ಗಳು ಈ ಕಾರ್ಯಕ್ಕೆ ಕೆಲವು ಮಹಾಶಯರಿಂದ ಸಹಾಯಾರ್ಥವಾಗಿ ದೊರೆತವು. ಮಹಗಾವದ ಶ್ರೀ ಸಿದ್ಧಾಂತಿ ರುದ್ರಾರಾಧ್ಯಶಾಸ್ತ್ರಿಗಳವರು ಈ ಕಾಯಕ್ಕೆ ತುಂಬಾ ಸಹಾಯಮಾಡಿ ತಮ್ಮ ಹೆಸರಿನಿಂದ ಸರಕಾರದ ಒಪ್ಪಿಗೆಯನ್ನು ಹೊಂದಿದರು. ಅವರೂ ಪ್ರಿಯ ಶಿವಲಿಂಗಣ್ಣನೂ ಹಣವನ್ನು ಹಾಕಿ ಈಗ ಅದನ್ನು ನಡೆಸುತ್ತಿದ್ದಾರೆ.

ವಿಜಾಪೂರದ ಶ್ರೀ ಪಿ. ಜಿ. ಹಳಕಟ್ಟಿಯವರು ಬಸವಾದಿ ಪ್ರಮಥರ ವಚನಗಳನ್ನು ಪ್ರಕಾಶಕ್ಕೆ ತಂದು ಕನ್ನಡ ನಾಡಿಗೆ ಮಹತ್ತರವಾದ ಉಪಕಾರವನ್ನು ಮಾಡಿದ್ದಾರೆ. ಇವರು ಕಳೆದ ಹತ್ತಾರು ವರುಷ ಪರಿಶೋಧಿಸಿಟ್ಟ ಹಿಂದಣ ವಚನಕಾರರ ಅನೇಕ ವಚನಗಳು ಅಚ್ಚಾಗಿರಲಿಲ್ಲ. ಅದಕ್ಕೆ ಹಣವಿನ ಕೊರತೆಯೇ ಮುಖ್ಯವೆಂದು ಒಂದು ದಿನ ಅವರಲ್ಲಿ ಸಂಭಾಷಿಸುವಾಗ ಗೊತ್ತಾಯಿತು.

ಆಗ ಆ ಎಲ್ಲ ಪರಿಶೋಧಿಸಿಟ್ಟ ವಚನಗಳ ಮುದ್ರಣಕ್ಕೆ ಬೇಕಾಗಬಹುದಾದ ಕಾಗದದ ವೆಚ್ಚಕ್ಕೆ ವಿಜಾಪೂರ ಜಿಲ್ಲೆಯ ಕೆಲವು ಸ್ಥಳಗಳಿಗೆ ಹೋಗಿ ೧೫ ದಿವಸ ಪ್ರಯತ್ನಿಸಿ ೭೭೦ರೂ. ಗಳನ್ನು ಕೂಡಿಸಿದೆನು. ಈ ಹಣವನ್ನು ಶ್ರೀಮಾನ್ ಹಳಕಟ್ಟಿಯವರಿಗೆ ಸಮರ್ಪಿಸುವ ಸಮಾರಂಭವು ಇಂಥ ಸಾರ್ವಜನಿಕ ಕಾರ್ಯಗಳಲ್ಲಿಯೇ ತೊಡಗಿರುವ ರಿ. ಸ. ಜಜ್ ಶ್ರೀ ಹಾಲಭಾವಿ ವೀರಭದ್ರಪ್ಪನವರ ಹಸ್ತದಿಂದ ಬಾಗಲಕೋಟೆಯಲ್ಲಿ ತಾ. ೨೬.೦೮.೧೯೩೫ ನೆಯ ದಿವಸ ಜರುಗುವಂತೆ ಮಾಡಿದೆನು.

ಈಗಿನ ಕಾಲದಲ್ಲಿ ಸ್ತ್ರೀ ಸಮಾಜವು ಜಾಗೃತವಾಗಬೇಕಾಗಿದೆ. ವೀರಶೈವ ಸಮಾಜದ ಮಹಿಳೆಯರಂತೂ ಮುಂದೆ ಬರುವುದು ಅತ್ಯಗತ್ಯ. ಅದಕ್ಕಾಗಿ ಅಕ್ಕಮಹಾದೇವಿಯ ಸ್ಮಾರಕೋತ್ಸವವನ್ನು ಪ್ರಚಾರದಲ್ಲಿ ತಂದರೆ ಮಹಿಳೆಯರ ಜಾಗೃತಿಗೆ ಎಷ್ಟೋ ಸಹಾಯವಾಗಬಹುದೆಂದು ಚೈತ್ರ ಶುದ್ಧ ಹುಣ್ಣಿಮೆಯು ಅಕ್ಕನ ಹುಣ್ಣಿಮೆಯೆಂದು ತಿಳಿದು ಆಚರಿಸಬೇಕಾಗಿ ೧೯೩೫ರಲ್ಲಿ **ಶರಣ ಸಂದೇಶ**ದಲ್ಲಿ ಪ್ರಕಟಿಸಿದೆನು. ಅಕ್ಕನ ವಚನಗಳಲ್ಲಿ ಆ ಮಹಾತ್ಮಳು ಶ್ರೀಶೈಲಕ್ಕೆ ಹೋಗುವಾಗ ವಸಂತ ಋತು ಇದ್ದಿತೆಂದು ಸ್ಪಷ್ಟ ತೋರುತ್ತದೆ. ಆದ ಕಾರಣ ಆ ಹುಣ್ಣಿಮೆಯು ಸುಸಂಗತವಾಗಿಯೂ ಹೆಣ್ಣು ಮಕ್ಕಳಿಗೆ ಅನುಕೂಲವಾದುದಾಗಿಯೂ ಇದೆ. ಎರಡೇ ವರುಷಗಳಲ್ಲಿ ಅನೇಕ ಕಡೆ ಈ ಅಕ್ಕನ ಹುಣ್ಣಿಮೆಯು ಜರುಗಿದುದನ್ನು ನೋಡಿದರೆ ಹತ್ತಾರು ವರುಷಗಳಲ್ಲಿ ಇದೊಂದು ಹೆಣ್ಣು ಮಕ್ಕಳ ಜಾಗೃತಿಗೆ ಅನುಕೂಲವಾದ ಪ್ರಸಂಗವಾಗಿಯೇ ಪರಿಣಮಿಸಬಹುದು.

ನಿಜಾಮ ಪ್ರಾಂತವು ಶಿಕ್ಷಣಾದಿ ಆಧುನಿಕ ಸುಧಾರಣೆಗಳಲ್ಲಿ ಬ್ರಿಟಿಷ್ ಹಿಂದುಸ್ಥಾನಕ್ಕಿಂತ ಬಹು ಹಿಂದುಳಿದಿದೆ. ಆ ಭಾಗದ ವೀರಶೈವರು ಸಂಖ್ಯೆಯಲ್ಲಿಯೂ ಸಂಪತ್ತಿನಲ್ಲಿಯೂ ಎಷ್ಟೋ ಮುಂದಿದ್ದರೂ ಶಿಕ್ಷಣವಿಲ್ಲದ್ದರಿಂದ ಬಹು ನಷ್ಟಕಷ್ಟಗಳಿಂದ ಜೀವಿಸಬೇಕಾಗಿದೆ. ಅಲ್ಲಿ ಮುಸಲ್ಮಾನರು ಪ್ರಾಬಲ್ಯ ಹೆಚ್ಚು. ಆರ್ಯ ಸಮಾಜವು ಮಾತ್ರ ಆ ಭಾಗದಲ್ಲಿ ಅವರ ಉಪಟಳವನ್ನು ಎಷ್ಟೋ ತಡೆಯುತ್ತದೆ. ಉದ್ಗಿರಿ ಎಂಬ ಸ್ಥಳವು ಅವರಿಗೆ ಆ ಭಾಗದಲ್ಲಿ ಬಹು ಅನುಕೂಲವಾದುದಾಗಿತ್ತು. ಅಲ್ಲಿಯ ಶ್ರೀ ವಕೀಲ ಸಂಗ್ರಾಮಪ್ಪನವರೇ ಮೊದಲಾದ ವೀರಶೈವ ವಿದ್ವಾನ್ ಮುಂದಾಳುಗಳು ಆರ್ಯ ಸಮಾಜದವರ ಕಾರ್ಯಕ್ಕೆ ತುಂಬಾ ಸಹಾಯಕರಾಗಿದ್ದರು. ಅಲ್ಲಿಯ ಶ್ರೀ ಬನಸಿಲಾಲ ಮತ್ತು ಶ್ರೀ ಶಾಮಲಾಲ ಎಂಬ ಆರ್ಯ ಸಮಾಜದ ಮುಂದಾಳುಗಳು ವೀರಶೈವರನ್ನೂ ಆರ್ಯ ಸಮಾಜದಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಿದರು. ಬಸವಣ್ಣನವರನ್ನೂ ಲಿಂಗಪೂಜೆಯನ್ನೂ ಅಲ್ಲಗಳೆಯುವುದಾಗಿ ಪ್ರಕಟವಾಯಿತು. ಇದರ ವಿರುದ್ಧವಾಗಿ **ಶರಣ ಸಂದೇಶ**ದಲ್ಲಿ ಕೆಲವು ಲೇಖನಗಳನ್ನು ೧೯೩೫ರಲ್ಲಿ ಬರಯಲು ವೀರಶೈವ ಸಮಾಜದಲ್ಲಿ ಬಹು ಜಾಗೃತಿಯುಂಟಾಗಿ ಅನೇಕ ಪ್ರಮುಖ ಸ್ಥಳಗಳಲ್ಲಿ ನಿಷೇಧಪರ ಸಭೆಗಳಾದವು. ಆಗ ಇದೊಂದು ಮಹತ್ವದ ಚರ್ಚೆಯಾಗಿಯೇ ಇದ್ದಿತು. ಕೊನೆಗೆ ಅವರು ನಾವು ಬಸವೇಶನನ್ನು ದೋಷಿಸಿಲ್ಲ ಮತ್ತು ದೋಷಿಸುವುದೂ ಇಲ್ಲ ಎಂದು ತಿಳಿಸಿದನಂತರ ಈ ಚಟುವಟಿಕೆಯು ನಿಂತಿತು. ಮೂವತ್ತು ವರುಷಗಳ ಪೂರ್ವದಲ್ಲಿ ಯಾವ ಆರ್ಯ ಸಮಾಜದ ಗುಣವಿಶಿಷ್ಟ ಚತುರ್ವರ್ಣಗಳು ವೀರಶೈವರ ಸಾಮಾಜಿಕ ರೀತಿಗಳಿಗಿಂತ ಶ್ರೇಷ್ಠವೆಂದು ನನಗೆ ತೋರಿದ್ದವೋ ಅವೇ ಈಗ ವೀರಶೈವ ತತ್ವಗಳಿಗಿಂತ ಕೀಳಾಗಿ ತೋರಿದವು. ಏಕೆಂದರ, ಬಸವಣ್ಣನವರು ಗುಣವಿಶಿಷ್ಟ ವರ್ಣಗಳನ್ನೂ ತೆಗೆದು ಹಾಕಿ ಲಿಂಗಾಂಗಿಗಳೆಲ್ಲಾ ಒಂದೇ ಎಂದೂ ಸಮಾನರೆಂದೂ ನುಡಿದು ಆ ಪ್ರಕಾರ ನಡೆದದ್ದು ಗೊತ್ತಾಯಿತು ಎಂದ ಮೇಲೆ ಈ

ಉದಾತ್ತ ತತ್ವವನ್ನು ಬಿಟ್ಟು ಸಂಕುಚಿತವಾಗಿ ವರ್ಣವಿಶಿಷ್ಟ ಆರ್ಯ ಸಮಾಜಕ್ಕೆ ಜನರು ಹೋಗುವುದು ಅಹಿತಕರವೇ ಸರಿ.

ನಾನು ಎಂದೂ ಕೋರ್ಟು ಕಚೇರಿಗಳಿಗೆ ಹೋದವನಲ್ಲ. ಅಥವಾ ಪಂಚಾಯತಿ ಮಾಡಿದವನಲ್ಲ, ಕರ್ನಾಟಕ ವಣಿಕ ಸಂಘದಲ್ಲಿ ಭಿನ್ನಾಭಿಪ್ರಾಯಗಳಿಂದ ವ್ಯಾಜ್ಯವುಂಟಾಗಿ ಅದು ಗದುಗಿನ ಕೋರ್ಟಿಗೆ ಹೋಗಿತ್ತು. ಸಾರ್ವಜನಿಕ ಹಿತದೃಷ್ಟಿಯಿಂದ ಇದು ಒಳ್ಳೆಯದಾಗಿರಲಿಲ್ಲ. ಅದಕ್ಕಾಗಿ ಈ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಜಂಗಿನ ಮುರಿಗಯ್ಯನವರು ಶ್ರೀ ಬಳ್ಳಾರಿ ವೀರಭದ್ರಪ್ಪನವರು ಮತ್ತು ಆ ಸಂಘದ ಸದಸ್ಯರಾದ ಶ್ರೀ ಗದಗಿನ ಕುಬೇರಪ್ಪನವರು ನಾನು ಹೇಳುವಂತೆ ವ್ಯಾಜ್ಯ ತೀರಿಸಿಕೊಳ್ಳುವುದಾಗಿ ಹೇಳಿದ್ದರಿಂದ ನಾನು ಇದಕ್ಕಾಗಿ ಅನೇಕ ಸಾರೆ ಗದಗಿಗೆ ಹೋಗಿ ೧೯೩೬ನೆಯ ಮೇ ತಿಂಗಳಲ್ಲಿ ವ್ಯಾಜ್ಯ ಮುಂದವರಿಯದಂತೆ ತೀರ್ಮಾನ ಮಾಡಿದೆನು.

ಸಾರ್ವಜನಿಕ ಕಾರ್ಯ ಮಾಡುವವರು ತಮ್ಮ ಹಕ್ಕು ಪ್ರತಿಷ್ಠೆಗಳ ಕಡೆಗೆ ಲಕ್ಷಿಸಬಾರದೆಂಬ ಮಾತಿನ ನಿಜತ್ವವನ್ನು ನಾನು ಆಗ ಅನುಭವದಿಂದಲೂ ಕಂಡುಕೊಂಡೆನು ಪಂಚನಾದ ನಾನೇ ಆಗ ಬಾಗಿ ನಡೆದದ್ದರಿಂದ ಅದು ತೀರ್ಮಾನವಾಯಿತು. ನಾನು ಪಂಚನಾಗಿದ್ದೇನೆಂದು ನನ್ನ ಹಕ್ಕು ಪ್ರತಿಷ್ಠೆಗ ಕಡೆಗೆ ಲಕ್ಷಿಸಿ ನಡೆದಿದ್ದರೆ ಅದು ತೀರ್ಮಾನವಾಗದೆ ವ್ಯಾಜ್ಯ ಮುಂದುವರಿಯುತ್ತಿದ್ದಿತು.

ಈ ಪ್ರಕಾರ ೧೯೦೬ನೆಯ ಮೇ ತಿಂಗಳಿಂದ ೧೯೩೬ನೆಯ ಮೇ ತಿಂಗಳ ಕೊನೆಯವರೆಗಿನ ನನ್ನ ಸಾರ್ವಜನಿಕ ಕಾರ್ಯಗಳ ಮುಖ್ಯ ವರದಿಯಿದೆ. ಇದರಲ್ಲಿಯ ಗುಣ ದೋಷಗಳನ್ನು ವಿಮರ್ಶಿಸಿ ಗುಣವಾಗಿರುವವುಗಳನ್ನು ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿರುವವರಿಗೆ ತಿಳಿಸಿದ್ಧಾದರೆ ಅದೇ ಈ ನನ್ನ ಕಾಣಿಕೆಗೆ ಬಂದ ಫಲ.

ನನ್ನ ಕೆಲವು ವಿಚಾರಗಳು :

ನನ್ನ ಈ ವರೆಗಿನ ಸಾರ್ವಜನಿಕ ಕಾರ್ಯಗಳಿಗೆ ಸಂಬಂಧಿಸಿರುವ ಧಾರ್ಮಿಕ, ಸಾಮಾಜಿಕ, ನೈತಿಕ ಮತ್ತು ರಾಜಕೀಯ ವಿಷಯಗಳಲ್ಲಿ ನಾನು ಯಾವ ವಿಧ'ವಾದ ಅಭಿಪ್ರಾಯವುಳ್ಳವನಾಗಿದ್ದೆನೆಂಬುದೂ ನನ್ನ ಸಹಾಯಕರಾದ ಮಹಾಶಯರಿಗೆ ಸ್ವಲ್ಪ ಗೊತ್ತಿರುವುದು ಯುಕ್ತವೆಂದು ತಿಳಿದು ಇಲ್ಲಿ ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ಈ ಎಲ್ಲ ವಿಷಯಗಳನ್ನು ಕುರಿತು ನಾನು ಬೇರೆ ಬೇರೆ ಪುಸ್ತಕಗಳನ್ನು ಬರೆಯುವವನಿದ್ದೇನೆ. ಅವುಗಳಲ್ಲಿ ನನ್ನ ಅಭಿಪ್ರಾಯಗಳು ವಿವರವಾಗಿ ತಿಳಿಸಲ್ಪಡುವವು.

ಧಾರ್ಮಿಕ : ದೇವರು, ಪುನರ್ಜನ್ಮ, ಸ್ವರ್ಗ, ನರಕ, ಪುಣ್ಯ, ಪಾಪ ಈ ಮುಂತಾದ ಅಪ್ರತ್ಯಕ್ಷ ಸಂಗತಿಗಳನ್ನು ಮಾತ್ರ ನಾನು ಧಾರ್ಮಿಕ ವಿಷಯವೆಂಬುದರಲ್ಲಿ ಪರಿಗಣಿಸಿದ್ದೇವೆ. ದೇವರ ವಿಷಯವು ಮನುಷ್ಯ ಪ್ರಾಣಿಗೆ ಎಂದೂ ತಿಳಿದಿಲ್ಲ. ತಿಳಿಯುವುದೂ ಇಲ್ಲ ಎಂದೇ ನನ್ನ ತಿಳುವಳಿಕೆ. ಈ ಸಂಗತಿಯು ಎಂತಹ ಜ್ಞಾನಿಗಳಿಗಾದರೂ ಅವರವರ ಬುದ್ಧಿ ಮತ್ತು ಭಾವನೆಗಳಂತೆಯೇ ವೇದ್ಯವಾಗತಕ್ಕದ್ದಾಗಿದೆ.

ಆದಕಾರಣ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವೇ ಸತ್ಯವೆಂದು ವಾದಿಸುವುದಾಗಲಿ ಅಥವಾ ಅನ್ಯರೂ ತಿಳಿಯಬೇಕೆಂಬುದಾಗಲಿ ನನಗೆ ಸಮ್ಮತವಿಲ್ಲ. ಈ ಸಂಗತಿಯ ಸತ್ಯಾಸತ್ಯತೆಗಳನ್ನು

ಕುರಿತು ನಾನು ಯೋಚಿಸುವುದನ್ನು ಬಿಟ್ಟಿದ್ದೇನೆ. ನಾನು ಈ ವಿಷಯದಲ್ಲಿ ಆಜ್ಞೇಯವಾದಿಯು, ಹರ್ಬರ್ಟ ಸ್ಪೆನ್ಸರರ ಗ್ರಂಥಗಳಿಂದ ನನಗೆ ಈ ಆಜ್ಞೆಯವಾದವು ಯುಕ್ತವೆಂದು ತೋರಿತು.

ಭಗವದ್ಗೀತೆ ಮತ್ತು **ಬಸವಣ್ಣನವರ ವಚನ** ಇವೇ ನನಗೆ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಹೆಚ್ಚು ಒಪ್ಪಿಗೆಯಾಗಿರತಕ್ಕ ಗ್ರಂಥಗಳು. ನಾನು ನಿರ್ಧರಿಸಿಕೊಂಡ ಅಭಿಪ್ರಾಯಕ್ಕೆ ಅನುಗುಣವಾದ ಈ ಗ್ರಂಥಗಳಲ್ಲಿಯ ವಾಕ್ಯಗಳನ್ನು ನಾನು ಆಧಾರವಾಗಿ ಇಟ್ಟುಕೊಂಡಿದ್ದೇನೆ. ಈ ಆಜ್ಞೆಯವಾದವನ್ನೇ **ಭಗವದ್ಗೀತೆ**ಯ ಈ ಕೆಳಗಿನ ಶ್ಲೋಕವು ಸೂಚಿಸುತ್ತದೆಂದು ನನ್ನ ದೃಢನಂಬಿಕೆ.

ನ ಮೇ ವಿದುಃ ಸುರಗಾಣಾಃ ಪ್ರಭವಂ ನ ಮಹರ್ಷಯಃ
ಅಹಮಾ ದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ

ಅರ್ಥ: ದೇವತೆಗಳಾಗಲಿ, ಮಹರ್ಷಿಗಳಾಗಲಿ, ನನ್ನ ಉತ್ಪತ್ತಿ ಹೇಗಾಯಿತ್ತೆಂಬುದನ್ನು ಅರಿಯರು. ಏಕೆಂದರೆ ಎಲ್ಲ ದೇವತೆಗಳ ಮತ್ತು ಮಹರ್ಷಿಗಳ ಆದಿ ಕಾರಣವು ನಾನೇ ಆಗಿದ್ದೇನೆ.

ನ ಕರ್ತೃತ್ವಂನ ಕರ್ಮಾಣಿ ಲೋಕಸ್ಯ ಸೃಜತಿ ಪ್ರಭುಃ
ನ ಕರ್ಮ ಫಲಸಂಯೋಗಂ ಸ್ವಭಾವಸ್ತು ಪ್ರವರ್ತತೇ

ಅರ್ಥ: ಜನರ ಕರ್ತೃತ್ವ, ಕರ್ಮ, ಅದರ ಫಲ, ಮತ್ತು ಅವುಗಳ ಸಂಯೋಗ ಇವುಗಳೆಲ್ಲಾ ದೇವರೇನೋ ಉಂಟುಮಾಡುವುದಿಲ್ಲ. ಪ್ರಕೃತಿಯ ಸ್ವಭಾವದಿಂದಲೇ ಇವೆಲ್ಲ ನಡೆಯುತ್ತವೆ.

ದೇವರು ಮನುಷ್ಯನಿಗಾಗಿ ಕೆಲವು ನಿಯಮಗಳನ್ನು ವೇದಾದಿ ಗ್ರಂಥಗಳಲ್ಲಿ ಹೇಳಿದ್ದಾನೆಂತಲೂ ಅವುಗಳಂತೆ ನಡೆದರೆ ಸುಖ ಮತ್ತು ಸ್ವರ್ಗಗಳು ದೊರೆಯುತ್ತವೆಂತಲೂ ಅವುಗಳಿಗೆ ವಿರೋಧವಾಗಿ ಆಚರಿಸಿದರೆ ದುಃಖ ಮತ್ತು ನರಕ ಸಂಭವಿಸುತ್ತವೆಂತಲೂ ನಾನು ತಿಳಿದಿಲ್ಲ. ಮೇಲಣ ಗೀತಾ ವಾಕ್ಯವು ಇದೇ ಅಭಿಪ್ರಾಯವನ್ನು ಹೇಳುತ್ತದೆಂದೇ ನನ್ನ ತಿಳುವಳಿಕೆ.

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿಭೋ,
ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ ಅನಾಚಾರವೇ ನರಕ.
ಕೂಡಲ ಸಂಗಮದೇವಾ ನೀವೇ ಪ್ರಮಾಣ.

ಎಂಬ ಬಸವಣ್ಣನವರ ವಚನವು ನನ್ನ ಅಭಿಪ್ರಾಯವನ್ನು ಬಲಪಡಿಸುತ್ತೆಂದು ನಾನು ತಿಳಿದಿದ್ದೇನೆ.

ನನ್ನ ವಿಚಾರವು ಹೀಗಿದ್ದ ಮೇಲೆ ನಾನು ಮಾಡುವ ಲಿಂಗ ಪೂಜೆಯು ತೋರಿಕೆಗಾಗಿದೆಯೆಂದೇ ಗ್ರಹಿಕೆಯಾಗಬಹುದು. ಆದರೆ ಹಾಗೇನೂ ಇಲ್ಲ. ಆ ವಿಚಾರದಲ್ಲಿ ನಾನೊಂದು ತೀರ್ಮಾನಕ್ಕೆ ಬಂದುಬಿಟ್ಟಿದ್ದೇನೆ. ಲಿಂಗವೆಂದರೆ ನಮಗೆ ತೋರುವ ಈ ವಿಶ್ವದ ಒಂದು ಚಿಹ್ನ. ವಿಶ್ವದ ಅನುಸಂಧಾನವೇ ಲಿಂಗಪೂಜೆ. ಲಿಂಗ ಮೂಲಕವಾಗಿ ವಿಶ್ವ ಭಾವನೆಯನ್ನು ಬಲಿಸಿ ಮನಸ್ಸು ಅದರಲ್ಲಿ ಬೆರತುಹೋಗುವಂತೆ ಮಾಡುವುದೆ ಲಿಂಗಪೂಜೆಯ ಫಲ.

ಜಗದಗಲ ಮುಗಿಲಗಲ, ಮಿಗೆಯಗಲ, ನಿಮ್ಮಗಲ,
ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿಂದತ್ತತ್ತ ನಿಮ್ಮ ಶ್ರೀಮುಕುಟ

ಅಗಮ್ಯ, ಅಪ್ರಮಾಣ, ಅಗೋಚರ, ಅಪ್ರತಿಮ ಲಿಂಗವೇ.
ಕೂಡಲಸಂಗಮದೇವಯ್ಯ ಎನ್ನ ಕರಸ್ಥಳಕ್ಕೆ ಬಂದು ಚುಳುಕಾದಿರಯ್ಯ.

ಎಂಬ ಬಸವಣ್ಣನವರ ವಚನವು ನನ್ನ ಲಿಂಗಪೂಜೆಯ ಗುಟ್ಟು. ಈ ಕೆಳಗಿನ ವಚನವು ಲಿಂಗಪೂಜೆಯ ಫಲವನ್ನು ಸೂಚಿಸುವುದೆಂದು ನನ್ನ ತಿಳಿವಳಿಕೆ.

ಜಗವು ಸುತ್ತಿಪ್ಪುದು ನಿನ್ನ ಮಾಯೆಯಯ್ಯಾ,
ನಿನ್ನ ಸುತ್ತಿಪ್ಪುದು ಎನ್ನ ಮನ ನೋಡಯ್ಯ
ಜಗಕ್ಕೆ ಬಲ್ಲಿದ ನೀನು, ಆನು ನಿನಗೆ ಬಲ್ಲಿದನು ಕಂಡಯ್ಯ
ಕರಿಯು ಕನ್ನಡಿಯೊಳಡಗಿದಂತಯ್ಯ,
ಎನ್ನೊಳಗೆ ನೀನಡಗಿದೆ ಕೂಡಲಸಂಗಮದೇವ.

ಮಹಾ ಶರಣರಾಗಿದ್ದ ಕಡಕೋಳ ಮಡಿವಾಳಪ್ಪನವರು ಹಾಡಿದ ಈ ಕೆಳಗಿನ ಪದ್ಯ ನನ್ನ ಪೂಜೆಗೆ ಬಹು ಪ್ರಿಯವಾದುದು.

ತನ್ನ ತಾ ತಿಳಿದ ಮೇಲೆ। ಇನ್ನೇ ನಿನ್ನೇನು?
ತನ್ನಂತೆ ತಾ ಸರ್ವವು ಜೀವ। ಮನ್ನಿಸಿ ಮೂಕಾದ ಮೇಲೆ

ತಾನೆ ಪೃಥ್ವಿ ಅಪ್ಪು ತೇಜ। ತಾನೆ ವಾಯು ಆಕಾಶಾತ್ಮಾ।
ತಾನೇ ಸೂರ್ಯ ಚಂದ್ರ ತಾರೆ। ತಾನೇ ಬ್ರಹ್ಮಾಂಡ ಮೇಲೆ॥

ಈ ಎರಡು ವಚನ, ಈ ಪದ್ಯ ಮತ್ತು ಶ್ರೀ ಶಿವಯೋಗಿಗಳು ಭಾವಲಿಂಗದ ಸಂಬಂಧವಾಗಿ ಹಾಡಿದ ಪದ. ಇವೇ ನನ್ನ ಲಿಂಗ ಪೂಜೆಯ ಮಂತ್ರ, ಸ್ತೋತ್ರ, ಜಪಾದಿಗಳು.

ಪುನರ್ಜನ್ಮದ ವಿಚಾರವಾಗಿ ನನ್ನ ತಿಳುವಳಿಕೆ ಹೀಗಿದೆ. ಮರಣೋತ್ತರ ಜೀವದ ಅಸ್ತಿತ್ವವೇ ನಷ್ಟವಾಗುತ್ತದೆಂದಾಗಲಿ ಅಥವಾ ಅದು ತನ್ನ ವಾಸನೆಯಂತೆ ಮತ್ತೊಂದು ದೇಹವನ್ನು ಧರಿಸುತ್ತದೆಂದಾಗಲಿ ನಾನು ತಿಳಿಯುವುದಿಲ್ಲ. ಊದಿನಕಟ್ಟಿಯು ಸಂಪೂರ್ಣ ಸುಟ್ಟುಹೋದಮೇಲೆ ಕೂಡಾ ಅದು ಮೊದಲು ಎಷ್ಟು ಸುಗಂಧದಿಂದ ಹೆಚ್ಚು ಲೇಪಿತವಾದುದಾಗಿದ್ದಿತೋ ಅಷ್ಟುಕಾಲ ಹೆಚ್ಚು ಹೀಗೆ ವಾತಾವರಣದಲ್ಲಿ ಅದೃಶ್ಯವಾಗಿರುತ್ತದೆಯೋ ಹಾಗೆಯೇ ಜೀವವು ಈ ದೇಹದಲ್ಲಿ ಎಷ್ಟು ಹೆಚ್ಚು ವಾಸನಾಯುಕ್ತವಾದುದಾಗಿರುತ್ತದೆಯೋ ಅಷ್ಟು ಹೆಚ್ಚು ಕಾಲ ದೇಹವನ್ನು ಬಿಟ್ಟ ಮೇಲೆ ವಾತಾವರಣದಲ್ಲಿ ಸೂಕ್ಷ್ಮ ತನುವಿನಲ್ಲಿದ್ದು ಕೊನೆಗೆ ಆಯಾಯ ತತ್ವಗಳಲ್ಲಿ ಬೆರೆತುಹೋಗುತ್ತದೆ.

ನಿರ್ವಿಷಯಿಯಾದ ಜೀವವು ದೇವಹನ್ನು ಬಿಟ್ಟೊಡನೆಯೇ ವಿಶ್ವದಲ್ಲಿ ಬೆರೆತುಹೋಗುವುದು. ವಿಶ್ವ ತತ್ವಗಳಲ್ಲಿ ಜೀವವು ಹಾಗೆ ಬೆರೆಯುವುದಕ್ಕೆ ಮನಸ್ಸು ವಿಶ್ವಾನುಸಂಧಾನದಲ್ಲಿಯೇ ನಿರತವಾಗಬೇಕು. ಬಸವಾದಿ ಶಿವಶರಣರು ಇದೇ ತತ್ವವನ್ನು ಬೋಧಿಸಿದ್ದಾರೆಂದು ನನ್ನ ತಿಳುವಳಿಕೆ. ಲಿಂಗಾಯತ ಮತತತ್ವದಂತೆ ನಡೆದವರಿಗೆ ಪುನರ್ಜನ್ಮವಿಲ್ಲವೆಂದು ಹೇಳುತ್ತಿರುವುದರ ಅಭಿಪ್ರಾಯವು ಹೀಗೆಂದೇ ನನ್ನ ಗ್ರಹಿಕೆ. ಬಸವಣ್ಣನವರ ಈ ಕೆಳಗಿನ ವಚನವು ಪುನರ್ಜನ್ಮದ ನನ್ನ ತಿಳುವಳಿಕೆಯನ್ನು ದೃಢಗೊಳಿಸಿತು.

ದೇವಲೋಕ ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕ ಕೇವಲ ಶರಣನಾಗಲರಿಯೆ.
ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ ಕೂಡಲ ಸಂಗಮದೇವ.

ಅಪ್ರತ್ಯಕ್ಷವಾದ ಈ ಧಾರ್ಮಿಕ ಸಂಗತಿಗಳೆಲ್ಲಾ ವೈಯಕ್ತಿಕವಾದವುಗಳೆಂದೇ ನನ್ನ ತಿಳುವಳಿಕೆ. ಅಯಾಯ ವ್ಯಕ್ತಿಗಳ ಬುದ್ಧಿ, ಭಾವನೆ, ಮನಸ್ಸಿನ ಮೇಲಾದ ಸಂಸ್ಕಾರಗಳಿಗೆ ಸಂಬಂಧವಾಗಿದೆ. ಆದಕಾರಣ ಇವುಗಳ ವಿಷಯದಲ್ಲಿ ಹೀಗೆಯೇ ತಿಳಿಯಬೇಕೆಂದು ಆಗ್ರಹ ಮಾಡದೆ ಪರರ ಧಾರ್ಮಿಕ ಆಚಾರ ವಿಚಾರಗಳ ವಿಷಯದಲ್ಲಿ ಸಹಿಷ್ಣುತೆಯಿರಬೇಕಾದುದು ಅತ್ಯಗತ್ಯವೆಂದೇ ನಾನು ತಿಳಿದಿದ್ದೇನೆ. ಆದರೆ ಯಾವುದೊಂದು ವ್ಯಕ್ತಿಯ ಧಾರ್ಮಿಕ ಭಾವನೆ ಮತ್ತು ಆಚಾರ ವಿಚಾರಗಳು ಅನ್ಯರಿಗಾಗಲಿ ಅಥವಾ ಅನ್ಯಪ್ರಾಣಿಗಳಿಗಾಗಲಿ ಯಾವ ವಿಧವಾದ ತೊಂದರೆಯನ್ನು ಮಾತ್ರ ಉಂಟುಮಾಡಕೂಡದು.

ಸಾಮಾಜಿಕ : ಮನುಷ್ಯನಿಗೆ ಜಗತ್ತಿನ ಎಲ್ಲ ಸುಖ ಸೌಲಭ್ಯಗಳನ್ನೂ ಅನುಭವಿಸಲು ಸಮಾನವಾದ ಅಧಿಕಾರವಿರಬೇಕು. ದೇಶ, ಜಾತಿ, ಪಂಥಗಳ ವ್ಯತ್ಯಾಸಗಳಿಂದ ಆತನು ಜನಾಂಗದಲ್ಲಿ ವಾಸಿಸಲು ಹೆಚ್ಚು ಕಡಿಮೆ ಅಧಿಕಾರಗಳುಳ್ಳವನಾಗಬಾರದು. ಸ್ತ್ರೀ ಪುರುಷರಲ್ಲಿ ಸಮಾನವಾದ ಧಾರ್ಮಿಕ, ಸಾಮಾಜಿಕ ಸ್ವಾತಂತ್ರ್ಯಗಳಿರಬೇಕು. ಜನ್ಮದಿಂದ ಒಂದು ವ್ಯಕ್ತಿ ಮೇಲು, ಇನ್ನೊಂದು ಕೀಳೆಂದು ತಿಳಿಯಕೂಡದು. ಹಿಂದುಗಳಲ್ಲಿರುವ ಜನ್ಮವಿಶಿಷ್ಟ ಜಾತಿಗಳಾಗಲಿ ಬ್ರಾಹ್ಮಣಾದಿ ವರ್ಣಗಳಾಗಲಿ ಸಮಂಜಸವಾದವುಗಳಲ್ಲ, ಅವು ಜನಾಂಗಕ್ಕೆ ಹಿತಕರವೂ ಇಲ್ಲ. ಭಗವದ್ಗೀತೆಯಲ್ಲಿರುವ ಚತುರ್ವರ್ಣಗಳನ್ನು ತೆಗೆದುಹಾಕಿದುದು ಮಹಾಕಾರ್ಯವೆಂದೇ ನನ್ನ ತಿಳಿವಳಿಕೆ.

ಅಂತೆಯೇ ಬಸವಣ್ಣನವರ ಈ ಕೆಳಗಿನ ವಚನವು ಸಾಮಾಜಿಕ ವಿಷಯದಲ್ಲಿ ಬಹು ಮಹತ್ವದ್ದೆಂದೂ ಅಮರವಾದುದೆಂದೂ ನನ್ನ ತಿಳುವಳಿಕೆ.

ಅಪ್ಪನು ನಮ್ಮ ಮಾದಾರ ಚೆನ್ನಯ್ಯ.
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ.
ಚಿಕ್ಕಯ್ಯ ನಮ್ಮಯ್ಯ ಕಾಣೀರಯ್ಯಾ.
ಅಣ್ಣನು ನಮ್ಮ ಕಿನ್ನರಿಯ ಬೊಮ್ಮಯ್ಯ
ಎನ್ನನೇಕರಿಯಿರಿ ಕೂಡಲಸಂಗಮದೇವ?

ಹಿಂದು ಜನಾಂಗದ ಮತ್ತು ಹಿಂದುಸ್ಥಾನದ ಈಗಿನ ಶೋಚನೀಯ ಸ್ಥಿತಿಗಳಿಗೆ ಹಿಂದು ಸಮಾಜದಲ್ಲಿರುವ ವರ್ಣ ಕಲ್ಪನೆ ಮತ್ತು ಜಾತಿಗಳು ಮುಖ್ಯ ಕಾರಣವಾಗಿವೆ. ಇವು ಅಳಿದು ಹೋಗಬೇಕು. ಹಾಗಾಗಲು ಜನರಲ್ಲಿ ವಿಚಾರಕ್ರಾಂತಿಯನ್ನುಂಟುಮಾಡುವುದೇ ಮುಖ್ಯ ಪ್ರಯತ್ನ. ಒಂದೊಂದು ಜಾತಿ ಮತಗಳಲ್ಲಿರುವ ಒಳಭೇದಗಳನ್ನು ಮೊದಲು ಕಳೆಯುವುದು ಹೆಚ್ಚು ಅನುಕೂಲ. ಊಟೋಪಚಾರ ಮತ್ತು ಶರೀರ ಸಂಬಂಧಗಳು ಐಚ್ಛಿಕ ವಿಷಯಗಳಾಗಿರಬೇಕು. ಆದರೆ ಅವು ಶಾರೀರಿಕ ಮಾನಸಿಕ ಉನ್ನತಿಗಳಿಗೆ ವಿಘಾತಕವಾದವುಗಳು ಮಾತ್ರ ಇರಕೂಡದು. ಇದೇ ಆಚಾರದ ಗುಟ್ಟು.

ನೈತಿಕ : ಮನುಷ್ಯನು ಜನಾಂಗದಲ್ಲಿ ಸುಖ ಶಾಂತಿಗಳಿಂದ ಜೀವಿಸಲು ಅವಶ್ಯಕವಾಗಿರತಕ್ಕ ನಡವಳಿಕೆಗಳೆಲ್ಲಾ ನೀತಿಗೆ ಸಂಬಂಧಪಟ್ಟಿವೆ. ಇವುಗಳಲ್ಲಿ ದಯವೇ ಮುಖ್ಯವೆಂದು ನನ್ನ ತಿಳುವಳಿಕೆ. ಅಂತೆಯೇ ಬಸವಣ್ಣನವರು ಈ ಕೆಳಗಿನ ವಚನ ನನಗೆ ಬಹು ಮಾನ್ಯವಾದುದು.

ದಯವಿಲ್ಲದ ಧರ್ಮವದಾವುದಯ್ಯ, ದಯವೇ ಬೇಕು ಸಕಲ ಪ್ರಾಣಿಗಳಲ್ಲಿ
ದಯವೇ ಧರ್ಮದ ಮೂಲವಯ್ಯಾ ಕೂಲಸಂಗಯ್ಯನಂತಲ್ಲದೊಲ್ಲನಯ್ಯಾ.

ಮನುಷ್ಯನು ಜನಾಂಗದ ಹಿತಕ್ಕಾಗಿ ತನ್ನ ಸ್ವಭಾವಕ್ಕನುಗುಣವಾದ ಕಾರ್ಯವನ್ನು ಸತ್ಯತೆಯಿಂದಲೂ ಧೈರ್ಯದಿಂದಲು ನಿರಂತರ ಮಾಡುತ್ತಿರಬೇಕು. ಇದೇ ನೈತಿಕ ಬಲವಿದ್ದುದರ ಲಕ್ಷಣ ಇದರ ಮೇಲಿಂದಲೇ ಮನುಷ್ಯನ ಶ್ರೇಷ್ಠತೆಯನ್ನು ಗುರ್ತಿಸಬೇಕು. ಧಾರ್ಮಿಕ ಉಪಾಸನೆ, ಧ್ಯಾನ, ಪ್ರಾರ್ಥನೆಗಳು ಈ ತನ್ನ ಕರ್ತವ್ಯಕ್ಕೆ ಬಲವನ್ನೂ ಉತ್ಸಾಹವನ್ನೂ ಉಂಟುಮಾಡುವಂತಿರಬೇಕು. ಭಗವದ್ಗೀತೆಯಲ್ಲಿಯ ಈ ಕೆಳಗಿನ ಶ್ಲೋಕವು ನನಗೆ ಈ ವಿಷಯದಲ್ಲಿ ಮಾರ್ಗದರ್ಶಿ:

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್
ಸರ್ವಾರಂಭಾ ಹೀ ದೋಷೇಣ ಧೂಮೇನಾಗ್ನಿರಿವಾವೃತಾಃ ೧೮–೪೮

ಅರ್ಥ : ಸ್ವಭಾವಸಿದ್ಧವಾದ ಕರ್ಮವು ಸದೋಷವಿದ್ದರೂ ಅದು ತ್ಯಾಜ್ಯವಾದುದಲ್ಲ. ಏಕೆಂದರೆ ಬೆಂಕಿಯು ಹೊಗೆಯಿಂದ ವ್ಯಾಪಿಸಿರುವಂತೆ ಎಲ್ಲ ಕರ್ಮಗಳೂ ದೋಷಯುಕ್ತವಾದವುಗಳಾಗಿಯೇ ಇವೆ.

ಆದಕಾರಣ ಜನರ ಮೆಚ್ಚಿಗೆಯ ಕಾರ್ಯಗಳನ್ನು ಕೈಕೊಳ್ಳದೆ ತನ್ನ ಗುಣ ಸ್ವಭಾವಗಳಿಗೆ ವಿಹಿತವಾಗಿರತಕ್ಕ ಕಾರ್ಯಗಳನ್ನೇ ಮಾಡಬೇಕು. ತನಗಾರಿ ಕಾರ್ಯಗಳಿವೆಯೇ ವಿನಾ ಕಾರ್ಯಗಳಿಗಾಗಿ ತಾನಿಲ್ಲವೆಂಬ ಹರ್ಬರ್ಟ ಸ್ಪೇನ್ಸರರ ವಾಕ್ಯವು ಎಂದೋ ನನಗೆ ಬಹು ಮೆಚ್ಚಿಗೆಯಾಗಿದೆ.

ನನಗೆ ಸತ್ಯವೆಂದು ತೋರಿದ ನನ್ನ ಸ್ವಭಾವಕ್ಕನುಗುಣವಾದ ಕಾರ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಮಾಡುವುದರ ಕಡೆಗೆ ನನ್ನ ಒಲವು. ಅದರಿಂದ ಅನೇಕ ಸಾರೆ ನನ್ನ ಆಪ್ತರೂ ವಿರೋಧಮಾಡಿದ್ದುಂಟು ನನ್ನ ಕಾರ್ಯದಲ್ಲಿ ಬಸವಣ್ಣನವರ ಈ ಕೆಳಗಿನ ಎರಡು ವಚನಗಳು ಉತ್ಸಾಹವನ್ನೂ ಸಾಹಸವನ್ನೂ ಉಂಟುಮಾಡತಕ್ಕವುಗಳಾಗಿವೆ. ಆದುದರಿಂದ ಇವುಗಳಲ್ಲಿ ಮೊದಲನೆಯದನ್ನು ನಾನು ನನ್ನ **ಶರಣ ಸಂದೇಶ** ಪತ್ರಿಕೆಯ ಶಿರೋ ಭಾಗದಲ್ಲಿಟ್ಟುಕೊಂಡಿದ್ದೇನೆ.

ನ್ಯಾಯನಿಷ್ಠುರ ದಾಕ್ಷಿಣ್ಯಪರ ನಾನಲ್ಲ.
ಲೋಕವಿರೋಧಿ ಶರಣನಾರಾರಿಗೂ ಅಂಜುವವನಲ್ಲ.
ಕೂಡಲಸಂಗಮದೇವರ ರಾಜತೇಜದೋಳಿಪ್ಪನಾಗಿ.

ಜೋಳವಾಳಿಯವ ನಾನಲ್ಲಯ್ಯ ವೇಳೆಯಾಳಿಯವ ನಾನಲ್ಲಯ್ಯ
ಹಾಳೂಗೆಟ್ಟೋಡುವ ಆಳು ನಾನಲ್ಲವಯ್ಯ ಕೇಳು
ಕೂಡಲಸಂಗಮದೇವ. ಮರಣವೇ ಮಹಾನವಮಿ,

ಇಂಥ ದಯೆ, ಸತ್ಯ, ಧೈರ್ಯಗಳಿಂದ ತನ್ನ ಸ್ವಭಾವಕ್ಕನುಗುಣವಾದ ಕಾರ್ಯಗಳನ್ನು ನಿರಪೇಕ್ಷ ಬುದ್ಧಿಯಿಂದ ಮಾಡುತ್ತ ಹೋದರೆ ಅದರಲ್ಲಿಯೇ ಎಲ್ಲ ಧರ್ಮ, ಸ್ವರ್ಗ, ಮೋಕ್ಷಾದಿಗಳಿವೆಯೆಂದು ನನ್ನ ತಿಳುವಳಿಕೆ, **ಭಗವದ್ಗೀತೆ** ಇದಕ್ಕೇನೆ ಕರ್ಮಯೋಗವೆಂದೂ ಬಸವಾದಿ ಶಿವಶರಣರು ಅರ್ಪಣಯೋಗವೆಂದೂ ಹೇಳಿದ್ದಾರೆಂದು ನನ್ನ ಗ್ರಹಿಕೆ.

ದೇವರು ಮನುಷ್ಯ ರೂಪದಲ್ಲಿ ಅವತಾರ ಮಾಡುತ್ತಾನೆಂದಾಗಲಿ ಅಥವಾ ಆತನು ತನ್ನ ದೂತರನ್ನು ಕಳುಹಿಸುತ್ತಾನೆಂದಾಗಲಿ ಅನೇಕರು ತಿಳಿದಿರುವುದು ನನಗೆ ಒಪ್ಪಿಗೆಯಿಲ್ಲ. ದೇವರಿಂದ ಯಾವ ಧರ್ಮ ಗ್ರಂಥಗಳೂ ಉಂಟಾಗುವುದಿಲ್ಲ. ಎಲ್ಲವೂ ಮನುಷ್ಯರಿಂದಲೇ ಉಂಟಾಗತಕ್ಕವು. ಆದರೆ ಅವರು ಮಹಾಪುರುಷರಿರಬಹುದು. ಎಂತಹ ಮಹಾಪುರುಷರಿದ್ದರೂ ಅವರ ಎಲ್ಲಾ ವಿಚಾರಗಳು ಎಲ್ಲಾ ಕಾಲಗಳಲ್ಲಿ ಎಲ್ಲರಿಗೂ ಹಿತಕರವಾಗಿಯೇ ಇರುತ್ತವೆಂದು ನಾನು ತಿಳಿದಿಲ್ಲ. ಯಾವುದೊಂದು ಗ್ರಂಥದ ಅಥವಾ ಒಬ್ಬ ಮಹಾ ವಿಭೂತಿಯ ಎಲ್ಲಾ ವಿಚಾರಗಳೂ ನನಗೆ ಮಾನ್ಯವಾಗಿಯೂ ಇಲ್ಲ. ಉತ್ಕ್ರಾಂತವಾದವೇ ನನಗೆ ಒಪ್ಪಿಗೆ.

ಈ ಪ್ರಕಾರ, ಧಾರ್ಮಿಕ ಸಾಮಾಜಿಕ ಮತ್ತು ನೈತಿಕ ವಿಷಯಗಳಲ್ಲಿ ನನ್ನ ವಿಚಾರಗಳಿವೆ. ಇವುಗಳಂತೆಯೇ ನಾನು ನಡೆಯುತ್ತಲೇ ಇದ್ದೇನೆಂದಲ್ಲ. ಆದರೆ ಹೀಗೆಯೇ ನಡೆಯಬೇಕೆಂದು ನಿರ್ಧರಿಸಿ, ಪ್ರಯತ್ನಿಸುತ್ತಿರುವ ಒಬ್ಬ ಸಾಧಕನು.

ರಾಜಕೀಯ ವಿಷಯ : ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವನ್ನುಂಟುಮಾಡಿಕೊಳ್ಳುವುದೇ ಈ ದೇಶದ ಈಗಿನ ರಾಜಕಾರಣದಲ್ಲಿಯ ಮುಖ್ಯ ಕಾರ್ಯ. ಈ ಕಾರ್ಯವನ್ನು ಮಹಾತ್ಮಾಗಾಂಧಿಯವರು ಬೋಧಿಸಿರುವ ಅಹಿಂಸಾ ಮಾರ್ಗದಿಂದಲೇ ಸಾಧಿಸಿಕೊಳ್ಳಬೇಕೆಂಬುದು ನನಗೆ ಒಪ್ಪಿಗೆ. ನಾನು ಕಳೆದ ಮೂವತ್ತು ವರುಷಗಳಿಂದಲೂ ಕೀರ್ತಿಶೇಷ ಗೋಖಲೆ ಮತ್ತು ಟಿಳಕರ ರಾಜಕಾರಣಗಳನ್ನು ಪ್ರದರ್ಶಿಸುವ **ಜ್ಞಾನಪ್ರಕಾಶ** ಮತ್ತು **ಕೇಸರೀ** ಪತ್ರಿಕೆಗಳನ್ನು ಓದುತ್ತಿದ್ದೇನೆ. ಇವೆರಡೂ ಭಿನ್ನ ಭಿನ್ನ ವಿಚಾರ ಸರಣಿಯ ಪತ್ರಿಕೆಗಳು. ಇವೆರಡನ್ನೂ ಓದದೆ ಬೇರೆ ಯಾವ ಪತ್ರಿಕೆಗಳನ್ನು ಓದಿದರೂ ನನಗೆ ಸಮಾಧಾನವಾಗುವುದಿಲ್ಲ.

ಗಾಂಧೀಜಿಯವರ ರಾಜಕಾರಣವು ಆ ಉಭಯ ವಿಭೂತಿಗಳ ತತ್ವಗಳಿಂದಲೂ ಕೂಡಿರುವುದಲ್ಲದೆ ಸತ್ಯಗ್ರಹವೆಂಬ ಶ್ರೇಷ್ಠ ತತ್ವವಿಶಿಷ್ಟವಾದುದಾಗಿದೆಯೆಂದೂ ನನ್ನ ಗ್ರಹಿಕೆ.

ಆ ಉಭಯ ವಿಭೂತಿಗಳು ರಾಜಕಾರಣವನ್ನೇ ಮುಖ್ಯವಾಗಿಟ್ಟುಕೊಂಡಿದ್ದರು. ಆದರೆ ಗಾಂಧೀಜಿಯವರು ಜನಾಂಗದ ಉನ್ನತಿಯ ಎಲ್ಲ ರೀತಿಗಳಲ್ಲಿಯೂ ಅದ್ಭುತವಾದ ಕ್ರಾಂತಿಯನ್ನುಂಟುಮಾಡಿದರು. ಇವರು ಯುಗಪುರುಷರೆಂದೇ ನನ್ನ ತಿಳುವಳಿಕೆ. ಈಗ ಪ್ರಪಂಚಕ್ಕೇನೆ ಒಂದು ಮಾರ್ಗವನ್ನು ತೋರಿಸುವ ಮಹಾವಿಭೂತಿಗಳು.

ಹೀಗಿದ್ದರೂ ಇವರ ಎಲ್ಲಾ ವಿಚಾರಗಳ್ನೂ ಅನುಸರಿಸಲು ನನಗೆ ಇಷ್ಟವಿಲ್ಲ. ಗಾಂಧೀಜಿಯವರ ಚತುರ್ವರ್ಣಗಳ ವಿಚಾರ ಸರಣಿ ನನಗೆ ಒಪ್ಪಿಗೆಯಿಲ್ಲ. ಈ ದೇಶದ ರಾಜಕಾರಣಕ್ಕೆ ಹಿಂದು ಸಮಾಜದಲ್ಲಿರುವ ವರ್ಣಗಳ ಕಲ್ಪನೆಯೂ ಸಂಬಂಧಪಟ್ಟಿದೆಯೆಂದೂ ಇದು ನಿವಾರಣೆಯಾಗಿ

ಹಿಂದು ಸಂಘಟನೆಯಾಗುವುದು ಹಿಂದುಸ್ಥಾನದ ರಾಜಕೀಯ ಉನ್ನತಿಗೆ ಬಹು ಸಹಾಯಕವೆಂದೂ ನನ್ನ ತಿಳುವಳಿಕೆ.

ಮುಸಲ್ಮಾನ ಧರ್ಮವು ಹಿಂದು ಮತ್ತು ಕ್ರೈಸ್ತ ಧರ್ಮಗಳಂತೆ ಪರಧರ್ಮ ಸಹಿಷ್ಣುತೆಯ ಪ್ರವೃತ್ತಿಯುಳ್ಳದ್ದಾಗಿಲ್ಲ. ಅದರಲ್ಲಿ ಆಕ್ರಮಣ ವೃತ್ತಿ ಹೆಚ್ಚು. ಅಂತೆಯೇ ನನಗೆ ಅದು ಸೇರುವುದಿಲ್ಲ. ಮುಸಲ್ಮಾನ ಜನಾಂಗದಲ್ಲಿ ಸ್ವದೇಶಕ್ಕಿಂತ ಸ್ವಧರ್ಮದ ಅಭಿಮಾನ ಅತ್ಯಧಿಕ. ಏಶಿಯಾ ಖಂಡದಲ್ಲಿ ಆ ಧರ್ಮದವರ ಸ್ವತಂತ್ರ್ಯ ರಾಷ್ಟ್ರಗಳಿವೆ. ಆದಕಾರಣ ಮುಸಲ್ಮಾನ್ ಸಮಾಜಕ್ಕೆ ಈ ದೇಶದಲ್ಲಿ ತನ್ನ ಪ್ರಭುತ್ವ ಸ್ಥಾಪಿಸುವ ಕಲ್ಪನೆ ಆಗಾಗ್ಗೆ ಉಂಟಾಗಬಹುದು. ಹಿಂದುಸ್ಥಾನದಲ್ಲಿ ಮುಸಲ್ಮಾನ್ ಸಮಾಜವು ಮೂರನೆಯ ಒಂದು ಭಾಗದಷ್ಟು ದೊಡ್ಡದಾಗಿರುವುದರಿಂದಲೂ ಜನ ಸಂಖ್ಯೆಯನ್ನು ಹೆಚ್ಚಿಸುವುದರ ಕಡೆಗೆ ಸ್ವಾಭಾವಿಕವಾಗಿಯೇ ಅದರ ಪ್ರವೃತ್ತಿಯಿರುವುದರಿಂದಲೂ ಈ ದೇಶದ ರಾಜಕೀಯ ಶಾಂತತೆಗೆ ಇದೊಂದು ಲಕ್ಷಿಸಲ್ಪಡತಕ್ಕ ಸಂಗತಿಯೇ ಸರಿ.

ಆದಕಾರಣ ಹಿಂದೂ ಶುದ್ಧಿ ಮತ್ತು ಸಂಘಟನೆಗಳು ದೇಶದ ರಾಜಕಾರಣಕ್ಕೆ ನಿಕಟ ಸಂಬಂಧವಾಗಿವೆಯೆಂದೂ ರಾಜಕಾರಣದಲ್ಲಿರುವವರು ಇದನ್ನು ನಿರ್ಲಕ್ಷಿಸುವುದು ಯುಕ್ತವಲ್ಲವೆಂದೂ ನನ್ನ ತಿಳುವಳಿಕೆ. ಗಾಂಧೀಜಿಯವರು ಈ ವಿಷಯವನ್ನೇನೂ ಲಕ್ಷಿಸುವುದಿಲ್ಲವೆಂದೇ ನನ್ನ ಭಾವನೆ.

ಗಾಂಧೀಜಿಯುವರು ಪ್ರಾರಂಭಿಸಿದ್ದ ಶಾಸನ ಭಂಗವು ಒಂದು ಸಿದ್ದಾಂತವಾಗಿ ತೋರಿದಿದ್ದುದರಿಂದಲೇ ನಾನು ಅವರಲ್ಲಿ ಸೇರಲಿಲ್ಲ. ನಮಗೆ ಸತ್ಯವೆಂದು ತೋರಿದ ಕಾರ್ಯಗಳನ್ನು ಮಾಡುವಾಗ ಸೆರೆಮನೆಗೆ ಹೋಗುವುದು ಬೇರೆ. ಸೆರೆಮನೆಗೆ ಹೋಗುವುದಕ್ಕಾಗಿಯೇ ಒಂದು ಕಾರ್ಯವನ್ನು ಮಾಡುವುದು ಬೇರೆ. ಗಾಂಧೀಜಿಯವರು ಪ್ರಾರಂಭಿಸಿದ್ದ ಶಾಸನಭಂಗದ ಚಟುವಟಿಕೆಯು ಎರಡನೆಯ ತರಹದ್ದಾಗಿದ್ದಿತು. ಅಂತೆಯೇ ಅದರಲ್ಲಿ ನಾನು ಸೇರಲಿಲ್ಲ. ಅದೊಂದು ರಾಜಕಾರಣದಲ್ಲಿಯ ಪ್ರಯತ್ನವಾಗಿದ್ದಿತೇ ವಿನಾ ಸತ್ಯಸಿದ್ಧಾಂತವೆನು ಆಗಿರಲಿಲ್ಲ. ಹಾಗಾಗಿದ್ದರೆ, ಇಂಗ್ಲೀಷ್ ಸರಕಾರದಲ್ಲಿ ಎಷ್ಟು ಅನ್ಯಾಯದ ಶಾಸನಗಳಿವೆಯೆಂದರೆ, ಅವುಗಳ ಉಲ್ಲಂಘನೆಯ ಕಾರ್ಯದಿಂದ ನಾನು ಸೆರೆಮನೆಯ ಹೊರಗೆ ಎಂದೂ ಇರುವುದೇ ಶಕ್ಯವಿಲ್ಲ. ಗಾಂಧೀಜಿಯವರು ಹೀಗೆಯೇ ಸತ್ಯಾಗ್ರಹವನ್ನು ಪ್ರಲ್ಹಾದನಂತೆ ಪ್ರಾರಂಭಿಸಿದರೆಂದೂ ಸೆರೆಮನೆಯಲ್ಲಿಯೇ ಇವರ ಅಂತ್ಯವೆಂದೂ ಮೊದಲು ನಾನು ತಿಳಿದೆನು. ಆದರೆ ಕಡೆಗೆ ಇದೊಂದು ಇವರ ರಾಜಕಾರಣದಲ್ಲಿಯ ಪ್ರಯತ್ನವಾಗಿದೆಯೆಂದೇ ಗೊತ್ತಾಯಿತು.

ನಾನು ಕಾಂಗ್ರೆಸ್ಸಿನಲ್ಲಿ ಈ ವರೆಗೂ ಸೇರಿಲ್ಲ. ಏಕೆಂಬುದನ್ನು **ಸತ್ಯಾಗ್ರಹ ಧರ್ಮ** ಎಂಬ ಚಿಕ್ಕ ಪುಸ್ತಕದಲ್ಲಿ ೧೯೨೨ ನೆಯ ಇಸವಿಯಲ್ಲಿಯೇ ಈ ಕೆಳಗಿನಂತೆ ಬರೆದು ಪ್ರಕಟಿಸಿದ್ದೇನೆ.

ರಾಜಕೀಯ ಸಾಮಾಜಿಕ ಮೊದಲಾದ ಯಾವ ಸಭೆಗಳೇ ಆಗಲಿ, ಅಥವಾ ಸಂಘಗಳೇ ಆಗಲಿ, ಅವು ಬಹುಭಾಗದವರ ಅಭಿಪ್ರಾಯದಂತೆಯೇ ನಡೆಯುತ್ತಿರುತ್ತವೆ. ಅವುಗಳಿಗೆ ಬಹುಮತವೇ ಪ್ರಾಣವು. ಸತ್ಯಾಗ್ರಹ ಧರ್ಮವನ್ನನುಸರಿಸುವವರಿಗಾದರೋ ಸತ್ಯವೇ ಪ್ರಾಣವು. ಆದುದರಿಂದ ನಿಜವಾದ ಸತ್ಯಾಗ್ರಹ ಧರ್ಮಿಯು ಇಂಥ ಬಹುಮತಾನುಗುಣ್ಯವಾಗಿ ನಡೆಯುವ ಸಭೆಗಳಲ್ಲಾಗಲಿ, ಸಂಘಗಳಲ್ಲಾಗಲಿ ಸೇರಿ ಅವುಗಳಂತೆ ಆಚರಿಸುವುದಿಲ್ಲ. ಆದರೆ ತಾನು ತನ್ನ ಅಭಿಪ್ರಾಯದಂತೆ

ಇಂಥ ಅನೇಕ ಸಭೆಗಳನ್ನೂ ಸಂಘಗಳನ್ನೂ ನಡೆಯಿಸಬಹುದು. ಸತ್ಯಾಗ್ರಹ ಧರ್ಮವನ್ನು ಸರಿಯಾಗಿಯೇ ಆಚರಿಸಬೇಕಾದರೆ ಆರಂಭದಲ್ಲಿ ಇಂಥ ಯಾವ ಸಭೆಗಳಿಗಾಗಲಿ ಸಂಬಂಧಪಡದಂತಿರುವುದೇ ಯುಕ್ತವೆಂದು ಭಾವಿಸಿದ್ದೇನೆ.

ಗಾಂಧೀಜಿಯವರು ಕಾಂಗ್ರೇಸ್ಸನ್ನು ತಮ್ಮ ಕಡೆ ಮಾಡಿಕೊಂಡಿದ್ದಾರೆಯೇ ವಿನಾ ಕಾಂಗ್ರೇಸ್ಸಿನಂತೆ ಅವರೇನೂ ನಡೆಯುವುದಿಲ್ಲವೆಂದೇ ನಾನು ತಿಳಿಸಿದ್ದೇನೆ. ಅವರು ಬಹುಮತದಂತೆ ನಡೆಯುವುದಿಲ್ಲವೆಂದೇ ನಾನು ತಿಳಿದಿದ್ದೇನೆ. ಅವರು ಬಹುಮತದಂತೆ ನಡೆಯುವವರಲ್ಲ. ತಮ್ಮ ಇಷ್ಟದಂತೆ ನಡೆಯುವವರು. ಅವರನ್ನೇ ಬಹುಮತವು ಬೇಕಾದರೆ ಅನುಸರಿಸಲಿ, ಇಲ್ಲವೆ ಬಿಡಲಿ.

ನಾನು ಯಾವ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಪ್ರಾಯಶಃ ಸೇರುತ್ತಾ ಇಲ್ಲ. ನನಗೆ ವಿಹಿತವಾಗಿ ತೋರಿದಂತೆ ಅದು ನಡೆಯುತ್ತದೆಂದು ಕಂಡರೇನೇ ಅದರಲ್ಲಿ ಸೇರುವುದು ಇಲ್ಲವಾದರೆ ಯಾವುದರಲ್ಲಿಯೂ ಸೇರದಿರುವುದು. ವೀರಶೈವ ತತ್ವ ಪ್ರಚಾರಕ ಸಂಘವನ್ನು ಸ್ಥಾಪಿಸಿ ಅದರಲ್ಲಿ ನಾನು ಸೇರಿದ್ದು ಮೇಲಿನ ಉದ್ದೇಶದಂತೆ, ಅದು ಆ ಪ್ರಕಾರವೇ ಆಯಿತು. ವೀರಶೈವ ಮಹಾಸಭೆಯ ಮಧ್ಯವರ್ತಿ ಮಂಡಲದಲ್ಲಿ ಸೇರಬೇಕಾದರೂ ನಾನು ಅದೇ ಪ್ರಕಾರ ಯೋಚಿಸಿದ್ದೆನು. ಆದುದರಿಂದ ಕಾರ್ಯವೇ ನಡೆಯುವುದಿಲ್ಲವೆಂದು ಗೊತ್ತಾದೊಡನೆ ಅದನ್ನು ಬಿಟ್ಟುಬಿಟ್ಟೆನು. ನಾನು ಈಗ ಯಾವ ಸಭೆ ಸಂಘಗಳಿಗೂ ಸದಸ್ಯನಾಗಿಲ್ಲ. ನನಗೆ ವಿಹತವೆಂದು ತೋರದಿರುವ ನಿಯಮಗಳನ್ನು ಬಹುಮತದಿಂದಾದವುಗಳೆಂಬ ಕಾರಣದಿಂದ ನಡೆಯುವ ಪ್ರವೃತ್ತಿಯು ನನ್ನದಲ್ಲ.

ಇದೊಂದು ವಿಧವಾದ ಅಹಂಕಾರವೆಂದೇ ಅನ್ಯರಿಗೆ ತೋರಿದರೆ ಅದೇನೂ ತಪ್ಪಲ್ಲ. ನನ್ನ ಸ್ವಭಾವದಿಂದಲೇ ನಾನು ಯಾವ ಸಂಘದಲ್ಲಿಯೂ ಸೇರದಿದ್ದದು. ಕಾಂಗ್ರೆಸ್ಸಿನಂತಹ ಸಂಸ್ಥೆಯ ಕಾರ್ಯಕಲಾಪಗಳ ಮೇಲೂ ಮಹಾತ್ಮಾ ಗಾಂಧಿ, ಪಂಡಿತ ಜವಾಹಲಲಾಲ ನೆಹರು ಮೊದಲಾದ ಮಹಾವಿಭೂತಿಗಳ ಕೆಲವು ಅಭಿಪ್ರಾಯಗಳ ಮೇಲೂ ಟೀಕೆಮಾಡಲು ನನಗೆ ಅಭ್ಯಂತರ ತೋರುವುದಿಲ್ಲ. ಆ ಪ್ರಕಾರ ಮಾಡುತ್ತಲೂ ಬಂದಿದ್ದೇನೆ.

ಕ್ರಿ. ಶ. ೧೯೩೪ರಲ್ಲಿ ಕಾಂಗ್ರೆಸ್ಸು ಮುಂಬೈಯಲ್ಲಿ ಕೂಡಿದಾಗ ಅದು ಜಾತಿ ನಿರ್ಣಯದ ವಿಷಯಕ್ಕೆ ಅನುಸರಿಸಿದ ಧೋರಣವನ್ನು ಮತ್ತು ೧೯೩೭ ರಲ್ಲಿ ಮೊದಲು ಅದು ಅಧಿಕಾರ ಸ್ವೀಕರಿಸದಿದ್ದುದನ್ನು ನಾನು ಖಂಡುತುಂಡಾಗಿ ಟೀಕಿಸಿದೆನು. ರಾಜಕಾರಣದಲ್ಲಿ ಕಾಂಗ್ರೆಸ್ಸೇ ಮುಖ್ಯ ಸಂಸ್ಥೆಯು. ಇದನ್ನೇ ಎಲ್ಲರೂ ಸೇರಬೇಕು. ಆದರೆ ಇದರ ವಿರುದ್ಧವಾಗಿರುವ ರಾಜಕೀಯ ಸಂಸ್ಥೆಗಳ ಮೇಲೆ ಕಾಂಗ್ರೆಸ್ಸಿನವರು ಯವ ಆಕ್ರಮಣ ಅನ್ಯಾಯಗಳನ್ನು ಮಾತ್ರ ಮಾಡಕೂಡದು. ಅವರಿಗೂ ತಮ್ಮ ತಮ್ಮ ಅಭಿಪ್ರಾಯದಂತೆ ನಡೆಯಲು ಸಂಪೂರ್ಣ ಸ್ವಾತಂತ್ರ್ಯ ಕೊಡಬೇಕು.

ಗಾಂಧೀಜಿಯವರ ಸತ್ಯ ಮತ್ತು ಅಹಿಂಸಾ ತತ್ವಗಳಿಗೆ ವಿರುದ್ಧವಾಗಿ ಕಾಂಗ್ರೇಸ್ಸ ಕೆಲಸಗಾರರು ನಡೆದರೆ ಅವುಗಳನ್ನು ಖಂಡಿಸುವುದು ನನ್ನ ರೀತಿ. ಇದರಿಂದ ಕರ್ನಾಟಕದ ಬಹುಜನ ಕಾಂಗ್ರೇಸ್ ಕೆಲಸಕಾರರಿಗೆ ನಾನು ಅಪ್ರಿಯನಾದೆನು. ಅನೇಕ ನನ್ನ ಮಿತ್ರರೂ ದೂರಾದರು. ನಾನು ಕಾಂಗ್ರೇಸ್ಸಿಗೆ ಸೇರಿದ್ದರೆ ಇಲ್ಲವೆ ಟೀಕಿಸದೆ ಸುಮ್ಮನಿದ್ದಿದ್ದರೆ ನನಗೆ ಜನರಲ್ಲಿ ಹೆಚ್ಚಾದ ಮಾನಮನ್ನಣೆ ದೊರೆಯುತ್ತಿದ್ದಿತೆಂಬುದೂ ನನಗೆ ಗೊತ್ತು. ಆದರೂ ಹಾಗೆ ಮಾಡುವುದರಿಂದ ನನ್ನ ಮನಸ್ಸಿಗೆ

ಮಾತ್ರ ಸಮಾಧಾನವಾಗುವುದಿಲ್ಲವೆಂಬುದು ನನ್ನ ಅನುಭವ. ಅಂತೆಯೇ ನಾನು ನನಗೆ ಯುಕ್ತ ಕಂಡಂತೆಯೇ ರಾಜಕಾರಣದಲ್ಲಿಯೂ ನಡೆಯುತ್ತಾ ಬಂದಿದ್ದೇನೆ. ಇದೇ ನನಗೆ ತೃಪ್ತಿಕರವಾದ ರೀತಿಯಾಗಿದೆ.

ಕಾಂಗ್ರೆಸ್ ಪಕ್ಷವೇ ಗ್ರಾಮ ಪಂಚಾಯತಿಯಿಂದ ಶಾಸನ ಮಂಡಲಗಳ ವರೆಗಿನ ಎಲ್ಲಾ ರಾಜಕೀಯ ಸಂಸ್ಥೆಗಳಲ್ಲಿಯೂ ಸೇರಿ ಏಕ ಸೂತ್ರದಿಂದ ಕೆಲಸಮಾಡಬೇಕು. ಮತ್ತು ಹೊರಗಡೆಯಲ್ಲಿಯೂ ಜನ ಜಾಗೃತಿಯ ಪ್ರಚಂಡಕಾರ್ಯವನ್ನು ನಡೆಯಿಸಬೇಕು. ಇದೇ ಸ್ವರಾಜ್ಯ ಪ್ರಾಪ್ತಿಗೆ ಹೆಚ್ಚು ಪರಿಣಾಮಕಾರಿಯಾದ ರೀತಿಯೆಂದು ನನ್ನ ತಿಳುವಳಿಕೆ.

ಗುಣಸ್ವಭಾವ ಮತ್ತು ಅನುಭವ : ಕೆಲವು ನನ್ನ ಗುಣ ಸ್ವಭಾವ ಮತ್ತು ಅನುಭವ, ಅಭಿರುಚಿಗಳನ್ನು ಇಲ್ಲಿ ತಿಳಿಸುವುದು ಅನುಚಿತವಾಗಲಾರದು. ಶುಚಿ, ಶಾಂತತೆ ಮತ್ತು ಸೇವೆ ಇವು ನನ್ನ ಗುಣ ಸ್ವಭಾವ ಅಭಿರುಚಿಗಳ ಸಾರವಾಗಿವೆಯೆಂದು ಹೇಳಬಹುದು. ವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ದೃಷ್ಟಿಯ ಮುಂದೆ ಇದೇ ಮೂರು ಸಂಗತಿಗಳನ್ನು ಇಡಲು ಬಹು ಪ್ರಯತ್ನಿಸಿದೆನು.

ಸ್ವಚ್ಛತೆ ಸಾದಾತನಗಳ ಕಡೆಗೇ ಒಲವು ಹೆಚ್ಚು. ಬಳಕೆಯಪದಾರ್ಥಗಳೆಲ್ಲಾ ಅಚ್ಚುಕಟ್ಟಾಗಿರಬೇಕು. ಮಾತುಗಾರಿಕೆ ಹರಟೆಗಳಲ್ಲೂ ಶೂನ್ಯ, ಸುಮ್ಮನೇ ಒಬ್ಬರ ಸಂಗಡ ಮಾತನಾಡುವ ಪ್ರವೃತ್ತಿಯಿಲ್ಲ. ಇದರಿಂದ ಗರ್ವಿಯೆಂದೂ ಅನೇಕರು ತಿಳಿದುಕೊಂಡುದುಂಟು. ಏನಾದರೊಂದು ಕಾರ್ಯದಲ್ಲಿಯೇ ತೊಡಗಿರುವ ಸ್ವಭಾವ. ಪ್ರತಿನಿತ್ಯ ೭ ತಾಸು ನಿದ್ರೆ ಬೇಕೇ ಬೇಕು. ಊಟಕ್ಕಿಂತ ನಿದ್ರೆಯು ನನ್ನ ಆರೋಗ್ಯಕ್ಕೆ ಬಹು ಅಗತ್ಯ.

ಬಹು ಮಿತವ್ಯಯ ೧ ರೂ. ಕೊಟ್ಟು ಒಂದು ಬಿ ಟೈಂಪೀಸ್ ತೆಗೆದುಕೊಂಡು ೧೨ ವರುಷ ಉಪಯೋಗಿಸಿದೆನು. ಅನಂತರ ನಾನು ಯಾವ ಟೈಂಪೀಸ್ ಅಥವಾ ವಾಚ್ ತೆಗೆದುಕೊಳ್ಳಲಿಲ್ಲ. ಆದರೆ ಕಾಲಕ್ಕೆ ಸರಿಯಾಗಿ ಕೆಲಸವಾಗಲೇಬೇಕು. ಅದರ ಕಡೆಗೆ ಬಹು ಎಚ್ಚರಿಕೆ. ಫೌಂಟಿನ್ ಪೆನ್ ಮೊದಲಾದ ಅನವಶ್ಯಕ ವಸ್ತುಗಳನ್ನು ಉಪಯೋಗಿಸುವುದಿಲ್ಲ. ವರುಷಕ್ಕೆ ಬೇಕಾಗುವ ೮-೧೦ ಖಾದಿ ಬಟ್ಟೆಗಳಿಗಾಗಿ ೧೦-೧೨ ರೂ. ಮಾತ್ರ ವೆಚ್ಚ. ಒಂದೇ ಹೊತ್ತು ಊಟ. ಊಟಕ್ಕೆ ತಿಂಗಳಿಗೆ ೪-೫ ರೂ. ಗಳಾದರೆ ಸಾಕು.

ಹೀಗೆ ನನ್ನ ಜೀವನಕ್ಕೆ ವರುಷಕ್ಕೆ ೭೫ ರೂ. ಗಳು ಸಾಕು. ಯಾವ ಚಟದ ವಸ್ತುಗಳಾಗಲಿ ತಿಂಡಿಗಳಾಗಲಿ ಬೇಕಿಲ್ಲ. ಸ್ವಸ್ಥಳದಲ್ಲಿದ್ದರೆ ಸಾಯಂಕಾಲ ಸ್ವಲ್ಪ ಉಪಾಹಾರ. ಇದರಿಂದ ನನ್ನ ಆರೋಗ್ಯ ಚೆನ್ನಾಗಿದೆ.

ಪಟ್ಟಣವಾಸ ಸೇರುವುದಿಲ್ಲ. ಅಡವಿ, ಗುಡ್ಡ ಮೊದಲಾದ ಸೃಷ್ಟಿಸೌಂದರ್ಯವನ್ನು ನೋಡುವುದರ ಕಡೆಗೆ ಒಲವು. ರಾತ್ರೆ ಆಕಾಶವನ್ನು ನೋಡುವುದೊಂದು ಹವ್ಯಾಸವೆಂದೇ ಹೇಳಬಹುದು. ಪ್ರಶಾಂತ ವಾತಾವರಣದಲ್ಲಿ ಅತ್ಯದ್ಭುತವಾದ ನಕ್ಷತ್ರ ಮಂಡಲವನ್ನು ನೋಡುತ್ತ ಹೊಂದುವ ಆನಂದವು ಲಿಂಗಪೂಜೆಗಿಂತ ನನಗೆ ಹೆಚ್ಚಿನದು. ಹಿಡಿದ ಕೆಲಸದಲ್ಲಿ ನುಡಿದ ಮಾತಿನಲ್ಲಿ ಹಟ ಹೆಚ್ಚು, ಹೆಚ್ಚು ಕಡಿಮೆ ಸಹಿಸಿಕೊಂಡು, ಜನರ ಒಲವು ಹಿಡಿದು, ಕೂಡಿ ಕೆಲಸಮಾಡುವ ಪ್ರವೃತ್ತಿಯಿಲ್ಲ, ಕಾರ್ಯದಲ್ಲಿ ಮಂದತನ ಸೇರುವುದಿಲ್ಲ. ಓದು ಬರಹಗಳ ವಿನಾ ತೋಟದ ಕೆಲಸ ಪ್ರಿಯವಾದುದು.

ಉಪ್ಪು, ಕಾರ, ಸಿಹಿಗಳನ್ನು ಬಿಟ್ಟು, ಸಾತ್ವಿಕ ಆಹಾರವನ್ನು ಮಿತವಾಗಿ ಸೇವಿಸಿ ನಾಲಿಗೆಯನ್ನು ಬಿಗಿಹಿಡಿದು ಮಹತ್ವಾಕಾಂಕ್ಷಿಯಾಗಿ ಯಾವುದೊಂದು ಉದಾತ್ತ ಕಾರ್ಯದಲ್ಲಿಯೇ ಆಸಕ್ತನಾಗಿದ್ದರೆ ತ್ರಿಕರಣಗಳಲ್ಲಿ ಕಾಯ ಸಂಬಂಧವಾದ ಬ್ರಹ್ಮಚರ್ಯವನ್ನು ಮಾತ್ರ ಧಾರಾಳವಾಗಿ ಆಚರಿಸಬಹುದು. ಅದರಿಂದ ಮಾನಸಿಕ ಬಲವು ಎಷ್ಟೋ ಹೆಚ್ಚಿ ಸಾರ್ವಜನಿಕ ಸೇವೆಗೆ ಬಹು ಸಹಾಯವಾಗುತ್ತದೆ. ಸಾಂಪತ್ತಿಕ ಕೊರತೆಯುಳ್ಳ ಮತ್ತು ಸಾಮಾನ್ಯ ಬುದ್ಧಿ ಶಕ್ತಿಯುಳ್ಳ ಜನರು ವಿವಾಹಿತರಾದರೆ ಅವರಿಂದ ಸಾರ್ವಜನಿಕ ಕಾರ್ಯ ಇಷ್ಟಾದರೂ ಆಗಲಾರದು.

ನಾನು ಈ ದಾರಿಯನ್ನು ಹಿಡಿಯದೆ ವಿವಾಹಿತನಾಗಿದ್ದರೆ ಜನಸಂಖ್ಯೆಯಲ್ಲಿ ೪-೫ ಹೆಚ್ಚಿಸಿ ನಾಲ್ಕೈದು ಸಾವಿರ ರೂ. ಕಾದಿಟ್ಟು ಈಗ ತಿಂಗಳಿಗೆ ೧೫-೨೦ ರೂ. ವಿಶ್ರಾಂತಿ ವೇತನ (ಪೆನ್‌ಶನ್) ಹೊಂದುವ ಮಾಸ್ತರನಾಗಿರುತ್ತಿದ್ದೆನು. ಅದಕ್ಕಿಂತ ನಾನು ಈಗ ಎಷ್ಟೋ ಹೆಚ್ಚು ಜನ ಸೇವೆಯನ್ನು ಮಾಡಿದ್ದೇನೆಂದು ನನಗೆ ಬಹು ಸಮಾಧಾನ.

❖❖

ಮುಂದುವರಿದ ಚರಿತ್ರೆ*

ಯಲಗುರೇಶ ಸಂಕನಾಳ

ಮಹಾತ್ಮಾ ಗಾಂಧೀಜಿಯವರ ೬೯ನೆಯ ಹುಟ್ಟುಹಬ್ಬದ ಶುಭದಿನದಲ್ಲಿ **"ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ"** ಎಂಬ ಪುಸ್ತಕದಲ್ಲಿ ನನ್ನ ಜೀವನ ಯಾತ್ರೆಯಲ್ಲಿ ಕಂಡುಬಂದ ಅನುಭವಗಳನ್ನು ೧೯೩೭ರಲ್ಲಿ ಪ್ರಕಟಿಸಿ, ನನ್ನ ಸಾರ್ವಜನಿಕ ಜೀವನವಿಕಾಸಕ್ಕಾಗಿ ನೆರವಾದ ಮಹನೀಯರುಗಳಿಗೆ ಕೃತಜ್ಞತಾ ಪೂರ್ವಕ ಒಪ್ಪಿಸಿದೆ. ಅದರಲ್ಲಿರುವ ಸಂಗತಿಗಳನ್ನು ಸಾರ್ವಜನಿಕವಾಗಿ, ಲೇಖನ ಮತ್ತು ಭಾಷಣಗಳಲ್ಲಿ ಪ್ರಸ್ತಾಪಿಸಬಾರದಾಗಿ ಕೂಡಾ ಪುಸ್ತಕದ ಪ್ರಾರಂಭದಲ್ಲಿ ನಿವೇದಿಸಿದ್ದೆನು. ಆ ಗ್ರಂಥದಲ್ಲಿ ನನ್ನ ಬಾಲ್ಯಜೀವನವನ್ನು ಕುರಿತು ಹೆಚ್ಚಾಗಿ ಬರೆಯದೇ ನನ್ನ ೧೭ನೆಯ ವರ್ಷದ ವಯಸ್ಸಿನಲ್ಲಿ ಕನ್ನಡ ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಶಿಕ್ಷಕವೃತ್ತಿಯನ್ನು ಕೈಗೊಂಡಂದಿನಿಂದ ಮುಂದೆ ಜರುಗಿದ, ಜೀವನದ ಮಹತ್ವದ ಸಂಗತಿಗಳನ್ನು ವಿವರಿಸಿದ್ದೆ. ೧೯೧೦ರಿಂದಲೂ ಡೈರಿ ಬರೆಯುವ ಪರಿಪಾಠವನ್ನಿಟ್ಟುಕೊಂಡಿದ್ದೆ. ಇದರ ಆಧಾರದಿಂದಲೂ ಜ್ಞಾಪಕದ ಮೇಲಿಂದಲೂ, ಆತ್ಮಚರಿತ್ರೆಯನ್ನು ಒದಗಿಸಿದ್ದೇನೆ. ಆತ್ಮಚರಿತ್ರೆ ಏನನ್ನು ಒಳಗೊಂಡಿರಬೇಕು ಎಂದು ಹೇಳುವುದು ಬಲು ಕಷ್ಟ. ಸಾಧಾರಣವಾಗಿ ನೆನೆಪಿನ ಭಂಡಾರ, ದಿನಚರಿ, ಪತ್ರವ್ಯಹಾರ, ಆತ್ಮವೃತ್ತಾಂತ ಹೀಗೆ, ಕೇವಲ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿರದೆ ಅದು ವ್ಯಕ್ತಿಯ ಬದುಕಿನ ಪರಿಸರ, ವ್ಯಕ್ತಿತ್ವ ವಿಕಾಸಗಳನ್ನು ಬಿಂಬಿಸುತ್ತ, ಸಾರ್ವಜನಿಕ ಜೀವನದ ಕೈಗನ್ನಡಿಯಾಗಬೇಕೆಂಬ ಹಂಬಲದಿಂದ, ಹಿರಿಯರ ಅನುಭವಗಳು ತರುಣರಿಗೆ ಮಾರ್ಗದರ್ಶನವನ್ನು ನೀಡುವ ಉದ್ದೇಶದಿಂದ ನನ್ನ ಜೀವನದ ಗೊತ್ತು ಗುರಿಗಳನ್ನೂ ಸಾರ್ವಜನಿಕ ಜೀವನದ ವಿಕಾಸವನ್ನೂ ಮಹಾತ್ಮಾ ಗಾಂಧೀಜಿಯವರ ಆತ್ಮವೃತ್ತಾಂತದ ಪ್ರೇರಣೆಯ ಮೇರೆಗೆ, ಜೀವನ ಚರಿತ್ರೆಯನ್ನು ನಿವೇದಿಸಿದ್ದೇನೆ.

ನನ್ನ ಜೀವನ ರಾಷ್ಟ್ರಿಯ ಇತಿಹಾಸದೊಂದಿಗೆ ಹೊಂದಿಕೊಂಡಿತ್ತು. ೪೦ ವರ್ಷಗಳ ಸಾರ್ವಜನಿಕ ಜೀವನ ಜಾಗೃತ ಭಾರತದ ನವಸಂದೇಶದ ಪ್ರಯೋಗವೆನಿಸಿತ್ತು. ಸ್ವಾತಂತ್ರ್ಯಕ್ಕಾಗಿ ಜೇಲಿಗೆ ಹೋಗುವುದು

---

* ೧೯೩೭ ರಿಂದ ೧೯೪೭ ಜನವರಿ ೨ ರ ವರೆಗಿನ ಮಂಜಪ್ಪನವರ ಆತ್ಮಕಥೆಯನ್ನು ಅವರೇ ರಚಿಸಿದ ಧಾಟಿಯಲ್ಲಿ ಶ್ರೀ ಯಲಗುರೇಶ ಸಂಕನಾಳ ಅವರು ರಚಿಸಿದ್ದಾರೆ. ಇದನ್ನು "ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ" ಗ್ರಂಥದಿಂದ(ಸಂ. ಎಂ.ಎಂ. ಕಲಬುರ್ಗಿ) ಎತ್ತಿಕೊಳ್ಳಲಾಗಿದೆ.

ದೇಶಾಭಿಮಾನದ. ವಿಷಯವಾದರೂ ರಚನಾತ್ಮಕ ಸಾಧನೆ ಅದಕ್ಕಿಂತಲೂ ದೊಡ್ಡದು. ಎಂದು ಭಾವಿಸಿ, ಕೇವಲ ಜೈಲಿಗೆ ಹೋದುದಕ್ಕಾಗಿಯೇ ದೇಶಭಕ್ತವೆನಿಸಿಕೊಳ್ಳಲಾರದೆ, ಪವಿತ್ರ ಜೀವನವನ್ನು ನಡೆಸಿ, ಜನತೆಯಲ್ಲಿ ಜ್ಞಾನಪ್ರಸಾರಮಾಡಿ, ರಾಷ್ಟ್ರೀಯ ವಿಚಾರಗಳನ್ನು ಎತ್ತಿ ಹಿಡಿದಿದ್ದೇನೆ. ರಾಷ್ಟ್ರಿಯ ಹೋರಾಟದಲ್ಲಿ, ಪ್ರತ್ಯಕ್ಷವಾಗಿ ಧುಮುಕದೆ, ವಿಮರ್ಶಾತ್ಮಕ ಹಾಗೂ ನಿಷ್ಪಕ್ಷಪಾತವಾಗಿ ರಾಷ್ಟ್ರೀಯ ಜೀವನವನ್ನು ಒರೆಗೆ ಹಚ್ಚುವ ಕೆಲಸ ಮಾಡಿದ್ದೇನೆ. ಕೇವಲ ಜನರನ್ನು ಮೆಚ್ಚಿಸುವುದು ನನ್ನ ಉದ್ಧೇಶವಾಗಿರಲಿಲ್ಲ. ಜನಾನುರಾಗ ಪ್ರಾಪ್ತಿಗಾಗಿ, ನನಗೆ ಸಹಜವಲ್ಲದ ಕಾರ್ಯವನ್ನು ಮಾಡುವುದು ವಿಹಿತವಲ್ಲ. ಅದೊಂದು ರೀತಿಯ ಆತ್ಮಹತ್ಯೆವೆಂದೇ ನನ್ನ ತಿಳುವಳಿಕೆ. ರಾಜಕೀಯ ಸ್ವಾತಂತ್ರ್ಯದಷ್ಟೇ ಸಾಮಾಜಿಕ ಸುಧಾರಣೆಯೂ ನನ್ನ ದೃಷ್ಟಿಯಲ್ಲಿ ಪ್ರಮುಖ ವಿಷಯವಾಗಿತ್ತು. ಉಭಯ ವಿಷಯಗಳಲ್ಲಿಯೂ ಭಾರತದ ಉದ್ಧಾರವಾಗಬೇಕೆಂದು ನನ್ನ ನಿತ್ಯಜೀವನದ ಹಂಬಲವಾಗಿತ್ತು.

ರಾಜಕೀಯ ಪಾರತಂತ್ರ್ಯದಿಂದ ಹಿಂದುಸ್ಥಾನವು ಕಳೆದೊಂದು ಸಾವಿರ ವರ್ಷಗಳಿಂದಲೂ ದಾರಿದ್ರ್ಯಾದಿ ಅನೇಕ ಕಷ್ಟನಷ್ಟಗಳಿಗೆ ಇಡಾಗುತ್ತ ಬಂದಿರುವಂತೆಯೇ ಅನೇಕ ಸಾವಿರ ವರುಷಗಳಿಂದಲೂ ಧಾರ್ಮಿಕ ನಾನು ದೋಷಗಳ ಮೂಲಕ ಹಿಂದೂ ಜನಾಂಗದ ಬಹುಭಾಗವು ಅನೇಕ ಅನಿರ್ವಚನೀಯ ದುಃಖ ಪರಂಪರೆಗಳಿಗೂ ಒಳಗಾಗುತ್ತ ಬಂದಿದೆ. ಹಿಂದೂ ದೇಶವೂ ನನ್ನ ತಾಯಿ. ಹಿಂದೂಧರ್ಮ ನನ್ನ ತಂದೆ. ಇವರಲ್ಲಿ ಯಾರ ದುಃಖವನ್ನು ನಿರ್ಲಕ್ಷಿಸುವುದೂ ಸರಿಯಲ್ಲ. ನಾನು ಹುಟ್ಟಿದ ದೇಶದಿಂದಲೂ ನಾನು ಅನುಸರಿಸಿದ ಧರ್ಮದಿಂದಲೂ ನನ್ನ ಜೀವಿತವು ರೂಪಗೊಂಡಿದೆ. ಆದಕಾರಣ ಅವುಗಳ ಸೇವೆಗಾಗಿ ನನ್ನ ಶಕ್ತಿಯನ್ನು ಸಮರ್ಪಿಸಿ ಬಿಡುವುದೇ ಅವುಗಳ ಋಣದಿಂದ ಮುಕ್ತನಾಗುವ ಮಾರ್ಗವೆಂದು ನನ್ನ ತಿಳುವಳಿಕೆ. ಅದೇ ನನಗೆ ಪರಮಧರ್ಮ. ಅವಿ ನನಗೆ ಪರತರ ಮೋಕ್ಷ.

ಬರೆಯುವುದು ಮತ್ತು ವ್ಯಾಖ್ಯಾನ ಮಾಡುವುದು ನನಗೆ ಮೊದಲಿನಿಂದಲೂ ಬಲು ಇಷ್ಟ ಸ್ವದೇಶಿ ವಸ್ತುಗಳ ಮೇಲಿನ ಮೋಹ, ಟಿಳಕರ ಮೇಲಿನ ಭಕ್ತಿ. ಗಾಂಧೀಜಿಯವರ ಮಾರ್ಗದರ್ಶನ ನನ್ನ ಜೀವನವನ್ನು ಬಹುವಾಗಿ ರೂಪಿಸಿದವು. ೧೯೩೬ರ ಶ್ರಾವಣ ಮಾಸದಲ್ಲಿ ಆಲಮಟ್ಟಿಯ ವೀರಶೈವ ವಿದ್ಯಾಲಯದಲ್ಲಿ ಅನ್ನದಾನೇಶ್ವರಸ್ವಾಮಿಗಳು, ಧಾರವಾಡದ ಮೃತ್ಯುಂಜಯ ಅಪ್ಪಗಳು, ಹಾವೇರಿಯ ಸ್ವಾಮಿಗಳು ಹಾಗೂ ಬಂಥನಾಳಸ್ವಾಮಿಗಳನ್ನು ಕರೆಯಿಸಿ, ಉಪನ್ಯಾಸ ಮಾಲೆಗಳನ್ನು ಏರ್ಪಡಿಸಿದ್ದೆ. ಆಲಮಟ್ಟಿಯ ಶ್ರೀ ಪಾಟೀಲ ನೂರಂದಯ್ಯನವರು, ಶ್ರೀ ಗುಡಗುಂಟಿ ರಾಚಯ್ಯನವರು, ಬಾಗಲಕೋಟೆಯ ಬಶೆಟ್ಟೆಪ್ಪ ಹಲಕುರ್ಕಿ ಮತ್ತು ಶಿವಸಂಗಪ್ಪ ಕುಪ್ಪಸದ ಎಂಬ ವ್ಯಾಪಾರಸ್ಥರು. ಮುದ್ದೇಬಿಹಾಳದ ಚೆನ್ನವೀರಪ್ಪ ಮೋಟಗಿ, ವಿಜಾಪುರದ ರಾವಬಹದ್ದೂರ ಫ. ಗು. ಹಳಕಟ್ಟಿ ಇವರೆಲ್ಲ ನನ್ನ ಮೇಲಿನ ಅಭಿಮಾನದಿಂದ ನನ್ನ ಎಲ್ಲ ಕಾರ್ಯಗಳಿಗೂ ಸದಾ ನೆರವನ್ನು ಸಕಲ ರೀತಿಯಿಂದಲೂ ಕೊಡುತ್ತಿದ್ದರು.

ಶ್ರೀಮನ್ನಿರಂಜನ ಪ್ರ. ಸ್ವ. ಶ್ರೀ ಮೃತ್ಯುಂಜಯಸ್ವಾಮಿಗಳು, ಧಾರವಾಡ ಇವರು ಆಗಾಗ್ಗೆ ಆಲಮಟ್ಟಿ ವೀರಶೈವ ವಿದ್ಯಾಲಯಕ್ಕೆ ಆಗಮಿಸಿ, ತಿಂಳುಗಟ್ಟಲೆ ವಾಸವಾಗಿದ್ದು, ಶಿವಾನುಭವಗೋಷ್ಠಿ ನಡೆಯುವಂತೆ ವ್ಯವಸ್ಥೆ ಮಾಡಿಕೊಡುತ್ತಿದ್ದರು. ೧೯೩೭ರಲ್ಲಿ ಸ್ಥಾಪಿತವಾದ ವೀರಶೈವ ತತ್ವಪ್ರಚಾರ ಸಂಘ ಸ್ವಾಮೀಜಿಗಳ ಪ್ರೋತ್ಸಾಹದಿಂದ ಹೆಚ್ಚು ಪ್ರಚಾರವನ್ನು ಪಡೆದು, ಜನತೆಯಲ್ಲಿ ರಚನಾತ್ಮಕ

ಜಾಗೃತಿಯನ್ನು ಉಂಟುಮಾಡಿತು. **ಶರಣಸಂದೇಶ** ಪತ್ರಿಕೆಯನ್ನಂತೂ ಎಷ್ಟೇ ತೊಂದರೆಗಳಿದ್ದರೂ, ನಿಯಮಿತವಾಗಿ ಪ್ರಕಟಿಸುತ್ತಿದ್ದೆ. ನನ್ನ ಪತ್ರಿಕೆಯಲ್ಲಿ ಎಂದೂ ಕೀಳು ಅಭಿರುಚಿಯ ಬರಹಗಳನ್ನು ಪ್ರಕಟಿಸುತ್ತಿರಲಿಲ್ಲ. ಕೇವಲ ದೇಶಭಕ್ತಿ ಪ್ರೇರಕವಾದ ಹಾಗೂ ಸಮಾಜ ಸುಧಾರಣೆಗೆ ಸಹಾಯಕವಾದ ಲೇಖನಗಳನ್ನು ಓದುಗರಿಗೆ ಮಾರ್ಗದರ್ಶನ ಮಾಡಬಲ್ಲ ಸುದ್ದಿಗಳನ್ನು, ವಿಚಾರಪರವಾದ ಸಂಪಾದಕೀಯ ಬರಹಗಳನ್ನು ಪ್ರಕಟಿಸುತ್ತಿದ್ದೆ. ಅಲ್ಲದೆ ತರುಣ ಬರಹಗಾರರಿಗೆ ಉತ್ತೇಜನ ಕೊಡುತ್ತಿದ್ದೆ. ಕೇವಲ ಹಣದಾಸೆಗಾಗಿ ಪ್ರಕಟಿಸದೆ ಪತ್ರಿಕೆಯ ಪಾವಿತ್ರ್ಯಕ್ಕೆ ಕುಂದು ಬರದಂತೆ ಎಚ್ಚರ ವಹಿಸುತ್ತಿದ್ದೆ. ನನ್ನ ಪತ್ರಿಕೆಯಲ್ಲಿ ದೋಷಾರೋಪಣೆಗಳ ದೊಂಬರಾಟ ನಡೆಸದೆ, ಅದು ಜ್ಞಾನಪ್ರಸಾರದ ಕೈದೀವಿಗೆಯಾಗಬೇಕೆಂದು, ಪ್ರಗತಿಪರ ವಿಚಾರಗಳಿಂದ ತರುಣರಿಗೆ ಸ್ಫೂರ್ತಿಯ ಸಲಹೆಯನ್ನು ಒದಗಿಸುತ್ತದೆ. ನನ್ನ ಪತ್ರಿಕೆಯಲ್ಲಿ ಕೆಲಸಕ್ಕೆ ಬಾರದ ಜಾಹಿರಾತುಗಳನ್ನು ಹಾಗೂ ನಂಬಲನರ್ಹವಾದ ವಾರಭವಿಷ್ಯ ಮುಂತಾದವುಗಳನ್ನು ಪ್ರಕಟಿಸುತ್ತಿರಲಿಲ್ಲ. ಕೆಲವು ಗೆಳೆಯರಿಂದ ವಾರಭವಿಷ್ಯ ಪ್ರಕಟಿಸಲು ಸಲಹೆ ಬಂದಾಗ, ಅವರಿಗೆ ಸ್ಪಷ್ಟವಾಗಿ ಹೇಳಿದೆ. ನನಗೆ ನಂಬಿಕೆ ಇಲ್ಲದ ಭವಿಷ್ಯ ನನ್ನ ಜನಗಳಿಂದ ಹೇಗೆ ಓದಿಸಲಿ? ಭವಿಷ್ಯದ ದುಶ್ಚಟವುಳ್ಳ ವಾಚಕರ ದೊಡ್ಡ ಬಳಗಿಕ್ಕಿಂತಲೂ ನಿಷ್ಠಾವಂತ ವಾಚಕರ ಚಿಕ್ಕ ಬಳಗಬೇ ಸಾಕು. ನನಗೆ ಬಸವಣ್ಣನವರೊಬ್ಬರೇ ಪ್ರೇಮಾದರದ ಮೂರ್ತಿಯಾಗಿರದೇ ಬುದ್ಧ, ಮಹಾವೀರ, ಪರಮಹಂಸ, ಗುರುನಾನಕ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಠಾಕೂರ, ಮದನ ಮೋಹನ ಮಾಲವೀಯ ಹಾಗೂ ಗಾಂಧೀಜೀ ಮೊದಲಾದ ಮಹಾವಿಭೂತಿ ಪುರುಷರ ಬಗೆಗೆ ಅಷ್ಟೇ ಆದರವಿತ್ತು. ಈ ಎಲ್ಲ ಮಹಾಪುರುಷರ ಭಾವಚಿತ್ರಗಳನ್ನು ನನ್ನ ಪತ್ರಿಕೆ ಶರಣಸಂದೇಶದ ಮುಖಪುಟದಲ್ಲಿ ಮುದ್ರಿಸುತ್ತಿದ್ದೆ.

೧೯೩೬ರ ಮಾರ್ಚ ತಿಂಗಳ ಆದಿಯಲ್ಲಿ ನಾಗಪುರದಲ್ಲಿ ಶ್ರೀ ಲಾಲಭಾವು ಗೋಖಲೆ ಮತ್ತು ಸೌ ಉಮಾತಾಯಿ ಗೋಖಲೆ ದಂಪತಿಗಳು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡರೆಂಬ ಹೃದಯವಿದ್ರಾವಕ ಸಂಗತಿ ಪ್ರಕಟವಾಗಿ, ನನ್ನ ಮನವನ್ನು ಕಲುಕಿತು. ಈ ದಂಪತಿಗಳಿಗೆ ಪ್ರಮಿಳಾದೇವಿ ಎಂಬ ಸಂಸ್ಕೃತದಲ್ಲಿ ಪಾಂಡಿತ್ಯವಿದ್ದ ಸುಶಿಕ್ಷಿತ ಹೆಣ್ಣುಮಗಳಿದ್ದಳು. ಅವಳು ಕಲ್ಕತ್ತಾ ವಿಶ್ವವಿದ್ಯಾಲಯದ ಕಾವ್ಯತೀರ್ಥ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ, ಶ್ರೀ ಮರ್ಹಾಡ ಪಾಂಡೆವರಲ್ಲಿ ವಿದ್ಯಾಭ್ಯಾಸ ಮಾಡಿದ್ದಳು. ಕೊನೆಗೆ ಅವರನ್ನೇ ರಜಿಸ್ಟರ ಪದ್ಧತಿಯಂತೆ ಮೊದಲು ಲಗ್ನವಾಗಿ, ಆಮೇಲೆ ಧಾರ್ಮಿಕ ವಿಧಿಯಂತೆ ಮಾರ್ಚ ಆದಿಯಲ್ಲಿ ಲಗ್ನವಾಗಿದ್ದಳು. ಆದರೆ ಮಗಳ ಪ್ರೇಮವಿವಾಹದಿಂದ ಆಘಾತಗೊಂಡು ಆತ್ಮಹತ್ಯೆ ಮಾಡಿಕೊಂಡ ಗೋಖಲೆ ದಂಪತಿಗಳ ಬಗ್ಗೆ ಅತೀವ ಕನಿಕರವೆನಿಸಿ **ಶರಣಸಂದೇಶ**ದಲ್ಲಿ ವಿವರವಾಗಿ, ಈ ಘಟನೆಯನ್ನು ಪ್ರಸ್ತಾಪಿಸಿದೆ. ಏಕೆಂದರೆ, ವಿವಾಹವು ಸಮಾಜ ವ್ಯವಸ್ಥೆಗೆ ಸಂಬಂಧಪಟ್ಟಿದ್ದು, ಈಗಿನ ಮತ್ತು ಮುಂದಿನ ಜನಾಂಗದ ಹಿತಾಹಿತಗಳಿಗೆ ಸಂಬಂಧಪಟ್ಟಿದ್ದು. ರಾಷ್ಟ್ರದ ಉನ್ನತಾವನತಿಗಳಿಗೆ ಮುಖ್ಯ ಕಾರಣವಾದುದು. ಆದುದರಿಂದ ದೇಶದೇಳಿಗೆಯನ್ನು ಇಚ್ಛಿಸುವವರು ವಿವಾಹದ ವಿಷಯದಲ್ಲಿಯೂ ಕಾಲಮಾನಕ್ಕನುಗುಣವಾದ ರೀತಿ ನೀತಿಗಳನ್ನು ಅನುಸರಿಸಬೇಕು. ಸುಶಿಕ್ಷಿತ ತರುಣ ತರುಣಿಯರ ಪ್ರಾಪಂಚಿಕ ಪ್ರೇಮಸೂತ್ರವೂ ತಮ್ಮ ಅಧೀನದಲ್ಲಿರಬೇಕೆಂದು ಈ ಕಾಲದಲ್ಲಿಯೂ ತಾಯಿ ತಂದೆಗಳು ಅಪೇಕ್ಷಿಸುವುದು ಅನುಚಿತವೂ ಅನರ್ಥಕರವೂ ಅಲ್ಲವೇ? ಅನೇಕ ವಿವಾಹ ವಿಚ್ಛೇದನೆಗಳಾಗುವುದಕ್ಕೂ, ವ್ಯಭಿಚಾರವೃತ್ತಿ ಹೆಚ್ಚುವುದಕ್ಕೂ ಸುಪ್ರಜಾ ಜನನಕ್ಕೆ ಅವಕಾಶವಿಲ್ಲದಿರುವುದಕ್ಕೂ, ತಾಯಿ ತಂದೆಗಳು ತಮ್ಮ ಮಕ್ಕಳ ವಿವಾಹದ

ವಿಷಯದಲ್ಲಿ ಇಂತಹ ದುರಾಗ್ರಹವುಳ್ಳವರಾಗಿರುವುದೇ ಕಾರಣವಾಗಿದೆ. ಆಧುನಿಕರಲ್ಲಾಗುತ್ತಿರುವ ವಿಚಾರಕ್ರಾಂತಿಯನ್ನು ಲಕ್ಷಿಸಿ, ತಾಯಿ ತಂದೆಗಳು ತಮ್ಮ ಪ್ರೌಢ, ಸುಶೀಕ್ಷಿತ ಮಕ್ಕಳ ಲಗ್ನದ ವಿಚಾರದಲ್ಲಿ ಸಲಹೆಯನ್ನು ಕೊಡಬೇಕೇ ವಿನಃ ಆಗ್ರಹಪಡಿಸುವುದು ಯುಕ್ತವಲ್ಲ, ಗೋಖಲೆ ದಂಪತಿಗಳ ಆತ್ಮಹತ್ಯೆ ಅನೇಕ ತಾಯಿ ತಂದೆಗಳಿಗೆ ಈ ವಿಧವಾದ ತಿಳುವಳಿಕೆ ಮಾಡಿದರೆ ಅದೊಂದು ಆತ್ಮಯಜ್ಞವಾಗಿ ಪರಿಣಮಿಸೀತು.

ಮುಂಬೈ ಮಹಾನಗರದಲ್ಲಿ ನಡೆದ ಕರ್ನಾಟಕ ಸಾಹಿತ್ಯ ಸಮ್ಮೇಳನದ ಮೂಲಕ ಗಡಿ ಭಾಗಗಳಲ್ಲಿ ಕನ್ನಡ ಪ್ರಚಾರಕರನ್ನು ನೇಮಿಸಲು ಕರೆಕೊಟ್ಟೆನು. ನೆರೆ ಭಾಷೆಗಳ ಆಕ್ರಮಣ ಗಡಿಭಾಗಗಳಲ್ಲಿ ಆಗದಂತೆ ನೋಡಿಕೊಳ್ಳುವುದು ಈ ಕನ್ನಡ ಪ್ರಚಾರಕರ ಕೆಲಸವಾಗಬೇಕೆಂದು ಒತ್ತಾಯಿಸಿದೆನು.

ಬ್ರಾಹ್ಮಣ ಮತ್ತು ಜಂಗಮ ಆರಾಧನೆಗಳಿಗಿಂತ ಅಸ್ಪೃಶ್ಯರ ಆರಾಧನೆಯೇ ದೇಶಕ್ಕೆ ಹೆಚ್ಚು ಕ್ಷೇಮಕರವೆಂದು ಭಾವಿಸಿದ್ದ ನಾನು, ಆದಿಜನರೂ, ಡಾ. ಅಂಬೇಡ್ಕರರೂ, ಧರ್ಮಾಂತರ ಹೊಂದುವ ಮಾರ್ಗವನ್ನು ಅನುಸರಿಸುವುದು ನ್ಯಾಯವಲ್ಲ ಮತ್ತು ಕ್ಷೇಮಕರವೂ ಅಲ್ಲ ಎಂದು ವಾದಿಸಿದೆ. ಧರ್ಮಾಂತರ ಹೊಂದಲು ಈಗ ಇವರು ಹೇಳುತ್ತಿರುವ ಕಾರಣ ಅಸಂಗತವಾದುದಾಗಿದೆ. ಮನೆಯಲ್ಲಿ ತಗಣಿ ಕಚ್ಚಿದರೆ ಮನೆಯನ್ನೇ ಸುಡುವುದೇ? ನೆಗಡಿ ಬಂದರೆ ಮೂಗನ್ನೇ ಕೊಯ್ಯುವುದೇ? ಎಂದು ಪ್ರಬಲವಾಗಿ ಪ್ರತಿಪಾದಿಸಿದೆ.

ಬ್ರಿಟಿಷರ "ಒಡಕು ಹುಟ್ಟಿಸಿ ಒಡೆತನ ಮಾಡುವ" ನೀತಿಯು ಅತ್ಯಂತ ಕುಟಿಲವಾಗಿತ್ತು. ಏಕೆಂದರೆ ಹಿಂದುಸ್ತಾನದಲ್ಲಿ ಒಡಕು ಹುಟ್ಟಿಸಲು ಅನೇಕ ಅನುಕೂಲತೆಗಳಿವೆ. ಇಲ್ಲಿಯ ಜಾತೀಯ ದುರಭಿಮಾನ. ರಾಷ್ಟ್ರಿಯ ಭಾವನೆಯ ಅಭಾವ ಮುಂತಾದ ಸಂಗತಿಗಳು ಇದ್ದವು. ಜಾತೀಯ ನಿರ್ಣಯುವನ್ನು ತೆಗೆದುಹಾಕಿಸಿ, ರಾಜಕಾರಣದಲ್ಲಿ ಎಲ್ಲ ಜಾತಿಯುವರು ಪರಸ್ಪರ ಸಹಾಯಕರಾಗುವಂತಹ ಪರಿಸ್ಥಿತಿಯನ್ನುಂಟು ಮಾಡುವುದೇ ಜಾತಿಯ ಒಡಕನ್ನು ಕಳೆಯುವ ನಿಜವಾದ ರೀತಿಯು. ಈ ಒಡಕು ಹೋದಾಗಲೇ ಹಿಂದೂಸ್ಥಾನದ ಮೇಲೆ ಅನ್ಯರ ಒಡೆತನವೂ ಇಲ್ಲದಂತಾಗುವುದು ಎಂದು ಬಲವಾಗಿ ಪ್ರತಿಪಾದಿಸಿದೆ. ಅಂತೆಯೇ ಶರಣ ಸಂದೇಶದಲ್ಲಿ ಸಾಂದರ್ಭಿಕವಾಗಿ ಕಾಲಕಾಲಕ್ಕೆ ಈ ಕುರಿತು ಪ್ರಕಟಣೆಗಳನ್ನು ಹೊರಡಿಸುತ್ತಿದ್ದೆ.

ರಾಜಕಾರಣದ ಅನೇಕ ಸನಾತನಿಗಳು ತಮ್ಮ ಜಾತಿ ಹೆಚ್ಚಿನದು. ಕಾಂಗ್ರೆಸ್ಸೇತರ ರಾಜಕೀಯ ಜಾತಿಗಳೆಲ್ಲ ಅಸ್ಪೃಶ್ಯ ಜಾತಿಗಳು. ಅವು ರಾಷ್ಟ್ರದ್ರೋಹದ ಜಾತಿಗಳು, ಅವು ತಲೆ ಎತ್ತದಂತೆ ಶಕ್ಯವಿದ್ದ ಎಲ್ಲ ಪ್ರಯತ್ನಗಳನ್ನು ಮಾಡುವುದು ಆ ಕಾಲದ ರಾಷ್ಟ್ರಭಕ್ತಿಯ ದ್ಯೋತಕವೇ ಆಗಿದ್ದಿತು. ಇದನ್ನು ಖಂಡಿಸಿ ದಿನಾಂಕ ೧೩.೯.೧೯೩೭ರ **ಶರಣಸಂದೇಶ**ದಲ್ಲಿ ಸವಿಸ್ತಾರವಾಗಿ ಲೇಖನವನ್ನು ಬರೆದು. ಈ ದೇಶದಲ್ಲಿ ಸ್ಥಾಪನೆಯಾಗುವ ಸ್ವರಾಜ್ಯವು ಸುರಾಜ್ಯವೂ ಆಗಬೇಕಾಗಿದೆ. ಹಾಗಾಗಬೇಕಾದರೆ ತೀರ ಚಿಕ್ಕದಾದ ಭಿನ್ನ ರಾಜಕೀಯ ಪಕ್ಷವೂ ರಾಜಕಾರಣಿಗಳಿಗೆ ಅಸ್ಪೃಶ್ಯವಾಗಬಾರದು. ಇಂತಹ ಸ್ಥಿತಿಯನ್ನು ಉಂಟುಮಾಡುವುದು ಈಗ ಮುಖಂಡರ ಹೊಣೆಯಾಗಿದೆ. ರಾಜಕಾರಣದಲ್ಲಿಯ ಅಸ್ಪೃಶ್ಯತೆ ನಿವಾರಣೆಯಾಗುವಂತೆ ಪ್ರಮುಖರು ಈಗಿನಿಂದಲೇ ಪ್ರಯತ್ನಿಸಬೇಕೆಂದು ಕಳಕಳಿಯಿಂದ ನಿವೇದಿಸಿಕೊಂಡೆ.

೧೯೩೭ರ ಸಪ್ಟಂಬರ್ ೨೦ ಚೈನಾದೇಶದ ದಿನ ವೆಂದು ಆಚರಿಸಲ್ಪಟಬೇಕೆಂದು ರಾಷ್ಟ್ರೀಯ ಸಭಾಧ್ಯಕ್ಷರಾದ ಪಂಡಿತ ಜವಾಹರಲಾಲ ನೆಹರೂರವರು ರಾಷ್ಟ್ರಕ್ಕೆ ವಿಜ್ಞಾಪಿಸಿಕೊಂಡಿದ್ದರು. ಜಪಾನದೇಶವು ಅನ್ಯಾಯವಾಗಿ ಚೀನಾದೇಶವನ್ನು ಆಕ್ರಮಿಸಿಕೊಳ್ಳುತ್ತ ಅನೇಕ ಚೀನಿ ಹೆಣ್ಣು ಮಕ್ಕಳ ಮೇಲೂ ಹುಡುಗರ ಮೇಲೂ ನಿರಯುಧರಾದ ನಾಗರಿಕರ ಮೇಲೂ ಬಾಂಬುಗಳನ್ನು ಎಸೆದು ಮಾಡುತ್ತಿರುವ ಬಹು ನಿಂದ್ಯಕೃತಿಗಳನ್ನು ನಿಷೇಧಿಸುವುದೇ ಈ ಚೈನಾ ದಿನದ ಉದ್ಧೇಶವಾಗಿತ್ತು. ಹಿಂದುಸ್ಥಾನದವರಾದ ನಾವು ಈ ಮುಂಚೆ ಅಭಿಸೀನಿಯಾ ದಿನವನ್ನು ಆಚರಿಸಿದೆವು. ಆ ಮೇಲೆ ಪ್ಯಾಲೆಸ್ಥೈನ್ ದಿನವನ್ನು ಆಚರಿಸಿದೆವು. ಈ ದಿನ ಚೈನಾ ದಿನವನ್ನು ಆಚರಿಸುತ್ತಿದ್ದೇವೆ. ಇನ್ನು ಮೇಲೆ ಯಾವ ದೇಶದ ದಿನವನ್ನು ಆಚರಿಸುವ ಪ್ರಸಂಗ ಬರುತ್ತದೆಯೋ? ನಾವೇನೋ ಇಂತಹ ಅನೇಕ ಬಲಹೀನ ದೇಶಗಳ ದಿನವನ್ನಾಚರಿಸುತ್ತಿದ್ದೇವೆ. ಆದರೆ ಹಿಂದುಸ್ತಾನದ ದಿನವನ್ನು ಪ್ರಪಂಚದ ಬೇರೆ ಯುವ ರಾಷ್ಟ್ರಗಳಾದರೂ ಆಚರಿಸುತ್ತಲಿವೆಯೋ? ಇಲ್ಲವೇ ಇಲ್ಲ. ಈ ವಿಷಯ ಖಂಡಿಸಿ ಲೇಖನಗಳನ್ನು ಬರೆದೆ. ಸಾಮ್ರಾಜ್ಯದ ದುರಾಶೆ ಪಾಶ್ಚಾತ್ಯರಲ್ಲಿದ್ದರೇನೇ ಅನರ್ಥಕರವೆಂದಲ್ಲ; ಪೌರಾತ್ಯರಲ್ಲಿದ್ದರು ಅಪಾಯಕರವೇ ಸರಿ. ಇದಕ್ಕೆ ಜಪಾನದ ಈಗಿನ ನಿಂದ್ಯಕಾರ್ಯಗಳೇ ದೃಷ್ಟಾಂತವಾಗಿವೆ. ಪ್ರಪಂಚದ ದುರ್ಬಲ ರಾಷ್ಟ್ರಗಳ ಸಂರಕ್ಷಣೆಗಾಗಿ ಏರ್ಪಟ್ಟ ರಾಷ್ಟ್ರ ಸಂಘವು, ಇಟಲಿಯು ಅಬಿಸೀನಿಯ ರಾಷ್ಟ್ರವನ್ನು ನುಂಗುತ್ತಿದ್ದಾಗ ಕಣ್ಣು ಮುಚ್ಚಿ ಕುಳಿತ ಘಟನೆಯನ್ನು ಖಂಡಿಸಿ ಬರೆದೆನು. ಜಪಾನದ ಆಕ್ರಮಣನೀತಿ ನೈತಿಕ ದೃಷ್ಟಿಯಿಂದಲೂ, ಹಿಂದೂಸ್ತಾನದ ಹಿತದೃಷ್ಟಿಯಿಂದಲೂ ತುಂಬಾ ನಿಷಿದ್ದವಾದುದು. ಬಲಹೀನರ ಬವಣೆಯನ್ನು ಹೆಚ್ಚಿಸುವಂಥದು ಆಗಿರುವುದರಿಂದ ಇದು ಜಾಗೃತೆ ನಿಲ್ಲಲೆಂದೇ ನಾನು ಹಾರೈಸಿದೆ.

೧೯೩೮ರ ಹೊತ್ತಿಗೆ ೪೦ ಚಿಕ್ಕ ದೊಡ್ಡ ಪುಸ್ತಕಗಳನ್ನು ಬರೆದು, ಸಾಧಾರಣ ಎರಡು ಲಕ್ಷ ಪ್ರತಿಗಳನ್ನು ಪ್ರಸಾರಗೊಳಿಸಿದ್ದೆನು. ವಿಜಾಪೂರ ಜಿಲ್ಲೆಯಲ್ಲಿ ಪ್ರತಿ ಹಳ್ಳಿಗೂ ಹೋಗಿ ಭಾಷಣ ಮಾಡಿ, ಜನಜಾಗೃತಿ ಮಾಡಲು ಪ್ರಯತ್ನಿಸಿದೆ. ಬಸವ ಜಯಂತಿ, ಅಕ್ಕಮಹಾದೇವಿ ಜಯಂತಿ, ನಾಡಹಬ್ಬ ಇಂತಹ ಹಲವಾರು ಪ್ರಸಂಗಗಳನ್ನು ಆಚರಿಸಲು ಕರೆಕೊಟ್ಟು, ರಾಷ್ಟ್ರೀಯ ಧರ್ಮದ ಮತ್ತು ಸ್ವಾತಂತ್ರ್ಯದ ಅಗತ್ಯತೆಯ ಪ್ರಚಾರವನ್ನು ಮಾಡಿದೆ. ಹೀಗಾಗಿ ಹಳ್ಳಿಗಳಲ್ಲಿ ಜನ ನನ್ನನ್ನು **"ಭಾಷಣದ ಮಾಮಲೇದಾರ"** ಎಂದು ಕರೆಯುವ ಪರಿಪಾಠವೇ ಬಿದ್ದಿತ್ತು. ೧೯೩೮ರಷ್ಟೊತ್ತಿಗೆ ೨೦೦ ಸ್ಥಳಗಳಲ್ಲಿ ಒಂದು ಸಾವಿರಕ್ಕಿಂತಲೂ ಹೆಚ್ಚು ಭಾಷಣ ಮಾಡಿದ್ದೆ. ಪಾಶ್ಚಾತ್ಯ ಲೇಖಕ ಹರ್ಭರ್ಟ ಸ್ಪೆನ್ಸರ್ ಹೇಳಿದ: ತನಗಾಗಿ ಕಾರ್ಯಗಳಿವೆಯೇ ವಿಹಂ ಕಾರ್ಯಗಳಿಗಾಗಿ ತಾನಿಲ್ಲ ಎಂಬ ಮಾತು ನನಗೆ ಬಹಳೇ ಪ್ರಿಯವಾದ ವಾಕ್ಯವಾಗಿತ್ತು. ಯಾವುದೇ ವಿಧವಾದ ವೈಯಕ್ತಿಕ ಮಹತ್ವಾಕಾಂಕ್ಷೆಗಳು ನನಗಿರಲಿಲ್ಲ. ನನ್ನ ಬಾಳಿಗೆ ವಚನಕಾರರ ತತ್ವಗಳು, ಬಸವೇಶ್ವರರ ಜೀವನ ಮತ್ತು ಬೋಧೆ ಹಾಗೂ ಸ್ವಾಮಿ ರಾಮತೀರ್ಥರ ವಿಚಾರಸರಣಿ ನನ್ನ ಮೇಲೆ ಬಹಳೇ ಪ್ರಭಾವ ಬೀರಿದ್ದವು. ಆದಿಜನರ ಸುಧಾರಣೆ, ಹಿಂದೂ ಸಂಘಟಣೆ, ಕರ್ನಾಟಕ ಏಕೀಕರಣ ಭಾರತೀಯ ಸ್ವಾತಂತ್ರ್ಯ ಇವು ನನ್ನನ್ನು ಹಗಲಿರುಳು ಕಾಡುತ್ತಿದ್ದ ಸಮಸ್ಯೆಗಳು, ಪತ್ರಿಕೋದ್ಯಮ, ಗ್ರಂಥರಚನೆ, ಜೀವನಶಿಕ್ಷಣ, ಖಾದೀ ಪ್ರಚಾರ ಇವುಗಳೊಂದಿಗೆ ನನ್ನಕಲ್ಪನೆಯ ಕೂಸಾದ ಆಲಮಟ್ಟಿಯ ವೀರಶೈವ ವಿದ್ಯಾಲಯವನ್ನು ನಡೆಸಿಕೊಂಡು ಹೋಗಬೇಕಾಗಿದ್ದಿತು. ಸರ್ಕಾರಿ ನೌಕರಿಯ ವ್ಯಾಮೋಹವೇ

ಹೆಚ್ಚಾಗಿದ್ದ ಅಂದಿನ ಕಾಲದಲ್ಲಿ ನನ್ನ ಗುರುಕುಲ ಶಿಕ್ಷಣ ಪದ್ಧತಿ, ಕಾಯಕ ಶಿಕ್ಷಣ ಮತ್ತು ನೈತಿಕ ಶಿಕ್ಷಣ ಹಾಗೂ ಗಾಂಧೀಜಿಯವರ ಜೀವನ ಶಿಕ್ಷಣ ಇವುಗಳನ್ನೊಳಗೊಂಡ ನನ್ನ ವಿದ್ಯಾಲಯದ ಶೈಕ್ಷಣಿಕ ಮಹತ್ವವನ್ನು ಜನತೆ ಅರಿಯಲಾರದೇ ಹೋಯಿತು. ಇನ್ನೊಂದೆಡೆ ವಿದ್ಯಾಲಯದ ಶಿಸ್ತಿನ ಕಟ್ಟುನಿಟ್ಟುಗಳಿಗೆ ಒಳಗಾಗದ ವಿದ್ಯಾರ್ಥಿಗಳಿಂದ ಸಂಖ್ಯಾಬಲ ಕುಗ್ಗಿತು. ಈ ವಿದ್ಯಾಲಯದ ಯೋಜನೆ ಅಷ್ಟೊಂದು ಸರಿಯಾಗಿ ವ್ಯಾಪಕವಾದ ಪ್ರಚಾರವನ್ನು ಪಡೆಯಲಿಲ್ಲ. ನನ್ನ ಮೇಲಿನ ಅಭಿಮಾನದಿಂದ ಹಾವೇರಿಯ ಮಾಗಾವಿ ಚನ್ನಬಸಪ್ಪನವರು ತಮ್ಮ ಇಬ್ಬರು ಮಕ್ಕಳನ್ನು ವಿದ್ಯಾಲಯಕ್ಕೆ ಕಳಿಸಿದ್ದರು. ಅಥರ್ಗಾದ ಸಿಂದಗಿಯ ಶಿವಲಿಂಗಣ್ಣ, ಕಮತರ ಗುರುಪ್ಪ ಈ ಶಿಸ್ತಿನ ಸೈನಿಕರೊಂದಿಗೆ ಆದಷ್ಟು ಚುರುಕಾಗಿ, ಇದ್ದುದರಲ್ಲಿಯೇ ಹೆಚ್ಚು ಶಿಸ್ತಿನಿಂದ ವಿದ್ಯಾಲಯವನ್ನು ನಡೆಸಿದ್ದೆನು. ಮಕ್ಕಳ ಮಾಲೆಯ ಜೊತೆಗೆ ಜ್ಞಾನೋದಯ ಗ್ರಂಥಮಾಲೆಯ ಪ್ರಕಟಣೆಯನ್ನು ಆರಂಭಿಸಿದೆನು.

ಯಾವ ಸಂಘ ಸಂಸ್ಥೆಗಳಿಗೂ ಸೇರದೆ, ನಾನೇ ಸಂಘ ಸಂಸ್ಥೆಗಾಗಿ, ರಾಷ್ಟ್ರೀಯ ದೃಷ್ಟಿಯನ್ನು ಪ್ರಸಾರಮಾಡುವ ಹಂಬಲದಿಂದ ರಾಷ್ಟ್ರೀಯ ಐಕ್ಯತೆ ಹಾಗೂ ಪ್ರಗತಿಗಳನ್ನೇ ಜೀವನದ ಗುರಿಯನ್ನಾಗಿಟ್ಟುಕೊಂಡಿದ್ದೆನು.

೧೯೩೮ರಲ್ಲಿ ರಾಮದುರ್ಗದಲ್ಲಿ ದುರಂತ ನಡೆದಾಗ ಮಹಾತ್ಮ ಗಾಂಧೀಜಿಯವರು ತಮ್ಮ ಹರಿಜನ ಪತ್ರಿಕೆಯಲ್ಲಿ ಏಕಪಕ್ಷಿಯವಾಗಿ ಲೇಖನ ಬರೆದುದು ನನಗೆ ಹಿಡಿಸದೆ, ನಾನು ಸೌಹಾರ್ದಯುತವಾಗಿ, ಮೃದುವಾದ ಭಾಷೆಯಲ್ಲಿ ಖಂಡಿಸಿ ಹೊರಗಿನ ನ್ಯಾಯಾಧೀಶರೊಬ್ಬರನ್ನು ಕರೆಯಿಸಿ, ನಿಷ್ಪಕ್ಷಪಾತವಾದ ವಿಚಾರಣೆಯಾಗಬೇಕೆಂದು ಸೂಚಿಸಿದೆ. ರಾಮದುರ್ಗ ಪ್ರಕರಣದಲ್ಲಿ ಪ್ರಜೆಗಳದೇ ತಪ್ಪು ಎಂದು ದುಡುಕು ನಿರ್ಣಯವನ್ನು ಕೊಡುವಷ್ಟು ಮಹಾತ್ಮಾಜಿಯವರು ದೂರ ಹೋಗಬಾರದಿತ್ತು ಎಂದು ನಯವಾಗಿ ಟೀಕಿಸಿ **ಶರಣಸಂದೇಶ**ದಲ್ಲಿ ಬರೆದೆ. ನನಗೆ ಕೊನೆಕೊನೆಗೆ ಹಿಂದೂ ಮಹಾಸಭೆಯತ್ತ ಒಲವು ಉಂಟಾಯಿತಾದರೂ ರಾಷ್ಟೀಯ ವಿಷಯಗಳಲ್ಲಿ ರಚನಾತ್ಮಕ, ಪಕ್ಷಾತೀತ ದೃಷ್ಟಿಯ ಅಭಿಪ್ರಾಯಗಳನ್ನು ನಿರ್ಭಯವಾಗಿ ಪ್ರಕಟಿಸುತ್ತಿದ್ದೆ. ಟಿಳಕ ಹಾಗೂ ಗಾಂಧೀಜಿಯವರ ಮೇಲೆ ನನಗೆ ಅಪಾರ ಅಭಿಮಾನವಿದ್ದಿತು. ಗಾಂಧೀಜಿಯವರೊಡನೆ ಸಾಬರಮತಿ ಆಶ್ರಮದಲ್ಲಿ ಕಳೆದ ಕೆಲವು ದಿನಗಳು ನನ್ನ ಜೀವನದಲ್ಲಿಯೇ ಅತ್ಯಮೂಲ್ಯವಾದುದು. ಅವರ ಮೇಲೆ ಎಷ್ಟೇ ಅಭಿಮಾನವಿದ್ದರೂ ಅವರ ಹಲವಾರು ವಿಚಾರಸರಣಿಗಳನ್ನು ನಾನು ಮೂಕ ಪ್ರೇಕ್ಷಕನಾಗಿ ಒಪ್ಪಿಕೊಳ್ಳದೆ, ಸೌಹಾರ್ದಯುತವೂ ಸ್ನೇಹಮಯವೂ ಆದ ತರ್ಕ ಬದ್ಧವಾದ ಸರಣಿಯನ್ನು ಪ್ರಕಟಪಡಿಸುತ್ತಿದ್ದೆನು. ಗಾಂಧೀಜಿಯವರು ಆದಿವಾಸಿಗಳನ್ನು ಹರಿಜನರು ಎಂದು ಕರೆಯುವ ಪರಿಪಾಠವನ್ನು ಖಂಡಿಸಿ, ಹರಿ-ಹರ ವಿಚಾರವನ್ನು ಜನಾಂಗದಲ್ಲಿ ತರದೇ ಅವರನ್ನು ಆದಿಜನರು ಎಂದು ಕರೆಯಬೇಕಾಗಿ ವಿನಂತಿಸಿಕೊಂಡೆನು.

೧೯೩೮ರಲ್ಲಿ ಸಾಮ್ರಾಜ್ಯದಾಹ ಹಾಗೂ ಯುದ್ಧದ ಭೀತಿ ಜಗತ್ತನ್ನು ಕಾಡುತ್ತಿದ್ದಿತು. ಹಿಟ್ಲರ್ ಮುಸೋಲಿನಿ, ಫ್ರಾಂಕೋ ಇವರ ಆಕ್ರಮಣ ರೀತಿ ಅವ್ಯಾಹತವಾಗಿ ನಡೆದಿತ್ತು. ಹಂಗೇರಿ ದೇಶದ ಬೋರಿಷ್ಟ ಸಿಲ್ಬಿಜರ್ ಎಂಬ ಜ್ಯೋತಿಷಿ ಯುರೋಪದ ಮಹಾಯುದ್ಧ ೧೯೩೮ರ ಮೇ ತಿಂಗಳಲ್ಲಿ ಆರಂಭವಾಗಿ ೧೯೪೨ರ ವರೆಗೆ ಜರುಗುವುದೆಂದು ಹೇಳಿದ್ದು ಕೇವಲ ಕಾಲ್ಪನಿಕವಲ್ಲ, ಯುರೋಪದವರಿಗಿರುವ ಸಾಮ್ರಾಜ್ಯದಾಹವು ಅಡಗಿದಾಗಲೇ ಲೋಕಕ್ಕೆ ನಿಜವಾದ ಶಾಂತಿಯು.

ಅಂತಹ ಶಾಂತಿಯು ಜಾಗ್ರತೆ ದೊರೆಯಲಿಕ್ಕಾಗಿಯೇ ಹಿಟ್ಲರನ ಸಾಮ್ರಾಜ್ಯದಾಹ, ಆಸ್ಟ್ರಿಯಾ ದೇಶದ ಸ್ವಾಧೀನದ ವಿಚಿತ್ರನೀತಿ, ಜರ್ಮನಿಯ ಅನ್ಯಾಯದ ಅತಿರೇಕ ಇವುಗಳೆಲ್ಲ ನಡೆದಿರಬಹುದೆಂದು ಪರಿಭಾವಿಸಿದೆ. ಒಟ್ಟಿನಲ್ಲಿ ಈ ಯುದ್ಧವು ಈಗ ಜಗತ್ತಿನಲ್ಲಿರುವ ಸಾಮ್ರಾಜ್ಯದಾಹವನ್ನು ಕಡಿಮೆಮಾಡಿ, ಸ್ವಾತಂತ್ರ್ಯದ ಪರೀಕ್ಷೆಯನ್ನು ಹೆಚ್ಚಿಸುವುದೆಂಬುದರಲ್ಲಿ ಸಂದೇಹವಿಲ್ಲ ಎಂಬ ತರ್ಕ ನನ್ನದಾಗಿದ್ದಿತು.

೧೯೩೯ರ ಜನೆವರ ೮ನೇ ದಿನಾಂಕದ ದಿವಸ ತ್ರಿಪುರಾ ಕಾಂಗ್ರೆಸ್ಸಿನ ಪ್ರತಿನಿಧಿಗಳ ಚುನಾವಣೆ ನಡೆಯಿತು. ಸಾಲವನ್ನೂ, ರೋಗವನ್ನೂ ಮುಚ್ಚಿಟ್ಟುಕೊಳ್ಳಬಾರದಂತೆ. ಅದೇ ಪ್ರಕಾರ ಸಾರ್ವಜನಿಕ ಕೆಲಸಗಾರರು ತಮ್ಮ ತಮ್ಮಲ್ಲಿಯ ಭಿನ್ನಾಭಿಪ್ರಾಯಗಳನ್ನು ಮುಚ್ಚಿಟ್ಟುಕೊಳ್ಳಬಾರದು. ಅಗಸಿಯ ಬಾಗೀಲಲ್ಲಿ ಕಟ್ಟಿದ್ದನ್ನು ಅಗಳಿಯ ಸಂದಿನಲ್ಲಿ ತೋರಿಸುವ ಆಪ್ತನಂತೆ ಬಿಚ್ಚು ಮನಸ್ಸಿನವರೆಂದು ತೋರಿಸಿಕೊಳ್ಳುವುದರಲ್ಲಿಯೂ ಫಲವಿಲ್ಲ. ತ್ರಿಪುರಾ ಚುನಾವಣೆಯಿಂದ ಮೂರು ರೂಪದ ತಿಕ್ಕಾಟಗಳು ಬಯಲಿಗೆ ಬಂದವು ೧. ವೈಯಕ್ತಿಯ ಉನ್ನತಿಯ ಆಶೆ ೨. ಜಾತ್ಯಾಂಧತೆ, ೩. ಪ್ರಾಮಾಣಿಕವಾದ ಮತಭೇತ.

ಇವುಗಳಲ್ಲಿ ಮೊದಲಿನ ಎರಡು ತಿಕ್ಕಾಟಗಳು ಅನರ್ಥಕಾರಕಗಳು. ಅವು ಉಳಿಯದಂತೆ ಪ್ರಯತ್ನಿಸಬೇಕಾದದೇ ಇಂದಿನ ಅತ್ಯಗತ್ಯ.

ವಿಧಾಯಕ ಕಾರ್ಯಗಳಿಗೆ ಕ್ಷೇತ್ರವು ಸಾಕಷ್ಟು ವಿಸ್ತಾರವಾಗಿದೆ. ಅಧಿಕಾರಕ್ಕಾದರೋ ಸ್ಥಾನಗಳೂ ಕಡಿಮೆಯಷ್ಟೇ ಎಂದ ಮೇಲೆ ಎಲ್ಲರೂ ಆಕಡೆ ತಿರುಗಿದರೆ ತಿಕ್ಕಾಟ ಹೆಚ್ಚಿ ಅದರಿಂದ ನಂಜು ಹುಟ್ಟುವುದು ಸ್ವಾಭಾವಿಕ

ದಿನಾಂಕ ೨೩.೦೯.೧೯೪೦ನೆಯ ದಿವಸ ಮಹಾತ್ಮಾ ಗಾಂಧೀಜಿಯವರು ವರ್ಧಾದಿಂದ ಹೊರಡಿಸಿದ ಪ್ರಕಟಣೆಯಲ್ಲಿ ನಾನು ವಾಯ್ಸರಾಯ್ ಸಂಗಡ ನಡೆಸಲಿರುವ ಸಂಧಾನ (ಭಾಷಣ ಸ್ವಾತಂತ್ರ್ಯ) ಯಶಸ್ವಿಯಾದರೆ ಹಿಂದುಸ್ಥಾನ ಮತ್ತು ಇಂಗ್ಲಂಡಗಳಿಗೆ ಮಾತ್ರ ಹಿತವಾಗದೆ ಯುದ್ದದಲ್ಲಿ ಸೇರಿರುವ ಎಲ್ಲ ರಾಷ್ಟ್ರಗಳಿಗೂ ಹಿತವಾಗಿ ಶಾಂತಿಯುಂಟಾಗುವುದು. ನಾನು ಕೇಳುವ ಭಾಷಣ ಸ್ವಾತಂತ್ರವು ನನಗೆ ಮೊದಲು ಸಣ್ಣ ವಿಷಯವೆಂದೇ ತೋರಿತು. ಈ ಭಾಷಣ ಸ್ವಾತಂತ್ರ್ಯವು ನಮಗೆ ದೊರೆತರೆ ಸ್ವರಾಜ್ಯದ ಕೀಲಿಕೈ ದೊರೆತಂತೆಯೇ ಸರಿ ಎಂಬ ಗಾಂಧೀಜಿಯವರ ಪ್ರಕಟಣೆಯನ್ನು ನೋಡಿದರೆ ಆಗಿನ ಕಾಲದಲ್ಲಿ ಭಾಷಣಸ್ವಾತಂತ್ರ್ಯದ ಮಹತ್ವ ಅರಿವಾದೀತು.

ಸ್ವಭಾವತಃ ನಾನು ಅಂತರ್ಮುಖಿ, ಆದರೆ ನ್ಯಾಯ ನಿಷ್ಠುರಿ, ನಿರ್ಭೀತ, ನನ್ನ ಭಾಷಣಗಳಲ್ಲಿ ಟೀಕೆ ಟಿಪ್ಪಣಿಗಳಿಲ್ಲದಿದ್ದರೂ ಬರಹಗಳಲ್ಲಿ, **ಶರಣಸಂದೇಶ** ಪತ್ರಿಕೆಯಲ್ಲಿ ಯಾರಿಗೂ ದಾಕ್ಷಿಣ್ಯಪರನಾಗದೆ ಉದ್ದಕ್ಕೂ ನಿರ್ಭೀತ ಬರಹಗಳನ್ನು ಪ್ರಕಟಿಸುತ್ತಿದ್ದೆ.

ಆಲಮಟ್ಟಿಯಲ್ಲಿ ಆಗಾಗ ನನಗೂ ವಿದ್ಯಾಲಯದ ವಿದ್ಯಾರ್ಥಿಗಳಿಗೂ ಮಲೇರಿಯಾ ಜ್ವರ ಕಾಡುತ್ತಿತ್ತು. ನನ್ನ ಸ್ವಭಾವವನ್ನು ತಿಳಿದ ಬಾಗಲಕೋಟೆಯ ಸಕ್ರೋಜಿ ಲಿಂಗಪ್ಪನವರು ತಾವೇ ಮುಂದಾಗಿ ನನ್ನ ಬೇಕು ಬೇಡಗಳನ್ನು ಈಡೇರಿಸುತ್ತಿದ್ದರು. ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾದಂತೆ, ಬಡವಿದ್ಯಾರ್ಥಿಗಳನ್ನಿಟ್ಟುಕೊಂಡೇ ವರ್ಷಾರು ತಿಂಗಳು ಮುದ್ರಣಕಲೆಯನ್ನೇ ಮುಖ್ಯವಾಗಿ ಕಲಿಸುವುದೆಂದು ತೀರ್ಮಾನಿಸಿದೆ.

ಜ್ಯೋತಿಷಿಗಳು ನನಗೆ ೪೮ನೆಯ ವಯಸ್ಸಿನಲ್ಲಿ ಮರಣವಿದೆಯೆಂದು ಹೇಳಿದ್ದರು. ಮೂಲತಃ ನನಗೆ ಜ್ಯೋತಿಷ್ಯದಲ್ಲಿ ನಂಬಿಕೆ ಇರದಿದ್ದರೂ ನಾನೂ ಮಾಡಲೇಬೇಕಾಗಿರುವ, ಉಳಿದಿರುವ ಕೆಲಸಗಳು ನನ್ನನ್ನು ಕಳವಳಕ್ಕಿಡುಮಾಡಿದವು. ೧೯೪೧ರಲ್ಲಿ **ಸುಬೋಧಸಾರ** ಗ್ರಂಥವನ್ನು ಪ್ರಕಟಿಸಿ ಆತ್ಮೀಯರಲ್ಲಿ ಹಂಚಿದೆನು. ವೈಯಕ್ತಿಕವಾಗಿ ಆತ್ಮಚರಿತ್ರೆಯಲ್ಲಿ ನನ್ನ ವೈಯಕ್ತಿಕ ಬದುಕಿನ ಬಗೆಗೆ ಹೇಳಿಕೊಳ್ಳುವಂತಹ ಸಂಗತಿಗಳಿರದಿದ್ದರೂ, ನನ್ನ ಜೀವನ ರಾಷ್ಟ್ರೀಯ ಜೀವನದೊಂದಿಗೆ ಹೊಂದಿಕೊಂಡಿದ್ದರಿಂದ ರಾಷ್ಟ್ರೀಯ ಘಟನೆಗಳೇ ನನ್ನ ಚರಿತ್ರೆಯ ಬಹುಪಾಲು ಪುಟಗಳನ್ನು ನುಂಗಿತು.

ರಾಜಕೀಯ ಚಟುವಟಿಕೆ ನಮ್ಮ ರಾಷ್ಟ್ರದಲ್ಲಿ ಇಷ್ಟೋತ್ತಿಗೆ ಉಗ್ರಸ್ವರೂಪವನ್ನು ಹೊಂದುತ್ತ ಬಂದಿತ್ತು. ಯಾರು ಶಾಸನಭಂಗವನ್ನು ಮಾಡಿ ಜೇಲಿಗೆ ಹೋಗುತ್ತಾರೋ ಅವರೇ ರಾಷ್ಟ್ರ ಸೇವಕ ಎಂಬ ಬಿರುದಿಗೆ ಅರ್ಹರು, ಉಳಿದವರು ಅಲ್ಲ ಎನ್ನುವ ವಾತಾವರಣ ಬಲವಾಗಿತ್ತು. ಜೇಲಿಗೆ ಹೋಗದಿದ್ದವರಿಗೂ ರಾಷ್ಟ್ರಸೇವಕ ಎಂದು ಹೇಳುವುದೆಂದರೆ, ಆ ಮಹಾ ಪಂಚಾಕ್ಷರಿ ಪದವನ್ನು ಅವಮಾನಗೊಳಿಸಿದಂತೆಯೇ ಸರಿಯೆಂದು ಕೆಲವರ ತಿಳುವಳಿಕೆಯಾಗಿತ್ತು. ರಾಷ್ಟ್ರ ಸೇವೆಯ ಅನೇಕ ರೀತಿಗಳಲ್ಲಿ ಅನ್ಯಾಯದ ಶಾಸನಗಳನ್ನು ನಿವಾರಣೆಗೊಳಿಸಲು ಕಾರಾಗೃಹವಾಸವನ್ನು ಅನುಭವಿಸುವುದು ಕೂಡ ರಾಷ್ಟ್ರದ ಒಂದು ಸೇವೆಯೇ ಆಗಿದೆ. ಆದರೆ ಅದು ರಾಷ್ಟ್ರದ ಪರಿಸ್ಥಿತಿಯನ್ನು ಅನುಸರಿಸಿ ಆಚರಿಸಲ್ಪಡತಕ್ಕದಾಗಿದೆ. ಈ ಜೈಲಿನ ಪ್ರವೇಶವೊಂದೇ ರಾಷ್ಟ್ರಸೇವೆಯ ಮಾರ್ಗವೆಂದೂ, ಜೈಲಿಗೆ ಹೋದವರು ಮಾತ್ರವೇ ರಾಷ್ಟ್ರಸೇವಕರೆಂದೂ, ಜೈಲಿಗೆ ಹೋಗುವುದರಿಂದಲೇ ರಾಜಕೀಯ ಸ್ವಾತಂತ್ರ್ಯ ದೊರೆಯುತ್ತದೆಂದೂ, ಜೈಲಿನ ಮಾರ್ಗ ಹಿಡಿಯದ ವ್ಯಕ್ತಿ, ಪಕ್ಷಪಂಗಡಗಳೆಲ್ಲ ಸರಕಾರವನ್ನು ಹಿಂಬಾಲಿಸಿದವುಗಳೆಂದೂ ತಿಳಿಯುವುದು ಸರಿಯಲ್ಲ. ೧೯೪೨ರ ಅಕ್ಟೋಬರ್ ೨೬ ರಂದು **ಶರಣ ಸಂದೇಶ** ಪತ್ರಿಕೆಯಲ್ಲಿ ಈ ವಿಷಯವನ್ನು ಬರೆಯುವದರೊಂದಿಗೆ ಹೀಗೆ ಕರೆಕೊಟ್ಟೆ. ಸೈನ್ಯದಲ್ಲಿ ಸೇರಿದರೆ ಬ್ರಿಟಿಷ ಸರಕಾರಕ್ಕೆ ಸಹಾಯ ಮಾಡಿದಂತಾಗುವುದೆಂಬ ಕಾಂಗ್ರೇಸ್ಸಿನ ತಪ್ಪು ಅಭಿಪ್ರಾಯವನ್ನು ಕನ್ನಡನಾಡಿನ ವೀರತರುಣರು ಲಕ್ಷಿಸದೆ ಮಹಾರಾಷ್ಟ್ರ, ಪಂಜಾಬ ಮೊದಲಾದ ಪ್ರಾಂತಗಳ ವೀರತರುಣರಂತೆ ಈಗ ಮುಂದೆ ಬಂದು, ಕನ್ನಡ ನಾಡು ಕಡುಗಲಿಗಳ ನಾಡೆಂಬುದನ್ನು ಪುನಃ ಸಿದ್ಧಮಾಡಿ ತೋರಿಸಬೇಕು. ಬಹುದಿನಗಳಿಂದ ಹಣವನ್ನು ಹಂಬಲಿಸುತ್ತಿದ್ದ ಬಡವನ ಮುಂದೆ ಹಣದ ಹಮ್ಮಿಣಿ ಬಿದ್ದಾಗ, ಕುರುಡರು ಹೇಗೆ ದಾರಿಯಲ್ಲಿ ಹೋಗುತ್ತಿರಬಹುದೆಂಬುದನ್ನು ತೋರಲು ಕಣ್ಣು ಮುಚ್ಚಿಕೊಂಡು ಹೋದನೆಂಬಂತೆ ಸ್ವಾತಂತ್ರ್ಯದ ಸಂಪಾದನೆ ಮತ್ತು ಸಂರಕ್ಷಣೆಗಳ ಈ ಅಪೂರ್ವ ಸಂದರ್ಭವನ್ನು ಕಳೆದುಕೊಳ್ಳದೆ ಸೈನ್ಯಶಾಖೆಯಲ್ಲಿ ಕನ್ನಡಿಗರು ಸೇರಬೇಕು. ಇಂಥ ಕನ್ನಡಿಗರ ಸಂಖ್ಯೆ ಹೆಚ್ಚಿದಷ್ಟು ಮುಂದೆ ಸ್ವತಂತ್ರ ಭಾರತದಲ್ಲಿ ಕನ್ನಡ ನಾಡಿನ ವರ್ಚಸ್ಸು ಹೆಚ್ಚುವುದು. ನಿಜವಾದ ಶೂರತ್ವವು ಕಾರಾಗೃಹದಲ್ಲಿಲ್ಲ. ಅದು ರಣಭೂಮಿಯಲ್ಲಿದೆ ರಾಷ್ಟ್ರಸೇವೆಯ ವೀರಶಿಕ್ಷಣವನ್ನು ಹೊಂದಲು ರಣಭೂಮಿಗೇನೇ ಹೋಗಬೇಕಾಗಿದೆ. ಅಂಥ ರಾಷ್ಟ್ರ ಸೇವೆಯ ಅಪೂರ್ವವಾದ ಉಜ್ವಲಮಾರ್ಗ ಈಗ ನಮ್ಮ ಮುಂದಿದೆ. ಈ ಮಾರ್ಗದಲ್ಲಿ ಹೋಗಿ ಜಯಶಾಲಿಗಳಾಗೋಣ.

ಉತ್ತರ ಕರ್ನಾಟಕದ ಧಾರವಾಡ. ವಿಜಾಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ದಿನೇ ದಿನೇ ವಿದ್ಯಾಭಿವೃದ್ಧಿಯಾಗುತ್ತಿರುವುದು ಮತ್ತು ಅದಕ್ಕಾಗಿ ತ್ಯಾಗವೀರ ಲಿಂಗರಾಜ, ದಾನಶೂರ ವಂಟಮುರಿ

ದೊರೆಗಳಂತೆ ಅಲ್ಲಲ್ಲಿ ಕೆಲವರು ತಮ್ಮ ಸಾಂಪತ್ತಿಕ ಸ್ಥಿತಿಗನುಗುಣವಾಗಿ ವಿದ್ಯಾಭಿವೃದ್ಧಿಗೆ ಧನಸಹಾಯ ಮಾಡುತ್ತಿರುವುದು ನಾಡಿನ ಏಳಿಗೆಯ ಶುಭಲಕ್ಷಣವಾಗಿತ್ತು. ೧೯೪೩ರ ಹೊತ್ತಿಗೆ ಧಾರವಾಡ ಮತ್ತು ಬೆಳಗಾಂವ ಈ ಎರಡು ಸ್ಥಳಗಳಲ್ಲಿ ಮಾತ್ರ ಎರಡು ಆರ್ಟ್ಸ ಕಾಲೇಜುಗಳಿದ್ದವು. ಇಂಗ್ಲೀಷ್ ವಿದ್ಯಾಭಿವೃದ್ಧಿಯ ವೇಗವನ್ನು ನೋಡಿದ್ದಾದರೆ ಈ ಎರಡೇ ಕಾಲೇಜುಗಳು ನಮಗೆ ಸಾಲವು ಎನಿಸಿತು. ನಮ್ಮ ನಾಡಿನ ಉತ್ತರದ ಕೊನೆಯ ಸ್ಥಳವಾದ ಸೊಲ್ಲಾಪುರದಲ್ಲಿ ಒಂದು ಕಾಲೇಜು ಏರ್ಪಟ್ಟಿದ್ದರೂ ಈ ಕನ್ನಡ ಭಾಗಕ್ಕೆ ಇನ್ನೂ ಒಂದೆರಡು ಆರ್ಟ್ಸ ಕಾಲೇಜುಗಳು ಬೇಕೆನಿಸಿದವು. ಧಾರವಾಡದಲ್ಲಿ ಒಂದು ಮತ್ತು ಬಾಗಲಕೋಟೆಯಲ್ಲಿ ಇನ್ನೊಂದು ಆರ್ಟ್ಸ ಕಾಲೇಜುಗಳನ್ನು ಅನುಷ್ಠಾನಕ್ಕೆ ತರುವ ಸಿದ್ಧತೆಗಳು ನಡೆದಿದ್ದವು. ಈ ಸ್ತುತ್ಯ ಪ್ರಯತ್ನ ಯಶಸ್ವಿಯಾಗಲೆಂದು ಹಾರೈಸಿದೆನು. ಇಂಥ ಆರ್ಟ್ಸ ಕಾಲೇಜುಗಳು ಹೆಚ್ಚಿನ ಮಾತ್ರದಿಂದ ನಾಡಿನ ನಿಜವಾದ ಅಭಿವೃದ್ಧಿಯಾಗುವುದಿಲ್ಲ. ಜನರ ಆರ್ಥಿಕ ಸ್ಥಿತಿಯು ಸುಧಾರಿಸಿ ಅವರಲ್ಲಿ ಸ್ವಾವಲಂಬನೆಯ ಪ್ರವೃತ್ತಿಯು ಹೆಚ್ಚಬೇಕು. ಅಂಥ ಶಿಕ್ಷಣದ ಅವಶ್ಯಕತೆಯೇ ಈಗ ಹೆಚ್ಚಾಗಿದೆ. ಆದಕಾರಣ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾದ ವ್ಯಾಪಾರವಿದ್ಯೆಯ ಕಾಲೇಜು ಈ ನಮ್ಮ ಭಾಗಕ್ಕೆ ಅಗತ್ಯವಾಗಿದೆ. ಇಂಥ ಕಾಲೇಜನ್ನು ಬೆಳಗಾಂವಿಯಲ್ಲಿಯೂ ಮತ್ತು ಗದಗಿನಲ್ಲಿಯೂ ಸ್ಥಾಪಿಸುವ ಪ್ರಯತ್ನ ನಡೆದಿದೆಯೆಂದು ತಿಳಿದಿದೆ. ನಾಡಿನ ಸಂಪದಭಿವೃದ್ಧಿಯನ್ನು ಇಚ್ಛಿಸುವವರೆಲ್ಲರೂ ಈ ವಿಧವಾದ ಕಾಲೇಜು ಏರ್ಪಡಲೆಂದೇ ಹಾರೈಸುತ್ತಿದ್ದಾರೆ. ಅವರಲ್ಲಿ ನಾನೂ ಒಬ್ಬ ಇವುಗಳ ವಿನಃ ಔದ್ಯೋಗಿಕ ಕಾಲೇಜು ನಮ್ಮ ಈ ಉತ್ತರ ಕರ್ನಾಟಕಕ್ಕೆ ಅಗತ್ಯವಾಗಿವೆ. ಧಾರವಾಡ, ಕಾರವಾರ, ವಿಜಾಪುರ, ಬೆಳಗಾಂವ, ಬಳ್ಳಾರಿ ಮತ್ತು ಸೊಲ್ಲಾಪುರ ಭಾಗದ ಕೆಲವು ಸ್ಥಳಗಳ ಈ ಮಧ್ಯಪ್ರದೇಶದಲ್ಲಿ ಸುಮಾರು ೫೦ ಲಕ್ಷ ಜನವಸತಿಯ ಭಾಗದಲ್ಲಿ ಒಂದಾದರೂ ಔದ್ಯೋಗಿಕ ಕಾಲೇಜು ಇಂಥ ಕಾಲದಲ್ಲಿಯೂ (೧೯೪೩) ಇಲ್ಲದಿರುವುದು ತುಂಬಾ ವಿಷಾದಕರವಲ್ಲವೇ? ಇನ್ನು ಮುಂದೆ ವಿವಿಧ ಉದ್ಯೋಗಗಳಿಗೇನೇ ಪ್ರಾಮುಖ್ಯತೆ ಬರುವುದು. ಯುದ್ಧದ ತರುವಾಯ ನಿರುದ್ಯೋಗಿಗಳ ಜೀವನಸಮಸ್ಯೆ ಬಹುಭೀಕರವಾಗಿ ಪರಿಣಮಿಸುವುದಿದೆ. ಎಲ್ಲ ರಾಷ್ಟ್ರಗಳಿಗೂ ಸ್ವಾವಲಂಬನೆಯ ಮಂತ್ರದಿಂದಲೇ ಭೀಕರವಾದ ಈ ಭೂತಚೇಷ್ಟೆಯನ್ನು ನಿಲ್ಲಿಸಬೇಕೆಂದು ಯೋಚಿಸುತ್ತಲಿವೆ ಎಂದ ಮೇಲೆ ಈ ಕನ್ನಡನಾಡಿನಲ್ಲಿ ಬಡೋದೆಯಲ್ಲಿರುವಂತಹ ಒಂದು ಕಲಾಭವನವಾದರೂ ಏರ್ಪಡಬೇಕಾದುದು. ಅಗತ್ಯವೆನಿಸಿತು. ಆರ್ಟ್ಸ ಕಾಲೇಜಿನಲ್ಲಿ ಕಲಿತವರೇ ಹೆಚ್ಚಾಗಿರುವುದರಿಂದ ಅಂಥ ಕಾಲೇಜನ್ನು ಸ್ಥಾಪಿಸುವ ಪ್ರವೃತ್ತಿಯೇ ಹೆಚ್ಚುವುದು ಸ್ವಾಭಾವಿಕ. ಈ ಔದ್ಯೋಗಿಕ ಕಾಲೇಜಿನ ಸ್ಥಿತಿ ಹಾಗಲ್ಲ. ಇದನ್ನು ನಿರ್ವಹಿಸುವವರೂ ಉದಾರಿಗಳಿಗೆ ಇವರ ಫಲಪ್ರಯೋಜನೆಗಳನ್ನು ಮನಗಾಣಿಸುವ ಅನುಭವಿಕರೂ ನಮ್ಮ ನಾಡಿನಲ್ಲಿ ವಿರಳವಾಗಿರುವುದರಿಂದಲೇ ಇಂಥ ಕಾಲೇಜು ಈ ವರೆಗೂ ಏರ್ಪಟ್ಟಿಲ್ಲ. ಅನೇಕ ವಸ್ತುಗಳಿಗಾಗಿ ಪರಪ್ರಾಂತಗಳಿಗೇನೇ ನಮ್ಮ ನಾಡಿನಿಂದ ಲಕ್ಷಾಂತರ ರೂಪಾಯಿಗಳು ಪ್ರತಿವರ್ಷ ಹೋಗುತ್ತಲಿವೆ. ಇದು ನನಗೆ ಅತ್ಯಂತ ಬೇಸರದ ಸಂಗತಿಯಾಗಿತ್ತು. ಔದ್ಯೋಗಿಕ ಕಾಲೇಜಿಗೆ ಹುಬ್ಬಳ್ಳಿ ಮತ್ತು ಸೊಲ್ಲಾಪುರ ಇವೆರಡು ನಮ್ಮ ಭಾಗದಲ್ಲಿ ಬಹು ಅನುಕೂಲವಾದ ಪಟ್ಟಣಗಳು. ಅಲ್ಲಿಯ ಉದಾರಿಗಳು ಈಗಲಾದರೂ ಈ ವಿಷಯದ ಕಡೆಗೆ ಲಕ್ಷಿಸಿ ಕನ್ನಡನಾಡಿನ ಈ ದೊಡ್ಡ ಕೊರತೆಯನ್ನು ನಿವಾರಣೆ ಮಾಡಬೇಕಾಗಿ ಸಾರ್ವಜನಿಕರಲ್ಲಿ ನಿವೇದಿಸಿಕೊಂಡೆನು.

೧೯೪೩ರ ಯುದ್ಧ ಕಾಲದಲ್ಲಿ ಕಾಗದ ದೊರೆಯದೆ ಆಲಮಟ್ಟಿಯಲ್ಲಿ ಕೈಕಾಗದವನ್ನೇ ತಯಾರಿಸಿ, **ಶರಣಸಂದೇಶ** ಪತ್ರಿಕೆಯ ಪ್ರಕಟಣೆಯನ್ನು ಬಹು ಕಷ್ಟದಿಂದ ಮುಂದುವರಿಸಿದೆನು.

ನಮ್ಮ ಕನ್ನಡನಾಡು ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಮೊದಲಾದ ಚಟುವಟಿಕೆಗಳಿಗೆ ಪೂರ್ವಕಾಲದಲ್ಲಿ ತವರುಮನೆಯಾಗಿದ್ದಿತು. ಇಲ್ಲಿಂದಲೇ ಬೇರೆ ಪ್ರಾಂತಗಳಿಗೆ ಹೊಸ ಹೊಸ ಚಟುವಟಿಕೆಗಳು ಹೋಗಿ ಜನಾಂಗವನ್ನು ಜಾಗೃತಗೊಳಿಸುತ್ತಿದ್ದವು. ಆದರೆ ವಿಜಯನಗರ ಸಾಮ್ರಾಜ್ಯವು ಅಸ್ತವಾದ ನಂತರ ಕಳೆದ ಮೂರು ನಾಲ್ಕುಕ ಶತಮಾನಗಳಿಂದ ಕನ್ನಡಿಗರು ಹೊಸ ವಿಚಾರಗಳಿಗಾಗಿ ಅನ್ಯರ ಮುಖ ನೋಡಬೇಕಾದ ಸಮಯ ಬಂದಿದೆ. ಬ್ರಿಟಿಷರ ಪ್ರಭುತ್ವವು ಈ ದೇಶದಲ್ಲಿ ನೆಲೆಸಿದ ನಂತರವಂತೂ ನಮ್ಮ ಸ್ವಾತಂತ್ರ್ಯದ ಅಸ್ತಿತ್ವವೇ ಅಳಿದು ಹೋಗಿ, ಪ್ರತಿಯೊಂದು ವಿಷಯದಲ್ಲಿಯೂ ಪರಾವಲಂಬಿಗಳಾಗಿ ಬಾಳುವ ಹೊತ್ತು ಬಂದಿದೆ.

ಹಂಚಿ ಹೋಗಿರುವ ಕನ್ನಡನಾಡು ಒಂದಾಗದೆ ಮತ್ತು ಕನ್ನಡಿಗರು ಜಾತಿ ಮತ್ಸರ ಬಿಟ್ಟು ಒಟ್ಟುಗೂಡಿ ಮುಂದೆಬಾರದೆ ಕನ್ನಡದೇವಿಯ ಮೊದಲಿನ ಘನತೆ ಪುನಃ ಬೆಳಗಲಾರದು, ಆ ವರೆಗು ಪರಪ್ರಾಂತೀಯರು ತೋರಿಸಿದ ಮಾರ್ಗದಲ್ಲಿ ಕೊಟ್ಟಷ್ಟು ಸೌಲಭ್ಯಗಳಿಂದ ತೃಪ್ತರಾಗಿ, ತಮ್ಮ ತಮ್ಮಲ್ಲಿಯೇ ಹೋರಾಡುತ್ತ ತಾವೇ ಅಚ್ಚು ಮೆಚ್ಚಿನ ಅನುಯಾಯಿಗಳೆಂದು ತಮ್ಮನ್ನೇ ಹೊಗಳಿಕೊಳ್ಳುತ್ತ, ಕನ್ನಡ ತಾಯಿಯ ಈಗಿನ ದುರ್ದೈವಿ ಮಕ್ಕಳು ಬಾಳಬೇಕಾಗುವುದು. ಹಂಚಿಹೋಗಿರುವ ಕನ್ನಡನಾಡನ್ನು ಒಂದುಗೂಡಿಸಬೇಕಾದರೆ ಸರಕಾರದ ಅಪ್ಪಣೆಯೇನೋ ಬೇಕು. ಆದರೆ ಸಾರ್ವಜನಿಕ ಕಾರ್ಯಕ್ಷೇತ್ರದಲ್ಲಿ ಕಾಲಿಟ್ಟ ಅನೇಕ ವೈಯಕ್ತಿಕ ಮತ್ತು ಜಾತಿನಿಷ್ಠಸ್ವಾರ್ಥ. ಮತ್ಸರ ಮೊದಲಾದ ಘಾತುಕಗುಣಗಳಿಂದ ಭಿನ್ನವಾಗಿರುವ ವಿವಿಧ ಕನ್ನಡಿಗರನ್ನು ಒಂದುಗೂಡಿಸಿ ಮುಂದೆ ತರಲು ಸರಕಾರವೇನೂ ಬೇಡ. ಕನ್ನಡಿಗರಾದ ನಾವು ಎಷ್ಟರಮಟ್ಟಿಗೆ ಈ ಅನರ್ಥಕರ ಗುಣಗಳನ್ನು ಬಿಡುತ್ತಾ ಹೋಗುವೆವೋ ಅಷ್ಟರಮಟ್ಟಿಗೆ ನಮ್ಮ ಸಂಘಟನೆ ಬಲಿಯುತ್ತದೆ. ಬಲಿತು ಬೆಳೆದ ಆ ಸಂಘಟನೆಯ ಬಲವೇ ಮುಂದಿನ ಕನ್ನಡನಾಡಿನ ಏಕೀರಣಕ್ಕೂ ಸಹಾಯವಾಗುವುದು. ಆದಕಾರಣ ಭವಿಷ್ಯತ್ತಿನ ದೃಷ್ಟಿಯಿಂದಲಾದರೂ ನಾವು ಒಂದಾಗಿ ಸೇರಿ ನಮ್ಮ ಬಲವನ್ನು ಬೆಳೆಯಿಸಿಕೊಳ್ಳಬೇಕೇ ಹೊರತು ನಮ್ಮ ಅಸೂಯೆ. ಮೌಢ್ಯತೆ ಮೊದಲಾದವುಗಳನ್ನು ಅದರಲ್ಲಿ ಸೇರಿಸಿ ಮತ್ತಷ್ಟು ಪಕ್ಷಪಂಗಡಗಳನ್ನೇ ಉಂಟುಮಾಡಿದರೆ ಕನ್ನಡಿಗರು ಮುಂದೆ ಬರುವುದು ಹೇಗೆ? ಕನ್ನಡನಾಡು ಉದಯವಾಗುವುದೆಂದು? ಎಂಬುದು ನನ್ನ ಮುಂದಿರುವ ಬೃಹತ್ ಪ್ರಶ್ನೆಯಾಗಿತ್ತು.

೧೯೪೩ರಲ್ಲಿ ಮುಂಬೈ ಪ್ರಾಂತದ ಕೆಲವು ಭಾಗಗಳಲ್ಲಿ ಬೆಳೆಯೇ ಬಾರದಿದ್ದುದರಿಂದ ಜೋಳ, ಸಜ್ಜೆ ಮೊದಲಾದ ಆಹಾರಧಾನ್ಯಗಳು ದೊರೆಯುವುದೇ ಕಷ್ಟವಾಗಿ ಜನತೆಯು ಬಹುದುಃಖವನ್ನು ಅನುಭವಿಸಿತು. ಈ ಸಲ ಅಂದರೆ ೧೯೪೪ರಲ್ಲಿ ಅಂಥ ಬರಗಾಲವೇನೂ ಇಲ್ಲ. ಮುಂಗಾರಿಯ ಮಳೆ ಬಂದಿದೆ, ಹಿಂಗಾರಿಯೂ ಕೆಲವು ಕಡೆ ಎಷ್ಟೋ ಅನುಕೂಲವಾಗಿದೆ. ಹೀಗಿದ್ದರು ಜನತೆಗೆ ಆಹಾರದ ಕೊರತೆಯು ಇದ್ದೇ ಇದೆ. ಮುಂದೆ ಯಾವ ಕಾಲಕ್ಕೆ ಎಂಥ ವಿಪತ್ತು ಬರುವುದೋ ಎಂಬ ಚಿಂತೆಯು ಜನತೆಯನ್ನು ವ್ಯಾಪಿಸಿತ್ತು. ಕೆಲವರು ಕಳೆದ ವರುಷಕ್ಕಿಂತ ಈ ವರ್ಷ ಕಷ್ಟವಾಗಿದೆ ಎಂದು ಹೇಳುತ್ತಿದ್ದಾರೆ. ಅಂತೆಯೇ ಮುಂಬೈ ಸರಕಾರವು ಧಾನ್ಯ ಸಂಗ್ರಹ ಮತ್ತು ವಿನಿಮಯಗಳ ಹೊಸ ಯೋಜನೆಯನ್ನು ಗೊತ್ತುಮಾಡಿದಂತೆ ಕಂಡುಬಂದಿತು. ಅದಾದರೂ ಜನತೆ ಮತ್ತು

ಸರಕಾರ ಸರಿಯಾದ ರೀತಿಯಲ್ಲಿ ವರ್ತಿಸಿದರೇನೇ ಫಲಕಾರಿಯಾಗುವುದು. ಈ ವರ್ಷದ (೧೯೪೪) ಮುಂಗಾರಿ ಬೆಳೆ ಬಂದನಂತರ ಜೋಳ ಮೊದಲಾದ ಧಾನ್ಯವನ್ನು ೧೦೦ಕ್ಕೆ ೧೦ ರಂತೆಯೂ ಭತ್ತವನ್ನು ೧೦೦ಕ್ಕೆ ೨೦ರಂತೆಯೂ ಸರಕಾರ ಖರೀದಿಸುವುದಾಗಿ ತಿಳಿಸಿತು. ಮತ್ತು ಆ ಪ್ರಕಾರ ಎಲ್ಲ ಕಡೆಗಳಲ್ಲಿಯೂ ಧಾನ್ಯಗಳನ್ನು ಒತ್ತಾಯವಾಗಿಯೂ ಸಂಗ್ರಹಿಸಿತು. ಹೀಗಿದ್ದರೂ ಮುಂಬೈಸರಕಾರದ ಸಲಹೆಗಾರರಾದ ಮಿ. ನಾಯಿಟ್ ಅವರು ದಿನಾಂಕ ೨೯.೦೨.೧೯೪೪ನೆಯ ದಿವಸ ಕೊಟ್ಟ ಪ್ರಕಟಣೆಯಲ್ಲಿ ಸರಕಾರಕ್ಕೆ ಬೇಕಾದಷ್ಟು ಧಾನ್ಯ ದೊರೆಯಲಿಲ್ಲ. ದೊಡ್ಡ ಜಮೀನದಾರ ಒಕ್ಕಲಿಗರು ಸರಕಾರದ ಸಂಗಡ ಸಹಕರಿಸಬೇಕಾದಷ್ಟು ಸಹಕರಿಸಲಿಲ್ಲ. ವ್ಯಾಪಾರಿಗಳೂ ಅವರೂ ಒಂದಾಗಿ ಕಳ್ಳತನದ ವ್ಯಾಪಾರಕ್ಕೆ ಅವಕಾಶ ಕೊಟ್ಟರು. ಎಲ್ಲ ಭಾರವೂ ಚಿಕ್ಕ ಪುಟ್ಟ ಒಕ್ಕಲಿಗರ ಮೇಲೆಯೇ ಬಿದ್ದಿತು. ಗ್ರಾಮಾಂತರಗಳಲ್ಲಿಯ ಅಧಿಕಾರಿಗಳು ಈ ವಿಚಾರವಾಗಿ ಒತ್ತಾಯ ಬಲಾತ್ಕಾರಗಳನ್ನು ನಡೆಯಿಸಿದರು. ಸರಕಾರಕ್ಕೆ ಬಂದ ಈ ಅನುಭವದಿಂದ ಗೊತ್ತು ಮಾಡಿದ ಹೊಸ ಯೋಜನೆಯ ಪ್ರಕಾರ ಒಂದು ಕುಟುಂಬಕ್ಕೆ ಒಂದು ವರುಷಕ್ಕೆ ೨೮ ಮಣ ಧಾನ್ಯ ಸಾಕು. ಬೆಳೆದವರಲ್ಲಿ ಅಷ್ಟನ್ನು ಮಾತ್ರ ಬಿಟ್ಟು ಉಳಿಯುವ ಧಾನ್ಯವನ್ನೆಲ್ಲ ಸರಕಾರವೇ ಕೊಂಡುಕೊಳ್ಳುವುದು. ಎಂಬ ಘೋಷಣೆ ಪ್ರಕಟವಾಯಿತು. ಸರಕಾರದ ಯೋಜನೆ ಅದೇಷ್ಟೋ ಒಳ್ಳೆಯದಿದ್ದರೂ ಅದನ್ನು ಆಚರಣೆಯಲ್ಲಿ ತರುವ ಅಧಿಕಾರಿಗಳೆಲ್ಲರೂ ನಿಷ್ಪಕ್ಷಪಾತಿಗಳೂ ಕರ್ತವ್ಯದಕ್ಷರೂ ಇರದಿದ್ದರೆ ಮತ್ತು ಯೋಜನೆಯನ್ನು ಸರಕಾರವು ಜನತೆಯ ಹಿತಾರ್ಥವಾಗಿಯೇ ಮಾಡಿದೆಯೆಂಬ ವಿಶ್ವಾಸದಿಂದ ಅಧಿಕಾರಿಗಳ ಸಂಗಡ ಜನರು ಮನಃಪೂರ್ವಕ ಸಹಕರಿಸಿ ನಡೆಯದಿದ್ದರೆ ಅದು ಫಲಕಾರಿಯಾಗುವುದಿಲ್ಲ. ಈ ಉಭಯ ವಿಷಯಗಳಲ್ಲಿಯೂ ಇರುವ ಲೋಪದೋಷಗಳಿಂದಲೇ ಕೈಗೆ ಬಂದುದು ಬಾಯಿಗೆ ಬರುವುದಿಲ್ಲವೆಂದು ತೋರುತ್ತದೆ. ಆದಕಾರಣ ಇವು ನಿವಾರಣೆಯಾಗದ ವಿನಃ ಸರಕಾರದ ಎಂತಹ ಉತ್ತಮೋತ್ತಮವಾದ ಯೋಜನೆಯು ಕೂಡ ಫಲಕಾರಿಯಾಗುವುದು ಶಕ್ಯವಿಲ್ಲವೆಂಬುದು ನನಗೆ ಪ್ರತ್ಯಕ್ಷವಾಗಿ ಗಮನಕ್ಕೆ ಬಂದಿತು.

ಮಹಾಯುದ್ಧಗಳನ್ನು ಕುರಿತಾಗಿ ಅದರಲ್ಲೂ ವಿಶೇಷವಾಗಿ ಹಿಟ್ಲರನ ಗತಿಯ ಬಗೆಗೆ ನಾನು ಈ ಹಿಂದೆ ೧೯೪೧ರ ಜೂನ್ ೨೬ರ **ಶರಣಸಂದೇಶ** ಪತ್ರಿಕೆಯಲ್ಲಿ ಬರೆದ ಭವಿಷ್ಯ ನಿಜವಾಯಿತು. ಹಿಟ್ಲರನ ಕೊನೆಯ ಪ್ರಯತ್ನ ಅವರ ಅಪಜಯಕ್ಕೆ ಕಾರಣವಾಗಿ, ರಕ್ತದಾಹವು ಅಡಗಿ, ಪ್ರಪಂಚಕ್ಕೆ ಶಾಂತಿ ಲಭಿಸುವದರಲ್ಲಿ ಸಂದೇಹವಿಲ್ಲ ಎಂಬ ಮಾತು ಸತ್ಯವಾಯಿತು. ಒಟ್ಟಿನಲ್ಲಿ ಈ ಯುದ್ಧವು ಈಗ ಜಗತ್ತಿನಲ್ಲಿರುವ ಸಾಮ್ರಾಜ್ಯದಾಹವನ್ನು ಕಡಿಮೆ ಮಾಡಿ, ಸ್ವಾತಂತ್ರ್ಯದ ಅಪೇಕ್ಷೆಯನ್ನೇ ಹೆಚ್ಚಿಸುವುದೆಂಬುದರಲ್ಲಿ ಸಂದೇಹವಿಲ್ಲ.

ರಾಷ್ಟ್ರಗೀತೆ ಎಂಬ ಒಂದು ಸಂಕಲನವನ್ನು ಇದೇ ಅವಧಿಯಲ್ಲಿ ಸಂಪಾದಿಸಿ ಪ್ರಕಟಿಸಿದೆನು. ಇದು ಅನೇಕ ಆವೃತ್ತಿಗಳನ್ನು ಹೊಂದಿತ್ತು. ಇದರಲ್ಲಿ ಖಾದಿ, ಪ್ರಾಣಿದಯೆ, ಸೆರೆ–ತಂಬಾಕು ನಿಷೇಧ ಮುಂತಾದ ವಿಷಯಗಳ ಮೇಲೆ ರಚಿತವಾದ ಹಾಡುಗಳಿದ್ದವು. ಶ್ರೀ ಬ್ಯಾಳಿ ಕಲ್ಯಾಣಪ್ಪನವರು ಇದನ್ನು ಭೋಗಷಟ್ಪದಿಯಲ್ಲಿ ರಚಿಸಿದರು.

೧೯೪೫ರಲ್ಲಿ ಶ್ರೀಗುರು ಸಂಗನಬಸವನ ಸ್ತುತಿ ಎಂಬ ಪದ್ಯವನ್ನು ಬರೆದು ಪ್ರಕಟಿಸಿದೆನು. ಅಬಾಲವೃದ್ಧರು ಯಾರಾದರೂ ಇದನ್ನು ಪ್ರಾರ್ಥನಾರೂಪದಲ್ಲಿ ಹಾಡಲು ಬರುತ್ತಿತ್ತು. ಈ ಸ್ತುತಿಯು

ಬಸವಣ್ಣನವರ ಬಗ್ಗೆ ಮಕ್ಕಳಲ್ಲಿ ಪ್ರೇಮಾದಾರವನ್ನುಂಟು ಮಾಡುವಂತಹ ಕೃತಿಯಾಗಿತ್ತು. ಮಹಾನುಭಾವರಾದ ಬಸವಣ್ಣನವರ ದಿವ್ಯಚರಿತ್ರೆಯನ್ನು ೬೩ ನುಡಿಗಳಲ್ಲಿ ತಿಳಿಸಿದ ಇದೊಂದು ನನ್ನ ನೂತನ ಪ್ರಯತ್ನ. ಇದನ್ನು ಚಿಕ್ಕಂದಿನಲ್ಲಿಯೇ ಮಕ್ಕಳ ಎಳೆಯ ವಯಸ್ಸಿನಲ್ಲಿಯೇ ಪಾಠ ಮಾಡಿಸುವುದರಿಂದ ಆ ದಿವ್ಯ ಚರಿತ್ರೆಯು ಶಾಶ್ವತವಾಗಿ ಅವರ ತಲೆಯಲ್ಲಿ ನೆಲೆನಿಲ್ಲುವುದು. ಮಹಾವಿಭೂತಿಗಳ ಪ್ರಭಾವಶಾಲಿ ಕಾರ್ಯಗಳ ನೆನಪು ನಮಗೆ ಆಗುತ್ತಿದ್ದರೆ, ನಮ್ಮ ಮನಸ್ಸಿನ ಪವಿತ್ರತೆ, ಬುದ್ಧಿಯ ವಿಶಾಲತೆ ಮತ್ತು ಭಾವದ ಬೆಳಕು ಹೆಚ್ಚಿ, ನಮ್ಮ ಜೀವನಯಾತ್ರೆಯಲ್ಲಿ ಬರುವ ಅನೇಕ ಎಡರು–ತೊಡರುಗಳನ್ನು ನಿವಾರಣೆ ಮಾಡುವ ಧೈರ್ಯಸಾಹಸಾದಿಗಳು ನಮ್ಮಲ್ಲಿ ಉಂಟಾಗಲು ಸಹಾಯವಾಗುತ್ತವೆ. ನಮ್ಮ ನಾಡಿನ ಮಹಾವ್ಯಕ್ತಿಯೊಬ್ಬರ ಮಹೋನ್ನತವಾದ ಸಾಧನೆಗಳನ್ನು ತಿಳಿಸುವ ಈ ಸ್ತುತಿ ಬಸವಣ್ಣನವರ ಉಜ್ವಲವಾದ ವ್ಯಕ್ತಿತ್ವವನ್ನು ಕಣ್ಣಮುಂದೆ ತರುತ್ತದೆ. ನೀತಿಭೋದೆಗೆ ಇಂತಹ ಹಾಡುಗಳು ಇಂತು ಅತ್ಯವಶ್ಯವಾಗಿವೆ.

ಮಲೇರಿಯಾದ ಜೊತೆಗೆ ಆಗಾಗ ನನ್ನನ್ನು ರಕ್ತದ ಇತ್ತಡವೂ ಕಾಡುತ್ತಿದ್ದಿತ್ತು. ಕಟ್ಟುನಿಟ್ಟಾಗಿ ಜೀವನ, ಅತಿಯಾದ ಪರಿಶ್ರಮ ಇವುಗಳಿಂದಾಗಿ ೧೯೪೬ರ ಹೊತ್ತಿಗೆ ನನ್ನ ದೇಹಸ್ಥಿತಿಯಲ್ಲಿ ಬದಲಾವಣೆಯಾಗಿ ಅಸ್ವಸ್ಥತೆ ಕಾಡಹತ್ತಿತು. ನನ್ನ ೬೧ನೆಯ ಹುಟ್ಟು ಹಬ್ಬದ ಆಚರಣೆಯ ಸವಿನೆನಪಿಗಾಗಿ ಪ್ರಗತಿ ಗ್ರಂಥಮಾಲೆ ಎಂಬ ಒಂದು ಹೊಸ ಗ್ರಂಥಮಾಲಯನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡು ಒಂದು ಯೋಜನೆಯುನ್ನು ತಯಾರಿಸಿದ್ದೆನು. ದಿನಾಂಕ ೧೭.೦೯.೧೯೪೫ರಂದು ಈ ಬಗ್ಗೆ ಸವಿಸ್ತಾರವಾದ ಒಂದು ವಿಜ್ಞಾನಪನೆಯನ್ನು ಪ್ರಕಟಿಸಿದ್ದೆನು. ನನ್ನ ಮೂವತ್ತು ವರ್ಷಗಳ ಸೇವೆಯ ವರದಿಯನ್ನು ಒಳಗೊಂಡ **ನನ್ನ ಕಾಣಿಕೆ** ಎಂಬ ಖಾಸಗಿ ಪುಸ್ತಕವನ್ನು ಹತ್ತು ವರುಷಗಳ ಹಿಂದೆ ಓದಿದ ಕೆಲವು ನನ್ನ ಹಿತಚಿಂತಕರು ಇದೇ ಬರುವ ಮಾಘ ಶುದ್ಧ ೧೫ ಮಿತಿಗೆ (೧೬.೦೨.೧೯೪೬) ನನಗೆ ೬೦ ವರ್ಷಗಳು ತುಂಬುವುದರಿಂದಾಗಿ ಆ ದಿವಷ ೬೧ನೆಯ ಹುಟ್ಟುಹಬ್ಬವನ್ನು ಸಾರ್ವಜನಿಕವಾಗಿ ಆಚರಿಸಬೇಕೆಂದು ಯೋಚಿಸಿ ನನ್ನ ಒಪ್ಪಿಗೆಯನ್ನು ಕೇಳಿದ್ದರು. ಇದು ಅವರ ಸೌಜನ್ಯ ಪ್ರೇಮಾದರಗಳ ದ್ಯೋತಕವಾಗಿದ್ದಿತೇ ವಿನಃ ನನ್ನ ಹೆಚ್ಚಳದ ಕುರುಹೇನೂ ಆಗಿರಲಿಲ್ಲ. ನಾನು ಅವರ ಮಾತಿಗೆ ಒಪ್ಪದೆ, ನನ್ನ ಪರಿಚಯದ ಕೆಲವು ಮಹಾಶಯರ ಮುಂದೆ ಈ ವಿಷಯವನ್ನಿಟ್ಟು, ಅವರ ಸಲಹೆ ಸೂಚನೆಗಳನ್ನು ಕೇಳಿದೆನು. ಆ ನನ್ನ ಹಿತಚಿಂತಕರು ಇದನ್ನು ಸಮರ್ಥಿಸಿ ಕೆಲವು ಸೂಚನೆಗಳನ್ನು ಮಾಡಿದರು. ಅದಕ್ಕೋಸ್ಕರ ನಾನು ಎಲ್ಲ ಮಹಾಶಯರಿಗೆ ತುಂಬಾ ಕೃತಜ್ಞನಾಗಿದ್ದೇನೆ. ಅವರಲ್ಲಿ ಕೆಲವು ಮಹನೀಯವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸದಿರಲಾರೆನು.

ಶ್ರೀಯುತರಾದ ಹಾಲಭಾವಿ ವೀರಭದ್ರಪ್ಪನವರು, ಪಿ. ಜಿ. ಹಳಕಟ್ಟಿಯವರು, ಶಂ. ಬಾ. ಜೋಶೀಯವರು, ಪಂಡಿತ ನಾಗಭೂಷಣಶಾಸ್ತ್ರಿಗಳು, ಬೆಟಗೇರಿ ಕೃಷ್ಣಶರ್ಮರು, ಎಸ್. ಬಿ. ಒರೇಮಠ ವಕೀಲರು, ಮಾಗಾವಿ ಚನ್ನಬಸಪ್ಪನವರು, ಟಿ. ಹೆಚ್. ಎಂ. ಸದಾಶಿವಯ್ಯನವರು, ಪಂಡಿತ ಚಂದ್ರಶೇಖರಶಾಸ್ತ್ರಿಗಳವರು.

ಇವರಲ್ಲಿ ಕೆಲವು ಮಹಾಶಯರು ಸೂಚಿಸಿದ ಸಂಗತಿಗಳ ಮುಖ್ಯಾಂಶಗಳು ಹೀಗಿವೆ:

೧. ಹುಟ್ಟುದಿನವನ್ನು ಆಚರಿಸುವುದಕ್ಕೂ ಹಣವನ್ನೂ ಕೂಡಿಸುವುದಕ್ಕೂ ಕನ್ನಡನಾಡಿನ ಎಲ್ಲ ಭಾಗಗಳ ಕೆಲವು ಮುಖಂಡರ ಹೆಸರಿನಿಂದ ಒಂದು ಪ್ರಕಟಣೆಯನ್ನು ಹೊರಡಿಸುವುದು.

೨. ಆ ದಿನ ಒಂದು ಪ್ರಮುಖ ಸ್ಥಳದಲ್ಲಿ ಸಭೆಗೂಡಿ ಎಲ್ಲ ಕಡೆಯಲ್ಲಿ ಕೂಡಿದ ಹಣವನ್ನು ನನಗೆ ಕೊಡುವುದು.

೩. ಆ ದಿವಸ ಒಂದು ಸಂಭಾವನಾಗ್ರಂಥವನ್ನು ಪ್ರಕಟಿಸುವುದು.

೬೧ನೆಯ ಹುಟ್ಟು ದಿನವು ಹೇಗೆ ಆಚರಿಸಲ್ಪಡಬೇಕೆಂಬ ವಿಷಯದಲ್ಲಿರುವ ನನ್ನ ಯೋಜನೆಯನ್ನು ಸಾರ್ವಜನಿಕರ ಅವಗಾಹನೆಗೆ ತಂದುಕೊಟ್ಟು, ಸಲಹೆ ಸೂಚನೆಗಳನ್ನು ಕೇಳಿದೆ, ನಾನು ಕಳೆದ ೪೦ ವರ್ಷಗಳಿಂದಲೂ ಮಾಡಿಕೊಳ್ಳುತ್ತ ಬಂದಿರುವ ನಾಡುನುಡಿಗಳ ಅಲ್ಪಸೇವೆಯು ನನ್ನ ಹುಟ್ಟುದಿನದಲ್ಲಿ ಒಂದು ಹೊಸ ರೀತಿಯಿಂದ ಹೆಚ್ಚು ಪರಿಣಾಮಕಾರಿಯಾಗಿ ಮುಂದೆ ಸಾಗಬೇಕೆಂದು ಒಂದು ಯೋಜನೆಯನ್ನು ಹೀಗೆ ರೂಪಿಸಿದೆನು.

೧. ನಾನು ಈ ವರೆಗೆ ಮಾಡಿದ ಯಾವುದೇ ಸಾರ್ವಜನಿಕ ಕಾರ್ಯಕ್ಕೆ ಬೇಕಾದ ಹಣವನ್ನು ನಾನೇ ವಿಜ್ಞಾಪಿಸಿಕೊಂಡು, ಅನೇಕ ಮಹಾಶಯರ ಸಹಾಯದಿಂದ ಕೂಡಿಸುತ್ತ ಬಂದಿರುವಂತೆ, ಈ ಹುಟ್ಟುದಿನದಲ್ಲಿ ಪ್ರಾರಂಭಿಸುವ ಕಾರ್ಯಕ್ಕಾದರೂ ನಾನೇ ಹಣವನ್ನು ಕೊಡಿಸಬೇಕೇ ವಿನಃ ಇದಕ್ಕಾಗಿ ಒಂದು ಸಮಿತಿಯನ್ನು ಏರ್ಪಡಿಸಬೇಕೆಂದು ನಾನು ಯೋಚಿಸಲಿಲ್ಲ. ಮತ್ತು ನನ್ನ ವಿಚಾರವಾಗಿ ಆಗಲಿ ಅಥವಾ ಬೇರೆ ವಿಷಯಗಳ ಸಂಬಂಧವಾಗಿಯಾಗಲಿ ಒಂದು ಸಂಭಾವನಾಗ್ರಂಥವನ್ನು ಬರೆಯಿಸಿ ಆ ದಿನ ಪ್ರಕಟಿಸಬೇಕೆಂದೂ ನಾನು ಗೊತ್ತುಮಾಡಲಿಲ್ಲ.

೨. ಕಳೆದ ಕೆಲವು ವರುಷಗಳಿಂದ ನನಗೆ ಅವಕಾಶ ದೊರೆತಾಗಲೆಲ್ಲ ಓದಿ ಋಗ್ವೇದಸಾರ ಎಂಬ ಕನ್ನಡ ಸಾಹಿತ್ಯದಲ್ಲಿಯೇ ಹೊಸದಾದ ಸುಮಾರು ೪೦೦ ಪುಟಗಳ ಒಂದು ಗ್ರಂಥವನ್ನು ಬರೆದಿದ್ದೆನು. ಇದನ್ನು ಅಚ್ಚು ಮಾಡಿಸಲು ಸುಮಾರು ಮೂರು ಸಾವಿರ ರೂಪಾಯಿ ವೆಚ್ಚ ಬರಬಹುದಾಗಿತ್ತು. ಪ್ರತಿಯೊಬ್ಬರು ಒಂದು ನೂರು ರೂಪಾಯಿ ಕೊಡುವ ಮೂವತ್ತು ಜನ ಮಹನೀಯರ ಸಹಾಯದಿಂದ ಅಚ್ಚಾಗುವ ಈ ಗ್ರಂಥವನ್ನೇ ಆ ದಿನ ಪ್ರಕಟಿಸಬೇಕೆಂದು ಯೋಚಿಸಿದ್ದೆನು.

೩. ಕಾಲಮಾನಕ್ಕೆ ತಕ್ಕಂತಹ ಗ್ರಂಥಗಳನ್ನು ಹಿಂದಿ, ಮರಾಠಿ ಮೊದಲಾದ ದೇಶಭಾಷೆಗಳಲ್ಲಿ ವಿದ್ವಾಂಸರಿಂದ ಬರೆಯಿಸಿ, ಪ್ರಚಾರಗೊಳಿಸತಕ್ಕ ಸಂಘ ಸಂಸ್ಥೆಗಳು ಬೇರೆ ಪ್ರಾಂತಗಳಲ್ಲಿ ಅನೇಕ ಇವೆ. ಹೆಚ್ಚಾದ ಬಂಡವಾಳವನ್ನು ಆ ಕಾರ್ಯಕ್ಕಾಗಿಯೇ ಉಪಯೋಗಿಸಿ, ವ್ಯಾಪಾರದೃಷ್ಟಿಯಿಂದಲೂ ಇದೊಂದು ಲಾಭದಾಯಕವಾದ ಉದ್ಯೋಗವನ್ನಾಗಿಯೇ ಅನೇಕರು ಮಾಡಿಕೊಂಡಿರುವುದೂ ಉಂಟು. ಆದರೆ ನಮ್ಮ ಕನ್ನಡ ನಾಡಿನಲ್ಲಿ ಮಾತ್ರ ಇಂಥ ಹೆಚ್ಚಿನ ಪ್ರಯತ್ನ ಈ ವರೆಗೆ ನಡೆದಿಲ್ಲ.

ಈಗ ತಾನೇ ಮುಗಿದ ಮಹಾಯುದ್ಧದಿಂದ ಜಗತ್ತಿನಲ್ಲಿ ಇನ್ನು ಮೇಲೆ ಅನೇಕ ಹೊಸ ವಿಷಯಗಳು ತಲೆದೋರುವವು. ಸಾಂಪತ್ತಿಕ, ಸಾಮಾಜಿಕ, ವೈಜ್ಞಾನಿಕ ಮತ್ತು ಶೈಕ್ಷಣಿಕ ಮೊದಲಾದ ವಿಷಯಗಳಲ್ಲಂತೂ ಎಷ್ಟೊ ವಿಚಾರಕ್ರಾಂತಿಯಾಗುವುದು. ಜಗತ್ತಿನ ಪುನರ್ಘಟನೆಗೆ ಸಂಬಂಧಿಸಿದಂತೆ ಪಾಶ್ಚಾತ್ಯ ದೇಶಗಳ ಸಮತಾವಾದ ಮೊದಲಾದ ಹೊಸ ವಿಚಾರತರಂಗಗಳೂ ದೇಶಕ್ಕೆ ಬರುವವು.

ನಮ್ಮ ರಾಷ್ಟ್ರ ಸಂಘಟನೆಗೆ ಧಾರ್ಮಿಕ, ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮೊದಲಾದ ವಿಷಯಗಳ ನಿಜತತ್ವ ಪ್ರಸಾರವು ಅಗತ್ಯವೆನಿಸುವುದು.

ಆಧುನಿಕ ಪ್ರಪಂಚದ ವಿವಿಧ ವೈಜ್ಞಾನಿಕ ವಿಷಯಗಳ ಸಚಿತ್ರ ಪುಸ್ತಕಗಳು ಪ್ರಾಥಮಿಕ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಕೈಯಲ್ಲಿ ಬರುವಂತೆ ಮಾಡುವುದರಿಂದ ಅವರ ಆ ಸಂಬಂಧವಾದ ಬುದ್ಧಿಯ ಬೆಳವಣಿಗೆಗೆ ಬಹು ಸಹಾಯವಾಗುತ್ತದೆ. ಕಾರಣ ಇನ್ನು ಮುಂದೆ ಇಂಥ ವೈಜ್ಞಾನಿಕ ಜ್ಞಾನಪ್ರಸಾರಕ ಕಾರ್ಯವು ಹೆಚ್ಚು ಅಗತ್ಯವಾಗಿಯೇ ಪರಿಣಮಿಸುವುದು.

ಕೇವಲ ಕನ್ನಡ ಓದು ಬರಹಗಳನ್ನೇ ಅರಿತಿರುವ ನಾಡಿನ ಬಹುಸಂಖ್ಯಾತರಲ್ಲಿ ಈ ಎಲ್ಲ ಪ್ರಗತಿಪರ ವಿಚಾರ ಪ್ರಸಾರವಾಗಬೇಕಾದರೆ, ಅಂತಹ ಗ್ರಂಥಗಳು ಹೆಚ್ಚು ಪ್ರಕಟವಾಗಬೇಕಾದುದು ಅಗತ್ಯವಾಗಿದೆ. ಈ ಕಾರ್ಯ ವೈಯಕ್ತಿಕವಾಗಿ ಹೆಚ್ಚು ಪ್ರಮಾಣದಿಂದ ಸಾಗಲಾರದು. ವಿದ್ವಾಂಸರ ಮತ್ತು ಧನಿಕರ ಶಕ್ತಿಗಳೆರಡೂ ಕೂಡಿದಾಗಲೇ ಈ ಮಹತ್ವದ ಕಾರ್ಯ ನೆರವೇರುವುದು. ಹಾಗೆ ಆ ಶಕ್ತಿಗಳನ್ನು ಕೂಡಿಸಲು ಒಂದು ಸಂಘವು ಅಗತ್ಯವಾಗಿದೆ. ಆದುದರಿಂದ ಆ ನನ್ನ ಹುಟ್ಟುದಿನದಲ್ಲಿ **'ಪ್ರಗತಿ ಗ್ರಂಥ ಸಮಿತಿ'** ಎಂಬುದನ್ನು ಸ್ಥಾಪಿಸಬೇಕೆಂದು ಯೋಚಿಸಿದ್ದೇನು.

೪. ಆ ಸಮಿತಿಯು ತಾನು ಇಂತಹ ಪುಸ್ತಕಗಳನ್ನು ಬರೆಯುವುದಲ್ಲದೇ ನಮ್ಮ ನಾಡಿನ ಉತ್ತಮ ಲೇಖನ ಮಹಾಶಯರಿಗೆ ಯೋಗ್ಯ ಸಂಭಾವನೆಯನ್ನು ಕೊಟ್ಟು ಅವರಿಂದ ಸ್ವತಂತ್ರವಾದ ಅಥವಾ ಇಂಗ್ಲೀಷ್ ಹಿಂದಿ, ಮರಾಠಿ ಮೊದಲಾದ ಭಾಷೆಗಳ್ಲಲಿರುವ ಗ್ರಂಥಗಳ ಅನುವಾದದ ಪುಸ್ತಕಗಳನ್ನು ಬರೆಯಿಸಿ ಅವುಗಳ ಸರ್ವಾಧಿಕಾರವನ್ನು ತಾನು ತೆಗೆದುಕೊಂಡು ಮುದ್ದಾಗಿ ಮುದ್ರಿಸಿ, ಆದಷ್ಟು ಸುಲಭ ಬೆಲೆಗೆ ದೊರೆಯುವಂತೆ ಮಾಡುವುದು.

೫. ಹೀಗೆ ಮಾಡುವುದರಿಂದ ನಮ್ಮ ನಾಡಿನ ಅನೇಕ ಮಹಾಶಯರಿಗೆ ಎಷ್ಟೋ ನೆರವಾದಂತಾಗುವುದಲ್ಲದೆ ಅವರ ಬುದ್ಧಿಶಕ್ತಿಯನ್ನು ನಮ್ಮ ನಾಡು-ನುಡಿಗಳ ಸೇವೆಗೆ ಉಪಯೋಗಿಸಿಕೊಂಡಂತಾಗುವುದು. ಅನೇಕ ಲೇಖಕ ಮಹಾಶಯರಿಗೆ ಸಂಪತ್ತಿಕ ಅನುಕೂಲತೆ ಯಿಲ್ಲದ್ದರಿಂದ, ಅವರ ಮಹತ್ವದ ಬುದ್ದಿಶಕ್ತಿ ನಾಡಿಗೆ ಉಪಯೋಗವಾಗುತ್ತಿಲ್ಲ, ಇದೊಂದು ನಮ್ಮ ನಾಡಿಗೆ ಮಹತ್ತರವಾದ ನಷ್ಟ. ಇದನ್ನು ನಿವಾರಣೆ ಮಾಡಲು ಈ ಸಮಿತಿಯು ಪ್ರಯತ್ನಿಸುವುದು.

೬. ಈ ಗ್ರಂಥಪ್ರಚಾರಕ ಸಮಿತಿಯಲ್ಲಿ ನನ್ನನ್ನೊಳಗೊಂಡು ಮುದ್ರಣ ಕಲೆಯನ್ನರಿತ ಮತ್ತು ವ್ಯಾಪಾರದೃಷ್ಟಿಯಿಂದ ಪ್ರಚಾರಗೊಳಿಸಬಲ್ಲ ಐದು ಜನರು ಇರುವರು. ಇದು ೧೮೬೦ನೆಯ ಶಾಸನದ ಪ್ರಕಾರ ರಿಜಿಸ್ಟರ್ ಮಾಡಲ್ಪಡುವುದು. ಇದರ ಮುಖ್ಯ ಕಾರ್ಯಾಲಯ ಧಾರವಾಡದಲ್ಲಿ ಏರ್ಪಡುವುದು ಇವರಲ್ಲಿ ಒಬ್ಬರು ಕಾರ್ಯದರ್ಶಿಯಾಗಿ ಮುದ್ರಣ, ಪುಸ್ತಕ ವಿಕ್ರಿಯ ಮೊದಲಾದ ಕೆಲಸಗಳನ್ನು ಅಲ್ಲಿ ನಡೆಯಿಸುವರು. ನಾನು ಸಂಚಾಲಕನಾಗಿರುವೆನು. ಸಮಿತಿಯವರೆಲ್ಲರೂ ಈ ಕಾರ್ಯವನ್ನು ಉಚಿತವಾಗಿಯೇ ನಡೆಯಿಸುವರು. ಆದರೆ ಕಾರ್ಯದರ್ಶಿಗಳು ಸಮಿತಿಯ ಕೆಲಸಗಳಿಗೆ ಯೋಗ್ಯರನ್ನು ವೇತನ ಕೊಟ್ಟು ಇಟ್ಟುಕೊಳ್ಳುವರು ಮತ್ತು ಪುಸ್ತಕ ವಿಕ್ರಯದ ಮೇಲೆ ದಲ್ಲಾಳಿಯನ್ನು ಹೊಂದುವರು.

೭. ಈ ಸಮಿತಿಯು ಯಾವ ಪುಸ್ತಕ ಬರೆಯಿಸಬೇಕೆಂಬುದನ್ನು ತಿಳಿಸಲಿಕ್ಕೂ ಬರೆಯಿಸಿದ ಪುಸ್ತಕಗಳಲ್ಲಿ ಆಗಬೇಕಾದ ಸುಧಾರಣೆ ಮತ್ತು ತಿದ್ದುಪಾಟುಗಳನ್ನು ಸೂಚಿಸಲಿಕ್ಕೂ ಕೆಲವು ತಜ್ಞರು ಬೇಕಾದುದು ಅಗತ್ಯವಾಗಿರುವುದರಿಂದ, ರಾ ಬ. ಪಿ. ಜಿ. ಹಳಕಟ್ಟಿಯವರು, ಡಾ. ನಂದಿಮಠರವರು. ಪ್ರಿನ್ಸಿಪಾಲರು, ಬಾಗಿಲುಕೋಟೆ ಬಸವೇಶ್ವರ ಕಾಲೇಜು, ಶ್ರೀಮಾನ್ ಶಂ. ಬಾ. ಜೋಶೀ ಅವರು ಈ ಸಮಿತಿಗೆ ಸಲಹೆಗಾರರಾಗಲು ನಾನು ಪ್ರಾರ್ಥಿಸಿಕೊಳ್ಳಲು ಕೃಪೆಯಿಟ್ಟು ಅವರು ಒಪ್ಪಿರುವುದು ತುಂಬಾ ಸಂತೋಷದ ಸಂಗತಿಯಾಗಿತ್ತು.

೮. ಆ ಹುಟ್ಟು ದಿನದಲ್ಲಿ ಪ್ರಕಟವಾಗುವ ಪುಸ್ತಕವು ಈ ಸಮಿತಿಯ ಮೊದಲನೆಯ ಗ್ರಂಥವಾಗಿ ಪರಿಣಮಿಸಿವುದು. ಅದರ ಕ್ರಯ ೫ ರೂ. ಅಚ್ಚಾಗುವ ಒಂದು ಸಾವಿರ ಪ್ರತಿಗಳನ್ನೂ ಈ ಸಮಿತಿಗೇನೇ ಕೊಡುವೆನು. ಮತ್ತು ಇದಕ್ಕೆ ಧನಸಹಾಯ ಮಾಡಿದ ಮೂವತ್ತು ಜನ ಮಹಾಶಯರನ್ನು ಈ ಸಮಿತಿಯು ಸಹಾಯಕರೆಂದೇ ತಿಳಿದುಕೊಳ್ಳುವುದು. ಒಂದು ವರುಷಕ್ಕೆ ಆರು ಪುಸ್ತಕಗಳನ್ನಾದರೂ ಪ್ರಕಟಿಸಬೇಕೆಂದು ಯೋಚಿಸಿದ್ದೆ.

೯. ಲಿಂಗೈಕ್ಯರಾದ ನನ್ನ ಅಣ್ಣ ದಾರವಾಡದ ಲಿಂಗರಾಜ ಆರ್ಟ್ಸ ಪ್ರೆಸ್ ಒಡೆಯರು ಶ್ರೀ ಮಧುಲಿಂಗಪ್ಪನವರ ಸ್ಮಾರಕ ನಿಧಿಯಿಂದ ಈ ಸಮಿತಿಗೆ ಆ ನನ್ನ ಹುಟ್ಟುದಿನದಲ್ಲಿ ೧೦೦೧ ರೂಪಾಯಿಗಳನ್ನು ಸಲ್ಲಿಸಬೇಕೆಂದಿದ್ದೆನು. ಹೀಗೆ ಆ ದಿನ ಸಮಿತಿಗೆ ಒಂದು ಸಾವಿರ ಗ್ರಂಥಗಳನ್ನೂ ಸ್ವಲ್ಪ ಧನವನ್ನೂ ಒಪ್ಪಿಸಬೇಕೆಂದು ಗೊತ್ತುಮಾಡಿದ್ದೆನು.

೧೦. ಈ ಕಾರ್ಯಕ್ಕೆ ಉದಾರಿಗಳಿಂದ ಎಷ್ಟು ಹೆಚ್ಚು ಧನಸಹಾಯವಾಗುವದೋ ಅಷ್ಟು ಅದು ಪರಿಣಾಮಕಾರಿಯಾಗಿ ಜರುಗುವುದಷ್ಟೇ. ಆದಕಾರಣ ಹಣವನ್ನು ಸೇರಿಸಲು ಈ ಕೆಳಗಿನಂತೆ ಆರು ತರದ ನಿಯಮಗಳನ್ನು ಮಾಡಿದ್ದೆನು.

(ಎ) ಈ ಸಮಿತಿಗೆ ೧೦೦೦ ರೂ. ಗಳಿಗಿಂತ ಹೆಚ್ಚು ಧನಸಹಾಯ ಮಾಡುವವರು ಸಮಿತಿಯ ಮಹಾಪೋಷಕರು (ಬಿ) ೫೦೦ ರೂ. ಗಳಿಂದ ೧೦೦೦ ಗಳ ವರೆಗೆ ಸಮಿತಿಗೆ ಹಣವನ್ನು ಕೊಟ್ಟವರು ಸಮಿತಿಯ ಪೋಷಕರು. ಈ ಮಹಾಪೋಷಕರ ಮತ್ತು ಪೋಷಕರ ಭಾವಚಿತ್ರಗಳನ್ನು ಸಮಿತಿಯು ಪ್ರಕಟಿಸುವ ಪ್ರತಿಯೊಂದು ಪುಸ್ತಕದಲ್ಲಿಯೂ ಮುದ್ರಿಸುವುದು ಮತ್ತು ಮಹಾಪೋಷಕರಿಗೆ ೨೦ ವರ್ಷಗಳವರೆಗೆ, ಪೋಷಕರಿಗೆ ೧೦ ವರ್ಷಗಳ ವರೆಗೆ ಸಮಿತಿಯಿಂದ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನು ಉಚಿತವಾಗಿ ಕೊಟುವುದು. (ಸಿ) ೨೫೦ ರಿಂದ ೫೦೦ ರೂ.ಗಳ ವರೆಗೆ ಧನಸಹಾಯ ಮಾಡುವವರು ಆಶ್ರಯದಾತರೆಂದು ತಿಳಿದು ಅವರ ಹೆಸರನ್ನು ಸಮಿತಿಯ ಪ್ರತಿಯೊಂದು ಪುಸ್ತಕದಲ್ಲಿಯೂ ನಿರ್ದೇಶನಗೊಳಿಸಿ ೫ ವರ್ಷಗಳ ವರೆಗೆ ಸಮಿತಿಯ ಎಲ್ಲ ಪುಸ್ತಕಗಳನ್ನು ಉಚಿತವಾಗಿ ಕೊಡುವುದು. (ಡಿ) ೧೦೦ ರಿಂದ ೨೫೦ ರೂ.ಗಳ ವರೆಗೆ ಧನಸಹಾಯ ಮಾಡುವವರು ಸಮಿತಿಯ ಸಹಾಯಕರೆಂದು ತಿಳಿದು ಮೂರು ವರ್ಷಗಳ ವರೆಗೆ ಸಮಿತಿಯ ಪುಸ್ತಕಗಳನ್ನೆಲ್ಲ ಅವರಿಗೆ ಉಚಿತವಾಗಿ ಕೊಡಲಾಗುವುದಲ್ಲದೆ ಮೂರು ವರ್ಷಗಳ ಸಮಿತಿಯ ಪುಸ್ತಕಗಳಲ್ಲಿ ಅವರ ನಾಮನಿರ್ದೇಶನ ಮಾಡಲಾಗುವುದು. (ಈ) ೫೦ ರಿಂದ ೧೦೦ ರೂ. ಗಳ ವರೆಗೆ ಧನಸಹಾಯ ಮಾಡುವವರು ಸಮಿತಿಯ ಪ್ರೋತ್ಸಾಹಕರೆಂದು ತಿಳಿದು ಒಂದು ವರುಷದ ಪುಸ್ತಕಗಳನ್ನೆಲ್ಲ ಅವರಿಗೆ ಉಚಿತವಾಗಿ ಕೊಡುವುದಲ್ಲದೇ ಆ ವರುಷ ಪ್ರಕಟವಾದ

ಪುಸ್ತಕಗಳಲ್ಲಿ ಅವರ ಹೆಸರನ್ನು ಉಲ್ಲೇಖಿಸಲಾಗುವುದು (ಎಫ್) ೨೫ ರಿಂದ ೫೦ ರೂ. ಗಳ ವರೆಗೆ ಧನಸಹಾಯ ಮಾಡುವವರು ಸಮಿತಿಯ ಹಿತೈಷಿಗಳೆಂದು ಅವರಿಗೆ ಒಂದು ವರ್ಷದ ಸಮಿತಿಯ ಪುಸ್ತಕಗಳನ್ನೆಲ್ಲ ಉಚಿತವಾಗಿ ಕೊಡಲಾಗುವುದು.

೧೧. ಈ ಆರು ಪ್ರಕಾರಗಳಲ್ಲಿ ಯಾವ ರೀತಿಯಿಂದಲಾದರೂ ಸಮಿತಿಗೆ ಧನ ಸಹಾಯ ಮಾಡಿದ ಮಹಾಶಯರು, ನಾಡು-ನುಡಿಗಳ ಸೇವೆಗೆ ಸಮಿತಿಯನ್ನು ಬಲಪಡಿಸಿದ ಶ್ರೇಯಸ್ಸಿಗೆ ಭಾಗಿಗಳಾಗುವರೆಂಬುದು ಮುಖ್ಯವಾದುದೇ ಹೊರತು, ಸಮಿತಿಯು ಕೃತಜ್ಞತಾಪೂರ್ವಕ ತಾನು ಸಲ್ಲಿಸುವ ಪುಸ್ತಕ ಗೌರವಗಳೇನೂ ಗಣ್ಯವಾದವುಗಳಲ್ಲ.

ಸಮಿತಿಗೆ ೨೫ ರೂ. ಗಳಿಗಿಂತ ಕಡಿಮೆಯಾಗಿ ಯಾರು ಎಷ್ಟೇ ಹಣವನ್ನು ಕೊಟ್ಟರೂ ಕೃತಜ್ಞತಾಪೂರ್ವಕ ಅದನ್ನು ತೆಗೆದುಕೊಂಡು, ಅವರಿಗೆ ಹಣ ಮುಟ್ಟಿದ ಪಾವತಿ ಕೊಡುವುದು ಮತ್ತು ಪ್ರತಿವರ್ಷ ಸಮಿತಿ ವರದಿಯನ್ನು ಪ್ರಕಟಿಸಿ, ಅದರಲ್ಲಿ ಅವರ ಸಹಾಯವನ್ನ ನಿರ್ದೇಶನಗೊಳಿಸುವುದು.

೧೨. ಈ ವರೆಗೆ ವಿವರಿಸಿರುವ ಸಂಗತಿಗಳಿಂದ ನನ್ನ ಯೋಜನೆಯ ರೀತಿಯು ಸಾರ್ವಜನಿಕರಿಗೆ ವೇದ್ಯವಾಗಬಹುದು. ಮಹಾಯುದ್ಧದಿಂದ ಜನತೆಯಲ್ಲಿ ವಾಚನಾಭಿರುಚಿ ಹೆಚ್ಚಿದೆ. ಪ್ರಾಥಮಿಕ ಶಿಕ್ಷಣ ಪ್ರಸಾರವೂ ಹೆಚ್ಚುತ್ತಿದೆ. ಇಂಥ ಕಾಲದಲ್ಲಿ ತಾಯಿನುಡಿಯಲ್ಲಿಯೇ ಆಧುನಿಕ ವಿಚಾರಸರಣಿಯ ಎಲ್ಲ ತರಹದ ಗ್ರಂಥಗಳು ವಿಪುಲವಾಗಿ ಪ್ರಸಾರವಾದರೆ ನಾಡಿನಲ್ಲಿ ಹೊಸ ವಿಚಾರ ಜಾಗೃತಿಯಾಗಿ, ಅದು ಬಲಗೊಳ್ಳಲು ಬಹು ಅನುಕೂಲವಾಗುತ್ತದೆ. ತಾಯಿನುಡಿಯನ್ನು ಮಾತ್ರಬಲ್ಲ ಜನತೆಯ ಜಾಗೃತಿಯೇ ನಾಡಿನ ನಿಜವಾದ ಜಾಗೃತಿ. ಇಂಥ ಗ್ರಂಥಪ್ರಚಾರಕ ಕಾರ್ಯವು ಶಿಕ್ಷಣ ಪ್ರಸಾರದ ಕಾರ್ಯಗಳಲ್ಲಿ ಮಹತ್ವದ್ದು. ಇತ್ತಕಡೆ ನಮ್ಮ ನಾಡಿನ ಉದಾರಿಗಳು ಲಕ್ಷಿಸಿದರೆ ಜನತೆಗೆ ಉಪಯುಕ್ತ ಪುಸ್ತಕಗಳು ಕಡಿಮೆ ಬೆಲೆಗೆ ದೊರೆತು ಮಹತ್ತರವಾದ ಪ್ರಯೋಜನವನ್ನು ಉಂಟುಮಾಡುವವು.

೧೩. ಈ ಸಮಿತಿಗೆ ಉದಾರಿಗಳಿಂದ ಕೊಡಲ್ಪಡುವ ಧನವನ್ನು ಭದ್ರವಾದ ಬ್ಯಾಂಕಿನಲ್ಲಿಟ್ಟು, ಆಗಾಗ್ಗೆ ಬೇಕಾಗುವಷ್ಟು ಹಣವನ್ನು ತೆಗೆದುಕೊಂಡು ಉಪಯೋಗಿಸಿ, ಪುಸ್ತಕಗಳ ವಿಕ್ರಯದಿಂದ ಬರುವ ಹಣವನ್ನು ಈ ನಿಧಿಗೆ ಕೂಡಿಸಲಾಗುವುದು. ಆದಕಾರಣ ಸಮಿತಿಯ ಹಣವು ದಿನೇ ದಿನೇ ಹೆಚ್ಚುತ್ತ ಹೋಗಿ ಪುಸ್ತಕಗಳು ಆದಷ್ಟು ಕಡಿಮೆ ಬೆಲೆಗೆ ಹೆಚ್ಚು ಜನತೆಗೆ ದೊರೆಯುವಂತಾಗುವುದು.

೧೪. ಸಮಿತಿಯ ಹೆಸರು, ಹಣ ಕೂಡಿಸುವ ವಿಧಾನ, ಗ್ರಂಥಪ್ರಸಾರ ರೀತಿ, ಮೊದಲಾದ ಮೇಲಿನ ಎಲ್ಲ ವಿಷಯಗಳಲ್ಲಿಯೂ ಸಾರ್ವಜನಿಕರ, ಹಿತಚಿಂತಕರ ಸಲಹೆ ಸೂಚನೆಗಳಿಗೆ ವಿನಂತಿಸಿಕೊಂಡೆನು.

ನನ್ನ ಆರೋಗ್ಯ ನನ್ನ ೬೦ ವರ್ಷ ವಯಸ್ಸಿನ ವೇಳೆಗೆ ಅಷ್ಟಾಗಿ ಚೆನ್ನಾಗಿ ಇರಲಿಲ್ಲ. ನನ್ನ ೬೧ನೆಯ ಹುಟ್ಟು ಹಬ್ಬದ ದಿವಸ ನಾನೇ ರಚಿಸಿದ **"ಋಗ್ವೇದಸಾರ"** ವೆಂಬ ಸುಮಾರು ೪೦೦ ಪುಟಗಳ ಗ್ರಂಥವನ್ನು ಪ್ರಕಟಿಸಬೇಕೆಂಬ ನನ್ನ ಆಶೆ ನೆರವೇರಲಿಲ್ಲ. ಏಕೆಂದರೆ ಸಕಾಲದಲ್ಲಿ ಈ ಗ್ರಂಥ ಮುದ್ರಣವಾಗುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ಅಂದು **'ಎಚ್ಚೆತ್ತ ಭಾರತ'** ಎಂಬ ಸುಮಾರು ೬೦ ಪುಟಗಳ ಚಿಕ್ಕ ಗ್ರಂಥವನ್ನು ಬರೆದು ಪ್ರಕಟಿಸಿದೆನು. ಎಚ್ಚೆತ್ತ ಭಾರತ ಪುಸ್ತಕದಲ್ಲಿ ಭಾರತದ

ಚರಿತ್ರೆಯ ಸುಮಾರು, ಐದು ಸಾವಿರ ವರ್ಷಗಳ ಏರಿಳಿತದ ವಿವೇಚನೆ ಇದ್ದು ಇದೊಂದು ಅತ್ಯಂತ ವಿಚಾರಪೂರಿತ ಗ್ರಂಥವಾಗಿದ್ದಿತು. ಭಾರತವು ಹೇಗೆ ಮುಂದೆ ಪ್ರಗತಿಯಾಗಬೇಕೆಂಬುದನ್ನು ಈ ಪುಸ್ತಕದಲ್ಲಿ ಚರ್ಚಿಸಿದ್ದೆನು.

ನನ್ನ ಮೇಲ್ಕಾಣಿಸಿದ ಪ್ರಗತಿ ಗ್ರಂಥಮಾಲೆಯ ಯೋಜನೆ ದುರದೃಷ್ಟವಶಾತ್ ನನ್ನ ಅನಾರೋಗ್ಯದ ನಿಮಿತ್ತವಾಗಿ ಜಾರಿಯಾಗಲಿಲ್ಲ. ರಕ್ತದ ಒತ್ತಡ ಮುಂತಾದ ಕಾಯಿಲೆಗಳಿಂದ ನನ್ನ ದೇಹ ಜರ್ಜರಿತವಾಯಿತು. ಸಾಲದುದಕ್ಕೆ ಒಪ್ಪತ್ತಿನ ಊಟ, ಹೀಗಾಗಿ ಸಂಪೂರ್ಣ ನಿಶ್ಯಕ್ತನಾಗಿ **ಶರಣಸಂದೇಶ**ದ ಪ್ರಕಟಣೆಯನ್ನು ನಿಲ್ಲಿಸಬೇಕಾಯಿತು. ಸ್ವಾತಂತ್ರ್ಯದ ಕನಸು ಕಾಣುತ್ತಿದ್ದ ನಾನು, ನಿಶ್ಯಕ್ತಿಯಿಂದಾಗಿ ನನ್ನ ಎಲ್ಲ ಯೋಜನೆಗಳನ್ನು ಕೈಬಿಡುವಂತಾದುದರಿಂದ ನನ್ನ ಹಿತಚಿಂತಕರು ಆಲಮಟ್ಟಿ, ಚಿಮ್ಮಲಗಿ, ಬಾಗಿಲಕೋಟೆ, ಮುದ್ದೇಬಿಹಾಳ, ಬೇನಾಳ, ಬಂಥನಾಳ, ನಿಡಗುಂದಿ ಹಾಗೂ ನೆರೆಯ ಹಳ್ಳಿಗಳಿಂದ ವೀರಶೈವ ವಿದ್ಯಾಲಯಕ್ಕೆ ಬಂದು ನನ್ನ ಕೊನೆಯ ಸಂದೇಶವನ್ನು ಕೇಳಿದಾಗ, ೧೯೪೭ರ ಜನೆವರಿ ೩ ರಂದು **"ವೀರರಾಗಿರಿ, ಧೀರರಾಗಿರಿ, ಪವಿತ್ರರಾಗಿರಿ, ಸ್ವತಂತ್ರ ರಾಷ್ಟ್ರದ ವೀರರಾಗಿರಿ, ಇದು ನನ್ನ ಕಡೆಯ ಮನವಿ"** ಎಂಬ ನನ್ನ ಕೊನೆಯ ಸಂದೇಶವನ್ನು ನೆರೆದ ಜನತೆಗೆ ಅಭಿಮಾನಿಗಳಿಗೆ ಭಾರವಾದ ಹೃದಯದಿಂದ ಕೊಟ್ಟೆನು.

* * *

ರಾಷ್ಟ್ರಧರ್ಮದ್ರಷ್ಟಾರ ಶ್ರೀ ಹರ್ಡೇಕರ ಮಂಜಪ್ಪನವರು ೧೯೪೭ರ ಜನೆವರಿ ೩ ರಂದು ಇಹಲೋಕವನ್ನು ತ್ಯಜಿಸಿದರು. ಅವರ ಪಾರ್ಥಿವ ಶರೀರದ ಅಂತ್ಯಸಂಸ್ಕಾರ ಆಲಮಟ್ಟಿಯಲ್ಲಿಯೇ ಅಪಾರ ಜನಸ್ತೋಮದ ಕಣ್ಣೀರಿನೊಂದಿಗೆ ನಡೆಸಲಾಯಿತು.

ವಿಷಯ ಋಣ

೧. ಶ್ರೀ ಮಹಾಂತಪ್ಪ ರುದ್ರಪ್ಪ ಬಳ್ಳೊಳ್ಳಿ. ಸಾ. ಆಲಮಟ್ಟಿ ವಯಸ್ಸು ೯೨ ವರ್ಷ.

೨. ಶರಣಸಂದೇಶ ಪತ್ರಿಕೆಯ ಆಯಾ ಸಂದರ್ಭದ ಸಂಚಿಕೆಗಳು.

೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ (೧೯೬೬) ಸಂ: ಗ. ಸ. ಹಾಲಪ್ಪ


❖❖

ಭಾಗ : ೨

❖

ರಾಷ್ಟ್ರೀಯ ಸಾಹಿತ್ಯ

* ಟಿಪ್ಪಣಿ
❖ ಖಾದಿಶಾಸ್ತ್ರ



ಹಾಳು ಬಿದ್ದಿರುವ ಮಂಜಪ್ಪನವರ ಅಧ್ಯಯನ ಕೊಠಡಿ, ಆಲಮಟ್ಟಿ(೧೯೮೯)

*

ಟಿಪ್ಪಣಿ

ಇಂದು ವಿಚಾರ ಪ್ರಧಾನಯುಗದಲ್ಲಿ ನಾವು ಬದುಕುತ್ತಿದ್ದೇವೆ. ವ್ಯಾಪಕ ವಿಚಾರ ಹೊಂದಿದವರು ಮಾತ್ರ ವರ್ತಮಾನಕ್ಕೆ ಸ್ಪಂದಿಸಿ, ಭವಿಷ್ಯತ್ತಿನ ರೂಪುರೇಷೆಗಳನ್ನು ನಿರ್ಮಿಸಬಲ್ಲವರಾಗಿದ್ದಾರೆ. ಈ ಕಾರಣ ವಿಚಾರ ವಿಶೇಷತೆ ಎಲ್ಲ ಮಾರ್ಗಕ್ಕೂ ಹೆಬ್ಬಾಗಿಲಾಗಿ ನಿಂತುಕೊಂಡಿದೆ. ಜ್ಞಾನಾರ್ಜನೆ, ಕ್ರಿಯಾಶಿಲತೆಗಳ ಮೂಲಕ ಸಾಹಿತ್ಯನಿರ್ಮಾಣದ ಹರವಿಗೂ ವಿಚಾರ ಪ್ರಕ್ರಿಯೆ ಹರಿದು, ಅದರ ಸಾಫಲ್ಯದ ಸೂತ್ರವಾಗಿ ಕೆಲಸಮಾಡುತ್ತಲಿದೆ. ಭಾರತೀಯ ಇತಿಹಾಸದಲ್ಲಿ ಇಂದು ಬದಲಾವಣೆಗೆ, ಅನುಸಾರವಾಗಿ ವಿಚಾರಸಾಹಿತ್ಯ ವಿಶೇಷರೂಪ ಪಡೆದು ಬೆಳೆಯುತ್ತಲಿದೆ. ೧೮ನೆಯ ಶತಮಾನದಲ್ಲಿ ಫ್ರಾನ್ಸ ಮತ್ತು ಅಮೇರಿಕದಲ್ಲಿ ಆದ ಔದ್ಯೋಗಿಕ ಮಹಾಕ್ರಂತಿ ವಿಚಾರಸಾಹಿತ್ಯಕ್ಕೆ ಪುಷ್ಟಿಯನ್ನೊದಗಿಸಿತು. ಜಾಗತಿಕ ಮಟ್ಟದ ಎರಡು ಮಹಾಯುದ್ಧಗಳು, ವೈಜ್ಞಾನಿಕ ಮನೋಭಾವ ಇತ್ಯಾದಿಗಳು ಸಂಭವಿಸಿ ಎಲ್ಲದರಲ್ಲೂ ವಿಚಾರ ಪ್ರಧಾನವೇ ಅಗ್ರಸ್ಥಾನ ಪಡೆದುಕೊಂಡಿತು. ಈ ಕಾರಣ ಸಾಹಿತ್ಯಕ್ಷೇತ್ರದಲ್ಲಿಯೂ ವೈಚಾರಿತಕೆ ವಿವಿಧ ಕವಲುಗಳಲ್ಲಿ ಸೃಷ್ಟಿಯಾಗತೊಡಗಿತು.

ವಿಚಾರಸಾಹಿತ್ಯದ ಒಂದು ಮುಖ್ಯ ಅಂಗ **'ರಾಷ್ಟ್ರಿಯ ಸಾಹಿತ್ಯ'** ರಾಷ್ಟ್ರದ ಕುರಿತು ಅಭಿಮಾನ ಹಾಗೂ ಅರಿವನ್ನು ಜಾಗೃತಗೊಳಿಸುವುದು ಇದರ ಮುಖ್ಯ ಆಶಯ. ದೇಶದ ಸೀಮಾರೇಖೆಗಳನ್ನು ಪರರು ಆಕ್ರಮಿಸದಂತೆ ನೋಡಿಕೊಂಡು, ನಮ್ಮದೇ ಆದ ಜೀವನ ವಿಧಾನದಲ್ಲಿ ರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸ್ವತಂತ್ರರಾಗಿ ಐಕ್ಯತೆಯಿಂದ ಬಾಳುವುದು ಈ ಆದರ್ಶದ ಸ್ವರೂಪವಾಗಿದೆ. ರಾಷ್ಟ್ರಿಯ ಐಕ್ಯತಾ ಮನೋಭಾವದೊಂದಿಗೆ 'ನಾನು ದೊಡ್ಡವನಲ್ಲ ನನ್ನ ರಾಷ್ಟ್ರ ದೊಡ್ಡದು.' ಎಂದು ಬದುಕುವುದು ರಾಷ್ಟ್ರೀಯತೆಯಾಗಿದೆ. "ಭಾವನಿಷ್ಠೆ ಧರ್ಮನಿಷ್ಠೆ ಮತ್ತು ಜನಾಂಗನಿಷ್ಠೆಗಳಿಗಿಂತಲೂ ಮುಖ್ಯವಾದುದು ರಾಷ್ಟ್ರನಿಷ್ಠೆ ಪರಸ್ಪರ ಹಿತಸಾಧನೆಗೆ ಪ್ರಾಮುಖ್ಯತೆಯನ್ನು ಕೊಟ್ಟು ಸ್ವಜಾತಿ, ಸ್ವಧರ್ಮ, ಸ್ವಭಾಷೆ ಮುಂತಾದವುಗಳನ್ನು ರಾಷ್ಟ್ರಹಿತಕ್ಕಾಗಿ ಅಧೀನಗೊಳಿಸಿ ಎಲ್ಲಕ್ಕಿಂತಲೂ ರಾಷ್ಟ್ರವೇ ದೊಡ್ಡದು ಎಂಬ ವಿಚಾರಕ್ರಾಂತಿಯೇ ರಾಷ್ಟ್ರೀಯತ್ವದ ಮೂಲಾಧಾರ"[೧] ಮನುಷ್ಯ ರಾಷ್ಟ್ರಿಯತ್ವವನ್ನು ಮೂಲಾಧರವಾಗಿಸಿಕೊಂಡರೆ ಉಳಿದವುಗಳೆಲ್ಲ ಗೌಣವಾಗಿ, ಬಂಧುತ್ವ ಅರಳುತ್ತದೆ.

---

೧. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ, ಗ.ಸ. ಹಾಲಪ್ಪ, ಪುಟ. ೮೪

ಭಾರತದಲ್ಲಿ ರಾಷ್ಟ್ರೀಯತೆಯ ಪರಿಕಲ್ಪನೆ ಬೀಜ ಮೊಳತದ್ದು ಇಂಗ್ಲೀಷರ ವಿರುದ್ಧ ಹೋರಾಡುವ ಸಂದರ್ಭದಲ್ಲಿ ಈ ಪೂರ್ವದಲ್ಲಿ ಮುಸ್ಲಿಮರ ಪ್ರಾಬಲ್ಯ ಅಧಿಕವಾಗಿತ್ತು. ದೇಶೀಸಂಸ್ಥಾನಗಳು ಮೂಲೆಗೂಂಪಾಗುತ್ತಿದ್ದವು. ಹಿಂದೂ ಜನಾಂಗ ತತ್ತರಿಸುತ್ತಿತ್ತು. ಈ ಸಂದರ್ಭದಲ್ಲಿ ಇಂಗ್ಲೀಷರ ಆಗಮನವಾಗಿ ಹೊಸ ಶಿಕ್ಷಣ ಕಾಲೂರಿತು. ಇದರೊಟ್ಟಿಗೆ ವಿಚಾರಶಕ್ತಿ ಬೇರುಬಿಟ್ಟಿತು. ರಾಜಾರಾಮ ಮೊಹನರಾಯ, ಸ್ವಾಮಿ ದಯಾನಂದ ಸರಸ್ವತಿ, ವಿವೇಕಾನಂದ ಮುಂತಾದವರು ಹೊಸ ಸಮಾಜನಿರ್ಮಾಣಕ್ಕೆ ಕೈಹಾಕಿ, ವಿಚಾರಕ್ರಾಂತಿಯನ್ನುಂಟು ಮಾಡಿದರು. ಸನಾತನ ವಿಚಾರಗಳಿಗೆ ಹೊಸ ಅರ್ಥ ನೀಡಿ, ಜನತೆ ಜ್ಞಾನಮಾರ್ಗದತ್ತ ಸಾಗಲು ಅನುವು ಮಾಡಿಕೊಟ್ಟರು. ಇದು ರಾಷ್ಟ್ರಪ್ರೇಮ ಅರಳಲು ಊರುಗೋಲಾಯಿತು. ಜನತೆಯಲ್ಲಿ ಸ್ವಾಭಿಮಾನ, ರಾಷ್ಟ್ರಾಭಿಮಾನ ಬೇರೂರತೊಡಗಿತು.

ಹಲವು ಭಾಷೆಗಳ ಸಂಗಮವಾದ ಭಾರತದಲ್ಲಿ ಸಂಪರ್ಕಸೇತು ಕೊರತೆ ಕಾರಣವಾಗಿ ಐಕ್ಯತೆ ಸಾಧಿಸುವುದು ಅಸಾಧ್ಯವಾಗಿತ್ತು. ಭಾರತದ ಒಂದು ಪ್ರದೇಶದ ಜನರಿಗೂ ಇನ್ನೊಂದು ಪ್ರದೇಶದ ಜನರಿಗೂ ಮಧ್ಯೆ ಭಾಷೆ ಕಾರಣವಾಗಿ ಕಂದಕವೇ ಇತ್ತು. ಈ ಕಂದಕಕ್ಕೆ ಸೇತುವೆಯಾದದ್ದು ಇಂಗ್ಲೀಷ್ ಶಿಕ್ಷಣ. ಈ ಕಾರಣವಾಗಿಯೇ ರಾಜಾರಾಮ ಮೋಹನರಾಯರಂತಹ ಸಮಾಜ ಸುಧಾರಕರು ಇಂಗ್ಲೀಷ ಶಿಕ್ಷಣವನ್ನು ಪುರಸ್ಕರಿಸಿದರು. ಇಂಗ್ಲೀಷ ಕಲಿತ ವಿದ್ಯಾವಂತರು ಜಾಗೃತರಾಗಿ ಒಂದೆಡೆ ಸೇರಿ, ಪರಸ್ಪರ ವಿಚಾರ ವಿನಿಮಯ ಮಾಡಿಕೊಂಡು ರಾಷ್ಟ್ರದ ಕುರಿತು ಚಿಂತನೆ ನಡೆಸಿದರು. ಸ್ವಾತಂತ್ರ್ಯ ಪಡೆಯಲು ಹೋರಾಟಕ್ಕೆ ಮುಂದಾಗಿ ನಿಂತರು ಪತ್ರಿಕೋದ್ಯಮ, ರೈಲುಮಾರ್ಗ, ಅಂಚೆ ಮತ್ತು ತಂತಿ ವ್ಯವಸ್ಥೆಗಳು ರೂಪಗೊಂಡು ಸಂಗ್ರಾಮಕ್ಕೆ ಸಹಾಯಕವಾಗಿ ನಿಂತವು. ಇವೆಲ್ಲ ಭಾರತದಲ್ಲಿ ರಾಷ್ಟ್ರೀಯತೆ ಬೆಳೆಯಲು ಕಾರಣವಾದವು. ಇದರ ಗಾಢವಾದ ಪ್ರಭಾವ ಭಾರತೀಯ ಬರಹಗಾರರ ಮೇಲೆ ಸಹಜವಾಗಿಯೇ ಆಯಿತು. ಅದರ ಅಂಗವಾಗಿ ರಾಷ್ಟ್ರೀಯ ಸಾಹಿತ್ಯ ರಚನೆಯಾಗತೊಡಗಿತು. ಬಂಕಿಮಚಮದ್ರ ಚಟರ್ಜಿ, ರವೀಂದ್ರನಾಥ ಠಾಕೂರ ಅವರು ತಮ್ಮ ಬರಹಗಳಲ್ಲಿ ರಾಷ್ಟ್ರೀಯತೆಯ ಪರಿಚ್ಛಾಯೆ ಮೂಡುವಂತೆ ಮಾಡಿದರು. ಬಂಕಿಮಚಂದ್ರರ ಆನಂದಮಠ ಕಾದಂಬರಿಯಲ್ಲಿಯ **"ವಂದೇ ಮಾತರಂ"** ಗೀತೆ ಭಾರತೀಯರ ಮೂಲಮಂತ್ರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರಾಷ್ಟ್ರವ್ಯಾಪಿ ಪ್ರಸಾರ ಪಡೆಯಿತು. ನಂತರ ರವೀಂದ್ರನಾಥ ಠಾಕೂರರ **'ಜನಗಣಮನ'** ರಾಷ್ಟ್ರಗೀತೆಯಾಗಿ ಪ್ರಸಿದ್ಧಿ ಪಡೆಯಿತು. ಇವುಗಳ ಪ್ರಭಾವ ಮತ್ತು ಗಾಂಧೀಜೀ ನೇತೃತ್ವದ ಹೋರಾಟಗಳು ಭಾರತದ ವಿವಿಧ ಭಾಗಗಳಲ್ಲಿ ರಾಷ್ಟ್ರೀಯ ಸಾಹಿತ್ಯ ಮೂಡಿಬರಲು ಕಾರಣವಾದವು. ಕರ್ನಾಟಕದಲ್ಲಿ ಈ ಕೊರತೆ ತುಂಬಲು ಮೊದಲಿಗರಾಗಿ ಮೂಡಿ ಬಂದವರು, ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು. ಈ ಕಾರಣವೇ ಮಂಜಪ್ಪನವರನ್ನು **'ಕನ್ನಡ ರಾಷ್ಟ್ರೀಯ ಸಾಹಿತ್ಯದ ಪಿತಾಮಹ'** ಎಂದು ಕರೆಯುವುದುಂಟು.

ಕನ್ನಡದಲ್ಲಿ ಮೊದ-ಮೊದಲು ಅನುವಾದರೂಪದಲ್ಲಿ ರಾಷ್ಟ್ರಿಯ ಸಾಹಿತ್ಯ ಮೂಡಿಬಂದಿತು. ಬಿ. ವೆಂಕಟಾಚಾರ್ಯರು, ಬಂಕಿಮಚಮದ್ರ ಚಟರ್ಜಿಯವರ ಆನಂದ ಮಠ ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದರು. ಗಳಗನಾಥರು ಮರಾಠಿಭಾಷೆಯಿಂದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕೃತಿಗಳನ್ನು ಅನುವಾದಿಸಿದರು. ನಂತರ ಸ್ವತಂತ್ರಕೃತಿಗಳನ್ನು ಬರೆದರು. ಇವುಗಳ ಪ್ರಭಾವ

ಮತ್ತು ಇಂಗ್ಲೀಷ ಶಿಕ್ಷಣ ಕಾರಣವಾಗಿ ಕನ್ನಡದಲ್ಲಿ ರಾಷ್ಟ್ರಾಭಿಮಾನ ತುಂಬಬಲ್ಲ, ಸ್ವತಂತ್ರಕೃತಿಗಳು ರಚನೆಯಾಗತೊಡಗಿದವು. ಕವಿತೆ, ಕಾದಂಬರಿ, ನಾಟಕ, ವಿವಿಧ ರೀತಿಯ ಗದ್ಯ ಬರಹ, ಜನಪದ ಸಾಹಿತ್ಯ– ಹೀಗೆ ಎಲ್ಲ ಬಗೆಯ ಸಾಹಿತ್ಯದಲ್ಲಿ ಆನುಷಂಗಿಕವಾಗಿ, ನೇರವಾಗಿ ರಾಷ್ಟ್ರೀಯ ಸಾಹಿತ್ಯ ಬೆಳೆಯತೊಡಗಿತು.

ಈ ಸಂದರ್ಭದಲ್ಲಿ ಹರ್ಡೇಕರ ಮಂಜಪ್ಪನವರ ಸ್ಥಾನ ಹಿರಿದಾದುದು, ಅಮೂಲ್ಯವಾದುದು. "ಹರ್ಡೇಕರ ಮಂಜಪ್ಪನವರು ಬರ್ನಾಡ ಷಾ ಮತ್ತು ರವೀಂದ್ರನಾಥ ಠಾಕೂರರಂತೆ ನಾಟಕಕಾರರಾಗಲಿ, ಕವಿಗಳಾಗಲಿ ಆಗಿರಲಿಲ್ಲ. ಬರ್ಟ್ರಾಂಡ ರಸೆಲ್ಲರಂತೆ ವಿಚಾರವಾದಿಗಳಾಗಿದ್ದರು. ಅವರು ಯಾವ ವಿಚಾರವನ್ನೇ ಕುರಿತು ಬರೆಯಲಿ ತರ್ಕದ ಒರೆಗಲ್ಲಿನಲ್ಲಿ ಪರೀಕ್ಷಿಸಿ, ವೈಜ್ಞಾನಿಕವಾಗಿ ಯೋಚಿಸುತ್ತಿದ್ದರು, ಮತ್ತು ಹೇಳುವ ವಿಷಯಗಳನ್ನು ಸ್ಪಷ್ಟವಾಗಿ ಹೃದಯಂಗಮವಾಗಿ ಹೇಳುತ್ತಿದ್ದರು. ಗಹನವಾದ ವಿಷಯಗಳನ್ನು ಕುರಿತು ಸರಳ ಶೈಲಿಯಲ್ಲಿ ಪರಿಣಾಮಕಾರಿಯಾಗುವ ರೀತಿಯಲ್ಲಿ ಮಂಜಪ್ಪನವರಂತೆ ಬರೆದಿರುವವರು ವಿರಳ. ಮಂಜಪ್ಪನವರ ಗದ್ಯಶೈಲಿ ಮಂಜಪ್ಪನವರದೇ ಆಗಿತ್ತು."[೨] ಆಕರ್ಷಕವಾದ, ಸರಳವಾದ ಶೈಲಿಯಿಂದ ಕನ್ನಡ ನಾಡಿನಲ್ಲಿ ರಾಷ್ಟ್ರಿಯತೆ, ಪ್ರಸಾರಗೊಲಿಸಲು ಮಂಜಪ್ಪನವರು ವಿವಿಧ ಕೃತಿಗಳನ್ನು ರಚಿಸಿದಿರು. ಅಲ್ಲೆಲ್ಲ ಪರಿಪಕ್ವವಿಚಾರಗಳನ್ನು ಪ್ರತಿಬಿಂಬಿಸಿದರು. "ಶ್ರೀ. ಡಿ. ಎಲ್. ನರಸಿಂಹಾಚಾರ್ಯರು ಒಮ್ಮೆ ಹೇಳಿದಂತೆ ಕನ್ನಡದ ನಾಡಿಯನ್ನು ಬಲ್ಲ ನಿಪುಣ ಶ್ರೀ ಮಂಜಪ್ಪ! ಅವರ ಕೃತಿಗಳಲ್ಲಿ ಕನ್ನಡ ನಾಣ್ಣುಡಿ ಪಡೆನುಡಿ, ಮನೆಮಾತು, ಸಾರ್ಥಕವಾದ ಉಪಮಾನಗಳ ಮತ್ತು ನಿತ್ಯ ಜೀವನದ ಸೊಬಗನ್ನು ಕಾಣಬಹುದು. ಮಂಜಪ್ಪನವರು ಜೀವನದ ಸಮಸ್ಯೆಗಳನ್ನು ಚೆನ್ನಾಗಿ ಗ್ರಹಿಸಿದ್ದರು. ಜನತೆಯ ದುಃಖ ದುಮ್ಮಾನಗಳನ್ನು ಅರಿತು ಜನಮನವನ್ನು ತಿದ್ದಿ ತಿರುಗಿಸಲು ಪ್ರೇರಕವಾಗುವ ಸಾಮಾಜಿಕ ಹಾಗೂ ವೈಚಾರಿಕ ಸಾಹಿತ್ಯವನ್ನು ಅಂತಃಕರಣಪೂರ್ವಕವಾಗಿ ನಿರ್ಮಿಸಿದರು. ಅವರ ನುಡಿಗಳಲ್ಲಿ ವಿಚಾರದ ಅಚ್ಚನ್ನು ಸಾಹಿತ್ಯದ ಮೆರಗನ್ನು, ಸತ್ಯನಿಷ್ಠೆಯನ್ನು ನೋಡಬಹುದು. ಅವರ ಮಾತುಗಳನ್ನು ಕೇಳಿ, ಗ್ರಂಥಗಳನ್ನು ಓದಿ, ಅವರ ವಾದಕ್ಕೆ ಮಣಿಯದವರು ಕಡಿಮೆ; ಅಂತಃಕರಣ, ಕರಗದವರು ವಿರಳ. ಅವರ ವಿಚಾರಕ್ಕೆ ಪರಿವರ್ತಿತರಾಗದವರಿಲ್ಲ. ಮಂಜಪ್ಪನವರು ರಚಿಸಿದ ಸಾಹಿತ್ಯ ಲೌಖಿಕ ಸಾಹಿತ್ಯವೆನ್ನಿರಿ, ವಿಚಾರ ಸಾಹಿತ್ಯವೆನ್ನಿರಿ, ರಾಷ್ಟ್ರಿಯ ಸಾಹಿತ್ಯವೆನ್ನಿರಿ ಅಥವಾ ಬೇರೆ ಯಾವುದೇ ಹೆಸರಿನಿಂದ ಅದನ್ನು ಕರೆಯಿರಿ. ಅದು ಜೀವನಸಾಹಿತ್ಯ. ಎಲ್ಲರಿಗೂ ಮೆಚ್ಚುಗೆಯಾದ ಸಾಹಿತ್ಯ. ಜನಾಂಗ ಮೇಲಕ್ಕೆತ್ತುವ ಉಜ್ವಲಸಾಹಿತ್ಯ, ರಾಷ್ಟ್ರಧರ್ಮವನ್ನು ಪ್ರತಿಪಾದಿಸುವ ತೇಜಪುಂಜವಾದ ಸಾಹಿತ್ಯ"[೩] ಹೀಗೆ ಹರ್ಡೇಕರ ಮಂಜಪ್ಪನವರ ವೈವಿಧ್ಯಮಯ ಸಾಹಿತ್ಯಕೃತಿಗಳಲ್ಲಿ ವಿಚಾರಪ್ರಖರತೆಯನ್ನು ವಿಶೇಷವಾಗಿ ಕಾಣುತ್ತೇವೆ. ರಾಷ್ಟ್ರೀಯತೆಯ ಆಲೋಚನೆಗಳನ್ನು ದೃಷ್ಟಿಸುತ್ತೇವೆ. ಮಂಜಪ್ಪನವರ ಒಟ್ಟು ಸಾಹಿತ್ಯ ಕೃತಿಗಳನ್ನು ಅಧ್ಯಯನದ ಅನುಕೂಲಕ್ಕಾಗಿ ವಿಂಗಡಿಸಿದರೂ ಅವುಗಳಲ್ಲಿ ಜೀವಸೂತ್ರವಾಗಿ ಕಂಡುಬರುವ ಅಂಶ ರಾಷ್ಟ್ರೀಯತೆ. ರಾಷ್ಟ್ರದ ಪುನಃನಿರ್ಮಾಣವೇ ಅವರ ಹೊಂಗನಸಾಗಿದ್ದರಿಂದ, ತಮ್ಮ ಬಹುಪಾಲು ಕೃತಿಗಳಲ್ಲಿ ನೇರವಾಗಿ ಪರ್ಯಾಯವಾಗಿ ರಾಷ್ಟ್ರೀಯ ವಿಚಾರ ಪ್ರತಿಬಿಂಬಿಸುವ ಕೃತಿಗಳನ್ನೇ

---

೨. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ–ಗ.ಸ. ಹಾಲಪ್ಪ, ಪುಟ.೯೧
೩. ಅದೇ.

ಬರೆದರು. ತಾವು ಹೊರಡಿಸುತ್ತಿದ್ದ ಉದ್ಯೋಗ, ಖಾದಿ ವಿಜಯ, ಶರಣ ಸಂದೇಶ ಮುಂತಾದ ಪತ್ರಿಕೆಗಳ ಸಂಪಾದಕೀಯದಲ್ಲೂ ಇಂಥ ವಿಚಾರಗಳನ್ನು ಹೆಚ್ಚಾಗಿ ಬರೆದು ಪ್ರಸಾರಗೊಳಿಸಿದರು.

'ರಾಷ್ಟ್ರೀಯತೆ' ಎಂಬುದು ಮಂಜಪ್ಪನವರ ಉಸಿರಾಗಿತ್ತು. ಸೈದ್ಧಾಂತಿಕವಾಗಿ ಮತ್ತು ಅನ್ವಯಿಕವಾಗಿ ಅದನ್ನು ಬಾಳಿದವರಲ್ಲಿ ಇವರು ಅಗ್ರಗಣ್ಯರು. ಇದು ಕಾರಣವಾಗಿಯೇ ಅವರ ಬರಹದಲ್ಲೆಲ್ಲ ರಾಷ್ಟ್ರಿಯತೆ ಪದೇ ಪದೇ ಕಾಣುತ್ತದೆ. ಇದು ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯದ ಮಾರ್ಗ ಹುಟ್ಟಿಕೊಂಡು ಬೆಳೆಯಲು ಕಾರಣವಾಯಿತು. ಇದರಿಂದಾಗಿಯೇ ಮಂಜಪ್ಪನವರನ್ನು ಕನ್ನಡ ರಾಷ್ಟ್ರೀಯ ಸಾಹಿತ್ಯದ ಪಿತಾಮಹರೆಂದು ಕರೆಯುವುದುಂಟು. ಡಾ. ಬಿ. ವ್ಹಿ. ಮಲ್ಲಾಪೂರ ಅವರು ಹೇಳುವಂತೆ– "ಅಡಿಯಿಂದ ಮುಡಿಯವರೆಗೆ ಮಂಜಪ್ಪನವರಲ್ಲಿ ಪರಿದಾಡುತ್ತಿದ್ದುದು ರಾಷ್ಟ್ರಿಯ ಪ್ರಜ್ಞೆಯಾದುದರಿಂದ, ಅವರ ಎಲ್ಲ ಬಗೆಯ ಸಾಹಿತ್ಯಕೃತಿಗಳಲ್ಲಿ ರಾಷ್ಟ್ರಿಯತೆ ಮಿಡಿಯುತ್ತಿದ್ದರೂ, ರಾಷ್ಟ್ರೀಯ ಕೃತಿಗಳಲ್ಲಿ ಅದರ ತುಡಿತ ಇನ್ನು ಹೆಚ್ಚು. ಆದುದರಿಂದ ಮಂಜಪ್ಪನವರು ನಿಜವಾದ ಅರ್ಥದಲ್ಲಿ ರಾಷ್ಟ್ರಧರ್ಮದ್ರಷ್ಟಾರರು. ರಾಷ್ಟ್ರಿಯ ಸಾಹಿತ್ಯ ನಿರ್ಮಾಣದಲ್ಲಿ ಅವರಂಥವರು ಕರ್ನಾಟಕದಲ್ಲಿ ಇಲ್ಲವೆಂದರೂ ಸಲ್ಲುತ್ತದೆ."[೪] ಈ ಮಾತನ್ನೂ ಗಮನಿಸಿದಾಗ ಮಂಜಪ್ಪನವರ ಭಾರತೀಯರ ದೇಶಭಕ್ತಿ, ಸತ್ಯಾಗ್ರಹ, ಎಚ್ಚೆತ್ತ ಹಿಂದೂಸ್ಥಾನ ಹಾಗೂ ಖಾದಿಶಾಸ್ತ್ರ ಇಲ್ಲಿ ಮುಖ್ಯವೆನಿಸುತ್ತವೆ. ಇವುಗಳಲ್ಲದೆ ಭಾಷಾಂತರ ರೂಪದ ರಾಷ್ಟ್ರೀಯಸಾಹಿತ್ಯ ಹಾಗೂ ಸ್ವತಂತ್ರ–ಅನುವಾದ–ಸಾರಾಂಶರೂಪದ ರಾಷ್ಟ್ರೀಯ ಸಾಹಿತ್ಯಕೃತಿಗಳು ಕೂಡ ವಿಶೇಷಗಮನ ಸೆಳೆಯುತ್ತವೆ.

ಮಂಜಪ್ಪನವರ ಸ್ವತಂತ್ರ ರಾಷ್ಟ್ರೀಯ ಸಾಹಿತ್ಯಕೃತಿಗಳಲ್ಲಿ ಖಾದಿಶಾಸ್ತ್ರಕ್ಕೆ ಅಗ್ರಸ್ಥಾನವುಂಟು. ಇದು ಸಂಶೋಧನಾತ್ಮಕ ಕೃತಿಯಾಗಿಯೂ ಖ್ಯಾತಿಗೊಂಡದ್ದುಂಟು. ಮಂಜಪ್ಪನವರು ಹೊರಡಿಸುತ್ತಿದ್ದ ಖಾದಿ ಹಾಗೂ ಉದ್ಯೋಗ ಎಂಬ ಪತ್ರಿಕೆಗಳು ಖಾದಿಯ ಮಹತ್ವ, ಅದರ ಹಿಂದಿರುವ ಪರಿಕಲ್ಪನೆಗಳನ್ನು ಬಿತ್ತರಿಸುವಂತಹವು. ಈ ಲೇಖನಗಳಿಂದ ಪ್ರಭಾವಿತರಾದ ಆಲೂರ ವೆಂಕಟರಾಯರು ಮಂಜಪ್ಪನವರಿಗೆ ಖಾದಿ ವಿಚಾರಗಳ ಕುರಿತು ಸ್ವತಂತ್ರ ಕೃತಿಯೊಂದನ್ನು ನವಜೀವನ ಗ್ರಂಥಮಾಲೆಗಾಗಿ ರಚಿಸಿಕೊಂಡು ಕೇಳಿಕೊಂಡರು. ಈ ಕೋರಿಕೆ ಕಾರಣವಾಗಿ ಖಾದಿಶಾಸ್ತ್ರಕೃತಿ ರಚನೆಯಾಯಿತು. ಖಾದಿಶಾಸ್ತ್ರ ರಾಷ್ಟ್ರೀಯತ್ವದ ದೃಷ್ಟಿಯಿಂದ ಸ್ಮರಣೀಯ ಗ್ರಂಥ. ಆರ್ಥಿಕವಾಗಿ ಹಿಂದುಳಿದ ದೇಶವಾದ ಭಾರತದಲ್ಲಿ ಸ್ವಯಂ ಉದ್ಯೋಗಾಭಿವೃದ್ಧಿಗೆ ನೂಲೂವ ನೇಯುವ ಖಾದಿ ಉದ್ಯೋಗ ಅನುಕೂಲಕರವಾದದ್ದು ಇದು ಸಾಂಘಿಕ ಬದುಕಿಗೆ ಸಹಾಯವಾಗುವದರಿಂದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಬಲ್ಲುದಾಗಿದೆ.

ಖಾದಿಯು ಪ್ರಾಚೀನತೆ, ಕೈರಾಟಿ, ಕೈಮಗ್ಗದ ಮಹತ್ವ, ಖಾದಿಯೂ ಗಿರಣಿ ಬಟ್ಟೆಯೂ, ಖಾದಿಯ ಪಾವಿತ್ರ್ಯ ಕುರಿತ ವಿಚಾರಗಳು ಇಲ್ಲಿರುವುದರಿಂದ ಇವು ರಾಷ್ಟ್ರೀಯ ಸ್ವಾಭಿಮಾನ ಬೆಳೆಯಲು ಸಹಾಯಕವಾಗುತ್ತವೆ. ಒಂದು ಕುಟುಂಬದ ಸರ್ವರೂ ಹೆಣ್ಣು– ಗಂಡೆಂಬ ಭೇದವಿಲ್ಲದಂತೆ ಈ ಕೆಲಸದಲ್ಲಿ ತೊಡಗುವದಿಂದ ಲಿಂಗಭೇದ ಮರೆಯಾಗಿ, ಸಮಾನತೆ ಮೂಡಲು ಆಧಾರವಾಗುತ್ತದೆ. ಯುವ ಜನಾಂಗ ಸರಿಯಾದ ನಿಟ್ಟಿನಲ್ಲಿ ಬದುಕು ರೂಪಿಸಿಕೊಳ್ಳಲು ಮಾರ್ಗದರ್ಶನ ಮಾಡುತ್ತದೆ.

---

೪. ಹರ್ಡೇಕರ ಮಂಜಪ್ಪನವರು–ಸಂ. ಎ.ಬಿ. ಹಿರೇಮಠ ಮತ್ತು ಆರ್.ಎಲ್. ಪೋಲಿಸ್ ಪಾಟೀಲ, ಪುಟ, ೬೪

ಕರ್ನಾಟಕದ ಖಾದಿಪುರುಷರೆಂದು ಅಭಿದಾನ ಹೊತ್ತ ಹರ್ಡೇಕರ ಮಂಜಪ್ಪನವರು ಖಾದಿಶಾಸ್ತ್ರ ಕೃತಿಯ ಲೇಖಕರಾಗಿರುವುದು ಸಾರ್ಥಕವೆನಿಸುತ್ತದೆ. ಗಾಂಧೀಜಿಯವರ ಧ್ಯೇಯಾದರ್ಶಗಳಿಗೆ ಮಾರುಹೋಗಿ, ಅವರ ಖಾದಿತತ್ವವನ್ನು ಒಪ್ಪಿಕೊಂಡು, ಆ ಚಳುವಳಿಯ ಮುಂದಾಳಾಗಿ, ಕರ್ನಾಟಕದಲ್ಲಿ ದುಡಿದವರು ಮಂಜಪ್ಪನವರು ಈ ಉದ್ಯೋಗದ ಮಹತ್ವ ಅರಿತು ನಮ್ಮ ಜನ ನಡೆದರೆ ಬಡತನ ದೂರವಾಗುವುದರಲ್ಲಿ ಸಂದೇಹವಿಲ್ಲ. ನಿರುದ್ಯೋಗ ಸಮಸ್ಯೆಯನ್ನು ಇದರಿಂದ ಸ್ವಲ್ಪ ಮಟ್ಟಿಗಾದರೂ ದೂರಮಾಡಬಹುದು. ರೊಟ್ಟಿಯಷ್ಟೇ ಬಟ್ಟೆ ಮುಖ್ಯ. ಎಂಬುದನ್ನರಿತು ಪ್ರತಿ ಭಾರತೀಯ ಕಾರ್ಯಪ್ರವೃತ್ತನಾದರೆ ಕೌಟುಂಬಿಕ ಆರ್ಥಿಕಾಭಿವೃದ್ಧಿಯಾಗುತ್ತದೆ. ಮನೆಯಲ್ಲಿ ಅಡಿಗೆಯ ಕಾರ್ಯ ಹೇಗೆ ಜರುಗುವದೋ ಹಾಗೇಯೇ ನೂಲುವ ಕಾರ್ಯ ಜರುಗಬೇಕು. ಆಗ ಮಾತ್ರ ಕೈರಾಟೆಯ ಚಟುವಟಿಕೆ ದೇಶದಲ್ಲಿ ಹೆಚ್ಚುತ್ತದೆ–ಎಂಬುದು ಮಂಜಪ್ಪನವರ ಅಭಿಲಾಷೆ. ಇದು ಅವರ ಸಾಮಾಜಿಕ ಕಳಕಳಿ ಹಾಗೂ ಜನಾಂಗ ಅಭಿವೃದ್ಧಿಯ ಶ್ರದ್ದೆಯನ್ನು ಎತ್ತಿ ತೋರಿಸುತ್ತದೆ.

"ಖಾದಿಶಾಸ್ತ್ರ" ಸ್ವದೇಶತತ್ವವನ್ನು ಪುರಸ್ಕರಿಸುವ ಕೃತಿಯಾಗುವುದರಿಂದ, ಅದಕ್ಕೆ ವಿಶೇಷ ಮಹತ್ವವಿದೆ. 'ವಿದೇಶಿ ಬಟ್ಟೆ ಬಹಿಷ್ಕರಿಸಿ ಸ್ವದೇಶಿ ಬಟ್ಟೆ ಸ್ವೀಕರಿಸಿ' ಖಾದಿ ಬೆಳವಣಿಗೆಗೆ ಪ್ರತಿ ಭಾರತೀಯ ಸಹಕರಿಸಿದರೆ, ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಅರಿತುಕೊಳ್ಳಬೇಕೆಂದು ಇದು ತಿಳಿಸುತ್ತದೆ. ಅನೇಕ ಆಕರಗಳನ್ನು ಬಳಸಿಕೊಂಡು ರಚನೆಯಾದ ಈ ಕೃತಿ, ಖಾದಿಯ ಐತಿಹಾಸಿಕ ಸಂಶೋಧನೆ ಮತ್ತು ವಿಮರ್ಶೆಗಳನ್ನು ಒಳಗೊಂಡು, ಕನ್ನಡಕ್ಕೆ ಹೊಸ ರೀತಿಯ ವೈಚಾರಿಕ ಕೃತಿಯಾಗಿ ಬೆಳೆದಿದೆ ಮತ್ತು ರಾಷ್ಟ್ರೀಯತೆಯನ್ನು ಪ್ರಸಾರಗೊಳಿಸಿ ಖಾದಿತತ್ವಕ್ಕೆ ಬದ್ದರಾಗಲು ಸಹೃದಯರನ್ನು ಹುರಿದುಂಬಿಸುತ್ತದೆ. ಹೀಗೆ ಹಲವು ವಿಶೇಷತೆಗಳು ಕಾರಣವಾಗಿ ಖಾದಿಶಾಸ್ತ್ರ ಕನ್ನಡ ರಾಷ್ಟ್ರೀಯ ಸಾಹಿತ್ಯದಲ್ಲಿ ವಿಶೇಷ ಸ್ಥಾನವನ್ನು ಪಡೆಯುತ್ತದೆ.

❖❖

ನವಜೀವನ ಗ್ರಂಥಭಾಂಡಾರ ಗ್ರಂಥ : ೪

ಖಾದಿಶಾಸ್ತ್ರ

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

ವೀರಶೈವ ವಿದ್ಯಾಲಯ, ಆಲಮಟ್ಟಿ.

ಸಂಪಾದಕರು ಮತ್ತು ಪ್ರಕಾಶಕರು

ಶ್ರೀ ಆಲೂರು ವೆಂಕಟರಾಯರು, ಬಿ.ಎ., ಎಲ್.ಎಲ್.ಬಿ.

(ಧಾರವಾಡ ನವಜೀವನ ಸಂಘದ ಪರವಾಗಿ)

೧೯೩೩

ಇದರ ಎಲ್ಲ ಹಕ್ಕು ಬಾಧ್ಯತೆಗಳು
ಶ್ರೀ ಆಲೂರು ವೆಂಕಟರಾಯರಿಗೆ ಸೇರಿವೆ

ಮುದ್ರಕರು

೧ ರಿಂ ೪೦ ಪುಟಗಳ ವರೆಗೆ ವಿಜಯ ಮುದ್ರಾಲಯದಲ್ಲಿ ಮುದ್ರಿಸಿದೆ.
೪೧ ರಿಂ ೧೧೦ ರವರೆಗೆ ವಸಂತ ಮುದ್ರಾಲಯ, ಧಾರವಾಡ ಇವರಲ್ಲಿ ಮುದ್ರಿಸಿದೆ.

ಪ್ರಕಾಶಕರು : ಶ್ರೀ ಆಲೂರು ವೆಂಕಟರಾಯರು
ಪ್ರಕಾಶ ಸ್ಥಳ : ನವಜೀವನ ಗ್ರಂಥ ಭಾಂಡಾರ, ಧಾರವಾಡ

೪ನೆಯ ಗ್ರಂಥ ಖಾದಿಶಾಸ್ತ್ರ ಮತ್ತು ೫ನೆಯ ಗ್ರಂಥ ಏಷಿಯಾ ಖಂಡದ ಜಾಗೃತಿ ಇವುಗಳ ಬಗ್ಗೆ

ಸಂಪಾದಕರ ಮುನ್ನುಡಿ

ನವಜೀವನ ಗ್ರಂಥಭಾಂಡಾರದ ಮೊದಲಿನ ಮೂರು ಗ್ರಂಥಗಳು ಹೊರಟ ಬಳಿಕ ಮುಂದಿನ ಗ್ರಂಥಗಳು ಈವರೆಗೂ ಹೊರಡದಿರುವುದನ್ನು ನೋಡಿ ನಮ್ಮ ಚಂದಾದಾರರು ನಮ್ಮನ್ನು ಪರಿಪರಿಯಾಗಿ ದೂಷಿಸುತ್ತಿರುವುದು ಸಹಜವಿದೆ. ಆದರೆ, ಈ ಮಧ್ಯಂತರದಲ್ಲಿ ನಮಗೊದಗಿದ ಅಪರಿಹಾರ್ಯವಾದ ತೊಂದರೆಗಳು ಅವರಿಗೆ ಗೊತ್ತಾದರೆ ಅವರು ನಮ್ಮನ್ನು ಮನಃಪೂರ್ವಕವಾಗಿ ಕ್ಷಮಿಸುವರೆಂದು ನಮಗೆ ಭರವಸೆವುಂಟು. ಮೂರು ಗ್ರಂಥಗಳು ಮುದ್ರಿತವಾದ ಬಳಿಕ ೪ನೆಯ ಗ್ರಂಥವಾದ **ಖಾದಿಶಾಸ್ತ್ರ**ವನ್ನು ಮುದ್ರಿಸಲಿಕ್ಕೆ ಕೊಟ್ಟೆವು. ಗ್ರಂಥವು ಅರ್ಧ ಮುದ್ರಿತವಾಗಿತ್ತು. ಅಷ್ಟರಲ್ಲಿ ಒಂದು ದಿವಸ ಆಕಸ್ಮಿಕವಾಗಿ, ಅದು ಮುದ್ರಿತವಾಗುತ್ತಿರುವ ವಿಜಯ ಮುದ್ರಣಾಲಯಕ್ಕೆ ಆರ್ಡಿನನ್ಸ ಪ್ರಕಾರ ಬೀಗಮೋಹರುಗಳು ಬಿದ್ದವು. ಆಯಿತು; ನಮ್ಮ ಕೆಲಸವು ಅಲ್ಲಿಗೇ ನಿಂತಿತು. ವಿಜಯ ಮುದ್ರಣಾಲಯಕ್ಕೊದಗಿದ ಆ ಗ್ರಹವು ತೀವ್ರ ದೂರಾಗಬಹುದೆಂದು ದಾರೀನೋಡಿದ್ದಾಯಿತು. ಆದರೆ ಅದು ದೂರಾಗಲಿಲ್ಲ. ಆಗ ಹೊಸದೊಂದು ಮುದ್ರಣಾಲಯವನ್ನು ಹುಡುಕಿದೆವು. ವಸಂತ ಮುದ್ರಣಾಲಯದವರು ಮುದ್ರಿಸಿಕೊಡುವುದಕ್ಕೆ ಒಪ್ಪಿಕೊಂಡರು. ಕೆಲಸವು ಪುನಃ ಪ್ರಾರಂಭವಾಯಿತು. ಆದರೆ, ಅಷ್ಟರಲ್ಲಿ ಅಂದರೆ ಈಗ ೭-೮ ತಿಂಗಳ ಹಿಂದೆ ಒಂದು ದಿವಸ ಆಕಸ್ಮಿಕವಾಗಿ ನಾವು ಆರ್ಡಿನನ್ಸ ಪ್ರಕಾರ ಹಿಡಿಯಲ್ಪಟ್ಟು ಇಡಲ್ಪಟ್ಟಿರುವೆವು. ಈ ಗ್ರಾಮ ಬಿಟ್ಟು ಕದಲಲಿಕ್ಕೆ ನಿರ್ಬಂಧ; ಪತ್ರವ್ಯವಹಾರ ಮಾಡುವುದಕ್ಕೆ ತೊಂದರೆ. ಹೀಗಾಗಿ **ನವಜೀವನ ಗ್ರಂಥಭಾಂಡಾರ**ದ ಕೆಲಸಕ್ಕೆ ದೊಡ್ಡ ತೊಂದರೆ, ದೊಡ್ಡ ವಿಘ್ನವುಂಟಾಯಿತು, ಆದರೂ ನಾವು ಶಕ್ಯವಾದಷ್ಟು ಅದನ್ನು ಮುಂದೆ ಸಾಗಿಸುವುದಕ್ಕೆ ಪ್ರಯತ್ನ ಮಾಡಿದ್ದರಿಂದ ಈಗ ಇವೆರಡು ಗ್ರಂಥಗಳು ಹೊರಬೀಳಲಿಕ್ಕೆ ಅವಕಾಶವಾಗಿದೆ. ೬ನೆಯ ಗ್ರಂಥವು ತೀವ್ರ ಹೊರಡುವದು. ಚಂದಾದಾರರಿಗೆ ತೋರಿಸಲಿಕ್ಕೆ ನಮಗೆ ಮೋರೆ ಇರದ್ದರಿಂದ ಇಷ್ಟು ದಿವಸ ಮೌನ ತಾಳಿದ್ದೇವು. ಈಗ ಪುನಃ ತಲೆಯೆತ್ತಲಿಕ್ಕೆ ಧೈರ್ಯವುಂಟಾಗಿದೆ. ಮೊದಲಿನ ವರ್ಷದ ಮಿಕ್ಕ ಮೂರು ಗ್ರಂಥಗಳನ್ನು ಚಂದಾದಾರರಿಗೆ ಮುಟ್ಟಿಸಿ, ಅವರ ಋಣದಿಂದ ಮುಕ್ತವಾಗುವುದು ನಮ್ಮ ಎಲ್ಲಕ್ಕೂ ಮೊದಲಿನ ಕೆಲಸ.

ಮುಂದಿನ ವ್ಯವಸ್ಥೆ : ನವಜೀವನ ಗ್ರಂಥಭಾಂಡಾರದ ಮುಂದಿನ ಗತಿ ಏನೆಂದು ಕನ್ನಡಿಗರು ಕೇಳುವುದು ಸ್ವಾಭಾವಿಕವಿದೆ. ಆದರೆ ಈಗಿನ ನಮ್ಮ ಸ್ಥಿತಿಯಲ್ಲಿ ಸಮರ್ಪಕವಾದ ಉತ್ತರ ಕೊಡುವುದೂ ಕಠಿಣ ಕೆಲಸ. ಏಕೆಂದರೆ, ಮೂರು-ನಾಲ್ಕು ವರ್ಷಗಳ ಹಿಂದೆ, ಸಾವಿರಾರು ರೂಪಾಯಿ ಸಾಲ

ಮಾಡಿ ಈ ಸಾಹಸದ ಕಾರ್ಯಕ್ಕೆ ನಾವು ಕೈ ಹಾಕಿದ್ದು, ಸಾಲವು ಬೆಳೆದಾಗ, ಕೆಲವು ಮಿತ್ರರ ಉದಾರಾಶ್ರಯದಿಂದ ಅಂತೂ ಇಂತೂ ಮೊದಲಿನ ವರ್ಷದ ಈ ಆರು ಗ್ರಂಥಗಳನ್ನು ಈಗ ಪೂರ್ಣ ಮುಗಿಸಿದ್ದು, ಈಗಂತೂ ಸಿಕ್ಕುಬಿದ್ದಿರುವೆವು. ಅಂದಬಳಿಕ ಮುಂದಿನದನ್ನು ಹೇಳುವುದು ಹೇಗೆ? ಸಾಲವು ಮಿತಿಮೀರಿ ಬೆಳೆಯಹತ್ತಿದೆ; ಮತ್ತು ಇನ್ನು ಮೇಲೆ ಮಿತ್ರರಿಗೆ ಹಣದ ಸಲುವಾಗಿ ತೊಂದರೆ ಕೊಡಲು ನಾವು ಇಚ್ಚಿಸುವುದಿಲ್ಲ. ಅಲ್ಲದೆ, ಚಂದಾದಾರರಿಂದ ಮುಂಗಡ ಹಣವನ್ನು ತೆಗೆದುಕೊಂಡು ಅವರನ್ನು ಸಂದೇಹಸ್ಥಿತಿಯಲ್ಲಿಡುವುದಕ್ಕೂ ನಮ್ಮ ಮನಸ್ಸು ಹಿಂಜರಿಯುತ್ತಲಿದೆ. ಆದಕಾರಣ, ಕನ್ನಡಿಗರೆಲ್ಲರೂ ನಮಗೆ ಧೈರ್ಯ ಕೊಟ್ಟರೆ, ಆರುತಿಂಗಳಿಗೆ ಒಮ್ಮೆಲೆ ಮೂರು ಗ್ರಂಥಗಳನ್ನು ಹೊರಡಿಸಿ. ಈ ಗ್ರಂಥಮಾಲೆಯನ್ನು ಮುಂದುವರಿಸುವ ಯೋಚನೆಯುಂಟು.

ಕನ್ನಡಿಗರ ಸಲಹೆ : ಈಗ ಆರು ಗ್ರಂಥಗಳು ಕನ್ನಡಿಗರ ಕಣ್ಣು ಮುಂದೆ ಇರುವವು. ಈ ಮಾದರಿಯ ಗ್ರಂಥಗಳ ಕೊರತೆಯು ಕನ್ನಡ ಭಾಷೆಗೆ ಉಂಟೆಂದು ಕನ್ನಡಿಗರ ಅಭಿಪ್ರಾಯವಿದ್ದರೆ, ಅವರು ನಮಗೆ ಸಾಧ್ಯವಾದಷ್ಟು ಸರ್ವರೀತಿಯಿಂದಲೂ ಸಹಾಯ ಮಾಡಬೇಕು. "ಸರ್ವಾರಂಭಾ ಹೀ ದೋಷೇಣ ಧೂಮೇನಾಗ್ನಿರಿವಾವ್ರತಾಃ" ಎಂಬಂತೆ ನಮ್ಮ ಈ ಮೊದಲ ಪ್ರಯತ್ನಗಳಲ್ಲಿ ದೋಷಗಳಿಲ್ಲವಂತಿಲ್ಲ. ಆದರೆ ಕನ್ನಡಿಗರು ಅವುಗಳನ್ನು ದೂರಮಾಡುವ ಬಗ್ಗೆ ನಮಗೆ ಸಲಹೆ ಕೊಟ್ಟು ದೂರುಮಾಡಿಸಿಕೊಳ್ಳಬೇಕು. ಮೊದಲ್ನುಡಿಗಳೆಲ್ಲವೂ ತೊದಲ್ನುಡಿಗಳೇ. ಕನ್ನಡಿಗರು ಕೊಟ್ಟ ಸಲಹೆಗಳನ್ನು ಶಕ್ಯವಾದ ಮಟ್ಟಿಗೆ ವ್ಯವಹಾರದಲ್ಲಿ ತರಲು ಪ್ರಯತ್ನಿಸುತ್ತೇವೆಂದು ನಾವು ಆಶ್ವಾಸನ ಕೊಡುತ್ತೇವೆ.

ಈ ಅವಧಿಯಲ್ಲಿ ನಮ್ಮ ಮಿತ್ರರಾದ ಶ್ರೀ ನಾರಾಯಣರಾವ ಲೋಕೂರ ಬಿ. ಎ. ಎಲ್. ಎಲ್. ಬಿ. ಡಿಸ್ಟ್ರಿಕ್ಟ ಜಡ್ಜ, ಅಹಮ್ಮದಾಬಾದ, ಇವರು ೧೮೫ ರೂಪಾಯಿಗಳನ್ನು ಕಳಿಸಿಯೂ ಮತ್ತು ನಮ್ಮ ಮಿತ್ರರಾದ ಶ್ರೀ ವಿಶ್ವನಾಥರಾವ ಜೋಗ, ಬಿ. ಎ., ಎಲ್. ಎಲ್. ಬಿ., ಎಮ್. ಎಲ್. ಸಿ., ವಕೀಲ, ಧಾರವಾಡ, ಇವರು ಒಂದುನೂರು ರೂಪಾಯಿಗಳನ್ನು ಕೊಟ್ಟು ನವಜೀವನ ಗ್ರಂಥಭಾಂಡಾರಕ್ಕೆ ಸಹಾಯ ಮಾಡಿದುದಕ್ಕಾಗಿ ನಾವು ಅಂತಃಕರಣಪೂರ್ವಕವಾಗಿ ಅವರ ಉಪಕಾರವನ್ನು ಸ್ಮರಿಸುತ್ತೇವೆ.

ಅದೇ ಮೇರೆಗೆ ಈ ಗ್ರಂಥವನ್ನು ಬರೆದುಕೊಟ್ಟ ಗ್ರಂಥಕರ್ತರಿಗೂ, ಮುದ್ರಿಸಿ ಕೊಟ್ಟ ಮುದ್ರಕರಿಗೂ ನಮ್ಮ ಮನಃಪೂರ್ವಕವಾದ ಮನ್ನಣೆಗಳು.

ಕಲಘಟಗಿ

೨೭-೩-೧೯೩೨

ಆಲೂರು ವೆಂಕಟರಾಯರು

ಸಂಪಾದಕ

ನವಜೀವನ ಗ್ರಂಥ ಭಾಂಡಾರ

❖❖

*

ಗ್ರಂಥಕ್ಕೆ ಮುನ್ನುಡಿ

ಖಾದಿಶಾಸ್ತ್ರವೆಂಬ ಹೆಸರನ್ನು ಕೇಳಿ ಕೆಲವರು ಚಕಿತರಾಗಬಹುದು. ವೇದಾಂತಶಾಸ್ತ್ರ, ವಿಜ್ಞಾನಶಾಸ್ತ್ರಗಳೆಂದರೇನೆಂಬುದು ಅವರಿಗೆ ತಿಳಿಯುವುದು. ಆದರೆ ಖಾದಿಗೆ ಶಾಸ್ತ್ರವೆಲ್ಲಿಂದ ಬಂದಿತು ಎಂಬುದೇ ಅವರ ಸಂದೇಹ. ಅಹುದು; ಖಾದಿಗೂ ಒಂದು ಶಾಸ್ತ್ರವುಂಟು. ಶಾಸ್ತ್ರವೆಂದರೆ, ಯಾವುದೊಂದು ಪುರುಷಾರ್ಥವನ್ನು ಸಾಧಿಸುವುದಕ್ಕೆ ಬೇಕಾದ ಸಂಗತಿಗಳ ನಿಯಮಬದ್ಧ ವಿಚಾರವೆಂದು ಸ್ಥೂಲದಿಂದ ಹೇಳಬಹುದು. ಹಿಂದೀ ಜನರ ಮನಸ್ಸಿನಲ್ಲಿ ಈಗ ಹುಟ್ಟಿರುವ ಖಾದಿಯ ಕಲ್ಪನೆಯು ಸಹಜ ಪ್ರಾಪ್ರವಾದುದಲ್ಲ. ಅದರ ಸೂಕ್ಷ್ಮ ಬೀಜಗಳು ಹಿಂದೀ ಜನರ ಹೃದಯದಲ್ಲಿ ಅನೇಕ ವರ್ಷಗಳಿಂದಲೂ ಇದ್ದವು. ಸ್ವದೇಶಿ ವಸ್ತುಗಳ ಪ್ರಚಾರದಲ್ಲಿ ಸ್ವದೇಶಿ ಅರಿವೆಗಳಿಗೆ ಎಲ್ಲಕ್ಕೂ ಹೆಚ್ಚು ಮಹತ್ವವಿತ್ತು. ಆ ಸ್ವದೇಶಿ ಅರಿವೆಗಳಲ್ಲಿ ಕೈನೂಲು ಕೈಮಗ್ಗದ ವಸ್ತ್ರಗಳೂ ಸಮಾವೇಶವಾಗುತ್ತಿದ್ದವು. ಆದರೆ. ಆ ಕಲ್ಪನೆಯು ಆಗ ಅವ್ಯಕ್ತ ಸ್ವರೂಪದಲ್ಲಿತ್ತು. ಮಹಾತ್ಮಾಗಾಂಧಿಯವರು ಇದೊಂದೇ ವಿಷಯವನ್ನು ಸಶಾಸ್ತ್ರವಾಗಿ ಅಭ್ಯಾಸ ಮಾಡಿದ್ದುದರಿಂದ, ಆ ಕಲ್ಪನೆಗೆ ಮೂರ್ತಸ್ವರೂಪವು ಉಂಟಾಯಿತು. ಅಂದಿನಿಂದ ಈ ಕೈನೂಲು ಕೈಮಗ್ಗಗಳ ವಿಷಯವು ಎಲ್ಲ ದೃಷ್ಟಿಗಳಿಂದಲೂ ಯೋಚಿಸಲ್ಪಟ್ಟು ಈಗ ಅದಕ್ಕೆ ಶಾಸ್ತ್ರ ಸ್ವರೂಪವು ಉಂಟಾಗಿರುವುದು. ಹಿಂದೀ ಜನರ ಮನಸ್ಸಿನಲ್ಲಿ ಈ ಖಾದಿಯ ಕಲ್ಪನೆಯು ಹುಟ್ಟಲಿಕ್ಕೆ ಯಾವ ಕಾರಣಗಳುಂಟಾದವೆಂಬುದನ್ನು ವಿಸ್ತಾರವಾಗಿ ತಿಳಿಯದೆ ಈಗಿನ ಅದರ ಮಹತ್ವವು ಜನರಿಗೆ ಚೆನ್ನಾಗಿ ಮನದಟ್ಟಾಗಲಾರದು. ಹಿಂದುಸ್ಥಾನದಲ್ಲಿ ಹಿಂದಕ್ಕೆ ಈ ಉದ್ಯೋಗವು ಎಷ್ಟು ಊರ್ಜಿತಾವಸ್ಥೆಯಲ್ಲಿದ್ದಿತು? ಅದು ಹೇಗೆ ಮತ್ತು ಏಕೆ ಹಾಳಾಯಿತು? ಇವೇ ಮುಂತಾದವುಗಳ ಸ್ಪಷ್ಟವಾದ ಕಲ್ಪನೆಯು ಪ್ರತಿಯೊಬ್ಬನಿಗೆ ಇರುವುದು ಅವಶ್ಯವಿದೆ. ಆದುದರಿಂದಲೇ ಇದರ ಗ್ರಂಥಕರ್ತರಾದ ಶ್ರೀ ಮಂಜಪ್ಪಾ ಹರ್ಡೇಕರರು ಅವೆಲ್ಲ ಹಿಂದಿನ ವಿಷಯಗಳನ್ನು ವಿಸ್ತಾರವಾಗಿ ಕೊಟ್ಟಿರುವರು. ಈ ಪುಸ್ತಕದ ವಿಶೇಷವೇನೆಂದರೆ. ಇದರೊಳಗಿನ ಪ್ರತಿಯೊಂದು ವಿಧಾನವು ಆಧಾರಪೂರ್ವಕವಾದದ್ದಿರುವುದು. ಹೆಜ್ಜೆಜ್ಜೆಗೆ ಗ್ರಂಥಕರ್ತರು ಕೇವಲ ತಮ್ಮ ಅಭಿಪ್ರಾಯವನ್ನು ಕೊಡದೆ, ಪರಕೀಯರ ವಾಕ್ಯಗಳಿಂದಲೇ ವಿಶೇಷವಾಗಿ ಈ ಶಾಸ್ತ್ರದ ವಿಷಯಗಳನ್ನು ಸಿದ್ಧಪಡಿಸಿರುವರು. ಶ್ರೀ ಹರ್ಡೇಕರ ಮಂಜಪ್ಪನವರು ಕರ್ನಾಟಕದಲ್ಲಿ ಖಾದಿಯ ಅಗ್ರಗಣ್ಯ ಪುರಸ್ಕೃತರು. ಆದಕಾರಣ, ಅವರು ಬರೆದ ವಾಕ್ಯಗಳಿಗೆ ಒಂದು ಬಗೆಯ ಗೌರವವಿದೆ. ಖಾದಿಯ ವಿಷಯದಲ್ಲಿ

ಭಿನ್ನಾಭಿಪ್ರಾಯವುಳ್ಳವರಿಗೂ ಈ ಗ್ರಂಥವು ಅತ್ಯಂತ ಉಪಯುಕ್ತವಾಗಿದೆ. ಏಕೆಂದರೆ, ಇದರಲ್ಲಿ ಹಿಂದುಸ್ಥಾನದ ಆ ಉದ್ಯೋಗವೂ ಹೇಗೆ ಹಾಳಾಯಿತೆಂಬುದರ ಮನೋರಂಜಕವಾದ ಆದರೆ ಹೃದಯದ್ರಾವಕವಾದ ಇತಿಹಾಸವಿದೆ.

ಖಾದಿಯೂ ಈಗ ಸಾಮಾನ್ಯತಃ ಸರ್ವಸಾಮಾನ್ಯ ವಿಷಯವಾಗಿದ್ದರೂ, ಜನರಿಗೆ ಆ ಬಗ್ಗೆ ಇರತಕ್ಕಷ್ಟು ಜ್ಞಾನವಿರುವುದಿಲ್ಲ; ಮತ್ತು ಜ್ಞಾನವಿಲ್ಲದ ಭಕ್ತಿಯು ಬಹಳದಿನ ಬಾಳಲಾರದೆಂದು ಬಗೆದು, ಖಾದಿಯ ಪ್ರಸಾರ ಕಾರ್ಯದಲ್ಲಿ ಕರ್ನಾಟಕದವರು ಮಾಡಬೇಕಾಗಿದ್ದ ಜ್ಞಾನದಾನ ಕಾರ್ಯವನ್ನು ಈ ಗ್ರಂಥಪ್ರಕಟನಾ ರೂಪದಿಂದ ಮಾಡಿದ್ದೇವೆ. ಈ ಗ್ರಂಥವು ಜನರ ಆದರಕ್ಕೆ ಪಾತ್ರವಾಗುವದೆಂದು ನಂಬಿದ್ದೇವೆ.

ಕಲಘಟಗಿ (ಜಿ. ಧಾರವಾಡ) **ಆಲೂರು ವೆಂಕಟರಾಯರು**

ಶ್ರೀ ಮುಖ ಸಂವತ್ಸರದ ಯುಗಾದಿ ಪ್ರತಿಪದ ಸಂಪಾದಕ

೨೭-೩-೧೯೩೩ ನವಜೀವನ ಗ್ರಂಥ ಭಾಂಡಾರ

❖❖

೧ನೆಯ ಪ್ರಕರಣ

ಉದ್ಯೋಗಯುಗ

ಈ ಮನುಷ್ಯ ಜಾತಿಯ ಸುಧಾರಣೆಯನ್ನು ಕುರಿತು ಸಮಾಜಶಾಸ್ತ್ರಜ್ಞರು ನಾಲ್ಕು ತರಗತಿಗಳನ್ನು ಗೊತ್ತುಮಾಡಿ, ಅವುಗಳಲ್ಲಿ ಮೊದಲನೆಯ ತರಗತಿಯ ಜನರಿರುವ ಕಾಲಕ್ಕೆ ಮೃಗಯಾಯುಗವೆಂಬ ಹೆಸರನ್ನಿಟ್ಟಿದ್ದಾರೆ. ಆ ಯುಗದ ಜನರು ಬೇಟೆಗಳಿಂದಲೇ ತಮ್ಮ ಜೀವನವನ್ನು ಸಾಗಿಸಿಕೊಳ್ಳುವರು. ನಾನಾ ಪಶುಪಕ್ಷಿಗಳ ಹಸಿಮಾಂಸವೇ ಅವರ ಆಹಾರಪದಾರ್ಥ. ಗಿಡಗಳ ಗುಂಪು, ಮರಗಳ ಹೊದರು, ಗುಡ್ಡಗಳಲ್ಲಿರುವ ಗುಹೆ ಮೊದಲಾದ ಸೃಷ್ಟಿಯ ಸ್ವಾಭಾವಿಕವಾದ ಗೌಪ್ಯಸ್ಥಾನಗಳೇ ಅವರ ಮನೆಮಠಗಳು, ತರತರದ ಗಿಡ ಬಳ್ಳಿಗಳ ಎಲೆಗಳೂ, ನಾನಾ ಪಶುಗಳ ಚರ್ಮಗಳೂ ಅವರ ವಸ್ತ್ರ ಪ್ರಾವರಣಗಳು. ಮನುಷ್ಯ ಜಾತಿಯ ಯಾವ ಜನಾಂಗವಾದರೂ ಇಂತಹ ಕಾಡುಸ್ಥಿತಿಯಲ್ಲಿ ಕೆಲವು ಕಾಲ ಇದ್ದೇ ಇರುತ್ತದೆಂಬುದು ಸಮಾಜಶಾಸ್ತ್ರಜ್ಞರ ಸಿದ್ಧಾಂತವಾಗಿದೆ.

ಈ ಕಾಡು ಸ್ಥಿತಿಯಲ್ಲಿದ್ದ ಜನಾಂಗವು ತನ್ನ ಅನುಭವದಿಂದಾಗಲಿ ಅಥವಾ ತನಗಿಂತ ಸುಧಾರಿಸಿದ ಮತ್ತೊಂದು ಸಮಾಜದ ಸಹವಾಸದಿಂದಾಗಲಿ ಆಹಾರ, ವಾಸಸ್ಥಾನ, ವಸ್ತ್ರಪ್ರಾವರಣಗಳಲ್ಲಿ ಸುಧಾರಣೆಯನ್ನು ಮಾಡಿಕೊಳ್ಳುತ್ತದೆ. ತನ್ನ ಜೀವಿತದ ಸುಖಸೌಲಭ್ಯಗಳಿಗಾಗಿ ಅನೇಕ ನಿರುಪದ್ರವಿಗಳಾದ ಪಶುಗಳನ್ನು ಸಂಗ್ರಹಿಸುತ್ತದೆ. ಈ ತರಹದ ಸುಧಾರಣೆಯನ್ನು ಹೊಂದಿ ಯಾವ ಜನಾಂಗವು ಜೀವಿಸುತ್ತಿರುವುತ್ತದೆಯೋ ಅದು ಗೋಪಾಲಯುಗದ ಜನಾಂಗವೆಂದು ಸಮಾಜಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಈ ಯುಗದ ಜನರು ಪಶುಗಳ ಮಾಂಸವನ್ನು ಬೇಯಿಸಿ ಸೇವಿಸುವರು. ಎಲೆ-ಹುಲ್ಲು ಮೊದಲಾದವುಗಳಿಂದ ಮನೆಗಳನ್ನು ಕಟ್ಟಿಕೊಳ್ಳುವರು. ಈಜನರು ಮೃಗಯಾಯುಗದವರಿಗಿಂತ ಸುಧಾರಿಸಿದವರಾಗಿರುತ್ತಾರೆ.

ಈ ಪ್ರಕಾರ ಒಂದು ಜನಾಂಗವು ಮೃಗಯಾಯುಗ ಮತ್ತು ಗೋಪಾಲಯುಗಗಳನ್ನು ಕಳೆದ ನಂತರ ಅದು **ಕೃಷಿಯುಗ**ದಲ್ಲಿ ಕಾಲಿಡುವುದು. ಆಗ ಅದೊಂದು ಸಮಾಜವಾಗಿಯೇ ಪರಿಣಮಿಸುವದು. ಆಹಾರಕ್ಕೋಸ್ಕರ ನಾನಾಧಾನ್ಯಗಳನ್ನೂ, ವಾಸವಾಗಿರಲು ಮನೆಮಠಗಳನ್ನೂ, ಧರಿಸಲು ವಸ್ತ್ರಾಭರಣಗಳನ್ನೂ ಉಂಟುಮಾಡಿಕೊಂಡು ಕೃಷಿಯುಗದ ಜನಾಂಗವು ಎಷ್ಟೋ ಸುಖ ಸೌಲಭ್ಯಗಲಿಂದ ಕಾಲಕಳೆಯುವದು. ಕೃಷಿಯುಗದ ಜನರಲ್ಲಿಯೇ ಮನುಷ್ಯಜಾತಿಯ ಉಚ್ಚತರವಾದ ಅನೇಕ ಆಚಾರವಿಚಾರಗಳು ವ್ಯಕ್ತವಾಗುತ್ತವೆ.

ಈ ಕೃಷಿಯುಗದ ಜನರು ಯುದ್ಧ, ವ್ಯಾಪಾರ, ಒಕ್ಕಲುತನ, ಕೈಗಾರಿಕೆ ಮೊದಲಾದ ಅನೇಕ ವಿಷಯಗಳಲ್ಲಿ ಪ್ರವೀಣರಾಗಿ ಮೃಗಯಾಯುಗ ಮತ್ತು ಗೋಪಾಲಯುಗಗಳಲ್ಲಿಯ ಜನರ ಮೇಲೆ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸುತ್ತಾರೆ. ಜಗತ್ತಿನ ಬಹುಭಾಗವು ಈ ಕೃಷಿಯುಗದಲ್ಲಿಯೇ ನಾನಾಕ್ರಾಂತಿಗಳಿಂದ ವ್ಯತ್ಯಾಸವನ್ನು ಹೊಂದುತ್ತದೆಂದು ಸಮಾಜಶಾಸ್ತ್ರಜ್ಞರು ದೃಢೀಕರಿಸಿದ್ದಾರೆ.

ಕೃಷಿಯುಗದ ನಂತರ **ಉದ್ಯೋಗಯುಗವು** ಪ್ರಾರಂಭವಾಗುತ್ತದೆ. ಆಗ ಕೈಗಾರಿಕೆ, ವ್ಯಾಪಾರಗಳೇ ಆ ಜನಾಂಗದ ಮುಖ್ಯಾಂಗಗಳಾಗುತ್ತವೆ. ಮನುಷ್ಯಜಾತಿಯಲ್ಲಿರತಕ್ಕ ಎಲ್ಲ ಬುದ್ಧಿಶಕ್ತಿಗಳು ಈ ಉದ್ಯೋಗಯುಗದಲ್ಲಿ ಹೊರಬೀಳುತ್ತವೆ. ಇಡೀ ಜಗತ್ತೇ ಒಂದು ವಿಶಾಲವಾದ ಕುಟುಂಬದಂತೆ ಪರಸ್ಪರಾವಲಂಬನೆ ಮತ್ತು ಸಂಬಂಧಗಳುಳ್ಳದ್ದಾಗಿ ಪರಿಣಮಿಸುತ್ತದೆ.

ಈ ಪ್ರಕಾರ ಜಗತ್ತಿನ ಯಾವ ಭಾಗದಲ್ಲಿರುವ ಯಾವ ಜನಾಂಗವಾದರು ಈ ನಾಲ್ಕೂ ಅವಸ್ಥೆಗಳನ್ನು, ಒಂದಿಲ್ಲೊಂದು ದಿನ ಹೊಂದೇ ಹೊಂದುವದು. ಇವುಗಳಲ್ಲಿ ಒಂದಕ್ಕಿಂತ ಒಂದು ಹೆಚ್ಚು ಸುಧಾರಣೆಯುಳ್ಳದ್ಧಾಗಿರುವುದರಿಂದ ತನಗಿಂತ ಹಿಂದಿರುವ ಸಮಾಜದ ಮೇಲೆ ತನ್ನ ಅಧಿಕಾರವನ್ನು ನಡಯಿಸುವದು ಸ್ವಾಭಾವಿಕವಾಗಿದ್ದ ಮತ್ತು ಜಗತ್ತಿನ ಎಲ್ಲಾ ಭಾಗಗಳಲ್ಲಿಯ ಎಲ್ಲ ಸಮಾಜಗಳೂ ಒಂದೇ ಕಾಲದಲ್ಲಿ ಒಂದೇ ವಿಧವಾದ ಸುಧಾರಣಾ ತರಗತಿಯಲ್ಲಿರುವುದು ಶಕ್ಯವಿಲ್ಲದ್ದರಿಂದ ಹಿಂದುಳಿದ ಜನಾಂಗವನ್ನು ಮುಂದುವರಿದ ಸಮಾಜದವರು ತಮ್ಮ ಸುಖಸೌಖ್ಯಗಳಿಗಾಗಿ ನಾನಾರೀತಿಗಳಿಂದ ನಡೆಸಿಕೊಳ್ಳುವದೂ ಸಹಜವಾಗಿದೆ.

ಸಮಾಜಶಾಸ್ತ್ರದ ಈ ತ್ರಿಕಾಲಬಾಧಿತವಾದ ತತ್ವವನ್ನು ನೋಡಿದರೆ ಭಾರತೀಯರಾದ ನಾವು ಈಗ ದುರವಸ್ಥೆಯಲ್ಲಿರುವುದಕ್ಕೂ ಪ್ರಾಚೀನಭಾರತೀಯರು ಅಂತಹ ಸುಸ್ಥಿತಿಯಲ್ಲಿದ್ದುದಕ್ಕೂ ಕಾರಣಗಳನ್ನೇನೂ ಕಂಡುಹಿಡಿಯಬೇಕಾದುದಿಲ್ಲ. ಏಕೆಂದರೆ, ಪ್ರತಿಯೊಂದು ಜನಾಂಗಕ್ಕೂ ಈ ಪ್ರಕಾರದ ಏರಿಳಿತಗಳು ಬರುವದು ಸ್ವಭಾವಿಕವಾಗಿಯೇ ಇದೆ. ಒಂದು ದೇಶದ ಜನಸಾಮಾನ್ಯರು ಗೋಪಾಲಯುಗದಲ್ಲಿಯ ಜನರಿಗಿಂತ ಕೀಳುತರದ ಸುದಾರಣೆಯುಳ್ಳವರಾಗಿರುವಾಗ ಆ ದೇಶದವರ ಮನಸ್ಸಿನ ಮೇಲೆ ಕೃಷಿಯುಗದ ಜನಗಳ ಸುದಾರಣೆಯು ವಿಶೇಷವಾದ ಪರಿಣಾಮವನ್ನುಂಟು ಮಾಡುವುದರಲ್ಲೇನು ಆಶ್ಚರ್ಯ? ಇದರಂತೆಯೇ ಕೃಷಿಯುಗದ ಜನರು ಉದ್ಯೋಗಯುಗದಲ್ಲಿಯ ಜನರ ಸುಧಾರಣೆಗೆ ಬೆರಗಾಗುವದು ಸ್ವಾಭಾವಿಕವಲ್ಲವೇ?

ಕೃಷಿಯುಗದಲ್ಲಿ ನಾರುಬಟ್ಟೆ, ತಂತು, ಸೂತ್ರ ಮೊದಲಾದ ಶಬ್ದಗಳು ಅತೀ ಪ್ರಾಚೀನ ಕಾಲದಲ್ಲಿ ಪ್ರಚಾರದಲ್ಲಿದ್ದದ್ದು, ಕಂಡುಬರುತ್ತದೆ. ಮನುಷ್ಯನು ಗಿಡಗಳ ಎಲೆಗಳಿಂದ ಬಟ್ಟೆಗಳನ್ನು ಯಾವ ಕಾಲದಿಂದ ಮಾಡಿಕೊಳ್ಳಲುಪಕ್ರಮಿಸಿದನೆಂಬುದನ್ನು ನಿಷ್ಕರ್ಷವಾಗಿ ಹೇಳಲಿಕ್ಕೆ ಬರುವದಿಲ್ಲ. ಆದರೆ ಮನುಷ್ಯನು ಮೃಗಯಾಯುಗದಲ್ಲಿದ್ದಾಗ ಬೇಟೆಯ ಸಲುವಾಗಿ ದಾರ, ಹಗ್ಗ, ಮುಂತಾದ ಸಾಧನಗಳನ್ನು ಮೊದಲಿಗೆ ಬಳಕೆಯಲ್ಲಿ ತಂದಿರಬಹುದು. ತದನಂತರ ನಾರು ಮತ್ತು ನೂಲಿನ ಎಳೆಗಳಿಂದ ಬಟ್ಟೆಯನ್ನುಂಟು ಮಾಡಿಕೊಳ್ಳುವ ಕಲೆಯು ತಲೆದೋರಿರಬಹುದು. ಆಗಿನ ಕಾಲದಲ್ಲಿ ನೂಲುವ ಮತ್ತು ನೇಯುವ ಉಪಕರಣಗಳು ಬಹು ಸಾದಾ ತರದವಿದ್ದಿರಬೇಕು; ಬಟ್ಟೆಯು ಬಹು ಒರಟಾದದ್ದಿರಬೇಕು; ಹೀಗೆಂದು ನಮಗೆ ಭಾವನೆಯಾಗುವದು. ಆದರೆ ಸಾವಿರಾರು

ವರ್ಷಗಳ ಪೂರ್ವದಲ್ಲಿ ಸರ್ವೋತ್ಕೃಷ್ಟವಾದ ಗುಣಧರ್ಮವುಳ್ಳ ಈಗಿನ ವಸ್ತುಗಳಿಗಿಂತಲೂ ಮಿಗಿಲಾದ ಬಟ್ಟೆಗಳು ಭರತಖಂಡದಲ್ಲಿ ಹುಟ್ಟುತ್ತಿದ್ದವೆಂದು ಇತಿಹಾಸದಿಂದ ಗೊತ್ತಾಗುತ್ತದೆ.

ಮನುಷ್ಯನು ತೀರ ಕಾಡುಸ್ಥಿತಿಯಲ್ಲಿದ್ದಾಗ ಆಹಾರ, ವಿಹಾರ, ವಸ್ತ್ರಗಳ, ವಿಷಯದಲ್ಲಿ ಕೇವಲ ಪಶುವೃತ್ತಿಯಿಂದಲೇಃ ಜೀವಿಸುತ್ತಿರುವಂತೆ ಕಾಣುತ್ತದೆ. ಅನೇಕ ಪ್ರಾಣಿಗಳಂತೆ ಮನುಷ್ಯನಾದರೂ ಒಂದಾನೊಂದು ಕಾಲದಲ್ಲಿ ದಿಗಂಬರ ರೂಪದಿಂದ ಸಂಚರಿಸುತ್ತಿರಬಹುದು. ಆ್ಯಡಮ್ ಮತ್ತು ಈವ್ಹ ಇವರು ಬೆತ್ತಲೆಯಿದ್ದರೆಂದು ಬೈಬಲ್ಲಿನಲ್ಲಿ ಹೇಳಿದೆ. ಬೆತ್ತಲೆ ತಿರುಗುವ ಕಾಡುಜನಗಳು ಈಗಲೂ ಅಲ್ಲಲ್ಲಿ ಕಾಣುತ್ತಿದ್ದಾರೆ. ಬರಬರುತ್ತ ಮನುಷ್ಯ ಪ್ರಾಣಿಗೆ ಗಿಡದ ತೊಗಟೆ, ಎಲೆ ಮುಂತಾದವುಗಳಿಂದ ತನ್ನ ಶರೀರವನ್ನು ಮುಚ್ಚಿಕೊಳ್ಳಬೇಕೆಂಬ ಕಲ್ಪನೆಯುಂಟಾಗಿರಬಹುದು. ಅನಂತರ ಕಾಡುಮೃಗಗಳ ಚರ್ಮವನ್ನು ಧಾರಣಮಾಡುತ್ತಿದ್ದಂತೆ ತೋರುತ್ತದೆ. ಅಂತೆಯೇ ಆ ಜನರು ತಾವು ದೇವರೆಂದು ಭಾವಿಸಿದ ಶಿವನಿಗೆ ಕೃತ್ತಿವಾಸನೆಂದು ಹೇಳಿರಬೇಕು. ಅಲ್ಲಿಂದ ವಲ್ಕಲಗಳು ಅಂದರೆ ನಾರುಬಟ್ಟೆಗಳು ಪ್ರಚಾರದಲ್ಲಿ ಬಂದಿರಬಹುದು. ಋಷಿಗಳು ಜಟಾವಲ್ಕಲಧಾರಿಗಳಾಗಿದ್ದರೆಂದು ನಾವು ಕೇಳುತ್ತೇವೆ. ತರುವಾಯ ಗೋಪಾಲಯುಗದಲ್ಲಿ ಕುರಿಯ ಉಣ್ಣೆಯಿಂದ ಸಿದ್ಧವಾದ ಕಂಬಳಿಗಳು ರೂಢಿಯಲ್ಲಿ ಬಂದಿರಬಹುದು. ಮೊದಲು ಅರಳಿಗೆ ಪಾಶ್ಚಾತ್ಯರು ಗಿಡದ ಮೇಲಿನ ಉಣ್ಣೆಯೆಂದು ಕರೆದದ್ದರೆ ಮೇಲಿಂದ ನೂಲಿನ ಕಲ್ಪನೆಯು ಹಿಂದುಗಡೆ ಕೃಷಿಯುಗದಲ್ಲಿ ಹೊಳೆದಂತೆ ಕಾಣುತ್ತದೆ. ನೂಲಿನಂತೆಯೇ ರೇಶಿಮೆಯ ಹುಳುಗಳಿಂದ ರೇಶಿಮೆಯನ್ನು ಸಂಗ್ರಹಸುವ ಶೋಧವುಂಟಾಗಿರಬಹುದು. ಆ ಮೇಲೆ ಉದ್ಯೋಗ ಯುಗದಲ್ಲಿ ಮನುಷ್ಯರೊಳಗೆ ವಿಧ ವಿಧದ ಅಂದಚಂದ ಆಡಂಬರಾದಿಗಳು ಕ್ರಮೇಣ ಹೆಚ್ಚಾಗಿರಬಹುದು. ಈ ಶೋಧದ ಕ್ರಮವು ಹೇಗೆ ಇರಲಿ, ಮನುಷ್ಯನು ಕಾಡುಸ್ಥಿತಿಯಿಂದ ಸುದಾರಣೆಯ ಸ್ಥಿತಿಗೆ ಮುಟ್ಟಿ ಪುನಃ ನೈಸರ್ಗಿಕ ಸ್ಥಿತಿಗೆ ಹೋಗುವಮತೆ ಭಾಸವಾಗುತ್ತದೆ. ಹಾಗಿಲ್ಲದಿದ್ದರೆ ಈಗಿನ ಎಷ್ಟೋ ಜನ ವೈರಾಗ್ಯಶಾಲಿಗಳು ಅರ್ಧಮರ್ಧ ದಿಗಂಬರರಾಗಿ ಪೂರ್ವದ ಸ್ಥಿತಿಯನ್ನೇಕೆ ಅನುಕರಿಸುತ್ತಿರುವರು?

ಇಂಗ್ಲಂಡ ಮೊದಲಾದ ಪಾಶ್ಚಾತ್ಯದೇಶಗಳಲ್ಲಿಯ ಜನರು ಮೃಗಯಾ ಮತ್ತು ಗೋಪಾಲ ಯುಗಗಳಲ್ಲಿಯ ಜನರಂತೆ ಕಾಡುಸ್ಥಿತಿಯಲ್ಲಿದ್ದಾಗ ಪ್ರಾಚೀನಭಾರತೀಯರು ಕೃಷಿಯುಗದ ಜನರಂತೆ ಸುಧಾರಣೆಯನ್ನು ಹೊಂದಿದ್ದರು. ಆದುದರಿಂದಲೇ ಈ ದೇಶದವರ ನಾನಾ ಕೈಗಾರಿಕೆಯ ಪದಾರ್ಥಗಳನ್ನು ಮತ್ತು ಅನೇಕ ಸುಧಾರಣೆಗಳನ್ನು ನೋಡಿ ಅವರು ಬೆರಗಾಗಿದ್ದರು. ಆದುದರಿಂದ ಜಗತ್ತಿನ ಎಲ್ಲ ಭಾಗಗಳಿಂದಲೂ ದ್ರವ್ಯಪ್ರವಾಹವು ಭರತಖಂಡದ ಕಡೆಗೆಯೇ ಹರಿದುಬಂದು ಭರತಖಂಡವು ಸಂಪತ್ತಿನ ಆಗರವಾಗಿದ್ದಿತು. ಭಾರತೀಯರಿಗೆ ನಾಲ್ಕಾರು ಸಾವಿರ ವರ್ಷಗಳ ಪೂರ್ವದಲ್ಲಿಯೇ ಉದ್ಯೋಗಯುಗವು ಪ್ರಾಪ್ತವಾದಾಗ ಜಗತ್ತಿನ ಬಹುಭಾಗವೆಲ್ಲ ಕಾಡುಸ್ಥಿತಿಯಲ್ಲಿಯೇ ಇದ್ದಿತು. ಆದ ಕಾರಣ ಭಾರತೀಯರ ಸ್ವಾಮಿತ್ವವೇ ಒಂದಿಲ್ಲೊಂದು ರೀತಿಯಿಂದ ಜಗತ್ತಿನ ನಾನಾ ಭಾಗಗಳಲ್ಲಿ ಸ್ಥಾಪನೆಯಾದುದರಲ್ಲಿ ಆಶ್ಚರ್ಯವೇನು?

ಇಂಗ್ಲಂಡ ಮೊದಲಾದ ಪಾಶ್ಚಾತ್ಯರಾಷ್ಟ್ರಗಳು ಮೃಗಯಾ ಮತ್ತು ಗೋಪಾಲಯುಗಗಳನ್ನು ಜಾಗ್ರತೆಯಾಗಿ ಕಳೆದು ಕೃಷಿಯುಗದಲ್ಲಿ ಸ್ವಲ್ಪಕಾಲವಿದ್ದು ಉದ್ಯೋಗಯುಗದಲ್ಲಿ ಪ್ರವೇಶಿಸಿದವು. ಕಳೆದ ೧೭ನೆಯ ಶತಮಾನವೇ ಅವುಗಳಿಗೆ ಉದ್ಯೋಗಯುಗದ ಪ್ರಭಾತಕಾಲವಾಗಿದ್ದಿತು. ಅವು

ಕಳೆದ ಮೂರು ಶತಮಾನಗಳಲ್ಲಿ ನಾನು ಸುಧಾರಣೆಗಳನ್ನು ಹೊಂದಿ ಯಾಂತ್ರಿಕಶಕ್ತಿಯಿಂದ ಪ್ರಪಂಚದ ಮೇಲೆ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಿದವು.

ಭಾರತೀಯರಾದ ನಾವು ಇನ್ನೂ ಪೂರ್ವದ ಉದ್ಯೋಗಯುಗದಲ್ಲಿಯೇ ಇದ್ದೇವೆ. ಆಧುನಿಕ ಉದ್ಯೋಗಯುಗದಲ್ಲಿ ನಾವು ಕಾಲನ್ನೇ ಇಟ್ಟಿಲ್ಲ. ಆದುದರಿಂದ ಪಾಶ್ಚಾತ್ಯರು ನಾನಾಕಲಾಕೌಶಲ್ಯಗಳಿಂದ ನಮ್ಮ ದೇಶದ ಮೇಲೆಯೂ ಮನಸ್ಸಿನ ಮೇಲೆಯೂ ಸ್ವಾಮಿತ್ವವನ್ನು ಸ್ಥಾಪಿಸಿದ್ದಾರೆ. ಅನಂತ ಆಶ್ಚರ್ಯಕರವಾದ ಪದಾರ್ಥಗಳನ್ನು ಮಾಡಿ ನಮ್ಮ ಮನಸ್ಸನ್ನು ಹರಣಮಾಡುತ್ತಿದ್ದಾರೆ. ಅನೇಕ ಅದ್ಭುತವಾದ ಕಾರ್ಯಗಳನ್ನು ಮಾಡಿ ನಮ್ಮ ಬುದ್ಧಿಯು ಮಂದವಾದುದೆಂದು ನಾವೇ ಹೇಳಿಕೊಳ್ಳುವಂತೆ ಮಾಡಿಬಿಟ್ಟಿದ್ದಾರೆ. ಈ ಪ್ರಕಾರ ಮನಸ್ಸಿನಿಂದಲು ಬುದ್ಧಿಯಿಂದಲು ನಾವು ಅವರ ದಾಸರಾದುದರಿಂದಲೇ ದೇಶವು ಅವರ ಸ್ವಾಧೀನವಾಗಿದೆ.

ಮಾನಸಿಕ ಪರಾಧೀನತೆಯು ಸಾಂಪತ್ತಿಕ ಪಾರತಂತ್ರ್ಯಕ್ಕೆ ಮೂಲವಾಗಿದೆ. ಸಾಂಪತ್ತಿಕ ಪಾರತಂತ್ರ್ಯವಾದರೋ ರಾಷ್ಟ್ರೀಯ ದಾಸ್ಯಕ್ಕೆ ಮುಖ್ಯಕಾರಣವಾಗಿದೆ. ಆದುದರಿಂದ ಭಾರತೀಯರು ನಾನಾ ಪಾರತಂತ್ರ್ಯಗಳನ್ನು ನಿವಾರಣೆಯಮಾಡಿಕೊಳ್ಳುವ ಮುಂಚೆ ಸಾಂಪತ್ತಿಕ ಸ್ವಾತಂತ್ರ್ಯಗಳನ್ನು ನಿವಾರಣೆಮಾಡಿಕೊಳ್ಳುವ ಮುಂಚೆ ಸಾಂಪತ್ತಿಕ ದಾಸ್ಯವನ್ನು ಮೊದಲು ತೆಗೆದು ಹಾಕಬೇಕು. ಭಾರತೀಯರು ಸಾಂಪತ್ತಿಕ ಸ್ವಾತಂತ್ರ್ಯವನ್ನು ಹೊಂದಬೇಕಾದರೆ ತಮಗೆ ಬೇಕಾಗಿರುವ ಸಕಲ ಪದಾರ್ಥಗಳನ್ನು ತಾವೇ ತಮ್ಮಲ್ಲಿ ಉಂಟುಮಾಡಿಕೊಳ್ಳಬೇಕು. ಭಾರತೀಯರು ಇಂತಹ ಸ್ಥಿತಿಯನ್ನು ಹೊಂದಿದ ವಿನಾ ಅವರು ಈಗ ಜಗತ್ತಿನಲ್ಲುಂಟಾಗಿರುವ ಭೀಕರವಾದ ಜೀವನಾರ್ಥದ ಕಲಹದಲ್ಲಿ ಬದುಕಿ ಉಳಿಯುವದೇ ಸಾಧ್ಯವಿಲ್ಲ.

ಪರದೇಶದವರ ತೀಕ್ಷ್ಣವಾದ ಶಸ್ತ್ರಕ್ಕಿಂತಲೂ ಅವರ ಸೂಕ್ಷ್ಮವಾದ ತಕ್ಕಡಿಯು ನಮ್ಮ ವಿಪತ್ತುಗಳಿಗೆ ಹೆಚ್ಚು ಕಾರಣವಾಗಿದೆ. ಪರದೇಶದವರು ದಂಡೆತ್ತಿ ಬಂದು ನಮ್ಮ ದೇಶವನ್ನು ಹಾಳು ಮಾಡಿದುದಕ್ಕಿಂತಲೂ ಅನ್ಯದೇಶಗಳ ವರ್ತಕರು ನಮ್ಮಲ್ಲಿ ನುಗ್ಗಿ ನಮ್ಮ ವ್ಯಾಪಾರ ಕೈಗಾರಿಕೆಗಳನ್ನು ಮೂಲೆಗೊತ್ತಿ ಅನೇಕ ಅನಿರ್ವಚನೀಯ ದುಃಖಗಳಿಗೀಡುಮಾಡಿದ್ದಾರೆ. ಆದಕಾರಣ ಒಂದು ರಾಷ್ಟ್ರವು ಯುದ್ಧದ ಮೂಲಕ ನಷ್ಟ ಹೊಂದಿದ ದುರವಸ್ಥೆಯನ್ನು ಜಾಗ್ರತೆಯಾಗಿ ಸುಧಾರಿಸಿಕೊಳ್ಳಬಹುದು. ಆದರೆ ಅದು ಅನ್ಯರಾಷ್ಟ್ರಗಳ ವರ್ತಕರ ಹಾವಳಿಯಿಂದ ಹಾಳಾಗಿದ್ದರೆ ಮಾತ್ರ ಸುಧಾರಿಸಿಕೊಳ್ಳುವುದು ಸುಲಭಸಾಧ್ಯವಲ್ಲ. ಆದುದರಿಂದ ನಮ್ಮ ಔದ್ಯೋಗಿಕಪಾರತತಂತ್ರ್ಯವನ್ನು ನಿವಾರಣೆ ಮಾಡಿಕೊಳ್ಳಲು ನಾವು ಇನ್ನು ಮೇಲೆ ತೀವ್ರತರವಾದ ಪ್ರಯತ್ನಗಳನ್ನು ಮಾಡುವುದು ಅತ್ಯವಶ್ಯವಾಗಿದೆ.

ನಮಗೆ ಬೇಕಾಗುವ ಪ್ರತಿಯೊಂದು ಪದಾರ್ಥವನ್ನೂ ನಾವು ನಮ್ಮ ದೇಶದಲ್ಲಿಯೇ ಮಾಡಿಕೊಳ್ಳಬೇಕು. ಯಾವುದು ನಮ್ಮಲ್ಲುಂಟಾಗುತ್ತದೆಯೋ ಅಂಥ ಪರದೇಶದ ಯಾವ ಪದಾರ್ಥವನ್ನೂ ನಾವು ಕೊಂಡುಕೊಳ್ಳಬಾರದು. ಇದರಿಂದಲೇ ನಮ್ಮ ಭರತಖಂಡದ ಶೋಚನೀಯವಾದ ಸಾಂಪತ್ತಿಕ ಸ್ಥಿತಿಯು ನಿವಾರಣೆಯಾಗುವುದು, ಇದರಿಂದಲೇ ನಮ್ಮ ಸಾಂಪತ್ತಿಕ ಸ್ವಾತಂತ್ರ್ಯವು ಲಭಿಸುವುದು. ಈ ಸಾಂಪತ್ತಿಕ ಸ್ವಾತಂತ್ರ್ಯವೇ ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಬಲವಾದ

ಸಾಧನವಾಗಿದೆ. ಆದುದರಿಂದ ಸಂದಪಭಿವೃದ್ಧಿಯನ್ನು ಅಪೇಕ್ಷಿಸುವವರೆಲ್ಲ ಉದ್ಯೋಗಶೀಲ ರಾಗಲೇಬೇಕು.

ಎಷ್ಟೋ ವರ್ಷಗಳು ಗತಿಸಿದರೂ ಭರತಖಂಡದ ಕೊಟ್ಯವಧಿ ಹಳ್ಳಿಗರ ಪರಿಸ್ಥಿತಿಯಲ್ಲಿ ಏನೂ ವ್ಯತ್ಯಾಸವಾಗದೆ ಅದು ಯಥಾಪ್ರಕಾರವಾಗಿ ಉಳಿದಿರುವದೆಂದು ಕೆಲವರ ಅಭಿಪ್ರಾಯ ಇದು ಸಮಂಜಸವಲ್ಲ. ನಿಜಾಂಶವೇನೆಂದರೆ, ಎಷ್ಟೋ ವರ್ಷಗಳ ವರೆಗೆ ಹಳ್ಳಿಗಳಲ್ಲಿ ಸಂಪತ್ತೂ ಕಸಬುಕಾಯಕಗಳೂ, ವ್ಯವಹಾರಗಳೂ, ಸುಖಶಾಂತಿಯೂ ನೆಲೆಸಿದ್ದವು. ಕೈಗಾರಿಕೆ ಕಲಾಕೌಶಲ್ಯಗಳಲ್ಲಿ ಹಳ್ಳಿಗರು ಅಸಾಧಾರಣವಾದ ನುರಿಪಡಿಯನ್ನು ಹೊಂದಿದ್ದರು. ಆದರೂ ಯಾವುದೋ ಒಂದು ಭಯಂಕರವಾದ ಶಾಪದ ಪ್ರಭಾವದಿಂದಲೋ ಏನೋ ಎಂಬಂತೆ ಸದ್ಯಕ್ಕೆ ಹಳ್ಳಿಗರು ದುಃಖದಲ್ಲಿ ಬಿದ್ದು ಬಳಲಿ ಬೆಂಡಾಗಿದ್ದಾರೆ. ಯಾವ ಪ್ರಾಮಾಣಿಕತನದ ಉದ್ಯೋಗವು ಇಲ್ಲದೆ ಕೇವಲ ನಿರುದ್ಯೋಗಿಗಳಾಗಿಯೇ ಜೀವಿಸುವ ದುರ್ಧರಪ್ರಸಂಗವು ಬಂದೊದಗಿರುತ್ತದೆ. ಈ ಪ್ರಕಾರ ದಾರಿದ್ರ್ಯ ದೀನಾವಸ್ಥೆಗಳಲ್ಲಿ ದೇಶವು ವ್ಯರ್ಥವಾಗಿ ತಲೆಯೆತ್ತಲು ಹೆಣಗಾಡುತ್ತಿರುವುದು. ಮೊದಲಿನ ಸ್ಥಿತಿಗೂ ಈಗಿನ ಸ್ಥಿತಿಗೂ ಬಹಳೇ ವ್ಯತ್ಯಾಸವಿದೆ. ಸದ್ಯಕ್ಕೆ ಹಳ್ಳಿಯಲ್ಲಿ ಪೂರ್ವಕಾಲದ ಸ್ವಾವಲಂಬನೆ, ಸ್ವಪೋಷಣೆ, ಪ್ರೇಮಭಾವನೆಯ ಚಿಹ್ನೆಗಳು ಕಾಣಿಸಲಾರವು. ಹಳ್ಳಿಯ ನಿವಾಸಿಗಲು ಮೊದಲು ಅಪಾರವಾದ ಮತ್ತು ಸುಗಮವಾದ ವ್ಯವಹಾರದ ಫಲಗಳನ್ನುಪಭೋಗಿಸುತ್ತಿದ್ದರು. ಆದರೆ ಈಗ ಕೇವಲ ಕಚ್ಚಾ ದ್ರವ್ಯಗಳ ಉತ್ಪಾದಕರೂ ಅವುಗಳನ್ನು ಪರದೇಶಗಳಿಗೆ ಕಳಿಸುವಂಥವರೂ ಆಗಿಬಿಟ್ಟಿದ್ದಾರೆ. ಅವರ ಮನೆಗಳು ಔದ್ಯೋಗಿಕ ಚಟುವಟಿಕೆಯ ಮಂದಿರಗಳಾಗಿಲ್ಲ. ಬ್ರಿಟಿಷರು ಈ ದೇಶಕ್ಕೆ ಬಂದನಂತರವೂ ಕೂಡ ಎಷ್ಟೋ ವರ್ಷಗಳ ವರೆಗೆ ಹಳ್ಳಿಗಳು ಕೈಗಾರಿಕೆ ಕಲಾಕೌಶಲ್ಯಗಳ ಕೇಂದ್ರಗಳಾಗಿದ್ದವು. ಅವುಗಳಲ್ಲಿ ನೂಲುವದೂ ನೇಯುವದೂ ಗುಡಿಸಲಿನ ಪ್ರಾಮುಖ್ಯವಾದ ಕಸಬುಗಳಾಗಿದ್ದವು. ೨೦೦ ವರ್ಷಗಳ ಪೂರ್ವದಲ್ಲಿ ಖಾದಿಯ ಉದ್ಯೋಗವು ಎಲ್ಲರಿಗೂ ಮನೆಗೆಲಸವಾಗಿ ಬಿಟ್ಟಿತ್ತು. ಈಗಿನಂತೆ ಅವರಿಗೆ ನೂಲಿರೆಂದು ಹೇಳುವ ಅವಶ್ಯಕತೆ ಇದ್ದಿಲ್ಲ. ಹೆಂಗಸರು ಗಂಡಸರೂ ಹುಡುಗರೂ ಸಹ ನೂಲುವ ಕಲೆಯನ್ನು ಚೆನ್ನಾಗಿ ಅರಿತು ಆಚರಿಸುವವರಾಗಿದ್ದರು. ಆದರೆ ಆ ಹಳೆಯ ಎಳೆಗಳು ಹರಿದುಹೋಗಿವೆ. ಆ ಎಳೆಗಳನ್ನು ಕೂಡಿಸಿ ದಾರವನ್ನು ಮಾಡುವ ಕೆಲಸವೂ ನಮ್ಮನ್ನು ಕೂಡಿದೆ. ಮರೆದ ಖಾದಿ ಉದ್ಯೋಗವನ್ನು ಪುನರುಜ್ಜೀವನಗೊಳಿಸಬೇಕಾಗಿರುವುದು. ಚಾತುರ್ಯವನ್ನು ನಷ್ಟಪಡಿಸಿಕೊಂಡ ನಮ್ಮ ಬೆರಳುಗಳಿಗೆ ಖಾದಿ ಬಟ್ಟೆಯನ್ನು ನೇಯುವ ಕಲೆಯನ್ನು ಕಲಿಸಿಕೊಡಬೇಕಾಗಿದೆ. ನಮ್ಮ ಪೂರ್ವಜರು ಜಾಣ್ಮೆಯಿಂದಲೂ ಸೌಲಭ್ಯದಿಂದಲೂ ರಾಟಿಯ ಸದುಪಯೋಗವನ್ನು ಹೊಂದುತ್ತಿದ್ದಂತೆ ನಾವಾದರೂ ಈಗ ಹೊಂದಬೇಕಾಗಿರುವುದು.

❖❖

೨ನೆಯ ಪ್ರಕರಣ

ಪ್ರಾಚೀನಕಾಲದ ಖಾದಿಯು

ನೂಲುವ ನೇಯುವ ಉದ್ಯೋಗದ ಇತಿಹಾಸವನ್ನು ವಿಚಾರಿಸಿದರೆ ನಾವು ಬಹುಪ್ರಾಚೀನಕಾಲದವರೆಗೂ ಹೋಗಬೇಕಾಗುತ್ತದೆ. ಆದರೆ ಅದರ ಇತಿಹಾಸವನ್ನು ಕ್ರಮಬದ್ಧವಾದ ರೀತಿಯಲ್ಲಿ ವಿವೇಚಿಸುವುದು ಸಾಧ್ಯವಿಲ್ಲ. ನೂಲುವದೂ ನೇಯುವದೂ ವೇದಗಳಷ್ಟೇ ಪ್ರಾಚೀನವಾಗಿರುತ್ತವೆ. ಭಾರತೀಯರ ಬುದ್ದಿಗೆ ವೇದಾಂತಿಯಷ್ಟೇ ನೇಕಾರನು ಮಹತ್ವದವನಾಗಿ ತೋರಿದ್ದಾನೆ. **ಬ್ರಹ್ಮಸೂತ್ರ, ಕಾರ್ಪಾಸಸೂತ್ರ**ಗಳಿಂದ ಇಡೀ ವಿಶ್ವವೇ ನೇಮಿಸಲ್ಪಟ್ಟಿರುವದು. ಬ್ರಹ್ಮಸೂತ್ರಗಳಲ್ಲಿ ಬ್ರಹ್ಮಜ್ಞಾನಕ್ಕೆ ಅನುಕೂಲವಾದ ಎಲ್ಲ ಸಾಹಿತ್ಯವೂ ಅಡಕವಾಗಿದೆ. **ತತ್ವವಾಯನಾದ** ವೇದಾಂತಿಯು ಮನುಷ್ಯನ ಆತ್ಮದ ಅಸಾರತೆಯನ್ನು ಅಚ್ಛಾದಿಸಿಬಟ್ಟನು. **ತಂತುವಾಯನು** ಅಂದರೆ ನೇಕಾರನು ಮನುಷ್ಯನ ಶರೀರದ ಮಾನಮರ್ಯಾದೆಯನ್ನು ಅಚ್ಛಾದಿಸಿದನು. ಭರತಖಂಡದ ಸುವರ್ಣಕಾಲದ ಇತಿಹಾಸವು ಇವರಿಬ್ಬರ ಚರಿತ್ರದಲ್ಲಿಯೇ ಅಡಕವಾಗಿರುತ್ತದೆ. ತತ್ವವಾಯನು ನಿಜವಾದ ಮಹರ್ಷಿಯು; ತಂತುವಾಯನು ನಿಜವಾದ ಕಲೆಗಾರನು. ಈಗ ನಾವು ತಂತುವಾಯನ ಜಾಣ್ಮೆಯ ಕಡೆಗೆ ನಮ್ಮ ದೃಷ್ಟಿಯನ್ನು ತಿರುಗಿಸೋಣ. ಯಾಕೆಂದರೆ ಭರತಖಂಡದ ವ್ಯವಹಾರಕಲೆಗಳ ಸುಧಾರಣೆಯು ಆತನ ಜಾಣ್ಮೆಯನ್ನೇ ವಿಶೇಷವಾಗಿ ಅವಲಂಬಿಸಿರುವುದು.

ವೇದಕಾಲದಲ್ಲಿಯ ನೇಯುವ ಉದ್ಯೋಗ

ಬಟ್ಟೆಯನ್ನು ನೇಯುವ ಶೋಧವು ಸುದಾರಣೆಯ ಕೊನೆಯ ಪರಿಸ್ಥಿತಿಯಲ್ಲಾಯಿತೆಂಬುದು ಸ್ಪಷ್ಟವಿದೆ. ಮಗ್ಗದಲ್ಲಿ ಎಳೆಗಳನ್ನು ಹೊಂದಿಸಿ ಹಾಕುವುದೂ, ಅದರಲ್ಲಿ ಲಾಳಿಯನ್ನು ಒಗೆಯುವದೂ, ಉಂಕಿಯನ್ನು ಏತ್ತೆತ್ತಿ ಇಳಿಸುವದೂ ಇವುಗಳಲ್ಲಿ ಸಾವಿರಾರು ವರ್ಷಗಳಾದರೂ ಯಾವ ಸುಧಾರಣೆಯೂ ಆದಂತೆ ತೋರುವುದಿಲ್ಲ. ಋಗ್ವೇದದ ೧೦ನೆಯ ಮಂಡಲದ ೩೦ನೆಯ ಸೂಕ್ತದಲ್ಲಿ ನಮ್ಮ ಆರ್ಯರು ನೇಯುವುದು ಮುಗಿದ ಬಳಿಕ ಲಾಳಿಯನ್ನೂ ಒತ್ತಟ್ಟಿಗಿರಿಸುತ್ತಿದ್ದರೆಂಬುದಾಗಿ ಹೇಳಿದೆ. ಕುಶಾಗ್ರತೆಯ ನೇಗೆಯ ಕಲೆಯು ಋಷಿಗಳ ಮನಸ್ಸಿನಲ್ಲಿ ಒಳ್ಳೆ ಪರಿಣಾಮವನ್ನು ಮಾಡಿದ್ದರಿಂದಲೇ ಶಾಶ್ವತವಾದ ನಿತ್ಯದ ರಹಸ್ಯವನ್ನರಿತುಕೊಳ್ಳುವಾಗ ತಂತುವಾಯ ನೆಂಬ ರೂಪಕಾರ್ಥದ ಶಬ್ದವನ್ನು ಪ್ರಯೋಗಿಸಿರುವರು. ಋಗ್ವೇದದಲ್ಲಿ ನೇಗೆಯ ಕಲೆಯ ವಿಷಯವಾಗಿ ಬಹುಸೊಗಸಾದ ದೃಷ್ಟಾಂತಗಳು ಕಂಡುಬರುತ್ತವೆ.

ವಿಲ್‌ಸನ್‌ರವರ ಋಗ್ವೇದದ ೨ನೆಯ ಭಾಗದ ೨೨೮ನೆಯ ಪುಟದಲ್ಲಿ ಹೇಳಿರುವದೇನೆಂದರೆ **"ಇಬ್ಬರು ಹೆಂಗಳೆಯರಾದ ನೇಕಾರ್ತಿಯರಂತೆ ಹಗಲು ರಾತ್ರಿಗಳೆರಡು ತಮ್ಮ ನಿತ್ಯದ ಕರ್ತವ್ಯವೆಂಬ ಬಟ್ಟೆಯನ್ನು ನೇಯ್ದು ಮುಗಿಸಲಿಕ್ಕೆ ಹರಿದುಬಿದ್ದ ಎಳೆಗಳನ್ನು ಒಂದಕ್ಕೊಂದು ಜೋಡಿಸುತ್ತಿದ್ದವು."** ಸೃಷ್ಟಿಕರ್ತನಾದ ಪ್ರಜಾಪತಿಯ ಯಜ್ಞವನ್ನು ನೇಯುವ ಶಬ್ದಗಳಿಂದಲೇ ವಿವರಿಸಿ ಹೇಳಿರುವರು. ರಾತ್ರಿಯ ಕಾಲದಲ್ಲಿ ಇಲಿಗಳು ನೂಲಿನ ಎಳೆಗಳನ್ನು ತಿನ್ನುವುದು ಸಹಜವು. ಇದು ವೇದಕಾಲದ ಜನರಿಗೆ ಚೆನ್ನಾಗಿ ಗೊತ್ತಾಗಿದ್ದಿತು. ಋಗ್ವೇದದಲ್ಲಿ ಇದರ ವಿಷಯವಾಗಿ ಒಂದು ಸಣ್ಣ ದೃಷ್ಟಾಂತವಿರುವದು. **'ಇಲಿಗಳು ನೇಕಾರರ ಎಳೆಗಳನ್ನು ತಿನ್ನುವಂತೆ ಚಿಂತಾತುರತೆಗಳು ನನ್ನನ್ನು ತಿಂದು ಸಣ್ಣ ಮಾಡತ್ತಲಿವೆ'** (೧೦ನೆಯ ಮಂಡಲ, ಸೂಕ್ತ ೩೩-೩)

ನೆಯುವ ಉದ್ಯೋಗವು ಆಗಿನ ಜನರಿಗೆ ಗೊತ್ತಾಗಿದ್ದಿತಷ್ಟೇ ಅಲ್ಲ; ಆ ಕಲೆಯ ಚಾತುರ್ಯವು ಅವರ ಭಾವನೆಯಲ್ಲಿ ದೃಢವಾಗಿ ನೆಲೆಸಿದ್ದಿತು. ಅಂತೆಯೇ **'ಜಾಣರು ಬಟ್ಟೆಗಳನ್ನು ನೇಯುವಂತೆ ನಾವು ನಮ್ಮ ಹಾಡುಗಳನ್ನು ನೇಯುತ್ತಿದ್ದೇವೆ.'** ಎಂದು ಋಗ್ವೇದದ ೧೦ನೆಯ ಮಂಡಲದ ಸೂಕ್ತ ೧೦೬-೧ರಲ್ಲಿ ಪ್ರತಿಪಾದಿಸಿದೆ. ಇದಲ್ಲದೆ **"ಆ ಪರಮ ತೇಜಸ್ವಿಗಳಾದ ಋಷಿವರ್ಯರು, ಆಕಾಶದಲ್ಲಿಯೂ ಅಗಾಧವಾದ ಸಮುದ್ರದಲ್ಲಿಯೂ ಹೊಸಹೊಸದಾಗಿ ಜಾಲವನ್ನು ನೇಯುತ್ತಿದ್ದಾರೆ."** ಎಂದು ಋಗ್ವೇದದ ೧ನೆಯ ಮಂಡಲದ ೧೪೯-೪ ಸೂಕ್ತಗಳಲ್ಲಿ ವಿವರವಾಗಿದೆ.

ನೂಲುವ ಬಗ್ಗೆ ರೂಪಕ

ಎಲ್ಲ ವೇದೋಪನಿಷತ್ತುಗಳಲ್ಲಿಯೂ ಸಂಸ್ಕೃತ ವಾಙ್ಮಯದಲ್ಲಿಯೂ ನೂಲುವದರ ಬಗ್ಗೆ ರೂಪಕಗಳು ಅಲ್ಲಲ್ಲಿ ಕಂಗೊಳಿಸುತ್ತವೆ. ಇಲ್ಲಿ ಕೆಲವನ್ನು ಮಾದರಿಗಾಗಿ ಕೊಡುತ್ತೇವೆ. ದೇವಾದಿದೇವನಾದ **ವಿಷ್ಣುವಿಗೆ ಸುತಂತು ಮತ್ತು ತಂತುವರ್ಧನ** ಎಂಬ ನಾಮನಿರ್ದೇಶಮಾಡಿರುವರು. ಕವಿಯು ಅಗ್ನಿದೇವನನ್ನು ಕುರಿತು ಹಾಡುವಾಗ **ಪುರಾತನಕಾಲದ ಎಳೆಗಳನ್ನು ನೂಲಬೇಕೆಂಬುದಾಗಿ** ದೇವತೆಗಲನ್ನು ಕುರಿತು ಪ್ರಾರ್ಥಿಸಿಕೊಂಡಿರುವನು. ಜೀವನಸೂತ್ರವೂ ವಂಶಸೂತ್ತವೂ ನೂಲಿನ ಎಳೆಗೇ ಹೋಲಿಸಲ್ಪಟ್ಟವುಗಳಾಗಿವೆ. **"ನಮ್ಮ ಹಿರಿಯರು ತಮ್ಮ ಸಂತಾನಪರಂಪರೆಯನ್ನು ಭೂಮಿಯ ಮೇಲಿರಿಸಿದರು. ಅವರ ಸಂತತಿಯು ಅವಿಚ್ಛಿನ್ನವಾದ ಕಾರ್ಪಾಸಸೂತ್ರದಂತಿರುವದು."** (ಋಗ್ವೇದ, ೧೦ನೆಯ ಮಂಡಲ, ಸೂಕ್ತ ೫೬-೬) ಅಥರ್ವವೇದದಲ್ಲಿ ಹೇಳಿರುವದೇನೆಂದರೆ ಒಬ್ಬ ತರುಣ ಗಂಡನು ತನ್ನ ವಿವಾಹದ ಪ್ರಥಮ ದಿವಸದಲ್ಲಿಯೇ ತನ್ನ ಹೆಂಡತಿಯು ಸಿದ್ಧಗೊಳಿಸಿದ ಧೋತರವನ್ನುಕೊಂಡನು ಈ ರೂಢಿಯು ಈಗಲೂ ಓರಿಸಾದ ಸಂಬಲಪುರ ಜಿಲ್ಲೆಯಲ್ಲಿಯೂ ಆಸಾಮ ಪ್ರಾಂತದ ಕೆಲವೆಡೆಯಲ್ಲಿಯೂ ಪ್ರಚಲಿತವಾಗಿರುತ್ತದೆ. ಈ ಸ್ಥಳಗಳಲ್ಲಿ ನೂತನ ವಧುವು ಪತಿಯ ಗೃಹಪ್ರವೇಶ ಮಾಡಿದ ಪ್ರಥಮ ವರುಷ ಅವಳಿಗೆ ನೂಲುವ ಉದ್ಯೋಗದ ಹೊರತು ಬೇರಾವ ಉದ್ಯೋಗಕ್ಕೂ ಹಚ್ಚುವುದಿಲ್ಲ. ಪೂರ್ವಪದ್ಧತಿಯ ಸ್ಮಾರಕಗಳು ಇಂದಿಗೂ ಮದುವೆಯ ಕಾಲದಲ್ಲಿ ಕಂಡುಬರುತ್ತವೆ. ವರನನ್ನು ಇದಿರ್ಗೊಂಡು ಕರೆದೊಯ್ಯುವಾಗ ಪ್ರಪಂಚಕ್ಕೆ ಅನುಕೂಲ ಬೀಳುವ ನೊಗ, ವನಿಕೆ, **ಕಡಗೋಲು, ಕದಿರು** ಮುಂತಾದವುಗಳನ್ನು ತೆಗೆದುಕೊಂಡು ಹೋಗುವ ರೂಢಿಯು ಈಗಲು ಕೆಲವೆಡೆಯಲ್ಲುಂಟು. ಇವೇ ಗೃಹಕ್ಕೆ ಸುಖಸಮಾಧಾನಗಳ ಉಪಕರಣಗಳು.

ಆಗಿನ ಕಾಲದಲ್ಲಿ ನೂಲುವದು ಸುಖಸಮಾಧಾನಗಳ ಉಪಕರಣಗಳು. ಆಗಿನ ಕಾಲದಲ್ಲಿ ನೂಲುವದು ಪ್ರತಿಯೊಬ್ಬರ ಮನೆಗೆಲಸವಾಗಿದ್ದಿತು.

ವೇದಕಾಲದ ನಾನಾತರದ ಉಡುಪುಗಳು

ವೇದಕಾಲದ ಮತ್ತು ರಾಮಾಯಣ ಮಹಾಭಾರತ ಕಾಲಗಳ ಜನರು ನೇಗೆಯ ಉದ್ಯೋಗವನ್ನು ಒಳ್ಳೆ ಊರ್ಜಿತಾವಸ್ಥೆಗೆ ತಂದಂತೆ ತೋರುತ್ತದೆ. ಆಗಿನ ಕಾಲದಲ್ಲಿ ಪುರಷನು ೩ ವಸ್ತ್ರಗಳನ್ನು ಧರಿಸುತ್ತಿದ್ದನು ಅವು ಯಾವವೆಂದರೆ (೧) ನೀವಿ (೨) **ಪರಿಧಾನ** ಅಥವಾ **ಅಧಿವಾಸಸ್** (೩) **ವಸ್ತ್ರ**. ನೀವಿಯೆಂದರೆ ಉಟ್ಟುಕೊಳ್ಳುವ ಧೋತರ; ಪರಿಧಾನವೆಂದರೆ ಹೊತ್ತುಕೊಳ್ಳುವ ಬಟ್ಟೆ; ವಸ್ತ್ರವೆಂಬುದು ಬೇರೊಂದು ಹೊದಿಕೆಯು. **ಉಷ್ಣೀಷ** ಅಂದರೆ ರುಮಾಲ-ಇದು ಸಹ ಪ್ರಚಾರದಲ್ಲಿದ್ದಂತೆ ತೋರುತ್ತದೆ. (ಅಥರ್ವವೇದ, ೧೫ನೆಯ ಮಂಡಲ ಸೂಕ್ತ ೨-೧೬) ತೈತ್ತಿರೀಯ ಬ್ರಾಹ್ಮಣದಲ್ಲಿ ಮರುತ್ತುಗಳು ಸುವರ್ಣವಸ್ತ್ರಗಳನ್ನು ಧರಿಸುತ್ತಿದ್ದರೆಂದು ವರ್ಣನೆಯಿದೆ. ಇದರ ಮೇಲಿಂದ ವೇದಕಾಲದಲ್ಲಿಯೂ ಅಂಥ ಸುಂದರವಾದ ಮತ್ತು ಅತಿಶಯ ನಯವುಳ್ಳಂಥ ಬಟ್ಟೆಗಳು ಮಾಡಲ್ಪಡುತ್ತಿದ್ದವೆಂದು ತೋರುತ್ತದೆ. ಶ್ರೀಮಂತರು ಉಟ್ಟುಕೊಳ್ಳುತ್ತಿದ್ದ ಬಹುಬೆಲೆಯ ಧೋತರಗಳಿಗೆ **ಪ್ರವಾರ**ಗಳೆಂದೆನ್ನುತ್ತಿದ್ದರು. ಶರೀರದ ಮೇಲ ಉತ್ತರೀಯವನ್ನು ಧರಿಸುತ್ತಿದ್ದರು. ತಲೆಗೆ ಉಷ್ಣೀಷವನ್ನು ಸುತ್ತುತ್ತಿದ್ದರು. ಹೆಂಗಸರು ಉತ್ತರೀಯವೆಂದರೆ ಉಟ್ಟುಕೊಳ್ಳುವ ಸೀರೆ, ಅಂತರೀಯವೆಂದರೆ ತಲೆಗೆ ಹಾಕಿಕೊಳ್ಳುವ ಸೆರಗು –ಈ ಪ್ರಕಾರ ಎರಡು ವಸ್ತ್ರಗಳನ್ನು ಧರಿಸುತ್ತಿದ್ದರು.

ಮಹಾಭಾರತದ ಒಂದು ಕಡೆಯಲ್ಲಿ ಬಹುಶಃ ಎಲ್ಲ ಜನರು ಯಾವ ಉಡುಪುಗಳನ್ನು ಧರಿಸುತ್ತಿದ್ದರೆಂಬ ಬಗ್ಗೆ ಒಂದು ಶ್ಲೋಕವು ದೃಷ್ಟಾಂತವಾಗಿದೆ:

> ಉಷ್ಣೀಷಾಣಿ ವಿಯಚ್ಚಂತ ಪುಂಡರೀಕನಿಬೈಃ ಕರೈಃ।
> ಅಂತರೀಯೋತ್ತರೀಯಾಣಿ ಭುಷಣಾನಿ ಚ ಸರ್ವಶಃ ॥

ಸಾಮಾನ್ಯವಾಗಿ ಎಲ್ಲರೂ ರುಮಾಲ, ಉಟ್ಟುಕೊಳ್ಳುವ ಧೋತರ, ಹಾಗೂ ಹೊತ್ತುಕೊಳ್ಳುವ ಪಂಜೆಗಳನ್ನಷ್ಟೇ ಧರಿಸುತ್ತಿದ್ದರೆಂಬುದು ಮೇಲಿನ ಶ್ಲೋಕದ ಭಾವಾರ್ಥವು.

ರಾಮಾಯಣ, ಮಹಾಭಾರತ ಕಾಲಗಳಲ್ಲಿ ರೇಶಿಮೆ, ಉಣ್ಣೆ ಹಾಗೂ ನೂಲಿನ ಬಟ್ಟೆಗಳು ಹೇರಳವಾಗಿ ಪ್ರಚಾರವಾಗಿದ್ದವು. ವಾಲ್ಮೀಕಿ ಮಹರ್ಷಿಯು ಹೇಳಿರುವುದೆನೆಂದರೆ 'ಸೀತಾದೇವಿಯ ಕರಂಡಕದಲ್ಲಿ ಉಣ್ಣೆಯ ವಸ್ತ್ರ, ಅಮೌಲ್ಯರತ್ನ, ಉತ್ಕೃಷ್ಟವಾದ ರೇಶಿಮೆಯ ಮಡಿಗಳು, ನಾನಾವರ್ಣದ ಜರದ ಪೀತಾಂಬರಗಳು ಬಹುಬೆಲೆಯ ವಸ್ತು ಒಡವೆಗಳು ಇದ್ದವು.' (ಬಾಲಕಾಂಡ, ಅಧ್ಯಾಯ ೧, ಶ್ಲೋಕ ೭೪೩) **ಮಹಾಭಾರತ**ದ **'ಸಭಾಪರ್ವ'**ದೊಳಗಿನ ೫೧-೫೨ನೆಯ ಶ್ಲೋಕಗಳಲ್ಲಿ **ಯುಧಿಷ್ಠಿರ**ನಿಗೆ ನಾನಾಭಾಗಗಳಿಂದ ಬಂದ ಕಾಣಿಕೆಗಳಲ್ಲಿ ಉಣ್ಣೆಯ ವಸ್ತ್ರಗಳೂ, ನಾನಾವರ್ಣದ ರತ್ನಗಂಬಳಿಗಳೂ, ಗುಜರಾಥದ ಅಭೀರರಿಂದ ಕಳುಹಿಸಲ್ಪಟ್ಟಿದ್ದವೆಂತಲೂ, ಮೈಸೂರ ಹಾಗೂ ಕರ್ನಾಟಕ ಪ್ರಾಂತಗಳಿಂದ, ನಾನಾ ಪ್ರಕಾರದ ಉಣ್ಣೆಯ ವಸ್ತ್ರಗಳೂ, ಸನಗಿನ ಗಂಟುಗಳೂ, ನಾರುಬಟ್ಟೆಗಳೂ ಪ್ರಾಪ್ತವಾಗಿದ್ದವೆಂತಲೂ ಪಾಂಡ್ಯರೂ ಚೋಳರೂ ಯುಧಿಷ್ಠೀರನಿಗೆ ಸುವರ್ಣದಿಂದ ಕೆತ್ತಿದ ನೂಲಿನ ಬಟ್ಟೆಗಳನ್ನು ಸಮರ್ಪಿದ್ದರೆಂತಲೂ ಉಲ್ಲೇಖವಿದೆ. ಇದರ ಮೇಲಿಂದ

ಪೂರ್ವಕಾಲದಲ್ಲಿಯೂ ಸಹ ನೇಗೆಯ ಉದ್ಯೋಗವು ಒಳ್ಳೇ ಊರ್ಜಿತಾವಸ್ಥೆಯಲ್ಲಿದ್ದಿತೆಂಬುದು ಸಿದ್ಧವಾಗುವದಿಲ್ಲವೇ?

ಖಾದಿ ಉದ್ಯೋಗದ ಮಾರ್ಪಾಟು

ಪ್ರಾಚೀನ ಕ್ಾಲದಲ್ಲಿ ನೇಯುವ ಉದ್ಯೋಗದಂತೆ ನೂಲುವದೂ ಪ್ರತಿಯೊಂದು ಮನೆಗೆಲಸವಾಗಿದ್ದಿತು. ಹಳ್ಳಿಗಳಲ್ಲಿ ಅದು ವಿಶೇಷವಾಗಿ ಪಸರಿಸಿತ್ತು. ವಾತ್ಸ್ಯಾಯನನು ತನ್ನ ಕಾಮಸೂತ್ರದ ಭಾರ್ಯಾಧಿಕರಣದಲ್ಲಿ ನೂಲುವದೂ ನೇಯುವದೂ ಪ್ರತಿಯೊಬ್ಬ ಗೃಹಿಣಿಯ ಅತ್ಯಾವಶ್ಯಕವಾದ ಕರ್ತವ್ಯವೆಂದು ಪ್ರತಿಪಾದಿಸಿದ್ದಾನೆ. ಜರತಾರಿ ಬಟ್ಟೆಗಳ ವ್ಯಾಪಾರಿಗಳು ರಾಜರ ಸ್ನೇಹಿತರು ಸಲಹೆಗಾರರೂ ಆಗಿದ್ದರು. ದಕ್ಷಿಣ ಹಿಂದುಸ್ಥಾನದಲ್ಲಿ ನೇಕಾರರ ಸುವ್ಯವಸ್ಥೆಯು ಒಳ್ಳೆ ಸಂಪೂರ್ಣಾವಸ್ಥೆಗೆ ಹೋಗಿದ್ದಿತು. ಅವರು ಒಂದು ಬ್ಯಾಂಕನ್ನೆ ಏರ್ಪಡಿಸಿದ್ದರು. ಜನರು ಅದರಲ್ಲಿ ಠೇವನ್ನಿಡುತ್ತಿದ್ದರು. ಜಾತಕ ಕಥೆಗಳಲ್ಲಿ ಪ್ರಮುಖ, ಜ್ಯೇಷ್ಠಕ, ಭಾಂಡಾಗಾರಿಕ, ಮುಂತಾದ ಕಲಾಕೌಶಲ್ಯ ನಿಪುಣರ ಬಗ್ಗೆ ಹೇಳಿದೆ. ನಾರದಸ್ಮೃತಿಯಲ್ಲಿ ಕಲಾನಿಪುಣರ ಬಗ್ಗೆ ಸಂದರ್ಭಗಳು ಬಂದಿರುತ್ತವೆ. ಅದರಲ್ಲಿ ಯಜಮಾನ ಮತ್ತು ಗುಮಾಸ್ತರು ಪರಸ್ಪರ ನಡೆದುಕೊಳ್ಳಬೇಕೆಂಬ ಬಗ್ಗೆ ಸುಗಮವಾದ ವಿವೇಚನೆಯಿರುವುದು.

ಖಾದಿಯ ಕ್ರಮಬದ್ಧತೆ

ದೇಶದೊಳಗಿನ ಕೋಟ್ಯವಧಿ ಜನಗಳು ತಮ್ಮ ಹೊಟ್ಟೆಗೆ ಆಹಾರವನ್ನೂ ಮೈಗೆ ಬಟ್ಟೆಯನ್ನೂ ಎಂದೂ ಕೊಳ್ಳುತ್ತಿರಲಿಲ್ಲ. ಅವುಗಳನ್ನು ಮನೆಯಲ್ಲಿಯೇ ಸಿದ್ಧಪಡಿಸಿಕೊಳ್ಳುತ್ತಿದ್ದರು. ಕೇವಲ ರಾಜರೂ ಸರದಾರರೂ, ಧನಿಕರೂ, ನೇಕಾರರಿಗೆ ಕೂಲಿಕೊಟ್ಟು ತಮ್ಮ ಬಟ್ಟೆಗಳನ್ನು ನೇಯಿಸಿಕೊಂಡು ಉತ್ಕೃಷ್ಟವಾದ ನೇಗೆಯ ಕಲೆಯನ್ನು ಪೋಷಿಸುತ್ತಿದ್ದರು. ವ್ಯಾಪಾರಿಯು ಜಾತ್ರೆಯಲ್ಲಿ ಜರವನ್ನು ಕೊಂಡು ಬಟ್ಟೆಗಳನ್ನು ನೇಯಿಸಿ ಉತ್ತಮವಾದ ಜರತಾರಿ ಬಟ್ಟೆಗಳನ್ನು ಪರಸ್ಥಳಕ್ಕೆ ಮಾರಾಟಕ್ಕಾಗಿ ಕಳುಹಿಸುತ್ತಿದ್ದನು. ಪ್ರತಿಯೊಂದು ರಾಜಮನೆತನದಲ್ಲಿ ನೂಲುವ ಹಾಗು ನೇಗೆಯ ಉದ್ಯೋಗವು ಒಳ್ಳೆ ಕ್ರಮಬದ್ಧವಾದ ಸ್ಥಿತಿಯಲ್ಲಿತ್ತೆಂಬುದು ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಪ್ರತಿಪಾದಿಸಿದ ಸೂತ್ರಾಧ್ಯಕ್ಷನ ಕರ್ತವ್ಯಗಳ ಮೇಲಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

ಖಾದಿಯು ವಿಷಯುವಾಗಿ ಕೆಲವು ನೇಮುಗಳು ಒಳ್ಳೆ ಮುಹತ್ವದವಾಗಿರುತ್ತವೆ. ಉದಾಹರಣಾರ್ಥವಾಗಿ **"ಕಾಟಕದಾಸರು ಹೋಗಲಾಗಿ ಸೀಳಿನ ತೂಕವು ಹಂಜಿಯ ತೂಕಕ್ಕಿಂತಲೂ ಕಡಿಮೆಯಾದರೆ ಕೂಲಿಯ ಹಣವನ್ನು ಮುರಕೊಳ್ಳಬೇಕು."** ಇದರ ಮೇಲಿಂದ ಸರಕಾರವು ನೂಲಿನ ಗುಣಧರ್ಮಗಳನ್ನು ತಾನೇ ನಿರ್ಧರಿಸುತ್ತಿತ್ತಲ್ಲದೆ ನೂಲಿನ ಉದ್ದಳತೆಯು ಕಡಿಮೆಯಾದರೆ ಕೂಲಿಯಲ್ಲಿ ಮುರಿದುಕೊಳ್ಳುವುದೇ ಅದಕ್ಕೆ ದಂಡವಾಗಿದ್ದಿತೆಂದು ಗೊತ್ತಾಗುವದು. ಸರಕಾರವು ನೇಕಾರರೊಂದಿಗೆ ಒಳ್ಳೆ ಕ್ರಮಬದ್ಧವಾದ ರೀತಿಯಿಂದ ವ್ಯವಹರಿಸುತ್ತಿದ್ದಿತು. ನೂತ ನೂಲಿನ ಉಪಯೋಗವೇ ವಿಶೇಷವಾಗಿ ಪ್ರಚಾರದಲ್ಲಿದ್ದಿತು. ನೂಲಿನ ಉದ್ದಳತೆಯ ಮೇಲಿಂದ ಕೂಲಿಯನ್ನು ಕೊಡುವದಾದರೂ ಒಳ್ಳೆ ನಿಯಮವಾಗಿದ್ದಿತು. ನೂಲಿನ ಎಳೆಗಳನ್ನು ಶಾಸ್ತ್ರ ದೃಷ್ಟಿಯಿಂದ ಪರೀಕ್ಷಿಸುತ್ತಿದ್ದರಷ್ಟೇ ಅಲ್ಲದೇ, ನೂಲಿನ ಗುಣಧರ್ಮಕ್ಕೆ ವಿಶೇಷವಾದ ಲಕ್ಷಣವು ಕೊಡಲ್ಪಡುತ್ತಿದ್ದಿತು. ಕೌಟಿಲ್ಯನ **ಅರ್ಥಶಾಸ್ತ್ರ**ದಲ್ಲಿ ಒಂದು ಕಟ್ಟಳೆಯು ಕಂಡುಬರುವದೇನೆಂದರೆ ಒಂದು ಪಲ್ಲೆ ಹತ್ತಿಗೆ ಮತ್ತು ರೇಶಿಮೆಗೆ ೧ ಪಲ್ಲೆ

ನೂಲು ಹೊರಡುತ್ತದೆ ಇಂಥ ಅನೇಕ ಅಳತೆ ಪ್ರಮಾಣಗಳು ಆಗಿನ ಕಾಲದಲ್ಲಿ ದೇಶದಲ್ಲಿ ಚೆನ್ನಾಗಿ ಗೊತ್ತಿದ್ದವು. ನೂಲುಗಾರನಂತೆ ನೇಕಾರನ ಬಗ್ಗೆಯೂ ಇಂತಿಷ್ಟು ನೂಲಿಗೆ ಇಂತಿಷ್ಟು ಬಟ್ಟೆಯನ್ನೊದಗಿಸಿಕೊಡಬೇಕೆಂಬ ಕಟ್ಟಳೆಗಳಿದ್ದವು. **ಅರ್ಥಶಾಸ್ತ್ರಕಾರನೂ ಮನುಸ್ಮೃತಿಯ** ಹಳೆಯ ಮಾತನ್ನೇ ಎತ್ತಿ ಬರೆಯುವದೇನೆಂದರೆ–

ನೇಕಾರನು ಬಟ್ಟೆಗೆ ಅಕ್ಕಿಯ ಗಂಜಿಯನ್ನು ತೊಡೆದ ಬಳಿಕ ೧೦ ಪಲ್ಲೆ ತೂಕದ ನೂಲಿಗೆ ಪ್ರತಿಯಾಗಿ ೧೧ ಪಲ್ಲೆ ತೂಕದ ಬಟ್ಟೆಯನ್ನು ಕೊಡದಿದ್ದರೆ ಆತನನ್ನು ಶಿಕ್ಷಿಸತಕ್ಕದ್ದು. ಬಟ್ಟೆಗೆ ಬಹಳ ಗಂಜಿಯನ್ನು ತೊಡೆದು ಕಡಿಮೆ ನೂಲಿನ ಬಟ್ಟೆಯನ್ನು ನೇಯ್ದು ತೂಕಕ್ಕೆ ಸರಿಮಾಡಿಕೊಟ್ಟರೆ ಜಾಣಾಕ್ಷರಾದವರು ಅದನ್ನು ಕೂಡಲೆ ಕಂಡುಹಿಡಿಯುತ್ತಿದ್ದರು.

ಅರ್ಥಶಾಸ್ತ್ರಕ್ಕಿಂತಲೂ ಹಿಂದಿನ ಗ್ರಂಥವಾದ ಶುಕ್ರನೀತಿಯಲ್ಲಿ ಹೇಳಿರುವದೇನೆಂದರೆ ವಸ್ತ್ರಪನೆಂಬ ಅಧಿಕಾರಿಯು ನೂಲು, ರೇಶಿಮೆ, ಮುಂತಾದ ಬಟ್ಟೆಗಳ ಬೆಲೆಯನ್ನು ಅವುಗಳ ನೇಗೆ, ನಯತ್ವ, ತಾಳಿಕೆ, ಗುಣಧರ್ಮಗಳಿಗನುಸಾರವಾಗಿ ಕಟ್ಟುತ್ತಿದ್ದನು. ಪ್ರತಿಯೊಂದು ಪ್ರಾಂತದ ವೈಶಿಷ್ಟ್ಯವೇ ಬೇರೆ. ವಂಗದೇಶವು ಶುಭ್ರವಾದ ದುಕೂಲವೆಂಬ ನಯವಾದ ರೇಶಿಮೆಯ ಬಟ್ಟೆಯನ್ನು ಹುಟ್ಟಿಸುತ್ತಿದ್ದಿತು. ಪಾಂಡ್ಯದೇಶದವರು ನೀಲಮಣಿಯ ಮೇಲ್ಭಾಗದಷ್ಟು ನುಣುಪಾದ ಕರೆಬಣ್ಣದ ಏಕನೇಗೆಯ ಬಟ್ಟೆಗಳನ್ನು ಸಿದ್ದಗೊಳಿಸುತ್ತಿದ್ದರು. **ಮಥುರಾ, ಅಪರಂತ, ಕಲಿಂಗ, ಕಾಶಿ, ವತ್ಸ, ಕೌಶಂಬಿ ಮಾಹಿಷ್ಮತಿ** ದೇಶಗಳು ನೂಲಿನ ಬಟ್ಟೆಗಳನ್ನು ಸಿದ್ದಗೊಳಿಸುವದರಲ್ಲಿ ಹೆಸರಾಗಿದ್ದವು.

ನೂಲುವುದು ಬಡವರ ಬಗ್ಗೆ ಕಟ್ಟಳೆಯು

ನೂಲುವದು ಎಲ್ಲರಿಗೂ ಸಾಮಾನ್ಯವಾದ ಉದ್ಯೋಗವಾದ್ದರಿಂದ ಬೇರಾವ ಉದ್ಯೋಗವಿರದಿದ್ದರೂ ಪ್ರಾಮಾಣಿಕತನದಿಂದ ರಾಟಿಯನ್ನು ತಿರುವಿ ತಮ್ಮ ಚರಿತಾರ್ಥವನ್ನು ಸಾಗಿಸಿಕೊಳ್ಳಲು ಸಮರ್ಥರಾಗುತ್ತಿದ್ದರು. ದಾರಿದ್ರ್ಯದಿಂದ ಬಳಲುವವರಿಗೆ ರಾಟಿಯು ಸಮಾಧಾನವನ್ನೀಯುವದು. ಅನಾಥರಿಗೆ ಅಭಯ ಹಸ್ತವಾಗಿರುವದು. ಜಾತಕ ಕಥೆಯಲ್ಲಿ ಒಬ್ಬ ಸ್ತ್ರೀಯಳು ಸಾಯುತ್ತಿರುವ ತನ್ನ ಪತಿಗೆ ಸಮಾಧಾನಕರವಾದ ಮಾತುಗಳಿಂದ ಹೇಳಿರುವದೇನೆಂದರೆ ನನಗೆ ಅರಳೆಯನ್ನು ನೂಲುಮಾಡುವ ಕಲೆಯು ಗೊತ್ತಿದೆ. ಅದರ ಸಹಾಯದಿಂದ ನಾನು ನಿಮ್ಮ ನನ್ನ ಮಕ್ಕಳನ್ನು ಕಾಪಾಡಲು ಸಮರ್ಥಳಾಗುವೆನು ಬಡ ಜನರ ಬಳಲಿಕೆಯನ್ನು ನಿರ್ಮೂಲಗೊಳಿಸುವದಕ್ಕಾಗಿಯೇ ನೂಲುವ ಉದ್ಯೋಗದ ಮಾರ್ಪಾಟಾಗಿದ್ದಿತು. ಸೂತ್ರಾಧ್ಯಕ್ಷನು ದರಿದ್ರರಿಗೂ ಕಂಗಾಲರಿಗೂ ಹೇಳವ ಕುಂಟರಿಗೂ ಮನೆಬಿಟ್ಟು ಕದಲದೆ ಸಮರ್ಥರಾದ ಬಡ ಹೆಣ್ಣುಮಕ್ಕಳಿಗೂ ಅವರ ಚರಿತಾರ್ಥವು ನಡೆಯಬೇಕೆಂಬುದಾಗಿ ನೂಲುವ ಉದ್ಯೋಗವನ್ನು ಹಚ್ಚಿಕೊಡುತ್ತಿದ್ದನು.

ನೂಲುವುದು ದರಿದ್ರರಿಗೆ ಒಂದು ತರದ ಕಟ್ಟಳೆಯಾಗಿ ಪರಿಣಮಿಸಿದ್ದಿತು. ಮನುವಿನ ಕಾಲದಲ್ಲಿಯೂ ಇದೇ ಪರಿಸ್ಥಿತಿಯಿದ್ದಿತೆಂಬುದು ಕುಲಕಭಟ್ಟನ ಟೀಕೆಯ ಮೇಲಿಂದ ಕಂಡುಬರುತ್ತದೆ. ವಿಧವೆಯರು, ಬಡ ಹೆಣ್ಣುಮಕ್ಕಳು ಬಾಹ್ಯ ಕೆಲಸಗಳನ್ನು ಮಾಡಲು ಅಸಮರ್ಥರಾದುದರಿಂದ ನೂಲುವದೇ ಬಹು ಪ್ರಾಮಾಣಿಕತನದ ಉದ್ಯೋಗವೆಂದು ಅವರು ಗ್ರಹಿಸಿದ್ದರು.

❖❖

೩ನೆಯ ಪ್ರಕರಣ

ಭಾರತೀಯರ ವಸ್ತ್ರಕಲಾನಿಪುಣತೆ

ನೂಲುವ ಮತ್ತು ನೇಯುವ ಕಲೆಗಳು ಉಳಿದ ದೇಶದವರಿಗೆ ಸ್ವಲ್ಪವೂ ಗೊತ್ತಿಲ್ಲದಿದ್ದಾಗ ಭರತಖಂಡದವರಿಗೆ ಅವು ಮನೆಮಾತಾಗಿಬಿಟ್ಟಿದ್ದವು. ಕ್ರೈಸ್ತನು ಹುಟ್ಟುವದಕ್ಕಿಂತ ಸಾವಿರಾರು ವರ್ಷಗಳ ಪೂರ್ವದಲ್ಲಿ ಭರತಖಂಡದ ನೂಲಿನ ಬಟೆಗಳು ಬಾಬಿಲೋನಕ್ಕೆ ಮಾರಾಟಕ್ಕಾಗಿ ಹೋಗುತ್ತಿದ್ದವೆಂದು ಇತಿಹಾಸದಿಂದ ತಿಳಿದುಬರುತ್ತದೆ. ಡಾ. ಸಾಯಿಸ್‌ನೆಂಬ ಸುಪ್ರಸಿದ್ದ ಭಾಷಾಶಾಸ್ತ್ರಜ್ಞನು 'ಸಿಂಧು' ಎಂಬ ಶಬ್ದಕ್ಕೆ ಹಳೆ ಬಾಬಿಲೋನಿಯಾ ಭಾಷೆಯಲ್ಲಿ ಮಲಮಲು ಎಂಬ ಅರ್ಥವಾಗುವದೆಂದು ಹೇಳಿದ್ದಾನೆ. ಇದರ ಮೇಲಿಂದ ಬಾಬಿಲೋನ ಜನರ ಹಾಗೂ ಸಿಂಧುನದೀತೀರದಲ್ಲಿ ವಾಸಮಾಡಿಕೊಂಡಿದ್ದ ಆರ್ಯರ ನಡುವೆ ಜಲಮಾರ್ಗದಿಂದ ವ್ಯಾಪಾರವು ನಡೆಯುತ್ತಿದ್ದಿತೆಂದು ಸಿದ್ದವಾಗುವುದಿಲ್ಲವೇ?

ನೂಲಿನ ಬಟ್ಟೆಗಳಿಗೆ ಗ್ರೀಕಭಾಷೆಯಲ್ಲಿ 'ಸಿಂಡನ್' ಎಂಬ ಹೆಸರಿರುವದರಿಂದ ಅದು ಭರತಖಂಡದ ಸಿಂಧಪ್ರಾಂತಕ್ಕೆ ಹೋಲುತ್ತದೆ. ಅದೇ ಗ್ರೀಕಭಾಷೆಯಲ್ಲಿ ಮಲಮಲಿನ ಬಟ್ಟೆಗೆ ಗ್ಯಾಂಜೆಟಿಕಾ ಎಂಬ ಹೆಸರಿರುವದರಿಂದ ಗಂಗಾತೀರದ ಪ್ರದೇಶದಿಂದ ಆ ವಸ್ತ್ರಗಳು ಅಲ್ಲಿಗೆ ಹೋಗುತ್ತಿದ್ದವೆಂದು ತಿಳಿಯುತ್ತದೆ.

ಕ್ಯಾಲಿಕೋ ಎಂಬ ಬಟ್ಟೆಯು ಕಲಕತ್ತೆಯಿಂದ ಹೋಗುತ್ತಿತ್ತಾದ್ದರಿಂದ ಅದಕ್ಕೆ ಆ ಹೆಸರು ಪ್ರಾಪ್ತವಾದಂತೆ ತೋರುತ್ತದೆ. ಆದುದರಿಂದ ಎಷ್ಟೋ ಶತಮಾನಗಳವರೆಗೆ ಜಲಮಾರ್ಗವಾಗಿ ಭಾರತೀಯರು ಪರದೇಶದವರೊಡನೆ ಬಟ್ಟೆಯ ವ್ಯಾಪಾರವನ್ನು ಮಾಡುತ್ತಿದ್ದರೆಂದು ಕಂಡುಬರುತ್ತದೆ.

ಹೆರೋಟೋಟಸ್ಸನ ಕಾಲದಲ್ಲಿಯೂ ಸಹ ಗ್ರೀಕರಿಗೆ ಅರಳೆಯೆಂದರೇನೆಂಬುದೇ ಗೊತ್ತಿದ್ದಂತೆ ತೋರುವದಿಲ್ಲ. ಯಾಕೆಂದರೆ ಸುಪ್ರಸಿದ್ದ ಇತಿಹಾಸಕರ್ತನು ಅರಳೆಗೆ ಕುರಿಯ ಉಣ್ಣೆಗಿಂತಲೂ ಶ್ರೇಷ್ಠವಾದ ಉಣ್ಣೆಯೆಂದು ಕರೆದಿರುವನು. ಅಲೆಕ್ಸಾಂಡರನ ಸೇನಾ ನಾಯಕರಲ್ಲೊಬ್ಬನಾದ ಎರಿಸ್ಟೋಬುಲಸ್‌ನೆಂಬವನೊಬ್ಬ ಗ್ರಂಥಕರ್ತನು ಹತ್ತಿಯ ಗಿಡಕ್ಕೆ ಉಣ್ಣೆಯ ಗಿಡವೆಂತಲೂ, ಉಣ್ಣೆಯೊಳಗಿಂದ ಬೀಜಗಳನ್ನು ತೆಗೆದು ಉಳಿದಿದ್ದನ್ನು ಉಣ್ಣೆಯಂತೆ ಹಿಂಜುತ್ತಿದ್ದರೆಂತಲೂ ಉಲ್ಲೇಖಿಸಿದ್ದಾನೆ. ಅಲೆಕ್ಸಾಂಡರನ ನೌಕಾಧಿಪತಿಯಾದ ನೀಯರ್ಕಸ್ ಎಂಬವನು ವರ್ಣಿಸಿರುವದೇನೆಂದರೆ "ಭರತಖಂಡದಲ್ಲಿ ಒಂದು ತರದ ಗಿಡಗಳು ಉಣ್ಣೆಯನ್ನು ಹೇರಳವಾಗಿ

ಒದಗಿಸಿ ಕೊಡುತ್ತವೆ. ಹಿಂದೂ ಜನರು ಇವುಗಳಿಂದ ಅತ್ಯಂತ ಶುಭ್ರವಾದ ಬಟ್ಟೆಗಳನ್ನು ಸಿದ್ಧಗೊಳಿಸುತ್ತಾರೆ."

ಅರಳೆಯು ಭರತಖಂಡದಲ್ಲಿ ಮನೆಮಾತಾಗಿದ್ದಿತು. ಆದರೆ ಪರಕೀಯರಿಗೆ ಮಾತ್ರ ಅದು ಕೌತುಕದ ಪದಾರ್ಥವಾಗಿದ್ದಿತು. ಭರತಖಂಡದ ನೂಲಿನ ಬಟ್ಟೆಯ ವ್ಯಾಪಾರವು ಭರದಿಂದ ಬೆಳೆದು ಪರದೇಶದವರ ಕಣ್ಣು ಕುಕ್ಕಿಸದೆ ಬಿಡಲಿಲ್ಲ. ಭರತಖಂಡದೊಳಗೆ ಪರಸ್ಪರ ಎಲ್ಲ ಪ್ರಾಂತಗಳ ನಡುವೆ ಬಟ್ಟೆಯ ವ್ಯಾಪಾರವು ನಡೆಯುತ್ತಿದ್ದಿತು. ಆಗಿನ ಕಾಲಕ್ಕೆ ದೇಶದಲ್ಲಿ ಮಹತ್ವದ ಮೂರು ವ್ಯಾಪಾರದ ಮಾರ್ಗಗಳಿದ್ದವು. ಅವು ಯಾವವೆಂದರೆ (೧) ಪೂರ್ವದಿಂದ ಪಶ್ಚಿಮಕ್ಕೆ ಬನಾರಸದಿಂದ ಪಶ್ಚಿಮಸಮುದ್ರತೀರದ ಬಂದರಗಳಿಗೂ ಬರೋಚ, ಸೋವಿರಾ, ರುರುಕ್ಕಾ ಪ್ರದೇಶಗಳಿಗೂ ವ್ಯಾಪಾರ ಮಾರ್ಗಗಳಿದ್ದವು. (೨) ಉತ್ತರದಿಂದ ಆಗ್ನೇಯಕ್ಕೆ ಗಾಂಧಾರ ಮತ್ತು ಮಗಧ ದೇಶಗಳಿಗೆ ಮಾರ್ಗವು ಹೋಗಿದ್ದಿತು. ಇದೇ ಮಾರ್ಗವನ್ನೇ ಮೆಗಾಸ್ಥನೀಸನು ಪಾಟಲಿಪುತ್ರ ಹಾಗೂ ಸಿಂಧಪ್ರಾಂತದ ನಡುವಿನ ರಾಜಮಾರ್ಗವೆಂದು ವರ್ಣಿಸಿರುವನು (೩) ಉತ್ತರದಿಂದ ನೈರುತ್ಯಕ್ಕೆ ಶ್ರಾಮಸ್ಥಿ ಮತ್ತು ಪ್ರತಿಸ್ಥಾನ ಇವುಗಳ ಮಧ್ಯದಲ್ಲಿ ೬ ನಿಲ್ದಾಣಗಳಿದ್ದವು. ಇವೇ ಮೊದಲಾದ ವ್ಯಾಪಾರದ ಮಾರ್ಗಗಳಿಂದ ನೂಲಿನ ಬಟ್ಟೆಗಳು ಸಮುದ್ರ ತೀರದ ಪಟ್ಟಣಗಳಿಗೆ ಹೇರಳವಾಗಿ ಹೋಗುತ್ತಿದ್ದವು.

ಉತ್ಕೃಷ್ಟ ಮಲಮಲು ಹಾಗೂ ಚೀಟಿನ ಬಟ್ಟೆಗಳು ಭರತಖಂಡದಲ್ಲಿ ವಿಫುಲವಾಗಿ ಹುಟ್ಟಿ ಜಲಮಾರ್ಗದಿಂದಲೂ ನೆಲಮಾರ್ಗದಿಂದಲೂ ಸಿರಿಯಾ, ಬಾಬಿಲೋನ, ಇರಾಣ, ಚೀನ, ಜಾವಾ, ಪೇಗು, ಮಲಕ್ಕಾ, ಗ್ರೀಸ, ರೋಮ ಮತ್ತು ಇಜಿಪ್ತ ದೇಶಗಳಿಗೆ ಹೊಗುತ್ತಿದ್ದವು. ಈ ಬಟ್ಟೆಗಳು ಸಮರ್ಕಂದದಿಂದ ಒಂಟೆಗಳ ಮಾರ್ಗದಿಂದಾಗಲಿ, ಹಿಂದಕುಶ ಪರ್ವತದ ಕಣಿವೆಯೊಳಗಿಂದಾಗಲಿ ಭೋಖರಾ ಮತ್ತು ಖೈಬರ ಘಟ್ಟದ ಮಾರ್ಗಗಳಿಂದಾಗಲಿ ಹೊರಬಿದ್ದು ತುರ್ಕಸ್ಥಾನ, ತಾರ್ತರಿಗಳೊಳಗಿಂದಹಾಯ್ದು ರಸಿಯಾ ದೇಶಕ್ಕೂ ಇಜಿಪ್ತಕ್ಕೂ ಮುಟ್ಟಿ ಅಲ್ಲಿಂದ ಭೂಮಧ್ಯ ಸಮುದ್ರದ ದಂಡೆಯ ಪ್ರದೇಶಗಳವರೆಗೆ ಪ್ರಸಾರವಾಗಿದ್ದವು.

ಆಗ ಚೀನ ಹಾಗೂ ಭರತಖಂಡಗಳ ನಡುವೆ ಜಲಮಾರ್ಗದ ವ್ಯಾಪಾರ ಚಟುವಟಿಕೆಯು ವಿಶೇಷವಾಗಿದ್ದಿತು. ಬ್ರಹ್ಮದೇಶದಿಂದ ಚೀನದವರೆಗಿನ ಮತ್ತು ಮಲಯಾ, ಆರ್ಕಿಪೆಲಾಗೋ, ದ್ವೀಪಗಳಲ್ಲಿಯೂ ಸಮುದ್ರತೀರದ ಪ್ರದೇಶಗಳಲ್ಲಿಯೂ ಭರತಖಂಡದ ವಸಾಹತುಗಳಿದ್ದವು. ಅಲ್ಲಲ್ಲಿ ವ್ಯಾಪಾರದ ಹಡಗಗಳು ನಿಲ್ಲುವುದಕ್ಕೆ ಅನುಕೂಲವಾದ ಸ್ಥಳಗಳನ್ನು ಗೊತ್ತುಪಡಿಸಿದ್ದರು. ಪೂರ್ವಕಾಲದ ಇತಿಹಾಸವನ್ನು ನೋಡಲಾಗಿ ಈ ಕೆಳಗೆ ಕಾಣಿಸಿದ ಬಂದರಗಳಿಂದ ನೂಲಿನ ಬಟ್ಟೆಗಳು ಪರದೇಶಗಳಿಗೆ ಹೋಗುತ್ತಿದ್ದವೆಂಬುದು ಗೊತ್ತಾಗುವುದು. (೧) ಸಿಂಧು ತೀರದ ಬಾರ್ಬೆರಿಕನ್ (೨) ಕಾಂಬೆ ಉಪಸಾಗರ (೩) ಉಜ್ಜಯಿನಿ (೪) ಪೈಠಣ ಮತ್ತು ದೇವಗಿರಿ (೫) ಸುರತ ಮತ್ತು ನವಸಾರಿ (೬) ಕನ್ಯಾಕುಮಾರಿ, ಮಛಲಿಪಟ್ಟಣ, ಕಾವೇರಿ ಪಟ್ಟಣ,

ಭರತಖಂಡದ ಸುಪ್ರಸಿದ್ಧವಾದ ಕಲಾಕೌಶಲ್ಯವೂ ನೇಗೆಯ ಬಟ್ಟೆಗಳೂ, ರಸಾಯನಶೋಧನಗಳೂ, ಎಷ್ಟೋ ವರ್ಷಗಳವರೆಗೆ ಪೂರ್ವ ಪಶ್ಚಿಮಗಳ ಪೇಟೆಗಳನ್ನೆಲ್ಲ ಗುತ್ತಿಗೆ ಹಿಡಿದುಬಿಟ್ಟಿದ್ದವು. ಭರತಖಂಡದ ಬಂದರಗಳೂ, ವ್ಯಾಪಾರದ ಪಡಿಮೂಲತೆಗಳೂ ಆಗಿನ ಕಾಲದಲ್ಲಿ ಗೊತ್ತಿದ್ದ ಜಗತ್ತಿನ ಎಲ್ಲ ಭಾಗಗಳಿಗೂ

ದಂಗುಬಡಿಸುವಂಥವುಗಳಾಗಿದ್ದವು. ಪರದೇಶದಿಂದ ಬಂದ ಪ್ರತಿಯೊಬ್ಬ ಪ್ರವಾಸಿಯು ಇಲ್ಲಿಯ ವ್ಯಾಪಾರದ ಸೊಬಗನ್ನು ಕಂಡು ಬೊಟ್ಟು ಕಚ್ಚಿ ಪ್ರಶಂಸಿಸದೆ ಎಂದಿಗೂ ಬಿಡಲಿಲ್ಲ.

ಪರದೇಶದ ಪ್ರವಾಸಿಗರ ಮೆಚ್ಚೋಲೆಗಳು

ನೂಲುವ ಮತ್ತು ನೇಯುವ ಉದ್ಯೋಗಗಳು ಪ್ರಾಚೀನ ಭರತಖಂಡದಲ್ಲಿ ಅತ್ಯಂತ ಊರ್ಜಿತಾವಸ್ಥೆಯ ಶಿಖರಕ್ಕೇರಿದ್ದುದರಿಂದ ಪರದೇಶಗಳಿಂದ ವ್ಯಾಪಾರಕ್ಕಾಗಲಿ ಅಥವಾ ಬೇರಾವ ಕಾರಣದಿಂದಾಗಲಿ ಇಲ್ಲಿಗೆ ಬಂದಂಥ ಪ್ರವಾಸಿಕರು ಆಶ್ಚರ್ಯಭರಿತರಾಗಿ ಈ ದೇಶದ ನೂಲಿನ ಬಟ್ಟೆಯ ಹುಟ್ಟುವಳಿಯ ಸಂಬಂಧದಿಂದ ಬಹುವಿಧವಾಗಿ ಪ್ರಶಂಸೆ ಮಾಡಿರುವರು. ಕ್ರಿ. ಶ. ೧೩೧-೧೩೫ರಲ್ಲಿ ಬಂದ ಅರಾಯನ್ ಎಂಬ ಪ್ರವಾಸಿಯು ಅದ್ವಿತೀಯ ಶುಭ್ರವಾದ ಭರತಖಂಡದ ಅರಳೆಯನ್ನು ಅರಬರು ಭಡೋಚದಿಂದ ಕೆಂಪು ಸಮುದ್ರದ ವರೆಗೂ ಅಡುಲಿಯವರೆಗೂ ಒಯ್ಯುತ್ತಿದ್ದರೆಂದು ವರ್ಣಿಸಿದ್ದಾನೆ. ಇದಲ್ಲದೆ ಮಛಲೀಪಟ್ಟಣದ ಬಣ್ಣದ ವಸ್ತ್ರಗಳ ವ್ಯಾಪಾರವು ಬಹು ಭರದಿಂದ ಸಾಗಿದ್ದಿತೆಂತಲೂ ಭರತಖಂಡದವರು ಕಸೂತಿಯ ಹಾಗೂ ಚಿಕ್ಕ ಚಿಕ್ಕ ಹೂವಿನ ೨ ಬಟ್ಟೆಗಳನ್ನು ಧರಿಸುತ್ತಿದ್ದರೆಂತಲೂ ವಿವರಿಸಿರುವನು. ರೋಮರಾಜ್ಯವೂ ರೋಮಪಟ್ಟಣವೂ ಭರತಖಂಡದ ನೂಲಿನ ಬಟ್ಟೆಗಳನ್ನು ವೆಗ್ಗಳವಾಗಿ ಉಪಯೋಗಿಸುತ್ತಿದ್ದವು. ಭರತಖಂಡ ಇಜಿಪ್ತಗಳ ನಡುವೆ ಜಲಮಾರ್ಗದ ವ್ಯಾಪಾರವು ಸುಮಾರು ಸಾವಿರ ವರ್ಷಗಳವರೆಗೆ ಅವ್ಯಾಹತವಾಗಿ ನಡೆದಿತ್ತು. ರೋಮದವರು ಭರತಖಂಡದ ಸಕಲಾತಿ, ರೇಶಿಮೆ, ಜರತಾತಿ ಮುಂತಾದ ಚಮಕಿಸುವ ಬಟ್ಟೆಗಳಿಗಾಗಿ ಅಗಣಿತದ್ರವ್ಯವನ್ನು ಸೂರೆಮಾಡುತ್ತಿದ್ದರು.

ರೋಮರಾಜ್ಯದಿಂದ ೧೦ಕೋಟಿ ಪವನಗಳು ಭರತಖಂಡದ ಬಟ್ಟೆಗಳನ್ನು ಕೊಳ್ಳುವದಕ್ಕಾಗಿ ವೆಚ್ಚವಾಗುತ್ತಿದ್ದವು. ಇದಕ್ಕಾಗಿ ಎಲ್ಡಿರ ಪ್ಲಿನಿ ರಾಜನು ಬಹಳೇ ಕೋಪಾರೂಢನಾಗಿದ್ದನೆಂದು ಇತಿಹಾಸಕರ್ತರು ಬರೆಯುತ್ತಾರೆ. ರೋಮರಾಜ್ಯದಲ್ಲಿ ರೇಶಿಮೆ, ಸಕಲಾತಿ, ಹಾಗೂ ನೂಲಿನ ಬಟ್ಟೆಗಳು ಅತ್ಯಂತ ತುಟ್ಟಿಯಿಂದ ಮಾರುತ್ತಿದ್ದವು. ಆರೋಲಿಯನ್ನನ್ ಕಾಲದಲ್ಲಿನ ರೇಶಿಮೆಯು ಬಂಗಾರದ ತೂಕಕ್ಕೆ ಸಮಾನವಾಗಿ ಮಾರಲ್ಪಡುತ್ತಿದ್ದಿತು. ಆದುದರಿಂದಲೇ ಟಿಬೇರಿಯಸ್ ಸೀಜರನು ರೇಶಿಮೆಯ ವಸ್ತ್ರಧಾರಣಪ್ರತಿಬಂಧಕವಾದ ಶಾಸನವನ್ನು ಪ್ರಚಾರದಲ್ಲಿ ತರಬೇಕಾಯಿತು.

ಜಗತ್ತಿನ ಎಲ್ಲೆಡೆಯಲ್ಲಿಯೂ ಭರತಖಂಡದ ನೂಲಿನ ಬಟ್ಟೆಗಳೇ ಮಾರಾಟವಾಗುತ್ತಿದ್ದವು. ಯಾಕೆಂದರೆ ಆ ಮಾದರಿಯ ಬಟ್ಟೆಗಳಲ್ಲಿಯೂ ಹುಟ್ಟುತ್ತಿರಲಿಲ್ಲ. ಗುಜರಾಥದ ಬಂದರಗಳಿಂದಲೂ ಕಾರೋಮಂಡಲದ ದಂಡೆಯಿಂದಲೂ ಪರದೇಶಗಳಿಗೆ ನೂಲಿನ ಬಟ್ಟೆಗಳು ಮಿತಿಮೀರಿ ಹೋಗುತ್ತಿದ್ದವು. ೨ನೆಯ ಖಲೀಫನಾದ ಉಮರನು ಭರತಖಂಡದ ನೂಲಿನ ಬಟ್ಟೆಯ ನಿಲುವಂಗಿಯನ್ನು ತೊಟ್ಟಿದ್ದನೆಂತಲೂ ಅದಕ್ಕೆ ೧೨ ತೂತುಗಳು ಬಿದ್ದು ಅದು ಹರಿದು ಚಿಂದಾಟಿಯಾಗಿದ್ದಿತೆಂತಲೂ ಉಲ್ಲೇಖವಿದೆ. ಸಾರಾಂಶ, ಎಲ್ಲಿ ಹೋದರೂ ಬಹುಜನ ಸಮಾಜವು ಭರತಖಂಡದ ನೂಲಿನ ಬಟ್ಟೆಯನ್ನೇ ಧರಿಸುತ್ತಿದ್ದಿತೆಂದು ಧಾರಾಳವಾಗಿ ಹೇಳಬಹುದು. ಇರಾಣ, ಮೆಸೊಫೊಟೆಮಿಯಾ, ಏಶಿಯಾಮೈನರ. ಜಾವಾ ಮುಂತಾದ ಪ್ರದೇಶಗಳಲ್ಲಿ ನಮ್ಮ ದೇಶದ ನೂಲಿನ ಬಟ್ಟೆಗಳೇ ಉಪಯೋಗಿಸಲ್ಪಡುತ್ತಿದ್ದವು.

ಬಂಗಾಲದ ಮಲಮಲ ಬಟ್ಟೆಗಳು ದೇಶದಲ್ಲಿ ಸರ್ವೋತ್ಕೃಷ್ಟವಾಗಿ ಮೆರೆಯುತ್ತಿದ್ದವು. ಅದರಂತೆ ನಯದಲ್ಲಿಯೂ ಚಿತ್ರದ ಸೊಬಗಿನಲ್ಲಿಯೂ, ಸೂಕ್ಷ್ಮವಾದ ಬಣ್ಣದ ಕೆಲಸದಲ್ಲಿಯೂ ಚಿತ್ರದ ಸೊಬಗಿನಲ್ಲಿಯೂ, ಸೂಕ್ಷ್ಮವಾದ ಬಣ್ಣದ ಕೆಲಸದಲ್ಲಿಯೂ ಭರತಖಂಡದ ಬಟ್ಟೆಗಳನ್ನು ಸರಿಗಟ್ಟುವ ಬಟ್ಟೆಗಳು ಜಗತ್ತಿನ ಬೇರಾವ ದೇಶದಲ್ಲಿಯೂ ಕಂಡುಬರುತ್ತಿದ್ದಿಲ್ಲ. ಮಾರ್ಕೋಪೋಲೋ ಎಂಬಾತನು ೧೩ನೆಯ ಶತಮಾನದಲ್ಲಿ ಭರತಖಂಡಕ್ಕೆ ಬಂದಾಗ ತೆಲಗು ದೇಶದ ಉತ್ಕೃಷ್ಟವಾದ ಮಲಮಲು ಹಾಗೂ ಇತರ ಅಮೌಲ್ಯವಾದ ಸರಕುಗಳ ಬಗ್ಗೆ ಹೀಗೆ ವರ್ಣಿಸಿರುವನು. "ಅವು ನಿಜವಾಗಿ ಜೇಡನ ಬಲೆಯೊಳಗಿನ ಯಾವ ರಾಜರಾಣಿಯರು ಸಂತೋಷಪಡಲಿಕ್ಕಿಲ್ಲ?"

ವಿಜಯಪಟ್ಟಣದ ಪಂಜಿಗಳನ್ನೂ ಮುಸುಲಾದ ಚೀಟುಗಳನ್ನೂ ನೆಲ್ಲೂರಿನ ಹೊದಿಕೆಗಳನ್ನು ಅರಣಿಯ ಮಲಮಲುಗಳನ್ನೂ ಪರದೇಶದ ಗಿರಾಕಿಗಳು ಬಹು ಉತ್ಸುಕತೆಯಿಂದ ಕೊಂಡುಕೊಳ್ಳುತ್ತಿದ್ದರು. ೧೫ನೆಯ ಶತಮಾನದ ಆದಿಯಲ್ಲಿ ಬಂದ ಬರಬೋಸಾ ಎಂಬ ಪ್ರವಾಸಿಯು ವರ್ಣಿಸಿರುವದೇನೆಂದರೆ ಕಾಂಬೆ ಪಟ್ಟಣವು ನಾನಾದೇಶಗಳ ವ್ಯಾಪಾರಿಗಳಿಂದಲೂ ಶಿಲ್ಪಿಗರಿಂದಲೂ ಕಲಾಕೌಶಲ್ಯಗಾರರಿಂದಲೂ ತುಂಬಿ ತುಳುಕುತ್ತಿದ್ದಿತು. ನೂಲಿನ ಬಟ್ಟೆಯ ವ್ಯಾಪಾರವು ಒಳ್ಳೆಯ ಏರಿಕೆಯ ಸ್ಥಿತಿಯಲ್ಲಿದ್ದಿತೆಂಬುದು ಆತನಿಗೆ ಗೊತ್ತಾಗಿದ್ದಿತು. ಬರಬೋಸನು ಬರುವದಕ್ಕಿಂತ ಮುಂಚೆ ನೂರೇ ವರ್ಷಗಳಲ್ಲಿ ಹತ್ತಿಯ ಗಿಡವು ದಕ್ಷಿಣ ಯುರೋಪದಲ್ಲಿ ಅದೇ ಮೊದಲು ಪರಿಚಿತವಾಗಿದ್ದಿತು. ಇಬ್ಬರು ಭರತಖಂಡದ ಪ್ರವಾಸಿಕರು ೧೧ನೆಯ ಶತಮಾನದ ಪೂರ್ವದಲ್ಲಿ ಜಪಾನದೊಳಗೆ ಮೊಟ್ಟಮೊದಲು ಹತ್ತಿಯ ಬೆಳೆಯನ್ನು ಪರಿಚಯಮಾಡಿಕೊಟ್ಟರೆಂದು ಆ ದೇಶದ ಸರಕಾರಿ ಕಾಗದ ಪತ್ರಗಳ ಮೇಲಿಂದ ಕಂಡುಬರುತ್ತಿದೆ.

ಯೂರೋಪದಲ್ಲಿ ಅರಳೆಯಿಂದ ಬಟ್ಟೆಯನ್ನುಂಟುಮಾಡುವ ಕ್ರಮವು ಮೊಟ್ಟಮೊದಲು ಇಟಾಲಿಯಲ್ಲಿ ಪ್ರಚಾರವಾಯಿತು. ಬರಬರುತ್ತ ವ್ಹೇನೀಸ್, ಮಿಲನ್, ಸ್ಯಾಕ್ಸನಿ, ಪ್ರುಶಿಯಾ ಮುಂತಾದ ಪಟ್ಟಣಗಳು ನೂಲಿನ ಬಟ್ಟೆಗಳನ್ನು ಸಿದ್ದಪಡಿಸಹತ್ತಿದವು. ಆದರೆ ಇವೆಲ್ಲ ಬಟ್ಟೆಗಳು ಭರತಖಂಡದ ಬಟ್ಟೆಗಳನ್ನೆಷ್ಟು ಮಾತ್ರವೂ ಹೋಲುತ್ತಿರಲಿಲ್ಲ. ಭರತಖಂಡದ ಬಟ್ಟೆಯ ವ್ಯಾಪಾರವೂ ಭರದಿಂದಲೇ ಸಾಗಿತು. ಅರಬರು ರೋಮನ್ನರು ಭರತಖಂಡದ ಬಟ್ಟೆಗಳನ್ನು ಪಶ್ಚಿಮದೇಶಗಳಲ್ಲೀಯೂ ದಕ್ಷಿಣ ಆಫ್ರಿಕಾದಲ್ಲಿಯೂ ಹರಡಿದರು.

೧೫೦೩-೦೮ರಲ್ಲಿ ಆಗಮಿಸಿದ 'ವದಥೇವಾ' ಎಂಬ ಪ್ರವಾಸಿಯು ಬಂಗಾಲದ ಸಂಪದಭಿವೃದ್ಧಿಯನ್ನು ಸೊಗಸಾಗಿ ವರ್ಣಿಸಿದ್ದಾನೆ. 'ಬಂಗಾಲದಿಂದ ಪ್ರತಿವರ್ಷ ರೇಶಿಮೆ ಮತ್ತು ನೂಲಿನ ಸರಕುಗಳನ್ನು ೫೦ ಹಡಗುಗಳು ಪರದೇಶಗಳಿಗೆ ಒಯ್ಯುತ್ತಿದ್ದವೆ'ಂದು ಆತನು ಉಲ್ಲೇಖಿಸಿದ್ದಾನೆ. ಮುಂದೆ ೬೦ ವರ್ಷಗಳನಂತರ ಬಂದ ಸೀಜರ ಪ್ರೇಡರಿಕ್‌ನೆಂಬವ್ಹೇನೀಸದ ವ್ಯಾಪಾರಿಯು ಸಾನಥೋಮ ಮತ್ತು ಪೇಗುಗಳ ನಡುವೆ ಬಟ್ಟೆಯ ವ್ಯಾಪಾರವು ಭರದಿಂದ ಸಾಗಿದ್ದಿತೆಂತಲು ಆ ಬಟ್ಟೆಗಳೂ ನಾನಾವಿಧವಾದ ಬಣ್ಣಗಳಿಂದ ಅಂದಚಂದವಾಗಿ ಕಾಣಿಸುತ್ತಿದ್ದವೆಂತಲೂ, ಹೆಚ್ಚೆಚ್ಚು ಒಗೆದಂತೆ ಬಣ್ಣಗಳೂ ಹೆಚ್ಚೆಚ್ಚು ಎದ್ದು ಕಾಣಿಸುತ್ತಿದ್ದವೆಂತಲೂ ವರ್ಣಿಸಿದ್ದಾನೆ.

೧೬ನೆಯ ಶತಮಾನದ ಸುಮಾರಿಗೆ ಬಂದ ಲಿನ್ಸಚೋಟನ್‌ನೆಂಬ ಪ್ರವಾಸಿಯೂ ನಾಗಪಟ್ಟಣ, ಮಛಲಿಪಟ್ಟಣ ಮತ್ತು ಸೆಂಟಥೋಮಗಳಲ್ಲಿ ನಾನಾಪ್ರಕಾರದ ಬಣ್ಣಗಳಿಂದ ಅಂದಚಂದವಾಗಿ

ಕೆಚ್ಚಿದ ನೂಲಿನ ಬಟ್ಟೆಗಳು ಅತ್ಯಂತ ಸೊಬಗು ನಯಗಳ ಮೂಲಕ ರೇಶಿಮಯ ಬಟ್ಟೆಗಳಿಗಿಂತಲೂ ತುಟ್ಟಿಯಾಗಿ ಮಾರುತ್ತಿದ್ದವೆಂದು ಅಭಿಪ್ರಾಯಪಟ್ಟಿದ್ದಾನೆ. ೧೭ನೆಯ ಶತಮಾನದಲ್ಲಿ ಬಂದ 'ಬರ್ನಿಯರ' ನೆಂಬ ಪ್ರವಾಸಿಯು ಭರತಖಂಡದ ನೂಲಿನ ಬಟ್ಟೆಯ ಅಸಾಧಾರಣ ನೇಗೆಯನ್ನೂ ನಯತ್ವವನ್ನೂ ನೋಡಿ ಬೆರಗಾಗಿ ಬೊಟ್ಟು ಕಚ್ಚಿದ್ದಾನೆ. ಬರ್ನಿಯರನ ಸಮಕಾಲೀನನಾದ ತಾವ್ಹರ್ನಿಯರನು ಬಂಗಾಲ ಮಾಳವಗಳ ಕ್ಯಾಲಿಕೋ ಬಟ್ಟೆಗಳ ಸಂಬಂಧವಾಗಿ ಆಶ್ಚರ್ಯದಿಂದ 'ಕ್ಯಾಲಿಕೋ ಬಟ್ಟೆಯನ್ನು ಕೈಯಲ್ಲಿ ತೆಗೆದುಕೊಂಡರೆ ಅದು ಕೈಯಲ್ಲಿದೆಯೋ ಇಲ್ಲವೋ ಎಂದೆನಿಸುವದು. ಅದರ ಎಳೆಗಳು ಕಣ್ಣಿಗೆ ಕಾಣದಷ್ಟು ಸೂಕ್ಷ್ಮವಾಗಿರುವವು.' ಎಂದು ಹೇಳಿರುವನು. ಈ ಮೇರೆಗೆ ಭಿನ್ನ ಭಿನ್ನ ಪ್ರವಾಸಿಗರ ಕೌತುಕಪ್ರಶಂಸೆಗಳನ್ನು ಬೇಕಾದಷ್ಟು ಬೆಳೆಯಿಸಬಹುದು.

ಭಾರತೀಯರ ಉತ್ಕರ್ಷತೆಯು

ಭರತಖಂಡಕ್ಕೆ ನೂಲಿನ ಬಟ್ಟೆಯ ವಿಷಯದಲ್ಲಿ ಜಗತ್ತಿನಿಂದಲೇ ಅಂಥ ಪ್ರಾಶಸ್ತ್ಯಯುಂಟಾಗಲು ಕಾರಣವೇನು? ಭರತಖಂಡವು ಹತ್ತಿಯನ್ನು ಬೆಳೆಯುವದರಲ್ಲಿ ಮಿಗಿಲಾದ ದೇಶವು. ಇಲ್ಲಿ ಹತ್ತಿಯು ಆಹಾರದಷ್ಟೇ ವಿಪುಲವಾಗಿರುವದೆಂದು ಒಬ್ಬ ಪ್ರವಾಸಿಯು ಬರೆದಿದ್ದಾನೆ. ಎಲ್ಲ ಜಾತಿಯ ಜನರು ತಮ್ಮ ತಮ್ಮ ಮನೆಗಳಲ್ಲಿ ವಂಶಪರಂಪರಾಗತವಾದ ನೂಲುವ ಕಲೆಯಲ್ಲಿ ಚೆನ್ನಾಗಿ ನುರಿತಿದ್ದರು. ಭೂಮಿಯ ಪಾಕೃತಿಕ ದಾನಗುಣವು ಈ ದೇಶದಲ್ಲಿ ಬಹು ಸಮೃದ್ಧವಾಗಿರುವುದು. ಬಟ್ಟೆಗೆ ಬಣ್ಣಕೊಡುವ ಹಾಗೂ ಅಚ್ಚು ಹಾಕುವ ಕೌಶಲ್ಯವು ಭಾರತೀಯರಲ್ಲಿ ವಿಶೇಷವಾಗಿತ್ತು. ಇವೆಲ್ಲ ಕಾರಣದಿಂದ ಭರತಖಂಡದ ಸಾಹಸಿಗರಾದ ವ್ಯಾಪಾರಿಗಳಿಗೆ ಜಗತ್ತಿನ ಪೇಟೆಗಳನ್ನೇ ಗುತ್ತಿಗೆ ಹಿಡಿಯುವದು ಬಹು ಸುಲಭವಾಯಿತು.

ಭಾರತದ ಕಲಾಕೌಶಲ್ಯಗಾರರಿಗೆ ಮುಸಲ್ಮಾನ ಬಾದಶಹರಿಂದ ಆಶ್ರಮವು ದೊರೆತಿದ್ದಿತು. ನೂಲುವ ಮತ್ತು ನೇಯುವ ಉತ್ಕೃಷ್ಟ ಕಲೆಗಳಿಗೆ ಹಿಂದೂ ರಾಜರಷ್ಟೇ ಮುಸಲ್ಮಾನ ಬಾದಶಹರು ಮನ್ನಣೆ ಮಾಡುತ್ತಿದ್ದರು. ಡಾಕಾದ ನವಾಬರು ದಿಲ್ಲಿ ಬಾದಶಹರೂ ಡಾಕಾದ ಮಲಮಲಿನ ವ್ಯಾಪಾರವನ್ನು ಭರದಿಂದ ಬೆಳೆಯಿಸಲು ಭರತ ಖಂಡದ ನೇಕಾರರಿಗೂ ನೂಲುಗಾರರಿಗೂ ಒಳ್ಳೇ ಸೌಕರ್ಯಗಳನ್ನುಂಟು ಮಾಡಿಕೊಡುತ್ತಿದ್ದರು. ಸೊಬಗುಸಡಗರಗಳ ಮೋಹದಿಂದ ನವಾಬ ಬಾದಶಹರು ಈ ಸ್ವದೇಶಿ ಕಸಬುಗಲಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿರು. ಮೊಗಲ ಬಾದಶಹರ ಕಾಲದಲ್ಲಿ ನೂಲಿನ ಬಟ್ಟೆಗಳು ಯಾವ ಪ್ರಮಾಣದಲ್ಲಿ ಸಿದ್ದವಾಗುತ್ತಿದ್ದವೆಂಬುದಕ್ಕೆ ಸಾಕಷ್ಟು ಆಧಾರಗಳು ದೊರೆಯದಿರುವದೊಂದು ವಿಷಾದದ ಸಂಗತಿಯೇ ಸರಿ.

ಅಕಬರ ಬಾದಶಹರ ಕಾಲದಲ್ಲಿ ಹಿಂದುಸ್ಥಾನದ ಎಲ್ಲ ಪೇಟೆಗಳನ್ನು ಸ್ವದೇಶಿ ಮಗ್ಗಗಳೇ ಆಕ್ರಮಿಸಿಬಿಟ್ಟಿದ್ದವು. ಮತ್ತು ಅರಬಸ್ಥಾನ, ಬ್ರಹ್ಮದೇಶ, ಪೂರ್ವದ ನಡುಗಡ್ಡೆಗಳು, ಆಫ್ರಿಕೆಯ ಪೂರ್ವದಂಡೆ, ಇವುಗಳಲ್ಲಿ ಭರತಖಂಡದ ನೂಲಿನ ಬಟ್ಟೆಗಳು ವಿಶೇಷವಾಗಿ ಮಾರಾಟವಾಗುತ್ತಿದ್ದವು. ೧೬ನೆಯ ಶತಮಾನದಲ್ಲಿ ಭರತಖಂಡಕ್ಕೆ ಆಗಮಿಸಿದ ಪಾಯರಾರ್ಡನೆಂಬ ಪ್ರವಾಸಿಯೂ ಕಾಂಬೆ, ಸುರತ, ಕಾಲಿಕತ್, ಗೋವಾ ನಗರಗಳಲ್ಲಿ ವ್ಯಾಪಾರವೂ ಸಂಪತ್ತೂ ಅಧಿಕವಾಗಿದ್ದವೆಂದು ಬರೆದಿದ್ದಾನೆ. ಕೇಪ್ ಆಫ್ ಗುಡ್ ಹೋಪ್‌ದಿಂದ ಹಿಡಿದು ಚೀನದ ವರೆಗೆ ಬಹುತರ ಎಲ್ಲ ಹೆಂಗಸರೂ ಗಂಡಸರೂ ಭರತಖಂಡದ ರೇಶಿಮೆಯ ಹಾಗೂ ನೂಲಿನ ಬಟ್ಟೆಗಳನ್ನು ಆಪಾದಮಸ್ತಕದವರೆಗೆ

ಧರಿಸುತ್ತಿದ್ದರೆಂದು ಆತನು ವಿವರಿಸಿದ್ದಾನೆ. ಇದಲ್ಲದೆ ನೂಲಿನಿಂದ ಶುಭ್ರ ಹಾಗೂ ಸೂಕ್ಷ್ಮವಾದ ಸರ್ವೋತ್ಕೃಷ್ಟ ವಸ್ತ್ರಗಳನ್ನು ನೇಯುತ್ತಿದ್ದರೆಂತಲು ವಿಶದಪಡಿಸಿದ್ದಾನೆ.

ವ್ಯಾಪಾರದ ಸ್ಥಿತ್ಯಂತರ

ಉತ್ತರ ಹಿಂದೂಸ್ಥಾನದ ಕೆಲವು ಭಾಗಗಳಲ್ಲಿ ಅಂದರೆ ಸಂಯುಕ್ತಪ್ರಾಂತ, ಬಿಹಾರ, ಪಂಜಾಬ ಮೊದಲಾದ ಪ್ರಾಂತಗಳಲ್ಲಿ ನೇಯುವ ಉದ್ಯೋಗವು ಹಿಂದುಗಳ ಕೈಬಿಟ್ಟು ಮುಸಲ್ಮಾನರ ಕೈಸೇರಿದಂತೆ ಕಾಣುತ್ತದೆ. ಯಾಕೆಂದರೆ ಈ ಪ್ರಾಂತಗಳಲ್ಲಿ ಮುಸಲ್ಮಾನ ನೇಕಾರರೇ ಹೆಚ್ಚಾಗಿರುವದು ಈಗಲೂ ಕಂಡುಬರುತ್ತದೆ. ಮುಸಲ್ಮಾನವರು ನೇಕಾರಿಕೆಯಲ್ಲಿಯೂ ಉಳಿದ ವ್ಯವಹಾರೋದ್ಯೋಗಗಳಲ್ಲಿಯೂ ಹೆಚ್ಚಾಗಿ ಸೇರಿಕೊಂಡರು. ಉತ್ತರದಲ್ಲಿ ಕಬೀರದಾಸನೂ ದಕ್ಷಿಣದಲ್ಲಿ ತಿರುವಲ್ಲುವರ ಎಂಬವನೂ ನೇಕಾರರಾಗಿ ಆ ಉದ್ಯೋಗದಲ್ಲಿಯೇ ಸುಖಶಾಂತಿಯನ್ನು ಪಡೆದಿದ್ದರು.

ಪಿಂಜಾರನ ಉದಯ

ಬಟ್ಟೆಯ ವ್ಯಾಪಾರವು ಭರದಿಂದ ನಡೆಯಹತ್ತಲು ಅದರ ಜೊತೆಗೆ ಹೊಸದೊಂದು ಉದ್ಯೋಗವು ಉದಯವಾಯಿತು. ಸಂಯುಕ್ತ ಪ್ರಾಂತದ ಹೊರತಾಗಿ ಉಳಿದ ಕಡೆಯಲೆಲ್ಲ ಬಹುಶಃ ಪಿಂಜಾರನು ಮುಸಲ್ಮಾನನೇ ಇರುವದರಿಂದ ಈ ಪಿಂಜಾರಿಕೆಯ ಉದ್ಯೋಗವೂ ಮುಸಲ್ಮಾನರ ಆಳಿಕೆಯಲ್ಲಿ ಉದಯವಾಯಿತೆಂಬುದು ಸ್ಪಷ್ಟವಾಗುವುದಿಲ್ಲವೇ **ಮೊದ ಮೊದಲು** ಗಾದಿಲೋಡುಗಳನ್ನು ಸಿದ್ಧಗೊಳಿಸುವದು ಪಿಂಜಾರನ ಉದ್ಯೋಗವಾಗಿದ್ದಿತು. ಬರಬರುತ್ತ ಆತನು ಹಂಜಿ ಮಾಡುವ ಕೆಲಸವನ್ನು ಕೈಗೊಂಡು ನೂಲುಗಾರರಿಗೆ ಸಹಾಯಕನಾದನು. ಕೆಲವು ಪ್ರಾಂತಗಳಲ್ಲಿ ಆತನು ನೂಲುಗಾರ ನೇಕಾರರೊಡನೆ ದಲಾಲಿಯನ್ನೇ ಮಾಡಲಾರಂಭಿಸಿದನೆನ್ನಲಿಕ್ಕೆ ಅನೇಕ ಆಧಾರಗಳು ದೊರೆಯುತ್ತವೆ.

ಪಿಂಜಾರನು ಅರಳಿಯನ್ನು ಸಂಗ್ರಹಿಸಿ ನೇಕಾರರಿಗೆ ನೆರವಾಗುತ್ತಿದ್ದನು. ಈ ಮೇರೆಗೆ ಆತನಿಗೆ ಪ್ರತಿನಿತ್ಯದ ಕೂಲಿಯ ಹೊರತು ನೂಲುಗಾರ ನೇಕಾರರಿಂದ ಅಲ್ಪಸ್ವಲ್ಪ ದಲಾಲಿಯೂ ದೊರೆಯುತ್ತಿದ್ದಿತು. ಪುರಾತನ ಭಾರತೀಯರು ಸಣ್ಣ ಸಣ್ಣ ಬಿಲ್ಲುಗಳಿಂದ ಅರಳೆಯನ್ನು ಹಿಂಜುತ್ತಿದ್ದಂತೆ ನಮಗೆ ಕಂಡುಬರುತ್ತದೆ. ಯಾಕೆಂದರೆ ಬಂಗಾಲ ಪ್ರಾಂತದಲ್ಲಿಯೂ ದಕ್ಷಿಣ ಹಿಂದೂಸ್ಥಾನದಲ್ಲಿಯೂ ಸಾವಿರಾರು ನೂಲುಗಾರರು ಈಗಲೂ ಸಹ ಅರಳೆಯನ್ನು ಹಿಂಜಲಿಕ್ಕೆ ಬಿಲ್ಲುಗಳನ್ನು ಉಪಯೋಗಿಸುತ್ತಿರುವರು.

ಯೂರೋಪದವರ ಹೋರಾಟ

೧೫ನೆಯ ಶತಮಾನದ ಆರಂಭದಲ್ಲಿ ಯುರೋಪದವರು ಹಿಂದುಸ್ಥಾನದಲ್ಲಿಯೂ ಪೂರ್ವದಿಕ್ಕಿನ ದೇಶಗಳಲ್ಲಿಯೂ ಎಲ್ಲ ಪೇಟೆಗಳನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಪರಸ್ಪರ ಹೋರಾಡಹತ್ತಿದರು. ಬಂಗಾರದ ಮೇಲಿನ ಆಶೆಯು ಅವರನ್ನು ಭರತಖಂಡಕ್ಕೂ ಪರ್ವದೇಶಗಳಿಗೂ ಬರಮಾಡಿತು. ಮೊದಲು ಪೋರ್ತುಗೀಜರೂ, ಅನಂತರ ಡಚ್ಚರು ಇಲ್ಲಿಗೆ ಬಂದರು. ಕಟ್ಟಕಡೆಗೆ ಫ್ರೆಂಚರೂ ಬ್ರಿಟಿಷರೂ ಆಗಮಿಸಿದರು. ಅವರ ಮೂಲ ಉದ್ದೇಶವೂ

ವ್ಯಾಪಾರ ಮಾಡವುದಾಗಿದ್ದಿತು. ನೇಕಾರರು ಮತ್ತು ಇತರ ಕಲಾಕೌಶಲ್ಯಗಾರರು ಇವರಿಗೆ ಪದಾರ್ಥಗಳನ್ನು ಸಿದ್ದಗೊಳಿಸಿಕೊಡಹತ್ತಿದರು.

ಈಸ್ಟ ಇಂಡಿಯಾ ಕಂಪನಿಯವರು ಮೊಟ್ಟಮೊದಲು ನೇಕಾರರ ಕೇಂದ್ರಗಳಾದ ಸೂರತ, ಹುಗಳಿ, ಮಛಲಿಪಟ್ಟಣ, ಕಾಲಿಕತ್ತಗಳಲ್ಲಿ ಧ್ವಜವೂರಿದರು. ಭರತಖಂಡದ ಕ್ಯಾಲಿಕೋ ಬಟ್ಟೆಗಳ ಸಂಬಂಧವಾಗಿ ಇಂಗ್ಲಂಡದ ಬೇಡಿಕೆಯು ಹೆಚ್ಚಾಯಿತು. ೧೯೯೫ರಲ್ಲಿ ಕಂಪನಿಯ ಡಾಯರೆಕ್ಟರರು ತಮ್ಮ ಗುಮಾಸ್ತರ ಸಂಗಡ ನಡೆಯಿಸಿರುವ ಪತ್ರವ್ಯವಹಾರಗಳ ಮೇಲಿಂದ ಇಂಗ್ಲಂಡದವರಿಗೆ ಉಳಿದ ಪದಾರ್ಥಗಳಿಗಿಂತಲು ಭರತಖಂಡದ ಕ್ಯಾಲಿಕೋಗಗಳು ಅತ್ಯಂತ ಆದರಣಿಯವಾಗಿದ್ದವೆಂದು ಕಂಡುಬರುತ್ತದೆ. ಒಂದು ಶತಮಾನದವರೆಗೆ ಈ ವ್ಯಾಪಾರವು ಅವ್ಯಾಹತವಾಗಿಯೇ ನಡೆಯಿತು. ಆದರೆ ವ್ಯಾಪಾರದ ಮೇಲಾಟವೂ ರಾಜಕೀಯ ಅಧಿಕಾರವೂ ಹಿಂದುಸ್ಥಾನದ ಅಪಾರವಾದ ಉದ್ಯೋಗವನ್ನು ಕಲಾಕೌಶಲ್ಯವನ್ನೂ ಮಣ್ಣುಗೂಡಿಸಿಬಿಟ್ಟವು.

ಮೊದಲು ಅಸಂಖ್ಯ ಜನಗಳು ಉದ್ಯೋಗ ಕಲಾಕೌಶಲ್ಯಗಳಲ್ಲಿ ತತ್ಪರರಾಗಿದ್ದರಿಂದ ಅವರಿಗೆ ಯಾತಕ್ಕೇನೂ ಕೊರತೆಯಿದ್ದಿದ್ದಿಲ್ಲ. ಆದರೆ ಅವೆಲ್ಲ ನಾಶವಾದಂದಿನಿಂದ ಅವರ ದಾರಿದ್ರ್ಯಕ್ಕೂ ಗೋಳಾಟಕ್ಕೂ ಪರಿಹಾರವೇ ಇಲ್ಲದಂತಾಗಿದೆ. ಸಾವಿರಾರು ವರ್ಷಗಳಿಂದ ಸರ್ವೋತ್ಕೃಷ್ಟವಾಗಿ ನುರಿಪಡೆಹೊಂದಿದ ನೇಗೆಯ ಚಾತುರ್ಯವೂ ಸಾಯುವ ಮುಂಚೆ ವಿಶೇಷವಾಗಿ ಚಟಪಡಿಸಿರಬಹುದಲ್ಲವೇ? ಡಾಕಾದ ಮಲಮಲು ಈ ವಿಷಯದಲ್ಲಿ ಒಳ್ಳೆ ದೃಷ್ಟಾಂತವಾಗಿದೆ. ಮಲಮಲಿನ ವ್ಯಾಪಾರದ ಇತಿಹಾಸವು ಭರತಖಂಡದ ಇತಿಹಾಸದಲ್ಲಿ ಬಹು ಮುಖ್ಯವಾದುದಾಗಿದೆ.

ಡಾಕಾ ಮಲಮಲು

ಬಂಗಾಲದ ಮಲಮಲಿಗೆ ಗ್ರೀಕರು 'ಗ್ಯಾಂಜೆಟಿಕಾ' ಎಂದು ಕರೆಯುತ್ತಿದ್ದರೆಂದು ಈ ಮೊದಲೇ ಹೇಳಿದೆಯಷ್ಟೆ. ರೋಮ ಪಟ್ಟಣಿಗರು ತಮ್ಮ ಊರ್ಜಿತಾವಸ್ಥೆಯ ಕಾಲದಲ್ಲಿ ಬಹು ಸೊಬಗುಳ್ಳ ಭರತಖಂಡದ ಮಲಮಲವನ್ನೇ ವಿಶೇಷವಾಗಿ ಧರಿಸುತ್ತಿದ್ದರು. ಪ್ಲಿನಿ ಎಂಬವನು ಬಂಗಾಲದ ಮಲಮಲವನ್ನು ಧರಿಸಿದರೆ ದೇಹವು ಲಕಲಕ ಹೊಳೆಯುವದೆಂದು ವರ್ಣಿಸಿದ್ದಾನೆ. ೯ನೆಯ ಶತಮಾನದಲ್ಲಿ ಬಂದ ಸುಲೈಮಾನ ಎಂಬ ಪ್ರವಾಸಿಯು ಡಾಕಾದ ಮಲಮಲವನ್ನು ನೋಡಿ ಬೆರಗಾಗಿ ವರ್ಣಿಸಿದ್ದೇನೆಂದರೆ "ಈ ಮಲಮಲಿನಷ್ಟು ಉತ್ಕೃಷ್ಟವಾದ ಹಾಗೂ ನಯವಾದ ಮಲಮಲು ಬೇರಾವ ಕಡೆಯಲ್ಲಿಯೂ ದೊರೆಯಲಾರದು. ಈ ಮಲಮಲಿನಿಂದ ಸಿದ್ದಗೊಳಿಸಿದ ಹೊದಿಕೆಯೂ ಕೈಬೆರಳಿನುಂಗುರದಲ್ಲಿ ಸುಲಭವಾಗಿ ಹಾಯ್ದು ಹೋಗಬಲ್ಲದು." ಪಾಯರಾರ್ಡನು ಬಂಗಾಲಕ್ಕೆ ಬಂದಾಗ ಈ ಪ್ರಕಾರ ಹೇಳಿದ್ದಾನೆ. "ಇಲ್ಲಿಯ ನೂಲಿನ ಬಟ್ಟೆಯ ನಯತ್ವವನ್ನು ಬಣ್ಣಿಸಲಸದಳವಲ್ಲ. ಅದನ್ನು ಮನುಷ್ಯನು ದೇಹದ ಮೇಲೆ ಧರಿಸಿಕೊಂಡರೆ ಮೈ ಮೇಲಿರುವದೋ ಇಲ್ಲವೋ ತಿಳಿಯುವದು ಅಸಾಧ್ಯವಾಗಿದೆ."

ರಾಲ್ಜೀಚ ಎಂಬವನು ಅಭಿಪ್ರಾಯಪಡುವದೇನೆಂದರೆ "ಭರತಖಂಡದಲ್ಲಿ ಸರ್ವೋತ್ಕೃಷ್ಟವಾದ ನೂಲಿನ ಬಟ್ಟೆಯು ಡಾಕಾದ ಬಳಿಯಲ್ಲಿರುವ ಸೋನಾರ ಗೋನ್ ಎಂಬಲ್ಲಿ ಹುಟ್ಟುತ್ತದೆ."

ನೂರಜಹಾನ ಮಹಾರಾಣಿಯು ಮಲಮಲನ್ನು ನೇಯುವ ಕಲೆಗೆ ಬಹಳೇ ಉತ್ತೇಜನಕೊಟ್ಟಳು. ಓಲಗದಲ್ಲಿ ರಾಜರಿಗೂ ಸರದಾರರಿಗೂ ಮಲಮಲಿನ ಬಟ್ಟೆಗಳು ಕಾಣಿಕೆಯಾಗಿ ಕೊಡಲ್ಪಡುತ್ತಿದ್ದವು. ತಾವ್ಹರ್ನಿಯರನೆಂಬ ಪ್ರವಾಸಿಯು ವರ್ಣಿಸಿರುವದೇನೆಂದರೆ "ಒಬ್ಬ ಪರ್ಶಿಯಾದ ರಾಯಭಾರಿಯೂ ಶಹಾಮೃಗದ ತತ್ತಿಯಷ್ಟು ಆಕಾರದ ಒಂದು ಟೆಂಗಿನ ಪರಟೆಯನ್ನು ಮುತ್ತು ಮಾಣಿಕಗಳಿಂದ ಹೆಣೆದು ತಮ್ಮ ಬಾದಶಹನಿಗೆ ಕಾಣಿಕೆಯಾಗಿ ಕೊಟ್ಟನು. ಆ ಪರಟೆಯನ್ನು ಬಿಚ್ಚಿನೋಡಲು ಅದರಲ್ಲಿ ೬೦ ಮೊಳ ವಿಶಾಲವಾದ ಮಲಮಲಿನ ರುಮಾಲವಿದ್ದಿತು." ಈಸ್ಟ ಇಂಡಿಯಾ ಕಂಪನಿಯವರು ಮಲಮಲಿನ ಮೇಲೆ ಅತ್ಯಂತ ಜೀವಪ್ರಾಣ ಮಾಡುತ್ತಿದ್ದರು. ಬರಬರುತ್ತ ಅಗ್ಗವಾದ ಕೀಳ್ತರದ ಪರದೇಶಿ ಮಲಮಲು ಹುಟ್ಟಿದ್ದರಿಂದ ಡಾಕಾ ಮಲಮಲಿನ ಉತ್ಪಾದನವು ಕಟ್ಟಾಯಿತು.

ಡಾಕಾ ಮಲಮಲಿನ ಉದ್ಯೋಗ

ನೂಲುವ ಹೆಣ್ಣುಮಕ್ಕಳು ಇಡೀ ಮುಂಜಾನೆ ನೂಲುವ ಕೆಲಸದಲ್ಲಿ ತೊಡಗಿದರೆ ಒಂದು ತಿಂಗಳಲ್ಲಿ ಸರ್ವೋತ್ಕೃಷ್ಟವಾದ ನೂರು ಅರ್ಧ ತೊರೆಯಷ್ಟು ಮಾತ್ರವೇ ಹೊರಡುತ್ತಿದ್ದಿತು. ನೂಲುವ ವೇಗವು ತಾಸಿಗೆ ೪೦-೫೦ ಯಾರ್ಡುಗಳಿಗಿಂತ ಹೆಚ್ಚಾಗಿದ್ದಿಲ್ಲ. ೧ ತೊಲೆ ನೂಲಿನ ಬೆಲೆಯು ೮ರೂ. ಆಗುತ್ತಿದ್ದಿತು. ಆದುದರಿಂದ ಸತತವಾಗಿ ನೂಲುವ ಸ್ತ್ರೀಯಳು ವರ್ಷಕ್ಕೆ ೨೦-೪೦ ರೂ. ಗಳ: ವರೆಗೆ ಸಂಪಾದಿಸುತ್ತಿದ್ದಳು. ಆ ನೂಲು ಪರದೇಶಿ ಯಂತ್ರಗಳ ನೂಲಿಗಿಂತ ಹೆಚ್ಚು ನಯವುಳ್ಳದ್ದೆಂದು ಕುಶಲಗಾರರು ಅಭಿಪ್ರಾಯಪಡುತ್ತಿದ್ದರು. ಡಾ. ಟೇಲರವರು ಹೇಳವುದೇನೆಂದರೆ "ಒಬ್ಬ ಸ್ವದೇಶಿ ನೂಲುಗಾರನು ನನ್ನ ಸಮಕ್ಷಮ ೧ ಲಡಿಯ ಉದ್ದಳತೆಯನ್ನು ಬಿಚ್ಚಿ ತೋರಿಸಿದನು. ಅದು ೧೫೦ ಮೈಲುಗಳಿಗಿಂತಲೂ ಹೆಚ್ಚು ಉದ್ದವಾಗಿದ್ದಿತು. ಹಿಂದುಗಡೆ ಅದರ ತೂಕಮಾಡಿ ನೋಡಲಾಗಿ ೧ ಪೌಂಡು ಆಯಿತು. ಇದರಿಂದ ಆ ನೂಲು ೫೦೦ ನಂಬರಿಗಿಂತಲೂ ಹೆಚ್ಚಿನದಾಗಿದ್ದಿತೆಂದು ಸ್ಪಷ್ಟವಾಗಿ ತಿಳಿಯುವದು."

ಡಾಕಾದ ನೇಕಾರರಾದರೂ ನೂಲುಗಾರರಂತೆ ಒಳ್ಳೆ ಕುಶಲಗಾರರಾಗಿದ್ದರು. ಅವರಿಗೆ ಕನಿಷ್ಠಪಕ್ಷಕ್ಕೆ ೧೨೬ ಪ್ರಕಾರದ ಭಿನ್ನ ಭಿನ್ನ ನೇಗೆಯ ಕಲೆಗಳು ಗೊತ್ತಿದ್ದವು. ಡಾಕಾದ ನೇಕಾರರು ಬಟ್ಟೆಗಳನ್ನು ಮುಟ್ಟಿನೋಡಿ ಅವುಗಳ ತೂಕವನ್ನೂ ನೇಗೆಯ ಗುಣಧರ್ಮವನ್ನೂ ಬಹು ಸಮರ್ಪಕವಾಗಿ ಹೇಳುತ್ತಿದ್ದರು. ೧ ಗುಂಜಿ ಸಹ ಕಡಿಮೆಯಾಗುತ್ತಿದ್ದಿಲ್ಲ. ಬಟ್ಟೆಗೆ ತೊಡೆಯಲಿಕ್ಕೆ ಅವರು ಹುರಿದ ಅಕ್ಕಿಯ ಗಂಜಿಯನ್ನುಪಯೋಗಿಸುತ್ತಿದ್ದರು. ನೇಕಾರರು ಚಾಟಿಗೆ ತಮ್ಮ ಮಗ್ಗಗಳನ್ನು ಹೂಡಿ ವಿಶೇಷವಾಗಿ ಮಳೆಗಾಲದಲ್ಲಿ ಅಂದರೆ ಆಷಾಢ, ಶ್ರಾವಣ, ಭಾದ್ರಪದ ಮಾಸಗಳಲ್ಲಿ ನೇಯುತ್ತಿದ್ದರು. ಮಳೆಗಾಲವೇ ಅವರಿಗೆ ನೇಯಲಿಕ್ಕೆ ಒಳ್ಳೇ ಅನುಕೂಲ ಸಮಯವಾಗಿದ್ದೀತು. ಇದಕ್ಕೆ ಕಾರಣವೇನೆಂದರೆ ಮಳೆಗಾಲದ ಆದ್ರತೆಯಿಂದ ಎಳೆಗಳು ಹರಿಯುತ್ತಿದ್ದಿಲ್ಲ. ಬೇಸಿಗೆಯ ಕಾಲದಲ್ಲಿ ನೇಕಾರರು ತಮ್ಮ ಮಗ್ಗಗಳ ಬುಡದಲ್ಲಿ ನೀರು ತುಂಬಿದ ಹರಿವಾಣಗಳನ್ನಿಟ್ಟುಕೊಳ್ಳುತ್ತಿದ್ದರು.

ಒಂದು ಮಲಮಲಿನ ಥಾನು ೨೦ ಯಾರ್ಡು ಉದ್ದ ೧ ಯಾರ್ಡು ಅಗಲವಾಗಿರುತ್ತಿದ್ದಿತು. 'ಮಲಮಲಖಾನ', 'ಸಿರಾಕಲಿ' ಎಂಬ ಮಲಮಲಿನ ಥಾನುಗಳನ್ನು ನೇಯುವದಕ್ಕೆ ೫-೬ ತಿಂಗಳುಗಳು ಬೇಕಾಗುತ್ತಿದ್ದವು. ಡಾಕಾ ಮಗ್ಗಗಳಲ್ಲುತ್ಪನ್ನವಾಗುವ ಮಲಮಲಿನಲ್ಲಿ 'ಜಾಮದಾನಿ' ಎಂಬುದು ಅತ್ಯಂತ ತುಟ್ಟಿಯಾಗಿದ್ದಿತು. ಮಲಮಲನ್ನು ಪರಸ್ಥಳಕ್ಕೆ ಕಳುಹಿಸಬೇಕಾದರೆ ಪೊಳ್ಳಾದ ಬಿದುರಿನ

ಒಳಬದಿಯಲ್ಲಿ ೨೦ ಯಾರ್ಡುಗಟ್ಲೆ ಮಲಮಲವನ್ನಿರಿಸುತ್ತಿದ್ದರು. 'ಮಲಮಲಖಾಸ' ಎಂಬ ವಸ್ತ್ರವನ್ನು ಕೊಳವಿಯಾಕಾರದ ತಗಡಿನಲ್ಲಿರಿಸಿ ಗಿಲಾಯಿ ಮಾಡಿ ದಿಲ್ಲಿಗೆ ಕಳಿಸುತ್ತಿದ್ದರು. ಮಲಮಲಿನ ೧ ಥಾನಿನ ಬೆಲೆಯು ೧೦೦–೪೦೦ ರೂ. ಗಳ ವರೆಗಿದ್ದಿತು. ಮಲಮಲಿನ ಬಟ್ಟೆಯು ಉತ್ಕೃಷ್ಟವಾದುದೂ, ಪಾರದರ್ಶಕವಾದುದೂ, ಸೊಬಗಿನದೂ ಇದ್ದುದರಿಂದ ಅದಕ್ಕೆ ಬಹುವಿಧದ ಅಲಂಕಾರಿಕ ಹೆಸರುಗಳು ಕೊಡಲ್ಪಟ್ಟಿವೆ.

ಉದಾ : ಶಬ್‌ನಮ್ (ಸಾಯಂಕಾಲದ ಮಂಜು), ಅಬ್ರವಾನ್ (ಹರಿಯುವ ಜಲ).

ಮಲಮಲಿನ ವಿಷಯವಾಗಿ ಬಹು ವಿನೋದಪರವಾದ ಕಥೆಗಳನ್ನು ಹೇಳುತ್ತಾರೆ. ಒಬ್ಬ ನೇಕಾರನು ಬಹು ಸೂಕ್ಷ್ಮವಾದ ಮಲಮಲನ್ನು ನಿಷ್ಕಾಳಜಿಯಿಂದ ನೆಲದ ಮೇಲೆ ಬಿಟ್ಟಿರಲು ಆತನ ಆಕಳು ಬಂದು ಅದು ಹುಲ್ಲೆಂದು ತಿಂದುಬಿಟ್ಟಿತಂತೆ. ಒಮ್ಮೆ ಔರಂಗಜೇಬ ಬಾದಶಾಹನು ಸೂಕ್ಷ್ಮವಾದ ಮಲಮಲಿನ ವಸ್ತ್ರವನ್ನುಟ್ಟುಕೊಂಡ ತನ್ನ ಮಗಳು ಇದುರಿಗೆ ಬಂದು ನಿಲ್ಲಲು ಆಕೆಯು ನಗ್ನವಾಗಿರುವಳೆಂದು ಭಾವಿಸಿ ಆಶ್ಚರ್ಯವನ್ನು ವ್ಯಕ್ತಪಡಿಸಿದನಂತೆ ಆಗ ಆತನ ಮಗಳು ತಾನು ೭ ಪದರಿನ ಮಲಮಲಿನ ವಸ್ತ್ರವನ್ನು ಧಾರಣಮಾಡಿಕೊಂಡಿರುವೆನೆಂದು ತಂದೆಗೆ ಸಿಟ್ಟುಮಾಡಿ ಹೇಳಿದಳಂತೆ.

❖❖

೪ನೆಯ ಪ್ರಕರಣ

ಕಂಪನಿಯ ಸರಕಾರದ ದುರಾಶೆಯೂ ಭಾರತೀಯ ಕೈಗಾರಿಕೆಯ ವಿನಾಶವೂ

ಇಂಗ್ಲೀಷರು ಹಿಂದುಸ್ಥಾನಕ್ಕೆ ಬರುವದಕ್ಕಿಂತ ಪೂರ್ವದಲ್ಲಿಯೂ ಅವರು ಬಂದನಂತರ ೧೦೦-೧೫೦ ವರ್ಷಗಳ ಪರ್ಯಂತರವೂ ಭರತಖಂಡವು ನೂಲಿನ ಬಟ್ಟೆಯ ವ್ಯವಹಾರದಲ್ಲಿ ಇಡೀ ಜಗತ್ತಿನ ಪೇಟೆಗಳನ್ನೆಲ್ಲ ಗುತ್ತಗೆ ಹಿಡಿದು ಬಿಟ್ಟಿದ್ದಿತು. ಆದರೆ ಆರ್ಥಿಕ ಪರಿಸ್ಥಿತಿಯ ವಿಪರ್ಯಾಸದಿಂದ ಸಾವಿರಾರು ವರ್ಷಗಳಿಂದ ನಡೆಯುತ್ತ ಬಂದ ನೂಲಿನ ಉದ್ಯೋಗವು ನಷ್ಟವಾಗಿ ಭರತಖಂಡವು ಪರದೇಶಿ ಬಟ್ಟೆಗಳನ್ನು ಧರಿಸುವ ಅತಿದೊಡ್ಡ ಗಿರಾಕಿಯಾಗಿಬಿಟ್ಟಿತು. ಪದಾರ್ಥೋತ್ಪಾದನ ಸ್ಥಿತಿಯು ನಾಶವಾಗಿ ಗಿರಾಕಿಯಾಗುವ ದುರವಸ್ಥೆಯು ಪ್ರಾಪ್ತವಾದುದಕ್ಕೆ ಕಾರಣವೇನೆಂಬುದನ್ನೇ ಇಲ್ಲಿ ನಾವು ವಿವರಸಬೇಕೆಂದಿದ್ದೇವೆ.

ಭರತಖಂಡದ ಅದ್ವಿತೀಯವಾದ ವ್ಯಾಪಾರದ ಬೆಳವಣಿಗೆಯು ಯೂರೋಪದ ರಾಷ್ಟ್ರದವರನ್ನು ಇಲ್ಲಿಗೆ ಬರಮಾಡಿತೆಂದು ಹಿಂದೆ ಹೇಳಿದೆಯಷ್ಟೆ. ಆಗಿನ ಕಾಲದಲ್ಲಿ ಏಶಿಯಾ ಮತ್ತು ಯೂರೋಪದ ರಾಷ್ಟ್ರಗಳಿಗಾಗಲಿ ಗ್ರೇಟ್ ಬ್ರಿಟನ್ನಕ್ಕಾಗಲಿ ಹಿಂದುಸ್ಥಾನದಲ್ಲಿ ಯಾವ ವ್ಯಾಪಾರದ ಸರಕುಗಳನ್ನು ತಂದಿಟ್ಟು ವ್ಯಾಪಾರ ಮಾಡುವ ಸಾಮರ್ಥ್ಯವಿದ್ದಿಲ್ಲ. ಹಿಂದುಸ್ಥಾನದ ಪೂರ್ವದಿಕ್ಕಿನ ನಡುಗಡ್ಡೆಗಳ ಮಸಾಲೆಯು ಪದಾರ್ಥಗಳೂ ಭರತಖಂಡದ ನೂಲಿನ ಸರಕುಗಳೂ ವೆಗ್ಗಳವಾದ ಲಾಭವನ್ನೊದಗಿಸಿಕೊಡುತ್ತಿದ್ದವು. ಆದುದರಿಂದ **ಪೋರ್ತುಗೀಜ, ಡಚ್ಚ, ಇಂಗ್ಲೀಷ್** ವ್ಯಾಪಾರಿಗಳು ವ್ಯಾಪಾರದ ಸ್ಪರ್ಧೆಯಿಂದ ಪರಸ್ಪರ ಹೋರಾಡಹತ್ತಿದರು. ಕೊನೆಗೆ ಬ್ರಿಟಿಷರು ಜಯಶಾಲಿಗಳಾಗಿ ಉಳಿದ ರಾಷ್ಟ್ರದವರನ್ನು ಹೊರಮಾಡಿ ಸಾರ್ವಭೌಮತ್ವವನ್ನು ಸಂಪಾದಿಸಿದರು. ಬ್ರಿಟಿಷರು ಹಿಂದುಸ್ಥಾನದಲ್ಲಿ ಸಾರ್ವಭೌಮತ್ವವನ್ನು ಪಡದದ್ದು **ಈಸ್ಟ ಇಂಡಿಯಾ ಕಂಪನಿ** ಯವರ ವಿಶ್ವಪ್ರಯತ್ನದಿಂದಲೇ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ.

೧೬೦೦ನೇ ಇಸ್ವಿಯಲ್ಲಿ ಎಲಿಝಾಬೆಥ ರಾಣಿಯ ಕಡೆಯಿಂದ ಸನದು ಪಡೆದುಕೊಂಡು ಈ ಕಂಪನಿಯು ಹೊರಹೊರಟಿತು. ಹಿಂದುಸ್ಥಾನದ ಆಯಕಟ್ಟಿನ ಸ್ಥಳಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಬೇಕಾದರೆ ಕಂಪನಿಯವರಿಗೆ ಸುಮಾರು ೪೦ ವರ್ಷಗಳು ಹಿಡಿದವು. ೧೬೧೦ರಲ್ಲಿ **ಮಛಲೀಪಟ್ಟಣ,** ೧೬೧೨ರಲ್ಲಿ **ಸೂರತ,** ೧೬೩೯ರಲ್ಲಿ **ಮದ್ರಾಸ,** ೧೬೪೦ರಲ್ಲಿ **ಗುಗಳಿ,** ಈ ಸ್ಥಳಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಹಿಂದುಸ್ಥಾನದ ನೂಲಿನ ಬಟ್ಟೆಗಳು ನೆಟ್ಟಗೆ ಈ

ವಸಾಹತುಗಳ ಮುಖಾಂತರವಾಗಿ ಇಂಗ್ಲಂಡಿಗೆ ಕಳುಹಿಸಲ್ಪಡುತ್ತಿದ್ದವು. ಈ ಮೊದಲು ಇಂಗ್ಲಂಡಿಗೆ ಹಿಂದುಸ್ಥಾನದ ನೂಲಿನ ಬಟ್ಟೆಗಳೂ ಕ್ಯಾಲಿಕೋಗಳೂ ಪರದೇಶಗಳ ಮಾರ್ಗವಾಗಿ ಬಹು ಸುತ್ತುವರಿದು ಹೋಗುತ್ತಿದ್ದವು. ಸರ್ವೋತ್ಕೃಷ್ಟವಾದ ನೂಲಿನ ಸರಕುಗಳು ಕಂಪನಿಯವರಿಂದ ಇಂಗ್ಲಂಡಿಗೆ ಕಳುಹಿಸಲ್ಪಡುತ್ತಿದ್ದುದರಿಂದ ಬೇಡಿಕೆಯು ಹೆಚ್ಚಾಗಿ ವ್ಯಾಪಾರವು ಭರದಿಂದ ಬೆಳೆಯಲಾರಂಭಿಸಿತು.

ಡಚ್ಚರು ಕಾರೋಮಂಡಲ ದಂಡೆಯಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿ ಸುರತದ ಮಾರ್ಗದಿಂದ ನೂಲಿನ ಬಟ್ಟೆಯ ವ್ಯಾಪಾರ ಮಾಡುತ್ತಿದ್ದರು. ಡಚ್ಚರು ೧೬೨೫ರಿಂದ ಹಿಂದುಸ್ಥಾನದ ನೂಲಿನ ಬಟ್ಟೆಗಳನ್ನು ತೆಗೆದುಕೊಂಡು ಹೋದದ್ದರ ವಿವರ : (ಸನಗಿನ ಗಂಟುಗಳು)

ವರ್ಷ	ಕಾರೋಮಂಡಲ	ಬಂಗಾಳ	ಗುಜರಾಥ	ಒಟ್ಟು
೧೬೨೫	೧೭೦೦		೮೦೦	೨೫೦೦
೧೬೪೧-೪೪ (ಪ್ರತಿವರ್ಷ)	೨೫೦೦		೧೦೦೦	೩೫೦೦
೧೬೫೭-೬೧ (ಪ್ರತಿವರ್ಷ)	೪೦೦೦	೫೦೦	೧೨೦೦	೫೭೦೦

ಸುರತದಿಂದ ಜಾವಾಕ್ಕೆ ಹೊರಟ ಒಂದು ಹಡಗದಲ್ಲಿ ೩೦ ಬೇರೆ ಬೇರೆ ಮಾದರಿಯ ಬಟ್ಟೆಯ ಸರಕುಗಳಿದ್ದವು. ಒಟ್ಟು ೧೫೦ ಪ್ರಕಾರದ ನೂಲಿನ ಸರಕುಗಳು ಬೇರೆ ಬೇರೆ ದೇಶಗಳಿಗೆ ಮಾರಾಟಕ್ಕೆ ಹೋಗುತ್ತಿದ್ದವೆಂದು ಫೋರಸ್ಟರನ ಇಂಗ್ಲೀಷ ಫ್ಯಾಕ್ಟರಿಜ್ ಎಂಬ ಗ್ರಂಥದಲ್ಲಿ ಹೇಳಿದೆ. ಇಂಗ್ಲಂಡದಲ್ಲಿ ಮೊದಮೊದಲು ಜನರಿಗೆ ಭರತಖಂಡಕ್ಕೆ ಬಂಗಾರವನ್ನು ಕಳಿಸಿಕೊಡಬೇಕೆಂದರೆ ಬಹು ದುಃಖವಾಗುತ್ತಿತ್ತು. ಕಂಪನಿಯವರು ಗುಜರಾಥ, ಕಾರೋಮಂಡಲ, ಬಂಗಾಲಗಳ ಪೇಟೆಗಳಲ್ಲಿ ಒಂದರ ಹಿಂದೊಂದು ಕೈವಶ ಮಾಡಿಕೊಂಡರು. ೧೬೧೪ರಲ್ಲಿ ೧೨,೫೦೦ ಥಾನುಗಳು, ೧೬೨೫ರಲ್ಲಿ ೧,೬೫,೦೦೦ ಥಾನುಗಳೂ ಪರಸ್ಥಳಗಳಿಗೊಯ್ಯಲ್ಪಟ್ಟವು. ೧೬೧೬-೧೮ರಲ್ಲಿ 'ರಾಯಲ್ ಆ್ಯನ್' ಎಂಬ ಹಡಗವು ೧೪೦೦೦ ಬಟ್ಟೆಯ ಥಾನುಗಳನ್ನು ತುಂಬಿಕೊಂಡು ಹೋಯಿತು. ಮುಂದೆ ೬ ವರ್ಷಗಳ ನಂತರ ಇದರ ೧೫ ಪಟ್ಟು ಬಟ್ಟೆಯು ಪುನಃ ಹೊರಹೊರಟಿತು.

೧೬೧೪ರಲ್ಲಿ ೫೦೦ ಪೌಂಡು ಬೆಲೆಬಾಳುವ ನೂಲು ಮಾತ್ರ ಕಳಿಸಲ್ಪಟ್ಟಿದ್ದಿತು. ಆದರೆ ಇಂಗ್ಲಂಡದಲ್ಲಿ ಭರತಖಂಡದ ನೂಲಿನ ಬೇಡಿಕೆಯೂ ಹೆಚ್ಚಾಯಿತು. ಬಟ್ಟೆಗಳು ಸಿಗದಿದ್ದರೆ ನೂಲಿನ ಸೀಳುಗಳನ್ನಾದರೂ ಕಳಿಸಬೇಕೆಂದು ಇಂಗ್ಲಂಡದವರು ಕಂಪನಿಯ ಸೇವಕರಿಗೆ ಒತ್ತಾಯಪಡಿಸಹತ್ತಿದರು. ೧೬೨೮ರಲ್ಲಿ ೫೨೮ಸನಗುಗಳು ಇಂಗ್ಲಂಡಿಗೆ ಹಡಗದಿಂದ ಒಯ್ಯಲ್ಪಟ್ಟವು. ಈ ಪ್ರಕಾರ ನೂಲನ್ನು ಹೊರಗೆ ಕಳಿಸಲುಪಕ್ರಮಿಸಲು ಹಿಂದುಸ್ಥಾನದದ ನೂಲಿನ ಕಿಮ್ಮತ್ತು ಹೆಚ್ಚು ತುಟ್ಟಿಯಾಯಿತು. ಅದರಿಂದ ಸುರತ ಮತ್ತು ಭಡೋಚಗಳಲ್ಲಿಯ ನೇಕಾರರು ನೂಲು ಹೊರಗೆ ಕೊಡುವದನ್ನು

ಸಂಪೂರ್ಣವಾಗಿ ನಿಲ್ಲಿಸಿದ ಹೊರತು ಬಟ್ಟೆಗಳನ್ನು ಮಾರಾಟಕ್ಕೆ ಕೊಡುವದಿಲ್ಲವೆಂದು ಹಟತೊಟ್ಟರು. ೧೬೭೭-೮೦ರ ವರೆಗೆ ಕ್ಯಾಲಿಕೋ ವಸ್ತ್ರಗಳನ್ನು ಇಂಗ್ಲಂಡಿನವರು ಹೆಚ್ಚೆಚ್ಚಾಗಿಯೆ ತರಿಸಿಕೊಳ್ಳುತ್ತಿದ್ದರು. ಕನಿಷ್ಠ ಪಕ್ಷಕ್ಕೆ ೫೦,೦೦೦ ಥಾನುಗಳಿಗಿಂತ ಕಡಮೆಯೇನೂ ಅಲ್ಲಿಗೆ ಹೋಗುತ್ತಿರಲಿಲ್ಲ. ಹಿಂದುಸ್ಥಾನದಲ್ಲಿ ಪ್ರತಿಯೊಂದು ಥಾನಿಗೆ ೭ ಶಿಲಿಂಗೂ ಕ್ರಯ ಬೀಳುತ್ತಿದ್ದಿತು. ಆದರೆ ಲಂಡನ್ನದಲ್ಲಿ ಅದಕ್ಕೆ ೨೦ ಶಿಲಿಂಗು ಕೊಡಬೇಕಾಗುತ್ತಿತ್ತು.

ಕಂಪನಿಯವರ ಲಾಭಕ್ಕೇನೂ ಕೊರತೆಯಿಲ್ಲದಂತಾಯಿತು. ಆದರೆ ಇಂಗ್ಲಂಡದವರು ಭರತಖಂಡದ ವ್ಯಾಪಾರದ ಏಳ್ಗೆಯ ಬಗ್ಗೆ ಅನೇಕ ತಕರಾರುಗಳನ್ನು ಮಾಡಲಾರಂಭಿಸಿದರು. ಹಾಲಂಡ, ಫ್ರಾನ್ಸ್, ದೇಶಗಳಿಗೆ ನಾರಿನ ಬಟ್ಟೆಗಳ ದೆಸೆಯಿಂದ ಪ್ರತಿವರ್ಷ ವೆಚ್ಚವಾಗಿ ಹೋಗುವ ೫ ಲಕ್ಷ ಪೌಂಡುಗಳನ್ನು ಸಹ ಭರತಖಂಡವೇ ನುಂಗಹತ್ತಿತು. ಮುಂದೆ ೩೦ ವರ್ಷಗಳ ವರೆಗೂ ವ್ಯಾಪಾರವೂ ಬಹು ಊರ್ಜಿತಾವಸ್ಥೆಯಲ್ಲಿಯೇ ಇದ್ದಿತು. ೧೬೫೧ರಲ್ಲಿ ಈಸ್ಟ ಇಂಡಿಯಾ ಕಂಪನಿಯವರು ಹೊರಡಿಸಿದ ವರದಿಯ ಮೇಲಿಂದ ಕ್ಯಾಲಿಕೋಗಳು ಅತ್ಯಂತ ಮಹತ್ವವಾದ ವ್ಯಾಪಾರದ ಸರಕುಗಳಾಗಿದ್ದವೆಂದು ತಿಳಿದುಬರುತ್ತದೆ.

ಲಾಭವೂ ಬೊಬ್ಬಾಟವೂ

ಭರತಖಂಡದಿಂದ ಸಿದ್ದವಾದ ಬಟ್ಟೆಗಳು ಬ್ರಿಟಿಷ್ ಗಿರಾಕಿಗಳ ಮಹತ್ವಾಕಾಂಕ್ಷೆಯಲ್ಲಿ ವ್ಯತ್ಯಾಸವನ್ನುಂಟುಮಾಡಿದವು. ಇಂಗ್ಲಂಡದಲ್ಲಿ ನಿರಂತರವಾದ ಬೇಡಿಕೆಯು ಹೆಚ್ಚಾದಂತೆ ಕಂಪನಿಯವರ ವ್ಯಾಪಾರವು ಊರ್ಜಿತಾವಸ್ಥೆಯ ಕೊನೆಯ ಶಿಖರಕ್ಕೇರಿತು. ಈ ವ್ಯಾಪಾರವು ಲಾಭದಾಯಕವೆಂದು ತಿಳಿದೊಡನೆಯೇ ಎಷ್ಟೋ ಸಣ್ಣಪುಟ್ಟ ಪ್ರತ್ಯೇಕವಾದ ಕಂಪನಿಗಳು ಇಲ್ಲಿಗೆ ಬಂದು ಹೇರಳವಾದ ಲಾಭವನ್ನು ಹೊಡೆಯಲಾರಂಭಿಸಿದವು. ಒಬ್ಬ ಇತಿಹಾಸಕರ್ತನು ಹೇಳಿರುವದೇನೆಂದರೆ "ಪುನರುದ್ಧಾರ" (Restoration)ಕಾಲಕ್ಕಿಂತ ಪೂರ್ವದಲ್ಲಿ ಥೇಮ್ಸ ನದಿಯನ್ನು ದಾಟಿ ಗಂಗಾನದಿಗೆ ಒಂದಾದರೂ ಹಡಗವೂ ಬಂದಿದ್ದಿಲ್ಲ. ಆದರೆ "ಪುನರುದ್ಧಾರ"ನಂತರ ೨೪ ವರ್ಷಗಳ ಅವಧಿಯಲ್ಲಿ ಪ್ರತಿವರ್ಷ ಭರತಖಂಡದ ವ್ಯಾಪಾರದ ದೊಡ್ಡ ದೊಡ್ಡ ಕೇಂದ್ರಗಳೊಂದಿಗೆ ೮೦೦೦ ಪೌಂಡಿನಿಂದ ಹಿಡಿದು ೩ ಲಕ್ಷ ಪೌಂಡುಗಳ ವರೆಗೆ ಇಂಗ್ಲಂಡದ ವ್ಯಾಪಾರವು ನಡೆಯಲಾರಂಭಿಸಿತು. ೧೯೭೬ರಲ್ಲಿ ಕಂಪನಿಯ ಪ್ರತಿಯೊಬ್ಬ ಮುಖ್ಯಾಧಿಕಾರಿಗೆ ತಾನು ಇಟ್ಟ ಠೇವಿನಷ್ಟೇ **'ಬೋನಸ್'** ಹಣವು ಪ್ರತಿವರ್ಷ ದೊರೆಯುತ್ತಿದ್ದಿತಲ್ಲದೆ ೧೦೦ಕ್ಕೆ ೫ರಂತೆ ಬಡ್ಡಿಯೂ ಪ್ರಾಪ್ರವಾಗುತ್ತಿತ್ತು.

ಇದನ್ನು ನೋಡಿ ಇಂಗ್ಲಂಡದ ಕುಹಕ ಬುದ್ಧಿಯವರಿಗೆ ಹೊಟ್ಟೆಯಲ್ಲಿ ಕಸಿವಿಸಿಯಾದಂತಾಗಿ ಅವರು ಅನೇಕ ಹೊಸ ಹೊಸ ಕಂಪನಿಗಳನ್ನುಂಟುಮಾಡಿಕೊಂಡು ಈಸ್ಟ ಇಂಡಿಯಾ ಕಂಪನಿಯೊಡನೆ ಸ್ಪರ್ಧೆ ಹೂಡಿ ಅದರ ಪ್ರತಿಷ್ಠೆಯನ್ನು ಬಗ್ಗು ಬಡಿಯಬೇಕೆಂದು ಬಹಳೇ ಹೆಣಗಾಡಿದರು. ವ್ಯಾಪಾರದ ದುರಾಶೆಯಿಂದ ಇಂಗ್ಲಂಡಕ್ಕೆ ಯಾವ ತರಹದ ಸ್ಥಿತಿಯು ಪ್ರಾಪ್ರವಾಗಿತ್ತೆಂಬುದನ್ನು ವಿವೇಚಿಸಲು ಇಲ್ಲಿ ಅವಕಾಶವಿಲ್ಲ. ಆದರೆ ೧೭ನೆಯ ಶತಮಾನದ ಕೊನೆಯಲ್ಲಿ ಇಂಗ್ಲಂಡದ ಎಲ್ಲ ವ್ಯಾಪಾರಿ ಕಂಪನಿಗಳು ಒಟ್ಟುಗೂಡಿದವು. ಈಸ್ಟ ಇಂಡಿಯಾ ಕಂಪನಿಯ ಕೈಕೆಳಗೇ ವ್ಯಾಪಾರದ ಸರ್ವಾಧಿಕಾರವು ಉಳಿಯಿತು. ಅದೇ ಕಾಲಕ್ಕೆ ಇಂಗ್ಲಂಡದಲ್ಲಿ ಭರತಖಂಡದ ನೂಲಿನ ಬಟ್ಟೆಗಳು ಅತ್ಯಂತ ಹೆಸರು ಪಡೆದಿದ್ದವು.

೧೬೭೭ರಲ್ಲಿ ೧,೬೦,೦೦೦ ಪೌಂಡು ಬೆಲೆ ಬಾಳುವ ಕ್ಯಾಲಿಕೋಗಳನ್ನು ಇಂಗ್ಲಂಡದವರು ಹಿಂದುಸ್ಥಾನದಿಂದ ತರಿಸಿಕೊಂಡಿದ್ದಾರೆ. ೩,೦೦,೦೦೦ ಪೌಂಡುಗಳನ್ನು ಭರತಖಂಡದ ಅಚ್ಚು ಹಾಕಿದ ಹಾಗೂ ಬಣ್ಣದ ಬಟ್ಟೆಗಳಿಗೂ, ಹಾಸಿಗೆ, ಹೊದಿಕೆ, ಗಾದಿ, ಗೌಸಣಿಕೆಗಳಿಗೂ ವೆಚ್ಚ ಮಾಡಿದ್ದಾರೆ. ೧೬೭೩–೭೮ರಲ್ಲಿ ೩೯,೦೩,೫೦೦ ಬಟ್ಟೆಯ ಥಾನುಗಳು ಇಂಗ್ಲಂಡಕ್ಕೆ ಇಲ್ಲಿಂದ ಹೋಗಿವೆ. ೧೬೮೦–೮೩ರಲ್ಲಿ ೮೩,೬೪,೦೦೦ ಥಾನುಗಳ ವ್ಯಾಪಾರವಾಯಿತು. ಸರಾಸರಿ ಪ್ರತಿವರ್ಷ ೨೦,೦೦೦ ಸಾವಿರ ಥಾನುಗಳಂತೂ ಬೇಕಾದ ಹಾಗೆ ಒಯ್ಯಲ್ಪಡುತ್ತಿದ್ದವು. ಪ್ರತಿಯೊಂದು ಕ್ಯಾಲಿಕೋ ಥಾನಿಗೆ ಇಂಗ್ಲಂಡಿನ ೩ ಶಿಲಿಂಗಿರ್ಗೆಪೇನಸಿನಂತೆ ಸುಂಕ ಬೀಳುತ್ತಿದ್ದಿತು.

ಭರತಖಂಡದ ಕ್ಯಾಲಿಕೋ ಬಟ್ಟೆಗಳ ಹೆಚ್ಚಳವನ್ನು ನೋಡಿ ಇಂಗ್ಲಂಡಿನ ಉಣ್ಣೆಬಟ್ಟೆಯ ಉತ್ಪಾದಕರು ಬಹಳೇ ಅಸೂಯಾಪರರಾಗಿ ಹಾಹಾಕಾರವನ್ನೆಬ್ಬಿಸಿದರು. ಈಸ್ಟ ಇಂಡಿಯಾದ ಕ್ಯಾಲಿಕೋ ಹಾಗೂ ರೇಶಿಮೆ ಬಟ್ಟೆಗಳ ಉಪಯೋಗವನ್ನು ಸಂಪೂರ್ಣವಾಗಿ ವಿರೋಧಿಸಬೇಕೆಂಬುದಾಗಿ 'ಹೌಸ್ ಆಫ್ ಕಾಮನ್ಸ' ದ ಕಡೆಗೆ ಅನೇಕ ಅರ್ಜಿಗಳು ಹೋದವು. ಆ ಮೇಲೆ ಭರತಖಂಡದ ನೂಲಿನ ಹಾಗೂ ರೇಶಿಮೆಯ ಬಟ್ಟೆಗಳ ಮೇಲೆ ಬಹು ಒತ್ತಾಯದ ಕರವನ್ನು ಕೂಡ್ರಿಸಿದರು. ೧೬೮೫ರಲ್ಲಿ ಭರತಖಂಡದಿಂದ ಕ್ಯಾಲಿಕೋ, ನಾರುಬಟ್ಟೆ, ರೇಶಿಮೆಯ ವಸ್ತ್ರ, ಮಿಶ್ರನೇಗೆಯ ಬಟ್ಟೆ ಮುಂತಾದವುಗಳು ಇಂಗ್ಲಂಡಿಗೆ ಮಾರಾಟಕ್ಕಾಗಿ ಹೋಗಿರಲು ಅವುಗಳ ಮೇಲೆ ೧೦೦ಕ್ಕೆ ೧೦ ರಂತೆ ಸುಂಕವನ್ನು ತೆಗೆದುಕೊಂಡರು. ೧೬೯೦ರಲ್ಲಿ ಈ ಕಂದಾಯವನ್ನು ಇಮ್ಮಡಿ ಮಾಡಿದರು. ಒವೆಲ್ಲ ನಿರ್ಬಂಧನೆಗಳಿದ್ದರೂ ಭರತಖಂಡದ ರೇಶಿಮೆ ಹಾಗೂ ಕ್ಯಾಲಿಕೋ ಬಟ್ಟೆಗಳು ಇಂಗ್ಲಂಡದವರ ಸರ್ವ ಸಾಮಾನ್ಯವಾದ ಉಡುಪುಗಳಾಗಿದ್ದವು. ಮಿ. ಲೆಕಿ ಎಂಬಾತನು ತನ್ನ 'ಇಂಗ್ಲಂಡದ ಇತಿಹಾಸ'ದಲ್ಲಿ ವರ್ಣಿಸಿರುವದೇನೆಂದರೆ "ಮೇರಿ ರಾಣಿಯೂ ತನ್ನ ಪತಿಯೊಡನೆ ಇಂಗ್ಲಂಡಿಗೆ ಬಂದಾಗ ಭರತಖಂಡದ ಅಂದಚಂದವಾದ ಬಣ್ಣದ ಕ್ಯಾಲಕೋ ವಸ್ತ್ರಗಳಿಗೆ ಮರುಳಾಗಿ ಅವುಗಳನ್ನು ಸಡಗರದಿಂದ ಧರಿಸಲಾರಂಭಿಸಿದಳು. ಎಲ್ಲ ವರ್ಗದ ಜನರೂ ಮಹಾರಾಣಿಯವರ ಅನುಕರಣವನ್ನೇ ಮಾಡಹತ್ತಿದರು. ಯಾರ್ಕ ಶಾಯರ, ವಿಲ್ಟಶಾಯರ, ನಾರವಿಚ್, ಸ್ಪಿಡಾಲ ಫೀಲ್ಡ್ಸ ಮೊದಲಾದ ಸ್ಥಳಗಳ ವ್ಯಾಪಾರಸ್ಥರೂ ಸಿರಿವಂತರೂ ಭರತಖಂಡದ ನೂಲಿನ ಸರಕುಗಳನ್ನು ಬಹು ಸಿಟ್ಟಿನಿಂದ ಜರಿಯಹತ್ತಿದರು."

ಮಿ. ಮೆಕಾಲೆಯವರು ತಮ್ಮ History of England ಎಂಬ ಗ್ರಂಥದಲ್ಲಿ ಅಲಂಕಾರಯುಕ್ತವಾಗಿ ಹೇಳಿರುವದೇನೆಂದರೆ "ಎಲ್ಲಿಯವರೆಗೆ ನಮ್ಮ ದೇಶದ ಹಳ್ಳಿಗಾಡ ಪ್ರದೇಶದವರೂ ಪಟ್ಟಣಿಗರೂ ನಿಲುವಂಗಿ, ಕಬಚ, ಹಾಸಿಗೆ, ಹೊದಿಕೆ ಮುಂತಾದವುಗಳನ್ನು ನಮ್ಮ ಕುರಿಯ ಉಣ್ಣೆಯಿಂದ ನಮ್ಮ ಮಗ್ಗಗಳಲ್ಲಿಯೇ ನೇಯ್ದು ಆ ಬಟ್ಟೆಗಳನ್ನುಪಯೋಗಿಸುತ್ತಿದ್ದರೋ ಅಲ್ಲಿಯವರೆಗೂ ಅವರ ಜೀವಿತವು ಸುಖಶಾಂತಿಗಳ ತೌರಮನೆಯಾಗಿದ್ದಿತು. ಎಲಿಝಾಬೆಥ್ ಮಹಾರಾಣಿಯವರ ರಾಜಗೃಹದ ಗೋಡೆಗಳನ್ನಲಂಕರಿಸುವ ಅಂದಚಂದವಾದ ಉಣ್ಣೆಯ ಪಡದೆಗಳೆಲ್ಲಿ ಅಡಗಿದವು? ನಮ್ಮ ಪೂರ್ವಜರಿಗೆ ಇಂಗ್ಲೀಷ ಕುರಿಗಳ ಉಣ್ಣೆಯಿಂದ ಇಂಗ್ಲೀಷ ಮಗ್ಗಗಳಲ್ಲಿ ಸಿದ್ಧವಾದ ಬಟ್ಟೆಗಳ ಹೊರತು ಬೇರೆ ವಸ್ತ್ರಗಳೇ ಗೊತ್ತಿರಲಿಲ್ಲವಲ್ಲ! ಆದರೆ ಈಗ ಸಭ್ಯಗೃಹಸ್ಥರೆನಿಸಿಕೊಳ್ಳುವವರು ಮುರ್ಶಿಧಾಬಾದದ ಕ್ಯಾಲಿಕೋ ಬಟ್ಟೆಯ ಅಂಗಿ ಕೋಟುಗಳನ್ನೂ ರೇಶಿಮೆಯ ಚೊಣ್ಣಗಳನ್ನೂ ಧರಿಸಿಕೊಂಡು ಮೆರೆದಾಡುವದು ನಾಚಿಗೆಗೇಡಿತನವಲ್ಲವೇ?"

೧೬೯೬ರಲ್ಲಿ The Naked Truth ಎಂಬ ಪ್ರಕಟನಾ ಪತ್ರಿಕೆಯಿಂದ ಕಂಡುಬರುವದೇನೆಂದರೆ 'ಸಡಗರವೆಂಬವಳು ನಿಜವಾಗಿಯೂ ಒಬ್ಬ ಮಾಟಗಾರ್ತಿಯು ಬಟ್ಟೆಯು ಹೆಚ್ಚುಚ್ಚು ತುಟ್ಟಿಯು ಅಪರೂಪವೂ ಆದ ಹಾಗೆಲ್ಲ ಸಡಗರಕ್ಕೆ ಮತ್ತಿಷ್ಟು ಕಳೆಯೇರುತ್ತಲಿದೆ! ೩೦ ಶಿಲಿಂಗಿಗೆ ೧ ಯಾರ್ಡಿನಂತೆ ಮಲಮಲ ಮಾರಾಟವಾಗುತ್ತಿದ್ದರೂ ವಿದೇಶಿಬಟ್ಟೆಗಳ ಮೇಲೆ ಬೇಕಾದಷ್ಟು ಸುಂಕವನ್ನು ಹೇರಿ ಅದನ್ನು ಪ್ರತಿಬಂಧಿಸಲೆತ್ನಿಸಿದರೂ ಅದರ ಬೇಡಿಕೆಯು ಇಂಗ್ಲಂಡದಲ್ಲಿ ಹೆಚ್ಚುತ್ತಲೇ ನಡೆದಿರುವದಲ್ಲ!' ಬ್ರಿಟಿಷ್ ಪಾರ್ಲಮೆಂಟಿನಲ್ಲಿ ಒಂದು ಗೊತ್ತುವಳಿಯು ಈ ಪ್ರಕಾರ ನಿರ್ಣಯವಾಗಿತ್ತು. ಆದಾವುದೆಂದರೆ 'ಸತ್ತಂಥವರ ಶವಗಳನ್ನು ಇಂಗ್ಲಂಡದ ಉಣ್ಣೆಯ ವಸ್ತ್ರಗಳಿಂದಲೇ ಶೃಂಗರಿಸಬೇಕು.'

ಡ್ಯಾನಿಯಲ್ ಡಿಪೋ ಎಂಬವರು ತಮ್ಮ ದೇಶದ ವ್ಯಾಪಾರದ ದುಃಸ್ಥಿತಿಯನ್ನು ಕುರಿತು ಬಹು ಸುಗಮವಾದ ಭಾಷೆಯಲ್ಲಿ ಬರೆದಿರುವದೇನೆಂದರೆ "ಜನಗಳೂ ತಮ್ಮ ಸಡಗರದ ಸಲುವಾಗಿ ಈಸ್ಟ ಇಂಡಿಯಾ ಕಂಪನಿಯವರ ಬಟ್ಟೆಗಳ ಕಡೆಗೆ ಮೇರೆದಪ್ಪಿ ಧಾವಿಸುತ್ತಲಿದ್ದಾರೆ. ಮೊದಲು ಚೀಟಿನ ಹಾಗೂ ಬಣ್ಣದ ಕ್ಯಾಲಿಕೋ ಬಟ್ಟೆಗಳನ್ನು ಹಾಸಲಿಕ್ಕೂ, ಗಾದಿಗಳಿಗೂ, ಉಪಯೋಗಿಸುತ್ತಿದ್ದರಷ್ಟೇ; ಆದರೆ ಈಗ ಆ ಬಟ್ಟೆಗಳು ನಮ್ಮ ಸ್ತ್ರೀಯರ ಸೊಬಗಿನ ಅಚ್ಛಾಧನಗಳಾಗಿವೆ. ಸಡಗರದ ತಿಳಿಗೇಡಿತನವು ತಾಳಗೆಟ್ಟು ಹೋಗಿದೆ. ಗುಣಗ್ರಾಹಿಗಳಾದ ಬ್ರಿಟಿಷ್ ಸ್ತ್ರೀಯರೂ ಕೂಡ ಹಿಂದುಸ್ಥಾನದ ಹಾಸಿಗೆಯ ಬಟ್ಟೆಗಳನ್ನು ಮೈಮೇಲೆ ಹೊದೆಯುತ್ತಿರುವರೆಂದ ಬಳಿಕ ಗೌರವವಿನ್ನೆಲ್ಲಿ ಉಳಿಯಿತು?"

"ಕೆಲವು ವರ್ಷಗಳ ಹಿಂದೆ ಇವೇ ಬಟ್ಟೆಗಳನ್ನು ಧರಿಸಬೇಕಾದರೆ ನಮ್ಮ ಅರಮನೆಯ ದಾದಿಗಳು ಅಸಂತೋಷದಿಂದ ಮೂಗುಮುರಿಯುತ್ತಿದ್ದರು. ಚೀಟಿನ ಅರಿವೆಯ ನೆಲದ ಮೇಲೆ ಒರಗುವದನ್ನು ಬಿಟ್ಟು ಸ್ತ್ರೀಯರ ದೇಹವನ್ನು ಆವರಿಸಿತು. ಕಾಲಕೆಳಗೆ ತುಳಿದಾಡುವಂತಹದು ಮೈಮೇಲೆ ಏರಿ ಕೊಡ್ರುವಂತಹದಾಯಿತು. ಮಹಾರಾಣಿಯರೂ ಸಹ ಚೀನ ಜಪಾನಗಳ ರೇಶಿಮೆ ಹಾಗೂ ಭರತಖಂಡದ ಕ್ಯಾಲಿಕೋ ವಸ್ತ್ರಗಳಿಂದ ಅಲಂಕೃತರಾಗಿ ಆನಂದಪಡುತ್ತಿರುವರಲ್ಲ! ಹಿಂದುಸ್ಥಾನದ ಕ್ಯಾಲಿಕೋಗಳು ನಮ್ಮ ಅಂತಃಪುರ, ಶಯನಗೃಹ, ಪಡದೆ, ಗಾದಿ, ಗೌಷಣಿಕೆ, ಹಾಸಿಗೆ, ಹೊದಿಕೆ, ಛತ್ತು ಮೊದಲಾದವುಗಳಿಗೆ ಅಲಂಕಾರವನ್ನುಂಟುಮಾಡುತ್ತಲಿರುವವು. ಆರರಲ್ಲಿ ಐದು ಪಾಲು ಬಟ್ಟೆಯು ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ಬಂದು ವೆಗ್ಗಳವಾದ ಲಾಭವನ್ನು ಪಡೆಯುತ್ತದೆ. ಆ ಬಟ್ಟೆಗಳು ಬಹು ಅಗ್ಗವಾಗಿರುವದರಿಂದ ಅವುಗಳನ್ನು ಕೊಳ್ಳುವ ಜನರು ಅಧಿಕವಾಗಿದ್ದಾರೆ."

ಅಗ್ಗದಲ್ಲಿಯೂ ತಾಳಿಕೆಯಲ್ಲಿಯೂ ಭರತಖಂಡದ ಬಟ್ಟೆಗಳು ಹೆಸರಾಗಿದ್ದುದರಿಂದ ಅವು ಬ್ರಿಟಿಷ್ ಪೇಟೆಗಳನ್ನೆಲ್ಲ ಗುತ್ತಿಗೆ ಹಿಡಿದುಬಿಟ್ಟವು. ಒಮ್ಮೆಯಂತೂ ಬ್ರಿಟಿಷ್ ಪೇಟೆಗಳನ್ನೆಲ್ಲ ಗುತ್ತಿಗೆ ಹಿಡಿದುಬಿಟ್ಟವು. ಒಮ್ಮೆಯಂತೂ ಬ್ರಿಟಿಷ್ ಕಲಾಕೌಶಲ್ಯಗಾರರು ಭರತಖಂಡದ ಬಟ್ಟೆಯ ಏಳ್ಗೆಯನ್ನು ನೋಡಿ ಸಂತಪ್ತರಾಗಿ ಕೋಲಚೆಸ್ಟರ ಎಂಬಲ್ಲಿ ದಂಗೆಯನ್ನೆಬ್ಬಿಸಿದರು. ಆ ದಂಗೆಯ ಕಾಲಕ್ಕೆ ಭರತಖಂಡದ ಕ್ಯಾಲಿಕೋಗಳನ್ನುಟ್ಟುಕೊಂಡಂಥ ಸ್ತ್ರೀಯರನ್ನು ಹಿಡಿದೆಳೆದು ಮಾನಭಂಗಗೊಳಿಸಿದರು. ಪಾರ್ಲಮೆಂಟನವರಾದರೂ ಭರತಖಂಡದ ನೂಲಿನ ಬಟ್ಟೆಯ ವಿರುದ್ಧವಾಗಿ ಹಾವಳಿಯನ್ನೆಬ್ಬಿಸಿದ ದೊಂಬೆಗಾರನ ಬಗ್ಗೆ ಸಂಪೂರ್ಣವಾದ ಸಹಾನುಭೂತಿಯನ್ನು ವ್ಯಕ್ತಪಡಿಸಿ ೧೭೦೦ರಲ್ಲಿ

ಭರತಖಂಡದ ಬಟ್ಟೆಗಳನ್ನು ಗ್ರೇಟ್ ಬ್ರಿಟನ್ನದಲ್ಲಿ ಯಾರೂ ಉಪಯೋಗಿಸಕೂಡದೆಂದು ಪ್ರಬಲವಾದ ಕಟ್ಟಳೆಯನ್ನು ಮಾಡಿದರು.

ಕಟ್ಟಳೆಯ ಚತುರೋಪಾಯ

೧೭೦೦ನೆಯ ಇಸ್ವಿಯಲ್ಲಿ ೩ನೆಯ ಉಯಿಲಿಯಮ್‌ನ ಕಾಲಕ್ಕೆ ಭರತಖಂಡದಿಂದ ಅಚ್ಚು ಹಾಕಿದ ಕ್ಯಾಲಿಕೋ ಬಟ್ಟೆಗಳನ್ನು ಇಂಗ್ಲಂಡದವರು ತರಿಸಕೂಡದೆಂದು ಉಗ್ರವಾದ ಶಾಸನವು ಪ್ರಚಾರದಲ್ಲಿ ಬಂದಿತು. ಆದರೆ ಭರತಖಂಡದಿಂದ ಶುಭ್ರವಾದ ಕ್ಯಾಲಿಕೋಗಳನ್ನು ತರಿಸಿ, ಇಂಗ್ಲಂಡದಲ್ಲಿ ಅವುಗಳಿಗೆ ಅಚ್ಚು ಹಾಕುವ ಕ್ರಮವು ಪ್ರಾರಂಭವಾಯಿತು. ಇದೂ ಸಹ ೧೭೨೧ರಲ್ಲಿ ೧ನೆಯ ಜಾರ್ಜನ ಕಾಲಕ್ಕೆ ವಿರೋಧಿಸಲ್ಪಟ್ಟಿತು. ಮುಂದೆ ೧೬ ವರ್ಷಗಳಲ್ಲಿ ಅಚ್ಚುಹಾಕಿದ ನೂಲಿನ ಬಟ್ಟೆಗಳೂ, ಮಿಶ್ರನೇಗೆಯ ಬಟ್ಟೆಗಳೂ, ಪ್ರತಿಬಂಧಿಸಲ್ಪಟ್ಟವು. ಆದಾಗ್ಯೂ ಸ್ತ್ರೀಯರ ಸಡಗರದ ಬಗ್ಗೆ ಇರುವ ಮೋಹಾಂಧತೆಯ ಮೂಲಕ ಕ್ಯಾಲಿಕೋ ಬಟ್ಟೆಗಳ ವ್ಯಾಪಾರವು ಅವಿಚ್ಛಿನ್ನವಾಗಿಯೇ ನಡೆಯಿತು. ೧೭೪೪ರಲ್ಲಿ ೩ನೆಯ ಜಾರ್ಜನ ಕಾಲಕ್ಕೆ ಕೇವಲ ಇಂಗ್ಲಂಡಿನ ಹಳ್ಳಿಗಾನ ಪ್ರದೇಶಗಳಿಂದ ಬಂದ ಬಟ್ಟೆಗಳನ್ನೇ ವ್ಯಾಪಾರ ಮಾಡಬೇಕೆಂದು ಪಾರ್ಲಿಮೆಂಟಿನಲ್ಲಿ ಪ್ರಬಲವಾದ ಶಾಸನವು ಏರ್ಪಟ್ಟಿತು. ಅರಳೆ ನೂಲುಗಳ ಹೊರತಾಗಿ ಭರತಖಂಡದ ನೂಲಿನ ಸರಕುಗಳಿಗೆ ದಾಳಿ ಬಂದಿತು.

ಈ ಪ್ರತಿಬಂಧಕವಾದ ಶಾಸನಗಳ ಹಾಗೂ ಕಠೋರತರವಾದ ದಂಡಗಳ ಉದ್ಧೇಶವೇನಿರಬಹುದೆಂಬುದು ಸ್ಪಷ್ಟವಾಗಿ ಕಾಣಿಸುತ್ತದೆ. ಅವೆಲ್ಲವುಗಳ ಉದ್ಧೇಶವು ಭರತಖಂಡದ ವ್ಯಾಪಾರವನ್ನು ಹಿಚುಕಿಹಾಕಿ ಬ್ರಿಟಿಷರು ತಮ್ಮ ಮೂಗು ಮೇಲು ಮಾಡಿಕೊಂಡು ಮೆರೆದಾಡಬೇಕೆಂಬುದಾಗಿದ್ದಿತು. ಎಷ್ಟೇ ಮಾಡಿದರೂ ಮಲಮಲು, ಕ್ಯಾಲಿಕೋ ಬಟ್ಟೆಗಳು ಉಗ್ರತರವಾದ ಸುಂಕವನ್ನು ಹೇರಿದರೂ ಕೂಡ ಸ್ವಲ್ಪ ಮಾತ್ರವೂ ಕುಗ್ಗದೆ ಮಾರಾಟವಾಗುತ್ತಿದ್ದವೆಂಬುದು ನಮಗೆ ಮುಂದೆ ತಿಳಿಯುವದು.

೧೭ನೆಯ ಶತಮಾನದ ಪರಿಸ್ಥಿತಿ

ಸುಂಕದ ಸಂಬಂಧವಾಗಿ ವಿವೇಚಿಸುವದಕ್ಕಿಂತ ಪೂರ್ವದಲ್ಲಿ ೧೭ನೆಯ ಶತಮಾನದ ಬ್ರಿಟಿಷ್ ವ್ಯಾಪಾರ ಹಾಗೂ ಶಾಸನ ಪದ್ಧತಿಗಳನ್ನು ಅರಿತುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಆ ಶತಮಾನದಲ್ಲಿ ಕ್ಯಾಲಿಕೋ ಬಟ್ಟೆಗಳ ವ್ಯಾಪಾರವು ಕೆಳಗೆ ಕಾಣಿಸಿದಂತೆ ನಡೆಯುತ್ತಿದ್ದಿತು.

ವರ್ಷ	ಕ್ಯಾಲಿಕೋ ಥಾನುಗಳು
೧೬೯೯	೫, ೮೩, ೦೩೪
೧೭೦೦	೯, ೫೧, ೧೦೯
೧೭೦೧	೮, ೨೬, ೧೦೧

ಈ ವ್ಯಾಪಾರದಿಂದ ಈಸ್ಟ ಇಂಡಿಯಾ ಕಂಪನಿಯವರಿಗೆ ಹೇರಳವಾದ ಲಾಭವುಂಟಾಯಿತು. ಅವರಿಗೆ ೪,೪೨,೩೮೦ ಪೌಂಡು ಬೆಲೆ ಬಳುವ ಬಂಗಾರದ ಗಟ್ಟಿಯೂ ೯೨,೨೨೪ ಪೌಂಡು ಬಟ್ಟೆಗಳ ಬೆಲೆಯೂ, ೭,೫೮,೦೪೨ ಪೌಂಡು ನೂಲಿನ ಕಿಮ್ಮತ್ತೂ ದೊರೆದವು. ಬಂಗಾಲ, ಮದ್ರಾಸ, ಸುರತ ಗಳಿಂದ ಕಂಪನಿಯವರು ಎಷ್ಟೆಷ್ಟು ಕಿಮ್ಮತ್ತಿನ ಎಷ್ಟೆಷ್ಟು ಥಾನುಗಳನ್ನು ಮಾರಿದರೆಂಬುದನ್ನು ಕೆಳಗೆ ತೋರಿಸಿದೆ.

ಪ್ರಾಂತಗಳು	ಥಾನುಗಳು	ಮಾರಾಟದ ಬೆಲೆಯು
ಬಂಗಾಲ	೧೩, ೩೮೦, ೩೪೪	೨೩, ೮೧೧೮೭೦೨ ಪೌ
ಮದ್ರಾಸ	೨. ೮೮೪.೧೦೫	೬೯೮೬೯೫೫ ಪೌ
ಸುರತ	೧, ೦೯೦, ೫೨೫	೮೨೦೯೯೧ ಪೌ

ವ್ಯಾಪಾರವಂತೂ ಒಳ್ಳೆ ಭರದಿಂದ ಸಾಗಿದ್ದಿತು. ಆದರೆ ವಸಾಹತುಗಳನ್ನು ಸ್ಥಾಪಿಸಬೇಕೆಂಬ ಹಾಗೂ ತಮ್ಮ ವರ್ಚಸ್ಸನ್ನು ಬೆಳೆಯಿಸಬೇಕೆಂಬ ಅಭಿಲಾಷೆಯ ಕಂಪನಿಯಲ್ಲಿ ಮತ್ತಿಷ್ಟು ಬೆಳೆಯಿತು. ೧೭೪೫ರ ವರೆಗೆ ಕಂಪನಿಯವರು ಸಣ್ಣಪುಟ್ಟ ವಸಾಹತುಗಳನ್ನು ತಮ್ಮ ಸ್ವಾಧೀನಪಡಿಸಿಕೊಂಡರು. ೧೬೯೦ರಲ್ಲಿ ಮುಂಬಯಿ ಇಲಾಖೆಯ ಗವ್ಹರ್ನರರಾಗಿದ್ದ ಮಿ. ಚೈಲ್ಡರೆಂಬವರು ವಸಾಹತುಗಳ ಅವಶ್ಯತಕೆಯು ವ್ಯಾಪಾರಕ್ಕಾಗಿಯೇ ಇದೆ ಎಂಬುದನ್ನು ಸ್ಪಷ್ಟವಾಗಿ ಆಡಿತೋರಿಸಿದ್ದಾರೆ.

ಕಂಪನಿಯವರ ಕಾರ್ಯಾಲಯಗಳಲ್ಲಿ ಕೆಲಸ ಮಾಡುವವರ ಹೆಸರುಗಳನ್ನು ನೋಡಿದರೆ ಅವರ ಉದ್ದೇಶವೇನಿದ್ದಿತೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ (೧) ಆನರೇಬಲ್ ಎಜಂಟ ಮತ್ತು ಗವ್ಹರ್ನರ ಎಂಬಾತನು ಕೌನ್ಸಿಲಿನ ಪ್ರಥಮ ಸದಸ್ಯನು. ಈತನು ವರ್ಷಕ್ಕೆ ತೀರ ಸ್ವಲ್ಪ ಸಂಬಳವನ್ನು ಅಂದರೆ ೩೦೦ ಪೌಂಡುಗಳನ್ನು ತೆಗೆದುಕೊಳ್ಳುತ್ತಿದ್ದನು. (೨) ಜಮಾಖರ್ಚು ಬರೆಯುವವನು (೩) ವಖಾರದ ಮುಖ್ಯಸ್ಥನು (೪) ಗಿರಾಕಿಗಳು, ಈ ಎಲ್ಲಾ ಕೌನ್ಸಿಲ್ ಸಭಾಸದರಿಗೂ ಕೂಡಿ ಪ್ರತಿಷ್ಠಿತ ವ್ಯಾಪಾರಿಗಳು ಎಂಬ ಸಂಸ್ಥೆಯಿತ್ತು. ಕಂಪನಿಯ ಕೈಕೆಳಗೆ ಕೆಲಸ ಮಾಡುತ್ತಿರುವಂಥ ಸಣ್ಣಪುಟ್ಟ ಸೇವಕರಿಗೆ ಕಾರಕೂನರು, ಉಮೇದವಾರರು ಎಂಬ ನಾಮಾಂಕಿತಗಳಿದ್ದವು. ಇವೆಲ್ಲ ವ್ಯಾಪಾರದ ಸಂಬಂಧದ ಹೆಸರುಗಳೇ ಆಗಿವೆ. ಕೇವಲ ಕಂಪನಿಯವಷ್ಟೇ ವ್ಯಾಪಾರಮಾಡುತ್ತಿದ್ದಿತೆಂತಲ್ಲ. ಆದರೆ ಪ್ರತಿಯೊಬ್ಬ ಕಂಪನಿಯ ಸೇವಕನೂ ಕೂಡ ಕಂಪನಿಯ ಹೆಸರಿನಿಂದ ಪದಾರ್ಥಗಳನ್ನು ಎತ್ತಿ ಹಾಕಿ ಅವುಗಳ ಮಾರಾಟದಿಂದ ಲಾಭಪಡೆಯುತ್ತಿದ್ದನು.

ಕಂಪನಿಯ ಸೇವಕರೊಳಗೆ ಇಂಗ್ಲಂಡಿನಲ್ಲಾಗಲಿ ಹಿಂದುಸ್ಥಾನದಲ್ಲಾಗಲಿ ಸಾರ್ವಜನಿಕ ಹಿತದೃಷ್ಟಿಯುಳ್ಳವರು ಬಹು ಅಪರೂಪವಾಗಿದ್ದರು. ಅವರ ಮೂಲ ಉದ್ದೇಶವು ಅಪಾರವಾದ ದ್ರವ್ಯಸಂಗ್ರಹ ಮಾಡುವುದೊಂದೇ ಆಗಿದ್ದಿತು. ಅದರ ಸಲುವಾಗಿ ಅವರು ಎಂಥ ಹೇಯವಾದ ಯೋಜನೆಗಳನ್ನಾದರೂ ಮಾಡಲಿಕ್ಕೆ ಹೇಸುತ್ತಿರಲಿಲ್ಲ. ಮಿ. ಬೋಲ್ಟ್ಸ ಎಂಬಾತನು ಕಂಪನಿಯವರ ಕಾರಸ್ಥಾನಗಳನ್ನು ಬಹು ನಿಂದಾವ್ಯಂಜಕವಾಗಿ ಮುಂದೆ ಬರೆದಂತೆ ವಿವರಿಸಿದ್ದಾನೆ.

ಗುತ್ತೇದಾರಿಕೆಯ ಆಡಳಿತ

ಅತ್ಯಂತ ಭಯಪ್ರದವಾದ ಗುತ್ತೇದಾರಿಕೆಯ ಪದ್ಧತಿಯಿಂದ ಭರತಖಂಡವು ಹೇಳಲಸದಳವಾದ ಕಷ್ಟ ನಷ್ಟಗಳನ್ನು ಸಹಿಸಿತು. ಕಂಪನಿಯ ವ್ಯಾಪಾರದ ಏರಿಕೆಯೂ, ಪ್ರತ್ಯೇಕ ಜನಗಳ ವ್ಯಾಪಾರವೂ, ಯುರೋಪದಲ್ಲಿ ಮಾಡಿದ ಠೇವಿನ ಬಗ್ಗೆ ಮಾಡಿದ ಏರ್ಪಾಟುಗಳೂ ಭರತಖಂಡದ ನೇಕಾರರನ್ನೂ, ವ್ಯಾಪಾರಿಗಳನ್ನೂ ಹಿಂಡಿ ಹಿಪ್ಪೆ ಮಾಡಿ ಬಿಟ್ಟವು. ಭರತಖಂಡದ ತೆರೆಗೆಯ ಹಣದಿಂದ ಲಕ್ಷಾವಧಿ ಪೌಂಡುಗಳವರೆಗೆ ಇಲ್ಲಿಯ ಪದಾರ್ಥಗಳನ್ನು ಹೆಚ್ಚಾಗಿ ಕ್ರಯಕ್ಕೆ ತೆಗೆದುಕೊಂಡು ಅವುಗಳನ್ನು ಹಡಗಗಳಲ್ಲಿ ಹೇರಿ ಮಾರಾಟಕ್ಕಾಗಿ ಕಳುಹಿಸುತ್ತಿದ್ದರು. ಬಂದ ಲಾಭದಿಂದ ಕಂಪನಿಯ ಸೇವಕರ ಸಂಬಳವನ್ನು ನೋಡಿಕೊಳ್ಳುತ್ತಿದ್ದರು.

ಭರತಖಂಡದ ಕ್ಯಾಲಿಕೋಗಳನ್ನು ಧರಿಸಕೂಡದೆಂದು ಇಂಗ್ಲಂಡದಲ್ಲಿ ಪ್ರತಿಭಂಧಕವಾದ ಶಾಸನವು ಏರ್ಪಟ್ಟಿದ್ದರೂ ಮಲಮಲು ಮತ್ತು ಚೀಟಿನ ಬಟ್ಟೆಗಳಿಗೆ ಆತಂಕವಿರಲಿಲ್ಲ. ಶಾಸನದಿಂದ ಪ್ರತಿಬಂಧವಾದ ಬಟ್ಟೆಗಳಿಗೂ ಕೂಡ ಬೇಡಿಕೆಯು ಹೆಚ್ಚಾಗುತ್ತ ನಡೆದದ್ದರಿಂದ ಅವುಗಳನ್ನು ಶಾಸನದ ವಿರುದ್ಧವಾಗಿ ಇಂಗ್ಲಂಡಿಗೆ ಕಳುಹಿಸಿಕೊಡುವದು ನಡೆಯಿತು. ಬ್ರಿಟಿಷ ವ್ಯಾಪಾರಿಗಳು ಅರಳೆಯ ವ್ಯಾಪಾರದ ಒಟ್ಟು ಗುತ್ತೆಯನ್ನು ಹಿಡಿದುಕೊಳ್ಳಲು ಬಹಳೇ ಆತುರಪಡಹತ್ತಿದರು.

ಸುರತದ ವ್ಯಾಪಾರಿ ಸಂಘವು ಬಹು ಕಠೋರವಾದ ಮತ್ತು ನಿಂದ್ಯವಾದ ಪದ್ಧತಿಗಳನ್ನು ಕೈಕೊಂಡು ನೇಕಾರರನ್ನು ತನ್ನ ಸಲುವಾಗಿ ಒತ್ತಾಯದಿಂದ ದುಡಿಸಿಕೊಳ್ಳಹತ್ತಿತು. ಪಾಪ! ಆ ಬಡ ನೇಕಾರರಿಗೆ ಸಾಕಷ್ಟು ಕೂಲಿಯನ್ನು ಕೊಡುತ್ತಿದ್ದಿಲ್ಲ. ದುಡಿಯಲಿಕ್ಕೊಪ್ಪಿಕೊಳ್ಳದವರಿಗೆ ಕುಸಿಬೀಳುವಷ್ಟು ಕರವನ್ನು ಹೇರುತ್ತಿದ್ದರು. ದಂಡಕೊಟ್ಟು ಪೂರಾ ನೀರಿನಲ್ಲಿ ಮುಳುಗುವದಕ್ಕಿಂತಲೂ ದುಡಿದುಡಿದು ಸತ್ತು ಹೋಗುವದು ಒಂದು ರೀತಿಯಿಂದ ಒಳ್ಳೆಯದೆನಿಸುತ್ತಿದ್ದಿತು. ನೇಕಾರರಿಗೆ ಡಚ್ಚ, ಪೂರ್ಚುಗಿಜ, ಫ್ರೆಂಚ, ಅರಬ ವ್ಯಾಪಾರಿಗಳಿಂದ ಸರ್ವ ಸಾಧಾರಣ ಬಟ್ಟೆಗಳಿಗಾಗಿ ಅಲ್ಪ ಸ್ವಲ್ಪ ಲಾಭವು ದೊರೆಯುತ್ತಿದ್ದಿತು. ಆದರೆ ಕಂಪನಿಯವರಿಗೆ ಒದಗಿಸಿಕೊಡುವ ಸರ್ವೋತ್ಕೃಷ್ಟವಾದ ಬಟ್ಟೆಗಳಿಂದ ಏನೂ ಲಾಭವಿದ್ದಿಲ್ಲ. ಆದುದರಿಂದ ನೇಕಾರರು ಕದ್ದು ಮುಚ್ಚಿ ಪರಸ್ಥಳದ ವ್ಯಾಪಾರಿಗಳಿಗೆ ಮಾರಿ ಲಾಭ ಪಡೆಯಹತ್ತಿದರು.

ಕಂಪನಿಯ ಸರಕಾರಕ್ಕೆ ಇದು ಗೊತ್ತಾದ ಕೂಡಲೆ ಅವರು ನೇಕಾರರಿಗೆ ಅತಿ ಉಗ್ರವಾದ ಮತ್ತು ಕಠೋರವಾದ ಶಿಕ್ಷೆಗಳನ್ನು ವಿಧಿಸಹತ್ತಿದರು. ಆಗ ಕಂಪನಿಯ ವ್ಯಾಪಾರದ ಮುಖ್ಯಾಧಿಕಾರಿಗಳಿಗೆ ನೇಕಾರರೆಲ್ಲರನ್ನು ಗುತ್ತೆ ಹಿಡಿಯಬೇಕೆಂಬ ಕಲ್ಪನೆಯುಂಟಾಯಿತು. ಅದಕ್ಕಾಗಿ ಅವರು ನೇಕಾರರಿಗೆ ಅನೇಕ ಯಾತನೆಗಳನ್ನು ಕೊಡಲು ನೇಕಾರರು ತಮ್ಮ ಉದ್ಯೋಗಗಳನ್ನು ಬಿಟ್ಟು ಬೇರೆ ಬೇರೆ ಉದ್ಯೋಗಗಳಲ್ಲಿ ಸೇರಿಕೊಂಡರು. ಇದನ್ನು ಕಂಡು **'ಇಂಗ್ಲೀಷ್ ಮುಖ್ಯಾಧಿಕಾರಿಯ ಅಪ್ಪಣೆಯ ವಿನಾ ಯಾವ ನೇಕಾರನೂ ಪಟ್ಟಣದ ಹೊರಗೆ ಕಾಲಿಡಕೂಡದೆಂದು ಕಠಿಣತರವಾದ ಕಟ್ಟಳೆಯನ್ನು ಮಾಡಿದರು.'**

ಬಂಗಾಲದ ಕಂಗಾಲ ಸ್ಥಿತಿಯನ್ನಂತೂ ಬಣ್ಣಿಸಲಳವಲ್ಲ "ಬಂಗಾಲ ಪ್ರಾಂತದಲ್ಲಿ ಕಂಪನಿಯವರ ನಿರಂತರವಾದ ಅತ್ಯಾಚಾರ ದುರಾಗ್ರಹಗಳು ಪದಾರ್ಥೋತ್ಪಾದಕರ ಹಾಗೂ ನೇಕಾರರ ಮೇಲೆ ಅನಿರ್ವಚನೀಯವಾದ ಆಘಾತವನ್ನುಂಟು ಮಾಡಿದವು! ಎಂದು ಮಿ. ಬೋಲ್ಟರವರು ಹೇಳಿದ್ದಾರೆ.

ಕಂಪನಿಯು ನಿಯಮಿಸಿದ ವ್ಯಾಪಾರಿಗಳು ಮತ್ತು ಗುಮಾಸ್ತರು ತಮ್ಮ ಪ್ರಾಂತದ ಮುಖ್ಯಾಧಿಕಾರಿಯೊಡನೆ ಆಯಾ ಪ್ರಾಂತಗಳನ್ನೊಳನುಗ್ಗಿ ಅಲ್ಲಿಯ ಜಮೀನದಾರರಿಗೆ ತಮ್ಮ ವ್ಯಾಪಾರಕ್ಕೆ ಸೌಲಭ್ಯಗಳನ್ನುಂಟು ಮಾಡಿಕೊಡಬೇಕೆಂದು ಆಜ್ಞಾಪತ್ರಗಳನ್ನು ಕಳುಹಿಸುತ್ತಿದ್ದರು."

"ಗುಮಾಸ್ತರು ಪದಾರ್ಥೋತ್ಪಾದನದ ಕೇಂದ್ರಸ್ಥಾನಕ್ಕೆ ಹೋಗಿ ಅಲ್ಲಿ ಧ್ವಜ ಊರುತ್ತಿದ್ದನು. ಆ ಮೇಲೆ ತನ್ನ ಶಿಪಾಯಿಗಳನ್ನು ಕಳುಹಿಸಿ ದಲಾಲರನ್ನೂ ನೇಕಾರರನ್ನೂ ಕರೆಯಿಸಿಕೊಳ್ಳುತ್ತಿದ್ದನು. ಆ ಗುಮಾಸ್ತರು ನೇಕಾರರಿಗೆ ತನ್ನ ಯಜಮಾನನು ನಿರ್ದಿಷ್ಟಗೊಳಿಸಿದ ಹಣದ ಬಗ್ಗೆ ನೇಕಾರರಿಂದ ಮುಂಚಿತವಾಗಿ ಕಾಗದ ಬರೆಯಿಸಿಕೊಂಡು ಅವರು ರುಜು ಮಾಡಿಸಿಕೊಳ್ಳುತ್ತಿದ್ದನು. ಆ ಮೇಲೆ ಸ್ವಲ್ಪ ಹಣ ಮುಂಗಡ ಕೊಟ್ಟು ಇಂತಿಷ್ಟು ದಿವಸಗಳೊಳಗೆ ಇಂತಿಷ್ಟು ದರದಿಂದ ಇಂತಿಷ್ಟು ಬಟ್ಟೆಗಳನ್ನೊದಗಿಸಿಕೊಡಬೇಕೆಂದು ಉಗ್ರವಾದ ಕರಾರು ಹಾಕುತ್ತಿದ್ದರು. ಪಾಪ! ಇದಕ್ಕೆ ಆ ಬಡಪ್ರಾಣಿಗಳಾದ ನೇಕಾರರ ಸಮ್ಮತಿಯಿದೆಯೋ ಇಲ್ಲವೋ ಇದಾವುದನ್ನೂ ವಿಚಾರಿಸುತ್ತಿದ್ದಿಲ್ಲ. ಗುಮಾಸ್ತನು ಅವರನ್ನು ಒತ್ತಿ ಹಣ್ಣು ಮಾಡಿ ಅವರ ರುಜು ತೆಗೆದುಕೊಳ್ಳುತ್ತಿದ್ದನು. ಇಂಥ ಅನೇಕ ನೇಕಾರರ ಹೆಸರುಗಳನ್ನು ಗುಮಾಸ್ತರು ಕಂಪನಿಯ ರಜಿಸ್ಟರ ಪುಸ್ತಕಗಳಲ್ಲಿ ಬರೆದಿಟ್ಟುಕೊಳ್ಳುತ್ತಿದ್ದರು. ಒಬ್ಬರ ಹಿಂದೊಬ್ಬರು ಬಂದ ಗುಮಾಸ್ತರು ನೇಕಾರರನ್ನು ಗುಲಾಮಗಿರಿಗಿಂತಲೂ ಕಡೆ ಮಾಡಿ ಅವರನ್ನು ಅತ್ಯಂತ ಕ್ರೂರತನದಿಂದ ನಡೆಯಿಸಿಕೊಳ್ಳುತ್ತಿದ್ದರು. ನೇಕಾರರು ತಾವು ಸಿದ್ಧಗೊಳಿಸಿದ ಬಟ್ಟೆಗಳನ್ನು ಮೂಲ ಕಿಮ್ಮತ್ತಿಗಿಂತ ೧೦೦ಕ್ಕೆ ೫೧ರಂತೆ ಒಮ್ಮೊಮ್ಮೆ ೧೦೦ಕ್ಕೆ ೪೦ ರಂತೆ ಕಡಿಮೆ ತೆಗೆದುಕೊಂಡು ಕಂಪನಿಯವರಿಗೆ ಮಾರಬೇಕೆಂಬುದಾಗಿ ಬಲವಾದ ಕಟ್ಟಳೆಯಿದ್ದಿತು."

–ಬೋಲ್ಟ

ಬಂಗಾಲದಲ್ಲಿ ಯಾವ ಅತ್ಯಾಚಾರವಿದ್ದಿತೋ ಅದೇ ಮದ್ರಾಸದಲ್ಲಿಯೂ ಇದ್ದಿತು. ಕಂಪನಿಯವರು ಅರ್ಕಾಟದ ನವಾಬನ ಮೇಲೆ ದೊಡ್ಡ ಸಂಕಟವನ್ನು ತಂದು ಹಾಕಿದ್ದರಿಂದ ಆತನು ನಿರ್ವಾಹವಿಲ್ಲದೆ ತನ್ನ ಮನಸ್ಸಿನ ವಿರುದ್ಧವಾಗಿ ಈ ಕೆಳಗಿನ ಪ್ರಕಟಣೆಯನ್ನು ತನ್ನ ಕೈಕೆಳಗಿನ ಅಧಿಕಾರಿಗಳಿಗೆ ಕೊಡಬೇಕಾಯಿತು. "ಮದ್ರಾಸದ ಗವ್ಹರ್ನರ ಸಾಹೇಬರು ನಿಮ್ಮ ಸೀಮೆಗೆ ಬಟ್ಟೆಗಳನ್ನು ಕೊಳ್ಳುವುದಕ್ಕಾಗಿ ಬರತಕ್ಕವರಿದ್ಧಾರೆ. ಆದಕಾರಣ ಈ ಪ್ರಕಟಣೆಯ ಮುಖಾಂತರ ಶ್ರುತುಪಡಿಸುವುದೇನೆಂದರೆ– ನೀವು ನಿಮ್ಮ ಅಧಿಕಾರಕ್ಕೊಳಪಟ್ಟ ಎಲ್ಲ ವ್ಯಾಪಾರಸ್ಥರಿಗೆ ಅವರವರ ನೂಲಿನ ಬಟ್ಟೆಗಳನ್ನು ಗವ್ಹರ್ನರ ಸಾಹೇಬರಿಗೂ ಅವರ ಅನುಚರರಿಗೂ ಕೊಡಿಸಬೇಕು. ಅವರಿಗೆ ಬೇಡವಾದ ಬಟ್ಟೆಗಳನ್ನು ಮಾತ್ರ ಬೇರೆ ಕಡೆಗೆ ಮಾರಾಟ ಮಾಡಲು ನಿಮ್ಮ ವ್ಯಾಪಾರಸ್ಥರಿಗೆ ಅಪ್ಪಣೆ ಕೊಡಬೇಕು. ಗವ್ಹರ್ನರ ಸಾಹೇಬರ ಕೈಕೆಳಗಿನವರ ಹೊರತಾಗಿ ಕ್ರಯಕ್ಕೆ ತೆಗೆದುಕೊಳ್ಳದಂತೆ ಎಚ್ಚರಿಕೆಯಿಂದಿರಬೇಕು. ಇಷ್ಟೇ ನನ್ನ ಕಟ್ಟಪ್ಪಣೆಯು. ಈ ನಿಯಮಕ್ಕೆ ವಿರುದ್ಧವಾಗಿ ವರ್ತಿಸುವ ವ್ಯಾಪಾರಿಗಳ ಕಡೆಯಿಂದ ಹೆಜ್ಜೆಜ್ಜೆಗೆ ತಪ್ಪು ದಂಡವನ್ನು ತೆಗೆದುಕೊಳ್ಳಬೇಕು."

ನಿಯಮಬದ್ಧವಾದ ದಬ್ಬಾಳಿಕೆ

ಕಂಪನಿಯ ಆಡಳಿತದಲ್ಲಿ ಹಣ ಎತ್ತಿ ಹಾಕುವದು ಪ್ರತಿದಿನದ ಕೆಲಸವಾಗಿತ್ತು. ಕಂಪನಿಯಿಂದ ಮುಂಗಡ ಹಣ ತೆಗೆದುಕೊಂಡ ನೇಕಾರರು ತನ್ನ ಪರಿಶ್ರಮವನ್ನು ಉಳಿದ ಹಿಂದಿಗಳಿಗಾಗಲಿ,

ಯುರೋಪಿಯರಿಗಾಗಲಿ ವಿನಿಮಯ ಮಾಡಲಿಕ್ಕೆ ಬರುತ್ತಿದ್ದಿಲ್ಲ. ಗೊತ್ತು ಪಡಿಸಿದ ಅವಧಿಯಲ್ಲಿ ನೇಕಾರರು ಬಟ್ಟೆಗಳನ್ನು ಕೊಡಲಿಕ್ಕೆ ತಪ್ಪಿದರೆ ವ್ಯಾಪಾರದ ಮುಖ್ಯಾಧಿಕಾರಿಯು ಶಿಪಾಯಿಗಳನ್ನು ಹಚ್ಚಿ ಶೀಘ್ರವಾಗಿ ಬಟ್ಟೆಗಳನ್ನೊದಗಿಸಿಕೊಳ್ಳುತ್ತಿದ್ದನು. ಶಿಪಾಯಿಗಳನ್ನು ಹಚ್ಚುವದೆಂದರೆ ದಿನಾಲು ೧ ಅಣೆಯಂತೆ ನೇಕಾರನ ಕಡೆಯಿಂದ ದಂಡ ತೆಗೆದುಕೊಳ್ಳುವುದು. ಬೇರೆಯವರಿಗೆ ನೇಕಾರರು ತನ್ನ ಬಟ್ಟೆಗಳನ್ನು ಮಾರಿದರೆ 'ದಿವಾಣಿ ಅದಾಲತ್' (ನ್ಯಾಯ ಕಚೇರಿ) ದಲ್ಲಿ ಅವನ ಮೇಲೆ ವ್ಯಾಜ್ಯ ಹೂಡುತ್ತಿದ್ದರು. ನೇಕಾರನು ಒಂದಕ್ಕಿಂತ ಹೆಚ್ಚು ಮಗ್ಗಗಳನ್ನು ಹೂಡಿದರೆ ಮತ್ತು ತನ್ನ ಕೆಲಸಕ್ಕೆ ಕೂಲಿಕಾರರನ್ನು ನೇಮಿಸಿಕೊಂಡರೆ ಆತನು ನೇಯ್ದ ಥಾನಿನ ಮೇಲೆ ೧೦೦ಕ್ಕೆ ೩೫ರಂತೆ ತಪ್ಪು ದಂಡವನ್ನು ಕೊಡಬೇಕಾಗಿದ್ದಿತು.

ಮಿ. ಬೋಲ್ಟರವರು ಹೇಳುವುದೇನೆಂದರೆ "ಒಮ್ಮೆ ನೇಕಾರರನ್ನು ಬ್ರಿಟಿಷ ಹಾಗೂ ಡಚ್ಚ ವ್ಯಾಪಾರಿಗಳು ತಮ್ಮ ತಮ್ಮೊಳಗೆ ಪಾಲು ಮಾಡಿ ಹಂಚಿಕೊಳ್ಳಬೇಕೆಂದಿದ್ದರು. ಆದರೆ ಇಂಥ ನಾಚಿಕೆಗೇಡಿತನದ ಕೃತ್ಯವು ಸುದೈವದಿಂದ "ಕೋರ್ಟ ಆಫ್ ಡಾಯರೇಕ್ಟರರ ಮನಸ್ಸಿಗೆ ಬರಲಿಲ್ಲ." ಅತ್ಯಂತ ವಿಶ್ವಸನೀಯವಾದ ಕಾಗದ ಪತ್ರಗಳ ಮೇಲಿಂದ ಕಂಡು ಬರುವದೇನೆಂದರೆ ನೇಕಾರರು ಪದೆ ಪದೆ ಕಠೋರವಾದ ದಂಡ ಪ್ರಾಯಶ್ಚಿತ್ತಗಳಿಗೆ ಗುರಿಮಾಡಲ್ಪಡುತ್ತಿದ್ದರು. ಇದಲ್ಲದೆ ಅವರನ್ನು ಚಬಕದಿಂದ ಒಳಿತಾಗಿ ತಳಿಸುತ್ತಿದ್ದರು. ಎಷ್ಟೋ ಸಲ ಅವರನ್ನು ಕಾರಾಗೃಹದಲ್ಲಿರಿಸುತ್ತಿದ್ದರು. ಅವರಿಗೆ ಬೇಡಿಗಳನ್ನು ಹಾಕಿಕೊಂಡು ಬೀದಿಯಲ್ಲಿ ಕರೆದೊಯ್ಯುವಾಗ ಅವರನ್ನು ಬಹಳೇ ಅವಮಾನಗೊಳಿಸುತ್ತಿದ್ದರು. ಅವರ ಪಾತ್ರೆಗಳನ್ನು ಕಂಪನಿಯವರು ಅನ್ಯಾಯವದ ದಂಡಗಳಿಗಾಗಿ ತೆಗೆದುಕೊಳ್ಳುತ್ತಿದ್ದರು. ಒಮ್ಮೊಮ್ಮೆ ಆ ಪಧಾರ್ಥಗಳನ್ನು ಬೇರೆಯವರಿಗೆ ಮಾರಿಬಿಡುತ್ತಿದ್ದರು."

ಕಂಪನಿಯವರ ಕಾರಸ್ಥಾನಗಳು

ಕಂಪನಿಯವರು ಯಾವ ಯಾವ ಕಾರಸ್ಥಾನಗಳಿಂದ ನೂಲಿನ ಬಟ್ಟೆಯ ವ್ಯಾಪಾರವನ್ನು ಬಂಧುರವಾಗಿಟ್ಟುಕೊಂಡರೆಂಬುದನ್ನು ಇದರಡಿಯಲ್ಲಿ ವಿವರಿಸಿದೆ.

(೧) ಗವ್ಹರ್ನರನ ಅಪ್ಪಣೆಯಿಲ್ಲದೆ ಭರತಖಂಡದ ಯಾವ ವ್ಯಾಪಾರಿಯೂ ಅವಾಂತರ ಪ್ರದೇಶಗಳಲ್ಲಿ ಗುಮಾಸ್ತರನ್ನು ಕಳುಹಿಸಿ ಪದಾರ್ಥಗಳನ್ನು ಕ್ರಯಕ್ಕೆ ತೆಗೆದುಕೊಳ್ಳಬಾರದೆಂದು ಪ್ರಬಲತರವಾದ ಕಟ್ಟಳೆಯಿದ್ದಿತು. ಆದರೆ ಕಂಪನಿಯ ಗುಮಾಸ್ತರು ಮಾತ್ರ ದೇಶದ ತುಂಬ ಬೇಕಾದಲ್ಲಿ ಹರಿಬಿದ್ದು ಅಸಂಖ್ಯವಾದ ಕ್ರೂರತನಗಳನ್ನಾಚರಿಸುತ್ತಿದ್ದರು.

(೨) ನೇಕಾರರ ಕಡೆಯಿಂದ ಕಂಪನಿಯ ಗುಮಾಸ್ತರು ಬರೆಯಿಸಿಕೊಂಡ ಕರಾರಪತ್ರಗಳನ್ನು ನೋಡಿದರೆ ನೇಕಾರರು ತಾವು ಹಾನಿಗಳನ್ನು ಸಹಿಸಿ ಕಂಪನಿಯ ಗುಮಾಸ್ತರ ಕಿಸೆಗಳನ್ನು ತುಂಬಬೇಕಾಗಿದ್ದಿತು.

(೩) ನೇಕಾರರ ಮೇಲೆ ದಂಡ, ಪ್ರಾಯಶ್ಚಿತ್ತ, ತಾಡನಗಳಂತೂ ಅವ್ಯಾಹತವಾಗಿಯೇ ಸಾಗಿದ್ದವು.

(೪) ಪ್ರತ್ಯೇಕ ವ್ಯಾಪಾರಿಯ ಹಾಗೂ ನೇಕಾರನ ಕಡೆಯಿಂದ ಪದಾರ್ಥಗಳನ್ನು ಬಲಾತ್ಕಾರದಿಂದ ಎತ್ತಿಹಾಕುತ್ತಿದ್ದರು.

(೫) ಆವಾಂತರ ಪ್ರದೇಶಗಳಲ್ಲಿ ವ್ಯವಹಾರ ನಡೆಯಿಸುವ ಪ್ರತ್ಯೇಕ ವ್ಯಾಪಾರಿಯ ಮೇಲೆ ಬಹು ಭಾರವಾದ ಕರಗಳನ್ನು ಕೂಡ್ರಿಸುತ್ತಿದ್ದರು.

ಕಂಪನಿಯವರ ಅತ್ಯಾಚಾರಗಳನ್ನು ಕುರಿತು ಮಿ. ಬೋಲ್ಬರವರು ಹೇಳಿರುವದೇನೆಂದರೆ "ಜಂಗುಲ ಕೇರಿಯ ಸುತ್ತು ಮುತ್ತಲಿನ ಪ್ರದೇಶಗಳಲ್ಲಿ ೫೦೦ ನೇಕಾರರ ಮನೆತನಗಳು ಕಂಪನಿಯ ಬಲಾತ್ಕಾರಗಳ ಮೂಲಕ ತಮ್ಮ ಪ್ರಾಂತವನ್ನೂ ಉದ್ಯೋಗವನ್ನೂ ಬಿಟ್ಟುಕೊಟ್ಟರು. ಎಷ್ಟೋ ಜನ ನೇಕಾರರು ಈ ಅತ್ಯಾಚಾರಗಳನ್ನು ಸಹಿಸಲಾರದೆ ತಮ್ಮನ್ನು ಕೆಲಸಕ್ಕೆ ಹಚ್ಚಬಾರದೆಂದು ತಮ್ಮ ಬೆರಳುಗಳನ್ನು ಕಡಿದುಕೊಂಡರು. ಅತ್ಯಾಚಾರಗಳ ಪರಮಾವಧಿಯ ಮೂಲಕ ಎಷ್ಟೋ ಪೇಟೆಗಳು ಹಾಳುಬಿದ್ದವು. ಸ್ವದೇಶಿ ವ್ಯಾಪಾರವು ಕಂಪನಿಯವರ ದಬ್ಬಾಳಿಕೆಯಿಂದ ಸಂಪೂರ್ಣವಾಗಿ ಕುಸಿಬಿದ್ದಿತು."

ಭರತಖಂಡದ ಸರಕುಗಳ ಮೇಲೆ ಪ್ರಬಲವಾದ ಸುಂಕವು

ಇದೇ ಸಮಯದಲ್ಲಿ ಇಂಗ್ಲಂಡದೊಳಗೆ ನೂಲಿನ ಸರಕುಗಳ ಹುಟ್ಟುವಳಿಯು ಬಹು ಭರದಿಂದ ಸಾಗಿದ್ದಿತು. ಅಗ್ಗೆ ಅನೇಕ ಶೋಧಗಳುಂಟಾದವು. ೧೭೬೦ರಲ್ಲಿ ಶಟಲ್ ಮಗ್ಗವೂ, ೧೭೬೪ರಲ್ಲಿ ನೂಲುವ ಯಂತ್ರವೂ ೧೭೬೫ರಲ್ಲಿ ನೇಯುವ ಯಂತ್ರವೂ ೧೭೬೮ರಲ್ಲಿ ಉಗಿಯ ಯಂತ್ರವೂ ಶೋಧಿಸಲ್ಪಟ್ಟವು. ಭರತಖಂಡದಿಂದ ಎತ್ತಿಕೊಂಡು ಹೋದ ವೆಗ್ಗಳವಾದ ಬಂಗಾರದ ಸಹಾಯದಿಂದ ಈ ಯಂತ್ರಗಳನ್ನು ಬಹು ಬಲವತ್ತರವಾಗಿ ನಡೆಯಿಸುತ್ತಿದ್ದರು. ಭರತಖಂಡದ ವಿಪುಲ ಧನಸಂಗ್ರಹವು ಇಂಗ್ಲಂಡಕ್ಕೆ ಪ್ರಾಪ್ತಿಸದಿದ್ದರೆ ಈ ಯಾವ ಶೋಧಗಳೂ ಆಗುವ ಸಂಭವವಿದ್ದಿಲ್ಲ. ಭರತಖಂಡದ ಕಲ್ಪವೃಕ್ಷರು ಆಂಗ್ಲೇಯರಿಗೆ ಸಂಪತ್ತನ್ನು ಸುರಿಸಿಬಟ್ಟಿತು. ಅನ್ಯಾಯದ ಗಳಿಕೆಯಿಂದ ಬ್ರಿಟಿಷ್ ವ್ಯಾಪಾರಕ್ಕೆ ಒಳ್ಳೇ ಪುಟ ಕೊಟ್ಟಂತಾಯಿತು. ಭರತಖಂಡಲ್ಲಿ ಬ್ರಿಟಿಷ್ ನೂಲಿನ ಸರಕುಗಳ ಮಾರಾಟಕ್ಕೆ ಅನುಕೂಲವಾದ ಪೇಟಗಳನ್ನೇರ್ಪಡಿಬೇಕೆಂತಲೂ, ಭರತಖಂಡದ ನೂಲಿನ ಸರಕುಗಳ ಮೇಲೆ ಪ್ರಬಲವಾದ ಸುಂಕನ್ನು ಹೇರಬೇಕೆಂತಲೂ ಪ್ರಯತ್ನಗಳು ನಡೆದವು.

ಮಿ. ರಾಬರ್ಟ್ಸ್ ಬ್ರಾವುನನು 'ಲಾರ್ಡ್ಸ್ ಕಮೀಟಿ'ಯಲ್ಲಿ ಮಾತಾಡಿದ್ದೇನೆಂದರೆ "ಹಿಂದುಸ್ಥಾನದ ಉತ್ಕೃಷ್ಟ ಬಟ್ಟೆಗಳ ಮೇಲೆ ಏನೂ ಕರ ಕ್ರೂಡಿಸದೆ ವ್ಯಾಪಾರ ಮಾಡಗೊಟ್ಟರೆ ಬ್ರಿಟಿಷ ನೂಲಿನ ಬಟ್ಟೆಗಳಿಗೆ ಪೆಟ್ಟು ತಗಲುವದು. ಅಲ್ಪ ಕಿಮ್ಮತ್ತಿನ ಹಿಂದುಸ್ಥಾನದ ಒರಟು ಬಟ್ಟೆಯ ಮೇಲೆ ಸುಂಕವನ್ನು ಹೇರದಿದ್ದರೆ ಅದೇ ಮಾದರಿಯ ಹೆಚ್ಚು ಕಿಮ್ಮತ್ತಿನ ಬ್ರಿಟಿಷ್ ಬಟ್ಟೆಗಳಿಗೆ ಅತ್ಯಂತ ಪ್ರಬಲವಾದ ಆಘಾತವನ್ನು ಕೊಟ್ಟಂತಾಗುತ್ತದೆ. ಹಿಂದುಸ್ಥಾನದ ಬಟ್ಟೆಗಳ ಕಿಮ್ಮತ್ತು ಬ್ರಿಟಿಷರ ಬಟ್ಟೆಗಳ ಕಿಮ್ಮತ್ತಿಗಿಂತಲೂ ೧೦೦ಕ್ಕೆ ೩೦ ರಿಂದ ೬೦ ರ ವರೆಗೆ ಕಡಿಮೆಯಾಗಿರುತ್ತದೆ."

೧೮೧೨ರಲ್ಲಿ ಲಾರ್ಡ ವೆಲ್ಲಸ್ಲಿಯು ಹೌಸ ಆಫ್ ಕಾಮನ್ಸದ ಮುಂದೆ ಮಾತನಾಡಿದ್ಧೇನೆಂದರೆ "ಹಿಂದುಸ್ಥಾನದ ಬಟ್ಟೆಗಳೀಗೆ ಕರ ಕೂಡ್ರಿಸದೆ ಹಾಗೆಯೇ ಬ್ರಿಟಿಷ ಪೇಟೆಗಳಿಗೆ ಬರಗೊಟ್ಟರೆ ಅವು ಬ್ರಿಟಿಷ ನೂಲಿನ ಸರಕನ್ನೇ ನಿರ್ಮೂಲಗೊಳಿಸುವವಲ್ಲದೆ ಉಳಿದ ಮನೆತನದ ಪ್ರಪಂಚಕ್ಕೆ ಬಹು ಭಾರವಾದ ಅಡಚಣಿಯನ್ನುಂಟುಮಾಡುವವು."

ಹಿಂದೂಸ್ಥಾನದ ನೂಲಿನ ಸರಕುಗಳ ಮೇಲೆ ಕರ ಕೂಡ್ರಿಸಬಾರದೆಂದು ಯಾರ ಮನಸ್ಸಿನಲ್ಲಿಯೂ ಹುಟ್ಟಿರಲಿಲ್ಲ. ಕರ ಕೂಡ್ರಿಸದೆ ಹಾಗೇಯೇ ಬಿಟ್ಟಿದ್ದರೆ ಬ್ರಿಟಿಷ ಬಟ್ಟೆಗಳು ಎಂದೋ

ನಾಮಶೇಷವಾಗಿ ಹೋಗುತ್ತಿದ್ದವು. ಹಿಂದುಸ್ಥಾನದ ಬಟ್ಟೆಗಳು ಬ್ರಿಟಿಷ ಬಟ್ಟೆಗಳಿಗಿಂತ ೧೦೦ಕ್ಕೆ ೫೦-೬೦ರಂತೆ ಕಡಿಮೆ ಕಿಮ್ಮತಿನಿಂದ ಮಾರಾಟವಾಗುತ್ತಿದ್ದುದರಿಂದ ಅವುಗಳ ಮೇಲೆ ೧೦೦ಕ್ಕೆ ೭೦-೮೦ರಂತೆ ಪ್ರಬಲವಾದ ಸುಂಕವನ್ನು ಹೇರಿದರು. ದುರಾಶೆ ಸ್ವಾರ್ಥಗಳ ಮೂಲಕ ಈ ತರಹದ ಗೋಳು ಕಟ್ಟಿಕೊಂಡು ತಮ್ಮ ವ್ಯಾಪಾರವನ್ನು ಭದ್ರವಾಗಿಟ್ಟುಕೊಂಡರು. ಹಿಂದುಸ್ಥಾನಕ್ಕೆ ಬ್ರಿಟಿಷ್ ಬಟ್ಟೆಗಳು ಬಂದರೆ ಅವುಗಳಿಗೆ ಸ್ವಲ್ಪ ಮಾತ್ರವೂ ಸುಂಕವನ್ನು ಹೇರುತ್ತಿದ್ದಿಲ್ಲ.

ಸ್ವತಂತ್ರ್ಯ ವ್ಯಾಪಾರ(Free Trade)ದ ಮುಖ್ಯ ಉದ್ದೇಶವು ತುಟ್ಟಿಯಾದ ತಮ್ಮ ದೇಶದ ಬಟ್ಟೆಗಳನ್ನು ಸಂರಕ್ಷಿಸುವದೂ ಅಗ್ಗವಾದ ಭರತಖಂಡದ ಬಟ್ಟೆಗಳ ಮೇಲೆ ಪ್ರಬಲವಾದ ಸುಂಕವನ್ನು ಹೇರುವದೂ ಆಗಿದ್ದಿತು. ಭರತಖಂಡದ ಹೋಳಿಯನ್ನು ಮಾಡಿಯೇ ಇಂಗ್ಲಂಡದ ಗಿರಣಿಗಳು ಜನ್ಮಧಾರಣ ಮಾಡಿದವು.

ಭರತಖಂಡವು ಸ್ವತಂತ್ರವಾಗಿದ್ದರೆ ಅದೆಂದಿಗೂ ಇಂಗ್ಲಂಡದ ಸೇಡು ತೀರಿಸಿಕೊಳ್ಳದೆ ಬಿಡುತ್ತಿದ್ದಿಲ್ಲ. ಅದು ಬ್ರಿಟಿಷ್ ಸರಕುಗಳ ಮೇಲೆ ಅತ್ಯುಗ್ರವಾದ ಸುಂಕವನ್ನು ಕೂಡ್ರಿಸುತ್ತಿದ್ದಿತು. ತನ್ನ ವ್ಯಾಪರೋದ್ಯೋಗವು ಎಂದೂ ನಾಶವಾಗದಂತೆ ಕಾಪಾಡಿಕೊಳ್ಳುತ್ತಿದ್ದಿತು. ಪಾಪ! ಆತ್ಮರಕ್ಷಣೆಯ ಯೋಗವು ಭರತಖಂಡಕ್ಕೆ ಪ್ರಾಪ್ತಿಸಲಿಲ್ಲ. ಅದು ಕೇವಲ ಅಪರಿಚಿತವಾದ ಆಳರಸರ ದಯೆಗೆ ಪಾತ್ರವಾಗಿ ಬಿಟ್ಟಿತು. ಬ್ರಿಟಿಷ ಸಾಹಸಗಾರರ ಜಯವು ಅವರ ಚಾತುರ್ಯವನ್ನಾಗಲಿ, ವಿಪುಲ ಸಂಪತ್ತನ್ನಾಗಲಿ ಅವಲಂಬಿಸಲಿಲ್ಲ. ಆದರೆ ಭರತಖಂಡದ ಬಟ್ಟೆಗಳ ಮೇಲೆ ಅಸಹ್ಯವಾದ ಕರಗಳನ್ನು ಕೂಡಿಸಿದ್ದೇ ಅವರ ಜಯಕ್ಕೆ ಮುಖ್ಯ ಕಾರಣವಾಯಿತು.

ಜಕಾತಿಗಳು

ಭರತಖಂಡದ ಪರದೇಸಿ ವ್ಯಾಪಾರವನ್ನು ಮಣ್ಣುಗೂಡಿಸಿದ್ದಲ್ಲದೆ ಅದು ತನ್ನ ದೇಶದಲ್ಲಿ ಕೂಡ ತಲೆಯೆತ್ತದಂತೆ ಅವರು ಅಸಹ್ಯವಾಗಿ ಜಕಾತಿಗಳನ್ನು ಪದಾರ್ಥೋತ್ಪಾದಕರ ಹಾಗೂ ವ್ಯಾಪಾರಿಗಳ ಮೇಲೆ ಹೇರುತ್ತಿದ್ದರು. ನವಾಬರ ಆಳಿಕೆಯಲ್ಲಿ ಪಧಾರ್ಥಗಳ ಕಿಮ್ಮತ್ತನ್ನು ಪರೀಕ್ಷಿಸದೆ ಎತ್ತು, ಕತ್ತೆ, ಬಂಡೆಗಳ ಭಾರದ ಮೇಲಿಂದ ಜಕಾತಿಯನ್ನು ತೆಗೆದುಕೊಳ್ಳುತ್ತಿದ್ದರು. ಜಕಾತಿಯು ಸ್ವಲ್ಪವಿರುತ್ತಿದ್ದರಿಂದ ಜಕಾತಿಯನ್ನು ತಪ್ಪಿಸಿ ಕಳ್ಳತನದಿಂದ ವ್ಯಾಪಾರ ಮಾಡಲು ಜನರು ಆಶೆ ಮಾಡುತ್ತಿರಲಿಲ್ಲ. ವ್ಯಾಪಾರಿಗಳು ಜಕಾತಿಯ ಚೀಟಿಗಳನ್ನೇ ಒಯ್ಯುತ್ತಿದ್ದಿಲ್ಲ. ದೂರ ದೂರದವರೆಗೆ ಪ್ರವಾಸವನ್ನು ಮಾಡುತ್ತ ಹೋದಂತೆ ಅಲ್ಲಲ್ಲಿ ಜಕಾತಿಗಳನ್ನು ಕೊಡಬೇಕಾಗುತ್ತಿತ್ತು.

ಬ್ರಿಟಿಷರು ಈ ಪದ್ಧತಿಯನ್ನು ಸಂಪೂರ್ಣವಾಗಿ ವ್ಯತ್ಯಾಸಗೊಳಿಸಿದರು. ಮಿ. ರ್‍ಯಾಕಿಂಗ ಎಂಬವರು ಪಾರ್ಲಿಮೆಂಟ ಸಿಲೆಕ್ಟ ಕಮೀಟಿಯಲ್ಲಿ ಸಾಕ್ಷಿ ಹೇಳಿರುವದೇನೆಂದರೆ "೧೮೪೫ರಲ್ಲಿ ಕೆಲವು ಕಡೆ ನೂಲಿನ ಸರಕುಗಳ ಮೇಲೆ ೧೦೦ಕ್ಕೆ ೧೭॥ ಅರಳೆಯ ಮೇಲೆ ೧೦೦ಕ್ಕೆ ೫೦, ನೂಲಿನ ಮೇಲೆ ೧೦೦ಕ್ಕೆ ೭॥, ಈ ಪ್ರಕಾರ ಜಕಾತಿಯನ್ನು ಕೊಡಬೇಕಾಗುತ್ತಿದ್ದಿತು." ಬಹುದೂರಿನಿಂದ ಅಲ್ಪ ಪ್ರಮಾಣದ ಸರಕುಗಳನ್ನೊಯ್ಯುತ್ತಿದ್ದರೂ ಇವೆಲ್ಲ ಸುಂಕಗಳನ್ನು ಕೊಟ್ಟ ಹೊರತು ಗತ್ಯಂತರವಿದ್ದಿಲ್ಲ. ಅರಳೆಯ ಬಟ್ಟೆಯಾಗವೇಕಾದರೆ ೪ ಪಟ್ಟು ಜಕಾತಿಯನ್ನು ಕೊಡಬೇಕಾಗುತ್ತಿದ್ದಿತು.

ಅರಳೆಯನ್ನು ಬಟ್ಟೆಯನ್ನಾಗಿ ಮಾಡುವ ಪೂರ್ವದಲ್ಲಿ ಕಂಪನಿಯ ಅಪ್ಪಣೆಯನ್ನು ಪಡೆಯದಿದ್ದರೆ ಬಟ್ಟೆಯವನು ಹೆಚ್ಚಿಗೆ ಜಕಾತಿಯನ್ನು ಕೊಡಬೇಕಾಗುತ್ತಿತ್ತು. ಅಪ್ಪಣೆಯು ಇಂತಿಷ್ಟು ಕ್ಲುಪ್ತ ಕಾಲದವರೆಗೆ ಮಾತ್ರವೇ ನಡೆಯಬೇಕಂಬ ನಿರ್ಬಂಧವಿದ್ದಿತು. ಸಕಾಲಕ್ಕೆ ಪದಾರ್ಥಗಳು ಮಾರಾಟವಾಗದಿದ್ದರೆ ವ್ಯಾಪಾರಿಯು ಪುನಃ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ಪುನಃ ಒಪ್ಪಿಗೆ ಪಡೆಯುವಾಗ ವ್ಯಾಪಾರಸ್ಥರು ತನ್ನ ಸರಕು ಮೊದಲಿನದೇ ಎಂಬುದನ್ನು ಸಾಕ್ಷಿಗಳಿಂದ ಸಿದ್ಧಮಾಡಿ ಕೊಡಬೇಕಾಗುತ್ತಿದ್ದಿತು. ಎಷ್ಟೋ ಪ್ರಸಂಗಗಳಲ್ಲಿ ಒಪ್ಪಿಗೆಯನ್ನು ಹೊಂದಿ ವ್ಯಾಪಾರಿಗಳು ಹೆಚ್ಚಿನ ಪದಾರ್ಥಗಳನ್ನು ವಿಕ್ರಯ ಮಾಡುತ್ತಿದ್ದರು. ಆದರೆ ಈ ಕಳ್ಳತನದ ಮಾರಾಟವನ್ನು ಪರೀಕ್ಷಿಸುವದಕ್ಕೋಸ್ಕರ ಅಲ್ಲಲ್ಲಿ ಶೋಧನ ಮಂದಿರಗಳು(Search Houses) ಸ್ಥಾಪಿಸಲ್ಪಟ್ಟಿದ್ದವು. ಇಂಥ ಶೋಧನ ಮಂದಿರಗಳು ಜಕಾತಿ ಕಟ್ಟೆಯಿಂದ ದೂರವಾಗಿರದೆ ಒಂದೇ ಮೈಲು ಅಂತರದ ಮೇಲಿರುತ್ತಿದ್ದವು. ವ್ಯಾಪಾರಿಗಳ ಮೇಲೆ ಜಕಾತಿಯ ಹಾಗೂ ಶೋಧಮಂದಿರಗಳ ಅಧಿಕಾರಿಗಳು ಹೇಳಲಸದಳವಾದ ತೊಂದರೆ ಪೀಡೆಗಳನ್ನುಂಟುಮಾಡಿದ್ದರಿಂದ ವ್ಯಾಪಾರವು ಎಲ್ಲ ಕಡೆಯಲ್ಲಿಯೂ ಕುಗ್ಗಿ ಹೋಯಿತು. ದೊಡ್ಡ ದೊಡ್ಡ ವ್ಯಾಪಾರಿಗಳು ಸಹ ಕ್ಷುಲ್ಲಕನಾದ ಜಕಾತಿ ಅಧಿಕಾರಿಯು ಕೈಕೆಳಗೆ ಶರಣಾಗತನಾಗಿ ನಡೆಯುವ ಪ್ರಸಂಗ ಬಂದದ್ದರಿಂದ ವ್ಯಾಪಾರವು ಎಂತು ಹೀನಸ್ಥಿತಿಗಿಳಿಯಿತೆಂಬುದನ್ನು ಬಣ್ಣಿಸಲಸಾಧ್ಯವು ಜಕಾತಿಗಳನ್ನೆತ್ತುವಾಗ ಅಧಿಕಾರಿಗಳು ತೋರಿಸುತ್ತಿದ್ದ ಅನ್ಯಾಯ ದುರಾಗ್ರಹಗಳನ್ನು ಮಿ. ಹೋಲ್ಟ ಮ್ಯಾಕೆಂಝಿ ಎಂಬವರು ೧೮೨೫ರಲ್ಲಿ ತಮ್ಮ ಟಿಪ್ಪಣಿಯ ಗ್ರಂಥದಲ್ಲಿ ಬರೆದಿಟ್ಟಿದ್ದಾರೆ.

ಈ ಜಕಾತಿಯನ್ನು ೧೮೩೬ರಲ್ಲಿ ಬಂಗಾಲದಲ್ಲಿಯೂ, ೧೮೩೮ರಲ್ಲಿ ಮುಂಬಯಿಯಲ್ಲಿಯೂ ೧೮೪೪ರಲ್ಲಿ ಮದ್ರಾಸದಲ್ಲಿಯೂ ೧೮೪೭ರಲ್ಲಿ ಎಲ್ಲ ಕಡೆಯಲ್ಲಿಯೂ ತೆಗೆದು ಹಾಕಿದರು.

"ಮುತಾರ್ಫಾ ಟ್ಯಾಕ್ಸ"

ಮುತಾರ್ಫಾ ಎಂಬ ಬಹು ಹೇಯವಾದ ಕರವು ಎಲ್ಲ ತರಹದ ವ್ಯವಹಾರ ಕಸಬುಗಳ ಹೊಟ್ಟೆಯ ಮೇಲೆ ಕಾಲಕೊಟ್ಟಿತು.

ನೇಕಾರರೂ, ಬಡಿಗರೂ, ಕಂಚುಗಾರರು, ತಾಂಬಟಿಗರೂ, ಅಂಗಡಿಕಾರರೂ, ಬೀದಿ ಬೀದಿಗಳಲ್ಲಿ ತಮ್ಮ ಪದಾರ್ಥಗಳನ್ನು ಮಾರುವವರೂ ಈ ಅನ್ಯಾಯದ ಕರಕ್ಕೆ ಆಹುತಿಯಾಗಿದ್ದರು. ಮದ್ರಾಸದ ಮಹಸೂಲಿನ ಮೇಲಾಧಿಕಾರಿಗಳಾಗಿದ್ದ ಮಿ. ಜೆ. ಡಬ್ಲೂ. ಬೀ. ಡಾಯರ್ಸ ಎಂಬುವರು ಈ ಬಲಾತ್ಕಾರದ ಕರದ ವಿಷಯವಾಗಿ ಹೇಳಿರುವದೇನೆಂದರೆ "ಹೊಲ ಮಾಡುವ ಒಕ್ಕಲಿಗರನ್ನು ಬಿಟ್ಟು ಬಹುಶಃ ಎಲ್ಲ ಜನರ ಮೇಲೆಯೂ ಈ ಕರವು ಹೇರಲ್ಪಟ್ಟಿರುತ್ತದೆ. ಒಬ್ಬ ಮುದಿಹೆಣ್ಣುಮಗಳು ಕಾಯಿಪಲ್ಲೆಗಳನ್ನು ಹೊತ್ತುಕೊಂಡು ಮುಂದಿನ ಬೀದಿಯಲ್ಲಿ ಮಾರಿದರೆ ಆ ಕಾಯಿಪಲ್ಲೆಗಳ ಮೇಲೆ ಕರವನ್ನು ಹೇರುತ್ತಿದ್ದರು. ಆದರೆ ಯುರೋಪದ ವ್ಯಾಪಾರಿಗಳ ಮೇಲೆ ಈ ಕರವನ್ನು ಕೂಡ್ರಿಸುತ್ತಿದ್ದಿಲ್ಲ."

ಒಟ್ಟಿನ ಮೇಲೆ ಈ ಕರದ ಮುಖ್ಯ ಉದ್ದೇಶವು ಭರತಖಂಡದ ಪ್ರಬಲವಾದ ವ್ಯಾಪಾರವನ್ನು ಬಗ್ಗುಬಡಿಯುವದಕ್ಕಾಗಿಯೇ ಇದ್ದಿತು. ಮುತಾರ್ಫಾ ಕರವನ್ನು ಅತಿ ಕ್ಷುಲ್ಲಕವಾದ ಒಡವೆಗಳ

ಮೇಲೆ ಸಹ ಕೂಡ್ರಿಸುತ್ತಿದ್ದರು. ಅತಿ ಅಗ್ಗವಾಗಿ ದೊರೆಯುವ ಪದಾರ್ಥಗಳಾದರೂ ಈ ಕರದಿಂದ ವಿಮುಕ್ತವಾಗಿರಲಿಲ್ಲ. ನೂಲಿನ ರಾಟಿಯೂ ಸಹ ಈ ದುಷ್ಕರದ ಸೆಳೆತಕ್ಕೆ ಸಿಲುಕಿದ್ದಿತು. ಅದರಂತೆ ನೇಕಾರರ ಮಗ್ಗಗಳೂ ಆ ಕರಕ್ಕೆ ತುತ್ತಾಗಿದ್ದವು.

ಗುಲಾಮಗಿರಿಯ ಕಾಲ

ಭರತಖಂಡವು ೧೯ನೆಯ ಶತಮಾನದಲ್ಲಿ ಗುಲಾಮಗಿರಿಯ ದುರ್ದೆಶೆಗೀಡಾಯಿತು. ಮೊದಮೊದಲು ಭರತಖಂಡದ ಬಗ್ಗೆ ಇಂಗ್ಲಂಡದ ಧೋರಣವು ಪ್ರತಿಬಂಧಕವಾಗಿಯೂ, ಬರಬರುತ್ತ ಬಲಾತ್ಕಾರವಾಗಿಯೂ, ತದನಂತರ ಬಹು ಕಠೋರವಾಗಿಯೂ ನಡೆದು ಭರತಖಂಡದ ಪದಾರ್ಥೋತ್ಪಾದನ ಶಕ್ತಿಗೆ ಕುಠಾರಪ್ರಾಯವಾಗಿಬಿಟ್ಟಿತು. ಬ್ರಿಟಿಷರು ಹಿಂದುಸ್ಥಾನದ ವ್ಯಾಪಾರೋದ್ಯೋಗಗಳ ವಿನಾಶಕ್ಕಾಗಿ ಮಾಡಿದ ಯೋಜನೆಗಳನ್ನು ಈ ಕೆಳಗೆ ಕೊಟ್ಟಿದೆ:

(೧) ಭರತಖಂಡದಲ್ಲಿ ಬ್ರಿಟಿಷರು ನಿರಂಕುಶವೃತ್ತಿಯಿಂದ ವ್ಯಾಪಾರ ಮಾಡಬೇಕೆಂಬ ದುರಾಗ್ರಹ.

(೨) ಇಂಗ್ಲಂಡದಲ್ಲಿ ಭರತಖಂಡದ ಪದಾರ್ಥಗಳು ಮಾರಾಟಕ್ಕೆ ಹೋದರೆ ಅವುಗಳ ಮೇಲೆ ಅನಿರ್ವಚನೀಯವಾದ ಕರಗಳನ್ನು ಹೇರಿದ್ದು.

(೩) ಭರತಖಂಡದ ಒಳನಾಡಿನ ವ್ಯಾಪಾರವನ್ನು ಬಗ್ಗು ಬಡಿಯಲಿಕ್ಕೆ ಜಕಾತಿ ಸುಂಕಗಳನ್ನು ಪ್ರಚಾರದಲ್ಲಿ ತಂದದ್ದು.

(೪) ಭರತಖಂಡದಿಂದ ಕಚ್ಚಾ ಮಾಲನ್ನು ಪರಸ್ಥಳಕ್ಕೆ ಸ್ವತಂತ್ರವಾಗಿ ಕಳುಹಿಸಲಿಕ್ಕೆ ಪ್ರೋತ್ಸಾಹ.

(೫) ಭರತಖಂಡದ ಕಲಾಕೌಶಲ್ಯಗಾರರನ್ನು ನಾನಾವಿಧವಾದ ಯಾತನೆಗಳಿಗೆ ಗುರಿಮಾಡಿದ್ದು.

(೬) ಕಂಪನಿಯ ಠೇವುಗಳನ್ನು ಕ್ರಮವಾಗಿ ವ್ಯವಸ್ಥೆಗೊಳಿಸಿದ್ದು,

(೭) ಭರತಖಂಡದ ಕಲಾಕೌಶಲ್ಯಗಾರರಿಂದ ಅವರವರ ವ್ಯಾಪಾರಿ ಗುಟ್ಟುಗಳನ್ನು ಹೊರಪಡಿಸಿದ್ದು

(೮) ಭರತಖಂಡದಲ್ಲಿ ಒತ್ತಾಯದ ಮೂಲಕವಾಗಿಯೂ ಇಂಗ್ಲಂಡದಲ್ಲಿ ಬಲಾತ್ಕಾರವಾದ ಕರಗಳ ಮೂಲಕವಾಗಿಯೂ ಈ ದೇಶದಲ್ಲಿ ಹುಟ್ಟುವ ಪದಾರ್ಥಗಳಿಗೆ ಪ್ರೋತ್ಸಾಹವಿಲ್ಲದಂತೆ ಮಾಡಿದ್ದು.

೧೮೩೫ರ ಸುಮಾರಿಗೆ ಭರತಖಂಡದಲ್ಲಿ ೧ ಲಕ್ಷದವರೆಗೆ ನೇಯುವ ಯಂತ್ರಗಳಾದವು. ಇದಕ್ಕಿಂತ ೨೦ ವರ್ಷಗಳ ಪೂರ್ವದಲ್ಲಿ ೨೦೦೦ ನೇಯುವ ಯಂತ್ರಗಳಿಗಿಂತಲೂ ಹೆಚ್ಚಿಗಿದ್ದಿಲ್ಲ. ೧೮೧೨–೩೩ರಲ್ಲಿ ಗಿರಣಿಯ ನೂಲು ಹಾಗು ಬಟ್ಟೆಗಳ ಕಿಮ್ಮತ್ತು ೧೦೦ಕ್ಕೆ ೨೫ರಿಂದ ೮೦ರ ವರೆಗೆ ಇಳಿಯಿತೆಂದು ಮಿ. ಬೇನ್ಸರವರು ಹೇಳುತ್ತಾರೆ. ಭರತಖಂಡದ ಪೇಟೆಗಳು ಗಿರಿಣಿಯ ನೂಲ ಬಟ್ಟೆಗಳಿಂದ ತುಂಬಿ ತುಳುಕ ಹತ್ತಿದವು. ಇಂಗ್ಲಿಷ ನೂಲಿನ ಕಿಮ್ಮತ್ತು. ಹಿಂದೂಸ್ಥಾನದ ನೂಲಿನ ಕಿಮ್ಮತ್ತಿಗಿಂತಲೂ ಅಗ್ಗವಾಗಿದ್ದಿತೆಂಬುದನ್ನು ಕೆಳಗೆ ಕಾಣಿಸಿದೆ.

ಇಂಗ್ಲಿಷ ನೂಲಿನ ಕಿಮ್ಮತ್ತು   ಹಿಂದುಸ್ಥಾನದ ನೂಲಿನ ಕಿಮ್ಮತ್ತು

ನೂಲಿನ ನಂ	(೧ ಪೌಂಡು) ಶಿ. ಪೇ.	(೧ ಪೌಂಡು) ಶಿ. ಪೇ.
೪೦	೧–೨॥	೩–೬
೬೦	೧–೧೦॥	೬–೦
೮೦	೨–೬॥।	೯–೩
೧೦೦	೩–೪।	೧೨–೪
೧೨೦	೪–೦	೧೬–೫
೧೫೦	೭–೬	೨೫–೬
೨೦೦	೧೪–೬	೪೫–೧

ಹಿಂದುಸ್ಥಾನದಲ್ಲಿ ಬ್ರಿಟಿಷ ಬಟ್ಟೆಗಳ ಅಗ್ಗವಾದ ಮಾರಾಟ

೧೮೭೯ರಲ್ಲಿ ೪೦–೪೦॥ ಲಕ್ಷ ರೂ. ಗಳ ಪರದೇಶಿ ಬಟ್ಟೆಯು ಭರತ ಖಂಡದಲ್ಲಿ ಮಾರಾಟವಾಯಿತು. ಆದರೆ ಮುಂದೆ ೫೦ ವರ್ಷಗಳ ಅವಧಿಯಲ್ಲಿ ಇದರ ೧೦ ಪಟ್ಟು ಹಣವನ್ನು ಪರಸ್ಥಳೀಯರು ಒಯ್ದರು. (ಬ್ರಿಟಿಷ್ ವ್ಯಾಪಾರಿಗಳಿಗೆ ತಮ್ಮ ಪದಾರ್ಥಗಳನ್ನು ಮಾರಾಟಮಾಡಲಿಕ್ಕೆ ಹಿಂದುಸ್ಥಾನದ ಪೇಟೆಯು ಮುಕ್ತವಾಗಿದ್ದಿತು. ಭರತಖಂಡದ ಪೇಟೆಯ ಬಗ್ಗೆ ಸವಿಸ್ತಾರವಾದ ಸಂಗತಿಗಳನ್ನೆಲ್ಲ ಬ್ರಿಟಿಷರು ಚೆನ್ನಾಗಿ ಪರಿಶೀಲಿಸಿದ್ದರು. ಭರತಖಂಡದ ಕಲಾಕೌಶಲ್ಯಗಾರರ ಗುಟ್ಟುಗಳೆಲ್ಲ ಅವರಿಗೆ ಗೊತ್ತಾಗಿದ್ದವು. ಆ ಕಲೆಯನ್ನು ತಾವು ಅಪಹರಿಸಬೇಕೆಂಬ ಉತ್ಕಟೇಚ್ಛೆಯ ಅವರಲ್ಲುತ್ಪನ್ನವಾಯಿತು. ಇಲ್ಲಿಯ ಜನರ ಅಭಿರುಚಿಗೆ ಅನುಕೂಲವಾಗುವಂತೆ ಲ್ಯಾಂಕ್ಯಾಶಾಯರ ಗಿರಣಿಗಳಲ್ಲಿ ತಕ್ಕ ಏರ್ಪಾಟುಗಳನ್ನು ಮಾಡಿದರು. ಅವುಗಳಿಗೆ ಹಿಂದೂಸ್ಥಾನದ ಸರಕಾರಿ ಅಧಿಕಾರಿಗಳು ಸಂಪೂರ್ಣವಾದ ಬೆಂಬಲವನ್ನು ಕೊಡುತ್ತಿದ್ದರು.

೧೮೫೧ರಲ್ಲಿ ಅಂತರರಾಷ್ಟ್ರಿಯ ಪ್ರದರ್ಶನದ ಕಾಲಕ್ಕೆ ಡಾ. ಜಾನ ಪೋರ್ಬ್ಸ ರಾಯಲ್ ಎಂಬವರಿಗೆ ಹಿಂದೂಸ್ಥಾನದಲ್ಲಿ ಹುಟ್ಟುವ ವಸ್ತುಗಳ ಹಾಗೂ ಬಟ್ಟೆಗಳ ಮಾದರಿಗಳನ್ನೆಲ್ಲ ಕೂಡಿಸಿ ಅವುಗಳನ್ನೆಲ್ಲ ಹಿಂದುಸ್ಥಾನದ ವೆಚ್ಚದಿಂದಲೇ ಲಂಡನ್ನದ ವಸ್ತು ಸಂಗ್ರಹಾಲಯದಲ್ಲಿರಿಸಬೇಕೆಂದು ಆಜ್ಞಾಪಿಸಿದ್ದರು. ಮಿ. ಜೆ. ಬಿ. ಕೀಥ್ ಎಂಬ ಇಂಗ್ಲೀಷ್ ಅಧಿಕಾರಿಯು ಏಯಾನಿ ಯಾಕ್ ಪತ್ರಿಕೆಯಲ್ಲಿ ಈ ಪ್ರಕಾರ ಪ್ರಕಟಿಸಿದ್ದಾರೆ.

ಮಿ. ಪೋರ್ಬ್ಸ ವಾಟ್ಸನ್ನನ ನಿರೀಕ್ಷಣೆ

ಬ್ರಿಟಿಷ ಪದಾರ್ಥೋರ್ತ್ಪಾದಕರು ತಮಗೆ ಮಿತಿಮೀರಿ ಲಾಭ ಬರಲೆಂದು ಭರತಖಂಡದ ಉಡುಪು ತೊಡಪುಗಳಿಗೆ ಅನುಕೂಲವಾದ ಬಣ್ಣ, ಅಂಚು, ಅಚ್ಚು, ಮೊದಲಾದ ಅಂದಚಂದಗಳಿಂದ ತಮ್ಮ ಬಟ್ಟೆಗಳನ್ನು ಮೋಹಕವಾಗಿ ಕಾಣುವಂತೆ ಮಾಡುತ್ತಿದ್ದರು. ಹಿಂದುಸ್ಥಾನದಿಂದ ಸುಮಾರು ೭೦೦ ಮಾದರಿಗಳನ್ನು ಸಂಗ್ರಹಿಸಿಕೊಂಡು ಅವುಗಳನ್ನು ಇಂಗ್ಲಂಡದ ವಸ್ತು ಸಂಗ್ರಹಾಲಯದಲ್ಲಿಟ್ಟು

ಅವುಗಳನ್ನೇ ಅನುಕರಣ ಮಾಡುವಂಥ ಬಟ್ಟೆಗಳನ್ನು ಬ್ರಿಟಿಷರು ಹುಟ್ಟಿಸಲಾರಂಭಿಸಿದರು. ಧೋತರ, ರುಮಾಲ, ಸೀರೆ, ಮಲಮಲು, ಚಾದರ, ಚೀಟಿನ ಬಟ್ಟೆ, ನೂಲು ರೇಶಿಮೆಗಳ ಮಿಶ್ರನೇಗೆಯ ಬಟ್ಟೆ, ಮುಂತಾದ ಭರತಖಂಡದ ಬಟ್ಟೆಗಳನ್ನು ಅಚ್ಚಳಿಯದೆ ಹೋಲುವಂಥ ಬಟ್ಟೆಗಳು ಬ್ರಿಟನ್ನದಲ್ಲಿ ಉತ್ಪನ್ನವಾದವು. ಭಾರ್‌ತೀಯರ ಅಭಿರುಚಿ ಬೇಡಿಕೆಗಳಿಗನುಕೂಲವಾಗಿಯೇ ಬ್ರಿಟಿಷ್ ಬಟ್ಟೆಗಳು ಕಂಗೊಳಿಸುತ್ತಿದ್ದವು. ಇದಕ್ಕೆ ಅನುಕೂಲವಾದ ಎಲ್ಲ ಉಪಾಯಗಳನ್ನು ಅವರು ಅರಿತವರಾಗಿದ್ದರು. ಹಿಂದುಸ್ಥಾನಕ್ಕೆ ಎಂಥ ಬಟ್ಟೆಗಳನ್ನು ಕಳುಹಿಸಿದರೆ ಮಾರಾಟವಾಗಿ ಲಾಭ ಹೆಚ್ಚಿಗೆ ಬಂದೀತೆಂಬುದು ಬ್ರಿಟಿಷರಿಗೆ ತುಂಬಾ ಮನವರಿಕೆಯಾಗಿದ್ದಿತು. ಸೀರೆಗಳಿಗೆ ಅಂದಚಂದವಾದ ಹೂಗಳನ್ನು ಕೆಚ್ಚುತ್ತಿದ್ದರು. ರುಮಲ, ಧೋತರ ದಡಿ, ಮಲಮಲು ಮುಂತಾದವುಗಳಿಗೆ ಸೂಕ್ಷ್ಮ ಕಲಾಕೌಶಲ್ಯ, ತಿಳಿಬಣ್ಣದ ಹೊಳಪು ಮುಂತಾದವುಗಳನ್ನು ಸೊಗಸಾಗಿ ಮಾಡಿದ್ದರು.

ಬ್ರಿಟಿಷರು ಆಯಾಯ ಬಟ್ಟೆಗಳಿಗೆ ಚಿತ್ರವಿಚಿತ್ರವಾದ ಭರತಖಂಡದ ಹೆಸರುಗಳನ್ನೇ ಕೊಟ್ಟಿದ್ದರು. ಆದರೆ ಬ್ರಿಟಿಷರಿಗೆ ಆ ಹೆಸರುಗಳ ಅರ್ಥವಾಗಲಿ ಉಚ್ಚಾರವಾಗಲೀ ಗೊತ್ತೇ ಇದ್ದಿಲ್ಲ. ಬ್ರಿಟಿಷ್ ಪದಾರ್ಥೋತ್ಪಾದಕರು ಕೇವಲ ಧನವಂತರಾದ ೧-೨ ಕೋಟಿ ಭಾರತೀಯ ಗಿರಾಕಿಗಳ ಬೇಡಿಕೆಯನ್ನಷ್ಟೇ ತೃಪ್ತಿಗೊಳಿಸದೆ ೧೦-೧೨ ಕೋಟಿ ಬಡಜನಗಳ ಸಡಗರ ಡೌಲುಗಳಿಗೆ ತಕ್ಕಂತೆ ಬಟ್ಟೆಯನ್ನು ಸಿದ್ಧಗೊಳಿಸಿ ಅವರನ್ನೂ ಗಿರಾಕಿಯನ್ನಾಗಿ ಮಾಡಿಕೊಂಡರು. ಸಾದಾತರದ ಅಗ್ಗವಾದ ಬಟ್ಟೆಗಳೇ ಹೆಚ್ಚಾಗಿ ಮಾರಾಟವಾಗುತ್ತಿದ್ದುದರಿಂದ ಬ್ರಿಟಿಷರು ಬಟ್ಟೆಗಳನ್ನು ವಿಶೇಷವಾಗಿ ಹುಟ್ಟಿಸುತ್ತಿದ್ದರು."

ಇದರಿಂದ ಭರತಖಂಡದಲ್ಲಿ ನೂಲುವ ಮತ್ತು ನೇಯುವ ಉದ್ಯೋಗಗಳು ಹಾಳಾಗಿ ಕೋಟ್ಯಾವಧಿ ಭಾರತೀಯರು ಕೂಳಿಲ್ಲದೆ ಸಾಯುವ ಪ್ರಸಂಗ ಬಂದಿತು. ಸಹಸ್ರಾವಧಿ ನೇಕಾರರು ಸಾಹುಕಾರರ ಹಾಗೂ ಗಿರಣಿ ಯಜಮಾನರ ಕೈಕೆಳಗೆ ದಾಸರಾಗಿ ದುಡಿಯುವ ಪ್ರಸಂಗಬಂದಿತು. ಸುಮಾರು ೩೦ ಕೋಟಿ ಜನಸಂಖ್ಯೆಯುಳ್ಳ ಭರತಖಂಡದ ಎಲ್ಲ ಜನರಿಗೂ ಉಡುತೊಡುವ ಬಟ್ಟೆಗಳನ್ನು ಸಿದ್ಧಗೊಳಿಸಬೇಕಾದರೆ ಜಗತ್ತಿನಲ್ಲಿ ದೊಡ್ಡ ಕಾರ್ಯಾಲಯವು ಅವಶ್ಯವಾದುದು. ಅಂದರೆ ಭರತಖಂಡಕ್ಕೆ ಬಹು ದೊಡ್ಡ ಕಾರ್ಯಾಲಯವು ಅವಶ್ಯವಾದುದು. ಅಂದರೆ ಭರತಖಂಡವು ಬಹು ದೊಡ್ಡ ಗಿರಾಕಿಯಾಗಬೇಕೆಂಬುದೇ ಇದರ ಮರ್ಮವು. ಇದನ್ನು ಸಾಧಿಸಲಿಕ್ಕೆ ಬ್ರಿಟಿಷರು ಲ್ಯಾಂಕ್ಯಾಶಾಯರದ ನೇಗೆಯ ಯಂತ್ರಗಳನ್ನು ಇಮ್ಮಡಿಯಾಗಿ ಬೆಳೆಸಿದರು.

ಭರತಖಂಡವು ಇಂಗ್ಲಂಡದ ಮೇಲಾದ ಗಿರಾಕಿಯಾಗಹತ್ತಲು, ಅದರ ಕೈಕಸಬುಗಳೂ ಕಲಾಕೌಶಲ್ಯಗಳೂ ಕ್ರಮೇಣ ಕಳಗುಂದುತ್ತ ಹೋದವು. ಭಾರತೀಯರು ವಿಧೇಶಿ ವ್ಯಾಪಾರಿಗಳ ಬಲೆಗೆ ಸಿಕ್ಕಿ ಪೇಚಾಡಲಾರಂಭಿಸಿದರು; ೧೮೬೩ರಲ್ಲಿ ಭರತಖಂಡವು ಇನ್ನೂ ಇಂಗ್ಲಂಡದವರು ನಿರೀಕ್ಷಿಸಿದಷ್ಟು ಪದಾರ್ಥಗಳನ್ನೇನೂ ಕೊಂಡಿದ್ದಿಲ್ಲ. ನೂಲುವ ಉದ್ಯೋಗವು ಸಂಪೂರ್ಣವಾಗಿ ನಾಶ ಹೊಂದಿದ್ದಿಲ್ಲ. ಪರದೇಶಿ ಟ್ವಸ್ಟು ಸಹ ವಿಶೇಷವಾಗಿ ಮಾರಾಟವಾಗುತ್ತಿದ್ದಿಲ್ಲ. ಚಾಂದೇರಿ ಅರಣಿ ಎಂಬ ಸ್ಥಳಗಳಲ್ಲಿ ಹುಟ್ಟುತ್ತಿದ್ದ ಮಲಮಲು ನಯನಮನೋಹರವಾಗಿ ಶೋಭಿಸುತ್ತಿದ್ದಿತು. ಸರ್ವೋತ್ಕೃಷ್ಟವಾದ ಬಟ್ಟೆಗಳು ನೂಲೂ ಇನ್ನೂ ಆಯಾಮ ಪೇಟೆಗಳಲ್ಲಿ ಸೊಬಗಿನಿಂದ ನಲಿದಾಡುತ್ತಿದ್ದವು.

ಕ್ಯಾಪ್ಟನ್ ಮೆಡೋಜ ಟೇಲರ ಎಂಬವನು ಅಭಿಪ್ರಾಯಪಡುವದೇನೆಂದರೆ "ಹೈದರಾಬಾದದ ಸಮೀಪದಲ್ಲಿರುವ ನಾರಾಯಣಪೇಟೆ ಮತ್ತು ನಾಂದೇರ ಎಂಬ ಸ್ಥಳಗಳಲ್ಲಿಯ ಜನರು ಡಾಕಾದಷ್ಟೇ ಸುರಚಿರವಾದ ನೂಲನ್ನು ತೆಗೆಯುತ್ತಿದ್ದರು. ಭರತಖಂಡದ ಜರತಾರಿ ಹಾಗೂ ಕಸೂತಿಯ ಬಟ್ಟೆಗಳನ್ನು ಯಂತ್ರಾಲಯಗಳಲ್ಲಿ ಹುಟ್ಟಿಸುವದು ಶಕ್ಯವಿಲ್ಲ. ಬಹು ಅಲಂಕಾರಯುಕ್ತವಾದ ಸಿರಿವಂತಿಗೆಯ ಬಟ್ಟೆಗಳು ಮನುಷ್ಯನ ಕೈ ಬೆರಳಿನ ಉಗುರುಗಳಿಂದ ನೇಯಲ್ಪಡುತ್ತಿದ್ದವು. ಅಲ್ಲಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಮುಂಗಡ ಹಣಕೊಟ್ಟು ನೇಕಾರರಿಂದ ಅವುಗಳನ್ನು ನೇಯಿಸಿಕೊಳ್ಳುತ್ತಿದ್ದರು. ಭರತಖಂಡದ ಜನಸಾಮಾನ್ಯರಿಗೆ ಬೇಕಾಗುವ ಒರಟು ಬಟ್ಟೆಯು ಕೈನೂಲು ಕೈಮಗ್ಗಗಳಿಂದ ಮಾಡಲ್ಪಟ್ಟು ಪೇಟೆಯಲ್ಲಿ ಹೆಚ್ಚಾಗಿ ಮಾರಾಟವಾಗುತ್ತಿದ್ದಿತು. ಪರದೇಶಿ ಬಟ್ಟೆಗಳಿಗಿಂತ ಕೈಮಗ್ಗದ ಬಟ್ಟೆಗಳು ಹೆಚ್ಚು ತಾಳಿಕೆಯುಳ್ಳವುಗಳಾಗಿದ್ದರಿಂದ ಅವು ತುಟ್ಟಿಯಾಗಿದ್ದರೂ ಜನರು ಅವುಗಳನ್ನೇ ಕೊಳ್ಳುತ್ತಿದ್ದರು."

ಮಧ್ಯಪ್ರಾಂತ, ಬಂಗಾಲ, ಮುಂಬಯಿ, ಮದ್ರಾಸ ಪ್ರಾಂತಗಳಲ್ಲಿ ಕೈರಾಟಿ ಕೈಮಗ್ಗಗಳ ಉದ್ಯೋಗಗಳು ಇನ್ನೂ ಸೊಬಗಿನಿಂದಲೇ ಸಾಗಿದ್ದವು.

ಭರತಖಂಡದಿಂದ ಪರಸ್ಥಳಕ್ಕೆ ಹೋಗುವ ಹತ್ತಿಯು

ಮಗ್ಗಗಳು ಮುಗ್ಗಿಹೋದ ಹಾಗೆಲ್ಲ ಕೈರಾಟಿಗಳು ಕುಸಿಬೀಳಲಾರಂಭಿಸಿದವು. ಒಕ್ಕಲಿಗರು ತಾವು ಬೆಳೆದ ಅರಳೆಯನ್ನು ನೂಲದೆ ಮಾರಾಟದ ಒಡವೆಯಂತೆ ಉಪಯೋಗಿಸಹತ್ತಿದರು. ಭಾರತೀಯರಿಗೆ ಅರಳೆಯ ಮಹತ್ವವು ತಿಳಿಯದೇ ಹೋಯಿತು. ೧೮೬೬ರಿಂದ ಇಲ್ಲಿಯವರೆಗೆ ವಿಚಾರಿಸಿದರೆ ಹತ್ತಿಯನ್ನು ಬಿತ್ತುವದು ೩ ಪಟ್ಟು ಹೆಚ್ಚಾಗಿದೆ. ದುಡ್ಡಿನಾಶೆಗಾಗಿ ಉಳಿದ ಪೈರುಗಳನ್ನು ಬಿಟ್ಟು ಜನರು ಹತ್ತಿಯನ್ನೇ ಹೆಚ್ಚಾಗಿ ಬೆಳೆದುಕೊಳ್ಳಲಾರಂಭಿಸಿದರು. ಹತ್ತಿಯು ಬೆಳೆಯಲಾರದಂಥ ಭೂಮಿಯಲ್ಲಿ ಸಹ ಅದನ್ನು ಬೆಳೆದುಕೊಳ್ಳುತ್ತಿದ್ದರು.

೧೯೦೯ನೆಯ ಮಧ್ಯಪ್ರಾಂತದ ಗ್ಯಾಝೆಟೀಯರದಲ್ಲಿ ಹೇಳಿರುವದೇನೆಂದರೆ "ಹತ್ತಿಯನ್ನು ಬೆಳೆಯುವ ವರ್ಧಾ ಮತ್ತು ವರ್ಹಾಡ ಜಿಲ್ಲೆಗಳಲ್ಲಿ ಬೇರೆ ಧಾನ್ಯಗಳನ್ನುಬಿಟ್ಟು ಹತ್ತಿಯನ್ನೇ ಬೆಳೆಯಹತ್ತಿದರು. ಡಾಕಾದಲ್ಲಿಯ ಹುಲ್ಲುಗಾವಲುಗಳು ಅಳಿದು ಹೋಗಿ ಹತ್ತಿಗೆ ಇಂಬುಗೊಟ್ಟವು. ಅರಳಿಯ ಧಾರಣಿಯು ಏರಿದ್ಧರಿಂದ ದುಡ್ಡಿನಾಶೆಗಾಗಿ ಒಕ್ಕಲಿಗರು ಹತ್ತಿಯನ್ನು ಬಿತ್ತಿ ಹಾಳಾಗಿ ಹೋದರು. ಸರಕಾರದವರಾದರೋ ಒಕ್ಕಲಿಗರಿಗೆ ಹತ್ತಿಯನ್ನು ಬಿತ್ತುವದಕ್ಕೆ ಬಹಳೇ ಪ್ರೋತ್ಸಾಹಿಸುತ್ತಿದ್ದರು. ಅಮೇರಿಕನ್ ಯುದ್ಧದ ಕಾಲದಲ್ಲಿ ಹಿಂದೂಸ್ಥಾನ ಸರಕಾರವು ಲ್ಯಾಂಕ್ಯಾಶಾರದ ಕಾರ್ಯಾಲಯಗಳ ಬೇಡಿಕೆಯನ್ನು ಸಫಲಗೊಳಿಸುವದಕ್ಕಾಗಿ ಬಹು ವಿಶಾಲವಾದ ಕ್ಷೇತ್ರದಲ್ಲಿ ಹತ್ತಿಯನ್ನು ಬೆಳೆಯಲಿಕ್ಕೆ ಅನುಕೂಲಮಾಡಿಕೊಟ್ಟಿತು."

ಸ್ವದೇಶಿ ಕೈ ಕಸಬುಗಳು ಪೂರಾ ನಿಂತುಬಿಟ್ಟವು. ಒಕ್ಕಲಿಗರು ಬಟ್ಟೆಗಳ ಗುಣಧರ್ಮಗಳ ಕಡೆಗೆ ಲಕ್ಷಗೊಡದೆ ಅಂದಚೆಂದ ಅಗ್ಗತನಗಳಿಗಿಂಬುಗೊಟ್ಟು ವಿದೇಶಿ ಬಟ್ಟೆಗಳಣನ್ನು ಕೊಳ್ಳುತ್ತ ತಮ್ಮ ಕಾಲಮೇಲೆ ತಾವೇ ಕಲ್ಲು ಹಾಕಿಕೊಂಡರು. ಇಂಗ್ಲಂಡವು ಹಿಂದುಸ್ಥಾನದಿಂದೊಯ್ದ ಅರಳೆಯನ್ನು ಬಟ್ಟೆಮಾಡಿ ಹಿಂದುಸ್ಥಾನಕ್ಕೆ ಮರಳಿ ಮಾರಾಟಕ್ಕಾಗಿ ಕಳಿಸಿಕೊಡುತ್ತಿದ್ದಿತು. ಸ್ವದೇಶಿ ಗಿರಣಿಗಳು ಸಹ ಕೆಲಮಟ್ಟಿಗೆ ಅರಳಿಯನ್ನು ಉಪಯೋಗಿಸುತ್ತಿದ್ದವು.

ಸಿಂಧ, ಪಂಜಾಬ, ಪ್ರಾಂತಗಳಲ್ಲಿ ಲ್ಯಾಂಕ್ಯಾಶಯರದ ಕಾರ್ಯಾಲಯಗಳಿಗನುಕೂಲವಾಗುವಂಥ ಹತ್ತಿಯನ್ನು ಬೆಳೆಯಲಿಕ್ಕೆ ಉತ್ತೇಜನವು ಕೊಡಲ್ಪಟ್ಟಿತು. ಅದೇ ಉದ್ದೇಶದಿಂದ ಮದ್ರಾಸದಲ್ಲಿ ಈಗಲೂ ವಿಶಾಲವಾದ ಕ್ಷೇತ್ರವನ್ನು ಸರಕಾರದವರು ಹತ್ತಿಯ ಬೆಳೆಗಾಗಿ ಉಪಯೋಗಿಸುತ್ತಿದ್ದಾರೆ.

ರೇಲ್ವೆಗಳ ಆಘಾತ

ದೇಶದಲ್ಲಿ ರೇಲ್ವೆಗಳನ್ನು ಹಬ್ಬಿಸಿ ಸರಕಾರವು ಹಿಂದುಸ್ಥಾನವನ್ನು ಪರದೇಶಿ ಬಟ್ಟೆಯ ದೊಡ್ಡ ಗಿರಕಿಯನ್ನಾಗಿ ಮಾಡಿತು.

ಇಂಗ್ಲಂಡದ ಬಟ್ಟೆಗಳನ್ನು ಹಿಂದುಸ್ಥಾನದಲ್ಲಿ ಪ್ರಸಾರ ಮಾಡುವದಕ್ಕೂ ಹಿಂದುಸ್ಥಾನದ ಅರಳೆಯನ್ನು ಇಂಗ್ಲಂಡಕ್ಕೆ ಕಳಿಸುವದಕ್ಕೂ ಉಗಿಬಂಡಿಗಳನ್ನು ಈ ದೇಶದಲ್ಲಿ ಸ್ಥಾಪಿಸಿದ್ದರ ಮುಖ್ಯ ಉದ್ಧೇಶವಾಗಿದೆಯೆಂಬುದನ್ನು ಲಾರ್ಡ ಡಾಲಹೌಸಿಯು ವ್ಯಕ್ತಗೊಳಿಸಿದ್ದಾನೆ. ಅರಳಿಯ ಧಾರಣಿಯು ಹೆಚ್ಚಾಗಿದ್ದುದರಿಂದ ಭಾರತೀಯರು ಇಂಗ್ಲಂಡಕ್ಕೆ ಹೆಚ್ಚೆಚ್ಚು ಅರಳೆಯನ್ನು ಕಳುಹಿಸಹತ್ತಿದರು. ೧೮೪೩ರಲ್ಲಿ ೧ ಪೌಂಡು ಅರಳೆಯ ಬೆಲೆಯು ೧॥ ಪೇನಸು ಇದ್ದದ್ದು ೧೮೫೧ರಲ್ಲಿ ೨ ಪೇ ಅಯಿತು. ಮುಂದೆ ೧೨ ವರ್ಷಗಳಲ್ಲಿ ೩ಪೇ ಆಯಿತು. ರೇಲ್ವೆಗಳು ಸ್ವದೇಶಿ ಪೇಟೆಗಳನ್ನೆಲ್ಲ ಆಕ್ರಮಿಸಿಕೊಳ್ಳಲಿಕ್ಕೆ ಬಹು ಸಹಾಯಕಾರಿಗಳಾದವು.

ರೇಲ್ವೆಗಳುಂಟಾಗಿ ನಮ್ಮ ವ್ಯಾಪಾರಕ್ಕೆ ಬಹಳೇ ಅನುಕೂಲಮಾಡಿದವೆಂಬುವದು ಕೇವಲ ಮಿಥ್ಯಾವಾದವು. ಮಿ. ಎಚ್. ಕೆ. ಕಾರ್ನವಾಲ ಎಂಬವರು ರೇಲ್ವೆಗಳ ಹಾವಳಿಯಿಂದ ಹಿಂದೂಸ್ಥಾನಕ್ಕೊದಗಿದ ಅಪಾರ ನಷ್ಟವನ್ನು ಈ ಪ್ರಕಾರವಾಗಿ ಬರೆದಿಟ್ಟಿದ್ದಾರೆ. "ಇಂಗ್ಲಂಡದಲ್ಲಿ ಔದ್ಯೋಗಿಕ ಕ್ರಾಂತಿಯುಂಟಾಗಲೂ ಶ್ರೀಮಂತ ಕೂಲಿಕಾರರಲ್ಲಿ ಹೊಸ ಚೈತನ್ಯವುಂಟಾಯಿತು. ಶ್ರೀಮಂತರು ದೊಡ್ಡ ದೊಡ್ಡ ಶೇರುಗಳನ್ನು ಹಾತಿ ಪಾಲಿನಿಂದ ಅರಳೆಯ ವ್ಯಾಪಾರವನ್ನು ಮಾಡಲಾರಂಭಿಸಿದರು. ಕೂಲಿಕಾರರ ಕಾರ್ಯಕ್ಷೇತ್ರವಾದರೂ ಮೊದಲಿಗಿಂತ ಅತ್ಯಧಿಕವಾಯಿತು. ಆದರೆ ಹಿಂದುಸ್ಥಾನದಲ್ಲಿ ಮೇಲ್ತರದ ಜನರ ದೊಡ್ಡಸ್ತಿಕೆಯು ಲೋಪವಾಯಿತು. ಒಕ್ಕಲಿಗರು ಅರಳೆಯನ್ನು ಪರಸ್ಥಳಕ್ಕೆ ಕಳುಹಿಸಿ ಜೊತೆಯ ಉದ್ಯೋಗವಿಲ್ಲದೆ ನಿರಾಶ್ರಿತರಾಗುವ ಪ್ರಸಂಗ ಬಂದಿತು. ಬಡರೈತರ ಮೇಲೆ ಮಿತಿಮೀರಿ ಕರಹೇರಿ ಆ ಮೂಲಕ ಬಂದ ೩ ಕೋಟಿ ರೂಪಾಯಿಗಳನ್ನು ತಾರಾಯಂತ್ರ ಮುಂತಾದ ಸುದ್ದಿಯ ಸೌಕರ್ಯಗಳ ವೆಚ್ಚಕ್ಕಾಗಿ ಉಪಯೋಗಿಸಹತ್ತಿದರು. ಈ ಮೇರೆಗೆ ಬಡರೈತರಿಗೆ ಒಂದರಹಿಂದೊಂದು ಸಂಕಟಗಳು ಬೆನ್ನು ಹತ್ತಿದವೇ ಹೊರತು ಅವುಗಳ ನಿವಾರಣೋಪಾಯವನ್ನು ಯಾರೂ ಮಾಡಲಿಲ್ಲ."

ಅರಳೆಯು ಮತ್ತು ಆಹಾರ ಪದಾರ್ಥಗಳು

ಎಷ್ಟೋ ವರ್ಷಗಳ ವರೆಗೆ ಅರಳೆಯಿಂದ ಹೆಚ್ಚೆಚ್ಚು ದುಡ್ಡು ಪ್ರಾಪ್ತವಾಯಿತೆಂಬುದು ನಿಜವಾದರೂ ಅದಕ್ಕೆ ಅನುಗುಣವಾಗಿ ಕಾಳುಕಡಿ ಮುಂತಾದ ಆಹಾರದ್ರವ್ಯಗಳು ತುಟ್ಟಿಯಾಗಿ ಜನಗಳನ್ನುಕಷ್ಟಕ್ಕೀಡು ಮಾಡಿದವೆಂಬುದನ್ನು ಮರೆಯಲಾಗದು. ಧಾನ್ಯ ಮತ್ತು ಹತ್ತಿಯ ಬೆಳೆಯು ೧೮೯೦–೧೯೨೪ರವರೆಗೆ ಯಾವ ಪ್ರಮಾಣದಲ್ಲಿದ್ದಿತೆಂಬುದನ್ನು ಕೆಳಗೆ ಕೊಟ್ಟಿದೆ :

ವರ್ಷ	ಹತ್ತಿಯಬೆಳೆ ಎಕರೆ	ಧಾನ್ಯದ ಬೆಳೆ ಎಕರೆ
೧೮೯೨-೯೩	೮೯.೪೫ ಲಕ್ಷ	೧೮೬೭.೬೧ ಲಕ್ಷ
೧೯೨೦-೨೧	೧೫೩.೧೮ ಲಕ್ಷ	೧೯೯೬.೬೭ ಲಕ್ಷ
೧೯೨೪-೨೫	೨೬೪.೮ ಲಕ್ಷ	೨೧೦೦.೦೦ ಲಕ್ಷ

ಹತ್ತಿಯ ಬೆಳೆಗೆ ಕ್ರಮೇಣ ಹೆಚ್ಚೆಚ್ಚು ಕ್ಷೇತ್ರವನ್ನು ಸಾಗುವಳಿ ಮಾಡಿದ್ದರಿಂದ ೧೮೯೨ರಲ್ಲಿ ಜನರು ಕೂಳಿಲ್ಲದ ಸಾಯುವ ಪ್ರಸಂಗ ಬಂದಿತು. ಈಗಲೂ ಸಹ ಉಪವಾಸ ವನವಾಸಗಳೇ ಅರಳೆ ಜೂಟ ಮೊದಲಾದ ವ್ಯವಹಾರಿಕ ಪದಾರ್ಥಗಳಿಂದ ಜನರ ಕ್ಷುಧೆಯೇನೂ ಶಾಂತವಾಗಲರಿಯದು.

ಹಳ್ಳಿಯ ಆರ್ಥಿಕ ಸ್ಥಿತಿಯ ವಿನಾಶ

ಹಳ್ಳಿಯ ಆರ್ಥಿಕ ಸ್ಥಿತಿಯು ಹಾಳಾಗಿ ಅದು ಪಟ್ಟಣವನ್ನು ಸೇರಿತು. ಯಾವದಾದರೊಂದು ಪಟ್ಟಣವು ವ್ಯಾಪಾರದಲ್ಲಿ ಮುಂದುವರಿಯಿತೆಂದು ತಿಳಿದರೆ ಅದು ನೂರಾರು ಹಳ್ಳಿಗಳನ್ನು ನುಂಗಿತೆಂದೇ ಭಾವಿಸಬೇಕು. ಬ್ರಿಟಿಷರ ಆಡಳಿತೆಯು ಒಳ್ಳೆ ಪ್ರಬಲಾವಸ್ಥೆಗೆ ಬಂದಾಗ ನೂಲುವ ಉದ್ಯೋಗವು ಹಾಳಾಗಿ ಹೋಯಿತು. ನೂಲುವ ಕಲೆಯು ಪರದೇಶದವರ ದುರಾಶೆ ಅನ್ಯಾಯಗಳ ಬಲೆಗೆ ಸಿಲ್ಕಿ ಕಳವಳಪಟ್ಟಿತು. ಕೈರಾಟಿಗಳು ನಿರುಪಯೋಗವುಳ್ಳವುಗಳಾಗಿ ಉರುವಲಕ್ಕಾಗಿ ಉಪಯೋಗಿಸಲ್ಪಡಹತ್ತಿದವು. ಬ್ರಿಟಿಷ್ ಬಟ್ಟೆಯ ಆಗಮನವೂ ಕಲಾಕೌಶಲ್ಯಗಾರರ ಮೇಲೆ ನಡೆಯಿಸಿದ ಅತ್ಯಾಚಾರವೂ ಸ್ವದೇಶಿ ಕೃಕಸಬುಗಳು ಪುನಃ ತಲೆಯೆತ್ತದಂತೆ ಮಾಡಿಬಿಟ್ಟವು. ಮಿ. ವಿಲ್‌ಸನ್‌ನೆಂಬ ಇತಿಹಾಸಕರ್ತನು ಹೇಳಿರುವದೇನೆಂದರೆ : "ಹಿಂದುಸ್ಥಾನವು ಬ್ರಿಟಿಷರಿಗೆ ವಿಪುಲವಾದ ಲಾಭ, ದಲಾಲಿ, ವಿಮೆ, ಹುಟ್ಟುವಳಿ ಮುಂತಾದವುಗಳನ್ನು ಸುರಿಸುರಿದು ಸಣ್ಣಾದ ಬಳಿಕ ಒಂದಿಲ್ಲೊಂದು ದಿನ ತನ್ನ ನಷ್ಟವಾದ ನೂಲುವ ಮತ್ತು ನೇಯುವ ಉದ್ಯೋಗಗಳನ್ನು ಪುನಃ ಕೈಕೊಳ್ಳಲೇಬೇಕಾಗುವದು."

ಹಿಂದುಸ್ಥಾನದ ಸರಕಾರವು ಹಿಂದುಸ್ಥಾನದ ನೂಲುವ ಉದ್ಯೋಗಕ್ಕೆ ಉದಾರಾಶ್ರಯವನ್ನು ಕೊಟ್ಟಿದ್ದರೆ ಜಗತ್ತಿನೊಳಗಿನ ಬೇಕಾದಂಥ ಯಂತ್ರವಿದ್ದರೂ ಕೈರಾಟಿಯೊಡನೆ ಮೇಲಾಟವಾಡುವ ಸಾಮರ್ಥ್ಯವು ಅದಕ್ಕುಂಟಾಗುತ್ತಿರಲಿಲ್ಲ. ಆದರೆ ಭಾರತೀಯರ ದುರ್ಭಾಗ್ಯಕ್ಕೆ ಬ್ರಿಟಿಷ ಸರಕಾರವು ಅಂಥ ಪುಣ್ಯಕೆಲಸವನ್ನು ಮಾಡಲಿಲ್ಲ. ಭರತಖಂಡದ ಕೋಟ್ಯಾವಧಿ ಬಡಜನಗಳ ದಾರಿದ್ರ್ಯ ದುಃಖಗಳ ಮೇಲೆಯೇ ಬ್ರಿಟಿಷ್ ವ್ಯಾಪಾರವು ಪ್ರಸ್ತಾಪಿತವಾಗಿರುತ್ತದೆ. ಹಿಂದುಸ್ಥಾನದ ಬಡರೈತರಿಗೆ ಒಡಕು ಮಡಿಕೆಯಲ್ಲಿ ಹಿಡಿ ಅನ್ನ ಸಿಗುತ್ತಿದ್ದು ಅದು ಬ್ರಿಟಿಷರ ಆಳಿಕೆಯಿಂದ ಕಳೆದುಹೋಗಿದೆಯೆಂದು ಮಿ. ಬರ್ಕ ಎಂಬವರು ಅಭಿಪ್ರಾಯಪಟ್ಟಿದ್ದಾರೆ.

❖❖

೫ನೆಯ ಪ್ರಕರಣ

ಕೈರಾಟೆ ಕೈಮಗ್ಗಗಳ ಮಹತ್ವ

ನಾವು ೨೦ನೆಯ ಶತಮಾನದಲ್ಲಿ ಕಾಲಿಟ್ಟಕೂಡಲೆ ಹಿಂದುಸ್ಥಾನದ ಪೇಟೆಗಳೆಲ್ಲ ಪರದೇಶಿ ಹಾಗೂ ಗಿರಣಿ ಬಟ್ಟೆಗಳಿಂದ ತುಂಬಿ ತುಳುಕುತ್ತಿದ್ದುದೂ ಕೈರಾಟಿ ಕೈಮಗ್ಗದ ಉದ್ಯೋಗಗಳು ಏನೋ ಅಕಲ್ಪಿತವಾಗಿ ಅಲ್ಲಲ್ಲಿ ನಡೆಯುತ್ತಿದ್ದುದೂ ನಮಗೆ ಕಂಡುಬರುತ್ತದೆ. ಸುಂದರವಾದ ಕೈನೂಲಿನ ಬಟ್ಟೆಗಳು ಮೊದಲಿನಂತೆ ಹಿಂದುಸ್ಥಾನದ ಪೇಟೆಗಳಲ್ಲಿ ಕಂಗೊಳಿಸಲಿಲ್ಲ. ಹಳ್ಳಿಯ ಕಲಾಕೌಶಲ್ಯವು ಚಟುವಟಿಕೆಯೂ ಲೋಪವಾದವು. ಭರತಖಂಡದ ಪದಾರ್ಥೋತ್ಪಾದನಶಕ್ತಿಯು ತಿರುಕನ ಕನಸಿನಂತಾಯಿತು. ಭರತಖಂಡವು ಪರದೇಶಗಳಿಗೆ ಬೇಕುಬೇಕಾದಂಥ ಬಟ್ಟೆಗಳನ್ನು ಕಳಿಸುವದರ ಬದಲಾಗಿ ಅದೇ ಅನ್ಯ ರಾಷ್ಟ್ರಗಳಿಂದ ನಯವಾದ, ಒರಟಾದ, ಶುಭ್ರವಾದ, ಅಂದಚಂದವಾದ ಬಟ್ಟೆಗಳನ್ನು ವೆಗ್ಗಳವಾಗಿ ತರಿಸಲಾರಂಭಿಸಿತು. ಭರತ ಭೂಮಿಯ ವಿದೇಶಿ ವ್ಯಾಪಾರದ ಸಾಹಸಿಗಳಿಗೆ ಮೃಗಯಾ ವಿಹಾರ ಭೂಮಿಯಾದಂತಾಯಿತು.

ಎಷ್ಟೋ ರಾಜಕಾರಣ ಧುರೀಣರು ಗುಡಿಸಲಿನ ಕಾಯಕಗಳ ವಿನಾಶದ ಬಗ್ಗೆ ಅನೇಕ ವ್ಯಾಖ್ಯಾನಗಳನ್ನು ಕೊಟ್ಟರು. ಲೇಖನಗಳನ್ನು ಬರೆದರು. ಆದರೆ ನಷ್ಟವಾದ ಉದ್ಯೋಗಗಳನ್ನು ಪುನರುಜ್ಜೀವನಗೊಳಿಸುವ ಉಪಾಯವೂ ಯಾರಿಗೂ ತೋಚದಾಯಿತು. ಕೈರಾಟೆ, ಕೈಮಗ್ಗಗಳು ಹಳೆ ಮಾದರಿಯ ನಿಷ್ಪ್ರಯೋಜಕವಾದ ಉಪಕರಣಗಳೆಂದು ಜನಗಳು ಅಪಹಾಸ್ಯ ಮಾಡಲುಪಕ್ರಮಿಸಿದರು. ಆದರೆ ಈಗ ನಾವು ನಮ್ಮ ಗತವೈಭವವನ್ನು ನೆನಿಸಿಕೊಂಡು ಅಳುತ್ತ ಕೂಡ್ರುವದರಿಂದೇನು ಪ್ರಯೋಜನ? ನಾವು ಟೊಂಕಕಟ್ಟಿ ಸದ್ಯದ ಸಾಂಪತ್ತಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕು.

ಕೈರಾಟಿಯ ಪುನರುದ್ಧಾರ

ಸ್ವದೇಶಿ ಚಟುವಟಿಕೆಯು ಪ್ರಾರಂಭವಾಗಿ ರಾಷ್ಟ್ರದಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿರುತ್ತದೆ. ಅದರ ಬಗ್ಗೆ ಪ್ರತಿಯೊಬ್ಬರೂ ಬಹುಸೂಕ್ಷ್ಮವಾಗಿ ಆಲೋಚಿಸುತ್ತಿದ್ದಾರೆ. ಜನರಲ್ಲಿ ಹೊಸ ಹೊಸ ವಿಚಾರಗಳೂ ಸ್ವಾವಲಂಬನೆಯ ತತ್ವಗಳೂ ತಲೆದೋರಲಾರಂಭಿಸಿವೆ. ಕಲಾಕೌಶಲ್ಯಗಳ ಪುನರುದ್ಧಾರವು ರಾಷ್ಟ್ರದ ಭಾಗ್ಯೋದಯದ ಚಿನ್ಹೆಯಾಗಿವೆ. ಮೊದಲು ಜನಗಳ ಲಕ್ಷವು ಗಿರಣಿಗಳ ಮುಖಾಂತರವಾಗಿ ಹಿಂದುಸ್ಥಾನದ ಬಟ್ಟೆಯ ಪ್ರಶ್ನೆಯನ್ನು ಹೋಗಲಾಡಿಸಬೇಕೆಂಬುವದರ ಕಡೆಗಿದ್ದಿತು.

ಕೈರಾಟಿಯ ಹೊಸ ಕಲ್ಪನೆಯನ್ನು ಭರತಖಂಡದ ರಾಷ್ಟ್ರೀಯ ಜೀವಿತದಲ್ಲಿ ಪುನಃ ನೆಲೆಸಿದವರು ಮಹಾತ್ಮಾ ಗಾಂಧಿಯವರು. ದೇಶದ ಕೋಟ್ಯವಧಿ ಬಡಜನಗಳ ಉದರನಿರ್ವಾಹದ ಬಗ್ಗೆಯೇ ಸದೈವ ಆಲೋಚಿಸುತ್ತಿರುವಂಥ ಮಹಾತ್ಮರಿಗೆ ಈ ವಿಚಾರವು ತಟ್ಟನೆ ಹೊಳೆಯಿತು. ರಸ್ಕಿನ್, ಟಾಲಸ್ಟಾಯ ಪ್ರಭೃತಿಗಳ ಗ್ರಂಥಾವಲೋಕನದಿಂದ ಜನ ಸಾಮಾನ್ಯರ ಔದ್ಯೋಗಿಕ ದಿಗ್ದರ್ಶನದ ಬಗ್ಗೆ ಮಾಹಾತ್ಮರಿಗೆ ಒಳ್ಳೆ ಬೆಂಬಲ ದೊರೆತಂತಾಯಿತು. ಹಿಂದುಸ್ಥಾನದ ದಾರಿದ್ರ್ಯದ ತೊಡಕನ್ನು ಬಿಡಿಸಲಿಚ್ಛಿಸುವ ಮಹಾತ್ಮರಿಗೆ ಕೈರಾಟಿಯು ಜಗತ್ತಿನೊಳಗಿನ ಎಲ್ಲ ದರಿದ್ರರ ದುಃಖನಿವಾರಣೆಗೆ ಸಂಜೀವಿನಿ ಮಂತ್ರವೆಂಬ ಉದಾತ್ತ ಕಲ್ಪನೆಯು ಅವರ ಮನದಲ್ಲಿ ಪ್ರಾದುರ್ಭವಿಸಿತು. ಮಹಾತ್ಮರು ೧೯೦೮ರಲ್ಲಿ ಇಂಡಿಯನ್ ಹೋಮರೂಲ ಎಂಬ ಪತ್ರಿಕೆಯಲ್ಲಿ ವರ್ತಕರೂ, ಗಿರಣಿಯ ಯಜಮಾನರೂ ಎಲ್ಲರೂ ಕೈರಾಟೆಯಿಂದ ನೂಲು ತೆಗೆಯಬೇಕೆಮಬ ಉದ್ಗಾರವನ್ನು ಹೊರಡಿಸಿದರು. ಮಹಾತ್ಮರಲ್ಲಿದ್ದ ಭೂತದಯೆಯೇ ಅವರನ್ನು ಆ ಪ್ರಕಾರವಾಗಿ ಒಡನಾಡಿಸಿತು. ಭೂತದಯೆಯಿಂದ ಕೂಡಿದ ಆರ್ಥಿಕ ಯೋಜನೆಯೇ ಜಗತ್ತಿಗೆ ಫಲಕಾರಿಯಾದುದು. ಈ ಪವಿತ್ರಾಂತಃಕರಣದ ಉದ್ದೇಶವನ್ನಿಟ್ಟುಕೊಂಡು ಮಹಾತ್ಮರು ಕೈರಾಟಿಯನ್ನು ಜನಗಳಿಗೆ ಪುನಃ ಪರಿಚಯ ಮಾಡಿಕೊಟ್ಟರು.

ಕೈರಾಟಿಯೂ ಅರ್ಥಶಾಸ್ತ್ರವೂ

ಕೈರಾಟಿಯು ಸದ್ಯಕ್ಕೆ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಅಗ್ರಸ್ಥಾನವನ್ನು ಹೊಂದಿರುತ್ತದೆ. ಆದರೆ ಅದು ರಾಷ್ಟ್ರಕ್ಕೆ ಕಲ್ಯಾಣವನ್ನೂ ಸಂಪತ್ತನ್ನೂ ಉಂಟುಮಾಡಬಲ್ಲುದೇ? ಸಾಂಪತ್ತಿಕ ದೃಷ್ಟಿಯಿಂದ ಖಾದಿಯು ಅತ್ಯಾವಶ್ಯಕವೇ? ಇವೇ ಮೊದಲಾದ ಪ್ರಶ್ನೆಗಳು ಹುಟ್ಟುತ್ತವೆ. ಎಲ್ಲರಿಗೂ ಸಂಪತ್ತು ಹೆಚ್ಚಿ ಸುಖವಾಗಿರಬೇಕೆಂಬ ಮಾತು ನಿರ್ವಿವಾದವಷ್ಟೆ. ಕೇವಲ ಸಂಪತ್ತನ್ನು ಶೇಖರಿಸುವದೇ ಆರ್ಥಿಕ ಚಟುವಟಿಕೆಯ ಮುಖ್ಯೋದ್ದೇಶವಲ್ಲ. ಮಾನವ ಜೀವಿತವು ಬಹು ಸೊಗಸಿನಿಂದ ಸಾಗುವದಕ್ಕೆ ಅವಶ್ಯಕವಾದ ಉದ್ದೇಶ ಹೇತುಗಳನ್ನೇ ಅರ್ಥಶಾಸ್ತ್ರವು ಒಳಗೊಂಡಿರಬೇಕಲ್ಲದೆ ಒಬ್ಬರಿಗೆ ಹೆಚ್ಚು ಸುಖಸೌಖ್ಯಗಳು ಇನ್ನೊಬ್ಬರಿಗೆ ಏಕಾದಶಿ ಉಪವಾಸಗಳು ಉಂಟಾಗಬಾರದು.

ಈಗ ಹಿಂದುಸ್ಥಾನದಲ್ಲಿ ಹೇಗೆ ಜೀವಿಸಬೇಕೆಂಬುದೇ ದೊಡ್ಡ ಪ್ರಶ್ನೆಯಾಗಿದೆ. ಹಳ್ಳಿಯ ಮನೆಗುಡಿಸಲುಗಳಲ್ಲಿ ಆರ್ಥಿಕ ಬಂಧುರತೆಯುಂಟಾಗುವಂತೆ ಮಾಡುವುದು ಪ್ರಸ್ತುತ ಕೆಲಸವಾಗಿದೆ. ಎಲ್ಲರಿಗೂ ಕೆಲಸ ದೊರೆತು ಮನೆ ಮನೆಗಳಲ್ಲಿ ಸಂಪತ್ತು ಕೂಡಿಬೀಳಹತ್ತಿದರೆ ರಾಷ್ಟ್ರಕ್ಕೆ ಸುಖವಾಗುವದು. ಸ್ವಾವಲಂಬನ, ಸಫಲವಾದ ಉದ್ಯೋಗ, ಮಾನವ ಶಕ್ತಿಯ ಸದುಪಯೋಗ, ಇವೇ ನಮ್ಮ ಭಾವೀ ಉತ್ಕರ್ಷತೆಯು ಲಕ್ಷಣಗಳು. ತಮ್ಮ ನೆರೆಹೊರೆಯ ಬಾಂಧವರ ಗೋಣು ಮುರಿದು ಕೆಲವು ವ್ಯಕ್ತಿಗಳು ಮಾತ್ರ ಸುಖೋಪಭೋಗಲೋಲುಪರಾದರೆ ಅದೇನೂ ಸುಗಮವಾದ ಆರ್ಥಿಕ ಯೋಜನೆಯಾಗಲಾರದು. ಉತ್ಪನ್ನವು ಹೆಚ್ಚು ಬರುವಂಥ ಉಪಕರಣಗಳನ್ನು ಪ್ರಚಾರದಲ್ಲಿ ತಂದರೂ ಅದು ಬಹುಸಂಖ್ಯಾತರಿಗೆ ಕೆಲಸವನ್ನು ಹಚ್ಚಿಕೊಡಬೇಕು. ಕೈರಾಟೆಯು ಸುಗಮವಾದ ಆರ್ಥಿಕ ಯೋಜನೆಯ ದ್ಯೋತಕವಾಗಿದೆ.

ಕೈರಾಟಿಯ ಬಗ್ಗೆ ಕೆಲವರ ಆಕ್ಷೇಪಗಳು

ರಾಷ್ಟ್ರದ ಅತ್ಯಂತ ಹಿತಕರ್ತರಿಗೂ ಸುವಿಚಾರಿಗಳಿಗೂ ಕೈರಾಟಿಯು ಬಹು ಪ್ರಯೋಜನಕಾರಿಯೆಂದು ತೊರುತ್ತಿದ್ದರೂ ಕೆಲವರಿಗೆ ರಾಟಿಯೆಂದರೆ ಕೇವಲ ಕಟ್ಟಿಗೆಯ ತುಣುಕೆಂತಲೂ ಅದರಲ್ಲಿ ರಾಷ್ಟ್ರೀಯ ಪ್ರಶ್ನೆಯನ್ನು ಬಿಡಿಸುವ ಗುಣವಿಲ್ಲವೆಂತಲೂ ತೋರುತ್ತಿದೆ. ಕೆಲವರಂತೂ ಕೈರಾಟಿಯು ಆರ್ಥಿಕ ದೃಷ್ಟಿಯಿಂದ ಯಾತಕ್ಕೂ ಪ್ರಯೋಜನವಿಲ್ಲವೆಂದು ಪ್ರತಿಪಾದಿಸುತ್ತಾರೆ. ಕೈರಾಟಿಯ ಬಗ್ಗೆ ಕೆಲವು ಅರ್ಥಶಾಸ್ತ್ರಜ್ಞರ ಆಕ್ಷೇಪಗಳಾವವೆಂದರೆ "ಕೈ ರಾಟಿಯಿಂದ ಹೆಚ್ಚು ಕೂಲಿ ದೊರೆಯುವದಿಲ್ಲ. ಅದು ಸ್ವತಂತ್ರವಾದ ಉದ್ಯೋಗವಲ್ಲ. ಬಡಜನಗಳು ಹೊಟ್ಟೆ ತುಂಬಿಕೊಳ್ಳಬೇಕೆಂದರೆ ಹೆಚ್ಚು ಕೂಲಿ ದೊರೆಯುವಂಥ ಬೇರೆ ಅನೇಕ ಉದ್ಯೋಗಗಳಿರುವವು. ಕೈರಾಟಿಯಿಂದ ರಾಷ್ಟ್ರದ ಸಂಪತ್ತೇನೂ ಅಧಿಕವಾಗುವದಿಲ್ಲ. ಒಂದು ವೇಳೆ ರಾಟೆಯು. ಉಪಯುಕ್ತವಾದುದೆಂದು ಗ್ರಹಿಸಿದರೂ ಅದು ಗಿರಣಿಗಳೊಂದಿಗೆ ಸ್ಪರ್ಧೆ ಹೂಡಲಾರದು." ಇವೆಲ್ಲ ಆಕ್ಷೇಪಗಳನ್ನು ವಿಚಾರಿಸುವದು ಅಗತ್ಯವಾಗಿದೆ.

ಕೈರಾಟಿಯನ್ನು ಎತ್ತಿಹಿಡಿದು ಮಾತನಾಡುವಂಥ ಯಾವ ಮನುಷ್ಯನು ಉಳಿದ ಕಲಾಕೌಶಲ್ಯಗಳಿಗಿಂತಲೂ ರಾಟಿಯಿಂದ ಹೆಚ್ಚು ಲಾಭ ಬರುತ್ತದೆಂದು ಎಂದೂ ಹೇಳಿರುವದಿಲ್ಲ. ಕೈರಾಟಿಯಿಂದ ದಿನಾಲು ೨-೩ ಆಣೆ ಕೂಲಿ ದೊರೆತರೆ ಸಾಕುಸಾಕಾಗಿ ಹೋಯಿತು. ಕೈರಾಟಿಯೆಂದರೆ ಬರಗಾಲ ನಿವಾರಣೋಪಾಯದ ಸಾಧನವೆಂದು ಹೇಳಬಹುದು. ಯಾಕೆಂದರೆ ಸರಕಾರದವರು ಬರಗಾಲದ ಕೆಲಸಗಾರರಿಗೆ ದಿನಾಲು ೨ ಆಣೆಗಿಂತ ಹೆಚ್ಚು ಕೂಲಿಯನ್ನು ಕೊಡುವದಿಲ್ಲ. ಆದರೆ ಒಕ್ಕಲಿಗರಿಗೆ ಒಕ್ಕಲುತನದ ಜೊತೆಗೆ ಕೈರಾಟಿಯ ಉದ್ಯೋಗವನ್ನು ಸಾಗಿಸಿದರೆ ಎಷ್ಟೋ ಸ್ವಲ್ಪಗಳಿಕೆಯಾಗಲೊಲ್ಲದೇಕೆ? ಅದರಿಂದಾಗುವ ಹಾನಿಯಾದರೂ ಏನು?

ಭಾರತೀಯರ ವಾರ್ಷಿಕಾದಾಯ

ಉಳಿದ ದೇಶಗಳಿಗೂ ಭರತಖಂಡಕ್ಕೂ ಒರೆಹಚ್ಚಿ ನೋಡಿದರೆ ನಮ್ಮ ದೇಶದ ಬಡತನವು ಎಷ್ಟು ಭಯಂಕರವಾದುದೆಂಬುದು ತಿಳಿದುಬರುತ್ತದೆ. ಈ ಬಗ್ಗೆ ಕೆಳಗಿನ ಅಂಕಿಗಳು ಸಾಕ್ಷೀಭೂತವಾಗಿವೆ:

ದೇಶ	ಪ್ರತಿಯೊಬ್ಬನ ವಾರ್ಷಿಕ ಉತ್ಪನ್ನ
ಇಂಗ್ಲಂಡ	೭೫೦ ರೂ.
ಅಮೇರಿಕಾ	೧೦೮೦ರೂ.
ಜರ್ಮನಿ	೪೫೦ರೂ.
ಫ್ರಾನ್ಸ	೫೭೦ರೂ.
ಇಟಾಲಿ	೩೪೫ರೂ.
ಕಾನಾಡಾ	೬೦೦ರೂ.
ಆಸ್ಟ್ರೇಲಿಯಾ	೮೧೦ರೂ.
ಜಪಾನ	೯೦ರೂ.
ಹಿಂದುಸ್ಥಾನ	೩೬ರೂ.

ದಾರಿದ್ರ್ಯ ಮತ್ತು ನಿರುದ್ಯೋಗ

ಮಹಾತ್ಮಾ ಗಾಂಧಿಯವರ ಮನಸ್ಸಿನಲ್ಲಿ ಅತ್ಯಂತ ದೃಢವಾಗಿ ನೆಲೆಸಿದ ಆರ್ಥಿಕ ಪ್ರಶ್ನೆಗಳೆಂದರೆ ಭಾರತೀಯರ ದಾರಿದ್ರ್ಯ ಮತ್ತು ನಿರುದ್ಯೋಗಗಳು. ಭರತಖಂಡದ ಬಹುಜನ ಸಮಾಜವು ಬಹು ದಾರಿದ್ರ್ಯಾವಸ್ಥೆಯಲ್ಲಿರುವದೆಂದು ಅವರು ಪದೆಪದೆ ಹೇಳುತ್ತಾರೆ. ಭಾರತೀಯರ ಬಾಳ್ವೆಯು ದನಗಳಿಗಿಂತಲೂ ಕೀಳಾಗಿರುವದು. ಸುಮಾರು ೩ ಕೋಟಿ ಜನಗಳಿಗೆ ಎರಡು ಹೊತ್ತು ಪೂರಾ ಊಟ ದೊರೆಯುವುದಿಲ್ಲ. ಜನರು ದರಿದ್ರರಿರುವರಷ್ಟೇ ಅಲ್ಲದೆ ಅವರ ದಾರಿದ್ರ್ಯವೂ ದಿನೇ ದಿನೇ ಬೆಳೆಯುತ್ತಲೇ ಇರುವದು.

ಮಹಾತ್ಮಾ ಗಾಂಧಿಯವರ ಅಭಿಪ್ರಾಯದಂತೆ ದಾರಿದ್ರ್ಯಕ್ಕೆ ನಿರುದ್ಯೋಗವೇ ಮೂಲಕಾರಣವಾಗಿದೆ. ಪ್ರತಿವರ್ಷ ೬ ತಿಂಗಳವರೆಗೂ ಒಕ್ಕಲಿಗರಿಗೆ ಉದ್ಯೋಗವೇ ದೊರೆಯುವದಿಲ್ಲ. ಆ ಕಾಲದಲ್ಲಿ ಅವರು ನಿರುದ್ಯೋಗಿಗಳಾಗಿ ಜೀವಿಸಬೇಕಾಗುತ್ತದೆ. ಒಕ್ಕಲಿಗರಿಗೆ ಆಹಾರಕ್ಕಿಂತಲೂ ಕೆಲಸದ ಅವಶ್ಯಕತೆಯು ಹೆಚ್ಚಿದೆ. ಅವರಿಗೆ ಕೆಲಸವು ದೊರೆತರೆ ತಮ್ಮ ಗಳಿಕೆಯಿಂದ ಆಹಾರವನ್ನು ದೊರಕಿಸುವ ಸಾಮರ್ಥ್ಯವು ಬರುತ್ತದೆ.

ಈ ನಿರುದ್ಯೋಗವು ಹೇಗೆ ಉತ್ಪನ್ನವಾಯಿತು? ಒಕ್ಕಲಿಗರು ತಮ್ಮ ಜೊತೆಯ ಉದ್ಯೋಗವಾದ ರಾಟಿಯ ಕಾಯಕವನ್ನು ಬಿಟ್ಟುಕೊಟ್ಟದ್ದೇ ಅದಕ್ಕೆ ಮುಖ್ಯ ಕಾರಣವು. ಈ ಜೊತೆಯ ಉದ್ಯೋಗವನ್ನು ನಾಶ ಮಾಡಲಿಕ್ಕೆ ಯಾರು ಕಾರಣರಾದರು? ಇದಕ್ಕೆ ಲ್ಯಾಂಕಾಶಾಯರದ ಗಿರಣಿಗಳು, ಭರತಖಂಡದ ಉಚ್ಚ ಹಾಗೂ ಮಧ್ಯಮ ತರಗತಿಯ ಜನಗಳೂ ಕಾರಣರಾದರು. ಲ್ಯಾಂಕಾಶಾಯರದ ಗಿರಣಿಯ ಯಜಮಾನರು ಅಗ್ಗವಾದ ಪದಾರ್ಥಗಳನ್ನು ಕಳುಹಿಸಿ ಈ ಜೊತೆಯ ಉದ್ಯೋಗವನ್ನು ಬೀಳುಗೆಡವಿದರು. ಭರತಖಂಡದ ಉಚ್ಚ ಹಾಗೂ ಮಧ್ಯಮ ತರಗತಿಯ ಜನರು ಪರದೇಶಿ ಬಟ್ಟೆಗಳನ್ನು ಭರತಖಂಡಕ್ಕೆ ಬರಮಾಡಿಕೊಂಡು ದೇಶದಲ್ಲಿ ನಿರುದ್ಯೋಗವನ್ನು ಹೆಚ್ಚಿಸಿದರು. ನೂಲುವ ಉದ್ಯೋಗವನ್ನು ಕಳೆದುಕೊಂಡು ಒಕ್ಕಲಿಗರಿಗೆ ಬೇರಾವ ಜೊತೆಯ ಉದ್ಯೋಗವೂ ಇಲ್ಲದಂತಾಯಿತು. ಕಾರಖಾನೆಗಳಿಂದ ಪಾಶ್ಚಾತ್ಯ ರಾಷ್ಟ್ರಗಳ ಒಕ್ಕಲಿಗರೂ ಸಹ ನೂಲುವ ನೇಯುವ ಉದ್ಯೋಗಗಳನ್ನು ಕಳೆದುಕೊಂಡಿದ್ದರು. ಆದರೆ ಅವರಿಗೆ ಹೊಸ ಹೊಸ ಉದ್ಯೋಗಗಳನ್ನು ಹಚ್ಚಿಕೊಟ್ಟಿರುವರು.

ದಾರಿದ್ರ್ಯ ನಿವಾರಣೋಪಾಯ

ಮಹಾತ್ಮಾ ಗಾಂಧಿಯವರು ದಾರಿದ್ರ್ಯಾ ನಿವಾರಣೆ ಮಾಡಲು ಅನೇಕ ಉಪಾಯಗಳನ್ನು ಯೋಜಿಸಿರುವರು. ಅವು ಯಾವುವೆಂದರೆ

(೧) **ಒಕ್ಕಲುತನದ ಸುಧಾರಣೆ :** ಒಕ್ಕಲುತನದ ಸುಧಾರಣೆ ಮಾಡಬೇಕಾದರೆ ಅಸಾಧ್ಯವಾದ ಅಡಚಣೆಗಳು ಬಂದೊದಗುವವೆಂದು ಅಭಿಪ್ರಾಯ. ಸರಕಾರದವರು ಒಕ್ಕಲುತನದ ಸುಧಾರಣೆಯ ಬಗ್ಗೆ ಅಷ್ಟೇನೂ ಲಕ್ಷಿಸುವದಿಲ್ಲ. ಯಾಕೆಂದರೆ, ಅದನ್ನು ನೆರವೇರಿಸಲು ದೊಡ್ಡ ಧನಸಂಗ್ರಹವು ಬೇಕಾಗುತ್ತದೆ. ಒಕ್ಕಲಿಗರು ಒಕ್ಕಲುತನದ ಹೊಸ ಪದ್ಧತಿಗಳನ್ನಂಗೀಕರಿಸಲೊಡಂಬಡುವದಿಲ್ಲ. ಸಾಮಾನ್ಯ ಜನರು ಸುಶಿಕ್ಷಿತರಾದ ಹೊರತು ವಿವಿಧ ಗೊಬ್ಬರಗಳ ಮಹತ್ವವು ಅವರಿಗೆ ಚೆನ್ನಾಗಿ

ತಿಳಿಯುವದಿಲ್ಲ. ಕುಟುಂಬ ಪದ್ಧಿತಯಲ್ಲಿ ತಕ್ಕ ಮಾರ್ಪಾಟುಗಳಾಗದೆ ಹರಿದು ಹಂಚಿದ ಸಣ್ಣಪುಟ್ಟ ಭೂಮಿಯ ತುಂಡುಗಳನ್ನೇಕೀಕರಿಸಿ ದೊಡ್ಡ ಹೊಲಗಳನ್ನು ಮಾಡಲಿಕ್ಕೆ ಬರುವಂತಿಲ್ಲ. ಇವೆಲ್ಲ ಕಾರಣಗಳಿಂದ ಒಕ್ಕಲುತನದ ಸುಧಾರಣೆಯಾಗಬೇಕಾದರೆ ಎಷ್ಟೋ ತಲೆಗಳು ಗತಿಸಿ ಹೋಗಬೇಕಾಗುವದು, ಒಕ್ಕುಲುತನದ ಸುಧಾರಣೆಯೇನೂ ಅನಾವಶ್ಯಕವಲ್ಲ. ಅದು ಅತ್ಯಾವಶ್ಯಕವೇ ಅಹುದು. ಆದರೆ ಅದಕ್ಕೆ ಶೀಘ್ರವಾದ ಮತ್ತು ಉತ್ತಮ ತರಹದ ಜೊತೆಯ ಉದ್ಯೋಗವು ಮೊದಲು ಬೇಕಾಗಿದೆ. ಅದಾವುದೆಂದರೆ ಕೈರಾಟಿಯಿಂದ ನೂಲುವದು.

(೨) ಕಾರ್ಯಾಲಯಗಳನ್ನು ಸ್ಥಾಪಿಸುವುದು : ದೊಡ್ಡ ದೊಡ್ಡ ಕಾರ್ಯಾಲಯಗಳನ್ನು ಸ್ಥಾಪಿಸುವದರಿಂದ ದೇಶದ ಬಡತನವೇನೂ ಹಿಂಗದೆಂದು ಮಹಾತ್ಮರು ಅಭಿಪ್ರಾಯಪಡುತ್ತಾರೆ ಹಿಂದುಸ್ಥಾನದಂಥ ಬಹು ದೊಡ್ಡ ದೇಶದಲ್ಲಿ ಎಷ್ಟೋ ಕಾರ್ಯಾಲಯಗಳನ್ನು ಸ್ಥಾಪಿಸಿದರೂ ಅಸಂಖ್ಯಾತರಾದ ಬಡಜನರಿಗೆಲ್ಲ ಕೂಲಿ ದೊರೆಯುವಂತೆ ಮಾಡುವದು ಅಸಾಧ್ಯವು. ಆದುದರಿಂದ ಹಿಂದುಸ್ಥಾನದಲ್ಲಿ ಕಾರ್ಯಾಲಯಗಳನ್ನು ಸ್ಥಾಪಿಸುವದೆಂದರೆ ಭಾರತೀಯರ ಹೊಟ್ಟೆಯಲ್ಲಿ ಮಣ್ಣು ತುಂಬಿದಂತೆಯೇ ಸರಿ. ಆದುದರಿಂದ ಕಾರ್ಯಾಲಯ ಸ್ಥಾಪನೆಯಿಂದೇನೂ ದಾರಿದ್ರ್ಯವೂ ನಿವಾರಣೆಯಾಗಲಾರದು. ದಾರಿದ್ರ್ಯವು ಹೋಗಲಿಕ್ಕೇಬೇಕು. ಆದರೆ ಕಾರ್ಯಾಲಯ ಸ್ಥಾಪನೆಯೇನೂ ಅದಕ್ಕುಪಾಯವಲ್ಲ.

(೩) ಕೈಮಗ್ಗದ ಉದ್ಯೋಗ : ಇದಾದರೂ ಬಡತನದ ನಿವಾರಣೆಗೆ ಯೋಗ್ಯವಾದ ಉಪಾಯವಲ್ಲ. ಯಾಕೆಂದರೆ (೧) ನೇಕಾರಿಕೆಯು ಜೊತೆಯ ಉದ್ಯೋಗವಾಗಿರದೆ ಸ್ವತಂತ್ರ್ಯ ಉದ್ಯೋಗವಾಗಿದೆ. ಒಕ್ಕಲಿಗರಿಗೆ ಬೇಕಾದುದು ಒಕ್ಕಲುತನದ ಜೊತೆಯ ಉದ್ಯೋಗವು (೨) ಕೈನೂಲಿನ ಉದ್ಯೋಗವಿಲ್ಲದೆ ಮಗ್ಗದ ಉದ್ಯೋಗವನ್ನು ಸಾಧಿಸಿದರೆ ನೂಲಿಗಾಗಿ ಮ್ಯಾಂಚೆಸ್ಟರ, ಮುಂಬಯಿ, ಜಪಾನಗಳ ಗಿರಣಿನೂಲಿಗೆ ಕೈ ಚಾಚಬೇಕಾಗುತ್ತದೆ. ಅದರಿಂದ ಗಿರಣಿಯ ಯಜಮಾನರ ಬೊಕ್ಕಸಗಳನ್ನು ಮಾತ್ರ ತುಂಬಿಕೊಟ್ಟಂತಾಗುತ್ತದೆ (೩) ಇದಲ್ಲದೇ ಕೈಮಗ್ಗದವರು ಎಂತೆಂಥ ಮಾದರಿಯ ಬಟ್ಟೆಗಳನ್ನು ಸಿದ್ಧಗೊಳಿಸುವರೋ, ಅಂಥವುಗಳನ್ನೇ ಗಿರಣಿಯವರು ಹುಟ್ಟಿಸಿ ಅಗ್ಗವಾಗಿ ಮಾರಾಟ ಮಾಡುತ್ತಾರೆ. ಕೈನೂಲಿನ ಉದ್ಯೋಗಕ್ಕೆ ಕೈಮಗ್ಗದ ಉದ್ಯೋಗವು ಸಹಾಯಕಾರಿಯಾಗಿರುವದು ಒಳ್ಳೆಯದು.

ಹಿಂದುಸ್ಥಾನದಲ್ಲಿ ಬಟ್ಟೆಗಳ ಗಿರಣಿಗಳನ್ನು ಹೆಚ್ಚಿಸಿ ದೇಶಕ್ಕೆ ಅರಿವೆಯನ್ನು ಪೂರೈಸಿಕೊಟ್ಟರೆ ದೇಶದ ದರಿದ್ರತೆಯೇನೂ ಹಿಂಗುವದಿಲ್ಲ. ಯಾಕೆಂದರೆ (೧) ಬಟ್ಟೆಯ ಕಾರ್ಯಾಲಯಗಳನ್ನೇನೂ ಗಿಡಗಂಟಿಗಳಂತೆ ಹೆಚ್ಚಾಗಿ ಹಬ್ಬಿಸಲಿಕ್ಕೆ ಬರುವದಿಲ್ಲ. (೨) ಅದಕ್ಕೆ ಪರದೇಶಿ ಯಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ. (೩) ಗಿರಣಿಗಳು ಕೋಟ್ಯಾವಧಿ ಜನಗಳಿಗೇನೂ ಕೆಲಸವನ್ನು ಹಚ್ಚಿಕೊಡಲಾರವು. ಹಿಂದುಸ್ಥಾನದಲ್ಲಿ ಬಟ್ಟೆಗಳು ಸಾಕುಸಾಕಷ್ಟು ಹುಟ್ಟಬೇಕಾದರೆ ಬಡಜನಗಳೆಲ್ಲ ಉದ್ಯೋಗದಲ್ಲಿ ತೊಡಗುವಂತೆ ಮಾಡಬೇಕು (೪) ಯಂತ್ರಾಲಯಗಳು ಬಹು ಸಂಖ್ಯಾತರಾದ ಸಾಮಾನ್ಯ ಜನರನ್ನು ನಿರಾಶೆಗೊಳಿಸುವವು. (೫) ಗಿರಣಿಗಳು ಮುಚ್ಚಲ್ಪಟ್ಟರೆ ಇಲ್ಲವೆ ಅವುಗಳಿಗೆ ಭಯಂಕರ ಅನಾಹುತಗಳು ಸಂಭವಿಸಿದರೆ ವಿಶೇಷ ಹಾನಿ ತಟ್ಟುತ್ತದೆ.

ಕೈನೂಲಿನ ಉದ್ಯೋಗವೇ ದಾರಿದ್ರ್ಯ ನಿವಾರಣೆಗೆ ಸರ್ವೋತ್ಕೃಷ್ಟವಾದ ಉಪಾಯವು ಯಾಕೆಂದರೆ, (೧) ಪರದೇಶಿ ಬಟ್ಟೆಗಳಿಗೆ ಸಂಪೂರ್ಣ ಬಹಿಷ್ಕಾರ ಹಾರಿದರೂ ಸಹ ಕೈಯಿಂದ ನೂತ ನೂಲನ್ನು ವಿಶೇಷವಾಗಿ ಶೇಖರಿಸಿ ಒಂದು ದೊಡ್ಡ ಪೇಟೆಯನ್ನು ಏರ್ಪಡಿಸುವದು ಶಕ್ಯವಿದೆ. (೨) ನೂಲಲಿಕ್ಕೆ ಕಲಿತುಕೊಳ್ಳುವುದು ಬಹು ಸುಲಭವಾದದ್ದು. (೩) ನೂಲುವ ಉದ್ಯೋಗವು ಬಹು ಪ್ರಾಚೀನ ಕಾಲದಿಂದಲೂ ನಡೆದುಬಂದಂತಹದಾಗಿದೆ. (೪) ಇದು ಒಕ್ಕಲಿಗರ ಮನೆಗಳಲ್ಲಿ ಬಹು ಸೂತ್ರವಾಗಿ ನಡೆಯುತ್ತದೆ. (೫) ವಿರಾಮಕಾಲಗಳಲ್ಲಿ ಆ ಉದ್ಯೋಗವನ್ನು ಬೇಕಾದ ಹಾಗೆ ಸಾಗಿಸಬಹುದು. (೬) ಕೋಟ್ಯವಧಿ ಭಾರತೀಯರಿಗೆ ಇದೊಂದೇ ಉತ್ಕೃಷ್ಟವಾದ ಜೊತೆಯ ಉದ್ಯೋಗವು (೭) ಲಕ್ಷಾಂತರ ಹಳ್ಳಿಗಾಡ ಗುಡಿಸಲಿನ ಜನಗಳಿಗೆ ಸಹ ಈ ಉದ್ಯೋಗವು ಸಂಪತ್ತಿನ ಮಳೆಯನ್ನೇ ಸುರಿಸಬಲ್ಲದು.

ನೂಲಿನ ಉದ್ಯೋಗದ ವಿಶಿಷ್ಟ ಗುಣಗಳು

ಒಕ್ಕಲಿಗರಿಗೆ ವಿರಾಮಕಾಲದಲ್ಲಿ ಉದ್ಯೋಗ ದೊರೆಯುವದಲ್ಲದೆ ನೂಲುವ ಕಾಯಕದಿಂದ ಬೇರೆ ಅನೇಕ ಹಿತಗಳಾಗುತ್ತವೆ. (೧) ಶಾಲೆಯ ವಿದ್ಯಾರ್ಥಿಗಳನ್ನು ಕ್ಲುಪ್ತವಾದ ಕಾಲದವರೆಗೆ ನೂಲಲಿಕ್ಕೆ ಹಚ್ಚಿದರೆ ಆರ್ಥಿಕ ದೃಷ್ಟಿಯಿಂದ ಆ ಶಾಲೆಯು ಬರಬರುತ್ತ ಬಹುಮಟ್ಟಿಗೆ ಸ್ವಯಂಪೋಷಿತವಾಗುವದು. (೨) ಭಿಕ್ಷುಕರು ಊರೂರು ಓಣಿಕೇರಿಗಳಲ್ಲಿ ತಿರುಗದೆ ನಮ್ರವಾದ ಈ ಉದ್ಯೋಗವನ್ನು ಕೈಗೊಂಡು ತಮ್ಮ ಚರಿತಾರ್ಥ ಸಾಗಿಸಲು ಅನುವಾಗುತ್ತದೆ. (೩) ಲಜ್ಜೆಯ ಮೂಲಕ ಮನೆಬಿಟ್ಟು ಹೊರಗೆ ಬಾರದಂಥ ಸ್ತ್ರೀಯರಿಗೂ ಸಹ ತಮ್ಮ ಪ್ರಪಂಚವನ್ನು ನೋಡಿಕೊಳ್ಳಲಿಕ್ಕೆ ನೂಲುವ ಉದ್ಯೋಗವು ಸರ್ವೋತ್ಕೃಷ್ಟವಾದುದಾಗಿದೆ. (೪) ಬರಗಾಲ, ನೆರೆಹಾವಳಿಗಳ ಪ್ರಸಂಗಗಳಲ್ಲಿ ಪೀಡಿತರಾದ ಜನರಿಗೆ ಸರಕಾರದವರು ನೂಲಿನ ಉದ್ಯೋಗವನ್ನು ಹಚ್ಚಿಕೊಟ್ಟು ಅವರ ಕಷ್ಟನಿವಾರಣೆ ಮಾಡಲು ಶಕ್ಯವಿದೆ.

ನೂಲುವ ಉದ್ಯೋಗವು ನಡೆಯಲಾರಂಭಿಸಿದರೆ ಅದರ ಜೊತೆಗೆ ನೇಕಾರರು, ಅಗಸರು, ಬಣಗಾರರು, ಪಿಂಜಾರರು, ಹತ್ತಿ ಅರೆಯುವವರು ಈ ಮೊದಲಾದವರಿಗೆ ಕೆಲಸ ದೊರೆಯುತ್ತದೆ. ಕೈನೂಲಿನ ಉದ್ಯೋಗದೊಡನೆ ಉಳಿದ ಕೈಕೆಲಸಗಳು ಉತ್ತೇಜನ ಹೊಂದುವವು. ಅವು ದೇಶದಲ್ಲಿ ಆರೋಗ್ಯಕರವಾದ ಹಾಗೂ ಸಜೀವಮಯವಾದ ವಾತಾವರಣವನ್ನು ಹೆಚ್ಚಿಸುವವು.

ಖಾದಿ ಪ್ರಸಾರಕ್ಕೆ ವಿಘ್ನಗಳು

ಮಹಾತ್ಮಾ ಗಾಂಧಿಯವರು ಖಾದಿಗೆ ಬರುವ ವಿಘ್ನಗಳಾವವೆಂಬುದನ್ನು ಈ ಪ್ರಕಾರ ಹೇಳಿರುವರು. (೧) ಪರದೇಶಿ ಕಾರ್ಯಾಲಯಗಳ ಸ್ಪರ್ಧೆ. (೨) ಸ್ವದೇಶಿ ಗಿರಣಿಗಳ ಮೇಲಾಟ (೩) ನೂಲುವ ಉದ್ಯೋಗಕ್ಕೆ ಜನಸಾಮಾನ್ಯರ ಔದಾಸೀನ್ಯ (೪) ಖಾದಿಯ ಒರಟತನ ಹಾಗೂ ತುಟ್ಟಿತನ.

ಮೊದಲನೆಯ ವಿಘ್ನವು ನಿವಾರಣೆಯಾಗಬೇಕಾದರೆ ಜನರಿಗೆ ಪರದೇಶಿ ಬಟ್ಟೆಗಳನ್ನು ಬಹಿಷ್ಕರಿಸಿ ಖಾದಿಯನ್ನೇ ಧರಿಸಬೇಕೆಂದು ಚಟುವಟಿಕೆಯನ್ನೆಬ್ಬಿಸಬೇಕು. ೨ನೆಯ ವಿಘ್ನವೇನೂ ಅಷ್ಟು ಮಹತ್ವದ್ದಲ್ಲ. ಪರದೇಶಿ ಬಟ್ಟೆಗಳನ್ನು ಸಂಪೂರ್ಣವಾಗಿ ನಿಷೇಧಿಸಿದರೆ ಬರೇ ಖಾದಿಯಿಂದ ಒಮ್ಮೆಲೆ ಭರತಖಂಡವು

ಅಚ್ಛಾದಿಸಲ್ಪಡುವದು ಶಕ್ಯವಿಲ್ಲ. ಆದ್ದರಿಂದ ಕೆಲವು ಕಾಲದಮಟ್ಟಿಗೆ ಸ್ವದೇಶಿ ಗಿರಣಿಗಳು ಖಾದಿಯ ಜೊತೆಗೆ ಸಾಗಬೇಕಾಗುತ್ತದೆ. ಆದರೆ ಮಹಾತ್ಮಾ ಗಾಂಧಿಯವರ ಕೊನೆಯ ಧ್ಯೇಯವು ಸ್ವದೇಶಿ ಗಿರಣಿಯ ಬಟ್ಟೆಗಳನ್ನೂ ಸಹ ಬಗ್ಗು ಬಡಿದು ಖಾದಿಯನ್ನೇ ಹೆಚ್ಚಾಗಿ ಪ್ರಚುರಗೊಳಿಸುವದಿರುತ್ತದೆ. ಸಾಮಾನ್ಯ ಜನರ: ಔದಾಸೀನ್ಯವನ್ನು ಕಳೆಯಬೇಕಾದರೆ ಶಾಲೆಯಲ್ಲಿ ಹುಡುಗರು ಮೊದಲ್ಗೊಂಡು ದೊಡ್ಡವರವರೆಗೆ ಎಲ್ಲರೂ ಕ್ಲುಪ್ತಕಾಲದವರೆಗೆ ನೂಲಬೇಕು. ಅಂದರೆ ಆ ಉದ್ಯೋಗಕ್ಕೆ ಸ್ವಲ್ಪ ಗೌರವ ಬಂದಂತಾಗುತ್ತದೆ. ಅದನ್ನು ನೋಡಿ ಜನಸಾಮಾನ್ಯರು ಉತ್ತೇಜನ ಹೊಂದಿ ಆ ಕೆಲಸವಲ್ಲಿ ತೊಡಗುವರು.

ಒಕ್ಕಲಿಗರು ತಮ್ಮ ಬಟ್ಟೆಯ ಸಲುವಾಗಿಯೇ ತಾವು ನೂಲಲುಪಕ್ರಮಿಸಿದರೆ ಅವರಿಗೆ ಒರಟುತನ ತುಟ್ಟಿತನಗಳ ಪ್ರಶ್ನೆಯೇ ಬರುವುದಿಲ್ಲ. ನೂಲುವವರ ಹತ್ತಿರ ನೂಲನ್ನು ಕ್ರಯಕ್ಕೆ ತೆಗೆದುಕೊಂಡು ನೇಕಾರರಿಂದ ಬಟ್ಟೆಯನ್ನು ನೇಯಿಸಿ ಅದನ್ನು ಪೇಟೆಯಲ್ಲಿ ಮಾರಾಟ ಮಾಡಬೇಕು. ಇಂಥ ಪ್ರಸಂಗದಲ್ಲಿ ಗಿರಣಿ ಬಟ್ಟೆಗಳಿಗೂ ಖಾದಿಗೂ ಮೇಲಾಟವಾಗಬಹುದು. ಗಿರಣಿಯ ಬಟ್ಟೆಗಳಿಗಿಂತಲೂ ಖಾದಿಯೂ ಒರಟಾಗಿಯೂ ತುಟ್ಟಿಯಾಗಿಯೂ ಇರುವದರಿಂದ ಅದರೊಡನೆ ಮೇಲಾಟವಾಡುವದು ಖಾದಿಗೆ ಶಕ್ಯವಿಲ್ಲ. ಈ ಅಡಚಣಿಯನ್ನು ದೂರಮಾಡಿಕೊಳ್ಳುವದಕ್ಕಾಗಿ ಉಚ್ಚ ಹಾಗೂ ಮಧ್ಯಮತರದ ಜನರು ತಮ್ಮ ಅಭಿರುಚಿಯನ್ನು ಕಡಿಮೆ ಮಾಡಿ ಒರಟಾದ ಬಟ್ಟೆಗಳನ್ನು ಧರಿಸಿಕೊಳ್ಳಬೇಕೆಂತಲೂ ಹೊಟ್ಟೆಗಿಲ್ಲದೆ ಬಳಲುವ ತಮ್ಮ ಬಡದೇಶಬಾಂಧವರ ಹಿತಕ್ಕಾಗಿ ಹೆಚ್ಚಿನ ವೆಚ್ಚವನ್ನು ಸಹಿಸಬೇಕೆಂತಲೂ ಮಹಾತ್ಮರು ಅವರಿಗೆ ಬೋಧಿಸುತ್ತಿದ್ದಾರೆ. ಭರತಖಂಡದ ರಾಷ್ಟ್ರೀಯ ಉದ್ಯೋಗವನ್ನು ಪುನಃ ಅದರ ಕಾಲಿನ ಮೇಲೆ ಗಟ್ಟಿಯಾಗಿ ನಿಲ್ಲುವಂತೆ ಮಾಡುವದು ಪ್ರತಿಯೊಬ್ಬ ಸ್ವದೇಶಾಭಿಮಾನಿಯಾದ ನಾಗರಿಕನ ಆದ್ಯಕರ್ತವ್ಯವಾಗಿದೆ.

ನೂಲುವುದೇ ನಿರುದ್ಯೋಗಕ್ಕೆ ಮದ್ದು

ಭರತಖಂಡದ ಒಕ್ಕಲುತನದ ಪರಿಸ್ಥಿತಿಯನ್ನು ನಿರೀಕ್ಷಿಸಿದರೆ ಒಕ್ಕಲಿಗರ ನಿರುದ್ಯೋಗವನ್ನು ಹೋಗಲಾಡಿಸಿ ಅವರ ಆಹಾರಬಟ್ಟೆಗಳ ವಿಷಯದಲ್ಲಿ ತಕ್ಕ ಯೋಜನೆಯನ್ನು ಮಾಡುವದು ವಿಹಿತವಾದುದು. ನಿರುದ್ಯೋಗಿಗಳಿಗೆ ಅನುಕೂಲವಾದ ಉದ್ಯೋಗವನ್ನು ಹಚ್ಚಿಕೊಡಬೇಕೆಂಬುದೇ ಇದರ ತಾತ್ಪರ್ಯ. ಆ ಉದ್ಯೋಗವು ಸುಗ್ಗಿಯನ್ನು ಬಿಟ್ಟು ಬಿಡುದಿನಗಳಲ್ಲಿ ಅನುಕೂಲವುಳ್ಳದ್ದಾಗಿರಬೇಕು. ಮಹಾಪೂರ ದುರ್ಭಿಕ್ಷೆಗಳಲ್ಲಿ ಜನರನ್ನು ಸಂರಕ್ಷಿಸುವಂತಹದಿರಬೇಕು. ಮನೆಯೊಳಗಿನ ಪ್ರತಿಯೊಂದು ವ್ಯಕ್ತಿಗೂ ಅದು ಬಹು ಸುಲಭವಾಗಿ ಕೈಕೊಳ್ಳಲಿಕ್ಕೆ ಬರುವಂತಹದಿರಬೇಕು. ತೀರ ಬಡತನದ ಗುಡಿಸಲುಗಳಿಗೂ ಅದು ಸಂಬಂಧಪಟ್ಟಿರಬೇಕು. ಆ ಕೆಲಸವು ಗಂಡಸರೂ, ಹೆಂಗಸರೂ, ಹುಡುಗರೂ, ಮುದುಕರೂ, ಯಾರು ಬೇಕಾದವರೂ ಮಾಡಲು ಯಾವ ತರಹದ ಸಂಕೋಚವಿರಕೂಡದು. ಜಾತಿ, ಅಭಿರುಚಿ, ರೂಢಿ ಮೊದಲಾಧ ಯಾವ ನಿರ್ಬಂಧನೆಗಳೂ ಅದಕ್ಕೆ ಇರಕೂಡದು. ಇವೆಲ್ಲ ಸೌಕರ್ಯಗಳಿಗೆ ಕೈರಾಟಿಯಿಂದ ನೂಲು ತೆಗೆಯುವ ಉದ್ಯೋಗವು ಒಳ್ಳೆಯ ಒರೆಗಲ್ಲಾಗಿರುವುದು.

ಕೈರಾಟಿಯಿಂದ ನೂಲುವದು ಪ್ರಾಚೀನ ಕಾಲದಿಂದಲೂ ನಡೆದುಬಂದ ಉದ್ಯೋಗವಾಗಿರುವದು, ಅದು ಇವತ್ತಿಗೂ ಅಸ್ತಿತ್ವದಲ್ಲಿದೆ. ಬಿಡುದಿನಗಳಲ್ಲಿ ಒಳ್ಳೆ ಸಹಾಯಕಾರಿಯಾದ ಜೊತೆಯ ಉದ್ಯೋಗವೆಂದರೆ ರಾಟಿಯಿಂದ ನೂಲುವದು. ಎಲ್ಲ ಹಳ್ಳಿಗಾಡ ಜನರಿಗೂ ಆ

ಉದ್ಯೋಗವು ಮುದ್ದುಮುದ್ದಾಗಿರುವದು. ಅಶಿಕ್ಷಿತರೂ, ದರಿದ್ರರೂ, ಕೂಳಿಲ್ಲದೆ, ಸಾಯುವವರೂ ಈ ಉದ್ಯೋಗವನ್ನು ನಿರಾಯಾಸವಾಗಿ ಕಲಿಯಬಲ್ಲರು. ಒಕ್ಕಲಿಗರು ಸುಖಶಾಂತಿಯಿಂದ ತಮ್ಮ ಚರಿತಾರ್ಥವನ್ನು ಸಾಗಿಸಬೇಕಾದರೆ ಅವರು ತಮ್ಮ ಜನ್ಮಸಿದ್ಧವಾದ ನೂಲುವ ಉದ್ಯೋಗವನ್ನು ಅವಶ್ಯವಾಗಿ ಕೈಕೊಳ್ಳಲೇಬೇಕು.

ರಾಟಿಯಿಂದ ಆಟ ಸಾಗುವದೇ?

ರಾಟಿಯನ್ನು ಪುನರುದ್ಧಾರ ಮಾಡುವದು ದೇಶಕ್ಕೆ ಒಳ್ಳೆಯ ಹಿತದ ಕೆಲಸವಾಗಿದೆ. ಆದರೆ ರಾಟಿಯಿಂದ ಆಟ ಸಾಗುವದೇ ಎಂದು ಕೆಲವರು ಆಕ್ಷೇಪಿಸುವರು. ಶ್ರೀಯುತ ಕಾಳೆಯವರು ಕೈರಾಟಿಯ ಕೆಲಸವನ್ನು ಕೈಕೊಂಡರೆ ಪ್ರತಿಯೊಬ್ಬನಿಗೆ ಒಂದು ವರ್ಷಕ್ಕೆ ೧೬ ರೂ. ದೊರೆಯುವದು ಪರಾಕಷ್ಟವೆಂದು ಹೇಳಿದ್ದಾರೆ. ಈ ಮಾತಿನ ಮಬ್ಬಿಗೆ ಬಲಿಬಿದ್ದು ರಾಟಿಯನ್ನು ಬಿಟ್ಟುಬಿಡಬೇಕೆಂತಲ್ಲ. ಶ್ರೀ ಕಾಳೆಯವರು ಭರತಖಂಡದ ಬಹು ಸಂಖ್ಯಾತರಾದ ಬಡಜನಗಳಿಗೆ ಕೈರಾಟಿಯನ್ನು ಬಿಟ್ಟು ಬೇರಾವ ಜೊತೆಯ ಉದ್ಯೋಗವೂ ಇಲ್ಲವೆಂಬುದನ್ನು ಮರೆಯುತ್ತಾರೆ.

ಕೈರಾಟಿಯ ಉದ್ಯೋಗವು ಹಿಂದುಸ್ಥಾನದ ಹಳ್ಳಿಗಾಡ ಜನಗಳಿಗೆ ಒಳ್ಳೆಯ ಉಪಯುಕ್ತವಾದ ಉದ್ಯೋಗವಾಗಿರುವದು. ನೂಲುವದನ್ನು ಯಾರಾದರು ಬಹು ಸುಲಭವಾಗಿ ಕಲಿಯಬಹುದು. ಅದಕ್ಕೆ ದೊಡ್ಡ ಭಾಂಡವಲು ಹಾಕಿ ಕೆಲಸ ನಡೆಯಿಸಬೇಕೆಂಬುದೇನೂ ಇಲ್ಲ. ಒಕ್ಕಲಿಗನ ಉತ್ಪನ್ನವನ್ನು ಅದು ಸ್ವಲ್ಪಮಟ್ಟಿಗಾದರು ಹೆಚ್ಚಿಸುತ್ತದೆ. ಕರಿಸಾಲುಬರಗಾಲದಲ್ಲಿ ಅದು ಬಡಬಗ್ಗರಿಗೆ ಬಹು ಸಹಾಯ ಮಾಡುತ್ತದೆ. ಕೈರಾಟಿಯಿಂದ ಗಳಿಕೆಯು ಸ್ವಲ್ಪೇ ಕಂಡರೂ ಬಹುಸಂಖ್ಯಾತ ಜನರು ಅದನ್ನು ನಡೆಯಿಸಿದರೆ ಹೇರಳವಾದ ಹಣವು ಪರದೇಶದವರ ಕಿಸೆಯಲ್ಲಿ ಬೀಳದೆ ನಮ್ಮ ದೇಶದಲ್ಲಿಯೇ ಶೇಖರವಾಗುತ್ತದೆ. ಸ್ವಲ್ಪೇ ಉತ್ಪನ್ನದಿಂದಲಾದರೂ ಮನುಷ್ಯನ ಸಾಮಾಜಿಕ ಪರಿಸ್ಥಿತಿಯು ಎಷ್ಟೊ ಮಟ್ಟಿಗೆ ಸುಧಾರಿಸಿದಂತಾಗುವದು. ಆದುದರಿಂದ ಕೈರಾಟಿಯ ಉದ್ಯೋಗಕ್ಕಿಂತಲೂ ಬಡಬಗ್ಗರಿಗೆ ಅಧಿಕವಾದ ಜೊತೆಯ ಉದ್ಯೋಗವು ಬೇರಾವುದೂ ಇಲ್ಲ.

ಕೈರಾಟಿಯಿಂದಾಗುವ ಹಿತಗಳು

(೧) ವರ್ಷದ ನಾಲ್ಕಾರು ತಿಂಗಳುಗಳವರೆಗೆ ನಿರುದ್ಯೋಗಿಗಳಾಗಿ ಜೀವಿಸುವ ಬಡ-ಒಕ್ಕಲಿಗರಿಗೆ ಕೈರಾಟಿಯು ಸರ್ವೋತ್ಕೃಷ್ಟವಾದ ಜೊತೆಯ ಉದ್ಯೋಗವಾಗಿರುತ್ತದೆ. ಬರಗಾಲದಲ್ಲಿ ಕೈರಾಟಿಯು ಸ್ವತಂತ್ರವಾದ ಉದ್ಯೋಗವಾಗಿರುತ್ತದೆ. ಕೈರಾಟಿಯು ದುಡಿತವನ್ನೂ ದುಡ್ಡನ್ನೂ ಒದಗಿಸಿ ಕೊಡುವಂಥ ಉಪಕರಣವಾಗಿದೆ.

(೨) ಪ್ರತಿವರ್ಷ ಪರದೇಶಿ ಬಟ್ಟೆಗಳಿಗಾಗಿ ನಮ್ಮ ಕೈಬಿಡುವ ೬೦ಕೋಟಿ ರೂ. ಗಳು ಕೈರಾಟಿಯು ಉಳಿಸುತ್ತದೆ. ಜನರ ಪದಾರ್ಥೋತ್ಪಾದನ ಶಕ್ತಿ ಮತ್ತು ಚಾತುರ್ಯಗಳನ್ನು ಬಹು ಸುಲಭ ಮಾಡಿಕೊಡುತ್ತದೆ.

(೩) ಕೈರಾಟಿಯ ನೂಲೂ ಕೈಮಗ್ಗದ ಬಟ್ಟೆಯೂ ಮನುಷ್ಯನಿಗೆ ಅತ್ಯಾವಶ್ಯಕವಾಗಿ ಬೇಕಾಗುವ ಪದಾರ್ಥಗಳಾಗಿರುವವು.

(೪) ಕೈರಾಟಿಯ ಉದ್ಯೋಗವನ್ನು ಬಹು ಸುಲಭವಾಗಿ ಕಲಿಯಬಹುದು. ಅದು ಸ್ತ್ರೀ–ಪುರುಷರಿಗೂ ಹುಡುಗರಿಗೂ ತಕ್ಕದ್ದಾಗಿರುತ್ತದೆ.

(೫) ಎಲ್ಲ ಜನರಿಗೂ ಅನುಕೂಲವಾದ ಉದ್ಯೋಗವೆಂದರೆ ಇದೊಂದೆ, ಅದು ತತ್‌ಕ್ಷಣದಲ್ಲಿಯೇ ರಾಷ್ಟ್ರದ ಸಂಪತ್ತನ್ನು ಅಭಿವೃದ್ಧಿಗೊಳಿಸುತ್ತದೆ.

(೬) ನಿರುದ್ಯೋಗ ಸೋಮಾರಿತನಗಳ ವಿರುದ್ಧವಾಗಿ, ಆ ಉದ್ಯೋಗವು ಜನಿಸಿರುವದಲ್ಲದೇ ಲಾಭಕರವಾದ ಉದ್ಯೋಗಗಳನ್ನು ಹಾಳುಗೆಡವಲಿಕ್ಕೆ ಹುಟ್ಟಿಲ್ಲ.

(೭) ಕೈರಾಟಿಯು ಬಡತನದ ನಿರಾಶೆಯನ್ನು ಹೋಗಲಾಡಿಸಿ ಸತತ ಪ್ರಯತ್ನದ ವಾತಾವರಣವನ್ನು ಹುಟ್ಟಿಸಿಕೊಡುತ್ತದೆ.

ಕೈನೂಲಿನ ಅನುಕೂಲತೆಗಳು

ಕೈನೂಲಿನಿಂದ ಭರತಖಂಡದ ಎಲ್ಲ ಜನರಿಗೆ ಬಟ್ಟೆಯು ಪೂರೈಸುವುದೇ? ಇದನ್ನೇ ಬೇರೆ ಶಬ್ದಗಳಿಂದ ಹೇಳಬೇಕಾದರೆ ಕೈರಾಟಿಯು ಆಧುನಿಕ ಭವ್ಯವಾದ ನೂಲುವ ಹಾಗೂ ನೇಯುವ ಕಾರ್ಯಾಲಯಗಳೊಂದಿಗೆ ಮೇಲಾಟವಾಡಬಲ್ಲುದೇ? ಕೈನೂಲಿನ ಬಟ್ಟೆಗಳಿಗೂ ಯಂತ್ರದ ಬಟ್ಟೆಗಳಿಗೂ ಸ್ಪರ್ಧೆ ಹುಟ್ಟುವುದಕ್ಕೆ ಅವಕಾಶವೇ ಇಲ್ಲ. ಯಾಕೆಂದರೆ, ಕೈರಾಟಿಯಿಂದ ನೂಲುವದು ಅವಶ್ಯಕವಾದ ಗೃಹಕೃತ್ಯವಾಗಿರುವದೇ ಹೊರತು ಅದು ವ್ಯಾಪಾರದ ವಿಷಯವಲ್ಲ. ಮನೆಯಲ್ಲಿ ಊಟಕ್ಕೆ ಅಡಿಗೆ ಮಾಡುವದೆಷ್ಟು ಅಗತ್ಯವೋ ಅಷ್ಟೇ ಬಟ್ಟೆ ಧರಿಸುವದಕ್ಕೆ ನೂಲುವದೂ ಅವಶ್ಯಕವಾಗಿದೆ. ಆದುದರಿಂದ ಇದು ಕಾರ್ಯಾಲಯಗಳೊಂದಿಗೆ ಸ್ಪರ್ಧೆ ಹೂಡುವ ಗೋಜಿಗೆಂದಿಗೂ ಹೋಗಲಾರದು. ಆಹಾರವನ್ನು ಒಕ್ಕಲಿಗರು ಹಣಕೊಟ್ಟು ಕೊಳ್ಳುವದಿಲ್ಲವಷ್ಟೇ. ಅದರಂತೆಯೇ ನಮಗೆ ಬೇಕಾಗುವ ಬಟ್ಟೆಯನ್ನಾದರೂ ನಾವೇಕೆ ರೊಕ್ಕ ಕೊಟ್ಟು ಕೊಳ್ಳಬೇಕು?

ಬೇರೆ ರೀತಿಯಿಂದ ವಿಚಾರಿಸಿದರೆ ಕಾರ್ಯಾಲಯ ಕೈರಾಟಿಗಳ ನಡುವೆ ಸ್ಪರ್ಧೆಯಿರುವದೇನೋ ನಿಜ. ಕೈರಾಟಿಯನ್ನು ಪುನರುಜ್ಜೀವನಗೊಳಿಸುವದೆಂದರೆ ರಾಷ್ಟ್ರದ ಉತ್ಪಾದನಶಕ್ತಿಯನ್ನು ಹೆಚ್ಚಿಸುವದಾಗಿರುತ್ತದೆ. ಇಷ್ಟು ದಿವಸಗಳವರೆಗೆ ಕೈರಾಟಿಗಳು ಮೂಲಿಗುಂಪಾಗಿ ಬಿದ್ದದ್ದರಿಂದ ಮನುಷ್ಯನ ಒಂದು ಅಂಗವೇ ಲೋಪವಾದಂತಾಗಿತ್ತು. ಈಗ ಆ ನಷ್ಟವಾದ ಅವಯವವನ್ನು ಹಚ್ಚಿ ಕೂಡಿಸಬೇಕಾಗಿರುವದು. ಕೈರಾಟಿಯ ಉದ್ಯೋಗವನ್ನು ಬಹುಸಂಖ್ಯಾತರಲ್ಲಿ ಪ್ರಚಾರ ಮಾಡಿದಾದ್ದರೆ ಅದು ಯಂತ್ರಾಲಯಗಳನ್ನೆಲ್ಲ ಹಿಮ್ಮೆಟ್ಟಿಸುವದೆಂದು ಸಹಜವಾಗಿ ಗೊತ್ತಾಗುವದು.

ಕೈರಾಟಿಯಿಂದುಂಟಾಗುವ ಕೆಲವು ಸೌಕರ್ಯಗಳನ್ನು ಇದರಡಿಯಲ್ಲಿ ಪ್ರಸ್ತಾಪಿಸಿದ್ದೇವೆ.

೧. ಕೈರಾಟಿಗೆ ಬೇಕಾಗುವ ಹತ್ತಿಯನ್ನು ಪ್ರತಿಯೊಬ್ಬರು ತಮ್ಮ ತಮ್ಮ ಹೊಲಗಳಲ್ಲಿ ದೊರಕಿಸಬಹುದು. ಇಲ್ಲವೆ ನೆರೆಹೊರೆಯವರಿಂದ ಸಂಪಾದಿಸಬಹುದು.

೨. ಕೈರಾಟಿಯು ಸಾದಾ ತರದ ಉಪಕರಣವಾಗಿದೆ. ಇದು ಕೆಟ್ಟರೆ ಹಳ್ಳಿಯವರೇ ಇದನ್ನು ಬಹು ಸುಲಭವಾಗಿ ಸರಿಪಡಿಸಬಲ್ಲರು.

೩. ಕೈರಾಟಿಯನ್ನು ಎಲ್ಲಿ ಬೇಕಾದಲ್ಲಿ ಸರಿಸಿ ಇಡಲಿಕ್ಕೆ ಬರುತ್ತದೆ. ಹುಡುಗರು, ಮುದಿಕೆಯರು, ಮೊದಲು ಮಾಡಿಕೊಂಡು ಮನೆಯೊಳಗಿನ ಎಲ್ಲ ಜನರೂ ರಾಟಿಯಿಂದ ನೂಲನ್ನು ತೆಗೆಯಬಲ್ಲರು.

೪. ಕೈರಾಟಿಯನ್ನು ತಿರುವಹತ್ತಿದರೆ ಬೇನೆಬೇಸರಿಕೆಗಳುಂಟಾಗುವದಿಲ್ಲ. ಆ ಉದ್ಯೋಗವನ್ನು ಬೇಕಾದಾಗ ಸಾಗಿಸಲಿಕ್ಕೆ ಬರುತ್ತದೆ.

೫. ಕುಶಲಗಾರರಿಗೆ ರಾಟಿಯಿಂದಲೇ ಬಹು ಜಿನುಗಾದ ನೂಲನ್ನು ತೆಗೆಯಲಿಕ್ಕೆ ಬರುತ್ತದೆ.

೬. ನೂಲಿಗೆ ನೂಲುಗಾರನೇ ಗಿರಾಕಿಯಾಗಬಲ್ಲನು. ಉಳಿದವರೂ ಕ್ರಯಕ್ಕೆ ತೆಗೆದುಕೊಳ್ಳುವರು. ನೂಲಿಗೆ ಯಾವಾಗಲೂ ಪೇಟೆಯು ಸಿದ್ಧವಾಗಿಯೇ ಇರುತ್ತದೆ.

೭. ಭರತಖಂಡದ ಸಂದಿಗೊಂದಿಗಳಲ್ಲಿ ಸಹ ಬಹುದಿವಸಗಳಿಂದ ನೇಕಾರರು ನೇಗೆಯ ಉದ್ಯೋಗವನ್ನು ಸಾಗಿಸುತ್ತ ಬಂದಿದ್ದಾರೆ.

ಕೈರಾಟಿ ಕೈಮಗ್ಗಗಳ ಕರ್ತೃತ್ವಶಕ್ತಿ

ಸದ್ಯಕ್ಕೆ ಭರತಖಂಡದ ಎಲ್ಲ ಜನರಿಗೆ ಖಾದಿಯನ್ನು ಒದಗಿಸಿಕೊಡುವಷ್ಟು ಕೈರಾಟಿ ಕೈಮಗ್ಗಗಳು ಈ ದೇಶದಲ್ಲಿ ದೊರೆಯಬಹುದೇ? ಈಗ ದೇಶದಲ್ಲಿ ಎಷ್ಟೆಷ್ಟು ರಾಟಿಗಳು ಕೆಲಸದಲ್ಲಿ ತೊಡಗಿರುವವೆಂಬುದನ್ನು ನಿಷ್ಕರ್ಷವಾಗಿ ಹೇಳಲಿಕ್ಕೆ ಬರುವುದಿಲ್ಲ. ಸದ್ಯಕ್ಕೆ ಪಂಜಾಬ, ತಮಿಳುನಾಡು, ಆಂದ್ರ, ಬಿಹಾರ, ಕರ್ನಾಟಕ, ರಜಪೂತಸ್ಥಾನ (ರಾಜಸ್ಥಾನ) ಈ ಪ್ರಾಂತಗಳು ಕೈರಾಟಿಯ ನಿವಾಸಸ್ಥಾನಗಳಾಗಿರುವವು. ಕೈರಾಟೆಗಳ ಸಂಖ್ಯೆ ಮಿತಿಮೀರಿ ಬೆಳೆದಿದ್ದ ಅಖಿಲ ಭಾರತೀಯ ರಾಟಿ ಸಂಘದ ವರದಿಯ ಮೇಲಿಂದ ೫೦ಲಕ್ಷ ರಾಟಿಗಳು ದಿನಾಲು ೪೦೫ ತಾಸು ಕೆಲಸ ಮಾಡಿದರೆ ಸರಾಸರಿ ೧೫ ನಂಬರಿನ ೮೪೦ ಯಾರ್ಡು ಉದ್ದವಾದ ಎರಡು ಸೀಳುಗಳು ಸಿದ್ಧವಾಗುವವು. ಅಂದರೆ ಒಂದು ವರ್ಷಕ್ಕೆ ಒಂದು ಕದಿರಿಗೆ ೪೮ಪೌಂಡು ನೂಲು ಹೊರಡುವದು. ಒಂದು ಪೌಂಡು ನೂಲಿನಿಂದ ೪ಚೌ. ಯಾರ್ಡು ಬಟ್ಟೆಯನ್ನು ನೇಯುತ್ತಾರೆಂದು ತಿಳಿದರೆ ೪೮ಪೌಂಡಿಗೆ ವರ್ಷಕ್ಕೆ ೧೯೨ ಪೌಂಡು ಬಟ್ಟೆಯು ಸಿದ್ಧವಾದಂತಾಯಿತು. ಕೈರಾಟಿಯಿಂದ ಒಟ್ಟಿನ ಮೇಲೆ ೯೬ ಕೋಟಿ ಯಾರ್ಡು ನೂಲು ಹೊರಡುವದು.

೧೯೨೨-೨೩ರಲ್ಲಿ ಪರದೇಶಿ ಬಟ್ಟೆಗಳ ಮುಖಾಂತರವಾಗಿ ೧೫೭ಕೋಟಿ ಯಾರ್ಡು ನೂಲು ಈ ದೇಶಕ್ಕೆ ಬಂದಿದೆ. ಇದರ ಮೇಲಿಂದ ೫೦ ಲಕ್ಷ ರಾಟಿಗಳು ಕೆಲಸ ಮಾಡಿದರೆ ಪರದೇಶದಿಂದ ಬರುವ ನೂಲಿನ ಮುಕ್ಕಾಲು ಭಾಗ ನೂಲು ಹೊರಡುತ್ತದೆಂದಂತಾಯಿತು. ರಾಟಿಗಳು ದಿನಾಲು ನಾಲ್ಕೇ ತಾಸು ದುಡಿದರೂ ಪರದೇಶದಿಂದ ಬರುವ ವೆಗ್ಗಳವಾದ ಬಟ್ಟೆಯನ್ನು ನಿಲ್ಲಿಸುತ್ತವೆಂದ ಬಳಿಕ ರಾಟಿಗಳ ಸಂಖ್ಯೆಯು ಬೆಳೆದರೆ ಪರದೇಶಿ ಬಟ್ಟೆಯ ಅವಶ್ಯಕತೆಯಿಲ್ಲೆಂಬುದು ಸ್ಪಷ್ಟವಾಗಿ ತಿಳಿಯುವದು.

ಕೈಮಗ್ಗಗಳೆಷ್ಟಿರುವವೆಂಬ ಬಗ್ಗೆ ಇನ್ನೂ ಚೆನ್ನಾಗಿ ಗೊತ್ತಾಗಿಲ್ಲ. ಯಂತ್ರಾಲಯಗಳ ಈ ತಾಕಲಾಟದ ಕಾಲದಲ್ಲಿಯೂ ಕೂಡ ೬೦ ಲಕ್ಷ ನೇಕಾರರು ನೇಗೆಯ ಉದ್ಯೋಗದಿಂದ

ಜೀವಿಸುತ್ತಿದ್ದಾರೆಂದು ೧೯೨೧ನೆಯ ವರ್ಷದ ಜನಪರಿಗಣನೆಯ ಮೇಲಿಂದ ಕಂಡುಬರುತ್ತದೆ. ೧೧ ಪ್ರಾಂತಗಳಲ್ಲಿರುವ ಕೈಮಗ್ಗಗಳ ಸರಾಸರಿ ಸಂಖ್ಯೆಯನ್ನು ಕೆಳಗೆ ಕೊಟ್ಟಿದೆ.

ಪ್ರಾಂತಗಳು	ಕೈಮಗ್ಗಗಳ ಸಂಖ್ಯೆ
೧. ಅಜಮೀರ	೧, ೫೮೭
೨. ಆಸಾಮ	೪, ೨೧, ೩೬೭
೩. ಬಂಗಾಲ	೨, ೧೩, ೮೮೬
೪. ಬಿಹಾರ	೧, ೬೪, ೫೯೨
೫. ಬ್ರಹ್ಮದೇಶ	೪, ೭೯, ೧೩೭
೬. ದಿಲ್ಲಿ	೧, ೬೬೭
೭. ಮದ್ರಾಸ	೧, ೬೯, ೪೦೩
೮. ಪಂಜಾಬ	೨, ೭೦, ೫೦೭
೯. ಬರೋಡಾ	೧೦, ೮೫೭
೧೦. ಹೈದರಾಬಾದ	೧, ೧೫, ೪೩೪
೧೧. ರಜಪೂತಸ್ಥಾನ	೯, ೭೪೧
ಕೈಮಗ್ಗಗಳ ಸಂಖ್ಯೆ ಒಟ್ಟು	**೧೯, ೩೮, ೧೭೮**

ಮೇಲಿನ ಅಂಕಿಗಳಲ್ಲಿ ವರಹಾಡ, ಸಂಯುಕ್ತಪ್ರಾಂತ, ಮಧ್ಯ ಪ್ರಾಂತಗಳ ಮಗ್ಗಗಳನ್ನು ಸಮಾವೇಶ ಮಾಡಿಲ್ಲ. ಅವುಗಳನ್ನು ಬಿಟ್ಟರೂ ನಮ್ಮ ದೇಶದಲ್ಲಿ ಸದ್ಯಕ್ಕೆ ಕನಿಷ್ಠ ಪಕ್ಷಕ್ಕೆ ೨೦ ಲಕ್ಷ ಮಗ್ಗಗಳಿರುತ್ತವೆಂದಾಯಿತು. ಪ್ರತಿಯೊಂದು ಮಗ್ಗದಿಂದ ಪ್ರತಿವರ್ಷ ೧,೦೦೦ ಚೌ. ಯಾರ್ಡ ಬಟ್ಟೆಯು ಸಿದ್ಧವಾಗುತ್ತದೆಂದು ಲೆಕ್ಕ ಹಾಕಿದರೂ ಪರದೇಶಗಳಿಂದ ಬರುವ ಬಟ್ಟೆಗಿಂತ ಹೆಚ್ಚು ಬಟ್ಟೆಯು ಇಲ್ಲಿಯೇ ಉತ್ಪನ್ನವಾಗುತ್ತದೆಂದು ಸ್ಪಷ್ಟವಾಗಿ ತಿಳಿಯುವದು. ಖಾದಿಯನ್ನು ದೇಶದ ಎಲ್ಲ ಜನರಿಗೆ ಒದಗಿಸಿ ಕೊಡುವಷ್ಟು ಕೈರಾಟಿ ಕೈಮಗ್ಗಗಳು ನಮ್ಮ ದೇಶದಲ್ಲಿ ಸಾಕುಸಾಕಷ್ಟಿವೆ. ಇದಲ್ಲದೆ ನೇಕಾರರು ಅಂದಚೆಂದವಾದ ನೇಗೆಯ ಕಲೆಯನ್ನು ಬಟ್ಟೆಗಳಲ್ಲಿ ತೋರಿಸುತ್ತಿರುವುದು. ನೂಲುವ ಹಾಗೂ ನೇಯುವ ಉದ್ಯೋಗಗಳು ಸುವ್ಯವಸ್ಥಿತವಾದ ರೀತಿಯಲ್ಲಿ ನಡೆಯಲಾರಂಭಿಸಿದರೆ ಖಾದಿ ಬಟ್ಟೆಗಳು ಗಿರಣಿ ಬಟ್ಟೆಗಳಿಗಿಂತಲು ಬಹು ಸುಲಭವಾಗಿ ದೊರೆಯುವವು.

ಆದರ್ಶಪ್ರಾಯವಾದ ಔದ್ಯೋಗಿಕ ಪರಿಸ್ಥಿತಿ

ಕೈರಾಟಿಯ ಚಟುವಟಿಕೆಯನ್ನು ದೇಶದಲ್ಲಿ ಹಬ್ಬಿಸಲಿಕ್ಕೆ ದೊಡ್ಡ ಭಾಂಡವಲಿಗಿಂತಲೂ ಕ್ರಮಬದ್ಧವಾದ ವ್ಯವಸ್ಥೆಯು ಅತ್ಯಾವಶ್ಯಕವಾಗಿರುವದು. ಕೈರಾಟಿ ಕೈಮಗ್ಗಗಳ ಸೊಬಗು ಸೌಕರ್ಯಗಳು ಹಿಂದಿನ ಕಾಲದಲ್ಲಿ ನಲಿದಾಡುತ್ತಿದ್ದವು. ಬಟ್ಟೆಗಳು ಹೇರಳವಾಗಿ ಹುಟ್ಟಿ ಚೆನ್ನಾಗಿ ಮಾರಾಟವಾಗುತ್ತಿದ್ದವು. ದೊಡ್ಡ ಭಂಡವಾಲವನ್ನು ಶೇಖರಿಸಿ ಉದ್ಯೋಗಗಳನ್ನು ಕ್ರಮಬದ್ಧವಾಗಿ ನಡೆಯಿಸುತ್ತಿದ್ದರು. ಶಿರಿವಂತರ

ಮನೆಯ ಹೆಣ್ಣುಮಕ್ಕಳು ವಿನೋದಕ್ಕಾಗಿಯೂ ತಮ್ಮ ಬಟ್ಟೆಗಾಗಿಯೂ ನೂಲುತ್ತಿದ್ದರು. ಬಡಬಗ್ಗರಾದ ಸ್ತ್ರೀಯರು ತಮಗಾಗಿಯೂ ಮಾರಾಟಕ್ಕಾಗಿಯೂ ನೂಲುತ್ತಿದ್ದರು.

ಮನೆಮನೆಗಳಲ್ಲಿ ಬೇಕಾದಷ್ಟು ಅರಳೆಯನ್ನು ಕಾದಿಟ್ಟುಕೊಳ್ಳುತ್ತಿದ್ದುದರಿಂದ ಹಣದ ಅವಶ್ಯಕತೆಯೇ ಇದ್ದಿಲ್ಲ. ನೂಲುಗಾರರೂ ನೇಕಾರರೂ ನೆರೆಹೊರೆಯವರಾಗಿದ್ದರು. ನೇಕಾರರು ದಲಾಲರಿಲ್ಲದೆ ತಮಗೆ ಬೇಕಾದಷ್ಟು ನೂಲನ್ನು ಧಾರಾಳವಾಗಿ ದೊರಕಿಸುತ್ತಿದ್ದರು. ಬಟ್ಟೆಯ ಉತ್ಪನ್ನವೂ ಮಾರಾಟವೂ ಬೇಕಾದ ಹಾಗೆ ಸಾಗಿದ್ದವು. ನೇಕಾರರು ಬೇಡಿಕೆಗೆ ತಕ್ಕಂತೆ ಅಂದಚೆಂದವಾದ ಬಟ್ಟೆಗಳನ್ನು ನೇಯುತ್ತಿದ್ದರು. ಈ ಮೇರೆಗೆ ಈ ಉದ್ಯೋಗಶಾಲಿಗಳು ಸ್ವತಂತ್ರವಾಗಿಯೂ ಸುಖರೂಪದಿಂದಲೂ ತಮ್ಮ ಚರಿತಾರ್ಥವನ್ನು ಸಾಗಿಸುತ್ತಿದ್ದರು.

ನಿರುದ್ಯೋಗಕ್ಕೆ ಹತ್ತಿಯನ್ನು ಸಂಗ್ರಹಿಸಿಡುವದೇ ಮದ್ದು

ನೂಲುಗಾರರು ಹತ್ತಿಯನ್ನು ಕೂಡಿಟ್ಟುಕೊಳ್ಳುವದು ದೇಶದ ನಿರುದ್ಯೋಗವನ್ನು ಹೊಡೆದೋಡಿಸುವದಕ್ಕೆ ಮುಖ್ಯ ಸಾಧನವಾಗಿದೆ. ನೂಲುಗಾರರಲ್ಲಿ ಬಹು ಜನರು ಹತ್ತಿಯನ್ನು ತಮ್ಮ ಹೊಲಗಳಲ್ಲಿ ಬೆಳೆಯುವವರಾಗಿದ್ದಾರೆ. ಹತ್ತಿ ಬಿಡಿಸುವ ಕೂಲಿಕಾರರಿಗೆ ಎಷ್ಟೋ ಕಡೆಯಲ್ಲಿ ಹತ್ತಿಯೇ ಕೂಲಿಯಾಗಿ ದೊರೆಯುತ್ತದೆ. ಜಮೀನದಾರರಂತು ಬೇಕಾದಷ್ಟು ಹತ್ತಿಯನ್ನು ಬೆಳೆದುಕೊಳ್ಳವರು. ಹತ್ತಿಯು ಬೆಳೆಯದ ಪ್ರದೇಶಗಳಲ್ಲಿ ನೂಲುಗಾರರ ಸಂಖ್ಯೆಯು ವಿಶೇಷವಾಗಿಲ್ಲ. ಎಷ್ಟೋ ಸ್ಥಳಗಳಲ್ಲಿ ನೂಲುಗಾರರು ಬಡವರಿದ್ದುದರಿಂದ ಅವರಿಗೆ ಹತ್ತಿಯನ್ನು ಸಂಗ್ರಹಿಸಿಟ್ಟುಕೊಳ್ಳುವದಾಗುವುದಿಲ್ಲ. ಅವರಿಗೆ ಪರರ ಸಹಾಯವು ಅವಶ್ಯವಾಗಿರುವುದು. ಹತ್ತಿಯನ್ನು ಒತ್ತಟ್ಟಿಗೆ ಶೇಖರಿಸುವದಕ್ಕಿಂತ ಅಲ್ಲಲ್ಲಿ ಅಲ್ಪ ಪ್ರಮಾಣದಿಂದ ಕೂಡಿಸಿಟ್ಟಿದ್ದಾದರೆ ಅರಳೆಯು ಕೆಟ್ಟು ಹೋಗುವ ಭಯವು ಕಡಿಮೆಯಾಗುತ್ತದೆ.

ಭರತಖಂಡಕ್ಕೆ ೫೦-೬೦ ಕೋಟಿ ರುಪಾಯಿಗಳ ಬಟ್ಟೆಯು ಬೇಕಾಗುತ್ತದೆ. ಇದಕ್ಕೆ ಬೇಕಾಗುವಷ್ಟು ಅರಳಿಯನ್ನು ಒತ್ತಟ್ಟಿಗೆ ಕೂಡಿ ಹಾಕಬೇಕೆಂದರೆ ಎಷ್ಟೋ ಕೋಟಿ ರೂಪಾಯಿಗಳ ಮೂಲಭಾಂಡವಲು ಬೇಕಾಗುತ್ತದೆ. ಇದಲ್ಲದೆ ಆಳುಹೋಳು, ಕಾರಕೂನ, ಕಟ್ಟಡ ಲೆಕ್ಕಪತ್ರ, ವಿಮೆ ಮುಂತಾದವುಗಳಿಗೆ ಬಹಳ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ಕೋಟ್ಯವಧಿ ಬಡಬಗ್ಗರಿಗೆ ದೊರೆಯುತ್ತಿರುವ ತುತ್ತು ರೊಟ್ಟಿಯನ್ನು ಹಾರಿಹೊಡೆದಂತಾಗುತ್ತದೆ. ಆದರೆ ಅರಳಿಯನ್ನು ಅಲ್ಲಲ್ಲಿಯೇ ಅಲ್ಪ ಪ್ರಮಾಣದಿಂದ ಸಂಗ್ರಹಿಸಿದ್ದಾದರೆ ಇಂಥ ಯಾವ ಅನರ್ಥಗಳಿಗೂ ಆಸ್ಪದವಿಲ್ಲ. ಅರಳೆಯನ್ನು ಬಹಳ ಸಂಗ್ರಹಿಸಿಟ್ಟಿರಲು ಧಾರಣಿಯು ಒಮ್ಮೆಲೇ ಮಂದವಾದರೆ ದಿವಾಳಿ ತೆಗೆಯುವ ಪ್ರಸಂಗ ಬರುವದು.

೧೯೨೫ರಲ್ಲಿ ಒಮ್ಮಿಂದೊಮ್ಮೆ ಅರಳಿಯ ಧಾರಣಿಯು ಏರಲು ಖಾದಿಯ ಉತ್ಪಾದಕರು ಅಲ್ಪ ಪ್ರಮಾಣದಿಂದ ಖಾದಿಯನ್ನು ಹುಟ್ಟಿಸಲಾರಂಭಿಸಿದರು. ಅದರಿಂದ ನೂಲುಗಾರರು ಉದ್ಯೋಗವಿಲ್ಲದೆ ಕುಳಿತರು, ಅರಳಿಯ ಧಾರಣೆಯು ಮಂದವಾದರೆ ತುಟ್ಟಿಯಿಂದ ಕೊಂಡ ಅರಳೆಯನ್ನು ಸಂಗ್ರಹಿಸಿಟ್ಟಿದ್ದು ಹಾನಿಕಾರಕವು. ಇತ್ತ ಅರಳೆಯ ಧಾರಣಿಯು ಏರಿದರೆ ಅದನ್ನು

ಕೊಳ್ಳುವದಕ್ಕೆ ದುಡ್ಡು ಸಾಲದೆ ಅತ್ಯಲ್ಪ ಪ್ರಮಾಣದಿಂದ ಖಾದಿಯನ್ನು ಹುಟ್ಟಿಸಬೇಕಾಗುತ್ತದೆ. ಇದರಿಂದ ಬಡಬಗ್ಗರಾದ ನೂಲುಗಾರರ ಬಾಯಿಗೆ ಗಡ್ಡೆಯನ್ನು ಕೊಟ್ಟಂತಾಗುತ್ತದೆ. ಇಂಥ ದುರ್ಘಟ ಪ್ರಸಂಗಗಳಲ್ಲಿ ನೂಲುಗಾರನು ಮುಂಚಿತವಾಗಿಯೇ ತಾನು ತನ್ನ ಅರಳೆಯನ್ನು ಕೂಡಿಟ್ಟುಕೊಂಡಿರುವದೇ ಲೇಸು.

ನೂಲುಗಾರನು ಹತ್ತಿಯನ್ನು ಸಂಗ್ರಹಿಸಿಟ್ಟುಕೊಂಡದ್ದಾದರೆ ಆತನಿಗೆ ಹತ್ತಿಯನ್ನು ಅರೆದ ಕೂಲಿಯೂ, ನೂತ ಕೂಲಿಯೂ ದೊರೆಯುವದಲ್ಲದೆ ಹತ್ತಿಯ ಕಾಳುಗಳು ಆತನಿಗೇ ಉಳಿಯುವವು, ಒಕ್ಕಲಿಗರಿಗೆ ಹತ್ತಿ ಕಾಳು ಉಳಿಯುವದೆಂದರೆ ದೊಡ್ಡ ಲಾಭವೇಸರಿ, ನೂಲುಗಾರನು ಅರಳೆಯ ಧಾರಣಿಯು ಏರಿದಾಗ ನೂಲು ಮಾರಿ ಲಾಭ ಪಡೆಯಬಹುದು. ಅರಳೆಯ ಧಾರಣಿಯು ಇಳಿದಾಗ ತಾನು ನೂತ ನೂಲನ್ನು ತನ್ನ ಮನೆತನಕ್ಕೆ ಬೇಕಾಗುವ ಬಟ್ಟೆಗಳಿಗಾಗಿ ಉಪಯೋಗಿಸಿಕೊಳ್ಳಬಹುದು. ಹಾಗೆ ಮಾಡುವದರಿಂದ ಅವನಿಗೆ ಯಾವ ಹಾನಿಯೂ ತಟ್ಟಿದಂತಾಗಲಿಲ್ಲವಷ್ಟೇ. ಆದುದರಿಂದ ನೂಲುಗಾರನು ತನ್ನ ಹೊಲದ ಹತ್ತಿಯನ್ನು ೧ ವರ್ಷದ ಮಟ್ಟಿಗೆ ನೂಲಲಿಕ್ಕೆ ಸಾಕಾಗುವಷ್ಟು ಸಂಗ್ರಹಿಸಿಟ್ಟುಕೊಳ್ಳಲೇಬೇಕು. ಬಡಬಗ್ಗರಾದ ನೂಲುಗಾರರಿಗೆ ಹಿಂದಿನ ಶಿಲುಕಿನ ಅರಳೆಯನ್ನು ಕೊಟ್ಟು ನೂಲು ಮಾಡಿಸಿಕೊಂಡರೆ ನೂಲುಗಾರರು, ನಿರುದ್ಯೋಗಿಗಳಾಗುವ ಸಂಭವವಿಲ್ಲ. ನೂಲುಗಾರರು ಅರಳೆಯನ್ನು ತಮ್ಮ ಆಹಾರದ್ರವ್ಯವೆಂದೇ ಸಂಗ್ರಹಿಸಿಟ್ಟುಕೊಳ್ಳಬೇಕು.

ಬಟ್ಟೆಯಾದರೂ ರೊಟ್ಟಿಯಷ್ಟೇ ಮಹತ್ವದ್ದಾಗಿದೆ.

೧೯೨೫ನೆಯ ವರ್ಷದ ವರದಿ

೧ ಪೌಂಡು ನೂಲಿನ ಬೆಲೆಯು ಹೇಗೆ ಸಿದ್ಧವಾಗುತ್ತದೆ? ೧೨ ನಂಬರಿನ ೧ ಪೌಂಡು ನೂಲಿಗೆ ೧ರೂ. ಬೆಲೆ ಬೀಳುತ್ತದೆ. ಅದು ಹೇಗೆಂದರೆ :

ರೂ.	ಆ.		ಪೈ.	
೦–	೯	–	೬	ಹತ್ತಿಯ ಕಿಮ್ಮತ್ತು
೦–	೫	–	೦	ನೂಲುವ ಕೂಲಿ
೦–	೧	–	೬	ಹಂಜಿಯ ಕೂಲಿ
೧–	೦	–	೦	

ಇದು ಒತ್ತಟ್ಟಿಗೆ ಹತ್ತಿಯನ್ನು ಶೇಖರಿಸಿದ್ದರ ಉದಾಹರಣೆಯಾಯಿತು. ಇನ್ನು ಪ್ರತ್ಯೇಕವಾಗಿ ತಮ್ಮ ಹತ್ತಿಯಿಂದ ತಾವೇ ನೂಲುವ ಕೆಲಸ ಮಾಡುವವರ ಸಂಬಂಧವಾಗಿ ವಿಚಾರಿಸುವಾ : ೧೨ ನಂಬರಿನ ೧ ಪೌಂಡು ನೂಲಿನ ಬೆಲೆಯು ೧೩ ಆ – ೬ ಪೈ ಆಗುತ್ತದೆ. ಅದು ಹೇಗೆಂದರೆ :

ರೂ.	ಆ.	ಪೈ.	
೦ –	೭ –	೬	ಹತ್ತಿಯ ಕಿಮ್ಮತ್ತು
೦ –	೬ –	೦	ನೂಲುವ ಕೂಲಿ

ಅಂತು ೦ – ೧೩ – ೬

ಎರಡನೆಯ ಸಂದರ್ಭದಲ್ಲಿ ನೂಲುಗಾರನಿಗೆ ೨॥ ಪೌಂಡು ಹತ್ತೀಕಾಳು ಉಳಿಯುವವು. ಮೇಲಿನ ಸಂಗತಿಗಳು ಅನುಭವದ ಮಾತುಗಳಾಗಿವೆ. ನೂಲುಗಾರನು ಹತ್ತಿಯನ್ನಿಟ್ಟುಕೊಳ್ಳುವದರಿಂದ ಆತನ ಗಳಿಕೆಯು ಹೆಚ್ಚಾಗುತ್ತದೆ. ಉದ್ಯೋಗವು ನಿರಂತರವಾಗಿ ಸಾಗುತ್ತದೆ. ರಾಷ್ಟ್ರದ ಸಂಘದಭಿವೃದ್ಧಿಗೂ ಆತನು ಸ್ವಲ್ಪ ಭಾಗಿಯಾದಂತಾಗುತ್ತದೆ. ಖಾದಿಯ ಬಟ್ಟೆಯು ಎಲ್ಲರಿಗೂ ಅಗ್ಗವಾಗಿಯೂ ಸುಲಭಾವಾಗಿಯೂ ದೊರೆಯಬೇಕಾದರೆ ನೂಲುಗಾರರು ತಮ್ಮ ಹತ್ತಿಯನ್ನು ತಾವೇ ಸಂಗ್ರಹಿಸಿಟ್ಟುಕೊಳ್ಳಬೇಕೆಂಬುದನ್ನು ಮರೆಯಲಾಗದು.

ಖಾದಿಯ ಪ್ರಸಾರ

ಖಾದಿಯ ಪ್ರಸಾರವಾಗಬೇಕಾದರೆ ಒರಟು, ಮಧ್ಯವರ್ತಿ, ಹಾಗೂ ಜಿನಗು ನೂಲನ್ನು ಹೆಚ್ಚಿಸಬೇಕಾಗುತ್ತದೆ. ಅಂದರೆ ಭಿನ್ನ ಭಿನ್ನ ಅಭಿರುಚಿಯ ಜನರಿಗೆ ತಕ್ಕಂಥ ಖಾದಿಯು ದೊರೆಯುವದು. ೬ ನಂಬರು ಮೊದಲ್ಗೊಂಡು ೩೦ ನಂಬರಿನ ವರೆಗೆ ನೂಲಿನ ತರಗತಿಗಳಿದ್ದರೆ ಹೆಚ್ಚಾಯಿತು. ಇದಕ್ಕಿಂತ ಹೆಚ್ಚಿಗೆ ಜಿನಗು ಇಳಿಸುವದು ಬೇಡ. ಮನುಷ್ಯನು ತನ್ನ ಸಲುವಾಗಿ ನೂಲು ನೂತುಕೊಳ್ಳುವುದು ಅತ್ಯಾವಶ್ಯಕವಾದುದು. ವರ್ಷಕ್ಕೆ ಒಬ್ಬ ಮನುಷ್ಯನು ತನಗೆ ಸಾಕಾಗುವಷ್ಟು ಬಟ್ಟೆಗಳನ್ನು ಹುಟ್ಟಿಸಿಕೊಳ್ಳಬೇಕಾದರ ದಿನಾಲು ೪೫ ನಿಮಿಷಗಳವರೆಗೆ ನೂತರೆ ಸಾಕು. ಆಯಾಯ ನಂಬರಿನ ಖಾದಿ ಬಟ್ಟೆಯ ಕಿಮ್ಮತ್ತು ೧ ಚೌ. ಯಾರ್ಡಿಗೆ ಎಷ್ಟು ಬೀಳುತ್ತದೆಂಬುದನ್ನು ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿದೆ.

ನೂಲಿನ ನಂಬರು	೧ಚೌ.	ಯಾರ್ಡಿನ	ಬೆಲೆ
	ರೂ.	ಆ.	ಪೈ.
೮	೦	೪	೫
೧೦	೦	೪	೩
೧೫	೦	೪	೬
೨೦	೦	೪	೯
೨೫	೦	೪	೬
೩೦	೦	೫	೦

೪೦	೦	೫	೦
೫೦	೦	೫	೩
೬೦	೦	೫	೯

ವಿದೇಶಿ ಬಟ್ಟೆಯನ್ನು ಸಮೂಲ ನಾಶಗೊಳಿಸಬೇಕಾದರೆ ನಾವು ಸ್ವೇಚ್ಛೆಯಿಂದಾದರೂ ನೂಲು ತೆಗೆಯಲೇಬೇಕು. ಸದ್ಯಕ್ಕೆ ರಾಷ್ಟ್ರದಲ್ಲಿ ಖಾದಿ ಪ್ರಚಾರಕ ಕಾರ್ಯವು ಬಹು ಭರದಿಂದ ನಡೆದಿರುವದು. ಖಾದಿಯ ಚಟುವಟಿಕೆಗಳ ಮುಖ್ಯ ಸಾಧನವಾವುದು? ದೇಶದೊಳಗಿನ ಶ್ರೀಮಂತರೂ, ಮಧ್ಯಮ ತರಗತಿಯವರೂ ಖಾದಿ ಬಟ್ಟೆಯನ್ನು ಹೆಚ್ಚಾಗಿ ಕೊಂಡುಕೊಳ್ಳಬೇಕು. ಖಾದಿಯು ಅಗ್ಗವಾಗಬೇಕಾದರೆ ಖಾದಿಯ ಹುಟ್ಟುವಳಿಯು ಹೆಚ್ಚಾಗಬೇಕು. ಅದಕ್ಕೆ ಸ್ವೇಚ್ಛೆಯಿಂದ ನೂಲು ತೆಗೆಯುವವರ ಸಂಖ್ಯೆಯು ಬೆಳೆಯಬೇಕು. ಸದ್ಯಕ್ಕೆ ಜಿನಗು ನೂಲಿಗಿಂತ ಒರಟು ನೂಲನ್ನು ನೂತು ಖಾದಿಯನ್ನು ಹೆಚ್ಚಿಸಬೇಕಾಗಿರುವದು.

ಖಾದಿಯು ಹೆಚ್ಚೆಚ್ಚು ಪ್ರಸಾರವಾಗಬೇಕಾದರೆ ಪೇಟೆಯಲ್ಲಿ ಅದನ್ನು ಚಿಲ್ಲರೆಯಾಗಿ ಮಾರಾಟ ಮಾಡುತ್ತಿರಬೇಕು. ಪೇಟೆಗೆ ಬಟ್ಟೆಗಳು ಸಿದ್ಧವಾಗಬೇಕಾದರೆ ಮೂಲಭಾಂಡವಲು ಹಾಕಿ ವ್ಯಾಪಾರಿಗಳು ಅದನ್ನು ಪ್ರಯತ್ನಿಸಬೇಕು. ಖಾದಿ ಬಟ್ಟೆಯೊಡನೆ ನೂಲಿನ ವ್ಯಾಪಾರವೂ ಪೇಟೆಯಲ್ಲಿ ನಡೆಯುತ್ತಿರಬೇಕು. ಹಳ್ಳಿಪಳ್ಳಿಯ ಜಾತ್ರೆಗಳಲ್ಲಿ ನೂಲಿನ ಹಾಗೂ ಬಟ್ಟೆಗಳ ಪ್ರದರ್ಶನಗಳನ್ನೇರ್ಪಡಿಸಬೇಕು. ದಟ್ಟಾದ ಜನಸಂಖ್ಯೆಯುಳ್ಳ ಪಟ್ಟಣದಲ್ಲಿ ಖಾದಿಯನ್ನು ಹೆಚ್ಚಾಗಿ ಪ್ರಸಾರ ಮಾಡುವದೇನೋ ಸುಲಭ. ಆದರೆ ಖಾದಿಯೂ ಹಳ್ಳಿಯ ಜನರಿಗೂ ಅನುಕೂಲವಗುವಂತೆ ಅಲ್ಲಲ್ಲಿ ದೊಡ್ಡ ದೊಡ್ಡ ಸಂತೆಗಳನ್ನೇರ್ಪಡಿಸಬೇಕು.

ಹಳ್ಳಿಯ ಜನರಲ್ಲಿ ಸ್ವದೇಶಾಭಿಮಾನವನ್ನು ತುಂಬಿ ಬಿಟ್ಟರೆ ಅದು ಬಹುದಿಂದ ಸ್ಥಿರವಾಗಿ ಉಳಿಯುವದು. ಆದುದರಿಂದ ಒಕ್ಕಲಿಗರು, ಬಡಿಗರು, ನೂಲುಗಾರರು, ನೇಕಾರರು. ಈ ಮೊದಲಾದ ಹಳ್ಳಿಯ ಕೆಲಸಗಾರರನ್ನು ಪುನಃ ಹುರಿದುಂಬಿಸಬೇಕು. ಹಳ್ಳಿಪಳ್ಳಿಯಲ್ಲಿ ಖಾದಿಯನ್ನು ಹೊತ್ತು ಮಾರುವವರು ಖಾದಿಯ ಹುಟ್ಟುವಳಿಗೆ ಪ್ರೋತ್ಸಾಹವನ್ನು ಕೊಡುತ್ತಿರಬೇಕು.

ನೂಲುಗಾರರ ಪ್ರಸಾರ

ಖಾದಿಯು ಬಹು ದೊಡ್ಡ ಪ್ರಮಾಣದಲ್ಲಿ ಬೆಳೆಯಬೇಕಾದರೆ ಹಳ್ಳಿಪಳ್ಳಿಯಲ್ಲಿ ನೂಲುಗಾರರ ಸಂಖ್ಯೆಯನ್ನು ಹೆಚ್ಚಿಸಬೇಕು. ನೂಲುಗಾರನಿಗೆ ತನ್ನ ನೂಲು ಉಳಿಸಿಕೊಂಡು ತನ್ನ ಬಟ್ಟೆಯನ್ನು ತಾನೇ ನೇಯಿಸಿಕೊಳ್ಳುವ ಅಭಿರುಚಿಯನ್ನು ಹುಟ್ಟಿಸಬೇಕು. ಪ್ರತಿಯೊಬ್ಬರಿಗೆ ಸರಾಸರಿ ೧೨ ಯಾರ್ಡು ಬಟ್ಟೆಯು ಬೇಕಾಗುತ್ತದೆ. ನೂಲುಗಾರರು ತನ್ನ ಅರಳೆಯನ್ನು ಸಂಗ್ರಹಿಸಿಟ್ಟುಕೊಂಡು ನೂಲು ತೆಗೆದು ಅದರಿಂದ ಬಟ್ಟೆಯನ್ನು ಸುಲಭವಾಗಿ ನೇಯಿಸಿಕೊಳ್ಳಬಲ್ಲನು.

ಕೆಲ ಕೆಲವು ಶ್ರೀಮಂತರು ದೊಡ್ಡ ಭಾಂಡವಲು ಹಾಕಿ ಖಾದಿ ವ್ಯಾಪಾರ ಮಾಡಿದರೆ ಹತ್ತಿ ಬೆಳೆಯದಂಥ ಪ್ರದೇಶಗಳಲ್ಲಿ ಲಕ್ಷಾವಧಿ ಬಡಕೂಲಿಕಾರರಿಗೆ ಉದ್ಯೋಗ ಹಚ್ಚಿಕೊಟ್ಟಂತಾಗುತ್ತದೆ; ಮತ್ತು ದೇಶದ ಹಿತಗಳನ್ನು ಸಾಧಿಸಿದಂತಾಗುತ್ತದೆ. ೧೫-೨೦ ಸಾವಿರ ರೂಪಾಯಿಗಳ

ಮೂಲಭಾಂಡವಲು ಹಾಕಿದರೆ ೧॥ ಲಕ್ಷ ರೂ. ಗಳ ಖಾದಿಯನ್ನು ಸಿದ್ಧಗೊಳಿಸಲಿಕ್ಕೆ ಅನುಕೂಲವಾಗುತ್ತದೆ.

ಈಗ ಎಷ್ಟೋ ಜನ ನೂಲುಗಾರರು ನೂಲುತ್ತಿರುವುದೇನೋ ನಿಜ. ಆದರೆ ಅವರು ವಿದೇಶಿ ಹಾಗೂ ಸ್ವದೇಶಿ ಗಿರಣಿ ಬಟ್ಟೆಗಳನ್ನು ಧರಿಸುತ್ತಿದ್ದಾರೆ. ಒಂದು ಮನೆತನದವರಿಗೆ ತಮ್ಮ ಬಟ್ಟೆಗಳಿಗೆ ಸಾಕಾಗುವಷ್ಟು ನೂಲು ಸಿದ್ಧವಾದ ಬಳಿಕ ಮಿಕ್ಕುದನ್ನ ಖಾದಿಪ್ರಸಾರಕಾರ್ಯಕ್ಕೆ ಮಾರಾಟ ಮಾಡುವಂತೆ ವ್ಯವಸ್ಥೆ ಇಡಿಸಬೇಕು. ಒಟ್ಟಿನ ಮೇಲೆ ಖಾದಿಯು ಹಳ್ಳಿಪಳ್ಳಿಗಳಲ್ಲಿ ಉಗಮವಾಗಿ ಅಲ್ಲಿಂದಲೇ ಅದು ಹೊರಸೂಸಬೇಕು.

ನೇಕಾರರ ಪ್ರಸಾರ

ಖಾದಿಯ ಪ್ರಸಾರಕ್ಕೆ ನೂಲುಗಾರರೆಷ್ಟು ಅವಶ್ಯಕವೋ ಅಷ್ಟೇ ನೇಕಾರರೂ ಅವಶ್ಯಕ. ನೇಕಾರರು ಬಹುದಿವಸಗಳಿಂದ ದೇಶಕ್ಕೆ ಆದಾರಸ್ತಂಭವಾದದಂತಾಗಿದ್ದಾನೆ. ಒಕ್ಕಲಿಗನು ಜನರ ಹೊಟ್ಟೆಯನ್ನು ತುಂಬುತ್ತಿದ್ದರೆ ನೇಕಾರರು ಜನರ ಬಟ್ಟೆಯನ್ನು ಅಚ್ಚಾದಿಸುತ್ತಿದ್ಧಾನೆ. ಒಕ್ಕಲುತನದ ತರುವಾಯ ನೇಕಾರಿಕೆಯೇ ದೇಶದ ಪ್ರಾಮುಖ್ಯವಾದ ಉದ್ಯೋಗವು. ನಮ್ಮ ದೇಶದಲ್ಲಿ ೬೦ ಲಕ್ಷ ನೇಕಾರರಿರುವರು. ಈಗಲೂ ಸಹ ಒಟ್ಟು ಬಟ್ಟೆಯ ಕಾಲುಪಾಲು ದೇಶಿ ಮಗ್ಗಗಳಿಂದ ಸಿದ್ದವಾಗುತ್ತಿರುತ್ತದೆ. ಮೂರುಪಾಲು ಗಿರಣಿ ಬಟ್ಟೆಯ ವೆಚ್ಚವಾಗುತ್ತದೆ.

೧೯೨೩ ರಲ್ಲಿ ಒಟ್ಟು ೪೩ ಕೋಟಿ ೫೦ ಲಕ್ಷ ಯಾರ್ಡು ನೂಲಿನಲ್ಲಿ ಸುಮಾರು ೧೧ ಕೋಟಿ ೩೦ ಲಕ್ಷ ಯಾರ್ಡು ನೂಲು ಮಗ್ಗಗಳಿಂದಲೇ ನೇಯಲ್ಪಟ್ಟದ್ದಾಗಿದೆ. ಹಳ್ಳಿಗಾಡಿನ ಪೂರ್ವದ ನೇಗೆಯ ಕಲೆಯು ಇತ್ತೀಚೆಗೆ ಸುಶಿಕ್ಷಿತ ಜನರ ಮನಸ್ಸಿನ ಮೇಲೆ ಒಳ್ಳೆ ಪರಿಣಾಮವನ್ನುಂಟುಮಾಡಿದೆ. ಕೈರಾಟಿಗಳು ಹೆಚ್ಚೆಚ್ಚು ಬೆಳೆದಂತೆ ಮಗ್ಗಗಳು ಹೆಚ್ಚಾಗಿವೆ.

ಕೈರಾಟಿ ಕೈಮಗ್ಗಗಳು ಒಂದನ್ನೊಂದು ಅವಲಂಬಿಸಿವೆ. ಆದರೆ ನೇಕಾರರಲ್ಲಿ ರಾಟಿಯ ನೂಲನ್ನು ಮಗ್ಗಕ್ಕೆ ಹೂಡುವ ಕೆಲಸವು ಇನ್ನೂ ಪ್ರಬಲವಾಗಿ ನಡೆದಿರುವದಿಲ್ಲ. ಕೈನೂಲಿನ ಬಟ್ಟೆಯನ್ನು ನೇಯ್ದರೆ ತನ್ನ ದೇಶಕ್ಕೂ ತನ್ನ ಬಾಂಧವರಿಗೂ ತನಗೂ ಹಿತವಾಗುವದೆಂಬ ಕಲ್ಪನೆಯು ಆತನಲ್ಲಿ ದೃಢವಾಗಿ ನೆಲೆಗೊಂಡಿರುವದಿಲ್ಲ. ಪರದೇಶಿ ಹಾಗೂ ಗಿರಣಿ ಬಟ್ಟೆಗಳನ್ನು ಸಮೂಲ ನಾಶಮಾಡಬೇಕಾದರೆ ಬರೇ ನೂಲುವದಷ್ಟೇ ಸಾಲದು. ಗಿರಣಿ ನೂಲನ್ನು ಸರ್ವಥಾ ಮಗ್ಗಕ್ಕೆ ಹೂಡಬಾರದು.

ಕೈನೂಲಿನ ಸಹಾಯವು ನೇಕಾರನಿಗುಂಟಾದರೆ ಆತನ ಉದ್ಯೋಗವು ಬಿಟ್ಟುಬಿಡದೆ ನಡೆಯುವದೆಂಬುದರಲ್ಲಿ ಸಂದೇಹವಿಲ್ಲ ಹಳ್ಳಿಗಳಲ್ಲಿ ರಾಟಿಯ ಮಂಜುಲ ನಾದವು ಮೊಳಗುತ್ತಿದ್ದರೆ ನೇಕಾರನಿಗೆ ನಿರುದ್ಯೋಗದ ಭಯವಿಲ್ಲ. ನೇಕಾರರು ನೇಯ್ದು ಬಟ್ಟೆಗಳಿಗೆ ಪೇಟೆಯು ಸಿದ್ಧವಾಗಿರುತ್ತದೆ. ಅದಕ್ಕಾಗಿ ಅವನು ಚಿಂತೆಮಾಡುವ ಕಾರಣವಿಲ್ಲ. ನೇಕಾರನ ಮನೆಯವರು ಕಂಡಿಕೆ ಸುತ್ತುವದು, ಉಂಕಿ ಹಾಕುವದು ನೂಲು ಹದಮಾಡಿಕೊಡುವದು ಈ ಮೊದಲಾದ ಕೆಲಸಗಳಲ್ಲಿ ಆತನಿಗೆ ನೆರವಾಗುವದರಿಂದ ಅವರಿಗೂ ಕೆಲಸ ಹತ್ತಿದಂತಾಗುವದು.

ಹಿಂದಕ್ಕೆ ನೇಕಾರನೇ ಬಟ್ಟೆಗಳಿಗೆ ಬಣ್ಣ ಕೊಡುತ್ತಿದ್ದನು. ಆದರೆ ಆ ಉದ್ಯೋಗವು ಈಗ ಅವನ ಕೈಬಿಟ್ಟುಹೋಗಿದೆ. ಎಷ್ಟೋ ನೇಕಾರರಿಗೆ ಉಂಕಿ ಹಾಕಲಿಕ್ಕೆ ಸಹ ಬರುವುದಿಲ್ಲ. ಕೈರಾಟಿಗಳ ಪುನರುದ್ಧಾರವಾದರೆ ಮುಗ್ಗಿ ಹೋದ ಮಗ್ಗಗಳು ಜಗ್ಗನೇ ಬೆಳಕಿಗೆ ಬಂದವವು. ನೇಕಾರನಿಗೆ ಸಾಕಷ್ಟು ಕೂಲಿಯ್ಝ ದೊರೆತು ಆತನು ಸುಖಶಾಂತಿಯಿಂದ ಕಾಲ ಕಳೆಯುವನು. ಬೀಸುವ ಕಲ್ಲಿನಲ್ಲಿ ಸಿಕ್ಕ ಧಾನ್ಯದಂತೆ ನೇಕಾರನು ಗಿರಣಿಯವರ ಹಾಗೂ ಸಾವುಕಾರರ ಸೆಳವಿಗೆ ಸಿಕ್ಕು ಪುಡಿಪುಡಿಯಾಗಹತ್ತಿದ್ದಾನೆ.

ನೇಕಾರರಿಗೆ ಪ್ರೋತ್ಸಾಹ ದೊರೆತರೆ ಅವರು ಹಳ್ಳಿಯನ್ನು ಬಿಟ್ಟು ಪಟ್ಟಣವನ್ನು ಸೇರುವ ಪ್ರಸಂಗವೇ ಬರಲಾರದು. ನೇಕಾರರು ಎಲ್ಲಿ ಹೋದರೂ ಕೈನೂಲಿನಿಂದಲೇ ಬಟೆಯನ್ನು ನೇಯ್ದರೆ ಮಾತ್ರ ಕ್ಷೇಮವಲ್ಲದೆ ಗಿರಣಿಯ ನೂಲು ಹಾನಿಕರವೆಂದು ಈಗಿನ ಪರಿಸ್ಥಿತಿಯಿಂದ ಸ್ಪಷ್ಟವಾಗಿ ಗೊತ್ತಾಗುವದು. ಈಗ ನೇಕಾರರಿಗೆ ನೂಲು ಒದಗಿಸಿ ಕೊಡುವವರು ಪೋಷಣೆಮಾಡುವ ಸಾವುಕಾರರು. ಅವರ ಸಂಸ್ಥೆಗಳು ಅಲ್ಲಲ್ಲಿ ದೊರೆಯವವು.

ಖೊಟ್ಟಿ ಖಾದಿಯು

ಕೆಲಕೆಲವು ಭಾಗಗಳಲ್ಲಿ ನೇಕಾರರು ಕೈನೂಲಿನಲ್ಲಿ ಗಿರಣಿ ನೂಲನ್ನು ಮಿಶ್ರಣಮಾಡಿ ಬಟ್ಟೆಗಳನ್ನು ನೆಯ್ಯುವರೆಂಬ ದಟ್ಟವಾರ್ತೆಯು ಪ್ರಸಾರವಾಗಿದೆ. ಆದರೆ ಬಟ್ಟೆಯನ್ನು ನಿರೀಕ್ಷಿಸಿ ನೋಡಿದರೆ ನೇಕಾರರ ಹುಳುಕು ಹೊರಬೀಳದೆ ಹೋಗುವದಿಲ್ಲ. ಗಿರಣಿ ನೂಲು ಮಿಶ್ರಣವಾಗಿದ್ದರೆ ಅದು ಸ್ಪಷ್ಟವಾಗಿ ಕಾಣುವದು. ಆದರೆ ನೇಕಾರರ ಈ ಖೋಟ್ಟತನವು ಬೇಗನೆ ನಾಶವಾಗುವದು ಮಾತ್ರ ದುಸ್ತರವಾಗಿದೆ. ಆದುದರಿಂದ ಸಿದ್ದವಾದ ಬಟ್ಟೆಗಳಿಗೆ ಕಾಂಗ್ರೇಸ ಖಾದಿ ಕೇಂದ್ರಗಳಿಂದ ಶಿಫಾರಸು ಪತ್ರಗಳು ದೊರೆಯಬೇಕಾಗುತ್ತದೆ, ರಾಟಿಯ ನೂಲು ಅಧಿಕವಾದರೆ ಇಂಥ ತ್ರೋಟಕತನಕ್ಕೆ ಆಸ್ಪದವಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ಶುದ್ದವಾದ ಕೈನೂಲನ್ನೇ ಪರೀಕ್ಷಿಸಿ ನೇಯಲಿಕ್ಕೆ ಕೊಡಬೇಕು.

ನೇಕಾರರಾಗಲಿ, ವ್ಯಾಪಾರಿಗಳಾಗಲಿ ಇಂಥ ತ್ರೋಟಕತನದ ಬಟ್ಟೆಗಳನ್ನು ಮಾರಾಟ ಮಾಡದಂತೆ ಕೆಲವು ಮಾರ್ಪಾಟುಗಳನ್ನು ಮಾಡಬೇಕಾಗುವದು:

(೧) ಇಂತಿಷ್ಟು ಕ್ಷೇತ್ರದಲ್ಲಿ ನಡೆಯುತ್ತಿರುವ ರಾಟಿಗಳೆಷ್ಟು? ಅವುಗಳಿಂದ ಸಿದ್ದವಾಗುವ ಬಟ್ಟೆಯ ಪ್ರಮಾಣವೆಷ್ಟು?

(೨) ಗಿರಣಿ ಅಥವಾ ವಿದೇಶಿ ನೂಲು ಆಯಾಮ ಕ್ಷೇತ್ರಗಳಲ್ಲಿ ಬರುತ್ತದೆಯೋ ಹೇಗೆ? ಬರುತ್ತಿದ್ದರೆ ಯಾವ ಸ್ಥಳದಿಂದ ಎಷ್ಟು ಬರುತ್ತದೆ?

(೩) ನೇಕಾರರ ನಡುವಳಿಕೆ ಸ್ಥಿತಿಗತಿಗಳು ಹೇಗಿರುವವು?

(೪) ವ್ಯಾಪಾರಿಗಳು ಆಯಾಯ ಕ್ಷೇತ್ರಗಳಿಂದ ಎಷ್ಟೆಷ್ಟು ಖಾದಿಯನ್ನು ಪರಸ್ಥಳಕ್ಕೆ ಕಳಿಸಿಕೊಡುವರು?

ವ್ಯಾಪಾರಸ್ಥರು ನೇಕಾರರಿಂದ ಖಾದಿ ಬಟ್ಟೆಯನ್ನು ಕೊಳ್ಳುವಾಗ ಇವೆಲ್ಲವುಗಳನ್ನು ಸೋಸಿ ನೋಡಿಕೊಳ್ಳಬೇಕು. ಮೊದಮೊದಲು ನೇಕಾರರ ಮೇಲೆ ಈ ತರಹದ ನಿರ್ಬಂಧಗಳನ್ನಿರಿಸಲೇ

ಬೇಕಾಗುತ್ತದೆ. ಆದರೆ ನೂಲುವವರ ಸಂಖ್ಯೆಯು ಹೆಚ್ಚಿ ನೂಲು ವೆಗ್ಗಳವಾಗಿ ಹುಟ್ಟ ಹತ್ತಿದರೆ ಈ ನಿರ್ಬಂಧಗಳು ತಾವಾಗಿಯೇ ನಷ್ಟವಾಗುವವು.

ವ್ಯಾಪಾರದ ವಸ್ತುಸಂಗ್ರಹಾಲಯಗಳು ಮತ್ತು ಪ್ರಯೋಗಶಾಲೆಗಳು

ಕೇವಲ ಬಾಹ್ಯಸಹಾಯಗಳಿಂದ ಖಾದಿಯ ಬೆಳವಣಗೆಯಾಲಾರದು, ಖಾದಿಯ ಬಗ್ಗೆ ಪ್ರೇಮವು ಹಳ್ಳಿಗಳ ಅಂತರಂಗದಿಂದ ಉಕ್ಕಿಬರುತ್ತಿರಬೇಕು. ಕೈರಾಟಿಯಿಂದ ನೂಲು ತೆಗೆಯುವದು ಅತ್ಯವಶ್ಯಕವೆಂದು ಕಂಡುಬಂದಾಗ್ಯೂ ಅದು ಹಿಂದಿನ ಕಾಲದಷ್ಟು ವ್ಯಾಪಕವಾಗುವದು ದುಸ್ಸಾಧ್ಯವು. ಕೈರಾಟಿ ಹಾಗೂ ಹಿಂಜುವ ಬಿಲ್ಲುಗಳ ವೇಗದಲ್ಲಿ ಸುಧಾರಣೆಗಳಾಗಬೇಕಾಗುವದು; ಅಂದರೆ ನೂಲಿನ ಗುಣಧರ್ಮ ಹಾಗೂ ಪರಿಣಾಮಗಳು ಹೆಚ್ಚುವವು.

ಒಂದು ರಾಟಿಯ ವೇಗವು ತಾಸಿಗೆ ೫೦ ಯಾರ್ಡಿನಂತೆ ಇದ್ದಾಗ್ಯೂ ೧ ಲಕ್ಷ ರಾಟಿಗಳು ದೇಶದಲ್ಲಿ ನಡೆಯಲಾರಂಭಿಸಿದರೆ ಸುಮಾರು ೧೪೦೦ ಪೌಂಡು ತೂಕದ ನೂಲು ಧಾರಾಳವಾಗಿ ದೊರೆಯುವದು. ಹಿಂಜುವ ಬಿಲ್ಲಿನಲ್ಲಿ ಸುಧಾರಣೆಯಾದರೆ ಇದಕ್ಕೂ ಹೆಚ್ಚಿಗೆ ನೂಲು ಹೊರಡಬಹುದು. ಉಚ್ಚ ಹಾಗೂ ಮಧ್ಯಮ ತರಗತಿಯ ನೂಲಿನ ಪ್ರಮಾಣವನ್ನಾದರೂ ಹೆಚ್ಚಿಸಲೇಬೇಕಾಗುವದು. ಹಂಜಿ ಮಾಡುವದರಲ್ಲಿಯೂ ಸುಧಾರಣೆಯಾಗಬೇಕು. ಹಳ್ಳಿಗಾಡ ಪ್ರದೇಶಗಳಲ್ಲಿ ಜನಗಳಿಗೆ ಒಳ್ಳೆ ರೀತಿಯಿಂದ ಹಿಂಜುವದನ್ನು ಕಲಿಸಿಕೊಡಬೇಕು. ಹತ್ತಿ ಅರೆಯುವದು ಮತ್ತು ನೂಲುವದು ಇವುಗಳಲ್ಲಿಯೂ ಸುಧಾರಣೆಯಾಗಬೇಕಾಗಿರುವುದು.

❖❖

೬ನೆಯ ಪ್ರಕರಣ

ಖಾದಿಯೂ ಗಿರಣಿ ಬಟ್ಟೆಯೂ

ದೇಶಕ್ಕೆ ಗಿರಣಿಗಳು ಹೆಚ್ಚು ಹಿತಮಾಡುವವೋ ಆಥವಾ ಶುದ್ಧ ಖಾದಿಯು ಹೆಚ್ಚು ಫಲಕಾರಿಯಾಗುವದೋ? ಈ ಪ್ರಶ್ನೆಯನ್ನು ವಿಚಾರಿಸುವ ಮೊದಲು ಹಿಂದುಸ್ಥಾನದಲ್ಲಿ ಗಿರಣಿಗಳ ವಿಕಾಸತೆಯು ಹೇಗುಂಟಾಯಿತೆಂಬುದನ್ನು ವಿವೇಚಿಸುವಾ. ೧೮೩೮ರಲ್ಲಿ ಕಲಕತ್ತೆಯಲ್ಲಿ ಮೊಟ್ಟ ಮೊದಲು ನೂಲಿನ ಗಿರಣಿಯೊಂದು ಸ್ಥಾಪಿತವಾಯಿತು. ೧೮೫೩ರಲ್ಲಿ ಮುಂಬಯಿಯಲ್ಲಿ ೫೦೦ ಕದಿರು ಕೆಲಸ ಮಾಡುವ ಗಿರಣಿಯೊಂದು ಪ್ರಾದುರ್ಭವಿಸಿತು. ಮುಂದೆ ಉಗಿಯ ಶಕ್ತಿಯಿಂದ ಬಟ್ಟೆಯನ್ನು ಹುಟ್ಟಿಸುವದು ಹಿಂದುಸ್ಥಾನದ ಔದ್ಯೋಗಿಕ ಜೀವಿತದ ಕುರುಹಾಯಿತು. ಭರತಖಂಡದಲ್ಲಿ ನೂಲಿನ ಗಿರಣಿಗಳು ಸ್ಥಾಪಿತವಾದುದರಿಂದಲೂ ಪರದೇಶಿ ಬಟ್ಟೆಗಳು ಬರಹತ್ತಿದ್ದರಿಂದಲೂ ಈ ದೇಶದ ಖಾದಿಯ ಉದ್ಯೋಗವು ನಷ್ಟವಾಯಿತು.

ಅಮೇರಿಕನ್ ಯುದ್ಧದ ಕಾಲಕ್ಕೆ ಹತ್ತಿಯ ಧಾರಣೀಯು ೭೮೪ ಪೌಂಡುಗಳಿಗೆ ೬೦೦ ರೂ. ಗಳವರೆಗೆ ಏರಿದ್ದಿತು. ಅನಂತರ

ಗಿರಣಿಗಳು ಸಂಖ್ಯೆಯು ಹೆಚ್ಚಿತು. ೧೮೮೨ರಲ್ಲಿ ೧೬,೫೪,೧೦೩ ಕದಿರು ಕೆಲಸ ಮಾಡುವ ೬೨ ನೂಲಿನ ಗಿರಣಿಗಳು ೫೩,೬೨೪ ಜನರನ್ನು ದುಡಿಸುವ ೧೫,೧೧೬ನೇಯುವ ಯಂತ್ರಗಳೂ ಸ್ಥಾಪಿತವಾದವು. ಆ ಮೇಲೆ ಅರಳೆಯ ಧಾರಣೀಯು ಇಳಿಯಲಾರಂಭಿಸಿತು. ಲ್ಯಾಂಕಾಶಾಯರದವರು ತಮ್ಮ ವ್ಯಾಪಾರವು ಮಂದವಾದದ್ದಕ್ಕಾಗಿ ಕೋಲಾಹಲವನ್ನೆಬ್ಬಿಸಿದರು. ಆದುದರಿಂದ ಹಿಂದುಸ್ಥಾನಕ್ಕೆ ಬರುವ ಬಟ್ಟೆಗಳ ಮೇಲಿನ ಕರವನ್ನು ತೆಗೆದು ಹಾಕಿದರು. ಆದಾಗ್ಯೂ ಹಿಂದುಸ್ಥಾನದ ಗಿರಣಿಗಳು ಬೆಳೆಯುತ್ತಲೇ ನಡೆದಿದ್ದವು. ೧೮೮೦-೧೯೨೪ರ ವರೆಗೆ ದೇಶೀ ಗಿರಣಿಗಳ ಪ್ರಾಬಲ್ಯವು ಹೆಚ್ಚಾಯಿತು. ಗಿರಣಿಗಳ ಸಂಖ್ಯೆಯು ೭೪ರಿಂದ ೩೩೩ರವರೆಗೂ, ಭಾಂಡವಲು ೮, ೧೬, ೭೭, ೨೫೦ ರೂ. ಯಿಂದ ೪೦, ೦೦, ೦೦, ೦೦೦ ರೂ. ಗಳವರೆಗೂ, ಕದಿರುಗಳ ಸಂಖ್ಯೆಯು ೧೮, ೯೫, ೨೮೪ ರಿಂದ ೭೯, ೨೭, ೯೩೮ ರವರೆಗೂ, ಮಗ್ಗಗಳ ಸಂಖ್ಯೆಯು ೧೬, ೨೫೧ ರಿಂದ ೧, ೪೪, ೭೯೪ರವರೆಗೂ, ಕೆಲಸಗಾರ ಸಂಖ್ಯೆಯು ೬೧, ೮೩೫ ರಿಂದ ೩, ೪೩, ೮೭೬ರವರೆಗೂ ಏರಿತು.

ಕಳೆದ ೪೦ ವರ್ಷಗಳಿಂದ ಗಿರಣಿಗಳ ಸಂಖ್ಯೆಯು ವಿಶೇಷವಾಗಿ ಬೆಳೆದಿರುತ್ತದೆ. ಆಗ ಗಿರಣಿಗಳು ಒಳ್ಳೆ ಬಿಕ್ಕಟ್ಟಿನ ಪ್ರಸಂಗದಲ್ಲಿ ಸಿಲುಕಿದ್ದವು. ಲ್ಯಾಂಕಾಶಾಯರದ ಅಸೂಯೆಯ ಮೂಲಕ ಗಿರಣಿ ಬಟ್ಟೆಗಳ ಮೇಲೆ ಹೆಚ್ಚಿಗೆ ಕರ ಕೂಡ್ರಿಸಿದ್ದರಿಂದಲೂ ಮುಂಬಯಿಯಲ್ಲಿ ಪ್ಲೇಗು ಬೇನೆಯು ಹಬ್ಬಿದ್ದರಿಂದಲೂ ಕೆಲಕಾಲದವರೆಗೆ ಕೂಲಿಕಾರರ ಅಭಾವವಿದ್ದುದರಿಂದಲೂ, ೧೯೦೦ರಲ್ಲಿ ಬರಗಾಲ ಬಿದ್ದುದರಿಂದಲೂ, ಸಾಕಷ್ಟು ಹತ್ತಿಯ ಸಂಗ್ರಹವು ದೊರೆಯದ್ದರಿಂದಲೂ ಗಿರಣಿಗಳ ಬೆಳವಣಿಗೆಗೆ ಆಘಾತವುಂಟಾಯಿತು. ಆದಾಗ್ಯೂ ಅವು ಕುಗ್ಗದೆ ಹಾಗೆಯೇ ಮುಂದುವರಿದವು. ೧೦ ವರ್ಷಗಳ ಹಿಂದಿನ ಸ್ಥಿತಿಗೂ ಈಗಿನ ಸ್ಥಿತಿಗೂ ಸರಿ ಹಚ್ಚಿನೋಡಿದರೆ ಈಗ ಗಿರಣಿ ಬಟ್ಟೆಗಳ ಪ್ರಮಾಣವು ೧೦೦ಕ್ಕೆ ೪೦ ರಂತೆ ಹೆಚ್ಚಿದಂತೆ ಕಂಡುಬರುತ್ತದೆ.

ಹಿಂದುಸ್ಥಾನದಲ್ಲಿ ವೆಚ್ಚವಾಗುವ ಒಟ್ಟು ಬಟ್ಟೆಯಲ್ಲಿ ೧೦೦ಕ್ಕೆ ೬೨ ರಂತೆ ಗಿರಣಿ ಬಟ್ಟೆಯಿರುತ್ತದೆ. ಪರದೇಶಗಳಿಂದ ಇಲ್ಲಿಗೆ ಬರುವ ಎಲ್ಲ ತರಹದ ಬಟ್ಟೆಗಳನ್ನು ಲೆಕ್ಕ ಮಾಡಿದರೆ ೧೦೦ಕ್ಕೆ ೨೫ಕ್ಕಿಂತಲೂ ಹೆಚ್ಚಾಗುವಂತಿಲ್ಲ. ಆದಾಗ್ಯೂ ಇಲ್ಲಿಯ ಗಿರಣಿಯ ಉದ್ಯೋಗವು ಗ್ರೇಟಬ್ರಿಟನ್ನದ ತಿಲಾಂಶವೂ ಹೋಲಲಾರದು. ೧೯೨೧ನೆಯ ವರ್ಷದ ಅಂತ್ಯಭಾಗದಲ್ಲಿ ಗ್ರೇಟಬ್ರಿಟನ್ನದೊಳಗೆ ೧,೦೦೦ ಲಕ್ಷ ಕದಿರುಗಳ ದುಡಿತ ನಡೆದು ೭,೯೦,೦೦೦ ನೇಯುವ ಯಂತ್ರಗಳು ಸಾಗವಾಗಿದ್ದವು. ಕದಿರುಗಳ ಸಂಖ್ಯೆಯು ಹಿಂದುಸ್ಥಾನದ ಗಿರಣಿಗಳಲ್ಲಿಯ ೧೦ ಪಟ್ಟು, ನೇಯುವ ಯಂತ್ರಗಳ ಸಂಖ್ಯೆಯು ೭ ಪಟ್ಟು ಹೆಚ್ಚಿದ್ದಂತಾಯಿತು.

ಇಂಗ್ಲಂಡದ ಹಾಗೂ ಹಿಂದುಸ್ಥಾನದ ಗಿರಣಿಗಳ ಉತ್ಪಾದಕಶಕ್ತಿಯನ್ನು ಸರಿಹಚ್ಚಿ ನೋಡಿದರೆ ಅಸಮಾನ ವ್ಯತ್ಯಾಸವು ಕಂಡುಬರುವದು. ಆದಾಗ್ಯೂ ಹಿಂದುಸ್ಥಾನದ ಕೆಲವು ಜನರು ಅಭಿಪ್ರಾಯಪಡುವದೇನೆಂದರೆ "ದೇಶದಲ್ಲಿ ಗಿರಣಿಗಳು ಹೆಚ್ಚಾದರೆ ಆರ್ಥಿಕ ಸ್ಥಿತಿಯೂ ಬಹಳೇ ಸುಧಾರಿಸುವದು. ಸುಮ್ಮನೆ ಕೈನೂಲು ಕೈಮಗ್ಗಗಳ ಗೊಡವೆಗೆ ಹೋಗುವದು ಬೇಡ." ಈಗ ನಾವು ಖಾದಿ ಹಾಗೂ ಗಿರಣಿಬಟ್ಟೆಗಳಲ್ಲಿ ಯಾವುದು ದೇಶಕ್ಕೆ ಹೆಚ್ಚು ಹಿತಕರವಾದುದೆಂಬುದನ್ನು ವಿಚಾರಿಸುವಾ. ಯಾವುದೇ ಔದ್ಯೋಗಿಕ ವ್ಯವಹಾರಕ್ಕೆ ೪-೫ ಪ್ರಾಮುಖ್ಯವಾದ ವಿಷಯಗಳನ್ನು ಲಕ್ಷಿಸಬೇಕಾಗುತ್ತದೆ. ಅವು ಯಾವುವೆಂದರೆ, (೧) ಭಾಂಡವಲ, (೨) ವೇಳೆ, (೩) ಪರಿಶ್ರಮ, (೪) ಸಾಮಾಜಿಕ ಸೌಕರ್ಯ.

ಭಾಂಡವಲು

ಗಿರಣಿಯ ಸ್ಥಾಪನೆಗೂ ಕೈರಾಟಿಯ ಪ್ರಸಾರಕ್ಕೂ ಎಷ್ಟು ಭಾಂಡವಲು ಹಾಗೂ ಅವಕಾಶ ಹತ್ತುತ್ತದೆಂಬುದನ್ನು ವಿಚಾರಿಸೋಣ. ಸದ್ಯಕ್ಕೆ ಗಿರಣಿಗಳ ಒಟ್ಟು ಭಾಂಡವಲು ೪೦ ಕೋಟಿ ರೂ. ಆಗುತ್ತದೆ. ಈ ಹಣದ ಸಹಾಯದಿಂದ ಪ್ರತಿವರ್ಷ ೭, ೦೦೦ ಲಕ್ಷ ಪೌಂಡು ನೂಲು ಸಿದ್ಧವಾಗುತ್ತದೆ; ಎಂದರೆ ಗಿರಣಿಯ ೧ ಕದಿರಿಗೆ ೧ ವರ್ಷಕ್ಕೆ ೧೦೦ ಪೌಂಡು ನೂಲಿನ ಉತ್ಪನ್ನವಾಗುತ್ತದೆ. ಇದಲ್ಲದೆ ಹಿಂದುಸ್ಥಾನದ ಗಿರಣಿಯಿಂದ ಸರ್ವಸಾಧಾರಣ ೧೮ ನಂಬರಿನ ನೂಲು ಹೊರಡುವದೆಂದು ಮರೆಯಲಾಗದು.

ಕೈರಾಟಿಯಿಂದ ೧೫ ನಂಬರಿನ ನೂಲು ೧ ಕದಿರಿಗೆ ದಿನಾಲು ಸುಮಾರು ಕಾಲು ಪೌಂಡು ಹೊರಡುತ್ತದೆಂದು ತಿಳಿದುಬಂದಿದೆ. ಹತ್ತು ನಂಬರಿನ ನೂಲು ವರ್ಷಕ್ಕೆ ೧೨೦-೧೩೦ ಪೌಂಡು ಬೇಕಾದ ಹಾಗೆ ಸಿದ್ಧವಾಗುತ್ತದೆ. ಗಿರಣಿಯಲ್ಲಿ ಹುಟ್ಟುವ ೭, ೦೦೦ ಲಕ್ಷ ಪೌಂಡು ನೂಲು ಕೇವಲ ೯೦ ಲಕ್ಷ ರಾಟಿಗಳಿಂಧ ಸಿದ್ಧವಾಗುತ್ತದೆ. ಇದರಿಂದ ಕೈರಾಟಿಯವರಿಗೆ ದಿನಾಲು ಸಂಪೂರ್ಣವಾಗಿ ಕೆಲಸಕ್ಕೆ ಹಚ್ಚಿಕೊಟ್ಟಂತಾಗುತ್ತದೆ. ಸರಿಪಡಿಸಿಕೊಂಡು ಕೆಲಸ ನಡೆಯಿಸಲಿಕ್ಕೆ ಹೆಚ್ಚಿಗೆ ಪರಿಶ್ರಮವೂ ಹತ್ತುವದಿಲ್ಲ. ಈಗ ರಾಟಿಗಳು ಗಿರಣಿಗಳ ಒಂದು ಹತ್ತಾಂಶ ದಷ್ಟು ಸಹ ನೂಲನ್ನು ಹುಟ್ಟಿಸುತ್ತಿರುವದಿಲ್ಲ. ಎಷ್ಟೋ ರಾಟಿಗಳು ಒಕ್ಕಲಿಗರ ಮನೆಗಳಲ್ಲಿ ಮೂಲಿಗುಂಪಾಗಿ ಬಿದ್ದಿರುವವು. ಅವೆಲ್ಲ ರಾಟಿಗಳು ಪುನಃ ಪ್ರಾರಂಭವಾದರೆ ಪ್ರತಿವರ್ಷ ಯಂತ್ರಗಳಿಗಾಗಿ ಸುಮ್ಮಸುಮ್ಮನೆ ವೆಚ್ಚವಾಗುವ ಲಕ್ಷಾಂತರ ರೂಪಾಯಿಗಳು ಉಳಿಯುವವು. ನೂಲಲಿಕ್ಕೆ ಬೇಕಾಗುವ ಹತ್ತಿಯನ್ನು ವೆಚ್ಚ ಕೊಟ್ಟು ತರಿಸಿಕೊಳ್ಳುವ ಕಾರಣವಿಲ್ಲ. ಅದು ಇದ್ದಲ್ಲಿಯೇ ವಿಪುಲವಾಗಿ ದೊರೆಯುವದು. ಹತ್ತಿಯು ಮನೆಮನೆಗಳಲ್ಲಿ ಸಹ ದೊರೆಯುತ್ತದೆ.

ವೇಗದ ತಪ್ಪು ತಿಳುವಳಿಕೆ

ಮಹಾಯುದ್ಧದ ಪೂರ್ವದಲ್ಲಿ ಪ್ರತಿಯೊಂದು ಗಿರಣಿಯ ಕದಿರಿಗೆ ೬೫ ರೂ. ನೇಯುವ ಯಂತ್ರಕ್ಕೆ ೯೦೦ ರೂ. ಕಿಮ್ಮತ್ತು ಬೀಳುತ್ತಿತ್ತು. ಆದರೆ ಸದ್ಯಕ್ಕೆ ಅವುಗಳ ಕಿಮ್ಮತ್ತು ಅನುಕ್ರಮವಾಗಿ ೧೦೦ ಮತ್ತು ೧೧೦೦ ರೂ. ಗಳವರೆಗೆ ಮುಟ್ಟಿರುತ್ತದೆ. ಗಿರಣಿಯ ಕದಿರು ಕೈರಾಟಿಯ ಕದಿರನಷ್ಟೇ ನಂಬರಿನ ನೂಲನ್ನು ಹೊರಡಿಸುತ್ತಿದ್ದು ಅದರ ಕಿಮ್ಮತ್ತು ಮಾತ್ರ ಕೈರಾಟಿಯ೨೫ಪಟ್ಟು ಆಗುತ್ತದೆ. ಗಿರಣಿಯ ಕದಿರಿನ ವೇಗವನ್ನು ಹೆಚ್ಚು ಮಾಡಲಿಕ್ಕೆ ಬರುತ್ತದೆಂಬುದೇನೋ ನಿಜ. ಸರ್ವೋತ್ಕೃಷ್ಟವಾದ ನೂಲಿನ ವಿಷಯದಲ್ಲಿ ಕೈರಾಟಿಗಿಂತಲೂ ಗಿರಣಿಗಳ ವೇಗವು ಹೆಚ್ಚಾಗಿರುತ್ತದೆ. ಗಿರಣಿಯ ಕದಿರಿನಿಂದ ದಿನಾಲು ೨೦ ನಂಬರಿನ ೭೨೦ ಔಂಸ ನೂಲನ್ನು ಹೊರಡಿಸುವದು ಶಕ್ಯವಿದೆ. ಅಂದರೆ ಕೈರಾಟಿಯ ಕದಿರಿನ ದುಪ್ಪಟ್ಟು ನೂಲನ್ನು ಹೊರಡಿಸಲಿಕ್ಕೆ ಬರುತ್ತದೆ.

ಆದರೆ ಯಂತ್ರಗಳ ಕಿಮ್ಮತ್ತಿಗೂ ಕೈರಾಟಿಯ ಕಿಮ್ಮತ್ತಿಗೂ ಸರಿ ಹಚ್ಚಿ ನೋಡಿದರೆ ಅಜಗಜಾಂತರ ವ್ಯತ್ಯಾಸವಿರುವದು. ಯಂತ್ರಗಳ ಕಿಮ್ಮತ್ತಿನ ಲೆಕ್ಕ ಹಾಕಿದರೆ ಅವುಗಳ ವೇಗವೇನೂ ಅಷ್ಟು ಮಹತ್ವದ್ದೆನಿಸುವದಿಲ್ಲ. ಗಿರಣಿಯಲ್ಲಿ ೧ ಕದಿರನ್ನು ನೆಲೆಗೊಳಿಸುವದಕ್ಕಿಂತ ಬಡಬಗ್ಗರ ಮನೆಗಳಲ್ಲಿ ೨೦-೨೫ ಕದಿರುಗಳನ್ನು ಪ್ರಚಾರ ಮಾಡುವದು ಹೆಚ್ಚು ಹಿತಕರವಾಗಿದೆ.

ಗಿರಣಿಯ ಕದಿರಿನ ಸ್ಥಿತಿಯು ನೇಯುವ ಯಂತ್ರಕ್ಕೂ ಅನ್ವಯಿಸುತ್ತದೆ. ೧ ವರ್ಷಕ್ಕೆ ನೇಯುವ ಯಂತ್ರದಿಂದ ೧೨,೦೦೦ ಯಾರ್ಡು ಬಟ್ಟೆಯು ಸಿದ್ಧವಾಗುತ್ತದೆ. ಈ ಹುಟ್ಟುವಳಿಯನ್ನು ನೇಯುವ ಯಂತ್ರದ ಕಿಮ್ಮತ್ತಿಗೆ ಹೋಲಿಸಿದರೆ ಅಷ್ಟೇನೂ ಹೆಚ್ಚಲ್ಲವೆಂದು ತಿಳಿಯುವದು. ಕೈಮಗ್ಗ ಹಾಗೂ ಯಂತ್ರದ ಮಗ್ಗಗಳ ಕತೃತ್ವಶಕ್ತಿ ಮತ್ತು ಕಿಮ್ಮತ್ತುಗಳನ್ನು ಇದರಡಿಯಲ್ಲಿ ಕೊಟ್ಟಿದ್ದೇವೆ.

ಒಂದು ವರ್ಷದಲ್ಲಿ ದುಡಿಯುವ ತಾಸುಗಳು	ಗಿರಣಿಯ ಯಂತ್ರಗಳು	ಕೈರಾಟಿ ಮಗ್ಗಗಳು
	೨,೯೨೦ ತಾಸು	೨, ೯೨೦ ತಾಸು
೧. ಕದಿರಿನಿಂದ ಹೊರಡುವ	೧೦೦-೧೨೦ ಪೌಂಡು	೯೦ ಪೌಂಡು
ನೂಲು ನೂಲಿನ ನಂಬರು	೧೫	೧೫
೧. ಕದಿರಿನ ಕಿಮ್ಮತ್ತು	೧೦೦ ರೂ.	೩ - ೪ ರೂ.
ಕಿಮ್ಮತ್ತಿಗನುಸರಿಸಿ ಕತೃತ್ವಶಕ್ತಿಯ ಪ್ರಮಾಣ		
	೧೦೦ ರೂ.	೨೪೦೦ರೂ.
ಮಗ್ಗದಿಂದ ಹೊರಡುವ ಬಟ್ಟೆಯ ಪ್ರಮಾಣ	೧೨೦೦೦	೧೨೦೦೦
	ಲಕ್ಷ ಯಾರ್ಡು	ಲಕ್ಷ ಯಾರ್ಡು
ಮಗ್ಗಗಳ ಕಿಮ್ಮತ್ತು	೯೦೦ ರೂ.	೨೦ ರೂ.
ಕಿಮ್ಮತ್ತಿಗನುಸರಿಸಿ ಮಗ್ಗಗಳ ಕರ್ತೃತ್ವಶಕ್ತಿ	೧೦೦ರೂ.	೪೫೦ ರೂ.

ಗಿರಣಿಗಳ ಭವಿಷ್ಯ

ಕೈರಾಟಿ ಹಾಗೂ ಗಿರಣಿಗಳ ಕರ್ತೃತ್ವಶಕ್ತಿಯ ಮಾತು ಹೇಗೇ ಇರಲಿ. ಗಿರಣಿಗಳ ಸಂಖ್ಯೆಯು ದೇಶದಲ್ಲಿ ಸುಲಭವಾಗಿ ಹೆಚ್ಚುತ್ತ ನಡೆದಿರುವದು. ಆದರೆ ಅವುಗಳ ಬೆಳವಣಿಗೆಯು ಹಾಗೇಯೇ ಮುಂದೆ ನಡೆಯಲಾರದು. ಇತ್ತೀಚೆಗೆ ಗಿರಣಿಗಳು ಏಶಿಯಾದೊಳಗಿನ ಪೇಟಗಳನ್ನೆಲ್ಲ ಕಳೆದುಕೊಂಡುಬಿಟ್ಟಿವೆ. ಗಿರಣಿಗಳು ಹೆಚ್ಚಾದರೆ ಅವು ಸಂಪೂರ್ಣವಾಗಿ ಹಿಂದುಸ್ಥಾನದ ಪೇಟೆಗಳನ್ನೆಲ್ಲ ಆಕ್ರಮಿಸಿಬಿಡುವವು. ಪರದೇಶಿ ಬಟ್ಟೆಗಳನ್ನು ತರಿಸುವ ಅವಶ್ಯಕತೆ ಬೀಳುವದಿಲ್ಲ. ಪರದೇಶಿ ಬಟ್ಟೆಯ ಅಗ್ಗವಾದ ಕಿಮ್ಮತ್ತು ಗಿರಣಿ ಬಟ್ಟೆಯ ಬೆಳವಣಿಗೆಗೆ ಎಂದಿಗೂ ತಡೆಹಾಕಲಾರದು. ಈಗ ಹಿಂದುಸ್ಥಾನದ ಗಿರಣಿಗಳು ೧೫೦೦೦ ಲಕ್ಷ ಯಾರ್ಡು ನೂಲನ್ನೂ ೫೮೦ ಲಕ್ಷ ಪೌಂಡ ಬಟ್ಟೆಯನ್ನು ಹೆಚ್ಚಿಗೆ ಹುಟ್ಟಿಸಲಾರಂಭಿಸಿದರೆ ಪರದೇಶಿ ಬಟ್ಟೆಯನ್ನು ತರಿಸುವದು ಅವಶ್ಯವಿಲ್ಲ.

ಈಗಿನ ಗಿರಣಿಯ ಕದಿರು ಸುಧಾರಣೆ ಹೊಂದಿ ವರ್ಷಕ್ಕೆ ೧೨೦-೧೫೦ ಲಕ್ಷ ಪೌಂಡು ನೂಲು ಹೊರಡಿಸಿದರೆ ಇನ್ನೂ ೩೦-೪೦ ಲಕ್ಷ ಕದಿರುಗಳ ಮಾರ್ಪಾಟಾಗಬೇಕಾಗುತ್ತದೆ. ಇದೇ ಮೇರೆಗೆ ನೇಯುವ ಯಂತ್ರಗಳ ಸಂಖ್ಯೆಯಾದರೂ ಇಮ್ಮಡಿ ಬೆಳೆಯಬೇಕು. ಇಂತಿಷ್ಟೇ ಕ್ಲುಪ್ತಕಾಲದಲ್ಲಿ ಗಿರಣಿಗಳ ಸುದಾರಣೆಯನ್ನು ಮಾಡಬಹುದುದೆಂದು ಹೇಳಲಿಕ್ಕಾಗುವದಿಲ್ಲ.

ಮಹಾಯುದ್ಧದ ಕಾಲಕ್ಕೆ ಹೊಸದಾಗಿ ಗಿರಣಿಗಳನ್ನು ಸ್ಥಾಪಿಸುವದು ದುಸ್ತರವಾಯಿತು. ಇದಲ್ಲದೆ ಯಂತ್ರಗಳ ಕಿಮ್ಮತ್ತು ಏರಿದ್ದರಿಂದ ಕದಿರು ಮತ್ತು ಯಂತ್ರದ ಮಗ್ಗಗಳನ್ನು ಹೆಚ್ಚಿಸುವದಾಗಲಿಲ್ಲ. ವಿನಿಮಯ ಪದ್ಧತಿಯಲ್ಲಿ ಹೆಚ್ಚು ಕಡಿಮೆಗಳುಂಟಾದ್ದರಿಂದ ಗಿರಣಿಗಳಿಗೆ ತೊಂದರೆಯುಂಟಾಯಿತು. ಇನ್ನು ಮುಂದಿನ ಸ್ಥಿತಿಯಾದರೂ ಗಿರಣಿಗಳಿಗೆ ಅನುಕೂಲವಾಗಿರುವದಿಲ್ಲ. ಇತ್ತೀಚೆಗಂತೂ ಎಷ್ಟೋ ಗಿರಣಿಗಳು ಮುಚ್ಚಲ್ಪಟ್ಟಿರುವವು. ೧೯೨೨ರಲ್ಲಿ ೧೯೨೧ಕ್ಕಿಂತಲೂ ಲಾಭಾಂಶವು ೧೦೦ಕ್ಕೆ ೫೦ರಂತೆ

ಇಳಿಯಿತು. ೧೯೨೪ರಿಂದ ಮುಂದೆ ಎಷ್ಟೋ ಗಿರಣಿಗಳು ಬಹಳೇ ಹಾನಿಗೀಡಾದವು. ಗಿರಣಿಗಳು ಪುನಃ ವೈಭವದಿಂದ ಮೆರೆಯಬೇಕಾದರೆ ಎಷ್ಟು ವರ್ಷಗಳು ಬೇಕಾಗುವವೋ ತಿಳಿಯದು.

೧೯೧೩-೨೩ರವರೆಗೆ ೪೦ ಸಾವಿರ ಗಿರಣಿ ಮಗ್ಗಗಳು. ೬ ಲಕ್ಷ ಕದಿರುಗಳು ಹೆಚ್ಚಾಗಿವೆ. ಇದೇ ಪ್ರಮಾಣದಿಂದ ಬೆಳೆದರೆ ೩೦-೪೦ ವರ್ಷಗಳಲ್ಲಿ ೩೦-೪೦ ಲಕ್ಷ ಕದಿರುಗಳು ಪ್ರಸಾರವಾಗಬಹುದು. ಪ್ರತಿವರ್ಷ ಗಿರಣಿಗಳಿಂದ ೫೦೦ ಲಕ್ಷ ಯಾರ್ಡು ಹೆಚ್ಚಾಗುತ್ತ ಹೋದರೆ ೩೦ ವರ್ಷಗಳಲ್ಲಿ ೧೫೦೦೦ ಲಕ್ಷ ಯಾರ್ಡು ಬಟ್ಟೆಯು ಸಿದ್ಧವಾಗುತ್ತದೆ. ಇಷ್ಟು ಬಟ್ಟೆಯು ಸದ್ಯಕ್ಕೆ ವಿದೇಶಗಳಿಂದ ಇಲ್ಲಿಗೆ ಬರುತ್ತದೆ. ಗಿರಣಿಗಳನ್ನು ಹೆಚ್ಚಿಸಬೇಕೆಂದು ಕಾಲಕ್ರಮಣ ಮಾಡುತ್ತ ಹೋದಂತೆ ವಿದೇಶಿ ಬಟ್ಟೆಗಳು ಇಲ್ಲಿಯ ಪೇಟೆಗಳನ್ನು ಹೆಚ್ಚೆಚ್ಚಿಗೆ ತುಂಬುತ್ತಲೇ ನಡೆಯುವವು.

ಕಿಮ್ಮತ್ತುಗಳ ತಾರತಮ್ಯ

ಈಗ ಖಾದಿಗಿಂತಲೂ ಗಿರಣಿಯ ಬಟ್ಟೆಗಳು ಬಹು ಅಗ್ಗವಾದದ್ದು ನಮಗೆ ಕಂಡುಬರುತ್ತದೆ. ಸರ್ವೋತ್ಕೃಷ್ಟವಾದ ೩೬ ಇಂಚು ಅಗಲಿನ ಖಾದಿಯ ಕಿಮ್ಮತ್ತು ೧ ವಾರಿಗೆ ೬ ಆ. ೬ ಪೈ ಬಿಳುತ್ತದೆ. ೪೫ ಇಂಚು ಅಗಲಿನ ಖಾದಿಗೆ ೮ ಆ ೯ಪೈ ಬೀಳುವದು. ೫೦ ಇಂಚಿನ ಖಾದಿಗೆ ೧೦ ಆ ೯ ಪೈ ಬಿಳುತ್ತದೆ. ಅಷ್ಟೇ ನಂಬರ ಹಾಗೂ ನೇಗೆಯ ಗಿರಣಿ ಬಟ್ಟೆಗಳಿಗೆ ತೀರ ಕಡಿಮೆ ಬೆಲೆ ಬೀಳುವದು. ನೂಲಿನ ಕಿಮ್ಮತ್ತುಗಳ ವ್ಯತ್ಯಾಸವನ್ನು ಇಲ್ಲಿ ಕೊಟ್ಟಿರುತ್ತೇವೆ.

ನೂ. ನಂ೧	**ಪೌ. ಕೈನೂ. ಬೆಲೆ.**	**೧ ಪೌಂ.. ಗಿ. ನೂ. ಬೆಲೆ.**
೧೦-೧೨	೦-೧೪-೦	೦-೮-೦
೨೦	೧-೦೮-೦	೧-೦-೦
೩೦	೧-೧೪-೦	೧-೨-೦

ಹಿಂದುಸ್ಥಾನದ ಗಿರಣಿಗಳಲ್ಲಿ ೧ ಪೌಂಡು ನೂಲಿಗೆ ಸುಮಾರು ೩ ಆಣೆ ಕೂಲಿ ಬೀಳುತ್ತದೆ. ೧೦-೧೨ ನಂಬರ ನೂಲು ತೆಗೆಯುವವನಿಗೆ ೧ ಪೌಂಡಿಗೆ ೪ ಆಣೆ ಅಥವಾ ೪ ಆಣೆ ೬ ಪೈ ಬೀಳುವದು. ಇದೇ ಮೇರೆಗೆ ಗಿರಣಿಯ ಮಗ್ಗಕ್ಕಿಂತಲೂ ಕೈಮಗ್ಗದ ಕೂಲಿಯು ಹೆಚ್ಚು ಬೀಳುವದು. ಗಿರಣಿಯಲ್ಲಿ ೧ ಪೌಂಡು ಬಟ್ಟೆಯನ್ನು ನೇಯಲಿಕ್ಕೆ ೪ ಆಣೆ ಹತ್ತುತ್ತದೆ. ಆದರೆ ಕೈಮಗ್ಗದ ಕೂಲಿಯು ಅದೇ ಬಟ್ಟೆಗೆ ೬. ಆಣೆಗಿಂತ ಹೆಚ್ಚಿಗೆ ಬೀಳುತ್ತದೆ. ಇದರ ಮೇಲಿಂದ ಖಾದಿ ಬಟ್ಟೆಯ ಕಿಮ್ಮತ್ತನ್ನಿಳಿಸುವದು ಅಸಂಭವವಾಗಿ ಕಾಣುತ್ತದೆ. ಆದರೆ ನೂಲುಗಾರನು ಸ್ವತಃ ಅರಳೆಯನ್ನು ಸಂಗ್ರಹಿಸಿ ಇಟ್ಟುಕೊಂಡು ಕೈರಾಟಿ ಕೈಮಗ್ಗಗಳಲ್ಲಿ ಹೆಚ್ಚು ಸುಧಾರಣೆ ಮಾಡಿಕೊಂಡರೆ ಬಟ್ಟೆಯ ಪ್ರಮಾಣವು ಹೆಚ್ಚಿ ಅದು ಗಿರಣಿ ಬಟ್ಟೆಯೊಂದಿಗೆ ಸುಲಭವಾಗಿ ಮೇಲಾಟವಾಡಬಲ್ಲರು.

ಈಗ ಖಾದಿ ಧಾರಣೆಯು ಇಳಿದಿರುತ್ತದೆ. ೧೯೨೨ರಲ್ಲಿ ೩೬ ಇಂಚು ಅಗಲಿನ ಖಾದಿಗೆ ವಾರಿಗೆ ೧೧ ಆಣೆ ಬೀಳುತ್ತಿತ್ತು. ನಡುವೆ ೭ ಆಣೆಗೆ ವಾರವಾಯಿತು. ಈಗ ಅದಕ್ಕು ಅಗ್ಗವಾಗಿ ದೊರೆಯುತ್ತದೆ. ೪೫ ಇಂಚು ಅಗಲಿನ ಖಾಧಿಯು ವಾರಿಗೆ ೧೨ ಆಣೆ ಇದ್ದದ್ದು ೯ ಆಣೆ ಆಗಿರುತ್ತದೆ. ೫೦ ಇಂಚಿನ ಖಾದಿಯು ೧೪ ಆಣೆಗೆ ವಾರವಿದ್ದುದು ೧೦ ಆಣೆಗೆ ದೊರೆಯುವದು. ಇದಕ್ಕೆ ಅರಳೆಯ ಧಾರಣೆಯು ಮಂದವಾಗಿದ್ದೂ ಒಂದು ಕಾರಣವಾಗಿದೆ. ಅಲ್ಲಲ್ಲಿ ಖಾದಿಯ

ಕೇಂದ್ರಗಳು ಹೆಚ್ಚಾಗಿ ಬಟ್ಟೆಯು ಅಗ್ಗವಾಗಲಿಕ್ಕೂ ಕಾರಣವಾಯಿತು. ತಾಳಿಕೆಯಲ್ಲಿ ಖಾದಿ ಬಟ್ಟೆಯು ಗಿರಣಿ ಬಟ್ಟೆಗಳಿಗಿಂತಲೂ ಮಿಗಿಲಾಗಿರುತ್ತದೆ.

ಸಾಮಾಜಿಕ ಸೌಕರ್ಯ

ಸಮಾಜದ ಜನರಿಗೆ ಕೈರಾಟಿ ಕೈಮಗ್ಗಗಳಲ್ಲಿ ಕೆಲಸ ಮಾಡುವದೆಷ್ಟು ಗೌರವಯುಕ್ತವಾಗಿ ಕಾಣುವದೋ ಅಷ್ಟು ಗಿರಣಿಯಲ್ಲಿ ದುಡಿಯುವದರಿಂದ ಗೌರವ ಬರಲಾರದು. ಸದ್ಯಕ್ಕೆ ಗಿರಣಿಗಳಲ್ಲಿ ಕೆಲಸ ಮಾಡುವವರ ಸಂಖ್ಯೆಯು ೪,೦೦,೦೦೦ ಕ್ಕಿಂತ ಹೆಚ್ಚಾಗಿಲ್ಲ. ಈ ಸಂಖ್ಯೆಗೆ ಸಟ್ಟಾವ್ಯಾಪಾರಿಗಳು, ದಲಾಲರು, ಚಿಲ್ಲರ ವ್ಯಾಪಾರಸ್ಥರ ಸಂಖ್ಯೆಯನ್ನು ಕೂಡಿಸಿದರೆ ಆ ಜನಸಂಖ್ಯೆಯು ೧೦ ಲಕ್ಷಕ್ಕೆ ಮೀರುವುದಿಲ್ಲ. ಆದರೆ ಈಗ ನಮ್ಮಲ್ಲಿ ಬರೇ ಕೈಮಗ್ಗದ ಕೆಲಸ ಮಾಡುವವರ ಸಂಖ್ಯೆಯೇ ಗಿರಣಿಯ ಕೂಲಿಕಾರರಿಗಿಂತ ಅಧಿಕವಾಗಿರುವುದು. ನೂಲುಗಾರರ ಸಂಖ್ಯೆಯಂತು ದೂರೇ ಉಳಿಯಿತು. ಗಿರಣಿಯ ಕೂಲಿಕಾರರ ಸಂಖ್ಯೆಯನ್ನು ಇಮ್ಮಡಿ ಮಾಡಿದರೂ ಹಿಂದುಸ್ಥಾನದ ಅಸಂಖ್ಯಾತ ಬಡಬಗ್ಗರ ಪಾಡೇನೂ ಹಿಂಗುವದಿಲ್ಲ. ಆದುದರಿಂದ ದೊಡ್ಡ ಪ್ರಮಾಣದ ಯಂತ್ರವನ್ನು ಸ್ಥಾಪಿಸುವದೆಂದರೆ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸಿದಂತೆಯೇ ಸರಿ.

ಹಿಂದುಸ್ಥಾನದ ಸಂಪತ್ತು ಕೆಲವು ಲಕ್ಷಾಧೀಶರ ಕೈಯಲ್ಲಿಯೇ ಉಳಿಯುವದು ಬೇಡ. ಅದು ಬಡಬಗ್ಗರಲ್ಲಿ ಹರಿದು ಹಂಚಲಿಕ್ಕೆಬೇಕು. ಸದ್ಯಕ್ಕೆ ನಿರುದ್ಯೋಗವನ್ನು ನಿವಾರಣೆ ಮಾಡುವದೇ ಹಿಂದುಸ್ಥಾನದ ಮುಖ್ಯ ಪ್ರಶ್ನೆಯಾಗಿದೆ. ಬಡವರಾದ ಹಳ್ಳಿಯ ಒಕ್ಕಲಿಗರು ತಮ್ಮ ಸ್ಥಿತಿಗತಿಗನುಕೂಲವಾದ ಹೋರೆಗಳನ್ನು ಕೈಕೊಂಡಿರುವರು. ಗಿರಣಿಗಳು ರಾಷ್ಟ್ರದ ಧ್ಯೇಯವನ್ನು ಸಿದ್ದಿಗೊಯ್ಯಲಾರವು.

ಕೈರಾಟಿಯ ಬಡಬಗ್ಗರಿಗೆ ಕಾಮಧೇನುವಾಗಿರುವುದು. ಈಗ ನಿರುದ್ಯೋಗಿಗಳಾಗಿ ಅರಹೊಟ್ಟೆ ಉಂಡು ಬಳಲುವ ಲಕ್ಷಾಂತರ ಬಡಜನಗಳಿಗೆ ಅದು ಭಾಗ್ಯದೇವತೆಯಾಗಿರುವುದು. ನೈತಿಕ ಭೌತಿಕ ದೃಷ್ಟಿಯಿಂದ ಬಹುಜನರಿಗೆ ಅನುಕೂಲವಾದ ಕೈರಾಟಿಯಂಥ ಉದ್ಯೋಗವು ಬೇರೊಂದಿಲ್ಲ. ಗಿರಣಿಗಳು ಬಡವರನ್ನು ಎಲ್ಲ ತರದಿಂದಲೂ ಹೀರಿಕೊಂಡು ಅವರನ್ನು ನಿರ್ವಿಣ್ಣರನ್ನಾಗಿ ಮಾಡುವವು. ಯಂತ್ರದ ದಬ್ಬಾಳಿಕೆಯೂ ಕಾರ್ಯಾಲಯಗಳ ಅರ್ಭಾಟವೂ ಬಹು ಘಾತಕವಾದವುಗಳು.

ಗಿರಣಿಯ ಕೂಲಿಕಾರನ ಸ್ಥಿತಿಯು ಬಹು ಕೀಳಾಗಿರುತ್ತದೆ. ದೊಡ್ಡ ಪಟ್ಟಣಗಳಲ್ಲಿ ಕೂಲಿಕಾರರ ವಸತಿಗೃಹಗಳು ಅನಾರೋಗ್ಯಕರವಾಗಿರುತ್ತದೆ. ಅವರು ಮದ್ಯಪಾನ ವ್ಯಭಿಚಾರ ಮೊದಲಾದ ದುರ್ವ್ಯಸನಗಳಿಗೀಡಾಗಿ ದುರ್ಬಲರಾಗಿ ಬಿಟ್ಟಿದ್ದಾರೆ. ಎಷ್ಟೋ ಹಳ್ಳಿಗರು ತಮ್ಮ ನೂಲುವ ಉದ್ಯೋಗವನ್ನು ಮರೆತು ಪಟ್ಟಣದ ಗಿರಣಿಗಳಲ್ಲಿ ಸೇರಿ ಅಕಾಲಮೃತ್ಯುವಿಗೆ ತುತ್ತಾಗುತ್ತಲಿದ್ದಾರೆ.

ಭರತಖಂಡದ ಭವಿಷ್ಯವು ಹಳ್ಳಿಗಾಡ ಕಲಾಕೌಶಲ್ಯಗಾರರನ್ನೇ ಅವಲಂಬಿಸಿರುತ್ತದೆ. ನೇಕಾರನು ಮಗ್ಗವನ್ನು ಸುಧಾರಿಸಿ ಅದರಲ್ಲಿಯೇ ತನ್ನ ಚಾತುರ್ಯವನ್ನು ವ್ಯಕ್ತಪಡಿಸಲು ಪ್ರಯತ್ನಿಸಬೇಕು. ಇದೇನೂ ಅಶಕ್ಯವಾದುದಲ್ಲ. ನೇಕಾರನ ಕೈ ನೂಲಿನ ಬಟ್ಟೆಯ ಭರತಖಂಡದ ದಾರಿದ್ರ್ಯ ನಿವಾರಣೆಯ ಚಿನ್ಹವಾಗಿದೆ.

❖❖

೭ನೆಯ ಪ್ರಕರಣ

ವಿದೇಶಿ ಬಟ್ಟೆಗೆ ಬಹಿಷ್ಕಾರ

ವಿದೇಶಿ ಬಟ್ಟೆಯ ಬಹಿಷ್ಕಾರವೇ ದಾರಿದ್ರ್ಯರೋಗ ನಿವಾರಣೆಯ ಪರಮೌಷಧಿಯು. ಅದು ಸೃಷ್ಟಿಯ ನಿಯಮವನ್ನನುಸರಿಸಿರುತ್ತದೆ. ಬಹಿಷ್ಕಾರದಿಂದ ವಿದೇಶಿ ವಸ್ತುಗಳ ಪ್ರತಿಬಂಧವಾಗುವದಲ್ಲದೆ ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹ ದೊರೆಯುವದು. ಸ್ವಾವಲಂಬಿಗಳಾದ ದೇಶಗಳಲ್ಲಿ ವಿಶಿಷ್ಟತರವಾದ ಸಾಮರ್ಥ್ಯವಿರುತ್ತದೆ. ಇಂಗ್ಲಂಡ ದೇಶವು ಮೊದಲು ತನ್ನ ದೇಶದ ಉದ್ಯೋಗಾಭಿವೃದ್ಧಿಗಾಗಿ ವಿದೇಶಿ ವಸ್ತುಗಳನ್ನು ಸಂಪೂರ್ಣವಾಗಿ ಬಹಿಷ್ಕರಿಸಿತು. ಮಿ. ಲೆಕಿ ಎಂಬ ಇತಿಹಾಸಕರ್ತನು ಹೇಳಿರುವದೇನೆಂದರೆ: "ಇಂಗ್ಲಂಡ ದೇಶವು ವಿದೇಶಿ ವಸ್ತುಗಳ ಮೇಲೆ ಬಹುವಿಧ ನಿರ್ಬಂಧಗಳನ್ನಿರಿಸದೆ ಬಿಟ್ಟಿದ್ದರೆ ಇಂಗ್ಲಂಡದ ಕಾರ್ಯಾಲಯಗಳಲ್ಲಿ ಯಾವ ಪದಾರ್ಥಗಳೂ ಹುಟ್ಟುತ್ತಿರಲಿಲ್ಲ. ಇಂಗ್ಲಂಡದ ಪದಾರ್ಥೋತ್ಪಾದಕರ ಸ್ವಾರ್ಥಬುದ್ಧಿ ಮತ್ತು ದುರಾಶೆಗಳ ಮೂಲಕವಾಗಿ ಅಮೇರಿಕಾ ದೇಶವು ಅವರ ಕೈಬಿಟ್ಟು ಸ್ವತಂತ್ರವಾಯಿತು. ಅಯರ್ಲಂಡದ ವ್ಯವಹಾರೊದ್ಯೋಗವು ಮಣ್ಣುಗೂಡಿ ಹೋಯಿತು. ಹಿಂದುಸ್ಥಾನದ ಕ್ಯಾಲಿಕೋಧ ಹುಟ್ಟುವಳಿಯು ಸಂಪೂರ್ಣ ನಷ್ಟವಾಯಿತು."

ಅಮೇರಿಕೆಯ ಸ್ವಾತಂತ್ರ್ಯ ಯುದ್ಧದ ಕಾಲಕ್ಕೆ ಅಮೇರಿಕೆಯವರಾದರೂ ಇಂಗ್ಲೀಷರ ಮಾರ್ಗವನ್ನೇ ಅನುಸರಿಸಿದರು. ಅವರು ಇಂಗ್ಲಂಡದಿಂದ ಯಾವ ಪದಾರ್ಥಗಳನ್ನೂ ತರಿಸಲಿಲ್ಲ. ಸ್ಟಾಂಪ ಆ್ಯಕ್ಟ್ ತೆಗೆದುಹಾಕುವವರೆಗೂ ಇಂಗ್ಲಂಡದ ಸಾಲವನ್ನು ತೀರುವದಿಲ್ಲವೆಂದು ಹಟ ಹಿಡಿದರು. ಇಂಗ್ಲೆಂಡದಿಂದ ಯಾವ ಸಹಾಯವನ್ನೂ ಹೊಂದದೆ ಸ್ವಯಂ ಧೀರರಾಗಲಿಕ್ಕೆ ಯಾವ ಸೌಕರ್ಯಗಳು ಬೇಕೋ ಅವೆಲ್ಲವುಗಳನ್ನು ಅಮೇರಿಕೆಯವರು ಮಾಡಿಕೊಂಡರು. ದೊಡ್ಡ ದೊಡ್ಡ ಶ್ರೀಮಂತರು ಇಂಗ್ಲಂಡದಿಂದ ಬಟ್ಟೆಗಳನ್ನು ತರಿಸದೆ ಕೈನೂಲಿನ ಬಟ್ಟೆಗಳನ್ನು ಧರಿಸಲುಪಕ್ರಮಿಸಿದರು. ಉಣ್ಣೆಯ ಬಟ್ಟೆಗಳಿಗಾಗಿ ಯಾರೂ ಕುರಿಗಳನ್ನು ತಿನ್ನಕೂಡದೆಂದು ಕಟ್ಟಳೆ ಮಾಡಿಕೊಂಡರು.

ಇಂಗ್ಲಂಡ ಅಮೇರಿಕೆಗಳು ಸ್ವತಂತ್ರ ರಾಷ್ಟ್ರಗಳು. ಅವು ಸಮಯಾನುಸಾರಾಗಿ ಬಹಿಷ್ಕಾರ ನಿರ್ಬಂಧನೆಗಳನ್ನು ಮುಂದುಮಾಡಿದವು. ಆದರೆ ಹಿಂದುಸ್ಥಾನವು ಈಗ ಅಂಥ ಸುದೈವದ ಸ್ಥಿತಿಯಲ್ಲಿರುವದಿಲ್ಲ. ಹಾಗಿದ್ದರೆ ಹಿಂದುಸ್ಥಾನದ ರಾಷ್ಟ್ರೀಯ ಸರಕಾರವಾದರೂ ವಿದೇಶಿ ವಸ್ತುಗಳನ್ನವಲಂಬಿಸದೆ ಸ್ವದೇಶಿ ಪದಾರ್ಥೋತ್ಪಾದನೆಯ ಕಡೆಗೇನೇ ಗಮನಿಸುತ್ತಿದ್ದಿತು.

ಈಗ ದೇಶದಲ್ಲಿ ಬಹಿಷ್ಕಾರ ಚಟುವಟಿಕೆಗಳನ್ನು ಪುರಸ್ಕರಿಸುವದೆಂದರೆ, ಹಿಂದುಸ್ಥಾನದ ನೂಲುಗಾರರು, ನೇಕಾರರು, ಕಲಾಕೌಶಲ್ಯಗಾರರು, ಬಣಗಾರರು, ಚಿತ್ರಗಾರರು ಮೊದಲಾದವರಿಗೆ ಉದ್ಯೋಗಗಳನ್ನು ಹಚ್ಚಿಕೊಟ್ಟು ವಿದೇಶಿ ಬಟ್ಟೆಯನ್ನು ಪೂರಾ ನಿಲ್ಲಿಸಿಬಿಡುವದಾಗಿರುತ್ತದೆ. ತನಗೆ ಮೂಲತಃ ಅತ್ಯಾವಶ್ಯಕವಾಗಿರುವ ಬಟ್ಟೆಯ ಸಲುವಾಗಿ ಅನ್ಯರಾಷ್ಟ್ರವನ್ನವಲಂಬಿಸುವ ಯಾವ ರಾಷ್ಟ್ರವೂ ಬೆಳವಣಿಗೆ ಹೊಂದಲಾರದು. ಮೊದಲು ಎಲ್ಲ ಜನರಲ್ಲಿ ಬಹಿಷ್ಕಾರ ಚಟುವಟಿಕೆಯು ನೆಲೆಗೊಳ್ಳಬೇಕು. ಅನಂತರ ಹಿಂದುಸ್ಥಾನದಲ್ಲಿ ನೈತಿಕ ಬೌದ್ಧಿಕ ದೃಷ್ಟಿಗಳಿಂದೊಡಗೂಡಿದ ಔದ್ಯೋಗಿಕ ಪುರುದ್ಧಾರವಾಗಬೇಕು. ಈ ಕಾರ್ಯವನ್ನು ಕೈಕೊಳ್ಳಬೇಕು. ವಿದೇಶಿ ಬಟ್ಟೆಗಳನ್ನು ಸಂಪೂರ್ಣ ಬಿಡುವದೂ ಸ್ವದೇಶಿ ಉದ್ಯೋಗವನ್ನು ಪುನರುದ್ಧಾರ ಮಾಡುವದೂ ಬಹಿಷ್ಕಾರದ ಮುಖ್ಯ ಗುರಿಯಾಗಿರಬೇಕು.

ವಿದೇಶದಿಂದ ಬರುವ ವಸ್ತುಗಳು

ಹಿಂದುಸ್ಥಾನದ ಬಹಿಷ್ಕಾರವು ವಿದೇಶಿವಸ್ತುನಿರಸನ ಹಾಗೂ ಸ್ವದೇಶಿ ಪದಾರ್ಥೋತ್ಪಾದನ ಶಕ್ತಿಗಳನ್ನೊಳಗೊಂಡಿರಬೇಕು. ಪ್ರಚಾರಕ ಕಾರ್ಯವನ್ನು ಕೈಕೊಳ್ಳುವದೂ, ಕೊರತೆಗಳನ್ನು ಕಡಿಮೆ ಮಾಡಿಕೊಳ್ಳುವದೂ, ಬಹಿಷ್ಕಾರ ಚಟುವಟಿಕೆಗೆ ಸಹಾಯ ಮಾಡುತ್ತವೆ. ಆದರೆ ಪರದೇಶಗಳಿಂದ ಬರುವ ಬಟ್ಟೆಗಳನ್ನು ಸ್ವದೇಶದಲ್ಲಿಯೇ ಸಿದ್ಧಪಡಿಸಿಕೊಳ್ಳುವದು ಸರ್ವೋತ್ಕೃಷ್ಟವಾದ ಮಾರ್ಗವು. ಆ ಪದಾರ್ಥೋತ್ಪಾದನೆಗಾಗಿ ತಕ್ಕ ಮಾರ್ಪಾಟುಗಳನ್ನು ಶೀಘ್ರವೇ ಮಾಡಬೇಕು. ಹಿಂದಿಯರು ವಿದೇಶಿ ವಸ್ತುಗಳನ್ನು ಸಂಪೂರ್ಣವಾಗಿ ತ್ಯಜಿಸಿಬಿಡಬೇಕು.

ಬಹಿಷ್ಕಾರವನ್ನು ಪುರಸ್ಕರಿಸುವ ಮಾರ್ಗಗಳಾವವೆಂದರೆ "(೧) ಸ್ವದೇಶಿ ನೂಲುವ ಮತ್ತು ನೇಯುವ ಗಿರಣಿಗಳು. (೨) ಕೈರಾಟಿ ಕೈಮಗ್ಗಗಳು ಇವೆರಡರಲ್ಲಿ ನಮಗೆ ಹೆಚ್ಚು ಹಿತವಾಗುವ ಮಾರ್ಗವಾವುದು? ನಮ್ಮ ಗುರಿಯನ್ನು ಸಾಧಿಸುವದಕ್ಕೆ ಯಾವದು ನಮಗೆ ಹೆಚ್ಚಿಗೆ ಸಹಾಯ ಮಾಡುವುದು? ಸ್ವದೇಶಿ ಬಟ್ಟೆಗಳನ್ನು ಹುಟ್ಟಿಸಬೇಕೆಂಬದನ್ನು ವಿಚಾರಿಸುವ ಮೊದಲು ಪರದೇಶಗಳಿಂದ ಹಿಂದುಸ್ಥಾನಕ್ಕೆ ಬರುವ ಬಟ್ಟೆಯ ಪ್ರಮಾಣವೆಷ್ಟೆಂಬುದನ್ನು ವಿಚಾರಿಸುವಾ."

ಸದ್ಯಕ್ಕೆ ವಿದೇಶಿ ಬಟ್ಟೆಯನ್ನು ತರಿಸುವ ಪ್ರಮಾಣವು ಇಳಿದಾಗ್ಯೂ ಅದು ೧೦೦ಕ್ಕೆ ೩೭ರಂತೆ ಇದ್ದಂತೆ ತೋರುತ್ತದೆ. ಅವುಗಳ ಕಿಮ್ಮತ್ತು ಸರಾಸರಿ ೬೦ ಕೋಟಿ ರೂ. ಆಗುತ್ತದೆ. ವಿದೇಶಿ ಬಟ್ಟೆಯೂ ಇಲ್ಲಿಗೆ ಬರುವದು ಕ್ರಮೇಣ ಕಡಿಮೆಯಾದುದಕ್ಕೆ ಕಳೆದ ಕೆಲವು ವರ್ಷಗಳಿಂದ ಬಹಿಷ್ಕಾರ ಚಟುವಟಿಕೆಯು ಭರದಿಂದ ನಡೆದುದೇ ಕಾರಣವು. ಖಾದಿಗೂ ಸ್ವದೇಶಿ ಪದಾರ್ಥಗಳಿಗೂ ಹೆಚ್ಚು ಪ್ರಾಮುಖ್ಯತೆಯುಂಟಾಗಿರುತ್ತದೆ. ಜನರಲ್ಲಿ ಬಟ್ಟೆಯನ್ನು ಧರಿಸುವ ಪ್ರಮಾಣವು ಕಡಿಮೆಯಾಗತೊಡಗಿದೆ. ವಿದೇಶಿ ಬಟ್ಟೆಗಳ ಕಿಮ್ಮತ್ತು ಏರಿದ್ದರಿಂದ ಸ್ವದೇಶಿ ಬಟ್ಟೆಗಳ ವ್ಯಾಪಾರಕ್ಕೆ ಪುಟ ಕೊಟ್ಟಂತಾಗಿದೆ. ವಿದೇಶಿ ಬಟ್ಟೆಗಳು ಪುನಃ ಮೊದಲಿನ ಸ್ಥಿತಿಗೇರುವದೆಂದಿಗೂ ಶಕ್ಯವಿಲ್ಲ. ಇದೆಲ್ಲ ಶ್ರೇಯಸ್ಸು ಬಹಿಷ್ಕಾರ ಚಟುವಟಿಕೆಗೆ ಸಲ್ಲುತ್ತದೆ. ಈಗ ವಿದೇಶಿ ಬಟ್ಟೆಯನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕಾದರೆ ಪ್ರತಿವರ್ಷ ೧೫೦೦ ದಶಲಕ್ಷ ಯಾರ್ಡು ಬಟ್ಟೆಯ ಪುರವಟೆಯಾಗಬೇಕು. ಮತ್ತು ೫೦೦ ಲಕ್ಷ ಪೌಂಡು ನೂಲಿನ ಹುಟ್ಟುವಳಿಯಾಗಬೇಕು.

ಗಿರಣಿ ಮತ್ತು ಕೈರಾಟಿಗಳ ಕಾರ್ಯಕ್ರಮ

ಬಹಿಷ್ಕಾರ ಚಟುವಟಿಕೆಗಳನ್ನು ಬೆಳೆಯಿಸಬೇಕಾದರೆ ಗಿರಣಿಗಳ ಸಂಖ್ಯೆಯನ್ನು ಹೆಚ್ಚಿಸಬೇಕೆಂದು ಕೆಲವರ ಗ್ರಹಿಕೆ. ಈಗಿನ ದೇಶಿ ಗಿರಣಿಗಳಲ್ಲಿ ವಿಶೇಷವಾದ ಬಟ್ಟೆಯ ಹುಟ್ಟುವಳಿಯಾದರೆ ವಿದೇಶಿ ಬಟ್ಟೆಗಳ ಬಹಿಷ್ಕಾರವು ಯಶಸ್ವಿಯಾಗುವದೆಂದು ಅವರ ಮತ. ಆದರೆ ಹತ್ತೆಂಟು ವರ್ಷಗಳ ಅವಧಿಯಲ್ಲಾದರೂ ಗಿರಣಿಗಳನ್ನು ಹೆಚ್ಚಿಸಿ ದೇಶದ ಎಲ್ಲ ಜನರಿಗೆ ಬಟ್ಟೆಯನ್ನೊದಗಿಸಿ ಕೊಡಬೇಕೆಂದರೆ ಅದು ಸಾಧ್ಯವಿಲ್ಲ. ಆದರೆ ಗಿರಣಿಗಳು ಸಹಾಯ ಮಾಡುವದೇನೋ ನಿಜ.

ಬಹಿಷ್ಕಾರ ಕಾಲದಲ್ಲಿ ಗಿರಣಿಯವರು ತಮ್ಮ ಬಟ್ಟೆಗಳ ಕಿಮ್ಮತ್ತನ್ನು ಏರಿಸದೆ ಚಟುವಟಿಕೆಗೆ ಸಹಾಯ ಮಾಡುವದು. ಗಿರಣಿಯವರು ತಮ್ಮ ಅಲ್ಪ ಲಾಭವನ್ನು ಬದಿಗೊತ್ತಿ ಹೆಚ್ಚಿನದಾದ ರಾಷ್ಟ್ರಹಿತದ ಕಡೆಗೆ ಲಕ್ಷಗೊಡುವದು. ಕೇವಲ ಗಿರಣಿಗಳಿಂದ ಬಹಿಷ್ಕಾರ ಚಟುವಟಿಕೆಯು ಪೂರ್ತಿಗೊಳ್ಳಲಾರದು. ವಿದೇಶಿ ಬಟ್ಟೆಗಳು ಈ ದೇಶದೊಳಗಿಂದ ಸಂಪೂರ್ಣ ಅಳಿದು ಹೋಗುವಂತೆ ಮಾಡಬೇಕು. ಅದಕ್ಕಾಗಿ ಗಿರಣಿಗಳ ಜೊತೆಗೆ ಕೈರಾಟಿ ಕೈಮಗ್ಗಗಳ ಪ್ರೋತ್ಸಾಹ ಕೊಡಬೇಕು.

ಖಾದಿ ಬೇಡಿಕೆಯನ್ನು ಹೆಚ್ಚಿಸುವದು

ಪ್ರತಿಯೊಂದು ವ್ಯಕ್ತಿಯು ತೀರ ಕಡಿಮೆ ಬಟ್ಟೆಗಳನ್ನು ಧರಿಸುವದಾದರೂ ಬಹಿಷ್ಕಾರ ಚಟುವಟಿಕೆಗೆ ಒಳ್ಳೆ ಸಹಾಯ ಮಾಡುತ್ತದೆ. ಬಹುಬೆಲೆಯ ಉಡುಪುಗಳನ್ನು ಧರಿಸುವವರು ಸ್ವದೇಶಾಭಿಮಾನದಿಂದ ಅತ್ಯಲ್ಪ ಬಟ್ಟೆಗಳನ್ನು ಧರಿಸುವದು ಯೋಗ್ಯವು. ಉಚ್ಚ ವರ್ಗದ ಹಾಗೂ ಮಧ್ಯಮ ವರ್ಗದ ಜನರು ವಿದೇಶಿ ಬಟ್ಟೆಯ ಮೇಲಿನ ವ್ಯಾಮೋಹವನ್ನು ಸಂಪೂರ್ಣವಾಗಿ ಬಿಟ್ಟು ಬಿಡಬೇಕು. ಖಾದಿ ಪ್ರಸಾರದಿಂದ ಜನರಲ್ಲಿ ಸಾದಾತನವೂ ಅಲ್ಪವ್ಯಯವೂ ನೆಲೆಗೊಳ್ಳವವು. ಸಾದಾತನವು ಪ್ರಸಾರವಾಗುವಂತೆಯೂ ದುಂದುಗಾರಿಕೆಯು ಕುಂದಿ ಹೋಗುವಂತೆಯೂ ಚಟುವಟಿಕೆಯನ್ನೆಬ್ಬಿಸಿದರೆ ಖಾದಿಯ ಪ್ರಸಾರವು ಸುಲಭವಾಗುವದು.

ಸುಶೀಕ್ಷಿತರಾದ ಬಹುಸಂಖ್ಯಾತ ಜನರು ಗಿರಣಿ ಬಟ್ಟೆಗಳಿಗಿಂತಲೂ ಖಾದಿಯನ್ನೇ ವಿಶೇಷವಾಗಿ ಉಪಯೋಗಿಸಬೇಕು. ವಿಧೇಶಿ ಬಟ್ಟೆಗಳನ್ನು ಸಂಪೂರ್ಣವಾಗಿ ಬಿಟ್ಟುಬಿಡಬೇಕು. ಈ ಉದ್ದೇಶವನ್ನು ನೆರವೇರಿಸಲಿಕ್ಕೆ ನಿರಂತರವಾದ ಹಾಗೂ ಅಪ್ರತಿಮವಾದ ಪ್ರಯತ್ನಗಳನ್ನು ಬಲವತ್ತರವಾಗಿ ಮಾಡಬೇಕು. ಎಲ್ಲ ಕಡೆಯಲ್ಲಿಯೂ ಸುವ್ಯವಸ್ಥಿತ ರೀತಿಯಿಂದ ಖಾದಿ ಪ್ರಸಾರಕ ಕಾರ್ಯವು ಸಾಗಿದರೆ ಪರಿಣಾಮವು ಒಳ್ಳೆ ಫಲಕಾರಿಯಾಗುವದು. ಪ್ರತಿಯೊಬ್ಬ ಖಾದಿದಾರಿಯು ಖಾದಿ ಪ್ರಸಾರದ ಹೊರೆಯನ್ನು ಹೊತ್ತುಕೊಳ್ಳತಕ್ಕದ್ದು ರಾಷ್ಟ್ರಕ್ಕೆ ಎಲ್ಲ ತರಹದ ಪ್ರಚಾರಕರೂ ಬೇಕಾಗಿದ್ದಾರೆ. ಸದ್ಯಕ್ಕೆ ಬೇಕಾದುದು ರಾಷ್ಟ್ರಹಿತದ ಉತ್ಕ್ರಾಂತಿಯು.

ಲಕ್ಷಾವಧಿ ಬಡಜನರನ್ನು ಸಂರಕ್ಷಿಸಬೇಕಾದರೆ ನಯವಾದ ನೂಲನ್ನು ಬಿಟ್ಟು ಒರಟಾದ ಖಾದಿಯ ಬಟ್ಟೆಯ ಕಡೆಗೆ ಅವರ ಮನಸ್ಸನ್ನೆಳೆಯಬೇಕು; ಅಂದರೆ ರಾಷ್ಟ್ರದ ಕಲ್ಯಾಣವಾಗುವದು. ಕೈರಾಟಿಯಿಂದ ನೂಲು ತೆಗೆಯುವದು ಎಲ್ಲಿಯೂ ನಷ್ಟಕರವಾದ ಉದ್ಯೋಗವೆಂದು ಗ್ರಹಿಸಲ್ಪಟ್ಟಿಲ್ಲ. ಎಷ್ಟೋ ಕಡೆಯಲ್ಲಿ ಅದರ ವ್ಯವಹಾರವು ಒಳ್ಳೆ ಭರದಿಂದ ಸಾಗಿರುತ್ತದೆ. ಖಾದಿಯ ಹುಟ್ಟುವಳಿಯು ಹೆಚ್ಚುದರೆ ಮಾರಾಟವಾಗದೆ ಅದು ಎಲ್ಲಿ ಶಿಲ್ಕಿಗೆ ಬೀಳುವದೋ ಎಂದು ನಾವು ಎದೆಗುಂದಲಾಗದು.

ಖಾದಿಯು ಮಾರಾಟವಾಗದೆ ಹಾಗೆಯೇ ಶಿಲಕು ಬಿದ್ದಿದೆಯೆಂದು ಇದುವರೆಗೆ ಎಲ್ಲಿಯೂ ಕೇಳಿಬರುವದಿಲ್ಲ. ಜನರಲ್ಲಿ ಬೇಡಿಕೆಯು ಹೆಚ್ಚುತ್ತಿರುವದರಿಂದ ಖಾದಿಯು ಎಷ್ಟು ಹುಟ್ಟಿದರೂ ಸಾಲದಂತಾಗಿದೆ. ಸದ್ಯಕ್ಕೆ ಉಚ್ಚ ಹಾಗೂ ಮಧ್ಯಮ ವರ್ಗದ ಜನರಲ್ಲಿ ಖಾದಿ ಪ್ರಸಾರವು ವಿಶೇಷವಾಗಿರುವದು.

ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಪ್ರಾಂತಗಳಲ್ಲಿಯೂ ಖಾದಿಯ ಕೇಂದ್ರಗಳನ್ನೇರ್ಪಡಿಸತಕ್ಕದ್ದು, ಆಯಾಯ ಪಟ್ಟಣಗಳ ನಾಗರಿಕರು ಪಾಲಿನಿಂದ ದೊಡ್ಡ ರಕಮಿನ ಖಾದಿಯನ್ನು ಕೊಂಡು ಜನಗಳಲ್ಲಿ ಆದಷ್ಟು ಪ್ರಚುರಗೊಳಿಸಬೇಕು. ೨೦-೩೦ ಜನರು ಕೂಡಿಕೊಂಡು ಪ್ರತಿತಿಂಗಳು ಖಾದಿಗಾಗಿ ಪ್ರತಿಯೊಬ್ಬರು ೩-೪ ರೂ. ಗಳನ್ನು ವೆಚ್ಚಮಾಡಬೇಕು. ಪಟ್ಟಣಗಳಲ್ಲಿ ರೋಖ ಹಣವು ಕೈಯಲ್ಲಾಡುವುದರಿಂದ ಈ ಕಾರ್ಯವು ಅಲ್ಲಿ ಸಾಧ್ಯವಾಗುವದು. ಆದರೆ ಹಳ್ಳಿಗರಲ್ಲಿ ಸುಗ್ಗಿಕಾಲದಲ್ಲಿ ಮಾತ್ರವೇ ಅಲ್ಪಸ್ವಲ್ಪ ಹಣವಿರುವದರಿಂದ ಅವರಿಗೆ ಈ ಮಾತು ಸಾಧ್ಯವಿಲ್ಲ. ಆದುದರಿಂದ ಹಳ್ಳಿಗಳಲ್ಲಿ ಖಾದಿ ಅಂಗಡಿಗಳನ್ನು ಸ್ಥಾಪಿಸುವುದು ನಿಷ್ಪ್ರಯೋಜಕವು ಖಾದಿ ಪ್ರಚಾರಕರು ಹಳ್ಳಿಹಳ್ಳಿಗಳಲ್ಲಿ ಖಾದಿಯನ್ನು ಹೊತ್ತು ಮಾರಬಹುದು.

ಖಾದಿ ಹುಟ್ಟುವಳಿಯ ಹೆಚ್ಚಳ

ಖಾದಿ ಹುಟ್ಟುವಳಿಯ ಕೇಂದ್ರಗಳು ಅಲ್ಲಲ್ಲಿ ಸುವ್ಯವಸ್ಥಿತವಾದ ರೀತಿಯಿಂದ ಸ್ಥಾಪಿಸಲ್ಪಡಬೇಕು. ಪೇಟೆಗಳಲ್ಲಿ ನೂಲು ಮಾರಾಟವಾಗಬೇಕು. ಪೇಟೆಯ ಸ್ಥಳಗಳಲ್ಲಿ ನೂಲನ್ನು ಕ್ರಯಕ್ಕೆ ಹಚ್ಚುವದು ಹೆಚ್ಚು ಪ್ರೋತ್ಸಾಹಕಾರಕವಾಗಿರುತ್ತದೆ. ನೂಲುಗಾರನು ತನ್ನ ಅರಳೆಯುನ್ನು ತಾನೇ ಸಂಗ್ರಹಿಸಿಟ್ಟುಕೊಳ್ಳುವದಕ್ಕೆ ವಿಶೇಷ ಉತ್ತೇಜನ ಕೊಡಬೇಕು. ಇದಲ್ಲದೆ ಹತ್ತಿಯ ಬೆಳೆಯು ಧಾನ್ಯದ ಬೆಳೆಗಿಂತ ತೀರ ಕಡಿಮೆ ಪ್ರಮಾಣದಲ್ಲಿರುವಂತೆ ಲಕ್ಷಿಸತಕ್ಕದ್ದು. ಇಷ್ಟೇ ಅಲ್ಲ; ನೂಲುಗಾರನು ಅರಳೆಯನ್ನು ಒಳ್ಳೆ ಮಿತವ್ಯಯದಿಂದ ಉಪಯೋಗಿಸಲಿಕ್ಕೆ ಅರಿತವನಾಗಿರಬೇಕು.

ಖಾದಿಯ ಪ್ರಚಾರಕರಿಗೆ ರಾಟಿಯನ್ನು ನೆಟ್ಟಗೆ ಮಾಡುವ, ಹಿಂಜುವ, ನೂಲುವ, ನೇಯುವ ಮುಂತಾದ ಕಲೆಗಳು ಅವಶ್ಯವಾಗಿ ಗೊತ್ತಿರಬೇಕಾಗುತ್ತದೆ. ದೊಡ್ಡ ಪ್ರಮಾಣದಿಂದ ಖಾದಿಯು ಉತ್ಪನ್ನವಾಗಬೇಕಾದರೆ ಪ್ರತಿಯೊಬ್ಬರು ಅಗತ್ಯವಾಗಿಯೂ ವಿನೋದಕ್ಕಾಗಿಯೂ ನೂಲಲೇಬೇಕು. ೫ ಜನರುಳ್ಳ ಒಂದು ಮನೆತನಕ್ಕೆ ದಿನಾಲು ನಾಲ್ಕಾರು ತಾಸು ೧ ಕೈರಾಟಿಯಿಂದ ನೂತರೆ ತೀರಿತು; ಅವರೆಲ್ಲರಿಗೂ ವರ್ಷ ಸಾಲುವಷ್ಟು ಬಟ್ಟೆಗಳು ಉತ್ಪನ್ನವಾಗುವವು. ಈ ಕೆಳಗಿನ ಅಂಕಿಗಳು ಬಹು ಮಹತ್ವದವಾಗಿವೆ.

(ಅ) ೫ ಜನರುಳ್ಳ ಒಂದು ಮನೆತನಕ್ಕೆ ವರ್ಷಕ್ಕೆ ೮೦ ಚೌರಸ ಯಾರ್ಡು ಬಟ್ಟೆಯು ಬೇಕಾಗುವದು; ಅಂದರೆ ತಿಂಗಳಿಗೆ ೬॥ ಚೌರಸ ಯಾರ್ಡು ಬೇಕು.

(ಬ) ೯॥ ಚೌ. ಯಾರ್ಡು ಬಟ್ಟೆಯನ್ನು ಸಿದ್ದಗೊಳಿಸಲಿಕ್ಕೆ ೧॥ ಪೌಂ. ನೂಲು ಬೇಕಾಗುತ್ತದೆ.

(ಕ) ಒಂದು ರಾಟಿಯು ದಿನಾಲು ಎರಡು ತಾಸು ದುಡಿದರೆ ೧ ತಿಂಗಳಿಗೆ ೧೫ ನಂಬರಿನ ೧॥ ಪೌಂಡು ನೂಲನ್ನು ನೂಲುವದು ಶಕ್ಯವಿದೆ.

ಆದುರಿಂದ ಪ್ರತಿಯೊಬ್ಬರು ತಮ್ಮ ಬಟ್ಟೆಗಳಿಗಾಗಿ ಅವಶ್ಯ ನೂಲಲೇಬೇಕು. ಕೈಮಗ್ಗಗಳನ್ನು ಆದಷ್ಟು ಕೈನೂಲಿನಿಲಿಂದಲೇ ಪ್ರೋತ್ಸಾಹಿಸಬೇಕು. ಹೀಗೆ ಮಾಡಿದ್ದಾದರೆ ಮರೆತುಹೋದ ಹಳೆ ಉದ್ಯೋಗಕ್ಕೆ ಪುನಃ ಜೀವನ ಕಳೆ ತುಂಬಿದಂತಾಗುತ್ತದೆ. ದಲಾಲಿ, ಭಾಂಡವಲ ಮುಂತಾದ ಅನಾವಶ್ಯಕ ಗೋಜಿಗೆ ಹೋಗುವದ್ದೇನೂ ಬೇಡ, ಮನೆಯಲ್ಲಿ ನೂಲುವ ಉದ್ಯೋಗವು ಒಮ್ಮೆ ನೆಲೆಗೊಂಡಿತೆಂದರೆ ಅದು ಕಡೆತನಕ ಬೇರೂರಿತೆಂದೇ ತಿಳಿಯಬೇಕು. ಜನರು ಆಲಸಿಗಳಾದುದರಿಂದಲೇ ನೂಲುವ ಕಲಿಯು ನಷ್ಟವಾಗಿ ಹೋಯಿತು.

ಬಟ್ಟೆಯ ಮಿತವ್ಯಯ

ಬಟ್ಟೆಯನ್ನು ಸಿದ್ಧಪಡಿಸಬೇಕಾದರೆ ಈ ಕೆಳಗಿನ ಸಲಕರಣೆಗಳು ಬೇಕಾಗುವವು. ಯಾವವೆಂದರೆ ಹತ್ತಿ ಅರೆಯುವ ಸಾಧನ, ಹಿಂಜಿವ ಬಿಲ್ಲು, ರಾಟಿ, ಕೈ ಮಗ್ಗ. ಈ ಸಾಧನಗಳಿಗನುವಾಗಿ ಹೊಲ ಮಾಡುವವ, ಹತ್ತಿ ಅರೆಯುವವ, ಹಿಂಜುವವ, ನೂಲುವವ, ನೇಯುವವ ಇವರ ಸಹಾಯವೂ ಬೇಕಾಗುತ್ತದೆ. ಈ ದೇಶದಲ್ಲಿ ಹತ್ತಿಯ ಬೆಳೆಯದೆ ಇದ್ದಂಥ ಸ್ಥಳಗಳು ತೀರ ಕಡಿಮೆಯಿರುತ್ತವೆ. ಹತ್ತಿ ಬೆಳೆಯದ ಪ್ರದೇಶಗಳು ಬೆಳೆಯುವ ಸ್ಥಳಗಳಿಂದ ಹತ್ತಿಯನ್ನು ದೊರಕಿಸಿಕೊಳ್ಳಬಹುದು.

ಬೆಳೆಯು ಚೆನ್ನಾಗಿ ಬಂದರೆ ೧ ಎಕರೆ ಭೂಮಿಗೆ ೨೦೦ ಪೌಂಡು ಅರಳೆಯು ಹೊರಡುವದು. ಆದರೆ ಹಿಂದುಸ್ಥಾನದಲ್ಲಿ ಸರಾಸರಿ ಒಂದು ಎಕರೆ ಭೂಮಿಗೆ ೧೦೦ ಪೌಂಡು ಅರಳೆಯು ಹ್ಯಾಗಾದರೂ ಹೊರಡುವದು. ಒಬ್ಬ ಮನುಷ್ಯನು ದಿನಾಲು ಹತ್ತು ಪೌಂಡು ಹತ್ತಿಯನ್ನು ಅರೆಯುವುದು ಶಕ್ಯವಿದೆ. ವರ್ಷಕ್ಕೆ ೩೦೦ ದಿವಸಗಳು ಕೆಲಸ ಮಾಡತಕ್ಕ ದಿವಸಗಳೆಂದು ತಿಳಿದರೂ ವರ್ಷದಲ್ಲಿ ೩೦೦ ಪೌಂಡು ಹತ್ತಿಯನ್ನು ಅರೆದಂತಾಗುವದು. ಇದೇ ಮೇರೆಗೆ ಒಬ್ಬ ಪಿಂಜಾರನು ವರ್ಷಕ್ಕೆ ೩೦೦ ಪೌಂಡು ಅರಳೆಯನ್ನು ಹಿಂಜುವನು.

ಪ್ರತಿ ದಿವಸ ನಾಲ್ಕೇ ತಾಸಿನಂತೆ ದುಡಿದರೆ ಒಬ್ಬ ಮನುಷ್ಯನು ೧೦ನೇ ನಂಬರಿನ ೫೦ ಪೌಂಡು ನೂಲನ್ನು ತೆಗೆಯುವನು. ಒಂದು ಮನೆತನದ ನೇಕಾರರು ೨೭ ಇಂಚು ಅಗಲಿನ ೨೫೦ ಪೌಂಡು ಅರಿವೆಯನ್ನು ದಿನಾಲು ನೆಯ್ಯುವನು.

ಪ್ರತಿಯೊಬ್ಬ ಮನುಷ್ಯನಿಗೆ ವರ್ಷಕ್ಕೆ ಸರಾಸರಿ ೧೦ ಪೌಂಡು ಅರಿವೆಯು ಸಾಕಾಗುತ್ತದೆ ತಿಳಿಯೋಣ. ಅಂದರೆ ೩೦೦ ಜೀವಿಗಳಿದ್ದ ೧ ಹಳ್ಳಿಗೆ ೩೦ ಎಕರೆ ಭೂಮಿಯನ್ನು ಹತ್ತಿಗಾಗಿ ಸಾಗುವಳಿ ಮಾಡಿದ್ದಾದರೆ ತೀರಿತು. ಒಬ್ಬ ಪಿಂಜಾರ, ಒಬ್ಬ ಹತ್ತಿ ಅರೆಯುವವ, ದಿನಾಲು ೪ ತಾಸು ಕೆಲಸ ಮಾಡುವ ೬೦ ಕೈರಾಟಿಗಳು, ಮತ್ತು ೪ ನೇಕಾರರ ಮನೆತನಗಳು ಇಷ್ಟಿದ್ದರೆ ಸಾಕು ಇದೇ ಮೇರೆಗೆ ದೊಡ್ಡ ಹಳ್ಳಿಗಳ ಹಾಗೂ ಪಟ್ಟಣಗಳ ಪ್ರಮಾಣದಿಂದ ಕೆಲಸವನ್ನು ಹೆಚ್ಚಿಸಬಹುದು.

೧ ಎಕರೆಗೆ ೧೦ ರೂಪಾಯಿಯಂತೆ ೩೦ ಎಕರೆ ಭೂಮಿಯನ್ನು ಸಾಗುವಳಿ ಮಾಡುವ ವೆಚ್ಚವು ೩೦೦ ರೂ. ಆಗುವದು. ೧ ಎಕರೆಗೆ ೨ ರೂ. ಯಂತೆ ಭೂಕಂದಾಯದ ವೆಚ್ಚವು ೬೦ ರೂ. ಆಗುವದು.

೩೦೦೦ ಪೌಂಡು ಅರಳೆಯನ್ನು ಹಿಂದೆ ಹಂಚಿ ಮಾಡುವ ವೆಚ್ಚವು ಪೌಂಡಿಗೆ ೨ ಅಣೆಗಳಂತೆ ಹಿಡಿದರೆ ೩೭೫ ರೂ. ಅಗುವದು ಅಷ್ಟೇ ಅರಳೆಯನ್ನು ನೂಲಲಿಕ್ಕೆ ೧ ಪಾಂಡಿಗೆ ೬ ಆಣೆಯಂತೆ ಹಿಡಿದರೆ ೧೧೨೫ ರೂ. ಆಗುವದು. ಅಷ್ಟೇ ನೂಲನ್ನು ಪೌಂಡಿಗೆ ೮ ಆಣೆಗಳಂತೆ ನೇಯುವ ಕೂಲಿಯು ೧೫೦೦ ರೂ. ಆಗುವದು. ಈ ಮೇರೆಗೆ :

ಸಾಗುವಳಿಯ ವೆಚ್ಚ	೩೦೦ ರೂ.
ಕಂದಾಯ	೬೦ ರೂ.
ಹಂಜಿ ಮಾಡಲಿಕ್ಕೆ	೩೭೫ ರೂ.
ನೂಲಲಿಕ್ಕೆ	೧೧೭೫ ರೂ.
ನೇಯಲಿಕ್ಕೆ	೧೫೦೦ ರೂ.

ಅಂತು ಒಟ್ಟು	೩೩೬೦ ರೂ. ಗಳು ಹತ್ತುವವು.

ನಾವು ಇಲ್ಲಿ ಹತ್ತಿ ಅರೆಯುವ ವೆಚ್ಚವನ್ನು ಬಿಟ್ಟುಬಿಡೋಣ. ಯಾಕೆಂದರೆ, ಅದು ಹತ್ತಿಕಾಳಿನ ವೆಚ್ಚದಲ್ಲಿ ಕೂಡಿಹೋಗುತ್ತದೆ. ಈ ಮೇರೆಗೆ ಒಂದು ಸಣ್ಣ ಹಳ್ಳಿಯು ೩೦೦೦ ಪೌಂಡು ಬಟ್ಟೆಯನ್ನು ಒಟ್ಟು ೩೩೬೦ ರೂ. ಗಳಲ್ಲಿ ದೊರಕಿಸುತ್ತದೆ. ಇದರಿಂದ ೧ ಪೌಂಡು ಅರಿವೆಗೆ ೧ ರೂ. ೪ ಆ. ಬೀಳುವದು.

ಸ್ವಲ್ಪ ಸಾಹಸಿಯಾದ ಮನುಷ್ಯನು ಈ ಕೆಲಸಗಳಿಗಾಗಿ ಪ್ರತಿದಿನ ಎರಡು ತಾಸುಗಳನ್ನು ವೆಚ್ಚ ಮಾಡಿದ್ಧಾದರೆ ಹತ್ತಿಗೆ ಎಷ್ಟು ಕೊಡಬೇಕಾಗುತ್ತದೆಯೋ ಅಷ್ಟೇ ಹಣದಿಂದ ಬಟ್ಟೆಯು ದೊರೆಯುತ್ತದೆ. ಸ್ವಲ್ಪ ನಯವುಳ್ಳ ಬಟ್ಟೆಗಳು ಬೇಕಾಗಿದ್ದರೆ ನೂಲುವ ಮತ್ತು ನೇಯುವ ಕೂಲಿಯನ್ನು ಸ್ವಲ್ಪ ಹೆಚ್ಚಿಸಬೇಕಾಗುತ್ತದೆ. ಇದಲ್ಲದೆ ರಾಟಿಗಳ ಹಾಗೂ ಕೈಮಗ್ಗಗಳ ಸಂಖ್ಯೆಯನ್ನು ಬೆಳೆಯಿಸಬೇಕಾಗುತ್ತದೆ. ಇದರಿಂದ ಉತ್ಪನ್ನವಾದ ಬಟ್ಟೆಯು ಇವುಗಳ ಪ್ರಮಾಣದಿಂದ ಕಿಮ್ಮತ್ತುಳ್ಳದ್ದಾಗುತ್ತದೆ.

೧೯೨೧ ನೇಯ ವರ್ಷದಿಂದ ಹಿಡಿದು ಬಟ್ಟೆಗಳ ಗುಣಧರ್ಮಗಳು ಹೆಚ್ಚಾಗಿ ಬೆಳೆದು ಕಿಮ್ಮತ್ತು ಅಗ್ಗವಾಗಹತ್ತಿರುವದು. ಆದುದರಿಂದ ಮೇಲೆ ತೋರಿಸಿದ ಅಂಕಿಗಳಲ್ಲಿ ಬಹಳೇ ವ್ಯತ್ಯಾಸ ಕಂಡುಬರುತ್ತಿದೆ. ಸಣ್ಣ ಪ್ರಮಾಣದಿಂದ ಅಲ್ಲಲ್ಲಿ ಸಿದ್ಧವಾಗುವ ಪದಾರ್ಥಗಳು ಎಷ್ಟು ಕ್ಷೇಮಕರವಾಗಿರುವೆಂಬುದನ್ನು ಹಿಂದುಸ್ಥಾನವು ಪ್ರತ್ಯಕ್ಷ ತೋರಿಸಿ ಕೊಡುತ್ತದೆ.

ಒಂದು ಮನೆತನಕ್ಕೆ ಸಾಕಾಗುವ ಬಟ್ಟೆಯು

ಕೈರಾಟಿಯು ನೂಲು ಗಿರಣಿಯ ನೂಲಿಗಿಂತಲೂ ಹೆಚ್ಚು ಒರಟಾಗಿರುವದು. ನೂಲುಗಾರರಿಗ ರೂಢಿ ಬಿದ್ದರೆ ಉತ್ಕೃಷ್ಟವಾದ ನೂಲನ್ನು ಶಂಕೆಯಿಲ್ಲದೆ ತೆಗೆಯುವರು. ಆದರೆ ಕೈರಾಟಿಯಿಂದ ಸರಾಸರಿ ೧೦ ನಂಬರಿನ ನೂಲಂತೂ ಹೊರಟೇಹೊರಡುವದು. ಹಿಂದುಸ್ತಾನದ ಗಿರಣಿಗಳಲ್ಲಿ ೧೧ ರಿಂದ ೨೦ ನಂಬರಿನವರೆಗೆ ನೂಲು ಹೊರಡುವದು.

ಐದು ಜನರಿರುವ ಒಂದು ಮನೆತನಕ್ಕೆ ಯಾರಾದರೂ ಒಬ್ಬರು ದಿನಾಲು ಎರಡು ತಾಸು ನೂತರೆ ಸಾಕು. ಎಲ್ಲರ ಬಟ್ಟೆಗಳಿಗೂ ಆ ನೂಲು ಸಾಲುವದು. ಪ್ರತಿಯೊಂದು ಮನೆತನದ ವ್ಯಕ್ತಿಗೆ ೧೨ ವಾರದಂತೆ ಹಿಡಿದರೆ ಒಟ್ಟು ೫ ಮಂದಿಗೆ ೬೦ ಯಾರ್ಡು ಬೇಕಾಗುತ್ತದೆ. ಪ್ರತಿತಿಂಗಳಿಗೆ ೫ ಯಾರ್ಡು ಅರಿವೆಯು ಸಾಕು. ೧೦ ನಂಬರಿನ ಒಂದು ಯಾರ್ಡು ಅರಿವೆಯ ತೂಕವು ೫ ಔಂಸ ಎಂದು ತಿಳಿದರೆ ೫ ಯಾರ್ಡಿನ ತೂಕವು ೨೫ ಔಂಸ ಆದಂತಾಯಿತು. ತಿಂಗಳಲ್ಲಿ ೨೫ ದಿವಸವೇ ಕೆಲಸ ಮಾಡಿದರೂ ಪ್ರತಿದಿವಸ ೧ ಔಂಸು ನೂಲನ್ನು ಧಾರಾಳವಾಗಿ ತೆಗೆಯಬಹುದು. ಒಂದು ಔಂಸಿಗೆ ೨॥ ತೊಲಿಯಾದರೆ ಪ್ರತಿದಿವಸ ೨॥ ತೊಲಿಯನ್ನು ತೆಗೆಯಲು ಅಡ್ಡಿಯಿಲ್ಲ. ಒಂದು ತೊಲಿಗೆ ೧೦ ನಂಬರಿನ ೨೧೦ ಯಾರ್ಡು ಆದರೆ ೧॥ ತೊಲಿಗೆ ೫೩೦ ಯಾರ್ಡನ್ನು ನೂಲಲಿಕ್ಕೆ ಹೆಚ್ಚು ಕಡಿಮೆ ೨ ತಾಸುಗಳು ಹತ್ತುವವು. ಹಿಂಜುವ ಕೆಲಸ ಮಾಡಲಿಕ್ಕೆ ಅರ್ಧ ತಾಸು ಹಿಡಿದರೂ ಒಟ್ಟು ದಿವಸಕ್ಕೆ ೨॥ ತಾಸು ಕೆಲಸ ಮಾಡಿದರೆ ತೀರಿತು.

ಪ್ರತಿಯೊಂದು ಮನೆತನದವರು ಸ್ವಲ್ಪ ಮನಸ್ಸಿನ ಮೇಲೆ ತೆಗೆದುಕೊಂಡು ಗಿರಣಿಗಳಿಂದ ವಿಮುಕ್ತವಾಗಲಿಚ್ಛಿಸಿದರೆ ದಿನಕ್ಕೆ ಎರಡು ತಾಸದರೂ ನೂತೇ ತೀರಬೇಕು. ಮನೆಯಲ್ಲಿ ಒಬ್ಬ ಸಹೋದರಿಯು ಈ ಕೆಲಸವನ್ನು ಕೈಕೊಂಡು ಅಷ್ಟಷ್ಟು ನೆರವಾದರೆ ಬಹು ಸುಲಭವಾಗಿ ಈ ಕಾರ್ಯ ಸಾದಿಸುವದು. ಇಲ್ಲಿಯವರೆಗೆ ಸರ್ವಸಾಧಾರಣ ಮನೆತನದ ಬಗ್ಗೆ ವಿಚಾರಿಸಿದ್ಧಾಯಿತು. ಇನ್ನು ನಗರಗಳಲ್ಲಿ ವಾಸಿಸುವಂಥ ಶ್ರೀಮಂತರು ವೆಗ್ಗಳವಾಗಿ ಬಟ್ಟೆಗಳನ್ನು ಉಪಯೋಗಿಸುತ್ತಿರುವದರಿಂದ ಗಿರಣಿಗಳಿಂದ ಬಿಡುಗಡೆ ಹೊಂದಲು ಪ್ರತಿಯೊಬ್ಬರು ದಿನಾಲು ಅರ್ಧ ತಾಸು ನೂತರೇ ತೀರಿತೆಂದು ಭಾವಿಸಲಾಗದು. ದೇಶದಲ್ಲಿ ಎಂಥ ಮನೆತನವಾದರೂ ೬೦ ಯಾರ್ಡಿಗಿಂತ ಹೆಚ್ಚಿಗೆ ಬಟ್ಟೆಯನ್ನು ಉಪಯೋಗಿಸುವದಿಲ್ಲ. ೧ ಯಾರ್ಡಿಗೆ ೮ ಆಣೆ ಹಿಡಿದರೂ ೬೦ ಯಾರ್ಡಿಗೆ ೩೦ ರೂ. ಗಳಾಗುವವು.

ಈಗ ಪ್ರತಿಯೊಂದು ಮನೆತನವು ಬಟ್ಟೆಗಾಗಿ ವರ್ಷಕ್ಕೆ ೩೦ ರೂ. ವೆಚ್ಚ ಮಾಡುವದು ಬಹು ದುಸ್ತರವಾದದ್ದೆಂದು ಎಲ್ಲರಿಗೂ ತಿಳಿದ ಮಾತಾಗಿದೆ. ಪ್ರತಿಯೊಬ್ಬ ೧೨-೧೩ ಯಾರ್ಡು ಹಿಡಿದರೆ ಅದರಲ್ಲಿ ಸಿರಿವಂತಿಗೆಯ ಎಲ್ಲ ಅಂದಚೆಂದಗಳು ಬಂದು ಹೋಗುತ್ತವೆ. ಖಾದಿಯ ಬಟ್ಟೆಯಿಂದಲೇ ವಿಧೇಸಿ ಬಟ್ಟೆಯನ್ನು ಬಹಿಷ್ಕರಿಸುವದೂ ದೇಶದ ಎಲ್ಲ ಜನತೆಯನ್ನು ಅಚ್ಛಾದಿಸುವದೂ ಬಹು ಸುಲಭವಾದದ್ದಾಗಿದ್ದರೂ ಅದರ ಮಹತ್ವದ ಕಡೆಗೆ ಇನ್ನೂ ನಮ್ಮ ಲಕ್ಷವು ಹೋಗದಿರುವದು ಪರಮಾಶ್ಚರ್ಯವು.

❖❖

೮ನೆಯ ಪ್ರಕರಣ

ಖಾದಿಯ ಪವಿತ್ರತೆ

ಖಾದಿಯ ಬಟ್ಟೆಯನ್ನು ಪುನಃ ಪ್ರಚಾರದಲ್ಲಿ ತಂದವರು ಮಹಾತ್ಮಾ ಗಾಂಧಿಯವರು, ಆದುದರಿಂದ ಅದಕ್ಕೆ ಗಾಂಧಿ ಬಟ್ಟೆಯೆಂದು ಅನೇಕರು ಹೇಳುತ್ತಿರುವರು. ಮೊದಲು ಇದಕ್ಕೆ ಕೊಡೆಯ ಅರಿವೆಯೆಂತಲೂ ಚೊಣ್ಣದ ಅರಿವೆ ಎಂತಲೂ ಬೇರೆ ಬೇರೆ ಕಡೆಗಳಲ್ಲಿ ಒಂದೊಂದು ಹೆಸರಿದ್ದಿತು. ಕೈನೂಲಿನ ಬಟ್ಟೆಗೆ ಗುಜರಾತಿ ಭಾಷೆಯಲ್ಲಿ ಖಾದಿ ಎಂದು ಹೇಳುತ್ತಾರೆ. ಮಹಾತ್ಮಾ ಗಾಂಧಿಯವರು ಗುಜರಾತಿಗಳಾಗಿರುವುದರಿಂದ ಅವರು ಹೇಳಿದ ಹೆಸರೇ ಎಲ್ಲ ಕಡೆಯಲ್ಲಿಯೂ ಪ್ರಚಾರದಲ್ಲಿ ಬಂದಿತು.

ಮಹಾತ್ಮಾ ಗಾಂಧಿಯವರ ಅನೇಕ ತತ್ವಗಳು ಈ ಖಾದಿಯಲ್ಲಿ ಅಡಕವಾಗಿವೆ. ಮಹಾತ್ಮರು ಸತ್ಯಾಗ್ರಹಿಗಳು. ಅವರ ಸತ್ಯ, ಅಹಿಂಸಾದಿ ಗುಣಗಳು ಖಾದಿಯನ್ನು ಧರಿಸುವದರಿಂದ ಆಚರಣೆಯಲ್ಲಿ ಬರಲು ಅವಕಾಶವಾಗುತ್ತದೆ. ಫ್ರಾನ್ಸದೇಶದ ಮಹಾತತ್ವಜ್ಞಾನಿಗಳಾದ ಪಾಲ್ ರಿಚರ್ಡರವರು ಮಹಾತ್ಮಾ ಗಾಂದೀಯವರನ್ನು ಮುಂದಿನ ಸತ್ಯಯುಗದ ಮೂಲಪುರುಷರೆಂದು ತಿಳಿಯುತ್ತಾರೆ. ರಸಾಯನ ಶಾಸ್ತ್ರದಲ್ಲಿ ಜಗಪ್ರಸಿದ್ಧರಾದ ಕಲಕತ್ತೆಯ ಪ್ರಪುಲ್ಲಚಂದ್ರರಾಯರು ಗಾಂಧಿಯವರನ್ನು ದೀನೋದ್ಧಾರಕರೆಂದು ತಿಳಿದಿದ್ದಾರೆ. ಆದುದರಿಂದ ಅವರಿಗೆ ಖಾದಿಯಲ್ಲಿಯೇ ಬಡವರ ಭಾಗ್ಯವಿದೆಯೆಂದು ತೋರುತ್ತಲಿದೆ. ರಾಷ್ಟ್ರೀಯ ಸಭೆಯ ಮುಖಂಡಿರಿಗೆ ಮಹಾತ್ಮರು ಸ್ವರಾಜ್ಯ ಸಂಸ್ಥಾಪಕರರಂತೆ ಕಾಣುತ್ತಾರೆ. ಅವರಿಗೆ ಖಾದಿಯಿಂದಲೇ ಸ್ವರಾಜ್ಯ ದೊರೆಯುತ್ತದೆಂಬ ನಂಬಿಗೆಯಿದೆ.

ಪರೋಪಕಾರವೇ ಪುಣ್ಯ; ಪರಪೀಡೆಯೇ ಪಾಪ. ಇದೇ ಎಲ್ಲಾ ಧರ್ಮಗಳ ಸಾರವಷ್ಟೇ ಆದುದರಿಂದ ನಮ್ಮ ಪ್ರತಿಯೊಂದು ಕಾರ್ಯದಲ್ಲಿಯೂ ಅನ್ಯಪ್ರಾಣಿಗಳಿಗೆ ಉಪಕಾರವಾಗುತ್ತದೆಯೋ ಅಥವಾ ಅಪಕಾರವಾಗುತ್ತದೆಯೋ ಎಂಬುದನ್ನು ನಾವು ನೋಡಲೇಬೇಕು. ನಮ್ಮ ನಡತೆಯು ಪರಪೀಡೆಗೆ ಕಾರಣವಾಗುವ ಪಕ್ಷದಲ್ಲಿ ಅದು ಪಾಪಾಚರಣೆಯೆಂದು ದಾರಾಳವಾಗಿ ತಿಳಿಯಬೇಕಲ್ಲವೇ?

ಸಮಾನ್ಯವಾದ ಈ ತತ್ವವನ್ನುಸರಿಸಿ ಬಟ್ಟೆಯ ವಿಷಯದಲ್ಲಿಯೂ ಯೋಚಿಸೋಣ. ಯಂತ್ರಗಳಿಂದಾಗುವ ಬಟ್ಟೆಗೂ ಕೈಯಿಂದಾಗುವ ಈ ಖಾದಿಗೂ ಇರತಕ್ಕ ಪಾಪಪುಣ್ಯೆಗಳ ವ್ಯತ್ಯಾಸವನ್ನು ನೋಡಿರಿ. ಬೆಂಕಿ ಅಥವಾ ಉಷ್ಣತೆಯ ಸಹಾಯವಿಲ್ಲದೆ ಯಂತ್ರ ನಡೆಯುವದಿಲ್ಲ. ಆದಕಾರಣ

ಯಂತ್ರಗಳ ಚಲನೆಗಾಗಿ ಪ್ರಖರವಾದ ಉಷ್ಣತೆಯನ್ನುಂಟು ಮಾಡಬೇಕಾಗುತ್ತದೆ. ಅದರಿಂದ ವಾತಾವರಣದಲ್ಲಿರುವ ಅನೇಕ ಪ್ರಾಣಿಗಳು ಸಾಯುತ್ತವೆ. ಈ ಪ್ರಕಾರ ಆರಂಭದಲ್ಲಿಯೇ ಹಿಂಸೆಯು ಪ್ರಾರಂಭವಾಯಿತು.

ಸಾವಿರಾರು ಬಡಹೆಂಗಸರು ಮತ್ತು ಗಂಡಸರು ಸ್ವಲ್ಪೂ ತೆರಪಿಲ್ಲದಂತೆ ಆ ಯಂತ್ರಾಲಯಗಳ ಕೆಟ್ಟ ಹವೆಯಲ್ಲಿ ದುಡಿದು ದುಡಿದು ಹಣ್ಣಾಗಿ ಹೋಗುತ್ತಾರೆ. ಬಟ್ಟೆಯ ಕಾರ್ಯಾಲಯಗಳಿಂದ ಈ ಕೂಲಿಕಾರರು ಕೆಲಸ ಮಾಡಿ ತಂಡ ತಂಡವಾಗಿ ಬರುತ್ತಿರುವಾಗ ಅವರು ಎಂಥ ದೀನಸ್ಥಿತಿಯಲ್ಲಿರುತ್ತಾರೆಂಬುದನ್ನು ನೋಡಿರಿ. ಅದರಲ್ಲಿ ಅನೇಕರು ವ್ಯಭಿಚಾರಾದಿ ನಾನಾ ದುರಾಚಾರಗಳಿಗೂ, ರೋಗಗಳಿಗೂ, ಅಪಾಯಗಳಿಗೂ ಈಡಾಗಿ ಬಳಲಬೇಕಾಗುತ್ತದೆ. ಬಸಿದು ಹೆಣ್ಣುಮಕ್ಕಳು ಕೂಡ ಬಹು ಕಷ್ಟಪಟ್ಟು ದುಡಿಯಬೇಕಾಗುತ್ತದೆ. ಮಕ್ಕಳಿಗೆ ಮಲೆಯುಣಿಸುವದಕ್ಕೆ ಕೂಡ ಸರಿಯಾದ ಕಾಲ ದೊರೆಯುವದಿಲ್ಲ. ಈ ಪ್ರಕಾರ ಕೂಲಿಕಾರರು ನಾನಾ ಕಷ್ಟಗಳನ್ನನುಭವಿಸಿದಾಗಲೇ ಯಂತ್ರಗಳಿಂದ ಬಟ್ಟೆಯಾಗುತ್ತದೆ.

ಈ ಪ್ರಕಾರ ಪರಹಿಂಸೆಯಿಂದುಂಟಾಗುವ ಆ ಯಂತ್ರಗಳ ಬಟ್ಟೆಗೆ ಪಾಪವು ಅಂಟಿಕೊಂಡಿರುತ್ತದೆ. ಅಂಥ ಬಟ್ಟೆಯನ್ನು ಹಾಕಿಕೊಳ್ಳುವದರಿಂದ ಅವರು ಆ ಪಾಪಕಾರ್ಯಕ್ಕೆ ಸಹಾಯವನ್ನು ಪ್ರೋತ್ಸಾಹವನ್ನೂ ಮಾಡಿದಂತಾಗುವದು.

ಈ ಖಾದಿಗಾದರೋ ಅಂಥ ಪಾಪವು ತಟ್ಟುವದೇ ಇಲ್ಲ. ಕೈರಾಟಿಯಲ್ಲಿ ಹಿಂಸೆಯು ಸಂಭವಿಸುವದೇ ಇಲ್ಲ. ಮತ್ತು ನೂಲುವವರು, ತಮ್ಮ ತಮ್ಮ ಮನೆಗಳಲ್ಲಿ ಶಾಂತ ವಾತಾವರಣದಲ್ಲಿ ಕುಳಿತುಕೊಂಡು ತಮ್ಮ ಇಷ್ಟದಂತೆ ಕೆಲಸ ಮಾಡುತ್ತಿರುತ್ತಾರೆ. ಅನಾಚಾರಗಳಿಗೂ ಅಪಾಯಗಳಿಗೂ ಅವಕಾಶವೇ ಇಲ್ಲ. ಆದಕಾರಣ ಬಟ್ಟೆಯ ಸಂಬಂದವಾದ ಪರಪೀಡೆಯ ಪಾಪವು ನಮಗೆ ತಟ್ಟಬಾರದೆಂದು ಈ ಖಾದಿಯನ್ನುಪಯೋಗಿಬೇಕು. ಕೊಲೆ ಸುಲಿಗೆ ಮಾಡಿ ತಂದ ಹಣದಿಂದ ಪಕ್ವಾನ್ನ ಮಾಡಿಸಿ ಅದನ್ನುಂಡವರು ಪಾಪಿಯಲ್ಲವೇ? ಕಳ್ಳನು ಕದ್ದುತಂದ ಒಡವೆಯನ್ನು ಕೊಳ್ಳುವವನು ಅಪರಾಧಿಯಲ್ಲವೇ? ಅದರಂತೆಯೇ ಅನ್ಯಾಯ ಹಿಂಸೆಗಳನ್ನೊಳಗೊಂಡ ಗಿರಣಿ ಬಟ್ಟೆಯು ಪಾಪಕೃತ್ಯಗಳಿಗೆ ಸಹಾಯವನ್ನೂ ಪ್ರೋತ್ಸಾಹವನ್ನು ಮಾಡಿದಂತಾಗಲಿಲ್ಲವೇ?

ಮಹಾತ್ಮಾ ಗಾಂಧಿಯವರ ಸತ್ಯಾಗ್ರಹ ವ್ರತಗಳಲ್ಲಿ ಸ್ವಧೇಶಿ ಎಂಬುದೊಂದು ವ್ರತವಾಗಿದೆ. ಈ ಖಾದಿಯು ಆ ಸ್ವದೇಶಿ ವ್ರತಕ್ಕೆ ಸೇರಿದ್ದಾಗಿದೆ. ಮಹಾತ್ಮರು ಸ್ವದೇಶಿ ವ್ರತದಲ್ಲಿ ವಿವರಿಸುವದೇನೆಂದರೆ "ಯಾಂತ್ರಿಕ ಕಾರ್ಯಗಳಿಂದ ಹಿಂಸೆಯು ಸಂಭವಿಸುವ ಕಾರಣ ಕೇವಲ ಕೈಯಿಂದಾದ ಸ್ವದೇಶಿ ಪದಾರ್ಥಗಳನ್ನೇ ಉಪಯೋಗಿಸಬೇಕು."

ಇದಲ್ಲದೆ ಶೀಖಮತದ ಒಬ್ಬ ಸಭ್ಯಗೃಹಸ್ಥನ ಪ್ರಶ್ನೆಗೆ "ರಾಮ ಮತ್ತು ರಹೀಮ" ಎಂಬ ಲೇಖನದಲ್ಲಿ ಮಹಾತ್ಮಾ ಗಾಂಧಿಯವರು ಹೇಳಿರುವದೇನೆಂದರೆ "ನಾವು ಎಲ್ಲಿಯವರೆಗೂ ಪರದೇಶಿ ಬಟ್ಟೆಯನ್ನು ತೆಗೆದು ಹಾಕಿಲ್ಲವೋ ಅಲ್ಲಿಯವರೆಗೂ ನಾವು ಪರಮಾತ್ಮನ ಅಥವಾ ಖುದಾನ ನಾಮಸ್ಮರಣೆಯನ್ನು ಈ ದೇಶದಲ್ಲಿ ಮಾಡಲು ಪಾತ್ರರಾಗಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ. ಏಕೆಂದರೆ, ಕೇವಲ ಶಬ್ದೋಚ್ಚಾರದಿಂದಲೇ ಸ್ವರ್ಗಪ್ರಾಪ್ತಿಯಾಗುತ್ತದೆಂದು ನಾನು ತಿಳಿಯುವದಿಲ್ಲ. ಆ ನಾಮಸ್ಮರಣೆ ಮಾಡಬೇಕಾದರೆ ಅಂಥ ಯೋಗ್ಯತೆಯೂ ಬೇಕಾಗುತ್ತದೆ."

"ಎರಡನೆಯವರ ಕತ್ತನ್ನು ಕತ್ತರಿಸುವ ಮನುಷ್ಯರು ರಾಮ ನಾಮವನ್ನು ಉಚ್ಚರಿಸುತ್ತಿದ್ದರೆ ಆತನು ಶ್ರೀರಾಮನಿಗೆ ಅವಮಾನವನ್ನು ಮಾಡುತ್ತಿದ್ಧಾನೆಂದು ತಿಳಿಯಬೇಕು. ಇದರಂತೆಯೇ ಒಬ್ಬ ಭಾರತೀಯನು ನೇಯ್ದು ಮಾಡಿದ ಬಟ್ಟೆಯನ್ನು ಬಿಟ್ಟು ಬಹು ದೂರದಿಂದ ತನಗೆ ಬೇಕಾಗುವ ಬಟ್ಟೆಗಳನ್ನೆಲ್ಲ ತರಿಸಿಕೊಂಡರೆ ಆತನು ತನ್ನ ಬಂಧುವಿನ ಕುತ್ತಿಗೆಯನ್ನು ಕತ್ತರಿಸುವಂತೆಯೇ ಸರಿ. ಆದುದರಿಂದ ಅಂಥವನಿಗೆ ರಾಮನಾಮೋಚ್ಚಾರಣೆಯ ಯೋಗ್ಯತೆಯು ಇಲ್ಲವೇ ಇಲ್ಲ."

ಖಾದಿಯ ವಿಷಯವಾಗಿ ಗಾಂಧಿಯವರು ಈ ಪ್ರಕಾರ ಅನೇಕ ರೀತಿಗಳಿಂದ ಹೇಳಿದ್ಧಾರೆ. ಅವುಗಳ ಮೇಲಿಂದ ಖಾದಿಯನ್ನು ಧರಿಸುವವರು ಧಾರ್ಮಿಕ ಪವಿತ್ರಾಚರಣೆಯೆಂದೇ ಅವರ ಅಭಿಪ್ರಾಯವೆಂಬುದು ಸ್ಪಷ್ಟವಾಗುತ್ತದೆ.

ಮಹಾತ್ಮಾ ಗಾಂಧಿಯವರು ಧರ್ಮಸ್ಥಾಪಕರ ಪ್ರಾಚೀನ ಆಚಾರಗಳನ್ನೇ ತಾವು ಆಚರಿಸುವುದಲ್ಲದೆ ನಮ್ಮ ಆಚರಣೆಯಲ್ಲಿಯೂ ಬರಲೆಂದು ಪ್ರಯತ್ನಿಸುತ್ತಿದ್ಧಾರೆ. ಈಗಿನಂತೆ ಪ್ರಾಚೀನ ಕಾಲದಲ್ಲಿ ಗಿರಣಿಯಿಂದ ಬಟೆಯಾಗುತ್ತಿರಲಿಲ್ಲ. ಆದುದರಿಂದ ಧರ್ಮಶಾಸ್ತ್ರಜ್ಞರು ಇಂಥ ಬಟ್ಟೆಯನ್ನು ನಿಷೇಧಿಸುವ ಸಂಭವವೇ ಇರಲಿಲ್ಲ. ಆದರೂ ಬಟ್ಟೆಯ ವಿಷಯದಲ್ಲಿ ಎಷ್ಟೋ ನಿರ್ಬಂದಗಳಿದ್ದಂತೆ ಸ್ಪಷ್ಟವಾಗಿ ಗೊತ್ತಾಗುತ್ತಲಿದೆ. ಇಂಥ ವಸ್ತ್ರವನ್ನೇಧರಿಸಬೇಕೆಂದು ಯಾವ ಧರ್ಮದಲ್ಲಿಯೂ ಕಟ್ಟಳೆಯಿಲ್ಲವೆಂದು ನೀವು ತಿಳಿದಿರುವಿರಷ್ಟೇ ಇದು ನಿಮ್ಮ ತಪ್ಪು ತಿಳುವಳಿಕೆಯು. ಏಕೆಂದರೆ, ವೀರಶೈವ ಮತದ ೬೪ ಶೀಲಗಳಲ್ಲಿ ೨೧ನೆಯ ಶೀಲವು ಈ ಪ್ರಕಾರವಿದೆ:

"ನೂತ ನೂಲಿನಿಂದ ಕೊಂಬಿನ ಲಾಳಿಯಂ ಮುಟ್ಟಿಸದೆ ಲಿಂಗವಂತರಿಂದೆ ರುಚಿತರಮಾದ ಪೊದಿಕೆಯಂ ನೇಯಿಸಿಕೊಳ್ಳದೆ ನಿರಂತರದೊಳಿರ್ಪತ್ತೊಂದನೆಯ ಶೀಲ"– ಸೋಮೇಶ್ವರ ಪುರಾಣ, ೨ನೆಯ ಸಂಧಿ.

ವೀರಶೈವರು ನೂತು ನೇಯ್ದು ಮಾಡಿದ ಬಟ್ಟೆಯನ್ನೇ ವೀರಶೈವರು ಉಪಯೋಗಿಸಬೇಕೆಂದು ಹೇಳುರುವದನ್ನು ನೋಡಿದರೆ ಧರ್ಮಾಚಾರಣೆಗಳಲ್ಲಿಯೂ ಇಂಥ ವಸ್ತ್ರವನ್ನೇ ಧರಿಸಬೇಕೆಂಬ ಕಟ್ಟಳೆಯುಂಟೆಂದು ಗೊತ್ತಾಗುವದಿಲ್ಲವೇ? ಈ ದೇಶದ ಅನೇಕ ಸದಾಚಾರಶೀಲರು ರೇಶ್ಮೆಯ ಬಟ್ಟೆಯನ್ನುಪಯೋಗಿಸುವದಿಲ್ಲ. ಏಕೆಂದರೆ, ಅದು ಪ್ರಾಣಹಿಸೆಯಿಂದುಂಟಾಗುತ್ತದೆ. ಇದರಂತೆಯೇ ಚರ್ಮದ ಸಾಮಾನುಗಳನ್ನೂ ಚರ್ಮ ಮಿಶ್ರವಾದ ಟೊಪ್ಪಿಗೆ ಮೊದಲಾದ ಉಡುಪುಗಳನ್ನೂ ಆಚಾರಶೀಲರಾದ ಅನೇಕ ಜನಗಳು ಉಪಯೋಗಿಸುವದಿಲ್ಲ. ಏಕೆಂದರೆ ಚರ್ಮವು ಹಿಂಸಾಮೂಲಕ ಬರುವ ಸಂಭವವಿದೆ. ಇಷ್ಟೇ ಅಲ್ಲ ಚರ್ಮದ ಉಪಯೋಗವು ಹೆಚ್ಚಾದಂತೆ ಪ್ರಾಣಹಿಂಸೆಯು ಕೂಡ ಹೆಚ್ಚುತ್ತದೆ. ಆ ಪ್ರಾಣಹಿಂಸೆಗೆ ಕಾರಣರಾಗಬಾರದೆಂದೇ ಅವು ಅಪವಿತ್ರವಾದ ಪದಾರ್ಥಗಳೆಂದು ಪ್ರಾಚೀನರು ಗೊತ್ತುಮಾಡಿದ್ದಾರೆ. ಇದು ನಮ್ಮ ಭಾರತೀಯರ ವಿಚಾರಸರಣಿಯು.

ಆದರೆ ಯುರೋಪಖಂಡಲ್ಲಿ ಅಸಂಖ್ಯ ಸ್ತ್ರೀಯರು ತಮ್ಮ ಉಡುಪು ಮನೋಹರವಾಗಿ ಕಾಣಬೇಕೆಂಬ ಉದ್ದೇಶದಿಂದಲೇ ಚಿಕ್ಕ ಚಿಕ್ಕ ಹಕ್ಕಿಗಳನ್ನು ಕೊಂದು ಅವುಗಳ ರೆಕ್ಕೆಗಳಿಂದ ತಮ್ಮ ಉಡುಪನ್ನಲಂಕರಿಸಿಕೊಳ್ಳುತ್ತಿರುವರು. ಚರ್ಮವಂತರೂ ಆ ಜನಗಳಿಗೆ ಅಪವಿತ್ರವಾದುದಲ್ಲವೇ ಅಲ್ಲ, ಇಂಥ ಪಾಶ್ಚಾತ್ಯ ವಿಚಾರಗಳೇ ಯಾರ ತಲೆಯಲ್ಲಿ ತುಂಬಿವೆಯೋ ಅವರಿಗೆ ಯಾಂತ್ರಿಕ ಬಟ್ಟೆಯಲ್ಲಿ ಹಿಂಸಾಯುಕ್ತವಾದ ಪಾಪವಿದೆಯೆಂಬುದು ಹೇಗೆ ತಾನೇ ಗೊತ್ತಾವುದು?

ಹಣವನ್ನುಳಿಸಿಕೊಳ್ಳಬೇಕೆಂದು ಪಾಪವನ್ನು ಸಂಗ್ರಹಿಸುವದು ಧರ್ಮವಲ್ಲ, ಮಿಲ್ಲುಗಳಲ್ಲಾದ ಬಟ್ಟೆಯು ಅದು ಸ್ವದೇಶದ್ದಾಗಿದ್ದರೂ ಅದನ್ನು ಬಿಟ್ಟು ಪವಿತ್ರವಾದ ಪರದೇಶದ ಖಾಧಿಯನ್ನುಪಯೋಗಿಸುವದು ಧರ್ಮವಾಗಿದೆ. ಆದರೆ ಸ್ವದೇಶದಲ್ಲಿ ಇಂಥ ಖಾದಿಯೂ ದೊರೆಯುತ್ತಿದ್ದರೆ ಅದನ್ನು ಬಿಟ್ಟು ಪರದೇಶದ ಖಾದಿಯನ್ನುಪಯೋಗಿಸುವದು ಮಾತ್ರ ಧರ್ಮವಲ್ಲ. ಹಾಗೆ ಮಾಡಿದರೆ ಆ ಉದ್ಯೋಗವನ್ನು ಮಾಡುತ್ತಿರುವ ನಮ್ಮ ದೇಶಭಾಂದವರ ಹೊಟ್ಟೆಯ ಮೇಲೆ ಹೊಡೆದ ಪಾಪವು ನಮಗೆ ಖಂಡಿತವಾಗಿಯೂ ತಗಲುವದು. ಇದು ಸ್ವದೇಶ ಪರದೇಶಗಳ ಪ್ರಶ್ನೆಯಿಲ್ಲ. ಪುಣ್ಯಪಾಪಗಳ ಪ್ರಶ್ನೆಯಾಗಿದೆ.

ಆದುದರಿಮದ ಪರಹಿಂಸೆಯ ಪಾಪವೆಂತಲೂ, ಅಹಿಂಸೆಯೇ ಪರಮ ಧರ್ಮವೆಂತಲೂ ಯಾರು ನಂಬಿದ್ದಾರೆಯೋ ಅಂಥವರು ಇದನ್ನರಿತಮೆಲೆ ಮಿಲ್ಲಿನ ಬಟ್ಟೆಯನ್ನು ಅರಗಳಿಗೆಯಾದರೂ ಮೈಮೆಲೆ ಹಾಕಿಕೊಳ್ಳಲಾರರು. ಬಡಕೂಲಿಕಾರರ ರಕ್ತವನ್ನೇ ಹೀರುತ್ತಿರುವ ಆ ಮಿಲ್ಲಿನ ಬಟ್ಟೆಗಳಿಗೆ ತಿಲಾಂಶವಾದರೂ ಆಶ್ರಯವನ್ನು ಕೊಡಲಾರರು. ಅಸಂಖ್ಯ ಕೂಲಿಕಾರರ ನಾನಾ ಕಷ್ಟಗಳಿಗೆ ಕಾರಣವಾಗಿರುವ ಮಿಲ್ಲುಗಳಿಗೆ ಪ್ರೊತ್ಸಾಹವನ್ನು ಕೊಟ್ಟು ಪಾಪವನ್ನು ಕಟ್ಟಿಕೊಳ್ಳಲಾರರು.

ಪರದೇಶದ ಮಿಲ್ಲುಗಳು ನಿಂತರೆ ಬಡವರು ಹಾಳಾಗುವರೆಂದು ತಿಳಿಯುವಿರೋ? ಆ ಬಡ ಕೂಲಿಕಾರರು ಶಾರೀರಿಕ, ನೈತಿಕ ವಿಷಯಗಳಲ್ಲಿ ಒಳ್ಳೆಯ ಸ್ಥಿತಿಗೆ ಬರುವರಲ್ಲದೆ, ಅವರ ಸಾಂಪತ್ತಿಕ ಸ್ಥಿತಿಯೂ ಸುಧಾರಿಸುವದು. ಯಾಂತ್ರಿಕ ಕಾರ್ಯಾಲಯಗಳು ಪ್ರಾರಂಭವಾದುದರಿಂದ ಕೂಲಿಕಾರರ ಸಾಂಪತ್ತಿಕ ಸ್ಥಿತಿಯು ಸುಧಾರಿಸಿತೆಂದು ತಿಳಿದಿರುವಿರೇನು? ಯಂತ್ರಾಲಯಗಳೆಂಬ ರಾಕ್ಷಸರು ಜನ್ಮವೆತ್ತಿದ್ದರಿಂದ ಬಡಜನಗಳ ಕಷ್ಟಕ್ಕೆ ಎಣೆಯಿಲ್ಲದಂತಾಗಿದೆ. ಅವುಗಳನ್ನು ಸಾಕಿದ್ದ ಯಜಮಾನರು ಮಾತ್ರ ನಾನಾ ವಿಷಯೋಪಭೋಗಗಳಲ್ಲಿ ಮಗ್ನರಾಗಿದ್ಧಾರೆ.

ಅಮೇರಿಕೆಯಲ್ಲಿ ಯಂತ್ರಾಲಯಗಳೆಂಬ ಆಧುನಿಕ ರಾಕ್ಷಸಗಳು ಜನ್ಮವೆತ್ತುವ ಮುಂಚೆ ೧೮೦೦ನೆಯ ಇಸ್ವಿಯಲ್ಲಿ ಅಲ್ಲಿಯ ಧನಿಕರ ಆದಾಯವು ಎಷ್ಟಿದ್ದಿತೋ ಅದಕ್ಕಿಂತಲೂ ಆ ರಾಕ್ಷಸಗಳು ಜನ್ಮವೆತ್ತಿದ ನಂತರ ೧೯೦೦ ನೆಯ ಇಸ್ವಿಯಲ್ಲಿ ೫೨ ಪಟ್ಟು ಸಂಪತ್ತು ಹೆಚ್ಚಾಯಿತು! ಆದರೆ ಕೂಲಿಕಾರರ ಆದಾಯವು ಮಾತ್ರ ಮೊದಲಿನ ಅರ್ಧದಷ್ಟಾಯಿತು. ಆದುದರಿಂದ ಪರದೇಶಿ ಬಟ್ಟೆಗಳನ್ನು ಬಿಟ್ಟರೆ ಅಲ್ಲಿಯ ಕೂಲಿಕಾರರಿಗೆ ಒಳ್ಳೆಯದನ್ನೇ ಮಾಡಿದಂತಾಗುವದಿಲ್ಲವೇ?

ಅಲ್ಲಿಯ ಕೆಲವು ಧನಿಕರ ಆದಾಯವು ಮಾತ್ರ ಕಡಿಮೆಯಾಗುವದು. ಹಾಗೆ ಆಗಬೇಕಾದುದೇ ಅವರಿಗೂ, ಪ್ರಪಂಚಕ್ಕೂ ಕ್ಷೇಮಕರವಾದದ್ದಾಗಿದೆ. ಧನದ ಆ ದುರಾಶೆಯು ಈಗಲೇ ಅಸಂಖ್ಯ ಜನಗಳ ನಾನಾ ಹಿಂಸೆಗಳಿಗೂ ದುಃಖಗಳಿಗೂ ಕಾರಣವಾಗಿರುವದಿಂದ ಆ ಧನಿಕರಲ್ಲಿ ಇನ್ನು ಮೇಲೆ ಹಣವು ಶೇಖರವಾಗಿದಿರುವದು ಎಲ್ಲರ ಕ್ಷೇಮಕ್ಕೂ ಕಾರಣವಾಗಿಲ್ಲವೇ? ಅಮೇರಿಕೆಯ ಶ್ರೀಮಾನ್ ರಾಕ್ ಫೇಲರ್ ಎಂಬವರು ಈಗ ಪ್ರಪಂಚದ ಎಲ್ಲ ಧನಿಕರಲ್ಲಿ ಮೊದಲನೆಯವರಾಗಿದ್ಧಾರೆ. ಇವರು ಇಷ್ಟು, ಹಣವನ್ನು ಗಳಿಸುವಾಗ ನೀತಿನಿಯಮಗಳ ಕಡೆಗೆ ಲಕ್ಷಿಸಲೇ ಇಲ್ಲೆಂಬುದು ಎಲ್ಲರಿಗೂ ತಿಳಿದ ಸಂಗತಿ. ಇಂಥ ಅನೇಕರು ನೀತಿ ಧರ್ಮಗಳ ಕಡೆಗೆ ಲಕ್ಷಿಸುದಕ್ಕೋಸ್ಕರವಾಗಿಯಾದರು ಅವರ ಯಂತ್ರಾಲಯಗಳು ನಿಲ್ಲುವದು ಯೋಗ್ಯವಲ್ಲವೇ?

ಒಬ್ಬನಿಗೆ ಹೊಟ್ಟೆಗಿಲ್ಲದಿದ್ದರೆ ಹೇಗೆ ದುಃಖವಾಗುತ್ತದೆಯೋ ಹಾಗೆಯೇ ಒಬ್ಬನ ಹೊಟ್ಟೆಗೆ ಹೆಚ್ಚು ಹಾಕಿದರೂ ಆತನಿಗೆ ಕಷ್ಟವಾಗುತ್ತದೆ. ಒಬ್ಬನು ಹಸಿವೆಯಿಂದ ಬಳಲುತ್ತಾನೆ. ಇನ್ನೊಬ್ಬನು ಅಜೀರ್ಣದಿಂದ ನರಳುತ್ತಾನೆ. ಈಗ ಉಭಯರೂ ಸುಖಿಗಳಾಗುವಂತೆ ಮಾಡುವ ಮಾರ್ಗವಾವುದು? ಅಜೀರ್ಣವಾದವನಿಗೆ ಆಹಾರವನ್ನು ಕೊಡದೆ ಆತನಿಗೆ ಲಂಘನ ಮಾಡಿಸಿ ಅದೇ ಆಹಾರವನ್ನು ಹೊಟ್ಟೆಗಿಲ್ಲದೆ ಬಳಲುತ್ತಿರುವವನಿಗೆ ಕೊಡಬೇಕು. ಹೀಗೆ ಮಾಡಿದರೆ ಅಧರ್ಮವಾಯಿತೋ ಮಾಡದಿದ್ದರೆ ಧರ್ಮವಾಯಿತೋ ನೀವೇ ಯೋಚಿಸಿರಿ. ಪರದೇಶಗಳ ಬಟೆಯನ್ನು ಬಿಟ್ಟು ಅಲ್ಲಿಯ ಮಿಲ್ಲುಗಳು ನಿಂತು ಹೋಗುವಂತೆ ಮಾಡಿದರೆ ಕೂಲಿಕಾರರಿಗೂ ಕಾರ್ಯಾಲಯಗಳ ಯಜಮಾನರಿಗೂ ಅನುಕ್ರಮವಾಗಿ ಒಬ್ಬರಿಗೆ ಊಟಕ್ಕೆ ಹಾಕಿ ಇನ್ನೊಬ್ಬರಿಗೆ ಲಂಘನ ಚಿಕಿತ್ಸೆಯಲ್ಲಿಟ್ಟಂತಾಗುವದು. ಅದರಿಂದಲೇ ಉಭಯರಿಗೂ ಕ್ಷೇಮ. ಆದುದರಿಂದ ಇದೇ ಧರ್ಮಕಾರ್ಯವು ಹೀಗೆ ಮಾಡದೆ ಅಜೀರ್ಣ ಧನಿಕರಿಗೇನೇ ಸಂಪತ್ತು ಸೇರುವಂತೆ ಮಾಡಿದರೆ ಉಭಯರನ್ನೂ ಕಷ್ಟಕ್ಕೀಡು ಮಾಡಿದ ಪಾಪ ಬರುತ್ತದೆ. ಇದೇ ಅಧರ್ಮ ಕಾರ್ಯವು.

ಈಗ ಬಹುಜನಗಳ ಬುದ್ಧಿಯಲ್ಲಿ ವಿಕಾರವುಂಟಾಗಿರುವದರಿಂದ ಅವರಿಗೆ ಲಕ್ಷಣವೇ ಅವಲಕ್ಷಣವಾಗಿಯೂ, ಅವಲಕ್ಷಣವೇ ಲಕ್ಷಣವಾಗಿಯೂ ತೋರುತ್ತಲಿದೆ. ಕೋಟು, ಹ್ಯಾಟು, ಬೂಟು, ಪಾಟ್ಲೋನ್ ಈ ಉಡುಪುಗಳೆಲ್ಲ ಭಾರತೀಯರಾದ ನಮಗೆ ಎಷ್ಟು ಲಕ್ಷಣವಾಗಿ ಕಾಣುತ್ತದೆಂಬ ವಿಷಯ ಹಾಗಿರಲಿ, ಬಟ್ಟೆಯನ್ನು ಧರಿಸುವದರಲ್ಲಿ ದೇಹ ಪೋಷಣೆಯ ಮಾನರಕ್ಷಣೆಯೂ ಮೂಖ್ಯೋದ್ದೇಶಗಳಾಗಿವೆ. ಇವು ಆಯಾಯ ದೇಶ, ಹವೆ, ಆಚಾರ, ಪದ್ಧತಿಗಳಿಗನುಸರಿಸಿಯೇ ಏರ್ಪಡಿಸಲ್ಪಡುತ್ತವೆ. ಈಗ ಕಸೆಯ ಅಂಗಿ, ಪಂಜಿ ಮೊದಲಾದ ನಮ್ಮ ದೇಶದ ಉಡುಪುಗಳು ಇಲ್ಲಿಯ ಹವೆ, ಆಚಾರ, ಪದ್ಧತಿಗಳಿಗನುಸಾರವಾಗಿಯೇ ಏರ್ಪಟ್ಟಿವೆ. ಆದುದರಿಂದ ನಮ್ಮ ದೇಶದ ಪದ್ಧತಿಯ ಪ್ರಕಾರ ಉಡುಪನ್ನು ಮಾಡುವದೇ ನಮಗೆ ಕ್ಷೇಮಕರವಾಗಿಯೂ ಲಕ್ಷಣವಾಗಿಯೂ ಇರುತ್ತದೆ. ಮಹಾತ್ಮಾ ಗಾಂಧಿಯವರು ಸ್ವದೇಶಪದ್ಧತಿಯಂತೆಯೇ ಬಟ್ಟೆಗಳನ್ನು ಧರಿಸಬೇಕೆಂದು ಸ್ವದೇಶಿ ವ್ರತದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಈ ದೇಶವು ಮಾಡಬೇಕಾದ ಕೆಲಸಗಳೆರಡು (೧) ವಿದೇಶಿ ಬಟ್ಟೆಗಳ ಸಂಪೂರ್ಣ ಬಹಿಷ್ಕಾರ (೨) ಖಾದಿ ಬಟ್ಟೆಯ ವಿಶೇಷ ಪ್ರಸಾರ. ಹಾಗಾದರೆ ಹಿಂದುಸ್ಥಾನವು ಗ್ರೇಟಬ್ರಿಟನ್ನದ ಬಹು ದೊಡ್ಡ ಗಿರಾಕಿಯೆರಿಬ ಬಡಿವಾರದ ಮಾತು ನಿಂತು ಹೋಗುವದು. ಭರತಖಂಡವು ತನ್ನ ಕಾಲಮೇಲೆ ತಾನು ನಿಂತು ಸುಖಶಾಂತಿಯಿಂದ ಕಾಲಕಳೆಯುವದು. ವಿದೇಶಿ ಬಟ್ಟೆಯನ್ನು ಬಹಿಷ್ಕರಿಸಿ ಸ್ವದೇಶಿ ಬಟ್ಟೆಯನ್ನು ಪುರಸ್ಕರಿಸುವದೇ ನಮ್ಮ ಮುಖ್ಯ ಧ್ಯೇಯವಾಗಿದೆ. ಇದೇ ಪವಿತ್ರ ಧರ್ಮವು.

ಓಂ ಶಾಂತಿಃ ಶಾಂತಿಃ ಶಾಂತಿಃ

❖❖

ಭಾಗ : ೩

❖

ಸಾಮಾಜಿಕ ಸಾಹಿತ್ಯ

* ಟಿಪ್ಪಣಿ
* ಪತಿತೋದ್ಧಾರ
* ಅಹಿಂಸೆ
* ಆಧುನಿಕ ಜರ್ಮನಿ
* ವೀರಶೈವ ಮತತತ್ವ
* ವೀರಶೈವ ಸಮಾಜ ಸುಧಾರಣೆ
* ವೀರಶೈವ ಏಕೀಕರಣ



ಹಾಳು ಬಿದ್ದಿರುವ ಬಸವಲಿಂಗ ಮುದ್ರಣಾಲಯ, ಆಲಮಟ್ಟಿ(೧೯೮೯)

*

ಟಿಪ್ಪಣಿ

ಬರಹಗಾರನು ಸಮಾಜವನ್ನು ಕಲಾನಿಷ್ಠ ವಿಚಾರನಿಷ್ಠ- ಹೀಗೆ ಎರಡು ಕವಲುಗಳಲ್ಲಿ ಬಳಸಿಕೊಳ್ಳುತ್ತಾನೆ. ಆಗ ಸಮಾಜದಲ್ಲಿರುವ ಜೀವನ ಪದ್ಧತಿ, ಆಚರಣೆ, ಸಾಂಸ್ಕೃತಿಕ ಸ್ವರೂಪ, ಮಾನವ ಕಟ್ಟಿಕೊಂಡಿರುವ ಜಾತಿಗುಂಪು, ಸಾಮಾಜಿಕ ಗಲಭೆಗಳು ಸಹಜವಾಗಿಯೇ ಕೃತಿಯ ಗರ್ಭದಲ್ಲಿ ಸಮೀಕರಣಗೊಳ್ಳುತ್ತಿದ್ದರೂ ಈ ಕವಲುಗಳ ವಿಧಾನ ಭಿನ್ನವಾಗಿರುತ್ತದೆ. ಇವುಗಳಲ್ಲಿ ಮಂಜಪ್ಪನವರದು ವಿಚಾರನಿಷ್ಠೆ ಕವಲು. ಇಂಥ ವಿಚಾರಸಾಹಿತ್ಯ ಸಮಾಜದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಏರು ಪೇರುಗಳನ್ನು ಯಥಾವತ್ತಾಗಿ ಚಿತ್ರಿಸುತ್ತ ವಿಶ್ಲೇಷಿಸುತ್ತ. ಹೊಸತಾಗಿ ನಡೆಯಲು ಮಾರ್ಗಸೂಚಿಸುತ್ತದೆ. ಹೊಸ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತದೆ.

ವಿಚಾರಸಾಹಿತ್ಯಕ್ಕೆ ಅಪೂರ್ವ ಕೊಡುಗೆ ನೀಡಿದ ಮಂಜಪ್ಪನವರು ತಮ್ಮ ಸಮಕಾಲೀನ ಸಮಾಜದ ಆಗು-ಹೋಗುಗಳನ್ನು ಅಲ್ಲಿರುವ ವಿಷಮ ವಿಚಾರಗಳನ್ನು ಕುರಿತು ಚಿಂತೆಮಾಡಿ, ದಿವ್ಯೌಷಧ ರೂಪದ ಪತ್ರಿಕಾ ಬರಹ ಹಾಗೂ ಕೃತಿಲೇಖನಕಾರ್ಯ ಮಾಡಿದರು. ತೀವ್ರವಾದ ಸಾಮಾಜಿಕ ಕಾಳಜಿಯನ್ನು ಹೊಂದಿದ್ದ ಅವರು "ಹೊಸ ಸಮಾಜ ನಿರ್ಮಿಸಬೇಕೆಂದು ಹೊರಟವರು. ಈ ಸಮಾಜ ನಿರ್ಮಾಣದ ಉತ್ಕಟತೆಗೆ ಹೊಂದಿಕೊಂಡು ಉಪನಿಷತ್ತಿ ರೂಪದಲ್ಲಿ ಸಾಹಿತ್ಯ ಸೃಷ್ಟಿಸಿದರು."[೧] ಇದರ ಫಲವಾಗಿ ಸ್ವಕರ್ತವ್ಯ ಸಿದ್ಧಾಂತ ಗೃಹಶಿಕ್ಷಣ, ಪತಿತೋದ್ಧಾರ, ಜಾತ್ರೆಗಳ ಸುಧಾರಣೆ, ಹಿಂದು ಸಂಘಟನೆ, ಹಿಂದೂಗಳ ಕೈಗನ್ನಡಿ, ಹಿಂದೂ ಜಾಗೃತಿ ಅವಶ್ಯಕವೇ, ಜಾತಿವಾದದ ವಿಮರ್ಶೆ, ಆದಿಜನ ಸುಧಾರಣೆ, ತರುಣರ ಕೈಗನ್ನಡಿ, ದಾಂಪತ್ಯ ಧರ್ಮ, ದಾಂಪತ್ಯ ಜೀವನ, ವೀರಶೈವ ಮತತತ್ವ, ವೀರಶೈವ ಸಮಾಜ ಸುಧಾರಣೆ, ವೀರಶೈವ ಏಕೀಕರಣ, ಮುಂತಾದ ಕೃತಿಗಳಲ್ಲಿ ಶೀರ್ಷಿಕೆಗೆ ಅನುಸಾರ ವಿಚಾರಗಳನ್ನು ವಿವರಿಸಿ, ತಮ್ಮ ನಿಲುವನ್ನು ದೃಢೀಕರಿಸಿದರು. ಇವುಗಳಲ್ಲದೆ ತಾವು ಹೊರಡಿಸುತ್ತಿದ್ದ ಪತ್ರಿಕೆಗಳ ಸಂಪಾದಕೀಯ ಹಾಗೂ ಲೇಖನಗಳಲ್ಲಿ ಅಂದಂದಿನ ಸಮಾಜದ ವಿಚಾರಗಳನ್ನು ಪ್ರಸ್ತಾಪಿಸಿದರು. ಇದು ಕಾರಣ, ಮಂಜಪ್ಪನವರ ಸಾಮಾಜಿಕ ಸಾಹಿತ್ಯಕೃತಿಗಳು ಅವರ ಸಮಕಾಲೀನ ಸಮಾಜದ ಪ್ರತಿಬಿಂಬವೆನಿಸಿವೆ. ಇವುಗಳಲ್ಲಿ ಪತಿತೋದ್ಧಾರ,

---

೧. ಮಾರ್ಗ ಸಂಪುಟ ಮೂರು-ಡಾ. ಎಂ. ಎಂ. ಕಲಬುರ್ಗಿ, ಪುಟ ೧೩೫.

ಅಹಿಂಸೆ, ಆಧುನಿಕ ಜರ್ಮನಿ, ವೀರಶೈವ ಮತತತ್ವ, ವೀರಶೈವ ಸಮಾಜ ಸುಧಾರಣೆ, ವೀರಶೈವ ಏಕೀಕರಣ ಕೃತಿಗಳನ್ನು ಇಲ್ಲಿ ಸಮಾಲೋಚಿಸಬಹುದಾಗಿದೆ.

"ಪತಿತೋದ್ಧಾರ" ಹೆಸರಿನದು ಮಂಜಪ್ಪನವರ ಸಾಮಾಜಿಕ ಸಾಹಿತ್ಯಕೃತಿ, ಅದು ಅವರ ಮೊದಲ ಕೃತಿಯೂ ಹೌದು. ಮಂಜಪ್ಪನವರು ಶಿರಸಿಯಲ್ಲಿದ್ದ ಕಾಲವದು. "ಅಸ್ಪೃಶ್ಯತಾ ನಿವಾರಣೆ ಹಾಗೂ ಆರ್ಯ ಸಮಾಜದ ಕಡೆಗೆ ಒಲವಿದ್ದ ಗಣಪತರಾವ ಬಾಡ ಎಂಬುವವರು ನನ್ನಿಂದ ಒಂದು ಚಿಕ್ಕ ಪುಸ್ತಕವನ್ನು ಬರೆಯಿಸಿದ್ದರು. ಅದಕ್ಕೆ "ಪತಿತೋದ್ಧಾರ" ಎಂಬ ಹೆಸರನ್ನಿಟ್ಟಿತ್ತು. ನನ್ನ ಹೆಸರಿನಿಂದಲೇ ಅದು ಪ್ರಕಟಗೊಳ್ಳಬೇಕೆಂದು ಅವರು ಬಹಳ ಆಗ್ರಹಪಟ್ಟರು. ನನ್ನ ಹೆಸರು ಹಾಕುವ ಧೈರ್ಯ ನನಗಿರಲಿಲ್ಲ. ಧಾರ್ಮಿಕ ಸಮಾಜಿಕ ಹೊಯ್ದಾಟವು ಆಗ ವಿಶೇಷವಾಗಿದ್ದಿತು. ಅವರ ಆತ್ಮಕಥೆಯ ಈ ಮಾತುಗಳು ಇಂದು ನಮಗೆ 'ಗಣಪತಿ ವೆಂಕಟೇಶ ಶಿರಸಿಕರ' ಹೆಸರಿನಲ್ಲಿ ದೊರೆಯುವ ಪತಿತೊದ್ಧಾರ ಕೃತಿ ಮಂಜಪ್ಪನವರದೇ ಎಂಬುದನ್ನು ಸಾಬೀತು ಪಡಿಸುತ್ತವೆ. ಇದು ಅವರಿಂದ ರಚನೆಗೊಂಡ ಮೊದಲ ಪುಸ್ತಕ. ಹೆಸರೇ ಸೂಚಿಸುವಮತೆ ಇದು 'ಅಸ್ಪೃಶ್ಯರ ಏಳ್ಗೆ' ಕುರಿತಾದ ವಿಚಾರಗಳನ್ನು ಒಳಗೊಂಡಿದೆ. ಸಮಾಜ ಸುಧಾರಣೆ, ಅಂತ್ಯಜರ ದುಃಸ್ಥಿತಿ, ಹಿಂದೂ ಜನಾಂಗದ ಕ್ಷೀಣತೆ, ಎಂಬ ಮೂರು ಪ್ರಕರಣಗಳಲ್ಲಿ ಇದು ವಿಷಯವನ್ನು ಪ್ರಸ್ತುತಪಡಿಸುತ್ತದೆ.

ಹಿಂದು ಸಮಾಜ ಅನೇಕ ಕಟ್ಟಳೆಗಳ ಮಧ್ಯೆ ನರಳುತ್ತಿದೆ. ಇವೆಲ್ಲ ಕಳಚಿ ಸುಧಾರಣೆಯಾಗಬೇಕಿದೆ ಎನ್ನುವ ಮಂಜಪ್ಪನವರು ರವೀಂದ್ರನಾಥ ಠಾಕೂರ, ಮಹಾತ್ಮಾಗಾಂಧೀ, ಶ್ರೀ ರಾಮತೀರ್ಥರ ವಿಚಾರಗಳನ್ನು ಸಾಧಾರವಾಗಿಸುತ್ತಾರೆ. ಅಸ್ಪೃಶ್ಯರು ಕೂಡ ಮನುಷ್ಯರೇ ಅವರ ಜೀವನಕ್ರಮ ಸುಧಾರಿಸಬೇಕೆಂದು ಆಲೋಚಿಸುವ ಮಂಜಪ್ಪನವರು ಮೂರು ಕ್ರಮಗಳನ್ನು ಸೂಚಿಸುತ್ತಾರೆ.

೧. ನಾವು ಅವರನ್ನು ಮುಟ್ಟದೆ ಇರುವ ಬಹಿಷ್ಕಾರವನ್ನು ಮೊದಲು ತೆಗೆದುಹಾಕಬೇಕು.

೨. ಉಪಾಧ್ಯಾಯರು ಎಲ್ಲರ ಮಕ್ಕಳಂತೆ ಇವರಿಗೆ ಪ್ರೀತಿ ಮತ್ತು ಅಭಿಮಾನದಿಂದ ವಿಧ್ಯಾಭ್ಯಾಸ ಮಾಡಿಸಬೇಕು.

೩. ಸ್ವಚ್ಚತೆ ಕಾಪಾಡಿಕೊಳ್ಳಲು, ಮಧ್ಯಪಾನದಿಂದ ದೂರವಿರಲು ಅವರಿಗೆ ತಿಳಿಹೇಳಬೇಕು.

ಇಂತಹ ಕೆಲವು ಕ್ರಮಕೈಗೊಳ್ಳುವಾಗ ಅಸ್ಪೃಶ್ಯರು ಸುಧಾರಣೆಯಾಗಲು ಸಾಧ್ಯ. ಅವರ ಸುಧಾರಣೆ ಪ್ರತಿಯೊಬ್ಬ ಹಿಂದೂವಿನ ಕರ್ತವ್ಯವೆಂದು ಸೂಚಿಸುವ ಮಂಜಪ್ಪನವರು, ಅವರನ್ನು ಸುಧಾರಿಸದಿದ್ದರೆ ಹಿಂದೂ ಜನಾಂಗಕ್ಕೆ ಧಾರ್ಮಿಕವಾಗಿ, ರಾಜಕೀಯವಾಗಿ, ಏಳ್ಗೆ ಸಾಧಿಸಲು ಸಾಧ್ಯವಾಗದೆಂದು ಅಭಿಪ್ರಾಯ ಪಡುತ್ತಾರೆ. ಇದಕ್ಕೆ ನಿದರ್ಶನಗಳನ್ನು ಒದಗಿಸಿ ಅವರು ಸದೃಢ ಹಿಂದೂ ಸಮಾಜ ನಿರ್ಮಾಣವಾಗಲು ಸಮಾನತೆ ಸಹಕಾರಗಳು ಊರುಗೋಲುಗಳಾಗಬೇಕೆಂದು ವಾದಿಸುತ್ತಾರೆ. ಇಂತಹ ಪ್ರಖರವಾದ ಸಾಮಾಜಿಕ ಚಿಂತನೆಗೆ ಆರಂಭ ಕಾಲದಲ್ಲಿಯೇ ಮಂಜಪ್ಪನವರು ಕೈ ಹಾಕಿದ್ದು ಸಾಮಾನ್ಯ ಸಂಗತಿಯಲ್ಲ, ಜಾತಿವ್ಯವಸ್ಥೆ ತುಂಬ ಪ್ರಬಲವಾಗಿದ್ದ ಕಾಲವದು, ಅದನ್ನು ಕಣ್ಣಾರೆ ಕಂಡು ಮರುಗಿದ ಮಂಜಪ್ಪನವರು ಸಮಸಮಾಜದ ಕನಸನ್ನು ಕಂಡು, ಈ ಕೃತಿಯಲ್ಲಿ ನಿರೂಪಿಸಿದ್ದಾರೆ.

'ಅಹಿಂಸೆ' ಎಂಬ ಕಿರುಕೃತಿಯಲ್ಲಿ ಅಹಿಂಸಾ ತತ್ವದ ಕುರಿತು ವಿಚಾರಗಳುಂಟು ನಾಲ್ಕು ಅಧ್ಯಾಯಗಳನ್ನು ಒಳಗೊಂಡ ಈ ಕೃತಿಯು ನರಹತ್ಯೆ. ಗೋವಧೆ, ಪಶುಬಲಿ ಹಾಗೂ ಪ್ರೇಮಜಲ ಕುರಿತಾದ ಸಂಗತಿಗಳನ್ನು ತಿಳಿಸುತ್ತದೆ. "ಯಾವ ಪ್ರಾಣಿಯ ದೇಹಕ್ಕಾಗಲಿ ಅಥವಾ ಮನಸ್ಸಿಗಾಗಲಿ ನೋವನ್ನು ಕೂಡಾ ಉಂಟುಮಾಡದಿರುವುದೇ ಅಹಿಂಸೆಯು." ಈ ಆಶಯವೇ ಕೃತಿಯ ಉದ್ದಕ್ಕೂ ಹರಿಯುತ್ತದೆ. ಅಹಿಂಸೆ ಪರಿಪಾಲನೆಗೆ ಅಂತಃಕರಣ ತುಂಬಿದ ಪ್ರೇಮವೇ ಶಕ್ತಿ. ಇದು ಮನುಷ್ಯನ ಅಂತರಂಗ ಶುದ್ಧಿಗೆ ಕಾರಣವಾಗಿ, ಆತನನ್ನು ಎತ್ತರಕ್ಕೆ ಒಯ್ಯಬಲ್ಲದು ಎಂಬ ಸಂದೇಶ ಈ ಪುಟ್ಟಕೃತಿಯದಾಗಿದೆ.

'ಆಧುನಿಕ ಜರ್ಮನಿ' ಎಂಬುದು ಐತಿಹಾಸಿಕ ಸಂಗತಿಗಳನ್ನು ಒಳಗೊಂಡ ಕೃತಿ. ಜರ್ಮನ್ ದೇಶದ ಇತಿಹಾಸ ಇಲ್ಲುಂಟು. ಆ ದೇಶದ ವಿದ್ಯಾಭ್ಯಾಸ, ಒಕ್ಕಲುತನ, ಕೈಗಾರಿಕೆ, ವ್ಯಾಪಾರ ಕುರಿತು ವಿವರವಾದ ವಿಚಾರಗಳನ್ನು ತಿಳಿಸಿ, ಇವು ಅಭಿವೃದ್ಧಿಗೆ ಹೇಗೆ ಪೂರಕವಾಗಬಲ್ಲವು ಎಂಬುದನ್ನು ಮಂಜಪ್ಪನವರು ತಿಳಿಯಪಡಿಸಿದ್ಧಾರೆ.

'ಸಂಘಟನೆಯೇ ಶಕ್ತಿ' 'ಒಕ್ಕಟ್ಟಿನಲ್ಲಿ ಬಲವಿದೆ' ಎಂಬ ಮಾತನ್ನು ಜರ್ಮನ್ ದೇಶದ ಜನ ಪರಿಪಾಲಿಸುತ್ತಾರೆ. ಹೀಗೆ ನಡೆಯಲು ಏಕನಾಯಕತ್ವವೇ ಮುಖ್ಯ. ಈ ಸಿದ್ಧಾಂತಕ್ಕೆ ಬದ್ಧರಾದ ಅವರು ಒಬ್ಬ ನಾಯಕನನ್ನು ಅನುಸರಿಸಿ ನಡೆದು, ಅಭಿವೃದ್ಧಿಗೆ ಬೆಲೆಕೊಡುತ್ತಾರೆ. ಇದು ಐಕಮತ್ಯಕ್ಕೆ ದಾರಿ–ಎಂಬ ಪ್ರಧಾನ ವಿಚಾರ ಕೃತಿಯುದ್ದಕ್ಕೂ ನಮಗೆ ಸಿಗುತ್ತದೆ.

'ವೀರಶೈವ ಮತತತ್ವ', 'ವೀರಶೈವ ಸಮಾಜ ಸುಧಾರಣೆ ವೀರಶೈವ ಏಕೀಕರಣ' ಕೃತಿಗಳು ವೀರಶೈವ ಧರ್ಮದ ಹಾಗೂ ಸಮಾಜದ ಮೇಲೆ ಬೆಳಕನ್ನು ಚೆಲ್ಲುತ್ತವೆ. ತಮ್ಮ ಸಮಕಾಲೀನ ಸಂದರ್ಭದಲ್ಲಿ ವೀರಶೈವ ಧರ್ಮ ಪ್ರಸಾರ–ಪ್ರಸಿದ್ಧಿಯಾಗಬೇಕೆಂದು ಮಂಜಪ್ಪನವರಿಗೆ ತೋರಿತು. ಇದಕ್ಕೆ ಮಾಧ್ಯಮವಾಗಿ ಗ್ರಂಥರಚನೆಗೆ ಕೈಹಾಕಿ, ವೀರಶೈವ ಮತದ ಕುರಿತು, ಶರಣರ ಕುರಿತು, ಅನೇಕ ಕೃತಿಗಳನ್ನು ರಚಿಸಿದರು. ಸರಳ ಭಾಷೆ, ಸಹಜ ನಿರೂಪಣೆಗಳ ಮೂಲಕ ಧರ್ಮದ ಗಹನ ವಿಚಾರಗಳು ಜನಸಾಮಾನ್ಯರಿಗೂ ತಿಳಿಯಬೇಕೆಂಬ ಅಪೇಕ್ಷೆಯಿಂದ 'ವೀರಶೈವಮತತತ್ವ' ವೆಂಬ ಕೃತಿಯನ್ನು ರಚಿಸಿದರು. ಈ ಕೃತಿಯಲ್ಲಿ ಧರ್ಮದ ಲಕ್ಷಣ, ಭಕ್ತನ ಆಚರಣೆ, ಮಹೇಶ್ವರನ ಸ್ಥಿತಿ, ಮನಶ್ಶುದ್ಧಿಗೆ ಸಾಧನ, ಅಂತರ್ಜ್ಞಾನ, ಸರ್ವತ್ರ, ಲಿಂಗಭಾವ, ಗುರುಪ್ರಕಾಶ, ನಿಷ್ಕಾಮಕರ್ಮ, ಲೋಕಸೇವೆ, ಆತ್ಮೋದ್ಧಾರ, ದೇಹವೇ ದೇವಾಲಯ, ಲಿಂಗಾಂಗ ಸಾಮರಸ್ಯ ಎಂಬ ವಿಷಯಗಳ ವಿವರಣೆ ಇದೆ.

ವ್ಯವಸ್ಥಿತ ಬದುಕಿನ ಸಂವಿಧಾನವೇ ಧರ್ಮ. ಇಂಥ ವಿಭಿನ್ನ ಸಂವಿಧಾನಗಳೇ ಜಗತ್ತಿನಲ್ಲಿ ಧರ್ಮಗಳಾಗಿ ಬೆಳೆದಿವೆ. ಇವುಗಳಲ್ಲಿ ಕೆಲವು ಉದ್ದೇಶಪೂರ್ವಕವಾಗಿ, ಇನ್ನು ಕೆಲವು ನಿರುದ್ದೇಶಪೂರ್ವಕವಾಗಿ ದೋಷಗಳನ್ನು ಒಳಪಡಿಸಿಕೊಂಡಿವೆ. ಇವುಗಳನ್ನು ನಿರಾಕರಿಸುವ ನಿಟ್ಟಿನಲ್ಲಿ ಹುಟ್ಟಿಕೊಂಡಿದೆ. ವೀರಶೈವ ಧರ್ಮ, ಇದನ್ನು ಪ್ರತಿಪಾದಿಸುವ **"ವೀರಶೈವ ಮತತತ್ವ"** ಕೃತಿ ಸಾಧಕನೊಬ್ಬ ಹಂತ–ಹಂತವಾಗಿ ಮೇಲೆರುತ್ತ ಹೋಗುವದನ್ನು ತಿಳಿಸುತ್ತದೆ. ಇಲ್ಲಿ ಅಂಗಸ್ಥಲಕ್ಕೆ ಸಂಬಂಧಿಸಿದ ನಲವತ್ತನಾಲ್ಕು ಮೆಟ್ಟಿಲು, ಲಿಂಗಸ್ಥಲಕ್ಕೆ ಸಂಬಂಧಿಸಿದ ಐವತ್ತೇಳು ಮೆಟ್ಟಿಲುಗಳು ಇದ್ದು, ಒಟ್ಟು ನೂರೊಂದು ಮೆಟ್ಟಿಲುಗಳನ್ನು ದಾಟಿದಾಗಲೇ ಐಕ್ಯಸ್ಥಿತಿಗೆ ಮನುಷ್ಯ ಮುಟ್ಟುವ ಪರಿಯನ್ನು ಇದು

ವಿವರಿಸುತ್ತದೆ. ಭಕ್ತಿ–ಮಹೇಶನಾಗಿ, ಮಹೇಶ–ಪ್ರಸಾದಿಯಾಗಿ, ಪ್ರಸಾದಿ–ಪ್ರಾಣಲಿಂಗಿಯಾಗಿ, ಪ್ರಾಣಲಿಂಗಿ–ಶರಣನಾಗಿ, ಶರಣ–ಲಿಂಗಾಂಗ ಸಾಮರಸ್ಯ ಹೊಂದುತ್ತಾನೆಂಬ ಗಹನವಿಚಾರಗಳನ್ನು ಸರಳ ಭಾಷೆಯಲ್ಲಿ ಹೃದ್ಯವಾದ ಶೈಲಿಯಲ್ಲಿ ಮಂಜಪ್ಪನವರು ಪ್ರತಿಪಾದಿಸಿದ್ದಾರೆ.

ಮನುಷ್ಯನಿಗೆ ಧರ್ಮಸಂಸ್ಕಾರ ಅಗತ್ಯವೇ? ಎಂದು ಪ್ರಶ್ನಿಸುವವರಿಗೆ ಅಗತ್ಯವೆಂದು ಈ ಕೃತಿ ಉತ್ತರಿಸುತ್ತದೆ. ನಿಜವಾದ ಧರ್ಮ ನಮ್ಮನ್ನು ಯಾವತ್ತೂ ಆಳುತ್ತಿರುತ್ತದೆ. ಅದರಡಿಯಲ್ಲಿ ನಾವು ಅರಳಬೇಕಾದರೆ ಅದರ ಆಚರಣೆಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲೇಬೇಕೆಂಬುದು ಧಾರ್ಮಿಕ ತಜ್ಞರ ಅಭಿಮತ. ಇದಕ್ಕೆ ನಿದರ್ಶನವಾಗಿ ಮಂಜಪ್ಪನವರು ಅಂದು ಬರೆದ **'ವೀರಶೈವ ಮತತತ್ವ'** ಕೃತಿ ಇಂದಿಗೂ ತನ್ನ ಮಹತ್ವವನ್ನು ಕಾಪಾಡಿಕೊಂಡಿದೆ.

"ಒಂದು ಮತಕ್ಕೆ ಮಹತ್ವವು ಅದರಲ್ಲಿರುವ ತತ್ವಗಳಿಂದಲೇ ಪ್ರಾಪ್ತವಾಗುವುದಿಲ್ಲ. ಆದರೆ ಆ ತತ್ವಗಳಂತೆ ನಡಯುವವ ಸಂಖ್ಯೆಯು ಆ ಮತಿಯರಲ್ಲಿ ಎಷ್ಟು ಹೆಚ್ಚುತ್ತದೆಯೋ ಅದರ ಮೇಲಿನಂದಲೇ ಆ ಮತಕ್ಕೆ ಘನತೆ ಬರುತ್ತದೆ. ಆದ ಕಾರಣ ವೀರಶೈವ ಮತವು ಶ್ರೇಷ್ಠ ಎಂಬುದನ್ನು ನಾವು ಗ್ರಂಥೋಕ್ತಿಗಳಿಂದ ತೋರಿಸದೇ ನಮ್ಮ ನಡತೆಯಿಂದ ತೋರಿಸಬೇಕು. ನಮ್ಮ ಸತ್ಯಾಭಿಮಾನ ಜಾಗೃತವಾಗದ ವಿನಃ ಇದು ಸಾಧ್ಯವಿಲ್ಲ."[೨] ಮಂಜಪ್ಪನವರ ಈ ವಿಚಾರ ಅವರು ವೀರಶೈವಧರ್ಮ ಕುರಿತು ಹೊಂದಿದ್ದ ಕಾಳಜಿಯನ್ನು ಅಭಿಮಾನವನ್ನು ಪ್ರಸ್ತುತಪಡಿಸುತ್ತದೆ.

"ವೀರಶೈವ ಮತತತ್ವ" ಕೃತಿಯ ಮುಂದುವರಿದ ರೂಪದಂತಿದೆ **'ವೀರಶೈವ ಸಮಾಜ ಸುಧಾರಣೆ'** ಗ್ರಂಥ ವೀರಶೈವ ಧರ್ಮನಿಷ್ಠೆಯನ್ನು ಕುರಿತು. ಅಲ್ಲಿ ತಿಳಿಸಿರುವ ಮಂಜಪ್ಪನವರು, ಅವರ ಅನುಯಾಯಿಗಳು ತಮ್ಮ ಲೋಪದೋಷಗಳನ್ನು ಸರಿಪಡಿಸಿಕೊಂಡು ಸಮಾಜದ ಏಳ್ಗೆಗೆ ದುಡಿಯಬೇಕೆಂದು ಇಲ್ಲಿ ಕರೆ ಕೊಡುತ್ತಾರೆ. ಈ ವಿಚಾರಕ್ಕೆ ಪೂರಕವಾಗಿ ಹಲವು ವಿಷಯಗಳನ್ನು ಪ್ರಸ್ತಾಪಿಸುವ ಅವರು, ಕೆ. ಪಿ. ಪುಟ್ಟಣ್ಣ ಶೆಟ್ಟಿ, ಶ್ರೀಮಂತ ಸರದೇಸಾಯಿ, ವಂಟಮುರಿ ಲಖಮನಗೌಡರು, ಮೆಣಸಿನಕಾಯಿ ಶಾಂತವೀರಪ್ಪನವರು, ಎಸ್. ಎಸ್. ಬಸವನಾಳ, ಆರ್. ಎಲ್. ಜವಳಿ. ಗುರುಸಿದ್ದಪ್ಪ ಗಿಲಗಂಚಿ, ಅರಟಾಳ ರುದ್ರಗೌಡರು, ವಾರದ ಮಲ್ಲಪ್ಪನವರು, ಫ. ಗು. ಹಳಕಟ್ಟಿ, ಶಿರಸಂಗಿ ಲಿಂಗಪ್ಪ ದೇಸಾಯಿ, ಸಿದ್ದಪ್ಪನವರು ಕಂಬಳಿ, ಸಿದ್ದರಾಮಪ್ಪ ಪಾವಟೆ, ವೀರಪ್ಪನವರು ಬಿಳಿಅಂಗಡಿ ಮುಂತಾದವರ ಆಲೋಚನೆಗಳನ್ನು ಆಕರ ಸಾಮಗ್ರಿಯಾಗಿಸಿಕೊಂಡು, ತಾವು ತಾಳಿರುವ ನಿಲುವನ್ನು ಗಟ್ಟಿಗೊಳಿಸಲು ಪ್ರಯತ್ನಿಸಿದ್ದಾರೆ.

ಬಸವಪೂರ್ವಯುಗದಲ್ಲಿ ವೀರಶೈವರ ಸ್ಥಿತಿಗತಿಗಳನ್ನು ವಿವರಿಸುವ ಮಂಜಪ್ಪನವರು, ಅದು ಬಸವಣ್ಣನವರ ಪೂರ್ವದಲ್ಲಿ ಇದ್ದಿತೆನ್ನುತ್ತಾರೆ. ಈ ಕಾರಣ ಬಸವಣ್ಣನವರು ವೀರಶೈವ ಮತದ ಸಂಸ್ಥಾಪಕರಲ್ಲ ಪುನರುತ್ಥಾನಕರು ಎಂಬ ನಿಲುವನ್ನು ಮಂಡಿಸುತ್ತಾರೆ. ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಯಾವುದೇ ವಿಷಯದ ಬಗ್ಗೆ ಪ್ರಾಚೀನತೆಯನ್ನು ಹೇಳಿಕೊಳ್ಳುವುದು ಒಂದು ವ್ಯಸನವಾಗಿ ಬೆಳೆದಿದ್ದಿತು. ಈ ಹಿನ್ನೆಲೆಯ ಮಂಜಪ್ಪನವರ ಈ ವಾದ ಇಂದು ಸಡಿಲುಗೊಳ್ಳತೊಡಗಿದೆ. ಇಲ್ಲಿಯೇ ಧಾರ್ಮಿಕವಾಗಿ, ಶೈಕ್ಷಣಿಕವಾಗಿ ವೀರಶೈವರಲ್ಲಿ ಉಂಟಾದ ಜಾಗೃತಿಯನ್ನು ಪ್ರಸ್ತಾಪಿಸುವ

---

೨. ವೀರಶೈವ ಮತತತ್ವ–ಹರ್ಡೇಕರ ಮಂಜಪ್ಪ, ಪುಟ, ೯೫.

ಮಂಜಪ್ಪನವರು, ಉತ್ತರ ಕರ್ನಾಟಕದಲ್ಲಿ ಅಂದು ತಲೆ ಎತ್ತಿದ್ದ ವಿದ್ಯಾಸಂಸ್ಥೆಗಳನ್ನು ಉಲ್ಲೇಖಿಸುತ್ತಾರೆ. ಈ ಸಂಸ್ಥೆಗಳು ಬೆಳೆದು ಸಮಾಜಕ್ಕೆ ಬೆಳಕಾಗಲು ಶ್ರೀಮಂತರು ಉದಾರವಾಗಿ ಧನಸಹಾಯ ನೀಡಬೇಕೆಂದು ಸೂಚಿಸುತ್ತಾರೆ. ಶಿಕ್ಷಣ ನಮ್ಮ ಸಂಪತ್ತನ್ನು ವ್ಯಕ್ತಿತ್ವವನ್ನು ವಿಕಸಿಸುವ ಮುಖ್ಯಸಾಧನವಾಗಿದ್ದು, ಇದಕ್ಕೆ ಕೈಗಾರಿಕೆ, ಯಾಂತ್ರಿಕತೆ, ವ್ಯಾಪಾರ ಸಂಬಂಧ ಕೌಶಲ್ಯಗಳು ಅಳವಟ್ಟರೆ ಸಮಾಜ ಏಳ್ಗೆಹೊಂದಿ ಬಡತನ ದೂರವಾಗುತ್ತದೆ. ಪ್ರಾಪಂಚಿಕ ಸುಖಕ್ಕೆ ಸಂಪತ್ತೇ ಮುಖ್ಯವಾಗಿರುವುದರಿಂದ ಅದರ ಅಭಿವೃದ್ಧಿಗೆ ಪೂರಕವಾಗುವ ಕೆಲಸವನ್ನು ಕೈಕೊಳ್ಳಬೇಕು- ಎಂಬ ಧೋರಣೆಯ ಅವರು ವೃತ್ತಿಶಿಕ್ಷಣದ ಮಹತ್ವವನ್ನು ಬೆಂಬಲಿಸುತ್ತಾರೆ (ಇದನ್ನು ಆಲಮಟ್ಟಿಯ ವೀರಶೈವ ವಿದ್ಯಾಲಯದಲ್ಲಿ ಅನುಷ್ಠಾನಕ್ಕೆ ತಂದರು). ಈ ಕುರಿತು "ನಮ್ಮ ಸಮಾಜದ ಪ್ರಮುಖರು, ಹಿತಚಿಂತಕರು ಮಾಡಿರುವ ಹಿತೋಪದೇಶವನ್ನು ನಾವು ಗಮನಿಸದೆ, ಅನ್ಯಸಮಾಜಗಳು ಈ ವರೆಗೂ ಹೊಂದಿರುವ ಅನುಭವ ಪ್ರಯೋಜನವನ್ನು ಪಡೆಯದೆ, ಕಣ್ಣು ಮುಚ್ಚಿಕೊಂಡು ಬಿ. ಎ., ಎಂ. ಎ. ಪದವಿಗಳನ್ನು ಹೊಂದುವ ಶಿಕ್ಷಣಕ್ಕಾಗಿಯೇ ನಮ್ಮ ಶಕ್ತಿಯನ್ನು ಕಳೆಯುತ್ತ ಹೋದರೆ ನಮ್ಮ ಸಮಾಜಕ್ಕೆ ಖಂಡಿತವಾಗಿಯೂ ಕ್ಷೇಮಕರವಾಗುವದಿಲ್ಲ"[೩] ಎಂಬ ಕಳಕಳಿಯ ಮಾತುಗಳು ಇಂದು ಕೂಡ ಪ್ರಸ್ತುವವೆನಿಸುತ್ತವೆ. ಹೀಗಾಗಿ ವಿಜ್ಞಾನ ತಂತ್ರಜ್ಞಾನದ ಯುಗದಲ್ಲಿ ಬದುಕುತ್ತಲಿರುವ ನಾವು ಇದರತ್ತ ಗಮನಹರಿಸಬೇಕಾಗಿದೆ. ಭಾವೈಕ್ಯತೆಯ ಬೇರುಮಾಡಿಕೊಂಡು ವೀರಶೈವರು ಬೆಳೆಯಬೇಕು ಧರ್ಮದ ಗುರುಗಳು ಮಾರ್ಗದರ್ಶಕರಾಗಿ ನಿಂತು ಸಮಾಜವನ್ನು ಎತ್ತರಕ್ಕೆ ಒಯ್ಯಬೇಕೆಂದು ಮನವಿ ಮಾಡುವ ಇವರು, 'ವೀರಶೈವ ಸಮಾಜ' ಸುಧಾರಣೆಯನ್ನು ವೀರಶೈವರೇ ಮಾಡಬೇಕು ಎಂಬ ಕಿವಿಮಾತನ್ನು ಹೇಳುತ್ತಾರೆ.,

ಮಂಜಪ್ಪನವರ **"ವೀರಶೈವ ಏಕೀಕರಣ"** ಎಂಬ ಕೃತಿ **"ವೀರಶೈವ ಮತತತ್ವ"** ಮತ್ತು **"ವೀರಶೈವ ಸಮಾಜಸುಧಾರಣೆ"**, ಕೃತಿಗಳಿಗೆ ಪೂರಕವಾಗಿದ್ದು, ಅವುಗಳ ಮುಂದುವರಿದ ರೂಪವೂ ಆಗಿದೆ. ಅನೇಕ ಪಂಗಡಗಳು, ಪಂಗಡಗಳಲ್ಲಿ ಉಪ ಪಂಗಡಗಳುಂಟಾಗಿ ವೀರಶೈವ ಸಮಾಜ ಛಿದ್ರರೂಪವನ್ನು ತಾಳುತ್ತಲಿದೆ. ಪಂಗಡಗಳಿಗೊಂದು ಸಂಘ ಹುಟ್ಟಿ ಬಿರುಕುಗಳು ಭದ್ರವಾಗತೊಡಗಿವೆ. ಇದು ಈ ಧರ್ಮದ ಏಳ್ಗೆಗೆ ಮಾರಕವಾಗಿರುವುದನ್ನು ೧೯೩೩ರಷ್ಟು ಹಿಂದೆಯೇ ಗಮನಿಸಿದ ಮಂಜಪ್ಪನವರು ಇದೆಲ್ಲ ಮರೆಯಾಗಿ ನಾವೆಲ್ಲ ವೀರಶೈವರು ಎಂಬ ಭಾವ ಅರಳಬೇಕೆಂಬ ಸದಾಶಯದಿಂದ ಕೃತಿರಚನೆ ಮಾಡಿರುವದಾಗಿ ತಿಳಿಸಿದ್ದಾರೆ. ಅವರ ಈ ಆಶಯ ಕೃತಿರೂಪ ಪಡೆಯಲು ಪ್ರೇರಣೆ ನೀಡಿದುದು ಧಾರವಾಡದಲ್ಲಿ ಜರುಗಿದ ೧೧ನೆಯ 'ವೀರಶೈವ ಮಹಾಸಭೆ.' ಈ ಸಭೆಯಲ್ಲಿ ವೀರಶೈವ ಗಣ್ಯರು 'ವೀರಶೈವ ಏಕೀಕರಣ' ಸಂಬಂಧವಾಗಿ ಚರ್ಚಿಸಿ, ನಿರ್ಣಯ ಕೈಕೊಂಡರು. ಇದರ ಫಲ 'ವೀರಶೈವ ಏಕೀಕರಣ' ಹೆಸರಿನ ಪುಟ್ಟ ಪುಸ್ತಕ, ಶೈಲಿ ಸರಳ, ಸಂಭಾಷಣೆ ರೂಪದ ನಿರೂಪಣೆ ಆಕರ್ಷಕ. "ಲಿಂಗಾಯತ (ವೀರಶೈವ)ರಲ್ಲಿ ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆ ಎಂದು ತಿಳಿಯಬಾರದು. ಎಲ್ಲರಲ್ಲಿಯೂ ಪರಸ್ಪರ ಊಟ, ಉಡುಗೆ, ಕೊಡುಕೊಳ್ಳುವುದು ನಡೆಯಬೇಕು"[೪] ಎಂಬುದನ್ನು ಈ ಕೃತಿ ಪ್ರತಿಪಾದಿಸುತ್ತದೆ. ಅಂದು ಮತ್ತು ಇಂದಿಗೂ ವೀರಶೈವ ಸಮಾಜಕ್ಕೆ ಮಾರ್ಗದರ್ಶಕವಾಗಬಲ್ಲ ಈ ಕೃತಿ, ಅವರ ಸಾಮಾಜಿಕ ಕಾಳಜಿಯನ್ನು ಸ್ಪಷ್ಟಪಡಿಸುತ್ತದೆ.

---

೩. ವೀರಶೈವ ಸಮಾಜ ಸುಧಾರಣೆ-ಹರ್ಡೇಕರ ಮಂಜಪ್ಪ, ಪುಟ, ೩೦
೪. ವೀರಶೈವ ಏಕೀಕರಣ-ಹರ್ಡೇಕರ ಮಂಜಪ್ಪ, ಪುಟ ೧

ಹೀಗೆ, ಮಂಜಪ್ಪನವರ ಸಾಮಾಜಿಕ ಸಾಹಿತ್ಯ ಹಲವು ಮುಖಗಳಲ್ಲಿ ವಿಚಾರಗಳನ್ನು ವ್ಯಕ್ತಪಡಿಸುತ್ತ, ಒಟ್ಟು ಸಾಮಾಜಿಕ ಅಭಿವೃದ್ಧಿಗೆ ಪ್ರಯತ್ನಿಸುತ್ತದೆ. ವಿಚಾರಸಾಹಿತ್ಯದ ಅಂಗವಾದ ಸಾಮಾಜಿಕ ಚಿಂತನೆ ಮಂಜಪ್ಪನವರಲ್ಲಿ ಗಾಢವಾಗಿತ್ತು. ಆದರ್ಶಸಮಾಜ ನಿರ್ಮಾಣಕ್ಕೆ ಬೇಕಾಗುವ ಸಾಮಗ್ರಿರೂಪದಲ್ಲಿ ಅವರ ಕೃತಿಗಳು ರೂಪಗೊಂಡವು ಎಂಬುದು ಗಮನಾರ್ಹ. ಪಾರತಂತ್ರ್ಯದ ದಿನಗಳಲ್ಲಿ ಅವರ ಸಮಕಾಲೀನ ಸಮಾಜ ಹಲವು ಸಂಕಷ್ಟಗಳಿಂದ ನರಳುತ್ತಿತ್ತು. ಸಂಪರ್ಕ ವ್ಯವಸ್ಥೆ-ಸಂವಹನ ಮಾಧ್ಯಮಗಳು ಸರಿಯಾಗಿ ಇರದ ವೇಳೆಯಲ್ಲಿ ಅವರು ತಮ್ಮ ಸಮಾಜಮುಖಿ ಆಲೋಚನೆಗಳನ್ನು ಸಂಚಾರದ ಮೂಲಕ, ಸಾಹಿತ್ಯದ ಮೂಲಕ ಪ್ರಸಾರಮಾಡಿದ್ದು ಸಣ್ಣ ಸಂಗತಿಯಲ್ಲ, ಅವರ ಒಟ್ಟು ಸಾಹಿತ್ಯದಲ್ಲಿ ರಾಷ್ಟ್ರ ಮತ್ತು ಸಮಾಜ ಕೇಂದ್ರಬಿಂದುಗಳಾಗಿ ನಿಲ್ಲುತ್ತವೆ. ಇವುಗಳ ಏಳ್ಗೆಯೇ ಮಾನವ ಜನಾಂಗದ ಏಳ್ಗೆ ಎಂಬುದು ಇವರ ಪರಿಭಾವನೆಯಾಗಿದೆ. "ಮಂಜಪ್ಪನವರ ವೈಯಕ್ತಿಕ ಬದುಕು-ಸಾಮಾಜಿಕ ಕ್ರಿಯೆಗಳು, ಹಿಂದೆ ನಿಂತು ಅವರ ಬರಹದ ಪ್ರಭಾವವನ್ನು ದಟ್ಟಗೊಳಿಸುತ್ತವೆ. ಮತ್ತು ಈ ಸಾಮರಸ್ಯದಿಂದಾಗಿ ಅವರ ಬರಹದಲ್ಲಿ ಅವರ ಮನಸ್ಸು ಎದ್ದು ಕಾಣುತ್ತದೆ."[೫] ಎಂಬುದು ತೀರ ಸತ್ಯವಾಗಿದೆ. ತಮ್ಮ ಬದುಕಿನುದ್ದಕ್ಕೂ ತಮಗಾಗಿ ಏನನ್ನು ಅಪೇಕ್ಷಿಸದ ಮಂಜಪ್ಪನವರು ಸಮಾಜಸುಧಾರಣೆಯ ಕನಸನ್ನು ಸದಾ ಕಾಣುತ್ತ ಕ್ರಿಯಾಶೀಲರಾಗುತ್ತಿದ್ದರು. ಇದಕ್ಕಾಗಿ ಹಳ್ಳಿ-ಹಳ್ಳಿ ತಿರುಗಾಡಿದ್ದುಂಟು ಹಲವಾರು ಔಚಿತ್ಯ ಪೂರ್ಣ ಕಾರ್ಯಮಾಡಿದ್ದುಂಟು. ವೈರುಧ್ಯಗಳ ಮಧ್ಯದಲ್ಲಿಯೇ ಜನರಲ್ಲಿ ತಿಳುವಳಿಕೆ ತರಲು ಪ್ರಯತ್ನಿಸಿದ್ದುಂಟು. ಕೃತಿರಚಿಸಿ ಬೆಳಕನ್ನು ಜನರ ಮನಸ್ಸಲ್ಲಿ ಮೂಡಿಸಿದ್ದುಂಟು. ಇವೆಲ್ಲವೂ ಮಂಜಪ್ಪನವರ ನವ ಸಮಾಜ ನಿರ್ಮಾಣದ ಉತ್ಕಟಾಪೇಕ್ಷೆಯನ್ನು ತೋರ್ಪಡಿಸುತ್ತವೆ.

❖❖

೫. ಕರ್ನಾಟಕ ಗಾಂಧೀ ಹರ್ಡೇಕರ ಮಂಜಪ್ಪ, ಸಂ. ಡಾ. ಎಂ. ಎಂ. ಕಲಬುರ್ಗಿ, ಪುಟ, ೩೩೫.

ಓಂ

ಪತಿತೋದ್ಧಾರ

ಲೇಖಕ

ಹರ್ಡೇಕರ ಮಂಜಪ್ಪನವರು

ಬಿ.ಬಿ.ಡಿ. ಪವರ್ ಪ್ರೆಸ್

ಬೆಂಗಳೂರು ಸಿಟಿ

ಕ್ರಿ.ಶ. ೧೯೧೮ ಕ್ರಯ ೪ ಆಣೆ (ಶಾ. ಶ. ೧೮೪೦)

PRINTED AT
THE B.B.D. POWER PRESS, BANGALORE CITY

*

ಪೀಠಿಕೆ

ಕನ್ನಡ ಭಾಷೆಯಲ್ಲಿ ಧಾರ್ಮಿಕ, ನೈತಿಕ, ಶಾಸ್ತ್ರೀಯ ಗ್ರಂಥಗಳು ಅನೇಕವಾಗಿವೆ. ಆದರೆ ಸಾಮಾಜಿಕ ಸುಧಾರಣೆಯ ಪುಸ್ತಕಗಳು ಬಹು ಕಡಿಮೆ. ಅದರಲ್ಲಿಯೂ ಪತಿತ ಜನಗಳ ಉದ್ಧಾರಕ್ಕಾಗಿ ಬರೆದವುಗಳು ಅತಿವಿರಳ. ಆದುದರಿಂದ ಈ ವಿಷಯದ ಮಹತ್ವವಾದರೂ ಜನಸಾಮಾನ್ಯರಿಗೆ ತಿಳಿಯಲೆಂದು ಈ ಘನವಾದ ವಿಷಯವನ್ನು ಬಹು ಸಂಕ್ಷಿಪ್ತವಾಗಿ ಈ ಚಿಕ್ಕ ಪುಸ್ತಕದಲ್ಲಿ ಬರೆದಿದೆ. ಇದರಲ್ಲಿ ಉದಾಹರಿಸಿರುವ ಸಂಗತಿಗಳು ಬಹುಜನಗಳಿಗೆ ವಿರೋಧವಾಗಿ ತೋರಬಹುದು. ಆದರೆ ಅವರು ನಿಷ್ಪಕ್ಷಪಾತ ದೃಷ್ಟಿಯಿಂದಲೂ, ನಿರ್ವಿಕಾರ ಮನಸ್ಸಿನಿಂದಲೂ ಮತ್ತು ಶಾಂತಚಿತ್ತದಿಂದಲೂ ಈ ವಿಷಯಗಳನ್ನು ಯೋಚಿಸಿದರೆ ಇದರಲ್ಲಿ ಪ್ರತಿಪಾದಿಸಿರುವ ಸಂಗತಿಗಳ ನಿಜತ್ವವೂ, ಮಹತ್ವವೂ ಅವರಿಗೆ ಸ್ಪಷ್ಟವಾಗಿ ತಿಳಿಯದೇ ಇರಲಾರವು. ವಾಚಕರಿಗೆ ಯುಕ್ತವೆಂದು ತೋರಿದ ತತ್ವಗಳು ಆಚರಣೆಯಲ್ಲಿ ಬರುವಂತೆ ಪ್ರಯತ್ನಿಸಬೇಕಾಗಿ ಪ್ರಾರ್ಥನೆ.

ತಾ : ೨೮-೭-೧೯೧೮ **ಹರ್ಡೇಕರ ಮಂಜಪ್ಪ**

❖❖

ಓಂ

ಹಿಂದುಗಳಿಗೆ ಸಂದೇಶ!

"ಹಿಂದುಧರ್ಮದಲ್ಲಿದ್ದ ಆರು ಕೋಟಿ ಅಂತ್ಯಜರು ಬೇಸತ್ತು,
ನಿರಾಶರಾಗಿ ಈ ಧರ್ಮವನ್ನೇ ಬಿಟ್ಟು
ಹೋಗುತ್ತಿರುವುದನ್ನು ನಿಲ್ಲಿಸಲು
ಎಲ್ಲರೂ ಪ್ರಯತ್ನಿಸಬೇಕಾಗಿ
ಪ್ರಾರ್ಥಿಸುತ್ತೇನೆ."

ಮಹಾತ್ಮಾ ಎಂ. ಕೆ. ಗಾಂಧಿ

೧ನೆಯ ಪ್ರಕರಣ

ಸಮಾಜ ಸುಧಾರಣೆ

ಬಹುಪ್ರಾಚೀನ ಕಾಲದಿಂದಲೂ ಪ್ರಸಿದ್ಧಿಯನ್ನು ಹೊಂದಿರುವ ಈ ಹಿಂದು ಜನಾಂಗವು ಉನ್ನತ ಸ್ಥಿತಿಗೆ ಬರಬೇಕೆಂದು ಅನೇಕರು ಅನೇಕ ವಿಧವಾಗಿ ಪ್ರಯತ್ನಿಸುತ್ತಿದ್ದಾರೆ. ಅವುಗಳಲ್ಲಿ ಸಮಾಜಸುಧಾರಣೆಯೂ ಒಂದಾಗಿದೆ. ಈ ಸಮಾಜ ಸುಧಾರಣೆಯು ಪುರಾಣಮತವಾದಿಗಳಿಗೆ ಬೇಕಾಗಿಲ್ಲ. ಇವರು ಯಾವಾಗಲೂ ವಿರೋಧಿಸುತ್ತಿದ್ದಾರೆ. ಸಮಾಜ ಸುಧಾರಕರು ಅವರಿಗೆ ಶತ್ರುಗಳಂತೆಯೂ, ಲೋಕಕಂಟಕರಂತೆಯೂ ಕಾಣುತ್ತಿದ್ದಾರೆ. ಪರದೇಶ ಗಮನವು ಶಾಸ್ತ್ರ ಸಮ್ಮತವಾದುದೆಂಬ ಉಪದೇಶವು ಪುರಾಣಮತವಾದಿಗಳಿಗೆ ಕರ್ಣಕಠೋರವಾಗಿದೆ! ಪ್ರೌಢವಿವಾಹವನ್ನಾಗಲಿ, ವಿಧವಾ ವಿವಾಹವನ್ನಾಗಲಿ ಇವರು ಅನಾಚಾರವೆಂದು ತಿಳಿಯುತ್ತಾರೆ! ಸ್ತ್ರಿ ಸ್ವಾತಂತ್ರ್ಯವನ್ನು ಇವರು ನಿಷೇಧಿಸುತ್ತಿರುವರು! ಅನ್ಯಧರ್ಮದವರನ್ನು ಹಿಂದು ಧರ್ಮದಲ್ಲಿ ತೆಗೆದುಕೊಳ್ಳುವುದು ಮಹತ್ತರವಾದ ಪಾಪಕೃತ್ಯವೆಂದು ಭಾವಿಸಿದ್ದಾರೆ! ಜಾತಿಭೇದ ನಿವಾರಣೆಯು ಭಯಂಕರವಾದ ಜಾತಿಸಂಕರವೆಂದು ಹೇಳುತ್ತಿರುವರು! ಇಷ್ಟೇ ಅಲ್ಲ; ಅಂತ್ಯಜರನ್ನು ಸ್ಪರ್ಶಮಾಡಬಹುದೆಂತಲೂ, ಅವರನ್ನು ನಮ್ಮಂತೆಯೇ ಉನ್ನತಸ್ಥಿತಿಗೆ ತರಬೇಕೆಂತಲೂ ಹೇಳುತ್ತಿರುವ ಸುಧಾರಕರು ಧರ್ಮ ಬಾಹ್ಯರೆಂದು ಈ ಪುರಾಣಮತವಾದಿಗಳು ಸಾರುತ್ತಿರುವರು!

ಪಾಶ್ಚಾತ್ಯ ಶಿಕ್ಷಣದ ಸುಸಂಸ್ಕಾರವು ಎಳ್ಳಷ್ಟಾದರೂ ಆಗದೇ ಇದ್ದ ಇಂಥ ವಿಲಕ್ಷಣ ಅಭಿಪ್ರಾಯವುಳ್ಳವರು ಹಿಂದು ಜನರಲ್ಲಿ ಕಡಿಮೆಯಿಲ್ಲ. ಇವರೇ ಅತ್ಯಧಿಕ. ಆದರೂ ಇಂಥವರ ಸಂಖ್ಯೆಯು ದಿನೇ ದಿನೇ ಕಡಿಮೆಯಾಗುತ್ತಿರುವುದು ಸುಚಿನ್ಹವೇ ಸರಿ. ಈ ಪುರಾಣ ಮತವಾದಿಗಳು ಕೂಪಮಂಡೂಕ ನ್ಯಾಯದಂತೆ ಸಂಕುಚಿತ ಬುದ್ಧಿಯುಳ್ಳವರಾಗಿರುವುದರಿಂದ ಹಿಂದು ಜನಾಂಗದ ಜ್ಞಾನಾಭಿವೃದ್ಧಿಗೆ ಬಲವಾದ ಪ್ರತಿಬಂಧ ಉಂಟಾಗಿದೆ. ಯಾವುದೋ ಒಂದು ಕಾಲದಲ್ಲಿ ಆ ಕಾಲಕ್ಕನುಸರಿಸಿ ಬರೆದ ಸ್ಮೃತಿಗ್ರಂಥಗಳ ದಾಸಾನುದಾಸರಾದ ಈ ಪುರಾಣಮತವಾದಿಗಳು ಹಿಂದುಜನಾಂಗದ ಶಾರೀರಕ, ಮಾನಸಿಕ ಅವನತಿಗಳಿಗೆ ಕಾರಣರಾಗಿದ್ದಾರೆ. ಇವರು ರೂಢಿಗೆ ಬದ್ಧರಾಗಿ ಅಂಧಶ್ರದ್ಧೆಯಿಂದ ನಡೆಯುತ್ತಾ ಜನಾಂಗವನ್ನು ಅಧೋಗತಿಗೀಡು ಮಾಡುತ್ತಿದ್ದಾರೆ. ಸಮಾಜ ಸುಧಾರಕರ ಕಾರ್ಯಗಳನ್ನು ನೋಡಿ, ಅಯ್ಯೋ! ಕಲಿಕಾಲ ಬಂದಿತು! ಧರ್ಮಗ್ಲಾನಿಯಾಯಿತು! ಎಲ್ಲೆಲ್ಲಿಯೂ ಅನಾಚಾರಗಳೂ, ನಾಸ್ತಿಕರೂ ಹೆಚ್ಚಿದರಲ್ಲಾ! ಎಂದು

ಇವರು ಕೂಗಿಕೊಳ್ಳುತ್ತಿರುವರು. ಆದರೆ ತಾವು ಹಿಂದು ಜನಾಂಗದೇಳ್ಗೆಗೆ ವಿರೋಧಿಸುವ ಮಹತ್ತರವಾದ ಪಾಪಕೃತ್ಯದಲ್ಲಿ ಮಗ್ನರಾಗಿದ್ದೇವೆಂಬುದನ್ನು ಮಾತ್ರ ಇನ್ನು ತಿಳಿದುಕೊಂಡಿಲ್ಲ.

ಕಾಲಮಾನವನ್ನನುಸರಿಸಿ ಸ್ಮೃತಿಗಳಲ್ಲಿಯೂ ವ್ಯತ್ಯಾಸಮಾಡಬೇಕಾದುದು ಸರ್ವಮಾನ್ಯವಾದ ನಿಯಮವಾಗಿದೆ ಎಂದು ವೇದ ವೇದಾಂಗಗಳನ್ನೆಲ್ಲಾ ಚೆನ್ನಾಗಿ ಅರಿತ ಮಹಾಜ್ಞಾನಿಗಳಾದ ಸ್ವಾಮಿ ವಿವೇಕಾನಂದರವರು ಹೇಳಿರುವುದನ್ನು ಈ ಪುರಾಣಮತವಾದಿಗಳು ಕಿವಿಗೊಟ್ಟು ಕೇಳಬಾರದೇ? ಮಿತ್ರರೇ! ಸ್ಮೃತಿಗಳು ನಿಮಗಾಗಿಯೂ, ನಿಮ್ಮ ಹಿತಕ್ಕಾಗಿಯೂ ಇವೆಯೇ ಹೊರತು ಸ್ಮೃತಿಗಳಿಗಾಗಿ ನೀವೇನೂ ಇಲ್ಲವೆಂಬುದನ್ನು ಲಕ್ಷ್ಯೆಯಲ್ಲಿಡಿರಿ. ಕಾಲಮಾನಕ್ಕನುಸರಿಸಿ ಸ್ಮೃತಿಗಳಲ್ಲಿ ವ್ಯತ್ಯಾಸಮಾಡಿರಿ. ನಿಮ್ಮ ಪ್ರಯೋಜನಕ್ಕಾಗಿ ಅವು ಏರ್ಪಡಿಸಲ್ಪಟ್ಟಿವೆಯೆಂಬುದನ್ನು ತಿಳಿಯದೇ ಸ್ಮೃತಿಗಳ ದಾಸರಾಗಬೇಡಿರಿ. ಹಿಂದುಸ್ಥಾನದ ಕಾಲಸ್ಥಿತಿಯು ಬೇರೆಯಾಗಿದೆ. ಆದಕಾರಣ ಪ್ರಾಚೀನ ಆಚಾರವಿಚಾರಗಳನ್ನೇ ಅನುಸರಿಸುತ್ತ ಹೋಗಿ ನೀವು ನಿಮ್ಮ ಮನುಷ್ಯತ್ವವನ್ನು ಕಳೆದುಕೊಳ್ಳಬೇಡಿರಿ ಎಂದು ವೈದಿಕ ಧರ್ಮಜ್ಞರೂ, ಮಹಾ ತತ್ವಜ್ಞಾನಿಗಳೂ ಆದ ಸ್ವಾಮಿ ಶ್ರೀ ರಾಮತೀರ್ಥರವರು ಬರೆದಿರುವುದನ್ನು ಇವರು ಇನ್ನು ಮೇಲಾದರೂ ಓದಿ ಎಚ್ಚೆತ್ತುಗೊಳ್ಳಬಾರದೇ?

ಪಾಶ್ಚಾತ್ಯ ಶಿಕ್ಷಣದ ಪರಿಣಾಮವು ಯಾವ ಜನಗಳ ಮೇಲೆ ಆಗಿದೆಯೋ ಅವರಲ್ಲಿ ಮುಖ್ಯವಾಗಿ ಮೂರು ವಿಧವಾದ ಅಭಿಪ್ರಾಯವುಳ್ಳವರಿರುತ್ತಾರೆ. ಕೆಲವರು ಪಾಶ್ಚಾತ್ಯರ ಎಲ್ಲಾ ಆಚಾರ ವಿಚಾರಗಳನ್ನೂ ತಾರತಮ್ಯವಿಲ್ಲದೆ ಅನುಸರಿಸುತ್ತ ತಮ್ಮ ಪ್ರಾಚೀನ ಪದ್ಧತಿಗಳನ್ನೆಲ್ಲಾ ದೂಷಿಸುತ್ತಿರುವರು. ಇಂಥ ಸುಧಾರಕರ ಸಂಖ್ಯೆಯು ಇಂಗ್ಲೀಷ್ ವಿದ್ಯಾಭ್ಯಾಸವು ಪ್ರಾರಂಭವಾದ ಕಾಲದಲ್ಲಿ ಹೆಚ್ಚಿದ್ದಿತು. ಆದರೆ ಈಗ ಇಂಥ ಅಭಿಪ್ರಾಯದವರು ಬಹು ಕಡಿಮೆಯಾಗಿದ್ದಾರೆ. ಇನ್ನು ಕೆಲವರು ತಮ್ಮ ಪ್ರಾಚೀನ ಪದ್ಧತಿಗಳಲ್ಲಿ ಅನೇಕ ದೋಷಗಳಿವೆಯೆಂತಲೂ ಅವುಗಳನ್ನು ತಿದ್ದಿಕೊಳ್ಳಬೇಕೆಂತಲೂ, ಮತ್ತು ಪಾಶ್ಚಾತ್ಯರ ಅನೇಕ ನಡತೆಗಳನ್ನು ಅನುಸರಿಸಬೇಕೆಂತಲೂ ಹೇಳುತ್ತಿದ್ದಾರೆ. ಆದರೆ ಅದಕ್ಕಾಗಿಯೇ ಪ್ರಯತ್ನಿಸಬೇಕಾದುದಿಲ್ಲವೆಂತಲೂ, ಅವೆಲ್ಲಾ ದಿನೇ ದಿನೇ ತಾವೇ ಸುಧಾರಿಸುತ್ತವೆಂತಲೂ ಇವರು ಹೇಳುತ್ತಿರುವರು. ತಮ್ಮ ಸಮಾಜದಲ್ಲಿರುವ ದೋಷಗಳನ್ನು ಉಚ್ಚಾಟಿಸಲು ಇವರು ಅಂಜುತ್ತಾರೆ. ರೂಢಿಗೆ ಬದ್ಧರಾಗಿ ನಡೆಯುತ್ತಿರುವ ಅಸಂಖ್ಯಜನಗಳು ತಮಗೆ ವಿರೋಧಿಗಳಾಗುತ್ತಾರೆಂತಲೂ, ಅವರಿಂದ ತಮ್ಮ ಕಾರ್ಯಕ್ಕೆ ಸಹಾಯವು ದೊರೆಯುವುದಿಲ್ಲವೆಂತಲೂ ಇವರು ಭಾವಿಸಿದಂತೆ ತೋರುತ್ತದೆ. ಆದುದರಿಂದ ಇವರು ಸಮಾಜ ಸುಧಾರಣೆಯ ಕಾರ್ಯವನ್ನು ಬಿಟ್ಟು ಕೇವಲ ರಾಜಕೀಯ ಸುಧಾರಣೆಯಲ್ಲಿಯೇ ಮಗ್ನರಾಗಿದ್ದಾರೆ. ಇವರು ರಾಜಕೀಯ ಸುಧಾರಣೆಯೇ ಮೊದಲನೆಯದೆಂತಲೂ, ಆ ಸುಧಾರಣೆಯಾದರೆ ಇತರ ಸುಧಾರಣೆಗಳೆಲ್ಲಾ ತಮ್ಮಿಂದ ತಾವೇ ಆಗುತ್ತವೆಂತಲು ಹೇಳುತ್ತಿರುವರು. ಇವರ ಈ ತಪ್ಪು ಅಭಿಪ್ರಾಯದಿಂದ ಸಮಾಜ ಸುಧಾರಣೆಗೆ ಬಲವಾದ ಪ್ರತಿಬಂಧವುಂಟಾಗಿದೆ.

ರಾಜಕೀಯ ವಿಷಯದಲ್ಲಿಯೂ ಪ್ರಸಿದ್ಧಿಯನ್ನು ಹೊಂದಿರುವ ಸರ್ ರವೀಂದ್ರನಾಥ ಟಾಗೋರ್‌ರವರು ಮೊನ್ನೆತಾನೆ ಬರೆದ Nationalism ಎಂಬ ಪುಸ್ತಕದಲ್ಲಿ "ಹಿಂದುಸ್ಥಾನದವರಾದ ನಮ್ಮಗಳ ಮೊದಲನೆಯ ಕಾರ್ಯವು ಸಮಾಜ ಸುಧಾರಣೆಯೇ ಹೊರತು ರಾಜಕೀಯ ಸುಧಾರಣೆಯಲ್ಲ. ಮತ್ತು ಹಿಂದುಸ್ಥಾನದಲ್ಲಿ ಏಕರಾಷ್ಟ್ರೀಯತ್ವವು ರಾಜಕೀಯ

ಸುಧಾರಣೆಯಿಂದುಂಟಾಗದೆ ಸಾಮಾಜಿಕ ಸುಧಾರಣೆಯಿಂದಲೇ ಪ್ರಾಪ್ತವಾಗುತ್ತದೆ" ಎಂಬುದಾಗಿ ಹೇಳಿರುವುದನ್ನು ಸಮಾಜ ಸುಧಾರಣೆಯ ವಿಷಯದಲ್ಲಿ ಮೂಕವೃತ್ತಿಯನ್ನು ವಹಿಸಿರುವ ರಾಜಕೀಯ ಪ್ರಮುಖರು ನೋಡಬಾರದೇ? ರಾಜಕೀಯ ಸಭೆಯ ಅಧ್ಯಕ್ಷರಾಗಿ "ಹಿಂದುಸ್ಥಾನದ ರಾಜ್ಯಕಾರಭಾರವು ನಮ್ಮ ಸ್ವಾಧೀನವಾದರೆ ಇತರ ಸುಧಾರಣೆಗಳೆಲ್ಲಾ ತಾವಾಗಿಯೇ ಆಗುತ್ತವೆಂದು ಕೆಲವರು ಯೋಚಿಸಿದ್ದಾರೆ. ಇದು ಇವರ ಮೂಢತನವು" ಎಂದು ಹೇಳಿರುವುದನ್ನು ಇವರು ಕಿವಿಗೊಟ್ಟು ಕೇಳಬಾರದೇ? ಸಾಮಾಜಿಕ ಸುಧಾರಣೆಯಾಗದೆ ಇರುವುದರಿಂದ ಈಗ ರಾಜಕೀಯ ಸುಧಾರಣೆಗೆ ಹಿಂದುಸ್ಥಾನದಲ್ಲಿ ಎಷ್ಟು ವಿಘ್ನಗಳುಂಟಾದವೆಂಬುದನ್ನು ನೋಡಿಯಾದರೂ ನಮ್ಮ ರಾಜಕೀಯ ಸುಧಾರಕರು ಎಚ್ಚರಗೊಳ್ಳಬಾರದೆ? ಹಿಂದುಸ್ಥಾನದಲ್ಲುಂಟಾಗಿರುವ ನವಚೈತನ್ಯವನ್ನು ನೋಡಿ ಕೆಲವು ರಾಜಕೀಯ ಮುಖಂಡರು ತಮ್ಮ ತಪ್ಪನ್ನು ತಿದ್ದಿಕೊಳ್ಳುತ್ತಿರುವಂತೆ ಕಾಣುತ್ತದೆ. ಇನ್ನು ಮೇಲಾದರೂ ಇವರು ಸಾಮಾಜಿಕ ಸುಧಾರಣೆಯ ಕಡೆಗೆ ಲಕ್ಷ್ಯಕೊಟ್ಟರೆ ಅಥವಾ ವಿರೋಧಿಸುವುದನ್ನಾದರೂ ಬಿಟ್ಟರೆ ಎಷ್ಟೋ ಹಿತವಾಗಬಹುದು.

ಅನೇಕರು ತಮ್ಮ ಸಮಾಜದಲ್ಲಿರತಕ್ಕ ದೋಷಗಳನ್ನು ತೆಗೆಯಲು ಹೇಗೆ ಸಿದ್ಧರಾಗಿದ್ದಾರೆಯೋ ಹಾಗೆಯೇ ಅನ್ಯ ಸಮಾಜಗಳಲ್ಲಿರುವ ಗುಣಗಳನ್ನೂ ತೆಗೆದುಕೊಳ್ಳುತ್ತಿರುವರು. ಇವರು ರಾಜಕೀಯ ವಿಷಯಕ್ಕೆ ಎಷ್ಟು ಪ್ರಾಮುಖ್ಯತೆಯನ್ನು ಕೊಡುತ್ತಿರುವರೋ ಅಷ್ಟೇ ಮಹತ್ವವನ್ನು ಸಾಮಾಜಿಕ ವಿಷಯಕ್ಕೂ ಕೊಡುತ್ತಿರುವರು. ಒಬ್ಬ ವ್ಯಕ್ತಿಯು ರಾಜಕೀಯ ಬಂಧನದಿಂದ ಬಿಡುಗಡೆಯಾಗುವುದು ಎಷ್ಟು ಯುಕ್ತವೋ ಅಷ್ಟೇ ಸಾಮಾಜಿಕ ತೊಂದರೆಯಿಂದಲೂ ತಪ್ಪಿಸಿಕೊಳ್ಳುವುದು ವಿಹಿತವೆಮದು ಈ ಸುಧಾರಕರು ಹೇಳುತ್ತಿದ್ಧಾರೆ. ಆದುದರಿಂದ ಸಾಮಾಜಿಕ ರಾಜಕೀಯ ಸುಧಾರಣೆಗಳು ಅವಿಚ್ಛಿನ್ನವಾಗಿಯೇ ನಡೆಯಬೇಕೆಂದು ಪ್ರಯತ್ನಿಸುತ್ತಿದ್ಧಾರೆ. ಇಂಥವರ ಸಂಖ್ಯೆಯು ಪ್ರಕೃತ ಕಡಿಮೆಯಾಗಿದ್ದರೂ ದಿನೇ ದಿನೇ ಹೆಚ್ಚುವಂತೆ ತೋರುತ್ತಿದೆ. ದೇಹದಲ್ಲಿ ರೋಗವನ್ನಿಟ್ಟುಕೊಳ್ಳುವುದು ಹೇಗೆ ಅಪಾಯಕರವೋ ಹಾಗೆಯೇ ಸಮಾಜದಲ್ಲಿ ದೋಷಗಳನ್ನಿಟ್ಟುಕೊಳ್ಳುವುದು ಅನರ್ಥಕಾರಿಯು, ರೋಗನಿವಾರಣೆಗಾಗಿ ಎಷ್ಟಾದರು ಕಷ್ಟಗಳನ್ನನುಭವಿಸಬೇಕಾದುದು ಹೇಗೆ ಯುಕ್ತವೋ ಹಾಗೆಯೇ ಸಮಾಜದಲ್ಲಿರತಕ್ಕ ಅಪಾಯಕರವಾದ ಪದ್ಧತಿಗಳನ್ನು ನಿವಾರಣೆಮಾಡಲು ಎಂಥ ದುಃಖವನ್ನಾದರೂ ಅನುಭವಿಸಲು ಸಿದ್ಧರಾಗಬೇಕಾದುದು ವಿಹಿತವು. ಒಂದು ದೇಹವು ಪುಷ್ಟವಾಗಿರಬೇಕಾದರೆ ಎಲ್ಲಾ ಅವಯವಗಳೂ ಸರಿಯಾಗಿಯೇ ಬೆಳೆಯಬೇಕಾದುದು ಅವಶ್ಯಕವಷ್ಟೆ? ಕೇವಲ ಹೊಟ್ಟೆಯೊಂದೇ ಬಲವಾದರೆ ಸಾಕೆಂದು ಯೋಚಿಸಿ ಅದನ್ನೇ ಬೆಳೆಸಿದರೆ ಅದೊಂದು ರೋಗವಾಗಿ ಪರಿಣಮಿಸುವುದಿಲ್ಲವೇ? ಹಾಗೆಯೇ ಒಂದು ಜನಾಂಗವು ಉನ್ನತ ಸ್ಥಿತಿಗೆ ಬರಬೇಕಾದರೆ ರಾಜಕೀಯ ಅಥವಾ ಸಮಾಜಿಕ, ಇಲ್ಲವೇ ಧಾರ್ಮಿಕ ಈ ಪ್ರಕಾರ ಯಾವುದೋ ಒಂದು ವಿಷಯದಲ್ಲಿಯೇ ಮಾತ್ರ ಸುಧಾರಣೆಯಾದರೆ ಸಾಲದು. ಈ ಎಲ್ಲಾ ವಿಷಯಗಳಲ್ಲಿಯೂ ಸುಧಾರಣೆಯಾಗಬೇಕು. ಆದಕಾರಣ, ಹಿಂದು ಜನಾಂಗವನ್ನು ಅಭಿವೃದ್ಧಿಗೆ ತರಬೇಕೆಂದು ಅಪೇಕ್ಷಿಸುವ ಪ್ರತಿಯೊಬ್ಬರೂ ಈ ಸಾಮಾಜಿಕ ವಿಷಯದಲ್ಲಿ ಪ್ರಯತ್ನಿಸುವುದು ಅವಶ್ಯಕವಲ್ಲವೇ?

ಸಾಮಾಜಿಕ ಸುಧಾರಣೆಯಲ್ಲಿ ಯಾವ ವಿಷಯದ ಕಡೆಗೆ ಮೊದಲು ಮನಸ್ಸು ಕೊಡಬೇಕೆಂಬುದು ಅವರವರ ಅಭಿಪ್ರಾಯಕ್ಕೊಳಪಟದ್ದಾಗಿದೆ. ತಮತಮಗೆ ಇಷ್ಟವಾಗಿ ತೋರಿದ ಸಂಗತಿಗಳ ಕಡೆಗೆ

ಲಕ್ಷಿಸುತ್ತಿದ್ದಾರೆ. ಕೆಲವರು ಹಿಂದುಗಳಲ್ಲಿರುವ ಬಾಲವಿಧವೆಯರ ಕಷ್ಟಗಳನ್ನೂ ಅವರಿಗೆ ಸಮಾಜದವರಿಂದಾಗುತ್ತಿರುವ ಮಾನದಂಡನೆ, ಹಿಂಸೆ ಮೊದಲಾದವಗಳನ್ನೂ ನೋಡಿ ಕನಿಕರ ಹುಟ್ಟಿ ಅವರ ಸುಧಾರಣೆಯಲ್ಲಿಯೇ ತಮ್ಮ ಆಯುಷ್ಯವನ್ನು ಕಳೆಯುತ್ತಿರುವರು. ಇನ್ನು ಕೆಲವರು ಸ್ತ್ರೀಯರಿಗಿರುವ ಪರತಂತ್ರವನ್ನೂ ಅವರೂ ಅಜ್ಞಾನದಿಂದ ಬಳಲುತ್ತಿರುವುದನ್ನೂ ಪುರುಷರು ಅವರನ್ನು ಸೆರೆ ಆಳುಗಳನ್ನಾಗಿ ಮಾಡಿಕೊಂಡು ಕಷ್ಟಪಡಿಸುತ್ತಿರುವುದನ್ನೂ ನೋಡಿ ಮರುಗಿ ಸ್ತ್ರೀಯರ ಸುಧಾರಣೆಗಾಗಿಯೇ ತಮ್ಮ ಆಯುಷ್ಯವನ್ನು ಅರ್ಪಿಸಿದ್ದಾರೆ. ಮತ್ತೆ ಹಲವರು ಈ ದೇಶದ ಅಂತ್ಯಜರ ದುಸ್ಥಿತಿಯನ್ನೂ, ಅವರಿಗೆ ಉತ್ತಮ ವರ್ಣದವರಿಂದಾಗುತ್ತಿರುವ ಮಾನಹಾನಿ, ಹಿಂಸೆ ಮೊದಲಾದವುಗಳನ್ನೂ ಕಂಡು ಬಹು ಕಳವಳಪಟ್ಟು ಆ ಜನಗಳ ಉದ್ಧಾರದಲ್ಲಿಯೇ ಆತ್ಮಾರ್ಪಣೆ ಮಾಡುತ್ತಿರುವರು. ಸಮಾಜ ಸುಧಾರಣೆಯ ಕಾರ್ಯದಲ್ಲಿ ಇವುಗಳೆಲ್ಲಾ ಪ್ರಾಮುಖ್ಯವಾದವುಗಳೇ ಆಗಿವೆ. ಆದರೂ ಇವುಗಳಲ್ಲಿ ಪತಿತ ಜನಗಳ ಉದ್ಧಾರದ ವಿಷಯವು ಬಹು ಮುಖ್ಯವಾದದ್ದಾಗಿದೆ. ಹಿಂದುಸ್ಥಾನದಲ್ಲಿ ಸಾಧಾರಣವಾಗಿ ಆರು ಕೋಟಿ ಅಂತ್ಯಜರು ಬಹು ಹೀನ ಸ್ಥಿತಿಯಲ್ಲಿದ್ದಾರೆ. ಇವರ ಅಭಿವೃದ್ಧಿಯು ಕೇವಲ ಸಾಮಾಜಿಕ ಸುಸ್ಥಿತಿಗೆ ಕಾರಣವಾಗಿರದೆ ಧಾರ್ಮಿಕ ಮತ್ತು ರಾಜಕೀಯ ವಿಷಯಗಳಲ್ಲಿಯೂ ಎಷ್ಟು ಮಹತ್ವವಾದದ್ದಾಗಿದೆಯೆಂಬುದು ಮುಂದಣ ಪ್ರಕರಣಗಳನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಓದುವವರಿಗೆ ವ್ಯಕ್ತವಾಗದೇ ಇರಲಾರದು.

❖❖

೨ನೆಯ ಪ್ರಕರಣ

ಅಂತ್ಯಜರ ದುಸ್ಥಿತಿ

ಈಗಿನ ಹಿಂದುಗಳ ಪೂರ್ವಜರಾದ ಆರ್ಯರು ನಮ್ಮಂತೆ ಭೇದ ಬುದ್ಧಿಯುಳ್ಳವರಾಗಿರಲಿಲ್ಲ. ಅವರು ಸತ್ಯಪ್ರಿಯರೂ, ವಿಶಾಲಮತಿಗಳೂ ಆಗಿದ್ದರು. ಬ್ರಾಹ್ಮಣನಲ್ಲಿ ಹುಟ್ಟಿದವರೆಲ್ಲಾ ಬ್ರಾಹ್ಮಣರೆಂತಲೂ, ಶೂದ್ರನಲ್ಲಿ ಹುಟ್ಟಿದವರೆಲ್ಲಾ ಶೂದ್ರರೆಂತಲ್ಲೂ ಅವರು ತಿಳಿಯುತ್ತಿರಲಿಲ್ಲ. ಅಂತ್ಯಜನಲ್ಲಿ ಹುಟ್ಟಿದ ಒಬ್ಬ ಮನುಷ್ಯನು ಎಷ್ಟೇ ಸದ್ಗುಣಿಯೂ, ಸದಾಚಾರಿಯೂ, ಇದ್ದರು ಆತನ ಶೂದ್ರತ್ವವು ಮಾತ್ರ ಹೋಗುವುದೇ ಇಲ್ಲವೆಂದಾಗಲಿ, ಅಥವಾ ಬ್ರಾಹ್ಮಣನಲ್ಲಿ ಹುಟ್ಟಿದ ಒಬ್ಬ ಮನುಷ್ಯನು ಎಷ್ಟೇ ದುರ್ಗುಣಿಯೂ, ದುರಾಚಾರಿಯೂ ಇದ್ದರು ಆತನ ಬ್ರಾಹ್ಮಣವು ಮಾತ್ರ ಇದ್ದೇ ಇರುತ್ತದೆಂದಾದಲಿ ಈಗಿನ ಹಿಂದುಗಳು ಹೇಗೆ ತಿಳಿಯುತ್ತಾರೆಯೋ ಹಾಗೆ ಅವರು ಭಾವಿಸುತ್ತಿರಲಿಲ್ಲ. ವರ್ಣಕ್ಕೆ ಜನ್ಮವು ಪ್ರಾಧಾನ್ಯವಾಗಿರದೆ ಗುಣಕರ್ಮಗಳೇ ಮುಖ್ಯವೆಂದು ಅವರು ತಿಳಿಯುತ್ತಿದ್ದರು. ಆದಕಾರಣ ಹಿಂದುಗಳಿಗೆ ಬಹು ಪವಿತ್ರವಾಗಿಯೂ, ಮಾನ್ಯವಾಗಿಯೂ ಇರುವ ಭಗವದ್ಗೀತೆಯಲ್ಲಿ **"ಚಾತುರ್ವರ್ಣ್ಯಂ ಮಯಾಸೃಷ್ಟ್ಯಂ ಗುಣಕರ್ಮವಿಭಾಗಶಃ"** ಬ್ರಾಹ್ಮಣಾದಿ ಚಾತುರ್ವರ್ಣಗಳು ಗುಣಕರ್ಮಗಳನ್ನನುಸರಿಸಿ ನನ್ನಿಂದ ಏರ್ಪಡಿಸಲ್ಪಟ್ಟವೆಯೆಂದು ಶ್ರೀ ಕೃಷ್ಣನು ಹೇಳಿದ್ಧಾನೆ.

ಈ ಶ್ರೇಷ್ಠ ತತ್ವವು ದಿನೇ ದಿನೇ ಲೋಪವಾಗುತ್ತಾ ವರ್ಣಕ್ಕೆ ಜನ್ಮವೇ ಮೂಲವಾಗಿ ಪರಿಣಮಿಸಿ ಗುಣಕರ್ಮಗಳ ಪ್ರಾಮುಖ್ಯತೆಯೇ ಇಲ್ಲದಂತಾಯಿತು. ಎಷ್ಟೋ ಸಾಹಸಪಟ್ಟು ಸದ್ಗುಣಿಯೂ, ಸತ್ಕರ್ಮಿಯೂ ಆಗಿ ಯಾವ ಪೂಜ್ಯತೆಯನ್ನು ಹೊಂದಬೇಕಾಗಿದ್ದಿತೋ ಅಂಥ ಗೌರವಾದಿಗಳು ಕೇವಲ ಜನ್ಮದಿಂದಲೇ ಪ್ರಾಪ್ತವಾಗಲುಪಕ್ರಮಿಸಿದವು. ಇಷ್ಟು ನಿರಾಯಾಸವಾಗಯೇ ಘನತೆಯು ದೊರೆಯುತ್ತಿದ್ದ ಮೇಲೆ ಆ ಸತ್ಕರ್ಮಗಳನ್ನಾಚರಿಸುವ ಕಷ್ಟವಾದರೂ ಏಕೆಂದು ಉತ್ತಮ ವರ್ಣದವರು ಯೋಚಿಸಿದ್ದುದು ಸ್ವಾಭಾವಿಕವಲ್ಲವೇ? ತಾವು ಎಷ್ಟೇ ಕಷ್ಟಪಟ್ಟು ಸದಾಚರಣೆಯಲ್ಲಿದ್ದರೂ ತಮ್ಮ ಶೂದ್ರತ್ವವೂ ಆ ಮೂಲಕ ಆಗುತ್ತಿದ್ದ ಮಾನಹಾನಿ, ಹಿಂಸೆ ಮೊದಲಾದವುಗಳೂ ಹೋಗದೇ ಇದ್ದಮೇಲೆ ತಾವು ಏಕೆ ವೃಥಾ ಶ್ರಮಪಡಬೇಕೆಂದು ಕೀಳುಕುಲದವರು ನಿರಾಶರಾದುದೂ ಸ್ವಭಾವಿಕವಲ್ಲವೇ? ಹೀಗಾಗಿ ಗುಣಕರ್ಮಗಳ ಕಡೆಗೆ ಯಾರೂ ಲಕ್ಷಿಸದೆ ಎಲ್ಲ ವರ್ಣದವರೂ ವಂಶಪಾರಂಪರ್ಯವಾಗಿ ಆಯಾಯ ವರ್ಣದವರೆಂಬುದಾಗಿಯೇ ಹೇಳಿಕೊಳ್ಳುತ್ತಾ ಬಂದರು. ಇದರಿಂದ ಒಂದು ವರ್ಗದವರು ಯಾವಾಗಲೂ ಶ್ರೇಷ್ಠರೆಂತಲೂ, ಇನ್ನೊಂದು ವರ್ಗದವರು

ನಿರಂತರದಲ್ಲಿಯೂ ಕನಿಷ್ಠರೆಂತಲೂ, ತಿಳಿಯಲು ಅವಕಾಶವಾಯಿತು. ಆಗ ಉತ್ತಮವರ್ಗದವರು ಹೀನಕುಲದವರನ್ನು ಬಗೆಬಗೆಯಿಂದ ಹಿಂಸೆಗೊಳಿಸಲಾರಂಭಿಸಿದರು.

ಪರದೇಶದವರು ಈ ದೇಶಕ್ಕೆ ಬರುವ ಮುಂಚೆ ಉತ್ತಮವರ್ಣದವರ ಪ್ರಾಬಲ್ಯವು ಅತ್ಯಧಿಕವಾಗಿದ್ದಿತು. ಅನ್ಯದೇಶದವರು ಈ ದೇಶದಲ್ಲಿ ಹೆಚ್ಚು ಹೆಚ್ಚಾಗಿ ಪ್ರವೇಶಸಿದಂತೆ ಕೀಳು ವರ್ಣದವರ ಹೀನಸ್ಥಿತಿಯು ಕಡಿಮೆಯಾಗಲಾರಂಭಿಸಿತು. ಆದರೂ ಈಗ ಕೂಡ ಈ ಜನಗಳ ದುಸ್ಥಿತಿಯು ಕಲ್ಪನಾತತೀತವಾಗಿದೆ. ಮುಸಲ್ಮಾನರು ಈ ದೇಶಕ್ಕೆ ಬರುವ ಪೂರ್ವದಲ್ಲಿ ಅಲ್ಬೇರೂನಿ ಎಂಬ ಪ್ರಸಿದ್ಧ ವಿದ್ವಾಂಸರು ಹಿಂದುಸ್ಥಾನಕ್ಕೆ ಬಂದು ಒಂದು ಸಂಸತವನ್ನು ಕಲಿತು ಇಲ್ಲಿನ ಸಂಗತಿಗಳನ್ನೆಲ್ಲಾ ತಿಳಿದುಕೊಂಡು ಹೋಗಿ ಒಂದು ಪುಸ್ತಕವನ್ನು ಬರೆದಿದ್ದಾನೆ. ಅದರಲ್ಲಿ ಆತನು ಹಿಂದುಸ್ಥಾನದ ಉತ್ತಮವರ್ಣದವರು ಅಲ್ಲಿಯ ಕೀಳುಕುಲದವರ ಹಿತದ ಕಡೆಗೆ ಸ್ವಲ್ಪಾದರೂ ಲಕ್ಷ ಕೊಡದೆ ಇರುವುದರಿಂದ ಆ ಕೀಳು ಜನಗಳು ಬಹುಶೋಚನೀಯ ಸ್ಥಿತಿಯಲ್ಲಿದ್ಧಾರೆ ಎಂದು ಸ್ಪಷ್ಟವಾಗಿ ಬರೆದಿದ್ಧಾನೆ. ಮುಸಲ್ಮಾನವರು ಈ ದೇಶಕ್ಕೆ ಬಂದ ನಂತರ ಅವರು ತಮ್ಮ ಧರ್ಮಪ್ರಸಾರಣೆಯನ್ನು ಬಲಾತ್ಕಾರವಾಗಿಯೂ ಮಾಡಲುಪಕ್ರಮಿಸಿದಾಗ ಈ ಶ್ರೇಷ್ಟವರ್ಣದವರಿಂದಾಗುತ್ತಿದ್ದ ಹಿಂಸೆ ಕಡಿಮೆಯಾಯಿತು. ಅನಂತರ ಸ್ವಂತತ್ರಪ್ರಿಯರಾದ ಇಂಗ್ಲೀಷರು ಈ ದೇಶವನ್ನು ಆಕ್ರಮಿಸಿಕೊಂಡದ್ದರಿಂದ ದಿನೇ ದಿನೇ ವ್ಯಕ್ತಿ ಸ್ವಾತಂತ್ರ್ಯವು ಹೆಚ್ಚುತ್ತಾ ಬಂದಿತು.

ಈ ಇಪ್ಪತ್ತನೆಯ ಶತಮಾನವು ಸ್ವಾತಂತ್ರ್ಯಯುಗದ ಪ್ರಥಮ ಶತಮಾನವೆಂದು ತೋರುತ್ತದೆ. ಪ್ರಪಂಚದ ಎಲ್ಲಾ ದೇಶಗಳೂ ಸ್ವತಂತ್ರ ಸಂಪಾದನೆಗಾಗಿಯೂ ಪ್ರಯತ್ನಿಸುತ್ತಲಿವೆ. ಪ್ರತಿಯೊಂದು ದೇಶದ ಪ್ರತಿಯೊಂದು ಮತದವರೂ ತಮ್ಮ ತಮ್ಮ ಸ್ವಾತಂತ್ರ್ಯಕ್ಕಾಗಿಯೇ ಯತ್ನಿಸುತ್ತಿದ್ಧಾರೆ. ಇಷ್ಟೇ ಅಲ್ಲ ಒಂದು ಮತದಲ್ಲಿಯ ಅನೇಕ ಒಳ ಭೇದಗಳು ಕೂಡಾ ಸ್ವತಂತ್ರವಾಗಬೇಕೆಂದು ಸಾಹಸಪಡುತ್ತಲಿವೆ. ಈ ಸ್ವಾತಂತ್ರ್ಯಶಕ್ತಿಯು ರಾಜ ಪ್ರಜೆಗಳಲ್ಲಿಯೂ, ಸ್ತ್ರೀ ಪುರಷರಲ್ಲಿಯೂ ಆಳು ಯಜಮನರಲ್ಲಿಯೂ ಗುರು ಶಿಷ್ಯರಲ್ಲಿಯೂ, ಇಷ್ಟೇ ಅಲ್ಲ, ತಂದೆ ಮಕ್ಕಳಲ್ಲಿಯೂ, ಅಣ್ಣ ತಮ್ಮಂದಿರಲ್ಲಿಯೂ, ಸತಿ ಪತಿಯರಲ್ಲಿಯೂ ಕೂಡಾ ಪ್ರವೇಶವಾಗಿ ಸೇವೆ ಸೇವಕ ಭಾವನೆಯನ್ನು ತಪ್ಪಿಸಿ ಪ್ರತಿಯೊಂದು ವ್ಯಕ್ತಿಗೂ ಸಮಾನ ಶಬ್ದವೇ ಕೇಳುತ್ತಿರುವುದು. ಇಂಥ ಸಮಯದಲ್ಲಿ ಕೋಟ್ಯಾಂತರ ಜನಗಳು ಧಾರ್ಮಿಕ ಬಂಧನದಿಂದ ಪೂರ್ವದಂತೆ ಬಳಲುತ್ತಿರುವುದು ಶಕ್ಯವೇ? ಆದುದರಿಂದ ಆದಷ್ಟು ಜಾಗ್ರತೆ ಅವರನ್ನು ಬಂಥನದಿಂದ ಬಿಡಿಸಿ, ಆ ಮೂಲಕ ಹಿಂದು ಜನಾಂಗವನ್ನೂ ದೇಶವನ್ನೂ ಅಭಿವೃದ್ಧಿಗೆ ತರುವುದೇ ದೇಶೋದ್ಧಾರಕರಿಗೆ ಪ್ರಥಮ ಕರ್ತವ್ಯವಲ್ಲವೇ?

ಶ್ರೇಷ್ಠ ವರ್ಣದವರು ಮುಟ್ಟಿಸಿಕೊಳ್ಳದೇ ಅನೇಕ ತೊಂದರೆಗಳನ್ನು ಕೊಡುತ್ತಿರುವ ಹೊಲೆಯ, ಮಾದಿಗ, ಮೊದಲಾದ ಅಂತ್ಯಜರ ಸಂಖ್ಯೆಯು ಹಿಂದುಸ್ಥಾನದಲ್ಲಿ ಸಾಧಾರಣ ಆರು ಕೋಟಿ ಇದೆಯಷ್ಟೇ ಎಂದರೆ, ಸುಮಾರು ಜರ್ಮನ್ ದೇಶದ ಜನಗಳಷ್ಟು ಈ ಅಂತ್ಯಜರಿದ್ಧಾರೆ. ಇಷ್ಟೆಲ್ಲಾ ಜನಗಳು ಎಂತಹ ದುಸ್ಥಿತಿಯಲ್ಲಿದ್ಧಾರೆಂಬುದನ್ನು ಈ ದೇಶದವರಿಗೆ ವಿವರಿಸಿ ಹೇಳಬೇಕಾದುದಿಲ್ಲ. ಈ ಜನಗಳೆಲ್ಲಾ ಉತ್ತಮವರ್ಣದವರಿಗೆ ಪಶುಗಳಿಗಿಂತಲು ಕೀಳಾಗಿ ಕಾಣುತ್ತಾರೆ. ನಾಯಿ, ನರಿ, ದನ, ಕರುಗಳೇ ಮೊದಲಾದ ಪಶುಗಳನ್ನು ಮುಟ್ಟುತ್ತಾರೆ. ಆದರೆ ಪ್ರಾಣಿಗಳಲ್ಲೆಲ್ಲಾ ಶ್ರೇಷ್ಟವಾದ

ಮನುಷ್ಯ ಜಾತಿಯಲ್ಲಿ ಹುಟ್ಟಿದ ಈ ಅಂತ್ಯಜರನ್ನು ಮುಟ್ಟುವುದಿಲ್ಲ! ಈ ಜನರ ಹೀನಸ್ಥಿತಿಯನ್ನು ಕುರಿತು ಶ್ರೀಮತ್ಪರಮಹಂಸಸ್ವಾಮಿ ರಾಮತೀರ್ಥರು ಅಮೇರಿಕಾರದಲ್ಲಿ ಹೇಳಿರುವದೇನೆಂದರೆ:

ಅಂತ್ಯಜರು ಬ್ರಾಹ್ಮಣಾದಿ ಉತ್ತಮವರ್ಣದವರ ಹತ್ತಿರ ಹೋಗಲು ಪ್ರತಿಬಂಧವಿದೆ. ಇಷ್ಟೇ ಅಲ್ಲ; ಅವರ ನೆರಳು ಕೂಡಾ ಉಚ್ಚ ವರ್ಣದವರ ಮೈಮೇಲೆ ಬೀಳಬಾರದು. ಹಾಗೆ ನೆರಳುಬಿದ್ದರೆ ತಾವು ಶುದ್ದರಾಗಬೇಕೆಂದು ಸ್ನಾನಮಾಡುತ್ತಾರೆ. ಶೂದ್ರರು ಮುಟ್ಟಿದ ಪದಾರ್ಥಗಳು ಮೈಲಿಗೆಯಾದವೆಂದು ಅವುಗಳನ್ನು ಮುಟ್ಟುವುದಿಲ್ಲ. ಈ ಶೂದ್ರರಾದರೋ ಮಾರ್ಗಗಳನ್ನೂ, ಕಾಲುವೆಗಳನ್ನು ಗುಡಿಸುವುದಲ್ಲದೆ ಮಲ ಮೊದಲಾದ ಅತ್ಯಂತ ಕೊಳೆ ಪದಾರ್ಥಗಳನ್ನು ತೆಗೆಯುವ ಕಷ್ಟತರವಾದ ಕೆಲಸಗಳನ್ನು ಮಾಡುತ್ತಿದ್ಧಾರೆ. ಇಂಥ ಕೆಲಸಗಳನ್ನು ಮಾಡಿ ಉತ್ತಮವರ್ಣದವರು ಹಾಕುವ ಹಳಸಿದ ಆಹಾರವನ್ನು ತಿಂದು ಜೀವಿಸುತ್ತಿದ್ಧಾರೆ. ಈ ಶೂದ್ರರ ಮಕ್ಕಳನ್ನು ಉತ್ತಮವರ್ಣದವರ ಪಾಠಶಾಲೆಗಳಲ್ಲಿ ಸೇರಿಸುವುದಿಲ್ಲ. ಇಂಥ ಸಾಮಾಜಿಕ ಬಲಾತ್ಕಾರದಿಂದ ಬಳಲುತ್ತ ಹೊಲಸು ಗುಡಿಸಲುಗಳಲ್ಲಿ ವಾಸವಾಗಿರುವ ದರಿದ್ರರಾದ ಈ ಅಂತ್ಯಜರೇ ಹಿಂದುಸ್ಥಾನದ ಎಲ್ಲಾ ರೋಗಗಳನ್ನೂ ಬಹು ಆದರದಿಂದ ಬರಮಾಡಿಕೊಳ್ಳುತ್ತಿರುವ ಯಜಮಾನರು! ಈ ಕೀಳು ಜನಗಳೇ ಸಮಾಜವೆಂಬ ದೇಹಕ್ಕೆ ಕಾಲುಗಳಂತೆಯೂ, ಸಮಾಜವೆಂಬ ಮಂದಿರಕ್ಕೆ ಆಸ್ತಿಭಾರದಂತೆಯೂ ಇದ್ದಾರೆ. ಯಾವ ಸಮಾಜವು ಕೀಳುಜನಗಳ ಉನ್ನತೆಗೆ ಆತಂಕವನ್ನುಂಟುಮಾಡುತ್ತದೆಯೋ ಮತ್ತು ಆ ಜನಗಳ ಶಿಕ್ಷಣಕ್ಕೆ ಪ್ರತಿಬಂಧವನ್ನುಂಟುಮಾಡುತ್ತಿದೆಯೋ ಆ ಸಮಾಜವು ತನ್ನ ಮನೆಯ ಆಸ್ತಿಭಾರವನ್ನು ತಾನೇ ಕೀಳುತ್ತಿದೆಯೆಂದು ತಿಳಿಯಬೇಕು. ಇಂಥ ಸಮಾಜವು ಅಧೋಗತಿಗಿಡಾಗದೇ ಇರುವುದಿಲ್ಲ.

ಈ ದೇಶದ ಅಂತ್ಯಜರ ವಿಷಯವಾಗಿ ಮಹಾತ್ಮಾ ಗಾಂಧಿಯವರು ಗುಜರಾತಿ ಪತ್ರಿಕೆಯಲ್ಲಿ ಬರೆದಿರುವುದೇನೆಂದರೆ : "ಹೊಲೆಯ, ಮಾದಿಗ, ಮೊದಲಾದ ಅಂತ್ಯಜರನ್ನು ಮುಟ್ಟಬಾರದೆಂಬ ರೂಢಿಯು ಅತ್ಯಂತ ನಿಂದ್ಯವಾದುದಾಗಿದೆ. ಧರ್ಮದ ಹೆಸರಿನಿಂದ ಕಳೆದ ಎರಡು ಸಾವಿರ ವರ್ಷಗಳಿಂದಲೂ, ಅಂತ್ಯಜರನ್ನು ಈ ರೀತಿಯಾಗಿ ನಡೆಯಿಸಿಕೊಳ್ಳುತ್ತಾ ಬಂದಿರುವ ಪಾಪದ ರಾಶಿಯು ಹಿಂದುಧರ್ಮದಮೇಲೆ ಪರ್ವತಪ್ರಾಯವಾಗಿದೆ. ಉಗಿಯಬಂಡಿಯ ಒಂದು ಪೆಟ್ಟಿಗೆಯಲ್ಲಿ ಒಬ್ಬ ಅಂತ್ಯಜನು ಬಂದೊಡನೆ ಎಲ್ಲರೂ ಅವನನ್ನು ಹೊಡೆಯಲಿಕ್ಕೆ ಹೋಗುತ್ತಾರೆ. ಬಾಯಿಗೆ ಬಂದಂತೆ ಬೈಯುತ್ತಾರೆ. "ಚಹಾ" ಮಾರುವವರು ಅವರಿಗೆ "ಚಹಾ" ಕೊಡುವುದಿಲ್ಲ. ಅವರು ಸಾಯುತ್ತಿದ್ದರೂ ಅವರನ್ನು ಮುಟ್ಟುವುದಿಲ್ಲ. ತಾನು ಉಂಡು ಬಿಟ್ಟ ಎಂಜಲವನ್ನು ಅವರಿಗೆ ಉಣ್ಣಲಿಕ್ಕೆ ಹಾಕುತ್ತಾರೆ. ತಾವು ತೊಟ್ಟುಬಿಟ್ಟ ಹರಕುಬಟ್ಟೆಗಳನ್ನು ಅವರಿಗೆ ಕೊಡುತ್ತಾರೆ. ಅವರಿಗೆ ವಿದ್ಯೆಯನ್ನು ಕಲಿಸಲು ಯಾರೂ ಬರುವುದಿಲ್ಲ. ಈ ಅಂತ್ಯಜರು ಮಾರ್ಗದಲ್ಲಿ ಹೋಗುತ್ತಿರುವಾಗ ಉತ್ತಮ ವರ್ಣದವರು ತಮ್ಮನ್ನು ಮುಟ್ಟಬೇಡಿರೆಂದು ಹೇಳುತ್ತಾರೆ. ಇದಕ್ಕಿಂತಲೂ ಇವರನ್ನು ಹೀನವಾಗಿ ಕಾಣುವುದು ಬೇರೆಯುಂಟೇ? ಅಂತ್ಯಜರ ಉದ್ಯೋಗವೇನಾದರು ಹೀನವಾದುದೇ? ನಮ್ಮ ತಾಯಿ ಮತ್ತು ವೈದ್ಯರು ಮಲ ಮೊದಲಾದ ಕೊಳೆಗಳನ್ನು ತೆಗತೆದು ಸ್ವಚ್ಛಮಾಡುವುದಿಲ್ಲವೇ? ಆದರೆ ಇವರು ಪುನಃ ಶುಚಿಯಾಗುತ್ತಾರೆಂದು ಕೆಲವರು ಹೇಳಬಹುದು. ಇವರಂತೆಯೇ ಆ ಅಂತ್ಯಜರೂ ಶುದ್ಧರಾಗಿರುವುದಕ್ಕೆ ನಾವೇ ಕಾರಣರು. ನಾವು ಎಂದು ಅವರನ್ನು ಪ್ರೇಮದಿಂದ ಮುಟ್ಟಲು ಪ್ರಾರಂಭಿಸುತ್ತೇವೆಯೋ ಅಂದಿನಿಂದ ಅವರು ಸ್ವಚ್ಛವಾಗಿರುವಂತೆಯೂ ನಾವು

ಪ್ರಯತ್ನಿಸುತ್ತೇವೆ. ಅವರ ವೃತ್ತಿಯು ಹೀನವಾದುದೆಂದು ತಿಳಿಯುವುದು ಸರಿಯಲ್ಲ. ದೇಶವು ಅನೇಕ ರೋಗಗಳಿಂದ ನರಳದೆ ಇರುವುದಕ್ಕೆ ಅವರ ವೃತ್ತಿಯೂ ಒಂದು ಮುಖ್ಯಕಾರಣವಾಗಿದೆ. ಆದುದರಿಂದ ವೈದ್ಯರು, ಡಾಕ್ಟರುಗಳಂತೆ ಈ ಅಂತ್ಯಜರೂ ಮಾನ್ಯರೇ ಸರಿ."

ಇದು ಧಾರ್ಮಿಕ ವಿಷಯವಾಗಿರುವುದರಿಂದ ಧರ್ಮಗುರುಗಳ ಅಭಿಪ್ರಾಯಕ್ಕೆ ಜನಸಾಮಾನ್ಯರು ಎಷ್ಟು ಮಹತ್ವವನ್ನು ಕೊಡುತ್ತಾರೆಯೊ, ಅಷ್ಟು, ಈ ಮುಖಂಡರ ಮಾತಿಗೆ ಮಹತ್ವವನ್ನು ಕೊಡುವುದಿಲ್ಲ. ಏಕೆಂದರೆ, ಆಂಗ್ಲ ವಿದ್ಯೆಯನ್ನು ಕಲಿತವರೆಲ್ಲಾ ಪ್ರಾಯಶಃ ಧರ್ಮ ಬಾಹ್ಯರೇ ಇರುತ್ತಾರೆಂಬ ತಪ್ಪು ತಿಳುವಳಿಕೆಯು ಜನಸಾಮಾನ್ಯರಲ್ಲಿದೆ. ಈ ಕಾಲದಲ್ಲಿ ಧರ್ಮ ಗುರುಗಳಾದರೂ ತಮ್ಮ ಆಜ್ಞರಾದ ಶಿಷ್ಯರಲ್ಲಿ ಈ ಸುಶಿಕ್ಷಿತರ ವಿಷಯವಾಗಿ ದುರುಭಿಪ್ರಾಯವನ್ನು ಹುಟ್ಟಿಸಿ ತಾವು ಅವರಿಂದ ಗೌರವವನ್ನು ಹೊಂದುತ್ತಿದ್ದಾರೆ. ಇಂತಹ ವಿಷಮಕಾಲದಲ್ಲಿ ಷಣ್ಮತಸ್ಥಾಪನಾಚಾರ್ಯರೂ, ಹಿಂದುಧರ್ಮದ ಪ್ರಮುಖ ಗುರುಗಳೂ ಆದ ಶ್ರೀ ಮಚ್ಛಂಕರಾಚಾರ್ಯರವರ ಪೀಠದ ಶಾಖಾನುವರ್ತಿಗಳಾದ ಕರವೀರ ಪೀಠದ ಶ್ರೀ ಶಂಕರಾಚಾರ್ಯರವರು ಬೊಂಬಾಯಿಯಲ್ಲಿ ಕಳೆದ ಮಾರ್ಚಿ ತಿಂಗಳು ೨೩-೨೪ನೆಯ ತಾರೀಖುಗಳಲ್ಲಿ ಅಂತ್ಯಜರ ಉದ್ಧಾರಕ್ಕಾಗಿ ಸೇರಿದ್ದ ಸಭೆಗೆ ಬರೆದು ಕಳುಹಿಸಿರುವುದರಲ್ಲಿ ಹೇಳಿರುವುದೇನೆಂದರೆ?

"ಯಾವ ಲೌಕಿಕ ಗೃಹಸ್ಥರು ಕೇವಲ ಧರ್ಮಾಚರಣೆಗಳಲ್ಲಿಯೇ ಕಾಲವನ್ನು ಕಳೆಯದೆ ಉದ್ಯೋಗಗಳನ್ನು ಮಾಡುತ್ತ ಮುಸಲ್ಮಾನರನ್ನೂ, ಕ್ರೈಸ್ತರನ್ನೂ, ಮುಟ್ಟಿಸಿಕೊಳ್ಳುತ್ತಾರೆಯೋ ಅಂಥವರು ತಮ್ಮ ಹಿಂದುಗಳಲ್ಲಿಯೇ ಕೆಲವರನ್ನು ಮುಟ್ಟದಿರುವುದು ಪಾಪವೇ ಸರಿ. ದಯೆಯೇ ಎಲ್ಲಾ ಧರ್ಮಚರಣೆಗಳ ಮೂಲವಾಗಿರುವುದರಿಂದ ಕೇವಲ ಕೀಳು ಕುಲದ ಜನಗಳಲ್ಲಿ ಸಹ ಯಾರು ಸಹೋದರಭಾವನೆಯುಳ್ಳವರಾಗಿರುತ್ತಾರೆಯೋ ಅವರೇ ನಿಜವಾದ ಧಾರ್ಮಿಕರು. ಅಂತ್ಯಜ ವರ್ಗದಲ್ಲಿ ಕೂಡ ಅನೇಕ ಸಾಧುಗಳು ಅವತರಿಸಿ ಬ್ರಾಹ್ಮಣರಿಗೂ ಪೂಜ್ಯರಾಗಿದ್ದುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಅಂತ್ಯಜರ ಇರುವಿಕೆಯು ದಿನೇ ದಿನೇ ಸುಧಾರಿಸುತ್ತಾ ಇದೆ ಮತ್ತು ಇತರ ಜನಗಳ ನಡತೆಯಾದರೋ ಕೇವಲ ಪಾರಲೌಕಿಕ ದೃಷ್ಟಿಯುಳ್ಳದ್ದಾಗಿಯೇ ಇಲ್ಲ. ಇಂತಹ ಸಮಯದಲ್ಲಿ ಅಂತ್ಯಜರು ಹಿಂದು ಧರ್ಮವನ್ನು ಬಿಟ್ಟು ಬೇರೇ ಧರ್ಮಗಳಲ್ಲಿ ಸೇರಬಾರದೆಂಬ ಉದ್ದೇಶದಿಂದಾದಲೂ ಅವರ ಸಂಗಡ ಯೋಗ್ಯ ರೀತಿಯಿಂದ ನಡೆದುಕೊಳ್ಳಬೇಕು."

ಇದೇನೋ ಅನಧಿಕಾರಿಗಳ ಕೂಗೆಂದು ಹೇಳಲು ಸಾಧ್ಯವೇ? ಪವಿತ್ರವಾದ ಗುರುಪೀಠದಲ್ಲಿ ಕುಳಿತು ಹೇಳಿದ ಅಧಿಕಾರಯುಕ್ತವಾದ ವಾಣಿಯಲ್ಲವೇ? ರೂಢಿಗೆ ಬದ್ಧರಾಗಿ ಮೂಢಭಕ್ತಿಯಿಂದ ನಡೆಯುತ್ತಿರುವ ಜನಗಳು ಇನ್ನು ಮೇಲಾದರು ಕಣ್ಣು ತೆರೆದು ತಾವು ಮಾಡುತ್ತಿರುವ ಅನರ್ಥವನ್ನು ನೋಡಬಾರದೇ? ಕೊಲೆ, ವ್ಯಭಿಚಾರ, ವಂಚನೆ, ಹಿಂಸೆ, ದ್ರೋಹ ಮೊದಲಾದ ನೀಚವೃತ್ತಿಗಳಲ್ಲಿರುವವರು ನಿಮಗೆ ಅಂತ್ಯಜರಂತೆ ತೋರುವುದಿಲ್ಲವೇ? ಅವರ ಸ್ಪರ್ಶವು ನಿಮಗೆ ಮೈಲಿಗೆಯನ್ನುಂಟುಮಾಡುವುದಿಲ್ಲವೇ? ಜಾತಿ ಚಂಡಾಲರಿಗಿಂತಲು ಈ ನೀಚಚಂಡಾಲರನ್ನು ನೀವು ಹೆಚ್ಚೆಂದು ತಿಳಿಯಬಹುದೇ? ಉತ್ತಮವರ್ಣದಲ್ಲಿ ಹುಟ್ಟಿದವರೆಲ್ಲಾ ಉತ್ತಮರೇ ಇರುತ್ತಾರೆಂದು ತಿಳಿಯುವುದು ಮೂಢತನವಲ್ಲವೇ? ಅಂತ್ಯಜರಿಗಿಂತಲೂ ಹೀನ ಗುಣ ಕರ್ಮಗಳುಳ್ಳ ಅಸಂಖ್ಯ ಜನಗಳು ನಾಮಧಾರಿಗಳಾದ ಉತ್ತಮವರ್ಣದವರಲ್ಲಿದ್ದ ಸಮಾಜಕಂಟಕರಾಗಿರುವುದು ನಿಮ್ಮ

ಕಣ್ಣಿಗೆ ಕಾಣುವುದಿಲ್ಲವೆ? ಕೀಳು ಕುಲದಲ್ಲಿ ಹುಟ್ಟಿದವರೆಲ್ಲಾ ನೀಚರೆಂದು ತಿಳಿದು ಅವರನ್ನು ಪಶುಗಳಿಗಿಂತಲು ಕಡೆಯಾಗಿ ಕಾಣುತ್ತಿರುವಂಥ ಪಾಪಕೃತ್ಯವನ್ನು ಮಾಡುತ್ತಿರುವುದು ಯುಕ್ತವೇ? ದಕ್ಷಿಣ ಆಫ್ರಿಕೆಯಲ್ಲಿ ಹಿಂದುಗಳನ್ನು ಯೂರೋಪದವರು ಕೀಳಾಗಿ ಕಾಣುತ್ತಾರೆಂದು ಆಕಾಶ ಪಾತಾಳಗಳೊಂದಾಗುವಂತೆ ಕೂಗುತ್ತಿರುವ ಜನಗಳು ತಮ್ಮ ದೇಶದಲ್ಲಿ ತಮ್ಮ ಧರ್ಮಬಾಂಧವರನ್ನು ಈ ರೀತಿಯಾಗಿ ನಡೆಯಿಸಿಕೊಳ್ಳಲು ನಾಚಬಾರದೇ?

ರಾಮ ಎಂಬ ಹೆಸರಿನ ಒಬ್ಬ ಅಂತ್ಯಜನು ಹಿಂದುಧರ್ಮದಲ್ಲಿಯೇ ಇದ್ದು ಈ ಧರ್ಮದ ಉತ್ತಮ ವರ್ಣದವರನ್ನು ಗುರುಗಳೆಂದು ಭಾವಿಸಿ ಜೀವಿಸುತ್ತಿದ್ದಾಗ ಅವನನ್ನು ಮುಟ್ಟದೆ ಬಹು ಕೀಳಾಗಿ ಕಾಣುತ್ತಾರೆ. ಆದರೆ ಆತನೇ ಮಹಮ್ಮದೀ ಧರ್ಮವನ್ನು ಸೇರಿ ಹುಸೇನ್ ಸಾಹೇಬನೆಂದು ಹೆಸರಿಟ್ಟುಕೊಂಡ ಮೇಲಾಗಲಿ, ಅಥವಾ ಕ್ರೈಸ್ತಧರ್ಮವನ್ನು ಸೇರಿ ಆಂಡ್ರೂವ ಎಂಬ ಹೆಸರನ್ನಿಟ್ಟುಕೊಂಡ ನಂತರವಾಗಲಿ, ಅದೇ ರಾಮನಿಗೆ ಸಲಾಮು ಮಾಡಲಿಕ್ಕೂ ಆತನ ಹಸ್ತಾಂದೋಳನಕ್ಕೂ ಯಾವ ಜನಗಳು ಮುಂಚೆ ಹತ್ತಿರ ನಿಲ್ಲಲಿಕ್ಕೆ ಸಹ ಅವಕಾಶವನ್ನು ಕೊಡುತ್ತಿದ್ದಿಲ್ಲವೊ ಆ ಜನಗಳೇ ಸಿದ್ಧರಾಗುತ್ತಾರೆ! ಇದೆಂತಹ ವಿಚಿತ್ರವೂ? ತಮ್ಮ ಹಿಂದುಧರ್ಮವು ಆ ಉಭಯಧರ್ಮಗಳಿಗಿಂತಲೂ ಕೀಳಾದುದೆಂದು ಇವರೇ ಒಪ್ಪಿಕೊಂಡಂತಾಗಲಿಲ್ಲವೇ? ಇಲ್ಲದಿದ್ದರೆ ತಮ್ಮ ಧರ್ಮದಲ್ಲಿರುವಾಗ ಆತನು ಅಷ್ಟು ಕೀಳಾಗಿದ್ದುದಕ್ಕೂ, ಅನಂತರ ಅವನಿಗೆ ಅಷ್ಟು ಮನ್ನಣೆ ದೊರೆತಿದ್ದಕ್ಕೂ ಕಾರಣವೇನು? ಇದೆಂತಹ ಮೂರ್ಖತನವು? ಅಂತ್ಯಜರ ವಿಷಯದಲ್ಲಿರುವ ಈ ಅನ್ಯಾಯವನ್ನು ದೂರಮಾಡಲು ಸ್ವಂತ ಬುದ್ಧಿಯನ್ನುಪಯೋಗಿಸಿರಿ. ಸಂಸ್ಕೃತ ಭಾಷೆಯಲ್ಲಿ ಬರೆದಿರುವುವೆಲ್ಲಾ ವೇದವಾಕ್ಯಗಳೆಂದು ತಿಳಿಯಬೇಡಿರಿ. ಈ ನಿಮ್ಮ ಮೂಢತನವನ್ನು ನೋಡಿ ಪ್ರಪಂಚವೇ ನಗುತ್ತಲಿದೆ. ಇನ್ನು ಮೇಲಾದರೂ ಎಚ್ಚತ್ತು ನಿಜವನ್ನು ತಿಳಿದುಕೊಳ್ಳಿರಿ. ಈಗ ಆಚರಣೆಯಲ್ಲಿರುವ ಮಡಿ ಮೈಲಿಗೆಗಳಲ್ಲಿಯೇ ಧರ್ಮಾಧರ್ಮಗಳಿವೆಯೆಂದು ತಿಳಿಯಬೇಡಿರಿ. ನಮ್ಮ ಧಾರ್ಮಿಕ ಸ್ಥಿತಿಯನ್ನು ಕುರಿತು ಸ್ವಾಮಿ ವಿವೇಕಾನಂದರವರು ಹೇಳಿರುವುದೇನೆಂದರೆ.

"ನಮಗೆ ಈಗ ವೇದಾಂತಿಗಳೆಂದು ಹೇಳುವಂತಿಲ್ಲ. ಅಥವಾ ಪೌರಾಣಿಕರೆಂತಲೂ ಹೇಳುವಹಾಗಿಲ್ಲ. ಆದರೆ ನಮಗೆ ಮುಟ್ಟಬೇಡಿ ಎಂಬುದೇ ಸರಿಯಾದ ಹೆಸರಾಗಿದೆ. ಏಕೆಂದರೆ, ಅಡಿಗೆಯ ಮನೆಯೇ ನಮ್ಮ ಧರ್ಮವಾಗಿಯೂ, ಅನ್ನದ ಪಾತ್ರೆಯೇ ನಮ್ಮ ದೇವರಾಗಿಯೂ, ನನ್ನ ಮುಟ್ಟಬೇಡ; ನಾನು ಮಡಿಯಲ್ಲಿದ್ದೇನೆ ಎಂಬುದೇ ನಮ್ಮ ವೇದಾಂತವಾಗಿಯೂ ಇವೆ. ಈ ಮೂರ್ಖತನವೂ ನಮ್ಮಲ್ಲಿ ಇನ್ನೂ ನೂರಾರು ವರ್ಷಗಳವರೆಗೆ ಇದ್ದರೆ ಈ ದೇಶದವರೆನ್ನೆಲ್ಲಾ ಹುಚ್ಚರ ವೈದ್ಯಾಲಯಕ್ಕೆ ತೆಗೆದುಕೊಂಡು ಹೋಗಬೇಕಾಗುವುದು."

ಅತ್ಯಂತ ಶ್ರೇಷ್ಟವಾದ ವೈಧಿಕಧರ್ಮವು ಈಗ ಎಂತಹ ಸ್ಥಿತಿಗೆ ಬಂದಿದೆಯೆಂಬುದನ್ನು ನೋಡಿರಿ. ಈ ದುಸ್ಥಿತಿಯಿಂದ ಪಾರಾಗಬೇಕಾದರೆ ನಮ್ಮ ಧರ್ಮಬಾಂಧವರಾದ ೬ ಕೋಟಿ ಅಂತ್ಯಜರನ್ನು ಸುಧಾರಿಸುವುದು ಎಷ್ಟು ಮಹತ್ವದ್ದಾಗಿಯೂ ಪವಿತ್ರವಾಗಿಯೂ ಇದೆಯೆಂಬುದನ್ನು ನಿಷ್ಪಕ್ಷಪಾತ ಬುದ್ಧಿಯಿಂದ ಯೋಚಿಸಿರಿ. ನಾವು ಈಗಲೇ ಎಚ್ಚತ್ತು ಈ ವಿಷಯದಲ್ಲಿ ಪ್ರಯತ್ನಿಸದಿದ್ದರೆ ನಮ್ಮ ಧರ್ಮಕ್ಕೂ ದೇಶಕ್ಕೂ ಎಂತಹ ಭಯಂಕರವಾದ ವಿಪತ್ತುಂಟಾಗಬಹುದೆಂಬುದನ್ನು ಊಹಿಸಿ ಕಾರ್ಯತತ್ಪರರಾಗಿರಿ.

ಅಂತ್ಯಜರನ್ನು ಸುಧಾರಿಸುವುದು ಅತ್ಯಾವಶ್ಯಕವೆಂದು ಈವರೆಗೆ ವಿವರಿಸಿದ ಸಂಗತಿಗಳಿಂದ ಸಿದ್ದವಾಯಿತಷ್ಟೆ. ಆದರೆ ಯಾವ ರೀತಿಯಿಂದ ಸುಧಾರಿಸಬೇಕೆಂಬುದು ಮಾತ್ರ ಈವರೆಗೂ ಉದಾಹರಿಸಿಲ್ಲ ಆದಕಾರಣ ಸುಧಾರಿಸುವ ಕ್ರಮಗಳನ್ನು ಕುರಿತು ಯೋಚಿಸೋಣ.

(೧) ನಾವು ಅವರನ್ನು ಮುಟ್ಟದೇ ಇರುವ ಬಹಿಷ್ಕಾರವನ್ನು ಮೊದಲು ತೆಗೆದುಹಾಕಬೇಕು. ಇದೊಂದರಿಂದಲೇ ಅವರು ಎಷ್ಟೋ ಸುಧಾರಿಸುತ್ತಾರೆ. ಏಕೆಂದರೆ, ಸಮಾಜದಲ್ಲಿ ಅವರು ಸಮ್ಮಿಳಿತರಾಗಲು ಅವಕಾಶವುಂಟಾಗುವುದು. ಆಗ, ತಾವು ಅನ್ಯರಿಗೆ ಸಮಾನರಾಗಬೇಕೆಂಬ ಉತ್ಸಾಹವುಂಟಾಗುತ್ತದೆ. ಈ ಮುಟ್ಟದಿರುವ ಬಹಿಷ್ಕಾರವನ್ನು ತೆಗೆದುಹಾಕದಿದ್ದರೆ ಅವರ ನಿಜವಾದ ಸ್ಥಿತಿಯು ನಮಗೆ ತಿಳಿಯುವುದಿಲ್ಲ. ಅವರ ವಿಷಯದಲ್ಲಿ ಸಂಪೂರ್ಣ ಸಹಾನುಭುತಿಯು ನಮಗೆ ಹುಟ್ಟುವುದಿಲ್ಲ. ಮತ್ತು ಅವರು ನಮ್ಮ ಮೇಲೆ ನಿಜವಾದ ವಿಶ್ವಾಸವನ್ನಿಡುವುದಿಲ್ಲ.

(೨) ಇವರ ವಿದ್ಯಾಭ್ಯಾಸಕ್ಕಾಗಿ ಪ್ರಯತ್ನಿಸುವುದು ಎರಡನೆಯ ಸುದಾರಣೆಯು, ಉತ್ತಮವರ್ಣದವರೇ ಉಪಾಧ್ಯಾಯರಾಗಿ ಅನ್ಯಬಾಲಕರಂತೆಯೇ ಅವರನ್ನು ಕಾಣುತ್ತ ಹೆಚ್ಚು ಪ್ರೀತಿಯಿಂದಲೂ, ಅಭಿಮಾನದಿಂದಲೂ ವಿದ್ಯಾಭ್ಯಾಸ ಮಾಡಿಸಬೇಕು.

(೩) ಇವರ ಸ್ವಚ್ಛತೆ, ಮತ್ತು ಮದ್ಯಪಾನದಿಂದಾಗುತ್ತಿರುವ ಅನರ್ಥ, ಇವುಗಳನ್ನು ಕುರಿತು ಈ ಜನಗಳ ಸಭೆ ಸೇರಿಸಿ ಬೊಧಿಸುವುದು ಮೂರನೆಯ ಸುಧಾರಣೆಯು. ಈ ಜನಗಳ ಮನೆಗೂ ಓಣಿಗಳಿಗೂ ಆಗಾಗ್ಗೆ ಹೋಗಿ ಈ ವಿಷಯಗಳನ್ನು ಬೋಧಿಸಬೇಕು.

ಈ ಮೂರು ವಿಧವಾದ ಏರ್ಪಾಟುಗಳನ್ನು ಮೊದಲು ಮಾಡಬೇಕು. ಧನಿಕರು ತಮ್ಮ ದ್ರವ್ಯಬಲದಿಂದಲೂ ವಿದ್ಯಾವಂತರು ತಮ್ಮ ವಿದ್ಯಾಬಲದಿಂದಲೂ ಸಂಘಮೂಲಕವಾಗಿ ಈ ಪವಿತ್ರವಾದ ಕಾರ್ಯಗಳನ್ನು ಮಾಡಲು ಈಗಲೇ ಸಿದ್ದರಾಗಬೇಕು. ಹಿಂದುಧರ್ಮಾಭಿಮಾನಿಯಾದ ಪ್ರತಿಯೊಬ್ಬನಿಗೂ ಇದು ಶ್ರೇಷ್ಠವಾದ ಕರ್ತವ್ಯವಾಗಿದೆ. ಈ ಕರ್ತವ್ಯವನ್ನು ಮಾಡಿ ಅಂತ್ಯಜರನ್ನು ಸುಧಾರಿಸದಿದ್ದರೆ ಹಿಂದುಜನಾಂಗಕ್ಕೆ ಕೇವಲ ಧಾರ್ಮಿಕ ವಿಷಯದಿಂದಲ್ಲ; ರಾಜಕೀಯ ವಿಷಯದಲ್ಲಿಯೂ ಮುಂದೆ ಎಂಥ ಭಯಂಕರವಾದ ಅನರ್ಥವುಂಟಾಗುತ್ತದೆಂಬುದು ಮುಂದಣ ಪ್ರಕರಣದಲ್ಲಿ ವಿವರಿಸಿದೆ.

❖❖

೩ನೆಯ ಪ್ರಕರಣ

ಹಿಂದುಜನಾಂಗದ ಕ್ಷೀಣತೆ

ಪ್ರಾಚೀನಕಾಲದ ಹಿಂದುಗಳು ನಮ್ಮಂತೆ ಹೀನಸ್ಥಿತಿಯಲ್ಲಿರಲಿಲ್ಲ. ಅವರು ಜಗತ್ತಿನ ಎಷ್ಟೋ ಭಾಗಗಲ್ಲಿ ತಮ್ಮ ಸಾಹಸ ಪರಾಕ್ರಮ ಮತ್ತು ಬುದ್ಧಿಬಲಗಳಿಂದ ರಾಜ್ಯವನ್ನು ಸ್ಥಾಪಿಸಿ ತಮ್ಮ ವೈದಿಕಧರ್ಮವು ಎಲ್ಲೆಲ್ಲಿಯೂ ಪ್ರಕಾಶಿಸುವಂತೆ ಮಾಡಿದ್ದರು. ಇಂಗ್ಲೀಷರು ಈ ಕಾಲದಲ್ಲಿ ಹೇಗೆ ಪ್ರಪಂಚದಲ್ಲೆಲ್ಲಾ ವ್ಯಾಪಿಸಿರುತ್ತಾರೋ ಹಾಗೆಯೇ ಒಂದಾನೊಂದು ಕಾಲದಲ್ಲಿ ನಮ್ಮ ಪೂರ್ವಜರು ಅನೇಕ ಕಡೆಗಳಲ್ಲಿ ನೆಲೆಸಿದ್ದರು. ಇದು ಅಭಿಮಾನಕ್ಕಾಗಿ ಅಡಿಕೊಳ್ಳತಕ್ಕ ಮಾತಲ್ಲ. ಕರ್ನಲ್ ಟಾಡ್, ಎಲ್ಫಿನ್‌ಸ್ಟನ್, ಬುಲರ್ ಮೊದಲಾದ ಅನೇಕ ಪಾಶ್ಚಾತ್ಯ ಇತಿಹಾಸಜ್ಞರೇ ಅನಂತ ಆಧಾರಗಳಿಂದ ಹೇಳುತ್ತಿದ್ಧಾರೆ. ಅವುಗಳನ್ನೆಲ್ಲಾ ಉದಾಹರಿಸುವುದು ಪ್ರಕೃತದ ವಿಷಯವಲ್ಲ. ಆದರೂ ಬುಲರ್ ಎಂಬ ಇತಿಹಾಸ್ಞರು ಬರೆದಿರುವ ಪುಸ್ತಕದೊಳಗಿನ ಒಂದೇ ಒಂದು ಸಂಗತಿಯನ್ನು ಇಲ್ಲಿ ವಿವರಿಸುವೆವು ಅದರ ಮೇಲಿಂದ ನಮ್ಮ ಪ್ರಾಚೀನರ ಯೋಗ್ಯತೆಯ ಸ್ಪಷ್ಟವಾಗಿ ಗೊತ್ತಾಗುವುದು.

ಬುಲರ್‌ರವರು ಹೇಳುವುದೇನೆಂದರೆ : "ಇತ್ತೀಚೆಗೆ ಗೊತ್ತಾದ ಅನೇಕ ಸಂಗತಿಗಳಿಂದ ಹಿಂದು ಜನಗಳು ಹಿಂದುಸ್ಥಾನದ ಪೂರ್ವ ಪಶ್ಚಿಮ ದಿಕ್ಕುಗಳಲ್ಲಿ ಬಹುದೂರದವರೆಗೂ ವಾಸವಾಗಿದ್ದರೆಂದು ತೋರುತ್ತದೆ. ಹಿಂದುಸ್ಥಾನದ ಪಶ್ಚಿಮ ದಿಕ್ಕುಗಳಲ್ಲಿ ಬಹುದೂರದವರೆಗೂ ವಾಸವಾಗಿದ್ದರೆಂದು ತೋರುತ್ತದೆ. ಹಿಂದುಸ್ಥಾನದ ಪಶ್ಚಿಮಕ್ಕೆ ಇರಾಣದ ಕೊಲ್ಲಿಯಿಂದ ಕೆಂಪುಸಮುದ್ರದ ದಂಡೆಗುಂಟ ಝುಂಜಿಬಾರದವರೆಗೆ ಆಫ್ರಿಕಾಖಂಡದ ಪೂರ್ವ ಭಾಗದಲ್ಲಿ ಹಿಂದು ಜನಗಳ ಉಪನಿವೇಶನಗಳು(Colonies)ಇದ್ದುವು. ಇದರಂತೆಯೇ ಹಿಂದುಸ್ಥಾನದ ಪೂರ್ವಕ್ಕೆ ಸಂಪೂರ್ಣವಾದ ಸಿಯಾಮ ಪ್ರಾಂತ್ಯವನ್ನು ಹಿಂದು ಜನಗಳು ವ್ಯಾಪಿಸಿ ಬಹು ದೂರದಲ್ಲಿರುವ ಫಿಲಿಫೈನ್ ದ್ವೀಪಗಳವರೆಗೂ ಮತ್ತು ಜಾವಾ, ಸುಮಾತ್ರಾ, ಬೋರ್ನಿವೋ, ಕ್ಯಾಂಬೋಡಿಯಾ ಮೊದಲಾದ ದ್ವೀಪಗಳಲ್ಲಿಯೂ ವಾಸವಾಗಿದ್ದರು. ಬೌದ್ಧಧರ್ಮವು ಹುಟ್ಟುವುದಕ್ಕಿಂತ ಪೂರ್ವದಲ್ಲಿಯೇ ಹಿಂದೂ ವೀರರು ತಮ್ಮ ಪರಾಕ್ರಮದಿಂದ ಈ ದೇಶಗಳಲ್ಲೆಲ್ಲಾ ತಮ್ಮ ರಾಜ್ಯವನ್ನು ಸ್ಥಾಪಿಸಿದ್ದಿರು. ಕ್ಯಾಂಬೋಡಿಯ ಮೊದಲಾದ ದೇಶಗಳಲ್ಲಿ ದೊರೆತಿರುವ ಶಿಲಾಶಾಸನಗಳಿಂದ ಆ ಕಾಲದಲ್ಲಿ ಆ ಎಲ್ಲಾ ದೇಶಗಳಲ್ಲಿಯೂ ಸಂಸ್ಕೃತವೇ ರಾಜಭಾಷೆಯಾಗಿದ್ದಿತೆಂತಲೂ, ರಾಜಾಶ್ರಯದಲ್ಲಿದ್ದ ಕವಿಗಳು ಸಂಸ್ಕೃತದಲ್ಲಿಯೇ ಕಾವ್ಯಗಳನ್ನು ಬರೆಯುತ್ತಿದ್ದರೆಂತಲೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಿಂದುಸ್ಥಾನದಲ್ಲಿ ಹೇಗೆ ಶಿವ

ಮತ್ತು ವಿಷ್ಣು ಈ ಉಭಯ ದೇವರಲ್ಲಿ ಹೆಚ್ಚು ಭಕ್ತಿಯುಳ್ಳವರಾಗಿದ್ದರೋ ಮತ್ತು **ಮಹಾಭಾರತ** ಗ್ರಂಥವನ್ನು ಎಷ್ಟು ವಿಶ್ವಾಸದಿಂದ ಓದುತ್ತಿದ್ದರೋ ಹಾಗೆಯೇ ಮೇಲೆ ವಿವರಿಸಿದ ದೇಶಗಳೆಲ್ಲೆಲ್ಲಾ ಶಿವ ಮತ್ತು ವಿಷ್ಣು ದೇವರ ಮೂರ್ತಿಗಳನ್ನು ಬಹುಭಕ್ತಿಯಿಂದ ಪೂಜಿಸುತ್ತ ಮಹಾಭಾರತವನ್ನು ಪ್ರೀತಿಯಿಂದ ಓದುತ್ತಿದ್ದರು. ಜಾಮ ಮೊದಲಾದ ಎಲ್ಲಾ ದ್ವೀಪಗಳಲ್ಲಿಯೂ ಈ ದೇವರ ದೇವಾಲಯಗಳ ಗುರುತುಗಳು ಈಗಲೂ ಕಾಣುತ್ತವೆ.

ಈಗಿನ ಅನೇಕ ನಾಮಧಾರಿಗಳಾದ ವೈದಿಕ ಪಂಡಿತರಂತೆ ಆಗಿನವರು ಸಮುದ್ರಯಾನವನ್ನು ನಿಷೇಧಿಸಿದ್ದರೇ? ಇಂಥ ಪ್ರತಿಬಂಧವಿದ್ದಿದ್ದರೆ ಆಪ್ರಕಾರ ರಾಜ್ಯಸ್ಥಾಪನೆಯಾಗುತ್ತಿದ್ದಿತೇ? ಪರಧರ್ಮದವರನ್ನು ಸ್ವಧರ್ಮದಲ್ಲಿ ತೆಗೆದುಕೊಳ್ಳುವುದು ಹಾಗಿರಲಿ, ಸ್ವಧರ್ಮದಲ್ಲಿಯೇ ಅನೇಕ ವರ್ಗದವರನ್ನು ಮುಟ್ಟಲೂಬಾರದೆಂದು ಹೇಳುತ್ತಿರುವ ಈಗಿನ ಧರ್ಮಜ್ಞರಂತೆ ಆಗಿನವರೂ ಇದ್ದಿದ್ದರೆ ಹಿಂದೂ ಧರ್ಮವು ಅಷ್ಟು ಹಬ್ಬುತ್ತಿದ್ದಿತೇ? ಆ ಕಾಲದ ಜನಗಳು ಅಷ್ಟು ವಿಶಾಲಬುದ್ಧಿಯುಳ್ಳವರಾಗಿದ್ದುದರಿಂದಲೇ ಅಂಥ ಶ್ರೇಷ್ಠಸ್ಥಿತಿಯಲ್ಲಿದ್ದರು. ಆ ಉನ್ನತ ವಿಚಾರಗಳು ಹೇಗೆ ಹೇಗೆ ಕಡಿಮೆಯಾಗುತ್ತ ಬಂದವೋ ಹಾಗೆ ಹಾಗೆ ಹಿಂದುಗಳೂ ಹೀನಸ್ಥಿತಿಗೆ ಬರಲಾರಂಭಿಸಿದರು ಕೊನೆಗೆ ಅನ್ಯದೇಶಗಳಲ್ಲಿ ಇವರ ಧರ್ಮ, ರಾಜ್ಯಗಳಿರುವುದು ಹಾಗಿರಲಿ, ತಮ್ಮ ದೇಶದಲ್ಲಿಯೇ ಅನ್ಯರ ಪ್ರಭುತ್ವ ಮತ್ತು ಪರರ ಧರ್ಮಗಳು ಪ್ರಬಲಿಸಿ ನಾಮಶೇಷರಾಗಿರುವ ಕಾಲಬಂದಿತು. ಈ ದುಸ್ಥಿತಿಗೆ ನಾವೇ ಕಾರಣರು. ಎಂದು ನಮ್ಮ ಪ್ರಾಚೀನರ ಶ್ರೇಷ್ಠತತ್ವಗಳನ್ನನುಸರಿಸ ಭಿನ್ನಭೇದಗಳಿಲ್ಲದೆ ನಡೆಯುತ್ತೇವೆಯೋ ಅಂದಿನಿಂದಲೇ ನಮ್ಮ ಉನ್ನತಿಗೆ ಪ್ರಾರಂಭವಾಯಿತೆಂದು ಖಂಡಿತ ತಿಳಿಯಬೇಕು.

ಹಿಂದುಗಳಲ್ಲಿದ್ದ ಪ್ರಾಚೀನ ವರ್ಣಾಶ್ರಮ ಧರ್ಮದ ತತ್ವವು ಲೋಪವಾದ್ದರಿಂದ ಹಿಂದುಜನಾಂಗದಲ್ಲಿ ಅನೇಕ ದೋಷಗಳುಂಟಾಗಿ ಸಮಾಜವು ಶೋಚನೀಯ ಸ್ಥಿತಿಯಲ್ಲಿದ್ದಿತು. ಅಂಥ ಸಮಯದಲ್ಲಿ ಭಗವಾನ್ ಗೌತಮ ಬುದ್ಧು ಜನ್ಮವೆತ್ತಿ ಹಿಂದುಧರ್ಮದ ಅನೇಕ ಶ್ರೇಷ್ಠತತ್ವಗಳನ್ನು ತೆಗೆದುಕೊಂಡು ಬೌದ್ಧ ಧರ್ಮವನ್ನು ಸ್ಥಾಪಿಸಿದನು. ಈ ಧರ್ಮದ ಪ್ರಾಬಲ್ಯವು ಹೆಚ್ಚಾದಂತೆ ಹಿಂದೂಧರ್ಮವು ಕ್ಷೀಣಿಸುತ್ತಾ ಬಂದಿತು. ನಾಲ್ಕಾರು ಶತಮಾನಗಳಲ್ಲಿಯೇ ಈ ಧರ್ಮವು ಹಿಂದುಸ್ಥಾನದಲ್ಲೆಲ್ಲಾ ಹಬ್ಬಿದ್ದಲ್ಲದೆ ತಿಬೇಟ್, ಚೀನಾ, ಜಪಾನ್ ಮೊದಲಾದ ದೂರದೇಶಗಳಲ್ಲೆಲ್ಲಾ ವ್ಯಾಪಿಸಿತು. ಇತಿಹಾಸದ ದೃಷ್ಟಿಯಿಂದ ನೋಡಿದರೆ ಹಿಂದುಧರ್ಮದ ಮೇಲೆ ಬಂದ ಗಂಡಾಂತರಗಳಲ್ಲಿ ಇದೇ ಮೊದಲನೆಯದು.

ಬೌದ್ಧಧರ್ಮವು ಸಾಧಾರಣ ೧೨ ಶತಮಾನಗಳವರೆಗೆ ನಿರಾತಂಕವಾಗಿ ಪ್ರಚಾರವಾಗುತ್ತಾ ಬಂದಿತು. ಆ ಸಮಯದಲ್ಲಿ ಶ್ರೀ **ಮಚ್ಛಂಕರಾಚಾರ್ಯರವರು** ಅವತರಿಸಿ ಪುನಃ ಹಿಂದುಧರ್ಮವನ್ನು ಪ್ರಚಾರಗೊಳಿಸಲುಪಕ್ರಮಿಸಿದರು. ಸ್ವಧರ್ಮವನ್ನು ಬಿಟ್ಟು ಬೌದ್ಧಧರ್ಮವನ್ನು ಸೇರಿದ್ದ ಜನಗಳನ್ನು ಪುನಃ ಹಿಂದುಧರ್ಮಕ್ಕೆ ಸೇರಿಸಿಕೊಂಡ ಪವಿತ್ರವಾದ ಕಾರ್ಯವನ್ನು ಈ ಆಚಾರ್ಯರು ಮಾಡದೇ ಇದ್ದಿದ್ದರೆ ಈದೇಶದಲ್ಲಿ ಈಗ ಎಷ್ಟು ಜನ ಪಾರ್ಶಿಗಳಿದ್ದಾರೆಯೋ ಅಷ್ಟು ಜನಗಳಾದರೂ ಹಿಂದುಗಳಿರುತ್ತಿದ್ದರೋ ಇಲ್ಲವೊ? ಶ್ರೀ ಶಂಕರಾಚಾರ್ಯರು ಹಿಂದುಧರ್ಮವನ್ನೇನೋ ರಕ್ಷಿಸಿದರು. ಆದರೆ ಈ ಧರ್ಮದ ಪ್ರಾಚೀನಕಾಲದ ವರ್ಣಾಶ್ರಮ ಧರ್ಮಗಳನ್ನು ಏರ್ಪಡಿಸದೆ ಅನೇಕ

ಮತಮತಾಂತರಗಳಿಗೆ ಅವಕಾಶವನ್ನಿಟ್ಟಿದ್ದರಿಂದ ಹಿಂದು ಜನಾಂಗದಲ್ಲಿ ಅನೈಕಮತ್ಯ ಹೆಚ್ಚಿತು. ಇವರನಂತರ ಒಂದೆರೆಡು ಶತಮಾನಗಳಲ್ಲಿಯೇ ಎಲ್ಲೆಲ್ಲಿಯೂ ಅನೇಕ ಮತಾಚಾರ್ಯರು ಹುಟ್ಟಿ ಹಿಂದು ಜನಾಂಗವು ಅನೈಕಮತ್ಯ, ಕಲಹ, ದ್ವೇಷಾಸೂಯೆಗಳಿಂದ ಬಳಲುವಂತೆ ಮಾಡಿದರು. ಇಂಥ ವಿಷಮಕಾಲದಲ್ಲಿ ಮಹಾಪರಾಪ್ರಕಮಶಾಲಿಗಳು, ಬಹು ಕ್ರೂರರೂ ಆದ ಮಹಮದೀಯರು ಹಿಂದೂಸ್ಥಾನದಲ್ಲಿ ಪ್ರವೇಶಿಸಿ ತಮ್ಮ ಶಸ್ತ್ರಬಲದಿಂದ ರಾಜ್ಯವನ್ನೂ, ಧರ್ಮವನ್ನು ಸ್ಥಾಪಿಸಲಾರಂಭಿಸಿದರು. ಹಿಂಧೂಧರ್ಮಕ್ಕೆ ಬಂದ ವಿಪತ್ತುಗಳಲ್ಲಿ ಇದು ಎರಡನೆಯದು.

ಸ್ವದೇಶದಲ್ಲಿಯೇ ಉಂಟಾಗಿದ್ದ ಆ ಮೊದಲನೆಯ ಗಂಡಾಂತರಕ್ಕಿಂತಲೂ ಪರದೇಶದಿಂದ ಬಂದ ಈ ವಿಪತ್ತು ಬಹುಭಯಂಕರವಾದ್ದಾಗಿದ್ದಿತು. ಮುಸಲ್ಮಾನರು ಆರಂಭದಲ್ಲಿ ರಾಜ್ಯಸ್ಥಾಪನೆಯನ್ನು ಮಾಡಿ ಅನಂತರ ತಮ್ಮ ಪ್ರಭುತ್ವದ ಬಲದಿಂದ ಧರ್ಮ ಪ್ರಚಾರಮಾಡಲುಪಕ್ರಮಿಸಿದರು. ಬಹು ಬಲಾತ್ಕಾರದಿಂದಲೂ ಕ್ರೂರತನದಿಂದಲೂ ಕೋಟ್ಯಾಂತರ ಜನಗಳನ್ನು ತಮ್ಮ ಧರ್ಮದವರನ್ನಾಗಿ ಮಾಡಿಕೊಂಡರು. ಮೂರು ನಾಲ್ಕು ಶತಮಾನಗಳಲ್ಲಿಯೇ ಮಹಮ್ಮದೀಯ ಧರ್ಮವು ಹಿಂದುಸ್ಥಾನದಲ್ಲೆಲ್ಲಾ ವ್ಯಾಪಿಸಿತು. ಆ ಕಾಲದಲ್ಲಿ ಶ್ರೀ ಆದಿಶಂಕರಾಚಾರ್ಯರಂಥವರಾದರೂ ಅವತರಿಸಿ ಧರ್ಮಬಾಹ್ಯರಾಗಿದ್ದ ಹಿಂದುಗಳನ್ನು ಸ್ವಧರ್ಮಗಳಲ್ಲಿ ತೆಗೆದುಕೊಳ್ಳುವ ಪವಿತ್ರವಾದ ಕಾರ್ಯವನ್ನು ಮಾಡಬೇಕಾಗಿದ್ದಿತು. ಆದರೆ ಹಿಂದುಗಳ ದುರ್ದೈವದಿಂದಲೂ, ಅಂಥ ಶ್ರೇಷ್ಠ ಪುರುಷರಾರು ಆಗ ಜನ್ಮವೆತ್ತಲಿಲ್ಲ. ಶ್ರೀ ಸ್ವಾಮಿ ರಾಮದಾಸರ ಪ್ರಭಾವದಿಂದಲೂ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಸಾಹಸದಿಂದಲೂ, ಮಹಮ್ಮದೀಯ ಧರ್ಮ ಪ್ರಚಾರಣೆಗೆ ಎಷ್ಟೊ ಪ್ರತಿಬಂಧವಾಯಿತು. ಆದರೂ ಹಿಂದುಧರ್ಮಕ್ಕೊದಗಿದ ಮಹತ್ತರವಾದ ವಿಪತ್ತು ದೂರವಾಗಲಿಲ್ಲ.

ಮುಸಲ್ಮಾನರು ಈ ಪ್ರಕಾರ ತಮ್ಮ ದರ್ಮಪ್ರಚಾರಣೆ ಮಾಡುತ್ತಿರುವಾಗ ಪೂರ್ಚುಗೀಸರು ಈ ದೇಶಕ್ಕೆ ಬಂದು ಅವರೂ ತಮ್ಮ ಕ್ರೈಸ್ತಧರ್ಮವನ್ನು ಬೆಳೆಸಲಾರಂಭಿಸಿದರು. ಆದರೆ ಇವರು ಮುಸಲ್ಮಾನರಷ್ಟು ಕ್ರೂರತನವನ್ನು ಮಾಡಲಿಲ್ಲ. ಇದು ಈ ಹಿಂದುಧರ್ಮಕ್ಕೆ ಬಂದ ಮೂರನೆಯ ವಿಪತ್ತು. ಈ ಕ್ರೈಸ್ತಧರ್ಮದ ಪೋರ್ಚುಗೀಜ್, ಫ್ರೆಂಚ್, ಇಂಗ್ಲಿಷ್ ಮೊದಲಾದ ಜನಗಳು ಈ ದೇಶಕ್ಕೆ ಬಂದು ರಾಜ್ಯಸ್ಥಾಪನೆ ಮಾಡಲು ಉಪಕ್ರಮಿಸಿದರು. ಆದರೆ ಮುಸಲ್ಮಾನರಂತೆ ತಮ್ಮ ಪ್ರಭುತ್ವವನ್ನು ಧರ್ಮಪ್ರಚಾರಣೆಗೆ ಪ್ರತ್ಯಕ್ಷವಾಗಿ ಉಪಯೋಗಿಸಲಿಲ್ಲ. ಉತ್ತಮವರ್ಣದವರು ಬಹು ಕೀಳಾಗಿ ಕಾಣುತ್ತಿದ್ದುದನ್ನು ನೋಡಿ ಅಂಥ ಜನಗಳನ್ನೆಲ್ಲಾ ಕ್ರೈಸ್ತಪಾದ್ರಿಗಳು ತಮ್ಮ ಧರ್ಮಕ್ಕೆ ಸೇರಿಸಿಕೊಳ್ಳಲಾರಂಭಿಸಿದರು.

ಹಿಂದುಗಳು ಮುಸಲ್ಮಾನರ ಕಾಲಕ್ಕೆ ತಮ್ಮಲ್ಲಿ ಐಕಮತ್ಯ. ಪರಾಕ್ರಮಾದಿಗಳಲ್ಲದೆ ಕೋಟ್ಯಾಂತರ ತಮ್ಮ ಧರ್ಮಬಾಂಧವರನ್ನು ಹೇಗೆ ಮುಸಲ್ಮಾನರ ಸ್ವಾಧೀನಮಾಡಿದರೋ ಹಾಗೆಯೇ ಪೋರ್ಚುಗೀಜರ ಕಾಲದಲ್ಲಿ ತಮ್ಮ ಭೇದಬುದ್ಧಿಯಾದ ಲಕ್ಷಾಂತರ ಸ್ವಧರ್ಮಿಯರನ್ನು ಕ್ರೈಸ್ತರ ಕೈಗೆ ಕೊಟ್ಟರು. ಈ ದೇಶದಲ್ಲಿ ಮುಸಲ್ಮಾನರ ರಾಜ್ಯವು ಹಾಳಾಗಿ ಇಂಗ್ಲಿಷರ ರಾಜ್ಯವು ಹೆಚ್ಚುತ್ತಾ ಬಂದಂತೆ ಮಹಮ್ಮದೀಯ ಧರ್ಮಪ್ರಸಾರಣೆಯು ಕುಗ್ಗಿ ಕ್ರೈಸ್ತಧರ್ಮವು ಅಧಿಕವಾಗುತ್ತಾ ಬಂದಿತು. ಈ ಕ್ರೈಸ್ತಧರ್ಮದ ಬೆಳವಣಿಗೆಗೆ ಹಿಂದುಧರ್ಮದ ನಾಮಧಾರಿಗಳಾದ ಉತ್ತಮವರ್ಣದವರೇ ಕಾರಣರಾಗಿದ್ದಾರೆ. ತಮ್ಮ ಧರ್ಮಬಾಂಧವರಾದ ಕೀಳುಜನಗಳನ್ನು ಇಷ್ಟು ಹೀನವಾಗಿ ಕಾಣದೇ

ಇದ್ದಿದ್ದರೆ ಕ್ರೈಸ್ಥಧರ್ಮವು ಈ ದೇಶದಲ್ಲಿ ಇಷ್ಟು ಹಬ್ಬುತ್ತಿರಲಿಲ್ಲ. ಈ ಕೆಳಗೆ ವಿವರಿಸಿರುವ ಸಂಗತಿಯಿಂದ ನಮ್ಮ ಈ ಅಭಿಪ್ರಾಯದ ಸತ್ಯತೆಯು ವಾಚಕರಿಗೆ ವ್ಯಕ್ತವಾಗಬಹುದು.

ಇಂಗ್ಲೆಂಡಿನಲ್ಲಿ ಪ್ರಸಿದ್ಧವಾಗುತ್ತಿರುವ ಕಾಂಟೆಂಪೂರ ರಿವ್ಯೂವ್ ಎಂಬ ಮಾಸಪತ್ರಿಕೆಯ ಕ್ರಿ.ಶ. ೧೯೦೮ನೆಯ ಮೇ ತಿಂಗಳ ಸಂಚಿಕೆಯಲ್ಲಿ ಮಿ. ಫಾರ್ಕಹರ್ ಎಂಬ ಒಬ್ಬ ಇಂಗ್ಲೀಷ್ ವಿದ್ವಾಂಸರು ಹಿಂದುಸ್ಥಾನದಲ್ಲಿಯ ಕ್ರೈಸ್ತಧರ್ಮದ ಅಭಿವೃದ್ಧಿಯನ್ನು ಕುರಿತು ಒಂದು ಲೇಖನವನ್ನು ಬರೆದಿದ್ದಾರೆ. ಅದರಲ್ಲಿ ಹೇಳಿರುವ ಮುಖ್ಯಾಂಶವೇನೆಂದರೆ; "ಹಿಂದುಧರ್ಮದ ಕೀಳುವರ್ಗದವರಿಗೆ ಆ ಧರ್ಮದ ಉತ್ತುಮ ವರ್ಣದವರು ಮಾಡುತ್ತಿರುವ ಹಿಂಸೆಯಿಂದಲೆ ಆ ಕೀಳುಜನಗಳು ಕ್ರೈಸ್ತಧರ್ಮವನ್ನು ಸ್ವೀಕರಿಸುತ್ತಾರೆ. ಅದರಿಂದ ಅವರಿಗೆ ಪ್ರಯೋಜನವೂ ಇದೆ. ಹಿಂದುಧರ್ಮದಲ್ಲಿ ಅವರು ಎಷ್ಟು ಹೀನಸ್ಥಿತಿಯಲ್ಲಿರುತ್ತಾರೆಯೋ ಅದಕ್ಕಿಂತಲೂ ಹೀನಸ್ಥಿತಿಯು ಅವರಿಗೆ ಬರುವ ಸಂಭವವೇ ಇಲ್ಲ. ಈಗಿನ ಹೊಲೆಯರ ಹಿಂದಣದವರೆಲ್ಲಾ ಹೊಲೆಯರೇ ಇದ್ದರು. ಮತ್ತು ಇವರ ಮುಂದಣಗಾದವರೂ ಹೊಲೆಯರಾಗಿದ್ಧೇ ಸಾಯುತ್ತಾರೆ. ಅವರು ಹಿಂದುಧರ್ಮದಲ್ಲಿರುವವರೆಗೆ ಆ ನರಕಮಯ ಸ್ಥಿತಿಯಿಂದ ಮೇಲಕ್ಕೇಳಲು ಅವರಿಗೆ ಅವಕಾಶವನ್ನೇ ಕೊಡುವದಿಲ್ಲ. ಆದರೆ ಆ ಜನಗಳನ್ನೆ ಪಾದ್ರಿಗಳು ಕ್ರೈಸ್ತ ಧರ್ಮಕ್ಕೆ ಸೇರಿಸಿಕೊಂಡೊಡನೆ ಹಿಂದುಗಳು ಅವರ ಸಂಗಡ ಸಮಾನರಂತೆ ವರ್ತಿಸುತ್ತಾರೆ. ಆದಕಾರಣ ಒಬ್ಬ ಹೊಲೆಯನು ಕ್ರೈಸ್ತ ಧರ್ಮವನ್ನು ಸೇರಿದೊಡನೆ ತಾನು ಎಲ್ಲರಿಗೂ ಸಮಾನನೆಂಬ ಭಾವನೆಯುಂಟಾಗಿ ಎಲ್ಲಾ ಉದ್ಯೋಗಗಳನ್ನೂ ಮಾಡಲು ಸ್ವತಂತ್ರನಾಗುತ್ತಾನೆ. ಈ ಕಾರಣದಿಂದಲೇ ಕ್ರೈಸ್ತಧರ್ಮವು ಕನಿಷ್ಠ ವರ್ಗದವರಿಗೆಲ್ಲಾ ಬಹು ಪ್ರೀತಿಕರವಾಗಿರುವದು. ಉತ್ತಮ ವರ್ಣದವರ ಹಿಂಸೆಯಿಂದ ಕೀಳುಕುಲದವರ ಲಕ್ಷ್ಯೆಯು ಕ್ರೈಸ್ತಧರ್ಮದ ಕಡೆಗೆ ವಿಶೇಷವಾಗಿದೆ. ಇದು ಹಿಂದುಗಳಲ್ಲಿ ಕೆಲವು ಬುದ್ಧಿಶಾಲಿಗಳಿಗೆ ತಿಳಿದಿದೆ. ಆದರೂ ನಮ್ಮ ಪಾದ್ರಿಗಳೇನೂ ಹೆದರಬೇಕಾದುದಿಲ್ಲ. ಏಕೆಂದರೆ, ಹಿಂದುಧರ್ಮದಲ್ಲಿ ಈಗಲೂ ಸಾವಿರಾರು ಮತಗಳು ಬಹು ಬಲವಾಗಿ ಬೇರೂರಿಕೊಂಡಿವೆ. ಆದುದರಿಂದ ಕೀಳು ಕುಲದವರ ತೊಂದರೆಯು ನಿಲ್ಲುವಂತಿಲ್ಲ. ಉತ್ತಮವರ್ಣದವರು ಕನಿಷ್ಟವರ್ಗದವರನ್ನು ತೊಂದರೆ ಪಡಿಸುತ್ತಿರುವವರೆಗೆ ಪಾದ್ರಿಗಳಿಗೂ ಕ್ರೈಸ್ತಧರ್ಮಕ್ಕೂ ಹಿಂದುಸ್ಥಾನದಲ್ಲಿ ಯಾವ ಭಯವೂ ಇಲ್ಲ. ಹಿಂದುಧರ್ಮಕ್ಕೆ ಮುಂದೆ ಬರುವ ಭಯಂಕರ ಸ್ಥಿತಿಯ ಸ್ವಪ್ನವು ಈಗಾಗಲೇ ಬುದ್ಧಿಶಾಲಿಗಳಾದ ಅನೇಕ ಹಿಂದುಗಳಿಗೆ ಬೀಳುತ್ತಲಿದೆ. ಆದರೆ ಬಹುಜನ ಸಮೂಹವು ರೂಢಿಯ ಅಭಿಮಾನದಿಂದ ಅಂಥ ಜನಗಳ ಕಾರ್ಯಕ್ಕೆ ಅವಕಾಶವನ್ನು ಕೊಟ್ಟಿರುವುದಿಲ್ಲ."

ಕ್ರೈಸ್ತಧರ್ಮವು ಹಬ್ಬುತ್ತಿರುವುದರ ಗುಟ್ಟು ಈಗಲಾದರೂ ಗೊತ್ತಾಯಿತೆ? ನಮ್ಮ ಸ್ವರೂಪವನ್ನು ಅವರು ಎಷ್ಟು ಚೆನ್ನಾಗಿ ತಿಳಿದುಕೊಂಡಿದ್ದಾರಲ್ಲವೇ? ನಮ್ಮ ಧರ್ಮಬಾಂಧವರು ಪಾದ್ರಿಗಳ ಬಲೆಯಲ್ಲಿ ಏಕೆ ಬೀಳುತ್ತಿರುವರೆಂಬುದು ಈಗಲಾದರೂ ತಿಳಿಯಿತೇ? "ಕೊಡಲಿಯ ಕಾವು ಕುಲಕ್ಕೆ ಮೃತ್ಯು" ಎಂಬ ಗಾದೆಯಂತೆ ಹಿಂದು ಧರ್ಮದ ನಾಶಕ್ಕೆ ಉತ್ತಮವರ್ಣದವರೆಂದು ಹೇಳಿಕೊಳ್ಳುತ್ತಿರುವ ನಾವೇ ಕಾರಣರಾಗಿಲ್ಲವೇ? ಇನ್ನು ಮೇಲಾದರೂ ಎಚ್ಚರಗೊಂಡು ಶ್ರೇಷ್ಠವಾದ ಹಿಂದುಧರ್ಮವನ್ನು ರಕ್ಷಿಸುವುದು ನಮ್ಮ ಕರ್ತವ್ಯವಲ್ಲವೆ? ಈ ಕರ್ತವ್ಯವನ್ನು ನಾಮಧಾರಿಗಳಾದ ಉತ್ತಮವರ್ಣದವರು

ಈ ಸಮಯದಲ್ಲಿ ಮಾಡದಿದ್ದರೆ ಮುಂದಣದವರು ನಮಗೆ ಮನುಷ್ಯರೆಂದು ಹೇಳುವರೇ? ಇಷ್ಟೆಲ್ಲಾ ಯೋಚಿಸಲಿಕ್ಕೆ ಇದೇನು ಅಂಥ ದೊಡ್ಡ ವಿಷಯವೆಂತಲೂ ಕೆಲವರು ಈ ಧರ್ಮವನ್ನು ಬಿಟ್ಟು ಕ್ರೈಸ್ತಧರ್ಮಕ್ಕೆ ಸೇರಿದಮಾತ್ರದಿಂದ ಹಿಂದುಧರ್ಮಕ್ಕೆ ಆದ ನಷ್ಟವೇನೆಂತಲೂ ಅನೇಕರು ಹೇಳಬಹುದು. ಆದರೆ ಮುಂದಾಲೋಚನೆಯುಳ್ಳವರು ಇದರಿಂದಾಗುವ ಅನರ್ಥವನ್ನು ಅರಿತುಕೊಳ್ಳದೆ ಇರಲಾರರು.

ಈ ವರೆಗೆ ವಿವರಿಸಿದ ಪ್ರಕಾರ ಬೌದ್ಧ, ಮಹಮ್ಮದೀಯ ಮತ್ತು ಕ್ರೈಸ್ತಧರ್ಮಗಳು ಹಿಂದುಸ್ಥಾನದಲ್ಲಿ ಪ್ರಬಲಿಸಿದ್ದರಿಂದ ಹಿಂದು ಜನಾಂಗಕ್ಕೆ ಯಾವ ಯಾವ ಹಿತಾಹಿತಗಳುಂಟಾದವೆಂಬುದನ್ನು ವಿಸ್ತಾರವಾಗಿ ವಿವರಿಸುವುದು ಪ್ರಕೃತದ ವಿಷಯವಲ್ಲ. ಆದರೂ ಕೆಲವು ಮುಖ್ಯ ಸಂಗತಿಗಳನ್ನು ತಿಳುಹಿಸುವುದು ಅವಶ್ಯಕವು. ಕಳೆದ ಕ್ರಿ. ಶ. ೧೯೧೧ನೆಯ ಜನಪರಿಗಣನೆಯಿಂದ ಹಿಂದುಸ್ಥಾನದಲ್ಲಿ ೩೧,೩೫,೪೭,೮೪೦ ಜನಗಳಿದ್ದಂತೆಯೂ, ಈ ಎಲ್ಲಾ ಜನಗಳು ೧೦ ಮುಖ್ಯವಾದ ಧರ್ಮಗಳನ್ನೂ ೮೫ ಮುಖ್ಯ ಮತಗಳನ್ನು ಅನುಸರಿಸಿದವರಾಗಿದ್ದರೆಂತಲೂ, ಗೊತ್ತಾಗುತ್ತದೆ. ಈ ಜನ ಸಂಖ್ಯೆಯಲ್ಲಿ ೨೧,೭೩,೩೭,೯೪೩ ಜನಗಳು ಹಿಂದುಗಳು, ೬,೬೬,೪೭,೨೯೯ ಜನಗಳು ಮುಸಲ್ಮಾನರು, ೧,೦೭,೨೧,೪೫೩ ಬೌದ್ಧರು, ಮತ್ತು ೩೮,೭೬,೨೦೩ ಜನಗಳು ಕ್ರೈಸ್ತರೂ ಇದ್ದಾರೆ. ಈ ಪ್ರಕಾರ ೮,೧೨,೪೪,೯೫೫ ಜನಗಳು ಈ ಮುಂಚೆ ವಿವರಿಸಿರುವಂತೆ ಹಿಂದು ಧರ್ಮವನ್ನು ಬಿಟ್ಟು ಅನ್ಯಧರ್ಮಗಳಿಗೆ ಹೋದವರಾಗಿದ್ದಾರೆ. ಇವರಲ್ಲಿ ಪರದೇಶಗಳ ಮುಸಲ್ಮಾನರೂ, ಕ್ರೈಸ್ತರೂ, ಕೆಲವರಿರಬಹುದು. ಆದರೆ ಅಂಥವರ ಸಂಖ್ಯೆಯು ಬಹು ಕಡಿಮೆಯಾಗಿದೆ. ಈ ಮೂರು ಧರ್ಮಗಳು ಈ ದೇಶದಲ್ಲಿ ಹಬ್ಬಿದ್ದರಿಂದ ಸಾಧಾರಣ ಎಂಟು ಕೋಟಿ ಜನಗಳನ್ನು ಹಿಂದು ಧರ್ಮವು ಕಳೆದುಕೊಂಡಿತಲ್ಲವೆ? ಇದು ಸಾಧಾರಣವಾದ ನಷ್ಟವೆಂದು ಹೇಳಬಹುದೇ? ಕುಟುಂಬದಿಂದ ಒಬ್ಬಿಬ್ಬರು ಹೋದರೆ ಎಷ್ಟೋ ವ್ಯಸನವಾಗುತ್ತಿರುವಾಗ ಎಂಟು ಕೋಟಿ ತಮ್ಮ ಧರ್ಮಬಾಂಧವರನ್ನು ಕಳೆದುಕೊಂಡದ್ದಕ್ಕಾಗಿ ನಿಜವಾದ ಹಿಂದುಗಳು ದುಃಖಿಸಲಾರರೇ?

ಹಿಂದು ಜನಾಂಗದ ಕ್ಷೀಣತೆಯು ಇನ್ನು ಕಡಿಮೆಯಾಗಿಲ್ಲ. ದಿನೇದಿನೇ ಹೆಚ್ಚುತ್ತಲೇ ಇದೆ. ಕ್ರಿ. ಶ. ೧೮೮೧ ರಿಂದ ೧೯೧೧ ರವರೆಗೆ ಈ ದೇಶದಲ್ಲಿ ಕ್ರೈಸ್ತರ ಸಂಖ್ಯೆಯು ೧೦೦ ಕ್ಕೆ ೧೦೮ ರಂತೆಯೂ ಮುಸಲ್ಮಾನರ ಸಂಖ್ಯೆಯು ೧೦೦ ಕ್ಕೆ ೩೩ ರಂತೆಯೂ, ಹೆಚ್ಚುತ್ತಾ ಬಂದಿವೆ; ನಾವು ೨೧ ಕೋಟಿ ಜನಗಳಿರುವುದರಿಂದ ಕಡಿಮೆಯಾದರೂ ಎಷ್ಟಾಗಬಹುದು? ಎಂದು ಉಪೇಕ್ಷೆ ಮಾಡಬಹುದೇ? ಹಾಗೆ ಮಾಡಲಿಕ್ಕೆ ಬರುವಂತಿಲ್ಲ. ಏಕೆಂದರೆ, ಯಾರಿಗೆ ಒಂದು ಕಾಸಾದರೂ ಆದಾಯವಿಲ್ಲದೆ ವೆಚ್ಚ ಮಾತ್ರ ವಿಶೇಷವಾಗಿರುತ್ತದೆಯೋ ಅವರಲ್ಲಿ ಎಷ್ಟೇ ಸಂಪತ್ತಿದ್ದರೂ ಒಂದಾನೊಂದು ದಿವಸ ಹೇಗೆ ಅವರು ಖಂಡಿತವಾಗಿಯೂ ದರಿದ್ರರಾಗುತ್ತಾರೆಯೋ, ಹಾಗೆಯೇ ಯಾವ ಹಿಂದುಧರ್ಮದಲ್ಲಿ ಒಬ್ಬ ಅನ್ಯಧರ್ಮಿಯನನ್ನಾದರೂ ಸ್ವಧರ್ಮದಲ್ಲಿ ಸೇರಿಸಿಕೊಳ್ಳಲಿಕ್ಕೆ ಅವಕಾಶವಿಲ್ಲದೆ ಪರಧರ್ಮಕ್ಕೆ ಮಾತ್ರ ಪ್ರತಿಕ್ಷಣದಲ್ಲಿಯೂ ಹೋಗಲು ಸೌಲಭ್ಯವುಂಟಾಗಿದೆಯೋ ಅಂಥ ಹಿಂದುಧರ್ಮದಲ್ಲಿ ಎಷ್ಟು ಕೋಟಿ ಜನಗಳಿದ್ದರೂ ಒಂದಾನೊಂದು ಕಾಲದಲ್ಲಿ ಒಬ್ಬರೂ ಇಲ್ಲದಂತಾಗುವುದು ಸ್ವಾಭಾವಿಕವಷ್ಟೆ. ಅಂಥ ದುಸ್ಥಿತಿಯಯು ಬಾರದಂತೆ ಈಗಲೇ ಪ್ರಯತ್ನಿಸುವುದು ಸುಜ್ಞರಾದ ಹಿಂದುಗಳ ಕರ್ತವ್ಯವಲ್ಲವೇ?

ಹಿಂದುಸ್ಥಾನದಲ್ಲಿ ಅನ್ಯಧರ್ಮಗಳು ಎಷ್ಟಾದರೂ ಪ್ರಸಾರವಾಗಲಿ, ಈ ಹಿಂದು ಧರ್ಮವನ್ನನುಸರಿಸುವವರು ಬೇಕಾದಷ್ಟು ಕಡಿಮೆಯಾಗಲಿ, ಇದರಿಂದ ಹಿಂದುಧರ್ಮಕ್ಕಾಗಲಿ, ಅಥವಾ ಆ ಧರ್ಮಾನುಯಾಯಿಗಳಿಗಾಗಲಿ ಆಗುವ ಅನರ್ಥವೇನು? ನಮ್ಮ ಶ್ರೇಷ್ಠವಾದ ಧರ್ಮವು ಕಡಿಮೆ ಜನಗಳಿಂದ ಆಚರಿಸಲ್ಪಡುವುದೆಂದು ಅದರ ಶ್ರೇಷ್ಠತ್ವವೇನಾದರೂ ಕಡಿಮೆಯಾಗಬಲ್ಲದೇ? ಎಂದು ಕೆಲವರು ಯೋಚಿಸಬಹುದು. ಆದರೆ ಅದು ವಿಹಿತವಲ್ಲ. ಒಂದು ಧರ್ಮದವರ ಸಂಖ್ಯೆಯು ಕಡಿಮೆಯಾಗುತ್ತಾ ಹೊಗುವುದು ಅವರ ಶೋಚನೀಯ ಸ್ಥಿತಿಯ ಒಂದು ಲಕ್ಷಣವಾಗಿದೆ. ತಮ್ಮ ಧರ್ಮಪ್ರಸಾರಣೆಯ ಶಕ್ತಿಯು ಕ್ಷೀಣಿಸಿದ್ದಕ್ಕೂ, ತಮ್ಮ ಮಹತ್ವವು ಪ್ರಪಂಚದಲ್ಲಿ ಇಲ್ಲದೇ ಇದ್ದುದಕ್ಕೂ, ಇದೊಂದು ದೃಷ್ಟಾಂತವು ಒಂದುವೇಳೆ ಇವರ ಧರ್ಮದ ತತ್ವಗಳು ಶ್ರೇಷ್ಠವಾದವುಗಳಿರಬಹುದು. ಆದರೆ ಅವುಗಳನ್ನು ಅನುಸರಿಸುವವರೇ ಕಡಿಮೆಯಾಗುತ್ತಾ ಹೋದರೆ ಆ ತತ್ವಗಳು ಲೋಪವಾಗಲಾರವೇ? ಪರಧರ್ಮಿಗಳು ನಾನಾ ವಿಧವಾದ ತೊಂದರೆಗಳನ್ನುಂಟು ಮಾಡಲು ಅವಕಾಶವಾಗುವುದಿಲ್ಲವೇ?

ಮುಸಲ್ಮಾನ್, ಬೌದ್ಧ, ಕ್ರೈಸ್ತಧರ್ಮಗಳು ಈ ದೇಶದಲ್ಲಿ ಇಷ್ಟೇ ಹೆಚ್ಚಿದ್ದರಿಂದ ಹಿಂದು ಜನಾಂಗಕ್ಕೆ ಎಷ್ಟೋ ಅನರ್ಥಗಳುಂಟಾಗುತ್ತಲಿವೆ. ಈ ಎಲ್ಲಾ ಧರ್ಮದವರ ಆಚಾರ ವಿಚಾರಗಳು ಪರಸ್ಪರ ಭಿನ್ನವಾಗಿರುವುದರಿಂದ ದೇಶವು ಅನೈಕ್ಯಮತಕ್ಕೆ ತವರುಮನೆಯಾಗಿದೆ. ಈ ಅನ್ಯಧರ್ಮಿಗಳು ತಮ್ಮ ಪೂರ್ವಜರು ಹಿಂದುಗಳಿದ್ದರೆಂಬುದನ್ನು ಕೂಡಾ ಮರೆತು ಹಿಂದುಗಳಿಗೆ ವಿರೋಧವಾಗಿಯಾದರೂ ತಾವು ಅಂಗೀಕರಿಸಿದ ಧರ್ಮದಂತೆ ನಡೆಯುತ್ತಾರೆ. ಹಿಂದುಧರ್ಮದ ಮತ್ತು ಆ ಧರ್ಮದವರ ವಿಷಯದಲ್ಲಿ ತಿಸ್ಕಾರ ಬುದ್ದಿಯೂ, ತಮ್ಮ ಧರ್ಮದ ಮತ್ತು ತಮ್ಮ ಧರ್ಮದವರ ವಿಷಯದಲ್ಲಿ ಆದರ ಬುದ್ಧಿಯು, ಹೆಚ್ಚುತ್ತಾ ಹೋಗುತ್ತದೆ. ಹಿಂದುಗಳಿಗೆ ಎಷ್ಟೇ ಅಸಮಾಧಾನವಾಗುತ್ತಿದ್ದರೂ ಮುಸಲ್ಮಾನರು 'ಬಕರಿ ಈದ್' ಮೊದಲಾದ ಹಬ್ಬಗಳಲ್ಲಿ ಗೋಹತ್ಯೆವನ್ನು ಮಾಡದೇ ಬಿಟ್ಟಿರುವರೇ?

ಕಳೆದ ಮೇ ತಿಂಗಳಲ್ಲಿ ಪುಣಾ ಪಟ್ಟಣದ 'ವಸಂತವ್ಯಾಖ್ಯಾನಮಾಲೆ'ಯಲ್ಲಿ ಗೋವಾ ಪ್ರಾಂತ್ಯದ ಶ್ರೀಯುತ ಯಶವಂತರಾವ, ಸೂರ್ಯರಾವ ಸರದೇಸಾಯಿ ಎಂಬುವರು ತಮ್ಮ ಪ್ರಾಂತ್ಯದ ಕ್ರೈಸ್ತರ ವಿಷಯವಾಗಿ ಒಂದು ಉಪನ್ಯಾಸವನ್ನು ಮಾಡಿದರು. ಅದರಲ್ಲಿ ಅವರು ಹೇಳಿದ್ದೇನೆಂದರೆ – "ಕ್ರೈಸ್ತಧರ್ಮದಲ್ಲಿ ಸೇರಿದ ಗೋವಾಪ್ರಾಂತ್ಯದ ಹಿಂದುಗಳು ಈಗ ಸಂಪೂರ್ಣವಾಗಿ ಪೋರ್ಚುಗೀಜರಾಗಿದ್ಧಾರೆ. ಇವರ ತಾತ ಮುತ್ತಾತರಲ್ಲಿ ಹಿಂದು ಧರ್ಮದ ಸಂಸ್ಕಾರವು ಸ್ವಲ್ಪಾದರೂ ಇತ್ತು. ಆದುದರಿಂದ ಅವರು ಗೋಮಾಂಸವನ್ನು ತಿನ್ನುತ್ತಿರಲಿಲ್ಲ. ಆದರೆ ಈಗಿನವರು ಗೋಮಾಂಸವನ್ನು ಯಥೇಚ್ಚವಾಗಿ ತಿನ್ನುತ್ತಾರೆ. ವಾಸ್ಕೋಡಗಾಮಾ, ಅಲ್ಬುಕರ್ಕರೇ ತಮ್ಮ ಪುರ್ವಜರೆಂದು ತಿಳಿಯುತ್ತಾರೆ! ಗೋವಾ ಪ್ರಾಂತ್ಯಕ್ಕಿಂತಲೂ ಪೋರ್ತುಗಾಲ ದೇಶಧ ವಿಷಯದಲ್ಲಿ ಇವರಿಗೆ ಹೆಚ್ಚು ಅಭಿಮಾನವಿದೆ." ಈ ಪ್ರಕಾರ ಪರಸ್ಪರ ವಿರೋಧವಾದ ಆಚಾರ ವಿಚಾರಗಳುಳ್ಳ ಧರ್ಮಗಳು ಈ ದೇಶದಲ್ಲಿ ಪ್ರಬಲವಾಗುತ್ತಿರುವಾಗ ದೇಶದಲ್ಲಿ ಐಕಮತ್ಯವು ಹೇಗುಂಟಾಗುತ್ತದೆ? ಆ ಐಕಮತ್ಯವಿಲ್ಲದಿದ್ದರೆ ಯಾವ ಹಿತವನ್ನು ಸಾಧಿಸುವುದಕ್ಕೆ ಸಾಧ್ಯವು?

ಹಿಂದುಸ್ಥಾನದಲ್ಲಿ ಈ ಪ್ರಕಾರ ಮುಸಲ್ಮಾನ, ಬೌದ್ಧ, ಕ್ರೈಸ್ತ, ಧರ್ಮಗಳು ಪ್ರಬಲಿಸಿರುವುದು ಹಿಂದು ಜನಾಂಗದ ರಾಜಕೀಯ ದೃಷ್ಟಿಯಿಂದಲೂ ಬಹು ಅನರ್ಥಕಾರಿಯಾಗಿದೆ. ಪ್ರಪಂಚವೆಲ್ಲಾ ಈ ಮೂರೇ ಧರ್ಮದವರ ಅಧಿನದಲ್ಲಿದೆಯೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಯೂರೋಪ, ಅಮ್ಮೇರಿಕಾ ಖಂಡಗಳು ಪ್ರಾಯಶಃ ಕ್ರೈಸ್ತರ ಸ್ವಾಧೀನದಲ್ಲಿಯೆ ಇವೆ. ಹಿಂದುಸ್ಥಾನವನ್ನು ಬಿಟ್ಟು ಸಂಪೂರ್ಣ ಏಶಿಯಾಖಂಡವು ಬೌದ್ಧ ಮತ್ತು ಮುಸಲ್ಮಾನ್ ಧರ್ಮದವರ ಅಧೀನದಲ್ಲಿದೆ. ಆಫ್ರಿಕಾ, ಓಶಿಯಾನಿಯ, ಮತ್ತು ಹಿಂದುಸ್ಥಾನ ಇವು ಮೇಲಿನ ಮೂರು ಧರ್ಮದವರಲ್ಲಿ ಯಾರಾದರೂ ಒಬ್ಬರ ಅಧಿಕಾರಕ್ಕೊಳಲಪಟ್ಟಿವೆ. ಆದರೆ ಪ್ರಾಚೀನ ಕಾಲದಲ್ಲಿ ಯಾವ ಹಿಂದುಗಳು ವಂಶಜರು ಈ ದೇಶದಲ್ಲಿ ೨೧ ಕೋಟಿ ಇದ್ದರೂ ತಮ್ಮ ಸ್ವತಂತ್ರ ರಾಜ್ಯವೆಂದು ಹೇಳಿಕೊಳ್ಳಲಿಕ್ಕೆ ಈ ಪ್ರಪಂಚದಲ್ಲಿ ಒಂದು ಅಂಗೈಯಷ್ಟಾದರೂ ಸ್ಥಳವನ್ನಿಟ್ಟುಕೊಂಡಿರುವರೇ? ಇವರೆಂತಹ ತ್ಯಾಗಿಗಳಿರಬಹುದು? ಜಗತ್ತಿನ ಚರಿತ್ರೆಯಲ್ಲಿ ಇದೊಂದು ಅದ್ಭುತವಾದ ಆಶ್ಚರ್ಯವಲ್ಲವೇ?

ಹಿಂದುಗಳು ತಮ್ಮ ಈ ರಾಜಕೀಯ ಹೀನಸ್ಥಿತಿಯನ್ನು ನೋಡಿಕೊಂಡು ನ್ಯಾಯವಾದ ಮಾರ್ಗದಿಂದಲೇ ಸ್ವಾತಂತ್ರ್ಯ ಸುಖವನ್ನು ಸಂಪಾದಿಸಿಬೇಕೆಂದು ಪ್ರಯತ್ನಿಸಿದರೆ ಈ ಮೂರು ಧರ್ಮದವರಲ್ಲಿ ಯಾರಾದರೂ ವಿರೋಧಿಸದೇ ಇರುವುದೇ ಇಲ್ಲ. ಏಕೆಂದರೆ, ಮುಸಲ್ಮಾನರಿಗೆ ತುರ್ಕಸ್ಥಾನದ ವಿಷಯದಲ್ಲಿಯೂ, ಕ್ರೈಸ್ತರಿಗೆ ಫ್ರೆಂಚ್ ಇಂಗ್ಲಂಡ ಮೊದಲಾದ ತಮ್ಮ ಧರ್ಮದವರ ದೇಶಗಳ ವಿಷಯದಲ್ಲಲಿಯೂ ಬೌದ್ಧರಿಗೆ ಜಪಾನ, ಚೀನಗಳ ವಿಷಯದಲ್ಲಿಯೂ, ಎಷ್ಟು ಅಭಿಮಾನವೋ, ಪೂಜ್ಯ ಬುದ್ಧಿಯು ಇರುತ್ತವೆಯೋ ಅಷ್ಟು ಹಿಂದುಸ್ಥಾನದ ವಿಷಯದಲ್ಲಿ ಇರುವುದಿಲ್ಲ. ಆದುದರಿಂದ ಇವರು ಸಮಯ ಬಂದಾಗ ತಮ್ಮ ಧರ್ಮದವರ ಏಳ್ಗೆಯ ಕಡೆಗೆ ಲಕ್ಷಿಸುವರೇ ಹೊರತು ಹಿಂದುಗಳ ಕಡೆಗೆ ಗಮನಿಸಲಿಕ್ಕಿಲ್ಲ. ಹಿಂದುದೇಶಕ್ಕೆ ವಿರೋಧವಾಗಿಯಾದರೂ ಸ್ವಧರ್ಮದವರು ಹಿತಕ್ಕಾಗಿ ಯತ್ನಿಸದೇ ಬಿಡರು. ಇದು ಮನುಷ್ಯ ಸ್ವಭಾವವಾಗಿದೆ. ಆದುದರಿಂದ ಈ ಧರ್ಮಗಳು ದೇಶದಲ್ಲಿ ಹೆಚ್ಚಿದರೆ ಹಿಂದುಗಳ ರಾಜಕೀಯ ದೃಷ್ಟಿಯಿಂದಲೂ ಎಷ್ಟು ಅನರ್ಥ ಸಂಭವಿಸಬಹುದೆಂಬುದು ಕುಶಲ ವಾಚಕರಿಗೆ ಇಷ್ಟರಿಂದಲೇ ಚೆನ್ನಾಗಿ ತಿಳಿಯಬಹುದು. ಪರಧರ್ಮಗಳ ಪ್ರಾಬಲ್ಯವು ಹಿಂದುಗಳ ಧಾರ್ಮಿಕ, ಸಮಾಜಿಕ ಮತ್ತು ರಾಜಕೀಯ ಅವನತಿಗಳಿಗೆ ಬಹುಬಲವಾದ ಕಾರಣಗಳಾಗಿವೆಯೆಂದು ಈವರೆಗೆ ವಿವರಿಸಿರುವ ಸಂಗತಿಗಳಿಂದ ಸ್ಪಷ್ಟವಾಗುವುದಿಲ್ಲವೆ? ಇಂಥ ಮಹತ್ವ ವಿಷಯದಲ್ಲಿ ಉಪೇಕ್ಷೆ ಮಾಡುವುದು ಭಯಂಕರವಾದ ಅಪರಾಧವಲ್ಲವೇ?

ಹಿಂದೂ ಜನಾಂಗಕ್ಕೆ ಬರುವ ಮುಂದಣ ಮಹತ್ತರವಾದ ವಿಪತ್ತು ದೂರಾಗಲು ಎರಡೇ ಮುಖ್ಯ ಉಪಾಯಗಳಿವೆ. (೧) ಹಿಂದಣ ಪ್ರಕರಣದಲ್ಲಿ ವಿವರಿಸಿರುವಂತೆ ಅಂತ್ಯಜರ ಸುಧಾರಣೆಯನ್ನು ಮಾಡಲು ಪ್ರಯತ್ನಿಸಬೇಕು. ಹಾಗೆ ಮಾಡಿದರೆ ಪರಧರ್ಮಗಳನ್ನು ಸ್ವೀಕರಿಸುವುದು ಬಹು ಕಡಿಮೆಯಾಗುತ್ತದೆ. (೨) ಹಿಂಧು ಧರ್ಮಕ್ಕೇ ಬರುವವರನ್ನು ಅವರು ಯಾವ ಧರ್ಮದವರೆ ಇರಲಿ ತೆಗೆದುಕೊಳ್ಳಬೇಕು. ಇದರಿಂದ ಅನ್ಯಧರ್ಮಗಳ ಪ್ರಾಬಲ್ಯವು ಕಡಿಮೆಯಾಗುವುದಲ್ಲದೆ ಹಿಂಧು ಧರ್ಮವನ್ನು ಬಿಟ್ಟುಹೋಗುವುದು ನಿಲ್ಲುತ್ತದೆ. ವೈದಿಕಧರ್ಮವನ್ನು ಈ ರೀತಿಯಾಗಿ ಜೀರ್ಣೋದ್ಧಾರ ಮಾಡುವ ಪರಮ ಪವಿತ್ರವಾದ ಕಾರ್ಯವನ್ನು ಶ್ರೀ ಸ್ವಾಮಿ ದಯಾನಂದ ಸರಸ್ವತಿಗಳು ಈಗ ೨೫ ವರ್ಷಗಳ ಹಿಂದೆ ಪ್ರಾರಂಭಿಸಿದರು. ಈ ಮಹತ್ವದ ಕಾರ್ಯವನ್ನು

ಆರ್ಯ ಸಮಾಜದವರು ಮತ್ತು ಬೊಂಬಾಯಿಯ "ಹಿಂದು ಮಿಷನರಿ" ಸಂಘದವರು ವಿಶೇಷವಾಗಿ ಮಾಡುತ್ತಿದ್ಧಾರೆ. ನಿಜವಾದ ಹಿಂದುಧರ್ಮಾಭಿಮಾನಿಗೆ ಇದು ಸಂತೋಷವನ್ನುಂಟುಮಾಡಲಾರದೇ?

ಕೆಲವು ಪುರಾಣಮತವಾದಿಗಳು ಇದು ಅಧರ್ಮವೆಂತಲೂ, ಅನಾಚಾರವೆಂತಲೂ, ಹೇಳಬಹುದು. ಇಷ್ಟೇ ಅಲ್ಲ ಈ ವಿಷಯವನ್ನು ಕೇಳುವುದು ಕೂಡಾ ಮಹಾ ಪಾಪವೆಂದು ಕಿವಿ ಮುಚ್ಚಿಕೊಳ್ಳಬಹುದು. ಇಂಥವರು ಶಾಂತ ಚಿತ್ತದಿಂದ ಈ ವಿಷಯವನ್ನು ಯೋಚಿಸಲಿ. ತಾವು ಈಗ ಯಾವ ವರ್ಣದಲ್ಲಿದ್ದಾರೆಯೋ ಅದೇ ವರ್ಣದ ಮೂಲಪುರುಷನಿಂದ ತಮ್ಮ ವಂಶವು ಬಂದಿದೆಯೆಂದು ಧೈರ್ಯದಿಂದ ಎದೆ ತಟ್ಟಿಕೊಂಡು ಹೇಳುವರೇ? ಪ್ರಾಚೀನ ಋಷಿ ಗೋತ್ರವನ್ನು ಹೇಳುತ್ತಿರುವವರು ತಮ್ಮ ಮೂಲ ಪುರುಷರು ಯಾವ ವರ್ಣದವರಿದ್ದರೆಂಬುದನ್ನು ನೋಡಬಾರದೇ? ಅವರಿಗೆ ಜನ್ಮದಿಂದಲೇ ವರ್ಣವು ಬಂದಿತ್ತೋ, ಗುಣಕರ್ಮಗಳಿಂದ ಬಂದಿತ್ತೋ ಎಂಬುದನ್ನು ನಿರ್ವಿಕಾರ ಬುದ್ಧಿಯಿಂದ ತಿಳಿದುಕೊಳ್ಳಬಾರದೇ? ಪ್ರಪಂಚದಲ್ಲಿ ಯಾವ ಧರ್ಮವು ಅನ್ಯಧರ್ಮದವರನ್ನು ತೆಗೆದುಕೊಂಡಿಲ್ಲ? ಈಗಿರುವ ಹಿಂದುಗಳ ಪೂರ್ವಜರು ಹಿಂದಕ್ಕೆ ಬೌದ್ಧಧರ್ಮದವರಾಗಿರಲಿಲ್ಲವೇನು? ಅವರ ಪ್ರಾಚೀನರು ಒಂದು ಕಾಲದಲ್ಲಿ ವೈದಿಕ ಧರ್ಮಗಳಾಗಿರಲಿಲ್ಲವೇನು? ಮನುಷ್ಯನು ಹುಟ್ಟಿದಾಗಲೇ ಒಂದು ಧರ್ಮವನ್ನು ಅನುಸರಿಸಿರುತ್ತಾನೆಂದು ತಿಳಿಯುಪುದು ಮೂಢತನವಲ್ಲವೇ? ನಿಷ್ಪಕ್ಷಪಾತದಿಂದ ಯೋಚಿಸುವ ಎಂಥ ಸಾಧಾರಣ ಬುದ್ಧಿಯುಳ್ಳವರಿಗೂ ಇದರ ನಿಜತ್ವ ತಿಳಿಯುವಂತಿರುವುದರಿಂದ ಅನೇಕ ಗ್ರಂಥಗಳ ಆಧಾರಗಳನ್ನೂ ದೃಷ್ಟಾಂತಗಳನ್ನು ವಿವರಿಸುವ ಪ್ರಯತ್ನವು ವ್ಯರ್ಥವಾದುದಲ್ಲವೇ? ಆದುದರಿಂದ ಆ ವಿಷಯಗಳ ಕಡೆಗೆ ಲಕ್ಷಿಸಿರುವುದಿಲ್ಲ.

ಈ ಧಾರ್ಮಿಕ ಮತ್ತು ತಾತ್ವಿಕ ಯೋಚನೆಗಳು ಹಾಗಿರಲಿ, ಕೇವಲ ನ್ಯಾಯದೃಷ್ಟಿಯಿಂದಲಾದರೂ ಮುಸಲ್ಮಾನ್ ಕ್ರೈಸ್ತಧರ್ಮದವರನ್ನು ಹಿಂದು ಧರ್ಮದಲ್ಲಿ ಸೇರಿಸಿಕೊಳ್ಳುವುದು ಯುಕ್ತವೆಂದು ತೋರುತ್ತದೆ. ಹಿಂದಕ್ಕೆ ಮುಸಲ್ಮಾನರಾದವರೆಲ್ಲಾ ಪ್ರಾಯಶಃ ಬಲಾತ್ಕಾರದಿಂದಲೇ ಆ ಧರ್ಮವನ್ನು ಸ್ವೀಕರಿಸಿದ್ದರಷ್ಟೇ. ಅಂಥ ಜನಗಳ ವಂಶಜರು ಈಗ ಪುನಃ ಹಿಂದು ಧರ್ಮದಲ್ಲಿ ಬರುತ್ತೇನೆಂದು ಹೇಳಿದರೆ ಅವರನ್ನೇಕೆ ತೆಗೆದುಕೊಳ್ಳಬಾರದು?ಇವರು ಮಾಡಿರುವ ಅಪರಾಧವೇನು? ನಾವು ನಮ್ಮ ಕರ್ತವ್ಯವನ್ನು ಮಾಡಿ ಆ ಕಾಲದಲ್ಲಿ ನಮ್ಮ ಧರ್ಮಬಾಂಧವರಾಗಿದ್ದ ಇವರ ಪೂರ್ವಜನರನ್ನು ಬಿಡಿಸಿಕೊಳ್ಳಲಿಲ್ಲ. ನಮ್ಮ ಈ ಅಪರಾಧವನ್ನು ಕಳೆದುಕೊಳ್ಳಬೇಕಾದರೆ ಇವರನ್ನಾದರೂ ನಮ್ಮ ಧರ್ಮದಲ್ಲಿ ಸೇರಿಸಿಕೊಳ್ಳಬಾರದೇ? ಮುಸಲ್ಮಾನರಿಂದುಂಟಾಗಿದ್ದ ಭಯಂಕರವಾದ ವಿಪತ್ತಿನಲ್ಲಿ ಯಾವ ಕೆಲವು ಮರಾಠಿ ಜನರು ಪ್ರಾಣದಾಸೆಯನ್ನು ಬಿಟ್ಟು ಸ್ವಧರ್ಮ ಸ್ವದೇಶಗಳ ರಕ್ಷಣಾರ್ಥವಾಗಿ ಮಹಮ್ಮದೀ ರಾಜರ ಅಂತರ್ಯಗಳನ್ನು ತಿಳಿದುಕೊಳ್ಳಲು ಮುಸಲ್ಮಾನ್ ಧರ್ಮವನ್ನು ಸ್ವೀಕರಿಸಿದ್ದರೋ ಅಂಥ ಮಹಾತ್ಮರ ವಂಶಜರು ಈಗ ಹಿಂದು ಧರ್ಮದಲ್ಲಿ ಬರುತ್ತೇವೆಂದು ಹೇಳಿದರೆ ಅವರನ್ನು ತೆಗೆದುಕೊಳ್ಳದಿರುವುದು ಎಂಥ ದ್ರೋಹವು? ಇವರ ಪೂರ್ವಜರು ಆ ಕಾಲದಲ್ಲಿ ಮಾಡಿದ ಮಹದುಪಕಾರಕ್ಕೆ ಇವರನ್ನು ಆ ಧರ್ಮದಲ್ಲಿಯೇ ಇಡುವುದು ಪ್ರತ್ಯುಪಕಾರವೇ? ಈಗಲೂ ಪೇಶಾವರದ ಕಡೆಗೆ ಆಗಾಗ್ಗೆ ಹಿಂದುಸ್ಥಾನದ ಗಡಿಯಲ್ಲಿರತಕ್ಕ ಕ್ರೂರವಾದ ಮುಸಲ್ಮಾನರು ನೆರೆಯ ಗ್ರಾಮಗಳಲ್ಲಿರತಕ್ಕ ಹಿಂದು ಜನಗಳ ಮನೆಯನ್ನು ಮಾತ್ರ ನುಗ್ಗಿ ಅವರನ್ನು ಹಿಂಸೆಗೊಳಿಸಿ ತಮ್ಮ

ಧರ್ಮಕ್ಕೆ ಸೇರಿಸಿಕೊಳ್ಳುತ್ತಿದ್ದಾರಷ್ಟೆ ಈ ಕಷ್ಟದಿಂದ ಪಾರಾಗಬೇಕೆಂದು ನೆರೆಯ ಗ್ರಾಮಗಳ ಹಿಂದುಗಳೆಲ್ಲಾ ತಾವೇ ಮುಂಚಿತವಾಗಿ ಮುಸಲ್ಮಾನರಾಗುತ್ತಿದ್ಧಾರೆ. ಈ ಪ್ರಾಂತ್ಯದ ಹಿಂದುಗಳನ್ನು ರಕ್ಷಿಸುವುದೂ ಧರ್ಮದಿಂದ ದೂರಾದವರನ್ನು ಸ್ವಧರ್ಮದಲ್ಲಿ ಕೂಡಿಸಿಕೊಳ್ಳುವುದೂ ಹಿಂದು ಧರ್ಮಾಭಿಮಾನಿಗಳ ಕತ್ಯವ್ಯವಲ್ಲವೇ? ಹಿಂದು ಧರ್ಮದ ನಾಮಧಾರಿಗಳಾದ ಉತ್ತಮ ವರ್ಣದವರು ಅಂತ್ಯಜರೇ ಮೊದಲಾದವರನ್ನು ಕೀಳಾಗಿ ಕಂಡದ್ದರಿಂದ ಯಾವ 'ನಿರ್ಮಳ' ಎಂಬ ಗ್ರಾಮದ ಹಿಂದುಗಳು ಕ್ರೈಸ್ತರಾಗಿದ್ದರೋ ಅವರ ವಂಶಜರು ಈಗ ಹಿಂದು ಧರ್ಮದಲ್ಲಿ ಬರುತ್ತೇವೆಂದು ಹೇಳುತ್ತಿರುವುದನ್ನು ನಿರಾಕರಿಸುವುದು ನ್ಯಾಯವೋ?

ಮುಖ್ಯವಾಗಿ ಅಂತ್ಯಜರ ಸುಧಾರಣೆಯನ್ನು ಮಾಡುತ್ತಾ ಅನ್ಯಧರ್ಮಿಗಳನ್ನು ಸ್ವಧರ್ಮದಲ್ಲಿ ಸೇರಿಸಿಕೊಳ್ಳುತ್ತಾ ಹಿಂದುಧರ್ಮದ ಜೀರ್ಣೋದ್ಧಾರವನ್ನು ಪ್ರಾಚೀನ ಆರ್ಯರ ಗುಣಕರ್ಮಗಳ ತತ್ವವನ್ನನುಸರಿಸಿ ಮಾಡದ ಹೊರತು ಹಿಂದು ಜನಾಂಗದ ಧಾರ್ಮಿಕ, ಸಾಮಾಜಿಕ, ರಾಜಕೀಯ ಹೀನ ಸ್ಥಿತಿಗಳು ನಿವಾರಣೆಯಾಗುವುದಿಲ್ಲ. ಆದುದರಿಂದ ಇಂಥ ಪವಿತ್ರವಾದ ಕಾರ್ಯವನ್ನು ಮಾಡಲು ಸಕಲರಿಗೂ ಸಮೃದ್ಧಿಯುಂಟಾಗಲೆಂದು ಹಾರೈಸಿ ಈ ಚಿಕ್ಕ ಪುಸ್ತಕವನ್ನು ಪೂರೈಸಿದೆ.

❖❖

ಅಹಿಂಸೆ

ಲೇಖಕ

ಎಂ. ಮಂಜಪ್ಪ ಹರ್ಡೇಕರ

ವೀರಶೈವ ವಿದ್ಯಾಲಯ, ಆಲಮಟ್ಟಿ

೧ನೆಯ ಪ್ರಕರಣ

ನರಹತ್ಯೆ

ಯಾವ ಪ್ರಾಣಿಯ ದೇಹಕ್ಕಾಗಲಿ ಅಥವಾ ಮನಸ್ಸಿಗಾಗಲಿ ನೋವನ್ನು ಕೂಡಾ ಉಂಟು ಮಾಡದಿರುವುದೇ ಅಹಿಂಸೆಯು. ಇಂಥ ಅಹಿಂಸಾವ್ರತವು ಮನುಷ್ಯನ ಧ್ಯೇಯವಾಗಿರುವುದು ಸಾಧ್ಯವೇ ವಿನಾ ಅದು ಆಚರಣೆಯಲ್ಲಿ ಬರಲು ಅವಕಾಶವಿಲ್ಲ ಏಕೆಂದರೆ ಮನುಷ್ಯನು ಬದುಕುವದಕ್ಕಾದರೂ ಅವಶ್ಯಕವಾಗಿ ಸೇವಿಸಲೇ ಬೇಕಾಗಿರುವ ಹವೆ ಮತ್ತು ನೀರುಗಳಲ್ಲಿ ಕೂಡಾ ಕಣ್ಣಿಗೆ ಕಾಣದಿರುವಂತಹ ಅಸಂಖ್ಯ ಪ್ರಾಣಿಗಳು ವಾಸವಾಗಿ ಇದ್ದೇ ಇರುತ್ತವೆ. ನಾವು ಜೀವಿಸಬೇಕಾದರೆ ಅವು ಸಾಯಬೇಕಾದುದು ಅನಿವಾರ್ಯವು ಇಷ್ಟೇ ಅಲ್ಲ; ಆ ಸೂಕ್ಷ್ಮತ್ವವು ಪ್ರಾಣಿಗಳ ಮರಣವೇ ನಮ್ಮ ಜೀವಿತವೆಂದು ಹೇಳಬಹುದು. ಆದುದರಿಂದಲೇ ಜೀವಕ್ಕೆ ಜೀವಿಗಳೇ ಜೀವನವೆಂದು ಹೇಳಿದ್ದಾರೆ.

ಆದರೆ ಇದರ ಮೇಲಿಂದ ಮನುಷ್ಯನು ಬೇಕಾದ ಪ್ರಾಣಿಗಳನ್ನು ಬೇಕಾದ ರೀತಿಯಲ್ಲಿ ಹಿಂಸಿಸಬಹುದೆಂದು ಮಾತ್ರ ಸಿದ್ಧವಾಗುವುದಿಲ್ಲ. ಏಕೆಂದರೆ; ಎಷ್ಟೋಮಟ್ಟಿಗೆ ಪ್ರಾಣಿಹಿಂಸೆಯನ್ನು ಮಾಡದೆಯೇ ಮನುಷ್ಯನು ಜೀವಿಸುವುದು ಸಾಧ್ಯವಿದೆ. ಇಷ್ಟೇ ಇಲ್ಲ; ಪ್ರಾಣಿಗಳಿಗಿರುವ ಇಂದ್ರಿಯಗಳ ತಾರತಮ್ಯದ ಮೇಲಿಂದ ಆಯಾಯ ಪ್ರಾಣಿಗಳ ವಿಷಯದಲ್ಲಿ ಅಹಿಂಸಾ ವ್ರತವನ್ನು ಆಚರಿಸುವುದರಿಂದಲೇ ಮನುಷ್ಯನಲ್ಲಿ ಮನುಷ್ಯತ್ವವು ಪೂರ್ಣಾವಸ್ಥೆಯನ್ನು ಹೊಂದುತ್ತದೆ. ಆದಕಾರಣ ಈ ಅಹಿಂಸಾವ್ರತವು ಮನುಷ್ಯನಿಂದ ಎಷ್ಟರ ಮಟ್ಟಿಗೆ ಆಚರಿಸಲ್ಪಡುವುದು ಸಾಧ್ಯವಿದೆಯೆಂಬಂಶವು ಈವರೆಗಿನ ಅನೇಕ ಜ್ಞಾನಿಗಳ ಅನುಭವದಿಂದ ಗೊತ್ತಾಗಿದೆಯೇ ಅಷ್ಟರಮಟ್ಟಿಗಾದರೂ ಆಚರಿಸಲ್ಪಡಬೇಕಾದುದು ಪ್ರತಿಯೊಬ್ಬ ಮನುಷ್ಯನ ಕರ್ತವ್ಯವಾಗಿದೆ.

ಮನುಷ್ಯನು ಮನುಷ್ಯರನ್ನು ಕೊಲ್ಲುವುದು ಅಯುಕ್ತವಾದುದೆಂದು ಹೇಳಬೇಕಾದುದೇ ಇಲ್ಲ. ಏಕೆಂದರೆ, ಪ್ರತಿಯೊಬ್ಬ ಮನುಷ್ಯನಿಗೂ ತನ್ನ ಜೀವವು ತನಗೆ ಅತ್ಯಂತ ಪ್ರಿಯವಾಗಿಯೇ ಇರುತ್ತದೆ. ಮತ್ತು ಅದನ್ನು ರಕ್ಷಿಸುವುದಕ್ಕೋಸ್ಕರ ಹಗಲಿರಳು ಪ್ರಯತ್ನಿಸಿರುತ್ತಾನೆ. ಈ ಪ್ರಕಾರ ಎಲ್ಲರಿಗೂ ಸಮಾನಪ್ರೀಯವಾಗಿರತಕ್ಕ ಪ್ರಾಣವನ್ನು ಯಾರು ಕಳೆಯಲು ಹೋಗುತ್ತಾರೆಯೋ, ಅವರು ತಮ್ಮ ಪ್ರಾಣದಾಶೆಯನ್ನೂ ಬಿಡಬೇಕಾಗುತ್ತದೆ. ಕೊಂದವರಿಗೆ ಕೊಲೆತಪ್ಪದೆಂಬ ನಾಣ್ಣುಡಿಯು, ನಿನ್ನ ಕತ್ತಿಯನ್ನು ಒರೆಯಲ್ಲಿ ಹಾಕು, ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು ಎಂಬ

ಸಾಧುವರ್ಯ ಯೇಸುಕ್ರಿಸ್ತನ ಉಪದೇಶವು ಮನುಷ್ಯ ಕೊಲೆಯು ಆಯುಕ್ತವಾದುದೆಂದೇ ಸೂಚಿಸುತ್ತದೆ. ಆದಕಾರಣ ಸುಧಾರಿಸಿದ ಎಲ್ಲಾ ಸಮಾಜಗಳೂ ಮನುಷ್ಯ ಕೊಲೆಯು ಭಯಂಕರವಾದ ಅಪರಾಧವೆಂದೇ ತಿಳಿದಿವೆ.

ಆದರೆ ಈ ನಿಯಮವು ಎಲ್ಲಾ ಕಡೆಗಳಲ್ಲಿಯೂ, ಎಲ್ಲಾ ಕಾಲಗಳಲ್ಲಿಯೂ, ಮಾತ್ರ ಇನ್ನೂ ಅನ್ವಯಿಸಲ್ಪಡದೇ ಇದ್ದುದು ಮಾತ್ರ ಅತ್ಯಂತ ವಿಷಾದಕರವಾದುದಾಗಿದೆ. ಒಬ್ಬನಾಗಲಿ ಅಥವಾ ಅನೇಕರಾಗಲಿ ಕೇವಲ ಸ್ವಾರ್ಥಕ್ಕೋಸ್ಕರ ಅನ್ಯರನ್ನು ಕೊಂದರೆ ಮಾತ್ರ ಅದು ಅಪರಾಧವೆಂದು ತಿಳಿಯುವವರೇ ಹೆಚ್ಚು ಅವರೇ ತಮ್ಮ ಧರ್ಮಕ್ಕೋಸ್ಕರವೆಂದಾಗಲಿ, ಇಲ್ಲವೆ ದೇಶಕ್ಕೋಸ್ಕರವೆಂದಾಗಲಿ ಅನ್ಯರನ್ನುಕೊಂದರೆ ಅದು ಅಪರಾಧವಲ್ಲವೆಂದು ಅನೇಕರು ತಿಳಿಯುತ್ತಾರೆ! ಈ ತಪ್ಪು ತಿಳುವಳಿಕೆಯಿಂದಲೇ ಪ್ರಪಂಚದಲ್ಲಿ ಈವರೆವಿಗೂ ಆಗಾಗ್ಗೆ ಅನೇಕ ಧಾರ್ಮಿಕ ಮತ್ತು ರಾಜಕೀಯ ಯುದ್ದಗಳೂ, ಕೊಲೆ ಸುಲಿಗೆಗಳೂ, ಜರುಗುತ್ತಾ ಬಂದಿವೆ. ಆ ಭಯಂಕರವಾದ ನರಹತ್ಯೆಯಿಂದಲೇ, ಜನಾಂಗವು ಈವರೆವಿಗೂ ಅಪರಮಿತವಾದ ಅನರ್ಥ ಪರಂಪರೆಗಳಿಂದ ನರಳುತ್ತಾ ಬಂದಿವೆ.

ಒಬ್ಬನು ಸ್ವಾರ್ಥಕ್ಕೋಸ್ಕರ ಇನ್ನೊಬ್ಬನನ್ನು ಕೊಂದರೆ ಅದು ಹೇಗೆ ಅಪರಾಧವಾಗುತ್ತದೆಯೋ ಹಾಗೆಯೇ ಆತನು ತನ್ನ ಧರ್ಮಕ್ಕೋಸ್ಕರವಾಗಿಯಾಗಲಿ, ಅಥವಾ ದೇಶಕ್ಕೋಸ್ಕರವಾಗಿಯಾಗಲಿ ಅನ್ಯರನ್ನು ಕೊಂದರು ಕೂಡಾ ಅದು ಅಪರಾಧವಾಗಬೇಕಾದುದೇ ನ್ಯಾಯವಲ್ಲವೆ? ಕೊಲ್ಲುವವನ ಉದ್ದೇಶವು ವ್ಯತ್ಯಾಸವಾದಂತೆ ಸಾಯುವವನಿಗೆ ದುಃಖವೇನಾದರೂ ಹೆಚ್ಚು ಕಡಿಮೆಯಾಗುತ್ತದೆಯೋ? ಯಾರು ಯಾವ ಉದ್ದೇಶದಿಂದ ಕೊಲೆಮಾಡಿದರೂ ಸಾಯುವವನು ಮಾತ್ರ ಪ್ರಾಣ ಹಿಂಸೆಯ ಕ್ಲೇಶವನ್ನು ಸಂಪೂರ್ಣವಾಗಿ ಅನುಭವಿಸಲೇಬೇಕಾದುದು ಸ್ವಾಭಾವಿಕವಲ್ಲವೇ? ಬಹು ಜನರು ಬಹು ಚಾತುರ್ಯದಿಂದ ಕೊಲ್ಲುವುದನ್ನು ಕಲಿತು ಧರ್ಮಾಭಿಮಾನಿಗಳೆಂದಾಗಲಿ, ದೇಶಾಭಿಮಾನಿಗಳೆಂದಾಗಲಿ, ಹೆಸರಿಟ್ಟುಕೊಂಡ ಮಾತ್ರದಿಂದ ಕೊಲ್ಲುವ ಆ ಕೆಟ್ಟ ಕಾರ್ಯವು ಒಳ್ಳೆಯದಾಗಬಹುದೇ? ಪಾಪ ಕಾರ್ಯವನ್ನು ಬಹು ಜನರು ಮಾಡಿದ ಮಾತ್ರದಿಂದ ಅದು ಪುಣ್ಯಕಾರ್ಯವಾಗಬಹುದೇ? ಅಥವಾ ಪುಣ್ಯ ಕಾರ್ಯಗಳನ್ನು ಒಬ್ಬನೇ ಮಾಡಿದ ಮಾತ್ರದಿಂದ ಅದು ಪಾಪಕಾರ್ಯವಾಗಬಹುದೇ? ಇಲ್ಲ. ಹಿಂಸೆಯು ಸ್ವಾಭಾವಿಕವಾಗಿಯೇ ದುಷ್ಫಲದಾಯಕವಾದುದಾಗಿದೆ. ಅದನ್ನು ಎಷ್ಟು ಜನರು ಎಷ್ಟು ಗ್ರಂಥಾಧಾರಗಳಿಂದ ಯಾವ ಯಾವ ಹೆಸರುಗಳನ್ನಿಟ್ಟುಕೊಂಡು ಮಾಡಿದರೇನು? ಆ ದುಷ್ಟ ಕರ್ಮವೇನಾದರೂ ಸತ್ಫಲವನ್ನೀಯುವುದೇ?

ರತ್ನದ ಸಂಗಡಲೇ ಕಾಂತಿಯು, ಪುಷ್ಪದ ಸಂಗಡಲೇ ಪರಿಮಳವು ಹೇಗೆ ಅವಿಚ್ಛಿನ್ನವಾಗಿರುತ್ತವೆಯೋ ಹಾಗೆಯೇ **ಕರ್ಮದ ಸಂಗಡಲೇ ಅದರ ಫಲವೂ ಇದ್ದೇ ಇರುತ್ತದೆ.** ಆದಕಾರಣ ಒಬ್ಬ ಮನುಷ್ಯನು ಸ್ವಾರ್ಥಕ್ಕೋಸ್ಕರ ಮಾಡುವ ಕೊಲೆಯ ಫಲವನ್ನು ಹೇಗೆ ಆತನು ಅನುಭವಿಸಲೇಬೇಕಾಗಿದೆಯೋ ಹಾಗೆಯೇ ಒಂದು ಧರ್ಮದವರಾಗಲಿ, ಅಥವಾ ಒಂದು ದೇಶದವರಾಗಲಿ ಯುದ್ಧ ಮೂಲಕ ಮಾಡುವ ನರಹತ್ಯದ ದುಷ್ಫಲವನ್ನು ಆಯಾಯ ಧರ್ಮದವರಾಗಲಿ ಅಥವ ದೇಶದವರಾಗಲಿ ಅನುಭವಿಸಿಯೇತೀರಬೇಕು. ಇದು ಕರ್ಮತತ್ವದ ಸತ್ಯಸಿದ್ಧಾಂತವಾಗಿದೆ. ಆದರೆ ಒಂದು ವ್ಯಕ್ತಿಯ ಅಪರಾಧದ ದುಷ್ಫಲವು ಹೇಗೆ ಜಾಗ್ರತೆ ತೋರುತ್ತದೆಯೋ

ಹಾಗೆ ಬಹುಜನಗಳ ಈ ಘೋರಕೃತ್ಯದ ಭಯಂಕರವಾದ ಅನರ್ಥವು ಮಾತ್ರ ಜಾಗ್ರತೆ ಕಾಣುವುದಿಲ್ಲ. ಆದುದರಿಂದ ಜನ ಸಾಮಾನ್ಯರು ಯಾವ ಅನರ್ಥವು ಸಂಭವಿಸುವದಿಲ್ಲವೆಂದು ತಿಳಿಯುತ್ತಾರೆ. ತಾವು ಹಿತಕ್ಕೋಸ್ಕರವೆಂದು ಕೊಲೆ ಸೂಲಿಗೆಗಳನ್ನು ಮಾಡುತ್ತಾರೆಯೋ ಆ ತಮ್ಮ ಧರ್ಮದವರಾಗಲಿ ಅಥವಾ ದೇಶದವರ್ರಾಗಲಿ ಆ ನರಹತ್ಯೆದ ದುಷ್ಫಲವನ್ನು ಮುಂದೆ ಅನುಭವಿಸಿಯೇ ಅನುಭವಿಸುವರು. ಏಕೆಂದರೆ, ಹಿಂಸೆಯೆಂಬ ವಿಷಬೀಜವನ್ನೇ ಇವರು ಬಿತ್ತಿರುತ್ತಾರೆ.

ಯಾರು ಯಾವ ಕಾಲದಲ್ಲಿ ಯಾವ ಉದ್ದೇಶದಿಂದಲೇ ಆಗಲಿ ಬೇವಿನ ಬೀಜವನ್ನು ಬಿತ್ತಿದರೆ ಅದು ಸಸಿಯಾಗಿ ಬೆಳೆದು ಮಾವಿನ ಫಲವನ್ನೇನಾದರೂ ಬಿಡಬಹುದೇ? ನಾವು ಯಾವ ವಿಧವಾದ ಬೀಜವನ್ನು ಬಿತ್ತುತ್ತೇವೆಯೋ ಆ ವಿಧವಾದ ಫಲವೇ ಪ್ರಾಪ್ತವಾಗುವುದು ಸ್ವಾಭಾವಿಕವಲ್ಲವೇ? ನಮಗೆ ಪ್ರೇಮವು ಬೇಕಾಗಿದ್ದರೆ ಪ್ರೇಮವನ್ನುಂಟುಮಾಡುವ ಕಾರ್ಯವನ್ನೇ ನಾವು ಮಾಡಬೇಕು. ದ್ವೇಷವುಂಟಾಗುವ ಕಾರ್ಯವನ್ನು ಮಾಡಿ ಪ್ರೇಮವನ್ನಪೇಕ್ಷಿದರೆ ಅದು ಹೇಗೆತಾನೆ ದೊರೆಯುವುದು? ಅನ್ಯದೇಶದವರನ್ನಾಗಲಿ ಅಥವಾ ಅನ್ಯಧರ್ಮದವರನ್ನಾಗಲಿ ಹಿಂಸೆಗೊಳಿಸಿ ಅವರಿಂದ ಪ್ರೇಮವನ್ನು ಅಪೇಕ್ಷಿಸುವುದು ಮೂಢತನವಲ್ಲವೇ? ಆದಕಾರಣ ತಮಗಾಗಲಿ, ತಮ್ಮ ಧರ್ಮದವರಿಗಾಗಲಿ, ತಮ್ಮ ದೇಶದವರಿಗಾಗಲಿ, ಪ್ರೇಮ, ಸುಖ, ಶಾಂತಿಗಳು ಬೇಕೆಂದು ಯಾರು ಅಪೇಕ್ಷಿಸುತ್ತಾರೆಯೋ ಅವರು ಯಾವ ಕಾಲದಲ್ಲಿಯೇ ಆಗಲಿ, ಯಾವ ಉದ್ದೇಶದಿಂದಲೇ ಆಗಲಲಿ, ಯಾರನ್ನೇ ಆಗಲಿ ಕೊಲ್ಲದಿರುವುದೇ ಯುಕ್ತವಾದದ್ಧಾಗಿದೆ. ಈ ಪ್ರಕಾರ ಹೇಳಲಿಕ್ಕೆ ಮಾತ್ರ ಬರಬಹುದೇ ವಿನಾ ಆಚರಿಸಲಿಕ್ಕೆ ಮಾತ್ರ ಯಾರಿಗೂ ಬರುವುದಿಲ್ಲವೆಂತಲೂ ಒಂದು ವೇಳೆ ಆಚರಿಸಲ್ಪಟ್ಟರೆ ಅವರಿಂದ ಧರ್ಮರಕ್ಷಣೆಯು ಅಥವಾ ದೇಶದ ಸ್ವಾತಂತ್ರ್ಯ ಸಂಪಾದನೆಯ ಮಹತ್ಕಾರ್ಯವು ಮಾತ್ರ ಆಗುವುದಿಲ್ಲವೆಂತಲೂ ಧರ್ಮರಕ್ಷಣೆಗೂ ಸ್ವಾತಂತ್ರ್ಯ ಸ್ಥಾಪನೆಗೂ ದುಷ್ಟರನ್ನು ಸಂಹಾರಮಾಡಬೇಕಾದುದು ಅಪರಿಹಾರ್ಯವಾದುದೆಂತಲೂ ಕೆಲವರು ಹೇಳಬಹುದು. ಇದು ಅವರ ತಪ್ಪು ತಿಳುವಳಿಕೆಯಾಗಿದೆ. ತಮಗೆ ಅಹಿತವನ್ನೇ ಬಯಸುತ್ತಿರುವ ಮನುಷ್ಯನನ್ನೇ ಆದಿಯಾಗಿ ಸಕಲರನ್ನೂ ಸಮಾನರೆಂದು ತಿಳಿದು ಅವರ ವಿಷಯದಲ್ಲಿ ಕಾಯಾ ವಾಚಾ ಮನಸ್ಸಿನಿಂದಲೂ ಕೂಡಾ ಅಹಿಂಸಾ ವ್ರತವನ್ನಾಚರಿಸಿ ಅಸಂಖ್ಯ ಮಹಾನುಭಾವರ ಚರಿತ್ರೆಗಳೇ ದೃಷ್ಟಾಂತಗಳಾಗಿರುವಾಗ ಈ ಅಹಿಂಸಾವ್ರತವು ಕೇವಲ ನುಡಿಮಾತ್ರವಾದುದೆಂದು ಹೇಳಬಹುದೇ? ಯಾರು ಆಚರಿಸಲು ಕ್ರಮಿಸುತ್ತಾರೆಯೋ ಅವರಿಗೆ ಅದು ನಡವಳಿಕೆಯಲ್ಲಿ ಬರುವುದು. ಇಲ್ಲದಿದ್ದರೆ ನುಡಿಮಾತ್ರದಲ್ಲಿಯೇ ಇರುವುದು ಸ್ವಭಾವಿಕವಾಗಿದೆ.

ಧರ್ಮಸ್ಥಾಪನೆಗೆ ಹಿಂಸೆಯು ಅವಶ್ಯಕವೇ ಆಗಿದೆಯೆಂದು ಕೆಲವರು ತಿಳಿದಿದ್ದಾರಷ್ಟೆ ಅವರು ಭಗವಾನ ಗೌತಮ ಬುದ್ಧನ ಚರಿತ್ರೆಯನ್ನು ನೋಡಲಿ. ಪ್ರಪಂಚದ ಎಲ್ಲಾ ಧರ್ಮಗಳಿಗಿಂತಲೂ ವಿಸ್ತಾರವಾಗಿ ವ್ಯಾಪಿಸಿರುವ ಆ ಬೌದ್ಧಮತವು ಹಿಂಸೆಯಿಂದ ಸ್ಥಾಪನೆಯಾಯಿತೇ? ಅಹಿಂಸೆಯಿಂದಾಯಿತೇ? ಜಗತ್ತಿನಲ್ಲಿ ಒಂದು ಪ್ರಸಿದ್ಧ ಧರ್ಮವಾಗಿರುವ ಕ್ರೈಸ್ತ ಧರ್ಮವು ಹಿಂಸೆಯಿಂದ ಸ್ಥಾಪನೆಯಾಯಿತೇ? ಅಹಿಂಸೆಯಿಂದಾಯಿತೇ? ಸಾಧುವರ್ಯ ಯೇಸುಕ್ರಿಸ್ತನ ಚರಿತ್ರೆಯನ್ನು ಓದಲಿ, ಅಹಿಂಸೆಯೇ ಪರಮ ಧರ್ಮವನ್ನು ಮಹಾತ್ಮನಾದ ಮಹಾವೀರನು ಹಿಂಸೆಯಿಂದ ಜೀರ್ಣೋದ್ಧಾರಮಾಡಿದನೇ? ಅಹಿಂಸೆಯಿಂದ ಮಾಡಿದನೇ? ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ

ವಿಶಿಷ್ಟಾದ್ವೈತ ಈ ವೈದಿಕ ಮತಗಳನ್ನು ಶ್ರೀ ಶಂಕರಾಚಾರ್ಯರು, ಶ್ರೀಮಧ್ವಾಚಾರ್ಯರು, ಶ್ರೀರಾಮಾನುಜಾಚಾರ್ಯರು, ಶ್ರೀ ಬಸವಣ್ಣನವರು ಶಸ್ತ್ರದಿಂದ ಉದ್ದಾರಮಾಡಿದರೇ? ಶಾಸ್ತ್ರದಿಂದ ಉದ್ಧಾರಮಾಡಿದರೇ? ಈ ಎಲ್ಲಾ ದೃಷ್ಟಾಂತಗಳ ಮೇಲಿಂದ ಧರ್ಮ ಸಂಸ್ಥಾಪನೆಗೂ ಕೂಡಾ ಹಿಂಸೆಯೂ ಅನಾವಶ್ಯಕವೆಂದೇ ಸಿದ್ಧವಾಗುವುದಿಲ್ಲವೇ?

ನರಹತ್ಯವನ್ನು ಮಾಡದೆ ಒಂದು ವೇಳೆ ಧರ್ಮವನ್ನೇನೋ ರಕ್ಷಿಸಬಹುದು, ಆದರೆ ರಾಜಕೀಯ ವಿಷಯದಲ್ಲಿ ದೇಶಸಂರಕ್ಷಣೆಗಾಗಲಿ, ಸ್ವಾತಂತ್ರ್ಯ ಸ್ಥಾಪನೆಗಾಗಲಿ, ಯುದ್ಧ ಮೂಲಕ ಜನಸಂಹಾರವಾದ ವಿನಾ ಮಾರ್ಗವೇ ಇಲ್ಲವೆಂದು ಕೆಲವರಿಗೆ ತೋರಬಹುದು. ಧಾರ್ಮಿಕ ವಿಷಯದಲ್ಲಿರುವಷ್ಟು ಈ ರಾಜಕೀಯ ವಿಷಯದಲ್ಲಿ ಮಾತ್ರ ಅಹಿಂಸೆಯ ದೃಷ್ಟಾಂತಗಳಿಲ್ಲ. ಆದರೆ ರಾಜಕೀಯ ವಿಷಯದಲ್ಲಿ ಹಿಂಸೆಯು ಅವಶ್ಯಕವಾಗಿಯೇ ಇದೆಯೆಂದು ತಿಳಿಯುವುದು ಮಾತ್ರ ವಿಹಿತವಲ್ಲ. ಧಾರ್ಮಿಕ ವಿಷಯದಲ್ಲಿ ಅಹಿಂಸಾವ್ರತವು ಹೇಗೆ ಈ ಭರತಖಂಡದಲ್ಲಿ ಮೊದಲು ಜನ್ಮವೆತ್ತಿತೋ ಹಾಗೆಯೇ ರಾಜಕೀಯ ವಿಷಯದಲ್ಲಿಯೂ ಈ ಪುಣ್ಯಭೂಮಿಯಲ್ಲಿಯೇ ಆ ಅಹಿಂಸಾ ವ್ರತವು ತಲೆದೋರಿದೆ. ಮಹಾತ್ಮ ಗಾಂಧಿಯವರೇ ಈ ವಿಷಯದಲ್ಲಿ ಆದಿಪುರುಷರು. ರಾಜಕೀಯ ಉದ್ದೇಶದಿಂದ ಪ್ರಪಂಚದಲ್ಲಾಗುತ್ತಾ ಬಂದಿರುವ ಮನುಷ್ಯ ಸಂಹಾರವನ್ನು ನಿಲ್ಲಿಸುವುದೇ ಮಹಾತ್ಮಾ ಗಾಂಧಿಯವರ ಅವತಾರಕೃತ್ಯವು ಈ ವರೆಗೆ ದಕ್ಷಿಣ ಆಫ್ರಿಕೆಯಲ್ಲಿಯೂ, ಈ ದೇಶದಲ್ಲಿಯೂ ಅಹಿಂಸಾವ್ರತದಿಂದಲೇ ಅನೇಕ ರಾಜಕೀಯ ಸೌಲಭ್ಯಗಳನ್ನು ಸಂಪಾದಿಸಿ ಪ್ರಪಂಚಕ್ಕೆ ಮಾರ್ಗದರ್ಶಿಗಳಾಗಿದ್ದಾರೆ. ಇನ್ನು ಜನರು ಈ ಮಹಾತ್ಮರು ತೋರಿಸಿದ ಮಾರ್ಗದಲ್ಲಿಯೇ ಆಚರಿಸಬೇಕಾದುದು ಅವರ ಕರ್ತವ್ಯವಾಗಿದೆ. ಹಾಗೆ ಆಚರಿಸಿದರೆ ರಾಜಕೀಯ ಸ್ವಾತಂತ್ರ್ಯವೂ ಲಭಿಸುವುದರಲ್ಲಿ ಸಂದೇಹವೇ ಇಲ್ಲ. ಏಕೆಂದರೆ ಅಹಿಂಸಾ ತತ್ವವು ಸರ್ವ ವಿಷಯಗಳಲ್ಲಿಯೂ ಜಯಪ್ರದವಾಗುವುದು ಅದರ ಸ್ವಭಾವವೇ ಆಗಿದೆ. ಆದಕಾರಣ ಪ್ರಪಂಚದ ಮುಂದಿನ ರಾಜಕೀಯ ಚರಿತ್ರೆಯಲ್ಲಿ ಈಗಿನ ಧಾರ್ಮಿಕ ಚರಿತ್ರೆಯಲ್ಲಿ ತೋರುವಂತೆಯೇ ಅನೇಕ ಅಹಿಂಸಾವಾದಿಗಳಾದ ಆತ್ಮವಿವರ ದೃಷ್ಟಾಂತಗಳು ಖಂಡಿತವಾಗಿಯೂ ಪ್ರಕಾಶಿಸುವವು. ಈವರೆಗಿನ ರಾಷ್ಟ್ರಭಕ್ತರ ಚರಿತ್ರೆಗಳು ರಕ್ತದಿಂದ ಬರೆಯಲ್ಪಟ್ಟಿವೆಯಷ್ಟೆ ಆದರೆ ಆ ಮಹಾತ್ಮರ ದಿವ್ಯ ಚರಿತ್ರೆಗಳು ದಯಾರಸದಿಂದ ಬರೆಯಲ್ಪಡುವವು. ಮತ್ತು ರಾಜ್ಯಕ್ರಾಂತಿಗಳೂ ಅಹಿಂಸೆಯಿಂದಲೇ ಜರುಗುವವು.

ಆದ ಕಾರಣ ಮನುಷ್ಯರನ್ನು ಯಾವ ಉದ್ದೇಶದಿಂದ ಯಾರು ಯಾವ ಕಾಲದಲ್ಲಿಯೂ ಕೊಲ್ಲುವುದು ಅವಶ್ಯಕವಾಗಿಲ್ಲ ಮತ್ತು ಹಿತಕರವಾಗಿಯೂ ಇಲ್ಲ, ಆದುದರಿಂದಲೇ ಭಗವಾನ್ ಬುದ್ದದೇವನು ಹೇಳಿರುವುದೇನೆಂದರೆ "ಎಲೈ ಮನುಷ್ಯನೇ? ನಿನ್ನನ್ನು ಶಿಕ್ಷಿಸುವರೆಂದರೆ ನೀನು ಹೇಗೆ ನಡುಗುವಿಯೋ ಮತ್ತು ನಿನ್ನನ್ನು ಕೊಲ್ಲುವದೆಂದರೆ ಪ್ರಾಣದಾಶೆಯಿಂದ ಹೇಗೆ ಭಯಪಟುವಿಯೋ ಹಾಗೆಯೇ ಇತರರೂ ಅಂಜುತ್ತಾರೆಂದು ತಿಳಿದು ಯಾರನ್ನೂ ಹಿಂಸಿಸಬೇಡ ಅಥವಾ ಕೊಲ್ಲಬೇಡ."

ಮನುಷ್ಯರನ್ನು ಕೊಲ್ಲದೆ ಅಥವಾ ಗಾಯಪಡಿಸದೆ ಇದ್ದ ಮಾತ್ರದಿಂದ ಅಹಿಂಸಾವ್ರತವನ್ನಾಚರಿಸಿದಂತಾಗಲಿಲ್ಲ. ಕೂಲಿಕಾರನೇ ಮೊದಲಾದ ಯಾವ ಕೆಲಸಗಾರರನ್ನು ದುಡಿಸಬೇಕಾದರೂ ಅವರ ವಿಷಯದಲ್ಲಿ ದಯೆಯುಳ್ಳವರಾಗಿಬೇಕು. ಅವರ ಹೊಟ್ಟೆ ಬಟ್ಟೆ ಸೌಲಭ್ಯಗಳ ವಿಷಯದಲ್ಲಿ ಉಪೇಕ್ಷೆಯುಳ್ಳವರಾಗಿ ಅವರಿಂದ ಕೆಲಸ ಮಾಡಿಸಿಕೊಲ್ಳುವುದರಲ್ಲಿ ಮಾತ್ರ ಬಹು

ಎಚ್ಚರಿಕೆಯುಳ್ಳವರಾಗಿದ್ದರೆ ಆ ಬಡಜನಗಳನ್ನು ಹಿಂಸಿಸಿದಂತೆಯೇ ಸರಿ. ಈ ಕಾಲದಲ್ಲಿ ಅನೇಕ ಕಾರ್ಯಾಲಯಗಳ ಮತ್ತು ತೋಟಗಳ ಯಜಮಾನರು ಕೂಲಿಕಾರರನ್ನು ಕ್ರಮಕ್ಕೆ ತೆಗೆದುಕೊಂಡ ದನಗಳಿಗಿಂತಲೂ ಕಡೆಯಾಗಿ ಕಾಣುತ್ತ ಅವರ ಶಕ್ತಿಗೆ ಮೀರಿದ ಕೆಲಸಗಳನ್ನು ಕೂಡಾ ಅವರಿಂದ ಮಾಡಿಸುತ್ತಿರುತ್ತಾರೆ. ಈ ಕ್ರೂರ ನಡತೆಗಳು ಕೂಡಾ ಹಿಂಸೆಗಳೇ ಆಗಿವೆ. ಆದಕಾರಣ ಸಕಲರೂ ತಮ್ಮ ಕೂಲಿಯವರು ಅಥವಾ ಕೆಲಸಗಾರರು ತಮ್ಮಂತೆಯೇ ಮನುಷ್ಯರಾಗಿದ್ದಾರೆಂತಲೂ, ಅವರಿಗೂ ದಣಿವು, ಬೇಸರಿಕೆ, ಕಷ್ಟಗಳುಂಟಾಗುತ್ತವೆಂತಲೂ ತಿಳಿದು ಕೆಲಸ ಮಾಡಿಸಬೇಕು.

ಈವರೆಗೂ ಮುಖ್ಯವಾಗಿ ಮನುಷ್ಯರ ದೇಹಸಂಬಂಧವಾಗಿಯೇ ಯೋಚಿಸಿದಂತಾಯಿತು. ಇಷ್ಟರಲ್ಲಿಯೇ ಅಹಿಂಸಾವ್ರತವು ಪೂರ್ತಿಯಾಗುವುದಿಲ್ಲ. ನಮ್ಮ ನುಡಿಯಿಂದಲೂ ಅನ್ಯರಿಗೆ ಹಿಂಸೆಯಾಗುವುದುಂಟು. ಆದಕಾರಣ ಅನ್ಯರ ಮನಸ್ಸಿಗೆ ನೋವಾಗದಂತೆ ಮಾತನಾಡಬೇಕು. ಕ್ರೂರವಾದ ಮಾತುಗಳು ಅಥವಾ ಲೇಖನಗಳು ಸಜ್ಜನರಿಗೆ ತೀಕ್ಷ್ಣವಾದ ಶಸ್ತ್ರಗಳಿಂದ ಮಾಡಲ್ಪಡುವ ಹಿಂಸೆಗಿಂತಲೂ ಹೆಚ್ಚಿನ ದುಃಖವನ್ನುಂಟು ಮಾಡುತ್ತವೆ. ಆದಕಾರಣ ಯಾರಿಗೆ ಯಾವ ಕಾಲದಲ್ಲಿಯೇ ಆಗಲಿ ಬಿರುನುಡಿಯನ್ನಾಡುವುದು ನಿಂದ್ಯವಾದುದೇ ಸರಿ. ಕಠಿಣೋಕ್ತಿಯು ಮಹಾ ಅನರ್ಥಕಾರಿಯಾಗಿದೆಯೆಂಬುದನ್ನು ಅನೇಕರು ತಿಳಿದಿಲ್ಲ; ತಿಳಿದಿದ್ದರೂ ತಮ್ಮ ನಾಲಿಗೆಯನ್ನು ತಡೆಯುವುದಿಲ್ಲ. ತಾವು ವಿನೋದದಿಂದಾಗಲಿ ಅಥವಾ ಹೆಮ್ಮೆಯಿಂದಾಗಲಿ, ಅನ್ಯರಿಗಾಡುವ ಬಿರುನುಡಿಗಳು ಅವರಿಗೆ ಎಂತಹ ಹಿಂಸೆಯನ್ನುಂಟುಮಾಡಬಹುದೆಂಬುದನ್ನು ಯೋಚಿಸುವುದಿಲ್ಲ. ತಮ್ಮ ಮಾತುಗಳಾಗಲಿ ಲೇಖನಗಳಾಗಲಿ ಅನ್ಯರ ಮನಸ್ಸಿನ ಮೇಲೆ ಯಾವ ಪರಿಣಾಮವನ್ನುಂಟು ಮಾಡಬಹುದೆಂಬುದನ್ನು ಮೊದಲು ತಾವು ಯೋಚಿಸಿಯೇ ಉಪಯೋಗಿಸಬೇಕು.

ತನಗೆ ಯಾವ ನಡೆನುಡಿಗಳು ಇಷ್ಟವಾಗಿಲ್ಲವೋ ಅವು ಅನ್ಯರಿಗೂ ಸಂತೋಷಕರವಾಗಿರುವುದಿಲ್ಲವೆಂಬುದನ್ನು ತಿಳಿದು ಆಚರಿಸುವುದೇ ಸಕಲ ಧರ್ಮಗಳ ಸಾರವಾಗಿದೆ. ಈ ವಿಷಯವಾಗಿ ಮಹಾಭಾರತದಲ್ಲಿ ಹೇಳಿರುವುದೇನೆಂದರೆ :

॥ನತತ್ಪರಸ್ಯ ಸಂಧದ್ಯಾತ್ಪ್ರತಿಕೂಲಂ ಯದಾತ್ಮನಃ॥

"ಯಾವುದನ್ನನುಭವಿಸಲು ತನಗೆ ದುಃಖವಾಗುತ್ತದೆಯೋ

ಅದನ್ನು ತಾನು ಅನ್ಯರಿಗುಂಟುಮಾಡಬಾರದು."

❖❖

೨ನೆಯ ಪ್ರಕರಣ

ಗೋವಧೆ

ಮನುಷ್ಯನು ಮನುಷ್ಯರನ್ನು ಹಿಂಸಿಸದಿದ್ದರೆ ಅಹಿಂಸಾವ್ರತದಲ್ಲಿ ಮೊದಲನೆಯ ಆಚರಣೆಯನ್ನಾಚರಿಸಿದಂತಾಯಿತು ಯಾವ ಪ್ರೇಮದಿಂದ ಮನುಷ್ಯರನ್ನು ಹಿಂಸಿಸುವುದಿಲ್ಲವೋ ಅದೇ ಪ್ರೇಮವನ್ನು ದನಗಳ ಮೇಲೆಯೂ ಇಟ್ಟರೆ ಆಗ ಆತನು ಅಹಿಂಸಾವ್ರತವನ್ನಾಚರಿಸಲು ಒಂದು ಹೆಜ್ಜೆ ಮುಂದಿಟ್ಟಂತಾಗುವುದು. ಯಾವ ಪ್ರಾಣಿಗಳು ಮನುಷ್ಯನ ಜೀವಿತಕ್ಕೆ ಬಹು ಸಹಾಯವನ್ನು ಮಾಡುತ್ತಲಿವೆಯೋ ಅಂಥ ಪಶುಗಳ ವಿಷಯದಲ್ಲಿ ಅಹಿಂಸಾವ್ರವನ್ನಾಚರಿಸುವುದು ಮನುಷ್ಯನ ಮುಖ್ಯ ಕರ್ತವ್ಯವಾಗಿಯೇ ಇದೆ.

ಪ್ರಾಣಿಕೋಟಿಯಲ್ಲಿ ಗೋವಿನಷ್ಟು ಮನುಷ್ಯನಿಗೆ ಸಹಾಯವನ್ನು ಮಾಡುವ ಪ್ರಾಣಿಯು ಬೇರೊಂದಿಲ್ಲ. ಹೆತ್ತ ತಾಯಿಯಂತೆ ಹಾಲನ್ನು ಕೊಟ್ಟು ಮನುಷ್ಯನನ್ನು ಜೋಪಾನಮಾಡುತ್ತದೆ. ಇಷ್ಟೇ ಅಲ್ಲ; ನಮ್ಮ ಆಹಾರದ ಧಾನ್ಯಾದಿ ಪದಾರ್ಥಗಳನ್ನು ಬೆಳೆಯಲು ಮುಖ್ಯ ಸಾಧನವಾದ ಎತ್ತುಗಳನ್ನು ಹೆತ್ತು ಮನಷ್ಯಜಾತಿಗೆ ಮಹದುಪಕಾರವನ್ನು ಮಾಡುತ್ತದೆ. ಇಂಥ ಗೋಮಾತೆಯನ್ನು ನಾಲಿಗೆಯ ಕ್ಷಣಿಕ ರುಚಿಗಾಗಲಿ ಅಥವಾ ಧಾರ್ಮಿಕ ಮೂಢನಂಬಿಕೆಯಿಂದಾಗಲಿ ಕೊಲ್ಲುವುದು ಮನುಷ್ಯ ಜಾತಿಗೇನೇ ಮಹದನರ್ಥಕಾರಿಯಾದುದಲ್ಲವೇ? ಈ ಪವಿತ್ರ ಭೂಮಿಯಾದ ಭರತಖಂಡದಲ್ಲಿ ಎಲ್ಲಿಯವರೆಗೂ ಗೋಸಂರಕ್ಷಣೆಯು ತೃಪ್ತಿಕರವಾಗಿ ಜರುಗುತ್ತಿದ್ದಿತೋ, ಗೋಮಾತೆಯನ್ನು ಎಂತಹ ಪಾಪಿಯು ಕೂಡಾ ಎಲ್ಲಿಯವರೆಗೂ ಕೊಲ್ಲುತ್ತಿರಲಿಲ್ಲವೋ, ಗೋವುಗಳು ಪ್ರಾಣ ಭಯವಿಲ್ಲದೆ ಸಕಲರಿಂದಲೂ ಪೂಜೆಗೊಳ್ಳುತ್ತ ಭಾರತೀಯರಿಗೆ ಧನಧಾನ್ಯಗಳೂ, ಹಾಲು ತುಪ್ಪ ಮೊದಲಾದ ಪೌಷ್ಟಿಕ ಪದಾರ್ಥಗಳು ಸಮೃದ್ಧಿಯಾಗಿಯೇ ಇದ್ದವು.

ಎಂದಿನಿಂದ ನಮ್ಮನ್ನು ಸಂರಕ್ಷಿಸುವ ಇಂಥ ಸಾಧುಪ್ರಾಣೀಗಳೇ ಭರತಖಂಡದಲ್ಲಿ ಕೊಲ್ಲಲುಪಕ್ರಮಿಸಲ್ಪಟ್ಟವೋ, ಎಂದಿನಿಂದ ಈ ಪುಣ್ಯಭೂಮಿಯು ಗೋಮಾತೆಯ ರಕ್ತಪ್ರವಾಹದಿಂದ ಅಪವಿತ್ರವಾಗಲುಪಕ್ರಮಿಸಿತೋ, ಎಂದಿನಿಂದ ಮಹಾ ಪರೋಪಕಾರಿಯಾದ ಈ ಬಡಪ್ರಾಣಿಯ ಪ್ರಾಣೋತ್ಕ್ರಮಣ ದುಃಖಧ್ವನಿಯೂ ಭರತಖಂಡದಲ್ಲೆಲ್ಲಾ ವ್ಯಾಪಿಸಲುಪಕ್ರಮಿಸಿತೋ, ಅಂದಿನಿಂದಲೇ ನಾವು ಶೋಚನೀಯ ಸ್ಥಿತಿಗೀಡಾಗುತ್ತಾ ಬಂದೆವು. ನಮಗೆ ಉಪಕಾರಮಾಡುವ ಪ್ರಾಣಿಗಳಿಗೆ ನಾವು ಅಪಕಾರಮಾಡಲುಪಕ್ರಮಿಸಿದ್ದರಿಂದ ಆ ನಮ್ಮ ಕೃತಘ್ನತನದ ಪಾಪವೃಕ್ಷಕ್ಕೆ ದಾರಿದ್ರ್ಯ, ಕ್ಷಾಮ, ರೋಗಾದಿಗಳೇ ಫಲಗಳಾದವು. ಆ ದುಷ್ಫಲಗಳನ್ನೇ ಈಗ ನಾವು ಅನುಭವಿಸುತ್ತಿದ್ದೇವೆ.

ಅತ್ಯಂತ ಕ್ಷುದ್ರವಾದ ನಾಲಿಗೆಯ ರುಚಿಗಾಗಿ ಪ್ರತಿವರ್ಷ ಈ ದೇಶದಲ್ಲಿ ಲಕ್ಷಾಂತರ ಗೋವುಗಳನ್ನು ಕ್ರೈಸ್ತಬಾಂಧವರು ಸಂಹಾರಮಾಡುತ್ತಿದ್ದಾರೆ. ನಮ್ಮ ಮುಸಲ್ಮಾನ್ ಬಾಂಧವರು ಧರ್ಮದ ಹೆಸರಿನಿಂದ ಸಹಸ್ರಾವಧಿ ಗೋವುಗಳನ್ನು ಪ್ರತಿವರ್ಷ ಕೊಲ್ಲುತ್ತಿದ್ದಾರೆ. ಆದರೆ ಇತ್ತಿಚೇಗೆ ತಮ್ಮ ಹಿಂದು ಬಾಂಧವರ ಮನಸ್ಸನ್ನು ನೋಯಿಸ್ಕಬಾರದೆಂದು ಮಹಾತ್ಮಗಾಂಧಿಯವರ ದಿವ್ಯತರವಾದ ಆತ್ಮಪ್ರಭೆಯಿಂದ ನಮ್ಮ ಅನೇಕ ಮುಸಲ್ಮಾನ ಬಾಂಧವರ ಹೃದಯವು ಗೋಮಾತೆಯ ವಿಷಯದಲ್ಲಿ ಕರಗಿ ಗೋವಧೆಯನ್ನು ಎಷ್ಟೋ ನಿಲ್ಲಿಸಿದ್ದಾರೆ. ಗೋವುಗಳನ್ನು ಪೂಜೆಮಾಡುತ್ತಿರುವ ಹಿಂದುಗಳಲ್ಲಿಯೇ ಈಗ ಅಸಂಖ್ಯ ಜನರು ಹಣದಾಶೆಯಿಂದ ತಮ್ಮನ್ನು ಸಾಕಿ ಸಲುಹಿದ ಗೋಮಾತಯನ್ನು ಕಡಿಯಲಿಕ್ಕೆ ಕೊಡುತ್ತಿದ್ದಾರೆ. ಈ ಪ್ರಕಾರ ಈ ಪುಣ್ಯಭೂಮಿಯಲ್ಲಿ ಗೋವಧೆಯ ಭಯಂಕರ ಪಾಪಕೃತ್ಯವೂ ಜರುಗುತ್ತಲಿದೆ!

ಅಯ್ಯೋ! ಮನುಷ್ಯನು ಎಷ್ಟು ಕಠಿಣ ಹೃದಯದವರಾದರಲ್ಲಾ! ಇವರ ಕೃತಘ್ನತನವನ್ನು ಎಷ್ಟೆಂದು ಹೇಳಬೇಕು? ತಮ್ಮ ಮನುಷ್ಯತ್ವಕ್ಕೇನೇ ಕಲಂಕವುಂಟಾಗುವಂತಹ ಘೋರತರವಾದ ಅಪರಾಧವನ್ನು ನಾಚಿಕೆಯಿಲ್ಲದೆ ಮಾಡುತ್ತಿರುವರಲ್ಲಾ! ಬಹು ಕ್ಷುದ್ರವಾದ ಹುಲ್ಲನ್ನು ತಿಂದು ಅತಿ ಮೌಲ್ಯವಾದ ಅಮೃತವನ್ನು ಕೊಟ್ಟು ಇವರನ್ನು ಸಂತೋಷಪಡಿಸಿದುದಕ್ಕೆ ಈ ಮರಣದಂಡನೆಯೇ ನಮಗೆ ಬಹುಮಾನವೇ? ಅಯ್ಯೋ! ಯಾವ ಕೈಗಳಿಂದ ನಮ್ಮ ಹಾಲನ್ನು ಹಿಂಡಿಕೊಂಡರೋ ಅದೇ ಕೈಗಳಿಂದ ನಮ್ಮನ್ನು ಕಡಿಯಲಿಕ್ಕೆ ಕೊಡುತ್ತಿರುವರಲ್ಲಾ! ಯಾವ ಕೈಗಳಿಂದ ನಮ್ಮ ಹಾಲನ್ನು ಸೇವಿಸುತ್ತಿದ್ದಾರೆಯೋ ಅದೇ ಕೈಗಳಿಂದ ನಮ್ಮ ಕತ್ತನ್ನು ಕತ್ತರಿಸುತ್ತಿರುವರಲ್ಲಾ! ಅಹಹ! ಹಾವಿಗೆ ಹಾಲೆರದಂತಾಯಿತಲ್ಲಾ!

ಎಂದು ಗೋವುಗಳು ಮರುಗುತ್ತಿರಲಿಕ್ಕಿಲ್ಲವೇ? ಅವುಗಳಿಗೆ ಆಕಸ್ಮಾತ್ತಾಗಿ ಮಾತನಾಡುವುದು ಬಂದು ಬಿಟ್ಟರೆ ಅವು ಇದೇ ಪ್ರಕಾರ ಮೊರೆಯಿಡಲಿಕ್ಕಿಲ್ಲವೇ? ಅವುಗಳ ನ್ಯಾಯವಾದ ಈ ಮೊರೆಯನ್ನು ಕೇಳಿದರೆ ಗೋವುಗಳನ್ನು ಕೊಲ್ಲುವವರು ಮತ್ತು ಕೊಲ್ಲಲಿಕ್ಕೆ ಕೊಡುವವರು ತಲೆಯೆತ್ತಿ ತಿರುಗಾಡಲು ನಾಚಲಿಕ್ಕಿಲ್ಲವೇ? ಆದಕಾರಣ ಮನುಷ್ಯ ಜಾತಿಗೆ ಅತ್ಯಂತ ಉಪಕಾರ ಮಾಡುತ್ತಿರುವ ಆಕಳು. ಎತ್ತು, ಎಮ್ಮೆ ಮತ್ತು ಕೋಣಗಳನ್ನು ಯಾವಕಾರಣದಿಂದಲಾದರು ಕೊಲ್ಲದಿರುವುದೇ ಮನುಷ್ಯರಾದವರ ಮುಖ್ಯ ಕರ್ತವ್ಯವಾಗಿದೆ.

ಈ ದನಗಳನ್ನು ಕೊಲ್ಲದಿದ್ದ ಮಾತ್ರದಿಂದ ಅವುಗಳ ವಿಷಯದಲ್ಲಿ ಸಂಪೂರ್ಣ ದಯೆಯನ್ನು ತೋರಿಸಿದಂತಾಗಲಿಲ್ಲ. ಅವುಗಳನ್ನು ದುಡಿಸಿಕೊಳ್ಳುವ ವಿಷಯದಲ್ಲಿಯೂ ದಯೆಯಿರಬೇಕು. ಅವುಗಳಿಗೆ ತಮ್ಮ ದುಃಖವನ್ನು ಹೇಳಲಿಕ್ಕೆ ಬರುವುದಿಲ್ಲವೆಂದು ತಿಳಿದು ಆ ಮೂಕ ಪ್ರಾಣಿಗಳಿಗೆ ಹುಲ್ಲು ನೀರುಗಳನ್ನು ಸರಿಯಾಗಿ ಹಾಕದೆ ಅವುಗಳ ರೋಗ, ದಣುವು, ಆಯಾಸಗಳನ್ನು ಲಕ್ಷಿಸದೆ ಅವುಗಳನ್ನು ಕೆಲಸಕ್ಕೆ ಹಚ್ಚುವುದಾಗಲಿ, ಹೆಚ್ಚು ಭಾರವನ್ನು ಹಾಕಿ ತೆರಪಿಲ್ಲದೆ ಅವುಗಳಿಂದ ಕೆಲಸ ಮಾಡಿಸುವುದಾಗಲಿ, ಇವುಗಳೆಲ್ಲಾ ಹಿಂಸಾಕೃತ್ಯಗಳೇ ಸರಿ. ಹಣದ ದುರಾಶೆಯಿಂದ ಈ ಕ್ರೂರ ಕೃತ್ಯಗಳನ್ನು ಮಾಡುವುದು ಸರಿಯಲ್ಲ. ಈ ಪಾಪ ಕೃತ್ಯದಿಂದ ಹಣವೇನೋ ಸಂಪಾದನೆಯಾಗುವುದಿಲ್ಲ. ಆದರೆ ಪಾಪಮಾತ್ರ ಸಂಪಾದನೆಯಾಗುತ್ತದೆ. ಆದಕಾರಣ ಈ ಬಡಪ್ರಾಣಿಗಳನ್ನು ಚೆನ್ನಾಗಿ ಜೋಪಾನ ಮಾಡಿ ಅವುಗಳಿಂದ ಮಿತವಾಗಿಯೇ ದುಡಿಸಿಕೊಳ್ಳುವುದು ಯುಕ್ತವಾಗಿಯೂ, ಹಿತಕರವಾಗಿಯೂ ಇದೆ.

❖❖

೩ನೆಯ ಪ್ರಕರಣ

ಪಶುಬಲಿ

ಮನುಷ್ಯನು ಮನುಷ್ಯರನ್ನೂ ಮತ್ತು ದನಗಳನ್ನೂ ಹಿಂಸಿಸದೆ ಜೀವಿಸುವುದು ಹೇಗೆ ಸಾಧ್ಯವಿದೆಯೋ ಹಾಗೆಯೇ ನಿರುಪದ್ರವಿಗಳಾದ ಯಾವ ಪಶು ಮತ್ತು ಪಕ್ಷಿಗಳನ್ನು ಕೂಡಾ ಹಿಂಸಿಸದೆ ಜೀವಿಸುವುದೂ ಸಾಧ್ಯವಿದೆ. ಅಂತಹ ಪ್ರಾಣಿಗಳ ವಿಷಯದಲ್ಲಿಯೂ ಪ್ರೇಮವುಳ್ಳವರಾದರೆ ಅಹಿಂಸಾ ವ್ರತವನ್ನಾಚರಿಸಲು ಮತ್ತೊಂದು ಹೆಜ್ಜೆ ಮುಂದೆ ಹೋದಂತಾಗುವುದು. ಈ ಪ್ರಕಾರ ಹಿಂಸೆಯಿಂದ ಮೂರು ಹೆಜ್ಜೆ ಮುಂದೆ ಬಂದಿರುವವರೆಲ್ಲಾ ಅಹಿಂಸಾವಾದಿಗಳೆಂದು ಹೇಳಲು ಅಭ್ಯಂತರವಿಲ್ಲ, ಮತ್ತು ಹಿಂಸೆಯಿಂದ ಇಷ್ಟು ದೂರದಲ್ಲಿ ನಿಲ್ಲಲು ಸಕಲರಿಗೂ ಸಾಧ್ಯವಿದೆಯೆಂಬ ವಿಷಯದಲ್ಲಿ ಸಂದೇಹವೂ ಇಲ್ಲ.

ಕುರಿ, ಕೋಳಿ, ಮೀನು, ಮೊಲ ಮೊದಲಾದ ಮನುಷ್ಯನಿಗೆ ಯಾವ ಅಪಾಯವನ್ನೂ ಮಾಡದಿರುವಂತಹ ಸಾಧು ಪ್ರಾಣಿಗಳನ್ನು ಕೊಲ್ಲುವುದೇಕೆ! ಹೊಟ್ಟೆಗಾಗಿಯೇ? ಅಥವಾ ನಾಲಿಗೆಗಾಗಿಯೇ? ಈ ಪ್ರಾಣಿಗಳನ್ನು ಕೊಂದು ತಿನ್ನದಿದ್ದರೆ ಮನುಷ್ಯನು ಬದುಕುವುದಿಲ್ಲವೇ? ಹುಲಿ ಸಿಂಹ ಮೊದಲಾದ ಕ್ರೂರಪ್ರಾಣಿಗಳಿಗೆ ಹೇಗೆ ಮಾಂಸವು ಅವಶ್ಯಕವಾದ ಆಹಾರವೇ ಆಗಿದೆಯೋ ಹಾಗೆ ಮನುಷ್ಯನಿಗೆ ಕೂಡಾ ಜೀವನಕ್ಕೆ ಮಾಂಸವು ಅವಶ್ಯಕವಾದುದೇ? ಅವು ಹೇಗೆ ಮಾಂಸವನ್ನು ತಿಂದೇ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಬೇಕಾಗುತ್ತದೆಯೋ ಹಾಗೆಯೇ ಮನುಷ್ಯನು ಕೂಡಾ ಮಾಂಸವನ್ನು ತಿಂದು ಜೀವಿಸುವ ಪ್ರಾಣಿಯೇ? ಈ ಎಲ್ಲಾ ಸಂಗತಿಗಳನ್ನು ಮಾಂಸಾಹಾರಿಗಳು ಯೋಚಿಸಬೇಕಾದುದು ವಿಹಿತವಲ್ಲವೇ?

ಹೊಟ್ಟೆಯ ತಾಪವನ್ನು ಕಳೆದುಕೊಳ್ಳುವುದಕ್ಕಾಗಿ ಈ ಪ್ರಾಣಿಗಳನ್ನೇನೋ ಕೊಲ್ಲುವುದಿಲ್ಲ. ಏಕೆಂದರೆ, ಮಾಂಸಾಹಾರಿಗಳು ಫಲ ಧಾನ್ಯಗಳನ್ನು ತಿಂದೇ ಜೀವಿಸುತ್ತಾರೆಯೇ ವಿನಾಃ ಪ್ರತಿನಿತ್ಯ ಮಾಂಸವೊಂದನ್ನೇ ತಿನ್ನುವುದಿಲ್ಲ. ಇದರ ಮೇಲಿಂದಲೇ ಈ ಪ್ರಾಣಿಗಳನ್ನು ಹೊಟ್ಟೆಗಾಗಿ ಕೊಲ್ಲುವುದಿಲ್ಲವೆಂಬುದು ಸಿದ್ಧವಾಗುತ್ತದೆ.

ಹಾಗಾದರೆ ಕೊಲ್ಲವುದೇಕೆ? ನಾಲಿಗೆಯ ರುಚಿಗಾಗಿ ಅಲ್ಲವೇ? ಕಲಿತ ಆ ಕೆಟ್ಟ ಚಾಳಿಗಾಗಿ ಅಲ್ಲವೇ? ಅನೇಕರು ತಮ್ಮ ದೇಹಾರೋಗ್ಯಕ್ಕೆ ಕೇಡನ್ನುಂಟುಮಾಡುತ್ತಿದ್ದರೂ ಕಲಿತ ಚಾಳಿಯನ್ನೂ ಬಿಡಲಾರದೆ ಹೇಗೆ ಅನೇಕ ಅಪಾಯಕರವಾದ ಪದಾರ್ಥಗಳನ್ನು ಸೇವಿಸುತ್ತಿರುತ್ತಾರೆಯೋ ಹಾಗೆಯೇ

ಈ ಮಾಂಸಾಹಾರಿಗಳು ಕೂಡಾ ಮಾಂಸವು ಮನುಷ್ಯ ಪ್ರಾಣಿಗೆ ಅಸ್ವಾಭಾವಿಕವಾದ ಆಹಾರವಾಗಿದ್ದರೂ, ಮನುಷ್ಯನ ಗುಣಸ್ವಭಾವಗಳನ್ನು ಕೆಡಿಸಿ ದೇಹಕ್ಕೆ ಅಪಾಯವನ್ನುಂಟುಮಾಡುತ್ತಿದ್ದರೂ ರಸನೇಂದ್ರಿಯದ ಚಪಲತೆಗೆ ಮನ ಸೋತು ಅಸಂಖ್ಯ ಸಾಧುಪ್ರಾಣಿಗಳ ಕೊಲೆಗೆ ಕಾರಣರಾಗುತ್ತಾರೆ.

ಮಾಂಸಾಹಾರಿಗಳಾಗಿದ್ದ ಪಾಶ್ಚಾತ್ಯ ಘನವೈದ್ಯರೇ ಈಗ ಮಾಂಸವು ಮನುಷ್ಯನ ಆಹಾರವಲ್ಲವೆಂತಲೂ ಮನುಷ್ಯನು ಫಲಾಹಾರಿಯಾದ ಪ್ರಾಣಿಯೆಂತಲೂ ಮಾಂಸಾಹಾರದಿಂದ ಮನುಷ್ಯನ ಬೌದ್ಧಿಕ, ಮಾನಸಿಕ ಮತ್ತು ಶಾರೀರಿಕ ಅಭಿವೃದ್ಧಿಗಳಿಗೆ ಅಪಾಯ ಸಂಭವಿಸುತ್ತದೆಂತಲೂ ಸಾರಿ ಸಾರಿ ಹೇಳಲುಪಕ್ರಮಿಸಿದ್ದಾರೆ. ಮಾಂಸಾಹಾರಿಗಳು ಇನ್ನು ಮೇಲಾದರೂ ಈ ನಿಂದ್ಯವಾದ ಆಹಾರವನ್ನು ಬಿಡುವುದು ವಿಹಿತವಲ್ಲವೇ?

ಮನುಷ್ಯನ ಗುಣಸ್ವಭಾವುಗಳು ಆತನು ಸೇವಿಸುವ ಆಹಾರದ ಮೇಲೆಯು ಅವಲಂಬಿಸಿವೆಯೆಂಬುದು ಸರ್ವಸಮ್ಮತವಾದ ಸಂಗತಿಯಲ್ಲವೇ? ಮಾಂಸಾಹಾರವು ತಾಮಸಗುಣವನ್ನು ಹೆಚ್ಚಿಸುತ್ತದೆಂಬುದು ಯಾರಿಗೆ ತಾನೆ ತಿಳಿದಿಲ್ಲ? ಯಾರು ತಾಮಸಗುಣಸ್ವಭಾವಿಗಳೋ ಅವರು ಮನುಷ್ಯ ಜಾತಿಯ ವಿಷಯದಲ್ಲಿ ಕಾಯಾ ವಾಚಾಅನುಸರಿಸಲೇಬೇಕಾಗಿರುವ ಅಹಿಂಸಾವ್ರತವನ್ನು ಹೇಗೆತಾನೆ ಆಚರಿಸುವುದು ಸಾಧ್ಯ? ಈ ಎಲ್ಲಾ ಕಾರಣಗಳಿಂದಲೂ ಮಾಂಸಾಹಾರವು ಅತ್ಯಂತ ತ್ಯಾಜ್ಯವಾದುದೆಂದೇ ಸಿದ್ಧವಾಗುತ್ತದೆ. ಮಾಂಸಾಹಾರವು ನಿಂತಿತೆಂದರೆ ಅಸಂಖ್ಯ ಪಶುಪಕ್ಷಿಗಳ ಸಂಹಾರವು ತಾನಾಗಿಯೇ ನಿಲ್ಲುವುದು.

ಅಸಂಖ್ಯ ಜನರು ದುರ್ಗಾದೇವತೆಗಾಗಲಿ, ಮಾರೆಮ್ಮನಿಗಾಗಲಿ ಕುರಿಕೋಳಿಗಳನ್ನು ಬಲಿಕೊಡುತ್ತಿದ್ದಾರಷ್ಟೇ ಅಯ್ಯೋ! ಇವರ ಮೂಢನಂಬಿಕೆಯನ್ನು ಎಷ್ಟು ಹೇಳಬೇಕು? ರೋಗಕ್ಕೆ ಔಷಧೋಪಚಾರಗಳನ್ನು ಮಾಡದೆ ದೇವತೆಗೆ ಹರಕೆಯನ್ನು ಕಟ್ಟಿಕೊಳ್ಳುವುದೇ ಮೊದಲು ತಪ್ಪು ಅದರಲ್ಲಿಯೂ ಆ ನಿರಪರಾಧಿಗಳಾದ ಕುರಿಕೋಳಿಗಳನ್ನು ಕೊಲ್ಲಿಸುತ್ತೇವೆಂದು ಹೇಳಿಕೊಳ್ಳುವುದಂತೂ ದೊಡ್ಡ ತಪ್ಪು ಪಾಪ! ಆ ಬಡಪ್ರಾಣಿಗಳನ್ನು ಕೊಂದರೆ ದೇವತಿಗೆ ಸಂತೋಷವಾಗಬಹುದೇ? ಆ ಪ್ರಾಣಿಗಳ ಮೇಲೆ ದೇವತಿಗೇನಾದರೂ ದ್ವೇಷವುಂಟೇ? ಅಯ್ಯೋ ಇದೆಂತಹ ಹುಚ್ಚುತನ, ಮನುಷ್ಯನು ತನ್ನ ಬುದ್ಧಿಗೆ ಸರಿಯಾಗಿಯೇ ದೇವರಲ್ಲಿಯೂ ಗುಣಗಳನ್ನು ಕಲ್ಪಿಸುತ್ತಾನೆಂಬುದು ಸುಳ್ಳಲ್ಲ. ತಮಗೆ ಆ ಮೂಕ ಪ್ರಾಣಿಗಳ ವಿಷಯದಲ್ಲಿ ದಯೆಯಿಲ್ಲದ್ದರಿಂದ ದೇವತೆಯಲ್ಲಿಯೂ ದಯೆಯಿಲ್ಲವೆಂದು ಈ ಜನರು ತಿಳಿಯುತ್ತಾರಲ್ಲವೇ? ನಿರುಪದ್ರವಿಗಳೂ ನಿರಪರಾಧಿಗಳೂ ಆದ ಆ ಬಡಪ್ರಾಣಿಗಳನ್ನು ಕೊಂದು ಪಾಪವನ್ನೇಕೆ ಕಟ್ಟಿಕೊಳ್ಳುವಿರಿ.

ಅನೇಕ ಸ್ವಾರ್ಥಿಗಳು ಇದು ಧರ್ಮಕಾರ್ಯವೆಂತಲೂ, ಗ್ರಾಮಶಾಂತಿಗೆ ಪಶುಬಲಿಯು ಅವಶ್ಯಕವೆಂತಲೂ, ಅನೇಕ ರೀತಿಗಳಿಂದ ಹೇಳುವುದುದಂಟು ತಮ್ಮ ಮಾತು ನಿಜವೆಂದು ತೋರಿಸುವುದಕ್ಕಾಗಿ ಅನೇಕ ಕಲ್ಪಿತ ಕಥೆಗಳನ್ನೂ ಅಶಾಸ್ತ್ರೀಯವಾದ ಶ್ಲೋಕಗಳನ್ನೂ ಹೇಳುತ್ತಿರುತ್ತಾರೆ. ಈ ಯಾವ ಹರಟೆಯ ಮಾತುಗಳಿಗೂ ಮೋಸಹೋಗಬೇಡಿರಿ. ಅಹಿಂಸೆಯೇ ಪವಿತ್ರವಾದ ಧರ್ಮವು. ಹಿಂಸೆಯೇ ಮಹತ್ತರವಾದ ಅಧರ್ಮವು. ಪರೋಪಕಾರವೇ ಪುಣ್ಯವು. ಪರಪೀಡೆಯೇ ಪಾಪವು. ಇವೇ ಎಲ್ಲಾ ಧರ್ಮಶಾಸ್ತ್ರಗಳ ಸಾರವಾಗಿರುವಾಗ ಇವುಗಳಿಗೆ ವಿರೋಧವಾಗಿ ಹೇಳುವ ಕ್ಷುದ್ರ ವಚನಗಳನ್ನು ಕೇಳಿ ಪ್ರಾಣಿಗಳನ್ನು ಕೊಲ್ಲಿಸಿಬೇಡಿರಿ.

ಇದೇನೋ ಜನಸಾಮಾನ್ಯರು ಮಾಡತಕ್ಕ ಪಶುಬಲಿಯು. ಆದರೆ ಪಂಡಿತರೆಂತಲೂ ಸಕಲಶಾಸ್ತ್ರ ಪ್ರವೀಣರೆಂತಲೂ ಪ್ರಸಿದ್ಧಿಯನ್ನು ಹೊಂದಿರುವ ಕೆಲವು ಜನರು ಪಶುಗಳನ್ನು ಬಲಿಕೊಡುತ್ತಿರುವರಲ್ಲಾ! ಇಷ್ಟೇ ಅಲ್ಲ; ಅದು ಪವಿತ್ರವಾದ ಧರ್ಮವೆಂತಲೂ ಮಹಾ ಪುಣ್ಯಪ್ರದವಾದುದೆಂತಲೂ ಹೇಳುತ್ತಿರುವರಲ್ಲಾ!! ಇವರು ವಾಕ್ಪಾಂಡಿತ್ಯದಲ್ಲಿ ಬಹು ಸಮರ್ಥರಾಗಿರುತ್ತಾರಾದ ಕಾರಣ ಸಾಧಾರಣ ಜನಗಳು ಈ ವಿಷಯದಲ್ಲಿ ಇವರ ಮುಂದೆ ಮಾತನಾಡುವುದು ಸಾಧ್ಯವೇಯಿಲ್ಲ. ಒಂದು ಕಾಲದಲ್ಲಿ ಆಚರಣೆಯಲ್ಲಿದ್ದ ಆಚಾರವೂ ಅಸಂಬಂಧವಾದ ಆ ಕಾಲದ ವಚನಗಳೂ ಯಜ್ಞದ ಹೆಸರಿನಿಂದ ಪಶುಗಳನ್ನು ಕೊಲ್ಲಲು ಇವರಿಗೆ ಈಗ ಆಧಾರಗಳಾಗಿವೆ. ಆದುದರಿಂದ "ಯಾವಾತನು ಬಲವಾದ ಅಥವಾ ದುರ್ಬಲವಾದ ಯಾವ ಪ್ರಾಣಿಯನ್ನೇ ಆಗಲಿ ಹಿಂಸಿಸುವುದಿಲ್ಲವೋ ಅಥವಾ ಕೊಲ್ಲುವುದಿಲ್ಲವೋ ಇಲ್ಲವೆ ಕೊಲ್ಲಿಸುವುದಿಲ್ಲವೋ ಆತನೇ ನಿಜವಾದ ಬ್ರಾಹ್ಮಣನೆಂದು ಕರೆಯುವೆನು" ಎಂಬುದಾಗಿ ಭಗವಾನ್ ಬುದ್ಧದೇವರು ಬೋಧಿಸಿರುವುದನ್ನಾಗಲಿ, "ಮಾತಿನ ಮಾತಿಗೆ ನಿನ್ನನ್ನು ಕೊಂದಿಹರೆಂದು ಎಲೇ ಹೋತೇ ಅಳು ಕಂಡೆಯಾ. ವೇದವನ್ನೋದಿದವರ ಮುಂದೆ ಅಳು ಕಂಡೆಯಾ ಹೋತೇ ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡೆಯಾ ಹೋತೇ. ನೀನತ್ತುವಕ್ಕೆ ತಕ್ಕದ್ದು ಮಾಡುವ ಕೂಡಲಸಂಗಮದೇವ" ಎಂದು ಮಹಾನುಭಾವರಾದ ಬಸವಣ್ಣನವರು ಉಪದೇಶಿಸಿರುವುದನ್ನಾಗಲಿ.

ಶ್ರೇಯಾನ್ದ್ರವ್ಯಮಯಾದ್ಯಜ್ಞಾ ಜ್ಞಾನಯಜ್ಞಃಪರಂತಪಃ ॥೪=೨೩॥

"ದ್ರವ್ಯಮಯವಾದ ಯಜ್ಞಕ್ಕಿಂತಲು ಜ್ಞಾನ ಯಜ್ಞವೇ ಶ್ರೇಷ್ಠವಾದುದು" ಎಂದು **ಶ್ರೀಮದ್ಭಗವದ್ಗೀತೆ**ಯಲ್ಲಿ ಉಕ್ತವಾಗಿರುವುದನ್ನಾಗಲಿ, ಅಹಂಕಾರವನ್ನು ಶೂಲಕ್ಕೇರಿಸಿ ಸರ್ವಾತ್ಮ ಭಾವನೆಯನ್ನು ಪುನರುಜ್ಜಿನವಗೊಳಿಸುವುದೇ ಯಜ್ಞವು ಎಂದು ಶ್ರೀಮತ್ಪರಮಹಂಸರಾದ ಶ್ರೀಸ್ವಾಮಿ ರಾಮತೀರ್ಥರವರು ಹೇಳಿರುವುದನ್ನಾಗಲಿ, "ನಮಗೆ ಯಾವುದೇ ಅತ್ಯಂತ ಪ್ರಿಯವಾಗಿದೆಯೋ ಅದನ್ನು ಶ್ರೇಷ್ಠತರವಾದ ಉದ್ದೇಶಕ್ಕೋಸ್ಕರ ಸಮರ್ಪಿಸುವದೇ ಯಜ್ಞದ ರಹಸ್ಯವಾಗಿದೆ. ಪಶುಯಜ್ಞದಿಂದ ಯಜ್ಞಪದ್ಧತಿಯು ದಿನೇ ದಿನೇ ಸುಧಾರಿಸುತ್ತ **ಭಗವದ್ಗೀತೆ**ಯಲ್ಲಿ ಯುಕ್ತವಾಗಿರುವ ಇಂದ್ರಿಯುಳಗನ್ನು ಇಂದ್ರಿಯುಗಳನ್ನು ಇಂದ್ರಿಯುಗಳಲ್ಲಿ ಸಂಯುಮನಮಾಡುವ ಯಜ್ಞಪದ್ಧತಿಯುಂಟಾಯಿತು. ನಮ್ಮಲ್ಲಿರುವ ಅಜ್ಞಾನ ಮತ್ತು ತಮೋಗುಣಗಳನ್ನು ಜ್ಞಾನದಲ್ಲಿ ಯಜ್ಞಾಮಾಡುವುದೇ ಯಜ್ಞದ ಶ್ರೇಷ್ಠತರವಾದ ಅವಸ್ಥೆಯು" ಎಂದು ಸನಾತನ ವೈದಿಕ ಮತಾಭಿಮಾನಿಗಳೂ ಮಹಾ ತತ್ವಜ್ಞನಿಗಳೂ ಆದ ಕೀರ್ತಿಶೇಷ ಬಾಳ ಗಂಗಾಧರ ಟಿಳಕರವರು ತಾ॥ ೯-೯-೧೯೦೫ನೆಯ ದಿವಸ ತಮ್ಮ ಭಾಷಣದಲ್ಲಿ ಹೇಳಿರುವುದನ್ನಾಗಲಿ, ಯಜ್ಞವನ್ನು ಮಾಡುವ ಪಂಡಿತರು ಲಕ್ಷಿಸುವುದೇ ಇಲ್ಲ ಇವರು ತಮ್ಮಲ್ಲಿ ಗ್ರಂಥಾಧಾರವಿರುವುದರಿಂದ ತಾವು ಹೋತನ್ನು ಕೊಲ್ಲುವ ಪಾಪಕಾರ್ಯವು ಪುಣ್ಯ ಕಾರ್ಯವಾಗುತ್ತದೆಂದು ಹೇಳುತ್ತಿದ್ದಾರೆ! ಪ್ರಾಣಿಗಳನ್ನು ಕೊಂದು ತಿನ್ನುವವರೆಲ್ಲರೂ ಅದು ಸೂಕ್ತವಾದುದೆಂದು ಹೇಳುವ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡೇ ಇದ್ದಾರೆ. ಅವೇನು ಹೋತುಗಳು ಬರೆದ ಗ್ರಂಥಗಳೇನು? ಒಂದು ಕಾಲದಲ್ಲಿ ಆ ಕಾಲಕ್ಕೆ ತಕ್ಕಂತೆ ಬರೆಯಲ್ಪಟ್ಟ ಮಾತ್ರದಿಂದ, ಆ ಗ್ರಂಥಗಳಿಗೆ ಯಾವಾಗಲೂ ದಾಸರಾಗಿಯೇ ವರ್ತಿಸಬೇಕಾಗುವದು ವಿಹಿತವೇ? ಮನುಷ್ಯನ ಬುದ್ಧಿಶಕ್ತಿಯು ವೃದ್ಧಿ ಯಾಗುವುದಿಲ್ಲವೆಂದೇ ಇವರು ತಿಳಿದಿದ್ದಾರೆಯೇ?

ಗ್ರಂಥಗಳು ಮನುಷ್ಯನಿಗಾಗಿ ಏರ್ಪಟ್ಟಿವೆಯೇ ವಿನಾಃ ಮನುಷ್ಯರೇನೂ ಗ್ರಂಥಗಳಿಗೋಸ್ಕರ ಜನ್ಮವೆತ್ತಿಲ್ಲವೆಂಬುದನ್ನು ಈ ಪಂಡಿತರು ಯೋಚಿಸಬಾರದೇ?

ಈಗ ಕರ್ನಾಟಕದಲ್ಲಿ ಪಶುಯಜ್ಞಗಳು ಹೆಚ್ಚಾಗಲುಪಕ್ರಮಿಸಿವೆ. ಇದರಿಂದ ಅಹಿಂಸಾವಾದಿಗಳಾದ ಜೈನರ ಮತ್ತು ವೀರಶೈವರ ಮನಸ್ಸಿಗೆ ನೋವುಂಟಾಗುವ ಸಂಭವವಿದೆ. ರಾಷ್ಟ್ರದಲ್ಲಿ ಪರಸ್ಪರ ಪ್ರೇಮಾದರಗಳುಂಟಾಗಬೇಕೆಂದು ಪ್ರಯತ್ನಿಸುತ್ತಿರುವ ದೇಶಭಕ್ತರು ಮಹಮ್ಮದೀಯರಿಗೆ ಗೋವಧೆಯನ್ನು ನಿಲ್ಲಿಸಿರೆಂದು ಹೇಗೆ ಹೇಳಿಕೊಳ್ಳುತ್ತಿದ್ದಾರೆಯೋ ಹಾಗೆಯೇ ಪಶುಗಳನ್ನು ಕೊಲ್ಲುವ ಯಜ್ಞಗಳೂ ಆಗದಂತೆ ಪ್ರಯತ್ನಿಸುವುದು ಅವಶ್ಯಕವಾಗಿದೆ.

❖❖

೪ನೆಯ ಪ್ರಕರಣ

ಪ್ರೇಮಜಲ

ಮನುಷ್ಯನು ಯಾವ ಮನುಷ್ಯನನ್ನೇ ಆಗಲಿ, ಮತ್ತು ಸಾಧುವಾದ ಯಾವ ಪಕ್ಷಿಗಳನ್ನೆ ಆಗಲಿ, ಯಾವ ಉದ್ಧೇಶದಿಂದಲಾದರೂ ಕೊಲ್ಲುವುದು ಅಥವಾ ಹಿಂಸೆಗೊಲಿಸುವುದು ಅತ್ಯಂತ ನಿಂದ್ಯವಾದುದೆಂಬುದನ್ನು ಈವರೆಗಿಗೂ ವಿವರಿಸಿದ್ದಾಯಿತಷ್ಟೆ, ಇದರ ಮೇಲಿಂದ ಇನ್ನಿತರ ಕ್ರೂರಪ್ರಾಣಿಗಳನ್ನೂ ಕ್ರಿಮಿಕೀಟಕಾದಿ ಜೀವಿಗಳನ್ನೂ, ಕೊಲ್ಲಬಹುದೆಂದು ಮಾತ್ರ ಊಹಿಸಬಾರದು. ಕಣ್ಣಿಗೆ ಕಾಣುವ ಯಾವ ಪ್ರಾಣಿಗಳನ್ನೂ ಕೊಲ್ಲದಿರುವುದೇ ಯುಕ್ತವಾದುದಾಗಿದೆ. ಆದರೆ ಅದು ಅವರವರ ಆತ್ಮಬಲವನ್ನೂ ಪ್ರೇಮಾತಿಶಯವನ್ನೂ ಅವಲಂಬಿಸಿರುವುದು . ಮನುಷ್ಯರನ್ನು ಮತ್ತು ಸಾಧುವಾದ ಪಶುಪಕ್ಷಿಗಳನ್ನು ಮಾತ್ರ ಯಾವ ವಿಧದಿಂದಲೂ ಹಿಂಸಿಸದಿರುವುದು ಸಕಲರಿಗು ಸಾಧ್ಯವಾದುದಾಗಿದೆ. ಇಷ್ಟರಮಟ್ಟಿಗೆ ಯಾರು ಅಹಿಂಸಾವ್ರತವನ್ನಾಚರಿಸಲು ಸಿದ್ಧರಾಗುತ್ತಾರೆಯೋ ಅವರು ಮುಂದೆ ಹೆಜ್ಜೆಯನ್ನಿಡಲು ತಾವೇ ಸಮರ್ಥರಾಗುತ್ತಾರೆ.

ಗೋರಕ್ಷಣೆಗೆ ಒಂದುಗಡೆ ಧನಸಹಾಯ ಮಾಡಿ ಇನ್ನೊಂದು ಕಡೆ ಸಾಲಗಾರರನ್ನೂ ಕೂಲಿಕಾರರನ್ನೂ ನಾನಾ ರೀತಿಗಳಿಂದ ಹಿಂಸಿಸುವವರಿಗಾಗಲಿ, ಅಥವಾ ಇರಿವೆಗಳಿದ್ದಲ್ಲಿಗೆ ಹೋಗಿ ಸಕ್ಕರೆಯನ್ನು ಹಾಕಿ ಬಂದು ಬರಡಾದ ಅಥವಾ ಮುದಿಯಾದ ಧನಗಳನ್ನು ಕಡಿಯಲಿಕ್ಕೆ ಕೊಡುವವರಿಗಾಗಲಿ, ಇಲ್ಲವೆ ಈ ಪ್ರಕಾರ ಯಾವ ರೀತಿಯಿಂದಲೇ ಆದರೂ ಪರಸ್ಪರ ವಿರೋಧವಾಗಿ ಯಾರು ಆಚರಿಸುತ್ತಾರೆಯೋ ಅವರಿಗಾಗಲಿ, ಅಹಿಂಸೆಯ ಮರ್ಮವೇ ತಿಳಿದಿಲ್ಲವೆಂದು ಹೇಳಬೇಕಾಗುತ್ತದೆ. ಏಕೆಂದರೆ, ನಿಜವಾದ ಅಹಿಂಸಾವಾದಿಯು ಈ ಪ್ರಕಾರ ಪರಸ್ಪರ ವಿರೋಧವಾಗಿ ಎಂದ ಆಚರಿಸುವುದಿಲ್ಲ.

ಅಹಿಂಸೆಗೆ ಪ್ರೇಮವೇ ಮೂಲವಾಗಿದೆ. ಆದಕಾರಣ ವಿಶ್ವಪ್ರೇಮವೇ ಸಂಪೂರ್ಣವಾದ ಅಹಿಂಸೆಯೂ. ಪ್ರೇಮಕ್ಕೆ ಸಮಾನವಾದುದು ಪ್ರಪಂಚದಲ್ಲಿ ಬೇರೊಂದಿಲ್ಲ. ಏಕೆಂದರೆ ಪ್ರಾಣಿಗಳ ವಿಷಯದಲ್ಲಿ ಯಾರಲ್ಲಿ ಪ್ರೇಮವೇ ಇಲ್ಲವೋ ಅವರು ಎಷ್ಟು ಬುದ್ಧಿಧಾಲಿಗಳಾಗಿದ್ದರೇನು? ಅವರಲ್ಲಿ ಎಷ್ಟು ಧನಧಾನ್ಯಗಳಿದ್ದರೇನು? ಅವರಲ್ಲಿ ಎಂತಹ ಶಕ್ತಿ ಸಾಹಸ ಅಧಿಕಾರಗಳಿದ್ದರೇನು? ಅವುಗಳೆಲ್ಲಾ ನಿಸ್ತೇಜವಾಗುವುದಿಲ್ಲವೇ? ಆದುದರಿಂದ ಪ್ರೇಮವೇ ಇವೆಲ್ಲವುಗಳಿಗಿಂತಲೂ ಹೆಚ್ಚಿನದಾಗಿದೆ.

ಪ್ರಾಣಿಕೋಟಿಯಲ್ಲಿಡುವ ಈ ಪ್ರೇಮವೇ ಮನುಷ್ಯನ ಆತ್ಮಶುದ್ಧಿಗೆ ನಿರ್ಮ್ಲೋದಕವಾಗಿದೆ. ಈ ಪ್ರೇಮಜಲವು ಯಾರಲ್ಲಿ ಎಷ್ಟು ಹೆಚ್ಚಾಗಿರುತ್ತದೆಯೋ ಅಷ್ಟು ಅವರ ಆತ್ಮವು ಹೆಚ್ಚು ಪವಿತ್ರವಾಗಿರುತ್ತದೆ. ಈ ಅಮೂಲ್ಯವಾದ ಪ್ರೇಮಜಲವು ಗುಹೆದುಡ್ಡಗಳಲ್ಲಿಲ್ಲ; ಅರಣ್ಯ ಪರ್ವತಗಳಲ್ಲಿಲ್ಲ; ದೇವಾಲಯ ಪ್ರಾರ್ಥನಾಲಯಗಳಲ್ಲಿಲ್ಲ; ಶಾಸ್ತ್ರ ಪುರಾಣಗಳಲ್ಲಿಲ್ಲ; ಅದು ನಮ್ಮ ಹೃದಯದಲ್ಲಿಯೇ ಇದೆ. ಆ ಪ್ರೇಮಜಲವನ್ನು ನಾವು ಎಷ್ಟು ಹೆಚ್ಚಿಸಿಕೊಳ್ಳುತ್ತೇವೆಯೋ ಅಷ್ಟು ಅದು ಹೆಚ್ಚುತ್ತದೆ.

ಒಂದು ಚಿಕ್ಕ ಸ್ಥಳದಲ್ಲಿ ಬಿಂದುಮಾತ್ರವಾಗಿ ಹುಟ್ಟಿದ ನದಿಯು ಮುಂದಕ್ಕೆ ಹೋದ ಹೋದ ಹಾಗೆ ಹೆಚ್ಚು ಹೆಚ್ಚಾಗುತ್ತಾ ಬಹು ಪ್ರದೇಶವನ್ನು ವ್ಯಾಪಿಸಿ ಅಸಂಖ್ಯ ಪ್ರಾಣಿಗಳ ದಾಹವನ್ನು ನಿವಾರಣೆ ಮಾಡಿ ಕೊನೆಗೆ ತನ್ನ ಜನ್ಮ ಭೂಮಿಯಾದ ಸಮುದ್ರವನ್ನೇ ಹೇಗೆ ಹೋಗಿ ಸೇರುತ್ತದೆಯೋ, ಹಾಗೆಯೇ ನಮ್ಮ ಹೃದಯದಲ್ಲಿ ಅಡಗಿರುವ ಆ ಪ್ರೇಮಜಲವನ್ನು ಹಾಗೆಯೇ ಮುಂದಕ್ಕೆ ಬಿಡುತ್ತಾ ಹೋದರೆ ಅದು ದಿನೇ ದಿನೇ ವಿಶಾಲವಾಗುತ್ತಾ ಪ್ರಾಣಿಕೋಟಿಯನ್ನೇ ವ್ಯಾಪಿಸಿ ಕೊನೆಗೆ ವಿಶ್ವದಲ್ಲಿಯೇ ಲಯವಾಗುವುದು.

ಆದುದರಿಂದ ನಮ್ಮ ಮನೆಯವರ, ಬಂಧುಬಾಂಧವರ ಮತ್ತು ಇಷ್ಟಮಿತ್ರರ ಹತ್ತಿರಲೇ ಹರಿದಾಡುತ್ತಿರುವ ಆ ನಮ್ಮ ಪ್ರೇಮಜಲವನ್ನು ಮುಂದಕ್ಕೆ ಬಿಡಲು ಪ್ರಯತ್ನಿಸೋಣ, ಅನ್ಯ ಸಮಾಜದವರು, ಅನ್ಯ ಧರ್ಮದವರು, ಅನ್ಯ ದೇಶದವರು ಎಂಬ ಸಂಕುಚಿತ ಕಲ್ಪನೆಗೆ ಕಾರಣವಾಗಿರುವ ಆ ಅನ್ಯ ಎಂದ ಒಡ್ಡನ್ನು ತೆಗೆದುಹಾಕೋಣ. ಆಗ ಆ ಪ್ರೇಮಪ್ರವಹಾವು ಇಡೀ ಮನುಷ್ಯ ಜಾತಿಯನ್ನೇ ವ್ಯಾಪಿಸುತ್ತದೆ. ಅನಂತರ ಇತರ ಪ್ರಾಣಿಕೋಟಿಯಲ್ಲೆಲ್ಲಾ ತುಂಬಲು ಬಹುಕಾಲ ಬೇಕಾಗಿಲ್ಲ. ಏಕೆಂದರೆ, ಆಗ ಆ ಪ್ರೇಮ ಪ್ರವಾಹಕ್ಕೆ ಸಮುದ್ರದಂತಹ ವಿಶಾಲತ್ವವು ಮತ್ತು ಗಾಂಭೀರ್ಯವು ಉಂಟಾಗುತ್ತದೆ. ಅಂಥ ದಯಾಸಾಗರನಾಗಬೇಕಾದುದೇ ಮನುಷ್ಯನ ಮುಖ್ಯ ಧ್ಯೇಯವು. ಆ ಪ್ರೇಮಶರಧಿಯಲ್ಲಿ ಶಯನಮಾಡುವುದೇ ಮನುಷ್ಯನಾಗಿ ಹುಟ್ಟಿದುದಕ್ಕೆ ಸಾರ್ಥಕವು. ಅಂಥ ಕರುಣಾಸಮುದ್ರನೇ ಧನ್ಯನು.

ಮನುಷ್ಯನು ಇಂತಹ ಶ್ರೇಷ್ಠತರವಾದ ಸ್ಥಿತಿಯನ್ನು ಹೊಂದುವುದೇ ಅಹಿಂಸಾವ್ರತ ವನ್ನಾಚರಿಸಬೇಕಾದುದರ ರಹಸ್ಯವು. ಈ ಪ್ರಕಾರ ಮನುಷ್ಯನು ಪ್ರೇಮಮಯನಾಗುಬೇಕೆಂಬುದಾಗಿಯೇ ಸಕಲ ಶಾಸ್ತ್ರ ಪುರಾಣ, ನೀತಿ, ಆಚಾರಗಳು ಏರ್ಪಟ್ಟಿವೆ. ಧರ್ಮಕ್ಕೆ ದಯೆಯೇ ಮೂಲವೆಂದು ಹೇಳಿರುವುದರ ಮರ್ಮವಾದರೂ ಇದೇ ಸರಿ. ಆದಕಾರಣ ಅಹಿಂಸಾವ್ರತವನ್ನಾಚರಿಸಿ ನಮ್ಮಲ್ಲಿರುವ ಪ್ರೇಮಜಲವು ಉಬ್ಬೇರಿಬರಲವಕಾಶವನ್ನುಂಟುಮಾಡೋಣ.

ಇದೇನೋ ವರ್ಣನೆಯೆಂದು ತಿಳಿದು ನಮ್ಮ ಪ್ರೇಮಜಲವನ್ನು ಮುಂದಕ್ಕೆ ಬಿಡದಿದ್ದರೆ ನಮಗೇ ನಷ್ಟ ಅದಕ್ಕೆ ಪ್ರವಾಹದ ಸ್ವರೂಪವು ಬರುವುದೇ ಇಲ್ಲ. ನಮ್ಮ ಆತ್ಮನಿಗೆ ಅಂಟಿಕೊಂಡಿರುವ ಮಲಿನತ್ವವು ನಿವಾರಣೆಯಾಗುವುದೇ ಇಲ್ಲ. ಏಕೆಂದರೆ ಪ್ರೇಮಜಲದ ವಿನಾ ಇನ್ನಾವ ತೀರ್ಥೋದಕದಿಂದಾಗಲಿ, ಅಥವಾ ತಪೋಜ್ವಾಲೆಯಿಂದಾಗಲಿ, ಇಲ್ಲವೆ ಜ್ಞಾನಾಗ್ನಿಯಿಂದಾಗಲಿ, ಆತ್ಮಶುದ್ಧಿಯು ಆಗುವುದೇ ಇಲ್ಲ. ಪ್ರೇಮಾತಿಶಯದಿಂದ ಆನಂದಬಾಷ್ಪಗಳನ್ನು ಧರಿಸುವ ಸುಪ್ರಸಂಗಗಳು ನಮಗೆ ಬರುವುದಿಲ್ಲ.

ಆದಕಾರಣ ಯಾವ ಸಂದೇಹಕ್ಕೂ ಒಳಗಾಗದೆ, ಅಹಿಂಸೆಯ ಸಾಧ್ಯಾಸಾಧ್ಯಗಳ ವಿಷಯದಲ್ಲಿ ಗ್ರಂಥಾಧಾರಗಳಿಂದ ಚರ್ಚಿಸುವುದರಲ್ಲಿಯೇ ಕಾಲಕ್ಷೇಪಮಾಡದೆ, ಮತ, ಪಂಗಡ, ಪಕ್ಷಾಭಿಮಾನಗಳಿಂದ ಉಪೇಕ್ಷಿಸದೆ, ಈ ಸತ್ಯ ಸಿದ್ಧಾಂತವನ್ನು ಅನುಭವದಿಂದ ದೃಢೀಕರಿಸಿಕೊಳ್ಳುವುದಕ್ಕೋಸ್ಕರ ಹೆಚ್ಚು ಹೆಚ್ಚು ಪ್ರಾಣಿಗಳಲ್ಲಿ ಪ್ರೇಮವನ್ನಿಡುತ್ತಾ, ಅಹಿಂಸಾವ್ರತವನ್ನಾಚರಿಸಲು ಒಂದೊಂದು ಹೆಜ್ಜೆಯನ್ನು ಮುಂದಿಡುತ್ತಾ, ಪ್ರೇಮಜಲವನ್ನು ವಿಸ್ತಾರಗೊಳಿಸಿ, ಆತ್ಮಶುದ್ಧಿಯನ್ನು ಹೊಂದಿ, ಸುಖ-ಶಾಂತಿಗಳನ್ನನುಭವಿಸುತ್ತ, ಪ್ರೇಮಸಾಮ್ರಾಜ್ಯ ಸ್ಥಾಪನೆಗೆ ಸಹಾಯಕವಾಗುವ ಸದ್ಬುದ್ಧಿಯು ಸಕಲರಲ್ಲಿಯೂ ಉಂಟಾಗಲಿ.

❖❖

ಆಧುನಿಕ ಜರ್ಮನಿ

ಲೇಖಕರು
ಹರ್ಡೇಕರ ಮಂಜಪ್ಪ

ಇದರ ಮುದ್ರಣ ಮತ್ತು ಪ್ರಕಟನೆಗಳು ಸರ್ವಾಧಿಕಾರಗಳನ್ನೂ
ಲೇಖಕರು ಕಾದಿಟ್ಟುಕೊಂಡಿದ್ದಾರೆ

ಆಧುನಿಕ ಜರ್ಮನಿ

ಇದನ್ನು
ಎಂ. ಮಂಜಪ್ಪ ಹರ್ಡೇಕರ, ದಾವಣಗೆರೆ
ಇವರು ಬರೆದು, ದಾವಣಗೆರೆಯಲ್ಲಿ ಪ್ರಕಟಿಸಿದರು

ಬೆಳಗಾವಿಯೊಳಗೆ ದೇವೇಂದ್ರ ಫಡೆಪ್ಪಾ ಚೌಗುಲೆ ಇವರು
ತಮ್ಮ "ಶ್ರೀ ಮಹಾವೀರ" ಮುದ್ರಣಾಲಯದಲ್ಲಿ
ಮುದ್ರಿಸಿದರು.

ಈ ಪುಸ್ತಕದ ಸಂಪೂರ್ಣ ಅಧಿಕಾರವು ಗ್ರಂಥಕರ್ತರದಾಗಿದೆ

ಶಾ.ಶ. ೧೮೪೦ ಕ್ರಯ ೪ ಆಣೆ ಕ್ರಿ.ಶ. ೧೯೧೮

*

ಪೀಠಿಕೆ

ಈಗಿನ ಘೋರಯುದ್ಧಕ್ಕೆ ಕಾರಣನಾದ ಕೆಯುಂಟಾಯಿತು.ಕೈಸರನ ಪೂರ್ವವೃತ್ತಾಂತವನ್ನು ಮತ್ತು ಜರ್ಮನಿಗೆ ಇಂತಹ ಸಾಮರ್ಥ್ಯವುಂಟಾಗಲು ಅಲ್ಲಿನ ವಿದ್ಯೆ, ಒಕ್ಕಲುತನ, ಕೈಗಾರಿಕೆ, ವ್ಯಾಪಾರ ಮೊದಲಾದವಗುಳು ಯಾವ ರೀತಿಯಲ್ಲಿ ಹೇಗೆ ಹೇಗೆ ಹೆಚ್ಚುತ್ತಾ ಬಂದವೆಂಬುದನ್ನು ತಿಳಿದುಕೊಳ್ಳಲು ಯಾರು ತಾನೆ ಅಪೇಕ್ಷಿಸಲಿಕ್ಕಿಲ್ಲ? ಇಂತಹ ಪುಸ್ತಕವು ಕನ್ನಡ ಭಾಷೆಯಲ್ಲಿ ಈವರೆವಿಗೂ ಇಲ್ಲದಿದ್ದುದರಿಂದ **ಜರ್ಮನಿಯ ಉತ್ಕ್ರಾಂತಿ, ಕೈಸರ್** ಎಂಬ ಪುಸ್ತಕಗಳ ಮತ್ತು ಮಾಸಿಕ ಆಧಾರಗಳಿಂದ ಕ್ರಿ. ಶ. ೧೮೧೮ರ ವರೆಗಿನ ವಿಷಯಗಳನ್ನು ಕೂಡಿಸಿ ಈ ಪುಸ್ತಕವನ್ನು ಬರೆದಿದೆ.

ಈ ಚಿಕ್ಕ ಪುಸ್ತಕದಿಂದ ಜರ್ಮನಿಯ ವಿಸ್ತಾರವಾದ ಚರಿತ್ರೆಯನ್ನು ಓದುವ ಅಪೇಕ್ಷೆಯು ವಾಚಕರಲ್ಲುಂಟಾಗಿ ಆ ದೇಶದ ಅನೇಕ ಸಾತ್ವಿಕ ಮತ್ತು ಶ್ರೇಯೋಭಿವೃದ್ಧಿಯ ಪದ್ಧತಿಗಳು ಅನುಕರಿಸಲ್ಪಡಲೆಂದು ಹಾರೈಸಿ ಈ ಚಿಕ್ಕ ಪೀಠಿಕೆಯನ್ನು ಮುಗಿಸಿದೆ.

ದಾವಣಗೆರೆ

ಎಂ.ಎಂ. ಹರ್ಡೇಕರ

❖❖

೧ನೆಯ ಪ್ರಕರಣ

ಕೈಸರವ ಚರಿತ್ರೆ

ಕೈಸರ ಎಂಬುದು ಈಗಿನ ಚಕ್ರವರ್ತಿಯ ಹೆಸರಲ್ಲ. ಈ ಸೀಝರ್ ಎಂಬ ರೋಮನ್ ಶಬ್ದಕ್ಕೆ ಜರ್ಮನ್ ಭಾಷೆಯಲ್ಲಿ ಕೈಸರ ಎಂದು ಹೇಳುತ್ತಾರೆ. ಜರ್ಮನಿ ಮತ್ತು ಆಸ್ಟ್ರಿಯಾ ದೇಶಗಳ ಚಕ್ರವರ್ತಿಗಳಿಗೆ ಈ ಶಬ್ದವನ್ನುಪಯೋಗಿಸುವ ರೂಢಿಯುಂಟು. ಆದುದರಿಂದ ಪ್ರಚಾರದಲ್ಲಿರುವ ಕೈಸರ ಎಂಬ ಹೆಸರಿನ ಈ ಎರಡನೇ ವಿಲ್ಯಂ ಚಕ್ರವರ್ತಿಗೆ ಉಪಯೋಗಿಸಿದೆ.

ಕೈಸನರು ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಕ್ರಿ. ಶ. ೧೮೫೯ನೆಯ ಜನವರಿ ೨೭ನೆಯು ತಾರೀಕಿನ ಪ್ರಾತಃಕಾಲದಲ್ಲಿ ಜನಿಸಿದನು. ಆಗ, ೧೦೧ ಸಾರೆ ತೋಪುಹಾರಿಸಲ್ಪಟ್ಟಿತು. ಈತನ ತಂದೆಯ ಹೆಸರು ಮೂರನೆಯ ಫ್ರೆಢರಿಕ್. ತಾಯಿಯ ಹೆಸರು ಎಡಿಲೆಡ್ ವಿಕ್ಟೋರಿಯಾ. ಇವಳು ಇಂಗ್ಲಂಡಿನ ವಿಕ್ಟೋರಿಯಾ ಮಹಾರಾಣಿಯ ಹಿರಿಯ ಮಗಳು.

ಕೈಸರನನ್ನು ಕ್ಯಾಸಲ್ ಎಂಬ ಪಟ್ಟಣದ ಪಾಠಶಾಲೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು. ಅನ್ಯ ಬಾಲಕರಂತೆ ಕೈಸರನೂ ಆ ಪಾಠಶಾಲೆಯ ಎಲ್ಲಾ ಅಭ್ಯಾಸಗಳನ್ನು ಕಾಲಕ್ಕೆ ಸರಿಯಾಗಿ ಮಾಡುತ್ತಿದ್ದನು. ಮತ್ತು ಪ್ರತ್ಯೇಕವಾಗಿ ಫ್ರೆಂಚ, ಇಂಗ್ಲೀಷ್ ಭಾಷೆಗಳನ್ನು ಕಲಿಯುತ್ತಿದ್ದನು. ಚಳಿಗಾಲದಲ್ಲಿ ಕೂಡಾ ಬೆಳಗಿನ ೬ ಘಂಟೆಗೆ ಎದ್ದು ಹಿಂದಣ ಪಾಠಗಳನ್ನೆಲ್ಲಾ ಓದುತ್ತಿದ್ದನು. ಇತಿಹಾಸ ಮತ್ತು ಭಾಷಾವಿಷಯಗಳಲ್ಲಿ ಈತನಿಗೆ ಹೆಚ್ಚು ಅಭಿರುಚಿಯಿದ್ದಿತು. ಕೈಸರನು ಕ್ರಿ. ಶ. ೧೮೭೭ನೆಯ ಜನವರಿ ತಿಂಗಳಲ್ಲಿ ಆ ಪಾಠಶಾಲೆಯ ವಿದ್ಯಾಭ್ಯಾಸವನ್ನು ಪೂರೈಸಿದನು. ಮಹಾಪುರುಷರ ಚರಿತ್ರೆಯನ್ನು ಕೈಸರನು ಬಹು ಪ್ರೀತಿಯಿಂದ ಓದುತ್ತಿದ್ದನು.

ಪ್ರಾಥಮಿಕ ವಿದ್ಯಾಭ್ಯಾಸವು ಪೂರೈಸಿದನಂತರ ಕೈಸರನು ಬಾನ್ ವಿಶ್ವವಿದ್ಯಾಲಯದಲ್ಲಿ ಯುದ್ಧ ವಿದ್ಯೆಯನ್ನು ಕಲಿತನು. ಅಲ್ಲಿ ನ್ಯಾಯಶಾಸ್ತ್ರ ಮತ್ತು ತತ್ವಜ್ಞಾನಗಳನ್ನು ಕಲಿಸುತ್ತಿದ್ದರು. ಆದರೆ ಅವು ಕೈಸರನಿಗೆ ಸೇರುತ್ತಿರಲಿಲ್ಲ. ಈ ವಿಶ್ವವಿದ್ಯಾಲಯದ ಅಭ್ಯಾಸವು ಮುಗಿದ ಮೇಲೆ ಕ್ರಿ. ಶ. ೧೮೮೧ರಲ್ಲಿ ಕೈಸರನ ಲಗ್ನವಾಯಿತು. ಅನಂತರ ೭ ವರ್ಷ ಫ್ರೆಡರಿಕ್ ದಿ ಗ್ರೇಟ್‌ನ ಅರಮನೆಯಲ್ಲಿದ್ದು ಯುದ್ಧವಿದ್ಯೆ, ರಾಜನೀತಿ ಮೊದಲಾದವುಗಳನ್ನು ಕಲಿತನು.

ಕೈಸರನ ತಾತನಾದ ಮೊದಲನೆಯ ವಿಲ್ಯಂ ಚಕ್ರವರ್ತಿಯು ಮಹಾ ಪರಾಕ್ರಮಶಾಲಿಯಾಗಿದ್ದನು. ಜರ್ಮನಿಯ ಅಭಿವೃದ್ಧಿಗೆ ಅವನೇ ಮುಖ್ಯ ಕಾರಣನು. ಈತನು ಕ್ರಿ. ಶ. ೧೮೮೮ರಲ್ಲಿ ಮರಣಹೊಂದಲು ಕೈಸರನ ತಂದೆಯು ಪಟ್ಟಕ್ಕೆ ಬಂದನು. ಈತನು ಮೂರೇ ತಿಂಗಳುಗಳಲ್ಲಿ ಮೃತಪಟ್ಟನು. ಆಗ ಕೈಸರನು ಕ್ರಿ. ಶ. ೧೮೮೮ನೆಯ ಜೂನ್ ತಿಂಗಳಲ್ಲಿ ಚಕ್ರವರ್ತಿಯಾದನು. ತಾಯಿಯು ಇಂಗ್ಲಂಡಿನ ವಿಷಯದಲ್ಲಿ ಅದರ ಬುದ್ಧಿಯುಳ್ಳವಳಾಗಿದ್ದಳೆಂದು, ತಂದೆಯು ಕಾರ್ಯದಕ್ಷನಾಗಿರಲಿಲ್ಲವೆಂತಲೂ, ಆ ತಂದೆತಾಯಿಗಳ ವಿಷಯದಲ್ಲೂ ಕೈಸರನಿಗೆ ತಿಲಾಂಶವಾದರೂ ಪೂಜ್ಯಬುದ್ಧಿಯಿರಲಿಲ್ಲ. ಆದರೆ ತಾತನ ವಿಷಯದಲ್ಲಿ ಬಹು ಭಕ್ತಿಯುಳ್ಳವನಾಗಿದ್ದನು.

ಕೈಸರನು ಪಟ್ಟಕ್ಕೆ ಬಂದೊಡನೆ ತನ್ನ ಸೈನಿಕರನ್ನು ಕುರಿತು ನೀವು ಮತ್ತು ನಾನು ಪರಸ್ಪರ ಸಹಾಯಕ್ಕಾಗಿಯೇ ಜನ್ಮವೆತ್ತಿದ್ದೇವೆ. ದೇವರ ಇಚ್ಚೆಯಂತೆ ನಮಗೆ ಆನಂದವೇ ಆಗಲಿ, ಅಥವಾ ದುಃಖವೇ ಆಗಲಿ ಪ್ರಾಪ್ತವಾದಾಗ ಉಭಯರೂ ಒಂದಾಗಿರೋಣ, ನನ್ನ ಪೂರ್ವಜರು ಸ್ವರ್ಗದಲ್ಲಿ ಕುಳಿತ. ನನ್ನ ಕಡೆಗೆ ನೋಡುತ್ತಿದ್ದಾರೆ. ನನ್ನ ಸೈನ್ಯದ ಕೀರ್ತಿಯನ್ನು ಅವರ ಮುಂದೆ ಎಂದಾದರೂ ವರ್ಣಿಸುವ ಪ್ರಸಂಗವು ನನಗೆ ಬರುತ್ತವೆಂಬುದನ್ನು ನೆನಪಿನಲ್ಲಿಡಿರಿ ಎಂದು ಹೇಳಿದನು. ಅನಂತರ ಸ್ವಲ್ಪ ದಿವಸಗಳಲ್ಲಿಯೇ ರಶಿಯಾ, ಆಸ್ಟ್ರಿಯಾ, ಇಟಲಿ ಮೊದಲಾದ ಯುರೋಪಖಂಡದ ಅನೇಕ ದೇಶಗಳಲ್ಲಿ ಸಂಚರಿಸಿ ಸ್ವದೇಶಕ್ಕೆ ಬಂದನು. ಜರ್ಮನಿಯ ಏಳ್ಗೆಯ ವಿಷಯದಲ್ಲಿ ೨೬ ವರ್ಷ ಯಾವ ಪ್ರಸಿದ್ಧ ಮಂತ್ರಿಯು ಶ್ರಮ ಪಟ್ಟಿದ್ದರೋ ಅಂತಹ ಬಿಸ್ಮಾರ್ಕನಿಗೂ ಕೈಸರನಿಗೂ ಪ್ರಭುತ್ವವನ್ನು ನಡೆಯಿಸುವುದರಲ್ಲಿ ಭಿನ್ನಾಭಿಪ್ರಾಯಗಳುಂಟಾಗಲೂ ಕ್ರಿ. ಶ. ೧೮೯೦ರಲ್ಲಿ ಬಿಸ್ಮಾರ್ಕನು ತಾನಾಗಿಯೇ ಕೆಲಸದಿಂದ ನಿವೃತ್ತನಾಗಬೇಕಾಯಿತು.

ಕೈಸರನು ತನ್ನಲ್ಲಿ ನೌಕಾಬಲವಿಲ್ಲವಲ್ಲಾ ಎಂದು ಯಾವಾಗಲೂ ಚಿಂತಿಸುತ್ತಿದ್ದನು. ಈ ಬಲವನ್ನು ಹೆಚ್ಚಿಸಬೇಕೆಂಬ ಉದ್ಧೇಶದಿಂದ ಬಹು ವಿಸ್ತಾರವಾದ ಝಂಜಿಬಾರ್ ಎಂಬ ಆಫ್ರಿಕೆಯಲ್ಲಿನ ಒಂದು ಪ್ರಾಂತ್ಯವನ್ನು ಇಂಗ್ಲೀಷರಿಗೆ ಕೊಟ್ಟ, ಅದಕ್ಕೆ ಪ್ರತಿಯಾಗಿ ಹೇಲಿಗೋಲ್ಯಾಂಡ್ ಎಂಬ ಚಿಕ್ಕ ನಡುಗಡ್ಡೆಯನ್ನು ಕ್ರಿ. ಶ. ೧೮೯೦ರಲ್ಲಿ ತೆಗೆದುಕೊಂಡನು. ಈ ನಡುಗಡ್ಡೆಯು ದೊರಕಿದೊಡನೆ ಅಲ್ಲಿ ಹಡಗುಗಳನ್ನು ಕಟ್ಟಿಸಲು ಪ್ರಾರಂಭಿಸಿದನು. ಅನಂತರ ನಾಲ್ಕು ವರ್ಷಗಳಲ್ಲಿಯೇ ಕೀಲ್ ಕಾಲುವೆಯ ಕಾರ್ಯವನ್ನು ಪೂರೈಸಿ ಬಾಲ್ಟಿಕ್ ಮತ್ತು ಉತ್ತರ ಸಮುದ್ರಗಳಿಗೆ ಹೋಗಿಬರಲು ಅನುಕೂಲವನ್ನುಂಟುಮಾಡಿದೆನು. ಆ ಕೀಲ್ ಕಾಲಿವೆಯನ್ನು ಮತ್ತೂ ಹೆಚ್ಚು ಆಳವಾಗಿ ತೊಡಿಸಿದನು. ಕ್ರಿ. ಶ. ೧೯೧೪ರಿಂದ ಎಂತಹ ದೊಡ್ಡ ಹಡಗವೂ ಕೂಡಾ ನಿರಾತಂಕವಾಗಿ ಹೋಗಿಬರುವಂತೆ ಮಾಡಿದನು. ನೌಕಾಬಲದ ಮಹತ್ವಾಕಾಂಕ್ಷೆಯಿಂದ ನಮ್ಮ ನೌಕಾಬಲಕ್ಕೆ ಜಯವನ್ನು ಕೋಡು ಎಂದು ಜನಗಳು ಪ್ರಾರ್ಥನಾ ಮಂದಿರದಲ್ಲಿ ಪ್ರಾರ್ಥಿಸಿಕೊಳ್ಳುವ ರೂಢಿಯನ್ನು ಕೂಡಾ ಉಂಟುಮಾಡಿದನು. ಕೈಸರನ ವಿಶೇಷವಾದ ಸಾಹಸದಿಂದ ೧೦-೧೫ವರುಷದಲ್ಲಿಯೇ ಇಂಗ್ಲೀಷ್ ಹೊರ್ತು ಜಗತ್ತಿನಲ್ಲಿ ಯಾರಿಗೂ ಇಲ್ಲದಷ್ಟು ನೌಕಾಬಲವು ಜರ್ಮನಿಯಲ್ಲಿ ಸಿದ್ದವಾಯಿತು.

ಚೀನಾದೇಶದ ಸ್ವಾಧೀನದಲ್ಲಿದ್ದ ಕಿಯಾಚೋ ಎಂಬಲ್ಲಿ ಕ್ರಿ. ಶ. ೧೮೯೭ರಲ್ಲಿ ಇಬ್ಬರು ಜರ್ಮನ್ ಉಪದೇಶಿಗಳು ಕೊಲ್ಲಲ್ಪಟ್ಟರು. ಆಗ ಕೈಸರನು ತನ್ನ ತಮ್ಮನಾದ ಹೆನರಿಯ ಸಂಗಟ ಯುದ್ಧದ ಹಡಗುಗಳನ್ನು ಚೀನಾದೇಶಕ್ಕೆ ಕಳುಹಿಸಿ ಅವರು ಮಾಡಿದ ಅಪರಾಧಕ್ಕಾಗಿ ಕಿಯಾಚೋ

ಮತ್ತು ಅದರ ಸುತ್ತಲಿನ ೪೦೦ ಚದುರ ಮೈಲಿ ಪ್ರದೇಶ ಇವುಗಳನ್ನು ೧೦೦ ವರ್ಷ ಜರ್ಮನಿಯ ಸ್ವಾಧೀನದಲ್ಲಿರುವಂತೆ ಒಪ್ಪಂದಮಾಡಿಕೊಂಡನು. ಇದನ್ನು ನೋಡಿ ರಶಿಯಾ, ಫ್ರಾನ್ಸ ಮೊದಲಾದ ಯುರೋಪ್ ಖಂಡದ ಪ್ರಬಲ ರಾಷ್ಟ್ರದವರೂ ಚೀನಾದೇಶದಲ್ಲಿ ಅನೇಕ ಸೌಲಭ್ಯಗಳನ್ನು ಹೊಂದಲಾರಂಭಿಸಿದರು.

ಪರದೇಶದವರ ಪ್ರಾಬಲ್ಯವು ಚೀನಾದೇಶದಲ್ಲಿ ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ನೋಡಿ ಆ ದೇಶದ ಚಕ್ರವರ್ತಿಯ ತಾಯಿಯು ಕ್ರಿ. ಶ. ೧೮೯೮ರಲ್ಲಿ ರಾಜ್ಯಾಧಿಕಾರವನ್ನು ತನ್ನ ಕಡೆಗೆ ತೆಗೆದುಕೊಂಡು ಕ್ರೈಸ್ತಪಾದ್ರಿಗಳನ್ನು ಮತ್ತು ಅವರ ಮತಕ್ಕೆ ಸೇರದವರನ್ನು ಕೊಲ್ಲಿಸಲು ಬಾಕ್ಸರ್ ಎಂಬ ಒಂದು ಗುಪ್ತ ಸಂಘವನ್ನು ಸ್ಥಾಪಿಸಿದಳು. ಸಂಘದವರು ಕ್ರಿ. ಶ. ೧೯೦೦ ನೆಯ ವಸಂತ ಋತುವಿನಲ್ಲಿ ಸಾಧಾರಣ ೩೦ ಸಹಸ್ರ ಕ್ರೈಸ್ತಮತೀಯರನ್ನು ಕೊಂದರು. ಈ ಪ್ರಕಾರ ಕೊಲೆಯಾದವರಲ್ಲಿ ೨೬೬ ಜನಗಳು ಮಾತ್ರ ಯೂರೋಪಖಂಡದವರಾಗಿದ್ದರು. ಜರ್ಮನ್ ಮತ್ತು ಜಪಾನ್ ದೇಶಗಳ ರಾಯಭಾರಿಗಳೂ ಭಯಂಕರವಾದ ಈ ಸಮಾಚಾರ ತಿಳಿದೊಡನೆ ಜಪಾನ್, ರಶಿಯಾ ಇಂಗ್ಲಂಡ್, ಅಮೇರಿಕಾ, ಫ್ರಾನ್ಸ್, ಜರ್ಮನಿ ಮೊದಲಾದ ದೇಶದವರು ಸೇರಿ ಸಾಧಾರಣ ೮೦ ಸಾವಿರ ಸೈನ್ಯವನ್ನು ಚೀನಾ ದೇಶದ ಮೇಲೆ ಕಳುಹಿಸಿದರು. ಈ ಯುದ್ಧದಲ್ಲಿ ಚೀನಾದೇಶವು ಸೋಲಲು ಚೀನಾ ಸರಕಾರದವರು ೩೦ ವರ್ಷಗಳೊಳಗಾಗಿ ಯುದ್ದದಲ್ಲಿ ಸೇರಿರುವ ಎಲ್ಲಾ ದೇಶದವರಿಗೆ ಸೇರಿ. ೬ ಕೋಟಿ ೬೦ ಲಕ್ಷ ಪೌಂಡುಗಳನ್ನು ಕೊಡಬೇಕೆಂತಲೂ, ಜರ್ಮನಿ ಮತ್ತು ಜಪಾನ್ ದೇಶಗಳ ರಾಯಭಾರಿಗಳಲ್ಲಿಗೆ ಹೋಗಿ ಕ್ಷಮಾರ್ಪಣೆಯನ್ನು ಕೇಳಿಕೊಳ್ಳಬೇಕೆಂತಲೂ ಒಪ್ಪಂದವಾಯಿತು.;

ಈ ಒಪ್ಪಂದದ ಮೇರೆಗೆ ಚೀನಾದೇಶದ ರಾಯಭಾರಿಯು ಜರ್ಮನಿಗೆ ಬರಲು ಕೈಸರನು ಚೀನಾದೇಶದ ರಾಯಭಾರಿಯು ನನ್ನ ಹತ್ತಿರ ಬರುವಾಗ ಆ ದೇಶದ ಪದ್ಧತಿಯಂತೆ ಮೂರಾವರ್ತಿ ಸಾಷ್ಟಾಂಗ ನಮಸ್ಕಾರ ಮಾಡಬೇಕೆಂದು ಹೇಳಿದರು. ಕೈಸರನ ಮೂರ್ಖತನದ ಈ ಮಾತನ್ನು ಎಲ್ಲಾ ದೇಶದವರೂ ನಿಷೇದಿಸಿದ್ದರಿಂದ ಮೂರಾವರ್ತಿ ಸಲಾಮ್ ಮಾಡಬೇಕೆಂದು ತಿಳಿಸಿದನು. ಚೀನಾದೇಶದ ಯುದ್ಧಕ್ಕೆ ತನ್ನ ಸೈನಿಕರನ್ನು ಕಳುಹಿಸುವಾಗ ಕೈಸರನು ಅವರಿಗೆ ಪ್ರೋತ್ಸಾಹಿಸಿದ್ದೇನೆಂದರೆ, ಸೈನಿಕರೆ, ಶತ್ರುಗಳು ನಿಮ್ಮ ಸ್ವಾಧೀನರಾದಾಗ ಅವರನ್ನು ನೀವು ಕ್ಷಮಿಸಬೇಡಿರಿ; ಅಥವಾ ಅವರನ್ನು ಸೆರೆಹಿಡಿಯಬೇಡಿರಿ; ಆದರೆ ಇನ್ನೂ ಸಾವಿರಾರು ವರ್ಷಗಳವರೆಗೂ ಅವರು ಜರ್ಮನಿಯ ಕಡೆಗೆ ಇಣಕಿ ಕೂಡಾ ನೋಡದಷ್ಟು ಭಯಂಕರಾಗಿ ಶಸ್ತ್ರಪ್ರಹಾರವನ್ನು ಮಾಡಿರಿ! "ಕೈಸರನ ಈ ಪ್ರೇರಣೆಯ ವ್ಯರ್ಥವಾಗಲಿಲ್ಲ. ಮಹಾ ಅನರ್ಥವನ್ನೇ ಉಂಟುಮಾಡಿತು. ಆ ಸೈನಿಕರು ಚೀನಾದೇಶದಲ್ಲಿ ವಿಶೇಷವಾದ ಸುಲಿಗೆಯನ್ನು ಮಾಡಿದ್ದಲ್ಲದೇ ಗ್ರಹಗಳ ಗತಿಯನ್ನು ಕಂಡು ಹಿಡಿಯಲು ಚೀನಾದವರು ಬಹುಕಾಲದಿಂದಲೂ ಇಟ್ಟುಕೊಂಡಿದ್ದ ಯಂತ್ರವನ್ನು ತಮ್ಮ ದೇಶಕ್ಕೆ ತಂದು ಕೈಸರನ ಚರಿತ್ರೆಗೆ ಕಳಂಕವನ್ನುಂಟುಮಾಡಿದರು. ಕೈಸರನ ಕ್ರೂರ ಸ್ವಭಾವವು ಆಗಲೇ ಜಗತ್ತಿಗೆಲ್ಲಾ ಗೊತ್ತಾಗಿದ್ದಿತು."

ಇಂಗ್ಲೀಷರಿಗೂ, ಬೋರವರಿಗೂ, ಕ್ರಿ. ಶ. ೧೮೭೬ರಲ್ಲಿ ಯುದ್ದ ಪ್ರಾರಂಭವಾಗಲು ಕೈಸರನು ಬೋರವರಿಗೆ ಪ್ರತ್ಯಕ್ಷವಾಗಿ ಸಹಾಯಮಾಡಲು ಭಯಪಟ್ಟು ಪರೋಕ್ಷದಲ್ಲಿ ಪ್ರೋತ್ಸಾಹಿಸಿದನು. ಬೋರವರು ಆ ಯುದ್ದದಲ್ಲಿ ಜಯಶಾಲಿಗಳಾದುದರಿಂದ ಸಂತೋಷ ಪ್ರದರ್ಶನ ಮಾಡಿದರು.

ಫ್ರೆಂಚರ ಅಧೀನದಲ್ಲಿದ್ದ ಮೋರಕ್ಕೋ ದೇಶದಲ್ಲಿ ಕ್ರಿ. ಶ ೧೯೦೭-೦೮ರಲ್ಲಿ ಅನೇಕ ಫ್ರೆಂಚ್ ಜನಗಳ ಕೊಲೆಯಾಗಿ ಅವರಲ್ಲಿ ದ್ವೇಷಾಸೂಯೆಗಳುಂಟಾಗಲು ಕೈಸರನ ಕಪಟ ಕಾರ್ಯಗಳೇ ಕಾರಣಗಳಾದವು. ಇಂಗ್ಲೀಷರು ಫ್ರೆಂಚರ ಪಕ್ಷವನ್ನುವಹಿಸಿದ್ದರಿಂದ ಕೈಸರನು ನಿರುಪಾಯನಾಗಿ ಮೋರಕ್ಕೋ ದೇಶದ ಮೇಲೆ ಫ್ರಾನ್ಸಿನ ಅಧಿಕಾರವಿದೆಯೆಂಬುದನ್ನು ಕ್ರಿ. ಶ. ೧೯೧೧ರಲ್ಲಿ ಅನುಮೋದಿಸಿದನು.

ಲಂಡನ್ನಿನ **ಡೇಲಿ ಟೆಲಿಗ್ರಾಫ** ಎಂಬ ಪತ್ರಿಕೆಯ ತಾರೀಕು ೨೮-೧೦-೧೯೦೮ನೆಯ ಸಂಚಿಕೆಯಲ್ಲೊ ಕೈಸರನ ಅಭಿಪ್ರಾಯವೆಂದು ಒಂದು ಲೇಖನವು ಪ್ರಕಟವಾಯಿತು. ಕೈಸರನು ತಾನು ಜಗತ್ತಿನೆಲ್ಲೆಡೆಗೂ ನೆಲೆಗೊಳ್ಳಲು ಪ್ರಯತ್ನಿಸುತ್ತಿದ್ದೇನೆಂತಲೂ ಇಂಗ್ಲೀಷರು ಮಾತ್ರ ನನ್ನನ್ನು ನಂಬುವುದಿಲ್ಲವೆಂತಲೂ ನನ್ನ ದೇಶದವರಿಗೆ ಇಂಗ್ಲಂಡಿನವರ ವಿಷಯದಲ್ಲಿ ಪ್ರೇಮವಿಲ್ಲವೆಂತಲೂ ಆ ಲೇಖನ ಬರೆದಿದ್ದಿತು. ಜರ್ಮನಿಯ ಚಾನ್ಸಲರನು (ಮುಖ್ಯಮಂತ್ರಿ) ತನ್ನ ದೇಶದವರ ಮೇಲೆ ಈ ಪ್ರಕಾರವಾಗಿ ಕೈಸರನು ದೋಷಾರೋಪಣೆ ಮಾಡಿದ್ದಕ್ಕಾಗಿ ತನ್ನ ಅಧಿಕಾರದಿಂದ ನಿವೃತ್ತನಾದನು. ಕೈಸರನ ವಿರುದ್ಧವಾಗಿ ದೇಶದಲ್ಲೆಲ್ಲಾ ಗಲಭೆಯುಂಟಾಯಿತು. ಆಗ ಕೈಸರನು ತಾನು ಹಾಗೆ ಹೇಳಿದ್ದು ತಪ್ಪಾಯಿತೆಂದು ಕ್ಷಮಾರ್ಪಣೆಯನ್ನು ಕೇಳಿಕೊಂಡನು.

ಕೈಸರನಿಗೆ ಒಬ್ಬ ಸಹೋದರನು, ನಾಲ್ವರು, ಸಹೋದರಿಯರು ಇದ್ದಾರೆ ಸಹೋದರನಾದ ಪ್ರಿನ್ಸ್ ಹೆನರಿಯ ನೌಕಾವಿದ್ಯೆಯಲ್ಲಿ ಬಹು ಬಲ್ಲಿದನು. ಕೈಸರನು ಮಹತ್ವಾಕಾಂಕ್ಷೆಯೂ, ಮಹಾ ಸಾಹಸಿಯೂ ದೀರ್ಘೋದ್ಯೋಗಿಯೂ ಆಗಿದ್ದಾನೆ. ಈತನು ವಿಷಯಲೋಲುಪ್ತನಲ್ಲ. ತನ್ನ ಉದ್ಧೇಶವನ್ನು ಸಾಧಿಸುವಾಗ ನ್ಯಾಯಾನ್ಯಾಯಗಳ ಕಡೆಗೆ ಗಮನಿಸುವುದಿಲ್ಲ. ಜರ್ಮನಿಯ ಅಭಿವೃದ್ಧಿಯೇ ತನ್ನ ಸರ್ವಸ್ವವೆಂದು ತಿಳಿಸಿದ್ದಾನೆ. ನಿರಂಕುಶ ಪ್ರಭುತ್ವದಲ್ಲಿಯೇ ಹೆಚ್ಚು ಅಭಿರುಚಿಯು ಮುಂದಣ ಪ್ರಕರಣದಲ್ಲಿ ವಿವರಿಸಿರುವ ಅನೇಕ ಸಂಗತಿಗಳಿಂದ ಕೈಸರನ ಪ್ರಭುತ್ವದಲ್ಲಾದ ಮಹತ್ಕಾರ್ಯಗಳುವಾಚಕರಿಗೆ ವ್ಯಕ್ತವಾಗಬಹುದು.

❖❖

೨ನೆಯ ಪ್ರಕರಣ

ಜರ್ಮನಿಯ ಪೂರ್ವವೃತ್ತಾಂತ

ಜರ್ಮನಿಯ ಅತೀ ಪ್ರಾಚೀನ ಚರಿತ್ರೆಯ ಕಡೆಗೆ ಗಮನಿಸುವುದು ಪ್ರಕೃತದ ವಿಷಯವಲ್ಲ. ಈಗಿನ ಸ್ಥಿತಿಯೂ ಈ ದೇಶಕ್ಕೆ ಬರಲು ಎಂದಿನಿಂದ ಪ್ರಾರಂಭವಾಯಿತೆನ್ನುವುದನ್ನು, ಅದು ದಿನೇ ದಿನೇ ಹೇಗೆ ವ್ಯತ್ಯಾಸವಾಗಿತೆಂಬುದನ್ನು ಇಲ್ಲಿ ವಿವರಿಸಿದೆ. ಪ್ರಾಟಸ್ಟಂಟ್‌ಮತವು ಹದಿನಾರನೆಯ ಶತಮಾನದಲ್ಲಿ ಲೂಥರನಿಂದ ಸ್ಥಾಪಿಸಲ್ಪಟ್ಟಿತಷ್ಟೆ. ಜರ್ಮನಿಯ ಉತ್ತರಭಾಗದ ಜನಗಳೇ ಈ ಮತವನ್ನು ಹೆಚ್ಚಾಗಿ ಅವಲಂಬಿಸಿದರು. ಅನಂತರ ಎರಡನೇಯ ಫ್ರೆಡರಿಕ್ ರಾಜನ ಕಾಲದಲ್ಲಿ ರೋಮನ್ ಕ್ಯಾಥಲಿಕ್ ಮತ್ತು ಫ್ರಾಟಸ್ಟಮಟ್ ಮತೀಯರು ೩೦ ವರ್ಷ ಬಹು ಭಯಂಕರವಾದ ಧರ್ಮಯುದ್ಧವನ್ನು ಮಾಡಿದರು. ಫ್ರೆಂಚರು ಆ ಸಮಯದಲ್ಲಿ ಜರ್ಮನಿಯ ಕೆಲವು ಪ್ರದೇಶಗಳನ್ನು ತಮ್ಮ ಸ್ವಾಧೀನಮಾಡಿಕೊಂಡರು. ಮತ್ತು ಸ್ವಿತ್ಸರಲಂಡ್ ಎಂಬ ಸ್ವತಂತ್ರ ರಾಜ್ಯವು ಆ ಕಾಲದಲ್ಲಿಯೇ ಉಂಟಾಯಿತು.

ಹೊಹೆನ್-ಝೋಲರ್ನ ಎಂಬ ಒಂದು ರಾಜವಂಶವು ಆ ಕಠಿಣಕಾಲದಲ್ಲಿ ಬಹು ಪ್ರಸಿದ್ಧಿಗೆ ಬಂದಿತು. ಈ ವಂಶದ ಮೊದಲನೆಯ ರಾಜನಾದ ಫ್ರೆಡಿರಿಕ್ ವಿಲ್ಯಂ ಎಂಬುವನು ಕ್ರಿ. ಶ. ೧೬೪೦ರಲ್ಲಿ ಪಟ್ಟಕ್ಕೆ ಬಂದು ೪೮ವರ್ಷ ರಾಜ್ಯವಾಳಿದನು. ಪ್ರಕೃತದ ಕೈಸರನು ಇದೇ ವಂಶದವನು. ಈ ವಂಶದ ೯ ಜನ ರಾಜರು ಈವರೆಗೆ ಅವಿಚ್ಛಿನ್ನವಾಗಿ ಅಳುತ್ತಾ ಬಂದಿದ್ಧಾರೆ. ಜರ್ಮನಿಯ ಬೇರೆ ಬೇರೆ ಭಾಗಗಳು ಬೇರೆ ಬೇರೆ ರಾಜರ ಆಳ್ವಿಕೆಗೆ ಒಳಪಟ್ಟಿದ್ದರೂ ಆ ದೇಶದ ಪ್ರಶಿಯಾ ಎಂಬ ಸಂಸ್ಥಾನದ ರಾಜನೇ ಜರ್ಮನಿಯ ರಾಜನೆಂದು ತಿಳಿಯುತ್ತಿದ್ದರು.

ಈ ಜರ್ಮನಿ ದೇಶವು ಆಸ್ಟ್ರಿಯಾ ದೇಶದ ಚಕ್ರವರ್ತಿಯ ಅಧೀನದಲ್ಲಿ ಬಳಲುತ್ತಿದ್ದಿತು. ಈ ದುಸ್ಥಿತಿಯನ್ನು ನಿವಾರಣೆಮಾಡಬೇಕೆಂದು ಫ್ರೆಡಿರಿಕ್ ದಿ ಗ್ರೇಟ್ ಎಂಬ ಮಹಾ ಪರಾಕ್ರಮಶಾಲಿಯಾದ ರಾಜನು ಪ್ರಯತ್ನಿಸಿದನು. ಜರ್ಮನಿಯ ಏಳ್ಗೆಯನ್ನು ನೋಡಿ ಸಹಿಸಲಾರದೆ ಆಸ್ಟ್ರಿಯಾ, ರಶಿಯಾ ಮತ್ತು ಫ್ರಾನ್ಸ ದೇಶದವರು ಸೇರಿ ಜರ್ಮನಿಯನ್ನು ಹಂಚಿಕೊಳ್ಳಬೇಕೆಂದು ಕ್ರಿ. ಶ. ೧೭೫೬ರಲ್ಲಿ ಜರ್ಮನಿಯ ಸಂಗಡ ಯುದ್ಧ ಮಾಡಿದರು. ಆಗ ಫ್ರೆಡರಿಕ್ ದಿ ಗ್ರೇಟ್‌ನು ಇಂಗ್ಲೀಷರ ಸಹಾಯವನ್ನು ಕೇಳಿಕೊಂಡಿದ್ದರಿಂದ ಇಂಗ್ಲೀಷರು ಮತ್ತು ಜರ್ಮನಿಯವರು ಒಂದಾಗಿ ೭ ವರ್ಷ ಯುದ್ಧ ಮಾಡಿ ಫ್ರಾನ್ಸ್ ಆಸ್ಟ್ರಿಯಾ, ಮತ್ತು ರಶಿಯಾದವರನ್ನು ಸೋಲಿಸಿದರು. ಆದರೂ ಜರ್ಮನಿಯು ಆಸ್ಟ್ರಿಯಾದವರ ಅಧಿನದಿಮದ ಸಂಪೂರ್ಣವಾಗಿ ಬಿಡುಗಡೆಯಾಗಲಿಲ್ಲ.

ಫ್ರೇಡರಿಕ್ ದಿ ಗ್ರೇಟ್‌ನ ತರುವಾಯ ಅಂತಹ ಪರಾಕ್ರಮಶಾಲಿಗಳಾದ ರಾಜರು ಪಟ್ಟಕ್ಕೆ ಬಾರದೇ ಇದ್ದುದರಿಂದಲೂ, ಆ ಕಾಲದ ಜರ್ಮನಿಯ ಜನಗಳು ನಿರ್ಬಲರು. ದರಿದ್ರರು ಅಲ್ಪಸಂತುಷ್ಟರು, ಕೇವಲ ಪಾರಲೌಕಿಕ ವಿಷಯುಗಳಲ್ಲಿಯೇ ಅಭಿರುಚಿಯುಳ್ಳವರೂ, ಕೂಪಮಂಡೂಕವೃತ್ತಿಯಿಂದ ಜೀವಿಸುತ್ತಿದ್ದವರೂ ಆಗಿದ್ದುದರಿಂದ ಜರ್ಮನಿಯು ಆಸ್ಟ್ರಿಯಾ ದೇಶದ ಅಧೀನದಲ್ಲಿಯೇ ಅನೇಕ ಕಾಲ ನೆರಳಬೇಕಾಯಿತು. ಇಂತಹ ಸಮಯದಲ್ಲಿ ಪರಾಕ್ರಮಿಯಾದ ನೆಪೋಲಿಯನ್ನನು ಇಂತಹ ಸಮಯದಲ್ಲಿ ಪ್ರಸಿದ್ಧಿಗೆ ಬಂದು ಜರ್ಮನ್, ಆಸ್ಟ್ರಿಯಾ ದೇಶಗಳಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಿದನು. ಇಂಗ್ಲೀಷರು ಆ ನೆಪೋಲಿಯನ್ನನನ್ನು ಸೋಲಿಸಿ ಪ್ರಪಂಚದಲ್ಲಿ ಶಾಂತತೆಯನ್ನುಂಟುಮಾಡಿದರೂ ಜರ್ಮನಿಯು ಮಾತ್ರ ಆಸ್ಟ್ರಿಯಾ ದೇಶದ ಬಂಧನದಿಂದ ಪಾರಾಗಲಿಲ್ಲ.

ಜರ್ಮನಿಯು ಈ ಪ್ರಕಾರ ಪಾರತಂತ್ರ್ಯದಲ್ಲಿ ಬಳಲುತ್ತಿದ್ದುದನ್ನು ನೋಡಿ ಕಾಂಟ್, ಗೇಟಿ, ಶೀಲರ್ ಮೊದಲಾದ ಪ್ರಸಿದ್ಧ ಜರ್ಮನ್ ಗ್ರಂಥಕಾರರು ಅನೇಕ ಗ್ರಂಥಗಳನ್ನು ಬರೆದನು ಜನ ಸಾಮಾನ್ಯರಲ್ಲಿ ಕೂಡಾ ದೇಶಾಭಿಮಾನ, ಸ್ವಾತಂತ್ರ್ಯ ಪ್ರೀತಿಗಳುಂಟಾಗುವಂತೆ ಮಾಡಿದರು. ಸ್ವದೇಶೋದ್ಧಾರಕ್ಕಾಗಿ ಪ್ರಾಣವನ್ನು ಕೂಡಾ ಸಮರ್ಪಿಸಲು ಸಿದ್ಧರಾಗಬೇಕೆಂಬ ತತ್ವವನ್ನು ಈ ಗ್ರಂಥಕಾರರು ಪ್ರಸಾರಗೊಳಿಸಿ ಜನಗಳಲ್ಲಿ ವಿದ್ಯಾಭಿರುಚಿಯನ್ನುಂಟುಮಾಡಿದರು. ಇಂತಹ ನೂತನ ಮೊದಲನೆಯ ವಿಲ್ಯಂ ಎಂಬ ಪರಾಕ್ರಮಿಯಾದ ರಾಜನು ಪಟ್ಟಕ್ಕೆ ಬಂದನು. ಈತನು ಪ್ರಭುತ್ವಕ್ಕೆ ಬಂದ ೫ನೇ ವರ್ಷದಲ್ಲಿ ಎಂದರೆ ಕ್ರಿ. ಶ. ೧೮೬೬ರಲ್ಲಿ ಆಸ್ಟ್ರೀಯ ದೇಶದ ಸಂಗಡ ಯುದ್ಧ ಮಾಡಿ ಜರ್ಮನಿಯ ಪರತಂತ್ರವನ್ನು ಸಂಪೂರ್ಣವಾಗಿ ನಿವಾರಣೆಮಾಡಿದನು.

ಜರ್ಮನಿಗೆ ಸ್ವಾತಂತ್ರ್ಯವು ಪ್ರಾಪ್ತವಾದೊಡನೆ ಅದು ದಿನೇ ದಿನೇ ಉನ್ನತಸ್ಥಿತಿಗೆ ಬರಲಾರಂಭಿಸಿತು. ವಿಲ್ಯಂ ರಾಜನಿಗೆ ಸರಿಯಾದ ಬಿಸ್ಮಾರ್ಕನೆಂಬ ಮಹಾ ಸಮರ್ಥನಾದ ಪುರುಷರು ಮಂತ್ರಿಯಾದನು. ಈ ಉಭಯರೂ ಸೇರಿ ಜರ್ಮನಿಯ ಶ್ರೇಯೋಭಿವೃದ್ಧಿಗಾಗಿಯೇ ಪ್ರಯತ್ನಿಸಿದರು. ವಿಲ್ಯಂ ರಾಜನು ಫ್ರಾನ್ಸಿನ ಸಂಗಡ ಕ್ರಿ. ಶ. ೧೮೭೦ರಲ್ಲಿ ಬಹು ಘನವಾದ ಯುದ್ಧಮಾಡಿ ಅವರನ್ನು ಸೋಲಿಸಿ ಅಲ್ಸೆನ್ ಮತ್ತು ಲಾರೆನ್ ಪ್ರಾಂತ್ಯಗಳನ್ನು ಕಿತ್ತುಕೊಂಡದಲ್ಲದೆ ೨೦ ಕೋಟಿ ಪೌಂಡುಗಳನ್ನು ನಷ್ಟ ದ್ರವ್ಯವಾಗಿ ತೆಗೆದುಕೊಂಡರು. ಈ ಘನವಾದ ಜಯದಿಂದ ಜರ್ಮನಿಯ ಉತ್ಸಾಹ ಸಾಹಸಾಧಿಗಳೂ ಅತ್ಯಧಿಕವಾದವು.

ಈ ಫ್ರೆಂಚ್ ಯುದ್ಧದಲ್ಲಿ ಜಯವಾದೊಡನೆ ಜರ್ಮನಿಯ ಭದ್ರತೆಗಾಗಿ ಆ ದೇಶದ ಎಲ್ಲಾ ಸಂಸ್ಥಾನಗಳನ್ನು ಕೂಡಿಸಿ ಕ್ರಿ. ಶ. ೧೮೭೧ನೆಯ ಜನವರಿ ೧೮ನೆಯ ತಾರೀಕಿನ ದಿವಸ ವಿಲ್ಯಂ ರಾಜನು ಜರ್ಮನ್ ಸಾಮ್ರಾಜ್ಯವನ್ನು ಏರ್ಪಡಿಸಿದನು. ಈ ನವೀನ ಅಭಿವೃದ್ಧಿಗೆ ಅಪಾಯ ಸಂಭವಿಸಬಾರದೆಂದು ಬಿಸ್ಮಾರ್ಕನು ಕ್ರಿ. ಶ. ೧೮೭೮ರಲ್ಲಿ ಆಸ್ಟ್ರಿಯಾ ದೇಶದ ಸಂಗಡ. ಕ್ರಿ. ಶ. ೧೮೮೭ರಲ್ಲಿ ಇಟಲಿ ಸಂಗಡ ಯುದ್ದಕಾಲದಲ್ಲಿ ಪರಸ್ಪರ ಸಹಾಯ ಮಾಡಬೇಕೆಂದು ಒಪ್ಪಂದಮಾಡಿಕೊಂಡನು. ಇಂಗ್ಲೀಷರು ಈ ಪಕ್ಷವನ್ನು ವಹಿಸಿದರು. ಈ ರೀತಿಯಾಗಿ ಯುರೋಪ ಖಂಡದ ಪ್ರಬಲ ರಾಷ್ಟ್ರಗಳು ಎರಡು ಪಕ್ಷಗಳಾಗಿ ಪರಿಣಮಿಸಿದವು.

❖❖

೩ನೆಯ ಪ್ರಕರಣ

ವಿದ್ಯೆ

ಬಾಲವಿದ್ಯಾಭ್ಯಾಸವು ಜರ್ಮನಿಯಲ್ಲಿ ವಿಶೇಷವಾಗಿ ಪ್ರಸಾರವಾಗಿದೆ. ಬಾಲಕರಿಗೂ ಮತ್ತು ಬಾಲಕಿಯರಿಗೂ ಅಕ್ಷರಾಭ್ಯಾಸವನ್ನೂ ಬಲಾತ್ಕಾರವಾಗಿಯೂ, ಉಚಿತವಾಗಿಯೂ ಮಾಡಿಸುತ್ತಾರೆ. ೬ ವರ್ಷದಿಂದ ೧೪ ವರ್ಷಗಳೊಳಗಿನ ಮಕ್ಕಳು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಲೇಬೇಕೆಂಬ ರಾಜಶಾಸನವಿದೆ. ಆದುದರಿಂದ ಒಂದು ಸಾವಿರಕ್ಕೆ ೩ ಜನಗಳು ಕೂಡಾ ಆ ದೇಶದಲ್ಲಿ ನಿರಕ್ಷರಕುಕ್ಷಿಗಳು ದೊರೆಯುವುದಿಲ್ಲ.

ಪ್ರಾಥಮಿಕ ಶಿಕ್ಷಣವು ಪೂರೈಸಿದ ನಂತರ ಮೂರು ವರ್ಷ ಕಂಟಿನ್ಯುಏಷನ್ ಎಂಬ ಮಧ್ಯಮ ಪಾಠಶಾಲೆಯಲ್ಲಿ ಕಲಿಯಬೇಕೆಂಬ ನಿಯಮವಿದೆ. ಒಕ್ಕಲುತನ, ನೌಕಾಶಾಸ್ತ್ರ, ವ್ಯಾಪಾರವಿದ್ಯೆಗಳನ್ನೂ, ಫ್ರೆಂಚ್, ಇಂಗ್ಲೀಷ್ ಭಾಷೆಗಳನ್ನು ಅನೇಕ ಚಿಕ್ಕ ಚಿಕ್ಕ ಕೈಗಾರಿಕೆಗಳನ್ನು ಈ ಮಧ್ಯಮ ಪಾಠಶಾಲೆಗಳಲ್ಲಿ ಕಲಿಸುತ್ತಾರೆ. ಪ್ರಾಥಮಿಕ ಮತ್ತು ಈ ಮಧ್ಯಮ ಪಾಠಶಾಲೆಗಳ ವೆಚ್ಚದಲ್ಲಿ ೨ ಭಾಗವನ್ನು ಮುನಸಿಪಾಲ್ಟಿಯವರು, ಒಂದು ಭಾಗವನ್ನು ಸರಕಾರದವರು ವಹಿಸುತ್ತಾರೆ.

ಮಧ್ಯಮ ಪಾಠಶಾಲೆಯಲ್ಲಿ ಓದುವ ವಿದ್ಯಾರ್ಥಿಯು ವರ್ಷಕ್ಕೆ ೧೧೨ ರೂ. ೮ ಆಣೆಯನ್ನು ಕೇವಲ ಕೈಗಾರಿಕೆಯನ್ನೇ ಕಲಿಸತಕ್ಕ ಪಾಠಶಾಲೆಯಲ್ಲಿ ಕಲಿಯತಕ್ಕ ವಿದ್ಯಾರ್ಥಿಯು ವರ್ಷಕ್ಕೆ ೮೨ರೂ. ೮ ಆಣೆ ಫಿ ಕೊಡಬೇಕಾಗುತ್ತದೆ. ಜರ್ಮನಿಯ ಸಂಸ್ಥಾನದಲ್ಲಿ ಸಾಧಾರಣ ೪೫ ಲಕ್ಷ ಜನಸಂಖ್ಯೆಯುಳ್ಳ ಸಾಕ್ಷೆನ್ ಎಂಬುದೊಂದು ಸಂಸ್ಥಾನವಿದೆ. ಅಲ್ಲಿನ ಜನಗಳು ಕೈಗಾರಿಕೆಯ ವಿದ್ಯೆಯಲ್ಲಿಯೇ ಬಹು ಅಭಿರುಚಿಯುಳ್ಳವರಾಗಿದ್ದಾರೆ. ಕ್ರಿ. ಶ. ೧೯೦೫ರಲ್ಲಿ ೩೬೦ ಕೈಗಾರಿಕೆಯ ಪಾಠಶಾಲೆಗಳಿದ್ದವು.

ಟೆಕ್ನಿಕಲ್ ಎಂಬ ಕಲಾಶಾಲೆಗಳು ಜರ್ಮನಿಯಲ್ಲಿ ಹನ್ನೊಂದು ಇವೆ. ಯಂತ್ರವಿದ್ಯೆ. ಚಿತ್ರವಿದ್ಯೆ ವಿದ್ಯುಚ್ಛಕ್ತಿಯ ವಿದ್ಯೆ ಮೊದಲಾದ ಕಲೆಗಳನ್ನು ಆ ಪಾಠಶಾಲೆಗಳಲ್ಲಿ ಕಲಿಸುತ್ತಾರೆ ಈ ಪಾಠಶಾಲೆಗಳಲ್ಲಿ ನ್ಯಾಯಶಾಸ್ತ್ರವನ್ನು ೧೧ ಸಾವಿರ ವಿದ್ಯಾರ್ಥಿಗಳೂ ವೈದ್ಯಶಾಸ್ತ್ರವನ್ನು ೧೪ ಸಹಸ್ರ ವಿದ್ಯಾರ್ಥಿಗಳೂ ಕ್ರಿ. ಶ. ೧೯೧೨ರಲ್ಲಿ ಕಲಿಯುತ್ತಿದ್ದರು. ವೈದ್ಯಶಾಸ್ತ್ರವನ್ನು ಕಲಿಯುವವರಲ್ಲಿ ೬೦೦ ಹೆಂಗಸರಿದ್ದರು. ಪರದೇಶದ ವಿದ್ಯಾರ್ಥಿಗಳಿಗೆ ಈ ದೇಶದಲ್ಲಿ ನಿರ್ವಂಚನೆಯಿಂದ ಹೇಳಿಕೊಡುವುದಿಲ್ಲ. ಮತ್ತು ವಿದ್ಯಾರ್ಥಿವೇತನವನ್ನು ಹೆಚ್ಚು ತೆಗೆದುಕೊಳ್ಳುತ್ತಾರೆ. ಜರ್ಮನಿಯ ಪ್ರಸಿದ್ಧ ಪ್ರೋಫೆಸರ್ರಿಗೂ ಕೂಡ ವರ್ಷಕ್ಕೆ ೧೦-೧೧ ಸಾವಿರ ರೂಪಾಯಿಗಿಂತ ಹೆಚ್ಚಿಗೆ ವೇತನ ದೊರೆಯುವುದಿಲ್ಲ. ಈ ಪ್ರಕಾರ ಎಲ್ಲಾ ವಿಧವಾದ ವಿದ್ಯೆಯಲ್ಲಿಯೂ ಜರ್ಮನಿ ಮುಂದಾಗಿದೆ.

❖❖

೪ನೆಯ ಪ್ರಕರಣ

ಕೈಗಾರಿಕೆ

ಯುದ್ಧದಿಂದ ಎಷ್ಟೇ ನಷ್ಟವಾಗಿದ್ದರೂ ಕೈಗಾರಿಕೆ ಮತ್ತು ವ್ಯಾಪಾರಗಳಿಂದ ಆ ನಷ್ಟವನ್ನು ತುಂಬಿಕೊಳ್ಳತ್ತೇವೆಂದು ಜರ್ಮನಿಯ ರಾಜಕಾರ್ಯಪ್ರವೀಣರು ಹೇಳುತ್ತಿರುವುದನ್ನು ನೋಡಿದರೆ ಅವರು ಕೈಗಾರಿಕೆ ಮತ್ತು ವ್ಯಾಪಾರಗಳಿಗೆ ಎಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿದ್ದಾರೆಂಬುದು ಗೊತ್ತಾಗುತ್ತದೆ. ಆ ದೇಶದ ಕಾರ್ಯಾಲಯಗಳೀಗೆ ಬೇಕಾಗುವಷ್ಟು ಕಲ್ಲಿದ್ದಲೆಯು ಅಲ್ಲಿಯೇ ಹುಟ್ಟುವಂತಿದೆ. ಆದರೆ ಈಗ ಪ್ರತಿವರ್ಷ ಒಂಬತ್ತು ಲಕ್ಷ ಟನ್ ಕಲ್ಲಿದ್ದಲೆಯನ್ನು ಮಾತ್ರ ಇಂಗ್ಲೆಂಡಿನಿಂದ ತರಿಸಿಕೊಳ್ಳಬೇಕಾಗುತ್ತದೆ ಇದನ್ನು ತಪ್ಪಿಸಬೇಕೆಂದು ಜರ್ಮನಿಯು ಪ್ರಯತ್ನಿಸುತ್ತಾ ಇದ್ದಿತು.

ಇಂಗ್ಲಂಡಿನ ನೌಕಾ ಸಾಮರ್ಥ್ಯವನ್ನು ಕಡಿಮೆಮಾಡಬೇಕೆಂಬ ಉದ್ದೇಶವು ಜರ್ಮನಿಗೆ ಬಹುಕಾಲದಿಂದಲೂ ಇದ್ದಿತಷ್ಟೇ ಆದುದರಿಂದ ಹಡಗು ಮೊದಲಾದವುಗಳನ್ನು ಕಟ್ಟಲು ಬೇಕಾಗುವ ಕಬ್ಬಿಣವನ್ನೆಲ್ಲಾ ಜರ್ಮನಿಯಲ್ಲಿಯೇ ಉಂಟುಮಾಡಿಕೊಳ್ಳುತ್ತಿದ್ದಾರೆ. ಕಬ್ಬಿಣ ಮತ್ತು ಉಕ್ಕಿನ ಪದಾರ್ಥಗಳನ್ನು ಮಾಡುವ ಕ್ರುಫ್ ಎಂಬ ಒಂದು ಕಾರ್ಯಾಲಯವು ಬಹು ಘನವಾದದ್ದಾಗಿದೆ. ಕ್ರಿ. ಶ. ೧೮೧೧ರಲ್ಲಿ ಆಲ್ ಫ್ರೇಡ್ ಕ್ರುಪ್‌ನ ಕಾಲದಲ್ಲಿ ಈ ಕಾರ್ಯಾಲಯವು ಬಹು ಪ್ರಸಿದ್ಧಿಗೆ ಬಂದಿತು. ಈ ಕಾರ್ಯಾಲಯದ ಆದಾಯದ ಮೇಲಿನ ಕಂದಾಯವು ಸಾಧಾರಣ ಹನ್ನೆರಡು ಲಕ್ಷ ರೂಪಾಯಿಯಿದೆ. ಪ್ರಕೃತದ ಯುದ್ಧದಲ್ಲಿ ಉಪಯೋಗಿಸಿದ ೧೭ ಇಂಚಿನ ತೋಪುಗಳು ಇದೇ ಕಾರ್ಯಾಲಯದಲ್ಲಿ ಮಾಡಲ್ಪಟ್ಟವುಗಳು.

ಜರ್ಮನಿಯವರು ಕ್ರಿ. ಶ. ೧೮೭೦ನೆಯ ಇಸ್ವಿಯ ಮುಂಚೆ ಪರದೇಶಗಳಿಂದ ವರ್ಷಕ್ಕೆ ಹತ್ತು ಲಕ್ಷ ಪೌಂಡುಗಳ ನೀಲಿಯನ್ನು ತರಿಸುತ್ತಿದ್ದರು. ಡಾ. ಬೇಯರ್ ಎಂಬ ಜರ್ಮನ್ ಶಾಸ್ತ್ರಜ್ಞರು ಕೃತ್ರಿಮ ರೀತಿಯಿಂದ ನೀಲಿಮಾಡುವುದನ್ನು ಕಂಡುಹಿದಿದ ಮೇಲೆ ಜರ್ಮನಿಯೇ ಪ್ರತಿವರ್ಷ ೩೦ ಲಕ್ಷ ಪೌಂಡುಗಳ ನೀಲಿಯನ್ನು ಪರದೇಶಗಳಿಗೆ ಕಳುಹಿಸಲಾರಂಭಿಸಿತು. ಈ ದೇಶದಲ್ಲಿ ಕ್ರಿ. ಶ. ೧೯೧೯ರಲ್ಲಿ ೧೫೦ ಬಣ್ಣದ ಕಾರ್ಯಾಲಯಗಳಿದ್ದವು. ಅವುಗಳಲ್ಲೆಲ್ಲಾ ೨ ಕೋಟಿ ಪೌಂಡು ಬಂಡವಾಳವು ಇದ್ದಿತು. ಆ ವರ್ಷ ಈ ಕಾರ್ಯಾಲಯಗಳಿಗೆ ನೂರಕ್ಕೆ ೨೦ ರಂತೆ ಲಾಭ ಬಂದಿತು. ಜರ್ಮನಿಯು ಬಣ್ಣಕ್ಕೆ ಬೇಕಾಗುವ ೬೦ ಲಕ್ಷ ಪೌಂಡುಗಳ ಬೆಲೆಯ ಪದಾರ್ಥಗಳನ್ನು ಪ್ರತಿವರ್ಷವೂ ಪರದೇಶಗಳಿಗೆ ಕಳುಹಿಸುತ್ತಾ ಇದೆ.

ಪೋಟ್ಯಾಷ್ ಎಂಬ ಒಂದು ವಿಧವಾದ ಕ್ಷಾರ ಪದಾರ್ಥವನ್ನು ಜಗತ್ತಿಗೆಲ್ಲಾ ಜರ್ಮನಿಯು ಕಳುಹಿಸುತ್ತದೆ. ಈ ಪೋಟ್ಯಾಷ್ ವಿಕ್ರಯದಿಂದ ವರ್ಷ ಪ್ರಾಪ್ತಿ ಅರವತ್ತು ಲಕ್ಷ ಪೌಂಡುಗಳು ಜರ್ಮನಿಗೆ ದೊರೆಯುತ್ತದೆ. ಈ ದೇಶದವರು ಪ್ರತಿವರ್ಷ ೮೦ ಲಕ್ಷ ಪೌಂಡುಗಳ ವಿದ್ಯುಚ್ಛಕ್ತಿಯ ಪದಾರ್ಥಗಳನ್ನು ಪರದೇಶಗಳಿಗೆ ಕಳುಹಿಸುತ್ತಾರೆ. ಈ ವಿದ್ಯುಚ್ಛಕ್ತಿಯ ಕಾರ್ಯಾಲಯಗಳಲ್ಲಿ ಒಂದು ಕಾರ್ಯಾಲಯದ ಶಿಲ್ಕು ೬ ಕೋಟಿ ರೂಪಾಯಿಗಳಿವೆ ನೂಲು. ಬಟ್ಟೆ, ರೇಶ್ಮೆ, ಗಾಜು, ಕಾಗದ, ಸಕ್ಕರೆ ಮತ್ತು ರಸಾಯನ ಪದಾರ್ಥ ಮೊದಲಾದವುಗಳ ಕಾರ್ಯಾಲಯಗಳೂ ಈ ದೇಶದಲ್ಲಿ ವಿಶೇಷವಾಗಿದೆ.

ಜರ್ಮನಿಯ ಎಲ್ಲಾ ಕೈಗಾರಿಕೆಗಳೂ ಈ ಪ್ರಕಾರ ಘನವಾದ ಯಂತ್ರಗಳ ಸಹಾಯದಿಂದಲೇ ನಡೆಯುತ್ತವೆಂದು ಯೋಚಿಸಬಾರದು. ಚಿಕ್ಕ ಚಿಕ್ಕ ಕೈಕಸಬುಗಳಿಂದಲೂ ಬಹುಜನಗಳು ಜೀವಿಸುತ್ತಿದ್ದಾರೆ. ಮೂರು ನಾಲ್ಕು ಜನ ಕೂಲಿಯವರನ್ನಿಟ್ಟುಕೊಂಡು ಕೈ ಮಗ್ಗಗಳಿಂದ ಬಟ್ಟೆಗಳನ್ನು ಮಾಡಿ ಸಾಧಾರಣ ೨೫ ಲಕ್ಷ ಜನಗಳು ಆ ದೇಶದಲ್ಲಿ ಜೀವಿಸುತ್ತಿದ್ಧಾರೆ. ಚಾಕು, ಕತ್ತರಿ, ಟೊಪ್ಪಿಗೆ, ಗಡಿಯಾರ ಮತ್ತು ಆಟದ ಗೊಂಬೆಗಳೇ ಮೊದಲಾದ ಕೈಕಸಬುಗಳು ಹಳ್ಳಿಗಳಲ್ಲಿ ವಿಶೇಷವಾಗಿ ನಡೆಯುತ್ತಲಿವೆ. ಈ ಕಸಬುಗಳೇ ಆ ಜನಗಳ ಜೀವನೋಪಾಯಗಳಾಗಿರುವುದರಿಂದ ಸರಕಾರದವರು ಅವರಿಗೆ ದ್ರವ್ಯದಿಂದಲೂ ಅನೇಕ ಸೌಲಭ್ಯಗಳಿಂದಲೂ ಪ್ರೋತ್ಸಾಹಿಸುತ್ತಿದ್ಧಾರೆ.

ಕೈಗಾರಿಕೆಗೆ ಕೂಲಿಕಾರರೇ ಪ್ರಾಣಸ್ವರೂಪಿಗಳಾಗಿರುವುದರಿಂದ ಜರ್ಮನಿಯ ಕೂಲಿಕಾರರ ಸ್ಥಿತಿಯನ್ನು ತಿಳಿದುಕೊಳ್ಳುವುದು ಅವಶ್ಯಕವು. ಕೂಲಿಕಾರನು ತಮ್ಮ ಪ್ರಯೋಜನಕ್ಕಾಗಿ ಕೆಲಸಕ್ಕೆ ಹೋಗದೆ ಮುಷ್ಕರ ಹಿಡಿಯುವದು ಜರ್ಮನಿಯಲ್ಲಿ ಅಪರಾಧವಾಗಿ ಪರಿಣಮಿಸುವುದಿಲ್ಲ. ಮತ್ತು ಕೆಲಸಗಾರರನ್ನು ಅಧೀನದಲ್ಲಿಟ್ಟುಕೊಳ್ಳಲು ಕಾರ್ಯಾಲಯದವರು ತಮ್ಮ ಕಾರ್ಯಾಲಯಗಳನ್ನು ನಿಲ್ಲಿಸುವುದೂ ಅನ್ಯಾಯವಾಗುವುದಿಲ್ಲ. ಕೂಲಿಕಾರರ ಹಿತಕ್ಕಾಗಿ ಅನೇಕ ಸಂಘಗಳಿರುವಂತೆ ಕಾರ್ಯಾಲಯದವರೂ ತಮ್ಮ ಪ್ರಯೋಜನಕ್ಕಾಗಿ ಸಂಘಗಳನ್ನು ಏರ್ಪಡಿಸಿಕೊಂಡಿದ್ದಾರೆ. ಕೂಲಿಕಾರರಿಗೂ, ಕಾರ್ಯಾಲಯದವರಿಗೂ ಕಲಹವುಂಟಾದರೆ ಅದನ್ನು ನಿವಾರಣೆಮಾಡಲು ಇಪ್ಪತ್ತು ಸಹಸ್ರಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಪಟ್ಟಣಗಳಲ್ಲೆಲ್ಲಾ "ಇಂಡಸ್ಟ್ರೀಯಲ್ ಕೋರ್ಟ" ಎಂಬ ನ್ಯಾಯಸ್ಥಾನವನ್ನು ಸರಕಾರದವರು ಸ್ಥಾಪಿಸಿದ್ಧಾರೆ.

ಕೂಲಿಕಾರರ ಸುಖಕ್ಕಾಗಿ ಮುಖ್ಯ ಮೂರು ವಿಧವಾದ ಸಂಘಗಳು ಆ ದೇಶದಲ್ಲಿವೆ. ಅವುಗಳಲ್ಲೆಲ್ಲಾ ಸೋಷೆಲ್ ಡೆಮಾಕ್ರಟಿಕ್ ಎಂಬ ಸಂಘವೇ ಮುಖ್ಯವಾದದು. ಈ ಸಂಘಕ್ಕೆ ಕ್ರಿ. ಶ. ೧೮೯೦ರಲ್ಲಿ ೨॥ ಲಕ್ಷ ಕೂಲಿಕಾರರು ಸೇರಿದ್ದರು. ಈ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತ ಕ್ರಿ. ಶ. ೧೯೧೬ರಲ್ಲಿ ೧೭ ಲಕ್ಷಕ್ಕೆ ಬಂದಿತ್ತು. ಇದರಿಂದ ಈ ಸಂಘವು ಎಷ್ಟು ಪ್ರಬಲವಾಗಿ ಪ್ರಸಾರವಾಗುತ್ತಿದೆಯೆಂಬುವದು ಗೊತ್ತಾಗುತ್ತದೆ. ಆ ೧೭ ಲಕ್ಷ ಜನಗಳಲ್ಲಿ ೧ ಲಕ್ಷ ಸ್ತ್ರೀಯರಿದ್ಧಾರೆ. ಈ ಸಂಘದ ಪ್ರಯತ್ನದಿಂದಲೇ ಕೂಲಿಕಾರರ ಕೂಲಿಯು ಹೆಚ್ಚಿದೆಯಲ್ಲದೆ ಕೆಲಸ ಮಾಡುವ ಕಾಲವು ಕಡಿಮೆಯಾಗಿ ಅನೇಕ ಸೌಲಭ್ಯಗಳುಂಟಾಗಿವೆ.

ಈ ಸಂಘದವರು ತಮ್ಮ ಮತಪ್ರಸಾರಣೆಗಾಗಿಯೂ, ಕಷ್ಟ ನಿವಾರಣೆಗಾಗಿಯೂ, ಅನೇಕ ಪತ್ರಿಕೆಗಳ ಮೂಲಕ ಪ್ರಯತ್ನಿಸುತ್ತಿದ್ದಾರೆ. ಈ ಸಂಘದಿಂದ ದೈನಿಕಪತ್ರಿಕೆಗಳೇ ೬೮ ಪ್ರಕಟವಾಗುತ್ತವೆ.

ಈ ಒಂದೊಂದು ಪತ್ರಿಕೆಗಳ ಚಂದಾದಾರರಾದರೋ ಲಕ್ಷಾಂತರ ಜನಗಳಿದ್ದಾರೆ. ಈ ಸಂಘಕ್ಕೆ ಸೇರಿದ ಕೂಲಿಕಾರನು ಪ್ರತಿವಾರ ತನ್ನ ಆದಾಯದಲ್ಲಿ ೧೦೦ಕ್ಕೆ ೬ರಂತೆ ಈ ಸಂಘಕ್ಕೆ ಚಂದಾ ಹಣವನ್ನು ಕೊಡಬೇಕಾಗುತ್ತದೆ. ಕೂಲಿಕಾರರಿಗೆ ಪ್ರತಿನಿತ್ಯ ಸಾಧಾರಣ ೧॥ ರೂಪಾಯಿ ಕೂಲಿ ದೊರೆಯುತ್ತದೆ.

ಕೂಲಿಕಾರರಿಗಾಗಿ ರಾತ್ರೆಪಾಠಶಾಲೆಗಳೂ ಪುಸ್ತಕ ಭಂಡಾರಗಳೂ ಸಂಗೀತಶಾಲೆಗಳೂ ನಾಟಕಗಳೂ ಜರ್ಮನಿಯಲ್ಲಿ ಏರ್ಪಟಿಸಲ್ಪಟ್ಟಿವೆ. ಪ್ರತಿಯೊಂದು ಕಾರ್ಯಾಲಯದಲ್ಲಿಯೂ, ಕೂಲಿಕಾರರಿಗಾಗಿ ಸ್ನಾನದ ಮನೆಗಳಿರುತ್ತವೆ. ಕೆಲಸವು ಪೂರೈಸಿದನಂತರ ಅಲ್ಲಿ ಸ್ನಾನವನ್ನು ಮಾಡಿಕೊಂಡು ಹೋಗಲೇಬೇಕೆಂಬ ನಿಯಮವಿದೆ. ಕೆಲಸಕ್ಕೆ ಬಂದೊಡನೆ ತಮ್ಮ ತಮ್ಮ ಬಟ್ಟೆಗಳನ್ನಿಟ್ಟುಕೊಳ್ಳಲು ಕೂಲಿಕಾರರಿಗಲ್ಲಾ ಪೆಟ್ಟಿಗೆಗಳನ್ನು ಕಾರ್ಯಾಲಯದವರೇ ಕೊಡುತ್ತಾರೆ. ಮತ್ತು ಕೆಲಸ ಮಾಡುವಾಗ ಉಪಯೋಗಿಸತಕ್ಕ ಉಡುಪನ್ನೂ ಕಾರ್ಯಾಲಯದವರು ಕೊಡುತ್ತಾರೆ. ಕಾರ್ಯಾಲಯಗಳಲ್ಲಿ ಗಾಯಹೊಂದಿದವರಿಗೆ ತಮ್ಮ ವೆಚ್ಚದಿಂದಲೇ ಔಷಧೋಪಚಾರಗಳನ್ನು ಮಾಡಿಸುವುದಲ್ಲದೆ ಅವರ ಜೀವವಿಮೇಯ ವಿಷಯದಲ್ಲಿಯೂ ಅನೇಕ ಏರ್ಪಾಟುಗಳನ್ನು ಮಾಡಿರುತ್ತಾರೆ.

ಈ ಪ್ರಕಾರ ಜರ್ಮನಿ ಕೈಗಾರಿಕೆಯ ಕೂಲಿಕಾರರು ಸುಖದಿಂದ್ದಾರೆ. ಆದರೆ ಬೀರ್ ಎಂಬ ಮಧ್ಯವನ್ನು ಅಲ್ಲಿನ ಕೂಲಿಕಾರರು ಬಹು ಹೆಚ್ಚಾಗಿ ಕುಡಿಯುತ್ತಿದ್ಧಾರೆ. ಅದನ್ನು ತಪ್ಪಿಸಬೇಕೆಂದು ಈ ಸಂಘದವರು ಬಹಳವಾಗಿ ಪ್ರಯತ್ನಿಸುತ್ತಿದ್ದಾರೆ. ಈ ದೇಶದ ಕೂಲಿಕಾರರು ಪ್ರತಿನಿತ್ಯ ೧೦ ತಾಸು ಕೆಲಸ ಮಾಡಬೇಕಾಗುತ್ತದೆ. ಭಾನುವಾರ ಪೂರ್ಣ ವಿಶ್ರಾಂತಿ ದೊರೆಯುತ್ತದೆ. ಕಾರ್ಯಾಲಯದವರೂ ಸಂಘವನ್ನು ಮಾಡಿಕೊಂಡು ಈ ಡೆಮಾಕ್ರಟಿಕ್-ಸಂಘಕ್ಕೆ ಸೇರಿದ ಕೂಲಿಕಾರರು ತಮ್ಮ ಕಾರ್ಯಾಲಯದಲ್ಲಿ ಹೆಚ್ಚದಂತೆ ಎಚ್ಚರದಿಂದಿರುತ್ತಾರೆ. ಒಟ್ಟಿಗೆ ಈ ದೇಶದ ಕೈಗಾರಿಕೆಯ ಕೂಲಿಕಾರರು ಒಳ್ಳೆಯ ಸ್ಥಿತಿಯಲ್ಲಿರುತ್ತಾರೆ.

❖❖

೫ನೆಯ ಪ್ರಕರಣ

ಒಕ್ಕಲುತನ

ಕೈಗಾರಿಕೆಯು ಜರ್ಮನಿಯಲ್ಲಿ ಎಷ್ಟು ಅಭಿವೃದ್ಧಿ ಸ್ಥಿತಿಯಲ್ಲಿದೆಯೋ ಅಷ್ಟು ಒಕ್ಕಲುತನವು ಕಡಿಮೆ ತರಹದಲ್ಲಿದೆ. ಹೆದಿನೆಂಟನೆಯ ಶತಮಾನದ ಆದಿಯಲ್ಲಿ ೧೦೦ಕ್ಕೆ ೮೦ ಜನಗಳು ಒಕ್ಕಲತನದಿಂದ ಜೀವಿಸುತ್ತಿದ್ದರು. ಆದರೆ ಕ್ರಿ. ಶ. ೧೯೦೫ರಲ್ಲಿ ೧೦೦ಕ್ಕೆ ೩೦ ಜನಗಳು ಮಾತ್ರ ಒಕ್ಕಲುತನದಿಂದ ಜೀವಿಸುತ್ತಿದ್ದರು. ಕೈಗಾರಿಕೆ ಮತ್ತು ವ್ಯಾಪಾರಗಳ ಕಡೆಗೆ ಆ ದೇಶದ ಜನಗಳು ಎಷ್ಟು ವಿಶೇಷವಾಗಿ ಗಮನಿಸಲುಪಕ್ರಮಿಸಿದ್ದಾರೆಂಬುದು ಇದರಿಂದ ಗೊತ್ತಾಗುತ್ತದೆ. ಒಂದು ಕೋಟಿ ೭೦ ಲಕ್ಷ ಜನಗಳು ಕ್ರಿ. ಶ. ೧೯೦೫ರಲ್ಲಿ ೮ ಕೋಟಿ ಎಕರೆ ಸಾಗುವಳಿಯನ್ನು ಮಾಡಿಕೊಂಡು ಜೀವಿಸುತ್ತಿದ್ದರು.

ಒಕ್ಕಲತನಕ್ಕೆ ಬೇಕಾಗುವ ಕೆಲಸಗಾರರ ಕೊರತೆಯೇ ಅಲ್ಲಿನ ವ್ಯವಸಾಯದ ಹೀನಸ್ಥಿತಿಗೆ ಒಂದು ಮುಖ್ಯ ಕಾರಣವಾಗಿದೆ. ಕೈಗಾರಿಕೆಯ ಕೂಲಿಕಾರರಗಿರುವಷ್ಟು ಸುಖಸೌಲಭ್ಯಗಳು ಒಕ್ಕಲುತನದ ಕೆಲಸಗಾರರಿಗಿರುವುದಿಲ್ಲ. ಆದುದರಿಂದ ಗ್ರಾಮಗಳಲ್ಲಿ ವಾಸಿಸುವ ಜನಗಳು ಪಟ್ಟಣಗಳಿಗೆ ಹೋಗಿ ಕೂಲಿ ಮಾಡುತ್ತಾರೆ. ಹದಿನೆಂಟನೆಯ ಶತಮಾನದ ಕೊನೆಯವರೆಗೂ ಕೆಲಸಗಾರರನ್ನು ಜರ್ಮನಿಯಲ್ಲಿ ಸೆರೆಯಾಳಿನಂತೆ ಕಾಣುತ್ತಿದ್ದರು. ಈ ಅನ್ಯಾಯವು ೧೯ನೆಯ ಶತಮಾನದ ಆದಿಯಲ್ಲಿ ೩ನೆಯ ಫ್ರೆಡರಿಕ್ ರಾಜನು ನಿವಾರಣೆಮಾಡಿ ವ್ಯಕ್ತಿಸ್ವಾತಂತ್ರ್ಯವನ್ನುಂಟುಮಾಡಿದನು. ಆಗ, ಧನಿಕರೆಲ್ಲಾ ಈ ಶಾಸನಕ್ಕೆ ವಿರೋಧವಾಗಿ ಗಲಭೆಮಾಡಲು ಅವರ ದಾಕ್ಷಿಣ್ಯಕ್ಕೊಳಗಾಗಿ ಮನೆಗೆಲಸ ಮಾಡುವ ಕೆಲಸಗಾರರಿಗೆ ಈ ಹೊಸ ಶಾಸನವು ಸಂಬಂಧವಿಲ್ಲವೆಂತಲೂ, ಹಿಂದಣ ಶಾಸನದಂತೆಯೇ ಅವರು ಯಜಮಾನನ ಅಧೀನದಲ್ಲಿರಬೇಕೆಂತಲೂ, ಫ್ರೆಡರಿಕ್ ರಾಜನು ಅಪ್ಪಣೆ ಮಾಡಿದನು.

ಈ ಕೆಲಸಗಾರರು ಯಜಮಾನನ ಇಷ್ಟಾನುಸಾರ ಇರಬೇಕಾಗುತ್ತದೆ. ಯಜಮಾನನ ಅಪ್ಪಣೆಯಿಲ್ಲದೆ ಅವರಿಂದ ಬಿಡುಗಡೆಯಾಗಲು ಕೆಲಸಗಾರರಿಗೆ ಅಧಿಕಾರವಿಲ್ಲ. ಯಜಮಾನನಿಗೆ ವಿರೋಧವಾಗಿ ನಡೆದ ಕೆಲಸಗಾರನು ೧೫ ಶಿಲಿಂಗ್ ದಂಡ ಅಥವಾ ೩ ದಿವಸ ಶಿಕ್ಷೆಯನ್ನು ಹೊಂದಬೇಕಾಗುತ್ತದೆ. ಯಜಮಾನನು ತನ್ನ ಇಷ್ಟ ಬಂದಾಗ ಕೆಲಸಗಾರರನ್ನು ಬಿಡಬಹುದು. ಆದರೆ ಕೆಲಸಗಾರನಿಗೆ ಮಾತ್ರ ಈ ಅಧಿಕಾರವಿಲ್ಲ. ಬಲಾತ್ಕಾರದಿಂದಲಾದರೂ ಯಜಮಾನನು ಕೆಲಸಗಾರರನ್ನು ಕೆಲಸಕ್ಕೆ ಹಚ್ಚಬಹುದು ಈ ಉಭಯದಲ್ಲಿ ಕಲಹವುಂಟಾದರೆ ಯಜಮಾನನಂತೆ

ಮರ್ಯಾನವಾಗುವದೇ ವಿಶೇಷ. ಈ ನಾಗರೀಕ ದೇಶದಲ್ಲಿ ಇಂತಹ ಅನ್ಯಾಯ ನಡೆಯುತ್ತಿರುವುದು ಯಾರಿಗೆ ತಾನೇ ಆಶ್ಚರ್ಯವನ್ನುಂಟುಮಾಡಲಾರದು? ಒಬ್ಬ ಮನುಷ್ಯನು ಕೈಗಾರಿಕೆಯ ಕೂಲಿಕಾರನಾದರೆ ಅವನಿಗೆ ಎಷ್ಟೋ ಸೌಲಭ್ಯಗಳುಂಟಾಗುತ್ತವೆ. ಆದರೆ ಯಾವುದೇ ಮನುಷ್ಯನು ಮನೆಯ ಕೆಲಸಗಾರನಾದರೆ ಸೆರೆಯಾಳಾಗಿ ಜೀವಿಸಬೇಕಾಗುತ್ತದೆ. ಒಕ್ಕುಲತದ ಕೆಲಸಗಾರರನ್ನೂ ಮನೆಗೆಲಸದ ಕೆಲಸಗಾರರಂತೆಯೇ ತಿಳಿಯುತ್ತಿರುವುದರಿಂದ ಒಕ್ಕಲುತನದ ಕೆಲಸಕ್ಕೆ ಕೂಲಿಕಾರರು ದೊರೆಯುವದೇ ಬಹು ಕಡಿಮೆ.

ಒಕ್ಕಲುತನದ ಕೆಲಸಗಾರರು ಜರ್ಮನಿಯಲ್ಲಿ ಕಡಿಮೆಯಿರುವುದರಿಂದ ಸುಗ್ಗಿಯ ಕಾಲದಲ್ಲಿ ಗ್ಯಾಲಿಪಿಯಾ ದೇಶದಿಂದ ಜರ್ಮನಿಗೆ ಬಹುಜನಗಳು ಕೂಲಿಗಾಗಿ ಬರುತ್ತಾರೆ. ಸುಗ್ಗಿಯು ಪೂರೈಸಿದೊಡನೆ ಅವರು ತಮ್ಮ ದೇಶಕ್ಕೆ ಹೋಗಬೇಕಾಗುತ್ತದೆ. ಏಕೆಂದರೆ ಪರದೇಶದವರಿಗೆ ಆ ದೇಶದಲ್ಲಿ ವಾಸವಾಗಿರಲು ಅಧಿಕಾರವಿಲ್ಲ. ಈ ಕೂಲಿಕಾರರಲ್ಲಿ ಗಂಡಸರಿಗೆ ೧॥ ರೂ. ವರೆಗೂ. ದಿನಗೂಲಿ ದೊರೆಯುತ್ತದೆ. ಜರ್ಮನ್‌ದೇಶದ ಹೆಣ್ಣಾಳುಗಳು ಒಕ್ಕಲತನದ ಕೆಲಸಕ್ಕೆ ಹೋದರೆ ವರ್ಷಕ್ಕೆ ೬೦೦-೭೦೦ರೂ. ಸಂಬಳ ದೊರೆಯುತ್ತದೆ. ಪ್ರತಿವರ್ಷ ೭ ಲಕ್ಷ ಕೂಲಿಕಾರರು ಪರದೇಶಗಳಿಂದ ಜರ್ಮನಿಗೆ ಬರುತ್ತಾರೆ. ಅವರಲ್ಲಿ ೧೦೦ಕ್ಕೆ ೬೦ಜನಗಳು ಕೇವಲ ಒಕ್ಕಲುತನದ ಕೆಲಸಕ್ಕಾಗಿಯೇ ಸೇರುತ್ತಾರೆ.

ರಾಯ್ ಎಂಬುದೇ ಜರ್ಮನಿಯ ಮುಖ್ಯವಾದ ಆಹಾರ ಧಾನ್ಯವು. ಆ ದೇಶಕ್ಕೆ ಬೇಕಾಗುವಷ್ಟು ಆಹಾರಪದಾರ್ಥಗಳು ಕೂಡಾ ಅಲ್ಲಿ ಹುಟ್ಟದಿರುವುದನ್ನು ನೋಡಿ ಕೌಂಟಕ್ಯಾಪ್ರಿವಿಲ್ ಎಂಬುವವನು ಯುದ್ಧದಲ್ಲಿ ನಮಗೆ ಅಪಜಯವಾಗಲು ಇದೊಂದು ಮುಖ್ಯಕಾರಣವಾಗಿ ಪರಿಣಮಿಸುವುದೆಂದು ಕ್ರಿ. ಶ. ೧೮೯೧ರಲ್ಲಿ ಹೇಳಿದ್ದನು. ಇತ್ತೀಚೆಗೆ ಒಕ್ಕಲುತನದ ವಿಷಯದಲ್ಲಿ ಹೆಚ್ಚು ಗಮನಿಸಿದ್ದಾರೆ. ಭೂಮಿಯನ್ನು ೨೫ರಿಂದ ೫೦ ಎಕರೆಗಳೊಳಗಾಗಿ ಒಂದೊಂದು ಚಿಕ್ಕ ಚಿಕ್ಕ ಭಾಗಗಳನ್ನು ಮಾಡಬೇಕೆಂದು ಯೋಚಿಸಿ ಕ್ರಿ. ಶ. ೧೯೦೫ರಲ್ಲಿ ಪ್ರಯತ್ನಿಸಿದರು. ಅದರಿಂದ ಅಷ್ಟು ಪ್ರಯೋಜನವಾಗಲಿಲ್ಲ. ಯಂತ್ರಾಧಿಗಳಿಂದಲೂ, ಒಕ್ಕಲುತನದ ಬ್ಯಾಂಕುಗಳನ್ನು ಸ್ಥಾಪಿಸಿ ಅವುಗಳ ಸಹಾಯದಿಂದಲೂ, ವ್ಯವಸಾಯವನ್ನು ಅಭಿವೃದ್ಧಿಗೆ ತರಲು ಪ್ರಯತ್ನಿಸುತ್ತಿದ್ದಾರೆ. ಈ ದೇಶಕ್ಕೆ ಬರುವ ಧಾನ್ಯಗಳಿಗೆ ಸುಂಕವನ್ನು ಕಡಿಮೆಯಾಗಿಯೂ, ಈ ದೇಶದಿಂದ ಹೋಗತಕ್ಕ ಧಾನ್ಯಗಳಿಗೆ ಸುಂಕವನ್ನು ಹೆಚ್ಚಾಗಿಯೂ ಹಾಕಿ ಒಕ್ಕಲುತನಕ್ಕೆ ಪ್ರೋತ್ಸಾಹಿಸುತ್ತಿದ್ಧಾರೆ. ಕ್ರಿ. ಶ. ೧೯೧೧ರಲ್ಲಿ ಒಕ್ಕಲುತನಕ್ಕೆ ಸಹಾಯಮಾಡತಕ್ಕ ಪರಸ್ಪರ ಸಹಾಯಕ ಸಂಘಗಳು ೨೫ ಸಾವಿರ ಇದ್ದವು. ಅವುಗಳಲ್ಲೆಲ್ಲಾ ೪೦ ಲಕ್ಷ ಜನಗಳ ಹಣವಿದ್ದಿತು. ಒಕ್ಕಲುತನದಿಂದ ವರ್ಷಕ್ಕೆ ೩೫-೪೦ ಕೋಟಿ ಪೌಂಡು ಆದಾಯವಿದೆ. ಒಟ್ಟಾಗಿ ನೋಡಿದರೆ ಜರ್ಮನಯ ಒಕ್ಕಲುತನವು ಹೀನಸ್ಥಿತಿಯಲ್ಲಿದೆಯೆಂದು ಗೊತ್ತಾಗುತ್ತದೆ. ಕೈಗಾರಿಕೆ, ವ್ಯಾಪಾರಗಳ ಕಡೆಗೆ ಹೆಚ್ಚಾಗಿ ಗಮನಿಸಿರುವುದೇ ಈ ದುಸ್ಥಿತಿಗೆ ಮುಖ್ಯ ಕಾರಣವು.

❖❖

೬ನೆಯ ಪ್ರಕರಣ

ವ್ಯಾಪಾರ

ಕಳೆದ ಒಂದು ಶತಮಾನದ ಹಿಂದೆ ಭೌತಿಕವಿದ್ಯೆಗಳಲ್ಲಿ ಜರ್ಮನಿಯು ಬಹಳ ಹಿಂದಿದ್ದಿತು. ಇದನ್ನು ನೋಡಿ ಇಂಗ್ಲಿಷರು ಆ ದೇಶಕ್ಕೆ ಹೋಗಿ ಅನೇಕ ಯಾಂತ್ರಿಕ ಶಕ್ತಿಗಳಿಂದ ಅಲ್ಲಿ ಎಷ್ಟೋ ಮಹತ್ಕಾರ್ಯಗಳನ್ನು ಮಾಡುತ್ತಿದ್ದರು. ಜರ್ಮನ್ ಜನಗಳ ಗುಣ, ಸ್ವಭಾವ, ಚಾತುರ್ಯಗಳನ್ನು ತಿಳಿದ ರಿಚರ್ಡ ಕಾಬ್‌ಡೆನ್ ಎಂಬ ವಿದ್ವಾಂಸರು ತಾರೀಖು ೧೩-೧೨-೧೮೩೮ನೆಯ ದಿವಸ ಮ್ಯಾಂಚಸ್ಟರ್ ಪಟ್ಟಣದ ಚೆಂಬರ್ ಆಫ್ ಕಾಮರ್ಸ ಎಂಬ ವ್ಯಾಪಾರ ಸಂಘದಲ್ಲಿ ಉಪನ್ಯಾಸ ಮಾಡಿದಾಗ ಹೇಳಿದ್ದೇನೆಂದರೆ "ಇಂಗ್ಲೀಷರು ಜರ್ಮನಿಗೆ ಹೋಗಿ ಅಲ್ಲಿ ಯಂತ್ರಾದಿಗಳ ಅನೇಕ ಸಾಹಸದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅವುಗಳನ್ನೆಲ್ಲಾ ಅಲ್ಲಿನ ಜನಗಳು ಕಲಿತರೆ ಅವರು ಇಂಗ್ಲೀಷರ ಬೆರಳನ್ನು ಇಂಗ್ಲಿಷರ ಕಣ್ಣಿನಲ್ಲಿಯೇ ಚುಚ್ಚದೆ ಬಿಡಲಾರರು."

ಎಂಬತ್ತು ವರ್ಷಗಳ ಮುಂಚೆ ರಿಚರ್ಡ ಕಾಬ್‌ಡೆನ್‌ರವರು ಹೇಳಿದ ಭವಿಷ್ಯವನ್ನು ಜರ್ಮನಿಯು ಪ್ರಕೃತದ ಯುದ್ಧದಿಂದ ನಿಜಗೊಳಿಸಿತಷ್ಟೆ. ಯಾವ ಕಾರ್ಯದಲ್ಲಿ ಪ್ರವೇಶಿಸಿದರೂ ಅದೊಂದರಲ್ಲಿಯೇ ಮಗ್ನರಾಗಿ ಅತ್ಯಾಧಿಕ ಸ್ಥಿತಿಯನ್ನು ಹೊಂದುವುದು ಜರ್ಮನ್ ಜನಗಳ ಸ್ವಭಾವವು ಈಗ ಸಂಪದಭಿವೃದ್ಧಿಯ ವಿನಾ ಇನ್ನಾವ ಕಡೆಗೂ ಆ ಜನಗಳು ಗಮನಿಸುವುದಿಲ್ಲ. ಮತ್ತು ಸಂಪದಭಿವೃದ್ಧಿಗೆ ವ್ಯಾಪಾರವೇ ಮುಖ್ಯ ಸಾಧನವೆಂಬುದನ್ನು ದೃಢವಾಗಿ ನಂಬಿದ್ದಾರೆ. ಆದುದರಿಂದ ವ್ಯಾಪಾರವೃದ್ಧಿಯ ವಿಷಯದಲ್ಲಿಯೇ ಬಹು ಆಸಕ್ತರಾಗಿದ್ದಾರೆ.

ಜರ್ಮನಿಗೆ ಕ್ರಿ. ಶ. ೧೮೬೦ರಲ್ಲಿ ೫,೪೭,೫೦,೦೦೦ ಪೌಂಡುಗಳ ಪಧಾರ್ಥಗಳು ಬಂದಿದ್ದವು. ಮತ್ತು ಅದೇ ವರ್ಷ ಜರ್ಮನಿಯಿಂದ ೭೦,೦೦,೦೦೦ ಪೌಂಡುಗಳ ಪದಾರ್ಥಗಳು ಪರದೇಶಗಳಿಗೆ ಹೋಗಿದ್ದವು. ಆದರೆ ಕ್ರಿ. ಶ. ೧೯೧೩ರಲ್ಲಿ ಜರ್ಮನಿಗೆ ೫೨,೫೮,೦೦,೦೦೦ ಪೌಂಡುಗಳ ಪದಾರ್ಥಗಳು ಪರದೇಶಗಳೀಗೆ ಹೋಗಿದ್ದವು. ಜರ್ಮನಿಯಲ್ಲಿ ಕಚ್ಚಾ ಪದಾರ್ಥಗಳ ಕೊರತೆಯಿರುವುದರಿಂದ ಈ ಪ್ರಕಾರ ಹೆಚ್ಚು ದ್ರವ್ಯದ ಪದಾರ್ಥಗಳನ್ನು ಅನ್ಯದೇಶಗಳಿಂದ ತರಿಸಿಕೊಳ್ಳಬೇಕಾಗುತ್ತದೆ. ಕೇವಲ ೫೩, ವರ್ಷಗಳಲ್ಲಿ ಮುಂಚೆಗಿಂತ ೮೧೦ ಪಟ್ಟು ವ್ಯಾಪಾವರು ಹೆಚ್ಚಲು ಆ ದೇಶದ ಜನಗಳ ಸಹಸ ಮತ್ತು ಸರಕಾರದವರ ಸಹಾಯಗಳೇ ಮುಖ್ಯ ಕಾರಣಗಳಾಗಿವೆ.

ಜರ್ಮನಿಯ ಪದಾರ್ಥಗಳು ಕಡಿಮೆ ವೆಚ್ಚದಲ್ಲಿ ಸಿದ್ಧವಾಗುತ್ತಿರುವುದು. ಅಲ್ಲಿನ ವರ್ತಕರು ಕಾಲಾನುಗುಣವಾಗಿ ವರ್ತಿಸುತ್ತಿರುವುದು. ಮತ್ತು ಗಿರಾಕಿಗಳ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಳ್ಳುವುದು ಜರ್ಮನಿಯ ವ್ಯಾಪಾರವೃದ್ಧಿಗೆ ಬಹು ಅನುಕೂಲವಾಗಿದೆ. ವ್ಯಾಪಾರವು ಒಂದು ಶಾಸ್ತ್ರವೆಂದು ತಿಳಿದು ಅಲ್ಲಿನ ವರ್ತಕರು ಅದನ್ನು ಚೆನ್ನಾಗಿ ಕಲಿಯುತ್ತಾರೆಯೇ ವಿನ ತಮ್ಮ ಜೀವನೋಪಾಯಕ್ಕಾಗಿ ಹಿಂದಿನವರು ಗೊತ್ತುಪಡಿಸಿಟ್ಟ ಉದ್ಯೋಗವೆಂದು ತಿಳಿದು ಅದನ್ನು ಹೇಗಾದರೂ ನಡೆಯಿಸುತ್ತಿರುವುದಿಲ್ಲ. ಚೆಂಬರ್ ಆಫ್ ಕಾಮರ್ಸ ಎಂಬ ವ್ಯಾಪಾರ ಸಂಘಗಳು ಆ ದೇಶದ ಎಲ್ಲ ಪಟ್ಟಣಗಳಲ್ಲಿಯೂ ಇವೆ. ಸ್ವದೇಶ ಪರದೇಶಗಳ ವ್ಯಾಪಾರದ ವಿಷಯದಲ್ಲಿ ಈ ಸಂಘಗಳು ವರ್ತಕರಿಗೆ ಅನೇಕ ಸೌಲಭ್ಯಗಳನ್ನುಂಟು ಮಾಡಿಕೊಡುತ್ತಲಿವೆ.

ವ್ಯಾಪಾರವೃದ್ಧಿಗೆ ಭೂಮಾರ್ಗವನ್ನು ಜಲಮಾರ್ಗಗಳೂ ಹೆಚ್ಚುವುದು ಅವಶ್ಯಕವೆಂದು ಯೋಚಿಸಿ ಜರ್ಮನ್ ಸರಕಾರದವರು ಈ ಕಾರ್ಯಗಳನ್ನು ತಾವೇ ವಹಿಸಿದ್ದಾರೆ. ಈ ದೇಶದ ಲೋಕಮಾರ್ಗಗಳೆಲ್ಲಾ ಪ್ರಾಯಶಃ ಸರಕಾರದ ಸ್ವಾಧಿನದಲ್ಲಿಯೇ ಇವೆ. ಸರಕಾರದ ಆಶ್ರಯದಿಂದಲೂ ಮೇಲ್ವಿಚಾರಣೆಯಿಂದಲೂ ಕ್ರಿ. ಶ. ೧೯೧೦ಶರಲ್ಲಿ ೩೧,೯೧೧ ಮೈಲಿ ಲೋಹ ಮಾರ್ಗಗಳ ಕೆಲಸವು ನಡೆದಿದ್ದಿತು. ಈ ಶಾಖೆಗೆ ೬೦ ಕೋಟಿ ಪೌಂಡು ಬಂಡವಾಳವನ್ನು ಹೂಡಿ, ೪,೪೮,೦೦,೦೦೦ ಪೌಂಡು ಲಾಭ ಬಂದಿತು. ಜನಗಳು ಸಂಘಮೂಲಕವಾಗಿ ೨೫೬೪ ಮೈಲಿ ಲೋಹಮಾರ್ಗವನ್ನು ಏರ್ಪಡಿಸಿದ್ದಾರೆ.

ದೊಡ್ಡ ದೊಡ್ಡ ನದಿಗಳಿಂದ ಕಾಲುವೆಗಳನ್ನು ತೆಗೆದು ವ್ಯಾಪಾರದ ಚಿಕ್ಕ ಚಿಕ್ಕ ಹಡಗುಗಳು ಹೋಗಿಬರಲು ಅವಕಾಶವನ್ನುಂಟುಮಾಡಿದ್ಧಾರೆ. ಕ್ರಿ. ಶ. ೧೮೭೪ರಲ್ಲಿ ಜಗತ್ತಿನಲ್ಲಿರುವ ವ್ಯಾಪಾರದ ಹಡಗುಗಳಲ್ಲಿ ೧೦೦ಕ್ಕೆ ೫ ಹಡಗುಗಳು ಜರ್ಮನ್ ದೇಶದವುಗಳಿದ್ದವು. ಆದರೆ ಕ್ರಿ. ಶ. ೧೯೧೦ಶರಲ್ಲಿ ಇದರ ಎರಡರಷ್ಟು ಹೆಚ್ಚಾದವು. ಈ ಪ್ರಕಾರ ಜರ್ಮನಿಯ ವ್ಯಾಪಾರಾಭಿವೃದ್ಧಿಗೆ ಅಲ್ಲಿನ ಸರಕಾರದವರು ಮತ್ತು ಪ್ರಜೆಗಳು ಅನೇಕ ವಿಧವಾಗಿ ಪ್ರಯತ್ನಿಸುತ್ತಿದ್ದಾರೆ.

❖❖

೭ನೆಯ ಪ್ರಕರಣ

ರಾಷ್ಟ್ರೀಯ ಸಾಮರ್ಥ್ಯ

ಜರ್ಮನಿ ದೇಶವು ೨೦ ಲಕ್ಷ ಸಹಸ್ರ ಚದುರುಮೈಲಿ ವಿಸ್ತಾರವುಳ್ಳದ್ದಾಗಿದೆ. ಈ ದೇಶದಲ್ಲಿ ೨೬ ಸಂಸ್ಥಾನಗಳಿವೆ. ಆ ಎಲ್ಲಾ ಸಂಸ್ಥಾನಗಳಿಗೂ ಪ್ರಶಿಯಾ ಸಂಸ್ಥಾನದ ರಾಜನೇ ಚಕ್ರವರ್ತಿಯು. ಈಗಿನ ಚಕ್ರವರ್ತಿಯಾದ ಕೈಸರನು ತನ್ನ ರಾಷ್ಟ್ರದ ಬೌದ್ಧಿಕ, ಮತ್ತು ಸಾಂಪತ್ತಿಕ ಉನ್ನತೆಗಾಗಿ ಪ್ರಯತ್ನಿಸುತ್ತಿರುವಂತೆ ದೇಶದ ಪ್ರಜಾಸಂಖ್ಯೆಯು ಹೆಚ್ಚುವುದಕ್ಕೂ ಪ್ರೋತ್ಸಾಹಿಸುತ್ತಿದ್ದಾನೆ. ಈ ಸಂಗತಿಯು ಕೆಲವು ವಾಚಕರಿಗೆ ಆಶ್ಚರ್ಯಕರವಾಗಿ ತೋರಬಹುದು. ಆದರೆ ಇದರಲ್ಲಿ ಅಂತಹ ಚಮತ್ಕಾರವೇನೂ ಇಲ್ಲ.

ಕ್ರಿ. ಶ. ೧೯೧೧ರಲ್ಲಿ ಜರ್ಮನಿಯಲ್ಲಿ ೬ ಕೋಟಿ ೮೦ ಲಕ್ಷ ಪ್ರಜಾಸಂಖ್ಯೆಯಿದ್ದಿತು. ಇದಕ್ಕೆ ೧೫ ವರ್ಷಗಳ ಹಿಂದೆ ನೂರಕ್ಕೆ ೫ ರಂತೆ ಜನಸಂಖ್ಯೆಯು ಹೆಚ್ಚಲು ಅಲ್ಲಿನ ಮರಣ ಸಂಖ್ಯೆಯನ್ನು ಪ್ರಯತ್ನ ಪೂರ್ವಕವಾಗಿ ಕಡಿಮೆಮಾಡಿಕೊಂಡಿರುವುದೇ ಮುಖ್ಯ ಕಾರಣವು. ಶಿಶುಗಳು ಸಾಯುವದಕ್ಕೂ ಬದುಕುವುದಕ್ಕೂ ದೈವವೇ ಕಾರಣವೆಂದು ಜರ್ಮನಿಯವರು ತಿಳಿಯುತ್ತಿದ್ದರು. ತಾಯಿ ತಂದೆಗಳು ನಿರೋಗಿಗಳಾಗಿರುವುದರಿಂದಲೂ, ಗರ್ಭಿಣಿಯು ಮಿತದಿಂದ ಆಹಾರವಿಹಾರಗಳಲ್ಲಿರುವುದರಿಂದಲೂ ಶಿಶುಗಳಿಗೆ ಮೊಲೆಹಾಲನ್ನೆ ಉಣಿಸಿ ಬಹು ಎಚ್ಚರಿಕೆಯಿಂದ ಸರಿಯಾಗಿ ಜೋಪಾನ ಮಾಡುವುದರಿಂದಲೂ ಶಿಶುಗಳು ಸಾಯುವುದು ಕಡಿಮೆಯಾಗುತ್ತದೆಂಬುದನ್ನು ಆ ಜನಗಳು ತಿಲಾಂಶವಾದರೂ ನಂಬುತ್ತಿರಲಿಲ್ಲ. ಆದುದರಿಂದ ೧೦೦ ಕ್ಕೆ ೨೦ ಶಿಶುಗಳು ಒಂದು ವರ್ಷ ತುಂಬುದರೊಳಗಾಗಿಯೇ ಸಾಯುತ್ತಿದ್ದವು.

ಈ ದುಸ್ಥಿತಿಯನ್ನು ನಿವಾರಣೆ ಮಾಡಬೇಕೆಂದು ಬರ್ಲಿನ್ ಪಟ್ಟಣದಲ್ಲಿ **ವುಮೆನ್ಸ್ ಪೇಟ್ರಿಯಾಟಿಕ್ ಅಸೋಶಿಯೇಶನ್** ಎಂಬ ಸಂಘವು ಸ್ಥಾಪನೆಯಾಯಿತು. ಈ ಸಂಘದವರು ಜನಗಳ, ಮುನಸಿಪಾಲ್ಟಿಗಳ ಮತ್ತು ಸರಕಾರ ಸಹಾಯದಿಂದ ಗರ್ಭಿಣಿಯರಿಗೆ ಅವರ ಆಚಾರ ವಿಚಾರಗಳನ್ನು ತಿಳಿಸುವುದೂ ಮೊಲೆ ಹಾಲನ್ನೇ ಮಕ್ಕಳಿಗೆ ಉಣಿಸುವ ವಿಷಯದಲ್ಲಿ ಪ್ರೋತ್ಸಾಹಿಸುವುದೂ ಯಾರಿಗೆ ಮೊಲೆಹಾಲಿಲ್ಲವೋ ಅಂತಹವರಿಗೆ ಶುದ್ಧವಾದ ಹಾಲನ್ನೂ ಕೊಡುವುದೂ ಕೂಲಿಮಾಡಿ ಜೀವಿಸುತ್ತಿರುವ ಗರ್ಭಿಣಿಗೆ ದಿವಸಗಳು ತುಂಬಿದಮೇಲೆ ನಾಲ್ಕಾರು ವಾರ ವಿಶ್ರಾಂತಿ ಕೊಡಿಸುವುದೂ ಹೆತ್ತಕಾಲದಲ್ಲಿ ಅವರಿಗೂ ಅವರ ಶಿಶುಗಳಿಗೂ ಸರಿಯಾದ ಆಹಾರ ದೊರೆಯುವಂತೆ ಮಾಡುವುದೂ

ಮತ್ತು ಅನಾಥರಾದ ಶಿಶುಗಳನ್ನು ಜೋಪಾನಮಾಡುವುದೂ ಇವೇ ಮೊದಲಾದ ಪ್ರಯತ್ನಗಳಿಂದ ಶಿಶುಗಳ ಮರಣಸಂಖ್ಯೆಯನ್ನು ಎಷ್ಟೋ ಕಡಿಮೆ ಮಾಡಿದ್ದಾರೆ. ಈ ಸಂಘದ ಕಾರ್ಯಗಳನ್ನು ಕೈಸರನು ಕ್ರಿ. ಶ. ೧೯೦೪ರಲ್ಲಿ ಬಹಳವಾಗಿ ಶ್ಲಾಘಿಸಿ ಸರಕಾರದಿಂದ ತುಂಬಾ ಸಹಾಯ ಮಾಡಲು ಪ್ರಾರಂಭಿಸಿದರು.

ಜನಸಂಖ್ಯೆಯು ಜರ್ಮನಿಯಲ್ಲಿ ದಿನೇ ದಿನೇ ಹೆಚ್ಚುತ್ತಿರುವುದರಿಂದ ಜನಗಳಿಗೆ ಜೀವಿಸುವುದು ಕಷ್ಟವಾಗುತ್ತ ಇದೆ. ಆದಕಾರಣ ವ್ಯಾಪಾರಾದಿ ಉಪಾಯಗಳಿಂದ ಜನಗಳು ಹೆಚ್ಚಿಗೆ ಆದಾಯವನ್ನುಂಟುಮಾಡಿಕೊಳ್ಳಬೇಕಾಗಿದೆ. ಇಲ್ಲದಿದ್ದರೆ ಜೀವನಾರ್ಥವಾಗಿ ಪರದೇಶಗಳಿಗೆ ಹೋಗಬೇಕಾಗುತ್ತದೆ. ಕ್ರಿ. ಶ. ೧೮೯೬ ರಿಂದ ೧೯೦೬ರವರೆಗೆ ೨೨॥ ಲಕ್ಷ ಜರ್ಮನಿಯವರು ಆಸ್ಟ್ರೇಲಿಯಾ, ಆಫ್ರಿಕಾ ಮೊದಲಾದ ಖಂಡಗಳಿಗೆ ಜೀವನಾರ್ಥವಾಗಿ ಹೋಗಿದ್ದಾರೆ. ಇಷ್ಟು ಜನಗಳು ಜನ್ಮಭೂಮಿಯನ್ನು ಬಿಟ್ಟು ಹೋಗಬೇಕಾಯಿತಲ್ಲಾ ಎಂದು ಅಲ್ಲಿನ ದೇಶಾಭಿಮಾನಿಗಳು ಚಿಂತಿಸುತ್ತಿದ್ದಾರೆ. ಜನಸಂಖ್ಯೆಯು ಹೆಚ್ಚುತ್ತಿರುವಂತೆ ಅವರ ಜೀವನೋಪಾಯವನ್ನು ಹೆಚ್ಚಿಸಬೇಕೆಂಬ ಪ್ರಯತ್ನವು ಅಧಿಕವಾಗುತ್ತಲಿದೆ. ಜಗತ್ತನ್ನೇ ಆಶ್ರಯಿಸಬೇಕೆಂಬ ತತ್ವವನ್ನು(World Policy)ಕೈಸರನೇ ಆರಂಭದಲ್ಲಿ ಪ್ರತಿಪಾದಿಸತಕ್ಕ ಪ್ರಯತ್ನ ಮಾಡಲುಪುಕ್ರಮಿಸಿದನು.

ಪರದೇಶಗಳಿಗೆ ಹೋಗಿ ಅಲ್ಲಿ ಜೀವನೋಪಾಯಗಳನ್ನು ಕಲ್ಪಿಸಿಕೊಂಡು ವಾಸವಾಗಿರದಿದ್ದರೆ ಜರ್ಮನಿಯಲ್ಲಿ ಜೀವನಾರ್ಥವಾದ ತೊಂದರೆಯು ವಿಶೇಷವಾಗುತ್ತದೆಂದು ಯೋಚಿಸಿ ಕ್ರಿ. ಶ. ೧೮೮೨ರಲ್ಲಿ ಆಫ್ರಿಕಾ ಖಂಡಕ್ಕೆ ಹೋಗಿ ವಾಸಿಸುವುದಕ್ಕೆ ಪ್ರಾರಂಭಿಸಿದರು. ಈ ಪ್ರಕಾರ ಪರದೇಶಗಳಿಗೆ ಹೋಗಿ ವಾಸಿಸುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತ ಕ್ರಿ.ಶ. ೧೯೦೬ರಲ್ಲಿ ೧,೨೧,೯೯,೦೦೦ ಜನಗಳು ಪರದೇಶಗಳಿಗೆ ಹೋಗಿ ೧೬, ೬೧, ೭೫೦ ಚದುರಮೈಲಿ ಪ್ರದೇಶವನ್ನು ವ್ಯಾಪಿಸಿದರು.

ಆಫ್ರಿಕಾಖಂಡದ ತಮ್ಮ ಅಧಿನದಲ್ಲಿರತಕ್ಕ ಪ್ರದೇಶದಲ್ಲಿನ ನಿಗ್ರೋಜನಗಳನ್ನು ಆಳಲು ಜರ್ಮನಿಯಿಂದ ಅಧಿಕಾರಿಗಳು ಹೋಗುತ್ತಾರೆ. ಆ ಅಧಿಕಾರಿಗಳು ಅಲ್ಲಿನ ಅಲ್ಲಿನ ಮೂಲನಿವಾಸಿಗಳನ್ನು ಸರೆಯಾಳಿನಂತೆ ಕಾಣುತ್ತಿದ್ದಾರೆ. ಅವರ ಏಳ್ಗೆಯ ವಿಷಯದಲ್ಲಿ ಅಧಿಕಾರಿಗಳು ತುಂಬಾ ಉಪೇಕ್ಷೆಯಿಂದಿರುತ್ತಾರೆ. ಆ ಜನಗಳ ದುಸ್ಥಿತಿಯನ್ನು ನಿವಾರಿಸಬೇಕೆಂದು "ಕಲೋನಿಯಲ್" ಸೆಕ್ರೆಟರಿಯು ಜರ್ಮನ್ ಪಾರ್ಲಿಮೆಂಟಿನಲ್ಲಿ ಎಷ್ಟು ಕೂಗಿಕೊಂಡರೂ ಯಾರೂ ಗಮನಿಸುತ್ತಿರಲಿಲ್ಲ. ಈ ಶೋಚನೀಯ ಸ್ಥಿತಿಯನ್ನು ನೋಡಿ ಕ್ರಿ. ಶ. ೧೯೦೫ರಲ್ಲಿ ರ್‍ಯಾಡಿಕಲ್ ಪಂಗಡದ ಒಬ್ಬ ಪ್ರತಿನಿಧಿಯು ಈ ಪರದೇಶಗಳ ರಾಜ್ಯವನ್ನೆಲ್ಲಾ ಲಿಲಾವಿನಲ್ಲಿ ಮಾರಿದರಾದರೂ ಕ್ಷೇಮವಾಗುತ್ತದೆಂದು ಹೇಳಿದನು. ಇಷ್ಟೆಲ್ಲಾ ಗಲಭೆಯಾದುದರಿಂದ ಆ ಜನಗಳ ಕಷ್ಟನಷ್ಟಗಳನ್ನು ತಿಳಿದುಕೊಂಡು ಯುಕ್ತವಾದ ಸುಧಾರಣೆಯನ್ನು ಮಾಡುವುದಕ್ಕೋಸ್ಕರ ಕ್ರಿ. ಶ. ೧೯೦೭ರಲ್ಲಿ ಒಂದು ಸಂಘವನ್ನು ಸ್ಥಾಪಿಸಿದರು.

ಜರ್ಮನಿಯಿಂದ ಬಂಧ ಅಧಿಕಾರಿಗಳು ಆ ದೇಶದ ಮೂಲನಿವಾಸಿಗಳನ್ನು ಹೇಗೆ ಹಿಂಸಿಸುತ್ತಿದ್ದರೋ, ಹಾಗೇಯೇ ಒಕ್ಕಲುತನವನ್ನು ಮಾಡಿಸಲು, ಕಾರ್ಯಾಲಯಗಳನ್ನು ನಡೆಯಿಸಲು ಜರ್ಮನಿಯಿಂದ ಬಂದ ಜನಗಳೂ ಆ ನಿಗ್ರೋ ಜನಗಳಿಗೆ ಕಷ್ಟಪಡಿಸುತ್ತಿದ್ದರು. ಜರ್ಮನ್ ಜನಗಳ ಕೆಲಸಕ್ಕಾಗಿ ಸೇರಿದ ನಿಗ್ರೋಜನಗಳು ನಾಲ್ಕನೆಯ ಒಂದು ಭಾಗದಷ್ಟು ಜನಗಳು

ಹಿಂಸೆಯಿಂದಲೇ ಸತ್ತರು. ಈ ಎಲ್ಲಾ ಕಾರಣಗಳಿಂದ ಆಫ್ರಿಕೆಯು ನಿಗ್ರೋಜನಗಳಲ್ಲಿಲ ಅಸಂತೊಷವು ಅಧಿಕವಾಯಿತು. ಇದನ್ನು ಕಡಿಮೆ ಮಾಡಲು ಜರ್ಮನ್ ಸರಕಾರದವರು ಪ್ರಯತ್ನಿಸುತ್ತಿದ್ದರು. ಅಷ್ಟರಲ್ಲಿ ಈ ಪ್ರದೇಶಗಳೆಲ್ಲಾ ಯುದ್ದದಿಂದ ಇಂಗ್ಲೀಷರ ಕೈಸೇರಿದವು.

ಜರ್ಮನ್ ಸಾಮ್ರಾಜ್ಯವು ದಿನೇ ದಿನೇ ಹೆಚ್ಚುತ್ತ ಬಂದುದರಿಂದ ಅದನ್ನು ರಕ್ಷಿಸುವ ಪ್ರಯತ್ನವೂ ಅಧಿಕವಾಗುತ್ತ ಬಂದಿತು, ವಿದ್ಯಾಭ್ಯಾಸವು ಪೂರೈಸಿದೊಡನೆ ಪ್ರತಿಯೊಬ್ಬನೂ ೨ ವರ್ಷ ಸೈನ್ಯಶಾಖೆಯಲ್ಲಿ ಇರಲೇಬೇಕೆಂಬ ನಿಯಮವು ಆ ದೇಶದಲ್ಲಿದೆ. ಈ ದೇಶದ ಭೂಮಿಯ ಮೇಲಿನ ಮತ್ತು ಸಮುದ್ರದ ಮೇಲಿನ ಸೈನ್ಯಶಾಖೆಗಾಗಿ ಕ್ರಿ. ಶ. ೧೮೮೦ರಲ್ಲಿ ೨ ಕೋಟಿ ೩೦ ಲಕ್ಷ ಪೌಂಡು ವೆಚ್ಚವಾಗಿದ್ದಿತು. ಅನಂತರ ಕ್ರಿ. ಶ. ೧೯೧೩-೧೪ರಲ್ಲಿ ೬ ಕೋಟಿ ೮೭ ಲಕ್ಷ ಪೌಂಡು ವೆಚ್ಚವಾಯಿತು. ಇದರಿಂದ ಜರ್ಮನಿಯು ತನ್ನ ಸೈನ್ಯಸಾಮರ್ಥ್ಯವನ್ನು ಎಷ್ಟು ಹೆಚ್ಚಿಸಿತೆಂಬುದು ಸ್ಪಷ್ಟವಾಗುತ್ತದೆ. ಜರ್ಮನಿಯ ಜನಸಂಖ್ಯೆಯು ಪ್ರತಿವರ್ಷ ಹತ್ತು ಲಕ್ಷ ಹೆಚ್ಚಾಗುತ್ತಲಿದೆ. ಈ ಪ್ರಕಾ ಜರ್ಮನಿಯ ರಾಷ್ಟ್ರೀಯ ಸಾಮರ್ಥ್ಯವು ದಿನೇ ದಿನೇ ಬೆಳೆಯುತ್ತ ಬಂದಿತು.

❖❖

೮ನೆಯ ಪ್ರಕರಣ

ಸಂಘಶಕ್ತಿ

ಐಕ್ಯಮತ್ಯದಿಂದ ಸಂಘಮೂಲಕವಾಗಿ ಕೆಲಸ ಮಾಡುವುದು ಜರ್ಮನ್ ಸ್ವಭಾವವೇ ಆಗಿದೆ. ಸ್ವತಂತ್ರ ವಿಚಾರದಿಂದ ನಡೆಯುವುದಕ್ಕಿಂತಲೂ, ಒಬ್ಬರ ಆಜ್ಞೆಯನ್ನನುಸರಿಸಿ, ನಡೆಯುವ ಗುಣವು ಆ ಜನಗಳಲ್ಲಿ ಹೆಚ್ಚಿದೆ. ಜನಗಳ ಸಂಪದಭಿವೃದ್ಧಿಗಾಗಿ ಕ್ರಿ. ಶ. ೧೯೦೭ರಲ್ಲಿ ೨೫,೭೧೪ ಪರಸ್ಪರ ಸಹಾಯಕ ಸಂಘಗಳು ಜರ್ಮನಿಯಲ್ಲಿ ಇದ್ದವು. ಅವುಗಳಲ್ಲೆಲ್ಲಾ ೩, ೮೬, ೦೧೪೩ ಸಭಾಸದರಿದ್ದರು. ಎಂದರೆ, ಆ ದೇಶದ ಪ್ರಜಾಸಂಖ್ಯೆಯಲ್ಲಿ ೧೫ಕ್ಕೆ ಒಬ್ಬರಂತೆ ಈ ಸಂಘದಲ್ಲಿ ಸೇರಿದಂತಾಯಿತು. ಇಂಗ್ಲಂಡಿನಲ್ಲಿ ಕೂಡಾ ಪರಸ್ಪರ ಸಹಾಯಕ ಸಂಘಗಳಿಗೆ ಇಷ್ಟು ಜನಗಳು ಸೇರಿರುವುದಿಲ್ಲ.

ಜರ್ಮನ್ ಜನಗಳು ಸಂಘಮೂಲಕವಾಗಿ ಹೇಗೆ ಕೆಲಸಮಾಡುತ್ತಾರೆಂಬುದು ಅಲ್ಲಿ ಸ್ಥಾಪಿಸಲ್ಪಟ್ಟ ಜರ್ಮನ ನೇವಿಲೀಗಂ ಎಂಬ ನೌಕಾಸಂಘದ ಕಾರ್ಯಗಳಿಂದ ಚೆನ್ನಾಗಿ ತಿಳಿಯುವಂತಿದೆ. ಸಮುದ್ರದ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸದಿದ್ದರೆ ಜರ್ಮನಿಯು ಉನ್ನತಸ್ಥಿತಿಗೆ ಬರುವುದಿಲ್ಲವೆಂದು ಆ ದೇಶದ ಕೆಲವು ಪ್ರಮುಖರು ಯೋಚಿಸಿ ಕ್ರಿ. ಶ. ೧೮೯೮ರಲ್ಲಿ ಒಂದು ನೌಕಾಸಂಘವನ್ನು ಸ್ಥಾಪಿಸಿದರು. ಕೈಸರನ ಪ್ರಿಯ ಮಿತ್ರನಾದ ಆಲ್‌ಫ್ರೆಡ್‌ಕ್ರಪ್ ಎಂಬ ಕ್ರುಪ್ ಕಾರ್ಯಾಲಯದ ಯಜಮಾನನೇ ಈ ಸಂಘ ಸ್ಥಾಪಕರಲ್ಲಿ ಮುಖ್ಯನು. ಕೈಸರನ ಸಹೋದರನಾದ ಪ್ರಿನ್ಸ್ ಹೆನ್ರಿಯೇ ಈ ಸಂಘದ ಕಾರ್ಯನಿರ್ವಾಹಕನಾದನು. ಜರ್ಮನ್ ಸರಕಾರದವರು ನೌಕಾಬಲವನ್ನು ಹೆಚ್ಚಿಸುವುದಿಲ್ಲವಲ್ಲಾ ಎಂದು ಈ ಸಂಘವು ಏರ್ಪಟ್ಟಿತು.

ವರ್ಷಕ್ಕೆ ೬ ಆಣೆ ಚಂದಾ ಕೊಟ್ಟವರೆಲ್ಲಾ ಈ ಸಂಘದ ಸಭಾಸದರೆಂತಲೂ ಒಂದೇ ಸಾರಿಗೆ ೭೫೦ ರೂ.ಗಳನ್ನು ಕೊಟ್ಟವರು ಅಜೀವ ಸಭಾಸದರೆಂತಲೂ ನಿಯಮಮಾಡಿದರು. ಸಂಘದ ಕಾರ್ಯಗಳನ್ನು ಹೆಚ್ಚಾಗಿ ಮಾಡಿದವರಿಗೆ ಅನೇಕ ಪದವಿಗಳನ್ನು ಕೊಡಲಾರಂಭಿಸಿದರು. ಸೈನ್ಯ ಶಾಖೆಯ ಅನೇಕ ಅಧಿಕಾರಿಗಳು ಅರ್ಧ ಸಂಬಳದ ಮೇಲೆ ಈ ಸಂಘದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಈ ಸಂಘವು ಏರ್ಪಟ್ಟು ಎರಡೇ ವರ್ಷಗಳಲ್ಲಿ ಸಂಘದಿಂದ ಮೂರು ಸಾವಿರ ಉಪದೇಶಕರನ್ನು ಕಳುಹಿಸಿ ಚಿತ್ರಪಟಗಳಿಂದಲೂ ಪದ್ಯಗಳಿಂದಲೂ ಉಪನ್ಯಾಸಗಳಿಂದಲೂ ಪ್ರಸಿದ್ಧ ಪತ್ರಿಕೆಗಳಿಂದಲೂ ಪುಸ್ತಕಗಳ ಪ್ರಸಾರದಿಂದಲೂ ಲಕ್ಷಾಂತರ ಜನಗಳಿಗೆ ನೌಕಾಬಲದ ಮಹತ್ವವನ್ನು ತಿಳಿಸಿದರು.

ಎಪ್ಪತ್ತು ಲಕ್ಷ ಪುಸ್ತಕ ಮತ್ತು ಪ್ರಸಿದ್ಧಪತ್ರಿಕೆಗಳನ್ನು ಸಂಘದಿಂದ ಉಚಿತವಾಗಿ ಹಂಚಿದರು. ಈ ಎಲ್ಲಾ ಕೆಲಸಗಳಿಗಾಗಿ ೨॥ ಲಕ್ಷ ರೂ. ಗಳು ವೆಚ್ಚವಾದವು. ಸಂಘದವರು ಈ ಪ್ರಕಾರ ಗಲಭೆ ಮಾಡಿದುದರಿಂದ ಕ್ರಿ. ಶ. ೧೯೦೦ರಲ್ಲಿ ೩೮ ಯುದ್ಧದ ಹಡಗಗಳನ್ನು ಕಟ್ಟಬೇಕೆಂತಲೂ ಇದಕ್ಕಾಗಿ ೩೦೦ ಕೋಟಿ ರೂ. ಗಳನ್ನು ವೆಚ್ಚಮಾಡಬೇಕೆಂತಲೂ ಜರ್ಮನ್ ಪಾರ್ಲಿಮೆಂಟಿನಲ್ಲಿ ತೀರ್ಮಾನವಾಯಿತು.

ಇಂಗ್ಲೀಷರ ನೌಕಾಬಲ ವಿಶೇಷವಾಗಿದೆಯಂತಲೂ ನಾವು ಬದುಕಬೇಕಾಗಿದ್ದರೆ ಅವರಿಗಿಂತಲೂ ಹೆಚ್ಚಿನ ಬಲವನ್ನು ಹೊಂದಬೇಕೆಂತಲೂ, ಇಲ್ಲದಿದ್ದರೆ ನಾವು ನಾಶವಾಗುವುದೇ ಸರಿಯೆಂತಲೂ ಈ ಸಂಘವು ಅನೇಕ ಮುಖವಾಗಿ ತಿಳುಹಿಸಿ ಜನಗಳನು ಹುರಿದುಂಬಿಸಿತು. ನಮ್ಮ ಮುಂದಣ ಸ್ಥಿತಿಯು ನೌಕಾಬಾಲವನ್ನೇ ಅವಲಂಬಿಸಿದೆಯೆಂಬ ಅರ್ಥವುಳ್ಳ ೬೭ ಪದ್ಯಗಳುಳ್ಳ ಒಂದು ಪುಸ್ತಕದ ಲಕ್ಷಾಂತರ ಪ್ರತಿಗಳನ್ನು ಹಂಚಿ ಜನಸಾಮಾನ್ಯರೆಲ್ಲಾ ಈ ವಿಷಯದ ಕಡೆಗೆ ಗಮನಿಸುವಂತೆ ಮಾಡಿದರು. ಈ ಸಂಘವು ಕ್ರಿ. ಶ. ೧೯೦೫ರಲ್ಲಿ ಮತ್ತೆ ಹೆಚ್ಚಾದ ಗಲಭೆಯನ್ನು ಮಾಡಿ ಮೂರುಲಕ್ಷ ಜನಗಳ ರುಜುವುಳ್ಳ ಒಂದು ವಿಜ್ಞಾಪನಾ ಪತ್ರಿಕೆಯನ್ನು ಪಾರ್ಲಿಮೆಂಟಿಗೆ ಸಮರ್ಪಿಸಿ ನೌಕಾಬಲವನ್ನು ಇನೂ ಹೆಚ್ಚಿಸಬೇಕೆಂದು ಪ್ರಯತ್ನಿಸಿತು. ಪಾರ್ಲಿಮೆಂಟನವರು ಈ ಗಲಭೆಯನ್ನು ನೋಡಿ ೭೫ ಕೋಟಿ ರೂ. ಹೆಚ್ಚಿಗೆ ವೆಚ್ಚಮಾಡಿ ಬಹು ಬಲವಾದ ೨೪ ಹಡಗುಗಳನ್ನು ಕಟ್ಟಿಸಬೇಕೆಂದು ತೀರ್ಮಾನಿಸಿದರು.

ಈ ಸಂಘದ ೪೦೦೦ ಶಾಖಾ ಸಂಘಗಳು ಜರ್ಮನಿಯ ಬೇರೆ ಬೇರೆ ಭಾಗಗಳಲ್ಲಿ ಸ್ಥಾಪಿತವಾದವು. ಈ ಸಂಘಕ್ಕೆ ಕ್ರಿ. ಶ. ೧೯೦೭ರಲ್ಲಿ ೯,೪೬,೦೦೦ ಸಭಾಸದರಿದ್ದರು. ಇದರ ವಾರ್ಷಿಕ ಆದಾಯವು ೭॥ ಲಕ್ಷ ರೂ. ಇದೆ. ಈ ಸಂಘದಿಂದ "ದಿ ಫ್ಲ್ಯಾಟ್" ಎಂಬ ಒಂದು ಪತ್ರಿಕೆಯು ಪ್ರಕಟವಾಗುತ್ತದೆ. ಈ ಪತ್ರಿಕೆಯ ೩, ೭೦, ೦೦೦ ಪ್ರತಿಗಳು ಪ್ರಕಟವಾಗುತ್ತವೆ. ಇಷ್ಟು ಹೆಚ್ಚಾಗಿ ಪ್ರಸಾರವಾಗುವ ಪತ್ರಿಕೆಯು ಆ ದೇಶದಲ್ಲಿಯೇ ಇಲ್ಲ. ಜರ್ಮನಿಯ ನೌಕಾಸಂಘವು ಇಷ್ಟು ಪ್ರಬಲವಾಗಿ ಕಾರ್ಯಮಾಡುತ್ತಿದ್ದುದನ್ನು ಕೈಸರನು ನೋಡಿ ಸಂತೋಷಿಸಿ ಕ್ರಿ. ಶ. ೧೯೦೫ರಲ್ಲಿ ಈ ಸಂಘದವರಿಗೆ ತಿಳುಹಿಸಿದ್ಧೇನೆಂದರೆ; "ದೇಶಾಭಿಮಾನದಿಂದ ಪ್ರೇರಿತರಾಗಿ ನಮ್ಮ ದೇಶದ ಸಾಮರ್ಥ್ಯವನ್ನು ಹೆಚ್ಚಿಸಲು ನೀವು ಮಾಡುತ್ತಿರುವ ಈ ಅಸಾಧಾರಣವಾದ ಸಾಹಸವನ್ನು ನೋಡಿ ನನ್ನ ಎಲ್ಲಾ ಅಪೇಕ್ಷೆಗೂ ಪೂರೈಸುತ್ತವೆಂದು ನಂಬಿದ್ದೇನೆ." ಈವರೆಗೆ ವಿವರಿಸಿರುವ ವಿಷಯಗಳಿಂದ ಜರ್ಮನಿಯವರ ಐಕ್ಯಮತ್ಯ ಸಾಹಸಾದಿಗಳು ವ್ಯಕ್ತವಾಗುವಂತೆ ಈಗಿನ ಘೋರ ಯುದ್ಧದ ಪೂರ್ವಸಿದ್ಧತೆಯನ್ನು ಎಂದಿನಿಂದ ಮಾಡುತ್ತಾ ಬಂದಿರುವರೆಂಬುದು ವಾಚಕರಿಗೆ ಗೊತ್ತಾಗದಿರಲಾರದು. ಜರ್ಮನಿಯವರ ಬುದ್ಧಿಶಕ್ತಿ, ಪರಾಕ್ರಮ, ಸಾಹಸಾದಿಗಳು ಜಗತ್ತಿನ ಶಾಂತತೆಗೂ, ಸುಖಕ್ಕೂ ಕಾರಣಗಳಾಗದೆ ಅಶಾಂತತೆಗೂ ದುಃಖಕ್ಕೂ ಸಾಧನೆಗಾಗಿ ಪರಿಣಮಿಸಿದ್ದುದು ಯಾರಿಗೆ ತಾನೆ ವಿಷಾದವನ್ನುಂಟುಮಾಡಲಾರದು?

❖❖

ನವೀನ ವಾರಪತ್ರಿಕೆ! ಜಾಗ್ರತೆ ಚಂದಾದಾರರಾಗಿರಿ!!

ಶರಣ ಸಂದೇಶ

ಸಂಪಾದಕರು
ಹರ್ಡೇಕರ ಮಂಜಪ್ಪನವರು

ರಾಜಕೀಯ ಪಾರತಂತ್ರ್ಯ ಮತ್ತು ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ದಾಸ್ಯತ್ವಗಳ ನಿವಾರಣೆಗಾಗಿ ಪ್ರಯತ್ನಿಸುವಂತೆ ವೀರಶೈವ ಸಮಾಜದಲ್ಲುಂಟಾಗಿರುವ ಕೀಳು ಮೇಲುಗಳೆಂಬ ಕುಕಲ್ಪನೆಗಳನ್ನು ಕಳೆದು ಶ್ರೀ ಬಸವಾದಿ ಪ್ರಮಥರ ಮಾರ್ಗವನ್ನು ಪ್ರಸಾರಗೊಳಿಸುವುದೇ ಈ ಪತ್ರಿಕೆಯ ಮುಖ್ಯೋದ್ದೇಶವಾಗಿದೆ.

ವಾರ್ಷಿಕ ಚಂದಾ ಅಂಚೆಯವೆಚ್ಚ ಸೇರಿ ೩ ರೂ.

ಮ್ಯಾನೇಜರ್ : ಶರಣ ಸಂದೇಶ

ಪೋ. ಆಲಮಟ್ಟಿ

ಜಿ. ವಿಜಾಪುರ

ಈ ಪುಸ್ತಕವು ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ಅಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ ಪ್ರಕಟಿಸಲ್ಪಟ್ಟಿತು.

ವೀರಶೈವ ಮತತತ್ವ

ಶ್ರೀ ಹರ್ಡೇಕರ್ ಮಂಜಪ್ಪನವರು

ಹರ್ಡೇಕರ ಮಂಜಪ್ಪನವರು ಬರೆದ

ರಾಷ್ಟ್ರೀಯ ಮತ್ತು ಧಾರ್ಮಿಕ ಪುಸ್ತಕಗಳು

ಆರೋಗ್ಯ ಜೀವನ	೦-೮-೦
ಬುದ್ಧಿಯ ಮಾತು	೦-೩-೦
ವೀರಶೈವ ಮತಬೋಧೆ	೦-೨-೦
ಖಾದೀ ವಿಜಯ-೧೨ ಪುಸ್ತಕಗಳಿಗೆ	೨-೦-೦
ಶ್ರೀ ಲಿಂಗರಾಜರ ಚರಿತ್ರೆ	೦-೬-೦
ಮಕ್ಕಳ ಪುಸ್ತಕ ೧೧, ೧ಕ್ಕೆ	೦-೧-೬
ವೀರಶೈವ ಮತತತ್ವ	೦-೪-೦
ಭಜನಾವಳಿ	೦-೧-೬
ಬಸವಾವತಾರ	೦-೦-೬
ಬುದ್ಧ ಚರಿತ್ರೆ	೦-೬-೦

ವ್ಯವಸ್ಥಾಪಕ
ಜ್ಞಾನೋದಯ ಗ್ರಂಥ ಭಾಂಡಾರ ಆಲಮಟ್ಟಿ
ಪೋ. ಆಲಮಟ್ಟಿ, ಜಿ. ವಿಜಾಪುರ.

ವೀರಶೈವ ವಿದ್ಯಾಲಯ ಗ್ರಂಥಮಾಲೆಯ ಸಂಖ್ಯೆ : ೧೯

॥ಓಂ॥

ವೀರಶೈವ ಮತತತ್ವ

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

ಈ ಪುಸ್ತಕದ ಸರ್ವಾಧಿಕಾರವೂ
ವೀರಶೈವ ವಿದ್ಯಾಲಯಕ್ಕೆ ಸಂಬಂಧಿಸಿದೆ

ಶಾ. ಶ. ೧೮೫೪ ಕ್ರಯ ೪ಆಣೆ ಕ್ರಿ.ಶ. ೧೯೩೨

ಈ ಪುಸ್ತಕವು ಆಲಮಟ್ಟಿ
ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ
ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ
ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

*

ಪೀಠಿಕೆ

ವೀರಶೈವ ಮತಸಂಬಂಧವಾದ ಸಂಗತಿಗಳು ಈ ಮತದ ಸಕಲರಿಗೂ ತಿಳಿದಿರಬೇಕಾದುದು ಅತ್ಯಾವಶ್ಯಕವಷ್ಟೆ. ಹಾಗೆ ತಿಳಿಯಬೇಕಾದರೆ ಈ ಮತದ ಅನೇಕ ಮಹಾ ಮಹಾ ಗ್ರಂಥಗಳನ್ನು ಓದಬೇಕಾಗುವುದು. ಇದು ಸಕಲರಿಗೂ ಹೇಗೆ ತಾನೆ ಶಕ್ಯವು? ಆದುದರಿಂದ ಒಂದೇ ಗ್ರಂಥವನ್ನು ಓದಿದರೆ ಈ ಮತದ ಮುಖ್ಯ ತತ್ವಗಳೆಲ್ಲಾ ತಿಳಿದಿರಬೇಕೆಂದು ಪಂಡಿತರು ಅಂತಹ ಗ್ರಂಥಗಳನ್ನು ರಚಿಸುವದು ಸ್ವಭಾವಿಕವಾಗಿದೆ.

ಈ ಪ್ರಕಾರ ರಚಿಸಲ್ಪಟ್ಟ ಗ್ರಂಥಗಲ್ಲಲಿ **ವೀರಶೈವ ಸಿದ್ಧಾಂತ ಶಿಖಾಮಣಿ** ಎಂಬ ಗ್ರಂಥವು ಬಹು ಮುಖ್ಯವಾದುದಾಗಿದೆ. ಇದನ್ನು ಶ್ರೀ ಶಿವಯೋಗಿ ಶಿವಾಚಾರ್ಯರು ರಚಿಸಿದ್ದಾರೆ. ಶ್ರೀ ರೇಣುಕಗಣನಾಥರು ಅಗಸ್ತ್ಯಋಷಿಗಳಿಗೆ ಬೋಧಿಸಿದುದನ್ನೇ ತಾನು ಹೇಳುವೆನೆಂದು ಈ ಗ್ರಂಥಕಾರರು ತಿಳಿಸಿದ್ಧಾರೆ.

ಈ ಗ್ರಂಥವು ಕೂಡಾ ಎಲ್ಲ ಪಂಡಿತರಿಗೂ ಸ್ಪಷ್ಟವಾಗಿ ತಿಳಿಯುಲಾರದೆಂದು ಶ್ರೀ ತೋಂಟದಾರ್ಯರು ಇದಕ್ಕೆ ವ್ಯಾಖ್ಯೆಯನ್ನು ಬರೆದರು. ಈ ಮೂಲ ಗ್ರಂಥ ಮತ್ತು ವ್ಯಾಖೆಗಳು ಕೂಡಾ ಸಂಸ್ಕೃತ ಭಾಷೆಯಲ್ಲಿಯೇ ಇರುವುದರಿಂದ ಸಂಸ್ಕೃತವನ್ನರಿಯದ ಅಸಂಖ್ಯ ಜನಗಳಿಗೆ ಈ ಮತತತ್ವಗಳು ತಿಳಿಯಲೆಂದು ಕೈ ಪಂಡಿತ, ಎನ್. ಆರ್. ಕರಿಬಸವಶಾಸ್ತ್ರಿಗಳವರು ಇದಕ್ಕೆ ವಿಸ್ತಾರವಾದ ಕನ್ನಡ ಟೀಕೆ ಟಿಪ್ಪಣಿಗಳನ್ನು ಬರೆದು ಬಹು ಉಪಕಾರವನ್ನು ಮಾಡಿದ್ದಾರೆ.

ಈ ಕನ್ನಡ ಗ್ರಂಥವು ದೊಡ್ಡದಾಗಿರುವುದರಿಂದ ಇದೊಂದನ್ನು ಕೂಡಾ ಈ ಕಾಲದಲ್ಲಿ ಓದಿ ತಿಳಿದುಕೊಳ್ಳುವವರು ಬಹು ವಿರಳ.

ಬಹು ಸುಲಭದರಲ್ಲಿಯೂ ಅಲ್ಪಾವಕಾಶದಲ್ಲಿಯೂ ಈ ಮತದ ಎಲ್ಲ ತತ್ವಗಳೂ ಜನಸಾಮಾನ್ಯರಿಗೂ ಕೂಡಾ ತಿಳಿಯುವಂತಹ ಒಂದು ಪುಸ್ತಕವು ಬೇಕೆಂಬುವವರೇ ಈ ಕಾಲದಲ್ಲಿ ಅತ್ಯಧಿಕ. ಆದುದರಿಂದ ಆ ವೀರಶೈವ **ಸಿದ್ಧಾಂತ ಶಿಖಾಮಣಿ**ಯ ಕನ್ನಡ ಗ್ರಂಥದ ಆಧಾರದಿಂದ ಈ ಚಿಕ್ಕ ಪುಸ್ತಕವನ್ನು ಬರೆದದ್ದಾಗಿದೆ.

ಅವಶ್ಯಕವಿದ್ದ ಪ್ರಸಂಗಗಳಲ್ಲಿ ಮೂಲ ಸಂಸ್ಕೃತ ಶ್ಲೋಕಗಳನ್ನೂ ಪ್ರಮಥರ ವಚನಗಳನ್ನೂ ಉದಾಹರಿಸಿದೆ. ಈ ಮತದಲ್ಲಿ ೧೧೧ಸ್ಥಳಗಳ ಮೂಲಕ ಮತತತ್ವಗಳನ್ನು ಕ್ರಮಗೊಳಿಸಿದ್ದಾಗಿದೆ. ಅವುಗಳಲ್ಲಿ ಅಂಗಸ್ಥಳ ಮತ್ತು ಲಿಂಗಸ್ಥಳಗಳೆಂಬ ಸಾಧಕರು ಮತ್ತು ಸಾಧ್ಯರು ಆಚರಿಸತಕ್ಕ ಆಚರಣೆಗಳು ವಿಭಾಗಿಸಲ್ಪಟ್ಟಿವೆ.

ಈ ಪುಸ್ತಕದಲ್ಲಿ ಸಾಧಕರ ಸಂಗತಿಗಳನ್ನೇ ಹೆಚ್ಚು ವಿವರಿಸಿ ಸಾಧ್ಯರ ವಿಷಯಗಳನ್ನು ಸಂಕ್ಷಿಪ್ತಗೊಳಿಸಿದೆ. ಪುಸ್ತಕವು ದೊಡ್ಡದಾಗಿದೆ. ಹೆಚ್ಚು ಪ್ರಯೋಜನಕಾರಿಯಾಗಲೆಂದೇ ಹೀಗೆ ಮಾಡಿದ್ದಾಗಿದೆ. ಮತ್ತು ಆಯಾಯ ಸ್ಥಳಗಳಲ್ಲಿ ವಿವೇಚಿಸಿರುವ ಸಂಗತಿಗಳು ಮೊದಲೇ ಗೊತ್ತಾಗಲೆಂಬ ಉದ್ಧೇಶದಿಂದ ೧೨ ಪ್ರಕರಣಗಳನ್ನು ಮಾಡಿ ಅವುಗಳಲ್ಲಿ ಪ್ರತಿಪಾದಿಸಿರುವ ಮುಖ್ಯ ತತ್ವದ ಭೋಧವಾಗುವಂತಹ ಶಿರೋಲೇಖನವನ್ನೂ ಕೊಟ್ಟಿದೆ. ಕೊನೆಗೆ ಇವೆಲ್ಲವುಗಳ ತಾತ್ಪಾರ್ಯವನ್ನು ಉಪ ಸಂಹಾರವಾಗಿ ಬರೆದಿದೆ.

ಇಂತಹ ಧಾರ್ಮಿಕ ಪುಸ್ತಕಗಳು ಪ್ರಸಾರವಾಗಿ ಜನರಲ್ಲಿ ಒಳ್ಳೆಯ ಆಚಾರ ವಿಚಾರಗಳುಂಟಾಗಲೆಂದು ಹಾರೈಸುತ್ತಿರುವ ಹುನಗುಂದದ ಶ್ರೀ ಮಾನ್ ನಾಗರಾಳ ದೊಡ್ಡಪ್ಪಣ್ಣನವರು ಮೂರು ನೂರು ರೂ. ಗಳನ್ನೂ ಈ ಪುಸ್ತಕ ಪ್ರಕಟಣೆಗೆ ಕೊಟ್ಟುದರಿಂದ ಇವರನ್ನು ಹೃದಯಪೂರ್ವಕ ಅಭಿನಂದಿಸುತ್ತೇನೆ. ಇವರ ಈ ಪುಣ್ಯಕಾರ್ಯದ ಪ್ರಯೋಜನವನ್ನು ನಮ್ಮ ಸಮಾಜ ಬಾಂಧವರು ಈ ಪುಸ್ತಕ ವಾಚನದ ಮೂಲಕ ಹೊಂದುವರೆಂದು ನಂಬಿದ್ದೇನೆ.


ಆಲಮಟ್ಟಿ — **ಹರ್ಡೇಕರ ಮಂಜಪ್ಪ**

ವೀರಶೈವ ವಿದ್ಯಾಲಯ

ತಾ. ೧–೮–೧೯೩೧

❖❖

ಶ್ರೀ ಬಸವಾದಿ ಪ್ರಮಥರಂತೆ ನುಡಿದು, ನುಡಿದಂತೆ ನಡೆದು
ಪರಮಪೂಜ್ಯರಾಗಿ ಲಿಂಗೈಕ್ಯರಾದ
ಶ್ರೀಮನ್ನಿರಂಜನ



ಅಥಣಿ
ಶ್ರೀ ಮುರಘೇಂದ್ರ ಮಹಾಶಿವಯೋಗಿಗಳವರ
ಪಾದಸಂದರ್ಶನದ ಸ್ಮರಣಾರ್ಥವಾಗಿ
ಆ ಮಹಾತಪಸ್ವಿಗಳ ಚಿತ್ಕಳೆಗೆ ಈ ಗ್ರಂಥ ಕುಸುಮವು
ಗ್ರಂಥಕರ್ತನಿಂದ ಸಮರ್ಪಿಸಲ್ಪಟ್ಟಿದೆ.

*

ವಿಷಯಾನುಕ್ರಮಣಿಕೆ

೯೫. ಚರಾಚರಲಯ ಸ್ಥಳ

೯೬. ಭಾಂಡ ಸ್ಥಳ

೯೭. ಭಾಜನ ಸ್ಥಳ

೯೮. ಅಂಗಾಲೇಪ ಸ್ಥಳ

೯೯. ಸ್ವಪರಾಜ್ಞ ಸ್ಥಳ

೧೦೦. ಭಾವಾಭಾವಲಯ ಸ್ಥಳ

೧೦೧. ಜ್ಞಾನ ಶೂನ್ಯ ಸ್ಥಳ

॥ಓಂ॥

ವೀರಶೈವ ಮತತತ್ವ

೧ನೆಯ ಪ್ರಕರಣ

ವೀರಶೈವ ಲಕ್ಷಣ

ಈ ಪ್ರಪಂಚದಲ್ಲಿರುವ ಯಾವ ಧರ್ಮ ಮತಪಂಥಗಳಾದರೂ ಅವು ಇಹದಲ್ಲಿಯ ಸುಖ ಮತ್ತು ಪರದಲ್ಲಿ ಶಾಂತಿಯನ್ನು ಹೊಂದುವುದಕ್ಕೋಸ್ಕರ ಮನುಷ್ಯರಿಗಾಗಿಯೇ ಸ್ಥಾಪಿಸಲ್ಪಟ್ಟಿವೆ. ಆದುದರಿಂದ ಸುಖಶಾಂತಿಗಳನ್ನಪೇಕ್ಷಿಸುವ ಮನುಷ್ಯನು ಯಾವುದಾದರೊಂದು ಧರ್ಮ ಅಥವಾ ಮತ ಇಲ್ಲವೇ ಪಂಥವನ್ನು ಅನುಸರಿಸಿಯೇ ಇರುತ್ತಾನೆ. ಈ ಲೋಕದಲ್ಲಿ ಸುಖಶಾಂತಿಯನ್ನಪೇಕ್ಷಿಸದೆ ಮನುಷ್ಯನಿರುವುದು ಹೇಗೆ ಶಕ್ಯವಿಲ್ಲವೋ ಹಾಗೆಯೇ ಯಾವುದಾದರೊಂದು ಧರ್ಮ ಮತ ಪಂಥವನ್ನನುಸರಿಸದ ಮನುಷ್ಯನಿರುವುದೂ ಸಾಧ್ಯವಿಲ್ಲ.

ಒಂದು ವ್ಯಕ್ತಿಗೆ ಯಾವ ಧರ್ಮವು ಅಥವಾ ಮತವು ಇಲ್ಲವೆ ಪಂಥವು ಬಹು ಪ್ರಿಯಕರವಾಗಿರುತ್ತದೆಯೋ ಅದೇ ಧರ್ಮ ಮತ ಪಂಥವು ಇನ್ನೊಂದು ವ್ಯಕ್ತಿಗೆ ಅಪ್ರಿಯವಾಗಬಹುದು. ಇದು ಆಯಾಯ ವ್ಯಕ್ತಿಗಳ ಮೇಲಾಗಿರುವ ಸಂಸ್ಕಾರ ಮತ್ತು ಅವರಲ್ಲಿರತಕ್ಕ ಪ್ರವೃತ್ತಿಗಳ ವ್ಯತ್ಯಾಸದ ಫಲವಾಗಿದೆ. ಈ ವ್ಯತ್ಯಾಸವನ್ನು ಸಂಪೂರ್ಣ ತೆಗೆದುಹಾಕುವುದು ಅವಶ್ಯವಾಗಿಯೂ ಅನುಚಿತವಾಗಿಯೂ ಇದೆ. ಎಲ್ಲ ಧರ್ಮ ಮತಪಂಥಗಳೂ ಮನುಷ್ಯ ಜಾತಿಯ ಸುಖಶಾಂತಿಗಳಿಗಾಗಿಯೇ ಏರ್ಪಟ್ಟಿರುವುದರಿಂದ ಅವುಗಳಲ್ಲಿ ಯಾವುದೊಂದರ ಅಸ್ತಿತ್ವವು ಕೂಡಾ ಮನುಷ್ಯವರ್ಗದ ಯಾವುದಾದರೊಂದು ಪ್ರವೃತ್ತಿಯ ಸಮೂಹಕ್ಕೆ ಸಮಯದಲ್ಲಿ ಅವಶ್ಯಕವಾಗಿಯೇ ಪರಿಣಮಿಸುವುದು. ಆದುದರಿಂದ ಒಂದು ಧರ್ಮ ಅಥವಾ ಮತ ಇಲ್ಲವೆ ಪಂಥವು ನಮಗೆ ಅಪ್ರಿಯವಾದ ಮಾತ್ರದಲ್ಲಿ ಅದರ ಅಸ್ತಿತ್ವವೇ ಅನವಶ್ಯಕವೆಂದು ತಿಳಿಯಬಾರದು.

ಸಣ್ಣ ಅಂಗಿಯು ದೊಡ್ಡವರಿಗೆ ಅನವಶ್ಯಕವಾಗಿ ತೋರಿದ ಮಾತ್ರದಿಂದ ಸಣ್ಣ ಅಂಗಿಗಳೇ ಇರಬಾರದೆಂದು ಹೇಳಬಹುದೇ? ಬೇಸಿಗೆಯ ಕಾಲದಲ್ಲಿ ಉಣ್ಣಿಯ ಬಟ್ಟೆಯು ಅಪ್ರಿಯವಾಗಿ ತೋರಿದರೆ ಉಣ್ಣಿಯಬಟ್ಟೆಯನ್ನು ದ್ವೇಷಿಸಬಹುದೇ? ಹೀಗೆಯೇ ಯಾವ ಯಾವ ಜೀವಿಗಳಲ್ಲಿ ಯಾವ ಯಾವ ಸಂಸ್ಕಾರ ಪ್ರವೃತ್ತಿಗಳುಂಟಾಗಿರುತ್ತವೆಯೋ ಅವುಗಳ ಅಂತಸ್ತುಗಳ ಪ್ರಕಾರ

ಆಯಾಯ ಧರ್ಮ ಮತ ಪಂಥಗಳಲ್ಲಿ ಪ್ರೇಮಾದರಗಳುಂಟಾಗುವುದು ಸ್ವಾಭಾವಿಕವಾಗಿದೆ. ಆದುದರಿಂದ ಪ್ರಪಂಚದ ಯಾವ ಧರ್ಮಮತಪಂಥಗಳನ್ನೂ ದ್ವೇಷಿಸದೆ ಅವೆಲ್ಲ ಮನುಷ್ಯಜಾತಿಯ ಸುಖಶಾಂತಿಗಳಿಗಾಗಿಯೇ ಅಸ್ತಿತ್ವದಲ್ಲಿವೆಯೆಂದು ತಿಳಿಯುವುದೇ ವಿಹಿತವಾಗಿದೆ.

ನಮಗೆ ಯಾವ ಮತು ಬಹು ಪ್ರಿಯಕರವಾಗಿ ತೋರುತ್ತದೆಯೋ ಅದರ ತತ್ವಗಳನ್ನು ನಾವು ಮೊದಲು ತಿಳಿದುಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ. ಹಾಗೆ ತಿಳಿದುಕೊಳ್ಳಬೇಕಾದುದು ನಮ್ಮ ಕರ್ತವ್ಯವಾಗಿದೆ. ಹಾಗೆ ತಿಳಿದುಕೊಳ್ಳದೆ ಅದನ್ನು ಪ್ರೀತಿಸುವುದೆಂದರೆ ಅದೊಂದು ದೋಷವೇ ಸರಿ. ನಾವು ಅನುಸರಿಸುತ್ತಿರುವ ಮತದಲ್ಲಿ ಅಂತಹ ಶ್ರೇಷ್ಠತತ್ವಗಳಿವೆಯೆಂದು ತಿಳಿದು ನಾವು ಆ ಮತವನ್ನು ಪ್ರೀತಿಸುತ್ತಿದ್ದೇವೆಯೊ, ತಿಳಿಯದೆ ಪ್ರೀತಿಸುತ್ತಿದ್ಧೇವೆಯೋ ಎಂಬುದನ್ನು ಮೊದಲು ಯೋಚಿಸಬೇಕು. ತಿಳಿಯದೆ ಪ್ರೀತಿಸುತ್ತಿದ್ದರೆ ಆ ಪ್ರೇಮವು ಸ್ಥಿರವಾಗಿರುವುದು ಶಕ್ಯವೇ ಇಲ್ಲ. ಆ ಮತತತ್ವಗಳೇ ತನ್ನ ನಿಜವಾದ ಸುಖಶಾಂತಿಗಳಿಗೆ ಕಾರಣವಾಗಿಯೂ ಪರಿಣಮಿಸಲಾರವು.

ಒಂದು ಮತದಲ್ಲಿರುವ ತತ್ವಗಳು ತನಗೆ ಶ್ರೇಷ್ಠತರವಾದವುಗಳಾಗಿ ತೋರುತ್ತವೆಂದು ಆ ಮತವನ್ನನುಸರಿಸುವವರು ಅತ್ಯಂತ ವಿರಳ. ಆದರೆ ತಾನು ಆ ಮತದವರಲ್ಲಿ ಜನ್ಮವೆತ್ತಿದ್ದೇನೆಂದು ಅದನ್ನು ಪ್ರೀತಿಸುವವರೇ ಅತ್ಯಧಿಕ. ಆದುದರಿಂದಲೇ ಯಾವ ಮತೀಯರಲ್ಲಾದರೂ ಆ ಮತದಲ್ಲಿಯ ತತ್ವಗಳ ನಿಜಜ್ಞಾನವುಂಟಾಗಿ ಅವುಗಳಿಂದ ಪ್ರಾಪ್ತವಾಗುವ ಸುಖಶಾಂತಿಗಳನ್ನು ಹೊಂದುವವರು ಅತ್ಯಂತ ವಿರಳ. ಈ ಶೋಚನೀಯ ಸ್ಥಿತಿಯು ದೂರಾಗಬೇಕು. ನನಗೆ ಈ ಮತದ ತತ್ವಗಳು ಶ್ರೇಷ್ಠವೆಂದು ತಿಳಿಯುವುದರಿಂದ ನಾನು ಇದನ್ನು ಅನುಸರಿಸುತ್ತಿದ್ದೇನೆಂದು ಹೇಳುವವರು ಬೇಕಾಗಿದ್ದಾರೆಯೆ ವಿನಹ ನಾನು ಈ ಮತದಲ್ಲಿ ಹುಟ್ಟಿದ್ದರಿಂದ ಇದನ್ನು ಅನುಸಿರಿಸುತ್ತಿದ್ದೇನೆಂದು ಹೇಳುವವರು ಬೇಕಾಗಿಲ್ಲ. ಇವರು ಮತಕ್ಕೆ ಭಾರವಾಗಿರತಕ್ಕವರೇ ವಿನಾ ಮತದ ಪ್ರಯೋಜನವನ್ನು ಹೊಂದುವವರಲ್ಲ.

ವೀರಶೈವ ಮತವನ್ನನುಸರಿಸುವವರು ತಮ್ಮ ಮತದ ಮುಖ್ಯ ತತ್ವಗಳನ್ನಾದರೂ ಚೆನ್ನಾಗಿ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳದಿರುವುದು ಒಂದು ದೊಡ್ಡ ದೋಷವೇ ಸರಿ. ತಾನು ಅನುಸರಿಸುವ ಮತದ ಜ್ಞಾನವೇ ತನಗಿಲ್ಲದಿರುವಂತಹ ಮೂಢತನವು ಬೇರೊಂದಿಲ್ಲ. ಈ ಮೂಢತನವೇ ಸಮಾಜದಲ್ಲುಂಟಾಗಿರುವ ನಾನಾ ದೋಷಗಳಿಗೆ ಮೂಲವಾಗಿದೆ. ಆದುದರಿಂದ ನಮ್ಮ ಅನೇಕ ದುಃಖಗಳು ದೂರಾಗಬೇಕಾದರೆ ನಮ್ಮ ಮತದ ನಿಜತತ್ವಗಳನ್ನು ತಿಳಿದುಕೊಳ್ಳುವುದು ಆವಶ್ಯಕವಾಗಿಯೇ ಇದೆ.

ಒಂದು ಗುಡ್ಡದ ಮೇಲಿರತಕ್ಕ ಶಿವಾಲಯಕ್ಕೆ ಹೋಗಲು ಅನುಕೂಲವಾಗಬೇಕೆಂದು ಅನೇಕ ಮೆಟ್ಟಲುಗಳನ್ನು ಮಾಡಿಸಿರುತ್ತಾರಷ್ಟೇ ಅವುಗಳನ್ನು ನಾವು ಏರುತ್ತ ಹೋದಂತೆ ಅಲ್ಲಲ್ಲಿ ವಿಶ್ರಮಿಸಿಕೊಳ್ಳಲು ದೊಡ್ಡ ದೊಡ್ಡ ಕಟ್ಟೆಗಳನ್ನೂ ಕಟ್ಟಿಸಿರುವುದಿಲ್ಲವೇ? ಅವೆಲ್ಲವುಗಳ ಉಪಯೋಗವನ್ನು ನಾವು ಮಾಡಿಕೊಂಡರೆ ನಿರಾಯಾಸವಾಗಿ ಆ ಶಿವಾಲಯವನ್ನು ಸೇರಿ ಸಂತೋಷ ಹೊಂದಬಹುದಲ್ಲವೆ? ಹಾಗೆ ಮಾಡದೆ ಆ ಗುಡ್ಡವನ್ನು ಯಾವುದಾದರೊಂದು ದಾರಿಯಿಂದ ಹತ್ತಹೋದರೆ ಕಲ್ಲುಮುಳ್ಳುಗಳನ್ನು ತುಳಿದು, ಎಲ್ಲೆಲ್ಲಿಯೋ ಸುತ್ತಿ, ಬಹು ಆಯಾಸಪಡಬೇಕಾಗುವುದಿಲ್ಲವೇ?

ಆದುದರಿಂದ ಶಿವಾಲಯವನ್ನು ಸೇರುವವರು ದಾರಿಯನ್ನು ಹಿಡಿದು ಹೋಗುವುದೇ ಶ್ರೇಯಸ್ಕರವಲ್ಲವೇ?

ಇದರಂತೆಯೇ ಈ ಜೀವನು ಶಿವನನ್ನು ಸೇರಲು ನಮ್ಮ ಪ್ರಾಚೀನ ಮತಸ್ಥಾಪಕರು ಸುಗಮವಾದ ಒಂದು ದಾರಿಯನ್ನು ಏರ್ಪಡಿಸಿದ್ದಾರೆ. ಅದನ್ನು ತಿಳಿದುಕೊಂಡು ಅದೇ ದಾರಿಯಲ್ಲಿ ನಾವು ಹೋದರೆ ನಿರಾಯಾಸವಾಗಿ ಶಿವನನ್ನು ಸೇರುವೆವು. ದಾರಿಯಲ್ಲಿಯೂ ನಮಗೆ ನಷ್ಟಕಷ್ಟಗಳಾಗುವುದಿಲ್ಲ. ಎಂದರೆ ಇಹದಲ್ಲಿ ದುಃಖವಿಲ್ಲದೆ ಪರದಲ್ಲಿಯೂ ಮೋಕ್ಷ ದೊರೆಯುವುದು.

ಈ ಜೀವನು ಶಿವನನ್ನು ಸೇರಲು ಒಟ್ಟು ೧೦೧ ಮೆಟ್ಟುಗಳನ್ನು ಎಂದರೆ ಸ್ಥಳಗಳನ್ನು ದಾಟಬೇಕೆಂದು ನಮ್ಮ ಮತ ಸ್ಥಾಪಕರು ನಿರ್ದೇಶಗೊಳಿಸಿದ್ದಾರೆ. ೧೦೧ ಮೆಟ್ಲುಗಳ ಮಧ್ಯದಲ್ಲಿ ಎರಡು ಮುಖ್ಯ ಭಾಗಗಳಿವೆ. ಆ ಪ್ರತಿಯೊಂದು ಭಾಗದಲ್ಲಿಯೂ ಆರಾರು ಕಟ್ಟೆಗಳಿವೆ. ಅಲ್ಲಿ ವಿಶ್ರಮಿಸಿಕೊಂಡು ಮುಂದೆ ಸಾಗಿದರೆ ಶಿವನನ್ನು ಸೇರಿ ಶಾಂತಿಯನ್ನು ಹೊಂದುತ್ತವೆ. ಈ ೧೦೧ ಸ್ಥಳಗಳ ತಿಳುವಳಿಕೆಯೇ ವೀರಶೈವ ಮತದ ತಿಳುವಳಿಕೆಯು ಈ ೧೦೧ ಮೆಟ್ಲುಗಳಿಗೂ ಆರು ತರಹದ ಕಟ್ಟೆಗಳಿಗೂ ಬೇರೆಬೇರೆ ಹೆಸರುಗಳನ್ನಿಟ್ಟಿದ್ದಾರೆ.

ಮೊದಲನೆಯ ಮೆಟ್ಲಿಗೆ ಪಿಂಡಸ್ಥಳ ಎಂದು ಹೇಳುತ್ತಾರೆ. ಮೊದಲಿನ ೧೫ ಸ್ಥಳಗಳನ್ನು ದಾಟಿದರೆ ಭಕ್ತಸ್ಥಳ ಎಂಬ ಒಂದು ಸ್ಥಳವನ್ನು ಕಾಣುವೆವು. ಆ ಮೇಲೆ ೯ ಸ್ಥಳಗಳನ್ನು ದಾಟಿದರೆ ಮಹೇಶ್ವರಸ್ಥಳವು, ೭ ಸ್ಥಳಗಳನ್ನು ದಾಟಿದರೆ ಪ್ರಸಾದಿಸ್ಥಳವು. ೫ ಸ್ಥಳಗಳನ್ನುದಾಟಿದರೆ ಪ್ರಾಣಲಿಂಗಿಸ್ಥಳವು ೪ ಸ್ಥಳಗಳನ್ನು ದಾಟಿದರೆ ಶರಣಸ್ಥಳವು; ಪುನಃ ೪ ಸ್ಥಳಗಳನ್ನು ದಾಟಿದರೆ ಐಕ್ಯಸ್ಥಳವು ದೊರೆಯುತ್ತವೆ. ಇಲ್ಲಿಗೆ ಮೊದಲನೆಯ ಭಾಗವು ಪೂರೈಸಿತು. ಇದಕ್ಕೆ ಅಂಗಸ್ಥಳ ಎಂದು ಹೇಳುತ್ತಾರೆ. ಇಲ್ಲಿಗೆ ೧೦೧ ಸ್ಥಳಗಳಲ್ಲಿ ೪೪ ಸ್ಥಳಗಳನ್ನು ಅಥವಾ ಮೆಟ್ಲುಗಳನ್ನು ಏರಿದಂತಾಯಿತು. ಇನ್ನು ಮುಂದಿನ ಭಾಗಕ್ಕೆ ಲಿಂಗಸ್ಥಳವೆಂದು ಹೇಳುತ್ತಾರೆ. ಅದರಲ್ಲಿ ಇನ್ನುಳಿದ ೫೭ ಮೆಟ್ಲುಗಳನ್ನು ದಾಟಬೇಕು. ಅಲ್ಲಿಯು ಕೂಡಾ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯ ಸ್ಥಳಗಳೆಂಬ ಆರು ಕಟ್ಟೆಗಳು ಅಥವಾ ಸ್ಥಳಗಳು ಇದ್ದೇ ಇವೆ. ಕೊನೆಯ ಮೆಟ್ಲಿಗೆ ಜ್ಞಾನಶೂನ್ಯಸ್ಥಳ ಎಂಬ ಹೆಸರಿದೆ. ಈ ಪ್ರಕಾರ ಪಿಂಡಸ್ಥಳ ಮೊದಲು ಮಾಡಿಕೊಂಡು ಜ್ಞಾನಶೂನ್ಯಸ್ಥಳದವರೆಗಿನ ೧೦೧ ಸ್ಥಳಗಳ ಮುಖ್ಯಲಕ್ಷಣಗಳೇ ವೀರಶೈವ ಲಕ್ಷಣವಾಗಿದೆ. ಆದುದರಿಂದ ಈ ಎಲ್ಲ ಸ್ಥಳಗಳ ಸಂಬಂಧವಾಗಿ ಕ್ರಮದಿಂದ ಸ್ವಲ್ಪಯೋಚಿಸೋಣ.

(೧) ಪಿಂಡಸ್ಥಳ : ಈ ಪ್ರಪಂಚವೆಲ್ಲೂ ಜೀವಜಾಲದಿಂದ ತುಂಬಿದೆ. ಈ ಜೀವಕೋಟಿಯಲ್ಲಿ ನಮ್ಮ ಕಣ್ಣಿಗೆ ಕಾಣುವ ಜೀವಿಗಳು ಅನಂತವಾಗಿರುವಂತೆಯೇ ಕಣ್ಣೀಗೆ ಕಾಣದಿರುವ ಜೀವಿಗಳೂ ಅಸಂಖ್ಯಾತವಾಗಿಯೇ ಕಣ್ಣಿಗೆ ಕಾಣುವ ಜೀವಿಗಳಲ್ಲಿ ೮೪ ಲಕ್ಷ ಜಾತಿಗಳನ್ನೂ ನಮ್ಮ ಪ್ರಾಚೀನರು ಗೊತ್ತುಪಡಿಸಿದ್ದಾರೆ. ಇವುಗಳ ವಿವರವು ಸ್ಕಾಂದ ಪುರಾಣದಲ್ಲಿ ಈ ಪ್ರಕಾರ ಹೇಳಿದೆ.

ದೇವತೆಗಳಲ್ಲಿ ೧೬ ಲಕ್ಷ, ಮನುಷ್ಯರಲ್ಲಿ ೯ ಲಕ್ಷ, ಜಲಪ್ರಾಣಿಗಳಲ್ಲಿ ೧೦ ಲಕ್ಷ, ಪಕ್ಷಿಗಳಲ್ಲಿ ೧೦ ಲಕ್ಷ, ಮೃಗಗಳಲ್ಲಿ ೧೦ ಲಕ್ಷ, ಸರ್ಪಗಳಲ್ಲಿ ೧೧ ಲಕ್ಷ, ಸ್ಥಾವರಗಳಲ್ಲಿ ೧೮ ಲಕ್ಷ, ಈ ಪ್ರಕಾರ ೮೪ ಲಕ್ಷ ಜೀವಜಾತಿಗಳಿವೆ.

ಈ ಎಲ್ಲ ಜೀವಿಗಳ ಹೃದಯದಲ್ಲಿಯೂ ಪರಶಿವನು ವ್ಯಾಪಿಸಿದ್ದಾನೆ. ಅತಿ ಸೂಕ್ಷ್ಮವಾದ ಆಲದ ಬೀಜದಲ್ಲಿಯೂ ಕೂಡಾ ಅತ್ಯಂತ ಘನವಾದ ವೃಕ್ಷವು ಹೇಗೆ ಹುದುಗಿಕೊಂಡಿದೆಯೋ ಹಾಗೆಯೇ ಪರಶಿವನು ಜೀವಿಗಳ ಹೃದಯದಲ್ಲಿ ಅಡಕವಾಗಿದ್ಧನೆ. ಜೀವಿಗಳಲ್ಲಿ ಪರಶಿವನು ಹೇಗೆ ವಾಸವಾಗಿದ್ದಾನೆಂಬುದನ್ನು ಮಹಾನುಭಾವರಾದ ಬಸವಣ್ಣನವರು ಈ ಪ್ರಕಾರ ವಿವರಿಸಿದ್ದಾರೆ.

ಉದಕದಲ್ಲಿ ಬಚ್ಚಿಟ್ಟ ಬಯಕೆಯ ಕಿಚ್ಚಿನಂತಿದ್ದಿತ್ತು।
ಶಶಿಯೊಳಗಣ ರಸದ ರುಚಿಯಂತಿದ್ದಿತ್ತು।
ನನೆಯೊಳಗಣ ಪರಿಮಳದಂತಿದ್ದಿತ್ತು।
ಕೂಡಲಸಂಗಮದೇವ ನಿಮ್ಮ ನಿಲವು ಕನ್ಯೆಯ ಸ್ನೇಹದಂತಿದ್ದಿತ್ತು॥ ಪಿಂಡಸ್ಥಳ ॥೧॥

"ನೀರಿನಲ್ಲಿ ಬೆಂಕಿಯು, ಬೆಳದಿಂಗಳಲ್ಲಿ ತಂಪು, ಮೊಗ್ಗೆಯಲ್ಲಿ ಗಂಧವು, ಕನ್ಯೆಯಲ್ಲಿ ಯೌವನದ ಲಕ್ಷಣವು ಹೇಗೆ ಪ್ರತ್ಯೇಕವಾಗಿರದೆ ಅಡಕವಾಗಿರುತ್ತವೆಯೋ ಹಾಗೆಯೇ ಪರಶಿವನು ಜೀವಿಗಳಲ್ಲಿ ಅಭಿನ್ನವಾಗಿಯೂ ಅಸ್ಪಷ್ಟವಾಗಿಯೂ ಇದ್ದಾನೆ."

ಇಂಥ ಜೀವಕೋಟಿಗಳಲ್ಲಿ ಮನುಷ್ಯದೇಹದಲ್ಲಿ ವಾಸವಾಗಿರುವ ಜೀವನು ಪೂರ್ವಪುಣ್ಯಪರಿಪಾಕದಿಂದ ನಿರ್ಮಲಾಂತಃಕರಣನಾದರೆ ಆತನಿಗೆ ಪರಶಿವನ ಕಡೆಗೆ ಹೋಗುವ ಪ್ರವೃತ್ತಿಯುಂಟಾಗುತ್ತದೆ. ಇಂಥ ಶುದ್ಧಾಂತಃಕರಣದ ಜೀವನಿಗೆ ವೀರಶೈವಮತದಲ್ಲಿ "ಪಿಂಡ" ಎಂಬುದಾಗಿ ಹೇಳಿದ್ದಾರೆ. ವೀರಶೈವ **ಸಿದ್ಧಾಂತ ಶಿಖಾಮಣಿ**ಯಲ್ಲಿ "ಪಿಂಡ" ಎಂಬುದರ ವಿಷಯವಾಗಿ ಈ ಪ್ರಕಾರ ವಿವೇಚಿಸಲ್ಪಟ್ಟಿದೆ.

ಬಹುಜನ್ಮ ಕೃತ್ಯಃ ಪುಣ್ಯೇಃ ಪ್ರಕ್ಷೀಣೇಪಾಪಪಂಜರೇ।
ಶುದ್ಧಾಂತಃಕರಣೋಧೇಹೀ ಪಿಂಡ ಶಬ್ದೇನಗೀಯತೇ ॥ ಪರಿಚ್ಛೇದ ೫ ಶ್ಲೋಕ ೩೨.

"ಅನೇಕ ಜನ್ಮಾಂತರಗಳ ಪುಣ್ಯದಿಂದ ಶುದ್ಧಾಂತಃಕರಣನಾದ ಜೀವನೇ "ಪಿಂಡ" ಎಂದು ಹೇಳಿಸಿಕೊಳ್ಳುತ್ತಾನೆ."

ಗುಡ್ಡದ ಮೇಲಿರುವ ಶಿವಾಲಯವನ್ನು ನೋಡಬೇಕೆಂಬ ಅಪೇಕ್ಷೆಯು ಯಾರಲ್ಲುಂಟಾಗಿರುತ್ತದೆಯೋ ಅವರೇ ಅಲ್ಲಿಗೆ ಹೋಗುವ ದಾರಿಯನ್ನು ಹುಡುಕುವರಷ್ಟೆ. ಹಾಗೆಯೇ ಶಿವನನ್ನು ಸೇರಬೇಕೆಂಬ ಇಚ್ಛೇಯು ಕೂಡಾ-ನಿರ್ಮಲ ಮನಸ್ಸಿನವರಿಗುಂಟಾಗುವುದೇ ವಿನಾ ಅನ್ಯರಿಗಾಗುವುದು ಶಕ್ಯವಿಲ್ಲ. ಹೀಗೆ ಸದಿಚ್ಛೇಯುಂಟಾದ ಜೀವನಿಗೇನೇ ಮತತತ್ವಗಳನ್ನು ತಿಳಿದುಕೊಳ್ಳುವ ಅಪೇಕ್ಷೆಯುಂಟಾಗುತ್ತದೆ. ಆದುದರಿಂದ ಇಂಥ ಸದಿಚ್ಛೇಯುಂಟಾಯಿತೆಂದರೆ ಆ ಜೀವನು ಪಿಂಡಸ್ಥಳವೆಂಬ ಮೊದಲನೆಯ ಮೆಟ್ಟಲನ್ನು ಏರಿದಂತಾಯಿತು.

(೨) ಪಿಂಡಜ್ಞಾನ ಸ್ಥಳ : ಶಿವನನ್ನು ಸೇರಬೇಕೆಂದಪೇಕ್ಷಿಸುವ ಜೀವನು ತಾನು ವಾಸವಾಗಿರತಕ್ಕ ದೇಹವು ಬೇರೆ, ತಾನು ಬೇರೆ ಎಂಬ ಜ್ಞಾನವುಳ್ಳವನಾಗಬೇಕು. ದೇಹವೇ ನಾನೆಂಬ ತಪ್ಪು ತಿಳುವಳಿಕೆಯನ್ನು ತೆಗೆದು ಹಾಕಬೇಕು. ನನ್ನ ಮನೆಯೆಂದರೆ ಹೇಗೆ ನಾನು ಮತ್ತು ಮನೆಯು ಬೇರೆಯಾಗಿರುತ್ತವೆಯೋ, ಮನೆಯೇ ಹೇಗೆ ನಾನಲ್ಲವೋ, ಮನೆ ಮುರಿದರಾಗಲಿ, ಬಿದ್ದು ಹೋದರಾಗಲಿ ನನಗೆ ಹೇಗೆ ನಾಶವಿಲ್ಲವೋ ಹಾಗೆಯೇ ಈ ದೇಹ ಮತ್ತು ನಾನು ಎಂಬ ಆತ್ಮ

ಬೇರೆಯೇ ವಿನಾ ಒಂದೇ ಅಲ್ಲವೆಂಬ ತಿಳುವಳಿಕೆಯು ಆ ಜೀವನಿಗುಂಟಾದರೆ ಆತನು ಪಿಂಡಜ್ಞಾನಸ್ಥಳವೆಂಬ ಎರಡನೆಯ ಮೆಟ್ಲನ್ನು ಏರಿದಂತಾಯಿತು. ಪಿಂಡಜ್ಞಾನಸ್ಥಳದ ಲಕ್ಷಣವನ್ನು ಸಿದ್ಧಾಂತಶಿಖಾಮಣಿಯಲ್ಲಿ ಈ ಪ್ರಕಾರ ಹೇಳಿದ್ದಾರೆ.

ಶರೀರಾತ್ಮ ವಿವೇಕೇನ ಪಿಂಡಜ್ಞಾನೀ ಸಕಥ್ಯತೇ! ಪ.೫ ಶ್ಲೋ.೫೬

"ಇದು ದೇಹ, ಇದು ಆತ್ಮ, ಇವೆರಡೂ ವಿನಾ ಒಂದೇ ಅಲ್ಲವೆಂಬ ವಿವೇಕವುಳ್ಳವನೇ ಪಿಂಡಜ್ಞಾನಿಸ್ಥಳದವನೆಂದು ತಿಳಿಯಬೇಕು."

(೩) ಸಂಸಾರಹೇಯ ಸ್ಥಳ : ದೇಹ ಬೇರೆ ಮತ್ತು ನಾನೆಂಬ ಆತ್ಮನು ಬೇರೆಯೆಂಬ ತಿಳುವಳಿಕೆಯುಂಟಾದ ಮೇಲೆ ದೇಹಮೋಹವು ಹೋಗುವುದು. ಆತ್ಮನಲ್ಲಿ ಪ್ರೇಮವುಂಟಾಗುವುದು. ದೇಹವನ್ನು ಅಂದಗೊಳಿಸುವ, ಬೆಳೆಸುವ, ಸುಖಪಡಿಸುವ ಮೊದಲಾದ ಸಂಸಾರಕಾರ್ಯಗಳಲ್ಲಿ ಹೇಯವುಂಟಾಗುತ್ತದೆ. ಆಜೀವನು ಇಂಥ ಸ್ಥಿತಿಗೆ ಬಂದರೆ ಸಂಸಾರ ಹೇಯಸ್ಥಳವೆಂಬ ಮೂರನೆಯ ಮೆಟ್ಲನ್ನು ಹತ್ತಿದಂತಾಯಿತು.

ಆದುದರಿಂದ ವೀರಶೈವ ಮತದವರಾಗಬೇಕೆಂಬುವವರೂ ಶಿವನನ್ನು ಸೇರಬೇಕೆಂಬ ಪ್ರಬಲವಾದ ಇಚ್ಚೆಯುಳ್ಳವರೂ ದೇಹವು ತಾನಲ್ಲವೆಂಬ ಪರಿಜ್ಞಾನ ಹೊಂದಿದವರೂ ದೇಹದಲ್ಲಿಯೂ ದೇಹ ಸುಖಕ್ಕಾಗಿ ಸತಿಸುತ ಧನಾದಿಗಳಲ್ಲಿಯೂ ಮೋಹಹೊಂದದೆ ಹೇಯ ಬುದ್ಧಿಯುಳ್ಳವರಾಗಬೇಕೆಂದು ಈ ವರೆಗಿನ ವಿವೇಚನೆಯಿಂದ ಸಿದ್ದವಾಯಿತಷ್ಟೆ ಹೀಗಾದರೆ ಶಿವಾಲಯವನ್ನು ಸೇರುವ ೧೦೧ ಮೆಟ್ಲುಗಳಲ್ಲಿ ಮೂರು ಮೆಟ್ಲುಗಳನ್ನು ಏರಿದಂತಾಯಿತು.

(೪) ಗುರುಕಾರುಣ್ಯ ಸ್ಥಳ : ಈ ಪ್ರಕಾರ ಸಂಸಾರದಲ್ಲಿ ಹೇಯವುಂಟಾದರೇನೇ ಗುರುಗಳ ಕೃಪೆಯು ಪ್ರಾಪ್ತವಾಗುತ್ತದೆ. ಶಿವನನ್ನು ಸೇರುವ ಮುಂದಣ ಪ್ರಯಾಣಕ್ಕೆ ಮಾರ್ಗದರ್ಶಿಗಳು ಬೇಕೇಬೇಕಾಗಿದೆಯಷ್ಟೆ ಅವರೇ ಗುರುಗಳು. ಅವರ ಸಹಾಯದಿಂದಲೇ ಶಿವನನ್ನು ಸೇರಬೇಕಾಗುತ್ತದೆ. ಆದುದರಿಂದ ಮಹಾನುಭಾವರಾದ ಬಸವಣ್ಣನವರು ಈ ಪ್ರಕಾರ ಹೇಳಿದ್ದಾರೆ:

ಮಡಿಕೆಯ ಮಾಡುವರೆ ಮಣ್ಣೆ ಮೊದಲು
ತೊಡಿಗೆಯ ಮಾಡುವರೆ ಹೊನ್ನೆ ಮೊದಲು
ಶಿವಪಥವನರಿವಡೆ ಗುರುಪಥವೆ ಮೊದಲು
ಕೂಡಲಸಂಗಮದೇವರನರಿವಡೆ ಶರಣರ ಸಂಗವೆ ಮೊದಲು ॥ ಗುರುಕಾರುಣ್ಯ ಸ್ಥಳ.೧

"ಮಡಿಕೆಯನ್ನು ಮಾಡಲು ಹೇಗೆ ಮೊದಲು ಮಣ್ಣು ಬೇಕಾಗಿದೆಯೋ ಆಭರಣವನ್ನು ಮಾಡಲು ಹೇಗೆ ಮೊದಲು ಹೊನ್ನು ಬೇಕಾಗಿದೆಯೋ ಹಾಗೆಯೇ ಶಿವನನ್ನು ಕಾಣಲು ಮೊದಲು ಗುರುಗಳು ಬೇಕೆ ಬೇಕು. ಶಿವಶರಣರ ಗುರುಗಳ ಸಹವಾಸವೇ ನಾವು ಶಿವನನ್ನು ಸೇರಲು ಸಹಾಯ ಮಾಡುತ್ತದೆ."

ನಮಗೆ ಮಾರ್ಗದರ್ಶಿಯಾಗಿರತಕ್ಕ ಗುರು ಹೇಗಿರಬೇಕೆಂಬುದನ್ನು "ಸಿಧ್ಧಾಂತ ಶಿಖಾಮಣಿ" ಗ್ರಂಥದ ಗುರುಕಾರುಣ್ಯ ಸ್ಥಳದಲ್ಲಿ ಈ ಪ್ರಕಾರ ವಿವರಿಸಿದ್ದಾಗಿದೆ.

ಲಿಂಗಧಾರಣ ಸಂಯುಕ್ತಂ । ಲಿಂಗಪೂಜಾಪರಾಯಣಂ ।
ಲಿಂಗಾಂಗ ಯೋಗತತ್ವಜ್ಞಂ। ನಿರೂಢಾದ್ವೈತವಾಸನಂ ॥
ಲಿಂಗಾಂಗ ಸ್ಥಳಭೇದಜ್ಞಂ। ಶ್ರೀ ಗುರುಂ ಶಿವವಾದಿನಂ।
ಸೇವೇತ ಪರಮಾಚಾರ್ಯಂ। ಶಿಷ್ಯೋಭಕ್ತಿಭಯಾನ್ವಿತಃ ॥ ಪ. ೬ ಶ್ಲೋ. ೬-೭

"ಲಿಂಗಧಾರಣೆ, ಲಿಂಗಪೂಜಾತತ್ಪರತೆ, ಲಿಂಗಾಂಗ ಸಾಮರಸ್ಯಜ್ಞಾನ ಮತ್ತು ಸರ್ವತ್ರ, ಶಿವಭಾವನೆಗಳುಳ್ಳವರಾಗಿ ೧೦೧ ಸ್ಥಳಗಳ ಪರಿಜ್ಞಾನವಿದ್ದ ಶ್ರೀಗುರುವಿಗೆ ಭಕ್ತಿಯಿಂದ ಶರಣು ಹೋಗಬೇಕು."

ಇಂತಹ ಸದ್ಗುಣ, ಸದಾಚಾರ, ಸುಜ್ಞಾನಗಳುಳ್ಳ ಗುರುಗಳ ವಿನಾ ಹೆಸರಿಗೆ ಗುರುಗಳೆಂದು ಹೇಳಿಕೊಳ್ಳುವವರಲ್ಲಿ ಹೋದರೆ ನಮಗೆ ಶಿವನನ್ನು ಸೇರುವ ಮಾರ್ಗವು ದೊರೆಯುವುದು. ಆದುದರಿಂದ ಗುರುವನ್ನು ಸೇರಬೇಕೆಂದಪೇಕ್ಷಿಸುವವರು ಈ ವಿಷಯದಲ್ಲಿ ಬಹು ಎಚ್ಚರಿಕೆಯುಳ್ಳವರಾಗಿರಬೇಕು.

ಬಳ್ಳಿ ಕುರುಡರು ಕೂಡಿ । ಹಳ್ಳವನು ಬಿದ್ದಂತೆ ।
ಒಳ್ಳೆಯ ಗುರುವಿನುಪದೇಶವಿಲ್ಲದಿರೆ ।
ಎಲ್ಲಿಯದು ಮುಕ್ತಿ ಸರ್ವಜ್ಞ?

ಎಂಬ ಸರ್ವಜ್ಞ ಕವಿಯ ದಿವ್ಯೋಕ್ತಿಯನ್ನು ಯಾವಾಗಲೂ ಸ್ಮರಣೆಯಲ್ಲಿಟ್ಟುಕೊಳ್ಳಬೇಕು. ಸಂಸಾರದಲ್ಲಿ ಹೇಯಬುದ್ದಿಯುಂಟಾದ ಮುಮುಕ್ಷುನಾಮಧಾರಿ ಗುರುಗಳನ್ನು ಬಿಟ್ಟು ಸದ್ಗುರುವಿನ ಸನ್ನಿಧಿಗೆ ಹೋಗಿ ಅಲ್ಲಿ ಸೇವಾತತ್ಪರನಾಗಬೇಕು. ಈ ಶಿಷ್ಯನ ಸದ್ಗುಣ, ಸದಾಚಾರಗಳು ಆ ಗುರುವರೇಣ್ಯರಿಗೆ ಒಪ್ಪಿಗೆಯಾಗಿ ಈತನನ್ನು ಉದ್ಧಾರಮಾಡಬೇಕೆಂಬ ಕರುಣವುಂಟಾಯಿತೆಂದರೆ ಆಗ ಆ ಶಿಷ್ಯನು ಗುರುಕಾರುಣ್ಯ ಸ್ಥಳವೆಂಬ ನಾಲ್ಕನೆಯ ಮೆಟ್ಟಲನ್ನು ಏರಿದಂತಾಯಿತು.

(೫) ಲಿಂಗಧಾರಣ ಸ್ಥಳ : ಈ ಪ್ರಕಾರ ನಾಲ್ಕು ಸ್ಥಳಗಳು ಆಸ್ತಿಕರಾದ ಎಲ್ಲ ಮತೀಯರಿಗೂ ಇದ್ದೇ ಇರಬೇಕಾಗುತ್ತವೆ. ಇವು ದೇವರನ್ನು ಸೇರಬೇಕೆಂಬ ಯಾವ ಧರ್ಮಮತಪಂಥದವರಿಗಾದರೂ ಅವಶ್ಯಕವಾಗಿಯೇ ಇವೆ. ದೇವ ಕಡೆಗೆ ಪ್ರವೃತ್ತಿ. ದೇಹಾತ್ಮಗಳ ಭಿನ್ನಜ್ಞಾನ, ಸಂಸಾರ ಹೇಯತ್ವ ಮತ್ತು ಗುರುಕಾರುಣ್ಯಗಳು ಯಾವ ಮತದವರಿಗೆ ತಾನೇ ಬೇಡ? ಎಂದ ಮೇಲೆ ಇವೇನೂ ವೀರಶೈವ ಮತದ ವೈಶಿಷ್ಟ್ಯಗಳೆಂದು ಹೇಳಲಿಕ್ಕಾಗದು. ಎಲ್ಲ ಮತೀಯರೂ ಈ ನಾಲ್ಕು ಸ್ಥಳಗಳನ್ನು ಅನುಸರಿಸಲೇಬೇಕಾಗುತ್ತದೆ. ಆದರೆ ವೀರಶೈವ ಮತದಲ್ಲಿ ಹೇಗೆ ಈ ಕ್ರಮವನ್ನು ಶಾಸ್ತ್ರೀಯವಾಗಿ ನಿರ್ದೇಶಗೊಳಿಸಿದ್ದಾರೆಯೋ ಹಾಗೆಯೇ ಬೇರೆ ಮತಗಳಲ್ಲಿ ಗೊತ್ತುಪಡಿಸಿರಲಿಕ್ಕಿಲ್ಲ. ಹಾಗೆ ಗೊತ್ತು ಪಡಿಸಿದಿದ್ದ ಮಾತ್ರದಿಂದ ಅನ್ಯಮತೀಯರಿಗೆ ಈ ಸ್ಥಳಗಳು ಬೇಡವೆಂದಾಗಲಿ ಅಥವಾ ಅವರು ಅನುಸರಿಸುವುದಿಲ್ಲವೆಂದಾಗಲಿ ತಿಳಿಯಬಾರದು.

ಐದನೆಯದಾದ ಲಿಂಗಧಾರಣಸ್ಥಳವು ಮಾತ್ರ ಹಾಗಲ್ಲ, ಇದು ವೀರಶೈವ ಮತದ ವೈಶಿಷ್ಟ್ಯವಾಗಿದೆ. ಜಗತ್ತಿನಲ್ಲಿ ಯಾವ ಧರ್ಮಮತಪಂಥದವರೂ ಇಂಥ ಸಂಸ್ಕಾರವನ್ನು ಹೊಂದುತ್ತಾ ಇಲ್ಲ. ಆಸ್ತಿಕ ಧರ್ಮದವರಲ್ಲಿ ಕೆಲವರು ಮೂರ್ತಿಪೂಜಕರಿದ್ದಾರೆ. ಕೆಲವರು ನಿರಾಕಾರ ಧ್ಯಾನಿಗಳಿದ್ದಾರೆ. ಮೂರ್ತಿ

ಪೂಜಕರಲ್ಲಿ ತಮಗೆ ಇಷ್ಟವಾದ ಮೂರ್ತಿಗಳನ್ನು ಇಟ್ಟು ಪೂಜಿಸುತ್ತಿದ್ದಾರೆಯೇ ವಿನಾ ವೀರಶೈವರಂತೆ ದೇಹದ ಮೇಲೆ ಧರಿಸಿಕೊಂಡು ಪೂಜಿಸುವುದಿಲ್ಲ.

ಈ ಲಿಂಗಧಾರಣಸ್ಥಳಕ್ಕೆ ಬಂದ ನಂತರ ಆತನು ಪರಶಿವನ ಚಿನ್ನವಾದ ಇಷ್ಟಲಿಂಗವನ್ನು ಅಂಗದಮೇಲೆ ಯಾವಾಗಲೂ ಧರಿಸಬೇಕಾಗುತ್ತದೆ. ಸದ್ಗುರು ಶಿಷ್ಯನಲ್ಲಿ ಕಾರುಣ್ಯವುಳ್ಳವನಾದೊಡನೆ ಆತನ ಮಸ್ತಕದ ಮೇಲೆ ತನ್ನ ಕೃಪಾಹಸ್ತವನ್ನಿಟ್ಟು ಆತನಲ್ಲಿ ಶಿವಕಲೆಯನ್ನು ಜಾಗೃತಗೊಳಿಸುವನು. ಇದಕ್ಕೆ "ವೇಧಾ" ದೀಕ್ಷೆಯೆಂದು ಹೇಳುತ್ತಾರೆ. ಆ ಮೇಲೆ ಶಿವಪಂಚಾಕ್ಷರಿಯ ಮಂತ್ರವನ್ನುಪದೇಶಮಾಡಿ ನೀನೇ ಶಿವನೆಂಬ "ಸೋಹಂ" ಭಾವನೆಯುಂಟಾಗುವ ರೀತಿಯನ್ನು ತೋರಿಸುವನು. ಇದಕ್ಕೆ ಮನು ಅಥವಾ ಮಂತ್ರದೀಕ್ಷೆ ಎಂದು ಹೇಳುತ್ತಾರೆ. ಆ ಮೇಲೆ ಕಲಶ ಸ್ಥಾಪನೆಯಿಂದ ಇಷ್ಟಲಿಂಗವನ್ನು ಸ್ಥೂಲದೇಹದಲ್ಲಿ ಧರಿಸುವನು. ಇದಕ್ಕೆ "ಕ್ರಿಯಾ" ದೀಕ್ಷೆಯೆಂದು ಹೇಳುತ್ತಾರೆ. ಈ ಪ್ರಕಾರ ದೀಕ್ಷಾತ್ರಯಗಳಿಂದ ಲಿಂಗಧಾರಣ ಮಾಡಿಕೊಂಡ ನಂತರ ಐದನೆಯ ಮೆಟ್ಲನ್ನು ಏರಿದಂತಾಯಿತು.

ಈ ಲಿಂಗಧಾರಣವು ವೀರಶೈವ ಮತದಲ್ಲಿ ಅತ್ಯಂತ ಮುಖ್ಯವಾಗಿರುವುದರಿಂದಲೂ ಜಗತ್ತಿನಲ್ಲಿಯ ಯಾವ ಧರ್ಮದಲ್ಲಿಯೂ ಈ ವಿಧವಾದ ಪದ್ಧತಿಯಿಲ್ಲದಿದ್ದುದರಿಂದಲೂ ಈ ವಿಷಯವನ್ನು ಸ್ಪಷ್ಟ ವಿವರಿಸಬೇಕಾದುದು ಅವಶ್ಯವಾಗಿದೆ.

ಪರಮಾತ್ಮನು ನಮ್ಮ ಹೃದಯದಲ್ಲಿ ವಾಸವಾಗಿದ್ದಾನೆಂದು ಎಲ್ಲ ಆಸ್ತಿಕರೂ ಹೇಳುತ್ತಿದ್ದಾರೆ. ಆದುದರಿಂದ ಈ ದೇಹವು ದೇವಾಲಯವೆಂದೇ ಭಾವಿಸುತ್ತಿದ್ದಾರೆ. ಆದರೆ ಆ ತಮ್ಮ ಭಾವನೆಯಂತೆ ಕರ್ಮವು ಮಾತ್ರ ಅವರಲ್ಲಿಲ್ಲ. ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನತಿಷ್ಠಿತಿ ಎಂಬುದನಾದಿ ಶ್ರೀ ಕೃಷ್ಣಪರಮಾತ್ಮನು ಭಗವದ್ಗೀತೆಯಲ್ಲಿ ಹೇಳಿದ್ದಾನಷ್ಟೆ. ಈಶ್ವರನು ನಮ್ಮ ಹೃದಯದಲ್ಲಿದ್ದ ಮೇಲೆ. ಈ ದೇಹವು ಶಿವಾಲಯವಾಯಿತಷ್ಟೇ. ಈ ತತ್ವವನ್ನು ವೀರಶೈವರು ಸ್ಪಷ್ಟವಾಗಿ ಈ ಲಿಂಗಧಾರಣ ಕ್ರಿಯೆಯಿಂದ ವ್ಯಕ್ತಗೊಳಿಸುತ್ತಿದ್ದಾರೆ. ತಮ್ಮ ದೇಹದ ಮೇಲೆ ಲಿಂಗಮೂರ್ತಿಯನ್ನು ಯಾವಾಗಲೂ ಸ್ಥಾಪಿಸಿಕೊಂಡು ಇದನ್ನು ನಿಜವಾಗಿ ಶಿವಾಲಯವನ್ನೇ ಮಾಡಿದ್ದಾರೆ.

ಒಂದು ಆಕಳಿಗಾದ ಹುಣ್ಣನ್ನು ಗುಣಪಡಿಸಲು ಆಕಳ ತುಪ್ಪಬೇಕಾದಾಗ ಆಕಳ ಹಾಲನ್ನು ಹೆಪ್ಪುಹಾಕಿ, ಮಸರನ್ನು ಕಡೆದು, ಬೆಣ್ಣೆಯನ್ನು ಕಾಸಿದರಲ್ಲವೇ ತುಪ್ಪವು ದೊರೆತು ಅದರಿಂದ ಔಷಧಿಯಾಗುವುದು? ಹಾಗೆ ಮಾಡದೆ ಆ ಆಕಳ ಕೆಚ್ಚಲಲ್ಲೇ ಹೇಗಾದರೂ ಹಾಲಿದೆ; ಹಾಲಿದ್ದಲ್ಲೇ ತುಪ್ಪವೂ ಇದೆ; ಆದುದರಿಂದಲೇ ಆ ಹುಣ್ಣಿಗೆ ಔಷಧಿ ಮಾಡೋಣವೆಂದರೆ ಹೇಗೆ ತಾನೆ ಆ ಹುಣ್ಣು ಹೋಗುವುದು ಸಾಧ್ಯವು?

ಹಾಗೆಯೇ ಜೀವನಿಗುಂಟಾಗಿರುವ ಭವರೋಗವನ್ನು ಕಳೆಯಬೇಕಾದರೆ ನಮ್ಮ ಹೃದಯದಲ್ಲಿರತಕ್ಕ ಪರಮಾತ್ಮನನ್ನು ಹೊರಗೆ ರೂಪುಗೊಳಿಸಿ ಧರಿಸಿ ಪೂಜಿಸಬೇಕಲ್ಲವೇ? ಹೇಗಾದರೂ ಹೃದಯದಲ್ಲಿ ಪರಮಾತ್ಮನಿದ್ದಾನೆಂದು ಹೊರಗೆ ಆತನನ್ನು ಧರಿಸಿ ಪೂಜಿಸದಿದ್ದರೆ ಭವರೋಗ ಹೋಗುವುದು ಹೇಗೆ? ತೊಡೆಯಮೇಲಿನ ಮಗುವನ್ನು ಮುದ್ದು ಕೊಟ್ಟು ಆಡಿಸಿ ಸಂತೊಷಪಡಬಹುದಲ್ಲದೆ ಹೊಟ್ಟೆಯಲ್ಲಿದ್ದ ಶಿಶುವನ್ನು ಮುದ್ದಾಡಿ ಆನಂದ ಪಡುವುದು ಶಕ್ಯವೇ? ಆದುದರಿಂದ ಹೃದಯದಲ್ಲಿನ ಪರಮಾತ್ಮನು ನಮ್ಮ ಅನುಭವಕ್ಕೆ ಬರಬೇಕಾದರೆ ಬಾಹ್ಯದಲ್ಲಿ ಪೂಜೆಯು ಅವಶ್ಯಕವಾಗಿದೆ. ಈ ತತ್ವದಿಂದಲೇ ಮೂರ್ತಿಪೂಜೆಯು ಏರ್ಪಟ್ಟಿದೆ.

ಮೂರ್ತಿಪೂಜೆಯು ಅವಶ್ಯಕವಾದ ಮೇಲೆ ಈ ನಮ್ಮ ದೇಹವನ್ನೇ ನಿಜವಾದ ದೇವಾಲಯವನ್ನಾಗಿ ಮಾಡಿಕೊಳ್ಳದೆ ಊರಲ್ಲಿಯೋ ಅಥವಾ ಮನೆಯಲ್ಲಿಯೋ ಒಂದು ದೇವಾಲಯವನ್ನು ಮಾಡಿ ಅಲ್ಲಿಗೆ ಹೋಗಿ ಎಲ್ಲರೂ ಪೂಜಿಸುವುದು ಯುಕ್ತವೇ? ಅನುಕೂಲವೇ? ಶಕ್ಯವೇ? ಎಂಬಂಶಗಳನ್ನು ಯೋಚಿಸಬಾರದೇ? ಒಂದೇ ದೇವರನ್ನು ಊರಲ್ಲಿಯ ಅಥವಾ ಮನೆಯಲ್ಲಿಯ ಎಲ್ಲ ಜನರೂ ಮೂರುಕಾಲ ಪೂಜಿಸಲು ಹೇಗೆ ತಾನೆ ಸಾಧ್ಯವು? ಆದುದರಿಂದ ಒಬ್ಬ ಪೂಜಾರಿಯನ್ನು ನಿಯಮಿಸಿ ಊರವರ ಪರವಾಗಿ ಆತನು ಪೂಜಿಸುವಂತೆ ಮಾಡಿದರು. ಮನೆಯಲ್ಲಿ ಯಾರೂದರೂ ದೇವರ ಪೂಜೆಯನ್ನು ಮಾಡಿದರೆ ಆ ಮನೆಯವರೆಲ್ಲರೂ ಪೂಜೆ ಮಾಡಿದಂತಾಯಿತೆಂದು ತಿಳಿದರು. ಹೀಗಾದ ಮೇಲೆ, ಎಲ್ಲ ವ್ಯಕ್ತಿಗಳ ಆತ್ಮೋನ್ನತಿಗೆ ಅವಕಾಶವೆಲ್ಲಿದೆ?

ತನ್ನಾಶ್ರಯದ ರತಿಸುಖವನು, ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯನೇಮವನು ತಾ. ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತಬಲ್ಲರು ಕೂಡಲಸಂಗಮದೇವ?

ಭಕ್ತಸ್ಥಲ ೧೮೩

ಎಂಬುದಾಗಿ ಮಹಾನುಭಾವರಾದ ಬಸವಣ್ಣನವರು ಹೇಳಿರುವಂತೆ ಅನ್ಯರಿಂದ ದೇವರ ಪೂಜೆಯನ್ನು ಮಾಡಿಸುವವರು ಶಿವನನ್ನು ಕಾಣುವುದು ಶಕ್ಯವಿಲ್ಲ. ಅದು ಯುಕ್ತವೂ ಅಲ್ಲ. ತನಗೆ ಹಸಿವೆಯಾದಾಗ ಅನ್ಯರು ಊಟಮಾಡಿದರೆ ತನ್ನ ಹೊಟ್ಟೆ ತುಂಬುವುದೇ? ತಾನು ರೋಗಿಯಾದಾಗ ಅನ್ಯರು ಔಷಧಿಯನ್ನು ತೆಗೆದುಕೊಂಡರೆ ತಾನು ನಿರೋಗಿಯಾಗುವನೇ? ತನ್ನ ಆತ್ಮೋನ್ನತಿಯಾಗಬೇಕಾದರೆ ತಾನು ದೇವರ ಪೂಜೆ ಧ್ಯಾನಾದಿಗಳನ್ನು ಮಾಡಬೇಕೇ ವಿನಾ ಅನ್ಯರು ಮಾಡಿದರೆ ಅದರಿಂದ ತನ್ನ ಹೀನಾವಸ್ಥೆಯು ದೂರಾಗುವುದು ಹೇಗೆ?

ಆದಕಾರಣ ವೀರಶೈವ ಮತತತ್ವದ ಪ್ರಕಾರ ಪ್ರತಿಯೊಂದು ವ್ಯಕ್ತಿಯೂ ಶಿವಲಿಂಗವನ್ನು ಧರಿಸಿ ನಿಜವಾಗಿಯೂ ತನ್ನ ದೇಹವನ್ನು ಶಿವಾಲಯವನ್ನಾಗಿ ಮಾಡಿಕೊಳ್ಳವುದೇ ವಿಹಿತವಾಗಿದೆಯೆಂದು ಸಿದ್ಧವಾಗುವುದಿಲ್ಲವೇ? ಎಂದ ಮೇಲೆ ಮೆಟ್ಲುಗಳನ್ನು ಏರಿದ ಜೀವನಿಗೆ ಲಿಂಗಧಾರಣವು ಅತ್ಯವಶ್ಯಕವಾಗಿಯೇ ಇದೆ.

ನಮಗೆ ತೋರುವ ದೇಹವು ಇದೊಂದೇ ಆಗಿದ್ದರೂ ಜೀವಾತ್ಮನಿಗೆ ಸೂಕ್ಷ್ಮ ಮತ್ತು ಕಾರಣಗಳೆಂದ ಇನ್ನೆರಡು ದೇಹಗಳೂ ಅಂಟಿಕೊಂಡಿವೆ. ಈ ಪ್ರಕಾರ ಜೀವನಿಗಿರುವ ಸ್ಥೂಲ, ಸೂಕ್ಷ್ಮ ಕಾರಣಗಳೆಂಬ ಮೂರು ದೇಹಗಳಲ್ಲಿ ಅನುಕ್ರಮವಾಗಿ ಆಣವಮಲ, ಮಾಯಾಮಲ ಮತ್ತು ಕಾರ್ಮಿಕಮಲಗಳೆಂಬ ಮೂರು ದೋಷಗಳು ಇವೆ. ಇವುಗಳನ್ನು ತೆಗೆಯಲು ಈ ಇಷ್ಟಲಿಂಗಪೂಜೆಯೊಂದೇ ಸಾಲದು, ಆದುದರಿಂದ ವೀರಶೈವ ಮತದಲ್ಲಿ ಮೂರು ಪರಕಾರದ ಲಿಂಗಪೂಜೆಯನ್ನು ಗೊತ್ತುಮಾಡಿದ್ದಾರೆ.

ಶ್ರೀಗುರು ತನ್ನ ಕಾರುಣ್ಯ ಹಸ್ತವನ್ನು ಕೃಪಾದೃಷ್ಟಿಯಿಂದ ನಮ್ಮ ಮಸ್ತಕದ ಮೇಲಿಟ್ಟೊಡನೆ ಆ ವೇಧಾಧಿಕ್ಷೆಯಿಂದ ನಮ್ಮ ಹೃದಯದಲ್ಲಿದ್ದ ಪರಮಾತ್ಮ ಜ್ಯೋತಿಯು ಮಸ್ತಕವನ್ನು ವ್ಯಾಪಿಸಿತು. ಆ ಮಹಾಬೇಳಕೇ ಭಾವಲಿಂಗವು. ಅದನ್ನು ಧ್ಯಾನಿಸುವುದರಿಂದ ನಮ್ಮ ಕಾರಣದೇಹದಲ್ಲಿ ಸೇರಿದ್ದ ಧನಾದಿ ಕಾರ್ಮಿಕಮಲಗಳು ನಾಶವಾಗುತ್ತವೆ.

ಮಸ್ತಕದಲ್ಲಿ ತೋರಿದ ಮಹಾಬೆಳಕನ್ನೇ ಮಂತ್ರೋಪದೇಶದ ಮನುದೀಕ್ಷೆಯಿಂದ ಮನಸ್ಸಿಗೆ ತಂದುಕೊಟ್ಟುದೇ ಪ್ರಾಣಲಿಂಗವು. ಈ ಪ್ರಾಣಲಿಂಗವು ಆಧಾರಸ್ಥಾನದಲ್ಲಿ ಸುವರ್ಣಕಾಂತಿಯಿಂದಲೂ ಹೃದಯಸ್ಥಾನದಲ್ಲಿ ಹವಳದ ಕಾಂತಿಯಿಂದಲೂ ಹುಬ್ಬಿನ ಮಧ್ಯದಲ್ಲಿ ಸ್ಪಟಿಕದ ಕಾಂತಿಯಿಂಪಲೂ ಪ್ರಕಾಶಿಸುತ್ತಿದೆಯೆಂದು ಭಾವಿಸಿ ಇವುಗಳಲ್ಲಿ ತನಗಿಷ್ಟವಾದ ಸ್ಥಾನದಲ್ಲಿ ಅನುಸಂಧಾನವನ್ನು ಮಾಡುವುದೇ ಪ್ರಾಣ ಲಿಂಗಧಾರಣೆಯು. ಇದರಿಂದ ಸೂಕ್ಷ್ಮದೇಹದಲ್ಲಿರುವ ಜಾತಿಯ ಮೋಹಸಂಬಂಧವಾದ ಮಾಯಾಮಲ ನಾಶವಾಗುತ್ತದೆ.

ಆ ಮನಸ್ಸಿನಲ್ಲಿ ಹೊಳೆದ ಬೆಳಕನ್ನೇ ರೂಪುಗೊಳಿಸಿ ಕೈಯಲ್ಲಿ ಕ್ರಿಯಾದೀಕ್ಷೆಯ ಮೂಲಕ ಕೊಟ್ಟಲಿಂಗವೇ ಇಷ್ಟಲಿಂಗವು. ಇದನ್ನು ಸ್ಥೂಲದೇಹದಲ್ಲಿ ಧರಿಸಿದರೆ ತಂದೆತಾಯಿಗಳ ಶುಕ್ರಶೋಣಿತ ಸಂಬಂಧವಾದ ಆಣವಮಲವು ನಾಶವಾಗುತ್ತದೆ. ಈ ಇಷ್ಟಲಿಂಗವನ್ನು ಧರಿಸುವ ಸ್ಥಾನಗಳ ವಿಷಯವಾಗಿ **ಸಿದ್ಧಾಂತ ಶಿಖಾಮಣಿಯ** ಲಿಂಗಧಾರಣ ಸ್ಥಳದಲ್ಲಿ ಈ ಪ್ರಕಾರ ವಿವರಿಸಿದೆ. :

ಮೂರ್ಧ್ನಿವಾ ಕಂಠದೇಶೇವಾ। ಕಕ್ಷೇವಕ್ಷ ಸ್ಥಳೇ ಪಿವಾ।
ಕುಕ್ಷೌಹಸ್ತಸ್ಥಳೇ ವಾಪಿ। ಧಾರಯೇ ಲಿಂಗಮೈಶ್ವರಂ॥ ಪ. ೬. ಶ್ಲೋ. ೫೩.

'ಇಷ್ಟಲಿಂಗವನ್ನು ತಲೆ, ಕೊರಳು, ಎದೆ, ಹೊಟ್ಟೆ, ಹಸ್ತ ಈ ಆರು ಸ್ಥಾನಗಳ ಮೇಲೆ ಎಲ್ಲಿಯಾದರೂ ಧರಿಸಬಹುದು.' ಈ ಸ್ಥಾನಗಳನ್ನು ಬಿಟ್ಟು ಬೇರೆ ಕಡೆಗೆ ಧರಿಸುವುದು ಪಾಪಕರವಾದುದು. ಹೊಕ್ಕಳ ಕೆಳಭಾಗಕ್ಕೆ ಬರುವಂತೆ ಧರಿಸುವುದಂತೂ ಮಹಾ ಪಾಪಕರವಾದುದಾಗಿದೆ. ಈ ಇಷ್ಟಲಿಂಗವನ್ನು ಒಂದು ನಿಮಿಷವಾದರೂ ಬಿಟ್ಟಿರಬಾರದು. ದೇಹಾಂತ್ಯದವರೆಗೂ ಇದು ಇದ್ದೇ ಇರಬೇಕು.

ಈ ಇಷ್ಟಲಿಂಗವನ್ನು ತನ್ನ ಎಡಹಸ್ತದಲ್ಲಿರಿಸಿ ಗಂಧಾಕ್ಷತೆ ಪತ್ರೆಪುಷ್ಪಾದಿಗಳಿಂದ ಗುರುಗಳು ತಿಳಿಸಿಕೊಟ್ಟ ಪ್ರಕಾರ ಭಕ್ತಿಭಾವದಿಂದ ಪೂಜಿಸಬೇಕು. ಇದು ಇಷ್ಟಲಿಂಗ ಪೂಜೆಯು ಈ ಪೂಜೆಯನ್ನು ಮಾಡಿ ಪ್ರಾಣಲಿಂಗವನ್ನು ನೋಡಬೇಕು. ಅಲ್ಲಿ ಆ ದಿವ್ಯ ಜ್ಯೋತಿಗೆ ತನ್ನಲ್ಲಿರುವ ಶಿವಭಕ್ತಿಯೆಂಬ ಜಲದಿಂದ ಅಭಿಷೇಕ ಮಾಡಿ ವೈರಾಗ್ಯವೆಂಬ ಗಂಧವನ್ನೂ ಇಂದ್ರಿಯನಿಗ್ರಹವೆಂಬ ಅಕ್ಷತೆಯನ್ನೂ ಶಿವಜಾನವೆಂಬ ಪುಷ್ಪವನ್ನೂ ಸಂತೋಷವೆಂಬ ಧೂಪವನ್ನೂ ಅರ್ಪಿಸಿ ಪೂಜೆಮಾಡಬೇಕು. ಈ ಪ್ರಕಾರ ಸದ್ಗುಣ ಸಧಾಚಾರಗಳುಳ್ಳವನಾಗಿ, ಆ ತನ್ನ ಪ್ರಾಣಲಿಂಗಾನುಸಂಧಾನವನ್ನು ಮಾಡುವದೇ ಪ್ರಾಣಲಿಂಗ ಪೂಜೆಯು.

ಈ ಪೃಥ್ವಿಯೇ ಪೀಠವೆಂತಲೂ ಅಷ್ಟದಿಕ್ಕುಗಳೇ ಗೋಮುಖವೆಂತಲೂ ಆಕಾಶವೇ ಮೇಲ್ಭಾಗವೆಂತಲೂ ಭಾವಿಸಿ ವಿಶ್ವಾಕಾರದ ಲಿಂಗವು ಶಿವಜ್ಞಾನವೆಂಬ ಕರದಲ್ಲಿದೆಯೆಂತಲೂ ಸಪ್ತಸಮುದ್ರಗಳಿಂದ ಅಭಿಷೇಕ ಮಾಡುತ್ತಿದ್ದೇನೆಂತಲೂ ಸೂರ್ಯಚಂದ್ರ ನಕ್ಷತ್ರಗಳಿಂದ ಕೂಡಿದ ದಿವ್ಯವಾದ ಹೂಮಾಲೆಯನ್ನು ಆ ಭಾವಲಿಂಗಕ್ಕೆ ಧರಿಸಿದ್ದೇನೆಂತಲೂ ಪ್ರಪಂಚದ ಸಮಸ್ತ ಸಸ್ಯಾದಿಗಳನ್ನು

ನೈವೇದ್ಯವಾಗಿ ಸಮರ್ಪಿಸುತ್ತ ತಾನೂ ಅದರಲ್ಲಿಯೇ ಯಾಳ್ಳವನಾಗುವುದೇ ಭಾವಲಿಂಗ ಪೂಜೆಯು, ಪ್ರಾಣಲಿಂಗ ಪೂಜೆಯನ್ನು ನೋಡಿದ ಮೇಲೆ ಈ ಭಾವಲಿಂಗದಲ್ಲಿ ಕೂಡಬೇಕು. ಈ ಪ್ರಕಾರ ಇಷ್ಟ ಪ್ರಾಣ ಮತ್ತು ಭಾವಲಿಂಗಗಳ ಪೂಜೆಯನ್ನು ಮಾಡಿ, ನೋಡಿ ಕೂಡುವುದೇ ವೀರಶೈವರ ಲಿಂಗಪೂಜೆಯು. ಇದು ಕೇವಲ ಸಾಕಾರ ಪೂಜೆಯನ್ನು ಅಥವಾ ಕೇವಲ ನಿರಾಕಾರ ಪೂಜೆಯಲ್ಲ. ಕೇವಲ ಸಾಕಾರ ಪೂಜೆಯಿಂದ ಜೀವನು ಜಡನಾಗಬಹುದು. ಕೇವಲ ನಿರಾಕಾರ ಪೂಜೆಯಿಂದ ಭ್ರಮಿತನಾಗಬಹುದು. ಈ ಉಭಯ ಪೂಜೆಯು ಜೀವನ ಉದ್ಧಾರಕ್ಕೆ ಸುಲಭೋಪಾಯವು.

ಈ ಪ್ರಕಾರ ಶ್ರೀ ಗುರು ಲಿಂಗಾಧಾರಣಸ್ಥಳದಲ್ಲಿ ಜೀವನಿಗೆ ಎಲ್ಲ ಸಂಗತಿಗಳನ್ನೂ ತಿಳಿಸಿದ ನಂತರ ಆ ಪ್ರಕಾರ ಆಚರಿಸುವ ಜೀವನು ಐದನೆಯ ಮೆಟ್ಟಲನ್ನು ಏರಿದ್ಧಾನೆಂದು ತಿಳಿಯಬೇಕು.

(೬) ವಿಭೂತಿಧಾರಣ ಸ್ಥಳ : ಕೇವಲ ಗೋಮಯದಿಂದ ಶಾಸ್ತ್ರೋಕ್ತವಾಗಿ ಸಿದ್ಧವಾದ ಭಸ್ಮವನ್ನು ತ್ರಿಪುಂಡ್ರವಾಗಿ ಧರಿಸುವುದರಲ್ಲಿ ನಿಷ್ಠೆಯುಳ್ಳ ಜೀವನು ಆರನೆಯ ಸೋಪಾನವನ್ನೇರಿದನೆಂದು ತಿಳಿಯಬೇಕು. ವಿಭೂತಿಯು ಶಿವನ ಮೈ ಬೆಳಗೆಂದು ಭಾವಿಸಿ ಧರಿಸಬೇಕು. ಇದನ್ನು ಧರಿಸುವಾಗ ಅಂತರ್ಧ್ಯಾನಾಸಕ್ತನಾಗಿ ಬಾಹ್ಯ ವಿಚಾರಗಳನ್ನೆಲ್ಲಾ ಬಿಟ್ಟುಬಿಡಬೇಕು.

ಬೆಂಕಿಯನ್ನು ಆರಗೊಡದೆ ಕಾದಿಡುವಾಗ ಮೇಲೆ ಹೇಗೆ ಬೂದಿಯನ್ನು ಮುಚ್ಚುತ್ತಾರೆಯೋ ಹಾಗೆಯೇ ಆಂತರ್ಯಜ್ಯೋತಿಯು ಪ್ರಕಾಶಮಯವಾಗಿ ಬಾಹ್ಯ ವಿಷಯಾದಿಗಳಿಂದ ಆರಬಾರದೆಂದು ಈ ಭಸ್ಮವನ್ನು ದೇಹಕ್ಕೆ ಲೇಪಿಸುವ ಭಾವನೆಯುಳ್ಳವನಾಗಿರಬೇಕು. ಇಂತಹ ನಿಷ್ಠೆಯಿಂದ **ಸಿದ್ಧಾಂತ ಶಿಖಾಮಣಿಯ** ವಿಭೂತಿಧಾರಣ ಸ್ಥಳದಲ್ಲಿ ವಿವಿಸಿರುವಂತೆ ಕಿರುಬೆರಳು ಮತ್ತು ಹೆಬ್ಬೆರಳುಗಳನ್ನು ಬಿಟ್ಟು ಉಳಿದ ಮೂರು ಬೆರಳುಗಳಿಂದ ಈ ಕೆಳಗೆ ವಿವರಿಸಿರುವ ಸ್ಥಳಗಳಲ್ಲಿ ಧರಿಸಬೇಕು.

ಉತ್ತಮಾಂಗೇ ಲಲಾಟೇಚ ಶ್ರಣದ್ವಿತಯೇ ತಥಾ~
ಗಳೇ ಬುಜದ್ವಯೇಚ್ಛವ ಹೃದಿನಾಚಾಚ ಪೃಷ್ಠಕೇ
ಬಾಹುಯುಗ್ಮೇಕಕುದ್ದೇಶೇ ಮಣೀಬಂಧದ್ವಯೇ ತಥಾ
ತ್ರಿಪುಂಡ್ರಂ ಭಸ್ಮರಾಧಾರ್ಯಂ ಮೂಲಮಂತ್ರೆಅ ಸಾಧಕೈಃ ಪ. ೬. ಶ್ಲೋ.೩೨-೩೩

"ತಲೆ, ಹಣೆ, ಎರಡು ಕಿವಿ, ಕೊರಳು ಎರಡು ಭುಜ, ಎದೆ, ಹೊಕ್ಕಳು, ಬೆನ್ನು ಎರಡು ತೋಳು ಕುತ್ತಿಗೆ, ಎರಡು ಮುಂಗೈ ಈ ಪ್ರಕಾರ ೧೫ ಸ್ಥಾನಗಳಲ್ಲಿ ಭಸ್ಮವನ್ನು ಭಕ್ತಿಯಿಂದ ಧರಿಸಬೇಕು."

(೭) ರುದ್ರಾಕ್ಷಿಧಾರಣ ಸ್ಥಳ : ರುದ್ರಾಕ್ಷಿಗಳು ತ್ರಿಪುರಸಂಹಾರದ ಕಾಲಕ್ಕೇ ರುದ್ರನ ಕಣ್ಣುಗಳಿಂದ ಉದುರಿನ ಜಲಬಿಂದುಗಳಿಂದುಂಟಾದವೆಂದು ಶಾಸ್ತ್ರದಲ್ಲಿ ಹೇಳಿದೆ. ಇವುಗಳನ್ನು ಭಕ್ತಿಯಿಂದ ಗುರುಗಳು ಉಪದೇಶ ಮಾಡಿದ ಪ್ರಕಾರ ಧರಿಸಬೇಕು. ಶಿವರೂಪದಂತಿರುವ ಗುರುಗಳ ಕೃಪಾಕಟಾಕ್ಷದಿಂದ ಬರುವ ಆನಂದಬಾಷ್ಪಗಳೇ ರುದ್ರಾಕ್ಷಿಗಳೆಂತಲೂ ಅವುಗಳನ್ನು ಶಿಷ್ಯನು ಧರಿಸಬೇಕೆಂತಲೂ ಕೆಲವರು ಈ ರುದ್ರಾಕ್ಷಿಯ ಮರ್ಮವನ್ನು ಹೇಳುತ್ತಾರೆ. ಎಂದರೆ ಯಾವಾಗಲೂ ಗುರುಗಳ ಕೃಪಾಕಟಾಕ್ಷ ಪಾತ್ರನಾಗಿರುವುದೇ ರುದ್ರಾಕ್ಷಿಧಾರಣವೆಂಬುದು ಅವರ ಉದ್ದೇಶವು. ಇದು ವಿಹಿತವಾಗಿಯೇ ಇದೆ. ಹೀಗೆ ಗುರುಕೃಪೆಗೆ ಪಾತ್ರನಾಗಿರುವ ಶಿಷ್ಯನು ಅದರ ದ್ಯೋಕವಾಗಿಯೇ

ರುದ್ರಾಕ್ಷಿಗಳನ್ನು ಧರಿಸುವುದು ವಿಹಿತ. ಹಾಗೆ ಗುರುಕೃಪೆಗೆ ಪಾತ್ರನಾಗದೆ ಇರತಕ್ಕ ಜೀವನು ರುದ್ರಾಕ್ಷಿಗಳನ್ನು ಧರಿಸುವುದರಿಂದೇನು ಫಲ?

ಭಸ್ಮಧಾರಣವು ಶೀತನಿವಾರಣೆಗೂ ಚರ್ಮರೋಗ ನಿವಾರಣೆಯೂ ಸಾಧನವಾಗಿರುವಂತೆ ರುದ್ರಾಕ್ಷಿಯಲ್ಲಿ ವಿದ್ಯುಚ್ಛಕ್ತಿಯ ಗುಣವಿರುವುದಿಂದ ಇದನ್ನು ದೇಹದಲ್ಲಿ ಯಾವಾಗಲೂ ಧರಿಸಿದರೆ ರಕ್ತಾಭಿಸರಣಕ್ಕೆ ಸ್ಸಹಾಯ ಮಾಡುತ್ತದೆಂತಲೂ ಕೆಲವರು ಹೇಳುತ್ತಾರೆ. ಆದರೆ ಇದು ಧಾರ್ಮಿಕ ಭಾವನೆಯನ್ನು ಇವುಗಳನ್ನು ದೃಷ್ಟಿಯಿಂದಲೇ ಧರಿಸುವುದು ಮನಸ್ಸಿನ ಪವಿತ್ರತೆಗೆ ಸಾಧನವಾಗುತ್ತದೆ. ಇದರಿಂದ ದೇಹ ಪವಿತ್ರವೂ ಆಗುತ್ತಿದ್ದರೆ ಒಳ್ಳಯದೇ ಆಯಿತು. ರುದ್ರಾಕ್ಷಿಗಳು ಬಂಗಾರದ ಒರಿಗೆ ಬರುವಂತೆ ಇರಬೇಕು. ಇವುಗಳಲ್ಲಿ ಮುಖ ವ್ಯತ್ಯಾಸಗಳೂ ಇವೆ. ಬೇರೆ ಬೇರೆ ಮುಖದವುಗಳಿಂದ ಫಲಪರಿಣಾಮಗಳೂ ಬೇರೆಯಾಗುತ್ತವೆಂದು ಶಾಸ್ತ್ರದಲ್ಲಿ ಹೇಳಿದೆ.

ರುದ್ರಾಕ್ಷಿಧಾರಣೆಯ ವಿಷಯವಾಗಿ **ಸಿದ್ಧಾಂತ ಶಿಖಾಮಣಿಯ** ರುದ್ರಾಕ್ಷಧಾರಣ ಸ್ಥಲದಲ್ಲಿ ಈ ಪ್ರಕಾರ ಹೇಳದೆ.

ಶಿಖಾಯಾಮೇಕಮೇಕಾಸ್ಯ ರುದ್ರಾಕ್ಷಂ ಧಾರಯೇದ್ಬುಧಃ
ದ್ವಿತಿದ್ವಾದಶ ವಕ್ತ್ರಾಣಿ ಶಿರಸಿ ತ್ರೀಣಿ ಧಾರಯೇತ್
ಷಟ್ತ್ರಿಂಶದ್ಧಾರಯೇನ್ಮೂರ್ಧ್ನಿ ನಿತ್ಯಮೇಕಾದಶಾನನಾ‌ರ್
ಪಂಚಾಶದ್ಧಾರಯೇ ದ್ವಿರ್ದ್ವಾಚತುರ್ವಕ್ತ್ರಾಮಿ ವಕ್ಷಸಿ
ತ್ರಯೋದಶಮುಖಾನ್ಬಾಹೊವೇರ್ಧರೇತ್ ಷೋಡಶ ಷೋಡಶ
ಪ್ರತ್ಯೇಕಂ ದ್ವಾದಶ ವಹೇನ್ನ ವಾಸ್ಯಾನ್ಮಣಿ ಬಂಧಯೋಃ
ಚತುರ್ದಶ ಮುಖಂ ಯಜ್ಞಸೂತ್ರ ಮಷ್ಟೋತ್ತರಂ ಶತಂ   ಪ. ೭. ಶ್ಲೋ. ೫೪–೫೮

ಬುದ್ಧಿವಂತರಾದ ಶಿವಭಕ್ತನು ಶಿಖಾಸ್ಥಾನದಲ್ಲಿ ಒಂದು ಮುಖದ ಒಂದು ರುದ್ರಾಕ್ಷಿಯನ್ನು ತಲೆಯ ಮೇಲೆ ೨ ಮುಖವುಳ್ಳದ್ದೊಂದು ೩ ಮುಖವುಳ್ಳದ್ದೊಂದು, ೧೨ ಮುಖವುಳ್ಳದ್ದೊಂದು, ಈ ಪ್ರಕಾರ ಮೂರನ್ನು ೧೧ ಮುಖಗಳ ೩೬ ರುದ್ರಾಕ್ಷಿಗಳನ್ನು ನೆತ್ತಿಯ ಮೇಲೆ. ೧೦ ಮುಖದವು ೨, ೭ ಮುಖದವು ೨, ೫ ಮುಖದವು ೨ ಹೀಗೆ ಆರಾರನ್ನು ಎರಡು ಕಿವಿಗಳಲ್ಲಿಯು, ೬ ಮುಖದ ೧೬, ೮ ಮುಖದ ೧೬ ಹೀಗೆ ೩೨ ರುದ್ರಾಕ್ಷಿಗಳನ್ನು ಕೊರಳಿನಲ್ಲಿಯು, ೪ ಮುಖದ ೫೦ ರುದ್ರಾಕ್ಷಿಗಳನ್ನು ಎದೆಯ ಮೇಲೆಯು, ೧೩ ಮುಖದ ೩೨ ರುದ್ರಾಕ್ಷಿಗಳನ್ನು, ಒಂದೊಂದು ತೊಳಿಗೆ ೧೬ರಂತೆ ಎರಡೂ ತೋಳೂಗಳಲ್ಲಿ ೯ ಮುಖಗಳ ೨೪ ರುದ್ರಾಕ್ಷಿಗಳನ್ನು ೧೨ ರಂತೆ ೨ ಮುಂಗೈಗಳಿಗೂ ೧೪ ಮುಖಗಳ ೧೦೮ ರುದ್ರಾಕ್ಷಿಗಳನ್ನು ಯಜ್ಞೋಪವೀತವನ್ನಾಗಿಯೂ ಧರಿಸಬೇಕು.

ಇಷ್ಟು ರುದ್ರಾಕ್ಷಿಗಳನ್ನು ಯಾವಾಗಲೂ ಧರಿಸಲು ಶಕ್ಯವಿಲ್ಲದವರು ಲಿಂಗಪೂಜೆಯ ಕಾಲದಲ್ಲಾದರೂ ಧರಿಸಬೇಕು ಆಗಲು ಕೂಡಾ ಇಷ್ಟೆಲ್ಲಾ ರುದ್ರಾಕ್ಷಿಗಳನ್ನು ಧರಿಸಲು ಸಾಧ್ಯವಿಲ್ಲದಿದ್ದರೆ ಕೊನೆಗೆ ಒಂದು ರುದ್ರಾಕ್ಷಿಯನ್ನಾದರೂ ಭಕ್ತಿಯಿಂದ ಯಾವಾಗಲೂ ಧರಿಸಬೇಕು.

ಗುರುಕಾರುಣ್ಯ ಲಿಂಗಧಾರಿಯಾಗಿ ಮಲಮಾಯಾ ಪಾಶಗಳನ್ನು ಭಸ್ಮಮಾಡಿದೆನೆಂಬುದರ ದ್ಯೋತಕಕ್ಕಾಗಿ ಹಣೆಯ ಮೇಲಾದರೂ ತ್ರಿಪುಂಡ್ರ ಭಸ್ಮಧಾರಣೆಯು ಹೇಗೆ ಅತ್ಯಗತ್ಯವಾಗಿಯೇ ಇದೆಯೇ ಹಾಗೆಯೇ ಗುರುಕೃಪಾ ಕಟಾಕ್ಷಕ್ಕೆ ಪಾತ್ರನಾಗಿರುವುದರ ದ್ಯೋತಕಕ್ಕಾಗಿ ಒಂದು ರುದ್ರಾಕ್ಷಿಯನ್ನಾದರೂ ಯಾವಾಗಲೂ ಧರಿಸಬೇಕಾದುದು ಅಗತ್ಯವಾಗಿದೆ. ಆಗ ಜೀವನು ಏಳನೆಯ ಅಂತಸ್ತನ್ನು ಏರಿದಂತಾಯಿತು.

(೮) ಪಂಚಾಕ್ಷರಿ ಜಪ ಸ್ಥಳ : ಈ ವರೆಗೆ ವಿವರಿಸಿದಂತೆ ಲಿಂಗ, ಭಸ್ಮ ಮತ್ತು ರುದ್ರಾಕ್ಷಿಗಳನ್ನು ಧರಿಸಿದ ಶಿವಭಕ್ತನು ಶಿವಪಂಚಾಕ್ಷರ ಮಂತ್ರಜಪವನ್ನು ಮಾಡಬೇಕು. ಈ ಜಪವು ಮಾನಸ, ಉಪಾಂಶು ಮತ್ತು ವಾಚಿಕವೆಂದು ಮೂರು ತರಹವಾಗಿದೆ. ಗಟ್ಟಿಯಾಗಿ ಶಿವಪಂಚಾಕ್ಷರಿಯನ್ನು ಉಚ್ಚರಿಸುವುದು ವಾಚಕ ಇದು ಹೆಚ್ಚು ಫಲದಾಯಕವಾದುದಲ್ಲ. ಆದುದರಿಂದಲೇ ವೀರಶೈವರು ಇದನ್ನು ನಿಷೇಧಿಸಿದ್ದಾರೆ. ಶಿವನು ತನಗೆ ಪತಿಯೆಂತಲೂ ತಾನು ಸತಿಯೆಂತಲೂ ಮಧುರ ಭಕ್ತಿಯಿಂದಾಚರಿಸುವುದೇ ವೀರಶೈವರಧರ್ಮವು. ಪತಿವ್ರತಾ ಸ್ತ್ರೀಯಳು ಹೇಗೆ ತನ್ನ ಪತಿಯ ಹೆಸರನ್ನು ವಾಚಿಕವಾಗಿ ಹೇಳುವುದಿಲ್ಲವೋ ಹಾಗೆಯೋ ವೀರಶೈವನು ಪಂಚಾಕ್ಷರಿಯ ಮಂತ್ರವನ್ನು ವಾಚಿಕವಾಗಿ ಜಪಿಸಬಾರದೆಂದೇ ಶಿವಾನುಭವಿಗಳು ಹೇಳುತ್ತಿದ್ಧಾರೆ.

ಬಹು ಮೆಲ್ಲಗೆ ತುಟಿಗಳನ್ನು ಮಾತ್ರ ಆಡಿಸುತ್ತ ಪಂಚಾಕ್ಷರಿಮಂತ್ರವನ್ನು ಜಪಿಸುವುದು ಉಪಾಂಶು ಜಪವೆಂದು ಹೇಳುತ್ತಾರೆ. ಇದು ವೀರಶೈವರಿಗೆ ಸಮ್ಮತವಾದುದಾಗಿದೆ. ಆದರೆ ಇದಕ್ಕಿಂದ ಮನಸ್ಸಿನಲ್ಲಿಯೇ ಜಪಿಸುವುದು ಸರ್ವಶ್ರೇಷ್ಠವಾದುದು. ಮನಸ್ಸಿನಲ್ಲಿ ಜಪಿಸತಕ್ಕದ್ದಾಗಿದುದರಿಂದಲೇ ಇದಕ್ಕೆ ಮಂತ್ರವೆಂದು ಹೇಳಿದೆ. ಆದುದರಿಂದ ಗುರುಗಳು ಉಪದೇಶ ಮಾಡಿದ ಪ್ರಕಾರ ಈ ಪಂಚಾಕ್ಷರಿ ಮಂತ್ರಜಪವನ್ನು ಬಹು ಭಕ್ತಿಯಿಂದ ಮಾಡುತ್ತಿರಬೇಕು. ಹಾಗಾದರೆ ಶಿವನನ್ನು ಸೇರುವ ೧೦೧ ಸ್ಥಳಗಳಲ್ಲಿ ೮ ಸ್ಥಳಗಳನ್ನು ಏರಿದಂತಾಗುವುದು.

ಮನುಷ್ಯನು ಒಂದು ದಿನಕ್ಕೆ ೨೧೬೦೦ ಸಾರೆ ಶ್ವಾಸವನ್ನು ಬಿಟ್ಟು ತೆಗೆದುಕೊಳ್ಳುತ್ತಿದ್ದರೆ ಹೀಗೆ ಮಾಡುವಾಗ ಸ್ವಭಾವಿಕವಾಗಿಯೇ ಹಂಸ ಎಂಬ ಶಬ್ದವನ್ನು ಜೀವನು ಉಚ್ಚರಿಸುತ್ತಿದ್ದಾನೆ. ಗುರುಗಳ ಉಪದೇಶದಿಂದ ಈ ಹಂಸ ಶಬ್ದಗಳ ಸ್ವಭಾವಿಕ ಪ್ರಾಣ ಸಂಚಾರವನ್ನು ಪಡೆದು ಪ್ರಾಣಾಯಾಮದಿಂದ "ಸೋಹಂ" ಎಂಬುದಾಗಿ ತಿರುಗಿಸಿಕೊಳ್ಳಬೇಕು. ಇದೇ ಮಂತ್ರಸಿದ್ಧಿಯು.

ಶಾಂತಚಿತ್ತವಾಗಿ ಭಕ್ತಿಯಿಂದ ಯಾವಾಗಲೂ ಈ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಿದ್ದರೆ ಹೃದಯಾಂತರ್ಗತ ಪರಮಾತ್ಮನು ಮಕ್ಕಳ ಮೊರೆಗೆ ತಾಯಿಯು ಬರುವಂತೆ ಪ್ರಸನ್ನನಾಗುತ್ತಾನೆ. ಆದುದರಿಂದ ಶಿವಪೂಜೆಯಾದ ನಂತರ ನೂರೊಂಟು ಸಾರೆಯಾದರೂ ಈ ಜಪವನ್ನು ಮಾಡಲೇಬೇಕು. ಹೀಗೆ ಮಾಡಿದರೆ ಎಂಟನೆಯ ಸೋಪಾನವನ್ನು ಏರಿದಂತಾಯಿತು. ವೀರಶೈವರಾದವರಲ್ಲಿ ಈ ವರೆಗೆ ವಿವರಿಸಿರುವ ಆಚರಣೆಗಳಾದರೂ ಇರಲೇಬೇಕು. ಇದೇ ವೀರಶೈವ ಲಕ್ಷಣ.

❖❖

೨ನೆಯ ಪ್ರಕರಣ

ಭಕ್ತನ ಆಚರಣೆ

ಶಿವಲಿಂಗ ಭಸ್ಮ ರುದ್ರಾಕ್ಷಿಗಳನ್ನು ಧರಿಸಿ ಶಿವ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಿರುವ ಶಿವಭಕ್ತನು ಆಚರಿಸತಕ್ಕ ಕೆಲವು ಮುಖ್ಯ ಆಚರಣೆಗಳನ್ನು ಈ ಪ್ರಕರಣದಲ್ಲಿ ವಿವರಿಸಿದ್ಧಾಗಿದೆ.

(೯) ಭಕ್ತಮಾರ್ಗ ಕ್ರಿಯಾಸ್ಥಳ : ವೀರಶೈವನು ಆಚರಿಸಬೇಕಾದ ೧೦೧ ಸ್ಥಳಗಳ ಆಚರಣೆಗಳಲ್ಲಿ ಈ ಮುಂಚೆ ೮ ಸ್ಥಳಗಳ ವೀವೇಚನೆಯನ್ನು ಮಾಡಿದ್ಧಾಗಿದೆಯಷ್ಟೆ. ಒಂಬತ್ತನೆಯದಾದ ಭಕ್ತಮಾರ್ಗ ಕ್ರಿಯಾಸ್ಥಳದಲ್ಲಿ ಶಿವಭಕ್ತಿಯೇ ಮುಖ್ಯವಾದುದಾಗಿ ಪರಿಣಮಿಸಿದೆ. ಯಾವಾತನು ಶಿವನಲ್ಲಿ ಅಚಲವಾದ ಭಕ್ತಿಯುಳ್ಳವನಾಗಿರುವನೋ ಆತನು ಯಾವ ಕುಲದವನಾಗಿದ್ದರೂ ಭಕ್ತನೆಂದೇ ತಿಳಿಯಬೇಕು. ಈ ವಿಷಯವಾಗಿ ಸಿದ್ಧಾಂತ ಶಿಖಾಮಣಿ ಗ್ರಂಥದ ಭಕ್ತಮಾರ್ಗ ಕ್ರಿಯಾಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

ಅಧಮೇಚೋತ್ತಮೇವಾಪಿ ಯತ್ರಕುತ್ರಚಿದೂರ್ಜಿತಾ
ವರ್ತಕೇ ಶಾಂಕರೀ ಭಕ್ತಿಸ್ಸಭಕ್ತ ಇತಿಗೀಯತೇ
ಭಕ್ತಿಸ್ಸ್ಥಿರೀಕೃತಾಯಾಸ್ಮಿ ಮ್ಲೇಚ್ಛೇವಾದ್ವಿಜಸತ್ತಮೇ
ಶಂಭೋಃ ಪ್ರಿಯಸ್ಸವಿಪ್ರಶ್ಚ ನಪ್ರಿಯೋ ಭಕ್ತಿವರ್ಜಿತಃ ಪ. ೮. ಶ್ಲೋ. ೪. ೫

"ಅಧಮ ಕುಲದವರಿರಲಿ ಅಥವಾ ಉತ್ತಮ ಕುಲದವರಿರಲಿ ಶಿವಭಕ್ತಿಯುಳ್ಳಾತನೇ ಭಕ್ತನು ಶ್ವಪಚನವಾಗಿದ್ದರೂ ಶಿವಭಕ್ತಿಯುಳ್ಳವನಾಗಿದ್ದರೆ ಶಿವನು ಮೆಚ್ಚುವನೇ ವಿನಾ ಬ್ರಾಹ್ಮಣನಾಗಿದ್ದರು ಶಿವಭಕ್ತಿವಿಹೀನನಾಗಿದ್ದರೆ ಆತನನ್ನು ಮೆಚ್ಚುವುದಿಲ್ಲ."

ಈ ಶ್ರೇಷ್ಠವಾದ ತತ್ವವನ್ನೇ ಮಹಾನುಭಾವರಾದ ಬಸವಣ್ಣನವರೂ ಈ ಪ್ರಕಾರ ಬೋಧಿಸಿದ್ದಾರೆ.

"ಶ್ವಪಚನಾದರೇನು ಲಿಂಗಭಕ್ತನೇ ಕುಲಜನು"
"ವಿಪ್ರಮೊದಲು ಅಂತ್ಯಜಕಡೆಯಾಗಿ ಶಿವಭಕ್ತರಾದವರನೊಂದೆಯಂಬೆ"
"ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ ಕಾಗೆ ಕೋಳಿಗಳಿಗಿಂತ ಕರಕಷ್ಟ."

ಆದುದರಿಂದ ಶಿವಭಕ್ತಿಯುಳ್ಳಾತನೇ ಶ್ರೇಷ್ಠನಲ್ಲದೆ ಜಾತಿಯಿಂದ ಯಾರಿಗೂ ಶ್ರೇಷ್ಟತ್ವವಿಲ್ಲವೆಂದೇ ಶಿವಭಕ್ತನು ತಿಳಿಯಬೇಕು.

ಈ ಶಿವಭಕ್ತಿಯು ಅಂತರ್ಯದಲ್ಲಿ ಪ್ರಾಣಲಿಂಗಾನುಸಂಧಾನದಲ್ಲೊಂದೇ ಇದ್ದರೆ ಸಾಲದು. ಅದು ಬಾಹ್ಯದಲ್ಲಿ ಇಷ್ಟಲಿಂಗ ಪೂಜಾದಿಗಳಲ್ಲಿಯೂ ಇರಲೇಬೇಕು. ಈ ಭಕ್ತಿಯು ಗುರುಲಿಂಗಜಂಗಮಗಳ ಸೇವೆಯಲ್ಲಿ ವ್ಯಕ್ತವಾದರೆ ಕಾಯ ಸಂಬಂಧವಾದುದಾಗಿಯೂ ಸ್ತುತಿಯಲ್ಲಿ ತೋರಿದರೆ ವಾಚಕವೆಂಬುದಾಗಿಯೂ ಧ್ಯಾನ್ಯದಲ್ಲಿ ಕೂಡಿದರೆ ಮಾನಸಿಕವೆಂಬುದಾಗಿಯೂ ಹೇಳಿಕೊಳ್ಳುತ್ತದೆ.

ಶಿವಭಕ್ತನು ತನ್ನಲ್ಲಿರುವ ಭಕ್ತಿಯನ್ನು ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞನಗಳೆಂಬ ಪಂಚಕ್ರಿಯೆಗಳಿಂದ ವ್ಯಕ್ತಗೊಳಿಸಬೇಕಾಗುತ್ತದೆ.

ಲಿಂಗಪೂಜೆಯ ಉಪಕರಣಗಳನ್ನು ಸಿದ್ಧಗೊಳಿಸಲು ದೇಹದಂಡನೆಯನ್ನು ಮಾಡುವುದು ತಪಸ್ಸು ಮತ್ತು ಕರ್ಮಗಳೇ ವಿನಾ ಹುಣ್ಣಿಮೆ ಅಮವಾಸಿ ಮೊದಲಾದ ಮಿತಿಮಾಸಾದಿಗಳ ವ್ರತವನ್ನಾಚರಿಸುವುದು ತಪಸ್ಸಲ್ಲ. ಯಾಗಾದಿಗಳನ್ನು ಮಾಡುವುದು ಕರ್ಮವೂ ಅಲ್ಲ. ಇವು ಶಿವಭಕ್ತನಿಗೆ ನಿಷಿದ್ದವಾದವುಗಳಾಗಿವೆ. ಆದುದರಿಂದಲೇ **'ಸಿದ್ಧಾಂತ ಶಿಖಾಮಣಿ'**ಯಲ್ಲಿ ಈ ಪ್ರಕಾರ ಹೇಳಿದೆ.

ಶಿವಾರ್ಥೇ ದೇಹ ಸಂತೋಷಸ್ತಪಃಕೃಛ್ರಾದಿ ನೋಮತಂ
ಶಿವಾರ್ಚಾ ಕರ್ಮವಿಜ್ಞೇಯಂ ಬಾಹ್ಯಂ ಯುಗಾದಿನೋಚ್ಯತೇಃ

"ಶಿವಪೂಜೆಗಾಗಿ ದೇಹದಂಡನೆಯಾಗುವುದೇ ತಪಸ್ಸು, ಶಿವಪೂಜೆಯೇ ಕರ್ಮವು, ಯಜ್ಞಯಾಗಾದಿಗಳನ್ನು ಮಾಡಕೂಡದು."

ಶಿವಪಂಚಾಕ್ಷರಿ ಅಥವಾ ಷಡಕ್ಷರಿ ಮಂತ್ರಜಪವೇ ಜಪವು. ಬೇರೆ ಯಾವ ದೇವರ ಅಥವಾ ಗ್ರಹಾದಿಗಳ ಜಪವನ್ನು ಭಕ್ತನು ಮಾಡಲೇಬಾರದು. ಶಿವಧ್ಯಾನವನ್ನು ಮಾಡಬೇಕಲ್ಲದೆ ಅನ್ಯದೇವರ ಧ್ಯಾನವನ್ನು ಎಂದೂ ಮಾಡಕೂಡದು. ಶಿವಾಗಮಗಳ ಜ್ಞಾನವೇ ಜ್ಞಾನವಲ್ಲವೆ ವೇದಾದಿ ಹಿಂಸೆ, ಫಲ ಪದಗಳನ್ನು ಕೊಡುವ ಶಾಸ್ತ್ರಗಳ ಜ್ಞಾನವು ಜ್ಞಾನವಲ್ಲ. ಆದುದರಿಂದಲೇ **'ಸಿದ್ಧಾಂತ ಶಿಖಾಮಣಿ'**ಯಲ್ಲಿ ಈ ಪ್ರಕಾರ ಹೇಳಿದೆ.

ಶಿವಾಗಮಾರ್ಥ ವಿಜ್ಞಾನಂ ಜ್ಞಾನಂ ನಾನ್ಯಾರ್ಥವೇದನಂ

"ಕಾಮಿಕಾದಿ ಶಿವಾಗಮಗಳ ಜ್ಞಾನವೇ ಜ್ಞಾನವಲ್ಲದೆ ಅನ್ಯಶಾಸ್ತ್ರಗಳ ಜ್ಞಾನವೇನೂ ಜ್ಞಾನವಲ್ಲ, ವೇದಗಳಿಗಿಂತ ಆಗಮಗಳಿಗೆ ವೀರಶೈವರು ಹೆಚ್ಚು ಮಹತ್ವವನ್ನು ಏಕೆ ಕೊಟ್ಟಿರುವರೆಂದರೆ, ವೇದಗಳಲ್ಲಿ ಪಶುಹಿಂಸೆಯ ಯಜ್ಞಾದಿಗಳನ್ನು ಹೇಳಿದೆ. ಪರಲೋಕದ ಫಲಪದಗಳಿಗಾಗಿ ಯಾಗಾದಿಗಳನ್ನು ಹೇಳಿದೆ. ಆದುದರಿಂದ ವೇದಗಳಲ್ಲಿ ತ್ರಿಗುಣಾತ್ಮಕವಾದ ಜ್ಞಾನವು ಇದ್ದೇ ಇದೆ. ಶಿವಾಗಮಗಳು ಗುಣಾತೀತ ಜ್ಞಾನವನ್ನು ಪ್ರತಿಪಾದಿಸುವುದರಿಂದ ಅವುಗಳನ್ನು ವೀರಶೈವರು ಹೆಚ್ಚು ಮಾನ್ಯ ಮಾಡುತ್ತಿದ್ದಾರೆ."

ಶ್ರೀ ಕೃಷ್ಣ ಪರಮಾತ್ಮನಿಗೂ ಕೂಡಾ ಇದು ಮಾನ್ಯವಾಗಿದ್ದುದರಿಂದಲೇ ಅರ್ಜುನನಿಗೆ ಈ ಪ್ರಕಾರ ಹೇಳಿದರು.

"ತ್ರೈ ಗುಣ್ಯವಿಷಯಾವೇದಾ ನಿಸ್ತ್ರೈಗುಣೋ ಭವಾರ್ಜುನ"

"ವೇದಗಳು ಸತ್ವಾದಿ ಗುಣತ್ರಯ ನಿಷಯಕವಾದವುಗಳು, ಆದುದರಿಮದ ಅರ್ಜುನನೇ ನೀನು ಗುಣತ್ರಯ ರಹಿತನಾಗು."

ಈ ಪ್ರಕಾರ ಶಿವಸಂಬಂಧವಾದ ತಪಸ್ಸು, ಕರ್ಮ, ಜಪ, ಧ್ಯಾನ ಮತ್ತು ಜ್ಞಾನಗಳೆಂಬ ಪಂಚಕ್ರಿಯೆಗಳನ್ನು ಯಾವ ಭಕ್ತನು ಆಚರಿಸುತ್ತಿರುತ್ತಾನೆಯೋ ಆತನಿಗೆ ಹುಟ್ಟು ಸಾವು, ಕುಲ, ಎಂಜಲ ಮತ್ತು ಮುಟ್ಟಾದ ಸೂತಕಗಳೆಂಬ ಪಂಚಸೂತಕಗಳು ಇಲ್ಲವೇ ಇಲ್ಲ.

ಆದುದರಿಂದ **"ಸಿದ್ಧಾಂತ ಶಿಖಾಮಣಿ"** ಗ್ರಂಥದ ಭಕ್ತಮಾರ್ಗಕ್ರಿಯಾ ಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

ನತಸ್ಯಸೂತಕಂ ಕಿಂಚಿತ್ಪ್ರಾಣಲಿಂಗಾಂಗ ಸಂಗಿನಃ
ಜನ್ಮನೋತ್ಥಂ ಮೃತೋತ್ಥಂಚ ವಿದ್ಯತೇ ಪರಮಾರ್ಥತಃ
ಲಿಂಗಾರ್ಚನ ರತಾಯಾಶ್ಚ ಋತೌನಾರ್ಯಾನಸೂತಕಂ
ತಥಾಪ್ರಸೂತಿ ಕಾಯಾಶ್ಚ ಸೂತಕಂ ನೈವವಿದ್ಯತೇ ಪ. ೯. ಶ್ಲೋ. ೪೪-೪೫

"ಜಾತ, ಮೃತ, ಕುಲ, ಉಚ್ಛಿಷ್ಟ ಮತ್ತು ರಜಸ್ಸೂತಕಗಳು ಪ್ರಾಣಲಿಂಗಾನು ಸಂಧಾನವುಳ್ಳ ಶಿವಭಕ್ತರಿಗೆ ಇಲ್ಲವೇ ಇಲ್ಲ."

ಪ್ರಾಕೃತ ವರ್ಣದವರಾದ ಬ್ರಾಹ್ಮಣರು ಕೂಡಾ ಯಜ್ಞಯಾಗಾದಿಗಳಲ್ಲಿ ಆಸಕ್ತರಾಗಿ ಸತಿಪತಿಗಳು ವ್ರತಬಂಧನಮಾಡಿದಾಗ ಜನನ, ಮರಣ, ರಜಸ್ಸಾದಿ ಸೂತಕಗಳನ್ನು ಆಚರಿಸುವುದಿಲ್ಲವಷ್ಟೆ ವೀರಶೈವರಲ್ಲಿ ಲಿಂಗಾರ್ಚನೆಯೇ ಪ್ರತಿನಿತ್ಯದಲ್ಲಿಯೂ ಬಿಟ್ಟು ಬಿಡದೆ ಆಚರಿಸಬೇಕಾದ ಯಜ್ಞಯಾಗಾದಿಗಳಿಗಿಂತ ಹೆಚ್ಚಿನ ವ್ರತವಾಗಿರುವುದರಿಂದ ಈ ಸೂತಕಗಳನ್ನು ನಿರಾಕರಿಸುವುದು ವಿಹಿತವಲ್ಲವೇ?

ಶಿವಭಕ್ತನಿಗೆ ಈ ಪಂಚಸೂತಕಗಳಿಲ್ಲದಿದ್ದರೂ ಬೇರೆ ಪಂಚಭವಿ ಸಂಗಗಳು ನಿಷಿದ್ಧವಾಗಿವೆ. ಈ ವಿಷಯವಾಗಿ ಶಿವಾಗಮಗಳು ಈ ಪ್ರಕಾರ ಸೂಚಿಸುತ್ತವೆ.

ಮಧ್ಯಪಾನೀ ಮಾಂಸಭಕ್ತೀ ಚಾನ್ಯದೈವಸ್ಯಪೂಜಕಃ
ಆಲಿಂಗೀಚ ದುರಾಚಾರೀ ಪಂಚೈತೇ ಭವಿನಸ್ಮೃತಾಃ

"ಮಧ್ಯ ಪಾನ ಮಾಡುವವರು, ಮಾಂಶಭಕ್ಷಕರು, ಶಿವನ ವಿನಾ ಬೇರೆ ದೇವರನ್ನು ಪೂಜಿಸುವವರು, ಲಿಂಗಧಾರಣವಿಲ್ಲದವರು, ಶಾಸ್ತ್ರದಿಂದ ವಿರೋಧಿಸಲ್ಪಟ್ಟ ದುರಾಚಾರಗಳನ್ನು ಆಚರಿಸುವವರು ಭವಿಗಳು ಈ ಐದು ತರಹದ ಭವಿಗಳ ಅನ್ನಪಾನಾದಿಗಳನ್ನು ಸೇವಿಸಬಾರದು."

ಈ ಪ್ರಕಾರ ಶಿವನಲ್ಲಿ ವೀರವ್ರತವನ್ನು ಕೈಕೊಂಡು ನಡೆಯುತ್ತಿರುವ ಭಕ್ತನು ಭಕ್ತಿಯ ೯ ತರಗತಿಗಳಲ್ಲಿ ಕೊನೆಯದಾದ ಆತ್ಮರ್ಪಣೆಗೂ ಕೂಡಾ ಸಿದ್ಧನಾಗಲೇ ಬೇಕು. ಶಿನಲಿಂಗಲಾಂಛನಗಳಾದ ಲಿಂಗಭಸ್ಮಾದಿಗಳಿಗೂ ಶಿವಭಕ್ತರಿಗೂ ಅವಮಾನ ಅಪಾಯಗಳು ಸಂಭವಿಸಿದರೆ ತನ್ನ ಪ್ರಾಣವನ್ನು ಕೂಡಾ ಸಮರ್ಪಿಸಿ ಅವುಗಳನ್ನು ನಿವಾರಣೆ ಮಾಡವುದೇ ಭಕ್ತನ ಪವಿತ್ರ ಕರ್ತವ್ಯವಾಗಿದೆ. ಈ ವಿಷಯವಾಗಿ **'ಸಿದ್ಧಾಂತ ಶಿಖಾಮಣಿ'** ಗ್ರಂಥದ ಭಕ್ತಮಾರ್ಗಕ್ರಿಯಾ ಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

ಅಥವಾ ಶಿವಭಕ್ತಾನಾಂ ಶಿವಲಾಂಛನ ಧಾರೀಣಾಂ
ತತ್ರ ಪ್ರಾಣಾನ್ವಿಹಾಯಾಪಿ ಪರಿಹಾರಂ ಸಮಾಚರೇತ್
ಶಿವಾರ್ಥಂ ಮುಕ್ತ ಜೀ ವಶ್ಚೆ ಚ್ಛಿ ವಸಾಯುಜ್ಯ ಮಾಪ್ನಯಾತ್
ಶಿವನಿಂದಾಕರಂ ದೃಷ್ಟ್ವಾ ಘಾತಯೇದಥವಾಶಪೇತ
ಸ್ಥಾನಂ ವಾ ತತ್ಪರಿತ್ಯಜ್ಯ ಗಚ್ಚೇಧ್ಯದ್ಯಕ್ಷಮೋಭವೇತ ಪ. ೯. ಶ್ಲೋ ೩೬-೩೭

"ಶಿವಭಕ್ತರ ಮತ್ತು ಶಿವಲಾಂಛನಗಳ ಅಪಾಯ ನಿವಾರಣಾರ್ಥವಾಗಿ ಪ್ರಾಣತ್ಯಾಗವನ್ನಾದರೂ ಮಾಡಬೇಕು. ಹಾಗೆ ಮಾಡಿದರೆ ಆತನಿಗೆ ಶಿವಸಾಯುಜ್ಯವೇ ಲಭಿಸುತ್ತದೆ. ಶಿವದ್ರೋಹಿಯನ್ನು ಕೊಲ್ಲಬೇಕು. ಅಥವಾ ಶಪಿಸಬೇಕು; ಇಲ್ಲವೆ ಅಂಥ ಶಿವನಿಂದಕನಿರುವ ಸ್ಥಳವನ್ನೇ ಬಿಟ್ಟುಹೋಗಬೇಕು."

ಇಂಥ ವೀರತರವಾದ ಆಚರಣೆಯು ಭಕ್ತನಲ್ಲಿರುವುದರಿಂದಲೇ ಶಿವಭಕ್ತೋ ಮಹಾತೇಜಾ ಎಂಬಂತೆ ಶಿವಭಕ್ತನು ಭಕ್ತಿಯಿಂದ ಮಹಾತೇಜೋಮಯನಾಗಿರುತ್ತಾನೆ.

ಈ ವರೆಗೆ ವಿವರಿಸಿರುವಂತೆ ಆಚರಣೆಯು ಭಕ್ರನು ೯ನೆಯ ಮೆಟ್ಟನ್ನು ದಾಟಿದನೆಂದು ತಿಳಿಯಬೇಕು.

(೧೦) ಉಭಯಸ್ಥಳ : ಪರಮಾತ್ಮನ ಅರುವನ್ನುಂಟು ಮಾಡಿಕೊಡುವ ಗುರು ಎಲ್ಲ ಮತೀಯರಲ್ಲಿಯೂ ಪೂಜ್ಯನಾಗಿಯೇ ಇರುತ್ತಾನಷ್ಟೆ ಶಿವನಿಗೂ ಇಂತಹ ಸದ್ಗುರುವಿಗೂ ಭೇದವಿಲ್ಲವೆಂದು ತಿಳಿದು ಶಿವನೇ ಗುರುರೂಪದಲ್ಲಿ ಅವತರಿಸಿ ತನಗೆ ಇಷ್ಟಪ್ರಾಣ ಭಾವಲಿಂಗಗಳ ಅರುವನ್ನುಂಟು ಮಾಡಿಕೊಟ್ಟಿದ್ಧಾನೆಂದು ಭಾವಿಸಿ ಶಿವನಲ್ಲಿಟ್ಟ ಭಕ್ತಿವಿಶ್ವಾಸಗಳನ್ನೇ ಗುರುವಿನಲ್ಲಿಯೂ ಇಟ್ಟು ಆತನನ್ನು ಪೂಜಿಸುವುದೇ ಉಭಯ ಸ್ಥಳದ ಲಕ್ಷಣವು.

ಭಕ್ತನು ಈ ಪ್ರಕಾರ ಗುರುವಿನಲ್ಲಿ ಭಕ್ತಿಯುಳ್ಳವನಾದರೆ ಆತನು ೧೦ನೆಯ ಸೋಪಾನವನ್ನು ಏರಿದಂತಾಗುತ್ತವುದು.

(೧೧) ತ್ರಿವಿಧಸಂಪತಿಸ್ಥಳ : ಗುರು ಮತ್ತು ಲಿಂಗಗಳಲ್ಲಿ ಭಕ್ತಿಯಿರುವಂತೆಯೇ ಜಂಗಮನಲ್ಲಿ ಭಕ್ತಿ ವಿಶ್ವಾಸಗಳಿರುವುದೇ ತ್ರಿವಿಧಸಂಪತ್ತಿಸ್ಥಳದ ಮುಖ್ಯ ಲಕ್ಷಣವು. ಭಕ್ತನಿಗೆ ಗುರು ಲಿಂಗ ಮತ್ತು ಜಂಗಮ ಈ ಮೂರು ಮುಖ್ಯ ಸಂಪತ್ತುಗಳಾಗಿಯೇ ಇವೆ.

ಏಕ ಏವ ಶಿವಸ್ಸಾಕ್ಷಾತ್ಸರ್ವಾನು ಗ್ರಾಹಕಃ ಪ್ರಭುಃ।
ಗುರು ಜಂಗಮ ಲಿಂಗಾತ್ಮಾ ವರ್ತತೇ ಭುಕ್ತಿ ಮುಕ್ತಿದಃ । ಪ. ೯. ಶ್ಲೋ. ೬೦

"ಒಬ್ಬ ಶಿವನೇ ಭಕ್ತರಿಗೆ ಭೋಗಮೋಕ್ಷಗಳನ್ನು ಕೊಡುವುದಕ್ಕೋಸ್ಕರ ಗುರು ಲಿಂಗ ಜಂಗಮ ಎಂಬ ಮೂರು ರೂಪಗಳಿಂದ ಜಗತ್ತಿನಲ್ಲಿ ಅವತರಿಸಿದ್ದಾನೆ."

ಎಂಬುದಾಗಿ **'ಸಿದ್ಧಾಂತ ಶೀಖಾಮಣಿ'**ಯಲ್ಲಿ ಹೇಳಿರುವಂತೆ ಭಕ್ತನು ಈ ತ್ರಿಮೂರ್ತಿಗಳನ್ನೂ ಶಿವನೆಂದೇ ತಿಳಿದು ಪೂಜಿಸಬೇಕು. ಒಬ್ಬ ಶಿವನೇ ಈ ಪ್ರಕಾರ ಮೂರು ರೂಪುಗಳನ್ನು ಧರಿಸಿದ್ದರಿಂದ ಇವುಗಳಲ್ಲಿ ಭೇದವಿಲ್ಲದಿದ್ದರೂ ತರತಮಗಳೆಂಬ ಅಂತಸ್ತುಗಳು ಮಾತ್ರ ಇದ್ಧೇ ಇವೆ. ಇಷ್ಟಲಿಂಗಕ್ಕಿಂತಲೂ ಗುರು ಅಧಿಕತ. ಗುರುವಿಗಿಂತಲೂ ಜಂಗಮ ಅಧಿಕ, ಕಾಲು, ಎದೆ, ತಲೆ ಇವು ಮೂರು

ದೇಹವನ್ನು ಬಿಡದೆ ಕೂಡಿಕೊಂಡಿದ್ದರೂ ಇಷ್ಟೇ ಅಲ್ಲ; ಇವು ಮೂರು ಕೂಡಿದ್ದರೇನೇ ದೇಹವು ಸಂಪೂರ್ಣಾವಸ್ಥೆಯನ್ನು ಹೊಂದುತ್ತಿದ್ದರೂ ಇವುಗಳಲ್ಲಿ ತರತಮಗಳೆಂಬ ವ್ಯತ್ಯಸಗಳು ಇದ್ದೇ ಇವೆಯಲ್ಲವೇ? ಕಾಲಿಗಿಂತ ಎದೆ ಹೆಚ್ಚಿನದು, ಎದೆಗಿಂತ ಶಿರಸ್ಸು ಮೇಲಾದುದು. ಮೇಲ್ಭಾಗವೇ ಜಂಗಮವೆಂದು ತಿಳಿಯಬೇಕು. ಭಕ್ತನಿಗೆ ಶಿವನ ಈ ಮೂರು ಭಾಗಗಳೂ ಪೂಜ್ಯವಾಗಿದ್ದರೂ ಅವುಗಳಲ್ಲಿ ವ್ಯತ್ಯಾಸವಿರುವುದು ಸ್ವಾಭಾವಿಕವಾಗಿದೆ.

ನಮ್ಮ ಕರಸ್ಥಳಕ್ಕೆ ಲಿಂಗಮೂರ್ತಿಯನ್ನು ತಂದು ಕೊಟ್ಟಾತನು ಗುರುವಲ್ಲವೇ? ಆ ಲಿಂಗದಲ್ಲಿ ಶಿವಕಳೆಯನ್ನಿರಿಸಿದಾತನು ಗುರುವಲ್ಲವೇ? ಅಂತಹ ಶಿವಕಳೆಯೊಂದಿಲ್ಲದಿದ್ದಿದ್ದರೆ ಆ ಲಿಂಗಕ್ಕೆ ಲಿಂಗತ್ವವೆಲ್ಲಿರುತ್ತಿದ್ದಿತು? ಆದುದರಿಂದ ಲಿಂಗಕ್ಕಿಂತಲೂ ಗುರುವು ಅಧಿಕವೆಂಬುದು ವಿಹಿತವಲ್ಲವೇ?

ಲಿಂಗವು ಸ್ಥಾವರ ಮತ್ತು ಜಂಗಮ ಎಂಬೆರಡು ಪ್ರಕಾರವಾಗಿದೆಯೆಂದು **'ಸಿದ್ಧಾಂತ ಶಿಖಾಮಣಿ'** ಗ್ರಂಥದಲ್ಲಿ ಹೇಳಿ ಅದರ ವ್ಯತ್ಯಾಸವನ್ನೂ ಈ ಪ್ರಕಾರ ತಿಳಿಸಿದ್ಧಾಗಿದೆ.

ಅಜಂಗಮಂತು ಯಲ್ಲಿಂಗಂ ಮೃಚ್ಛಿಲಾದಿ ವಿನಿರ್ಮಿತಂ ।
ತದ್ವರಂ ಜಂಗಮಂಲಿಂಗಂ ಶಿವಯೋಗೀತಿ ವಿಶ್ರುತಂ ॥
ಅಚರೇ ಮಂತ್ರ ಸಂಸ್ಕಾರಾಲ್ಲಿಂಗೇ ವಸತಿ ಶಂಕರಃ ।
ಸದಾಕಾಲಂ ವಸತ್ಯೇವಚರಲಿಂಗೇ ಮಹೇಶ್ವರಃ ॥ ಪ. ೯ ಶ್ಲೋ. ೬೨-೬೩

"ಕಲ್ಲು ಮಣ್ಣು ಮೊದಲಾದ ಜಡಪದಾರ್ಥಗಳಿಂದ ಮಾಡಲ್ಪಟ್ಟ ಸ್ಥಾವರಲಿಂಗಕ್ಕಿಂತಲೂ ಚರಲಿಂಗನಾದ ಜಂಗಮಮೂರ್ತಿಯು ಶ್ರೇಷ್ಠನು. ಏಕೆಂದರೆ, ಮಂತ್ರ ಸಂಸ್ಕಾರವಾದರೆ ಜಡಮೂರ್ತಿಯಲ್ಲಿ ಶಿವನು ನೆಲೆಸುತ್ತಾನೆ. ಜಂಗಮಮೂರ್ತಿಯಲ್ಲಾದರೂ ಶಿವನು ಯಾವಾಗಲೂ ನೆಲೆಸುತ್ತಾನೆ."

ಆದುದರಿಂದ ಲಿಂಗಕ್ಕೆ ಮುಖವು ಜಂಗಮವೆಂದು ವೀರಶೈವ ಸಾರುತ್ತಿದೆ. ಜಂಗಮ ತೃಪ್ತಿಯಿಂದಲೇ ಲಿಂಗವು ಎಂದರೆ ಶಿವನು ಪ್ರಸನ್ನನಾಗುತ್ತಾನೆ. ಅಗ್ನಿಯಲ್ಲಿ ತುಪ್ಪ ಮೊದಲಾದವುಗಳನ್ನು ಸುರುವಿ ದೇವತೆಗಳನ್ನು ಸಂತೋಷಪಡಿಸುತ್ತೇವೆಂಬ ಪ್ರಕೃತಿ ಪೂಜಕರ ಯಜ್ಞಯಾಗಾದಿಗಳಿಗಿಂತ ಜಂಗಮರ ಜಠರಾಗ್ನಿಯಲ್ಲಿ ಅಂತಹ ಹವಿಯನ್ನರ್ಪಿಸಿ ಪುರುಷ (ಆತ್ಮ) ಪೂಜಕರಾದ ವೀರಶೈವರು ಮಾಡುವ ಗಣಾರಾಧನೆಯು ಶ್ರೇಷ್ಠವಾದುದಾಗಿದೆ.

ಆಧುನಿಕ ವೇದಾಂತಿಗಳಲ್ಲಿ ಅಗ್ರಗಣ್ಯರಾದ ಸ್ವಾಮಿ ರಾಮತೀರ್ಥರು ಕೂಡಾ 'ಯಜ್ಞರಹಸ್ಯ' ಎಂಬ ತಮ್ಮ ಲೇಖನದಲ್ಲಿ ಈ ಪ್ರಕಾರ ಹೇಳಿದ್ದಾರೆ: ಅಗ್ನಿಗೆ ಅನ್ನ ತುಪ್ಪಗಳನ್ನರ್ಪಿಸುವುದಕ್ಕಿಂತ ಬಡಜನಗಳ ಹೊಟ್ಟೆಗೆ ಅವುಗಳನ್ನು ಹಾಕುವುದೇ ದೇವರನ್ನು ಸಂತೊಷಗೊಳಿಸುವ ನಿಜವಾದ ಯಜ್ಞವು.

ಲಿಂಗಜಂಗಮಗಳಲ್ಲಿರುವ ಈ ಸೂಕ್ಷ್ಮ ತಾರತಮ್ಯವು ಅನೇಕರಿಗೆ ತಿಳಿಯದಿದ್ದುದರಿಂದಲೇ ಲಿಂಗದ ಮೇಲೆ ಜಂಗಮ ಪಾದೋದಕವೇಕೆ? ಛೇ! ಅದೆಂದಿಗೂ ಆಗದು, ಅದು ಸರಿಯಲ್ಲವೆಂದು ಆಡಿಕೊಳ್ಳುತ್ತಿದ್ದಾರೆ. ಅದು ಸರಿಯಲ್ಲ.

ಈ ವಿಷಯವಾಗಿ ಮಹಾನುಭಾವರಾದ ಬಸವಣ್ಣನವರು ಹೇಳಿರುವ ಈ ಕೆಳಗಿನ ವಚನವು ಅತ್ಯಂತ ಮಹತ್ವದ್ದಾಗಿದೆ.

ಜಂಗಮನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣೆಯೆಂತೋ
ಶಿವ ಶಿವ! ನಿಂದಿಸುವ ಪೂಜಿಸುವ ಪಾತಕವ ಕೇಳಲಾಗದು.
ಗುರುವಿನ ಗುರು ಜಂಗಮವಿಂತೆಂದುದು ಕೂಡಲಸಂಗನ ವಚನ॥

"ಲಿಂಗ ಪೂಜಕನೆಂದು ಜಂಗಮವನ್ನು ಜರಿಯಬಹುದೇ? ಶಿವನೇ! ಇದು ಮಹಾಪಾಪವು, ಲಿಂಗಕ್ಕಿಂತಲೂ, ಜಂಗಮವು ಶ್ರೇಷ್ಠವಾದುದು. ಇಷ್ಟೇ ಅಲ್ಲ, ಗುರುವಿಗು ಕೂಡಾ ಜಂಗಮನೇ ಗುರುವಾಗಿರುವುದರಿಂದ ಜಂಗಮನು ಗುರು ಲಿಂಗಗಳಿಗಿಂತಲೂ ಶ್ರೇಷ್ಠರು."

ಎಲ್ಲ ಮತಗಳಲ್ಲಿ ಗುರು ಒಬ್ಬಾತನೇ ಇರುತ್ತಾನೆ. ಈ ವೀರಶೈವ ಮತದಲ್ಲಿ ಜಂಗಮವೆಂಬುದೊಂದು ಹೆಚ್ಚೇಕೆ? ಎಂಬ ಸಂಶಯವುಂಟಾಗಬಹುದು. ವೈಧಿಕಧರ್ಮವೀರ ಸ್ವಾಮಿವಿವೇಕಾನಂದರು ಗುರುಗಳಲ್ಲಿ ಸಾಮಾನ್ಯಗುರು ಮತ್ತು ಅವತಾರಿ ಗುರು ಎಂಬುದಾಗಿ ಎರಡು ಪ್ರಕಾರಗಳಿವೆಯೆಂದು ಹೇಳಿದ್ದಾರಷ್ಟೇ. ಅವತಾರಿ ಗುರುವಿಗೇನೇ ನಮ್ಮಲ್ಲಿ ಜಂಗಮವೆಂದು ಹೇಳಿದ್ದಾರೆ. ನಮಗೆ ಗುರುಗಳ ಉಪದೇಶದಿಂದ ಯಾವ ಜ್ಞಾನ ಲಭಿಸುತ್ತಿದೆಯೋ ಅದು ಜಂಗಮರ ದರ್ಶನದಿಂದಲೇ ಪ್ರಾಪ್ತವಾಗಿ ಸ್ಥಿರಗೊಳ್ಳುತ್ತದೆ. ಆದುದರಿಂದಲೇ ಶೈವದಲ್ಲಿ ಗುರು ಲಿಂಗ ಜಂಗಮಗಳ ಫಲಪ್ರಾಪ್ತಿಯು ಈ ಪ್ರಕಾರವಾಗಿ ಹೇಳಿದೆ.

ಗುರುಸ್ಸಂಶಯ ವಿಚ್ಛಿತ್ತ್ಯೈಸ್ವಾನಂದಾವಾಪ್ತಯೇ ಶಿವಃ ।
ತದ್ಭಾವ ದಾರ್ಢ್ಯಾಯ ಸದಾ ಸೇವನೀಯಶ್ಶಿವಾತ್ಮಕಃ ।

"ಗುರುವಿನಿಂದ ತನ್ನ ಸಂಶಯ ನಿವೃತ್ತಿಯೂ, ಲಿಂಗದಿಂದ ನಿತ್ಯಾನಂದವೂ, ಜಂಗಮ ಮೂರ್ತಿಯಿಂದ ಶಿವತತ್ವಾನುಸಂಧಾನ ದೃಢತೆಯೂ ಲಭಿಸುತ್ತವೆ."

ಆದುದರಿಂದ ಈ ತಾರತಮ್ಯವನ್ನರಿತು ಮೂರರಲ್ಲಿಯೂ ಭಕ್ತಿಯನ್ನಿಟ್ಟು ಆಚರಿಸುವುದೇ ತ್ರಿವಿಧ ಸಂಪತ್ತಿಸ್ಥಳವು. ಇಂತಹ ಆಚರಣೆಯುಳ್ಳ ಭಕ್ತನು ೧೧ನೆಯ ಮೆಟ್ಟಿಲನ್ನು ಏರಿದನೆಂದು ತಿಳಿಯಬೇಕು.

(೧೨) ಚತುರ್ವಿಧ ಸಾರಾಯಸ್ಥಳ : ಲಿಂಗಾರ್ಪಿತವಾದ ಪ್ರಸಾದವನ್ನೇ ಭಕ್ತನು ಸೇವಿಸಬೇಕು. ಶಿವಲಿಂಗಕ್ಕೆ ನೈವೇದ್ಯ ಮಾಸೆ ಆಹಾರವನ್ನು ಸೇವಿಸಿದರೆ ಸರ್ವಜ್ಞಕವಿಯು ಹೇಳಿರುವಂತೆ ಮಾಂಸಸೇವನೆ ಮಾಡಿದಂತಾಗುತ್ತದೆ.

ಲಿಂಗಕ್ಕೆ ತೋರದೆ । ಅಂಗಕ್ಕೆ ಕೊಂಡರೆ ।
ತಿಂಗಳಲ್ಲಿ ಸತ್ತ ಹಳೆನಾಯಿ ಮಾಂಸವನು ।
ನುಂಗಿದಂತಕ್ಕು ಸರ್ವಜ್ಞ ॥

ಶಿವಲಿಂಗ ಪಾದೋದಕ ಪ್ರಸಾದಗಳನ್ನು ಭಕ್ತಿಯಿಂದ ಸೇವಿಸುವಂತೆಯೇ ಗುರುಜಂಗಮರ ಪಾದೋದಕ ಪ್ರಸಾದಗಳನ್ನು ಸೇವಿಸಬೇಕು. ಗುರುಪ್ರಸಾದಕ್ಕೆ ಶುದ್ಧಪ್ರಸಾದವೆಂತಲೂ ಲಿಂಗಪ್ರಸಾದಕ್ಕೆ

ಸಿದ್ಧಪ್ರಸಾದವೆಂತಲೂ ಜಂಗಮಪ್ರಸಾದಕ್ಕೆ ಪ್ರಸಿದ್ಧ ಪ್ರಸಾದವೆಂತಲೂ ಹೇಳುತ್ತಾರೆ. ಗುರುಲಿಂಗ ಜಂಗಮಗಳಲ್ಲಿ ಭಕ್ತಿಯುಳ್ಳವನಾಗಿ ನಡೆಯುವಂತೆಯೇ ಗುರು ಜಂಗಮರ ಪಾದೋದಕ ಪ್ರಸಾದಗಳನ್ನು ಸೇವಿಸುವುದೂ ಅವಶ್ಯಕವಾದ ಆಚರಣೆಯಾಗಿರುವುದರಿಂದ ಇದಕ್ಕೆ ಚತುರ್ವಿಧ ಸಾರಾಯಸ್ಥಳವೆಂದು ಹೇಳಿದ್ದಾರೆ.

ಗುರು ಜಂಗಮರ ಪಾದೋದಕ ಪ್ರಸಾದವನ್ನು ತಾನು ಸ್ವೀಕರಿಸುವುದಲ್ಲದೆ ಪರಮಪವಿತ್ರರಾದ ನಿರಂಜನಮೂರ್ತಿಗಳ ಪಾದೋದಕದಿಂದ ಲಿಂಗಮೂರ್ತಿಗಳು ಕೂಡಾ ಅಭಿಷೇಕಮಾಡಬೇಕೆಂದು ಈ ಪ್ರಕಾರ ವೀರಾಗಮದಲ್ಲಿ ಹೇಳಿದೆ.

ನಿರಂಜನಸ್ಯ ಶುದ್ಧ ಸ್ಯನಿಸ್ಸ್ಥಲಸ್ಯ ಚರಸ್ಯಚ ।
ಪಾದಾಂಬುನಾ ಲಿಂಗಮೂರ್ತಿಂ ಸ್ನಾಪ್ಯ ಕುರ್ವೀತ ಭೋಜನಂ ॥

"ಪರಿಶುದ್ಧನಾದ ಷಟಸ್ಥಳಮೂರ್ತಿಯ ಪಾದೋದಕದಿಂದ ಇಷ್ಟಲಿಂಗವನ್ನು ಅಭಿಷೇಕ ಮಾಡಿ ಅನಂತರವೇ ಭೋಜವನ್ನು ಮಾಡಬೇಕು."

ಈ ವಿಧವಾದ ಗುರು ಲಿಂಗ ಜಂಗಮಗಳ ಪೂಜೆಮಾಡಿ ಪಾದೋದಕ ಪ್ರಸಾದಗಳನ್ನು ಸೇವಿಸುವ ಭಕ್ತನು ೧೨ನೆಯ ಸೋಪಾನವನ್ನು ಏರಿದನಂದು ತಿಳಿಯಬೇಕು.

(೧೩) ಉಪಾಧಿಮಾಟ ಸ್ಥಳ : ಗುರು ಲಿಂಗ ಜಂಗಮರ ಪೂಜೆಮಾಡಿ ಪಾದೋದಕ ಪ್ರಸಾದಗಳನ್ನು ಸೇವಿಸುವಂತೆಯೇ ಗುರುವಿಗೆ ತನುವಿನಿಂದಲೂ ಲಿಂಗಕ್ಕೆ ಮನಸ್ಸಿನಿಂದಲೂ ಜಂಗಮಕ್ಕೆ ಧನದಿಂದಲೂ ಸೇವೆಮಾಡಬೇಕು. ಗುರುಲಿಂಗ ಜಂಗಮಗಳಿಗೆ ತನ್ನ ಶಕ್ತಿಗನುಸರಿಸಿ ಧಾನಮಾಡಲೇಬೇಕು. ಈ ದಾನವು ಸೋಪಾಧಿಕ, ನಿರುಪಾಧಿಕ, ಸಹಜ ಎಂಬುದಾಗಿ ಮೂರು ಪ್ರಕಾರವಾಗಿದೆ. ಯಾವುದಾದರೊಂದು ಪ್ರಯೋಜನವನ್ನು ಹೊಂದವೇಕೆಂಬ ಉದ್ದೇಶದಿಂದ ಮಾಡುವ ದಾನಕ್ಕೆ ಉಪಾಧಿಮಾಟ ಎಂದು ಹೇಳುತ್ತಾರೆ. ಭಕ್ತನಿಗೆ ಇಂತಹ ಇಚ್ಛೆಯುಂಟಾಗಿ ದಾನಮಾಡಿದರೆ ಆತನು ೧೩ನೇಯ ಸ್ಥಾನವನ್ನು ಏರಿದಂತಾಯಿತು.

(೧೪) ನಿರುಪಾಧಿಮಾಟ ಸ್ಥಳ : ಫಲಾಪೇಕ್ಷೆಯಿಂದ ಮಾಡುವ ದಾನವು ತುಚ್ಛವಾದುದೆಂದು ತಿಳಿದು ಶಿವನಿಗೆ ಅರ್ಪಿತವಾಗಲೆಂದು ದಾನ ಮಾಡಿದರೆ ಅದು ಶ್ರೇಷ್ಠವಾದ ದಾನವಾಗುವುದು. ಈ ಪ್ರಕಾರ ದಾನ ಮಾಡುವ ಭಕ್ತನು ನಿರುಪಾಧಿ ಮಾಟವೆಂಬ ೧೪ನೆಯ ಸ್ಥಾನವನ್ನು ದಾಟುವನು.

(೧೫) ಸಹಜಮಾಟಸ್ಥಳ : ಫಲಾಪೇಕ್ಷೆಯಿಲ್ಲದೆ ದಾನ ಮಾಡುವ ಪ್ರವೃತ್ತಿಯುಂಟಾದರೆ ಮುಂದೆ ಅದು ಸಹಜ ದನವಾಗಿ ಪರಿಣಮಿಸುತ್ತದೆ. ದಾನ ಮಾಡುವ ವಸ್ತು ದಾನಹೊಂದತಕ್ಕ ವ್ಯಕ್ತಿ ಮತ್ತು ದಾನ ಮಾಡತಕ್ಕ ಭಕ್ತಿ ಈ ಮೂವರು ಒಂದೇ ಎಂಬ ಭಾವನೆಯುಂಟಾಗುತ್ತದೆ. "ದಾತಾ ಭೋಕ್ತಾಸ್ವಯಂ ಶಿವಃ" ಎಂಬಂತೆ ಕೊಡುಕೊಳ್ಳುವವರೂ ವಸ್ತುವೂ ಶಿವನೆಂದೇ ತಿಳಿಯುವುದು ಸಹಜ ಮಾಟಸ್ಥಳದ ಲಕ್ಷಣವು.

ಭಗವದ್ಗೀತೆಯಲ್ಲಿ ಹೇಳಿರುವಂತೆ "ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ" ನಾನು ಈ ಕರ್ಮಕ್ಕೆ ಮಾತ್ರ ಅಧಿಕಾರಿಯೇ ವಿನಾ ಫಲಾಪೇಕ್ಷೆಯನ್ನು ಮಾಡುವುದು ನನ್ನ ಕರ್ತವ್ಯವಲ್ಲವೆಂದು

ತಿಳಿದು ಕರ್ಮತ್ಯಾಗದಲ್ಲಿಯಾಗಲಿ, ಅಥವಾ ಫಲಾಪೇಕ್ಷೆಯಲ್ಲಿಯಾಗಲಿ ಆಸಕ್ತನಾಗದೆ ಕರ್ಮಮಾಡುವಂತೆ ಸಹಜ ಮಾಟಸ್ಥಳದ ಭಕ್ತನು ಗುರು, ಲಿಂಗ, ಜಂಗಮಗಳ ಸೇವೆಯನ್ನು ಶಿವಾರ್ಪಣ ಬುದ್ಧಿಯಿಂದ ಮಾಡುವನು. ಇಂತಹ ಭಕ್ತನು ೧೫ನೆಯ ಸ್ಥಾನವನ್ನು ದಾಟುವನು. ಆಗ ಆತನು ಭಕ್ತಸ್ಥಳವೆಂದು ಮೊದಲನೆಯ ಕಟ್ಟೆಯನ್ನೇರಿ ಎಷ್ಟೋ ಸುಖಸಮಾಧಾನಗಳನ್ನು ಹೊಂದುವನು.

❖❖

೩ನೆಯ ಪ್ರಕರಣ

ಮಾಹೇಶ್ವರನ ಸ್ಥಿತಿ

ಈ ಮುಂಚೆ ವಿವರಿಸಿದ ಪ್ರಕಾರ ಆಚರಿಸಿದ ಶಿವಭಕ್ತನೇ ಮಾಹೇಶ್ವರನಾಗುತ್ತಾನೆ. ಮಾಹೇಶ್ವರರ ವರ್ಗವೇ ಒಂದು ಬೇರೆಯೆಂದಾಗಲಿ, ಜನ್ಮದಿಂದಲೇ ಮಾಹೇಶ್ವರರಾಗುವ ಒಂದು ಜಾತಿಯಿದೆಯೆಂದಾಗಲಿ ತಿಳಿಯುವದು ಶುದ್ಧ ತಪ್ಪು. ಈ ವಿಷಯವಾಗಿ ವೀರಶೈವ ಸಿದ್ಧಾಂತ ಶಿಖಾಮಣಿ ಗ್ರಂಥದ ಮಾಹೇಶ್ವರಸ್ಥಳದಲ್ಲಿ ಈ ಪ್ರಕಾರ ಸ್ಪಷ್ಟ ಹೇಳಿದೆ.

ಕೇವಲೇ ಸಹಜೇದಾನೇ ನಿಷ್ಣಾತ ಶ್ಶಿವತತ್ಪರಃ ।
ಬ್ರಹ್ಮಾದಿಸ್ಥಾನ ವಿಮುಖೋ ಭಕ್ತೋ ಮಾಹೇಶ್ವರ ಸ್ಸ್ಮೃತಃ ॥ ಪ. ೧೦. ಶ್ಲೋ. ೨

"ಭಕ್ತಸ್ಥಳದ ೧೫ನೆಯ ಆಚರಣೆಯಾದ ಸಹಜದಾನವನ್ನು ಆಚರಿಸುವಾತನು ಬ್ರಹ್ಮಾದಿ ಲೋಕಗಳ ಪ್ರಾಪ್ತಿಯನ್ನು ಕೂಡಾ ತೃಣೀಕರಿಸುವದಿಂದ ಅಂತಹ ಭಕ್ತನೇ ಮಾಹೇಶ್ವರನಾಗುತ್ತಾನೆ."

ಈ ಮಾಹೇಸ್ವರ ಸ್ಥಳವು ಒಂಬತ್ತು ಅಂತಸ್ತುಗಳಿಂದ ಕೂಡಿದ್ದಾಗಿದೆ. ಭಕ್ತಸ್ಥಳದ ೧೫ ಅಂತಸ್ತುಗಳನ್ನು ದಾಟಿ ಬಂದ ಭಕ್ತನು ಕ್ರಮವಾಗಿ ಈ ಮಾಹೇಶ್ವರ ಸ್ಥಳದ ಅಂತಸ್ತುಗಳನ್ನು ಏರಬೇಕಾಗುತ್ತದೆ. ಆದುದರಿಮದ ಅವುಗಳ ಸ್ಥಿತಿಯನ್ನು ಇಲ್ಲಿ ಕ್ರಮದಿಂದ ಸಂಕ್ಷಿಪ್ತವಾಗಿ ಉದಾಹರಿಸಿದ್ದಾಗಿದೆ.

(೧೬) ಮಾಹೇಶ್ವರ ಪ್ರಶಂಸಾಸ್ಥಳ : ಬ್ರಹ್ಮಾದಿ ಶಿವೇತರ ದೇವತೆಗಳು ಕುದ್ರವಾದವುಗಳೆಂದು ತಿಳಿದು ಶಿವನಲ್ಲಿಯೇ ಅದ್ವಿತೀಯವಾದ ಭಕ್ತಿಯನ್ನಿಡುವಾತನೇ ಮಾಹೇಶ್ವರನು. ಈತನು ಮಹಾ ನೀತಿಪರನಾಗಿಯೂ ಆಚರಿಸಬೇಕಾಗುತ್ತದೆ. ಮಾಹೇಶ್ವರನ ಆಚರಣೆಯನ್ನು ಕುರಿತು **"ಸಿದ್ಧಾಂತ ಶಿಖಾಮಣಿ"**ಯಲ್ಲಿ ಈ ಪ್ರಕಾರ ಹೇಳಿದೆ.

ಪರಸ್ತ್ರೀ ಸಂಗ ನಿರ್ಮುಕ್ತಃ ಪರದ್ರವ್ಯ ಪರಾಙ್ಮುಖಃ ।
ಶಿವಾರ್ಥಕಾರ್ಯ ಸಂಪನ್ನಶ್ಶಿವಾಗಮ ಪರಾಯಣಃ ॥
ನಿರಸ್ತಮದನೋನ್ಮೇಷೋ ನಿರ್ಧೂತ ಕ್ರೋಧವಿಪ್ಲವಃ।
ಸದಾಸಂತುಷ್ ಹೃದಯಸ್ಸರ್ವ ಪ್ರಾಣಿ ಹಿತೇರತಃ ॥ ಪ. ೧೦. ಶ್ಲೋ. ೧೫-೧೮.

"ತನ್ನ ಧರ್ಮಪತ್ನಿಯ ವಿನಾ ಅನ್ಯಸ್ತ್ರೀಯರ ಸಂಗ ಮಾಡದಿರುವುದು, ಪರದ್ರವ್ಯದಲ್ಲಿ ಆಸೆಯಿಲ್ಲದಿರುವುದು. ಶಿವಕಾರ್ಯಗಳಲ್ಲಿ ಆಸಕ್ತನಾಗಿರುವುದು, ಶಿವಾಗಮ ಶಾಸ್ತ್ರಗಳಲ್ಲಿ ನಿಪುಣನಾಗಿರುವುದು, ಕಾಮ ಕ್ರೋಧಾದಿಗಳನ್ನು ಬಿಟ್ಟು ಯಾವಾಗಲೂ ಸಂತೋಷಚಿತ್ತನಾಗಿದ್ದು ಸಕಲ ಪ್ರಾಣಿಗಳ ಹಿತಾರ್ಥವಾಗಿ ಪ್ರಯತ್ನಿಸುವುದು ಮಾಹೇಶ್ವರನ ಕರ್ತವ್ಯಗಳಾಗಿವೆ."

ಈ ಪ್ರಕಾರ ಶಿವಭಕ್ತಿ ಮತ್ತು ನೀತಿಸದಾಚಾರಗಳಿಂದ ಭಕ್ತನು ಆಚರಿಸಲುಪಕ್ರಮಿಸಿದರೆ ಆತನು ೧೬ನೆಯ ಅಂತಸ್ತನ್ನು ಏರಿದಂತಾಯಿತು.

(೧೭) ಲಿಂಗನಿಷ್ಠಾಸ್ಥಳ : ಇಷ್ಟಲಿಂಗದಲ್ಲಿ ಅಚಲವಾದ ನಿಷ್ಠೆಯುಂಟಾಗಿ ಲಿಂಗಪೂಜೆಯೇ ಸರ್ವಸಿದ್ದಿಗಳನ್ನುಂಟುಮಾಡುವುದೆಂಬ ದೃಢಶ್ರದ್ಧೇಯಿಂದ ಲಿಂಗಪೂಜಾನಿರತನಾದ ಮಾಹೇಶ್ವರನೇ ಲಿಂಗನಿಷ್ಠಾಸ್ಥಳವನ್ನು ಸೇರುವನು.

ಅಪಗಚ್ಛತು ಸರ್ವಸ್ವಂ ಶಿರಚ್ಛೇದನಮಸ್ತುವಾ ।
ಮಾಹೇಶ್ವರೋ ನಮುಂಚೇತ ಲಿಂಗಪೂಜಾ ಮಹಾವ್ರತಂ ॥ ಪ. ೧೦ ಶ್ಲೋ.೨೨

"ತನ್ನ ಸರ್ವಸ್ವವೂ ನಾಶವಾದರೂ ಆಗಲಿ, ಶಿರಸ್ಸು ಕತ್ತರಿಸಿ ಕೆಳಗೆ ಬಿದ್ದರೂ ಬೀಳಲಿ, ಮಾಹೇಶ್ವರನು ಲಿಂಗಪೂಜೆಯ ತನ್ನ ಪವಿತ್ರ ವ್ರತವನ್ನು ಬಿಡುವುದಿಲ್ಲ."

(೧೮) ಪೂರ್ವಾಶ್ರಯನಿರಸನ ಸ್ಥಳ : ಲಿಂಗಪೂಜೆಯಲ್ಲಿ ನಿಷ್ಠೆಯುಳ್ಳ ಮಾಹೇಶ್ವರನು ತನ್ನ ಪೂರ್ವ ಕುಲಜಾತಿ ಸಬಂಧಗಳ ಆಚರಣೆಗಳನ್ನು ಸಂಪೂರ್ಣ ಬಿಟ್ಟವನಾಗಿರಬೇಕು. ಈ ವಿಷಯವಾಗಿ **'ಸಿದ್ಧಾಂತ ಶಿಖಾಮಣಿ'**ಯಲ್ಲಿ ಈ ಪ್ರಕಾರ ಹೇಳಿದೆ :

ಸ್ವಜಾತಿ ಕುಲಜಾನ್‌ಧರ್ಮಾನ್ ಲಿಂಗನಿಷ್ಠಾವಿರೋಧಿನಃ ।
ತ್ಯಜನ್ಮಾಹೇಶ್ವರೋಜ್ಞೇಯಃ ಪೂರ್ವಾಶ್ರಯ ನಿರಾಸ್ರಕಃ ॥ ಪ. ೧೦, ಶ್ಲೋ. ೩೧.

"ತನ್ನ ಲಿಂಗನಿಷ್ಠೆಗೆ ವಿರೋಧಗಳಾದ ಪೂರ್ವದ ಬ್ರಾಹ್ಮಣಾದಿ ಜಾತಿ ಕುಲ ಸಂಬಂಧವಾದ ಆಚರಣೆಗಳನ್ನು ಬಿಟ್ಟ ಮಾಹೇಶ್ವರನೇ ಪೂರ್ವಾಶ್ರಯ ನಿರಸನ ಸ್ಥಳವನ್ನು ಸೇರುವನು."

ಭಗವದ್ಗೀತೆಯಲ್ಲಿಯು ಕೂಡಾ "ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ" ಎಂಬುದಾಗಿ ಎಲ್ಲ ಧರ್ಮಗಳನ್ನೂ ಬಿಟ್ಟು ನನಗೇನೇ ಶರಣಾಗತನಾಗೆಂದು ಹೇಳಿದಂತೆ ಪೂರ್ವದ ಎಲ್ಲ ಧರ್ಮಕುಲಾಚಾರಗಳನ್ನೂ ಬಿಟ್ಟು ಕೇವಲ ವೀರಶೈವ ತತ್ವಗಳಿಗೇನೇ ಶರಣಾಗತನಾಗಿ ಆಚರಿಸಬೇಕು. ಹೆಸರಿಗೆ ಮಾತ್ರ ವೀರಶೈವನಾಗಿ ಪೂರ್ವಕುಲಜಾತಿಯ ನಡತೆಗಳಂತೆ ನಡೆದು ತನ್ನ ಕುಲ ಹೆಚ್ಚು ಆತನ ಕುಲ ಕಡಿಮೆಯೆಂದು ವೀರಶೈವರಲ್ಲಿ ಕುಲಭೇದ ಮಾಡಿದರೆ ಆತನು ಮುಂದಣ ಅಂತಸ್ತುಗಳನ್ನು ಏರುವುದಿಲ್ಲ, ಆದುದರಿಂದ ಈ ಸ್ಥಳದಲ್ಲಿ ಕುಲ ಸೂತಕವನ್ನು ಕಿತ್ತು ಹಾಕಲು **'ಸಿದ್ಧಾಂತ ಶಿಖಾಮಣಿ'**ಯಲ್ಲಿ ಈ ಪ್ರಕಾರ ಸ್ಪಷ್ಟವಾಗಿ ಹೇಳಿದೆ.

ಶಿವಸಂಸ್ಕಾರ ಯುಕ್ತೇಷು ಜಾತಿಭೇದೋನವಿದ್ಯತೆ ।
ಕಾಷ್ಟೇಷುವಹ್ನಿಗ್ದೇಷು ಯಥಾರೂಪಂನವಿದ್ಯತೇ ॥
ತಸ್ಮಾತ್ಸರ್ವಪ್ರಯತ್ನೇನ ಶಿವಸಂಸ್ಕಾರ ಸಂಯುತಃ ।
ಜಾತಿಭೇದಂ ನಕುರ್ವೀತ ಶಿವಭಕ್ತೇಕದಾಚನ ॥ ಪ. ೧೦. ಶ್ಲೋ. ೩೭-೩೮

"ಬೆಂಕಿಯಿಂದ ಸುಡಲ್ಪಟ್ಟ ಕಟ್ಟಿಗೆಗಳಲ್ಲಿ ಹೇಗೆ ಮುಂಚಿನ ರೂಪಾದಿಗಳು ಕಾಣುವುದಿಲ್ಲವೋ ಹಾಗೆಯೇ ಶಿವದೀಕ್ಷೆಯಾದ ವೀರಶೈವರಲ್ಲಿ ಪೂರ್ವದ ಜಾತಿಭೇದಗಳು ಉಳಿಯುವುದಿಲ್ಲ. ಆದುದರಿಂದ ಯಾವಾಗಲೂ ಲಿಂಗಧಾರಿಗಳಲ್ಲಿ ಜಾತಿಭೇದಗಳನ್ನು ಮಾಡದಿರಲು ತುಂಬಾ ಪ್ರಯತ್ನಿಸಬೇಕು."

ವೀರಶೈವರಲ್ಲಿ ಜಾತಿಭೇದವನ್ನು ಮಾಡಿದ್ಧಾದರೆ. "ಶಿವಲಿಂಗೇ ಶಿಲಾಬುದ್ದಿಂಕುರ್ವಾಣ ಇವಪಾತಕ" ಎಂಬ ಶಿವರಹಸ್ಯವಚನ ಪ್ರಮಾಣದಂತೆ ಇಷ್ಟಲಿಂಗವು ಕಲ್ಲೆಂದು ತಿಳಿದಂಥ ಪಾಪಕ್ಕೆ ಗುರಿಯಾಗುತ್ತಾನೆ.

ಜಂಗಮಪುಂಗವರಾದ ಶ್ರೀ ಚೆನ್ನಬಸವಣ್ಣನವರು ಈ ಕೆಳಗಿನ ವಚನವನ್ನು ಹೇಳಿರುವ ಕಾರಣವಾದರೂ ಇದೇ ಸರಿ.

ದಾಸಿಪುತ್ರನೇ ಆಗಲಿ, ವೇಶ್ಯಾಪುತ್ರನೇ ಆಗಲಿ,
ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ತಿಳಿದು ವಂದಿಸಿ ಪೂಜಿಸಿ
ಪಾದೋದಕ ಪ್ರಸಾದ ತೆಗೆದುಕೊಂಬುದೇ ಯೋಗ್ಯ.
ಹಾಗಲ್ಲದೆ ಉದಾಸೀನ ಮಾಡಿಬಿಡುವವಗೆ
ಪಂಚಮಹಾಪಾತಕ ಕೂಡಲ ಚೆನ್ನಸಂಗಮದೇವ ॥

ಇಂತಹ ಪೂರ್ವ ಕುಲಜಾತಿಗಳ ಸಂಬಂಧವಾದ ಪಾಪಕಲ್ಪನೆಯಿಂದ ಬಿಡಲ್ಪಟ್ಟ ಶುದ್ಧ ಮಾಹೇಶ್ವರನೇ ಪೂರ್ವಾಶ್ರಯ ನಿರಸನವೆಂಬ ೧೮ನೆಯ ಅಂತಸ್ತನ್ನು ಮಿರಿದವನಾಗುವನು.

(೧೯) ಸರ್ವಾದ್ವೈತ ನಿರಸನ ಸ್ಥಳ : ಪೂರ್ವಕುಲಜಾತಿಗಳ ಸಂಬಂಧವನ್ನೂ ಅವುಗಳ ಅತ್ಯಾಚಾರಗಳನ್ನೂ ಬಿಡಬೇಕೆಂದ ಮಾತ್ರದಲ್ಲಿ ಹಿಟ್ಟು ಬೂದಿಗಳನ್ನು ಕಲಿಸುವ ಮುಳ್ಳುತನದ ನಡತೆಗಳನ್ನು ಆಚರಿಸಬೇಕೆಂದಲ್ಲ. ಇಂಥ ಅದ್ವೈತ ಅಥವಾ ಭ್ರಮೆಯನ್ನು ಹೊಂದಬಾರದೆಂದು ಈ ಸ್ಥಳವು ಏರ್ಪಟ್ಟಿದೆ.

ಪೂಜೆಮಾಡುವ ಮತ್ತು ಪೂಜೆ ಹೊಂದುವ ವ್ಯಕ್ತಿಗಳು ಬೇರೆಯೆಂದು ತಿಳಿದು ಗುರು ಲಿಂಗ ಜಂಗಮಗಳಲ್ಲಿ ಪೂಜ್ಯಭಾವವನ್ನಿಟ್ಟು ನಡೆಯಬೇಕಲ್ಲದೆ ಎಲ್ಲವೂ ಒಂದೇ ಎಂದು ತಿಳಿದು ಯಾತರಲ್ಲಿ ಏನಿದೆಯಂಬ ವಾಗಾದ್ವೈತವಾಗಲಿ, ಕಂಡಕಡೆ ಬೇಕಾದುದನ್ನು ತಿಂದು ತೇಗುವ ಅನಾಚಾರದ ಅದ್ವೈತವಾಗಲಿ ಇರಕೂಡದು. ಎಲ್ಲವೂ ಬ್ರಹ್ಮವೆಂದು ತಿಳಿದು ಬೇಕಾದ ಹಾಗೆ ನಡೆಯಲು ಜನರಿಗೆ ದುರುಪದೇಶವನ್ನು ಮಾಡಬಾರದು. **ಭಗವದ್ಗೀತೆ**ಯಲ್ಲಿ "ನಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ ॥" ಎಂಬುದಾಗಿ ಹೇಳಿರುವಂತೆ ಅಜ್ಞ ಜನರಲ್ಲಿ ಬುದ್ಧಿ ಭೇದವನ್ನು ಮಾಡುವುದು ಮಹಾಪಾಪಕೃತ್ಯವಾಗಿದೆ.

ಆದುದರಿಂದ ಈ ಯಾವ ದೋಷಗಳಿಗೂ ಅವಕಾಶ ಕೊಡದೆ ಆಚರಿಸುವ ಮಾಹೇಶ್ವರನೇ ೧೯ನೇಯ ಸೋಪಾನವನ್ನು ಮೀರುವನು.

(೨೦) ಆಹ್ವಾನ ನಿರಸನ ಸ್ಥಳ : ಶ್ರೀ ಗುರು ದೀಕ್ಷೆಯ ಕಾಲಕ್ಕೆ ಇಷ್ಟಲಿಂಗದಲ್ಲಿ ಶಿವಕಲೆಯನ್ನು ಆಹ್ವಾನಿಸಿದ್ದರಿಂದ ಪುನಃ ಆಹ್ವಾನಗೊಳಿಸಬೇಕಾದ ಅವಶ್ಯಕತೆಯಿಲ್ಲವೆಂದು ತಿಳಿವುದೇ ಆಹ್ವಾನ

ನಿರಸನ ಸ್ಥಳದ ಲಕ್ಷಣವು. ಇಷ್ಟಲಿಂಗದಲ್ಲಿದ್ದ ಶಿವಕಳೆಯು ವಿಸರ್ಜಿಸಲ್ಪಟ್ಟಿತೆಂಬ ಭಾವನೆಯುಂಟಾಗದೆ ಇಷ್ಟಲಿಂಗದಲ್ಲಿ ಶಿವಕಳೆಯು ಶಾಶ್ವತವಾಗಿಯೇ ಇರುತ್ತದೆಂಬ ದೃಢ ಶ್ರದ್ಧೆಯಿಂದ ಆಹ್ವಾನ ವಿಸರ್ಜನೆಗಳ ಗೊಡವೆಗೆ ಹೋಗದಿದ್ದರೆ ೨೦ನೆಯ ಸ್ಥಾನವನ್ನೇರಿದಂತಾಯಿತು.

(೨೧) ಅಷ್ಟಮೂರ್ತಿನಿರಸನ ಸ್ಥಳ : ಶಿವನಿಗೆ ಪೃಥ್ವಿ, ಅಪ್ಪು, ತೇಜ, ವಾಯು, ಆಕಾಶ, ಸೂರ್ಯ, ಚಂದ್ರ ಮತ್ತು ಆತ್ಮಗಳೆಂಬ ಎಂಟು ತನುಗಳಿವೆ. ಇವು ಕೂಡ ಶಿವನೇ ಎಂದು ತಿಳಿಯುವುದು ವಿಹಿತವಲ್ಲ. ಮಡಕೆಯನ್ನು ಕುಂಬಾರನು ಮಾಡಿದರೂ ಮಡಕೆ ಮತ್ತು ಕುಂಬಾರ ಬೇರೆಯಲ್ಲವೇ? ಹಾಗೆಯೇ ಶಿವನು ಈ ಅಷ್ಟ ತನು ಅಥವಾ ಮೂರ್ತಿಗಳನ್ನು ಮಾಡಿ ಅವುಗಳಲ್ಲಿ ವಾಸವಾಗಿದ್ದರೂ ಆತನು ಬೇರೆ, ಮತ್ತು ಈ ಅಷ್ಟ ಮೂರ್ತಿ ನಿರಸನ ಸ್ಥಳದ ಲಕ್ಷಣವು.

(೨೨) ಸರ್ವಗತತ್ವ ನಿರಸನ ಸ್ಥಳ : ಶಿವನು ಸರ್ವ ವ್ಯಾಪಕನಾಗಿದ್ದಾನೆಂಬುದು ತತ್ವದೃಷ್ಟಿಯಿಂದ ಸತ್ಯವಾದುದಾಗಿದ್ದರೂ ಲಿಂಗನಿಷ್ಠನಾದ ಮಾಹೇಶ್ವರನು ಹಾಗೆ ಆಚರಿಸಲಾಗದು. ಎಲ್ಲವೂ ಶಿವನೆಂದ ಮೇಲೆ ಸೇವ್ಯಸೇವಕ ಭಾವನೆಗಳೇ ಅಳಿದು ಹೋಗುತ್ತವೆ. ಯಾವುದು ಯೋಗ್ಯವಾದ ಮತ್ತು ಯಾವುದು ಅಯೋಗ್ಯವಾದ ಪದಾರ್ಥವೆಂಬುದನ್ನು ಕೂಡಾ ಯೋಚಿಸಬಾರದಂತಾಗಬಹುದು. ಆದುದರಿಂದ ಪರಮಶ್ರೇಷ್ಠರಾದ ಶ್ರಿ ನಿಜಗುಣ ಶಿವಯೋಗಿಗಳವರು ಹೇಳಿರುವಂತೆಯೇ "ಬಳಸದಿರ ದ್ವೈತವನು ಬಾಹ್ಯದೊಳು" ಬಾಹ್ಯದಲ್ಲಿ ಅದ್ವೈತ ಆಚರಣೆಯನ್ನಾಚರಿಸಬಾರದು.

(೨೩) ಶಿಜಜಗನ್ಮಯಸ್ಥಳ : ಶಿವನು ಸರ್ವತ್ರ ವ್ಯಾಪಿಸಿರುವನೆಂಬ ತತ್ವಕ್ಕೆ ಬಾಧೆಯುಂಟಾಗಬಾರದೆಂದು ಈ ಶಿವಜಗನ್ಮಯಸ್ಥಳವು ಏರ್ಪಟ್ಟಿದೆ. ಬಾಹ್ಯದಲ್ಲಿ ಅದ್ವೈತವನ್ನಾಚರಿಸದಿರುವುದು ಹೇಗೆ ಯುಕ್ತವಾಗಿದೆಯೋ ಹಾಗೆಯೇ ಶಿವನು ಜಗದ್ವೈಕ್ಯನಾಗಿದ್ದಾನೆಂದು ದೃಢವಾಗಿ ನಂಬುವುದೂ ಅಗತ್ಯವಾಗಿದೆ. ಆದುದರಿಂದಲೇ ಶ್ರೀ ನಿಜಗುಣ ಶಿವಯೋಗಿಗಳು ಬಾಹ್ಯದಲ್ಲಿ ಅದ್ವೈತವನ್ನಾಚರಿಸಬೇಡವೆಂದು ಮಾತ್ರ ಹೇಳಲಿಲ್ಲ. "ನಿನ್ನೊಳಗೇಕೋ ಭಾವನೆಯೊಡಗೂಡು" ಎಂಬುದಾಗಿ ಅದರ ಮುಂದೆಯೇ ಹೇಳಿದ್ದಾರೆ.

ಮಣ್ಣಿಗೂ ಮಡಿಕೆಗೂ ರೂಪಸ್ಥಿತಿ ಮೊದಲಾದವುಗಳಲ್ಲಿ ವ್ಯತ್ಯಾಸ ತೋರಿದರೂ ತತ್ವದಲ್ಲಿ ಹೇಗೆ ಅಭೇದವಿದೆಯೋ ಹಾಗೆಯೇ ಶಿವನಿಂದುಂಟಾಗಿರುವ ಈ ವಿಶ್ವಕ್ಕೂ ಶಿವನಿಗೂ ಸ್ಥಿತ್ಯಾದಿಗಳಲ್ಲಿ ಭಿನ್ನ ತೋರಿದರೂ ತತ್ವದಿಂದ ಏಕವಾಗಿಯೇ ಇರುವುದರಿಂದ ಶಿವನು ಜಗತ್ತಿನಲ್ಲೆಲ್ಲಾ ಶಿವಜಗನ್ಮಯಸ್ಥಳವನ್ನು ಸೇರಿದ ಲಕ್ಷಣವು.

(೨೪) ಭಕ್ತದೇಹಿಕ ಲಿಂಗಸ್ಥಳ : ಶಿವನು ಸರ್ವವ್ಯಾಪಕನಾಗಿದ್ದರೂ ತನ್ನ ಭಕ್ತರ ಹೃದಯದಲ್ಲಿ ವಿಶೇಷ ಪ್ರಕಾಶಮಯನಾಗಿರುತ್ತಾರೆ. ವೀರಶೈವ ಸಿದ್ಧಾಂತ ಶಿಖಾಮಣಿಯ ಭಕ್ತದೇಹಿಕಲಿಂಗಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

> ವಿಶುದ್ಧೇಷು ವಿರಕ್ತೇಷು ವಿವೇಕಿಷು ಮಹಾತ್ಮಸು ।
> ಶಿವಸ್ತಿಷ್ಠತಿ ಸರ್ವಾತ್ಮಾ ಶಿವಲಾಂಛನಧಾರಿಷು ॥ ಪ. ೧೦. ಶ್ಲೋ. ೨೨.

"ಅತ್ಯಂತ ಪರಿಶುದ್ಧರಾದ ವಿರಕ್ತಸ್ವಾಮಿಗಳಲ್ಲಿಯೂ (ಜಂಗಮಮೂರ್ತಿಗಳಲ್ಲಿ) ಆತ್ಮಾನಾತ್ಮ ವಿವೇಕವುಳ್ಳ ಮಹಾತ್ಮರುಗಳಲ್ಲಿಯೂ, ಲಿಂಗಭಸ್ಮಾದಿ ಶಿವಲಾಂಛನಗಳುಳ್ಳ ಶಿವಭಕ್ತರಲ್ಲಿಯೂ ಶಿವನು ಯಾವಾಗಲೂ ಪ್ರಕಾಶಿಸುತ್ತಾನೆ."

ಈ ಮರ್ಮವನ್ನರಿತು ಭಕ್ತಿಭಾವನೆಗಳಿಂದ ನಡೆಯುವ ಮಾಹೇಶ್ವರನು ಭಕ್ತ ದೇಹಿಕ ಲಿಂಗ ಸ್ಥಳವನ್ನು ಸೇರಿದವನಾಗುವನು. ಈ ವರೆಗೆ ವಿವರಿಸಿರುವಂತೆ ಆಚರಿಸಿದ ಆ ಮಾಹೇಶ್ವರನೇ ಸಿದ್ಧಾಂತ ಶಿಖಾಮಣಿಯ ಮಾಹೇಶ್ವರೋ, ಸೌಭವತಿ ಪ್ರಸಾದೀ ಎಂಬ ಉಕ್ತಿಯಂತೆ ಮುಂದೆ ಪ್ರಸಾದಿಯಾಗಿ ಶೋಭಿಸುತ್ತಾನೆ.

❖❖

೪ನೆಯ ಪ್ರಕರಣ

ಮನಃಶುದ್ಧಿಗೆ ಸಾಧನ

ಶಿವಭಕ್ತನು ಗುಣಾಚಾರಗಳ ಶ್ರೇಷ್ಠತ್ವದಿಂದ ಮಹೇಶ್ವರನಾದಂತೆಯೇ ಆ ಮಾಹೇಶ್ವರನೇ ಹೆಚ್ಚಿನ ಪರಿ ಶುದ್ಧತೆಯಿಂದ ಪ್ರಸಾದಿಯಾಗುತ್ತಾನೆ. ಆಗ ಆತನು ೧೦೧ ಸ್ಥಳಗಳಲ್ಲಿ ೨೪ ಸ್ಥಳಗಳನ್ನು ದಾಟಿ ಮೂರನೆಯ ಕಟ್ಟೆಯಂತಿರುವ ಪ್ರಸಾದಿಸ್ಥಳಕ್ಕೆ ಬಂದು ಎಷ್ಟೋ ಸುಖಶಾಂತಿಗಳನ್ನನುಭವಿಸುತ್ತಾನೆ.

ಈ ಮೂರನೆಯದಾದ ಪ್ರಸಾದಿ ಸ್ಥಳವು ಏಳು ಒಳಭೇದ ಅಥವಾ ಅಂತಸ್ತುಗಳುಳ್ಳದ್ದಾಗಿದೆ. ಅವುಗಳ ವಿವರವನ್ನು ಇದರಡಿಯಲ್ಲಿ ಸಂಕ್ಷಿಪ್ತವಾಗಿ ವಿವರಿಸಿದ್ದಾಗಿದೆ.

(೨೫) ಪ್ರಸಾದಿ ಸ್ಥಳ : ಈ ಮುಂಚೆ ವಿವರಿಸಿದ ಪ್ರಕಾರ ಸದ್ಗುಣ ಸದಾಚಾರಗಳುಳ್ಳ ಮಾಹೇಶ್ವರನು ಪ್ರಸಾದಿಸ್ಥಳವನ್ನು ಸೇರಲು ಯೋಗ್ಯನಾಗುತ್ತಾನೆ.

ನೈರ್ಮಲ್ಯಂ ಮನಸೋ ಲಿಂಗಂ ಪ್ರಸಾದ ಇತಿ ಕಥ್ಯತೇ।

ಎಂದರೆ ಮನಸ್ಸು ನಿರ್ಮಲವಾಗಿರುವುದರ ಗುರುತೇ ಪ್ರಸಾದ ಎಂದು ಸಿದ್ಧಾಂತ ಶಿಖಾಮಣಿಯಲ್ಲಿ ಹೇಳಿರುವಂತೆ ಮನಸ್ಸು ನಿರ್ಮಳವಾಗಿರಬೇಕಾದರೆ ತಾನು ಸೇವಿಸುವುದು ಅನ್ನವಾಗದೆ ಅದು ಪ್ರಸಾದವಾಗಿ ಪರಿಣಮಿಸಬೇಕು.

ಗುರು, ಲಿಂಗ, ಜಂಗಮಗಳಿಗರ್ಪಿಸಿ, ಮಿಕ್ಕುಳಿದುದೇ ಪ್ರಸಾದವು. ಇವುಗಳಿಗರ್ಪಿಸದಿರುವುದೇ ಅನ್ನವು, ಆದುದರಿಂದ ಪ್ರಸಾದಿಯಾಗಬೇಕೆಂಬ ಎಂದರೆ ಪರಿಶುದ್ಧಮನಸ್ಕನಾಗಬೇಕೆಂಬ ಮಾಹೇಶ್ವರನು ಗುರು, ಲಿಂಗ, ಜಂಗಮಗಳಿಗರ್ಪಿಸಿ, ಪ್ರಸಾದ ಮಾಡಿಯೇ ಸ್ವೀಕರಿಸಬೇಕು. ನಾವು ಸೇವಿಸುವ ಆಹಾರಕ್ಕೂ ಮನಸ್ಸಿನ ಪರಿಶುದ್ದತೆಗೂ ಸಂಬಂಧವೇನೂ ಇಲ್ಲವೆಂದು ತಿಳಿಯಕೂಡದು.

ಆಹಾರ ಶುದ್ಧೌ ತತ್ವ ಶುದ್ಧಿಸ್ತತ್ವ ಶುದ್ಧೌ ಧ್ರುವಾ ಸ್ಮೃತಿಃ ।

ಎಂಬ **"ಛಾಂದೋಗ್ಯ ಉಪನಿಷತ್ತಿ"**ನ ಉಕ್ತಿಯ ಪ್ರಕಾರ ಆಹಾರವು ಶುದ್ಧವಾದುದಾಗಿದ್ದರೇನೇ ರಕ್ತಾದಿ ಸಪ್ತ ಧಾತುಗಳು ಸತ್ವಗುಣ ವಿಶಿಷ್ಟವಾದವುಗಳಾಗಿ ಮನ ಬುದ್ಧಿಗಳು ಪವಿತ್ರ ಮತ್ತು ತೀಕ್ಷ್ಣವಾದವುಗಳಾಗುತ್ತವೆ.

ಗುರು ಲಿಂಗ ಜಂಗಮುಗಗಳಿಗೆ ಅರ್ಪಿಸುವ ಅಹಾರವು ಪರಿಶುದ್ಧವಾದುದಾಗಿಯೇ ಇರಬೇಕಾಗುತ್ತದೆ. ಅಂತಹ ಪರಿಶುದ್ಧವಾದ ಆಹಾರವನ್ನು ಪ್ರಸಾದವಾಗಿ ಮಾಡಿಕೊಳ್ಳಬೇಕಾದರೆ ಅದರಲ್ಲಿ ಪವಿತ್ರ ಭಾವನೆಯನ್ನು ಬೆರಸಬೇಕಾಗುತ್ತದೆ. ಭಗವದ್ಗೀತೆಯಲ್ಲಿ ಹೇಳಿರುವಂತೆ

ರಾಗದ್ವೇಷ ವಿಯುಕ್ತೈಸ್ತು ವಿಷಯಾನಿಂದ್ರಿಯೈಶ್ಚರನ್ ।
ಆತ್ಮವಸ್ಯೈರ್ವಿಧೇಯಾತ್ಮಾಪ್ರಸಾದಮಧಿಗಚ್ಛತಿ ।

ಪ್ರಸನ್ನ ಚಿತ್ತವೆಂಬ ಪ್ರಸಾದ ಪ್ರಾಪ್ರವಾಗಬೇಕಾದರೆ ಶುದ್ಧವಾದ ಸಾತ್ವಿಕಾಹಾರವನ್ನು ಗುರು ಲಿಂಗ ಜಂಗಮಗಳಿಗರ್ಪಿಸಿ ಮಿಕ್ಕುಳಿದುದರಲ್ಲಿ ಪವಿತ್ರಭಾವನೆಯುಳ್ಳವನಾಗಿ ಶಾಂತಚಿತ್ತದಿಂದ ಸೇವಿಸುವ ಮಾಹೇಶ್ವರನು ಪರಿಶುದ್ಧ ಮನಸ್ಸಿನವನಾಗುವನು. ಈತನೇ ಪ್ರಸಾದಿಯು. ಇಂತಹ ಪ್ರಸಾದಿಗೆ ಮನವಿಕಾರವಿರುವುದಿಲ್ಲ. ಈತನೇ ಪ್ರಸಾದಿಯ ಸ್ಥಳವನ್ನು ಸೇರಿದ ಪವಿತ್ರಾತ್ಮನು. ರೂಢಿಯಲ್ಲಿ ಪ್ರಸಾದಿಕರೆಂದು ಹೇಳಿಸಿಕೊಳ್ಳುವರು ಮನವಿಕಾರವಿಲ್ಲದ ಈ ಸ್ಥಿತಿಯಲ್ಲಿರಬೇಕಾಗುವುದೆಂಬುದನ್ನು ಮರೆಯಬಾರದು.

(೨೬) ಗುರುಮಹತ್ಮ್ಯ ಸ್ಥಳ : ತಾನು ಸೇವಿಸುವ ಆಹಾರವನ್ನು ಗುರುವಿಗೇಕೆ ಅರ್ಪಿಸಬೇಕು? ಆ ಗುರುವಿನಲ್ಲಿ ಅಂತಹ ಮಹತ್ವವೇನಿದೆಯೆಂಬ ಸಂದೇಹ ಬರಬಹುದೆಂದೇ ಈ ಗುರುಮಹತ್ಮ್ಯವನ್ನು ತಿಳಿದುಕೊಳ್ಳಬೇಕಾಗಿದೆ. ಜಗದ್ವ್ಯಾಪಕನಾದ ಶಿವನನ್ನು ತಿಳಿಸಿಕೊಡುವಾತನೇ ಗುರುವಲ್ಲವೇ? ಆ ಗುರುವಿನ ಕೃಪೆ ಸದುಪದೇಶಗಳುಲಭಿಸದಿದ್ದರೆ ಶಿವನ ಸಂಬಂಧವಾದ ಜ್ಞಾನವು ನಮಗೆ ಹೇಗೆ ತಾನೆ ಲಭಿಸುವುದು? ಅಂತಹ ಜ್ಞಾನವಿಲ್ಲದಿದ್ದರೆ ಮನುಷ್ಯ ಜನ್ಮವೇ ವ್ಯರ್ಥವಾಗುವುದಿಲ್ಲವೇ? ಆದುದರಿಂದ ಗುರುವಿನ ಉಪಕಾರವು ಅತ್ಯಧಿಕವಾದುದು. ಆತನ ಕೃಪೆಯನ್ನು ಹೋಂದುವುದಕ್ಕಾಗಿಯೇ ತಾನು ಸೇವಿಸುವ ಆಹಾರವನ್ನು ಆತನಿಗೆ ಮೊದಲು ಅರ್ಪಿಸಿ ಆತನ ಕೃಪೆಯಿಂದ ಕೂಡಿದ ಪ್ರಸಾದವನ್ನು ಸೇವಿಸಿದರೆ ತಾನೂ ಪ್ರಸಾದಿಯಾಗುತ್ತಾರೆ. ಆದಕಾರಣ ಗುರುವಿನಲ್ಲಿ ಶಿವನಿಗಿಂತ ಅಧಿಕವಾದ ಭಕ್ತಿಯನ್ನಿಟ್ಟು ಗುರು ದಯಪಾಲಿಸಿದ ಶುದ್ಧ ಪ್ರಸಾದವನ್ನು ಸೇವಿಸುತ್ತಿರುವಾತನು ಗುರುಮಹಾತ್ಮ್ಯಸ್ಥಳದಲ್ಲಿದ್ದಾನೆಂದು ತಿಳಿಯಬೇಕು.

(೨೭) ಲಿಂಗಮಹತ್ಮ್ಯಸ್ಥಳ: ಅತ್ಯಂತ ಸೂಕ್ಷ್ಮವಾದ ಆಲದ ಬೀಜದಲ್ಲಿ ಬಹು ವಿಶಾಲವಾದ ಆಲದ ವೃಕ್ಷವು ಹೇಗೆ ಅಡಕವಾಗಿದೆಯೋ ಹಾಗೆಯೇ ಇಷ್ಟಲಿಂಗದಲ್ಲಿ ವಿಶ್ವವೇ ಅಡಕವಾಗಿದೆಯೆಂದು ಭಾವಿಸಬೇಕು. ವೃಕ್ಷದಲ್ಲಿ ಜೀವಕಳೆಯು ಹೇಗೆ ಅದೃಶ್ಯವಾಗಿದೆಯೋ ಹಾಗೆಯೇ ಲಿಂಗಮೂರ್ತಿಯಲ್ಲಿ ಶಿವಕಳೆಯು ಅದೃಶ್ಯವಾಗಿದೆ.

ಕ್ರಿಯಾ ಶಕ್ತ್ಯಾತ್ಮಕಂ ಪೀಠಂ ಜ್ಞಾನ ಶಕ್ತ್ಯಾತ್ಮನಃ ಪ್ರಭೋಃ ।

ಎಂಬ ಶಿವಾಗಮ ವಚನದಂತೆ ಇಷ್ಟಲಿಂಗದ ಪೀಠವೇ ಕ್ರಿಯಾಶಕ್ತಿಯಾಗಿಯೂ ಮೇಲಣ ಗೋಳಕವೇ ಜ್ಞಾನಶಕ್ತಿಯಾಗಿಯೂ ಇದೆಯೆಂದು ತಿಳಿದು ಶಿವನನ್ನು ಕ್ರಿಯಾಜ್ಞಾನಗಳಿಂದ ಪೂಜಿಸಿ ಧ್ಯಾನಿಸಿ ಕೃತಾರ್ಥನಾಗಬೇಕು. ಇಂತಹ ಪರಮಶ್ರೇಷ್ಠವಾದ ಶಿವಲಿಂಗಕ್ಕೆ ತಾನು ಸೇವಿಸುವ ಶುದ್ಧಾಹಾರವನ್ನು ಅರ್ಪಿಸಿ ಸಿದ್ದಪ್ರಸಾದವನ್ನಾದಗಿ ಮಾಡಿಕೊಂಡು ಸೇವಿಸುವ ಪ್ರಸಾದಿಯೇ ಲಿಂಗಮಹಾತ್ಮೆಯನ್ನರಿತಿದ್ದಾನೆಂದು ತಿಳಿಯಬೇಕು.

(೨೮) **ಜಂಗಮಮಹತ್ಮ್ಯಸ್ಥಳ** : ಗುರು ಲಿಂಗಗಳ ಮಹತ್ವಕ್ಕಿಂತಲೂ ಜಂಗಮ ಮಹತ್ಮ್ಯೆಯು ಅತ್ಯಧಿಕವಾದುದು. ಈ ವಿಷಯವಾಗಿ **ಸಿದ್ಧಾಂತಶಿಖಾಮಣಿಯ** ಜಂಗಮ ಮಹತ್ಮ್ಯೆಸ್ಥಳದಲ್ಲಿ ಹೇಳುವುದೇನೆಂದರೆ :

ಜಾನಂತ್ಯತಿಶಯಾದ್ಯೇತು ಶಿವಂ ಪ್ರಕಾಶಕಂ ।
ಸ್ವಸ್ವರೂಪತಯಾ ತೇತು ಜಂಗಮಾ ಇತಿ ಕೀರ್ತಿನಾ ॥ ಪ. ೧೧. ಶ್ಲೋ. ೩೬

"ಅತಿಶಯವಾದ ಲಿಂಗಾಂಗ ಸಾಮರಸ್ಯ ಜ್ಞಾನವುಳ್ಳವನಾಗಿ ತನ್ನ ಜ್ಞಾನ ಕ್ರಿಯಾ ಶಕ್ತಿಗಳಿಂದ ಶಿವನು ಹೇಗೆ ವಿಶ್ವವನ್ನು ಬೆಳಗುತ್ತಿದ್ಧಾನೆಯೋ ಹಾಗೆಯೇ ಪರಶಿವನಿಗೂ ತನಗು ಅಭೇದವೆಂಬ ದೃಢನಂಬಿಕೆಯಿಂದ ಸ್ವಸ್ವರೂಪಜ್ಞಾನಾದ ಮಹಾತ್ಮನೇ ಜಂಗಮನು." ಇಂತಹ ಜಂಗಮಮೂರ್ತಿಯು ಲೋಕೋದ್ಧಾರಕ್ಕೋಸ್ಕರ ಯಾವಾಗಲೂ ಸಂಚರಿಸುತ್ತಿರುವುದರಿಂದ ಜಗದ್ಗುರುವಾಗಿ ಶೋಭಿಸುತ್ತಿರುತ್ತಾನೆ.

ಸರ್ವಲೋಕೋಪಕಾರಾಯ ಯೋದೇವಃ ಪರಮೇಶ್ವರಃ ।
ಚರತ್ಯತಿಥಿ ರೂಪೇಣ ನಮಸ್ತೆ ಜಂಗಮಾತ್ಮನೆ ॥

ಪರಮಾತ್ಮನೇ ಸರ್ವಜನಗಳ ಹಿತಾರ್ಥವಾಗಿ ಅತಿಥಿ ರೂಪದಿಂದ ಸಂಚರಿಸುತ್ತಿರುತ್ತಾನೆ. ಆತನೇ ಜಂಗಮನು. ಅಂತಹ ಜಂಗಮ ಮೂರ್ತಿಗೆ ನಮಸ್ಕರಿಸಿ ಕೃತಾರ್ಥರಾಗಬೇಕು.

ಇಂತಹ ಪರಮಪೂಜ್ಯರಾದ ಷಟಸ್ಥಲ ಜ್ಞಾನಿಗಳಿಗೆ ಪ್ರಸಾದಿಯು ತಾನು ಸೇವಿಸುವ ಪರಿಶುದ್ಧವಾದ ಆಹಾರವನ್ನು ಅರ್ಪಿಸಿ ಪ್ರಸಿದ್ಧ ಪ್ರಸಾದವನ್ನು ಮಾಡಿಕೊಂಡು ಸೇವಿಸಿದರೆ ಜಂಗಮ ಮಹತ್ಮ್ಯೆಯನ್ನರಿತಂತಾಯಿತು.

(೨೯) **ಭಕ್ತಮಹತ್ಮ್ಯಸ್ಥಳ** : ಈ ಪ್ರಕಾರರ ಗುರುಲಿಂಗಜಂಗಮಗಳಲ್ಲಿ ಮಹತ್ತರವಾದ ಭಕ್ತಿಯನ್ನಿಟ್ಟು ಶುದ್ಧ ಸಿದ್ಧಪ್ರಸಿದ್ಧ ಪ್ರಸಾದಗಳನ್ನು ಸೇವಿಸಿ ಪ್ರಸನ್ನಚಿತ್ತನಾದ ಮಹಾ ಶಿವಭಕ್ತನು ಲೋಕದಲ್ಲಿ ಬಹು ಶ್ರೇಷ್ಠನಾಗಿದ್ಧಾನೆ ಸೂರ್ಯನ ರಥಕ್ಕಿರುವ ಕುದುರೆಗಳಿಗೆ ಹೇಗೆ ಕತ್ತಲೆಯ ಭಯವಿಲ್ಲವೋ ಹಾಗೆಯೇ ಇಂತಹ ಭಕ್ತಶ್ರೇಷ್ಠನಿಗೆ ಪಾಪದ ಭಯವಿಲ್ಲ, ಮದಗಜವನ್ನು ಕಮಲದ ದೇಂಟುಗಳಿಂದ ಮಾಡಲ್ಪಟ್ಟ ಸರಪಳಿಯು ಹೇಗೆ ಪ್ರತಿಬಂಧಿಸಲಾರದೊ ಹಾಗೆಯೇ ಇಂಥ ಶಿವಭಕ್ತಿಯಿಂದ ಪುಷ್ಪನಾದ ಭಕ್ತನನ್ನು ಯಾವ ಪಾಪಗಳೂ ಪ್ರತಿಬಂದಿಸುವುದಿಲ್ಲ.

ಎಂದರೆ ಇಂತಹ ಅದ್ವಿತಿಯ ಶಿವಭಕ್ತಿಯುಂಟಾದ ಭಕ್ತನ ಹಿಂದನ ಕುಲಜಾತಿ ಆಚಾರವಿಚಾರಗಳಾವುವೂ ಪ್ರತಿಬಂಧಕಗಳಾಗುವುದಿಲ್ಲವೆಂದೇ ತಿಳಿಯಬೇಕು. ಈ ವಿಷಯವಾಗಿ **ಸಿದ್ಧಾಂತ ಶಿಖಾಮಣಿಯ** ಭಕ್ತಮಹತ್ಮ್ಯ ಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

ಬ್ರಾಹ್ಮಣಃ ಕ್ಷತ್ರಿಯೋವಾಪಿ ವೈಶ್ಯೋವಾ ಶೂದ್ರ ಏವವಾ ।
ಅಂತ್ಯಜೋವಾ ಶಿವೇಭಕ್ತ ಶ್ಶಿವನ್ಮಾನ್ಯ ಏವಸಃ ॥
ಶಿವಭಕ್ತಿ ಸಮಾವೇಶೇ ಕ್ವಜಾತಿ ಪರಿಕಲ್ಪನಾ ।
ಇಂಧನೇಷ್ವಗ್ನಿದಗ್ದೇಷುಕೋವಾ ಭೇದಃ ಪ್ರಕೀರ್ತ್ಯತೇ ॥ ಪ. ೧೧. ಶ್ಲೋ ೫೪-೫೫

"ಬ್ರಾಹ್ಮಣ, ಕ್ಷತ್ರಿಯ ವೈಶ್ಯ ಶೂದ್ರರುಗಳು ಮಾತ್ರವಲ್ಲದೆ ಅಂತ್ಯಜನಾಗಿದ್ದರೂ ಕೂಡಾ ಆತನಲ್ಲಿ ಶಿವಭಕ್ತಿಯಿದ್ದುದಾದರೆ ಆತನು ಶಿವನಂತೆಯೇ ಪೂಜ್ಯನಾದನೆಂದು ತಿಳಿಯಬೇಕು. ಶಿವಭಕ್ತಿಯುಕ್ತನಾದ

ಮೇಲೆ ಆತನಲ್ಲಿ ಪೂರ್ವಜಾತಿಯೆಲ್ಲಿ ಉಳಿಯವುದು? ಗಿಡಗಳ ಗುಂಪಿಗೆ ಬೆಂಕಿಯನ್ನು ಹಚ್ಚಿ ಸುಟ್ಟ ಬಳಿಕ ಅವುಗಳಲ್ಲಿ ಗಿಡಿಗಳ ಜಾತಿಯನ್ನು ಎಣಿಸುವರೇ?"

ನಿರ್ಮಲ ಮನಸ್ಕನಾದ ಪ್ರಸಾದಿಯೂ ಶಿವಭಕ್ತನನ್ನು ಕೂಡಾ ಪೂಜ್ಯನನ್ನಾಗಿಯೇ ಪರಿಭಾವಿಸುತ್ತಾನೆ. ಇಂತಹ ಸ್ಥಿತಿಯು ಆತನಿಗೆ ಪ್ರಾಪ್ತವಾದರೆ ೨೯ನೆಯ ಅಂತಸ್ತನ್ನು ಏರಿದಂತಾಗುವುದು.

(೩೦) ಶರಣ ಮಹಾತ್ಮ್ಯಸ್ಥಳ : ಶಿವನೇ ಸರ್ವೋತ್ತಮನೆಂದು ತಿಳಿದು ಬ್ರಹ್ಮಾದಿ ಯಾವ ದೇವತೆಗಳಲ್ಲಿಯೂ ನಿಷ್ಠೆಯನ್ನಿಡದೆ ಶಿವನಿಗೆ ಶರಣಾಗತನಾದ ಶಿವಭಕ್ತನೇ ಶರಣನು. ಇಂತಹ ಶರಣನೇ ಶರಣಾರ್ಥಿ ಎಂದು ಶಿವನನ್ನು ಮೋಕ್ಷಪ್ರಾಪ್ತಿಗಾಗಿ ಪ್ರಾರ್ಥಿಸಿಕೊಳ್ಳುತ್ತಾನೆ. ವೀರಶೈವರಲ್ಲಿ ಶರಣಾರ್ಥಿ ಶರಣಾರ್ಥಾ ಎಂಬ ಶಬ್ದವು ಪ್ರಾರ್ಥನೆಗೋಸ್ಕರ ಉಪಯೋಗಿಸಲ್ಪಡುತ್ತಲಿದೆಯಷ್ಟೆ ಇದು ನಮಸ್ಕಾರ ಶಬ್ದಕ್ಕಿಂತ ವಿಶೇಷ ಮಹತ್ವ ಪಾರಮಾರ್ಥಿಕ ಅರ್ಥವನ್ನೊಳಕೊಂಡಿದೆ. ಸಿದ್ಧಾಂತ ಶಿಖಾಮಣಿ ಗ್ರಂಥದ ಶರಣ ಮಹಾತ್ಮ್ಯಸ್ಥಳದಲ್ಲಿ ಈ ವಿಷಯವಾಗಿ ಹೇಳಿರುವುದೇನೆಂದರೆ.

ಶಿವ ಮಭ್ಯರ್ಥರ್ಯ ಮೋಕ್ಷಂ ಶರಣಾರ್ಥಿ ಗೀಯತೇ

'ಶಿವನನ್ನು ಮೋಕ್ಷಾರ್ಥವಾಗಿ ಬೇಡುವುದೇ ಶರಣಾರ್ಥಿ'' ಎಂದು ಹೇಳಿಸಿಕೊಳ್ಳುವುದು.

ಸರ್ವವೂ ಶಿವಾಧೀನವೆಂದು ತಿಳಿದು ಶಿವನನ್ನು ಮೊರೆಹೊಕ್ಕು ನಿಶ್ಚಿಂತನಾಗಿ ಶಿವನಿಷ್ಠೆಯಲ್ಲಿ ಲೋಲನಾಗಿರತಕ್ಕ ಶರಣನು ಪರಮಪೂಜ್ಯನೆಂತಲೂ ಆತನ ಜನ್ಮವೇ ಸಾರ್ಥಕವಾದುದೆಂತಲೂ ತಿಳಿಯಬೇಕು.

(೩೧) ಪ್ರಸಾದಮಹತ್ಮ್ಯ ಸ್ಥಳ : ಗುರುಲಿಂಗ ಜಂಗಮಗಳ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳ ಸೇವನೆಯಿಂದಲೇ ತನ್ನಲ್ಲಿ ಶಿವನಿಗೆ ಮೊರೆಹೋಗುವ ದಿವ್ಯಜ್ಞಾನೋದಯವಾಗುವುದರಿಂದ ಪ್ರಸಾದವು ಅತ್ಯಂತ ಮಹತ್ವವಾದುದೆಂದು ತಿಳಿಯಬೇಕು.

ಶಿವನಿಗೆ ಮೊರೆಹೋಗುವುದರಿಂದ ಎಲ್ಲ ದುಃಖಗಳಿಂದ ಪಾರಾಗಿ ಪರಮಾನಂದ ವನ್ನನುಭವಿಸುತ್ತಾನೆ. ಇಂತಹ ಶ್ರೇಷ್ಠ ಸ್ಥಿತಿಯು ಪ್ರಸಾದದಿಂದಲೇ ಲಭಿಸುವ ಕಾರಣ ಪ್ರಸಾದ ಮಹಾತ್ಮೆಯು ವಿಶೇಷವಾದುದಾಗಿದೆ. ಈ ವಿಷಯವಾಗಿ **ಸಿದ್ಧಾಂತ ಶಿಖಾಮಣಿ**ಯಲ್ಲಿ ಈ ಪ್ರಕಾರ ಹೇಳಿದೆ.

ಪ್ರಸಾದೇ ಶಾಂಭವೇ ಸಿದ್ಧೇ ಪರಮಾನಂದ ಕಾರಣೇ ।
ಸರ್ವಂಶಿವ ಮಯಂ ವಿಶ್ವಂ ದೃಶ್ಯತೇನಾ ತ್ರಸಂಶಯಃ ॥ ಪ. ೧೦. ಶ್ಲೋ. ೨೪.

"ಪರಮಾನಂದಕ್ಕೆ ಮೂಲವಾದ ಶಿವಪ್ರಸಾದದ ಕೃಪೆಯು ಲಭಿಸಿದರೆ ಈ ದೃಶ್ಯವಾದ ಪ್ರಪಂಚವೆಲ್ಲವೂ ತನಗೆ ಶಿವಮಯವಾಗಿಯೇ ತೋರುವುದರಲ್ಲಿ ಎಳ್ಳಷ್ಟಾದರು ಸಂಶಯವಿಲ್ಲ."

ಇಂತಹ ಸ್ಥಿತಿಯು ಭಕ್ತನಿಗೆ ಪ್ರಾಪ್ತವಾದಾಗಲೇ ಆತನು ಪ್ರಸಾದಿಯಾದನೆಂದು ತಿಳಿಯಬೇಕು, ಆಗ ಭಕ್ತನು ೩೧ ಅಂತಸ್ತುಗಳನ್ನು ದಾಟಿದವನಾಗುವನು.

❖❖

೫ನೆಯ ಪ್ರಕರಣ

ಅಂತರ್ಜ್ಞಾನ

ವೀರಶೈವನು ಮೊದಲನೆಯ ಭಕ್ತ. ಮಹೇಶ ಮತ್ತು ಪ್ರಸಾದಿ ಎಂಬ ಈ ಮೂರು ಸ್ಥಳಗಳಲ್ಲಿರುವಾಗ ಶಿವಸಂಬಂಧವಾದ ಕರ್ಮಗಳನ್ನೇ ಹೆಚ್ಚಾಗಿ ಮಾಡಬೇಕಾಗುತ್ತದೆ. ಆಗ ಆತನ ದೃಷ್ಟಿಯು ಹೆಚ್ಚಾಗಿ ಬಹಿರ್ಮುಖವಾಗಿಯೇ ಇರುತ್ತದೆ. ಈ ಮೂರು ಮುಖ್ಯಸ್ಥಾನಗಳನ್ನು ಎಂದರೆ ಈ ಮುಂಚೆ ವಿವರಿಸಿದ ೩೧ ಅಂತಸ್ತುಗಳನ್ನು ಏರುವವರೆಗು ಹೊರಗಡೆಯಲ್ಲಿಯೇ ಶಿವಸಂಬಂಧವಾದ ಜ್ಞಾನವುಳ್ಳವನಾಗಿರುತ್ತಾನೆ. ಅನಂತರ ಆತನ ದೃಷ್ಟಿಯು ಅಂತರ್ಮುಖವಾಗುತ್ತದೆ.

ಮುಂದಣ ಪ್ರಾಣಲಿಂಗಿ, ಶರಣ, ಮತ್ತು ಐಕ್ಯಗಳೆಂಬ ಸ್ಥಳಗಳಲ್ಲಿ ಪ್ರವೇಶಿಸುವಾಗ ಜ್ಞಾನಾಧಿಕವಾಗಿಯೇ ಕ್ರಿಯೆಗಳನ್ನಾಚರಿಸುತ್ತಾನೆ. ಈ ವಿಷಯವಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಈ ಪ್ರಕಾರ ಹೇಳಿದೆ.

ಭಕ್ತೋ ಮಾಹೇಶ್ವರಶ್ಚೈವ ಪ್ರಸಾದೀತಿಚ ಕೀರ್ತಿತಃ ।
ಕರ್ಮ ಪ್ರಾಧಾನ್ಯ ಯೋಗೇನ ಜ್ಞಾನ ಯೋಗೋಸ್ಯಕಥ್ಯತೇ ॥ ಪ. ೧೨. ಶ್ಲೋ. ೨.

"ಭಕ್ತ ಮಾಹೇಶ್ವರ, ಮತ್ತು ಪ್ರಸಾದಿ ಸ್ಥಳಗಳಲ್ಲಿರುವ ಭಕ್ತನಿಗೆ ಕರ್ಮವೇ ಪ್ರಾದಾನ್ಯವಾಗಿ ಮುಂದಣ ಮೂರು ಸ್ಥಳಗಳಲ್ಲಿ ಶಿವಜ್ಞಾನವೇ ಅಧಿಕವಾಗಿರುತ್ತದೆ."

(೩೨) ಪ್ರಾಣಲಿಂಗಿಸ್ಥಳ : ನಿರ್ಮಲಚಿತ್ತನಾದ ಪ್ರಸಾದಿಯು ಗುರೂಪದೇಶದಂತೆ ಯೋಗಮಾರ್ಗದಿಂದ ಆಧಾರಚಕ್ರವನ್ನು ಒಲಿದ. ನಾಭಿಕಂದದಿಂದುಂಟಾಗುವ ಪರಮಜ್ಯೋತಿಯನ್ನೇ ಪ್ರಾಣಲಿಂಗವೆಂದು ಅದರಲ್ಲಿ ಅನುಸಂಧಾನವುಳ್ಳವನಾಗಬೇಕು. ಸೂರ್ಯಕಿರಣದಲ್ಲಿ ಮಂಜು ಅಡಗಿ ಹೋಗುವಂತೆ ಪ್ರಾಣವಾಯುವು ಯಾವ ಠಾವಿನಲ್ಲಿ ಲೀನವಾಗುವುದೋ ಅದೇ ಪ್ರಾಣಲಿಂಗವೆಂದು ಬಹಿರ್ಮುಖವಾಗಿದ್ದ ಚಿತ್ತವನ್ನು ಅಂತರ್ಮುಖ ಮಾಡಿ ಆ ಪರಂಜ್ಯೋತಿಯ ಅನುಸಂಧಾನವನ್ನೇ ಮಾಡಬೇಕು.

ನಿರ್ಮಲಾಂತಃಕರಣಿಯಾದ ಪ್ರಸಾದಿಯು ಗುರೂಪದೇಶದಂತೆ ಶಿವಯೋಗನಿಷ್ಠನಾದರೆ ಆತನ ಹೃದಯಾಕಾಶದಲ್ಲಿ ಪ್ರಾಣಲಿಂಗವು ದೀಪದಂತೆ ಬೆಳಗುವುದು. ಇದನ್ನು ಲಕ್ಷಿಸದೆ ಕೇವಲ ಬಾಹ್ಯಲಿಂಗ ಪೂಜೆಯೊಂದರಲ್ಲಿಯೇ ಆಸಕ್ತನಾದರೆ ಆತನು ಜಡಮತಿಯಾಗುತ್ತಾನೆ. ಈ ವಿಷಯವಾಗಿ ಸಿದ್ಧಾಂತ ಶಿಖಾಮಣಿಯ ಪ್ರಾಣಲಿಂಗಿಸ್ಥಳದಲ್ಲಿ ಈ ಪ್ರಕಾರ ಹೇಳಿದೆ.

अन्तस्स्थितं परं लिंगं ज्योतीरूपं शिवात्मकं ।

ವಿಹಾಯ ಬಾಹ್ಯಲಿಂಗಸ್ಥಾ ವಿಮೂಢಾ ಇತಿಕೀರ್ತಿತಾಃ ॥

“ಒಳಗೆ ಜ್ಯೋತಿ ರೂಪವಾಗಿರುವ ಶಿವಮಯವಾದ ಪ್ರಾಣಲಿಂಗವನ್ನು ಬಿಟ್ಟು ಯಾರು ಬಾಹು ಪ್ರಾಕೃತಿಕ ರಂಗದ ತತ್ಪರರಾಗಿರುವರೋ ಅವರು ಅತ್ಯಂತ ಮೂಢರೆಂದು ಹೇಳಿಸಿಕೊಳ್ಳುವರು.”

ಆದುದರಿಂದ್ಃ ಇಷ್ಟಲಿಂಗವನ್ನು ಬಾಹ್ಯದಲ್ಲಿ ಪೂಜಿಸುವುದು ಹೇಗೆ ವೀರಶೈವರ ಕರ್ತವ್ಯವಾಗಿದೆಯೋ, ಹಾಗೆಯೇ ಅಂತರ್ಯದಲ್ಲಿ ಪ್ರಾಣಲಿಂಗಾನುಸಂಧಾನವನ್ನು ಮಾಡುವುದು ಅಗತ್ಯವಾಗಿದೆ. ಹೀಗೆ ಮಾಡುವಾತನೇ ಪ್ರಾಣಲಿಂಗದಲ್ಲಿರುವನು.

(೩೩) ಪ್ರಾಣಲಿಂಗಾರ್ಚನಸ್ಥಳ : ಹನ್ನೆರಡು ಎಸಳುಗಳ ಕಮಲದಂತೆ ಹೃದಯ ಮಧ್ಯದಲ್ಲಿರುವ ಅನಾಹತ ಚಕ್ರದಲ್ಲಿ ನವದ್ವಾರಗಳಿಂದ ಮುಚ್ಚಲ್ಪಟ್ಟದ್ದಾಗಿಯೂ ಬ್ರಹ್ಮರಂಧ್ರದಲ್ಲಿರುವ ಪೂರ್ಣಚಂದ್ರಮಂಡಲದಿಂದ ಸೋರುತ್ತಿರುವ ಅಮೃತಧಾರೆಯ ಸಿಂಚನೆಯಿಂದ ಬಹು ತಂಪಾಗಿಯೂ ಸರ್ವತೋಮುಖವಾಗಿಯೂ ಬೆಳಗುತ್ತಿರುವ ಆ ಪ್ರಾಣಲಿಂಗವನ್ನು ಈ ಪ್ರಕಾರ ಪೂಜಿಸಬೇಕು.

ಶಾಂತಿಯೆಂಬ ಜಲದಿಂದ ಅಭಿಷೇಕ ಮಾಡಿ ಸುವಿವೇಕವೆಂಬ ವಸ್ತ್ರವನ್ನು ಧರಿಸಿ ಸತ್ಯವೆಂಬ ಆಭರಣವನ್ನಿಟ್ಟು ವೈರಾಗ್ಯವೆಂಬ ಪುಷ್ಪ ಮಾಲೆಯನ್ನರ್ಪಿಸಬೇಕು. ಈ ಪೂಜೆಯಲ್ಲಿ ಚಿತ್ತೈಕಾಗ್ರತೆಯೇ ಗಂಧ, ಅಹಂಕಾರ ನಿರಸನವೇ ಅಕ್ಷತೆ, ವಿಶ್ವಾಸವೇ ಧೂಪ, ಆತ್ಮ ಜ್ಞಾನವೇ ದೀಪ, ಪ್ರಾಪಂಚಿಕ ಭ್ರಾಂತಿಯನ್ನಳಿಯುವುದೇ ನೈವೇದ್ಯ. ಈ ಪ್ರಕಾರ ಸದ್ಗುಣ ಸತ್ಪ್ರವರ್ತಿಗಳಿಂದ ವರ್ತಿಸುವುದೇ ಪ್ರಾಣಲಿಂಗಪೂಜೆಯು. ಹೀಗೆ ಆಚರಿಸತಕ್ಕ ಮಹಾತ್ಮನು ಪ್ರಾಣಲಿಂಗ ಪೂಜೆಯಲ್ಲಿದ್ಧಾನೆಂದು ತಿಳಿಯಬೇಕು.

(೩೪) ಶಿವಯೋಗಸಮಾಧಿಸ್ಥಳ : ಈ ಪ್ರಕಾರ ಪ್ರಾಣಲಿಂಗಾರ್ಚನೆಯಲ್ಲಿರತಕ್ಕ ಮಹಾತ್ಮನು ಶಿವ ಯೋಗ ಸಮಾಧಿಯನ್ನು ಮುಂದೆ ಹೊಂದುವನು. ಯೋಗಶ್ಚಿತ್ತವೃತ್ತಿ ನಿರೋಧಃ ಎಂಬ ಪತಂಜಲ ಋಷಿಗಳ ಅಭಿಪ್ರಾಯದಂತೆ ನಮ್ಮಲ್ಲುಂಟಾಗುವ ನಾನಾತರಹದ ಚಿತ್ತವೃತ್ತಿಗಳನ್ನು ನಿರೋಧಿಸಲು ಮಲೇಂದ್ರಿಯ ಸ್ಥಾನದಲ್ಲಿ ಆಧಾರಚಕ್ರ, ಮೂತ್ರೇಂಧ್ರಿಯ ಸ್ಥಾನದಲ್ಲಿ ಸ್ವಾಧಿಷ್ಠಾನ ಚಕ್ರ, ನಾಭಿ ಸ್ಥಾನದಲ್ಲಿ ಮಣಿಪುರಕ ಚಕ್ರ, ಹೃದಯ ಸ್ಥಾನದಲ್ಲಿ ಅನಾಹತ ಚಕ್ರ, ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ ಮತ್ತು ಭೂಮಧ್ಯಸ್ಥಾನದಲ್ಲಿ ಆಜ್ಞಾಚಕ್ರಗಳೆಂಬ ಈ ಪ್ರಕಾರ ಆರು ಚಕ್ರಗಳು ಸೂಕ್ಷ್ಮದೇಹಾಂತರ್ಗತವಾಗಿದೆ.

ಇವುಗಳಿಗೆ ಕ್ರಮವಾಗಿ ೪-೭-೧೦-೧೨-೧೬-೬ ಎಸಳುಗಳ ಕಮಲಗಳುದಯಿಸುತ್ತಿರುವುವು. ಇವುಗಳನ್ನು ಗುರೂಪದೇಶದ ಪ್ರಕಾರ ಅರಿದು ಭಾವಿಸಬೇಕು.

ಆಧಾರ ಚಕ್ರವನ್ನು ಹಿಮ್ಮಡದಿಂದೊತ್ತಿ ರೇಚಕ ಪೂರಕ ಕುಂಭಕಗಳಿಂದ ಪ್ರಾಣಾಯಾಮವನ್ನು ಮಾಡಿ ಸುಷುಮ್ನನಾಡಿಯಲ್ಲಿ ಹುದುಗಿರುವ ಕುಂಡಲಿಶಕ್ತಿಯನ್ನು ಜಾಗೃತಗೊಳಿಸಿ ಮೇಲು ಮುಖ ಮಾಡಿಸಿ ಆರು ಚಕ್ರಗಳನ್ನು ದಾಟಿಸಿ ಶಿಖಾಚಕ್ರದ ಸಹಸ್ರದಳ ಕಮಲದ ಮಧ್ಯದಲ್ಲಿ ಪ್ರವೇಶಗೊಳಿಸಿದರೆ ಅಲ್ಲಿ ೩೮ ಕಲೆಗಳಿಂದ ಬೆಳಗುವ ದಿವ್ಯಪ್ರಕಾಶವಿದೆ. ಅದೇ ಕೈಲಾಸವೆಂದು ಶಾಸ್ತ್ರಜ್ಞರು ಹೇಳುತ್ತಿದ್ದಾರೆ.

ಸಿದ್ಧಾಂತ ಶಿಖಾಮಣಿಯ ಶಿವಯೋಗ ಸಮಾಧಿ ಸ್ಥಳದಲ್ಲಿ ಹೇಳಿರುವ ಪ್ರಕಾರ ಜ್ಯೋತಿಯಲ್ಲಿ ಬೆರಿಯಬೇಕು.

ಹಂಸ ರೂಪಂ ಪರಾತ್ಮಾನಂ ಸೋಹಂ ಭಾವೇನ ಭಾವಯೇತ್ ।
ತದೇಕತಾನತಾ ಸಿದ್ಧಿಸ್ಸಮಾಧೀ ಪರಮೋಮತಃ ॥ ಪ. ೧೨. ಶ್ಲೋ. ೩.

ಹಂಸರೂಪದಿಂದಾಡುತ್ತಿರುವ ಆತ್ಮ ಲಿಂಗವನ್ನು ಗುರೂಪದೇಶದಿಂದ ಸೋಹಂಕಾರವನ್ನಾಗಿ ಮಾಡಿಕೊಂಡು ಧ್ಯಾನಿಸಬೇಕು. ಶಿವನೇ ನಾನೆಂಬುದೇ ಸೋಹಂ ಎಂಬುದರ ಅರ್ಥವು. ಈ ಪ್ರಕಾರ ಶಿವನಿಗೂ ಜೀವನಿಗೂ ಭಿನ್ನವಿಲ್ಲದಿರುವ ಏಕತ್ವವೇ ಸಮಾಧಿಯು.

ಈ ಪ್ರಕಾರ ಅಂತರ್ಮುಖವಾಗಿ ಶಿವಾನಂದ ಲೋಲನಾಗಿರುವಾತನೇ ಶಿವಯೋಗ ಸಮಾಧಿ ಸ್ಥಳದಲ್ಲಿರುವ ಮಹಾತ್ಮನು.

(೩೫) ಲಿಂಗನಿಜಸ್ಥಳ : ಪ್ರಾಣಲಿಂಗಿಯೂ ತನ್ನಲ್ಲಿರುವ ಲಿಂಗರೂಪಿಯಾದ ಶಿವನನ್ನು ಪ್ರತ್ಯಕ್ಷಾನುಭಾವದಿಂದ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುವನು. ಆಗ ಆತನಿಗೆ ಲಿಂಗವೊಂದೇ ಸತ್ಯವಾಗಿ ತೋರುವುದು. ಈ ವಿಶ್ವವು ಲಿಂಗದಲ್ಲಿಯೇ ಉದ್ಭವಿಸಿ ಲಿಂಗದಿಂದಲೇ ರಕ್ಷಣೆಗಾಗಿ ಕೊನೆಗೆ ಲಿಂಗದಲ್ಲಿಯೇ ಲಯವಾಗುವುದೆಂದು ಆ ಪ್ರಾಣಲಿಂಗಿಯೂ ತಿಳಿಯುವನು. ಇಂತಹ ಸ್ಥಿತಿಯು ಪ್ರಾಪ್ತವಾದರೆ ಆತನು ಲಿಂಗನಿಜಸ್ಥಳದಲ್ಲಿರುವನೆಂದು ತಿಳಿಯಬೇಕು.

(೩೬) ಅಂಗಲಿಂಗಸ್ಥಳ : ಪ್ರಾಣಲಿಂಗಿಯೂ ಸರ್ವತ್ರ ಲಿಂಗಭಾವೆಯುಳ್ಳವನಾಗಿದ್ದರೂ ಅಂಗಭಾವವನ್ನು ಎಂದರೆ ತಾನು ಶಿವಸಂಪನ್ನನಾದ ಜೀವನೆಂಬ ಭಾವವನ್ನು ಮರೆತಿರುವುದಿಲ್ಲ. ಆದುದರಿಂದಲೇ ತನ್ನ ಹೃದಯ ಮಧ್ಯದಲ್ಲಿ ಬೆಳಗುವ ಲಿಂಗಮೂರ್ತಿಯನ್ನು ಗುರುಶಾಸ್ತ್ರಸ್ವಾನುಭವಗಳಿಂದ ಅರಿತು ಆರಾಧಿಸುತ್ತಿರುತ್ತಾನೆ, ಜೀವನು ಲಿಂಗದಲ್ಲಿಯೂ ಲಿಂಗವು ಜೀವದಲ್ಲಿಯೂ ಬೀಜಾಂಕುರಗಳಂತೆ ಅಭಿನ್ನವಾಗಿ ವಾಗಿಯೆಂದು ತಿಳಿದು ಕೊಂಡಿರುವುದೇ ಅಂಗಲಿಂಗಸ್ಥಳವು.

(೩೭) ಶರಣಸ್ಥಳ : ಪ್ರಾಣಲಿಂಗಾನುಸಂಧಾನವುಳ್ಳ ಆ ಮಹಾತ್ಮನು ತಾನೇ ಸತಿಯೆಂತಲೂ ಆ ಲಿಂಗಮೂರ್ತಿಯೇ ಪತಿಯೆಂತಲೂ ತಿಳಿದು ಪ್ರೌಢ ಸತಿಯು ತನ್ನ ಪತಿಯಲ್ಲಿ ಹೇಗೆ ಸಂಸಾರ ಸುಖವನ್ನನುಭವಿಸುತ್ತಿರುತ್ತಾಳೆಯೋ ಹಾಗೆಯೇ ಲಿಂಗಮೂರ್ತಿಯ ಪೂಜೆ, ಧ್ಯಾನಾದಿಗಳಿಂದ ಲಿಂಗಾನಂದವನ್ನನುಭವಿಸುತ್ತಾನೆ. ಆತನೇ ಶರಣನೆಂದು ತಿಳಿಯಬೇಕು.

ಪತಿವ್ರತಾ ಸ್ತ್ರೀಯಳು ಪರ ಪುರಷರಲ್ಲಿ ಹೇಗೆ ಪತಿಭಾವನೆಯನ್ನಿಡುವುದಿಲ್ಲವೋ ಹಾಗೆಯೇ ಈ ಶರಣನು ಶಿವೇತರ ದೇವರುಗಳಲ್ಲಿ ದ್ವೈವ ಭಾವವನ್ನಿಡದೆ ತನ್ನ ಭಕ್ತಿಭಾವಗಳನ್ನು ಲಿಂಗಮೂರ್ತಿಯಲ್ಲಿಯೇ ಯೋಗಗೊಳಿಸಿ, ಯಾವಾಗಲೂ ಲಿಂಗಭೋಗೋಪಭೋಗಿಯಾಗಿ ಸುಖಶಾಂತಿಗಳಲ್ಲಿರುವನು. ಇಂತಹ ಶಿವಭಕ್ತನೇ ಶರಣಸ್ಥಳದಲ್ಲಿದ್ದಾನೆಂದು ತಿಳಿಯಬೇಕು.

(೩೮) ತಾಮಸನಿರಸನಸ್ಥಳ : ಲಿಂಗವೇ ಪತಿ, ತಾನೇಸತಿ, ಎಂದು ತಿಳಿದಾಚರಿಸುವ ಶರಣನು ಸತ್ವಗುಣಶೀಲನಾಗಿರಬೇಕೇ ವಿನಾ ತಮೋಗುಣ ವಿಶಿಷ್ಟನಾಗಬಾರದು. ಸಿದ್ಧಾಂತ ಶಿಖಾಮಣಿಯಲ್ಲಿ ತಾಮಸಿಯ ಲಕ್ಷಣವನ್ನು ಈ ತಾಮಸನಿರಸನ ಸ್ಥಳದಲ್ಲಿ ಈ ಪ್ರಕಾರ ಉದಾಹರಿಸಿದ್ದಾಗಿದೆ.

ಯೋದ್ವೇಷ್ಟಿ ಸಕಲಾರ್ ಲೋಕಾರ್ ಯೋವಾಹಂ ಕುರುತೇ ಸದಾ
ಯೋಸತ್ಯ ಭಾವನಾ ಯುಕ್ತಸ್ಲ ತಾಮಸ ಇತಿ ಸ್ಮೃತಃ ॥

"ಯಾವಾತನು ಅನ್ಯರನ್ನು ದ್ವೇಷಿಸುತ್ತ ಅಹಂಕಾರಯುಕ್ತನಾಗಿ ಅಸತ್ಯಾಚರಣೆ ನುಡಿ ಕಲ್ಪನೆಗಳಿಂದ ಕೂಡಿದವನಾಗಿರುತ್ತಾನೆಯೋ ಆತನೇ ತಾಮಸಿಯು."

ಇಂತಹ ತಾಮಸ ಗುಣಗಳು ಶರಣನಿಗೆ ಯಾವಾಗಲೂ ಬಾರದಂತೆ ಆತನು ಈ ಕೆಳಗೆ ವಿವರಿಸಿರುವ ಪ್ರಕಾರ ಹತ್ತು ಸಾತ್ವಿಕ ಗುಣಗಳುಳ್ಳವನಾಗಬೇಕು.

ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ ।
ಕ್ಷಾಂತೀಃ ಕಾರುಣ್ಯ ಸಂಪತ್ತಿ ಶ್ರೃದ್ಧಾಸತ್ಯ ಸಮುದ್ಭವಾ ॥
ಶಿವಭಕ್ತಿಃ ಪರೋಧರ್ಮರ್ ಶ್ರೀವಜ್ಞಾನಸ್ಯ ಭಾಂಧವಾಃ ।
ಏತೈರ್ಯುಕ್ತೋ ಮಹಾಯೋಗಿ ಸಾತ್ವಿಕಃ ಪರಿಕೀರ್ತಿತಃ ॥ ಪ. ೧೩. ಶ್ಲೋ. ೧೫–೧೬

ಅಂತಯರಿಂದ್ರಿಯನಿಗ್ರಹ, ಬಾಹ್ಮೇಂದ್ರಿಯ ನಿಗ್ರಹ, ನಿತ್ಯಾನಿತ್ಯವಸ್ತುವಿಚಾರ, ವಿಷಯ ವೈರಾಗ್ಯ, ಅಖಂಡವಾದ ಶಿವಧ್ಯಾನ, ಕ್ಷಮೆ, ದಯೆ, ಶೃದ್ಧೆ, ಶಿವಭಕ್ತಿ, ಶಿವಾಚಾರಗಳೆಂಬ ಹತ್ತು ಸಾತ್ವಿಕ ಗುಣಗಳು ಶಿವಜ್ಞಾನಕ್ಕೆ ಬಂಧುಗಳಾಗಿವೆ. ಇವುಗಳಿಂದ ಕೂಡಿದ ಮಹಾಶಿವಯೋಗಿಯೇ ಸಾತ್ವಿಕನು.

ಶರಣನು ಈ ಪ್ರಕಾರ ಸತ್ವಗುಣಶೀಲನಾಗಲು ತಾಮಸ ನಿರಸನ ಸ್ಥಳವನ್ನು ಸೇರಿದನೆಂದು ತಿಳಿಯಬೇಕು.

(೩೯) ನಿರ್ದೇಶಸ್ಥಳ : ಶರಣನು ಈ ಪ್ರಕಾರ ಸತ್ವ ಗುಣ ವಿಶಿಷ್ಟನಾಗುವದುದರಿಂದ ಆತನಲ್ಲಿ ಸಾಮರಸ್ಯ ಜ್ಞಾನವುಂಟಾಗುತ್ತದೆ. ಆ ಜ್ಞಾನವೇ ನಿರ್ದೇಶಿಸಿ ಈ ಸ್ಥಳದಲ್ಲಿ ವಿವರಿಸಿರುವುದರಿಂದ ಇದು "ನಿರ್ದೇಶ ಸ್ಥಳ" ಎಂಬುದಾಗಿ ಹೇಳಲ್ಪಟ್ಟಿತು.

ಆದುದರಿಂದ ಜಗತ್ತನ್ನು ಉದ್ಧಾರ ಮಾಡುವ ಮಹಾತ್ಮರು ಶರಣಸ್ಥಳದಲ್ಲಿದ್ಧಾಗಲೇ ಜಗದ್ಗುರುಗಳಾಗುತ್ತಾರೆ. ಶರಣರೇ ನಿಜ ಗುರುಗಳೆಂಬುದು ಈ ವೀರಶೈವ ಮತ ಸಿದ್ಧಾಂತವು. ಆದ ಕಾರಣ ಈ ಶರಣ ಸ್ಥಳದಲ್ಲಿಯೇ ಗುರತ್ವವನ್ನು ಹೇಳಿದ್ದಾರೆ.

ಈ ಪ್ರಕಾರ ಶರಣಸ್ಥಳದಲ್ಲಿರುವ ಆ ಶಿವಭಕ್ತನಿಗೇನೇ ಗುರುತ್ವವು ಬರುತ್ತದೆಂದು ಹೇಳಿರುವ ಕಾರಣವೇನೆಂದರೆ ಶರಣಸ್ಥಳದ ಹಿಂದಣದಾದ ಪ್ರಾಣಲಿಂಗಿ ಸ್ಥಳದಲ್ಲಿರುವಾತನು ಇನ್ನೂ ತಾನೇ ಪರಿಶುದ್ಧನಾಗಿರುವುದಿಲ್ಲವಾದುದರಿಂದ ಜೀವಿಗಳನ್ನು ಉದ್ಧಾರ ಮಾಡುವ ಸಾಮರ್ಥ್ಯವು ಆತನಿಗಿರುವುದಿಲ್ಲ. ಮುಂದಣ ಐಕ್ಯಸ್ಥಳದಲ್ಲಾದರೋ ತಾನೇ ಪರಶಿವನಲ್ಲಿ ಬೆರೆತಿರುವುದರಿಂದ ಅನ್ಯರ ಉದ್ಧಾರಕ್ಕೋಸ್ಕರ ಪ್ರಯತ್ನಿಸುವುದಿಲ್ಲ.

ಈ ಶರಣರಲ್ಲಿ ಶಿವಜ್ಞಾನವೇ ಬೆಳಗುವುದರಿಂದ ಈತನೇ ಗುರುವಾಗಲು ಯೋಗ್ಯರು. ಏಕೆಂದರೆ, ಈ ನಿರ್ದೇಶಕ ಸ್ಥಳದ ವಿಷಯವನ್ನು ವಿವರಿಸುವಾಗ ಸಿದ್ಧಾಂತ ಶಿಖಾಮಣಿಯಲ್ಲಿ ಈತನೇ ಏಕೆ ಗುರುವಾಗುತ್ತಾನೆಂಬುದರ ಕಾರಣವನ್ನು ಈ ಪ್ರಕಾರ ವಿವರಿಸಿದೆ.

ಅಜ್ಞಾತ ಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್ ।
ಪ್ರಜ್ಞಾ ವಿಭೂತಿಯೋಗೇನ ತಮಾಹುರ್ಗುರು ಸತ್ತಮಂ ॥ ಪ. ೧೩. ಶ್ಲೋ. ೧೫.

ಅಜ್ಞಾನವೆಂಬ ಧೂಳಿ ಮುಸುಕಿದ ಚಿತ್ತವೆಂಬ ಕನ್ನಡಿಗೆ ಶಿವಜ್ಞಾನವೆಂಬ ವಿಭೂತಿಯನ್ನು ತಿಕ್ಕಿ ಯಾವಾತನು ಬೆಳಗುತ್ತಾನೆಯೋ ಆತನೇ ಗುರು ಶ್ರೇಷ್ಠನೆಂದು ತಿಳಿಯಬೇಕು.

(೪೦) ಶೀಲಸಂಪಾದನಸ್ಥಳ : ಶಿವಶರಣನಿಗೆ ನಿರ್ದೇಶಿಸಿ ತಿಳುಹಿಸಲ್ಪಟ್ಟ ಶಿವಜ್ಞಾನದಲ್ಲಿಯೇ ನಿಷ್ಠೆಯುಳ್ಳವನಾಗಿ ಶಿವನೇ ತನಗೆ ರಕ್ಷಕನೆಂದು ಶಿವನಲ್ಲಿಯೇ ನಂಬುಗೆಯುಳ್ಳವನಾಗಿರುವ ಶರಣನು ಶೀಲಸಂಪನ್ನನೆಂದು ತಿಳಿಯಬೇಕು. ಏಕೆಂದರೆ, ಶಿವಜ್ಞಾನವೇ ನಿಜವಾದ ಶೀಲವು. ಇಂತಹ ಶೀಲವು ಆ ಶರಣನಲ್ಲಿ ಅಳವಟ್ಟಿರುವುದರಿಂದ ಆತನು ಶೀಲಸಂಪಾದನೆಯ ಸ್ಥಳದಲ್ಲಿರುತ್ತಾನೆಂದು ತಿಳಿಯಬೇಕು. ಈ ಶರಣನೇ ಮುಂದೆ ಐಕ್ಯಸ್ಥಳವನ್ನು ಸೇರಿ ಪರಮಾನಂದವನ್ನನುಭಿಸುವನು.

❖❖

೬ನೆಯ ಪ್ರಕರಣ

ಸರ್ವತ್ರ ಲಿಂಗ ಭಾವ

ಶಿವಜ್ಞಾನಾನಂದಲೋಲನಾದ ಶರಣನು ಮುಂದೆ ಶಿವನಲ್ಲಿ ಬೆರೆಯುವನು. ಅದೇ ಆತನು ಸೇರುವ ಆರನೆಯದಾದ ಐಕ್ಯಸ್ಥಳವು. ಅಂಗ ಸ್ಥಳದಲ್ಲಿ ಆರು ಮುಖ್ಯ ಭೇದಗಳಲ್ಲಿ ಇದೇ ಕೊನೆಯದಾಗಿದೆ.

ಈ ಐಕ್ಯ ಸ್ಥಳದಲ್ಲಿ ನಾಲ್ಕು ಒಳಭೇದಗಳಿವೆ. ಅವುಗಳಲ್ಲಿ ಮೊದಲನೆಯದಾದ ಐಕ್ಯಸ್ಥಳದ ವಿಷಯವಾಗಿ **'ಸಿದ್ಧಾಂತ ಶಿಖಾಮಣಿ'**ಯಲ್ಲಿ ಈ ಪ್ರಕಾರ ಉದಾಹರಿಸಿದೆ.

(೪೧) ಯಾವಾಗಲೂ ಇಷ್ಟ ಪ್ರಾಣ ಭಾವಲಿಂಗಗಳ ಪೂಜೆ ಧ್ಯಾನಾದಿಗಳಲ್ಲಿಯೇ ಆಸಕ್ತನಾದ ಶರಣನು ಈ ವಿಶ್ವವನ್ನು ಲಿಂಗಸ್ವರೂಪದಲ್ಲಿಯೇ ಕಾಣುತ್ತಾನೆ. ವಿರಹಪುರುಷನು ವಿರಹಾತಿಶಯದಿಂದ ಎಲ್ಲೆಲ್ಲಿಯೂ ತನ್ನ ಬಯಕೆಯ ಸ್ತ್ರೀಯಳನ್ನೇ ಕಾಣುವಂತೆ ತಾನೇ ಸತಿ, ಲಿಂಗವೇ ಪತಿಯೆಂಬ ಮಧುರ ಶಿವಭಕ್ತಿಯಲ್ಲಿಯೇ ಲೀನನಾದ ಶಿವಶರಣನು ಸರ್ವತ್ರ ತನ್ನ ಲಿಂಗ ಮೂರ್ತಿಯನ್ನೇ ಕಾಣುವನೇ ವಿನಾ "ನಪಶ್ಯತಿ ಜಗಜ್ಜಾಲಂ ಮಾಯಾ ಕಲ್ಪಿತ ವೈಭವಂ" ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಮಾಯಾಶಕ್ತಿಯಿಂದ ಕೂಡಿದ ಈ ಜಗತ್ತಿನ ಕಲ್ಪನೆಯೇ ಆ ಶರಣವರೇಣ್ಯನ ಚಿತ್ತದಲ್ಲಿ ಉಂಟಾಗುವುದಿಲ್ಲ. ಇಂತಹ ಸರ್ವತ್ರ ಲಿಂಗಭಾವನೆಯುಂಟಾಗುವುದೇ ಐಕ್ಯಸ್ಥಳದ ಲಕ್ಷಣವು.

(೪೨) ಸರ್ವಾಚಾರ ಸಂಪತ್ತಿಸ್ಥಳ : ಎಲ್ಲೆಡೆಯಲ್ಲಿಯೂ ಲಿಂಗಮೂರ್ತಿಯ ವಿನಾ ಇನ್ನೊಂದರ ಜ್ಞಾನವೇ ಇಲ್ಲದಿರುವಂತಹ ಲಿಂಗೈಕ್ಯನು ಆಚರಿಸುವ ಆಚರಣೆಗಳೆಲ್ಲಾ ಪರಮ ಪವಿತ್ರವಾದವುಗಳೇ ಇರುತ್ತವೆ. ಏಕೆಂದರೆ ಆತನು ಜೀವನ್ಮುಕ್ತನಾಗಿರುತ್ತಾನೆ. ಆತನು ಫಲಾಪೇಕ್ಷೆಯಿಂದಾಗಲಿ ಅಥವಾ ಸಂಕಲ್ಪ ವಿಕಲ್ಪಗಳಿಂದಾಗಲಿ ಯಾವ ಕರ್ಮಗಳನ್ನೂ ಮಾಡುವುದಿಲ್ಲ. ಮತ್ತು ಆತನು ಯಾವ ಆಚರಣೆಗಳನ್ನಾಚರಿಸಿದರೂ ಅವು ಆತನಿಗೆ ಸಂಬಂಧಿಸುವುದಿಲ್ಲ. ಆತನ ನುಡಿನಡೆಗಳೆಲ್ಲಾ ಶಿವಲಿಂಗ ಸ್ತುತಿ ಅರ್ಚನಾದಿಗಳಾಗಿಯೇ ಪರಿಣಮಿಸುತ್ತವೆ.

ಆದುದರಿಂದ ಇಂತಹ ಲಿಂಗೈಕ್ಯನು ಸರ್ವಾಚಾರ ಸಂಪತ್ತಿ ಸ್ಥಳದಲ್ಲಿರುತ್ತಾನೆಂದು ತಿಳಿಯಬೇಕು.

(೪೩) ಏಕಭಾಜನಸ್ಥಳ : ಲಿಂಗೈಕ್ಯ ಭಾವನೆಯುಳ್ಳ ಆ ಶಿವಶರಣನು ತನ್ನನ್ನೂ ಶಿವನನ್ನೂ ಈ ಜಗತ್ತನ್ನೂ ಒಂದೇ ಎಂದು ತಿಳಿದು ಶಿವರೂಪವಾದ ಒಂದೇ ಆಶ್ರಯದಲ್ಲಿಯೇ ಎಲ್ಲವನ್ನೂ ಐಕ್ಯಗೊಳಿಸುವುದರಿಂದ ಇಂತಹ ಆ ಶಿವಯೋಗಿಯು ಏಕಭಾಜನಸ್ಥಳದಲ್ಲಿದ್ದಾನೆಂದು ತಿಳಿಯಬೇಕು.

ಇಂತಹ ಭಾವನೆಯುಂಟಾಗುವುದರಿಂದ ಆತನಿಗೆ ಪ್ರಸಾದೈ ಕ್ಯತೆಯು ಪ್ರಾಪ್ತವಾಗುತ್ತದೆ. ಗುರು ಲಿಂಗ ಜಂಗಮ ಪಾದೋದಕ ಪ್ರಸಾದಗಳಲ್ಲಿ ಭಿನ್ನತ್ವವು ಆತನಿಗೆ ತೋರುವುದೇ ಇಲ್ಲ. ಅಂತೆಯೇ ಆತನು ಗುರು ಜಂಗಮ ಪಾದೋದಕವನ್ನು ಲಿಂಗಕ್ಕೆ ಅಭಿಷೇಕ ಮಾಡಿ ಅವರ ಪ್ರಸಾದವನ್ನು ಲಿಂಗಕ್ಕೆ ಸಮರ್ಪಿಸುತ್ತಾನೆ.

ಪಾದಾಭಿಷೇಕ ಸಲಿಲೈರ್ಲಿಂಗ ಮಜ್ಜನ ಮುತ್ತಮಂ ।
ತತ್ಪ್ರಸಾದಂ ಚ ನೈವೇದ್ಯಂ ತಥಾ ಮುಕ್ತಿ ಫಲಂ ಧ್ರುವಂ ॥

"ಗುರು ಜಂಗಮರ ಪಾದೋದಕದಿಂದ ಲಿಂಗಮೂರ್ತಿಗೆ ಅಭಿಷೇಕ ಮಾಡುವುದು ಉತ್ತಮವಾಗಿಯೂ ಅವರುಗಳ ಪ್ರಸಾದವನ್ನು ನೈವೇದ್ಯ ಮಾಡುವುದು. ಮುಕ್ತಿದಾಯಕ ವಾದುದಾಗಿಯೂ ಇದೆ." ಎಂಬುದಾಗಿ ಪಾರಮೇಶ್ವರರಾಗಮದಲ್ಲಿ ಹೇಳಿರುವಂತೆ ಈ ಏಕಭಾಜನ ಸ್ಥಾನದಲ್ಲಿರುವ ಮಹಾತ್ಮನು ಪ್ರಸಾದೈಕ್ಯನಾಗಿ ನಿರಂತರ ಸಂತೋಷಚಿತ್ತನಾಗಿರುತ್ತಾನೆ. ಎಲ್ಲ ಸುಖದುಃಖಗಳನ್ನೂ ಇಷ್ಟಾನಿಷ್ಟಗಳನ್ನೂ ಆ ಶಿವಪ್ರಸಾದವೆಂದೇ ಸಂತೋಷಚಿತ್ತದಿಂದ ಅಂಗೀಕರಿಸುತ್ತಾನೆ.

ಜಲದಲ್ಲಿ ಹುಟ್ಟುವ ತೆರೆ ನೊರೆ ಗುಳ್ಳಿ ಮೊದಲಾದವುಗಳೆಲ್ಲಾ ನೀರಿನ ಪರಿಣಾಮಗಳೇ ಹೊರತು ನೀರಿಗೂ ಅವುಗಳಿಗೂ ಹೇಗೆ ಭಿನ್ನವಿಲ್ಲವೋ ಹಾಗೆಯೇ ಈ ಪ್ರಪಂಚದಲ್ಲಿ ತೋರುವ ವಸ್ತು ಜಾಲವೆಲ್ಲಾ ಆ ಶಿವನಿಗೆ ಭಿನ್ನವಿಲ್ಲದೆ ಏಕವಾಗಿಯೇ ಇದೆಯೆಂದು ತಿಳಿಯುವ ಈ ಏಕಭಾಜನನು ಯಾವ ಮನೋವಿಕಾರಗಳಿಗೂ ಒಳಗಾಗದೆ ಸದಾಲಿಂಗಾನಂದ ಲೋಲನಾಗಿರುತ್ತಾನೆ.

(೪೪) ಸಹಭೋಜನಸ್ಥಳ : ಮೊದಲು ಪ್ರಪಂಚದಲ್ಲಿ ತಾನು ಭೇದ ಜ್ಞನವುಳ್ಳವನಾಗಿದ್ದನು. ಎಂದರೆ ಜಡಜಡಗಳಲ್ಲಿ ಭೇದ, ಜೀವಜೀವಗಳಲ್ಲಿ ಭೇದ, ಜೀವಜಡಗಳಲ್ಲಿ ಭೇದ, ಗುರುಶಿಷ್ಯರಲ್ಲಿ ಭೇದ, ಅಂಗಲಿಂಗಗಳಲ್ಲಿ ಭೇದ, ಈ ಪ್ರಕಾರ ದ್ವೈತಭಾವವನ್ನು ತಾನೇ ನುಂಗಿ ಅದ್ವೈತಿಯಾದುದರಿಂದ ಈತನು ಸಹ ಭೋಜನ ಸ್ಥಳವನ್ನು ಸೇರುವನು.

ಶಿವಂ ವಿಶ್ವ ಗುರುಂ ಸಾಕ್ಷಾ ದ್ಯೋಜಯೇನ್ನಿತ್ಯಮಾತ್ಮನೀ ।
ಏಕತ್ವೇನ ಚಿದಾಕಾರೇತದಿದಂ ಸಹಭೋಜನಂ ॥ ೩೫॥

"ಸಾಕ್ಷಾಚ್ಚಿದಾಕಾರನಾದ ತನ್ನಲ್ಲಿ ಶಿವನನ್ನೂ ಗುರುವನ್ನೂ ಜಗತ್ತನ್ನೂ ಏಕರೂಪದಿಂದ ಯಾವಾಗಲೂ ಅರಿವುದೇ ಸಹಭೋಜನಸ್ಥಳವು."

ಎಂಬುದಾಗಿ ಸಿದ್ಧಾಂತ ಶಿಖಾಮಣಿಯ ಗ್ರಂಥದ ೧೪ನೆಯ ಪರಿಚ್ಛೇದದಲ್ಲಿ ಸ್ಪಷ್ಟವಾಗಿ ಹೇಳಿರುವಂತೆ ಸಹಭೋಜನ ಸ್ಥಳದಲ್ಲಿರುವ ಮಹಾತ್ಮನು ಲಿಂಗಸಾಕ್ಷಾತ್ಕಾರನಾಗಿರುತ್ತಾನೆ., ಆತನಿಗೆ ಜಗತ್ತಿನ ಭೇದ ಭ್ರಾಂತಿಯೇ ಇರುವುದಿಲ್ಲ. ಇದೇ ಪರಮ ಮುಕ್ತಿಯು. ಇಂತಹ ಸ್ಥಿತಿಯಲ್ಲಿರುವವರೇ ಜೀವನ್ಮುಕ್ತರು. ಇವರ ಕಾಯಕವೇ ಕೈಲಾಸ. ಶಿವನಾಣೆ ಇದು ಸತ್ಯವೆಂದು ಶಿವಶರಣರು ಸಾರಿಸಾರಿ ಹೇಳಿದ್ದಾರೆ.

ಈ ವರೆಗೆ ವಿವರಿಸಿದ ಭಕ್ತಾದಿ ಐಕ್ಯಾಂತ್ಯದೊಳಗಿನ ೪೪ ಅಂಗಸ್ಥಳಗಳನ್ನು ಯಾವ ಜೀವನು ಸೇರಿ ಆಚರಿಸಿ ಸುಖಶಾಂತಿಗಳನ್ನು ಹೊಂದಿರುತ್ತಾನೆಯೋ ಆತನ ಜನ್ಮವೇ ಸಾರ್ಥಕವಾದುದು. ಆತನೇ ಈ ಲೋಕದಲ್ಲಿ ಗುರುವಾಗಲು ಯೋಗ್ಯನು. ಅಂತಹ ಗುರುವಿನ ಕ್ರಿಯಾದಿಗಳನ್ನೆಲ್ಲ ಮುಂದೆ ಲಿಂಗಸ್ಥಳದ ೫೭ ಪ್ರಕಾರಗಳಿಂದ ವಿವರಿಸಿದ್ದಾಗಿದೆ.

❖❖

೭ನೆಯ ಪ್ರಕರಣ

ಗುರುಪ್ರಕಾಶ

ಕಳೆದ ಆರು ಪ್ರಕರಣಗಳಲ್ಲಿ ಪಿಂಡಾದಿ ಸಹಭೋಜನಾಂತ್ಯ ೪೪ ಅಂಗಸ್ಥಳಗಳನ್ನು ವಿವರಿಸಿದ್ದಾಯಿತಷ್ಟೇ ಅವುಗಳಲ್ಲಿ ಉದಾಹರಿಸಲ್ಪಟ್ಟಂತೆ ಯಾವ ಮಹಾನುಭಾವರು ಆಚರಿಸುತ್ತಾನೆಯೋ ಆತನೇ ಗುರುವಾಗುತ್ತಾನೆ. ವೀರಶೈವ ಮತದಲ್ಲಿ ಗುರುವೆಂದು ಗೊತ್ತುಮಾಡಿರುವುದು ಅಂತಹ ಮಹಾತ್ಮನಿಗೇನೇ ಸರಿ.

ಆ ಗುರುವಿನ ಯೋಗ್ಯತೆ, ಆತನ ಆಚರಣೆ, ಆತನಿಂದ ಪ್ರಾಣಿಗಳಿಗಾಗುವ ಕಲ್ಯಾಣ ಮೊದಲಾದ ಸಂಗತಿಗಳು ಇನ್ನು ಮುಂದೆ ವಿವರಿಸಲ್ಪಡುವವು. ಅವುಗಳಿಗೆ ಲಿಂಗಸ್ಥಳಗಳೆಂದು ಹೇಳಿದ್ದಾರೆ. ಅವು ೫೭ಸ್ಥಳಗಳಿವೆ. ಇವುಗಳನ್ನು ಹಿಂದಣ ಅಂಗಸ್ಥಳಗಳಂತೆಯೇ ಭಕ್ತಾದಿ ಐಕ್ಯಾಂತ್ಯದವರೆಗೆ ಆರು ಸ್ಥಳಗಳಲ್ಲಿ ಹಂಚಿಹಾಕಿದ್ದಾರೆ. ಈ ಲಿಂಗಸ್ಥಳದ ಭಕ್ತಸ್ಥಳದಲ್ಲಿ ಒಂಬತ್ತು ಭೇದಗಳಿವೆ. ಅವುಗಳಲ್ಲಿ ಮೊದಲನೆಯದು ದೀಕ್ಷಾಗುರುಸ್ಥಳವು.

(೪೫) ದೀಕ್ಷಾಗುರುಸ್ಥಳ : ಯಾವ ಶಿವಭಕ್ತನು ಅಂಗಸ್ಥಳದ ೪೪ ಸ್ಥಳಗಳಲ್ಲಿ ವಿವರಿಸಿರುವಂತೆ ಆಚರಿಸುತ್ತಿದ್ದಾನೆಯೋ ಆ ಪರಮ ಪೂಜ್ಯನೇ ಗುರುವೆಂದು ತಿಳಿಯಬೇಕು. ಆದುದರಿಂದ ಆತನೇ ಶಿವದೀಕ್ಷೆಯನ್ನು ಮಾಡಲು ಸಮರ್ಥನು ಆದುದರಿಂದ ಆತನು ದೀಕ್ಷಾ ಗುರುಸ್ಥಳದಲ್ಲಿದ್ದಾನೆಂದು ತಿಳಿಯಬೇಕು.

ಆಚಿ ನೋತಿಚ ಶಾಸ್ತ್ರಾರ್ಥಾನಾಚಾರೇ ಸ್ಥಾಪಯತ್ಯಲಂ
ಸ್ವಯಮಾ ಚರತೇಯಸ್ಮಾದಾಚಾರ್ಯಸ್ತೇನ ಚೋಚ್ಯತೆ   ಪ. ೧೫. ಶ್ಲೋ. ೬.

"ಈ ಗುರುವೇ ವೀರಶೈವ ಶಾಸ್ತ್ರದ ರಹಸ್ಯಾರ್ಥಗಳನ್ನು ಬಿಚ್ಚಿ ಬೋಧಿಸುವವನೂ, ತನ್ನ ಶಿಷ್ಯರನ್ನು ವೀರಶೈವ ಸದಾಚರಣೆಯಲ್ಲಿ ತತ್ಪರರಾಗುವಂತೆ ಮಾಡುವವನೂ, ಮತ್ತು ತಾನು ಕೂಡಾ ಆ ಸದಾಚಾರಗಳಂತೆಯೇ ಆಚರಿಸುವವನೂ ಆಗಿರುವುದರಿಂದ ಈತನು "ಆಚಾರ್ಯ" ನೆಂತಲೂ ಹೇಳಿಸಿಕೊಳ್ಳುತ್ತಾನೆ."

ಎಂಬುದಾಗಿ ವೀರಶೈವ ಸಿದ್ಧಾಂತ ಶಿಖಾಮಣಿಯ ಈ ದೀಕ್ಷಾಗುರು ಸ್ಥಳದಲ್ಲಿ ಹೇಳಿರುವ ಪ್ರಕಾರ ಆ ಅಂಗಸ್ಥಳಗಳಲ್ಲಿ ಅಳವಟ್ಟ ಶಿವಭಕ್ತನು ಗುರುವಾಗಿಯೂ ಆಚಾರ್ಯನಾಗಿಯೂ

ಜನಗಳಿಂದ ಪೂಜ್ಯತೆಯನ್ನು ಹೊಂದಿ ವೀರಶೈವ ದೀಕ್ಷೆಯಿಂದ ಜೀವಿಗಳನ್ನು ಉದ್ಧಾರಮಾಡುತ್ತಾನೆ. ಆದುದರಿಂದ ಇಂಥ ಮಹಾತ್ಮನು ದೀಕ್ಷಾಗುರು ಸ್ಥಳದಲ್ಲಿದ್ದಾನೆಂದು ಪರಿಗಣಿಸಿದ್ದಾರೆ.

(೪೬) ಶಿಕ್ಷಾಗುರುಸ್ಥಳ : ಶಿವದೀಕ್ಷೆಯನ್ನು ಮಾಡಿದ ಗುರುವೇ ಶಿಷ್ಯನು ಮಾಡಿದ ಪ್ರಶ್ನೆಗಳಿಗೆ ಉತ್ತರವನ್ನು ಹೇಳಿ ಆತನ ಸಂಶಯವನ್ನು ನಿವಾರಣೆಮಾಡಿ ಒಳ್ಳೆಯ ಧಾರ್ಮಿಕ ಶಿಕ್ಷಣವನ್ನು ಕೊಡುವುದರಿಂದ ಶಿಕ್ಷಾಗುರು ಸ್ಥಳದಲ್ಲಿದ್ದಾನೆಂದು ಹೇಳಲ್ಪಟ್ಟಿತು.

(೪೭) ಜ್ಞಾನಗುರುಸ್ಥಳ : ಯಾವ ಗುರು ಶಿಷ್ಯನ ಸಂಶಯಗಳನ್ನು ಕಳೆದು ಲಿಂಗಾಂಗ ಸಾಮರಸ್ಯ ಜ್ಞಾನವು ಶಿಷ್ಯನ ಸ್ವಾನುಭವಕ್ಕೆ ಬರುವಂತೆ ಮಾಡುತ್ತಾನೆಯೋ ಆತನೇ ಜ್ಞಾನಗುರುವಾದನು. ಆದುದರಿಂದ ಆತನು ಜ್ಞಾನಗುರುಸ್ಥಳದಲ್ಲಿದ್ದಾನೆಂದು ಹೇಳೀದೆ.

(೪೮) ಕ್ರಿಯಾಲಿಂಗಸ್ಥಳ : ಜ್ಞಾನಗುರುಗಳು ಸ್ವಾನುಭವಕ್ಕೆ ತಂದುಕೊಟ್ಟ ಆ ಲಿಂಗಾಂಗ ಸಾಮರಸ್ಯ ಜ್ಞಾನದಿಂದ ತಾನು ಆಚರಿಸತಕ್ಕ ಕ್ರಿಯೆಗಳೆಲ್ಲವೂ ಯಾವ ಲಿಂಗದಲ್ಲಿ ಅಡಕವಾಗಿರುತ್ತವೆಯೋ ಅದಕ್ಕೆ ಕ್ರಿಯಾಲಿಂಗ ಅಥವಾ ಇಷ್ಟಲಿಂಗವೆಂದು ಹೇಳುತ್ತಾರೆ. ಇದನ್ನು ಗುರುಗಳು ಶಿಕ್ಷಣ ಕೊಟ್ಟ ಪ್ರಕಾರ ಪೂಜಿಸುವುದು ಅನೇಕ ಯಜ್ಞಯಾಗಾದಿಗಳಿಗಿಂತ ಹೆಚ್ಚು ಫಲವನ್ನು ಕೊಡತಕ್ಕದ್ದಾಗಿವೆ. ಇಂಥ ಕ್ರಿಯಾಲಿಂಗದ ಮಹತ್ವವನ್ನು ತಿಳಿಸುವುದರಿಂದ ಇದು ಕ್ರಿಯಾಲಿಂಗಸ್ಥಳವಾಯಿತು.

(೪೯) ಭಾವಲಿಂಗಸ್ಥಳ : ಕ್ರಿಯಾಲಿಂಗ ಪೂಜೆಯಿಂದ ನಮ್ಮಲ್ಲುಂಟಾಗುವ ಆ ಲಿಂಗಸಂಬಂಧವಾದ ಭಾವವು ಎಲ್ಲಿ ಲಯವಾಗುತ್ತದೆಯೋ ಅದಕ್ಕೆ ಭಾವ ಅಥವಾ ಪ್ರಾಣಲಿಂಗವೆಂದು ಹೇಳುತ್ತಾರೆ. ಇಂತಹ ಪ್ರಾಣಲಿಂಗೋಪಾಸನೆಯು ಇಷ್ಟಲಿಂಗ ಪೂಜೆಗಿಂತಲೂ ಹೆಚ್ಚು ಫಲದಾಯಕವಾದುದು. ಇಂಥ ಪ್ರಾಣಲಿಂಗದ ಮಹತ್ವವನ್ನು ತಿಳಿಸುವುದರಿಂದ ಇದು ಪ್ರಾಣ ಅಥವಾ ಭಾವಲಿಂಗ ಸ್ಥಳವಾಯಿತು.

(೫೦) ಜ್ಞಾನಲಿಂಗಸ್ಥಳ : ಪ್ರಾಣಲಿಂಗಿಯ ಸಂಧಾನಕ್ಕೆ ಕಾರಣವಾದ ಜ್ಞಾನವು ಎಲ್ಲಿ ಲೀನವಾಗುತ್ತದೆಯೋ ಅದೇ ಜ್ಞಾನಲಿಂಗ ಅಥವಾ ತೃಪ್ತಿಲಿಂಗವೇಂದು ಹೇಳುತ್ತಾರೆ. ಇಷ್ಟಲಿಂಗದಲ್ಲಿ ಪೂಜೆಯೂ ಪ್ರಾಣಲಿಂಗದಲ್ಲಿ ಭಾವನೆಯೂ ತೃಪ್ತಿಲಿಂಗದಲ್ಲಿ ಜ್ಞಾನವೂ ಅರ್ಪಿಸಲ್ಪಡಬೇಕು. ಈ ಪ್ರಕಾರ ಆ ಜ್ಞಾನಲಿಂಗದ ಮಹತ್ವವನ್ನು ತಿಳಿಸುವುದರಿಂದ ಇದು ಜ್ಞಾನ ಅಥವಾ ತೃಪ್ತಿಲಿಂಗಸ್ಥಳವಾಯಿತು.

(೫೧) ಸ್ವಯಂಲಿಂಗಸ್ಥಳ : ಜ್ಞಾನಲಿಂಗದಲ್ಲಿಯೇ ಲೀನನಾಗಿರತಕ್ಕ ಆ ಗುರುವರ್ಯನು ತಾನೇ ಲಿಂಗಮೂರ್ತಿಯಾಗಿರುತ್ತಾನೆ. ಆತನಿಗೆ ಬಾಹ್ಯ ವಿಷಯಗಳಾವವೂ ಕ್ಲೇಶಾದಿಗಳನ್ನುಂಟು ಮಾಡುವುದಿಲ್ಲಾ. ಆ ಶಿವಯೋಗಿಯು ಲಿಂಗಸ್ವರೂಪಿಯಾಗಿರುವುದರಿಂದ ಸ್ವಯಲಿಂಗಸ್ಥಳವೆಂದು ಹೇಳಲ್ಪಟ್ಟಿದೆ.

(೫೨) ಚರಲಿಂಗಸ್ಥಳ : ದೇಹ ವಸ್ತು ಮೊದಲಾದವುಗಳಲ್ಲಿ ನಾನು ನನ್ನದು ಎಂಬ ಅಹಂಕಾರ ಮಮಕಾರಗಳ ಕಟ್ಟಿಲ್ಲದೆ ಆ ಸ್ವಯಲಿಂಗಿಯು ಎಲ್ಲೆಲ್ಲಿಯೂ ತಾನೇತಾನೆಂದು ತಿಳಿದು ಸಂಚರಿಸುತ್ತಿರುವುದರಿಂದ ಆತನು ಚರಲಿಂಗನೆನಿಸಿಕೊಳ್ಳುತ್ತಾನೆ.

(೫೩) ಪರಲಿಂಗಸ್ಥಳ : ಆ ಚರಲಿಂಗಿಯೂ ತನಗೆ ಬೇರೆಯಾದುದು ಈ ವಿಶ್ವದಲ್ಲಿ ಯಾವುದೂ ಇಲ್ಲವೆಂಬ ಜ್ಞಾನವುಳ್ಳವನಾಗುವುದೇ ಪರಲಿಂಗಸ್ಥಾನವನ್ನು ಸೇರುವುದು. ಈ ಸರ್ವಾತ್ಮಭಾವವುಳ್ಳ

ಮಹಾಶಿವಯೋಗಿಯು ದೇಹಧಾರಿಯಾಗಿದ್ದರೂ ಆತನಲ್ಲಿ ದೇಹಾಭಿಮಾನಗಳಾವುವು. ಇರುವುದಿಲ್ಲ. ಆತನು ಆ ಪರಶಿವನಲ್ಲಿಯೇ ಲೀನವಾಗಿರುತ್ತಾನೆ. ತನ್ನ ದರ್ಶನ ಸ್ಪರ್ಶನಾದಿಗಳಿಂದ ಜೀವಕೋಟಿಯನ್ನು ಉದ್ಧಾರ ಮಾಡುವ ದಿವ್ಯ ಸಾಮರ್ಥ್ಯವುಳ್ಳವನಾಗಿ ಜಗದ್ಗುರುವಾಗಿರುತ್ತಾನೆ.

ಈ ಪ್ರಕಾರ ಗುರುವು ತನ್ನಲ್ಲಿ ಶಿವಜ್ಞಾನವನ್ನು ಅಧಿಕಮಾಡಿಕೊಳ್ಳುತ್ತಾ ಶಿಷ್ಯರನ್ನು ದೀಕ್ಷೆ, ಶಿಕ್ಷೆ ಮೊದಲಾದವುಗಳಿಂದ ಪುನೀತರನ್ನಾಗಿ ಮಾಡಿ ಕೊನೆಗೆ ತಾನೂ ಶಿವಮಯನಾಗಿ ತನ್ನ ದರ್ಶನಾಶೀರ್ವಾದಗಳಿಗೆ ಪಾತ್ರರಾದವರನ್ನು ಕೂಡಾ ಉದ್ಧಾರ ಮಾಡುವ ದಿವ್ಯ ಸಾಮರ್ಥ್ಯವನ್ನು ಹೊಂದುತ್ತಾನೆ.

❖❖

೮ನೆಯ ಪ್ರಕರಣ

ನಿಷ್ಕಾಮ ಕರ್ಮ

ಶ್ರೀ ಗುರು ಲಿಂಗಾಂಗ ಸಾಮರಸ್ಯ ಜ್ಞಾನದಿಂದ ಪ್ರಕಾಶಿಸುತ್ತ ಲೋಕೋದ್ಧಾರವನ್ನು ಮಾಡುತ್ತಿದ್ದರೂ ಆತನು ಶಿವಾಗಮಗಳಲ್ಲಿ ಉಕ್ತವಾಗಿರತಕ್ಕ ವೀರಶೈವಾಚಾರಗಳನ್ನೇನೂ ಬಿಟ್ಟಿರುವುದಿಲ್ಲ. ಶಿವಪೂಜಾದಿ ಕರ್ಮಗಳನ್ನು ತನಗೆ ದಿವ್ಯಜ್ಞಾನೋದಯವಾದ ನಂತರ ಕೂಡಾ ಆಚರಿಸುತ್ತಲೇ ಇರುತ್ತಾನೆ.

(೫೪) ಕ್ರಿಯಾಗಮಸ್ಥಳ : ಶಿವಸ್ವರೂಪಿಯಾದಂತಹ ಗುರುವು ಕೂಡಾ ಶಿವಪೂಜಾದಿ ಕ್ರಿಯೆಗಳನ್ನು ಬಿಡಬಾರದು. ಒಂದು ಕಟ್ಟಿಗೆಯಿಂದ ತಿಕ್ಕಿದ ವಿನಾ ಅದರಲ್ಲಿರುವ ಬೆಂಕಿಯು ಹೇಗೆ ಹೊರಗೆ ಬರುವುದಿಲ್ಲವೋ ಹಾಗೆಯೇ ಬಾಹ್ಯ ಕ್ರಿಯೆಗಳನ್ನಾಚರಿಸದಿದ್ದರೆ ಅಂತರ್ಯದಲ್ಲಿರುವ ಶಿವಕಲೆಯು ಪ್ರಕಾಶಿಸುವುದಿಲ್ಲ.

ಕೇವಲ ಕರ್ಮದಿಂದಲೇ ಹೇಗೆ ಮೋಕ್ಷ ದೊರೆಯುವದಿಲ್ಲವೋ ಹಾಗೇಯೇ ಕೇವಲ ಜ್ಞಾನದಿಂದಲೇ ಮೋಕ್ಷ ದೊರೆಯುವುದಿಲ್ಲ. ಈ ಜ್ಞಾನ ಕರ್ಮಗಳೆರಡೂ ಇದ್ದರೇನೇ ಈ ಪ್ರಪಂಚಿಕ ದುಃಖಾಗ್ನಿಯಿಂದ ಪಾರಾಗಿ ನಿತ್ಯ ಸುಖಶಾಂತಿಗಳನ್ನು ಹೊಂದುವನು. ಕಾಲಿಲ್ಲ ಕುರುಪನು ಹೇಗೆ ಕಾಣದೇ ಬೆಂಕಿಗೆ ಆಹುತಿ ಆಗುತ್ತಾನೆಯೋ ಹಾಗೆಯೇ ಕಣ್ಣಿದ್ದ ಹೆಳವನು ಕೂಡಾ ಪಾರಾಗಿ ಹೋಗಲು ಕಾಲುಗಳಿಲ್ಲದೆ ಬೆಂಕಿಯಿಂದ ಸುಟ್ಟು ಹೋಗುತ್ತಾನೆ. ಆದುದರಿಂದ ಬೆಂಕಿಯ ತಾಪದಿಂದ ಪಾರಾಗಲು ಕಣ್ಣು ಕಾಲುಗಳೆರಡೂ ಹೇಗೆ ಅವಶ್ಯವಾಗಿವೆಯೋ ಹಾಗೇಯೇ ಜ್ಞಾನ ಕ್ರಿಯೆಗಳೆರಡೂ ಸಂಸಾರತಾಪನಿವಾರಣೆಗೆ ಅವಶ್ಯಕವೆಂದು ಆ ಗುರುವರೇಣ್ಯನು ಕ್ರಿಯಾತತ್ಪರನಾಗಿರುತ್ತಾನೆ. ಆದರೆ ಆ ಕ್ರಿಯೆಗಳಲ್ಲಿ ಫಲವನ್ನು ಮಾತ್ರ ಇಚ್ಚಿಸುವುದಿಲ್ಲ. ಇಂತಹ ಅನಾಸಕ್ತ ಕರ್ಮನಿರತನಾಗಿಯೇ ಆ ಗುರುವರ್ಯನು ಆಚರಿಸುತ್ತಿರುವುದರಿಂದ ಆತನು ಕ್ರಿಯಾಗಮ ಸ್ಥಳದಲ್ಲಿದ್ಧಾನೆಂದು ಹೇಳಿದೆ.

(೫೫) ಭಾವಾಗಮಸ್ಥಳ : ನಿಷ್ಕಾಮಕರ್ಮವನ್ನಾಚರಿಸುವ ಆ ಶಿವಯೋಗಿಯು ಕೇವಲ ಜ್ಞಾನದಲ್ಲಾಗಲಿ ಅಥವಾ ಕರ್ಮದಲ್ಲಾಗಲಿ ಚಿತ್ತವುಳ್ಳವನಾಗಿರದೆ ತಾನು ಶಿವನೆಂಬ ಶಿವೋಹಂ ಭಾವವುಳ್ಳವನಾಗಿರುವುದರಿಂದ ಆತನು ಭಾವಾಗಮಸ್ಥಳದಲ್ಲಿರುತ್ತಾನೆಂದು ತಿಳಿಯಬೇಕು.

(೫೬) ಜ್ಞಾನಾಗಮಸ್ಥಳ : ಈ ಪ್ರಕಾರ ಭಾವಾಗಮಸ್ಥಳದಲ್ಲಿರುವ ಗುರುವರ್ಯರು ಜ್ಞಾನವನ್ನು ಮಾತ್ರ ಬಿಡದೆ ಭಾವಕರ್ಮಗಳೆರಡರಿಂದಲೂ ಕೂಡಿದ ಜ್ಞಾನವಿಶಿಷ್ಟನಾಗಿ ತನ್ನ ನುಡಿನಡೆಗಳಿಂದ ಅನ್ಯರಿಗೆ ಮಾರ್ಗದರ್ಶಿಯಾಗಿ ಶೋಭಿಸುತ್ತಿರುತ್ತಾನೆ. ಈತನೇ ಜ್ಞಾನಾಗಮಸ್ಥಳವಾತನು.

(೫೭) ಸಕಾಯಸ್ಥಳ : ಈ ದೇಹವೇ ಧರ್ಮಾದಿ ಪುರುಷಾರ್ಥಗಳಿಗೆ ಸಾಧನವಾಗಿರುವದರಿಂದ ಈ ಕಾಯವು ತ್ಯಾಜ್ಯವೆಂದು ಆ ಶಿವಯೋಗಿಯು ದೇಹವನ್ನು ತ್ಯಾಗಮಾಡುವುದಿಲ್ಲ. ದೇಹಧಾರಿಯಾಗಿಯೇ ಇದ್ದು ಲೋಕೋದ್ಧಾರವನ್ನು ಮಾಡುತ್ತಿರುತ್ತಾನೆ. ಆದುದರಿಂದ ಆತನು ಸ್ವಕಾಯಸ್ಥಳಿಯೆಂದು ಹೇಳಿದೆ.

(೫೮) ಅಕಾಯಸ್ಥಳ : ದೇಹಧಾರಿಯಾಗಿದ್ದರೂ ದೇಹಗುಣವಿಶಿಷ್ಟನಾಗಿರವುದಿಲ್ಲ. ಕಾಮ ಕ್ರೋಧಾದಿ ವಿಕಾರಗಳಿಗೊಳಗಾಗಿರುವುದಿಲ್ಲ. ಆದುದರಿಂದ ಆತನು ಅಕಾಯ ಸ್ಥಳದಲ್ಲಿದ್ದಾನೆಂತೆಯೂ ಹೇಳಿದೆ.

(೫೯) ಪರಕಾಯಸ್ಥಳ : ಈ ಪ್ರಕಾರ ದೇಹಧಾರಿಯಾಗಿದ್ದರೂ ದೇಹಧರ್ಮಗಳನ್ನು ಮಾತ್ರ ಬಿಟ್ಟಿರತಕ್ಕ ಆ ಶಿವಯೋಗಿಯ ಕಾಯವು ಪರಮಶ್ರೇಷ್ಠವಾದುದು. ಅದರಿಂದ ಆತನಿಗೆ ಯಾವ ಭಾದಕವೂ ಇಲ್ಲ. ಇದ್ದರೂ ಸರಿಯೆ; ಹೋದರೂ ಸರಿಯೆ. ಆದುದರಿಂದ ಆತನು ಪರಕಾಯಸ್ಥನೆಂದು ಹೇಳಿದೆ.

(೬೦) ಧರ್ಮಾಚಾರಸ್ಥಳ : ಆ ಶಿವಯೋಗಿಯು ಪರಕಾಯಸ್ಥನಾಗಿದ್ದರೂ ಧರ್ಮದ ಹತ್ತು ಆಜ್ಞೆಗಳನ್ನು ಅನುಸರಿಸವವನಾಗಿಯೇ ಇರುತ್ತಾನೆ. ಆದುದರಿಂದ ಧರ್ಮಾಚಾರ ಸ್ಥಳದವನೆಂದು ಹೇಳಿಸಿಕೊಳ್ಳುವನು. ಧರ್ಮದ ಆ ಹತ್ತು ನಿಯಮಗಳನ್ನು ವೀರಶೈವ ಸಿದ್ಧಾಂತ ಶಿಖಾಮಣಿಯಲ್ಲಿ ಈ ಧರ್ಮಾಚಾರ ಸ್ಥಳವನ್ನು ವಿವರಿಸುವಾಗ ಈ ಪ್ರಕಾರ ಹೇಳಿದೆ.

> ಅಹಿಂಸಾ ಸತ್ಯ ಮಸ್ತೇಯಂ ಬ್ರಹ್ಮಚರ್ಯಂ ದಯಾಕ್ಷಮಾ
> ದಾನಂ ಪೂಜಾ ಜಪೋಧ್ಯಾನ ಮಿತಿಧರ್ಮಸ್ಯ ಸಂಗ್ರಹಃ   ಪ. ೧೬. ಶ್ಲೋ.೫೯

(೬೧) ಭಾವಾಚಾರಸ್ಥಳ : ಈ ದರ್ಮಾಚಾರಗಳನ್ನು ಆ ಶಿವಯೋಗಿಯು ಆಚರಿಸುತ್ತಿದ್ದರೂ ಶಿವನೇ ಸರ್ವವನ್ನೂ ಮಾಡಿಸತಕ್ಕವನೆಂದು ಭಾವನೆಯುಳ್ಳವನಾಗಿರುವುದರಿಂದ ಭಾವಾಚಾರಸ್ಥನಾಗುತ್ತಾನೆ.

(೬೨) ಜ್ಞಾನಾಚಾರಸ್ಥಳ : ಆ ಶಿವಯೋಗಿಯು ಭಾವಾಚಾರಸ್ಥನಾಗಿ ಆಚರಿಸುವ ಆಚರಣೆಗಳೆಲ್ಲಾ ಜಗತ್ತಿನ ಜನರಿಗೆ ಜ್ಞಾನಾಚರಣೆಗಳಾಗಿಯೇ ಪರಿಣಮಿಸುವವು. ಶಿವೇತರ ಭಿನ್ನವಾದ ವಸ್ತುವು ಯಾವುದೂ ಇಲ್ಲವೆಂಬ ಜ್ಞಾನದಿಂದಲೇ ಎಲ್ಲ ಧರ್ಮಕಾರ್ಯಗಳನ್ನು ಈತನು ಮಾಡುತ್ತಿರುವುದರಿಂದ ಜ್ಞಾನಾಚಾರಸ್ಥನಾಗುತ್ತಾನೆ.

ಈ ಪ್ರಕಾರ ಆ ಗುರುವರ್ಯನು ತಾನು ಶಿವಜ್ಞಾನವುಳ್ಳವನಾಗಿದ್ದೇನೆಂದು ಯಾವ ಕರ್ಮಗಳನ್ನೂ ಬಿಡದೆ ಯಾವ ಫಲವನ್ನೂ ಅಪೇಕ್ಷಿಸದೆ ಲೋಕಸಂಗ್ರಹಕ್ಕಾಗಿ ಎಂದರೆ ಲೋಕೋದ್ಧಾರಕ್ಕಾಗಿ ಕರ್ಮಮಾಡುತ್ತಿರುತ್ತಾನೆ. ಇದೇ ಆ ಶಿವಯೋಗಿಯ ನಿಷ್ಕಾಮ ಕರ್ಮವು.

❖❖

೯ನೆಯ ಪ್ರಕರಣ

ಲೋಕಸೇವೆ

ಕಳೆದ ಪ್ರಕರಣದಲ್ಲಿ ವಿವರಿಸಿದಂತೆ ನಿಷ್ಕಾಮಕರ್ಮ ನಿರತನಾದ ಶಿವಯೋಗಿಯು ಲೋಕಸೇವೆಯನ್ನು ಹೇಗೆ ಮಾಡುತ್ತಿರುತ್ತಾನೆಂಬುದು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ.

(೬೩) ಕಯಾನುಗ್ರಹಸ್ಥಳ : ಲಿಂಗಸ್ಥಳದಲ್ಲಿ ಮೂರನೆಯದಾದ ಪ್ರಸಾದಿಸ್ಥಳವು ಒಂಭತ್ತು ಒಳಬೇದಗಳೀಂದ ಕೂಡಿದ್ಧಾಗಿದೆ. ಇವುಗಳಲ್ಲಿ ಕಾಯಾನುಗ್ರಹ ಸ್ಥಳವೇ ಮೊದಲನೆಯದು. ಜ್ಞಾನಾಚಾರ ಸಂಪನ್ನರಾದ ಆ ಶಿವಯೋಗಿಯು ತನ್ನ ದೇಹದ ಮೂಲಕ ಲೌಕಿಕರನ್ನು ಅನುಗ್ರಹಿಸುತ್ತಿರುವನಾದುದರಿಂದ ಆತನು ಕಾಯಾನುಗ್ರಹಿಸುತ್ತಿರುವುದರಿಮದ ಆತನು ಕಾಯಾನುಗ್ರಹನೆಂದು ಹೇಳಲ್ಪಟ್ಟಿತು.

ಈ ಮಹಾತ್ಮನು ದೇಹಧಾರಿಯಾಗಿರುವುದರಿಂದ ಲೌಕಿಕರು ಈತನ ಸೇವೆ ಪೂಜಾದಿಗಳನ್ನು ಮಾಡಲು ಅನುಕೂಲವಾಯಿತು. ಆ ಸೇವೆ ಪೂಜಾದಿಗಳಿಂದ ಅವರು ಕೃತಾರ್ಥರಾಗುತ್ತಾರೆ. ಆದಕಾರಣ ಈ ಶಿವಯೋಗಿಯು ತನ್ನ ದೇಹದ ಮೂಲಕವಾಗಿ ಅನ್ಯರನ್ನು ಅನುಗ್ರಹಿಸುತ್ತಿರುವುದರಿಂದ ಈತನು ಕಾಯಾನುಗ್ರಹಿಯಾದನು.

(೬೪) ಇಂದ್ರಿಯಾನುಗ್ರಹಸ್ಥಳ : ಈ ಮಹಾತ್ಮನು ಇಂದ್ರಿಯಗಳನ್ನು ನಿಗ್ರಹಿಸಿ ಶಮೆ ದಮೆ ಮೊದಲಾದ ಸತ್ವಗುಣ ಶೀಲನಾಗಿ ಆ ಮೂಲಕ ಲೋಕದ ಜನರನ್ನು ಉದ್ಧಾರ ಮಾಡುತ್ತಿರುತ್ತಾವಾದ್ದರಿಂದ ಈತನು ಇಂದ್ರಿಯಾನುಗ್ರಹಸ್ಥನೆಂದೂ ಹೇಳಿದ್ದಾರೆ.

(೬೫) ಪ್ರಾಣಾನುಗ್ರಹಸ್ಥಳ : ಈ ಇಂದ್ರಿಯಾನುಗ್ರಹನ ಶಿವಯೋಗಿಯೂ ತನ್ನ ಪ್ರಾಣವಾಯುವನ್ನು ರೇಚಕ ಪೂರಕ ಕುಂಭಕಗಳಿಂದ ನಿಗ್ರಹಸಿದವನಾಗಿ ಆ ಪ್ರಾಣಾಯಾಮದ ಪ್ರಭೆಯಿಂದಲೂ ಜನರನ್ನು ಉದ್ಧಾರಮಾಡುತ್ತಿರುವುದರಿಂದ ಪ್ರಾಣಾನುಗ್ರಹ ಸ್ಥಳದಲ್ಲಿರುತ್ತಾನೆಂದು ಹೇಳಿದೆ.

(೬೬) ಕಾರ್ಯಾರ್ಪಿತಸ್ಥಳ : ಆ ಮಹಾಶಿವಯೋಗಿಯು ಲೋಕೋದ್ಧಾರಕ್ಕೋಸ್ಕರ ತನ್ನ ದೇಹವನ್ನು ಶಿವನೀಗೇನೇ ಅರ್ಪಿಸಿ ಬಿಡುತ್ತಾನೆ. ತಾನು ಮಾಡುವ ನೋಡುವ ಮೊದಲಾದ ಎಲ್ಲ ಇಂದ್ರಿಯಗಳ ಕಾರ್ಯಗಳೂ ಆ ಶಿವನಿಗಾಗಿಯೇ ಜರುಗುತ್ತವೆಂದು ತಿಳಿದು ಅವುಗಳನ್ನು ಶಿವನಿಗೇನೇ ಅರ್ಪಿಸುವುದರಿಂದ ಆತನು ಕಾಯಾರ್ಪಿತನಾದನು.

(೭೫) ನಿರ್ದೇಹಾಗಮಸ್ಥಳ : ಪರಮಾತ್ಮಸ್ವರೂಪಿಯಾದ ಆ ಶಿವಯೋಗಿಯು ದೇಹಧಾರಿಯಾಗಿದ್ದರೂ ತನ್ನ ದೇಹ, ತನ್ನ ಕೃಶದೇಹ, ತನ್ನ ಸ್ಥೂಲದೇಹಗಳೆಂಬ ಭಾವನೆಯುಳ್ಳವನಾಗಿರುವುದಿಲ್ಲ. ಆತನಿಗೆ ದೇಹವಿದ್ದರೂ ಇಲ್ಲದಂತೆಯೇ ಸರಿ. ಆದುದರಿಂದ ಆತನು ನಿರ್ದೇಹಾಗಮಸ್ಥಲದಾತನೆಂದು ಹೇಳಿದೆ.

(೭೬) ನಿರ್ಭಾವಾಗಮಸ್ಥಳ : ಈ ನಿರ್ದೇಹೀಯ ಮನೋಭಾವವು ಇಂದ್ರಿಯವಿಕಾರಗಳಿಗೆ ಅವಕಾಶವನ್ನುಂಟುಮಾಡುವುದಿಲ್ಲವಾದುದರಿಂದ ಈತನು ಭಾವವುಳ್ಳವನಾಗಿದ್ದರೂ ನಿರ್ಭಾವಾಗಮ ಸ್ಥಳದಲ್ಲಿರುತ್ತಾನೆಂದು ಹೇಳಿದೆ.

(೭೭) ನಷ್ಟಾಗಮಸ್ಥಳ : ನಿರ್ಭಾವಾಗಮ ಸ್ಥಳದಲ್ಲಿರುವ ಶಿವಯೋಗಿಯ ಭೇದಜ್ಞಾನವೇ ನಷ್ಟವಾಗಿ ಹೋಗಿರುವುದರಿಂದ ಆತನು ನಷ್ಟಾಗಮಸ್ಥಳನೆಂದು ಹೇಳಿದೆ. ಈತನು ಕೊಡುವವನು, ಕೊಡಲ್ಪಡುವ ವಸ್ತು ಮತ್ತು ಹೊಂದುವವನು ಎಂಬ ತ್ರಿಪುಟೀಮಯ ಪ್ರಪಂಚವನ್ನೇ ನಷ್ಟಗೊಳಿಸಿರುತ್ತಾನೆ.

(೭೮) ಆದಿಪ್ರಸಾದಿಸ್ಥಳ : ಈ ಪ್ರಕಾರ ತ್ರಿಪುಟೀಮಯ ಪ್ರಪಂಚಭಾವವನ್ನು ನಷ್ಟಮಾಡಿದಾತನಿಗೇನೇ ಪರಮಾತ್ಮನ ಕೃಪೆಯಾಗುತ್ತದೆ. ಆ ಕೃಪೆಯೇ ಪ್ರಸಾದವು. ಅದು ಜಗದಾಧಾರಿಯಾದ ಪರಶಿವನಿಂದ ದೊರೆಯುವ ಪ್ರಸಾದವಾದಕಾರಣ ಆದಿ ಪ್ರಸಾದವಾಯಿತು. ಅದನ್ನು ಹೊಂದುವಾತನೇ ಆದಿ ಪ್ರಸಾದಿಯು.

(೭೯) ಅಂತ್ಯ ಪ್ರಸಾದಿಸ್ಥಳ : ಆದಿ ಪ್ರಸಾದಿಯೇ ಅನಂತರ ಅಂತ್ಯಪ್ರಸಾದಿಯಾಗುತ್ತಾನೆ. ಅಣು ಮೊದಲಾಗಿ ಶಿವಾಂತವಾದ ಪದಾರ್ಥಗಳೆಲ್ಲವೂ ಲಯವಾಗಲು ಪರಶಿವನೇ ಕಾರಣನಾಗಿದ್ದಾನಷ್ಟೆ. ಆದುದರಿಂದ ಆ ಪರಶಿವನೇ ಅಂತ್ಯನು. ಅಂತಹ ಅಂತ್ಯನ ಸಾಕ್ಷಾತ್ಕಾರವು ಆದಿಪ್ರಸಾದಿಗೆ ಮುಂದೆ ಪ್ರಾಪ್ತವಾಗುವುದರಿಂದ ಆತನು ಅಂತ್ಯಪ್ರಸಾದಿಯಾದನು.

(೮೦) ಸೇವ್ಯ ಪ್ರಸಾಧಿಸ್ಥಳ : ಶಿವಸ್ವರೂಪಿಯಾದ ಶ್ರೀ ಗುರುವೇ ಸೇವ್ಯನು. ಆತನ ಉಪದೇಶಾನುಭವಗಳೇ ಪ್ರಸಾದ. ಆ ಗುರುವಿಗೂ ಈ ಪ್ರಸಾರಕ್ಕೂ ಭೇದವಿಲ್ಲವೆಂದು ತಿಳಿದು ಅದನ್ನನುಭವಿಸುವಾತನೇ ಸೇವ್ಯ ಪ್ರಸಾದಿಯು.

ಈ ಪ್ರಕಾರ ಗುರುಕೃಪೆಯನ್ನು ಪಡೆದ ಶಿಷ್ಯನು ಆ ಮೇಲೆ ತಾನೂ ಗುರುವಾಗಿ ಕೊನೆಗೆ ತನ್ನ ಆತ್ಮೋದ್ಧಾರದಿಂದ ಪರಮಾತ್ಮನಲ್ಲಿ ಬೆರೆದು ನಿತ್ಯ ಸುಖಿಯಾಗುತ್ತಾನೆ.

❖❖

೧೧ನೆಯ ಪ್ರಕರಣ

ದೇಹವೇ ದೇವಾಲಯ

ಶಿವಪ್ರಸಾದದಿಂದ ಆತ್ಮೋನ್ನತಿಯನ್ನು ಹೊಂದಿದ ಆ ಮಹಾಶಿವಯೋಗಿಯೂ ದಿವ್ಯವಾದ ಶಿವಜ್ಞಾನದಿಂದ ಯಾವಾಗಲೂ ಪ್ರಕಾಶಿಸುತ್ತಾನೆ. ಆತನು ಮುಂದೆ ಶರಣಸ್ಥಳವನ್ನು ಸೇರಿ ತನ್ನ ಕಾಯವನ್ನೇ ಕೈಲಾಸವನ್ನಾಗಿ ಮಾಡಿಕೊಳ್ಳುತ್ತಾನೆ.

ಈ ಶರಣಸ್ಥಳದಲ್ಲಿ ೧೨ ಒಳಭೇದಗಳಿವೆ. ಅವುಗಳನ್ನು ಈ ಪ್ರಕರಣದಲ್ಲಿ ಸಂಕ್ಷಿಪ್ತವಾಗಿ ಉದಾಹರಿಸಿದ್ದಾಗಿದೆ.

(೮೧) ದೀಕ್ಷಾ ಪಾದೋದಕ ಸ್ಥಳ : ಸೇವ್ಯ ಪ್ರಸಾದಿಯಾದ ಆ ಶಿಷ್ಯೋತ್ತಮನು ದೀಕ್ಷೆಯಿಂದ ಗುರುವಿನಲ್ಲಿ ಏಕೀಭವಿಸುತ್ತಾನೆ. ಎಂದರೆ ದೀಕ್ಷೆಯಿಂದ ಗುರುಶಿಷ್ಯರಲ್ಲಿ ಭಿನ್ನತ್ವವು ಲೋಪವಾಗಿ ಏಕತ್ವವೇ ಪ್ರಾಪ್ತವಾಗುತ್ತದೆ. ಈ ಗುರುಶಿಷ್ಯರ ಅಭೇದ ಭಾವದಿಂದುಂಟಾದ ಜ್ಞಾನಾನಂದವೇ ದೀಕ್ಷಾ ಪಾದೋದಕವೆಂದು ಹೇಳಿಸಿಕೊಳ್ಳುತ್ತದೆ. ಈ ವಿಷಯವಾಗಿ ಸಿದ್ಧಾಂತ ಶಿಖಾಮಣಿಯಲ್ಲಿ ಈ ಪ್ರಕಾರ ಹೇಳಿದೆ.

ದೀಕ್ಷಯಾಪಗತದ್ವೈತಂ ಯದ್ಜ್ಞಾನಂ ಗುರುಶಿಷ್ಯಯೋಃ
ಆನಂದಸ್ಯೈಕೆ ಮೇತೇನ ದೀಕ್ಷಾ ಪಾದೋದಕರಂ ಸ್ಮೃತಂ ಪ. ೧೯. ಶ್ಲೋ. ೬

"ಗುರುಶಿಷ್ಯರಲ್ಲಿಯ ದ್ವೈತಜ್ಞಾನವು ಅಳಿದು ಹೋಗಿ ಉದಯಿಸುವ ಅದ್ವೈತ ಜ್ಞಾನವು ನಿಜಾನಂದದಲ್ಲಿ ಐಕ್ಯವಾಗುವುದೇ ದೀಕ್ಷಾ ಪಾದೋದಕವು."

(೮೨) ಶಿಕ್ಷಾ ಪಾದೋದಕ ಸ್ಥಳ : ದೀಕ್ಷಾನುಭವದಿಂದ ಪ್ರಾಪ್ತವಾದ ಶಿವಜ್ಞಾನದ ಮನನವು ಸಮರಸಭಾವವನ್ನುಂಟು ಮಾಡಿ ಯಾವ ದಿವ್ಯನಂದವನ್ನುಂಟುಮಾಡುತ್ತದೆಯೋ ಅದೇ ಶಿಕ್ಷಾ ಪಾದೋದಕವು.

(೮೩) ಜ್ಞಾನಪಾದೋದಕಸ್ಥಳ : ಶಿಕ್ಷಾಪಾದೋದಕದ ಅನುಭವ ಸುಖವೇ ಪರಮಾನಂದ ರೂಪವಾದ ಸ್ಥಾನವು. ಆ ಜ್ಞಾನದ ಮನನದಲ್ಲಿ ಸಮರಸವಾದ ಜ್ಞಾನವೇ ಜ್ಞಾನಪಾದೋದಕವು.

೧೨ನೆಯ ಪ್ರಕರಣ

ಲಿಂಗಾಂಗ ಸಾಮರಸ್ಯ

ದೇಹವೇ ದೇವಾಲಯವಾಗಿರುವ ಶಿವಯೋಗಿಯು ಮುಂದೆ ಈ ವಿಶ್ವವನ್ನೆಲ್ಲಾ ಶಿವನನ್ನಾಗಿಯೇ ತಿಳಿಯುವನು. ಅಂಗವೆಂಬ ಜೀವನಿಗೂ ಲಿಂಗವೆಂಬ ಶಿವನಿಗೂ ಸಾಮರಸ್ಯವು ಪ್ರಾಪ್ತವಾಗುತ್ತದೆಂಬುದೇ ಈ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ.

ಲಿಂಗಸ್ಥಳದಲ್ಲಿ ಕೊನೆಯರಾದ ಐಕ್ಯಸ್ಥಳವು ಒಂಬತ್ತು ಒಳಭೇದಗಳಿಂದ ಕೂಡಿದ್ದಾಗಿದೆ. ಅವುಗಳ ವಿವರಣೆಯೇ ಲಿಂಗಾಂಗ ಸಾಮರಸ್ಯದ ವಿವೇಚನೆಯು.

(೯೩) ಸ್ವೀಕೃತ ಪ್ರಸಾದಿ ಸ್ಥಳ : ಮಡಕೆಗೆ ಮಣ್ಣೇ ಸಾಧನವಾಗಿದೆಯೆಂಬುದು ತಿಳಿದುದಲ್ಲದೆ ಆ ಮಣ್ಣಿನ ಜ್ಞಾನವೂ ಆದ ಮೇಲೆ ಎಷ್ಟು ಮಡಕೆ, ಕುಡಿಕೆ, ಕೊಡ ಮೊದಲಾದವುಗಳು ತೋರಿದರೂ ಅವೆಲ್ಲಾ ಮಣ್ಣೇ ಸರಿ, ಎಂಬ ಸತ್ಯಜ್ಞಾನವು ಹೇಗೆ ಉಂಟಾಗುತ್ತದೆಯೋ ಹಾಗೆಯೇ ಜ್ಞಾನಪ್ರಕಾಶಿಯಾದ ಆ ಶಿವಯೋಗಿಗೆ ಈ ವಿಶ್ವದಲ್ಲಿ ಯಾವ ಪದಾರ್ಥಗಳನ್ನು ನೋಡಿದರೂ ಅದು ಪರಮಾತ್ಮನಂತೆಯೇ ಆತನಿಗೆ ತೋರುತ್ತದೆ.

ಆತನು ಜ್ಞಾನಾಗ್ನಿಯಲ್ಲಿ ಭಿನ್ನ ಕಲ್ಪನೆಯನ್ನು ದಹಿಸಿ ಉಂಟಾದ ಶಿವಾನಂದ ಪ್ರಸಾದವನ್ನು ಭೋಗಿಸುವವನಾದ ಕಾರನ ಸ್ವೀಕೃತ ಪ್ರಸಾಧಿಯಾದನು.

(೯೪) ಶಿಷ್ಟೋದನ ಸ್ಥಳ : ಈ ತೋರುವ ಜಗತ್ತಿಗೆ ಪರಶಿವನಲ್ಲಡಗಿರತಕ್ಕ ಮಾಯೇಯೇ ಕಾರಣವಾಗಿದೆ. ಈ ಮಾಯೆಯೇ ಶಿಷ್ಟೊದನ ಎಂದರೆ ಉಳಿದ ಅನ್ನವೆಂದು ಹೇಳಿದೆ. ಸ್ವೀಕೃತ ಪ್ರಸಾದಿಯು ಈ ಮಾಯೆಯನ್ನು ಬಿಟ್ಟಿರುತ್ತಾನೆ. ಆದುದರಿಂದ ಮಾಯೆಯು ಈ ಶಿವಯೋಗಿಗೆ ಶಿಷ್ಟೋಧನವೆಂದು ಹೇಳಿದೆ.

(೯೫) ಚರಾಚರಲಯ ಸ್ಥಳ : ಆ ಶಿವಯೋಗಿಯು ತನ್ನನ್ನಾಗಲಿ ಅಥವಾ ಈ ಜಗತ್ತಿನ ಯಾವ ಚರಾ ಚರ ವಸ್ತುಗಳನ್ನಾಗಲಿ ಶಿವನಿಗೆ ಭಿನ್ನವಾಗಿ ತಿಳಿಯುವುದಿಲ್ಲವಾದುದರಿಂದ ಆತನಲ್ಲಿ ಚರಾಚರಗಳೆಲ್ಲವೂ ಲಯವಾದವೆಂದೇ ತಿಳಿಯಬೇಕು.

(೯೬) ಭಾಂಡರಸ್ಥಳ : ಈ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಿಗೆ ಮೂಲಕ ಕಾರಣನಾದ ಪರಶಿವನ ವಿಮರ್ಶಾತ್ಮಕ ವಿಚಾರ ರೂಪವಾದ ಭಾಂಡದಲ್ಲಿ ಸಕಲ ತತ್ವಗಳನ್ನೂ ಅಡಗಿಸಿ ಸ್ವಸ್ವರೂಪದಲ್ಲಿರುವ ಶಿವಯೋಗಿಯೇ ಭಾಂಡಸ್ಥಳಸಂಪನ್ನರು.

(೯೭) ಭಾಜನಸ್ಥಳ : ಶಿವನ ವಿಮರ್ಶನಾ ಶಕ್ತಿಗೆ ಆತನ ತಿತೋಧಾನ ಶಕ್ತಿಯು ಭಾಜನ ಎಂದರೆ ಆಧಾರವಾಗಿರುವುದು. ಈ ಶಕ್ತಿಯನ್ನು ಆ ಶಿವಯೋಗಿಯು ಉಳ್ಳವನಾಗಿರುವುದರಿಂದ ಆತನು ಪರಬ್ರಹ್ಮನೇ ಆಗಿರುತ್ತಾನೆ.

(೯೮) ಅಂಗಾಲೇಪಸ್ಥಳ : ಆಕಾಶದಲ್ಲಿಯೇ ಮೋಡ, ಹೊಗೆ ಮೊದಲಾದವುಗಳು ಸಂಚರಿಸುತ್ತಿದ್ದರೂ ಅವುಗಳಿಂದ ಆಕಾಶವು ಹೇಗೆ ಲೇಪನವಾಗಿರುವುದಿಲ್ಲವೋ ಹಾಗೆಯೇ ಆ ಭಾಜನ ಸ್ಥಾನದ ಶಿವಯೋಗಿಯ ಸರ್ವವ್ಯಾಪಕನಾಗಿದ್ದರೂ ಯಾವ ಅಂಗ ಗುಣಗಳಿಂದಲೂ ಲೇಪಿತನಾಗಿರುವುದಿಲ್ಲ.

(೯೯) ಸ್ವಪರರಾಜ್ಞಸ್ಥಳ : ಅಂಗಾಲೇಪಸ್ಥನಾದ ಶಿವಯೋಗಿಯೂ ಈ ವಿಶ್ವದಲ್ಲಿ ಯಾವುದನ್ನೂ ತನ್ನದೆಂದಾಗಲಿ ಅಥವಾ ಪರರದೆಂದಾಗಲಿ ಭಾವಿಸದೆ ಇರುವನಾದುದರಿಂದ ಸ್ವಪರಾಜ್ಞ ಸ್ಥಳದವನಾದನು.

(೧೦೦) ಭಾವಾಭಾವಲಯಸ್ಥಳ : ಲೌಕಿಕ ಯಾವ ಭಾವನೆಗಳೂ ಆ ಶಿವಯೋಗಿಯಲ್ಲಿ ಉದಯಿಸದೆ ಆತನ ಮನ ಮೊದಲಾದ ಅಂತಃಕರಣಗಳು ಕೂಡಾ ಶಿವನಲ್ಲಿ ಲಯವಾಗಿ ಹೋಗುವುದರಿಂದ ಭಾವಾಭಾವಲಯಸ್ಥಳನಾದನು.

(೧೦೧) ಜ್ಞಾನಶೂನ್ಯಸ್ಥಳ : ಆ ಪರಮ ಶಿವಯೋಗಿಯು ಆ ವಿಶ್ವದಲ್ಲಿ ತಿಳಿಯಬೇಕಾದುದೇನು ಉಳಿಯುವುದಿಲ್ಲ. ಹಾಲಿನಲ್ಲಿ ಹಾಲು ಬೆರೆಯುವಂತೆ ಪರಶಿವನಲ್ಲಿ ಆ ಶಿವಯೋಗಿಯು ಬೆರೆತು ಹೋಗುತ್ತಾನೆ. ಇದೇ ಲಿಂಗಾಂಗ ಸಾಮರಸ್ಯವು. ಇದೇ ಜೀವನು ಶಿವನನ್ನು ಸೇರಿದ ಸ್ಥಳವು.

❖❖

೪ನೆಯ ಸ್ಥಳವು ಲಿಂಗಧಾರಣ ಸ್ಥಳವೆಂತಲೂ ಹೇಳಿದೆ. ಈ ಇಷ್ಟಲಿಂಗ ಧಾರಣೆಯು ವೀರಶೈವ ಮತದಲ್ಲಿ ಒಂದು ವೈಶಿಷ್ಟ್ಯವಾದುದೂ ಅತ್ಯಂತ ಪ್ರಾಮುಖ್ಯವಾದುದೂ ಆಗಿದೆ.

ಈ ಇಷ್ಟಲಿಂಗ ಪೂಜೆಯು ಸಾಕಾರ ಪೂಜೆಯಾಗಿದೆ. ಪ್ರಾಣಲಿಂಗ ಮತ್ತು ಭಾವಲಿಂಗಗಳ ಧ್ಯಾನ ಮತ್ತು ಅನುಸಂಧಾನಗಳು ನಿರಾಕಾರ ಪೂಜೆಯಾಗಿವೆ. ಇವುಗಳಲ್ಲಿ ಯಾವುದನ್ನು ಬಿಟ್ಟರೂ ಜೀವನು ಉದ್ಧಾರವಾಗುವುದಿಲ್ಲವೆಂದೇ ಈ ಮತದ ಸಿದ್ಧಾಂತವಾಗಿದೆ. ಕೆಲವು ಮತದವರಂತೆ ಕೇವಲ ಸಾಕಾರ ಪೂಜೆಯನ್ನಾಗಲಿ ಅಥವಾ ಕೆಲವು ಧರ್ಮದವರಂತೆ ಕೇವಲ ನಿರಾಕಾರ ಪೂಜೆಯನ್ನಾಗಲಿ ಈ ಮತವು ಪ್ರತಿಪಾದಿಸದೆ ಇವೆರಡನ್ನೂ ಕೂಡಿಸಿರುವುದು ಈ ಮತದಲ್ಲಿ ಒಂದು ಶ್ರೇಷ್ಠವಾದ ನೂತನ ತತ್ವವಾಗಿದೆ.

ಭಗವದ್ಗೀತೆಯ ೧೨ನೆಯ ಅಧ್ಯಾಯದ ಆದಿಯಲ್ಲಿ ಈ ತತ್ವವು ಚೆನ್ನಾಗಿ ವಿವೇಚಿಸಲ್ಪಟ್ಟಿದೆ. ಮೂರು ಮತ್ತು ನಾಲ್ಕನೆಯ ಶ್ಲೋಕಗಳಲ್ಲಿ ಅವ್ಯಕ್ತ ಎಂದರೆ ನಿರಾಕಾರ ಅಥವಾ ನಿರ್ಗುಣೋಪಾಸನೆಯನ್ನು ಹೇಳಿ ಮುಂದೆ ೫ನೆಯ ಶ್ಲೋಕದಲ್ಲಿ ಈ ಪ್ರಕಾರ ಶ್ರೀ ಕೃಷ್ಣನು ಹೇಳೀದ್ಧಾನೆ.

ಕ್ಲೇಶೋಧಿಕ ತರಸ್ತೇಷಾ ಮವ್ಯಕ್ತಾಸಕ್ತ ಚೇತಸಾಮ
ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ ॥೫॥

"ಅವ್ಯಕ್ತೋಪಾಸನೆಯು ವ್ಯಕ್ತರಾದ ಎಂದರೆ ದೇಹಧಾರಿಗಳಾದ ಮನುಷ್ಯರಿಗೆ ಕ್ಲೇಶದಾಯಕವಾದುದಾಗಿಯೂ ಕಷ್ಟಸಾಧ್ಯವಾದುದಾಗಿಯೂ ಇದೆ."

ಆದುದರಿಂದ ನೀನು ಸಾಕಾರೋಪಾಸನೆಯಿಂದಲೇ ನನ್ನನ್ನು ಸೇರೆಂದು ಶ್ರೀ ಕೃಷ್ಣಪರಮಾತ್ಮನು ಮುಂದೆ ಎಂಟನೆಯ ಶ್ಲೋಕದಲ್ಲಿ ಹೇಳಿದ್ದಾನೆ.

ಈ ಪ್ರಕಾರ ಹೇಳಿದ ಸಾಕಾರ ಮತ್ತು ನಿರಾಕಾರಗಳೆರಡರ ಪೂಜೆಯನ್ನೂ ವೀರಶೈವ ಮತದಲ್ಲಿ ಮಾತ್ರವೇ ಗೊತ್ತು ಮಾಡಿರುವುದರಿಂದ ಸ್ಥೂಲ ಸೂಕ್ಷ್ಮ ಕಾರಣಗಳೆಂಬ ಲಿಂಗತ್ರಯುವುಳ್ಳವರೆಲ್ಲರೂ ಇಷ್ಟಪ್ರಾಣ ಭಾವಗಳೆಂಬ ಲಿಂಗತ್ರಸಂಪನ್ನರಾಗಲೇಬೇಕೆಂಬ ತತ್ವವು ಎಷ್ಟು ಮಹತ್ವದ್ದಾಗಿದೆಯೆಂಬುದು ಸ್ಪಷ್ಟವಾಗುತ್ತದೆ.

ಶಿಷ್ಯನ ತನುಮನಭಾವಗಳಲ್ಲಿ ಇಂತಹ ಲಿಂಗಧಾರಣೆಯನ್ನು ಮಾಡುವ ಗುರುವು ಹೇಗಿರಬೇಕೆಂಬುದು ಬಹು ಮುಖ್ಯವಾದ ಸಂಗತಿಯಾಗಿರುವುದರಿಂದ ಇಂತಹ ದೀಕ್ಷೆಯನ್ನು ಮಾಡುವ ಸಾಮರ್ಥ್ಯವು ಸಾಧಕನಿಗಿಲ್ಲವೆಂದೇ ವೀರಶೈವ ಮತವು ಹೇಳುತ್ತಿದೆ. ಆದುದರಿಂದಲೇ ೪೪ ಅಂಗಸ್ಥಳಗಳನ್ನು ಮೀರಿದ ಶಿವಶರಣನೇ ಲಿಂಗಧಾರಣೆಯ ದೀಕ್ಷೆಗೆ ಅರ್ಹನೆಂದು ಲಿಂಗಸ್ಥಳದ ಅಥವಾ ಸಾಧ್ಯನಾದ ಶಿವಯೋಗಿಯು ಆಚರಿಸುವ ಸ್ಥಳಗಳಲ್ಲಿ ಮೊದಲನೆಯಾದ ೪೫ನೆಯ ದೀಕ್ಷಾ ಗುರುಸ್ಥಳವನ್ನು ವಿವರಿಸಿದೆ.

ಈ ಮತದಲ್ಲಿ ಗುರು ಎಂದು ಹೇಳಿಸಿಕೊಳ್ಳಬೇಕಾದರೆ ಮೊದಲೆಯ ೩೬ ಸ್ಥಳಗಳಲ್ಲಿ ವಿವರಿಸಿರುವಂತೆ ತನ್ನ ಆಚಾರವಿಚಾರಗಳನ್ನು ಸುಧಾರಿಸಿಕೊಂಡು ೩೭ನೆಯ ಶರಣಸ್ಥಳವನ್ನು ಸೇರಿರಲೇಬೇಕೆಂದು ಸ್ಪಷ್ಟವಾಗಿ ತಿಳಿಸಿದೆ. ಶರಣಸ್ಥಳದ ಆಚಾರವಿಚಾರಗಳು ಅಳವಟ್ಟ ವಿನಾ

ಗುರುಸ್ಥಳದವರೆಂದು ಹೇಳಿಕೊಳ್ಳಲಿಕ್ಕಾಗಲಿ ಗುರುಗಳ ಸಂಗಡ ಪಾದೋದಕ ಪ್ರಸಾದಗಳ ಸಾಮರಸ್ಯವನ್ನು ನಡೆಯಿಸಲಿಕ್ಕಾಗಲಿ ಅಧಿಕಾರವೇ ಬರುವುದಿಲ್ಲವೆಂದು ಐದು ಮತ್ತು ಆರನೆಯ ಪ್ರಕರಣಗಳಲ್ಲಿ ವಿವರಿಸಿರುವ ಸಂಗತಿಗಳನ್ನು ನಾವು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

ಐಕ್ಯಸ್ಥಳದಲ್ಲಿರುವ ಸಾಧಕನು ೪೨ನೆಯ ಸ್ಥಳದಲ್ಲಿ ವಿವರಿಸಿದಂತೆ ಸರ್ವಾಚಾರ ಸಂಪತ್ತಿ ಸ್ಥಳದವನಾಗಿ ಏಕಭಾಜನ ಸ್ಥಳದಲ್ಲಿ ವಿವರಿಸಿರುವಂತೆ ತನ್ನನ್ನೂ ಶಿವನನ್ನೂ ಒಂದೇ ಎಂದು ತಿಳಿಯುವಂತಹ ಜ್ಞಾನಕ್ರಿಯೆಗಳು ಅಳವಟ್ಟ ವಿನಾ ಗುರು ಜಂಗಮರ ಪಾದೋದಕವನ್ನು ಲಿಂಗದ ಮೇಲೆ ಅಭಿಷೇಕ ಮಾಡುವ ಸಾಮರ್ಥ್ಯವು ಬರುವುದಿಲ್ಲವೆಂದೇ ಆರನೇಯ ಪ್ರಕರಣದಲ್ಲಿ ವಿವರಿಸಿರುವ ಸಂಗತಿಗಳಿಂದ ಸ್ಪಷ್ಟವಾಗುತ್ತದೆ.

ಈ ಪ್ರಕಾರ ಸಾಧಕನಾದ ಐಕ್ಯಸ್ಥಳದ ಶಿಷ್ಯನಿಗೇನೇ ಸಾಧ್ಯನಾದ ಶಿವಯೋಗಿಯ ಪಾದೋದಕ ಆತನಿಗೂ ಇಷ್ಟಲಿಂಗಕ್ಕೂ ಅರ್ಪಣಕ್ಕೆ ಯೋಗ್ಯವೇ ವಿನಾ ಅನ್ಯ ಅಧಿಕಾರಿಗಳಿಗೆ ಈ ಸಾಮರಸ್ಯ ಕ್ರಿಯೆಯು ಸಲ್ಲದೆಂದೇ ಆ ಸ್ಥಳಗಳಲ್ಲಿ ಈ ಸಂಗತಿಗಳನ್ನು ವಿವರಿಸುವುದರ ಮೇಲಿಂದ ಗೊತ್ತಾಗುತ್ತದೆ. ಅಂತಹ ಸರ್ವತ್ರ ಲಿಂಗಭಾವವುಳ್ಳ ಗುರುಶಿಷ್ಯರಲ್ಲಿಯ ಸಾಮರಸ್ಯದ ಈ ಕ್ರಿಯೆಯು ಹೇಗೆ ತಾನೇ ಯಾರಿಂದ ಆಕ್ಷೇಪಿಸಲು ಸಾಧ್ಯವು? ಅನಧಿಕಾರಿಗಳು ಈ ಕಾರ್ಯವನ್ನು ಮಾಡುವುದರಿಂದಲೇ ಜನರಲ್ಲಿ ಸಂದೇಹಕ್ಕೆ ಅವಕಾಶವಾಗಿದೆ.

ಲಿಂಗಧಾರಣವಾದನಂತರ ಆ ಶಿವಭಕ್ತನ ಆಚಾರವಿಚಾರಗಳು ಹೇಗಿರಬೇಕೆಂಬುದನ್ನು ಭಕ್ತಮಾರ್ಗಕ್ರಿಯಾಸ್ಥಳ ಎಂಬ ಒಂಭತ್ತನೆಯ ಸ್ಥಳದಲ್ಲಿಯೇ ವಿವರಿಸಿದೆ. ಆತನು ವೀರಶೈವರಲ್ಲಿ ಜಾತಿಭೇದವನ್ನು ಮಾಡಬಾರದೆಂಬುದೇ ಆ ಭಕ್ತನು ಆಚರಿಸಬೇಕಾದ ಆಚರಣೆಗಳಲ್ಲಿ ಮೊದಲನೆಯದಾಗಿದೆ. ಯಜ್ಞಯಾಗಾದಿ ಹಿಂಸಾಯುಕ್ತ ಕರ್ಮಗಳನ್ನಾಗಲಿ ಶಿವಪೂಜೆ ಮೊದಲಾದ ಪಂಚಕ್ರಿಯೆಗಳಲ್ಲಿರತಕ್ಕ ಆ.ಶಿವಭಕ್ತನು ಜಾತಿ ಮೊದಲಾದ ಪಂಚ ಸೂತಕಗಳನ್ನಾಘಲಿ ಆಚರಿಸಬಾರದು.

ಈ ಪ್ರಕಾರ ಜಾತಿಭೇದ ಯಜ್ಞಯಾಗ, ವ್ರತೋಪವಾಸ ಮತ್ತು ಪಂಚಸೂತಕಗಳಿಲ್ಲದಿರುವುದು ಕೂಡಾ ವೀರಶೈವ ಮತದಲ್ಲಿ ಅತ್ಯಂತ ಮಹತ್ವವಾದ ವೈಶಿಷ್ಟ್ಯವೆಂದೇ ತಿಳಿಯಬೇಕು. ಈ ಮತದಲ್ಲಿರತಕ್ಕ ಸಮಾನತೆ, ಉದಾರತ್ವ, ಭೂತದಯೆಗಳನ್ನು ಭಕ್ತನು ಆಚರಿಸಬೇಕಾಗಿರುವ ಈ ಮೇಲಣ ಆಚರಣಗಳ ವ್ಯಕ್ತಗೊಳಿಸತಕ್ಕವುಗಳಾಗಿವೆ.

ಶಿವಭಕ್ತಿಯುಳ್ಳ ಪುರುಷನು ಹೇಗೆ ಲಿಂಗಧಾರಣಾದಿ ಸಂಸ್ಕಾರಗಳನ್ನು ಹೊಂದಿ ತಾನು ಉದ್ಧಾರನಾಗುವುದಲ್ಲದೆ ಅನ್ಯರನ್ನೂ ಉದ್ಧಾರಮಾಡುಬಹುದೋ ಹಾಗೇಯೇ ಶಿವಭಕ್ತಿಯುಳ್ಳ ಸ್ತ್ರೀಯಳು ಲಿಂಗಧಾರಣಾದಿ ಸಂಸ್ಕಾರಗಳನ್ನು ಹೊಂದಿ ಪುನೀತಳಾಗಲಿಕ್ಕೂ ಅನ್ಯರನ್ನು ಪವಿತ್ರಗೊಳಿಸಲಿಕ್ಕೂ ಈತಮತದಲ್ಲಿರಕ್ಕ ಸ್ವಾತಂತ್ರ್ಯವು ಬಹು ಶ್ರೇಷ್ಠವಾದುದಾಗಿದೆ. ಆದುದರಿಂದ ಭಕ್ತನಿಗೆ ಸಂಬಂಧಿಸಿದ ಸಂಗತಿಗಳೆಲ್ಲವೂ ಭಕ್ತಳಿಗೂ ಸಂಬಂಧಿಸಿವೆಯೆಂದೇ ತಿಳಿಯಬೇಕು. ಈ ವಿಧವಾಗಿ ಸ್ತ್ರೀಪುರುಷರಿಗೆ ಸಮಾನವಾದ ಧಾರ್ಮಿಕ ಸಂಸ್ಕಾರ ಸ್ವಾತಂತ್ರ್ಯಗಳಿರುವುದು ಕೂಡಾ ಈ ಮತದ ಒಂದು ವೈಶಿಷ್ಟ್ಯವೇ ಆಗಿದೆ.

ಅನಾದಿ ವೀರಶೈವ ಸಾರಸಂಗ್ರಹ

೨೩ನೆಯ ಪ್ರಕರಣ

ಇಂಧನಂವನಿಸಂಪರ್ಕಾದ್ವೃಕ್ಷನಾಮ ವಿನಶ್ಯತಿ
ಶಿವಸಂಸ್ಕಾರ ಸಂಪನ್ನೇ ಜಾತಿಭೇದಂ ನಕಾರಯೇತ್ ||೨೮೧||

ಗ್ರಾಮಸ್ಯ ಮಲಿನಂ ತೋಯಂ ನದೀನಾಂಚಪವಿತ್ರಕಂ
ಶಿವಸಂಸ್ಕಾರ ಸಂಪನ್ನೇ ಜಾತಿಭೇದಂ ನಕಾರಯೇತ್ ||೨೮೩||

ಶಿವಸಂಸ್ಕಾರ ಸಂಪನ್ನೋ ಹ್ಯಯಂಶೂದ್ರೋಹ್ಯಯಂದ್ವಿಜಃ
ಲಿಂಗಭೇದ ಕೃತೋಹೇನ್ ರೌರವಂನರಕಂ ವ್ರಜೇತ ||೨೮೭||

"ಕಟ್ಟಿಗೆಗೆ ಬೆಂಕಿಯನ್ನು ಹಚ್ಚುವುದರಿಂದ ಕಟ್ಟಿಗೆ ಎಂಬ ಹೆಸರು ಹೇಗ ಲೋಪವಾಗಿ ಹೋಗುತ್ತದಯೋ ಹಾಗೆಯೇ ಶಿವದೀಕ್ಷೆಯಾಗುವುದರಿಂದ ಲೋಪವಾಗಿ ಹೋಗುತ್ತದೆಯೋ ಹಾಗೆಯೇ ಶಿವದೀಕ್ಷೆಯಾಗುವುದರಿಂದ ಜಾತಿಭೇದವೆಂಬುದು ನಷ್ಟವಾಗುತ್ತದೆ. ಊರಲ್ಲಿ ನಾನಾ ಕಡೆಗೆ ಹರಿದ ಮಲಿನ ನೀರಾದರೂ ನದಿಗೆ ಹೋಗಿ ಸೇರಿದ ನಂತರ ಹೇಗೆ ಅದು ಪವಿತ್ರವಾಗುತ್ತದೆಯೋ ಹಾಗೆಯೇ ಶಿವದೀಕ್ಷೆಯಾದ ನಂತರ ಹಿಂದಿನ ಜಾತ್ಯಾದಿಗಳು ಹೋಗಿ ಆತನು ಪವಿತ್ರನೇ ಆಗುತ್ತಾನೆ. ಆದುದರಿಂದ ಶಿವದೀಕ್ಷೆಯಾದ ನಂತರ ಜಾತಿ ಭೇದವನ್ನು ಮಾಡಬಾರದು. ಶಿವದೀಕ್ಷೆಯಾದವರಲ್ಲಿ ಇವರು ಶೂದ್ರರು, ಅವರು ದ್ವಿಜರು ಎಂದು ಜಾತಿಭೇದವನ್ನು ಮಾಡಿದ್ಧಾದರೆ ಭಯಂಕರವಾದ ನರಕವೇ ಪ್ರಾಪ್ತವಾಗುತ್ತದೆ."

ವೀರಶೈವರಲ್ಲಿ ಜಾತಿಗಳಿಲ್ಲವೆಂಬ ವಿಷಯಗಳಲ್ಲಿ ಈ ಪ್ರಕಾರ ಅನೇಕ ಆಧಾರಗಳನ್ನು ಉದಾಹರಿಸಬಹುದು. ವಿಚಾರಪರರು ಈ ಮತದಲ್ಲಿರತಕ್ಕ ಈ ಮಹತ್ವವಾದ ಸಿದ್ಧಾಂತಕ್ಕೆ ಲೋಪಬರದಂತೆ ಆಚರಿಸುವುದು ಅತ್ಯಾವಶ್ಯಕವಾಗಿದೆ. ವೀರಶೈವ ಮತವು ಜನ್ಮದಿಂದ ಜಾತಿಯನ್ನು ಹೇಳುವುದಿಲ್ಲ. ಇಷ್ಟೆ ಅಲ್ಲ; ಈ ಅನ್ಯಾಯವಾದ ರೀತಿಯನ್ನು ಸಂಪೂರ್ಣವಾಗಿ ನಿಷೇಧಿಸುತ್ತದೆ. ಶಿವಭಕ್ತಿ ಸದ್ಗುಣ ಸದಾಚಾರಗಳೇ ಜಾತಿಗೆ ಕಾರಣವಾಗಿವೆಯಲ್ಲದೆ ಜನ್ಮವೇನೂ ಕಾರಣವಲ್ಲವೆಂಬುದೇ ವೀರಶೈವ ಮತದ ಸಿದ್ಧಾಂತವು. ಆದುದರಿಂದಲೇ ಮಹಾನುಭಾವರಾದ ಬಸವಣ್ಣನವರು ಕೂಡಾ "ಕರ್ಣದಲ್ಲಿ ಜನಿಸಿದವರುಂಟೆ ಜಗದೊಳಗೆ? ಇದು ಕಾರಣ ಕೂಡಲಸಂಗಮದೇವ ಲಿಂಗಸ್ಥಲವನರಿದವನೇ ಕುಲಜನು ಎಂಬುದಾಗಿ ಹೇಳಿದ್ದಾರೆ."

ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ ॥ ೪.೧೩

"ಗುಣಕರ್ಮಗಳ ವಿಭಾಗಗಳಿಗೆ ಅನುಸರಿಸಿ ನಾನೇ ನಾಲ್ಕು ವರ್ಣಗಳನ್ನು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ) ಉಂಟು ಮಾಡಿದ್ದೇನೆ." ಎಂಬುದಾಗಿ **ಭಗವದ್ಗೀತೆ**ಯಲ್ಲಿ ಹೇಳಿದೆಯಷ್ಟೆ

ವರ್ಣಗಳಿಗೆ ಗುಣಕರ್ಮಗಳೇ ಕರಣವಲ್ಲದೆ ಜನ್ಮವೇನೂ ಕಾರಣವಿಲ್ಲವೆಂಬ ತತ್ವವು ಭಗವದ್ಗೀತೆಗೂ ಮಾನ್ಯವಿದೆ. ಅದರ ಗೀತೆಯ ಈ ತತ್ವವು ಕೂಡಾ ವೀರಶೈವ ಮತತತತ್ವದಷ್ಟು ಈ ವಿಷಯದಲ್ಲಿ ವಿಶಾಲವಾದುದಾಗಿಲ್ಲ. ಆತ್ಮೋನ್ನತಿಗೆ ಅನವಶ್ಯಕವಾದ ವರ್ಣಗಳ ಕಟ್ಟನ್ನು ಗೀತೆಯು ಕೂಡಾ ಪ್ರತಿಪಾದಿಸಿದೆ. ವೀರಶೈವ ಮತವಾದರೋ ಈ ವರ್ಣಗಳ ತೊಡಕನ್ನೇ ಹಾಕಿಲ್ಲ.

ಭಕ್ತ ಮತ್ತು ಮಹೇಶ ಎಂಬೆರಡು ವರ್ಗಗಳು ಈ ಮತದಲ್ಲಿವೆಯೆಂದು ಕೆಲವರು ತಿಳಿದುಕೊಂಡಿರುವುದುಂಟು. ಮತ್ತು ಈ ವರ್ಗಗಳು ಜನ್ಮದಿಂದಲೇ ಏರ್ಪಡುತ್ತವೆಂತಲೂ ಕೆಲವರು ಹೇಳುತ್ತಿದ್ದಾರೆ. ಇವೆಲ್ಲ ವೀರಶೈವ ಮತಕ್ಕೆ ವಿರೋಧವಾದ ಅಭಿಪ್ರಾಯಗಳೆಂಬುದು ಕೂಡಾ ಹಿಂದಣ ಹನ್ನೆರಡು ಪ್ರಕರಣಗಳನ್ನು ಓದಿದ ನಿಷ್ಪಕ್ಷಪಾತಿಗಳಿಗೆ ಚೆನ್ನಾಗಿ ಗೊತ್ತಾಗಿರಬಹುದು. ಭಕ್ತನೇ ಮಹೇಶನಾಗಿಯೂ ಮಹೇಶನೇ ಪ್ರಸಾದಿಯಾಗಿಯೂ ತನ್ನ ಜ್ಞಾನಾಚಾರಗಳ ಹೆಚ್ಚಳದಿಂದ ಕೊನೆಗೆ ಷಟಸ್ಥಳ ಬ್ರಹ್ಮಿಯು ಹೇಗಾಗುತ್ತಾನೆಂಬುದನ್ನು ಸಿದ್ಧಾಂತ ಶಿಖಾಮಣಿಯಲ್ಲಿ ಸ್ಪಷ್ಟವಾಗಿ ವಿವರಿಸಿದೆಯಷ್ಟೆ.

ಗುರುತ್ವವು ಅಂಗಸ್ಥಳ ಶರಣಸ್ಥಳವು ಪ್ರಾಪ್ತವಾದ ನಂತರ ಬರುವುದೇ ವಿನಾ ಆ ಪೂರ್ವದಲ್ಲಿ ಬರುವುದಿಲ್ಲವೆಂದೇ ಈ ಮುಂಚೆ ವಿವರಿಸಿದ್ಧಾಗಿದೆಯಷ್ಟೆ ಅನಂತರ ಆ ಸಾಧಕನು ತಾನು ಸಾಧ್ಯವಾದ ಮೇಲೆಯೇ ಎಂದರೆ ಅಂಗಸ್ಥಳದ ಐಕ್ಯಸ್ಥಳವು ಸಂಪೂರ್ಣ ಅಳವಟ್ಟ ಮೇಲೆಯೇ ಅನ್ಯರಿಗೆ ದೀಕ್ಷೆಯನ್ನು ಮಾಡಲು ಸಮರ್ಥವಾಗುತ್ತಾನೆ. ಆದುದರಿಂದ ಸಾಧ್ಯನು ಆಚರಿಸತಕ್ಕೆ ಲಿಂಗಸ್ಥಳಗಳಲ್ಲಿಯೇ ದೀಕ್ಷಾ ಗುರುಸ್ಥಳವನ್ನು ಮೊದಲನೆಯದನ್ನಾಗಿ ವಿವರಿಸಿದ್ಧಾರೆ.

ಈ ಗುರುಗಳು ಶಿವದೀಕ್ಷೆಯನ್ನು ಮಾಡುವಾಗ ಆ ಶಿಷ್ಯನು ಹೇಗಿರಬೇಕೆಂಬುದನ್ನು ಮುಂದೆ ೪ನೆಯ ಶಿಷ್ಯಸ್ಥಳ ಎಂಬುದರಲ್ಲಿ ವಿವರಿಸಿದ್ದಾಗಿದೆ. ಇದನ್ನು ಕೂಡಾ ದೀಕ್ಷೆ ಮಾಡುವವರೂ ದೀಕ್ಷೆ ಹೊಂದುವವರೂ ಲಕ್ಷಿಸಬೇಕು. ಆಚಾರಹೀನರಿಗೆ ಧನದಾಸೆಗಾಗಿಯೇ ಅಥವಾ ಜನದಾಸೆಗಾಗಿಯೋ ದೀಕ್ಷೆ ಮಾಡಿದರೆ ಮಹಾನುಭಾವರಾದ ಬಸವಣ್ಣನವರು ಹೇಳಿರುವಂತೆ ಸಗಣಿಯ ಬೆನಕಂಗೆ ಸಂಪಿಗೆಯ ಅರಳಲ್ಲಿ ಪೂಜಸಿದಂತಾಗುವುದು ಹೀಗಾಗಬಾರದೆಂದೇ ಶಿಷ್ಯಸ್ಥಳವನ್ನು ಏರ್ಪಡಿಸಿ ಆತನಿರಬೇಕಾದ ರೀತಿಯನ್ನು ತಿಳಿಸಿದ್ಧಾರೆ.

ಅಂತಹ ಯೋಗ್ಯ ಭಕ್ತನಿಗೆ ಶಿವದೀಕ್ಷೆಯನ್ನು ಮಾಡಿದರೆ ಮುಂದೆ ಆತನೇ ಗುರುವಾಗುತ್ತಾನೆಂದು ೭೧ನೆಯ ಸೇವ್ಯಸ್ಥಳ ಎಂಬುದರಲ್ಲಿ ಸ್ಪಷ್ಟವಾಗಿ ಹೇಳಿರುವುದರಿಂದ ಭಕ್ತ ಮತ್ತು ಗುರುವರ್ಗಳೆಂಬುವು ಜನ್ಮದಿಂದಲೇ ಏರ್ಪಡುತ್ತವೆಂದು ತಿಳಿಯುವುದು ಅನುಚಿತವಲ್ಲವೇ? ಹಾಗೆ ಹೇಳಿದರೆ ವೀರಶೈವ ಮತದ ವಿಚಾರತತ್ವಕ್ಕೆ ಕಲಂಕವನ್ನುಂಟು ಮಾಡಿದಂತಾಗುವುದಿಲ್ಲವೇ? ಆದಕಾರಣ ವೀರಶೈವ ಮತದಲ್ಲಿ ಜನ್ಮದಿಂದ ಗುರುವರ್ಗಮತ್ತು ಭಕ್ತವರ್ಗಗಳೆಂಬುವು ಇಲ್ಲವೇ ಇಲ್ಲವೆಂದು ತಿಳಿಯಬೇಕು.

ವೀರಶೈವ ಮತದಲ್ಲಿ ಮತಾಚಾರಗಳಿಗೇನೇ ಮಹತ್ವವನ್ನು ಕೊಟ್ಟಿಲ್ಲ. ಅವುಗಳಿಗೆ ನೀತಿಯ ಸಂಬಂಧವನ್ನೂ ಇಟ್ಟಿದೆ. ಸತ್ಯ. ಅಹಿಂಸಾದಿ ಸಾಮಾನ್ಯ ಧರ್ಮವು ಕೂಡಾ ವೀರಶೈವನಿಂದ ಆಚರಿಸಲ್ಪಡಬೇಕೆಂದೇ ಹೇಳಿದೆ. ಸಾಧಕನಾಗಿರುವ ಭಕ್ತನು ಈ ನೀತಿಯ ತತ್ವಗಳನ್ನು ಆಚರಿಸಲೇಬೇಕೆಂದು ೧೬ನೆಯ ಮಾಹೇಶ್ವರ ಸ್ಥಳದಲ್ಲಿ ವಿವರಿಸಿದ ನಂತರವೇ ೧೭ನೆಯ

ಲಿಂಗನಿಷ್ಠಾಸ್ಥಳವನ್ನು ವಿವರಿಸಿರುವ ಕಾರಣವೇನೆಂದರೆ, ಲಿಂಗನಿಷ್ಠೆಯುಂಟಾಗಿ ಆತ್ಮೋನ್ನತಿಯಾಗಬೇಕಾದರೆ ಮೊದಲು ನೈತಿಕ ಸಾಮರ್ಥ್ಯವನ್ನು ನಾವು ಹೊಂದಲೇಬೇಕೆಂಬುದು ನಮಗೆ ತಿಳಿಯಬೇಕು. ಈ ನೈತಿಕ ಸಾಮರ್ಥ್ಯವಿಲ್ಲದೆ ಮಾಡುವ ಮತಾಚಾರಗಳೆಲ್ಲಾ ಡಂಭಾಚಾರಗಳಾಗಿಯೇ ಪರಿಣಮಿಸುತ್ತವೆ. ಆದುದರಿಂದ ನಾವು ನೀತಿಯ ನಿಯಮಗಳನ್ನೂ ತಪ್ಪದೇ ಆಚರಿಸಲೇಬೇಕು.

ನೀತಿಯು ಕೇವಲ ಸಾಧಕರಲ್ಲಿ ಮಾತ್ರವೇ ಇರಬೇಕೆಂದು ಈ ಮತವು ಹೇಳವುದಿಲ್ಲ. ಸಾಧ್ಯರಲ್ಲಿಯು ಕೂಡ ಇರಬೇಕೆಂದೇ ಹೇಳುತ್ತಿದೆ. ಆದುದರಿಂದ ಸಾಧ್ಯಾರು ಆಚರಿಸತಕ್ಕ ಆಚರಣೆಗಳಲ್ಲಿಯ ೬೦ ನೆಯ ಧರ್ಮಾಚಾರ ಸ್ಥಳದಲ್ಲಿ ಅಹಿಂಸಾ, ಸತ್ಯ, ಕಳವುಮಾಡದಿರುವುದು, ಬ್ರಹ್ಮಚರ್ಯ, ಮೊದಲಾದ ನೈತಿಕ ನಿಯಮಗಳನ್ನು ವಿವರಿಸಿದ್ದಾರೆ. ಆದುದರಿಂದ ವೀರಶೈವ ಮತವು ನೈತಿಕ ಸಾಮರ್ಥ್ಯದಿಂದಲೇ ಧಾರ್ಮಿಕ ಧ್ಯೇಯವನ್ನು ಸಾಧಿಸಬೇಕೆಂದು ಹೇಳುತ್ತಿದೆ.

ಈ ಪ್ರಕಾರ ವೀರಶೈವ ಮತದಲ್ಲಿ ಅನೇಕ ಮಹತ್ವದ ತತ್ವಗಳಿವೆಯೆಂಬುದು ಈ ವರೆಗಿನ ವಿವೇಚನೆಯಿಂದ ವಾಚಕರಿಗೆ ವೇದ್ಯವಾಗಿರಬಹುದು. ಇಂತಹ ಶ್ರೇಷ್ಠಮತವನ್ನನುಸರಿಸಿದವರು ಈ ಮತತತ್ವಗಳನ್ನು ಚೆನ್ನಾಗಿ ತಿಳಿದುಕೊಂಡು ಅವುಗಳಂತೆಯೇ ನಡೆಯಲು ಪ್ರಯತ್ನಿಸಬೇಕಾದುದು ಅವಶ್ಯಕವಾಗಿದೆ.

ತಪ್ಪು ಆಚಾರವಿಚಾರಗಳಿಂದ ಕೂಡಿದ ರೂಢಿಗೆ ನಾವು ದಾಸರಾಗಿ ವರ್ತಿಸಬಾರದು. ರೂಢಿಯು ತತ್ವವನ್ನು ನಾಶಮಾಡುತ್ತಿದ್ದರೆ ಇಲ್ಲವೆ ಅದಕ್ಕೆ ಕಲಂಕವನ್ನುಂಟುಮಾಡುತ್ತಿದ್ದರೆ ಆ ರೂಢಿಯನ್ನು ಬಿಡಲು ನಾವು ಸಿದ್ಧರಾಗಬೇಕು. ಈ ವಿಧವಾದ ಮನೋಧೈರ್ಯವಿಲ್ಲದಿದ್ದರೆ ನಾವು ಈ ಮತದ ನಿಜತತ್ವವನ್ನಾಚರಿಸಲು ಸಮರ್ಥರಾಗುವುದಿಲ್ಲ.

ಒಂದು ಮತಕ್ಕೆ ಮಹತ್ವವು ಅದರಲ್ಲಿರುವ ತತ್ವಗಳಿಂದಲೇ ಪ್ರಾಪ್ತವಾಗುವುದಿಲ್ಲ. ಆದರೆ ಆ ತತ್ವಗಳಂತೆ ನಡೆಯುವವರ ಸಂಖ್ಯೆಯು ಆ ಮತೀಯರಲ್ಲಿ ಎಷ್ಟು ಹೆಚ್ಚಿರುತ್ತದೆಯೋ ಅದರ ಮೇಲಿಂದಲೇ ಆ ಮತಕ್ಕೆ ಘನತೆಯೂ ಬರುತ್ತದೆ. ಆದಕಾರಣ ವೀರಶೈವ ಮತವು ಶ್ರೇಷ್ಠವೆಂಬುದನ್ನು ನಾವು ಗ್ರಂಥೋಕ್ತಿಗಳಿಂದ ತೋರಿಸದೆ ನಮ್ಮ ನಡತೆಯಿಂದಲೇ ತೋರಿಸಬೇಕು. ನಮ್ಮ ಸತ್ಯಾಭಿಮಾನ ಜಾಗೃತವಾದ ವಿನಾ ಇದು ಸಾಧ್ಯವಲ್ಲ.

ಈವರೆಗೆ ವಿವರಿಸಲ್ಪಟ್ಟಿರುವ ತತ್ವಗಳು ಆಚರಣೆಯಲ್ಲಿ ಬರುವಂತಹ ಸಾಮರ್ಥ್ಯವೂ ಉದಯವಾಗಲಿ! ಆ ಮೂಲಕ ವೀರಶೈವ ಮತತತ್ವದ ಜ್ಯೋತಿಯು ಎಲ್ಲೆಲ್ಲಿಯೂ ಬೆಳಗಲಿ ! ಆ ಬಸವಾದಿ ಪ್ರಮಥಪುಂಗವರು ಉದ್ಧಾರಮಾಡಿದ ಈ ಶ್ರೇಷ್ಠ ಮತವು ಅಸಂಖ್ಯ ಜೀವಾತ್ಮರುಗಳಿಗೆ ಸುಖಶಾಂತಿಗಳನ್ನುಂಟು ಮಾಡಲಿ ! ಇದೇ ಆ ದಯಾಘನನಾದ ಪರಮಾತ್ಮನಲ್ಲಿ ನಮ್ಮ ಪ್ರಾರ್ಥನೆ.

❖❖

ನೂತನ

ವಾರಪತ್ರಿಕೆ !

ಜಾಗ್ರತೆ

ಚಂದಾದಾರರಾಗಿರಿ!!

ಶರಣ ಸಂದೇಶ

ಸಂಪಾದಕರು

ಹರ್ಡೇಕರ ಮಂಜಪ್ಪನವರು

ಪ್ರತಿ ಸೋಮವಾರವೂ ಪ್ರಕಟವಾಗುವುದು

ಇದು ರಾಷ್ಟ್ರೋನ್ನತಿಗೆ ಅವಶ್ಯವಾದ ಉದಾತ್ತವಿಚಾರಗಳನ್ನುಂಟುಮಾಡುವ ಪತ್ರಿಕೆ

ಇದು ಸಾಮಾಜಿಕ ದಾಸ್ಯತ್ವವನ್ನು ನಿವಾರಣೆಮಾಡಲು ಜನಾಂಗದಲ್ಲಿ ಜಾಗೃತಿಯನ್ನುಂಟುಮಾಡುವ ಪತ್ರಿಕೆ

ಇದು ವೀರಶೈವ ಸಮಾಜದಲ್ಲಿ ಸಂಘಟನೆಯನ್ನುಂಟುಮಾಡಿ ಶ್ರೀಬಸವಾದಿ ಪ್ರಮಥರ ಮಾರ್ಗವನ್ನು ಪ್ರಸಾರಗೊಳಿಸುವ ಪತ್ರಿಕೆ

ವಾರ್ಷಿಕ ಚಂದಾ ಅಂಚೆಯ ವೆಚ್ಚ ಸೇರಿ ೩ ರೂ.

ಮ್ಯಾನೇಜರ್–ಶರಣ ಸಂದೇಶ

ಪೋ. ಆಲಮಟ್ಟಿ

ಜಿ. ವಿಜಾಪೂರ

ವೀರಶೈವ ಸಮಾಜ ಸುಧಾರಣೆ

ಲೇಖಕ
ಎಂ. ಮಂಜಪ್ಪ ಹರ್ಡೇಕರ

ಪ್ರಥಮ ಮುದ್ರಣ

ಬಿ. ಬಿ. ಡಿ. ಪವರ್ ಪ್ರೆಸ್
ಬೆಂಗಳೂರು ಸಿಟಿ

ಶಾ. ಶ. ೧೮೪೩ ಕ್ರಿ.ಶ. ೧೯೨೧

*

ಪೀಠಿಕೆ

ಈ ನಮ್ಮ ಭರತಖಂಡದಲ್ಲುಂಟಾಗಿರುವ ನವೀನ ಜಾಗ್ರತೆಯಿಂದ ಅನೇಕ ಸಮಾಜಗಳು ಎಚ್ಚೆತ್ತು ತಮ್ಮ ತಮ್ಮ ಉನ್ನತಿಗಾಗಿ ಅವಿಶ್ರಾಂತ ಶ್ರಮಪಡುತ್ತಲಿವೆಯಷ್ಟೆ. ಇಂತಹ ಸುಸಮಯದಲ್ಲಿ ಸಾಧಾರಣ ೩೫ ಲಕ್ಷಜನ ಸಂಖ್ಯೆಯುಳ್ಳ ಈ ನಮ್ಮ ವೀರಶೈವ ಸಮಾಜವಾದರೂ ತನ್ನ ಶ್ರೇಯಸ್ಸಿಗಾಗಿ ಪ್ರಯತ್ನಿಸುವುದು ಅವಶ್ಯಕವಲ್ಲವೇ? ಅಂತಹ ಪ್ರಯತ್ನಗಳು ಜರುಗಬೇಕಾದರೆ ಸಮಾಜದಲ್ಲಿರುವ ಕುಂದುಕೊರತೆಗಳು ಸಮಾಜದ ಬಾಂಧವರಿಗೆ ವೇದ್ಯವಾಗಬೇಕಾಗುತ್ತದೆ. ಆದುದರಿಂದಲೇ ನಮ್ಮ ಸಮಾಜದ ಪ್ರಮುಖ ಮುಂದಾಳುಗಳು ನಾವು ಸುಧಾರಿಸಿಕೊಳ್ಳಬೇಕಾದ ಅನೇಕ ಸಂಗತಿಗಳನ್ನು ಆಗಾಗ್ಗೆ ಮಹಾಸಭೆಯಗಳಲ್ಲಿಡುತ್ತಾ ಬಂದಿದ್ದಾರೆ. ಆ ವಿಷಯಗಳು ಪುನಃ ಪುನಃ ಸಮಾಜದ ಮುಂದೆ ಬರುವುದು ಸುಧಾರಣೆಗೆ ಅವಶ್ಯಕವಾಗಿರುವುದರಿಂದ ಆ ಸಂಗತಿಗಳನ್ನೇ ಈ ಕಾಲಕ್ಕೆ ತಕ್ಕಂತೆ ೯ ಪ್ರಕರಣಗಳನ್ನಾಗಿ ವಿಂಗಡಿಸಿ ಈ ಚಿಕ್ಕ ಪುಸ್ತಕದ ಮೂಲಕ ನಮ್ಮ ಸಮಾಜ ಬಾಂಧವರ ಮುಂದೆ ಇಟ್ಟಿದ್ದೇವೆ.

ಈ ನಮ್ಮ ವೀರಶೈವ ಸಮಾಜವೇನೋ ಕ್ಷುದ್ರವಾದುದಲ್ಲ. ಇದರ ಉನ್ನತಿ ಅವನತಿಗಳನ್ನು ಉಪೇಕ್ಷಿಸುವಂತಿಲ್ಲ ಈ ಸಮಾಜವು ಹಿಂದು ಧರ್ಮದ ಒಂದು ಶ್ರೇಷ್ಠತರವಾದ ಮತವನ್ನನುಸರಿಸುತ್ತಾ ಬಂದದ್ದಾಗಿದೆ. ಈ ಸಮಾಜವು ಭಾರತೀಯ ತತ್ವಜ್ಞಾನ ಸಿದ್ದಂತಗಳಲ್ಲಿ ಒಂದು ಸ್ವತಂತ್ರವಾದ ತತ್ವವನ್ನು ಪ್ರತಿಪಾದಿಸತಕ್ಕದ್ಧಾಗಿದೆ. ಈ ಸಮಾಜವು ಹಿಂದು ಧರ್ಮದ ಎಲ್ಲಾ ಸಮಾಜಗಳಿಗಿಂತಲೂ ವಿಶೇಷತರವಾದ ರಚನೆಯುಳ್ಳದ್ಧಾಗಿದೆ. ಇಷ್ಟೇ ಅಲ್ಲ; ಈಗ ನಮ್ಮ ಕರ್ನಾಟಕದೇಶದ ಹಿತಾಹಿತಗಳು ಬಹುಮಟ್ಟಿಗೆ ಈ ಸಮಾಜವನ್ನೇ ಅವಲಂಬಿಸಿವೆಯೆಂದು ಹೇಳಿದರೆ ಅತ್ಯುಕ್ತಿಯಾಗಲಾರದು. ನಮ್ಮ ಸಮಾಜದ ಪ್ರಾಮುಖ್ಯತೆಯನ್ನು ಕುರಿತು ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಯವರು ೮ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ: "ಕಾವ್ಯಾಲಾಪನೆಯಲ್ಲಿಯೂ ಚಮತ್ಕಾರವಾದ ಕಲಾಕೌಶಲ್ಯಾಭಿಗಳಲ್ಲಿಯೂ ನಮ್ಮ ಸಮಾಜವನ್ನು ಅದ್ವಿತೀಯರೆಂಬ ಪ್ರಾಮುಖ್ಯತೆಯನ್ನು ಪಡೆದಿರುತ್ತಾರೆ. ವಾಣಿಜ್ಯದಲ್ಲಿ ನಮ್ಮ ಮತಸ್ಥರು ಅತ್ಯಂತ ಮುಂದಾಳುಗಳು. ವ್ಯವಸಾಯವೃತ್ತಿಯಲ್ಲಾದರೋ ಬೆನ್ನೆಲಬಿನಂತಿರುವರು. ಇಷ್ಟೇ. ಅಲ್ಲ, ವೀರಶೈವ ಸಮಾಜದವರು ಭರತಖಂಡದ ವಿವಿಧ ಜನಾಂಗಗಳಲ್ಲಿ ಒಂದು ಅತಿ

ಪ್ರಾಮುಖ್ಯವಾದ ಪ್ರತ್ಯೇಕ ಜನಾಂಗದವರಾಗಿ, ತಮ್ಮದೇ ಪ್ರತ್ಯೇಕ ಐತಿಹಾಸಿಕ ಕುಲಕ್ರಮಾಗತವಾದ ಚರಿತ್ರೆಯುಳ್ಳವರಾಗಿರುತ್ತಾರೆ."

ಇಷ್ಟು ಪ್ರಾಮುಖ್ಯವಾದ ಈ ನಮ್ಮ ವೀರಶೈವ ಸಮಾಜದ ವಿಷಯವಾಗಿ ಆಲೋಚಿಸುವುದಾಗಲಿ, ಪ್ರಯತ್ನಿಸುವುದಗಲಿ, ವ್ಯರ್ಥವಾದುದೆಂದು ಹೇಳಬಹುದೇ? ಇಂತಹ ಶ್ರೇಷ್ಠತರವಾದ ಸಮಾಜದಲ್ಲಿ ಜನ್ಮವೆತ್ತಿರುವವರು ಸಮಾಜ ಶ್ರೇಯಸ್ಸಿಗಾಗಿ ಪ್ರಯತ್ನಿಸುವುದು ಮುಖ್ಯ ಕರ್ತವ್ಯವಲ್ಲವೇ? ಇಂತಹ ಕರ್ತವ್ಯ ಜಾಗ್ರತೆಯುಂಟಾಗಲೆಂಬ ಸದುದ್ದೇಶದಿಂದ ಈ ಚಿಕ್ಕ ಪುಸ್ತಕವು ಸಮಾಜ ಸೇವಾರೂಪದಲ್ಲಿ ಬರೆಯಲ್ಪಟ್ಟಿದೆಯೇ ವಿನಾ ಯಾರ ಸ್ತುತಿ ನಿಂದೆಗಳನ್ನು ಮಾಡುವುದಕ್ಕೂ ಬರೆಯಲ್ಪಟ್ಟಿಲ್ಲ. ಶ್ರೀಮಂತ ಸರ್ ದೇಸಾಯಿ ವಂಟಮುರಿ ಲಖಮನಗೌಡರು ಸಿ. ಐ. ಇ. ಯವರು ೪ನೆಯ ವೀರಶೈವ ಮಹಾಸಭಾಧ್ಯಕ್ಷರಾಗಿ ಮಾಡಿರುವ ಉಪನ್ಯಾಸದಲ್ಲಿ – "ನಮ್ಮೊಳಗಿನ ವ್ಯಂಗಗಳನ್ನು ಅನ್ಯತು ಎತ್ತಿ ನಗೆಯಾಡುವ ಪೂರ್ವದಲ್ಲಿ ನಾವೇ ಅವುಗಳನ್ನು ಈ ಸಭೆಯ ಮುಂದಿಟ್ಟು ಆದಷ್ಟು ಪ್ರಯತ್ನಪೂರ್ವಕವಾಗಿ ಹೋಗಲಾಡಿಸಿಕೊಳ್ಳಲಿಕ್ಕೆ ಉದ್ಯುಕ್ತರಾದರೆ ನಮ್ಮ ಸಮಾಜವು ಬೇಗನೆ ಸುಸ್ಥಿತಿಯನ್ನು ಹೊಂದುವರೆಂಬ ಬಲವಾದ ಆಶೆಯಿಂದ ಮಾತಾಡುತ್ತೇನಲ್ಲದೆ ನನ್ನ ಮನಸ್ಸಿನಲ್ಲಿ ಜನರ ನಿಂದೆಯನ್ನು ಮಾಡುವುದುಂಟೆಂದು ಮಾತ್ರ ಯಾರೂ ಏಣಿಸಬಾರದು." ಎಂದು ಹೇಳಿರುವಂತೆಯೇ ಈ ಪುಸ್ತಕದಲ್ಲಿ ಮಾಡಲ್ಪಟ್ಟಿರುವ ದೋಷೋದ್ಘಾಟನೆಯ ವಿಷಯದಲ್ಲಿಯೂ ವಾಚಕರು ನಮ್ಮ ಉದ್ಧೇಶವನ್ನು ಭಾವಿಸಿ ಸಮಾಜೋನ್ನತಿಯ ಕಾರ್ಯಾಸಕ್ತರಾಗಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತೇವೆ.

ನಮ್ಮ ಸಮಾಜದ ಕೆಲವು ಸಾರ್ವಜನಿಕ ಸಂಸ್ಥೆಗಳ ಕಾರ್ಯನಿರ್ವಾಹಕರು ನಮ್ಮ ಪ್ರಾರ್ಥನೆಯ ಪ್ರಕಾರ ನಮ್ಮ ಸಂಸ್ಥೆಯ ಸಂಗತಿಗಳನ್ನು ತಿಳಹಿಸದಿದ್ದುದರಿಂದ ಆ ವಿಷಯಗಳನ್ನು ವಿವರವಾಗಿ ಪ್ರಕಟಿಸಲು ಅವಕಾಶವಾಗದಿದ್ದುಕ್ಕಾಗಿ ತುಂಬಾ ವಿಷಾದವಾಗುತ್ತದೆ. ಶ್ರೀಯುತ ರಿ. ಡಿ. ಕಲೆಕ್ಟರ್ ಮೆಣಸಿನಕಾಯಿ ಶಾಂತವೀರಪ್ಪನವರು. ಶ್ರೀಯುತ ಎಸ್. ಎಸ್. ಬಸವನಾಳರವರು ಮತ್ತು ಶ್ರೀಯುತ ಆರ್. ಎಲ್. ಜವಳಿಯವರು ತಮ್ಮ ಸಂಸ್ಥೆಗಳ ಸಮಾಚಾರಗಳನ್ನು ತಿಳುಹಿಸಿದ್ದುದಕ್ಕೋಸ್ಕರ ಈ ಮಹಾಶಯರಿಗೆ ತುಂಬಾ ಕೃತಜ್ಞರಾಗಿದ್ದೇವೆ.

ದಾವಣಗೆರೆ — ಎಂ. ಎಂ. ಹರ್ಡೇಕರ

ತಾ. ೫–೨–೧೯೨೧

❖❖

*

ವಿಷಯಾನುಕ್ರಮಣಿಕೆ

ಈ ಪುಸ್ತಕದ ಸರ್ವಾಧಿಕಾರವೂ ಗ್ರಂಥಕರ್ತರದ್ದಾಗಿದೆ. ಗ್ರ. ಸ. ೭

ಸ್ವಲ್ಪ ಪ್ರತಿಗಳೇ ಪ್ರಕಟವಾಗುತ್ತವೆ. ಜಾಗ್ರತೆ ಚಂದಾದಾರರಾಗಿರಿ

*

ರಾಷ್ಟ್ರಜೀವನ ಗ್ರಂಥಮಾಲೆ

ದಾವಣಗೆರೆ

ವಾರ್ಷಿಕ ಚಂದಾ ೨ ರೂಪಾಯಿ. ಅಂಚೆ ವೆಚ್ಚ ಬೇರೆ

೧೨೫ ಪುಟಗಳ ಪುಸ್ತಕವು

ಮೂರು ತಿಂಗಳುಗಳಿಗೊಂದು ಪ್ರಕಟವಾಗುವುದು

ಎಂ. ಮಂಜಪ್ಪ ಹರ್ಡೇಕರ

ಸಂಪಾದಕ

ವೀರಶೈವ ಸಮಾಜ ಸುಧಾರಣೆ

೧ನೆಯ ಪ್ರಕರಣ

ಪೂರ್ವಕಾಲದ ವೀರಶೈವ ಸಮಾಜ

ಈ ನಮ್ಮ ವೀರಶೈವ ಸಮಾಜದ ಪ್ರಕೃತ ಸ್ಥಿತಿಯನ್ನು ತಿಳಿದುಕೊಳ್ಳುವ ಮುಂಚೆ ಇದರ ಪ್ರಾಚೀನ ಸ್ಥಿತಿಯ ಕಡೆಗೆ ಸ್ವಲ್ಪ ಗಮನಿಸೋಣ. ಏಕೆಂದರೆ, ಆ ಪ್ರಾಚೀನ ಸ್ಥಿತಿಯ ಜ್ಞಾನವು ಈಗ ನಮ್ಮ ಸಮಾಜವು ಯಾವ ತರಗತಿಯಲ್ಲಿದೆಯೆಂಬುದನ್ನು ನಿರ್ಣಯಿಸಲು ಎಷ್ಟೋ ಸಹಾಯ ಮಾಡುತ್ತದೆ. ಈ ವೀರಶೈವ ಮತವು ಅನಾದಿಸಂಸಿದ್ಧವಾದುದೆಂಬುದನ್ನು ವಿವರಿಸಿ ಹೇಳಬೇಕಾದುದಿಲ್ಲ. ಮತ್ತು ಅದು ಪ್ರಕೃತದ ವಿಷಯವೂ ಅಲ್ಲ. ಈ ದೇಶದ ಐತಿಹಾಸಿಕ ಕಾಲಕ್ಕಿಂತಲೂ ಪೂರ್ವದಲ್ಲಿಯೇ ವೀರಶೈವ ಮತಾನುಯಾಯಿಗಳಿದ್ಧರೆಂಬುದು ಮಹಾಭಾರತಾದಿ ಪ್ರಾಚೀನ ಗ್ರಂಥಗಳಿಂದ ವ್ಯಕ್ತವಾಗುತ್ತದೆ.

ಐತಿಹಾಸಿಕ ಕಾಲದಲ್ಲಾದರೋ, ಕ್ರಿ.ಶ. ೫ನೆಯ ಶತಮಾನದ ಪೂರ್ವದಲ್ಲಿಯೂ ವೀರಶೈವರಿದ್ದರೆಂದು ಮಿ. ಫಿಲಿಪ್ ಬ್ರೌನ್, ಮಿ. ರಾಯಿಸ್ ಮೊದಲಾದ ಪಾಶ್ಚಾತ್ಯ ಪಂಡಿತರು ಐತಿಹಾಸಿಕ ಆಧಾರಗಳಿಂದ ದೃಢೀಕರಿಸಿದ್ದಾರೆ. ಈ ಸಂಬಂಧವಾಗಿ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳಲಪೇಕ್ಷೆಯುಳ್ಳವರು ಮ॥ ರಾ॥ ವೀರಪ್ಪ ಬಸಪ್ಪ ಬಿಳಿಅಂಗಡಿ, ಬಿ.ಎ.ಎಲ್.ಎಲ್.ಬಿ. ಇವರು ಬರೆದಿರುವ **"ವೀರಶೈವಮತ ಪ್ರಾಚೀನತ್ವ"** ಎಂಬ ಪುಸ್ತಕವನ್ನು ಮತ್ತು ಮ॥ ರಾ॥ ಎಂ. ಎಂ. ಕಲ್ಯಾಣಶೆಟ್ಟಿ ಬಿ.ಎ. ಇವರು ಮಹಾರಾಷ್ಟ್ರ ಭಾಷೆಯಲ್ಲಿ ಬರೆದಿರುವ **"ವೀರಶೈವ ಸ್ಥಿತಿ"** ಎಂಬ ಪುಸ್ತಕವನ್ನು ಓದುವುದುತ್ತಮ.

ಈ ಭರತಖಂಡವು ನಾನಾಮತಗಳಿಗೆ ಮಾತೃಸ್ಥಾನವಾಗಿದೆ. ಒಂದು ಕಾಲದಲ್ಲಿ ಬಹು ಪ್ರಸಾರ ಹೊಂದಿದ ಮತವೇ ಮತ್ತೊಂದು ಕಾಲದಲ್ಲಿ ಲಯವಾದ ದೃಷ್ಟಾಂತಗಳು ಈ ದೇಶದಷ್ಟು ಇನ್ನಾವ ದೇಶದಚರಿತ್ರೆಯಲ್ಲಿಯೂ ದೊರೆಯುವದಿಲ್ಲ. ಏಕೆಂದರೆ, ಧರ್ಮಕ್ರಾಂತಿಗಳು ಈ ದೇಶದಷ್ಟು ಪ್ರಪಂಚದ ಇನ್ನಾವ ದೇಶದಲ್ಲಿ ಆಗಿಲ್ಲ. ಒಂದು ಕಾಲದಲ್ಲಿ ಒಂದು ಮತವನ್ನು ಒಬ್ಬ ಮಹಾತ್ಮನು ಬೋಧಿಸಿದಾಗ ಆ ಕಾಲದ ಜನಗಳು ಆತನ ಮತವನ್ನೇ ಅನುಸರಿಸುತ್ತಿದ್ದರು. ಅನೇಕ ರಾಜರ ಮತ್ತು ವಿದ್ವಾಂಸರ ಸಹಾಯದಿಂದ ಆ ಮತವು ಕೆಲವು ಕಾಲ ಬಹು ಪ್ರಸಾರವನ್ನೂ ಹೊಂದುತ್ತಿದ್ದಿತು. ಆದರೆ ಮತ್ತೊಬ್ಬ ಮಹಾತ್ಮನು ಬೇರೊಂದು ಕಾಲದಲ್ಲಿ ಇನ್ನೊಂದು ಮತವನ್ನು ಉಪದೇಶ

ಮಾಡಲು ಆ ಹಿಂದಿಣ ಮತಾನುಯಾಯಿಗಳೇ ಪುನಃ ಈ ಕೆಲವುಕಾಲ ಶ್ರೇಷ್ಠ ಸ್ಥಿತಿಯಲ್ಲಿಯು, ಕೆಲವು ಕಾಲ ಕನಿಷ್ಠ ಸ್ಥಿತಿಯಲ್ಲಿಯು ಇರಬೇಕಾಗುತ್ತಿದ್ದಿತು. ಈ ನಮ್ಮ ವೀರಶೈವ ಸಮಾಜವಾದರೂ ಈ ಪ್ರಕಾರ ಆಯಾಯ ಕಾಲಕ್ಕೆ ತಕ್ಕಂತೆ ಬೇರೆ ಬೇರೆ ಸ್ಥಿತಿಗಳನ್ನು ಹೊಂದುತ್ತಾ ಬಂದಿದೆ.

ಕ್ರಿ.ಶ. ಪೂರ್ವ ೫ನೆಯ ಶತಮಾನದ ಹಿಂದೆ ಶ್ರೀ ಅರ್ಹತ ಮತ್ತು ಶ್ರೀ ಬುದ್ಧ ಈ ಉಭಯ ಮಹಾತ್ಮರು ಜೈನ ಮತ್ತು ಬೌದ್ಧ ವ್ರತಗಳನ್ನು ಬೋಧಿಸಿದರು. ಈ ಮತಗಳು ಬೇರೆ ಬೇರೆ ಕಾಲಗಳಲ್ಲಿ ಬಹು ಪ್ರಸಾರವನ್ನೂ ಹೊಂದಿದವು. ಐತಿಹಾಸಿಕ ಕಾಲದ ಮತೋದ್ಧಾರಕರಲ್ಲಿ ಇವರೇ ಮೊದಲನೆಯವರು. ಈ ಉಭಯ ಮತಗಳ ಪ್ರಾಬಲ್ಯದಿಂದ ಆ ಮುಂಚಿನ ಅನೇಕ ಮತಗಳು ಅಳಿದು ಹೋಗಿದ್ದವು ಆದ ಕಾರಣ ಶಂಕರಾಚಾರ್ಯರು ಕ್ರಿ. ಶ. ೮ನೆಯ ಶತಮಾನದಲ್ಲಿ ಅದ್ವೈತಮತವನ್ನು ಶ್ರೀ ರಾಮಾನುಜಾಚಾರ್ಯರು ಕ್ರಿ. ಶ. ೧೧ನೆಯ ಶತಮಾನದಲ್ಲಿ ವಿಶಿಷ್ಟಾದ್ವೈತ ಮತವನ್ನು ಶ್ರೀ ಮಧ್ವಾಚಾರ್ಯರು ಕ್ರಿ. ಶ. ೧೨ನೆಯ ಶತಮಾನದಲ್ಲಿದ್ವೈತಮತವನ್ನು ಬೋಧಿಸಿದರು. ಇವುಗಳಂತೆಯೇ ಖಿಲವಾಗಿ ಹೋಗಿದ್ದ ಪ್ರಾಚೀನ ಕಾಲದ ಈ ನಮ್ಮ ಶಕ್ತಿವಿಶಿಷ್ಟಾದ್ವೈತಮತವನ್ನೂ ಶ್ರೀ ಬಸವಣ್ಣನವರು ಕ್ರಿ. ಶ. ೧೨ನೆಯ ಶತಮಾನದಲ್ಲಿ ಜೀರ್ಣೋದ್ಧಾರಗೊಳಿಸಿದರು. ಈ ಪ್ರಕಾರ ನಾಲ್ಕು ಶತಮಾನಗಳಲ್ಲಿಯೇ ಈ ನಾಲ್ಕು ಮತಗಳೂ ವಿಶೇಷ ಪ್ರಸಾರ ಹೊಂದಿದುದರಿಂದ ಜೈನ ಮತ್ತು ಬೌದ್ಧ ಮತಗಳ ಪ್ರಾಬಲ್ಯವು ಈ ದೇಶದಲ್ಲಿ ಬಹುಮಟ್ಟಿಗೆ ಕಡಿಮೆಯಾಯಿತು.

ಐತಿಹಾಸಿಕ ಕಾಲಕ್ಕಿಂತ ಹಿಂದೆ ಒಂದಾನೊಂದು ಸಮಯದಲ್ಲಿ ಬಹು ಉನ್ನತ ಸ್ಥಿತಿಯಲ್ಲಿದ್ದ ವೀರಶೈವ ಸಮಾಜವು ಪರಮತಗಳ ಪ್ರಾಬಲ್ಯದಿಂದ ದಿನೇ ದಿನೇ ಹೀನ ಸ್ಥಿತಿಗೆ ಬರುತ್ತಾ ಕ್ರಿ. ಶ. ೧೨ನೆಯ ಶತಮಾನದ ಆದಿಯಲ್ಲಂತೂ ಬಹು ದುಸ್ಥಿತಿಯಲ್ಲಿದ್ದಿತು. ಶ್ರೀ ಬಸವಣ್ಣನವರ ಅವತಾರದ ಕಾರಣವನ್ನು ಕುರಿತು **ಬಸವಪುರಾಣದ** ಮೊದಲನೆಯ ಅಧ್ಯಾಯದಲ್ಲಿ ವಿವರಿಸಲ್ಪಟ್ಟಿರುವುದರ ಮೇಲಿಂದಲೂ ಆಗ ನಮ್ಮ ಸಮಾಜವು ಬಹು ಶೋಚನೀಯ ಸ್ಥಿತಿಯಲ್ಲಿದ್ದಿತೆಂದೇ ಸಿದ್ಧವಾಗುತ್ತದೆ. ಶ್ರೀ ಬಸವಣ್ಣನವರು ತಮ್ಮ ಅಸಾಧಾರಣವಾದ ಭಕ್ತಿಪ್ರಭಾವದಿಂದ ಸ್ವಲ್ಪಕಾಲದಲ್ಲಿಯೇ ಈ ಮತವನ್ನು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರ ದೇಶಗಳಲ್ಲಿ ಪ್ರಸಾರಗೊಳಿಸಿದರು. ವೀರಶೈವ ಮತವು ಈ ಮಹಾತ್ಮರಿಂದ ಪುನಃ ಊರ್ಜಿತಸ್ಥಿತಿಗೆ ಬಂದಿತು. ಕರ್ನಾಟಕ ದೇಶದಲ್ಲಾದರೋ ಇದೊಂದು ಪ್ರಬಲ ಸಮಾಜವಾಗಿಯೇ ಏರ್ಪಟ್ಟಿತು.

ಈ ಸಮಾಜದ ಅನೇಕ ಮಹಾ ಮಹಾಮಹಿಮಾಶಾಲಿಗಳಿಂದಲೂ, ಶಿವಶರಣರಿಂದಲೂ, ಕರ್ನಾಟಕ ದೇಶದ ಅನೇಕ ಸ್ಥಳಗಳು ಪುಣ್ಯಕ್ಷೇತ್ರಗಳಾದವು. ಈ ಸಮಾಜದ ಅನೇಕ ಕವಿಶ್ರೇಷ್ಠರು ರಚಿಸಿದ ದಿವ್ಯಕಾವ್ಯಗಳಿಂದ ಕರ್ನಾಟಕ ಭಾಷಾಮಾತೆಯು ಬಹು ಮನೋಹರವಾಗಿ ಶೃಂಗರಿಸಲ್ಪಟ್ಟಳು. ಸಂಸ್ಕೃತ ಭಾಷೆಯಲ್ಲಿ ಬರೆಯಲ್ಪಟ್ಟಿದ್ದ ಈ ಮತದ ತತ್ವಗಳನ್ನು ನಮ್ಮ ಸಮಾಜದ ಅಸಂಖ್ಯಾತ ವಿದ್ವಾಂಸರು ವಚನರೂಪದಲ್ಲಿ ಬರೆದು ಜನಸಾಮಾನ್ಯರಲ್ಲಿ ಜ್ಞಾನಪ್ರಸಾರಣೆಯನ್ನು ಮಾಡಿದ್ದಲ್ಲದೆ ಕರ್ನಾಟಕ ಭಾಷೆಯನ್ನು ಬಹು ಊರ್ಜಿತ ಸ್ಥಿತಿಗೆ ತಂದರು. ಕರ್ನಾಟಕ ದೇಶದಲ್ಲಿ ವಿದ್ಯಾಭ್ಯಾಸವನ್ನು ಮಾಡಿಸುವ ಕಾರ್ಯವಾದರೋ ಬಹುಮಟ್ಟಿಗೆ ಈ ಸಮಾಜದ ಗುರುವರ್ಗವನ್ನೇ ಅವಲಂಬಿಸಿದ್ದಿತು. ಈ ಸಮಾಜದ ಅನೇಕ ಪರಾಕ್ರಮಶಾಲಿಗಳು ಕರ್ನಾಟಕದ ಬೇರೆ ಬೇರೆ ಭಾಗಗಳ ಪ್ರಭುಗಳಾಗಿ ವೀರಶೈವ ಸಮಾಜಕ್ಕೆ ಬಹು ಘನತೆಯನ್ನುಂಟುಮಾಡಿದರು. ಈ ನಮ್ಮ ಕರ್ನಾಟಕ ದೇಶದ

ಒಕ್ಕಲತನ, ವ್ಯಾಪಾರ, ಕೈಗಾರಿಕೆಗಳಾದರೋ ಮುಖ್ಯವಾಗಿ ನಮ್ಮ ಸಮಾಜವನ್ನೇ ಆಶ್ರಯಿಸಿದ್ದವು. ಈ ಪ್ರಕಾರ ಧಾರ್ಮಿಕ, ರಾಜಕೀಯ, ಸಾಂಪತ್ತಿಕ ಮತ್ತು ವಿದ್ಯಾವಿಷಯಗಳಲ್ಲಿ ನಮ್ಮ ಸಮಾಜವು ೧೧ನೆಯ ಶತಮಾನದವರೆವಿಗೂ ದಿನೇ ದಿನೇ ಅಭಿವೃದ್ಧಿಯನ್ನೇ ಹೊಂದುತ್ತಾ ಬಂದಿತು. ಅನಂತರ ಮಹಮ್ಮದೀಯರು ಈ ದೇಶದಲ್ಲಿ ಪ್ರಬಲರಾದುದರಿಂದ ನಮ್ಮ ಧಾರ್ಮಿಕ ಅಭಿವೃದ್ಧಿಗೆ ಪ್ರತಿಬಂಧವುಂಟಾಯಿತು. ಅನಂತರ ಪಾಶ್ಚಾತ್ಯರ ಆಗಮನದಿಂದಲೂ, ಅವರ ಪ್ರಭುತ್ವವು ಈ ದೇಶದಲ್ಲಿ ಸ್ಥಾಪಿಸಲ್ಪಟ್ಟಿದ್ದರಿಂದಲೂ, ನಮ್ಮ ಸಮಾಜದಲ್ಲಿ ಮಹತ್ತರವಾದ ವ್ಯತ್ಯಾಸಗಳಾದವು.

ಈಸ್ಟ್ ಇಂಡಿಯಾ ಕಂಪನಿಯವರ ಪ್ರಭುತ್ವದಿಂದ ಈ ದೇಶದ ಕೈಗಾರಿಕೆಯ ಉದ್ಯೋಗವು ಬಹು ಕಡಿಮೆಯಾಯಿತು. ನೂಲುವ ಮತ್ತು ನೇಯುವ ಕೈಗಾರಿಕೆಯಾದರೋ ನಿರ್ಮೂಲವಾಯಿತೆಂದೇ ಹೇಳಬಹುದು. ಆಗ ನಮ್ಮ ಜನಗಳು ನಮ್ಮ ಮತಾಚಾರಕ್ಕೆ ವಿರೋಧವಾಗಿ ಅನ್ಯರು ಮಾಡಿದ ಬಟ್ಟೆಗಳನ್ನು ಉಪಯೋಗಿಸಲು ಪ್ರಾರಂಭಿಸಿದ್ದರಿಂದ ನಮ್ಮ ಸಮಾಜದವರು ನೂಲುವುದನ್ನು ನೇಯ್ಯುವುದನ್ನು ಬಿಡುತ್ತಾ ಬಂದರು. ನಮ್ಮ ಸಮಾಜದಲ್ಲಿ ದೊಡ್ಡದಾದ ಇದೊಂದು ಕೈಗಾರಿಕೆಯು ಕಡಿಮೆಯಾದುದರಿಂದ ನಮ್ಮ ಸಾಂಪತ್ತಿಕ ಸ್ಥಿತಿಗೆ ಭಯಂಕರವಾದ ಹಾನಿಯುಂಟಾಯಿತು. ಕಂಪನಿ ಸರಕಾರದನಂತರ ಏರ್ಪಟ್ಟ ಇಂಗ್ಲಂಡ ಸರಕಾರದ ಪ್ರಭುತ್ವದಿಂದ ಈ ದೇಶದಲ್ಲಿ ಸ್ಥಿರವಾದ ಶಾಂತತೆಯೂ ನೆಲೆಸಿತು. ಉಗಿಬಂಡಿಯ ಮಾರ್ಗಗಳು ಎಲ್ಲಾ ಭಾಗಗಳಲ್ಲಿಯೂ ವ್ಯಾಪಿಸಿ ಪ್ರಯಾಣ ಸೌಲಭ್ಯವುಂಟಾಯಿತು. ಮತ್ತು ವಿದ್ಯಾಭ್ಯಾಸಕ್ಕೆ ವಿಶೇಷವಾದ ಅನುಕೂಲತೆಯೂ, ಪ್ರೋತ್ಸಾಹವೂ ದೊರೆತವು. ಈ ನೂತನ ವ್ಯತ್ಯಾಸಗಳಿಂದ ನಮ್ಮ ಸಮಾಜವು ಮತ್ತೂ ಹೀನ ಸ್ಥಿತಿಗೆ ಬಂದಿತು. ದೇಶದಲ್ಲಿ ಶಾಂತತೆಯುಂಟಾಗಿ ಪ್ರಯಾಣ ಸೌಲಭ್ಯವು ದೊರೆತುದರಿಂದ ಗುಜರಾಥ, ಕಾಠೇವಾಡ, ಮಾರವಾಡ ಮೊದಲಾದ ದೂರ ಪ್ರಾಂತಗಳ ಸಾಹಸಿಗಳಾದ ವರ್ತಕರು ಈ ಕರ್ನಾಟಕ ದೇಶದಲ್ಲಿ ಪ್ರವೇಶಿಸಿ ಇಲ್ಲಿಯೇ ವ್ಯಾಪಾರ ಮಾಡಲುಪಕ್ರಮಿಸಿದರು. ಆದರೆ ನಮ್ಮ ಸಮಾಜದ ವರ್ತಕರು ಮಾತ್ರ ಅವರಂತೆ ಅನ್ಯ ಪ್ರದೇಶಗಳಿಗೆ ಹೋಗಿ ವ್ಯಾಪಾರ ಮಾಡಲಿಲ್ಲ. ಆದುದರಿಂದ ಕರ್ನಾಟಕ ದೇಶದ ವ್ಯಾಪಾರವು ಮೊದಲು ಮುಖ್ಯವಾಗಿ ಯಾವ ಸಮಾಜವನ್ನಾಶ್ರಯಿಸಿದ್ದಿತೋ ಅಂತಹ ಈ ವೀರಶೈವ ಸಮಾಜದ ಸಾಂಪತ್ತಿಕ ಕ್ಷೀಣತೆಗೆ ಇದೊಂದು ಬಲವಾದ ಕಾರಣವಾಯಿತು.

ಸರಕಾರದವರಿಂದಲೇ ವಿದ್ಯಾಲಯುಗಳು ಸ್ಥಾಪಿಸಲ್ಪಟ್ಟು ವಿದ್ಯಾಭ್ಯಾಸಕ್ಕೆ ಹೆಚ್ಚು ಸೌಲಭ್ಯವುಂಟಾದುದರಿಂದ ಯಾರಿಗೆ ವಿದ್ಯೆಯೊಂದೇ ಜೀವನಕ್ಕೆ ಮುಖ್ಯೋದ್ಯೋಗವಾಗಿದ್ದಿತೋ ಅಂತಹ ಕೆಲುವು ಬ್ರಾಹ್ಮಣ ವರ್ಗದವರು ವಿದ್ಯೆಯಲ್ಲಿ ಮುಂದೆ ಬಂದರು. ಇಂಗ್ಲಂಡ ಸರಕಾರದವರಿಗಾದರೋ ಇಲ್ಲಿಯ ರಾಜ್ಯ ಕಾರ್ಯಗಳನ್ನು ನಡೆಯಿಸಲು ಇಂತಹ ಸುಶಿಕ್ಷಿತರೇ ಬೇಕಾಗಿದ್ದರು. ಆದುದರಿಂದ ಆ ಸಂಬಂಧವಾದ ಸುಖಸೌಲಭ್ಯಗಳು ಅವರಿಗೆ ದೊರೆತವು. ಬ್ರಾಹ್ಮಣರು ನಮ್ಮ ವಿದ್ಯಾಭ್ಯಾಸಕ್ಕೆ ಉದ್ದೇಶಪೂರ್ವಕವಾಗಿ ಪ್ರತಿಬಂಧವನ್ನು ಮಾಡಿದ್ದರಿಂದ ನಮ್ಮ ಸಮಾಜವು ಈ ಪ್ರಕಾರ ವಿದ್ಯೆಯಲ್ಲಿ ಹಿಂದುಳಿಯಿತೆಂದು ಕೆಲವರು ಹೇಳುತ್ತಾರೆ. ಇದು ಯುಕ್ತವಲ್ಲ. ಉತ್ತರ ಕಾನಡಾ ಜಿಲ್ಲೆಯ ಹವ್ಯಕ ಬ್ರಾಹ್ಮಣ ವರ್ಗವು ನಮ್ಮಂತೆಯೇ ವಿದ್ಯೆಯಲ್ಲಿ ಹಿಂದುಳಿದಿದೆ. ಏಕೆಂದರೆ, ಒಕ್ಕಲತನವನ್ನು ಮಾಡುವವರೇ ಅವರಲ್ಲಿ ಹೆಚ್ಚು ನಮ್ಮ ಸಮಾಜದಲ್ಲಿಯು ಕೂಡಾ

೧೦೦ಕ್ಕೆ ೯೯ ಜನಗಳು ಒಕ್ಕಲತನ, ವ್ಯಾಪಾರ ಮತ್ತು ಕೈಗಾರಿಕೆಗಳಿಂದಲೇ ಜೀವಿಸತಕ್ಕವರಾಗಿದುದರಿಂದ ಇವರಿಗೆ ವಿದ್ಯೆಯ ಅವಶ್ಯಕತೆಯೇ ತೋರಲಿಲ್ಲ. ಇಷ್ಟೇ ಅಲ್ಲ ; ಈ ವೃತ್ತಿಗಳ ಜನರು ವಿಶೇಷವಾಗಿ ಸಣ್ಣ ಗ್ರಾಮಗಳಲ್ಲಿಯೇ ಇರುವುದರಿಂದಲೂ, ಪಟ್ಟಣಗಳಂತೆ ಆ ಸ್ಥಳಗಳಲ್ಲಿ ಸರಕಾರದವರು ವಿದ್ಯಾಭ್ಯಾಸಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಡದಿದ್ದುದರಿಂದಲು, ಇಂಗ್ಲೀಷ್ ಸರಕಾರದವರಿಂದಾದ ವಿದ್ಯಾಭ್ಯಾಸ ಸೌಲಭ್ಯವನ್ನು ನಮ್ಮ ಸಮಾಜದವರು ಹೊಂದಲವಕಾಶವಾಗಲಿಲ್ಲ.

ಶ್ರಮವಿಭಾಗದ ತತ್ವವನ್ನನುಸರಿಸಿ ಏರ್ಪಡಿಸಲ್ಪಟ್ಟ ಈ ನಮ್ಮ ಸಮಾಜಕ್ಕೆ ಪಾಶ್ಚಾತ್ಯ ಸುಧಾರಣೆಯಿಂದ ಆರಂಭದಲ್ಲಿ ಈ ಸ್ಥಿತಿಯುಂಟಾದುದು ಸ್ವಾಭಾವಿಕವಾದುದೇ ಸರಿ. ನಾವು ಪರಪ್ರಾಂತ್ಯಗಳಿಗೆ ಹೋಗಿ ವ್ಯಾಪಾರವನ್ನು ಮಾಡದಿದ್ದುದು ಮತ್ತು ನಾವು ವಿದ್ಯೆಯನ್ನು ಕಲಿಯದಿದ್ದುದು ನಮ್ಮ ದೋಷವೇ ವಿನಾ ಇಂಗ್ಲೀಷ್ ಸರಕಾರದವರು ಸುಧಾರಣೆಯನ್ನು ಮಾಡಿದ್ದಾಗಲಿ ಅಥವಾ ಅವುಗಳ ಪ್ರಯೋಜನವನ್ನು ಅನ್ಯ ಸಮಾಜಗಳು ಹೊಂದಿದ್ದಾಗಲಿ, ತಪ್ಪಲ್ಲ. ಅಂತು, ನಮ್ಮ ಸಮಾಜವೇನೊ ೧೬ನೆಯ ಶತಮಾನದಿಂದ ಪ್ರತಿಯೊಂದು ವಿಷಯದಲ್ಲಿಯೂ ದಿನೇ ದಿನೇ ಕ್ಷೀಣಸ್ಥಿತಿಯನ್ನೆ ಹೊಂದುತ್ತಾ ಬಂದಿತು.

❖❖

೨ನೆಯ ಪ್ರಕರಣ

ವೀರಶೈವ ಸಮಾಜದಲ್ಲುಂಟಾದ ಜಾಗ್ರತೆ

ಮಹಮ್ಮದೀಯರು ಈ ನಮ್ಮ ದಕ್ಷಿಣ ದೇಶದಲ್ಲಿ ಪ್ರಬಲರಾದಂದಿನಿಂದ ಈ ದೇಶವು ಕ್ರಿ. ಶ. ೧೮೫೮ರಲ್ಲಿ ಇಂಗ್ಲೀಷ್ ಸರಕಾರದ ಅಧೀನವಾಗುವವರೆವಿಗೂ ನಮ್ಮ ಸಮಾಜವು ದಿನೇ ದಿನೇ ಅವನತ ಸ್ಥಿತಿಯನ್ನೇ ಹೊಂದುತ್ತಾಬಂದಿತು. ಅನಂತರ ಪಾಶ್ಚಾತ್ಯ ಶಿಕ್ಷಣವು ಈ ದೇಶದಲ್ಲಿ ಪ್ರಸಾರವಾಗಲು ನಮ್ಮ ಸಮಾಜದಲ್ಲಿಯೂ ಕೆಲವರು ಈ ಶಿಕ್ಷಣವನ್ನು ಹೊಂದಿದರು. ಅದರಲ್ಲಿ ಕೈ ರಾವಬಹದ್ದೂರ್ ವೀರಭದ್ರ ಮಡಿವಾಳೇಶ್ವರ ಪಂಡಿತ ಮತ್ತು ಕೈ. ರಾವ್‌ಸಾಹೇಬ್ ಡೆಪ್ಯುಟಿ ಚನ್ನಬಸಪ್ಪ ಅಣ್ಣ ಧಾರವಾಡ ಈ ಉಭಯ ಮಹಾಶಯರು ಗಾಢ ನಿದ್ರೆಯಲ್ಲಿದ್ದ ಈ ನಮ್ಮ ವೀರಶೈವ ಸಮಾಜವನ್ನು ಜಾಗ್ರತಗೊಳಿಸಿದರು.

ಪಾಶ್ಚಾತ್ಯ ಶಿಕ್ಷಣವು ನಮ್ಮ ಸಮಾಜದಲ್ಲಿ ಪ್ರಸಾರವಾಗದಿದ್ದರೆ ಸಮಾಜವು ಉನ್ನತ ಸ್ಥಿತಿಗೆ ಬರುವುದಿಲ್ಲವೆಂದು ಈ ಮುಂದಾಳುಗಳು ಯೋಚಿಸಿ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಶ್ರೀಮಹಾಲಿಂಗ. ಮುರುಘರಾಜೇಂದ್ರ ಮಹಾಸ್ವಾಮಿಗಳವರಲ್ಲಿ ತಮ್ಮ ಅಭಿಪ್ರಾಯವನ್ನು ಅರಿಕೆಮಾಡಿಕೊಂಡು ಆ ಪೂಜ್ಯಪಾದರ ಆಶೀರ್ವಾದದ ಬಲದಿಂದ ಕ್ರಿ. ಶ. ೧೮೮೯ರಲ್ಲಿ ಬೆಳಗಾಂವಿಯಲ್ಲಿ ೫೦ ವೀರಶೈವ ವಿದ್ಯಾರ್ಥಿಗಳಿಗೆ ಭೋಜನಕ್ಕೆ ಅನುಕೂಲಪಡಿಸಿದರು. ಈ ಕಾರ್ಯಕ್ಕೆ ಶ್ರಿ ಜಗದ್ಗುರು ಮಹಾಲಿಂಗಸ್ವಾಮಿಗಳವರು ತಿಂಗಳಿಗೆ ೩೦೦ ರೂ. ಗಳನ್ನು ಆಶೀರ್ವದಿಸುತ್ತಿದ್ದರು. ವೀರಶೈವರ ವಿದ್ಯಾಭಿವೃದ್ಧಿಯ ಆಧುನಿಕ ಪ್ರಯತ್ನಗಳಲ್ಲಿ ಇದೇ ಮೊದಲನೆಯದಾಗಿದೆ. ಈ ಮಹತ್ಕಾರ್ಯವು ನಮ್ಮ ಸಮಾಜದ ದುರ್ದೈವದಿಂದ ಬಹುಕಾಲ ಜರುಗಲಿಲ್ಲ. ಮುಂದೆ ಸ್ವಲ್ಪಕಾಲದಲ್ಲಿಯೇ ಶ್ರೀ ಜಗದ್ಗುರು ಮಹಾಲಿಂಗಸ್ವಾಮಿಗಳವರು ಲಿಂಗೈಕ್ಯರಾದರು. ರಾವ್ ಬಹದ್ದೂರ್ ಪಂಡಿತರಾದರೂ ಆ ಕಾಲದಲ್ಲಿಯೇ ಎಂದರೆ ತಮ್ಮ ೪೯ ನೆಯ ವರ್ಷದಲ್ಲಿಯೇ ಶಿವೈಕ್ಯರಾದರು. ಈ ವಿದ್ಯಾಸಂಸ್ಥೆಯ ಮೂಲ ಪುರುಷರುಗಳೇ ಈ ಪ್ರಕಾರ ಅದೃಶ್ಯರಾದುದರಿಂದ ರಾವ್‌ಸಾಹೇಬ ಡೆಪ್ಯುಟಿ ಚನ್ನಬಸಪ್ಪನವರಿಗೆ ಸಹಾಯಕರೇ ಇಲ್ಲದಂತಾಯಿತು. ಆದರೂ ಅವರು ಧೈರ್ಯಗುಂದದೆ ವಿದ್ಯಭಿವೃದ್ಧಿಯ ಕಾರ್ಯವನ್ನು ಮಾಡುತ್ತಲೇ ಬಂದರು. ಅನಂತರ ಅವರು ಕೂಡಾ ನಮ್ಮ ದುರಾದೃಷ್ಟದಿಂದ ಕ್ರಿ. ಶ. ೧೮೮೧ರಲ್ಲಿ ಕೈಲಾಸವಾಸಿಗಳಾಗಲು ವೀರಶೈವ ಸಮಾಜದಲ್ಲಿ ವಿದ್ಯಾಭಿಮಾನಿಗಳೇ ಇಲ್ಲದಂತಾಯಿತು.

ನಮ್ಮ ಸಮಾಜದ ಸುದೈವದಿಂದ ಮುಂದೆ ಒಂದೆರಡು ವರ್ಷಗಳಲ್ಲಿಯೇ ಕೈ. ರಾವ ಬಹದೂರ್ ಗುರುಸಿದ್ದಪ್ಪ ಅಣ್ಣಿ ಗಿಲಗಂಚಿ ಮತ್ತು ರಾವ್ ಬಹದ್ದೂರ್ ರುದ್ರಗೌಡರು ಅರಟಾಳ್ ಐ. ಎಸ್. ಓ. ಈ ಉಭಯ ಮಹನೀಯರು ನಮ್ಮ ಮೊದಲಿನ ಮುಂದಾಳುಗಳು ತೋರಿಸಿದ ಮಾರ್ಗವನ್ನೇ ಅನುಸರಿಸಿ ವಿದ್ಯಾಭಿವೃದ್ಧಿಯ ಪವಿತ್ರಕಾರ್ಯವನ್ನು ಮಾಡಲುಪಕ್ರಮಿಸಿದರು. ಈ ಉಭಯ ಮುಂದಾಳುಗಳು ಕ್ರಿ. ಶ. ೧೮೮೩ರಲ್ಲಿ ಧಾರವಾಡ ಲಿಂಗಾಯತ ಎಜ್ಯುಕೇಶನ್ ಫಂಡ್ ಎಂಬ ವಿದ್ಯಾಭಿವೃದ್ಧಿಯ ಸಂಸ್ಥೆಯನ್ನೇರ್ಪಡಿಸಿದರು. ವಿದ್ಯಾಪ್ರಸಾರದ ಈ ಪುಣ್ಯದಾಯಕವಾದ ಕಾರ್ಯಕ್ಕೆ ಒಂಟಮುರಿ ಸರ್ ದೇಸಾಯಿ ಶ್ರೀಮಂತ ಲಖಮನಗೌಡರು ಸಿ. ಐ. ಇ. ಈ ಮಹಾಶಯರು ೫೦ ಸಹಸ್ರ ರೂ. ಗಳನ್ನು ಕೈ. ಶ್ರೀಮಂತ ಲಿಂಗಪ್ಪ ಜಾಯಪ್ಪ ಸರದೇಸಾಯಿ ಶಿರಸಂಗಿ ಈ ದಾನಶೂರರು ವರ್ಷಕ್ಕೆ ೧೨೦೦ ರೂ. ಗಳ ಆದಾಯದ ಅಮ್ಮಣಗಿ ಎಂಬ ಗ್ರಾಮವನ್ನು ಮತ್ತು ರಾವ್‌ಸಾಹೇಬ್ ಶ್ರೀಮಂತ ಅಪ್ಪಯ್ಯಪ್ಪಣ್ಣ ಶಿಂತ್ರೆ ಈ ಮಹನೀಯರು ೧೦ ಸಹಸ್ರ ರೂ. ಗಳನ್ನು ಕೊಟ್ಟರು. ಈ ಪ್ರಕಾರ ಅನೇಕ ಮಹನೀಯರು ವೀರಶೈವರ ವಿದ್ಯಾಭಿವೃದ್ಧಿಗೆ ಸಹಾಯಮಾಡಿದ್ದರಿಂದ ಆ ಫಂಡು ಈಗ ಎರಡೂ ಲಕ್ಷ ಮೂವತ್ತು ನಾಲ್ಕು ಸಹಸ್ರ ರೂ. ಗಳುಳ್ಳದ್ದಾಗಿದೆ. ಈ ಫಂಡಿಗೆ ವರ್ಷಕ್ಕೆ ಸಾಧಾರಣ ೭೦೦೦ ರೂ. ಬಡ್ಡಿಯೂ ಬರುತ್ತಿರುವುದರಿಂದ ಆ ಹಣವನ್ನು ಈಗ ೧೧೩ ವಿದ್ಯಾರ್ಥಿಗಳಿಗೆ ವೇತನರೂಪದಲ್ಲಿ ಕೊಡುತ್ತಿದ್ದಾರೆ. ಈ ಫಂಡಿನ ಸಹಾಯ ಹೊಂದಿ ಈ ವರೆಗೂ ಸಾಧಾರಣ ೧೪೦ ಜನಗಳು ಪದವಿಧರರಾಗಿದಧಾರೆ. ಈ ಫಂಡಿನ ಅಭಿವೃದ್ಧಿಗೂ, ವ್ಯವಸ್ಥೆಗೂ, ರಿ. ಡಿ. ಡಿ. ಕಲೆಕ್ಟರ್ ಶ್ರೀಯುತ ಮೆಣಸಿನಕಾಯಿ ಶಾಂತವೀರಪ್ಪನವರು ಬಹು ಸಹಾಯಕರಾಗಿದ್ದಾರೆ. ವಿದ್ಯಾಭಿವೃದ್ಧಿಯ ಈ ಮಹತ್ಕಾರ್ಯವನ್ನು ಮಾಡಿರುವ ಮೂಲಪುರುಷರು ಮತ್ತು ಇದನ್ನು ಪ್ರೋತ್ಸಾಹಿಸಿದವರು ನಮ್ಮ ಸಮಾಜದಲ್ಲಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸುವರು.

ಇಂಗ್ಲೀಷ್ ವಿದ್ಯಾಭಿವೃದ್ಧಿಯ ಕಾರ್ಯವು ಈ ಪ್ರಕಾರ ಸಮರ್ಥರಾದ ಮುಂದಾಳುಗಳ ಪ್ರಯತ್ನದಿಂದ ಬಹು ವೇಗವಾಗಿ ನಡೆಯುತ್ತಿರುವಾಗಲೇ ಸಂಸ್ಕೃತ ವಿದ್ಯಾಭ್ಯಾಸದ ಕಡೆಗೂ ನಮ್ಮ ಸಮಾಜದ ಪ್ರಮುಖರು ಗಮನಿಸಿದರು. ಗದಗಿನ ಶ್ರೀಮನ್ನಿರಂಜನ ಜಗದ್ಗುರು ಶ್ರೀತೋಂಟದಾರ್ಯ ಮಹಾಸ್ವಾಮಿಗಳವರು ಒಂದು ಸಂಸ್ಕೃತ ಪಾಠಶಾಲೆಯನ್ನು ಏರ್ಪಡಿಸಿದರು. ನಮ್ಮ ಸಮಾಜದ ಪ್ರಮುಖ ಮುಂದಾಳುಗಳಾದ ಕೈ. ರಾವ್ ಬಹದ್ದೂರ್ ವಾರದ ಮಲ್ಲಪ್ಪನವರು ತಮ್ಮ ಉದಾರಾಶ್ರಯದಿಂದ ಸೊಲ್ಲಾಪುರದಲ್ಲಿ ಒಂದು ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಿದರು. ಈ ಮಹಾಶಯರು ಸಂಸ್ಕೃತ ವಿದ್ಯಾಭ್ಯಾಸಕ್ಕೆ ಸುಧಾರಣ ಒಂದು ಲಕ್ಷ ರೂ. ಗಳನ್ನು ವೆಚ್ಚ ಮಾಡಿದರು. ಈ ಪಾಠಶಾಲೆಯಲ್ಲಿ ೭೦ ರಿಂದ ೮೦ ವಿದ್ಯಾರ್ಥಿಗಳು ಯಾವಾಗಲೂ ಓದುತ್ತಿದ್ದರು. ಈ ಪ್ರಾಂತ್ಯದಿಂದ ಕಾಶಿಗೆ ಕಲಿಯಲಿಕ್ಕೆ ಹೋಗುತ್ತಿದ್ದ ಸಂಸ್ಕೃತ ವಿದ್ಯಾಥಿಗಳಿಗೆ ಅಲ್ಲಿನ ಶ್ರೀ ವಿಶ್ವಾರಾಧ್ಯ ಸಿಂಹಾಸನಾಧಿಪತಿಗಳಾದ ಜಗದ್ಗುರು ಶ್ರೀ ರಾಜೇಶ್ವರ ಶಿವಾಚಾರ್ಯರು ಅನಂತರ ಈಗಿನ ಜಗದ್ಗುರು ಶ್ರೀ ಶಿವಲಿಂಗ ಶಿವಾಚಾರ್ಯರವರು ಉದಾರಾಶ್ರಯವನ್ನು ದಯಪಾಲಿಸುತ್ತಾ ಬಂದುದರಿಂದ ನಮ್ಮ ಸಮಾಜದಲ್ಲಿ ಸಂಸ್ಕೃತವಿದ್ಯಾ ಪ್ರಸಾರವಾಗಲು ಬಹು ಅನುಕೂಲವಾಯಿತು. ಈ ಮಧ್ಯದಲ್ಲಿ ಹಾವೇರಿ, ಹಾನಗಲ್ಲು, ಶಲವಡಿ, ಸಾಂಸಿ, ರಾಣೆಬೆನ್ನೂರು, ಅಬ್ಬಿಗೇರಿ, ದಾವಣಗೇರೆ ಮೊದಲಾದ

ಅನೇಕ ಸ್ಥಳಗಳಲ್ಲಿ ಸಂಸ್ಕೃತ ಪಾಠಶಾಲೆಗಳು ಏರ್ಪಟ್ಟವು. ಆದರೆ ಇವು ಅಷ್ಟು ಫಲಕಾರಿಯಾಗಲಿಲ್ಲ. ಏಕೆಂದರೆ ಸ್ವಲ್ಪ ಕಾಲದಲ್ಲಿಯೇ ಅನೇಕ ಪಾಠಶಾಲೆಗಳು ನಿಂತು ಹೋದವು. ಸಕಲರ ಶಕ್ತಿಯೂ ಒಂದೇ ಕಡೆಗೆ ಸೇರಿ ಒಂದು ದೊಡ್ಡದಾದ ಸಂಸ್ಕೃತ ವಿದ್ಯಾಲಯವು ಏರ್ಪಟ್ಟಿದ್ದರೆ ಈ ಪ್ರಕಾರ ಶ್ರಮವು ವ್ಯರ್ಥವಾಗುತ್ತಿರಲಿಲ್ಲ.

ಈ ಪ್ರಕಾರ.ಲೌಕಿಕ ಮತ್ತು ವೈದಿಕ ವಿದ್ಯೆಗಳ ಅಭಿವೃದ್ಧಿಯ ಕಾರ್ಯಗಳು ನಡೆಯುತ್ತಿರುವಾಗಲೇ ಕೈ. ವೈ. ವೀರಸಂಗಪ್ಪನವರು ತಮ್ಮ ಅಸಾಧಾರಣ ಪಾಂಡಿತ್ಯದಿಂದಲೂ ಸ್ವಾರ್ಥ-ತ್ಯಾಗದಿಂದಲೂ **"ಮೈಸೂರು ಸ್ಟಾರ್"** ಪತ್ರಿಕಾ ಮೂಲಕವಾಗಿ ಧರ್ಮಜಾಗ್ರತೆಯ ಕಾರ್ಯವನ್ನು ಪ್ರಾರಂಭಿಸಿದರು. ಕೈ ಮರಿಮಲ್ಲಪ್ಪನವರು ಮೈಸೂರಿನಲ್ಲಿ ಇಂಗ್ಲೀಷ ಪಾಠಶಾಲೆಯನ್ನು ಸ್ಥಾಪಿಸಿ ವಿದ್ಯಾಭಿವೃದ್ಧಿಗೆ ತುಂಬಾ ಸಹಾಯ ಮಾಡಿದರು. ಕೈ ರಾ. ಬಾ. ವಾರದ ಅಪ್ಪಾಸಾಹೇಬರವರು ವೇ ಪಂಡಿತ ಮಲ್ಲಿಕಾರ್ಜುನ ಶಾಸ್ತ್ರಗಳವರೇ ಮೊದಲಾದ ವಿದ್ವಾಂಸರಿಂದ ವೀರಶೈವ ಮತದ ಸಾಧಾರಣ ೬೦ ಗ್ರಂಥಗಳನ್ನು ಮರಾಠಿ ಭಾಷೆಯಲ್ಲಿ ಭಾಷಾಂತರಮಾಡಿಸಿದ್ದಲ್ಲದೆ ಅವುಗಳನ್ನು ಅಚ್ಚುಮಾಡಿಸಿ ಮಹಾರಾಷ್ಟ್ರ ದೇಶದಲ್ಲಿ ವೀರಶೈವಮತತತ್ವಗಳನ್ನು ಪ್ರಸಾರಗೊಳಿಸಿದರು. ಈ ಮಹನೀಯರು ಈ ಕಾರ್ಯಕ್ಕೆ ಸಾಧಾರಣ ೫೦ ಸಹಸ್ರ ರೂ. ಗಳನ್ನು ವೆಚ್ಚ ಮಾಡಿದರು. ಈ ಪ್ರಕಾರ ಎಲ್ಲಾ ಭಾಗಗಳಲ್ಲಿಯೂ, ನಾನಾ ರೀತಿಗಳಿಂದ ಸಮಾಜ ಜಾಗ್ರತೆಯ ಕಾರ್ಯಗಳು ನಡೆಯುತ್ತಾ ಬಂದವು.

ಸಮಾಜ ಹಿತತತ್ಪರವಾದ ಶ್ರೀ ಮನ್ನಿರಂಜನ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರ ಪ್ರಯತ್ನದಿಂದ ಕ್ರಿ. ಶ. ೧೯೦೪ನೆಯ ಮೇ ತಿಂಗಳ ೧೩ನೆಯ ತಾರೀಖಿನ ಶುಕ್ರವಾರ ಮಧ್ಯಾಹ್ನ ೧ ಗಂಟೆಗೆ ಧಾರವಾಡದಲ್ಲಿ ಮೊದಲನೆಯ ಶ್ರೀ ಮದ್ವೀರಶೈವ ಮಹಾಸಭೆಯು ಕೂಡಿತು. ಇದು ನಮ್ಮ ಸಮಾಜದಲ್ಲುಂಟಾದ ಜಾಗ್ರತೆಯನ್ನು ವ್ಯಕ್ತಗೊಳಿಸುವ ಒಂದು ಮುಖ್ಯ ಸಂಸ್ಥೆಯಾಗಿದೆ. ಈ ಮಹಾಸಭೆಯು ಅನಂತರ ಬೆಂಗಳೂರು, ಸೊಲ್ಲಾಪುರ, ಬಾಗಲಕೋಟೆ, ಬಳ್ಳಾರಿ, ಬೆಳಗಾಂವ ಮತ್ತು ನಿಪ್ಪಾಣಿ ಈ ಸ್ಥಳಗಳಲ್ಲಿ ಸೇರಿದ್ದರಿಂದ ನಮ್ಮ ಸಮಾಜದ ಎಲ್ಲಾ ಭಾಗಗಳ ವೀರಶೈವರೂ ಜಾಗ್ರತರಾದರು. ಅಲ್ಲಲ್ಲಿ ಸಮಾಜ ಕಾರ್ಯಗಳು ಪ್ರಾರಂಭವಾದವು. ಸಮಾಜದಲ್ಲಿ ನವಚೈತನ್ಯವುಂಟಾಯಿತು. ಅನೇಕ ಉದಾರಿಗಳಾದ ಶ್ರೀಮಂತರು ವಿದ್ಯಾಭಿವೃದ್ಧಿಯೇ ಮೊದಲಾದ ಸಮಾಜೋನ್ನತಿಯ ಕಾರ್ಯಗಳಿಗೆ ದ್ರವ್ಯ ಸಹಾಯ ಮಾಡಲುಪಕ್ರಮಿಸಿದರು. ದಿವಾನ್ ಬಹದ್ದೂರ ಕೆ. ಪಿ. ಪುಟ್ಟಣ್ಣಶೆಟ್ಟರು. ಸಿ. ಐ. ಇ. ಯವರೇ ಮೊದಲಾದ ಪ್ರಮುಖರ ಸಹಾಯದಿಂದ ಬೆಂಗಳೂರಲ್ಲಿ ವೀರಶೈವ ವಿದ್ಯಾಭಿವೃದ್ಧಿಯ ಫಂಡು ಸ್ಥಾಪಿಸಲ್ಪಟ್ಟಿತು. ಈಗ ಅದು ಸಾಧಾರಣ ೫೦ ಸಹಸ್ರ ರೂ. ಗಳುಳ್ಳದ್ದಾಗಿದೆ. ದಾವಣಗೆರೆಯಲ್ಲಿ ಅಲ್ಲಿನ ವೀರಶೈವ ಮಹಾಜನಗಳ ಪ್ರಯತ್ನದಿಂದ ಕ್ರಿ. ಶ. ೧೯೦೭ರಲ್ಲಿ ವೀರಶೈವ ವಿದ್ಯಾವರ್ಧಕ ಫಂಡು ಸ್ಥಾಪಿಸಲ್ಪಟ್ಟು ಈಗ ಅದು ಸಾಧಾರಣ ೪೦ ಸಹಸ್ರ ರೂ. ಗಳುಳ್ಳದ್ದಾಗಿದೆ. ಉಜ್ಜಯನಿ ಶ್ರೀ ಮರುಳಾರಾಧ್ಯ ಸಿಂಹಾಸನದ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯರವರ ಪ್ರಯತ್ನದಿಂದ ಬಳ್ಳಾರಿಯಲ್ಲಿಯೂ ಒಂದು ವಿದ್ಯಾಭಿವೃದ್ಧಿಯ ಫಂಡು ಏರ್ಪಟ್ಟಿದೆ. ಇವುಗಳಂತೆಯೇ ಶಿವಮೊಗ್ಗ ಬಾಗಲಕೋಟೆ, ಮೊದಲಾದ ಅನೇಕ ಸ್ಥಳಗಳಲ್ಲಿ ವಿದ್ಯಾಭಿವೃದ್ಧಿಯ ಫಂಡುಗಳು ಸ್ಥಾಪಿಸಲ್ಪಟ್ಟಿವೆ. ಈ ಕಾರ್ಯಗಳಿಗೆಲ್ಲಾ ಮಹಾಸಭೆಯಿಂದಾದ ಜಾಗ್ರತೆಯೇ ಮುಖ್ಯ ಕಾರಣವಾಯಿತು.

ಇಂತಹ ಬಹು ಪ್ರಯೋಜನಕಾರಿಯಾದ ಮಹಾಸಭೆಯನ್ನು ಜೀರ್ಣೋದ್ಧಾರಮಾಡುವುದು ಅವಶ್ಯಕವೆಂದು, ಭಕ್ತೋದ್ಧಾರನಿರತರಾದ ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಕ್ರಿ. ಶ. ೧೯೧೭ರಲ್ಲಿ ಈ ಸಭೆಯನ್ನು ದಾವಣಗೆರೆಲ್ಲಿ ಕೂಡಿಸಲು ಅಲ್ಲಿನ ಮಹಾಜನಗಳಿಗೆ ಅಪ್ಪಣೆ ಮಾಡಿ ಸ್ವತಃ ಆ ಸಭೆಗೆ ಆಗಮಿಸಿ, ಈ ಸಭೆಯು ಪ್ರತಿವರ್ಷದಲ್ಲಿಯೂ ನಡೆಯುವುದಕ್ಕೋಸ್ಕರ ಒಂದು ಫಂಡು ಏರ್ಪಡಿಸಲು ಅದಕ್ಕೆ ೫ ಸಹಸ್ರ ರೂ. ಗಳನ್ನು ಆಶೀರ್ವದಿಸಿದರು. ಮುಂದೆ ಬೀರೂರಲ್ಲಿ ಸೇರಿದ ೯ನೆಯ ಮಹಾಸಭೆಯಲ್ಲಿ ಗುರುವರ್ಗದವರ ನಿಮಿತ್ಯಕ್ಕಾಗಿ ಕಲಹವುಂಟಾಗದೆ ಇದ್ದಿದ್ದರೆ. ಈ ಮಹಾಸಭೆಯು ಪ್ರತಿವರ್ಷದಲ್ಲಿಯೂ ನಡೆಯುತ್ತಾ ಬರುತ್ತಲಿದ್ದಿತು.

ನಮ್ಮ ಸಮಾಜದ ವಿದ್ಯಾಭಿವೃದ್ಧಿಗೆ ಧರ್ಮಪ್ರವರ್ತಕ ಕೈ. ಗುಬ್ಬಿ. ತೋಟದಪ್ಪನವರು ಒಂದು ಲಕ್ಷ ರೂ. ಗಳನ್ನು ಸಹಾಯ ಮಾಡಿದ್ದರಿಂದ ಈಗ ಬೆಂಗಳೂರಿನಲ್ಲಿ ೪೦ ರಿಂದ ೫೦ ವಿದ್ಯಾರ್ಥಿಗಳಿಗೆ ಭೋಜನಕ್ಕೂ ವಾಸವಾಗಿರುವುದಕ್ಕೂ ಅನುಕೂಲವಾಗಿದೆ. ಈ ಮಹಾಶಯರಂತೆಯೇ ಬೆಂಗಳೂರು ಸರಾಫ್ ಸೂಲಿಬೆಲೆ ಕೈ ಶಾಮಣ್ಣನವರು ವಿಶೇಷವಾಗಿ ಧನಸಹಾಯ ಮಾಡಿದುದರಿಂದ ಬೆಂಗಳೂರು ವೀರಶೈವ ವಿದ್ಯಾಭಿವೃದ್ಧಿಯ ಫಂಡು ಈ ಪ್ರಕಾರ ಅಧಿಕವಾಗಿ ಎಷ್ಟೋ ಪ್ರಯೋಜನಕಾರಿಯಾಗಿದೆ. ಈ ಪ್ರಕಾರ ನಮ್ಮ ಸಮಾಜದ ಅನೇಕರ ಮಹನೀಯರು ವಿದ್ಯಾಭಿವೃದ್ಧಿಗೆ ಮಾಡಿದ ಸಹಾಯಗಳಲ್ಲೆಲ್ಲಾ ಶಿಖರಪ್ರಾಯವಾದ ಸಹಾಯವನ್ನು ಶ್ರೀಮಂತ ಸರ್ ದೇಸಾಯಿ ಲಿಂಗಪ್ಪ ಜಾಯಪ್ಪ ಶರಸಂಗಿಕರವರು ಮಾಡಿ ಅಕ್ಷಯವಾದ ಕೀರ್ತಿಯನ್ನು ಹೊಂದಿದ್ದಾರೆ. ಈ ದಾನಶೂರರಂತೆ ತಮ್ಮ ಸಂಸ್ಥಾನವನ್ನೇ ಸಮಾಜೋದ್ಧಾರಕ್ಕೆ ಸಮರ್ಪಿಸಿದ ಸಮರ್ಪಿಸಿದ ಸಂಗತಿಯು ಈ ಕಾಲದ ನಮ್ಮ ಸಮಾಜದ ಚರಿತ್ರೆಯಲ್ಲಿಯೇ ಏಕೆ? ನಮ್ಮ ದೇಶದ ಚರಿತ್ರೆಯಲ್ಲಿಯೂ ದೊರೆಯುವುದು ದುರ್ಲಭ. ಇಂತಹ ಮಹಾನುಭಾವರು ನಮ್ಮ ಸಮಾಜದಲ್ಲಿ ಅವತರಿಸಿದುದು ನಮ್ಮ ಸಮಾಜಕ್ಕೆ ಅತ್ಯಂತ ಭೂಷಣಪ್ರದವಾದುದಾಗಿದೆ. ಈ ಪುಣ್ಯಾತ್ಮರು ಅನುಸರಿಸಿದ ಮಾರ್ಗವನ್ನೇ ನಮ್ಮ ಸಮಾಜದ ಎಲ್ಲಾಧನಿಕರೂ ಅನುಸರಿಸಿದರೆ ಈ ಸಮಾಜದ ಅಜ್ಞಾನಾಂಧಕಾರವು ನಿವಾರಣೆಯಾಗಲು ಬಹುಕಾಲವೇಕೆ? ದಾನಶೂರ ಕೈ. ಶಿರಸಂಗಿಕರ್‌ರವರು ಸಮರ್ಪಿಸಿರುವ ಸೊತ್ತಿನ ವಾರ್ಷಿಕಾದಾಯವು ಸಾಧಾರಣ ೫೦ ಸಹಸ್ರ ರೂ. ಗಳಾಗಬಹುದು. ಕಳೆದ ಜೂನ್ ತಿಂಗಳಿಂದ ಈ ಮಹಾತ್ಮರ ದ್ರವ್ಯವು ವೇತನ ಮೂಲಕವಾಗಿ ವಿದ್ಯಾರ್ಥಿಗಳೀಗೆ ಕೊಡಲ್ಪಡುತ್ತಲಿದೆ.

ಈ ಪ್ರಕಾರ ಭಕ್ತವರ್ಗದ ಅನೇಕ ಮಹನೀಯರು ಸಮಾಜೋನ್ನತಿಗೆ ಪ್ರಯತ್ನಿಸಿದ್ದಂತೆಯೇ ಗುರುವರ್ಗದಲ್ಲಿಯೂ ಅನೇಕ ಗುರುವರೇಣ್ಯರು ಸಮಾಜೋದ್ಧಾರಕ್ಕೋಸ್ಕರ ಅವಿಶ್ರಾಂತ ಶ್ರಮವನ್ನು ವಹಿಸಲಾರಂಭಿಸಿದರು. ಚಿತ್ರದುರ್ಗದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರು ಶೂನ್ಯಪೀಠವನ್ನಂಕರಿಸಿದ ನಂತರ ಈಗ ೧೬-೧೭ ವರ್ಷಗಳಿಂದ ಕರ್ನಾಟಕ, ಮಹಾರಾಷ್ಟ್ರ ದೇಶದಲ್ಲಿ ಬಹುದೂರ ಸಂಚರಿಸಿ ವಿಶೇಷವಾದ ಧರ್ಮಜಾಗ್ರತೆಯನ್ನುಂಟು ಮಾಡಿದ್ದಲ್ಲದೆ, ಆಯಾಯ ಪ್ರಾಂತ್ಯಗಳ ಸದ್ಭಕ್ತರು ಕಾಣೀಕೆಯಾಗಿ ಸಮರ್ಪಿಸಿದ ಲಕ್ಷಾಂತರ ರೂ.ಗಳನ್ನು ಭಕ್ತರ ಶ್ರೇಯೋಭಿವೃದ್ಧಿಯ ಕಾರ್ಯಗಳಲ್ಲಿಯೇ ವಿನಿಯೋಗಿಸಿದ್ದಾರೆ. ಇಂಗ್ಲೀಷ್, ಸಂಸ್ಕೃತ, ವಿದ್ಯೆಗಳನ್ನು ಕಲಿಯುತ್ತಲಿರುವ ಅನೇಕ ವಿದ್ಯಾರ್ಥಿಗಳಿಗೆ

ಪ್ರತಿವರ್ಷ ಸಾವಿರಾರು ರೂಪಾಯಿಗಳನ್ನು ವೇತನ ಮೂಲಕ ದಯಪಾಲಿಸುತ್ತಿದ್ದಾರೆ. ಬೆಂಗಳೂರು, ತುಮಕೂರು, ತಿಪಟೂರು, ಚಿತ್ರದುರ್ಗ, ಮೊದಲಾದ ಸ್ಥಳಗಳಲ್ಲಿ ಅನೇಕ ಸಹಸ್ರ ರೂ. ಗಳನ್ನು ವಿನಿಯೋಗಿಸಿ ವೀರಶೈವ ವಿದ್ಯಾರ್ಥಿನಿಲಯಗಳನ್ನು ಏರ್ಪಡಿಸಿರುತ್ತಾರೆ.

ಶ್ರೀ ಮನ್ನಿರಂಜನ ಹಾನಗಲ್ಲ ಶ್ರೀ ಕುಮಾರಸ್ವಾಮಿಗಳವರು ಮಹಾಕೂಟಕ್ಷೇತ್ರದ ಆಗ್ನೇಯ ದಿಕ್ಕಿನಲ್ಲಿ ಮಲಾಪಹಾರಿನದಿಯ ದಂಡೆಯ ಮೇಲೆ ಶ್ರೀಮದ್ವೀರಶೈವ ಶಿವಯೋಗ ಮಂದಿರವನ್ನು ತಾರೀಖು ೨-೨-೧೯೦೯ನೆಯ ದಿವಸ ಸ್ಥಾಪಿಸಿ, ನಮ್ಮ ಸಮಾಜದಲ್ಲಿ ಎಷ್ಟೋ ಧರ್ಮಜಾಗ್ರತೆಯನ್ನುಂಟುಮಾಡಿರುವರು. ಈ ಶಿವಯೋಗ ಮಂದಿರದಲ್ಲಿ ಸಾಧಾರಣ ೩೦ ರಿಂದ ೪೦ ಶಿವಯೋಗ ಸಾಧಕರಿರುತ್ತಾರೆ. ಪ್ರತಿವರ್ಷ ಸಾಧಾರಣ ೧೦ ಸಹಸ್ರ ರೂ. ಗಳು ಈ ಮಂದಿರದಲ್ಲಿರುವ ಸಾಧಕರಿಗೂ ಅವರ ವಿದ್ಯಾಭ್ಯಾಸಾದಿ ಸತ್ಕಾರ್ಯಗಳಿಗೂ ವಿನಿಯೋಗಿಸಲ್ಪಟುತ್ತಲಿವೆ. ಈ ಮಹತ್ಕಾರ್ಯವು ನಿರಾತಂಕವಾಗಿ ನಡೆಯುವದಕ್ಕೋಸ್ಕರ ಲಕ್ಷಾಂತರ ರೂ. ಗಳ ಸ್ಥಿರಾಸ್ತಿಗಳೂ ಮಾಡಲ್ಪಟ್ಟಿವೆ. ಈ ಶಿವಯೋಗ ಮಂದಿರದಿಂದ ಶ್ರೀ ಮಹಂತದೇವರೇ ಮೊದಲಾದ ಶಿವಯೋಗಿಗಳು, ಶ್ರೀಯುತ ವೀರಬಸಪ್ಪಶ್ರೇಷ್ಟಿಯವರೇ ಮೊದಲಾದ ಉಪನ್ಯಾಸಕರು ವೆ ಬಸವಲಿಂಗಶಾಸ್ತ್ರಿಗಳವರೇ ಮೊದಲಾದ ಶಿವಕೀರ್ತನಕಾರರು. ಅನೇಕಕಡೆ ಸಂಚರಿಸಿ, ಸಮಾಜ ಜಾಗ್ರತೆಯ ಕಾರ್ಯಗಳನ್ನು ಮಾಡುತ್ತಲಿದ್ಧಾರೆ.

ಶ್ರೀಮನ್ನಿರಂಜನ ದಾವಣಗೆರೆ ಶ್ರೀ ಮೃತ್ಯುಂಜಯ ಸ್ವಾಮಿಗಳವರು ಹಂಸಭಾವಿ, ಹಿರೇಕೆರೂರು, ವನಸಿಗ್ಗಲಿ ಮತ್ತು ಮುಳುಗುಂದ ಈ ಗ್ರಾಮಗಳಲ್ಲಿ ಇಂಗ್ಲೀಷ್ ಪಾಠಶಾಲೆಯನ್ನು ಏರ್ಪಡಿಸಿದ್ದಲ್ಲದೆ ಧಾರವಾಡದಲ್ಲಿ ಇಂಗ್ಲೀಷ್ ವಿದ್ಯಭ್ಯಾಸ ಮಾಡುವ ವೀರಶೈವ ಬಡವಿದ್ಯಾರ್ಥಿಗಳ ಭೋಜನಕ್ಕೆ ಅನುಕೂಲ ಪಡಿಸಿರುತ್ತಾರೆ. ಆ ಸಂಸ್ಥೆಯಲ್ಲಿ ಈಗ ೩೦ ರಿಂದ ೪೦ ವಿದ್ಯಾರ್ಥಿಗಳು ಭೋಜನ ಮಾಡುತ್ತಿದ್ಧಾರೆ. ಇದಕ್ಕೆ ಪ್ರತಿ ವರ್ಷ ಸಾಧಾರಣ ೩೫೦೦ ರೂ. ಗಳು ವಿನಿಯೋಗಿಸಲ್ಪಡುತ್ತಲಿವೆ.

ಕೈ. ವೈ. ವೀರಸಂಗಪ್ಪನವರ ನಂತರ ಮೈಸೂರು ಸ್ಟಾರ್ ಪತ್ರಿಕೆಯನ್ನು ಅವರ ಮಕ್ಕಳಾದ ಶ್ರೀಯುತ ವೈ. ವಿರೂಪಾಕ್ಷಯ್ಯನವರು ಅವಿಚ್ಛಿನ್ನವಾಗಿ ನಡೆಸಿಕೊಳ್ಳುತ್ತಾ ಬಂದು ನಮ್ಮ ಸಮಾಜಕ್ಕೆ ಬಹು ಪ್ರಯೋಜನವನ್ನುಂಟುಮಾಡಿದ್ಧಾರೆ ವೇ ವಿದ್ವಾನ್ ಎನ್. ಆರ. ಕರಿಬಸವಶಾಸ್ತ್ರಗಳವರು ವೀರಶೈವ ಮತದ ಅನೇಕ ಗ್ರಂಥಗಳನ್ನು ಪ್ರಕಟಿಸಿ ಧರ್ಮಜಾಗ್ರತೆಯನ್ನುಂಟುಮಾಡಿದ್ದಾರೆ. ಶ್ರೀಯುತ ವೇ ಗದಿಗೆಯ್ಯಸ್ವಾಮಿ ಹೊನ್ನಾಪುರಮಠ ಇವರು ಚಂದ್ರೋದಯ ಪತ್ರಿಕಾಮೂಲಕವಾಗಿಯು ವೇ ಹೆಚ್. ಶಿವಲಿಂಗಶಾಸ್ತ್ರಿಗಳವರು ಧರ್ಮತರಂಗಿಣೀ ಪತ್ರಿಕೆಯ ಮೂಲಕವಾಗಿಯೂ, ಸಮಾಜದಲ್ಲಿ ಎಷ್ಟೋ ಜಾಗ್ರತೆಯನ್ನುಂಟುಮಾಡಿದ್ದಾರೆ.

ನಮ್ಮ ಸಮಾಜದ ಅನೇಕ ಅಧಿಕಾರಿಗಳು, ಶ್ರೀಮಂತರು, ಗುರುವರ್ಯರು, ಸಮಾಜೋದ್ಧಾರಕ, ಕಾರ್ಯಗಳನ್ನು ಮಾಡುತ್ತಾ ಬಂದತೆಯೇ ನಮ್ಮ ಸಮಾಜದ ಅನೇಕ ತರುಣ ಪದವೀಧರರೂ ಸಮಾಜದಲ್ಲಿ ವಿದ್ಯಾಪ್ರಸಾರ ಮಾಡುತ್ತಿದ್ಧಾರೆ. ಶ್ರೀಯುತ ಎಂ. ಆರ್. ಸಾಖರೆ, ಎಂ. ಎ., ಶ್ರೀಯುತ ಎಸ್. ಎಸ್. ಬಸವನಾಳ ಎಂ. ಎ., ಮೊದಲಾದ ಸ್ವಾರ್ಥತ್ಯಾಗಿಗಳಾದ ಪದವಿಧರರು ಸೇರಿ "ಬೆಳಗಾವಿಯಲ್ಲಿ ಕರ್ನಾಟಕ ಲಿಂಗಾಯತ ಎಜ್ಯುಕೇಷನ್ ಸೊಸೈಟಿ" ಎಂಬ ಹೆಸರಿನ

ವಿದ್ಯಾಭಿವೃದ್ಧಿಯ ಸಂಘವನ್ನೇರ್ಪಡಿಸಿ ರಾವ್ ಬಹದ್ದೂರ ರುದ್ರಗೌಡರು ಅರಟಾಳ, ಐ. ಎಸ್. ಓ. ರವರ ಪ್ರೋತ್ಸಾಹದಿಂದ ಬೆಳಗಾವಿಯಲ್ಲಿ "ಗಿಲಗಂಚಿ ಅರಟಾಳ ಹೈಸ್ಕೂಲ"ನ್ನು ತಾ. ೧೩-೧೧-೧೯೧೬ನೆಯ ದಿವಸ ಸ್ಥಾಪಿಸಿದರು. ಈ ಉತ್ಸಾಹಿಗಳಾದ ಪದವೀಧರನ ಅವಿಶ್ರಾಂತ ಶ್ರಮದಿಂದ ಈಗ ಈ ಹೈಸ್ಕೂಲು ಆ ಭಾಗದ ಎಲ್ಲಾ ಹೈಸ್ಕೂಲುಗಳಲ್ಲಿ ಮೊದಲನೆಯದಾಗಿದೆ. ಈಗ ಈ ಪಾಠಶಾಲೆಯಲ್ಲಿ ಸಾಧಾರಣ ೩೦೦ ಜನ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈ ಪಾಠಶಾಲೆಯಲ್ಲಿ ಅಭ್ಯಾಸಮಾಡಿ ಈವರೆಗೆ ಸಾಧಾರಣ ೮೦ ವಿದ್ಯಾರ್ಥಿಗಳು ಮ್ಯಾಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿರುವರು. ಇವರಲ್ಲಿ ಮುಕ್ಕಾಲುಪಾಲು ವೀರಶೈವ ವಿದ್ಯಾರ್ಥಿಗಳಿದ್ದಾರೆ. ಈ ಪಾಠಶಾಲೆಯಲ್ಲಿ ಅಧ್ಯಾಪಕರಾಗಿರುವ ೬ ಜನ ವೀರಶೈವ ಪದವೀಧರರು ಅತ್ಯಲ್ಪ ವೇತನವನ್ನು ತೆಗೆದುಕೊಂಡು ಹೈಸ್ಕೂಲಿಗೆ ಬೇಕಾಗುವ ಸಾಧಾರಣ ೧೫ ಸಹಸ್ರ ರೂ. ಗಳ ಸಾಮಾನುಗಳನ್ನು ಶೇಖರಿಸಿದ್ದಾರೆ. ಸರಕಾರದವರು ವರ್ಷಕ್ಕೆ ೨೦೦೦ ರೂ. ಗಳನ್ನು ಸಹಾಯಮಾಡಲು ಕಳೆದ ವರ್ಷದಿಂದ ಪ್ರಾರಂಭಿಸಿರುವರು.

ಇದರಂತೆಯೇ ವಿಜಾಪೂರದಲ್ಲಿಯೂ ವೀರಶೈವ ವಿದ್ಯಾಭಿವೃದ್ಧಿಯ ಸಂಘವು ರಾವ್ ಸಾಹೇಬ್ ಪಿ. ಜಿ. ಹಳಕಟ್ಟಿಯವರ ಪ್ರಯತ್ನದಿಂದ ಏರ್ಪಟ್ಟು ಶ್ರೀಯುತ ಆರ್. ಎಲ್. ಜವಳಿ. ಬಿ.ಎಸ್.ಸಿ. ಯವರೇ ಮೊದಲಾದ ಪದವೀಧರರ ಸ್ವಾರ್ಥತ್ಯಾಗದಿಂದ ವಿಜಾಪುರದಲ್ಲಿ ನ್ಯೂ ಇಂಗ್ಲೀಷ ಸ್ಕೂಲ್ ಎಂಬ ಪಾಠಶಾಲೆಯ ಕ್ರಿ. ಶ. ೧೯೧೭ನೆಯ ಫೆಬ್ರವರಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಈಗ ಈ ಶಾಲೆಯಲ್ಲಿ ೬ನೆಯ ತರಗತಿಯವರೆಗೆ ಇಂಗ್ಲೀಷ್ ವಿದ್ಯಾಭ್ಯಾಸವು ನಡೆಯುತ್ತಲಿದೆ ಸಾಧಾರಣ ೧೮೦ ವಿದ್ಯಾರ್ಥಿಗಳು ಕಲಿಯುತ್ತಲಿದ್ದಾರೆ. ಸರಕಾರದವರು ವರ್ಷಕ್ಕೆ ೧೫೦೦ ರೂ. ಗಳನ್ನು ಈ ಪಾಠಶಾಲೆಗೆ ಸಹಾಯಾರ್ಥವಾಗಿ ಕೊಡುತ್ತಿದ್ದಾರೆ.

ಈವರೆಗೆ ವಿವರಿಸಿರುವ ಸಂಗತಿಗಳಿಂದ ಕಳೆದ ಅರ್ಧ ಶತಮಾನಾದಿಂದಲೂ ನಮ್ಮ ಸಮಾಜದಲ್ಲಿ ವಿದ್ಯಾಭಿವೃದ್ಧಿಯು ಮತ್ತು ಧಾರ್ಮಿಕ ಜಾಗ್ರತೆಯು ಯಾವ ಪ್ರಕಾರ ಆಗುತ್ತಾ ಬಂದಿವೆಯೆಂಬುದು ವಾಚಕರಿಗೆ ವೇದ್ಯವಾಗಿರಬಹುದು. ಇಷ್ಟರಿಂದಲೇ ನಾವು ಸಂತೋಷಪಡುವಂತಿಲ್ಲ. ನಮ್ಮ ಸಮಾಜದ ಶೋಚನೀಯ ಸ್ಥಿತಿಯನ್ನು ನಿವಾರಣೆ ಮಾಡಲು ಈಗ ತಾನೇ ನಾವು ಪ್ರಾರಂಭಿಸಿರುವೆವೆಂದು ಭಾವಿಸುವುದೇ ವಿಹಿತವಾಗಿದೆ. ಈವರೆಗೆ ಆಗಿರುವ ಕಾರ್ಯಗಳ ವಿಷಯದಲ್ಲಿಯೂ, ಇನ್ನು ಮುಂದೆ ಆಗಬೇಕಾಗಿರುವ ಕಾರ್ಯಗಳ ವಿಷಯದಲ್ಲಿಯೂ ನಾವು ವಿಶೇಷವಾಗಿ ಪ್ರಯತ್ನಿಸಬೇಕಾಗಿದೆ. ಸಕಲರೂ ಈ ಸಮಾಜೋದ್ಧಾರದ ಪವಿತ್ರಕಾರ್ಯವನ್ನು ವಹಿಸದಿದ್ದರೆ ಸಮಾಜದೇಳಿಗೆಯು ಖಂಡಿತವಾಗಿಯೂ ಆಗುವಂತಿಲ್ಲ.

ಬೆಳಗಾವಿ ಮತ್ತು ವಿಜಾಪುರಗಳಲ್ಲಿ ಉತ್ಸಾಹಿಗಳಾದ ಪದವಿಧರರು ಸ್ಥಾಪಿಸಿರುವ ಶಿಕ್ಷಣ ಸಂಸ್ಥೆಗಳಿಗೆ ನಮ್ಮ ಸಮಾಜದ ಧನಿಕರಿಂದ ಇನ್ನೂ ಧನಸಹಾಯವಾಗದಿದ್ದುದು ತುಂಬಾ ವಿಷಾದಕರವಾದದ್ದಾಗಿದೆ. ಧನಿಕರು ಉದಾರ ಮನಸ್ಸಿನಿಂದ ಈ ಸಂಸ್ಥೆಗಳಿಗೆ ಸಹಾಯಮಾಡುವುದು ಕರ್ತವ್ಯವಲ್ಲವೇ? ವಿದ್ಯಾಂಸರಾದ ಆ ಪದವೀಧರರು ಸಮಾಜಹಿತಕ್ಕೋಸ್ಕರ ಮಾಡಿರುವ ಸ್ವಾರ್ಥತ್ಯಾಗವನ್ನು ಸಮಾಜದ ಧನಿಕರು ಲಕ್ಷಿಸಿ ಅವರಿಗೆ ಪ್ರೋತ್ಸಾಹಿಸುವುದು ವಿಹಿತವಾಗಿಲ್ಲವೇ?

ತಮ್ಮ ದ್ರವ್ಯದ ಸದ್ವಿನಿಯೋಗ ಮಾಡಲು ಈ ವಿದ್ಯಾಭಿವೃರ್ದಧಿಯ ಕಾರ್ಯಕ್ಕಿಂತಲೂ ಶ್ರೇಷ್ಠಕರವಾದ ಬೇರೊಂದು ಕಾರ್ಯವುಂಟೇ? ನಮ್ಮ ಸಮಾಜದ ಅಜ್ಞಾನವನ್ನು ನಿವಾರಣೆ ಮಾಡುವುದಕ್ಕಿಂತ ಪವಿತ್ರವಾದ ಅನ್ಯಕಾರ್ಯವಿದೆಯೇ? ನಮ್ಮ ನೆರೆಯ ಅನೇಕ ಸಮಾಜಗಳಲ್ಲಿರುವ ಧನಿಕರು ಈಗ ರಾಷ್ಟ್ರೀಯ ವಿದ್ಯಾಲಯಗಳಿಗೆ ದ್ರವ್ಯವನ್ನು ಸೂರೆಮಾಡುತ್ತಿರುವಾಗ ನಮ್ಮ ಸಮಾಜದವರು ನಮ್ಮ ಸಮಾಜದ ವಿದ್ಯಾಲಯಗಳಿಗಾದರೂ ಸಹಾಯ ಮಾಡದಿರುವುದು ವಿಷಾದಕರವಾದುದಲ್ಲವೇ?

ವಿದ್ಯಾಲಯಗಳನ್ನೇರ್ಪಡಿಸುವುದು ದೇವಾಲಯಗಳನ್ನು ಸ್ಥಾಪಿಸುವುದಕ್ಕಿಂತಲೂ ಪುಣ್ಯದಾಯುಕವಾದುದೆಂತಲೂ, ಪೂಜಾಮಂಟಪಗಳನ್ನು ರಚಿಸಿ ಆರಾಧನೆಗಳನ್ನು ಮಾಡಿಸುವದಕ್ಕಿಂತಲೂ ವಿದ್ಯಾರ್ಥಿ ನಿಲಯಗಳನ್ನೇರ್ಪಡಿಸಿ ಅಲ್ಲಿರುವ ಬಡವಿದ್ಯಾರ್ಥಿಗಳಿಗೆ ಭೋಜನ ದೊರೆಯುವಂತೆ ಮಾಡುವುದು ಹೆಚ್ಚು ಶ್ರೇಯಸ್ಕರವಾದುದೆಂತಲೂ, ದರಿದ್ರರ ಲಗ್ನಕ್ಕೆ ದ್ರವ್ಯ ಸಹಾಯಮಾಡುವುದಕ್ಕಿಂತಲು ದರಿದ್ರ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ದ್ರವ್ಯಸಹಾಯ ಮಾಡುವುದು ವಿಶೇಷ ಕಲ್ಯಾಣಪ್ರದವಾದುದೆಂತಲೂ ನಮ್ಮ ಸವಮಾಜದವರು ಭಾವಿಸಿ ಆ ಪ್ರಕಾರ ಆಚರಿಸಲುಪಕ್ರಮಿಸಬೇಕಾದ ಸಮಯವು ಪ್ರಾಪ್ತವಾಗಿದೆ. ಆದುದರಿಮದ ಧನಿಕ ಮಹಾಶಯರೇ! ನಮ್ಮ ಸಮಾಜವು ಈ ಪವಿತ್ರಕಾರ್ಯಗಳಿಗೋಸ್ಕರ ತಮ್ಮ ದ್ರವ್ಯವನ್ನಪೇಕ್ಷಿಸುತ್ತದೆ. ತಮ್ಮ ಧರ್ಮಬುದ್ಧಿಯು ಜಾಗ್ರತವಾಗಲು ಇದೇ ಸಮಯವು. ಈ ಸಮಯದಲ್ಲಿಯೇ ಅವರ ಸದ್ವಿನಿಯೋಗ ಮಾಡಿ ಕೀರ್ತಿಭಾಜನರಾಗುವುದು ವಿಹಿತವಲ್ಲವೇ?

ಈ ವರೆವಿಗೂ ನಮ್ಮ ಸಮಾಜದ ಸ್ತ್ರೀ ವಿದ್ಯಾಭಿವೃದ್ಧಿಗೆ ಪ್ರತ್ಯೇಕವಾದ ಯಾವ ಪ್ರಯತ್ನವೂ ನಡೆಯದಿದ್ದುದು ತುಂಬಾ ವಿಷಾದವಾದುದಲ್ಲವೇ? ನಮ್ಮ ಸಮಾಜದ ಅರ್ಧಾಂಗವು ಇನ್ನೂ ಗಾಢನಿದ್ರೆಯಲ್ಲಿಯೇ ಇದೆ, ಇದನ್ನು ಎಚ್ಚರಗೊಳಿಸುವುದು ವಿಹಿತವಲ್ಲವೇ? ಇಲ್ಲದಿದ್ದರೆ ಅರ್ಧಾಂಗವು ಅಚೇತನವುಳ್ಳ ಈ ಸಮಾಜ ಪುರುಷನಿಂದ ಯಾವ ಕಾರ್ಯವು ತಾನೇ ತೃಪ್ತಿಕರವಾಗಿ ಜರುಗಲು ಸಾಧ್ಯವು? ಈ ನಮ್ಮ ವೀರಶೈವ ಸ್ತ್ರೀಯರುಗಳಿಗೆ ಪುರುಷರಂತೆಯೇ ಹೇಗೆ ಸಮಾನವಾದ ಧಾರ್ಮಿಕ ಆಚಾರ ಸ್ವಾತಂತ್ರ್ಯವಿದಿಯೋ ಹಾಗೆ ಹಿಂದು ಧರ್ಮದ ಬೇರೆ ಯಾವಮತದ ಸ್ತ್ರೀಯರಿಗೂ ಇಲ್ಲವಷ್ಟೆ ಆದರೂ ಬೇರೆಮತೀಯರೇ ಸ್ತ್ರೀ ವಿದ್ಯಾಭ್ಯಾಸಕ್ಕೆ ಎಷ್ಟೊ ಪ್ರೋತ್ಸಾಹಿಸಿರುವಾಗ ನಾವು ಮಾತ್ರ ನಮ್ಮ ಮಾತೃವರ್ಗವನ್ನು ಅಜ್ಞಾನದಲ್ಲಿಯೇ ಇಡುವದು ವಿಹಿತವೇ? ಈಗ ಸರಕಾರಿ ಬಾಲಿಕಾ ಪಾಠಶಾಲೆಗಳಲ್ಲಿ ಸ್ತ್ರೀ ಶಿಕ್ಷಣವು ಅಷ್ಟು ತೃಪ್ತಿಕರವಾದ ರೀತಿಯಲ್ಲಿ ದೊರೆಯುತ್ತಾ ಇಲ್ಲ. ಆದುದರಿಂದ ಧಾರ್ಮಿಕ ಮತ್ತು ನೈತಿಕ ವಿಷಯಗಳೆ ಮುಖ್ಯವಾಗಿ ಕಲಿಸಲ್ಪಡುವ ವೀರಶೈವ ಬಾಲಿಕಾ ಪಾಠಶಾಲೆಗಳನ್ನು ಅಲ್ಲಲ್ಲಿ ಸ್ಥಾಪಿಸುವುದು ಬಹು ಶ್ರೇಯಸ್ಕರವಾದದ್ದಾಗಿದೆ. ಅಂತಹ ಸುಶೀಲರಾದ ಸುಶಿಕ್ಷಿತ ಮಾತೆಯರಿಂದಲೇ ಸಮಾಜೋದ್ಧಾರ ಮಡುವ ಪುರುಷಶ್ರೇಷ್ಠರು ಜನ್ಮವೆತ್ತುತ್ತಾರೆ. ಆದಕಾರಣ ವಿದ್ಯಾಭಿಮಾನಿಗಳು ಈ ವಿಷಯದ ಕಡೆಗೆ ಗಮನಿಸುವುದು ಅತ್ಯಾವಶ್ಯಕವಲ್ಲವೇ?

ನಮ್ಮ ಮತದ ಪ್ರಾಚೀನ ಕಾಲದ ಮತ್ತು ಅರ್ವಾಚೀನ ಕಾಲದ ಸಂಸ್ಕೃತ, ತಮಿಳು, ತೆಲಗು ಮತ್ತು ಕನ್ನಡ ಭಾಷೆಗಳಲ್ಲಿರುವ ಗ್ರಂಥಗಳನ್ನು ಶೋಧಿಸಿ ಒಂದು ಕಡೆಗೆ ಶೇಖರಿಸಿಡುವುದು ಅವಶ್ಯಕವಾಗಿಯೂ, ಬಹು ಫಲಕಾರಿಯೂ ಇದೆ. ಪರಮತದ್ವೇಷಿಗಳು ನಮ್ಮ ಮತದ ಅನೇಕ

ಗ್ರಂಥಗಳನ್ನು ಹಾಳು ಮಾಡಿದ್ದಾರೆ. ಮಹಮ್ಮದೀಯರ ಪ್ರಭುತ್ವದಲ್ಲಂತೂ ಅನೇಕ ಕ್ರೂರ ಪ್ರಭುಗಳು ಅಮೌಲ್ಯವಾದ ಭಾರತೀಯ ಗ್ರಂಥ ಭಂಡಾರಗಳನ್ನು ನಾಶಮಾಡಿ ಪ್ರಪಂಚಕ್ಕೇನೇ ಮಹತ್ತರವಾದ ಹಾನಿಯನ್ನುಂಟು ಮಾಡಿರುವರು. ಉದಾಂತಪುರದಲ್ಲಿ ಮಹಾಪಾಲನು ರಾಜ್ಯವಾಳುವಾಗ ಅಲ್ಲಿದ್ದ ಘನತರವಾದ ಗ್ರಂಥಾಲಯಗಳನ್ನು ಕ್ರಿ. ಶ. ೧೨೦೨ರಲ್ಲಿ ಮಹಮ್ಮದೀಯರು ಸುಡಿಸಿದ್ದಲ್ಲದೆ ೬ ಸಹಸ್ರ ಬೌದ್ಧ ಸಾಧುಗಳನ್ನು ಕೊಲ್ಲಿಸಿ ಬಿಟ್ಟರು! ಇಂತಹ ಅನೇಕ ಅನರ್ಥಗಳು ಆ ಕಾಲದಲ್ಲಿ ಜರುಗಿದೆ. ಇಂತಹ ಗಂಡಾಂತರದಲ್ಲಿ ನಮ್ಮ ಮತದ ಗ್ರಂಥಗಳು ಉಳಿದುದೇ ಬಹು ಕಡಿಮೆ. ಆ ಉಳಿದವುಗಳನ್ನಾದರೂ ಈ ಶಾಂತತಾಕಾಲದಲ್ಲಿ ದೊಡ್ಡ ದೊಡ್ಡ ರಾಜಧಾನಿಗಳಲ್ಲಿಯೂ, ಪಟ್ಟಣಗಳಲ್ಲಿಯೂ, ಇರುವ ಗ್ರಂಥ ಭಂಡಾರಗಳಲ್ಲಿ ಪರಿಶೋಧಿಸಿ ನಮ್ಮ ಗ್ರಂಥಗಳನ್ನು ಸಂಗ್ರಹಿಸುವುದು ಯುಕ್ತವಾಗಿಲ್ಲವೇ? ಮತರಕ್ಷಣೆಯ ಕಾರ್ಯಕ್ಕಾಗಿಯೇ ಕಂಕಣಬದ್ಧರಾಗಿರುವ ನಮ್ಮ ಮತದ ಮಹಾಮಹಾ ಪೀಠಾಧಿಪತಿಗಳು ಈ ಮಹಾತ್ಕಾರ್ಯವನ್ನು ವಹಿಸುವುದು ಯುಕ್ತವಾಗಿಲ್ಲವೆ? ತಮ್ಮಲ್ಲಿ ಯಥೇಚ್ಚವಾಗಿ ಪ್ರಯೋಜನವಿಲ್ಲದೆ ಬಿದ್ದಿರುವ ಆ ಲಕ್ಷ್ಮಿಯನ್ನು ಬಹು ಫಲದಾಯಕಳದ ಈ ಸರಸ್ವತಿಯ ಶೋಧಕ್ಕೋಸ್ಕರ ಕಳುಹಿಸುವುದು ಧರ್ಮವಾಗಿಲ್ಲವೇ? ಆ ಲಕ್ಷ್ಮಿಯನ್ನು ತೃಣೀಕರಿಸಬೇಕಾದ ಈ ಪೂಜ್ಯಪಾದರುಗಳೇ ಈ ಕಾರ್ಯದಲ್ಲಿ ಚಿತ್ತವಿಡದಿದ್ದರೆ ಈ ಮತರಕ್ಷಣೆಯ ಕಾರ್ಯವನ್ನು ಮಾಡುವವರಾರು? ಇಂತಹ ಗ್ರಂಥಭಂಡಾರವೇ ನಮ್ಮ ಮತದ ಜೀವನವಲ್ಲವೇ? ಆದುದರಿಂದ ನಮ್ಮ ಮತದ ಅನೇಕ ಪಂಡಿತರುಗಳಿಗೆ ವಿಶೇಷವಾದ ದ್ರವ್ಯಸಹಾಯವನ್ನು ಮಾಡಿ ವೀರಶೈವ ಗ್ರಂಥಭಂಡಾರವನ್ನೇರ್ಪಡಿಸುವ ಶ್ರೇಷ್ಠತರವಾದ ಕಾರ್ಯವನ್ನು ಈ ಕಾಲದಲ್ಲಿ ನಮ್ಮ ಮಹಾಪೂಜ್ಯಪಾದರುಗಳು ಪ್ರಾರಂಭಿಸಬೇಕೆಂದು ಭಕ್ತಿಪೂರ್ವಕವಾಗಿ ಭಿನ್ನವಿಸಿಕೊಳ್ಳುತ್ತೇನೆ.

ನಮ್ಮ ಮತಗ್ರಂಥಗಳನ್ನು ಪ್ರಸಾರಗೊಳಿಸುವುದಕ್ಕೂ ನಮ್ಮ ಸಮಾಜಸುಧಾರಣೆಯ ವಿಷಯವಾಗಿ ಜಾಗ್ರತೆಯನ್ನುಂಟುಮಾಡುವುದಕ್ಕೂ ಮುದ್ರಣಾಲಯವೂ ಈ ಕಾಲದಲ್ಲಿ ಬದಲಾದ ಸಾಧನವಾಗಿದೆ. ಆದುದರಿಂದ ನಮ್ಮ ಸಮಾಜದವರು ಒಂದು ಘನವಾದ ಮುದ್ರಣಾಲಯವನ್ನು ಸ್ಥಾಪಿಸುವುದು ಈಗ ಅಗತ್ಯವಾಗಿದೆ. ಈ ವಿಷಯವಾಗಿ ಮೈಸೂರು ಪ್ರಾಂತ್ಯದ ವೀರಶೈವ ಮಹಾಜನಗಳು ಯೋಚಿಸಿರುತ್ತಾರಷ್ಟೇ ಈ ಆಲೋಚನೆಯು ಫಲಕಾರಿಯಾಗುವುದು ಅವಶ್ಯಕವಾಗಿದೆ. ಇಂತಹ ಸಂಸ್ಥೆಯಿಂದ ಮತಗ್ರಂಥಗಳು ಮುದ್ರಿಸಲ್ಪಡುವುದಲ್ಲದೆ ಕನ್ನಡ, ತೆಲಗು, ಮರಾಠಿ ಮತ್ತು ಇಂಗ್ಲೀಷ್ ಈ ನಾಲ್ಕು ಭಾಷೆಗಳಲ್ಲಿ ವರ್ತಮಾನಪತ್ರಿಕೆಗಳನ್ನು ಪ್ರಕಟಿಸಿ ಬೇರೆ ಬೇರೆ ಭಾಷೆಗಳನಾಡುತ್ತಿರುವ ನಮ್ಮ ಸಮಾಜ ಬಾಂಧವರೆಲ್ಲರೂ ಒಂದೇ ಅಭಿಪ್ರಾಯದಿಂದ ಕೂಡಿ ಕೆಲಸಮಾಡಲು ಅವಕಾಶವಾಗುವಂತೆ ಮಾಡಬೇಕು. ಈ ಕಾರ್ಯವನ್ನು ಆಂಗ್ಲ ವಿದ್ಯಾಪ್ರವೀಣರಾದ ನಮ್ಮ ಸಮಾಜದ ವಿದ್ವಾಂಸರು ವಹಿಸುವುದೇ ಯುಕ್ತವಾಗಿಲ್ಲವೇ? ಇದು ಇವರ ಮೇಲೆಯೇ ಬಿದ್ದ ಭಾರವಲ್ಲವೇ? ಪಾಶ್ಚಾತ್ಯ ಶಿಕ್ಷಣವನ್ನು ಹೊಂದಿದ ಈ ಮಹಾಶಯರೇ ಸಮಾಜ ಸುಧಾರಣೆಯು ಈ ಆಧುನಿಕ ಕಾರ್ಯವನ್ನು ವಹಿಸದಿದ್ದರೆ ಇದನ್ನು ಮಾಡುವವರಾರು? ಸಮಾಜದ ಸಹಾಯದಿಂದ ಅನೇಕರು ಪದವೀಧರರಾಗಿ ಕೇವಲ ಸ್ವಂತಕಾರ್ಯಗಳಲ್ಲಿಯೇ ಆಸಕ್ತರಾಗಿದ್ದಾರೆಯೇ ವಿನಾ ಅವರಿಂದ ಸಮಾಜಕ್ಕೆ ಯಾವ ಪ್ರಯೋಜನವೂ ಆಗುತ್ತಾ ಇಲ್ಲವೆಂತಲೂ, ಇಂತಹ ಸುಶಿಕ್ಷಿತರು ನಮ್ಮ ಸಮಾಜದಲ್ಲಿ

ಹೆಚ್ಚುವುದಕ್ಕೋಸ್ಕರ ನಾವೇಕೆ ದ್ರವ್ಯಸಹಾಯ ಮಾಡಬೇಕೆಂತಲೂ, ಅನೇಕರು ಆಕ್ಷೇಪಿಸುತ್ತಿದ್ದಾರೆ. ಇದು ಕೆಲವಂಶದಲ್ಲಿ ನಿಜವಾಗಿಯೂ ಇದೆ. ಆದುದರಿಂದ ಆಂಗ್ಲ ವಿದ್ವಾಂಸವರ್ಗಕ್ಕೇನೇ ಈ ವಿಧವಾದ ಆಕ್ಷೇಪಣೆಯು ಬರದಂಥೆ ಇಂತಹ ಸಮಾಜಕಾರ್ಯಗಳಲ್ಲಿ ಮುಂದಾಳುಗಳಾಗಬೇಕಾದುದು ಈ ಮಹಾಶಯರ ಕರ್ತವ್ಯವಾಗಿಯೇ ಇದೆ. ಆದಕಾರಣ ಈ ಶ್ರೇಷ್ಠ ಫಲದಾಯಕವಾದ ಕಾರ್ಯವನ್ನು ನಮ್ಮ ಆಂಗ್ಲ ವಿದ್ಯಾವಿಭೂಷಿತರು ಪ್ರಾರಂಭಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಈ ಪ್ರಕಾರ ಸಮಾಜೋದ್ಧಾರದ ಸಕಲ ಕಾರ್ಯಗಳೂ ಪ್ರಾರಂಭವಾದಾಗಲೇ ನಮ್ಮ ಸಮಾಜದಲ್ಲಿ ಸಂಪೂರ್ಣವಾದ ಜಾಗ್ರತೆಯುಂಟಾಯಿತೆಂದು ಹೇಳಬಹುದು.

❖❖

೩ನೆಯ ಪ್ರಕರಣ

ಸಂಪದಭಿವೃದ್ಧಿಯ ಶಿಕ್ಷಣ

ಕಳೆದ ಪ್ರಕರಣದಲ್ಲಿ ವಿವರಿಸಿದ ಸಂಗತಿಗಳಿಂದ ಈಗ ಅರ್ಧ ಶತಮಾನದಿಂದಲೂ ಇಂಗ್ಲೀಷ್ ವಿದ್ಯಭಿವೃದ್ಧಿಯ ಸಂಬಂಧವಾಗಿಯೇ ನಮ್ಮ ಸಮಾಜದಲ್ಲಿ ಹೆಚ್ಚಾದ ಪ್ರಯತ್ನ ನಡೆದಿದೆಯೆಂಬುದು ವಾಚಕರಿಗೆ ವೇದ್ಯವಾಗಿರಬಹುದು. ಇದೇನೋ ಪ್ರಯೋಜನಕಾರಿಯಾದುದೇ ಸರಿ. ಆದರೆ ಈ ವಿಧವಾದ ಶಿಕ್ಷಣವೊಂದೇ ಪ್ರಸಾರವಾದರೆ ನಮ್ಮ ಸಮಾಜದ ಸಕಲ ದುಸ್ಥಿತಿಗಳೂ ನಿವಾರಣೆಯಾಗುವವೇ? ವಿದ್ಯಾರ್ಜನೆ ಮಾಡುವವರೂ, ವಿದ್ಯೆಗೆ ಪ್ರೋತ್ಸಾಹಿಸುತ್ತಿರುವವರೂ, ಈಗಿನಂತೆಯೇ ಬಿ. ಎ., ಎಂ, ಎ., ಪದವಿಗಳನ್ನು ಹೊಂದುವುದೇ ಮುಖ್ಯ ಧ್ಯೇಯವಾಗಿಟ್ಟುಕೊಳ್ಳುವುದು ಯುಕ್ತವೇ? ಎಂಬಂಶಗಳನ್ನು ಯೋಚಿಸಬೇಕಾಗಿದೆ. ವೀರಶೈವ ಸಮಾಜವು ಈಗ ಧಾರ್ಮಿಕ, ರಾಜಕೀಯ ಮತ್ತು ಸಾಂಪತ್ತಿಕ ವಿಷಯಗಳಲ್ಲಿ ಹೀನಾವಸ್ಥೆಯಲ್ಲಿದೆಯೆಂದು ನಮ್ಮ ಸಮಾಜದ ಸಕಲ ವಿದ್ವಾಂಸರೂ ಹೇಳುತ್ತಿದ್ದಾರೆ. ಇದು ನಿರ್ವಿವಾದವಾದ ಸಂಗತಿಯಾಗಿಯೂ ಇದೆ. ಆದುದರಿಂದ ವಿದ್ಯಾವಿಷಯಕವಾದ ನಮ್ಮ ಪ್ರಯತ್ನವು ಈ ಎಲ್ಲಾ ಲೋಪಗಳನ್ನೂ ನಿವಾರಣೆ ಮಾಡತಕ್ಕದ್ದಾಗಿರಬೇಕಲ್ಲವೇ? ಬಿ. ಎ. ತರಗತಿಯವರೆಗೆ ವಿದ್ಯಾಭ್ಯಾಸಮಾಡಿದರೂ ಈಗ ದೊರೆಯುತ್ತಿರುವ ಶಿಕ್ಷಣದಿಂದ ಕೈಗಾರಿಕೆ, ವ್ಯಾಪಾರ, ಮೊದಲಾದ ಸಂಪದಭಿವೃದ್ಧಿಯ ವೃತ್ತಿಗಳ ಜ್ಞಾನವು ಶಿಲಾಂಶವಾದರೂ ಆಗುತ್ತದೆಯೋ? ಸರಕಾರಿ ಕೆಲಸಗಳಿಗೆ ಮಾತ್ರ ಯೋಗ್ಯವಾಗಿರುವಂತಹ ಶಿಕ್ಷಣವು ದೊರೆಯುತ್ತದೆಂಬುದು ಸರ್ವಸಮ್ಮತವಾದ ಸಂಗತಿಯಾಗಿಲ್ಲವೇ? ಆದಕಾರಣ ಇಂತಹ ವಿದ್ಯಾಂಸರೇ ನಮ್ಮ ಸಮಾಜದಲ್ಲಿ ಹೆಚ್ಚುವುದರಿಂದ ನಮ್ಮ ಸಾಂಪತ್ತಿಕ ಸ್ಥಿತಿಯೂ ಹೇಗೆ ತಾನೇ ಸುಧಾರಿಸುವುದು? ಕೆಲವು ಬ್ರಾಹ್ಮಣ ವರ್ಗಗಳಂತೆ ನಮ್ಮ ಸಮಾಜವು ಸರಕಾರದ ಕೆಲಸಗಳಿಂದಲೇ ಸುಸ್ಥಿತಿಯಲ್ಲಿರುವುದು ಸಾಧ್ಯವಿಲ್ಲ. ಏಕೆಂದರೆ, ನಮ್ಮ ಸಮಾಜದ ರಚನೆಯು ಹಿಂದುಗಳಲ್ಲಿಯ ಅನ್ಯ ಸಮಾಜಗಳಿಗಿಂತ ಭಿನ್ನರೀತಿಯಲ್ಲಿದೆ. ಸಮಾಜಶಾಸ್ತ್ರದಂತೆ ನೋಡಿದರೆ ಬೇರೆ ಹಿಂದು ಸಮಾಜಗಳ ಹಾಗೆ ಈ ನಮ್ಮ ಸಮಾಜವು ಅಪೂರ್ಣಾವಸ್ಥೆಯಲ್ಲಿಲ್ಲ. ಇಡೀ ಹಿಂದೂ ಜನಾಂಗದಂತೆಯೇ ಇದು ಸಂಪೂರ್ಣ ಸ್ಥಿತಿಯಲ್ಲಿದೆ. ಆದುದರಿಂದ ಅನ್ಯ ಅಪೂರ್ಣ ಸಮಾಜಗಳಂತೆಯೇ ಒಂದೇ ಒಂದು ವಿಷಯದಲ್ಲಿ ನಮ್ಮ ಸಮಾಜವು ಮುಂದಕ್ಕೆ ಬಂದರೆ ಅದು ನಮ್ಮ ಸಮಾಜದ ಅಭಿವೃದ್ಧಿಯಲ್ಲ.

ಹರ್ಬರ್ಟ ಸ್ಪೆನ್ಸರ್ ಎಂಬ ಇಂಗ್ಲಂಡಿನ ಪ್ರಸಿದ್ಧ ತತ್ವಜ್ಞಾನಿಗಳು ದಿ ಪ್ರಿನ್ಸಿಪಲ್ಸ ಆಫ್ ಸೋಸಿಯಾಲಜಿ ಎಂಬ ಸಮಾಜಶಾಸ್ತ್ರದ ಗ್ರಂಥದಲ್ಲಿ ಪ್ರತಿಪಾದಿಸಿರುವುದೇನೆಂದರೆ ಪ್ರಾಣಿಯ ಇಂದ್ರಿಯುಗಳ ರಚನೆಯು ಮೇಲಿಂದ ಹೇಗೆ ಅದರ ಶ್ರೇಷ್ಠ ಕನಿಷ್ಠತತ್ವಗಳನ್ನು ನಿರ್ಣಯಿಸಬಹುದಾಗಿದೆಯೋ ಹಾಗೆಯೇ ಸಮಾಜದಲ್ಲಿರುವ ಶ್ರಮ ವಿಭಾಗದ ಏರ್ಪಾಟುಗಳ ಮೇಲಿಂದ ಆ ಸಮಾಜವು ಪೂರ್ಣಾವಸ್ಥೆಯಲ್ಲಿದೆಯೋ ಅಥವಾ ಅಪೂರ್ಣಾವಸ್ಥೆಯಲ್ಲಿದೆಯೋ ಎಂಬುದನ್ನು ತಿಳಿದುಕೊಳ್ಳಬಹುದು. ಸಮಾಜಶಾಸ್ತ್ರದ ಈ ತತ್ವದಂತೆ ನೋಡಿದರೆ ನಮ್ಮ ಸಮಾಜದಲ್ಲಿರುವ ಶ್ರಮವಿಭಾಗದ ಏರ್ಪಾಟುಗಳೂ ಸಂಪೂರ್ಣಾವಸ್ಥೆಯನ್ನು ಹೊಂದಿದ ಸಮಾಜಗಳಲ್ಲಿರುವ ಏರ್ಪಾಟುಗಳಂತೆಯೇ ಇವೆಯೆಂದು ಸ್ಪಷ್ಟವಾಗಿ ತೋರುತ್ತದೆ. ಸಮಾಜದ ಸುಸ್ಥಿತಿಗೆ ಅವಶ್ಯಕವಾಗಿರುವ ಒಕ್ಕಲುತನ, ಕೈಗಾರಿಕೆ, ವ್ಯಾಪಾರ, ರಕ್ಷಣೆ, ಉಪದೇಶ ಮೊದಲಾದ ಸಕಲ ವೃತ್ತಿಗಳನ್ನು ಮಾಡುವವರು ನಮ್ಮ ಸಮಾಜದಲ್ಲಿದ್ದಾರೆ. ಹಿಂದುಗಳ ಇನ್ನಾವ ಸಮಾಜದಲ್ಲಿಯೂ ಈ ವಿಧವಾದ ಏರ್ಪಾಟುಗಳಿಲ್ಲ. ಆ ಸಮಾಜಗಳೆಲ್ಲಾ ಒಂದೊಂದೇ ವೃತ್ತಿಯುಳ್ಳವುಗಳಾಗಿವೆ. ಆದಕಾರಣ ಅವು ಅನ್ಯಸಮಾಜಗಳ ಸಹಾಯದಿಂದಲೇ ಜೀವಿಸಬೇಕಾಗಿದೆ. ಆದರೆ ನಮ್ಮ ಸಮಾಜವು ಹಾಗಲ್ಲ. ಇದು ಸ್ವಾವಲಂಬನೆಯಿಂದಲೇ ಜೀವಿಸುವ ಸಾಮರ್ಥ್ಯವುಳ್ಳದ್ದಾಗಿದೆ. ಆದುದರಿಂದಲೇ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಈ. ಯವರು ೮ನೆಯ ಶ್ರೀಮದ್ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ "ನಮ್ಮ ಸಮಾಜವು ಅನೇಕ ತರಗತಿಯ ಜನಗಳಿಂದಲೂ, ನಾನಾ ಕಸಬುಗಳನ್ನು ಮಾಡುವವರಿಂದಲೂ ಕೂಡಿರುವುದರಿಂದ ಇದೊಂದು ಚಿಕ್ಕ ಜನಾಂಗದೋಪಾದಿಯಲ್ಲಿಯೇ ಇದೆ ಎಂದು ಹೇಳಿದ್ದಾರೆ."

ಈ ಪ್ರಕಾರ ಸರ್ವಾಂಗಪರಿಪೂರ್ಣವಾದ ಈ ನಮ್ಮ ವೀರಶೈವ ಸಮಾಜವನ್ನು ಊರ್ಜಿತಸ್ಥಿತಿಗೆ ತರಬೇಕಾದರೆ ಸಕಲ ರೀತಿಗಳಿಂದಲೂ ಪ್ರಯತ್ನಿಸಬೇಕಾದುದು ಅತ್ಯಾವಶ್ಯಕವು. ನಮ್ಮ ಸಮಾಜದಲ್ಲಿರುವ ಈ ಅಸಾಧಾರಣವಾದ ಸುವ್ಯವಸ್ಥೆಗೆ ಲೋಪವುಂಟಾಗದಂತೆ ನಾವು ವಿದ್ಯಾಪ್ರಸಾರವನ್ನು ಮಾಡಬೇಕಾಗಿದೆ. ಕೇವಲ ಸರಕಾರಿ ಕೆಲಸಗಳಿಗೆ ಯೋಗ್ಯವಾಗಿರುವ ಈಗಿನ ಶಿಕ್ಷಣದ ಕಡೆಗೇನೇ ನಮ್ಮ ಲಕ್ಷ್ಯೆಯನ್ನು ಕೊಡುತ್ತಿರುವುದಾಗಲಿ, ಮತ್ತು ಆ ವಿದ್ಯಾರ್ಜನೆಗಾಗಿಯೇ ನಮ್ಮ ಸರ್ವಶಕ್ತಿಯನ್ನು ಕಳೆಯುತ್ತಿರುವುದಾಗಲಿ ವಿಹಿತವಲ್ಲ. ಈ ವಿಷಯವಾಗಿ ನಮ್ಮ ಸಮಾಜದ ಮುಂದಾಳುಗಳೂ ಹಿತಚಿಂತಕರೂ ಈ ಮುಂಚೆ ಹೇಳಿರುವುದನ್ನು ಗಮನಕ್ಕೆ ತಂದುಕೊಂಡು ಸಂಪದಭಿವೃದ್ಧಿಯ ಶಿಕ್ಷಣದ ಕಡೆಗೆ ನಾವು ಈಗಲೇ ಪ್ರಯತ್ನಿಸದಿದ್ದರೆ ನಮ್ಮ ಸಮಾಜವು ಈ ಸ್ಪರ್ಧೆಯ ನವಯುಗದಲ್ಲಿ ಜಾಗ್ರತೆ ಹೀನಾವಸ್ಥೆಗೆ ಬರುವುದು ಖಂಡಿತವು. ದಾನಶೂರ ಕೈ. ಶ್ರೀ ಶಿರಸಂಗಿ ಲಿಂಗಪ್ಪ ದೇಸಾಯಿಗಳು ಮೊದಲನೆಯ ಶ್ರೀಮದ್ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ:

"ಯಂತ್ರ ಸಂಬಂಧದ ಮತ್ತು ಕಲಾಕೌಶಲ್ಯದ ಜ್ಞಾನವನ್ನೂ ವ್ಯಾಪಾರದ ಜ್ಞಾನವನ್ನೂ ಕಲಿತುಕೊಳ್ಳಲಿಕ್ಕೆ ನಾವು ಪರದೇಶಕ್ಕೆ ಹೋಗಬೇಕು. ಸುಧಾರಿಸಿದ ರಾಷ್ಟ್ರದವರಿಂದ ಕಾಜು, ಸಬಕಾರ, ದೀಪದ ಕಡ್ಡಿ, ಛತ್ರಿ ಮುಂತಾದ ಅನೇಕ ನಿತ್ಯ ಉಪಯೋಗವುಳ್ಳ ಪದಾರ್ಥಗಳನ್ನು ಮಾಡಲಿಕ್ಕೆ ಅವುಗಳ ಕಾರಖಾನೆಗಳನ್ನು ನಮ್ಮಲ್ಲಿರುವ ಶ್ರೀಮಂತರ ಸಹಾಯದಿಂದ ಇಲ್ಲಿ ಸ್ಥಾಪಿಸಬೇಕು.

ಇವುಗಳಲ್ಲಿ ಕೆಲವು ಪದಾರ್ಥಗಳು ಒಳ್ಳೇ ಕ್ಷುಲ್ಲಕವೆಂದು ತೋರಿದಾಗ್ಯೂ ಅವುಗಳ ಮಾರಾಟವು ನಮ್ಮ ದೇಶದಲ್ಲಿ ಕೋಟ್ಯಾವಧಿ ರೂಪಾಯಿ ಕಿಮ್ಮತ್ತಿನದಾಗಿ ಈಗ ಅವುಗಳಿಂದ ಬರುವ ಲಾಭಗಳನ್ನು ಎರಡನೇ ಜನರು ತೆಗೆದುಕೊಳ್ಳುತ್ತಾರೆ. ನಮ್ಮ ಜನರಿಗೆ ನಿತ್ಯ ಬೇಕಾಗಿರುವ ಪದಾರ್ಥಗಳನ್ನು ನಾವೇ ಮಾಡಿ ಮಾರಿದರೆ ನಮ್ಮ ಸಮಾಜದ ಉನ್ನತಿಯಾಗುವುದರಲ್ಲಿ ಸಂಶಯವಿಲ್ಲ........ ಈ ಬಗ್ಗೆ ನಾವು ನಮ್ಮ ನೆರೆಯಲ್ಲಿರುವ ಜಪಾನ್ ದೇಶದವರ ಉದಾಹರಣೆಯನ್ನು ಮೇಲಿಂದ ಮೆಲೆ ಧ್ಯಾನದಲ್ಲಿ ತರತಕ್ಕದ್ದು ಕೆಲವು ವರ್ಷಗಳ ಹಿಂದೆ ಈ ಸಣ್ಣ ರಾಷ್ಟ್ರವು ಯಾರಿಗೂ ಗೊತ್ತಿದ್ದಿಲ್ಲ. ಆದರೆ ಅಲ್ಲಿಯ ಜನರು ದೀರ್ಘಪ್ರಯತ್ನಮಾಡಿ ತಮ್ಮ ಮಕ್ಕಳನ್ನು ಸುಧಾರಿಸಿದ ಪರದೇಶಗಳಿಗೆ ಕಳಿಸಿ, ಅಲ್ಲಿಯ ಕಲಾಕೌಶಲ್ಯದ ಜ್ಞಾನವನ್ನು ಕಲಿತುಕೊಂಡು ಅವರು ತಿರುಗಿ ಬಂದಮೇಲೆ ಅವರ ಸಹಾಯದಿಂದ ದೊಡ್ಡ ದೊಡ್ಡ ಕಾರಖಾನೆಗಳನ್ನು ಸ್ಥಾಪಿಸಿ ವಿವಿಧವಾದ ಸರಕುಗಳನ್ನು ಹುಟ್ಟಿಸಹತ್ತಿದಂದಿನಿಂದ ಅವರು ವ್ಯಾಪಾರದಲ್ಲಿ ಒಳ್ಳೇ ಕೀರ್ತಿಯನ್ನು ಪಡೆದರು. ವ್ಯಾಪಾರದಲ್ಲಿ ಜಪಾನವು ಇವತ್ತಿನ ಮಿತಿಗೆ ಪಾಶ್ಚಿಮಾತ್ಯ ಯಾವ ರಾಷ್ಟ್ರಕ್ಕೂ ಹಿಂದಿಲ್ಲ. ಇದನ್ನು ಕೇಳಿ ನಾವು ನಾಚದೆ ಇರಬಾರದು. ಇವರ ಉದಾಹರಣೆಯನ್ನು ನಾವು ಕ್ಷಣಶಃ ಮನಸ್ಸಿನಲ್ಲಿ ತಂದು ದೀರ್ಘೋದ್ಯೋಗ ಮಾಡಿದರೆ ನಿಶ್ಚಯವಾಗಿ ನಾವು ಘನತೆಗೇರುವೆವು."

ಕೈ. ರಾ. ಬ. ಶ್ರೀವಾರದ ಮಲ್ಲಪ್ಪನವರು ೩ನೆಯ ಶ್ರೀವೀರಶೈವ ಮಹಾಸಭಾ ಸ್ವಾಗತ ಸಂಘಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಕೇಳಿರುವುದೇನೆಂದರೆ–"ವ್ಯಾಪಾರ, ಒಕ್ಕಲುತನ, ಮತ್ತು ಕೈಗಾರಿಕೆಗಳ ಶಿಕ್ಷಣವನ್ನು ನಾವು ಸಂಪಾದಿಸಬೇಕು. ಪಾಶ್ಚಾತ್ಯ ವ್ಯಾಪರಿಗಳ ಜಾಣ್ಮೆ, ಐಕಮತ್ಯ ಮತ್ತು ಸಾಮರ್ಥ್ಯಗಳನ್ನು ಮೀರಿಸುವಂತಹ ಶ್ರೇಷ್ಠ ವಿದ್ಯೆಯು ನಮಗೆ ಬೇಕಾಗಿದೆ. ಈಗಿನ ಶಿಕ್ಷಣದಿಂದ ಈ ನಮ್ಮ ಉದ್ದೇಶವು ನೆರವೇರುವುದಿಲ್ಲ. ಸರಕಾರದವರಿಂದ ದೊರೆಯುತ್ತಿರುವ ವಿದ್ಯೆಯು ಪ್ರಾಥಮಿಕವಾದುದು. ಈ ವಿದ್ಯೆಯು ಪೂರೈಯಿಸಿದ ನಂತರ ಯಾವುದಾದರೊಂದು ಸ್ವತಂತ್ರ ವಿಷಯವನ್ನು ಕಲಿಯಬೇಕು. ಪ್ರಾಪಂಚಿಕ ಸುಖಕ್ಕೆ ಸಂಪತ್ತೇ ಮುಖ್ಯ ಸಾಧನವಾಗಿದೆ. ಈ ಸಂಪತ್ತು ಪ್ರಾಪ್ತವಾಗಲೂ ವ್ಯಾಪಾರ, ಕೈಗಾರಿಕೆ ಮತ್ತು ಒಕ್ಕಲುತನಗಳೇ ಮುಖ್ಯೋಪಾಯಗಳು, ಇವು ನಮ್ಮ ಸ್ವಾಧೀನವಾದ ವಿನಾ ನಮ್ಮ ಸಮಾಜವು ಏಳಿಗೆಯಾಗುವುದಿಲ್ಲವೆಂದು ನಾನು ದೃಢವಾಗಿ ನಂಬಿದ್ದೇನೆ."

ವಿದ್ಯಾಭ್ಯಾಸದ ಕಡೆಗಿರುವ ನಮ್ಮ ಸಮಾಜದ ಈಗಿನ ಲಕ್ಷ್ಯೆಯನ್ನೂ, ಇದರಿಂದಾಗುವ ಪರಿಣಾಮವನ್ನೂ, ನಾವು ಸಂಪದಭಿವೃದ್ಧಿಯ ಕಡೆಗೆ ಗಮನಿಸಬೇಕಾದ ಅವಶ್ಯಕತೆಯನ್ನೂ ಕುರಿತು ವಂಟಮುರಿ ಶ್ರೀ ಲಖಮನ ಗೌಡರು ಬ್ಯಾರಿಸ್ಟರ್ ಸಿ. ಐ. ಈ. ಯವರು ನಾಲ್ಕನೆಯ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ: ಒಕ್ಕಲುತನ, ವ್ಯಾಪಾರಗಳನ್ನೇ ಬಹುದಿವಸಗಳಿಂದ ಮಾಡುತ್ತ ಬಂದಿರುವ ನಮ್ಮ ಸಮಾಜಬಂಧುಗಳು ಮುಂದಾದರೂ ಅವುಳನ್ನು ಹಾಗೆಯೇ ಸಾಗಿಸಿಕೊಂಡು ನಡೆಯಬೇಕು. ಅನುವು ದೊರೆತ ವೇಳೆಯಲ್ಲಿ ಬೇರೊಂದು ಉದ್ಯೋಗವನ್ನಾಗಲಿ, ವಿಷಯಜ್ಞಾನವನ್ನಾಗಲಿ ಸಂಪಾದಿಸಬೇಕು. ಮುಂಚಿನ ಉದ್ಯೋಗವನ್ನು ಎಷ್ಟು ಮಾತ್ರವೂ ಬಿಡಕೂಡದು. ವ್ಯಾಪಾರ, ಉದ್ಯೋಗಗಳನ್ನು ಕುರಿತು ಹೀಗೆ ಆಗ್ರಹಪೂರ್ವಕವಾಗಿ ಪ್ರತಿಪಾದಿಸುವ ಕಾರಣವೇನೆಂದರೆ, ಇವು ಅತ್ಯಂತ ಮಹತ್ವದ ಉದ್ಯೋಗಗಳಿದ್ದು

ಬಹುಶಃ ಜಗತ್ತಿನ ಜೀವನಕ್ರಮಕ್ಕೆ ಇವೆರಡೇ ಆಧಾರಭೂತವಾಗಿತ್ತವೆ. ಈವು ಇಂದಿಗೆ ಜನದೊಳಗೆ ಇಲ್ಲವಾದರೆ ಪ್ರಳಯಕಾಲವೇ ಬಂತೆನ್ನಲಿಕ್ಕೆ ಯತ್ಕಿಂಚಿತವೂ ಸಂದೇಹವಿಲ್ಲ. ಇಂತಹ ಋದ್ಧಿ-ಸಿದ್ಧಿಗಳ ಜತೆಯು ಅನಾಯಾಸವಾಗಿ ನಮ್ಮ ಸಮಾಜದಲ್ಲ ಬುನಾದಿಯಿಂದ ಪ್ರತಿಷ್ಠಾನಗೊಂಡಿರಲು ಈಗ ಅವುಗಳನ್ನು ಧಿಕ್ಕರಿಸುವುದು ವಿವೇಕವೇ? ಹೀಗೆ ಅವುಗಳ ವಿಷಯವಾಗಿ ನಮ್ಮ ಔದಾಶೀನ್ಯವು ಬೆಳೆಯುತ್ತ ಹೋದರೆ "ವಿನಾಶಕಾಲೇ ವಿಪರೀತಬುದ್ಧಿ" ಎಂಬಂತೆ ನಮ್ಮ ಸಮಾಜದ ಅಳಿಗಾಲವೇ ಬಂತೆಂದು ತಿಳಿಯಬೇಕು.

"ವಿದ್ಯಾಭ್ಯಾಸವನ್ನು ಮಾಡುವದೆಂದರೆ ಸರಕಾರಿ ನೌಕರಿಯನ್ನು ದೊರಕಿಸುವ ಯೋಗ್ಯತೆಯನ್ನು ಪಡೆಯುವದು, ಎಂಬ ಭ್ರಾಂತಿಕಾರಕವಾದ ಮೂಢತನದ ಗ್ರಹಿಕೆಯು ಸಾಧಾರಣವಾಗಿ ಜನರಲ್ಲಿ ಹಬ್ಬರುತ್ತದೆ. ಆದರೆ ಈ ತಿಳುವಳಿಕೆಯು ನಮ್ಮ ಹಾನಿಗೆ ಮಾತ್ರ ಕಾರಣವಾಗಿರುವುದರಿಂದ ಆದಷ್ಟು ಭೇಗ ನಾವು ಇದನ್ನು ಬಿಡತಕ್ಕದ್ದು ವಿದ್ಯೆಯನ್ನು ಕೇವಲ ಜ್ಞಾನಪ್ರಾಪ್ತಿಗೂ, ಲೋಕೋಪಕಾರಕ್ಕೂ ಕಲಿಯಬೇಕು. ನಮ್ಮ ಜನರು ಸುಶಿಕ್ಷಿತರಿದ್ದರೂ ಸರಕಾರದವರು ನಮಗೆ ನೌಕರಿಯನ್ನು ಕೊಡುವುದಿಲ್ಲವೆನ್ನುವುದು ತೀರ ತಪ್ಪು ಯಾಕೆಂದರೆ, ಸರಕಾರದವರು ಕಲಿತವರಿಗೆಲ್ಲ ನೌರಿಯನ್ನು ಪೂರೈಸುವ ಗುತ್ತಿಗೆಧರರಲ್ಲ. ಆದದ್ದರಿಂದ ಈಗ ವಕೀಲಿ, ನೌಕರಿ, ಮುಂತಾದವುಗಳ ಕಡೆಗಿರುವ ಶಿಕ್ಷಿತಜನರ ಪ್ರವೃತ್ತಿಯು ಎಷ್ಟು ಮಾತ್ರವೂ ಸರಿಯಾದುದ್ದಲ್ಲ. ತಿಳಿದೂ ತಿಳಿದೂ ಅದೇ ಹಾದಿಯನ್ನು ಹಿಡಿಯುವದರಲ್ಲಿ ಅರ್ಥವಿಲ್ಲ ನಾವು ಎಂದಿನಂತೆ ನಮ್ಮ ಉದ್ಯೋಗಗಳನ್ನು ಭರದಿಂದ ಸಾಗಿಸಬೇಕು."

"ನಾವು ನಮ್ಮ ಸ್ವತಂತ್ರವಾದ ಉದ್ಯೋಗ ವ್ಯವಸಾಯಗಳನ್ನೇ ಅವಲಂಬಿಸಿರುವದು ಲೇಸು. ಯಾವನು ತನಗೆ ತಾನೇ ಸಹಾಯ ಮಾಡಿಕೊಳ್ಳುವನೋ ಅವನಿಗೆ ದೇವರು ನೇರವಾಗುತ್ತಾನೆ." ಎಂದು ಒಂದು ಕಡೆ ಉಲ್ಲೇಖವಿದೆ. ಆದುದರಿಂದ ನಾವು ನಮ್ಮ ಊರ್ಜಿತಾವಸ್ಥೆಗೆ ಸ್ವಾವಲಂಬನ ತತ್ವವನ್ನೇ ಅನುಸರಿಸಬೇಕು. ಕಳೆದುಕೊಂಡು ಹುಡುಕುವುದು ಎಂದೂ ಸರಿಯಲ್ಲ. ಈಗಿನ ಸುಸಂಧಿಯನ್ನು ನಾವು ಯೋಗ್ಯಕಾರ್ಯದಲ್ಲಿಯೇ ಉಪಯೋಗಿಸಿಕೊಳ್ಳಬೇಕು. ಹೋದ ಕಾಲವು ತಿರುಗಿ ಬರಲಾರದು. ಆದ್ದರಿಂದ ನಾವು ನಮ್ಮ ಪರಂಪರಾಗತ ಉದ್ಯೋಗಗಳ ಜ್ಞಾನವನ್ನು ಪಾಶ್ಚಾತ್ಯ ಪದ್ದತಿಯಿಂದ ಸಂಪಾದಿಸಿ ಸ್ವಹಿತವನ್ನೂ ಸಮಾಜಹಿತವನ್ನೂ ಸಾಧಿಸಿಕೊಳ್ಳಬೇಕೆಂದು ನಾನು ವಿನಯಪೂರ್ವಕವಾಗಿ ತಿಳಿಸುವೆನು.

ಸರಕಾರದ ದೊಡ್ಡ ದೊಡ್ಡ ಅಧಿಕಾರಗಳನ್ನು ನಿರ್ವಹಿಸಿ ರಾಜಕಾರ್ಯಪ್ರವೀಣರೆಂಬ ಪದವಿಯನ್ನು ಹೊಂದಿದ ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟಿ ಸಿ. ಐ. ಇ. ಯವರು ೮ನೆಯ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ "ಈಗ ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ, ವಿದ್ಯಭ್ಯಾಸ ಮಾಡುತ್ತಲಿರುವ ನಮ್ಮ ಪಂಗಡ ವಿದ್ಯಾರ್ಥಿಗಳು ಮುಂದೆ ಚೆನ್ನಾಗಿ ಸಂಪಾದಿಸಿ ಲಕ್ಷ್ಮೀಪುತ್ರರಾಗಿ ಅಭ್ಯುದಯ ಸ್ಥಿತಿಗೆ ಬಂದು ತಲೆಯೆತ್ತಿಕೊಂಡು ತಿರುಗಬೇಕೆಂದು ಅಭಿಪ್ರಾಯಪಡುವುದಾದರೆ ಸರಕಾರದ ಕೆಲಸವೇ ಮುಖ್ಯವಾದುದೆಂದು ಎಣಿಸಿ ಅದನ್ನು ಸಂಪಾದಿಸುವುದರಲ್ಲಿಯೇ ನಿರತರಾಗುವುದನ್ನು ಮಾನಸಿಕ ಮಾಡಬೇಕು. ಈ ಉದ್ದೇಶವು ನೆರವೇರಬೇಕಾದರೆ ಈ ವಿದ್ಯಾರ್ಥಿಗಳು ಯಾವುದಾದರೂ ಕೈಗಾರಿಕೆಯ ವಿದ್ಯೆಯನ್ನು ಕಲಿಯಬೇಕು. ಇದರಿಂದ ಇವರಿಗೆ ಪರತಂತ್ರವಿಲ್ಲದ ಮತ್ತು ಅಧಿಕ ಸಂಪಾದನೆಯುಳ್ಳ

ಕೈಗಾರಿಕೆ ಕಸಬನ್ನು ಕೈಕೊಳ್ಳುವುದರಿಂದ ಸುಖಜೀವನವು ದೊರೆಯುವುದಕ್ಕೆ ಅವಕಾಶವಾಗುವುದು. ಇದೂ ಅಲ್ಲದೆ ಇವರಿಗೆ ಸಂಪಾದನೆಯು ಅಧಿಕಾದಂತೆ ದೇಶದ ಸಂಪತ್ತೂ, ಅಭ್ಯುದಯವೂ, ಅಧಿಕವಾಗುತ್ತಾ ಬರುವವು. ಹೀಗಾದರೇನೇ ನಮ್ಮ ಪಂಗಡದವರಿಗೆ ಜನಸಮೂಹದಲ್ಲಿ ತಕ್ಕ ಗೌರವವು ದೊರೆಯುವುದಲ್ಲದೆ ದೇಶದ ಪೌರಕಾರ್ಯ. ರಾಜಕೀಯಾಂದೋಳನದಲ್ಲಿಯೂ ಇಂಥವರ ಗಣ್ಯತೆಯೂ, ಶಕ್ತಿಯೂ ಪ್ರಕಾಶಕ್ಕೆ ಬರುವವು.

"ನಮ್ಮ ದೇಶದಲ್ಲಿ ತಿಲಕಪ್ರಾಯರಾಗಿಯೂ ಮೂರ್ತಿಮತ್ತಾದ ದೇಶಾಭಿಮಾನಿಗಳಲ್ಲಿ ಅಗ್ರಗಣ್ಯರಾಗಿಯೂ ದೇಶಾಭಿಮಾನವನ್ನೇ ಮೂಲಮಂತ್ರವನ್ನಾಗಿಟ್ಟುಕೊಂಡಿರುವವರಾಗಿಯೂ ಇರುವರಲ್ಲದೆ ವಿದ್ಯಚ್ಛಕ್ತಿಯ ತೇಜಸ್ಸಿನಂತೆ ಯಾವ ಮಹನೀಯರ ದಿವ್ಯ ತೇಜಸ್ಸು ನಮ್ಮ ದೇಶದಲ್ಲೆಲ್ಲಾ ಸರ್ವವ್ಯಾಪಕವಾಗಿರುವುದೋ ಅಂಥಾ ಮಹಾನುಭಾವರೊಬ್ಬರು ಅಖಂಡ ಉತ್ತೇಜಕವಾದ ಅಂಶವನ್ನು ಈ ಮಹಾಸಭೆಯನ್ನಲಂಕರಿಸಿರತಕ್ಕ ತಮ್ಮಗಳ ದಿವ್ಯಚಿತ್ತಕ್ಕೆ ತರಬೇಕೆಂದು ನನಗೆ ಅಪ್ಪಣೆ ಕೊಡಿಸಿರುವುದೇನೆಂದರೆ ವ್ಯಾಪಾರದಲ್ಲಿಯೂ, ಕೈಗಾರಿಕೆಗಳಲ್ಲಿಯೂ, ಲಿಂಗಾಯತರಿಗೆ ಅತ್ಯದ್ಭುತವಾದ ನಿಪುಣತೆಯಿದೆ. ತಮ್ಮಲ್ಲಿ ಅಂತರ್ಗತವಾಗಿರುವ ಈ ನಿಪುಣತೆಯು ನೀವು ಸರ್ವವಿಧವಾಗಿಯೂ ಪ್ರಕಾಶಕ್ಕೆ ಬರುವಂತೆ ಮಾಡಿ ವೃದ್ಧಿಗೊಳಿಸಬೇಕು. ತಾವು ದಯವಿಟ್ಟು ಈ ಹಿತೋಕ್ತಿಯನ್ನು ಅತ್ಯಾದರಪುರಸ್ಸರವಾಗಿ ಸ್ವೀಕರಿಸಿ ಈ ಅದ್ವಿತೀಯ ದೇಶಾಭಿಮಾನಿಗಳ ಮಹೋದ್ದೇಶವನ್ನು ಸಾರ್ಥಕಮಾಡುವಿರೆಂದು ನಂಬಿರುತ್ತೇನೆ."

ನಮ್ಮ ಸಮಾಜದ ಪ್ರಮುಖರೂ, ಹಿತಚಿಂತಕರೂ ಮಾಡಿರುವ ಈ ಹಿತೋಪದೇಶವನ್ನು ತಾವು ಗಮನಿಸದೆ ಅನ್ಯ ಸಮಾಜಗಳು ಈವರೆಗೂ ಹೊಂದಿರುವ ಅನುಭವದ ಪ್ರಯೋಜನವನ್ನು ಪಡೆಯದೆ ಕಣ್ಣುಮುಚ್ಚಿಕೊಂಡು ಬಿ.ಎ., ಎಂ.ಎ. ಪದವಿಗಳನ್ನು ಹೊಂದುವ ಶಿಕ್ಷಣಕ್ಕಾಗಿಯೇ ನಮ್ಮ ಶಕ್ತಿಯನ್ನು ಕಳೆಯುತ್ತ ಹೋದರೆ ನಮ್ಮ ಸಮಾಜಕ್ಕೆ ಖಂಡಿತವಾಗಿಯೂ ಕ್ಷೇಮವಾಗುವುದಿಲ್ಲ. ಈಗ ದೇಶದಲ್ಲಿ ಸ್ವಾತಂತ್ರತೆಯ ವಿಚಾರಗಳು ಬಹು ಪ್ರಬಲವಾಗಿ ಪ್ರಸಾರವಾಗುತ್ತಲಿದೆ. ಅನೇಕ ಸುಶಿಕ್ಷಿತ ವರ್ಗದವರು ಪರತಂತ್ರವಾದ ಸರಕಾರಿ ಕೆಲಸಗಳನ್ನು ನಿರಾಕರಿಸಿ ಸ್ವತಂತ್ರವಾದ ಉದ್ಯೋಗಗಳನ್ನು ಮಾಡಲು ಪ್ರಾರಂಭಿಸುತ್ತಿದ್ದಾರೆ. ಸುಶಿಕ್ಷಿತರು ಯಾವ ಉದ್ಯೋಗದಲ್ಲಿ ಪ್ರವೇಶಿಸಿದರೂ ಅವರು ಜಾಗ್ರತೆ ಮುಂದಕ್ಕೆ ಬರುವುದು ಸ್ವಾಭಾವಿಕವಾಗಿದೆ. ಇಂತಹ ಸಮಯದಲ್ಲಿ ನಾವು ಮಾತ್ರ ನಮ್ಮ ಸಮಾಜದ ಮುಖ್ಯ ಜೀವನವಾದ ಒಕ್ಕಲುತನ. ಕೈಗಾರಿಕೆ ವ್ಯಾಪಾರಗಳನ್ನು ಈಗಿನ ಕಾಲಕ್ಕೆ ತಕ್ಕಂತೆ ಸುಧಾರಿಸಿಕೊಳ್ಳದಿದ್ದರೆ ಈಗ ಹೇಗೆ ವಿದ್ಯೆಯಲ್ಲಿ ಹಿಂದುಳಿದಿದ್ದೇವೆಯೋ ಹಾಗೆಯೇ ಮುಂದೆ ವ್ಯಾಪಾರ, ಕೈಗಾರಿಕೆಗಳಲ್ಲಿಯೂ ಹಿಂದೆ ಬೀಳಬೇಕಾದ ಸಮಯ ಬರುವುದು. ಆದಕಾರಣ ವಿದ್ಯಾಭ್ಯಾಸಿಗಳೂ, ಪ್ರೋತ್ಸಾಹಿಗಳು ಈಗಣ ದೇಶಸ್ಥಿತಿಯನ್ನು ಚೆನ್ನಾಗಿ ತಿಳಿದುಕೊಂಡು ಸಮಾಜವನ್ನು ಮುಂದೆ ವಿಪತ್ತಿಗೀಡುಮಾಡುವಂತೆ ಈಗಲೇ ಸಂಪದಭಿವೃದ್ಧಿಯ ಶಿಕ್ಷಣದ ಕಡೆಗೆ ಲಕ್ಷಿಸಬೇಕು.

ಈಗ ಕೈಗಾರಿಕೆ ಮತ್ತು ವ್ಯಾಪಾರ ಮೊದಲಾದ ಸಂಪದಭಿವೃದ್ಧಿಯ ಶಿಕ್ಷಣದ ಕಡೆಗೆ ಜನಗಳು ಲಕ್ಷಿಸುವಂಥೆ ಮಾಡಬೇಕು. ಇಂತಹ ಶಿಕ್ಷಣವನ್ನು ಹೊಂದಲು ದ್ರವ್ಯದ ಅನುಕೂಲತೆಯನ್ನು ಹೆಚ್ಚಾಗಿ ಕಲ್ಪಿಸಿಕೊಡಬೇಕಾದುದೇ ನಮ್ಮ ವಿದ್ಯಾಭಿವೃದ್ಧಿಯ ಫಂಡುಗಳ ಮತ್ತು ವಿದ್ಯಾಪ್ರೋತ್ಸಾಹಕರ ಮುಖ್ಯ ಕರ್ತವ್ಯವಾಗಿದೆ. ದಾನಶೂರ ಶ್ರೀ ಶಿರಸಂಗಿಕರರ ಫಂಡಿನಿಂದಲೂ, ಧಾರವಾಡ, ಬೆಂಗಳೂರು,

ಮೊದಲಾದ ಸ್ಥಳಗಳಲ್ಲಿರುವ ವಿದ್ಯಾವರ್ಧಕ ಫಂಡುಗಳಿಂದಲೂ ಸಂಪದಭಿವೃದ್ಧಿಯ ಶಿಕ್ಷಣವನ್ನು ಪರದೇಶಗಳಿಗೆ ಹೋಗಿ ಕಲಿತುಕೊಂಡು ಬರಲು ವೇತನಗಳನ್ನು ಕೊಡಲು ಪ್ರಾರಂಭಿಸಬೇಕು. ದಾನಶೂರ ಶ್ರೀ ಶಿರಸಂಗಿಕರರ ಫಂಡಿನಿಂದ ಆ ಮಹಾನುಭಾವರ ಹೆಸರಿನಲ್ಲಿ ನೂಲುವ, ನೇಯುವ, ಬಣ್ಣಕೊಡುವ ಮತ್ತು ಗಾಜು, ಸಬಕಾರ, ಮೇಣಬತ್ತಿ ಮೊದಲಾದವುಗಳನ್ನು ಮಾಡುವ ಶಿಕ್ಷಣವು ದೊರೆಯುವಂತಹ ಒಂದು ಕೈಗಾರಿಕೆಯ ವಿದ್ಯಾಲಯವನ್ನು ಕರ್ನಾಟಕದ ಮಧ್ಯಸ್ಥಳದಲ್ಲಿ ಸ್ಥಾಪಿಸಬೇಕು. ಇವೇ ಮೊದಲಾದ ಅನೇಕ ರೀತಿಗಳಿಂದ ಸಂಪದಭಿವೃದ್ಧಿಯ ಶಿಕ್ಷಣದ ಕಡೆಗೆ ಜನಗಳ ಮನಸ್ಸು ತಿರುಗುವಂತೆ ಮಾಡಿದರೆ ಈ ಫಂಡುಗಳಿಂದ ಸಮಾಜಕ್ಕೆ ಮಹುದುಪಕಾರವಾಗುವುದರಲ್ಲಿ ಅಭ್ಯಂತರವಿಲ್ಲ.

❖❖

೪ನೆಯ ಪ್ರಕರಣ

ಗುರುವರ್ಗ

ದೇಹದಲ್ಲಿ ಶಿರಸ್ಸು ಎಷ್ಟು ಪ್ರಾಧಾನ್ಯವಾದದ್ದಾಗಿದೆಯೋ, ಸಮಾಜದಲ್ಲಿ ಗುರುವರ್ಗವೂ ಅಷ್ಟು ಮುಖ್ಯವಾದದ್ದಾಗಿದೆ. ಏಕೆಂದರೆ, ಸಮಾಜ ಪುರುಷನಿಗೆ ಗುರುವರ್ಗವೇ ಶಿರಸ್ಸು ಶಿರಸ್ಸಿಗೆ ಅಷ್ಟು ಪ್ರಾಮುಖ್ಯತೆಯೇಕೆ ಬಂದಿದೆ? ಅದು ಎಲ್ಲಾ ಅವಯವಗಳಿಗೂ ಮೇಲಿದ್ದುದರಿಂದ ಬಂದಿದೆಯೊ? ಅಥವಾ ಮೊದಲು ಜನ್ಮವೆತ್ತಿರುವುದರಿಂದ ಬಂದಿದೆಯೋ? ಇಲ್ಲ ಮನುಷ್ಯನಿಗೆ ಮನುಷ್ಯತ್ವವುಂಟಾಗಬೇಕಾದರೆ ಯಾವ ಜ್ಞಾನವು ಬೇಕಾಗುತ್ತದೆಯೋ ಅಂತಹ ಜ್ಞಾನವನ್ನು ಸಂಪಾದಿಸಿಕೊಡುವ ಪಂಚಜ್ಞಾನೇಂದ್ರಿಯಗಳಲ್ಲಿ ಕಣ್ಣು ಮೊದಲಾದ ನಾಲ್ಕು ಇಂದ್ರಿಯಗಳನ್ನು ಈ ಶಿರಸ್ಸು ತನ್ನಲ್ಲಿಟ್ಟುಕೊಂಡಿದೆ. ಇಷ್ಟೇ ಅಲ್ಲ; ಇಡೀ ದೇಹಕ್ಕೆ ಜ್ಞಾನದಾನ ಮಾಡುವ ಪರಮಪವಿತ್ರವಾದ ಕಾರ್ಯವನ್ನೂ ಅದು ವಹಿಸಿಕೊಂಡಿರುತ್ತದೆ. ಆದುದರಿಂದಲೇ ಅದಕ್ಕೆ ಅಂತಹ ಶ್ರೇಷ್ಠತ್ವವನ್ನು ಕೊಟ್ಟು "ಸರ್ವೇಂದ್ರಿಯಾಣಾಂ ಶಿರಃ ಪ್ರಧಾನಂ" ಎಂದು ಜನಗಳು ಹೇಳಬೇಕಾಯಿತು. ಇದರಂತೆಯೇ ಸಮಾಜಪುರುಷನು ಸುಜ್ಞಾನಿಯಾಗಿ ಸುಖದಿಂದಿರುವಂತೆ ಮಾಡುವ ಮಹತ್ತರವಾದ ಕಾರ್ಯವನ್ನು ಗುರುವರ್ಗವು ವಹಿಸಿಕೊಂಡಿರುವುದರಿಂದ ಅದು ಸಮಾಜದಲ್ಲಿ ಶ್ರೇಷ್ಠವಾದದ್ದಾಗಿದೆ.

ಸಮಾಜಶಾಸ್ತ್ರದಂತೆ ನೋಡಿದರೂ ಜ್ಞಾನಪ್ರಸಾರಣೆಯೇ ಗುರುವರ್ಗದ ಕರ್ತವ್ಯವೆಂದು ಸಿದ್ಧವಾಗುತ್ತದೆ. ಈ ಕರ್ತವ್ಯವನ್ನು ನಮ್ಮ ವೀರಶೈವ ಸಮಾಜದ ಗುರುವರ್ಗವು ಎಂದಿನವರೆಗೂ ತೃಪ್ತಿಕರವಾಗಿ ಮಾಡುತ್ತಾ ಬಂದಿದ್ದಿತೋ ಅಂದಿನವರೆಗೂ ಸಮಾಜವು ಸುಸ್ಥಿತಿಯಲ್ಲಿಯೇ ಇದ್ದಿತು. ಆದರೆ ಈ ಸಮಾಜದ ದುರ್ದೈವದಿಂದ ನಮ್ಮ ಗುರುವರ್ಗವು ಇತ್ತೀಚೆಗೆ ಈ ಪವಿತ್ರಕರ್ತವ್ಯವನ್ನು ಬಿಡುತ್ತಾ ಬಂದುದರಿಂದ ಸಮಾಜವು ಶೋಚನೀಯ ಸ್ಥಿತಿಯನ್ನು ಹೊಂದಲವಕಾಶವಾಯಿತು. ಸಮಾಜ ಪುರುಷನಿಗೆ ಧರ್ಮವೇ ಆತ್ಮಸ್ವರೂಪವು. ಅಂತಹ ಧರ್ಮವನ್ನು ರಕ್ಷಿಸುವ ಕಾರ್ಯವಾದರೋ ಗುರುವರ್ಗದ್ದಾಗಿದೆ. ಆ ಗುರುವರ್ಗವೇ ಧಾರ್ಮಿಕ ಶಿಕ್ಷಣ ಹೊಂದುವುದನ್ನು ಬಿಟ್ಟಮೇಲೆ ಭಕ್ತವರ್ಗಕ್ಕೆ ಧರ್ಮವನ್ನು ಬೋಧಿಸುವವರಾರು? ಆದಕಾರಣ ಗುರುವರ್ಗವು ಮೊದಲು ಧರ್ಮಶಿಕ್ಷಣವನ್ನು ಹೊಂದಬೇಕು. ಈಗ ಗುರುವರ್ಗದಲ್ಲಿ ಯಾರೂ ಧರ್ಮಜ್ಞರೇ ಇಲ್ಲವೆಂಬುದೇನೂ ನಮ್ಮ ಅಭಿಪ್ರಾಯವಲ್ಲ. ಅಂತಹ ವಿದ್ವಾಂಸರು ಅನೇಕರಿದ್ದಾರೆ. ಆದರೆ ೧೦೦ ಕ್ಕೆ ೯೯ ಜನಗಳು ಧರ್ಮಶಿಕ್ಷಣವನ್ನು ಹೊಂದದವರೇ ಇದ್ದುದರಿಂದ ಈ ಪ್ರಕಾರ ಹೇಳಬೇಕಾಗಿದೆ. ಈ ವಿಷಯವಾಗಿ

ಕೈ. ಶ್ರೀ ವಾರದ ಮಲ್ಲಪ್ಪನವರು ೫ನೆಯ ಮಹಾಸಭಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ:

"ನಮ್ಮ ಧರ್ಮದ ಗುರುಗಳು ಧಾರ್ಮಿಕ ಶಿಕ್ಷಣವನ್ನು ಹೊಂದಿ ಅವರು ಪೂರ್ವಕಾಲದಲ್ಲಿ ಮಾಡುತ್ತಿದ್ದ ಧರ್ಮಸುಧಾರಣೆಯ ಪವಿತ್ರ ಕರ್ತವ್ಯವನ್ನು ಪುನಃ ಮಾಡಲು ಪ್ರಾರಂಭಿಸಿದರೆ ನಾವು ಈಗ ಯಾವ್ ಸುಧಾರಣೆಯಾಗಬೇಕೆಂದು ಹೇಳುತ್ತಿದ್ದೇವೆಯೋ ಅದು ಸ್ವಲ್ಪಕಾಲದಲ್ಲಿಯೇ ನಿಜವಾಗಿಯೂ ಆಗುವುದು. ಆದುದರಿಂದ ಗುರುಗಳು ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಯ ಕಾರ್ಯವನ್ನು ಹಿಂದಣ ಕಾಲದಂತೆ ಈಗಲೂ ಪ್ರಾರಭಿಸಿ ಸಮಾಜವೇ ತಮಗೆ ಋಣಿಯಾಗುವಂತೆ ಮಾಡಬೇಕು."

ಈಗ ದೇಶದಲ್ಲಿ ವಿಚಾರಕ್ರಾಂತಿಯು ಬಹು ವೇಗದಿಂದ ಆಗುತ್ತಲಿದೆ. ಇದಕ್ಕೆ ಪಾಶ್ಚಾತ್ಯ ಸುಧಾರಣೆಯೇ ಮುಖ್ಯ ಕಾರಣವು. ವ್ಯಕ್ತಿ ಸ್ವಾತಂತ್ರ್ಯದ ಪ್ರಭಾವದಿಂದ ಧಾರ್ಮಿಕ ಪ್ರಸಾರಣೆಯು ನಿರಾತಂಕವಾಗಿ ನಡೆದಿದೆ. ಆದುದರಿಂದ ನಾನಾ ಮತತತ್ವಗಳು ಜನಸಾಮಾನ್ಯರಿಗೂ ತಿಳಿಯಲವಕಾಶವಾಗಿದೆ. ಅನೇಕ ಅನ್ಯಮತೀಯರು ತಮ್ಮ ತಮ್ಮ ಮತತ್ವಗಳು ವಿಶೇಷ ಪ್ರಸಾರವಾಗುವದಕ್ಕೋಸ್ಕರ ನಾನಾ ರೀತಿಗಳಿಂದ ಪ್ರಯತ್ನಿಸುತ್ತಿದ್ದಾರೆ. ಜನಗಳಲ್ಲಾದರೋ ಯುಕ್ತಾಯುಕ್ತ ವಿವೇಚನಾಶಕ್ತಿಯು ಹೆಚ್ಚಾಗುತ್ತಲಿದೆ. ಇಂತಹ ಸಮಯದಲ್ಲಿ ನಮ್ಮ ಮತತತ್ವಗಳ ವಿಷಯವಾಗಿ ಸ್ವಮತೀಯರಲ್ಲಾದರೂ ಭಕ್ತಿ ವಿಶ್ವಾಸಗಳುಂಟಾಗುವಂತೆ ನಾವು ಪ್ರಯತ್ನಿಸಬೇಕು. ಇಲ್ಲದಿದ್ದರೆ ಸ್ವಮತದ ವಿಷಯದಲ್ಲಿ ಔದಾಸೀನ್ಯವೂ, ಪರಮತಗಳ ವಿಷಯದಲ್ಲಿ ಪ್ರೇಮವೂ, ಉಂಟಾಗಿ ಅತ್ಯಂತ ಶ್ರೇಷ್ಠತತ್ವಗಳಿಂದ ಕೂಡಿರುವ ಈ ವೀರಶೈವ ಮತವು ಕೊನೆಗೆ ನಾಮಮಾತ್ರದಲ್ಲುಳಿಯುವ ಕಾಲವು ಬರುವುದು. ಆದಕಾರಣ ಗುರುವರ್ಗದಲ್ಲಿರುವ ಕೆಲವು ಮಹಾಸ್ವಾಮಿಗಳಾದರೂ ಈ ವಿಷಯದ ಕಡೆಗೆ ಜಾಗ್ರತೆ ಚಿತ್ತವಿಟ್ಟು ಈ ಕಾಲಕ್ಕೆ ತಕ್ಕಂತಹ ಪದ್ಧತಿಯಲ್ಲಿ ಮತತತ್ವಗಳನ್ನು ಪ್ರಸಾರಗೊಳಿಸುವ ಧಾರ್ಮಿಕ ಶಿಕ್ಷಣಾಲಯಗಳನ್ನು ಸ್ಥಾಪಿಸಬೇಕು.

ಶ್ರೀಮನ್ನಿರಂಜನ ಶ್ರೀ ಹಾನಗಲ್ಲ ಕುಮಾರಸ್ವಾಮಿಗಳವರ ಪ್ರಯತ್ನದಿಂದ ಸ್ಥಾಪಿಸಲ್ಪಟ್ಟಿರುವ ಶಿವಯೋಗ ಮಂದಿರದಲ್ಲಿ ಈಗ ಧರ್ಮಶಿಕ್ಷಣವು ದೊರೆಯುತ್ತಿದ್ದರು ಈ ಕಾಲದಲ್ಲಿ ನಮ್ಮ ಮತತತ್ವಗಳನ್ನು ಪ್ರಸಾರಗೊಳಿಸಲು ಅದು ಅನುಕೂಲವಾಗುವುದಿಲ್ಲ. ನಮ್ಮ ಮತತತ್ವಗಳು ಈಗಿನ ಕಾಲಕ್ಕೆ ತಕ್ಕಂತಹ, ಪ್ರಯಾಣಗಳಿಂದಲೂ, ದೃಷ್ಟಾಂತಗಳಿಂದಲೂ ಪ್ರತಿಪಾದಿಸಿದರೆ ಮಾತ್ರ ಜನಗಳಿಗೆ ಅವುಗಳ ವಿಷಯದಲ್ಲಿ ನಂಬಿಕೆಯುಂಟಾಗುವುದೇ ವಿನಾ ಕೇವಲ ಪ್ರಾಚೀನ ಗ್ರಂಥಗಳಲ್ಲಿಯ ಶ್ಲೋಕಗಳನ್ನು ಎಷ್ಟು ಹೇಳಿದರೂ ಈಗ ಜನಗಳ ಮನಸ್ಸು ಸಮಾಧಾನವಾಗುವುದಿಲ್ಲ. ಶ್ರೀ ಸ್ವಾಮಿ ವಿವೇಕಾನಂದ, ಶ್ರೀ ಸ್ವಾಮಿರಾಮತೀರ್ಥ ಮೊದಲಾದ ಮಹಾಜ್ಞಾನಿಗಳು ಅದ್ವೈತಮತವನ್ನು ಮಹಾ ಮಹಾ ಜಡವಾದಿಗಳಿಗೂ ಕೂಡಾ ಒಪ್ಪಿಗೆಯಾಗುವಂತೆ ಪಾಶ್ಚಾತ್ಯಶಾಸ್ತ್ರಗಳ ಸಹಾಯದಿಂದ ಹೇಗೆ ಪ್ರತಿಪಾದಿಸುತ್ತಿದ್ದಾರೆಯೋ ಹಾಗೆಯೇ ನಮ್ಮ ಮತದ ಶ್ರೇಷ್ಠತ್ವವನ್ನಾದರೂ ಆಧುನಿಕ ಪದ್ಧತಿಯಿಂದಲೇ ಪ್ರತಿಪಾದಿಸಬೇಕು. ಆದಕಾರಣ ಧಾರ್ಮಿಕ ಶಿಕ್ಷಣವನ್ನು ತುಲನಾತ್ಮಕ ಪದ್ಧತಿಯಿಂದ (Comparetive study)ಹೊಂದಬೇಕೇ ವಿನಾ ನಮ್ಮ ಮತದ ತತ್ವಗಳನ್ನೇ ತಿಳುದುಕೊಂಡರೆ ಸಾಲದು. ಅಂಥವರಿಂದ ಮತ ಪ್ರಸಾರಣೆಯ ಕಾರ್ಯವು ಈ ಕಾಲದಲ್ಲಾಗುವುದಿಲ್ಲ.

ಈ ಕೊರತೆಯನ್ನು ನಿವಾರಣೆಮಾಡುವುದಕ್ಕೋಸ್ಕರ ಇಂಗ್ಲೀಷ್ ಮತ್ತು ಸಂಸ್ಕೃತ ಭಾಷೆಗಳನ್ನೂ ಸ್ವಮತದ ಮತ್ತು ಅನ್ಯ ಎಲ್ಲಾ ಮತಗಳ ತತ್ವಗಳನ್ನೂ ಕಲಿಸುವಂತಹ ಒಂದು ಉಚ್ಚಪ್ರತಿಯ ಧಾರ್ಮಿಕ ವಿದ್ಯಾಲಯವನ್ನು ಸ್ಥಾಪಿಸಬೇಕು. ಅಲ್ಲಿ ಶಿಕ್ಷಣ ಹೊಂದಿದವರು ೨೦ ವರ್ಷಗಳ ವರೆಗಾದರೂ ಮತೋಪದೇಶದ ಕಾರ್ಯವನ್ನು ಮಾಡಲೇಬೇಕೆಂಬ ನಿರ್ಭಂಧವಿರಬೇಕು. ಅಲ್ಲಿ ದೊರೆಯುವ ತುಲನಾತ್ಮಕವಾದ ಧಾರ್ಮಿಕ ಶಿಕ್ಷಣದಿಂದ ನಮ್ಮ ಮತತತ್ವಗಳು ಈ ದೇಶದ ಎಲ್ಲಾ ಪ್ರಸಿದ್ಧ ಭಾಷೆಗಳಲ್ಲಿಯೂ ಗ್ರಂಥಮೂಲಕ ಪ್ರತಿಪಾದಿಸಲ್ಪಟ್ಟಾಗಲೇ ನಮ್ಮ ಮತದ ಪ್ರಾಮುಖ್ಯತೆಯು ಈಗಿನ ಜನಗಳಿಗೆ ತಿಳಿದು ಅದು ರಕ್ಷಿಸಲ್ಪಡುವುದು. ಇಲ್ಲದಿದ್ದರೆ ದಿನೇ ದಿನೇ ಈ ಮತದ ತತ್ವಗಳ ವಿಷಯದಲ್ಲಿ ಉದಾಸೀನತೆಯು ಹೆಚ್ಚುತ್ತಾ ಹೋಗುವುದು. ಏಕೆಂದರೆ, ಈ ಕಾಲದ ಜನಗಳ ವಿಚಾರಸರಣಿಯೇ ಆ ರೀತಿಯಲ್ಲಿದೆ. ಆದುದರಿಂದ ಕಾಲಕ್ಕೆ ತಕ್ಕಂತಹ ಪದ್ಧತಿಗಳನ್ನನುಸರಿಯೇ ಮತೋಪದೇಶವನ್ನು ಮಾಡಬೇಕು. ಈ ಮತರಕ್ಷಣೆಯ ಕಾರ್ಯವನ್ನು ಮಾಡುವುದೇ ಗುರುವರ್ಗದ ಮುಖ್ಯ ಕರ್ತವ್ಯವಾಗಿದೆ.

ಗುರುವರ್ಗದಿಂದ ಈ ಮಹತ್ಕಾರ್ಯವಾಗಬೇಕಾದರೆ ಆ ವರ್ಗದವರಲ್ಲಿ ಪರಸ್ಪರ ಸಹಾನುಭೂತಿಯೂ, ಐಕಮತ್ಯವೂ ಇರಬೇಕಾದುದು ಅವಶ್ಯಕವಷ್ಠೆ. ಆದರೆ ಈ ಸಮಾಜದ ದುರ್ದೈವದಿಂದ ಈಗ ಅಂತಹ ಸ್ಥಿತಿಯು ಗುರುವರ್ಗದಲ್ಲಿಲ್ಲ. ಇಷ್ಟೇ ಅಲ್ಲ ಅನೈಕಮತ್ಯ. ಅಪ್ರೀತಿಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಈ ವರ್ಗದ ವಿಷಯವಾಗಿ ಇತ್ತೀಚೆಗೆ ಲೇಖನ ಮತ್ತು ಭಾಷಣಗಳ ಮೂಲಕ ನಡೆಯುತ್ತಲಿರುವ ಅಶ್ಲಾಘ್ನವಾದ ಕೋಲಾಹಲವು ಕೇವಲ ಆ ವರ್ಗಕ್ಕೊಂದೇ ಅಲ್ಲ; ವೀರಶೈವ ಸಮಾಜಕ್ಕೇನೇ ಕಲಂಕವನ್ನುಂಟುಮಾಡತಕ್ಕದ್ದಾಗಿದೆ. ಆದುದರಿಂದ ಗುರುವರ್ಗ ದಲ್ಲುಂಟಾಗಿರುವ ಈ ಕಲಹಾಗ್ನಿಯನ್ನು ಸಕಲರೂ ಸೇರಿ ಜಾಗ್ರತೆ ಶಾಂತಗೊಳಿಸಬೇಕು. ಇದು ಕಾಡಬೇಗೆಯಂತೆ ಸಮಾಜವನ್ನೇ ವ್ಯಾಪಿಸುತ್ತಲಿದೆ. ಸಮಯಭೇದ, ಮತ್ತು ಶ್ರೀ ವಿರಕ್ತಸ್ವಾಮಿಗಳ ಶ್ರೀ ಪಂಚಾಚಾರ್ಯರ ಶ್ರೇಷ್ಠತ್ವದವಾದ, ಈ ಉಭಯ ವಿಷಯಗಳೇ ಗುರುವರ್ಗದಲ್ಲುಂಟಾಗಿರುವ ಕಲಹಕ್ಕೆ ಕಾರಣವಾಗಿದೆ. ಈ ಅಭಿಪ್ರಾಯಗಳು ಸಮಾಧಾನಕರವಾಗಿ ತೀರ್ಮಾನವಾಗದ ವಿನಾ ನಮ್ಮ ಸಮಾಜಕ್ಕೆ ಕ್ಷೇಮವಿಲ್ಲ. ಕೈ. ವಾರದ ಅಪ್ಪಾಸಾಹೇಬರವರು ೫ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಾಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ವ್ಯಕ್ತಗೊಳಿಸಿದ ಈ ಕೆಳಗಿನ ಅಭಿಪ್ರಾಯಗಳ ಮೇಲಿಂದ ಕಲಹಕ್ಕೆ ಕಾರಣಗಳಾಗಿರುವ ಮೇಲಣ ಉಭಯ ವಿಷಯಗಳನ್ನೂ ನಿರ್ಣಯಸಬಹುದಾಗಿದೆ. ಅಪ್ಪಾಸಾಹೇಬರು ಹೇಳಿರುವುದೇನೆಂದರೆ :

"ಶ್ರೀಮನ್ನಿಂರಜನ (ವಿರಕ್ತ) ಮೂರ್ತಿಯು ಪಂಚಾಚಾರ್ಯರ ಮತ್ತು ಭಕ್ತರ ಉದ್ಧಾರಕ್ಕೋಸ್ಕರ ಅವತರಿಸಿದೆ. ಯುಗಭೇದದಿಂದ ಆ ಮೂರ್ತಿಗೆ ನಿರಂಜನ, ನಿರ್ಮಾಯ, ನಿಷ್ಕಲ ಮತ್ತು ಪ್ರಭು ಎಂಬ ನಾಮಗಳಿವೆ. ಈ ಕಲಿಯುಗದಲ್ಲಿ ಪ್ರಭು ಎಂಬ ನಾಮದಿಂದ ಪ್ರಸಿದ್ಧವಾಗಿದೆ. ಈ ಮೂರ್ತಿಯಿಂದ ಯಾವ ಶಾಖೆಗಳಾಗಲಿ, ಒಳಭೇದಗಳಾಗಲಿ, ಯಾವ ಯುಗದಲ್ಲುಂಟಾದ ದೃಷ್ಟಾಂತಗಳೂ ಗ್ರಂಥಗಳಲ್ಲಿಲ್ಲ. ಆದರೆ ಈಗ ಮಾತ್ರ ನಾಲ್ಕು ಸಮಯಭೇದಗಳಾಗಿವೆ. ಇವು ಗ್ರಂಥಗಳಲ್ಲಿ ಉಕ್ತವಾಗಿಲ್ಲವಾದುದರಿಂದ ಇತ್ತೀಚೆಗೆ ಏರ್ಪಟ್ಟವೆಂದು ಸ್ಪಷ್ಟವಾಗುತ್ತದೆ. ಅನೇಕ ನಿರಂಜನ ಸ್ವಾಮಿಗಳು ಈ ಸಮಯಭೇದವು ಪ್ರಾಚೀನಕಾಲದಿಂದ ನಡೆಯುತ್ತ ಬಂದದ್ದಲ್ಲವೆಂದೇ ತಿಳಿಯುತ್ತದೆ.

ಸಮಯಭೇದ ಮಾಡದಿದ್ದವರು ಅವರ ಸಮಯದಲ್ಲಿ ದೋಷಿಗಳಾಗಿಯೂ ಎಣಿಸಲ್ಪಡುವುದಿಲ್ಲ. ಆದಕಾರಣ ಎಲ್ಲ ಸಮಯಗಳೂ ಒಂದೇ ಎಂಬುದಕ್ಕೆ ಬೇರೆ ಪ್ರಮಾಣಗಳೇ ಬೇಕಾಗಿಲ್ಲ. ಅನೇಕ ದಿವಸಗಳಿಂದ ನಡೆಯುತ್ತ ಬಂದಿದ್ದ ಈ ಸಮಯಭೇದವನ್ನು ತೆಗೆದುಹಾಕಲು ಸಮಂಜಸವಾದ ನಿರಂಜನಸ್ವಾಮಿಗಳೂ, ಭಕ್ತಮಹೇಶ್ವರರೂ, ಎಲ್ಲಾ ಸಮಯಗಳೂ ಒಂದೇ ಎಂದು ತಿಳಿದು ಪೂರ್ವದಂತೆ ಐಕಮತ್ಯವನ್ನು ಹೊಂದಬೇಕೆಂದು ನಾನು ಪ್ರಾರ್ಥಿಸುತ್ತೇನೆ."

ಶ್ರೀ ಮನ್ನಿರಂಜನ ಸ್ವಾಮಿಗಳು ಶ್ರೀ ಪಂಚಾಚಾರ್ಯರಿಗಿಂತಲೂ ಶ್ರೇಷ್ಠರೆಂತಲೂ, ಇವರು ತಮ್ಮಲ್ಲಿರುವ ಸಮಯಭೇದವನ್ನು ತೆಗೆದುಹಾಕಬೇಕೆಂತಲೂ ಕೈ. ಅಪ್ಪಾಸಾಹೇಬರು ಪಟ್ಟ ಅಭಿಪ್ರಾಯವು ವೀರಶೈವ ಮತಾನುಯಾಯಿಗಳಾದ ಸಕಲ ಸುಜ್ಞರಿಂದಲೂ ಅನುಮೋದಿಸಲ್ಪಡದೆ ಇರಲಾರದು. ಭಕ್ತವರ್ಗಕ್ಕೆ ಈ ಉಭಯ ಶ್ರೀಗಳವರೂ ಪೂಜ್ಯರಾಗಿಯೇ ಇದ್ದಾರೆ. ಏಕೆಂದರೆ ಭಕ್ತೋದ್ಧಾರ ವಿಷಯದಲ್ಲಿ ಇವರುಗಳು ಬೇರೆ ಬೇರೆ ಕಾರ್ಯಗಳನ್ನು ವಹಿಸಿಕೊಂಡಿರುವರು. ಆಯಾಯ ಸ್ವಾಮಿಗಳವರು ಮತೋದ್ಧಾರದ ವಿಷಯದಲ್ಲಿ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡಿದಾಗಲೇ ಅವರು ಭಕ್ತರ ಸೇವಾಸ್ತುತಿಗಳಿಗೆ ಪಾತ್ರರಾಗುತ್ತಾರೆ. ಜನಗಳಾದರೋ ಈಗ ಸಮಾಜೋದ್ಧಾರ ಮಾಡುವವರನ್ನೇ ಪೂಜ್ಯರೆಂದು ತಿಳಿಯುತ್ತಿದ್ದಾರೆ. ಅಂತಹ ಮಹನೀಯರು ಅವರು ಶ್ರೀ ವಿರಕ್ತಸ್ವಾಮಿಗಳೇ ಆಗಿರಲಿ, ಅಥವಾ ಶ್ರೀ ಪಂಚಾಚಾರ್ಯರೇ ಆಗಿರಲಿ, ಇಲ್ಲವೆ ಭಕ್ತಿವರ್ಗದವರೇ ಆಗಿರಲಿ, ಅವರು ಸಮಾಜಕ್ಕೆ ಶ್ರೇಷ್ಠರಾಗಿಯೇ ತೋರುತ್ತಾರೆ. ಆಯಾಯ ಆಶ್ರಮಗಳನ್ನು ವಹಿಸಿದ ಮಾತ್ರದಿಂದಲೇ ಅವರುಗಳಿಗೆ ಅಂತಹ ಶ್ರೇಷ್ಠತ್ವವನ್ನು ಸಮಾಜವು ಈಗ ಕೊಡುವುದಿಲ್ಲ. ದಾನಶೂರ ಶ್ರಿ ಶಿರಸಂಗಿಕರರು ಭಕ್ತವರ್ಗದವರಾಗಿದ್ದರೂ ಸಮಾಜಕ್ಕೆ ಅವರು ಅತ್ಯಂತ ಪೂಜ್ಯರಾಗಿಲ್ಲವೇ? ಆ ಮಹಾಪುರಾತನರ ಶ್ರೇಣಿಯಲ್ಲಿಯೇ ಈ ಮಹಾತ್ಮವನ್ನು ಸಮಾಜವು ಸೇರಿಸಲಿಲ್ಲವೇ? ಸಮಾಜಕ್ಕೋಸ್ಕರ ಯಾರು ತಮ್ಮ ಸರ್ವಸ್ವವನ್ನೂ ಸೂರೆಮಾಡುತ್ತಾರೆಯೋ ಅಂತಹ ಮಹಾತ್ಮರೇ ಸಮಾಜಕ್ಕೆ ಶ್ರೇಷ್ಠರಾಗಿ ತೋರುತ್ತಾರೆ. ಆದಕಾರಣ ಈಗಿನ ಕಾಲಸ್ಥಿತಿಯನ್ನರಿತು ಪರಸ್ಪರ ಸಹಾನುಭೂತಿಯಿಂದ ತೃಪ್ತಿಕರವಾದ ತೀರ್ಮಾನವನ್ನು ತಮ್ಮಲ್ಲಿಯೇ ಮಾಡಿಕೊಂಡ ಸಮಾಜವನ್ನು ಉದ್ಧಾರಮಾಡಬೇಕೆಂದು ಉಭಯ ಶ್ರೀ ಗುರುವರ್ಯರುಗಳಿಗೂ ಅತ್ಯಂತ ವಿನಯದಿಂದ ಪ್ರಾರ್ಥಿಸುತ್ತೇವೆ. ಹಾಗೆ ಮಾಡದೆ ಈ ಕಲಹವನ್ನೇ ಹೆಚ್ಚಿಸುತ್ತಾ ಹೋದರೆ ಭಕ್ತವರ್ಗದಲ್ಲಿದ್ದ ಭಕ್ತಿಯು ಇನ್ನೂ ಕಡಿಮೆಯಾಗಿ ಕೊನೆಗೆ ಸಮಾಜ ಪುರುಷನ ರುಂಡ ಮತ್ತು ಮುಂಡಗಳೇ ಭಿನ್ನವಾಗುವ ಶೋಚನೀಯ ಸ್ಥಿತಿಯು ಪ್ರಾಪ್ತವಾಗಬಹುದು.

ನಮ್ಮ ಸಮಾಜಕ್ಕೆ ಮುಂದೆ ಪ್ರಾಪ್ತವಾಗುವ ಈ ವಿಪತ್ತನ್ನು ತಮ್ಮತಮ್ಮಲ್ಲಿಯೇ ನಿವಾರಣೆಮಾಡಲು ಸಾಧ್ಯವಿಲ್ಲದಿದ್ದರೆ ಈ ಉಭಯ ವಿಷಯಗಳನ್ನು ನಿರ್ಣಯಿಸಲು ನಮ್ಮ ಸಮಾಜದ ಪ್ರಮುಖರಾದ ಭಕ್ತವರ್ಗದ ಪಂಚರನ್ನು ಎರಡು ಪಂಗಡದವರು ನಿಯಮಿಸಿಕೊಂಡು ಅವರು ನಮ್ಮ ಮತದ ವಿಷಯದಲ್ಲಿ ಬಲ್ಲಿದರಾದ ಕೆಲವು ಪಂಡಿತರ ಸಹಾಯದಿಂದ ಮಾಡುವ ತೀರ್ಮಾನದಂತೆಯಾದರೂ ನಡೆದುಕೊಳ್ಳುವ ಏರ್ಪಾಟನ್ನು ಮಾಡಬೇಕು. ಸಮಾಜದ ಪ್ರಮುಖರೂ ಈ ವಿಷಯದ ಕಡೆಗೆ ಜಾಗ್ರತೆ ಗಮಿನಿಸುವುದು ಅತ್ಯಾವಶ್ಯಕವೂ. ಈ ವಿಷಯವನ್ನುಪೇಕ್ಷಿಸಿದರೆ ಪರಿಣಾಮದಲ್ಲಿ ಇದು ಖಂಡಿತವಾಗಿಯೂ ಅನರ್ಥವನ್ನೂಂಟುಮಾಡದೆ ಬಿಡುವುದೇ ಇಲ್ಲ. ಈಗಲೇ ಈ ಕಲಹದಿಂದ

ಸಮಾಜಕಾರ್ಯಕ್ಕೆ ಪ್ರತಿಬಂಧವಾಗಿಲ್ಲವೇ? ಕಳೆದ ೧೫ ವರ್ಷಗಳಿಂದಲೂ ನಮ್ಮ ಸಮಾಜದ ಪ್ರಮುಖರು ರಕ್ಷಿಸಿಕೊಂಡು ಬಂದಿದ್ದ ಶ್ರೀಮದ್ವೀರಶೈವ ಮಹಾಸಭಾ ಸಂಸ್ಥೆಗೆ ಬೀರೂರು ಮಹಾಸಭೆಯಲ್ಲಾದ ಅನರ್ಥವು ಸಮಾಜಕ್ಕೆ ಸಾಧಾರಣವಾದ ವಿಪತ್ತೆಂದು ಭಾವಿಸಬಹುದೇ? ಈ ಕಲಹಾಗ್ನಿಯು ಶಾಂತವಾದ ವಿನಾ ನಮ್ಮ ಸಮಾಜದಿಂದ ಯಾವ ಮಹತ್ಕಾರ್ಯಗಳೂ ಆಗುವುದಿಲ್ಲ. ಆದಕಾರಣ ಈ ವಿಷಯದ ಕಡೆಗೆ ಸಮಾಜದ ಪ್ರಮುಖರೂ ಗಮನಿಸಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

❖❖

೫ನೆಯ ಪ್ರಕರಣ

ಭಕ್ತವರ್ಗ

ನಮ್ಮ ಸಮಾಜದ ದುರ್ದೈವದಿಂದ ಗುರುವರ್ಗದಲ್ಲಿ ಹೇಗೆ ಕಲಹವಿದೆಯೋ ಹಾಗೆಯೇ ಭಕ್ತವರ್ಗದಲ್ಲಿಯೂ ಇದೆ. ಭಕ್ತರಲ್ಲಿ ಶೀಲವಂತರು, ಮೇಲುಪಾವುಡದವರು, ಬಣಜಿಗರು, ಜ್ಯೋತಿಪಣದವರು, ಗುಂಡಾಭಕ್ತರು, ಎಂಬಿವೇ ಮೊದಲಾದ ಅನೇಕ ಒಳಭೇದಗಳಿವೆಯಷ್ಟೆ. ಇವುಗಳೆಲ್ಲಾ ಅವರವರ ಆಚಾರ ಮತ್ತು ವೃತ್ತಿಗಳ ಮೇಲಿಂದ ಬಂದ ಹೆಸರುಗಳೇ ವಿನಾ ಶಾಸ್ತ್ರಸಮ್ಮತವಾಗಿ ಭಿನ್ನ ಭೆದಗಳನ್ನಾಗಲಿ, ಉಚ್ಚನೀಚತ್ವಗಳನ್ನಾಗಲಿ ಕಲ್ಪಿಸಿ ಉಂಟುಮಾಡಿದವುಗಳಲ್ಲ, ಬಳಕೆಯಲ್ಲಿರುವ ಭಕ್ತರೆಲ್ಲರೂ ಸಮಾನರೇ ವಿನಾ ಅವರಲ್ಲಿ ಶ್ರೇಷ್ಠ ಕನಿಷ್ಠತ್ವಗಳನ್ನು ಹೇಳುವುದು ಅಶಾಸ್ತ್ರೀಯವಾಗಿಯೂ, ಅಸಂಗತವಾಗಿಯೂ ಇದೆ. ಯಾವುದೋ ಒಂದು ಕಾಲದಲ್ಲಿ ಕೆಲವರು ಆಚರಿಸಿದ್ದನ್ನೇ ಈಗಲೂ ಅನುಸರಿಸುತ್ತ ಹೋಗುವುದು ಯುಕ್ತವಲ್ಲ, ಇದರಿಂದ ಸಮಾಜದ ಐಕಮತ್ಯಕ್ಕೆ ಬಲವಾದ ಪ್ರತಿಬಂಧವುಂಟಾಗಿದೆ. ಅನೇಕ ಒಳಭೇದದವರಲ್ಲಿ ಪರಸ್ಪರ ಪ್ರೀತಿವಿಶ್ವಾಸಗಳಿಲ್ಲದೆ ದ್ವೇಷಾಸೂಯೆಗಳು ಹೆಚ್ಚುತ್ತಾ ಇವೆ. ಕೆಲವು ಒಳಭೇದದವರ ಈ ಘಾತಕವಾದ ಪದ್ಧತಿಯಿಂದ ಈ ಸಮಾಜದಲ್ಲಿಯ ಅನೇಕ ಪಂಗಡಗಳು ಸ್ವತಂತ್ರವಾಗಲುಪಕ್ರಮಿಸಿವೆ. ಈಗಲಾದರೂ ನಾವು ಎಚ್ಚೆತ್ತು ಈ ನಮ್ಮ ದುಷ್ಟಪದ್ಧತಿಯನ್ನು ಕ್ರಿಯಾಮೂಲಕ ನಿವಾರಣೆಮಾಡದಿದ್ದರೆ ಸಮಾಜವು ಕ್ಷಯರೋಗಿಯಂತೆ ದಿನೇ ದಿನೇ ಕ್ಷೀಣಿಸುತ್ತಾ ಹೋಗುವುದರಲ್ಲಿ ಸಂಶಯವಿಲ್ಲ. ಈ ವಿಷಯವಾಗಿ ರಾ. ಬ. ಅರಟಾಳ ರುದ್ರಗೌಡರು ಐ. ಎಸ್. ಓ. ರವರು ೭ನೆಯ ಶ್ರೀಮದ್ವೀರಶೈವ ಮಹಾಸಭಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದರ ಮುಖ್ಯಾಂಶವೇನೆಂದರೆ :

"ನಮ್ಮಲ್ಲಿಯ ಕೆಲವು ಒಳಭೇದದವರು ತಾವು ಅನ್ಯರಿಗಿಂತ ಶ್ರೇಷ್ಠರೆಂದು ತಿಳಿದುಕೊಂಡು ಅವರಲ್ಲಿ ಭೋಜನವನ್ನೂ ಶರೀರ ಸಂಬಂಧವನ್ನು ಮಾಡುವುದಿಲ್ಲ. ಆದುದರಿಂದ ಪರಸ್ಪರ ಪ್ರೀತಿ, ಸಹಾಯಗಳು ತಪ್ಪಿಹೋಗಿವೆ. ನೀವು ನಮ್ಮ ಸಮಾಜವನ್ನು ಉನ್ನತಿ ಸ್ಥಿತಿಗೆ ತರಬೇಕೆಂದಪೇಕ್ಷಿಸುತ್ತಿದ್ದರೆ, ನೀವು ನಮ್ಮ ಮತಬಾಂಧವರನ್ನು ಪ್ರೀತಿಸಿ ಮತ್ತು ನೀವು ಅವರನ್ನು ಸಕಲ ವಿಷಗಳಲ್ಲಿಯು ನಿಮಗೆ ಸಮಾನರೆಂತಲೂ, ಅವರಲ್ಲಿ ಊಟವನ್ನು ಮತ್ತು ದೇಹಸಂಬಂಧವನ್ನು ಮಾಡಲು ಯಾವ ಅನುಮಾನವಿಲ್ಲವೆಂತಲೂ, ತಿಳಿದು ಆ ಪ್ರಕಾರ ಆಚರಿಸಿರಿ. ಊಟವನ್ನು ಮತ್ತು ಶರೀರಸಂಬಂಧವನ್ನು ಮಾಡಲು ನಾನು ಹೇಳುವುದೇಕೆಂದರೆ, ಅವರು ನಿಮಗೆ ಸಮಾನರೆಂಬ ನಿಮ್ಮ ಭಾವನೆಯನ್ನು

ಕಾರ್ಯಮೂಲಕ ತೋರಿಸಲು ನಿಮಗೆ ಇದೊಂದೇ ಉಪಾಯವು. ಈ ಕಾರ್ಯಗಳಿಂದ ಪರಸ್ಪರ ಪ್ರೀತಿಯುಂಟಾಗುತ್ತದೆ. ಅಶಾಸ್ತ್ರೀಯವಾಗಿಯೂ, ಅಸಮಂಜಸವಾಗಿಯೂ ಇರುವ ಈ ಒಳಭೇದಗಳನ್ನೂ ತೆಗೆದುಹಾಕಿದರೆ ನೀವು ಖಂಡಿತವಾಗಿಯೂ ಅಭಿವೃದ್ಧಿಗೆ ಬರುವುದಲ್ಲದೆ ನಮ್ಮ ಸಮಾಜವನ್ನೂ ಉನ್ನತ ಸ್ಥಿತಿಗೆ ತಂದಂತಾಗುವುದು.

ಹಿಂದುಗಳಲ್ಲಿ ಬೇಕಾದವರ ಸಂಗಡ ಶರೀರಸಂಬಂಧವನ್ನು ಬೆಳೆಯಿಸಬಹುದು ಎಂದು ಶ್ರೀಯುತ ಪಾಟೀಲರು ನಿಯಮನಿರ್ಮಾಣ ಸಭೆಯಲ್ಲಿಟ್ಟ ವಿಷಯವನ್ನೇ ನಮ್ಮ ಸಮಾಜದ ಅನೇಕ ಜನಗಳು ಅನುಮೋದಿಸಿ ಅದಕ್ಕೆ ವಿರೋಧಿಸಿದವರನ್ನು ಮನಸ್ಸಿಗೆ ಬಂದಂತೆ ದೂಷಿಸಿದರು. ಇಂಥವರು ನಮ್ಮಲ್ಲಿಯ ಒಳಭೇದಗಳನ್ನು ತಮ್ಮ ಕೃತಿಯಿಂದ ತೆಗೆದುಹಾಕಲು ಸಿದ್ಧರಾಗಬಾರದೇ? ಭಕ್ತರಲ್ಲಿ ಯಾರು ಕಡಿಮೆಯವರೆಂದು ಜನರು ತಿಳಿದುಕೊಂಡಿದ್ದಾರೆಯೇ ಅವರಲ್ಲಿಯೇ ಶರೀರಸಂಬಂಧವನ್ನು ಬೆಳೆಯಿಸುವ ಮನೋಧೈರ್ಯವನ್ನು ಈ ಧೀರರು ತೋರಿಸಬಾರದೇ? ಅಂತ್ಯಜರ ಸ್ಪರ್ಶವೇ ಮೊದಲಾದ ಅವರ ಅಭಿವೃದ್ಧಿಯ ವಿಷಯದಲ್ಲಿ ತಾವು ಬಹು ಅಭಿಮನಶಾಳಿಗಳೆಂತಲೂ, ಇದನ್ನು ವಿರೋಧಿಸುತ್ತಿರುವವರು ದುಷ್ಟರೂ, ನೀಚರೂ, ಎಂತಲೂ ಹೇಳುತ್ತಿರುವ ನಮ್ಮ ಸಮಾಜಶಾಲಿಗಳೆಂತೆಲೂ, ತಮ್ಮ ಮತದವರಲ್ಲಿಯೇ ಅನೇಕರನ್ನು ಕೀಳೆಂದು ಭಾವಿಸುತ್ತಿರುವುದು ಲಾಂಛನಾಸ್ಪದವಾದುದಲ್ಲವೇ? ಯಾವ ಸಮಾನತ್ವವನ್ನು ಇವರು ಸ್ವಮತೀಯರಿಗೇನೇ ಕೊಡಲು ಸಿದ್ಧರಾಗಿಲ್ಲವೋ ಅಂತಹ ಸಮಾನತ್ವವನ್ನು ಇವರು ಅನ್ಯಸಮಾಜದವರಿಂದ ಅಪೇಕ್ಷಿಸುತ್ತಿರುವುದು ಹಾಸ್ಯಾಸ್ಪದವಲ್ಲವೇ? ಈ ವಿಷಯದಲ್ಲಾಗುತ್ತಿರುವ ವಿಚಾರ ಜಾಗ್ರತೆಯನ್ನು ನೋಡಿಯಾದರೂ ಒಳಭೇದಗಳನ್ನು ತೆಗೆದು ಹಾಕಲು ಸಕಲರೂ ಪ್ರಯತ್ನಿಸಿಸಬೇಕು.

ನಮ್ಮ ಸಮಾಜದ ಸಕಲ ಜನಗಳೂ ಆಚಾರ ವಿಚಾರಗಳಲ್ಲಿ ಸುಧಾರಿಸಲಿಕ್ಕೂ, ಸಮಾಜದಲ್ಲಿ ಐಕ್ಯಮತವುಂಟಾಗುವುದಕ್ಕೂ ಈ ಉಭಯ ಆಚರಣೆಗಳೇ ಮುಖ್ಯ ಸಾಧನಗಳಾಗಿವೆ. ಗುರುವರ್ಗದವರಲ್ಲಿ ಯಾರು ಯಾವ ಉದ್ಯೋಗವನ್ನು ಮಾಡುತ್ತಿದ್ದರೂ ಆ ಉದ್ಯೋಗಕ್ಕೆ ಮಹತ್ವವನ್ನು ಕೊಡದೆ ಸ್ವಗೋತ್ರವನ್ನು ಮಾತ್ರ ಬಿಟ್ಟು ಅನ್ಯಗೋತ್ರದವರಲ್ಲಿ ಅವರು ಹೇಗೆ ದೇಹಸಂಬಂಧವನ್ನು ಮಾಡುತ್ತಿದ್ದಾರೆಯೋ ಹಾಗೆಯೇ ಭಕ್ತವರ್ಗದವರು ಕೂಡಾ ಅನ್ಯ ಗೋತ್ರದವರಲ್ಲಿ ಅವು ಯಾವ ಕಸಬನ್ನೇ ಮಾಡುತ್ತಿರಲಿ, ಅದಕ್ಕೆ ಉಚ್ಚ – ನೀಚತ್ವವನ್ನು ಕಲ್ಪಿಸದೆ ಅವರ ಸಂಗಡ ಶರೀರಸಂಬಂದವನ್ನು ಬೆಳೆಯಿಸಬೇಕು. ನಮ್ಮ ಸಮಾಜದ ಭಕ್ತವರ್ಗದಲ್ಲಿರುವ ಅಸಂತೋಷವನ್ನು ನಿವಾರಣೆಮಾಡಲು ಈ ಶಾಸ್ತ್ರೀಯವಾದ ಪದ್ಧತಿಯನ್ನು ಪ್ರಾರಂಭಿಸುವುದೇ ಉತ್ತಮೋಪಾಯವು. ಆದುದರಿಂದ ಸಕಲ ಭಕ್ತರೂ ಬಳಕೆಯಲ್ಲಿರುವ ಸ್ವಮತೀಯ ಭಕ್ತರ ಮನೆಯಲ್ಲಿ ಅವರು ಯಾವ ಉದ್ಯೋಗವನ್ನೇ ಮಾಡುತ್ತಿರಲಿ, ಊಟ ಮಾಡುವುದನ್ನು ಮತ್ತು ಸಗೋತ್ರಿಯರಲ್ಲದ ಅಂತಹ ಯಾವ ಭಕ್ತರಲ್ಲಿಯಾದರೂ ದೇಹಸಂಬಂಧ ಬೆಳೆಯಿಸುವುದನ್ನು ಜಾಗ್ರತೆ ಆಚರಣೆಯಲ್ಲಿ ತರಬೇಕೆಂದು ಪ್ರಾರ್ಥಿಸುತ್ತೇವೆ.

❖❖

೬ನೆಯ ಪ್ರಕರಣ

ಮುಂದಾಳುಗಳು

ಸಮಜಶಾಸ್ತ್ರದೃಷ್ಟಿಯಿಂದ ನೋಡಿದರೆ ಒಂದು ಸಮಾಜವು ವಿಶಾಲವಾದ ಒಂದು ಕುಟುಂಬವಾಗಿಯೇ ಇದೆಯೆಂದು ತೋರುತ್ತದೆ. ಒಂದು ಕುಟುಂಬವು ಅಭಿವೃದ್ಧಿಗೆ ಭರಬೇಕಾದರೆ ಆ ಕುಟುಂಬದಲ್ಲಿರುವವರಿಗೆ ಕಾಲಕ್ಕೆ ತಕ್ಕ ಸಲಹೆಗಳನ್ನು ಕೊಡುತ್ತಾ ಅವರು ಕರ್ತವ್ಯತತ್ಪರರಾಗಿರುವಂತೆ ಮಾಡಿ ಆ ಕುಟುಂಬವು ಯಾವ ವಿಪತ್ತಿಗೂ ಸಿಲುಕದಂತೆ ಅದನ್ನು ಬಹು ಎಚ್ಚರಿಕೆಯಿಂದ ಸಾಗಿಸಿಕೊಂಡು ಹೋಗಲಿಕ್ಕೆ ಯಜಮಾನನು ಹೇಗೆ ಅವಶ್ಯವಾಗಿ ಬೇಕಾಗುತ್ತದೆಯೋ ಹಾಗೆಯೇ ಒಂದು ಸಮಾಜವು ಅಭಿವೃದ್ಧಿಗೆ ಬರಬೇಕಾದರೂ ಆ ಸಮಾಜವನ್ನು ಸುಸ್ಥಿತಿಗೆ ತೆಗೆದುಕೊಂಡು ಹೋಗತಕ್ಕ ಸಮರ್ಥರಾದ ಯಜಮಾನರುಗಳು ಆ ಸಮಾಜದಲ್ಲಿರಬೇಕಾಗುತ್ತದೆ. ಅಂತಹ ಯಜಮಾನರುಗಳೇ ಸಮಾಜದ ಮುಂದಾಳುಗಳು, ಕುಟುಂಬದ ಹಿತಾಹಿತಗಳು ಹೇಗೆ ಆ ಕುಟುಂಬದ ಯಜಮಾನನ ಮೇಲೆಯೇ ಮುಖ್ಯವಾಗಿ ಅವಲಂಬಿಸಿರುತ್ತವೆಯೋ ಹಾಗೆಯೇ ಒಂದು ಸಮಾಜದ ಉನ್ನತಾವನತೆಗಳಾದರ ಆ ಸಮಾಜದ ಮುಂದಾಳುಗಳನ್ನೇ ಅವಲಂಬಿಸಿದೆ. ಒಂದು ಸಮಾಜದಲ್ಲಿರುವ ಮುಂದಾಳುಗಳ ಮೇಲಿಂದ ಆ ಸಮಾಜದ ಸ್ಥಿತಿಯನ್ನು ನಾವು ಧಾರಾಳವಾಗಿ ತಿಳಿದುಕೊಳ್ಳಬಹುದು. ಆದಕಾರಣ ಒಂದು ಸಮಾಜದ ಮುಂದಾಳುಗಳ ಚರಿತ್ರೆಯೇ ಆ ಸಮಾಜದ ಚರಿತ್ರೆಯೆಂದರೆ ಅತ್ಯುಕ್ತಿಯಾಗಲಾರದು. ಈ ಪ್ರಕಾರ ಮುಂದಾಳುಗಳು ಸಮಾಜದಲ್ಲಿ ಶ್ರೇಷ್ಠಸ್ಥಾನವನ್ನು ಹೊಂದಿದ್ದಾರೆ.

ನಮ್ಮ ಸಮಾಜದಲ್ಲಿ ಕಳೆದ ಅರ್ಧಶತಮಾನದಿಂದಲೂ ಆಗಿಹೋದ ಮತ್ತು ಪ್ರಕೃತದಲ್ಲಿರುವ ಮುಂದಾಳುಗಳ ವಿಷಯವಾಗಿ ಆಲೋಚಿಸಿದರೆ ನಮ್ಮ ಮೇಲಿನ ಪ್ರತಿಪಾದನೆಯ ನಿಜತ್ವವು ವಾಚಕರಿಗೆ ವೇದ್ಯವಾಗಬಹುದು. ನಮ್ಮ ಸಮಾಜದಲ್ಲಿ ಸಮರ್ಥರಾದ ಮುಂದಾಳುಗಳಿದ್ದಾಗಲೇ ಸಮಾಜೋನ್ನತಿಯ ಕಾರ್ಯಗಳಾದವೆಂಬುದು ೨ನೆಯ ಪ್ರಕರಣದಲ್ಲಿ ವಿವರಿಸಿರುವ ಸಂಗತಿಗಳಿಂದ ಸ್ಪಷ್ಟವಾಗುತ್ತದೆ, ಅವರಲ್ಲಿ ಅನೇಕರು ನಮ್ಮ ಸಮಾಜದ ದುರ್ದೈವದಿಂದ ಆಕಾಲದಲ್ಲಿಯೇ ಲಿಂಗೈಕ್ಯರಾದರು. ಆ ಹಿಂದಿನ ಮುಂದಾಳುಗಳಲ್ಲಿ ಈಗ ರಾ. ಬ. ರುದ್ರಗೌಡರು ಅರಟಾಳ ಐ. ಎಸ್. ಓ. ಶ್ರೀಮಂತ ಲಖಮನಗೌಡರು ಒಂಟಮುರಿಕರ್ ಸಿ. ಐ. ಇ. ದಿವಾನ್ ಬಹದ್ದೂರ್ ಕೆ. ಪಿ. ಪುಟ್ಟಣ್ಣಶೆಟ್ಟರು ಸಿ. ಐ. ಇ. ಮತ್ತು ಶ್ರೀಯುತ ಶಾಂತವೀರಪ್ಪನವರು ಮೆಣಸಿನಕಾಯಿ, ಈ

ನಾಲ್ಕು ಜನ ಮಹಾಶಯರು ವೃದ್ಧಾಪ್ಯದಿಂದ ವಿಶ್ರಾಂತಿಯನ್ನು ಹೊಂದಿದ್ದಾರೆ. ಆದರೂ ಸಮಾಜದ ಎಷ್ಟೋ ಕಾರ್ಯಗಳನ್ನು ಮಾಡುತ್ತಲೇ ಇದ್ದಾರೆ. ಇವರುಗಳಿಂದ ಇನ್ನೂ ಹೆಚ್ಚಿನ ಕಾರ್ಯಗಳನ್ನಪೇಕ್ಷಿಸುವುದು ವಿಹಿತವಲ್ಲ. ಹಾಗಾದರೆ ಇನ್ನುಳಿದ ಈ ಕಾಲದ ಮುಂದಾಳುಗಳಾರು? ಸರಕಾರಿ ಅಧಿಕಾರದಲ್ಲಿದ್ದರೂ ಸಮಾಜಕ್ಕೆ ಮಹದುಪಕಾರವನ್ನು ಮಾಡುತ್ತಿದ್ದ ರಾ. ಬ. ಅರಟಾಳ ಸಾಹೇಬರಂತಹ ಮುಂದಾಳುಗಳು ಈಗ ನಮ್ಮ ಸಮಾಜದ ಅಧಿಕಾರಿಗಳಲ್ಲಿ ಯಾರಾದರೂ ಇದ್ಧಾರೆಯೇ? ತಾವು ಆಗರ್ಭಶ್ರೀಮಂತರಾಗಿದ್ದರೂ ಸಮಾಜದ ದುಸ್ಥಿತಿಯನ್ನು ನಿವಾರಣೆಯಮಾಡಲು ಪರಿಶ್ರಮಪಟ್ಟ ದಾನಶೂರ ಶಿರಸಂಗಿಕರ್, ಶ್ರೀಮಂತ ಒಂಟಮುರಿಕರ್‌ರಂತಹ ದೇಸಾಯಿಗಳು ಈಗಿನ ನಮ್ಮ ದೇಸಾಯಿಗಳಲ್ಲಿ ಯಾರಾದರೂ ಇದ್ದಾರೆಯೇ? ತಾವು ಘನವ್ಯಾಪಾರಿಗಳಾಗಿದ್ದರೂ ಸಮಾಜದ ಹಿತಕ್ಕಾಗಿ ಯಾವಾಗಲೂ ಪ್ರಯತ್ನಿಸುತ್ತಿದ್ದ ಕೈ. ರಾ. ಬ. ಅಪ್ಪಾಸಾಹೇಬರಂತಹ ಮುಂದಾಳುಗಳು ಈಗಿನ ವರ್ತಕರಲ್ಲಿ ಯಾರಾದರೂ ಇದ್ದಾರೆಯೇ? ತಮ್ಮ ಅಸಾಧಾರಣವಾದ ಪಾಂಡಿತ್ಯದಿಂದ ಧಾರ್ಮಿಕ ಜಾಗ್ರತೆಯನ್ನುಂಟುಮಾಡಿದ ಕೈ. ವೈ. ವೀರಸಂಗಪ್ಪನವರಂತಹ ಮಾರ್ಗದರ್ಶಿಗಳು ಈಗ ನಮ್ಮ ಸಮಾಜದ ವಿದ್ವಾಂಸರುಗಳಲ್ಲಿ ಯಾರಾದರೂ ಇದ್ಧಾರೆಯೇ? ಸಮಾಜಬಂಧುಗಳೇ, ನಮ್ಮ ಸಮಾಜದ ಮುಂದಾಳುಗಳೆಲ್ಲಿ? ನಾನಾ ವಿಚಾರಗಳಿಂದ ಮಹತ್ತರವಾದ ವ್ಯತ್ಯಾಸವಾಗುತ್ತಿರುವ ಈ ಕಠಿಣಕಾಲದಲ್ಲಿ ನಮ್ಮ ಸಮಾಜವನ್ನು ಶ್ರೇಯಸ್ಕರವಾದ ಮಾರ್ಗದಲ್ಲಿ ತೆಗೆದುಕೊಂಡು ಹೋಗತಕ್ಕ ಮುಂದಾಳುಗಳೆಲ್ಲಿದ್ಧಾರೆ? ಎಂದು ಸಮಾಜ ಹಿತಚಿಂತಕರು ಕೇಳಿದರೆ ನಾವು ನಿರುತ್ತರರಾಗುವ ಸಮಯ ಬಂದಿಲ್ಲವೇ? ಈ ದುಸ್ಥಿತಿಯನ್ನು ನೋಡಿ ಯಾರಿಗೆ ತಾನೆ ವಿಷಾದವಾಗಲಾರದು?

ಒಂದು ಸಣ್ಣ ಕುಟುಂಬವೇ ಸಮರ್ಥವಾದ ಯಜಮಾನನಿಲ್ಲದಿದ್ದರೆ ಅವ್ಯವಸ್ಥೆಯನ್ನು ಹೊಂದುತ್ತದೆ. ಸಮಾಜವೆಂಬ ಈ ವಿಶಾಲವಾದ ಕುಟುಂಬವನ್ನಾದರೋ ಮುಂದಾಲೋಚನೆಯಿಂದಲೂ, ದಕ್ಷತೆಯಿಂದಲೂ ಹಿತಕರವಾದ ರೀತಿಯಲ್ಲಿ ನಡೆಯಿಸಿಕೊಮಡು ಹೋಗಲು ಮುಂದಾಳುಗಳೇ ಇಲ್ಲದಿದ್ದರೆ ಇದು ಯಾವ ಸ್ಥಿತಿಗೆ ಹೋಗಬಹುದೆಂಬುದನ್ನು ವಾಚಕರೇ ಯೋಚಿಸಬೇಕು. ಈಗಿನ ಕಾಲವಾದರೋ ಪ್ರತಿಯೊಂದು ವಿಷಯದಲ್ಲಿಯೂ ಸ್ಪರ್ಧೆಯಿಂದಲೇ ಜಯಪ್ರದವನ್ನು ಹೊಂದಬೇಕಾದದ್ದಾಗಿದೆ. ಇಂತಹ ಸಮಯದಲ್ಲಿ ಸಮಾಜದಲ್ಲಿರುವ ಶಕ್ತಿಸಾಹಸಗಳೆಲ್ಲಾ ಒಳ್ಳೆಯ ರೀತಿಯಲ್ಲಿ ವಿನಿಯೋಗವಾಗುವಂತೆ ಮಾಡುವ ಮುಂದಾಳುಗಳಲ್ಲಿಲ್ಲದಿದ್ದುದು ಈ ಸಮಾಜದ ದುರ್ದೈವವೇ ಸರಿ. ಹಿಂದಿನ ಮುಂದಾಳುಗಳು ಈಗ ಕಾರ್ಯವನ್ನು ಮಾಡುವಂತಿಲ್ಲದಿದ್ದರೂ ಈ ೩೦ಲಕ್ಷ ಜನಸಂಖ್ಯೆಯುಳ್ಳ ಸಮಾಜದಲ್ಲಿ ಈಗ ಹೊಸದಾಗಿ ಯಾರೂ ಮುಂದಾಳುಗಳಾಗಿಲ್ಲವೇ? ಎಂದು ಯಾರಾದರೂ ಕೇಳಬಹುದು. ಹಾಗೆ ಅವಿಚ್ಛಿನ್ನವಾಗಿಯೇ ಮುಂದಾಳುಗಳ ಪರಂಪರೆಯಿರುವುದೇನೋ ರೂಢಿಯಿದೆ. ಆದರೆ ನಮ್ಮ ದುರ್ದೈವದಿಂದ ಅಂತಹ ಪರಂಪರೆಯು ನಮಗೆ ದೊರೆತಿಲ್ಲ ದೇಸಾಯಿಗಳಲ್ಲಾಗಲಿ, ವ್ಯಾಪಾರಿಗಳಲ್ಲಾಗಲಿ, ಅಥವಾ ಅಧಿಕಾರಿಗಳಲ್ಲಾಗಲಿ, ನಮ್ಮ ಸಮಾಜದ ಮುಂದಾಳುಗಳಲ್ಲಿವೆಂಬುದನ್ನು ಈ ಮುಂಚೆಯೇ ಹೇಳಿದ್ದಾಗಿದೆಯಷ್ಟೆ ಇನ್ನುಳಿದುದು ವಕೀಲರ ವರ್ಗವು. ಈ ಕಾಲದಲ್ಲಿ ಈ ವರ್ಗದವರೇ ಸಾರ್ವಜನಿಕ ಕಾರ್ಯಗಳಲ್ಲಿ ಮುಂದಾಳುಗಳಾಗುವುದು ಹೆಚ್ಚು ಆದುದರಿಂದ ಈ ವರ್ಗದ ಕಡೆಗೆ ಗಮನಿಸೋಣ.

ನಮ್ಮ ಸಮಾಜದಲ್ಲಿ ಬುದ್ದಿಶಾಲಿಗಳೂ, ಕಾರ್ಯದಕ್ಷರೂ ಆದ ಅನೇಕ ವಕೀಲರುಗಳಿದ್ಧಾರೆ. ಆದರೆ ಅವರುಗಳು ಈಗ ಕೇವಲ ಸ್ಥಳೀಯ ಮುಂದಾಳುಗಳಾಗಿದ್ದಾರೆಯೇ ವಿನಾ ನಮ್ಮ ಇಡೀ ವೀರಶೈವ ಸಮಾಜದ ಮುಂದಾಳುಗಳಾಗಿಲ್ಲ. ಕೈ. ಎಂ. ಬಸವಯ್ಯನವರು ಮೈಸೂರು ಪ್ರಾಂತ್ಯದ ವೀರಶೈವರಲ್ಲಿ ಎಷ್ಟೋ ಮುಂದಾಳುಗಳಾಗಿದ್ದರು. ಇಷ್ಟರಲ್ಲೇ ಇವರು ನಮ್ಮ ಸಮಾಜದ ಮುಂದಾಳುಗಳಾಗಬಹುದೆಂಬ ನಿರೀಕ್ಷಣೆಯೂ ಇದ್ದಿತು. ಆದರೆ ಅವರು ಅಕಾಲದಲ್ಲಿಯೇ ಕೈಲಾಸವಾಸಿಗಳಾದುದರಿಂದ ಈಗ ನಮ್ಮಲ್ಲಿ ಒಂದು ಪ್ರಾಂತ್ಯಕ್ಕಾದರೂ ಪ್ರಮುಖ ರಾಗಿರುವವರಿಲ್ಲದಾಯಿತು. ರಾ. ಸಾ. ಫಕೀರಪ್ಪನವರು ಹಳ್ಳಿಕಟ್ಟಿ ಬಿ.ಎ.ಎಲ್.ಎಲ್.ಬಿ. ಇವರು ಅನೇಕ ವರ್ಷಗಳಿಂದ ಸಮಾಜ ಕಾರ್ಯಗಳನ್ನು ಮಾಡುತ್ತಾ ಬಂದಿದ್ದಾರೆ. ಇವರು ತಮ್ಮ ಸಾತ್ವಿಕವೃತ್ತಿಯಿಂದಲೂ, ಅವಿಶ್ರಾಂತ ಶ್ರಮದಿಂದಲೂ ವಿಜಾಪುರ ಜಿಲ್ಲೆಯ ವೀರಶೈವರಲ್ಲಿ ಮುಂದಾಳುಗಳಾಗಿದ್ಧಾರೆ. ಶ್ರೀಯುತ ಸಿದ್ದಪ್ಪನವರು ಕಂಬಳಿ ಬಿ.ಎ.ಎಲ್.ಎಲ್.ಬಿ. ಶ್ರೀಯುತ ಚನ್ನಪ್ಪನವರು ಹುಲಕೋಟಿ ಬಿ.ಎ.ಎಲ್.ಎಲ್.ಬಿ. ಮತ್ತು ಶ್ರೀಯುತ ಜಿ. ಪರಮಶಿವಯ್ಯನವರು ಬಿ.ಎ.,ಎಲ್.ಎಲ್.ಬಿ. ಈ ಪದವೀಧರರು ಈಗ ತಾನೆ ಹೆಚ್ಚಿನ ಸಾರ್ವಜನಿಕ ಕಾರ್ಯಗಳಲ್ಲಿ ಪ್ರವೇಶಿಸಿದ್ಧಾರೆ. ಇವರ ಈಗಿನ ಕಾರ್ಯಕ್ಷೇತ್ರವು ವಿಸ್ತಾರವಾದದ್ದಾಗಿರುವುದರಿಂದ ಕೇವಲ ನಮ್ಮ ಸಮಾಜಕ್ಕೇನೇ ಇವರುಗಳಿಂದ ಎಷ್ಟರಮಟ್ಟಿಗೆ ಪ್ರಯೋಜನವಾಗುತ್ತದೆಂಬುದು ಮುಂದೆ ತಿಳಿಯತಕ್ಕದ್ಧಾಗಿದೆ. ಶ್ರೀಯುತ ಸಿದ್ದರಾಮಪ್ಪನವರು ಪಾವಟೆ ಬಿ.ಎ.,ಎಲ್.ಎಲ್.ಬಿ. ಮತ್ತು ಶ್ರೀಯುತ ವೀರಪ್ಪನವರು ಬಿಳಿಅಂಗಡಿ ಬಿ.ಎ.,ಎಲ್.ಎಲ್.ಬಿ. ಈ ಉಭಯ ವಿದ್ವಾಂಸರು ನಮ್ಮ ಮತದ ತತ್ವಗಳನ್ನು ಗ್ರಂಥ ಮೂಲಕ ಎಷ್ಟೋ ಮಟ್ಟಿಗೆ ಪ್ರಸಾರಮಾಡುತ್ತಿದ್ಧಾರೆ. ಈ ನಮ್ಮ ವಕೀಲರುಗಳಿಂದ ಸಮಾಜಕ್ಕೆ ಮಹದುಪಕಾರವಾಗಿ ಇವರು ಇಡೀ ಸಮಾಜದ ಮುಂದಾಳುಗಳಾಗಲೆಂದು ಯಾರು ತಾನೇ ಹಾರೈಸಲಾರರು? ಆದರೆ ಪ್ರಕೃತದಲ್ಲಿ ಮಾತ್ರ ಈ ವರ್ಗದಲ್ಲಿಯೂ ನಮ್ಮ ಸಮಾಜದ ಮುಂದಾಳುಗಳಿಲ್ಲವೆಂದೇ ಅತ್ಯಂತ ವಿಷಾದದಿಂದ ಹೇಳಬೇಕಾಗಿದೆಯಷ್ಟೇ.

ನಮ್ಮ ಸಮಾಜದಲ್ಲಿರುವ ಈ ಮಹತ್ತರವಾದ ಕೊರತೆಯನ್ನು ನಿವಾರಣೆಮಾಡಲು ವೀರಶೈವ ಮಹಾಸಭೆಯನ್ನು ಜೀರ್ಣೋದ್ಧಾರ ಮಾಡುವುದೊಂದೇ ಮುಖ್ಯೋಪಾಯವು. ಆ ಸಂಘಶಕ್ತಿಯಿಂದಲೇ ನಮ್ಮ ವಿಪತ್ತುಗಳನ್ನೆಲ್ಲಾ ಕಳೆದುಕೊಳ್ಳಬೇಕಾಗಿದೆ. ಮಹಾಸಭೆ ಸಮಾಜ ಸೇವಕರನ್ನುಂಟುಮಾಡುವ ಈ ಕಾಲದ ಕಾರ್ಯಾಲಯವು ನಮ್ಮ ಸಮಾಜದವರಿಗೆ ಅವರಲ್ಲಿರುವ ಸಮಾಜಸೇವಾಶಕ್ತಿಯನ್ನು ಪ್ರದರ್ಶಿಲು ಈ ಮಹಾಸಭೆಯೇ ವಿಹಿತವಾದ ರಂಗಸ್ಥಳವು ಅನೇಕ ವ್ಯಕ್ತಿಗಳಲ್ಲಿರುವ ಸಮಾಜಸೇವಾ ಶಕ್ತಿಯು ಏಕೀಭವಿಸಿ ಅದು ಪರಿಣಾಮಕಾರಿಯಾಗುವಂತೆ ಮಾಡಲು ಈ ಮಹಾಸಭೆಗೆ ಮಾತ್ರ ಸಾಮರ್ಥ್ಯವಿದೆ. ಆದುದರಿಂದ ಇದರ ಮೂಲಕವಾಗಿಯೇ ಸಮಾಜವು ಊರ್ಜಿತ ಸ್ಥಿತಿಗೆ ಬರಬೇಕಾಗಿದೆ. ಕಲಿಯುಗದಲ್ಲಿ ಸಂಘಶಕ್ತಿಯಿಂದಲೇ ಕಾರ್ಯಸಾಧ್ಯವೆಂಬುದು ಕೇವಲ ಗ್ರಂಥೋಕ್ತಿಯೇ ಅಲ್ಲ. ನಮ್ಮ ನೆರೆಯಲ್ಲಿಯೇ ನಡೆಯುತ್ತಲಿರುವ ಅಸಂಖ್ಯಾತ ಕಾರ್ಯಗಳೂ ದೃಷ್ಟಾಂತಗಳಾಗಿವೆ. ಈ ಉದ್ದೇಶವನ್ನಿಟ್ಟುಕೊಂಡೇ ನಮ್ಮ ಮೊದಲಿನ ಮುಂದಾಳುಗಳು ಈ ಮಹಾಸಭೆಯನ್ನು ಸ್ಥಾಪಿಸಿದರು. ಈ ವಿಷಯವಾಗಿ ಮೊದಲನೆಯ ಮಹಾಸಭಾಧ್ಯಕ್ಷರಾದ ದಾನಶೂರ ಕೈ. ಶಿರಸಂಗಿಕರರು ತಮ್ಮ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ:

"ನಮ್ಮ ಧರ್ಮವು ಮುಂಚಿನ ಸ್ಥಿತಿಗೆ ಬಂದು ನಾವೆಲ್ಲರೂ ಧರ್ಮೈಕಬದ್ಧರಾಗಬೇಕಾದರೆ ಏನುಮಾಡಬೇಕೆಂಬುದೇ ಈ ಸಭೆಯ ಮುಖ್ಯ ಉದ್ದೇಶವು. ಇನ್ನು ಇದರೊಡನೆ ಕಾಲಕ್ಕೆ ಸರಿಯಾಗಿ ನಮ್ಮ ಸಂಘದಲ್ಲಿ ಸಾಮಾಜಿಕ ಸುಧಾರಣೆ, ಕಲಾಕೌಶಲ್ಯಗಳ ಜ್ಞಾನ, ವ್ಯವಹಾರಜ್ಞಾನ, ಮೊದಲಾದವುಗಳೀಗೆ ಏನು ಮಾಡಿದರೆ ಉತ್ತೇಜನ ಬಂದೀತೆಂದು ವಿಚಾರಮಾಡುವುದೇ ಈ ಸಭೆಯ ಎರಡನೆಯ ಉದ್ದೇಶವೂ. ಧರ್ಮಸುಧಾರಣೆಯಲ್ಲಿಯೂ, ಇತರ ಸಾಮಾಜಿಕ ಸುಧಾರಣೆಯಲ್ಲಿಯೂ, ನಮ್ಮ ಸಂಘವು ಹಿಂದುಳಿದಿದ್ದು ನಮ್ಮಲ್ಲಿ ಶೂನ್ಯಸಿಂಹಾಸನಾಧಿಪತಿಗಳ ಮತ್ತು ಉಳಿದ ದೊಡ್ಡ ದೊಡ್ಡ ಧರ್ಮಗುರುಗಳ ಹಾಗೂ ಅವರ ಅನುಯಾಯಿಗಳ ಮನಸ್ಸಿನಲ್ಲಿ ಆ ಸಂಬಂಧದಿಂದ ಜನಿಸಿದ ಕಲಂಕವನ್ನು ಹೋಗಲಾಡಿಸುವುದಕ್ಕೋಸ್ಕರ ಯತ್ನಮಾಡಬೇಕೆಂಬ ವಿಚಾರದಿಂದ ಈ ಪ್ರಕಾರ ಸಭೆಗೂಡಿಸಿದ್ದು ನೋಡಿ ನನಗೆ ಪರಮಾನಂದವಾಗುತ್ತದೆ."

"ಇನ್ನು ಮುಂದೆಯಾದರೂ ಇಂಥಾ ಮಹಾಸಭೆಗಳನ್ನು ಮೇಲಿಂದ ಮೇಲೆ ಕೂಡಿಸಿ ಧರ್ಮವೃದ್ಧಿ ಸಮಾಜಸುಧಾರಣೆ, ವಿದ್ಯಾರ್ಜನೆ, ಕಲಾಕೌಶಲ್ಯಗಳ ಉನ್ನತಿ ಇವುಗಳ ಬಗ್ಗೆ ವಿಚಾರಮಾಡುವುದು ಬಹಳ ಅವಶ್ಯಕವಾಗಿದೆ. ಇದರಿಂದಲೇ ನಮ್ಮ ಜನರಿಗೆ ಇಹಪರ ಸೌಖ್ಯಗಳೂ ದೊರೆತಕ್ಕವುಗಳಾಗಿವೆ. ಮತ್ತು ಇಂಥ ಸಭೆಗಳು ಕೂಡುವುದರಿಂದ ಯಾವತ್ತೂ ಭಾಗಗಳಲ್ಲಿಯ ನಮ್ಮ ಮತದ ಮುಖ್ಯ ಮುಖ್ಯ ಜನರ ದರ್ಶನವು ಒಬ್ಬರಿಗೊಬ್ಬರಿಗೆ ಆಗಿ ಎಲ್ಲರ ವಿಚಾರಗಳನ್ನು ತಿಳಿದುಕೊಳ್ಳಲಿಕ್ಕೂ, ತಮ್ಮಲ್ಲಿದ್ದ ಕೀಳ ಆಚರಣೆಗಳನ್ನು ದೂರಮಾಡಲಿಕ್ಕೂ, ವ್ಯಾಪಾರ ಉದ್ಯೋಗಗಳಲ್ಲಿದ್ದ ನ್ಯೂನತೆಗಳ ವಿಚಾರಮಾಡಿ ಅವುಗಳಲ್ಲಿ ಏನು ಸುಧಾರಣೆ ಮಾಡಬೇಕೆಂಬುದನ್ನು ನಿರ್ಣಯಿಸಲಿಕ್ಕೂ, ನಾವೆಲ್ಲರೂ ಸಮರ್ಥರಾಗುತ್ತೇವೆ. ನಮ್ಮ ಮತಸ್ಥರು ಏನಾದರೂ ಅಡಚಣೆಯಲ್ಲಿ ಬಂದರೆ ಒಬ್ಬರಿಗೊಬ್ಬರು ಸಹಾಯಮಾಡಬೇಕೆಂಬ ಸಹಾನುಭೂತಿಯು ಅವರಲ್ಲಿ ಹುಟ್ಟಿ ಎಲ್ಲರ ಅಡಚಣೆಗಳು ತಮ್ಮಿಂದ ತಾವೇ ದೂರವಾಗುವವು. ಇದಾದರೂ ಈ ಮಹಾಸಭೆಯ ಫಲವೆಂದು ತಿಳಿಯಬೇಕು. ಇವೇ ಮೊದಲಾದ ಕಾರಣಗಳನ್ನು ಮನಸ್ಸಿನಲ್ಲಿ ತಂದು ನಮ್ಮಲ್ಲಿಯ ಮಹನೀಯರು ಈ ಮಹಾಸಭೆಯನ್ನು ಕೂಡಿಸಿದ್ದಾರೆ."

ಈ ಮಹಾಸಭೆಯಿಂದಾಗತಕ್ಕ ಪ್ರಯೋಜನಗಳನ್ನೂ ಇದರ ಮಹತ್ವವನ್ನೂ ಕುರಿತು ಕೈ. ರಾ. ಬ. ವಾರದ ಮಲ್ಲಪ್ಪನವರು ೫ನೆಯ ಮಹಾಸಭಾಧ್ಯಕ್ಷರಾಗಿ ತಮ್ಮ ಭಾಷಣದಲ್ಲಿ ಹೇಳಿರುವುದೇನೆಂದರೆ. "ಈ ಮಹಾಸಭೆಯೇ ನಮ್ಮ ಸಮಾಜದ ಮುಖವು. ಈ ಮಹಾಸಭೆಯೇ ನಮ್ಮ ಈ ಮಹಾಸಭೆಯು ಕೊನೆಯ ಕಾರ್ಯವು. ಈ ಪ್ರಕಾರ ಕಾಮಧೇನುವಿನಂತಿರುವ ಮಹಾಸಭೆಯ ವಿಷಯದಲ್ಲಿರುವ ನಮ್ಮ ಉದಾಸೀನತೆಯೇ ನಮ್ಮ ದುಸ್ಥಿತಿಗೆ ಕಾರಣವಾಗಿದೆ. ನಾವು ನಮ್ಮಲ್ಲಿರುವ ಸಮಾಜಸೇವಾಶಕ್ತಿಯನ್ನು ನಾನಾ ಮುಖಗಳಿಂದ ಕಳೆಯುತ್ತಿದ್ದೇವೆ. ಆ ಅನೇಕರ ಉತ್ಸಾಹಗಳು ಏಕೀಭವಿಸಲು ಅವಕಾಶವೇ ಇಲ್ಲದಂತಾಗಿದೆ. ಮಹಮ್ಮದೀಯರು ನಮ್ಮ ತರುವಾಯ ತಮ್ಮ ಸಮಾಜದ ಸಭೆಯನ್ನೇರ್ಪಡಿಸಿಕೊಂಡು ಈಗ ಎಷ್ಟೋ ಪ್ರಯೋಜನ ಹೊಂದುತ್ತಿರುವುದನ್ನು ನಾವು ನೋಡುತ್ತಿದ್ದರೂ ನಮ್ಮಲ್ಲಿ ನಮ್ಮ ಮಹಾಸಭೆಯನ್ನು ನಿರಾಂತಕವಾಗಿ ಪರಿಣಾಮಕಾರಿಯಾಗುವಂತೆ ನಡೆಯಿಸಿಕೊಂಡು ಹೋಗುವ ಬುದ್ಧಿಯುಂಟಾಗಿಲ್ಲ. ಈ ವರೆವಿಗೂ ಮಹಾಸಭೆಯು ೧೭ ಸಾರಿ ಸೇರಬೇಕಾಗಿದ್ದಿತು. ಆದರೆ ೯ ಸಾರಿ ಮಾತ್ರ ಕೂಡಿದೆ. ಇದು ನಮ್ಮ

ಸಮಾಜಕ್ಕೆ ಕಳಂಕವನ್ನುಂಟು ಮಾಡತಕ್ಕದ್ದಲ್ಲವೇ? ಸ್ವಸಮಾಜದ ಕಡೆಗೆ ಲಕ್ಷ್ಯಯನ್ನೇ ಕೊಡದೆ ಗೌರವ, ಮನ್ನಣೆಗಳಿಗೋಸ್ಕರ ಅನ್ಯಸಮಾಜಗಳಲ್ಲಿ ಸೇರಿ ದೇಶೋದ್ಧಾರ ಮಾಡುತ್ತಿದ್ದೇವೆಂಬುದು ಅದೆಂತಹ ದೇಶಸೇವೆ? ಅನ್ಯ ಸಮಾಜಗಳಲ್ಲಿ ಸೇರಲೆಬಾರದೆಂಬುದೆನು ನಮ್ಮ ಅಭಿಪ್ರಾಯವಲ್ಲ. ಆದರೆ ಅವರು ಸ್ವಸಮಾಜವನ್ನು ಮಾತ್ರ ಖಂಡಿತವಾಗಿಯೂ ಮರೆಯಬಾರದು. ತಮ್ಮಲ್ಲಿರುವ ಸಾರ್ವಜನಿಕ ಹಿತೇಚ್ಛೆಯ ಅಲ್ಪಸ್ವಲ್ಪ ಶಕ್ತಿಯನ್ನೂ ಪರಸಮಾಜಗಳಲ್ಲಿಯ ಕಾರ್ಯಗಳಲ್ಲಿಯೇ ಕಳೆದುಬಿಟ್ಟರೆ ಸ್ವಸಮಾಜವನ್ನು ಮುಂದಕ್ಕೆ ತರುವವರಾರು? ಆದುದರಿಂದ ಸಾರ್ವಜನಿಕ ಕಾರ್ಯಗಳನ್ನು ಮಾಡುತ್ತಿರುವ ನಮ್ಮ ಸಮಾಜದ ಸಕಲ ಮಹಾಶಯರೂ ಮೊದಲು ತಮ್ಮ ಸಮಾಜಬಾಂಧವರನ್ನು ಸುಸ್ಥಿತಿಗೆ ತರಲು ಪ್ರಯತ್ನಿಸಬೇಕು. ಇದು ದೇಶಸೇವೆಯಲ್ಲಿಯೇ ಒಂದು ಕಾರ್ಯವಾಗಿದೆ. ಅನಂತರ ಅನ್ಯ ಸಮಾಜಗಳಲ್ಲಿ ತಮ್ಮ ಶಕ್ತಿ ಸಾಹಸಗಳನ್ನು ಕಳೆಯಬಹುದು. ನಮ್ಮ ಸಮಾಜದ ವಿಷಯದಲ್ಲಿಯಾದರೂ ಸಕಲ ಸುಶಿಕ್ಷಿತರೂ ಏಕಾಭಿಪ್ರಾಯದಿಂದ ಮಹಾಸಭೆಯನ್ನು ಜಾಗ್ರತೆ ಜೀರ್ಣೋದ್ಧಾರ ಮಾಡಿ ಆ ಮೂಲಕ ಸಮಾಜವನ್ನು ರಾಜಕೀಯ, ಸಾಮಾಜಿಕ, ಸಾಂಪತ್ತಿಕ, ಮೊದಲಾದ ಸಕಲ ವಿಷಯಗಳಲ್ಲಿಯೂ ಅಭಿವೃದ್ಧಿ ಸ್ಥಿತಿಗೆ ತರಬೇಕಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಮಹಾಸಭೆಯಿಂದ ಪ್ರಯೋಜನವೇನು? ವೃಥಾ ದ್ರವ್ಯಹಾನಿಯಲ್ಲವೇ? ಎಂದು ಹೇಳುವವರೂ ನಮ್ಮಲ್ಲಿ ಬಹುಜನಗಳಿದ್ಧಾರೆ. ಪಾಪ! ಅವರ ವಿಚಾರದೃಷ್ಟಿಗೆ ಇದರಿಂದಾಗುವ ಮಹತ್ತರವಾದ ಫಲಗಳು ಕಾಣುವುದಿಲ್ಲ. ಇಂತಹ ಜನಗಳಿಂದ ನಮ್ಮ ಸಮಾಜವು ಕೂಡಿರುವುದರಿಂದಲೇ ಮಹಾಸಭೆಯನ್ನು ಕೂಡಿಸುವ ಅವಶ್ಯಕತೆಯು ವಿಶೇಷವಾಗಿದೆ. ಈಗ ಪ್ರಪಂಚವು ಯಾವ ಶಕ್ತಿಯಿಂದ ನಡೆದಿದೆಯೆಂಬುದನ್ನು ಅವರೇನು ಬಲ್ಲರು? ಸಂಘಶಕ್ತಿಯು ಈ ಇಪ್ಪತ್ತನೆಯ ಶತಮಾನದಲ್ಲಿ ಮಾಡುತ್ತಲಿರುವ ಅದ್ಭುತವಾದ ಕಾರ್ಯಗಳನ್ನು ಅವರು ತಿಳಿದುಕೊಂಡಿದ್ದರೆ ಹೀಗೆ ಆಡಿಕೊಳ್ಳುತ್ತಿದ್ದರೇ? ಮಹಾಸಭೆಯನ್ನು ಕೂಡಿಸುವುದು ನಿರರ್ಥಕವಾದದ್ದಾಗಿದ್ದರೆ ಈ ಸಭೆಯನ್ನು ಚಿರಸ್ಥಾಯಿಗೊಳಿಸಲು ೬೩ ಸಹಸ್ರ ರೂಪಾಯಿಗಳು ೮ನೆಯ ಮಹಾಸಭೆಯಲ್ಲಿ ಕೂಡುತ್ತಿದ್ದವೇ? ಇದೊಂದೇ ದೃಷ್ಟಾಂತದಿಂದ ಮಹಾಸಭೆಯ ಮಹತ್ವವು ಎಷ್ಟಿದೆಯೆಂಬುದನ್ನು ತಿಳಿದುಕೊಳ್ಳಬಹುದು. ಮುಂದಾಲೋಚನೆಯಿಲ್ಲದ ಜನಗಳಿಂದ ಮಾಡಲ್ಪಟುವ ಇಂತಹ ಆಕ್ಷೇಪಣೆಗಳ ಕಡೆಗೆ ಗಮನಿಸದೆ ಇನ್ನು ಸಮಾಜದ ಸುಶಿಕ್ಷಿತರು ಈ ಮಹಾಸಭೆಯನ್ನು ಕೂಡಲೇ ಜೀರ್ಣೋದ್ಧಾರ ಮಾಡುವುದು ಅವಶ್ಯಕವಾಗಿದೆ. ಇದು ಇವರ ಮೇಲೆ ಬಿದ್ದಭಾರವಾಗಿದೆ. ನಮ್ಮ ಸಮಾಜದ ಧನಿಕರು ತಮ್ಮ ದ್ರವ್ಯದ ಮೂಲಕ ಸಹಾಯಮಾಡಿದ್ಧಾರೆ. ನಮ್ಮ ಸಮಾಜದ ಸುಶಿಕ್ಷಿತರು ತಮ್ಮ ವಿದ್ಯಾಶಕ್ತಿಯನ್ನು ಸಮಾಜದ ಈ ಪವಿತ್ರಕಾರ್ಯಕ್ಕೆ ವೆಚ್ಚಮಾಡಲು ಸಿದ್ಧರಾಬೇಕು. ಈ ಪ್ರಕಾರ ಲಕ್ಷ್ಮೀ ಸರಸ್ವತಿಯರ ಸಮ್ಮೇಲನವಾದ ದಿನವೇ ನಮ್ಮ ಸಮಾಜದ ಸುದಿನವು.

ಶ್ರೀಮದ್ವೀರಶೈವ ಮಹಾಸಭೆಯನ್ನು ಧಾರವಾಡದಲ್ಲಿರುವ ಮಹಾಸಭಾ ಸ್ಟ್ಯಾಂಡಿಂಗ್ ಕಮಿಟಿಯವರು ಮತ್ತು ಬೆಂಗಳೂರಿನಲ್ಲಿರುವ ಮಹಾಸಭಾ ಚಿರಸ್ಥಾಯಿ ಫಂಡಿನವರು ಕೂಡಿ ಜೀರ್ಣೋದ್ಧಾರ ಮಾಡಬೇಕಾಗಿದೆ. ಆದುದರಿಂದ ಚಿರಸ್ಥಾಯಿ ಫಂಡಿನ ಅಧ್ಯಕ್ಷರಾದ ದಿವಾನ್ ಬಹದ್ದೂರ ಕೆ. ಪಿ. ಪುಟ್ಟಣ್ಣಶೆಟ್ಟರವರು ಮತ್ತು ಸ್ಟ್ಯಾಂಡಿಂಗ್ ಕಮಿಟಿಯ ಅಧ್ಯಕ್ಷರಾದ ಶ್ರೀಯುತ

ಮೆಣಸಿನಕಾಯಿ ಶಾಂತವೀರಪ್ಪನವರು ಈ ವಿಷಯದ ಕಡೆಗೆ ಲಕ್ಷಿಸಬೇಕೆಂದು ನಾವು ವಿನಯದಿಂದ ಪ್ರಾರ್ಥಿಸುವತ್ತೇವೆ. ಈ ಮುಂದಾಳುಗಳು ಪ್ರಯತ್ನಿಸದಿದ್ದರೆ ಈ ಕಾರ್ಯವು ನೆರವೇರುವುದಿಲ್ಲ. ಈ ಮಹಾಶಯರು, ಮಹಾಸಭಾಫಂಡಿನ ವ್ಯವಸ್ಥೆಯನ್ನು ಮಾಡಿ ಸಭೆಯು ಮುಂದೆ ನಿರಾಂತಕವಾಗಿ ಜರುಗುವಂತೆ ಮಾಡಿಕೊಟ್ಟರೆ ದ್ರವ್ಯದಾನ ಮಾಡಿದವರ ಸದುದ್ದೇಶವನ್ನು ಸಾರ್ಥಕಗೊಳಿಸಿದ ಪುಣ್ಯಕ್ಕೆ ಇವರು ಭಾಗಿಗಳಾಗುವುದಲ್ಲದೆ ಈ ಉಭಯ ಮಹನೀಯರು ಸಮಾಜಕ್ಕೆ ಈವರೆಗೂ ಮಾಡಿರುವ ಕಾರ್ಯಗಳಲ್ಲಿ ಇದು ಶ್ರೇಷ್ಠತರವಾದದ್ದಾಗಿ ಪರಿಣಮಿಸುವುದರಲ್ಲಿ ಅಭ್ಯಂತರವಿಲ್ಲ. ಈ ಫಂಡಿನ ವ್ಯವಸ್ಥೆಯಾಗದಿದ್ದರೆ ಇನ್ನು ಮೇಲೆ ಸಮಾಜಕಾರ್ಯಕ್ಕೆ ದ್ರವ್ಯಶೇಖರವಾಗುವುದು ಕಠಿಣವಾಗುತ್ತದೆ. ಏಕೆಂದರೆ, ಯಾವ ಕಾರ್ಯಕ್ಕೋಸ್ಕರ ಹಣವು ಶೇಖರಿಸಲ್ಪಟುತ್ತದೆಯೋ ಆ ಕಾರ್ಯವನ್ನು ನಿರ್ವಹಿಸುವ ಸಾಮರ್ಥ್ಯವು ಮುಂದಾಳುಗಳಲ್ಲಿಲ್ಲವೆಂದೇ ಜನಗಳು ಭಾವಿಸುತ್ತಾರೆ. ಜನಗಳಲ್ಲಿ ಈ ವಿಧವಾದ ಭಾವನೆಯುಂಟಾಗುವುದು ಸಮಾಜಕ್ಕೆ ಕ್ಷೇಮಕರವಾದುದಲ್ಲ. ಆದಕಾರಣ ತಮ್ಮನ್ನೇ ಅವಲಂಬಿಸಿರುವ ಈ ಮಹತ್ಕಾರ್ಯವನ್ನು ಆದಷ್ಟು ಜಾಗ್ರತೆ ಮಾಡಬೇಕಾಗಿ ಈ ಉಭಯ ಮಹಾಶಯರಿಗೂ ನಾವು ಪುನಃ ಪ್ರಾರ್ಥಿಸಿಕೊಳ್ಳುತ್ತೇವೆ. ಮತ್ತು ದ್ರವ್ಯಸಹಾಯ ಮಾಡಿದ ಮಹನೀಯರೂ ತಮ್ಮ ಉದ್ದೇಶವು ಫಲಕಾರಿಯಾಗುವುದಕ್ಕೋಸ್ಕರ ಈ ವಿಷಯದ ಕಡೆಗೆ ಗಮನಿಸಿ ಫಂಡಿನ ಅಧ್ಯಕ್ಷರವರಿಗೆ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇವೆ.

❖❖

೭ನೆಯ ಪ್ರಕರಣ

ಸಂಪದಭಿವೃದ್ಧಿಯ ಸಾಧನ

ಸಮಾಜದ ಸಂಪದಭಿವೃದ್ಧಿಗೆ ಒಕ್ಕುಲತನ, ಕೈಗಾರಿಕೆ ಮತ್ತು ವ್ಯಾಪಾರಿಗಳೇ ಮುಖ್ಯ ಸಾಧನಗಳಾಗಿವೆ. ನಮ್ಮ ಸಮಾಜದಲ್ಲಾದರೋ, ಈ ಮೂರುವೃತ್ತಿಗಳನ್ನು ಮಾಡುವವರೇ ೧೦೦ ಕ್ಕೆ ೯೯ ಜನಗಳಿದ್ದರೆಂದು ಹೇಳಬಹುದು. ಆದಕಾರಣ ಇವರ ಉನ್ನತೆಯೇ ನಮ್ಮ ಸಮಾಜದ ಸಾಂಪತ್ತಿಕ ಉನ್ನತೆಯೆಂದು ಧಾರಾಳವಾಗಿ ಹೇಳಬಹುದು.

ಒಕ್ಕಲುತನ : ನಮ್ಮ ಸಮಾಜದಲ್ಲಿ ಇದೊಂದು ದೊಡ್ಡ ಉದ್ಯೋಗವಾಗಿದೆ. ಈ ಒಕ್ಕಲುತನವನ್ನು ಕಾಲಮಾನಕ್ಕೆ ತಕ್ಕಂತೆ ಸುಧಾರಿಸಿ ಪದ್ಧತಿಗಳಲ್ಲಿ ಫಲಕಾರಿಯಾದವುಗಳನ್ನು ತಿಳಿದುಕೊಂಡು ಅವುಗಳನ್ನನುಸರಿಸಿ ಮಾಡುತ್ತಾ ಹೋದರೆ ಹೆಚ್ಚು ಪ್ರಯೋಜನವಾಗುತ್ತದೆ. ಈ ಸಂಗತಿಗಳೆಲ್ಲಾ ತಿಳಿಯಲು ಈ ಕಾಲದಲ್ಲಿ ವಿದ್ಯೆಯುಬೇಕು. ಆದರೆ ಈ ಕಸುಬನ್ನು ಮಾಡುವ ಜನಗಳಲ್ಲಾದರೋ ವಿದ್ಯಾಭ್ಯಾಸವು ಅತ್ಯಂತ ವಿರಳ. ಈ ಜನಗಳು ವಿಶೇಷವಾಗಿ ಹಳ್ಳಿಗಳಲ್ಲಿರುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ಏಕೆಂದರೆ, ಅಲ್ಲಿ ಪಾಠಶಾಲೆಗಳು ಸರಕಾರದಿಂದ ಏರ್ಪಡಿಸಲ್ಪಟ್ಟಿರುವುದು ಬಹು ಕಡಿದೆ, ಹೊಸದಾಗಿ ಏರ್ಪಟ್ಟ ರಾಜಕೀಯ ಸುಧಾರಣೆಯಿಂದ ಬ್ರಿಟಿಷ್ ಹಿಂದುಸ್ಥಾನದಲ್ಲಿರುವ ನಮ್ಮ ಸಮಾಜದ ಹಳ್ಳಿವಾಸಿಗಳಾದ ಜನಗಳಿಗೆ ಇನ್ನು ಮೇಲೆ ವಿದ್ಯಾಭ್ಯಾಸಕ್ಕೆ ಎಷ್ಟೋ ಸೌಲಭ್ಯವುಂಟಾಗಬಹುದು. ಆಗ ಅವುಗಳ ಪ್ರಯೊಜನವನ್ನು ನಮ್ಮ ಜನಗಳು ಹೊಂದಬೇಕು. ನಮಗೇಕೆ ವಿದ್ಯೆ? ನಾವೇನೂ ಸರಕಾರಿ ಕೆಲಸ ಮಾಡಬೇಕಾಗಿದೆಯೇ? ಹುಡುಗನು ಶಾಲೆಗೆ ಹೋಗುವುದಕ್ಕಿಂತ ಹೊಲದ ಕಡೆಗೆ ದನಗಳನ್ನಾದರೂ ಆಡಿಸಿಕೊಂಡು ಬರಬಾರದೇ? ಎಂದು ಯೋಚಿಸಿ ವಿದ್ಯಾಭ್ಯಾಸವನ್ನು ಉಪೇಕ್ಷಿಸಬಾರದು. ಹಾಗೆ ಮಾಡಿದರೆ ನಮ್ಮ ಸಮಾಜದ ಹಿಂದಿನ ರಾಜರುಗಳಲ್ಲಿ ಒಬ್ಬರಾದ ಸೋದೆಯ ಸದಾಶಿವರಾಜರು ತಮ್ಮ ಸದಾಶಿವ ನೀತಿ ಎಂಬ ಪುಸ್ತಕದಲ್ಲಿ "ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ" ಎಂದು ಹೇಳಿದಂತೆ ಆ ಮಕ್ಕಳ ಆತ್ಮಹತ್ಯದ ದೋಷಕ್ಕೀಡಾಗಬೇಕಾಗುತ್ತದೆ. ಮೊದಲಿನ ಕಾಲದಲ್ಲಿ ಈ ಅಕ್ಷರಭ್ಯಾಸವು ಇಲ್ಲದಿದ್ದರೂ ನಡೆಯುತ್ತಿದ್ದಿತು. ಆದರೆ ಮೊದಲಿನ ಗ್ರಂಥೋಕ್ತಿಯು ಈಗ ದೃಷ್ಟಾಂತದಿಂದಲೂ ನಿಜವಾಗಿಯೇ ಪರಿಣಮಿಸಿದೆ. ಆದುದರಿಂದ ಸಕಲರೂ ತಮ್ಮ ಮಕ್ಕಳಿಗೆ ತಪ್ಪದೇ ವಿದ್ಯಾಭ್ಯಾಸವನ್ನು ಮಾಡಿಸಬೇಕು.

ಕೈಗಾರಿಕೆ : ನಮ್ಮ ಸಮಾಜದವರ ಕೈಗಾರಿಕೆಗಳಲ್ಲಿ ಬಟ್ಟೆಯ ಕೈಗಾರಿಕೆಯೇ ಹೆಚ್ಚಿನದು. ಪರದೇಶಗಳ ನೂಲನ್ನುಪಯೋಗಿಸುವುದರಿಂದ ಈ ಕೈಗಾರಿಕೆಯ ಹೆಚ್ಚಿನ ಲಾಭವೆಲ್ಲಾ ಅವರಿಗೆ ಹೋಗಿ ಮಗ್ಗಗಳ ಮೇಲೆ ನೇಯ್ದಿದ ಕೂಲಿಯೂ ಮಾತ್ರ ಇವರಿಗೆ ದೊರೆಯುತ್ತಾ ಇದೆ. ನಮ್ಮ ದೇಶದಲ್ಲುಂಟಾಗಿರುವ ಬಟ್ಟೆಗಳನ್ನುಪಯೋಗಿಸಬೇಕೆಂಬ ಅಭಿಮಾನವು ಇತ್ತೀಚೆಗೆ ಜನಗಳಲ್ಲಿ ಹೆಚ್ಚುತ್ತಾ ಇರುವುದರಿಂದ ಕಸುಬಿನ ನಮ್ಮ ಜನಗಳಾದರೂ ಈ ವಿಷಯದ ಕಡೆಗೆ ಲಕ್ಷ್ಯಿಸಿ ಅನೇಕ ಹೊಸ ಶೋಧನೆಗಳನ್ನು ಮಾಡಿ ನಮ್ಮ ದೇಶದವರಲ್ಲುಂಟಾದ ಈ ಅಭಿಮಾನದ ಪ್ರಯೋಜನವನ್ನು ಹೊಂದಬೇಕು. ಈ ವಿಷಯವಾಗಿ ನಮ್ಮ ದೇಶದಲ್ಲಿ ನಾನಾ ಸುಧಾರಣೆಗಳಾಗುತ್ತಾ ಇವೆ. ಬೇರೆ ಸುಶಿಕ್ಷಿತ ಜನಗಳೂ ಈ ಕೈಗಾರಿಕೆಯ ಕಡೆಗೆ ಗಮನಿಸಿದ್ದಾರೆ. ಇಂತಹ ಸಮಯದಲ್ಲಿ ನಾವು ಮಾತ್ರ ಎಚ್ಚರಿಯದೆ ಕಣ್ಣುಮುಚ್ಚಿಕೊಂಡು ಹಿಂದಿನ ಪದ್ಧತಿಗಳನ್ನೇ ಅನುಸರಿಸುತ್ತಾ ಹೋದರೆ ಕೊನೆಗೆ ಈ ಕೈಗಾರಿಕೆಯೂ ನಮ್ಮ ಕೈಬಿಟ್ಟು ಹೋಗುತ್ತದೆ. ಆದುದರಿಂದ ನೂಲುವ ನೇಯುವ ಮತ್ತು ಬಣ್ಣವನ್ನು ಹಾಕುವ ವಿಷಯುಗಳಲ್ಲಾಗುತ್ತಿರುವ ಸುಧಾರಣೆಗಳನ್ನು ನೋಡಿ ಅವುಗಳನ್ನರಿತುಕೊಂಡು ಬಹುಕಾಲದಿಂದಲೂ ಬಂದಿದ್ದ ತಮ್ಮ ಈ ಶ್ರೇಷ್ಠತರವಾದ ಉದ್ಯೋಗವನ್ನು ಹೆಚ್ಚು ಲಾಭದಾಯಕವಾಗುವಂತೆ ಮಾಡಲು ಪ್ರಯತ್ನಿಸಬೇಕು.

ವ್ಯಾಪಾರ : ನಮ್ಮ ಸಮಜದಲ್ಲಿ ವ್ಯಾಪಾರವೂ ಒಂದು ದೊಡ್ಡ ಉದ್ಯೋಗವಾಗಿದೆ. ಲಕ್ಷಾಂತರ ಜನಗಳು ಈ ವಾಣಿಜ್ಯ ವೃತ್ತಿಯಲ್ಲಿದ್ಧಾರೆ. ಇವರ ಅಭಿವೃದ್ಧಿಯು ನಮ್ಮ ಸಮಾಜದ ಉನ್ನತಿಗೆ ಒಂದು ಮುಖ್ಯಸಾಧನವಾಗಿಯೇ ಇದೆ. ಆದುದರಿಂದ ನಮ್ಮ ಸಮಾಜದ ವ್ಯಾಪಾರಿಗಳ ಪ್ರಕೃತ ಸ್ಥಿತಿಯನ್ನು ಆಲೋಚಿಸಿ ಅವರ ಉದ್ಯೋಗದಲ್ಲಿ ಕಾಲಕ್ಕೆ ತಕ್ಕ ಸುಧಾರಣೆಗಳನ್ನು ಮಾಡಿಸುವುದು ಸಮಾಜದೃಷ್ಟಿಯಿಂದ ಅತ್ಯಾವಶ್ಯಕವೇ ಸರಿ. "ವ್ಯಾಪಾರಿಗಳ ರಾಜ"ನೆಂಬ ಬಿರುದನ್ನು ಹೊಂದಿದ್ದ ಕೈ. ರಾ. ಬ. ವಾರದ ಮಲ್ಲಪ್ಪನವರು ೫ನೆಯ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ನಮ್ಮ ಈಗಿನ ವ್ಯಾಪಾರ ಸ್ಥಿತಿಯನ್ನೂ ಇದರಲ್ಲಿ ಮಾಡಬೇಕಾದ ಸುಧಾರಣೆಯನ್ನು ಕುರಿತು ಹೇಳಿರುವುದೇನೆಂದರೆ:

"ವ್ಯಾಪಾರವು ಬಹುಮಟ್ಟಿಗೆ ನಮ್ಮ ಕೈಬಿಟ್ಟುಹೋಗಿದೆ. ಬೇರೆ ಸ್ಥಳಗಳ ವ್ಯಾಪಾರಿಗಳು ಬಂದು ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಿದ್ಧಾರೆ. ವಂಶಪರಂಪರೆಯಿಂದ ಕೂಲಿಯನ್ನು ಮಾಡುತ್ತ ಬಂದವರು ಕೂಡಾ ಈಗ ವ್ಯಾಪಾರದಲ್ಲಿ ಪ್ರವೇಶಿಸಿದ್ಧಾರೆ. ಇಂತಹ ಸಮಯದಲ್ಲಿಯೂ ಕೂಡಾ ನಾವು ಎಚ್ಚರಿಯದಿದ್ದರೆ ವ್ಯಾಪಾರವು ಸಂಪೂರ್ಣವಾಗಿ ನಮ್ಮ ಕೈಬಿಟ್ಟು ಹೋಗುವುದು. ಆಮೇಲೆ ನಾವು ಕೂಲಿಕಾರರಾಗಬೇಕಾಗುತ್ತದೆ. ಮಧ್ಯಪ್ರಾಂತ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳ ವ್ಯಾಪಾರವು ನಮ್ಮಗಳ ಅಧಿನದಲ್ಲಿಯೇ ಇದ್ದಿತು. ಈಗ ವ್ಯಾಪಾರದಲ್ಲಿ ನಮ್ಮ ಜನಗಳು ಕಡಿಮೆಯಾಗುತ್ತಾ ಅನ್ಯಜನಗಳು ಹೆಚ್ಚುತ್ತಿದ್ದಾರೆ."

"ಈಗ ನಾವು ಪರಸ್ಪರ ಸಹಾಯಕ ಬಂಡವಾಳದಿಂದ ವ್ಯಾಪಾರವನ್ನು ಮಾಡಲುಪಕ್ರಮಿಸಬೇಕು. ವ್ಯಾಪಾರಸ್ಥರಿಗೆ ಈ ಕಾಲದಲ್ಲಿ ಇದೇ ಮುಖ್ಯೋಪಾಯವು. ಪಾರ್ಶಿ ಮತ್ತು ಭಾಟಯಾಜನಗಳು ಇದೇ ಪದ್ಧತಿಯಿಂದ ನೂಲುವ, ನೇಯುವ, ಮೊದಲಾದ ಕಾರ್ಯಾಲಯಗಳನ್ನು ಸ್ಥಾಪಿಸಿ

ಲಕ್ಷಾಂತರ ರೂ. ಗಳನ್ನು ಸಂಪಾದಿಸುತ್ತಿದ್ಧಾರೆ. ಇಂತಹ ಕಾರ್ಯಾಲಯಗಳಿಂದ ವಿಶೇಷ ಲಾಭವಾಗುತ್ತದೆಂದು ನಾನು ನನ್ನ ಅನುಭವದಿಂದ ಹೇಳುತ್ತೇನೆ.

"ಇಂಗ್ಲೆಂಡ್, ಅಮೇರಿಕಾ, ಜರ್ಮನಿ ಮತ್ತು ಜಪಾನ್‌ಗಳ ಸುಸ್ಥಿತಿಯೂ ಇಂತಹ ಕಾರ್ಯಾಲಯಗಳ ಮೇಲೆಯೇ ಅವಲಂಬಿಸಿದೆ. ನಾವು ಕೇವಲ ದಲಾಲರಾಗುವುದಕ್ಕಿಂತ ಕಾರ್ಯಾಲಯದವರಾಗಬೇಕು. ಈ ಲಾಭಕರವಾದ ಉದ್ಯೋಗದ ಕಡೆಗೆ ನಮ್ಮ ವ್ಯಾಪಾರಿಗಳು ಲಕ್ಷ್ಯಿಸುವುದಿಲ್ಲ. ನಾವು ಈಗ ಸಂಕ್ರಮಣಾವಸ್ಥೆಯಲ್ಲಿದ್ದೇವೆಮಬುದನ್ನು ಅವರು ಮರೆತಿದ್ಧಾರೆ. ಇದು ಒಳ್ಳೆಯದಲ್ಲ. ಇಂತಹ ಕಾರ್‍ಯಾಲಯಗಳಿಂದಲೇ ನಮ್ಮ ಸಮಾಜಕ್ಕೂ, ದೇಶಕ್ಕೂ, ಹಿತವಾಗುತ್ತದೆ. ಆದುದರಿಂದ ತಾವು ಈ ವಿಷಯದಕಡೆಗೆ ಲಕ್ಷ್ಯಿಸಬೇಕು."

"ನಮ್ಮ ಸಮಾಜದವರ ಈಗಿನ ವ್ಯಾಪಾರ ಸ್ಥಿತಿಯನ್ನೂ ಇದರಲ್ಲಾಗಬೇಕಾಗಿರುವ ಸುಧಾರಣೆಗಳನ್ನೂ ಕುರಿತು ಮ. ರಾ. ಮಲ್ಲಿಕಾರ್ಜುನಪ್ಪ ಪಾಟೀಲ ಈ ಅನುಭವಜ್ಞರು ಬಾಗಲಕೋಟೆ ಮಹಾಸಭೆಯಲ್ಲಿ ಮಾಡಿರುವ ಉಪನ್ಯಾಸವನ್ನು ನಮ್ಮ ವರ್ತಕರು ಅವಶ್ಯವಾಗಿ ಓದಬೇಕು. ನಮ್ಮ ಸಮಾಜದಿಂದ ಒಂದು ನೂಲುವ ಮತ್ತು ನೇಯುವ ಗಿರಣಿಯನ್ನು ಸ್ಥಾಪಿಸಬೇಕೆಂದು ಶ್ರೀಯುತ ಶಿವಮೂರ್ತಿಸ್ವಾಮಿ ಕಣಬರಗಿಮಠ ಇವರು ಬಾಗಲಕೋಟೆ ಮಹಾಸಭೆಯಲ್ಲಿಯೆ ಸೂಚಿಸಿದ್ದರು. ನಮ್ಮ ಸಮಾಜದ ಪ್ರಮುಖವರ್ತಕರು ಆಗ ಆ ವಿಷಯದ ಕಡೆಗೆ ಗಮನಿಸಿದ್ದರೆ ಸಮಾಜಕ್ಕೆ ಎಷ್ಟೋ ಪ್ರಯೋಜನವಾಗುತ್ತಿರಲಿಲ್ಲವೇ? ಈಗಲಾದರೂ ನಮ್ಮ ಸಮಾಜದ ಮಂದಾಳೂಗಳು ಸೂಚಿಸಿದ ವಿಷಯಗಳ ಕಡೆಗೆ ಗಮನಿಸಿ ವರ್ತಕರು ಪರಸ್ಪರ ಐಕಮತ್ಯದಿಂದ ತಮ್ಮ ವ್ಯಾಪಾ ಪದ್ಧತಿಯಲ್ಲಿ ಸುಧಾರಣೆಯನ್ನು ಮಾಡಿಕೊಳ್ಳಬೇಕು. ಈಗ ಸ್ವಾತಂತ್ರ್ಯದ ಗಾಳಿಯು ಬಹು ರಭಸದಿಂದ ಬೀಸುತ್ತಾ ಇದೆ. ಅನೇಕ ಸುಶಿಕ್ಷಿತ ಸಮಾಜಗಳಲ್ಲಿಯ ಸಾಹಸಿಗಳು ಈ ಸ್ವತಂತ್ರವಾದ ಉದ್ಯೋಗದಲ್ಲಿ ಹೆಚ್ಚಾಗಿ ಸೇರಲುಪಕ್ರಮಿಸಿದ್ದಾರೆ. ಇಂತಹ ಸಮಯದಲ್ಲಾದರು ನಾವು ನಮ್ಮ ಏಳಿಗೆಯನ್ನು ಕುರಿತು ವ್ಯಾಪಾರದಲ್ಲಿ ಅನೇಕ ಸುಧಾರಣೆಗಳನ್ನು ಮಾಡಿಕೊಳ್ಳದಿದ್ದರೆ ಖಂಡಿತವಾಗಿಯೂ ನಮ್ಮ ಸಮಾಜಕ್ಕೆ ಸಾಂಪತ್ತಿಕ ಹಾನಿಯುಂಟಾಗುವುದು. ನೂಲು, ಬಟ್ಟೆ, ಉಣ್ಣೆ, ಚೀಲ, ಸಬಕಾರ, ಗಾಜು, ಮೇಣಬತ್ತಿ, ದೀಪದ ಕಡ್ಡಿ, ಕಾಗದ, ಮೊದಲಾದವುಗಳನ್ನೂ ಮಾಡುವ ಸಣ್ಣದೊಡ್ಡ ಕಾರ್ಯಾಲಯಗಳನ್ನು 'ಲಿಮಿಟೆಡ್ ಕಂಪನಿ'ಯ ಮೂಲಕ ಸ್ಥಾಪಿಸಲು ನಮ್ಮ ವರ್ತಕರು ಈಗ ಪ್ರಯತ್ನಿಸಿಬೇಕು. ಈಗ ನಾಲ್ಕಾರು ವರ್ಷಗಳಿಂದ ನಮ್ಮ ಸಮಾಜದ ವರ್ತಕರಲ್ಲಿಯೂ ವಿಶೇಷವಾಗಿ ವ್ಯಾಪಿಸಿರುವ 'ಸಟ್ಟಾ' ವ್ಯಾಪಾರವೆಂಬ ಸಾಂಕ್ರಾಮಿಕ ರೋಗವು ಬಹು ಜನಗಳನ್ನು ಹಣ್ಣುಮಾಡಿ ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಗೆ ಬಲವಾದ ಅಪಾಯವನ್ನುಂಟುಮಾಡಿತು. ಇನ್ನು ಮೇಲಾದರೂ ನಮ್ಮ ಜನರು ಈ ದುರ್ವ್ಯಾಪಾರಕ್ಕೆ ಮುಖವಿಡಬಾರದು. ಈ ವಿಷಯವಾಗಿ ಕೈ. ರಾ. ಬ. ಅಪ್ಪಾಸಾಹೇಬರು ೫ನೆಯ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಹೇಳಿರುವದೇನೆಂದರೆ:

ವ್ಯಾಪಾರಗಳಲ್ಲಿ ಒಂದು ನ್ಯಾಯವಾದುದು. ಇನ್ನೊಮದು ಸಟ್ಟಾ ಅಥವಾ ಜೂಜಿನದು. ಜೂಜಾಟದಂತಿರುವ ಈ ಸಟ್ಟಾ ವ್ಯಾಪಾರವು ಪ್ರಾಮಾಣಿಕತನದ ಉದ್ಯೋಗವಲ್ಲ. ಈ ವ್ಯಾಪಾರವನ್ನು ಮಾಡುವವರು ನಮ್ಮಲ್ಲಿ ಬಹುಜನಗಳಿಲ್ಲ (ಕ್ರಿ. ಶ. ೧೯೦೯ರಲ್ಲಿ ಹಾಗಿದ್ದಿತು) ಆದರೂ ಜನಗಳೂ ಆ ಕಡೆಗೆ ಸ್ವಲ್ಪ ಲಕ್ಷ್ಯಿಸುತ್ತಿದ್ಧಾರೆಂದು ಈಗಲೇ ಸೂಚಿಸಬೇಕಾಗಿದೆ. ಒಂದೇ ಸಾರಿಗೆ

ಧನಿಕರಾಗಬೇಕೆಂದಪೇಕ್ಷಿಸಿ ಈ ವ್ಯಾಪಾರವನ್ನು ಮಾಡುತ್ತಾರೆ. ಆದರೆ ಇದರಿಂದ ಬಹುಜನಗಳು ಹಾಳಾಗಿಯೇ ಹೋಗಿದ್ದಾರೆ.

ಈವರೆಗೂ ನಮ್ಮ ಸಮಾಜದ ಸಂಪತ್ತನ್ನು ಯಾವ ಯಾವ ಉದ್ಯೋಗಗಳ ಮೂಲಕ ಹೇಗೆ ಹೇಗೆ ಹೆಚ್ಚಿಸಿಕೊಳ್ಳಬೇಕೆಂಬುದನ್ನು ಯೋಚಿಸಿದ್ದಾಯಿತು. ಇನ್ನು ನಮ್ಮ ಸಮಾಜದಿಂದ ಹೊರಗೆ ಹೋಗುತ್ತಿರುವ ಧನಪ್ರವಾಹವನ್ನು ಹೇಗೆ ತಡೆಯಬೇಕೆಂಬುದನ್ನು ಯೋಚಿಸೋಣ. ಹಾಗೆ ಮಾಡದಿದ್ದರೆ ನಾವು ಎಷ್ಟು ಸಂಪಾದಿಸಿದರೂ ದುಂದುಗಾರನಂತೆ ದರಿದ್ರಾವಸ್ಥೆಗೆ ಹೋಗಬೇಕಾಗುತ್ತದೆ. ಮನುಷ್ಯನ ಜೀವನಕ್ಕೆ ಆಹಾರ ಮತ್ತು ಬಟ್ಟೆ ಇವೆರಡೇ ಮುಖ್ಯವಾದವುಗಳಾಗಿವೆ. ಇವುಗಳಿಗಾಗಿಯೇ ಆದಾಯದ ಬಹುಭಾಗವು ವೆಚ್ಚವಾಗುತ್ತದೆ. ಆಹಾರ ಪದಾರ್ಥಗಳನ್ನಾದರೋ ನಮ್ಮ ಸಮಾಜದವರು ವಿಶೇಷವಾಗಿ ಬೆಳೆಯುತ್ತಿರುವುದರಿಂದ ಅದಕ್ಕೋಸ್ಕರ ನಾವು ನಮ್ಮ ಹಣವನ್ನು ವೆಚ್ಚ ಮಾಡಬೇಕಾದುದಿಲ್ಲ. ಆದರೆ ಬಟ್ಟೆಯ ವಿಷಯವು ಮಾತ್ರ ಈಗ ಈ ಪ್ರಕಾರವಿಲ್ಲ. ನಮ್ಮ ಸಮಾಜವು ಪ್ರತಿವರ್ಷ ೬೦-೭೦ ಲಕ್ಷ ರೂ. ಗಳನ್ನು ಬಟ್ಟೆಗೋಸ್ಕರ ಪರದೇಶಗಳಿಗೆ ಕಳುಹಿಸುತ್ತಾ ಇದೆ. ಇದು ಸಮಾಜಕ್ಕೆ ಸಾಧಾರಣವಾದ ನಷ್ಟವೇ? ಈ ಉದ್ಯೋಗವನ್ನು ಮಾಡುತ್ತಿರುವ ನಮ್ಮ ಸಮಾಜದ ಲಕ್ಷಾಂತರ ಜನಗಳಿಗೆ ನಾವೇ ನಷ್ಟಮಾಡುತ್ತಿರುವುದು ಯುಕ್ತವೇ? ನಮ್ಮ ಸಮಾಜ ಬಂಧುಗಳ ಉದ್ಯೋಗಕ್ಕೆ ಪ್ರೋತ್ಸಾಹಿಸುವುದು ನಮ್ಮ ಕರ್ತವ್ಯವಲ್ಲವೇ? ಕೇವಲ ಸಾಂಪತ್ತಿಕ ದೃಷ್ಟಿಯಿಂದಲೇ ಅಲ್ಲ; ಧಾರ್ಮಿಕ ದೃಷ್ಟಿಯಿಂದಲೂ ನಮ್ಮ ಸಮಾಜದವರು ಮಾಡಿದ ಬಟ್ಟೆಗಳನ್ನೇ ಉಪಯೋಗಿಸತಕ್ಕದ್ದು ನಮ್ಮ ಧರ್ಮವಲ್ಲವೇ?

ನೂತ ನೂಲಿನಿಂದಲೇ ಕೊಂಬಿನ ಲಾಳಿಯನ್ನು ಮುಟ್ಟಿಸದೆ ವೀರಶೈವರು ನೇಯ್ದಿದ ಬಟ್ಟೆಯನ್ನೇ ಉಪಯೋಗಿಸಬೇಕೆಂದು ನಮ್ಮ ೬೪ ಶೀಲಗಳಲ್ಲಿನ ೨೧ ನೆಯ ಶೀಲದಲ್ಲಿ ಸ್ಪಷ್ಟವಾಗಿ ಹೇಳಿರುವುದನ್ನು ಮೀರಿನಡೆಯುವುದು ವಿಹಿತವೇ? ಈಗ ನಮ್ಮ ದೇಶದಲ್ಲಿ ಸ್ವದೇಶೀತತ್ವವು ಎಷ್ಟೋ ಅನುಭವದಿಂದುಂಟಾಗಿದೆಯಷ್ಟೆ ಇದನ್ನೇ ನಮ್ಮ ಪ್ರಾಚೀನರು ನಮ್ಮ ಸಂಪದಭಿವೃದ್ಧಿಗಾಗಿ ಆಚಾರಗಳಲ್ಲಿಯೇ ಸೇರಿಸಿದ್ದುದನ್ನು ನೋಡಿದರೆ ಅಸಾಧಾರಣವಾದ ಈ ತತ್ವದ ಪ್ರಾಮುಖ್ಯತೆಯು ವ್ಯಕ್ತವಾಗುವುದಿಲ್ಲವೇ? ಈ ವಿಷಯವಾಗಿ ಕೈ. ರಾ. ಬ. ಅಪ್ಪಾಸಾಹೇಬರು ೩ನೆಯ ಶ್ರೀಮದ್ವೀರಶೈವ ಮಹಾಸಭೆಯ ಸ್ವಾಗತ ಸಂಘಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ:

"ನಮ್ಮ ಸಮಾಜದ ಕೈಗಾರಿಕೆಯು ಊರ್ಜಿತ ಸ್ಥಿತಿಗೆ ಬರಬೇಕೆಂದು ಯಾವ ಪದಾರ್ಥವು ವೀರಶೈವರಿಂದ ಮಾಡಲ್ಪಟ್ಟಿಲ್ಲವೋ ಅದನ್ನು ನಮ್ಮ ಜನಗಳು ಮುಟ್ಟಲೂಬಾರದೆಂಬ ಧಾರ್ಮಿಕ ನಿರ್ಬಂಧವನ್ನು ನಮ್ಮ ಪೂರ್ವಜರು ಏರ್ಪಡಿಸಿದ್ದಾರೆ. ಪರಜನಗಳ ಪದಾರ್ಥಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ನಿರ್ಧರಿಸುವುದರಿಂದ ತಮ್ಮಲ್ಲಿಯೇ ಆ ಪದಾರ್ಥಗಳನ್ನು ಮಾಡಿಕೊಳ್ಳುವ ಅಪೇಕ್ಷೆಯುಂಟಾಗುತ್ತದೆ. ಈ ಆಚರಣೆಯು ಕಡಿಮೆಯಾಗುತ್ತಾ ಬಂದಂತೆ ನಮ್ಮ ಸಮಾಜದ ಕೈಗಾರಿಕೆಯು ಕ್ಷೀಣಿಸುತ್ತಾ ಬಂದಿತು. ಈ ಆಚರಣೆಯಿಂದ ಆರಂಭದಲ್ಲಿ ತೊಂದರೆಯಾದರೂ ಪರಿಣಾಮದಲ್ಲಿ ಅನೇಕ ಪ್ರಯೋಜನಗಳುಂಟಾಗುತ್ತವೆ. ನಮ್ಮ ಧರ್ಮಾಚರಣೆಗೋಸ್ಕರವಾಗಿಯೂ, ನಮ್ಮ ಮತಬಾಂಧವರಲ್ಲಿ ಸಾವಿರಾರು ಜನಗಳ ಹಿತಾರ್ಥವಾಗಿಯೂ, ನಾವು ಈ ಆಚರಣೆಯನ್ನು ಆಚರಿಸುವುದು ಅವಶ್ಯಕವಾಗಿದೆ. ಈ ನಿಯಮವು ಎಲ್ಲರಿಂದಲೂ ಅಚರಿಸಲ್ಪಟ್ಟರೆ ಎಷ್ಟೋ ಜನಗಳ ಜೀವನ ನಡೆಯಬಹುದು ಮತ್ತು ಎಷ್ಟೋ ಪರೋಪಕಾರ ಮಾಡಿದಂತಾಗುವುದು."

ಶ್ರೀಮಂತ ಒಂಟಿಮುರಿ ದೇಸಾಯಿಗಳು ೪ನೆಯ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಭಾಷಣಮಾಡಿದಾಗ ಈ ವಿಷಯವಾಗಿ ಹೇಳಿರುವುದೇನೆಂದರೆ : ನಮ್ಮ ಧರ್ಮದ ಪ್ರಾಚೀನಸ್ವರೂಪವನ್ನೂ ಮೂಲಸ್ಥಿತಿಯನ್ನೂ ಶೋಧಿಸಿದರೆ ನಮ್ಮ ಸಮಾಜದಲ್ಲಿ ಪರಸ್ಪರರ ಮೇಲೆ ದೃಢತರವಾದ ಪ್ರೇಮವಿರಬೇಕೆಂಬ ಹಲಕೆಲವು ನೇಮಗಳನ್ನು ಹಾಕಿರುವರೆಂಬುದು ಸುಲಭವಾಗಿ ಕಂಡುಬರುವುದು, ನಮ್ಮ ನಿತ್ಯವ್ಯವಹಾರ ಸೌಕರ್ಯಕ್ಕೆ ಹಲವು ಉದ್ಯೋಗಸ್ಥರ ಅಗತ್ಯವಿರುವಷ್ಟೆ. ಅವರೆಲ್ಲರೂ ನಮ್ಮ ಸಮಾಜದ ಬಂಧುಗಳೇ ಇರಬೇಕೆಂಬ ನಿರ್ಬಂದವು ನಮ್ಮೊಳಗಿನದೊಂದು ಪ್ರಮುಖ ತತ್ವವಾಗಿದೆ. ಇದರಿಂದ ನಮ್ಮ ಪೂರ್ವಜರ ದೂರದೃಷ್ಟಿಯೂ, ಕಲಾಕೌಶಲ್ಯಾಭಿವೃದ್ಧಿಯ ಉತ್ಕಟೇಚ್ಚೆಯೂ, ಸ್ಪಷ್ಟವಾಗಿ ಪ್ರಕಟವಾಗುತ್ತವೆ."

ನಮ್ಮ ಸಮಾಜದ ಸಂಪದಭಿವೃದ್ಧಿಗೆ ನಮ್ಮಲ್ಲಿ ಇಂತಹ ಶ್ರೇಷ್ಠ ತತ್ವಗಳಿಗದ್ದರೂ ಅವುಗಳನ್ನುಪೇಕ್ಷಿಸಿ ನಮ್ಮ ಸಮಾಜದ ಲಕ್ಷಾಂತರ ಬಾಂಧವರ ಹೊಟ್ಟೆಯ ಮೇಲೆ ಹೊಡೆದು ಸಪ್ತಸಮುದ್ರಗಳ ಆಚೆಯಲ್ಲಿರುವ ಜನಗಳ ಧನರಾಶಿಯಲ್ಲಿ ನಮ್ಮ ಸಮಾಜದ ಲಕ್ಷಾಂತರ ರೂ. ಗಳನ್ನು ಪ್ರತಿವರ್ಷದಲ್ಲಿಯೂ ಎಸೆಯುತ್ತಿದ್ದೇವೆ! ಇದೆಂತಹ ನಮ್ಮ ಮೌಢ್ಯತನವು? ಇನ್ನಾದರೂ ನಾವು ಎಚ್ಚತ್ತು ನಮ್ಮ ಸಮಾಜ ಬಂಧುಗಳ ಕಡೆಗೆ ನೋಡಬಾರದೇ? ಅವರ ಅಭಿವೃದ್ಧಿಯೇ ನಮ್ಮ ಅಭಿವೃದ್ಧಿಯಲ್ಲವೇ? ಆದಕಾರಣ ಸಕಲ ವೀರಶೈವರೂ ಸ್ವಮತೀಯರು ಮಾಡುವ ಬಟ್ಟೆಗಳನ್ನೇ ಉಪಯೋಗಿಸಲು ಪ್ರಯತ್ನಿಸಬೇಕು. ಧಾರ್ಮಿಕ ದೃಷ್ಟಿಯಿಂದ ಈ ಆಚರಣೆಯನ್ನು ಆಚರಿಸುವುದು ಯಾರಿಗೆ ಸಾಧ್ಯವಿಲ್ಲವೋ ಅವರು ಸಮಾಜದ ಸಾಂಪತ್ತಿಕ ಸ್ಥಿತಿಯಕಡೆಗಾದರೂ ಗಮನಿಸಿ ನಮ್ಮ ಸಮಾಜದವರು ಮಾಡಿದ ಬಟ್ಟೆಗಳನ್ನೇ ಉಪಯೋಗಿಸಬೇಕು. ಯಾವ ಬಟ್ಟೆಗಳು ತಮ್ಮ ಸಮಾಜದವರಲ್ಲಿ ದೊರೆಯುವುದಿಲ್ಲವೋ ಅವುಗಳನ್ನು ನಮ್ಮ ಪ್ರಾಂತ್ಯದವರಿಂದಲೂ ಅವರಲ್ಲಿಯೂ ದೊರೆಯದಿದ್ದವುಗಳನ್ನು ತಮ್ಮ ದೇಶದ ಅನ್ಯ ಪ್ರಾಂತ್ಯದವರಿಂದಲೂ ತೆಗೆದುಕೊಳ್ಳಬೇಕು. ಏಕೆಂದರೆ, ನಮ್ಮ ಸಮಾಜದ ಸಾಂಪತ್ತಿಕಸ್ಥಿತಿಯು ನಮ್ಮ ದೇಶದ ಸಾಂಪತ್ತಿಕ ಸ್ಥಿತಿಯು ಮೇಲೆಯೂ ಹೆಚ್ಚಾಗಿ ಅವಲಂಬಿಸಿದೆ. ಆದ ಕಾರಣ ನಾವು ಪರದೇಶಗಳ ಬಟ್ಟೆಗಳನ್ನು ಉಪಯೋಗಿಸುವುದು ಬಹು ಹಾನಿಕರವಾದದ್ಧಾಗಿಯೂ, ಸ್ವಸಮಾಜದವರು ಮಾಡಿದ ಬಟ್ಟೆಗಳನ್ನು ಉಪಯೋಗಿಸುವುದು ಬಹು ಲಾಭಕರವಾದದ್ಧಾಗಿಯೂ ಇದೆ.

ನಮ್ಮ ಸಮಾಜದ ದ್ರವ್ಯವು ವ್ಯಾಜ್ಯಗಳಿಗೋಸ್ಕರ ವಿಶೇಷವಾಗಿ ಹಾಳಾಗುತ್ತಲಿದೆ. ಇದನ್ನು ಸಕಲರೂ ಪ್ರಯತ್ನಪೂರ್ವಕವಾಗಿ ತಡೆಯಬೇಕು. ಈ ಹಾಳಾದ ವ್ಯಾಜ್ಯಗಳಿಂದ ದ್ರವ್ಯವೊಂದೇ ನಷ್ಟವಲ್ಲ; ಕಾಲವೂ ವ್ಯರ್ಥವಾಗಿ ಅವಮಾನ, ಅಪ್ರೀತಿ, ದ್ವೇಷಾಸೂಯೆಗಳುಂಟಾಗುತ್ತವೆ. ಇಂತಹ ಅನರ್ಥಕಾರಿಯಾದುದನ್ನು ನಿಲ್ಲಿಸುವುದು ಸಮಾಜಕ್ಕೆ ಕ್ಷೇಮಕರವಾದುದಲ್ಲವೇ? ಈ ವಿಷಯವಾಗಿ ದಾನಶೂರ ಕೈ. ಶಿರಸಂಗಿಕರರು ಮೊದಲನೆಯ ವೀರಶೈವ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದೇನೆಂದರೆ:

"ಕೋರ್ಟುಗಳಲ್ಲಿ ವ್ಯಾಜ್ಯಗಳನ್ನು ಮಾಡುವವರು ನಮ್ಮ ಜನರೇ ಹೆಚ್ಚು. ದಕ್ಷಿಣ ಮಹಾರಾಷ್ಟ್ರ ದೇಶದ ಎಲ್ಲ ದಿವಾಣಿ ಮತ್ತು ಫೌಜುದಾರಿ ಕೋರ್ಟುಗಳಲ್ಲಿರುವ ವ್ಯಾಜ್ಯಗಳ ಸಂಖ್ಯೆಯನ್ನು ನೋಡಿದರೆ ೧೦೦ ಕ್ಕೆ ೭೫ರಂತೆ ವ್ಯಾಜ್ಯಗಳು ನಮ್ಮ ಜನರವೇ ಇರುತ್ತವೆ. ಈರ್ಷೆಯಿಂದಲೂ,

ಸಿಟ್ಟಿನಿಂದಲೂ, ನಿರರ್ಥಕವಾಗಿ ತಂಟೆಗಳನ್ನು ಮಾಡಿ ವರ್ಷಕ್ಕೆ ಲಕ್ಷಗಟ್ಲೆ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಕೋರ್ಟು ಫೀ ರೂಪದಿಂದ ಸರಕಾರಕ್ಕೆ ದಂಡಕೊಡುವದಲ್ಲದೆ ವಕೀಲರಿಗೆ ಫೀ, ಇನಾಮು ಮುಂತಾದವುಗಳ ರೂಪದಿಂದ ಬೋಗಸಿತುಂಬ ರೂಪಾಯಿಗಳನ್ನು ಕೊಟ್ಟು ತಮ್ಮ ಹೊಲಮನೆಗಳನ್ನು ವತ್ತೇಹಾಕಿ ಇಲ್ಲವೆ ಮಾರಾಟಮಾಡಿ ಬಡತನಕ್ಕೆ ಬರುತ್ತಾರೆ. ಇದು ಎಂಥ ಶೋಚನೀಯವಾದ ಮಾತು! ತಂಟೆ ಮಾಡಿ ಕೋರ್ಟಿಗೆ ಹೋದಬಳಿಕ ಗಾಣದಲ್ಲಿ ಕಬ್ಬುಗಳನ್ನು ಹಾಕಿ ರಸವನ್ನು ಹಿಂಡಿದಮೇಲೆ ಉಳಿದ ಸಿಪ್ಪೆಯಂತೆ ನಮ್ಮ ಜನರ ಅವಸ್ಥೆಯಾಗುವುದು ಏನಾಶ್ಚರ್ಯ? ಇನ್ನಾದರೂ ನಮ್ಮ ಜನರು ಬುದ್ದಿಯನ್ನು ಕಲಿತು ತಮ್ಮ ತಂಟೆಗಳನ್ನು ಪಂಚರ ವಿದ್ಯಮಾನದಂತೆ ತೀರಿಸಿಕೊಂಡರೆ ಅರ್ಥಹಾನಿಯೂ, ಮಾನಹಾನಿಯೂ, ತಪ್ಪುವವು."

ಹೊಟ್ಟೆ ಬಟ್ಟೆಗಳಿಗೂ ಕೂಡಾ ಕೊರತೆಯನ್ನು ಮಾಡಿಕೊಂಡು ಕೂಡಿಡುವ ಹಣವನ್ನೇಲ್ಲಾ ವ್ಯಾಜ್ಯಗಳಿಗೆ ಹಾಳುಮಾಡುತ್ತಿರುವ ನಮ್ಮ ಸಮಾಜದ ಅಸಂಖ್ಯಾತ ಜನಗಳನ್ನು ನೋಡಿದರೆ ಯಾರಿಗೆ ತಾನೆ ವಿಷಾದವಾಗಲಾರದು? ವ್ಯಾಜ್ಯಕ್ಕೆ ಬಂದಾಗ ಊಟದ ಮನೆಯಲ್ಲಿ ಒಂದಾಣೆಯನ್ನು ಹೆಚ್ಚು ಕೊಟ್ಟು ಒಳ್ಳೆಯ ಊಟವನ್ನು ಮಾಡದಿದ್ದ ಈ ನಮ್ಮ ಸಮಾಜಭಾಂಧವರು ವಕೀಲರ ಮುಂದೆ ನೂರಾರು ರೂಪಾಯಿಗಳನ್ನು ಸುರಿದು ದೀನತ್ವದಿಂದ ನಿಲ್ಲುವುದನ್ನು ನೋಡಿದರೆ ಯಾವ ಸುಜನರ ಮನಸ್ಸು ತಾನೆ ಕರಗಲಾರದು? ಮನೆಕೆಲಸಗಳನ್ನು ಬಿಟ್ಟು ದ್ವೇಷವನ್ನು ಕಟ್ಟಿಕೊಂಡು ಕಾಲಕ್ಕೆ ಸರಿಯಾಗಿ ಊಟ ನಿದ್ರೆಗಳಿಲ್ಲದೆ ಕೋರ್ಟು ಕಚೇರಿಗಳಿಗೂ, ವಕೀಲರ ಮನೆಗೂ, ಅನೇಕ ಅವಮಾನದ ನುಡಿಗಳನ್ನಾಡಿಸಿಕೊಳ್ಳುತ್ತ ಅಲೆದಾಡುತ್ತಿರುವ ಈ ಸಮಾಜಬಂಧುಗಳೇ, ಇನ್ನು ಮೇಲೆ ಈ ಹೀನಕಾರ್ಯವನ್ನು ಮಾಡಲು ಹೋಗಬೇಡಿರಿ. ಊರಲ್ಲಿಯ ಪಂಚರ ಅಭಿಪ್ರಾಯದಂತೆಯೇ ನಡೆಯಿರಿ. ಅದರಲ್ಲಿ ಕಣ್ಣಾರೆ ನಷ್ಟವಾದರೂ ಚಿಂತೆಯಿಲ್ಲ. ವ್ಯಾಜ್ಯದಲ್ಲಿ ಗೆಲ್ಲುವುದಕ್ಕಿಂತಲೂ ಪಂಚರಲ್ಲಿ ಸೋಲುವುದು ಮೇಲು. ಆದಕಾರಣ ವ್ಯಾಜ್ಯಗಳಿಗೆ ಹೋಗದೆ ತಮ್ಮ ಧನ, ಮಾನಗಳನ್ನು ಕಾಪಾಡಿಕೊಂಡು ಸಮಾಜದ ಸಂಪದಭಿವೃದ್ಧಿಗೂ ಸಹಾಯಕರವಾಗುವುದು ವಿಹಿತವಾದದ್ದಾಗಿದೆ.

ಇದು ಅಸಹಕಾರ ಕಾಲವಾಗಿರುವುದರಿಂದ ಪರದೇಶದ ಬಟ್ಟೆಗಳನ್ನು ತೆಗೆದುಕೊಳ್ಳದಿರುವುದು ಮತ್ತು ಕೋರ್ಟು ಕಚೇರಿಗಳಿಗೆ ವ್ಯಾಜ್ಯವನ್ನು ತೆಗೆದುಕೊಂಡು ಹೋಗದಿರುವುದು, ಸರಕಾರದವರ ಅಪ್ರೀತಿಗೆ ಕಾರಣವಾದವುಗಳೆಂದು ಯಾರೂ ಯೋಚಿಸಬೇಕಾದುದಿಲ್ಲ. ಈ ಅಸಹಕಾರದ ಗಲಬೇಯನ್ನು ಸಂಪೂರ್ಣ ನಾಶಮಾಡಬೇಕೆಂದು ಹೇಳುತ್ತಿರುವ ಮತ್ತು ಸರಕಾರದವರಿಗೆ ಬಹುಪ್ರಿಯರಾಗಿರುವ ಸರ್. ತ್ಯಾಗರಾಜಚೆಟ್ಟಿಯವರು ಕೂಡಾ ಹುಬ್ಬಳ್ಳಿಯಲ್ಲಿ ಕೂಡಿದ ಬ್ರಾಹ್ಮಣೇತರರ ಪರಿಷತ್ತಿನ ಅಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ನಿಮ್ಮ ವ್ಯಾಜ್ಯವನ್ನು ಪಂಚರಲ್ಲಿಯೇ ತೀರಿಸಿಕೊಳ್ಳರೆಂತಲೂ, ಕೋರ್ಟುಕಚೇರಿಗಳಿಗೆ ಹೋಗಬೇಡಿರೆಂತಲೂ ಪರದೇಶಗಳ ಪದಾರ್ಥಗಳನ್ನು ತೆಗೆದುಕೊಳ್ಳದೇ ಈ ದೇಶದಲ್ಲಿಯೇ ಎಲ್ಲಾ ಪದಾರ್ಥಗಳನ್ನೂ ಉಂಟುಮಾಡಿಕೊಳ್ಳಿರೆಂತಲೂ ಹೇಳಿದ್ದಾರೆ. ಆದುದರಿಂದ ಈ ವಿಷಯಗಳಲ್ಲಿ ಯಾವ ಸಂದೇಹವನ್ನು ಪಡುವುದು ವಿಹಿತವಲ್ಲ ಮತ್ತು ಕ್ಷೇಮಕರವಾದುದೂ ಅಲ್ಲ. ನಮ್ಮ ಸಮಾಜದವರು ಅಥವಾ ನಮ್ಮ ದೇಶದವರು ಮಾಡುವ ಬಟ್ಟೆಗಳನ್ನೇ ಉಪಯೋಗಿಸುವುದರಿಂದಲೂ, ಕೋರ್ಟು ಕಚೇರಿಗಳಿಗೆ ವ್ಯಾಜ್ಯವನ್ನು ತೆಗೆದುಕೊಂಡು

ಹೋಗದಿರುವುದರಿಂದಲೂ, ನಮ್ಮ ಸಮಾಜದ ಸಾಂಪತ್ತಿಕ ಸ್ಥಿತಿಯು ಸುಧಾರಿಸುವುದರಲ್ಲಿ ತಿಲಾಂಶವಾದರೂ ಸಂದೇಹವಿಲ್ಲ, ಆದಕಾರಣ ನಮ್ಮ ಸಮಾಜದ ಸಕಲರೂ ಧನವ್ಯಯದ ಈ ಉಭಯ ಭಯಂಕರ ಮಾರ್ಗವನ್ನೂ ತಡೆಯಲು ಪ್ರಯತ್ನಿಸಬೇಕಾಗಿ ಪ್ರಾರ್ಥನೆ.

❖❖

೮ನೆಯ ಪ್ರಕರಣ

ಭರತ ಖಂಡದಲ್ಲುಂಟಾದ ರಾಜಕೀಯ ಜಾಗ್ರತೆ

ಇಂಗ್ಲೀಷ್ ವಿದ್ಯೆಯು ಪ್ರಭಾವದಿಂದಲು, ಮತ್ತು ಇಂಗ್ಲಂಡ್ ಸರಕಾರದ ಪ್ರಭುತ್ವದ ಪರಿಚಯದಿಂದಲು ಭಾರತೀಯರಲ್ಲಿ ದೇಶಾಭಿಮಾನವುಂಟಾಗಿ ಕಳೆದ ಅರ್ಧಶತಮಾನದಿಂದಲೂ ಈ ದೇಶದಲ್ಲಿ ರಾಜಕೀಯ ಜಾಗ್ರತೆಯು ದಿನೇ ದಿನೇ ಹೆಚ್ಚುತ್ತಾ ಬಂದಿದೆ. ಈ ರಾಜಕೀಯ ಜಾಗ್ರತೆಯು ಭಾರತೀಯರಾದ ನಮಗೆ ನವೀನವಾದುದು. ಪ್ರಾಚೀನಕಾಲದ ರಾಜ್ಯಭಾರವು ಹೇಗೆ ಒಂದು ವರ್ಣದವರನ್ನೇ ಮುಖ್ಯವಾಗಿ ಅವಲಂಬಿಸಿರುತ್ತಿದ್ದಿತೋ ಹಾಗೆ ಈಗಿನ ರಾಜ್ಯದಾಳ್ವಿಕೆಯು ಈ ದೇಶದ ಯಾವುದಾದರೊಂದು ವರ್ಣದವರಿಗೆ ಅಥವಾ ಧರ್ಮದವರಿಗೆ ಇಲ್ಲವೆ ಮತದವರಿಗೇನೇ ಸಂಬಂಧಪಟ್ಟದ್ದಾಗಿಲ್ಲ. ಈ ದೇಶದ ಎಲ್ಲಾ ಜನಗಳು ರಾಜಕೀಯ ವಿಷಯದಲ್ಲಿ ಸಮಾನವಾದ ಭಾಗವುಳ್ಳವರಾಗಿಯೇ ಇದ್ದಾರೆ. ಇವರಲ್ಲಿ ಯಾವುದಾದರೂ ಒಂದು ಮತದವರಿಗೇನೇ ಪ್ರತ್ಯೇಕವಾದ ರಾಜಕೀಯ ಧ್ಯೇಯವನ್ನು ಗೊತ್ತುಪಡಿಸಬೇಕಾದುದಿಲ್ಲ. ಆದರೆ ರಾಜಕೀಯ ವಿಷಯದಲ್ಲಿ ಕೆಲವು ಸೌಲಭ್ಯಗಳನ್ನು ಮಾತ್ರ ಹೊಂದಬಹುದು.

ನಮ್ಮ ಸಮಾಜವು ಯಾವುದಾದರೂ ಒಂದೇ ಒಂದು ಪ್ರಭುತ್ವಕ್ಕೊಳಪಟ್ಟಿದೆಯೇ? ಅದೂ ಇಲ್ಲ. ಅನೇಕ ದೇಶಿ ಸಂಸ್ಥಾನಗಳ ಮತ್ತು ಬ್ರಿಟಿಷ್ ಸರಕಾರದ ಆಳ್ವಿಕೆಗೊಳಪಟ್ಟಿರುವುದರಿಂದ ಇಡೀ ಸಮಾಜಕ್ಕೇನೇ ಒಂದೇ ವಿಧವಾದ ರಾಜಕೀಯ ಸೌಲಭ್ಯವನ್ನು ಸಂಪಾದಿಸಲಿಕ್ಕೂ ಬರುವಂತಿಲ್ಲ. ಏಕೆಂದರೆ, ಬೇರೆ ಬೇರೆ ಆಳ್ವಿಕೆಗಳಿಗೊಳಪಟ್ಟಿರುವವರ ಕೊರತೆಗಳು ಭಿನ್ನಭಿನ್ನವಾಗಿಯೇ ಇವೆ. ಆದಕಾರಣ ಹಿಂದಿನ ವಿಷಯಗಳಂತೆ ಈ ರಾಜಕೀಯ ವಿಷಯವನ್ನು ಇಡೀ ನಮ್ಮ ಸಮಾಜಕ್ಕೆ ಅನ್ವಯಿಸುವ ಒಂದೇ ರೀತಿಯನ್ನು ವಿವರಿಸಲು ಸಾಧ್ಯವಿಲ್ಲ. ಆದುದರಿಂದ ಆಯಾಯ ಪ್ರಾಂತ್ಯಗಳ ವೀರಶೈವ ಮಹಾಜನಗಳು ತಮ್ಮ ತಮ್ಮ ಪ್ರಾಂತ್ಯದ ರಾಜಕೀಯ ಸಭೆಯನ್ನೇರ್ಪಡಿಸಿಕೊಂಡು ಅಲ್ಲಿಯ ಸ್ಥಿತಿಗನುಸಾರವಾಗಿ ತಮ್ಮ ತಮ್ಮ ಕೊರತೆಗಳನ್ನು ನಿವಾರಣೆ ಮಾಡಿಕೊಳ್ಳುವುದೇ ಯುಕ್ತವಾಗಿದೆ. ಯಾವ ಭಾಗದವರು ಯಾವ ರಾಜಕೀಯ ಅನುಕೂಲತೆಯನ್ನು ಹೊಂದಲು ಪ್ರಯತ್ನಿಸಬೇಕಾದರೂ ಈ ಕೆಳಗಿನ ತತ್ವವನ್ನು ಮಾತ್ರ ಅನುಸರಿಸುವುದು ವಿಹಿತವಾಗಿದೆ.

ನಮ್ಮ ದೇಶಕ್ಕೆ ಯಾವ ವಿಪತ್ತುಗಳುಂಟಾಗುತ್ತವೆಯೋ ಅವುಗಳೆಲ್ಲಾ ನಮ್ಮ ಸಮಾಜಕ್ಕೂ ಹೆಚ್ಚು ಕಡಿಮೆಯಾಗಿ ಪ್ರಾಪ್ತವಾಗಿಯೇ ಆಗುತ್ತವೆ. ಏಕೆಂದರೆ, ನಮ್ಮ ಸಮಾಜವು ಈ ದೇಶದಲ್ಲಿರುವ

ನಾನಾ ಸಮಾಜಗಳಲ್ಲಿಯೇ ಒಂದಾಗಿದೆ. ಆದುದರಿಂದ ನಮ್ಮ ಜನ್ಮಭೂಮಿಯ ದುಃಖವನ್ನು ನಿವಾರಣೆಮಾಡುವುದು ಪರೋಕ್ಷದಲ್ಲಿ ನಮ್ಮ ಸಮಾಜಕ್ಕೆ ಕ್ಷೇಮವನ್ನು ಮಾಡಿದಂತೆಯೇ ಸರಿ. ಇದರಂತೆಯೇ ನಮ್ಮ ದೇಶಕ್ಕೆ ನಾವು ಮಾಡುವ ಅಹಿತವು ಕೂಡಾ ಅಪ್ರತ್ಯಕ್ಷವಾಗಿ ನಮ್ಮ ಸಮಾಜಕ್ಕೂ ಹಾನಿಯನ್ನೇ ಉಂಟುಮಾಡುತ್ತದೆ. ಈ ಸರ್ವಸಮ್ಮತವಾದ ವಿಶಾಲದೃಷ್ಟಿಯಿಂದಲೇ ಕೈ. ರಾ. ಬ. ವಾರದ ಅಪ್ಪಾಸಾಹೇಬರು ಸೊಲ್ಲಾಪೂರದ ವೀರಶೈವ ಜ್ಞಾನವರ್ಧಕ ಸಭೆಯಲ್ಲಿ ಹೇಳಿರುವುದೇನೆಂದರೆ: "ಜನ್ಮಭೂಮಿಯು ಸ್ವರ್ಗಕ್ಕಿಂತಲೂ ಶ್ರೇಷ್ಠವಾದುದು. ನಮ್ಮನ್ನು ರಕ್ಷಿಸುವ ಮಾತೃಭೂಮಿಯು ಯಾವ ವಿಷಯವನ್ನು ಪ್ರಾಂಭಿಸುವುದೋ ಅದಕ್ಕೆ ನಾವು ಸಹಯಮಾಡದೆ ವಿರೋಧಿಸುವುದು ಮಹತ್ತರವಾದ ಪಾಪವು. ನಮ್ಮ ಸಮಾಜದ ಪ್ರಮುಖ ಮುಂದಾಳುಗಳಾದ ಈ ಮಹಾನುಭಾವರ ಹಿತೋಪದೇಶವನ್ನು ನಾವು ಲಕ್ಷ್ಯದಲ್ಲಿಟ್ಟುಕೊಂಡು ನಮ್ಮ ಸಮಾಜಕ್ಕೆ ರಾಜಕೀಯ ಸೌಲಭ್ಯಗಳನ್ನು ಸಂಪಾದಿಸುವುದೇ ಕ್ಷೇಮಕರವಾದದ್ದಾಗಿದೆ."

ಈಗ ನಮ್ಮ ಬ್ರಿಟಿಷ್ ಇಂಡಿಯಾದಲ್ಲಿ ಸೌಮ್ಯಪಂಗಡ, ಉಗ್ರಪಂಗಡ ಮತ್ತು ಸತ್ಯಾಗ್ರಹ ಪಂಗಡಗಳೆಂಬ ರಾಜಕೀಯ ಪಂಗಡಗಳು ಸ್ವರಾಜ್ಯ ಸಂಪಾದನೆಗೋಸ್ಕರ ಬೇರೆ ಬೇರೆ ರೀತಿಗಳಿಂದ ಪ್ರಯತ್ನಿಸುತ್ತಲಿವೆ. ಆ ಭಾಗದಲ್ಲಿರುವ ನಮ್ಮ ಸಮಾಜದ ಕೆಲವು ವ್ಯಕ್ತಿಗಳ ವಿನಾ ಉಳಿದ ಜನಗಳೆಲ್ಲಾ ಇವುಗಳಲ್ಲಿ ಯಾವ ಪಂಗಡವನ್ನೂ ಅನುಸರಿಸದೆ ಬೇರೆಯಾಗಿಯೇ ಇದ್ದಾರೆ. ಏಕೆಂದರೆ ಈ ರಾಜಕೀಯ ವಿಷಯದಲ್ಲಿ ಪ್ರವೇಶಿಸಲು ಭಾರತೀಯರಿಗೆ ಯಾವ ಶಿಕ್ಷಣವು ಕಾರಣವಾಯಿತೋ ಅಂತಹ ಪಾಶ್ಚಾತ್ಯ ಶಿಕ್ಷಣವು ನಮ್ಮ ಸಮಾಜದವರಲ್ಲಿ ಪ್ರಸಾರವಾಗದಿದ್ದುದೇ ಮುಖ್ಯ ಕಾರಣವಾಗಿದೆ. ಪಾಶ್ಚಾತ್ಯ ವಾಙ್ಮಯದಲ್ಲಿರುವ ಸ್ವಾತಂತ್ರ್ಯಾದಿ ಉದಾತ್ತ ತತ್ವಗಳ ದಿವ್ಯ ಜ್ಞಾನವುಂಟಾದ ವಿನಾ ಇಡೀ ದೇಶದ ಅಭಿವೃದ್ಧಿಯ ವಿಷಯದಲ್ಲಿ ಪ್ರಯತ್ನಿಸುವ ಬುದ್ಧಿಯೇ ಬರುವುದಿಲ್ಲ. ಆದಕಾರಣ ನಮ್ಮ ಸಮಜವು ಈ ಕಾಲದ ರಾಜಕೀಯ ಕಾರ್ಯಕ್ಷೇತ್ರದಲ್ಲಿ ಇನ್ನೂ ಪ್ರವೇಶಿಸದಿದ್ದುದು ಆಶ್ಚರ್ಯವಲ್ಲ.

ಈ ಮೂರು ರಾಜಕೀಯ ಪಂಗಡಗಳ ವಿನಾ ಬ್ರಾಹ್ಮಣೇತರರ ಪಂಗಡವೆಂಬ ಇನ್ನೊಂದು ಪಂಗಡವಿದೆಯಷ್ಟೆ. ಇದು ಅವುಗಳಂತೆ ಕೇವಲ ರಾಜಕೀಯ ಪಂಗಡವಲ್ಲ. ಈ ಪಂಗಡಕ್ಕಿರುವ ವರ್ಣವಿಶಿಷ್ಟವಾದ ಹೆಸರಿನ ಮೇಲಿಂದಲೇ ಇವರ ಉದ್ದೇಶವು ಸಮಾಜ ಸುಧಾರಣೆಯೆಂದೇ ಸ್ಪಷ್ಟವಾಗುತ್ತದೆ. ಹೀಗಿದ್ದರೂ ಇದು ರಾಜಕೀಯ ವಿಷಯದಲ್ಲಿಯೂ ಪ್ರವೇಶಿಸಿ ಮೂರು ಪಂಗಡಗಳಿಗೆ ವಿರೋಧವಾಗಿ ಸ್ವರಾಜ್ಯವು ಈಗ ಭರತಖಂಡಕ್ಕೆ ಬೇಡೇ ಬೇಡವೆಂದು ಹೇಳುತ್ತಾ ಇದೆ. ಪುರಾಣ ಮತವಾದಿಗಳಾದ ಶೈವಾದಿ ತ್ರಿಮತೀಯ ಕೆಲವು ಬ್ರಾಹ್ಮಣಜನಗಳಿಂದ ರಾಜ್ಯಾಧಿಕಾರದ ಮೂಲಕವಾಗಿಯೂ, ಧರ್ಮಾಧಿಕಾರದ ಮೂಲಕವಾಗಿಯೂ, ಬ್ರಾಹ್ಮಣೇತರರಿಗಾಗುತ್ತಿರುವ ಸಾಮಾಜಿಕ ಹಿಂಸೆಗಳನ್ನು ತಪ್ಪಿಸಿಕೊಳ್ಳುವುದು ಈ ಪಂಗಡದ ಕಾರ್ಯವಾಗಿದೆ. ರಾಜಕೀಯ ಅಧಿಕಾರ, ಗೌರವಗಳನ್ನು ತಾವು ಹೊಂದಬೇಕೆಂಬುದೂ ಈ ಪಂಗಡದ ಪ್ರಮುಖರ ಇಂಗಿತವು. ಈ ಪ್ರಕಾರ ಅನೇಕ ಅಂತರ್ಬಾಹ್ಯೋದ್ದೇಶಗಿಂದ ಈ ಬ್ರಾಹ್ಮಣೇತರರ ಪಂಗಡವು ಏರ್ಪಟ್ಟು ಪ್ರಸಾರವಾಗುತ್ತಾ ಬಂದಿದೆ. ಬ್ರಿಟಿಷ್ ಇಂಡಿಯಾದಲ್ಲಿಯು ಮತ್ತು ದೇಶಿ ಸಂಸ್ಥಾನದಗಳಲ್ಲಿಯೂ ಇರುವ ನಮ್ಮ ಸಮಾಜದ ಅನೇಕ ಜನಗಳು ಈ ಪಂಗಡದಲ್ಲಿ ಸೇರಿ ಇಡೀ ಸಮಾಜವನ್ನೇ ಈ ಪಂಗಡದಲ್ಲಿ ಎಳೆದುಕೊಳ್ಳಲು ಪ್ರಯತ್ನಿಸುತ್ತಿರುವುದರಿಂದ ನಮ್ಮ ಸಮಾಜವು ಈ ಪಂಗಡದಲ್ಲಿ ಸೇರಿದರೆ ಸಮಾಜಕ್ಕೆ ಪ್ರಾಪ್ತವಾಗುವ ಹಿತಾಹಿತಗಳನ್ನು ಕುರಿತು ವಿವರಿಸುವುದು ಅವಶ್ಯಕವಾಗಿದೆ.

ಯಾವ ಶೈವಾದಿ ಶ್ರೀಮತೀಯ ಬ್ರಾಹ್ಮಣರ ಧರ್ಮಾಧಿಕಾರವು ನಾಯರ್, ನಾಯಡು, ಪಿಳ್ಳೆ, ಮರಾಠಾ ಮೊದಲಾದ ಕೆಲವು ಹಿಂದು ಸಮಾಜಗಳ ಮೇಲೆ ಈಗ ಹೇಗೆ ಇದೆಯೋ ಹಾಗೆ ನಮ್ಮ ಸಮಾಜದ ಮೇಲೇನಾದರೂ ಅವರ ಧರ್ಮಾಧಿಕಾರವಿದೆಯೋ? ಆ ತ್ರಿಮತಿಯ ಬ್ರಾಹ್ಮಣರಂತೆ ನಮ್ಮ ಮತದವರೂ ಧಾರ್ಮಿಕ ಆಚಾರ ವಿಚಾರಗಳಲ್ಲಿ ಸ್ವತಂತ್ರರಾಗಿಲ್ಲವೇ? ಹಿಂದುಗಳಲ್ಲಿ ಕೆಲವು ಸಮಾಜದವರು ನಮ್ಮ ಧಾರ್ಮಿಕ ಅಧಿಕಾರಕ್ಕೂ ಒಳಪಟ್ಟಿಲ್ಲವೇ? ಹೀಗಿರುವಾಗ ಆ ಬ್ರಾಹ್ಮಣೇತರರಂತೆ ತ್ರಿಮತೀಯ ಬ್ರಾಹ್ಮಣರಿಂದ ಸಾಮಾಜಿಕ ವಿಷಯದಲ್ಲಿ ನಾವು ಯಾವ ಸ್ವಾತಂತ್ರ್ಯವನ್ನು ಸಂಪಾದಿಸಬೇಕಾಗಿದೆ? ಆದಕಾರಣ ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜದವರು ಸೇರುವುದು ಅನುಚಿತವಾಗಿಯೂ, ಅಗೌರವವನ್ನುಂಟು ಮಾಡಿಕೊಳ್ಳತಕ್ಕದ್ದಾಗಿಯೂ ಇಲ್ಲವೇ?

ಬ್ರಾಹ್ಮಣೇತರರ ಪಂಗಡದಲ್ಲಿ ಸೇರುವುದರಿಂದ ನಮ್ಮ ಸಮಾಜಕ್ಕೆ ಸಾಮಾಜಿಕ ಹಿತವಾಗುವುದು ಹಾಗಿರಲಿ. ಅಹಿತವೇ ಆಗುತ್ತದೆ. ಈ ದೇಶದಲ್ಲಿ ಮೊದಲೇ ಮತದ್ವೇಷವು ಹೆಚ್ಚು ಅದರಲ್ಲಿಯೂ ತ್ರಿಮತೀಯ ಬ್ರಾಹ್ಮಣರಿಗು, ವೀರಶೈವರಿಗೂ, ಅತ್ಯಧಿಕ ಹೀಗಿರುವಾಗ ಮತದ್ವೇಷವೃದ್ಧಿಗೆ ಎಷ್ಟೋ ಅವಕಾಶವಿರುವ ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜದವರೂ ಸೇರಿ ನಮ್ಮ ವಿಷಯದಲ್ಲಿರುವ ಆ ದ್ವೇಷಾಗ್ನಿಯನ್ನು ಮತ್ತೂ ಹುಟ್ಟಿಸಿಕೊಳ್ಳುವುದು ನಮ್ಮ ಸಮಾಜಕ್ಕೆ ಶ್ರೇಯಸ್ಕರವಾದುದೇ? ದ್ವೇಷವು ಪ್ರೀತಿಯಿಂದ ಕಡಿಮೆಯಾಗುವುದೇ ವಿನಾ ಆದು ದ್ವೇಷದಿಂದ ಕಡಿಮೆಯಾಗುತ್ತದೆಯೇ? ಮತ್ತೂ ಹೆಚ್ಚುತ್ತಾ ಹೋಗುವುದಿಲ್ಲವೇ? ನಮ್ಮ ಸಮಾಜವನ್ನು ನಾವು ಅಭಿವೃದ್ಧಿಗೆ ತರಬೇಕಾದರೆ ಅನ್ಯಮತೀಯರ ಸಂಗಡ ಸಹಾನುಭೂತಿಯಿಂದ ನಡೆದುಕೊಳ್ಳಲೇ ಬೇಕು. ಅದೇ ಪರಿಣಾಮದಲ್ಲಿ ಶ್ರೇಯಸ್ಸನ್ನುಂಟುಮಾಡುವುದು. ಮತದ್ವೇಷಕರವಾದ ಭಾಷಣಗಳು ಮತ್ತು ಲೇಖನಗಳು ಜನಗಳಲ್ಲಿ ಆವೇಶೋತ್ಸಾಹಗಳನ್ನುಂಟು ಮಾಬಹುದು. ಆದರೆ ಅವು ಕ್ಷಣಿಕವಾದವುಗಳು. ಆ ಉತ್ಸಾಹವು ನಿಜವಾದ ಜಾಗ್ರತೆಯ ಲಕ್ಷಣವಲ್ಲ, ಅದು ತನ್ನ ನಾಶಕ್ಕೆ ಕಾರಣವಾದದ್ದಾಗಿದೆ. ಮಾತನಾಡಲಿಕ್ಕೂ, ಬರೆಯಲಿಕ್ಕೂ, ಬರುತ್ತದೆಂದು ನಾಲಿಗೆಯಿಂದಲೂ, ಲೇಖನದಿಂದಲೂ ದ್ವೇಷಾಗ್ನಿಯನ್ನು ಯಾರೂ ಪ್ರಸಾರಗೊಳಿಸಬಾರದು. ಒಬ್ಬಿಬ್ಬರ ಇಂತಹ ಕಾರ್ಯಗಳೂ ಕೂಡಾ ಬಹುಜನಗಳು ಬಹುಕಾಲ ದುಃಖವನ್ನನುಭವಿಸಲು ಕಾರಣಗಳಾಗುತ್ತವೆ. ಜನಗಳಲ್ಲಿ ಅಡಗಿರುವ ಈ ಮತದ್ವೇಷವನ್ನು ಪ್ರಜ್ವಲಗೊಳಿಲಸುವುದು ಬಹು ಸುಲಭವು. ಆದರೆ ಅದನ್ನು ಶಾಂತಗೊಳಿಸುವುದು ಮಾತ್ರ ಬಹು ಕಷ್ಟತರವಾದದ್ದಾಗಿದೆ. ಕುಶಲನಾದ ವೈದ್ಯನು ರೋಗಿಯ ರೋಗವು ಗುಣವಾಗದಿದ್ದರೂ ಅದು ಹೆಚ್ಚುವಂತಹ ಔಷಧಿಯನ್ನು ಮಾತ್ರ ಹೇಗೆ ಕೊಡುವುದಿಲ್ಲವೋ ಹಾಗೆಯೇ ಸಮಾಜೋದ್ಧಾರಕ್ಕೆಂದು ಹೊರಡುವವರು ತಮ್ಮ ಕಾರ್ಯದಿಂದ ಸಮಾಜೋನ್ನತಿಯಾಗದಿದ್ದರೆ ಚಿಂತೆಯಿಲ್ಲ; ಅದು ಮತ್ತೂ ಅವನತಿಯನ್ನು ಮಾತ್ರ ಹೊಂದಬಾರದೆಂಬ ಮುಂದಾಲೋಚನೆಯನ್ನಿಟ್ಟುಕೊಂಡು ಕಾರ್ಯ ತತ್ಪರರಾಗಬೇಕು. "ನಮ್ಮ ಧರ್ಮದಲ್ಲಿ ಅಭಿಮಾನವುಂಟಾಗಬೇಕೆಂದರೆ ನಾವು ಅನ್ಯಧರ್ಮದವರ ದ್ವೇಷಮಾಡುವುದನ್ನು ಕಲಿಯಬೇಕೆಂದಲ್ಲ" ಎಂಬುದಾಗಿ ಕೈ. ರಾ. ಬ. ವಾರದ ಮಲ್ಲಪ್ಪನವರು ೫ನೆಯ ವೀರಶೈವ ಮಹಾಸಭಾಧ್ಯಕ್ಷರಾಗಿ ಮಾಡಿದ ಉಪನ್ಯಾಸದಲ್ಲಿ ಹೇಳಿರುವುದನ್ನು ನಮ್ಮ ಸಮಾಜಸೇವಕರು ಯಾವಾಗಲೂ ತಮ್ಮ ದೃಷ್ಟಿಪಥದಲ್ಲಿಟ್ಟುಕೊಂಡಿರಬೇಕು.

ಇನ್ನು ರಾಜಕೀಯ ದೃಷ್ಟಿಯಿಂದ ಈ ಪಂಗಡದಲ್ಲಿ ಸೇರುವುದರಿಂದಾಗುವ ಪ್ರಯೋಜನವನ್ನು ಕುರಿತು ಯೋಚಿಸೋಣ. ಬ್ರಾಹ್ಮಣೇತರರ ಪಂಗಡವು ಸ್ವರಾಜ್ಯವನ್ನು ಈಗಲೇ ಕೊಡಬೇಡಿರೆಂದು

ಹೇಳುತ್ತಾ ಇದೆಯಷ್ಟೆ ಹಿಗೆಯೇ ವೀರಶೈವ ಸಮಾಜದವರೂ ಹೇಳುವುದೂ ಯುಕ್ತವಾಗಿದೆಯೇ? ಸ್ವರಾಜ್ಯಸಂಪಾದನೆಯ ಕಾರಣವನ್ನು ತಿಳಿದುಕೊಂಡರೆ ಅದು ನಮಗೆ ಈಗಲೇ ಬೇಕಾಗಿದೆಯೋ ಇಲ್ಲವೋ ಎಂಬುದು ಚೆನ್ನಾಗಿ ಗೊತ್ತಾಗುತ್ತದೆ. ಪ್ರಪಂಚದ ಯಾವ ಸುಧಾರಿಸಿದ ದೇಶದಲ್ಲಿಯೂ ಇಲ್ಲದಂತಹ ಅನಿರ್ವಚನೀಯವಾದ ದಾರಿದ್ರ್ಯವು ಭಾರತೀಯರಾದ ನಮಗೆ ಪ್ರಾಪ್ತವಾಗಿರುವುದರಿಂದ ಇದನ್ನು ನಿವಾರಣೆಮಾಡಿಕೊಳ್ಳುವುದೇ ಸ್ವರಾಜ್ಯ ಸಂಪಾದನೆಯ ಮುಖ್ಯೋದ್ದೇಶವಾಗಿದೆ. ಮಿ. ವಿಲ್ಯಂ ಡಿಗ್ಬಿಯವರು ಸರಕಾರದ ಲೆಕ್ಕಪತ್ರಗಳ ಮೇಲಿಂದಲೇ ಹಿಂದುಸ್ಥಾನದಲ್ಲಿ ಹೊಟ್ಟೆಗೆ ಅನ್ನವಿಲ್ಲದೆ ಪ್ರತಿವರ್ಷ ೧೯-೨೦ ಲಕ್ಷ ಜನಗಳು ಸಾಯುತ್ತಿದ್ದಾರೆಂದು ದೃಢೀಕರಿಸಿದ್ದಾರೆ. ನಮ್ಮ ದೇಶದ ಮೂರು ಕೋಟಿ ಜನಗಳು ಒಂದೇ ಹೊತ್ತು ಊಟಮಾಡಿ ಜೀವಿಸುತ್ತಿದ್ದಾರೆಂದು ಮಹಾತ್ಮಾ ಗಾಂಧಿಯವರು ಹೇಳುತ್ತಿದ್ದಾರೆ. ನಮ್ಮ ದೇಶಬಾಂಧವರಿಗೆ ಇಂತಹ ದುಸ್ಥಿತಿ ಬರಲು ಇಂಗ್ಲೀಷ್ ಸರಕಾರದವರು ಸಾಧಾರಣ ೪೫ ಕೋಟಿ ರೂಪಾಯಿಗಳನ್ನು ಎಂದರೆ ಗಜನಿ ಮಹಮ್ಮದನು ಈ ದೇಶದ ಮೇಲೆ ೧೮ ಸಾರೆ ದಂಡೆತ್ತಿ ಬಂದು ಸುಲಿದುಕೊಂಡು ಹೋದಷ್ಟು ಹಣವನ್ನು ಪ್ರತಿವರ್ಷದಲ್ಲಿಯೂ ಈ ದೇಶದಿಂದ ತೆಗೆದುಕೊಂಡು ಹೋಗುತ್ತಿರುವುದೇ ಮುಖ್ಯಕಾರಣವೆಂದು ಮಹರ್ಷಿ ದಾದಾಬಾಯಿ ನವರೋಜಿಯವರು ಹೇಳಿದ್ದಾರೆ. ಒಂದು ದೇಶವು ಫಲವತ್ತಾದದ್ದಾಗಿದ್ದು ಆ ದೇಶದಲ್ಲಿ ನಾನಾ ಪದಾರ್ಥಗಳುಂಟಾಗುತ್ತಿದ್ದರೂ ಅಲ್ಲಿನ ಜನಗಳು ಮಾತ್ರ ಅತ್ಯಂತ ದರಿದ್ರರಾಗಿದ್ದಾರೆ. ಅಲ್ಲಿಯ ರಾಜ್ಯದಾಳಿಕೆಯಲ್ಲಿಯೇ ಏನಾದರೂ ದೋಷವಿರಬೇಕೆಂದು ಜಾನ್ ಬ್ರಾಯಿಟ್‌ರವರು ಸೂಚಿಸಿದ್ದಾರೆ. ಇವರೆಲ್ಲಾ ಈಗ ಬ್ರಾಹ್ಮಣೇತರರು ಯಾರಿಗೆ ಬ್ರಾಹ್ಮಣರೆಂದು ಹೇಳುತ್ತಿದ್ದಾರೆಯೋ ಅಂತಹ ಬ್ರಾಹ್ಮಣರಲ್ಲ, ಮತ್ತು ಅಂತಹ ಬ್ರಾಹ್ಮಣರು ಈ ದರಿದ್ರ್ಯಾವಸ್ಥೆಯಲ್ಲಿದ್ದಾರೆಂತಲೂ ಅವರು ಹೇಳಿಲ್ಲ. ಈಗಿನ ಬ್ರಾಹ್ಮಣೇತರರ ಮುಂದಾಳುಗಳೂ ತಾವು ಯಾವ ಜನಗಳ ಮುಂದಾಳೂಗಳೆಂದು ಹೇಳಿಕೊಳ್ಳುತ್ತಿದ್ದಾರೆಯೋ ಆ ನಮ್ಮ ದೀನರಾದ ದೇಶಬಾಂಧವರೇ ಈ ಘೋರತರವಾದ ದಾರಿದ್ರ್ಯದಿಂದ ಬಳಲುತ್ತಿದ್ದಾರೆ. ಎಂದಮೇಲೆ ಸ್ವರಾಜ್ಯ ಸಂಪಾದನೆಯು ಬ್ರಾಹ್ಮಣರಿಗೋ, ಅಥವಾ ಬ್ರಾಹ್ಮಣೇತರರಿಗೋ? ಸ್ವರಾಜ್ಯವನ್ನು ಜಾಗ್ರತೆ ಸಂಪಾದಿಸಿ ಈ ದರಿದ್ರ್ಯಾವಸ್ಥೆಯಿಂದ ಅವರನ್ನು ಪಾರುಮಾಡುವವರು ಬ್ರಾಹ್ಮಣೇತರರ ಮುಂದಾಳುಗಳೋ ಅಥವಾ ಅವರು ಇನ್ನೂ ಬಹುಕಾಲ ದರಿದ್ರಾವಸ್ಥೆಯಲ್ಲಿ ಬಳಲುತ್ತಲೇ ಇರಲು ಅವಕಾಶವಾಗುವಂತೆ ಈಗ ಸ್ವರಾಜ್ಯವೇ ಬೇಡವೆಂದು ಹೇಳುತ್ತಿರುವವರು ಬ್ರಾಹ್ಮಣೇತರರ ಮುಂದಾಳುಗಳೋ? ವಾಚಕರೇ ಯೋಚಿಸಬೇಕು.

ಆ ನಮ್ಮ ದೇಶಬಾಂಧವರಾದ ಕೋಟ್ಯಂತರ ಬಡಜನಗಳು ಇನ್ನೂ ದುಃಖದಲ್ಲಿಯೇ ಇರಲು ವೀರಶೈವರು ಪರೋಕ್ಷದಿಂದಲಾದರೂ ಬ್ರಿಟಿಷರಿಗೆ ಸಹಾಯಮಾಡುವುದು ಯುಕ್ತವೇ? ಇದು ಮಾತೃಭೂಮಿಗೆ ದ್ರೋಹವನ್ನು ಮಾಡಿದಂತಾಗುವುದಿಲ್ಲವೇ? ಈಗ ನಮಗೆ ಸ್ವರಾಜ್ಯವು ಬೇಡವೆಂದು ಹೇಳುವುದೆಂದರೆ ನಮ್ಮ ದರಿದ್ರ್ಯಾವಸ್ಥೆಯು ಇನ್ನೂ ಹೆಚ್ಚಾಗಲೆಂದೇ ಹಾರೈಸಿದಂತಲ್ಲವೇ? ನಮ್ಮ ಸಮಾಜದ ಮುಕ್ಕಾಲುಪಾಲು ಜನಗಳು ದ್ರವ್ಯಾರ್ಜನೆಯ ಕಾರ್ಯಗಳಲ್ಲಿಯೇ ನಿರತರಾಗಿರುವಾಗ ನಮ್ಮ ದೇಶದ ದಾರಿದ್ರ್ಯವು ನಮ್ಮನ್ನೂ ಬೆನ್ನುಹತ್ತದೆ ಬಿಟ್ಟದೆಯೋ? ಈಗ ಸ್ವರಾಜ್ಯ ದೊರೆತರೆ ಅದು ಪುರಾಣ ಮತವಾದಿಗಳಾದ ಬ್ರಾಹ್ಮಣರ ಅಧಿನವಾಗಿ ಅನ್ಯಜನಗಳೆಲ್ಲಾ ಘೋರತರವಾದ

ವಿಪತ್ತಿಗೀಡಾಗುತ್ತಾರೆಂದು ಹೇಳುತ್ತಿರುವ ಬ್ರಾಹ್ಮಣೇತರರ ಪಂಗಡವು ೧೮ನೇಯ ಶತಮಾನದ ಸ್ವಪ್ನಾವಸ್ಥೆಯಲ್ಲಿದೆಯೇ ವಿನಾ ಈ ಇಪ್ಪತ್ತನೆಯ ಶತಮಾನದ ಜಾಗ್ರತಾವಸ್ಥೆಯಲ್ಲಿಲ್ಲವೆಂದು ತಿಳಿಯಬೇಕು. ಸ್ವರಾಜ್ಯವೆಂದರೆ ಮೊದಲಿನಂತೆ. ಯಾವುದಾದರೊಂದು ವ್ಯಕ್ತಿಯ ಅಥವಾ ಯಾವುದಾದರೊಂದು ವರ್ಣದವರ ರಾಜ್ಯವಲ್ಲ ಹಾಗಿದ್ದರೆ ಧಾರ್ಮಿಕ ದೃಷ್ಟಿಯಿಂದ ಪರಸ್ಪರ ತುಂಬಾ ವಿರೋಧವುಳ್ಳ ಹಿಂದು ಮತ್ತು ಮುಸಲ್ಮಾನರು ಸೇರಿ ಈ ಸ್ವರಾಜ್ಯಸಂಪಾದನೆಯ ಕಾರ್ಯವನ್ನೇಕೆ ಮಾಡುತ್ತಿದ್ದರು? ಈಗ ದೊರೆಯುವ ಸ್ವರಾಜ್ಯವು ಪ್ರಜಾಪ್ರಭುತ್ವವು. ಬಹುಜನಗಳ ಅಭಿಪ್ರಾಯವೇ ರಾಜ್ಯ ಶಾಸನವಾಗುವುದು ಈಗ ಹಿಂದುಸ್ತಾನದಲ್ಲಿ ಎಲ್ಲ ಪಂಗಡಗಳ ಬ್ರಾಹ್ಮಣರ ಸಂಖ್ಯೆಯು ಸಾಧಾರಣ ನಾಲ್ಕು ಕೋಟಿ ಇದೆ. ಬೇರೆ ಜನಗಳ ಸಂಖ್ಯೆಯಾದರೋ ೨೭ ಕೋಟಿ ಇದೆ. ಇವುಗಳಲ್ಲಿ ಯಾರ ಸಂಖ್ಯೆಯು ಅತ್ಯಧಿಕವಾಗಿದೆಯೆಂಬುದನ್ನು ಯೋಚಿಸಬಾರದೇ? ಆ ನಾಲ್ಕು ಕೋಟಿ ಬ್ರಾಹ್ಮಣಜನಗಳಲ್ಲಿಯೂ ಸಕಲರೂ ಪುರಾಣಮತವಾದಿಗಳೇ ಇದ್ದಾರೆಯೇ? ಅವರಲ್ಲಿಯೇ ಅಸಂಖ್ಯಾತ ಜನಗಳೂ ವರ್ಣಾಶ್ರಮಗಳನ್ನು ತೆಗೆದುಹಾಕಬೇಕೆಂದು ಈ ಬ್ರಾಹ್ಮಣೇತರರ ಪಂಗಡವು ಹುಟ್ಟುವ ಮುಂಚೆಯೇ ಪ್ರಯತ್ನಿಸಲುಪಕ್ರಮಿಸಿಲ್ಲವೇ?

ಈಗಲೇ ಸ್ವರಾಜ್ಯವು ದೊರೆತರೆ ಈಗ ಐರೋಪ್ಯರಿಗೆ ಸಂಬಳದ ಮೂಲಕವಾಗಿ ಸೇರುತ್ತಿರುವ ವಿಪರೀತವಾದ ದ್ರವ್ಯದಲ್ಲಿ ಕೆಲವು ಭಾಗವು ಸುಶೀಕ್ಷಿತರಾದ ತ್ರಿಮತೀಯ ಬ್ರಾಹ್ಮಣಜನಗಳಿಗೆ ಕೆಲವು ಕಾಲ ದೊರೆಯಬಹುದು. ಅದನ್ನು ತಡೆಯುವುದಕ್ಕೋಸ್ಕರ ನಾವು ಬಹುಕಾಲ ವಿಶೇಷವಾದ ದ್ರವ್ಯವನ್ನು ಪರದೇಶಕ್ಕೆ ಕಳುಹಿಸುತ್ತಾ ದರಿದ್ರಾವಸ್ಥೆಯಲ್ಲಿರುವುದು ಯುಕ್ತವೇ? ನಮ್ಮ ದೇಶಬಾಂಧವರಿಗೆ ಸ್ವಲ್ಪ ಕೇಡನ್ನುಂಟು ಮಾಡುವುದಕ್ಕೋಸ್ಕರ ನಾವು ವಿಶೇಷವಾದ ಹಾನಿಯನ್ನುಂಟುಮಾಡಿಕೊಳ್ಳುವುದು ವಿಚಾರಪರರಿಗೆ ಯುಕ್ತವೇ? ನಿಜವಾಗಿ ನೋಡಿದರೆ ಪುರಾಣಮತವಾದಿಗಳಾದ ಬ್ರಾಹ್ಮಣರೇ ಈಗ ಸ್ವರಾಜ್ಯವನ್ನು ಕೊಡಬೇಡಿರೆಂದು ಹೇಳಬೇಕಾಗಿದ್ದಿತು. ಏಕೆಂದರೆ ಸ್ವರಾಜ್ಯವು ದೊರೆತರೆ ಅವರ ಕೃತ್ರಿಮವಾದ ಘನತೆಯು ಲಯವಾಗಿ ಹೋಗುತ್ತದೆ. ಹೇಗೆಂದರೆ, ಸ್ವರಾಜ್ಯವು ಪ್ರಾಪ್ತವಾದನಂತರ ಅನ್ಯಸಮಾಜದವರು ಮತ್ತು ಅನ್ಯಧರ್ಮದವರು ನಿಯಮ ನಿರ್ಮಾಣ ಸಭೆಗಳಲ್ಲಿ ಹೆಚ್ಚಾಗಿ ಸೇರಿ ತಮಗೆ ಅನುಕೂಲವಾದ ಶಾಸನಗಳನ್ನೇ ಮಾಡಿಕೊಳ್ಳುತ್ತಾರೆ. ಇಂತಹ ಸ್ಥಿತಿಯು ಜಾಗ್ರತೆ ಬರಬಾರದೆಂದು ಅವರೇ ಸ್ವರಾಜ್ಯಸಂಪಾದನೆಗೆ ವಿರೋಧಿಸಬೇಕಾಗಿದ್ದಿತು. ಆದರೆ ಅವರಿಗೆ ಪ್ರತಿಯಾಗಿ ಬ್ರಾಹ್ಮಣೇತರರೇ ವಿರೋಧಿಸುತ್ತಿರುವುದನ್ನು ನೋಡಿದರೆ ಅವರಿಗೆ ತಮ್ಮ ನಿಜವಾದ ಹಿತವು ಯಾವುದರಿಂದ ಲಭಿಸುತ್ತದೆಂಬ ತಿಳುವಳಿಕೆಯೇ ಇದ್ದಂತೆ ತೋರುವುದಿಲ್ಲ. ಅವರಲ್ಲಿ ವಿದ್ಯಾಪ್ರಸಾರವಾಗದೆ ಮೌಢ್ಯತನವಿದ್ದುದೇ ಇದಕ್ಕೆ ಕಾರಣವಾಗಿದೆ. ಈ ಜನಗಳು ತಮ್ಮ ಕಾಲಮೇಲೆ ತಾವೇ ಕಲ್ಲನ್ನು ಹಾಕಿಕೊಳ್ಳುತ್ತಿರುವಂತಹ ಭಯಂಕರವಾದ ಕಾರ್ಯವನ್ನು ಮಾಡುತ್ತಿರುವಾಗ ನಮ್ಮ ಸಮಾಜದವರು ಅವರ ಪಂಗಡದಲ್ಲಿ ಸೇರುವುದು ವಿಹತವೇ? ಈ ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜದವರೂ ಸೇರಿದರೆ ಧಾರ್ಮಿಕ ಸಾಮಾಜಿಕ ಮತ್ತು ಸಾಂಪತ್ತಿಕ ಈ ಮೂರು ರೀತಿಗಳಿಂದ ಕೇಡನ್ನುಂಟುಮಾಡಿಕೊಂಡಂತಾಗುವುದಲ್ಲದೆ ಅವರ ಅನರ್ಥಕಾರಿಯಾದ ಕಾರ್ಯಕ್ಕೆ ಸಹಾಯಮಾಡಿದ ದೋಷಕ್ಕೂ ಗುರಿಯಾಗಬೇಕಾಗುತ್ತದೆ.

ನಮ್ಮ ಕರ್ನಾಟಕದಲ್ಲಿ ಮದ್ರಾಸಿನ ಬ್ರಾಹ್ಮಣೇತರರ ಪಂಗಡವು ವೀರಶೈವರಲ್ಲಿ ಪ್ರಸಾರವಾಗುವುದಕ್ಕೆ

ಕೆಲವು ಕಾರಣಗಳಿವೆ. ವೀರಶೈವರಿಗೂ ಶೈವಾದಿ ಶ್ರೀಮತೀಯ ಬ್ರಾಹ್ಮಣರಿಗೂ ಮೊದಲಿನಿಂದಲೂ ಮತದ್ವೇಷವು ಇದ್ದೇ ಇದೆ. ಇದು ಕೆಲವು ಕಾಲದಿಂದ ಎಷ್ಟೋ ಕಡಿಮೆಯೆಯಾಗುತ್ತಾ ಇತ್ತು. ಆದರೆ ಇತ್ತೀಚೆಗೆ ತ್ರಿಮತೀಯ ಕೆಲವು ಬ್ರಾಹ್ಮಣರು ಚಿತ್ರದುರ್ಗದ ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಮಹಾಸ್ವಾಮಿಗಳವರಿಗಿರುವ ಬಿರುದಾವಳಿಗಳ ವಿಷಯದಲ್ಲಿಯೂ, ಶ್ರೀ ವ್ಯಾಸನ ತೋಳಿನ ಉತ್ಸವದ ವಿಷಯದಲ್ಲಿಯೂ ವಿರೋಧಿಸಿದ್ದರಿಂದ ಆ ಜನಗಳ ವಿಷಯದಲ್ಲಿ ವೀರಶೈವರಿಗೆ ಅಪ್ರೀತಿಯು ಹೆಚ್ಚಿತು. ಇಷ್ಟೇ ಅಲ್ಲ. ಪರಲೋಕವಾಸಿಗಳಾದ ಕೆರೂರು ವಾಸದೇವಾಚಾರ್ಯರಂತಹ ಮುಂದಾಲೋಚನೆಯಿಲ್ಲದ ಲೇಖಕರು ವೀರಶೈವಮತದ ಪರಮಪೂಜ್ಯ ವ್ಯಕ್ತಿಗಳ ವಿಷಯವಾಗಿ ಹೇಯವಾದ ಲೇಖಗಳನ್ನು ಪ್ರಕಟಿಸಿ ಮತದ್ವೇಷವು ಮತ್ತೂ ಹೆಚ್ಚಲು ಕಾರಣರಾದರು. ಮ. ರಾ. ವೆಂಕಟಕೃಷ್ಣಯ್ಯನವರಂತಹ ಈಗಿನ ಕಾಲಸ್ಥಿತಿಯನ್ನೂ ತಮ್ಮ ಕರ್ತವ್ಯದ ಮಹತ್ವವನ್ನೂ ತಿಳಿದುಕೊಳ್ಳದಿರುವ ಕೆಲವು ಬ್ರಾಹ್ಮಣ ಪತ್ರಿಕಾಕರ್ತರು ನಮ್ಮ ಸಮಾಜಕ್ಕೂ, ನಮ್ಮ ಸಮಾಜದ ಪ್ರಮುಖರಿಗೂ, ಅವಮಾನಕರವಾದ ಲೇಖನಗಳನ್ನು ಬರೆಯುತ್ತ ಮತದ್ವೇಷವನ್ನು ಪ್ರಸಾರಗೊಳಿಸುತ್ತಿದ್ದಾರೆ. ಇವೇ ಮೊದಲಾದ ಕಾರಣಗಳಿಂದ ಆ ಬ್ರಾಹ್ಮಣ ಜನಗಳ ವಿಷಯದಲ್ಲಿ ನಮ್ಮ ವೀರಶೈವ ಸಮಾಜದ ಬಹುಜನರು ಅಸಂತೋಷಿಗಳೂ, ಸಂತಾಪಯುಕ್ತರೂ, ಅದ ಸಮಯದಲ್ಲಿಯೇ ಬ್ರಾಹ್ಮಣರ ಘನತೆಯನ್ನು ನಾಶಮಾಡುವುದೇ ಸ್ವರಾಜ್ಯಸಂಪಾದನೆಯೆಂದು ತಿಳಿದುಕೊಂಡಿರುವ ಮದ್ರಾಸಿನ ಬ್ರಾಹ್ಮಣೇತರರ ಪಂಗಡವು ಪ್ರತ್ಯೇಕ ಪ್ರಾತಿನಿಧ್ಯವನ್ನು ಸಂಪಾದಿಸುವುದು ತನ್ನ ಮುಖ್ಯಕಾರ್ಯವೆಂದು ಪ್ರತಿಪಾದಿಸಿದ್ದರಿಂದಲೂ ಪ್ರತ್ಯೇಕ ಪ್ರಾತಿನಿಧ್ಯಾಪೇಕ್ಷಿಗಳಾದ ವೀರಶೈವರೂ ಈ ಪಂಗಡದಲ್ಲಿ ಸೇರಿದರು. ನಮ್ಮ ಸಮಾಜದವರು ಪ್ರತ್ಯೇಕ ಪ್ರಾತಿನಿಧ್ಯವನ್ನು ಕೇಳುವುದಕ್ಕಿಂತ ಮುಂಚೆಯೇ ಮಹಾನ್ ದೇಶಭಕ್ತರಾದ ಕೈ. ಗೋಖಲೆಯವರು ನಮ್ಮ ಸಮಾಜಕ್ಕೆ ಪ್ರತ್ಯೇಕ ಪ್ರಾತಿನಿಧ್ಯವನ್ನು ಕೊಡಬೇಕೆಂದು ಸೂಚಿಸಲ್ಪಟ್ಟಿರಲಿಲ್ಲವೇ?(Special representation to Lingayatas; etc. where necessary Hon. Gokhale's Home Rule Scheme)ಇವರು ಬ್ರಾಹ್ಮಣರಲ್ಲವೇ? ತಾತ್ಕಾಲಿಕವಾದ ವಿಷಯಗಳ ಕಡೆಗೇನೇ ಲಕ್ಷಿಸಿ ಈ ಬ್ರಾಹ್ಮಣೇತರರ ಪಂಗಡದಲ್ಲಿ ನಮ್ಮ ಸಮಾಜದವರು ಸೇರಿದುದು ಅನುಚಿತವಾದುದೆಂದು ಈ ವರೆವಿಗೆ ವಿವರಿಸಿರುವ ಸಂಗತಿಗಳಿಂದ ನಿಷ್ಪಕ್ಷಪಾತಿಗಳಾದ ವಾಚಕರಿಗೆ ವೇದ್ಯವಾಗದೆ ಇರಲಾರದು.

ಭರತಖಂಡದಲ್ಲುಂಟಾಗಿರುವ ಈ ನಮಯುಗದಲ್ಲಿ ಈ ನಮ್ಮ ವೀರಶೈವ ಸಮಾಜವು ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಸಾಂಪತ್ತಿಕಾದಿ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಯನ್ನು ಹೊಂದಿ ತನ್ನ ಜನನಿಯಾದ. ಈ ಭಾರತಮಾತೆಯ ಶ್ರೇಯಸ್ಸಿಗೆ ಸಾಧನವಾಗಿ ಪರಿಣಮಿಸಲೆಂದು ಹಾರೈಸುತ್ತೇವೆ.

❖❖

॥ಓಂ॥

ವೀರಶೈವ ಏಕೀಕರಣ

ವೀರಶೈವ ವಿದ್ಯಾಲಯ
ಆಲಮಟ್ಟಿ

॥ಓಂ॥

ವೀರಶೈವ ಏಕೀಕರಣ

ॐ

विद्यामृतमश्नुते

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

೧೯೩೩ ಕ್ರಯ – ೩ಪೈ ಶಾ. ಶ. ೧೮೫೫

*

ಪೀಠಿಕೆ

ಧಾರವಾಡದಲ್ಲಿ ಕೂಡಿದ ೧೧ನೆಯ ವೀರಶೈವ ಮಹಾಸಭೆಯಲ್ಲಿ ವೀರಶೈವ ಏಕೀಕರಣವನ್ನು ಕುರಿತು ಒಂದು ನಿರ್ಣಯವಾಗಿದೆಯಷ್ಟೇ. ಈ ನಿರ್ಣಯದ ಮಹತ್ವವೂ ಪ್ರಯೋಜನವೂ ನಮ್ಮ ಸಮಾಜ ಬಾಂಧವರಲ್ಲಿ ಸಕಲರಿಗೂ ತಿಳಿಯಲೆಂದು ಸಂವಾದ ರೂಪದಲ್ಲಿ ವಿವರಿಸಿ ಇದನ್ನು ಬರೆದುದಾಗಿದೆ.

ಇದನ್ನು ಓದಿದ ಮಹಾಶಯರು ತಮ್ಮ ನಡತೆಯಿಂದಲೂ ವೀರಶೈವ ಏಕೀಕರಣಕ್ಕೆ ಪ್ರೋತ್ಸಾಹಿಸುವರೆಂದು ನಂಬಿದ್ದೇನೆ.

ಹರ್ಡೇಕರ ಮಂಜಪ್ಪ

ಶಿವಪ್ಪ ಮತ್ತು ಲಿಂಗಪ್ಪ ಇವರ ಸಂಭಾಷಣೆ

ಶಿವಪ್ಪ : ಶರಣಾರ್ಥಿ ಲಿಂಗಪ್ಪನವರೇ? ಏನೂ ನೀವೂ ಮೊನ್ನೆ ಧಾರವಾಡ ಮಹಾಸಭೆಗೆ ಹೋಗಿದ್ದಿರಂತೆ, ಬನ್ನಿರಿ ಏನೇನು ನಡೆಯಿತು? ಎಲ್ಲಾ ಕುಲದವರ ಕೂಡ ಬಳಕಿ ಮಾಡಬೇಕಂತೆ, ಹೌದೇ?

ಲಿಂಗಪ್ಪ : ಯಾರು ಹೇಳಿದರು ನಿಮಗೆ? ಬೇರೆ ಕುಲದವರ ಸಂಗಡವಲ್ಲ; ನಮ್ಮ ಲಿಂಗಾಯತರಲ್ಲಿಯೇ ಒಬ್ಬರು ಹೆಚ್ಚು ಇನ್ನೊಬ್ಬರು ಕಡಿಮೆಯೆಂದು ತಿಳಿಯಬಾರದು. ಎಲ್ಲರಲ್ಲಿಯೂ ಪರಸ್ಪರ ಊಟ ಉಡಿಗೆ ಕೊಂಡುಕೊಳ್ಳೂವುದು ನಡೆಯಬೇಕೆಂದು ಗೊತ್ತಾಯಿತು.

ಶಿವಪ್ಪ : ಇದೊಳ್ಳೇ ಠರಾವು! ನಾಳೆ ಚಲವಾದಿ ರುದ್ರನ ಮನೆಗೆ, ಹಡಪದ ಹಂಪನ ಮನೆಗೆ ಊಟಕ್ಕೆ ಹೋಗಿರಿ. ಅವರೂ ಲಿಂಗಯತರಲ್ಲೇ?

ಲಿಂಗಪ್ಪ : ಹಾಗಲ್ಲರೀ ಶಿವಪ್ಪನವರೇ? ಹೀಗೇಕೇ ಸಿಟ್ಟಾಗುತ್ತೀರಿ, ಯಾವ ಮನೆಗೆ ಅಯ್ಯನವರು ಹೋಗತ್ತಾರೋ ಅಂಥ ಬಳಕಿಯಲ್ಲಿರುವವರ ಮನೆಯಲ್ಲಿಯೇ ಪರಸ್ಪರ ಊಟೋಪಚಾರ ನಡೆಯಬೇಕೆಂದು ಗೊತ್ತಾಗಿದೆ.

ಶಿವಪ್ಪ : ಹೀಗೋ, ಆಗಲಿ ಗಾಣಿಗೇರ ಚನ್ನವೀರಪ್ಪನ ಮನೆಗೆ, ಬಣಗಾರ ಸಿದ್ದಪ್ಪನ ಮನೆಗೆ ನಾವು ಶಿಲಾಬಳಕೆಯವರು ಊಟಕ್ಕೆ ಹೋಗಬಹುದೆ? ಲಿಂಗಪ್ಪನವರೆ ನೀವೇ ಹೇಳಿರಿ? ನಮ್ಮ ಹಿರಿಯರಾಗಲಿ, ನಿಮ್ಮ ಹಿರಿಯರಾಗಲಿ ಅವರ ಮನೆಗೆ ಎಂದಾದರೂ ಊಟಕ್ಕೆ ಹೋಗಿದ್ದರೆ? ಎಂದು ಇಲ್ಲದ್ದು ಈಗೇಕೆ ಬಂತು?

ಲಿಂಗಪ್ಪ : ನೀವು ಹೇಳುವುದು ನಿಜ. ನಾವು ಬಣಜಿಗರು ಹೆಚ್ಚಿನ ಕುಲದವರೆಂದೇ ತಿಳಿದಿದ್ದರಿಂದ ಅವರಲ್ಲಿ ಊಟಕ್ಕೆ ಹೋಗುತ್ತಿರಲಿಲ್ಲ. ಅವರೂ ತಾವು ಕಡಿಮೆ ಕುಲದವರೆಂದೇ ಮೊದಲು ತಿಳಿದಿದ್ದರು. ಅದಕ್ಕಾಗಿ ಲಗ್ನ ಮೂಹೂರ್ತಗಳಲ್ಲಿ ನಮಗೆ ಸೀದ ಕೊಡುತ್ತಿದ್ದರು. ಈಗ ಎಲ್ಲರೂ ಬುದ್ಧಿವಂತರಾಗಿದ್ದಾರೆ. ಶಿವಪ್ಪನವರೇ? ಯಾರೂ ತಾವು ಕಡಿಮೆಯವರೆಂದು ಹೇಳಿಸಿಕೊಳ್ಳುವಹಾಗಿಲ್ಲ ಅದಕ್ಕಾಗಿ ಈಗ ಇದು ಬಂತು.

ಶಿವಪ್ಪ : ನಾವೆಲ್ಲಿ ಅವರು ಕಡಿಮೆ ಕುಲದವರೆಂದು ಹೇಳುತ್ತೇವೆ? ಹೊಸಬಳಕಿ ಮಾಡಿದರೆ ಊಟಕ್ಕೆ ಹೋಗುತ್ತೇವಲ್ಲಾ ನಮ್ಮ ಲಗ್ನಕಾರ್ಯಗಳಲ್ಲಿ, ಮನೆ ಕೆಲಸಗಳಲ್ಲಿ ಅವರನ್ನು ನೀರಿಗೆ, ಅಡಿಗಿಗೆ, ಎಲ್ಲಾ ಕೆಲಸಗಳೀಗೆ ಇಟ್ಟುಕೊಳ್ಳುತ್ತೇವೆಲ್ಲಾ ಗಣಾರಾಧನೆಯ ಕಾಲಕ್ಕೆ ಎಲ್ಲರೂ ಕೂಡಿಯೇ ಊಟಕ್ಕೆ ಕುಳಿತುಕೊಳ್ಳುವುದಿಲ್ಲವೇ?

ಲಿಂಗಪ್ಪ : ಇಕೋ ಇದೇ ನೋಡಿರಿ, ಅವರಿಗೆ ಅವಮಾನ ಮಾಡುವುದು. ನಾವು ಅವರಿಗೆ ಕಡಿಮೆ ಕುಲದವರೆಂದು ಬಾಯಿಂದ ಹೇಳುವುದಿಲ್ಲ. ಆದರೆ ನಮ್ಮ ನಡವಳಿಕೆಗಳೆಲ್ಲಾ ಅವರು ಕಡಿಮೆಯವರೆಂದೇ ನಡೆದಿವೆ. ಅವರು ಬಳಕೆಯಲ್ಲಿದ್ದು, ಅವರಿಂದ ಊಟ ಉಡಿಗೆಯ ಎಲ್ಲ ಕೆಲಸಗಳನ್ನು ಮಾಡಿಸಿಕೊಂಡು, ಅವರ ಮನೆಗೆ ಮಾತ್ರ ಊಟಕ್ಕೆ ಹೋಗುವದಿಲ್ಲವೆಂದರೆ ಅವರು ಕೇಳುವರೇ? ಅದೇಕೆ, ನಮ್ಮ ಮನೆಗೆ ಊಟಕ್ಕೆ ಬರುವುದಿಲ್ಲ? ನೀವು ನಿಮ್ಮ ಮನೆಗೆ ಬರದಿದ್ದರೆ ನಾವೂ ನಿಮ್ಮ ಮನೆಗೆ ಬರುವುದಿಲ್ಲ ಎಂದು ಹೇಳುತ್ತಿದ್ದಾರೆ.

ಶಿವಪ್ಪ : ಅವರೇಕೆ ಹೇಳಲೊಲ್ಲರು ಲಿಂಗಪ್ಪನವರೆ, ಹಿಂದೆಂದೂ ನಡೆದಿಲ್ಲ ಹಿಂದಿನವರೇನು ದಡ್ಡರೆ? ಇದೆಂದೂ ಆಗದ ಮಾತು.

ಲಿಂಗಪ್ಪ : ಹಿಂದಿನದೇನು ಈಗ ಉಳಿದಿದೆ ಶಿವಪ್ಪನವರೇ? ಹಿಂದಿನವರು ಇಂಥಾ ಬಟ್ಟೆ ಹಾಕಿಕೊಳ್ಳುತ್ತಿದ್ದರೇ? ಹೀಗೆ ರೇಲ್ವೆ ಮೇಲೆ ದೇಶ ಕಟ್ಟಿ ವ್ಯಾಪಾರ ಮಾಡುತ್ತಿದ್ದರೇ? ಈ ತಂತಿ ಟಪಾಲುಗಳೆಲ್ಲಿದ್ದವು? ಈ ನಳದ ನೀರೆಲ್ಲಿತ್ತು? ಚಹದ ಅಂಗಡಿಯಲ್ಲಿ ಈಗ ಹೊಲಿ ಹದಿನೆಂಟು ಕುಲದವರೆಲ್ಲಾ ಕೂಡಿ ತಿನ್ನುತ್ತಾರಲ್ಲಾ ಇದೆಲ್ಲಿತ್ತು? ಗಾಂಧಿಯವರು ಹೊಲೆ ಮಾದಿಗರನ್ನೆಲ್ಲಾ ಮುಟ್ಟಿಸಿಕೊಳ್ಳಬೇಕೆಂದು ಹೇಳಿದರು. ದೇವಾಲಯಗಳಲ್ಲಿಯೂ ಅವರು ಬರಬೇಕೆಂದು ಹೇಳುತ್ತಾರೆ. ಇವೆಲ್ಲ ಬಹು ಕಡೆ ನಡೆದಿವೆ. ಅನೇಕ ಕಡೆ ಎಂತಹ ಬ್ರಾಹ್ಮಣರು ಕೂಡಾ ಹೊಲಿಗೇರಿ ಕಸ ಹೊಡೆಯುತ್ತಿದ್ದಾರೆ. ಸಹಭೋಜನವಂತೆ! ಎಲ್ಲಾ ಕುಲದವರೂ ಕೂಡಿ ಉಣ್ಣುತ್ತಿದ್ದಾರೆ. ಇವೆಲ್ಲಾ ಹಿಂದಾಗಿದ್ದವೇ? ಇಂದಾಗುವದು ಯಾರಿಗೆ ಗೊತ್ತಿತ್ತು? ಪ್ರಪಂಚದಲ್ಲಿ ಬಹು ಬದಲಾವಣೆಯಾಗುತ್ತಾ ನಡೆದಿದೆ. ಈ ನಮ್ಮ ನಮ್ಮಲ್ಲಿಯೇ ಊಟೋಪಚಾರ ನಡೆಯುವದೇನು ದೊಡ್ಡದು?

ಶಿವಪ್ಪ : ನಾವು ನಿಮ್ಮ ಮನೆಗೆ ಊಟಕ್ಕೆ ಬರುವುದಿಲ್ಲವೆಂದರೆ ಅವರೇನು ಮಾಡುತ್ತಾರೆ ಲಿಂಗಪ್ಪನವರೇ? ಮಹಾಸಭೆಯವರೇನು ಮಾಡುತ್ತಾರೆ? ನಾವು ಒಂದಾಗಿರಬೇಕು ನೋಡಿರಿ.

ಲಿಂಗಪ್ಪ : ನಾವು ಬರುವದಿಲ್ಲವೆಂದರೆ ಅವರೂ ನಮ್ಮಲ್ಲಿ ಊಟಕ್ಕೆ ಬರುವದಿಲ್ಲ. ಲಗ್ನಮುಹೂರ್ತಗಳಿಗೂ ಬೇರೆ ಕೆಲಸಕ್ಕೂ ಬರುವದಿಲ್ಲ. ಅವರು ಒಕ್ಕಟ್ಟಾಗುತ್ತಾರೆ. ದೊಡ್ಡ ಊರುಗಳಲ್ಲೇನೋ ನಮ್ಮ ಜನರು ಹೆಚ್ಚಿರುತ್ತಾರೆ. ಹಳ್ಳಿಗಳಲ್ಲಿ ನಮ್ಮ ಜನರ ಮನೆ ಕಡಿಮೆ. ಪಂಚಮ ಸಾಲಿಯವರು, ಗಾಣಿಗರು, ಜಾಡರು, ಕುಡ ಒಕ್ಕಲಿಗರು, ಸಾದರು ಈ ಜನರೇ ಹೆಚ್ಚು ಆಗ ಅಲ್ಲಿ ಬಣಜಿಗರಿಗೆ ತೊಂದರೆಯಾಗುತ್ತದೆ. ಇದರಿಂದ ಊರಲ್ಲಿಪಂಗಡಗಳಾಗಿ ಜಗಳ ಹೆಚ್ಚುತ್ತದೆ.

ಶಿವಪ್ಪ : ಅವರು ಹೀಗೆ ಮಾಡಿದರೆ ನಾವು ನಮ್ಮ ಅಯ್ಯನವರನ್ನು ಕಟ್ಟುಮಾಡಬೇಕು. ಅವರ ಲಗ್ನ ಮುಹೂರ್ತಗಳಿಗೂ ನಮ್ಮ ಅಯ್ಯನವರು ಹೋಗದಂತೆ ಮಾಡಬೇಕು. ಆಗ ಅವರು ಹಣ್ಣಿಗೆ ಬರುತ್ತಾರೆ.

ಲಿಂಗಪ್ಪ : ಇದೆಲ್ಲಾ ಈಗ ನಡೆಯವದಿಲ್ಲ, ಶಿವಪ್ಪನವರೇ? ಅಯ್ಯನವರೇನು ಅನುಕೂಲ ದೊರೆತ ಕಡೆಗೆ ತಿರುಗುವುದೇ ಹೆಚ್ಚು. ಅವರೂ ಅಯ್ಯನವರಲ್ಲಿ ಪಂಗಡಮಾಡಿ ತಮ್ಮ ಕಡೆಗೆ ಕೆಲವರನ್ನೂ ಕರೆದುಕೊಳ್ಳುತ್ತಾರೆ. ಆ ಮಠ ಈ ಮಠ ಎಂಬ ಜಗಳೋ ಜಗಳ! ಶುಭಕಾರ್ಯಗಳಲ್ಲಿ ಅಯ್ಯನವರ ಗುದ್ದಾಟ. ಎಲ್ಲಾ ಕಡೆಗೆ ಹೀಗೆಯೇ ನಡೆದಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಒಳ ಪಂಗಡಗಳ ಜಗಳ ಹೆಚ್ಚಾಗಿದೆ. ನೀವು ಅಂಗಡಿ ಮನಿ ಬಿಟ್ಟು ಹೊರಗೆ ಹೋಗುವುದಿಲ್ಲ ನಿಮಗೇನು ಗೊತ್ತು?

ಶಿವಪ್ಪ : ಅದೇಕರಿ ಲಿಂಗಪ್ಪನವರೇ? ಮೊನ್ನೆ ನಮ್ಮಲಿ ತುಪ್ಪದ ಬಸಪ್ಪ ಶಿವಳ್ಳಿಯಿಂದ ಬಂದಿದ್ದ. ಅಲ್ಲ ಪಂಚಮಸಾಲಿಯವರ ಮನೆಗಳೇ ಹೆಚ್ಚು ನಮ್ಮ ಬಣಜಿಗರ ಮನೆ ಬಹಳ ಕಡಿಮೆ. ಇದೇ ಊಟದ ಜಗಳ ಅಲ್ಲಿ ಇದ್ದೇ ಇತ್ತು. ಮೊನ್ನೆ ಗೌಡರ ಮನೆ ಲಗ್ನದಲ್ಲಿ ಒಳ್ಳೇ ಹೊಡಪೆಟ್ಟು ನಡೆಯಿತಂತೆ, ಗೌಡ ಬಣಜಿಗರ ಮೇಲ ಖಟ್ಲೆ ಮಾಡಿದ್ದಾನಂತೆ. ನಾನೂ ಹಾಗೆ ಸುದ್ದಿ ಕೇಳುತ್ತಿದ್ದೇನೆ.

ಲಿಂಗಪ್ಪ : ಒಂದು ಶಿವಳ್ಳಿಯೇ ಶಿವಪ್ಪನವರೆ, ಲಿಂಗದಹಳ್ಳಿ, ಬಸವನಕೊಪ್ಪ ಸಿದ್ದವ್ವನ ಹಳ್ಳಿ, ಅಸಾಮಿಗಳು ನಮ್ಮಲ್ಲಿ ಬರುತ್ತಾರೆ. ಆ ಕಡೆಗೆಲ್ಲಾ ಹಳ್ಳಿಗಳಲ್ಲಿ ಇದೇ ಜಗಳ. ಈ ಜಗಳದಿಂದ ಒಂದೊಂದು ಊರು ಹಾಳಾಗಿ ಹೋಗಿವೆ. ನಾವು ಬಣಜಿಗರು ಎಲ್ಲರಲ್ಲಿಯೂ ಊಟಕ್ಕೆ ಬರುತ್ತೇವೆಂದು ಹೇಳಿದರೆ ಈ ಜಗಳೇ ಬರುವದಿಲ್ಲ.

ಶಿವಪ್ಪ : ಊಟ ಮಾಡಿದರೂ ಮಾಡಬಹುದು. ಅವರಲ್ಲಿ ಆಚಾರ ಸರಿಯಾಗಿರುವದಿಲ್ಲರಿ ಲಿಂಗಪ್ಪನವರೆ.

ಲಿಂಗಪ್ಪ : ಯಾವುದು ಆಚಾರವೋ ಯಾವುದು ಅನಾಚಾರವೋ ತಿಳಿಯದಾಗಿದೆ ಶಿವಪ್ಪನವರೆ. ನಮ್ಮ ಬಣಜಿಗರಾದರೂ ಒಂದೊಂದು ಕಡೆ ಹಳ್ಳಿಗಳಲ್ಲಿ ಹೋಗಿರುತ್ತಾರೆ? ನಿಮ್ಮ ತುಪ್ಪದ ಬಸಪ್ಪ ಬಹಳ ಆಗ್ರಹ ಮಾಡಿದ್ದರಿಂದ ಮೊನ್ನೆ ಪೂಜೆಗೆ ಪತ್ರಿ ಪುಷ್ಪಗಳೇ? ಕೇಳಬಾರದು, ಅಲ್ಲೇ ಕಸ ಮುಸರಿ, ನೊಣಗಳಂತೂ ಮುಕ್ಕರಿ ಬಿಡುತ್ತಿದ್ದವು. ಆ ಊಟಮಾಡಿ ಹೊರಗೆ ಬರುವದರೊಳಗೆ ಸಾಕಾಗಿ ಹೋಯಿತು.

ನಾನು ಶಿವಳ್ಳಿಗೆ ಹೋದರೆ ಗೌಡರ ಮನೆಯಲ್ಲಿಯೇ ಇರುತ್ತೇನೆ. ಅವರಲ್ಲಿ ಎಷ್ಟು ಸ್ವಚ್ಛತೆ? ಪೂಜೆಗೆ ಎಷ್ಟು ಅನುಕೂಲ. ಈಗ ಎಲ್ಲಾ ಜನರಲ್ಲಿಯೂ ಅನೇಕರು ಚೆನ್ನಾಗಿ ಆಚಾರಶೀಲರಾಗಿದ್ದಾರೆ. ಶಿವಪ್ಪನವರೇ.

ಶಿವಪ್ಪ : ಏನು ಲಿಂಗಪ್ಪನವರೆ, ನೀವು ಪಂಚಮಸಾಲಿಯವರಲ್ಲಿ ಊಟ ಮಾಡುತ್ತೀರಾ?

ಲಿಂಗಪ್ಪ : ಪಂಚಮಸಾಲಿಯವರಲ್ಲೇ ಏಕೆ? ಸ್ವಚ್ಛತೆ ಸದಾಚಾರಗಳುಳ್ಳ ಬಳಕಿಯಲ್ಲಿರುವ ಯಾವ ಲಿಂಗಾಯತರ ಮನೆಯಲ್ಲಾದರೂ ನಾನು ಊಟ ಮಾಡುತ್ತೇನೆ. ನಾವು ಬಣಜಿಗರೆಂಬ

ಒಣ ಅಭಿಮಾನದಿಂದ ನಿಮ್ಮ ತುಪ್ಪದ ಬಸಪ್ಪನಂಥವರ ಮನೆಯಲ್ಲಿ ಮಾತ್ರ ಊಟ ಮಾಡಲಾರೆ.

ಮೊನ್ನೆ ಹುಣ್ಣುಮೆ ದಿವಸ ನಿಮ್ಮ ಚೆನ್ನಪ್ಪ ಸಿದ್ದಗೌಡರ ಮನೆಗೆ ಬಂದಿದ್ದ ಅವರು ಊಟಕ್ಕೆ ಎಷ್ಟು ಕರೆದರೂ ಬರಲಿಲ್ಲ. ನೀನು ಶಿವಪ್ಪನವರ ಮಗನಲ್ಲವೇ? ನಮ್ಮ ಮನೆಯಲ್ಲಿ ಏಕೆ ಊಟ ಮಾಡಿ? ಎಂದು ಅವರು ಹೇಳಿದರು. ಚಹಾದ ಅಂಗಡಿಯಲ್ಲಿ ಎಲ್ಲಾ ಕುಲದವರ ಕೂಡ ಕೂಡಿ ತಿನ್ನುತ್ತಾನೆ. ಸಿದ್ಧನಗೌಡರ ಮನೆಯಲ್ಲಿ ಉಣ್ಣುವುದು ಅದಕ್ಕೂ ಅನಾಚಾರವಾದೀತೆ? ಹೀಗೆ ಮಾಡಿದರೆ ಆ ಜನರ ಮನಸ್ಸು ನೋಯಲಿಕ್ಕಿಲ್ಲೇ?

ಶಿವಪ್ಪ : ಏನರಿ ಲಿಂಗಪ್ಪನವರೆ? ನಮ್ಮ ಚೆನ್ನಗೆ ಎಷ್ಟು ಹೇಳಿದರೂ ಕೇಳೋದಿಲ್ಲ. ಅವನ ತಲೆಯ ಮೇಲೆ ಏನು ಕೂದಲ? ತಾನೇ ಕಷ್ಟ ಮಾಡಿಕೊಳ್ಳುತ್ತಾನೆ! ಅಂಗಿ ಸಹ ತೆಗೆಯದೆ ಊಟ ಮಾಡುತ್ತಾನೆ!

ಯಾರ್‍ಯಾರೋ ಹುಡುಗರು ಕೂಡಿ ಅಟ್ಟದ ಮೇಲೆ ಯಾವಾಗಲೂ ಚಹಾ ಮಾಡಿಕೊಂಡು ಕಂಡದ್ದನ್ನೆಲ್ಲಾ ತಿನ್ನುತ್ತಾರೆ.

ನೀವು ಹೇಳುವುದು ನಿಜ. ಈಗ ಆಚಾರ ಉಳದೇ ಇಲ್ಲ. ಎಷ್ಟಾದರೂ ಅವರು ಶಿವಾಚಾರದವರು. ಅವರಲ್ಲಿ ಉಂಡರೇನು ತಪ್ಪು? ಊಟ ಉಡಿಗೆಗೆ ಶಿವಾಚಾರ. ಕೊಡಕೊಳ್ಳುವದಕ್ಕೆ ಕುಲಾಚಾರ ಎಂದು ಹಿರಿಯರು ಹೇಳುತ್ತಿದ್ದರು. ಆದ್ದರಿಂದ ನಿಮ್ಮಂತೆ ಎಲ್ಲಾ ಶಿವಭಕ್ತರಲ್ಲಿಯೂ ಊಟ ಮಾಡುವುದು ಯೋಗ್ಯವೇ ಸರಿ. ಆದರೆ ಹೆಣ್ಣು ಗಂಡು ಕೊಡುಕೊಳ್ಳುವುದು ಹೇಗೆ ನಡೆದೀತು? ಕುಲದವರೇ ಬೇಕು.

ಲಿಂಗಪ್ಪ : ಇಕೋ ಇದೇ ನೋಡಿರಿ, ನಮ್ಮ ದಡ್ಡತನ, ಲಿಂಗಾಯರೆನ್ನುವುದೇ ಒಂದು ಕುಲ. ಮತ್ತೆ ಇದರಲ್ಲಿ ಕುಲವೆಲ್ಲಿ ಬಂತು?

ಶಿವಪ್ಪ : ನಾವು ಗಾಣಿಗೇರು, ಒಕ್ಕಲಿಗರು, ಜಾಡರು, ಎಲ್ಲರೂ ಒಂದೇ ಕುಲದವರೆ? ಇದು ಯಾರು ಒಪ್ಪುವರು? ಶಾಸ್ತ್ರ ಹೀಗೆ ಅದೆ?

ಲಿಂಗಪ್ಪ : ಇವೆಲ್ಲ ಅವರವರ ಕಸಬಿನ ಮೇಲಿಂದ ಬಂದ ಹೆಸರುಗಳು. ಒಕ್ಕಲತನ ಮಾಡುವವರಿಗೆ ಒಕ್ಕಲಿಗರೆಂದರು. ನೇಯುವವರಿಗೆ ಜಾಡರೆಂದರು ಗಾಣ ಇಟ್ಟು ಎಣ್ಣೆ ತೆಗೆಯುವವರಿಗೆ ಗಾಣಿಗರೆಂದರು. ವ್ಯಾಪಾರ ಮಾಡುವವರಿಗೆ ಬಣಜೀಗರೇಂದರೂ. ಇವೆಲ್ಲ ಕುಲಗಳಾಗುತ್ತವೆಯೇ?

ಔಷಧಿ ಕೊಡುವರಿಗೆ ಈಗ ಡಾಕ್ಟರರೆನ್ನುತ್ತಾರೆ. ವ್ಯಾಜ್ಯ ನಡೆಸುವವರಿಗೆ ವಕೀಲರೆನ್ನುತ್ತಾರೆ. ಡಾಕ್ಟರ ಕುಲ, ವಕೀಲರ ಕುಲ ಅಂತ ಬೇರೆ ಬೇರೆ ಕುಲಗಳಿವೆಯೆಂದರೆ ನಗಲಿಕ್ಕಿಲ್ಲೇ?

ಪಂಚಮಸಾಲಿಯವರಲ್ಲಿ ಎಷ್ಟು ಜನ ಒಕ್ಕಲುತನ ಮಾಡೋದಿಲ್ಲ? ವ್ಯಾಪಾರ ಮಾಡೋದಿಲ್ಲ? ಗಾಣ ಇಟ್ಟುಕೊಂಡಿಲ್ಲ? ಅವರೆಲ್ಲ ಬೇರೆ ಬೇರೆ ಕುಲದವರಾಗಿದ್ದಾರೆ? ನಿಮ್ಮ ಮನೆಯಲ್ಲಿ ನೀವು ವ್ಯಾಪಾರ ಮಾಡುತ್ತೀರಿ. ನಿಮ್ಮ ವೀರಪ್ಪ ಒಕ್ಕಲುತನ ಮಾಡಿಸುತ್ತಾನೆ. ಅವನದೊಂದು ಕುಲ ಬೇರೆಯಾಯಿತೆ?

ಶಿವಪ್ಪ : ಇದೇನು ಇರಬಹುದು. ದೀಕ್ಷಾ ಬಳಕಿಯವರು, ಮೇಲು ಪಾವಡದವರು, ಇವರಾದರೂ ಬೇರೆ ಕುಲದವರಲ್ಲವೆ?

ಲಿಂಗಪ್ಪ : ಇವು ಅವರವರ ಆಚಾರದಿಂದ ಬಂದ ಹೆಸರು. ಕೆಲವರ ಮನೆಯಲ್ಲಿ ಹೆಣ್ಣುಗಂಡು ಎಲ್ಲರೂ ದೀಕ್ಷೆ ಹೊಂದಿ ಒಳ್ಳೆ ಆಚಾರಶೀಲರಾಗಿದ್ದರು. ಅವರು ಶಿವಾಚಾರದಂತೆ ದೀಕ್ಷೆ ಹೊಂದಿದವರಲ್ಲಿಯೇ ಬಳಿಕೆ ಮಾಡುವ ಕಟ್ಟಟ್ಟುಕೊಂಡರು. ಅವರು ದೀಕ್ಷಾಬಳಕಿಯವರು. ಕೆಲವರು ನೀರಿನ ಪಾತ್ರೆಗಳ ಮೇಲೆ ಯಾವಾಗಲೂ ಪಾವಡವನ್ನೇ ಹಾಕುತ್ತ ಬಂದರು. ಅವರಿಗೆ ಮೇಲ ಪಾವಡದವರೆಂದು ಹೇಳಿದರು. ನಮ್ಮ ಮತದಲ್ಲಿ ಇವೆಲ್ಲಾ ಆಚಾರಗಳನ್ನು ಮಾಡಬೇಕೆಂದೇ ಇದೆ. ಆದರೆ ಕೆಲವರು ಮಾಡುತ್ತಾರೆ. ಕೆಲವರು ಮಾಡುವುದಿಲ್ಲ. ಹೀಗಿದ್ದ ಮಾತ್ರಕ್ಕೆ ಅವರ ಕುಲವೇ ಬೇರೆಯಾಗುತ್ತದೆಯೇ?

ಒಬ್ಬ ಸ್ವಾಮಿಗಳು ಒಪ್ಪತ್ತೇ ಉಣ್ಣುತ್ತಿದ್ದರು. ಅವರಿಗೆ ಒಪ್ಪತ್ತೆಪ್ಪನವರೆಂದು ಹೇಳುತ್ತಿದ್ದರು. ಕಡೆಗೆ ಅವರ ಮಠಕ್ಕೆ ಒಪ್ಪತ್ತೆಪ್ಪನ ಮಠವೆಂದು ಹೇಳುತ್ತಿದ್ದಾರೆ. ಒಬ್ಬರು ಕಂಬಳಿಯೊಂದನ್ನೇ ಹೊತ್ತುಕೊಂಡಿರುತ್ತಿದ್ದರು. ಅವರಿಗೆ ಕಂಬಳಿ ಅಯ್ಯನವರೆಂದು ಹೇಳಿದರು. ಕಡೆಗೆ ಅವರ ಮಠಕ್ಕೆ ಕಂಬಳಯ್ಯನ ಮಠವೆಂದು ಹೇಳುತ್ತಿದ್ದರು. ಒಬ್ಬರು ಕಾರಬೇಳಿ ಕಜ್ಜಾ ಮಾತ್ರ ತೆಗೆದುಕೊಳ್ಳುತ್ತಿದ್ದರು. ಅವರಿಗೆ ಕಾರಬ್ಯಾಳೆಪ್ಪನವರೆಂದು ಹೇಳಿದರು. ಈಗ ಕಾರಬ್ಯಾಳೆಪ್ಪನವರಮಠವೆಂದು ಹೇಳುತ್ತಾರೆ. ಹೀಗೆ ನಮ್ಮ ಮಠಸ್ಥರದಲ್ಲಿಯೂ ಅನೇಕ ಹೆಸರು ಸೇರಿ ನಮ್ಮ ಮಠ ಹೆಚ್ಚು, ಅವರ ಮಠ ಕಡಿಮೆಯೆಂಬ ಜಗಳ ಇದ್ಧೇ ಇದೆ.

ನಮ್ಮ ಜನರ ದಡ್ಡ ತನದಿಂದ ಹೀಗೆ ತಪ್ಪುಗಳಾಗಿ ನಾನಾ ಕುಲಗಳೆಂದೇ ಅನೇಕರು ತಿಳಿಯುವಂತಾಗಿದೆ. ಇವೆಲ್ಲ ಹೋಗಿ ಲಿಂಗಾಯತರೆಲ್ಲಾ ಒಂದೇ ಎಂದು ತಿಳಿದು ಊಟ ಉಡಿಗೆ ಕೊಡುಕೊಳ್ಳುವದು ನಡಿಯದ ಹೊರತು ನಮ್ಮ ಸಮಾಜಕ್ಕೆ ಕ್ಷೇಮವಿಲ್ಲ.

ಶಿವಪ್ಪ : ಅಲ್ಲರಿ ಲಿಂಗಪ್ಪನವರೇ, ಬ್ರಾಹ್ಮಣ ಮಂದಿ ನಮಗೆ ಮೊದಲೇ ಶೂದ್ರರೆಂದು ಹೇಳುತ್ತಾರೆ. ಹೀಗೆ ನಾವೆಲ್ಲರೂ ಕೊಡುಕೊಳ್ಳುವದನ್ನೂ ಮಾಡಿದರೆ ನಗಲಿಕ್ಕಿಲ್ಲೇ?

ಲಿಂಗಪ್ಪ : ಆ ಜನರು ನಮಗಿಂತ ಬಹಳ ಮುಂದೆ ಹೋಗಿದ್ದಾರೆ. ನಿಮಗೇನು ಗೊತ್ತು? ಹಿಂದು ಜನರಲ್ಲಿ ಒಕ್ಕಟ್ಟಾಗಬೇಕೆಂದು ಅವರೇ ಈಗ ಬಹಳ ಪ್ರಯತ್ನ ಮಾಡುತ್ತಿದ್ದಾರೆ. ಹೊಲೆ ಮಾದಿಗರನ್ನು ಕೂಡಾ ಹರಿಜನ ಎಂದು ಹೆಸರಿಟ್ಟು ಅವರನ್ನು ಮೇಲಕ್ಕೆ ತರುತ್ತಿದ್ದಾರೆ, ನಮ್ಮ ಹಿಂದು ಜನರಲ್ಲಿ ನಾನಾ ಬೇದವಾಗಿ ಬಹಳ ಬಡಕಿದ್ದುದರಿಂದ ಮುಸಲ್ಮಾನರಿಗೆ ನಮ್ಮ ಮೇಲೆ ಏರಿಬರಲಿಕ್ಕೆ ಬಹಳ ಅನುಕೂಲವಾಗಿದೆ.

ಆದಕಾರಣ ಈ ಎಲ್ಲಾ ತಪ್ಪು ತಿಳುವಳಿಕೆ ತೆಗೆದುಹಾಕಿ, ಹಿಂದುಗಳೆಲ್ಲಾ ಒಂದೇ ಎಂದು ತಿಳಿಯರೆಂದು ಅವರೇ ಹೇಳುತ್ತಿದ್ದಾರೆ. ಊಟ ಉಡುಗೆ ಕೊಡುಕೊಳ್ಳುವದನ್ನು ಮಾತ್ರ ನಿಮ್ಮ ನಿಮ್ಮ ಮಾತಾಚಾರದಂತೆ ನಿಮ್ಮ ನಿಮ್ಮ ಮತದವರಲ್ಲಿ ನಡಿಸಿರೆಂದು ಅವರೇ ಹೇಳುತ್ತಿದ್ದಾರೆ.

ಅವರಲ್ಲಿಯೂ ದೇಶಸ್ಥರು, ಕರ್ಹಾಟೆಯವರು, ಕೊಂಕಣಸ್ಥರು ಎಂದು ನಾನಾ ಭೇದಗಳಿವೆ. ಅವೆಲ್ಲಾ ತಪ್ಪೆಂದು ಊಟ ಉಡಿಗೆಯಲ್ಲದೆ ಹೆಣ್ಣುಗಂಡು ಕೂಡಾ ಈಗ ಅನೇಕ ಕಡೆ ನಡೆಯುತ್ತಿದೆ. ಮೊನ್ನೆ ವಕೀಲ ಗೋಪಾಳರಾಯರು ಬಾಪಟ ವಕೀಲರ ಮಗಳನ್ನು ತಮ್ಮ ಮಗನಿಗೆ ಲಗ್ನ ಮಾಡಿದರಲ್ಲಾ ಗೋಪಾಳರಾಯರು ದೇಶಸ್ಥರು. ಬಾಪಟ ವಕೀಲರು ಕೊಂಕಣಸ್ಥರು.

ನಾನೂ ನಮ್ಮ ಶಿವಬಸಪ್ಪಗೆ ಶಿವನೂರ ವಕೀಲರ ಮಗಳನ್ನು ತೆಗೆದುಕೊಳ್ಳಬೇಕೆಂದು ಗೊತ್ತು ಮಾಡಿದ್ದೇನೆ. ಈ ಸಾರೆ ಕಾಲೇಜಿನಿಂದ ಬೇಸಿಗೆ ಸೂಟಿಯಲ್ಲಿ ಬಂದಾಗ ಲಗ್ನ ಮಾಡಬೇಕಾಗಿದೆ.

ಶಿವಪ್ಪ : ಏನರಿ ಶಿವನೂರು ವಕೀಲರು ಜಾಡರ ಪೈಕಿ ಅಲ್ಲೆ?

ಲಿಂಗಪ್ಪ : ಹೌದು, ಅವರ ಮನೆ ಆಚಾರ ವಿಚಾರ ನೋಡಿದರೆ ನಾವು ಬಣಜಿಗರು ನಾಚಬೇಕು, ಅವರು ಆ ಹುಡುಗಿಗೆ ಚೆನ್ನಾಗಿ ವಿದ್ಯೇ ಕಲಿಸಿದ್ದಾರೆ. ಆ ಹುಡುಗಿ ಎಷ್ಟು ಗುಣವಂತಿ!

ಶಿವಪ್ಪ : ನಿಮ್ಮದು ಬಹಳ ಧೈರ್ಯ, ಕೊಡುಕೊಂಬುದಕ್ಕೆ ಕುಲಾಚಾರವೆಂದೇ ಹಿರಿಯರು ಹೇಳುತ್ತಾ ಬಂದಿದ್ಧಾರೆ.

ಲಿಂಗಪ್ಪ : ಹಿಂದಕ್ಕೆ ಎಲ್ಲರೂ ಎಲ್ಲಾ ಕಸಬುಗಳನ್ನೂ ಮಾಡುತ್ತಿರಲಿಲ್ಲ. ಜಾಡರು ನೇಯುವದನ್ನೇ ಗಾಣಿಗರು ಗಾಣದ ಕೆಲಸವನ್ನೇ ಒಕ್ಕಲಿಗರು ಒಕ್ಕಲತನವನ್ನೇ, ಬಣಜಿಗರು ವ್ಯಾಪಾರವನ್ನೇ ಈ ಪ್ರಕಾರ ಒಂದೊಂದು ಕಸಬನ್ನೆ ಒಬ್ಬಬ್ಬೊರು ಮಾಡುತ್ತಿದ್ದರು.

ಜಾಡರ ಮನಿ ಹುಡುಗಿ ಚಿಕ್ಕಂದಿನಲ್ಲಿಯೇ, ಕಣಿಕಿ ಸುತ್ತುವುದು ಹಾಸೊಯ್ಯುವದು ಮೊದಲಾದ ನೇಯುವ ಕೆಲಸ ತಾಯಿಯ ಸಂಗಡ ಮಾಡುತ್ತಿರುತ್ತಾಳೆ. ಅದೇ ಹುಡುಗಿಯನ್ನು ಜಾಡರ ಹುಡುಗ ಮಾಡಿಕೊಂಡರೆ ತನ್ನ ನೇಯುವ ಕೆಲಸಕ್ಕೆ ಅನುಕೂಲವಾಗುತ್ತದೆ. ಹೀಗೆ ಆಯಾಯ ಕಸಬಿನವರಲ್ಲಿಯೇ ಲಗ್ನವಾದರೆ ಅವರ ಕಸಬಿಗೆ ಅನುಕೂಲವಾಗುತ್ತದೆಂದು ಹಿಂದೆ ಹಾಗೆ ಕೊಡಕೊಂಬುದಕ್ಕೆ ಕುಲಾಚಾರವೆಂದು ಹೇಳಿರಬೇಕು. ಈಗೇನು ಯಾರು ಬೇಕಾದರೂ ಲಾಭ ಬರುವ ಯಾವ ಉದ್ಯೋಗವನ್ನಾದರೂ ಮಾಡುತ್ತಾರೆ. ಹೆಣ್ಣು ಮಕ್ಕಳಿಗೆ ಎಲ್ಲರೂ ವಿದ್ಯೆ ಕಲಿಸುತ್ತಾರೆ. ಶಿವನೂರು ವಕೀಲರು ಜಾಡರೆಂದು ಹೇಳಿದರೂ ಅವರ ಮನೆಯಲ್ಲಿ ಒಂದೆಳಿ ನೂಲಿಲ್ಲ. ನೇಯುವದೇನು ಬಲ್ಲರು?

ನಮ್ಮ ಹುಡುಗನು ಕಲಿತವನು. ಆ ಹುಡುಗಿಯೂ ಕಲಿತವಳು. ಹೀಗೆ ಅನುಕೂಲವಾದ ವಧೂವರರ ಲಗ್ನವಾದರೆ ಮುಂದೆ ಅವರ ಸಂಸಾರ ಸರಿಯಾಗಿ ಸಾಗುತ್ತದೆ. ಇಲ್ಲದಿದ್ದರೆ ನಾವು ನಮ್ಮದೊಂದು ಕುಲವೆಂದು ತಿಳಿದು ಅವರಲ್ಲೇ ಕನ್ಯೆ ನೋಡಬೇಕೆಂದು ಈ ಅಭಿಮಾನದಿಂದ ಯಾವುದಾದರೊಂದು ಕನ್ಯೆ ಮಾಡಿದರೆ, ಮುಂದೆ ಬಾಳ್ವೆಯೇ ನಡೆಯುವುದಿಲ್ಲ.

ಶಿವಪ್ಪನವರೇ, ನಮ್ಮ ಕಾಲದಂತೆ ಈಗಿಲ್ಲ ಈಗಿನ ಹುಡುಗರ ಸ್ಥಿತಿಯೇ ಬೇರೆ, ನಮ್ಮ ಮನಸ್ಸಿನಂತೆ ಲಗ್ನಮಾಡಿದರೆ ಅವರ ಸಂಸಾರ ಮೂರಾ ಬಟ್ಟೇ ಸರಿ.

ಶಿವಪ್ಪ : ಹೌದು ನೋಡಿರಿ ನಿಮ್ಮ ಮಾತು, ನಮ್ಮ ಚೆನ್ನಗೆ ಲಗ್ನದಲ್ಲಿ ಲಗ್ನ ಆಗಿ ಹೋಗಲೆಂದು ನಮ್ಮ ತುಪ್ಪದ ಬಸಪ್ಪನ ಮಗಳನ್ನು ಲಗ್ನ ಮಾಡಿತಲ್ಲಾ ಆ ಹುಡುಗಿ ಚೆಂದಿಲ್ಲ. ಹಳ್ಳೀದು, ಕಲತಿಲ್ಲ. ನನಗೇನು ಬೇಡ. ನನಗೆ ಬೇರೆ ಲಗ್ನ ಮಾಡಬೇಕೆಂದು ಹೇಳುತ್ತಾನಂತೆ ಇನ್ನೂ ನನ್ನ ಹತ್ತಿರ ಈ ಸುದ್ದಿ ಬಂದಿಲ್ಲ. ಹೀಗಾದರೆ ಮುಂದೇನು ಗತಿ?

ಲಿಂಗಪ್ಪ : ಹೀಗೆ ಎಷ್ಟೋ ಆಗಿವೆ. ನಮ್ಮದೇ ಒಂದು ಕುಲ, ಅದರಲ್ಲೇ ಕೊಡತಗೊಳ್ಳುವದಾಗಬೇಕೆಂದರೆ ಹೀಗಾಗೇ ಆಗುತ್ತದೆ. ನೋಡಿರಿ. ಒಬ್ಬನ ಹತ್ತರಿದ್ದ ಮುಳುಗಾಯನ್ನೇ ನಾವು ತೆಗೆದುಕೊಳ್ಳಬೇಕೆಂದರೆ ನೀವು ಆರಿಸಿ ಬಿಟ್ಟದ್ದನ್ನು ನಾನು ತೆಗೆದುಕೊಳ್ಳಬೇಕು. ನಾನು ಆರಿಸಿಬಿಟ್ಟದ್ದನ್ನು ಇನ್ನೊಬ್ಬರು ತೆಗೆದುಕೊಳ್ಳಬೇಕು. ಅಂತು ಯಾರಾದರೂ ಹುಳುಕು ತೆಗೆದುಕೊಳ್ಳಲೇ ಬೇಕಾಗುತ್ತದೆ.

ನಮ್ಮ ಕುಲದ ಕಲ್ಪನೆಯಿಂದ ಲಗ್ನಗಳು ಹೀಗೆ ಆಗಹತ್ತಿವೆ. ಇದಲ್ಲದೆ ಒಂದು ಕಡೆ ಹೆಣ್ಣು ಹೆಚ್ಚು ಇನ್ನೊಂದು ಕಡೆ ಗಂಡು ಹೆಚ್ಚು ಇದರಿಂದ ವರದಕ್ಷಣೆ, ತೆರ ಮೊದಲಾದ ಅನಾಚಾರಗಳಂತೂ ಮಿತಿಮೀರಿವೆ. ಎಷ್ಟೋ ಮನೆಗಳು ಲಗ್ನದ ಸಾಲದಿಂದ ಕೆಟ್ಟುಹೋಗಿವೆ. ನಮ್ಮಲ್ಲಿಯ ಈ ಒಳಪಂಗಡಗಳು ಒಂದಾಗದೆ ನಮ್ಮ ಸಮಾಜಕ್ಕೆ ಸುಖವಿಲ್ಲ.

ಶಿವಪ್ಪ : ನೀವು ಹೇಳುವದೆಲ್ಲ ಸರಿ, ಇದಕ್ಕೆ ಶಾಸ್ತ್ರವಿದೆಯೇ?

ಲಿಂಗಪ್ಪ : ಹಿಂದಕ್ಕೆ ಬಸವಣ್ಣನವರ ಕಾಲದಲ್ಲಿಯೇ ಹರಳಯ್ಯ ಮಧುವಯ್ಯನವರ ಬೀಗತನ ಆಗಲಿಲ್ಲೆ? ಶಾಸ್ತ್ರ ಇಲ್ಲದೆ ಇದ್ದರೆ ಅವರು ಮಾಡುತ್ತಿದ್ದರೆ? ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ಝುಳಝುಳ ಹೇಳಿದ್ದಾರೆ.

ಉಂಬಲ್ಲಿ ಉಡುವಲ್ಲಿ ಕುಲ ಅಳಿಯಿತ್ತೆಂಬರು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು, ಎಂತಯ್ಯ ಅವರ ಭಕ್ತರೆಂತೆಂಬೆ? ಎಂತಯ್ಯ ಅವರ ಯುಕ್ತರೆಂತೆಂಬೆ? ಹೊಲತಿ ಶುದ್ಧ ನೀರ ಮಿಂದಂತಾಯಿತಲ್ಲಾ!

ಶಿವಪ್ಪ : ಅದೆಲ್ಲ ಸರಿ, ಅವರಲ್ಲಿ ಅಂಥ ಮಹಿಮೆಯಿತ್ತು. ಅವರಿಗೆ ಅದು ಸಲ್ಲಿತು, ಈಗಿನವರಲ್ಲಿ ಎಲ್ಲಿದೆ ಆ ಶಕ್ತಿ?

ಲಿಂಗಪ್ಪ : ಹಾಗಲ್ಲ, ಶಿವಪ್ಪನವರೇ, ಆಗಲೂ ಇಂಥ ಜನರು ಇದ್ದೇ ಇದ್ದರು. ಊಟ ಉಡುಗೆ ಕೊಡುಕೊಳ್ಳುವದು ಆಗಬಾರದೆಂದೇ ತಿಳಿದುಕೊಂಡಿದ್ದರು. ಅವರಿಗಾಗಿಯೇ ಈ ವಚನ ಹೇಳಿದ್ದಾರೆ.

ಶಿವಭಕ್ತರಲ್ಲಿ ಊಟ ಮಾಡಿದರೆ ಕುಲಕೆಟ್ಟಿತೆಂದು ತಿಳಿಯುತ್ತೀರಲ್ಲಾ! ಹೆಣ್ಣು ಕೊಡುವ ತೆಗೆದುಕೊಳ್ಳುವುದಕ್ಕೆ ನಿಮ್ಮ ಕುಲದವರೇ ಬೇಕೆಂದು ಹುಡುಕುತ್ತಿರಲ್ಲಾ! ಹೊಲತಿ ಎಂಥ

ಹೊಳೆಯಲ್ಲಿ ಜಳಕ ಮಾಡಿದರೂ ತನ್ನ ಹೊಲಿಗುಣ ಬಿಡದಂತೆ, ನಿಮಗೆ ಗುರುಲಿಂಗ ಜಂಗಮ ಮುಂತಾದ ಅಷ್ಟಾವರಣ ಕೊಟ್ಟರೂ ಇನ್ನೂ ನಿಮ್ಮ ಕುಲದ ಅಭಿಮಾನ ನೀವು ಬಿಡುವುದಿಲ್ಲವಲ್ಲಾ! ಎಂದು ನಮ್ಮಂಥ ಜನರಿಗೇನೇ ಬಸವಣ್ಣನವರು ಈ ವಚನದಲ್ಲಿ ಹೇಳಿದ್ದಾರೆ. ಶರಣರಂಥ ಮಹಿಮೆಯುಳ್ಳವರೇ ಹಾಗೆ ಮಾಡಬೇಕೆಂದಿದ್ದರೆ, ಇಷ್ಟೆಲ್ಲಾ ಹೇಳಿದವರು ಅದೊಂದು ಮಾತನ್ನು ಹೇಳುತ್ತಿರಲಿಲ್ಲೇ?

ಶಿವಪ್ಪ : ಹೌದು ನೀವು ಹೇಳುವದು ಸರಿ. ಅಲ್ಲರಿ ಲಿಂಗಪ್ಪನವರೇ, ಬಸವಣ್ಣವರು ಬಂದ ನಂತರ ಈ ಎಲ್ಲಾ ಕುಲದವರನ್ನು ತೆಗೆದುಕೊಂಡು ಕೂಡಿಸಿದರಂತಲ್ಲಾ ಆ ಮುಂಚೆ ಅಯ್ಯನವರ ಕುಲ ಮತ್ತು ನಮ್ಮ ಕುಲ ಎರಡೇ ಇದ್ದವಂತೆ. ನಮ್ಮ ಗುರುಬಸವಯ್ಯನವರು ಮೊನ್ನೆ ಹೇಳುತ್ತಿದ್ದರು.

ಲಿಂಗಪ್ಪ : ನಿಮ್ಮ ಗುರುಬಸವಯ್ಯನವರು ನಿಮ್ಮ ಹತ್ತಿರ ಹೀಗೆ ಹೇಳುತ್ತಾರೆ. ಅಲ್ಲಿ ಸಿದ್ಧನಗೌಡರ ಹತ್ತಿರ ಪಂಚಮಸಾಲಿಯವರು ಅಯ್ಯಗಳು ಮಾತ್ರ ಮೊದಲಿದ್ದರು. ಇತ್ತಲಾಗಿ ಬಸವಣ್ಣನೇ ಎಲ್ಲಾ ಕುಲದವರನ್ನು ತೆಗೆದುಕೊಂಡು ಹೊಲೆಗಲಿಸಿದೆನೆಂದು ಹೇಳುತ್ತಾರೆ. ಅವರೇನು ಸಮಯ ಬಂದಂತೆ ಹೇಳುತ್ತಾರೆ.

ಬಸವಣ್ಣನವರನ್ನು ನಿಂದಿಸುವ ಒಂದು ಪಂಗಡ ಹುಟ್ಟಿದೆ. ಅದಕ್ಕೆ ನಿಮ್ಮ ಗುರುಬಸವಯ್ಯನವರು ಸೇರಿದ್ದಾರೆ. ಬ್ರಾಹ್ಮಣರ ಹಾಗೆ ಜುಟ್ಟ ಬಿಡಬೇಕೆಂದು ಹೇಳುತ್ತಿದ್ದಾರೆ.

ಶಿವಪ್ಪ : ಹೌದರಿ ಲಿಂಗಪ್ಪನವರೇ, ಮೊದಲು ಅವರಿಗೆ ಜುಟ್ಟ ಇರಲಿಲ್ಲ. ಈಗ ಜುಟ್ಟ ಬಿಡಿಸಿದ್ದಾರೆ. ನನಗೇನು ಇದು ಗೊತ್ತು? ಕಾಶಿಗೆ ಹೋದ ಶಾಸ್ತ್ರಿಗಳು ಜುಟ್ಟ ಬಿಡಿಸುತ್ತಾರೆ. ಹಾಗೆಯೇ ಇವರೂ ಬಿಡಿಸಿರಬಹುದೆಂದು ನಾನು ತಿಳಿದಿದ್ದೆ.

ಲಿಂಗಪ್ಪ : ನೋಡಿರಿ ಶಿವಪ್ಪನವರೇ? ಜುಟ್ಟ ಬಿಡಿಸಲಿಕ್ಕೆ ಹೇಳ್ಯಾರು? ಮುಪ್ಪಿನ ಕಾಲದಲ್ಲಿ ಇದೊಂದು ವೇಷ ಮಾಡಬೇಕಾದೀತು.

ಶಿವಪ್ಪ : ಅವರು ನನಗೇನು ಹೇಳುತ್ತಾರೆ? ಬಸವಣ್ಣನವರನ್ನು ನನ್ನ ಮುಂದೇನೂ ನಿಂದಾ ಮಾಡಿಲ್ಲ. ಹಾಗೆ ಮಾಡಿದರೆ ಅವತ್ತೇ ಅವರಿಗೆ ಶರಣು. ಬಸವಣ್ಣನವರ ನಿಂದೆ ಮಾಡಬಹುದೆ? ಅದನ್ನು ಕೇಳಬಹುದೆ? ಅದೆಲ್ಲಾ ನಮ್ಮ ಹತ್ತರ ನಡೆಯುವುದಿಲ್ಲ ಬಿಡಿರಿ. ನೀವು ಬಹಳ ಓದಿಕೊಂಡಿದ್ದೀರಿ. ಅಂದಲ್ಲೇ ಹೀಗೆ ನಡೆಯುತ್ತೀರಿ. ನನ್ನ ಮನಸ್ಸಿಗೆ ಬಂತು.

ಲಿಂಗಪ್ಪ : ನಾನೇನು ಓದಿದ್ದೇನೆ? ನಾನೂ ಮೊದಲು ನಿಮ್ಮಂತೆಯೇ ತಿಳಿದಿದ್ದೆ ಈಗ ವರುಷಾರು ತಿಂಗಳಿಂದ ಆಲಮಟ್ಟಿ ಶರಣಸಂದೇಶ ಪತ್ರಿಕೆ ಓದುತ್ತಿದ್ದೇನೆ. ಅದರಲ್ಲಿ ಈ ಎಲ್ಲಾ ಸಂಗತಿಗಳಿದ್ದವು. ಅದು ಬಹಳ ಒಳ್ಳೇ ಪತ್ರಿಕೆ ನೋಡಿರಿ. ನಮ್ಮ ಮತದ ವಿಷಯ ಬಹಳ ಚೆನ್ನಾಗಿ ಅದರಲ್ಲಿರುತ್ತದೆ.

ಶಿವಪ್ಪ : ಹಾಗಾದರೆ ನಮಗೂ ಒಂದಕ್ಕೆ ಬರೆಯಿರಿ. ನಮ್ಮ ಚೆನ್ನ ಓದಲಿ, ಅದರ ವರ್ಗಣಿ ಎಷ್ಟು?

ಲಿಂಗಪ್ಪ : ಯಾಕಾಗಲೊಲ್ಲದು ಬರೆಯುತ್ತೇನೆ. ವರ್ಗಣಿ ಮೂರೆ ರೂಪಾಯಿ. ಬರುತ್ತೇನೆ ಶರಣಾರ್ಥಿ.

ಶಿವಪ್ಪ : ಶರಣಾರ್ಥಿ, ನಿಮಗೆ ಬಹಳ ಹೊತ್ತಾಯಿತು ಹೋಗಿಬನ್ನಿರಿ.

ಲಿಂಗಪ್ಪ : ಹೊತ್ತಾಧರೆ ಚಿಂತೆಯಿಲ್ಲ ಶಿವಪ್ಪನವರೇ, ನಾಳೆ ಲಗ್ನಕ್ಕೆ ಶಿವನೂರು ವಕಿಲರ ಮನೆಗೆ ಊಟಕ್ಕೆ ಬಂದರೆ, ಈ ದಿನ ಮಾತಾಡಿದ್ದು ಸಾರ್ಥಕವಾಯಿತು.

ಶಿವಪ್ಪ : ನೀವೇನು ಹಾಗೆ ತಿಳಿಯಬೇಡಿರಿ. ನೀವು ಹೋದಲ್ಲಿ ನಾನು ಇನ್ನು ಮೇಲೆ ಊಟಕ್ಕೆ ಬಂದೇ ಬರುತ್ತೇನೆ. ಬೇಕಾದರೆ ನೋಡಿರಿ.

❖❖

ಈ ಪುಸ್ತಕವು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣಮಂದಿರದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು ವೀರಶೈವ ವಿದ್ಯಾಲಯದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರಿಂದ ಪ್ರಕಟಿಸಲ್ಪಟ್ಟಿತು.

*

ಶರಣ ಸಂದೇಶ

ಸಂಪಾದಕರು

ಹರ್ಡೇಕರ್ ಮಂಜಪ್ಪನವರು

ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು ಪ್ರಸಾರಗೊಳಿಸುವ ಪತ್ರಿಕೆ.

ವಾರ್ಷಿಕ ಚಂದಾ

ಅಂಚೆಯ ವೆಚ್ಚಸೇರಿ ೩ ರೂ.

ಮ್ಯಾನೇಜರ–ಶರಣ ಸಂದೇಶ


ಆಲಮಟ್ಟಿ

ಭಾಗ : ೪

❖

ಮಕ್ಕಳ ಸಾಹಿತ್ಯ

* ಟಿಪ್ಪಣಿ
- ❖ ಅರವತ್ತೂಮೂರು ಪುರಾತನರ ಚರಿತ್ರೆ
- ❖ ತ್ಯಾಗವೀರ ಲಿಂಗರಾಜರ ಚರಿತ್ರೆ
- ❖ ಭಗವಾನ ಬುದ್ಧನ ಚರಿತ್ರೆ
- ❖ ವೀರಶೈವ ಮತಬೋಧೆ
- ❖ ಅಣ್ಣನ ಅರ್ಪಣ ಯೋಗ
- ❖ ಮಡಿವಾಳ ಮಾಚಿದೇವನ ಉಪದೇಶ



ಹಾಳು ಬಿದ್ದಿರುವ ಮುದ್ರಣ ಯಂತ್ರದ, ಬಿಡಿಭಾಗ, ಆಲಮಟ್ಟಿ(೧೯೮೯)

*

ಟಿಪ್ಪಣಿ

"ನಗುವ ಮಕ್ಕಳ ನಡುವೆ ನಗುವ ಕಲಿಯುವದೆ ಚೆನ್ನ
ಅವರೊಡನೆ ತೊದಲುಲಿವ ಹದನು ಚೆನ್ನ
ಹೊಸ ಹೂಗಳಂತಿರುವ ಮಿದುಮೈಯ ತಕ್ಕೈಯ್ಸಿ
ಹಿಡಿದೆತ್ತಿ ಮುದ್ದಾಡಿ ಕುಣಿಯುವುದೆ ಚೆನ್ನ"[೧]

–ವೀ. ಸೀತಾರಾಮಯ್ಯ

ಮಕ್ಕಳು ಹೂಗಳಂತೆ ಮೃದು. ಅವು ಭೂಮಿಯ ನಕ್ಷತ್ರಗಳು. ಮನೆಯ ಭಾಗ್ಯನಿಧಿಯಾಗಿ ,ಸಮಾಜದ ಸುಗ್ಗಿಯ ಚಿಗುರಾಗಿ ಅವು ಬೆಳೆಯುತ್ತವೆ. ಈ ಕಾರಣಕ್ಕಾಗಿಯೇ ಜನಪದ ತಾಯಿ

"ಬಾಲಕರಿಲ್ಲದ ಬಾಲಿದ್ಯಾತರ ಜನುಮ
ಬಾಡಿಗೆ ಎತ್ತು ದುಡಿದ್ಹಾಂಗ ।ಬಾಳೆಲೆಯ
ಹಾಸುಂಡ ಬೀಸಿ ಒಗೆದ್ಹಾಂಗ"

ಎಂದು ಹಾಡಿದ್ದುಂಟು. ಕಂದನಿದ್ದ ಬಾಳು ಸಾರ್ಥಕ–ಎಂಬ ಅವಳ ಮಾತನ್ನು ವೈಚಾರಿಕ ನೆಲೆಯಲ್ಲಿ ನಿಂತು ನೋಡಿದಾಗ, ಹೊಳೆವ ಅರ್ಥಗಳು ಹಲವು. ಇಂದಿನ ಶಿಶುಗಳು ನಾಳಿನ ಪ್ರಜೆಗಳು. ನಾಳಿನ ಜಗತ್ತು ಅವರ ಅಂಗೈಯಲ್ಲಿ. ಈ ಕಾರಣ ಮಕ್ಕಳ ಮನಸ್ಸು ತಯಾರುಮಾಡುವಲ್ಲಿ ಶ್ರದ್ಧೆ, ಜಾಣ್ಮೆ, ಬೇಕೇ ಬೇಕು. ಇದಕ್ಕೆ ಪೂರಕ ತಂದೆ ತಾಯಿಯ ಪೋಷಣೆ, ಗುರುಗಳ ಮಾರ್ಗದರ್ಶನ. ಇವರಿಗೆ ಆಧಾರ ಮಕ್ಕಳ ಸಾಹಿತ್ಯಕೃತಿಗಳು. ಈ ಸಾಹಿತ್ಯಕೃತಿಗಳು ನೀತಿಗೆ ಅನುಸಾರವಾಗಿ ಮಕ್ಕಳಲ್ಲಿ ಜ್ಞಾನ ಪ್ರಸರಣಗೊಳಿಸಿದರೆ, ಒಳ್ಳೆಯ ಮಾರ್ಗ ಮಕ್ಕಳಿಗೆ ಸಿಕ್ಕಂತಾಗುತ್ತದೆ. ಮುಂದೆ ತಮ್ಮಷ್ಟಕ್ಕೆ ತಾವೇ ಬೆಳೆದು, ನಾಡಿಗೆ ಕೊಡುಗೆ ನೀಡಬಲ್ಲರು– ಎಂಬುದು ಮರೆಯದ ಸಂಗತಿ.

"ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ
ಜೀವದ ಸ್ವಪ್ರೇಮದ ಪುತ್ರ–ಪುತ್ರಿಯರು
ಅವು ನಿಮ್ಮ ಮೂಲಕ ಬಂದಿವೆಯೇ ಹೊರತು ನಿಮ್ಮಿಂದಲ್ಲ.

---

೧. ಹೆಜ್ಜೆಪಾಡು, ವೀ ಸೀತಾರಾಮಯ್ಯ, ಪುಟ, ೩೪

ನಿಮ್ಮ ಜೊತೆ ಅವು ಇರುವುದಾದರೂ ನಿಮಗೆ ಸೇರಿದ್ದಲ್ಲ.
ನಿಮ್ಮ ಪ್ರೀತಿಯನ್ನು ನೀವು ಅವುಗಳಿಗೆ ನೀಡಬಹುದು
ಆದರೆ ನಿಮ್ಮ ಆಲೋಚನೆಗಳನ್ನಲ್ಲ.
ಏಕೆಂದರೆ ಅವರಿಗೆ ಅವರದೇ ಸ್ವಂತ ಆಲೋಚನೆಗಳುಂಟು.
ಅವರ ದೇಹಗಳಿಗೆ ನೀವು ಮನೆಯಾಗಬಹುದೇ ಹೊರತು, ಆತ್ಮಗಳಿಗಲ್ಲ"[೨]

ಖಲೀಲ ಗಿಬ್ರಾನ್‌ನ ಈ ಸಾಲುಗಳು ಮಕ್ಕಳ ವಿಷಯವಾಗಿ ಸೂಕ್ಷ್ಮ ವಿಚಾರಗಳನ್ನು ನಮ್ಮ ಮುಂದಿಡುತ್ತವೆ. ವಿನಾಕಾರಣ ಯಾವ ಒತ್ತಡವನ್ನು ಅವರಿಗೆ ಹೇರಬಾರದು. ಅವರಿಗೆ ಅವರದೇ ಲೋಕ ಉಂಟು– ಎಂಬುದನ್ನು ಅರಿತು ನಡೆಯಲು ಸೂಚಿಸುತ್ತವೆ. ಕಾರಣ ಇಂಥ ಮನಸ್ಸುಗಳನ್ನು ಮುಟ್ಟುವ, ತಟ್ಟುವ ಗೆಲ್ಲುವ ಸಾಹಿತ್ಯ ರಚಿಸುವದು ಕಷ್ಟಸಾಧ್ಯ ಕೆಲಸ.

"ಮಕ್ಕಳ ಮನಸ್ಸನ್ನು ಅರಳಿಸಿ, ಕುತೂಹಲವನ್ನು ಕೆರಳಿಸಿ, ಕಲ್ಪನೆಯನ್ನು ರೂಪಿಸಿ, ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ, ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ."[೩] ಈ ಸಾಹಿತ್ಯ ಜಾಗತಿಕ ವ್ಯಾಪ್ತಿಯಲ್ಲಿ ಸ್ಥಾನ ಪಡೆದುಂಟು. ಇದರ ಮೂಲ ಬೇರುಗಳು ಜಾನಪದ ಸಾಹಿತ್ಯದಲ್ಲಿ ಸಿಗುತ್ತವೆ. ಸದ್ಯ ತಿಳಿದ ಮಟ್ಟಿಗೆ ಕ್ರಿ. ಶ ಒಂದನೆಯ ಶತಮಾನದಷ್ಟು ಹಿಂದೆ ಸಂಸ್ಕೃತದಲ್ಲಿ ರಚಿತವಾದ ವಿಷ್ಣುಶರ್ಮನ "ಪಂಚತಂತ್ರ" ಮಕ್ಕಳ ಸಾಹಿತ್ಯದ ಮೂಲಗ್ರಂಥ. ಇದು ಜಗತ್ತಿನ ಹಲವಾರು ಭಾಷೆಗಳಿಗೆ ತರ್ಜುಮೆಗೊಂಡ ಕೃತಿ. ಮಕ್ಕಳಲ್ಲಿ ರಾಜಧರ್ಮ, ಲೋಕಧರ್ಮ, ಸಮಾಜಧರ್ಮಗಳನ್ನು ಪ್ರಾಣಿ–ಪಕ್ಷಿಗಳ ಉಪಮೆಗಳೊಂದಿಗೆ ತಿಳಿಸುವ ಇಲ್ಲಿನ ಪರಿ ಚಿತ್ತಾಕರ್ಷಕವಾದದ್ದು. ಇಲ್ಲಿರುವ ಕಥೆಗಳ ಉದ್ದೇಶ ಹಿತೋಪದೇಶ. "ಮಕ್ಕಳ ಸಾಹಿತ್ಯಕ್ಕೆ ನಿಶ್ಚಿತ ನಿಲುವು ಒದಗಿದ್ದು ಹದಿನೆಂಟನೆಯ ಶತಮಾನದಲ್ಲಿ. ಯುರೋಪದಲ್ಲಿ ಕ್ರಿ. ಶ. ೧೭೪೪ರಲ್ಲಿ ಜಾನ್ ನ್ಯೂ ಬೆರ್ರಿ ಎಂಬಾತ 'ಎ ಲಿಟಲ್ ಪ್ರೆಟ್ಟೀ ಪಾಕೇಟ್ ಬುಕ್'ಕೃತಿ ಪ್ರಕಟಿಸಿದ. ಮುಂದೆ ಈತನೇ ಪ್ರಕಟಿಸಿದ "ದಿ ಹಿಸ್ಟರಿ ಆಫ್ ಲಿಟಲ್ ಗುಡಿ ಟೂ ಶೂಸ್" ಎಂಬ ಮಕ್ಕಳ ಕೃತಿ ತುಂಬ ಪ್ರಸಿದ್ಧಿ ಪಡೆಯಿತು. ಈ ಕಿರುಪುಸ್ತಕ ಮಾಲಿಕೆಗಳು ಚಿತ್ರಸಹಿತವಾಗಿದ್ದೊಂದು ವಿಶೇಷ"[೪] ಮುಂದೆ ಹತ್ತೊಂಬತ್ತನೆಯ ಶತಮಾನದ ಮಧ್ಯ ಹಾಗೂ ಉತ್ತರ ಭಾಗದಲ್ಲಿ, ಮಕ್ಕಳ ಸಾಹಿತ್ಯ ಜಾಗತಿಕ ಸಂದರ್ಭದಲ್ಲಿ ವಿಪುಲವಾಗಿ ಬೆಳೆಯಿತು. "ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬಾಲಸಾಹಿತ್ಯಕ್ಕೆ ಅದ್ಭುತ ಕೊಡುಗೆ ನೀಡಿದವನು ಆರ್ಥರ್ ಮೀ ಎಂಬಾತ. ಈತ ೧೯೦೮ –೧೯೧೦ರ ಅವಧಿಯಲ್ಲಿ 'ದಿ ಚಿಲ್ಡ್ರನ್ ಎನ್ ಸೈಕ್ಲೋಪಿಡಿಯ' ಎಂಬ ಎಂಟು ಸಂಪುಟಗಳನ್ನು ಪ್ರಕಟಿಸಿದ. ಮಕ್ಕಳ ಸಾಹಿತ್ಯದ ಮಹರ್ಷಿ ಎನಿಸಿದ ಡೆನ್ಮಾರ್ಕಿನ ಹಾನ್ಸ ಕ್ರಿಶ್ಚಿಯನ್ ಅಂಡರಸನ್‌ನ ಕಥೆಗಳು ; ಯುರೋಪಿನ ಬಾಲಸಾಹಿತ್ಯದ ಸೊತ್ತಾದವು. ಪ್ರಾನ್ಸಿನ ನಿದ್ರಾಸುಂದರಿ, ಸಿಂಡ್ರೆಲ್ಲಾ ಕಥೆಗಳು, ಜರ್ಮನಿಯ ಗ್ರಿಮ್ ಸಹೋದರರ ಕಥೆಗಳು, ಏಸಿಯನ್ ಭಾಷೆಯ 'ಸಾವಿರದೊಂದು ರಾತ್ರಿ ಕಥೆಗಳು' ಹಿರಿ–ಕಿರಿಯರನ್ನೆಲ್ಲ ರಂಜಿಸುತ್ತಾ ಚಿರನೂತನವಾಗಿ ಉಳಿದಿದೆ."[೫]

---

೨. ಖಲೀಲ ಗಿಬ್ರಾನ್–ಪ್ರಭುಶಂಕರ, ಪುಟ, ೧೯
೩. ಕನ್ನಡ ವಿಶ್ವಕೋಶ : ಸಂಪುಟ, ಮೂರು, ಪುಟ, ೨೪೮
೪. ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಪುಟ, ೨೨೮
೫. ಆಧುನಿಕ ಕನ್ನಡ ಸಾಹಿತ್ಯ ರೂಪಗಳು, ಪುಟ, ೨೨೯

ಹೀಗೆ ಜಾಗತಿಕ ಮಟ್ಟದಲ್ಲಿ ಮಕ್ಕಳ ಸಾಹಿತ್ಯ ಸತ್ವಯುತವಾಗಿ ಬೆಳೆದಂತೆ ಭಾರತದಲ್ಲಿ ತೀವ್ರವಾಗಿ ಬೆಳೆಯದೆ ಸಮಾಧಾನಕರ ರೀತಿಯಲ್ಲಿ ಬೆಳೆಯಿತು. ಚಿಕ್ಕ ಪದ್ಯಗಳು, ಸ್ತೋತ್ರಗಳು, ಸಂವಾದಗಳು, ಕಥೆಗಳು, ಪುರಾಣ ಪುರಷರ, ಐತಿಹಾಸಿಕ ವ್ಯಕ್ತಿಗಳ ಬದುಕಿನ ಚಿತ್ರಗಳು ಇಲ್ಲಿ ಸ್ಥಾನ ಪಡೆದವು. ಕನ್ನಡ ಮಕ್ಕಳ ಸಾಹಿತ್ಯ ಇದಕ್ಕೆ ಹೊರತಾಗಿ ನಿಲ್ಲದು. ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಮಕ್ಕಳ ಸಾಹಿತ್ಯ ವಿಫುವಾಗಿ ಬೆಳೆದಿದ್ದು, ಈ ಶತಮಾನದ ಪೂರ್ವದಲ್ಲಿದ್ದ ಚೆನ್ನಪಟ್ಟಣದ ವಾಸುದೇವಯ್ಯನವರು ಕನ್ನಡ ಮಕ್ಕಳ ಸಾಹಿತ್ಯ ರೂಪಿಸುವಲ್ಲಿ (೧೮೫೨-೧೯೪೩) ಮೊದಲಿಗರು. ಅವರು ಪ್ರಕಟಿಸಿದ 'ಬಾಲಬೋಧೆ' ಮಕ್ಕಳ ವೇದವೆಂದು ಗೌರವ ಪಡೆದಿದೆ ಇದು ಪಠ್ಯಕೃತಿಯಾಗಿ ಪ್ರಸಿದ್ಧಿಹೊಂದಿತು. ಆನಂತರದಲ್ಲಿ ಎಂ.ಎಸ್. ಪುಟ್ಟಣ್ಣನವರ 'ನೀತಿ ಚಿಂತಾಮಣಿ,' ಕೃತಿ ಪ್ರಸಿದ್ಧಿಯನ್ನು ಸಾಧಿಸಿತು. ಇದು ಸಹ ಪಠ್ಯಕೃತಿಯಾಗಿ ಕನ್ನಡ ನಾಡಿನಲ್ಲಿ ಪ್ರಸಾರಹೊಂದಿತು. ಇದರಲ್ಲಿರುವ ಸುಮಾರು ೧೫೦ ಕಥೆಗಳು ಮನರಂಜನೆ ನೀಡುತ್ತವೆ. ಮಕ್ಕಳಿಗೆ ನೀತಿಪಾಠ ಹೇಳುತ್ತವೆ. ಇವುಗಳ ನಂತರದಲ್ಲಿ ಬಂದು ಆಧುನಿಕ ಕಾಲದ ಮಕ್ಕಳ ಸಾಹಿತ್ಯದ ಆಚಾರ್ಯರಾಗಿ ನಿಂತವರು ಪಂಜೆ ಮಂಗೇಶರಾಯರು, ಹೊನ್ನಾಪುರಮಠ ಗದಿಗಯ್ಯನವರು ಮತ್ತು ಹರ್ಡೇಕರ ಮಂಜಪ್ಪನವರು. ಇವರಿಂದ ಕನ್ನಡ ಮಕ್ಕಳ ಸಾಹಿತ್ಯಕ್ಕೆ ಶ್ರೇಷ್ಠ ಕೊಡುಗೆ ಸಂದಿದೆ. ಪಂಜೆ ಮಂಗೇಶರಾಯರು ಮತ್ತು ಹೊನ್ನಾಪುರ ಮಠ ಗದಿಗಯ್ಯನವರಿಗಿಂತಲೂ ಒಂದಿಷ್ಟು ಪೂರ್ವದಲ್ಲಿಯೇ ಹರ್ಡೇಕರ ಮಂಜಪ್ಪನವರು ಮಕ್ಕಳ ಸಾಹಿತ್ಯರಚನೆಗೆ ಕೈಹಾಕಿದವರು. ಹೀಗಾಗಿ "ಆಧುನಿಕ ಕನ್ನಡ ಮಕ್ಕಳ ಸಾಹಿತ್ಯದಲ್ಲಿ ಮಂಜಪ್ಪನವರು ಮೊದಲಿಗರಾಗುತ್ತಾರೆ"[೬] ಎಂಬ ಶಾಂತರಸರ ಮಾತಿನಲ್ಲಿ ಹುರಿಳಿದೆ.

ಮಂಜಪ್ಪನವರು ಮಾಸ್ತರರಾಗಿದ್ದಾಗ ೧೯೦೩ ರಷ್ಟು ಹಿಂದೆಯೇ ಕವಿತೆಗಳನ್ನು ರಚಿಸುತ್ತಿದ್ದುದಾಗಿ ಅವರ ಆತ್ಮಕಥೆಯಿಂದ ತಿಳಿದುಬರುತ್ತದೆ. "ನಾನು ಹುಡುಗರ ಆಟದ ಸಂಬಂಧವಾಗಿಯೂ ಚಿಕ್ಕ ಚಿಕ್ಕ ಪದಗಳನ್ನು ಕಟ್ಟಿ ನನ್ನ ಕಡೆಗಿದ್ದ ಒಂದನೆಯ ತರಗತಿಯ ಹುಡುಗರಿಗೆ ಬಹು ಹುರುಪುಕೊಟ್ಟು ಕಲಿಸುತ್ತಿದ್ದೆನು" ಎನ್ನುವ ಮಾತು, ಮಂಜಪ್ಪನವರ ಸಾಹಿತ್ಯಕೃಷಿ ಮಕ್ಕಳ ಸಾಹಿತ್ಯದಿಂದಲೇ ಆರಂಭವಾಯಿತೆಂಬುದನ್ನು ಕೂಡ ದೃಢಪಡಿಸುತ್ತದೆ.

ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳದಲ್ಲಿ ಮೂಡಿಬಂದ ಮಕ್ಕಳ ಸಾಹಿತ್ಯಕ್ಕಿಂತ ಮಂಜಪ್ಪನವರ ಮಕ್ಕಳ ಸಾಹಿತ್ಯ ಭಿನ್ನವಾದದ್ದು-ವಿಶೇಷವಾದದ್ದು. ನೀತಿಯೇ ಪ್ರಧಾನವಾಗಿ ಪಡಿಮೂಡಿರುವ ಇವರ ಕೃತಿಗಳು ರಂಜಕತೆಯನ್ನು ಗೌಣವಾಗಿ ಹೊಂದಿವೆ. ಆತ್ಮೀಯತೆ, ಚಿಂತನಶೀಲತೆ ಇಲ್ಲಿ ಎದ್ದುಕಾಣುತ್ತದೆ. ಮಕ್ಕಳಿಗೆ ಅಜ್ಜ ಅಜ್ಜಿ, ತಂದೆ-ತಾಯಿ ಹಾಗೂ ಗುರುಗಳು ಹೇಳಿದ ತಿಳುವಳಿಕೆಯ ಮಾತುಗಳಂತೆ ಆತ್ಮೀಯ ಶೈಲಿಯೂ ಇಲ್ಲಿ ಅಡಕವಾಗಿದೆ. ತಮ್ಮ ,ತಂಗಿ, ಶಿಷ್ಯ ಎಂಬ ಸಂಬೋಧನೆಯನ್ನು ಈ ಕೃತಿಗಳು ಕೂಡಿಕೊಂಡಿದ್ದು ಆಕರ್ಷಕವಾಗಿವೆ. ಚಿಕ್ಕ-ಚಿಕ್ಕ ವಾಕ್ಯಗಳು ಇಲ್ಲಿಯ ಜೀವಾಳವಾಗಿ, ನಿರೂಪಣೆ ಮೋಹಕವಾಗಿ ನಿಂತಿದೆ. ಚರಿತ್ರಾತ್ಮಕ-ಕಥಾತ್ಮಕ ಹಾಗೂ ಉಪದೇಶಾತ್ಮಕ-ಬೋಧನಾತ್ಮಕ ರೀತಿಯಲ್ಲಿ ಬರುವ ಇವು ಶ್ರೇಷ್ಠ ಮಾದರಿಯೆನಿಸಿವೆ. "ಸ್ವಾತಂತ್ರ್ಯಪೂರ್ವ ಹೋರಾಟಕಾಲದಲ್ಲಿ ರಾಷ್ಟ್ರ ಕಟ್ಟುವ ಕಾಯಕದಲ್ಲಿ ತೊಡಗಿದ್ದ ಮಂಜಪ್ಪನವರು ಮಕ್ಕಳ ಸಾಹಿತ್ಯರಚನೆಯಲ್ಲಿ ಮಹತ್ವಪೂರ್ಣ ಸಾಧನೆ ಮಾಡಿದ್ದು ಒಂದು ಅವಿಸ್ಮರಣೀಯ ಘಟ್ಟ.

---

೬. ಹರ್ಡೇಕರ ಮಂಜಪ್ಪನವರ ಜೀವನ ಹಾಗೂ ವ್ಯಕ್ತಿತ್ವ , ವಿವಿಧ ಲೇಖಕರು, ಪುಟ, ೯೪

ಅವರ ವೈಚಾರಿಕ ಸಾಹಿತ್ಯಕ್ಕೆ ನಮ್ಮ ರಾಷ್ಟ್ರೀಯ ಸಾಹಿತ್ಯೇತಿಹಾಸದಲ್ಲಿ ಮಹತ್ವದ ಸ್ಥಾನ ಇರುವಂತೆ, ಮಕ್ಕಳ ಸಾಹಿತ್ಯದಲ್ಲಿಯೂ ಅವರಿಗೊಂದು ಸ್ಥಾನ ಮೀಸಲಾಗಿರುತ್ತದೆಯಷ್ಟೇಯಲ್ಲ, ಅದು ಅಗ್ರ ಪಂಕ್ತಿಯಲ್ಲಿರುತ್ತದೆ."[೭]

ಮಂಜಪ್ಪನ ಮಕ್ಕಳ ಸಾಹಿತ್ಯವನ್ನು ಅಧ್ಯಯನ ದೃಷ್ಟಿಯಿಂದ ೧. ಚರಿತ್ರಾತ್ಮಕ-ಕಥಾತ್ಮಕ ಮಕ್ಕಳ ಸಾಹಿತ್ಯ ೨. ಉಪದೇಶಾತ್ಮಕ-ಬೋಧನಾತ್ಮಕ ಮಕ್ಕಳ ಸಾಹಿತ್ಯವೆಂದು ವಿಂಗಡಿಸುವುದುಂಟು. ಅರವತ್ಮೂರು ಪುರಾತನರ ಚರಿತ್ರೆ, ಲಿಂಗರಾಜರ ಚರಿತ್ರೆ, ಭಗವಾನ ಬುದ್ಧನ ಚರಿತ್ರೆ, ಬಸವಣ್ಣನವರ ಚರಿತ್ರೆ, ಶರಣಬಸವೇಶ್ವರ ಚರಿತ್ರೆ, ಲಜಪತರಾಯರ ಚರಿತ್ರೆ, ಪ್ರಭುದೇವರ ಕಥೆ, ಕಚದೇವನ ಕಥೆ ಮುಂತಾದವು ಚರಿತ್ರಾತ್ಮಕ-ಕಥಾತ್ಮಕ ಮಕ್ಕಳ ಉಪದೇಶ ಕೃತಿಗಳಾದರೆ ಬುದ್ಧಿಯ ಮಾತು, ಸ್ತ್ರೀನೀತಿ ಸಂಗ್ರಹ, ಆರೋಗ್ಯ ಜೀವನ, ಭಾಗ್ಯದ ಬೀಗದ ಕೈ, ಗೋಸೇವೆ, ಗಾಂಧಿ ಸಂದೇಶ, ಅಕ್ಕನ ಉಪದೇಶ, ವಿಜಯವಾಣಿ, ಅಣ್ಣನ ಕ್ರಾಂತಿ, ಬಸವಭಕ್ತಿ, ಕಾಯಕವೇ ಕೈಲಾಸ ಎಂಬ ಕೃತಿಗಳು ಉಪದೇಶಾತ್ಮಕ -ಬೋಧನಾತ್ಮಕ ಮಕ್ಕಳ ಸಾಹಿತ್ಯದಲ್ಲಿ ಸೇರ್ಪಡೆಯಾಗುತ್ತವೆ.

'ಭಕ್ತಿ' ಒಂದು ಶ್ರೇಷ್ಠ ಮೌಲ್ಯ. ಇದನ್ನು ಶಕ್ತಿಯಾಗಿಸಿಕೊಂಡು ಬೆಳೆದು-ಬಾಳಿದವರು ಅಮರರಾಗಿದ್ದಾರೆ. ಇದರಲ್ಲಿ ಚೋಳದೇಶದ ಪುರಾತನರು ಪ್ರಸಿದ್ಧರು. ಆತ್ಮಾರ್ಪಣ ಮನೋಭಾವದೊಂದಿಗೆ ಭಗವಂತನನ್ನು ಆರಾಧಿಸಿ ಮುಕ್ತಿಗೆ ಸಂದ ಅರವತ್ಮೂರು ಪುರಾತನರ ಸಂಕ್ಷಿಪ್ತ ಚರಿತ್ರೆಯನ್ನು ತಿಳಿಸುವ ಕೃತಿಯೇ ಮಂಜಪ್ಪನವರ "ಅರುವತ್ಮೂರು ಪುರಾತನರ ಚರಿತ್ರೆ" ಯಾಗಿದೆ. ಶಿವಸ್ಮರಣೆಯೇ ಶ್ರೇಷ್ಠವೆಂದು ಬಗೆದ ಈ ಪುರಾತನರು ಶಿವಲಿಂಗಪೂಜೆಯನ್ನು ನಿಷ್ಠೆಯಿಂದ ಮಾಡಿ, ಮುಕ್ತಿಗೆ ಪಾತ್ರರಾದರು. ಸರಳ ನಿರೂಪಣೆಯೊಂದಿಗೆ ತೀರ ಸಂಕ್ಷಿಪ್ತವಾಗಿ ಈ ಕೃತಿಯನ್ನು ರಚಿಸಿದ್ದಾರೆ. 'ಲಿಂಗರಾಜರ ಚರಿತ್ರೆ' ಮಕ್ಕಳ ಮಟ್ಟ ಮೀರಿನಿಲ್ಲುವ ದೀರ್ಘ ಸ್ವರೂಪದ ಕೃತಿ. ಆದರೆ ಮಕ್ಕಳಿಗೆ ಲಿಂಗರಾಜರಂಥವರನ್ನು ಕುರಿತು ತಿಳಿಸಿ ಹೇಳಬೇಕಾದ ಅವಶ್ಯಕತೆ ಅರಿತು, ಈ ಕೃತಿಯನ್ನು ಇಲ್ಲಿ ಸೇರಿಸಲಾಗಿದೆ. ಲಿಂಗರಾಜ ದೇಸಾಯಿಯವರ ಬದುಕಿನ ಪುಟಗಳನ್ನು ವಿವರಿಸುವ ಈ ಕೃತಿ, ಅವರು ವೀರಶೈವಸಮಾಜಕ್ಕೆ ಮಾಡಿದ ಸೇವೆಯನ್ನು ಸ್ಮರಿಸುತ್ತದೆ. ಅವರ ತ್ಯಾಗಮನೋಭಾವವನ್ನು ವಿದ್ಯಾಪ್ರೇಮವನ್ನು ಕಲಿಸುವಲ್ಲಿ ಸಫಲತೆಯನ್ನು ಸಾಧಿಸಿದೆ. "ಭಗವಾನ ಬುದ್ಧನ ಚರಿತ್ರೆ" ಬುದ್ಧನ ಜೀವನ ಮತ್ತು ತತ್ವಗಳನ್ನು ಪರಿಚಯಿಸುವ ಕೃತಿ. ಬುದ್ಧನ ಜನನ, ಬಾಲ್ಯಾವಸ್ಥೆ, ಸಂಸಾರತ್ಯಾಗ, ತಪಸ್ಸು, ಉಪದೇಶ, ಶಿಷ್ಯಬಳಗ, ಬೋಧಪದ್ಧತಿ ಮತ್ತು ಪರಿನಿರ್ವಾಣದ ವಿಚಾರಗಳನ್ನು ತಿಳಿಸುವದರೊಂದಿಗೆ ಬೌದ್ಧ ಮತದ ವಿಶೇಷ ಲಕ್ಷಣಗಳನ್ನು ತಿಳಿಸುತ್ತದೆ. ಮಕ್ಕಳು ಬುದ್ಧನ ಕುರಿತಾಗಿ-ಬೌದ್ಧಧರ್ಮದ ವಿಚಾರವಾಗಿ ತಿಳಿದುಕೊಳ್ಳಲು ನೆರವಾಗುವ ಕೈಪಿಡಿ ರೂಪದ ಕೃತಿ ಇದಾಗಿದೆ.

'ಧರ್ಮಬೋಧೆ' ಮನುಷ್ಯನನ್ನು ಸುಸಂಸ್ಕೃತರಾಗಿ ಬಾಳಲು ಕಲಿಸುತ್ತದೆ. ಇದು ಹಿರಿಯರು ತಮ್ಮ ಮಕ್ಕಳಿಗೆ ಜರೂರಾಗಿ ತಿಳಿಸಿಕೋಡಬೇಕಾದ ವಿಚಾರ. ಎಳೆಯ ಮನಸ್ಸುಗಳ ಮೇಲೆ ಮಾಡುವ 'ಬದುಕಿನ ಒಳ್ಳೆಯ ಸಂಸ್ಕಾರ ಚಿತ್ರ' ಅವರನ್ನು ಸತ್ಪ್ರಜೆ ರೂಪಿಸುವುದೆಂಬ ವಿಚಾರವನ್ನು ಹೊಂದಿದ ಮಂಜಪ್ಪನವರು, ಮಕ್ಕಳನ್ನು ಅನುಲಕ್ಷಿಸಿಯೇ 'ವೀರಶೈವ ಮತಬೋಧೆ' ಎಂಬ ಕೃತಿ ರಚಿಸಿದರು. ಇದು, ಮಕ್ಕಳಿಗೆ ಧಾರ್ಮಿಕ ಶಿಕ್ಷಣದ ಅವಶ್ಯಕತೆ, ವೀರಶೈವ ಮತ, ಅಷ್ಟಾವರಣ,

೭. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ಸಂ. ಡಾ. ಎಂ.ಎಂ. ಕಲಬುರ್ಗಿ, ಪುಟ, ೪೦೩

ಪಂಚಾಚಾರ, ಷಟ್‌ಸ್ಥಲ, ಇತ್ಯಾದಿ ವಿಷಯಗಳನ್ನು ಬಿತ್ತರಿಸುವ ಕೃತಿ. ಮಕ್ಕಳ ಮನಕ್ಕೆ ಮುಟ್ಟುವ ಭಾಷಾನಿರೂಪಣೆ ಇಲ್ಲಿದೆ. ಮರೆಯಬೇಡ, ಜ್ಞಾಪಕವಿರಲಿ, ನಿನಗೆ ಮಂಗಳವಾಗಲಿ ಎಂಬ ಮಾತುಗಳು ಈ ಕೃತಿಯ ಉದ್ದೇಶವನ್ನು ಹೆಚ್ಚಿಸಿವೆ. ಮಕ್ಕಳ ಮನದಲ್ಲಿ ಧರ್ಮಜ್ಯೋತಿ ಬೆಳಗುವ ಈ ಕೃತಿ ವೀರಶೈವಧರ್ಮ ಹಾಗೂ ಸಮಾಜ ಕುರಿತು ಮಂಜಪ್ಪನವರು ಹೊಂದಿದ ಅಭಿಮಾನವನ್ನು ತಿಳಿಸುತ್ತದೆ. **'ಅಣ್ಣನ ಅರ್ಪಣಯೋಗ'** ಎಂಬ ಕೃತಿ ಭಕ್ತಿಯೋಗದಲ್ಲಿ ವಿಕಾಸ ಹೊಂದಿರುವ ಬಸವಣ್ಣನ ಅರ್ಪಣಯೋಗವನ್ನು ತಿಳಿಸುತ್ತದೆ, ಬಸವಣ್ಣವನವರ ವಚನಗಳೊಂದಿಗೆ ಸಮನ್ವಯಮಾಡಿ ಬೇರೆಯವರ ವಚನಗಳನ್ನು ನೀಡಿ ವಸ್ತುವಿನ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ. ಪ್ರಶ್ನೋತ್ತರ ರೂಪದಲ್ಲಿರುವ ಈ ಕೃತಿ ಗುರು, ಲಿಂಗ, ಜಂಗಮಕ್ಕೆ ತನು–ಮನ–ಧನಗಳನ್ನು ಅರ್ಪಿಸಬೇಕೆಂದು ತಿಳಿಸುತ್ತದೆ. ಇದು ಸುಖ–ಶಾಂತಿಗೆ ದಾರಿ. ಇದನ್ನು ಮನನ ಮಾಡಿಕೊಂಡು ಆಚರಣೆಗೆ ತರುವುದೇ ಜೀವನದ ಸಾರ್ಥಕತೆಯೆಂದು ಅಭಿಪ್ರಾಯಪಡುತ್ತಾರೆ. 'ಮಡಿವಾಳ ಮಾಚಿದೇವನ ಉಪದೇಶ' ಅತ್ಯಂತ ಕಿರಿಯ ಕೃತಿ. ಮಾಚಿದೇವರ ಅಲ್ಪಪರಿಚಯ, ಅವರ ಮಚನಗಳಲ್ಲಿಯ ಉಪದೇಶ, ಕಾಯಕ ತತ್ವದ ಮಹತ್ವ, ಶರಣರ ಬದುಕಿನ ಹಿರಿಮೆಯನ್ನು ಸಾದರಪಡಿಸುವ ಕೃತಿ ಇದಾಗಿದೆ. ಮಂಜಪ್ಪನವರೇ ರಚಿಸಿದ "ಕಾಯಕವೇ ಕೈಲಾಸ"ಕೃತಿಯ ಹಲವು ಆಲೋಚನೆಗಳು ಇಲ್ಲಿ ಪುನರುಕ್ತಗೊಂಡಂತೆ ತೋರುತ್ತದೆ.

ಹೀಗೆ ಮಂಜಪ್ಪನವರ ಮಕ್ಕಳ ಸಾಹಿತ್ಯದಲ್ಲಿ ಕಥೆ–ಚರಿತ್ರೆಗಳು ಸ್ಥಾನ ಪಡೆದಂತೆ ಉಪದೇಶ–ಬೋಧನೆಗಳೂ ವಿಶೇಷ ಮಹತ್ವ ಪಡೆದಿವೆ. ಕೆಲವೊಮ್ಮೆ ಬೋಧನೆ ಜಾಸ್ತಿಯಾದಂತೆ ತೋರಿದರೂ ಆತ್ಮೀಯ ಶೈಲಿ ಕಾರಣವಾಗಿ ಈ ಕೃತಿಗಳು ಗೆಲುವನ್ನು ಸಾಧಿಸುತ್ತವೆ. "ಮಕ್ಕಳ ಮನಸ್ಸು ಪಾದರಸದಂತೆ ಹರಿದಾಡುತ್ತಿರುವ ಭಾವನೆಗಳ ಒಂದು ಸಾಮ್ರಾಜ್ಯ. ಹೊಸ ಭಾವನೆಗಳು ಕಲ್ಪಿತವಾದಂತೆ ಅವುಗಳ ಚಟುವಟಿಕೆಯ ಕಾರ್ಯಕ್ರಮವು ನಿರ್ಧಾರವಾಗುವುದು. ಆಶೆಗಳು ಕೊನೆ ಮೊದಲಿಲ್ಲದ ರೀತಿಯಲ್ಲಿರುವವು."[೮] ಇಂತಹ ಮಕ್ಕಳ ಮನಸ್ಸನ್ನು ಗೆಲ್ಲುವ ಬರಹದ ಶೈಲಿ ಮಂಜಪ್ಪನವರಿಗೆ ಸಿದ್ಧಿಸಿತ್ತು. 'ಇಂದಿನ ಮಕ್ಕಳು ನಾಳಿನ ಪ್ರಜೆಗಳು' ಎಂದರಿತಿದ್ದ ಅವರು, ಮಕ್ಕಳ ಮನದೊಳಗೆ ಆದರ್ಶನಾಯಕರ ಜೀವನಗಾಥೆ ಕಥೆಯರೂಪದಲ್ಲಿ, ಚರಿತ್ರೆರೂಪದಲ್ಲಿ ನಿಲ್ಲಬೇಕೆಂಬ ಅಭಿಪ್ರಾಯಕ್ಕೆ ಬಂದು, ಅಂಥ ಅನೇಕ ಕೃತಿಗಳನ್ನು ರಚಿಸಿದರು. ಇದರೊಟ್ಟಿಗೆ ಬೋಧನೆ–ಉಪದೇಶಗಳು ಬದುಕನ್ನು ರೂಪಿಸಬಲ್ಲವು ಎಂಬುದನ್ನರಿತು, ಆ ರೀತಿಯ ಅನೇಕ ಕೃತಿಗಳನ್ನು ರಚಿಸಿದರು. ಚಿಕ್ಕವರಿದ್ದಾಗಲೇ ಶ್ರೇಷ್ಠ ವಿಚಾರಗಳನ್ನು ಮನದಲ್ಲಿ ಬಿತ್ತಿದರೆ ಭವಿಷತ್ತಿನಲ್ಲಿ ಅವರು ಬೆಳಕಾಗಬಲ್ಲರು, ಈ ಕಾರಣ ಮಕ್ಕಳಲ್ಲಿ ಒಳ್ಳೆಯ ಉಪದೇಶ ತುಂಬಬೇಕೆಂಬುದು ಮಂಜಪ್ಪನವರ ಸದಾಶಯವಾಗಿತ್ತು. "ಮಕ್ಕಳು ಎಳೆಯ ಗಿಡದಂತೆ, ಜೇನು ಮೇಣದಂತೆ, ಅವರನ್ನು ತಿದ್ದುವುದು ಸುಲಭ, ಒಳ್ಳೆಯ ಮೇಲ್ಪಂಕ್ತಿ ಗುರುಮುಖೇನ ಬರಬಹುದಾದ ವಿದ್ಯಾಭ್ಯಾಸ. ಹಸನಾದ ಮನೆಯ ವಾತಾವರಣ, ಸ್ವಚ್ಛವಾದ ಸಾಮಾಜಿಕ ಜೀವನ, ಇವು ದೊರೆತಲ್ಲಿ ಮಗುವಿನಲ್ಲಿ ಉದಯವಾಗುತ್ತಿರುವ ಶಕ್ತಿ ಸಮಾರ್ಥ್ಯಗಳು ಸಜೀವವಾಗಿ ಪರಿಪುಷ್ಟವಾಗಿ, ಸನ್ಮಾರ್ಗದಲ್ಲಿ ವಿಕಾಸಗೊಂಡು ಬಲಿಯುತ್ತವೆ."[೯] ಇದಕ್ಕಗನುಗುಣವಾಗಿ ಮಂಜಪ್ಪನವರು ತಮ್ಮ ಸಾಹಿತ್ಯದಲ್ಲಿ ರಂಜನೆ–ವಿನೋದ ನೀಡದೆ, ಉಪದೇಶ –ಬೋಧನೆ ನೀಡಿರುವದು ಸ್ವಾಗತಾರ್ಹವಾಗಿದೆ. ಅವರ ಮಕ್ಕಳ ಸಾಹಿತ್ಯಕ್ಕೆ ಈ ಕಾರಣವಾಗಿಯೇ ಮಕ್ಕಳ ಮನಕ್ಕೆ ಮಣಿಯುವ ಪ್ರೌಢರ ಮನಕ್ಕೆ ಸ್ಪಂದಿಸುವ ಗುಣವಿದೆ.

೮. ಶಿಕ್ಷಣ ಸಮಸ್ಯೆಗಳು, ಎಸ್. ಕೃಷ್ಣಪ್ಪ, ಪುಟ ೩೫
೯. ಲೇಖನ ಕಲೆ, ಎನ್. ಪ್ರಹ್ಲಾದರಾವ, ಪುಟ ೮೨

ಮಕ್ಕಳ ಕುರಿತು ಅನನ್ಯ ಕಾಳಜಿ ಹೊಂದಿದ ಮಂಜಪ್ಪನವರು ಶಕ್ತಿಶಾಲಿದೇಹ, ಬಲಶಾಲಿಯಾದ ಮನಸ್ಸು ನಿರ್ಮಾಣಗೊಳ್ಳಲು ಉತ್ತೇಜನ ನೀಡುವ ಮಕ್ಕಳ ಸಾಹಿತ್ಯವನ್ನು ಸೃಷ್ಟಿಸಿದರು. ಕಾಲ್ಪನಿಕ ಕಥೆಗಳನ್ನು ಹೇಳದೆ ನಮ್ಮ ನಾಡಿನ-ದೇಶದ ಹಿರಿಯರ, ಶರಣರ, ವೀರರ ಬದುಕು ಆದರ್ಶಗಳನ್ನು ಕಥಾರೂಪವಾಗಿ ಬರೆದರು. ರಾಷ್ಟ್ರಭಕ್ತಿ, ಮಾನವಪ್ರೇಮ, ತ್ಯಾಗ, ದಯೆ, ಧರ್ಮ, ಸತ್ಸಂಗ, ಕಾಯಕ, ಭಕ್ತಿ, ಸತ್ಯ, ನೀತಿ, ಶ್ರಮ, ಸೇವೆ, ಆರೋಗ್ಯ ಮುಂತಾದ ಬೋಧನೆಗಳು ಇವರ ಕೃತಿಗಳಲ್ಲಿ ಇರುವುದನ್ನು ಕಾಣುತ್ತೇವೆ. "ಮಕ್ಕಳು ಯೌವನಕ್ಕೆ ಬರುವ ಪೂರ್ವದಲ್ಲಿಯೇ ಅವರಲ್ಲಿ ಸರ್ವಾಂಗ ಸುಂದರ ಬೆಳವಣಿಗೆಗೆ ಬೇಕಾಗುವ ಎಲ್ಲ ವಿಷಯಗಳನ್ನು ಕುರಿತು ಮಂಜಪ್ಪ. ಸಾಹಿತ್ಯ ಸೃಷ್ಟಿಮಾಡಿದ್ದಾರೆ. ಬಹುಶಃ ಇಂತಹ ಸರಳ ಸುಂದರ ಶೈಲಿಯ ಸಾಹಿತ್ಯ ಬೇರೆ ಕಡೆಗೆ ಕಾಣ ಸಿಕ್ಕುವುದಿಲ್ಲ." ಎನ್ನುವ ಶಾಂತರಸರ ವಿಚಾರಗಳು ಮಂಜಪ್ಪನವರ ಮಕ್ಕಳ ಸಾಹಿತ್ಯದ ಸ್ಪಷ್ಟ ಸ್ವರೂಪವನ್ನು ಮಹತ್ವವನ್ನು ತಿಳಿಯಪಡಿಸುತ್ತವೆ.

ಅಂದು ಆಧುನಿಕ ಮುದ್ರಣ ಸೌಲಭ್ಯಗಳಿಂದ ದೂರವಿದ್ದ ಕಾಲ, ಅಂಥ ಸಂದರ್ಭದಲ್ಲಿಯೇ ಮಂಜಪ್ಪನವರು ವಿವಿಧ ಗ್ರಂಥಮಾಲೆಗಳ ಜೊತೆಗೆ ಮಕ್ಕಳ ಪುಸ್ತಕ ಮಾಲೆಯೊಂದನ್ನು ಪ್ರಾರಂಭಿಸಿ, ತಮ್ಮ ಕೃತಿಗಳನ್ನಲ್ಲದೆ ಬೇರೆಯವರ ಕೃತಿಗಳನ್ನೂ ಪ್ರಕಟಿಸಿದರು. ಈ ಮಾಲೆಯ ಕೃತಿಗಳ ಕುರಿತು ತಮ್ಮ "ಕಚದೇವನ ಕಥೆ" ಕೃತಿಯ ಪೀಠಿಕೆಯಲ್ಲಿ "ಚಿಕ್ಕಮಕ್ಕಳಿಗೆ ದೊಡ್ಡವರ ಸಂಗತಿಗಳು ತಿಳಿದಿರುವುದು ಬಹು ಒಳ್ಳೆಯದು. ಆದುದರಿಂದ ಸುಲಭವಾದ ಭಾಷೆಯಲ್ಲಿ ಸ್ವಲ್ಪ ಸಂಗತಿಗಳನ್ನಾದರೂ ತಿಳಿಸಬೇಕೆಂದು ಈ ಪುಸ್ತಕವನ್ನು ಬರೆದದ್ದಾಗಿದೆ. ಪಾಲಕರು ಉಪಧ್ಯಾಯರು ಇದರ ಉಪಯೋಗವಾಗುವಂತೆ ಚಿಕ್ಕ ಮಕ್ಕಳಿಗೆ ಓದಿಸುವರೆಂದು ನಂಬಿದ್ದೇನೆ." ಎಂದು ಹೇಳಿದ ಮಾತುಗಳು ಮಕ್ಕಳಿಗೆ ಓದುವ ಸಾಮರ್ಥ್ಯವಿದ್ದರೆ, ಸರಿ; ಇಲ್ಲದಿದ್ದರೆ ಪಾಲಕರು, ಶಿಕ್ಷಕರು ಕೃತಿಗಳನ್ನು ಓದಲು ಪ್ರೇರೇಪಿಸಬೇಕು. ಇಲ್ಲವೇ ತಾವೇ ಸ್ವತಃ ಓದಿ ಅವರಿಗೆ ತಿಳಿಸಿ ಹೇಳಬೇಕು. ಇದು ಅವರ ಮಹತ್ವದ ಜವಾಬ್ದಾರಿ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ.

ಇಂದಿನ ಮಕ್ಕಳ ಸಾಹಿತ್ಯದ ಕೃತಿಗಳು ಚಿತ್ತಾಕರ್ಷಕವಾದವುಗಳು. ಪ್ರತಿಪುಟವೂ ವರ್ಣರಂಜಿತವಾಗಿರುವುದುಂಟು. ಇದರಿಂದ ಮಕ್ಕಳು ಬೇಗನೇ ಅರ್ಥಮಾಡಿಕೊಳ್ಳಲು ಸುಲಭಸಾಧ್ಯವಾಗುತ್ತದೆ. ಇವು ಮಂಜಪ್ಪನವರ ಮಕ್ಕಳ ಕೃತಿಗಳಲ್ಲಿ ಕಾಣವು ಪುಸ್ತಕ ಸರಿಯಾಗಿ ಮುದ್ರಣಗೊಂಡರೆ ಸಾಕೆನ್ನುವ ಆ ಕಾಲದಲ್ಲಿ ಸಚಿತ್ರ ಪುಸ್ತಕ ಪ್ರಕಟಿಸುವುದು ದೂರದ ಮಾತಾಗಿತ್ತು. ಹೀಗಿದ್ದೂ ಮಕ್ಕಳ ಕುರಿತು, ಸಮಾಜ-ದೇಶ ಕುರಿತು ಅಗಾಧ ಪ್ರೇಮಾಭಿಮಾನ ಹೊಂದಿದ ಮಂಜಪ್ಪನವರು ಶ್ರೇಷ್ಠ ಮೌಲ್ಯಗಳು ಮಕ್ಕಳ ಮನದೊಳಗೆ ಸಾಕಾರಗೊಳ್ಳುವ ಕೃತಿಗಳನ್ನು ಕೊಟ್ಟರು. ಈ ವಿಭಾಗದ ಸಾಹಿತ್ಯದಲ್ಲಿ ಅವರ ಸೇವೆ ಅವಿಸ್ಮರಣೀಯವಾದದ್ದು "ಮಂಜಪ್ಪನವರು ಮಕ್ಕಳ ಸಾಹಿತ್ಯ ನಿರ್ಮಿಸಿ ಲಿಯೋ ಟಾಲಸ್ಟಾಯ್, ರವೀಂದ್ರನಾಥ ಠಾಕೂರರಂತೆಯೂ, ಇನ್ನೊಂದೆಡೆಗೆ ಮಕ್ಕಳ ಮನಸ್ಸು, ಮತ್ತು ಬುದ್ಧಿ, ಶಿಕ್ಷಣ, ನೀತಿ, ಶಿಸ್ತುಗಳ ಚಿಂತಕರಾಗಿ ಮಾಸೋ, ಮಾಂಟೆಸರಿಯವರಂತೆ ಕಾಣಿಸುತ್ತಾರೆ. ಅವರ ಮಕ್ಕಳ ಸಾಹಿತ್ಯಕ್ಕೆ ಸಾಹಿತಿಯ ಸಾಹಿತ್ಯಗುಣಗಳೂ, ದಾರ್ಶನಿಕನ ದಾರ್ಶನಿಕ ಗುಣಗಳೂ ಸೇರಿಕೊಂಡಿವೆ."[೧೦] ಹೀಗೆ ಮಂಜಪ್ಪನವರ ಮಕ್ಕಳ ಸಾಹಿತ್ಯಕೃತಿಗಳು ಶ್ರೇಷ್ಠ ಮೌಲ್ಯದಿಂದ ಕೂಡಿವೆ.

❖❖

---

೧೦. ಹರ್ಡೇಕರ ಮಂಜಪ್ಪನವರು, ಸಂ.ಪ್ರಾ.ಎ.ಬಿ.ಹಿರೇಮಠ ಮತ್ತು ಶ್ರೀ ಆರ್. ಎಲ್. ಪೋಲಿಸ್ ಪಾಟೀಲ, ಪುಟ, ೨೨

ಅರುವತ್ತು ಮೂರು ಪುರಾತನರ ಚರಿತ್ರೆ

ॐ

विद्यामृतमश्नुते

ವೀರಶೈವ ವಿದ್ಯಾಲಯ
ಆಲಮಟ್ಟಿ

ವೀರಶೈವ ವಿದ್ಯಾಲಯ ಗ್ರಂಥಮಾಲೆ ಸಂಖ್ಯೆ : ೨೦

॥ಓಂ॥

ಅರುವತ್ತು ಮೂರು ಪುರಾತನರ ಚರಿತ್ರೆ

ಈ ಪುಸ್ತಕದ ಸಂಪೂರ್ಣ ಅಧಿಕಾರವು
ವೀರಶೈವ ವಿದ್ಯಾಲಯ ಸಂಸ್ಥೆಗೆ ಸಂಬಂಧಪಟ್ಟಿದೆ

ಕ್ರಯ೨ ಆಣೆ

ಶಾ. ಶ. ೧೮೫೫ ಕ್ರಿ.ಶ. ೧೯೩೩

*

ಪೀಠಿಕೆ

ಶ್ರೀ ಕಲಿಗಣನಾಥಾದಿ ೬೩ ಪುರಾತನರು ಶಿವಭಕ್ತರಿಗೆ ಬಹು ಪೂರ್ವಕಾಲದಿಂದಲೂ ಪೂಜ್ಯರಾಗಿದ್ದಾರೆ. ಇವರ ವಿಷಯವಾಗಿ ಆಗಸ್ತ್ಯ ಋಷಿಗಳು, ಉಪಮನ್ಯು ಮುನಿಗಳು ಸಂಸ್ಕೃತದಲ್ಲಿಯೂ ಶಕ್ಕಿಳಾರ ನಾಯರೆಂಬುವವರು **ಪೆರಿಯ ಪುರಾಣ**ವೆಂದು ತಮಿಳಿನಲ್ಲಿಯೂ ಸುರಂಗಕವಿ. ನಿಜಗುಣರು, ಬೊಮ್ಮರಸರು, ಕನ್ನಡ ಪದ್ಯದಲ್ಲಿಯೂ ಶ್ರೀ ಎಸ್. ಸಿ. ಚೆನ್ನವೀರಪ್ಪನವರು, ಶ್ರೀ ಮಿರ್ಜಿ ಮಹಾರುದ್ರಪ್ಪನವರು ಕನ್ನಡ ವಚನ ರೂಪದಲ್ಲಿಯೂ ಬರೆದಿದ್ಧಾರೆ. ಈ ದೊಡ್ಡ ಪುಸ್ತಕಗಳನ್ನು ಓದುವುದು ಯಾರಿಗೆ ಶಕ್ಯವಿಲ್ಲವೋ ಅವರಿಗೆ ಸ್ವಲ್ಪದರಲ್ಲಿಯೇ ಪುರಾತನರ ಪರಿಚಯವಾಗಲೆಂದು ಈ ಚಿಕ್ಕ ಪುಸ್ತಕವನ್ನು ಬರೆದಿದ್ದಾಗಿದೆ.

ಪೆರಿಯ ಪುರಾಣವು ಕ್ರಿ. ಶ. ೧೧೦೦ರಲ್ಲಿ ರಚನೆಯಾಗಿರಬೇಕೆಂದು ಊಹಿಸಲ್ಪಟ್ಟಿರುವ ಕಾರಣ ಈ ಪುರಾತನರು ಒಂದು ಸಾವಿರ ವರುಷಗಳ ಹಿಂದೆಯೇ ಆಗಿ ಹೋಗಿದ್ದಾರೆಂದು ಧಾರಾಳವಾಗಿ ಹೇಳಬಹುದು. ಇವರೆಲ್ಲರೂ ಮುಖ್ಯವಾಗಿ ಚೋಳ ದೇಶದವರು, ಆದುದರಿಂದ ಲಿಂಗಪೂಜೆಯು ಚೋಳ ರಾಜ್ಯದಲ್ಲಿಯೇ ವಿಶೇಷವಾಗಿದ್ದಿತೆಂದು ಸ್ಪಷ್ಟವಾಗುತ್ತದೆ.

ಈ ಪುರಾತನರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳಲ್ಲಿ ಜನ್ಮವೆತ್ತಿದ ಮಹಾ ಶಿವಭಕ್ತರಿದ್ದಾರೆ. ಇಷ್ಟೆ ಅಲ್ಲ, ಕಾರಿಕಾಲಾಂಬೆ ಮೊದಲಾದ ಸ್ತ್ರೀಯರೂ ಇದ್ದಾರೆ ಎಂದ ಮೇಲೆ ಶಿವಭಕ್ತಿಯಿಂದ ಪೂಜ್ಯರಾಗಲು ಯಾವ ಕುಲಭೇದವಾಗಲಿ ಅಥವಾ ಸ್ತ್ರೀಪುರುಷರೆಂಬ ವ್ಯತ್ಯಾಸವಾಗಲಿ ಪ್ರತಿಬಂಧವನ್ನುಂಟು ಮಾಡುವುದಿಲ್ಲವೆಂದೇ ಸ್ಪಷ್ಟವಾಗುತ್ತದೆ. ಈ ದಿವ್ಯ ಸಿದ್ಧಾಂತವು ನಮ್ಮ ನಡವಳಿಕೆಯಲ್ಲಿ ಬರಲೆಂದೇ ನಾವು ಈ ಪುರಾತನರ ಸ್ತುತಿಯನ್ನೂ ಪೂಜೆಯನ್ನೂ ಮಾಡಬೇಕು. ನುಡಿ ಪುರಾತನರದಾಗಿ ನಡೆಯು ಮಾತ್ರ ಕಿರಾತರಂತಾದರೆ ಶಿವನು ಮೆಚ್ಚುವುದಿಲ್ಲ. ಶಿವನು ದಂಭಾಚಾರದ ಪೂಜೆ ನುಡಿನಡೆಗಳಿಗೆ ಮೆಚ್ಚುವವನಲ್ಲ. ಹಿಡಿದ ವ್ರತ ಪೂರ್ತಿಗಾಗಿ ಮಾಡಿದ ಆತ್ಮಾರ್ಪಣಕ್ಕೆ ಅಥವಾ ಕೂಸುಗಳಂತೆ ಸರಳ ಮನಸ್ಸುಳ್ಳವರ ಭಕ್ತಿಯ ಉಬ್ಬಿಗೆ ಓಡಿಬಂದು ಅವರ ಆಳಿನ ಆಳಾಗಿ ದುಡಿದು ಬೇಕಾದ ಸುಖಶಾಂತಿಗಳನ್ನು ದಯಪಾಲಿಸುತ್ತಾನೆಂಬುದೇ ಈ ಪುರಾತನರ ಚರಿತ್ರೆಯಿಂದ ಗೊತ್ತಾಗುವ ಮುಖ್ಯ ಸಂಗತಿಯು. ಇಂತಹ ವೀರವೃತ್ತಿ, ಭಕ್ತಿ ಭಾವನೆಗಳು ಈ ಪುಸ್ತಕವನ್ನೋದುವುದರಿಂದ ನಮ್ಮಲ್ಲಿ ಅತ್ಯಲ್ಪ ಪ್ರಮಾಣದಲ್ಲಾದರೂ ಉಂಟಾಗಲೆಂದು ಹಾರೈಸೋಣ.

ವೀರಶೈವ ವಿದ್ಯಾಲಯ — **ಹರ್ಡೇಕರ ಮಂಜಪ್ಪ**

ತಾ. ೧೨-೪-೧೯೩೩ — ಆಲಮಟ್ಟಿ

ಅರವತ್ತು ಮೂರು ಪುರಾತನರ ಚರಿತ್ರೆ

೧. ಕಲಿಗಣನಾಥ

ಹಿಂದಕ್ಕೆ ಚೋಳದೇಶದಲ್ಲಿ ಶಿವಪುರವೆಂಬ ಒಂದು ದೊಡ್ಡ ಪಟ್ಟಣವಿತ್ತು. ಇದಕ್ಕೆ ಕಲಿಗಣನಾಥನೆಂಬ ಒಬ್ಬ ಮಹಾಲಿಂಗ ಭಕ್ತನು ಒಡೆಯನಾಗಿದ್ದನು. ಈ ರಾಜನು ತನ್ನ ಪಟ್ಟಣದಲ್ಲಿರುವವರೆಲ್ಲರೂ ಲಿಂಗವನ್ನು ಧರಿಸಿರಲೇಬೇಕೆಂದು ಕಟ್ಟಪ್ಪಣೆ ಮಾಡಿದ್ದನು.

ಆ ಪಟ್ಟಣದವರೆಲ್ಲರೂ ಲಿಂಗಧಾರಿಗಳಾಗಿದ್ದರು. ಲಿಂಗಾಂಗಿಯಲ್ಲದ ಒಬ್ಬ ಒಕ್ಕಲಿಗನು ಒಂದು ದಿವಸ ಅರಮನೆಗೆ ಬಂದು ನನಗೆ ಭೂಕಂದಾಯ ಹೆಚ್ಚಾಗಿದೆಯೆಂದು ಹೇಳಿದರು.

ಲಿಂಗಧಾರಿಯಲ್ಲದ ಆ ಒಕ್ಕಲಿಗನನ್ನು ಆಚೆ ಕಳುಹಿಸಿರೆಂದು ರಾಜನು ಹೇಳಲು ಆ ಒಕ್ಕಲಿಗನು ಹೋಗದಿರಲು ರಾಜನು ಕೋಪದಿಂದ ಖಡ್ಗವನ್ನು ತೆಗೆದುಕೊಂಡು ಬಂದನು.

ಆಗ ಒಕ್ಕಲಿಗನ ರೂಪದಲ್ಲಿ ಬಂದಿದ್ದ ಶಿವನು ಕಲಿಗಣನಾಥನ ಲಿಂಗಭಕ್ತಿಯನ್ನು ನೋಡಿ ಸಂತೋಷಪಟ್ಟು ಆತನಿಂದ ಲಿಂಗಧಾರಣೆಯನ್ನು ಹೊಂದಿ ಕಲಿಗಣನಾಥರಿಗೆ ಗಣಪದವಿಯನ್ನಿತ್ತನು.

೨. ರುದ್ರಪಶುಪತಿ

ದಕ್ಷಿಣದೇಶದಲ್ಲಿ ಶಿವಪುರಿಯೆಂಬ ಒಂದು ಪಟ್ಟಣವಿತ್ತು. ಅಲ್ಲಿ ಶಿವಭಕ್ತರು ಹೆಚ್ಚಾಗಿದ್ದರು. ಒಂದು ಮಠದಲ್ಲಿ ಶಿವಪುರಾಣವನ್ನು ಒಬ್ಬ ಶಾಸ್ತ್ರಿಗಳು ಬಹು ಚೆನ್ನಾಗಿ ಹೇಳುತ್ತಿದ್ದರು.

ಆ ಪುರಾಣವನ್ನು ಕೇಳಲು ರುದ್ರಪಶುಪತಿಯೆಂಬ ಒಬ್ಬ ಮಹಾಮುಗ್ಧ ಭಕ್ತನೂ ಪ್ರತಿನಿತ್ಯ ಹೋಗುತ್ತಿದ್ದನು. ಒಂದು ದಿವಸ ಸಮುದ್ರಮಥನದ ಕಥೆಯಲ್ಲಿ ಶಿವನು ವಿಷ ಕುಡಿದನೆಂದು ಹೇಳಿದೊಡನೆ ರುದ್ರಪಶಿಪತಿಗೆ ಬಹು ದುಃಖವಾಯಿತು. ಅಯ್ಯೋ ಶಿವನು ಸಾಯುತ್ತಾನಲ್ಲಾ ನಮ್ಮಪ್ಪ ವಿಷ ಕುಡಿದರೆ ಬದುಕುವನೇ? ಎಂದು ನೆಲದಮೇಲೆ ಬಿದ್ದು ಹೊರಳಾಡುತ್ತಾ ಅಳಹತ್ತಿದನು.

ಈ ಭಕ್ತನು ಬಹು ದುಃಖದಿಂದ ಸಾಯುವಂತಾದನು. ಆಗ ಶಿವನು ಈತನ ಭಕ್ತಿಗೆ ಮೆಚ್ಚಿ ಬಂದು ನಾನು ಸಾಯುವದಿಲ್ಲವೆಂದು ಸಮಾಧಾನಗೊಳಿಸಿದನು.

ನೀನು ವಿಷ ಕುಡಿದರೆ ನಾನು ಕತ್ತಿಯಿಂದ ನನ್ನ ಕುತ್ತಿಗೆಯನ್ನು ಕತ್ತರಿಸಿಕೊಳ್ಳುತ್ತೇನೆ ನೋಡೆಂದು ಹೇಳಿ ಕತ್ತಿಯನ್ನು ಹಿಡಿದುಕೊಂಡು ಶಿವನ ವಿಷಕಂಠವನ್ನು ನೋಡುತ್ತ ಆತನ ತೊಡೆಯಮೇಲೆ ಈಗಲೂ ಕುಳಿತಿದ್ದಾನೆ.

೩. ಮುರುಘರು

ಚೋಳದೇಶದಲ್ಲಿ ಪಗವಲ್ಲುರವೆಂಬ ಪಟ್ಟಣವಿತ್ತು. ಅಲ್ಲಿ ಮುರುಘರೆಂಬ ಒಬ್ಬ ಮಹಾ ಶಿವಭಕ್ತರಿದ್ದರು. ಇವರು ಶಿವಪಂಚಾಕ್ಷರಿ ನಾಮವನ್ನು ನಾವು ಉಸುರಾಡಿಸುವಂತೆ ಯಾವಾಗಲೂ ಜಪಿಸುತ್ತಿದ್ದರು.

ಒಂದು ದಿವಸ ಆ ಪಟ್ಟಣದ ಶಿವಾಲಯಕ್ಕೆ ಹೋಗಿ ಬಹು ಭಕ್ತಿಯಿಂದ ಅಲ್ಲಿಯ ಶಿವಲಿಂಗವನ್ನು ಪೂಜೆ ಮಾಡಿ ಸಂತೋಷದಿಂದ ಶಿವನಾಮವನ್ನು ಹಾಡಿ ಶಿವಲಿಂಗದಲ್ಲಿಯೇ ದೃಷ್ಟಿಯನ್ನಿಟ್ಟು ಶಿವಪಂಚಾಕ್ಷರಿಯ ಜಪದಲ್ಲಿಯೇ ಮಗ್ನರಾದರು.

ಬಹು ಭಕ್ತಿಯಿಂದ ಆ ಶಿವನಾಮವನ್ನು ಸ್ಮರಿಸುತ್ತಿರುವಾಗ ಇವರ ಕಣ್ಣುಗಳು ಆನಂದ ಜಲದಿಂದ ತುಂಬಿದವು. ಎಲ್ಲೆಲ್ಲಿಯೂ ಶಿವಲಿಂಗವೇ ತೋರಲಾರಂಭಿಸಿತು. ಆಗ ಭಕ್ತಿಯ ಉದ್ರೇಕದಿಂದ ಇವರು ಮೈಮರೆತರು.

ಶಿವನು ಈ ಮುರುಘದ ಮಹಾಭಕ್ತಿಯನ್ನು ನೋಡಿ ಸಂತೋಷದಿಂದ ಅಲ್ಲಿಯೇ ತನ್ನ ನಿಜರೂಪವನ್ನು ತೋರಿಸಿ ಅವರಿಗೆ ಗಣಪದವಿಯನ್ನು ಕೊಟ್ಟನು.

೪. ಚೊಕ್ಕನಯನಾರು

ಚೋಳದೇಶದಲ್ಲಿ ಶೋಭನಪುರವೆಂಬ ಒಂದು ಪಟ್ಟಣವಿತ್ತು. ಇದರ ಹತ್ತಿರ ಕಾವೇರಿ ನದಿಯು ಬಹು ರಮ್ಯವಾಗಿ ಹರಿಯುತ್ತಿತ್ತು. ಈ ನದಿಯ ಎರಡೂ ದಂಡೆಗಳಲ್ಲಿ ಅನೇಕ ಹೂದೋಟಗಳು ಬಹು ಮನೋಹರವಾಗಿದ್ದವು.

ಈ ಪಟ್ಟಣದಲ್ಲಿ ಚೊಕ್ಕನಯನಾರೆಂಬ ಒಬ್ಬ ಮಹಾಶಿವಭಕ್ತರಿದ್ದರು. ಇವರು ಗೋವುಗಳನ್ನು ಕಾಯುವ ಕಾಯಕ ಮಾಡುತ್ತಿದ್ದರು. ಕೊಳಲೂದುವುದರಲ್ಲಿ ಇವರಿಗೆ ಚಿಕ್ಕಂದನಿಂದಲೂ ಬಹು ಜಾಣ್ಮೆಯಿದ್ದಿತು.

ಒಂದು ದಿವಸ ಗೋವುಗಳನ್ನು ನದಿಯ ದಂಡೆಯಲ್ಲಿ ಮೇಯಿಸುತ್ತಿರುವಾಗ ಅಲ್ಲಿಯ ಒಂದು ಹೂದೋಟದಲ್ಲಿದ್ದ ಹೂವುಗಳಿಂದ ತುಂಬಿದ ಕಕ್ಕೆಯ ಮರವನ್ನು ನೋಡಿ ಶಿವಪೂಜೆಯ ಸ್ಮರಣೆಯಾಗಿ ಆ ಕಕ್ಕೆಯ ಮರದಲ್ಲಿಯೇ ದೃಷ್ಟಿಯಿಟ್ಟು ಶಿವನಾಮವನ್ನು ಬಗೆಬಗೆಯಿಂದ ಕೊಳಲಿನಲ್ಲಿ ಬಾರಿಸುತ್ತ ಸಂತೋಷಾತಿಶಯದಿಂದ ಶಿವಧ್ಯಾನದಲ್ಲಿಯೇ ಮಗ್ನರಾಗಿ ಮೈಮರೆತರು.

ಆಗ ಶಿವನು ಚೊಕ್ಕನಯನಾರರ ಈ ಮಹಾಭಕ್ತಿಗೆ ಮೆಚ್ಚಿ ತನ್ನ ನಿಜರೂಪವನ್ನು ಆ ಕಕ್ಕೆಯ ಮರದಲ್ಲಿಯೇ ತೋರಿಸಿ ಇವರಿಗೆ ಗಣಪದವಿಯನ್ನು ಕೊಟ್ಟನು.

೫. ತಿರುನೀಲಕಂಠರು

ಜೋಳ ರಾಜ್ಯದಲ್ಲಿ ಪೊನ್ನಾಂಬಲವೆಂಬ ಒಂದು ಪಟ್ಟಣವಿತ್ತು. ಅಲ್ಲಿ ತಿರುನೀಲಕಂಠರೆಂಬ ಒಬ್ಬ ಮಹಾಶಿವಭಕ್ತರಿದ್ದರು. ಇವರಿಗೆ ಸತ್ಯವತಿಯೆಂಬ ಒಬ್ಬ ಒಳ್ಳೆಯ ಸತಿಯಿದ್ದಳೂ.

ತಿರುನೀಲಕಂಠರು ಆ ಪಟ್ಟಣದ ಶಿವಾಲಯದಿಂದ ರಾತ್ರೆ ಬರುವಾಗ ಒಬ್ಬ ಶಿವಭಕ್ತಳಾದ ವೇಶ್ಯಾ ಸ್ತ್ರೀಯಳು ಕಾಣದೆ ಮೈಲಿಗೆಯ ನೀರನ್ನು ಈ ತಿರುನೀಲಕಂಠರ ಮೇಲೆ ಚಲ್ಲಿ ತನ್ನಿಂದ ತಪ್ಪಾಯಿತೆಂದು ಬಹುಪರಿಯಾಗಿ ಬೇಡಿಕೊಂಡು ಅವರನ್ನು ಸ್ನಾನ ಮಾಡಿಸಿ ಸುಗಂಧ ದ್ರವ್ಯಗಳನ್ನು ಲೇಪಿಸಿ ಕಳುಹಿಸಿಕೊಟ್ಟಳು.

ಇವರ ಪತ್ನಿಯು ತನ್ನ ಪತಿಯ ಈ ದಿನದ ರೀತಿಯೇ ಬೇರೆಯಾಗಿದೆಯೆಂದು ತಿಳಿದು ನೀವು ಪರಸ್ತ್ರೀಸಂಗಿಗಳಾದುದರಿಂದ ನನ್ನ ಮುಟ್ಟವಾರದಾಗಿ ಶಿವನಾಣೆಯನ್ನಿಟ್ಟಳು. ಪರಸ್ಪರರು ಮುಟ್ಟದೆ ೮೦ ವರುಷ ಕಾಲಕಳೆದರು.

ಒಂದು ದಿನ ಶಿವನು ಜಂಗಮ ರೂಪದಿಂದ ಬಂದು ಇವರಲ್ಲಿ ಒಂದು ಒಟ್ಟಲನ್ನಿಟ್ಟು ಮಾಯಮಾಡಿ ಸತಿಪತಿಗಳು ಪರಸ್ಪರ ಕೈ ಮುಟ್ಟಿ ತಾವು ಬಟ್ಟಲನ್ನು ಅಪಹರಿಸಿಲ್ಲವಾಗಿ ಆಣೆ ಮಾಡಲು ಒಪ್ಪದಿರಲು ಇವರ ವ್ರತನಿಷ್ಠೆಗೆ ಮೆಚ್ಚಿ ೮೦ ವರುಷಗಳ ಪೂರ್ವದ ಪ್ರಾಯವನ್ನಿತ್ತು. ಕೊನೆಗೆ ಇವರಿಗೆ ಗಣಪದವಿಯನ್ನಿತ್ತನು.

೬. ಕಾರಿಕಾಲಾಂಬೆ

ಚೋಳ ರಾಜ್ಯದಲ್ಲಿ ಕಾರಿಕಾಲವೆಂಬ ಒಂದು ಪಟ್ಟಣವಿತ್ತು. ಅಲ್ಲಿ ಕಾರಿಕಾಲಾಂಬೆ ಎಂಬ ಒಬ್ಬ ಮಹಾ ಶಿವಭಕ್ತಳು ಚಿತ್ರವಿದ್ಯೆಯಲ್ಲಿ ಬಲ್ಲಿದವಳಾಗಿದ್ದಳು.

ಇವಳು ಶಿವಭಕ್ತಿಯ ಬಲದಿಂದ ಮಹಿಮಾಶಾಲಿಯಾಗಿದ್ದಳು. ತನ್ನ ಪತಿಯು ಕೊಟ್ಟಿದ್ದ ಎರಡು ಮಾವಿನ ಹಣ್ಣುಗಳನ್ನು ಜಂಗಮರೂಪದಲ್ಲಿ ಬಂದಿದ್ದ ಶಿವನಿಗೆ ಕೊಟ್ಟುದನ್ನು ಆ ಪತಿಯು ನೋಡಿ ಕೋಪದಿಂದ ನಾನು ಕೊಟ್ಟ ಮಾವಿನ ಹಣ್ಣುಗಳನ್ನು ಕೊಡೆಂದು ಕೇಳಲು ಪುನಃ ಅವುಗಳನ್ನೇ ಕೊಟ್ಟಳು.

ಪತಿಯು ಇವಳು ಮಹಾಮಹಿಮಳೆಂದು ಇವಳ ಪಾದಕ್ಕೆರಗಿ ಬೇಡಿಕೊಂಡನು. ಆಗ ಈ ಮಹಿಮಳು ಆಸ್ಥಳವನ್ನು ಬಿಟ್ಟು ಶಿವಮಹಿಮೆಯನ್ನು ಸಾರುತ್ತ ತಿರುವಾಲಂಗಾಪುರಕ್ಕೆ ಬಂದು ಅಲ್ಲಿಯ ಶಿವಾಲಯದಲ್ಲಿ ಬಹು ಭಕ್ತಿಯಿಂದ ಶಿವಪೂಜಾಸಕ್ತಳಾಗಿರಲು ಶಿವನು ಮೆಚ್ಚಿ ಇವಳಿಗೆ ಕೈಲಾಸಕ್ಕೆ ಬರಲು ಅಪ್ಪಣೆ ಮಾಡಿದನು. ಆಗ ಆ ಪವಿತ್ರ ಮಾರ್ಗದಲ್ಲಿ ಕಾಲುಗಳಿಂದ ನಡೆಯಬಾರದೆಂದು ತಲೆಯಿಂದಲೇ ನಡೆಯುತ್ತ ಕೈಲಾಸಕ್ಕೆ ಹೋದಳು.

೭. ನರಸಿಂಗಮೊನೆಯರು

ಚೋಳ ದೇಶದಲ್ಲಿ ತಿರುವಾಲೂರು ಎಂಬ ಒಂದು ಪಟ್ಟಣವಿದ್ದಿತು. ಅಲ್ಲಿ ನರಸಿಂಗ ಮೊನೆಯಾರೆಂಬ ಒಬ್ಬ ರಾಜನು ರಾಜ್ಯವಾಳುತ್ತಿದ್ದನು. ಪ್ರತಿನಿತ್ಯ ಜಂಗಮದಾಸೋಹಕ್ಕೆ ಹೇರಳವಾಗಿ ಹಣವನ್ನು ವೆಚ್ಚಮಾಡುತ್ತಿದ್ದನು.

ಜಂಗಮರು ಅಪೇಕ್ಷಿಸಿದ್ದನ್ನು ಅವರಿಗಿತ್ತು ಸಂತೋಷಪಡಿಸುತ್ತಿದ್ದನು. ಈ ರಾಜನ ತ್ಯಾಗ ಗುಣವನ್ನು ಪರೀಕ್ಷಿಸುವುದಕ್ಕಾಗಿ ಶಿವನು ಜಂಗಮರೂಪದಿಂದ ಬಂದು ನಮ್ಮ ಹೊನ್ನಿನ ವ್ರತವನ್ನು ಪೂರೈಸಿಕೊಡೆಂದು ಹೇಳಿದನು.

- ಪ್ರಭುವೇ, ತಮ್ಮ ಹೊನ್ನಿನ ವ್ರತವೇನೆಂದು ರಾಜನು ಕೇಳಲು ಆ ಜಂಗಮರು ನಮಗೆ ಸಾಕಾಗುವಷ್ಟು ಬಂಗಾರವನ್ನು ಒಬ್ಬನೇ ಒಂದೇ ಕಾಲದಲ್ಲಿ ಕೊಡಬೇಕು.

ಆಗ ರಾಜನೂ ತನ್ನಲ್ಲಿರತಕ್ಕ ಬಂಗಾರವನ್ನೆಲ್ಲಾ ತರಿಸಿ ತಮಗೆ ಬೇಕಾದಷ್ಟನ್ನು ತೆಗೆದುಕೊಳ್ಳಬಹುದೆಂದು ಬೇಡಿಕೊಂಡನು. ರಾಜನ ಈ ತ್ಯಾಗವನ್ನು ಶಿವನು ನೋಡಿ ಸಂತೋಷಪಟ್ಟು ಆತನಿಗೆ ಗಣಪದವಿಯನ್ನು ಕೊಟ್ಟನು.

೮. ಕಡವೂರಕಾರಿಗಳು

ದಕ್ಷಿಣ ದೇಶದಲ್ಲಿ ಕಡವೂರೆಂಬ ಒಂದು ಗ್ರಾಮವಿದ್ದಿತು. ಅಲ್ಲಿ ಕಡವೂರ ಕಾರಿಗಳೆಂಬ ಒಬ್ಬ ಮಹಾ ಶಿವಭಕ್ತರು ಜನಗಳನ್ನು ನಗಿಸುವುದರಲ್ಲಿ ಬಹು ಬಲ್ಲಿದರಾಗಿದ್ದರು.

ನಾನಾ ರೀತಿಯ ವಿನೋದದ ಒಳ್ಳೆಯ ಮಾತುಗಳನ್ನಾಡಿ ಜನರನ್ನು ಸಂತೋಷಗೊಳಿಸಿ ಆ ಸಂತೋಷವನ್ನು ಶಿವನಿಗರ್ಪಿಸುವುದೇ ಇವರ ಕಾಯಕವಾಗಿತ್ತು.

ಇವರ ಮಾತಿಗೆ ನಗದಿದ್ದವರೇ ಇದ್ದಿಲ್ಲ. ಇವರು ಬಂದೊಡನೆ ಜನರಿಗೆ ಯಾವ ಕೋಪತಾಪಗಳಿದ್ದರೂ ಅವು ನಿವಾರಣೆಯಾಗಿ ಸಂತೋಷವೇ ಉಕ್ಕೇರಿ ಬರುತ್ತಿದ್ದಿತು. ಇವರ ಜಾಣ್ಮೆಯನ್ನು ಪರೀಕ್ಷಿಸಲು ಶಿವನು ಪಾರ್ವತಿಯೊಡನೆ ಮನುಷ್ಯರೂಪದಿಂದ ಈ ಕಡವೂರ ಕಾರಿಗಳ ಹತ್ತಿರಬಂದನು ಇವರು ಎಷ್ಟು ಚಾತುರ್ಯದ ಮಾತುಗಳನ್ನಾಡಿದರೂ ಇಬ್ಬರೂ ನಗಲಿಲ್ಲ. ಆಗ ಇವರು ಮನುಷ್ಯ ರೂಪದಲ್ಲಿ ಶಿವನೇ ಪರೀಕ್ಷೆಗಾಗಿ ಬಂದಿದ್ದಾನೆಂದು ತಿಳಿದು ಈ ಹೆಣ್ಣು ಮಗಳು ನಿಮ್ಮ ತಂಗಿಯೋ ಅಥವಾ ಅಕ್ಕನೋ ಎಂದು ಕೇಳಲು ಶಿವನು ನಕ್ಕು ಇವರ ಜಾಣ್ಮೆಗೆ ಮೆಚ್ಚಿ ಗಣಪದವಿಯನ್ನಿತ್ತನು.

೯. ತಿರುನೀಲಕಂಠಪಾಣರು

ಚೇರ ದೇಶದಲ್ಲಿ ತಿರುವಂಜಕಳವೆಂಬ ಒಂದು ಪಟ್ಟಣವಿದ್ದಿತು. ಅಲ್ಲಿ ತಿರುನೀಲಕಂಠಪಾಣರೆಂಬ ಮಹಾ ಶಿವಭಕ್ತರು ಸಂಗೀರಶಾಸ್ತ್ರದಲ್ಲಿ ಬಹು ಪ್ರವೀಣರಾಗಿದ್ದರು, ಇವರು ವೀಣೆಯನ್ನು ಬಾರಿಸುತ್ತ ಶಿವನ ಮಹಿಮೆಯನ್ನು ಬಹು ಮನೋಹರವಾಗಿ ಹಾಡುತ್ತಿದ್ದರು.

ಇವರು ಆ ಪಟ್ಟಣದ ಶಿವಾಲಯದಲ್ಲಿ ಬಹು ಮಂಜುಳವಾದ ಗಾನದಿಂದ ಶಿವಸ್ತುತಿ ಮಾಡುತ್ತಿದ್ದುದನ್ನು ಅಲ್ಲಿಯ ಚಾರಮರಾಜನು ಕೇಳಿ ಬಹು ಸಂತೋಷಪಟ್ಟು ಇವರಿಗೆ ಒಂದು ರತ್ನಪೀಠವನ್ನು ಅರ್ಪಿಸಿದನು. ಒಂದು ದಿವಸ ತಿರುನೀಲಕಂಠಪಾಣರು ಶಿವಲಿಂಗದ ಮುಂದೆ ಕುಳಿತು ಆನಂದಾತಿಶಯದಿಂದಲೂ ಭಕ್ತಿ ವಿಶೇಷದಿಂದಲೂ ಶಿವನನ್ನು ಪರಿಪರಿಯಿಂದ ಸ್ತುತಿಸಿ ಶಿವಧ್ಯಾನದಲ್ಲಿಯೇ ಮಗ್ನರಾಗಲು ಶಿವನು ಇವರ ಭಕ್ತಿಗೂ ಸಂಗೀತಕ್ಕೂ ಬಹು ಸಂತೋಷಪಟ್ಟು ತನ್ನ ನಿಜರೂಪವನ್ನು ತೋರಿಸಿ ಗಣಪದವಿಯನ್ನು ದಯಪಾಲಿಸಿದನು.

೧೦. ಚಿರುಪುಲಿಯಾಂಡರು

ಚೋಳ ದೇಶದಲ್ಲಿ ಚಿರುಪುತ್ತೂರೆಂಬ ಒಂದು ಪಟ್ಟಣವಿದ್ದಿತು. ಅಲ್ಲಿ ಚಿರುಪುಲಿಯಾಂಡರೆಂಬ ಮಹಾ ಶಿವಭಕ್ತರು ಜಂಗಮಪ್ರಾಣಿಗಳಾಗಿದ್ದರು. ಪ್ರತಿನಿತ್ಯ ಅನೇಕ ಜಂಗಮರಿಗೆ ತೃಪ್ತಿ ಪಡಿಸದೆ ತಾವು ಅನ್ನಾಹಾರಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಇವರ ಈ ಜಂಗಮ ದಾಸೋಹದ ಕೀರ್ತಿಯು ಎಲ್ಲ ಕಡೆಗೂ ಹಬ್ಬಿತು. ಅನೇಕ ಕಡೆಗಳಿಂದ ಜಂಗಮರು ತಂಡುತಂಡಾಗಿ ಬಂದು ತಮ್ಮ ಇಷ್ಟಾನುಸಾರವಾದ ಪ್ರಸಾದವನ್ನು ಸ್ವೀಕರಿಸಿ ಸಂತೋಷಪಡುತ್ತಿದ್ದರು. ಶಿವನು ಈ ಭಕ್ತನ ಪರೀಕ್ಷಿಸಬೇಕೆಂದು ಒಬ್ಬ ಜಂಗಮನೂ ದೊರೆಯದವಂತೆ ಮಾಡಿದನು. ಆಗ ಚಿರಪುಲಿಯಾಂಡರು ಅನ್ನಾಹಾರಗಳನ್ನು ಬಿಟ್ಟು ಜಂಗಮರನ್ನು ಹುಡುಕಲಾರಂಭಿಸಿದರು. ಈ ಪ್ರಕಾರ ಇವರು ೩೮ ದಿಸಗಳವರೆಗೆ ಉಪವಾಸವಾಗಿರಲು ಶಿವನು ಇವರ ಜಂಗಮ ವ್ರತಕ್ಕೆ ಮೆಚ್ಚಿ ಕೊನೆಗೆ ತಾನೇ ಜಂಗಮನಾಗಿ ಬಂದು ಇವರ ವ್ರತವನ್ನು ಪೂರೈಸಿಕೊಟ್ಟು ಇವರಿಗೆ ಗಣಪದವಿಯನ್ನಿತ್ತನು.

೧೧. ಸೋಮಾಸಿಮಾರರು

ದಕ್ಷಿಣದೇಶದಲ್ಲಿ ತಿರುವರಂಬರವೆಂಬ ಒಂದು ಗ್ರಾಮವಿದ್ದಿತು. ಅಲ್ಲಿ ಸೋಮಾಸಿಮಾರರೆಂಬ ಒಬ್ಬ ಶೈವ ಬ್ರಾಹ್ಮಣರು ಮಹಾ ಶಿವಭಕ್ತರಿದ್ದರು. ಇವರು ತಮ್ಮ ಯಾಗಕ್ಕೆ ಶಿವನನ್ನು ಕರೆಯಿಸಬೇಕೆಂದಪೇಕ್ಷಿಸಿ ಶಿವನನ್ನು ಒಲಿಸಿಕೊಂಡಿದ್ದ ಸೌಂದರನಂಬೆಣ್ಣನೆಂಬ ಮಹಾ ಭಕ್ತನ ಕೃಪೆಗೆ ಪಾತ್ರರಾಗಬೇಕೆಂದು ಆತನ ಶಿವಪೂಜೆಗೆ ಪ್ರತಿನಿತ್ಯ ಒಳ್ಳೆಯ ಪತ್ರೆ ಪುಷ್ಪಗಳನ್ನು ಕೊಟ್ಟು ಬರಹತ್ತಿದರು.

ಈ ಪ್ರಕಾರ ೩ ವರುಷ ಪತ್ರೆಪುಷ್ಪಗಳನ್ನು ತಪ್ಪದೆ ಕೊಟ್ಟ ನಂತರ ಒಂದು ದಿನ ಸೌಂದರನಂಬೆಣ್ಣನು ಈ ಭಕ್ತನ ಅಪೇಕ್ಷೆಯೇನೆಂದು ಕೇಳಲು ಶಿವನನ್ನು ತನ್ನ ಯಾಗಕ್ಕೆ ಕಳುಹಿಸಬೇಕಾಗಿ ಬೇಡಿಕೊಂಡನು.

ನಂಬೆಣ್ಣನ ಇಷ್ಟದಂತೆ ಶಿವನು ಯಾಗಕ್ಕೆ ಹೋಗಲು ಒಪ್ಪಿ ಒಬ್ಬ ಹೊಲೆಯನ ವೇಷದಿಂದ ಬರಲು ಯಾಗಕ್ಕೆ ಬಂದ ಬ್ರಾಹ್ಮಣರೆಲ್ಲರೂ ಯಾಗಭ್ರಷ್ಟವಾಯಿತೆಂದು ಹೇಳಿ ಹೊರಟು ಹೋದರು.

ಸೋಮಾಸಿಮಾರರು ಈತನು ಹೊಲೆಯನಲ್ಲ; ಶಿವನೇ ಈ ರೂಪದಲ್ಲಿ ಬಂದಿದ್ದಾನೆಂದು ಪೂಜಿಸಲು ಶಿವನು ಈತನ ಭಕ್ತಿಗೆ ಮೆಚ್ಚಿ ಗಣ ಪದವಿಯನ್ನಿತ್ತನು.

೧೨. ಅಚ್ಯುತರು

ಚೋಳ ದೇಶದಲ್ಲಿ ತಿರುಚೆನ್ನಾಡೆಂಬ ಒಂದು ಪಟ್ಟಣವಿದ್ದಿತು. ಅಲ್ಲಿ ಅಚ್ಯುತರೆಂಬ ಒಬ್ಬ ಮಹಾ ಶಿವಭಕ್ತರು ಜೂಜಾಟದಲ್ಲಿ ಮಹಾಬಲ್ಲಿದರಾಗಿದ್ದರು. ಇವರು ಪ್ರತಿನಿತ್ಯ ಜೂಜಾಡಿ ಅದರಲ್ಲಿ ಬಂದ ದ್ರವ್ಯವನ್ನೆಲ್ಲಾ ಗುರುಲಿಂಗ ಜಂಗಮ ಸೇವೆಗೆ ಸಮರ್ಪಿಸಿ ಬಿಡುತ್ತಿದ್ದರು.

ಅನೇಕ ದಿನಗಳ ವರೆಗೆ ಇದೇ ಪ್ರಕಾರ ಜೂಜಾಡಿ ಬಂದ ಹಣದಿಂದ ಗುರುಲಿಂಗ ಜಂಗಮ ಸೇವೆಯನ್ನು ಮಾಡಿದರು.

ಈ ಪ್ರಕಾರ ಜೂಜಾಟದಲ್ಲಿ ಅಪಾರವಾದ ದ್ರವ್ಯವನ್ನು ಸಂಪಾದಿಸಿ ಅದನ್ನೆಲ್ಲಾ ಪರಹಿತಾರ್ಥವಾಗಿಯೇ ಸವಿಸಿ ತಾವು ನಿರಾಶರಾಗಿ ಶಿವಧ್ಯಾನದಲ್ಲಿರುತ್ತಿದ್ದರು. ಶಿವನು ಇವರ ಜಾಣ್ಮೆಯನ್ನು ಪರೀಕ್ಷಿಸಲು ತಾನೊಬ್ಬ ಧನಿಕನ ವೇಷದಿಂದ ಬಂದು ಅಚ್ಯುತರ ಸಂಗಡ ಜೂಜಾಡಲಾರಂಭಿಸಿದನು. ಎಷ್ಟು ಜಾಣ್ಮೆಯಿಂದ ಆಡಿದರೂ ಕೊನೆಗೆ ಅಚ್ಯುತರೇ ಗೆದ್ದುದನ್ನು ನೋಡಿ ಶಿವನು ಮೆಚ್ಚಿ ಅವರಿಗೆ ತನ್ನ ನಿಜರೂಪವನ್ನು ತೋರಿ ಕೊನೆಗೆ ಗಣಪದವಿಯನ್ನು ದಯಪಾಲಿಸಿದನು.

೧೩. ಮೊನೆಯಾಂಡರು

ಚೋಳದೇಶದಲ್ಲಿ ಮೊನೆಯಾಂಡರೆಂಬ ಒಬ್ಬ ಮಹಾ ಶಿವಭಕ್ತರು ಯುದ್ಧವಿದ್ಯೆಯಲ್ಲಿ ಬಹು ಪ್ರಸಿದ್ಧರಾಗಿದ್ದರು. ಶಿವಭಕ್ತರಲ್ಲದವರ ಸಂಗಡ ಯುದ್ಧ ಮಾಡಿ ಅವರನ್ನು ಸೋಲಿಸಿ ಆ ತಮ್ಮ ಜಯದಿಂದ ಶಿವಮತವನ್ನು ಪ್ರಸಾರಗೊಳಿಸುತ್ತಿದ್ದರು.

ಇವರು ತಮ್ಮ ದಿವ್ಯ ಪರಾಕ್ರಮದಿಂದ ಅನೇಕ ಶಿವದ್ರೋಹಿಗಳನ್ನು ಸಂಹರಿಸಿ ಶಿವಮತವನ್ನು ಪ್ರಸಾರಗೊಳಿಸಿ ಬಹು ಕೀರ್ತಿಯನ್ನು ಹೊಂದಿದ್ದರು. ಇವರು ತಮ್ಮ ಕಾಯಕಕ್ಕಾಗಿ ಪಗಲ್ಚೋಳರಾಜನಲ್ಲಿರಲು ಒಂದು ದಿನ ಮಹಾಯುದ್ಧ ಪ್ರಸಂಗ ಬಂದಿತು. ಈ ರಾಜನ ಮಾಂಡಲಿಕನಾದ ಪಾಂಡ್ಯರಾಜನು ಕಪ್ಪವನ್ನು ಕೊಡದೆ ಯುದ್ಧಕ್ಕೆ ಬರಲು ಮೊನೆಯಾಂಡರು ರಣಕ್ಷೇತ್ರದಲ್ಲಿ ಬಹು ಪರಾಕ್ರಮದಿಂದ ಯುದ್ಧಮಾಡಿ ವೈರಿಗಳ ಸಂಹಾರ ಮಾಡಿದುದನ್ನು ಶಿವನು ನೋಡಿ ಸಂತೋಷ ಪಟ್ಟು ಈ ಮಹಾಶೂರನಾದ ಶಿವಭಕ್ತನಿಗೆ ತನ್ನ ನಿಜರೂಪವನ್ನು ತೋರಿಸಿ ಕಡೆಗೆ ಗಣಪದವಿಯನ್ನು ಕೊಟ್ಟನು.

೧೪. ಮಾನ ಕಂಜರರು

ಚೋಳದೇಶದಲ್ಲಿ ಕುಂಜಪುರವೆಂಬ ಒಂದು ಪಟ್ಟಣವಿದ್ದಿತು ಅಲ್ಲಿ ಮಾನಕಂಜರನೆಂಬ ರಾಜನು ರಾಜ್ಯವಾಳುತ್ತಿದ್ದನು. ಈತನು ಮಹಾ ಶಿವಭಕ್ತನಾಗಿದ್ದನು. ಪ್ರತಿನಿತ್ಯ ಜಂಗಮರು

ಅಪೇಕ್ಷಿಸಿದುದನ್ನು ಅರ್ಪಿಸಿ ಜಂಗಮ ಪ್ರಾಣಿಯಾಗಿ ಶೋಭಿಸುತ್ತಿದ್ದನು. ಈತನಿಗೆ ಗುಣವತಿಯೆಂಬ ಯೋಗ್ಯ ಪತ್ನಿಯಿದ್ದಳು. ಶಿವನಾಜ್ಞೆಯಿಂದ ಒಬ್ಬ ಸುಶೀಲೆಯಾದ ಮಗಳು ಜನಿಸಿದಳು. ಅವಳಿಗೆ ಸೋಮಪ್ರಭೆಯೆಂಬ ಹೆಸರನ್ನಿಟ್ಟರು.

ಈ ಮಗಳ ವಿವಾಹ ಕಾಲದಲ್ಲಿ ಶಿವನು ಈತನ ಜಂಗಮ ಪ್ರೇಮವನ್ನು ಪರೀಕ್ಷಿಸಬೇಕೆಂದು ಲಗ್ನ ಮಂಪಟಕ್ಕೆ ಜಂಗಮವೇಷದಿಂದ ಬಂದು ಮನಕಂಜರನನ್ನು ನನ್ನ ಇಷ್ಟದಂತೆ ನಡೆಯುವಿಯಾ ಎಂದು ಕೇಳಿದನು. ರಾಜನು ತಮಗೆ ಬೇಕಾದುದನ್ನು ಕೊಟ್ಟು ತಮ್ಮ ಕೃಪೆಗೆ ಪಾತ್ರನಾಗುವೆನೆಂದು ಬಿನ್ನಯಿಸಿಕೊಂಡಕೂಡಲೆ ನಿನ್ನ ಮಗಳ ಮುಡಿಯನ್ನು ಕೊಯಿದುಕೊಡೆಂದು ಕೇಳಿದನು ಆಗ ರಾಜನು ಮನಸ್ಸಿನಲ್ಲಿ ಸ್ವಲ್ಪವಾದರೂ ಚಿಂತಿಸದೆ ಆ ತನ್ನ ಮಗಳ ಮುಡಿಯನ್ನು ಕೊಯಿದುಕೊಡಲು ಶಿವನು ಆತನ ಭಕ್ತಿಗೆ ಮೆಚ್ಚಿ ನಿಜರೂಪವನ್ನು ತೋರಿ ಆತನಿಗೆ ಗಣಪದವಿಯನ್ನು ದಯಪಾಲಿಸಿದನು.

೧೫. ಪಗಲ್ಚೋಳರು

ಚೋಳ ದೇಶದಲ್ಲಿ ಕರಿಯೂರೆಂಬ ಪಟ್ಟಣವಿದ್ದಿತು. ಅಲ್ಲಿ ಪಗಲ್ಚೋಳನೆಂಬ ಮಹಾಶಿವಭಕ್ತನಾದ ರಾಜನು ರಾಜ್ಯವಾಳುತ್ತಿದ್ದನು. ಈತನಿಗೆ ಸೋಮಪ್ರಭೆಯೆಂಬ ಪತ್ನಿಯಿದ್ದಳು. ಮಹಾ ಶಿವಭಕ್ತನಾದ ಮಾನಕಂಜರ ರಾಜನೇ ಈತನ ಮಾವನಾಗಿದ್ದನು.

ಈ ರಾಜನು ಶಿವಭಕ್ತರನ್ನು ಸಾಕ್ಷಾತ್ ಶಿವನಂತೆಯೇ ಕಂಡು ತನ್ನ ಮಾವನಂತೆಯೇ ಶಿವಭಕ್ತಿ ಪರಾಯಣನಾಗಿದ್ದನು. ಈತನ ಮಾಂಡಲಿಕನಾದ ಪಾಂಡ್ಯರಾಜನು ಕಪ್ಪಕೊಡದೆ ದಂಡೆತ್ತಿ ಬಂದಾಗ ಮೊನೆಯಾಂಡರೆಂಬ ಮಹಾ ಪರಾಕ್ರಮಿಗಳಾದ ಶಿವಭಕ್ತರೊಂದಿಗೆ ವೈರಿಯನ್ನು ಜಯಿಸಿ ವೈರಿಗಳ ತಲೆಯನ್ನು ತಂದವರಿಗೆ ತಲೆಯೊಂದಕ್ಕೆ ಹೊನ್ನಿನ ವರಹವೊಂದನ್ನು ಕೊಡುವುದಾಗಿ ಸಾರಿದನು. ಹಣದಾಶೆಗೆ. ಒಬ್ಬ ಶಿವಭಕ್ತನ ಶಿರಸ್ಸನ್ನು ಒಬ್ಬನು ತಂದೊಪ್ಪಿಸಲು ಅದನ್ನು ಪಗಲ್ಚೋಳನು ನೋಡಿ ನನ್ನಿಂದ ಈ ಶಿವಭಕ್ತನ ಸಂಹಾರದ ಪಾಪ ಸಂಭವಿಸಿತಲ್ಲಾ! ಎಂದು ಶೋಕಿಸಿ ಇದಕ್ಕೆ ತನ್ನ ಶಿರಸ್ಸನ್ನು ಕತ್ತರಿಸಿಕೊಳ್ಳುವುದೇ ಪ್ರಾಯಶ್ಚಿತ್ತವೆಂದು ತಿಳಿದು ಶಿರಸ್ಸನ್ನು ಕತ್ತರಿಸಿಕೊಳ್ಳಲು ಶಿವನು ಈತನ ಭಕ್ತಿಗೆ ಮೆಚ್ಚಿ ಆ ಶಿವಭಕ್ತನನ್ನೂ ಈ ರಾಜನನ್ನೂ ಬದುಕಿಸಿ ಅವರಿಗೆ ಗಣಪದವಿಯನ್ನಿತ್ತನು.

೧೬. ಕಲಿಕಾಮದೇವರು

ಚೋಳದೇಶದಲ್ಲಿ ತಿರುನಲ್ಲೂರೆಂಬ ಒಂದು ಪಟ್ಟಣವಿದ್ದಿತು. ಅಲ್ಲಿ ಕಲಿಕಾಮದೇವನೆಂಬ ಗಣಾಚಾರ ಶ್ರೇಷ್ಠನಾದ ರಾಜನು ರಾಜ್ಯವಾಳುತ್ತಿದ್ದನು. ಶಿವದ್ರೋಹಿಗಳ ಸಂಹಾರವೇ ಈತನ ಮುಖ್ಯ ಕಾಯಕವಾಗಿತ್ತು. ಆದಕಾರಣ ಸೌಂದರ ನಂಬೆಣ್ಣನೆಂಬ ರಾಜನು ಭಕ್ತಿಯ ಬಲದಿಂದ ಶಿವನನ್ನು ಸೇವಕನನ್ನಾಗಿ ಮಾಡಿಕೊಂಡ ಸಂಗತಿಯನ್ನು ಕೇಳಿ ಆತನನ್ನು ಸಂಹರಿಸಬೇಕೆಂದು ನಂಬೆಣ್ಣನ ಪಟ್ಟಣದಿಂದ ಬಂದ ಒಬ್ಬ ಚರನನ್ನು ಸಂತಹರಿಸಿದನು.

ಆತ ನಂಬೆಣ್ಣನಿಗೂ ಕಲಿಕಾಮದೇವನಿಗೂ ಭಯಂಕರ ಯುದ್ಧವಾಗಿ ನಂಬೆಣ್ಣನು ಸೋತು ಓಡಿಹೋದನು. ಶಿವನು ಕಲಿಕಾಮನ ನಿಷ್ಠೆಯನ್ನು ನಂಬೆಣ್ಣನಿಗೆ ತೋರಿಸಲು ರೂಪಾಂತರದಿಂದ ಇಬ್ಬರೂ ಕಲಿಕಾಮನಲ್ಲಿಗೆ ಬಂದು ಆತನಿಗೆ ಹೃದಯಬೇನೆಯನ್ನುಂಟುಮಾಡಿ ಆತನ ಆತಿಥ್ಯದಲ್ಲಿರುವಾಗ ಶಿವನು ಇಕೋ ಈತನೇ ನಂಬೆಣ್ಣನೆಂದು ಹೇಳಲು ಸಹಿಸಲಸಾಧ್ಯವಾದ ಆ ವೇದನೆಯಲ್ಲಿ ಕೂಡಾ ಕೋಪಾಟೋಪದಿಂದ ನಂಬೆಣ್ಣನನ್ನು ಕೊಲ್ಲಲು ಹೋಗಲು ಶಿವನು ಆತನ ವೀರವ್ರತಕ್ಕೆ ಮೆಚ್ಚಿ ನಿಜರೂಪ ತೋರಿ ನಾನು ಲೋಕದೊಡೆಯನಾಗಿದ್ದರೂ ಭಕ್ತರು ನನಗೊಡೆಯರೆಂಬುದನ್ನು ಆತನಿಗೆ ತಿಳಿಸಿ ಗಣಪದವಿಯನ್ನಿತ್ತನು.

೧೭. ತಿರುಮೂಲದೇವರು

ದಕ್ಷಿಣದೇಶದಲ್ಲಿ ತಿರುಮೂಲದೇವರೆಂಬ ಒಬ್ಬ ಸಿದ್ಧಯೋಗಿಗಳು ಸಂಚರಿಸುತ್ತಿದ್ದರು. ಒಂದು ದಿವಸ ಒಬ್ಬ ಗೋಪಾಲನು ಅಡವಿಯಲ್ಲಿ ಆಕಸ್ಮಾತ್ತಾಗಿ ಪ್ರಾಣಬಿಟ್ಟಿದ್ದನು. ಆತನ ಸುಂದರ ಕಾಯವನ್ನೂ ಪವಿತ್ರ ಕಾಯಕವನ್ನೂ ಈ ಸಿದ್ದರು ನೋಡಿ ಪರಕಾಯ ಪ್ರವೇಶ ವಿದ್ಯೆಯಿಂದ ತಮ್ಮ ದೇಹವನ್ನು ಬೇರೆಕಡೆ ಬಚ್ಚಿಟ್ಟು ಆ ಗೋಪಾಲನ ಶವದಲ್ಲಿ ತಾವು ಪ್ರವೇಶಿಸಿ ಗೋವುಗಳನ್ನು ಮೇಯಿಸಲಾರಂಭಿಸಿದರು.

ಸಾಯಂಕಾಲಕ್ಕೆ ಗೋವುಗಳು ತಮ್ಮ ತಮ್ಮ ಮನೆಗೆ ಹೋದವು. ಅನಂತರ ಇವರು ತಮ್ಮ ದೇಹವನ್ನು ಹುಡುಕಲು ಅದು ದೊರೆಯದಿರಲು ಬಹು ಪಶ್ಚಾತ್ತಾಪಪಟ್ಟು ಗೋಕ್ಷಿರಾಭಿಷೇಕದಿಂದ ಶಿವನನ್ನು ಮೆಚ್ಚಿಸಬೇಕೆಂದು ಯೋಚಿಸಿ ಹಸುವಿನ ಹಾಲಿನಿಂದ ನಿತ್ಯದಲ್ಲಿ ಯಥೇಚ್ಛವಾಗಿ ಲಿಂಗಾಭಿಷೇಕವನ್ನು ಮಾಡಲಾರಂಭಿಸಿದರು. ಇವರು ಬಹು ಭಕ್ತಿಯಿಂದ ಮಾಡುತ್ತಿರುವ ಈ ಹಾಲಿನ ಅಭಿಷೇಕಕ್ಕೆ ಪಾರ್ವತಿಯು ಮೆಚ್ಚಿ ತಾನೇ ಒಂದು ಹಸುವಾಗಿ ಬಂದು ಇವರ ಮನದಣಿಯುವಂತೆ ಲಿಂಗದ ಮೇಲೆ ಹಾಲನ್ನು ಕರೆಯಲು ತಿರುಮೂಲದೇವರಿಗೆ ಅತ್ಯಾನಂದವಾಯಿತು. ಶಿವನು ಇವರ ಭಕ್ತಿಗೆ ಮೆಚ್ಚಿ ಗಣಪದವಿಯನ್ನು ಕೊಟ್ಟನು.

೧೮. ಪಗಲ್ತೊಣೆಯಾಂಡರು

ಚೋಳದೇಶದಲ್ಲಿ ತಿರುವಂಜಲೂರೆಂಬ ಒಂದು ಪಟ್ಟಣವಿದ್ದಿತು. ಅಲ್ಲಿ ಪಗಲ್ತೋಣೆ ಯಾಂಡರೆಂಬ ಒಬ್ಬ ಶಿವಾಚಾರಶೀಲರು ಪ್ರತಿನಿತ್ಯ ಹೊಸ ಒರತಿಯ ನೀರಿನಿಂದಲೇ ಶಿವಲಿಂಗಾಭಿಷೇಕವನ್ನು ಮಾಡುವ ವ್ರತವನ್ನು ಕೈಕೊಂಡು ಅನೇಕ ವರುಷಗಳವರೆಗೆ ತಪ್ಪದೆ ಈ ವ್ರತವನ್ನಾಚರಿಸಿದರು.

ಶಿವನು ಇವರ ವ್ರತ ನಿಷ್ಠೆಯನ್ನು ಪರೀಕ್ಷಿಸಬೇಕೆಂದು ಆ ತಿರುವಂಜಲೂರಲ್ಲಿ ಒರತಿಯನ್ನು ತೆಗೆದರು ನೀರು ಬರದಂತೆ ಮಾಡಿದನು. ಪಗಲ್ತೊಣೆಯಾಂಡರು ತಮ್ಮಲ್ಲಿರುವ ಧನವನ್ನೆಲ್ಲಾ ವೆಚ್ಚ ಮಾಡಿ ಅನೇಕ ಕಡೆ ಒರತಿಗಳನ್ನು ತೆರೆಯಿಸಿದರು. ಎಲ್ಲಿಯೂ ನೀರು ಬಾರದಿದ್ದುದರಿಂದ

ಬಹುದುಃಖಿತರಾಗಿ ಶಿವಪೂಜೆ ಶಿವಪ್ರಸಾದವಿಲ್ಲದೆ ಅನೇಕ ದಿವಸಗಳವರೆಗೆ ಶಿವಧ್ಯಾನದಲ್ಲಿಯೇ ಕಾಲಕಳೆದರು. ಕೊನೆಗೆ ಈ ಪ್ರಕಾರ ವ್ರತಾಚರಣೆಯನ್ನಾಚರಿಸದೆ ಬದುಕುವುದು ಸರಿಯಲ್ಲವೆಂದು ಯೋಚಿಸಿ, ಅಲ್ಲಿಯ ಶಿವಾಲಯಕ್ಕೆ ಹೋಗಿ ಆ ಶಿವಲಿಂಗಕ್ಕೆ ತಮ್ಮ ಶಿರಸ್ಸನ್ನು ಅಪ್ಪಳಿಸಿ ಪ್ರಾಣತ್ಯಾಗ ಮಾಡಿಕೊಳ್ಳಲು ಶಿವನು ಅವರ ಭಕ್ತಿಗೆ ಮೆಚ್ಚಿ ಅಲ್ಲಿಯೇ ತನ್ನ ನಿಜರೂಪ ತೋರಿಸಿ ಇವರಿಗೆ ಗಣಪದವಿಯನ್ನಿತ್ತನು.

೧೯. ಅರಿವಾಳ್ತಾಂಡರು

ಚೋಳದೇಸದ ತಿರುನಲ್ಲೂರು ಪಟ್ಟಣದಿಂದ ೫ ಮೈಲುಗಳ ದೂರದಲ್ಲಿ ಕಣ್ಣುಮಂಗಲವೆಂಬ ಒಂದು ಗ್ರಾಮವಿದ್ದಿತು. ಅಲ್ಲಿ ಅರಿವಾಳ್ತಾಂಡರೆಂಬ ಮಹಾ ಶಿವಭಕ್ತರಿದ್ದರು. ಇವರು ಶೂದ್ರ ಕುಲದಲ್ಲಿ ಹುಟ್ಟಿದ್ದರು. ಬತ್ತದ ಗದ್ದೆಯಲ್ಲಿ ಕೂಲಿಯ ಕೆಲಸಕ್ಕೆ ಹೋಗಿ ತಮಗೆ ಕೂಲಿಗಾಗಿ ಬರತಕ್ಕ ಸಣ್ಣಕ್ಕಿಯನ್ನೆಲ್ಲಾ ತಿರುನಲ್ಲೂರ ಶಿವಲಿಂಗಕ್ಕೆ ಅರ್ಪಿಸುವ ವ್ರತವನ್ನು ಕೈಕೊಂಡು ಅನೇಕ ವರುಷಗಳವರೆಗೆ ಆಚರಿಸಿದರು.

ಶಿವನು ಇವರ ವ್ರತನಿಷ್ಠೆಯನ್ನು ನೋಡಬೇಕೆಂದು ಪ್ರತಿನಿತ್ಯ ಸಣ್ಣಕ್ಕಿಯ ಕೂಲಿಯೇ ದೊರೆಯುವಂತೆ ಮಾಡಿದನು. ಇವರು ಆ ಎಲ್ಲ ಅಕ್ಕಿಯನ್ನೂ ಶಿವಲಿಂಗಕ್ಕೇನೆ ಅರ್ಪಿಸಿ ತಾವು ಉಪವಾಸದಿಂದಿರಲಾರಂಭಿಸಿದರು. ಹೀಗೆ ಅರಿವಾಳ್ತಂಡರು ಬಿಟ್ಟು ಬಿಡದೆ ೨೦ ದಿವಸ ಉಪವಾಸವಾಗಿದ್ದು ೨೧ನೆಯ ದಿವಸ ಬಂದ ಕೂಲಿಯ ಅಕ್ಕಿಯನ್ನು ತೆಗೆದುಕೊಂಡು ಹೋಗುವಾಗ ಬಿರುಗಾಳಿಯಿಂದ ಅದು ಕೂಡಾ ಚೆಲ್ಲಿ ಹೋಯಿತು. ಆಗ ತನ್ನ ವ್ರತ ಭಂಗವಾಯಿತೆಂದು ಸೊಂಟದಲ್ಲಿದ್ದ ಕುಡುಗೋಲಿನಿಂದ ತಮ್ಮ ಶಿರಸ್ಸನ್ನು ಕತ್ತರಿಸಿಕೊಳ್ಳಲು ಶಿವನು ಇವರ ವ್ರತನಿಷ್ಠೆಗೆ ಮೆಚ್ಚಿ ಪ್ರತ್ಯಕ್ಷನಾಗಿ ಗಣಪದವಿಯನ್ನಿತ್ತನು.

೨೦. ನೈಸಭಕ್ತರು

ಚೋಳ ದೇಶದಲ್ಲಿ ತಿರುವನಂದನವೆಂಬ ಪಟ್ಟಣವಿದ್ದಿತು. ಅಲ್ಲಿ ನೈಸಭಕ್ತರೆಂಬ ಒಬ್ಬ ಮಹಾ ಶಿವಭಕ್ತರಿದ್ದರು. ಇವರು ಬಟ್ಟೆಗಳ ನೇಯುವ ಕಾಯಕವನ್ನು ಮಾಡುತ್ತ ಶಿವಭಕ್ತರಿಗೆ ಆ ಬಟ್ಟೆಗಳನ್ನು ಕೊಟ್ಟು ಬಂದುದನ್ನು ಗುರುಲಿಂಗ ಜಂಗಮ ಸೇವೆಗಾಗಿ ಅರ್ಪಿಸುತ್ತಿದ್ದರು.

ಶಿವಗಣ ಸಮೂಹದ ಚಿತ್ರಗಳಿಂದೊಪ್ಪುವ ಒಂದು ನವೀನವಾದ ಸುಂದರ ಬಟ್ಟೆಯನ್ನು ನೆಯಿದು ಜಂಗಮರಿಗರ್ಪಿಸಬೇಕೆಂದು ಈ ನೈಸಭಕ್ತರು ಯೋಚಿಸಿ ಒಂದು ವರುಷ ಪ್ರಯತ್ನಪಟ್ಟು ದೇವಾಂಗಭೂಷಿತವಾದ ಬಟ್ಟೆಯನ್ನು ಸಿದ್ಧಗೊಳಿಸಿ ಜಂಗಮಮೂರ್ತಿಗರ್ಪಿಸಬೇಕೆಂದು ಕಾದಿಟ್ಟಿದ್ದರು.

ಶಿವನು ಇವರ ಭಕ್ತಿಯನ್ನು ಪರಿಕ್ಷಿಸಬೇಕೆಂದು ಯೋಚಿಸಿ ಜಂಗಮಾಕಾರದಿಂದ ಇವರ ಮನೆಯ ಮುಂದೆ ಬಂದನು. ಆಗ ನೈಸಭಕ್ತರು ನಾ ಮಾಡಿದ ಬಟ್ಟೆಯನ್ನು ಧರಿಸಲು ಈ ಪೂಜ್ಯರೇ ಯೋಗ್ಯರೆಂದು ಯೋಚಿಸಿ ಇವರನ್ನು ಭಕ್ತಿ ಪೂರ್ವಕ ಬರಮಾಡಿಕೊಂಡು ಸ್ನಾನಾದಿ ನಿತ್ಯ ಕರ್ಮಗಳನ್ನು ಮಾಡಿಸಿ ಕೊನೆಗೆ ಆ ತನ್ನ ದಿವ್ಯ ಬಟ್ಟೆಯನ್ನು ಬಹು ಭಕ್ತಿಯಿಂದರ್ಪಿಸಿದನು. ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೨೧. ತಿರುನೀಲನಕ್ಕರು

ಚೋಳದೇಶದ ಶಾಂತಿಮಂಗಳವೆಂಬ ಪಟ್ಟಣದಲ್ಲಿ ತಿರುನೀಲನಕ್ಕರೆಂಬ ಮಹಾಶಿವಭಕ್ತರಿಗೆ ಸಲ್ಲೀಲೆಯೆಂಬೊಬ್ಬ ಮಹಾದಯಾಭರಿತಾಳದ ಪತ್ನಿಯಿದ್ದಳು. ಈ ದಂಪತಿಗಳು ಪ್ರತಿನಿತ್ಯ ಶಿವಲಿಂಗವನ್ನು ಪೂಜಿಸುವ ವ್ರತವುಳ್ಳವರಾಗಿದ್ದರು.

ಒಂದು ದಿವಸ ಇಬ್ಬರೂ ಶಿವಲಿಂಗಪೂಜೆಗೆ ಹೋದಾಗ ಆ ಲಿಂಗಮೂರ್ತಿಯ ಮೇಲೆ ಒಂದು ಜೇಡ ಹುಳುವಿದ್ದುದನ್ನು ಸಲ್ಲೀಲೆಯು ನೋಡಿ ಮನಸ್ಸಿನಲ್ಲಿ ನೊಂದು ನಮ್ಮಪ್ಪನಿಗೆ ಈ ಹುಳದಿಂದ ಹುಗುಳಗಳೇಳಬಹುದೆಂದು ಮೆಲ್ಲನೆ ಊಬಲು ಲಿಂಗಮೂರ್ತಿಗೆ ಉಗುಳು ಸಿಡಿಸಿದೆಯೆಂದು ಕೋಪದಿಂದ ಅವಳನ್ನು ಪತಿಯು ಹೊರಗೆ ತಳ್ಳಿಬಿಟ್ಟನು.

ಮರುದಿನ ಇಬ್ಬರೂ ಪೂಜೆಗೆ ಬರಲು ಆ ಲಿಂಗಮೂರ್ತಿಯ ತಲೆಯಲ್ಲಿ ಗುಳ್ಳಿಗಳೆದ್ದು ಹುಳಗಳಾದುದನ್ನು ಕಂಡು ಸಲ್ಲೀಲೆಯು ಮರಮರನೆ ಮರುಗಿ ನೆಲಕ್ಕೆ ದೊಪ್ಪನೆ ಬಿದ್ದುಬಿಟ್ಟಳು. ನಿನ್ನೆ ನನ್ನ ಕನಸಿನಲ್ಲಿ ಶಿವನು ಬಂದು ನಾನು ನಿನ್ನನ್ನು ತಳ್ಳಿದ್ದರಿಂದ ತನಗೆ ತಲೆಯಲ್ಲಿ ಹುಳುಗಳಾದವೆಂದು ಹೇಳಿದುದು ನಿಜವಾಯಿತಲ್ಲಾ ಎಂದು ತಿರುನೀಲನಕ್ಕರು ಶೋಕಿಸಲಾರಂಭಿಸಿದರು. ಆಗ ಈ ಮುಗ್ಧ ಸಲ್ಲೀಲೆಯ ಭಕ್ತಿಗೆ ಶಿವನು ಮೆಚ್ಚಿ ತನ್ನ ನಿಜರೂಪ ತೋರಿ ಇಬ್ಬರಿಗೂ ಗಣಪದವಿಯನ್ನಿತ್ತನು.

೨೨. ತಿರುಕುರುಪಿತೊಂಡರು

ತೊಂಡದೇಶದ ಕಾಂಚೀಪುರದಲ್ಲಿ ತಿರುಕುರಪಿತೊಂಡರೆಂಬ ಒಬ್ಬ ಮಹಾ ಶಿವಭಕ್ತನು ಬಟ್ಟೆಯನ್ನು ತೊಳೆಯುವ ಕಾಯಕ ಮಾಡುತ್ತಿದ್ದರು. ಇವರು ಶಿವಭಕ್ತರ ಮನೆಗೆ ಹೋಗಿ ಅವರ ಬಟ್ಟೆಯನ್ನು ತೆಗೆದುಕೊಂಡು ಬಂದು ಚೆನ್ನಾಗಿ ತೊಳೆದು ಅವರವರಿಗೆ ಕೊಟ್ಟುಬರುತ್ತಿದ್ದರು.

ಶಿವನು ಅವರ ಭಕ್ತಿಯನ್ನು ನೋಡಲು ಪ್ರಮಥರನ್ನು ಕಳುಹಿಸಲು ಅವರು ರಾಶಿರಾಶಿಯಾಗಿ ಬಟ್ಟೆಯನ್ನು ಕೊಟ್ಟರೂ ಹತ್ತು ದಿವಸ ಹಗಲಿರುಳೂ ಅವುಗಳನ್ನು ಸ್ವಚ್ಛವಾಗಿ ತೊಳದುಕೊಟ್ಟು ಅವರ ಪ್ರೀತಿಗೆ ಪಾತ್ರರಾದರು.

ಕೊನೆಗೆ ಶಿವನೇ ಒಂದು ದಿನ ಬಂದು ಈ ನಮ್ಮ ಕಂಥೆ ಬಟ್ಟೆಯ ಬಣ್ಣ ಹೋಗುವ ಹಾಗೆ ತೊಳೆದು ಕೊಡಪ್ಪಾ ಎಂದು ಹೇಳಲು ತಿರುಕುರುಪಿತೊಂಡರು ಎಷ್ಟು ತೊಳೆದರೂ ಏನನ್ನು ಹಚ್ಚಿದರೂ ಆ ಬಣ್ಣ ಹೋಗಲಿಲ್ಲ. ಆಗ ಇವರು ಬಹು ದುಃಖಿತರಾಗಿ ಈ ಬಟ್ಟೆಯ ಬಣ್ಣವನ್ನು ತೆಗೆದು ಜಂಗಮಮೂರ್ತಿಯನ್ನು ಸಂತೋಷಪಡಿಸದೆ ಬದುಕಿರುವುದು ವ್ಯರ್ಥವೆಂದು ಯೋಚಿಸಿ ಅಲ್ಲಿದ್ದ ಕಲ್ಲಿಗೆ ತಮ್ಮ ತಲೆಯನ್ನೇ ಅಪ್ಪಳಿಸಿಕೊಳ್ಳಲು ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೨೩. ತಿರುನಾಳ್ಪೋವರು

ಚೋಶದೇಶದ ವಾದನೂರು ಗ್ರಾಮದಲ್ಲಿ ತಿರುನಾಳ್ಪೋವರೆಂಬ ಒಬ್ಬ ಮಹಾ ಶಿವಭಕ್ತರು ಒಕ್ಕಲತನದ ಕೂಲಿಯ ಕಾಯಕವನ್ನು ಮಾಡಿ ಜೀವಿಸುತ್ತಿದ್ದರು. ಇವರು ಒಬ್ಬ ಬ್ರಾಹ್ಮಣನ ಗದ್ದೆಯಲ್ಲಿ ಒಂದು ತಿಂಗಳು ಕೂಲಿಕೆಲಸವನ್ನು ಮಾಡಲು ಒಪ್ಪಿಕೊಂಡಿದ್ದರು. ಆ ಮಧ್ಯದಲ್ಲಿ ಪೊನ್ನಾಂಬಲೇಶ್ವರನ ಯಾತ್ರೆಗೆ ಹೋಗಬೇಕೆಂಬ ಲವಲವಿಕೆಯು ಇವರಿಗೆ ವಿಶೇಷವಾದುದರಿಂದ ಹೋಗಲು ಸಿದ್ದರಾದರು.

ಅಷ್ಟರಲ್ಲಿ ಆ ಬ್ರಾಹ್ಮಣರು ಬಂದು ನಮ್ಮ ಬೆಳೆಯನ್ನು ಇನ್ನೂ ಒಟ್ಟಿಲ್ಲವಾದುದರಿಂದ ಆ ಕೆಲಸವನ್ನು ಮುಗಿಸಿ ಬೇಕಾದಲ್ಲಿ ಹೋಗಬಹುದೆಂದು ಹೇಳಲು ಬಹು ಉತ್ಸಾಹದಿಂದ ಗದ್ದಗೆ ಹೋಗಿ ನೆಲ್ಲಿನ ಬೆಳೆಯನ್ನು ಕೊಯ್ಯಲಾರಂಭಿಸಿದರು. ಶಿವನು ಇವರ ಭಕ್ತಿಗೆ ಮೆಚ್ಚಿ ತನ್ನ ಗಣಸಮೂಹವನ್ನು ಕಳುಹಿಸಿ ಒಂದೇ ದಿನದಲ್ಲಿ ಎಲ್ಲ ಬೆಳೆಯನ್ನು ಕೊಯಿಸಿ ಒಟ್ಟಿಸಿದನು. ಆ ಮೇಲೆ ಸಂತೋಷದಿಂದ ತಿರುನಾಳ್ಪೋವರು ಪೊನ್ನಾಂಬಲೇಶ್ವರ ಯಾತ್ರೆಗೆ ಯೋಗಿ ಶಿವಲಿಂಗವನ್ನು ಪೂಜಿಸಿ ಹಾಡಿ ಭಕ್ತಿಯ ಅತಿರೇಕದಿಂದ ಮೈಮರೆತರು. ಆಗ ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೨೪. ಏಣಾಧಿನಾಥರು

ಚೋಳ ದೇಶದ ಕರಿಯೂರು ಪಟ್ಟಣದಲ್ಲಿ ಏಣಾಧಿನಾಥರೆಂಬ ಮಹಾ ಶಿವಭಕ್ತರು ವೀರಭದ್ರೇಶನಿಂದ ದಿವ್ಯ ಖಡ್ಗವನ್ನು ಹೊಂದಿ ಶಿವಭಕ್ತರಲ್ಲದವರನ್ನು ಯುದ್ದದಲ್ಲಿ ಸಂಹರಿಸಿ ಬರುವ ಸಂಪತ್ತನ್ನು ಗುರುಲಿಂಗ ಜಂಗಮ ದಾಸೋಹಕ್ಕೆ ಸಮರ್ಪಿಸುವ ಕಾಯಕವನ್ನು ಕೈಕೊಂಡಿದ್ದರು.

ಮಾರಾಂಕನೆಂಬ ಒಬ್ಬ ಮಹಾ ಪರಾಕ್ರಮಿಯನ್ನು ಯದ್ದದಲ್ಲಿ ಸಂಹರಿಸಿ ಆತನು ಪಣವಾಗಿಟ್ಟಿದ್ದ ೭೦೦ ಹೊನ್ನುಗಳನ್ನೂ ರಾಜಗುರುವೆಂಬ ಮತ್ತೊಬ್ಬ ಶೂರನು ಪಣವಾಗಿಟ್ಟ ಒಂದು ಸಾವಿರ ಹೊನ್ನನ್ನೂ ಕೂಡ ಆತನ ಸಂಹಾರದಿಂದ ಸಂಪಾದಿಸಿ ಜಂಗಮದಾಸೋಹಿಯಾಗಿದ್ದನು. ರಾಜಗುರುವೆಂಬುವನ ಮಗನು ತನ್ನ ತಾಯಿಯ ಉಪದೇಶದಂತೆ ಕಪಟದಿಂದ ಭಸ್ಮ ರುದ್ರಾಕ್ಷಿಗಳನ್ನು ಧರಿಸಿಕೊಂಡು ಏಣಾಧಿನಾಥರ ಸಂಗಡ ಯುದ್ದಕ್ಕೆ ಬರಲು ಇವರು ಖಡ್ಗವನ್ನು ಕೆಳಗಿಟ್ಟು ಶರಣಾಗತರಾಗಲು ಆ ಕಪಟಿಯು ಇವರನ್ನು ಕೊಂದು ಓಡಿ ಹೋದನು. ಆಗ ಶಿವನು ಏಣಾಧಿನಾಥರ ಶಿವಲಾಂಛನಗಳಲ್ಲಿಯ ಭಕ್ತಿಗೆ ಮೆಚ್ಚಿ ಅವರಿಗೆ ಪ್ರಾಣದಾನ ಮಾಡಿ ನಿಜರೂಪ ತೋರಿ ಗಣಪದವಿಯನುನಿತ್ತನು.

೨೫. ಸೇದಿರಾಜರು

ಚೋಳದೇಸದಲ್ಲಿ ಸೇದಿರಾಜನೆಂಬ ಮಹಾ ಪರಾಕ್ರಮಶಾಲಿಯಾದ ಶಿವಭಕ್ತನು ಜಂಗಮ ಪೂಜಾ ಲೋಲನಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದನು. ಈತನ ಕೀರ್ತಿಯನ್ನು ಕೇಳಿ ಸಹಿಸಲಾರದೆ ಮನ್ನೆ ಎಂಬ ರಾಜನು ದಂಡೆತ್ತಿ ಬಂದು ಭಯಂಕರ ಯುದ್ಧಮಾಡಿ ಕೊನೆಗೆ ಸೋತು ಓಡಿ ಹೋಗಿ ಈತನನ್ನು ಕೊಲ್ಲಲು ಜಂಗಮ ವೇಷದಿಂದ ಬಂದನು.

ಆಗ ಸೇದಿರಾಜನು ಈತನು ಜಂಗಮೋತ್ತಮನೆಂದು ಬಹು ಭಕ್ತಿಯಿಂದ ಪಾದ ಪೂಜೆಯನ್ನು ಮಾಡಿ ತಾವು ಆಗಮಿಸಿದ ಕಾರಣವೇನೆಂದು ಬಿನ್ನಯಿಸಿಕೊಳ್ಳಲು ಆ ಕಪಟ ಜಂಗಮನು ರಾಜನೇ ನಮ್ಮಲ್ಲೊಂದು ಹೊಸದಾದ ಆಗಮ ಗ್ರಂಥವಿದೆ. ಅದನ್ನು ನಿನಗೆ ಏಕಾಂತದಲ್ಲಿ ಉಪದೇಶಮಾಡಿಕೊಡಬೇಕಾಗಿರುವುದರಿಂದ ಬಂದಿದ್ದೇವೆಂದು ಕರೆದುಕೊಂಡು ಹೋಗಿ ನಮಸ್ಕಾರ ಮಾಡಿದೊಡನೆ ಬೆನ್ನಿನಲ್ಲಿ ಖಡ್ಗವನ್ನು ಇರಿಯಲು ಈ ಅಪೂರ್ವವಾದ ಆಗಮಗ್ರಂಥವನ್ನು ದಯಪಾಲಿಸಿದ ಈ ಜಂಗಮನು ಶಿವನೇ ಸರಿಯೆಂದು ಆ ರಾಜನು ಭಕ್ತಿಯ ಉದ್ರೇಕದಿಂದ ಆ ಕಪಟ ಜಂಗಮನನ್ನು ಸತ್ಕರಿಸಿ ಕಳುಹಿಸಲು ಶಿವನು ಈ ಜಂಗಮ ಭಕ್ತಿಗೆ ಮೆಚ್ಚಿ ಸೇದಿರಾಜರಿಗೆ ಗಣಪದವಿಯನ್ನಿತ್ತನು.

೨೬. ಪೂಸಲೆಯಾಂಡರು

ಚೋಳದೇಶದ ಕರಿಯೂರು ಪಟ್ಟಣದಲ್ಲಿ ಪಗಲ್ಚೋಳನೆಂಬ ಮಹಾ ಶಿವಭಕ್ತನಾದ ರಾಜನು ಅನೇಕ ಮನೋಹರವಾದ ಶಿವಾಲಯಗಳನ್ನು ಕಟ್ಟಿಸಿ ಬಹು ಕೀರ್ತಿ ಹೊಂದಿದ್ದನು. ಆ ಶಿವಾಲಯಗಳನ್ನು ನೋಡಲು ಬಹು ದೂರ ದೇಶಗಳಿಂದ ಅನೇಕ ಭಕ್ತರು ಬರುತ್ತಿದ್ದರು. ಪೂಸಲೆಯಂಡರೆಂಬ ಮಹಾ ಶಿವಯೋಗಿಗಿಗಳು ಆ ಪಟ್ಟಣದಲ್ಲಿದ್ದ ದಿವ್ಯತರವಾದ ಶಿವಾಲಯವನ್ನು ನೋಡಿ ಸಂತೋಷಭರಿತರಾಗಿ ಅದಕ್ಕತಿಶಯವಾದ ಒಂದು ಶಿವಾಲಯವು ತಮ್ಮ ಹೃದಯದಲ್ಲಿ ನಿರ್ಮಿಸಲು ಭಾವನಾ ಬಲದಿಂದ ಸಿದ್ದರಾಗಿದ್ದರು.

ಈ ಶಿವಯೋಗಗಳ ಯೋಗಬಲವನ್ನು ರಾಜನು ಕೇಳಿ ಅವರಲ್ಲಿಗೆ ಬಂದು ತಮ್ಮ ಯೋಗದ ಉದ್ಧೇಶವೇನೆಂದು ಬಿನ್ನಯಿಸಿಕೊಳ್ಳಲು ತಮ್ಮ ಹೃದಯದಲ್ಲಿ ನಿರ್ಮಿಸಿದ ಶಿವಾಲಯವನ್ನು ಹೃದಯ ಭೇದಿಸಿ ಆ ರಾಜನಿಗೆ ತೋರಿಸಲು ರಾಜನು ಪರಮಾಶ್ಚರ್ಯಪಟ್ಟನು. ಶಿವನು ಇವರ ಭಕ್ತಿಯೋಗಕ್ಕೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೨೭. ಕಂಗುಲಿಯ ಕಲಿಯಾಂಡರು

ಚೋಳದೇಶದಲ್ಲಿ ಕಡವೂರೆಂಬ ಪಟ್ಟಣದಲ್ಲಿ ಕಂಗುಲಿಯ ಕಲಿಯಾಂಡರೆಂಬ ಮಹಾ ಶಿವಭಕ್ತರು ಪ್ರತಿನಿತ್ಯ ಆ ಪಟ್ಟಣದ ಶಿವಲಿಂಗಕ್ಕೆ ೨ ತೊಲೆ ಧೂಪವನ್ನರ್ಪಿಸುತ್ತಿದ್ದರು. ಕಡೆಗೆ ಕೈಯಲ್ಲಿ ಕಾಸಿಲ್ಲದಂತಾಗಲು ಧೂಪವಿಲ್ಲದೆ ಶಿವಲಿಂಗಪೂಜೆ ತಪ್ಪಿ ಕೆಲವು ದಿವಸ ಉಪವಾಸದಲ್ಲಿದ್ದರು. ಕೊನೆಗೆ ಅಲ್ಲಿಂದ ತಿರಿಪಿನಂದನವೆಂಬ ಪಟ್ಟಣಕ್ಕೆ ಬರಲು ಅಲ್ಲಿಯ ಶಿವಲಿಂಗವು ಒಂದು ಮಗ್ಗಲಿಗೆ ಓಸರಿಸಿದ್ದಿತ್ತು. ಇದನ್ನು ಯಾವ ಪ್ರಯತ್ನದಿಂದಲೂಸರಿಪಡಿಸಲಾಗದಿದ್ದುದರಿಂದ ಅಲ್ಲಿಯ ರಾಜನು ಈ ಲಿಂಗಮೂರ್ತಿಯನ್ನು ಸರಪಡಿಸಿದವರಿಗೆ ನಾಲ್ಕಿ ಸಾವಿರ ಹೊನ್ನುಗಳನ್ನು ಕೊಡಲಾಗುವದೆಂದು ಪ್ರಸಿದ್ದಿಸಿ ಆ ಹೊನ್ನಿನ ಚೀಲವನ್ನು ಆ ಶಿವಾಲಯದ ಮುಂದೆ ಕಟ್ಟಿಸಿದ್ದನು.

ಕಲಿಯಾಂಡರು ಆ ಹೊನ್ನಿನ ಚೀಲವನ್ನು ತೆಗೆದುಕೊಂಡು ಧೂಪವನ್ನು ತರಿಸಿ ಎಲ್ಲವನ್ನೂ ಆ ಶಿವಲಿಂಗದ ಮುಂದೆ ಸುಡುತ್ತ ಶಕ್ತಿಯ ಉದ್ರೇಕದಿಂದ ಒಂದು ಕಠಾರಿಯ ತುದಿಯನ್ನು ತಮ್ಮ \

ಕೊರಳಿಗೆ ಹಚ್ಚಿಕೊಂಡು ಇನ್ನೊಂದು ತುದಿಯನ್ನು ಶಿವಲಿಂಗಕ್ಕೆ ಕಟ್ಟಿ ಜಗ್ಗಲು ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೨೮. ಇರಿಭಕ್ತರು

ಚೋಳದೇಶದ ಕರಿಯೂರ ಪಟ್ಟಣದಲ್ಲಿ ಪಗಲ್ಚೋಳನೆಂಬ ಬಹು ಪರಾಕ್ರಮಶಾಲಿಯಾದ ರಾಜನಿದ್ದನು. ಈ ಶಿವಭಕ್ತನ ಪಟ್ಟಣಕ್ಕೆ ಶೂರಮಣಿಗಳಾದ ಇರಿಭಕ್ತರೆಂಬ ಮಹಾ ಶಿವಭಕ್ತರು ಬಂದು ವಾಸವಾಗಿದ್ದರು. ಇವರು ಶಿವಭಕ್ತನಲ್ಲದ ಒಬ್ಬ ವ್ಯಕ್ತಿಗೆ ಭಸ್ಮವನ್ನು ಧರಿಸಲು ಆತನು ಅದನ್ನು ನಿಂದಿಸಿದೊಡನೆ ಆತನ ಶಿರಸ್ಸನ್ನು ಕತ್ತರಿಸಿದರು. ಆ ಶವವನ್ನು ಆತನ ಸಂಬಂಧಿಗಳು ರಾಜನಲ್ಲಿಗೆ ತೆಗೆದುಕೊಂಡು ಹೋಗಿ ನಡೆದ ಸಂಗತಿಯನ್ನು ತಿಳಿಸಲು ಇರಿಭಕ್ತರು ಅಲ್ಲಿಗೆ ಬಂದು ಭಸ್ಮವನ್ನು ಆ ಶವಕ್ಕೆ ಧರಿಸಲು ಜೀವ ಬಂದಿತು. ಆಗ ಅಲ್ಲಿದ್ದವರೆಲ್ಲರೂ ಶಿವಭಕ್ತರಾದರು.

ಒಂದು ದಿನ ರಾಜ ಪಟ್ಟದಾನೆಯು ಮದವೇರಿ ಶಿವಪೂಜೆಯ ಪುಷ್ಪಗಳನ್ನು ಹಾಳುಮಾಡಲು ಅದನ್ನು ಇರಿಭಕ್ತರು ಕೊಂದುದನ್ನು ಕೇಳಿ ರಾಜನು ಬಂದು ಆನೆಯ ಅಪರಾಧಕ್ಕೆ ಅದರ ಒಡೆಯನಾದ ನಾನೇ ಕಾರಣನಾದುದರಿಂದ ನನ್ನನ್ನು ಕೊಲ್ಲಬೇಕಾಗಿ ಶಿರಸ್ಸನ್ನು ಬಾಗಿಸಲು ಇರಿಭಕ್ತರು ಇಂಥ ಶಿವಭಕ್ತನ ಸೊತ್ತನ್ನು ನಾಶಮಾಡಿದೆನಲ್ಲಾ ಎಂದು ದುಃಖಿಸಿ ಆ ಕಠಾರಿಯಿಂದ ತಮ್ಮ ಶಿರಸ್ಸನ್ನು ಕತ್ತರಿಸಿಕೊಳ್ಳಲು ಶಿವನು ಮೆಚ್ಚಿ ನಿಜರೂಪ ತೋರಿ ಆನೆಯನ್ನು ಬದುಕಿಸಿ ಗಣಪದವಿಯನ್ನಿತ್ತನು.

೨೯. ಕಳಚಂಗ ಪೆರುಮಾಳೆಯರು

ಚೋಳದೇಶದಲ್ಲಿ ಕಳಚಂಗ ಪೆರಮಾಳೆಯೆಂಬ ಒಬ್ಬ ಪರಾಕ್ರಮಶಾಲಿಯಾದ ರಾಜನಿದ್ದನು. ಈತನು ಮಹಾಶಿವಭಕ್ತನಾಗಿದ್ದನು. ಒಂದು ದಿನ ಬೇಟೆಗೆ ಹೋದಾಗ ಅರಣ್ಯದಲ್ಲಿ ಬಹು ಭಯಂಕರವಾದ ಒಂದು ಗುಹೆಯನ್ನು ಕಂಡು ಅದರಲ್ಲಿ ರಾಜನು ಹೋಗಲು ಅಲ್ಲಿ ಮಹಾ ಶೂರನಾದ ಒಬ್ಬ ಮಲ್ಲನಿದ್ದನು. ಆತನು ತನ್ನ ಗವಿಯಲ್ಲಿ ಬಂದ ಈ ರಾಜನ ಸಂಗಡ ಕೋಪಾಟೋಪದಿಂದ ಯುದ್ಧಮಾಡಿ ಕೊನೆಗೆ ಸೋತನು.

ರಾಜನ ಪರಾಕ್ರಮಕ್ಕೆ ಮೆಚ್ಚಿ ತಾನು ಯಕ್ಷನೆಂಬುದನ್ನು ಹೇಳಿ ತನ್ನ ನಿಜರೂಪವನ್ನು ತೋರಿಸಿ ನಾನು ಹಿಂದಣ ಜನ್ಮದಲ್ಲಿ ಆನೆಯಾಗಿದ್ದು ಶಿವಲಿಂಗವನ್ನು ಪೂಜಿಸುವಾಗ ನೀನು ಜೇಡುಹುಳವಾಗಿದ್ದು ಅದೇ ಲಿಂಗವನ್ನು ಪೂಜಿಸಿ ನನ್ನನ್ನು ಕೊಲ್ಲಬೇಕೆಂದು ನನ್ನ ಸೊಂಡಿಯಲ್ಲಿ ಸೇರಿದ್ದರಿಂದ ನಾವಿಬ್ಬರೂ ಮೃತಪಟ್ಟು ಈಗ ಈ ಸ್ಥಿತಿಗೆ ಬಂದೆವು. ಇಕೋ ಆ ಲಿಂಗವು ಇಲ್ಲಿಯೇ ಇದೆ. ಅದನ್ನು ಪೂಜಿಸೆಂದು ಹೇಳಲು ರಾಜನು ಬಹು ಭಕ್ತಿಯಿಂದ ಆ ಲಿಂಗ ಪೂಜೆಯಲ್ಲಿಯೇ ಆಸಕ್ತನಾಗಲು ಶಿವನು ಈತನ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೩೦. ನಮಿನಂದಿಯರು

ಚೋಳದೇಶದ ತಿರುವಾಲೂರೆಂಬ ಪಟ್ಟಣದಲ್ಲಿ ನಮಿನಂದಿಯರೆಂಬ ಒಬ್ಬ ಮಹಾ ಶಿವಭಕ್ತರಿದ್ದರು. ಇವರು ಆ ಪಟ್ಟಣದ ಹೊರಭಾಗದಲ್ಲಿದ್ದ ಶಿವಾಲಯಕ್ಕೆ ಪ್ರತಿನಿತ್ಯ ಮೂರು ಕಾಲಗಳಲ್ಲಿ ಹೋಗಿ ಬಹುಭಕ್ತಿಯಿಂದ ಶಿವಲಿಂಗಪೂಜೆಯನ್ನು ಮಾಡುತ್ತಿದ್ದರು.

ಒಂದು ದಿನ ಸಾಯಂಕಾಲದ ಪೂಜೆಯಲ್ಲಿ ವಿಶೇಷ ಭಕ್ತಿಯುಂಟಾಗಿ, ಶಿವಧ್ಯಾನದಲ್ಲಿಯೇ ಮಗ್ನರಾದುದರಿಂದ ಪೂಜೆ ಪೂರೈಸಲು ಬಹು ವೇಳೆಯಾಯಿತು. ಮನೆಗೆ ಬರುವಾದ ದಾರಿಯಲ್ಲಿ ಒಮ್ಮೆಲೇ ಮೋಡ ಕವಿದು ಭಯಂಕರವಾದ ಗುಡುಗು ಸಿಡಿಲುಗಳುಂಟಾಗಿ ವಿಶೇಷ ಮಳೆ ಸುರಿಯಲು ಕಾಣದೆ ಒಂದು ದೊಡ್ಡ ಕೊರಡನ್ನು ಎಡವಿ ನೆಲಕ್ಕೆ ಬೀಳುವಾಗ ಶಿವಶಿವಾ ಎಂದು ಬಹು ಕೈಂಕರ್ಯದಿಂದ ನುಡಿಯಲು ಶಿವನು ಜಂಗಮ ವೇಷದಿಂದ ತಟ್ಟನೆ ಅಲ್ಲಿಗೆ ಬಂದು ಇವರನ್ನು ಹಿಡಿದೆತ್ತಿ ತನ್ನ ನಿಜರೂಪ ತೋರಿಸಿ ನಿನ್ನ ಇಷ್ಟವೇನೆಂದು ಕೇಳಲು ಅಪ್ಪಾ ಇಂಥ ಕತ್ತಲೆಯಲ್ಲಿ ನೀನು ಮನೆಯನ್ನು ಬಿಟ್ಟು ಬರಬಾರದೆಂಬುದೇ ನನ್ನ ಇಷ್ಟವೆಂದು ಹೇಳಿದರು. ಶಿವನು ಇವರ ಮುಗ್ಧ ಭಕ್ತಿಗೆ ಮೆಚ್ಚಿ ಗಣಪದವಿಯನ್ನಿತ್ತನು.

೩೧. ಅಮರ ನೀತಿಗಳು

ಚೋಳದೇಶದ ತಿರುನಲ್ಲೂರ ಪಟ್ಟಣದಲ್ಲಿ ಮಹಾ ಧನಿಕನೂ ದಾನಶೂರನೂ ಆದ ಅಮರನೀತಿಯೆಂಬ ಮಹಾ ಶಿವಭಕ್ತನಿದ್ದನು. ಈತನಿಗೆ ಕನಕಮಾಲೆಯೆಂಬ ಧರ್ಮಪತ್ನಿಯೂ ಧನದತ್ತನೆಂಬ ಸುಗುಣಿಯಾದ ಮಗನೂ ಇದ್ದರು. ಈತನು ಪ್ರತಿನಿತ್ಯ ಜಂಗಮರಿಗೆ ಅವರಿಚ್ಛೆಸಿದಷ್ಟು ಬಟ್ಟೆಗಳನ್ನು ಕೊಟ್ಟು ಮಹಾ ದಾನಿಯೆಂದು ಕೀರ್ತಿ ಪಡೆದಿದ್ದನು.

ಶಿವನು ಈತನ ಭಕ್ತಿಯನ್ನು ಪರೀಕ್ಷಿಸಲು ವೃದ್ಧ ಜಂಗಮರೂಪದಿಂದ ಬಂದು ನನ್ನದೊಂದು ಕೌಪೀನವನ್ನು (ಲಂಗೋಟಿಯನ್ನು) ಇಟ್ಟುಕೊಳ್ಳೆಂದು ಈತನ ಕಡೆಗೆ ಕೊಟ್ಟು ಅದನ್ನು ಮಾಯ ಮಾಡಿ ಆ ಲಂಗೋಟಿಗೆ ಪ್ರತಿಯಾಗಿ ನನ್ನಲ್ಲಿರುವ ಲಂಗೋಟಿಯ ತೂಕದ ಬಟ್ಟೆಯನ್ನಾದರೂ ಕೊಡೆಂದು ಕೇಳಲು ಅಮರನೀತಿಯು ತನ್ನಲ್ಲಿದ್ದ ವಸ್ತ್ರಗಳನ್ನೆಲ್ಲಾ ಒಂದು ಪರಡಿಯಲ್ಲಿ ಹಾಕಿದನು. ಲಂಗೋಟಿಯಿದ್ದ ಪರಡಿಯ ಏಳಲೇ ಇಲ್ಲ. ಆ ಮೇಲೆ ತನ್ನ ಮಗನನ್ನೂ ಹೆಂಡತಿಯನ್ನೂ ಪರಡಿಯಲ್ಲಿ ನಿಲ್ಲಿಸಲು ಸ್ವಲ್ಪ ಮೇಲಕ್ಕೇದ್ದಿತು. ಆಗ ಭಕ್ತಿಯ ಆವೇಶದಿಂದ ತಾನೂ ಪರಡಿಯಲ್ಲಿ ಕುಳಿತುಕೊಳ್ಳಲು ಲಂಗೋಟಿ ಪರಡಿಗೆ ಸರಿ ಬಂದಿತು. ಆಗ ಶಿವನು ತನ್ನ ನಿಜರೂಪವನ್ನು ತೋರಿ ಗಣಪದವಿಯನ್ನಿತ್ತನು.

೩೨. ಕಲಿಕಂಭರು

ಚೋಳದೇಶದಲ್ಲಿ ತಿರುಮರೆಯೆಂಬ ಪಟ್ಟಣದಲ್ಲಿ ಕಲಿಕಂಭರೆಂಬ ಮಹಾ ಶಿವಭಕ್ತರು ಜಂಗಮಸೇವೆಯಲ್ಲಿ ಧುರೀಣರಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದರು. ಪ್ರತಿ ನಿತ್ಯದಲ್ಲಿಯೂ ಜಂಗಮರ ಇಷ್ಟದಂತೆ ಅರ್ಪಿಸಿ ಕೃಪೆಗೆ ಪಾತ್ರರಾಗಿದ್ದರು.

ಹಿಂದಕ್ಕೆ ಇವರಲ್ಲಿ ಆಳಾಗಿದ್ದ ಒಬ್ಬ ಮೋಸಗಾರನು ದುಡಿಯಲಾರದೆ ಜಂಗಮವೇಷವನ್ನು ಹಾಕಿಕೊಂಡು ಈ ಕಲಿಕಂಭರ ಕಡೆಗೆ ಬಂದನು. ಆಗ ಕಲಿಕಂಭರು ಜಂಗಮಮೂರ್ತಿಗಳು ಆಗಮಿಸಿದರೆಂದು ಬಹು ಭಕ್ತಿಯಿಂದ ಬರಮಾಡಿಕೊಂಡು ಪಾದ ತೊಳೆಯಲು ನೀರನ್ನು ತರಲಿಕ್ಕೆ ತಮ್ಮ ಸತಿಗೆ ಹೇಳಿದರು. ಆ ಸತಿಯು ಬಂದು ನೋಡಿ ತಮ್ಮಲ್ಲಿಯ ಆಳೆಂದು ಗುರ್ತಿಸಿ ಈ ಕಪಟಿಯ ಪಾದಗಳನ್ನು ತೊಳೆಯುವುದಿಲ್ಲವೆನ್ನಲು ಜಂಗಮದ ಹಿಂದಿನ ಕುಲಜಾತಿಕಸುಬುಗಳನ್ನು ಎಣಿಸಿ ನಿಂದಿಸಬಹುದುದೇ? ಎಂದು ಕೋಪಿಸಿ ಖಡ್ಗದಿಂದ ಸತಿಯ ಕೈಯನ್ನು ಕತ್ತರಿಸಲು ಆಗ ಶಿವನು ಇವರ ಜಂಗಮ ಭಕ್ತಿಗೆ ಮೆಚ್ಚಿ ಗಣಪದವಿಯನ್ನಿತ್ತನು.

೩೩. ಕಣ್ಣಪ್ಪನು

ಚೋಳದೇಶದ ಕಾಳತ್ತಿ ಎಂಬ ಒಂದು ಬೆಟ್ಟದಲ್ಲಿ ಕಣ್ಣಪ್ಪನೆಂಬ ಶೂರ ಬೇಡನು ಬೇಟೆಯಾಡುತ್ತಿರುವಾಗ ಒಂದು ಚಿಗರಿಯು ಓಡಿ ಹೋಗಿ ಒಂದು ಶಿವಾಲಯದಲ್ಲಿ ಸೇರಲು ಅದರ ಬಾಗಿಲುಗಳು ತಾವೇ ಮುಚ್ಚಿಕೊಂಡವು. ಆಗ ಕಣ್ಣಪ್ಪನು ಶಿವನೇ ಬಾಗಿಲು ತೆರೆ ಚಿಗರಿಯಲ್ಲಿ ನಿನಗೂ ಪಾಲುಕೊಡುತ್ತೇನೆಂದು ಪರಿಪರಿಯಲ್ಲಿ ಬೇಡಿಕೊಳ್ಳಲು ಬಾಗಿಲು ತೆರೆದವು. ಚಿಗರಿಯೂ ದೊರೆಯಿತು. ಅದನ್ನು ಕೊಂದು ಅದರ ಮಾಂಸವನ್ನು ಶಿವನಿಗರ್ಪಿಸಿ ನಮ್ಮಪ್ಪನು ರಾತ್ರೆ ಈ ಅಡವಿಯಲ್ಲಿ ಅಂಜಬಹುದೆಂದು ತಾನು ಅಲ್ಲಿಯೇ ವಾಸವಾಗಿದ್ದನು.

ಮರುದಿನ ಒಬ್ಬ ಬ್ರಾಹ್ಮಣನು ಪೂಜೆಗೆ ಬಂದು ಆ ಶಿವಾಲಯದಲ್ಲಿ ಮಾಂಸದ ತುಂಡುಗಳು ಬಿದ್ದುದನ್ನು ನೋಡಿ ಅಸಹ್ಯಪಟ್ಟು ಅದನ್ನು ಶುಚಿಗೊಳಿಸಿ ಹೋದನು. ಕಣ್ಣಪ್ಪನು ಪುನಃ ಬಂದು ತನ್ನ ನಿತ್ಯ ನೇಮದಂತೆ ಶಿವಲಿಂಗಕ್ಕೆ ಮಾಂಸವನ್ನರ್ಪಿಸುವಾಗ ಶಿವನು ಈತನ ಭಕ್ತಿಯನ್ನು ಪರೀಕ್ಷಿಸಬೇಕೆಂದು ಆ ಶಿವಲಿಂಗದ ಒಂದು ಕಣ್ಣಿನಲ್ಲಿ ರಕ್ತ ಸುರಿಯುವಂತೆ ಮಾಡಲು ಕಣ್ಣಪ್ಪನು ತನ್ನ ಕಣ್ಣನ್ನು ಕಿತ್ತು ಅಲ್ಲಿ ಹಚ್ಚಿದನು. ಇನ್ನೊಂದು ಕಣ್ಣಿನಲ್ಲಿಯೂ ರಕ್ತ ಸುರಿಯಲು ತನ್ನ ಮತ್ತೊಂದು ಕಣ್ಣನ್ನೂ ಕೀಳುವಾಗ ಶಿವನು ನಿಜರೂಪವನ್ನು ತೋರಿ ಗಣಪದವಿಯನ್ನಿತ್ತನು.

೩೪. ನಾಟ್ಯಮಿಗೆ ತಾಂಡಿ

ಪಾಂಡ್ಯ ರಾಜ್ಯದ ಮಧುರಾ ನಗರದಲ್ಲಿ ನಾಟ್ಯಮಿಗೆ ತಾಂಡಿಯೆಂಬ ಮಹಾ ಶಿವಭಕ್ತನು ಶಿವನಲ್ಲದ ಅನ್ಯ ದೇವರನ್ನು ಭಜಿಸುವವರು ಮುಟ್ಟಿದ ಬಾವಿಯ ನೀರನ್ನು ಲಿಂಗಾಭಿಷೇಕಕ್ಕೆ ಉಪಯೋಗಿಸದಿದ್ದ ವ್ರತವನ್ನು ಕೈಕೊಂಡು ಬಹು ಪ್ರಸಿದ್ಧನಾಗಿದ್ದನು.

ಈ ಮಹಾಶಿವಭಕ್ತನು ಹುಟ್ಟುಕುರುಡನಾಗಿದ್ದನು. ಈತನ ಆಚಾರವನ್ನು ಕೆಡಿಸಬೇಕೆಂದು ಜೈನಾದಿ ಪರಮತೀಯ ದುರುಳರು ಬಾವಿಯನ್ನು ಮುಟ್ಟುತ್ತಿದ್ದರು. ಆಗ ಮತ್ತೊಂದು ಬಾವಿಯನ್ನು ತೆಗೆಯುತ್ತಿದ್ದನು. ಈ ಪ್ರಕಾರ ದುರುಳರು ಅನೇಕ ಸಾರೆ ತೊಂದರೆ ಪಡಿಸಲು ಆ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗಿ ಬಾವಿಯನ್ನು ತೋಡುತ್ತಿರುವಾಗ ಕೆಲವು ದುರಳ ಜೈನರು ಬಾವಿಯ ಕೆಸರನ್ನು ನಾಟ್ಯಮಿಗೆ ತಾಂಡಿ ಮೇಲಕ್ಕೆ ತೆಗೆಯುತ್ತಿದ್ದಾಗ ಹಗ್ಗವನ್ನು ಕತ್ತರಿಸಿಬಿಟ್ಟರು. ಆಗ ನಾಟ್ಯಮಿಗೆ ತಾಂಡಿಗಳು ಬಾವಿಯಲ್ಲಿ ಬೀಳುವಷ್ಟರಲ್ಲಿ ಶಿವನು ಬಂದು ಎತ್ತಿ ಹಿಡಿದು ಕಣ್ಣುಗಳನ್ನು ಕೊಡಲು ಆ ಜೈನರನ್ನು ಸಂಹರಿಸಿ ಶಿವನ ಪ್ರೀತಿಗೆ ಪಾತ್ರರಾಗಿ ಗಣಪದವಿಯನ್ನು ಹೊಂದಿದರು.

೩೫. ಬಲಘಂಡ ಮೂರ್ತಿಗಳು

ಪಾಂಡ್ಯ ರಾಜ್ಯದ ಮಧುರಾ ಪಟ್ಟಣದಲ್ಲಿ ಚೊಕ್ಕನಾಯನಾರ ಲಿಂಗಾಲಯವು ಬಹು ಪ್ರಸಿದ್ಧಿಯನ್ನು ಹೊಂದಿದ್ದಿತು. ಆ ಲಿಂಗಮೂರ್ತಿಗೆ ಪ್ರತಿನಿತ್ಯ ಚಂದನಗಂಧವನ್ನು ಲೇಪಿಸುವ ವ್ರತನಿಷ್ಠನಾದ ಬಲಘಂಡ ಮೂರ್ತಿಯೆಂಬ ಮಹಾ ಧನಿಕನಾದ ಶಿವಭಕ್ತನು ತನ್ನ ಶಿವಾಚಾರಗಳಿಂದ ಬಹು ಪ್ರಸಿದ್ಧನಾಗಿದ್ದನು.

ಕೆಲವು ವರುಷಗಳಲ್ಲಿ ಇವರಿಗೆ ಬಹು ಬಡತನ ಬಂದಿತು. ಚಂದನ ಕಟ್ಟಿಗೆಗೆ ಕಾಸಿಲ್ಲದೆ ಲಿಂಗಪೂಜೆ ತಪ್ಪಿ ಇಪ್ಪತ್ತೆರಡು ದಿವಸ ಉಪವಾಸದಿಂದಿದ್ದರು. ಶಿವನೇ ನಾನು ವ್ರತ ಭಂಗ ಮಾಡಲೆಂದು ನೀನಿಂತಹ ಸ್ಥಿತಿಯನ್ನು ತಂದಿರುವಿಯಾ ನಾನಂಜುವೆನೇ ಎಂದು ೨೨ ದಿನಗಳವರೆಗೆ ಶಿವಸ್ಮರಣೆಯಲ್ಲಿಯೇ ಇದ್ದರು.

೨೩ನೆಯ ದಿನ ನಿನ್ನ ಮೊಳಕೈಯಲ್ಲಿಯೇ ಗಂಧವಿರುವಾಗ ಚಂದನವನ್ನು ಹುಡುಕುವಿಯಾ? ಎಂದು ಸ್ವಪ್ನದಲ್ಲಿ ಶಿವನು ನುಡಿದಂತೆ ಕೇಳಲು ಮರುದಿನ ಸಂತೋಷದಿಂದ ಶಿವಾಲಯಕ್ಕೆ ಹೋಗಿ ಬಹು ಭಕ್ತಿಯಿಂದ ತನ್ನ ಮೊಳಕೈಯನ್ನೇ ಗಂಧದ ಕಲ್ಲಿಗೆ ತಿಕ್ಕಲಾಗಿ ಈತನ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೩೬. ಅಃಪೂತಿಯರು

ಚೋಳದೇಶದ ತಿರುವಣ್ಣೂರೆಂಬ ಗ್ರಾಮದಲ್ಲಿ ಅಃಪೂತಿಯೆಂಬ ಒಬ್ಬ ಶಿವಭಕ್ತನು ಸದ್ಗುರುವಿನ ಕೃಪೆಗೆ ಪಾತ್ರನಾಗಬೇಕೆಂದು ಬಹು ಹಂಬಲಿಸುತ್ತಿದ್ದನು. ಆಗ ಒಬ್ಬ ಜ್ಞಾನಿಯು ಅಯ್ಯಾ ನಿನಗೆ ವಾಗೀಶನೇ ಗುರುವಾಗಿರುವನು. ಆತನು ಮೊದಲು ಜೈನನಾಗಿದ್ದನು. ಈಗ ಶಿವಭಕ್ತಿಯಿಂದ ಮಹಾ ಪೂಜ್ಯನಾಗಿದ್ದಾನೆ. ಆತನು ತಿರಿವರಿಗೆ ಎಂಬ ಪಟ್ಟಣದಲ್ಲಿದ್ದಾನೆಂದು ಹೇಳಿದನು.

ಇದನ್ನು ಅಃಪೂತಿಯು ಕೇಳಿ ಪರಮ ಸಂತೋಷಪಟ್ಟು ಆಗಲೇ ವಾಗೀಶನು ತನ್ನ ಗುರುವೆಂದು ಭಾವಿಸಿ ತನ್ನ ಮನೆ ತೋಟ, ಸ್ಥಳಗಳಿಗೆಲ್ಲಾ ವಾಗೀಶ ಎಂಬ ಹೆಸರನ್ನಿಟ್ಟಿದ್ದಲ್ಲದೆ ತನ್ನ ಮಗನಿಗೂ ವಾಗೀಶ ಎಂಬ ಹೆಸರನ್ನಿಟ್ಟು ಆತನ ದರ್ಶನಾಪೇಕ್ಷಿಯಾದನು. ವಾಗೀಶನು ದೇಶ ಸಂಚಾರ ಮಾಡುತ್ತಾ ಅಃಪೂತಿಯಪಟ್ಟಣಕ್ಕೆ ಬರಲು ಇವರಿಗೆ ಪರಮಾನಂದವಾಯಿತು. ಇವರ ದೃಢಭಕ್ತಿಯನ್ನು ನೊಡಿ ವಾಗೀಶನಿಗೂ ಇವರ ಮೇಲೆ ಕೃಪೆಯುಂಟಾಯಿತು. ಆಗ ಅಃಪೂತಿಯವರಿಗೂ ಶಿವತತ್ವವನ್ನು ವಾಗೀಶನು ಬೋಧಿಸಲು ಯಾವಾಗಲೂ ಶಿವಸ್ಮರಣೆ ಶಿವಗಾನದಲ್ಲಿಯೇ ಮಗ್ನರಾಗಿದ್ದುದನ್ನು ಶಿವನು ನೊಡಿ ಸಂತೋಷಪಟ್ಟು ಇವರನ್ನು ಕೈಲಾಸಕ್ಕೆ ಕರೆದುಕೊಂಡು ಗಣಪದವಿಯನ್ನಿತ್ತನು.

೩೭. ವಾಗೀಶ

ಚೋಳದೇಶದ ಮಧುರೆ ಪಟ್ಟಣದಲ್ಲಿ ಧರ್ಮಶೇಖರ ಸೂರಿಯೆಂಬ ಒಬ್ಬ ಜೈನಮತದ ಬ್ರಹ್ಮಚಾರಿಯು ಮಹಾ ಪಂಡಿತನಾಗಿದ್ದನು. ಈತನಿಗೆ ತೆಲ್ಲಿವೆಲ್ಲಿ ನಾಚಿ ಎಂಬ ಒಬ್ಬ ಅಕ್ಕನಿದ್ದಳು.

ಅವಳು ಜೈನ ಧರ್ಮವನ್ನು ತ್ಯಜಿಸಿ ಮಹಾ ಶಿವಭಕ್ತಳಾಗಿ ತಿರಿವರಿಯೆಂಬ ಪಟ್ಟಣದಲ್ಲಿ ಶಿವಲಿಂಗ ಪೂಜಾ ಲೋಲಳಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದಳು. ತನ್ನ ತಮ್ಮನಿಗೆ ೬೦ ವರುಷಗಳಾದರೂ ಇನ್ನೂ ಜೈನಮತದ ಹುಚ್ಚು ಬಿಡಲೊಲ್ಲೊದೇ? ಶಿವನೇ, ಆತನಲ್ಲಿ ನಿನ್ನ ಭಕ್ತಿಯುಂಟಾಗಬಾರದೇ? ಎಂದು ಶಿವನನ್ನು ಬೇಡಿಕೊಳ್ಳುತ್ತಿದ್ದಳು.

ಧರ್ಮಶೇಖರ ಸೂರಿಗೆ ಭಯಂಕರವಾದ ಹೃದಯ ಶೂಲಿಯ ರೋಗವುಂಟಾಯಿತು. ಯಾವ ವೈದ್ಯರಿಂದಲೂ ಈ ರೋಗನಿವಾರಣೆಯಾಗದಿರಲು ತನ್ನ ಅಕ್ಕನ ಬಳಿಗೆ ಬಂದು ಇದಕ್ಕುಪಾಯವೇನೆಂದು ಕೇಳಲು ನೀನು ಶಿವಭಕ್ತನಾಗು, ಇಗೋ ಭಸ್ಮದ ಮಹತ್ವ ನೋಡೆಂದು ಭಸ್ಮವನ್ನು ಧರಿಸಲು ರೋಗ ನಿವಾರಣೆಯಾಯಿತು. ಆಗ ಶಿವಭಕ್ತನಾಗಿ ವಾಗೀಶನೆಂಬ ಹೆಸರನ್ನಿಟ್ಟುಕೊಳ್ಳಲು ಜೈನರು ಹಿಂಸೆಪಡಿಸಿದುದನ್ನು ತಾಳಿಕೊಂಡು ಶಿವಧ್ಯಾನಯಲ್ಲಿಯೇ ಮಗ್ನವಾದುದನ್ನು ಶಿವನು ನೋಡಿ ಸಂತೋಷಪಟ್ಟು ಗಣಪದವಿಯನ್ನಿತ್ತನು.

೩೮. ಪಿಳ್ಳೆ ನಾಯನಾರು

ಅಥವಾ

ತಿರುಜ್ಞಾನ ಸಂಬಂಧಿಗಳು

ಪಾಂಡ್ಯರಾಜ್ಯದ ಚೇಯಾಳಿಯೆಂಬಪುರದಲ್ಲಿ ಮಹೇಶ್ವರಭಟ್ಟನೆಂಬೊಬ್ಬ ಶೈವ ಬ್ರಾಹ್ಮಣನಿದ್ದನು. ಈತನಿಗೆ ಮಹಾದೇವಿಯೆಂಬ ಒಬ್ಬ ಧರ್ಮಪತ್ನಿಯಿದ್ದಳು. ಈ ದಂಪತಿಗಳಿಗೆ ಶಿವಾಜ್ಞೆಯಂತೆ ಷಣ್ಮುಖನೇ ಮಗುವಾಗಿ ಜನಿಸಿದನು. ಆತನಿಗೆ ನಾಯನಾರೆಂಬ ಹೆಸರಿಟ್ಟರು. ಶಿವ ಕೃಪೆಯಿಂದ ಈ ಮಗುವಿಗೆ ಮೊದಲನೆಯ ವರುಷದಲ್ಲಿಯೇ ಶಿವದೀಕ್ಷೆಯಾಗಿ ೭ನೇ ವರ್ಷದಲ್ಲಿಯೇ ಅದ್ವಿತಿಯವಾದ ಶಿವಜ್ಞಾನ ಲಭಿಸಿತು. ಆದುದರಿಂದ ಇವರಿಗೆ ತಿರುಜ್ಞಾನಸಂಬಂಧಿಗಳೆಂಬ ಹೆಸರೂ ಬಂದಿತು. ಇವರು ಮಹಾಜ್ಞಾನಿಗಳಾಗಿದ್ದರೂ ವಯಸ್ಸಿನಲ್ಲಿ ಬಾಲಕಾಗಿದ್ದ ಕಾರಣ ಪಿಳ್ಳೆ ಎಂದರೆ ಬಾಲನಾಯನಾರೆಂದು ಕರೆದರು.

ಏಳನೆಯ ವರ್ಷದಲ್ಲಿಯೇ ಜೈನ ಮತದ ಮಧುರೆಯ ಕೂನ ಪಾಂಡ್ಯರಾಜನಿಗೆ ಶಿವದೀಕ್ಷೆಯನ್ನು ಕೊಟ್ಟು ಆ ರಾಜ್ಯದ ಜೈನ ಪಂಡಿತರನ್ನು ವಾದದಲ್ಲಿ ಸೋಲಿಸಿ ೧೨ ಸಾವಿರ ಜೈನರನ್ನು ರಾಜನಿಂದ ಶೂಲಕ್ಕೆ ಹಾಕಿಸಿ ಮಹಾಮಹಿಮರಾಗಿ ಶಿವಮತ ಪ್ರಸಾರ ಮಾಡಿ ಕೊನೆಗೆ ಶಿವಲಿಂಗದಲ್ಲಿ ಬೆರೆತರು.

೩೯. ಕುಲಶ್ಚರ್ಯ

ಪಾಂಡ್ಯರಾಜ್ಯದ ಮಧುರೆ ಪಟ್ಟಣದಲ್ಲಿ ಕೂನ ಪಾಂಡ್ಯನೆಂಬ ಜೈನಮತದ ರಾಜನು ರಾಜ್ಯವಾಳುತ್ತಿದ್ದನು. ಆ ರಾಜ್ಯದಲ್ಲಿ ಜೈನಮತ ಪ್ರಸಾರವಾಗಿ ಶಿವಮತವು ಕ್ಷೀಣವಾಗಿದ್ದಿತು. ರಾಜನಲ್ಲಿ ಕುಲಶ್ಚರ್ಯನೆಂಬ ಒಬ್ಬ ಚತುರನಾದ ಮಂತ್ರಿಯಿದ್ದನು. ಈತನು ಶಿವಮತ ಪ್ರೇಮಿಯಾಗಿದ್ದನು. ಜಿನಮತ ಪ್ರಾಬಲ್ಯವು ಈತನಿಗೆ ಬಹುದುಃಖವನ್ನುಂಟು ಮಾಡಿದ್ದಿತು. ಎಲ್ಲೆಲ್ಲಿಯೂ ಜೈನಮತದ ಹಾವಳಿಯುಂಟಾದುದು ಈತನಿಗೆ ವಿಷಾದಕರವಾಗಿದ್ದಿತು.

ತಿರುಜ್ಞಾನ ಸಂಬಂಧಿಗಳ ಮಹಿಮೆಯಿಂದ ರಾಜನು ಶಿವಭಕ್ತನಾಗಲು ಈತನಿಗೆ ಬಹು ಸಂತೋಷವಾಯಿತು. ಆ ಪಿಳ್ಳೆ ನಾಯನಾರಲ್ಲಿ ಬಹುಭಕ್ತಿಯುಳ್ಳವನಾಗಿ ಶಿವಮತ ಪ್ರಸಾರಣೆಗೆ ವಿಶೇಷ ಸಹಾಯ ಮಾಡಿದನು. ಜೈನರು ವಾದದಲ್ಲಿ ಸೋಲಲು, ಗೊತ್ತಾದ ಪ್ರಕಾರ ೧೨ ಸಾವಿರ ಜೈನರನ್ನು ಶೂಲಕ್ಕೇರಿಸಲು ಈ ಮಂತ್ರಿಯು ಮುಂದಾಳಾಗಿದ್ದನು. ಈತನ ಶಿವಭಕ್ತಿ ಶಿವಮತ ಪ್ರಸಾರಣೆಗಳಿಗೆ ಶಿವನು ಮೆಚ್ಚಿ ಗಣಪದವಿಯನ್ನಿತ್ತನು.

೪೦. ಸೌಂದರ ಪಾಂಡ್ಯ

ಪಾಂಡ್ಯ ರಾಜ್ಯದ ಮಧುರೆ ಪಟ್ಟಣದಲ್ಲಿ ಜೈನಮತದ ಸೌಂದರಪಾಂಡ್ಯನೆಂಬ ರಾಜನು ರಾಜ್ಯವಾಳುತ್ತಿದ್ದನು. ಈತನಿಗೆ ಕೂನಪಾಂಡ್ಯನೆಂತಲೂ ಹೇಳುತ್ತಿದ್ದರು. ಈತನು ಜೈನಮತವನ್ನು ಬಹುಪ್ರಸಾರಗೊಳಿಸಿದನು. ಶೈವಮತದ ಪಗಲ್ಚೋಳ ರಾಜನ ತಂಗಿಯಾದ ಮಂಗಾಯಕ್ಕಳೆಂಬ ಮಹಾ ಶಿವಭಕ್ತಳನ್ನು ಈತನು ಬಲಾತ್ಕಾರವಾಗಿ ತಂದು ತನಗೆ ಸತಿಯಾಗಬೇಕೆಂದು ಪ್ರಯತ್ನಿಸಿದನು.

ಈ ರಾಜನಿಗೆ ಭಯಂಕರವಾದ ಉರಿಬೇನೆಯುಂಟಾಗಿ ಯಾವ ವೈದ್ಯ ಮಂತ್ರತಂತ್ರಗಳಿಂದಲೂ ಗುಣವಾಗದಿರಲು ಮಂಗಾಯಕ್ಕಳ ಉಪದೇಶದಂತೆ ತಿರುಜ್ಞಾನ ಸಂಬಂಧಿಗಳಿಂದ ಭಸ್ಮ ಧಾರಣೆಯನ್ನು ಹೊಂದಿ ನಿರೋಗಿಯಾಗಲು ಕೊನೆಗೆ ಶಿವಮತವನ್ನು ಸ್ವೀಕರಿಸಿದನು. ಆ ಮೇಲೆ ತನ್ನ ರಾಜ್ಯದಲ್ಲಿದ್ದ ಜೈನರೆಲ್ಲರೂ ಶಿವಭಕ್ತರಾಗಲು ವಿಶೇಷವಾಗಿ ಪ್ರಯತ್ನಿಸಿದನು. ತಿರುಜ್ಞಾನಸಂಬಂಧಿಗಳಿಂದ ಸೋತ ೧೨ ಸಾವಿರ ಜೈನರನ್ನು ಶೂಲಕ್ಕೇರಿಸಿದನು. ಈತನ ಶಿವಭಕ್ತಿಗೂ ಶಿವಮತ ಪ್ರಸಾರಣೆಗೂ ಶಿವನು ಮೆಚ್ಚಿ ಗಣಪದವಿಯನ್ನಿತ್ತನು.

೪೧. ಮಂಗಾಯಕ್ಕ

ಚೋಳರಾಜ್ಯದಲ್ಲಿ ವಿಕ್ರಮಚೋಳನೆಂಬ ರಾಜನು ರಾಜ್ಯವಾಳುತ್ತಿದ್ದನು. ಈತನಿಗೆ ಪಗಲ್ಚೋಳನೆಂಬ ಮಹಾ ಪರಾಕ್ರಮಶಾಲಿಯಾದ ಮಗನು ಮತ್ತು ಮಂಗಾಯಕ್ಕನೆಂಬ ಮಹಾ ಶಿವಭಕ್ತಳಾದ ಮಗಳು ಇದ್ದರು. ಈ ಮಹಾ ಶಿವಭಕ್ತಳ ಗುಣರೂಪ ಯೌವನಗಳಿಗೆ ಸೌಂದರಪಾಂಡ್ಯ ರಾಜನು ಮೋಹಿಸಿ ಕಪಟೋಪಾಯುಗಳಿಮದ ಮಂಗಾಯಕ್ಕನನ್ನು ಅಪಹರಿಸಿ ತಂದು ತನ್ನ ಸತಿಯಳಾಗೆಂದು ಕೇಳಿಕೊಂಡನು.

ಈ ಮಹಾ ಶಿವಭಕ್ತಳು ಜೈನ ಮತದರಸನಾದ ಆ ಕೂನಪಾಂಡ್ಯನನ್ನು ಲಗ್ನವಾಗಲು ಒಪ್ಪದೆ ಈ ರಾಜನಿಗೆ ಶಿವಭಕ್ತಿಯುಂಟಾಗಲೆಂದು ಶಿವನನ್ನು ಬೇಡಿಕೊಳ್ಳುತ್ತಿದ್ದಳು.

ಈ ಮಹಾ ಭಕ್ತಳ ಪ್ರಾರ್ಥನೆಯ ಪ್ರಕಾರ ತಿರುಜ್ಞಾನ ಸಂಬಂಧಿಗಳು ಮಧುರೆಗೆ ಆಗಮಿಸಿ ಸೌಂದರ ಪಾಂಡ್ಯನ ರೋಗ ನಿವಾರಣೆ ಮಾಡಿ ಶಿವದೀಕ್ಷೆಯನ್ನಿತ್ತ ನಂತರ ಮಂಗಾಯಕ್ಕನು ಪಾಂಡ್ಯ ರಾಜನ ಸತಿಯಳಾಗಿ ಶರ್ವಾಣಿಯೆಂಬ ಸುಪುತ್ರಿಯನ್ನು ಪಡೆದು ಶಿವಮತ ಪ್ರಸಾರಣೆಗೆ ಬಹು ಸಹಾಯ ಮಾಡಿದಳು. ಶಿವನು ಇವಳ ಶಿವಭಕ್ತಿಗೂ ಶಿವಮತ ಪ್ರಸಾರಣೆಗೂ ಮೆಚ್ಚಿ ಗಣಪದವಿಯನ್ನಿತ್ತನು.

೪೨. ವೇಳ್ಕುತ್ತರು

ಚೋಳದೇಶ ಮಣಿಮಂದಪತ್ತೂರೆಂಬ ಪುರದಲ್ಲಿ ವೇಳ್ಕುತ್ತರೆಂಬ ಮಹಾ ಗುರುಭಕ್ತರಿದ್ದರು. ಗುರುಗಳನ್ನು ಬಿಟ್ಟರಗಳಿಗೆಯಾದರೂ ಇವರು ಇರುತ್ತಿರಲಿಲ್ಲ.

ಮೇಳ್ಕುತ್ತರು ತಮ್ಮ ಗುರುಗಳಿಗೆ ತನುಮನಧನ ಅಭಿಮಾನಾದಿ ಎಲ್ಲವನ್ನೂ ನಿರ್ವಂಚನೆಯಿಂದರ್ಪಿಸಿ ಮನೆಯನ್ನೇ ಮರೆತು ಬಿಟ್ಟಿದ್ದರು. ಗುರುಗಳಾದರೋ ಇವರ ಅಚಲ ಗುರುಭಕ್ತಿಯನ್ನು ನೋಡಿ ತಾವು ಇವರ ಮೇಲೆ ನಿರತಿಶಯವಾದ ಪ್ರೇಮವನ್ನಿಟ್ಟು ಏನನ್ನೂ ಮರೆಮಾಚದೆ ಹೇಳುತ್ತಿದ್ದರು.

ಮಗು, ನೀನು ಈ ರೀತಿ ಮನೆಬಿಟ್ಟಿರಬೇಡ. ನಮ್ಮ ಪಾದುಕೆಗಳೇ ನಾವೆಂದು ತಿಳಿದು ಅವುಗಳನ್ನು ನಿನ್ನ ಹತ್ತಿರ ಇಟ್ಟುಕೊಂಡು ಮನೆಯಲ್ಲಿರೆಂದು ಗುರುಗಳು ಅಪ್ಪಣೆ ಮಾಡಲು ಅದೇ ಪ್ರಕಾರ ವೇಳ್ಕುತ್ತರ ಪಾದುಕೆಗಳನ್ನು ಪ್ರತಿನಿತ್ಯ ಗುರುವೆಂದು ಪೂಜಿಸುತ್ತಿರಲು, ಒಂದು ದಿನ ಶಿವನು ಇವರ ಗುರುಭಕ್ತಿಯನ್ನು ನೋಡಲು ಇವರಿಗೆ ತನ್ನ ನಿಜಸ್ವರೂಪವನ್ನು ತೋರಿಸಿದನು. ಇವರು ಶಿವನಿಗೆ ನಮಸ್ಕಾರ ಮಾಡಲಿಲ್ಲ. ಏಕೆಂದರೆ ಇವರ ತಲೆಯ ಮೇಲೆ ಗುರುಗಳ ಪಾದುಕೆಗಳಿದ್ದವು. ಗುರು ಪಾದುಕೆಗಿಂತ ಶಿವನು ಹೆಚ್ಚಿನವನಲ್ಲವೆಂಬ ಇವರ ಗುರುಭಕ್ತಿಗೆ ಶಿವನು ಮೆಚ್ಚಿ ಗಣಪದವಿಯನ್ನಿತ್ತನು.

೪೩. ಕುಳಚಂಗರು

ಚೋಳ ದೇಶದ ತಿರುವೆಯ್ಯೂರೆಂಬ ಪಟ್ಟಣದಲ್ಲಿ ಕುಳಚಂಗನೆಂಬ ರಾಜನು ರಾಜ್ಯವಾಳುತ್ತಿದ್ದನು. ಈತನು ಮಹಾ ಶಿವಭಕ್ತನಾಗಿದ್ದನು. ಶಿವಲಿಂಗಪೂಜೆಯಲ್ಲಿ ಈ ರಾಜನಿಗೆ ಬಹುಪ್ರೇಮ. ಲಿಂಗಪೂಜೆಗೆ ಉತ್ತಮೋತ್ತಮ ಪತ್ರೆ ಪುಷ್ಪಗಳು ಬೇಕೆಂದು ಬಹು ರಮ್ಯವಾದ ಒಂದು ಹೂದೋಟವನ್ನು ಮಾಡಿಸಿದ್ದನು.

ಈ ಮಹಾಭಕ್ತನು ಪ್ರತಿನಿತ್ಯ ತಾನೇ ನಸುಕಿನಲ್ಲಿ ತೋಟಕ್ಕೆ ಹೋಗಿ ಕೋಮಲವಾದ ಪತ್ರೆಗಳನ್ನೂ ಸುಂದರವಾದ ಮಲ್ಲಿಗೆ ಸೇವಂತಿಗೆ ಮೊದಲಾದ ಹೂವುಗಳನ್ನೂ ಎತ್ತಿಕೊಂಡು ಬಂದು ಮನೋಹರವಾದ ಮಾಲೆಗಳನ್ನು ಮಾಡಿ ಶಿವಲಿಂಗಕ್ಕೆ ಧರಿಸಿ ಪೂಜಿಸುತ್ತಿದ್ದನು.

ಒಂದು ದಿವಸ ಪ್ರತಿನಿತ್ಯದಂತೆ ತನ್ನ ಸತಿಯನ್ನು ಸಂಗಡ ಕರೆದುಕೊಂಡು ಶಿವಾಲಯಕ್ಕೆ ಹೋಗಿ ಶಿವಲಿಂಗವನ್ನು ಪೂಜಿಸುತ್ತಿರುವಾಗ ಅಲ್ಲಿದ್ದ ಸುಂದರವಾದ ಹೂಮಾಲೆಗಳಲ್ಲಿ ಒಂದನ್ನು ಈತನ ಹೆಂಡತಿಯು ತನಗೆ ಮುಡಿದುಕೊಳ್ಳಲುಬೇಕೆಂದು ತೆಗೆದಿಟ್ಟುಕೊಳ್ಳಲು ಕುಳಚಂಗರು ಇದನ್ನು ನೋಡಿ ಶಿವನ ಹೂಮಾಲೆಯನ್ನು ಅಪಹರಿಸಿದಿಯಾ ಭ್ರಷ್ಟಳೇ? ಎಂದು ಅಲ್ಲಿದ್ದ ಖಡ್ಗವನ್ನು ತೆಗೆದುಕೊಂಡು ಅವಳ ಕೈಯನ್ನು ಕತ್ತರಿಸಿಬಿಟ್ಟರು. ಶಿವನು ಇವರ ಭಕ್ತಿಗೆ ಮೆಚ್ಚಿ ಗಣಪದವಿಯನ್ನಿತ್ತನು.

೪೪. ಸಾಂಖ್ಯ ನಾಯನಾರು

ಚೋಳದೇಶದ ಆರೂರೆಂಬ ಪಟ್ಟಣದಲ್ಲಿ ಸಾಂಖ್ಯನಾಯನಾರೆಂಬ ಮಹಾಶಿವಭಕ್ತರಿದ್ದರು. ಇವರಲ್ಲಿದ್ದ ಶಿವಭಕ್ತಿ ಶಿವಪೂಜಾ ಕ್ರಮಗಳೆಲ್ಲ ಬಹು ವಿಚಿತ್ರವಾದವುಗಳು. ಇವರು ಶಿವಭಕ್ತರ ದನಕಾಯುವ ಕಾಯಕವನ್ನು ಮಾಡುತ್ತಿದ್ದರು.

ಅಡವಿಗೆ ದನಗಳನ್ನು ಹೊಡೆದುಕೊಂಡು ಹೋದಾಗ ಚಿಕ್ಕ ಚಿಕ್ಕ ಗುಂಡುಕಲ್ಲುಗಳನ್ನಾರಿಸಿಕೊಂಡು ಅವುಗಳಿಂದ ಅಲ್ಲಿದ್ದ ಶಿವಲಿಂಗಕ್ಕೆ ಪ್ರತಿನಿತ್ಯ ತಪ್ಪದೆ ಹೊಡೆಯುತ್ತಿದ್ದರು. ಇದೇ ಈ ಸಾಂಖ್ಯನಾಯರ ಪೂಜೆಯು! ಆ ಕಿರಿಗಲ್ಲುಗಳೇ ಪತ್ರೆ ಪುಷ್ಪಗಳು! ಆ ಪ್ರಕಾರ ಹೊಡೆದ ನಂತರವೇ ತಾವು ಊಟ ಮಾಡುತ್ತಿದ್ದರು.

ಶಿವನು ಇವರ ಭಕ್ತಿಯನ್ನು ನೋಡಲು ಒಂದಲ್ಲ ಎರಡಲ್ಲ ಇಪ್ಪತ್ತು ದಿವಸಗಳವರೆಗೆ ಕಿರಿಗಲ್ಲುಗಳು ಹೊರೆಯದಂತೆ ಮಾಡಿದನು. ಆದುದರಿಂದ ಇವರು ಇಪ್ಪತ್ತು ದಿನಗಳವರೆಗೆ ಉಪವಾಸದಿಂದಿದ್ದರು. ಆ ಮೇಲೆ ಒಂದೇ ಒಂದು ಬಹುದೊಡ್ಡದಾದ ಗುಂಡುಗಲ್ಲು ದೊರೆಯಲು ಇಪ್ಪತ್ತು ದಿನಗಳ ಪೂಜೆಯನ್ನು ಈ ದಿನವೇ ಮಾಡುವೆನೆಂದು ಆ ಕಲ್ಲನ್ನೆತ್ತಿ ಶಿವಲಿಂಗದ ತಲೆಯ ಮೇಲೆ ಹಾಕುವದರೊಳಗಾಗಿ ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೪೫. ಓಹಿಲರು

ಚೋಳದೇಶದ ಪೊನ್ನೆಯೆಂಬ ಪಟ್ಟಣದಲ್ಲಿ ಓಹಿಲರೆಂಬ ಮಹಾ ಶಿವಭಕ್ತರಿದ್ದರು. ಇವರಿಗೆ ವಾಹಿತ್ಯರೆಂತಲೂ ಹೇಳುವುದುಂಟು. ಇವರು ಪ್ರತಿನಿತ್ಯ ಸಮುದ್ರದ ನೀರಿನಿಂದ ಶಿವಲಿಂಗಕ್ಕೆ ಅಭಿಷೇಕವನ್ನು ಮಾಡಿ ತಮ್ಮ ತೂಕದಷ್ಟು ಗುಗ್ಗುಳವನ್ನು ಶಿವಲಿಂಗದ ಮುಂದೆ ಸುಡುತ್ತಿದ್ದರು. ಇದಕ್ಕಾಗಿ ಒಂದು ಕುಂಡವನ್ನೇ ಮಾಡಿದ್ದರು.

ಇವರು ಈ ವ್ರತವನ್ನು ಅನೇಕ ವರುಷಗಳವರೆಗೆ ನಡೆಸಿದ ನಂತರ ಗುಗ್ಗುಳಕ್ಕೆ ಹಣವಿಲ್ಲದಂತಾಯಿತು. ಆಗ ಅಡವಿಯಿಂದ ತಾವೇ ಗುಗ್ಗುಳವನ್ನು ತೆಗೆದುಕೊಂಡು ಬರಲಾರಂಭಿಸಿದರು. ಇದರಿಂದ ಬೇರೆ ಕಾಯಕವಿಲ್ಲದೆ ಊಟಕ್ಕೂ ಇಲ್ಲದಂತಾಗಲು ಶಿವಪೂಜೆ ಮಾಡಿದ ಪತ್ರೆ ಪುಷ್ಪಗಳನ್ನು ಸೇವಿಸಿ ತಮ್ಮ ಗುಗ್ಗುಳದ ವ್ರತವನ್ನು ನಡೆಯಿಸಿದರು.

ಕೆಲವು ದುಷ್ಟರು ಇವರಿಗೆ ಶಿವ ನಿರ್ಮಾಲ್ಯದ ಪತ್ರೆ ಪುಷ್ಪಗಳೂ ದೊರೆಯಬಾರದೆಂದು ಅವುಗಳನ್ನು ಸುಡಹತ್ತಿದರು. ಆಗ ಆ ಬೂದಿಯನ್ನು ಸೇವಿಸಿ ತಮ್ಮ ವ್ರತವನ್ನು ನಡೆಸಿದರು. ಶಿವನು ಇವರ ಪರಮ ಭಕ್ತಿಗೆ ಮೆಚ್ಚಿ ನಿಜರೂಪತೋರಿ ಗಣಪದವಿಯನ್ನಿತ್ತನು.

೪೬. ಚಿರುತೊಣೆಯಾಂಡರು

ಚೋಳದೇಶದ ತಿರಿಪಾದರಿ ಎಂಬ ಪಟ್ಟಣದಲ್ಲಿ ಚಿರುತೊಣಿಯಾಂಡರೆಂಬ ಒಬ್ಬ ಮಹಾ ಶಿವಭಕ್ತರಿದ್ದರು ಇವರು ಶಿವಲಿಂಗ ಪೂಜೆಯಲ್ಲಿ ಬಹು ಭಕ್ತಿಯುಳ್ಳವರಾಗಿದ್ದರು.

ಪಟ್ಟಣದ ಶಿವಲಿಂಗ ಪೂಜೆಗೆ ನಾನಾ ತರದ ಪುಷ್ಪಗಳುಬೇಕೆಂದು ಒಂದು ರಮ್ಯವಾದ ಹೂದೋಟವನ್ನು ಮಾಡಿದ್ದರು. ಶಿವಲಿಂಗಪೂಜೆಗಲ್ಲದೆ ಬೇರೆ ಕೆಲಸಕ್ಕೂ ಆ ತೋಟದ ಹೂವುಗಳನ್ನು ಯಾರೂ ತೆಗೆದುಕೊಳ್ಳುತ್ತಿರಲಿಲ್ಲ.

ಒಂದು ದಿವಸ ಈ ಚಿರುತೊಣೆಯಾಂಡರು ತಮ್ಮ ತೋಟದಿಂದ ನಾನಾ ತರದ ಬಹು ಸುಗಂಧ ಪುಷ್ಪಗಳನ್ನು ತೆಗೆದುಕೊಂಡು ಬಂದು ಅವುಗಳ ಹಾರವನ್ನು ಮಾಡುತ್ತಿರುವಾಗ ಅವರ ಪತ್ನಿಯು ಹೂಗಳನ್ನು ತೆಗೆದುಕೊಂಡು ಮೂಸಿ ನೊಡಿದಳು. ಇದನ್ನು ಇವರು ನೋಡಿ ಶಿವಪೂಜೆಗೆ ಮೀಸಲಾಗಿದ್ದ ಹೂವುಗಳನ್ನು ಮೂಸಿದಿಯಾ ನೀಚಳೇ? ಎಂದು ಕೋಪದಿಂದ ಅವಳ ಮುಗನ್ನೇ ಕೊಯ್ಯಿದುಬಿಟ್ಟರು. ಆಗ ಶಿವನು ಇವರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೪೭. ಕಳಚತ್ತಿಯಾಂಡರು

ಚೋಳದೇಶದ ಕಣಂಜಿ ಪಟ್ಟಣದಲ್ಲಿ ಕಳಚತ್ತಿಯಾಂಡರೆಂಬ ಮಹಾ ಶಿವಭಕ್ತರಿದ್ದರು. ಇವರು ಶಿವನಿಂದೆ, ಶಾವಾಚಾರನಿಂದೆ, ಶಿವಲಾಂಚನಗಳ ನಿಂದೆಯುನ್ನು ಸಹಿಸದೆ ಅವುಗಳನ್ನುಂಟುಮಾಡುವವರನ್ನು ಸಂಹರಿಸಿ ಗಣಾಚಾರ ನಿಷ್ಠರಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದರು.

ಒಂದು ದಿನ ಶಿವನು ಇವರ ಗಣಾಚಾರದ ನಿಷ್ಠೆಯನ್ನು ನೋಡಬೇಕೆಂದು ಮನುಷ್ಯಾಕಾರದಿಂದ ಬಂದು ಅಯ್ಯಾ ಬೂದಿ ಬಡಕರಾದ ಜಂಗಮರು ಪರಮಾತ್ಮನ ಸ್ವರೂಪವೇ? ಸುಡುಗಾಡದಲ್ಲಿರುವ ಶಿವನು ಪರಮಾತ್ಮನೇ? ಎಂದು ಕಳಚತ್ತಿಯಾಂಡರಿಗೆ ಪ್ರಶ್ನೆ ಮಾಡಿದನು.

ಈ ಕರ್ಣ ಕಠೋರವಾದ ಶಬ್ದಗಳನ್ನು ಕೇಳಿದೊಡನೆ ಇವರಿಗೆ ಬಹು ಭಯಂಕರವಾದ ಕೋಪವುಂಟಾಗಿ ಹತ್ತಿರದಲ್ಲಿದ್ದ ಕಠಾರಿಯನ್ನು ತೆಗೆದುಕೊಂಡು ದುರುಳನೇ ನಿನ್ನನ್ನು ಈಗಲೇ ಸಂಹಾರ ಮಾಡುತ್ತೇನೆಂದು ಗರ್ಜಿಸಿ ಆತನನ್ನು ಹಿಡಿದು ಕಠಾರಿಯಿಂದ ಶಿರಸ್ಸನ್ನು ಕತ್ತರಿಸುವುದರೊಳಗಾಗಿ ಶಿವನು ಪ್ರತ್ಯಕ್ಷನಾಗಿ ಇವರ ಗಣಾಚಾರಕ್ಕೆ ಗಣಪದವಿಯನ್ನಿತ್ತನು.

೪೮. ಕೊಲ್ಲುಲಿಯಾಂಡರು

ಚೋಳದೇಶದ ತಿರುವಣ್ಣಮಾಲೆಯೆಂಬ ಪಟ್ಟಣದಲ್ಲಿ ಕೊಲ್ಪುಲಿಯಾಂಡನೆಂಬ ಮಹಾ ಶಿವಭಕ್ತನಾದ ಧನಿಕನಿದ್ದನು. ಈತನು ಪ್ರತಿನಿತ್ಯ ತನ್ನಲ್ಲಿ ಬಂದ ಜಂಗಮರಿಗೆ ಸುಖಭೋಜನ ವಸ್ತ್ರಾದಿಗಳನ್ನು ಅರ್ಪಿಸಿ ಸಂತೋಷಪಡಿಸುತ್ತಿದ್ದನು.

ಈತನು ದ್ವೀಪಾಂತರಗಳಿಗೆ ವ್ಯಾಪಾರಕ್ಕೆ ಹೋಗಬೇಕಾಯಿತು. ಮುಂದೆ ಬರಗಾಲ ಬರುವ ಲಕ್ಷಣ ತೋರಿತು. ಆದುದರಿಂದ ಮನೆಯ ತಾಯಿತಂದೆ ಸತಿಸುತರಿಗೆಲ್ಲ ನಾನಿಲ್ಲದಾಗ ಬರಗಾಲದಲ್ಲಿ ಕೂಡಾ ಈಗಿನಂತೆಯೇ ಜಂಗಮತೃಪ್ತಿ ನಡೆಯಬೇಕೆಂದು ತಿಳಿಸಿ ವ್ಯಾಪಾರಕ್ಕೆ ಹೋದನು.

ಮುಂದೆ ಬರಗಾಲ ಬರಲು ಈತನ ನೆಂಟರೆಲ್ಲಾ ಮನೆಗೆ ಬಂದು ಸೇರಿಕೊಂಡದ್ದರಿಂದ ಜಂಗಮ ತೃಪ್ತಿ ಸರಿಯಾಗಿ ನಡೆಯಲಿಲ್ಲ. ಈತನು ದ್ವೀಪಾಂತರಗಳಿಂದ ಬಂದ ನಂತರ ನಡೆದ ಸಂಗತಿಯನ್ನು ಕೇಳಿ ಬಹು ದುಃಖಿತನಾಗಿ ನೆಂಟರನ್ನೆಲ್ಲಾ ಕರೆಯಿಸಿ ಮನೆಯೊಳಗಿರಿಸಿ ಬಾಗಿಲು

ಹಾಕಿ ಎಲ್ಲರ ಶಿರಚ್ಛೇದ ಮಾಡಲು ಶಿವನು ಈತನ ಜಂಗಮ ದಾಸೋಹಕ್ಕೆ ಮೆಚ್ಚಿ ನಿಜರೂಪ ತೋರಿ ಅವರೆಲ್ಲರಿಗೂ ಪ್ರಾಣದಾನ ಮಾಡಿ ಈತನಿಗೆ ಗಣಪದವಿಯನ್ನಿತ್ತನು.

೪೯. ತಂಡೇಶ

ಚೋಳದೇಶದ ಸಲ್ಲೀಲೆ ಪಟ್ಟಣದಲ್ಲಿ ಒಬ್ಬ ಬ್ರಾಹ್ಮಣನಿದ್ದನು. ಆತನ ಹೆಂಡತಿಯು ಮಹಾ ಶಿವಭಕ್ತಳಾಗಿದ್ದಳು. ಈ ದಂಪತಿಗಳಿಗೆ ಒಬ್ಬ ಸುಕುಮಾರನು ಹುಟ್ಟಿದನು. ಆತನ ಹೆಸರು ತಂಡೇಶ.

ಈ ಬಾಲಕನು ಲಿಂಗಪೂಜೆಯ ಆಟದಲ್ಲಿಯೇ ಬಹು ಪ್ರೇಮಿಯಾಗಿದ್ದನು. ಇದು ತಾಯಿಗೆ ಬಹು ಪ್ರೀತಿಕರವಾಗಿದ್ದರೂ ತಂದೆಗೆ ಬಹು ಕೋಪಕರವಾಗಿದ್ದಿತು. ಮಗನ ಲಿಂಗಪೂಜೆಯ ಆಟವನ್ನು ತಪ್ಪಿಸಬೇಕೆಂದು ಆತನಿಗೆ ತನ್ನಲ್ಲಿದ್ದ ಗೋವುಗಳನ್ನು ಕಾಯುವ ಕೆಲಸಕ್ಕೆ ನಿಯಮಿಸಿದನು.

ತಂಡೇಶನು ಗೋವುಗಳನ್ನು ಮೇಯಿಸಿ ಅಲ್ಲಿಯೂ ಮಳಲಿನಿಂದ ಲಿಂಗವನ್ನು ಮಾಡಿ ಗೋವುಗಳ ಹಾಲಿನಿಂದ ಅಭಿಷೇಕ ಮಾಡಿ ಪೂಜಿಸಲಾರಂಭಿಸಿದನು. ಈ ಸಂಗತಿಯು ದನಕಾಯುವ ಹುಡುಗರಿಂದ ತಂದೆಗೆ ತಿಳಿಯಲು ಒಂದು ದಿನ ತಂಡೇಶನು ಲಿಂಗಕ್ಕೆ ಹಾಲಿನಿಂದ ಹೆಚ್ಚಾಗಿ ಅಭಿಷೇಕ ಮಾಡಿ ಪೂಜಿಸುತ್ತಿದ್ದುದನ್ನು ಕಂಡು ಬಹು ಕೋಪದಿಂದ ಆ ಲಿಂಗವನ್ನು ಹಾಳುಮಾಡಿದನು. ಆಗ ತಂಡೇಶನು ಲಿಂಗದ್ರೋಹಿಯಾದ ಆತನ ಶಿರಚ್ಛೇದ ಮಾಡಲು ಶಿವನು ಈತನ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಆ ತಂದೆಯನ್ನು ಬದುಕಿಸಿ ತಂಡೇಶನಿಗೆ ಗಣಪದವಿಯನ್ನಿತ್ತನು.

೫೦. ಕಲಿಯ ನಾಯನಾರು

ಚೋಳದೇಶದ ತಿರುವತ್ತೂರು ಪಟ್ಟಣದಲ್ಲಿ ಕಲಿಯನಾಯನಾರೆಂಬ ಮಹಾ ಧನಿಕನಾದ ಶಿವಭಕ್ತನು ಪ್ರತಿನಿತ್ಯ ಒಂದು ಲಕ್ಷ ದೀಪಗಳನ್ನು ಹಚ್ಚಿ ಲಿಂಗಪೂಜೆಮಾಡುವ ವ್ರತವನ್ನು ಕೈಕೊಂಡಿದ್ದನು. ಈ ಮಹಾ ವ್ರತವು ಕೆಲವು ವರ್ಷಗಳವರೆಗೆ ನಡೆಯಲು ಹಣವೆಲ್ಲ ಹೋಗಿ ಬಹು ಬಡತನ ಬಂದಿತು.

ಅಯ್ಯೋ ಇನ್ನು ಲಕ್ಷ ದೀಪಗಳ ವ್ರತಕ್ಕೆ ಎಣ್ಣೆಯಿಲ್ಲವಲ್ಲಾ ಇನ್ನೇನು ಮಾಡಲಿ? ಎಂದು ಚಿಂತಿಸುತ್ತಾ ಐದು ದಿನಗಳವರೆಗೆ ಲಿಂಗಪೂಜೆ ಊಟೋಪಚಾರಗಳಿಲ್ಲದೆ ಶಿವಚಿಂತೆಯಲ್ಲಿಯೇ ಇದ್ದನು. ಆಗ ಈತನಿಗೆ ಒಂದು ಯೋಚನೆ ಹೊಳೆಯಿತು. ಆಗ ಬಹು ಸಂತೋಷದಿಂದ ಸ್ನಾನಮಾಡಿ ಶಿವಪೂಜೆಗೆ ಸಿದ್ಧನಾಗಿ ಎಣ್ಣೆಯ ಕಡಾಯಿಯವನ್ನು ಮುಂದಿಟ್ಟುಕೊಂಡು ಶಿವನೇ ಎಣ್ಣೆಯನ್ನು ನೀನು ನನ್ನ ದೇಹದಲ್ಲಿಯೇ ಇಟ್ಟಿಲ್ಲವೇ? ಎಂದು ಹೇಳಿ ಬಲವಾದ ಶಸ್ತ್ರವನ್ನು ದೇಹದಲ್ಲಿ ಚುಚ್ಚಿಕೊಳ್ಳಲು ಶಿವಕೃಪೆಯಿಂದ ಯಥೇಚ್ಛವಾದ ಎಣ್ಣೆ ಬಂದಿತು. ಶಿವನು ಈತನ ಅಪಾರ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೫೧. ಐಯಡಿಯರು

ಚೋಳದೇಶದ ತಿರುವಣ್ಣವೆಂಬ ಪಟ್ಟಣದಲ್ಲಿ ಐಯಡಿಯನೆಂಬ ರಾಜನು ರಾಜ್ಯವಾಳುತ್ತಿದ್ದನು. ಈತನು ಮಹಾ ಶಿವಭಕ್ತನಾಗಿದ್ದನು. ಶಿವಾಲಯಗಳನ್ನು ಹೊಸದಾಗಿ ನಿರ್ಮಿಸಿ ಅವುಗಳ ಪೂಜೆ ವ್ಯವಸ್ಥೆಗಳಿಗಾಗಿಯೂ ವಿಶೇಷವಾದ ಹಣವನ್ನು ವೆಚ್ಚ ಮಾಡುತ್ತಿದ್ದನು.

ಜಗತ್ತಿನಲ್ಲಿಲ್ಲದಂಥ ಒಮದು ಭವ್ಯವಾದ ಶಿವಾಲಯವನ್ನು ನಿರ್ಮಿಸಬೇಕೆಂದು ರಾಜನು ಯೋಚಿಸಿ ಅಪಾರವಾದ ಹಣವನ್ನು ವೆಚ್ಚ ಮಾಡಿ ಭವ್ಯ ಶಿವಾಲಯವನ್ನು ಕಟ್ಟಿಸಿದನು. ಆ ಶಿವಾಲಯದ ಸೊಬಗನ್ನು ನೋಡಿ ಅತ್ಯಾನಂದದಿಂದಲೂ ಶಿವಭಕ್ತಿಯ ಉದ್ರೇಕದಿಂದಲೂ ಆ ಶಿವಾಲಯದ ಹತ್ತಿರ ನಿಂತು ತನ್ನ ಕಣ್ಣಿಗೆ ತೋರಿದ ಗ್ರಾಮಗಳನ್ನೆಲ್ಲಾ ಶಿವಪೂಜಾ ಧುರೀಣರಿಗೆ ದಾನವಾಗಿ ಕೊಟ್ಟನು.

ಈ ಪ್ರಕಾರ ಶಿವಭಕ್ತಿಲೋಲನಾದ ಈ ರಾಜನು ಒಂದು ದಿನ ಲಿಂಗಪೂಜಾನಿರತನಾಗಿದ್ದಾಗ ಶಿವನು ಈತನ ಭಕ್ತಿಗೆ ಮೆಚ್ಚಿ ನಿಜರೂಪ ತೋರಿ ಗಣಪದವಿಯನ್ನಿತ್ತನು.

೫೨. ಚಿರುತೊಂಡರು

ಚೋಳದೇಶದ ಕಾಂಚಿಪುರದಲ್ಲಿ ಚಿರುತೊಂಡನೆಂಬ ಒಬ್ಬ ಬಹು ಧನಿಕನಾದ ವೈಶ್ಯ ಶಿವಭಕ್ತನಿದ್ದನು. ಈತನಿಗೆ ಸಿರಿಯಾಳನೆಂತಲೂ ಹೇಳುತ್ತಿದ್ದರು. ಅನ್ನದಾನದಲ್ಲಿ ಈತನಿಗೆ ಸರಿಯಾದವರು ಯಾರೂ ಇರಲಿಲ್ಲ. ಚಂಗಳೆಯೆಂಬ ಧರ್ಮಪತ್ನಿಯು ಈತನ ಅನ್ನದಾನದ ಮಹಾ ಕಾರ್ಯಕ್ಕೆ ಬಹು ಸಹಾಯಕಳಾಗಿದ್ದಳು. ಈ ದಂಪತಿಗಳಿಗೆ ಚಿಲ್ಲಾಳನೆಂಬ ಒಬ್ಬ ಸುಕುಮಾರನಿದ್ದನು.

ಸಿರಿಯಾಳನ ಅನ್ನದಾನದ ನಿಷ್ಠೆಯನ್ನು ಪರೀಕ್ಷಿಸಬೆಕೆಂದು ಶಿವನು ಕಾಪಾಲಿಕ ಮತದ ಭೈರವ ರೂಪದಿಂದ ಬಂದು; "ಭಕ್ತನೇ, ನಮ್ಮ ವ್ರತದಂತೆ ನಮಗೆ ಅಹಾರಕೊಟ್ಟರೆ ಸೇವಿಸುವೆ" ಎಂದು ಹೇಳಿದನು. ಸಿರಿಯಾಳನು ಇದಕ್ಕೆ ಒಪ್ಪಿದ್ದರಿಂದ ಭೈರವನು ತಾಯಿತಂದೆಗಳು ತಮ್ಮ ಮಗನನ್ನು ಸಂಹರಿಸಿ ಆತನ ಮಾಂಸವನ್ನು ಅರ್ಪಿಸಬೇಕು, ಮಗನ ಶಿರಸ್ಸನ್ನಾದರೊ ತಾಯಿಯೇ ಸ್ವಲ್ಪವಾದರೂ ದುಃಖಿಸದೆ ಕತ್ತರಿಸಬೇಕೆಂದು ಹೇಳಲು ಸಿರಿಯಾಳ ಮತ್ತು ಚಂಗಳೆಯರು ತಮ್ಮ ಮಗನಾದ ಚಿಲ್ಲಾಳನನ್ನು ಸಂತೋಷದಿಂದ ಸಂಹರಿಸಲು ಶಿವನು ಇವರ ಭಕ್ತಿಗೆ ಮೆಚ್ಚಿ ಮಗುವಿಗೆ ಪ್ರಾಣದಾನ ಮಾಡಿ ಎಲ್ಲರಿಗೂ ಗಣಪದವಿಯನ್ನಿತ್ತನು.

೫೩. ಅತಿಭಕ್ತನು

ಚೋಳದೇಶದ ತಿರುವಣ್ಣಪುರದಲ್ಲಿ ಅತಿಭಕ್ತನೆಂಬ ಒಬ್ಬ ಮಹಾ ಶಿವಭಕ್ತನಿದ್ದನು. ಇತನು ಆ ಪಟ್ಟಣದ ತಿರುವಣ್ಣ ಎಂಬ ನದಿಯಲ್ಲಿ ಪ್ರತಿನಿತ್ಯ ಮೀನುಗಳನ್ನು ಹಿಡಿದು ಮಾರಿ ಜೀವಿಸುತ್ತಿದ್ದನು. ಈತನು ಬೆಸ್ತರ ಜಾತಿಯವನಿದ್ದರೂ ಶಿವನಲ್ಲಿ ಬಹು ಭಕ್ತಿಯುಳ್ಳವನಾಗಿದ್ದನು.

ತಾನು ಮೀನವನ್ನು ಹಿಡಿಯಲಿಕ್ಕೆ ಹೋದಾಗ ಮೊದಲು ದೊರೆತ ಮೀನವು ಶಿವನಿಗೆ ಸಲ್ಲಲೆಂದು ಅದನ್ನು ತೆಗೆದುಕೊಳ್ಳದೆ ನೀರಿನಲ್ಲಿ ಬಿಟ್ಟುಬಿಡುತ್ತಿದ್ದನು. ಇದೊಂದು ಈತನ ವ್ರತವೇ ಆಗಿದ್ದಿತು. ಶಿವನು ಈತನ ಈ ವ್ರತ ಪರೀಕ್ಷಿಸಬೇಕೆಂದು ಒಂದು ದಿವ್ಯವಾದ ಮೀನವು ಒಂದು ದಿನ ಮೊದಲು ದೊರೆತ ನಂತರ ಪುನಃ ಎಲ್ಲಿ ಹೋಗಿ ಎಷ್ಟು ಸಾರೆ ಮೀನುಗಳನ್ನು ಹಿಡಿಯಲು ಪ್ರಯತ್ನಿಸಿದರೂ ಪುನಃ ಅದೇ ಮೀನವು ದೊರೆಯುವಂತೆ ಮಾಡಿದನು. ಇದು ಆ ಅತಿಭಕ್ತನಿಗೆ ಆಶ್ಚರ್ಯವಾಗಿ ತೋರಿ ಶಿವನು ನನಗೆ ಈ ಉದ್ಯೋಗವನ್ನು ಬಿಡಲು ಈ ಪ್ರಕಾರ ಮಾಡಿರುವನೆಂದು ತಿಳಿದು ಅಂದಿನಿಂದಲೇ ಮೀನ ಹಿಡಿಯುವ ಪಾಪಕಾರ್ಯವನ್ನು ಬಿಟ್ಟು ಶಿವಪೂಜೆ ಶಿವಧ್ಯಾನಗಳಲ್ಲಿಯೇ ಆಸಕ್ತನಾಗಿರಲು ಶಿವನು ಮೆಚ್ಚಿ ಗಣಪದವಿಯನ್ನಿತ್ತನು.

೫೪. ಕಣಂಬುಲ್ಲ ನಂಬಿ

ಚೋಳದೇಶದ ಕಣಂಬೂರೆಂಬಲ್ಲಿ ನಂಬಿ ಎಂಬ ಮಹಾ ಶಿವ ಭಕ್ತನಿದ್ದನು. ಈತನು ಕಟ್ಟಿಗೆ ಮಾರಾಟ ಮಾಡಿ ಜೀವಿಸುತ್ತಿದ್ದನು.

ಒಂದು ದಿನ ಕಟ್ಟಿಗೆಗಾಗಿ ಅಡವಿಗೆ ಹೋದಾಗ ಅಲ್ಲಿ ಒಂದು ಶಿವಾಲಯವನ್ನು ಕಂಡನು. ಅಲ್ಲಿದ್ದ ಶಿವಲಿಂಗಕ್ಕೆ ನಮಸ್ಕರಿಸಿ ಆ ಲಿಂಗಮೂರ್ತಿಯನ್ನು ಪೂಜಿಸಬೇಕೆಂದು ಬಹು ಸಂತೋಷದಿಂದ ಸ್ನಾನ ಮಾಡಿ ಪತ್ರೆ ಪುಷ್ಪಾದಿಗಳನ್ನು ತೆಗೆದುಕೊಂಡು ಬಂದು ಸಂಜೆಯವರೆಗೂ ಪೂಜೆಯನ್ನು ಮಾಡಿದನು. ರಾತ್ರೆ ಶಿವನಿಗೆ ಕತ್ತಲಲ್ಲಿ ಅಂಜಿಕೆಯುಂಟಾಗಬಹುದೆಂದು ಹುಲ್ಲನ್ನು ತಂದಿಟ್ಟು ಅಷ್ಟಷ್ಟೇ ಹುಲ್ಲನ್ನು ಸುಡುತ್ತ ಯಾವಾಗಲೂ ಬೆಳಕಿರುವಂತೆ ಮಾಡಿದನು. ಅನಂತರ ಪ್ರತಿನಿತ್ಯ ರಾತ್ರೆ ಇದೇ ಪ್ರಕಾರ ಹುಲ್ಲು ಸುಡುವ ವ್ರತವನ್ನು ಕೈಕೊಂಡನು.

ಶಿವನು ಈತನ ಭಕ್ತಿಯನ್ನು ನೋಡಲು ಒಂದು ದಿನ ರಾತ್ರೆ ಒಮ್ಮೆಲೇ ಎಲ್ಲಾ ಹುಲ್ಲು ಸುಟ್ಟು ಹೋಗುವಂತೆ ಮಾಡಲು ಈ ಭಕ್ತನು ತನ್ನ ತಲೆಯ ಮೇಲಿನ ಕೂದಲುಗಳಿಗೇನೇ ಬೆಂಕಿ ಹಚ್ಚಿಕೊಂಡು ಬೆಳಕು ಮಾಡಿದುದನ್ನು ಶಿವನು ನೋಡಿ ಮೆಚ್ಚಿ ಈತನಿಗೆ ನಿಜರೂಪ ತೋರಿ ಗಣಪದವಿಯನ್ನಿತ್ತನು.

೫೫. ಎಳೆಯಾಂಡ ಗುಡಿಮಾರರು

ಚೋಳದೇಶದ ಎಳೆಯಾಂಡ ಗ್ರಾಮದಲ್ಲಿ ಗುಡಿಮಾರನೆಂಬ ಮಹಾ ಧನಿಕನಾದ ಶಿವಭಕ್ತನಿದ್ದನು. ಈತನು ಶೂದ್ರಕುಲದಲ್ಲಿ ಹುಟ್ಟಿದ್ದರೂ ಅನ್ನದಾನ ಮಾಡುವುದರಲ್ಲಿ ಬಹು ಪ್ರೀತಿಯುಳ್ಳವನಾಗಿದ್ದನು. ಕೆಲವು ವರುಷಗಳಲ್ಲಿ ಈತನಿಗೆ ಬಡತನ ಬಂದಿತು. ತನ್ನ ಜೀವನ ನಡೆಯುವುದೇ ಕಷ್ಟವಾಯಿತು. ಇಂತಹ ಸಮಯದಲ್ಲಿ ಶಿವನು ಈತನ ನಿಷ್ಠೆಯನ್ನು ಪರೀಕ್ಷಿಸಲು ಆ ಊರಲ್ಲಿ ಒಂದು ದಿನ ವಿಶೇಷವಾಗಿ ಮಳೆ ಸುರಿಯುವಂತೆ ಮಾಡಿದನು. ಜನರು ಹೊರಗೆ ಹೋಗುವುದು ಸಾಧ್ಯವಿಲ್ಲದಂತಾಯಿತು. ಆಗ ಮಧ್ಯರಾತ್ರೆಯಲ್ಲಿ ಶಿವನು ಒಬ್ಬ ಮುದುಕನಾಗಿ

ಈತನ ಮನೆಗೆ ಬಂದು ಚಳಿಯಾಗಿದೆ, ಹೊಟ್ಟೆ ಹಸಿದಿದೆ ಎಂದು ಹಲುಬ ಹತ್ತಿದನು. ಆಗ ಮನೆಯ ಜಂತಿಯನ್ನು ತೆಗೆದು ಉರಿಮಾಡಿ ಗದ್ದೆಯಲ್ಲಿ ಬಿತ್ತಿದ್ದ ಬತ್ತಗಳನ್ನು ರಾತ್ರೆ ತಂದು ಅಕ್ಕಿಯ ಮಾಡಿ, ಮಗನನ್ನು ಬಾಳೆಯಕಾಯಿಗೆ ಹಿತ್ತಲಲ್ಲಿ ಕಳುಹಿಸಿದಾಗ ಆ ಮಗನಿಗೆ ಹಾವು ಕಡಿದು ಸತ್ತರೂ ಚಿಂತಿಸದೆ ಆ ಮುದುಕನ ಊಟಕ್ಕೆ ಸಿದ್ಧಗೊಳಿಸಿದ್ದನ್ನು ಶಿವನು ನೋಡಿ ಸಂತೋಷಪಟ್ಟು ನಿಜರೂಪ ತೋರಿ ಆ ದಂಪತಿಗಳಿಗೂ ಮಗನಿಗೂ ಗಣಪದವಿಯನ್ನಿತ್ತನು.

೫೬. ಅಡವಘೆಯ ಪೆರುಮಾಳೆಯರು

ಚೋಳದೇಶದ ತಿರುನಾಗ ಪಟ್ಟಣದಲ್ಲಿ ಅಡವಘೆಯ ಪೆರುಮಾಳೆಯೆಂಬ ಶಿವಭಕ್ತ ಶಿರೋಮಣಿಯಾದ ರಾಜನಿದ್ದನು. ಈತನಿಗೆ ಬಹು ಪ್ರಿಯನಾದ ಧನಪಾಲನೆಂಬ ಮಹಾಶಿವಭಕ್ತ ಧನಿಕನು ಬಡಜನಗಳ ಪೋಷಣೆಯಲ್ಲಿ ನಿರತನಾಗಿದ್ದನು.

ಒಂದು ಸಾರೆ ಆ ನಾಡಿನಲ್ಲಿ ಬರಗಾಲವುಂಟಾಯಿತು. ಜನರು ಹೊಟ್ಟೆಗಿಲ್ಲದೆ ಬಹು ಬಳಲ ಹತ್ತಿದರು. ಆಗ ಧನಪಾಲನು ತನ್ನ ಮೂರು ಸಾವಿರ ಬತ್ತದ ಕಣಜಗಳಲ್ಲಿಯ ಎಲ್ಲ ಧಾನ್ಯವನ್ನು ಬಡವರಿಗೆ ದಾನಮಾಡಿ ಬಹು ಜನರನ್ನು ರಕ್ಷಿಸಿ ವಿಶೇಷ ಕೀರ್ತಿ ಪಡೆದನು. ರಾಜನು ಈತನ ಸಮಯೋಚಿತ ದಾನವನ್ನು ನೋಡಿ ತಾನು ಈ ಪ್ರಕಾರ ದಾನ ಮಡಿ ಪುಣ್ಯ ಪಡೆಯಲಿಲ್ಲವಲ್ಲಾ ಎಂದು ದುಃಖಿಸಿ ಒಂದು ದಿನ ಧನಪಾಲನ ಮನೆಗೆ ಹೋಗಿ ನಾನು ಕೇಳಿದುದನ್ನು ಕೊಡುವಿಯಾ? ಎಂದು ಪ್ರಶ್ನೆ ಮಾಡಿದನು. ಆಗ ಧನಪಾಲನು ಕೊಡುವೆನೆಂದು ಬಿನ್ನಯಿಸಿಕೊಳ್ಳಲು ನಾನು ನನ್ನ ರಾಜ್ಯವನ್ನು ನಿನಗೆ ಕೊಡುತ್ತೇನೆ. ಬರಗಾಲದಲ್ಲಿ ಅನ್ನದಾನದಿಂದ ಸಂಪಾದಿಸಿದ ಪುಣ್ಯವನ್ನು ನನಗೆ ಕೊಡೆಂದು ಕೇಳಿದನು. ಧನಪಾಲನು ಅದೇ ಪ್ರಕಾರ ಮಾಡಿದನು. ಶಿವನು ರಾಜನ ತ್ಯಾಗಕ್ಕೆ ಮೆಚ್ಚಿ ಗಣಪದವಿಯನ್ನಿತ್ತನು.

೫೭. ಇಹಃಪಗೆಯಾಂಡ

ಚೋಳದೇಶದ ಕಾವೇರಿ ಪಟ್ಟಣದಲ್ಲಿ ಇಹಃಪಗೆಯಾಂಡನೆಂಬ ಮಹಾ ಶಿವಭಕ್ತನಾದ ರಾಜನಿದ್ದನು. ಈತನು ಜಂಗಮರು ಕೇಳಿದುದನ್ನು ಕೊಡುವ ವ್ರತವುಳ್ಳವನಾಗಿ ಬಹು ಪ್ರಸಿದ್ಧಿಯನ್ನು ಹೊಂದಿದ್ದನು, ಈತನಿಗೆ ಒಂದು ನೂರು ಹೆಂಡಂದಿರಿದ್ದರು. ಅವರಲ್ಲಿ ರತ್ನಾವತಿಯೆಂಬ ಹೆಂಡತಿಯು ಬಹು ಸುಂದರಳೂ ಸದ್ಗುಣ ಸದಾಚಾರಶೀಲಳೂ ಆಗಿದ್ದು ರಾಜನಿಗೆ ಬಹು ಪ್ರಿಯಳಾಗಿದ್ದಳು. ಈ ರಾಜನಿಗೆ ಸಿಂಧುಬಲ್ಲಾಳನೆಂತಲೂ ಹೇಳುತ್ತಿದ್ದರು.

ಒಂದು ದಿನ ಶಿವನು ಈತನ ದಾನಗುಣವನ್ನು ಪರೀಕ್ಷಿಸಬೇಕೆಂದು ಬಹು ಮನೋಹರವಾದ ಜಂಗಮ ರೂಪವನ್ನು ತಾಳಿ ಸಿಂಧುಭಲ್ಲಾಳನಲ್ಲಿಗೆ ಬಂದು ನಾನು ಕೇಳಿದುದನ್ನು ಕೊಡುವಿಯಾ? ಎಂದು ಪ್ರಶ್ನೆಮಾಡಿದನು. ರಾಜನು ಸಂತೋಷದಿಂದ ಕೊಡುವೆನೆಂದು ಹೇಳಲು ಆತನ ನೂರು ಜನ ರಾಣಿಯರನ್ನೂ ಕರೆಯಿಸಿ ಅವರಲ್ಲಿ ಸುಂದರಳಾದ ರತ್ನಾವತಿಯನ್ನು ನನಗೆ ಕೊಡೆಂದು

ಹೇಳಿದನು. ಆಗ ಸಿಂಧು ಬಲ್ಲಾಳನು ಬಹು ಭಕ್ತಿಯಿಂದ ಆ ಸತಿಯನ್ನು ಜಂಗಮಮೂರ್ತಿಗರ್ಪಿಸಿ ದಾರಿಯಲ್ಲಿ ಸೆಳೆದುಕೊಂಡು ಹೋಗಲು ಬಂದಿದ್ದ ರತ್ನಾವತಿಯ ಸಂಬಂಧಿಗಳನ್ನು ಸಂಹರಿಸಲು ಶಿವನು ಮೆಚ್ಚಿ ಎಲ್ಲರಿಗೂ ಪ್ರಾಣದಾನಮಾಡಿ ಈತನಿಗೆ ನಿಜರೂಪ ತೋರಿ ಗಣಪದವಿಯನ್ನಿತ್ತನು.

೫೮. ಮೆರೆಮಿಂಡದೇವ

ಚೋಳದೇಶದ ತಿರುವಾರೂರೆಂಬ ಸ್ಥಳದಲ್ಲಿ ಮೆರೆಮಿಂಡದೇವನೆಂಬ ಗಣಾಚಾರ ವ್ರತನಿಷ್ಠನಾದ ಒಬ್ಬ ಮಹಾ ಶಿವಭಕ್ತನಿದ್ದನು. ಈತನು ಶಿವಭಕ್ತರ ದುಃಖ ಮಾನಹಾನಿಗಳನ್ನು ಸ್ವಲ್ಪವೂ ಸಹಿಸದೆ ಅಂಥವುಗಳನ್ನುಂಟುಮಾಡಿದವರಿಗೆ ಕೂಡಲೇ ಶಿಕ್ಷಿಸುತ್ತಿದ್ದನು.

ಒಂದು ದಿನ ಸೌಂದರ ನಂಬೆಣ್ಣನು ಶಿವಾಲಯದಲ್ಲಿ ಹೋಗುವಾಗ ಅಲ್ಲಿದ್ದ ಶಿವಶರಣರಿಗೆ ಶರಣಾರ್ಥಿಯೆಂದು ವಂದಿಸದಿರಲು ಮೆರಮಿಂಡದೇವನು ಕೋಪಗೊಂಡು ಆತನ ಶಿರಚ್ಛೇದ ಮಾಡುವೆನೆಂದು ಬೆನ್ನಟ್ಟಿದನು. ಆಗ ನಂಬೆಣ್ಣನು ಭಯಪಟ್ಟು ಶಿವನ ಮೊರೆಹೋಗಲು ಶಿವನು ನನ್ನ ಭಕ್ತರಿಗೆ ವಂದಿಸದೆ ಈ ಪ್ರಕಾರ ಅವರನ್ನು ನಿರ್ಲಕ್ಷಿಸಬಹುದೇ? ಇದು ಸರಿಯಲ್ಲ. ಈ ತಪ್ಪಿಗಾಗಿ ಆ ಶರಣ ಶ್ರೇಷ್ಠನಾದ ಮೆರೆಮಿಂಡದೇವನಿಗೆ ಶರಣಾಗತನಾಗೆನಲು ನಂಬೆಣ್ಣನು ತಪ್ಪಾಯಿತೆಂದು ಶರಣು ಹೋದನು. ಆಗ ಮೇರೆಮಿಂಡದೇವನು ಇಂಥ ಸುಶೀಲನಾದ ಶಿವಭಕ್ತನನ್ನು ಕೊಲ್ಲಲು ಪ್ರಯತ್ನಿಸಿದೆನಲ್ಲಾ ಎಂದು ದುಃಖಿಸಿ ಆ ತಪ್ಪಿಗಾಗಿ ನಾನೇ ನನ್ನ ಶಿರಸ್ಸನ್ನು ಕತ್ತರಿಸಿಕೊಳ್ಳಬೇಕೆಂದು ಶಿರಸ್ಸಿಗೆ ಕಠಾರಿಯನ್ನು ಚುಚ್ಚಿಕೊಳ್ಳಲು ಶಿವನು ಈತನ ಭಕ್ತಿಗೆ ಮೆಚ್ಚಿ ನಿಜರೂಪತೋರಿ ಗಣಪದವಿಯನ್ನಿತ್ತನು.

೫೯. ಚಾರಮನು

ಚೋಳದೇಶದ ಕುಂಡಗನೂರೆಂಬ ಪಟ್ಟಣದಲ್ಲಿ ಚಾರಮನೆಂಬ ಮಹಾ ಶಿವಭಕ್ತನಾದ ರಾಜನು ರಾಜ್ಯವಾಳುತ್ತಿದ್ದನು. ಈತನು ಶಿವಪೂಜಾಲೋಲನಾಗಿದ್ದನು. ಈತನ ಲಿಂಗಪೂಜಾತಿಶಯಕ್ಕೆ ಶಿವನು ಮೆಚ್ಚಿ ಪೂಜೆಯ ಕಾಲದಲ್ಲಿ ತನ್ನ ಪಾದಗಳ ಗೆಜ್ಜೆಯಿಂದ ಮಂಜುಳ ನಾದವನ್ನು ಮಾಡುತ್ತಿದ್ದನು.

ಚಾರಮರಾಜನು ಪ್ರತಿನಿತ್ಯ ಶಿವನ ಪಾದದ ಗೆಜ್ಜೆಗಳ ಸ್ವರವನ್ನು ಕೇಳಿ ನಲಿನಲಿದಾಡಿ ಆನಂದಾತಿಶಯದಿಂದ ಶಿವನ ಸ್ತುತಿಯನ್ನು ಮಾಡುತ್ತಿದ್ದನು. ಒಂದು ದಿನ ಆ ಮಂಜುಳ ಸ್ವರವು ಕೇಳದಿರಲು ದುಃಖಿತನಾಗಿ "ಶಿವನೇ ನನ್ನ ಮೇಲೇಕೆ ಕೋಪಿಸಿದೆ?" ಎಂದು ಬೇಡಿಕೊಳ್ಳಲು ನಾನು ಸೌಂದರನಂಬೆಣ್ಣನ ಸ್ತುತಿಯ ಕಡೆಗೆ ಲಕ್ಷಿಸಿದ್ದೆನೆಂದು ಆಕಾಶವಾಣಿಯಾಗಲು ಚಾರಮರಾಜನು ಆ ಮಹಾ ಭಕ್ತನ ದರ್ಶನ ಹೊಂದಬೇಕೆಂದು ಯೋಚಿಸಿ ಸೌಂದರನಂಬೆಣ್ಣನಲ್ಲಿಗೆ ಹೋಗಿ ಆತನ ಕೃಪೆಗೆ ಪಾತ್ರನಾಗಿ ಆತನ ಸಂಗಡ ಕೈಲಾಸಕ್ಕೆ ತೆರಳಿ ಅಲ್ಲಿ ನಂದೀಶನಿಂದ ಉಪದೇಶವನ್ನು ಹೊಂದಿ ಶಿವಸನ್ನಿಧಿಯನ್ನು ಸೇರಿದನು.

೬೦. ಕುರುಂಬರು

ಚೋಳ ಮಂಡಲದ ಪೆರಮಳವಿಯೆಂಬ ಪಟ್ಟಣದಲ್ಲಿ ಕುರುಂಬನೆಂಬ ಮಹಾ ಶಿವಭಕ್ತನಾದ ರಾಜನಿದ್ದನು. ಈತನು ಶಿವಪೂಜೆ, ಶಿವಧ್ಯಾನ ಶಿವಶರಣರ ಸಹವಾಸಗಳಲ್ಲಿಯೇ ಹೆಚ್ಚು ಕಾಲ ಕಳೆಯುತ್ತ ರಾಜ್ಯಪರಿಪಾಲನೆಯ ಕಾರ್ಯಗಳಲ್ಲಿ ಉದಾಸೀನನಾದನು.

ಒಂದು ದಿನ ಈತನಿಗೆ ಸಂಸಾರದ ವಿಷಯದಲ್ಲಿ ಬಹು ಹೇಯ ಬುದ್ಧಿಯುಂಟಾಯಿತು. ಈ ರಾಜ್ಯ ಧನ ಕನಕಾದಿಗಳೆಲ್ಲ ಶಿವಸೇವೆಗೆ ಪ್ರತಿಬಂಧಕಗಳಾಗಿವೆಯೆಂದು ಯೋಚಿಸಿ ರಾಜ್ಯಕೋಶಗಳನ್ನು ಸಮರ್ಥರಾದ ಅನ್ಯರಿಗೆ ವಹಿಸಿ ತಾನು ಶಿವನನ್ನು ಒಲಿಸಿ ಕೊಂಡ ಸೌಂದರನಂಬೆಣ್ಣನ ಸೇವೆಗಾಗಿ ಹೊರಟುಹೋದನು.

ಅಲ್ಲಿ ಆ ಮಹಿಮನ ಮುಂದೆ ಯಾವಾಗಲೂ ನಂದಿಧ್ವಜವನ್ನು ಹಿಡಿದುಕೊಂಡಿರುವ ಕಾಯಕವನ್ನು ಕೈಕೊಂಡು ನಂಬೆಣ್ಣನ ನೆರಳಿನೋಪಾದಿಯಲ್ಲಿ ಆತನ ಸಂಗಂಡಲೇ ಇದ್ದು ಆತನ ಕೃಪೆಗೆ ಪಾತ್ರನಾಗಿ ಕೈಲಾಸಕ್ಕೆ ತೆರಳಿ ಶಿವಸನ್ನಿಧಿಯನ್ನು ಹೊಂದಿದನು.

೬೧. ಜಡೆಯ ನಯನಾರು

ಚೋಳದೇಶದ ತಿರುವಾವಲೂರೆಂಬ ಪಟ್ಟಣದಲ್ಲಿ ಉತ್ತುಂಗ ಚೋಳನೆಂಬ ಶಿವಭಕ್ತನಾದ ರಾಜನಿದ್ದನು. ಈತನಿಗೆ ನರಸಿಂಗ ಮೊನೆಯರೆಂತಲೂ ಹೇಳುತ್ತಿದ್ದರು. ಈ ರಾಜನಲ್ಲಿ ಸಕಲೈಶ್ವರ್ಯಗಳಿದ್ದರೂ ಪುತ್ರನಿರದಿದ್ದುದರಿಂದ ಬಹು ದುಃಖಿತನಾಗಿದ್ದನು. ಈ ಪಟ್ಟಣದಲ್ಲಿ ಜಡೆಯ ನಯನಾರೆಂಬ ಒಬ್ಬ ಮಹಾ ಶಿವಭಕ್ತನಿದ್ದನು. ಈತನು ಶಿವನನ್ನು ಪ್ರತಿನಿತ್ಯ ಬಹುಭಕ್ತಿಯಿಂದ ಪೂಜಿಸುತ್ತಿದ್ದನು. ಈತನಿಗೆ ಒಬ್ಬ ಧರ್ಮಪತ್ನಿಯಿದ್ದಳು. ಅವಳ ಹೆಸರು ಯಸ್ಯಜ್ಞಾನಿದೇವಿ.

ಈ ದಂಪತಿಗಳಿಗೆ ಶಿವಕೃಪೆಯಿಂದ ಒಬ್ಬ ಮಗನು ಹುಟ್ಟಿದನು. ಆತನ ಹೆಸರು ನಂಬೆಣ್ಣ. ಶಿವನ ಸಂಕೇತದಂತೆ ಈ ಬಾಲಕನು ಆ ಪಟ್ಟಣದ ಉತ್ತುಂಗ ಚೋಳ ರಾಜನಿಗೆ ಮಗನಾಗಿ ಶಿವ ಭಕ್ತಿಯಿಂದ ಶಿವನನ್ನು ಒಲಿಸಿಕೊಂಡನು. ಈ ಮಗನಿಂದ ಜಡೆಯ ನಯನಾರನಿಗೆ ಶಿವಕೃಪೆಯುಂಟಾಗಿ ಗಣಪದವಿ ಲಭಿಸಿತು.

೬೨. ಯಸ್ಯಜ್ಞಾನಿದೇವಿ

ಚೋಳದೇಶದ ತಿರುವಾವಲೂರು ಎಂಬ ಪಟ್ಟಣದಲ್ಲಿ ಉತ್ತುಂಗ ಚೋಳನು ರಾಜ್ಯವಾಳುತ್ತಿರುವಾಗ ಜಡೆಯ ನಯನಾರನೆಂಬ ಒಬ್ಬ ಮಹಾ ಶಿವಭಕ್ತನಿದ್ದನು. ಆತನಿಗೆ ಯಸ್ಯಜ್ಞಾನಿದೇವಿಯೆಂಬ ಮಹಾಸದ್ಗುಣ ಸದಾಚಾರಶೀಲಳಾದ ಪತ್ನಿಯಿದ್ದಳು.

ಈ ದಂಪತಿಗಳಿಗೆ ನಂಬೆಣ್ಣನೆಂಬ ಒಬ್ಬ ಮಗನಿದ್ದನು. ಆ ಮಗನು ೫ ವರುಷದವನಿದ್ದಾಗ ಒಂದು ದಿನ ಮಾರ್ಗದಲ್ಲಿ ಆಡುತ್ತಿದ್ದನು. ಅಷ್ಟರಲ್ಲಿ ಆ ಪಟ್ಟಣದ ರಾಜನ ಪಟ್ಟದಾನೆಯು ಮದವೇರಿ ಬಂದು ಈ ಮಗುವನ್ನು ತನ್ನ ಸೊಂಡಿಲಲ್ಲಿ ತೆಗೆದುಕೊಂಡು ತಲೆಯ ಮೇಲಿಟ್ಟುಕೊಂಡು ಹೋಯಿತು.

ಆಗ ರಾಜನು ತನಗೆ ಮಕ್ಕಳಿಲ್ಲದ್ದರಿಂದ ಶಿವನೇ ಈತನನ್ನು ಮಗನನ್ನಾಗಿ ಕೊಟ್ಟನೆಂದು ತಿಳಿದು ಈ ದಂಪತಿಗಳಲ್ಲಿ ಮಗುವನ್ನು ಕೊಡಿರೆಂದು ಕೇಳಿಕೊಳ್ಳಲು ಯಸ್ಯಜ್ಞಾನಿದೇವಿಯ ಕೊಡಲೊಪ್ಪಿದಳು. ಮುಂದೆ ನಂಬೆಣ್ಣನು ರಾಜನಾಗಿ ಶಿವಭಕ್ತಿಯಿಂದ ಶಿವನನ್ನು ಒಲಿಸಿಕೊಂಡನು. ಈ ಮಗನಿಂದ ಶಿವಕೃಪೆಯು ಯಸ್ಯಜ್ಞಾನಿದೇವಿಗೂ ಪ್ರಾಪ್ತವಾಗಿ ಗಣಪದವಿಯು ಲಭಿಸಿತು.

೬೩. ಸೌಂದರ ನಂಬೇಶ

ಚೋಳದೇಶದ ತಿರುವಾವಲೂರು ಪಟ್ಟನದ ಉತ್ತುಂಗ ಚೋಳ ರಾಜನು ರಾಜ್ಯವಾಳುತ್ತಿದ್ದಾಗ ಜಡೆಯದೇ ನಯನಾರು ಮತ್ತು ಯಸ್ಯಜ್ಞಾನಿದೇವಿಯರೆಂಬ ದಂಪತಿಗಳಲ್ಲಿ ಶಿವಾಜ್ಞೆಯಿಂದ ಜನಿಸಿದ ನಂಬೆಣ್ಣನು ಶಿವನಿಚ್ಛೆಯಂತೆ ಮಗನಾಗಿ ಆ ದೇಶಕ್ಕೆ ದೊರೆಯಾಗಿದ್ದನು.

ಈ ನಂಬೇಶನು ಮಹಾ ಶಿವಭಕ್ತನಾಗಿ ತನ್ನ ಭಕ್ತಿಯ ಪ್ರಭಾವದಿಂದ ಶಿವನನ್ನು ಒಲಿಸಿಕೊಂಡು ಪ್ರತಿನಿತ್ಯ ಒಂದು ಪಡಿ ಹೊನ್ನುಗಳನ್ನು ಶಿವನಿಂದ ಹೊಂದಿ ಗುರು ಜಂಗಮ ಸೇವೆ ಮಾಡುತ್ತಿದ್ದನು. ಈತನಿಗೆ ಸುರರತ್ನಮಾಲೆಯೆಂಬ ರಾಜಕನ್ನಿಕೆಯನ್ನು ಕೊಟ್ಟು ವಿವಾಹ ಮಾಡುವ ಕಾಲದಲ್ಲಿ ಶಿವನು ಈ ವಿವಾಹವನ್ನು, ನಂಬಿಯು ದಾಸಿಯ ಪುತ್ರನೆಂದು ದೂರು ಹೇಳಿ ತಪ್ಪಿಸಿ ಪರವೆ ನಾಚಿಯೆಂಬ ಬಹು ಸುಂದರ ವೇಶ್ಯಾಸ್ತ್ರೀಯಳ ಮೊಲೆಗಳನ್ನು ಕೂಡಾ ಶಿವಲಿಂಗವೆಂದೇ ಭಾವಿಸಲು ಅಲ್ಲಿಯೇ ಶಿವನು ಪ್ರತ್ಯಕ್ಷನಾದನು. ಇದೇ ಪ್ರಕಾರ ಸಂಕಿಲೆನಾಚಿಯೆಂಬ ಕನ್ಯೆಗೂ ನಂಬೆಣ್ಣನಿಗೂ ಶಿವನು ಸಂಬಂಧವನ್ನು ಬೆಳೆಸಿ ಕೊನೆಗೆ ಆತನ ಅಪಾರ ಭಕ್ತಿಗೆ ಮೆಚ್ಚಿ ಗಣಪದವಿಯನ್ನಿತ್ತನು.

❖❖

ಶರಣ ಸಂದೇಶ

ಸಂಪಾದಕರು

ಹರ್ಡೇಕರ ಮಂಜಪ್ಪನವರು

ರಾಜಕೀಯ ಪಾರತಂತ್ರ್ಯ ಮತ್ತು ಅಸ್ಪೃಶ್ಯತೆ ಮೊದಲಾದ ಸಾಮಾಜಿಕ ದಾಸ್ಯತ್ವಗಳ ನಿವಾರಣೆಗಾಗಿ ಪ್ರಯತ್ನಿಸುವಂತೆ ವೀರಶೈವ ಸಮಾಜದಲ್ಲುಂಟಾಗಿರುವ ಕೀಳುಮೇಲುಗಳೆಂಬ ಕುಕಲ್ಪನೆಗಳನ್ನು ಕಳೆದು ಶ್ರೀ ಬಸವಾದಿ ಪ್ರಮಥರ ಮಾರ್ಗವನ್ನು ಪ್ರಸಾರಗೊಳಿಸುವುದೇ ಈ ಪತ್ರಿಕೆಯ ಮುಖ್ಯೋದ್ದೇಶವಾಗಿದೆ.

ವಾರ್ಷಿಕ ಚಂದಾ ಅಂಚೆಯ ವೆಚ್ಚ ಸೇರಿ ೩ ರೂ.

ಮ್ಯಾನೇಜರ್ : ಶರಣ ಸಂದೇಶ

ಪೋ. ಆಲಮಟ್ಟಿ

ಜಿ. ವಿಜಾಪುರ

ವೀರಶೈವ ವಿದ್ಯಾಲಯದ ಗ್ರಂಥಮಾಲೆಯ ಸಂಖ್ಯೆ : ೧೨

॥ಓಂ॥

ತ್ಯಾಗವೀರ ಲಿಂಗರಾಜ ಚರಿತ್ರೆ

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

ಈ ಗ್ರಂಥದ ಸರ್ವಾಧಿಕಾರವು
ವೀರಶೈವ ವಿದ್ಯಾಲಯ ಸಂಸ್ಥೆಗೆ ಸಂಬಂಧಪಟ್ಟಿದೆ

ಕ್ರಿ. ಶ. ೧೯೩೦ ಕ್ರಯ ೧೦ ಆಣೆ ಶಾಶ. ೧೮೫೨

ಈ ಪುಸ್ತಕವು ಆಲಮಟ್ಟಿ ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ ಹರ್ಡೇಕರ
ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ
ಇವರಿಂದಲೇ ಪ್ರಕಟಿಸಲ್ಪಟ್ಟಿತು.

*

ಪೀಠಿಕೆ

ಈ ಪ್ರಪಂಚದಲ್ಲಿ ಅನೇಕ ಮಹಾತ್ಮರು ಹೇಗೆ ತಮ್ಮ ಆತ್ಮಬಲದಿಂದಲೂ ಅನೇಕ ಜ್ಞಾನಿಗಳು ಹೇಗೆ ತಮ್ಮ ಬುದ್ಧಿ ಶಕ್ತಿಯಿಂದಲೂ ಅನೇಕ ಪ್ರರಾಕ್ರಮಿಗಳು ಹೇಗೆ ತಮ್ಮ ಭುಜಬಲದಿಂದಲೂ ಸುಖಶಾಂತಿಗಳನ್ನುಂಟುಮಾಡಿ ಜನಾಂಗಕ್ಕೆ ವಂದ್ಯರಾಗಿದ್ದಾರೆಯೋ ಹಾಗೆಯೇ ಅನೇಕ ಧನಿಕರು ಕೂಡಾ ತಮ್ಮ ಸಂಪತ್ತಿನ ಸದುಪಯೋಗವನ್ನು ಮಾಡಿ ಆದರ್ಶಪ್ರಾಯರಾಗಿದ್ದಾರೆ.

ಸಂಪತ್ತಿನ ಸದುಪಯೋಗವನ್ನು ಮಾಡಿ ಬಹುಜನರಿಗೆ ಮಾರ್ಗದರ್ಶಿಗಳಾದ ವೀರಶೈವ ಸಮಾಜದ, ಇಷ್ಟೇ ಅಲ್ಲ; ಕರ್ನಾಟಕದ ಒಬ್ಬ ಮಹಾಪುರುಷರ ದಿವ್ಯಚರಿತ್ರೆಯನ್ನು ಈ ದಿವಸ ನಮ್ಮ ವಾಚಕರ ಮುಂದಿಟ್ಟಿದ್ದೇವೆ. ಈ ಚರಿತ್ರೆಯಲ್ಲಿ ಪ್ರಕಾಶಿಸುವ ಅದ್ವಿತೀಯವಾದ ತ್ಯಾಗಜ್ಯೋತಿಯಿಂದ ನಮ್ಮ ಸ್ವಾರ್ಥ ತಿಮಿರವು ಸ್ವಲ್ಪವಾದರೂ ನಿವಾರಣೆಯಾದರೆ ಈ ಚರಿತ್ರೆಯಿಂದ ಪ್ರಯೋಜನವಾಯಿತೆಂದು ತಿಳಿಯಬಹುದು.

ಈ ಚರಿತ್ರೆಯ ವಿಷಯಸಂಗ್ರಹಕ್ಕೆ **ಶ್ರೀ ಲಕ್ಕಪ್ಪ ಅವ್ವಪ್ಪ ಶಿರಹಟ್ಟಿ** ಈ ಮಹಾಶಯರು ತುಂಬಾ ಸಹಾಯ ಮಾಡಿದುದರಿಂದ ಇವರಿಗೂ, ಕೈ ಬರವಣಿಗೆಯ ಪ್ರತಿಯನ್ನು ಓದಿ ಯೋಗ್ಯ ತಿದ್ದು ಪಾಟುಗಳನ್ನು ಮಾಡಿದುದರಿಂದ **ಶಿರಸಂಗಿ ಕಾರಭಾರಿ ಶ್ರೀ ಸಿಗ್ಗಲಿ ಬಸವಪ್ಪನವರಿಗೂ ಮತ್ತು ಕಮತಗಿ ಶೆಟ್ಟರ ಶ್ರೀ ಚನ್ನಮಲ್ಲಪ್ಪನವರು, ಉಕ್ಕಲಿ ಶ್ರೀ ಭಿಮನಗೌಡರು** ಮೊದಲಾದ ಅನೇಕ ಮಹಾಶಯರು ಎಷ್ಟೋ ಸಂಗತಿಗಳನ್ನು ತಿಳಿಸಿದುದರಿಂದ ಆ ಎಲ್ಲ ಮಹನೀಯರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ.

ವೀರಶೈವ ವಿದ್ಯಾಲಯ **ಹರ್ಡೇಕರ ಮಂಜಪ್ಪ**

ತಾ. ೨೫-೧೨-೧೯೩೦

❖❖

*

ವಿಷಯಾನುಕ್ರಮಣಿಕೆ

೧ನೆಯ ಪ್ರಕರಣ

ಕಲಿಯ ಕೈಕತ್ತಿ

ಈ ಪ್ರಪಂಚದ ಸಕಲ ಪ್ರಾಣಿಗಳ ಮೇಲೆಯೂ ಮನುಷ್ಯನು ತನ್ನ ಸ್ವಾಮಿತ್ವವನ್ನು ತನ್ನಲ್ಲಿರುವ ದೇಹಶಕ್ತಿಯಿಂದ ಅಥವಾ ಬುದ್ಧಿಶಕ್ತಿಯಿಂದ ಇಲ್ಲವೆ ಇವೆರಡರ ಸಹಾಯದಿಂದ ಸ್ಥಾಪಿಸಲು ಸಮರ್ಥನಾಗಿದ್ಧಾನೆ. ಈ ಉಭಯ ಶಕ್ತಿಗಳಲ್ಲಿ ಬುದ್ಧಿಶಕ್ತಿಯೇ ಮುಖ್ಯವಾದುದಾಗಿದೆ. ದೇಹಶಕ್ತಿಯು ಗೌಣವಾದುದು. ಆದುದರಿಂದಲೇ ಮನುಷ್ಯನು ತನಗಿಂತ ಬಹು ಬಲಶಾಲಿಗಳಾದ ಆನೆ, ಸಿಂಹ ಮೊದಲಾದ ಪಶುಗಳನ್ನು ಕೂಡಾ ತನ್ನ ಬುದ್ಧಿ ಸಾಮರ್ಥ್ಯದಿಂದ ಅವುಗಳನ್ನು ಅಧೀನಪಡಿಸಿಕೊಳ್ಳಲು ಸಮರ್ಥನಾಗಿದ್ಧಾನೆ ಎಂದ ಮೇಲೆ, ಬುದ್ದಿ ಶಾಲಿಗಳಾದ ಜನಾಂಗದವರು ನಿರ್ಬಲರೂ ಆಜ್ಞರು ಆದ ಜನಗಳ ಮೇಲೆ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸುವುದೇನಾಶ್ಚರ್ಯ?

ದೇಹಶಕ್ತಿಯು ಬುದ್ದಿಯಶಕ್ತಿಯಷ್ಟು ಪ್ರಾಮುಖ್ಯವಾದುದಾಗಿರದಿದ್ದರೂ ಅದೇನು, ಉಪೇಕ್ಷಿಸಲ್ಪಡುವಷ್ಟು ಕ್ಷುದ್ರವಾದುದಲ್ಲ. ಎಷ್ಟೋ ಸಂದರ್ಭಗಳಲ್ಲಿ ಬುದ್ದಿಶಕ್ತಿಯ ಕಾರ್ಯವೇ ಸಾಗದಂತೆ ಮಾಡುವಷ್ಟು ಸಾಮರ್ಥ್ಯವು ಕೂಡಾ ಈ ದೇಹಶಕ್ತಿಯಲ್ಲಿದೆ. ಇದು ಇಷ್ಟು ಪ್ರಬಲವಾದುದಾಗಿರುವುದರಿಂದಲೇ ಬುದ್ಧಿಶಕ್ತಿಯು ಜಗತ್ತಿನಲ್ಲಿ ಹೇಗೆ ಅನೇಕ ಕ್ರಾಂತಿಗಳನ್ನುಂಟು ಮಾಡಿದೆಯೋ ಹಾಗೆಯೇ ದೇಹಶಕ್ತಿಯು ಕೂಡಾ ಪ್ರಚಂಡ ವ್ಯತ್ಯಾಸಗಳನ್ನು ಮಾಡಿದೆ.

ಈ ಪ್ರಕಾರ ಈ ಉಭಯ ಶಕ್ತಿಗಳಲ್ಲಿ ಒಂದೊಂದೇ ಇಷ್ಟು ಮಹತ್ವದವುಗಳಾಗಿರುವಾಗ ಈ ಎರಡೂ ಶಕ್ತಿಗಳು ಯಾರಲ್ಲಿ ಕೂಡಿವೆಯೋ ಅವರು ಸರ್ವ ಶ್ರೇಷ್ಠರಾಗುವುದರಲ್ಲಿ ಸಂದೇಹವೇ? ಈ ಉಭಯ ಬಲಗಳುಳ್ಳ ಸಮಾಜವು ಪ್ರಪಂಚದ ಮೇಲೆಯೇ ತನ್ನ ಸ್ವಾಮಿತ್ವವನ್ನು ಸ್ಥಾಪಿಸುವುದು ಸೋಜಿಗವೇ? ಆದುದರಿಂದಲೇ ಯೋಗಿವರೇಣ್ಯನಾದ ಶ್ರೀ ಕೃಷ್ಣನು ಎಲ್ಲಿ ಕೃಷ್ಣಾರ್ಜುನರು ಕೂಡಿರುವರೋ ಎಂದರೆ ಬುದ್ಧಿ ಶಕ್ತಿ ಮತ್ತು ದೇಹಶಕ್ತಿಗಳು ಎಲ್ಲಿ ಕೂಡಿವೆಯೋ ಅಲ್ಲಿ ನಿಶ್ಚಯವಾಗಿಯೂ ಸಂಪತ್ತು ಮತ್ತು ಜಯಗಳು ಲಭಿಸುತ್ತವೆಂಬ ಸಿದ್ಧಾಂತವನ್ನು ಗೀತೆಯ ಕೊನೆಯ ಅಧ್ಯಾಯದ ಕೊನೆಯ ಶ್ಲೋಕದಲ್ಲಿ ಹೇಳಿದ್ದಾನೆ.

ಜನ್ನಾಂಗದ ಸುಖಸೌಲಭ್ಯಗಳಿಗೆ ಮುಖ್ಯ ಸಾಧನಗಳಾದ ಈ ಶಾರೀರಿಕ ಮತ್ತು ಬೌದ್ಧಿಕ ಶಕ್ತಿಗಳು ಪ್ರಾಚೀನ ಭಾರತೀಯರಲ್ಲಿ ಏಕೀಭವಿಸಿದ್ದವು. ಆದುದರಿಂದಲೇ ಅವರು ಆಗಿನ ಪ್ರಪಂಚದ ಬಹು ಭಾಗಗಳಲ್ಲೆಲ್ಲಾ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಿ ಅಪಾರವಾದ ಸಂಪತ್ತಿನಿಂದಲೂ ಘನತರವಾದ

ಗೌರವದಿಂದಲೂ ಜೀವಿಸುತ್ತಿದ್ದರು. ಹಗಲು ರಾತ್ರೆಗಳೂ ಒಂದನ್ನೊಂದು ಹಿಂಬಾಲಿಸುವುದು ಹೇಗೆ ಸ್ವಾಭಾವಿಕವಾಗಿದೆಯೋ ಹಾಗೆಯೇ ಒಂದು ಜನಾಂಗಕ್ಕೆ ಉನ್ನತಾವನತಿಗಳು ಪ್ರಾಪ್ತವಾಗುವುದೂ ಸಹಜವಾಗಿದೆ. ಸಾವಿರಾರು ವರುಷಗಳಿಂದ ಪ್ರಪಂಚದಲ್ಲೆಲ್ಲಾ ಶ್ರೇಷ್ಠಸ್ಥಾನವನ್ನು ಹೊಂದಿ ಶೋಭಿಸುತ್ತಿದ್ದ ಭರತಖಂಡಕ್ಕೆ ೧೨ನೆಯ ಶತಮಾನದಿಂದ ಅವನತಿಯು ಪ್ರಾರಂಭವಾಯಿತು. ಮನೆಯ ಜಗಳವು ಹೇಗೆ ಆ ಮನೆತನದ ನಾಶಕ್ಕೆ ಕಾರಣವಾಗುತ್ತದೆಯೋ ಹಾಗೆಯೇ ದೇಶದಲ್ಲಿ ಒಬ್ಬರನ್ನೊಬ್ಬರು ಹಾಳು ಮಾಡಬೇಕೆಂದು ಪ್ರಾರಂಭವಾಗುವ ರಾಷ್ಟ್ರೀಯ ಕಲಹವು ಆ ರಾಷ್ಟ್ರದ ನಾಶಕ್ಕೇನೇ ಕಾರಣವಾಗುವುದು. ಇಂತಹ ಶೋಚನೀಯವಾದ ರಾಷ್ಟ್ರೀಯ ಅಂತಃಕಲಹವು ಹನ್ನೆರಡನೆಯ ಶತಮಾನದಲ್ಲಿ ಹೆಚ್ಚಿತು. ಆದುದರಿಂದ ಸ್ವದೇಶವನ್ನೂ ಸ್ವಧರ್ಮವನ್ನೂ ಸ್ವಜನಾಂಗವನ್ನೂ ಸಂರಕ್ಷಿಸಲು ಸಾಧನವಾಗಿದ್ದ ಭಾರತೀಯರ ಪೂರ್ವದ ಬುದ್ಧಿಶಕ್ತಿಯು ಪರದೇಶದವರನ್ನೂ ಪರಧರ್ಮದವರನ್ನೂ ಪರಜನಾಂದವರನ್ನೂ ರಕ್ಷಿಸಲು ಉಪಯೋಗವಾಗಲುಪಕ್ರಮಿಸಿತು. ಭಾರತೀಯರ ಪ್ರಭುತ್ವವನ್ನು ಪರದೇಶಗಳಲ್ಲಿ ಸ್ಥಾಪಿಸಲು ವಿನಿಯೋಗಿಸಲ್ಪಟುತ್ತಿದ್ದ ಅಸಾಧಾರಣವಾದ ದೇಹಶಕ್ತಿಯು ಪರದೇಶದವರ ಪ್ರಭುತ್ವವು ಈ ದೇಶದಲ್ಲಿ ನೆಲೆಗೊಳ್ಳಲು ಸಹಾಯವಾಗಹತ್ತಿತು. ಇಷ್ಟೇ ಅಲ್ಲ; ಭಾರತೀಯರ ಅದ್ವಿತೀಯ ಬುದ್ಧಿಸಾಮರ್ಥ್ಯವೂ ಮತ್ತು ಆಶ್ಚರ್ಯಕರವಾದ ಶಾರೀರಿಕ ಬಲವು ಸ್ವದೇಶ ಭಾಂದವರ ಸಂಹಾರಕ್ಕೂ ಸಾಧನಗಳಾದವು. ಆದುದರಿಂದ ಮುಸಲ್ಮಾನರ ಸ್ವಾಮಿತ್ವವು ಈ ದೇಶದಲ್ಲಿ ಸ್ಥಾಪನೆಯಾಯಿತು. ಪರದೇಶದವರು ನಮ್ಮನ್ನು ಗೆದ್ದು ಈ ಪ್ರದೇಶದಲ್ಲಿ ತಮ್ಮ ರಾಜ್ಯವನ್ನೇನೂ ನೆಲೆಗೊಳಿಸಲಿಲ್ಲ. ನಾವೇ ನಮ್ಮವರನ್ನು ಗೆದ್ದು ಅನ್ಯರ ಕೈಗೆ ನಮ್ಮ ರಾಜ್ಯವನ್ನು ಕೊಟ್ಟೆವು. ಇದರಿಂದಲೇ ನಾವು ಪರಾಧೀನರಾಗಿ ಬಾಳಬೇಕಾಯಿತು. ಎಲ್ಲಿಯವರೆಗೂ ನಮ್ಮಲ್ಲಿರತಕ್ಕ ಬುದ್ಧಿಶಕ್ತಿ ಮತ್ತು ದೇಹಶಕ್ತಿಗಳು ಈ ಪ್ರಕಾರ ಸ್ವಜನರ ನಾಶಕ್ಕೂ ಉಪಯೋಗಿಸಲ್ಪಡುವುವೋ ಅಲ್ಲಿಯವರೆಗೂ **ನಮಗೆ ಪಾರತಂತ್ರ್ಯವು ತಪ್ಪುವುದಿಲ್ಲ.**

ಭಾರತೀಯರಾದ ನಮಗೆ ೧೨ನೆಯ ಶತಮಾನದಲ್ಲಿ ಪ್ರಾರಂಭವಾದ ಪರಾಧೀನತೆಯು ದಿನೇ ದಿನೇ ಹೆಚ್ಚಿತು. ಉತ್ತರ ದೇಶದಲ್ಲಿದ್ದ ಮುಸಲ್ಮಾನರ ಪ್ರಭುತ್ವವು ೨-೩ ಶತಮಾನಗಳಲ್ಲಿಯೇ ದಕ್ಷಿಣ ದೇಶದಲ್ಲಿಯೂ ವ್ಯಾಪಿಸಿತು. ಆಗ ಕರ್ನಾಟಕದವರಾದ ನಾವು ಮುಸಲ್ಮಾನರ ಆಳ್ವಿಕೆಗೆ ಆಹುತಿಯಾದೆವು. ಕರ್ನಾಟಕದಲ್ಲಿಯ ಮುಸಲ್ಮಾನರ ಪ್ರಭುತ್ವಕ್ಕೆ ವಿಜಾಪುರವೇ ಕೇಂದ್ರ ಸ್ಥಾನವಾಯಿತು. ಆಗ ಕರ್ನಾಟಕದ ಅನೇಕ ಶೂರರು ವಿಜಾಪುರದ ಬಾದಶಹನ ದಂಡಿನಲ್ಲಿ ಸೇರಿ ತಮ್ಮ ಶೌರ್ಯ ಸಾಹಸಗಳನ್ನು ತೋರಿಸಲುಪಕ್ರಮಿಸಿದರು.

ನಮ್ಮ ಜನರಲ್ಲಿ ಬಹುಕಾಲದಿಂದಲೂ ಸ್ವಾಮಿಭಕ್ತಿಯು ಬೇರೂರಿಕೊಂಡಿದೆ. ಇದರಲ್ಲಿ ನಮ್ಮವರು ತಾರತಮ್ಯವನ್ನೇ ಅರಿಯರು. ತಾವು ತಮ್ಮ ರಾಜನಲ್ಲಿ ಸೇವಕರಾಗಿರುವಾಗ ಆತನು ಯಾರ ಸಂಹಾರ ಮಾಡಲು ಅಪ್ಪಣೆ ಮಾಡುವನೋ ಅವರನ್ನು ಅವರು ತನಗೆ ಸ್ವಜನರಾಗಿರಲಿ ಅಥವಾ ಬಂಧು ಬಾಂಧವರಾಗಿರಲಿ, ಇಲ್ಲವೆ ಗುರುಹಿರಿಯರರಾಗಿರಲಿ, ಯಾರಿದ್ದರೂ ಕೊಲ್ಲುವುದೇ ತನ್ನ ಧರ್ಮವೆಂತಲೂ ಅದೇ ತನಗೆ ಭೂಷಣಪ್ರದಯವೆಂತಲೂ ತಿಳಿಯುತ್ತಾನೆ. ಯಾವ ರಾಜನ ಉಪ್ಪನ್ನು ಊಟ ಮಾಡುತ್ತಾನೆಯೋ ಆತನ ಆಜ್ಞೆಯಂತೆಯೇ ನಡೆಯುವುದೊಂದನ್ನೇ ಆತನು ಬಲ್ಲನು, ಈ ವಿಧವಾದ **ಸ್ವಾಮಿನಿಷ್ಠೆಯ ಭಾವನೆಯಿಂದಲೇ ಅನ್ಯಾಯವಾದ ಭಾರತೀಯ ಯುದ್ಧದಲ್ಲಿ**

ಭೀಷ್ಮದ್ರೋಣಾದಿಗಳು ಕೂಡಾ ಪಾಂಡವರ ಸಂಹಾರಕ್ಕೆ ಸಿದ್ಧರಾದರು. ತಾವು ಯಾರ ಉಪ್ಪನ್ನು ಊಟ ಮಾಡುತ್ತಾರೆಯೋ ಅವರ ಮೇಲೆ ತಿರುಗಿ ಬೀಳುವ ಸ್ವಾಮಿದ್ರೋಹಕ್ಕಿಂತಲೂ ಈ ಸ್ವಾಮಿನಿಷ್ಠೆಯು ಶ್ರೇಷ್ಠವಾದುದೇನೋ ನಿಜ. ಆದರೆ ಸ್ವಜನರನ್ನು ನಾಶಮಾಡುವಂಥ ಕಾರ್ಯವನ್ನು ಮೊದಲೇ ಕೈಕೊಳ್ಳದಿರುವುದಾಗಿ ಅಥವಾ ಅಂತಹ ಅಪ್ಪಣೆಯನ್ನು ಮೊದಲೇ ಕೈಕೊಳ್ಳದಿರುವುದಾಗಲಿ ಅಥವಾ ಅಂತಹ ಅಪ್ಪಣೆಯನ್ನು ನಾನು ಮಾನ್ಯ ಮಾಡುವುದೇ ಇಲ್ಲವೆಂದು ಮೊದಲೇ ತಿಳುಹಿಸಿ ಅದಕ್ಕೆ ಒಪ್ಪಿಗೆಯನ್ನು ಕೊಡುವ ರಾಜನ ಸೈನ್ಯದಲ್ಲೇ ಸೇರುವುದಾಗಲಿ ಈ ಸ್ವಾಮಿನಿಷ್ಠೆಗಿಂತಲು ಶ್ರೇಷ್ಠವಾದುದಾಗಿದೆ. ಈ ಆಧುನಿಕ ವಿಚಾರ ಸರಣಿಯು ಪೂರ್ವಕಾಲದಲ್ಲಿರದಿದ್ದುದರಿಂದ ಅನೇಕ ಪರಾಕ್ರಮಿಗಳು ಮತ್ತು ಬುದ್ಧಿ ಶಾಲಿಗಳು ತಮ್ಮ ಶಕ್ತಿ ಸಾಹಸಗಳನ್ನು ಪರದೇಶವರ ಪ್ರಭುತ್ವಕ್ಕಾಗಿಯೂ ಉಪಯೋಗಿಸಿದರು. ಅವರಲ್ಲಿ ವಿಠ್ಠಪ್ಪನಾಯಿಕನೂ ಒಬ್ಬನು.

ಈತನು ಭೀಮಾನದಿಯ ತೀರದಲ್ಲಿರುವ ಅವರಾದಿ ಎಂಬ ಗ್ರಾಮದ ಗೌಡನು. ತನಗೂ ತನ್ನ ತಮ್ಮನಿಗೂ ಮನೆತನದ ಸೊತ್ತಿನ ವಿಷಯವಾಗಿ ವಿವಾದವುಂಟಾಗಲು ಎಲ್ಲವನ್ನೂ ತಮ್ಮನಿಗೇನೇ ಬಿಟ್ಟುಕೊಟ್ಟು ತಾನು ವಿಜಾಪುರ ಬಾದಶಹನ ಸೈನ್ಯದಲ್ಲಿ ಅಧಿಕಾರಿಯಾಗಿ ಸೇರಿದನು. ಅನಂತರ ಅಲ್ಲಿ ಆದಿಲಶಹನ ಕಾಲದಲ್ಲಿ ತಾಳಿಕೋಟೆ ಕಾಳಗವೂ ಪ್ರಾರಂಭವಾಗಲು ವಿಠ್ಠಪ್ಪನಾಯಕನು ವಿಜಯನಗರದ ಸೈನ್ಯವನ್ನು ಸಂಹಾರ ಮಾಡುವುದರಲ್ಲಿ ಬಹು ಪರಾಕ್ರಮವನ್ನು ತೋರಿಸಿದ್ದಕ್ಕೋಸ್ಕರ ಮತ್ತು ತೊರಗಲ್ಲ ಕಿಲ್ಲೆಯನ್ನು ತೆಗೆದುಕೊಂಡಿದ್ದರಿಂದ ಬಾದಶಹನು ಮೆಚ್ಚಿ ತೊರಗಲ್ಲ ಸುಭೇದಾರಿಕೆಯನ್ನು ಕೊಟ್ಟಿದ್ದಲ್ಲದೆ ನವಲಗುಂದ ಸಂಸ್ಥಾನವನ್ನು ವಂಶಪಾರಂಪರ್ಯವಾಗಿ ಉಂಬಳಿ ಹಾಕಿಕೊಟ್ಟನು. ಒಂದು ಹಳ್ಳಿಯ ಗೌಡನಾಗಿದ್ದ ಈ ಕಲಿಯು ತನ್ನ ಕೈ ಕತ್ತಿಯ ಶಕ್ತಿಯಿಂದಲೇ ಇಂತಹ ಉನ್ನತಿಯನ್ನು ಹೊಂದಿ ಮೂರು ಲಕ್ಷ ವರಹದ ಪಾಚ್ಛಾ ಎಂಬ ಬಹುಮಾನದ ಬಿರುಸಿನಿಂದ ಕಲೆಯಲ್ಪಟ್ಟನು.

❖❖

೨ನೆಯ ಪ್ರಕರಣ

ಕಲ್ಲರಳಿ ಹೂವಾಯಿತು

ನವಲಗುಂದ ಸಂಸ್ಥಾನವು ಬುದ್ಧಿಶಕ್ತಿಯಿಂದೇನೂ ವಿಠ್ಠಪ್ಪನಾಯಕನಿಗೆ ದೊರೆಯಲಿಲ್ಲ. ಆತನು ಅದನ್ನು ತನ್ನ ಭುಜಬಲದಿಂದಲೇ ಹೊಂದಿದನು. ಆದರೆ ಅದು ಮುಂದೆ ಭೂಜಬಲದಿಂದಲೇ ಶಾಶ್ವತವಾಗಲಿಲ್ಲ. ಸಾಧಾರನ ೨೦೦ ವರುಷಗಳವರೆಗೆ ಈತನ ವಂಶಜರು ಆ ಸಂಸ್ಥಾನವನ್ನಾಳಿದರು. ಈ ವಂಶದ ಏಳನೆಯವರಾದ ಜಾಯಪ್ಪ ರಾಜರ ಕಾಲಕ್ಕೆ ಟಿಪ್ಪುಸುಲ್ತಾನನು ಮಲಾಪಹಾರಿ ನದಿಯವರೆಗೂ ದಂಡೆತ್ತಿ ಬಂದಾಗ ನವಲಗುಂದ ಸಂಸ್ಥಾನದ ಮೇಲೆಯೂ ಮುತ್ತಿಗೆಯನ್ನು ಹಾಕಿದನು. ಟೀಪ್ಪುಸುಲ್ತಾನನ ಸೈನ್ಯವು ಬಹು ಬಲವಾದುದಾಗಿದ್ದಿತು. ಆದುದರಿಂದ ಅಂಥ ಸೈನ್ಯದ ಮುಂದೆ ಜಾಯಪ್ಪರಾಜರು ನಿಂತು ಯುದ್ಧ ಮಾಡುವುದು ಶಕ್ಯವಿರಲಿಲ್ಲ. ಆದರೂ ಇವರಲ್ಲಿದ್ದ **ಪರಶುರಾಮನೆಂಬ ಶೂರ ದಳಪತಿಯು ಟಿಪ್ಪುಸುಲ್ತಾನನ ಸೈನ್ಯದ ಸಂಗಡ ಬಹು ಹೋರಾಡಿ ಯುದ್ಧ ಭೂಮಿಯಲ್ಲಿಯೇ ದೇಹಬಿಟ್ಟನು.** ಈ ಸುದ್ದಿಯು ಜಾಯಪ್ಪ ರಾಜರಿಗೆ ತಿಳಿದ ಕೂಡಲೆ ಇನ್ನು ಮ್ಲೇಂಛನಾದ ಟಿಪ್ಪುಸುಲ್ತಾನನ ಕೈವಶವಾಗಬೇಕಾಗುವುದೆಂದು ತಿಳಿದು ಶಿರಸಂಗಿ ಗುಡ್ಡವನ್ನು ಸೇರಿದರು. ಸುಲ್ತಾನನು ತೋರಗಲ್ಲ ಪರಗಣೆ ಮತ್ತು ನವಲಗುಂದ ಸಂಸ್ಥಾನಗಳೆರಡನ್ನೂ ತೆಗೆದುಕೊಂಡು ಅವುಗಳ ಮೇಲೆ ಒಬ್ಬ ಅಧಿಕಾರಿಯನ್ನು ನಿಯಮಿಸಿ ಹೋದನು.

ಜಾಯಪ್ಪರಾಜರು ಬಹು ಚತುರರೂ ರಾಜಕಾರ್ಯ ಪ್ರವೀಣರೂ ಆಗಿದ್ದರು. ಇವರು ಅನುಕೂಲ ಸಮಯವನ್ನೇ ಸಾಧಿಸುತ್ತಿದ್ದರು. ಅಷ್ಟರಲ್ಲಿ ಮೈಸೂರು ೩ನೆಯ ಯುದ್ಧವು ಪ್ರಾರಂಭವಾಯಿತು. ಇಂಗ್ಲೀಷರು, ನಿಜಾಮ, ಮತ್ತು ಪೇಶ್ವೆಯವರು ಕೂಡಿ ಟೀಪುಸುಲ್ತಾನನನ್ನು ಸೋಲಿಸಿ ಆತನ ರಾಜ್ಯವನ್ನು ಹಂಚಿಕೊಂಡಿದ್ದರಿಂದ ನವಲಗುಂದ ಸಂಸ್ಥಾನವಿದ್ದ ಭಾಗವು ಕ್ರಿ. ಶ. ೧೭೯೨ರಲ್ಲಿ ಪೇಶ್ವೆಯವರ ಕಡೆಗೆ ಬಂದಿತು. ಆಗ ಜಾಯಪ್ಪರಾಜರು ಪುಣೆಗೆ ಹೋಗಿ ತಮ್ಮ ಬುದ್ಧಿ ಸಾಮರ್ಥ್ಯದಿಂದ ನವಲಗುಂದ ಸಂಸ್ಥಾನದ ಸ್ವಾಮಿತ್ವವನ್ನು ಸಂಪಾದಿಸಲು ಪ್ರಯತ್ನಿಸಿದರು. ಆದರೆ ಅದೇ ಸಮಯದಲ್ಲಿಯೇ ಸವಾಯಿ ಮಾಧವರಾಯನು ಸತ್ತದ್ದರಿಂದ ಪೇಶ್ವೆಯವರಲ್ಲಿ ಒಳಜಗಳ ಪ್ರಾರಂಭವಾಗಲು ಮುಂದೆ ವಿಚಾರಮಾಡುವವರೆಗೂ ಚರಿತಾರ್ಥಕ್ಕಾಗಿ ೨೩ ಸಾವಿರ ರೂ. ಗಳ ನಖ್ತನೇಮಣೂಕಿ ಕೊಡುವುದಾಗಿ ತಿಳಿಸಿ ಜಾಯಪ್ಪರಾಜನನ್ನು ಕ್ರಿ. ಶ. ೧೭೯೫ರಲ್ಲಿ ಕಳುಹಿಸಿಕೊಟ್ಟರು. ಪೇಶ್ವೆಯವರ ಪ್ರಸಿದ್ಧ ಮಂತ್ರಿಗಳಾಗಿದ್ದ ನಾನಾಫಡಣವೀಸರು ಜಾಯಪ್ಪರಾಜರು

ಬುದ್ಧಿ ಸಾಮರ್ಥ್ಯವನ್ನು ನೋಡಿ ಮೆಚ್ಚಿದ್ದರಿಂದ ಇಷ್ಟಾದರೂ ಆಗ ದೊರೆತಿತು. ಮುಂದೆ ಸ್ವಲ್ಪ ಕಾಲದಲ್ಲಿಯೇ ಪೇಶ್ವೆಯವರ ರಾಜ್ಯವೂ ಇಂಗ್ಲೀಷರ ಪಾಲಾಗಲು ಆಗ ಜಾಯಪ್ಪರಾಜರು ತಮಗೆ ನವಲಗುಂದ ಸಂಸ್ಥಾನವು ದೊರೆಯಬೇಕೆಂದು ಪ್ರಯತ್ನಿಸಿದರು. ಆದರೆ ಅದು ಸಾಧಿಸಲಿಲ್ಲ. ಪೇಶ್ವೆಯವರು ಕೊಟ್ಟಿರುವ ೨೩ ಸಾವಿರ ರೂ. ಗಳ ಚರಿತಾರ್ಥದ ವಿನಾ ಹೆಚ್ಚಿಗೆ ದೊರೆಯಲಾರದೆಂದು ಇಂಗ್ಲೀಷರು ತಿಳಿಸಿದರು. ಆ ಚರಿತಾರ್ಥ ದ್ರವ್ಯಕ್ಕಾಗಿಯೇ ಮುಂದೆ ಹತ್ತು ಗ್ರಾಮಗಳನ್ನು ಉಂಬಳಿ ಹಾಕಿಕೊಟ್ಟರು. ಅವುಗಳಲ್ಲಿ ಶಿರಸಂಗಿಯೇ ಮುಖ್ಯವಾದುದಾಗಿದ್ದುದರಿಂದ ಅಲ್ಲಿಯೇ ಈ ಮನೆತನದವರು ಇರಲಾರಂಭಿಸಿದರು. ಜಾಯಪ್ಪರಾಜರು ಆಗಲೇ ಪ್ರಯತ್ನಿಸದೆ ಹೋಗಿದ್ದರೆ ಈ ಚರಿತ್ರೆಯನ್ನು ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲ. ಆದುದರಿಂದ ವಿಠ್ಠಪ್ಪನಾಯಕರ ಭುಜಬಲವು ಹೇಗೆ ಈ ಚರಿತ್ರೆಗೆ ಮೂಲವಾಗಿದೆಯೋ ಹಾಗೆಯೇ ಜಾಯಪ್ಪರಾಜರ ಬುದ್ಧಿಬಲವೂ ಮೂಲವಾಗಿದೆ.

ಜಾಯಪ್ಪರಾಜರ ತರುವಾಯ ಲಿಂಗಪ್ಪ ದೇಸಾಯಿತಳು ಅನಂತರ ಜಾಯಪ್ಪ ದೇಸಾಯಿಗಳು ಈ ಸಂಸ್ಥಾನವನ್ನು ಆಳಿದರು. ಒಂಬತ್ತನೆಯವರಾದ ಜಾಯಪ್ಪ ದೇಸಾಯಿಗಳಿಗೆ ಮೂರು ಜನ ಪತ್ನಿಯರು. ಅವರಲ್ಲಿ ಒಬ್ಬಳು ಪತಿಗಿಂತ ಪೂರ್ವದಲ್ಲಿಯೇ ಮೃತಪಟ್ಟಿದ್ದಳು. ಉಳಿದ ಇಬ್ಬರಲ್ಲಿ ಕುಮಟೆಯ ಗಂಗಾಬಾಯಿ ಎಂಬುವವರು ಹಿರಿಯರು. ನಾಗರಹಳ್ಳಿಯ ಉಮಾಬಾಯಿಯೆಂಬುವವರು ಚಿಕ್ಕವರು. ಈ ಚಿಕ್ಕವರ ಹೊಟ್ಟೆಯಲ್ಲಿಯೇ ಒಂದು ಗಂಡುಮಗು ಹುಟ್ಟಿತು. ಜಾಯಪ್ಪದೇಸಾಯಿಗಳು ಮುಂದ್ರೆ ಸ್ವಲ್ಪ ದಿವಸಗಳಲ್ಲಿಯೇ ಕ್ಷಯರೋಗದಿಂದ ಮೃತಪಟ್ಟರು. ಅನಂತರ ಆ ಮಗುವೂ ತೀರಿತು. ಆಗ ಈ ಉಭಯ ಅಕ್ಕತಂಗಿಯರೂ ತಮ್ಮ ತಮ್ಮ ಬಳಗದವರಲ್ಲಿಯೇ ದತ್ತಕ ಮಗನನ್ನು ಮಾಡಿಕೊಳ್ಳಲುಪಕ್ರಮಿಸಿದ್ದರಿಂದ ಭಿನ್ನಾಭಿಪ್ರಾಯಗಳುಂಟಾಗಿ ಗೃಹ ಕಲಹವು ಪ್ರಾರಂಭವಾಯಿತು. ಆಗ ಕಾರಭಾರಿಗಳಾಗಿದ್ದ ದೇವರಾಯರು ಬಹುಬುದ್ಧಿಶಾಲಿಗಳಾಗಿದ್ದರು. ಅವರು ಈ ಉಭಯರ ಮನೆತನಕ್ಕೂ ಸಂಬಂಧವಿಲ್ಲದ ಬೇರೊಂದು ಕುಟುಂಬದವರನ್ನೇ ದತ್ತಕ ಮಗನನ್ನು ಮಾಡಿಕೊಳ್ಳಬೇಕೆಂದು ಯೋಚಿಸಿ ಆ ಉಭಯರ ಒಪ್ಪಿಗೆಯನ್ನು ತೆಗೆದುಕೊಂಡು ನವಲಗುಂದ ಸಂಸ್ಥಾನಕ್ಕೆ ದತ್ತಪುತ್ರನನ್ನು ಮಾಡಿಕೊಳ್ಳುವುದಿರುವುದರಿಂದ ಈ ದೇಸಾಯರ ಕುಲದಲ್ಲಿ ಜನ್ಮವೆತ್ತಿದ ಸುಶೀಲ ಸುಶೀಕ್ಷಿತ ಮತ್ತು ಸಲಕ್ಷಣ ಯುಕ್ತ ಮಕ್ಕಳನ್ನು ಕರೆದುಕೊಂಡು ಬರಬೇಕೆಂದು ಎಲ್ಲ ಕಡೆಗೂ ಪ್ರಸಿದ್ಧವಾಗಿಯೇ ತಿಳಿಸಿದರು.

ಈ ಸಮಾಚಾರವನ್ನು ಕೇಳಿದಕೂಡಲೇ ಅನೇಕರು ತಮ್ಮ ಮಗನಿಗೆ ನವಲಗುಂದ ದೇಸಗತಿಯು ದೊರೆಯುವುದೆಂಬ ಆಶೆಯಿಂದ ಶಿರಸಂಗಿಗೆ ತಮ್ಮ ತಮ್ಮ ಮಕ್ಕಳನ್ನು ಕರೆದುಕೊಂಡು ಬಂದರು. ದತ್ತುಪುತ್ರನನ್ನು ಆರಿಸುವುದಕ್ಕಾಗಿ ಕೆಲವು ಪ್ರಮುಖರನ್ನು ಗೊತ್ತುಮಾಡಿದ್ದರು. ಅವರು ಭಾವಿಕತನದಿಂದ ಶಕುನವನ್ನು ನೋಡಬೇಕೆಂದು ಪರಸ್ಥಳಗಳಿಂದ ಬಂದ ಜನರ ಕಡೆಗೆ ರಾತ್ರೆ ಹೋದರು. ಆಗ ಕೆಲವರು ಮಲಗಿದ್ದರು. ಕೆಲವರು ಮಾತನಾಡುತ್ತ ಕುಳಿತಿದ್ದರು. ಒಂದು ಮಠದಲ್ಲುಳಿದವರ ಕಡೆಗೆ ಹೋಗಲು ಒಬ್ಬ ಹುಡುಗನು ಊಟಮಾಡುತ್ತ ಕುಳಿತ್ತಿದ್ದನು. ಅದನ್ನು ನೋಡಿ ಇದು ಶುಭಶಕುನವು. ಈ ಹುಡುಗನೇ ಯೋಗ್ಯನಾಗುತ್ತಾನೆಂದು ಯೋಚಿಸಿ ಮನೆಗೆ ಬಂದರು.

ಮರುದಿನ ಎಲ್ಲ ಹುಡುಗರನ್ನೂ ವಿದ್ಯೆಬುದ್ಧಿಗಳಲ್ಲಿಯೂ ಸಾಮುದ್ರಿಕ ಶಾಸ್ತ್ರದಂತೆ ರಾಜಲಕ್ಷಣಗಳಲ್ಲಿಯೂ ಪರೀಕ್ಷಿಸಲು ಹಿಂದಿನ ರಾತ್ರೆ ಊಟಕ್ಕೆ ಕುಳಿತಿದ್ದ ಹುಡುಗನೇ ಎಲ್ಲರಿಗೆ

ಎಲ್ಲ ವಿಷಯಗಳಲ್ಲಿಯೂ ಯೋಗ್ಯನೆಂದು ತೋರಿದನು. ಆಗ ಆತನನ್ನೇ ನವಲಗುಂದ ಸಂಸ್ಥಾನಕ್ಕೆ ದತ್ತಕ ಮಗನನ್ನಾಗಿ ಮಾಡಿಕೊಳ್ಳಬೇಕೆಂದು ನಿಶ್ಚಿಯಿಸಿ ಕ್ರಿ. ಶ. ೧೮೮೭ನೆಯ ಜೂನ್ ೨ನೆಯ ತಾರೀಖಿನ ದಿವಸ ಶಾಸ್ತ್ರೋಕ್ತವಾಗಿ ಜಾಯಪ್ಪನವರ ಹಿರಿಯ ಕುಟುಂಬವಾದ ಗಂಗಾಬಾಯಿಯವರಿಗೆ ಮಗನನ್ನಾಗಿ ಮಾಡಿದರು. ಆಗ ಊಟಕ್ಕೆ ಕುಳಿತಿದ್ದ ಹುಡುಗನೇ ಈಗ ಸಾವಿರಾರು ಜನರಿಗೆ ವಿದ್ಯೆಕಲಿಸಿ ಊಟಮಾಡಿಸುತ್ತಿರುವ ಲಿಂಗರಾಜನು.

ಧಾರವಾಡ ಜಿಲ್ಲೆಯಲ್ಲಿ ಮಿರ್ಜಿ ಸಂಸ್ಥಾನಕ್ಕೆ ಸೇರಿದ ಲಕ್ಷ್ಮೇಶ್ವರ ಎಂಬುದೊಂದು ತಾಲೂಕು ಇದೆ. ಈ ತಾಲೂಕಿನ ಶಿಗ್ಗಲಿ ಎಂಬ ಹಳ್ಳಿಯಲ್ಲಿ ಗೂಳಪ್ಪನೆಂಬ ಒಬ್ಬ ಗೃಹಸ್ಥನಿದ್ದನು. ಆತನಿಗೆ ಕ್ರಿ. ಶ. ೧೮೬೧ನೆಯ ಜನವರಿ ೧೦ನೆಯ ತಾರೀಖಿನ ದಿವಸ ಒಬ್ಬ ಮಗನು ಹುಟ್ಟಿದನು. ಆತನು ಹೆಸರು ರಾಮಪ್ಪ. ಆ ರಾಮಪ್ಪನೇ ಆ ದಿನ ರಾತ್ರೆ ಊಟಮಾಡುತ್ತ ಕುಳಿತಿದ್ದನು. ಒಂದೇ ದಿನದ ಹಿಂದೆ ಒಬ್ಬ ಬಡ ಒಕ್ಕಲಿಗನ ಮಗನಾಗಿದ್ದ ರಾಮಪ್ಪನು ಆ ದಿನ ನವಲಗುಂದ ಸಂಸ್ಥಾನಾಧಿಪತಿ ಲಿಂಗರಾಜನಾದುದನ್ನು ನೋಡಿದರು. ಕಲ್ಲರಳಿ ಹೂವಾಯಿತಲ್ಲಾ! ದೈವಬಲ ಎಂತಹ ಬಲವಪ್ಪಾ! ಎಂದು ಅಂದುಕೊಂಡದ್ದು ಆಶ್ಚರ್ಯವೇ? ವಿಠ್ಠಪ್ಪನಾಯಕರ ಭುಜಬಲವಾಗಲಿ ಅಥವಾ ಜಾಯಪ್ಪರಾಜರ ಬುದ್ಧಿ ಬಲವಾಗಲಿ ಇಲ್ಲದೇ ಲಿಂಗರಾಜರಿಗೆ ದೈವಬಲವೇ ನವಲಗುಂದ ಸಂಸ್ಥಾನವನ್ನು ತಂದು ಕೊಟ್ಟಿತು. ಆದುದರಿಂದ ದೇಹಶಕ್ತಿ ಮತ್ತು ಬುದ್ಧಿ ಶಕ್ತಿಗಳ ವಿನಾ ಇನ್ನೊಂದು ದೈವಶಕ್ತಿಯೂ ಈ ಪ್ರಪಂಚದಲ್ಲಿ ವ್ಯತ್ಯಾಸಗಳನ್ನು ಮಾಡುತ್ತಿರುತ್ತದೆಂದು ಅನೇಕರು ಪ್ರತಿಪಾದಿಸುತ್ತಿದ್ದಾರೆ.

❖❖

೩ನೆಯ ಪ್ರಕರಣ

ತಾಯಿಯ ತೊಟ್ಟಿಲು

ಶ್ರೀ ಲಿಂಗರಾಜರು ನವಲಗುಂದ ಸಂಸ್ಥಾನದ ಅಧಿಪತಿಗಳಾದಾಗ ೧೨ ವರ್ಷದವರಾಗಿದ್ದರು. ಆಗ ಇವರ ತಲೆಗೆ ಬಹು ಭಯಂಕರವಾದ ಮಾದಿ ಹುಣ್ಣುಗಳಾಗಿದ್ದವು. ಅವುಗಳನ್ನು ಶ್ರೀ ಗಂಗಾಬಾಯಿಯವರೇ ತೊಳೆದು ಅವುಗಳಿಗೆ ಔಷಧಿಯನ್ನು ಹಚ್ಚಿ ಲಿಂಗರಾಜರನ್ನು ತಮ್ಮ ಹಾಸಿಗೆಯ ಮೇಲೆಯೇ ಮಲಗಿಸಿಕೊಂಡು ಬಹು ಪ್ರೇಮದಿಂದ ಇವರನ್ನು ಜೋಪಾನ ಮಾಡಲುಪಕ್ರಮಿಸಿದರು. ಇದನ್ನು ಅವರಲ್ಲಿ ಬಹು ದಿನಗಳಿಂದಿದ್ದ ಶಾಸ್ತ್ರಿ ಬಸವಮ್ಮ ಎಂಬ ಮುದುಕಿಯು ನೋಡಿ "ಅವ್ವಾ ನೀವೇಕೆ ಹುಣ್ಣು ತೊಳೆದು ಔಷಧಿ ಹಚ್ಚುತ್ತೀರಿ? ಬೇರೆಯವರಿಗೆ ಹೇಳಬಾರದೇ? ಅದು ಬಹು ಕೆಟ್ಟುಹುಣ್ಣು. ಬೇರೆ ಹಾಸಿಗೆಯಮೇಲೆ ಮಲಗಿಸಬಾರದೇ?" ಎಂದು ಹೇಳಿದಳು. ಆಗ ಶ್ರೀ ಗಂಗಾಬಾಯಿಯವರು ಬಸವಮ್ಮಾ, ಅಪ್ಪಾಸಾಹೇಬರು ನನ್ನ ಹೊಟ್ಟೆಯ ಮಗನಾಗಿದ್ದರೆ ನೀನು ಹೀಗೆ ಹೇಳುತ್ತಿದ್ದಿಯಾ? ನನಗೇನಾದರೂ ಆಗಲಿ, ನನ್ನ ಅಪ್ಪಾಸಾಹೇಬನಿಗೆ ಗುಣವಾದರೆ ಸಾಕು ಎಂದು ಹೇಳಿದರು.

ಇದರ ಮೇಲಿಂದ ಶ್ರೀ ಗಂಗಾಬಾಯಿಯವರಿಗೆ ಲಿಂಗರಾಜರ ವಿಷಯದಲ್ಲಿ ಎಂಥ ಪ್ರೇಮವಿದ್ದಿತೆಂಬುದು ಗೊತ್ತಾಗುವುದಿಲ್ಲವೇ? ಶ್ರೀ ಲಿಂಗರಾಜನನ್ನು ಕಟ್ಟಿಗೆಯ ತೊಟ್ಟಿಲಲ್ಲಿ ಮಲಗಿಸುವ ಪ್ರಸಂಗವು ಶ್ರೀ ಗಂಗಾಬಾಯಿಯವರಿಗೆ ಬಾರದಿದ್ದರೂ ಇವರು ತಮ್ಮ ಪುತ್ರವಾತ್ಸಲ್ಯವೆಂಬ ದಿವ್ಯ ತೊಟ್ಟಿಲಲ್ಲಿಟ್ಟುಕೊಂಡೇ ಲಿಂಗರಾಜರನ್ನು ಸಂರಕ್ಷಿಸಿದರು. ದತ್ತಕ ಮಗನ ಮೇಲೆ ಪ್ರೇಮವಿರುವ ತಾಯಿಯರು ಬಹು ಕಡಿಮೆ. ಅದರಂತೆಯೇ ದತ್ತಕ ತಾಯಿಯಲ್ಲಿ ಭಕ್ತಿ ವಿಶ್ವಾಸಗಳನ್ನಿಡುವ ಮಕ್ಕಳು ಅತಿ ವಿರಳ. ಆದರೆ ಈ ಸಾಮಾನ್ಯ ನಿಯಮವು ಶ್ರೀ ಗಂಗಾಬಾಯಿ ಮತ್ತು ಶ್ರೀ ಲಿಂಗರಾಜರಲ್ಲಿರಲಿಲ್ಲ. ಇವರು ನಿಜವಾದ ತಾಯಿಮಕ್ಕಳಂತೆಯೇ ಪ್ರೇಮಾದರಗಳುಳ್ಳವರಾಗಿದ್ದರು.

ಶ್ರೀ ಲಿಂಗರಾಜರ ಪ್ರಾಥಮಿಕ ವಿದ್ಯಾಭ್ಯಾಸವು ಶಿರಸಂಗಿಯಲ್ಲಿಯೇ ಪೂರೈಸಿತು. ಸಿದ್ದಗಿರಿಯ ಇವರ ಕುಲಗುರುಗಳು ಲಿಂಗರಾಜನಿಗೆ ಮರಾಠಿ ಭಾಷೆಯನ್ನು ಕಲಿಸಿದರು. ಅನಂತರ ಲಿಂಗರಾಜರು ಇಂಗ್ಲೀಷ ಅಭ್ಯಾಸಕ್ಕೋಸ್ಕರ ಕೊಲ್ಲಾಪುರಕ್ಕೆ ಹೋದರು. ಅಲ್ಲಿ ಕೊಲ್ಲಾಪೂರ, ಮುಧೋಳ, ಮಿರ್ಜಿ ಮೊದಲಾದ ಸಂಸ್ಥಾನಗಳ ರಾಜ ಪುತ್ರರು ವಿದ್ಯಾಭ್ಯಾಸ ಮಾಡುತ್ತಿದ್ದರು. ಅವರ ಜೊತೆಯಲ್ಲಿ ಲಿಂಗರಾಜರೂ ಸೇರಿ ಬಹು ಶ್ರದ್ಧೆಯಿಂದ ವಿದ್ಯಾಭ್ಯಾಸವನ್ನು ಮಾಡಿದರು. ಆಗ ಇವರ

ಊಟೋಪಚಾರಗಳಿಗಾಗಿ ಪ್ರತ್ಯೇಕವಾದ ವ್ಯವಸ್ಥೆಯೇ ಇದ್ದಿತು. ಶಿರಹಟ್ಟಿಯ ಲಿಂಗನಗೌಡರೆಂಬ ಒಳ್ಳೆಯ ಕಾರ್ಯದಕ್ಷರೇ ಲಿಂಗರಾಜರ ವಿದ್ಯಾಭ್ಯಾಸದ ವ್ಯವಸ್ಥೆಯನ್ನು ವಹಿಸಿಕೊಂಡಿದ್ದರು.

ವಿದ್ಯಾಭ್ಯಾಸಕ್ಕೆ ವಿಶ್ರಾಂತಿ ಕಾಲ ದೊರೆತಾಗ ಲಿಂಗರಾಜರು ಶಿರಸಂಗಿಗೆ ಬರುತ್ತಿದ್ದರು. ಮಗನು ಬರುವುದನ್ನೇ ಗಂಗಾಬಾಯಿಯವರು ನಿರೀಕ್ಷಿಸುತ್ತಿದ್ದರು. ಮಗನ ವಿದ್ಯಾಭ್ಯಾಸದ ಸ್ಥಿತಿಗತಿಗಳನ್ನು ಕೇಳಿ ಬಹು ಸಂತೋಷ ಪಡುತ್ತಿದ್ದರು. ಲಿಂಗರಾಜರ ಚಿಕ್ಕ ತಾಯಿಯವರಾದ ಉಮಾಬಾಯಿಯವರೂ ಶಿರಸಂಗಿಯ ಹತ್ತರದಲ್ಲಿರುವ ಬೇವೂರ ಕಿಲ್ಲೆಯಲ್ಲಿರುತ್ತಿದ್ದರು. ಅವರಿಗೆ ಲಿಂಗರಾಜರ ವಿಷಯದಲ್ಲಿ ಅಷ್ಟು ಪ್ರೇಮವಿರಲಿಲ್ಲ. ಏಕೆಂದರೆ, ಇವರನ್ನು ಸಂಸ್ಥಾನಾಧಿಪತಿಗಳನ್ನಾಗಿ ಮಾಡಿದುದು. ಅವರಿಗೆ ಇಷ್ಟವಿರಲಿಲ್ಲ. ಲಿಂಗರಾಜರು ಎಂದಾದರೂ ಚಿಕ್ಕ ತಾಯಿಯವರ ಹತ್ತಿರ ಹೋದರೆ ಅವರೇನೂ ವಿಶೇಷ ಪ್ರೇಮ ತೋರಿಸುತ್ತಿರಲಿಲ್ಲ. ಇವರೂ ಅಷ್ಟೇ ಭಕ್ತಿ ವಿಶ್ವಾಸಗಳನ್ನು ತೋರಿಸುತ್ತಿದ್ದರು.

ಶ್ರೀ ಗಂಗಾಬಾಯಿಯವರು ಸುಶೀಲರು; ಒಳ್ಳೆಯ ಆಚಾರವಂತರು; ಗುರು ಲಿಂಗ ಜಂಗಮಗಳಲ್ಲಿ ಬಹು ಭಕ್ತಿಯುಳ್ಳವರು ಆಗಿದ್ದರು, ಲಿಂಗರಾಜರ ಕ್ಷೇಮ ಚಿಂತನೆಯೇ ಅವರ ಮುಖ್ಯ ವಿಷಯವಾಗಿದ್ದಿತು. ಆಗ ಇವರು ಮುಪ್ಪಿನವರಾದುದರಿಂದ ಮರಣ ಕಾಲವು ಸಮೀಪಿಸಿತು. ಅಂಥ ಸಮಯದಲ್ಲಿ ಕೂಡಾ ಸ್ನಾನ ಲಿಂಗಾರ್ಚನೆಗಳನ್ನು ಮಾಡಿದರು. ಅಪ್ಪಾಸಾಹೇಬರೂ ಕೊಲ್ಲಾಪೂರದಿಂದ ಬಂದರೆಂದು ಹೇಳಿದ ಕೂಡಲೇ ಕಣ್ಣು ತೆರೆದು ಅತ್ತಿತ್ತ ನೋಡಿ ಮಗನನ್ನು ಕಾಣದೆ ಕಣ್ಣು ಮುಚ್ಚುತ್ತಿದ್ದರು. ಈ ಪ್ರಕಾರ ಮಗನ ಸ್ಮರಣೆಯಲ್ಲಿಯೇ ಶಿವಧ್ಯಾನ ಮಾಡುತ್ತ ದೇಹ ಬಿಟ್ಟರು.

ಶ್ರೀ ಲಿಂಗರಾಜರು ತಾಯಿಯು ಮೃತಪಟ್ಟನಂತರ ಬಂದು ಬಹು ದುಃಖಿಸಿದರು. ಅನಂತರ ಇವರ ವಿದ್ಯಾಭ್ಯಾಸವು ನಿಂತಿತು. ಆಗ ಇವರು ಇಂಗ್ಲೀಷ್ ೭ನೆಯ ತರಗತಿಯಲ್ಲಿ ಅಭ್ಯಾಸ ಮಾಡುತ್ತಿದ್ದರು.

❖❖

೪ನೆಯ ಪ್ರಕರಣ

ತಾಯಿಯ ಸೆರೆಮನೆ

ಶ್ರೀ ಗಂಗಾಬಾಯಿಯವರು ಶಿವಾಧಿನರಾದನಂತರ ನವಲಗುಂದ ಸಂಸ್ಥಾನದ ಸರ್ವಾಧಿಕಾರಿಗಳೂ ಶ್ರೀ ಲಿಂಗರಾಜರ ಚಿಕ್ಕ ತಾಯಿಯವರಾದ ಶ್ರೀ ಉಮಾಬಾಯಿಯವರ ಅಧೀನವಾದವು. ಇವರು ಲಿಂಗರಾಜರಲ್ಲಿ ಪ್ರೇಮವುಳ್ಳವರಾಗಿರಲಿಲ್ಲ. ಆದುದರಿಂದ ಆಗ ಸಂಸ್ಥಾನದ ಕಾರ್ಯಗಳನ್ನು ನಡೆಯಿಸುತ್ತಿದ್ದವರಲ್ಲಿಯೂ ಉಮಾಬಾಯಿಯವರಿಗೆ ವಿಶ್ವಾಸವಿರಲಿಲ್ಲ. ಆದಕಾರಣ ಉಮಾಬಾಯಿಯವರು ಲಿಂಗರಾಜರದೊಂದು ಪಂಗಡವನ್ನೇ ಬೇರೆ ಮಾಡಿ ತಾವು ತಮಗೆ ಅನುಕೂಲವಾಗುವವರನ್ನು ಸಂಸ್ಥಾನದ ಕಾರ್ಯಗಳಿಗೆ ನಿಯಮಿಸಿಕೊಳ್ಳಲುಪಕ್ರಮಿಸಿದರು.

ಶ್ರೀ ಉಮಾಬಾಯಿಯವರ ಪಂಗಡದಲ್ಲಿ ಶ್ರೀ ಸಿದ್ದರಾಮಸ್ವಾಮಿಗಳೇ ಪ್ರಮುಖರಾಗಿದ್ದರು. ಇವರು ಶಿರಸಂಗಿಯ ವಿರಕ್ತಮಠದ ಸ್ವಾಮಿಗಳು. ಲೌಕಿಕ ವಿಷಯಗಳಲ್ಲಿ ಬಹು ಚತುರರಾಗಿದ್ದರು. ಆದುದರಿಂದ ಸಂಸ್ಥಾನದ ಎಲ್ಲ ಸೂತ್ರಗಳೂ ಇವರ ಕೈಸೇರಿದವು. ಶ್ರೀ ಜಾಯಪ್ಪ ದೇಸಾಯರ ತರುವಾಯ ಶ್ರೀ ಉಮಾಬಾಯಿಯವರ ಹೊಟ್ಟೆಯಲ್ಲಿ ಒಂದು ಕೂಸು ಹುಟ್ಟಿದ್ದಿತು. ಆದುದರಿಂದ ಉಮಾಬಾಯಿಯವರೇ ಬೇರೆ ದತ್ತಕ ತೆಗೆದುಕೊಳ್ಳುವವರಿದ್ದರೆಂದು ಈ ಸಿದ್ದರಾಮ ಸ್ವಾಮಿಗಳು ಹೇಳಲುಪಕ್ರಮಿಸಿದರು.

ಶ್ರೀ ಲಿಂಗರಾಜರ ಪಂಗಡದಲ್ಲಿ ಕಾರಭಾರಿ ದೇವರಾಯರು, ಶಿರಹಟ್ಟಿ ಪಾಟೀಲ ಲಿಂಗಪ್ಪನವರು, ಹೊಂಗಲದ ಹವಾಲದಾರ ಬಸಪ್ಪನವರು ಪ್ರಮುಖರಾಗಿದ್ದರು. ಇವರಲ್ಲಿ ಕಾರಭಾರಿ ದೇವರಾಯರು ಬಹು ಚತುರರೂ ಧೈರ್ಯಶಾಲಿಗಳೂ ಆಗಿದ್ದರು. ಉಮಾಬಾಯಿಯವರು ಶ್ರೀ ಗಂಗಾಬಾಯಿಯವರ ತರುವಾಯ ಮಾಡಿದ ಕಾರಸ್ಥಾನಗಳನ್ನು ನೋಡಿ ಶ್ರೀ ಲಿಂಗರಾಜರಿಗೆ ಜಾಗ್ರತೆ ವಿವಾಹ ಮಾಡಿ ಸಂಸ್ಥಾನದ ಅಧಿಕಾರಗಳನ್ನು ಇವರ ಕಡೆಗೆ ಕೊಡಿಸಬೇಕೆಂದು ಯೋಚಿಸಿದರು.

ಲಿಂಗರಾಜರಿಗೆ ತಮ್ಮ ಪೂಜ್ಯಳಾದ ತಾಯಿಯ ವಿಯೋಗ ದುಃಖವು ಇನ್ನೂ ಕಡಿಮೆಯಾಗಿರಲಿಲ್ಲ. ಅಷ್ಟರಲ್ಲೇ ಸಂಸ್ಥಾನದ ವಿಷಯವಾಗಿ ಕಲಹ ಪ್ರಾರಂಭವಾಗಬಹುದೆಂಬ ವಿಷಾದವೂ ಉಂಟಾಯಿತು. ಇಂತಹ ಸಮಯದಲ್ಲಿ ನೀವು ಈಗ ಲಗ್ನವಾಗಲೇಬೇಕೆಂಬ ಇವರ ಹಿತಚಿಂತಕರು ಲಿಂಗರಾಜರಿಗೆ ಬಹು ಒತ್ತಾಯ ಮಾಡಿದರು. ಆದುದರಿಂದ ಲಿಂಗರಾಜನಿಗೆ ಏನೂ ತಿಳಿಯದಂತಾಯಿತು. ಶ್ರೀಗಂಗಾಬಾಯಿಯವರ ವಿಯೋಗವಾದೊಡನೆಯೇ ಇವರ ಸುಖವೂ

ಬಯಲಾಯಿತು. ಸುತ್ತಲೂ ದುಃಖದ ಸಂಗತಿಗಳೇ ವ್ಯಾಪಿಸಿದವು. ಅಂಥ ಪ್ರಸಂಗದಲ್ಲಿ ಕೂಡಾ ತಮ್ಮ ಹಿತಚಿಂತಕರ ಅಭಿಪ್ರಾಯದಂತೆ ಉಕ್ಕಲಿ ಬಸವನಗೌಡರ ಕನ್ಯೆ ಬಸವವ್ವನವರನ್ನು ಹಿರಿಯ ಪತ್ನಿಯನ್ನಾಗಿಯೂ, ಶಿರಹಟ್ಟಿಯ ಚೆನ್ನವ್ವನವರನ್ನು ಚಿಕ್ಕಪತ್ನಿಯನ್ನಾಗಿಯೂ , ಒಂದೇ ಕಾಲದಲ್ಲಿ ಲಗ್ನವಾದರು. ಏಕೆಂದರೆ, ಒಂದೇ ಕಾಲದಲ್ಲಿ ಇಬ್ಬರನ್ನು ಲಗ್ನವಾಗುವುದು ಈ ಸಂಸ್ಥಾನದ ಪದ್ಧತಿಯಾಗಿದ್ದಿತು. ಆಗ ಲಿಂಗರಾಜರು ೧೮-೧೯ ವರ್ಷದವರಾಗಿದ್ದರು.

ಈ ವಿವಾಹವು ಶ್ರೀ ಉಮಾಬಾಯಿಯವರಿಗೆ ಒಪ್ಪಿಗೆಯಿರಲಿಲ್ಲ. ಆದರೆ ತಮ್ಮ ಮಾತು ನಡೆಯುವುದಿಲ್ಲವೆಂದು ತಿಳಿದು ಪ್ರತ್ಯಕ್ಷವಾಗಿ ವಿರೋಧಿಸಲಿಲ್ಲ. ಶ್ರೀ ಲಿಂಗರಾಜರ ವಿವಾಹವಾದ ನಂತರ ಇವರನ್ನು ತಮ್ಮಲ್ಲಿಗೆ ಔತಣಕ್ಕಾಗಿ ಕರೆದರು. ಕೆಲವರು ಶ್ರೀ ಉಮಾಬಾಯಿಯವರಲ್ಲಿ ಊಟಕ್ಕೆ ಹೋಗುವುದು ಸರಿಯಲ್ಲವೆಂದು ಶ್ರೀ ಲಿಂಗರಾಜರಿಗೆ ತಿಳುಹಿಸಿದರೂ ಕೂಡಾ ಇವರು ದಾಕ್ಷಿಣ್ಯಕ್ಕೊಳಗಾಗಿ ಹೋದರು. ಉಮಾಬಾಯಿಯವರಲ್ಲಿ ಊಟಕ್ಕೆ ಹೋದ ದಿನವೇ ಲಿಂಗರಾಜರಿಗೆ ವಿಶೇಷ ಜ್ವರ ಬಂದಿದೆಯೆಂತಲೂ ಊಟ ಉಪಚಾರಗಳಿಲ್ಲದೆ ಒಂದು ಕೋಣೆಯಲ್ಲಿ ಮಲಗಿದ್ದಾರೆಂತಲು ಶಿರಸಂಗಿಗೆ ಸುದ್ದಿಯು ಬಂದಿತು.

ದೇವರಾಯರು ಬಹು ಕುಶಲರಾಗಿದ್ದುದರಿಂದ ಉಮಾಬಾಯಿಯವರ ಹತ್ತಿರ ಹೋಗಿ "ಅವ್ವಾ, ಅಪ್ಪಾಸಾಹೇಬರಿಗೆ ನಿಮ್ಮಲ್ಲಿಯ ಹವೆಯು ಸರಿಬರುವಂತೆ ಕಾಣುವುದಿಲ್ಲ. ಆದುದರಿಂದ ಶಿರಸಂಗಿಗೆ ಕರೆದುಕೊಂಡು ಹೋಗುತ್ತೇವೆಂದು ಹೇಳಿದರು." ಉಮಾಬಾಯಿಯವರ ಅಪ್ಪಣೆಯನ್ನು ಪಡೆಯುವ ಮುಂಚೆಯೇ ಬೇರೆಯವರು ಲಿಂಗರಾಜರು ಮಲಗಿದ್ದ ಕೋಣೆಯೊಳಗೆ ನುಗ್ಗಿ ಅವರನ್ನು ಮೇಣೆಯಲ್ಲಿ ಮಲಗಿಸಿ ತೆಗೆದುಕೊಂಡು ಹೋಗಲುಪಕ್ರಮಿಸಿದರು. ಇದನ್ನು ನೋಡಿ ಉಮಾಬಾಯಿಯವರಿಗೆ ವಿಷಾದವಾಯಿತು.

ಶ್ರೀ ಲಿಂಗರಾಜರಿಗೆ ಆಗ ಸ್ಮೃತಿಯಿರಲಿಲ್ಲ. ಶಿರಸಂಗಿಗೆ ಕರೆದುಕೊಂಡು ಬಂದನಂತರ ಅನೇಕರು ಅನೇಕ ರೀತಿಯಾಗಿ ಆಡಿಕೊಳ್ಳಲಾರಂಭಿಸಿದರು. ಕೂಡಲೇ ರಾಮದುರ್ಗಕ್ಕೆ ಹೋಗಿ ಡಾಕ್ಟರರನ್ನು ಕರೆದುಕೊಂಡು ಬಂದರು. ಡಾಕ್ಟರರು ಎಲ್ಲ ಸಂಗತಿಗಳನ್ನು ದೇಹದ ಸ್ಥಿತಿಯನ್ನು ತಿಳಿದುಕೊಂಡು ಉಪಶಮನಕ್ಕೆ ಔಷಧಿಯನ್ನು ಕೊಟ್ಟರು. ಮೂರು ನಾಲ್ಕು ಸಾರಿ ವಾಂತಿಯಾದ ನಂತರ ಸ್ವಲ್ಪ ಗುಣವಾಯಿತು.

ಶ್ರೀ ಉಮಾಬಾಯಿಯವರು ಈ ಸಮಾಚಾರವನ್ನು ಕೇಳಿ ಶಿರಸಂಗಿಗೆ ಬಂದು ಲಿಂಗರಾಜರ ಔಷಧೋಪಚಾರಗಳನ್ನು ತಾವೇ ವಹಿಸಿಕೊಳ್ಳುತ್ತೇನೆಂದು ಹೇಳಿ ಅರಮನೆಯಲ್ಲಿದ್ದ ಲಿಂಗರಾಜರ ಎಲ್ಲ ಹಿತಚಿಂತಕರನ್ನು ಹೊರಗೆ ಹಾಕಿದರು. ಆಗ ಅವರು ಅರಮನೆಯ ಹೊರಗಿದ್ದ ಒಂದು ಚಿಕ್ಕ ಮನೆಯಲ್ಲಿ ವಾಸವಾಗಿ ಯಾವ ಕಾಲಕ್ಕೆ ಲಿಂಗರಾಜರಿಗೆ ಏನು ಸಂಭವಿಸುವುದೋ ಎಂದು ಚಿಂತಿಸುತ್ತಿದ್ದರು.

ಶ್ರೀ ಉಮಾಬಾಯಿಯವರು ತಮ್ಮ ಮಗನನ್ನು ಒಂದು ಕೋಣೆಯಲ್ಲಿಟ್ಟರು. ಇವರನ್ನು ಕಾಯುವುದಕ್ಕಾಗಿ ಒಬ್ಬರನ್ನು ನಿಯಮಿಸಿದರು. ಆ ಕೋಣೆ ಮತ್ತು ಅದರ ಮುಂದಿನ ಒಂದಂಕಣದ ಸ್ಥಳಗಳ ವಿನಾ ಬೇರೆ ಕಡೆಗೆ ಹೋಗುವುದು ಲಿಂಗರಾಜನಿಗೆ ಕಷ್ಟವಾಗಿದ್ದಿತು. ದಿವಸಕ್ಕೆ ಎರಡಾವರ್ತಿ ಮಾತ್ರ ಅಲ್ಲಿಯೇ ಊಟಕ್ಕೆ ತಂದು ಕೊಡುತ್ತಿದ್ದರು. ಶ್ರೀ ಗಂಗಾಬಾಯಿಯವರ ತೋಟ್ಟಿಲಲ್ಲಿ ಬೆಳೆದ

ಲಿಂಗರಾಜರು ಆಗ ಶ್ರೀ ಉಮಾಬಾಯಿಯವರ ಸೆರೆಮನೆಯಲ್ಲಿ ಕಾಲಕಳೆಯ ಬೇಕಾಯಿತು. ಆಗ ಇವರಿಗೆ ತಮ್ಮ ಅರಮನೆಯೇ ಸೆರೆಮನೆಯಾಯಿತು.

ಅರಮನೆಯ ಹೊರಗಿದ್ದಾಗಲೂ ಇವರ ಹಿತಚಿಂತಕರು ಲಿಂಗರಾಜರ ಈ ದುರವಸ್ಥೆಯನ್ನು ನೋಡಿ ಬಹು ದುಃಖಿಸಿದರು. ತಮ್ಮ ಚಿಕ್ಕಮಕ್ಕಳ ಸಂಗಡ ಮುಚ್ಚುಮರೆಯಿಂದ ಲಿಂಗರಾಜರಿಗೆ ಹಣ್ಣು ಹಂಪಲಗಳೆನ್ನು ಕಳುಹಿಸುತ್ತಿದ್ದರು. ಲಿಂಗರಾಜರಿಗೆ ಜಾಗ್ರತೆ ಸಂಸ್ಥಾನವನ್ನು ಸ್ವಾಧೀನ ಪಡಿಸದಿದ್ದರೆ ಅನರ್ಥವು ಸಂಭವಿಸುತ್ತದೆಂದು ತಿಳಿದು ಸವದತ್ತಿ, ಬೆಳಗಾಂವ, ಮೊದಲಾದ ಸ್ಥಳಗಳಿಗೆ ಹೋಗಿ ಅಧಿಕಾರಿಗಳಲ್ಲಿ ನವಲಗುಂದ ಸಂಸ್ಥಾನದ ಸ್ಥಿತಿಯನ್ನು, ಲಿಂಗರಾಜರಿಗೆ ಸಂಭವಿಸಿದ ವಿಪತ್ತನ್ನು ಹೇಳಿಕೊಂಡು ಉಮಾಬಾಯಿಯವರ ಕೈಯಿಂದ ಸಂಸ್ಥಾನವು ಬಿಡುಗಡೆಯಾಗುವ ಪ್ರಯತ್ನವನ್ನು ಮಾಡಲುಪಕ್ರಮಿಸಿದರು.

ಶ್ರೀ ಉಮಾಬಾಯಿಯವರಿಗಂತೂ ತಮ್ಮ ಉದ್ದೇಶವು ಪೂರ್ತಿಯಾದಂತೆ ತೋರಿತು, ಸಂಸ್ಥಾನದ ಸೂತ್ರವು ಸಿದ್ದರಾಮ ಸ್ವಾಮಿಗಳ ಅಧೀನವಾಗಿದ್ದುದರಿಂದ ದ್ರವ್ಯವು ಸೂರೆಯಾಗಲಾರಂಭವಾಯಿತು. ತಮ್ಮ ಪಂಗಡದ ಜನರನ್ನು ಹೆಚ್ಚು ಮಾಡಿಕೊಳ್ಳಬೇಕೆಂದು ಧನದಾಸೆಗೊಳಗಾಗುವವರಿಗೆಲ್ಲಾ ಯಥೇಚ್ಛವಾಗಿ ಹಣವನ್ನು ಕೊಡಲುಪಕ್ರಮಿಸಿದರು. ಉಮಾಬಾಯಿಯವರ ತಮ್ಮಂದಿರಾದ ಎಲ್ಲಪ್ಪನವರೇ ಸಂಸ್ಥಾನದ ಅಧಿಪತಿಗಳಂತೆ ಮಾನ ಮನ್ನಣೆ ವೈಭವಗಳನ್ನನುಭವಿಸುತ್ತಿದ್ದರು. ಈ ಪ್ರಕಾರ ನಿಜವಾದ ರಾಜರು ಸೆರೆಮನೆಯಲ್ಲಿ ಬಳಲುತ್ತ ಹೊರಗಿನವರು ರಾಜ್ಯ ಸುಖಗಳನ್ನಭವಿಸುವ ಪ್ರಸಂಗ ಬಂದಿತು.

ಶ್ರೀ ಲಿಂಗರಾಜರನ್ನು ಒಮ್ಮೆಲೆ ರಾಜಪದವಿಗೆ ತಂದ ದೈವವೇ ಈಗ ಒಮ್ಮೆಲೇ ಸೆರೆಯಾಳನ್ನಾಗಿ ಮಾಡಿಬಿಟ್ಟಿತು. ಮಹಾ ವಿಭೂತಿಗಳ ಚರಿತ್ರೆಗಳಲ್ಲಿ ಇಂತಹ ಮಹದಂತರಗಳು ತಪ್ಪದೇ ಪ್ರಾಪ್ತವಾಗುತ್ತಿರುವ ಪ್ರಸಂಗಗಳೇ ಹೆಚ್ಚಿರುತ್ತದೆ. ಇಂಥ ಸ್ಥಿತ್ಯಂತರಗಳು ಸಂಭವಿಸುತ್ತಿರುವುದರಿಂದಲೇ ಅವರು ಚರಿತ್ರೆ ಪುರುಷರಾಗುತ್ತಾರೆ. ಈ ಪ್ರಕಾರ ಎಂಥ ವಿಪರೀತ ಬಿಡುವುದಿಲ್ಲ. ಅನ್ಯಾಯಕ್ಕವಕಾಶವನ್ನು ಕೊಡುವುದಿಲ್ಲ. ಆದುದರಿಂದ ಲಿಂಗರಾಜರ ದಿವ್ಯ ಚರಿತೆಯಲ್ಲಿ ಇದೊಂದು ಮಹತ್ವದ ಪ್ರಸಂಗವಾಗಿದೆ.

ಶ್ರೀ ಲಿಂಗರಾಜರ ಈ ಶೋಚನೀಯ ಸ್ಥಿತಿಯು ಬಹುಕಾಲ ನಿಲ್ಲಲಿಲ್ಲ. ಇವರ ಹಿತಚಿಂತಕರು ಉಪಾಯಾಂತರದಿಂದ ತನ್ನ ಈಗಿನ ಸ್ಥಿತಿಯನ್ನೂ ತನಗೆ ಅಧಿಕಾರವನ್ನು ಕೊಡಿಸಬೇಕಾಗಿರುವ ಅವಶ್ಯಕತೆಯನ್ನೂ ಕುರಿತು ಬೆಳಗಾಂವ ಕಲೆಕ್ಟರರ ಕಡೆಗೆ ಲಿಂಗರಾಜರಿಂದ ಒಂದು ಅರ್ಜಿಯನ್ನು ಬರೆಯಿಸಿ ತರಿಸಿದ್ದರು. ಅದನ್ನು ಕಲೆಕ್ಟರರ ಕಡೆಗೆ ಕೊಟ್ಟು ಎಲ್ಲ ಸ್ಥಿತಿಗತಿಗಳನ್ನು ಅರಿಕೆಮಾಡಿಕೊಂಡಿದ್ದರಿಂದ ಆಗ ಅಸಿಸ್ಟಂಟ ಕಲೆಕ್ಟರಾಗಿದ್ದ ಮೆಕರಕಲ ಸಾಹೇಬರು ಎಲ್ಲ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕಾಗಿ ಶಿರಸಂಗಿಗೆ ಬಂದರು.

ಶ್ರೀ ಉಮಾಬಾಯಿಯವರಿಗೆ ಮುಂಚೆಯೇ ಈ ಸಂಗತಿಯನ್ನು ತಿಳಿಸಿದ್ದುದರಿಂದ ಇವರೂ ಶಿರಸಂಗಿಗೆ ಬಂದರು. ಅರಮನೆಯಲ್ಲಿ ಲಿಂಗರಾಜರಿದ್ದ ಸ್ಥಿತಿಯನ್ನು ಸಾಹೇಬರು ಕಣ್ಣಾರೆ ನೋಡಿದರು. ಉಮಾಬಾಯಿಯವರು ಪಡದೆಯ ಒಳಭಾಗದಲ್ಲಿ ಕುಳಿತು ಮಾತನಾಡುತ್ತಿದ್ದರು. ಸಾಹೇಬರು ಉಮಾಬಾಯಿಯವರನ್ನು ಕುರಿತು "ನಿಮ್ಮ ಮಕ್ಕಳು ಪ್ರೌಢರಾಗಿದ್ದಾರೆ. ಅವರ ಕಡೆಗೆ ಸಂಸ್ಥಾನದ ಕೆಲಸಗಳನ್ನು ವಹಿಸಿ ನೀವು ವಿಶ್ರಾಂತಿ ಹೊಂದಬಾರದೇ?" ಎಂದು ಹೇಳಿದರು.

ಶ್ರೀ ಉಮಾಬಾಯಿಯವರು "ತಮ್ಮ ಮನಸ್ಸಿಗೆ ಬಂದಂತಾಗಲಿ" ಎಂದು ತಟ್ಟನೆ ನುಡಿದರು. ಅಷ್ಟರಲ್ಲಿಯೇ ಒಳಗಿದ್ದದರು ಘಾತವಾಯಿತೆಂದು ತಿಳಿದು ಬೇರೆ ಹೇಳಿಕೊಡಲು "ಈಗಲೇ ಆ ವಿಚಾರವಾದರೂ ಏಕೆ? ಅಪ್ಪಾಸಾಹೇಬರು ಇನ್ನೂ ಸಣ್ಣವರು, ವಿದ್ಯಾಭ್ಯಾಸಕ್ಕೆ ಹೋಗಲಿ. ನಾನೇ ಸಂಸ್ಥಾನವನ್ನು ನಡೆಸುತ್ತೇವೆ." ಎಂದು ಉಮಾಬಾಯಿಯವರು ಪುನಃ ಹೇಳಿದರು. ಆಗ ಸಾಹೇಬರಿಗೆ ಉಮಾಬಾಯಿಯವರ ಇಂಗಿತ ಗೊತ್ತಾಯಿತು. ಅನಂತರ ಲಿಂಗರಾಜರಿಗೆ "ನೀವು ಇನ್ನೂ ಎಷ್ಟು ದಿವಸ ಇಲ್ಲಿಯೇ ಇರುವಿರಿ? ಹೀಗೆ ಇಲ್ಲಿಯೇ ಇದ್ದರೆ ನಿಮಗೆ ಒಳ್ಳೆಯದಲ್ಲ. ನಮ್ಮ ಸಂಗಡ ಬೆಳಗಾಂವಿಗೆ ಬನ್ನಿರಿ. ಸರಕಾರದ ಮುಖಾಂತರವಾಗಿಯೇ ನಿಮ್ಮ ಅಧಿಕಾರವನ್ನು ಹೊಂದಿರಿ." ಎಂದು ಹೇಳಿದರು. ಇದಕ್ಕೆ ಲಿಂಗರಾಜರ ಹಿತಚಿಂತಕರು ಆಗ ಒಪ್ಪಿಗೆಯನ್ನೂ ತೋರಿಸಿದರು. ಕೂಡಲೇ ಸಾಹೇಬರ ಸಂಗಡ ಹೊರಗೆ ಬಂದರು. ಬೆಳಗಾಂವಿಗೆ ಹೋಗಿ ಮುಂದಣ ಪ್ರಯತ್ನಗಳನ್ನು ಮಾಡಲು ಲಿಂಗರಾಜರಲ್ಲಿ ಹಣವಿರಲಿಲ್ಲ. ಉಮಾಬಾಯಿಯವರು ಒಂದು ಕಾಸನ್ನಾದರು ಕೂಡಾ ಕೊಡುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿ ಕಳುಹಿಸಿದರು. ಆಗ ಇವರ ಹಿತಚಿಂತಕರಾದ ಸವದತ್ತಿ ಶ್ರೀ ಗೊರಬಾಳ ಪರಪ್ಪನವರು. ಮತ್ತು ಶ್ರೀ ದೇವರಾಯರೆ ಮೊದಲಾದವರ ಸಹಾಯದಿಂದ ಬೆಳಗಾವಿಗೆ ಹೋಗಿ ಸ್ವರಾಜ್ಯ ಸಂಪಾದಿಸಲು ಪ್ರಯತ್ನಿಸಲುಪಕ್ರಮಿಸಿದರು.

❖❖

೫ನೆಯ ಪ್ರಕರಣ

ಕೋಟೆಯು ಕೈವಶವಾಯಿತು

ಬೆಳಗಾಂವಿಯಲ್ಲಿ ಮಹೇಶ್ವರ ಪಂತ ಎಂಬ ಸರಕಾರಿ ವಕೀಲರು ಬಹು ಪ್ರಸಿದ್ಧರಾಗಿದ್ದರು. ಇವರ ತಂದೆಯವರು ಶ್ರೀ ಲಿಂಗರಾಜರ ತಂದೆಯವರಾದ ಜಾಯಪ್ಪ ದೇಸಾಯರಿಗೆ ಮರಾಠಿಯನ್ನು ಕಲಿಸಿದ್ದರು. ಅದಕ್ಕೋಸ್ಕರ ದೇಸಾಯರು ತಮ್ಮ ವಿದ್ಯಾಗುರುಗಳಿಗೆ ಉಂಬಳಿಯನ್ನು ಹಾಕಿಕೊಟ್ಟಿದ್ದರು. ಈ ಸಂಗತಿಯು ಮಹೇಶ್ವರ ಪಂತರಿಗೆ ಗೊತ್ತಿದ್ದಿತು. ಆದುದರಿಂದ ಲಿಂಗರಾಜರಿಗೆ ಇಂಥ ಪ್ರಸಂಗ ಬಂದುದನ್ನು ಕೇಳಿ ಇವರು ಬಹು ಆದರದಿಂದ ತಮ್ಮಲ್ಲಿಯೇ ಇಟ್ಟುಕೊಂಡು ಒಂದು ಕಾಸನ್ನಾದರು ಕೇಳದೆ ಇವರ ಪರವಾಗಿ ಕೆಲಸ ಮಾಡಲುಪಕ್ರಮಿಸಿದರು. ದಕ್ಷಿಣ ಭಾಗದ ಕಮೀಶನ್‌ರವರ ಹತ್ತಿರ ವ್ಯಾಜ್ಯವು ಪ್ರಾರಂಭವಾಯಿತು.

ಶ್ರೀ ಉಮಾಬಾಯಿಯವರಿಗೆ ಸಂಸ್ಥಾನದ ಬೊಕ್ಕಸವೇ ಕೈಸೇರಿತು. ಶ್ರೀ ಸಿದ್ಧರಾಮ ಸ್ವಾಮಿಗಳಂಥ ಚತುರರು ಬೇಕಾದ ಹಾಗೆ ಹಣ ಸೂರೆ ಮಾಡಿ ಕಾರ್ಯ ಮಾಡುವವರಿದ್ದರು. ಲಿಂಗರಾಜರು ನಿರ್ಧನಿಕರು, ರಾಜ್ಯಸೂತ್ರವೂ ಇವರ ಕೈಯಲ್ಲಿರಲಿಲ್ಲ. ಎಂದ ಮೇಲೆ ಇವರ ಸಹಾಯಕ್ಕೆ ಬರುವವರಾರು? ಶ್ರೀ ಮಹೇಶ್ವರ ಪಂತರಂಥ ಕೃತಜ್ಞರೂ, ಸತ್ಯಾಭಿಮಾನಿಗಳೂ, ಆದ ಕೆಲವರು ಮಾತ್ರವೇ ಲಿಂಗರಾಜರಿಗೆ ಸಹಾಯಮಾಡುತ್ತಿದ್ದರು. ಈ ವ್ಯಾಜ್ಯವು ಉಮಾಬಾಯಿಯವರಂತೆ ತೀರ್ಮಾನವಾಯಿತು. ಇದಕ್ಕೆ ಇವರ ಹಣಬಲವೇ ಕಾರಣವಾಗಿದ್ದಿತೆಂದು ಅನೇಕರು ಆಡಿಕೊಂಡರು. ಶ್ರೀ ಮಹೇಶ್ವರ ಪಂತರು ಮುಂಬೈ ಗವರ್ನರ ಸಾಹೇಬರ ಕಡೆಗೆ ಮೇಲ್ವಿಚಾರಣೆಗಾಗಿ ಈ ವ್ಯಾಜ್ಯವನ್ನು ತೆಗೆದುಕೊಂಡು ಹೋದರು. ಪುನರ್ವಿಚಾರಣೆಗೆ ಅವಧಿ ಬೇಕಾದುದರಿಂದ ಆ ವರೆಗೆ ಲಿಂಗರಾಜರು ಮುಂಬಯಿಯಲ್ಲಿರುವುದು ದ್ರವ್ಯದ ಅಭಾವದಿಂದ ಶಕ್ಯವಿರಲಿಲ್ಲವಾದುದರಿಂದ ತಮ್ಮ ಸಂಸ್ಥಾನದ ಹೊಂಗಲ ಗ್ರಾಮಕ್ಕೆ ಬಂದರು. ಶ್ರೀದೇವರಾಯರು ಶಿರಸಂಗಿಗೆ ಹೋದರು.

ವ್ಯಾಜ್ಯವು ಉಮಾಬಾಯಿಯವರಂತೆ ನಿರ್ಣಯವಾದುದರಿಂದ ಉಮಾಬಾಯಿಯವರು ಶಿರಸಂಗಿಗೆ ಬಂದು ಎಲ್ಲ ವಸ್ತ್ರಾಭರಣಗಳನ್ನೂ ಬೇವೂರಿಗೆ ತೆಗೆದುಕೊಂಡು ಹೋಗಿ ಶಿರಸಂಗಿ ಅರಮನೆಯಲ್ಲಿ ಯಾರೂ ಪ್ರವೇಶವಾಗದಂತೆ ಕಾವಲುಗಾರರನ್ನಿಟ್ಟರು. ಅಲ್ಲಿಯ ಕೊತವಾಲ ಮೊದಲಾದ ಕಾವಲುಗಾರರು ೩ ತಾಸು ರಾತ್ರೆಯಾದ ನಂತರ ಯಾರಿಗೂ ಅರಮನೆಯ ಬಾಗಿಲನ್ನು ತೆಗೆಯದಂತೆ ಕಟ್ಟಪ್ಪಣೆಯನ್ನು ಮಾಡಿದ್ದರು. ಈ ಪ್ರಕಾರ ಉಮಾಬಾಯಿಯವರಿಗೆ ಸಂಸ್ಥಾನದ ಸರ್ವ ಸಂಪತ್ತುಗಳೂ ಸಂಪೂರ್ಣವಾಗಿ ಸೇರಿದವು.

ಹೊಂಗಲದಲ್ಲಿ ಲಿಂಗರಾಜರ ಪಂಗಡದವರು ಸೇರಿ ನಮ್ಮ ಕಾರ್ಯ ಸಾಧಿಸಬೇಕಾದರೆ ನಾವು ಹೇಗಾದರೂ ಪ್ರಯತ್ನಿಸಿ ಶಿರಸಂಗಿಯ ಅರಮನೆಯನ್ನು ಸ್ವಾಧೀನಪಡಿಸಿಕೊಂಡು ಅಲ್ಲಿಯೇ ವಾಸವಾಗಿರುವುದು ಅತ್ಯವಶ್ಯಕವೆಂದು ನಿರ್ಧರಿಸಿದರು. ಈ ಕಾರ್ಯಕ್ಕೆ ಶಿರಹಟ್ಟಿಯ ಶ್ರೀ ಲಿಂಗನಗೌಡರು ಮುಂದಾಳುಗಳಾದರು. ಇವರು ವಿಜಾಪೂರ ಜಿಲ್ಲೆಯ ಡೋಣಿಸಾಲಿನಿಂದ ೨೫ ಜನ ಒಳ್ಳೇ ಬಲಶಾಲಿಗಳಾದ ತರುಣರನ್ನು ಕರೆದುಕೊಂಡುಬಂದು ಶಿರಸಂಗಿಯಲ್ಲಿರಿಸಿದರು. ಅಲ್ಲಿಯ ಕೊತವಾಲನ ಮಗನಂತೆಯೇ ಮಾತನಾಡುವ ಒಬ್ಬ ಮನುಷ್ಯನನ್ನು ಗೊತ್ತುಮಾಡಿ ಮಧ್ಯರಾತ್ರೆಯಲ್ಲಿ ಅರಮನೆಯ ಮುಂದೆ ಆ ಮನುಷ್ಯನಿಂದ "ಅಪ್ಪಾ ಅವ್ವನು ಹೊಟ್ಟೆ ಕಡಿಯುವುದೆಂದು ಉರುಳಾಡುತ್ತಿದ್ದಾಳೆ. ಕಣ್ಣುಗಳನ್ನು ಬೆಳ್ಳಗೆ ಮಾಡಿದ್ದಾಳೆ." ಎಂದು ಹೇಳಿಸಿದರು. ಕೊತವಾಲನು ಈ ಶಬ್ದವನ್ನು ಕೇಳಿದ ಕೂಡಲೇ ಬಾಗಿಲ ತೆರೆದು ಹೊರಗೆಬಂದನು ಕೂಡಲೇ ಹೊರಗಿದ್ದ ಲಿಂಗನಗೌಡರ ಜನರು ಒಳಗೆ ನುಗ್ಗಿ ಒಳಗಿನವರನ್ನು ಹೊರಗೆ ಹಾಕಿ ಅರಮನೆಯ ಬಾಗಿಲನ್ನು ಹಾಕಿಕೊಂಡು ಒಳಗೆ ಕುಳಿತುಕೊಂಡರು.

ಈ ಸಮಾಚಾರವು ಶ್ರೀ ಉಮಾಬಾಯಿಯವರಿಗೆ ತಿಳಿದೊಡನೆಯೇ ನೂರಾರು ಜನರನ್ನು ಕರೆದುಕೊಂಡು ಬಂದು ಅರಮನೆಯ ಸುತ್ತಲೂ ಕಾವಲಿಟ್ಟರು. ಒಳಗಿನವರು ಹೊರಗೆ ಹೋಗದಂತೆಯೂ ಹೊರಗಿನವರು ಒಳಗೆ ಹೋಗದಂತೆಯೂ ಪ್ರತಿಬಂಧಗೊಳಿಸಿದರು. ಒಳಗಿದ್ದವರು ಅನ್ನಾಹಾರಗಳಿಲ್ಲದೆ ಬಳಲುವಂತೆ ಮಾಡಬೇಕೆಂಬುದೇ ಉಮಾಬಾಯಿಯವರ ಉದ್ದೇಶವಾಗಿದ್ದಿತು. ಆ ಪ್ರಕಾರ ಒಳಗಿದ್ದ ಜನರು ಒಂದೆರಡು ದಿವಸಗಳಲ್ಲಿ ಅಲ್ಲಿದ್ದ ಅಲ್ಪಸ್ವಲ್ಪ ಆಹಾರ ಪದಾರ್ಥಗಳು ಮುಗಿದ ನಂತರ ಬಹು ಹಿಂಸೆಪಡಲಾರಂಭಿಸಿದರು. ಹೊರಗೆ ಬಂದರೆ ಕೊಲ್ಲುವುದಾಗಿ ಹೊರಗಿದ್ದವರು ಅಂಜಿಸಿದ್ದರಿಂದ ಒಳಗಿನವರು ಹೊರಗೆ ಬಾರದೆ ಅರಮನೆಯ ಉಪ್ಪರಿಗೆಯ ಮೇಲೆ ನಿಂತು ಜನರನ್ನು ಕರೆಯಲಾರಂಭಿಸಿದರು. ಅರಮನೆಯ ಸುತ್ತಲೂ ನೂರಾರು ಜನರು ಕಾಯುತ್ತಿದ್ದುದರಿಂದ ಬೇರೆಯವರು ಹತ್ತಿರಬರುವುದು ಸಾಧ್ಯವಿರಲಿಲ್ಲ. ಈ ಪ್ರಕಾರ ಉಮಾಬಾಯಿಯವರು ಲಿಂಗರಾಜರ ಪಂಗಡದವರನ್ನು ಸೆರೆಯಲ್ಲಿಟ್ಟರು.

ಈ ದುಃಖದ ಸಂಗತಿಯು ಶ್ರೀ ಲಿಂಗರಾಜರಿಗೆ ತಿಳಿಕ ಕೂಡಲೇ ಹೊಂಗಲದಿಂದ ಕಲೇಕ್ಟರ ಸಾಹೇಬರ ಬಳಿಗೆ ಹೋಗಿ ಶಿರಸಂಗಿಯಲ್ಲಿ ಕೊಲೆಸುಲಿಗೆಗಳಾಗುವ ಸಂಭವವಿರುವುದರಿಂದ ನಾನು ಅಲ್ಲಿಗೆ ಹೋಗಬೇಕಾಗಿದೆಯೆಂತಲೂ ನನ್ನ ರಕ್ಷಣೆಗೆ ಪೋಲಿಸರನ್ನು ಕೊಡಲೇಬೇಕೆಂತಲೂ ಕೇಳಿಕೊಂಡರು. ಆಗ ಕಲೇಕ್ಟರ ಸಾಹೇಬರವರು ಸವದತ್ತಿಯ ಫೌಜದಾರರಿಗೆ ಅಪ್ಪಣೆ ಮಾಡಲು ಲಿಂಗರಾಜರು ಶಿರಸಂಗಿಯ ತಮ್ಮ ಪಂಗಡದವರಿಗೆ ಈ ಸಮಾಚಾರವನ್ನು ತಿಳಿಸಲು ಹೊಂಗಲದ ಬಸವಪ್ಪನವರನ್ನು ಕಳುಹಿಸಿದರು. ಬಸವಪ್ಪನವರು ಕುದುರೆಯ ಮೇಲಿಂದ ಬಹು ಜಾಗ್ರತೆ ರಾತ್ರೆಯೇ ಶಿರಸಂಗಿಗೆ ಗುಪ್ತವಾಗಿ ಬಂದು ದೇವರಾಯರಿಗೆ ಈ ಸಮಾಚಾರವನ್ನು ತಿಳಿಸಿದರು.

ಶ್ರೀ ಉಮಾಬಾಯಿಯವರ ಸೆರೆಮನೆಯಲ್ಲಿ ಸಿಕ್ಕ ಕೋಟೆಯೊಳಗಿನ ಜನರು ಮೂರು ದಿನಗಳಾದರೂ ಹೊರಗೆ ಬಾರದಿದ್ದುದರಿಂದ ಉಮಾಬಾಯಿಯವರು ಆ ದಿನ ರಾತ್ರೆ ನೂರಾರು ಜನರನ್ನು ಪುನಃ ಕರೆದುಕೊಂಡು ಬಂದು ಕೋಟೆಯಮೇಲೆ ಜನರನ್ನು ಹತ್ತಿಸಿ ಮೇಲ್ಭಾಗವನ್ನು ಅಗಿದು ಒಳಗಿಳಿದು ಜನರನ್ನು ಹಿಡಿದುಕೊಂಡು ಬರಲು ಕಠೋರವಾದ ಅಪ್ಪಣೆಯನ್ನು ಕೊಟ್ಟಿದ್ದರು.

ಕೋಟೆಯ ಮುಂದೆ ಹೆಚ್ಚಾಗಿ ಬೆಂಕಿಯನ್ನು ಹೊತ್ತಿಸಿ ಆ ಉರಿಯ ಬೆಳಕಿನಲ್ಲಿ ಈ ಭಯಂಕರ ಕಾರ್ಯವನ್ನು ಮಾಡಲುಪಕ್ರಮಿಸಿದರು. ಉಮಾಬಾಯಿಯವರು ಮೇಣೆಯಲ್ಲಿ ಕುಳಿತು ಸುತ್ತಲೂ ತಿರುಗುತ್ತ ಈ ಸಾಹಸದ ಕಾರ್ಯಗಳನ್ನು ಮಾಡಿಸುತ್ತಿದ್ದರು.

ಕೋಟೆಯೊಳಗಿನ ಜನರು ಈ ಪ್ರಯತ್ನವನ್ನು ನೋಡಿ ತಾವು ಈ ದಿನ ಸಾಯುತ್ತೇವೆಂದು ತಿಳಿದುಕೊಂಡರು. ಲಿಂಗರಾಜರ ಪಂಗಡದವರು ಈ ದಿನ ಮಹಾವಿಪತ್ತೇ ಪ್ರಾಪ್ತವಾಯಿತೆಂದು ಬಹು ಚಿಂತಿಸಿದರು. ಆಗ ದೇವರಾಯರು ಬಹು ಧೈರ್ಯದಿಂದ ಉಮಾಬಾಯಿಯವರ ಹತ್ತಿರ ಹೋದರು. ಉಮಾಬಾಯಿಯವರು ಇವರನ್ನು ಬಹು ಸಿಟ್ಟಿನಿಂದಿ "ಬಾ, ಬಾ, ನಿಮ್ಮ ಮೋಸತನದಿಂದ ಎಂಥ ಅನರ್ಥವಾಗುವ ಹೊತ್ತು ಬಂದಿತು ನೋಡೆಂದು" ಹೇಳಿದರು. ಆಗ ದೇವರಾಯರು "ಒಡೆಯಳೇ?, ನಿಮ್ಮ ಹಿರಿಯರಿಂದಲೂ ನಾನು ನಿಮ್ಮ ಮನೆತನದ ಸೇವೆ ಮಾಡಿ ಮುಪ್ಪಾಗಿದ್ದೇನೆ. ನಾನು ನಿಮ್ಮ ಉಪ್ಪು ಉಂಡು ಬೆಳೆದೆನು. ನಾನು ನಿಮಗೆ ಎಂದೂ ದ್ರೋಹ ಮಾಡಿಲ್ಲ." ಎಂದು ಹೇಳಿದರು. ಆಗ ಉಮಾಬಾಯಿಯವರು ಈ ರಾತ್ರೆ ಹೋಂಗಲದ ಬಸವಪ್ಪನು ಬಂದಿದ್ದಾನಂತೆ, ಮತ್ತಾವ ಆಟವನ್ನು ಹೂಡಿರುವಿರಿ?" ಎಂದು ಕೇಳಿದರು. ಆಗ ದೇವರಾಯರು "ಅದಕ್ಕಾಗಿಯೇ ತಮ್ಮಲ್ಲಿಗೆ ಬಂದಿದ್ದೇನೆ. ತಮಗೊಂದು ಗಂಡಾಂತರ ಬಂದಿದೆ. ಕೂಡಲೇ ನಾವು ಪಾರಾಗಬೇಕೆಂದು ಹೇಳಲಿಕ್ಕೆ ಬಂದಿದ್ದೇನೆ. ಅಪ್ಪಾಸಾಹೇಬರು ಕಲೇಕ್ಟರ ಸಾಹೇಬರಿಂದ ಪೋಲೀಸ್ ಪಾರ್ಟಿ ತೆಗೆದುಕೊಂಡು ಬೇವೂರ ಅರಮನೆಯನ್ನು ಸ್ವಾಧೀನ ಮಾಡಿಕೊಳ್ಳಲು ಹೊರಟಿದ್ದಾರಂತೆ, ರಾತ್ರೆ ಬಸವಪ್ಪನು ಈ ಸುದ್ದಿ ತಂದಿದ್ದಾನೆ. ನೀವು ಇಲ್ಲಿದ್ದುದನ್ನು ತಿಳಿಸಿ ಜಾಗ್ರತೆ ಕರೆತರುವುದಕ್ಕಾಗಿ ಮತ್ತೇ ಹೋದನು."

ಈ ಸಂಗತಿಯನ್ನು ಕೇಳಿದೊಡನೆ ಶ್ರೀ ಉಮಾಬಾಯಿಯವರು ಅಂಜಿ ಮೊದಲು ಬೇವೂರು ಮನೆಯನ್ನು ಕಾಯ್ದುಕೊಳ್ಳಬೇಕೆಂದು ಎಲ್ಲ ಜನರನ್ನು ಕರೆದುಕೊಂಡು ಬೇವೂರಿಗೆ ಹೊರಟರು. ಆಗ ಬೆಳಗಾಗಲು೨-೩ ತಾಸುಗಳಿದ್ದವು. ದೇವರಾಯರ ಈ ಯುಕ್ತಿಯಿಂದ ಕೋಟೆಯೊಳಗಿದ್ದ ಜನರು ಬದುಕಿದರು. ಮರುದಿನ ಲಿಂಗರಾಜರು ಸಶಸ್ತ್ರ ಪೋಲೀಸರೊಂದಿಗೆ ಶಿರಸಂಗಿಗೆ ಬಂದರು. ಅಷ್ಟರಲ್ಲಿ ಉಮಾಬಾಯಿಯವರ ಪಂಗಡದವರು ಬೇವೂರಿಗೆ ಹೋಗಿದ್ದುದರಿಂದ ನಿರಾಯಾಸವಾಗಿ ಶಿರಸಂಗಿ ಕೋಟೆಯು ಕೈಸೇರಿತು.

❖❖

೬ನೆಯ ಪ್ರಕರಣ

ವಿಚಿತ್ರ ವಿಜಯ

ಶ್ರೀ ಲಿಂಗರಾಜರಿಗೆ ಶಿರಸಂಗಿಯ ಅರಮನೆಯೇ ಸ್ವಾಧೀನವಾಯಿತು. ಆದರೆ ಅದರಲ್ಲಿ ಯಾವ ಧನಧಾನ್ಯ ಸಂಪತ್ತುಗಳೂ ಇರಲಿಲ್ಲ. ಜನರಿಗೆ ಮಾತ್ರ ಸರಕಾರದವರು ಶ್ರೀ ಲಿಂಗರಾಜರ ಕಡೆಗೇನೇ ಇದ್ದಾರೆಂಬ ಕಲ್ಪನೆಯುಂಟಾಯಿತು. ಇದೊಂದು ಇವರಿಗೆ ಸಹಾಯವಾಯಿತು. ಶಿರಸಂಗಿಯ ಅರಮನೆಯು ಕೈಬಿಟ್ಟು ಹೋದುದರಿಂದ ಉಮಾಬಾಯಿಯವರಿಗೆ ಬಹು ಖೇದವಾಯಿತು. ಆಗ ಶ್ರೀಸಿದ್ಧರಾಮ ಸ್ವಾಮಿಗಳು ಬೆಳಗಾಂವಿ ಕಡೆಗೆ ಹೋಗಿದ್ದರು. ಅವರು ಬೇವೂರಿಗೆ ಬಂದು ನಡೆದ ಸಂಗತಿಯನ್ನೆಲ್ಲ ಕೇಳಿ ಸಂತೃಪ್ತರಾದರು. ಶಿರಸಂಗಿಗೆ ಬಂದು ಲಿಂಗರಾಜರಿಗೆ ಸ್ವೇಚ್ಛೆಯಾಗಿ ಮಾತನಾಡಿ "ನಿನ್ನನ್ನು ಭಿಕ್ಷೆ ಬೇಡುವಂತೆ ಮಾಡದಿದ್ದರೆ ನಾನು ಜಂಗಮನೇ ಅಲ್ಲ ಎಂದು ಪಂಥಮಾಡಿದರು. ಈ ಸಿದ್ಧರಾಮ ಸ್ವಾಮಿಗಳು ಉಮಾಬಾಯಿಯವರಿಂದ ಸಂಸ್ಥಾನದ ಸರ್ವಾಧಿಕಾರವನ್ನು ವಹಿಸಿಕೊಂಡಿದ್ದರಾದುದರಿಂದ ಎಲ್ಲ ಕಾರ್ಯಗಳನ್ನೂ ಇವರೇ ಮಾಡುತ್ತಿದ್ದರು. ಸಿದ್ದರಾಮ ಸ್ವಾಮಿಗಳು ವ್ಯಾಜ್ಯದ ಸಲುವಾಗಿ ಬೆಳಗಾಂವ, ಪುಣೆ ಧಾರವಾಡಗಳಿಗೆ ತಿರುಗಾಡಲಾರಂಭಿಸಿದರು. ಶ್ರೀ ಲಿಂಗನಗೌಡರೇ ಮೊದಲಾದ ಲಿಂಗರಾಜರ ಪಂಗಡದವರಿಗೆ ಉಮಾಬಾಯಿಯವರು "ನೀವು ಆ ಶಿಗ್ಗಲಿ ಒಕ್ಕಲಿಗನ ಬೆನ್ನು ಬಿಟ್ಟರೆ ಸಂಸ್ಥಾನದಲ್ಲಿ ನೀವು ಕೇಳಿದ್ದನು ಕೊಡುತ್ತೇನೆ." ಎಂದು ಹೇಳಿಕಳುಹಿಸಿದರು. ಸ್ವಾಮಿನಿಷ್ಠರೂ ನಿಜವಾದ ಹಿತಚಿಂತಕರೂ ಆದ ಈ ಜನರು ಉಮಾಬಾಯಿಯವರ ಯಾವ ಆಶೆಗಳಿಗೂ ಒಳಗಾಗಲಿಲ್ಲ. ಆಗ ಉಮಾಬಾಯಿಯವರು ಬೇವೂರಲ್ಲಿರುವುದು ಕ್ಷೇಮವಲ್ಲೆಂದು ಯೋಚಿಸಿ ಧಾರವಾಡಕ್ಕೆ ಹೋಗಿ ಅಲ್ಲಿ ಇರಲಾರಂಭಿಸಿದರು.

ಸಿದ್ಧರಾಮ ಸ್ವಾಮಿಗಳಿಗೆ ದ್ರವ್ಯದ ಅನುಕೂಲವಿದ್ದುದರಿಂದ ವ್ಯಾಜ್ಯಕ್ಕಾಗಿ ಅನೇಕರನ್ನು ಕೂಡಿಕೊಂಡು ಬೇಕಾದಲ್ಲಿ ಹೋಗಿ ದ್ರವ್ಯ ಸೂರೆ ಮಾಡುತ್ತಿದ್ದರು. ಲಿಂಗರಾಜರಿಗೆ ಮಾತ್ರ ವ್ಯಾಜ್ಯಕ್ಕೆ ಹಣವೇ ಇರಲಿಲ್ಲ. ಇಂಗಳೇಶ್ವರದ ಶ್ರೀ ಮಡಿವಾಳಗೌಡರು ಮತ್ತು ಹೊಂಗಲದ ಶ್ರೀ ಬಸವಪ್ಪನವರು ವ್ಯಾಜ್ಯಕ್ಕೆ ಸಹಾಯ ಮಾಡಲುಪಕ್ರಮಿಸಿದರು.

ಪುಣೆಯಲ್ಲಿ ಶಿವರಾಮ ಪಂತ ಗೋಯತ್ರಿ ಎಂಬೊಬ್ಬ ಗೃಹಸ್ಥರಿದ್ದರು. ಇವರ ಪೂರ್ವಜರು ಪೇಶ್ವೆ ಸರಕಾರದಲ್ಲಿ ಬಹು ಘನತೆಯನ್ನು ಹೊಂದಿದ್ದರು. ಶ್ರೀ ಜಾಯಪ್ಪ ದೇಸಾಯರು ಪೇಶ್ವೆಯವರಿಂದ

ಈ ನವಲಗುಂದ ಸಂಸ್ಥಾನವನ್ನು ತಿರುಗಿ ಸಂಪಾದಿಸುವ ಪ್ರಯತ್ನದಲ್ಲಿ ಶಿವರಾಮ ಪಂತರ ಪೂರ್ವಜರು ಬಹು ಸಹಾಯ ಮಾಡಿದ್ದರು. ಅದಕ್ಕೋಸ್ಕರ ಈ ಗೋಯತ್ರಿಯವರ ಮನೆತನಕ್ಕೆ ಶ್ರೀ ಜಾಯಪ್ಪ ದೇಸಾಯರು ಬಹುಮಾನವಾಗಿ ಭೂಮಿಗಳನ್ನು ಕೊಟ್ಟಿದ್ದರು. ಶ್ರೀ ಶಿವರಾಮ ಪಂತರು ಬೆಳಗಾವಿಗೆ ಬಂದುದನ್ನು ಕೇಳಿ ಲಿಂಗರಾಜ ಪಂಗಡದವರೂ ಇವರ ವಕೀಲರಾಗಿದ್ದ ಮಹೇಶ್ವರ ಪಂತರೂ ಶಿವರಾಮ ಪಂತರಲ್ಲಿ ಹೋಗಿ ಎಲ್ಲ ಸಂಗತಿಗಳನ್ನು ಹೇಳಿಕೊಂಡರು. ಆಗ ಶಿವರಾಮ ಪಂತರು ತಮ್ಮ ಮನೆತನಕ್ಕೆ ಈ ಸಂಸ್ಥಾನದವರು ಮಾಡಿದ ಮನ್ನಣೆಯನ್ನು ಜ್ಞಾಪಿಸಿಕೊಂಡು ಲಿಂಗರಾಜರ ಕಾರ್ಯವನ್ನು ತಾವು ಮಾಡುತ್ತೇವೆಂದು ಅಭಿವಚನ ಕೊಟ್ಟರು.

ಆಗ ಉಗೆ ಬಂಡಿಯ ಮಾರ್ಗವು ಮುಂಬಯಿಂದ ಪುಣೆಯ ವರೆಗೆ ಮಾತ್ರವೇ ಪ್ರಾರಂಭವಾಗಿದ್ದಿತು. ಪುಣೆಗೆ ಬೆಳಗಾವಿಯಿಂದ ಕುದುರೆ ಗಾಡಿಗಳ ಮೇಲೆಯೇ "ಟಪಾಲು" ಹೋಗುತ್ತಿದ್ದಿತು. ಧನಿಕರು ಆ "ಟಪಾಲ್" ಗಾಡಿಗಳ ಮೇಲಿಂದಲೇ ಪುಣೆಗೆ ಹೋಗುತ್ತಿದ್ದರು. ಆದುದರಿಂದ ಮುಂಬೈಯಲ್ಲಿ ನಡೆದ ವ್ಯಾಜ್ಯಕ್ಕೋಸ್ಕರ ಸಿದ್ಧರಾಮ ಸ್ವಾಮಿಗಳು ಬೆಳಗಾವಿ "ಟಪಾಲ್" ಗಾಡಿಯಲ್ಲಿ ಕುಳಿತರು. ಶಿವರಾಮ ಪಂತರೂ ಅದೇ ದಿವಸ ಬೆಳಗಾವಿಯಿಂದ ಹೊರಟರು. ಇವರು ಲಿಂಗರಾಜರ ಕಡೆಯವರಾಗಿದ್ದಾರೆಂಬುದು ಸಿದ್ಧರಾಮ ಸ್ವಾಮಿಗಳಿಗೇನೂ ಗೊತ್ತಿರಲಿಲ್ಲ.

ಈ ಟಪಾಲ್ ಗಾಡಿಗಳು ಪುಣೆಗೆ ಹೋಗುವಾಗ ಮಾರ್ಗದಲ್ಲಿ ಸಾತಾರಾ ಪಟ್ಟಣದ ಹತ್ತಿರ ಒಂಟೆಗಳು ಬಂದವು. ಅವುಗಳನ್ನು ನೋಡಿ ಒಂದು ಗಾಡಿಯ ಕುದುರೆಗಳು ಬೆದರಿ ಬೇರೆ ಕಡೆಗೆ ಓಡಿದುದರಿಂದ ಅದರಲ್ಲಿದ್ದ ಸಿದ್ಧರಾಮ ಸ್ವಾಮಿಗಳು ಕೆಳಗೆ ಬಿದ್ದರು. ಕೂಡಲೇ ಹಿಂದಿನ ಗಾಡಿಯು ಅವರ ಕುತ್ತಿಗೆಯ ಮೇಲೆಯೇ ಹಾಯ್ದು ಹೋದುದರಿಂದ ಸ್ವಲ್ಪ ಹೊತ್ತಿನಲ್ಲಿಯೇ ಸಿದ್ಧರಾಮ ಸ್ವಾಮಿಗಳು ಪ್ರಾಣ ಬಿಟ್ಟರು! ಲಿಂಗರಾಜರ ವಿರೋಧವಾಗಿ ಮಾಡಬೇಕಾಗಿದ್ದ ಇವರ ಎಲ್ಲ ಪ್ರಯತ್ನಗಳೂ ಮಣ್ಣು ಪಾಲಾದವು. ಲಿಂಗರಾಜರ ದೈವವೋ ಅಥವಾ ಉಮಾಬಾಯಿಯವರ ದುರ್ದೈವವೋ ಸಿದ್ಧರಾಮಸ್ವಾಮಿಗಳಿಗೆ ಇಂಥ ಶೋಚನೀಯ ಸ್ಥಿತಿಯನ್ನುಂಟುಮಾಡಿತು.

ಈ ದುಃಖದ ಸಂಗತಿಯೂ ಉಮಾಬಾಯಿಯವರಿಗೆ ತಿಳಿದೊಡನೆಯೇ ಬಹು ಶೋಕಿಸಿ ತಮಗೆ ಇನ್ನು ಅಪಜಯವೇ ಸರಿಯೆಂದು ತಿಳಿದರು. ಆಗ ಲಿಂಗರಾಜರು ಹೊಂಗಲದಲ್ಲಿದ್ದರು. ಈ ಸಮಾಚಾರವನ್ನು ಕೇಳಿ ಇನ್ನಾದರೂ ತನಗೆ ವಿರೋಧಿಸದೆ ಒಳ್ಳೆಯ ರೀತಿಯಲ್ಲಿದ್ದುಕೊಂಡು ಹೋಗಲು ಹೇಳಿಕೊಳ್ಳಬೇಕೆಂದು ಧಾರವಾಡಕ್ಕೆ ಹೋದರು. ಲಿಂಗರಾಜರ ಇಷ್ಟದಂತೆ ನಡೆಯುವುದು ತಮಗೆ ಅವಮಾನವೇ ಸರಿಯೆಂದು ತಿಳಿದು ಅದಕ್ಕೆ ಒಪ್ಪಲಿಲ್ಲ.

ಮುಂಬಯಿಯಲ್ಲಿ ನಡೆದ ವ್ಯಾಜ್ಯದ ದೆಸೆಯಿಂದ ಲಿಂಗರಾಜರು ಮತ್ತು ಹೊಂಗಲದ ಬಸವಪ್ಪನವರು ಪುಣೆಗೆ ಹೋದರು. ಅಲ್ಲಿ ವ್ಯಾಜ್ಯದ ಸಂಗತಿಗಳನ್ನೇಲ್ಲಾ ಕೇಳಿದನಂತರ ತಮಗೆ ಇಲ್ಲಿಯೂ ಜಯವಾಗುವಂತೆ ತೋರುವುದಿಲ್ಲವೆಂಬ ಸಂಶಯವು ಲಿಂಗರಾಜರಲ್ಲುಂಟಾಯಿತು. ಈ ಸಂದೇಹದಿಂದ ಇವರು ಬಹು ನಿರಾಶರಾದರು. ವ್ಯಾಜ್ಯವು ತನ್ನಂತೆ ಆಗದಿದ್ದರೆ ಬಹು ಅವಮರ್ಯಾದೆಯನ್ನು ಸಂಕಟಗಳನ್ನೂ ಅನುಭವಿಸಬೇಕಾಗುವುದೆಂಬ ದುಃಖದ ಸಂಗತಿಗಳನ್ನೇ ಚಿಂತಿಸಲುಪಕ್ರಮಿಸಿದರು. ಇವರ ಈ ಕಲ್ಪನಾ ವಿಶಿಷ್ಟವಾದ ದುಃಖವು ಇವರನ್ನು ಆತ್ಮಹತ್ಯಕ್ಕೆ ಪ್ರವೃತ್ತರನ್ನಾಗಿ ಮಾಡಿತು. ಗೂಟಕ್ಕೆ ನೇತು ಹಾಕಿದ್ದ ಪಿಸ್ತೂಲನ್ನು ತೆಗೆದುಕೊಂಡು

ಹೊಡೆದುಕೊಳ್ಳಬೇಕೆಂದು ಒಂದು ದಿನ ಮಧ್ಯರಾತ್ರಿಯಲ್ಲಿ ಅದನ್ನು ತೆಗೆದುಕೊಳ್ಳಲು ಹೋಗುವಾಗ ಅದರ ಹತ್ತಿರದಲ್ಲಿದ್ದ ಕತ್ತಿಯು ಕೆಳಗೆ ಬೀಳಲು ಅಲ್ಲಿಯೇ ಮಲಗಿದ್ದ ಬಸವಪ್ಪನವರು ಎಚ್ಚತ್ತು. ದೀಪವನ್ನು ಹಚ್ಚಿ ಲಿಂಗರಾಜರ ಕೈಯಲ್ಲಿದ್ದ ಪಿಸ್ತೂಲನ್ನು ಕಸಿದುಕೊಂಡರು. ಲಿಂಗರಾಜರು ಮುಖವನ್ನು ತಗ್ಗಿಸಿ ಕಣ್ಣೀರು ಸುರಿಸುತ್ತ ಕುಳಿತುಕೊಂಡರು.

ಶ್ರೀ ಬಸವಪ್ಪನವರು ಲಿಂಗರಾಜರನ್ನು ಕುರಿತು "ತಾವು ಇದೆಂಥ ಭಯಂಕರ ಕೆಲಸವನ್ನು ಮಾಡಿಕೊಳ್ಳುತ್ತಿದ್ದಿರಲ್ಲಾ! ನಿಮಗಾಗಿಯೇ ಕಷ್ಟಪಡುತ್ತಿರುವ ನಮ್ಮೆಲ್ಲರನ್ನೂ ದುಃಖಕ್ಕೀಡುಮಾಡುತ್ತಿದ್ದಿರಲ್ಲಾ! ಈಗ ನಿಮಗೆ ಆತ್ಮಹತ್ಯಮಾಡಿಕೊಳ್ಳುವಂಥ ಪ್ರಸಂಗವೇನು ಬಂದಿದೆ?" ಎಂದು ನಾನಾ ಪರಿಗಳಿಂದ ಬುದ್ಧಿಯ ಮಾತು ಹೇಳುವಷ್ಟರಲ್ಲಿ ಬೆಳಗಾಯಿತು. ಶ್ರೀ ಶಿವರಾಮ ಪಂತರು ಅಷ್ಟರಲ್ಲಿಯೇ ಅಲ್ಲಿಗೆ ಬಂದರು. ಲಿಂಗರಾಜರಿಗೆ ಸದುಪದೇಶಗಳನ್ನು ಮಾಡಿ ಮುಂಬೈಯಲ್ಲಿ ವ್ಯಾಜ್ಯವು ತಮ್ಮಂತೆಯೇ ಆಗುವ ಲಕ್ಷಣವಿದೆಯೆಂದು ನಿನ್ನೆ ಬಂದಿರುವ ಪತ್ರವನ್ನು ನಿಮಗೆ ತೋರಿಸಲಿಕ್ಕೇನೇ ಬಂದಿದ್ದೇನೆಂದು ಆ ಪತ್ರವನ್ನು ಲಿಂಗರಾಜನಿಗೆ ಕೊಟ್ಟರು. ಅದನ್ನು ಓದಿದ ನಂತರ ಲಿಂಗರಾಜರಿಗೆ ಸಮಾಧಾನವಾಯಿತು. ಈ ಪ್ರಕಾರ ಲಿಂಗರಾಜರು ಬಹು ಘೋರವಾದ ಗಂಡಾಂತರದಿಂದ ಪಾರಾದರು.

ಅನಂತರ ಲಿಂಗರಾಜರು ಎಲ್ಲರೊಡನೆ ಮುಂಬಯಿಗೆ ಹೋದರು. ಅಲ್ಲಿ ಇವರ ಸಹಾಯಾಧ್ಯಾಯಿಗಳಾದ ಕೊಲ್ಲಾಪುರದ ಶ್ರೀ ಶಿವಾಜಿ ಮಹಾರಾಜರಿದ್ದುದನ್ನು ಕೇಳಿ ಅವರಿಂದ ತಮಗೇನಾದರೂ ಸಹಾಯವಾಗಬಹುದೆಂದು ಅವರ ಹತ್ತಿರ ಹೋದರು. ಆಗ ಅವರು ಲಿಂಗರಾಜರನ್ನು ಕುರಿತು "ನಿಮ್ಮ ತಾಯಿಯವರು ನಿಮಗೆ ಈ ಪ್ರಕಾರ ಪ್ರಯತ್ನ ಮಾಡಲಿಕ್ಕಾದರೂ ಅವಕಾಶವಿರುವಂತೆ ಮಾಡಿದ್ದಾರೆ. ಆದರೆ ನನ್ನ ದತ್ತಕ ತಾಯಿಯು ನಾನು ಹುಚ್ಚನಿರುವೆನೆಂದು ಗೊತ್ತುಪಡಿಸಿ ಈಗ ಈ ಸೆರೆ ಮನೆಯಲ್ಲಿಡಿಸಿದ್ದಾಳೆ. ನನ್ನಿಂದ ನಿಮಗೇನು ಸಹಾಯವಾದೀತು?" ಎಂದು ಹೇಳಲು ಉಭಯರೂ ತಮ್ಮ ಶೋಚನೀಯ ಸ್ಥಿತಿಗಳನ್ನು ಕುರಿತು ದುಃಖಿಸಿದ ನಂತರ ಲಿಂಗರಾಜರು ತಿರುಗಿಬಂದರು. ಶ್ರೀ ಶಿವರಾಮ ಪಂತರ ಸಾಹಸದಿಂದ ವ್ಯಾಜ್ಯವು ಲಿಂಗರಾಜರಂತೆ ತೀರ್ಮಾನವಾಗಿ ಸಂಸ್ಥಾನದ ಸರ್ವಾಧಿಕಾರವನ್ನು ಲಿಂಗರಾಜರ ಕಡೆಗೆ ಕೂಡಿಸಬೇಕಾಗಿ ಬೆಳಗಾವಿ ಕಲೆಕ್ಟರರಿಗೆ ಅಪ್ಪಣೆಯಾಯಿತು.

ಆಮೇಲೆ ಎಲ್ಲರೂ ಸಂತೋಷದಿಂದ ಶಿರಸಂಗಿಗೆ ಬಂದು ಉತ್ಸವ ವೈಭವಳೊಡನೆ ಲಿಂಗರಾಜರಿಗೆ ನವಲಗುಂದ ಸಂಸ್ಥಾನದ ಸರ್ವಾಧಿಕಾರಗಳನ್ನು ವಹಿಸಿದರು. ತಮಗೆ ಮಾಡಿದ ಮಹದುಪಕಾರಕ್ಕೋಸ್ಕರ ಮಹೇಶ್ವರ ಪಂತರಿಗೂ ಶಿವರಾಮ ಪಂತರಿಗೂ ಕೆಲವು ಭೂಮಿಗಳನ್ನು ಬಹುಮಾನವಾಗಿ ಕೊಟ್ಟಿದ್ದಲ್ಲದೆ ಶಿವರಾಮ ಪಂತರನ್ನು ತಮ್ಮ ಮುಖ್ಯ ಕಾರಭಾರಿಗಳನ್ನಾಗಿ ಮಾಡಿಕೊಂಡರು. ಪೂರ್ವದ ಕಾರಭಾರಿಗಳಾದ ದೇವರಾಯರು ವೃದ್ಧರಾದುದರಿಂದ ಅವರಿಗೆ ತಕ್ಕ ವೇತನವನ್ನು ಕೊಟ್ಟು ಮನೆಯಲ್ಲಿಯೇ ಇಟ್ಟುಕೊಂಡರು. ಈ ಪ್ರಕಾರ ಲಿಂಗರಾಜರು ನಾನು ವಿಪತ್ತುಗಳನ್ನನುಭವಿಸಿ ಕೊನೆಗೆ ಜಯಶೀಲರಾಗಿ ಸಂಸ್ಥಾನದ ಪ್ರಭುತ್ವವನ್ನು ನಡೆಯಿಸಲುಪಕ್ರಮಿಸಿದರು.

❖❖

೭ನೆಯ ಪ್ರಕರಣ

ಹಣ್ಣು ತಿಂದ ಹುಣ್ಣು !

ಶ್ರೀ ಲಿಂಗರಾಜರು ಜಯಶೀಲರಾಗಿ ಸಂಸ್ಥಾನಾಧಿಪತಿಗಳಾದುದರಿಂದ ಉಮಾಬಾಯಿಯವರಿಗೆ ಅತ್ಯಂತ ದುಃಖವಾಯಿತು. ಕೂಡಿಟ್ಟ ದ್ರವ್ಯವೂ ವ್ಯಾಜ್ಯಗಳಿಗೆ ವೆಚ್ಚವಾಗಿ ಕೈಬರಿದಾಯಿತು. ಹಣ ಹೋದಮೇಲೆ ಅದರ ಆಸೆಗಾಗಿ ಶ್ರೀ ಉಮಾಬಾಯಿಯವರ ಹತ್ತಿರ ಸುಳಿದಾಡುತ್ತಿದ್ದ ಜನರು ದಿನೇ ದಿನೇ ದೂರಾದರು. ಈ ಪ್ರಕಾರ ಉಮಾಬಾಯಿಯವರಿಗೆ ಅನೇಕ ವಿಪತ್ತುಗಳೊದಗಲು ಜೀವನಾಂಶಕ್ಕೋಸ್ಕರ ವ್ಯಾಜ್ಯಮಾಡಬೇಕೆಂದು ಪ್ರಯತ್ನಿಸಿದರು. ಆಗ ಕೆಲವರು ಬುದ್ಧಿಯನ್ನು ಹೇಳಿ ಸಮಾಧಾನಪಡಿಸಿದರು. ಶ್ರೀ ಲಿಂಗರಾಜರು ಉಮಾಬಾಯಿಯವರಿಗೆ ೨೫೦೦ ರೂ. ವಾರ್ಷಿಕಾದಾಯದ ಸೊತ್ತನ್ನೂ ಮರಣಾಂತ್ಯದವರೆಗೂ ಉಪಭೋಗಿಸಲು ಕೊಟ್ಟು ಬೇವೂರ ಕೋಟೆಯಲ್ಲಿ ಸ್ವತಂತ್ರವಾಗಿರುವಂತೆ ವ್ಯವಸ್ಥೆಮಾಡಿ ಕೊಟ್ಟರು. ಮತ್ತು ಉಮಾಬಾಯಿಯವರ ತಮ್ಮಂದಿರಾದ ಶ್ರೀ ಎಲ್ಲಪ್ಪನವರಿಗೆ ೨೫ ಕೂರಿಗೆ ಭೂಮಿಯನ್ನು ಉಂಬಳಿಯಾಗಿ ಕೊಟ್ಟರು.

ಲಿಂಗರಾಜರು ಈ ಪ್ರಕಾರ ತಮ್ಮ ಸುತ್ತಲಿನ ಎಲ್ಲ ಕಂಟಕಗಳನ್ನು ನಿವಾರಣೆಮಾಡಿ ಸುಖದಿಂದ ಕಾಲಕಳೆಯಬೇಕೆನ್ನುವುದರಲ್ಲಿಯೇ ಇವರ ಹಿರಿಯ ಪತ್ನಿಯರಾದ ಬಸವಪ್ಪನವರು ದಮ್ಮಿನ ಬೇನೆಯಿಂದ ಮೃತಪಟ್ಟರು. ಚಿಕ್ಕ ಪತ್ನಿಯವರಾದ ಚನ್ನವ್ವರವರ ಕಾಲುಗಳು ಹೋದವು. ಅದುದರಿಂದ ಲಿಂಗರಾಜರು ಮತ್ತೆ ಇದೊಂದು ವಿಧವಾದ ದುಃಖಕ್ಕೊಳಗಾಗಬೇಕಾಯಿತು. ಬಸವ್ವನವರು ಶಿವೈಕ್ಯರಾದನಂತರ ಲಿಂಗರಾಜರಿಗೂ ತಮಗೂ ಇದ್ದ ಸಂಬಂಧವು ತಪ್ಪಬಾರದೆಂದು ಉಕ್ಕಲಿಯ ಬಸವನಗೌಡರು ತಿಕೋಟಿಯ ಚಿನ್ನಪ್ಪಗೌಡರ ಮಗಳನ್ನು ತಮ್ಮ ಮಗಳನ್ನಾಗಿ ಮಾಡಿಕೊಂಡು ಲಿಂಗರಾಜರಿಗೆ ಆ ತಮ್ಮ ಭಾಗಿರಥಿಯವರನ್ನು ಕೊಡುವುದಾಗಿ ನಿರ್ಧರಿಸಿದರು. ಪೂರ್ವದ ಸಂಬಂಧವನ್ನು ಬಿಡಬಾರದೆಂದು ಆ ಕನ್ಯೆಯನ್ನು ಗೊತ್ತು ಮಾಡಿಕೊಂಡು ಬಂದರು. ಈ ಕನ್ಯೆಯು ವಯಸ್ಸಿನಿಂದ ಚಿಕ್ಕವಳಿದ್ದರೂ ಕೇವಲ ತಮ್ಮ ಹಿತಚಿಂತಕರ ದಾಕ್ಷಿಣ್ಯಕ್ಕಾಗಿಯೇ ವಿವಾಹವಾದರು.

ವಿವಾಹವಾದ ಮರುದಿನವೇ ಶ್ರೀ ಲಿಂಗರಾಜರು ಪುಣೆಗೆ ಹೋದರು. ಅನೇಕರು ಬೇಡವೆಂದು ಹೇಳಿದರೂ ಕೇಳಲಿಲ್ಲ ಇಂಗಳೇಶ್ವರದ ಶ್ರೀ ಮಡಿವಾಳಪ್ಪಗೌಡರನ್ನು ಪುಣೆಗೆ ಕರೆದುಕೊಂಡು ಹೋಗಿ ತಮಗೆ ಬೇರೊಂದು ಕನ್ಯೆಯನ್ನು ಗೊತ್ತುಮಾಡಿಕೊಂಡು ಬರಬೇಕೆಂದು ಹೇಳಿದರು. ಆಗ ಉಕ್ಕಲಿ ಬಸವನಗೌಡರ ಸಂಬಂಧಿಗಳಾದ ಸೌಳಭಾವಿಯ ಗೌಡಪ್ಪಗೌಡರ ಮಗಳಾದ

ಗಿರಿಜಾಬಾಯಿಯೆಂಬುವರನ್ನು ಗೊತ್ತು ಮಾಡಿಕೊಂಡು ಹೋದರು. ಅಲ್ಲಿ ಸಂಕ್ಷಿಪ್ತ ವಿಧಿಗಳಿಂದ ಒಂದೇ ದಿವಸದಲ್ಲಿ ವಿವಾಹವಾಯಿತು. ಅನಂತರ ಲಿಂಗರಾಜರು ಶಿರಸಂಗಿಗೆ ಬಂದರು.

ಶ್ರೀ ಲಿಂಗರಾಜರು ಗ್ರಹಗಳ ಕಾಟ, ಶಕುನ, ಮೊದಲಾದವುಗಳು ನಿಜವೆಂದು ನಂಬುತ್ತಿದ್ದುದರಿಂದ ಅರಮನೆಯಲ್ಲಿ ತಮ್ಮ ಕುಟುಂಬಕ್ಕೆ ಕ್ಷೇಮವಿರುವುದಿಲ್ಲವೆಂದು ತಿಳಿದು ಈ ಉಭಯ ಪತ್ನಿಯರನ್ನೂ ಪ್ರತ್ಯೇಕವಾಗಿರುವ ಬೇರೊಂದು ಮನೆಯಲ್ಲಿಟ್ಟರು. ಗಿರಿಜಾಬಾಯಿಯವರು ಲಿಂಗರಾಜರ ಪ್ರೇಮಕ್ಕೆ ಪಾತ್ರರಾಗಿದ್ದರು. ಭಾಗೀರಥಿಬಾಯಿಯವರಾದರೋ ತಮ್ಮ ಸದ್ಗುಣ ಸದಾಚಾರಗಳಿಂದ ಲಿಂಗರಾಜರಿಗೆ ಪ್ರಿಯರಾಗಿದ್ದರು. ಕೆಲವು ದಿವಸಗಳಲ್ಲಿ ಗಿರಿಜಾಬಾಯಿಯವರು ಗರ್ಭವತಿಯಾದರು. ಆಗ ಲಿಂಗರಾಜರೇ ಮೊದಲಾದ ಸಂಸ್ಥಾನದ ಸಕಲ ಜನರಿಗೂ ಬಹು ಸಂತೋಷವಾಯಿತು. ಸವದತ್ತಿಯಲ್ಲಿ ಗಿರಿಜಾಬಾಯಿಯವರು ಗಂಡು ಕೂಸನ್ನು ಹೆತ್ತರು. ಆಗ ಲಿಂಗರಾಜರಿಗೆ ಪರಮಾನಂದವಾಯಿತು. ಬಂಡಿಯ ಮೇಲೆ ಸಕ್ಕರಿಯನ್ನು ಹೇರಿಕೊಂಡು ಯಥೇಚ್ಛವಾಗಿ ಹಂಚುವಂತೆಯೂ ಕೈ ನೀಡಿದವರಿಗೆಲ್ಲ ಒಂದೊಂದು ರೂಪಾಯಿ ಕೊಡುವಂತೆಯೂ ವ್ಯವಸ್ಥೆಯನ್ನು ಮಾಡಿದರು. ಅನೇಕರ ಸಾಲಗಳನ್ನು ತೆಗೆದು ಹಾಕಿದರು. ಆ ಸಮಯದಲ್ಲಿ ಅಲ್ಲಿಗೆ ಬಂದಿದ್ದ ಮುಧೋಳ ಸಂಸ್ಥಾನಾಧಿಪತಿಗಳಿಗೂ ಕಮೀಶನರ್ ಸಾಹೇಬರಿಗೂ ರಾ॥ ಬ॥ ಅರಟಾಳ ರುದ್ರಗೌಡರಿಗೂ ದೊಡ್ಡ ದೊಡ್ಡ ಔತಣಗಳನ್ನು ಮಾಡಿಸಿದರು. ಈ ಪ್ರಕಾರ ಶ್ರೀ ಲಿಂಗರಾಜರು ಪುತ್ರೋತ್ಸವದ ಪರಮ ಸಂತೋಷವನ್ನು ವ್ಯಕ್ತಪಡಿಸಿದರು.

ಶ್ರೀ ಲಿಂಗರಾಜರಿಗೆ ಈ ಸಂತೋಷವು ಒಂದೇ ಒಂದು ತಿಂಗಳವರೆಗಿದ್ದಿತು. ಅನಂತರ ಮತ್ತೆ ದುಃಖವು ಅವರಿಸಿತು. ಆ ಮಗು ಹೊಟ್ಟೆ ಬೇನೆಯಿಂದ ಮೃತಪಡಲು ಪುತ್ರಶೋಕವು ಶ್ರೀ ಲಿಂಗರಾಜರಿಗೆ ವಿಶೇಷವಾಗಿ ಬಾಧಿಸಿತು. ಗಿರಿಜಾಬಾಯಿಯವರು ಶಿರಸಂಗಿಗೆ ಬಂದ ಸ್ವಲ್ಪದಿವಸಗಳಲ್ಲಿಯೇ ಗಂಟಲ ಹುಣ್ಣಿನಿಂದ ಮೃತಪಟ್ಟರು. ಆಗ ಲಿಂಗರಾಜರು ಅತ್ಯಂತ ದುಃಖಿಗಳಾದರು. ಅತ್ಯಂತ ಪ್ರೇಮದ ಪತ್ನಿವಿಯೋಗವು ವಿಶೇಷ ದುಃಖವನ್ನುಂಟುಮಾಡುವುದು ಸ್ವಾಭಾವಿಕವಲ್ಲವೇ? ಸಂಸಾರದ ಸುಖ ದುಃಖಗಳು ಕ್ಷಣಭಂಗುರವಾದವುಗಳೇ ಸರಿ. ಆದುದರಿಂದ ಮುಂದೆ ಕೆಲವು ದಿವಸಗಳಲ್ಲಿಯೇ ಭಾಗೀರಥಿಬಾಯಿಯವರು ಗರ್ಭವತಿಯಾರಾಗಿ ಗಂಡು ಕೂಸನ್ನೇ ಹೆತ್ತುದನ್ನು ನೋಡಿ ಲಿಂಗರಾಜನಿಗೆ ಮತ್ತೆ ಸಂತೋಷವಾಯಿತು. ಆದರೆ ಹಿಂದಣ ಅನುಭವದ ಮೇಲಿಂದ ಈ ಸಾರೆ ಪುತ್ರೋತ್ಸವವನ್ನು ಯಾವ ವೈಭವಗಳಿಂದಲೂ ನಡೆಯಿಸಬಾರದೆಂದು ಗೊತ್ತುಮಾಡಿದರು. ಆ ಕೂಸು ಕೂಡಾ ನಾಲ್ಕಾರು ತಿಂಗಳುಗಳಲ್ಲಿಯೇ ಮೃತಪಟ್ಟುದರಿಂದ ಲಿಂಗರಾಜನಿಗೆ ಮತ್ತೆ ವಿಷಾದವುಂಟಾಯಿತು.

ಈ ಪ್ರಕಾರ ಮೂವರು ಪತ್ನಿಯರು ಮತ್ತು ಇಬ್ಬರು ಮಕ್ಕಳು ಮೃತಪಟ್ಟಿದ್ದರಿಂದ ಶ್ರೀ ಲಿಂಗರಾಜರಿಗೆ ಸಂಸಾರ ಸುಖದ ಸ್ಥಿತಿಗಳು ಬಹು ಮಟ್ಟಿಗೆ ಗೊತ್ತಾಯಿತು. ಈ ಸುಖಕ್ಕೆ ಮೋಹಿಸಿ ಹಣ್ಣೆಂದು ಸೇವಿಸ ಹೋದರೆ, ಅದು ಹುಣ್ಣಾಗಿಯೇ ಹಿಂಸೆಯನ್ನುಂಟು ಮಾಡುತ್ತದೆಂಬುದು ಶ್ರೀ ಲಿಂಗರಾಜರೆ ಸ್ವಾನುಭವದ ವಿಷಯವಾಯಿತು.

❖❖

೮ನೆಯ ಪ್ರಕರಣ

ಮೊಗ್ಗೆ ಅರಳಿತು

ಈವರೆಗೂ ಲಿಂಗರಾಜರು ವಿಶೇಷವಾಗಿ ಗೃಹಕಲಹ ಮತ್ತು ಕೌಟುಂಬಿಕ ಸಂಕಟಗಳಲ್ಲಿಯೇ ಕಾಲ ಕಳೆದಂತಾಯಿತು. ಸಂಸ್ಥಾನದಲ್ಲಿ ಯಾವ ಸುಧಾರಣೆಗಳನ್ನೂ ಮಾಡಿರಲಿಲ್ಲ. ಆದುದರಿಂದ ತಮ್ಮ ಕರ್ತವ್ಯಶಕ್ತಿಯನ್ನೂ ಅನಂತರ ಸಂಸ್ಥಾನದ ಶ್ರೇಯಸ್ಸಿಗಾಗಿ ವಿನಿಯೋಗಿಸಲುಪಕ್ರಮಿಸಿದರು. ತಮ್ಮ ಸಂಸ್ಥಾನದಲ್ಲಿಯ ರೈತರ ಭೂಮಿಯ ಮೇಲಿರತಕ್ಕ ಅವರ ಒಡೆತನವನ್ನು ತೆಗೆದು ಹಾಕಿ ತಮ್ಮ ಸ್ವಾಮಿತ್ವವನ್ನು ಸ್ಥಾಪಿಸಬೇಕೆಂದು ಮೊದಲು ಪ್ರಯತ್ನಿಸಿದರು; ಆದರೆ ಸಾಧಿಸಲಿಲ್ಲ. ಅನಂತರ ಭೂ ಕಂದಾಯವನ್ನು ಹೆಚ್ಚಿಗೆ ಮಾಡಿದರು. ಅದನ್ನು ರೈತರು ವಿರೋಧಿಸಿ ಗವ್ಹರ್ನರ ಸಾಹೇಬರ ವರೆಗೂ ವ್ಯಾಜ್ಯವನ್ನು ಮಾಡಿದರು. ಕೊನೆಗೂ ಲಿಂಗರಾಜರೇ ಆ ವ್ಯಾಜ್ಯದಲ್ಲಿ ಜಯಶಾಲಿಗಳಾದುದರಿಂದ ಭೂಕಂದಾಯವು ವರ್ಷಕ್ಕೆ ೪೦ ಸಹಸ್ರ ರೂ. ಗಳು ಬರುವಂತಾಯಿತು.

ಶ್ರೀ ಲಿಂಗರಾಜರು ಒಕ್ಕಲುತನದ ವಿಷಯದಲ್ಲಿ ಬಹು ಅಭಿರುಚಿಯುಳ್ಳವರಾಗಿದ್ದರು. ಶಿರಸಂಗಿ, ಹೊಂಗಲ ಮತ್ತು ಸವದತ್ತಿಗಳಲ್ಲಿ ಸ್ವಂತವಾಗಿಯೇ ಒಕ್ಕಲುತನವನ್ನು ಮಾಡಿಸುತ್ತಿದ್ದರು. ಶಿರಸಂಗಿಯಲ್ಲಿಯೇ ೮೦ ಎತ್ತು ಕೋಣಗಳನ್ನೂ ಕೆಲವು ಒಂಟೆಗಳನ್ನೂ ಇಟ್ಟು ಹೆಚ್ಚಿನ ಪ್ರಮಾಣದಲ್ಲಿ ಒಕ್ಕಲುತನ ಮಾಡಲುಪಕ್ರಮಿಸಿದರು. ಒಂಟೆಗಳನ್ನು ರಂಟೆಗಳನ್ನೆಳೆಯಲು ಉಪಯೋಗಿಸುತ್ತಿದ್ದರು. ಶ್ರೀ ಲಿಂಗರಾಜರು ತಾವೇ ಮಾಡಿಸುತ್ತಿದ್ದ ಒಕ್ಕಲುತನದಿಂದ ಪ್ರತಿವರ್ಷ ೧೫-೨೦ ಸಾವಿರ ರೂಪಾಯಿಗಳ ಆದಾಯವಾಗಲಾರಂಭಿಸಿತು. ಬಡ್ಡಿಯ ವ್ಯವಹಾರವೂ ನಡೆದಿದ್ದಿತು. ಈ ಪ್ರಕಾರ ಎಲ್ಲ ರೀತಿಗಳಿಂದ ವರ್ಷಕ್ಕೆ ಸಾಧಾರಣ ಒಂದು ಲಕ್ಷ ರೂ. ಗಳ ಆದಾಯವು ಸಂಸ್ಥಾನಕ್ಕೆ ಬರುವಂತೆ ಲಿಂಗರಾಜರು ಸ್ವಲ್ಪದಿನಗಳಲ್ಲಿಯೇ ಏರ್ಪಾಡು ಮಾಡಿದರು.

ಕ್ರಿ. ಶ. ೧೮೭೬ನೆಯ ಸಂವತ್ಸರದಲ್ಲಿ ಕ್ಷಾಮ ಉಂಟಾದುದರಿಂದ ತಮ್ಮ ಸಂಸ್ಥಾನದ ಬಡವರ ಜೀವಿತಕ್ಕವಕಾಶವುಂಟಾಗುವಂತೆ ಅವರಿಗೆ ಕೆರೆ ಕಾಲುವೆಗಳನ್ನು ಕಟ್ಟುವ ಕೆಲಸವನ್ನು ವಹಿಸಿದರು. ಶಿರಸಂಗಿಯ ಹತ್ತಿರ ಒಂದು ಕೆರೆಯನ್ನೂ ಮತ್ತು ಹೊಸಬಾಳ ಎಂಬ ಗ್ರಾಮದ ಹತ್ತಿರ ಒಂದು ದೊಡ್ಡ ಕೆರೆಯನ್ನೂ ಕಟ್ಟಿಸಲುಪಕ್ರಮಿಸಿದರು. ಈ ಕಾರ್ಯವು ೬ ವರುಷಗಳವರೆಗೆ ಜರುಗಿತು. ಮತ್ತು ಅದಕ್ಕೆ ೩ ಲಕ್ಷ ರೂ. ಗಳು ವೆಚ್ಚವಾದವು ಶಿರಸಂಗಿ ಕೆರೆಯಿಂದ ಮೈಲುಗಳವರೆಗೆ ನೀರು

ನಿಂತು ಬೆಳೆಗೆ ಬಹು ಅನುಕೂಲವಾಯಿತು. ಅನೇಕರು ಈ ನೀರಿನ ಸೌಲಭ್ಯದಿಂದ ಕಟ್ಟು ಭತ್ತ ಬಾಳೆಗಳನ್ನು ಬೆಳೆಯಲಾರಂಭಿಸಿದರು.

ಶ್ರೀ ಲಿಂಗರಾಜರಿಗೆ ವ್ಯಾಪಾರ ವಿಷಯದಲ್ಲಿಯೂ ಗಮನವಿದ್ದಿತು. ಸಂಘ ಮೂಲಕವಾಗಿ ದೊಡ್ಡ ದೊಡ್ಡ ವ್ಯಾಪಾರಗಳನ್ನು ಮಾಡುವುದು ಅವಶ್ಯಕವೆಂದು ಇವರು ಯೋಚಿಸಿದರು. ಆದುದರಿಂದ ಇವರು ಬೈಲಹೊಂಗಲ, ಇಂಗಳೇಶ್ವರ, ದಿಂಡವಾರ, ಶೇಗುಣಸಿ, ಬೆನಕನಕೊಪ್ಪ ಮೊದಲಾದ ಸ್ಥಳಗಳ ಗೌಡರನ್ನು ಕೂಡಿಸಿ ಪಾಲಿನಿಂದ ಒಂದು ವ್ಯಾಪಾರೀ ಸಂಘವನ್ನೇರ್ಪಡಿಸಿರು. ಆ ಸಂಘಕ್ಕೆ ತಾವು ೧೦ ಸಾವಿರ ರೂ. ಗಳನ್ನು ಕೊಟ್ಟರು. ಮೊದಲು ವಿಜಾಪುರದಲ್ಲಿ ಇಂಗಳೇಶ್ವರದ ಶ್ರೀ ರಾಯನಗೌಡರ ಹೆಸರಿನಿಂದ ಒಂದು ಅಂಗಡಿಯ ಸ್ಥಾಪನೆಯಾಯಿತು. ಈ ವ್ಯಾಪಾರೀ ಸಂಘದ ಕಾರ್ಯವು ಲಿಂಗರಾಜರು ಇರುವವರೆಗೆ ಚೆನ್ನಾಗಿ ನಡೆಯಿತು. ಅನಂತರ ಅನೇಕ ಬೇರೆ ಬೇರೆ ಸಂದರ್ಭಗಳುಂಟಾದುದರಿಂದ ಮುಂದುವರಿಯಲಿಲ್ಲ.

ಶ್ರೀ ಲಿಂಗರಾಜರು ಸಂಸ್ಥಾನದ ಆದಾಯವನ್ನು ಹೆಚ್ಚಿಸುವುದರಲ್ಲಿ ಹೇಗೆ ಆಸಕ್ತರಾಗಿದ್ದರೋ ಹಾಗೇಯೇ ಸಂಸ್ಥಾನದ ಘನತೆ ಕೀರ್ತಿಗಳಿಗೆ ಯೋಗ್ಯರಾಗುವಂತೆ ವಿಹಿತ ಕಾರ್ಯಗಳಲ್ಲಿ ಹಣವನ್ನು ವ್ಯಯಮಾಡಲು ಸಿದ್ಧರಾಗುತ್ತಿದ್ದರು. ಶಿರಸಂಗಿಯ ಹವೆಯು ಅಷ್ಟು ಅನುಕೂಲವಾಗಿಲ್ಲದಿದ್ದುದರಿಂದಲೂ ಆಗಾಗ್ಗೆ ಬೆಳಗಾವಿಗೆ ಹೋಗುವ ಪ್ರಸಂಗ ಬರುತ್ತಿದ್ದುದರಿಂದಲೂ ಬೆಳಗಾವಿಯಲ್ಲಿ ವಾಸವಾಗಿರಲು ಯೋಗ್ಯವಾದ ಸ್ಥಾನಬೇಕೆಂದು ಒಂದು ಭವ್ಯವಾದ ಮಂದಿರವನ್ನು ಕಟ್ಟಿಸಿದರು. ಆಗಿನ ಅಗ್ಗದ ಕಾಲದಲ್ಲಿ ಕೂಡಾ ಅದಕ್ಕೆ ನಾಲ್ವತ್ತು ಸಾವಿರ ರೂ. ಗಳೂ ವೆಚ್ಚವಾದವು. ತಮ್ಮ ತಾಯಿಯವರಾದ ಶ್ರೀ ಉಮಾಬಾಯಿಯವರು ದೇಹ ಬಿಡಲು ಅವರ ಅಂತ್ಯ ವಿಧಿಗಾಗಿ ೬ ಸಾವಿರ ರೂ. ಗಳನ್ನು ವೆಚ್ಚಮಾಡಿದರು. ವಾದ್ಯ ನೃತ್ಯ ಮೊದಲಾದವುಗಳ ಮೂಲಕ ಸಂಸ್ಥಾನದ ಸೇವೆಯನ್ನು ಮಾಡುತ್ತಿದ್ದವರಿಗೆ ಉಂಬಳಿಗಳು ಹಾಕಿಕೊಡಲ್ಪಟ್ಟಿದ್ದವು. ಗಜಾನನೋತ್ಸವ ಮೊದಲಾದ ಹಬ್ಬ ಹುಣ್ಣಿವೆಗಳಲ್ಲಿ ಬೇರೆ ಬೇರೆ ಮತೀಯರಿಗೆ ಸಂತರ್ಪಣೆ ಸಂಭಾವನೆಗಳು ಸಲ್ಲುತ್ತಿದ್ದವು. ಸಂಸ್ಥಾನದ ಘನತೆಗೆ ತಕ್ಕಂತೆ ಮೊದಲಿನಿಂದಲೂ ನಡೆಯುತ್ತ ಬಂದಿದ್ದ ಈ ಎಲ್ಲ ಕಾರ್ಯಗಳನ್ನೂ ಶ್ರೀ ಲಿಂಗರಾಜರು ಸರಿಯಾಗಿಯೇ ನಡೆಸುತ್ತಿದ್ದರು.

ಶ್ರೀ ಲಿಂಗರಾಜರ ಸಂಸ್ಥಾನದಲ್ಲಿ (೧) ಶಿರಸಂಗಿ (೨) ಕಲ್ಲಾಪುರ (೩) ಗೋವನಕೊಪ್ಪ (೪) ಕುರುವನಕೊಪ್ಪ (೫) ಬೆಳ್ಳೇರಿ (೬) ಹೊಸಬಾಳ (೭) ಹೂಲೀಕಟ್ಟಿ (೮) ಕೆಂಚಲಾರಕೊಪ್ಪ (೯) ಹೊಂಗಲ (೧೦) ಚಿಕ್ಕ ಉಳ್ಳೇಗೇರಿ ಎಂಬ ಹತ್ತು ಗ್ರಾಮಗಳಿದ್ದವು. ಈ ಗ್ರಾಮಗಳಲ್ಲಿಯ ಕೊಡಕೊಂಬುವ ಸಂಬಂಧವಾದ ವ್ಯಾಜ್ಯಗಳೆಲ್ಲವೂ ಇವರಲ್ಲಿಯೇ ತೀರ್ಮಾನವಾಗುತ್ತಿದ್ದವು. ಏಕೆಂದರೆ ಸರಕಾರದವರು ಇವರಿಗೆ ಸಬ್‌ಜಜ್ಜ್ ರ ಅಧಿಕಾರವನ್ನು ಕೊಟ್ಟಿದ್ದರು. ಶ್ರೀ ಲಿಂಗರಾಜರಿಗೆ ೨ನೆಯ ವರ್ಗದ ಮ್ಯಾಜಿಸ್ಟೇಟ್ ರ ಅಧಿಕಾರೂ ಇದ್ದುದರಿಂದ ಈ ಹತ್ತು ಗ್ರಾಮಗಳ ವಿನಾ ಸವದತ್ತಿ ತಾಲೂಕಿನಲ್ಲಿಯ ಎಲ್ಲ ಹೊಡೆದಾಟ ಮೊದಲಾದ ಅಪರಾಧಗಳ ವಿಚಾರಣೆಯು ಇವರಲ್ಲಿ ಜರುಗುತ್ತಿದ್ದಿತು. ಶ್ರೀ ಲಿಂಗರಾಜರು ನ್ಯಾಯ ನಿರ್ಣಯದಲ್ಲಿ ಬಹು ಕುಶಲರೂ ಸತ್ಯ ಪಕ್ಷ ಪಾತಿಗಳೂ ಆಗಿದ್ದರು. ಆದುದರಿಂದ ವ್ಯಾಜ್ಯದಲ್ಲಿ ತಮಗೆ ನ್ಯಾಯದೊರೆಯಬೇಕೆಂಬುವವರು ಶ್ರೀ ಲಿಂಗರಾಜರ ಕಡೆಗೇನೆ ತಮ್ಮ ವ್ಯಾಜ್ಯವನ್ನು ತರುತ್ತಿದ್ದರು.

ಶ್ರೀ ಲಿಂಗರಾಜರು ಮುಂಬಯಿ ಪ್ರಾಂತದ ದಕ್ಷಿಣಭಾಗದ ಪರವಾಗಿ ಮುಂಬಯಿ ನ್ಯಾಯನಿರ್ಣಯ ಸಭೆಯಲ್ಲಿ ಸದಸ್ಯರಾಗಿ ಆರಿಸಲ್ಪಟ್ಟಿದ್ದರು. ಆದುದರಿಂದ ತಮ್ಮ ಸಂಸ್ಥಾನದ ವಿನಾ ಈ ಪ್ರಾಂತದ ರಾಜಕೀಯ ವಿಷಯದಲ್ಲಿಯೂ ಪ್ರವೇಶಿಸಿ ಕಾರ್ಯ ಮಾಡಬೇಕಾಗುತ್ತಿದ್ದಿತು. ಈ ಪ್ರಕಾರ ಸಾಂಪತ್ತಿಕ ಮತ್ತು ರಾಜಕೀಯ ವಿಷಯದಲ್ಲಿ ಶ್ರೀ ಲಿಂಗರಾಜರು ಬಹು ದಕ್ಷತೆಯಿಂದ ಕಾರ್ಯ ಮಾಡಿ ಬಹು ಪ್ರಸಿದ್ಧಿಯನ್ನು ಹೊಂದಿದರು.

❖❖

೯ನೆಯ ಪ್ರಕರಣ

ಭಕ್ತಿಯ ಬೆಳಕು

ಗಿರಿಜಾಬಾಯಿಯವರು ಶಿವಾಧೀನರಾದನಂತರ ಲಿಂಗರಾಜರ ಪ್ರವೃತ್ತಿಯು ಎಷ್ಟೋ ಬೇರೆಯಾಗಿದ್ದಿತು. ಸಂಸಾರದ ವಿಷಯದಲ್ಲಿ ಆ ಮೊದಲಿನ ಮೋಹವು ಬಹುಮಟ್ಟಿಗೆ ಅಳಿದು ಹೋಗಿದ್ದಿತು. ಶಿರಸಂಗಿಯನ್ನು ಬಿಟ್ಟು ಕುಟುಂಬ ಸಹಿತವಾಗಿ ಬೆಳಗಾವಿಯಲ್ಲಿಯೇ ಹೆಚ್ಚಾಗಿ ಇರಲಾರಂಭಿಸಿದರು. ಆಗ ಉಕ್ಕಲಿಯ ಶ್ರೀ ಭೀಮನಗೌಡರು ಇಂಗಳೇಶ್ವರದ ಶ್ರೀ ರಾಯನಗೌಡರು ಮತ್ತು ತಿಕೋಟಿಯ ಶ್ರೀ ತಿಮ್ಮನಗೌಡರು ವಿಶೇಷ ಹಿತಚಿಂತಕರೂ ಸಹಾಯಕರೂ ಆಗಿದ್ದರು.

ಶ್ರೀ ಲಿಂಗರಾಜರೂ ಬೆಳಗಾವಿಯಲ್ಲಿದ್ದಾಗ ಕಾಸಿ ಯಾತ್ರೆಗೆ ಹೋಗಬೇಕೆಂದು ಯೋಚಿಸಿ ಬಹು ಸಂಭ್ರಮದಿಂದ ಆ ಯಾತ್ರೆಯನ್ನು ಮುಗಿಸಿಕೊಂಡು ಬಂದು ರಾಮೇಶ್ವರ ಯಾತ್ರೆಗೆ ಬಹು ವೈಭವದಿಂದ ಹೊರಟರು. ಇವರ ಸಂಗಡ ಸುಧಾರಣ ೬೦ ಜನ ಸ್ನೇಹಿತರೂ ಹಿತಚಿಂತಕರೂ ಆಪ್ತೇಷ್ಠರೂ ಇದ್ದರು. ರಾ॥ ಬ॥ ಅರಟಾಳ ರುದ್ರಗೌಡರು ಮದ್ರಾಸದ ವರೆಗೂ ದೊಡ್ಡ ದೊಡ್ಡ ಸ್ಥಳಗಳಲ್ಲಿ ಶ್ರೀ ಲಿಂಗರಾಜರ ಹೋದಾಗ ವ್ಯವಸ್ಥೆಗೋಸ್ಕರ ಮುಂಚೆಯೇ ಏರ್ಪಾಟಗಳನ್ನು ಮಾಡಿಸಿದ್ದರು. ಶ್ರೀ ಲಿಂಗರಾಜರು ರಾಮೇಶ್ವರಕ್ಕೆ ಹೋದಾಗ ಅಲ್ಲಿಯ ಸಂಸ್ಥಾನಾಧಿಪತಿಗಳಾದ ಶ್ರೀ ರಾಮನಾಥರಾಜರು ಇವರನ್ನು ಬಹು ಆದರೋಪಚಾರಗಳಿಂದ ಸತ್ಕರಿಸಿದರು. ಶ್ರೀ ರಾಮನಾಥ ದೇವಾಲಯದ ಹತ್ತಿರ ಇರತಕ್ಕ ಬಹು ಕಟ್ಟಡವನ್ನು ಶ್ರೀ ಲಿಂಗರಾಜರು ೨ ಸಾವಿರ ರೂ. ಗಳಿಗೆ ತೆಗೆದುಕೊಂಡು ಅದನ್ನು ಅಲ್ಲಿಗೆ ಹೋಗತಕ್ಕ ವೀರಶೈವ ಯಾತ್ರಿಕರ ನಿವಾಸಕ್ಕೆ ಕೊಟ್ಟರು. ರಾಮೇಶ್ವರದಿಂದ ಬರುವಾಗ ಬೆಂಗಳೂರ ಮಹಾಜನರಿಂದ ಸನ್ಮಾನವನ್ನು ಹೊಂದಿ ಶಿರಸಂಗಿಗೆ ಬಂದನಂತರ ಪುನಃ ಕಾಶಿಗೆ ಹೋಗಿ ಈ ಮಹಾಯಾತ್ರೆಯನ್ನು ಸಾಂಗಗೊಳಿಸಿದರು.

ಲಕ್ಷ್ಮೇಶ್ವರ ತಾಲೂಕಿನಲ್ಲಿ ರಿತ್ತಿ ಎಂಬ ಒಂದು ಗ್ರಾಮವಿದೆ. ಅಲ್ಲಿ ಶ್ರೀ ಮನ್ನಿರಂಜನ ಶ್ರೀ ಗುದ್ದಲಿ ಸ್ವಾಮಿಗಳೆಂಬ ಮಹಾ ತಪಸ್ವಿಗಳು ಆ ಕಾಲದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದ್ದರು. ಅದರ ದರ್ಶನಕ್ಕೆ ಹೋಗಬೇಕೆಂದು ಶ್ರೀಲಿಂಗರಾಜರು ಯೋಚಿಸಿದರು. ಆ ಶಿವಯೋಗಿಗಳ ದರ್ಶನವಾದ ನಂತರ ತಮ್ಮ ಜನ್ಮ ಸ್ಥಳವಾದ ಶಿಗ್ಗಲಿಗೂ ಹೋಗಿರಬೇಕೆಂದು ಗೊತ್ತುಮಾಡಿ ಸಂಸ್ಥಾನದ ಎಲ್ಲ ಸೇವಕರೂ ತಮ್ಮ ತಮ್ಮ ಕಾರ್ಯಗಳಲ್ಲಿ ದಕ್ಷರಾಗಿರುವಂತೆ ಅಪ್ಪಣೆಮಾಡಿ ಎಲ್ಲ ಹಿತಚಿಂತಕರೊಡನೆ ರಾಜವೈಭವದಿಂದ ಹೊರಟರು. ಆರಂಭದಲ್ಲಿ ಶ್ರೀ ಗುದ್ದಲಿ ಸ್ವಾಮಿಗಳವರ

ದರ್ಶನವನ್ನು ಹೊಂದಿ ಅಲ್ಲಿ ಒಂದು ಮಹಾಗಣಾರಾಧನೆಯನ್ನು ಮಾಡಿಸಿ ಶಿಗ್ಗಲಿಗೆ ಹೊರಟರು. ಇವರ ಸಹಾಯಾಧ್ಯಾಯಗಳಾಗಿದ್ದ ಮಿರ್ಜಿ ಶ್ರೀಬಾಳಾಸಾಹೇಬರವರು ಲಕ್ಷ್ಮೇಶ್ವರದ ಅಧಿಕಾರಿಗಳಿಗೆ ತಮ್ಮ ಸಂಸ್ಥಾನದಲ್ಲಿ ಶ್ರೀ ಲಿಂಗರಾಜರು ಇರುವವರೆಗೂ ಸಂಸ್ಥಾನದ ವೆಚ್ಚದಿಂದಲೇ ಅವರ ಎಲ್ಲ ವ್ಯವಸ್ಥೆಯನ್ನು ಮಾಡಬೇಕೆಂದು ಅಪ್ಪಣೆಮಾಡಿದ್ದರು. ಆದುದರಿಂದ ಲಕ್ಷ್ಮೇಶ್ವರದ ಅಧಿಕಾರಿಗಳು ಶ್ರೀಲಿಂಗರಾಜರ ಪ್ರಯಾಣದಲ್ಲಿ ಬಹು ವ್ಯವಸ್ಥೆಯನ್ನಿಟ್ಟಿದ್ದರು.

ಶ್ರೀ ಲಿಂಗರಾಜರು ರಾಜವೈಭವದೊಡನೆ ಶಿಗ್ಗಲಿಗೆ ಹೋಗಲು ಅಲ್ಲಿಯ ಜನರೆಲ್ಲಾ ಬೆರಗಾದರು. ನಮ್ಮಲ್ಲಿಯ ಒಕ್ಕಲಿಗರ ಹುಡುಗನು ಎಂಥ ಸ್ಥಿತಿಗೆ ಬಂದನು! ದೈವ ಮಹಿಮೆಯೆಂದು ಆಡಿಕೊಂಡರು. ಶಿಗ್ಗಲಿಯಲ್ಲಿರುವವರೆಗೂ ಪ್ರತಿನಿತ್ಯ ರಾಜರಲ್ಲಿ ಜರುಗುತ್ತಿದ್ದಂತೆ ನಾಟ್ಯ, ಗಾಯನ, ಕಲಾಪ್ರದರ್ಶನಗಳೂ ಪಂಡಿತರ ಸಭೆಗಳೂ ಶ್ರೀ ಲಿಂಗರಾಜರ ಸಮ್ಮುಖದಲ್ಲಿ ಜರುಗುತ್ತಿದ್ದವು. ಇವರು ಆ ಗ್ರಾಮದ ಜನರಿಗೆಲ್ಲ ಮಹಾ ಸಂತರ್ಪಣೆಯನ್ನು ಮಾಡಿಸಿದ್ದಲ್ಲದೇ ಅನೇಕರಿಗೆ ವಸ್ತ್ರಾಭರಣಗಳನ್ನು ಉಡುಗೊರೆಯಾಗಿ ಕೊಟ್ಟರು. ಲಕ್ಷ್ಮೇಶ್ವರದಲ್ಲಿ ಮಿರ್ಜಿ ಸಂಸ್ಥಾನದ ಪರವಾಗಿ ಶ್ರೀ ಲಿಂಗರಾಜರಿಗೆ ಒಂದು ಮಹಾ ಔತನವು ಕೊಡಲ್ಪಟ್ಟಿತು. ಈ ಮಹಾ ವೈಭವದ ಪ್ರವಾಸಕ್ಕೆ ಸಾಧಾರಣ ೬೦ ಸಹಸ್ರ ರೂ. ಗಳು ವೆಚ್ಚವಾದವು.

ಕ್ರಿ. ಸ. ೧೯೦೧ರಲ್ಲಿ ಏಳನೆಯ ಎಡ್ವರ್ಡ ಚಕ್ರವರ್ತಿಗಳ ಸಿಂಹಾಸನಾರೋಹಣದ ನಿಮಿತ್ತವಾಗಿ ದಿಲ್ಲಿಯಲ್ಲಿ ಇಂಗ್ಲೀಷ ಸರಕಾರದವರು ಒಂದು ಮಹಾಸಭೆಯನ್ನು ಕೂಡಿಸಿದ್ದರು. ಅಲ್ಲಿಗೆ ಬರಲು ಶ್ರೀ ಲಿಂಗರಾಜರಿಗೆ ಆಮಂತ್ರಣ ಬಂದುದರಿಂದ ತಮ್ಮ ಸಂಸ್ಥಾನದ ಘನತೆಗೆ ತಕ್ಕಂತೆ ಯೋಗ್ಯ ಪರಿವಾರದೊಡನೆ ದಿಲ್ಲಿಗೆ ಹೊರಟರು. ಇಂಗಳೇಶ್ವರ, ಉಕ್ಕಲಿ, ತಿಕೋಟ, ಶೇಗೂಣಸಿ ಮೊದಲಾದ ಸ್ಥಳಗಳಲ್ಲಿಯ ತಮ್ಮ ಆಪ್ತರನ್ನೂ ಹಿತಚಿಂತಕರನ್ನೂ ತಮ್ಮ ಸಂಗಡ ಕರೆದುಕೊಂಡು ಈ ದಿಲ್ಲಿ ಪ್ರವಾಸವನ್ನು ಬಹು ತೃಪ್ತಿಕರವಾಗಿ ಸಾಗಿಸಿಕೊಂಡು ಬಂದರು. ಈ ಪ್ರಕಾರ ಲಿಂಗರಾಜರು ತಮ್ಮ ಸಂಸ್ಥಾನದ ಹೊರಗಡೆಯಲ್ಲಿಯೂ ಸಂಚರಿಸಿ ಅನೇಕ ರೀತಿಗಳಿಂದ ಪ್ರಸಿದ್ಧಿಯನ್ನು ಹೊಂದಿದರು.

❖❖

೧೦ನೆಯ ಪ್ರಕರಣ

ತ್ಯಾಗದ ಬೀಜ

ಶ್ರೀ ಭಾಗೀರಥಿಬಾಯಿಯವರು ಸದ್ಗುಣ ಸದಾಚಾರಿಗಳಾಗಿದ್ದರು. ಇವರ ಪತಿಭಕ್ತಿಯು ಅಸಾಧಾರಣವಾಗಿದ್ದಿತು. ಆದುದರಿಂದ ಶ್ರೀ ಲಿಂಗರಾಜರಿಗೆ ದಿನೇ ದಿನೇ ಇವರಲ್ಲಿ ಪ್ರೇಮವು ಅತ್ಯಧಿಕವಾಗುತ್ತಿದ್ದಿತು. ಮೊದಲು ಇವರ ಗುಣ ಸ್ವಭಾವಗಳನ್ನರಿಯದೆ ಇವರನ್ನು ಉಪೇಕ್ಷಿಸಿದ್ದು ಅನುಚಿತವಾಯಿತೆಂದು ಲಿಂಗರಾಜರಿಗೆ ಅನಂತರ ತಿಳಿದು ಅದಕ್ಕಾಗಿ ಎಷ್ಟೋಸಾರೆ ಪಶ್ಚಾತ್ತಾಪಪಟ್ಟರು.

ಶ್ರೀ ಭಾಗೀರಥಿಬಾಯಿಯವರಿಗೆ ಸಂತಾನವಾಗದಿದ್ದುದರಿಂದ ಇನ್ನೊಂದು ಲಗ್ನವಾಗಬೇಕೆಂದು ಲಿಂಗರಾಜರಿಗೆ ಅವರ ಜನಕ ತಂದೆಯವರೇ ಮೊದಲಾದವರು ಹೇಳಿದರು. ಇದಕ್ಕೆ ತಮ್ಮ ಪ್ರೇಮದ ಪತ್ನಿಯು ಒಪ್ಪುವಳೋ ಇಲ್ಲವೋ ಎಂಬ ಸಂಶಯವು ಲಿಂಗರಾಜರಿಗೆ ಇದ್ದೇ ಇದ್ದಿತು. ಆದರೆ ಭಾಗೀರಥಿಬಾಯಿಯವರು ಅಂಥ ಸಂಕುಚಿತ ಮನಸ್ಸಿನವರಾಗಿರಲಿಲ್ಲ. ಅವರು ಸಂಸ್ಥಾನದ ವಂಶಾಭಿವೃದ್ಧಿಯ ಕಡೆಗೆ ಲಕ್ಷಿಸಿ ಲಿಂಗರಾಜರು ಮತ್ತೊಬ್ಬ ಕನ್ಯೆಯನ್ನು ಲಗ್ನವಾಗಲು ಬಹು ಸಂತೋಷದಿಂದ ಒಪ್ಪಿದರು. ಹೊನ್ನುಟಗಿ ಶ್ರೀ ಮಲಕಪ್ಪಗೌಡರು ಅಂಕಲಗಿಯಗೌಡರ ಮಗಳಾದ ನೀಲಮ್ಮನವರನ್ನು ಗೊತ್ತು ಮಾಡಿಕೊಂಡು ಬಂದರು. ಈ ವಿವಾಹವೂ ಶಿರಸಂಗಿಯಲ್ಲಿ ಬಹು ವೈಭವದಿಂದ ಜರುಗಿತು. ಅನಂತರ ಸ್ವಲ್ಪ ದಿವಸಗಳಲ್ಲಿಯೇ ಭಾಗೀರಥಿಬಾಯಿಯವರು ಗರ್ಭವತಿಯಾರಾದರೂ. ಆಗ ಸಂಸ್ಥಾನದ ಎಲ್ಲ ಹಿತಚಿಂತಕರಿಗೂ ಅತ್ಯಾನಂದವಾಯಿತು.

ಶ್ರೀ ಭಾಗೀರಥಿಬಾಯಿಯವರ ಹೆರಿಗೆಗೆ ಶಿರಸಂಗಿ, ಸವದತ್ತಿ, ಬೆಳಗಾವಿಗಳಿಗಿಂತ ವಿಜಾಪೂರವೇ ಅನೇಕ ರೀತಿಗಳಿಂದ ಉತ್ತಮವಾದ ಸ್ಥಳವೆಂದು ಎಲ್ಲ ಹಿತಚಿಂತಕರೂ ಯೋಚಿಸಿ ವಿಜಾಪುರದ ಶಹಾಪುರ ಪೇಟೆಯಲ್ಲಿ ಒಂದು ಮನೆಯನ್ನು ತೆಗೆದುಕೊಂಡು ಅಲ್ಲಿ ಭಾಗೀರಥಿಬಾಯಿಯವರ ಹೆರಿಗೆಗೆ ಯೋಗ್ಯ ವ್ಯವಸ್ಥೆಯನ್ನು ಇಂಗಳೇಶ್ವರದ ಶ್ರೀರಾಯನಗೌಡರು ಈ ವಿಷಯದಲ್ಲಿ ಬಹು ಸಾಹಸಮಾಡಿದರು. ಲಿಂಗರಾಜರು ಸಂಸ್ಥಾನದ ಕಾರ್ಯಗಳಿಗೋಸ್ಕರ ಶಿರಸಂಗಿ ಬೆಳಗಾವಿಗಳಿಗೆ ಹೋಗಬೇಕಾದುದರಿಂದ ಎಲ್ಲ ಹಿತಚಿಂತಕರಿಗೂ ಆಗಿನ ಕಾರಭರಿಗಳಾಗಿದ್ದ ಶ್ರೀ ಶಿವರುದ್ರ ಮಡಿವಾಳೇಶ್ವರ ಪಂಡಿತ ಎಂಬವರಿಗೂ ಭಾಗೀರಥಿಬಾಯಿಯವರ ಮೇಲ್ವಿಚಾರಣೆಯನ್ನು ವಹಿಸಿ ತಾವು ವಿಜಾಪುರದಿಂದ ಹೊರಟುಹೋದರು.

ಶ್ರೀ ಲಿಂಗರಾಜರು ಹೋದ ಕೆಲವು ದಿವಸಗಳಲ್ಲಿಯೇ ಭಾಗೀರಥಿಬಾಯಿಯವರು ಅಸ್ವಸ್ಥರಾದರು. ಕೈಕಾಲುಗಳು ಬಾತವು. ಈ ಸಮಾಚಾರವನ್ನು ಶ್ರೀ ಲಿಂಗರಾಜರಿಗೆ ತಿಳಿಸಲು ಅವರು ಬೆಳಗಾವಿಯ ಡಾಕ್ಟರರಲ್ಲಿ ಪ್ರಸ್ತಾಪಿಸಿ ಭಾಗೀರಥಿಬಾಯಿಯವರ ಜೀವನಕ್ಕೇನೂ ಅಪಾಯವಿಲ್ಲವೆಂಬುದನ್ನು ಕೇಳಿ ಸ್ವಲ್ಪ ಸಮಾಧಾನಪಟ್ಟರು. ವಿಪತ್ತಿನ ಸಮಯದಲ್ಲಿ ಮಿಥ್ಯದ ಕೆಲಸಗಳಲ್ಲಿ ಕೂಡಾ ವಿಶ್ವಾಸವುಂಟಾಗುವುದು ಸ್ವಾಭಾವಿಕವಾಗಿದೆ. ಆ ಪ್ರಕಾರ ಲಿಂಗರಾಜರ ಸ್ಥಿತಿಯೂ ಆಯಿತು. ಕೊಲ್ಲಾಪುರದ ಒಬ್ಬ ಪ್ರಸಿದ್ಧ ಜ್ಯೋತಿಷ್‌ಜ್ಞದಲ್ಲಿ ಭಾಗಿರಥಿಬಾಯಿಯವರ ವಿಷಯವಾಗಿ ಕೇಳಲು ಆ ಜೋತಿಷ್ಯಜ್ಞನು ಭಾಗೀರಥಿಬಾಯಿಯುವರಿಗೆ ಯಾವ ಅಪಾಯವೂ ಸಂಭವಿಸುವುದಿಲ್ಲವೆಂತಲೂ ಗಂಡು ಕೂಸನ್ನು ಹೆರುವರೆಂತಲೂ ಹೇಳಿದುದನ್ನು ನಂಬಿ ಸಂತೋಷದಿಂದ ವಿಜಾಪುರಕ್ಕೆ ಬಂದರು.

ಶ್ರೀ ಭಾಗೀರಥಿಬಾಯಿಯವರ ರೋಗವು ದಿನೇ ದಿನೇ ಹೆಚ್ಚಾಯಿತು. ಒಂದು ದಿನ ತಮ್ಮನ್ನು ಹಾಸಿಗೆಯಿಂದ ಮೇಲಕ್ಕೆಬ್ಬಿಸಲು ಕುಗ್ಗಿದ ಧ್ವನಿಯಿಂದ ಹೇಳಿದರು. ಶ್ರೀ ಲಿಂಗರಾಜರು ಮಗ್ಗಲಿಗೆ ಕೈಕೊಟ್ಟು ಎತ್ತಿದರು. ಅಷ್ಟರಲ್ಲಿ ಪತಿಯ ಕಡೆಗೆ ನೋಡಿ ಕೈ ಜೋಡಿಸಿ ನಮಸ್ಕರಿಸಿ ಕಣ್ಣು ಮುಚ್ಚಿದರು. ಸ್ವಲ್ಪ ಕಾಲದಲ್ಲಿಯೇ ಭಾಗೀರಥಿಬಾಯಿಯವರ ಪತಿಯ ಪಾದಧ್ಯಾನ ಮಾಡುತ್ತಾ ದೇಹಬಿಟ್ಟರು. ಆಗ ಲಿಂಗರಾಜರಿಗೆ ಸಹಿಸಲಸಾಧ್ಯವಾದ ದುಃಖವುಂಟಾಯಿತು. ಭಾಗೀರಥಿಬಾಯಿಯವರ ಸ್ಮಶಾನಯಾತ್ರೆಗೆ ಪುರ ಪ್ರಮುಖರೂ ಅಧಿಕಾರಿಗಳು ಆಗಮಿಸಿ ಶ್ರೀ ಲಿಂಗರಾಜರ ವಿಷಯದಲ್ಲಿ ತಮಗುಂಟಾದ ವಿಷಾದವನ್ನು ವ್ಯಕ್ತಗೊಳಿಸಿದರು.

ಶ್ರೀ ಲಿಂಗರಾಜರು ದುಃಖದ ಹೃದಯದಿಂದ ಶಿರಸಂಗಿಗೆ ಬಂದರು. ಇವರ ದುಃಖವನ್ನು ಕಡಿಮೆ ಮಾಡಲು ರಾ॥ ಬ॥ ಅರಟಾಳ ರುದ್ರಗೌಡರೇ ಮೊದಲಾದ ಸ್ನೇಹಿತರೂ ಅನೇಕ ಹಿತಚಿಂತಕರೂ ಬಹು ಪ್ರಯತ್ನಿಸಿದರು. ಲಿಂಗರಾಜರಲ್ಲಿ ವೈರಾಗ್ಯವು ತಲೆದೋರಿತು. ಮೈ ಮೇಲಿನ ಆಭರಣಗಳನ್ನು ತೆಗೆದುಹಾಕಿದರು. ಸಾದಾ ವಸ್ತ್ರಗಳನ್ನು ಧರಿಸಲುಪಕ್ರಮಿಸಿದರು. ಒಂದೇ ಹೊತ್ತು ಊಟ ಮಾಡಲಾರಂಭಿಸಿದರು. ಮೃದುವಾದ ಹಾಸಿಗೆಯ ಮೇಲೆ ಮಲಗುವದನ್ನು ಬಿಟ್ಟರು. ಶ್ರೀ ಭಾಗೀರಥಿಬಾಯಿಯವರ ಸ್ಮರಣಾರ್ಥವಾಗಿ ಅಮ್ಮಣಗಿ ಎಂಬ ಇನಾಮ ಗ್ರಾಮವನ್ನು ಕೊಂಡು ಕೊಂಡು ಅದನ್ನು ಧಾರವಾಡದ ಲಿಂಗಾಯತ ಫಂಡಿಗೆ ಕೊಟ್ಟರು. ಇವರ ಚಿಕ್ಕ ಪತ್ನಿಯವರಾದ ನೀಲಮ್ಮನವರು ಕ್ಷಯರೋಗದಿಂದ ದಿನೇ ದಿನೇ ಕ್ಷೀಣ ಸ್ಥಿತಿಯನ್ನು ಹೊಂದಲಾರಂಭಿಸಿದರು.

❖❖

೧೧ನೆಯ ಪ್ರಕರಣ

ಸಮಾಜ ಸೇವೆ

ಶ್ರೀ ಲಿಂಗರಾಜರು ಸಂಸಾರದ ನಾನಾ ದುಃಖಗಳಿಗೆ ಈಡಾಗಿ ಬಹು ಬೆಂದಿದ್ದರು. ಆದರೂ ಸಂಸ್ಥಾನದ ವಂಶಾಭಿವೃದ್ಧಿಗೋಸ್ಕರ ಪುತ್ರಾಪೇಕ್ಷೆಯು ಇನ್ನೂ ಸಂಪೂರ್ಣ ನಿವಾರಣೆಯಾಗಿರಲಿಲ್ಲ. ಹಿತಚಿಂತಕರಂತು ಪುನಃ ಲಗ್ನವಾಗಲು ಒತ್ತಾಯ ಮಾಡುತ್ತಿದ್ದರು. ಕೊನೆಗೆ ಲಿಂಗರಾಜರು ೬ನೆಯ ವಿವಾಹಕ್ಕು ಒಪ್ಪಿದರು. ಶ್ರೀಯುತ ಉಕ್ಕಲಿಯ ಭೀಮನಗೌಡರೇ ಮೊದಲಾದ ಹಿತಚಿಂತಕರು ಜಮಖಂಡಿ ಸಂಸ್ಥಾನದಲ್ಲಿರುವ ಕಲಬುರಗಿಯ ಗೌಡರ ಮಗಳಾದ ಸುಂದರಬಾಯಿಯವರನ್ನು ಗೊತ್ತು ಮಾಡಿ ಹೊಂಗಲಕ್ಕೆ ಕರೆದುಕೊಂಡು ಬಂದರು ಅಲ್ಲಿ ವಿವಾಹವಾಯಿತು.

ಶ್ರೀ ಲಿಂಗರಾಜರು ಈ ನೂತನ ಪತ್ನಿ ಸಮೇತ ನವಲಗುಂದಕ್ಕೆ ಹೋಗಿ ಅಲ್ಲಿ ಕೆಲವು ದಿವಸಗಳವರೆಗೆ ಇದ್ದರು. ಶಿರಸಂಗಿಗೆ ಬಂದ ಮೇಲೆ ಕ್ಷಯರೋಗ ಪೀಡಿತರದ ನೀಲಮ್ಮನವರು ದೇಹ ಬಿಟ್ಟುದರಿಂದ ಪುನಃ ಪತ್ನಿ ವಿಯೋಗದ ದುಃಖಕ್ಕೊಳಗಾದರು. ಈ ಪ್ರಕಾರ ಶ್ರೀಲಿಂಗರಾಜರಿಗೆ ಪುನಃ ಪುನಃ ಸಂಸಾರದ ದುಃಖಗಳುಂಟಾದುದರಿಂದ ಇವರು ಸಂಸಾರದಲ್ಲಿ ಈ ಸಾರೆಞ ನಿರಾಶರಾದರು. ಈ ಪ್ರಕಾರ ಸಂಸ್ಥಾನದ ಕ್ಷೇಮಕ್ಕಾಗಿ ಸಂಸಾರದಲ್ಲಿ ಸಿಲುಕುವುದಕ್ಕಿಂತ ಸಮಾಜ ಹಿತಾರ್ಥವಾಗಿಯಾದರೂ ಪ್ರಯತ್ನಿಸಬೇಕೆಂಬ ವಿಚಾರಗಳುಂಟಾಗಲಾರಂಭಿಸಿದವು. ಇದೇ ಸಮಯದಲ್ಲಿ ವೀರಶೈವ ಮಹಾಸಭೆಯನ್ನು ಕೂಡಿಸಬೇಕೆಂಬ ವಿಚಾರವುಂಟಾದುದರಿಂದ ಕ್ರಿ. ಶ. ೧೯೦೪ನೆಯ ಮೇ ತಿಂಗಳಲ್ಲಿ ಮೊದಲನೆಯ ಮಹಾಸಭೆಯು ಧಾರವಾಡದಲ್ಲಿ ಸೇರಿತು. ಶ್ರೀ ಲಿಂಗರಾಜರನ್ನೇ ಅಧ್ಯಕ್ಷರಾಗಿ ಮಾಡಬೇಕೆಂದು ಮಹಾಜನರು ನಿರ್ಧರಿಸಿದರು. ಆ ಪ್ರಕಾರ ಲಿಂಗರಾಜರು ಮಹಾಸಭೆಯ ಅಧ್ಯಕ್ಷರಾಗಿ ಸಮಾಜ ಕಾರ್ಯವನ್ನು ಮಾಡಲುಪಕ್ರಮಿಸಿದರು. ಆ ಕಾಲಕ್ಕೆ ಇವರು ಒಂದು ಭಾಷಣದಲ್ಲಿ "ನಾನು ಸಾಯುವುದರಿಂದ ನಮ್ಮ ಸಮಾಜಕ್ಕೆ ಹಿತವಾಗುವಂತಿದ್ದರೆ ನಾನು ಅದಕ್ಕೆಂದಿಗೂ ಹಿಂದೆ ಮುಂದೆ ನೋಡಲಾರೆನು" ಎಂದು ಹೇಳಿದುದನ್ನು ನೋಡಿದರೆ ಸಂಸಾರದ ಉಪೇಕ್ಷೆಯಾಗಿ ಸಮಾಜದ ಹಿತಚಿಂತನೆಯು ಇವರಲ್ಲಿ ಆಗ ಎಷ್ಟು ಪ್ರಬಲವಾಗಿದ್ದಿತೆಂಬುದು ಗೊತ್ತಾಗುತ್ತದೆ.

ಕ್ರಿ. ಶ. ೧೯೦೫ನೆಯ ಡಿಸೆಂಬರ ತಿಂಗಳಲ್ಲಿ ಬೆಂಗಳೂರಲ್ಲಿ ೨ನೆಯ ವೀರಶೈವ ಮಹಾಸಭೆಯು ಸೇರಿದ್ದಿತು. ಆ ಭಾಗದ ಮಹಾಜರು ಪ್ರಾರ್ಥಿಸಿಕೊಂಡು ಲಿಂಗರಾಜರನ್ನೇ ಈ ಎರಡನೇ ಸಭೆಗೂ

ಅಧ್ಯಕ್ಷರನ್ನಾಗಿ ಮಾಡಿದರು. ಶ್ರೀ ಲಿಂಗರಾಜರು ಬೆಂಗಳೂರಿಗೆ ಹೋಗುವಾಗ ಮಾರ್ಗದಲ್ಲಿ ಹುಬ್ಬಳ್ಳಿ, ಹಾವೇರಿ, ರಾಣೆಬೆನ್ನೂರು ಮೊದಲಾದ ಸ್ಥಳಗಳ ವೀರಶೈವ ಮಹಾಜನರು ಶ್ರೀ ಲಿಂಗರಾಜರಿಗೆ ಬಹು ಮನ್ನಣೆಯನ್ನು ಮಾಡಿದರು. ಬೆಂಗಳೂರಿಗೆ ಹೋದನಂತರ ಶ್ರೀ ಕಾಂತರಾಜೆ ಅರಸಿನವರ ರಾಜಭವನದಲ್ಲಿ ಇವರನ್ನು ಇರಿಸಿದರು. ಆ ೨ನೆಯ ಮಹಾಸಭೆಯ ಅಧ್ಯಕ್ಷತೆಯ ಕಾರ್ಯವನ್ನು ಬಹು ಸಮರ್ಥತೆಯಿಂದ ನೆರವೇರಿಸಿದರು. ಅಲ್ಲಿಯ ಮುಖ್ಯಮಂತ್ರಿಗಳು, ರೆಸಿಡೆಂಟರು, ಮತ್ತು ಮಹಾಜನರುಗಳನ್ನು ಕಂಡು ಲಿಂಗರಾಜರು ಸಂಸ್ಥಾನದ ಅಧಿಕಾರಿಗಳಲ್ಲಿಯೂ ಬಹು ಪ್ರಿಯರಾದರು. ಈ ಮಹತ್ಕಾರ್ಯವನ್ನು ಪೂರೈಸಿ ಕೋಲಾರದ ಬಂಗಾರದ ಕಣಿಯನ್ನು ನೋಡಿ ಚಿರಸಂಗಿಗೆ ಬಂದರು. ಈ ಉಭಯ ಮಹಾಸಭೆಗಳಲ್ಲಿ ಅಧ್ಯಕ್ಷರಾಗಿ ಮಾಡಿದ ಭಾಷಣಗಳು ಅತ್ಯಂತ ಮಹತ್ವದವುಗಳೂ ಶ್ರೀ ಲಿಂಗರಾಜರ ಅಭಿಪ್ರಾಯಗಳನ್ನು ವ್ಯಕ್ತಗೊಳಿಸತಕ್ಕವುಗಳೂ ಆಗಿರುತ್ತವೆ. ಅವುಗಳಲ್ಲಿ ಮೊದಲನೆಯ ಮಹಾಸಭೆಯ ಭಾಷಣವು ಬಹು ಮುಖ್ಯವಾದುದಾಗಿರುವುದರಿಂದ ಆ ಭಾಷಣದ ಮುಖ್ಯಾಂಶವನ್ನು ಇದರಡಿಯಲ್ಲಿ ಉದಾಹರಿಸಿದ್ದಾಗಿದೆ :

ಧಾರವಾಡದಲ್ಲಿ ಕೂಡಿದ ಮೊದಲನೆಯ ಮಹಾಸಭೆಯ ಅಧ್ಯಕ್ಷರಾಗಿ ಮಾಡಿದ ಭಾಷಣದ ಮುಖ್ಯಾಂಶ

ನಮ್ಮ ಧರ್ಮವು ಮುಂಚಿನ ಸ್ಥಿತಿಗೆ ಬಂದು ನಾವೆಲ್ಲರೂ ಧರ್ಮೈಕಬದ್ಧರಾಗಬೇಕಾದರೆ ಏನು ಮಾಡಬೇಕೆಂಬುದೇ ಈ ಸಭೆಯ ಮುಖ್ಯ ಉದ್ಧೇಶವು. ಇನ್ನೂ ಇದರೊಡನೆ ಕಾಲಕ್ಕೆ ಸರಿಯಾಗಿ ನಮ್ಮ ಸಂಘದಲ್ಲಿ ಸಾಮಾಜಿಕ ಸುಧಾರಣೆ, ಕಲಾ ಕೌಶಲ್ಯಗಳ ಜ್ಞಾನ, ವ್ಯವಹಾರಜ್ಞಾನ ಮೊದಲಾದವುಗಳಿಗೆ ಏನು ಮಾಡಿದರೆ ಉತ್ತೇಜನ ಬಂದೀತೆಂದು ವಿಚಾರ ಮಾಡುವದೇ ಈ ಸಭೆಯ ಎರಡನೇಯ ಉದ್ಧೇಶವು ಧರ್ಮಸುಧಾರಣೆಯಲ್ಲಿಯೂ ಇತರ ಸಾಮಾಜಿಕ ಸುದಾರಣೆಯಲ್ಲಿಯೂ ನಮ್ಮ ಸಂಘವು ಹಿಂದುಳಿದಿದ್ದು ನಮ್ಮಲ್ಲಿ ಶೂನ್ಯಸಿಂಹಾಸನಾಧಿಪತಿಗಳ ಮತ್ತು ಉಳಿದ ದೊಡ್ಡ ದೊಡ್ಡ ಧರ್ಮಗುರುಗಳು ಹಾಗೂ ಅವರ ಅನುಯಾಯಿಗಳ ಮನಸ್ಸಿನಲ್ಲಿ ಆ ಸಂಬಂಧದಿಂದ ಯತ್ನ ಮಾಡಬೇಕೆಂಬ ವಿಚಾರದಿಂದ ಈ ಪ್ರಕಾರದ ಸಭೆಗೂಡಿಸಿದ್ದು ನೋಡಿ ನನಗೆ ಪರಮಾನಂದವಾಗಿರುವದು.

ಇನ್ನು ಮುಂದೆಯಾದರೂ ಇಂಥಾ ಮಹಾಸಭೆಗಳನ್ನು ಮೇಲಿಂದಮೇಲೆ ಕೂಡಿಸಿ ಧರ್ಮವೃದ್ಧಿ, ಸಮಾಜಸುಧಾರಣೆ, ವಿದ್ಯಾರ್ಜನೆ, ಕಲಾಕೌಶಲ್ಯಗಳ ಉನ್ನತೆ ಇವುಗಳ ಬಗ್ಗೆ ವಿಚಾರ ಮಾಡುವುದು ಬಹಳ ಅವಶ್ಯಕವಾಗಿದೆ. ಇದರಿಂದಲೇ ನಮ್ಮ ಜನರಿಗೆ ಇಹಪರಸೌಖ್ಯಗಳು ದೊರಕತಕ್ಕವುಗಳಾಗಿವೆ. ಮತ್ತು ಇಂಥ ಸಭೆಗಳು ಕೂಡುವುದರಿಂದ ಯಾವತ್ತು ಭಾಗಗಳಲ್ಲಿಯ ನಮ್ಮ ಮತದ ಮುಖ್ಯ ಮುಖ್ಯ ಜನರ ದರ್ಶನವು ಒಬ್ಬರಿಗೊಬ್ಬರಿಗೆ ಆಗಿ ಎಲ್ಲರ ವಿಚಾರಗಳನ್ನು ತಿಳುಕೊಳ್ಳಲಿಕ್ಕೂ, ತಮ್ಮಲ್ಲಿದ್ದ ಕೀಳು ಆಚರಣೆಗಳನ್ನು ದೂರ ಮಾಡಲಿಕ್ಕೂ ವ್ಯಾಪಾರ ಉದ್ಯೋಗಗಳಲ್ಲಿದ್ದ ನ್ಯೂನ್ಯತೆಗಳ ವಿಚಾರ ಮಾಡಿ ಅವುಗಳಲ್ಲಿ ಏನು ಸುಧಾರಣೆ ಮಾಡಬೇಕೆಂಬುದನ್ನು ನಿರ್ಣಯಿಸಲಿಕ್ಕೂ ನಾವೆಲ್ಲರೂ ಸಮರ್ಥರಾಗುತ್ತೇವೆ. ನಮ್ಮ ಮತಸ್ಥರು ಏನಾದರೂ ಅಡಚಣಿಯಲ್ಲಿ ಬಂದರೆ ಒಬ್ಬರಿಗೊಬ್ಬರು ಸಹಾಯ ಮಾಡಬೇಕೆಂಬ ಸಹಾನುಭೂತಿಯು ಅವರಲ್ಲಿ ಹುಟ್ಟಿ ಯಾವತ್ತರ ಅಡಚಣಿಗಳು ತಮ್ಮಿಂದತಾವೇ ದೂರಾಗುವವು. ಇವೇ ಮೊದಲಾದ ಕಾರಣಗಳನ್ನು ಮನಸ್ಸಿನಲ್ಲಿ ತಂದು ನಮ್ಮಲ್ಲಿಯ ಮಹನೀಯರು ಈ ಮಹಾಸಭೆಯನ್ನು ಕೂಡಿಸಿರುತ್ತಾರೆ.

ನಾವು ಈಗ ಕೂಡಿಸಿರುವ ಮಹಾಸಭೆಯನ್ನು ಕಂಡು ಕೆಲವು ಪಾಶ್ಚಿಮಾತ್ಯ ವಿದ್ಯಾ ಸಂಸ್ಕಾರವುಳ್ಳ ಪಂಡಿತರೂ ರಾಷ್ಟ್ರಭಕ್ತರೂ ಕಾಂಗ್ರೆಸ್ ಮತ್ತು ಕಾನ್‌ಫರೆನ್ಸ್ ಸಭೆಗಳ ಅಭಿಮಾನಿಗಳೂ ಇಂಥಾ ಸಭೆಗಳಾಗುವದರಿಂದಪರಮತದವರ ಕೂಡ ದ್ವೇಷವು ಬೆಳೆಯುತ್ತದೆಂದು ತಿಳಿಯುತ್ತಾರೆ. ಅವರ ಮುಖ್ಯವಾದ ಆಕ್ಷೇಪವೇನೆಂದರೆ "ಹಿಂದುಸ್ಥಾನದಲ್ಲಿ ಅಗಣೀತ ಮತಗಳೂ ಜಾತಿಗಳೂ ಒಳಜಾತಿಗಳೂ ಉಂಟು. ಪ್ರತಿಯೊಬ್ಬರೂ ತಮ್ಮ ತಮ್ಮ ಮತಗಳ ಸಭೆಗಳನ್ನು ಕೂಡಿಸುತ್ತಾ ನಡೆದರೆ, ಹಿಂದುಸ್ಥಾನದ ಯಾವತ್ತೂ ಮತದವರಲ್ಲಿ ರಾಷ್ಟ್ರೀಯ ಐಕ್ಯವು ಬೆಳೆಯುವುದು ಅಸಾಧ್ಯವಾಗುತ್ತದೆ." ಆದರೆ ಈ ಆಕ್ಷೇಪದಲ್ಲಿ ವಿಶೇಷವಾದ ಅರ್ಥವಿಲ್ಲ. ಯಾಕೆಂದರೆ ಪ್ರತಿ ಒಬ್ಬರು ತಮ್ಮ ತಮ್ಮ ಕುಟುಂಬಗಳನ್ನೂ, ಮತಗಳನ್ನೂ ಸುಧಾರಿಸಲಿಕ್ಕೆ ಪ್ರಯತ್ನಮಾಡಿದರೆ ದೇಶವು ತಾನಾಗಿಯೇ ಸುಧಾರಿಸುತ್ತದೆಯೆಂದು ಕುಟುಂಬಗಳೂ ಕೂಡಿ ಹಿಂದುಸ್ಥಾನದ ರಾಷ್ಟ್ರವು ಆಗಿರುತ್ತದೆ. ಆದ್ದರಿಂದ ಎಲ್ಲ ಮತದವರನ್ನು ಒಂದೇ ಸಮುಚ್ಚಯಮಾಡಿ ಸುಧಾರಣೆ ಮಾಡಲಿಕ್ಕೆ ಪ್ರಯತ್ನ ಮಾಡಹತ್ತಿದರೆ ದಿನಾವಧಿಯು ಹತ್ತುವದಲ್ಲದೆ ಬಹಳ ಶ್ರಮಮಾಡಬೇಕಾಗುತ್ತದೆ. ಆದರೆ ಬೇರೆ ಬೇರೆ ಮತದವರು ತಮ್ಮ ತಮ್ಮ ಮತದಮಟ್ಟಿಗೆ ಸುಧಾರಣೆಮಾಡಲಿಕ್ಕೆ ಪ್ರಯತ್ನಿಸಿದರೆ ಅವರ ಕೆಲಸವು ಸುಲಭವಾಗಿ ಆಗುತ್ತದೆ. ಮತ್ತು ಇದರಿಂದ ಮುಂದೆ ದೇಶಬಾಂಧವರೊಳಗೆ ಐಕ್ಯವು ಸಹ ಬೆಳೆಯುತ್ತದೆ.

ಭ್ರಾಹ್ಮಣರು ತಮ್ಮ ಮಹಾಸಭೆಯನ್ನು ಕೂಡಿಸಲಿ, ಜೈನರು ಕೂಡಿಸಲಿ, ಮುಸಲ್ಮಾನರು ಕೂಡಿಸಲಿ, ಇದರಿಂದ ರಾಷ್ಟ್ರೀಯ ಐಕ್ಯಕ್ಕೆ ಏನೂ ಅಪಾಯವಿಲ್ಲ. ಪ್ರತಿಯೊಂದು ಮತದವರು ಎರಡನೇ ಮತದವರ ಉತ್ಕರ್ಷ ನೋಡಿ ಅಸಂತೋಷ ಪಡದೆ ಅವರು ಯಾವ ಮಾರ್ಗದಿಂದ ನಡೆದು ಆ ಉತ್ಕರ್ಷೆಯನ್ನು ಹೊಂದುವರೋ ಅದೇ ಮಾರ್ಗದಿಂದ ತಾವೂ ನಡೆದು ಅವರಂತೆ ಊರ್ಜಿತ ಸ್ಥಿತಿಯನ್ನು ಹೊಂದಲಿಕ್ಕೆ ಎಲ್ಲ ಮತದವರು ಒಕ್ಕಟ್ಟಾಗಿ ಸರಿಯಾದ ಪ್ರಯತ್ನಗಳನ್ನು ಮಾಡಬೇಕು. ಆ ಪ್ರಯತ್ನಗಳು ದುಷ್ಟವಾಗಲಿ ಸ್ವಾರ್ಥವಾಗಲೀ ಇರಬಾರದು. ಇದಲ್ಲದೇ ಸುಧಾರಣೆಯ ಮಾರ್ಗದಲ್ಲಿ ಮುಂದೆ ಹೆಜ್ಜೆಗಳನ್ನಿಟ್ಟವರು ಹಿಂದುಳಿದವರ ಮೇಲೆ ಹೆಚ್ಚು ದಯಾ ದಾಕ್ಷಿಣ್ಯವನ್ನು ತೋರಿಸಬೇಕು. ಅಂದರೆ ಯಾವ ರೀತಿಯಿಂದಲೂ ರಾಷ್ಟ್ರೀಯ ಐಕ್ಯಕ್ಕೆ ಹಾನಿಯುಂಟಾಗಲಾರದು. ಈ ಮಾದರಿಯ ಪ್ರಯತ್ನವೇ ನಮ್ಮ ಈ ಮಹಾಸಭೆಯ ಉದ್ಧೇಶವಿದ್ದು ಪರಮತಸ್ಥರ ಕೂಡ ಕಲಹವನ್ನೂ ಪರಮತಸ್ಥರ ನಿಂದೆಯನ್ನು ಮಾಡುವುದು ನಮಗೆ ಇಷ್ಟವಿಲ್ಲ. ಇದನ್ನು ಯಾವತ್ತೂ ಮತಬಾಂಧವರು ಚೆನ್ನಾಗಿ ಗ್ರಹಿಸಲೆಂಬುವದು ನನ್ನ ಮುಖ್ಯ ಕೋರಿಕೆಯಾಗಿದೆ.

ವಿದ್ಯೆಯ ವಿಷಯವು ಒಳ್ಳೇ ಮಹತ್ವದ್ದು ಇರುತ್ತದೆ. ನಮ್ಮಲ್ಲಿ ಮತ್ತು ನಮ್ಮ ಮುಂದಿನ ಏಳಿಗೆಯವರಲ್ಲಿ ವಿದ್ಯಾಭಿವೃದ್ಧಿಯ ಹ್ಯಾಗೆ ಆದೀತು ಅನ್ನುವ ವಿಚಾರವೂ ಇತ್ತಿತ್ತನಮ್ಮಲ್ಲಿ ಕಲಿತ ಯಾವತ್ತೂ ಸದ್ಗೃಹಸ್ಥರ ಮನಸ್ಸಿನಲ್ಲಿ ಬರಹತ್ತಿರುತ್ತದೆ.

ಆದರೂ ಎರಡನೆ ಮತಸ್ಥರು ಎಷ್ಟು ತೀವ್ರ ಮುಂದೆ ಹೋಗುತ್ತಿರುವರೋ ಅಷ್ಟು ತೀವ್ರ ನಮ್ಮಲ್ಲಿ ವಿದ್ಯಾಭಿವೃದ್ಧಿಯು ಆಗಹತ್ತಿಲ್ಲ. ಇದಕ್ಕೆ ಕಾರಣಗಳು ಬಹಳ ಉಂಟು. ಮುಖ್ಯ ಕಾರಣವೇನೆಂದರೆ ನಮ್ಮಲ್ಲಿಯ ಬಡತನವು. ಇದರಿಂದ ಎಷ್ಟೋ ಜನ ತಾಯಿತಂದೆಗಳಿಗೆ ತಮ್ಮ ಮಕ್ಕಳನ್ನು ಸಾಲಿಗೆ ಹಾಕಿ ಖರ್ಚು ಮಾಡತಕ್ಕ ಸಾಮರ್ಥ್ಯವು ಇರುವುದಿಲ್ಲ. ೨ನೆಯದು ನಮ್ಮ ಮತಸ್ಥರ ಮುಖ್ಯ ಉದ್ಯೋಗವೆಂದರೆ ವ್ಯಾಪಾರ ಮತ್ತು ಒಕ್ಕಲುತನಗಳಿದ್ದು ನಾನು ಮೇಲೆ ಹೇಳಿದ ದಾರಿದ್ರ್ಯದ

ಮೂಲಕವೇ ತಾಯಿ ತಂದೆಗಳೂ ತಮ್ಮ ಮಕ್ಕಳನ್ನು ಸ್ವಲ್ಪ ದೊಡ್ಡವರಾದಕೂಡಲೆ ಈ ಉದ್ಯೋಗಗಳಿಗೆ ಹಚ್ಚುತ್ತಾರೆ. ಇದರಿಂದ ಒಳ್ಳೇ ಜಾಣಹುಡುಗರಿದ್ದಾಗ್ಯೂ ಅವರ ಬುದ್ಧಿಯ ಉಪಯೋಗವು ವಿದ್ಯೆಯ ಕಡೆಗೆ ಆಗುವದಿಲ್ಲ. ಈ ಎಲ್ಲರಿಗೂ ವಿದ್ಯೆ ಕಲಿಸಲಿಕ್ಕೆ ಸಹಾಯಮಾಡಬೇಕೆಂದರೆ ಈಗಿರುವ ನಮ್ಮ ಫಂಡು ಸಾಕಷ್ಟು ಇರುವುದಿಲ್ಲ. ಆದ್ದರಿಂದ ಪ್ರತ್ಯೇಕ ಗ್ರಾಮಗಳಲ್ಲಿ ಈ ಬಗ್ಗೆ ಸಣ್ಣ ಸಣ್ಣ ಫಂಡುಗಳನ್ನು ಕೂಡಿಸಿ ಅಲ್ಲಿಯ ಹುಡುಗರಿಗೆ ಪ್ರಾಥಮಿಕ ಶಿಕ್ಷಣವು ದೊರೆಯುವಂತೆ ಪ್ರಯತ್ನವನ್ನು ನಾವೆಲ್ಲರೂ ಅವಶ್ಯಕವಾಗಿ ಮಾಡಬೇಕು. ಇಲ್ಲವೇ ಈ ಪ್ರಾಥಮಿಕ ಶಿಕ್ಷಣದ ಬಗ್ಗೆ ಇನ್ನೊಂದ ದೊಡ್ಡ ಫಂಡು ಕೂಡಿಸಿ ಅದರಿಂದ ಯಾವತ್ತೂ ಹುಡುಗರಿಗೆ ವಿದ್ಯಾದಾನ ಕೊಡದ ಹೊರ್ತು ನಮ್ಮಲ್ಲಿ ವಿದ್ಯಾಪ್ರಸಾರವಾಗುವುದಿಲ್ಲ. ಈ ಪ್ರಾಥಮಿಕ ಶಿಕ್ಷಣವು ವೃದ್ಧಿ ಹೊಂದದ ಹೊರ್ತು ನಮ್ಮಲ್ಲಿ ಬಹಳಮಂದಿ ದೊಡ್ಡ ವಿದ್ವಾಂಸರಾದಾರೆಂದು ಆಶಿಸುವುದು ವ್ಯರ್ಥವದೆ.

ನಮ್ಮ ಸಾಮಾಜಿಕ ಪದ್ಧತಿಗಳಲ್ಲಿ ಸುಧಾರಿಸಬೇಕಾಗಿರುವ ಮುಖ್ಯ ವಿಷಯಗಳು :

೧ನೆಯದ್ದು, ಬಾಲವಿವಾಹ. ಈ ಬಾಲವಿವಾಹದ ಪದ್ಧತಿಯೂ ನಮ್ಮಲ್ಲಿ ಎಷ್ಟರಮಟ್ಟಿಗೆ ಹಬ್ಬಿಕೊಂಡಿದೆ ಎಂಬುದನ್ನು ನೋಡಿದರೆ ಮನಸ್ಸಿಗೆ ಬಹಳೇ ದುಃಖವಾಗುತ್ತದೆ. ಲಗ್ನವೆಂದರೇನು, ಗಂಡ ಹೆಂಡರ ಕರ್ತವ್ಯವೇನು ಎಂಬ ಸಂಗತಿಗಳನ್ನು ತಿಳಿದುಕೊಳ್ಳುವುದಕ್ಕೆ ಮಕ್ಕಳು ಅಸಮರ್ಥರಿರುವಾಗ್ಗೆ ತಾಯಿತಂದೆಗಳು ಅವರ ಲಗ್ನ ಮಾಡುತ್ತಾರೆ. ಒಮ್ಮೆ ತಮ್ಮ ಎದುರಿಗೆ ಲಗ್ನವಾಗಿ ಹೋದರೆ ತೀರಿತು. ಕಣ್ಣಿನ ಪ್ರೀತಿಯನ್ನು ತೀರಿಸಿಕೊಂಡರೆ ಕೃತಾರ್ಥರಾದೆವು ಎಂಬ ತಿಳುವಳಿಕೆಯೇ ಅವರಲ್ಲಿ ಇರುತ್ತದೆ. ಕೆಲ ಕೆಲವು ಮೂಢ ಜನರು ತೊಟ್ಟಿಲಕ್ಕೆ ಬಾಸಿಂಗ ಕಟ್ಟಿ ಲಗ್ನ ಮಾಡುತ್ತಾರೆ. ಈ ಪದ್ಧತಿಯು ಕಾಡಸ್ಥಿತಿಯನ್ನು ವ್ಯಕ್ತಗೊಳಿಸುತ್ತದೆಂಬುದನ್ನು ನೀವೇ ವಿಚಾರಮಾಡಿರಿ. ಲಗ್ನಮಾಡುವದೆಂದರೆ ತಮ್ಮ ತಲೆಯ ಮೇಲಿನ ಹೊರೆಯನ್ನು ಇಳಿಸುವದೆಂದು ಕೆಲವರು ತಿಳುಕೊಳ್ಳುತ್ತಾರೆ. ಈ ಬಾಲ್ಯ ವಿವಾಹದ ಪದ್ಧತಿಯನ್ನು ಒಮ್ಮೆಲೇ ಎಲ್ಲರೂ ಬಿಟ್ಟು ಬಿಡಬೇಕು. ಹುಡುಗನು ೧೮-೨೦ ವರ್ಷ ಪ್ರಾಯದವನೂ ಹುಡುಗಿಯು ೧೦-೧೨ ವರ್ಷ ಪ್ರಾಯದವಳೂ ಆಗುವವರೆಗೆ ಲಗ್ನ ಮಾಡಬಾರದು.

೨ನೆಯದ್ದು, ವೃದ್ಧ ವಿವಾಹ, ಕೆಲಕೆಲವು ಮುದುಕರು ೫೦-೬೦ ವರ್ಷದವರಾದರೂ ಲಗ್ನ ಮಾಡಿಕೊಳ್ಳೂವ ಭ್ರಾಂತಿಯಲ್ಲಿರುತ್ತಾರೆ. ತಮ್ಮ ವಯಸ್ಸೇನು, ತಮ್ಮ ಬಾಳುವಿಕೆ ಎಷ್ಟು ವರ್ಷ, ತಮ್ಮಲ್ಲಿ ಶರೀರ ಸಾಮರ್ಥ್ಯವು ಎಷ್ಟರಮಟ್ಟಿಗೆ ಉಂಟು ಎಂಬುದನ್ನು ವಿಚಾರಮಾಡದೇ ಲಗ್ನ ಮಾಡಿಕೊಳ್ಳುತ್ತಾರೆ. ಇದಲ್ಲದೆ ಇಂಥ ಮುದುಕ ಗಂಡಂದಿರಿಗೆ ಹುಡುಗಿಯರ ತಾಯಿತಂದೆಗಳು ದ್ರವ್ಯದ ಆಸೆಗೆ ಬಾಯ್ದೆರೆದು ತಮ್ಮ ಮಕ್ಕಳನ್ನ ನೀರು ಇಲ್ಲದ ಬಾವಿಯಲ್ಲಿ ನೂಕಿಕೊಟ್ಟಂತೆ ಲಗ್ನಮಾಡಿಕೊಡಲಿಕ್ಕೆ ಒಪ್ಪುತ್ತಾರೆ. ಇದು ತೀರ ತಪ್ಪು.

೩ನೆಯದ್ದು, ಲಗ್ನದಲ್ಲಿ ಕೆಲ ಕೆಲವು ಜನರು ವರನ ಪಕ್ಷದವರು ವರದಕ್ಷಿಣೆ ವರೋಪಚಾರವನ್ನು ವ್ಯಾಪಾರದ ಪದ್ಧತಿಯಂತೆ ತೆಗೆದುಕೊಳ್ಳುವರು. ಹೆಣ್ಣು ಹಡೆದ ತಾಯಿತಂದೆಗಳು ಹೊಲ ಮನಿ ವತ್ತಿ ಹಾಕಿ ಸಾಲವನ್ನಾದರೂ ತಂದು ವರದಕ್ಷಿಣೆ ವರೋಪಚಾರಗಳನ್ನು ಕೊಡಬೇಕಾಗುವುದು. ಹಾಗೂ ಕನ್ಯಾ ಪಕ್ಷದವರು ಕೆಲಕೆಲವರಲ್ಲಿ ವರನ ಪಕ್ಷದಿಂದ ತೆರವು ಅಥವಾ ಕನ್ಯಾವಿಕ್ರಯ ಹಣವನ್ನು ತೆಗೆದುಕೊಳ್ಳುತ್ತಾರೆ. ಈ ಪ್ರಕಾರ ತಮ್ಮ ಹೊಟ್ಟೆಯ ಮಕ್ಕಳನ್ನು ಮಾರಾಟಮಾಡುವ ಸ್ಥಿತಿಯು ಯಾವ ವಿವೇಕಿ ಮನುಷ್ಯನಿಗೂ ಸಮ್ಮತವಾಗಲಾರದು.

೪ನೆಯದ್ದು, ಲಗ್ನದಲ್ಲಿ ದುಂದುಗಾರಿಕೆಯಿಂದ ಹಣವನ್ನು ವೆಚ್ಚಮಾಡುವ ಪದ್ಧತಿಯು ನಮ್ಮೊಳಗೆ ಬಹಳ ಉಂಟು. ನಮ್ಮ ಜನರು ಸ್ವಾಭಾವಿಕವಾಗಿ ಬಹು ದುಂದುಗಾದರು. ಅವರಿಗೆ ಮಿತವ್ಯಯವೆಂಬುದು ಅಪರಿಚಿತ ವಸ್ತುವಾಗಿದೆ. ಲಗ್ನದಲ್ಲಿ ಮಾಡುವ ಖರ್ಚಿಗೆ ಮಿತಿಯೇ ಇಲ್ಲ. ಗಾಯನ, ನೃತ್ಯ ಮುಂತಾದ ಅನವಶ್ಯ ಖರ್ಚುಮಾಡುವ ಪದ್ಧತಿಯು ಲಗ್ನದಲ್ಲಿ ಬಹಳವಾಗಿ ಕಂಡುಬರುತ್ತದ.ಎ ಇದರಿಂದ ಬಡತನಕ್ಕೆ ಬಾಗಿಲ ತೆರೆದಿಟ್ಟಂತೆ ಆಗುವುದು, ನೂರು ರೂಪಾಯಿಗಳಲ್ಲಿ ಆಗುವ ಲಗ್ನಕ್ಕೆ ಸಾವಿರ ರೂ. ಖರ್ಚುಮಾಡುವರು. ಸಾವಿರ ರೂಪಾಯಿ ಖರ್ಚುಮಾಡುವಲ್ಲಿ ಹತ್ತುಸಾವಿರ ಖರ್ಚುಮಾಡುವರು. ಇದು ಯೋಗ್ಯವಾದುದಲ್ಲ. ಇದನ್ನು ಎಲ್ಲರೂ ಬಿಡತಕ್ಕದ್ದು. ತಮ್ಮ ತಮ್ಮ ಯೋಗ್ಯತೆಗನುಸರಿಸಿ ಅವಶ್ಯವಾದ ಖರ್ಚನ್ನು ಮಾಡುವುದು ವಿವೇಕತನವು.

೫ನೆಯದ್ದು, ನಮ್ಮಲ್ಲಿ ಕೆಲವರು ಅನ್ಯ ಮತಸ್ಥರಿಂದ ಕಾರ್ಯಗಳನ್ನು ಮಾಡಿಸುತ್ತಾರೆ. ಅಂಥವರಿಗೆ ಆದಷ್ಟು ಮಟ್ಟಿಗೆ ಉಪದೇಶಮಾಡಿ ಆ ಪದ್ಧತಿಯನ್ನು ಬಿಡಿಸಿ ಶಾಸ್ತ್ರೋಕ್ತ ರೀತಿಯಿಂದ ನಮ್ಮ ವೈದಿಕರ ಕಡೆಯಿಂದ ಲಗ್ನ ಮಾಡಿಸಬೇಕು. ಮತ್ತು ಈ ಪ್ರಕಾರ ಉಪದೇಶದ ಕಡೆಗೆ ಲಕ್ಷಕೊಡದೆ ಯಾವನು ವಿರುದ್ಧವಾಗಿ ಆಚರಿಸುವನೋ ಅಂಥವನಿಗೆ ಬಹಿಷ್ಕಾರಕೊಟ್ಟು ಅವನಲ್ಲಿ ಜಂಗಮರೂ ಉಳಿದ ಲಿಂಗಾಯತರೂ ಅನ್ನೋದಕ ತಕ್ಕೊಳಬಾರದು.

೬ನೆಯದ್ದು, ಉಡಿಕಿ ಮತ್ತು ವಿಧವಾವಿವಾಹ. ಬ್ರಾಹ್ಮಣರಲ್ಲಿಯೂ ಕೆಲವರು ವಿಧವಾ ವಿವಾಹವನ್ನು ಪ್ರಚಾರದಲ್ಲಿ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ವಿಶೇಷತಃ ಪ್ಲೇಗೀನ ದಿವಸಗಳಲ್ಲಿ ಚಿಕ್ಕ ಬಾಲಿಕೆಯರು ಗಂಡನನ್ನು ಕಳಕೊಂಡು ವಿಧವೆಯಾಗಿರುವದನ್ನು ನೆಇಡಿ ಎಂಥ ಪಾಷಾಣಹೃದಯನಿಗಾದರೂ ಅವರ ಬಗ್ಗೆ ಕನಿಕರವು ಹುಟ್ಟದೆ ಇರಲಾರದು. ಅವರಲ್ಲಿ ವಿಧವಾವಿವಾಹದ ಪ್ರಚಾರವಿಲ್ಲದೇ ಇದ್ದು ಅದನ್ನು ಮಾಡಿದವರಿಗೆ ಬಹಿಷ್ಕಾರ ಕೊಟ್ಟಾಗ್ಯೂ ಅದಕ್ಕೆ ಹೆದರದೆ ವಿಧವಾವಿವಾಹ ಮಾಡುವುದು ಅಲ್ಲಲ್ಲಿ ದೃಷ್ಟಿಗೆ ಬೀಳುತ್ತದೆ. ಹಾಗೂ ವಿಧವಾ ವಿವಾಹೋತ್ತೇಜಕ ಮಂಡಳಿಗಳನ್ನು ಸ್ಥಾಪಿಸಿ ಬ್ರಾಹ್ಮಣಜಾತಿಯೊಳಗಿನ ಕೆಲವು ಸುಧಾರಕರು ಈ ವಿಷಯದಲ್ಲಿ ಮನಮುಟ್ಟಿ ಸಾಹಸಮಾಡಿ ಅನೇಕ ವಿಧವೆಯರ ಪುನರ್ವಿವಾಹಗಳನ್ನು ಮಾಡಿರುತ್ತಾರೆ. ಆದರೆ ನಮ್ಮಲ್ಲಿ ವಿಧವಾವಿವಾಹವು ಬಹು ವರ್ಷಗಳಿಂದ ಪ್ರಚಾರದಲ್ಲಿ ಉಂಟು. ಆದರೂ ಈ ಪದ್ಧತಿಗೆ ಸ್ವಲ್ಪ ಪರಿಮಿತಿ ಇರುವದು ಸ್ಪಷ್ಟವಿದೆ. ಗಂಡನು ಚಿಕ್ಕ ವಯಸ್ಸಿನಲ್ಲಿ ಮರಣಪಟ್ಟರೆ ಜಾತಿಭ್ರಷ್ಟನಾದರೆ, ಅಥವಾ ರೋಗಿಷ್ಟನಾಗಿ ಪ್ರಪಂಚ ಮಾಡಲಿಕ್ಕೆ ಅಸಮರ್ಥನಾದರೆ ಹೆಂಡತಿಯು ಪುನರ್ವಿವಾಹ ಮಾಡಿಕೊಳ್ಳುವುದು ವಿಹಿತವು. ಆದರೆ ಮುದುಕಿಯರು ನಾಲ್ಕು ನಾಲ್ಕು ಎಂಟೆಂಟು ಮಕ್ಕಳನ್ನು ಹಡೆದು ಆ ಮಕ್ಕಳನ್ನು ಅವರಷ್ಟಕ್ಕೇ ಬಿಟ್ಟು ತಾವು ಎರಡನೇ ಗಂಡನನ್ನು ಮಾಡಿಕೊಳ್ಳುವದೂ, ಹೆಂಡತಿಯೂ ತನ್ನ ಗಂಡನಕೂಡ ಜಗಳಾಡಿ ಅವನನ್ನು ಬಿಟ್ಟು ಹೋಗಿ ತನ್ನ ಮನಸ್ಸಿನಿಗೆ ಬಂದ ಮತ್ತೊಬ್ಬನನ್ನು ಗಂಡನಾಗಿ ಮಾಡಿಕೊಳ್ಳೂವದೂ, ಎರಡು ಮೂರು ನಾಲ್ಕು ಐದು ಆರು ಪುನರ್ವಿವಾಹಗಳನ್ನು ಒಬ್ಬಳೇ ಹೆಂಗಸು ಮಾಡಿಕೊಳ್ಳುವುದೂ, ನಮ್ಮ ಸಮಾಜಕ್ಕೆ ಬಹಳೇ ಘಾತಕವಾಗಿರುತ್ತದೆ.

೭ನೆಯದ್ದು, ಸಮುದ್ರ ಪರ್ಯಟಣವು. ಈ ವಿಷಯವು ಬಹಳೇ ಮಹತ್ವದ್ದಿರುತ್ತದೆ. ಆತ್ಮೋನ್ನತಿಗಾಗಲೀ ದೇಶೋನ್ನತಿಗಾಗಲೀ ಬೇರೆ ಬೇರೆ ಸುಧಾರಿಸಿದ ರಾಷ್ಟ್ರಗಳೊಳಗಿನ ವಸ್ತುಗಳ ಜ್ಞಾನವನ್ನು ಪಡಕೊಂಡು ಬರುವದಕ್ಕಾಗಲೀ ಸಮುದ್ರ ಪರ್ಯಟನವು ಬಹಳ ಅಗತ್ಯವಾದದ್ದು.

ಆದರೆ ಸಮುದ್ರ ಪರ್ಯಟನವನ್ನು ಮಾಡುವವರು ಭ್ರಷ್ಟವಾದ ಆಚಾರಗಳನ್ನು ಮಾಡಲಾಗದೆಂತಲೂ, ಅವರ ಅನ್ನಪಾನಾದಿಗಳು ಶುದ್ಧವಾಗಿರಬೇಕೆಂದತಲೂ, ಕಟ್ಟಳೆ ಮಾಡಿ ವಿದ್ಯಾ ಕೌಶಲ್ಯಗಳನ್ನು ಕಲಿಯಲಿಚ್ಚಿಸುವವರಿಗೆ ನಮ್ಮ ಗುರುಗಳೂ ಉಳಿದ ಸಮಾಜದವರೂ ನಾನು ಮೇಲೆ ಹೇಳೀದಂತೆ ಅನುಕೂಲ ಮಾಡಿಕೊಟ್ಟಲ್ಲಿ ಅವರು ನಮ್ಮ ಸಮಾಜಕ್ಕೆ ಬಹಳ ಉಪಕಾರಮಾಡಿದಂತೆ ಆಗುವುದು.

ಲಿಂಗಾಯತ ಧರ್ಮದ ಕಾಲ ನಿರ್ಣಯ :

ಶ್ರೀ ಬಸವೇಶ್ವರನು ಕ್ರಿ. ಶ. ೧೨ನೆಯ ಶತಮಾನದಲ್ಲಿ ಬಿಜ್ಜಳನ ಕಾಲಕ್ಕೆ ಇದ್ದನೆಂಬುವದು ಇತಿಹಾಸಪ್ರಸಿದ್ದವಿದೆ. ಆದರೆ. ಕ್ರಿ. ಶ. ೯ನೆಯ ಶತಮಾನದಲ್ಲಿ ಕಂಚಿ ಎಂಬ ಊರಲ್ಲಿ ಶಿವಕೋಟಿ ಎಂಬ ಅರಸನು ರಾಜ್ಯವಾಳುವಾಗ್ಗೆ ಅಕಳಂಕನೆಂಬುವನು ವೀರಶೈವರ ಪಕ್ಷ ವಹಿಸಿ ಜೈನ ಪಂಡಿತರನ್ನು ಸೋಲಿಸಿದನೆಂದು ಅಕಳಂಕ ಚರಿತ್ರವೆಂಬ ಜೈನಗ್ರಂಥದಲ್ಲಿ ಬಂದಿದೆ. ಇದರಿಂದ ಶ್ರೀ ಬಸವೇಶ್ವರನು ಇದ್ದ ಕಾಲಕ್ಕಿಂತ ೩೦೦ ವರ್ಷಗಳ ಪೂರ್ವದಲ್ಲಿ ವೀರಶೈವರು ಇದ್ದರೆಂದು ಸಿದ್ಧವಾಗುತ್ತದೆ. ಮತ್ತು ಚೇರದೇಶದಲ್ಲಿ ೮ನೆಯ ಶತಮಾನದಲ್ಲಿ ರಾಜ್ಯವಾಳಿದ ರಾಯಗೋವಿಂದನೆಂಬ ಅರಸನು ಲಿಂಗಧಾರಿಗಳ ಅಭಿಮಾನಿ ಇದ್ದನೆಂದು ಬ್ರಾವುನ್ ಸಾಹೇಬರು ಬರೆದ ಕರ್ನಾಟಕದ ಇತಿಹಾಸ ಮೇಲಿಂದ ತಿಳಿಯುತ್ತದೆ. ಇದಲ್ಲದೆ ವಿಕ್ರಮಾರ್ಕ ಶಕದ ೬೩೧ನೇ ವರ್ಷದಲ್ಲಿ ಅಂದರೆ ೧೩೭೯ ವರುಷಗಳ ಹಿಂದೆ ಕಾಶೀ ಅರಸನಾದ ಜಯನಂದದೇವನು ಅಲ್ಲಿಯ ಧರ್ಮಪೀಠಕ್ಕೆ ಜಂಗಮಪುರವನ್ನು ಉಂಬಳಿಯಾಗಿ ಕೊಟ್ಟನೆಂಬುವದು ಶಾಸನದ ಮೇಲಿಂದ ಸಿದ್ದವಾಗುತ್ತದೆ.

ಇವೆಲ್ಲ ಕಾರಣಗಳಿಂದ ಶ್ರೀ ಬಸವೇಶ್ವರನು ಇದ್ದ ಕಾಲಕ್ಕಿಂತ ಪೂರ್ವದಲ್ಲಿ ಲಿಂಗಾಯತ ಮತವಿತ್ತೆಂದು ಸಿದ್ಧವಾಗುತ್ತದೆ.

ಲಿಂಗಾಯತರಲ್ಲಿ ಧರ್ಮೋಪದೇಶಕರು ಇರುವದು ಬಹಳೇ ಅಗತ್ಯವಿದೆ. ಇವರು ಪ್ರತಿಯೊಂದು ಊರಿಗೆ ಹೋಗಿ ಲಿಂಗಾಯತಧರ್ಮವನ್ನೂ, ಜಂಗಮರ ಮತ್ತು ಭಕ್ತರ ಕರ್ತವ್ಯಗಳನ್ನೂ, ದಿನಾಲು ಶಿವಪೂಜೆಯನ್ನು ಮಾಡುವಕಾಲಕ್ಕೆ ಬೇಕಾಗುವ ಮಂತ್ರೋಕ್ತ ವಿಧಾನಗಳನ್ನೂ, ಲಗ್ನದ ಕಾರ್ಯಗಳಲ್ಲಿ ಜಂಗಮರು ಮಾಡಬೇಕಾದ ಶಾಸ್ತ್ರೋಕ್ತ ವಿಧಿಗಳನ್ನೂ, ಅವರಿಗೆ ತಿಳಿಸಿಕೊಡಬೇಕು. ಲಿಂಗವೆಂದರೇನು. ಜಂಗಮವೆಂದರೇನು, ಮುಂತಾದ ಅಷ್ಟಾವರ್ಣಗಳ ವಿಷಯಗಳನ್ನು ಎಲ್ಲ ಜನರಿಗೆ ತಿಳಿಯುವಂಥ ಶಬ್ದಗಳಲ್ಲಿ ಬೋಧಿಸಬೇಕು. ಮತ್ತು ಯಾವನು ಈ ಉಪದೇಶಕ್ಕೆ ಒಳಗಾಗದೇ ಇರುವನೋ ಅಂಥವನ ಕೂಡ ಅನ್ನೋದಕ ಮತ್ತು ಶರೀರ ಸಂಬಂಧ ಮಾಡದೆಂದು ಅಲ್ಲಲ್ಲಿಯ ಮಠಸ್ಥರಿಗೆ ಮತ್ತು ಸಮೀಪದಲ್ಲಿರುವ ಪಂಚಾಯತ ಜನರಿಗೆ ತಿಳಿಸಬೇಕು. ಇದಲ್ಲದೇ ಪ್ರತಿಯೊಂದು ಗ್ರಾಮದಲ್ಲಿ ತಾವು ಎಷ್ಟು ಮಂದಿಗೆ ಲಿಂಗಧಾರಣ ಮಾಡಿಸಿ ಆಚಾರಕ್ಕೆ ಹಚ್ಚಿದರೆಂಬ ಬಗ್ಗೆ ಮೇಲಿಂದ ಮೇಲೆ ರಿಪೋರ್ಟುಮಾಡಬೇಕೆಂಬ ಬಗ್ಗೆ ಈ ಸಭೆಯವರು ನಿಯಮಮಾಡಿದರೆ ವಿಹಿತವಾಗುವದು. ಮತ್ತು ನೀತಿಯ ಭೋದವನ್ನು ಚೆನ್ನಾಗಿ ಮಾಡಿ ಇಂತಿಂಥ ಒಳ್ಳೇ ಕಾರ್ಯದಿಂದ ಇಂತಿಂಥ ಒಳ್ಳೇ

ಫಲವು ದೊರಕುವದೆಂದು ತಿಳಿಹಿಸಬೇಕು. ಇದಲ್ಲದೇ ಲಿಂಗಾಯತ ಜನರು ತಮ್ಮ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲಿಕ್ಕೆ ಶಾಲಿಗೆ ಕಳಿಸುತ್ತಾರೋ ಇಲ್ಲವೋ, ಕಳಿಸದೆ ಇದ್ದರೆ ಅವರಿಗೆ ಏನು ಆಡಚಣಿಯುಂಟು ಅವರಿಗೆ ಹಣದ ಸಹಾಯವು ಬೇಕಾಗಿದ್ದರೆ ಅಥವಾ ಸರಕಾರಿ ಶಾಲೆಗಳು ಇಲ್ಲದಿದ್ದರೆ, ಶಾಲಾಗುರುಗಳು ಬೇಕಾಗಿದ್ದರೆ ಅವೆಲ್ಲವನ್ನು ಧಾರವಾಡ, ಬೆಳಗಾಂವ, ಸೊಲ್ಲಾಪುರ, ಮೈಸೂರ ಅಥವಾ ಮತ್ಯಾವದಾದರೊಂದು ಪ್ರಸಿದ್ಧ ಪಟ್ಟಣದ ಪ್ರಮುಖ ಗೃಹಸ್ಥರಿಗೆ ತಿಳಿಸಬೇಕು. ನಮ್ಮ ಧರ್ಮೋಪದೇಶಕರು ಲಿಂಗಾಯತರು ಇರುವ ಹಳ್ಳಿಗಳಿಗೆ ಸಹ ಹೋಗಿ ತಮ್ಮ ವ್ಯಾಖ್ಯಾನರೂಪದಿಂದಲೂ, ಶಿವಕೀರ್ತನೆಯ ರೂಪದಿಂದಲೂ ಲಿಂಗಾಯತಧರ್ಮೋಪದೇಶವನ್ನು ಮಾಡಬೇಕು. ಈ ಧರ್ಮೋಪದೇಶವನ್ನು ಮಾಡುವುದಕ್ಕಾಗಿ "ಧರ್ಮೋಪದೇಶಕರ ಫಂಡು" ಕೂಡಿಸಬೇಕು. ಮತ್ತು ಈ ಸಭೆಯವರು ಶಿವಭಕ್ತಿ ಆಚಾರ ಸಂಬಂಧವಾಗಿ ಚಿಕ್ಕ ಚಿಕ್ಕ ಪುಸ್ತಕಗಳನ್ನು ಕನ್ನಡ, ಮರಾಠಿ ಮತ್ತು ತೆಲಗುಭಾಷೆಗಳಲ್ಲಿ ಛಾಪಿಸಿ ಉಪದೇಶಕರ ದ್ವಾರದಿಂದ ಹಂಚಬೇಕು. ಧರ್ಮೋಪದೇಶಕರ ಫಂಡು ಪ್ರತಿ ಒಂದು ಊರಲ್ಲಿ ಸ್ಥಾಪನವಾಗಬೇಕು. ಅಂದರೆ ಸುಲಭವಾಗಿ ಸಾಗುವುದು. ಆದರೆ ಕೆಲಕೆಲವು ಗ್ರಾಮುಗಳಲ್ಲಿ ಫಂಡುಗಳು ಸ್ಥಾಪನವಾಗಿ ಚೆನ್ನಾಗಿ ಉಪಯೋಗವಾಗದೇ ಅವುಗಳ ದುರುಪಯೋಗವಾದೀತೆಂಬ ಭಯದಿಂದ ನಾನು ಒಂದು ಉಪಾಯವನ್ನು ಸೂಚಿಸುತ್ತೇನೆ. ಅದು ನಿಮ್ಮೆಲ್ಲರಿಗೆ ಮಾನ್ಯ ಕಂಡರೆ ಬೇಗನೆ ಇದರಂತೆ ಯತ್ನಿಸಿರಿ. ಅದೇನೆಂದರೆ ಇದೇ ಮಹಾಸಭೆಯಲ್ಲಿ ಕೂಡಿದ ಧರ್ಮಾಭಿಮಾನಿ ಜನರೊಳಗೆ ವರ್ಷಕ್ಕೆ ೩ ರೂ. ಅಥವಾ ೫ ರೂ. ವರ್ಗಣಿ ಹಾಕತಕ್ಕವರನ್ನು ಕಾಯಮ ಸಭಾಸದರನ್ನು ಮಾಡಿ ಅವರ ಹೆಸರಿನ ಯಾದಿ ಇಟ್ಟು ಅವರಿಂದ ಬಂದ ಹಣದಲ್ಲಿ ಪ್ರತಿವರ್ಷ ಇಂಥ ಮಹಾಸಭೆ ಕೂಡಿಸಬೇಕು. ಪರಿಷತ್ತಿಗೆ ಬರುವವರು ತಮ್ಮ ಊಟದ ಮತ್ತು ಇಳುಕೊಳ್ಳುವ ವ್ಯವಸ್ಥೆಯನ್ನು ತಾವೇ ನೋಡಿಕೊಳ್ಳಬೇಕೆಂಬ ನಿರ್ಬಂಧನೆಯನ್ನಿಟ್ಟರೆ ಬರೇ ಪರಿಷತ್ತಿನ ರಿಪೋರ್ಟ ಮುದ್ರಿಸಲಿಕ್ಕೆ ಮತ್ತು ಮಹಾಸಭೆಯ ವ್ಯವಸ್ಥೆಯನ್ನಿಡುವ ಉಳಿದ ಕೆಲಸಕ್ಕೆ ೨೦೦-೩೦೦ ರೂ. ಖರ್ಚುಮಾಡಿಕೊಂಡು ಉಳಿದ ಹಣವನ್ನು ಧರ್ಮೋಪದೇಶಕರಿಗೆ ಸಂಬಳಕ್ಕಾಗಿ ಕೊಡಬೇಕು. ಈಗ ತುರ್ತಕ್ಕೆ ೫ ಜನ ಧರ್ಮೋಪದೇಶಕರನ್ನು ನೇಮಿಸಿ ಅನುಭವ ತೆಗೆದುಕೊಳ್ಳಬೇಕು. ಮಹಾಸಭೆಗೆ ಮತ್ತು ಧರ್ಮೋಪದೇಶಕರ ಸಂಬಳಕ್ಕೆ ಖರ್ಚಾಗಿ ಉಳಿದ ಹಣವನ್ನು ಹಳ್ಳಿಗಳಲ್ಲಿ ಸಾಲಿಗೆ ಹೋಗುವ ಹುಡುಗರಿಗೆ ಫೀ ಕೊಡಲಿಕ್ಕೆ ಮತ್ತು ಪುಸ್ತಕ ಕೊಳ್ಳಲಿಕ್ಕೆ ಕೊಡಬೇಕು. ಮತು ವೀರಶೈವ ಪಾಠಶಾಲೆಗಳಿಗೆ ಸಹಾಯಮಾಡಬೇಕು. ಈ ರೀತಿಯಿಂದ ಪ್ರಯತ್ನಮಾಡಿದರೆ ಏನು ಫಲವು ಆಗುತ್ತದೆಂದು ಅನುಭವ ತೆಗೆದುಕೊಳ್ಳುವುದು ಬಹಳ ಮಹತ್ವವುಳ್ಳದ್ದೆಂದು ನನಗೆ ಕಾಣಿಸಿದ್ದರಿಂದ ಈ ವಿಷಯವನ್ನು ಮುಖ್ಯವಾಗಿ ನಿಮ್ಮೆಲ್ಲರ ಮುಂದೆ ಇಟ್ಟಿದ್ದೇನೆ. ಈ ಹೊತ್ತು ನಮ್ಮ ಸಮಾಜದ ಕಲ್ಯಾಣವಾಗಬೇಕೆಂದು ನಾವು ಅಪೇಕ್ಷಿಸುತ್ತಿದ್ದರೆ, ಕೇವಲ ಉದರಂಭರಣಾರ್ಥವಾಗಿ ಜೀವಿಸಿಕೊಳ್ಳದೇ ನಮ್ಮ ನಮ್ಮ ಕೈಯಿಂದ ಏನಾದರೂ ಪರೋಪಕಾರ, ಸ್ವಜನ ಸೇವಾ ಸ್ವಜಾತಿ ಕಲ್ಯಾಣಗಳು ಆಗಬೇಕೆಂಬುವದು ನಮ್ಮ ಮನಸ್ಸಿನಲ್ಲಿ ಎಳ್ಳಷ್ಟಾದರೂ ಬಂದಿದ್ದರೆ ಒಂದು ಸ್ಥಿರವಾದ ವ್ಯವಸ್ಥಾಪಕ ಸಂಘವನ್ನು ಅವಶ್ಯವಾಗಿ ಸ್ಥಾಪಿಸಿಕೊಳ್ಳತಕ್ಕದ್ದು. ಇಲ್ಲದಿದ್ದರೆ ನಾವು ಇಲ್ಲಿ ಮಹಾಸಭೆಗೆ ಒಂದು ಬರೆ ವಾಕ್ಚಾತುರ್ಯವುಳ್ಳ, ಭಾಷಣಗಳನ್ನು ಮಾಡಿ ಮಹಾಸಭೆಯಲ್ಲಿ ಕೂತಾಗ್ಗೆ ಮಾತ್ರ ಅಭಿಮಾನವನ್ನು ಮೈಯಲ್ಲಿ ಸೇರಿಸಿಕೊಂಡು ಮಹಾಸಭೆಯನ್ನು ಬಿಟ್ಟು ಮನೆಗೆ ಹೋದಕೂಡಲೇ ನಮ್ಮ ಅಭಿಪ್ರಾಯದ ಮೇಲೆ ನೀರು ಎರೆದು

ಚೌಕಾಸನವನ್ನು ಹಾಕಿಕೊಂಡು ಕೂಡ್ರುವದು ಅಥವಾ ನಿದ್ರಾವಶರಾಗುವುದು ಯೋಗ್ಯವಲ್ಲ. ಏನಾದರೂ ಕೃತಿಯನ್ನು ನಡೆಸಿರಿ, ಬಾಯಿಯಿಂದ ಮಾತಾಡಿ ಸುಮ್ಮನೇ ಕೂಡ್ರಬೇಡಿರಿ, ಎಂದು ನಾನು ನಿಮಗೆ ಮನಃ ಪುನಃ ಬೇಡಿಕೊಳ್ಳುತ್ತೇನೆ.

ವೈದಿಕೀ ವಿದ್ಯೆಯು ಮೊದಲು ಜಂಗಮರಿಗೆ ತಕ್ಕಮಟ್ಟಿಗೆ ಬರುತ್ತಿತ್ತು. ಆದರೆ ಈಗ ಜಂಗಮರು ಬಹುಶಃ ಈ ಅಭ್ಯಾಸವನ್ನು ಮಾಡುವದಿಲ್ಲ. ಭಕ್ತರು ಮತವೆಂದರೇನು, ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸುವುದಿಲ್ಲ. ಮತ ಗ್ರಂಥಗಳು ಯಾವ್ಯಾವು? ಯಾವ ಭಾಷೆಯಲ್ಲಿರುತ್ತವೆ? ಇದು ಸಹ ಅನೇಕರಿಗೆ ಗೊತ್ತಿಲ್ಲ. ಆದ್ದರಿಂದ ಅಲ್ಲಲ್ಲಿ ವೀರಶೈವ ಪಾಠಶಾಲೆಗಳನ್ನು ಸ್ಥಾಪಿಸಿ ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಊಟ ಉಪಚಾರಕ್ಕೂ ಅನುಕೂಲತೆಗಳನ್ನು ಮಾಡಿಕೊಡಬೇಕು. ಈ ಪಾಠಶಾಲೆಗಳಲ್ಲಿ ಸಂಸ್ಕೃತ ಅಭ್ಯಾಸವನ್ನು ಸಹ ತಕ್ಕಮಟ್ಟಿಗೆ ಕಲಿಸಬೇಕು. ಅಂದರೆ ಈ ಪಾಠಶಾಲೆಯಿಂದ ಹೊರಬೀಳುವ ವಿದ್ಯಾರ್ಥಿಗಳೂ ಶಾಸ್ತ್ರಿಗಳೂ ಧರ್ಮೋಪದೇಶಕರೂ ಆಗಿ ನಮ್ಮ ಸಮಾಜಕ್ಕೆ ಬಹು ಪ್ರಯೋಜನವಾಗುವದಲ್ಲದೆ ನಮ್ಮ ಧರ್ಮಕೃತ್ಯಗಳೆಲ್ಲ ಶಾಸ್ತ್ರೋಕ್ತವಾಗಿ ಜರುಗುವವು. ಇದನ್ನು ಎಲ್ಲ ವೀರಶೈವ ಮತಾಭಿಮಾನಿಗಳು ಚೆನ್ನಾಗಿ ಲಕ್ಷದಲ್ಲಿ ತರತಕ್ಕದ್ದು.

ಕೋರ್ಟಿನಲ್ಲಿ ವ್ಯಾಜ್ಯಗಳನ್ನು ಮಾಡುವವರು ನಮ್ಮ ಜನರೇ ಬಹಳ ಮಂದಿ. ದಕ್ಷಿಣ ಮಹಾರಾಷ್ಟ್ರ ದೇಶದ ಎಲ್ಲ ದಿವಾಣಿ ಮತ್ತು ಫೌಜುದಾರಿ ಕೋರ್ಟುಗಳಲ್ಲಿರುವ ವ್ಯಾಜ್ಯಗಳ ಸಂಖ್ಯೆಯನ್ನು ನೋಡಿದರೆ ೧೦೦ಕ್ಕೆ ೭೫ ತಂಟೆಗಳೂ ವ್ಯಾಜ್ಯಗಳು ನಮ್ಮ ಜನರವೇ ಇರುತ್ತವೆ. ಈರ್ಷೆಯಿಂದಲೂ, ಸಿಟ್ಟಿನಿಂದಲೂ, ನಿರರ್ಥಕವಾಗಿ ತಂಟೆಗಳನ್ನು ಮಾಡಿ ವರ್ಷಕ್ಕೆ ಲಕ್ಷ ಗಟ್ಲೆ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಕೊರ್ಟು ಫೀ ರೂಪದಿಂದ ಸರಕಾರಕ್ಕೆ ದಂಡ ಕೊಡುವದಲ್ಲದೆ, ವಕೀಲರಿಗೆ ಫೀ ಬಯಾನು ಇನಾಮು ಮುಂತಾದ ರೂಪಗಳಿಂದ ಬೊಗಸಿ ತುಂಬ ರೂಪಾಯಿಗಳನ್ನು ಕೊಟ್ಟು ತಮ್ಮ ಹೊಲ ಮನೆಗಳನ್ನು ವತ್ತೀ ಹಾಕಿ ಇಲ್ಲವೇ ಮಾರಾಟ ಮಾಡಿ, ಬಡತನಕ್ಕೆ ಬರುತ್ತಾರೆ. ಇದು ಎಂಥ ಶೋಚನೀಯವಾದ ಮಾತು! ಆಟ ನೋಟಗಳಲ್ಲಿ ಮತ್ತು ಶುಭಾಶುಭಕಾರ್ಯಗಳಲ್ಲಿ ಹಣವನ್ನು ಖರ್ಚು ಮಾಡುವುದು ಪ್ರಚಾರದಲ್ಲಿ ಅದೆ, ಇದಲ್ಲದೆ ತಂಟೆ ಮಾಡಿ ಕೋರ್ಟಿಗೆ ಹೋದ ಬಳಿಕ, ಗಾಣದಲ್ಲಿ ಕಬ್ಬುಗಳನ್ನು ಹಾಕಿ ರಸವನ್ನು ಹಿಡಿದ ಮೇಲೆ ಉಳಿದ ಹಿಪ್ಪಿಯಂತೆ ನಮ್ಮ ಜನರ ಅವಸ್ಥೆಯಾಗುವುದು ಏನಾಶ್ಚರ್ಯವು? ಇನ್ನಾದರೂ ನಮ್ಮ ಜನರು ಬುದ್ಧಿಯನ್ನು ಕಲಿತು ತಮ್ಮ ತಂಟೆಗಳನ್ನು ಪಂಚರ ವಿದ್ಯಮಾನ ತೀರಿಸಿಕೊಂಡರೆ ಅರ್ಥಹಾನಿಯೂ ಮಾನಹಾನಿಯೂ ತಪ್ಪುವವು.

ಗಂಡಸರು ಮಾತ್ರ ವಿದ್ಯೆ ಕಲಿತರೆ ಸಾಕಾಗದು. ಹೆಂಗಸರೂ ನಿತ್ಯ ಪ್ರಪಂಚದ ಕೆಲಸಕ್ಕೆ ಮತ್ತು ಬಾಲಕರ ಆರಂಭದ ಶಿಕ್ಷಣಕ್ಕೆ ಬೇಕಾಗುವಷ್ಟು ವಿದ್ಯೆಯನ್ನು ಕಲಿಯಲಿಕ್ಕೆಬೇಕು. ಗಂಡಸರಿಗೆ ಉತ್ತಮವಾಗಿ ಸಂಸಾರಮಾಡಲಿಕ್ಕೂ ಸದ್ಧರ್ಮ ಸುನೀತಿಗಳಿಂದ ಆಚರಿಸಲಿಕ್ಕೂ ಕಲಿತ ಹೆಂಡಂದಿರ ಸಹಾಯವು ಮುಖ್ಯವಾಗಿ ಬೇಕಾಗುತ್ತದೆ. ಚಿಕ್ಕ ಮಕ್ಕಳಿಗೆ ತಂದೆಯ ವಿದ್ಯೆಗಿಂತ ತಾಯಿಯ ವಿದ್ಯೆಯು ಹೆಚ್ಚು ಉಪಯೋಗಕ್ಕೆ ಬೀಳುವದು. ಯಾಕೆಂದರೆ ಚಿಕ್ಕ ಮಕ್ಕಳು ತಂದೆಗಿಂತ ತಾಯಿಯ ಬಳಿಯಲ್ಲಿ ಹೆಚ್ಚು ಕಾಲದವರೆಗೆ ಇರುವರು. ಆದ್ದರಿಂದ ತಾಯಂದಿರ ಗುಣದಮೇಲೂ, ಅವರ ಶಿಕ್ಷಣದಮೇಲೂ, ಮಕ್ಕಳ ಗುಣವು ಅವಲಂಬಿಸಿರುತ್ತದೆ. ಮಕ್ಕಳು ಸಣ್ಣರಿರುವಾಗ್ಗೆ ಕಲಿತ ಗುಣವನ್ನು ಮುಂದೆ

ದೊಡ್ಡವರಾದಮೇಲೆ ಬಹುಶಃ ಬಿಡುವುದಿಲ್ಲ. ತಾಯಂದಿರು ಸುಶಿಕ್ಷಿತರಿದ್ದರೆ ಅವರು ತಮ್ಮ ಮಕ್ಕಳಿಗೆ ಸುಶಿಕ್ಷಣವನ್ನು ಕೊಡುವರು. ಅದರಿಂದ ವಿದ್ಯೆಯು ನಮ್ಮೊಳಗೆ ಈಗಿರುವುದಕ್ಕಿಂತ ಇಮ್ಮಡಿ ಮುಮ್ಮಡಿ ವೇಗದಿಂದ ಪ್ರಸಾರವಾಗುವುದು. ಆದ್ದರಿಂದ ಸ್ತ್ರೀ ಶಿಕ್ಷಣದ ಬಗ್ಗೆ ನಮ್ಮ ಜನರು ಆದಷ್ಟು ಉತ್ತೇಜನ ಕೊಡುವರೆಂದು ನಂಬುತ್ತೇನೆ.

ಧರ್ಮ ಶಿಕ್ಷಣದಲ್ಲಿ ನೀತಿ ಶಿಕ್ಷಣವು ಸಮಾವೇಶವಾಗುತ್ತದೆ. ಧರ್ಮದ ಶಿಕ್ಷಣ ಕೊಟ್ಟರೆ ನೀತಿ ಶಿಕ್ಷಣವು ತಾನಾಗಿ ಬರುತ್ತದೆ. ವಿದ್ಯೆಯನ್ನು ಧರ್ಮ ಶಿಕ್ಷಣ ಮತ್ತು ನೀತಿಗಳನ್ನನುಸರಿಸಿ ಕೊಟ್ಟರೆ ನಮ್ಮಲ್ಲಿ ಘನ ವಿದ್ವಾಂಸರೂ ಧರ್ಮಿಷ್ಠರೂ ನೀತಿವಂತರೂ ಆಗುವರು. ಧರ್ಮ ಮತ್ತು ನೀತಿಗಳು ಇರದಿದ್ದರೆ ವಿದ್ಯೆಯು ಬಂದರೂ ವ್ಯರ್ಥ. ಸುಳ್ಳುಗಾರರೂ, ಅಪ್ರಮಾಣೀಕರೂ, ವ್ಯಭಿಚಾರಿಗಳೂ, ಯಾವ ಜನರಲ್ಲಿ ಹೆಚ್ಚಾಗಿರುವರೋ ಅವರು ಗ್ರಹಣಹಿಡಿದ ಸೂರ್ಯನಂತೆ ತೇಜಹೀನರಾಗುವರು. ಅವರು ಎಂದಿಗೂ ಮುಂದಕ್ಕೆ ಬರಲಾರರು. ಆದ್ದರಿಂದ ನಾವು ನೀತಿ ಶಿಕ್ಷಣದ ಕಡೆಗೆ ವಿಶೇಷ ಲಕ್ಷ ಕೊಡತಕ್ಕದ್ದು.

ಕೈದಿಗಳ ಲಿಂಗವನ್ನು ತೆಗಿಸುವದೂ, ಅವರಿಗೆ ಪರಮತಸ್ಥರ ಕಡೆಯಿಂದ ಅನ್ನ ನೀರು ಕೊಡಿಸುವದೂ ನಮ್ಮ ಮತಕ್ಕೆ ಬಹಳೇ ಕುಂದು ಕೊರತೆಗಳಾಗಿವೆ. ಬ್ರಾಹ್ಮಣ ಕೈದಿಗಳಿಗೆ ಬ್ರಾಹ್ಮಣರಿಂದಲೇ ಅನ್ನೋದಕಗಳು ದೊರಕುವಂತೆ ನಮ್ಮ ಮತದ ಕೈದಿಗಳಿಗೂ ದೊರಕಬೇಕೆಂಬ ಬಗ್ಗೆ ನಮ್ಮ ಸರಕಾರದವರಿಗೆ ನಾವು ವಿನಯಪೂರ್ವಕವಾಗಿ ಅರ್ಜಿಯ ದ್ವಾರಾ ಬೇಡಿಕೊಳ್ಳತಕ್ಕದ್ದು.

ವ್ಯಾಪಾತರವು ನಮ್ಮ ಮತದವರ ಮುಖ್ಯ ಉಪಜೀವನದ ಸಾಧನವಿದ್ದು, ಇದಕ್ಕೂ ಸಹ ವಿದ್ಯೆಯ ಅವಶ್ಯಕತೆಯು ಬಹಳೇ ಉಂಟು. ಯಾಕೆಂದರೆ ಪೂರ್ವಕಾಲದಲ್ಲಿ ನಮ್ಮ ವ್ಯಾಪಾರವು ನಮ್ಮ ದೇಶದಲ್ಲಿಯೇ ನಡಿಯುತ್ತಿತ್ತು. ಈಗ ಹಿಂದುಸ್ಥಾನದ ವ್ಯಾಪಾರವು ಇಡೀ ಪೃಥ್ವಿಯೊಳಗಿನ ಬಹುಶಃ ಎಲ್ಲ ದೇಶಗಳ ಸಂಗಡ ನಡೆಯುತ್ತದೆ. ವ್ಯಾಪಾರದ ಸಂಗತಿಗಳು ನಮಗೆ ತಿಳಿಯುವುದು ಅತಿಶಯ ಮಹತ್ವದ್ದಿರುತ್ತದೆ. ಇದಲ್ಲದೇ ವ್ಯಾಪಾರದಲ್ಲಿ ಮೊದಲಿಗಿಂತ ಈಗ ಬಹಳ ಭೇದಗಳಾಗಿವೆ. ಮೊದಲಿನಂತೆ ನಾವು ಚಿಕ್ಕತಕ್ಕಡಿ ಅಂಗಡಿಯಿಂದ ಅಥವಾ ಧಾನ್ಯ ವ ಕಿರುಕುಳ ವ್ಯಾಪಾರದಿಂದ ಎಂದೂ ಮುಂದಾಗಲಾರೆವು. ಈಗಿನ ಕಾಲಕ್ಕೆ ಸರಿಯಾಗಿ ವ್ಯಾಪಾರದಲ್ಲಿ ಮುಂದಾಗಬೇಕಾದರೆ ನಾವು ರೇಶ್ಮಿ, ಅರಳಿ, ಬೆಳ್ಳಿ, ಬಂಗಾರ, ನೂಲಿನ ಮತ್ತು ಉಣ್ಣಿಯ ವಸ್ತ್ರ, ಚಾಕು, ಕತ್ತರಿ, ಸಬಕಾರ, ದೀಪದ ಕಡ್ಡಿ ಮುಂತಾದ ಎಲ್ಲ ಸರಕುಗಳ ವ್ಯಾಪಾರವನ್ನೂ ದೊಡ್ಡ ಬಂಡವಲದ ಸಹಾಯದಿಂದ ಮಾಡಬೇಕು. ಇದಲ್ಲದೇ ಯಂತ್ರಸಂಬಂಧದ ಮತ್ತು ಕಲಾಕೌಶಲ್ಯದ ಜ್ಞಾನವನ್ನೂ, ವ್ಯಾಪಾರದ ಜ್ಞಾನವನ್ನೂ ಕಲಿತುಕೊಳ್ಳಲಿಕ್ಕೆ ಪರದೇಶಕ್ಕೆ ಹೋಗಬೇಕು.

ಸುಧಾರಿಸಿದ ರಾಷ್ಟ್ರದವರಿಂದ ಕಾಜು, ಸಬಕಾರ, ದೀಪದ ಕಡ್ಡಿ, ಛತ್ರಿ ಮುಂತಾದ ಅನೇಕ ನಿತ್ಯ ಉಪಯೋಗವುಳ್ಳ ಪದಾರ್ಥಗಳನ್ನು ಮಾಡಲಿಕ್ಕೆ ಕಲಿತು ಅವುಗಳ ಕಾರಖಾನೆಗಳನ್ನು ನಮ್ಮಲ್ಲಿರುವ ಶ್ರೀಮಂತರ ಸಹಾಯದಿಂದ ಇಲ್ಲಿ ಸ್ಥಾಪಿಸಬೇಕು. ಇವುಗಳಲ್ಲಿ ಕೆಲವು ಪದಾರ್ಥಗಳು ಒಳ್ಳೆ ಕ್ಷುಲ್ಲಕವೆಂದು ತೋರಿದಾಗ್ಯೂ ಅವುಗಳ ಮಾರಾಟವು ನಮ್ಮ ದೇಶದಲ್ಲಿ ಕೋಟ್ಯಾವಧಿ ರೂಪಾಯಿ ಕಿಮ್ಮತ್ತಿನದು ಆಗಿ ಈಗ ಅವುಗಳಿಂದ ಬರುವ ಲಾಭಗಳನ್ನು ಎರಡನೆ ಜನರು ತೆಗೆದುಕೊಳ್ಳುತ್ತಾರೆ. ನಮ್ಮ ಜನರಿಗೆ ನಿತ್ಯ ಬೇಕಾಗುವ ಪದಾರ್ಥಗಳನ್ನು ನಾವೇ ಮಾಡಿದರೆ ನಮ್ಮ ಸಮಾಜವು

ಉನ್ನತಿಯಾಗುವುದರಲ್ಲಿ ಸಂಶಯವಿಲ್ಲ. ಕೆಲವರು ನಮ್ಮಿಂದ ಇಂಥ ಕಾರಖಾನೆಗಳು ಹ್ಯಾಗೆ ತೆಗಿಯಲ್ಪಟ್ಟಾವು ಎಂಬ ಆಕ್ಷೇಪ ತೆಗಿಯಬಹುದು. ಆದರೆ ನಾವು ಪಾಶ್ಚಿಮಾತ್ಯ ಜನರ ಅನುಕರಣ ಮಾಡಿದರೆ ಈ ಮಾತಿನ ನಿರ್ಣಯವು ಸ್ವಲ್ಪದರಲ್ಲಿಯೇ ಆಗುವದು. ಹ್ಯಾಗೆಂದರೆ, ನಮ್ಮಲ್ಲಿರುವ ದೊಡ್ಡ ದೊಡ್ಡ ವರ್ತಕರು ಕಂಪನಿಗಳನ್ನು ಸ್ಥಾಪಿಸಿ ಮೇಲೆ ಹೇಳಿದಂಥ ಸರಕುಗಳನ್ನು ಮಾಡುವ ಕಾರಖಾನೆಗಳನ್ನು ವೃದ್ಧಿಗೊಳಿಸಬೇಕು. ಆದರೆ ನಮ್ಮ ಹಿಂದೂ ದೇಶದ ದುರ್ದೈವದಿಂದ ನಮ್ಮಲ್ಲಿದ್ದ ಸದ್ಗುಣಗಳೂ, ಸತ್ಯತೆಯೂ ಪ್ರಾಮಾಣಿಕತನವೂ, ದೀರ್ಘೋದ್ಯೋಗವೂ, ಲೋಪವಾಗಿ ಅವುಗಳ ಬದಲಾಗಿ ದುರ್ಗುಣಗಳೂ, ಅಸತ್ಯತೆಯೂ, ಅಪ್ರಮಾಣಿಕತನವೂ, ಆಲಸ್ಯವು ನಮ್ಮಲ್ಲಿ ಸೇರಿಕೊಂಡಿರುತ್ತವೆ. ಆದ್ದರಿಂದ ಇಂಥ ಕೆಲಸಗಳಾಗುವದು ಒಂದು ವೇಳೆ ದುಸ್ತರವಾದರೂ ನಮ್ಮ ವರ್ತಕರು ವಿಶ್ವಾಸವುಳ್ಳ ಜನರನ್ನು ಕೂಡಿಸಿಕೊಂಡು ಮೊದಲು ಸಣ್ಣಕಂಪನಿಗಳನ್ನು ಸ್ಥಾಪಿಸಿ, ಅದರಲ್ಲಿ ಇಂಗ್ಲೀಷ್ ಓದಬರಹವರಿತ ತಮ್ಮ ಮಕ್ಕಳನ್ನು ಸೇರಿಸಿ ಅವರ ಸದ್ಗುಣ ಮುಂತಾದ್ದರ ಕಡೆಗೆ ಲಕ್ಷ ಕೊಡುತ್ತಾ ನಡೆದರೆ, ಕೆಲವು ಕಾಲದ ಮೇಲೆ ಆ ಮಕ್ಕಳು ಸದ್ಗುಣಿಗಳೂ, ಪ್ರಾಮಾಣಿಕರೂ ಆಗಿ, ಮುಂದೆ ದೊಡ್ಡ ದೊಡ್ಡ ಕಂಪನಿಗಳನ್ನು ಸ್ಥಾಪಿಸಲಿಕ್ಕೆ ಅನಾಯಾಸವಾಗಿ ಅನುಕೂಲತೆಯಾಗುವುದು.

ಸದ್ಯಕ್ಕೆ ಸಣ್ಣ ಸಣ್ಣ ಕಂಪನಿಗಳನ್ನು ಸ್ಥಾಪಿಸಿ, ಸಣ್ಣ ಸಣ್ಣ ಕಾರಖಾನೆಗಳಲ್ಲಿ ಭಂಡವಲವನ್ನು ಉಪಯೋಗಿಸಿದರೂ ನಮ್ಮ ವ್ಯಾಪಾರವು ತಕ್ಕಮಟ್ಟಿಗೆ ವೃದ್ಧಿಯಾಗುವುದು. ಈ ಕೆಲಸಕ್ಕೆ ಪ್ರಥಮತಃ ಬಾಷಾಜ್ಞಾನವೂ. ತದನಂತರ ಕಲಾಕೌಶಲ್ಯದ ಜ್ಞಾನವು, ಆ ಮೇಲೆ ವ್ಯಾಪಾರದ ಸಂಗತಿಗಳ ಜ್ಞಾನವು ಅವಶ್ಯವಾಗಿ ಬೇಕಾಗಿರುವವು. ಆದ್ದರಿಂದ ನಮ್ಮಲ್ಲಿರುವ ಶ್ರೀಮಂತರು ತಮ್ಮ ಮಕ್ಕಳಿಗೆ ಈಗಿನಂತೆ ಬೇರಿಜು, ವಜಾ ಬಾಕಿ, ಗುಣಾಕಾರ, ಅಂಕೆಗಳ ಉಪಯೋಗ ಮುಂತಾದವುಗಳನ್ನಷ್ಟೇ ಕಲಿಸದೆ, ಉಚ್ಚ ಪ್ರತಿಯ ಶಿಕ್ಷಣವನ್ನು ಕೊಟ್ಟರೆ ವ್ಯಾಪಾರಕ್ಕೆ ಬಹಳೇ ಉಪಯೋಗವಾದೀತೆಂದು ನನ್ನ ಅಭಿಪ್ರಾಯವದೆ. ಈಬಗ್ಗೆ ನಾವು ನಮ್ಮ ನೆರೆಯಲ್ಲಿರುವ ಜಪಾನ ದೇಶದವರ ಉದಾಹರಣೆಯನ್ನು ಮೇಲಿಂದ ಮೇಲೆ ಧ್ಯಾನದಲ್ಲಿ ತರತಕ್ಕದ್ದು. ಕೆಲವು ವರ್ಷಗಳ ಹಿಂದೆ ಈ ಸಣ್ಣ ರಾಷ್ಟ್ರವೂ ಯಾರಿಗೂ ಗೊತ್ತಿದ್ದಿಲ್ಲ. ಆದರೆ ಅಲ್ಲಿಯ ಜನರು ದೀರ್ಘಪ್ರಯತ್ನ ಮಾಡಿ, ತಮ್ಮ ಮಕ್ಕಳನ್ನು ಸುಧಾರಿಸಿದ ಪರದೇಶಗಳಿಗೆ ಕಳಿಸಿ, ಅಲ್ಲಿಯ ಕಲಾಕೌಶಲ್ಯದ ಜ್ಞಾನವನ್ನು ಕಲಿತುಕೊಂಡು, ಅವರು ತಿರುಗಿಬಂದಮೇಲೆ, ಅವರ ಸಹಾಯದಿಂದ ದೊಡ್ಡ ದೊಡ್ಡ ಕಾರಖಾನೆಗಳನ್ನು ಸ್ಥಾಪಿಸಿ ವಿಧವಿಧವಾದ ಸರಕುಗಳನ್ನು ಹುಟ್ಟಿಸಹತ್ತಿದಂದಿನಿಂದ ಅವರು ವ್ಯಾಪಾರದಲ್ಲಿ ಒಳ್ಳೇ ಕೀರ್ತಿಯನ್ನು ಪಡೆದಿರುವರು. ವ್ಯಾಪಾರದ ವಿಷಯದಲ್ಲಿ ಜಪಾನವು ಈವತ್ತಿನ ಮಿತಿಗೆ ಪಾಶಿಮಾತ್ಯ ಯಾವ ರಾಷ್ಟ್ರಕ್ಕೂ ಹಿಂದಿಲ್ಲ. ಇದನ್ನು ಕೇಳಿ ನಾವು ನಾಚದೇ ಇರಬಾರದು. ಇವರ ಉದಾಹರಣೆಯನ್ನು ನಾವು ಕ್ಷಣಶಃ ಮನಸ್ಸಿನಲ್ಲಿ ತಂದು, ದೀರ್ಘೋದ್ಯೋಗ ಮಾಡಿದರೆ ನಿಶ್ಚಯವಾಗಿ ನಾವು ಘನತೆಗೇರುವೆವು.

ನಮ್ಮ ಹಿಂದುಸ್ಥಾನವು ಸುವರ್ಣಭೂಮಿಯೆಂದು ಹೆಸರು ಹೊಂದುವದಕ್ಕೆ ಒಕ್ಕಲುತನವೇ ಕಾರಣವಾದದ್ದು. ಆದರೆ ಇತ್ತಿತ್ತಲಾಗಿ ಅನಾವೃಷ್ಟಿಯ ಮೂಲಕ ಮೇಲಿಂದ ಮೇಲೆ ಬರ ಬೀಳಹತ್ತಿ ನಮ್ಮಲ್ಲಿಯ ಒಕ್ಕಲುತನವು ಬಹಳೇ ಕ್ಷೀಣಸ್ಥಿತಿಗೆ ಬಂದಿರುತ್ತದೆ. ಇದಕ್ಕೆ ಅನಾವೃಷ್ಟಿಯ ಹೊರ್ತು ಇನ್ನೂ ಅನೇಕ ಕಾರಣಗಳುಂಟು. ಪೂರ್ವದಲ್ಲಿ ನಮ್ಮ ಇಡೀ ಹಿಂದುಸ್ಥಾನದಲ್ಲಿ ಒಕ್ಕಲುತನಕ್ಕೆ

ಎಷ್ಟು ಭೂಮಿಯ ಉಪಯೋಗದಲ್ಲಿತ್ತೋ ಅದಕ್ಕಿಂತಲೂ ಈಗ ಹೆಚ್ಚು ಭೂಮಿಯು ಸಾಗಾಗಿ ಇನ್ನು ಮುಂದೆ ಹೆಚ್ಚು ಸಾಗುವಳಿಯಾಗಲಿಕ್ಕೆ ಬೀಳ ಭೂಮಿಯೇ ಇಲ್ಲದ ಹಾಗಿರುತ್ತದೆ. ಇದರ ಮೇಲಿಂದ ನೋಡಿದರೆ ಯಾವತ್ತೂ ಭೂಮಿಯು ವರ್ಷಕ್ಕೆ ಸಾಗುತ್ತಿದ್ದು, ಅದರಲ್ಲಿಯ ಪೈರಿಗೆ ಉಪಯೋಗ ಬೀಳುವ ದ್ರವ್ಯಗಳು ಖರ್ಚಾಗುತ್ತವೆ. ಅವುಗಳ ಬದಲು ಭೂಮಿಗಳಿಗೆ ಹಾಕತಕ್ಕ ಗೊಬ್ಬರವೇ ಮೊದಲಾದ ದ್ರವ್ಯಗಳು ಖರ್ಚಾಗುತ್ತವೆ. ಅವುಗಳ ಬದಲು ಭೂಮಿಗಳಿಗೆ ಹಾಕತಕ್ಕ ಗೊಬ್ಬರವೇ ಮೊದಲಾದ ದ್ರವ್ಯಗಳು ನಮ್ಮಲ್ಲಿ ಸಾಕಷ್ಟು ಇರದೇ ಇದ್ದು, ಕೃಷಿಕರ್ಮ ಶಾಸ್ತ್ರದಪ್ರಕಾರ ತರತರದ ದ್ರವ್ಯಗಳುಳ್ಳ ಗೊಬ್ಬರವನ್ನು ಮಾಡುವ ಜ್ಞಾನವು ನಮ್ಮಲ್ಲಿ ಇಲ್ಲ. ಆದ್ದರಿಂದ ಭೂಮಿಗಳು ದಿನೇ ದಿನೇ ಬಡವಾಗುತ್ತ ನಡೆದು ಪೂರ್ವದಲ್ಲಿ ಯಾವ ಭೂಮಿಯಿಂದ ಎಷ್ಟು ಹುಟ್ಟುವಳಿ ಆಗುತ್ತಿತ್ತೋ ಅದರ ಅರ್ಧದಷ್ಟು ಸಹ ಆಗುವುದಿಲ್ಲ. ಇದಲ್ಲದೇ ಜನಸಂಖ್ಯೆಯು ಬೆಳೆದುದ್ದರಿಂದಲೂ ನಮ್ಮಲ್ಲಿ ಹುಟ್ಟುವ ಧಾನ್ಯಗಳು ಪರದೇಶಕ್ಕೆ ಹೋಗುವುದರಿಂದಲೂ ಧಾನ್ಯದ ಉತ್ಪನ್ನಕ್ಕಿಂತ ಹತ್ತಿಯ ಉತ್ಪನ್ನವು ಹೆಚ್ಚು ಕಿಮ್ಮತ್ತಿನದಾಗುವದರಿಂದಲೂ ಹತ್ತಿಯನ್ನು ಬಿತ್ತುವ ಭೂಮಿಯು ೧/೩ ಕ್ಕಿಂತ ಹೆಚ್ಚು ಇರುವದರಿಂದಲೂ ಸ್ವಲ್ಪ ಅನಾವೃಷ್ಟಿಯಾದ ಕೂಡಲೆ ನಮಗೆ ಧಾನ್ಯವೂ ದನಗಳಿಗೆ ಮೇವು ಸಾಕಷ್ಟು ಸಿಗದೆ, ದುಷ್ಕಾಳವೂ ಬೀಳುತ್ತದೆ. ನಾವು ಇದರಿಂದ ಮುಕ್ತರಾಗಬೇಕಾದರೆ ನಮಗೆ ಸರಕಾರದವರ ಸಹಾಯವು ಬೇಕು. ಈ ಸಹಾಯವೆಂದರೆ ಸರಕಾರದವರು ಅಲ್ಲಲ್ಲಿಗೆ ಅಗ್ರಿಕಲ್ಚರ ಫಾರ್ಮು ಅಂದರೆ "ಒಕ್ಕಲುತನದ ಶಾಲೆ"ಗಳನ್ನು ಸ್ಥಾಪಿಸಿ ಅವುಗಳಲ್ಲಿ ಹೊಸ ಹೊಸ ಗೊಬ್ಬರಗಳನ್ನು ಹ್ಯಾಗೆ ತಯಾರಮಾಡಬೇಕೆಂಬುವದನ್ನು ನಮ್ಮ ರೈತರಿಗೆ ತೋರಿಸಬೇಕು. ನಮ್ಮಲ್ಲಿ ಒಕ್ಕಲುತನದ ಆಯುಧಗಲು ಹಳೇ ತರದವು ಇದ್ದು ಅವುಗಳಿಂದ ಈಗಿನ ಸುಧಾರಿಸಿದ ಆಯುಧಗಳಂತೆ ಕೆಲಸವಾಗುವುದಿಲ್ಲ. ಆದ್ದರಿಂದ ಈಗಿನ ಹೊಸ ಸುಧಾರಿಸಿದ ಆಯುಧಗಳನ್ನು ಸರಕಾರದವರು ಅಲ್ಲಲ್ಲಿಗೆ ತಂದು ಅವುಗಳ ಉಪಯೋಗವನ್ನು ರೈತರಿಗೆ ತೋರಿಸಿ ಅವುಗಳನ್ನು ಪ್ರಚಾರದಲ್ಲಿ ತರುವ ಬಗ್ಗೆ ಜನರಿಗೆ ಸಹಾಯ ಮಾಡಬೇಕು. ನಮ್ಮ ದೇಶದಲ್ಲಿ ಅನಾವೃಷ್ಟಿಯಂತೂ ಮೇಲಿಂದ ಮೇಲೆ ನಡೆದಿರುವದು. ಇದಕ್ಕೆ ಈಶ್ವರನ ಕೋಪದ ಹೊರ್ತು ಎರಡನೇ ಕಾರಣವ್ಯಾವುದೂ ಇಲ್ಲ. ಆದರೂ ನಮ್ಮ ದೇಶದಲ್ಲಿ ಹರಿದು ಹೋಗುವ ನೀರನ್ನು ಅಲ್ಲಿಂದಲ್ಲಿಯೇ ತಡೆಹಾಕಿ ಕಟ್ಟಿ, ಸಣ್ಣ ಸಣ್ಣ ಕೆರೆಗಳನ್ನೂ, ಭಾವಿಗಳನ್ನೂ ಕಟ್ಟಿಸಿ, ಅವುಗಳಿಂದ ಆದಷ್ಟು ಭೂಮಿಯನ್ನು ತೊಯಿಸಿಕೊಡುವ ಯತ್ನವನ್ನು ಸರಕಾರದವರು ಮಾಡದಿದ್ದರೆ ನಮ್ಮ ಒಕ್ಕಲುತನವು ಕೆಲವು ಕಾಲದಲ್ಲಿ ನಾಮಶೇಷಮಾತ್ರ ಉಳಿಯುವದು, ಆದ್ದರಿಂದ ಈ ಬಗ್ಗೆ ನಾವೆಲ್ಲರೂ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

❖❖

೧೨ನೆಯ ಪ್ರಕರಣ

ಬೆಳಕಿನಲ್ಲಿ ಬೆಳಕು ಬೆರೆಯಿತು

ಬೆಂಗಳೂರು ಮಹಾಸಭೆಯ ಕಾರ್ಯವನ್ನು ಪೂರೈಸಿಕೊಂಡು ಬಂದನಂತರ ಶ್ರೀ ಲಿಂಗರಾಜರು ಬಹು ಕಾಲ ಜೀವಿಸಲಿಲ್ಲ. ಇವರ ಜೀವಿತದಲ್ಲಿ ಅದೇ ಕೊನೆಯ ಮಹತ್ಕಾರ್ಯವಾಗಿದ್ದಿತ್ತು. ಕ್ರಿ. ಶ. ೧೯೦೬ನೆಯ ಮಾರ್ಚ ತಿಂಗಳಲ್ಲಿ ಬೆಳ್ಳೇರಿ ಗ್ರಾಮಕ್ಕೆ ಹೋದಾಗ ಅಜೀರ್ಣದಿಂದ ಹೊಟ್ಟೆಯುಬ್ಬಿತು. ಅದೇ ರೋಗವು ದಿನೇ ದಿನೇ ಹೆಚ್ಚಾಗಲು ಪಕ್ರಮಿಸಿತು.

ಶಿವಪೇಟೆಯ ಮಠದ ಶ್ರೀ ಸ್ವಾಮಿಗಳವರು ಅದೇ ಸಮಯದಲ್ಲಿ ೧೪ ಮಂಟಪಗಳ ಪೂಜಾಸವಾರಂಭವನ್ನು ಶಿರಸಂಗಿಯಲ್ಲಿ ಪ್ರಾರಂಭಿಸಬೇಕೆಂದು ಯೋಚಿಸಿ ಆ ಮಹಾತ್ಕಾರ್ಯಭಾರವನ್ನು ಶ್ರೀ ಲಿಂಗರಾಜರಿಗೆ ವಹಿಸಿದ್ದರು. ಆ ಪೂಜೆಗೆ ಮಹಾ ತಪಸ್ವಿಗಳಾಗಿದ್ದ ಅಥಣಿ ಶ್ರೀ ಮುರುಘೇಂದ್ರ ಮಹಾ ಶಿವಯೋಗಿಗಳವರು ಆಗಮಿಸ ತಕ್ಕವರಿದ್ದುದರಿಂದ ಅದು ಬಹು ವೈಭವದಿಂದ ಜರುಗಬೇಕಾಗಿದ್ದಿತು. ಶ್ರೀ ಲಿಂಗರಾಜರಿಗೆ ಆದ ದೇಹದ ಸ್ಥಿತಿಯು ಚೆನ್ನಾಗಿರದಿದ್ದರೂ ತಾವು ವಹಿಸಿಕೊಂಡ ಮಹತ್ಕಾರ್ಯವನ್ನು ಬಿಡುವುದು ಸರಿಯಲ್ಲವೆಂದು ಯೋಚಿಸಿ ಪೂಜಾ ಸಮಾರಂಭದ ಎಲ್ಲ ಕಾರ್ಯಗಳನ್ನೂ ಜರುಗಿಸಿದರು.

ಅನಂತರ ರೋಗವು ಹೆಚ್ಚಾಗಲು ಬೆಳಗಾವಿಗೆ ಹೋಗಿ ಪ್ರಸಿದ್ಧ ವೈದ್ಯರಿಂದಲೂ ಡಾಕ್ಟರರಿಂದಲೂ ಔಷಧೋಪಚಾರಗಳನ್ನು ಹೊಂದಲಾರಂಭಿಸಿದರು. ಶ್ರೀ ಉಕ್ಕಲಿ ಭೀಮನಗೌಡರು ಶ್ರೀ ಕಾಖಂಡಿಕಿ ದುಂಡಪ್ಪನವರು ಇವರ ವ್ಯವಸ್ಥೆಗಾಗಿ ಬಹು ಪ್ರಯತ್ನಿಸಲಾರಂಭಿಸಿದರು. ರೋಗವು ಹೆಚ್ಚಾಗುತ್ತಿದ್ದುದನ್ನು ಶ್ರೀ ಲಿಂಗರಾಜರು ನೋಡಿ ತಾವು ಇನ್ನು ಬದುಕುವುದಿಲ್ಲವೆಂದು ನಿರ್ಧರಿಸಿ ಒಂದು ಕೋಣೆಯಲ್ಲಿ ಗುಪ್ತವಾಗಿ ಮೃತ್ಯು ಪತ್ರವನ್ನು ಬರೆಯಲುಪಕ್ರಮಿಸಿದರು. ಯಾವಾಗಲೂ ಮೃತ್ಯುಪತ್ರದ ವಿಷಯವನ್ನೇ ಯೋಚಿಸುತ್ತ ಕೆಲವು ದಿವಸಗಳಲ್ಲಿ ತಮ್ಮ ಯೋಚನೆಗಳನ್ನು ನಿರ್ಧರಿಸಿ ಬರೆದು ಮೃತ್ಯುಪತ್ರವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಅದಕ್ಕೆ ಮುದ್ರೆಯನ್ನು ಹಾಕಿ ಭದ್ರಗೊಳಿಸಿ ಆಗ ಬೆಳಗಾವಿಯ ಕಲೇಕ್ಟರರಾಗಿದ್ದ ಜಾಕ್ಸನ್ ಸಾಹೇಬರ ಕಡೆಗೆ ತಾವೇ ಹೋಗಿ ಕೊಟ್ಟು ಬಂದರು. ಈ ಮೃತ್ಯುಪತ್ರದ ಸಂಗತಿಯು ಯಾರಿಗೂ ಗೊತ್ತಿರಲಿಲ್ಲ. ಯಾರ ಸಂಗಡಲೂ ಈ ಸಂಬಂಧವಾಗಿ ಆಲೋಚನೆ ಮಾಡಿರಲಿಲ್ಲ.

ಶ್ರೀ ಲಿಂಗರಾಜರ ಆ ಮೃತ್ಯು ಪತ್ರದಲ್ಲಿ ಅವರ ಮರಣರಹಿತವಾದ ಈ ಕೆಳಗಿನ ದಿವ್ಯಚಾರಿತ್ರ್ಯವಿದ್ದಿತು. ಅದು ಮೃತ್ಯು ಪತ್ರವಾಗಿರದೆ ತ್ಯಾಗದ ಜ್ಯೋತಿಯಾಗಿದ್ದಿತು.

ಶ್ರೀ ಲಿಂಗರಾಜರು ಬೆಳಗಾವಿಯಿಂದ ಶಿರಸಂಗಿಗೆ ಬಂದು ಅಲ್ಲಿಗೆ ಜಮಖಂಡಿ, ಮಿರ್ಜಿ, ಸ್ಥಳಗಳ ಪ್ರಸಿದ್ಧ ವೈದ್ಯರನ್ನು ಕರೆಯಿಸಿ ಔಷಧೋಪಚಾರಗಳನ್ನು ಹೊಂದಲಾರಂಭಿಸಿದರು. ಇವರ ಕ್ಷಯರೋಗವೇನೂ ಕಡಿಮೆಯಾಗದೆ ಹೆಚ್ಚುತ್ತಲೇ ಹೋಯಿತು. ಅನಂತರ ಶ್ರಾವಣಮಾಸದಲ್ಲಿ ನವಲಗುಂದಕ್ಕೆ ಹೋದರು. ಅಲ್ಲಿಯೂ ರೋಗವು ಹೆಚ್ಚಾದುದರಿಂದ ತಮ್ಮ ಹಿತಚಿಂತರನ್ನೂ ಸ್ನೇಹಿತರನ್ನೂ ಕರೆಯಿಸಿಕೊಳ್ಳಲಾರಂಭಿಸಿದರು.

ಇವರ ಪರಮಾಪ್ತರೂ ಸ್ನೇಹಿತರೂ ಆದ ರಾ॥ ಬ॥ ಅರಟಾಳ ರುದ್ರಗೌಡರನ್ನೂ ಶ್ರಾವಣಾಂತ್ಯದಲ್ಲಿ ಕರೆಯಿಸಿಕೊಂಡು ಏಕಾಂತವಾಗಿ ತಮ್ಮ ಮೃತ್ಯುಪತ್ರದ ಎಲ್ಲ ಸಂಗತಿಗಳನ್ನು ತಿಳಿಸಿದರು. ಅದನ್ನು ಕೇಳಿ ರಾ॥ ಬ॥ ರುದ್ರಗೌಡರು ಬೆರಗಾದರು. ಆದರೆ ಆ ಸಂಗತಿಯನ್ನು ಮಾತ್ರ ಆಗ ಅವರು ಯಾರಿಗೂ ತಿಳಿಸಲಿಲ್ಲ. ಶ್ರೀ ಲಿಂಗರಾಜರ ನಂಬಿಗಸ್ಥರಾದ ಶ್ರೀ ಕಿತ್ತೂರು ರೇವಣಸಿದ್ದಪ್ಪನವರ ಕಡೆಗೆ ಬೊಕ್ಕಸದ ಕೀಲಿಕೈ ಕೊಟ್ಟರು.

ಭಾದ್ರಪದ ಶುದ್ಧದಲ್ಲಿ ರೋಗವು ವಿಶೇಷವಾಯಿತು. ಚವತಿ ಗುರುವಾರ ದಿವಸ ಶ್ರೀ ಲಿಂಗರಾಜರು ತಮ್ಮ ಜಡದೇಹವನ್ನು ಬಿಟ್ಟರು. ಈ ದುಃಖ ವಾರ್ತೆಯು ತಂತಿಯ ಮೂಲಕ ಎಲ್ಲ ಕಡೆಗೂ ವ್ಯಾಪಿಸಿತು. ರಾ॥ ಬ॥ ರುದ್ರಗೌಡರು, ಶ್ರೀ ಸುಂದರಾಬಾಯಿಯವರೇ ಮೊದಲಾದವರು ಅತ್ಯಂತ ದುಃಖದಿಂದ ಬೆಳಗಾವಿಗೆ ಬಂದು ಮೃತ್ಯು ಪತ್ರವನ್ನು ನೋಡಲು ಕಲೆಕ್ಟರ್ ಸಾಹೇಬರನ್ನು ಪ್ರಾರ್ಥಿಸಿಕೊಂಡರು. ಅದನ್ನು ನೋಡಲು ಬಹು ಜನರು ಉತ್ಸುಕತೆಯುಳ್ಳವರಾಗಿದ್ದರು. ತಮ್ಮ ಬಂಧು ಬಾಂಧವರಲ್ಲಿಯೇ ಯಾರನ್ನಾದರೂ ದತ್ತಕಮಗನನ್ನು ಮಾಡಿ ಕೊಂಡಿರಬೇಕೆಂದೇ ಬಹು ಜನರು ಯೋಚಿಸಿದ್ದರು. ಶ್ರೀ ಲಿಂಗರಾಜರು ವೀರಶೈವ ಸಮಾಜದ ಅನೇಕರನ್ನು ತಮ್ಮಮಕ್ಕಳನ್ನಾಗಿ ಮಾಡಿಕೊಂಡಿರುವ ಆ ಮೃತ್ಯುಪತ್ರವನ್ನು ನೋಡಿ ಅನೇಕರು ಸಂತೋಷಪಟ್ಟರು. ಕೆಲವರು ದುಃಖಿಸಿದರು.

ಮೃತ್ಯುಪತ್ರವು

(ಮರಾಠಿ ಭಾಷೆಯಲ್ಲಿ ಬರೆಯಲ್ಪಟ್ಟುದರ ಭಾಷಾಂತರ)

ನಾನು, ಲಿಂಗಪ್ಪ ಜಾಯಪ್ಪ ದೇಸಾಯಿ ಮತ್ತು ಸರದೇಸಾಯಿ ನಾಡಗೌಡ, ಸುಭೆ ತೊರಗಲ್ಲ, ಪರಗಣೆ ಕೊಕಟನೂರ, ಸಂಸ್ಥಾನ ನವಲಗುಂದ, ಇನಾಮ ಶಿರಸಂಗಿ ಮುಂತಾದ ಹತ್ತು ಗ್ರಾಮಗಳು. ಈ ದಿವಸ ಇರುವದು, ಬೆಳಗಾಂವ, ತಾ. ೬ನೆಯ ೧೯೦೬ನೇ ಇಸವಿ ದಿವಸ ಬರೆದಿಡುವ ಮೃತ್ಯುಪತ್ರ ಏನೆಂದರೆ :

೧. ಈ ತಾರೀಖಿಗೆ ನನ್ನ ಹೊಟ್ಟೆಯಲ್ಲಿ ಯಾವ ಸಂತತಿಯೂ ಇರುವುದಿಲ್ಲ. ಒಬ್ಬ ಹೆಂಡತಿಯು ಮತ್ತು ನಾನು ಇಬ್ಬರೇ ಇದ್ದೇವೆ. ಇದಲ್ಲದೇ ಸಂಸ್ಥಾನದ ಸಂಬಂಧದ ಬೇರೆ ಪಾಲುಗಾರರು ಯಾರೂ ಇಲ್ಲ. ನಾನು ಸ್ವತಃ ಎರಡನೇ ಮನೆತನದವನಿದ್ದು ಸಂಸ್ಥಾನಕ್ಕೆ ದತ್ತಕ ಆಗಿರುವೆನು. ಒಂದು ವೇಳೆ ಇನ್ನು ಮೇಲೆ ನನಗೆ ಔರಸೆ ಸಂತತಿ ಹುಡುಗ ಅಥವಾ ಹುಡಿಗೆ ಆದರೆ ಅವು ಅಥವಾ ಆಕೆಯು ಸಂಸ್ಥಾನದ ಪೂರ್ಣ ಒಡೆಯರಾಗುವರು. ಗಂಡು ಹೆಣ್ಣು ಎರಡೂ ಆದರೆ ಗಂಡುಮಗನು ಪೂರ್ಣ ಒಡೆಯನಾಗುವನು. ಆದರೆ ಹೆಣ್ಣು ಮಗಳಿಗೆ ಆಕೆಯ ವಂಶ ಇರುವವರೆಗೆ

ಆಕೆಗೆ ಪ್ರತಿವರ್ಷ ಐದು ಸಾವಿರ ರೂಪಾಯಿಗಳ ಸ್ಥಾವರ ಉತ್ಪನ್ನ ಭಾಗಮಾಡಿ ಕೊಡಬೇಕು. ಅಕೆಯ ವಂಶವು ನಷ್ಟವಾದರೆ ಈ ಆಸ್ತಿ ಸಂಸ್ಥಾನಕ್ಕೆ ತಿರುಗಿ ಬರಬೇಕು. ಮತ್ತು ಗಂಡು ಮಗನ ವಂಶವು ನಷ್ಟವಾದರೆ ಹೆಣ್ಣುಮಗಳ ಸಂತತಿಯಲ್ಲಿ ಒಬ್ಬ ಹುಡುಗನನ್ನು ದತ್ತಕ ಮಾಡಿಕೊಂಡು ಸಂಸ್ಥಾನಕ್ಕೆ ಭಾಧ್ಯಸ್ಥನನ್ನಾಗಿ ಮಾಡಬೇಕು. ಮಗನ ಅಥವಾ ಮಗಳ ಅಜ್ಞಾನತ್ವದಲ್ಲಿ ಮೇ॥ ಕಲೆಕ್ಟರ ಸಾಹೇಬ ಇವರು ಪ್ರತಿ ತಿಂಗಳಿಗೆ ೧೦೦ ಸಂಬಳದ ಒಬ್ಬ ಸಂಭಾವಿತ ಲಿಂಗಾಯತ ಕಾರಭಾರಿಯನ್ನಿಟ್ಟು ಮೈನರ್ (ಅಲ್ಪ ವಯಸ್ಸಿನವರು) ವಯಸ್ಸಿಗೆ ಬರುವವರೆಗೆ ಸಂಸ್ಥಾನದ ಕಾರಭಾರವನ್ನು ಸಾಗಿಸಬೇಕು. ಐದು ವರ್ಷದ ತರುವಾಯ ಹುಡುಗರನ್ನು ಹೆಂಡತಿಯ ಹತ್ತರ ಇಡಬಾರದು. ಕೂಡಲೇ ಕಲೆಕ್ಟರ ಸಾಹೇಬರು ತಮ್ಮ ವಶದಲ್ಲಿ ತೆಗೆದುಕೊಂಡು, ಒಬ್ಬ ಒಳ್ಳೆಯ ಲಿಂಗಾಯತ ಮನುಷ್ಯನನ್ನು ಸಂರಕ್ಷಣೆ ಇಟ್ಟು ಪಾಲನ ಮಾಡಬೇಕು. ಆ ಹುಡುಗ ಮತ್ತು ಹುಡಿಗೆಯ ವಿದ್ಯಾಭ್ಯಾಸ ಬಹಳ ಉತ್ತಮ ರೀತಿಯಿಂದ ಮಾಡಿಸಬೇಕು. ಮೊದಲಿನಿಂದ ಗ್ರ್ಯಾಜುಯೇಟ್ (ಇಂಗ್ಲೀಷ್ ಕಲಿತ ಪದವೀಧರರು) ಶಿಕ್ಷರನ್ನೇನಿಯಮಿಸಬೇಕು. ಆತನು ಕೊಂಕಣಸ್ಥ ಬ್ರಾಹ್ಮಣನಾಗಿರಬೇಕು. ಹುಡುಗರ ಮಾನ ಮರ್ಯಾದೆಗಳನ್ನು ಚೆನ್ನಾಗಿ ಇಡಬೇಕು. ಹುಡುಗನು ಸುಜ್ಞಾನನಾಗುವವರೆಗೆ ಅವನ ನಡೆನುಡಿ ರೀತಿಗಳ ಕಡೆಗೆ ಲಕ್ಷಗೊಡಬೇಕು. ವಿದ್ಯಾಭ್ಯಾಸಕ್ಕಾಗಲೀ ಬೇರೆ ಯಾವ ಕಾರಣದಿಂದಲಾಗಲೀ ಪರದೇಶಕ್ಕೆ ಕಳಸಲೇಬಾರದು. ಹಿಂದುಸ್ಥಾನದಲ್ಲಿ ಬೇಕಾದಲ್ಲಿ ಇಡಲಿಕ್ಕೆ ಅಡ್ಡಿಯಿಲ್ಲ. ಆದರೆ ಅವರ ಜಾತಿ ಪದ್ಧತಿಗನುಸರಿಸಿ ಯಾವಾಗಲೂ ಅವರ ವಿಷಯದಲ್ಲಿ ವರ್ತಿಸುತ್ತಿರಬೇಕು.

೨. ಹೆಂಡತಿಗೆ ಪ್ರತಿ ತಿಂಗಳಿಗೆ ನೂರು ರೂಪಾಯಿ ಹೊಟ್ಟೆಯ ಖರ್ಚಿಗಾಗಿ ಕೊಡಬೇಕು. ಅಲ್ಲದೇ ನೌಕರ ಚಾಕರರನ್ನು ಸಂಸ್ಥಾನದಿಂದ ಕೊಡಬೇಕು. ಅವರು ಮುಪ್ಪಿನವರಿರಬೇಕು. ಮತ್ತು ಅವರು ಮೇ॥ ಕಲೆಕ್ಟರ್ ಸಾಹೇಬರ ಮನಗಾಣಿಕೆಯವರಿರಬೇಕು. ಹೆಂಡತಿಗೆ ಬೇಕಾದ ನೌಕರರನ್ನು ನೇಮಿಸಬಾರದು. ಆಕೆಗೆ ಒಂದು ಸಾರ್ವಟ ಅಥವಾ ಕುದುರೆಯಗಾಡಿ, ಒಬ್ಬಸ್ವಾರ, ನಾಲ್ಕುಜನ ಶಿಫಾಯರು, ಇಬ್ಬರು ಹುಜುರೆ, ಒಬ್ಬ ದಾಶಿ, ಒಬ್ಬ ಕಾರಕೂನ, ಮೂವರು ಅಡಿಗೆಯವರು ಈ ಪ್ರಕಾರ ಸಂಹಜಾಮ ಕೊಡಬೇಕು. ಅವರ ಸಂಬಳ ಸಂಸ್ಥಾನದೊಳಗಿಂದ ಬೇರೆಯೇ ಅವರದವರಿಗೆ ಮುಟ್ಟಿಸಬೇಕು. ಅವಳು ಯಾತ್ರೆ ಮಾಡಬಯಸಿದರೆ ಯೋಗ್ಯ ವೆಚ್ಚಕ್ಕಾಗಿ ಕೊಡಬೇಕು. ಅವರ ಮೈಮೇಲೆ ಕೆಲವು ಆಭರಣಗಳಿರುವುವು. ಅವುಗಳನ್ನು ಆವಳಿಗೆ ಸ್ತ್ರೀ ಧನವೆಂದು ಕೊಟ್ಟಿದ್ದೇನೆ. ಇದಲ್ಲದೇ ಬಳಸಲಿಕ್ಕೆ ಪಾತ್ರೆ ಮೊದಲಾದ ಸಾಮಾನು ಅವಶ್ಯವಿದ್ದಷ್ಟೇ ಕೊಡಬೇಕು. ಹೆಚ್ಚಿಗೆ ಕೊಡಬಾರದು. ಉಳಿದ ಯಾವತ್ತೂ ಜಂಗಮಸೊತ್ತನ್ನು ಮೇ॥ ಕಲೆಕ್ಟರ ಸಾಹೇಬರು ತಮ್ಮ ವಶದಲ್ಲಿ ತೆಗೆದುಕೊಂಡು ನಾಶವಾಗತಕ್ಕ ಪದಾರ್ಥಗಳನ್ನು ಮಾರಿ ಉಳಿದದ್ದನ್ನು ಮೈನರ್ ವಯಸ್ಸಿಗೆ ಬರುವವರೆಗೆ ಇಟ್ಟು ಅವರಿಗೆ ಒಪ್ಪಿಸಬೇಕು.

೩. ಸಂಸ್ಥಾನದ ಆಶ್ರಯದಲ್ಲಿ ಇನಾಮದಾರರು ಬಹಳ ಇದ್ದು ಅವರ ನೌಕರಿ ಸರಿಯಾಗಿ ಸಾಗುವುದಿಲ್ಲ. ಅದಕ್ಕೆ ಅದರ ವಿಚಾರಮಾಡಿ ಅವರವರ ಲೇಖೀ ಆಧಾರಗಳಂತೆ ನಡೆಯಿಸಬೇಕು. ನೌಕರಿ ಇನಾಮು ಇದ್ದು ಅವರ ಕಡೆಯಿಂದ ಭರಜೂರಿ (ಅರ್ಧ ತೆರಿಗೆ) ತಕ್ಕೊಳ್ಳಬೇಕು. ಒಂದು ವೇಳೆ ಅವರು ಒಪ್ಪದಿದ್ದರೆ ರೀತಿಯಂತೆ ಭೂಮಿ ಬಿಡಿಸಿಕೊಳ್ಳಬೇಕು.

೪. ರೈತರ ಸಂಗಡ ಬಹಳ ವಾದವಿವಾದಮಾಡಿ ಕಚ್ಚಾ ತೆರಿಗೆಯನ್ನು ಕೂಡ್ರಿಸಿರುತ್ತದೆ. ಮುಂದೆ ಕಾಲಕಾಲಕ್ಕೆ ಯೋಗ್ಯ ತೆರಿಗೆಯನ್ನು ಕೂಡ್ರಿಸಿ ತಕ್ಕೊಳ್ಳುತ್ತ ಹೋಗಬೇಕು. (ರಿ॥ ತರ್ಮ ಸರಕಾರದ ಮುಖಾಂತರ ಮಾಡಿಸಬಾರದು)

೫. ಈಗ ಕಾಗದ ಪತ್ರ ಖಜೀನಿ ಮತ್ತು ಇತರ ಎಲ್ಲ ಸರಕು ರಾ॥ ನರಸಿಂಹ ರಾಮಚಂದ್ರ ಫಡಣೀಸ ಅವರ ವಶದಲ್ಲಿರುವದು. ಆದರೂ ಬಹುಶಃ ಜಂಗಮಸೊತ್ತಿನ ಪಟ್ಟಿ ತಯಾರಿಸಿರುವೆನು. ಅದರಂತೆ ಅವರ ಕಡೆಯಿಂದ ಒಪ್ಪಿಸಿಕೊಳ್ಳಬೇಕು. ಜಡ ಜವಾಹೀರ ಮತ್ತು ಬಂಗಾರ ಬೆಳ್ಳಿಯ ಅಲಂಕಾರಗಳ ಪೆಟ್ಟಿಗೆಗಳು ಎರಡೂ ತಿಜೋರಿಗಳೊಳಗೆ ಇರುವವು. ಆದರ ಬೀಗದ ಕೈ ಯಾವಾಗಲೂ ನನ್ನ ಕಡೆಗೆ ಇರುವದು. ಒಂದು ವೇಳೆ ನರಸಿಂಹರಾಯನ ವಶದಲ್ಲಿಯೂ ಇರಬಹುದು. ಕಮತದ ಸಂಬಂಧದ ಯಾವತ್ತೂ ಎತ್ತುಗಳನ್ನೂ ಸಾಮಾನುಗಳನ್ನೂ ಮಾರಿ ಕಮತದ ಲಾವಣೀ ಕೊಡಬೇಕು. ಶಿರಸಂಗಿ ಮತ್ತು ಹೊಸಬಾಳ ಹದ್ದಿಯಲ್ಲಿ ಎರಡು ಕೆರೆಗಳಿವೆ. ಅವು ಕೆಟ್ಟಭಾಗವನ್ನು ಪ್ರತಿ ವರ್ಷ ಸರಿಮಾಡಿಸುತ್ತಿರಬೇಕು. ಅವುಗಳ ಕೆಳಗಿನ ಭೂಮಿ ಸುಧಾರಿಸಿ ಲಾವಣೀ ಮಾಡಬೇಕು. ಪ್ರತಿವರ್ಷ ಜಮಾಬಂದಿ ತಯಾರಿಸಿ ಮೇ॥ ಕಲೆಕ್ಟರ್ ಸಾಹೇಬರು ಸಹಿ ಮಾಡುತ್ತಿರಬೇಕು. ಶಿರಸಂಗಿಯ ಖಜಾನೆಯಲ್ಲಿ ಐದು ಸಾವಿರಕ್ಕಿಂತ ಹೆಚ್ಚು ಶಿಲಕು ಇಡಬಾರದು. ಅದನ್ನು ಬ್ಯಾಂಕಿನಲ್ಲಿ ಇಡಬೇಕು. ಈಗಿದ್ದ ನೌಕರರಲ್ಲಿ ಅವಶ್ಯವಿದ್ದ, ಒಳ್ಳೇ ನೌಕರರನ್ನು ಇಟ್ಟುಕೊಂಡು ಉಳಿದವರನ್ನು ತೆಗೆಯಬೇಕು.

೬. ರಾಯನಗೌಡ ಇಂಗಳೇಶ್ವರ ಇವರ ಹೆಸರಿನಿಂದ ವಿಜಾಪುರ ಶಿರಸಂಗಿಗಳೊಳಗೆ ಅಂಗಡಿಗಳು ಅವೆ. ಅವುಗಳಲ್ಲಿ ನಮ್ಮ ಹತ್ತು ಸಾವಿರ ರೂಪಾಯಿಗಳಿವೆ. ಅವುಗಳ ಬಡ್ಡಿ ಸಹಿತ ತೆಗೆದುಕೊಂಡು ರಾ॥ ಮಲ್ಲಪ್ಪಾ ಕರಿಬಸಪ್ಪಾ ಮದ್ಲಿ ಶಿಗ್ಗಲಿ ಇವನು ವಯಸ್ಸಿಗೆ ಬಂದನಂತರ ಕೊಡಬೇಕು. ಮಾತೋಶ್ರೀ ಗಂಗಾಬಾಯಿ ಗೌಡತಿ ಬೋರುಟಗಿ ಇವರು ಇಪ್ಪತ್ತು ವರ್ಷಗಳಿಂದ ನನ್ನ ಹತ್ತಿರ ಇದ್ದಾರೆ. ಅವರಿಗೆ ಒಂದು ಸೇರು ಬಂಗಾರ ಕೊಟ್ಟು ಅವರು ಜೀವಿಸಿರು ವವರೆಗೂ ಪ್ರತಿ ತಿಂಗಳಿಗೆ ೮ ರೂ. ಗಳನ್ನು ಅವರು ಇದ್ದಲ್ಲಿಗೆ ಮುಟ್ಟಿಸಬೇಕು. ಅವರು ಕೇಳುವ ಪ್ರಸಂಗ ತರಗೊಡಬಾರದು. ಮಾ. ಬಸವ್ವಾ ಇವರಿಗೆ ೬೦ ರೂ. ವರ್ಷಾಸನವನ್ನು ಅವರು ಜೀವಿಸುವವರೆಗೂ ಕೊಡಬೇಕು. ರಾ॥ ಕರಿಬಸಪ್ಪಾ ಮತ್ತು ಶಿವಬಸಪ್ಪಾ ತಂದಿ ಘೂಳಪ್ಪಾ ಮದ್ಲಿ ಶಿಗ್ಗಲಿ ಈ ಇಬ್ಬರಿಗೆ ಐದು ಸಾವಿರ ರೂಪಾಯಿ ಕೊಡಬೇಕು. ಸೌ. ಮರಿಯೆಲ್ಲವ್ವಾ ಮೂಲಿಮನಿ ಶಿಗ್ಗಲಿ ಇವರಿಗೆ ೫ ಸಾವಿರ ರೂ. ರಾ॥ ಬಸಪ್ಪಾ ನಿಂಗಪ್ಪಾ ಶಿಗ್ಗಲಿ ಬೆಳ್ಳೇರಿ ಇವರಿಗೆ ೨ ಸಾವಿರ ರೂಪಾಯಿ ಕೊಡಬೇಕು. ಇವೆಲ್ಲವನ್ನು ಕೊಟ್ಟು ಮೈನರ್ ವಯಸ್ಸಿಗೆ ಬಂದು ಅಧಿಕಾರಿಗಳಾಗುವ ಕಾಲಕಾಲಕ್ಕೆ ಇರುವ ಎಲ್ಲ ಶಿಲ್ಲುಕು ಹಣವನ್ನು ಲಿಂಗಾಯತ ವಿದ್ಯಾಭಿವೃದ್ಧಿ ಫಂಡಿಗೆ ಕೊಟ್ಟು ಬಿಡಬೇಕು. ಮೈನರ್ ವಯಸ್ಸಿಗೆ ಬಂದಾಗ ಏನೂ ಶಿಲಕು ಕೊಡಬಾರದು. ಆದರೆ ಸಂಸ್ಥಾನದ ವ್ಯವಸ್ಥೆಯನ್ನು ಚೆನ್ನಾಗಿ ಇಡಬೇಕು. ಮೈನರ್ ಕಾರಭಾರ ಮಾಡುವದಕ್ಕೆ ಯೋಗ್ಯರಾಗುವವರೆಗೆ ಅವರಿಗೆ ಅಧಿಕಾರ ಕೊಡಬಾರದು. ಅವರ ಲಗ್ನ ಮುಂತಾದ ಎಲ್ಲ ಕೆಲಸಗಳನ್ನು ಉತ್ತಮರೀತಿಯಿಂದ ಮಾಡಬೇಕು. ಈ ಸಂಬಂಧದಲ್ಲಿ ಹೆಂಡತಿಯೂ ಬದುಕಿದ್ದರೆ ಅವಳ ಅಭಿಪ್ರಾಯ ಕೇಳಬೇಕು. ಇಲ್ಲದಿದ್ದರೆ ನಮ್ಮ ಆಪ್ತರಾದ ಉಕ್ಕಲಿ, ತಿಕೋಟ, ಇಂಗಳೇಶ್ವರ ಗೌಡರನ್ನು ವಿಚಾರಿಸಿ ಅವರ ಒಪ್ಪಿಗೆಯಂತೆ ಕನ್ಯಾ ಅಥವಾ ವರ ಗೊತ್ತು ಮಾಡಬೇಕು. ಮೇ॥ ಕಲೆಕ್ಟರ್ ಸಾಹೇಬರು ಲಗ್ನಕ್ಕೆ ಅವಶ್ಯವಾದ ವೆಚ್ಚವನ್ನು ಮಾಡಬೇಕು.

೭. ತಲ್ಲೂರಕರ ಇವರ ಆಭರಣಗಳು ನಮ್ಮ ಕಡೆಗೆ ಇರುವವು. ಅವುಗಳನ್ನು ಮೇ॥ ಕಲೆಕ್ಟರ ಸಾಹೇಬರು ಪಟ್ಟಿಯ ಪ್ರಕಾರ ತಮ್ಮ ವಶದಲ್ಲಿ ತೆಗೆದುಕೊಂಡು ಇಡಬೇಕು. ಶಿವಮೂರ್ತಿ ರಾ॥ ಸಿದ್ಧರಾಮಯ್ಯಾ ಗದಿಗೆಯ್ಯಾ ಹಿರೇಮಠ ಕೊಲ್ಲಾಪುರ ಇವರ ಆಭರಣಗಳ ಪೆಟ್ಟಿಗೆ ಇರುವುದು ಆದರೆ ಪಟ್ಟಿ ಇಲ್ಲ. ಒಳಗೆ ಏನೇನಿರುವುವೋ ಗೊತ್ತಿಲ್ಲ. ಇಲ್ಲಿಯವರೆಗೆ ಅವನ ಮತ್ತು ಅವನ ದತ್ತಕ ತಾಯಿಯ ಕಲಹದ ಸಲುವಾಗಿ ನಾನು ಅವರಿಗೆ ಕೊಟ್ಟಿಲ್ಲ. ಆ ಕಲಹ ತೀರಿಸಿಕೊಂಡು ಇಬ್ಬರೂ ಬಂದು ಬೇಡಿದಾಗ ಅವರ ಪಾವತಿ ತೆಗೆದುಕೊಂಡು ಕೊಡಬೇಕು. ಅಥವಾ ತಾಯಿಯ ಮರಣದ ನಂತರ ಮಗನಿಗೆ ಕೊಡಬೇಕು. ರಾ. ಮಹಾದೇವ ಎಲ್ಲಪ್ಪಾ ಗವತವಾಲೆ ಬೆಳಗಾವ ಇವನು ನನಗೆ ಬಹಳ ಉಪಯೋಗ ಬಿದ್ದಿದ್ದಾನೆ. ಅದರಿಂದ ಅವನಿಗೆ ೨ ಸಾವಿರ ರೂ. ಗಳನ್ನು ಎಲ್ಲರಿಗಿಂತ ಮೊದಲು ಕೊಡಬೇಕು. ಇದಲ್ಲದೆ ಬೆಳಗಾವ ಬಂಗಲೆಯ ವ್ಯವಸ್ಥೆಯನ್ನು ಅವನು ಜೀವಿಸುವವರೆಗೂ ಅವನ ಕಡೆಗಿಟ್ಟು ಪ್ರತಿ ತಿಂಗಳ ೧೨ ರೂ. ಸಂಬಳ ಕೊಡುತ್ತ ಹೋಗಬೇಕು.

೮. ಸಂಸ್ಥಾನದ ಮನೆಗಳು ಊರೂರಿಗೆ ಬಹಳ ಅವೆ. ಅವುಗಳನ್ನು ಒಳ್ಳೇ ಹೊತ್ತು ನೋಡಿ ಮಾರಿಬಿಡಬೇಕು. ಸವದತ್ತಿ ಹೊಂಗಲಗಳೊಳಗಿನ ಕಮಠ ಮನೆಗಳನ್ನೂ ಶಿರಸಂಗಿ ನವಲಗುಂದಗಳೊಳಗಿನ ಕಿಲ್ಲೆ ಮಂದಿರಗಳನ್ನೂ ಬೆಳಗಾಂವ ಬಂಗಲೆಯನ್ನೂ ಮಾತ್ರ ಮೈನರ್ ವಯಸ್ಸಿಗೆ ಬರುವವರೆಗೆ ಚೆನ್ನಾಗಿ ಇಟ್ಟು ಅವರಿಗೆ ಒಪ್ಪಿಸಬೇಕು. ಸವದತ್ತಿಯಲ್ಲಿರುವ ಸೌ ಸಾವಕ್ಕಾ ಗಂಡ ದೊಡ್ಡಪ್ಪಾ ದಾನಗೊಂಡ ಇವಳಿಗೆ ಸವದತ್ತಿಯೊಳಗಿನ ಸುಮಾರು ೨೮ ಎಕರೆಯ ಗುರುಬಾಳದವರ ಎಂಬ ಹೊಲಾಕೊಟ್ಟಿದೆ. ಅದನ್ನು ಅವಳಿಗೆ ಏನೂ ತೆಗೆದುಕೊಳ್ಳದೆ ಖರೀದಿ ಮಾಡಿ ಕೊಡಬೇಕು. ಸವದತ್ತಿಯಲ್ಲಿರುವ ನಿಂಗಪ್ಪಾ, ಮತ್ತು ಭರಮಪ್ಪಾ ಮುತಗೊಂಡ ಇವರ ಮನೆ, ಸರಕು ಮತ್ತು ಭೂಮಿ ನಮ್ಮ ಕಡೆಗೆ ಖರೀದಿ ಅವೆ, ಒಂದು ವೇಳೆ ಅವರು ಗಂಟು ಮತ್ತು ಬಡ್ಡಿ ಕೊಟ್ಟರೆ ಅವರ ಮಕ್ಕಳ ಹೆಸರಿನಿಂದ ತಿರುಗಿ ಖರೀದಿ ಮಾಡಿಕೊಡಬೇಕು. ಅವರಿಗೆ ಕೊಡಬಾರದು.

ಈ ಯಾವತ್ತೂ ವ್ಯವಸ್ಥೆಯನ್ನು ನನಗೆ ಔರಸ ಸಂತತಿಯಾದರೆ ಮಾಡತಕ್ಕದ್ದದೆ. ಇಲ್ಲದಿದ್ದರೆ ನನ್ನ ಯಾವತ್ತೂ ಸ್ಥಾವರ ಮತ್ತು ಜಂಗಮ ಆಸ್ತಿಯನ್ನು ನಾನು ಧರ್ಮಾರ್ಥ ಕೊಡುವ ಸಂಕಲ್ಪ ಮಾಡಿದ್ದೇನೆ. ನಾನು ದತ್ತಕ ತಕ್ಕೊಳ್ಳುವುದಿಲ್ಲ. ಕುಟುಂಬಕ್ಕೆ ಅಥವಾ ಬೇರೆ ಯಾರಿಗಾದರೂ ದತ್ತಕ ತೆಗೆದುಕೊಳ್ಳುವ ಅಧಿಕಾರವನ್ನು ಕೊಟ್ಟಿಲ್ಲ. ಮತ್ತು ಕೊಡುವುದಿಲ್ಲ. ಒಂದುವೇಳೆ ಯಾರಾದರೂ ದತ್ತಕ ಮಾಡಿಕೊಂಡು ನನ್ನ ಒಪ್ಪಿಗೆ ಇತ್ತೆಂದು ಹೇಳಿದರೆ ಅದು ಸುಳ್ಳು ಎಂದು ತಿಳಿಯಬೇಕು. ಮತ್ತು ನಾನು ಕೆಳಗೆ ಬರೆದ ಪ್ರಕಾರ ಸೊತ್ತಿನ ವ್ಯವಸ್ಥೆಯನ್ನು ಮಾಡಬೇಕು.

೯. ಮೆ. ಕಲೆಕ್ಟರ ಸಾಹೇಬ ಬೆಳಗಾಂವ ಇವರು ನನ್ನ ಯಾವತ್ತೂ ಸ್ಥಾವರ ಮತ್ತು ಜಂಗಮ ಆಸ್ತಿಗಳನ್ನು ತಮ್ಮ ವಶದಲ್ಲಿ ತೆಗೆದುಕೊಂಡು ನಾನು ಮೇಲೆ ೨ ರಿಂದ ೮ ಪೂರ್ಣ ಕಲಮುಗಳಲ್ಲಿ ಬರೆದ ಪ್ರಕಾರ ಎಲ್ಲ ವ್ಯವಸ್ಥೆ ಮಾಡಿ, ಒಂದು ಲಿಂಗಾಯತ ಜನರ ಕಮಿಟಿ ಸ್ಥಾಪಿಸಿ ತಾವು ಅದರಲ್ಲಿ ಅಧ್ಯಕ್ಷರಾಗಬೇಕು. ಅದಕ್ಕೆ ಸರಕಾರದವರು ದಯಮಾಡಿ ಒಪ್ಪಿಗೆಯನ್ನು ಕೊಡಬೇಕು. ಇದರಲ್ಲಿ

೧. ರಾವಬಹಾದ್ದೂರ ರುದ್ರಗೌಡ ಅರಟಾಳ

೨. ರಾವಸಾಹೇಬ ಸತ್ಯಪ್ಪ ಘಾಳಿ

೩. ರಾವಸಾಹೇಬ ರೇವಣಸಿದ್ದಪ್ಪಾ ಕಿತ್ತೂರ

೪. ರಾ. ರಾ. ಭೀಮನಗೌಡ ಪಾಟೀಲ ಉಕ್ಕಲಿ

೫. ರಾ. ರಾ. ರಾಯನಗೌಡಾ ಪಾಟೀಲ ಇಂಗಳೇಶ್ವರ

೬. ರಾ. ರಾ. ತಿಮ್ಮನಗೌಡ ಪಾಟೀಲ ತಿಕೋಟ

೭. ರಾ. ರಾ. ಮಲ್ಲಿಕಾರ್ಜುನಪ್ಪಾ ರೈನಾಪುರ

ಇವರನ್ನು ಸಭಾಸದರನ್ನಾಗಿ ನಿಯಮಿಸಿಕೊಳ್ಳಬೇಕು. ಇವರಲ್ಲಿ ಯಾರಾದರೂ ತೀರಿದರೆ ಉಳಿದ ಮೇಂಬರರ ಒಪ್ಪಿಗೆಯಂತೆ ಹೊಸ ಮೇಂಬರರನ್ನು ನಿಯಮಿಸಿಕೊಂಡು ಮುಂದೆ ಬರೆದ ಪ್ರಕಾರ ಕೆಲಸ ನಡೆಯಿಸಬೇಕು.

೧೦. ಯಾವತ್ತು ಜಂಗಮ ಆಸ್ತಿಯನ್ನು ಮೇಲೆ ಬರದಂತೆ ವ್ಯವಸ್ಥೆಮಾಡಿ ಉಳಿದದ್ದನ್ನು ಮಾರಿ ಹಣ ಕೊಡಿಸಬೇಕು. ಪ್ರತಿವರ್ಷ ಸಂಸ್ಥಾನದ ಖರ್ಚು ವಜಾಹೋಗಿ ಉಳಿದ ಹಣವನ್ನು ಲಿಂಗಾಯತ ಜನರ ವಿದ್ಯಾಭಿವೃದ್ದಿಗಾಗಿ ಬಹುಮತದಂತೆ ಖರ್ಚು ಮಾಡಬೇಕು. ನನ್ನ ಮನಸ್ಸಿನಲ್ಲಿ ಲಿಂಗಾಯತ ಜನರಿಗೆ ಒಕ್ಕಲುತನ ಕಲಾಕೌಶಲ್ಯ ಕಲಿಸಬೇಕೆಂದು ಬಹಳವಿದೆ. ಆದ್ದರಿಂದ ಅತ್ತಕಡಿಗೆ ಆದಷ್ಟು ಪ್ರಯತ್ನ ಮಾಡಬೇಕು. ಸ್ವಜಾತಿಯ ಅಂದರೆ ಕುಡುಒಕ್ಕಲಿಗ ಜಾತಿಯ ಜನರು ಕಲಿಯುವವರಿದ್ದರೆ ಮೊದಲು ಅವರಿಗೆ ಸಹಾಯಮಾಡಬೇಕು. ಆ ಮೇಲೆ ಉಳಿದ ಲಿಂಗಾಯತರಿಗೆ ಮಾಡಬೇಕು.

೧೧. ಈ ಸಂಸ್ಥೆಗೆ ಸರದೇಸಾಯಿ ನವಲಗುಂದ ಇವರ ಹೆಸರು ಕೊಡಬೇಕು. ಉಳಿದ ಸ್ಥಾವರ ಆಸ್ತಿಯ ಖಾತೆಗಳಿಗೆ ಸಂಸ್ಥಾನದ ಹೆಸರೇ ಬರೆದು ವ್ಯವಸ್ಥಾಪಕ ಪಂಚ ಮತ್ತು ಪ್ರೆಸಿಡೆಂಟ (ಅಧ್ಯಕ್ಷ) ಎಂದು ಬರೆಯಬೇಕು. ಯಾವತ್ತು ವ್ಯವಸ್ಥೆಯನ್ನು ಅಧ್ಯಕ್ಷರೇ ಮಾಡಬೇಕು. ಯಾವಾಗಲೂ ಮೇ॥ ಕಲೆಕ್ಟರ ಸಾಹೇಬ ಬೆಳಗಾಂವ ಇವರೇ ಅಧ್ಯಕ್ಷರಾಗಿರಬೇಕು. ಈ ಕೆಲಸದಲ್ಲಿ ನೌಕರರು ಮುಂತಾದವರೆಲ್ಲರೂ ಲಿಂಗಾಯತರೇ ಆಗಿರಬೇಕು. ಬ್ರಾಹ್ಮಣರು ಅಥವಾ ಬೇರೆ ಜಾತಿಯ ಜನರು ಇರಕೂಡದು. ಸಂಸ್ಥಾನದ ಆಯಾ ಉತ್ಪನ್ನ ಬೆಳೆಯಿಸುವುದರಲ್ಲಿ ಅಧ್ಯಕ್ಷರು ಲಕ್ಷಗೊಡಬೇಕು. ಎಲ್ಲ ವ್ಯವಸ್ಥೆಯನ್ನು ನಾನು ಮೇಲೆ ಗೊತ್ತು ಮಾಡಿದಂತೆಯೇ ಮಾಡಬೇಕು. ಒಂದು ವೇಳೆ ಸಭಾಸದರು ಉತ್ಪನ್ನ ಬೆಳೆಯಿಸುವಲ್ಲಿ ಏನು ಅಭಿಪ್ರಾಯ ಕೊಡುತ್ತಾರೆಂಬುದನ್ನು ಅಧ್ಯಕ್ಷರೇ ವಿಚಾರಮಾಡಬೇಕು. ಸಭಾಸದರು ಸಂಸ್ಥಾನದ ಕೆಲಸದಲ್ಲಿ ಕೈ ಹಾಕಬಾರದು. ವೇಳೆ ವೇಳೆಗೆ ತಮ್ಮ ಮತವನ್ನು ಮಾತ್ರ ಕೊಡಬೇಕು.

೧೨. ಈ ಮೃತ್ಯು ಪತ್ರದ ಏಗ್ಜಿಕ್ಯೂಶನ್ ಮೆ॥ ಕಲೆಕ್ಟರ ಸಾಹೇಬ ಬೆಳಗಾಂವ ಇವರು ಕಟ್ಟಳೆಯಂತೆ ಮಾಡಬೇಕು.

ಈ ಪ್ರಕಾರ ೧೨ ಕಲಮಿನ ಮೃತ್ಯು ಪತ್ರವನ್ನು ನಾನು ಸ್ವತಃ ಪೂರ್ಣ ಪ್ರಜ್ಞೆಯಿಂದಲೂ ಆತ್ಮ ಸಂತೋಷದಿಂದಲೂ ಬರೆದು ಇಟ್ಟಿದ್ದೇನೆ. ತಾರೀಖು. ೬ನೇ ಜೂನ್ ೧೯೦೬ನೇ ಇಸ್ವಿ

ಬೆಳಗಾಂವ (ಸಹಿ ಇಂಗ್ರೇಜಿ)
ತಾ. ೬-೬-೧೯೦೬ ಸರದೇಸಾಯಿ

ನವಲಗುಂದ, ಮುಂಬೈ ಸರಕಾರದವರು ತಾ. ೩೧-೫-೨೮ನೆಯ ದಿವಸ

ಪ್ರಕಟಿಸಿದ ಪ್ರಕಟನೆ

ನಂ. ೩೭೬೮ ಮುಂಬಯಿ ಕ್ಯಾಸ್ಟಲ್ ತಾ. ೨೮-೪-೧೯೨೮

ದಾನಧರ್ಮ ಶಾಸನ (The Charitable Endowments Act)೧೮೯೦

ಶಿರಸಂಗಿ - ನವಲಗುಂದ ಸರದೇಸಾಯಿಯವರ ಧಾನಧರ್ಮದ ಟ್ರಸ್ಟ ಫಂಡಿನ ವಿಷಯವಾಗಿ ಮಂಜೂರಾದ ಹುಕುಮು.

ಬೆಳಗಾವಿ ಜಿಲ್ಲೆ, ಪರಸಗಡ ತಾಲೂಕಿನ, ಶಿರಸಂಗಿ ನವಲಗುಂದ ಗ್ರಾಮಗಳ ಲಿಂಗಪ್ಪಾ ಜಾಯಪ್ಪಾ ಸರದೇಸಾಯಿಯವರು ತಮ್ಮ ಅಂತ್ಯಕಾಲಕ್ಕೆ ತಾ. ೬-೬-೧೯೦೬ನೆಯ ದಿವಸ ಮೃತ್ಯು ಪತ್ರದಲ್ಲಿ ತಮ್ಮ ಆಸ್ತಿಯನ್ನೆಲ್ಲ ಲಿಂಗಾಯತರೊಳಗೆ ಶಿಕ್ಷಣ ಪ್ರಸಾರವಾಗಬೇಕೆಂಬ ಸದುದ್ದೇಶದಿಂದ ಧಾರೆಯರೆದಿರುವರು. ಆ ಉದ್ದೇಶವನ್ನು ಸಫಲಗೊಲಿಸುವುದಕ್ಕೋಸ್ಕರವಾಗಿ ತಮ್ಮ ಮೃತ್ಯುಪತ್ರದಲ್ಲಿ ಬೆಳಗಾವಿಯ ಮೇ॥ ಕಲೆಕ್ಟರ ಸಾಹೇಬರವರನ್ನು ನಿಯಮಿಸಿರುವರು.

ಮೇ॥ ಕಲೆಕ್ಟರ ಸಾಹೇಬರಿಗೆ ಆ ಮೃತ್ಯುಪತ್ರದ ಉದ್ಧೇಶಗಳನ್ನು ಈಡೇರಿಸುವ ಬಗ್ಗೆ ಅರ್ಜಿ ಬರಲು ಅವರು ತಾ. ೨೫-೮-೧೯೦೬ರಲ್ಲಿ ಬೆಳಗಾವಿ ಜಿಲ್ಲೆಯ ಕೋರ್ಟಿನ ಮುಖಾಂತರವಾಗಿ ಆ ಮೃತ್ಯುಪತ್ರವನ್ನು ವಶಪಡಿಸಿಕೊಂಡು ಅಧಿಕಾರಯುಕ್ತರಾಗಿ ಆಸ್ತಿಯನ್ನೆಲ್ಲ ಸ್ವಾಧೀನ ಮಾಡಿಕೊಂಡು ಇಲ್ಲಿಯ ವರೆಗೂ ಅದರ ಆಡಳಿತವನ್ನು ನಡೆಸುತ್ತ ಬಂದಿದ್ದಾರೆ.

ಮೆ॥ ಕಲೆಕ್ಟರ ಸಾಹೇಬರು ಆ ಮೃತ್ಯುಪತ್ರಾನುಸಾರವಾಗಿ ೭ ಜನ ಲಿಂಗಾಯತ ಸದ್ಗೃಹಸ್ಥರ ಕಮೀಟಿಗೆ ಅಧ್ಯಕ್ಷ(President)ರಾಗಿ ಆರಿಸಲ್ಪಟ್ಟಿದ್ದಾರೆ. ಅಧ್ಯಕ್ಷರು ಆ ಸದಸ್ಯರ ಒಪ್ಪಿಗೆಯನ್ನು ತೆಗೆದುಕೊಂಡು ಲಿಂಗಾಯತರಲ್ಲಿ ವಿದ್ಯಾಪ್ರಸಾರವಾಗುವದಕ್ಕೆ ಆ ಆಸ್ತಿಯ ಉತ್ಪನ್ನವನ್ನು ವಿನಿಯೋಗಿಸುತ್ತಿರುವರು.

ಆ ಆಸ್ತಿಯ ಸದ್ಯದ ಆಡಳಿತಗಾರರು ಮೇಲಿನ ಮೃತ್ಯು ಪತ್ರದ ಉದ್ದೇಶಗಳನ್ನು ಕೊನೆಗಾಣಿಸಲಿಕ್ಕೆ ಸರದೇಸಾಯಿಯವರ ಸ್ಥಿರಚರಾಸ್ತಿಯನ್ನೆಲ್ಲ ೧೮೯೦ ನೆಯ ದಾನ ಧರ್ಮಶಾಸನ(Charitable Endowments Act)ಕ್ಕೆ ಅನ್ವಯಿಸಬೇಕೆಂಬುದಾಗಿ ಮುಂಬಯಿ ಸರಕಾರಕ್ಕೆ ಅರ್ಜಿಯ ಮೂಲಕ ಅರಿಕೆ ಮಾಡಿಕೊಂಡರು.

ಮುಂಬಯಿ ಸರಕಾರದವರು ಈ ಅರ್ಜಿಯ ಕರಾರುಗಳಿಗೆ ಮೆಚ್ಚಿ ಅದಕ್ಕೆ ತಮ್ಮ ಸಂಪೂರ್ಣ ಅನುಮತಿಯನ್ನು ಕೊಟ್ಟಿದ್ಧಾರೆ. ದಾನಧರ್ಮ ಶಾಸನದ ೫ನೆಯ ಕಲಮಿನ ಪ್ರಕಾರ ಆ ಮೃತ್ಯುಪತ್ರದ

ಸದುದ್ದೇಶಗಳು ಮೇಲ್ಕಂಡ ಆಸ್ತಿಯ ಆಡಳಿತಗಾರರಿಮದ ನಿರ್ವಹಿಸಲ್ಪಡಬೇಕೆಂಬುವದಾಗಿ ಮಂಜೂರು ಮಾಡಿದ್ದಾರೆ.

ಆ ಶಾಸನದ ೪ (೧) ಮತ್ತು ೫ (೧) ಕಲಮಿಗಳಿಗನುಸರಿಸಿ ಮುಂಬಯಿ ಸರಕಾರವು ಮುಂಬಯಿ ಇಲಾಖೆಯ ಧರ್ಮಾದಾವ ಹಣದ ಕೋಶಾಧ್ಯಕ್ಷರ ವಶದಲ್ಲಿ ಆಯಾಯ ಕರಾರುಗಳನ್ನು ನಿರ್ವಹಿಸುವದಕ್ಕಾಗಿ ಆ ಆಸ್ತಿಯ ಹಣವನ್ನು ಇಟ್ಟಿರುತ್ತದೆ. ಆ ಕೋಶಾಧ್ಯಕ್ಷರು ಉತ್ಪನ್ನವನ್ನು ಕೂಡಿಸಬಹುದು. ಬಡ್ಡಿಯನ್ನೆತ್ತಬಹುದು ಮುದ್ದತಿಗೆ ಸರಿಯಾಗಿ ಹಣ ಬಡ್ಡಿ ಮುಂತಾದವುಗಳನ್ನೂ ವಸೂಲ ಮಾಡಬಹುದು. ಆದರೆ ಆ ವಸೂಲಾದ ಹಣವನ್ನು ಯೋಗ್ಯ ರೀತಿಯಿಂದ ವಿನಿಯೋಗಿಸುವ ಅಧಿಕಾರವು ಟ್ರಿಸ್ಟ ಕಮೀಟಿಗಿರುತ್ತದೆ.

ಅನುಕ್ರಮಣಿಕೆ – ೧

(೧) ಮೇಲ್ಕಂಡ ಧರ್ಮಾದಾವ ಕೋಶಾಧ್ಯಕ್ಷರ ವಶದಲ್ಲಿಟ್ಟ ಆ ಆಸ್ತಿಗೆ "ನವಲಗುಂದ ಶಿರಸಂತಿ ಸರದೇಸಾಯಿ ಧರ್ಮಾದಾವ ಟ್ರಿಸ್ಟ ಫಂಡ ಬೆಳಗಾವ" ಎಂದು ಕರಿಯಬೇಕು.

(೨) ಆ ಆಸ್ತಿಯಿಂದ ಹೊರಡುವ ಉತ್ಪನ್ನದಲ್ಲಿ ಅದರ ವ್ಯವಸ್ಥೆ ಮಾರ್ಪಾಟುಗಳ ವೆಚ್ಚ ಹೋಗಲಾಗಿ ಉಳಿದದ್ದನ್ನು ಲಿಂಗಾಯತರಲ್ಲಿ ವಿದ್ಯಾಪ್ರಸಾರ ಮಾಡುವದಕ್ಕೋಸ್ಕರವಾಗಿ ವಿನಿಯೋಗಿಸಬೇಕು.

(೩) ಸರಕಾರದ ರಕ್ಷಣೆಯ ಕೆಳಗಿದ್ದ ಆ ಆಸ್ತಿಯನ್ನು ಏನಾದರೂ ಅಂಥ ಅಪರಿಹಾರ್ಯ ಪ್ರಸಂಗ ಬಂದರೆ ಉದಾಹರಣಾರ್ಥ ಬರ ಬಿದ್ದರೆ ಅಥವಾ ಕರಿಸಾಲಾದರೆ ತಮ್ಮ ವಶಪಡಿಸಿಕೊಳ್ಳಲು ಟ್ರಸ್ಟ ಕಮೀಟಿಗೆ ಸರ್ವಾಧಿಕಾರವಿದೆ. ಲಿಂಗಾಯತ ವಿದ್ಯಾರ್ಥಿಗಳಿಗಾಗಿ ವಸತಿ ಗೃಹ ಭೋಜನಗೃಹ ಮುಂತಾದವುಗಳನ್ನು ಕಟ್ಟಿಸಿ ಕೊಡುವುದಕ್ಕಾಗಿ ಆ ಹಣವನ್ನುಪಯೋಗಿಸುವ ಅಧಿಕಾರವೂ ಟ್ರಸ್ಟಿಗಳಿಗಿರುತ್ತದೆ. ಇಂಡಿಯನ್ ಟ್ರಸ್ಟ ಆ್ಯಕ್ಟದ ಮೇರೆಗೆ ಸರಕಾರಿ ರಕ್ಷಣೆಯನ್ನು ಕಿತ್ತು ಬೆರೆಯವರ ರಕ್ಷಣೆಯ ಕೆಳಗೆ ಆ ಹಣವನ್ನು ವಶಪಡಿಸಲು ಟ್ರಸ್ಟಿಗಳಿಗಧಿಕಾರವುಂಟು.

(೪) ಮೇಲ್ಕಂಡ ಆಸ್ತಿಯ ಮೇಲ್ವಿಚಾರಣೆಗಾಗಿ ಅದರ ಉದ್ದೇಶಗಳನ್ನು ನಿರ್ವಹಿಸುವುದಕ್ಕೆ ಈ ಕೆಳಗಿನ ೭ ಜನ ಲಿಂಗಾಯತ ಸಭ್ಯ ಗೃಹಸ್ಥರು ಕಮೀಟಿಯ ಸದಸ್ಯರಾಗಿರಬೇಕು. ಮತ್ತು ಬೆಳಗಾವಿಯ ಮೆ॥ ಕಲೆಕ್ಟರ್ ಸಾಹೇಬರು ಯಾವಾಗಲೂ ಆ ಕಮೀಟಿಯ ಅಧ್ಯಕ್ಷರಾಗಿದ್ದು ತಮ್ಮ ಕಚೇರಿಯ ವ್ಯತಿರಿಕ್ತ ಕಾರ್ಯವೆಂದು ತಿಳಿದು ಇದರ ಆಡಳಿತವನ್ನು ನಿರ್ವಹಿಸಬೇಕು.

ಆ ಕಮೀಟಿಗೆ ಯಾವಾಗಲೂ ೮ ಜನ ಸದಸ್ಯರಿದ್ದು ಅವರಲ್ಲಿ ಮೆ॥ ಕಲೆಕ್ಟರ ಸಾಹೇಬರು ಆ ಕಮೀಟಿಯ ಸದಸ್ಯರೂ ಅಧ್ಯಕ್ಷರೂ ಆಗಿರತಕ್ಕದ್ದು.

ಸದಸ್ಯರು

ರಾವಬಾಹದ್ದೂರ ರುದ್ರಗೌಡಾ ಚನವೀರಗೌಡಾ ಅರಟಾಳ ಆಯ್. ಎಸ್. ಓ (ರಿಟಾಯರ್ಡ ಡಿಸ್ಟ್ರಿಕ್ಟ ಡಿಪೋಟಿ ಕಲೆಕ್ಟರ ಬೆಳವಾವ)

ಸತ್ಯಪ್ಪಾ ಸಂಕಪ್ಪಾ ಘಾಳಿ ಬಿ. ಎ. (ರಿಟಾಯರ್ಡ ಮಾಮಲೇದಾರ ಬೆಳಗಾಂವ)

ಮಲ್ಲಿಕಾರ್ಜುನಪ್ಪಾ ಶಿವಲಿಂಗಪ್ಪಾ ರೈನಾಪುರ ಬಿ. ಎ. ಮಾಜಿ ಸಿರಸ್ತೆದಾರ ತಾ. ಅಥಣಿ ಜಿ. ಬೆಳಗಾವ

ಬಸಲಿಂಗಪ್ಪಾ ಚನಬಸಪ್ಪಾ ಶಿಗ್ಗಲಿ ಶಿರಸಂಗಿ ತಾ. ಪರಸಗಡ, ಜಿ. ಬೆಳಗಾವ

ಭೀಮನಗೌಡ ಪರಮನಗೌಡಾ ಪಾಟೀಲ ಉಕ್ಕಲಿ, ತಾ. ಬಾಗೇವಾಡಿ, ಜಿ. ವಿಜಾಪೂರ.

ಭೀಮನಗೌಡಾ ಮಲ್ಲನಗೌಡಾ ಪಾಟೀಲ ಶೇಗುಣಸಿ, ತಾ. ಮತ್ತು ಜಿ. ವಿಜಾಪೂರ.

ದಾನಪ್ಪ ಗೌಡಾ ಬಸನಗೌಡಾ ಪಾಟೀಲ ಇನಾಮದಾರ ದೊರಿ, ನೇಗಿನಹಾಳ, ತಾ. ಸಂಪಗಾವಿ ಜಿ. ಬೆಳಗಾವ.

ಮೆ॥ ಕಲೆಕ್ಟರ್‌ರ ಹೊರತಾಗಿ ಮೇಲ್ಕಂಡ ಸದಸ್ಯರು ತಮ್ಮ ಜೀವವಿರುವ ವರೆಗೂ ಸದಸ್ಯರಾಗಿರತಕ್ಕದ್ದು. ಆದರೆ ಯಾವನಾದರೊಬ್ಬ ಸದಸ್ಯನಾಗಲಿ ಅಥವಾ ಸದಸ್ಯರಾಗಿಲಿ ಆಕಸ್ಮಾತ್ ಮರಣಹೊಂದಿದರೆ ಬ್ರಿಟಿಷ ಹಿಂದುಸ್ಥಾನ ಬಿಟ್ಟು ಸತತ ೬ ತಿಂಗಳುಗಳ ವರೆಗೆ ಬೇರೆ ಪ್ರದೇಶಗಳಿಗೆ ಹೋಗಿದ್ದರೆ, ದಿವಾಳಿತೆಗೆದರೆ, ಏನಾದರು ಅಪರಾಧ ಮಾಡಿ ಶಿಕ್ಷೆ ಹೊಂದಿದ್ದರೆ, ಸದಸ್ಯನಾಗಿ ಅಥವಾ ಸದಸ್ಯರಾಗಿ ಕೆಲಸಮಾಡಲು ಇಷ್ಟವಿರದಿದ್ದರೆ ಅಥವಾ ಸಮ್ಮತಿಯನ್ನು ಕೊಡದಿದ್ದರೆ, ಸದಸ್ಯತ್ವಕ್ಕೆ ಅಸಮರ್ಥರಾಗಿದ್ದರೆ ಅಂಥ ಸದಸ್ಯನನ್ನು ಅಥವಾ ಸದಸ್ಯರನ್ನು ಕಡಿಮೆ ಮಾಡಿ ಉಳಿದ ಸದಸ್ಯರು ಮೆ॥ ಕಲೇಕ್ಟರ ಸಾಹೇಬರನ್ನು ಕೂಡಿಕೊಂಡು ಬಹುಮತದ ಪ್ರಕಾರ ಲಿಂಗಾಯತ ಜಾತಿಯ ಬೇರೆ ಸದಸ್ಯನನ್ನು ಅಥವಾ ಸದಸ್ಯರನ್ನು ಆರಿಸಿಕೊಳ್ಳಲು ಅಧಿಕಾರವಿರುತ್ತದೆ. ಇಂಥ ಯಾವುದೇ ಅನಾಹೂತವು ಸಂಭವಿಸಿದರೆ ಮೆ॥ ಕಲೆಕ್ಟರರು ಉಳಿದ ಸದಸ್ಯರುಗಳಿಗೆ ಆ ಸಂಬಂಧವಾಗಿ ಶೀಘ್ರವೇ ವಿಶದಪಡಿಸುವರು. ಆ ಮೇಲೆ ಆ ಸದಸ್ಯರು ಸಮಾವೇಶವಾಗಿ ಕಾರ್ಯಕ್ರಮದ ಪುಸ್ತಕದಲ್ಲಿ ಹೊಸ ಸದಸ್ಯನನ್ನಾಗಲಿ ಸದಸ್ಯರನ್ನಾಗಲಿ ಸೇರ್ಪಡಿಸಿಕೊಳ್ಳಬೇಕು. ಆ ಅನಾಹುತವು ಸಂಭವಿಸಿದ ಸುದ್ದಿಯು ಗೊತ್ತಾದ ೬ ತಿಂಗಳಲ್ಲಿ ವಾರ್ಷಿಕ ಸಭೆಯಾಗಲಿ ಬೇರಾವ ಕ್ಲಪ್ತ ಸಭೆಯಾಗಲಿ ಕೂಡುತ್ತಿದ್ದರೆ ಮೇಲಿನ ಚುನಾವಣೆಯನ್ನು ಮಾಡತಕ್ಕದ್ದು. ಇಂಥ ಸಭೆಯಲ್ಲಿ ಆಯಾಯ ಪ್ರಸಂಗಗಳಿಂದ ಯಾರಾದರೂ ಸದಸ್ಯರ ಚ್ಯುತಿಯಾದಾಗ ಉಳಿದ ಸದಸ್ಯರು ಬಹು ಮತದಿಂದ ಹೊಸಬರನ್ನಾರಿಸಿಕೊಳ್ಳಬೇಕು. ಆ ಅನಾಹುತಗಳು ಸಂಭವಿಸಿದ ೬ ತಿಂಗಳೊಳಗಾಗಿ ಕ್ಲಪ್ತ ಸಭೆಯಾಗಲಿ ವಾರ್ಷಿಕ ಸಭೆಯಾಗಲಿ ಕೂಡದಿದ್ದರೆ ಒಂದು ಪ್ರತ್ಯೇಕವಾದ ಸಭೆಯನ್ನು ಕರೆದು ಹೊಸ ಸದಸ್ಯರನ್ನು ಆರಿಸಿಕೊಳ್ಳಬೇಕು. ಇಲ್ಲವೇ ಪತ್ರವ್ಯವಹಾರದ ಮುಖಾಂತರವಾಗಿ ಮತ ತೆಗೆದುಕೊಂಡು ಅವುಗಳನ್ನು ಕಾಯ್ದಿಟ್ಟು ಮುಂದೆ ಸಮೀಪದಲ್ಲಿ ಕೂಡುವ ಸಭೆಯಲ್ಲಿ ಮತ ತೆಗೆದುಕೊಂಡು ಹೊಸ ಸದಸ್ಯನ ಅಥವಾ ಸದಸ್ಯರ ಚುನಾವಣೆಯನ್ನು ನಿರ್ಧರಿಸಬೇಕು.

(೫) ಮೇಲ್ಕಂಡ ಕಮೀಟಿಯ ಸದಸ್ಯರು ಬಹಳವಾದರೆ ವರ್ಷಕ್ಕೆ ಎರಡಾವರ್ತಿ ಕನಿಷ್ಠಪಕ್ಷಕ್ಕೆ ವರ್ಷಕ್ಕೊಂದಾವರ್ತಿಯಾದರೂ ಕೂಡಬೇಕು.

(೬) ಅಧ್ಯಕ್ಷರ ಅಪ್ಪಣೆಯ ಮೇರೆ ಪ್ರತ್ಯೇಕವಾದ ಸಭೆಗಳು ಮಹತ್ವದ ಪ್ರಸಂಗಗಳಲ್ಲಿ ಆಗಾಗ್ಗೆ ಕರೆಯಲ್ಪಡುವವು.

(೭) ಸಭೆಯ ಕಾಲಕ್ಕೆ ೪ ಜನ ಸದಸ್ಯರು ಕೂಡಿದರೆ ಕೋರಮ್ ಆಯಿತೆಂದು ತಿಳಿಯಬೇಕು. ಕೋರಮ್ ಭರತಿಯಾಗದೆ ಸಭೆಯು ಮುಂದೆ ಹಾಕಲ್ಪಟ್ಟರೆ ಮುಂದೆ ಹಾಕಲ್ಪಟ್ಟ ಸಭೆಗೆ ಪುನಃ ಕೋರಮ್‌ದ ಪ್ರಶ್ನೆಯಿಲ್ಲ.

(೮) ಪ್ರತಿಯೊಬ್ಬ ಸದಸ್ಯನಿಗೆ ೧ ಹೋಟು (ಮತ) ಇರುತ್ತದೆ. ಸಭೆಯಲ್ಲಿ ನಿರ್ಧರಿಸತಕ್ಕ ಪ್ರತಿಯೊಂದು ವಿಷಯವನ್ನು ಕೂಡಿದ ಸದಸ್ಯರ ಮತ ತೆಗೆದುಕೊಂಡು ಅಧ್ಯಕ್ಷರು ಆ ವಿಷಯವನ್ನು ನಿರ್ಣಯಿಸುವರು. ಅಧ್ಯಕ್ಷರಿಗೆ ಇತರರಂತೆ ಸರ್ವಸಾಧಾರಣವಾಗಿ ೧ ಹೋಟು ಇರುತ್ತದೆ. ಏರಡೂ ಸರಿಯಾಗಿ ಮತಬಿದ್ದ ಪ್ರಸಂಗದಲ್ಲಿ ಅಧ್ಯಕ್ಷರಿಗೆ ೧ ಹೆಚ್ಚಿನ ಹೋಟು ಇರುತ್ತದೆ. ಇದನ್ನು ಅವರು ತಮಗೆ ಯುಕ್ತ ಕಂಡಂತೆ ಕೊಟ್ಟು ನಿರ್ಣಯ ಮಾಡುವರು.

(೯) ಆಸ್ತಿ ಹಾಗೂ ಅದರ ಆಡಳಿತ ವ್ಯವಸ್ಥೆಗಳ ಸಂಬಂಧವಾದ ಎಲ್ಲ ಲೆಕ್ಕ ಪತ್ರಗಳೂ ಕಾಗದ ಪತ್ರಗಳೂ ಸರಿಯಾಗಿ ಕಾಯ್ದಿಡಲ್ಪಡುವವು. ಪ್ರತಿಯೊಂದು ವರ್ಷದ ಕೊನೆಗೆ ಎಲ್ಲ ಲೆಕ್ಕ ಪತ್ರಗಳನ್ನು ಸದಸ್ಯರು ಆರಿಸಿಕೊಟ್ಟ ಬೇರೊಬ್ಬ ಸ್ವತಂತ್ರ ಸಭ್ಯಗೃಹಸ್ಥರಿಂದ ತಪಾಸಣೆಯಾಗುವವು.

ಉಪಸಂಹಾರ

॥ ನಧನೇನ ನ ಪ್ರಜಯಾ ತ್ಯಾಗೇನ್ಯಕೇ ನಾಮೃತತ್ವ ಮಾನಶುಃ ॥

ತ್ಯಾಗವೀರ ಲಿಂಗರಾಜರ ಚರಿತ್ರೆಯಲ್ಲಿ ಎರಡು ಭಾಗಗಳನ್ನು ಮಾಡಬಹುದು. ಕ್ರಿ. ಶ. ೧೯೦೪ ನೆಯ ಸಂವತ್ಸರದ ವರೆಗಿನ ಅವರ ಪೂರ್ವ ಭಾಗದ ಚರಿತ್ರೆಯು ಅಷ್ಟೇನೂ ಆದರ್ಶಪ್ರಾಯವಾದುದೆಂದು ಹೇಳಲಿಕ್ಕಾಗುವುದಿಲ್ಲ. ಅದೇ ಪ್ರಕಾರವೇ ಮುಂದಣ ಎರಡು ವರ್ಷಗಳ ಅವರ ಉತ್ತರ ಭಾಗದ ಜೀವಿತವೂ ಸಾಗಿದ್ದರೆ ಈ ಚರಿತ್ರೆಯನ್ನು ಬರೆಯುವ ಪ್ರಸಂಗವೇ ಬರುತ್ತಿರಲಿಲ್ಲವೆಂದು ಹೇಳಿದರೂ ಹೇಳಬಹುದು ಎಂದ ಮೇಲೆ, ಕೇವಲ ಎರಡು ವರುಷಗಳ ತಮ್ಮ ಕಾರ್ಯಗಳಿಂದಲೇ ಈ ಪ್ರಕಾರ ಚರಿತ್ರ ಪುರುಷರಾದುದು ಅತ್ಯಂತ ಮಹತ್ವವಾದುದಲ್ಲವೇ?

ತ್ಯಾಗವೀರರ ಎರಡು ವರುಷಗಳ ಮಹತ್ಕಾರ್ಯಗಳಲ್ಲಿ ಕೂಡಾ ಅವರು ತಮ್ಮ ಸರ್ವಸಂಪತ್ತನ್ನೂ ವೀರಶೈವ ಸಮಾಜದಲ್ಲಿ ವಿದ್ಯಾ ಪ್ರಸಾರ ಮಾಡಲು ಸಮರ್ಪಿಸಿದ ಪರಮ ಪವಿತ್ರವಾದ ಕಾರ್ಯವೇ ಅತ್ಯಂತ ಪ್ರಾಮುಖ್ಯವಾದುದಾಗಿದೆ. ಇದೊಂದು ಕಾರ್ಯವು ಸಂಭವಿಸದಿದ್ದರೆ ಶ್ರೀ ಲಿಂಗರಾಜರ ಚರಿತ್ರೆಗೆ ಇಂಥ ದಿವ್ಯ ಸ್ವರೂಪವು ಪ್ರಾಪ್ತವಾಗುತ್ತಿರಲಿಲ್ಲ. ಆದಕಾರಣ ಮನುಷ್ಯನ ಜೀವಿತದಲ್ಲಿ ಒಂದೇ ಒಂದು ಕಾರ್ಯವು ಕೂಡಾ ಆತನನ್ನು ಚರಿತ್ರೆ ಪುರುಷನನ್ನಾಗಿ ಮಾಡಬಹುದೆಂಬುದು ಈ ಚರಿತ್ರೆಯಿಂದ ಸ್ಪಷ್ಟವಾಗುವುದಿಲ್ಲವೇ?

ಅಂತಹ ದಿವ್ಯ ಸಾಮರ್ಥ್ಯವು ತ್ಯಾಗವೃತ್ತಿಯಲ್ಲುಂಟೇ ವಿನಾ ಭೋಗವೃತ್ತಿಯಲ್ಲಿಲ್ಲ. ತನ್ನ ತನು ಅಥವಾ ಧನ ಇಲ್ಲವೇ ಪ್ರಾಣವನ್ನೂ ಜನಸೇವೆಗೆ ಸಮರ್ಪಿಸುವ ಒಂದೇ ಒಂದು ಕಾರ್ಯವೂ ಕೂಡಾ ಆತನಿಗೆ ಅಕ್ಷಯವಾದ ಕೀರ್ತಿಯನ್ನೂ ಸ್ಥಿರವಾದ ಶಾಂತಿಯನ್ನೂ ಉಂಟುಮಾಡುತ್ತದೆ. ಆದುದರಿಂದಲೇ ದ್ರವ್ಯವನ್ನು ವಿಶೇಷವಾಗಿ ಕೂಡಿಡುವುದರಿಂದಾಗಲಿ ಅಥವಾ ಬಹುಪುತ್ರರನ್ನು

ಪಡೆಯುವುದರಿಂದಾಗಲಿ ಸುಖಶಾಂತಿಗಳು ದೊರೆಯದೆ. ತ್ಯಾಗದಿಂದಲೇ ಮೋಕ್ಷ ಪ್ರಾಪ್ತಿಯೆಂದು ಶಿರೋ ಭಾಗದಲ್ಲಿರುವ ವಾಕ್ಯದ ಮೂಲಕ ಭಾರತೀಯ ತತ್ವಜ್ಞಾನಿಗಳು ಪ್ರಪಂಚಕ್ಕೆ ಸಾರಿ ಸಾರಿ ಹೇಳಿದ್ದಾರೆ.

ಶ್ರೀ ಲಿಂಗರಾಜರು ತಮ್ಮ ಸಂಸ್ಥಾನವನ್ನು ಈ ಪ್ರಕಾರ ಕಳೆಯಬಾರದಾಗಿದ್ದಿತೆಂದು ಕೆಲವರು ಹೇಳುವುದುಂಟು. ಇಂತಹವರ ಸಹಾಯ ಪ್ರೇರಣೆಗಳಿಂದಲೇ ತ್ಯಾಗವೀರರ ಉದ್ಧೇಶವು ಸಫಲವಾಗಬಾರದೆಂದು ಅನೇಕ ವರ್ಷಗಳ ವರೆಗೆ ವ್ಯಾಜ್ಯವು ನಡೆಯಿತು. ಕೊನೆಗೂ ಶ್ರೀ ಲಿಂಗರಾಜರು ತಮ್ಮ ತ್ಯಾಗವೃತ್ತಿಯೆಂಬ ಲೆಕ್ಕಣಿಕೆಯ ಮೂಲಕ ದಯಾರಸವೆಂಬ ಮಸಿಯಿಂದ ಸುವಿವೇಕವೆಂಬ ಕಾಗದಮೇಲೆ ಬರೆದಿಟ್ಟ ಅಮರ ಪತ್ರದಂತೆಯೇ ಸಂಸ್ಥಾನದ ಸರ್ವ ಸಂಪತ್ತೂ ವಿದ್ಯಾಪ್ರಸಾರಣೆಗೆ ವಿನಿಯೋಗವಾಗುತ್ತ ಆ ಸಂಸ್ಥಾನವೂ ಉಳಿಯಿತು. ಇಲ್ಲದಿದ್ದರೆ ದತ್ತಕಪುತ್ರನ ಕೈಸೇರಿ ಎಂದಾದರೂ ಅಳಿದೇ ಹೋಗುತ್ತಿದ್ದಿತು.

ಯಾರಿಗೆ ಸಂತಾನವಿಲ್ಲವೋ ಅವರು ತಮ್ಮ ವಂಶವು ಉಳಿಯಬೇಕೆಂಬ ಮರುಳುತನದಿಂದ ದತ್ತಕಪುತ್ರನನ್ನು ಮಾಡಿಕೊಳ್ಳದೇ ಈ ತ್ಯಾಗವೀರರ ದಿವ್ಯ ಕೃತಿಯಂತೆಯೆ ತಮ್ಮ ಸಂಪತ್ತನ್ನು ಸಮರ್ಪಿಸಬೇಕು. ಇದೇ ತಾವು ತಮ್ಮ ವಂಶವು ಯಾವಾಗಲೂ ಉಳಿಯುವಂತಹ ದಿವ್ಯೋಪಾಯವು.

'ಸರ್ವೆಷಾಮೇವ ದಾನಾನಾಂ ಬ್ರಹ್ಮದಾನಂ ವಿಶಿಷ್ಯತೆ' ಎಂಬ ಉಕ್ತಿಯಂತೆ ಎಲ್ಲ ದಾನಗಳಲ್ಲಿಯೂ ಜ್ಞಾನದಾನವೇ ಮುಖ್ಯವಾದುದರಿಂದ ತ್ಯಾಗವೀರರು ತಮ್ಮ ಸರ್ವ ಸಂಪತ್ತನ್ನು ವಿದ್ಯಾಪ್ರಸಾರಣೆಗಾಗಿಯೆ ಧಾರೆಯೆರೆದುದು ಸಮಂಜಸವಾಗಿಯೇ ಇದೆ. ಅಜ್ಞಾನವೇ ಎಲ್ಲ ದುಃಖಗಳಿಗೂ ಕಾರಣವಾಗಿರುವುದರಿಂದ ವೀರಶೈವ ಸಮಾಜದಲ್ಲಿ ವ್ಯಾಪಿಸಿರುವ ಅಜ್ಞಾನವು ಮೊದಲು ನಿವಾರಣೆಯಾಗಬೇಕಾದುದು ಯುಕ್ತವಾಗಿಯೂ ಇದೆ.

ತ್ಯಾಗವೀರರು ಈ ತಮ್ಮ "ದೇಶ ಕಾಲೇಚ ಪಾತ್ರೇಚ ತದ್ದಾನಂ ಸಾತ್ವಿಕಂ ಸ್ಮೃತಂ" ಎಂಬ ಭಗವದ್ಗೀತೋಕ್ತಿಯಂತೆ ದೇಶಕಾಲಸ್ಥಿತಿಯನ್ನರಿತು ಯಾವವಿದ್ಯೆಗೆ ಹೇಗೆ ಯಾರಿಂದ ದಾನದ್ರವ್ಯವು ವಿನಿಯೋಗವಾಗಬೇಕೆಂಬುದನ್ನು ಮುಂಚೆಯೇ ನಿರ್ಧರಿಸಿರುವರೋ ಅದು ಕೂಡಾ ಅತ್ಯಂತ ಸ್ತುತ್ಯವಾದುದಾಗಿಯೇ ಇದೆ.

ತ್ಯಾಗವೀರರು ತಮ್ಮ ಅಮರಪತ್ರದಲ್ಲಿ "ನನ್ನ ಮನಸ್ಸಿನಲ್ಲಿ ಲಿಂಗಾಯತ ಜನರಿಗೆ ಒಕ್ಕಲುತನ ಕಲಾಕೌಶಲ ಕಲಿಸಬೇಕೆಂದು ಬಹಳವಿದೆ. ಆದ್ದರಿಂದ ಅತ್ತಕಡೆಗೆ ಆದಷ್ಟು ಪ್ರಯತ್ನ ಮಾಡಬೇಕು." ಎಂದು ಬರೆದಿಟ್ಟಿರುವುದನ್ನು ನೋಡಿದರೆ ಅವರ ಮುಂದಾಲೋಚನೆ ಮತ್ತು ಜನಾಂಗವು ಸ್ವಾವಲಂಬಿಯಾಗುವುದರ ವಿಷಯದಲ್ಲಿ ಅವರಿಗಿದ್ದ ಉತ್ಸುಕತೆಗಳು ಸ್ಪಷ್ಟವಾಗುತ್ತವೆ. ಆ ಮಹಾಪುರುಷರ ಅಪೇಕ್ಷೆಯಂತೆ ಆ ವಿಧವಾದ ವಿದ್ಯಾಪ್ರಸಾರಕ್ಕೆ ಇನ್ನೂ ಸಂಪತ್ತು ವಿನಿಯೋಗವಾಗದಿರುವುದು ವಿಷಾದಕರವಾದ ಸಂಗತಿಯಾಗಿದೆ.

ಇನ್ನು ಮೇಲಾದರೂ "ಟ್ರಸ್ಟ ಸಂಘದವರು ತ್ಯಾಗವೀರರ ಉದ್ದೇಶದ ಕಡೆಗೆ ಲಕ್ಷಿಸಿ ಅವರಹೆಸರಿನಿಂದ ಒಕ್ಕಲುತನ ಮತ್ತು ಕೈಗಾರಿಕೆಗಳನ್ನು ಕಲಿಸತಕ್ಕ ಒಂದು ಮಹಾವಿದ್ಯಾಲಯವನ್ನು ಸ್ಥಾಪಿಸಿ ತಮ್ಮ ಮೇಲಿಟ್ಟಿದ್ದ ಅವರ ವಿಶ್ವಾಸಕ್ಕೆ ಸಂಪೂರ್ಣ ಪಾತ್ರರಾಗಿ ಕೀರ್ತಿ ಪಡೆಯುವರೆಂದು ನಂಬಿದ್ದೇವೆ."

ತ್ಯಾಗವೀರರೇನೋ ತಮ್ಮ ಅದ್ವಿತೀಯವಾದ ದಾನದಿಂದ ಅಕ್ಷಯ ಕೀರ್ತಿಯನ್ನು ಪಡೆದರು. ನಾವು ಆ ಪುಣ್ಯಪುರುಷರ ಜಯಂತ್ಯುತ್ಸವವನ್ನು ಜನವರಿ ೧೦ನೆಯ ತಾರೀಖಿನ ದಿವಸ ಜರುಗಿಸಿ ಆ ಜ್ಯೋತಿರ್ಮಯವಾದ ತ್ಯಾಗದ ಜಯಂತಿಯಿಂದ ನಮ್ಮ ಸ್ವಾರ್ಥ ಪ್ರವೃತ್ತಿಯನ್ನು ಸ್ವಲ್ಪವಾದರೂ ಕಳೆದುಕೊಳ್ಳುವುದು ವಿಹಿತಗಾಗಿಲ್ಲವೇ? ಈ ಪುಣ್ಯ ಪುರುಷರ ದ್ರವ್ಯ ಸಹಾಯದಿಂದ ವಿದ್ಯಾವಂತರಾದ ಮಹಾಶಯರು ತಾವು ಜನಾಂಗದ ವಿದ್ಯಾಭಿವೃದ್ಧಿಗೆ ತಮ್ಮ ಆದಾಯದಲ್ಲಿ ಕೆಲವಂಶವನ್ನಾದರೂ ಸಹಾಯ ಮಾಡುವುದು ಕರ್ತವ್ಯವಾಗಿಲ್ಲವೇ? ಇಂತಹ ಸುಸಮಯವು ಜಾಗ್ರತೆ ಪ್ರಾಪ್ತವಾಗಿ ಎಲ್ಲೆಲ್ಲಿಯೂ ತ್ಯಾಗದ ಜ್ಯೋತಿಯೇ ಪ್ರಕಾಶಿಸಲಿ!

❖❖

ಭಗವಾನ್ ಬುದ್ಧಚರಿತ್ರೆ

ಲೇಖಕ

ಹರ್ಡೇಕರ ಮಂಜಪ್ಪ

(ಸತ್ಯಾಗ್ರಹಾಶ್ರಮ)

ಪ್ರಕಾಶಕ

ಬೊಂದಾಡೆ ಬಾಳಪ್ಪ

ದಾವಣಗೆರೆ

ಬೆಂಗಳೂರು ಸಿಟಿ

ಕ್ಯಾಕ್ಸ್ಟರ್ ಪ್ರೆಸ್ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟಿತು

ಕ್ರಿ. ಶ. ೧೯೨೩ ಕ್ರಯ ೬ ಆಣೆ ಶಾಶ. ೧೮೪೫

*

ಪೀಠಿಕೆ

ಈ ಪ್ರಪಂಚದ ಮೂರನೆಯ ಒಂದು ಭಾಗದ ಜನಗಳು ಎಂದರೆ ಸಾಧಾರಣ ೫೦ ಕೋಟಿ ಜನರು ಯಾವ ಲೋಕಪೂಜ್ಯನ ಮತದವರೆಂದು ಈಗಲೂ ಬಹು ಅಭಿಮಾನದಿಂದ ಹೇಳಿಕೊಳ್ಳುತ್ತಿದ್ದಾರೆಯೋ, ಯಾವ ಮಹಾತ್ಮನ ಪವಿತ್ರವಾದ ಚಾರಿತ್ರ್ಯವು ಕಳೆದೆರಡೂವರೆ ಸಹಸ್ರವರ್ಷಗಳಿಂದಲೂ ಜಗತ್ತಿನ ಅಸಂಖ್ಯ ಸಾತ್ವಿಕ ಶಿರೋಮಣಿಗಳಿಗೆ ಮಾರ್ಗದರ್ಶನಕ ವಾಗಿದೆಯೋ, ಯಾವ ಮಹಾಜ್ಞಾನಿಯ ಧರ್ಮೋಪದೇಶವು ಅಸಂಖ್ಯ ಜನಗಳ ಮನಃಕ್ಷೋಭೆಯನ್ನು ಶಾಂತಗೊಳಿಸಿ ಸುಖಸಮಾಧಾನಗಳನ್ನುಂಟು ಮಾಡಿದೆಯೋ, ಯಾವ ಕರುಣಾಶಾಲಿಯ ಮತತತ್ವಗಳು ಕೋಟ್ಯಾಂತರ ಹೀನ ದೀನ ಜನಗಳನ್ನು ಉದ್ಧಾರ ಮಾಡಿದವೋ, ಯಾವ ಆತ್ಮವೀರನ ಜನ್ಮವು ಪ್ರಪಂಚದ ಪುನರ್ಘಟನೆಗೆ ಕಾರಣವಾಯಿತೋ ಮತ್ತು ಈ ವರೆಗೆ ಯಾವ ದೇಶದಲ್ಲಿಯೂ ಅವತರಿಸದಿದ್ದಂತಹ ಯಾವ ಮಹಾಪುರುಷನನ್ನು ಹೆತ್ತುದಕ್ಕೋಸ್ಕರ ಈ ನಮ್ಮ ಭಾರತಮಾತೆಗೆ ವಿಶೇಷವಾದ ಘನತೆಯು ಪ್ರಾಪ್ತವಾಗಿದೆಯೋ, ಅಂತಹ **ಭಗವಾನ್, ಗೌತಮ ಬುದ್ಧನ** ಚರಿತ್ರೆಯು ನಮ್ಮ ಕನ್ನಡ ಭಾಷೆಯಲ್ಲಿಯೂ ವಿವರವಾಗಿರಬೇಕಾದುದು ಅವಶ್ಯಕವಿಲ್ಲವೇ? ಅದ ರಲ್ಲಿಯೂ ಶಾಂತಿಯುಗದ ಈ ಅರುಣೋದಯ ಕಾಲದಲ್ಲಿ ಆತ್ಮೀಯ ಬಲವನ್ನು ಹೆಚ್ಚಿಸಿಕೊಳ್ಳಲು ಆ ಮಹಾತ್ಮನ ದಿವ್ಯಚರಿತ್ರೆಯ ಅವಶ್ಯಕತೆಯು ನಮ್ಮ ಕನ್ನಡಿಗರಿಗೆ ಹೆಚ್ಚಾಗಿಯೇ ಇದೆಯೆಂದು ಹೇಳಬೇಕಾದುದಿಲ್ಲ. ಆದಕಾರಣ ಆ ವೈರಾಗ್ಯ ನಿಧಿಯಾದ ಬುದ್ಧದೇವನ ಚರಿತ್ರೆಯು ಸ್ವಲ್ಪವಿವರವಾಗಿಯೇ ಈ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ.

ಅದ್ವಿತೀಯವಾದ ವೈರಾಗ್ಯ, ಅಸಾಧಾರಣವಾದ ದಯೆ, ಅನುಪಮೇಯವಾದ ಶೀಲಸ್ವಭಾವ, ಅಗಾಧವಾದ ಆತ್ಮತೇಜ ಅಸದೃಶವಾದ ಲೋಕೋದ್ಧಾರದ ಕಾರ್ಯಾಸಕ್ತಿ ಈ ಮೊದಲಾದ ಸಾತ್ವಿಕಗುಣಗಳೆಲ್ಲಾ ಆ ಭಗವಾನ್ ಬುದ್ಧ ದೇವನೊಬ್ಬನಲ್ಲಿಯೇ ಏಕೀಭವಿಸಿದ್ದರಿಂದ ಜನಸಾಮಾನ್ಯರು ಊಹಿಸದಂತಹ ಅಧ್ಭುತಕಾರ್ಯಗಳು ಕೂಡಾ ಆ ಮಹಾತ್ಮನಿಂದ ಜರುಗಿದವು. ಆದರೆ ಪಶುಬಲವೆ ಪ್ರಾಧಾನ್ಯವಾಗಿಯೂ, ವಿಷಯೋಪಭೋಗವೇ ಜೀವಿತದ ಮುಖ್ಯಧ್ಯೇಯವಾಗಿಯೂ ಪರಿಣಮಿಸಿರುವ ಈ ಕಾಲದಲ್ಲಿ ಬುದ್ಧ ಮಹಾತ್ಮನ ಚರಿತ್ರೆಯನ್ನೋದಿದ ಡಾ. ಕರ್ನ್ ಮಾ. ಸೆನಾರ್ಟ ಮೊದಲಾದ

ಪಾಶ್ಚಾತ್ಯ ಪಂಡಿತರಿಗೆ ಬುದ್ದನೆಂಬ ಮನುಷ್ಯನು ಜನ್ಮವೆತ್ತಿರಲೇ ಇಲ್ಲವೆಂತಲೂ, ಆತನು ಕಲ್ಪಿತ ಪುರುಷನೆಂತಲೂ, ತೋರಿದುದೇನಾಶ್ಚರ್ಯ?

ಹಿಂದುಸ್ಥಾನ ಸರಕಾರದ ಪ್ರಾಚೀನವಸ್ತು ಸಂಶೋಧಕ ಶಾಖೆಯವರಿಗೆ ಈಗ ಕೆಲವು ವರ್ಷಗಳ ಹಿಂದೆ ನೇಪಾಳ ಸಂಸ್ಥಾನದಲ್ಲಿ ಅಶೋಕ ರಾಜನ ಕಾಲದ (ಕ್ರಿ. ಶ. ಪೂರ್ವ ೨೪೯) ಒಂದು ಶಿಲಾಸ್ತಂಭವು ದೊರೆತಿರುವುದರಿಂದ ಬುದ್ಧನು ಕಲ್ಪಿತ ಪುರುಷನೆಂದು ಇನ್ನು ಮೇಲಂತೂ ಹೇಳಲವಕಾಶವಿಲ್ಲ. ಆ ಶಿಲಾಸ್ತಂಭದಲ್ಲಿರುವ ಶಾಸನದ ಮುಖ್ಯಾಂಶವೇನೆಂದರೆ :

"ಅಶೋಕರಾಜನಿಗೆ ರಾಜ್ಯಾಭಿಷೇಕವಾದ ೨೦ ವರ್ಷಗಳನಂತರ ಆ ಮಹಾರಾಜನು ಲುಂಬಿನಿ ಗ್ರಾಮದ ಹತ್ತಿರ ಬುದ್ದ ಜನ್ಮಸ್ಥಳಕ್ಕೆ ಬಂದು ಆ ಸ್ಥಳವನ್ನು ಪೂಜೆಮಾಡಿ ನಾಲ್ಕು ದಿಕ್ಕುಗಳಲ್ಲಿ ಕಲ್ಲಿನ ಗೋಡೆಗಳನ್ನು ಕಟ್ಟಿಸಿ ಶಿಲಾಸ್ತಂಭವನ್ನು ಸ್ಥಾಪಿಸಿ ಆ ಲುಂಬಿನಿ ಗ್ರಾಮದ ಭೂಕಂದಾಯವನ್ನು ತೆಗೆದುಹಾಕಿದನು."

ಬುದ್ಧನು ಕಲ್ಪಿತ ಪುರುಷನಲ್ಲವೆಂದು ತಿಳಿಯುವುದಕ್ಕೆ ಇದೊಂದೇ ಶಿಲಾಶಾಸನವು ಸಾಕಾಗಿದೆ. ಆದಕಾರಣ ಈ ಚರಿತ್ರೆಯ ಕಲ್ಪಿತ ಕಾದಂಬರಿಯಂತೆ ಯಾವುದೋ ಒಂದು ವ್ಯಕ್ತಿಯ ವಿಷಯವೆಂದು ಭಾವಿಸದೆ ನಿಜವಾಗಿಯೂ ಈಗ ಸಾಧಾರಣ ೨೫೦೦ ವರ್ಷಗಳ ಪೂರ್ವದಲ್ಲಿ ಜನ್ಮವೆತ್ತಿದ ಮಹಾಪುರುಷನ ಚರಿತ್ರೆಯೆಂಬ ದೃಢವಿಶ್ವಾಸದಿಂದಲೇ ಎಂತಹ ಸಂದೇಹ ಬುದ್ಧಿಯವರು ಕೂಡಾ ಓದಲು ಅಭ್ಯಂತರವಿಲ್ಲ.

ಈ ಚರಿತ್ರೆಯು ಐತಿಹಾಸಿಕ ದೃಷ್ಟಿಯಿಂದಲೇ ಬರೆಯಲ್ಪಟ್ಟಿದೆ. ಆದರೆ ಒಂದನೆಯ ಪ್ರಕರಣದಲ್ಲಿರುವ ಬುದ್ದನ ಜನ್ಮಾಂತರದ ಸಂಗತಿಯು ಐತಿಹಾಸಿಕ ಆಧಾರವೆಂದು ಹೇಳಲಿಕ್ಕಾಗುವುದಿಲ್ಲ ಬೌದ್ಧ ಮತದವರು ಬುದ್ಧದೇವನ ವಿಷಯದಲ್ಲಿ ಯಾವ ಅಭಿಪ್ರಾಯವುಳ್ಳವರಾಗಿದ್ದಾರೆಂಬುದು ಮಾತ್ರ ಅದರಿಂದ ವ್ಯಕ್ತವಾಗುತ್ತದೆ. ಇದರಂತೆಯೇ ಎರಡನೆಯ ಪ್ರಕರಣದಲ್ಲಿ ವಿವರಿಸಲ್ಪಟ್ಟ ಸಂಸಾರವನ್ನು ಬಿಟ್ಟುಹೋಗುವಾಗ ಯೋಚಿಸಿದ ಸಿದ್ಧಾರ್ಥನ ಯೋಚನೆಗಳು ಕೂಡಾ ಐತಿಹಾಸಿಕ ಆಧಾರಗಳೆಂದು ನಂಬಲಿಕ್ಕಾಗುವುದಿಲ್ಲ. ಆದರೆ ಆ ಪ್ರಕಾರ ಸಿದ್ಧಾರ್ಥನಲ್ಲಿ ಯೋಚನೆಗಳುಂಟಾಗಿರ ಬಹುದೆಂದು ಊಹಿಸುವುದು ಅಸಮಂಜಸವೇನೂ ಆಗಲಾರದು.

ಪೌರಾಣಿಕ ದೃಷ್ಟಿಯಿಂದ ಬರೆಯಲ್ಪಟ್ಟಿರುವ ಬುದ್ಧದೇವನ ಚರಿತ್ರೆಗಳಲ್ಲಿ ಮಾರವಿಜಯವೆಂಬುದೊಂದು ವಿಷಯವು ಬಹುವಿವರವಾಗಿ ವರ್ಣಿಸಲ್ಪಟ್ಟಿರುತ್ತದೆ. ಕಾಮನು ನಾನಾರೂಪಗಳನ್ನು ಧರಿಸಿಕೊಂಡು ಬಂದು ಬುದ್ದನನ್ನು ಅನೇಕ ಸಾರೆ ಮೋಸಗೊಳಿಸಬೇಕೆಂದು ಪ್ರಯತ್ನಿಸಿದರೂ ಬುದ್ಧನು ಆತನಿಗೆ ಮರುಳಾಗದೆ ತಾನೇ ಜಯಶಾಲಿಯಾದನೆಂಬುದೇ ಆ ಮಾರವಿಜಯ ವರ್ಣನೆಯ ಮುಖ್ಯಾಂಶವು ಸುಪ್ರಸಿದ್ದ ವೀರಶೈವ ಗ್ರಂಥಕಾರರಾದ ಮಗ್ಗಿಯ ಮಾಯಿದೇವರು ತಮ್ಮ ಶತಕತ್ರಯಗ್ರಂಥದಲ್ಲಿ **"ಮನದಮನೋರಥಂ ಲಯಮನೈದಲು ಕಾಮಜಯಂ"** ಎಂದು ಹೇಳಿರುವಂತೆ ಆ ಬುದ್ಧ ಭಗವಾನನ ಮನಸ್ಸಿನ ಚಂಚಲ ಸ್ವಭಾವವು ಅಡಗಿ ಹೋಯಿತೆಂಬುದನ್ನು ಹೇಳುವುದೇ ಆ ಮಾರವಿಜಯವನ್ನು ವಿವರಿಸಿದುದರ ಮುಖ್ಯೋದ್ದೇಶವಾಗಿದೆ. ಆದಕಾರಣ ಐತಿಹಾಸಿಕ ಬರೆದಿರುವ ಈ ಪುಸ್ತಕದಲ್ಲಿ ಆ ವಿಷಯವನ್ನು ವಿವರಿಸಿಲ್ಲ. ಇದರಂತೆಯೇ

ಧಾರ್ಮಿಕ ಭಾವನೆಯಿಂದ ಬರೆದಿರುವ ಬುದ್ಧನ ಅನೇಕ ಸಂಗತಿಗಳೂ ಐತಿಹಾಸಿಕ ಆಧಾರಗಳೆಂದು ನಂಬಲಿಕ್ಕೆ ಬರುವಂತಿಲ್ಲವಾದುದರಿಂದ ಅವುಗಳನ್ನೂ ಬಿಟ್ಟು ಬುದ್ಧದೇವನ ಪರಿನಿರ್ವಾಣದವರೆಗಿನ ಸಂಗತಿಗಳೂ ಏಳುಪ್ರಕರಣಗಳಲ್ಲಿ ವಿವರಿಸಲ್ಪಟ್ಟಿವೆ. ಎಂಟನೆಯ ಪ್ರಕರಣದಲ್ಲಿ ಆ ಮಹಾತ್ಮನು ಬೋಧಿಸಿದ ಪದ್ಧತಿಯನ್ನು ತೋರಿಸಿ ಆತನ ವಿಷಯದಲ್ಲಿಯೂ, ಆತನ ಮತದ ವಿಷಯದಲ್ಲಿಯೂ ನನ್ನ ಅಭಿಪ್ರಾಯಗಳನ್ನು ಉಪಸಂಹಾರ ರೂಪದಲ್ಲಿ ಬರೆದಿರುವೆನು.

ಈ ಪುಸ್ತಕವನ್ನು ಬೌದ್ಧಧರ್ಮದ ವಿಷಯದಲ್ಲಿಯೂ ಪಾಲಿಭಾಷೆಯಲ್ಲಿಯೂ, ಮಹಾಪಂಡಿತರಾದ ಪ್ರೊ. ಧರ್ಮಾನಂದ ಕೋಸಂಬಿಯವರು ಬುದ್ಧದೇವನ ವಿಷಯವಾಗಿ ಪಾಲಿಭಾಷೆಯಲ್ಲಿ ಬರೆಯಲ್ಪಟ್ಟಿರುವ ಎಲ್ಲಾ ಮುಖ್ಯ ಗ್ರಂಥಗಳ ಆಧಾರದಿಂದ ಪೌರಾಣಿಕ ರೀತಿಯಲ್ಲಿ ರಚಿಸಿರುವ **ಬುದ್ಧ ಲೀಲಾಸಾರ ಸಂಗ್ರಹ** ಮತ್ತು ಘನಪಂಡಿತರಾದ ಶ್ರೀಯುತ ವಾಸುದೇವ ಗೋವಿಂದ ಆಪಟೆಯವರು ಬೌದ್ಧ ಧರ್ಮದ ವಿಷಯವಾಗಿ ೧೫ ವರ್ಷ ಅಧ್ಯಯನಮಾಡಿ ಪಾಶ್ಚಾತ್ಯ ಮತ್ತು ಪೌರ್ವಾತ್ಯ ಗ್ರಂಥಕಾರರ ೫೦ ಗ್ರಂಥಗಳನ್ನು ಆಧಾರವಾಗಿಟ್ಟುಕೊಂಡು ಐತಿಹಾಸಿಕ ದೃಷ್ಟಿಯಿಂದ ಬರೆದಿರುವ **ಬೌದ್ಧ ಪರ್ವ** ಈ ಎರಡು ಗ್ರಂಥಗಳನ್ನೇ ಮುಖ್ಯಾಧಾರವಾಗಿಟ್ಟುಕೊಂಡು ಬರೆದಿರುವುದರಿಂದ ಆ ಉಭಯವಿದ್ವಾಂಸರಿಗೂ ಅತ್ಯಂತ ಕೃತಜ್ಞನಾಗಿದ್ದೇನೆ.

ಈ ಚಿಕ್ಕ ಪುಸ್ತಕವನ್ನೋದಿದ ಕನ್ನಡ ವಾಚಕರಿಗೆ ಬುದ್ಧ ಮಹಾತ್ಮನ ವಿಷಯದಲ್ಲಿ ಹೆಚ್ಚು ಸಂಗತಿಗಳನ್ನು ತಿಳಿದುಕೊಳ್ಳಬೇಕೆಂಬ ಅಪೇಕ್ಷೆಯಾದರೂ ಉಂಟಾದರೆ ಈ ಪುಸ್ತಕಕರ್ತನ ಶ್ರಮವು ಸಾರ್ಥಕವಾಗುವುದು.

ಹರಿಹರ — **ಹರ್ಡೇಕರ ಮಂಜಪ್ಪ**

ತಾ॥ ೧೯-೪-೧೯೨೩ — ಸತ್ಯಾಗ್ರಹಾಶ್ರಮ

❖❖

॥ಸತ್ಯಮೇವ ಜಯತೇ ನಾನೃತಂ॥

೧ನೆಯ ಪ್ರಕರಣ

ಜನ್ಮ ಮತ್ತು ಬಾಲ್ಯಾವಸ್ಥೆ

ಯಾವ ಜಗತ್ಪೂಜ್ಯವಾದ ಭಗವಾನ್ ಬುದ್ದನ ವಿಷಯವಾಗಿ ಈಗ ಪ್ರಸ್ತಾಪಿಸಲ್ಪಡುತ್ತಿದೆಯೋ ಆತನು ಇದೊಂದೇ ಜನ್ಮದಲ್ಲಿ ಇಂತಹ ಅದ್ವಿತೀಯವಾದ ಯೋಗ್ಯತೆಯನ್ನು ಹೊಂದಿದನೆಂದು ಬೌದ್ಧ ಧರ್ಮಿಗಳು ಹೇಳುವುದಿಲ್ಲ. ಅವರು ಪುನರ್ಜನ್ಮವಾದಿಗಳಾಗಿದ್ದಾರೆ. ಆದಕಾರಣ ಈ ಬುದ್ದನಿಗೆ ಇಂತಹ ಲೋಕೋತ್ತರವಾದ ವೈರಾಗ್ಯ, ಶಾಂತಿ, ದಯೆ ಮತ್ತು ಜ್ಞಾನಗಳುಂಟಾಗಲು ಈತನು ಹಿಂದೆ ಅನೇಕ ಜನ್ಮಗಳಲ್ಲಿ ನಾನಾ ಪುಣ್ಯಕಾರ್ಯಗಳನ್ನು ಮಾಡಿದ್ದನೆಂದು ಅವರು ಹೇಳುತ್ತಿದ್ಧಾರೆ. ಬುದ್ದನ ಪೂರ್ವ ಜನ್ಮಗಳ ವಿಷಯವಾಗಿ ಬೌದ್ಧ ಗ್ರಂಥಗಳಲ್ಲಿ ವರ್ಣಿಸಲ್ಪಟ್ಟಿರುವುದರ ಮುಖ್ಯಾಂಶವೇನೆಂದರೆ

ಈ ಬುದ್ದನ ಹಿಂದಣ ಜನ್ಮದ ಹೆಸರು ಬೋಧಿಸತ್ವ. ಈತನು ಅನೇಕ ಜನ್ಮಗಳ ಸುಕೃತದಿಂದ ತುಷಿತ ಎಂಬ ದೇವಲೋಕದಲ್ಲಿ ಜನ್ಮವೆತ್ತಿದ್ದನು. ಆ ಲೋಕದಲ್ಲಿದ್ದ ದೇವತೆಗಳು ಒಂದು ದಿವಸ ಬೋಧಿಸತ್ವವನ್ನು ಕುರಿತು "ಎಲೈಮಿತ್ರನೇ? ಈ ಸ್ವರ್ಗ ಲೋಕದಲ್ಲಿ ಸುಖವನ್ನನುಭವಿಸಬೇಕೆಂದು ನೀನು ಅನೇಕ ಜನ್ಮಗಳಲ್ಲಿ ಪುಣ್ಯಕಾರ್ಯಗಳನ್ನು ಮಾಡಿದಿಯಾ? ಉದ್ಧಾರಮಾಡಬೇಕೆಂದೇ ನೀನು ಇಷ್ಟು ಪುಣ್ಯವನ್ನು ಸಂಪಾದಿಸಿಲ್ಲವೇ? ಆದುದರಿಂದ ಈ ಸ್ವರ್ಗ ಸುಖವನ್ನು ಬಿಟ್ಟು ಮನುಷ್ಯಲೋಕದ ದುಃಖವನ್ನನುಭವಿಸಲು ಸಿದ್ದನಾಗು ಎಂದು ಹೇಳಿದರು.

ಆಗ ಬೋಧಿಸತ್ವನು "ಮಿತ್ರರೇ! ನಾನು ಈ ವರೆವಿಗೂ ಬಹು ಜನ್ಮಗಳನ್ನು ಹೊಂದಿ ಅನೇಕ ದುಃಖಗಳನ್ನನುಭವಿಸಿದ್ದೇನೆ. **ಜನನಗಳ ಉದ್ದಾರಕ್ಕೋಸ್ಕರ ದುಃಖವನ್ನನುಭವಿಸಲು ನನಗೆ ಎಷ್ಟು ಸಂತೋಷವಾಗುತ್ತದೆಯೋ ಅಷ್ಟು ಈ ಸ್ವರ್ಗಸುಖದಿಂದ ನನಗೆ ಆನಂದವಾಗುವುದಿಲ್ಲ.** ಮನುಷ್ಯಲೋಕದಲ್ಲಿ ಜನ್ಮ ಹೊಂದುವ ಮುಂಚೆ ಕೆಲವು ಸಂಗತಿಗಳನ್ನು ಯೋಚಿಸಬೇಕಾಗಿದೆ. ಆದಕಾರಣ ನಾನು ಯೋಚಿಸಿ ನಿಮಗೆ ಇಷ್ಟರಲಿಯೇ ತಿಳಿಸುತ್ತೇನೆ." ಎಂದು ದೇವತೆಗಳಿಗೆ ಹೇಳಲು ಅವರು ಹೊರಟುಹೋದರು.

ಅನಂತರ ಬೋಧಿಸತ್ವನು ತನ್ನಲ್ಲಿಯೇ ತಾನು "ಪೃಥ್ವಿಯ ಎಲ್ಲಾ ಖಂಡಗಳಲ್ಲಿಯೂ ಭರತಖಂಡವೇ ಬುದ್ಧನ ಜನನಕ್ಕೆ ಯೋಗ್ಯ ಭೂಮಿಯು. ಅದರಲ್ಲಿಯೂ ವಿಂಧ್ಯಾ ಮತ್ತು

ಹಿಮಾಲಯಗಳ ಮಧ್ಯಪ್ರದೇಶವು ಶ್ರೇಷ್ಠಕರವಾದುದು. ಏಕೆಂದರೆ, ಪ್ರಾಚೀನಕಾಲದಿಂದಲೂ ಅಲ್ಲಿಯೇ ಅನೇಕ ಮಹಾ ಮಹಾ ಸಾಧುಶರಣರು ಜನ್ಮವೆತ್ತಿದ್ದಾರೆ. ನಾನಾದರೂ ಅದೇ ಪ್ರದೇಶದಲ್ಲಿ ಶ್ರೇಷ್ಠವಾದ ಶಾಕ್ಯಕುಲದಲ್ಲಿಯೇ ಕೊನೆಯ ಜನ್ಮವನ್ನು ತಾಳುವುದು ವಿಹಿತವು" ಎಂದು ಯೋಚಿಸಿ ದೇವತೆಗಳಿಗೆ ತನ್ನ ಅಭಿಪ್ರಾಯವನ್ನು ತಿಳಿಸಿದನು. ಆಗ ಅಲ್ಲಿದ್ದ ದೇವತೆಗಳಲ್ಲಿ ಯಾರ ಆಯುಷ್ಯವು ತೀರಿದ್ದಿತೋ ಅವರೆಲ್ಲರೂ ಬುದ್ದನ ಶಿಷ್ಯತ್ವದ ಪ್ರಯೋಜನವನ್ನು ಹೊಂದಬೇಕೆಂದು ಯೋಚಿಸಿ ಭರತಖಂಡದ ಮಧ್ಯಪ್ರದೇಶದಲ್ಲಿ ಜನ್ಮವೆತ್ತಿದರು.

ಕಾಶಿಪಟ್ಟಣದಿಂದ ಉತ್ತರಕ್ಕೆ ಸಾಧಾರಣ ೧೦೦ ಮೈಲಿಗಳ ದೂರದಲ್ಲಿ ಶಾಕ್ಯವಂಶದ ಶುದ್ಧೋದನನೆಂಬ ರಾಜನು ಕಪಿಲವಸ್ತು ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಈತನು ಮಹಾಸ್ವಾಭಿಮಾನಿಯೂ, ಪ್ರಜಾರಂಜಕನೂ, ಆಗಿದ್ದನು. ಈತನಿಗೆ ಮಾಯಾದೇವಿ ಎಂಬೊಬ್ಬ ಪತ್ನಿಯಿದ್ದಳು ಅವಳು ಸುಶೀಲೆಯೂ, ದಯಾಪರಳೂ ಆಗಿದ್ದರು.

ಆ ಕಪಿಲವಸ್ತು ಪಟ್ಟಣದಲ್ಲಿ ಪ್ರತಿ ವರ್ಷ ಆಷಾಢ ಶುದ್ಧನವಮಿಯಿಂದ ಎಳು ದಿವಸಗಳವರೆಗೆ ಒಂದು ಘನವಾದ ಉತ್ಸವವು ಜರುಗುತ್ತಿದ್ದಿತು. ಈ ಪದ್ಧತಿಯು ಪ್ರಕಾರ ಒಂದು ವರ್ಷ ಆ ಕಪಿಲವಸ್ತು ಪಟ್ಟಣದಲ್ಲಿ ಆಷಾಢೋತ್ಸವವು ಬಹು ಸಂಭ್ರಮದಿಂದ ಜರುಗಿತು. ಆ ಉತ್ಸವಕಾಲದಲ್ಲಿ ಕ್ಷತ್ರಿಯ ಸ್ತ್ರೀ ಪುರುಷರು ಯಥೇಚ್ಛವಾಗಿ ಮಧ್ಯಪಾನ ಮಾಡುವುದು ವಾಡಿಕೆಯಾಗಿದ್ದಿತು. ಆದರೆ ಶುದ್ಧೋದನರಾಜನ ಪತ್ನಿಯಾದ ಮಾಯಾದೇವಿಯು ಸದಾಚಾರಸಂಪನ್ನಳಾಗಿದ್ದುದರಿಂದ ಮಧ್ಯಪಾನ ಮಾಡದೆ ಉತ್ಸವದ ಕೊನೆಯ ದಿವಸ ಅನೇಕ ಕುರುಡರಿಗು, ಕುಂಟರಿಗು, ಅಂಗಹೀನರಿಗು, ಮತ್ತು ಸನ್ಯಾಸಿಗಳಿಗೂ, ವಿಶೇಷ ಧನ, ಧಾನ್ಯ, ವಸ್ತ್ರಾದಿಗಳನ್ನು ದಾನಮಾಡಿ ಆ ರಾತ್ರಿ ಧರ್ಮ ಶ್ರವಣದಲ್ಲಿ ಎಷ್ಟೋ ಕಾಲವನ್ನು ಕಳೆದು ಅನಂತರ ಮಲಗಿಕೊಂಡಳೂ. ಆ ಪೌರ್ಣಮೆಯ ರಾತ್ರಿ ಕೆಳಗೆ ವಿವರಿಸಿದಂತಹ ಒಂದು ಸ್ವಪ್ನವನ್ನು ಮಾಯಾದೇವಿಯು ಕಂಡಳೂ.

"ದಿಕ್ಪಾಲಕರಾದ ದೇವತೆಗಳು ಅವಳನ್ನು ಎತ್ತಿಕೊಂಡುಹೋಗಿ ಹಿಮಾಲಯದ ಮೇಲೆ ಬಹು ಭವ್ಯವಾದ ಒಂದು ಶಾಲವೃಕ್ಷದ ಕೆಳಗಿಳಿಸಿದರು. ಅನಂತರ ಆ ದೇವತೆಗಳ ಸ್ತ್ರೀಯರು ಮಾಯಾದೇವಿಗೆ ಗಂಧೋದಕದಿಂದ ಸ್ನಾನ ಮಾಡಿಸಿ ದಿವ್ಯ ವಸ್ತ್ರಾಲಂಕಾರಳಿಂದ ಅವಳನ್ನು ಶೃಂಗರಿಸಿ ಒಂದು ಮಂಚದ ಮೇಲೆ ಪೂರ್ವದಿಕ್ಕಿಗೆ ತಲೆ ಮಾಡಿ ಮಲಗಿಸಿದರು. ಆ ಮೇಲೆ ಒಂದು ಬಿಳಿಯ ಆನೆಯು ಹತ್ತಿರದಲ್ಲಿದ್ದ ಸುವರ್ಣಪರ್ವತದಿಂದ ಕೆಳಗಿಳಿದು ಬಂದು ತನ್ನ ಸೊಂಡಿಲಿನಲ್ಲಿ ಬಿಳಿಯ ಕಮಲವನ್ನು ಹಿಡಿದುಕೊಂಡು ಮಾಯಾದೇವಿಗೆ ಮೂರುಸಾರೆ ಪ್ರದಕ್ಷಿಣೆಮಾಡಿ ಮೆಲ್ಲಗೆ ಅವಳ ಬಲಪಕ್ಕದಿಂದ ಹೊಟ್ಟೆಯಲ್ಲಿ ಹೋಯಿತು!"

ಮಾಯಾದೇವಿಯು ಈ ವಿಚಿತ್ರವಾದ ಸ್ವಪ್ನವನ್ನು ಮರುದಿನ ತನ್ನ ಪತಿಗೆ ತಿಳುಹಿಸಿದಳು ಆಗ ರಾಜನು ಪಟ್ಟಣದ ಪ್ರಮುಖ ವಿದ್ವಾಂಸರನ್ನು ಕರೆಯಿಸಿ ಆ ಸ್ವಪ್ನದ ಫಲವೇನೆಂದು ಕೇಳಿದನು.

ಆ ಪಂಡಿತರು ಹೇಳಿದುದೇನೆಂದರೆ "ಮಹಾರಾಜನೇ? ಇದು ಅತ್ಯಂತ ಶುಭಸೂಚಕರವಾದ ಸ್ವಪ್ನವಾಗಿದೆ. ಮಹಾರಾಣಿಯವರ ಹೊಟ್ಟೆಯಲ್ಲಿ ಒಬ್ಬ ಮಹಾಪುರುಷರು ಜನ್ಮವೆತ್ತುವನು. **ಆತನು ಗೃಹಸ್ಥಾಶ್ರಮದಲ್ಲಿದ್ದರೆ ಚಕ್ರವರ್ತಿಯಾಗುವನು. ಸನ್ಯಾಸಿಯಾದರೆ ಬುದ್ಧ (ಜ್ಞಾನಿ) ನಾಗಿ ಜಗತ್ತಿನ ಆಜ್ಞಾನವನ್ನು ನಿವಾರಣೆ ಮಾಡುವನು."**

ಇದನ್ನು ಕೇಳಿ ರಾಜನಿಗೆ ಆತ್ಮಾನಂದವಾಯಿತು. ಆ ಬಳಿಕ ಮಾಯಾದೇವಿಗೆ ದಿನೇ ದಿನೇ ಗರ್ಭಚಿನ್ಹೆಗಳು ತೋರಲಾರಂಭವಾದವು. ಒಂದು ದಿವಸ ಮಾಯಾದೇವಿಯು ತನ್ನ ತವರುಮನೆಗೆ ಹೋಗಬೇಕೆಂದು ಅಪೇಕ್ಷಿಸಲು ಶುದ್ಧೋದನರಾಜನು ಒಂದು ಸಾವಿರ ಸೈನ್ಯದೊಂದಿಗೆ ಕಳುಹಿಸಿಕೊಟ್ಟನು. ಮಾಯಾದೇವಿಯ ತಾಯಿಯ ಮನೆಯ ದೇವದಹ ಎಂಬ ಪಟ್ಟಣದಲ್ಲಿದ್ದಿತು. ಆ ಪಟ್ಟಣವನ್ನು ಕೋಲಿಯ ವಂಶದ ರಾಜರು ಆಳುತ್ತಿದ್ದರು. ಅವರ ಮತ್ತು ಈ ಕಪಿಲವಸ್ತುಪಟ್ಟಣದ ಶಾಕ್ಯರು ಆ ಉಭಯ ರಾಜ್ಯಗಳ ಮಧ್ಯದಲ್ಲಿ ತಮ್ಮ ವಿಹಾರಕ್ಕೋಸ್ಕರ ಲುಂಬಿನಿ ಎಂಬ ಒಂದು ರಮಣೀಯವಾದ ಉದ್ಯಾನವನವನ್ನು ನಿರ್ಮಿಸಿದ್ದರು.

ಮಾಯಾದೇವಿಯು ಸಕಲ ಪರಿವಾರದೊಡನೆ ಲುಂಬಿನಿ ಉದ್ಯಾನವನದ ಹತ್ತಿರ ಬರಲು ಅಲ್ಲಿ ಸ್ವಲ್ಪ ವಿಶ್ರಾಂತಿಯನ್ನು ಹೊಂದಬೇಕೆಂದಪೇಕ್ಷಿಸಿದಳು. ಆಗ ಸೇವಕರು ಅವಳು ಕುಳಿತಿದ್ದ ಪಾಲಕಿಯನ್ನು ಆ ಉದ್ಯಾನವನದಲ್ಲಿ ತೆಗೆದುಕೊಂಡು ಹೋಗಲು ಮಾಯಾದೇವಿಯು ಕೆಳಗಿಳಿದು ಅತ್ತಿತ್ತ ತಿರುಗಾಡಿ ಬಹು ರಮ್ಯವಾಗಿದ್ದ ಒಂದು ಶಾಲವೃಕ್ಷದ ಕೆಳಗೆ ಹೋಗಿ ನಿಂತುಕೊಂಡಳು. ಅಷ್ಟರಲ್ಲಿಯೇ ಪ್ರಸೂತವೇದನೆಯು ಪ್ರಾರಂಭವಾಗಲು ದಾಸಿಯರು ಮಾಯಾದೇವಿಯನ್ನು ಸುತ್ತಲೂ ಬಟ್ಟೆಯಿಂದ ಮರೆಮಾಡಿದರು. ಅನಂತರ ಆ **ಶಾಲವೃಕ್ಷದ ಕೆಳಗೆ ಜಗದೋದ್ಧಾರಕನಾದ ಈ ನಮ್ಮ ಚರಿತ್ರನಾಯಕನು ಜನ್ಮವೆತ್ತಿದನು.** ಈ ಪುಣ್ಯಕಾರ್ಯವು ಕ್ರಿಸ್ತಿ ಶಕ ಪೂರ್ವ ಸಾಧಾರಣ ೬೩೩ನೆಯ ವರ್ಷದಲ್ಲಿ ಸಂಭವಿಸಿತು. ಎಂದರೆ ಈ ಹಿಂದೆ ೨೫೫೬ನೆಯ ವರ್ಷದಲ್ಲಿ ಜರುಗಿತು.

ಈ ಪುತ್ರಜನನ ವಾರ್ತೆಯು ಶುದ್ಧೋದನರಾಜನಿಗೆ ತಿಳಿದೊಡನೆ ಅತ್ಯಾನಂದದಿಂದ ಬಹು ಸಂಭ್ರಮದೊಡನೆ ಮಾಯಾದೇವಿಯನ್ನು ಪಟ್ಟಣಕ್ಕೆ ಕರೆಯಿಸಿಕೊಂಡನು. ಕಪಿಲವಸ್ತು ಪಟ್ಟಣದ ಹತ್ತಿರ ಒಂದು ಅರಣ್ಯದಲ್ಲಿ ಅಸಿತದೇವಲ ಎಂಬ ಋಷಿಗೆ ಈ ಸಮಾಚಾರವು ತಿಳಿಯಲು ಆತನು ಕಪಿಲವಸ್ತು ಪಟ್ಟಣಕ್ಕೆ ಬಂದು ರಾಜಪುತ್ರನನ್ನು ನೋಡಿದನು. ಮಹಾಪುರುಷನಿಗಿರಬೇಕಾದ ೩೨ ಮುಖ್ಯಲಕ್ಷಣಗಳೂ. ೮೦ ಉಪಲಕ್ಷಣಗಳು, ಆ ಕೂಸಿನಲ್ಲಿದ್ದುದನ್ನು ಕಂಡೊಡನೆ ಆ ಋಷಿಯ ಕಣ್ಣುಗಳಿಂದ ನೀರು ಸುರಿಯಲಾರಂಭವಾಯಿತು. ಆಗ ನೆರೆಯಲ್ಲಿದ್ದವರು ಆಶ್ಚರ್ಯದಿಂದ "ಋಷಿಗಳೇ? ಏಕೆ ಅಳುವಿರಿ? ಮಗುವಿಗೆ ವಿಪತ್ತೇನಾದರೂ ಇದೆಯೇ?" ಎಂದು ಕೇಳಿದರು. ಆ ಋಷಿಯು ಆಗ ಎಲೈ ಶಾಕ್ಯರೆ? ನಿಮ್ಮ ಕುಲದಲ್ಲಿ ಈ ರತ್ನವು ಜನ್ಮವೆತ್ತಿದುದರಿಂದ ನೀವು ಆತ್ಯಾನಂದಹೊಂದಿರಿ. **ಈ ಮಗುವಿನ ಲಕ್ಷಣಗಳ ಮೇಲಿಂದ ಈತನು ಮಹಾಜ್ಞಾನಿಯಾಗಿ ಅಸಂಖ್ಯ ಪ್ರಾಣಿಗಳನ್ನು ಉದ್ಧಾರಮಾಡುವನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.** ಆದರೆ ನನ್ನ ಆಯುಷ್ಯವು ಇನ್ನು ಸ್ವಲ್ಪವೇ ಉಳಿದಿರುವುದರಿಂದ ಅಮೃತಪ್ರಾಯವಾದ ಈತನ ಧರ್ಮೋಪದೇಶವನ್ನು ಹೊಂದಲು ನನಗೆ ಅವಕಾಶವಿಲ್ಲವಲ್ಲಾ ಎಂದು ಯೋಚಿಸಿ ನಾನಾ ದುಃಖಿಸಿದೆನು. ನಿಮ್ಮಲ್ಲಿ ಯಾರು ಈತನ ಧರ್ಮೋಪದೇಶವನ್ನು ಕೇಳಲು ಬದುಕಿರುವರೋ ಅವರೇ ಧನ್ಯರು ಎಂದು ಹೇಳಿ ಆ ಋಷಿಯ ಮಗುವಿಗೆ ನಮಸ್ಕರಿಸಿ ತನ್ನ ಆಶ್ರಮಕ್ಕೆ ಹೋದನು.

ಶುದ್ಧೋದನನ ರಾಜಸಭೆಯಲ್ಲಿ ರಾಮ, ಧಜ, ಲಕ್ಷ್ಮಣ, ಮಂತ್ರಿ, ಕೌಂಡಿಣ್ಯ, ಭೋಜ, ಸುಯಾಮ ಮತ್ತು ಸುದತ್ತ ಎಂಬ ಎಂಟುಜನ ವಿದ್ವಾಂಸರಿದ್ದರು. ಇವರಲ್ಲಿ ಏಳುಜನರು ಆ

ಮಗುವಿನ ಜಾತಕದ ವಿಷಯದಲ್ಲಿ ಅನಿಶ್ಚಿತ ಫಲವನ್ನು ಹೇಳಿದರು. ಆದರೆ **ಕೌಂಡಿಣ್ಯನು ಮಾತ್ರ ಈತನು ಖಂಡಿತವಾಗಿಯೂ ಮಹಾಜ್ಞಾನಿಯಾಗುತ್ತಾನೆಂಬುದಾಗಿಯೇ ಹೇಳಿದನು**. ಶುದ್ಧೋದನನು ಈ ಪುತ್ರನಿಂದ ತನ್ನ ಮನೋರಥವು ಸಿದ್ಧಿಸುವುದೆಂದು ಆತನಿಗೆ ಸಿದ್ಧಾರ್ಥನೆಂಬ ಹೆಸರನ್ನಿಡಿಸಿದನು. ಸಿದ್ಧಾರ್ಥನು ಏಳನೆಯ ದಿವಸದವನಿರುವಾಗಲೇ ಆತನ ತಾಯಿಯಾದ ಮಾಯಾದೇವಿಯು ಪರಲೋಕವಾಸಿಯಾದಳು. ಅನಂತರ ಶುದ್ಧೋದನನ ಇನ್ನೊಬ್ಬ ಪತ್ನಿಯಾದ ಗೌತಮಿ ಎಂಬುವಳು ಸಿದ್ಧಾರ್ಥನನ್ನು ಬಹು ಪ್ರೇಮದಿಂದ ಸಾಕಿ ಸಲುಹಿದಳು.

ಕಪಿಲವಸ್ತು ಪಟ್ಟಣದಲ್ಲಿ ಪ್ರತಿವರ್ಷ ವಪ್ಪಮಂಗಲ ಎಂಬ ಉತ್ಸವವು ಬಹು ಸಂಭ್ರಮದಿಂದ ಜರುಗುತ್ತಿದ್ದಿತು. ಆ ದಿವಸ ಶಾಕ್ಯರಾಜನು ತಾನೇ ಹೊಲವನ್ನುಳುತ್ತಿದ್ದನು. ಶುದ್ಧೋಧನ ರಾಜನು ಒಂದು ವರ್ಷ ಈ ಉತ್ಸವಕ್ಕೋಸ್ಕರ ತನ್ನ ಮಗನಾದ ಸಿದ್ಧಾರ್ಥನನ್ನು ಕರೆದುಕೊಂಡು ಹೊಲಕ್ಕೆ ಹೋದನು. ಅಲ್ಲಿ ಒಂದು ನೇರಲಗಿಡದ ಕೆಳಗೆ ತನ್ನ ಮಗನನ್ನು ಕುಳ್ಳಿರಿಸಿ ಆತನ ರಕ್ಷಣೆಗೆ ಒಬ್ಬ ಸೇವಕಳನ್ನು ನಿಯಮಿಸಿ ತಾನು ಪುರಜನರೊಂದಿಗೆ ಉಳುವುದಕ್ಕೆ ಹೋದನು. ಆ ಸೇವಕಳು ಸಿದ್ಧಾರ್ಥನನ್ನು ಅಲ್ಲಿಯೇ ಮಲಗಿಸಿ ಆ ಉತ್ಸವಕ್ಕಾಗಿ ಬಂದಿದ್ದ ಅಂಗಡಿಗಳನ್ನು ತಾನು ನೋಡಲಿಕ್ಕೆ ಹೋಗಿ ಆ ಮಗುವನ್ನು ಮರೆತುಬಿಟ್ಟಳು. ಇತ್ತ ಸಿದ್ಧಾರ್ಥನು ಎಚ್ಚೆತ್ತು ಯಾರು ಹತ್ತಿರ ಇಲ್ಲದಿದ್ದದನ್ನು ನೋಡಿ ವಜ್ರಾಸನವನ್ನು ಹಾಕಿ ಧ್ಯಾನ ಮಗ್ನನಾದನು. ಅನಂತರ ಆ ಸೇವಕಳು ಬಂದು ಈ ಆಶ್ಚರ್ಯವನ್ನು ನೋಡಿ ಓಡುತ್ತ ಹೋಗಿ ಮಹಾರಾಜನಿಗೆ ಈ ಸಂಗತಿಯನ್ನು ತಿಳಿಸಿದಳು. ರಾಜನು ಸಿದ್ಧಾರ್ಥನ ಈ ಧ್ಯಾನನಿಷ್ಠೆಯನ್ನು ನೋಡಿ ಅಸಿತ ಋಷಿಯ ಭವಿಷ್ಯವು ನಿಜವೆಂದು ನಂಬಿದನು.

ಶುದ್ಧೋದನ ರಾಜನಿಗೆ ತನ್ನ ಮಗನು ಮಹಾಜ್ಞಾನಿಯಾಗುವುದು ಬೇಕಾಗಿರಲಿಲ್ಲ. ಆತನಿಗೆ ತನ್ನ ಪುತ್ರನು ಮಹಾ ಪರಾಕ್ರಮಶಾಲಿಯಾಗಿ ರಾಜವೈಭವದಲ್ಲಿರುವುದೇ ಇಷ್ಟವಾಗಿದ್ದಿತು. ಆದಕಾರಣ ಆ ಉತ್ಸವವನ್ನು ತೀರಿಸಿಕೊಂಡು ಬಂದನಂತರ ಸಿದ್ಧಾರ್ಥನು ಜ್ಞಾನಿಯಾಗುವ ವಿಷಯದಲ್ಲಿ ಯಾರು ಸಂಶಯಯುಕ್ತವಾದ ಭವಿಷ್ಯವನ್ನು ಹೇಳಿದ್ದರೋ ಆ ಏಳುಜನ ಪಂಡಿತರನ್ನು ಕರೆಯಿಸಿ ನಡೆದ ವರ್ತಮಾನವನ್ನು ತಿಳುಹಿಸಿ ಇದಕ್ಕುಪಾಯವೇನೆಂದು ಕೇಳಿದನು. ಆಗ ಆ ಪಂಡಿತು ಹೇಳಿದುದೇನೆಂದರೆ–

"ವೃದ್ಧರು, ರೋಗಿಗಳು, ಮತ್ತು ಶವಗಳು ಸಿದ್ಧಾರ್ಥನ ಕಣ್ಣಿಗೆ ಕಾಣದಂತೆ ಆತನನ್ನು ಬೇರೆ ಸ್ಥಳದಲ್ಲಿಡಬೇಕು. ಏಕೆಂದರೆ ಅವುಗಳನ್ನು ನೋಡುವುದರಿಂದ ಆತನಲ್ಲಿ ವೈರಾಗ್ಯವುಂಟಾಗುವುದು." ಆಗ ಶುದ್ಧೋಧನನು ಬೇರೆ ಬೇರೆ ಋತುಗಳಿಗೆ ಅನುಕೂಲವಾಗುವಂತೆ ಬೇರೆ ಬೇರೆ ರಾಜ ಭವನಗಳನ್ನು ಕಟ್ಟಿಸಿ ಅಲ್ಲಿ ಯಾವ ರೋಗಿಗಳು ವೃದ್ಧರೂ ಇರದಂತೆ ಅಪ್ಪಣೆ ಮಾಡಿ ಸಿದ್ಧಾರ್ಥನನ್ನು ಆ ಮಂದಿರಗಳಲ್ಲಿರಿಸಿದನು. **ಸಿದ್ಧಾರ್ಥನಿಗೆ ವಿಶ್ವಾಮಿತ್ರನೆಂಬ ಪುರೋಹಿತನು ವಿದ್ಯೆಯನ್ನು ಕಲಿಸುತ್ತಿದ್ದನು**. ಸ್ವಲ್ಪ ದಿವಸಗಳಲ್ಲಿಯೇ ಸಿದ್ಧಾರ್ಥನು ಯುದ್ಧ ವಿದ್ಯೆಯಲ್ಲಿಯೂ ಪ್ರವೀಣನಾದನು. ಅನಂತರ ಯಶೋಧರಾದೇವಿಯೆಂಬ ಕನ್ಯೆಯನ್ನು ತಂದು ಸಿದ್ಧಾರ್ಥನಿಗೆ ಲಗ್ನಮಾಡಲು ಈ ಉಭಯ ಸತಿಪತಿಗಳೂ ಬಹು ಸಂತೋಷದಿಂದ ಕಾಲಕಳೆಯುತ್ತಿದ್ದರು.

❖❖

೨ನೆಯ ಪ್ರಕರಣ

ಸಂಸಾರ ತ್ಯಾಗ

ಸಿದ್ಧಾರ್ಥನು ಯಶೋಧರೆಯೆಂಬ ತನ್ನ ಪ್ರಿಯಪತ್ನಿಯೊಡನೆ ಅತ್ಯಾನಂದದಿಂದ ಕಾಲಕಳೆಯುತ್ತಿರುವಾಗ ಒಂದು ದಿವಸ ತನ್ನ ತಂದೆಯು ಉದ್ಯಾನವನವನ್ನೂ, ಕಪಿಲವಸ್ತು ಪಟ್ಟಣವನ್ನೂ ನೋಡಬೇಕೆಂದಪೇಕ್ಷಿಸಿದನು. ಈ ಸಮಾಚಾರವು ಶುದ್ಧೋಧನರಾಜನಿಗೆ ತಿಳಿದೊಡನೆ ಆತನು ರಾಜಬೀದಿಗಳನ್ನೆಲ್ಲಾ ಅಂದಗೊಳಿಸುವಂತೆಯೂ, ಮಾರ್ಗದಲ್ಲಿ ಕುರುಡರು, ಕುಂಟರು, ಮುದಕರೇ ಮೊದಲಾದ ಅಶಕ್ತರು ಓಡಾಡದಂತೆಯೂ ಅಪ್ಪಣೆಮಾಡಿದನು.

ಸಿದ್ಧಾರ್ಥನು ರಥದಲ್ಲಿ ಕುಳಿತು ರಾಜಧಾನಿಯಾದ ಕಪಿಲವಸ್ತು ಪಟ್ಟಣವನ್ನು ಪ್ರವೇಶಿಸಲು ಮಧ್ಯದಾರಿಯಲ್ಲಿ ಹಣ್ಣು ಹಣ್ಣಾದ ಒಬ್ಬ ಮುದುಕನು ಬಂದನು. ಆಗ ಸಿದ್ಧಾರ್ಥನು ತನ್ನ ಸಾರಥಿಯಾದ ಛನ್ನನನ್ನು ಕುರಿತು ಇದಾವ ಪ್ರಾಣಿ? ಮನುಷ್ಯನಂತೆ ಕಾಣುತ್ತಿದ್ದರೂ ಕೂದಲುಗಳು ಬೆಳ್ಳಗಿವೆ. ಕೈಯಲ್ಲಿ ಕೋಲನ್ನು ಹಿಡಿದುಕೊಂಡು ನಡೆಯುತ್ತಾ ಇದೆ ಎಂದು ಕೇಳಲು ಆಗ ಆ ಸಾರಥಿಯು ಈತನು ನಮ್ಮಂತೆಯೇ ಮನುಷ್ಯನಾಗಿದ್ದಾನೆ. ಆತನಿಗೆ ಮುಪ್ಪು ಬಂದಿದೆ. ನಮಗಾದರೂ ಇನ್ನು ಕೆಲವು ಕಾಲದ ನಂತರ ಇದೇ ಸ್ಥಿತಿಯು ಬರುವುದು ಎಂದು ಹೇಳಿದನು. ಆಗ ಸಿದ್ಧಾರ್ಥನು ರಥವನ್ನು ಹಿಂದೆ ತಿರುಗಿಸಲು ಹೇಳಿ ತನ್ನ ವಾಸಸ್ಥಾನಕ್ಕೆ ಬಂದು ವೃದ್ಧಾಪ್ಯದ ಶೋಚನೀಯ ಸ್ಥಿತಿಯನ್ನು ಕುರಿತು ಯೋಚಿಸಲುಪಕ್ರಮಿಸಿದರನು. ತನ್ನ ಮಗನು ಹಿಂತಿರುಗಿಹೋದ ಸಮಾಚಾರವನ್ನು ಶುದ್ಧೋದನ ರಾಜನು ಕೇಳಿ ಬಹು ಚಿಂತಿಸಲಾರಂಭಿಸಿದನು.

ಸಿದ್ಧಾರ್ಥನು ಪಟ್ಟಣವನ್ನು ನೋಡಬೇಕೆಂದು ಹೋದಾಗ ಇದೇ ಪ್ರಕಾರ ಮತ್ತೊಂದು ಸಾರೆ ಒಬ್ಬ ಮಹಾರೋಗಿಯನ್ನೂ, ಇನ್ನೊಂದು ಸಾರೆ ಒಂದು ಶವವನ್ನೂ ಮಧ್ಯಮಾರ್ಗದಲ್ಲಿ ಕಂಡು ಖಿನ್ನ ಮನಸ್ಸಿನಿಂದ ಹಿಂತಿರುಗಿ ಬಂದು ಮುಪ್ಪು, ರೋಗ ಮತ್ತು ಮರಣಗಳನ್ನು ಕಂಡು ಯಾವಾಗಲೂ ಚಿಂತಿಸಲಾರಂಭಿಸಿದನೆಂತಲೂ, ಸಂಸಾರತ್ಯಾಗದ ವಿಷಯದಲ್ಲಿ ವೈರಾಗ್ಯವುಂಟಾಗಲು ಇವೇ ಕಾರಣಗಳಾದವೆಂತಲೂ, ಬೌದ್ಧ ಗ್ರಂಥಗಳಲ್ಲಿ ವಿಸ್ತಾರವಾಗಿ ವಿವರಿಸಿದೆ. ನಾಲ್ಕನೆಯ ಸಾರೆ ಈತನು ಪುರಪ್ರವೇಶ ಮಾಡಿದಾಗ ಒಂದು ಗಿಡದಕೆಳಗೆ ಕುಳಿತಿದ್ದ ಒಬ್ಬ ಸನ್ಯಾಸಿಯನ್ನು ನೋಡಿ ಸಂತೋಷಿಸಿ ಆ ದಿವಸ ರಥವನ್ನು ಮುಂದಕ್ಕೆ ಹೊಡೆಯಿಸಿ ಉದ್ಯಾನವನ್ನು ನೋಡಿಕೊಂಡು ಬಂದನು. ಅಷ್ಟರಲ್ಲಿ ಆತನ ಪತ್ನಿಯು ಒಂದು ಗಂಡು ಕೂಸನ್ನು ಹೆತ್ತಳು.

ಸಿದ್ಧಾರ್ಥನಿಗೆ ಈ ಸಮಾಚಾರವು ತಿಳಿದೊಡನೆ ಇದೊಂದು "ರಾಹು" ಗಂಟು ಬಿದ್ದಿತೇ ಎಂದು ಖೇದದಿಂದ ನುಡಿದನು. ಮಗನು ಈ ಪ್ರಕಾರ ಹೇಳಿದುದನ್ನು ಶುದ್ಧೋಧದನನು ಕೇಳಿ ಇನ್ನು ಮೇಲೆ ನನ್ನ ಮಗನು ಸಂಸಾರವನ್ನು ಬಿಟ್ಟು ಹೋಗದತಾಯಿತೆಂದು ಸಂತೋಷಪಟ್ಟು ಆ ತನ್ನ ಮೊಮ್ಮಗನಿಗೆ "ರಾಹುಲ" ಎಂಬ ಹೆಸನ್ನೇ ಇಡಿಸಿ ಪಟ್ಟಣದಲ್ಲಿ ಮಹಾವೈಭವದಿಂದ ಉತ್ಸವನ್ನು ಮಾಡಿಸಿದನು.

ತಂದೆಯು ಈ ಪ್ರಕಾರ ಅತ್ಯಾನಂದದಿಂದಿದ್ದರೂ ಸಿದ್ಧಾರ್ಥನು ಮಾತ್ರ ಮುಪ್ಪು, ರೋಗ, ಮರಣಗಳ ದುಃಖ ನಿವಾರಣೆಯ ವಿಷಯದಲ್ಲಿಯೇ ಮಗ್ನನಾಗಿದ್ದನು. ಅರಮನೆಯ ವಾರಾಂಗನೆಯರು ಬಂದು ಸಂಗೀತ ನಾಟ್ಯಗಳಿಂದ ಸಿದ್ಧಾರ್ಥನ ಮನಸ್ಸನ್ನು ಸಂತೋಷಗೊಳಿಸಲಾರಂಭಿಸಿದರು. ಸಿದ್ಧಾರ್ಥನಿಗಾದರೋ ಆ ನೃತ್ಯ ಗಾಯನಾದಿಗಳಿಂದ ಸಂತೋಷವಾಗದೆ ನಿದ್ರೆಯೇ ಬಂದಿತು. ಆಗ ಆ ಸ್ತ್ರೀಯರು ತಮ್ಮ ತಮ್ಮ ವಾದ್ಯಗಳನ್ನು ಅಲ್ಲಿಯೇ ಇಟ್ಟು ತಾವೂ ಅಲ್ಲಿಯೇ ಮಲಗಿಕೊಂಡರು.

ಸಿದ್ಧಾರ್ಥನು ಮಧ್ಯರಾತ್ರಿಯಲ್ಲಿ ಎಚ್ಚೆತ್ತು ಎದ್ದು ಕುಳಿತುಕೊಂಡು **ಜನ್ಮ, ಜರೆ, ವ್ಯಾಧಿ** ಮತ್ತು ಮರಣಗಳ ಸಂಬಂಧವಾಗಿ ಯೋಚಿಸಲುಪಕ್ರಮಿಸಿದನು. ಆತನ ಮುಂಭಾಗದಲ್ಲಿ ಮಲಗಿದ್ದ ಆ ವೇಶ್ಯಾಂಗನೆಯರಲ್ಲಿ ಕೆಲವರು ಉಟ್ಟುಕೊಂಡ ವಸ್ತುಗಳು ವ್ಯತ್ಯಾಸವಾಗಿದ್ದವು. ಕೆಲವರು ಸ್ವಪ್ನದಲ್ಲಿ ಹಲಬುತ್ತಿದ್ದರು. ಕೆಲವರು ಹಲ್ಲು ಕಡಿಯುತ್ತಿದ್ದರು. ಅವರ ಕಡೆಗೆ ಸಿದ್ಧಾರ್ಥನು ನೋಡಿ ತನ್ನಲ್ಲಿಯೇ ತಾನು ಯೋಚಿಸಿದ್ದೇನೆಂದರೆ :

"ಈ ಮುಂಚೆ ಈ ಸ್ತ್ರೀಯರೆಲ್ಲಾ ನಾನಾ ಅಭಿನಯಗಳಿಂದಲೂ, ತಾವು ದೇವಲೋಕದ ಅಪ್ಸರ ಸ್ತ್ರೀಯರೋ ಏನೋ ಎಂಬಂತೆ ನಟಿಸಿದರಲ್ಲಾ! ಅದೆಲ್ಲಾ ಭ್ರಮೆಯೇ ಸರಿ. ಈಗ ಇವರ ನಿಜಸ್ಥಿತಿಯು ತೋರುತ್ತಲಿದೆ. **ನಿದ್ರೆಯು ಇಹಲೋಕದಲ್ಲಿ ಒಂದು ಚಿಕ್ಕದಾದ ಮರಣದಂತೆಯೇ ಸರಿ. ಮನುಷ್ಯನ ಮರಣೋತ್ತರದ ಸ್ಥಿತಿಯನ್ನು ಇದರ ಮೇಲಿಂದ ಊಹಿಸಬಹುದು.** ಈಗ ಈ ಸ್ಥಳವು ಸಜೀವಿಗಳಾದ ಶವಗಳುಳ್ಳ ಸ್ಮಶಾನದಂತೆಯೇ ತೋರುತ್ತಲಿದೆ!"

ಸಿದ್ಧಾರ್ಥನು ಈ ಪ್ರಕಾರ ಯೋಚಿಸುತ್ತಾ ಮಂಚದಿಂದ ಕೆಳಗಿಳಿದು ಹೊರಗೆ ಬಂದು ಅಲ್ಲಿ ಮಲಗಿದ್ದ ಸೇವಕನನ್ನು ಎಬ್ಬಿಸಿ ಪ್ರಯಾಣಕ್ಕೆ ಒಂದು ಒಳ್ಳೆಯ ಕುದುರೆಯನ್ನು ಈಗಲೇ ತೆಗೆದುಕೊಂಡು ಬರಬೇಕೆಂದು ಹೇಳಿದನು. ಛನ್ನನೆಂಬ ಆ ಸೇವಕನು ಆಗಲೇ ಕುದುರೆಯ ಲಾಯಕ್ಕೆ ಹೋಗಿ ಕಂಥ ಎಂಬ ಒಂದು ದಿವ್ಯವಾದ ಕುದುರೆಯನ್ನು ಹಿಡಿದುಕೊಂಡುಬಂದನು. ಆಗ ಸಿದ್ಧಾರ್ಥನು ತನ್ನ ಉಡುಪನ್ನು ಹಾಕಿಕೊಂಡು ಕೆಳಗಿಳಿಯುವಷ್ಟರಲ್ಲಿ ತನ್ನ ಪ್ರಿಯ ಪತ್ನಿಯನ್ನು ಮತ್ತು ಆ ದಿವಸವೇ ಹುಟ್ಟಿದ್ದ ತನ್ನ ಮಗನನ್ನೂ ನೋಡಬೇಕೆಂಬ ಅಪೇಕ್ಷೆಯುಂಟಾಗಲು ರಾಣಿಯ ವಾಸಸ್ಥಾನದ ಕಡೆಗೆ ಹೋದನು.

ಯಶೋಧರೆಯು ಮಗುವಿನ ಮೇಲೆ ಕೈಹಾಕಿಕೊಂಡು ಮಲಗಿದ್ದಳು. ಆದುದರಿಂದ ಕೂಸಿನ ಮುಖವು ಕಾಣುವಂತಿರಲಿಲ್ಲ. ಆಗ ಸಿದ್ಧಾರ್ಥನು ಪತ್ನಿಯ ಕೈಯನ್ನು ಸರಿಸಿ ಮಗನ ಮುಖವನ್ನು ನೋಡಬೇಕೆಂದು ಯೋಚಿಸಿದನು. ಆದರೆ ಹಾಗೆ ಮಾಡುವುದರಿಂದ ಪತ್ನಿಯು ಎಚ್ಚೆತ್ತು ತನ್ನ ಪ್ರಯಾಣಕ್ಕೆ ವಿಘ್ನವನ್ನುಂಟುಮಾಡಬಹುದೆಂದು ತಿಳಿದು ಹಾಗೆ ದೂರದಲ್ಲಿಯೇ ನಿಂತು ಪತ್ನಿಯನ್ನು

ಎಚ್ಚೆರಗೊಳಿಸಲೋ, ಬೇಡವೋ, ಎಂದು ಯೋಚಿಸಲಾರಂಭಿಸಿದನು. ಸಿದ್ಧಾರ್ಥನು ಕೊನೆಗೆ ನಿರ್ಧರಿಸಿದ್ದೇನೆಂದರೆ :

"ಜನರು ಜನ್ಮ ಜರಾದಿ ದುಃಖಗಳಿಂದ ಮುಕ್ತರಾಗುವ ಮಾರ್ಗವು ನನಗೆ ಗೊತ್ತಾದರೆ ನನ್ನ ಪತ್ನಿ ಪುತ್ರರಿಗೂ ಪ್ರಯೋಜನವನ್ನುಂಟುಮಾಡಬಹುದು. ಆದರೆ ಯಶೋಧರೆಯನ್ನು ಎಚ್ಚರಗೊಳಿಸಿ ನಾನು ಪತ್ನಿಪುತ್ರರ ಮೋಹದಲ್ಲಿಯೇ ಶಿಲ್ಕಿದರೆ ಮೋಕ್ಷ ಮಾರ್ಗವು ತಪ್ಪುವುದೇ ನಿಶ್ಚಯ. ಮಗನ ಮೋರೆಯನ್ನು ಅನಂತರ ನೋಡಬಹುದು. ಪತ್ನಿಯನ್ನೂ ಕಡೆಗೆ ಸಮಾಧಾನಗೊಳಿಸಬಹುದು. **ಆದರೆ ಮೋಕ್ಷಮಾರ್ಗವನ್ನು ಗೊತ್ತು ಹಚ್ಚಲು ನನಗೆ ಈಗ ದೊರೆತಿರುವಂತಹ ಸಮಯವು ಇನ್ನೆಂದಿಗೂ ದೊರೆಯಲಾರದು.** ತಪಶ್ಚರ್ಯದ ತೀವ್ರತರವಾದ ಕ್ಲೇಶವನ್ನನುಭವಿಸಲು ಈಗ ನನ್ನ ದೇಹದಲ್ಲಿ ಸಾಮರ್ಥ್ಯವಿದೆ. ಈ ಯೌವನಕಾಲವು ಕಳೆದು ಹೋಯಿತೆಂದರೆ ಅನಂತರ ಧರ್ಮಸಾಧನೆಗೆ ಬೇಕಾಗುವ ಸ್ಥಿರಪ್ರಯತ್ನವು ನನ್ನಿಂದಾಗಲಾರದು. ಆದಕಾರಣ ಯಶೋಧರೆಯನ್ನು ನಿದ್ರಾಸುಖದಲ್ಲಿಯೇ ಬಿಟ್ಟು ನಾನು ಹಾಗೆಯೇ ಹೊರಟುಹೋಗುವುದೇ ಯುಕ್ತವಾಗಿದೆ."

ಈ ಪ್ರಕಾರ ನಿಶ್ಚಯಿಸಿ ತನ್ನಲ್ಲಿಯೇ ಸಿದ್ಧಾರ್ಥನು ಹೇಲಿಕೊಂಡದ್ದೇನೆಂದರೆ "ಪ್ರಿಯ ಯಶೋಧರೆ, ನಾನು ನಿನಗೆ ತಿಳಿಸದಂತೆ ಅರಣ್ಯವಾಸಕ್ಕೆ ಹೋಗುತ್ತೇನೆಂದು ನಿನ್ನಲ್ಲಿ ನನ್ನ ಪ್ರೇಮವಿಲ್ಲವೆಂದು ತಿಳಿಯಬೇಡ. ಅನ್ಯ ಪ್ರಾಣಿಗಳ ದುಃಖದಿಂದಲೇ ನನ್ನ ಅಂತಃಕರಣವು ಕರಗಿರುವಾಗ ಅನೇಕ ವರ್ಷಗಳಿಂದ ನನ್ನ ಸಹವಾಸದಲ್ಲಿದ್ದ ನಿನ್ನ ವಿಷಯದಲ್ಲಿ ಪ್ರೇಮವಿಲ್ಲದಂತಾಗುವುದು ಸಾಧ್ಯವೇ?"

"ಬಂಧು ಬಾಂಧವರೇ" ನಾನು ಬಹು ಕಠೋರ ಹೃದಯದವನೆಂದು ನೀವು ಹೇಳಿದರೂ ಹೇಳಿರಿ ಆದರೆ ನಾನು ಮಾತ್ರ ಮೊದಲಿಗಿಂತಲೂ ಈಗ ಬಹು ಕೋಮಲ ಹೃದಯದವನಾಗಿದ್ದೇನೆಂದು ನಿಶ್ಚಯವಾಗಿ ಹೇಳುತ್ತೇನೆ. ಮೊದಲು ನನ್ನ ದುಃಖವೇ ನನ್ನನ್ನು ಬಾಧಿಸುತ್ತಿದ್ದಿತು. ಆದರೆ ಈಗ **ಸಕಲ ಪ್ರಾಣಿಗಳ ದುಃಖದಿಂದ ನನ್ನ ಮನಸ್ಸು ಮರುಗುತ್ತಲಿದೆ,** ಇಷ್ಟ ಮಿತ್ರರೆಲ್ಲಾ ನನ್ನ ಸುಖಕ್ಕಾಗಿಯೇ ಇದ್ದಾರೆಂದು ತಿಳಿದಿದ್ದೆನು. ಆದರೆ **ಈಗ ಜಗತ್ತಿನ ಕಲ್ಯಾಣಕ್ಕಾಗಿಯೇ ಜೀವಿಸಬೇಕಾಗಿದೆಯೆಂದು ಭಾವಿಸಿದ್ದೇನೆ.**

"ನನ್ನ ವಿಷಯದಲ್ಲಿ ಯಾರೂ ಏನನ್ನಾದರೂ ಹೇಳಲಿ. ನಾನು ಸಂಸಾರತ್ಯಾಗ ಮಾಡುವುದು ಕೇವಲ ನನ್ನ ಆತ್ಮಕ್ಕೇನೇ ಮೋಕ್ಷ ದೊರೆಯಬೇಕೆಂಬ ಉದ್ದೇಶದಿಂದಲ್ಲ; **ನಾನು ದುಃಖಗಳಿಂದ ಬಳಲುತ್ತಿರುವ ಮನುಷ್ಯಜಾತಿಗೆ ಸುಖಸ್ಥಿತಿಯು ಪ್ರಾಪ್ತವಾಗುತ್ತದೆಯೋ ಇಲ್ಲವೋ ಎಂಬುದನ್ನು ಶೋಧಿಸುವುದಕ್ಕಾಗಿಯೇ ನಾನು ಹೋಗುತ್ತಿದ್ದೇನೆ."**

ಸಿದ್ಧಾರ್ಥನಿಗೆ ಆಗ ಇಪ್ಪತ್ತೊಂಬತ್ತು ವರ್ಷಗಳಾಗಿದ್ದವು. ಅಂತಹ ಕಡುಯೌವನದಲ್ಲಿ ಆ ಪ್ರಿಯಪತ್ನಿ ಪುತ್ರರನ್ನೂ, ರಾಜವೈಭವವನ್ನೂ ತೃಣೀಕರಿಸಿ ಅರಣ್ಯವಾಸಿಯಾಗಬೇಕೆಂದೇ ನಿರ್ಧರಿಸಿ ಕೆಳಗಿಳಿಸಿದನು. ಆಗ ಮಧ್ಯರಾತ್ರಿಯು ಮೀರಿಹೋಗಿದ್ದಿತು. ಆ ದಿವಸ ಆಷಾಢ ಶುದ್ಧ ಪೌರ್ಣಿಮೆ ಮೋಡಗಳ ಸುಳಿದಾಟವಿದ್ದರೂ ಬೆಳದಿಂಗಳ ಮಂದಪ್ರಕಾಶದಿಂದ ಮಾರ್ಗವು ಚೆನ್ನಾಗಿ ಕಾಣುತ್ತಿದ್ದಿತು. ಸಿದ್ಧಾರ್ಥನು ಕುದುರೆಯನ್ನೇರಿ ಆ ಸೇವಕನಿಗೆ ತನ್ನ ಹಿಂಭಾಗದಲ್ಲಿ ಕುಳಿತುಕೊಳ್ಳಲು ಹೇಳಿದನು. ಈ ಪ್ರಕಾರ ಉಭಯರೂ ಆ ಒಂದೇ ಕುದುರೆಯಮೇಲೆ ಕುಳಿತುಕೊಂಡು ಹೊರಟರು. ಕುದುರೆಯು

ಬಹು ಬಲವಾಗಿದ್ದುದರಿಂದ ಇಬ್ಬರು ಕುಳಿತುಕೊಂಡಿದ್ದರೂ ಬಹು ವೇಗದಿಂದಲೇ ಹೋಯಿತು. ಪಟ್ಟಣದ ಹೊರಭಾಗಕ್ಕೆ ಬಂದನಂತರ ಸಿದ್ಧಾರ್ಥನು ತನ್ನ ಪ್ರೀತಿಯ ಕಪಿಲವಸ್ತು ಪಟ್ಟಣವನ್ನು ತಿರುಗಿನೋಡಿ ಛನ್ನನಿಗೆ ಹೇಳಿದುದೇನೆಂದರೆ :

"ಛನ್ನ! ಈ ನನ್ನ ಪ್ರೀತಿಯ ಪಟ್ಟಣದ ಕಡೆಯ ದರ್ಶನವನ್ನು ತೆಗೆದುಕೊಳ್ಳುತ್ತೇನೆ. ನನ್ನ ಪ್ರಯತ್ನವು ಫಲಕಾರಿಯಾದರೆ ಈ ಪಟ್ಟಣಕ್ಕೆ ಬರುವೆನು. ಇಲ್ಲದಿದ್ದರೆ ಇದೇ ಕೊನೆಯ ದರ್ಶನ ಛನ್ನ, ನಾವು ಇನ್ನು ರಾಜಗೃಹ ನಗರದ ಮಾರ್ಗವಾಗಿ ಹೋಗೋಣ ಆ ಪಟ್ಟಣದ ಸುತ್ತಲೂ ಅನೇಕ ತಪಸ್ವಿಗಳಿದ್ದಾರೆಂದು ಕೇಳಿದ್ದೇನೆ. ಅವರು ನನ್ನ ಸಂದೇಹಗಳನ್ನು ನಿವಾರಣೆ ಮಾಡಬಹುದು."

ಸಿದ್ಧಾರ್ಥನು ಈ ಪ್ರಕಾರ ಹೇಳಿ ಕುದುರೆಯನ್ನು ಮುಂದಕ್ಕೆ ಬಿಟ್ಟನು. ಆ ದಿವಸ ಮೂರು ರಾಜ್ಯಗಳನ್ನೂ ದಾಟಿ ಮರು ದಿವಸ ಅನೋಮ ಎಂಬ ನದಿಯ ದಂಡೆಗೆ ಬಂದಿಳಿದು ಕುದುರೆಯನ್ನು ಛನ್ನನ ಸ್ವಾಧಿನಕ್ಕೆ ಕೊಟ್ಟು ನೀನು ಇನ್ನು ಮೇಲೆ ಕುದುರೆಯನ್ನು ತೆಗೆದುಕೊಂಡು ಊರಿಗೆ ಹೋಗು. ನಾನು ಇನ್ನು ಮುಂದೆ ನಡೆದುಕೊಂಡೇ ಹೋಗುವೆನು ಎಂದು ಹೇಳಿದನು.

ಛನ್ನನು ಈ ಮಾತುಗಳನ್ನು ಕೇಳಿ ಬಹು ದುಃಖದಿಂದ "ನಾನು ನಿಮ್ಮನ್ನು ಹೇಗೆ ಬಿಟ್ಟು ಹೋಗಲಿ? ಮಹಾರಾಜರು ಕೇಳಿದರೆ ನಾನೇನು ಹೇಳಲಿ?" ಎಂದು ಅರಿಕೆಮಾಡಿಕೊಳ್ಳಲು ಸಿದ್ಧಾರ್ಥನು "ಛನ್ನ! ನೀನು ಚಿಂತಿಸಬೇಡ, ಈ ನನ್ನ ಆಭರಣಗಳನ್ನೆಲ್ಲಾ ತೆಗೆದುಕೊಂಡು ಹೋಗಿ ನನ್ನ ತಂದೆಯವರ ಮುಂದಿಟ್ಟು ನಿಮ್ಮ ಮಗನು ಶಾಶ್ವತ ಸುಖಪ್ರಾಪ್ತಿಯ ಮಾರ್ಗವನ್ನು ಶೋಧಿಸುವುದಕ್ಕಾಗಿ ಹೋಗಿದ್ದಾನೆ. ಆ ಮಾರ್ಗವು ಗೊತ್ತಾದರೆ ಆತನು ನಿಮ್ಮ ದರ್ಶನಕ್ಕೆ ಬರುವನು. ಇಲ್ಲದಿದ್ದರೆ ಆತನ ಕೊನೆಯ ನಮಸ್ಕಾರ" ಎಂದು ಹೇಳು ಎಂಬುದಾಗಿ ತಿಳಿಸಿದನು.

ಸಿದ್ಧಾರ್ಥನು ಈ ಪ್ರಕಾರ ಹೇಳುತ್ತಿದ್ದಾಗ ಛನ್ನನ ಕಣ್ಣುಗಳಿಂದ ನೀರು ಸುರಿಯುತ್ತಿದ್ದಿತು. ಆತನು ದುಃಖಪಡುತ್ತಿದ್ದುದನ್ನು ನೋಡಿ ಸಿದ್ಧಾರ್ಥನು ಪುನಃ ಹೇಳಿದುದೇನೆಂದರೆ :

"ಛನ್ನ! ನಿನ್ನ ಸ್ವಾಮಿಭಕ್ತಿಯನ್ನು ಎಷ್ಟು ವರ್ಣಿಸಿದರೂ ತೀರದು. ಆದರೆ ನಿನಗೆ ನಿಜಸ್ಥಿತಿಯ ಜ್ಞಾನವು ಮಾತ್ರ ಇಲ್ಲವೇ ಇಲ್ಲ. ನಾನು ಮತ್ತು ನೀನು ಎಷ್ಟೇ ಕಾಲ ಕೂಡಿದ್ದರೂ ಕಡೆಗೆ ಮರಣವು ನಮ್ಮಿಬ್ಬರನ್ನೂ ಅಗಲಿಸುವುದಿಲ್ಲವೇ? ಆ ನಿಷ್ಕರುಣಿಯಾದ ಮೃತ್ಯುವಿನ ಬಾಯಿಯಿಂದ ಯಾವ ಪ್ರಾಣಿಗಳು ತಾನೆ ಪಾರಾಗಿ ಹೋಗಿವೆ? ಆದ ಕಾರಣ ಎಂದಾದರೂ ಸಂಭವಿಸುವ ವಿಯೋಗವು ಈ ದಿವಸವೇ ಬಂದ ಮಾತ್ರದಲ್ಲಿ ಇಷ್ಟು ಶೋಕಿಸುವುದೇಕೆ? ಈ ನನ್ನ ವಿಯೋಗವು ನಿರಂತರವಾದುದೆಂದು ಹೇಳಲಿಕ್ಕೂ ಬರುವಂತಿಲ್ಲ. ಏಕೆಂದರೆ ನನಗೆ ಸದ್ಧರ್ಮದ ಜ್ಞಾನವಾದರೆ ಪುನಃ ನಿನ್ನನ್ನು ಕಂಡೇಕಾಣುತ್ತೇನೆ. ಆದಕಾರಣ, ದುಃಖಿಸದೆ ನಾನು ಹೇಳಿದಂತೆ ಮಾಡು."

ಛನ್ನನ್ನು ತನ್ನ ಒಡೆಯನ ಅಪ್ಪಣೆಯ ಪ್ರಕಾರ ಕುದುರೆಯನ್ನು ಹಿಡಿದುಕೊಂಡು ಹೊರಡುವಷ್ಟರಲ್ಲಿ ಆ ಕುದುರೆಯು ತಟ್ಟನೆ ಭೂಮಿಯ ಮೇಲೆ ಬಿದ್ದು ಉರುಳಾಡಿ ಪ್ರಾಣವನ್ನು ಬಿಟ್ಟಿತು. ಆಗ ಛನ್ನನ ದುಃಖವು ಮತ್ತಷ್ಟೂ ಹೆಚ್ಚಿತು. ಆದರೂ ರಾಜಪುತ್ರನ ಅಪ್ಪಣೆಯ ಪ್ರಕಾರ ಆ ಎಲ್ಲಾ ದುಃಖಗಳನ್ನೂ ಸಹಿಸಿಕೊಂಡು ಕಪಿಲವಸ್ತು ಪಟ್ಟಣಕ್ಕೆ ಬಂದು ನಡೆದ ಸಂಗತಿಗಳನ್ನು ಮಹಾರಾಜರಲ್ಲಿ ವಿಜ್ಞಾಪಿಸಿಕೊಂಡನು.

❖❖

೩ನೆಯ ಪ್ರಕರಣ

ತಪಶ್ಚರ್ಯ

ಇತ್ತ ಸಿದ್ಧಾರ್ಥನು ರಾಜವೇಷವನ್ನು ತೆಗೆದುಹಾಕಿ ಭಿಕ್ಷುಗಳ (ಸನ್ಯಾಸಿಗಳ) ಉಡುಪನ್ನು ಹಾಕಿಕೊಂಡು ನಡೆದುಕೊಳ್ಳುತ್ತಾ ಏಳು ದಿವಸಗಳಲ್ಲಿ ರಾಜಗೃಹ ನಗರವನ್ನು ಸೇರಿದನು. ಆ ಪಟ್ಟಣಕ್ಕೆ ಬಂದ ನಂತರ ಮಧ್ಯಾನ್ಹದಲ್ಲಿ ತನ್ನ ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ರಾಜ ಬೀದಿಯಲ್ಲಿ ಹೋಗುತ್ತಿದ್ದನು. ಆ ಮಗಧದೇಶದ ರಾಜನಾದ ಬಿಂಬಸಾರನು ತನ್ನರಮನೆಯ ಮೇಲುಪ್ಪರಿಗೆಯ ಮೇಲಿಂದ ಸಿದ್ಧಾರ್ಥನನ್ನು ನೋಡಿ ಈ ತರುಣ ಸನ್ಯಾಸಿಯು ಯಾರಾಗಿರಬಹುದು? ಈತನ ಮುಖಕಾಂತಿಯನ್ನೂ, ಲಕ್ಷಣಗಳನ್ನೂ, ನೋಡಿದರೆ ಉತ್ತಮ ವಂಶಜನಂತೆ ಕಾಣುತ್ತಾನೆ ಎಂದು ಯೋಚಿಸಿ ತನ್ನ ದೂತರನ್ನು ಕರೆದು ಆ ಭಿಕ್ಷುಕನು ಎಲ್ಲಿಗೆ ಹೋಗಿ ಏನು ಮಾಡುತ್ತಾನೆಂಬುದನ್ನು ತಿಳಿದುಕೊಂಡು ಬರಬೇಕೆಂದು ಅವರಿಗೆ ಅಪ್ಪಣೆ ಮಾಡಿದನು.

ಸಿದ್ಧಾರ್ಥನು ಭಿಕ್ಷಾನ್ನವನ್ನು ತೆಗೆದುಕೊಂಡು ಆ ಪಟ್ಟಣದ ಹತ್ತಿರದಲ್ಲಿದ್ದ ಪಾಂಡವ ಪರ್ವತ ಎಂಬ ಗುಡ್ಡದ ಹತ್ತಿರ ಹೋಗಿ ನೆರಳಲ್ಲಿ ಒಂದು ಕಲ್ಲಿನ ಮೇಲೆ ಕುಳಿತುಕೊಂಡನು. ರಾಜದೂತರು ಇದನ್ನು ನೋಡಿ ಹಾಗೆಯೇ ತಿರುಗಿಹೋಗಿ ತಮ್ಮ ದೊರೆಯಲ್ಲಿ ಹೇಳಿದರು. ಆಗ ಬಿಂಬಿಸಾರಾಜನು ರಥದ ಮೇಲೆ ಕುಳಿತುಕೊಂಡು ಪಾಂಡವ ಪರ್ವತದ ಬಳಿಗೆ ಬಂದು ರಥವನ್ನಿಳಿದು ನಡೆದುಕೊಳ್ಳುತ್ತಾ ಸಿದ್ಧಾರ್ಥನ ಹತ್ತಿರ ಬಂದನು, ಸಿದ್ಧಾರ್ಥನು ಅಷ್ಟರಲ್ಲಿ ಊಟವನ್ನು ಮಾಡಿ ಭಿಕ್ಷಾಪಾತ್ರೆಯನ್ನು ತೊಳೆದು ಬಿಸಿಲಿನಲ್ಲಿಟ್ಟು ಶಾಂತಚಿತ್ತನಾಗಿ ಕುಳಿತಿದ್ದನು. ಬಿಂಬಿಸಾರ ರಾಜನು ದೂರದಲ್ಲಿ ಕುಳಿತುಕೊಂಡು ನೀವು ಯಾರು? ಕ್ಷತ್ರಿಯ ಕುಲದವರಂತೆ ತೋರುತ್ತಿರುವಿರಿ. ನೀವು ನನ್ನ ರಾಜ್ಯದಲ್ಲುಳಿದರೆ ನಿಮಗೆ ಸೈನ್ಯಶಾಖೆಯಲ್ಲಿ ದೊಡ್ಡ ಅಧಿಕಾರವನ್ನು ಕೊಡುತ್ತೇನೆ ಎಂದು ಹೇಳಿದನು. ಆಗ ಸಿದ್ಧಾರ್ಥನು:

"ಮಹಾರಾಜನೇ? ನಾನು ಶಾಕ್ಯವಂಶದ ಶುದ್ಧೋಧನರಾಜನ ಮಗನು. ನನಗೆ ಯಾವ ಸಂಪತ್ತುಗಳ ಕೊರತೆಯೂ ಇಲ್ಲ. ಯಾವ ಸಂಪತ್ತನ್ನು ಹೊಂದಬೇಕೆಂತಲೂ ನಾನು ಮನೆಯನ್ನು ಬಿಟ್ಟು ಬಂದಿಲ್ಲ **ಮನುಷ್ಯಪ್ರಾಣಿಯ ದುಃಖ ನಿವಾರಣೆಯ ಮಾರ್ಗವನ್ನು ಶೋಧಿಸುವದಕ್ಕೋಸ್ಕರವಾಗಿಯೇ ನಾನು ಪ್ರಯಾಣದ ಶ್ರಮವನ್ನು** ವಹಿಸಿದ್ದೇನೆ. ಇಷ್ಟೇ ಅಲ್ಲದೆ, ಇನ್ನಾದ ಕಷ್ಟಗಳನ್ನಾದರೂ ಅದಕ್ಕೋಸ್ಕರ ಅನುಭವಿಸಲು ಸಿದ್ಧನಿದ್ದೇನೆ. ದುಃಖನಿವಾರಣೆಯ ಆ ದಿವ್ಯಮಾರ್ಗವನ್ನು ಕಂಡು ಹಿಡಿಯದಿದ್ದರೆ ನನ್ನ ಜನ್ಮವು ವ್ಯರ್ಥವೆಂದು ನಾನು ತಿಳಿದಿದ್ದೇನೆ" ಎಂದು ಹೇಳಿದನು.

ಬಿಂಬಸಾರ ರಾಜನು ಸಿದ್ಧಾರ್ಥನ ಈ ದೃಢ ನಿಶ್ಚಯವನ್ನು ನೋಡಿ ರಾಜಕುಮಾರನೇ? ನಿನ್ನ ಸಂಕಲ್ಪಕ್ಕೆ ನಾನು ವಿರೋಧವಾಗುವುದಿಲ್ಲ. ನಿನಗೆ ಜಗದುದ್ಧಾರದ ಮಾರ್ಗವು ಗೊತ್ತಾದರೆ ಮೊದಲು ನೀನು ನನ್ನ ವಿಹಾರ (ಭಿಕ್ಕುಗಳಿರುವ ಉದ್ಯಾನವನ) ದಾನವನ್ನು ಸ್ವೀಕರಿಸಬೇಕೆಂದು ಹೇಳಿದನು. ಅದನ್ನು ಸಿದ್ಧಾರ್ಥನು ಅನುಮೋದಿಸಿ ಅಲ್ಲಿಂದ ಆಳಾರ, ಕಾಲಾಮ ಎಂಬು ಋಷಿಗಳ ಆಶ್ರಮಕ್ಕೆ ಹೋದನು.

ಕಾಲಾಮುಋಷಿಯು ಯೋಗಶಾಸ್ತ್ರದಲ್ಲಿ ಬಹು ಪ್ರಸಿದ್ಧವಾಗಿದ್ದನು ಆ ಋಷಿಯಲ್ಲಿ ಸಿದ್ಧಾರ್ಥನು ಯೋಗಾಭ್ಯಾಸವನ್ನು ಕಲಿತು ಸಮಾಧಿಯ ಸಪ್ತಾವಸ್ಥೆಗಳಲ್ಲಿಯೂ ಪಾರಂಗತವಾಗಿ ಅಷ್ಟರಿಂದಲೂ ತೃಪ್ತನಾಗದೆ ಉದ್ರಕರಾಮಪುರತ್ರನೆಂಬ ಇನ್ನೊಬ್ಬ ಋಷಿಯ ಆಶ್ರಮಕ್ಕೆ ಹೋಗಿ ಅಲ್ಲಿ ಆತನ ಶಿಷ್ಯನಾಗಿ ಸಮಾಧಿಯ ಕೊನೆಯ ಅಷ್ಟಮಾವಸ್ಥೆಯ ಉಪದೇಶವನ್ನು ಹೊಂದಿ ಅದರಿಂದಲೂ ಸಂತುಷ್ಟನಾಗದೆ ಸತ್ಯಸಿದ್ಧಾಂತವನ್ನು ತಾನೇ ಶೋಧಿಸಬೇಕೆಂದು ನಿರ್ಧರಿಸಿದನು.

ಸಿದ್ಧಾರ್ಥನು ಸಂಚರಿಸುತ್ತಾ ಗಯಾಪಟ್ಟಣದ ಹತ್ತಿರ ಸೌರಂಜನಾ ನದಿಯ ದಂಡೆಯಲ್ಲಿದ್ದ ಉರುವೆಲಾ ಎಂಬ ಬಹು ರಮಣೀಯವಾದ ಪ್ರದೇಶಕ್ಕೆ ಬಂದನು. ಸಿದ್ಧಾರ್ಥನಿಗೆ ಆ ಸ್ಥಳವು ಬಹು ಮನೋಹರವಾಗಿ ತೋರಿದ್ದರಿಂದ ಅಲ್ಲಿಯೇ ತಪಶ್ಚರ್ಯವನ್ನು ಪ್ರಾರಂಭಿಸಿದನು. **ಆಹಾರ ವಿಹಾರಗಳನ್ನು ದಿನೇ ದಿನೇ ಕಡಿಮೆಮಾಡುತ್ತ ಕಠಿಣವಾದ ಹಠಯೋಗವನ್ನು ಮಾಡಲುಪಕ್ರಮಿಸಿದನು.** ಆ ಪ್ರದೇಶದಲ್ಲಿದ್ದ ಕೌಂಡಿಣ್ಯ, ವಪ್ರ, ಭದೀಯ, ಮಹಾನಮ ಮತ್ತು ಅಶ್ವಜಿತ ಎಂಬ ಐದು ಜನ ಬ್ರಾಹ್ಮಣ ತಪಸ್ವಿಗಳು ಸಿದ್ಧಾರ್ಥನ ಈ ಉಗ್ರ ತಪಶ್ಚರ್ಯವನ್ನು ನೋಡಿ ಈತನ ಹತ್ತಿರ ಬಂದು ಈತನಿಂದ ಮುಂದೆ ತಾವು ಕೃತಾರ್ಥರಾಗಬಹುದೆಂದು ಸಿದ್ಧಾರ್ಥನ ಸೇವೆಯಲ್ಲಿ ನಿರತರಾದರು.

ಸಿದ್ಧಾರ್ಥನು ಆ ತೀವ್ರತರವಾದ ತಪಸ್ಸಿನಿಂದ ಬಹು ನಿರ್ಬಲನಾದನು. ಕೈಕಾಲುಗಳಲ್ಲಿ ಸ್ವಲ್ಪವೂ ಸಾಮರ್ಥ್ಯವಿಲದಂತಾಯಿತು. ನಕ್ಷತ್ರಗಳ ಪ್ರತಿಬಿಂಬವು ನೀರಿನಲ್ಲಿ ಹೇಗೆ ಬಹು ಒಳಗೆ ಹೋದಂತೆ ಕಾಣುತ್ತದೆಯೋ ಹಾಗೆಯೇ ಸಿದ್ಧಾರ್ಥನ ಕಣ್ಣುಗಳು ಬಹು ಒಳಗೆ ಕಾಣಲಾರಂಭವಾದವು. ಆಗ ಸಿದ್ಧಾರ್ಥನು ಈ ತಪಶ್ಚರ್ಯದಿಂದ ಯಾವ ಫಲವಾಯಿತು? ಈ ಕಾಯಕ್ಲೇಶವು ಯಾವ ಶಾಂತಿಸುಖಗಳನ್ನು ಉಂಟುಮಾಡಿತು? ಎಂದು ಯೋಚಿಸಿ ತಾನು ತಪ್ಪು ದಾರಿಯಲ್ಲಿ ಹೋಗುತ್ತಿದ್ದೇನೆಂದು ಗೊತ್ತು ಮಾಡಿದನು. ಆದಕಾರಣ ಅಂದಿನಿಂದ ಸ್ವಲ್ಪ ಸ್ವಲ್ಪ ಆಹಾರವನ್ನು ಸೇವಿಸುತ್ತಾ ದಿನೇ ದಿನೇ ದೇಹದಲ್ಲಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾ ಬಂದನು.

ಸಿದ್ಧಾರ್ಥನು ಈ ಪ್ರಕಾರ ಆಹಾರ ವಿಹಾರಗಳಲ್ಲಿ ಪುನಃ ಪ್ರವರ್ತಿಸಿದ್ದರಿಂದ ಆ ಬ್ರಾಹ್ಮಣ ಶಿಷ್ಯರು ಈತನು ಮೋಸಗಾರನೆಂತಲೂ, ನಿಜವಾದ ತಪಸ್ವಿಯಲ್ಲವೆಂತಲೂ, ಭಾವಿಸಿ ಸಿದ್ಧಾರ್ಥನನ್ನು ಬಿಟ್ಟು ಕಾಶಿಯ ಹತ್ತಿರ ಋಷಿಪತವೆಂಬ ಸ್ಥಳಕ್ಕೆ ಹೋದರು. ತನ್ನ ಶಿಷ್ಯರು ತನ್ನನ್ನು ಬಿಟ್ಟು ಹೋದರೂ ಸಿದ್ಧಾರ್ಥನು ಭಯಪಡದೆ **ಒಂದು ಆಲದ ಮರದ ಕೆಳಗೆ ಯೋಗಾರೂಢನಾಗಿ ಕುಳಿತನು. ಈ ಪ್ರಕಾರ ಯೋಗದಲ್ಲಿರುವಾಗ ಒಂದು ದಿವಸ ಸಿದ್ಧಾರ್ಥನಿಗೆ ಮನುಷ್ಯಪ್ರಾಣಿಯ ದುಃಖಪರಂಪರೆಯ ಕಾರಣವು ವ್ಯಕ್ತವಾಯಿತು.** ಅಂದೇ ಆತನು ಬುದ್ಧನಾದನು. ಆ ದಿವಸವು ವೈಶಾಖ ಶುದ್ಧ ಪೌರ್ಣಮಿಯಾಗಿದ್ದಿತು. ಸಿದ್ಧಾರ್ಥನು ಆರು ವರ್ಷ ತಪಸ್ಸು ಮಾಡಿದನಂತರ

ಆತನಿಗೆ ಆ ದಿವ್ಯತರವಾದ ಜ್ಞಾನೋದಯವಾಯಿತು. ಈ ಪ್ರಕಾರ ಸಿದ್ಧಾರ್ಥನು ೩೫ ನೆಯ ವರ್ಷದಲ್ಲಿ ಬುದ್ಧನಾದನು.

ಬುದ್ಧನು ತಾನು ಕಂಡುಹಿಡಿದ ತತ್ವಜ್ಞಾನವನ್ನು ಕಲಾಮ ಮತ್ತು ಉದ್ರಕಋುಷಿಗಳಿಗೆ ತಿಳಿಸಬೇಕೆಂದು ಯೋಚಿಸಿದನು. ಅಷ್ಟರಲ್ಲಿಯೇ ಆ ಉಭಯ ಋುಷಿಗಳೂ ದೇಹವನ್ನು ಬಿಟ್ಟಿದ್ದರು. ಉತ್ಕಲದೇಶದಿಂದ ತಪಸ್ವ ಮತ್ತು ಭಲ್ಲಿಕ ಎಂಬ ಇಬ್ಬರು ವರ್ತಕರು ಆ ಮಾರ್ಗವಾಗಿ ವ್ಯಾಪಾರಕ್ಕೆ ಹೋಗುತ್ತಿದ್ದರು. ಮಹಾಜ್ಞಾನಿಯಾದ ಬುದ್ಧನ ಸಮಾಚಾರವನ್ನು ಕೇಳಿ ಈತನ ದರ್ಶನಕ್ಕೆ ಬಂದರು. ಆ ವರ್ತಕರು ಬುದ್ದನ ಧರ್ಮೋಪದೇಶವನ್ನು ಕೇಳಿ ಬಹು ಸಂತುಷ್ಟರಾಗಿ ಆತನ ಶಿಷ್ಯರಾದರು. ಇವರೇ ಬುದ್ದನ ಶಿಷ್ಯರಲ್ಲಿ ಮೊದಲನೆಯವರು.

ಬುದ್ಧನ ಬಳಿಗೆ ಒಬ್ಬ ಬ್ರಾಹ್ಮಣ ಪಂಡಿತನು ಬಂದು "ಗೌತಮನೇ, ನಿಜವಾದ ಬ್ರಾಹ್ಮಣನಾರು?" ಎಂದು ಪ್ರಶ್ನೆ ಮಾಡಿದನು. ಆಗ ಬುದ್ಧನು, "ಯಾವಾತನು ತನ್ನ ಅಂತಃಕರಣದಿಂದ ಪಾಪವನ್ನು ತೆಗೆದುಹಾಕಿದ್ದಾನೆಯೋ, ಗರ್ವವೆಂಬ ಮಲವು ಯಾವಾತನ ಅಂತಃಕರಣಕ್ಕೆ ತಗಲಿಲ್ಲವೋ, ಯಾವಾತನೂ ಪೂರ್ಣ ಬ್ರಹ್ಮಚಾರಿಯಾಗಿರುತ್ತಾನೆಯೋ, ಯಾವಾತನಿಗೆ ಇಹಲೋಕದ ವಿಷಯದಲ್ಲಿ ಯಾವುದರ ಆಶೆಯೂ ಇಲ್ಲವೋ, ಯಾವಾತನು ಅಂತದೃಷ್ಟಿಯಿಂದ ಜ್ಞಾನದ ಅಂತ್ಯ ಸ್ಥಿತಿಯನ್ನು ನೋಡಿದ್ಧಾನೆಯೋ ಆತನೇ ನಿಜವಾದ ಬ್ರಾಹ್ಮಣನು" ಎಂದು ಹೇಳಿದನು.

ಉಪಕನೆಂಬ ಇನ್ನೊಬ್ಬ ಶ್ರವಣನು (ಸನ್ಯಾಸಿಯು) ಬುದ್ಧನ ಹತ್ತಿರ ಹೋಗಿ ಬಂದು ನೀನು ಯಾರ ಶಿಷ್ಯನೆಂದು ಪ್ರಶ್ನೆ ಮಾಡಿದನು. ಆಗ ಬುದ್ಧನು "ನನ್ನ ಧರ್ಮ ಮಾರ್ಗವನ್ನು ನಾನೇ ಕಂಡು ಹಿಡಿದಿದ್ದೇನೆ. ಆದುದರಿಂದ ನಾನು ಯಾರ ಶಿಷ್ಯನೆಂದು ಹೇಳಲಿ?" ಎಂದುತ್ತರವನ್ನು ಕೊಟ್ಟನು. ಆಗ ಆ ಉಪಕನು ಹಾಗಾದರೆ ನೀನು ಅರ್ಹನು ಆಗಿರುವಿಯೋ? ನಿನಗೆ ಜಿನ ಎಂದು ಹೇಳಬಹುದೋ? ಎಂದು ಕೇಳಲು ಬುದ್ಧನು ಹೌದೆಂದು ಹೇಳಿದನು. ಈ ಪ್ರಕಾರ ಉರವೆಲ ಪ್ರದೇಶದಲ್ಲಿ ಸಿದ್ಧಾರ್ಥನೂ ಬುದ್ಧನಾಗಿ ಧರ್ಮೋಪದೇಶಕ್ಕೋಸ್ಕರ ಕಾಶಿಪಟ್ಟಣಕ್ಕೆ ಹೋದನು.

❖❖

೪ನೆಯ ಪ್ರಕರಣ

ಧರ್ಮೋಪದೇಶ

ಭಗವಾನ್ ಬುದ್ಧದೇವನು ತನಗೆ ಜ್ಞಾನೋದಯವಾದನಂತರ ಏಳು ವಾರಗಳವರೆಗೆ ಬೋಧಿವೃಕ್ಷದ ಕೆಳಗೆ ಕುಳಿತುಕೊಂಡು ತನ್ನ ವಿಚಾರಗಳನ್ನು ಕ್ರಮಗೊಳಿಸಿ ಅನಂತರ ಧರ್ಮೋಪದೇಶಕ್ಕೋಸ್ಕರ ಹೊರಟನು. ಆ ದಿವಸ ಆಷಾಢ ಶುದ್ಧ ಪೌರ್ಣಿಮೆಯಾಗಿದ್ದಿತು. ಬುದ್ಧದೇವನು ಮೊದಲು ಕಾಶಿಪಟ್ಟಣದ ಹತ್ತಿರಿದ್ದ ಋಷಿಪತನಕ್ಕೆ ಹೋಗಿ ತನನ್ನು ಬಿಟ್ಟುಹೋಗಿದ್ದ ಐದು ಜನ ಬ್ರಾಹ್ಮಣರಿಗೆ ಮೊದಲು ಧರ್ಮೋಪದೇಶವನ್ನು ಮಾಡಿದನು. ಅವರಲ್ಲಿ ಕೌಂಡಿಣ್ಯ ಋಷಿಗೆ ಬುದ್ಧನ ಧರ್ಮವು ಮೊದಲು ಗೊತ್ತಾದುದರಿಂದ ಆತನಿಗೆ ಆಜ್ಞಾತ ಕೌಂಡಿಣ್ಯ ಎಂಬ ಹೆಸರುಂಟಾಯಿತು. ಬುದ್ಧ ಭಿಕ್ಷುಗಳಲ್ಲಿ ಈ ಐದು ಜನಗಳೇ ಮೊದಲನೆಯವರು. ಬುದ್ಧದೇವನು ಅವರಿಗೆ ತನ್ನ ಧರ್ಮವನ್ನು ಈ ಪ್ರಕಾರ ಭೋದಿಸಿದನು.

"ಭಿಕ್ಷುಗಳೇ, ಕಾಮೋಪಭೋಗದಲ್ಲಿಯೇ ಸುಖವನ್ನನುಭವಿಸುವುದು ಒಂದು ಮಾರ್ಗವು. ಇದು ಅತ್ಯಂತ ಹೀನವಾಗಿಯೂ, ಗ್ರಾಮ್ಯವಾಗಿಯೂ, ಅಜ್ಞ ಜನಗಳಿಂದ ಆಚರಿಸಲ್ಪಟತಕ್ಕದ್ದಾಗಿಯೂ ಇದೆ. ದೇಹದಂಡನೆಯನ್ನು ಮಾಡುವುದು ಇನ್ನೊಂದು ಮಾರ್ಗವು. ಇದು ಕೂಡಾ ದುಃಖದಾಯಕವಾಗಿಯೂ, ಅನಾರ್ಯ ಮತ್ತು ಅನರ್ಥಕಾರಿಯಾಗಿಯೂ ಇದೆ. ತಪಸ್ವಿಗಳು ಈ ಉಭಯ ಮಾರ್ಗಗಳನ್ನೂ ಹಿಡಿಯಬಾರದು. **ಬುದ್ಧನು ಈ ಉಭಯ ಮಾರ್ಗಗಳಲ್ಲಿನ ಒಂದು ಮಧ್ಯಮಾರ್ಗವನ್ನು ಕಂಡುಹಿಡಿದಿದ್ದಾನೆ."**

"ಭಿಕ್ಷುಗಳೇ, ಜನ್ಮ, ಜರೆ, ವ್ಯಾದಿ, ಮರಣ, ಅಪ್ರಿಯವಸ್ತುಗಳಪ್ರಾಪ್ತಿ ಮತ್ತು ಪ್ರಿಯವಸ್ತುಗಳ ವಿಯೋಗ ಈ ಮೊದಲಾದವುಗಳಿಂದಲೇ ಮನುಷ್ಯನು ಇಹಲೋಕದಲ್ಲಿ ದುಃಖಿಯಾಗುತ್ತಾನೆ. ಇದಕ್ಕೆ ನಾನು **ದುಃಖವೆಂಬ ಮೊದಲನೆಯ ಆರ್ಯಸತ್ಯ**ವೆಂದು ಹೇಳುತಿದ್ದೇನೆ."

ಈ ಎಲ್ಲಾ ದುಃಖಗಳೂ ಆಶೆಯಿಂದಲೇ ಉಂಟಾಗುತ್ತವೆ. ಇಹಲೋಕದಲ್ಲಿ ವಿಷಯೋಪಭೋಗದ ಆಶೆ, ಪರಲೋಕದಲ್ಲಿ ಸ್ವರ್ಗಸುಖದ ಆಶೆ ಮತ್ತು ಯಥೇಚ್ಛ ಸುಖವನ್ನನುಭವಿಸಿ ಆತ್ಮಹತ್ಯವನ್ನು ಮಾಡಿಕೊಳ್ಳಬೇಕೆಂಬ ಆಶೆ ಈ ತ್ರಿವಿಧ ಆಶೆಗಳಿಂದಲೇ ಮನುಷ್ಯನು ಅನೇಕ ಪಾಪಕೃತ್ಯಗಳನ್ನು ಮಾಡುತ್ತಾನೆ. ಆದಕಾರಣ ದುಃಖಗಳಿಗೆ ಆಶೆಯೇ ಮೂಲವೆಂದು ತಿಳಿಯಬೇಕು. ಈ ಎರಡನೆಯ ಸಿದ್ಧಾಂತಕ್ಕೆ ನಾನು **ದುಃಖಸಮುದಯ ಆರ್ಯಸತ್ಯ**ವೆಂದು ಹೇಳುತ್ತಿದ್ದೇನೆ.

ಆಶೆಯನ್ನು ನಿರೋಧಿಸಿದಾಗಲೇ ನಿರ್ವಾಣವು ಲಭಿಸುತ್ತದೆ, ದೇಹ ದಂಡನೆಯಿಂದಾಗಲಿ ಅಥವಾ ವಿಷಯೋಪಭೋಗದಿಂದಾಗಲಿ ಮೋಕ್ಷವು ಲಭಿಸುವುದಿಲ್ಲ. ಇದೇ ಮೂರನೆಯ ಸಿದ್ಧಾಂತವು. ಇದಕ್ಕೆ ನಾನು ದುಃಖನಿರೋಧ ಆರ್ಯಸತ್ಯವೆಂದು ಹೇಳುತ್ತಿದ್ದೇನೆ.

ಈ ದುಃಖನಿರೋಧವು ಸಮ್ಯಕ್‌ದೃಷ್ಟಿ ಮೊದಲಾದ ಆರ್ಯಅಷ್ಟಾಂಗಗಳಿಂದಾಗುತ್ತದೆಯೇ ವಿನಾ ವ್ರತೋಪಾಸಗಳಿಂದಾಗುವುದಿಲ್ಲ ಇದೇ ನಾಲ್ಕನೆಯ ಸಿದ್ಧಾಂತವು. ಇದಕ್ಕೆ ನಾನು **ದುಃಖನಿರೋಧ ಗಾಮಿನೀ ಪ್ರತಿಪದಾ ಆರ್ಯಸತ್ಯ**ವೆಂದು ಹೇಳುತ್ತಿದ್ದೇನೆ.

"ಈ ನಾಲ್ಕು ಅರ್ಯ ಸತ್ಯಗಳು ಮತ್ತು ಇವುಗಳಿಗೆ ಸಂಬಂಧಿಸಿದಂತೆ ಸಮ್ಯಕ್ ದೃಷ್ಟಿ (ಯಥಾರ್ಥಜ್ಞಾನ) ಸಮ್ಯಕ್ ಸಂಕಲ್ಪ (ಯೋಗ್ಯ ವಿಷಯಗಳಲ್ಲಿ ಮನಸ್ಸಿನ ದೃಢತೆ) ಸಮ್ಯಕ್ ವಾಕ್ (ಯೋಗ್ಯ ಶಬ್ದ ಯೋಜನೆ) ಸಮ್ಯಕ್ ಕರ್ಮಾಂತ (ಯೋಗ್ಯಕೃತ್ಯ) ಸಮ್ಯಕ್ ಅಜೀವ (ಉದಯನಿರ್ವಾಹದ ಯೋಗ್ಯ ಸಾಧನ) ಸಮ್ಯಕ್ ವ್ಯಾಯಾಮ (ಯೋಗ್ಯವಾದ ಪ್ರಯತ್ನ) ಸಮ್ಯಕ್ ಸ್ಮೃತಿ (ಯೋಗ್ಯವಾದ ವಿಚಾರ) ಸಮ್ಯಕ್ ಸಮಾಧಿ (ಯೋಗ್ಯವಾದ ಮಾನಸಿಕ ಶಾಂತಿ) ಎಂಬ ಆರ್ಯ ಅಷ್ಟಾಂಗಗಳು ಬುದ್ಧನಿಂದ ಕಂಡು ಹಿಡಿಯಲ್ಪಟ್ಟ ಧರ್ಮ ಮಾರ್ಗಗಳಾಗಿವೆ. ಮನುಷ್ಯನಿಗೆ ಇವುಗಳ ಜ್ಞಾನವಾಗುವುದರಿಂದಲೇ ಆತನು ಸಂಬುದ್ಧಾವಸ್ಥೆಯನ್ನು ಹೊಂದುವನು."

ಬುದ್ಧದೇವನ ಈ ಧರ್ಮೋಪದೇಶವು ಆ ಐದು ಜನ ಬ್ರಾಹ್ಮಣ ತಪಸ್ವಿಗಳಿಗೂ ವಿಹಿತವೆಂದು ತೋರಿದುದರಿಂದ ಈತನ ಶಿಷ್ಯರಾದರು. ಬುದ್ಧನ ಈ ಮೊದಲನೆಯ ಧರ್ಮೋಪದೇಶಕ್ಕೆ ಧರ್ಮ ಚಕ್ರ ಪ್ರವರ್ತನವೆಂದು ಹೇಳುತ್ತಿದ್ದಾರೆ. ಆಗ ಬುದ್ಧನು "ಭಿಕ್ಷುಗಳೇ, ಈ ನನ್ನ ಧರ್ಮವನ್ನು ಸ್ವೀಕರಿಸಿರಿ. ಮತ್ತು ಬ್ರಹ್ಮಚರ್ಯವನ್ನು ರಕ್ಷಿಸಿ ಭವದುಃಖದಿಂದ ಪಾರಾಗಿರಿ" ಎಂದು ಹೇಳಿದನು.

❖❖

೫ನೆಯ ಪ್ರಕರಣ

ಬುದ್ಧವಿಜಯ

ಬುದ್ಧ ದೇವನು ಋಷಿಪತದಲ್ಲಿರುವಾಗ ಕಾಶಿಪಟ್ಟಣದ ಒಬ್ಬ ಪ್ರಸಿದ್ಧ ಧನಿಕನ ಮಗನಾದ ಯಶ ಎಂಬಾತನು ಐಹಿತ ಸುಖೋಪಭೋಗಗಳಲ್ಲಿ ಅಪ್ರಿಯವಾಗಿ ಬುದ್ಧನ ಬಳಿಗೆ ಬರಲು ಆತನಿಗೆ ಬುದ್ಧನು ತನ್ನ ನಾಲ್ಕು ಆರ್ಯ ಸತ್ಯಗಳನ್ನು ಬೋಧಿಸಿದನು. ಆಗ ಆತನು ಬುದ್ಧನ ಭಿಕ್ಷುಗಳಲ್ಲಿ ಸೇರಿ ಸಂಸಾರವನ್ನು ತ್ಯಾಗಮಾಡಲು ಆತನ ತಂದೆಯು ಅವನನ್ನು ಕರೆದುಕೊಂಡು ಹೋಗಲು ಬಂದನು. ಆತನಿಗೂ ಬುದ್ಧನು ಧರ್ಮೋಪದೇಶಮಾಡಲು ಆ ತಂದೆಯೂ ಕೂಡಾ ಬುದ್ಧನ ಶಿಷ್ಯನಾಗಿ ಎಲ್ಲಾ ಭಿಕ್ಷುಗಳನ್ನೂ ಬುದ್ಧದೇವನನ್ನೂ ತನ್ನ ಮನೆಗೆ ಭೋಜನಕ್ಕೆ ಕರೆದುಕೊಂಡುಹೋದನು. ಆಗ ಬುದ್ಧನು ಯಶನ ತಾಯಿಗೂ, ಪತ್ನಿಗೂ ಧರ್ಮೋಪದೇಶಮಾಡಲು ಅವರು ಕೂಡಾ ಬೌದ್ಧ ಮತಕ್ಕೆ ಸೇರಿ ಯಶನನ್ನು ಸಂಸಾರಕ್ಕೆಳೆಯುವ ಪ್ರಯತ್ನವನ್ನು ಬಿಟ್ಟುಬಿಟ್ಟರು.

ಕಾಶಿಯಲ್ಲಿ ಯಶನ ಅನೇಕ ಸ್ನೇಹಿತರಿದ್ದರು. ಅವರಲ್ಲಿ ೫೪ ಜನ ತರುಣರು ಸಂಸಾರವನ್ನು ಬಿಟ್ಟು ಬುದ್ಧನ ಮತವನ್ನು ಸ್ವೀಕರಿಸಿ ಭಿಕ್ಷುಗಳಾದರು. ಆಗ ತನ್ನ ಮತವನ್ನನುಸರಿಸಿದ ೬೦ ಜನ ಬೌದ್ಧ ಭಿಕ್ಷುಗಳನ್ನು ಕುರಿತು ಬುದ್ಧದೇವನು ಹೇಳಿದುದೇನೆಂದರೆ.

"ಭಿಕ್ಷುಗಳೇ, ಇನ್ನು, ನೀವು ಜನ ಹಿತಾರ್ಥವಾಗಿ ನಾಲ್ಕೂ ದಿಕ್ಕುಗಳಲ್ಲಿ ಸಂಚರಿಸಿ ಜನಗಳಿಗೆ ನನ್ನ ಧರ್ಮವನ್ನು ಬೋಧಿಸಿರಿ. ಶುದ್ಧ ಬ್ರಹ್ಮಚರ್ಯವನ್ನು ಜನಗಳಿಗೆ ಉಪದೇಶಮಾಡಿರಿ. ಒಂದೇ ಮಾರ್ಗದಲ್ಲಿ ಒಬ್ಬರು ಹೋಗಬೇಡಿರಿ. ಭಿಕ್ಷುಗಳೇ, ಧರ್ಮೋಪದೇಶವಿಲ್ಲದೆ ಅನೇಕ ಜನಗಳು ಹೀನಾವಸ್ಥೆಗೀಡಾಗುತ್ತಿದ್ದಾರೆ. ಆದುದರಿಂದ ನನ್ನ ಧರ್ಮವನ್ನರಿತುಕೊಳ್ಳುವವರು ನಿಮಗೆ ಬಹು ಜನಗಳು ದೊರೆಯುವರು. ನಾನು ಕೂಡಾ ಧರ್ಮಪ್ರಚಾರಕ್ಕೋಸ್ಕರ ಉರವೆಲಾ (ಗಯಾ) ಪ್ರದೇಶಕ್ಕೆ ಹೋಗುತ್ತೇನೆ."

ಕೌಂಡಿಣ್ಯಾದಿ ೬೦ ಜನ ಭಿಕ್ಷುಗಳೂ ಧರ್ಮೋಪದೇಶಕ್ಕೋಸ್ಕರ ನಾನಾಭಾಗಗಳಿಗೆ ಹೋದರು. ಬುದ್ದದೇವನು ಉರವೆಲಾ ಪ್ರದೇಶಕ್ಕೆ ಹೋದನು. ಅಲ್ಲಿ ಉರುವೆಲಕಶ್ಯಪ, ನದಿಕಶ್ಯಪ ಮತ್ತು ಗಯಾಕಶ್ಯಪ ಎಂಬ ಮೂರು ಜನ ಬಂಧುಗಳು ಬಹು ಪ್ರಸಿದ್ಧ ತಪಸ್ವಿಗಳಾಗಿದ್ದರು. ಬುದ್ಧದೇವನು ತನ್ನ ದಿವ್ಯತರವಾದ ಧರ್ಮವನ್ನು ಅವರಿಗೆ ಬೋಧಿಸಲು ಅವರು ಬೌದ್ಧ ಮತವನ್ನೇ ಅಂಗೀಕರಿಸಿದರು.

ಇಷ್ಟೇ ಅಲ್ಲ; ಆ ಮೂರು ಜನ ತಪಸ್ವಿಗಳ ಒಟ್ಟು ಒಂದು ಸಾವಿರ ಶಿಷ್ಯರೂ ಜಟಾದಿಗಳನ್ನು ಬೋಳಿಸಿ ಬುದ್ಧ ಭಿಕ್ಷುಗಳಾದರು.

ಬುದ್ಧನ ಈ ವಿಜಯ ವಾರ್ತೆಯು ಎಲ್ಲೆಲ್ಲಿಯೂ ವ್ಯಾಪಿಸಿತು. ಬುದ್ಧನು ಒಂದು ದಿವಸ ಆ ತನ್ನ ಒಂದು ಸಾವಿರ ಶಿಷ್ಯರನ್ನು ಕರೆದುಕೊಂಡು ತಾನು ಪೂರ್ವದಲ್ಲಿ ಅಭಿವಚನ ಕೊಟ್ಟಪ್ರಕಾರ ರಾಜಗೃಹನಗರದ ಬಿಂಬಿಸಾರ ರಾಜನ ಬಳಿಗೆ ಹೋದನು. ಆಗ ರಾಜನು ಬಹು ವೈಭವದಿಂದ ಬುದ್ಧದೇವನನ್ನು ಕರೆದುಕೊಂಡು ಹೋಗಿ ವೇಣುವನವೆಂಬ ತನ್ನ ಉದ್ಯಾನವನವನ್ನು ಬುದ್ಧ ಭಿಕ್ಷುಗಳಿಗೋಸ್ಕರ ದಾನಕೊಟ್ಟನು. ಬುದ್ಧನು ಆ ದಾನವನ್ನು ಸ್ವೀಕರಿಸಿ ತನ್ನ ಭಿಕ್ಷುಗಳಿಗೂ ಕೂಡಾ ಜನರು ದಾನರೂಪದಲ್ಲಿ ಕೊಡುವ ಉದ್ಯಾನವನಗಳನ್ನು ಸ್ವೀಕರಿಸಬಹುದೆಂದು ಒಪ್ಪಿಗೆಯನ್ನು ಕೊಟ್ಟನು.

ಆ ರಾಜಗೃಹನಗರದ ಹತ್ತಿರ ಸಂಜಯು ಎಂಬ ಸುಪ್ರಸಿದ್ಧನಾದ ಒಬ್ಬ ಪರಿವ್ರಾಜಕಾಚಾರ್ಯನಿದ್ದನು. ಆತನಲ್ಲಿ ೨೫೦ ಜನ ಶಿಷ್ಯರಿದ್ದರು. ಅವರಲ್ಲಿ ಸಾರಿ ಪುತ್ರ ಎಂಬುವವನು ಪ್ರಮುಖನಾಗಿದ್ದನು. ಆತನು ಬುದ್ಧನ ಉಪದೇಶವನ್ನು ಕೇಳಿ ಆತನ ಮತವನ್ನನುಸರಿಲು ಸಿದ್ಧನಾಗಿ ತನ್ನ ಮೊಗ್ಗಲಾನ (ಮೌದ್ರಲಾಯನ) ಮೊದಲಾದ ಎಲ್ಲಾ ಸಹಪಾಠಿಕರಿಗೂ ಬೌದ್ಧ ಮತವನ್ನು ತಿಳಿಸಿ ಆತನ ಶಿಷ್ಯರಾಗುವಂತೆ ಮಾಡಲು ಅವರೆಲ್ಲರೂ ತಮ್ಮ ಗುರುಗಳಾದ ಸಂಜಯಾಚಾರ್ಯರ ಬಳಿಗೆ ಹೋಗಿ ಆ ಸಂಗತಿಯನ್ನು ತಿಳಿಸಿದರು. ಆಗ ಸಂಜಯಾಚಾರ್ಯರು ಹಾಗೆ ಮಾಡಬೇಡಿರೆಂದು ಎಷ್ಟು ಹೇಳಿದರೂ ಆ ಶಿಷ್ಯರು ಕೇಳದೆ ಬುದ್ಧನ ಬಳಿಗೆ ಬಂದು ಆತನ ಮತವನ್ನನುಸರಿಸಿ ಭಿಕ್ಷುಗಳ ಸಂಘದಲ್ಲಿ ಸೇರಿದರು.

ಸಾರಿಪುತ್ರ, ಮೊಗ್ಗಲಾಯನ ಮೊದಲಾದ ೨೫೦ ಜನ ಶಿಷ್ಯರು ಬುದ್ಧದೇವನ ಬಳಿಗೆ ಬಂದಾಗ ಅವರಿಗೆ ಒಂದೇ ಶ್ಲೋಕದಲ್ಲಿ ಬುದ್ದನು ತನ್ನ ಮತದ ಮುಖ್ಯಾಂಶವನ್ನು ಹೇಳಿದನು. ಆ ಶ್ಲೋಕವು ಯಾವುದೆಂದರೆ–

ಸಬ್ಬಪಾಪಸ್ಸ ಅಕರಣಂ ಕುಸಲಸ್ಸ ಉಪಸಂಪದಾ ।
ಸಚಿತ್ತಪರಿಯೋದಪನಂ ಏತಂ ಬುದ್ಧಾನ ಸಾಸನಂ ॥

ಅರ್ಥ–ಯಾವ ವಿಧವಾದ ಪಾಪಕಾರ್ಯವನ್ನೂ ಮಾಡದಿರುವುದು, ಮಂಗಳದಾಯಕವಾದ ಕರ್ಮಗಳನ್ನು ಮಾಡುವುದು, ಮತ್ತು ತನ್ನ ಚಿತ್ತವನ್ನು ಶುದ್ಧವಾಗಿಟ್ಟುಕೊಳ್ಳುವುದು, ಇದೇ ಬುದ್ಧನ ಧರ್ಮವು.

ಸಂಜಯಾಚಾರ್ಯನ ಎಲ್ಲಾ ಶಿಷ್ಯರೂ ಬುದ್ಧನ ಮತವನ್ನನುಸರಿಸಿದ ವಾರ್ತೆಯು ರಾಜಗೃಹನಗರದಲ್ಲೆಲ್ಲಾ ವ್ಯಾಪಿಸಿತು. ಮಾರ್ಗದಲ್ಲಿ ಬುದ್ಧ ಭಿಕ್ಷುಗಳನ್ನು ನೋಡಿದೊಡನೆ ಇನ್ನು ಯಾರನ್ನು ತೆಗೆದುಕೊಂಡು ಹೋಗುತ್ತಾರೆಯೋ ಎಂದು ಆಡಿಕೊಳ್ಳುತ್ತಿದ್ದರು. ಜನಗಳ ಕೂಗು ಬುದ್ಧದೇವನಿಗೆ ತಿಳಿಯಿತು. ಆಗ ಆತನು "ಭಿಕ್ಷುಗಳೇ, ಇಂಥ ಕೂಗು ಬಹು ದಿವಸ ನಿಲ್ಲುವದಿಲ್ಲ. ಜನರು ನಾಲ್ಕೆಂಟು ದಿವಸಗಳವರೆಗೆ ಈ ಪ್ರಕಾರ ಮಾಡನಾಡಿ ಆ ಮೇಲೆ ತಾವೇ ಸುಮ್ಮನಾಗುತ್ತಾರೆ. ಆದರೂ ನಿಮಗೆ ಯಾರಾದರೂ ಆ ಪ್ರಕಾರ ಹೇಳಿದರೆ–ಶೂರನಾದ ತಥಾಗತನು ಶಿಷ್ಯರನ್ನು

ಸದ್ಧರ್ಮದಿಂದೆ ತೆಗೆದುಕೊಂಡು ಹೋಗುತ್ತಿರುವಾಗ ನಿಮಗೆ ಇಷ್ಟು ಅಸೂಯೆಯೇಕೆ? ಎಂದು ಸ್ಪಷ್ಟವಾಗಿ ಕೇಳಿರಿ" ಎಂದು ಹೇಳಿದನು.

ಬುದ್ಧ ಭಿಕ್ಷುಗಳು ಆ ಮಗಧದೇಶದಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿದರು. ಭಿಕ್ಷುಗಳಸಂಖ್ಯೆಯು ದಿನೇ ದಿನೇ ಹೆಚ್ಚುತ್ತಾ ಬಂದಿತು. ಆಗ ಬುದ್ಧದೇವನು ಆ ವೇಣುವನವಿಹಾದಲ್ಲಿದ್ದ ಎಲ್ಲಾ ಭಿಕ್ಷಗುಳ ಆಚಾರ, ವಿಚಾರ, ಉಡುಪು ಮೊದಲಾದವಗುಳಲ್ಲಿ ಏಕರೂಪತೆಯನ್ನೂ, ಕ್ರಮನಿಯಮಗಳನ್ನೂ, ಉಂಟು ಮಾಡಿದನು.

ಶುದ್ಧೋಧನ ರಾಜನಿಗೆ ತನ್ನ ಮಗನು ೬ ವರ್ಷಗಳಿಂದಲೂ ಎಲ್ಲಿದ್ದಾನೆಂಬುದು ಅಷ್ಟು ಚೆನ್ನಾಗಿ ಗೊತ್ತೇ ಇರಲಿಲ್ಲ. ಆದರೆ ಈಗ ಆತನು ಒಂದು ಘನವಾದ ಮತವನ್ನು ಸ್ಥಾಪಿಸಿ ಬಿಂಬಿಸಾರ ರಾಜನ ವೇಣುವನ ವಿಹಾರದಲ್ಲಿ ವಾಸವಾಗಿದ್ದಾನೆಂಬ ಸಮಾಚಾರವು ತಿಳಿದೊಡನೆ ಆತನನ್ನು ಪಟ್ಟಣಕ್ಕೆ ಕರೆದುಕೊಂಡು ಬರಲು ಒಬ್ಬ ದೂತನನ್ನು ಕಳುಹಿಸಿದನು. ಆ ಸೇವಕನು ವೇಣುವನದಲ್ಲಿ ಬುದ್ಧ ಮಹಾತ್ಮನ ಧರ್ಮೋಪದೇಶವನ್ನು ಕೇಳಿ ಆತನ ಮತವನ್ನನುಸರಿಸಿ ಅಲ್ಲಿಯೇ ಉಳಿದನು. ಶುದ್ಧೋಧನ ರಾಜನು ತನ್ನ ಸೇವಕನು ಬಾರದಿದ್ದುದನ್ನು ತಿಳಿದು ಪುನಃ ಇಬ್ಬರೂ ಮೂವರನ್ನು ಕಳುಹಿಸಿದನು. ಅವರು ಕೂಡಾ ಅದೇ ಪ್ರಕಾರ ಬುದ್ಧ ಭಿಕ್ಷುಗಳಾಗಿ ಆ ವೇಣುವನದಲ್ಲಿಯೇ ವಾಸವಾಗಿದ್ದುದರಿಂದ ಕಡೆಗೆ ಕಾಲುದಾಯಿ ಎಂಬ ಬುದ್ಧನ ಬಾಲ್ಯ ಸ್ನೇಹಿತನನ್ನು ರಾಜನು ಕಳುಹಿಸಿದನು. ಆತನು ಬುದ್ಧನ ಬಳಿಗೆ ಬಂದು ಆತನ ಧರ್ಮತತ್ವಗಳನ್ನು ತಿಳಿದುಕೊಂಡನಂತರ ಬೌದ್ಧ ಮತವನ್ನನುಸರಿಸಿದರೂ ಆ ಹಿಂದಣ ಸೇವಕರಂತೆ ಶುದ್ಧೋಧದನನ ಅಪ್ಪಣೆಯನ್ನು ಮರೆಯಲಿಲ್ಲ. ಪಾಲ್ಗುಣ ಶುದ್ಧ ಪೌರ್ಣಿಮೆಯ ದಿವಸ ಬುದ್ಧ ಮಹಾತ್ಮನಿಗೆ ಹೇಳಿದುದೇನೆಂದರೆ :

"ಭಗವಾನ್, ತಮ್ಮ ತಂದೆಯವರು ತಮ್ಮ ದರ್ಶನವನ್ನು ಹೊಂದಬೇಕೆಂದು ಬಹು ಉತ್ಸುಕತೆಯುಳ್ಳವರಾಗಿದ್ದಾರೆ. ಆದಕಾರಣ ತಾವು ಒಂದುಸಾರೆ ಕಪಿಲವಸ್ತು ಪಟ್ಟಣಕ್ಕೆ ಆಗಮಿಸಿ ಸಕಲರಿಗೂ ದರ್ಶನವನ್ನು ಕೊಡಬೇಕೆಂಬುದೇ ನನ್ನ ವಿಜ್ಞಾಪನೆ. ಈ ವಸಂತಕಾಲವು ತಮ್ಮ ಪ್ರಯಾಣಕ್ಕೆ ಅನುಕೂಲವಾಗಿಯೂ ಇದೆ."

ಕಾಲುದಾಯಿಯ ವಿಜ್ಞಾಪನೆಯ ಪ್ರಕಾರ ಕಪಿಲವಸ್ತು ಪಟ್ಟಣಕ್ಕೆ ಬುದ್ದ ಗುರು ಹೋಗಿ ಶಾಕ್ಯರಾಜನ ನೈಗ್ರೋಥ ಎಂಬ ವಿಹಾರದಲ್ಲಿ ವಾಸವಾಗಿದ್ದು ಧರ್ಮೋಪದೇಶ ಮಾಡಲುಪಕ್ರಮಿಸಿದನು. ಬುದ್ದನು ಭಿಕ್ಷಾಪಾತ್ರೆ ಹಿಡಿದುದನ್ನು ಶುದ್ಧೋಧನ ರಾಜನು ನೋಡಿ ಲಜ್ಜಿತನಾಗಿ ಕೋಪದಿಂದ ಮಗನೇ, ನೀನು ನಮ್ಮ ರಾಜಕುಲಕ್ಕೆ ಕಲಂಕವನ್ನು ಮಾಡುವಂತೆ ನಡೆಯುತ್ತಿರುವಿ. ನಿನಗೂ ನಿನ್ನ ಶಿಷ್ಯಮಂಡಳಿಗೂ, ಅನ್ನೋದಕಗಳನ್ನು ಕೊಡುವಷ್ಟು ಶಕ್ತಿಯು ನಮ್ಮಲ್ಲಿಲ್ಲವೇ? ಎಂದು ಕೇಳಿದನು. ಆಗ ಬುದ್ಧದೇವನು ಮಹಾರಾಜನೇ? **ಭಿಕ್ಷೆಯನ್ನು ಬೇಡುವುದೇ ನನ್ನ ಕುಲಧರ್ಮವಾಗಿದೆ.** ಏಕೆಂದರೆ, ಹಿಂದೆ ಆಗಿ ಹೋದ ಬುದ್ಧರೇ ನನ್ನ ಪೂರ್ವಜರು ಅವರೇ ಭಿಕ್ಷೆಯನ್ನು ಬೇಡುವ ಪದ್ಧತಿಯನ್ನು ಹಾಕಿಕೊಟ್ಟಿದ್ದಾರೆ. ನಾನು ಅದರಂತೆಯೇ ಆಚರಿಸುತ್ತಿದ್ದೇನೆ. ಒಬ್ಬನಿಗೆ ಗುಪ್ತಧನವು ದೊರೆತರೆ ಅದರಲ್ಲಿನ ಉತ್ತಮೋತ್ತಮವಾದ ರತ್ನಗಳನ್ನು ತಂದೆಗೆ ಕೊಡುವುದು ಸ್ವಾಭಾವಿಕವಾಗಿದೆಯಷ್ಟೆ.

ಅದೇ ಪ್ರಕಾರ ನನಗೆ ಪ್ರಾಪ್ತವಾಗಿರುವ ರತ್ನಸಂಗ್ರಹದೊಳಗಿನ ಕೆಲವು ಶ್ರೇಷ್ಠ ರತ್ನಗಳನ್ನು ತಮಗೆ ಕೊಡುತ್ತೇನೆ. ಅವುಗಳನ್ನು ತಾವು ಸ್ವೀಕರಿಸಬೇಕೆಂದು ಬುದ್ಧನು ಈ ಪ್ರಕಾರ ಹೇಳಿದನು.

ಉತ್ತಿತ್ಥೆನಪ್ಪಮಜ್ಜೇಯ್ಯ ಧಮ್ಮಂ ಸುಚರಿತಂಚರೆ ।
ದಮ್ಮಚಾರ್ಿ ಸುಖಂ ಸೇತಿ ಅಸ್ಮಿಂಲೋಕೇಪರಂ ಹಿಚ ॥೧॥

ಧಮ್ಮಂಚರೇ ಸುಚರಿತಂನತಂ ದುಚ್ಚರಿತಂಚರೆ ।
ಧಮ್ಮಚಾರಿ ಸುಖಂಸೇತಿ ಅಸ್ಮಿಂಲೋಕೇಪರಂಹಿಚ ॥೨॥

ಅರ್ಥ: **ಏಳಿರಿ, ಸೋಂಬೇರಿಗಳಾಗಬೇಡಿರಿ. ಸದ್ಧರ್ಮವನ್ನಾಚರಿಸಿರಿ,** ಧರ್ಮದಂತೆ ನಡೆಯುವವರಿಗೆ ಇಹಲೋಕದಲ್ಲಿ ಸುಖವು ದೊರೆಯುತ್ತದೆ. ಸತ್ಕರ್ಮವನ್ನು ಮಾಡಿರಿ. ದುಷ್ಕರ್ಮಗಳನ್ನು ಮಾಡಬೇಡಿರಿ. **ಧರ್ಮದಂತೆ ನಡೆಯುವರು ಇಹಪರಲೋಕಗಳಲ್ಲಿ ಸುಖವನ್ನು ಹೊಂದುವರು.**

ಬುದ್ಧಮಹಾತ್ಮನ ಈ ದಿವ್ಯವಾಣಿಯಿಂದ ಶುದ್ಧೋಧನ ರಾಜನು ಶಾಂತನಾದನು. ಆತನ ಹೃದಯದಲ್ಲಿ ಜ್ಞಾನ ಪ್ರಭೆಯು ಪ್ರಕಾಶಿಸಿತು. ಆಗ ಬುದ್ಧನನ್ನು ತನ್ನರಮನೆಗೆ ಕರೆದುಕೊಂಡು ಹೋಗಿ ಸತ್ಕರಿಸಿದನು. ರಾಜ ಮನೆತನದವರೆಲ್ಲರೂ ಬುದ್ದನ ದರ್ಶನಕ್ಕೆ ಬಂದರು. ಆದರೆ ಯಶೋಧರದೇವಿಯು ಮಾತ್ರ ಬಾರದೆ ದುಃಖಿಸುತ್ತಿದ್ದಳು. ಬುದ್ಧದೇವನು ಅವಳಿಗೆ ಅವಳ ಪೂರ್ವಜನ್ಮದ ಸ್ಥಿತಿಯನ್ನು ತಿಳುಹಿಸಿ ಅವಳನ್ನು ಶಾಂತಗೊಳಿಸಿ ತಿರುಗಿ ಬರುವಷ್ಟರಲ್ಲಿ ಯಶೋಧರದೇವಿಯು ತನ್ನ ಮಗನಿಗೆ ಹೇಳಿದುದೇನೆಂದರೆ "ರಾಹುಲಾ! ಇಗೋ ಈ ಶ್ರಮಣ (ಸನ್ಯಾಸಿ) ನನ್ನು ನೋಡಿರುವಿಯಾ, ಈತನೇ ನಿನ್ನ ತಂದೆಯು. ನೀನು ಆತನ ಬಳಿಗೆ ಹೋಗಿ ನಿನ್ನ ದಾಯ ಭಾಗವನ್ನು ಕೇಳು."

ರಾಹುಲನು ತನ್ನ ತಾಯಿಯು ಹೇಳಿದುದನ್ನು ಕೇಳಿ ಓಡುತ್ತ ಹೋಗಿ ಬುದ್ದನ ಮುಂದೆ ನಿಂತನು. ಬುದ್ಧದೇವನು ಅಲ್ಲಿಂದ ಹೊರಡಲು ರಾಹುಲನು ಆತನ ಬೆನ್ನು ಹತ್ತಿ ತಂದೆಯೇ? ನನ್ನ ದಾಯಭಾಗವನ್ನು ಕೊಡು ಎಂದು ಕೇಳಲಾರಂಭಿಸಿದನು. ಬುದ್ಧನು ತನ್ನ ವಿಹಾರಕ್ಕೆ ಹೋದನಂತರ ಸಾರಿಪುತ್ರನೆಂದ ಶ್ರಮಣನನ್ನು ಕರೆದು ಈ ರಾಹುಲ ಕುಮಾರನು ನನ್ನ ಹತ್ತಿರ ದಾಯಭಾಗವನ್ನು ಕೇಳುತ್ತಿದ್ದಾನೆ. ಈತನಿಗೆ ನೀನು ಪ್ರವ್ರಜ್ಯಾಕೊಟ್ಟು ಈತನನ್ನು ಶ್ರಮಣೇರನನ್ನಾಗಿ ಮಾಡು ಎಂದು ಹೇಳಿದರು. ಸಾರಿಪುತ್ರನು ಬುದ್ಧನ ಆಜ್ಞೆಯ ಪ್ರಕಾರ ವಿಧಿಪೂರ್ವಕ ರಾಹುಲನನ್ನು ಶ್ರಮಣೇರನನ್ನಾಗಿ ಮಾಡಿ ತನ್ನ ಬಳಿಯಲ್ಲಿಟ್ಟುಕೊಂಡನು.

ಪ್ರವ್ರಜ್ಯಾನ ಎಂಬುದು ಬ್ರಹ್ಮಚರ್ಯದ ದೀಕ್ಷೆಯಂತೆಯೇ ಸರಿ. ಶ್ರಮಣೇರ ಎಂದರೆ ಬ್ರಹ್ಮಚಾರಿ ಎಂದು ಹೇಳಬಹುದು. ಏಕೆಂದರೆ, ಶ್ರಮಣೇರನಾದವನು ನಡೆಯಬೇಕಾದ ಶಿಕ್ಷಾಪದ ಎಂಬ ದಶನಿಯಮಗಳು ಪ್ರಾಯಶಃ ಬ್ರಹ್ಮಚಾರಿಯು ಆಚರಿಸಭೇಕಾದ ಆಚರಣೆಯಗಳಂತೆಯೇ ಇವೆ. ಬುದ್ದನು ಇಪ್ಪತ್ತು ವರ್ಷಗಳಿಗೆ ಮೇಲ್ಪಟ್ಟ ವಯಸ್ಸಿನವರನ್ನು ಮಾತ್ರ ಭಿಕ್ಷುಗಳನ್ನಾಗಿ ಮಾಡಿಕೊಳ್ಳುತ್ತಿದ್ದನು. ಅದಕ್ಕಿಂತಲೂ ಕಡಿಮೆ ವಯಸ್ಸಿನವರಿಗೆ ಪ್ರವ್ರಜ್ಯಾದೀಕ್ಷೆಯನ್ನು ಕೊಟ್ಟು ಶ್ರಮಣೇರರನ್ನು (ಬ್ರಹ್ಮಚಾರಿ)

ಮಾಡಿ ಒಬ್ಬ ಭಿಕ್ಷುವಿನ ಸೇವೆಗೆ ಒಪ್ಪಿಸುತ್ತಿದ್ದನು. ಅದೇ ಪ್ರಕಾರ ರಾಹುಲನನ್ನು ಸಾರಿಪುತ್ರನ ಕಡೆಗೆ ವಹಿಸಿದನು.

ಈ ಸಮಾಚಾರವು ಶುದ್ಧೋಧನ ರಾಜನಿಗೆ ತಿಳಿಯಲು ಆತನು ನ್ಯಗ್ರೋಧವಿಹಾರಕ್ಕೆ ಹೋಗಿ ಬುದ್ಧನಲ್ಲಿ ಹೇಳಿಕೊಂಡುದುದೇನೆಂದರೆ" ಭಗವಾನ್, ನೀನು ಸಂಸಾರತ್ಯಾಗ ಮಾಡಿ ಹೋದಾಗಲೇ ನನಗೆ ಬಹು ವಿಷಾದವಾಗಿದ್ದಿತು. ಈಗ ಈ ನನ್ನ ಮೊಮ್ಮಗನಿಗೂ ದೀಕ್ಷೆಯನ್ನು ಕೊಟ್ಟಿದ್ದರಿಂದ ನನಗೆ ಅತ್ಯಂತ ದುಃಖವಾಗಿದೆ. ತಮ್ಮ ತಾಯಿ ತಂದೆಗಳ ಒಪ್ಪಿಗೆಯನ್ನು ಹೊಂದದಂಥ ಯಾವ ಬಾಲಕರನ್ನೂ ನೀನು ನಿನ್ನ ಭಿಕ್ಷು ಸಂಘದಲ್ಲಿ ಇನ್ನು ಮುಂದೆ ಸೇರಿಸಿಕೊಳ್ಳಬೇಡವೆಂಬುದೇ ನನ್ನ ಪ್ರಾರ್ಥನೆಯು ಬುದ್ದದೇವನು ಅಂದಿನಿಂದ ತಾಯಿತಂದೆಗಳ ಒಪ್ಪಿಗೆಯಿಲ್ಲದಿದ್ದವರನ್ನು ಭಿಕ್ಷು ಸಂಘದಲ್ಲಾಗಲಿ, ಅಥವಾ ಶ್ರಮಣೇರ ಸಂಘದಲ್ಲಾಗಲಿ, ಸೇರಿಸಬಾರದೆಂದು ಅಪ್ಪಣೆ ಮಾಡಿದನು.

ಬುದ್ಧನು ಕಪಿಲವಸ್ತು ಪಟ್ಟಣದಿಂದ ಶ್ರಾವಸ್ತಿ ಪಟ್ಟಣಕ್ಕೆ ಅಲ್ಲಿನ ಸುಪ್ರಸಿದ್ಧ ಧನಿಕನಾದ ಅನಾಥಪಿಂಡಕನ ಪ್ರಾರ್ಥನೆಯ ಪ್ರಕಾರ ಭಿಕ್ಷು ಸಮೂಹದೊಡನೆ ಹೋಗಿ ಧರ್ಮೋಪದೇಶ ಮಾಡಿ ಅನಾಥಪಿಂಡಿಕನು ವಿಪುಲ ಧನವನ್ನು ವೆಚ್ಚ ಮಾಡಿ ಕಟ್ಟಿಸಿಕೊಟ್ಟ ಜೇತನವೆಂಬ ವಿಹಾರವನ್ನು ದಾನವಾಗಿ ಸ್ವೀಕರಿಸಿದನು. ಆ ದಾನವನ್ನು ಅಂಗೀಕರಿಸುವಾಗ ಬುದ್ಧನು ಹೇಳಿದುದೇನೆಂದರೆ: **"ವಿಹಾರ ದಾನವು ಎಲ್ಲಾ ದಾನಗಳಲ್ಲಿ ಶ್ರೇಷ್ಠವಾದುದಾಗಿದೆ.** ಭಿಕ್ಷುಗಳ ಧ್ಯಾನಕ್ಕೆ ಮಳೆ, ಗಾಳಿ, ಮೃಗಾದಿಗಳಿಂದಾತಕ್ಕ ತೊಂದರೆಗಳು ತಪ್ಪುತ್ತವೆ. ಆದಕಾರಣ ಬೌದ್ಧೋಪಾಸಕರು ವಿಹಾರಗಳನ್ನು ಕಟ್ಟಿಸಿ ವಿದ್ವಾಂಸರ ಭಿಕ್ಷುಗಳಿರಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು ಮತ್ತು ಅವರ ಅನ್ನೋದಕಗಳಿಗೆ ಅನುಕೂಲ ಪಡಿಸಬೇಕು."

ಬುದ್ಧನು ಅನಂತರ ಶ್ರಾವಸ್ತೀ ಪಟ್ಟಣದ ಚೇತವನದಲ್ಲಿಯೇ ಬಹುಕಾಲ ವಾಸವಾಗಿದ್ದನು. ಆದರೂ ಆಗಾಗ್ಗೆ ಸುತ್ತಲಿನ ಪ್ರದೇಶಗಳಿಗೆ ಹೋಗಿ ಧರ್ಮೋಪದೇಶ ಮಾಡುತ್ತಿದ್ದನು. ಈ ಪ್ರಕಾರ ಬುದ್ಧ ಮಹಾತ್ಮನು ತಾನು ಹೋದಲ್ಲೆಲ್ಲಾ ತನ್ನ ಧರ್ಮವನ್ನು ಪ್ರಸಾರಗೊಳಿಸಿ ಆಳು ಮೊದಲುಗೊಂಡು ಅರಸನವರೆಗಿನ ಮತ್ತು ಪಾಮರ ಮೊದಲುಗೊಂಡು ಪಂಡಿತರವರೆಗಿನ ಸಕಲ ತರಗತಿಯ ನಾನಾ ಉದ್ಯೋಗಗಳ ಅಸಂಖ್ಯ ಜನಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡು ದಿಗ್ವಿಜಯವನ್ನು ಹೊಂದಿದನು.

❖❖

೭ನೆಯ ಪ್ರಕರಣ

ಬುದ್ಧನ ಶಿಷ್ಯರು ಮತ್ತು ಶತ್ರುಗಳು

ಭಗವಾನ್ ಬುದ್ಧನ ಶಿಷ್ಯರಲ್ಲಿ ಎರಡು ವರ್ಗಗಳಿದ್ದವು. ಸಂಸಾರವನ್ನು ತ್ಯಜಿಸಿ ಸನ್ಯಾಸದೀಕ್ಷೆಯನ್ನು ಹೊಂದಿದವರಿಗೆ **ಭಿಕ್ಷು** ಎಂದೂ, ಗೃಹಸ್ಥಾಶ್ರಮದಲ್ಲಿರುತ್ತಿದ್ದವರಿಗೆ **ಉಪಾಸಕ** ಎಂದೂ ಹೇಳುತ್ತಿದ್ದರು. ಈ ಎರಡೂ ವರ್ಗಗಳಲ್ಲಿಯೂ ಪುರುಷರಂತೆಯೇ ಸ್ತ್ರೀಯರು ಕೂಡಾ ಸೇರಿದ್ದರು. ಅವರಿಗೆ ಅನುಕ್ರಮವಾಗಿ **ಭಿಕ್ಷುಣಿ** ಮತ್ತು **ಉಪಾಸಿಕಾ** ಎಂದು ಹೇಳುತ್ತಿದ್ದರು.

ಬುದ್ಧದೇವನ ಶಿಷ್ಯರಲ್ಲಿ ಸಾರಿಪುತ್ರ, ಮೊಗ್ಗಲಾನ, ಕೌಂಡಿಣ್ಯ, ಮತ್ತು ಕಾತ್ಯಾಯನ ಮೊದಲಾದ ಸುಪ್ರಸಿದ್ದ ಬ್ರಾಹ್ಮಣ ವಿದ್ವಾಂಸರು ಬಿಂಬಿಸಾರ, ಪ್ರಸೇನಜಿತ ಮುಂತಾದ ಪ್ರಸಿದ್ಧ ರಾಜರು, ಆನಂದ, ಅನಿರುದ್ಧ, ಜೀವಕ, ಇತ್ಯಾದಿ ಶ್ರೇಷ್ಠ ವಂಶದ ಕ್ಷತ್ರಿಯರು, ಯಶ, ಅನಾಥಪಿಂಡಿಕ ಮೊದಲಾದ ಮಹಾಶ್ರೀಮಂತರು ಇದ್ದಂತೆಯೇ ಸುನೀತ ಎಂಬ ಅಂತ್ಯಜನು, ಅಂಗುಲಿಮಾಲಾ ಎಂಬ ಕದಿಯುವ ಕೆಲಸದವನು, ಸ್ವಾತಿ ಎಂಬ ಅಂಬಿಗನು, ನಂದ ಎಂಬ ಗೌಳಿಗನು, ಉಪಾಲಿ ಎಂಬ ಕ್ಷೌರಿಕನು ಇವರೇ ಮುಂತಾದ ಹೀನಕುಲದವರೆಂದು ತಿಳಿಯಲ್ಪಡುತ್ತಿದ್ದ ಜನಗಳೂ ಇದ್ದರು.

ಪುರುಷರಂತೆಯು ಸ್ತ್ರೀಯರಲ್ಲಿಯು ಕೂಡಾ ನಾನಾವೃತ್ತಿಯ ಮತ್ತು ಯೋಗ್ಯತೆಯ ಶಿಷ್ಯರಿದ್ದರು. ಮಹಾಪ್ರಜಾವತಿ ಗೌತಮಿ, ಯಶೋಧರೆ, ಖೇಮಾ ಮೊದಲಾದ ರಾಣಿಯರು ಉತ್ಪಲವರ್ಣೀ ಮೊದಲಾದ ಧನಿಕರ ಕನ್ಯೆಯರು, ಚಂಪಾ ಎಂಬ ಭೇಡರಳು, ಪೂರ್ಣಾ ಎಂಬ ದಾಸಿಪುತ್ರಳು, ವಿಮಲಾ, ಅಂಬಪಾಲಿ ಎಂಬ ವೇಶ್ಯೆಯರು ಬುದ್ಧದೇವನ ಶಿಷ್ಯರಾಗಿದ್ದರು.

ಭಿಕ್ಷುಗಳಲ್ಲಿ ಆನಂದನೇ ಬುದ್ಧನ ಅತ್ಯಂತ ಪ್ರೀತಿಯ ಶಿಷ್ಯನಾಗಿದ್ದನು. ಬುದ್ಧನು ತನ್ನ ಅನೇಕ ಮನೋಗತಗಳನ್ನು ಆನಂದನಿಗೆ ಮಾತ್ರತಿಳಿಸಿದ್ದನು. ಈ ಆನಂದನು ಶಾಕ್ಯವಂಶದವನು. ಬುದ್ಧನಿಗೆ ಸಂಬಂಧಿಯಾಗಿದ್ದನು. ಬುದ್ಧದೇವನ ತರುವಾಯ ಆನಂದನೇ ಧಾರ್ಮಿಕ ಸಂದೇಹಗಳನ್ನು ನಿವಾರಣೆಮಾಡುತ್ತಿದ್ದನು. ಭಿಕ್ಷುಣಿಯರಲ್ಲಿ ಬುದ್ಧದೇವನನ್ನು ಸಾಕಿ ಸಲಹಿದ ಮಾಹಾ ಪ್ರಜಾವತಿ ಗೌತಮಿಯೇ ಪ್ರಮುಖಳಾಗಿದ್ದಳು. ಶುದ್ಧೋಧನರಾಜನು ಮೃತಪಟ್ಟನಂತರ ಗೌತಮಿಯೂ ತಾನು ಭಿಕ್ಷುಣಿಯಾಗಬೇಕೆಂದು ಕಪಿಲವಸ್ತು ಪಟ್ಟಣದಿಂದ ನಡೆದುಕೊಳ್ಳುತ್ತಾ ಬಹು ಶ್ರಮಪಟ್ಟು ಬುದ್ಧನಿದ್ದ ವೈಶಾಲಿ ಎಂಬ ಪಟ್ಟಣಕ್ಕೆ ಹೋದಳು. ಆಗ ಬುದ್ಧದೇವನು ಸ್ತ್ರೀಯರನ್ನು ಭಿಕ್ಷುಣಿಯರನ್ನಾಗಿ ಮಾಡಲು ಒಪ್ಪಲಿಲ್ಲ. ಏಕೆಂದರೆ ಅವರಿಗೂ, ಭಿಕ್ಷುಗಳಿಗೂ ಕಲಹವುಂಟಾಗಬಹುದೆಂದು

ಯೋಚಿಸಿದನು. ಆಗ ಆನಂದನ ಪ್ರಾರ್ಥನೆಯ ಮೇರೆಗೆ ಸ್ತ್ರೀಯರಿಗೂ ಭಿಕ್ಷುದೀಕ್ಷೆಯನ್ನು ಕೊಡಲು ಅನುಮೋದಿಸಿದನು. ಗೌತಮಿಯೇ ಮೊದಲನೆಯ ಭಿಕ್ಷುಣಿ. ಅನಂತರ ಸಾವಿರಾರು ಸ್ತ್ರೀಯರು ಭಿಕ್ಷುಣಿಯರಾದರು. ಇವರಲ್ಲಿ ಪ್ರಮುಖರಾದವರಿಗೆ ಥೇರಿ ಎಂದು ಹೇಳುತ್ತಾರೆ. ಇಂಥ ನೂರಾರು ಥೇರಿ ಭಿಕ್ಷುಣೀಯರು ತಮ್ಮ ಶೀಲ, ವಿದ್ಯೆ, ಗುಣಾದಿಗಳಿಂದ ಬಹು ಪೂಜ್ಯರಾಗಿದ್ದಾರೆ. ಮಹಾ ಪ್ರಜಾವತಿ ಗೌತಮನಿಯು ಭಿಕ್ಷುಣಿಯಾದನಂತರ ಅನೇಕ ಗೀತೆಗಳನ್ನು ರಚಿಸಿ ಭಿಕ್ಷುಣಿಸಂಘಕ್ಕೆ ಪ್ರಮುಖಳಾಗಿ ಬೌದ್ಧಮತವನ್ನು ಪ್ರಸಾರಗೊಳಿಸಿದಳು. ಗೌತಮಿಯ ಬುದ್ಧದೇವನನ್ನು ಕುರಿತು ಹೇಳಿರುವುದೇನೆಂದರೆ :

ಅಹಂಸುಗ ತತೇಮಾತಾ, ತ್ವಂಚವೀರ ಪಿತಾಮಮ ।
ಸದ್ದಮ್ಮ ಸುಖದ ನಾಥ–ತಯಾ ಜಾತಹ್ಮಿ ಗೋತಮ ॥೧॥

ಅರ್ಥ : ಬುದ್ಧದೇವನೇ ನಾನು ನಿನ್ನ ತಾಯಿಯೇನೋ ನಿಜ, ಆದರೆ ನೀನು ನನ್ನ ತಂದೆಯಾಗಿರುವಿ. ಏಕೆಂದರೆ, ನಿಜಸುಖವನ್ನು ಕೊಡುವ ಧರ್ಮವನ್ನು ಬೋಧಿಸಿ ನನಗೆ ನೂತನವಾಗಿ ಜೀವದಾನವನ್ನು ಕೊಟ್ಟಿರುವಿ.

ಸಂವಡ್ಢಿತೋಽಯಂ ಸುಗತ ರೂಪಕಾಯೊ ಮಯಾತವ ।
ಅನಿಂದಿತೋ ಧಮ್ಮತನೂ ಮಮಸಂವಡ್ಢೀತೋ ತಯಾ ॥೨॥

ಅರ್ಥ : ಸುಗತನೇ, ನಾನು ನಿನ್ನನ್ನು ಸಾಕಿಸಲುಹಿದಂತೆಯೇ ನೀನು ಕೂಡಾ ನನ್ನ ಆನಂದಮಯವಾದ ಧರ್ಮತನುವನ್ನು ಕಾಪಾಡಿದಿ.

ಮುಹುತ್ತಮ್ ತಣ್ಹಾಸಮಣಮ್ ಖೀರಂತಂ ಪಾಯಿತೋಮಯಾ ।
ತಯಾಽಹಂ ಸಂತಂ ಅಚ್ಚಂತಂ ಧಮ್ಮಖೀರಂ ಪಿಪಾಯಿತಾ ॥೩॥

ಅರ್ಥ : ನಿನ್ನ ಕ್ಷಣಿಕವಾದ ಆಶೆಯನ್ನು ನಾನು ಹಾಲುಣಿಸಿ ನಿವಾರಣೆ ಮಾಡಿದೆನು. ಆದರೆ ನೀನು ನನಗೆ ಧರ್ಮಕ್ಷೀರವನ್ನು ಪಾನಮಾಡಿಸಿ ನನ್ನ ಅಕ್ಷಯವಾದ ಆಶೆಯನ್ನು ನಿವಾರಣೆ ಮಾಡಿದಿ.

ಈ ಪ್ರಕಾರ ಮಹಾಮಹಾ ವಿದ್ವಾಂಸರಾದ ಸ್ತ್ರೀ ಪುರುಷರು, ರಾಜರು, ಧನಿಕರು, ಬುದ್ಧಜೀವನ ಶಿಷ್ಯರಾಗಿ ಆತನ ಮತವನ್ನು ಪ್ರಸರಗೊಳಿಸ ಬಹು ಸಹಾಯ ಮಾಡಿದರು. ಇದನ್ನು ನೋಡಿ ಸಹಿಸಲಾರದೆ ಅನೇಕರು ಬುದ್ಧನನ್ನು ದ್ವೇಷಿಸಲಾರಂಭಿಸಿದರು. ಆದರೆ ಅದರಿಂದ ಬುದ್ಧನಿಗೆ ಯಾವ ಕೊರತೆಯೂ ಉಂಟಾಗದೆ ಆತನ ಘನತೆಯು ಪ್ರಸರವಾಗಲಿಕ್ಕೇನೇ ಆ ದ್ವೇಷವು ಸಹಾಯವಾಯಿತು. ಬುದ್ಧನ ಶತ್ರುಗಳಲ್ಲಿ ದೇವದತ್ತ ಎಂಬುವವನು ಪ್ರಮುಖನು. ಈತನು ಬುದ್ಧನಿಗೆ ಭಾವನಾಗಬೇಕು. (ಯಶೋಧರಾದೇವಿಯ ಸಹೋದರ) ಈ ದೇವದತ್ತನು ಬುದ್ಧನ ಶಿಷ್ಯನಾಗಿದ್ದರೂ ಮಹಾಪ್ರತಿಷ್ಠಾಪೇಕ್ಷಿಯಾಗಿದ್ದನು. ಆದುದರಿಂದ ತನ್ನನ್ನು ಭಿಕ್ಷು ಸಂಘಕ್ಕೆ ಪ್ರಮುಖನನ್ನಾಗಿ ಮಾಡಬೇಕೆಂದು ಬುದ್ಧದೇವನನ್ನು ಕೇಳಿದನು. ಆಗ ಬುದ್ಧನು ಸಾರಿಪುತ್ರ, ಮೊಗ್ಗಲಾನ ಮೊದಲಾದ ಸಮರ್ಥರಾದಂಥ ಭಿಕ್ಷುಗಳಿಗೇನೇ ಭಿಕ್ಷು ಸಂಘಾಧಿಪತ್ಯವನ್ನು ಕೊಡದಿರುವಾಗ ನಿನ್ನಂತಹ ಅಸಮರ್ಥನಿಗೆ ಆ ಪದವಿಯು ಹೇಗೆತಾನೆ ದೊರೆಯುವುದು? ಎಂದು ಹೇಳಲು ದೇವದತ್ತನು ಕೋಪಗೊಂಡು ಹೇಗಾದರೂ ಮಾಡಿ ಬುದ್ಧನನ್ನು ಕೊಂದು ತಾವೆ ಪ್ರಮುಖನಾಗಬೇಕೆಂದು ಯೋಚಿಸಿದನು.

ಈ ದುಷ್ಕೃಕಾರ್ಯವನ್ನು ಸಾಧಿಸಲು ದೇವದತ್ತನು ರಾಜಗೃಹನಗರಕ್ಕೆ ಹೋಗಿ ಅಲ್ಲಿಯ ಯುವರಾಜನಾದ ಅಜಾಶತ್ರು ಎಂಬುವವನ ಸ್ನೇಹ ಸಂಪಾದಿಸಿದನು. **ನೀನು ನಿನ್ನ ತಂದೆಯಾದ ಬಿಂಬಸಾರ ರಾಜನನ್ನು ಕೊಂದು ನೀನೆ ರಾಜನಾಗು. ನಾನು ಬುದ್ಧನನ್ನು ಕೊಂದು ನಾನೇ ಬುದ್ಧನಾಗುತ್ತೇನೆ.** ಎಂದು ಅಜಾತಶತ್ರುವಿಗೆ ದುರುಪದೇಶವನ್ನು ಮಾಡಿದನು. ಆತನು ಈ ದೇವದತ್ತನ ಉಪದೇಶಕ್ಕೆ ಮರುಳಾಗಿ ತನ್ನ ತಂದೆಯನ್ನು ಕೊಲ್ಲಲು ಪ್ರಯತ್ನಿಸಿದನು. ಈ ನೀಚಕಾರ್ಯವು ಬಿಂಬಸಾರ ರಾಜನ ಸೇವಕರಿಂದ ರಾಜನಿಗೆ ತಿಳಿಯಲು ಮಗನನ್ನು ಕರೆಯಿಸಿ ಕೇಳಿದನು. ಆಗ ಅಜಾತಶತ್ರು ತಾನು ರಾಜನಾಗಬೇಕೆಂದು ಈ ಕೊಲೆಮಾಡಲುಪಕ್ರಮಿಸಿದ್ದೇನೆಂದು ಹೇಳಿದನು. ಬಿಂಬಸಾರನು ಆಗ ಮಂತ್ರಿಗಳನ್ನು ಕರೆಯಿಸಿ **ತನ್ನ ರಾಜ್ಯ ಪಟ್ಟವನ್ನು ಅಜಾತತ್ರುವಿಗೆ ವಹಿಸಿದನು. ಆದರೂ ಕೆಲವು ದಿವಸಗಳನಂತರ ತನ್ನ ತಂದೆಯನ್ನು ಸೆರೆಯಲ್ಲಿಡಿಸಿ ಆತನನ್ನು ಉಪವಾಸದಿಂದಿಟ್ಟು ಕೊಂದನು.**

ಅನಂತರ ದೇವದತ್ತನು ಬುದ್ಧನನ್ನು ಕೊಲ್ಲಲು ತನಗೆ ಸಹಾಯ ಮಾಡಬೇಕೆಂದು ಅಜಾತಶತ್ರುವನ್ನು ಕೇಳಿದನು. **ಆ ರಾಜನು ಬುದ್ದನನ್ನು ಕೊಲ್ಲಲು ಕೆಲವು ಕೊಲೆಗಡಕರನ್ನು ಕಳುಹಿಸಿದನು.** ಆದರೆ ಅವರು ಬುದ್ಧನನ್ನು ಕೊಲ್ಲದೆ ಅವನ ಶಿಷ್ಯರಾಗಿ ಅಲ್ಲಿಯೇ ಉಳಿದರು. ಆಗ ದೇವದತ್ತನು ತಾನೇ ಈ ಕಾರ್ಯವನ್ನು ಮಾಡಬೇಕೆಂದು ಯೋಚಿಸಿ ಬುದ್ಧದೇವನು ಗೃಧ್ರಕೂಟಪರ್ವತದಡಿಯಲ್ಲಿ ಒಂದು ದಿನ ಚಂಕ್ರಮಣ (ಅತ್ತಿತ್ತ ತಿರುಗಾಡುವುದು) ಮಾಡುತ್ತಿರುವಾಗ **ದೇವದತ್ತನು ಒಂದು ಬಂಡೆಗಲ್ಲನ್ನು ಬುದ್ಧನ ಮೇಲುರುಳಿಸಿದನು.** ಆದರೆ ಅದು ಮಧ್ಯಮಾರ್ಗದಲ್ಲಿಯೇ ಒಡೆದುದರಿಂದ ಅದರೊಂದು ಚೂರು ಬುದ್ಧದೇವನ ಕಾಲಿಗೆ ತಗಲಿ ದೊಡ್ಡ ಗಾಯವಾಯಿತು. ಆಗ ಬುದ್ಧನು ಮೇಲೆ ದೇವದತ್ತನನ್ನು ನೋಡಿ **"ಮೂರ್ಖನೇ, ಕೊಲ್ಲಬೇಕೆಂದು ಯೋಚಿಸಿ ನೀನು ಈ ದುಷ್ಟ ಕಾರ್ಯವನ್ನು ಮಾಡಿದ್ದರಿಂದ ಘೋರ ಪಾಪಕ್ಕೀಡಾಗುವಿ"** ಎಂದು ಹೇಳಿದನು.

ಅಂದಿನಿಂದ ಅನೇಕ ಭಿಕ್ಷುಗಳು ಬುದ್ಧ ದೇವನನ್ನು ಸುತ್ತಲೂ ಬಹು ಎಚ್ಚರಿಕೆಯಿಂದ ಕಾಯಲಾರಂಭಿಸಿದರು. ಇದನ್ನು ಬುದ್ಧನು ನೋಡಿ "ಭಿಕ್ಷುಗಳೇ, ಈ ನನ್ನ ದೇಹದ ವಿಷಯದಲ್ಲಿ ನೀವು ಇಷ್ಟು ಶ್ರಮ ವಹಿಸಬೇಕಾದುದಿಲ್ಲ. **ನನ್ನ ಶಿಷ್ಯರಿಂದ ನಾನು ರಕ್ಷಿಸಲ್ಪಡಬೇಕೆಂದು ಅಪೇಕ್ಷಿಸುವುದಿಲ್ಲ.** ಆದ ಕಾರಣ ನೀವು ನನ್ನನ್ನು ಕಾಯದೇ ನಿಮ್ಮ ನಿಮ್ಮ ಕೆಲಸಗಳಿಗೆ ಹೋಗಿರಿ" ಎಂದು ಹೇಳಿದನು.

ದೇವದತ್ತನು ಬುದ್ಧನನ್ನು ಕೊಲ್ಲಲು ನಾನಾಪ್ರಯತ್ನಗಳನ್ನು ಮಾಡಿ ಕೈಗೂಡದನಂತರ ಬುದ್ಧ ಭಿಕ್ಷಗಳಲ್ಲಿ ಅನೈಕಮತ್ಯವನ್ನುಂಟು ಮಾಡಬೇಕೆಂದು ಒಂದು ದಿವಸ ಬುದ್ಧನ ಬಳಿಗೆ ಬಂಧು ಭಿಕ್ಷುಗಳ ಆಚರಣೆಯಲ್ಲಿ ಕೆಲವು ಹೊಸ ನಿಯಮಗಳನ್ನು ಸೇರಿಸಬೇಕೆಂದು ಹೇಳಿಕೊಂಡನು. ಅದಕ್ಕೆ ಬುದ್ಧನು ಒಪ್ಪದಿರಲು ಕೆಲವು ಭಿಕ್ಷುಗಳನ್ನು ತನ್ನ ಕಡೆಗೆ ಮಾಡಿಕೊಂಡು ತಾನೊಂದು ಹೊಸಪಂಥವನ್ನು ಸ್ಥಾಪಿಸಬೇಕೆಂದು ಪ್ರಯತ್ನಿಸಿದನು. ಅದು ಕೂಡಾ ಸಾಧಿಸಲಿಲ್ಲ.

ಈ ದೇವದತ್ತನಿಗೆ ಸಹಾಯಕನಾಗಿದ್ದ ಅಜಾತಶತ್ರು ರಾಜನು ಜೀವನೆಂಬ ತನ್ನ ರಾಜಸಭೆಯಲ್ಲಿದ್ದ ಘನವೈದ್ಯನ ಸಲಹೆಯ ಪ್ರಕಾರ ಒಂದು ದಿವಸ ಬುದ್ಧದೇವನ ಬಳಿಗೆ ಹೋಗಿ ಧರ್ಮ ಚರ್ಚೆಯನ್ನು ಮಾಡಿ ಸಕಲ ಸಂದೇಹಗಳನ್ನೂ ನಿವಾರಣೆ ಮಾಡಿಕೊಂಡು ಬುದ್ಧನ ಮತವನ್ನನುಸರಿಸಿ ಆತನ ಶಿಷ್ಯನಾದ ನಂತರ ತಾನು ಮಾಡಿದ ಪಿತೃಹತ್ಯ ವಿಷಯದಲ್ಲಿ ಪಶ್ಚಾತ್ತಾಪವನ್ನು ಪ್ರದರ್ಶಿಸಲು ಆಗ

ಬುದ್ಧನು ಹೇಳಿದುದೇನೆಂದರೆ: "ಮಹಾರಾಜನೇ, ನೀನು ತಂದೆಯನ್ನು ಕೊಲ್ಲಿಸಿದುದು ನಿಶ್ಚಯವಾಗಿಯೂ ಅಪರಾಧವೇ ಸರಿ. ಆದರೆ ಈಗ ನೀನು ಅದಕ್ಕೋಸ್ಕರ ಪಶ್ಚಾತಾಪ ಪಡುತ್ತಿರುವುದು ಸಮಾಧಾನದ ಸಂಗತಿಯಾಗಿದೆ. **ಮಾಡಿದ ಅಪರಾಧಕ್ಕೋಸ್ಕರ ಪಶ್ಚಾತ್ತಾಪ ಪಡುವುದು ಮತ್ತು ಪುನಃ ಅಂತಹ ಅಪರಾಧವನ್ನು ಮಾಡದಿರುವುದು ಆರ್ಯಶ್ರಾವಕರ ಕರ್ತವ್ಯವಾಗಿದೆ."** ಈ ಪ್ರಕಾರ ಅಜಾತಶತ್ರು ಬುದ್ಧನ ಶಿಷ್ಯನಾದುದರಿಂದ ದೇವದತ್ತನಿಗಿದ್ದ ಮುಖ್ಯಬಲವೇ ಇಲ್ಲದಂತಾಯಿತು.

ಕುರುದೇಶದಲ್ಲಿ ಮಾಗಂದಿಯಾ ಎಂಬೊಬ್ಬ ಬ್ರಾಹ್ಮಣನಿದ್ದನು. ಆತನಿಗೆ ಒಬ್ಬ ಮಗಳಿದ್ದಳು. ಅವಳು ಮಹಾರೂಪವತಿಯಾಗಿದ್ದುದರಿಂದ ತಕ್ಕವರನನ್ನು ನೋಡಿಯೇ ಲಗ್ನಮಾಡಬೇಕೆಂದು ತಂದೆಯು ಯೋಚಿಸಿದ್ದನು. ಬುದ್ಧದೇವನು ಧರ್ಮೋಪದೇಶ ಮಾಡುತ್ತ ಆ ಸ್ಥಳಕ್ಕೆ ಬರಲು ಆ ಬ್ರಾಹ್ಮಣನು ತನ್ನ ಮಗಳನ್ನು ಲಗ್ನಮಾಡಿಕೊಳ್ಳಬೇಕೆಂದು ಬುದ್ಧನನ್ನು ಪ್ರಾರ್ಥಿಸಿಕೊಂಡನು. ಆಗ ಬುದ್ಧನು ಆತನಿಗೆ ತನ್ನ ಸಂಸಾರತ್ಯಾಗದ ಕಾರಣವನ್ನು ತಿಳಿಸಿ ಧರ್ಮೋಪದೇಶ ಮಾಡಲು ಆ ಬ್ರಾಹ್ಮಣನು ತನ್ನ ಮಗಳನ್ನು ತನ್ನ ತಮ್ಮನ ಸ್ವಾಧೀನಪಡಿಸಿ ತಾನು ಪತ್ನಿ ಸಹಿತ ಬೌದ್ಧ ಮತವನ್ನು ಸ್ವೀಕರಿಸಿದನು. ಆಗ ಆ ಕನ್ಯೆಗೆ ಬುದ್ಧನು. ತನ್ನಂಥ ರೂಪವತಿಯನ್ನು ನಿರಾಕರಿಸಿದನಲ್ಲಾ! ಎಂದು ಆತನ ವಿಷಯದಲ್ಲಿ ಬಹು ದ್ವೇಷವುಂಟಾಯಿತು. ಅವಳನ್ನು ಕೋಶಾಂಬಿ ಪಟ್ಟಣದ ಉದಯನೆಂಬ ರಾಜನಿಗೆ ಲಗ್ನಮಾಡಿಕೊಡಲು ಅವಳು ತನ್ನ ರೂಪದಿಂದಲೂ, ಚಾತುರ್ಯದಿಂದಲೂ ಆ ರಾಜನ ಪಟ್ಟದ ರಾಣಿಯಾದಳು. ಬುದ್ಧದೇವನು ಧರ್ಮೋಪದೇಶ ಮಾಡುತ್ತ ಒಂದು ದಿವಸ ಕೋಶಾಂಭಿ ಪಟ್ಟಣಕ್ಕೆ ಹೋಗಲು ಆ ಬ್ರಾಹ್ಮಣ ಕನ್ಯೆಯು ಈ ಸಮಾಚಾರವನ್ನು ತಿಳಿದು ತನ್ನ ಸೇಡು ತೀರಿಸಿಕೊಳ್ಳುವುದಕ್ಕೆ ಇದೇ ಸಮಯವೆಂದು ಯೋಚಿಸಿ **ಬುದ್ಧನು ಯಾವ ಬೀದಿಯಲ್ಲಿ ಬಂದರೂ ಆತನನ್ನು ಸ್ವೇಚ್ಛೀಯಾಗಿ ದೂಷಿಸುವುದಕ್ಕೋಸ್ಕರವಾಗಿಯೇ ಕೆಲವರನ್ನು ನಿಯಮಿಸಿದಳು.**

ಬುದ್ಧನು ತನ್ನ ನಿಜ ಶಿಷ್ಯನಾದ ಆನಂದನೊಡನೆ ಭಿಕ್ಷೆಗೋಸ್ಕರ ಆ ಪಟ್ಟಣದ ಯಾವ ಬೀದಿಯಲ್ಲಿ ಹೋದರೂ ಮನಸ್ಸಿಗೆ ಬಂದಂತೆ ಬುದ್ಧನನ್ನು ಬೈಯಲಾರಂಭಿಸಿದರು. ಆತ ಆನಂದನು "ಭಗವಾನ, ನಾವು ಈ ಸ್ಥಳವನ್ನು ಬಿಟ್ಟು ಹೋಗೋಣ" ಎಂದು ಹೇಳಿದನು. ಆಗ ಬುದ್ಧನು ನಾವು ಬೇರೆ ಕಡೆಗೆ ಹೋದರೆ ಅಲ್ಲಿಯೂ ಇದೇ ಪ್ರಕಾರ ದೂಷಿಸಿದರೆ ಏನು ಮಾಡಬೇಕೆಂದು ಆನಂದವನ್ನು ಕೇಳಲು ಆಗ ಆನಂದನು ಇನ್ನೊಂದು ಪಟ್ಟಣಕ್ಕೆ ಹೋಗೋಣವೆಂದು ಹೇಳಿದನು.

ಆಗ ಬುದ್ಧದೇವನು "ಆನಂದನೇ, ಇದು ಸರಿಯಲ್ಲ, **ನಾವು ಇಲ್ಲಿಯೇ ಆ ದೂಷಣೆಗಳನ್ನು ಸಹಿಸಿದರೆ ಇನ್ನೊಂದು ಕಡೆಗೆ ಹೋಗುವ ಶ್ರಮವೇ ನಮಗಿಲ್ಲ.** ಈ ಜನರು ನಾಲ್ಕಾರು ದಿವಸಗಳವರೆಗೆ ಈ ಪ್ರಕಾರ ದೂಷಿಸುತ್ತಾರೆ. **ನಾವು ಆ ದೂಷನೆಯನ್ನುಪೇಕ್ಷಿಸಿದ್ದೆವೆಂಬುದು ಅವರಿಗೆ ತಿಳಿದೊಡನೆ ಈ ಉದ್ಯೋಗವನ್ನು ತಾವೇ ಬಿಡುತ್ತಾರೆ."** ಎಂದು ಹೇಳಿದನು. ಅನಂತರ ೭-೮ ದಿವಸಗಳಲ್ಲಿಯೇ ಬುದ್ದನು ಹೇಳಿದಂತಾಯಿತು.

ಶ್ರಾವಸ್ತಿ ಪಟ್ಟಣದಲ್ಲಿ ಬುದ್ಧ ಭಿಕ್ಷುಗಳಿಗುಂಟಾದ ಸುಖ ಸೌಲಭ್ಯಗಳನ್ನು ನೋಡಿ ಸೈರಿಸದೆ ಕೆಲವು ಕುಹಕರು ಸುಂದರಿ ಎಂಬೊಬ್ಬಳನ್ನು ಕೊಲ್ಲಿಸಿ ಬುದ್ಧನು ವಾಸವಾಗಿದ್ದ ಜೇತವನದ ಒಂದು ಕಸದ ಗುಂಡಿಯಲ್ಲಿ ಹೂಳಿಸಿದರು. ರಾಜದೂತರು ಈ ಕೊಲೆಯ ಶೋಧಾರ್ಥವಾಗಿ ಆ

ಕುಹಕರ ಹೇಳಿಕೆಯ ಪ್ರಕಾರ ಜೇತವನವನ್ನು ಹುಡುಕಿ ಆ ಶವವನ್ನು ಹೊರಗೆ ತೆಗೆದ. ಆಗ ಆ ಕುಹಕರು ಆ ಶವವನ್ನು ಊರಲ್ಲೆಲ್ಲಾ ಮೆರೆಯಿಸಿ ಬುದ್ಧನ ಮತ್ತು ಆತನ ಭಿಕ್ಷುಗಳ ಕಾರ್ಯವನ್ನು ನೋಡಿರೆಂದು ಜನಗಳಿಗೆ ಕೂಗಿ ಕೂಗಿ ಹೇಳಿದರು. ಇದರಿಂದ ಬುದ್ಧನ ಮತ್ತು ಭಿಕ್ಷುಗಳ ವಿಷಯದಲ್ಲಿ ಅನೇಕರಿಗೆ ತಿರಸ್ಕಾರ ಭಾವನೆಯುಂಟಾಯಿತು. ಆ ಸಂದರ್ಭದಲ್ಲಿ ಬುದ್ಧನು ಹೇಳಿದುದೇನೆಂದರೆ: **"ಸುಳ್ಳು ಅಪರಾಧವನ್ನು ಹೊರಿಸುವವರಿಗೆ ನಾನು ತಿಲಾಂಶವದರೂ ಮನ್ನಣೆಯನ್ನು ಮಾಡುವುದಿಲ್ಲ, ಯಾರೂ ಸುಳ್ಳನ್ನು ಹೇಳುತ್ತಾರೆಯೋ ಮತ್ತು ತಮ್ಮ ಪಾಪ ಕೃತ್ಯವನ್ನು ಅನ್ಯರ ಮೇಲೆ ಹಾಕುತ್ತಾರೆಯೋ ಅವರಿಗೆ ನರಕದ ವಿನಾ ಬೇರೆ ಗತಿಯೇ ಇಲ್ಲ."**

ಯಾರು ಸುಂದರಿಯನ್ನು ಕೊಂದಿದ್ದರೋ ಅವರೇ ಒಂದು ದಿವಸ ಹೆಂಡವನ್ನು ಕುಡಿದು ಜಗಳಾಡುತ್ತಿದ್ದಾಗ ಸುಂದರಿಯ ಕೊಲೆಯಿಂದ ಬಂದ ಹಣವಿನ ವಿಷಯದಲ್ಲಿ ಪ್ರಸ್ತಾಪಿಸಲು ಗೂಢಚರರು ಅವರನ್ನು ರಾಜ ಸಭೆಗೆ ಕರೆದುಕೊಂಡು ಹೋದ ಮೇಲೆ ನಿಜಸಂಗತಿಯನ್ನು ಹೇಳಿದರು. ಆಗ ಬುದ್ಧನ ವಿಷಯದಲ್ಲಿ ಜನರಿಗೆ ಮೊದಲಿಗಿಂತಲೂ ಪೂಜ್ಯಭಾವನೆಯು ಅತ್ಯಧಿಕವಾಯಿತು.

ಶ್ರಾವಸ್ತಿಪಟ್ಟಣದಲ್ಲಿ ನಂದನೆಂಬ ಒಬ್ಬ ದುಷ್ಟನಿದ್ದನು. ಈತನು ಬುದ್ಧ ಭಿಕ್ಷುಣಿಯರಿಗೆ ಅವಮಾನವನ್ನು ಮಾಡಿ ಬುದ್ಧನಿಗೆ ಅಗೌರವವನ್ನುಂಟುಮಾಡಬೇಕೆಂದು ಪ್ರಯತ್ನಿಸಿದನು. ಉತ್ಪಲವರ್ಣಾ ಎಂಬ ಭಿಕ್ಷುಣಿಯು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು, ಶ್ರಾವಸ್ತಿ ಪಟ್ಟಣದಲ್ಲಿ ಭಿಕ್ಷೆಗೆ ಹೋದಾಗ ಈ ನಂದನು ಅವಳನ್ನು ದೂಷಿಸಿ ಅವಳ ಅಂಗಸ್ಪರ್ಶ ಮಾಡಲು ಆ ಭಿಕ್ಷುಣಿಯು ತನಗುಂಟಾದ ಕೋಪವನ್ನು ತಡೆದು ಆತನಿಗೆ ಉಪದೇಶ ಮಾಡಿದುದೇನೆಂದರೆ :

ಮಧುವಾ ಮಞತಿ ಬಾಲೋ ಯಾವಪಾಪಂ ನಪಚ್ಚತಿ ।
ಯದಾಚಿ ಪಚ್ಚತೀ ಪಾಪಂ ಅಥಬಾಲೋದುಃಖಂನಿಗಚ್ಛತಿ ॥

ಅರ್ಥ: **ಪಾಪವು ಎಲ್ಲಿಯವರೆಗೂ ಫಲರೂಪಕ್ಕೆ ಬಂದಿಲ್ಲವೋ ಅಲ್ಲಿಯವರೆಗೂ ಮೂರ್ಖನಿಗೆ ಅದು ಮಧುರವಾಗಿಯೇ ತೋರುತ್ತದೆ**. ಆದರೆ ಆ ಪಾಪವು ಪಕ್ವವಾಯಿತೆಂದರೆ ಆಗ ಅದನ್ನು ಅನುಭವಿಸಬೇಕಾಗುತ್ತದೆ.

ಬೌದ್ಧ ಧರ್ಮ ಪ್ರಸಾರವನ್ನು ನೋಡಲಾರದೆ ಅನೇಕ ಅತಿಥಿಕರು (೯ ಬ್ರಾಹ್ಮಣ) ಬುದ್ಧನಿಗೆ ಅವಮಾನವನ್ನು ಮಾಡಬೇಕೆಂದು ಚಿಂಚಾ ಎಂಬ ನಿರ್ಲಜ್ಜೆಯಾದ ಸ್ತ್ರೀಯಳನ್ನು ಬುದ್ಧನ ಬಳಿಗೆ ಧರ್ಮೋಪದೇಶ ಹೊಂದುವುದಕ್ಕೋಸ್ಕರವೆಂದು ಕಳುಹಿಸಿ ಅನಂತರ ನಾಲ್ಕಾರು ತಿಂಗಳ ಮೇಲೆ ಅವಳಿಗೆ **ಬುದ್ಧನಿಂದ ಗರ್ಭಧಾರಣವಾಯಿತೆಂಬ ಸುಳ್ಳುಸಂಗತಿಯನ್ನು ಪ್ರಸಾರಗೊಳಿಸಿದರು**. ಆ ಸ್ತ್ರೀಯಳು ಧನದಾಶೆಯಿಂದ ತನಗೆ ಬುದ್ಧನಿಂದಲೇ ಗರ್ಭಧಾರಣೆಯಾಯಿತೆಂದೇ ಹೇಳಲಾರಂಭಿಸಿದಳು! ಕೆಲವು ದಿವಸಗಳನಂತರ ಅತಿಥಿಕರ ಈ ನೀಚ ಪ್ರಯತ್ನವು ಹೊರಬಿದ್ದಿತು.

ಬುದ್ಧದೇವನ ಮಾವನಾ (ಯಶೋಧರಾದೇವಿಯ ತಂದೆ) ಸುಪ್ರ ಬುದ್ಧನು ಈತನ ವೈರಿಯಾಗಿದ್ದನು. ತನ್ನ ಮಗಳನ್ನು ಬಿಟ್ಟು ಹೋದನಲ್ಲಾ! ಎಂಬುದೇ ಆತನ ದ್ವೇಷಕ್ಕೆ ಕಾರಣವು.

ಇವನಂತೆಯೇ ಮಾಗಧಿ ಎಂಬ ಬ್ರಾಹ್ಮಣ ಮೊದಲಾದ ಕೆಲವು ಶತ್ರುಗಳು ಬುದ್ಧನಿಗೆ ಅಲ್ಲಲ್ಲಿ ನಾನಾ ಉಪದ್ರವಗಳನ್ನು ಮಾಡಿದರು. ಆದರೂ ಕ್ಷಾಮಾಶೀಲನಾದ ಬುದ್ಧದೇವನಿಗೆ ಅವರ ವೈರತ್ವದಿಂದ ಯಾವ ಅಪಾಯವೂ ಸಂಭವಿಸದೆ ಆತನ ಅನುಪಮೇಯವಾದ ಶಾಂತಿ ದಯಾದಿ ಸದ್ಗುಣಗಳೇ ವಿಶೇಷ ಪ್ರಕಾಶ ಹೊಂದಿದವು.

❖❖

೭ನೆಯ ಪ್ರಕರಣ

ಬುದ್ಧನ ಬೋಧನಪದ್ಧತಿ

ಗೃಹಸ್ಥನ ಕರ್ತವ್ಯ

ಒಂದು ದಿವಸ ರಾಜಗೃಹ ಪಟ್ಟಣದ ಸಿಗಾಲನೆಂಬ ತರುಣನು ಪ್ರಾತಃಕಾಲದಲ್ಲಿ ಊರಹೊರಗೆ ಬಂದು ಪೂರ್ವ, ಪಶ್ಚಿಮಾದಿ ನಾಲ್ಕು ದಿಕ್ಕುಗಳಿಗೂ, ಮೇಲೆ ಮತ್ತು ಕೆಳಗೂ, ನಮಸ್ಕಾರ ಮಾಡುತ್ತಿದ್ದನು. ಇದನ್ನು ಬುದ್ಧದೇವನು ನೋಡಿ ಹೇಳಿದುದರ ಮುಖ್ಯಾಂಶವೇನೆಂದರೆ :

"ಎಲೈ ಗೃಹಪತಿಪುತ್ರನೇ? ನಿನ್ನೀ ನಮಸ್ಕಾರ ವಿಧಿಯು ಆರ್ಯಪದ್ಧತಿಗೆ ಸಮ್ಮತವಾದುದಲ್ಲ. ಆರೂದಿಕ್ಕುಗಳನ್ನು ಪೂಜಿಸಬೇಕಾದರೆ ಮೊದಲು ಪ್ರಾಣಹಿಂಸೆ. ಕಳ್ಳತನ, ವ್ಯಭಿಚಾರ ಮತ್ತು ಅಸತ್ಯ ಈ ನಾಲ್ಕು ಕರ್ಮಕ್ಲೇಶಗಳನ್ನೂ, ಚಂದಕ್ಕೋಸ್ಕರ, ದ್ವೇಷಕ್ಕೋಸ್ಕರ, ಭಯಕ್ಕೋಸ್ಕರ ಮತ್ತು ಮೋಹಕ್ಕೋಸ್ಕರ ಮಾಡಲ್ಪಡುವ ಪಾಪಕರ್ಮಗಳನ್ನೂ, ಬಿಡಬೇಕು. ಇವುಗಳಲ್ಲದೆ, ಮದ್ಯಪಾನ, ರಾತ್ರಿಸಂಚಾರ, ನಾಟಕಾದಿ ಆಟಗಳ ವ್ಯಸನ, ಜೂಜು, ದುಷ್ಟರಸ್ನೇಹ ಮತ್ತು ಸೋಂಬೇರಿತನ ಈ ಆರುಧನ ನಾಶವಾಗುವ ಪ್ರವೃತ್ತಿಗಳೂ ನಿಂತುಹೋಗಬೇಕು.

ತಾಯಿತಂದೆಗಳ ಪೂಜೆಯೇ ಪೂರ್ವದಿಕ್ಕಿನ ಪೂಜೆಯು, ಗುರುಗಳ ಪೂಜೆಯೇ ದಕ್ಷಿಣದಿಕ್ಕಿನ ಪೂಜೆಯು. ಪತ್ನಿವ್ರತನಾಗಿ ಅವಳನ್ನು ಸುಸ್ಥಿತಿಯಲ್ಲಿಡುವುದೇ ಪಶ್ಚಿಮದಿಕ್ಕಿನಪೂಜೆಯು. ಬಂಧುಬಾಂಧವರನ್ನು ಸನ್ಮಾನಿಸುವುದೇ ಉತ್ತರದಿಕ್ಕಿನ ಪೂಜೆಯು. ಸೇವಕರನ್ನು ಒಳ್ಳೆಯ ರೀತಿಯಲ್ಲಿಟ್ಟುಕೊಳ್ಳುವುದೇ ಕೆಳಗಿನ ದಿಕ್ಕಿನ ಪೂಜೆಯು. ಎಲೈ ಗೃಹಪತಿ ಪುತ್ರನೇ? **ದಾನ, ಪ್ರಿಯವಚನ, ಅರ್ಥಚರ್ಯ** (ಅನ್ಯರಿಗೆ ಸಹಾಯ) **ಸಮಾನಾತ್ಮತಾ** (ತನ್ನಂತೆ ಅನ್ಯರನ್ನು ಕಾಣುವುದು) **ಇವು ನಾಲ್ಕು ಲೋಕೋಪಯೋಗದ ಸಾಧನಗಳಾಗಿವೆ.**

ಐದು ವಿಷಯಗಳನ್ನು ಸತತ ಜ್ಞಾಪಿಸುತ್ತಿರು

ಬುದ್ಧ ಮಹಾತ್ಮನು ಶ್ರಾವಸ್ತಿಯಲ್ಲಿರುವಾಗ ಒಂದು ದಿವಸ ಭಿಕ್ಷುಗಳನ್ನು ಕುರಿತು ಹೇಳಿದುದೇನೆಂದರೆ : ಭಿಕ್ಷುಗಳೇ ಪುರುಷವೇ ಆಗಲಿ ಅಥವಾ ಸ್ತ್ರೀಯಳೇ ಆಗಲಿ. ಭಿಕ್ಷುವೇ ಆಗಲಿ, ಅಥವಾ ಗೃಹಸ್ಥನೇ ಆಗಲಿ (೧) ನಾನು ವಾರ್ಧಿಕ್ಯವನ್ನು ಹೊಂದುತ್ತೇನೆ. (೨) ನಾನು

ವ್ಯಾಧಿಗೊಳಗಾಗುತ್ತೇನೆ. (೩) ನಾನು ಮರಣಾಧೀನನು (೪) ಸರ್ವಪ್ರಿಯವಸ್ತುಗಳನ್ನೂ ನಾನು ಬಿಟ್ಟು ಹೋಗಬೇಕಾಗುತ್ತದೆ. (೫) ದುಷ್ಟ ಮತ್ತು ಸತ್ಯಕರ್ಮಗಳಿಗೆ ನಾನು ಭಾಗಿಯಾಗಿದ್ದೇನೆ. ಕರ್ಮವೇ ನನ್ನ ಧನ ಮತ್ತು ಕರ್ಮವೇ ನನ್ನ ಬಂಧು ಎಂಬೀ ಐದು ವಿಷಯಗಳನ್ನು ಯಾವಾಗಲೂ ಜ್ಞಾನಪಕದಲ್ಲಿಟ್ಟುಕೊಳ್ಳಬೇಕು."

೧ನೆಯದರಿಂದ ಯೌವನ ಮದವು ಕಡಿಮೆಯಾಗಿ ತಾರುಣ್ಯಮದದಿಂದ ಮಾಡಲ್ಪಟುವ ಕಾಯಾ. ವಾಚಾ, ಮನಸ್ಸುಗಳ ಪಾಪಕರ್ಮಗಳು ಕಡಿಮೆಯಾಗುತ್ತವೆ. ೨ನೆಯದರಿಂದ ಆರೋಗ್ಯಮದವು ಕಡಿಮೆಯಾಗತ್ತದೆ. ೩ನೆಯದರಿಂದ ಜೀವಿತಮದವು ನಾಶವಾಗುತ್ತದೆ. ೪ನೆಯ ದರಿಂದ ಮನುಷ್ಯನು ಪ್ರಿಯವಸ್ತುಗಳ ದೆಶೆಯಿಂದಾಗಲಿ ಅಥವಾ ಮನುಷ್ಯನಿಗೋಸ್ಕರವಾಗಲಿ, ಪಾಪಾಚರಣೆಯನ್ನಾಚರಿಸಲು ಉದ್ಯುಕ್ತವಾಗುವುದಿಲ್ಲ. ೫ನೆಯದರಿಂದ ಪಾಪಕರ್ಮಗಳು ಮಾಡಲ್ಪಡುವುದಿಲ್ಲ.

ಬುದ್ಧನ ಪಂಚಾವರ್ಣ

ಬುದ್ದ ಗುರು ಶ್ರಾವಸ್ತಿಯ ಜೇತವನದಲ್ಲಿದ್ದಾಗ ಸಂಗಾರವ ಎಂಬ ಬ್ರಾಹ್ಮಣನ ಪ್ರಶ್ನೆಗೆ ಉತ್ತರವಾಗಿ ಬುದ್ದದೇವನು ಹೇಳಿದುದೇನೆಂದರೆ:

"ಎಲೈಬ್ರಾಹ್ಮಣನೇ, ಒಂದು ಪಾತ್ರೆ ನೀರಿನಲ್ಲಿ ನೀಲ ಅಥವಾ ಕಪ್ಪು ಬಣ್ಣವನ್ನು ಹಾಕಿದರೆ ಅದರಲ್ಲಿ ನಮ್ಮ ಪ್ರತಿಬಿಂಬವು ಹೇಗೆ ತೋರುವುದಿಲ್ಲವೋ ಹಾಗೆಯೇ ಯಾರ ಚಿತ್ತವೂ **ಕಾಮವಿಕಾರದಿಂದ ವ್ಯಗ್ರವಾಗಿದೆಯೋ ಅವರಿಗೆ ತಮ್ಮ ಹಿತಾಹಿತಗಳು ಗೊತ್ತಾಗುವುದಿಲ್ಲ**. ಆ ಪಾತ್ರೆಯ ನೀರು ಉಷ್ಣತೆಯಿಂದ ಕುದಿಯಲುಪಕ್ರಮಿಸಿದಾಗ ಹೇಗೆ ಅದರಲ್ಲಿ ಮನುಷ್ಯನ ಛಾಯೆಯು ಕಾಣುವುದಿಲ್ಲವೋ ಹಾಗೆಯೇ **ಮನುಷ್ಯನು ಕ್ರೋಧವಿಶಿಷ್ಟನಾದಾಗ ಆತನಿಗೆ ಆತ್ಮಹಿತವು ಏತರಲ್ಲಿದೆಯೆಂಬುದು ತಿಳಿಯುವುದಿಲ್ಲ**. ಆ ಪಾತ್ರೆಯ ನೀರು ಗುಳ್ಳೇಗಳಿಂದ ಕೂಡಿದ್ದರೆ ಹೇಗೆ ನಮ್ಮ ಪ್ರತಿಬಿಂಬವು ತೋರುವುದಿಲ್ಲವೋ ಹಾಗೆಯೇ **ಯಾರ ಮನಸ್ಸು ಆಲಸ್ಯತನದಿಂದ ಕೂಡಿದ್ದಾಗಿದೆಯೋ ಅವರಿಗೂ ಕೂಡ ತಮ್ಮ ಹಿತಾಹಿತಗಳು ಗೊತ್ತಾಗುವುದಿಲ್ಲ**. ಎಂದ ಮೇಲೆ ಅಂಥವರಿಗೆ ಅನ್ಯರಹಿತವು ಹೇಗೆ ತಾನೆ ಗೊತ್ತಾಗುವುದು?"

ಆ ಪಾತ್ರೆಯ ನೀರು ಗಾಳಿಯಿಂದ ಅಲೆದಾಡುತ್ತಿದ್ದರೆ ಹೇಗೆ ಅದರಲ್ಲಿ ನಮ್ಮ ಮುಖವು ತೋರುವುದಿಲ್ಲವೋ ಹಾಗೆಯೇ ಯಾರ ಚಿತ್ತವೂ ಭ್ರಾಂತಿಯಿಂದ ಕೂಡಿರ್ದದಾಗಿದೆಯೋ ಅವರಿಗೆ ಸ್ವಹಿತ ಮತ್ತು ಪರಹಿತಗಳು ಏತರಲ್ಲಿವೆಯೆಂಬುದು ಗೊತ್ತಾಗುವುದಿಲ್ಲ. ಆ ನೀರು ರಾಡಿಯಾಗಿದ್ದರೂ ಕೂಡಾ ಹೇಗೆ ಪ್ರತಿಬಿಂಬವು ಚೆನ್ನಾಗಿ ಕಾಣುವುದಿಲ್ಲವೋ ಅದರಂತೆಯೇ **ಯಾರ ಚಿತ್ತವು ಸಂಶಯಗ್ರಸ್ತವಾಗಿದೆಯೋ ಅವರಿಗೂ ಕೂಡಾ ಸ್ವಹಿತ ಮತ್ತು ಪರಹಿತಗಳ ಜ್ಞಾನವುಂಟಾಗುವುದಿಲ್ಲ**. ಆದರೆ ಅದೇ ನೀರು ಸ್ವಚ್ಛವಾಗಿಯೂ, ಶಾಂತವಾಗಿಯೂ, ಇದ್ದರೆ ಅದರಲ್ಲಿ ಮನುಷ್ಯನಿಗೆ ತನ್ನ ಪ್ರತಿಬಿಂಬವು ಹೇಗೆ ಸ್ಪಷ್ಟವಾಗಿ ಕಾಣುತ್ತದೆಯೋ ಹಾಗೆಯೇ **ಯಾರ ಚಿತ್ರವೂ ಕಾಮವಾಸನೆಯಿಂದಲೂ, ಕ್ರೋಧದಿಂದಲು, ಆಲಸ್ಯದಿಂದಲು, ಭ್ರಾಮತಿಯಿಂದಲು ಮತ್ತು ಸಂಶಯದಿಂದಲು ಆಚ್ಛಾದಿಸಲ್ಪಟ್ಟಿಲ್ಲವೋ ಅವರಿಗೆ ತಮ್ಮ ಮತ್ತು ಅನ್ಯರ ಹಿತಗಳು ಏತರಿಂದ ಲಭಿಸುತ್ತವೆಂಬುದು ಚೆನ್ನಾಗಿ ಗೊತ್ತಾಗುತ್ತದೆ.**

ಎಲೈ ಬ್ರಾಹ್ಮಣನೇ, ಈ ಪಂಚಾವರ್ಣಗಳ ನಿವಾರಣೆಗಾಗಿ (೧) ಸ್ಮೃತಿ (ವಿವೇಕ) (೨) ಧರ್ಮಪ್ರವಿಚಯ (ಮನೋವೃತ್ತಿಯ ಪೃಥಃಕರಣಜ್ಞಾನ) (೩) ವೀರ್ಯ (ಸತ್ಕರ್ಮಗಳ ವಿಷಯದಲ್ಲಿ ಮಾನಸಿಕ ಉತ್ಸಾಹ) (೪) ಪ್ರೀತಿ (ಸತ್ಕರ್ಮಗಳಿಂದುಂಟಾಗುವ ಆನಂದ) (೫) ಪ್ರಶ್ರಬ್ಧಿ (ಚಿತ್ತಸುಖ) (೬) ಸಮಾಧಿ (ಚಿತ್ತೇಕಾಗ್ರತೆ) (೭) ಉಪೇಕ್ಷಾ (ಚಿತ್ತದ ಮಧ್ಯಾವಸ್ಥೆ) ಈ ಏಳು ಭೋಧ್ಯಂಗ (ಜ್ಞಾನಾಂಗ)ಗಳನ್ನು ಹೊಂದಬೇಕು.

ವಿಚಾರಮಾಡಿ ವಿಶ್ವಾಸವನ್ನಿಡಿರಿ

ಭಗವಾನ್ ಬುದ್ದನು ಧರ್ಮಪ್ರಸಾರಾರ್ಥವಾಗಿ ಕೋಲಸದೇಶದಲ್ಲಿ ಸಂಚರಿಸುತ್ತಿದ್ದಾಗ ಕಾಲಾಮು ಎಂಬ ಕ್ಷತ್ರಿಯರ ಪಟ್ಟಣಕ್ಕೆ ಬರಲು ಅವರು ಬುದ್ಧನನ್ನು ಕುರಿತು ಪ್ರತಿಯೊಬ್ಬ ಧರ್ಮೋಪದೇಶಕನೂ ಇಲ್ಲಿಗೆ ಬಂದು ತನ್ನ ಧರ್ಮವನ್ನೇ ಶ್ಲಾಘಿಸಿಕೊಂಡು ಅನ್ಯರಧರ್ಮವನ್ನು ನಿಂದಿಸುತ್ತಿದ್ದಾನೆ. ಆದುದರಿಂದ ಯಾರ ಧರ್ಮವು ಸತ್ಯವೆಂದು ತಿಳಿಯಬೇಕು? ಎಂದು ಪ್ರಶ್ನೆ ಮಾಡಿದರು.

ಆಗ ಬುದ್ಧದೇವನು ಹೇಳಿದುದೇನೆಂದರೆ; "ಕಾಲಾಮರೇ? ನಾನು ಹೇಳುವುದನ್ನು ನೀವು ಪರಂಪರೆಯಿಂದಲೂ ಕೇಳಿರುವಿರೆಂದು ನಂಬಬೇಡಿರಿ. ಅಥವಾ ಪರಂಪರೆಯಿಂದ ಆಚರಿಸುತ್ತಾ ಬಂದಿರುವಿರೆಂದು ನಂಬಬೇಡಿರಿ; ಇಲ್ಲವೇ ನಾನು ಹೇಳಿದುದು ನಿಮ್ಮ ಪವಿತ್ರ ಗ್ರಂಥಗಳಲ್ಲಿ ದೆಯೆಂದು ನೀವು ನಂಬಬೇಡಿರಿ. ಅಥವಾ ನಮ್ಮ ಹೇಳಿಕೆಯು ಅನುಮಾನದಿಂದ ದೃಢೀಕರಿಸಲಿಕ್ಕೆ ಬರುತ್ತದೆಂದು ಅದರಲ್ಲಿ ವಿಶ್ವಾಸವನ್ನಿಡಬೇಡಿರಿ. ಇಲ್ಲವೆ ಈ ಶ್ರಮಣನು ಪ್ರಸಿದ್ಧನಾಗಿಯೂ ಪೂಜ್ಯನಾಗಿಯೂ ಇದ್ದಾನೆಂದು ನನ್ನ ಮಾತಿನಲ್ಲಿ ವಿಶ್ವಾಸವನ್ನಿಡಬೇಡಿರಿ ಆದರೆ **ಯಾವಾಗ ನಿಮ್ಮ ಸದಸದ್ವಿವೇಕ ಬುದ್ಧಿಗೆ ನನ್ನ ಉಪದೇಶವು ವಿಹಿತವಾಗಿ ತೋರುತ್ತದೆಯೋ ಆಗಲೇ ಅದನ್ನು ಗ್ರಹಣಮಾಡಿರಿ.**

ಕಾಲಾಮರೇ? ಯಾವ ಮನುಷ್ಯನ ಅಂತಃಕರಣವು ಲೋಭದಿಂದಾಗಲಿ ಅಥವಾ ದ್ವೇಷದಿಂದಾಗಲಿ, ಇಲ್ಲವೇ ಮೋಹದಿಂದಾಗಲಿ ವ್ಯಾಪಿಸಿದೆಯೋ ಆತನಿಂದ ಆತ್ಮಹಿತವಾಗಲಿ, ಅಥವಾ ಪರಿಹಿತವಾಗಲಿ, ಸಂಭವಿಸುವುದು ಸಾಧ್ಯವೇ? ಕಾಲಾಮರು–ಎಂದೂ ಸಾಧ್ಯವಿಲ್ಲ.

ಕಾಲಾಮರೇ? ಹಾಗಾದರೆ **ಲೋಭ, ಮತ್ತು ಮೋಹ ಇವೇ ಪಾಪಕ್ಕೆ ಮೂಲವಾಗಿಯೂ ಅಲೋಭ, ಅದ್ವೇಷ ಮತ್ತು ಅಮೋಹ ಇವೇ ಪುಣ್ಯಕ್ಕೆ ಮೂಲವೆಂತಲೂ** ಸಿದ್ದವಾಗುವುದಿಲ್ಲವೇ? ಕಾಲಾಮರು ನಿಜ.

"ಕಾಲಾಮರೆ, ಈ ನನ್ನ ಉಪದೇಶವು ನಿಮಗೆ ವಿಹಿತವಾಗಿ ತೋರಿದರೂ ಇನ್ನೂ ಆಲೋಚಿಸಿದ ನಂತರ ಲೋಭ, ದ್ವೇಷ, ಮೋಹವನ್ನಳಿವುದೇ ತನಗೂ, ಅನ್ಯರಿಗೂ ಹಿತಕರವಾಗಿಯೂ ಜಗತ್ತಿನ ಸುಖಾಭಿವೃದ್ಧಿಗೆ ಸಾಧನವಾಗಿಯೂ ಪರಿಣಮಿಸುತ್ತದೆಂದೇ ತೋರಿದರೆ ಆಗ ಅಂತಹ ಮನೋಧರ್ಮವನ್ನುಂಟುಮಾಡಿಕೊಳ್ಳಲು ಪ್ರಯತ್ನಿಸಿರಿ." ಬುದ್ಧದೇವನ ಈ ಉಪದೇಶವನ್ನು ಕೇಳಿದ ನಂತರ ಆ ಕಾಲಾಮರು ಬುದ್ಧನ ಶಿಷ್ಯರಾದರು.

ಜನ್ಮ ಮತ್ತು ಜಾತಿ

ಬುದ್ಧ ಮಹಾತ್ಮನು ಇಚ್ಛಾನಂಗಲವೆಂಬ ಉಪವನದಲ್ಲಿರುವಾಗ ಜಾತಿಯು ಜನ್ಮದಿಂದಲೇ ಅಥವಾ ಕರ್ಮದಿಂದಲೇ? ಎಂಬ ವಿಷಯದಲ್ಲಿ ಭಾರದ್ವಾಜ ಮತ್ತು ವಾಸಿಷ್ಟ ಎಂಬಿಬ್ಬ ಬ್ರಾಹ್ಮಣರು ಚರ್ಚಿಸಿ ಬುದ್ಧದೇವನ ಅಭಿಪ್ರಾಯವನ್ನು ಕೇಳಲು, ಆಗ ಬುದ್ಧ ಭಗವಾನನು ಹೇಳಿದುದೇನೆಂದರೆ:

ವಾಸಿಷ್ಠನೇ? ತೃಣ ವೃಕ್ಷಾದಿ ವನಸ್ಪತಿಗಳಲ್ಲಿಯೂ, ಕ್ರಿಮಿಕೀಟಕಾದಿ ಪ್ರಾಣಿಗಳಲ್ಲಿಯೂ ನಾನಾ ಜಾತಿಗಳಿವೆಯಷ್ಟೆ. ಸರ್ಪಗಳಲ್ಲಿಯೇ ಅನೇಕ ಜಾತಿಗಳಿವೆ. ಮೀನುಗಳಲ್ಲಿಯೂ ಅಸಂಖ್ಯ ಜಾತಿಗಳಿವೆ. ಅವುಗಳೆಲ್ಲಾ ಬೇರೆ ಬೇರೆ ಜಾತಿಗಳೆಂಬುದಕ್ಕೆ ಭಿನ್ನ ಭಿನ್ನ ಲಕ್ಷಣಗಳು ಸ್ಪಷ್ಟವಾಗಿಯೇ ತೋರುತ್ತಿರುತ್ತವೆ. ಹಾಗೆ ಮನುಷ್ಯರಲ್ಲೇನಾದರೂ ಭಿನ್ನ ಭಿನ್ನ ಜಾತಿಗಳಿವೆಯೇ? ಕರಚರಣಾದಿ ಅವಯವಗಳೆಲ್ಲಾ ಪ್ರಾಯಶಃ ಒಂದೇ ತರವಾಗಿರುತ್ತವೆ. ಆದಕಾರಣ ಆಕಾರದ ಮೇಲಿಂದ ಜಾತಿಯನ್ನು ಕಲ್ಪಿಸುವುದಕ್ಕೆ ಬರುವುದಿಲ್ಲ. ಆದರೆ ಕರ್ಮದ ಮೇಲಿಂದಮಾತ್ರ ಜಾತಿಯನ್ನು ಕಲ್ಪಿಸಬಹುದು."

ಒಬ್ಬ ಬ್ರಾಹ್ಮಣನು ಆಕಳನ್ನಿಟ್ಟುಕೊಂಡು ಆದುದರಿಂದಲೇ ಜೀವನವನ್ನು ಸಾಗಿಸಿಕೊಳ್ಳುತ್ತಿದ್ದರೆ ಆತನಿಗೆ ಗವಳಿಗನೆಂದೇ ಹೇಳಬೇಕೇ ವಿನಾ ಬ್ರಾಹ್ಮಣನೆಂದು ಹೇಳಬಾರದು. ಇದರಂತೆಯೇ ಶಿಲ್ಪವಿದ್ಯೆಯನ್ನು ಬಲ್ಲವರು ಶಿಲ್ಪಿಗರು ವ್ಯಾಪಾರ ಮಾಡುವವರು ವೈಶ್ಯರು, ಯುದ್ಧ ಮಾಡುವವರು ಕ್ಷತ್ರಿಯರು, ಕದಿಯುವರು ಕಳ್ಳರು ಎಂದೇ ತಿಳಿಯಬೇಕು.

"ಎಲ್ಲಾ ಸಂಸಾರಬಂಧಗಳನ್ನು ತೆಗೆದುಹಾಕಿ, ಯಾವ ಸಂಸಾರ ತೆಗೆದುಹಾಕಿ, ಯಾವ ಸಂಸಾರ ದುಃಖಗಳಿಗೂ ಅಂಜದೆ, ಯಾವುದರಲ್ಲಿಯೂ ಆಸಕ್ತಿಯನ್ನಿಡದಂತೆ ಯಾರು ಇರುತ್ತಾರೆಯೋ ಅವರಿಗೇನೆ ನಾನು ಬ್ರಾಹ್ಮಣರೆಂದು ಹೇಳುತ್ತೇನೆ. **ಅನ್ಯರು ದೂಷಿಸುವ ದೂಷಣೆಗಳನ್ನು ಅನ್ಯರು ಕೊಡುವ ಹಿಂಸೆ, ಬಂಧನಗಳನ್ನು, ಯಾರು ಸಹಿಸಿಕೊಂಡು ಕ್ಷಮೆಯೇ ತಮ್ಮ ಸಾಮರ್ಥ್ಯವೆಂದು ತಿಳಿದಿದ್ದಾರೆಯೋ ಅವರಿಗೇನೇ ನಾನು ಬ್ರಾಹ್ಮಣರೆಂದು ಹೇಳುತ್ತೇನೆ.** ಕಮಲಪತ್ರದಲ್ಲಿನ ಉದಕ ಬಿಂದುವಿನಂತೆ ಯಾರು ಇಹಲೋಕದ ವಿಷಯಸುಖಕ್ಕೆ ಅಂಟಿಕೊಳ್ಳದಿರುತ್ತಾರೆಯೋ ಅವರಿಗೇನೇ ಬ್ರಾಹ್ಮಣರೆಂದು ನಾನು ಹೇಳುತ್ತೇನೆ."

"ಜನ್ಮದಿಂದಲೇ ಬ್ರಾಹ್ಮಣನಾಗಲಿ, ಅಬ್ರಾಹ್ಮಣವಾಗಲಿ ಆಗುವುದಿಲ್ಲ. ಕರ್ಮದಿಂದ ಬ್ರಾಹ್ಮಣನೂ ಅಬ್ರಾಹ್ಮಣನೂ ಆಗುತ್ತಾರೆ. ಕರ್ಮದಿಂದಲೇ ಈ ಜಗತ್ತು ನಡೆಯುತ್ತಾ ಇದೆ. ರಥವು ಹೇಗೆ ಅಚ್ಚಿನ ಆಶ್ರಯದಲ್ಲಿರುತ್ತದೆಯೋ ಹಾಗೆಯೇ **ಸರ್ವಪ್ರಾಣಿಗಳೂ ಕರ್ಮವನ್ನೇ ಅವಲಂಬಿಸಿವೆ."**

ಬುದ್ಧದೇವನು ಶ್ರಾವಸ್ತಿಪಟ್ಟಣದಲ್ಲಿ ಭಿಕ್ಷೆಗೆ ಹೋದಾಗ ಅಗ್ನಿಹೋತ್ರಿ ಭಾರದ್ವಾಜ ಎಂಬ ಬ್ರಾಹ್ಮಣನು ಅಗ್ನಿಗೆ ಆಹುತಿ ಹಾಕುತ್ತಿರುವಾಗ ಬುದ್ಧನನ್ನು ನೋಡಿದೊಡನೆ ಓಹೋ **ಚಾಂಡಾಲನು** ಇಲ್ಲೇ ನಿಂತಿದ್ದಾನೆಂದು ಹೇಳಿದನು. ಆಗ ಬುದ್ಧ ಮಹಾತ್ಮನು ಹೇಳಿದುದೇನೆಂದರೆ.

"ಯಾರು ಆಗಾಗ್ಗೆ ಕೋಪಗೊಳ್ಳುತ್ತಾರೆಯೋ, ಯಾರು ಸೇಡುತೀರಿಸಿಕೊಳ್ಳಲು ಪ್ರಯತ್ನಿಸುತ್ತಾರೆಯೋ, ಯಾರು ಪ್ರಾಣಿಗಳನ್ನು ಕೊಲ್ಲುತ್ತಾರೆಯೋ, ಯಾರ ಅಂತಃಕರಣದಲ್ಲಿ ದಯೆಯಿಲ್ಲವೊ, ಯಾರೂ ಕಳವುಸುಲಿಗೆಗಳನ್ನು ಮಾಡುತ್ತಾರೆಯೋ ಅವರು ಚಂಡಾಲರು, ಯಾರು ಅನ್ಯರಲ್ಲಿ ಸಾಲಮಾಡಿ ಅದನ್ನು ಕೇಳಲಿಕ್ಕೆ ಬಂದಾಗ ತಲೆ ತಪ್ಪಿಸಿಕೊಂಡು ಹೋಗುತ್ತಾರೆಯೋ

ಮತ್ತು ನಿನಗೆ ನಾನು ಕೊಡಬೇಕಾದುದಿಲ್ಲವೆಂದು ಸುಳ್ಳು ಹೇಳುತ್ತಾರೆಯೋ ಅವರು ಚಂಡಾಲರು. ಯಾರು ಸ್ವಂತಕ್ಕೋಸ್ಕರ ಅಥವಾ ಪರರಿಗೋಸ್ಕರ, ಇಲ್ಲವೆ ಧನಾಶೇಯಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಾರೆಯೋ ಅವರು ಚಂಡಾಲರು. ಯಾರು ವ್ಯಭಿಚಾರ ಮಾಡುತ್ತಾರೆಯೋ ಅವರು ಚಂಡಾಲರು. ಯಾರು ವೃದ್ಧ ತಾಯಿತಂದೆಗಳನ್ನು ಜೋಪಾನ ಮಾಡುವುದಿಲ್ಲವೋ, ಯಾರು ತಾಯಿ, ತಂದೆ, ಅಕ್ಕ, ತಂಗಿ ಮೊದಲಾದ ಸಂಬಂಧಗಳಿಗೆ ಬೈದು ಅವರನ್ನು ಹೊಡೆಯುತ್ತಾರೆಯೋ ಅವರು ಚಂಡಾಲರು, ತಾವು ಮಾಡಿದ ಪಾಪಕರ್ಮವನ್ನು ಯಾರು ಮುಚ್ಚಲು ಪ್ರಯತ್ನಿಸುತ್ತಾರೆಯೋ ಅವರು ಚಂಡಾಲರು."

"**ಜನ್ಮದಿಂದಲೇ ಚಾಂಡಾಲನಾಗಲಿ, ಬ್ರಾಹ್ಮಣನಾಗಲಿ, ಆಗುವುದಿಲ್ಲ, ಕರ್ಮದಿಂದ ಬ್ರಾಹ್ಮಣನಾಗಲಿ, ಅಥವಾ ಚಾಂಡಲನಾಗಲಿ ಆಗುತ್ತಾನೆ**. ಮಾತಂಗನೆಂಬ ಪ್ರಸಿದ್ಧ ಋಷಿಯು ಶ್ವಪಾಕ (ನಾಯಿಯ ಮಾಂಸವನ್ನು ತಿನ್ನುವ) ಚಾಂಡಾಲ ಪುತ್ರನು. ಆದರೂ ಆತನೂ ಮಹಾ ಬ್ರಾಹ್ಮಣರಿಗೂ ಕ್ಷತ್ರಿಯರಿಗೂ, ಪೂಜ್ಯನಾಗಿರಲಿಲ್ಲವೆ? ಒಳ್ಳೆಯ ಕುಲದಲ್ಲಿ ಹುಟ್ಟಿದ ಅನೇಕ ಬ್ರಾಹ್ಮಣರು ನಾನಾ ಪಾಪಕರ್ಮ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಇಹಲೋಕದಲ್ಲಿ ಅವರು ನಿಂದ್ಯರಾಗಿದ್ದಾರೆ. ಪರಲೋಕದಲ್ಲಿಯೂ ಅವರು ದುರ್ಗತಿಯನ್ನು ಹೊಂದುವರು.

ಯಜ್ಞಯಾಗ

ಬುದ್ಧಗುರು ಧರ್ಮೋಪದೇಶವನ್ನು ಮಾಡುತ್ತ ಮಗಧದೇಶದ ಖಾಣುಮತ ಎಂಬ ಗ್ರಾಮಕ್ಕೆ ಒಂದು ದಿವಸ ಹೋಗಿದ್ದನು. ಆ ಗ್ರಾಮವು ಕೂಟದಂತೆ ಎಂಬ ಬ್ರಾಹ್ಮಣನಿಗೆ ಬಿಂಬಿಸಾರ ರಾಜನಿಂದ ಉಂಬಳಿಯಾಗಿ ಕೊಡಲ್ಪಟ್ಟಿದ್ದಿತು. ಆ ತನ್ನ ಗ್ರಾಮದಲ್ಲಿ ಆಗ ಕೂಟದಂತ ಬ್ರಾಹ್ಮಣನು ಮಹಾಯಜ್ಞವನ್ನು ಮಾಡುವ ಸಿದ್ದತೆಯಲ್ಲಿದ್ದನು. ೭೦೦ ಎತ್ತುಗಳನ್ನು, ೭೦೦ ಕುರಿಗಳನ್ನು ಹೋತುಗಳೇ ಮೊದಲಾದ **ಒಟ್ಟು ೩೫೦೦ ಪಶುಗಳನ್ನು ಅಗ್ನಿಗೆ ಆಹುತಿಕೊಡಬೇಕೆಂದು ಯೋಚಿಸಿದ್ದನು**. ಬುದ್ಧ ದೇವನು ತನ್ನ ಗ್ರಾಮಕ್ಕೆ ಬಂದನಂತರ ಕೂಟದಂತೆನು ಆತನ ದರ್ಶನಕ್ಕೆ ಹೋಗಿ ಶ್ರೇಷ್ಠತರವಾದ ಯಜ್ಞ ವಿಧಿಯನ್ನು ತಿಳಿಸಬೇಕೆಂದು ಬುದ್ಧನನ್ನು ಪ್ರಾರ್ಥಿಸಿಕೊಂಡನು. ಆಗ ಬುದ್ಧದೇವನು ಹೇಳಿದುದೇನೆಂದರೆ:

"ಪೂರ್ವಕಾದಲ್ಲಿ ಮಹಾವಿಜಿತ ಎಂಬ ಮಹಾರಾಜನು ಯಜ್ಞ ಮಾಡಬೇಕೆಂದು ಅಪೇಕ್ಷಿಸಲು ಅರಮನೆಯ ಪುರೋಹಿತನ ಅಭಿಪ್ರಾಯದ, ಪ್ರಕಾರ ಆ ಯಜ್ಞವು ಜರುಗಿತು. ಆ ಯಜ್ಞದಲ್ಲಿ ಆಕಳು, ಕುರಿ, ಹೋತಗಳೇ ಮೊದಲಾದ ಯಾವ ಪ್ರಾಣಿಗಳ ಹಿಂಸೆಯೂ ಸಂಭವಿಸಲಿಲ್ಲ. ಯಾವ ಗಿಡಗಳನ್ನು ಕಡಿದೂ ಯಾಗವನ್ನು ಮಾಡಲಿಲ್ಲ. ಆಳುಗಳನ್ನು ಬಲಾತ್ಕಾರವಾಗಿ ಕೆಲಸಕ್ಕೆ ಹಚ್ಚಲಿಲ್ಲ. ಎಲ್ಲರೂ ಸ್ವಸಂತೋಷದಿಂದಲೇ ಕೆಲಸಗಳನ್ನು ಮಾಡಿದರು. **ತುಪ್ಪ, ಎಣ್ಣೆ, ಬೆಣ್ಣೆ, ಮೊಸರು, ಜೇನುತುಪ್ಪ ಮತ್ತು ಬೆಲ್ಲ ಇವುಗಳನ್ನು ಅಗ್ನಿಗೆ ಆಹುತಿ ಕೊಟ್ಟರು**. ಕುರುಡರಿಗು, ಕುಂಟರಿಗು, ಅಂಗಹೀನರಿಗು, ಯಜ್ಞಶಾಲೆಯ ನಾಲ್ಕು ದಿಕ್ಕುಗಳಲ್ಲಿ ಧರ್ಮಶಾಲೆಗಳನ್ನು ಕಟ್ಟಿಸಿ ಅಲ್ಲಿ ಬಡಜನಗಳಿಗೆ ದಾನ ಧರ್ಮಮಾಡಿದನು."

ಬುದ್ಧನು ಈ ಶ್ರೇಷ್ಠ ತರವಾದ ಯಜ್ಞವಿಧಿಯನ್ನು ಹೇಳಿ ಕೂಟದಂತೆ ಬ್ರಾಹ್ಮಣನಿಗೆ ತನ್ನ ಧರ್ಮ ತತ್ವಗಳನ್ನು ತಿಳಿಸಿದನು. ಆಗ ಆ ಬ್ರಾಹ್ಮಣನು ಬೌದ್ಧ ಮತವನ್ನನುಸರಿಸಿ ಯಜ್ಞಕ್ಕೋಸ್ಕರ ತಂದಿದ್ದ ಪಶುಗಳನ್ನು ಬಿಟ್ಟುಬಿಟ್ಟನು.

ಬುದ್ಧನ ಒಕ್ಕಲುತನ

ಬುದ್ಧ ಮಹಾತ್ಮನು ಮಗಧರಾಷ್ಟ್ರದ ಏಕನಾಳ ಎಂಬ ಗ್ರಾಮಕ್ಕೆ ಹೋದಾಗ ಆ ಗ್ರಾಮದ ಭಾರದ್ವಾಜ ಬ್ರಾಹ್ಮಣನು ತನ್ನ ಭೂಮಿಯನ್ನು ಊಳುತ್ತಿದ್ದ ಎಲ್ಲಾ ಒಕ್ಕಲಿಗರಿಗೂ ಊಟಕ್ಕೆ ಮಾಡಿಸಿದ್ದನು. ಊಟದ ಸಮಾರಂಭವು ನಡೆದಾಗ ಬುದ್ದನು ಭಿಕ್ಷಾಪಾತ್ರೆಯನ್ನು ತೆಗೆದುಕೊಂಡು ಅಲ್ಲಿಗೆ ಹೋಗಲು, ಎಲೈ ಶ್ರಮಣನೇ? ನೀನೂ ಒಕ್ಕಲುತನವನ್ನು ಮಾಡಿ ಜೀವಿಸು. ಈ ಪ್ರಕಾರ ಭಿಕ್ಷೆ ಬೇಡುವುದು ಸರಿಯಲ್ಲ. ಎಂದು ಭಾರದ್ವಾಜ ಬ್ರಾಹ್ಮಣನು ಹೇಳಲು ಆಗ ಬುದ್ಧ ಮಹಾತ್ಮನು ಆತನನ್ನು ಕುರಿತು ಹೇಳಿದುದೇನೆಂದರೆ :

"ನಾನು ಕೂಡ ಒಕ್ಕಲುತನದಿಂದಲೇ ಜೀವಿಸುತ್ತಿದ್ದೇನೆ. ಶ್ರದ್ಧೆಯೇ ನನ್ನ ಬೀಜವು, ಸದಾಚರಣೆಯೇ ಅದರ ಮೇಲೆ ಬೀಳುವ ಮಳೆಯು, ಪ್ರಜ್ಞೆಯೇ ನನ್ನ ನೇಗಿಲು, ಪಾಪದ ವಿಷಯದಲ್ಲಿರುವ ಲಜ್ಜೆಯೇ ಆ ನೇಗಿಲಿನ ಮಧ್ಯದಲ್ಲಿರುವ ಕಟ್ಟಿಗೆಯು, ಮನಸ್ಸೆಂಬ ಹಗ್ಗದಿಂದ ಈ ನೇಗಿಲನ್ನು ಕಟ್ಟಿದ್ದೇನೆ. ಸ್ಮೃತಿಯೇ ಆ ನೇಗಿಲಿಗಿರುವ ಕುಳವು, ಸತ್ಯವೇ ನನ್ನ ಕೂರಿಗೆ ಬಟ್ಟಲು, ಶಾಂತಿಯೇ ನನ್ನ ವಿಶ್ರಾಂತಿಯು, ಉತ್ಸಾಹವೇ ನನ್ನ ಎತ್ತುಗಳು. ಈ ನನ್ನ ಊಳುವ ಕಾರ್ಯವು ನಿರ್ವಾಣದ ಕಡೆಗೆ ಹೋಗುತ್ತಾ ಇದೆ. **ಈ ನನ್ನ ಒಕ್ಕಲುತನದಿಂದ ಎಲೈ ಭಾರದ್ವಾಜನೇ? ಅಮೃತಫಲವು ಲಭಿಸುತ್ತದೆ. ಈ ಒಕ್ಕಲುತನದಿಂದ ಮನುಷ್ಯನ ಸಕಲ ದುಃಖಗಳೂ ನಿವಾರಣೆಯಾಗುತ್ತವೆ."**

ಭಾರದ್ವಾಜನು ಬುದ್ಧನ ಭಾಷಣವನ್ನು ಕೇಳಿ ಒಂದು ಪಾತ್ರೆಯಲ್ಲಿ ಹಾಲಿನಿಂದ ಮಾಡಿದ ಪಕ್ವಾನ್ನವನ್ನು ತಂದು ಇದನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿಕೊಂಡನು. ಆಗ ಬುದ್ಧನು. "ಎಲೈ ಭಾರದ್ವಾಜನೇ? ನಾನು ಈ ದಿವಸ ಭಿಕ್ಷೆಯ ಸಂಬಂಧವಾಗಿ ನಿನ್ನ ಸಂಗಡ ಸಂಭಾಷಣೆ ಮಾಡಿರುವುದರಿಂದ ಇದನ್ನು ನಾನು ಸ್ವೀಕರಿಸುವುದಿಲ್ಲ. ನೀನು ಯಾವ ಸತ್ಪುರುಷರನ್ನಾದರೂ ಅನ್ನದಾನದಿಂದ ಸಂತುಷ್ಟಗೊಳಿಸು. ಏಕೆಂದರೆ **ಸಾಧು ಸಜ್ಜನರೇ ಪುಣ್ಯ."**

ಭಿಕ್ಷುಗಳು ಎಂದೂ ಕೋಪಿಸಬಾರದು

ಮೇಲಿಯ ಫಾಲ್ಗುಣ ಎಂಬೊಬ್ಬ ಭಿಕ್ಷುಯಿದ್ದನು. ಈತನು ಭಿಕ್ಷುಣಿಯರ ಸಂಬಂಧವಾಗಿ ಯಾರು ದೂಷಿಸಿದರೂ ಅವರ ಸಂಗಡ ಕೂಡಲೇ ಕಲಹಕ್ಕೆ ಹೋಗುತ್ತಿದ್ದನು. ಇದು ಬುದ್ಧ ಮಹಾತ್ಮನಿಗೆ ತಿಳಿದೊಡನೆ ಆತನನ್ನು ಕರೆಯಿಸಿ ಬುದ್ಧದೇವನು ಹೇಳಿದುದೇನೆಂದರೆ:

"ಎಲೈ ಫಲ್ಗುಣನೇ ನೀನು ಕುಲೀನನು. ಶ್ರದ್ಧಾ ಪೂರ್ವಕ ಭಿಕ್ಷುವಾಗಿರುವಿ. ಆದರು ಇನ್ನು ನಿನ್ನ ಪ್ರಾಪಂಚಿಕ ಸಂಸ್ಕಾರವು ಹೋಗದೆ ಇದ್ದುದು ಆಶ್ಚರ್ಯವಲ್ಲವೇ? ಭಿಕ್ಷುಣಿಯರಿಗಾಗಲಿ, ಅಥವಾ ನಿನಗಾಗಲಿ, **ಯಾರೇ ದೂಷಿಸಿದರು, ಹೊಡೆದರು, ಇಷ್ಟೇ ಅಲ್ಲ; ಶಸ್ತ್ರದಿಂದ ಗಾಯಮಾಡಿದರು ನಿನ್ನ ಬಾಯಿಯಿಂದ ಕೆಟ್ಟ ನುಡಿಗಳು ಹೊರಡಬಾರದು. ನೀನು ವಿಕಾರವಶನಾಗಬಾರದು. ಇಷ್ಟೇ ಅಲ್ಲ; ಆ ನಿನ್ನ ವೈರಿಗಳ ವಿಷಯದಲ್ಲಿ ಅನುಕಂಪನೆಯೂ, ಪ್ರೇಮವೂ, ಇರುವಂತೆ ನೀನು ಎಚ್ಚರದಿಂದ ನಡೆದುಕೊ."**

ಅನಂತರ ಭಿಕ್ಷುಗಳನ್ನು ಕುರಿತು ಹೇಳಿದುದೇನೆಂದರೆ "ಭಿಕ್ಷುಗಳೇ, ಎಲ್ಲಿಯವರೆಗೂ ಒಬ್ಬ ಭಿಕ್ಷು ಕೆಟ್ಟ ಶಬ್ದಗಳನ್ನು ಕೇಳಿಲ್ಲವೋ ಅಲ್ಲಿಯವರೆಗು ಆತನು ಶಾಂತನಾಗಿಯೂ ನಮ್ರನಾಗಿಯೂ ಇರುತ್ತಾನೆ. ಆದರೆ ಯಾವಾಗ ಆತನು ಕೆಟ್ಟ ಮಾತುಗಳನ್ನು ಕೇಳುತ್ತಾನೆಯೋ ಆಗ ಆತನ ಶಾಂತತೆಯ ಮತ್ತು ನಮ್ರತೆಯ ನಿಜತ್ವವು ಗೊತ್ತಾಗುತ್ತದೆ. **ಯಾರು ಅನ್ನವಸ್ತ್ರಗಳಿಗೋಸ್ಕರ ನಮ್ರ ಮತ್ತು ಶಾಂತರಾಗುತ್ತಾರೆಯೋ ಅವರಿಗೆ ನಾನು ಶಾಂತರೆಂತಲೂ, ನಮ್ರರೆಂತಲೂ, ಹೇಳುವುದಿಲ್ಲ, ಆದರೆ ಯಾರು ಧರ್ಮದ ಗೌರವಕ್ಕೋಸ್ಕರ ಶಾಂತರೂ, ನಮ್ರರೂ ಆಗುತ್ತಾರೆಯೋ ಅವರೇ ನಿಜವಾದ ಶಾಂತರೆಂತಲೂ ನಮ್ರರೆಂತಲೂ ತಿಳಿಯಬೇಕು."**

ಭಿಕ್ಷುಗಳೇ, ಕಳ್ಳರು ದೊಡ್ಡ ಗರಗಸದಿಂದ ಒಬ್ಬ ಭಿಕ್ಷುವಿನ ಅವಯವಗಳನ್ನು ಕೊರೆಯಲಾರಂಭಿಸಿದಾಗ ಆತನು **ಕೋಪಗೊಂಡರೆ ಅವನು ನನ್ನ ನಿಜವಾದ ಅನುಯಾಯಿಯೆಂದು ಹೇಳಲಿಕ್ಕಾಗುವುದಿಲ್ಲ**. ಅಂತಹ ಸಮಯದಲ್ಲಿಯೂ ಕೂಡಾ ಭಿಕ್ಷುಗಳೇ, ನೀವು ಕೋಪಿಸಬಾರದು ನಿಮ್ಮ ಬಾಯಿಂದ ಬಿರುನುಡಿಗಳು ಬರಬಾರದು. **ನಿಮ್ಮ ಅಂತಃಕರಣದಲ್ಲಿ ದಯೆ ಮತ್ತು ಪ್ರೇಮಗಳೇ ನೆಲೆಸಬೇಕು**. ಆ ನಿಮ್ಮ ವೈರಿಯನ್ನೇ ಮೊದಲುಮಾಡಿಕೊಂಡು ಪ್ರಪಂಚದಲ್ಲಿರುವ ಸಕಲರ ಮೇಲೆಯೂ ಅಕುಟಿಲವಾದ ಪ್ರೇಮವನ್ನಿಡಿರಿ. ಈ ವಿಷಯದಲ್ಲಿ ಬಹು ಎಚ್ಚರಿಕೆಯಿರಲಿ. ಭಿಕ್ಷುಗಳೇ **ಈ ನನ್ನ ಉಪದೇಶವನ್ನು ಪುನಃ ಪುನಃ ಮನನ ಮಾಡಿರಿ.**

ಬುದ್ಧ ಭಗವಾನನು ರಾಜಗೃಹದ ಪಟ್ಟಣದ ವೇಣುವನದಲ್ಲಿದ್ದಾಗ ಭಾರದ್ವಾಜನೆಂಬೊಬ್ಬ ಬ್ರಾಹ್ಮಣನು ತನ್ನ ವಂಶದ ಒಬ್ಬ ಬ್ರಾಹ್ಮಣನು ಬೌದ್ಧ ಮತವನ್ನು ಸೇರಿದನೆಂಬ ಸಮಾಚಾರವನ್ನು ಕೇಳಿ ಬಹು ಕೋಪಗೊಂಡು ಬುದ್ಧನ ಹತ್ತಿರಬಂದು ಬುದ್ಧದೇವನಿಗೆ ಮನಸ್ಸಿಗೆ ಬಂದಂತೆ ಅವಾಚ್ಯ ಶಬ್ದಗಳನ್ನಾಡಿದನು. ಆದರೂ ಬುದ್ಧಗುರು ಶಾಂತನಾಗಿಯೇ ಇದ್ದನು. ಆ ಭಾರದ್ವಾಜನು ಸ್ವಲ್ಪ ಶಾಂತನಾದನಂತರ ಆತನಿಗೆ ಉಪದೇಶಮಾಡಿದುದೇನೆಂದರೆ :

"ಎಲೈ ಬ್ರಾಹ್ಮಣನೇ, ನಾನು ಕೋಪಗೊಳ್ಳದಿದ್ದುದು ಸ್ಪಷ್ಟವಾಗಿಯೇ ಇದೆ. **ಕೋಪಗೊಂಡವರ ಮೇಲೆ ಯಾರು ಕೋಪಿಸುತ್ತಾರೆಯೋ ಅವರಿಗೇನೇ ಕೇಡಾಗುತ್ತದೆ**. ಒಬ್ಬನು ಕೋಪಗೊಂಡಾಗ ತಾನು ಮಾತ್ರ ಕೋಪಿಸದಿದ್ದರೆ ಆಗ ಅವನು ಒಂದು **ದೊಡ್ಡ ಯುದ್ಧದಲ್ಲಿ ಜಯವನ್ನು ಹೊಂದಿದಂತೆಯೇ** ಸರಿ. ಪ್ರತಿಕಕ್ಷಿಯು ಕೋಪಗೊಂಡಿದ್ದಾನೆಂದು ತಿಳಿದು ಯಾರು ಮಹಾ ವಿವೇಕದಿಂದ ಶಾಂತರಾಗುತ್ತಾರೆಯೋ ಅವರು ತಮಗೆ ಹಿತವನ್ನು ಮಾಡಿಕೊಂಡಂತಾಗುವುದಲ್ಲದೆ ಅನ್ಯರಿಗೂ ಹಿತವನ್ನು ಮಾಡಿದಂತಾಗುವುದು ತನ್ನ ಮತ್ತು ಅನ್ಯರ ರೋಗವನ್ನು ಗುಣಮಾಡುವ ಇಂತಹ ಮನುಷ್ಯನಿಗೆ ಅಜ್ಞರು ಮೂರ್ಖನೆಂದು ಹೇಳುತ್ತಾರೆ."

ಜಗತ್ತು ಶಾಶ್ವತವೇ ಅಶಾಶ್ವತವೇ?

ಬುದ್ಧ ಮಹಾತ್ಮನು ಶ್ರಾವಸ್ತಿ ಪಟ್ಟಣದ ಅನಾಥಪಿಂಡಿಕರ ಉದ್ಯಾನವನದಲ್ಲಿದ್ದಾಗ ಮಾಲುಂಕ್ಯ ಪುತ್ರನೆಂಬ ಒಬ್ಬ ಭಿಕ್ಷು ಬಂದು ಬುದ್ಧಭಗವಾನನ್ನು ಕೇಳಿದುದೇನೆಂದರೆ: "ಭದಂತ ನಾನು ಏಕಾಂತದಲ್ಲಿ ಕುಳಿತಾಗ ಈ ಜಗತ್ತು ಶಾಶ್ವತವಾದುದೇ? ಅಥವಾ ಅಶಾಶ್ವತವಾದುದೇ? ದೇಹ ಮತ್ತು ಆತ್ಮ ಇವು ಒಂದೇ ಆಗಿವೆಯೇ? ಅಥವಾ ಭಿನ್ನವಾಗಿವೆಯೋ? ತಥಾಗತನಿಗೆ ಮರಣೋತ್ತರ

ಜನ್ಮವುಂಟೇ? ಅಥವಾ ಇಲ್ಲವೇ? ಈ ವಿಷಯಗಳ ಯೋಚನೆಯುಂಟಾಯಿತು. ತಾವು ಈ ವಿಷಯಗಳಲ್ಲಿ ಸಮಾಧಾನಕರವಾದ ವಿವರಣೆಯನ್ನು ಮಾಡಿದರೆ ನಾನು ತಮ್ಮ ಶಿಷ್ಯನಾಗುವೆನು. ತಮಗೆ ಗೊತ್ತಿರದಿದ್ದರೆ ಆಪ್ರಕಾರ ಗೊತ್ತಿಲ್ಲವೆಂದು ಹೇಳುವುದೇ ವಿಹಿತವಾದ ರೀತಿಯಾಗಿದೆ."

ಆಗ ಬುದ್ಧ ಮಹಾತ್ಮನು ಮಾಲುಂಕ್ಯಪುತ್ರನೇ, ನೀನು ನನ್ನ ಶಿಷ್ಯನಾದರೆ ಮಾತ್ರ ಈ ವಿಷಯಗಳನ್ನು ವಿವರಿಸುತ್ತೇನೆಂದು ನಾನು ಎಂದಾದರೂ ಹೇಳಿದ್ದೇನೋ? ಮಾಲುಂಕ್ಯಪುತ್ರ – ಇಲ್ಲ ಭದಂತ.

ಎಲೈ ಮಾಲುಂಕ್ಯಪುತ್ರನೇ, ಒಬ್ಬ ಮನುಷ್ಯನಿಗೆ ವಿಷಯುಕ್ತವಾದ ಬಾಣವು ನಾಟಿ ಆತನು ಬಳಲುತ್ತಿದ್ದಾಗ ಆತನ ಇಷ್ಟಮಿತ್ರರು ಶಸ್ತ್ರಕ್ರಿಯೆಯನ್ನು ಬಲ್ಲಂತಹ ಒಬ್ಬ ವೈದ್ಯರನ್ನು ಕರೆದುಕೊಂಡು ಬಂದರು. ಆಗ ಆ ಮನುಷ್ಯನು ವೈದ್ಯನನ್ನು ಕುರಿತು ಈ ಬಾಣವನ್ನು ಹೊಡೆದವರಾರು? ಬ್ರಾಹ್ಮಣನೇ, ಆಥವಾಕ್ಷತ್ರಿಯನೇ, ಇಲ್ಲವೇ ವೈಶ್ಯನೇ ಶೂದ್ರನೇ? ಆತನು ಬೆಳ್ಳಗಿದ್ದನೇ ಆತನ ಭಾಣವು ಹೇಗಿದ್ದಿತು? ಆ ಬಾಣಕ್ಕೆ ಯಾತರ ದಾರವನ್ನು ಕಟ್ಟಿದ್ದನು? ಈ ಮೊದಲಾದ ವಿಷಯಗಳನ್ನು ನೀವು ಎಲ್ಲಿಯವರೆಗು ನನಗೆ ಹೇಳುವುದಿಲ್ಲವೋ ಅಲ್ಲಿಯವರೆಗೂ ನಿಮ್ಮ ಶಸ್ತ್ರವನ್ನು ನನ್ನ ದೇಹಕ್ಕೆ ಮುಟ್ಟಿಸಿಕೊಳ್ಳುವುದಿಲ್ಲವೆಂದು ಹೇಳಿದರೆ ಆ ಮನುಷ್ಯನಿಗೆ ಆ ಎಲ್ಲಾ ಸಂಗತಿಗಳು ತಿಳಿಯುವುದಕ್ಕಿಂತ ಪೂರ್ವದಲ್ಲಿಯೇ ಮರಣವು ಪ್ರಾಪ್ತವಾಗುವುದು.

ಅದರಂತೆಯೇ ಈ ಜಗತ್ತು ಶಾಶ್ವತವಾಗಿದೆಯೇ, ಆಥವಾ ಅಶಾಶ್ವತವಾಗಿದೆಯೇ? ಇತ್ಯಾದಿ ವಿಷಯಗಳೆಲ್ಲಾ ನನಗೆ ತಿಳಿದ ವಿನಾ ನಾನು ಬ್ರಹ್ಮಚರ್ಯದ ಅಭ್ಯಾಸವನ್ನು ಮಾಡುವುದಿಲ್ಲವೆಂದು ಯಾರಾದರೂ ಹಠ ಹಿಡಿದರೆ ಅವರಿಗೆ ಆ ಸಂಗತಿಗಳು ತಿಳಿಯದೇನೆ ಮರಣವು ಲಭಿಸುವುದು.

"ಎಲೈ ಮಾಲುಂಕ್ಯಪುತ್ರನೇ, **ಜಗತ್ತಿನ ಶಾಶ್ವತತೆ ಮೊದಲಾದ ನೀನು ಕೇಳಿದ ವಿಷಯಗಳು ಧರ್ಮಾಚರಣೆಗೆ ಸಹಾಯಕವಾದವುಗಳಲ್ಲ, ಅವುಗಳನ್ನು ಹೇಗೆ ತಿಳಿದುಕೊಂಡರೂ ಜರೆ, ಮರಣ, ಶೋಕಾದಿಗಳೇನೂ ನಿವಾರಣೆಯಾಗುವುದಿಲ್ಲ. ಆದುದರಿಂದಲೇ ಈ ವಿಷಯಗಳನ್ನು ವಿವರಿಸುವ ಗೊಡವೆಗೆ ನಾನು ಹೋಗಿಲ್ಲ.** ಇವುಗಳ ಸಂಬಂಧವಾದ ಚರ್ಚೆಯಿಂದ ವೈರಾಗ್ಯ ಪಾಪನಿರೋಧ, ಶಾಂತಿ ಪ್ರಜ್ಞೇ, ಸಂಬೋಧ, ನಿರ್ವಾಣಗಳೇನೂ ಸಂಭವಿಸುವುದಿಲ್ಲ. ಮಾಲುಂಕ್ಯಪುತ್ರನೇ, ದುಃಖ, ದುಃಖಸಮುದಾಯ, ದುಃಖನಿರೋಧ, ಮತ್ತು ದುಃಖನಿರೋಧಮಾರ್ಗ, ಈ ನಾಲ್ಕು ಆರ್ಯಸತ್ಯಗಳೇನೋ ಇದ್ದೇ ಇವೆಯೆಂಬುದನ್ನು ನಾನು ಸ್ಪಷ್ಟೀಕರಿಸಿದ್ದೇನೆ. ಏಕೆಂದರೆ, ಇವೇ ವೈರಾಗ್ಯ ಪಾಪನಿರೋಧ, ಶಾಂತಿ, ಪ್ರಜ್ಞೆ, ಸಂಬೋಧ ಮತ್ತು ನಿರ್ವಾಣಗಳಿಗೆ ಸಾಧನಗಳಾಗಿವೆ. ಆದಕಾರಣ ಮಾಲುಂಕ್ಯಪುತ್ರನೇ, **ನಾನು ಯಾವ ವಿಷಯಗಳನ್ನು ಚರ್ಚಿಸಲಿಲ್ಲವೋ ಅವುಗಳನ್ನು ಚರ್ಚಿಸಬೇಡ, ಮತ್ತು ಯಾವ ವಿಷಯಗಳನ್ನೂ ನಾನು ಸ್ಪಷ್ಟೀಕರಿಸಿದ್ದೇನೆಯೋ ಆವೇ ಸ್ಪಷ್ಟಿಕರಣಕ್ಕೆ ಯೋಗ್ಯವಾದವುಗಳೆಂದು ತಿಳಿ."**

ಅಂಗುಲಿಮಾಲಾ

ಅಂಗುಲಿಮಾಲಾ ಎಂಬ ಸುಪ್ರಸಿದ್ಧ ಕಳ್ಳನು ಶ್ರಾವಸ್ತಿ ಪಟ್ಟಣದ ಹತ್ತಿರ ಬಹು ಕೊಲೆ ಸುಲಿಗೆಗಳನ್ನು ಮಾಡುತ್ತಿದ್ದನು. ದಾರಿಕಾರರನ್ನು ಕೊಂದು ಅವರ ಅಂಗುಲ(ಬೆರಳು)ಗಳನ್ನು

ಕತ್ತರಿಸಿಕೊಂಡು ಅವುಗಳ ಮಾಲೆಯನ್ನು ಮಾಡಿಕೊಂಡು ಹಾಕಿಕೊಳ್ಳುತ್ತಿದ್ದನು. ಆದುದರಿಂದ ಆತನಿಗೆ ಅಂಗುಲಿಮಾಲಾ ಎಂಬ ಹೆಸರು ಬಂದಿದ್ದಿತು.

ಒಂದು ದಿವಸ ಬುದ್ಧ ಮಹಾತ್ಮನು ಶ್ರಾವಸ್ತಿ ಪಟ್ಟಣದಿಂದ ಅಂಗುಲಿಮಾಲಾ ಕಳ್ಳನಿರುವ ಕಡೆಗೆ ಹೊರಟನು. ಆಗ ದಾರಿಯಲ್ಲಿ ಗವಳಿಗರು ಮತ್ತು ಒಕ್ಕಲುತನ ಮಾಡುವವರು ಬುದ್ಧನನ್ನು ಕುರಿತು ಶ್ರವಣನೇ, ಆ ದಾರಿಯಲ್ಲಿ ಹೋಗಬೇಡ. ಅಲ್ಲಿ ಅಂಗುಲಿಮಾಲಾ ಎಂಬ ಬಹು ದೊಡ್ಡ ಕಳ್ಳನಿದ್ದಾನೆ. ನೀನು ಅಲ್ಲಿಗೆ ಹೋದರೆ ನಿನ್ನನ್ನು ಕೊಲ್ಲುವನು ಎಂದು ಹೇಳಿದರು. ಬುದ್ಧದೇವನು ಅದನ್ನು ಕೇಳಿದ ನಂತರ ಅವರಿಗೆ ಯಾವ ಉತ್ತರವನ್ನು ಹೇಳದೆ ಹಾಗಯೇ ಮುಂದಕ್ಕೆ ಹೋದನು. ಬಹುದೂರ ಹೋದನಂತರ ಅಂಗುಲಿಮಾಲಾ ಕಳ್ಳನು ಈ ಬುದ್ಧದೇವನನ್ನು ನೋಡಿ ಓಡಿಬಂದನು. ಆದರೂ ಬುದ್ಧನು ಅವನ ಕೈಗೆ ಸಿಗದೆ ಮುಂದೆಯೇ ಹೋಗುತ್ತಿದ್ದನು. ಇದನ್ನು ಆ ಕಳ್ಳನು ನೋಡಿ "ಓ ಶ್ರಮಣನೇ, ಅಲ್ಲಿಯೇ ನಿಲ್ಲು." ಎಂದು ಹೇಳಲು ಆಗ ಬುದ್ಧನು, "ನಾನು ನಿಂತಿದ್ದೇನೆ ನೀನು ನಿಲ್ಲು ಎಂದು ಹೇಳುತ್ತಾ ಹಾಗೆಯೇ ಮುಂದಕ್ಕೆ ಹೋಗುತ್ತಿದ್ದನು."

ಆ ಕಳ್ಳನು ನಾನು ನಿಂತಿದ್ದರೂ ನನಗೆ ನಿಲ್ಲೆಂತಲೂ ತಾನು ಹೋಗುತ್ತಿದ್ದರೂ ತಾನು ನಿಂತಿದ್ದೇನೆಂತಲೂ ಈ ಶ್ರಮಣನು ಹೇಳುತ್ತಿರುವನಲ್ಲಾ! ಇದರರ್ಥವೇನು? ಎಂದು ಆ ಬುದ್ಧ ದೇವನನ್ನು ಕೇಳಿದನು. ಆಗ ಬುದ್ಧ ಮಹಾತ್ಮನು ಹೇಳಿದುದೇನೆಂದರೆ "ಅಂಗುಲಿಮಾಲಾ! ಪ್ರಾಣಿಗಳಲ್ಲಿ ನಾನು ದಯೆಯುಳ್ಳವನಾಗಿರುವುದರಿಂದ ನಾನು ನಿಂತಿದ್ದೇನೆ. ಆದರೆ ನಿನ್ನ ಅಂತಃಕರಣದಲ್ಲಿ ದಯೆಯಿಲ್ಲದರಿಂದ ನೀನು ಅಸ್ಥಿರನಾಗಿರುವಿ." ಆದುದರಿಂದಲೇ ನಾನು ನಿನಗೆ ನಿಲ್ಲೆಂದು ಹೇಳಿದೆನು.

ಬುದ್ಧ ಮಹಾತ್ಮನ ಈ ವಾಕ್ಯವನ್ನು ಕೇಳಿದೊಡನೆ ಆ ಕಳ್ಳನಿಗೆ ವಿವೇಕವುಂಟಾಗಿ ಆತನು ಬುದ್ಧನ ಪಾದಗಳ ಮೇಲೆ ಬಿದ್ದು ನನ್ನನ್ನು ಭಿಕ್ಷುವನ್ನಾಗಿ ಮಾಡೆಂದು ಬೇಡಿಕೊಂಡನು. ಏಕೆಂದರೆ ಬುದ್ಧದೇವನ ಕೀರ್ತಿಯನ್ನು ಆ ಕಳ್ಳನು ಚೆನ್ನಾಗಿ ಕೇಳಿದ್ದನು. ಈ ದಿವಸ ನನಗೆ ಆ ಮಹಾತ್ಮನ ದರ್ಶನವಾದಕಾರಣ ಇಂದಿನಿಂದ ಆ ಪಾಪಕರ್ಮವನ್ನು ಬಿಟ್ಟು ಬುದ್ಧನ ಶಿಷ್ಯನಾಗಬೇಕೆಂದು ನಿರ್ಧರಿಸಿ ಆ ಪ್ರಕಾರ ಭಿಕ್ಷುದೀಕ್ಷೆಯನ್ನು ಹೊಂದಲಪೇಕ್ಷಿಸಿದನು.

ಬುದ್ಧದೇವನು ಅಂಗುಲಿಮಾಲಾನನ್ನೂ ತನ್ನ ಭಿಕ್ಷು ಸಂಘದಲ್ಲಿ ಸೇರಿಸಿಕೊಂಡನಂತರ ಈತನು ಭಿಕ್ಷಾನ್ನಕ್ಕೋಸ್ಕರ ಶ್ರಾವಸ್ತಿ ಪಟ್ಟಣದಲ್ಲಿ ಹೋದಾಗ ಒಂದು ದಿವಸ ಕೆಲವು ಜನರು ಅಂಗುಲಿಮಾಲಾನಿಗೆ ಕಲ್ಲುಗಳಿಂದಲೂ, ಕಟ್ಟಿಗೆಗಳಿಂದಲೂ ಚೆನ್ನಾಗಿ ಹೊಡೆಯಲು ಆತನ ತಲೆಯೊಡೆದು ರಕ್ತವು ಸುರಿಯಲಾರಂಭವಾಯಿತು. ಆದರೂ ಅಂಗುಲಿಮಾಲಾನು ಕೋಪಗೊಳ್ಳದೆ ಹಾಗೆಯೇ ಬುದ್ಧನ ಬಳಿಗೆ ಬಂದನು.

ಬುದ್ಧದೇವನು ಈತನನ್ನು ನೋಡಿ "ಎಲೈ ಶ್ರವಣನೆ? ಸಹಿಸು! ಸಹಿಸು! ಯಾವ ಕ್ರೂರ ಕರ್ಮಗಳ ಫಲವನ್ನು ನೀನು ಸಾವಿರಾರು ವರುಷ ನರಕದಲ್ಲಿ ಅನುಭವಿಸಬೇಕಾಗಿದ್ದಿತೋ ಅದೇ ಫಲವನ್ನು ನೀನು ಇಹಲೋಕದಲ್ಲಿ ಇಷ್ಟರಿಂದಲೇ ಅನುಭವಿಸುತ್ತಿರುವಿ" ಎಂದು ಹೇಳಿದನು.

ಆ ಹಿಂಸೆಯನ್ನು ಅಂಗುಲಿಮಾಲಾ ಸಹಿಸಿಕೊಂಡು ಭಿಕ್ಷುಧರ್ಮದಂತೆಯೇ ಆಚರಿಸಿ ಬಹು ಪ್ರಸಿದ್ಧಿಯನ್ನು ಹೊಂದಿದನು.

❖❖

೮ನೆಯ ಪ್ರಕರಣ

ಪರಿನಿರ್ವಾಣ

ಬುದ್ಧದೇವನು ತನ್ನ ವೃದ್ಧಾಪ್ಯದಲ್ಲಿ ಕೂಡ ದೇಶಸಂಚಾರಮಾಡಿ ಧರ್ಮೋಪದೇಶವನ್ನು ಮಾಡುತ್ತಿದ್ದನು. ಈ ಪ್ರಕಾರ ಸಂಚರಿಸುತ್ತಿರುವಾಗ ಒಂದು ದಿವಸ ವೈಶಾಲಿಪಟ್ಟಣಕ್ಕೆ ಬರಲು ಅಲ್ಲಿನ ಪ್ರಸಿದ್ಧ ವೇಶ್ಯಾಂಗನೆಯಾದ ಅಮ್ರಪಾಲಿ ಎಂಬುವವಳು ಬುದ್ಧದೇವನಿಗೂ, ಆತನ ಭಿಕ್ಷು ಸಂಘಕ್ಕೂ ತನ್ನ ಮನೆಯಲ್ಲಿ ಭೋಜನೋಪಚಾರಗಳನ್ನು ಮಾಡಿಸಿ ತನ್ನ ಉದ್ಯಾನವನವನ್ನು ಭಿಕ್ಷು ಸಂಘಕ್ಕೆ ದಾನವಾಗಿ ಕೊಟ್ಟಳು.

ಬುದ್ಧ ಮಹಾತ್ಮನು ಅಮ್ರಪಾಲಿಯ ಅದರಾತಿಥ್ಯವನ್ನು ಸ್ವೀಕರಿಸಿ ದೇಶಸಂಚಾರಮಾಡುತ್ತಾ ಪಾವಾ ಎಂಬ ಪಟ್ಟಣಕ್ಕೆ ಬಂದು ಚುಂದಾ ಎಂಬ ಕಮ್ಮಾರನ ಆಮ್ರವನದಲ್ಲಿಳಿದನು. ಬುದ್ಧದೇವನು ತನ್ನ ವನಕ್ಕೆ ಆಗಮಿಸಿದ ವಾರ್ತೆಯನ್ನು ಆ ಚುಂದಾ ಕಮ್ಮಾರನು ಕೇಳಿ ಬುದ್ಧನ ಬಳಿಗೆ ಬಂದು ಆತನನ್ನೂ ಆತನ ಭಿಕ್ಷುಸಂಘವನ್ನೂ ತನ್ನ ಮನೆಗೆ ಊಟಕ್ಕೆ ಕರೆದುಕೊಂಡು ಬಂದು ನಾನಾ ಪಕ್ವಾನ್ನಗಳಿಂದ ಅವರನ್ನು ಸಂತುಷ್ಟಗೊಳಿಸಿದನು.

ಆ ಪಕ್ವಾನ್ನಗಳಲ್ಲಿ "ಸೂಕರಮದ್ದವ" ಎಂಬ ಹೆಸರಿನ ಒಂದು ಭಕ್ಷ್ಯವೂ ಇದ್ದಿತು. ಅದನ್ನು ಬುದ್ಧದೇವನಿಗೆ ನೀಡಲು ಆತನು ಚುಂದಾ ಕಮ್ಮಾರನಿಗೆ ಹೇಳಿದುದೇನೆಂದರೆ "ಇದನ್ನು ನೀನು ಅನ್ಯರಿಗೆ ನೀಡಬೇಡ. **ಈ ಪದಾರ್ಥಗಳನ್ನು ಜೀರ್ಣಿಸಿಕೊಳ್ಳುವವರು ನನಗೆ ಈ ಜಗತ್ತಿನಲ್ಲಿ ಯಾರೂ ಕಾಣುವುದಿಲ್ಲ.** ಆದಕಾರಣ ಉಳಿದುದನ್ನು ನೀನು ಭೂಮಿಯಲ್ಲಿ ಹೂಳಿಬಿಡು." ಆಗ ಚುಂದಾ ಕಮ್ಮಾರನು ಬುದ್ಧನ ಅಪ್ಪಣೆಯ ಪ್ರಕಾರವೇ ಮಾಡಿದನು.

ಆ ದಿವಸ ಭೋಜನೋತ್ತರ ಬುದ್ಧನಿಗೆ ಅತಿಸಾರ ರೋಗವುಂಟಾಯಿತು. ಆದರೂ ಅದನ್ನು ಸಹಿಸಿಕೊಂಡು ಮುಂದಕ್ಕೆ ಪ್ರಯಾಣ ಮಾಡಿದನು. ಆ ಭಕ್ಷ್ಯವು ಹಂದಿಯ ಮಾಂಸವಾಗಿದ್ದಿತೆಂದು ಕೆಲವರು ಹೇಳುತ್ತಿದ್ದಾರೆ. ಅಂತಹ ಅಹಿಂಸಾ ಧರ್ಮ ಸಂಸ್ಥಾಪಕನಾದ ಬುದ್ಧನು ಮಾಂಸವನ್ನು ಸೇವಿಸಿದನೆಂಬುದು ಶುದ್ಧ ಅಸಂಗತವಾದುದೇ ಸರಿ. ಅದೊಂದು ವನಸ್ಪತಿಯ ಆಹಾರವಾಗಿದ್ದೀತೆಂದು ಕೆಲವರು ಹೇಳುತ್ತಿದ್ದಾರೆ. ಕೆಲವರು ದೇವದತ್ತನು ವಿಷವನ್ನು ಹಾಕಿಸಿದನೆಂದು ಪ್ರತಿಪಾದಿಸುತ್ತಿದ್ದಾರೆ. ಅಂತು ಅದು ಮಾಂಸವಾಗಿರಲಿಲ್ಲವೆಂಬುದೇನೋ ನಿಸ್ಸಂದೇಹವಾದ ಸಂಗತಿಯು.

ಬುದ್ಧದೇವನಿಗೆ ತಾನು ನೀಡಿದ ಆಹಾರದಿಂದ ಆತನು ರೋಗಪೀಡಿತನಾದನಲ್ಲಾ! ಎಂದು ಚುಂದಾ ಕಮ್ಮಾರನು ಬಹು ವಿಷಾದಿಸಿದಂತೆ ತೋರುತ್ತದೆ. ಏಕೆಂದರೆ ಬುದ್ಧನು ಕಕುತ್ಥಾ ನದಿಯ ತೀರಕ್ಕೆ ಹೋದಾಗ ಆನಂದನೆಂಬ ತನ್ನಪ್ರಿಯಶಿಷ್ಯನಲ್ಲಿ ಹೇಳಿದುದೇನೆಂದರೆ : ಆನಂದನೇ, ನನಗೆ ಆಹಾರವನ್ನು ಕೊಟ್ಟುದುಕ್ಕೋಸ್ಕರ ಚುಂದಾ ಕಮ್ಮಾರನಿಗೆ ದುಃಖವಾಗಿರಬಹುದು. ಅದಕ್ಕೋಸ್ಕರ ನೀನು ಆತನಿಗೆ **"ಚುಂದಾ ನೀನೇ ಧನ್ಯನು!** ಏಕೆಂದರೆ ತಥಾಗತನಿಗೆ (ಬುದ್ಧನಿಗೆ) ಕೊನೆಯ ಭಿಕ್ಷವನ್ನು ಕೊಡುವ ಸುಸಮಯವು ನಿನಗೇನೇ ಲಭ್ಯವಾಯಿತು ಎಂದು ಹೇಳಿ ಆತನ ಸಂದೇಹವನ್ನು ನಿವಾರಣೆ ಮಾಡು."

ಬುದ್ಧನು ಅಲ್ಲಿಂದ ಕುಸಿನಾರೆ ಪಟ್ಟಣದ ಮಲಕ್ಷತ್ರಿಯರ ಶಾಲವನಕ್ಕೆ ಹೋದನು. ಆ ಶಾಲವನದಲ್ಲಿ ಒಂದು ವೃಕ್ಷದ ಕೆಳಗೆ ಬುದ್ದನು ಮಲಗಿರುವಾಗ ಆನಂದನಿಗೆ ಹೇಳಿದುದೇನೆಂದರೆ: ಆನಂದನೇ, ಬುದ್ಧ ಪೂಜೆಗೋಸ್ಕರ ಎಷ್ಟು ಪುಷ್ಪಗಳನ್ನು, ಎಷ್ಟು ವಾದ್ಯಗಳನ್ನೂ, ಉಪಯೋಗಿಸಿದರೂ ಅದು ಬುದ್ಧನ ನಿಜವಾದ ಪೂಜೆಯಾಗಲಾರದು. **ಬುದ್ಧನು ಭೋದಿಸಿರುವ ಧರ್ಮದಂತೆ ನಡೆಯುವುದೇ ಬುದ್ದನ ನಿಜವಾದ ಪೂಜೆಯು.** ಆದುದರಿಂದ ಆನಂದನೇ, ನೀವೆಲ್ಲರೂ ನನ್ನ ಧರ್ಮವನ್ನನುಸರಿಸಿಯೇ ನಡೆಯಿರಿ.

ಬುದ್ಧನಿಗೆ ತನ್ನ ನಿರ್ವಾಣ ಸಮಯವು ಸಮೀಪಿಸಿತೆಂಬುದು ತಿಳಿಯಿತು. ಆದಕಾರಣ ಹತ್ತಿರ ಪ್ರದೇಶದಲ್ಲಿದ್ದ ಭಿಕ್ಷುಗಳನ್ನೆಲ್ಲಾ ಕರೆಯಿಸಿ ಅವರಿಗೆ ಪುನಃ ಪುನಃ ತನ್ನ ಧರ್ಮತತ್ವಗಳನ್ನು ಬೋಧಿಸಿದನು. ಇಷ್ಟೇ ಅಲ್ಲ; ಯಾರಿಗೆ ಏನಾದರೂ ಸಂದೇಹವಿದ್ದರೆ ಕೇಳಿ ನಿವಾರಣೆ ಮಾಡಿಕೊಳ್ಳಿರೆಂದು ಕೂಡು ತಿಳಿಸಿದರು. ಆನಂದಶಿಷ್ಯನು ಬುದ್ಧನನ್ನು ಕುರಿತು "ಭಗವಾನ್ ನಾವು ಸ್ತ್ರೀಯರ ಸಂಗಡ ಹೇಗೆ ವರ್ತಿಸಬೇಕು?" ಎಂದು ಕೇಳಲು ಬುದ್ಧನು "ಆದಷ್ಟು ಮಟ್ಟಿಗೆ ಸ್ತ್ರೀಯರ ದರ್ಶನಕ್ಕೆ ಅವಕಾಶವನ್ನೇ ಕೊಡಬೇಡಿರಿ." ಎಂದು ಹೇಳಿದನು. "ಭಗವಾನ ಒಂದು ವೇಳೆ ದರ್ಶನಮಾಡುವ ಪ್ರಸಂಗಬಂದರೆ ಹೇಗೆ ಮಾಡಬೇಕು?" ಎಂದು ಕೇಳಲು ಆಗ ಆನಂದನೇ "ಅವರ ಸಂಗಡ ಮಾತನಾಡಬೇಡಿರಿ." ಎಂದು ಹೇಳಿದನು. "ಭಗವಾನ್ ಸಂಭಾಷಣೆಯ ಪ್ರಸಂಗ ಬಂದರೆ ಹೇಗೆ ಮಾಡಬೇಕು?" ಎಂದು ಕೇಳಲು ಆನಂದನೇ, ಆಗ ಎಚ್ಚರಿಕೆಯಿಂದಿರು. ಮನಸ್ಸಿನಲ್ಲಿ ಯಾವ ದುಷ್ಟಭಾವನೆಯನ್ನೂ ತರಬೇಡ. **ನಿನಗಿಂತ ಹಿರಿಯರನ್ನೂ ತಾಯಿಯಂತೆಯೂ, ಚಿಕ್ಕವರನ್ನು ಮಕ್ಕಳಂತೆಯೂ ತರುಣಿಯರನ್ನು ಸಹೋದರಿಯರಂತೆಯೂ ತಿಳಿ.**

ಪರಸ್ತ್ರೀಯರನ್ನು ಕಾಮದೃಷ್ಟಿಯಿಂದ ನೋಡುವುದಕ್ಕಿಂತಲೂ ಕಬ್ಬಿಣದ ಕಾದಸರಳನ್ನು ಕಣ್ಣಲ್ಲಿ ಚುಚ್ಚಿಕೊಂಡು ಆ ಪಾಪನೇತ್ರವನ್ನೇ ಸುಟ್ಟುಕೊಳ್ಳುವುದುತ್ತಮ.

"ಭಗವಾನ್, ಪರಿನಿರ್ವಾಣದ ನಂತರ ನಮ್ಮ ದೇಹವನ್ನು ಏನು ಮಾಡಬೇಕೆಂದು ಕೇಳಲು, ಆನಂದನೇ ನಿರ್ವಾಣದ ನಂತರ ಈ ದೇಹವನ್ನು ಪೂಜೆ ಮಾಡಬೇಡಿರಿ. ನಾನು ನಿಮಗೆ ಯಾವ ಸನ್ಮಾರ್ಗವನ್ನು ತೋರಿಸಿದ್ದೇನೆಯೋ ಅದನ್ನನುಸರಿಸಿಯೇ ನಡೆಯಿರಿ. ಎಚ್ಚರಿಕೆ, ಉದ್ಯೋಗಿಗಳು ಶಾಂತರೂ ಆಗಿರಿ. ಅನೇಕ ಗೃಹಸ್ಥರು ನನ್ನ ಶಿಷ್ಯರಿದ್ದಾರೆ. ಅವರು ಈ ದೇಹದ ವ್ಯವಸ್ಥೆಯನ್ನು ಮಾಡುವರು ಎಂದು ಬುದ್ಧಭಗವಾನನು ಹೇಳಿದನು."

ಆನಂದನು ಇದನ್ನು ಕೇಳಿ ಅಲ್ಲಿಂದ ಹೊರಟು ಹೋಗಿ ಅಳುತ್ತಾ ಕುಳಿತುಕೊಂಡನು. ಆಗ ಬುದ್ಧದೇವನು ಆತನನ್ನು ಕರೆಯಿಸಿ "ಆನಂದನೇ, ಹೀಗೇಕೆ ಶೋಕಿಸುವಿ? **ಸಕಲಪ್ರಿಯವಸ್ತುಗಳನ್ನೂ ನಾವು ಬಿಡಬೇಕಾಗುವುದೆಂಬುದನ್ನು ನಾನು ಈ ಮುಂಚೆಯೇ ಹೇಳಿಲ್ಲವೇ? ಯಾವುದು ಹುಟ್ಟಿದೆಯೋ ಅದು ನಾಶವಾಗದೆ ಇರುವುದು ಸಾಧ್ಯವೇ** ಆನಂದನೇ? ನೀನು ತಥಾಗತನಸೇವೆಯನ್ನು ಚೆನ್ನಾಗಿ ಮಾಡಿರುವಿ. ನೀನು ಪುಣ್ಯಶಾಲಿಯು. ನೀನು ಪ್ರಯತ್ನಪಟ್ಟರೆ ಜಾಗ್ರತೆ ಬುದ್ಧಪದವಿಯನ್ನು ಹೊಂದುವಿ" ಎಂದು ಹೇಳಿದನು.

ಅನಂತರ ಸುಭದ್ರನೆಂಬ ಅನ್ಯಮತೀಯನು ಬುದ್ದನಲ್ಲಿ ಧರ್ಮಜಿಜ್ಞಾಸಕ್ಕೋಸ್ಕರ ಬರಲು ಆನಂದನು ಈಗ ಬುದ್ದ ಗುರು ಅಂತ್ಯಾವಸ್ಥೆಯಲ್ಲಿರುವುದರಿಂದ ಅವರಿಗೆ ತೊಂದರೆ ಕೊಡಬೇಡಿರೆಂದು ಆತನು ಮುಂದೆ ಹೋಗುವುದನ್ನು ತಡೆದನು. ಇದನ್ನು ಬುದ್ಧನು ಕೇಳಿ ಆನಂದನಿಗೆ ಹೇಳಿದುದೇನೆಂದರೆ: "ಧರ್ಮ ಜಿಜ್ಞಾಸಕ್ಕೆ ಆತನನ್ನು ಒಳಗೆ ಬಿಡು. ಆತನು ನನಗೆ ತೊಂದರೆ ಕೊಡುವುದಕ್ಕೆ ಬರುವುದಿಲ್ಲ. ತತ್ವಜ್ಞಾನವನ್ನು ಹೊಂದಲು ಬರುತ್ತಿದ್ದಾನೆ." ಆಗ ಆನಂದನು ಸುಭದ್ರನನ್ನು ಒಳಗೆ ಕಳುಹಿಸಲು ಆತನಿಗೆ ಧರ್ಮೋಪದೇಶವನ್ನು ಮಾಡಿ ಆತನ ಸಂದೇಹಗಳನ್ನು ನಿವಾರಣೆ ಮಾಡಲು ಸುಭದ್ರನು ಬೌದ್ಧಮತವನ್ನಂಗೀಕರಿಸಿ ಬುದ್ಧಭಿಕ್ಷುಗಳಲ್ಲಿ ಸೇರಿದನು. ಈತನೇ ಬುದ್ಧನ ಉಪದೇಶದಿಂದ ಭಿಕ್ಷಗಳಲ್ಲಿ ಕೊನೆಯವನು.

ಅನಂತರ ಬುದ್ ದೇವನು ಎಲ್ಲಾ ಭಿಕ್ಷುಗಳನ್ನು ಕರೆದು ತನ್ನ ಧರ್ಮದ ನಾಲ್ಕು ಆರ್ಯ ಸತ್ಯಗಳನ್ನು ವಿವರವಾಗಿ ಬೋಧಿಸಿ ಧ್ಯಾನಸ್ಥನಾದನು.

"ಭಿಕ್ಷುಗಳೇ, ಸಕಲ ಸಂಯೋಗಜನ್ಯವಸ್ತುಗಳೂ ಕ್ಷಯ ಶೀಲವಾದವುಗಳಾಗಿವೆ. ಆದಕಾರಣ ಎಚ್ಚರಿಕೆಯಿಂದ ನಿಮ್ಮ ನಿಮ್ಮ ಕರ್ತವ್ಯದಲ್ಲಿ ನಿರತರಾಗಿರಿ."

ಎಂದು ಆ ಮಹಾತ್ಮನಾದ ಬುದ್ದ ದೇವನು ಭಿಕ್ಷುಗಳಿಗೆ ಬೋಧಿಸಿದನು. **ಇದೇ ಬುದ್ದನ ಕೊನೆಯ ವಾಕ್ಯವು.**

ಆ ಬಳಿಕ ಲೋಕಪೂಜ್ಯನಾದ ಈ ಮಹಾತ್ಮನು ಕ್ರಿ. ಶ. ಪೂರ್ವ ೫೪೩ ನೆಯ ವೈಶಾಖ ಶುದ್ಧ ೧೫ನೆಯ ದಿವಸ ಕುಶಿನಾರ ಪಟ್ಟಣದ ಶಾಲವನದಲ್ಲಿ ನಿರ್ವಾಣವನ್ನು ಹೊಂದಿದನು. ಆಗ ಈತನಿಗೆ ೮೦ ವರ್ಷಗಳಾಗಿದ್ದವು.

ಬುದ್ದದೇವನು ದೇಹವನ್ನು ಬಿಟ್ಟನಂತರ ಆ ಶರೀರವನ್ನು ಮಲಕ್ಷತ್ರಿಯರು ತಮ್ಮ ಪಟ್ಟಣದಲ್ಲಿ ಏಳು ದಿವಸಗಳವರೆಗೆ ನಾನಾ ವೈಭವಗಳಿಂದ ಪೂಜೆ ಮಾಡಿ ಅನಂತರ ಚಂದನಕಾಷ್ಠದಿಂದ ಶವಸಂಸ್ಕಾರಗಳನ್ನು ಮಾಡಿದರು. ಬುದ್ಧನದೇಹಾವಶೇಷವನ್ನು ಹಂಚಿಕೊಳ್ಳುವ ವಿಷಯದಲ್ಲಿ ವಾದ ವಿವಾದಗಳುಂಟಾಗಲು ದ್ರೋಣನೆಂಬ ಒಬ್ಬ ಸನ್ಯಾಸಿಯು ಆ ಕಲಹವನ್ನು ನಿವಾರಣೆಮಾಡಿ ಅಜಾತಶತ್ರುರಾಜನೇ ಮೊದಲಾದ ಎಂಟು ಜನ ರಾಜರು, ವೆಟ್ಟದ್ವಿಪಕ ಮತ್ತು ದ್ರೋಣ ಎಂಬುಭಯಬ್ರಾಹ್ಮಣರು ಹಂಚಿಕೊಂಡು ತಮ್ಮ ತಮ್ಮ ಸ್ಥಳಗಳಲ್ಲಿ ಆ ದೇಹಾವಶೇಷದ ಮೇಲೆ ಭವ್ಯವಾದ ಸ್ತೂಪ (ಮಂದಿರ) ಗಳನ್ನು ಕಟ್ಟಿಸಿದರು.

ಬುದ್ಧದೇವನ ನಿತ್ಯಾಚರಣೆ : ಬುದ್ದನು ಜಾಗ್ರತೆ ಎದ್ದು ಧ್ಯಾನ ಮಾಡುತ್ತಿದ್ದನು. ಅಥವಾ ಉದ್ಯಾನವನದ ಹೊರಭಾಗದಲ್ಲಿ ಚಂಕ್ರಮಣ (ಇತ್ತಿಂದ ಅತ್ತ ತಿರುಗಾಡುವುದು) ಮಾಡುತ್ತಿದ್ದನು. ಅನಂತರ ಭಿಕ್ಷಾರ್ಥವಾಗಿ ಊರಲ್ಲಿ ಹೋಗುತ್ತಿದ್ದನು. ಆಗ ಯಾರಾದರೂ ಪ್ರಶ್ನೆಮಾಡಿದರೆ ಅವರಿಗೆ ಉಪದೇಶಮಾಡುತ್ತಿದ್ದನು. ಭಿಕ್ಷಾ ಪಾತ್ರೆಯಲ್ಲಿ ಯಾವ ಆಹಾರವನ್ನೂ ಹಾಕುತ್ತಿದ್ದರೂ ಅದನ್ನು ತೆಗೆದುಕೊಂಡು ಉದ್ಯಾನವನಕ್ಕೆ ಬರುತ್ತಿದ್ದನು. ಅನಂತರ ಮಧ್ಯಾಹ್ನ ೬ ತಾಸಿಗೆ ಸ್ವಲ್ಪ ಮುಂಚೆ ಊಟಮಾಡಿ ಸ್ವಲ್ಪ ವಿಶ್ರಾಂತಿಯನ್ನು ಹೊಂದು ಧ್ಯಾನಮಗ್ನನಾಗುತ್ತಿದ್ದನು. ಸಂಧ್ಯಾಕಾಲದಲ್ಲಿ ಭಿಕ್ಷುಗಳಿಗೂ, ಇತರರಿಗೂ ಉಪದೇಶಮಾಡುತ್ತಿದ್ದನು. ಆ ಬಳಿಕ ಮಧ್ಯರಾತ್ರೆಯ ಸುಮಾರಕ್ಕೆ ಮಲಗುತ್ತಿದ್ದನು. **ಪ್ರತಿನಿತ್ಯ ಒಂದೇ ಸಾರೆ ಭೋಜನ ಮಾಡುತ್ತಿದ್ದನು.**

ಈತನು ಸಂಚಾರಕ್ಕೆ ಹೋಗುವಾಗ ಪ್ರಾಯಶಃ ಸಂಗಡ ಭಿಕ್ಷು ಸಮೂಹವು ಇದ್ದೇ ಇರುತ್ತಿದ್ದಿತು. ಯಾವ ಊರಿನಲ್ಲಿ ಉದ್ಯಾನವನಗಳಿರುತ್ತಿದ್ದಲ್ಲವೋ ಅಂಥಸ್ಥಳದಲ್ಲಿ ಊರಹೊರಗೆ ಯಾವುದಾದರೊಂದು ಗಿಡದ ಕೆಳಗೆ ವಾಸವಾಗಿರುತ್ತಿದ್ದನು. ಮುಂಚಿತವಾಗಿಯೇ ಯಾರಾದರೂ ಭಿಕ್ಷಾನ್ನಕ್ಕೆ ಬರಬೇಕೆಂದು ಪ್ರಾರ್ಥಿಸಿಕೊಂಡರೆ ಭಿಕ್ಷು ಸಮೂಹದೊಡನೆ ಅವರ ಮನೆಗೆ ಭಿಕ್ಷುಗ್ರಹಣಕ್ಕೆ ಹೋಗುತ್ತಿದ್ದನು. ಊಟವನ್ನು ತೀರಿಸಿಕೊಂಡು ಸಾಯಂಕಾಲಕ್ಕೆ ಮತ್ತೊಂದು ಊರಿಗೆ ಹೋಗುತ್ತಿದ್ದನು.

ಈ ಪ್ರಕಾರ ಆ ಭಗವಾನ್ ಬುದ್ಧದೇವನು ೪೫ ವರ್ಷ ಆಚರಿಸಿ ಅವಿಚ್ಛನ್ನವಾಗಿ ಧರ್ಮೋಪದೇಶವನ್ನು ಮಾಡಿ ಲಕ್ಷಾಂತರ ಜನಗಳನ್ನು ಉದ್ಧಾರಮಾಡಿದನು.

❖❖

೯ನೆಯ ಪ್ರಕರಣ

ಉಪಸಂಹಾರ

ಭಗವಾನ್ ಬುದ್ಧದೇವನು ತನ್ನ ಜೀವಿತದಲ್ಲಿ ನಡೆಯಿಸಿದ ಅದ್ಭುತ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಈವರೆವಿಗೂ ವಿವರಿಸಿದಂತಾಯಿತಷ್ಟೆ. ಇನ್ನು ಆ ಮಹಾತ್ಮನು ನಿರ್ವಾಣ ಹೊಂದಿದನಂತರ ಆತನ ವಿಷಯದಲ್ಲಿಯೂ, ಆತನ ಧರ್ಮದ ವಿಷಯದಲ್ಲಿಯೂ ಉಂಟಾದ ಅಭಿಪ್ರಾಯಗಳನ್ನು ಕುರಿತು ಸ್ವಲ್ಪ ಯೋಚಿಸೋಣ.

ಬುದ್ಧದೇವನು ಅವತರಿಸುವದಕ್ಕೆ ಮುಂಚೆ ಭರತಖಂಡದ ಸ್ಥಿತಿಯು ಹೇಗಿತ್ತೆಂಬುದು ಸ್ವಲ್ಪ ತಿಳಿದ ವಿನಾ ಆತನ ಅವತಾರ ಕೃತ್ಯದ ಮಹತ್ವವು ಅಷ್ಟು ಚೆನ್ನಾಗಿ ಗೊತ್ತಾಗುವುದಿಲ್ಲ. ಆದಕಾರಣ ಆಗಿನ ಸ್ಥಿತಿಯ ಕಡೆಗೆ ಮೊದಲು ಗಮನಿಸೋಣ. ಈಗ ೨೫೦೦ ವರ್ಷಗಳ ಪೂರ್ವದಲ್ಲಿ ಜನಸಂಖ್ಯೆಯು ಈಗಿನಷ್ಟು ಹೆಚ್ಚಾಗಿರಲಿಲ್ಲ. ಒಕ್ಕಲುತನವೇ ಭಾರತೀಯರ ಮುಖ್ಯೋದ್ಯೋಗ ವಾಗಿದ್ದಿತು. ಈಗಿನಷ್ಟಾದರೂ ಕೈಗಾರಿಕೆಯ ಕಾರ್ಯಾಲಯಗಳು ಆ ಕಾಲದಲ್ಲಿರಲಿಲ್ಲ. ತಾವು ಬೆಳೆದ ಬೆಳೆಯಲ್ಲಿ ಹತ್ತನೆಯ ಒಂದು ಭಾಗವನ್ನು ಸರಕಾರಕ್ಕೆ ಕಂದಾಯವಾಗಿ ಕೊಟ್ಟು ಬಿಟ್ಟದ್ದರೆ ತೀರಿಹೋಗುತ್ತಿದ್ದಿತು. ಈಗಿನಂತೆ ನಾನಾ ಕಂದಾಯ ತೆರಿಗೆ ಸುಂಕಗಳನ್ನು ಸರಕಾರಕ್ಕೆ ಕೊಡಬೇಕಾಗುತ್ತಿದ್ದಿಲ್ಲ. ಈಗಿನ ಹಾಗೆ ಐಹಿಕ ಸುಖೋಪಭೋಗದ ನಾನಾತರಹಗಳು ಆ ಕಾಲದಲ್ಲಿರಲಿಲ್ಲ. ಜನರು ಬಹು ಸಾದಾವೃತ್ತಿಯುಳ್ಳವರಾಗಿದ್ದರು. ಈ ಮೊದಲಾದ ಕಾರಣಗಳಿಂದ **ಆ ಕಾಲದ ಭಾರತೀಯರ ಸಾಂಪತ್ತಿಕ ಸ್ಥಿತಿಯು ಬಹು ಚೆನ್ನಾಗಿಯೇ ಇದ್ದಿತು.**

ಶಾಕ್ಯ ಮಗ್ಗ, ಕಾಲಾಮ, ಕೋಲಿಯ, ಮೋರಿಯ ಮೊದಲಾದ ಕ್ಷತ್ರಿಯ ವಂಶದ ರಾಜರು ಪ್ರಜಾಭಿಪ್ರಾಯಕ್ಕೆ ಮನ್ನಣೆಯನ್ನು ಕೊಟ್ಟು ರಾಜ್ಯವಾಳುತ್ತಿದ್ದರು. ಮಗಧ ಮತ್ತು ಕೋಶಲ ಈ ಉಭಯ ರಾಜ್ಯಗಳು ಆ ಕಾಲದಲ್ಲಿ ಬಹು ಪ್ರಸಿದ್ಧಿಯನ್ನು ಹೊಂದಿದ್ದವು. ಈ ರಾಜ್ಯಾಧಿಪತಿಗಳಲ್ಲಿ ಪರಸ್ಪರ ಪ್ರೇಮವಿರಲಿಲ್ಲ. ಆ ಕಾಲದ ಪ್ರಭುಗಳು ಪ್ರಜಾರಂಜಕರಾಗಿಯೇ ಪ್ರಭುತ್ವವನ್ನು ನಡೆಯಿಸುವುದು ವಿಶೇಷವಾಗಿದ್ದುದರಿಂದ **ರಾಜಕೀಯ ಸ್ಥಿತಿಯು ಕೂಡಾ ಬುದ್ಧ ದೇವನ ಪೂರ್ವದಲ್ಲಿ ಒಳ್ಳೆಯದಾಗಿಯೇ ಇದ್ದಿತು.**

ಸಾಂಪತ್ತಿಕ ಮತ್ತು ರಾಜಕೀಯ ವಿಷಯಗಳಂತೆ ಸಾಮಾಜಿಕ ಸ್ಥಿತಿಯು ಮಾತ್ರ ಬುದ್ಧದೇವನ ಮುಂಚೆ ಚೆನ್ನಾಗಿರಲಿಲ್ಲ. **ಗುಣಕರ್ಮಾನುಗುಣ್ಯವಾಗಿ ಏರ್ಪಟ್ಟಿದ್ದ ಬ್ರಾಹ್ಮಣಾದಿ ಚಾತುರ್ವರ್ಣಗಳು**

ಬುದ್ದದೇವನ ಕಾಲದಲ್ಲಿ ಜನ್ಮದಿಂದಲೇ ಎಣಿಸಲ್ಪಡುತ್ತಿದ್ದವು. ವರ್ಣಾಭಿಮಾನವು ಜನಗಳಲ್ಲಿ ಅತ್ಯಧಿಕವಾಗಿದ್ದಿತು. ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಿದ್ದವರು ಅನ್ಯವರ್ಣದವರನ್ನು ಬಹು ಕೀಳಾಗಿ ಕಾಣುತ್ತಿದ್ದರು. ಜನ್ಮಕ್ಕೇ ಪ್ರಾಮುಖ್ಯತೆಯಿದ್ದಿತೇ ವಿನಾ ಸದಾಚಾರ ಸದ್ಗುಣಗಳಿಗೆ ಅಷ್ಟು ಮಹತ್ವವಿರಲಿಲ್ಲ. ಉತ್ತಮವರ್ಣದವರೆಂದು ಹೇಳಿಕೊಳ್ಳುತ್ತಿದ್ದವರಲ್ಲಿ ಅನಾಚಾರಗಳು ಅತ್ಯಧಿಕವಾಗಿದ್ದವು. ಆದರೂ ಅವರು ತಾವೇ ಶ್ರೇಷ್ಠರೆಂದು ಹೇಳಿಕೊಳ್ಳುತ್ತ ಅನ್ಯವರ್ಣದವರ ಮೇಲೆ ಸಾಮಾಜಿಕ ಅಧಿಕಾರವನ್ನು ನಡೆಯಿಸುತ್ತಿದ್ದರು. ಈ ಪ್ರಕಾರ ಸಮಾಜಿಕ ಅವನತಿಗೆ ಮುಖ್ಯಕಾರಣವಾಗಿರುವ ಜನ್ಮ ವಿಶಿಷ್ಟವಾದ ವರ್ಣಕಲ್ಪನೆಯು ಬುದ್ಧ ದೇವನ ಪೂರ್ವದಲ್ಲಿ ಬಹು ಪ್ರಬಲವಾಗಿದ್ದಿತು.

ಧಾರ್ಮಿಕ ಸ್ಥಿತಿಯಂತೂ ಈ ಎಲ್ಲವುಗಳಿಗಿಂತ ಹೆಚ್ಚು ಹೀನಾವಸ್ಥೆಗೀಡಾಗಿದ್ದಿತು. ಧರ್ಮದ ಹೆಸರಿನಿಂದ ಭಯಂಕರವಾದ ಅನಾಚಾರಗಳು ನಡೆಯುತ್ತಿದ್ದವು. ಪಾರಲೌಕಿಕ ಸುಖಾಪೇಕ್ಷೆಯಿಂದ ಪ್ರಾಣಿ ಬಲಿಯು ವಿಶೇಷವಾಗಿದ್ದಿತು. ಯಾರು ಹೆಚ್ಚು ಪ್ರಾಣಿಗಳನ್ನು ಕೊಂದು ಎಷ್ಟು ಹೆಚ್ಚು ಯಜ್ಞಗಳನ್ನು ಮಾಡುತ್ತಿದ್ದರೋ ಅವರು ಅಷ್ಟು ಹೆಚ್ಚು ಗೌರವ ಪ್ರತಿಷ್ಠೆಗಳನ್ನು ಹೊಂದುತ್ತಿದ್ದರು. ನಾನಾ ಅನುಷ್ಠಾನ, ವ್ರತ, ಜಪ, ಮಂತ್ರಗಳ ಪ್ರಾಬಲ್ಯವು ವಿಶೇಷವಾಗಿ ಡಂಭಾಚಾರಗಳು ಹೆಚ್ಚಿದ್ದವು. ಕಪಟಿಗಳು, ಮೋಸಗಾರರು, ಧರ್ಮದ ಹೆಸರಿನಿಂದ ಅನೇಕ ಅನಾಚಾರಗಳನ್ನು ಮಾಡುತ್ತಿದ್ದರು.

ಭಾರತೀಯ ತತ್ವಜ್ಞಾನದ ನಾನಾ ಭಾಗಗಳಾದ ಉಪನಿಷತ್ತುಗಳೂ, ದರ್ಶನಗಳೂ, ಬುದ್ದದೇವನ ಪೂರ್ವದಲ್ಲಿಯೇ ಉಂಟಾಗಿದ್ದುದರಿಂದ ಅವುಗಳನ್ನು ಪ್ರತಿಪಾದಿಸುವ ಪಂಡಿತ ವರ್ಗವೂ ಬಹು ಪ್ರಬಲವಾಗಿಯೇ ಇದ್ದಿತು. ಜ್ಞೇಯ ಅಥವಾ ಆಸ್ತಿಕವಾದಿಗಳು (ದೇವರಿದ್ಧಾನೆಂದು ಹೇಳುವವರು) ನಾಸ್ತಿಕರು (ದೇವರಿಲ್ಲವೆಂದು ಹೇಳುವವರು) ಮತ್ತು ಆಜ್ಞೇಯ ಅಥವಾ ವೀಕ್ಷೇಪವಾದಿಗಳು (ದೇವರು ಇರುವುದಾಗಲಿ, ಇಲ್ಲದಿರುವುದಾಗಲಿ, ಮನುಷ್ಯನಿಗೆ ತಿಳಿಯುವುದಿಲ್ಲವೆಂದು ಹೇಳುವರು) ಮತ್ತು ಆಜ್ಞೆಯ ಅಥವಾ ವಿಕ್ಷಪವಾದಿಗಳು (ದೇವರು ಇರುವುದಾಗಲಿ, ಇಲ್ಲದಿರುವುದಾಗಲಿ, ಮನುಷ್ಯನಿಗೆ ತಿಳಿಯುವದಿಲ್ಲವೆಂದು ಹೇಳುವವರು) ತಮ್ಮ ತಮ್ಮ ವಾಕ್ಪಾಂಡಿತ್ಯವನ್ನು ತೋರಿಸುವುದರಲ್ಲಿ ಬಲ್ಲಿದರಾಗಿದ್ದರು. ಇಹಪರ ಸುಖಗಳು ಯಜ್ಞಯಾಗಾದಿ ಕರ್ಮಗಳಿಂದಲೇ ಲಭಿಸುತ್ತವೆಂಬ ತಿಳುವಳಿಕೆಯೇ ಜನಗಳಲ್ಲಿ ಹೆಚ್ಚಾಗಿದ್ದಿತು.

ಭರತ ಖಂಡವು ಇಂತಹ ಸ್ಥಿತಿಯಲ್ಲಿದ್ದಾಗ ಭಗವಾನ್ ಬುದ್ಧದೇವನು ಅವತರಿಸಿದನು. ಕುಶಲವೈದ್ಯನು ದೇಹದ ಯಾವ ಭಾಗವು ಕೆಟ್ಟಿದೆಯೋ ಅದನ್ನೇ ಸರಿಪಡಿಸಿ ಹೇಗೆ ಇಡೀ ದೇಹಕ್ಕೆ ಆರೋಗ್ಯವನ್ನುಂಟುಮಾಡುತ್ತಾನೆಯೋ ಹಾಗೆಯೇ ಅವತಾರಿಪುರುಷರು ಕೂಡಾ ಜನಾಂಗದ ಯಾವ ವಿಷಯವು ಹೀನಾವಸ್ಥೆಗೀಡಾಗಿದೆಯೋ ಅದನ್ನೇ ಊರ್ಜಿತಾವಸ್ಥೆಗೆ ತಂದು ಜನಾಂಗದಲ್ಲಿ ಸುಖಶಾಂತಿಗಳುಂಟಾಗುವಂತೆ ಮಾಡುತ್ತಾರೆ. ಆದಕಾರಣ ಅಕಾಲದಲ್ಲಿ ದುಸ್ಥಿತಿಗೀಡಾಗಿದ್ದ ಭಾರತೀಯ ಜನಾಂಗದ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳನ್ನು ಸುಧಾರಿಸುವುದಕ್ಕಾಗಿಯೇ ಬುದ್ಧದೇವನು ಪ್ರಯತ್ನಿಸಿದನು.

ಮಹಾಮಹಾಪಂಡಿತರೆಂದು ಹೇಳಿಸಿಕೊಂಡ ಸಾವಿರಗಟ್ಟಲೆ ಜನಗಳು ಬುದ್ಧದೇವನ ಉಪದೇಶವನ್ನು ಕೇಳಿದೊಡನೆಯೇ ಸಂಸಾರವನ್ನು ತ್ಯಾಗಮಾಡಿ ಹೇಗೆ ತಾನೆ ಬುದ್ಧ ಭಿಕ್ಷುಗಳಾಗಿರಬಹುದು? ಅತನ ಉಪದೇಶದಂತೆ ಲಕ್ಷಾಂತರ ಜನಗಳು ತಮ್ಮ ಪೂರ್ವಮತವನ್ನು

ಬಿಟ್ಟು ಹೇಗೆ ತಾನೆ ಆತನ ಮತವನ್ನನುಸರಿಸಿರಬಹುದು? ಎಂಬ ಸಂದೇಹಗಳಿಂದ ಅನೇಕರು ಇದು ಅತಿಶಯೋಕ್ತಿಯಾದ ಸಂಗತಿಯೆಂದು ತಿಳಿದುಕೊಂಡರೂ ತಿಳಿದುಕೊಳ್ಳಬಹುದು. ಆದರೆ ಅದು ಯುಕ್ತವಲ್ಲ, ಆ ಕಾಲದ ಧಾರ್ಮಿಕ ಮತ್ತು ಸಾಮಾಜಿಕ ವಿಷಯಗಳೇ ಅಷ್ಟು ಹೀನಾವಸ್ಥೆಗೀಡಾಗಿದ್ದವು. ಜನಗಳ ತಪ್ಪು ತಿಳುವಳಿಕೆಯನ್ನೂ, ಅನಾಚಾರಗಳನ್ನೂ, ಆ ಮಹಾತ್ಮರು ವಿವರಿಸಿ ಸತ್ಯವನ್ನು ತೋರಿಸಿದೊಡನೆಯೇ ಜನಗಳು ಆತನನ್ನು ಹಿಂಬಾಲಿಸಿದರು.

ಮಹಾತ್ಮಾಗಾಂಧಿಯವರು ರಾಷ್ಟ್ರಕ್ಕೆ ಸತ್ಯಮಾರ್ಗವನ್ನು ತೋರಿಸಿದೊಡನೆ, ಕ್ರಿ. ಶ. ೧೯೨೧–೨೨ನೆಯ ಸಂವತ್ಸರಗಳಲ್ಲಿ ಸಾವಿರಗಟ್ಟಲೆ ಜನಗಳು ಕಾರಾಗೃಹಕ್ಕೆ ಹೋಗಲಿಲ್ಲವೇ? ಲಕ್ಷಾಂತರ ಜನರು ಆ ಮಹಾತ್ಮನ ವ್ರತವನ್ನು ಕೈಕೊಳ್ಳಲಿಲ್ಲವೇ? ಸಾವಿರಾರು ಜನಗಳು ಸರ್ವಸ್ವವನ್ನೂ ಸೂರೆಮಾಡಲು ಏಕೆ ಸಿದ್ಧರಾದರು? ತಮ್ಮ ದುಸ್ಥಿಯು ಜ್ಞಾನವುಂಟಾಗಿ ಸತ್ಯಮಾರ್ಗವು ತೋರಿದುದರಿಂದಲ್ಲವೇ?

ಇದೇ ಪ್ರಕಾರ ಬುದ್ಧದೇವನು ಕೂಡಾ ಆ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಅನ್ಯಾಯಗಳನ್ನು ಅನಾಚಾರಗಳನ್ನು ಜನಗಳಿಗೆ ತಿಳಿಸಿ ಸತ್ಯಮಾರ್ಗವನ್ನು ತೋರಿಸಿದ್ದರಿಂದ ಅತ್ಯದ್ಭುತವಾದ ಕ್ರಾಂತಿಯೇ ಉಂಟಾಯಿತು. ಮಹಾತ್ಮ ಗಾಂಧಿಯವರು ಕಾರಾಗೃಹಕ್ಕೆ ಹೋದೊಡನೆ ಅವರ ಉಪದೇಶದ ವಿಷಯದಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಅಷ್ಟು ಸ್ವಾರ್ಥತ್ಯಾಗವನ್ನು ಮಾಡಲಾರದೆ ಹೇಗೆ ಅನೇಕರು ಅನೇಕ ಪ್ರಕಾರ ನಡೆಯಲುಪಕ್ರಮಿಸಿದರೋ ಹಾಗೆಯೇ ಬುದ್ದದೇವನು ನಿರ್ವಾಣಹೊಂದಿದ ಸ್ವಲ್ಪ ದಿವಸಗಳಲ್ಲಿಯೇ ಬುದ್ದ ಭಿಕ್ಷೂಗಳಲ್ಲಿ ಭಿನ್ನಾಭಿಪ್ರಾಯಗಳುಂಟಾಗಿ ಬೌದ್ಧ ಮತಾವಲಂಬಿಗಳೆಂದು ಹೇಳಿಕೊಳ್ಳುತ್ತಲೇ ಅನೇಕರು ಅನೇಕ ರೀತಿಗಳಿಂದ ನಡೆಯಲುಪಕ್ರಮಿಸಿದರು.

ಬುದ್ಧ ದೇವನ ನಿರ್ವಾಣದ ನಂತರ ಸುಬದ್ಧನೆಂಬ ಭಿಕ್ಷು ಹೇಳಿದುದೇನೆಂದರೆ : "ಬಾಂಧವರೆ, ದುಃಖಿಸಬೇಡಿರಿ ಒಳ್ಳೆಯದೇ ಆಯಿತು. ನಮ್ಮ ಗುರು ನಮಗೆ ಬಹು ಕಠಿಣವಾದ ಆಚಾರಗಳನ್ನು ಆಚರಿಸಲು ಅಪ್ಪಣೆಮಾಡಿದ್ದನು. ಈಗ ನಮಗೆ ಅವುಗಳ ಪ್ರತಿಬಂಧವಿಲ್ಲದಂತಾಯಿತು." ಸುಬುದ್ಧನು ಈ ಪ್ರಕಾರ ಸ್ವೇಚ್ಛಾಚಾರಕ್ಕೆ ಅವಕಾಶವಾಗುವಂತೆ ಮಾತನಾಡಿದುದರಿಂದ ಬುದ್ಧದೇವನ ತತ್ವಗಳಲ್ಲಿ ವಿಶ್ವಾಸವನ್ನು ದೃಢಗೊಳಿಸುವದಕ್ಕೋಸ್ಕರ ರಾಜಗೃಹಪಟ್ಟಣದಲ್ಲಿ ಬುದ್ಧ ಭಿಕ್ಷುಗಳ ಒಂದು ಸಭೆ ಸೇರಿತು. ಆ ಸಭೆಗೆ ೫೦೦ ಜನ ಭಿಕ್ಷುಗಳು ಬಂದಿದ್ದರು. ಮಂಗಳಸೂಚಕವಾದ ಗೀತೆಯನ್ನು ಅವರೆಲ್ಲರೂ ಸೇರಿ ಹೇಳಿದುದರಿಂದ ಆ ಸಭೆಗೆ ಸಂಗಿತೀ ಎಂದು ಹೇಳುತ್ತಿದ್ದಾರೆ. ಆ ಸಭೆಗೆ ಮಹಾಕಶ್ಯಪನೆಂಬ ಘನವಿದ್ವಾಂಸನು ಆಧ್ಯಕ್ಷನಾಗಿದ್ದನು. ಬುದ್ಧದೇವನ ನಿಜಶಿಷ್ಯನಾದ ಆನಂದನೇ ಮತತತ್ವಗಳನ್ನು ಸ್ಪಷ್ಟೀಕರಿಸಿದನು.

ಸುಬದ್ಧನಂತರಹ ಭಿಕ್ಷುಗಳು ಆ ಸಭೆಯಲ್ಲಿ ಅನೇಕರಿದ್ದುದರಿಂದ ಮತಾಚಾರಗಳನ್ನು ಎಷ್ಟೋ ಶಿಥಿಲಗೊಳಿಸಿದರು. ಬೌದ್ಧ ಮತದ ನಿವೃತ್ತಿ ಪರವಾದ ಕಠಿಣಾಚಾರಗಳನ್ನು ಆಚರಿಸಲಾರದೆ ಅನೇಕ ಭಿಕ್ಷುಗಳು ಪುನಃ ಬ್ರಾಹ್ಮಣತ್ವನ್ನು ಸ್ವೀಕರಿಸಿದರು. ಈ ಪ್ರಕಾರ ಬೌದ್ಧಭಿಕ್ಷುಗಳ ಆಚಾರವು ದಿನೇ ದಿನೇ ಕ್ಷೀಣವಾಗುತ್ತಾ ಅನಾಚಾರಿಗಳಾದ ಭಿಕ್ಷುಗಳು ಹೆಚ್ಚುತ್ತಾ ಬಂದರು. ಆದಕಾರಣ ಬುದ್ಧನ ತರುವಾಯ ಎರಡನೆಯ ಶತಮಾನದಲ್ಲಿ ಇನ್ನೊಂದು ಮಹಾಸಭೆಯು ವೈಶಾಲಿಪಟ್ಟಣದಲ್ಲಿ

ಸೇರಿತು. ಆ ಸಭೆಗೆ ೭೦೦ ಭಿಕ್ಷುಗಳು ಕೂಡಿದ್ದರು. **ಎಂಟು ತಿಂಗಳುಗಳವರೆಗೆ ವಾದವಿವಾದಗಳು ಜರುಗಿ ಭಿಕ್ಷುಗಳ ಸದಾಚಾರದ ಕಟ್ಟು ಬಹುಮಟ್ಟಿಗೆ ಬಿಚ್ಚಿಹೋಯಿತು.**

ಈ ಪ್ರಕಾರ ಬೌದ್ಧ ಧರ್ಮಗಳ ಪವಿತ್ರತೆಯೂ, ತೇಜವೂ, ಕ್ಷೀಣಿಸುತ್ತಿರುವ ಸಮಯದಲ್ಲಿ ಪುನಃ ಅವುಗಳನ್ನು ರಕ್ಷಿಸುವ ಮಹತ್ಕಾರ್ಯವು ಅಶೋಕನೆಂಬ ಮೌರ್ಯವಂಶದ ಮಹಾಚಕ್ರವರ್ತಿಯಿಂದ ಜರುಗಿತು. **ಬುದ್ಧದೇವನತರುವಾಯ ಬೌದ್ಧಮತ ಪ್ರಸಾರಕ್ಕೆ ಈ ಅಶೋಕ ಚಕ್ರವರ್ತಿಯಷ್ಟು ಇನ್ನಾರಿಂದಲೂ ಸಹಾಯ ಸೌಲಭ್ಯಗಳು ದೊರೆಯಲಿಲ್ಲ.** ಕ್ರಿ.ಶ. ಪೂರ್ವ ೩ನೆಯ ಶತಮಾನದಲ್ಲಿದ್ದ ಈ ಮಹಾರಾಜನು ತಾನು ಬೌದ್ಧ ಮತವನ್ನಂಗೀಕರಸಿ ತನ್ನ ಮಗಳಾದ ಸಂಘಮಿತ್ರಾ ಎಂಬುವಳನ್ನು ಧರ್ಮಪ್ರಸಾರಾರ್ಥವಾಗಿ ಸಿಲೋನ್ ಪ್ರಾಂತ್ಯಕ್ಕೆ ಕಳುಹಿಸಿದನು. ಭೌದ್ಧ ಮತವನ್ನು ಬೋಧಿಸಲು ಈ ದೇಶದ ನೆರೆಯ ಪ್ರದೇಶಗಳಿಗೂ ಒಟ್ಟು **೨೫೬ ಬೌದ್ಧ ಧರ್ಮೋಪದೇಶಕರನ್ನು ಕಳುಹಿಸಿದನು.** ರಕ್ಷಿತ ಎಂಬ ಪಂಡಿತನನ್ನು ಕರ್ನಾಟಕದ ಪ್ರಾಚೀನ ಪಟ್ಟಣವಾದ ಬನವಾಸಿಗೆ ಕಳುಹಿಸಿದ್ದನು. ಬೌದ್ಧ ಭಿಕ್ಷುಗಳಲ್ಲಿ ಆಚಾರವಿಚಾರಗಳ ಏಕರೂಪತೆಯುಂಟಾಗಲು ಕ್ರಿ. ಶ. ಪೂರ್ವ ೨೫೬ನೆಯ ಸಂವತ್ಸರದಲ್ಲಿ ಮೂರನೆಯ ಮಹಾಸಭೆಯನ್ನು ಕೂಡಿಸಿದರು. ಈ ಪ್ರಕಾರ ನಾನಾ ಸಾತ್ವಿಕ ರೀತಿಗಳಿಂದ ಬೌದ್ಧ ಮತವನ್ನು ಈ ಮಹಾಚಕ್ರವರ್ತಿಯು ಬಹು ಪ್ರಸಾರಗೊಳಿಸಿದನು.

ಈ ಚಕ್ರವರ್ತಿಯ ತರುವಾಯ ಕ್ರಿ. ಶ. ಮೊದಲನೆಯ ಶತಮಾನದಲ್ಲಿ ಕನಿಷ್ಕನೆಂಬ ರಾಜನೂ ಕೂಡಾ ಬೌದ್ಧಮತವನ್ನು ಎಷ್ಟೋ ಪ್ರಸಾರಗೊಳಿಸಿದನು. ಈ ಪ್ರಕಾರ ಮಹಾಮಹಾಚಕ್ರವರ್ತಿಗಳಿಂದಲೂ, ವಿದ್ವಾಂಸರಿಂದಲೂ, **ಬೌದ್ಧ ಮತವು ಭರತ ಖಂಡದಲ್ಲೆಲ್ಲಾ ವ್ಯಾಪಸಿದ್ದಲ್ಲದೆ ಸಿಲೋನ್, ಕಾಬೂಲ, ಕಂದಹಾರ, ತಿಬೇಟ್, ಚೀನಾ, ಜಪಾನ್ ಮೊದಲಾದ ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿಯೂ ಈ ಮತವು ಪ್ರಸಾರವಾಯಿತು.** ಇಷ್ಟೆ ಅಲ್ಲ: ಐದು ಜನ ಬೌದ್ಧ ಭಿಕ್ಷುಗಳು ರಶಿಯಾದೇಶದ ಉತ್ತರಭಾಗದಿಂದ ಕಾಮಾಶ್ಚಾಟಕಾ ದ್ವೀಪಕಲ್ಪದ ಮಾರ್ಗವಾಗಿ ಅಮೇರಿಕಾ ಖಂಡಕ್ಕೂ ಹೋಗಿದ್ದರು. ಇದರ ಮೇಲಿಂದ ಕೋಲಂಬಸ್ಸನಗಿಂತಲೂ ಒಂದು ಸಾವಿರವರ್ಷ ಮುಂಚೆಯೇ ಅಮೇರಿಕಾ ಖಂಡವು ಏಶಿಯಾ ಖಂಡದವರಿಗೆ ಗೊತ್ತಿದ್ದಿತೆಂದು ಸಿದ್ಧವಾಗುತ್ತದೆ.

ಬೌದ್ಧಮತವು ಸ್ವದೇಶ ಮತ್ತು ಪರದೇಶಗಳಲ್ಲಿ ಕ್ರಿ. ಶ. ೫ನೆಯ ಶತಮಾನದವರೆಗೆ ಎಂದರೆ ಸಾಧಾರಣ ಒಂದು ಸಾವಿರವರ್ಷ ಅವಿಚ್ಛಿನ್ನವಾಗಿ ಪ್ರಸಾರವಾಗಿ ಮನುಷ್ಯಜಾತಿಗೆ ಅಪರಿಮಿತವಾದ ಹಿತವನ್ನುಂಟುಮಾಡಿತು. **ಜಗತ್ತಿನಲ್ಲಿ ಈ ವರೆವಿಗೂ ಯಾವ ಧರ್ಮೋಪದೇಶದಕರೂ ಮಾಡದಿದ್ದಂತಹ ಸಾಹಸಕಾರ್ಯಗಳನ್ನು ಬೌದ್ಧ ಭಿಕ್ಷುಗಳು ಮಾಡಿತೋರಿಸಿದ್ದಾರೆ.** ಕೇವಲ ತಮ್ಮ ಆತ್ಮಬಲದಿಂದಲೂ, ಬುದ್ಧಿಶಕ್ತಿಯಿಂದಲೂ ಜಗತ್ತಿನಲ್ಲಿ ಮಹತ್ತರವಾದ ಕ್ರಾಂತಿಯನ್ನು ಈ ಬೌದ್ಧ ಭಿಕ್ಷುಗಳೇ ಉಂಟುಮಾಡಿರುವರು. ಬುದ್ಧದೇವನತರುವಾಯ ಪಾಲಿ, ಸಂಸ್ಕೃತ, ತಿಬೇಟ, ಚೀನ, ಜಪಾನ ಮೊದಲಾದ ಭಾಷೆಗಳಲ್ಲಿ ಬೌದ್ಧ ಮತವನ್ನು ಕುರಿತು ಅಸಂಖ್ಯ ಗ್ರಂಥಗಳು ರಚಿಸಲ್ಪಟ್ಟವು. ಯಾವ ಧರ್ಮದ ವಾಙ್ಮಯವೂ ಪ್ರಾಚೀನ ಕಾಲದಲ್ಲಿ ಇಷ್ಟು ಪ್ರಬಲತರವಾಗಿರಲಿಲ್ಲ. ಪಾಲಿಭಾಷೆಯಲ್ಲಿ **ತ್ರಿಪೀಟಕ** ಎಂಬ ಬೌದ್ಧ ಮತವ ಒಂದು ಗ್ರಂಥವಿದೆ. ಇದರಷ್ಟು ಘನವಾದ ಗ್ರಂಥವು ಪ್ರಪಂಚದಲ್ಲಿ ಯಾವುದೂ ಇಲ್ಲ. ಮಹಾಭಾರತ ಗ್ರಂಥದ ಮೂರರಷ್ಟು ಎಂದರೆ ಸಾಧಾರಣ ಮೂರುಲಕ್ಷ ಶ್ಲೋಕಗಳುಳ್ಳದ್ದಾಗಿದೆ. ಬೌದ್ಧ ಮತವು ಈ ಗ್ರಂಥದಲ್ಲಿ ಬಹು ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಪಾಲಿಭಾಷೆಯಲ್ಲಿ **"ಧಮ್ಮಪದ"** ಎಂಬ ಒಂದು ಗ್ರಂಥವು ಬರೆಯಲ್ಪಟ್ಟಿದೆ. ಇದರಲ್ಲಿ ಭಗವಾನ್ ಬುದ್ಧದೇವನ ಉಪದೇಶಗಳಿವೆ. ಇದು ಜಗತ್ತಿನ ಶ್ರೇಷ್ಠ ಗ್ರಂಥಗಳಲ್ಲೊಂದಾಗಿದೆ. ಬೌದ್ಧ ಮತದ ಮುಖ್ಯಾಂಶವು ಈ ಗ್ರಂಥದಿಂದ ಗೊತ್ತಾಗುವುದು. (ಇದನ್ನು ಪರಲೋಕವಾಸಿಗಳಾದ ಬೀದರೆ ಅಶ್ವಥ ನಾರಾಯಣ ಶಾಸ್ತ್ರಗಳವರು ಕನ್ನಡದ ಭಾಷೆಗೆ ಪರಿವರ್ತಿಸಿದ್ದಾರೆ. ಕನ್ನಡ ವಾಚಕರು ಅವಶ್ಯಕವಾಗಿ ಈ **"ಧರ್ಮಪದ"** ಎಂಬ ಪುಸ್ತಕವನ್ನು ಓದಬೇಕು. ಇದರಲ್ಲಿ ೨೬ ಅಧ್ಯಾಯಗಗಳು ಅವುಗಳಲ್ಲಿ ೪೨೩ ಶ್ಲೋಕಗಳೂ ಇವೆ. ಬೌದ್ಧ ಮತವು ಸ್ಥಾಪಿಸಲ್ಪಟ್ಟಂದಿನಿಂದ ಇಷ್ಟು ಪ್ರಸಾರವಾಗುವವರೆಗೂ ಒಂದೇ ರೂಪದಲ್ಲಿರಲಿಲ್ಲ. ಅದು ಹೆಚ್ಚು ಹೆಚ್ಚು ಪ್ರಸಾರವಾದಂತೆ ಅದರ ಸ್ವರೂಪವೂ ಭಿನ್ನ ಭಿನ್ನವಾಗಲುಪಕ್ರಮಿಸಿತು. ಮೊದಲು ಮಹಾಯಾನ ಮತ್ತು ಹೀನಯಾಗಳೆಂಬ ಎರಡು ಪಂಥಗಳು ಏರ್ಪಟ್ಟವು. ಅನಂತರ ಅವುಗಳಲ್ಲಿ ೧೮ ಭೇದಗಳಾದವು. ಆ ಬಳಿಕ ಅವು ೯೬ ಒಳಭೇದಗಲಾಗಿ ಪರಿಣಮಿಸಿದವು. ಈ ಪ್ರಕಾರ **ಬುದ್ಧದೇವನು ಸ್ಥಾಪಿಸಿದ ಒಂದೇ ಒಂದು ಮತವು ಒಂದು ಸಾವಿರ ವರ್ಷಗಳಲ್ಲಿ ಸಾಧಾರಣ ಒಂದು ನೂರು ಶಾಖೋಪಶಾಖೆಯಾಗಿ ಪರಿಣಮಿಸಿತು.**

ಈ ಪ್ರಕಾರ ಐದನೆಯ ಶತಮಾನದ ಅಂತ್ಯದವರೆವಿಗೂ ನಾನಾಮುಖಗಳಿಂದ ಪ್ರಸಾರವಾದ ಬೌದ್ಧ ಮತವು ಹಿಂದೂಸ್ಥಾನದಲ್ಲಿ ಅನಂತರ ದಿನೇ ದಿನೇ ಕ್ಷೀಣವಾಗುತ್ತಾ ಈಗ ಈ ದೇಶದಲ್ಲಿ ನಾಮಮಾತ್ರವಾಗಿ ಸಾಧಾರಣ ಒಂದು ಕೋಟಿ ಬೌದ್ಧ ಮತಾವಲಂಬಿಗಳಿದ್ದಾರೆ. ಬೌದ್ಧ ಮತಕ್ಕೆ ಈ ಜನ್ಮಸ್ಥಳದಲ್ಲಿಯೆ ಇಂತಹ ಶೋಚನೀಯ ಸ್ಥಿತಿಯುಂಟಾಗಲು ಈ ಕೆಳಗಿನ ನಾಲ್ಕು ಸಂಗತಿಗಳೇ ಮುಖ್ಯಕಾರಣಗಳಾದವು.

(೧) ಕಾಶ್ಮೀರದೇಶದ ರಾಜನಾಗಿದ್ದ ಮಿಹಿರಕುಲ ಮತ್ತು ಬಂಗಾಲ ಗೇಶದ ರಾಜನಾಗಿದ್ದ ಶಶಾಂಕ ಈ ಉಭಯರಾಜರೂ ಬೌದ್ಧ ದ್ವೇಷಿಗಳಾಗಿ ಅನಂತರ **ಬೌದ್ಧ ಭಿಕ್ಷುಗಳನ್ನು ಕೊಲ್ಲಿಸಿ ಅವರ ವಿಹಾರಗಳನ್ನು ಹಾಳುಮಾಡಿದುದು.** (೨) ಘಜನಿ ಮಹಮ್ಮದ್, ಬಖತಾರ ಖಿಲಜಿ, ಅಲ್ಲಾವುದೀನಖಿಲಜಿ, ಮೊದಲಾದ ಮುಸಲ್ಮಾನ ರಾಜರು, **ಬೌದ್ಧ ಭಿಕ್ಷುಗಳನ್ನು ಸಂಹಾರಮಾಡಿ ವಿಕ್ರಮಶಿಲಾ, ನಾಲಂದ ಪಟ್ಟಣಗಳಲ್ಲಿದ್ದ ಅವರ ಮಹಾ ವಿದ್ಯಾಲಯಗಳನ್ನು ನಾಶಮಾಡಿದುದು.** (೩) ಭಗವಾನ್ ಬುದ್ಧದೇವನು ಬೋಧಿಸಿದ ಪವಿತ್ರಾಚರಣರೆಯು ಆ ಮತಾನುಯಾಯಿ ಗಳಲ್ಲಿಲ್ಲದಂತಾಗಿ **ಅನಾಚಾರಿಗಳು, ಅಜ್ಞರು ಆದಂತಹ ಬೌದ್ಧ ಭಿಕ್ಷುಗಳು ಹೆಚ್ಚಿದುವು** (೪) ಶ್ರೀ ಕುಮಾರಿಲಭಟ್ಟರು ಶ್ರೀ ಶಂಕರಾಚಾರ್ಯರು, ಮೊದಲಾದ ಅಚಾರ್ಯರು **ಬೌದ್ಧ ಮತವನ್ನು ಖಂಡಿಸಿ ಸ್ವಮತಗಳನ್ನು ಪ್ರಸಾರಗೊಳಿಸಿದರು.**

ಈ ವರೆವಿಗೂ ಬೌದ್ಧ ಮತದ ಬಾಹ್ಯಸ್ವರೂಪವನ್ನು ಸಂಕ್ಷಿಪ್ತವಾಗಿ ವಿವರಿಸಿದಂತಾಯಿತಷ್ಟೆ. ಇನ್ನು ಆ ಮಹಾತ್ಮನ ವಿಷಯದಲ್ಲಿಯೂ, ಬೌದ್ಧ ಮತದ ವಿಷಯದಲ್ಲಿಯೂ ಇರತಕ್ಕ ಕೆಲವು ಆಕ್ಷೇಪಗಳನ್ನು ಕುರಿತು ಯೋಚಿಸೋಣ.

ಅವತಾರಿ ಪುರುಷರು ಮತ್ತು ಗೌತಮಬುದ್ಧ

ವಿಷ್ಣುಪುರಾಣ, ಅಗ್ನಿಪುರಾಣ, ಭವಿಷ್ಯಪುರಾಣ ಮೊದಲಾದ ಅನೇಕ ಪುರಾಣಗಳಲ್ಲಿ ವಿಷ್ಣುವಿನ ದಶಾವತಾರಗಳು ಈ ಕೆಳಗಿನ ಶ್ಲೋಕದಲ್ಲಿರುವಂತೆ ವಿವರಿಸಲ್ಪಟ್ಟಿವೆ.

ಮತ್ಸ್ಯಂ ಕೂರ್ಮಂವರಾಹಂಚ ನಾರಸಿಂಹಂಚವಾಮನಂ
ರಾಮಂರಾಮಂಚಕೃಷ್ಣಂಚಬುದ್ದಂಚಕಲ್ಕಿನಂತಥಾ ॥

ಈ ದಶಾವತಾರಗಳಲ್ಲಿ ಬೌದ್ಧಾವತಾರವು ಒಂಬತ್ತನೆಯದಾಗಿದೆ. ಭಗವಾನ್ ಗೌತಮಬುದ್ಧನೇ ವಿಷ್ಣುವಿನ ಆ ಒಂಬತ್ತನೆಯ ಅವತಾರಿ ಪುರುಷನೆಂಬುದರಲ್ಲಿ ಸಂದೇಹವಿಲ್ಲ. ವಿಷ್ಣುಪುರಾಣದಲ್ಲಿ (ಅಧ್ಯಾಯ ೧೭-೧೮) ಬೌದ್ಧಾವತಾರವು ವಿವರವಾಗಿಯೆ ವಿವರಿಸಲ್ಪಟ್ಟಿದೆ. "ನಿಮಗೆ ನಿರ್ವಾಣಬೇಕಾಗಿದ್ದರೆ ಪಶುಯಜ್ಞವನ್ನು ತ್ಯಜಿಸಿ ಜಗತ್ತನ್ನು ವಿಜ್ಞಾನಮಯವಾಗಿ ಮಾಡಿರೆಂದು ಬುದ್ಧನು ಅರ್ಹತ ಧರ್ಮವನ್ನು ಬೋಧಿಸಿದನು." ಎಂಬುದಾಗಿ ಆ ಪುರಾಣದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ಇದರ ಮೇಲಿಂದ ಈ ಭಗವಾನ್ ಬುದ್ಧದೇವನೇ ವಿಷ್ಣುವಿನ ಒಂಬತ್ತನೆಯ ಅವತಾರವೆಂದು ಎಲ್ಲಾ ಹಿಂದುಗಳೂ ನಂಬಿರುವರೆಂದು ಸಿದ್ಧವಾಗುತ್ತದೆ.

ಶ್ರೀರಾಮಚಂದ್ರ, ಶ್ರೀ ಕೃಷ್ಣ ಮೊದಲಾದ ವಿಷ್ಣುವಿನ ಅವತಾರಿ ಪುರುಷರನ್ನು ಹಿಂದುಗಳೂ ಪೂಜಿಸುವುದೇಕೆ? ಈ ಬುದ್ದದೇವನು ಅದೇ ಶ್ರೀ ವಿಷ್ಣುವಿನ ಅವತಾರಿ ಪುರುಷನಾಗಿದ್ದರೂ ಈತನನ್ನು ದೂಷಿಸುವುದೇಕೆ? ಬುದ್ಧದೇವನ ವಿಷಯದಲ್ಲಿ ಇತ್ತೀಚೆಗೆ ದುರಭಿಪ್ರಾಯವು. ಅಪೂಜ್ಯತೆಯೂ, ಉಂಟಾದವೇ ವಿನಾ ಪೂರ್ವಕಾಲದಲ್ಲಿ ಇಂತಹ ಅಭಿಪ್ರಾಯಗಳೀರಲಿಲ್ಲ. ಹಾಗಿದ್ದಿದ್ದರೆ ಆತನು ಪರಮಾತ್ಮನ ಅವತಾರವೆಂದು ಜನರು ನಂಬುತ್ತಿರಲಿಲ್ಲ. ಪರಮಾತ್ಮನು ಹಿಂದಣ ಅವತಾರಗಳಲ್ಲಿ ಹೇಗೆ ದುಷ್ಟರನ್ನು ನಾಶಮಾಡಿ ಶಿಷ್ಟರನ್ನು ರಕ್ಷಿಸಿದನೋ ಹಾಗೆಯೇ ಬುದ್ಧದೇವನು ಕೂಡ ಈ ಜನಗಳ ದುಷ್ಟತ್ವವನ್ನು ನಾಶಮಾಡಿ ಶಿಷ್ಟತ್ವವನ್ನು ರಕ್ಷಿಸಿದುದರಿಂದ ಈತನು ಆ ಪರಮಾತ್ಮನ ಅವತಾರವೆಂದೇ ಸಕಲರೂ ನಂಬಿದರು. **ಬುದ್ಧದೇವನ ಅತಿದ್ವೀಯವಾದ ಜ್ಞಾನ, ದಯೆ, ಆತ್ಮಪ್ರಭೆಗಳೇ ಬುದ್ದನು ಆ ಪರಮಾತ್ಮನ ಸಾತ್ವಿಕಾವತಾರವೆಂಬುದಕ್ಕೆ ದೃಷ್ಟಾಂತಗಳಾಗಿದ್ದವು.** ಆದುದರಿಂದ ಬುದ್ಧ ದೇವನ ವಿಷಯದಲ್ಲಿ ಅತ್ಯಂತ ಪೂಜ್ಯತೆಯುಂಟಾಗಿ ಆತನು ಅವತಾರಿ ಪುರುಷನೆಂದು ಭಾವಿಸಿದುದರಲ್ಲಿ ಆಶ್ಚರ್ಯವೇನು?

ಪೂರ್ವಕಾಲದ ಜನಗಳಲ್ಲಿದ್ದ ಈ ಭಾವನೆಯು ಅಳಿದು ಹೋಗಿ ಬುದ್ಧನ ವಿಷಯದಲ್ಲಿ ದುರಭಿಪ್ರಾಯವುಂಟಾಗಲು ಶ್ರೀ ಕುಮಾರಿಲಭಟ್ಟರೇ ಮೊದಲಾದ ಕರ್ಮಮಾರ್ಗ ಪ್ರವರ್ತಕರೇ ಕಾರಣರಾದರು. ಇವರು ತಮ್ಮ ತಮ್ಮ ಮತಗಳನ್ನು ಪ್ರಸಾರಮಾಡುವುದಕ್ಕೋಸ್ಕರ ಬೌದ್ಧಮತವನ್ನು ಖಂಡಿಸುವಾಗ ಬುದ್ದನಿಗೆ ನಾಸ್ತಿಕನೆಂದು ಹೇಳಲುಪಕ್ರಮಿಸಿದರು. ಇಷ್ಟೇ ಅಲ್ಲ; ಅನೇಕರು ಬುದ್ದನಿಗೆ ಕಳ್ಳನೆಂತಲೂ ಹೇಳಿದ್ದಾರೆ! ಈ ಪ್ರಕಾರ ಬುದ್ದದೇವನನ್ನು ನಾನಾರೀತಿಗಳಿಂದ ದೂಷಿಸಿ ಪುರಾಣಾದಿ ಪ್ರಾಚೀನ ಗ್ರಂಥಗಳಲ್ಲಿಯೂ ಆ ದೂಷಣೆಗಳನ್ನು ಸೇರಿಸಿಬಿಟ್ಟರು. ಆದರೆ ಆತನು ಅವತಾರಿ ಪುರುಷನೆಂದು ಅನೇಕ ಶತಮಾನಗಳಿಂದ ಜನಗಳು ಬರೆಯುತ್ತಾ ಬಂದುದನ್ನು ಮಾತ್ರ ಇಲ್ಲದಂತೆ ಮಾಡುವುದು ಸಾಧ್ಯವಿರಲಿಲ್ಲ. ಆದಕಾರಣ ಬುದ್ದನು ಅವತಾರಪುರುಷನೆಂದು ಹೇಳಲೇಬೇಕಾಯಿತು. ಆದರೆ ಆತನ ಮತವನ್ನು ಖಂಡಿಸಬೇಕಾಗಿದ್ದುದರಿಂದ ಅಸುರರಿಗೆ ಮೋಹವನ್ನುಂಟು ಮಾಡುವುದಕ್ಕೋಸ್ಕರ ಪರಮಾತ್ಮನು ಬುದ್ದನಾಗಿ ಅವತರಿಸಿ ಶ್ರುತಿಸ್ಮೃತಿಗಳಿಗೆ ವಿರೋಧವಾದ ಧರ್ಮವನ್ನು ಬೋಧಿಸಿದನೆಂದು ಹೇಳಲುಪಕ್ರಮಿಸಿದರು.

ಈ ಪ್ರತಿಪಾದನೆಯು ಸಮಂಜಸವಾಗಿದೆಯೇ? **ಬುದ್ಧನು ಪರಮಾತ್ಮನ ಅವತಾರವಲ್ಲವೆಂದಾದರೂ ಹೇಳಬೇಕು; ಇಲ್ಲವೇ ಆತನ ಮತವು ಗ್ರಾಹ್ಯವಾದುದೆಂದಾದರೂ ಒಪ್ಪಬೇಕು.** ಪರಮಾತ್ಮನ ಅವತಾರವೆಂದು ಹೇಳುವುದು ಮತ್ತು ಆತನು ಜನರಿಗೆ ದುರುಪದೇಶಮಾಡಿದನೆಂದು ಪ್ರತಿಪಾದಿಸುವುದು ಇವು ಪರಸ್ಪರ ವಿರೊಧವಾದ ಸಂಗತಿಗಳಲ್ಲವೇ? ಪರಮಾತ್ಮನು ಎಂಟುಸಾರೆಯೂ ಶಿಷ್ಯರನ್ನು ರಕ್ಷಿಸಿ ಜಗತ್ತಿಗೆ ಸನ್ಮಾರ್ಗವನ್ನು ತೋರಿಸಲು ಅವತರಿಸಿ ಈ ಸಾರೆ ಮಾತ್ರ ಜನರಿಗೆ ದುರುಪದೇಶಮಾಡಲು ಅವತರಿಸಿರಬಹುದೇ? ದುರುಪದೇಶಮಾಡಲು ಪ್ರಪಂಚದಲ್ಲಿ ಜನಗಳೇನು ಇರಲಿಲ್ಲವೇ? ಮತದ್ವೇಷದಿಂದ ಬುದ್ದ ದೇವನನ್ನು ಈ ಪ್ರಕಾರ ದೂಷಿಸಿರುವರೆಂದು ಸಿದ್ದವಾಗುವುದಿಲ್ಲವೇ?

ಶ್ರೀ ರಾಮಕೃಷ್ಣಾದಿಗಳಂತೆ ಬುದ್ಧದೇವನು ಕೂಡಾ ನಿಷ್ಪಕ್ಷಪಾತಿಗಳಾದ ಹಿಂದುಗಳಿಗೆ ಪೂಜ್ಯನಾಗಿಯೇ ಪರಿಣಮಿಸದಿರಲಾರನು. ಇಷ್ಟೇ ಅಲ್ಲ. **ಆ ರಾಮಕೃಷ್ಣಾದಿಗಳಿಗಿಂತಲೂ ಈ ಬುದ್ದದೇವನು ಹೆಚ್ಚು ವಂದನೀಯನಾಗಿ ತೋರುವನು.** ಏಕೆಂದರೆ ಆ ಹಿಂದಣ ಅವತಾರಗಳೆಲ್ಲಾ ಹಿಂಸಾಯುಕ್ತವಾದವುಗಳಾಗಿವೆ. ಅವುಗಳಲ್ಲಿ ರಜಸಗುಣವೇ ಅಧಿಕವಾಗಿದೆ. ಈ ಬೌದ್ಧಾವತಾರವಾದರೋ ಅಹಿಂಸಾಮಯವಾಗಿದೆ. ಇದರಲ್ಲಿ ಸಾತ್ವಿಕ ಗುಣವೇ ಪ್ರಧಾನ್ಯವಾದುದಾಗಿದೆ. **ಇತರ ಅವತಾರಗಳಂತೆ ಈ ಅವತಾರ ಕೃತ್ಯವು ಜನಗಳ ರಕ್ತದಿಂದ ಅಪವಿತ್ರವಾಗಿಲ್ಲ. ಈ ಬೌದ್ಧಾವತಾರವು ಪ್ರೇಮಜಲದಿಂದ ಪುನೀತವಾಗಿದೆ.** ಹಿಂದಣ ಅವತಾರಗಳು ಪ್ರಯಶಃ ಭರತಖಂಡದ ಶ್ರೇಯಸ್ಸಿಗಾಗಿಯೇ, ಪರಿಣಮಿಸಲ್ಪಟ್ಟಿದ್ದರೆ ಈ ಬೌದ್ಧಾವತಾರವು ಪ್ರಪಂಚದ ಬಹು ಭಾಗವನ್ನು ಉದ್ಧಾರಗೊಳಿಸಲು ಕಾರಣವಾಗಿದೆ. ಆದಕಾರಣ ನಿಷ್ಪಕ್ಷ ಪಾತಿಗಳಾದ ಹಿಂದುಗಳು ಹಿಂದಣ ಎಲ್ಲಾ ಅವತಾರಿ ಪುರುಷರಿಗಿಂತಲೂ ಭಗವಾನ್ ಬುದ್ಧದೇವನಲ್ಲಿ ವಿಶೇಷವಾದ ಪೂಜ್ಯ ಬುದ್ಧಿಯನ್ನಿಡುವಲ್ಲಿ ಸಂದೇಹವೇ ಇಲ್ಲ.

ಹಿಂದುಧರ್ಮ ಮತ್ತು ಬೌದ್ಧಮತ

ಪೂರ್ವಕಾಲದಲ್ಲಿ ಯಾವ ಧರ್ಮಕ್ಕೆ ಆರ್ಯಧರ್ಮ ಅಥವಾ ವೈದಿಕಧರ್ಮ ಇಲ್ಲವೇ ಬ್ರಾಹ್ಮಣಧರ್ಮವೆಂದು ಹೇಳುತ್ತಿದ್ದರೋ ಅದೇಧರ್ಮಕ್ಕೆ ಈಗ ಹಿಂದು ಧರ್ಮವೆಂದು ಹೇಳುತ್ತಿದ್ದಾರೆ. ಈ ಹಿಂದುಧರ್ಮಕ್ಕು ಬೌದ್ಧ ಮತಕ್ಕೂ ಯಾವಸಂಬಂಧವೂ ಇಲ್ಲವೆಂತಲೂ ಇಷ್ಟೇ ಅಲ್ಲ; ಹಿಂದು ಧರ್ಮವನ್ನು ವಿರೋಧಿಸುವುದಕ್ಕಾಗಿಯೇ ಈ ಬೌದ್ಧಮತವು ಸ್ಥಾಪಿಸಲ್ಪಟ್ಟಿತೆಂತಲೂ ಅನೇಕರು ಹೇಳುತ್ತಿದ್ಧಾರೆ. ಇದು ಕೂಡಾ ಮತದ್ವೇಷದಿಂದ ಹೇಳತಕ್ಕ ಸಂಗತಿಯೇ ಸರಿ. ಏಕೆಂದರೆ, **ಪರಮಾತ್ಮನು ಹಿಂದೆ ಎಂಟು ಸಾರೆ ಯಾವ ಧರ್ಮವನ್ನು ಉದ್ಧಾರಮಾಡುವುದಕ್ಕೋಸ್ಕರವಾಗಿಯೇ ಅವತರಿಸಿದನೋ ಅದೇ ಪರಮಾತ್ಮನು ಈ ಸಾರೆ ಅದೇ ಹಿಂದುಧರ್ಮವನ್ನು ನಾಶಮಾಡುವುದಕ್ಕಾಗಿ ಅವತರಿಸಿರಬಹುದೇ?** ಧರ್ಮವು ಗ್ಲಾನಿಯಾದಾಗ ಅದನ್ನು ರಕ್ಷಿಸುವುದಕ್ಕೋಸ್ಕರವಾಗಿಯೇ ಆಗಾಗ್ಗೆ ಅವತರಿಸುತ್ತೇನೆಂದು ಪರಮಾತ್ಮನು ಭಗವದ್ಗೀತೆಯಲ್ಲಿ ಅಭಿವಚನ ಕೊಟ್ಟಿದ್ದಾನೆಂದು ಯಾರು ಹೇಳುತ್ತಿರುವರೋ ಅವರೇ ಅದೇ ಪರಮಾತ್ಮನು ಹಿಂದು ಧರ್ಮವನ್ನು ನಾಶಮಾಡಲು ಬುದ್ಧನಾಗಿ ಅವತಿರಿಸಿದನೆಂದು ಪ್ರತಿಪಾದಿಸುವುದು ಸಮಂಜಸವಾಗಿದೆಯೇ?

ಬುದ್ಧನು ವೇದಗಳನ್ನು ಎಂದರೆ ಶ್ರುತಿಯನ್ನು ನಂಬುವುದಿಲ್ಲವಾದುದರಿಂದ ಆತನ ಮತವು ವೈದಿಕ ಮತವಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಬುದ್ಧದೇವನು ಅಷ್ಟಪ್ರಮಾಣಗಳಲ್ಲಿ ಪ್ರತ್ಯಕ್ಷಾನುಮಾನಗಳೆಂಬ ಎರಡೇ ಪ್ರಮಾಣಗಳನ್ನು ನಂಬುತ್ತಾನೆಯೇ ವಿನಾ ಶಬ್ದ (ಶ್ರುತಿ) ಪ್ರಮಾಣವನ್ನು ನಂಬುವುದಿಲ್ಲವೆಂಬುದೇನೋ ನಿಜ. ಇಷ್ಟರಿಂದಲೇ ಆತನ ಮತವು ಅವೈದಿಕ ಮತವಾಗುತ್ತದೆಯೇ? ಷಡ್ದರ್ಶನಗಳಲ್ಲಿ ಒಂದಾದ ವೈಶೇಷಿಕ ದರ್ಶನದ ಕತೃಗಳಾದ **ಕಣಾದ ಋಷಿಗಳು ಕೂಡ ಪ್ರತ್ಯಾಕ್ಷಾನುಮಾನಗಳೆಂಬ ಎರಡೇ ಪ್ರಮಾಣಗಳನ್ನು ನಂಬತಕ್ಕವರಾಗಿದ್ದಾರೆ.** ಅವರು ಶಬ್ದ (ಶ್ರುತಿ) ಪ್ರಮಾಣವನ್ನು ನಂಬುವುದಿಲ್ಲ. ಆದರೂ ಅವರ ದರ್ಶನವು ಅವೈದಿಕವಾದುದೆಂದೇಕೆ ತಿಳಿಯುವುದಿಲ್ಲ?

ಬುದ್ಧನು ನಾಸ್ತಿಕನಾದುದರಿಂದ ಆತನ ಮತವು ಆರ್ಯಧರ್ಮಕ್ಕೆ ಸಂಬಂಧವಾದುದಲ್ಲವೆಂದು ಕೆಲವರು ಹೇಳುತ್ತಾರೆ. ಅವರ ಅಭಿಪ್ರಾಯದಂತೆ ಬುದ್ದನು ನಾಸ್ತಿಕವಾದಿ ಎಂದು ತಿಳಿದರೂ ಕೂಡಾ ಆತನ ಮತವು ಆರ್ಯಧರ್ಮಕ್ಕೇಕೆ ಸಂಬಂಧಪಡುವುದಿಲ್ಲ? ಸಾಂಖ್ಯಕಾರನಾದ ಕಪಿಲ ಋಷಿಯು ನಾಸ್ತಿಕವಾದಿಯಾಗಿದ್ದಾನಷ್ಟೆ? ಹೀಗಿದ್ದರು ಆತನ ಸಾಂಖ್ಯದರ್ಶನವು ಅವೈದಿಕವಾದುದೆಂದೇಕೆ ಭಾವಿಸಲ್ಪಡುವದಿಲ್ಲ?

ಬುದ್ಧದೇವನು ಕೂಡಾ ಇವರುಗಳಂತೆ ಕೇವಲ ದರ್ಶನಕಾರನಾಗಿದ್ದಿದ್ದರೆ ಈತನ ತತ್ವಗಳು ಅವೈದಿಕವಾದವುಗಳೆಂದು ಯಾರೂ ಹೇಳುತ್ತಿರಲಿಲ್ಲ. ಆದರೆ ಭಗವಾನ್ ಬುದ್ಧದೇವನು ಆ ತನ್ನ ತತ್ವಗಳಂತೆಯೇ ಆಚರಿಸುವ ಒಂದು ಘನವಾದಮತವನ್ನೆರ್ಪಡಿಸಿದನು. ಆದಕಾರಣ ತಮ್ಮ ಮತೀಯರು ಆತನ ಮತದಲ್ಲಿ ಸೇರಬಾರದೆಂಬ ಉದ್ದೇಶದಿಂದ ಬೌದ್ಧಮತವು ಅವೈದಿಕವಾದುದೆಂದು ದೂಷಿಸಿರುವರೇ ವಿನಾ ಬೌದ್ಧಮತವೇನೂ ಆರ್ಯಧರ್ಮದಿಂದ ಭಿನ್ನವಾದುದಲ್ಲ, **ಅನೇಕಋಷಿಗಳಂತೆ ಈ ಬುದ್ಧದೇವನು ಕೂಡಾ ವೈದಿಕ, ತತ್ವಜ್ಞಾನದ ಒಂದು ಮಾರ್ಗವನ್ನು ಪ್ರಪಂಚಕ್ಕೆ ಬೋಧಿಸಿದ್ದಾನೆ. ಆದರೆ ಹಿಂದಣ ಮುನಿಗಳು ಕೇವಲ ತತ್ವಜ್ಞಾನವೊಂದನ್ನೇ ಬೋಧಿಸಿದರು.** ಈ ಶಾಕ್ಯಮುನಿಯಾದರೊ ತನ್ನ ತತ್ವಜ್ಞಾನದಂತೆಯೇ ಆಚರಿಸುವ ಒಂದು ಮತವನ್ನೇ ಏರ್ಪಡಿಸಿದನು.

ಬುದ್ಧನು ಚಾತುರ್ವರ್ಣಗಳನ್ನು ತೆಗೆದುಹಾಕಿದುದರಿಂದ ಆತನ ಮತವು ಬ್ರಾಹ್ಮಣರ ಧರ್ಮಕ್ಕೆ ವಿರೋಧವಾದುದೆಂದು ಕೆಲವರು ಹೇಳುತ್ತಾರೆ. ಇದಾದರೂ ಯುಕ್ತವಾದುದಲ್ಲ. ವೇದಕಾಲದಲ್ಲಿ ಮೊದಲು ವರ್ಣಾಶ್ರಮಗಳೇ ಇರಲಿಲ್ಲ. ಅನಂತರ ಚಾತುವರ್ಣಗಳು ಉಂಟಾದವು. ಮೊದಲು ಆರ್ಯ ಅನಾರ್ಯ (ದಸ್ಯು) ಗಳೆಂಬ ಎರಡೇ ಪಂಗಡಗಳಿದ್ದವು. ವೇದಕಾಲದ ಕೊನೆಯಲ್ಲಿ ಆರ್ಯರಲ್ಲಿ ಬ್ರಾಹ್ಮಣಾದಿ ತ್ರಿವರ್ಣಗಳುಂಟಾದವು. ಅವೂ ಕೂಡಾ ಬುದ್ದದೇವನ ಕಾಲದಲ್ಲಿದ್ದಂತೆ ಅಥವಾ ಈಗ ಪ್ರಚಾರದಲ್ಲಿರುವಂತೆ ಜನ್ಮ ವಿಶಿಷ್ಟವಾದವುಗಳಾಗಿರಲಿಲ್ಲ. ಅವರವರ ಗುಣಕರ್ಮಸ್ವಭಾವಗಳ ಮೇಲಿಂದಲೇ ವರ್ಣಗಳು ತಿಳಿಯಲ್ಪಡುತ್ತಿದ್ದವು. ಕಡೆಗೆ ವರ್ಣಕ್ಕೆ ಜನ್ಮವೇ ಮೂಲವಾಗಿ ಪರಿಣಮಿಸಿತು. ಜನಾಂಗದ ಅಭಿವೃದ್ಧಿಗೆ ವಿಘಾತವಾದ ಈ ಜನ್ಮ ವಿಶಿಷ್ಟ ವರ್ಣಕಲ್ಪನೆಯೇ ಜನಗಳಲ್ಲುಂಟಾಗದಂತೆ ಬುದ್ಧದೇವನು ವರ್ಣಗಳನ್ನೇ ತೆಗೆದುಹಾಕಿದುದು ಅವೈದಿಕವೇ? ವೇದವಿರೋಧವಾದ ಜನ್ಮವಿಶಿಷ್ಟ ವರ್ಣಕಲ್ಪನೆಯನ್ನು ಪ್ರತಿಪಾದಿಸುತ್ತಿರುವುದು ಅವೈದಿಕವೇ? ವಾಚಕರೇ ಯೋಚಿಸಲಿ.

ಬುದ್ಧನು ಅಹಿಂಸಾತತ್ವವನ್ನು ಬೋಧಿಸುವುದರಿಂದ ಆತನ ಮತವು ಆರ್ಯ ಧರ್ಮಕ್ಕೆ ಸಮ್ಮತವಾದುದಲ್ಲವೆಂದು ಕೆಲವರು ಹೇಳುತ್ತಿದ್ದಾರೆ. ಬುದ್ಧನ ಪೂರ್ವದಲ್ಲಿ ಅಹಿಂಸಾತತ್ವವು ವೈದಿಕ ಧರ್ಮದಲ್ಲಿರಲಿಲ್ಲವೆಂಬುದೇನೋ ನಿಜ. ಆದರೆ ಇಷ್ಟು ಮಾತ್ರದಿಂದಲೇ ಬೌದ್ಧ ಮತವು ವೈದಿಕಮತದಿಂದ ಭಿನ್ನವಾದುದೆಂದು ಹೇಳಬಹುದೇ? ಬುದ್ಧನ ಅಹಿಂಸಾತತ್ವವು ಆಯುಕ್ತವಾದುದಾಗಿದ್ದರೆ ಅದನ್ನೇ ವೈದಿಕ ಮತೀಯರೆಂದು ಹೇಳಿಕೊಳ್ಳುತ್ತಿರುವವರು ಈಗ ಆಚರಿಸುತ್ತಿರುವುದೇಕೆ? ಹಾಗೆ ಅಹಿಂಸಾತತ್ವವನ್ನು ಚರಿಸುತ್ತಿರುವುದರಿಂದ ಇವರು ಈಗ ಅವೈದಿಕ ಮತೀಯರಾಗಿದ್ದಾರೆಯೇ?

ಆರ್ಯಧರ್ಮವು ಅನ್ಯಧರ್ಮಗಳಂತೆ ಸಂಕುಚಿತವಾದುದಲ್ಲ. ಜನಾಂಗದ ಉನ್ನತಿಗೋಸ್ಕರ ಕಾಲಕಾಲಕ್ಕೆ ಯುಕ್ತವಾದ ಮಹಾಮಹಾ ತತ್ವಗಳನ್ನೊಳಗೊಂಡು ಹಿಂದುಧರ್ಮವು ಬಹು ವಿಕಾಸತ್ವವನ್ನು ಹೊಂದಿದೆ. ಈ ಧರ್ಮ ವೃಕ್ಷವು ದಿನೇ ದಿನೇ ಶಾಖೋಪಶಾಖೆಗಳಿಂದ ಬೆಳೆಯುತ್ತಾ ಬಂದುದಾಗಿದೆಯೇ ವಿನಾ ಅನ್ಯಧರ್ಮವೃಕ್ಷಗಳಂತೆ ಕ್ಲುಪ್ತವಾದ ಶಾಖೆಗಳುಳ್ಳದ್ದಾಗಿಲ್ಲ. ಯಾರು ಅವತಾರಿಪುರುಷರೆಂದು ನಾವು ತಿಳಿಯುತ್ತೇವೆಯೋ ಆ ಮಹಾತ್ಮರಿಗೆ ಈ ಧರ್ಮವೃಕ್ಷವನ್ನು ಅಭಿವೃದ್ಧಿಗೊಳಿಸುವದೂ ಒಂದು ಮುಖ್ಯ ಕಾರ್ಯವಾಗಿಯೇ ಇರುತ್ತದೆ. ಭಗವಾನ್ ಬುದ್ಧನು ಅವತಾರಿಪುರಷನೆಂದು ಸಕಲ ವೈದಿಕರೂ ಒಪ್ಪುತ್ತಿರುವುದರಿಂದ ಆತನ ಅಹಿಂಸಾತತ್ವವು ವೈಧಿಕಧರ್ಮಕ್ಕೆ ಮುಖ್ಯವಾದುದು ಯುಕ್ತವೇ ಆಗಿದೆ. ಪ್ರಪಂಚದ ಸುಖಶಾಂತಿಗಳಿಗೆ ಮುಂದೆ ಅಹಿಂಸಾತತ್ವವು ಅವಶ್ಯವಾಗಿ ಪರಿಣಮಿಸುವುದೆಂಬ ಉದ್ದೇಶದಿಂದಲೇ ಬುದ್ಧದೇವನು ಆ ತತ್ವವನ್ನು ಜಗತ್ತಿಗೆ ಬೋಧಿಸಿದನು. ಆತನ ಅವತಾರಕೃತ್ಯಗಳಲ್ಲಿ ಇದೊಂದು ಮಹತ್ವ ಕಾರ್ಯವೇ ಆಗಿದ್ದಿತು. ಈ ಪವಿತ್ರವಾದ ತತ್ವವನ್ನು ಅನುಸರಿಸಿದುದರಿಂದ ವೈದಿಕ ಧರ್ಮಕ್ಕೆ ವಿಶೇಷವಾದ ಗೌರವವೂ ಬಂದಿತು.

ಬುದ್ಧ ದೇವನು ಉಪನಿಷತ್ತಾದಿ ಪ್ರಾಚೀನ ವೈದಿಕ ಗ್ರಂಥಗಳಲ್ಲಿರುವ ನೀತಿನಿಯಮಗಳನ್ನೇ ಮುಖ್ಯವಾಗಿ ಬೋಧಿಸಿರುವನೆಂಬುದು ಪರಲೋಕವಾಸಿಗಳಾದ ಅಶ್ವಥನಾರಾಯಣ ಶಾಸ್ತ್ರಿಗಳವರು ಬರೆದಿರುವ **"ಧರ್ಮಪದ"** ಎಂಬ ಬುದ್ಧದೇವನ ಗ್ರಂಥದಿಂದ ಸ್ಪಷ್ಟ ವ್ಯಕ್ತವಾಗುವಂತಿದೆ. ಏಕೆಂದರೆ, ಆ ಮಹಾತ್ಮನ ಅಭಿಪ್ರಾಯಕ್ಕೂ, ವೈದಿಕ ಗ್ರಂಥದಲ್ಲಿ ವಿವರಿಸಿರುವುದಕ್ಕು ಇರತಕ್ಕ ಸಾಮ್ಯವನ್ನು ಆ ಗ್ರಂಥದಲ್ಲಿ ಚೆನ್ನಾಗಿ ತೋರಿಸಿದ್ದಾರೆ. ಅದನ್ನೋದಿದ ನಿಷ್ಪಕ್ಷಪಾತಿಗಳಿಗೆ **ಬುದ್ಧದೇವನು ಆರ್ಯಧರ್ಮವನ್ನೇ ಪುನರುಜ್ಜೀವನಗೊಳಿಸಿದನೆಂದು ವ್ಯಕ್ತವಾಗದಿರಲಾಗದು.** ಬೌದ್ಧ ಮತವನ್ನು ಚೆನ್ನಾಗಿ ಅಧ್ಯಯನ ಮಾಡಿದ ಸುಪ್ರಸಿದ್ಧ ಪಾಶ್ಚಾತ್ಯ ಗ್ರಂಥಕಾರರಾದ ಪ್ರೊ. ಹ್ರಿಸ್‌ಡೆವಿಡ್ಸ ಎಂಬುವವರು ಈ ವಿಷಯದಲ್ಲಿ ಹೇಳಿರುವುದೇನೆಂದರೆ :

"ಬೌದ್ಧ ಮತವು ಹಿಂದುಧರ್ಮದಿಂದಲೇ ಹುಟ್ಟಿದೆ. ಬುದ್ಧನು ವೈದಿಕ ಗ್ರಂಥಗಳನ್ನೇ ಅಧ್ಯಯನ ಮಾಡಿದ್ದನು. ಇಷ್ಟೇ ಅಲ್ಲ ತನ್ನ ಮತವೇ ಸನಾತನ ವೈದಿಕ ಮತದ ನಿಜತತ್ವವನ್ನು ಬೋಧಿಸತಕ್ಕುದಾಗಿದೆಯೆಂತಲೂ ಆತನು ನಂಬಿದ್ದನು. ಬುದ್ಧನು ಹಿಂದು ಧರ್ಮದವರಲ್ಲಿ ಬಹು ಶ್ರೇಷ್ಠನು; ಜ್ಞಾನಿಯು ಮತ್ತು ಉತ್ತಮನು ಆಗಿದ್ದನೆಂದು ಧಾರಾಳವಾಗಿ ಹೇಳಬಹುದು."

ಬೌದ್ಧ ಮತವು ನಾಸ್ತಿಕ ಮತವಲ್ಲ

ಬುದ್ಧನು ದೇವರೇ ಇಲ್ಲವೆಂದು ಹೇಳತಕ್ಕವನಾದುದರಿಂದ ಬೌದ್ಧಮತವು ನಾಸ್ತಿಕಮತವೆಂದು ಅನೇಕರು ಹೇಳುತ್ತಿದ್ದಾರೆ. ಇದಾದರೂ ಆತನ ಮತದ ವಿಷಯದಲ್ಲಿ ದುರಭಿಪ್ರಾಯವುಂಟಾಗುವುದಕ್ಕೋಸ್ಕರವಾಗಿಯೇ ಹೇಳಿದುದಾಗಿದೆ. **ಮನುಷ್ಯನು ತನ್ನ ಜ್ಞಾನಕ್ಕನುಗುಣವಾಗಿ ದೇವರನ್ನು ಕಲ್ಪಿಸಿಕೊಳ್ಳುತ್ತಾನೆ.** ಕೆಲವರು ತಾವು ಪೂಜಿಸುವ ಮೂರ್ತಿಯಲ್ಲಿಯೇ ದೇವರಿದ್ದಾನೆಂದು ನಂಬಿ ಅದಕ್ಕೆ ಯಾವ ಹೆಸರನ್ನು ಕೊಟ್ಟಿರುತ್ತಾರೆಯೋ ಆತನೊಬ್ಬನೇ ದೇವರಲ್ಲದೆ ಬೇರೆ ದೇವರೆ ಇಲ್ಲವೆಂದು ತಿಳಿಯುತ್ತಾರೆ. ಕೆಲವರು ಈ ಸಗುಣೋಪಾಸನೆಯನ್ನು ಬಿಟ್ಟು ದೇವರು ತಮ್ಮ ಹೃದಯಮಧ್ಯದಲ್ಲಿದ್ದಾನೆಂದು ಭಾವಿಸಿ ಧ್ಯಾನಾಸಕ್ತರಾಗುತ್ತಾರೆ.

ಈ ನಿರ್ಗುಣೋಪಾಸಕರು ಸಗುಣೋಪಾಸಕರಿಗೆ ನಾಸ್ತಿಕರಂತೆ ತೋರುತ್ತಾರೆ. ಕೆಲವರು ಈ ಪ್ರಪಂಚವೇ ದೇವರ ಸ್ವರೂಪವೆಂದು ಭಾವಿಸಿ ಪ್ರಾಣಿಗಳ ಹಿತಕ್ಕೋಸ್ಕರ ಪ್ರಯತ್ನಿಸುತ್ತಿರುವುದೇ ಆ ಪರಮಾತ್ಮನ ಪೂಜೆ, ಧ್ಯಾನಾದಿಗಳೆಂದು ತಿಳಿದು ಯಾವಾಗಲೂ ಪರಹಿತಕಾರ್ಯಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಇವರು ನಿರ್ಗುಣೋಪಾಸಕರಿಗೆ ನಾಸ್ತಿಕರಂತೆ ತೋರಬಹುದು. ಈ ಪ್ರಕಾರ ಯಾರೂ ತಮ್ಮ ಕಲ್ಪನೆಯ ಪ್ರಕಾರ ದೇವರ ವಿಷಯದಲ್ಲಿ ಆಚರಿಸುವುದಿಲ್ಲವೋ ಅವರೆಲ್ಲರೂ ಅವರ ಪಾಲಿಗೆ ನಾಸ್ತಿಕರಾಗಿಯೇ ಪರಿಣಮಿಸುತ್ತಾರೆ. ಇದೇ ಪ್ರಕಾರ ಬುದ್ಧದೇವನು ಕೂಡಾ ಅನೇಕರಿಗೆ ನಾಸ್ತಿಕನಂತೆ ಕಾಣುತ್ತಿದ್ದಾನೆಯೇ ವಿನಾ ಆತನು ದೇವರೇ ಇಲ್ಲವೆಂದು ಮಾತ್ರ ಎಲ್ಲೆಲ್ಲಿಯೂ ಹೇಳಿಲ್ಲ.

ಇದರಂತೆಯೇ ದೇವರು ಸಮುದ್ರದ ಮೇಲೆ ಮಲಗಿರುವನೆಂದಾಗಲಿ, ಕೈಲಾಸದಲ್ಲಿ ಕುಳಿತಿರುವನೆಂದಾಗಲಿ, ಆಕಾಶದಲ್ಲಿ ಸಂಚರಿಸುತ್ತಿದ್ದಾನೆಂದಾಗಲಿ, ಇಲ್ಲವೆ ಹೃದಯ ಮಧ್ಯದಲ್ಲಿ ಪ್ರಕಾಶಿಸುತ್ತಿದಾನೆಂದಾಗಲಿ ಯಾವುದನ್ನೂ ಬುದ್ಧನು ಹೇಳಿಲ್ಲ. ಆದುದರಿಂದ ಯಾರು ಆಯಾಯ ಸ್ಥಾನಗಳಲ್ಲಿ ದೇವರಿದ್ದಾನೆಂದು ನಂಬಿದ್ದಾರೆಯೋ ಅವರೆಲ್ಲರಿಗೂ ಬುದ್ಧನು ನಾಸ್ತಿಕನಂತೆ ತೋರಿದುದೇನಾಶ್ಚರ್ಯ? ಇದು ಸಾಮಾನ್ಯ ಜನರ ಸ್ಥಿತಿಯಾಯಿತು. ಆದರೆ ಯಾರು ಮಹಾಮಹಾಪಂಡಿತರೆಂದು ಹೇಳಿಕೊಂಡಿದ್ದಾರೆಯೋ ಅವರು ಕೂಡಾ ಬುದ್ಧನು ನಾಸ್ತಿಕನೆಂದು ಹೇಳುವುದು ಆತನ ವಿಷಯದಲ್ಲಿ ದುರಾಭಿಪ್ರಾಯವನ್ನುಂಟುಮಾಡುವುದಕ್ಕೋಸ್ಕರವಾಗಿಯೇ ವಿನಾ ದೇವರ ವಿಷಯಕವಾದ ಬುದ್ಧನ ಕಲ್ಪನೆಯು ಅವರಿಗೆ ತಿಳಿದಿಲ್ಲವೆಂದು ಹೇಳಲಿಕ್ಕಾಗುವುದಿಲ್ಲ.

ದೇವರ ವಿಷಯಕವಾದ ಬುದ್ಧನ ಕಲ್ಪನೆಯು ಉಪನಿಷತ್ತುಗಳಿಗೆ ಸಮ್ಮತವಾದುದಾಗಿದೆ. ಆತನ ಕಲ್ಪನೆಗೆ ಭಕ್ತಿಯು ಪ್ರಾಧಾನ್ಯವಾಗಿರದೆ ಜ್ಞಾನವೇ ಮೂಲವಾಗಿದೆ. ಆದುದರಿಂದ ದೇವರು ನಿರ್ಗುಣ, ನಿರಾಕಾರ, ಅನಿರ್ವಚನೀಯನೆಂದು ಒಂದು ಕಡೆ ಹೇಳಿ ಮತ್ತೊಂದುಕಡೆ ಆತನು ಸಚ್ಚಿದಾನಂದನೆಂತಲೂ, ಕೈಲಾಸ ವೈಕುಂಠದಲ್ಲಿ ವಾಸವಾಗಿರುತ್ತಾನೆಂತಲೂ, ಆತನ ರೂಪ, ಕುಟುಂಬಗಳನ್ನು ಕುರಿತು ವರ್ಣಿಸುವ ಅಸಮಂಜಸವಾದ ಪದ್ಧತಿಯನ್ನು ಬುದ್ಧದೇವನು ಅನುಸರಿಸಿಲ್ಲ. ದೇವರು ಎಲ್ಲಿದ್ದಾನೆ? ಹೇಗಿದ್ದಾನೆ? ಏನು ಮಾಡುತ್ತಿದ್ದಾನೆ? ಇವೇ ಮೊದಲಾದ ಪ್ರಶ್ನೆಗಳಿಗೆ ಉತ್ತರವನ್ನು ಹೇಳುವ ಅಧಿಕ ಪ್ರಸಂಗವನ್ನು ಬುದ್ಧದೇವನು ಮಾಡಿಲ್ಲ. ಏಕೆಂದರೆ ಆತನು ವಾಚಾತೀತನೆಂದು ತಿಳಿದಿದ್ದನು.

ಒಬ್ಬ ಬ್ರಾಹ್ಮಣನು ಬುದ್ದನ ಬಳಿಗೆ ಬಂದು ನಿನ್ನ "ನಿರ್ವಾಣವು" ಹೇಗಿರುತ್ತದೆಂದು ಕೇಳಿದನು. ಆಗ ಬುದ್ಧನು ಆತನಿಗೆ ಯಾವ ಉತ್ತರವನ್ನೂ ಹೇಳಲಿಲ್ಲ. ಇದನ್ನು ಆ ಬ್ರಾಹ್ಮಣನು, "ನೋಡಿ ಬುದ್ದನೇ, ನೀನು ಮಹಾಜ್ಞಾನಿಯೆಂದು ಹೇಳುತ್ತಿದ್ದಾರೆ. ನೀನು ಬೋಧಿಸುವ ನಿರ್ವಾಣವನ್ನು ಕುರಿತು ನೀನೇ ವಿವರಿಸಲಾರಿಯಾ? ಎಂದು ಪುನಃ ಪ್ರಶ್ನೆಮಾಡಿದನು. ಆಗ ಬುದ್ಧದೇವನು ಹೇಳಿದುದೇನೆಂದರೆ, **"ಎಲೈ ಬ್ರಾಹ್ಮಣನೇ, ನಿರ್ವಾಣದಲ್ಲಿ ನಿನಗೆ ವಿವರಿಸಿ ಹೇಳುವ ಯಾವ ವಸ್ತುವೇ ಆಗಲಿ, ಅಥವಾ ವಿಷಯವೇ ಆಗಲಿ ಇಲ್ಲದಿರುವುದರಿಂದ ನಾನು ಮೌನದಿಂದಿದ್ದೆನು."** ಆಸ್ತಿಕರೆಂದು ಹೇಳಿಕೊಳ್ಳುವವರು **"ನಿಶ್ಯಬ್ಧಂಬ್ರಹ್ಮ ಮುಚ್ಯಂತೆ"** ಎಂದು ಹೇಳಿರುವುದನ್ನೇ ಬುದ್ಧನು ಆ ಪ್ರಕಾರ ಹೇಳಿದನೆಂದು ವ್ಯಕ್ತವಾಗುವುದಿಲ್ಲವೇ? ಬ್ರಹ್ಮವು ಅನಿರ್ವಚನೀಯವಾದುದೆಂದು ಆತನು ಚೆನ್ನಾಗಿಯೇ ಅರಿತಿದ್ದನಾದುದರಿಂದ ಅದನ್ನು ವಚನಕ್ಕೆ ತರುವುದು ಆತನಿಗೆ ಸಾಧ್ಯವಿರಲಿಲ್ಲ. ಆದುದರಿಂದ ಆತನು ಅನೇಕರಿಗೆ ನಾಸ್ತಿಕನಾಗಿ ಪರಿಣಮಿಸಿದನು.

ಬುದ್ಧನ ನಿರ್ವಾಣವೂ ವೇದಾಂತಿಗಳ ಬ್ರಹ್ಮೈಕ್ಯವೂ ಒಂದೇ ಆಗಿವೆ. ಅವಿದ್ಯೆಯೇಬಂಧನಕ್ಕೆ ಕಾರಣವಾಗಿರುವುದರಿಂದ ಅದು ನಾಶವಾದಾಗಲೇ ಮೋಕ್ಷವು ಲಭಿಸುತ್ತದೆಂದು ವೇದಾಂತಿಗಳು ಹೇಳುವಂತೆಯೇ ಬುದ್ಧನು ಕೂಡಾ ಅವಿದ್ಯೆಯು ಅಳಿದುಹೋದಾಗಲೇ ನಿರ್ವಾಣವು ಪ್ರಾಪ್ತವಾಗುತ್ತದೆಂದು ಸ್ಪಷ್ಟವಾಗಿ ಹೇಳಿದ್ಧಾರೆ. ಈ ವಿಷಯಗಳಲ್ಲಿ ಭಗವಾನ್ ಬುದ್ಧನು ಹೇಳಿರುವ ಸಂಗತಿಗಳು "ಇತಿ ಉತ್ತಕ" ಎಂಬ ಗ್ರಂಥದಲ್ಲಿ ಉಕ್ತವಾಗಿದೆ. ಅದರಲ್ಲಿ ಬುದ್ಧನು ಹೇಳಿರುವುದೇನೆಂದರೆ:

"ಯಸ್ಸರಾಗೋಚದೋಸೋಚ ಅವಿಜ್ಜಾಚ ವಿರಾಜಿತಾ ।
ತಂಭಾವಿತತ್ತಂತರಮ್ ಬ್ರಹ್ಮಭೂತಂತಥಾಗತಮ್ ॥"

"ಯಾರು ರಾಗದ್ವೇಷ ಅವಿದ್ಯೆಗಳಿಂದ ನಿವೃತ್ತ ರಾಗಿದ್ದಾರೆಯೋ ಅವರೇ ಬ್ರಹ್ಮಭೂತಿಗಳು ಅಥವಾ ತಥಾಗತರು."

ಇದರ ಮೇಲಿಂದ ಬುದ್ಧನು ಬ್ರಹ್ಮದ ವಿಷಯದಲ್ಲಿ ಯಾವ ಅಭಿಪ್ರಾಯವುಳ್ಳವನಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. **ಶ್ರೀ ಶಂಕರಾಚಾರ್ಯರು ಬೋಧಿಸಿರುವ ಅದ್ವೈತಮತವು ಬುದ್ಧನ ಮತವನ್ನು ಬಹು ಮಟ್ಟಿಗೆ ಹೋಲುತ್ತದೆ.** ಆದುದರಿಂದಲೇ ಶ್ರೀ ಶಂಕರಾಚಾರ್ಯರಿಗೆ **ಪ್ರಚ್ಛನ್ನ ಬುದ್ಧನೆಂದು** ಹೇಳುತ್ತಿದ್ದಾರೆ. ಬುದ್ಧನ ತತ್ವಗಳಾದರೋ ಕಪಿಲಋಷಿಯ ಸಾಂಖ್ಯದರ್ಶನವನ್ನು ಬಹುಮಟ್ಟಿಗೆ ಹೋಲುತ್ತದೆ. ಆದುದರಿಂದ ಈ ಎಲ್ಲಾ ಮತಗಳು ನಾನಾರೀತಿಗಳಿಂದ ದೂಷಿಸುವುದಕ್ಕೆ ಮತದ್ವೇಷವೇ ಕಾರಣವೆಂದು ನಿಷ್ಪಕ್ಷಪಾತಿಗಳಿಗೆ ವ್ಯಕ್ತವಾಗದಿರಲಾರದು.

ಬೌದ್ಧ ಮತದ ವಿಶೇಷ ಲಕ್ಷಣ

ವೇದಗಳಂತೆ ಅಥವಾ ಬೈಬಲ್ಲಿನಂತೆ ಇಲ್ಲವೆ ಖುರಾನಿನಂತೆ ಬೌದ್ಧ ಮತೀಯರಿಗೆ ಒಂದು ಧರ್ಮಗ್ರಂಥವಿಲ್ಲ. ದೇವರಿಂದಾಗಲಿ ಅಥವಾ ದೇವರ ಕಡೆಯವರಿಂದಾಗಲಿ, ಒಂದು ಗ್ರಂಥ ಉಂಟಾಗಿದೆಯೆಂತಲೂ, ಯಾವಾಗಲೂ ಎಲ್ಲರೂ ಅದರಂತೆಯೇ ನಡೆಯಲೇಬೇಕೆಂತಲೂ, ಹಾಗೆ ನಡೆದವರಿಗೆ ಮಾತ್ರವೇ ಮೋಕ್ಷವು ಲಭಿಸುತ್ತದೆಂತಲು, ಬುದ್ಧನು ಹೇಳಿಲ್ಲ. ಯಾರಿಂದಲಾದರೂ ಒಂದು ಕಾಲದಲ್ಲಿ ಆ ಕಾಲಕ್ಕೆ ತಕ್ಕಂತೆ ಒಂದು ಗ್ರಂಥವುಂಟಾದರೆ ಅದಕ್ಕೇನೇ ಸಕಲರೂ ಸಕಲ

ಕಾಲಗಳಲ್ಲಿಯೂ ದಾಸರಾಗಿಯೇ ವರ್ತಿಸಬೇಕೆಂದು ಬೌದ್ಧಮತದಲ್ಲೇನೂ ಆಜ್ಞಾಪಿಸಿಲ್ಲ. ಭಗವಾನ್ ಬುದ್ಧನು ಈ ವಿಷಯವಾಗಿ **"ಕಲಮಸುತ್ತ"** ಎಂಬುದರಲ್ಲಿ ಹೇಳಿರುವುದೇನೆಂದರೆ:

"ಓ ಭಿಕ್ಷುವೇ, ಇತರರು ಹೇಳಿದುದನ್ನೆಲ್ಲಾ ಕೇಳಿದ ಮಾತ್ರದಿಂದ ಅದನ್ನು ನಂಬಬೇಡ; ತಲತಲಾಂತರಗಳಿಂದಲೂ ಒಬ್ಬನು ಮತ್ತೊಬ್ಬನಿಗೆ ಹೇಳುತ್ತಾ ಬಂದುದಾದ ಮಾತ್ರದಿಂದ ಅದರಲ್ಲಿ ನಂಬಿಕೆಯನ್ನಿಡಬೇಡ; ಒಂದು ವಿಷಯವು ಅನೇಕರಿಂದ ಒಂದೇ ರೀತಿಯಲ್ಲಿ ಹೇಳಲ್ಪಟ್ಟು ಕೇವಲ ಪ್ರಚಾರಕ್ಕೆ ಬಂದುದರಿಂದ ಅದರಲ್ಲಿ ವಿಶ್ವಾಸವನ್ನಿಡಬೇಡ; ಪೂರ್ವಋಷಿಗಳಿಂದ ಬರೆಯಲ್ಪಟ್ಟುದೆಂಬುದರಿಂದಲೇ ಅದರಲ್ಲಿ ನಂಬಿಕೆಯನ್ನಿಡಬೇಡ; ನಿರಾಧಾರ ಪ್ರಮಾಣಗಳಲ್ಲಿ ನಂಬಿಕೆಯನ್ನಿಡಬೇಡ; ಒಂದು ವಿಷಯವು ಬಹುದಿವಸಗಳಿಂದ ನಿನ್ನನ್ನು ಅನುಸರಿಸಿಬಂದಿರುವ ಮಾತ್ರಕ್ಕೇ ಅದರಲ್ಲಿ ನಂಬಿಕೆಯನ್ನಿಡಬೇಡ; ಒಂದು ಸಂಗತಿಯನ್ನು ಪೂರ್ವಿಕರು ಮತ್ತು ಹಿರಿಯರಾದವರು ಹೇಳಿದ್ದ ಮಾತ್ರಕ್ಕೆ ಅದರಲ್ಲಿ ನಂಬಿಕೆಯನ್ನಿಡಬೇಡ; ಆದರೆ ಇವುಗಳನ್ನು ಕಿವಿಯಿಂದ ಕೇಳದೆ ತಿರಸ್ಕರಿಸಬೇಡ. ಅವುಗಳನ್ನು ಕೇಳಿ ಚೆನ್ನಾಗಿ ವಿಮರ್ಶಿಸಿ ನ್ಯಾಯಬಲದಿಂದ ಜಿಜ್ಞಾಸೆಮಾಡಿ ಅನಂತರ ಅದು ಲೋಕಕ್ಕಾಗಲಿ ಇಲ್ಲವೆ ನಿನಗಾಗಲಿ ಅಥವಾ ಲೋಕಕ್ಕೂ ನಿನಗೂ ಸಹ ಆಗಲಿ ಉಪಯೋಗಕರವಾಗಿದ್ದಲ್ಲಿ ಅದರಲ್ಲಿ ದೃಢವಾದ ನಂಬಿಕೆಯನ್ನಿಡು; ಮತ್ತು ಅಷ್ಟಕ್ಕೇ ತೃಪ್ತನಾಗದೆ ಲೋಕಕ್ಕೆ ಮೇಲ್ಪಂಗ್ತಿಯಾಗಿರುವಂತೆ ಅದನ್ನು ನಿನ್ನ ಆಚರಣೆಯಲ್ಲಿ ತರುವನಾಗು; ಅದರಿಂದ ನೀನು ನಿರ್ವಾಣವನ್ನು ಹೊಂದುವಿ."

ಇದರ ಮೇಲಿಂದ **ಬುದ್ಧನು ಮನುಷ್ಯನ ವಿಚಾರಾಭಿವೃದ್ಧಿಗೂ, ಸ್ವಾತಂತ್ರ್ಯಕ್ಕೂ, ಎಷ್ಟು ಅವಕಾಶವನ್ನು ಕೊಟ್ಟಿದ್ದಾನೆಂಬುದು ಸ್ಪಷ್ಟವಾಗುತ್ತದೆ.** ಇದು ಬೌದ್ಧಮತದ ಒಂದು ವಿಶೇಷ ಲಕ್ಷಣವಾಗಿದೆ.

ಅನೇಕ ಧರ್ಮದವರು ಮತ್ತು ಮತಸ್ಥಾಪಕರು ಸೃಷ್ಟಿಯ ಉತ್ಪತ್ತಿ ಸ್ಥಿತಿಲಯಗಳ ವಿಷಯದಲ್ಲಿಯು ದೇವರ ಸಗುಣನಿರ್ಗುಣಗಳ ವಿಷಯದಲ್ಲಿಯು ಮತ್ತು ದ್ವೈತಾದ್ವೈತ ಮೊದಲಾದ ವಿಷಯಗಳಲ್ಲಿಯೂ ಹೇಗೆ ಚರ್ಚಿಸಿದ್ದಾರೆಯೋ ಹಾಗೆ ಈ ಬೌದ್ಧಮತದಲ್ಲಿ ಈ ವಿಷಯಗಳು ಚರ್ಚಿಸಲ್ಪಟ್ಟಿಲ್ಲ. ಏಕೆಂದರೆ ಈ ವಿಷಯಗಳು ಮನುಷ್ಯನ ಬುದ್ಧಿಗೆ ನಿಲುಕುವುದಿಲ್ಲವೆಂತಲೂ ಇವುಗಳ ಚರ್ಚೆಯಿಂದ ಮನುಷ್ಯ ಪ್ರಾಣಿಗೆ ಯಾವ ಪ್ರಯೋಜನವೂ ಇಲ್ಲವೆಂತಲೂ ಬುದ್ಧನು ತಿಳಿದಿದ್ದನು.

ಮಾಲೂಕ್ಯ ಪುತ್ರನು ಈ ವಿಷಯವನ್ನು ಕೇಳಿದಾಗ ಬುದ್ಧನು ಹೇಳಿದ ಸಂಗತಿಯು ಈ ಮುಂಚೆಯೇ ವಿವರಿಸಲ್ಪಟ್ಟಿದೆಯಷ್ಟೆ. ಪರಿವ್ರಾಜಕಪೊಟ್ಟಪಾದನು ಒಂದು ಸಾರೆ ಜಗತ್ತಿನ ನಿತ್ಯಾನಿತ್ಯತೆ, ಜೀವಶರೀರಗಳ ಸಂಬಂಧ ಮರಣಾನಂತರ ಜೀವನಿಗುಂಟಾಗುವ ಸ್ಥಿತಿ ಮೊದಲಾದ ವಿಷಯಗಳನ್ನು ಕುರಿತು ಕೇಳಲು ಆಗ ಬುದ್ಧದೇವನು ಹೇಳಿದುದೇನೆಂದರೆ "ಈ ವಿಷಯಗಳಿಂದ ಧರ್ಮವಾಗಲಿ, ಬ್ರಹ್ಮಚರ್ಯವಾಗಲಿ, ವೈರಾಗ್ಯವಾಗಲಿ, ಧ್ಯಾನಧಾರಣಾದಿಗಳಾಗಲಿ ಯಾವುವೂ ಪ್ರಾಪ್ತವಾಗುವುದಿಲ್ಲ. ಮತ್ತು ನಿರ್ವಾಣಹೊಂದಲು ಇವುಗಳಿಂದ ಯಾವ ಸಹಾಯವೂ ಆಗುವುದಿಲ್ಲ ಆದಕಾರಣ ನಾನು **ಈ ಸಂಗತಿಗಳನ್ನು ಪ್ರಕಟಗೊಳಿಸುವುದಿಲ್ಲ.**"

ಬುದ್ಧನು ತನ್ನ ಮತದಲ್ಲಿ ಶುಷ್ಕವಾದಕ್ಕೆ ಅವಕಾಶವಿಲ್ಲದಂತೆ ಮಾಡಿರುವುದೂ ಈ ಮತದ ಒಂದು ವಿಶೇಷಲಕ್ಷಣವೇ ಆಗಿದೆ.

ಕೆಲವು ಮತದವರಿಗೆ ಸ್ವರ್ಗ ಸುಖಾನುಭವವೇ ಮುಖ್ಯಧ್ಯೇಯವಾಗಿದ್ದರೆ ಕೆಲವು ಮತದವರಿಗೆ ಬ್ರಹ್ಮಾನಂದದಲ್ಲಿ ಲೀನವಾಗುವುದೇ ಧ್ಯೇಯವಾಗಿದೆ. ಆದರೆ ಈ ಬುದ್ಧ ಮತದಲ್ಲಿ ಅಪರಿಚಯವದ ಇಂಥ ವಿಷಯಗಳ ಪ್ರಾಪ್ತಿಯು ಧ್ಯೇಯವಾಗಿ ಎಣಿಸಲ್ಪಟ್ಟಿಲ್ಲ. ದುಃಖವನ್ನು ನಿವಾರಣೆ ಮಾಡಿಕೊಳ್ಳುವುದೇ ಬೌದ್ಧ ಮತದ ಮುಖ್ಯಧ್ಯೇಯವಾಗಿದೆ. ಸುಖಪ್ರಾಪ್ತಿಯ ಧ್ಯೇಯಕ್ಕೂ, ದುಃಖನಿವೃತ್ತಿ ಧ್ಯೇಯಕ್ಕೂ ವ್ಯತ್ಯಾಸವೇನೂ ಇಲ್ಲವೆಂದು ಕೆಲವರಿಗೆ ತೋರಬಹುದು. ಆದರ ಅದು ಯುಕ್ತವಲ್ಲ. ಏಕೆಂದರೆ, ಸ್ವರ್ಗಾದಿಗಳ ಸುಖವು ಮನುಷ್ಯನ ಅನುಭವ ಸಿದ್ಧವಾದವುಗಳಲ್ಲ. ಆದುದರಿಂದ ತಾನು ಅನುಭವಿಸದೇ ಇರತಕ್ಕ ವಿಷಯಗಳಲ್ಲಿ ಮನುಷ್ಯನ ಮನಸ್ಸು ಆತುರ ಪಡುವುದಿಲ್ಲ ಮತ್ತು ಸ್ಥಿರಗೊಳ್ಳುವುದಿಲ್ಲ. ಆದರೆ ದುಃಖಾನುಭವವು ಸಕಲರಿಗೂ ಇರುವುದರಿಂದ ಅದನ್ನು ನಿವಾರಣೆ ಮಾಡಿಕೊಳ್ಳಲು ಮನುಷ್ಯನು ಜಾಗ್ರತೆ ಪ್ರವರ್ತನಾಗುತ್ತಾನೆ. ಮತ್ತು ಸ್ಥಿರಪ್ರಯತ್ನವನ್ನು ಮಾಡುತ್ತಾನೆ. ಆದಕಾರಣ ಅಪರಿಚಯವಾದ ಸುಖಪ್ರಾಪ್ತಿಯನ್ನು ಮನುಷ್ಯನ ಧ್ಯೇಯವಾಗಿಡದೆ ಅನುಭವ ಜನ್ಯವಾದ ದುಃಖನಿವೃತ್ತಿಯನ್ನೇ ಆತನ ಧ್ಯೇಯವಾಗಿಟ್ಟಿರುವುದು ಬುದ್ಧ ದೇವನ ಜ್ಞಾನಾಧಿಕ್ಯವನ್ನು ವ್ಯಕ್ತಗೊಳಿಸತಕ್ಕದ್ದಾಗಿದೆ.

ಬೌದ್ಧ ಮತದಲ್ಲಿ ಅನ್ಯಮತಗಳಂತೆ ಆಚಾರ ಬಾಹುಳ್ಯವಿಲ್ಲವಾದುದರಿಂದ ಅಂಧಶ್ರದ್ಧೆಗೂ ಧಾರ್ಮಿಕ ಮೂಢನಂಬಿಕೆಗೂ ಅವಕಾಶವಿಲ್ಲ. **ಈ ಮತೀಯರಿಗೆ ಸ್ನಾನ ಪೂಜಾದಿ ಬಾಹ್ಯಾಚಾರಗಳು ಪ್ರಾಮುಖ್ಯವಾದವುಗಳಾಗಿರದೆ ಸತ್ಯ ಅಹಿಂಸಾದಿ ನೈತಿಕ ಆಚರಣೆಗಳೇ ಮುಖ್ಯವಾಗಿವೆ.** ಬೌದ್ಧ ಮತದಲ್ಲಿ ಸೇರಿದ ಗೃಹಸ್ಥನು ಆಚರಿಸಬೇಕಾದ ಈ ಕೆಳಗಿನ **"ಪಂಚಶೀಲ"**ಗಳನ್ನು ನೋಡಿದರೆ ಬೌದ್ಧ ಮತವು ನೀತಿ ಪ್ರಾಧಾನ್ಯವಾದುದೆಂದು ಸ್ಪಷ್ಟವಾಗುತ್ತದೆ.

(೧) ತಾನು ಯಾವ ಹಿಂಸೆಯನ್ನೂ ಮಾಡಬಾರದು ಮತ್ತು ಅನ್ಯರು ಮಾಡುವ ಹಿಂಸೆಗೆ ತಾನು ಒಪ್ಪಿಗೆಯನ್ನು ಕೊಡಬಾರದು.

(೨) ತಾನು ಯಾವ ಪದಾರ್ಥವನ್ನೂ ಕದಿಯಬಾರದು ಮತ್ತು ಕಳ್ಳತನಕ್ಕೆ ಒಪ್ಪಿಗೆಯನ್ನು ಕೊಡಬಾರದು.

(೩) ವ್ಯಭಿಚಾರವು ಭಯಂಕರವಾದ ಅಗ್ನಿಕುಂಡದಂತಿರುವುದರಿಂದ ಅದು ತನಗೆ ಸ್ಪರ್ಶವಾಗದಂತೆ ಬಹು ಎಚ್ಚರದಿಂದಿರಬೇಕು.

(೪) ಸುಳ್ಳಾಡಬಾರದು. ಸುಳ್ಳುಸಾಕ್ಷಿಯನ್ನು ಹೇಳಬಾರದು ಮತ್ತು ಸುಳ್ಳಿಗೆ ಒಪ್ಪಿಗೆಯನ್ನು ಕೊಡಬಾರದು.

(೫) ತಾನು ಮದ್ಯ ಮೊದಲಾದ ಮಾದಕ ಪದಾರ್ಥಗಳನ್ನು ಸೇವಿಸಬಾರದು. ಮತ್ತು ಅನ್ಯರು ಸೇವಿಸುವುದಕ್ಕೆ ಒಪ್ಪಿಗೆ ಕೊಡಬಾರದು.

ಅಹಿಂಸಾತತ್ವವು ಬೌದ್ಧ ಮತದ ಒಂದು ವಿಶೇಷಲಕ್ಷಣವಾಗಿದೆ. ಹಿಂಸೆಯನ್ನು ಅಹಿಂಸೆಯಿಂದಲೇ ನಿಲ್ಲಿಸಬೇಕೆಂದು ತನ್ನ ಆಚರಣೆಯಿಂದ ಬೋಧಿಸಿದ ಮಹಾತ್ಮನು ಪ್ರಪಂಚದಲ್ಲಿ ಈ ಬುದ್ಧ ದೇವನೇ ಮೊದಲನೆಯವನು. ಪ್ರಾಣಿಗಳನ್ನು ಹಿಂಸಿಸದಿರುವುದೊಂದೇ ಅಹಿಂಸಾವ್ರತವಲ್ಲ ಸಕಲಪ್ರಾಣಿಗಳಲ್ಲಿಯೂ ಪ್ರೇಮವನ್ನಿಡುವುದೂ ಅಹಿಂಸಾ ತತ್ವದ ಮುಖ್ಯಲಕ್ಷಣವಾಗಿದೆ. ಆದಕಾರಣ ಬೌದ್ಧ ಮತಗ್ರಂಥಗಳಲ್ಲಿ ಈ ಅಹಿಂಸಾತತ್ವಕ್ಕೆ **"ವಿಶ್ವಮೈತ್ರಿ"** ಎಂದು ಹೇಳಿದ್ದಾರೆ.

ಇಂತಹ ಅನೇಕ ಶ್ರೇಷ್ಠತರವಾದ ತತ್ವಗಳಿಂದ ಕೂಡಿರುವ ಈ ಬೌದ್ಧ ಮತವು ಸಾಮಾನ್ಯ ಬುದ್ಧಿ ಗ್ರಾಹ್ಯವಾದುದಲ್ಲವೆಂಬುದೇನೋ ನಿಜ. ಒಂದುವೇಳೆ ತಿಳಿದರೂ ಆಚರಿಸಲ್ಪಟುವುದಂತು ಅತ್ಯಂತ ಕಠಿಣವಾದುದೆಂಬ ವಿಷಯದಲ್ಲಿ ಸಂದೇಹವೇ ಇಲ್ಲ. ಆದುದರಿಂದಲೇ ಈಗ ಕೋಟ್ಯಾಂತರ ಜನಗಳು ಕೇವಲ ನುಡಿ ಮಾತ್ರದಲ್ಲಿ ಬೌದ್ಧಮತಿಯರಾಗಿದ್ದಾರೆಯೇ ವಿನಾ ನಡತೆಯಲ್ಲಿಲ್ಲವೆಂದು ಸಹಜ. ಈ ಸಂಗತಿಗಳೆಲ್ಲಾ ಬುದ್ಧದೇವನಿಗೆ ತಿಳಿಯದವುಗಳಲ್ಲ. ಆತನು ಈ ವಿಷಯವಾಗಿ ಹೇಳಿರುವುದೇನೆಂದರೆ: ನನ್ನ ಸತ್ಯಧರ್ಮವನ್ನು ಸಂಕ್ಷಿಪ್ರವಾಗಿಯೇ ವಿವರಿಸಲಿ, ಅಥವಾ ವಿಸ್ತಾರವಾಗಿಯೇ ವಿವರಿಸಲಿ, ಎರಡೂ ಒಂದೇ ಸರಿ, ಏಕೆಂದರೆ, ಇದನ್ನರಿತುಕೊಳ್ಳುವವರು ಸ್ವಲ್ಪೇ ಜನರು. ತಿಳಿದುಕೊಳ್ಳುವವರೆ ಸ್ವಲ್ಪ ಜನರಾದ ಮೇಲೆ ಅದರಂತೆ ನಡೆಯುವವರಂತೂ ಸ್ವಲ್ಪಜನರೆಂಬುದನ್ನು ಹೇಳಲೇಬೇಕಾಗಿಲ್ಲ. ಆದರೆ ಯಾರಿಗೆ ಅರಿತುಕೊಳ್ಳುವಂತಹ ಬುದ್ಧಿ ಸಾಮರ್ಥ್ಯವಿದೆಯೋ ಅವರು ಕೂಡಾ ಬುದ್ಧನ ವಿಷಯದಲ್ಲಿ ತಪ್ಪುತಿಳುವಳಿಕೆಯುಳ್ಳವರಾಗಿ ಈ ಮಹಾತ್ಮನ ಅನೇಕ ಶ್ರೇಷ್ಠತರವಾದ ತತ್ವಗಳನ್ನುಪೇಕ್ಷಿಸುವುದು ಶೋಚನೀಯವಾದುದಲ್ಲವೇ?

ಭಗವಾನ್ ಬುದ್ಧದೇವನ ವಿಷಯದಲ್ಲಿರುವ ದುರಭಿಪ್ರಾಯವು ನಿವಾರಣೆಯಾಗಿ ಆತ್ಮೋನ್ನತಿಗೆ ಆ ಮಹಾತ್ಮನ ಉಪದೇಶಗಳು ಸಹಾಯವಾಗುವಂತೆ ಅವುಗಳನ್ನು ಪ್ರೇಮದೃಷ್ಟಿಯಿಂದ ನೋಡಿ ಅರಿತುಕೊಳ್ಳುವ ಸದ್ಬುದ್ಧಿಯು ಸಕಲರಲ್ಲಿಯೂ ಉಂಟಾಗಲಿ! ಅಹಿಂಸಾತತ್ವವು ಪುನಃ ಪ್ರಪಂಚದಲ್ಲಿ ವ್ಯಾಪಿಸಲಿ! ಪ್ರಪಂಚವನ್ನು ಮುಸುಕಿರುವ ಪಶುಬಲವೆಂಬ ಕಾರ್ಗತ್ತಲೆಯು ಜಾಗ್ರತೆ ನಿವಾರಣೆಯಾಗಿ ಆತ್ಮಪ್ರಭೆಯಲ್ಲಿ ಸಕಲರೂ ಸುಖಶಾಂತಿಗಳನ್ನನುಭವಿಸಲಿ.

ಬುದ್ಧ ಬೋಧೆ

ಭಗವಾನ್ ಬುದ್ಧದೇವನ **"ಧಮ್ಮಪದ"** ಎಂಬ ಗ್ರಂಥವನ್ನು ಪರಲೋಕವಾಸಿಗಳಾದ ಆಶ್ವಥ ನಾರಾಯಣಶಾಸ್ತ್ರಗಳವರು ಕನ್ನಡ ಭಾಷೆಗೆ ಪರಿವರ್ತಿಸಿದ್ದಾರಷ್ಟೆ, ಅದರಲ್ಲಿಯ ಕೆಲವು ವಾಕ್ಯಗಳನ್ನು ಇದರಡಿಯಲ್ಲಿ ವಿವರಿಸಿದೆ.

(೧) ಯಾವ ಮನುಷ್ಯನಾದರು ದುರಭಿಪ್ರಾಯದಿಂದ ಒಂದು ಕ್ರೂರವಾದ ಮಾತನ್ನಾಡಿದರಾಗಲಿ ಅಥವಾ ಒಂದು ಕ್ರೂರವಾದ ಕೃತ್ಯವನ್ನು ಮಾಡಿದರಾಗಲಿ ಗಾಡಿಯನ್ನು ಎಳೆದುಕೊಂಡು ಹೋಗುವ ಎತ್ತಿನ ಕಾಲುಗಳ ಹಿಂದೆಯೇ ಆ ಗಾಡಿಯ ಚಕ್ರವು ಹೇಗೆ ಹೋಗುತ್ತದೆಯೋ ಹಾಗೆಯೇ ಆ ಮಾತಿನ ಮತ್ತು ಕೃತ್ಯದ ಸಂಗಡವೇ ಅವುಗಳಿಗೆ ಸರಿಯಾದ ದುಃಖವೂ ಹಿಂಬಾಲಿಸುತ್ತದೆ. ಮತ್ತು ಯಾವ ಮನುಷ್ಯನಾದರೂ ಒಳ್ಳೆಯ ಅಭಿಪ್ರಾಯದಿಂದ ಒಂದು ಒಳ್ಳೆಯ ಮಾತನ್ನಾಡಿದರಾಗಲಿ ಅಥವಾ ಒಂದು ಒಳ್ಳೆಯ ಕೃತ್ಯವನ್ನು ಮಾಡಿದರಾಗಲಿ ನೆಳಲು ಮನುಷ್ಯನ ದೇಹವನ್ನು ಬಿಡದೆ ಹೇಗೆ ಹಿಂಬಾಲಿಸುತ್ತದೆಯೋ ಹಾಗೆಯೇ ಆ ಮಾತಿನ ಮತ್ತು ಕೃತ್ಯದ ಜೊತೆಯಲ್ಲಿಯೇ ಅವುಗಳಿಗನುಸಾರವಾದ ಸುಖವೂ ಹಿಂಬಾಲಿಸುತ್ತದೆ.

(೨) ಅವನು ನನ್ನನ್ನು ಬೈದನು, ಅವನು ನನ್ನನ್ನು ಹೊಡೆದರು, ಅವನು ನನ್ನನ್ನು ಸೋಲಿಸಿದನು, ಅವನು ನನ್ನ ವಸ್ತುವನ್ನು ಅಪಹರಿಸಿದನು ಎಂಬ ಯೋಚನೆಗಳಿಂದ ಯಾವಾತನು ನಿರಂತರದಲ್ಲಿಯೂ ಕೊರಗುತ್ತಿರುವನೋ ಅಂಥವನನ್ನು ದ್ವೇಷವು ಎಂದಿಗೂ ಬಿಡುವುದಿಲ್ಲ.

ಆದರೆ ಯಾರು ಇಂತಹ ಯೋಚನೆಗಳಿಮದ ನಿವೃತ್ತರಾಗಿದ್ಧಾರೆಯೋ ಅಂಥವರನ್ನು ದ್ವೇಷವು ಎಂದಿಗೂ ಅಂಟುವುದಿಲ್ಲ. ಏಕೆಂದರೆ; ದ್ವೇಷವು ದ್ವೇಷದಿಂದ ಎಂದಿಗೂ ಶಾಂತವಾಗದೆ ಅದು ವಿಶ್ವಾಸದಿಂದ ಶಾಂತವಾಗುವುದು. ಇದೇ ಸನಾತನ ಧರ್ಮವು.

(೩) ದ್ವೇಷವುಳ್ಳ ಮನುಷ್ಯನು ತನ್ನ ದ್ವೇಷಿಗೆ ಮಾಡುವ ಕೆಡಕು, ಮತ್ತು ಶತ್ರುತ್ವವುಳ್ಳವನು ತನ್ನ ಶತ್ರತ್ವವುಳ್ಳವನು ತನ್ನ ಶತ್ರುವಿಗೆ ಮಾಡುವ ಕೆಡಕು, ಇವುಗಳಿಗಿಂತಲೂ ದುರ್ಮಾರ್ಗದಲ್ಲಿ ಗಮಿನಿಸುವ ಮನಸ್ಸುಳ್ಳವನ ಕೆಡಕು ಬಹು ಅಪಾಯಕರವಾಗಿರುವುದು. ದುರ್ಮಾರ್ಗಿಯ ಇತರರಿಗೆ ಕಂಟಕನಾಗುವುದಲ್ಲದೆ ತನ್ನ ನಾಶಕ್ಕೂ ತಾನು ಕಾರಣನಾಗುವನು.

(೪) ಮನುಷ್ಯನಿಗೆ, ಆತನ ತಾಯಿ, ತಂದೆ, ಬಂಧುಗಳೇ ಮುಂತಾದ ಹಿತಚಿಂತಕರು ಮಾಡುವ ಉಪಕಾರಕ್ಕಿಂತಲೂ ಸನ್ಮಾರ್ಗದಲ್ಲಿ ಗಮನಿಸುವ ಆತನ ಮನಸ್ಸಿನ ಉಪಕಾರವೇ ಅನರ್ಘ್ಯವಾದುದು. ಸನ್ಮಾರ್ಗಿಯು ಇತರರಿಗೆ ಉಪಕಾರಿಯಾಗುವುದಲ್ಲದೇ ತನ್ನ ನಿರ್ವಾಣಕ್ಕು ತಾನು ಕಾರಣನಾಗುವನು.

(೫) ವಿವೇಕಿಯಾದವನು ಇತರರ ಅವಿವೇಕಕ್ಕಾಗಲಿ ಅಥವಾ ಆಚಾರದುರಾಚಾರಗಳಿಗಾಗಲಿ ಗಮನ ಕೊಟ್ಟು ಅವುಗಳನ್ನು ತಿದ್ದುವುದಕ್ಕೆ ಪ್ರತಿಯಾಗಿ ತನ್ನನ್ನು ತಾನು ತಿದ್ದಿಕೊಳ್ಳಲಿ.

(೬) ಯಾವ ಅವಿವೇಕಿಯು ತನ್ನ ಅವಿವೇಕವನ್ನು ತಿಳಿದುಕೊಳ್ಳುವನೋ ಅವನನ್ನು ಬುದ್ಧಿವಂತನೆಂದೇ ಭಾವಿಸಬೇಕು. ಆದರೆ ಯಾವ ಅವಿವೇಕಿಯೂ ತನ್ನ ಅವಿವೇಕತನವನ್ನೂ ವಿವೇಕವೆಂದು ಭಾವಿಸುವನೋ ಅವನು ನಿಜವಾಗಿಯೂ ಅವಿವೇಕಿಯು.

(೭) ಒಬ್ಬನು ಸಾವಿರಾರು ಸಾರೆ ಸಾವಿರಾರು ಜನರನ್ನು ಯುದ್ಧದಲ್ಲಿ ಜಯಿಸುತ್ತಾನೆ. ಇನ್ನೊಬ್ಬನು ಒಂದೇಸಾರೆ ತನ್ನೊಬ್ಬನನ್ನೇ ಜಯಿಸಿಕೊಳ್ಳುತ್ತಾನೆ. ಈ ಉಭಯರಲ್ಲಿ ಎರಡನೆಯವನೇ ಸರ್ವೋತ್ತಮನಾದ ಜಯಶಾಲಿಯು.

(೮) ಯಾರ ವಿಷಯದಲ್ಲಿಯೂ ಕ್ರೂರವಾದ ಮಾತನ್ನಾಡಿದರು. ಏಕೆಂದರೆ, ಅವರೂ ನಿನಗೆ ಅದೇ ರೀತಿಯಲ್ಲಿ ಉತ್ತರವನ್ನು ಕೊಡುವರು. ಕ್ರೂರವಾದ ಮಾತು ಯಾವಾಗಲೂ ಅಪಾಯಕರವಾದುದಾಗಿದೆ. ಪ್ರಹಾರವು ಪ್ರತಿಪ್ರಹಾರವನ್ನು ತರುವುದು.

(೯) ಮನುಷ್ಯನು ಮೊದಲು ತಾನು ಸನ್ಮಾರ್ಗದಲ್ಲಿ ನಡೆದು ಅನಂತರ ಅನ್ಯರಿಗೆ ಬೋಧಿಸಲಿ, ಈ ಪ್ರಕಾರ ಆಚರಿಸುವಂಥ ವಿವೇಕಿಯು ತೊಂದರೆಯನ್ನು ಹೊಂದಲಾರನು.

(೧೦) ಬಲೆಗೆ ಬಿದ್ದ ಪಕ್ಷಿಗಳು ತಪ್ಪಿಸಿಕೊಂಡು ಹೋಗುವುದು ಹೇಗೆ ಅಪರೂಪವೇ ಹಾಗೆಯೇ ಈ ಪ್ರಪಂಚವು ಅಂಧಕಾರಮಯವೆಂಬುದನ್ನರಿತು ಇದನ್ನು ಬಿಟ್ಟು ಬೆಳಕಿಗೆ ಹೋಗುವವರು ಅಪರೂಪವು.

(೧೧) ಯಾವಾತನು ಸತ್ಯಮಾರ್ಗವನ್ನು ಬಿಟ್ಟು ಅಸತ್ಯವನ್ನಾಡುತ್ತಿರುತ್ತಾನೆಯೋ ಆತನು ಲೋಕದಲ್ಲಿ ಮಾಡದಿದ್ದ ದುಷ್ಕೃತ್ಯವಾವುದೂ ಇಲ್ಲವು.

(೧೨) ಮಹಾತ್ಮನು ದೊರೆಯುವು ದುರ್ಲಭವು. ಆತನು ಎಲ್ಲೆಲ್ಲಿಯೂ ಅವತರಿಸುವುದಿಲ್ಲ. ಎಲ್ಲಿ ಆ ಮಹಾತ್ಮನು ಅವತರಿಸುವನೋ ಆ ಭೂಮಿಯು ಅಭಿವೃದ್ಧಿಯನ್ನು ಹೊಂದುವುದು.

(೧೩) ಹಾಗಾದರೆ ದ್ವೇಷಿಗಳ ಮಧ್ಯದಲ್ಲಿ ವಾಸವಾಗಿದ್ದರೂ ಮತ್ತು ದ್ವೇಷಿಗಳು ನಮ್ಮನ್ನು ದ್ವೇಷಿಸುತ್ತಿದ್ದರೂ ಅವರನ್ನು ನಾವು ದ್ವೇಷಿಸಿದೆ ಸುಖದಿಂದಿರೋಣ.

(೧೪) ಭಾಗ್ಯದಲ್ಲಿ ಆರೋಗ್ಯಭಾಗ್ಯವೇ ಸರ್ವೋತ್ತಮವಾದುದು. ತೃಪ್ತಿಯೇ ಅನರ್ಘ್ಯವಾದ ಐಶ್ವರ್ಯವು. ನಂಬಿಕೆಯೇ ಸರ್ವೋತ್ತಮವಾದ ಬಂಧುತ್ವವು ಮತ್ತು ನಿರ್ಮಾಣವೇ ಸರ್ವಶ್ರೇಷ್ಠವಾದ ಆನಂದವು.

(೧೫) ಮನುಷ್ಯನು ವಿಶ್ವಾಸದಿಂದ ಕೋಪವನ್ನು, ಶಿಷ್ಯತ್ವದಿಂದ ದುಷ್ಟತ್ವವನ್ನು, ಉದಾರತ್ವದಿಂದ ಕೃಪಣತ್ವವನ್ನು ಮತ್ತು ಸತ್ಯತೆಯಿಂದ ಅಸತ್ಯವನ್ನು ಜಯಿಸಲಿ.

(೧೬) ಪ್ರಾಪಂಚಿಕರಿಂದ ನಿರಂತರದಲ್ಲಿಯೂ ದೂಷಿಸಲ್ಪಟ್ಟವನೇ ಆಗಲಿ ಮುಂದೆಯೂ ಇರುವುದಿಲ್ಲ. ಮತ್ತು ಈಗಲೂ ಇಲ್ಲವು.

(೧೭) ಯಾವಾತನು ತನ್ನ ದೇಹ, ನಾಲಿಗೆ, ಮತ್ತು ಮನಸ್ಸುಗಳನ್ನು ಭದ್ರಪಡಿಸಿ ತನ್ನಾಧೀನದಲ್ಲಿಲಟ್ಟುಕೊಂಡಿರುತ್ತಾನೆಯೋ ಆತನೇ ವಿವೇಕಿಯು.

(೧೮) ಕಬ್ಬಿಣದಿಂದುಂಟಾಗುವ ಮಣ್ಣು ತಾನು ಹುಟ್ಟಿದೊಡನೆಯೇ ಆ ಕಬ್ಬಿಣವನ್ನೇ ಹೇಗೆ ನಾಶಮಾಡುತ್ತದೆಯೋ ಹಾಗೆಯೇ ದುರ್ಮಾರ್ಗಿಯ ದುಷ್ಟತ್ವವು ಆತನನ್ನು ನಾಶಮಾಡುತ್ತದೆ.

(೧೯) ಯಾವಾತನು ಪ್ರಾಣಿಗಳನ್ನು ಹಿಂಸಿಸುತ್ತಾನೆಯೋ, ಅಸತ್ಯವನ್ನಾಡುತ್ತಾನೆಯೋ, ಅಧರ್ಮವಾಗಿ ಅನ್ಯರಿಂದ ಯಾವುದನ್ನಾದರೂ ತೆಗೆದುಕೊಳ್ಳುತ್ತಾನೆಯೋ, ಅನ್ಯ ಸ್ತ್ರೀಯರಲ್ಲಿ ಗಮಿಸುತ್ತಾನೆಯೋ, ಮತ್ತು ಮದ್ಯಾದಿ ಮದ್ಯದ್ರವ್ಯಗಳನ್ನು ಸೇವಿಸುತ್ತಾನೆಯೋ ಆತನು ಈ ಜನ್ಮದಲ್ಲಿಯೇ ತನ್ನ ನಾಶಕ್ಕೆ ತಾನೇ ಕಾರಣನಾಗುವನು.

(೨೦) ಮನುಷ್ಯನು ಇತರರ ತಪ್ಪನ್ನು ಕಂಡುಹಿಡಿಯುವುದರಲ್ಲಿಯೇ ನಿರತನಾಗಿದ್ದಲ್ಲಿ ಆ ಅವಿವೇಕಿಗೆ ಇತರರ ಸುಗುಣಗಳನ್ನು ಕಂಡು ಹಿಡಿದು ಸಂತೋಷಪಡುವ ಯೋಗ್ಯತೆಯೇ ಇಲ್ಲದಂತಾಗಿ ತಾನೂ ದುರ್ಗುಣಿಯಾಗುತ್ತಾನೆ. ಆದಕಾರಣ ಇತರರ ತಪ್ಪನ್ನು ಎಂದಿಗೂ ಎಣಿಸಬಾರದು.

(೨೧) ಯಾವಾತನಲ್ಲಿ ಸತ್ಯತೆ, ಸದ್ವ್ಯಾಪಾರ, ದಯೆ, ಮನೋಸ್ಥೈರ್ಯ, ಸಮಭಾವನೆ, ನಿರ್ಮಲತೆ ಮತ್ತು ಜ್ಞಾನಾದಿಗಳಿವೆಯೋ ಆತನು ಚಿಕ್ಕವನಾಗಿದ್ದರೂ ಜ್ಞಾನವೃದ್ಧರು.

(೨೨) ಯಾವಾತನು ಇತರರನ್ನು ಹಿಂಸಿಸುವುದರ ಮೂಲಕ ತಾನು ಸಂತೋಷ ಪಡುವೆನೆಂದಿಚ್ಚಿಸುವನೋ ಆತನನ್ನು ದ್ವೇಷವು ಎಂದಿಗೂ ಬಿಡುವುದಿಲ್ಲ.

(೨೩) ಮನಸ್ಸನ್ನು ನಿರೋಧಿಸವದಿರುವ ದುಷ್ಟರು ಭಿಕ್ಷಾ ಜೀವಿಗಳಾಗಿರುವುದಕ್ಕಿಂತಲೂ ಕಾದ ಕಬ್ಬಿಣವನ್ನು ಸೇವಿಸುವುದುತ್ತಮವು.

(೨೪) ಜ್ಞಾನವಿದ್ದ ವಿನಾ ಯೋಗವಿಲ್ಲವು. ಯೋಗವಿದ್ ವಿನಾ ಜ್ಞಾನವಿಲ್ಲವು. ಯಾರಿಗೆ ಜ್ಞಾನ ಮತ್ತು ಯೋಗ ಇವೆರಡೂ ಇವೆಯೋ ಅವರಿಗೆ ನಿರ್ವಾಣವು ಸಮೀಪದಲ್ಲಿಯೇ ಇರುವುದು.

(೨೫) ಮನುಷ್ಯನು ಜಟೆಯನ್ನು ಧರಿಸುವುದರಿಂದಾಗಲಿ ಇಲ್ಲವೆ ತನ್ನ ಹುಟ್ಟುವಿಕೆಯಿಂದಾಗಲಿ ಮತ್ತು ತನ್ನ ವಂಶದಿಂದಾಗಲಿ ಇಲ್ಲವೆ ಅಗ್ನಿ ಹೋತ್ರಾದಿಗಳಿಂದಾಗಲಿ ಎಂದಿಗೂ ಬ್ರಾಹ್ಮಣವೆನಿಸಿಕೊಳ್ಳಲಾರನು. ಆದರೆ ಯಾವಾತನಲ್ಲಿ ಸತ್ಯ. ಅಹಿಂಸಾದಿ ಸದ್ಗುಣಗಳಿವೆಯೋ ಆತನೇ ನಿಜವಾದ ಮಹಾತ್ಮನು ಮತ್ತು ಆತನೇ ನಿಜವಾದ ಬ್ರಾಹ್ಮಣನು.

(೨೬) ಮನುಷ್ಯನು ತನ್ನ ಮಾತಾಪಿತೃಗಳ ಕುಲಗೋತ್ರಗಳಿಂದಾಗಲಿ ಅಥವಾ ವಿದ್ಯಾಡಂಬರದಿಂದಾಗಲಿ ಇಲ್ಲವೇ ಐಶ್ವರ್ಯದಿಂದಾಗಲಿ ಬ್ರಾಹ್ಮಣನಾಗಲಾರನು. ಆದರೆ ಯಾವಾತನು ಯಾವುದರಲ್ಲಿಯೂ ಮಮತೆಯನ್ನಿಟ್ಟಿಲ್ಲವೋ ಆತನು ದರಿದ್ರನಾಗಿದ್ದರೂ ಆತನನ್ನೇ ನಿಜವಾದ ಬ್ರಾಹ್ಮಣನೆಂದು ಕರೆಯುವೆನು.

(೨೭) ಯಾವಾತನು ಬಲವಾದ ಅಥವಾ ದುರ್ಬಲವಾದ ಯಾವ ಪ್ರಾಣಿಯನ್ನೇ ಆಗಲಿ ಹಿಂಸಿಸುವುದಿಲ್ಲವೋ ಅಥವಾ ಕೊಲ್ಲುವುದೇ ಆಗಲಿ ಇಲ್ಲವೆ ಕೊಲ್ಲಿಸುವುದೇ ಆಗಲಿ ಮಾಡುವುದಿಲ್ಲವೋ ಆತನನ್ನೇ ನಿಜವಾದ ಬ್ರಾಹ್ಮಣನೆಂದು ಕರೆಯುವೆನು.

(೨೮) ಯಾವಾತನು ಕೋಪಿಗಳ ವಿಷಯದಲ್ಲಿ ತಾಳ್ಮೆಯನ್ನು ಮತ್ತು ದುಷ್ಟರ ವಿಷಯದಲ್ಲಿ ನಮ್ರಭಾವವನ್ನು ತೋರಿಸುವುದಲ್ಲದೆ ಆಶೆಗಾರರು ಆಶೆಪಡಿಸಿದರು ಆಶೆಯನ್ನು ಹೊಂದದೆ ಇರುತ್ತಾನೆಯೋ ಆತನನ್ನೇ ನಿಜವಾದ ಬ್ರಾಹ್ಮಣನೆಂದು ಕರೆಯುವೆನು.

(೨೯) ಮನುಷ್ಯನು ವಿಪರೀತ ಮಾತನಾಡುವ ಮಾತ್ರದಿಂದ ವಿದ್ವಾಂಸನೆನಿಸನು. ಆದರೆ ಯಾವಾತನು ತಾಳ್ಮೆಯುಳ್ಳವನಾಗಿಯೂ ಮಾತ್ಸರ್ಯ ಭೀತಿಗಳಿಂದ ವರ್ಜಿತನಾಗಿಯೂ ಇರುತ್ತಾನೆಯೋ ಆತನೇ ವಿದ್ವಾಂಸನು.

(೩೦) ನಾಚಿಕೆಯಿಲ್ಲದವನಿಗೂ ಕಾಗೆಗೂ ದುರ್ಮಾರ್ಗಿಗೂ ಪರನಿಂದಕನಿಗೂ ವಾಚಾಳಿಗೂ ಮತ್ತು ಅವಿವೇಕಿಗೂ ಈ ಲೋಕದಲ್ಲಿ ಜೀವಿಸುವುದು ಅತಿ ಸುಲಭವು.

(೩೧) ಆದರೆ ಮರ್ಯಾದೆಯುಳ್ಳವನಿಗೂ ಮೌನವೃತ್ತಿಯುಳ್ಳವನಿಗೂ ನಿರ್ದೋಷಿಗೂ ಬುದ್ಧಿಶಾಲಿಗೂ ಸಾತ್ವಿಕನಿಗೂ ಮತ್ತು ಸುಗುಣನಿಗೂ ಈ ಲೋಕದಲ್ಲಿ ಜೀವಿಸುವುದು ಅತೀ ಕಷ್ಟವು.

(೩೨) ಸತ್ಯವನ್ನಾಡು, ಕ್ರೋಧಕ್ಕೊಳಗಾಗಬೇಡ, ಯಾರಾದರೂ ನಿನ್ನ ಸಹಾಯವನ್ನಪೇಕ್ಷಿಸಿದರೆ ಸಾಧ್ಯವಾದಷ್ಟು ಮಾಡು. ಈ ಮೂರು ಮಾರ್ಗಗಳನ್ನು ಅನುಸರಿಸಿದ್ದೇ ಆದರೆ ನೀನು ಖಂಡಿತವಾಗಿಯೂ ದೇವರೇ ಆಗುವಿ.

(೩೩) ಎಲೈ ಮನುಷ್ಯನೇ, ನಿನ್ನನ್ನು ಶಿಕ್ಷಿಸುವರೆಂದರೆ ಹೇಗೆ ನಡುಗುವಿಯೋ ಮತ್ತು ನಿನ್ನನ್ನು, ಕೊಲ್ಲುವರೆಂದರೆ ಹೇಗೆ ಪ್ರಾಣದಾಶೆಯಿಂದ ಭಯಪಡುವಿಯೋ ಹಾಗೆಯೇ ಇತರರೆಂಬುದನ್ನರಿತು ಯಾರನ್ನೂ ಹಿಂಸಿಸಬೇಡ ಅಥವಾ ಕೊಲ್ಲಲೂ ಬೇಡ.

(೩೪) ಮನುಷ್ಯನು ವ್ಯಭಿಚಾರಿಯಾಗಿಯೂ, ದುಷ್ಟನಾಗಿಯೂ ನೂರುವರ್ಷ ಜೀವಿಸುವುದಕ್ಕಿಂತಲೂ ಸನ್ಮಾರ್ಗಿಯಾಗಿಯೂ ವಿವೇಕಿಯಾಗಿಯೂ ಒಂದೇ ದಿವಸ ಜೀವಿಸುವುದತ್ತಮವು.

(೩೫) ಪಾಯಸವನ್ನು ಸೌಟಿನಿಂದ ನಿರಂತರದಲ್ಲಿ ನೀಡುತ್ತಿದ್ದರೂ ಆ ಸೌಟಿಗೆ ಆ ಪಾಯಸದ ಮಾಧುರ್ಯವು ಹೇಗೆ ತಿಳಿಯುವುದಿಲ್ಲವೋ ಹಾಗೆಯೇ ಅವಿವೇಕಿಯು ಜ್ಞಾನಿಯ ಸಂಗಡ ತನ್ನ ಜೀವಿತಕಾಲವನ್ನೆಲ್ಲಾ ಕಳೆದರೂ ಸತ್ಯವಸ್ತುವು ಅವನಿಗೆಂದಿಗೂ ಗೋಚರವಾಗುವುದಿಲ್ಲ.

(೩೬) ಯಾವಾತನು ಇಂದ್ರಿಯ ಸೌಖ್ಯದಲ್ಲಿ ಗಮನವಿಲ್ಲದಿರುತ್ತಾನೆಯೋ ಯಾವಾತನ ಮನಸ್ಸು ವಿಕಲ್ಪವನ್ನು ಹೊಂದುವುದಿಲ್ಲವೋ ಮತ್ತು ಯಾವಾತನೂ ಸುಖದುಃಖಗಳನ್ನು ದೂರೀಕರಿಸಿದ್ದಾನೆಯೋ ಅಂತಹ ಜಾಗ್ರತ ಪುರುಷನಿಗೆ ಯಾವ ಭಯವೂ ಇಲ್ಲವು.

(೩೭) ಸರ್ವ ಪುಷ್ಪಗಳ ಪರಿಮಳಕ್ಕಿಂತಲೂ ಪರೋಪಕಾರಿಯಾದ ಸನ್ಮಾರ್ಗಿಯು ಯಶೋಪರಿಮಳವು ಸರ್ವೋತ್ತಮವಾದುದಲ್ಲದೆ ದೇವಲೋಕದಲ್ಲಿಯೂ ಕೂಡ ವ್ಯಾಪಿಸುವುದು.

(೩೮) ಯಾರು ತಮ್ಮ ಯೌವನದಲ್ಲಿ ಬ್ರಹ್ಮಚರ್ಯವನ್ನನುಸರಿಸದೆ ಮನಸ್ವಿ ವಿಹರಿಸುವರೋ ಮತ್ತು ಇತರರನ್ನು ವಂಚಿಸಿ ದ್ರವ್ಯಾರ್ಜನೆಯನ್ನು ಮಾಡುವರೋ ಅವರು ಹಾರುವುದಕ್ಕೆ ಶಕ್ತಿಯಿಲ್ಲದ ಬಕಪಕ್ಷಿಯ ಮೀನುಗಳಿದ್ದ ಕುಂಟೆಯ ಬಳಿಯಲ್ಲಿ ಕಾದು ಹೇಗೆ ಸಾಯುವುದೋ ಹಾಗೆಯೇ ತಮ್ಮ ವಾರ್ಧಿಕ್ಕದಲ್ಲಿ ದಾರಿದ್ರ್ಯ, ದೌರ್ಬಲ್ಯ, ಮತ್ತು ರೋಗಗಳಿಂದ ಸಂಕಟಪಡುತ್ತ ಕೊನೆಗೆ ಘೋರಯಾತನೆಯನ್ನನುಭವಿಸಿ ಸಾಯುವರು.

(೩೯) ನಿನ್ನಿಂದಲೇ ನಿನ್ನನ್ನು ಉದ್ದರಿಸಿಕೊ, ನಿನ್ನನ್ನು ನೀನು ಪರೀಕ್ಷಿಸು. ಈ ರೀತಿ ನಿನ್ನನ್ನು ನೀನು ಭದ್ರಪಡಿಸಿಕೊಂಡು ನೀನಾರೆಂಬುದನ್ನು ವಿಚಾರಿಸಿದಲ್ಲಿ, ಭಿಕ್ಷುವೇ, ನೀನು ನಿಜವಾಗಿಯೂ ಸುಖಿಯಾಗುವೆ, ಏಕೆಂದರೆ, ನಿನಗೆ ನೀನೇ ದೇವರಾಗುವೆ. ನಿನಗೆ ನೀನೇ ಆಧಾರವು ಆದ ಪ್ರಯುಕ್ತ ಧನಿಕನು ತನ್ನ ವಾಹನಾಶ್ವಗಳನ್ನು ಬಂಧಿಸಿ ಕಾಪಾಡುವಂತೆ ನಿನ್ನನ್ನು ನೀನೇ ಬಂಧಿಸಿ (ನಿನ್ನ ಇಂದ್ರಿಯಗಳನ್ನು ಜಯಿಸಿ) ಕಾಪಾಡಿಕೊ.

(೪೦) ಯಾರನ್ನೂ ನಿಂದಿಸಬೇಡ, ಯಾರನ್ನೂ ಹಿಂಸಿಸಬೇಡ, ಸತ್ಯಧರ್ಮವನ್ನತಿಕ್ರಮಿಸಬೇಡ, ಮಿತಾಹಾರದಲ್ಲಿರು ಮತ್ತು ಒಬ್ಬನೇ ಮಲಗು, ಒಬ್ಬನೇ ಕುಳಿತುಕೊ, ನಿರಂತರದಲ್ಲಿಯೂ ಉತ್ತಮ ಯೋಚನೆಯಲ್ಲಿರು. ಇವೇ ಜ್ಞಾನಿಯ ಬೋಧೆ.

❖❖

ವೀರಶೈವ ವಿದ್ಯಾಲಯದ ಗ್ರಂಥಮಾಲೆಯ ಸಂಖ್ಯೆ : ೧

॥ಓಂ॥

ವೀರಶೈವ ಮತಬೋಧೆ

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

ಈ ಗ್ರಂಥದ ಸರ್ವಾಧಿಕಾರವು

ವೀರಶೈವ ವಿದ್ಯಾಲಯ ಸಂಸ್ಥೆಗೆ ಸಂಬಂಧಪಟ್ಟಿದೆ

ಕ್ರಿ. ಶ. ೧೯೩೧ ಶಾಶ. ೧೮೫೩

ಈ ಪುಸ್ತಕವು ಶ್ರೀ ಬಸವಲಿಂಗ ಮುದ್ರಣ ಮಂದಿರದಲ್ಲಿ
ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಆಲಮಟ್ಟಿ ವೀರಶೈವ ವಿದ್ಯಾಲಯದಲ್ಲಿ
ಹರ್ಡೇಕರ ಮಂಜಪ್ಪನವರಿಂದ
ಪ್ರಕಟಿಸಲ್ಪಟ್ಟಿತು.

ಕೈ. ಪೂಜ್ಯ ಶ್ರೀ ದುಂಡಯ್ಯಸ್ವಾಮಿ ನಂದಿಮಠ
ಗೋಕಾಕ



ಈ ಮಹಾಶಯರು ತಮ್ಮ ಅಂತ್ಯಕಾಲದಲ್ಲಿ ವೀರಶೈವ ವಿದ್ಯಾಲಯಕ್ಕೆ ೫೦೦ ರೂಪಾಯಿಗಳನ್ನು ಸಮರ್ಪಿಸಿದುದರಿಂದ ಇವರಲ್ಲಿದ್ದ ಉಜ್ವಲವಾದ ಧಾರ್ಮಿಕ ಜ್ಞಾನ ಪ್ರಸಾರಣೇಚ್ಛೆಯ ಸ್ಮರಣಾರ್ಥವಾಗಿ ಈ ಪುಸ್ತಕವು ಪ್ರಕಟಿಸಲ್ಪಟ್ಟಿದೆ.

*

ಪೀಠಿಕೆ

ವೀರಶೈವ ಬಾಲಕರಿಗೆ ನಮ್ಮ ಮತದ ಕೆಲವು ಮುಖ್ಯ ಸಂಗತಿಗಳಾದರೂ ಮೊದಲು ತಿಳಿದಿರಬೇಕಾದುದು ಅಗತ್ಯವಾದುದಾಗಿದೆ. ಆದರೆ ಆ ಪ್ರಕಾರ ತಿಳಿಸುವ ಪುಸ್ತಕಗಳು ಮಾತ್ರ ಈ ವರೆಗೂ ಇಲ್ಲದಿದ್ದುದರಿಂದ ಈ ಪುಸ್ತಕವನ್ನು ಬಾಲಕರಿಗಾಗಿಯೇ ಬರೆದು ಆದಷ್ಟು ಸುಲಭವಾದ ಭಾಷೆಯಲ್ಲಿ ವೀರಶೈವಮತದ ಮುಖ್ಯ ಮುಖ್ಯ ಸಂಗತಿಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾಗಿದೆ.

ಈ ಪುಸ್ತಕವನ್ನು ಧರ್ಮಾಭಿಮಾನಿಗಳ ಸಹಾಯದಿಂದ ಶಾಲೆಗಳಲ್ಲಿಯ ವೀರಶೈವ ಬಾಲಕರು ಓದುವಂತೆ ವ್ಯವಸ್ಥೆಯಾಗಬೇಕು. ಮನೆಗಳಲ್ಲಿಯೂ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಇದನ್ನು ಓದಿಸಬೇಕು. ಈ ಪ್ರಕಾರ ವೀರಶೈವ ಮತಾಭಿಮಾನಿಗಳು ಪ್ರಯತ್ನಿಸಿದರೆ ಎಷ್ಟೊ ಪ್ರಯೋಜನವಾಗಬಹುದು.

ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳುವವರಿಗೋಸ್ಕರವಾಗಿ **ವೀರಶೈವ ಮತತತ್ವ** ಮತ್ತು **ವೀರಶೈವ ತತ್ವಜ್ಞಾನ** ಎಂಬೆರಡು ಪುಸ್ತಕಗಳು ಪ್ರಕಟವಾಗುವುವು.

ಬಸವಜಯಂತಿ — **ಹರ್ಡೇಕರ ಮಂಜಪ್ಪ**

ತಾ. ೨೧.೪-೩೧ — ಆಲಮಟ್ಟಿ

ಓಂ

ವೀರಶೈವ ಮತಬೋಧೆ

ಧಾರ್ಮಿಕ ಶಿಕ್ಷಣವೇಕೆ ಬೇಕು?

ತಮ್ಮಾ ಇತ್ತಬಾ, ನಿನಗೆ ತಿಳುಹಿಸತಕ್ಕ ಕೆಲವು ಸಂಗತಿಗಳಿವೆ. ನೀನು ಈ ವರೆಗೆ ಓದು ಬರಹಗಳನ್ನು ತಕ್ಕಮಟ್ಟಿಗೆ ಕಲಿತಿರುವಿ. ಕೊಡುಕೊಳ್ಳುವ ಲೆಕ್ಕವೂ ನಿನಗೆ ಸ್ವಲ್ಪ ತಿಳಿದಿದೆ. ನೀನು ವಾಸವಾಗಿರುವ ಪ್ರಾಂತದ ಚರಿತ್ರೆಯೂ ನಿನಗೆ ಸಾಧಾರಣವಾಗಿ ಗೊತ್ತಾಗಿದೆ. ಇಷ್ಟೆಲ್ಲ ಸಂಗತಿಗಳು ನಿನಗೆ ಸಾಧಾರಣವಾಗಿ ಗೊತ್ತಾಗಿದೆ. ಇಷ್ಟೆಲ್ಲ ಸಂಗತಿಗಳು ತಿಳಿದುದರಿಂದ "ಜಾಣಾದೆನೆಂದು" ನೀನು ಭಾವಿಸಿರುವಿಯೇನು? ಅದು ಸರಿಯಲ್ಲ.

ನಾವು ಈ ಲೋಕದಲ್ಲಿ ಇಂಥ ಎಷ್ಟು ಸಂಗತಿಗಳನ್ನು ತಿಳಿದಕೊಂಡರೂ ನಾವು ನಮ್ಮ ಮತದ ಸಂಗತಿಗಳನ್ನು ತಕ್ಕಮಟ್ಟಿಗಾದರೂ ತಿಳಿದುಕೊಳ್ಳದಿದ್ದರೆ ನಾವು ದಡ್ಡರೇ ಸರಿ. ನಮ್ಮ ಮತದ ತಿಳುವಳಿಕೆಯೇ ನಮಗಾದಂತಹ ವಿದ್ಯೆಯನು ನಾವು ಎಷ್ಟು ಕಲಿತರೂ ಅದೆಲ್ಲಾ ಹೊಟ್ಟೆ ಹೊರೆದುಕೊಳ್ಳುವ ವಿದ್ಯೆಯೇ ಸರಿ.

ತಮ್ಮಾ ಮನುಷ್ಯರಾದ ನಾವು ಬೇರೆ ಪ್ರಾಣಿಗಳಂತೆ ಕೇವಲ ಹೊಟ್ಟೆಗಾಗಿಯೇ ಬದುಕಿರುವೆನೇನು? ಇಲ್ಲ. ನಾವು ಈ ಲೋಕದಲ್ಲಿರುವ ವರೆಗೆ ಮಾತ್ರ ಉಂಡುಟ್ಟು ಸುಖದಿಂದ ಕಾಲಕಳೆದರೆ ತೀರಲಿಲ್ಲ. ನಾವು ಈ ಲೋಕವನ್ನು ಬಿಟ್ಟು ಪಾರಲೋಕಕ್ಕೆ ಹೋದಮೇಲೆಯೂ ಸುಖಶಾಂತಿಗಳಲ್ಲಿರಬೇಕಾಗಿದೆ. ಆದುದರಿಂದ ಸತ್ತ ಮೇಲೆಯೂ ಸುಖವಾಗಿರಲು ಬರುವಂತೆ ಈಗಲೇ ನಡೆದುಕೊಳ್ಳಬೇಕು. ಆ ಪರಲೋಕದ ಸುಖ ಸಂಪಾದನೆಗಾಗಿಯೇ ನಾವು ಈಗ ಈ ಲೋಕದಲ್ಲಿರಬೇಕಾಗಿದೆ.

ಮುಂದಾಲೋಚನೆಯಿಲ್ಲದ ನೊಣಗಳು ಬೇಸಿಗೆಯ ಕಾಲದಲ್ಲಿ ತಮ್ಮ ಹೊಟ್ಟೆಗೆ ಕೂಡಿಟ್ಟುಕೊಳ್ಳದಿದ್ದುದರಿಂದ ಮಳೆಗಾಲದಲ್ಲಿ ಬಹು ಕಷ್ಟಪಡುವುದಿಲ್ಲವೇ? ಇರುವೆಗಳಾದರೋ, ಬಹು ಜಾಣ ಪ್ರಾಣಿಗಳು. ಅವು ತಮಗೆ ಮಳೆಗಾಲದಲ್ಲಿ ಹೊಟ್ಟೆಗೆಬೇಕೆಂದು ಮೊದಲೇ ಕೂಡಿಟ್ಟುಕೊಳ್ಳುತ್ತವೆ. ಆದುದರಿಂದ ಅವು ಮಳೆಗಾಗಲದಲ್ಲಿಯೂ, ಸುಖದಿಂದಲೇ ಇರುವುದಿಲ್ಲವೆ? ನಾವು ಕೂಡಾ ಈ ಲೋಕದಲ್ಲಿರುವಾಗಲೇ ಪರಲೋಕ ಸುಖಕ್ಕೆ ಬೇಕಾಗುವ ಸಂಗತಿಗಳನ್ನು

ಸಂಪಾದಿಸಿಕೊಂಡರೆ ಅಲ್ಲಿ ಆಗ ಸುಖಶಾಂತಿಗಳಲ್ಲಿರುವೆವು. ಇಲ್ಲದಿದ್ದರೆ ನೊಣಗಳು ಮಳೆಗಾಲದಲ್ಲಿ ಕಷ್ಟಪಡುವಂತೆ ನಾವು ಮರಣಹೊಂದಿದ ನಂತರ ದುಃಖಪಡಬೇಕಾಗುವುದು. ಸೋಮಾರಿಗಳೂ ದಡ್ಡ ಪ್ರಾಣಿಗಳೂ ಆದ ನೊಣಗಳು ತಮಗೆ ಮಳೆಗಾಲವೇ ಬೇಡವೆಂದರೆ ಅದು ಬಾರದೇ ಬಿಡುವುದೇ? ಇಲ್ಲವೇ ಇಲ್ಲ. ಅದರಂತೆಯೇ ಕೇವಲ ಹೊಟ್ಟೆ ಹೊರೆದುಕೊಳ್ಳುವುದಕ್ಕಾಗಿ ಬದುಕಿನ ಮನುಷ್ಯರು ಸತ್ತಮೇಲೆ ತಮಗೆ ಪರಲೋಕವು ಬೇಡವೆಂದರೆ ಅದು ಅವರಿಗೆ ಬಿಡುವುದೇ? ಅದೆಂದಿಗೂ ಬಿಟ್ಟದ್ದಲ್ಲ. ಆದಕಾರಣ ತಮ್ಮಾ, ಮುಂದೆ ಕಷ್ಟ ಬರಬಾರದೆಂದಿದ್ದರೆ ಈಗಲೇ ನಿನ್ನ ಮತ ಧರ್ಮಗಳನ್ನು ಸ್ವಲ್ಪವಾದರೂ ತಿಳಿದುಕೊಂಡು ಆ ಪ್ರಕಾರ ನಡೆದುಕೋ. ಆ ಸಂಗತಿಗಳನ್ನು ತಿಳಿದುಕೊಳ್ಳಲು ಇದು ನಿನಗೆ ಒಳ್ಳೆಯ ಸಮಯವಾಗಿದೆ. ಈ ಚಿಕ್ಕತನದಲ್ಲಿ ನಿನಗೆ ಈ ಸಂಗತಿಗಳು ಗೊತ್ತಾಗಿ ನಿನ್ನ ಆಚರಣೆಯಲ್ಲಿ ಬಂದರೆ ಅವು ನಿನ್ನಲ್ಲಿ ಸ್ಥಿರವಾಗುತ್ತವೆ. ಆ ಮೇಲೆ ನೀನು ಹೆಚ್ಚಿನ ಸಂಗತಿಗಳನ್ನು ಅರಿತುಕೊಳ್ಳಲು ಅಪೇಕ್ಷಿಸುವಿ. ಆ ನಿನ್ನ ಅಪೇಕ್ಷೆಯೇ ನಿನಗೆ ಹೆಚ್ಚಿನ ತಿಳುವಳಿಕೆಯನ್ನುಂಟುಮಾಡುವುದು. ಆ ತಿಳುವಳಿಕೆಯು ನಿನ್ನ ಇಹಲೋಕದ ಸುಖಕ್ಕೂ ಪಾರಲೋಕದ ಶಾಂತಿಗೂ ಕಾರಣವಾಗುವುದು.

ನಮ್ಮ ಧರ್ಮವಾವುದು ?

ತಮ್ಮಾ, ನಾನು ಹೇಳುವುದನ್ನು ಮನಸ್ಸುಗೊಟ್ಟು ಕೇಳು. ಈ ಲೋಕದಲ್ಲಿ ವೈದಿಕ, ಕ್ರೈಸ್ತ ಮುಸಲ್ಮಾನ ಮೊದಲಾದ ಅನೇಕ ಧರ್ಮಗಳಿವೆ. ಪ್ರತಿಯೊಂದು ಧರ್ಮದಲ್ಲಿಯೂ ಅನೇಕ ಮತಗಳಿವೆ. ಆಯಾಯ ಮತಧರ್ಮದವರು ತಮ್ಮ ತಮ್ಮ ಮತಧರ್ಮಗಳನ್ನು ಸರಿಯಾಗಿ ತಿಳಿದುಕೊಂಡು ನಡೆದರೆ ಎಲ್ಲರಿಗೂ ಕ್ಷೇಮ, ನಾವು ಈ ಕಾಲದಲ್ಲಿ ನಮ್ಮ ಮತದ ಸಂಗತಿಗಳನ್ನು ಮಾತ್ರವೇ ತಿಳಿದುಕೊಂಡರೆ ಸಾಲದು. ನಮ್ಮ ನೆರೆಹೊರೆಯವರ ಮತಧರ್ಮಗಳನ್ನು ಅವರ ಭಾವನೆಯಂತೆ ಸರಿಯಾಗಿ ತಕ್ಕಮಟ್ಟಿಗಾದರೂ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಂಡಾಗಲೇ ಅವರ ವಿಷಯದಲ್ಲಿ ನಮಗೆ ಪ್ರೇಮಾದರಗಳುಂಟಾಗುವವು. ಇಲ್ಲದಿದ್ದರೆ ನಾವು ನಮ್ಮ ಮತದಂತೆ ನಡೆಯಲು ಸಮರ್ಥರಾಗುವುದಿಲ್ಲ. ಆದಕಾರಣ ನೆರೆಹೊರೆಯವರ ಮತಧರ್ಮಗಳನ್ನು ತಿಳಿದುಕೊಳ್ಳುವುದು. ಈ ಕಾಲದಲ್ಲಂತೂ ಅಗತ್ಯ. ಆ ಮುಂಚೆ ನಮ್ಮ ಮತ ಧರ್ಮಗಳನ್ನು ನಾವು ತಿಳಿದುಕೊಂಡಿರಬೇಕು.

ನಿನಗೆ ಯಾರಾದರೂ ನೀನು ಯಾವ ಧರ್ಮದವನೆಂದು ಕೇಳಿದರೆ ನೀನು ಸರಿಯಾದ ಉತ್ತರವನ್ನು ಹೇಳಲಾರಿ. ಏಕೆಂದರೆ, ನಿನಗೆ ಧರ್ಮದ ಹೆಸರೇ ಗೊತ್ತಿಲ್ಲ. ನೀನು ಹಿಂದು ಧರ್ಮದವನೆಂದು ಬಹು ಜನರು ಕರೆಯುತ್ತಾರೆ. ನೀನಾದರೂ ಹಾಗೆಯೇ ತಿಳಿದುಕೊಂಡಿರಬಹುದು. ಹಿಂದು ಎಂಬುದೊಂದು ಧರ್ಮವು ಈ ಲೋಕದಲ್ಲಿ ಇಲ್ಲವೇ ಇಲ್ಲ. ಪರದೇಶದವರು ತಿಳಿದೋ ಅಥವಾ ತಿಳಿಯದೆಯೋ ನಮಗೆ ಹಿಂದುಗಳೆಂದು ಹೇಳಿದರು. ನಾವು ಅದನ್ನೇ ನಮ್ಮ ಹೆಸರೆಂದು ತಿಳಿದುಕೊಂಡೆವು. ನಮ್ಮ ಧರ್ಮಕ್ಕೂ ಅದೇ ಹೆಸರನ್ನು ಹೇಳುತ್ತಾರೆ. ಅದು ಸರಿಯಲ್ಲ. ನಾವು ವೈಧಿಕಧರ್ಮದವರು.

೧೯೦೦ ವರ್ಷಗಳ ಪೂರ್ವದಲ್ಲಿ ಕ್ರಿಸ್ತನೆಂಬ ಮಹಾಸಾಧು ಪುರುಷರು ಪರಲೋಕ ಸುಖಕ್ಕಗಿ ಕೆಲವು ಸಂಗತಿಗಳನ್ನು ತಿಳುಹಿಸಿದನು. ಆತನನ್ನೇ ನಂಬಿಕೊಂಡು ಆತನ ಉಪದೇಶಗಳಂತೆ

ನಡೆಯುವವರಿಗೆ ಕ್ರೈಸ್ತಧರ್ಮದವರೆಂದು ಹೇಳುತ್ತಾರೆ. ಆತನ ಬೋಧನೆಗಳಿಂದ ಕೂಡಿದ ಪುಸ್ತಕಕ್ಕೆ "ಬೈಬಲ್" ಎಂದು ಹೇಳುತ್ತಾರೆ. ಮಹಮ್ಮದನೆಂಬ ಮಹಾತ್ಮನು ೧೩೦೦ ವರ್ಷಗಳ ಹಿಂದೆ ಅನೇಕ ಸಂಗತಿಗಳನ್ನು ಉಪದೇಶ ಮಾಡಿದನು. ಆತನಲ್ಲಿ ಭಕ್ತಿಯುಳ್ಳವರಾಗಿ ಆತನ ಉಪದೇಶಗಳಂತೆ ನಡೆಯುವವರಿಗೆ ಮಹಮ್ಮದೀಯರು ಅಥವಾ ಮುಸಲ್ಮಾನರೆಂದು ಹೇಳುತ್ತಾರೆ. ಆತನ ಉಪದೇಶಗಳ ಗ್ರಂಥಕ್ಕೆ "ಖುರಾನ್" ಎಂದು ಹೇಳುತ್ತಾರೆ. ಈ ಪ್ರಕಾರ ನಮ್ಮ ವೈದಿಕ ಧರ್ಮವು ಯಾವನೊಬ್ಬ ಮಹಾಪುರುಷನಿಂದ ಯಾವುದೋ ಒಂದು ಕಾಲದಲ್ಲಿ ಉಂಟಾದುದಲ್ಲ. ಅನೇಕ ಋಷಿಗಳು ಬೇರೆ ಬೇರೆ ಕಾಲದಲ್ಲಿ ಅವತರಿಸಿ ದೇವರ ಪ್ರೇರಣೆಯಿಂದ ಅನೇಕ ಸಂಗತಿಗಳನ್ನು ಹೊರಪಡಿಸಿದರು. ಆ ಎಲ್ಲಾ ಸಂಗತಿಗಳ ಸಮೂಹಕ್ಕೆ ವೇದಗಳೆಂದು ಹೇಳುತ್ತಾರೆ. ಅವು ಋಗ್ವೇದ, ಯಜುರ್ವೇದ, ಸಾಮದೇವ, ಅಥರ್ವಣವೇದಗಳೆಂದು ನಾಲ್ಕು ಭಾಗಗಳಾಗಿವೆ. ಇವುಗಳನ್ನು ಒಬ್ಬರೇ ಪ್ರಕಟ ಮಾಡಿಲ್ಲವಾದುದರಿಂದ ಈ ಧರ್ಮಕ್ಕೆ ಕ್ರೈಸ್ತ ಮಹಮ್ಮದರಂತೆ ಒಬ್ಬ ಮಹಾಪುರುಷನ ಹೆಸರಿನಲ್ಲಿ. ಮತ್ತು ಯಾವ ಕಾಲದಲ್ಲಿ ಪ್ರಕಟವಾದವೆಂಬುದು ಗೊತ್ತಿಲದಿದ್ದುದರಿಂದ ಈ ಧರ್ಮವು ಇಂತಹ ವರ್ಷದಲ್ಲಿಯೇ ಉಂಟಾಯಿತೆಂದು ಹೇಳಲಿಕ್ಕೆ ಬರುವುದಿಲ್ಲ. ವೇದವಾಕ್ಯಗಳಲ್ಲಿ ವಿಶ್ವಾಸವಿಟ್ಟು ಅವುಗಳಂತೆ ನಡೆಯುವುದರಿಂದ ನಾವು ವೈದಿಕ ಧರ್ಮದವರಾಗಿದ್ದೇವೆ.

ಈ ವೈದಿಕ ಧರ್ಮದಲ್ಲಿ ಆಚಾರ ವಿಚಾರಗಳ ವ್ಯತ್ಯಾಸದಿಂದ ಮುಖ್ಯವಾಗಿ ಶೈವ, ವೈಷ್ಣವ, ಗಾಣಪತ್ಯ, ಸೌರ, ಶಾಕ್ತೇಯ, ಕಾಪಾಲಿಕೆಗಳೆಂಬ ಆರು ಮತಗಳುಂಟಾಗಿವೆ. ಶೈವರು ಶಿವನನ್ನು, ವೈಷ್ಣವರು ವಿಷ್ಣುವನ್ನು, ಗಾಣಪತ್ಯರು ಗಣಪತಿಯನ್ನು, ಸೌರರು ಸೂರ್ಯನನ್ನು ಶಾಕ್ತೇಯರು ಶಕ್ತಿಯನ್ನು, ಕಾಪಾಲಿಕರು ಕೈಯಲ್ಲಿ ತಲೆಬುರಡಿ ಹಿಡಿದ ಶಿವನನ್ನು ಮುಖ್ಯವೆಂದು ಭಾವಿಸಿ ಪೂಜಿಸುತ್ತಿದ್ದಾರೆ. ಇವರಲ್ಲಿ ಅನೇಕರು ಆ ವೇದಗಳಷ್ಟೇ ಪೂಜ್ಯವಾದ ಆಗಮ ಗ್ರಂಥಗಳನ್ನೂ ಅನುರಿಸಿ ನಡೆಯುತ್ತಾರೆ. ಹೀಗಿದ್ದರೂ ಇವರೆಲ್ಲರೂ ವೈದಿಕಧರ್ಮದವರೇ ಸರಿ.

ಏಕೆ, ತಮ್ಮಾ ತಿಳಿಯಲೊಲ್ಲದೇನು? ಒಂದು ಮನೆಯಲ್ಲಿರತಕ್ಕ ಅಣ್ಣ ತಮ್ಮಂದಿರೆಲ್ಲಾ ತಮ್ಮ ಮನಸ್ಸಿಗೆ ಬಂದ ಬೇರೆ ಬೇರೆ ಕೆಲಸಗಳನ್ನು ಮಾಡುವುದಿಲ್ಲವೆ? ಹಾಗೆ ಬೇರೆ ಬೇರೆ ಕೆಲಸಗಳನ್ನು ಮಾಡಿದರೂ ಅವರೆಲ್ಲರೂ ಒಂದೇ ಮನೆಯವರೆಂದು ಹೇಳುವುದಿಲ್ಲವೆ? ಅವರ ಕೆಲಸಗಳು ಬೇರೆ ಬೇರೆಯಾಗಿದ್ದ ಮಾತ್ರದಲ್ಲಿ ಅವರು ಒಬ್ಬರಿಗೊಬ್ಬರು ಪ್ರೇಮಾದರಗಳಿಂದಿರುವುದಿಲ್ಲವೇ? ಅವರೆಲ್ಲರು ಬೇರೆ ಬೇರೆ ರೀತಿಗಳಿಂದ ಕೆಲಸಮಾಡಿದರೂ ಆ ಮನೆತನಕ್ಕೇನೇ ಒಳಪಡುವುದಿಲ್ಲವೆ? ಅವರವರ ಅಪೇಕ್ಷೆ ಶಕ್ತಿಗಳ ವ್ಯತ್ಯಾಸದಿಂದ ಆ ಪ್ರಕಾರ ಮನೆಯಲ್ಲಿ ಅಣ್ಣತಮ್ಮಂದಿರು ಬೇರೆ ಬೇರೆ ಕೆಲಸಗಳನ್ನು ಬೇರೆ ಬೇರೆ ರೀತಿಗಳಿಂದ ಮಾಡುವುದು ಸ್ವಾಭಾವಿಕವು.

ಅದೇ ಪ್ರಕಾರ ವೇದಗಳನ್ನು ನಂಬಿದವರೆಲ್ಲಾ ಒಂದು ಮನೆತನದವರು. ಅವರಲ್ಲಿ ಶೈವ ಮೊದಲಾದ ಎಲ್ಲ ಮತದವರೂ ಅನ್ನ ತಮ್ಮಂದಿರಂತಿದ್ದಾರೆ. ಇವರು ತಮ್ಮ ತಮ್ಮ ಇಷ್ಟದಂತೆ ಪರಮಾತ್ಮನ ಬೇರೆ ಬೇರೆ ಹೆಸರನ್ನೇ ಮುಖ್ಯವಗಿಟ್ಟುಕೊಂಡು ತಮ್ಮ ಗುಣಸ್ವಭಾಗಳಂತೆ ಬೇರೆ ಬೇರೆ ಆಚಾರ ವಿಚಾರಗಳಿಂದ ನಡೆದುಕೊಳ್ಳುತ್ತಾರೆ. ಹೀಗಿರುವುದು ಸ್ವಾಭಾವಿಕವೂ. ಈ ಪ್ರಕಾರ ಆಚಾರ ವಿಚಾರಗಳಿಂದ ನಡೆದುಕೊಳ್ಳುತ್ತಾರೆ. ಹೀಗಿರುವುದು ಸ್ವಾಭಾವಿಕವು. ಈ ಪ್ರಕಾರ ಆಚಾರ ವಿಚಾರಗಳು ಬೇರೆಯಾದ ಮಾತ್ರದಲ್ಲಿ ಇವರು ವೈದಿಕಧರ್ಮದವರೇ ಅಲ್ಲವೆಂದು ಹೇಳಲಿಕ್ಕಾಗುವುದೇ? ಇಲ್ಲ.

ವೀರಶೈವ ಮತವೆಂದರೇನು?

ಶಿವನನ್ನು ಪೂಜೆ ಮಾಡತಕ್ಕ ಶೈವರಲ್ಲಿಯೇ ನಾವು ಸೇರಿದವರು. ನಮಗೆ ವೀರಶೈವರೆನ್ನುತ್ತಾರೆ. ರೂಢಿಯಲ್ಲಿ ಲಿಂಗಾಯತರೆಂತಲೂ ಹೇಳುವುದುಂಟು. ನಾವು ನಮ್ಮ ದೇಹದ ಮೇಲೆ ಯಾವಾಗಲೂ ಲಿಂಗವನ್ನು ಧರಿಸಿರುತ್ತೇವೆಂದು ನಮಗೆ ಲಿಂಗಾಯತರೆಂದು ಹೇಳುತ್ತಾರೆ. ನಾವು ಶಿವನನ್ನು ಮಾತ್ರವೇ ಪೂಜೆಮಾಡತಕ್ಕವರು. ಶಿವಪೂಜೆ, ಶಿವಸ್ತುತಿ, ಶಿವಜ್ಞಾನಗಳಲ್ಲಿಯೇ ನಾವು ಸಂತೋಷಪಡುವವರು. ಶಿವನಲ್ಲಿ ಜೀವನವನ್ನು ಬೆರೆಸುವ ವಿದ್ಯೆಯೇ ನಮ್ಮ ಮುಖ್ಯ ವಿದ್ಯೆಯು. ಇಂತಹ ವಿದ್ಯೆಯಲ್ಲಿಯೇ ನಾವು ಸಂಗೋಷವುಳ್ಳವರಾಗಿರಬೇಕು. ಶೂರನು ಕತ್ತಿಯನ್ನು ಬಿಟ್ಟು ಕಾಳಗಕ್ಕೆ ಹೋಗುವನೇ? ವೀರರು ತಮ್ಮ ಖಡ್ಗವನ್ನು ಹತ್ತಿರದಲ್ಲಿಯೇ ಇಟ್ಟುಕೊಳ್ಳುವುದಿಲ್ಲವೇ? ಹಾಗೆಯೇ ಈ ಸಂಸಾರವೆಂಬ ಯುದ್ಧಭೂಮಿಯಲ್ಲಿ ನಾವು ಲಿಂಗರೂಪಿಯಾದ ಶಿವನೆಂಬ ಶಸ್ತ್ರವನ್ನು ಯಾವಾಗಲೂ ಧರಿಸಿಕೊಂಡೇ ಇರುತ್ತವೆ. ಅದನ್ನು ನಾವೆಂದಿಗೂ ಬಿಟ್ಟುಗಲುವುದಿಲ್ಲ. ಏಕೆಂದರೆ, ಕಾಮ. ಕ್ರೋಧ, ಮೊದಲಾದ ವೈರಿಗಳು ಯಾವಾಗ ನಮ್ಮ ಮೇಲೆ ಬರುವವೋ ತಿಳಿಯದು. ಶಿವನ ವಿಷಯವಾಗಿ ಇಂಥ ವೀರ ವ್ರತಗಳುಳ್ಳವರಾಗಿರುವುದರಿಂದಲೂ ನಮಗೆ ವೀರಶೈವರು. ಲಿಂಗಾಯತರು ಎಂದು ಹೇಳುವುದು ಸಮಂಜವಾಗಿಯೇ ಇದೆ.

ತಮ್ಮಾ, ಈ ಸಂಗತಿಗಳು ನಮ್ಮಲ್ಲಿ ಬಹು ಜನರಿಗೆ ಗೊತ್ತಿಲ್ಲ. ಆದುದರಿಂದ ನಿಮ್ಮ ಮತವಾವುದು? ನೀವು ಯಾವ ಜಾತಿಯವರು? ಎಂದು ಯಾರಾದರೂ ಕೇಳಿದರೆ ನಾವು ಒಕ್ಕಲಿಗರು, ಬಣಜಿಗರು, ಜಾಡರು, ಬಣಗಾರರು, ಶೀಲವಂತರು, ಮೇಲುಪಾವಡದವರು, ಗಣಂಗಳು ಗಾಣಿಗರು, ಎಂದು ತಾವು ಮಾಡುತ್ತಿದ್ದ ಕಸಬುಗಳ ಹೆಸರುಗಳನ್ನಾಗಲಿ ಅಥವಾ ತಮ್ಮ ಶೀಲಾಚಾರಗಳನ್ನಾಗಲಿ ಹೇಳುತ್ತಾರೆ. ಇದು ತಪ್ಪು. ಹಾಗೆ ಹೇಳಬಾರದು. ಒಕ್ಕಲುತನ, ವ್ಯಾಪಾರ, ನೇಯುವುದು, ಬಣ್ಣಕೊಡುವುದು, ಇವೆಲ್ಲವುಗಳು ಉದ್ಯೋಗಗಳಲ್ಲವೇ? ಇವೇನು ಮತಧರ್ಮಗಳೇ? ಒಬ್ಬ ವಕೀಲರಿಗಾಗಲಿ ಅಥವಾ ಒಬ್ಬ ಡಾಕ್ಟರಿಗಾಗಲಿ ನಿಮ್ಮ ಮತವಾವುದೆಂದು ಕೇಳಿದರೆ ವಕೀಲಿ ಮತವೆಂದಾಗಲಿ ಡಾಕ್ಟರ ಮತವೆಂದಾಗಲಿ ಹೇಳಬಹುದೆ? ಇವು ಹೇಗೆ ಒಂದೊಂದು ಕಸಬುಗಳಾಗಿವೆಯೋ ಹಾಗೆಯೇ ವ್ಯಾಪಾರ ಒಕ್ಕಲುತನ ಮೊದಲಾದವುಗಳೂ ಒಂದೊಂದು ಕಸಬುಗಳು ವೀರಶೈವರಲ್ಲಿ ೬೪ ಶೀಲಗಳು ಅಥವಾ ವ್ರತಗಳಿವೆ. ಅವುಗಳಲ್ಲಿ ಯಾರಾದರೂ ಒಂದು ಶೀಲವನ್ನು ಚರಿಸುತ್ತಿದ್ದರೆ ಅವರ ಮನೆಯವರು ಆ ಶೀಲವೇ ತಮ್ಮ ಮತವೆಂದು ಹೇಳಬಹುದೇ? ಏಕಾದಶಿ ವ್ರತ ಹಿಡಿದವರಿಗೆ ನಿಮ್ಮ ಮತವಾವುದೆಂದು ಕೇಳಿದರೆ ಅವರು ಏಕಾದಶಿ ಜಾತಿ ಎಂದು ಹೇಳಿದರೆ ನೀನು ನಗಲಿಕ್ಕಿಲ್ಲವೇ?

ಅದೇ ಪ್ರಕಾರ ನಿಮ್ಮ ಮತವನ್ನು ಕೇಳಿದಾಗ ನೀನು ಒಕ್ಕಲುತನ ಮೊದಲಾದ ಈಗಿನ ಅಥವಾ ನಿಮ್ಮ ಮನೆತನದವರು ಹಿಂದೆ ಮಾಡಿದ ಕಸಬುಗಳ ಹೆಸರನ್ನಾಗಲಿ ಇಲ್ಲವೇ ನಿಮ್ಮ ಶೀಲಾಚಾರಗಳ ಹೆಸರುಗಳನ್ನಾಗಲಿ ಹೇಳಿದರೆ ಜನರು ನಗುವರು. ನಿನ್ನ ಮತವಾವುದೆಂದು ಕೇಳಿದರೆ ವೀರಶೈವ ಮತವೆಂದೇ ನೀನು ಹೇಳಬೇಕು. ನಿನ್ನ ಧರ್ಮವಾವುದೆಂದರೆ ವೈಧಿಕ ಧರ್ಮವೆಂದು ಹೇಳಬೇಕೇ ವಿನಾ ಹಿಂದುಧರ್ಮವೆಂದು ಹೇಳಬಾರದು. ನಿನ್ನ ಧರ್ಮ ಮತ್ತು ಮತಗಳು ವೇದಾಗಮಗಳಲ್ಲಿ ಹೇಳಿವೆ. ಆದುದರಿಂದ ನಿನ್ನ ಮತ, ಧರ್ಮ, ಮತ್ತು ಮತಗಳ ಸಂಬಂಧವಾದ ಗ್ರಂಥ, ಈ ಮೂರು ಮುಖ್ಯ ಸಂಗತಿಗಳನ್ನು ಚೆನ್ನಾಗಿ ನೆನೆಪಿನಲ್ಲಿಟ್ಟುಕೋ.

ಅಷ್ಟಾವರಣ

ತಮ್ಮಾ ಇನ್ನು ನಮ್ಮ ಮತದ ಮುಖ್ಯ ಆಚಾರಗಳನ್ನು ಹೇಳುತ್ತೇನೆ. ಮನಸ್ಸಿಟ್ಟು ಕೇಳು, ವೀರಶೈವ ಮತದಲ್ಲಿ ಅಷ್ಟಾವರಣ, ಪಂಚಾಚಾರ, ಷಟಸ್ಥಲ, ಎಂಬ ಮೂರು ಮುಖ್ಯ ವಿಷಯಗಳಿವೆ. ಇವುಗಳಲ್ಲಿ ಮೊದಲನೆಯದಾದ ಅಷ್ಟಾವರಣದ ಸಂಬಂಧವಾಗಿ ಮುಂಚೆ ಸ್ವಲ್ಪ ಹೇಳುತ್ತೇನೆ. (೧) ಗುರು (೨) ಲಿಂಗ (೩) ಜಂಗಮ (೪) ಪಾದೋದಕ (೫) ಪ್ರಸಾದ (೬) ವಿಭೂತಿ (೭) ರುದ್ರಾಕ್ಷಿ (೮) ಮಂತ್ರ ಇವೆ ಅಷ್ಟಾವರಣಗಳು.

(೧) ನಮಗೆ ಇಹಪರಗಳಲ್ಲಿ ಸುಖಶಾಂತಿಗಳುಂಟಾದಾಗ ಬೇಕಾದರೆ ನಾವು ಹೇಗೆ ನಡೆಯಬೇಕೆಂಬುದನ್ನು ನಮಗೆ ಹೇಳಿಕೊಟ್ಟು ಆ ಪ್ರಕಾರ ನಡೆಸುವವರೇ ಗುರುಗಳು. ಈ ಗುರುಗಳಿಲ್ಲದಿದ್ದರೆ ನಮಗೆ ಇಹಲೋಕದಲ್ಲಿ ನಾವು ನಡೆಯಬೇಕಾದ ಆಚಾರ ವಿಚಾರಗಳನ್ನು ಹೇಳುವವರಾರು? ನಮಗೆ ಒಳ್ಳೆಯ ಆಚಾರ ವಿಚಾರಗಳನ್ನು ಹೇಳಿಕೊಡದಿದ್ದರೆ ನಾವು ಅನೇಕ ಕೆಟ್ಟ ನಡತೆಗಳಿಂದ ನಡೆದು ಕಷ್ಟ ಪಡಬೇಕಾಗುವುದಿಲ್ಲವೇ? ನಾವು ಕತ್ತಲೆಯಲ್ಲಿ ಹೋಗುತ್ತಿರುವಾಗ ಯಾರಾದರೂ ದೀಪವನ್ನು ತಂದು ಕೊಟ್ಟರೆ ನಮಗೆ ಬಹು ಅನುಕೂಲವಾಗುವುದಿಲ್ಲವೇ? ನಮ್ಮ ಕಷ್ಟವು ತಪ್ಪುವುದಿಲ್ಲವೇ? ಅದೇ ಪ್ರಕಾರ ನಮಗೆ ತಿಳುವಳಿಕೆಯಿಲ್ಲದೆ ತಪ್ಪುದಾರಿಯಲ್ಲಿ ನಡೆದು ಕಷ್ಟಪಡುತ್ತಿರುವಾಗ ನಮಗೆ ಹಿತವಾಗುವುದಿಲ್ಲವೇ? ಅವರೇ ಗುರುಗಳು. ಅವರ ಉಪದೇಶದಂತೆ ನಡೆದುಕೊಂಡರೇನೇ ನಮಗೆ ಸುಖ ಶಾಂತಿಗಳು ದೊರೆಯುತ್ತವೆ. ಆದುದರಿಂದಲೇ ಸರ್ವಜ್ಞನು.

ಗುರುರಾಯನುಪದೇಶ ದೊರೆಕೊಂಡಿತಾದೊಡೆ
ಹರಿವುದು ಪಾಪವೆಂತೆನಲು ವಜ್ರದಿಂ ಗಿರಿಯ
ಹೊಯಿದಂತೆ ಸರ್ವಜ್ಞ

ಎಂದು ಹೇಳಿದ್ದಾನೆ. ವಜ್ರದಿಂದ ಬಂಡೆಗಲ್ಲನ್ನು ಮತ್ತು ಅಂಥ ಕಲ್ಲುಗಳಿಂದ ಕೂಡಿದ ಪರ್ವತವನ್ನು ಕೂಡ ಕೊರೆದು ಹಾಕಲು ಬರುತ್ತದೆ. ಗುರುಗಳ ಉಪದೇಶವು ಕೂಡಾ ವಜ್ರದಂತಿರುವ ಕಾರಣ ಪರ್ವತದಂಥಾ ಪಾಪವನ್ನು ಕೂಡಾ ಕಳೆದು ನಮ್ಮನ್ನು ಕಷ್ಟ ನಷ್ಟಗಳಿಂದ ಬಿಡುಗಡೆ ಮಾಡುತ್ತದೆ.

ಗುರುಗಳೇ ನಮಗೆ ಕೆಟ್ಟವರ ಜೊತೆಯನ್ನು ಬಿಡಿಸಿ ಒಳ್ಳೆಯವರ ಸ್ನೇಹ ಮಾಡಿಸಿ ನಿಜವಾದ ಅಣ್ಣತಮ್ಮಂದಿರನ್ನು ತೋರಿಸಿಕೊಡುತ್ತಾರೆ. ಗುರುಗಳೇ ನಮಗೆ ದೇವರ ಸಂಬಂಧವಾಗಿ ತಿಳುಹಿಸಿಕೊಟ್ಟು ದೇವರ ಸೇವೆಯನ್ನು ಮಾಡಲು ಹಚ್ಚುತ್ತಾರೆ. ಗುರುಗಳು ಹೀಗೆ ಮಾಡುವುದರಿಂದಲೇ ನಾವು ಪುಣ್ಯ ಕೆಲಸಗಳನ್ನು ಮಾಡಿ ಇಲ್ಲಿ ಸುಖವನ್ನು ಹೊಂದುವುದಲ್ಲದೆ ಪರಲೋಕದಲ್ಲಿ ಮುಕ್ತಿಯನ್ನು ಹೊಂದುತ್ತೇವೆ. ಗುರುಗಲಿಂದ ಇಷ್ಟೆಲ್ಲಾ ಹಿತಗಳಾಗುತ್ತವೆಂದೇ ಸರ್ವಜ್ಞನು.

ಗುರುವಿಂದ ಬಂಧುಗಳು ಗುರುವಿಂದ ದೈವಗಳು
ಗುರುವಿಂದಲಿಹುದು ಪುಣ್ಯವು ಗುರುವಿಂದ
ಜಗಕೆಲ್ಲ ಮುಕ್ತಿ ಸರ್ವಜ್ಞ

ಎಂದು ಹೇಳಿದ್ದಾನೆ. ತಮ್ಮಾ, ಗುರುಗಳಿಂದ ಇಷ್ಟು ಹಿತವಾಗುತ್ತಿರುವಾವ ನಮಗೆ ಗುರುಗಳು ಬೇಡವೇ? ಬೇಕೇ ಬೇಕು. ಗುರುಗಳು ಬೇಕೆಂದು ಹೆಸರಿಗೆ ಮಾತ್ರ, ಗುರುಗಳಾದವರನ್ನು ಸೇರಿದರೆ ನಮಗೆ ಹಿತವಾಗುವುದೇ? ತಾನೇ ಕುರುಡನಾದವನು ನಮಗೆ ಒಳ್ಳೇ ದಾರಿಯನ್ನು ತೋರಿಸುವವನೇ? ಕುರುಡನ ಬೆನ್ನು ಹತ್ತಿಹೋದರೆ ನಾವು ತಗ್ಗಿನಲ್ಲಿ ಬೀಳಬೇಕಾಗುವುದಿಲ್ಲವೇ? ಅದರಂತೆಯೇ ಯಾರು ಒಳ್ಳೆಯ ಆಚಾರ ವಿಚಾರಗಳುಳ್ಳವರಾಗಿರುವುದಿಲ್ಲವೋ ಅವರನ್ನು ನಾವು ಗುರುಗಳೆಂದು ಹಿಂಬಾಲಿಸಿದರೆ ಇಲ್ಲಿ ಕಷ್ಟಪಡುವೆವಲ್ಲದೆ ಪರಲೋಕದಲ್ಲಿಯೂ ದುಃಖಪಡಬೇಕಾಗುವುದು. ಆದಕಾರಣ ಸರ್ವಜ್ಞನು

ಬಳ್ಳಿ ಕುರುಡರು ಕೂಡಿ। ಹಳ್ಳವನು ಬಿದ್ದಂತೆ।
ಒಳ್ಳೆಯ ಗುರುವಿನುಪದೇಶ ಇಲ್ಲದಿರೆ
ಎಲ್ಲಿಯದು ಮುಕ್ತಿ ಸರ್ವಜ್ಞ ॥

ಎಂದು ಹೇಳಿದ್ದಾನೆ. ಆದುದರಿಂದ ನೀನು ಕಂಡ ಕಂಡವರನ್ನೆಲ್ಲ ಗುರುಗಳೆಂದು ತಿಳಿಯಬೇಡ. ಒಳ್ಳೆಯ ಗುರುಗಳು ಬಹು ವಿರಳ. ಅವರು ಪರಸ್ತ್ರೀ, ಪರಧನ, ಮೊದಲಾದ ಪರವಸ್ತುಗಳನ್ನು ಅಪಹರಿಸುವ ಕೆಟ್ಟ ಕಾರ್ಯಗಳನ್ನು ಮಾಡಬೇಡಿರೆಂದು ಹೇಳುತ್ತಾರೆ. ಅವುಗಳನ್ನು ಅವರೂ ಮಾಡುವುದಿಲ್ಲ. ಮತ್ತು ನಮಗೆ ದೇವರ ಪೂಜೆ, ಜನಸೇವೆ, ಪರೋಪಕಾರ, ಮೊದಲಾದ ಯಾವ ಒಳ್ಳೆಯ ಕಾರ್ಯಗಳನ್ನು ಮಾಡಲು ಹೇಳುತ್ತಾರೆಯೋ ಅವುಗಳನ್ನೇ ಅವರೂ ಮಾಡುತ್ತಾರೆ. ಈ ಪ್ರಕಾರ ನಡೆನುಡಿಗಳು ಒಂದಾಗಿರತಕ್ಕವರೇ ಗುರುಗಳು. ಇಂಥಾ ಗುರುಗಳನ್ನು ಹಿಂಬಾಲಿಸಿದರೇನೇ ನಮ್ಮ ಕಷ್ಟ ನಷ್ಟಗಳು ನಿವಾರಣೆಯಾಗುವುವು.

ಒಳ್ಳೆಯ ಗುರುಗಳು ಮೊದಲು ನಮ್ಮ ದೇಹವನ್ನು ಶುದ್ಧವಾಗಿಟ್ಟುಕೊಳ್ಳುವ ಆಚಾರಗಳನ್ನು ಕಲಿಸುತ್ತಾರೆ. ಆ ಮೇಲೆ ಮನಸ್ಸು ಒಳ್ಳೆಯ ವಿಷಯಗಳನ್ನೇ ಚಿಂತಿಸುವಂಥ ವಿಚಾರಗಳನ್ನು ಹೇಳಿಸಿಕೊಡುತ್ತಾರೆ. ಅನಂತರ ನಾವು ಒಳ್ಳೆಯ ಭಾವನೆಯನ್ನೇ ಮಾಡುವ ರೀತಿಗಳನ್ನು ತಿಳಿಸಿಕೊಡುತ್ತಾರೆ. ಈ ಪ್ರಕಾರ ನಮ್ಮ ತನುಮನಭಾವಗಳು ಶುದ್ಧವಾದರೆ ನಾವು ಇಹದಲ್ಲಿ ಸುಖವನ್ನು ಮತ್ತು ಪರರಲ್ಲಿ ಶಾಂತಿಯನ್ನು ಹೊಂದುತ್ತೇವೆ.

ತಮ್ಮಾ, ನಮ್ಮ ದೇಹವು ಶುದ್ಧವಾಗಿರಬೇಕೆಂದು ಗುರುಗಳು ನಮಗೆ ಮೊದಲು ಹೇಳಿಕೊಡುವುದೇನೆಂಬುದನ್ನು ನೀನು ಬಲ್ಲಿಯಾ? ಇಲ್ಲ, ಸ್ವಲ್ಪ ಹೇಳುತ್ತೇನೆ. ಕೇಳು, ನೀನು ಮುಂಜಾನೆ ನಸುಕಿನಲ್ಲಿಯೇ ಏಳು. ಹಾಗೆ ಮಾಡಿದರೆ ನಿದ್ದೆಯ ಕಾಲದಲ್ಲಿದ್ದ ಜಾಡ್ಯವು ಹೋಗುತ್ತದೆ. ಆ ಮೇಲೆ ಭಸ್ಮವನ್ನು ಧರಿಸಿಕೊಂಡು ಸ್ವಲ್ಪ ಹೊತ್ತು ಶಿಭಜನೆಯನ್ನು ಮಾಡು. ಅದರಿಂದ ನಿನ್ನ ಮನಸ್ಸನಿನ ಮಂದತನವು ಹೋಗಿ ಕೆಲಸದಲ್ಲಿ ಉತ್ಸಾಹವುಂಟಾಗುತ್ತದೆ. ಆ ಬಳಿಕ ಶೌಚವಿಧಿಗಳಾಗಿ ಬೈಲು ಪ್ರದೇಶಕ್ಕೆ ೧ ಮೈಲು ದೂರಾದರೂ ಹೋಗು. ಹಾಗೆ ದೂರ ನಡೆದು ಹೋದರೆ ಮಲವಿಸರ್ಜನೆಯು ಸರಿಯಾಗಿ ಆಗುತ್ತದೆ. ನೀನು ಶೌಚವಿಧಿಯನ್ನು ತೀರಿಸಿಕೊಂಡು ಬರುವಾಗ ತಂಬಿಗೆಯನ್ನು ಎಡಗೈಯಲ್ಲಿ ಹಿಡಿಯಲೇ ಬೇಡ. ಆ ಎಡಗೈಯಿಂದ ನಿನ್ನ ಬಟ್ಟೆಗಳನ್ನಾಗಲಿ ದೇಹದ ಬೇರೆ ಅವಯವಗಳನ್ನಾಗಲಿ ಮುಟ್ಟಲೇ ಬೇಡ. ಏಕೆಂದರೆ ಮಲಮೂತ್ರಗಳ ಅಣುಗಳು ಆ ಎಡಗೈ ಹಸ್ತಕ್ಕೆ ಹತ್ತಿರುತ್ತವೆ. ಅವು ನಿನ್ನ ಬಟ್ಟೆಗಳಿಗಾಗಲಿ ಮೈಗಾಗಲಿ ತಗಲಿದರೆ ಕೇಡಲ್ಲವೇ?

ಅದು ನಿನಗೆ ಹೊಲಸಾಗಿ ತೋರುವುದಿಲ್ಲವೇ? ಆದುದರಿಂದ ತಮ್ಮಾ, ನೀನು ತಂಬಿಗೆಯನ್ನು ತೆಗೆದುಕೊಂಡು ಹೋಗಿ ಬಂದ ನಂತರ ತಂಬಿಗೆ ಮೊದಲಾದವಗುಳೇನನ್ನೂ ಮುಟ್ಟದೆ ಮೊದಲು ಮಣ್ಣಿನಿಂದಾಗಲಿ ಅಥವಾ ಬೂದಿಯಿಂದಾಗಲಿ ಮೂರುಸಾರೆಯಾದರೂ ಎಡಹಸ್ತವನ್ನು ಚೆನ್ನಾಗಿ ತೊಳಿದುಕೋ. ಅನಂತರ ತಂಬಿಗೆಯ್ನು ಒಳಗೂ ಹೊರಗೂ ಮೂರು ಸಾರೆ ಬೆಳಗು.

ಆ ಮೇಲೆ ಮೊಳಕೈ ಮೊಳಕಾಲುಗಳ ವರೆಗೂ ಕೈಕಾಲುಗಳನ್ನು ಚೆನ್ನಾಗಿ ತೊಳೆದುಕೊಂಡು ಮೋರೆಯನ್ನು ತೊಳೆದು ಮೂರುಸಾರೆಯಾದರೂ ಬಾಯಿಯನ್ನು ಮುಕ್ಕಳಿಸು. ಆ ಮೇಲೆ ಜಾಲಿಯ ಕಟ್ಟಿಯಿಂದಾಗಲಿ ಅಥವಾ ಉತ್ತರಾಣಿಯ ಬೇರಿನಿಂದಾಗಲಿ ಇಲ್ಲವೇ ಉಪ್ಪು ಕೂಡಿಸಿದ ಕರಿಭೂದಿಯಿಂದಾಗಲಿ ಹಲ್ಲುಗಳನ್ನು ಚೆನ್ನಾಗಿ ಒಳಗೂ ಹೊರಗೂ ತಿಕ್ಕಿಕೊ. ನಾಲಿಗೆಯ ಮೇಲಿರತಕ್ಕ ಹೊಲಸನ್ನು ತೆಗೆದುಹಾಕು. ದೇಹ ಶುದ್ಧಿಗೆ ಇವುಗಳೆಲ್ಲಾ ಬಹುಮುಖ್ಯವಾಗಿವೆ. ನಾವು ಜಗಿದ ಆಹಾರ ಪದಾರ್ಥಗಳು ಹಲ್ಲಿನ ಸಂದಿಯಲ್ಲಿ ಸಿಕ್ಕಿಕೊಂಡಿರುತ್ತವೆ. ಅವುಗಳನ್ನು ಪ್ರತಿನಿತ್ಯ ಹಲ್ಲುತಿಕ್ಕಿ ತೆಗೆಯದಿದ್ದರೆ ಅಲ್ಲೇ ಕೊಳೆಯುತ್ತವೆ.

ನಾವು ಉಸುರಾಡಿಸುವುದರಿಂದ ಒಳಗಿನ ಹೊಲಸು ಹೊರಗೆ ಬರುವಾಗ ನಮ್ಮ ಹಲ್ಲು ನಾಲಿಗೆಗಳಿಗೆ ತಗುಲುತ್ತದೆ. ಆದುದರಿಂದ ಬಾಯಿಯ ಆಗಾಗ್ಗೆ ಹೊಲಸಾಗುತ್ತದೆ. ಹಲ್ಲು ನಾಲಿಗೆಗಳನ್ನು ಪ್ರತಿನಿತ್ಯ ಬೆಳಿಗ್ಗೆ ಸರಿಯಾಗಿ ತಿಕ್ಕಿಕೊಳ್ಳದಿದ್ದರೆ ನಮ್ಮ ಬಾಯಿ ನಾರುತ್ತದೆ. ಊಟ ಮಾಡುವಾಗ ಆ ಬಾಯಿಯ ಹೊಲಸೇ ಮತ್ತೆ ಹೊಟ್ಟೆಯೊಳಗೆ ಹೋಗುತ್ತದೆ. ಇದರಿಂದ ಬೇರೆ ಬೇರೆ ರೋಗಗಳು ಹುಟ್ಟುತ್ತವೆ. ಆದುದರಿಂದ ನೀನು ಈ ಬೆಳಗಿನ ಕಟ್ಟಳೆಯನ್ನು ತಪ್ಪದೇ ಆಚರಿಸು. ಇವೆಲ್ಲ ಕೆಸಲಗಳು ಸೂರ್ಯ ಹುಟ್ಟುವುದರೊಳಗಾಗಿಯೇ ಆಗಿರಬೇಕು.

ಆ ಮೇಲೆ ನೀನು ಶೀರ್ಷಾಸನ, ಸರ್ವಾಂಗಾಸನ ಮೊದಲಾದ ಆಸನಗಳನ್ನು ಹಾಕಿ ವ್ಯಾಯಾಮ ಮಾಡು, ಅದರಿಂದ ನಿನ್ನ ದೇಹದೊಳಗಿದ್ದ ಹೊಸಲು ಬೆವರಿನ ರೂಪದಿಂದ ಹೊರಗೆ ಬಂದು ನಿನ್ನ ದೇಹವು ಗಟ್ಟಿಯಾಗುವುದು. ಮನಸ್ಸಿಗೆ ಬಹು ಉತ್ಸಾಹವುಂಟಾಗುವುದು. ವ್ಯಾಯಾಮ ಮಾಡಿದ ನಂತರ ಸ್ವಲ್ಪ ಹೊತ್ತು ಬಿಟ್ಟು ಸ್ನಾನ ಮಾಡು. ಸ್ನಾನಕ್ಕೆ ತಣ್ಣಿರೇಒಳ್ಳೆಯದು. ಆಗ ಸ್ನಾನಕ್ಕೆ ಅನುಕೂಲವಿಲ್ಲದಿದ್ದರೆ ಮೈಯನ್ನು ಬಟ್ಟೆಯಿಂದ ಚೆನ್ನಾಗಿ ಒರಿಸಿಕೊಂಡು ನಿನ್ನ ನಿತ್ಯದ ಕೆಲಸಕ್ಕೆ ಹೋಗು. ಮದ್ಯಾಹ್ನದಲ್ಲಿ ಊಟಕ್ಕೆ ಮುಂಚೆ ತಪ್ಪದೇ ಸ್ನಾನವನ್ನು ಮಾಡಲೇಬೇಕು. ಆಗ ಶೀಗಿ ಕಾಯಿಯ ಪುಡಿಯಿಂದಾಗಲೀ ಅಥವಾ ಹೆಸರು ಹಿಟ್ಟು ಇಲ್ಲವೆ ಕಡಲೆಯ ಹಿಟ್ಟಿನಿಂದಾಗಲಿ ಮೈಯನ್ನು ಚೆನ್ನಾಗಿ ತಿಕ್ಕಿಕೊ. ಹಸಿ ಬಟ್ಟೆಯಿಂದ ಮೈಯನ್ನು ಉಜ್ಜಿಕೊ. ಹೀಗೆ ಮಾಡುವುದರಿಂದ ಕೂದಲಿನ ಸಂದಿಯಲ್ಲಿರತಕ್ಕ ಹೊಲಸು ಕೂಡಾ ಹೋಗಿ ಮೈ ಝುಳ ಝುಳವಾಗುತ್ತದೆ. ಹೀಗೆ ಮೈ ತಿಕ್ಕಿಯೇ ಜಳಕ ಮಾಡಬೇಕು. ಆ ಮೇಲೆ ಒಗೆದ ಬಟ್ಟೆಯನ್ನುಟ್ಟುಕೋ. ನೀನು ಉಡುವ ಮತ್ತು ತೊಡುವ ಬಟ್ಟೆಗಳು ಬಹು ಝುಳ ಝುಳವಾಗಿರಬೇಕು. ಇದೇ ದೇಹ ಶುದ್ಧಿಗಾಗಿ ಗುರುಗಳು ಹೇಳಿಕೊಡುವ ಮುಖ್ಯಾಚಾರಗಳು. ಆ ಮೇಲೆ ಶಿವಪೂಜೆಯನ್ನು ಮಾಡುವ ರೀತಿಗಳನ್ನು ಹೇಳಿಕೊಡುತ್ತಾರೆ. ಈ ಪ್ರಕಾರ ಒಳ್ಳೆಯ ಗುರುಗಳ ಉಪದೇಶದಿಂದ ನಮಗೆ ಬಹು ಹಿತವುಂಟು.

ಗುರುಗಳಲ್ಲಿ ಶಿಕ್ಷಾ ಗುರು, ದೀಕ್ಷಾಗುರು, ಮತ್ತು ಮೋಕ್ಷಗುರುಗಳೆಂದು ಮೂರು ಪ್ರಕಾರಗಳಿವೆ. ಅವೆಲ್ಲ ಸಂಗತಿಗಳನ್ನು ಈಗಲೇ ಹೇಳಿದರೆ ತಿಳಿಯಲಿಕ್ಕಿಲ್ಲ. ಈಗಲೇ ಅವುಗಳನ್ನು ತಿಳಿದುಕೊಳ್ಳಬೇಕಾದುದೂ ಇಲ್ಲ.

ನಮ್ಮ ಮನೆಯಲ್ಲಿ ಒಂದು ಮಗುವು ಹುಟ್ಟಿದರೆ, ಆ ಕೂಸಿಗೆ ಲಿಂಗಧಾರಣ ಮಾಡಲು ಐಯ್ಯನವರು ಬರುವುದಿಲ್ಲವೇ? ಅವರು ನಮ್ಮ ಗುರುಗಳು ನಮ್ಮ ಮನೆಯಲ್ಲಿ ಲಗ್ನವಾದರೆ ನಮ್ಮ ಪಟ್ಟದ ಸ್ವಾಮಿಗಳನ್ನು ಕರೆಯಿಸಿಕೊಳ್ಳುತ್ತೇವೆ.

ಆ ಪಟ್ಟದ ಸ್ವಾಮಿಗಳೂ ನಮ್ಮ ಗುರುಗಳು. ಈ ಇಬ್ಬರು ಗುರುಗಳ ಮೇಲೆಯೂ ಇನ್ನೊಬ್ಬ ಗುರುಗಳಿದ್ದಾರೆ. ಅವರು ಎಷ್ಟೋ ವರ್ಷಗಳಿಗೊಮ್ಮೆ ನಮ್ಮಲ್ಲಿಗೆ ಬರುತ್ತಿರುತ್ತಾರೆ. ಅವರಿಗೆ ಆಚಾರ್ಯರೆಂದು ಹೇಳುತ್ತಾರೆ. ಅವರು ಸೂತ್ರ ಗೋತ್ರಗಳನ್ನೇ ನಮ್ಮ ಪಟ್ಟದ ಸ್ವಾಮಿಗಳೂ ನಾವೂ ಹೇಳಬೇಕಾದುದು. ಈ ಆಚಾರ್ಯರು ಆಗಾಗ್ಗೆ ನಮ್ಮ ಮತವನ್ನು ಉದ್ಧಾರ ಮಾಡುವುದಕ್ಕೆ ಅವತರಿಸುತ್ತಿರುತ್ತಾರೆ. ಆ ಪ್ರಕಾರ ಈಗ ೭-೮ ನೂರು ವರ್ಷಗಳ ಹಿಂದೆ ಬೇರೆ ಬೇರೆ ಕಾಲಗಳಲ್ಲಿ ವೀರಶೈವ ಮತಾಚಾರ್ಯರು ಅವರತಿಸಿ ಕಾಶಿ, ಹಿಮವತ್ಕೇದಾರ, ಶ್ರೀಶೈಲ, ಬಾಳಿಹಳ್ಳಿ, ಮತ್ತು ಉಜ್ಜನಿ ಐದು ಸ್ಥಳಗಳಲ್ಲಿ ತಮ್ಮ ಗುರುಪೀಠಗಳನ್ನು ಸ್ಥಾಪಿಸಿದರು. ಇವರೇ ಪಂಚಾಚಾರ್ಯರು. ಈ ಪಂಚಾಚಾರ್ಯರ ಗೋತ್ರ ಸೂತ್ರಗಳಲ್ಲಿಯೇ ನಾವು ಯಾವುದಾದರೊಂದು ಗೋತ್ರ ಸೂತ್ರಕ್ಕೆ ಸಂಬಂಧಪಟ್ಟವರಾಗಿದ್ದೇವೆ. ನೀನು ಯಾವ ಗೋತ್ರ ಸೂತ್ರದವನೆಂಬುದನ್ನು ನಿನ್ನ ತಂದೆ ತಾಯಿಗಳನ್ನು ಕೇಳಿ ತಿಳಿದುಕೊ.

(೨) ನಾವು ಹುಟ್ಟಿದ ದಿನದಲ್ಲಿ ಅಥವಾ ೫ ನೆಯ ದಿವಸದಲ್ಲಿ ನಮಗೆ ಲಿಂಗಧಾರಣ ಮಾಡುತ್ತಾರೆ. ನಾವು ಈಗ ಧರಿಸಿರುವುದು ಅದೇ ಲಿಂಗವು. ಈ ಲಿಂಗವನ್ನು ನಾವು ನಮ್ಮ ತಾಯಿಯ ಹೊಟ್ಟೆಯಲ್ಲಿರುವಾಗ ಎಂಟನೆಯ ತಿಂಗಳಲ್ಲಿಯೇ ನಮಗಾಗಿ ನಮ್ಮ ತಾಯಿಗೆ ಧರಿಸಬೇಕೆಂದು ನಮ್ಮ ಮತದಲ್ಲಿ ಹೇಳಿದೆ. ಹೀಗೆ ಮಾಡುವುದು ಬಹು ವಿರಳ. ನಾವು ಹೊಟ್ಟೆಯಲ್ಲಿದ್ದಾಗ ಈ ಪ್ರಕಾರ ಲಿಂಗಧಾರಣ ಮಾಡದಿದ್ದರೂ ನಾವು ಹುಟ್ಟಿದ ಕೂಡಲೇ ತಪ್ಪದೇ ನಮಗೆ ಲಿಂಗಧಾರಣ ಮಾಡಲೇಬೇಕು. ಮೂರು ಅಥವಾ ೫ ದಿನಗಳ ನಂತರ ಲಿಂಗಧಾರಣ ಮಾಡುವುದು ಸರಿಯಲ್ಲ.

ಈ ಲಿಂಗವನ್ನು ಗುರುಗಳು ನಮ್ಮ ಕೈಗೆ ಕೊಟ್ಟಿದ್ದಾರೆ. ಇದಕ್ಕೆ ಇಷ್ಟಲಿಂಗವೆಂದು ಹೇಳುತ್ತಾರೆ. ನಾವು ಭಕ್ತಿಯಿಂದ ನಡೆದುಕೊಂಡರೆ ನಾವು ಇಷ್ಟಪಟ್ಟಿದ್ದನ್ನೆಲ್ಲಾ ಈ ಲಿಂಗವು ಕೊಡುವುದರಿಂದ ಇದಕ್ಕೆ ಇಷ್ಟಲಿಂಗವೆಂಬ ಹೆಸರು ಸಮಂಜಸವಾಗಿಯೂ ಇದೆ. ಲೋಕಗಳಿಗೆಲ್ಲಾ ಒಡೆಯನಾದ ಪರಶಿವನೇ ಈ ಲಿಂಗಮೂರ್ತಿಯು. ನಾವು ಈ ಲಿಂಗದೇವನಲ್ಲಿ ಎಷ್ಟು ಭಕ್ತಿ ಭಾವವುಳ್ಳವರಾಗುವೆವೋ ಅಷ್ಟು ಶಿವನು ನಮಗೆ ಈ ಲಿಂಗದಲ್ಲಿ ತೋರುವನು. ಆದುದರಿಂದ ಸರ್ವಜ್ಞ ಕವಿಯು.

ಶಿವಪೂಜೆ ಮಾಡಿದಡೆ। ಶಿವನ ಕೊಂಡಾಡಿದಡೆ।
ಶಿವನೊಳು ನೆನಹನಿಲಿಸಿದಡೆ॥ ಶಿವಲೋಕ
ವವಗೆ ಕಾಣಯ್ಯ ಸರ್ವಜ್ಞ॥

ಎಂದು ಹೇಳಿದ್ದಾನೆ. ಆ ಪ್ರಕಾರ ನಮಗೆ ಶಿವಲೋಕವು ದೊರೆಯಬೇಕಾದರೆ ನಾವು ಶಿವಪೂಜೆ, ಶಿವಭಜನೆ, ಮೊದಲಾದವುಗಳನ್ನು ಭಕ್ತಿ ಭಾವದಿಂದ ಮಾಡಲೇಬೇಕು. ನಮಗೆ ಈ ಶಿವಲಿಂಗದ ಸಕಲಸಂಗತಿಗಳು ಚೆನ್ನಾಗಿ ತಿಳಿಯಬೇಕು. ನಾವು ಕೂಸಾಗಿರುವಾಗ ನಮಗೆ ಲಿಂಗವನ್ನು ಧರಿಸಿರುತ್ತಾರಷ್ಟೇ. ಆಗ ನಮಗೆ ಆ ಲಿಂಗದ ಪೂಜೆಯ ರೀತಿ ಮೊದಲಾದವುಗಳೇನಾದರೂ

ಗೊತ್ತಾಗಿರುತ್ತವೆಯೇ? ಇಲ್ಲವೇ ಇಲ್ಲ. ಆದುದರಿಂದ ೮-೧೦ ವರ್ಷದವರಾಗಿ ತಿಳುವಳಿಕೆಯುಳ್ಳವರಾದ ನಂತರ ಒಳ್ಳೆಯ ಗುರುಗಳಿಂದ ದೀಕ್ಷೆಯನ್ನು ಹೊಂದಬೇಕು. ಹಾಗೆ ದೀಕ್ಷೆಯನ್ನು ಹೊಂದದೆ ಲಿಂಗಪೂಜೆಯನ್ನು ಮಾಡಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಆದಕಾರಣ ನೀನು ದೀಕ್ಷೆಯನ್ನು ಹೊಂದಿ ಲಿಂಗಪೂಜೆಯನ್ನು ಭಕ್ತಿ ವಿಶ್ವಾಸಗಳಿಂದ ಮಾಡು. ಲಿಂಗವು ಇಷ್ಟ, ಪ್ರಾನ, ಭಾವ ಎಂದು ಮೂರು ಪ್ರಕಾರವಿದೆ. ನಮಗಿರತಕ್ಕ ಸ್ಥೂಲ, ಸೂಕ್ಷ್ಮ, ಕಾರಣಗಳೆಂಬ ಮೂರು ದೇಹಗಳಲ್ಲಿರತಕ್ಕ ಅಣವಮಲ, ಮಾಯಾಮಲ, ಕಾರ್ಮಿಕ ಮಲಗಳೆಂಬ ಮೂರು ಪಾಪಗಳು ನಿವಾರಣೆಯಾಗುತ್ತವೆ. ಈ ಎಲ್ಲ ಸಂಗತಿಗಳು ನಿನಗೆ ಈಗಲೇ ತಿಳಿಯುವುದಿಲ್ಲ. ಒಳ್ಳೆಯ ಗುರುಗಳಿಂದ ನೀನು ವೇಧಾ, ಮನು, ಕ್ರಿಯಾದೀಕ್ಷೆಗಳನ್ನು ಹೊಂದಿದ ನಂತರ ಗೊತ್ತಾಗುವವು. ಆದುದರಿಂದ ತಮ್ಮಾ, ನೀನು ಮೊದಲು ದೀಕ್ಷೆಯನ್ನು ಹೊಂದು.

ನೀನು ಧರಿಸತಕ್ಕ ಇಷ್ಟಲಿಂಗವನ್ನು ನೀನೆಂದೂ ಬಿಟ್ಟರಬೇಡ. ನೀನು ಆ ಶಿವನನ್ನು ಬಿಟ್ಟರೆ ಆತನೂ ನಿನ್ನನ್ನು ಬಿಟ್ಟು ಹೋಗುವನು. ನೀನು ಪ್ರೇಮದಿಂದ ಯಾವಾಗಲೂ ನಿನ್ನ ಹತ್ತಿರವೇ ಇಟ್ಟುಕೊಂಡರೆ ಆ ಶಿವನು ಕೂಡಾ ನಿನ್ನನ್ನು ಪ್ರೀತಿಸುವನು. ನೀನು ಆ ಲಿಂಗಮೂರ್ತಿಯನ್ನು ನಿನ್ನ ಶಿರಸ್ಸು, ಕಂಠ, ಕಂಕಳು, ಎದೆ, ಮತ್ತು ಹಸ್ತಗಳಲ್ಲಿ ಯಾವುದಾದರೊಂದು ಕಡೆ ಧರಿಸಬೇಕೆಂದು ಶಾಸ್ತ್ರದಲ್ಲಿ ಹೇಳಿದೆ. ಈ ಐದು ಸ್ಥಾನಗಳಲ್ಲಿ ಕಂಠ ಮತ್ತು ಎದೆಗಳೇ ನಿನಗೆ ಧರಿಸಲು ಬಹು ಅನುಕೂಲ ಸ್ಥಾನಗಳು.

ನೀನು ಯಾವ ಪದಾರ್ಥವನ್ನು ತಿನ್ನಬೇಕಾದರೂ ನಿನ್ನ ಇಷ್ಟಲಿಂಗಕ್ಕೆ ಭಕ್ತಿಭಾವದಿಂದ ತೋರಿಸಿಯೇ ತಿನ್ನಬೇಕು. ಶಿವನೇ ನಮಗೆ ಪದಾರ್ಥಗಳನ್ನು ಉಂಟುಮಾಡಿ ಕೊಟ್ಟಿದ್ಧಾನೆ. ಆತನ ಪದಾರ್ಥಗಳನ್ನು ವೊದಲು ಆತನಿಗೆ ಕೊಡದೆ ನಾವೇ ತೆಗೆದುಕೊಂಡರೆ ಪಾಪಮಾಡಿದಂತಾಗುವುದಿಲ್ಲವೇ? ಆದುದರಿಂದ ಸರ್ವಜ್ಞನು

ಲಿಂಗಕ್ಕೆ ತೋರಿಸದೆ। ಅಂಗಕ್ಕೆ ಕೊಂಡರೆ।
ತಿಂಗಳಲಿ ಸತ್ತ ಹಳೆನಾಯಿ। ಮಾಂಸವನು
ನುಂಗಿದಂತಕ್ಕು ಸರ್ವಜ್ಞ॥

ಎಂದು ನಾಯಿಯ ಮಾಂಸವನ್ನು ತಿಂದಂತಹ ಪಾಪ ಬರುತ್ತದೆಂದು ಹೇಳಿದ್ದಾನೆ. ಆದುದರಿಂದ ಲಿಂಗಕ್ಕೆ ತೋರಿಸದೆ ಏನನ್ನೂ ತಿನ್ನಬೇಡ. ತಿಳಿಯಿತೇ? ತಮ್ಮಾ, ಲಿಂಗವನ್ನು ಬಿಟ್ಟಿರಬೇಡ, ಲಿಂಗವನ್ನು ಸರಿಯಾದ ಸ್ಥಾನದಲ್ಲಿ ಧರಿಸು, ಲಿಂಗಕ್ಕೆ ಅರ್ಪಿಸದೆ ಸೇವಿಸಬೇಡ. ಈ ಮೂರು ನಿಯಮಗಳನ್ನಾದರೂ ತಪ್ಪದೇ ನಡೆಯಿಸು.

(೩) ಅಷ್ಟಾವರಣಗಳಲ್ಲಿ ಗುರು ಮತ್ತು ಲಿಂಗಗಳ ಸಂಬಂಧವಾಗಿ ಹೇಳಿದೆನು. ಇನ್ನು ಜಂಗಮ ವಿಷಯ, ಜಂಗಮವೆಂದರೆ ಜಗತ್ತಿನ ಜಂಜಾಟ ಬಿಟ್ಟವರು. ಇವರು ಜಗತ್ತಿನ ಹಿತಕ್ಕಾಗಿಯೇ ದೇಶಾಂತರಗಳಲ್ಲಿ ಸಂಚರಿಸಿ ಜನರ ದುಃಖವನ್ನು ದೂರಮಾಡುವರು. ಆದಕಾರಣ ಇವರು ಜಗದ್ಗುರುಗಳು. ಲಿಂಗಮೂರ್ತಿಯ ಸಂಬಂಧವಾಗಿ ನಿಜವಾದ ಅರುವನ್ನು ಹುಟ್ಟಿಸಿ ನಾವೂ ಲಿಂಗಮೂರ್ತಿಗಳೇ ಆಗುವಂತೆ ಮಾಡುವರು. ಶಿವಜೀವೈಕ್ಯವನ್ನು ತಿಳಿಸುವ ಜ್ಞಾನಮೂರ್ತಿಗಳೇ

ಜಂಗಮರು, ಜಂಗಮರ ದರ್ಶನಾಶೀರ್ವಾದಗಳಿಂದಲೇ ನಾವು ಶಿವನನ್ನು ಸೇರುವೆವು. ನಮಗೆ ಗುರುಗಳು ಲಿಂಗವನ್ನುಕೊಟ್ಟಿರುವುದರಿಂದ ಜಂಗಮವೇಕೆ? ಲಿಂಗಪೂಜೆಯೊಂದೇ ಸಾಕೆಂದರೆ ಶಿವನನ್ನು ಸೇರಲಾಗುವುದಿಲ್ಲ. ಆದುದರಿಂದ ಮಹಾನುಭಾವರಾದ ಬಸಣ್ಣನವರು

"ಜಂಗಮ ನಿಂದೆಯ ಮಾಡಿ
ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೋ
ಶಿವ ಶಿವ ನಿಂದಿಸುವ ಪೂಜಿಸುವ ಪಾತಕನ ಕೇಳಲಾಗದು
ಗುರುವಿನ ಗುರು ಜಂಗಮವಿಂತೆಂದುದು
ಕೂಡಲ ಸಂಗನ ವಚನ"

ಎಂದು ಹೇಳಿದ್ಧಾರೆ. ಅಂಥ ಯೋಗ್ಯ ಜಂಗಮರ ದರ್ಶನಾಶೀರ್ವಾದಗಳನ್ನು ಹೊಂದಿದರೆ ನಮಗೆ ಹಿತಕರವಲ್ಲದೆ ಹೆಸರಿಗೆ ಮಾತ್ರ ಜಂಗಮರಾಗಿರತಕ್ಕವರ ಸಹವಾಸದಲ್ಲಿದ್ದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಅನೇಕ ಕೇಡುಗಳಾದರೂ ಆಗಬಹುದು. ಆದಕಾರಣ ನೀನು ಯೋಗ್ಯ ಜಂಗಮರ ದರ್ಶನಕ್ಕೆ ಮಾತ್ರ ಹೋಗು.

ಜಂಗಮರಲ್ಲಿ ಸ್ಥಿರ, ಚರ, ಪರ, ಎಂಬ ಮೂರು ಪ್ರಕಾರಗಳಿವೆ. ಆ ವಿಷಯಗಳನ್ನೆಲ್ಲಾ ನೀನು ಈಗಲೇ ತಿಳಿದುಕೊಳ್ಳಬೇಕಾದುದಿಲ್ಲ. ಒಳ್ಳೆಯ ಗುರುಗಳ ಉಪದೇಶದಿಂದ ನಾವು ಉದ್ಧಾರವಾಗುತ್ತೇವೆ. ಆದರೆ ಯೋಗ್ಯ ಜಂಗಮರ ದರ್ಶನಮಾತ್ರದಿಂದಲೇ ನಾವು ಪವಿತ್ರರಾಗುತ್ತೇವೆ. ಆದುದರಿಂದಲೇ ಜಂಗಮರು ಗುರುಗಳಿಗೂ ಗುರುಗಳಾಗಿದ್ದಾರೆಂದು ಬಸವಣ್ಣನವರು ಹೇಳಿದ್ದಾರೆ. ಬೇರೆ ಮತದವರು ಗುರು ಮತ್ತು ಅವತಾರಿ ಗುರುಗಳೆಂದು ಹೇಳುತ್ತಾರೆ ನಮ್ಮ ಮತದಲ್ಲಿ ಗುರು ಮತ್ತು ಜಂಗಮವೆಂದು ಹೇಳಿದೆ.ನಮ್ಮ ಮತವನ್ನು ಉದ್ಧಾರಮಾಡುವದಕ್ಕೋಸ್ಕರ ಆಗಾಗ್ಗೆ ಜಂಗಮಮೂರ್ತಿಗಳು ಅವತರಿಸುತ್ತಾರೆ. ಆ ಪ್ರಕಾರ ಈಗ ೮೦೦ ವರ್ಷಗಳ ಹಿಂದೆ ಪ್ರಭುದೇವರೆಂಬ ಜಂಗಮಮೂರ್ತಿಗಳು, ಅವರತಿಸಿದ್ದರು. ಅವರ ಸಂಪ್ರದಾಯದ ಜಂಗಮ ಮೂರ್ತಿಗಳೇ ಚಿತ್ರದುರ್ಗ, ಹುಬ್ಬಳ್ಳಿ, ಗದಗ, ಉರವಕೊಂಡೆ ಈ ಸ್ಥಳಗಳ ಮುಖ್ಯ ಪೀಠಗಳಲಿದ್ದಾರೆ. ಈ ಪೀಠಗಳಿಗೆ ಸಂಬಂಧಿಸಿದ ಸಾವಿರಾರು ಮಠಗಳೂ ಇವೆ. ಇವುಗಳಲ್ಲಿರತಕ್ಕ ಜಂಗಮಮೂರ್ತಿಗಳಿಗೆ ವಿರಕ್ತ ಸ್ವಾಮಿಗಳೆಂತಲು ಹೇಳುವುದುಂಟು.

ಈ ಪ್ರಕಾರ ನಮಗೆ. ಅತ್ಯಂತ ಪೂಜ್ಯವಾಗಿರತಕ್ಕ ಗುರುಲಿಂಗ, ಜಂಗಮಗಳಿಗೆ ನಮ್ಮ ತನು ಮನಧನಗಳನ್ನು ಅರ್ಪಿಸಿದರೆ ನಾವು ಪವಿತ್ರರಾಗುತ್ತೇವೆ. ಗುರುಸೇವೆಯನ್ನು ನಾವು ದೇಹ ದಂಡಿಸಿ ಮಾಡಬೇಕು. ನಮ್ಮ ಮನಸ್ಸನ್ನು ಯಾವಾಗಲೂ ಲಿಂಗದಲ್ಲಿಯೇ ಇಡಬೇಕು. ನಾವು ನಮ್ಮ ಸಂಪತ್ತನ್ನು ಜಂಗಮಮೂರ್ತಿಗಳ ಸೇವೆಗೆ ಸಲ್ಲಿಸಬೇಕು. ಇವುಗಳಿಗೇನೆ ತ್ರಿವಿಧ ದಾಸೋಹವೆಂದು ಹೇಳುತ್ತಾರೆ. ನಾವು ಈ ಪ್ರಕಾರ ಮೊದಲು ದಾಸಭಾವದಿಂದ ನಡೆದುಕೊಂಡರೆ ಕೊನೆಗೆ ನಾವೇ ಈಶರಾಗುತ್ತೇವೆ. ಶಿವನ ಮೂರು ರೂಪಗಳಾದ ಗುರು, ಲಿಂಗ, ಜಂಗಮಗಳಿಗೆ ಮೊದಲು ದಾಸನಾದಾತನೇ ಕೊನೆಗೆ ಈಶನಾಗುತ್ತಾನೆ. ಇದೇ ದಾಸೋಹಂ ಅಥವಾ ದಾಸೋಹ.

ಇನ್ನು ೪ ನೆಯದಾದ ಪಾದೊದಕರ ವಿಷಯವಾಗಿ ಸ್ವಲ್ಪ ಹೇಳುತ್ತೇನೆ. ಗುರುಲಿಂಗ ಜಂಗಮಗಳ ಪದತೀರ್ಥವೇ ಪಾದೋದಕವು. ಈ ಗುರುಪಾದೋದಕ. ಲಿಂಗ ಪಾದೋದಕ, ಮತ್ತು ಜಂಗಮ

ಪಾದೋದಕಗಳನ್ನು ನಾವು ಭಕ್ತಿ ವಿಶ್ವಾಸಗಳಿಂದ ಸೇವಿಸಬೇಕು. ಈ ಪಾದೋದಕವು ಹತ್ತು ವಿಧವಾಗಿದೆ. ಇದನ್ನು ಸೇವಿಸುವ ರೀತಿ ಮೊದಲಾದವುಗಳನ್ನು ನೀನು ದೀಕ್ಷೆ ಹೊಂದಿದರೆ ಗುರುಗಳು ತಿಳುಹಿಸಿಕೊಡುತ್ತಾರೆ.

ಗುರು ಲಿಂಗ ಜಂಗಮರಿಗೆ ಅರ್ಪಿಸಿ ಮಿಕ್ಕುದನ್ನು ಸೇವಿಸುವುದೇ ಪ್ರಸಾದವು. ಗುರುಪ್ರಸಾದಕ್ಕೆ ಶುದ್ಧ ಪ್ರಸಾದವೆಂತಲೂ, ಲಿಂಗ ಪ್ರಸಾದಕ್ಕೆ ಸಿದ್ದ ಪ್ರಸಾದವೆಂತಲೂ, ಜಂಗಮ ಪ್ರಸಾದಕ್ಕೆ ಪ್ರಸಿದ್ಧಪ್ರಸಾದವೆಂತಲೂ ಹೇಳುತ್ತಾರೆ. ಈ ಯಾವ ಪ್ರಸಾದವನ್ನೇ ಆಗಲಿ ಸ್ವಲ್ಪವಾದರೂ ಕೆಳಗೆ ಚೆಲ್ಲದಂತೆ ಅಥವಾ ಬಟ್ಟಲಲ್ಲಿ ಬಿಡದಂತೆ ಸೇವಿಸಬೇಕು. ನೀನು ಊಟ ಮಾಡುವ ಮುಂಚೆ ಇಷ್ಟಲಿಂಗಕ್ಕೆ ಅರ್ಪಿಸಿಯೇ ಊಟ ಮಾಡಬೇಕೆಂದು ಈ ಮುಂಚೆ ಹೇಳೀದ್ದೇನಷ್ಟೇ. ಆಗ ಬಹು ಎಚ್ಚರಿಕೆ ಇರಲಿ, ಬಹು ಜನರು ಊಟದ ಬಟ್ಟಲಸುತ್ತಲೂ ಕೋಳಿ ಕೆದರಿದಂತೆ ಚೆಲ್ಲುತ್ತ ಊಟಮಾಡುತ್ತಾರೆ. ಇದು ಬಹು ಅನ್ಯಾಯ ಶಿವನಿಗೆ ಒಪ್ಪಿಸಿದ ವಸ್ತುಗಳನ್ನು ಹಾಗೆ ಚೆಲ್ಲಬಹುದೇ? ನಾವು ಆತನ ಪ್ರಸಾದವನ್ನು ಹಾಗೆ ಉಪೇಕ್ಷೆ ಮಾಡಿದರೆ ನಮಗೆ ಒಳ್ಳೆಯದಾಗುವುದೇ? ಇಲ್ಲವೇ ಇಲ್ಲ, ದೊಡ್ಡವರು ಕೊಟ್ಟದ್ದನ್ನು ನಾವು ಅಲ್ಲಗಳೆದರೆ ಅವಮಾನ ಮಾಡಿದಂತಾಗಲಿಲ್ಲವೇ? ಆದಕಾರಣ ಶಿವಪ್ರಸಾದವನ್ನು ಸ್ವಲ್ಪವೂ ಕೆಳಗೆ ಚೆಲ್ಲದಂತೆ, ಬಟ್ಟಲಲ್ಲಿ ಸ್ವಲ್ಪವೂ ಬಿಡದಂತೆ, ಸೇವಿಸಬೇಕು. ಇದರಿಂದ ಬಹು ಪ್ರಯೋಜನವಿದೆ, ಆದುದರಿಂದಲೇ, ಸರ್ವಜ್ಞ ಕವಿಯು,

ಈಶ ಪ್ರಸಾದವನು। ಸೋಸದಲೆ ತಾ ಕೊಳ್ಳೆ।
ಶಾಶ್ವತ ಪದವಿ ತಾನಕ್ಕು। ಜಗಕೆಲ್ಲ
ಈಶ್ವರನೆ ಅಕ್ಕು ಸರ್ವಜ್ಞ॥

ಎಂದು ಹೇಳಿದ್ದಾನೆ. ಆದುದರಿಂದ ನೀನು ಇನ್ನು ಮೇಲೆ ಊಟ ಮಾಡುವಾಗ ಬಹು ಎಚ್ಚರಿಕೆಯಿಂದಿರು. ಪ್ರಸಾದವು ಮೂರು ಪ್ರಕಾರಗಳುಳ್ಳದ್ದಾಗಿದ್ದರೂ ಅದು ೧೧ ರೀತಿಗಳುಳ್ಳದ್ದಾಗಿದೆ. ಆ ಸಂಗತಿಗಳೆಲ್ಲ ನಿನಗೆ ಮುಂದೆ ತಿಳಿಯುವವು.

ಇನ್ನು ವಿಭೂತಿಯ ವಿಷಯವಾಗಿ ಸ್ವಲ್ಪ ಕೇಳು, ಗೋಮಯವನ್ನು ಶುದ್ದಗೊಳಿಸಿ ಮಾಡಿದ ಭಸ್ಮವನ್ನೇ ನಾವು ಧರಿಸಬೇಕು. ಈ ಭಸ್ಮವು ಶಿವನ ಮೈ ಬೆಳಕೆಂಬ ನಂಬಿಗೆಯು ನಮಗಿರಬೇಕು. ಇದನ್ನು ಬಲಹಸ್ತದ ಕಿರಿ ಬೆರಳು ಮತ್ತು ಹೆಬ್ಬೆರಳುಗಳನ್ನು ಬಿಟ್ಟು ಮೂರು ಬೆರಳುಗಳಿಂದ ಧರಿಸಬೇಕು. ಹೆಣ್ಣು ಮಕ್ಕಳು ಕೂಡಾ ಹೀಗೆ ಮೂರು ಬೆರಳುಗಳಿಂದ ಧರಿಸಬೇಕೇ ವಿನಾ ೨ ಬೆರಳುಗಳಿಂದ ಧರಿಸಬಾರದು. ಈ ಭಸ್ಮವನ್ನು ಭಕ್ತಿ ವಿಶ್ವಾಸಗಳಿಂದ ತಲೆ, ಹಣೆ, ಎರಡೂ ಕಿವಿ, ಕೊರಳು, ಎರಡೂ ಭುಜ, ಎದೆ ಹೊಕ್ಕಳು, ಬೆನ್ನು ಎರಡೂ ತೋಳು, ಕುತ್ತಿಗೆ ಮತ್ತು ಎರಡೂ ಮುಂಗೈ ಈ ಪ್ರಕಾರ ೧೫ ಸ್ಥಳಗಳಲ್ಲಿ ಧರಿಸಬೇಕೆಂದು ಶಾಸ್ತ್ರದಲ್ಲಿ ಹೇಳಿದೆ ನೀನು ಶಿವಭಕ್ತನಾದುರಿಂದ ನಿನ್ನ ಹಣೆಯಲ್ಲಿ ಯಾವಾಗಲೂ ಭಸ್ಮವಿರಬೇಕು. ಅದು ಬಹು ಮಂಗಲಕರವಾದುದು. ಆದುದರಿಂದಲೇ ಬಸವಣ್ಣನವರು; ನೀರಿಗೆ ನೈದಿಲೆ ಶೃಂಗಾರ, ಊರಿಗೆ ಅರಸನೇ ಶೃಂಗಾರ , ಸಮುದ್ರಕ್ಕೆ ನೆರೆಯೇ ಶೃಂಗಾರ, ನಾರಿಗೆ ಗುಣವೇ ಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ, ಕೂಡಲಸಂಗನ ಶರಣರ ನೊಸಲಿಗೆ ವಿಭೂತಿಯೇ ಶೃಂಗಾರ ಎಂದು ಹೇಳಿದ್ಧಾರೆ. ಈ ಭಸ್ಮವನ್ನು ಎದ್ದು ನಿಂತಾಗಲಿ, ತುದಗುಂಡಿಯಲ್ಲಿ ಕುಳಿತಾಗಲೀ, ಎಂದೂ ಧರಿಸಬೇಡ. ಚಾಪಿ ಮೊದಲಾದ

ಆಸನಗಳ ಮೇಲೆ ಸರಿಯಾಗಿ ಕುಳಿತುಕೊಂಡೇ ಧರಿಸು. ಧರಿಸಿಕೊಳ್ಳುವ ಭಸ್ಮವನ್ನು ಕಂಡಕಂಡಲ್ಲಿ ಚೆಲ್ಲಬೇಡ. ಕೈಕಾಲು ಮೋರೆಗಳನ್ನು ತೊಳೆದುಕೊಳ್ಳದೆ ಮುಟ್ಟಬೇಡ. ಈ ಪ್ರಕಾರ ಭಕ್ತಿಭಾವದಿಂದ ಅದನ್ನು ನೀನಿಟ್ಟುಕೊಂಡು ಧರಿಸಿದರೆ ಒಳ್ಳೆಯದಾಗುವುದು.

ಅಷ್ಟಾವರಣಗಳಲ್ಲಿ ಏಳನೆಯದು ರುದ್ರಾಕ್ಷಿಯು. ಶಿವನು ತ್ರಿಪುರ ಸಂಹಾರ ಮಾಡುವಾಗ ಮೂರು ಕಣ್ಣುಗಳನ್ನು ತೆರೆದಿದ್ದನು. ಆ ಕಣ್ಣುಗಳಿಂದ ನೀರಿನ ಹನಿಗಳು ಭೂಮಿಗೆ ಬಿದ್ದವು. ಆ ಹನಿಗಳಿಂದ ಹುಟ್ಟುದವುಗಳೇ ರುದ್ರಾಕ್ಷಿಗಳೆಂದು ನಮ್ಮ ಮತದಲ್ಲಿ ಹೇಳಿದೆ. ಇವು ಒಂದರಿಂದ ಅನೇಕ ಮುಖಗಳುಳ್ಳವುಗಳಿವೆ. ಇಂತಹ ಮುಖದ ರುದ್ರಾಕ್ಷಿಗಳನ್ನು ಇಂಥ ಸ್ಥಾನದಲ್ಲಿಯೇ ಧರಿಸಬೇಕೆಂದು ನಿಯಮವಿದೆ. ಆ ಪ್ರಕಾರ ಧರಿಸುವುದೇ ಉತ್ತಮವು. ಕೊನೆಗೆ ಒಂದು ರುದ್ರಾಕ್ಷಿಯನ್ನಾದರೂ ನೀನು ಭಕ್ತಿಯಿಂದ ಎದೆ ಅಥವಾ ಕೊರಳಲ್ಲಿ ಧರಿಸು. ಈ ಪ್ರಕಾರ ಭಸ್ಮ ರುದ್ರಾಕ್ಷಿಗಳನ್ನು ಭಕ್ತಿಯಿಂದ ಧರಿಸಿದರೆ

ರುದ್ರಾಕ್ಷಿ ಭಸಿತವನು। ಹೊದ್ದಿರಲು ದೇಹದೊಳಿದ್ದ।
ಪಾಪಗಳು ಬಯಲಾಗಿ ಶಿವನು। ತಾ ನಿದ್ದಲ್ಲಿಯೇ
ಬರುವ ಸರ್ವಜ್ಞ॥

ಎಂದು ಸರ್ವಜ್ಞ ಕವಿಯು ಹೇಳಿದಂತೆ ಶಿವನು ಮೆಚ್ಚುವನು.

ಅಷ್ಟಾವರಣಗಳಲ್ಲಿ ಕೊನೆಯದು ಮಂತ್ರ, ಮನಸ್ಸನ್ನು ನಿಲ್ಲಿಸುವುದರಿಂದಲೇ ಇದಕ್ಕೆ ಮಂತ್ರವೆಂದು ಹೇಳುತ್ತಾರೆ. ನಾವು ದೀಕ್ಷೆ ಹೊಂದುವಾಗ ಗುರುಗಳು ನಮಗೆ ಶಿವಪಂಚಾಕ್ಷರಿ ಅಥವಾ ಶಿವಷಡಾಕ್ಷರಿ ಮಂತ್ರವನ್ನು ಉಪದೇಶ ಮಾಡುತ್ತಾರೆ. ಅದನ್ನು ನಾವು ಭಕ್ತಿವಿಶ್ವಾಸಗಳಿಂದ ಜಪಿಸಬೇಕು. ಹಾಗೇ ಮಾಡಿದರೆ ಹರಿದಾಡುವ ಮನಸ್ಸು ಶಿವನ ಪಾದದಲ್ಲಿಯೇ ನಿಲ್ಲುತ್ತದೆ. ಅನೇಕರು ಈ ಮಂತ್ರವನ್ನು ಕೂಗಿ ಕೂಗಿ ಹೇಳುತ್ತಾರೆ. ಹಾಗೇ ಹೇಳಬಾರದು. ಅದರಿಂದ ಮನಸ್ಸನ್ನು ತಡೆಯಲಿಕ್ಕಾಗುವುದಿಲ್ಲ. ಮತ್ತು ಶಿವನು ಪತಿಯೆಂತಲೂ ನಾವು ಆತನ ಸತಿಯೆಂತಲು ತಿಳಿದು ಪೂಜಿಸತಕ್ಕವರಾಗಿದ್ದೇವೆ. ಗರತಿಯಾದ ಹೆಣ್ಣು ಮಗಳು ತನ್ನ ಗಂಡನ ಹೆಸರನ್ನು ಬಿಚ್ಚಿ ಹೇಳುತ್ತಾಳೆಯೇ? ಇಲ್ಲವೇ ಇಲ್ಲ. ಅದರಂತೆ ನಾವಾದರೂ ನಮ್ಮ ಶಿವಮಂತ್ರವನ್ನು ಬಾಯಿಬಿಚ್ಚಿ ಹೇಳಬಾರದು. ನಮ್ಮ ಮನಸ್ಸನ್ನು ನಿಲ್ಲಿಸಲು ಈ ಮಂತ್ರವು ಬಹು ಸಹಾಯ ಮಾಡುತ್ತದೆ. ಆದುದರಿಂದ ನೀನು ಶಿವಪೂಜೆಯ ಕಾಲದಲ್ಲಿ ಒಂದೆರಡು ನಿಮಿಷವಾದರೂ ಶಿವನಲ್ಲಿ ಭಕ್ತಿಭಾವವನ್ನಿಟ್ಟು ಈ ಮಂತ್ರವನ್ನು ಜಪಿಸು.

ಅಷ್ಟಾವರಣಗಳ ಈ ಸಂಕ್ಷಿಪ್ತ ಸಂಗತಿಗಳನ್ನಾದರೂ ನೆನಪಿನಲ್ಲಿಟ್ಟುಕೊಂಡು ಆಚರಿಸು.

ಇವುಗಳ ವಿಷಯವು ಇಷ್ಟಕ್ಕೇ ತೀರಲಿಲ್ಲ. ಮತಗ್ರಂಥಗಳಲ್ಲಿ ಬಹು ವಿಸ್ತಾರವಾಗಿ ಹೇಳಿದ್ದಾರೆ. ಈ ಅಷ್ಟಾವರಣಗಳಿಗೆ ಬಾಹ್ಯಅಷ್ಟಾವಾರಣಗಳೆನ್ನುತ್ತಾರೆ. ಅರುವೇ ಗುರುವು, ಪ್ರಾಣವೇ ಲಿಂಗ, ಸುಜ್ಞಾನವೇ ಜಂಗಮ, ಪಂಚಜ್ಞಾನೇಂದ್ರಿಯಗಳೇ ಪಾದೋದಕಾದಿ ಬೇರೆ ಆವರಣಗಳು. ಅವುಗಳಿಗೆ ಅಷ್ಟಾವರಣಗಳೆನ್ನುತ್ತಾರೆ. ಇವುಗಳ ರಹಸ್ಯವನ್ನು ತಿಳಿದುಕೊಂಡಾಗಲೇ ಈ ಮತದ ಅಷ್ಟಾವರಣಗಳ ಮಹತ್ವವು ಗೊತ್ತಾಗುತ್ತದೆ. ಅವೆಲ್ಲ ಕಠಿಣ ವಿಷಯಗಳು. ಇಷ್ಟೇ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಂಡು ಆಚರಿಸಿದ್ಧಾದರೆ ಮುಂದೆ ನಿನಗೆ ಹೆಚ್ಚಿನ ಸಂಗತಿಗಳನ್ನು ತಿಳಿದುಕೊಳ್ಳತಕ್ಕ ಅಪೇಕ್ಷೆ ಮತ್ತು ಸಾಮರ್ಥ್ಯಗಳುಂಟಾಗಿ ಶ್ರೀ ಗುರುವಿನಿಂದ ನಿನಗೆ ಯೋಗ್ಯ ಉಪದೇಶವಾಗುವುದು.

ಪಂಚಾಚಾರಗಳು

(೧) ಲಿಂಗಾಚಾರ : ಶ್ರೀಗುರುವು ನಮಗೆ ಕೊಟ್ಟಿರತಕ್ಕ ಇಷ್ಟಲಿಂಗದ ವಿನಾ ಬೇರೆ ಯಾವ ಮೂರ್ತಿಯನ್ನೂ ನಾವು ಪೂಜಿಸಬಾರದು. ನಾವು ನಮ್ಮ ಭಕ್ತಿಭಾವಗಳನ್ನೆಲ್ಲಾ ಶಿವಲಿಂಗ ಪೂಜೆಯಲ್ಲಿಯೇ ಇಡಬೇಕು. ನಮಗೆ ಶಿವನು ಪತಿಯೆಂತಲೂ ನಾವು ಆತನ ಸತಿಯೆಂತಲೂ ತಿಳಿದುಕೊಳ್ಳಬೇಕೆಂದು ಈ ಮುಂಚೆ ನಾನು ಹೇಳಿಲ್ಲವೇ? ಗರತಿಯಾದ ಹೆಣ್ಣುಮಗಳು ತನ್ನ ಗಂಡನಲ್ಲಿಟ್ಟ ಭಕ್ತಿಭಾವನೆಗಳನ್ನು ಬೇರೆಯಲ್ಲಿಡುವಳೇ? ಇಲ್ಲವೇ ಇಲ್ಲ. ಹಾಗೆಯೇ ನಾವು ನಮ್ಮ ಶಿವಲಿಂಗ ಮತ್ತು ಶಿವರೂಪಗಳಾದ ಇಟ್ಟರೆ ಪಾಪಿಗಳಾಗುತ್ತೇವೆ. ಆದುದರಿಂದಲೇ ಶ್ರೀ ಬಸವಣ್ಣನವರು.

ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣೀರೋ,
ನಂಬಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ,'
ಬೇಡೆ; ಬೇಡ ಅನ್ಯದೈವದ ಸಂಗ ಹೊಲ್ಲ,
ಅನ್ಯದೈವವೆಂಬುದು ಹಾದರ ಕಾಣಿರೋ,
ಕೂಡಲಸಂಗಮದೇವರು ಕಂಡರೆ ಮೂಗ ಕೊಯ್ಯುವ ಕಾಣಿರೋ

ಎಂದು ಹೇಳಿದ್ದಾರೆ. ಆದುದರಿಂದ ನೀನು ನಿನ್ನ ಇಷ್ಟಲಿಂಗದ ವಿನಾ ಬೇರೆ ಯಾವ ದೇವರ ಪೂಜೆಗಳನ್ನೂ ಮಾಡಬೇಡ. ಕೆಲವರು ತಾವು ಲಿಂಗವನ್ನ ಧರಿಸಿದ್ದರೂ ಬಸವಣ್ಣ, ವೀರಭದ್ರ, ಹನುಮಪ್ಪ, ಮಲ್ಲಯ್ಯ, ವೀರಣ್ಣ, ಕಾಳವ್ವ ಮೊದಲಾದ ಅನೇಕ ದೇವರುಗಳ ಪೂಜೆಯನ್ನು ಮಾಡುತ್ತಾರೆ. ನೀನು ಹಾಗೆಂದಿಗೂ ಮಾಡಬೇಡ. ನೀನು ಇಷ್ಟಲಿಂಗದ ವಿನಾ ಬೇರೆ ಯಾವ ದೇವರಿಗೂ ನಡೆದುಕೊಳ್ಳಬಾರದೆಂದ ಮಾತ್ರದಲ್ಲಿ ಆ ಬೇರೆ ದೇವರುಗಳನ್ನು ಅಲ್ಲಗಳೆಯ ಬೇಕೆಂದಲ್ಲ. ಅಥವಾ ಅವುಗಳನ್ನು ದ್ವೇಷಿಸ ಬೇಕೆಂದಲ್ಲ, ಹಾಗೆಂದಿಗೂ ಮಾಡಬಾರದು. ಬೇರೆ ದೇವರುಗಳ ವಿಷಯದಲ್ಲಿ ಅದರ ಭಾವನೆಯನ್ನಿಡು. ಅದರ ಅವುಗಳ ಪೂಜೆ ಭಜನೆಗಳನ್ನು ನೀನು ಮಾಡಬೇಡ. ಇದೇ ಲಿಂಗಾಚಾರದ ಮುಖ್ಯ ನಿಯಮವು.

(೨) ಸದಾಚಾರ : ಒಳ್ಳೆಯ ಉದ್ಯೋಗವನ್ನು ಮಾಡಿ ಹಣ ಸಂಪಾದಿಸಿ ಅದನ್ನು ಗುರುಲಿಂಗ ಜಂಗಮಗಳ ಸೇವೆಗೊಪ್ಪಿಸು. ಬಡಜನಗಳ ಹೊಟ್ಟೆ ಬಟ್ಟೆಗಳಿಗಾಗಿ ನೀನು ಗಳಿಸಿದ ಹಣವನ್ನು ಸೂರೆಮಾಡು. ಹೀಗೆ ನೀನು ಕಷ್ಟಪಟ್ಟು ಹಣಗಳಿಸಿ ಒಳ್ಳೇ ಕೆಲಸಗಳಿಗೆ ವೆಚ್ಚ ಮಾಡು, ಯಾರಿಗೂ ಹಿಂಸೆಪಡಿಸಬೇಡ. ಪರರ ವಸ್ತುಗಳನ್ನು ಅಪಹರಿಸಬೇಡ. ನಿನ್ನಂತೆಯೇ ಸಕಲ ಪ್ರಾಣಿಗಳಿಗೂ ಸುಖದುಃಖಗಳುಂಟಾಗುತ್ತಿರುವವೆಂದು ಅವುಗಳಲ್ಲಿ ಪ್ರೇಮವಿಟ್ಟು ನಡೆ. ಹೀಗೆ ನೀನು ಸತ್ಯದಿಂದ ನಡೆದರೆ ಅದೇ ಸದಾಚಾರವು.

(೩) ಶಿವಾಚಾರ : ವೀರಶೈವರೆಲ್ಲರೂ ಶಿವಸ್ವತೂಪಿಗಳೆಂದೇ ತಿಳಿ. ಅವರಲ್ಲಿ ಹೆಚ್ಚು ಕಡಿಮೆಗಳನ್ನು ಮಾಡಬೇಡ. ವೀರಶೈವರಲ್ಲಿ ಊಟ ಉಪಚಾರಗಳಿಗಾಗಲೀ, ಹೆಣ್ಣು ಕೊಡುಕೊಳ್ಳುವುದಕ್ಕಾಗಲೀ ಹಿಂದೆಮುಂದೆ ನೋಡಬೇಡ. ವೀರಶೈವರಲ್ಲಿ ಆಚಾರವನ್ನು ನೋಡಬೇಕಲ್ಲದೆ ಅವರ ಕುಲಕಸಬು ಮೊದಲಾದವುಗಳನ್ನು ಎಣಿಸಬಾರದು. ಸದಾಚಾರ ಶೀಲನಾದ ವೀರಶೈವನು ಯಾವ ಕುಲದವನೇ ಆಗಿರಲಿ, ಅಥವಾ ನೇಯುವ, ಉಳುವ, ಕೆತ್ತುವ, ಕಟ್ಟುವ ಮೊದಲಾದ ಯಾವ ಕಾಯಕವನ್ನೇ ಮಾಡುತ್ತಿರಲಿ, ಬಸವಣ್ಣನವರು ಈ ಶಿವಾಚಾರದ ವಿಷಯವಾಗಿ ಹೇಳಿರುವುದೇನೆಂದರೆ:

ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡೆನಾದಡೆ
ನಿಮ್ಮಾಣೆ, ನಿಮ್ಮ ಪುರಾತನರಾಣೆ,
ತಲೆದಂಡ ತಲೆದಂಡ,
ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ ನಿಮ್ಮ ರಾಣೀವಾಸದಾಣೆ.

ಆದುದರಿಂದ ಶಿವಭಕ್ತರಲ್ಲಿ ಹೆಚ್ಚು ಕಡಿಮೆಗಳನ್ನೆಣಿಸದೆ ಸಮಭಾವನೆಯಿಂದಲೇ ನಡೆಯಬೇಕು.

(೪) ಗಣಾಚಾರ: ಶಿವನಿಂದೆಯನ್ನು ಶಿವಭಕ್ತರ ದೂಷಣೆಯನ್ನು ಕಿವಿಗೊಟ್ಟು ಕೇಳಬೇಡ. ಆ ದೂಷಣೆಗಳು ನಿನ್ನ ಭಕ್ತಿ ವಿಶ್ವಾಸಗಳನ್ನು ಹಾಳು ಮಾಡುತ್ತವೆ. ಆಗ ನೀನು ದುಃಖಿಯಾಗುವಿ. ಆದುದರಿಂದ ಶಿವನಿಂದೆಯನ್ನು ಕಿವಿಗೊಟ್ಟು ಕೇಳಬೇಡ. ಇದೇ ಗಣಾಚಾರ.

(೫) ಭೃತ್ಯಾಚಾರ : ಶಿವಭಕ್ತರೆಲ್ಲರೂ ಪೂಜ್ಯರೆಂದು ತಿಳಿದು ಅವರಲ್ಲಿ ನಮ್ರ ಭಾವದಿಂದ ನಡೆದುಕೋ. ವೀರಶೈವರ ಒಂದು ಶಿಶುವು ಕೂಡಾ ಬಹು ಪೂಜ್ಯವಾದುದೆಂದು ಅದರ ಸೇವೆಯನ್ನು ಮಾಡಲು ಸಿದ್ಧನಾಗು.

ಈ ಪ್ರಕಾರ ಪಂಚಾಚಾರಗಳ ಮುಖ್ಯ ಲಕ್ಷಣಗಳನ್ನು ಲಕ್ಷದಲ್ಲಿಟ್ಟುಕೊಂಡು ಆಚರಿಸಿದರೆ ಬಹು ಒಳ್ಳೆಯದಾಗುವುದು. ನಿನಗೆ ಈ ಎಲ್ಲ ಆಚಾರಗಳ ಮುಖ್ಯ ಲಕ್ಷಣಗಳು ಜ್ಞಾಪಕದಲ್ಲಿರಬೇಕೆಂಬುದಕ್ಕೋಸ್ಕರ ಶ್ರೀ ಚನ್ನಬಸವಣ್ಣನವರು ಹೇಳಿರತಕ್ಕ ಒಂದು ವಚನವನ್ನು ನಿನಗೆ ತಿಳಿಸುತ್ತೇನೆ. ಅದನ್ನು ನೀನು ಚೆನ್ನಾಗಿ ಲಕ್ಷದಲ್ಲಿಟ್ಟುಕೊ.

ಲಿಂಗವೇ ಪರವೆಂದರಿದು ಅನ್ಯದೇವರಭಜನೆಯಿಲ್ಲದಿರ್ಪುದೇ ಲಿಂಗಾಚಾರ,
ಸತ್ಕ್ರಿಯೆಯಿಂದ ಧನ ಸಂಪಾದಿಸಿ
ಗುರು, ಲಿಂಗ, ಜಂಗಮ, ದಾಸೋಹ, ದಾನ, ಪರೋಪಕಾರ ಮಾಡುವುದೇ ಸದಾಚಾರ.
ಅಂಗದ ಮೇಲೆ ಲಿಂಗವಿರ್ಪ ಶಿವಭಕ್ತನೇ ಶಿವರೂಪವೆಂದರಿದು
ಅವರು ಮಂದಿರವಪೊಕ್ಕು ಮಿಕ್ಕಿದನುಂಬುದೇ ಶಿವಾಚಾರ.
ಶಿವನಿಂದೆಯ ಕಿವಿಗೊಟ್ಟು ಕೇಳದಿಪ್ಪುದೇ ಗಣಾಚಾರ.
ಶಿವಭಕ್ತರ ಶಿಶುವು ತೊಟ್ಟಿಲಲ್ಲಿರ್ಪುದ ಕಂಡು
ಯಜಮಾನನೆಂದರಿದು ನಮ್ರಭಾವದಿಂ ನಡೆದುಕೊಳ್ಳುವುದೇ ಭೃತ್ಯಾಚಾರ.
ಇಂತೀ ಪಂಚಾಚಾರ ಸಂಯುಕ್ತನಿಕ್ಕಿ ಸಲಹೋ ಕೂಡಲಚೆನ್ನಸಂಗಮದೇವ.

ಷಟಸ್ಥಲ

ತಮ್ಮಾ, ನಿನಗೆ ವೀರಶೈವರ ಮುಖ್ಯ ವಿಷಯಗಳಾದ ಅಷ್ಟಾವರಣ ಮತ್ತು ಪಂಚಾಚಾರಗಳನ್ನು ಕುರಿತು ಈ ವರೆಗೂ ಹೇಳಿದೆನು. ಇನ್ನೊಂದು ವಿಷಯವಿದೆ. ಅದು ಷಟಸ್ಥಲ, ಇದೇ ನಮ್ಮ ಮತಕ್ಕೆ ಬಹು ಮುಖ್ಯವಾದ ಸಂಗತಿಯು. ಇದರಲ್ಲಿ ಅಷ್ಟಾವರಣ, ಮತ್ತು ಪಂಚಾಚಾರಗಳು ಸಹ ಕೂಡಿಕೊಂಡೇ ಇವೆ. ಈ ವೀರಶೈವಮತಕ್ಕೆ ಷಟಸ್ಥಲ ಮಾರ್ಗವೆಂದರೆ ತಪ್ಪೇನೂ ಆಗಲಾರದು. ಅಷ್ಟು ಈ ಮತದಲ್ಲಿ ಷಟಸ್ಥಳ ವಿಷಯವು ಮುಖ್ಯವಾದುದಾಗಿದೆ. ಆದಕಾರಣ ಈ ಸಂಗತಿಯನ್ನು ಚಿತ್ತುಗೊಟ್ಟು ಕೇಳು.

(೧) ಭಕ್ತಸ್ಥಲ : ಇದು ಷಟಸ್ಥಳಗಳಲ್ಲಿ ಮೊದಲನೆಯಾಗಿದೆ. ಶಿವನಲ್ಲಿ ಮತ್ತು ಶಿವಲಾಂಛನಗಳಾದ ಭಸ್ಮ, ರುದ್ರಾಕ್ಷಿ ಮೊದಲಾದವುಗಳಲ್ಲಿಯೂ ಬಹುಭಕ್ತಿ ವಿಶ್ವಾಸಗಳುಳ್ಳವರಾಗಿರಬೇಕು. ಗುರು ಲಿಂಗ ಜಂಗಮಗಳ ಸೇವೆಯನ್ನು ಬಹು ಪ್ರೇಮದಿಂದ ಮಾಡಬೇಕು. ಶಿವಭಕ್ತರಲ್ಲಿ ಬಹು ಅದರ ಬುದ್ಧಿಯುಳ್ಳವರಾಗಿರಬೇಕು. ಈ ಪ್ರಕಾರ ಶಿವನಲ್ಲಿಯೂ ಶಿವಾಚಾರಗಳಲ್ಲಿಯೂ ಶಿವಭಕ್ತರಲ್ಲಿಯೂ ಭಕ್ತಿಯುಕ್ತನಾಗಿ ನಡೆದುಕೊಳ್ಳುವುದೇ ಭಕ್ತಸ್ಥಲವು.

(೨) ಮಹೇಶಸ್ಥಲ : ಭಕ್ತಸ್ಥಳದ ಆಚಾರ ವಿಚಾರಗಳು ಅಟವಟ್ಟನಂತರ ಲಿಂಗಪೂಜೆಯಲ್ಲಿ ನಿಷ್ಠೆಯು ಹೆಚ್ಚುತ್ತದೆ. ಪರಸ್ತ್ರೀ, ಪರಧನ, ಮೊದಲಾದ ಪರವಸ್ತುಗಳ ಅಪೇಕ್ಷೆಯ ಕನಸು ಮನಸ್ಸುಗಳಲ್ಲಿಯೂ ಕೂಡ ಆಗುವುದಿಲ್ಲ. ಯಾವಾಗಲೂ ಶಿವಪೂಜೆ, ಶಿವಭಜನೆ, ಶಿವಾನುಭವಗೋಷ್ಠಿ ಮೊದಲಾದ ಶಿವಸಂಬಂಧವಾದ ಕಾರ್ಯಗಳಲ್ಲಿಯೇ ಪ್ರೇಮವುಂಟಾಗುತ್ತದೆ. ಇಂಥ ಸ್ಥಿತಿಯುಂಟಾದುದೇ ಮಹೇಶ್ವರಸ್ಥಳವು.

(೩) ಪ್ರಸಾದಿಸ್ಥಲ : ತಾನು ಇಡುವ, ಉಡುವ, ತೊಡುವ, ಭೋಗಿಸುವ ಮೊದಲಾದ ವಸ್ತುಗಳು ಶಿವಕೃಪೆಯಿಂದಲೇ ಬಂದಿವೆಯೆಂದು ತಿಳಿಯಬೇಕು. ಕಣ್ಣು, ಮೂಗು, ಕಿವಿ ನಾಲಿಗೆ, ಮೊದಲಾದ ಅವಯವಗಳಿಂದ ನಾವು ನೋಡುವ, ಮೂಸುವ, ರುಚಿಸುವ, ಮೊದಲಾದ ಕೆಲಸಗಳೆಲ್ಲನ್ನೂ ಶಿವನೇ ಮಾಡಿಸುತ್ತಿದ್ದಾನೆಂದು ತಿಳಿಯಬೇಕು. ಶಿವನ ಸ್ಮರಣೆಯಿಲ್ಲದೆ ಶಿವನಿಗೆ ಅರ್ಪಿಸದೆ ಯಾವ ಅವಯವಗಳಿಂದ ಯಾವುದನ್ನೂ ಅನುಭವಿಸಬಾರದು. ಇದೇ ಪ್ರಸಾದಿಸ್ಥಳದ ಮುಖ್ಯ ಲಕ್ಷಣವು.

(೪) ಪ್ರಾಣಲಿಂಗಿ : ತನ್ನ ಪ್ರಾಣದ ಮೇಲೆ ತನಗೆ ಎಷ್ಟು ಪ್ರೇಮವೋ ಅಷ್ಟೇ ಲಿಂಗದ ಮೇಲೆ ಪ್ರೇಮವಿರಬೇಕು. ಪ್ರಾಣಕ್ಕೂ ಲಿಂಗಕ್ಕೂ ಬೇರೆಯಲ್ಲದಷ್ಟು ಲಿಂಗದಲ್ಲಿ ಭಕ್ತಿಯಿರಬೇಕು. ತನಗೆ ಎಂಥ ಸುಖದುಃಖಗಳು ಬಂದರೂ ಅವು ಶಿವನಿಂದಲೇ ಬಂದವುಗಳೆಂದು ತಿಳಿದು ಅವುಗಳಿಗಾಗಿ ಹಿಗ್ಗಿ ತಗ್ಗಬಾರದು. ಈ ಪ್ರಕಾರ ಲಿಂಗದಲ್ಲಿ ನಿಷ್ಠೆಯುಳ್ಳವರೇ ಪ್ರಾಣಲಿಂಗಿಗಳು.

(೫) ಶರಣ : ತಾನು ಲಿಂಗದೇವರ ಸತಿಯೆಂತಲೂ ಲಿಂಗದೇವನೇ ನನ್ನ ಪತಿಯೆಂತಲೂ ನಂಬಿ ನಡೆದುಕೊಳ್ಳಬೇಕು. ನಾನಾ ಪದಾರ್ಥಗಳನ್ನು ಉಣಬೇಕು. ಇಡಬೇಕು, ತೊಡಬೇಕು. ಭೋಗಿಸಬೇಕೆಂಬ ಹಂಬಲವಿರಬಾರದು. ಎಲ್ಲವೂ ಲಿಂಗವೆಂದೇ ತಿಳಿದು ತಾನು ಬಹು ಕಿಂಕತನಾಗಿ ನಡೆದುಕೊಳ್ಳಬೇಕು. ಈ ಪ್ರಕಾರ ಶಿವನಿಗೆ ಶರಣಾಗತನಾಗಿ ನಡೆದುಕೊಳ್ಳುತ್ತಿರುವವನೇ ಶರಣನು.

ಐಕ್ಯ : ಲಿಂಗದಲ್ಲಿಯೇ ಮನಸ್ಸು ಬೆರೆತು ಹೋಗಬೇಕು. ಈ ಜಗತ್ತಿನಲ್ಲಿ ಯಾವುದನ್ನು ನೋಡಿದರೂ ಅದು ಲಿಂಗವಾಗಿಯೇ ಕಾಣಬೇಕು. ಲಿಂಗವನ್ನೇ ನೆನೆಯುತ್ತಿರಬೇಕು. ಯಾವ ಕೆಲಸವನ್ನು ಮಾಡುತ್ತಿದ್ದರೂ ಅದು ಲಿಂಗಪೂಜೆ ಲಿಂಗಸೇವೆಗಳೆಂಬ ಭಾವನೆಯುಳ್ಳವನಾಗಿರಬೇಕು. ಹೂವಿನೊಳಗೆ ಪರಿಮಳವು ಹೇಗೆ ಬೆರೆತುಕೊಂಡಿರುತ್ತದೆಯೋ ಎಳ್ಳಿನಲ್ಲಿ ಎಣ್ಣೆಯು ಹೇಗೆ ಸೇರಿಕೊಂಡಿರುತ್ತದೆಯೋ ಹಾಗೆಯೇ ಈ ಜಗತ್ತೆಂಬ ಲಿಂಗದಲ್ಲಿ ಯಾರ ಮನಸ್ಸು ಲೀನವಾಗಿ ಹೋಗಿದೆಯೋ ಅವರೇ ಐಕ್ಯಸ್ಥಲದವರು.

ತಮ್ಮಾ, ಈ ಆರು ಸ್ಥಳಗಳ ಮುಖ್ಯ ಸಂಗತಿಗಳನ್ನು ಈಗ ನಿನಗೆ ಸ್ವಲ್ಪದರಲ್ಲಿ ಹೇಳಿದ್ದೇನೆ. ಇವು ನಿನಗೆ ನೆನಪಿರಲೆಂದು ಆರು ವಚನಗಳನ್ನು ಹೇಳಿಕೊಡುತ್ತೇನೆ. ಅವುಗಳನ್ನು ಪಾಠ ಮಾಡಿ ತಿಳಿದುಕೊ.

(೧) ಸದಾಚಾರದಲ್ಲಿ ನಡೆಯುವುದು ಶಿವನಲ್ಲಿ ಭಕ್ತಿಯಾಗಿರುವುದು ಲಿಂಗಜಂಗಮವು ಬಂದರೆ ಸಂತೋಷ ಬುದ್ಧಿಯಾಗಿರುವುದು ಲಾಂಛನಧಾರಿಗಳ ಕಂಡರೆ ವಂದಿಸುವುದು ಇದು ಭಕ್ತಸ್ಥಲ ನೋಡಾ ಅಪ್ರಮಾಣ ಕೂಡಲಸಂಗಮದೇವ.

(೨) ಪರಸ್ತ್ರೀ ಪರಧನದಾಶೆಯ ಬಿಟ್ಟು ಶುದ್ಧನಾಗಿ ಲಿಂಗನಿಷ್ಠೆಯುಳ್ಳಾತನು ಮಾಹೇಶ್ವರ ಸ್ಥಳ ನೋಡಾ ಅಪ್ರಮಾಣ ಕೂಡಲಸಂಗಮದೇವ.

(೩) ಲಿಂಗ ಪ್ರಸಾದ ನೆನಹಿನಿಂದ ಭೋಗಿಸುವುದೇ ಅರ್ಪಿತ. ಅನರ್ಪಿತವ ಬಿಡುವುದೀಗ ಪ್ರಸಾದಿ ಸ್ಥಲ ನೋಡಾ ಅಪ್ರಮಾಣ ಕೂಡಲಸಂಗಮದೇವ.

(೪) ಪ್ರಾಣವೇ ಲಿಂಗವಾಗಿ ಲಿಂಗವೇ ಪ್ರಾಣವಾಗಿ ಸುಖ ದುಃಖ ಉಭಯವು ತನಗಿಲ್ಲದಿಹುದೀಗ ಪ್ರಾಣಲಿಂಗಿಯ ಸ್ಥಲ ನೋಡಾ ಅಪ್ರಮಾಣ ಕೂಡಲಸಂಗಮದೇವ.

(೫) ಲಿಂಗನೇ ಪತಿಯಾಗಿ ತಾನು ಸತಿಯೆಂಬ ಭಾವದಲ್ಲಿ ಆಚರಿಸಿ ಪಂಚೇಂದ್ರಿಯ ಸುಖಗಳ ಬಯಸದಿಹುದೀಗ ಶರಣಸ್ಥಲ ನೋಡಾ ಅಪ್ರಮಾಣ ಕೂಡಲಸಂಗಮದೇವ.

(೬) ಕ್ಷೀರದೊಳಗಣ ಘೃತದಂತೆ, ತಿಲದೊಳಗಣ ತೈಲದಂತೆ, ಪುಷ್ಪದೊಳಗಣ ಪರಿಮಳದಂತೆ, ಉಪ್ಪು ಉದಕವ ಕೂಡಿದಂತೆ, ಮನಲಿಂಗದಲ್ಲಿ ಲೀಯವಾಗಿವುದೀಗ ಐಕ್ಯಸ್ಥಲ ನೋಡಾ ಅಪ್ರಮಾಣ ಕೂಡಲಸಂಗಮದೇವ.

ಈ ಭಕ್ತ, ಮಹೇಶ್, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಗಳೆಂಬ ಆರು ಸ್ಥಳಗಳಲ್ಲಿಯೇ ವೀರಶೈವಮತದ ಎಲ್ಲ ಆಚಾರ ವಿಚಾರಗಳು ಅಡಕವಾಗಿವೆ. ಆ ವಿಚಾರ ವಿಚಾರಗಳನ್ನೇ ವಿವರವಾಗಿ ನೂರೊಂದು ಪ್ರಕಾರ ವಿಂಗಡಿಸಿ ನಮ್ಮ ಶಾಸ್ತ್ರಗಳಲ್ಲಿ ಹೇಳಿದೆ. ಆ ನೂರೊಂದು ಪ್ರಕಾರಗಳಿಗೇನೆ ನೂರೊಂದು ಸ್ಥಲಗಳೆಂದು ಹೇಳುತ್ತಿದ್ದಾರೆ. ನೂರೊಂದು ಸ್ಥಲಗಳಿಗೂ ಆರು ಸ್ಥಲಗಳಿಗೂ ಭಿನ್ನವಿಲ್ಲ ಎರಡೂ ಒಂದೇ ಸರಿ.

ಅಲಮಟ್ಟಿಯ ವೀರಶೈವ ವಿದ್ಯಾಲಯದವರು ಆರು ಮೂಲೆಯ ಒಂದು ಚಿತ್ರವನ್ನು ತಮ್ಮ ಪುಸ್ತಕಗಳ ಮೇಲೆ ಹಾಕುತ್ತಿರುವುದನ್ನು ನೀನು ನೋಡಿಲ್ಲವೇ? ಅದು ನಮ್ಮ ಮತದ ಗುರುತಾಗಿದೆ. ನಮ್ಮ ಆರು ಸ್ಥಲಗಳನ್ನೇ ಅದು ತೋರಿಸುತ್ತದೆ. ಆ ಚಿತ್ರದ ಆರು ಮೂಲೆಗಳಲ್ಲಿಯೂ ನಮ್ಮ ಮಂತ್ರದ ಆರಕ್ಷರಗಳನ್ನು ಗುರುಗಳು ತಿಳಿಸಿಕೊಟ್ಟ ಪ್ರಕಾರ ತನ್ನ ಅಂಗೈಯಲ್ಲಿ ಬರೆದು ತಮ್ಮ ಇಷ್ಟಲಿಂಗವನ್ನಿಟ್ಟು ಪೂಜಿಸಬೇಕಾಗುತ್ತದೆ. ಆದುದರಿಂದ ತಮ್ಮಾ, ಈ ಆರು ಸ್ಥಲ ಅಥವಾ ಷಟಸ್ಥಲದ ವಿಷಯಗಳು ಬಹು ಹೆಚ್ಚಿನವುಗಳಾಗಿವೆ.

ನಾನು ಈ ವರೆಗೂ ಹೇಳಿದ ಸಂಗತಿಗಳನ್ನೇಲ್ಲಾ ನೆನಪಿನಲ್ಲಿಟ್ಟುಕೊಂಡು ನೀನು ನಡೆದರೆ ಮುಂದೆ ಈ ಷಟಸ್ಥಲಗಳ ಸಂಗತಿಗಳೆಲ್ಲಾ ನಿನಗೆ **ಚೆನ್ನಾ**ಗಿ ತಿಳಿಯುವವು. ಆಗ ನೀನು

ಸಂತೋಷಪಡುವಿ. ಅವುಗಳಂತೆ ನಡೆದರೆ ನಿನಗೆ ಇಹಪರಗಳಲ್ಲಿ ಸುಖಶಾಂತಿಗಳು ದೊರೆಯುವವು. ಆದಕಾರಣ ತಮ್ಮಾ ಈ ವರೆಗೂ ಹೇಳಿದ ಸಂಗತಿಗಳನ್ನೆಲ್ಲಾ ಚೆನ್ನಾಗಿ ನೆನಪಿನಲ್ಲಿಟ್ಟುಕೊಂಡು ನಡೆದುಕೊ, ತಿಳಿಯಿತೇ? ಮರೆಯಬೇಡ. ಜ್ಞಾಪಕವಿರಲಿ, ನಿನಗೆ ಶಿವನು ಅಂಥ ಬುದ್ಧಿಯನ್ನೂ ಶಕ್ತಿಯನ್ನೂ ಕೊಡಲ್ಲಿ. ನಿನಗೆ ಮಂಗಲವಾಗಲಿ, ತಮ್ಮಾ, ಹೋಗಿ ಬಾ

ನೀತಿಯ ವಚನಗಳು

ಕಳಬೇಡ, ಕೊಲಬೇಡ,
ಹುಸಿಯ ನುಡಿಯಲು ಬೇಡ, ಮುನಿಯ ಬೇಡ,
ಅನ್ಯರಿಗೆ ಅಸೂಯೆ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗನೊಲಿಸುವ ಪರಿ, ॥೧॥

ಕೊಲ್ಲೆನಯ್ಯಾ ಪ್ರಾಣಿಗಳ, ಮೆಲ್ಲೆನಯ್ಯ ಬಾಯಿಚ್ಚೆಗೆ,
ಒಲ್ಲೆನಯ್ಯಾ ಪರಸತಿಯ ಸಂಗವ,
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ,
ಬಳ್ಳದ ಬಾಯಂತೆ ಒಂದೆ ಮನವ ಮಾಡಿ,
ನಿಲ್ಲೆಂದು ನಿಲಿಸಯ್ಯ ಕೂಡಲಸಂಗಮದೇವ, ॥೨॥

ದಯವಿಲ್ಲದ ಧರ್ಮವದಾವುದಯ್ಯ?
ದಯವೇ ಬೇಕು ಸರ್ವ ಪ್ರಾಣಿಗಳಲ್ಲಿಯು,
ದಯವೇ ಧರ್ಮದ ಮೂಲವಯ್ಯ,
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ ॥೩॥

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ
ಸತ್ಯವ ನುಡಿವುದೇ ದೇವಲೋಕ
ಮಿಥ್ಯವ ನುಡಿವುದೇ ಮರ್ತ್ಯಲೋಕ
ಆಚಾರವೇ ಸ್ವರ್ಗ, ಅನಾಚಾರವೇ ನರಕ,
ಕೂಲಸಂಗಮದೇವ ನೀವೇ ಪ್ರಮಾಣ ॥೪॥

ಸಾರಸಜ್ಜನವರ ಸಂಗವ ಮಾಡುವುದು,
ದೂರ ದುರ್ಜನವ ಸಂಗ ಬೇಡವಯ್ಯ
ಆವ ಹಾವಾದಡೇನು? ವಿಷವೊಂದೇ
ಅಂಥವರ ಸಂಗ ನಮಗೆ ಬೇಡವಯ್ಯ
ಅಂತರಂಗ ಶುದ್ಧವಿಲ್ಲದವರ ಸಂಗ ಹಿಂಗಿ ಕಾಳಕೂಟವಿಷವೋ
ಕೂಡಲಸಂಗಮದೇವ. ||೫||

ವೀರಶೈವ ವಿದ್ಯಾಲಯದ ಗ್ರಂಥಮಾಲೆಯ ಸಂಖ್ಯೆ : ೨೯

॥ಓಂ॥

ಅಣ್ಣನ ಅರ್ಪಣಯೋಗ

ಲೇಖಕರು

ಶ್ರೀ ಹರ್ಡೇಕರ ಮಂಜಪ್ಪನವರು

ಧನ ಸಹಾಯಕರು

ಶ್ರೀ ಮಾಗಾವಿ ಚೆನ್ನಬಸವಪ್ಪನವರು ಹಾವೇರಿ

ಈ ಗ್ರಂಥದ ಸರ್ವಾಧಿಕಾರವು
ವೀರಶೈವ ವಿದ್ಯಾಲಯ ಸಂಸ್ಥೆಗೆ ಸಂಬಂಧಪಟ್ಟಿದೆ

ಕ್ರಿ. ಶ. ೧೯೩೮ ಕ್ರಯ ೧ ಆಣೆ ಶಾಶ. ೧೮೬೦

*

ಅಭಿನಂದನೆ



ಶ್ರೀ ಬಸವಾದಿ ಪ್ರಮಥರ ತತ್ವಪ್ರಸಾರದಲ್ಲಿ ವಿಶೇಷ ಅಭಿರುಚಿಯುಳ್ಳವರಾಗಿದ್ದ **ಕೈ. ಮಾಗಾವಿ ಸಿದ್ದಪ್ಪಣ್ಣನವರು** ಹಾವೇರಿ. ಇವರ ಸ್ಮರಣಾರ್ಥವಾಗಿ ಅವರ ತಮ್ಮಂದಿರಾದ ಶ್ರೀಯುತ ಮಾಗಾವಿ ಚೆನ್ನಬಸವಪ್ಪನವರು ಹಾವೇರಿ ಇವರು "ಅಣ್ಣನ ಅರ್ಪಣಯೋಗ" ಎಂಬ ಈ ಪುಟ್ಟ ಪುಸ್ತಕವು ಬಸವಜಯಂತಿಯ ಕಾಣಿಕೆಯಗಿ ಪ್ರಸಾರವಾಗಲು ತುಂಬಾ ಧನಸಹಾಯ ಮಾಡಿದುದರಿಂದ ನಾವು ಹೃದಯಪೂರ್ವಕ ಈ ಮಹಾಶಯರನ್ನು ಅಭಿನಂದಿಸುತ್ತೇವೆ.

ಅರ್ಪಣಯೋಗದ ತತ್ವಗಳನ್ನು ಆಚರಣೆಯಲ್ಲಿ ತರುವ ಎದೆಗಾರಿಕೆಯು ಎಲ್ಲರಲ್ಲಿಯೂ ಉಂಟಾಗಲಿ.

ತಾ. ೨-೫-೧೯೩೮ **ಹರ್ಡೇಕರ ಮಂಜಪ್ಪ**

❖❖

ಶ್ರೀ ಬಸವಣ್ಣನವರ ಅರ್ಪಣಯೋಗ

ಪ್ರಶ್ನೆ : ಹಿಂದು ತತ್ವಜ್ಞಾನದಲ್ಲಿ ಕರ್ಮಯೋಗ, ಜ್ಞಾನಯೋಗ, ರಾಜಯೋಗ ಮತ್ತು ಭಕ್ತಿಯೋಗ ಎಂಬ ನಾಲ್ಕು ಯೋಗಗಳನ್ನು ಹೇಳಿದೆ. ಆದರೆ ಈ ನಿಮ್ಮ ಅರ್ಪಣಯೋಗ ಎಂಬುದನ್ನು ಮಾತ್ರ ಹೇಳಿಲ್ಲ. ಇದೇನು ಈ ನಾಲ್ಕು ಯೋಗಗಳಿಗಿಂತ ಭಿನ್ನವಾದುದೇ? ಅಥವಾ ಇವುಗಳಲ್ಲಿಯೇ ಯಾವುದಾದರೂ ಒಂದಕ್ಕೆ ಸೇರಿದ್ದಾಗಿದೆಯೆ?

ಉತ್ತರ : ಹಿಂದು ತತ್ವಜ್ಞಾನವು ಯಾವುದೋ ಒಂದು ಕಾಲದಲ್ಲಿಯೇ ಒಂದು ವ್ಯಕ್ತಿಯಿಂದಲೇ ಉಂಟಾದುದೇನೂ ಅಲ್ಲವಷ್ಟೆ. ಬಹು ಕಾಲದಿಂದಲೂ ಅನೇಕ ಮಹಾವಿಭೂತಿಗಳ ಅನುಭವದಿಂದ ಅದು ಬೇರೆ ಬೇರೆ ವಿಭಾಗ ವಿಕಾಸಗಳನ್ನು ಹೊಂದುತ್ತಾ ಬಂದಿದೆಯಲ್ಲವೆ?

ಅದೇ ಪ್ರಕಾರ ಈ ಅರ್ಪಣ ಯೋಗವೂ ಹಿಂದು ತತ್ವಜ್ಞಾನದ ಭಕ್ತಿಯೋಗದಲ್ಲಿಯೇ ವಿಕಾಸವನ್ನು ಹೊಂದಿದ್ದಾಗಿದೆ. ಮಹಾನುಭಾವರಾದ ಬಸವಣ್ಣನವರೇ ಇದನ್ನು ಹೆಚ್ಚಾಗಿ ಬೆಳಕಿಗೆ ತಂದರು. ಅಂತೆಯೇ ಇದಕ್ಕೆ ಅಣ್ಣನವರ ಅರ್ಪಣಯೋಗವೆಂದು ಹೇಳಿದ್ದಾಗಿದೆ.

ಪ್ರಶ್ನೆ : ಭಕ್ತಿ ಯೋಗಕ್ಕೂ ಅರ್ಪಣಯೋಗಕ್ಕೂ ಇರುವ ವ್ಯತ್ಯಾಸವೇನು?

ಉತ್ತರ : ಎಲ್ಲ ಕರ್ಮಗಳೂ ಪರಮಾತ್ಮನವೇ ಆಗಿದೆ. ಆತನೇ ಮಾಡಿಸುವಾತನು, ನಾನು ನಿಮಿತ್ತ ಮಾತ್ರನಾಗಿದ್ದೇನೆ ಎಂದು ನಂಬಿ ಪರಮಾತ್ಮನ ಮಹಿಮೆಯನ್ನು ಶ್ರಣಮಾಡುವುದರಲ್ಲಿಯೂ ಕೀರ್ತನೆ ಮಾಡುವುದರಲ್ಲಿಯೂ ಇರುವುದೇ ಭಕ್ತಿಯೋಗದ ಮುಖ್ಯ ಲಕ್ಷಣವು.

ಪರಮಾತ್ಮನು ಗುರು, ಲಿಂಗ, ಜಂಗಮ ಎಂಬ ಮೂರು ಪ್ರಕಾರಗಳಿಂದ ಜಗತ್ತಿನಲ್ಲಿ ತೋರುತ್ತಿದ್ದಾನೆಂದೆ ನಂಬಿ ಅವುಗಳಿಗೆ ಅನುಕ್ರಮವಾಗಿ ತನ್ನ ತನು, ಮನ ಧನಗಳನ್ನು ಅರ್ಪಿಸುವುದೇ ಅರ್ಪಣಯೋಗದ ಮುಖ್ಯ ಲಕ್ಷಣ.

ಪ್ರಶ್ನೆ : ಸಕಲ ಕರ್ಮಗಳೂ ಪರಮಾತ್ಮನವೇ ಎಂದು ನಂಬಿ ನಡೆದ ಮೇಲೆ ಈ ನಿಮ್ಮ ತನುಮನ ಧನಗಳ ಕ್ರಿಯೆಗಳೂ ಅದರಲ್ಲಿಯೇ ಅಡಕವಾಗಿ ಹೋಗುತ್ತವೆ. ಎಂದ ಮೇಲೆ ಈ ಪತ್ಯೇಕವಾದ ವಿವರಣೆಯು ಅನಾವಶ್ಯಕವಲ್ಲವೆ?

ಉತ್ತರ : ಈ ವಿಧವಾದ ವಿವರಣೆಯು ಅಗತ್ಯವಾಗಿದೆ. ಭಕ್ತಿಯೋಗದಲ್ಲಿ ಈ ವಿವರಣೆಯಿಲ್ಲದಿದ್ದುದೇ ಒಂದು ಕೊರತೆಯಾಗಿದ್ದಿತು. ಭಕ್ತನು ತನು ಮನ ಧನಗಳನ್ನೆಲ್ಲಾ ತನ್ನ

ಔಪಾಸನಾ ಮೂರ್ತಿಯ ಸೇವೆಯೊಂದರಲ್ಲಿಯೇ ಸವಿಸುತ್ತಿದ್ದುದರಿಂದ ಲೋಕಸಂಗ್ರಹದ ಅರ್ಥಾತ್ ಲೋಕಸೇವೆಯ ಕಾರ್ಯವು ಆತನಿಂದ ಸ್ಫುಟವಾದ ರೀತಿಯಲ್ಲಿ ಸಂಭವಿಸಲವಕಾಶವಿರಲಿಲ್ಲ. ಅಂತೆಯೇ ಭಕ್ತನು ತನ್ನ ತನು ಮನ ಧನಗಳನ್ನು ಪರಮಾತ್ಮನಿಗೆ ಅರ್ಪಿಸುವ ರೀತಿ ನೀತಿಗಳನ್ನು ಈ ಅರ್ಪಣಯೋಗದಲ್ಲಿ ವಿವರಿಸಿ ಭಕ್ತಿಯೋಗಕ್ಕೆ ಒಂದು ಹೊಸ ಕಳೆಯನ್ನೇ ಉಂಟುಮಾಡಿ ಅದು ಕರ್ಮಯೋಗದ ಹಾಗೆ ತೇಜೋಮಯವಾದುದಾಗುವಂತೆ ಮಾಡಿದರು.

ಪ್ರಶ್ನೆ : ತನು, ಮನ ಧನಗಳನ್ನು ಅರ್ಪಿಸಿದ ಮಾತ್ರದಿಂದ ಭಕ್ತಿಯೋಗದ ಫಲವು ಪ್ರಾಪ್ತವಾಗುತ್ತದೆಯೇ?

ಉತ್ತರ : ಒಂದು ದಿನ ಯಾಜ್ಞವಲ್ಕ್ಯರು ತಮಗೆ ಆತ್ಮ ಸಾಕ್ಷಾತ್ಕಾರವು ಒಂದು ನಿಮಿಷದಲ್ಲಿಯೇ ಆಗುವಂತೆ ಬೋಧಿಸಬೇಕಾಗಿ ಋಷಿಗಳಲ್ಲಿ ಪ್ರಾರ್ಥಿಸಿಕೊಂಡರಂತೆ. ಆಗ ಅಷ್ಟವಕ್ರರೆಂಬುವವರು ತಾವು ಒಂದು ನಿಮಿಷದಲ್ಲಿಯೇ ಉಪದೇಶ ಮಾಡುವುದಾಗಿ ತಿಳಿಸಿ ತಮಗೆ ಗುರುದಕ್ಷಿಣೆ ಏನು ಕೊಡುವಿರೆಂದು ಯಾಜ್ಞವಲ್ಕ್ಯರನ್ನು ಕೇಳಿದರು. ಆಗ ಯಾಜ್ಞವಲ್ಕ್ಯರು ಈ ದೇಹವನ್ನೇ ಗುರುದಕ್ಷಿಣಯಾಗಿ ಕೊಟ್ಟು ನಿಮ್ಮ ಸೇವೆಯಲ್ಲಿಯೇ ಮರಣಾಂತ್ಯದವರೆಗೂ ಇರುವೆನೆಂದು ಹೇಳಿದರು.

ನೀವು ಮುಪ್ಪಿನವರಾಗಿರುವಿರಿ. ಈ ದೇಹ ಇಷ್ಟರಲ್ಲೇ ಬಿದ್ದು ಹೋಗುವುದು. ಇದನ್ನು ತೆಗೆದುಕೊಂಡು ನಾನೇನು ಮಾಡಲಿ? ಎಂದು ಅಷ್ಟವಕ್ರರು ಹೇಳಿದರು. ಆಗ ಯಾಜ್ಞವಲ್ಕ್ಯರು ನನ್ನ ಆಶ್ರಮಾದಿ ಸೊತ್ತುಗಳನ್ನೆಲ್ಲಾ ನಿಮಗೆ ಗುರುದಕ್ಷಿಣೆಯಾಗಿ ಕೊಟ್ಟುಬಿಡುತ್ತೇನೆಂದು ಹೇಳಿದರು. ಅವುಗಳಿಗೆಲ್ಲಾ ನಿಮ್ಮ ಮಕ್ಕಳೇ ಅಧಿಕಾರಿಗಳಾಗುತ್ತಾರಾದುದರಿಂದ ಅವೂ ನಮಗೆ ಬೇಡವೆಂದು ಅಷ್ಟವಕ್ರರು ಹೇಳಿದರು.

ಹಾಗಾದರೆ, ನನ್ನಲ್ಲುಳಿದುದು ನನ್ನ ಮನಸ್ಸೊಂದೇ ಒಂದು. ಅದನ್ನೇ ನಿಮಗೆ ಕೊಟ್ಟು ಬಿಡುತ್ತೇನೆಂದು ಯಾಜ್ಞವಲ್ಕ್ಯರು ಹೇಳಿದರು. ಆಗಲಿ, ಹಾಗೇ ಮಾಡಿರೆಂದೂ ಇದೇ ಆತ್ಮ ಸಾಕ್ಷಾತ್ಕಾರದ ದಿವ್ಯೋಪದೇಶವೆಂದೂ ಅಷ್ಟವಕ್ರತು ತಿಳಿಸಿದರು. ತನು, ಮನ, ಧನಗಳ ಅರ್ಪಣೆಯ ಮಹತ್ವ ಗೊತ್ತಾಯಿತಷ್ಟೆ.

ಪ್ರಶ್ನೆ : ಸರಿಯಾಗಿ ತಿಳಿಯಲಿಲ್ಲ. ನನ್ನ ಪ್ರಶ್ನೆಗೆ ಇದು ಹೇಗೆ ಉತ್ತರವಾಯಿತು?

ಉತ್ತರ : ಆಳಿನಿಂದ ಅರಸನವರೆಗೂ ಪಂಡಿತನಿಂದ ಪಾಮರನ ವರೆಗೂ ಎಲ್ಲರಿಗೂ ಒಂದು ದೇಹ, ಮನಸ್ಸು ಮತ್ತು ನನ್ನದೆಂದು ಹೇಳಿಕೊಳ್ಳುವ ಏನಾದರೊಂದು ಸೊತ್ತು, ಇವು ಮೂರೆ ಇರತಕ್ಕವುಗಳು. ಮನುಷ್ಯನಿಂದ ಯಾವ ಕರ್ಮಗಳಾದರೂ ಸಂಭವಿಸಲು ಇವೇ ಕಾರಣವಾಗಿವೆ. ಎಂದ ಮೇಲೆ ಇವುಗಳನ್ನೇ ಪರಮಾತ್ಮನಿಗೆ ಅರ್ಪಿಸಿದ ಬಳಿಕ ನಾನು, ನನ್ನದು, ಎಂಬುದೇ ಉಳಿಯಲಿಲ್ಲವಷ್ಟೆ. ಎಲ್ಲವು ನೀನೇ, ನಿನ್ನದೇ ಎಂದರೆ ಪರಮಾತ್ಮ ಮತ್ತು ಪರಮಾತ್ಮನದೇ ಆಯಿತಲ್ಲವೆ? ಆತ್ಮ ಸಾಕ್ಷಾತ್ಕಾವಾಗಲಿ ಪರತರ ಮೋಕ್ಷವಾಗಲಿ ಇದಕ್ಕಿಂತ ಬೇರುಂಟೆ?

ಅಂತೆಯೇ ಬಸವಣ್ಣನವರು ಹೀಗೆ ಹೇಳಿದ್ದಾರೆ : ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮದೆಂದ ಬಳಿಕನ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ

ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ ಎನಗೆ ಬೇರೆ ವಿಚಾರವುಂಟೆ ಕೂಡಲಸಂಗಮದೇವ?

ತನು ಮನ ಧನವ ಮೀರಿ ಮಾತಾಡಬಲ್ಲರೆ ಆತ ನಿಸ್ಸೀಮನು. ಆತ ನಿಜೈಕ್ಯನು. ತನು ಮನ ಧನ ಸವಿಸಿದರೆ, ಕೂಡಲಸಂಗಮದೇವನೊಲಿವ.

ಪ್ರಶ್ನೆ : ಯಾಜ್ಞವಲ್ಕ್ಯ ಮತ್ತು ಅಷ್ಟವಕ್ರ ಸಂಭಾಷಣೆಯ ರಹಸ್ಯವೇನೋ ಸ್ಪಷ್ಟ ಗೊತ್ತಾಗಲಿಲ್ಲ. ಅದೂ ಅರ್ಪಣಯೋಗವೆ?

ಉತ್ತರ : ಯಾಜ್ಞವಲ್ಕ್ಯನಲ್ಲಿಯಾದರೂ ತನು ಮನ ಮತ್ತು ಧನ ಇವು ಮೂರೇ ಇದ್ದವಷ್ಟೇ. ತನುವು ಇಂದಲ್ಲ. ನಾಳೇ ನಾಶವಾಗಿ ಹೋಗುವುದು, ಧನವು ಅನ್ಯರ ಸ್ವಾಧೀನವಾಗುವುದು ಎಂದ ಮೇಲೆ ಅವುಗಳ ಮೇಲೆ ಆಸೆ ಇಡದೆ ಉಳಿದ ಮನಸೊಂದನ್ನು ಗುರುವಿಗೆ ಕೊಟ್ಟ ಬಿಟ್ಟರೆ ಈ ಮುಂಚೆ ಹೇಳಿದಂತೆ ನಾನು ನನ್ನದು, ಎಂಬುವುಗಳೇ ಇಲ್ಲದಂತಾಗುವುದಿಲ್ಲವೆ? ಅಣ್ಣನ ಅರ್ಪಣಯೋಗದ ಸಾಮಾನ್ಯ ಸ್ವರೂಪವೇ ಉಪನಿಷತ್ತಿನ ಈ ಕಥೆಯಲ್ಲಿ ಅಡಕವಾಗಿದೆಯಾದುದರಿಂದ ಅದನ್ನು ಹೇಳಿದೆನು.

ಪ್ರಶ್ನೆ : ಪರಮಾತ್ಮನ ಸೇವೆ ಮಾಡುವ ರೀತಿನೀತಿಗಳನ್ನು ಭಕ್ತಿಯೋಗದಲ್ಲಿ ಗೊತ್ತು ಪಡಿಸದೆ ಇದ್ದುದರಿಂದ ಆದ ಕೊರತೆಯೇನು?

ಉತ್ತರ : ಪರಮಾತ್ಮನ ಭಕ್ತಿಯನ್ನು ಒಂಭತ್ತು ಪ್ರಕಾರ ಮಾಡಬೇಕೆಂದು ಭಕ್ತಿಮಾರ್ಗದಲ್ಲಿ ಬಹು ವಿವರವಾಗಿ ಹೇಳಿದೆ. ಆದರೆ ಅವೆಲ್ಲ ಕೇವಲ ಭಕ್ತನ ಔಪಾಸನಾ ಮೂರ್ತಿಯೊಂದನ್ನೇ ಕುರಿತು ಇವೆ. ಲೋಕಸೇವೆಯೂ ಭಕ್ತಿಯೋಗಿಯ ಕರ್ತವ್ಯವೆಂದೇ ಗೊತ್ತುಮಾಡಿಲ್ಲ. ಅದರಿಂದ ಕೇವಲ ದೇವರ ನಾಮಸ್ಮರಣೆ. ಆಡಂಬರದ ದೇವರ ಪೂಜೆ, ಮೊದಲಾದ ಬಾಹ್ಯಕ್ರಿಯೆಗಳಲ್ಲಿಯೇ ಅನೇಕರು ಮಗ್ನರಾಗಿಬಿಡಬಹುದು.

ಅನೇಕರು ಡಂಭಾಚಾರಿಗಳಾಗಿ ಜನಾಂಗದ ಪೋಷಣೆ, ಸಂವರ್ಧನೆಗಳಿಗೆ ಕಂಟಕರಾಗಬಹುದು. ಬಸವಣ್ಣನವರ ಕಾಲದಲ್ಲಿ ಬಹು ಜನರು ಭಕ್ತಿಯೋಗವನ್ನು ಈ ರೀತಿಯಾಗಿ ಆಚರಿಸತ್ತಿದ್ದರೆಂದು ತೋರುತ್ತದೆ. ಅಂತೆಯೇ ಇಂಥ ಘಾತಕವಾದ ಭಕ್ತಿಯ ವೇಷವನ್ನು ಅವರು ತೀಕ್ಷ್ಣವಾಗಿ ಖಂಡಿಸಿ ಆ ಅರ್ಪಣಯೋಗದ ಮೂಲಕ ಭಕ್ತಿಯ ರೀತಿ ನೀತಿಗಳನ್ನು ಸ್ಪಷ್ಟ ನಿರ್ದೇಶನಗೊಳಿಸಿದರು. ಈ ಮಹಾನುಭಾವರು ಒಂದು ವಚನದಲ್ಲಿ ಈ ಪ್ರಕಾರ ಹೇಳಿದ್ದಾರೆ.

> ಹಲವು ಮಣಿಯ ಕಟ್ಟಿ, ಕುಣಿಕುಣಿದಾಡಿ, ಹಲವು ಪರಿಯಲು ವಿಭೂತಿಯ ಧರಿಸಿ,
> ಗಣಾಡಂಬರದ ನಡುವೆ ನಲಿನಲಿದಾಡಿ, ಉಂಡು ತಾಂಬೂಲಗೊಂಡು ಹೋಹುದಲ್ಲ,
> ತನು ಮನ ಧನ ಸಮರ್ಪಿಸದವರ ಕೂಡಲಸಂಗಮದೇವನೆಂತೊಲಿವ?

ಬೇಕಷ್ಟು ರುದ್ರಾಕ್ಷಿಗಳನ್ನು ಕಟ್ಟಿಕೊಂಡು, ನಾನಾ ರೀತಿಯಲ್ಲಿ ವಿಭೂತಿಯನ್ನು ಹಚ್ಚಿಕೊಂಡು, ಶಿವನಾಮವನ್ನು ಹೇಳುತ್ತ ಶಿವಸ್ತುತಿ ಮಾಡುತ್ತ, ಕುಣಿಕುಣಿದಾಡುತ್ತ, ಅನೇಕರು ಮಹಾಶಿವಭಕ್ತರೆಂದು ಹೇಳಿಸಿಕೊಳ್ಳುತ್ತಿದ್ದರು. ಏಕೆಂದರೆ ಹಾಗೆ ಮಾಡುವುದು ಸುಲಭ. ಈ ಡಂಭಾಚಾರವೇನೂ ನಿಜವಾದ ಭಕ್ತಿಯಲ್ಲ. ಹೀಗೆ ಮಾಡಿದರೆ ಶಿವನು ಮೆಚ್ಚುವುದಿಲ್ಲ. ತನ್ನ ತನುಮನ ಧನಗಳನ್ನು ಗುರುಲಿಂಗ

ಜಂಗಮಗಳ ಸೇವೆಯಲ್ಲಿ ಸವಿಸಬೇಕು. ಹಾಗಾದಾಗಲೇ ಶಿವನು ಮೆಚ್ಚುತ್ತಾನೆ. ಭಕ್ತಿಯೋಗವು ಬಾಯಿ ಮಾತಿನಿಂದಲೇ ಪೂರ್ತಿಯಾಗತಕ್ಕದ್ದಲ್ಲ. ಅದಕ್ಕೆ ಉಜ್ವಲವಾದ ತ್ಯಾಗವೃತ್ತಿಯೂ ಇರಬೇಕೆಂದು ಬಸವಣ್ಣನವರು ಸುವ್ಯವಸ್ಥಿತವಾಗಿ ಈ ಅರ್ಪಣಯೋಗವನ್ನು ಜನಾಂಗದಲ್ಲಿ ಪ್ರಚಾರಕ್ಕೆ ತಂದದ್ದರಿಂದಲೇ ಪ್ರಭುದೇವರು ಹೀಗೆ ಹೇಳಿದ್ದಾರೆ.

> ತನುವ ಗೆಲಲರಿಯದೆ, ಮನವ ಗೆಲಲರಿಯದೆ, ಧನವ ಗೆಲಲರಿಯದೆ
> ಭ್ರಮೆಗೊಂಡಿತ್ತು ಲೋಕವೆಲ್ಲವು
> ತನು ದಾಸೋಹಕ್ಕೆ ಸವೆಸಿ ಮನವ ಲಿಂಗಧ್ಯಾನದಲ್ಲಿ ಸವೆಸಿ,
> ಧನವ ಜಂಗಮದಲ್ಲಿ ಸವೆಸಿ ಗೆಲ್ಲಬಲ್ಲರೆ ಸಂಗನ ಬಸವಣ್ಣನಲ್ಲದೆ ಮತ್ತಾರನೂ ಕಾಣೆ,
> ಗುಹೇಶ್ವರಾ, ನಿಮ್ಮ ಶರಣ ಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

ಹೀಗೆ ಪ್ರಭುದೇವರು ಅಣ್ಣನ ಅರ್ಪಣಯೋಗದ ಮಹತ್ವವನ್ನು ಹೇಳಿದ ಕಾರಣವಾದರೂ ಇದೇ ಸರಿ.

ಪ್ರಶ್ನೆ : ಪ್ರತಿಯೊಂದು ವ್ಯಕ್ತಿಗೂ ತನು ಮನ ಮತ್ತು ಧನ ಇವು ಇದ್ದೇ ಇರುತ್ತವೆಂಬುದೇನೋ ನಿಜ. ಮತ್ತು ಅವುಗಳನ್ನು ಪರಮಾತ್ಮನಿಗೆ ಅರ್ಪಿಸಿಬಿಟ್ಟರೆ ಮೋಕ್ಷ ಪ್ರಾಪ್ತಿಯಾಗುತ್ತದೆಂಬುದೂ ಒಪ್ಪತಕ್ಕ ಮಾತೇ ಸರಿ. ಆದರೆ ಅವುಗಳನ್ನು ಬಸವಣ್ಣನವರು ಹೇಗೆ ಅರ್ಪಿಸಿದರೆಂಬುದು ಮಾತ್ರ ಪ್ರಭುದೇವರ ಈ ವಚನದಿಂದ ವಿವರವಾಗಿ ಗೊತ್ತಾಗಲಿಲ್ಲ. ಅದನ್ನು ತಿಳಿಸುವಿರಾ?

ಉತ್ತರ : ಲಿಂಗಾಂಗಿಗಳು ತಾವು ಗುರುಪುತ್ರರೆಂದೇ ತಿಳಿಯುತ್ತಾರೆ. ಏಕೆಂದರೇ, ಅಂಗದಮೇಲೆ ಲಿಂಗವನ್ನು ಗುರು ಧರಿಸಿದನಂತೆ ಆ ಅಂಗವು ತಂದೆಯ ರಕ್ತ ಸಂಬಂಧವನ್ನು ನೀಗಿ ಗುರುವಿನಿಂದ ಉಪದೇಶಿಸಲ್ಪಟ್ಟ ಮಂತ್ರ ಸಂಬಂಧವಾದುದಾಗುತ್ತದೆ. ಆಗ ಆತನು ಗುರುವಿನಿಂದ ಹುಟ್ಟಿದವನೆಂದೇ ತಿಳಿಯಲ್ಪಡುತ್ತಾನೆ. ಅಂತೆಯೇ ಲಿಂಗಾಂಗಿಗಳೆಲ್ಲರು ಈಗಲೂ ತಮ್ಮ ಗುರುವಿನ ಹೆಸರನ್ನು ಹೇಳುವುದು ರೂಢಿಯಲ್ಲಿದೆ. ಈ ದೇಹವು ಗುರುವಿನದಾದ ಕಾರಣ ಗುರುವಿನ ಋಣದಿಂದ ಮುಕ್ತನಾಗಲು ಇದನ್ನು ಗುರುವಿಗೆ ಸಲ್ಲಿಸಬೇಕಾದುದು ವಿಹಿತವಷ್ಟೆ, ಗುರುವಾದರೋ ಆ ತನ್ನ ಶಿಷ್ಯನ ದೇಹವು ಸಾರ್ಥಕವಾಗಲೆಂದು ಆತನು ಲಿಂಗಾಂಗಿಗಳ ಸೇವೆಗೆ ಎಂದರೆ ದಾಸೋಹಕ್ಕೆ ನೀನು ನಿನ್ನ ದೇಹವನ್ನು ಸವಿಸೆಂದು ಶಿಷ್ಯನಿಗೆ ಆಜ್ಞಾಪಿಸುತ್ತಾನೆ.

ಇದೇ ಗುರುವಿಗೆ ತನುವನ್ನು ಸವಿಸುವ ರೀತಿಯು ಅಂಗದಮೇಲೆ ಲಿಂಗವುಳ್ಳವರೆಲ್ಲ ಸಂಗಯ್ಯನೆಂದು ಕಾಂಬೆ ಎಂಬುದೇ ಬಸವಣ್ಣನವರ ಭಾಷೆಯಾಗಿದ್ದಿತು. ಆದಕಾರಣ ಲಿಂಗಾಂಗಿಗಳೆಲ್ಲರೂ ತನ್ನ ಗುರುಗಳೆಂದೇ ತಿಳಿದು ಲಿಂಗಾಯತಸಮಾಜ ಸೇವೆಗಾಗಿ ತನ್ನ ತನುವನ್ನು ಬಸವಣ್ಣನವರು ಸವಿಸಿದರು.

ತನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ಎಂಬುದು ಬಸವಣ್ಣನವರ ಸಿದ್ಧಾಂತ, ಆದುದರಿಂದ ಶಿವಸಮಾಜ ಸೇವೆಯಲ್ಲಿಯೇ ತಮ್ಮ ದೇಹವನ್ನು ಸವಿಸಿದರು. ಅಂತೆಯೇ ತನು ದಾಸೋಹಕ್ಕೆ ಸವಿಸಿದನು ಬಸವಣ್ಣ ಎಂದು ಪ್ರಭು ದೇವರು ಹೇಳಿದ್ಧಾರೆ. ಲಿಂಗಾಂಗಿಗಳೆಲ್ಲರೂ ಲಿಂಗಾಯತರ ಸೇವೆಗಾಗಿ ತಮ್ಮ ತನುವನ್ನು ಸವಿಸುವುದೇ ತನುವನ್ನು ಗುರುವಿಗೆ ಅರ್ಪಿಸುವ ರೀತಿಯು.

ಮನಸ್ಸನ್ನು ಲಿಂಗಪೂಜೆ, ಲಿಂಗಧ್ಯಾನಗಳಲ್ಲಿ ಇಡುವುದೇ ಲಿಂಗಕ್ಕೆ ಮನಸ್ಸನ್ನು ಅರ್ಪಿಸುವ ರೀತಿಯ ಲೋಕೋಪಕಾರಕ್ಕೋಸ್ಕರ ಸಂಚರಿಸುತ್ತಿರುವ ಪರಮ ಪವಿತ್ರ ಜಂಗಮರಿಗೆ ತನ್ನ ಧನವನ್ನು ಅರ್ಪಿಸುವುದೇ ಜಂಗಮಕ್ಕೆ ಧನವನ್ನು ಸವಿಸುವ ರೀತಿಯು.

ಪ್ರಶ್ನೆ : ಗುರುವಿಗೆ ತನವನ್ನು ಸಲ್ಲಿಸಿದರೆ ಅದು ಲಿಂಗಾಂಗಿಗಳ ಸೇವೆಗೆ ಹೋಗುವುದರಿಂದ ತನುವು ಸಾರ್ಥಕವಾಗುವುದೇನೋ ನಿಜ. ಮನಸ್ಸನ್ನು ಲಿಂಗಧ್ಯಾನದಲ್ಲಿರಿಸಿದರೆ ಅದು ಪವಿತ್ರವಾಗುವುದೂ ಸಹಜ. ಆದರೆ ಧನವನ್ನು ಜಂಗಮರಿಗೆ ಕೊಡುವುದರಿಂದ ಜಂಗಮರನ್ನು ಧನಿಕರನ್ನಾಗಿ ಮಾಡಿದಂತಾಗುವುದೇ ವಿನಾ ಅದರಿಂದ ಅನ್ಯರಿಗೇನು ಹಿತವಾಗುವುದು?

ಉತ್ತರ : ಧನುವುಳ್ಳವರು ಜಂಗಮರಲ್ಲ, ಧನವನ್ನು ಹಂಚುವವರು ಜಂಗಮರು, ಜಂಗಮರು ಕೂಡಾ ತನುಮನ ಧನಗಳನ್ನು ಸವಿಸಲೇಬೇಕಾದುದು ಅವರ ಕರ್ತವ್ಯ.

ಸರ್ವಲೋಕೋಪಕಾರಾಯ ಯೋದೇವಃ ಪರಮೇಶ್ವರ ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೆ

ಯಾರೂ ಲೋಕೋಪಕಾರಕ್ಕೋಸ್ಕರವಾಗಿಯೇ ಸಂಚರಿಸುತ್ತಿದ್ಧಾರೆಯೋ ಅಂತಹ ದೇವತಾಸ್ವರೂಪಿಗಳಾದವರೇ ಜಂಗಮರು ಅಂತಹ ಮಹಾತ್ಮರಿಗೇನೇ ಧನವನ್ನು ಅರ್ಪಿಸಬೇಕು. ಅವರು ಆ ಧನವನ್ನು ಲೋಕೋಪಕಾರರ ಕಾರ್ಯಗಳಿಗಾಗಿ ಹಂಚಿ ಬಿಡುತ್ತಾರೆಯೇ ವಿನಾ ತಮ್ಮ ಹಿತಾರ್ಥವಾಗಿ ಅದನ್ನು ವಿನಿಯೋಗಿಸುವುದಿಲ್ಲ.

ಮೋಡವು ಸಮುದ್ರದ ನೀರನ್ನು ತೆಗೆದುಕೊಂಡು ಮಳೆಯ ರೂಪದಲ್ಲಿ ಭೂಮಿಯ ಮೇಲೆ ಚೆಲ್ಲುವಂತೆ ಜಂಗಮರು ಭಕ್ತರಿಂದ ಬರುವ ಧನವನ್ನು ಲೋಕೋಪಕಾರದ ಕಾರ್ಯಗಳಿಗಾಗಿ ಹಂಚಿ ಬಿಡುತ್ತಾರೆ. ಅಂತೆಯೇ ಅವರಿಗೆ ಧನವನ್ನು ಅರ್ಪಿಸಬೇಕೆಂದು ಗೊತ್ತು ಮಾಡಿದ್ಧಾರೆ.

ಅಣ್ಣನ ಈ ಅರ್ಪಣಯೋಗವು ಸರಿಯಾದ ಆಚರಣೆಯಲ್ಲಿ ಬಂದರೆ ಸಮಾಜದಲ್ಲಿ ಆರ್ಥಿಕ ವಿಷಮತೆಯುಂಟಾಗುವುದೇ ಶಕ್ಯವಿಲ್ಲ. ಇಂದಿನದು ನಾಳೀಗೆ ತಂಗುಳವೆಂದೇ ತಿಳಿಯಬೇಕಾಗಿ ಅರ್ಪಣಯೋಗದ ಸಿದ್ಧಾಂತವು ಸಂಗ್ರಹಕ್ಕೆ ಈ ಯೋಗದಲ್ಲಿ ಅವಕಾಶವೇ ಇಲ್ಲ. ಧನವನ್ನು ಸಂಗ್ರಹ ಮಾಡಿಟ್ಟರೆ ಆತನು ಕಳ್ಳತನವನ್ನು ಮಾಡಿದಂತೆಯೇ ಸರಿಯೆಂದು ಅಣ್ಣನ ಅರ್ಪಣಯೋಗವು ಸಾರುತ್ತಿದೆ.

ಪ್ರಶ್ನೆ : ಬಸವಣ್ಣನವರು ಹೀಗೆ ತತ್ವವನ್ನೇ ಹೇಳಿದ್ದಾರೆಯೋ? ಅಥವಾ ಪ್ರಭುದೇವರು ಹೇಳೀದಂತೆ ಆಚರಣೆಯಲ್ಲೇನಾದರೂ ತಂದಿದ್ದರೋ?

ಉತ್ತರ : ಬಸವಣ್ಣನವರು ಕೇವಲ ನುಡಿದವರಲ್ಲ, ಅವರು ತಮ್ಮ ನಡತೆಯಿಂದಲೂ ಲೋಕಕ್ಕೆ ಬೋಧಿಸಿದವರು. ಇವರು ತಮ್ಮ ಪತ್ನಿಗೆ ಓಲೆಯನ್ನು ಮಾಡಿಸಿಕೊಟ್ಟಿದ್ದರು. ಒಂದು ದಿನ ಒಬ್ಬ ಕಳ್ಳನು ಜಂಗಮ ವೇಷವನ್ನು ಹಾಕಿಕೊಂಡು ಇವರ ಮನೆಯಲ್ಲಿದ್ದು ರಾತ್ರೆ ಇವರ ಪತ್ನಿಯ ಕಿವಿಯಲ್ಲಿದ್ದ ಓಲೆಯನ್ನು ತೆಗೆದುಕೊಳ್ಳುವಾಗ ಎಚ್ಚತ್ತು ಬಸವಣ್ಣನವರಿಗೆ ತಿಳಿಸಲು ಆಗ ಅವರು ಹೀಗೆ ಹೇಳಿದರು.

ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ! ಕೈವಿಡಿದ ಸಜ್ಜನೆಯೆಂದೆ ನಂಬಿರ್ದೆನಯ್ಯಾ!
ಅಯ್ಯೋ ನಮ್ಮಯ್ಯನ ಕೈಯಿ ನೊಂದಿತು. ತೆಗೆದು ಕೊಡಾ ಎಲಾ ಚಂಡಾಲಗಿತ್ತಿ.
ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದರೆ ಕೂಡಲ ಸಂಗಮದೇವನಲ್ಲದೆ ಆರೂ ಇಲ್ಲ.

ನೀನು ಶಿವಾಚಾರವನ್ನು ಅರಿತ ಸಜ್ಜನೆಯೆಂದೇ ನಿನ್ನನ್ನು ನಾನು ಲಗ್ನವಾಗಿದ್ದೆ. ಅಯ್ಯೋ!; ನಿನ್ನ ಓಲೆಯನ್ನು ತೆಗೆಯುವಾಗ ನಮ್ಮ ಒಡೆಯನ ಕೈ ನೊಂದಿತಲ್ಲಾ! ಎಲಾ. ಚಂಡಾಲಗಿತ್ತಿ, ಜಾಗ್ರತೆ ತೆಗೆದು ಕೊಡು. ನಾನು ನಮ್ಮ ಒಡೆಯನಾದ ಜಂಗಮ ದೇವಗೆ ಧನವನ್ನೇಲ್ಲಾ ಸಲ್ಲಿಸದೆ ಅದರಲ್ಲಿಟ್ಟುಕೊಂಡು ನಿನಗೆ ಓಲೆಯನ್ನು ಮಾಡಿಸಿಕೊಟ್ಟಿದ್ದರಿಂದ ನಾನು ಕಳ್ಳನಾದೆನು. ಇಂಥ ಕಳ್ಳನಾದ ನನ್ನ ಮನೆಗೆ ಹೆಚ್ಚಿನ ಕಳ್ಳ ಬಂದಿರಬೇಕಾದರೆ ಆತನೂ ಕೂಡಲ ಸಂಗಮನಾಥನಲ್ಲದೆ ಬೇರೆಯವರೇ? ಎಂದು ಹೇಳಿ ಓಲೆಯನ್ನು ಕೂಡಿಸಿದರು. ಆ ಕಳ್ಳನು ತನ್ನ ನಡತೆಗೆ ಪಶ್ಚಾತ್ತಾಪ ಪಟ್ಟು ಕಳ್ಳತನವನ್ನು ಬಿಟ್ಟು ಶಿವಭಕ್ತನಾದನು. ಆಗ ಹೇಳಿದ ಈ ವಚನದಿಂದ ಧನವನ್ನು ಲಿಂಗಾಂಗಿಯು ಕೂಡಿಡದೆ ಅದನ್ನು ಜಂಗಮರಿಗೆ ಅರ್ಪಿಸಲೇಬೇಕೆಂದೂ ಕೂಡಿಟ್ಟರೆ ಕಳ್ಳತನ ಮಾಡಿದಂತಾಗುತ್ತದೆಂದು ಸ್ಪಷ್ಟವಾಗುವುದಿಲ್ಲವೆ? ಅಂತಯೇ ಬಸವಣ್ಣನವರು ಹೀಗೆ ಹೇಳಿದ್ದಾರೆ.

ಹೊನ್ನಿನೊಳಗೊಂದೊರೆಯ. ಸೀರೆಯೊಳಗೊಂದೆಳೆಯ, ಅನ್ನದೊಳಗೊಂದಗುಳ,
ಇಂದಿಂಗೆ ನಾಳಿಂಗೆ ಬೇಕೆಂದಾನಾದರೆ ನಿಮ್ಮಾಣೆ, ನಿಮ್ಮ ಪುರಾತನರಾಣೆ,
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ.

ಮನುಷ್ಯನು ತನ್ನ ಜೀವನಕ್ಕೆ ಅಗತ್ಯವಾದ ಆಹಾರ ಪದಾರ್ಥ, ಬಟ್ಟೆ ಮತ್ತು ಹೊನ್ನು ಇವುಗಳನ್ನು ಕೂಡಿಡುವುದುಂಟಷ್ಟೆ. ಆದುದರಿಂದ ಅನ್ನದಲ್ಲಿ ಒಂದು ಅಗುಳನ್ನಾದರೂ ಬಟ್ಟೆಯಲ್ಲಿ ಒಂದು ಎಳೆಯಷ್ಟನ್ನಾದರೂ ಚಿನ್ನದಲ್ಲಿ ಒಂದು ಒರೆಯನ್ನಾದರು ನನಗಾಗಿ ಇಂದು, ನಾಳೆ ಬೇಕೆಂದು ಕೂಡಿಡುವುದಿಲ್ಲವೆಂದೂ ಎಲ್ಲವನ್ನೂ ಶಿವಶರಣರಿಗಾಗಿಯೇ ಅರ್ಪಿಸುತ್ತೇನೆಂದೂ ಬಸವಣ್ಣನವರು ಈ ವಚನದಲ್ಲಿ ಪ್ರತಿಜ್ಞಾಪೂರ್ವಕ ಹೇಳಿದ್ದಾರೆ.

ನಾಳೆಗೆ ಬೇಕೆಂದು ಕೂಡಿಡುವಾತನೇ ನಾಸ್ತಿಕನೆಂದು ಅವರ ಭಾವನೆ, ಏಕೆಂದರೆ, ನಾಳೆ ಶಿವನಿರುವುದಿಲ್ಲವೆ? ಶಿವನಿದ್ದ ಮೇಲೆ ನಮಗೆ ಯಾರ ಹಂಗು? ಯಾವುದರ ಕೊರತೆ? ನಾಳೆಗೆ ಶಿವನಿರುವುದಿಲ್ಲವೆಂದು ತಿಳಿದವರೇ ನಾಳೆಗಾಗಿ ಕೂಡಿಡಬೇಕೆಂದು ಆ ಶಿವಶರಣರು ತಿಳಿದಿದ್ದರು. ಅವರಿಗೆ ಇಂದಿನದು ನಾಳೆಗೆ ತಂಗಳು.

ಶಿವಶರಣರ ಈ ದಿವ್ಯ ತತ್ವವು ಬಹು ಜನರ ಆಚರಣೆಯಲ್ಲಿ ಬಂದರೆ ಸಮಾಜದಲ್ಲಿ ಈಗಿನ ಆರ್ಥಿಕ ವಿಷಮತೆಯುಂಟಾಗುವುದೇ? ಈಗಿನ ಸೋಶಾಲಿಜಂ, ಬೊಲ್ಸೆವಿಜಂ ಮೊದಲಾದ ಯಾವ "ಇಜಂ"ಗಳೂ ಬೇಕಾಗುವುದಿಲ್ಲವಷ್ಟೆ. ಅಂತೆಯೇ ಅಣ್ಣನ ಅರ್ಪಣಯೋಗವು ಈಗಿನ ಸಮತಾವಾದಕ್ಕಿಂತಲು ಹೆಚ್ಚು ಪ್ರಯೋಜನಕಾರಿಯಾದುದು. ಆದರೆ ಅದು ಸ್ವ ಸಂತೋಷದಿಂದ ಉಂಟಾಗಬೇಕಾದುದಾಗಿರುವುದರಿಂದ ಕಷ್ಟಸಾಧ್ಯ. ಈಗಿನ ಸಮತಾವಾದವಾದರೋ ಒತ್ತಾಯದ ಕಟ್ಟಳೆಯಿಂದ ಏರ್ಪಡುವುದಾದ ಕಾರಣ ಸುಲಭಸಾಧ್ಯ. ಮೊದಲಿನದು ಸ್ಥಿರ. ಎರಡನೆಯದು ಅಸ್ಥಿರ

ಪ್ರಶ್ನೆ : ಈ ಅರ್ಪಣಯೋಗದಲ್ಲಿ ಜಂಗಮಕ್ಕೆ ಧನವನ್ನು ಅರ್ಪಿಸಬೇಕೆಂಬುದು ಮುಖ್ಯವೇ? ಮನವನ್ನು ಲಿಂಗಕ್ಕೆ ಒಪ್ಪಿಸಬೇಕೆಂಬುದು ಮುಖ್ಯವೇ?

ಉತ್ತರ : ಎರಡೂ ಅಗತ್ಯವಾದವುಗಳು ಮತ್ತು ಮುಖ್ಯವಾದವುಗಳು ಆದರೆ ಲಿಂಗದೇವನ ಉಪಚಾರದಲ್ಲಿ ಮನಸ್ಸನ್ನು ಇಟ್ಟಿದ್ದೇನೆಂದು ಜಂಗಮಕ್ಕೆ ಧನವನ್ನು ಅರ್ಪಿಸಲು ಮಾತ್ರ ಹಿಂಜರಿಯಬಾರದು. ಜಂಗಮಕ್ಕೆ ಧನವನ್ನು ಅರ್ಪಿಸುವುದೇ ಲಿಂಗದಲ್ಲಿ ಮನವನ್ನಿಟ್ಟಿರುವುದಕ್ಕೆ ಹೆಗ್ಗುರುತು. ಅಂತೆಯೇ ಬಸವಣ್ಣನವರು ಈ ವಿಷಯವಾಗಿ ಹೇಳಿದುದನ್ನು ಲಕ್ಷವಿಟ್ಟು ಕೇಳಿರಿ.

ಆಡುತ್ತಾ ಹಾಡುತ್ತ ಭಕ್ತಿಯ ಮಾಡಬಹುದು. ಲಿಂಗಕ್ಕೆ ಅದು ಬೇಡದು, ಬೆಸಗೊಳ್ಳದು ತಂದೊಮ್ಮೆ ನೀಡಬಹುದು. ಕಾಡುವ ಬೇಡುವ ಜಂಗಮ ಬಂದರೆ ನೀಡಲು ಬಾರದು ಕೂಡಲ ಸಂಗಮದೇವ.

ಲಿಂಗಮೂರ್ತಿಯೇನೂ ಮಾತನಾಡುವುದಿಲ್ಲ. ನೀಡಿದರೆ ಊಟ ಮಾಡುವುದೂ ಇಲ್ಲ. ಇಂತಹದೇ ಬೇಕೆಂದು ಕೇಳುವುದಿಲ್ಲ ಎಂದ ಮೇಲೆ ಬೇಕಾದಷ್ಟು ಆಡಿ, ಹಾಡಿ ಪೂಜಿಸಿ, ಭಕ್ತಿಯನ್ನು ಮಾಡಬಹುದು. ಅದರೆ ಜಂಗಮರಿಗೆ ಧನಧಾನ್ಯಾದಿಗಳನ್ನು ಕೊಡುವುದು ಕಷ್ಟವಲ್ಲವೆ? ಅದನ್ನು ಕೊಟ್ಟರೇನೇ ಲಿಂಗಕ್ಕೆ ಮನವನ್ನು ಒಪ್ಪಿಸಿದ್ದಾನೆಂದು ತಿಳಿಯಬೇಕು.

ಉದಯದ ಮಾಗಿಯ ಬಿಸಿಲು ಅಂಗಕ್ಕೆ ಹಿತವಾಯಿತ್ತು.
ಮಧ್ಯಾಹ್ನದ ಬಿಸಿಲು ಅಂಗಕ್ಕೆ ಕರಕಠಿಣವಾಯಿತ್ತು.
ಮೊದಲಲ್ಲಿ ಲಿಂಗಭಕ್ತಿ ಹಿತವಾಯಿತ್ತು. ಕಡೆಯಲ್ಲಿ ಜಂಗಮ ಭಕ್ತಿ ಕಠಿಣವಾಯಿತ್ತು.
ಇದು ಕಾರಣ ಕೂಡಲ ಸಂಗಮದೇವನವರ ಬಲ್ಲನಾಗಿ ಒಲ್ಲನಯ್ಯ.

ಮಾಗಿಯ ಬಿಸಿಲು ಮುಂಜಾನೆ ಮೈಯಗೆ ಹಿತವಾಗಿ ತೋರುವಂತೆ ಲಿಂಗಪೂಜಾದಿ ದೇವರಭಕ್ತಿಯು ಮೊದಲು ಅನುಕೂಲವೆಂದೇ ತೋರುತ್ತದೆ. ಕಡೆಗೆ ಮಧ್ಯಾಹ್ನದ ಬಿಸಿಲು ಹೇಗೆ ತಾಳಲಾರದಂತಾಗುತ್ತದೆಯೋ ಹಾಗೆಯೇ ಜಂಗಮರಿಗೆ ಧನಧಾನ್ಯಾದಿಗಳನ್ನು ಕೊಡುವ ಪ್ರಸಂಗ ಬಂದಾಗ ವ್ಯಸನವಾಗುತ್ತದೆ. ಹಾಗೆ ಜಂಗಮ ಸೇವೆಗೆ ವ್ಯಸನಪಟ್ಟು ಲಿಂಗಪೂಜೆಯ ಸೇವೆಯನ್ನು ಎಷ್ಟು ಮಾಡಿದರೂ ಅವರು ಠಕ್ಕರೆಂದು ಶಿವನು ಅವರಿಗೆ ಮೆಚ್ಚುವುದಿಲ್ಲ.

ಭಾಂಡವ ತುಂಬಿದ ಬಳಿಕ ಸುಂಕವ ತೆತ್ತಲ್ಲದೆ ವಿರಹಿತ ಹೋಗಬಾರದು.
ಕಳ್ಳನಾಣ್ಯ ಸಲುಗೆಗೆ ಸಲ್ಲದು. ಕಳ್ಳ ನಾಣ್ಯ ಸಲ್ಲಲೀಯರಯ್ಯಾ
ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ ಕೂಡಲ ಸಂಗಮದೇವ

ತುಂಬಿದ ಬಂಡಿಯನ್ನು ಹೊಡೆದುಕೊಂಡು ಹೋದರೆ ಸುಂಕವನ್ನು ಹೇಗೆ ಕೊಟ್ಟೇತೀರಬೇಕೊ ಹಾಗೆಯೋ ಭಕ್ತಿಯ ಕುರುಹಾದ ಲಿಂಗವನ್ನು ಅಂಗದ ಮೇಲೆ ಧರಿಸಿದರೆ ಜಂಗಮರೆಂಬ ಸುಂಕದವರಿಗೆ ಧನಧಾನ್ಯಗಳೆಂಬ ಸುಂಕವನ್ನು ಕೊಡಲೇಬೇಕು. ಸುಂಕ ತಪ್ಪಿಸಿಕೊಂಡರೆ ಲಿಂಗಾಂಗಿಯು ಕಳ್ಳನೇ ಸರಿ. ಆತನಲ್ಲಿರುವ ಜಂಗಮಕ್ಕೆ ವಂಚನೆ ಮಾಡಿದ ಧನಧಾನ್ಯಗಳೆಲ್ಲಾ ವ್ಯರ್ಥವಾದವುಗಳೇ ಸರಿ.

ಮಾಡಿ ನೀಡಿ ಲಿಂಗವ ಪೂಜಿಸಿಹೆವೆಂಬವರು ನೀವೆಲ್ಲಾ ಕೇಳಿರಣ್ಣಾ!
ಹಾಗದ ಕೆರಹ ಹೊರಗೆ ಕಳೆದು ದೇಗುಲಕ್ಕೆ ಹೋಗಿ ನಮಸ್ಕಾರ ಮಾಡುವನಂತೆ,
ತನ್ನ ಕೆರಹಿನ ಧ್ಯಾನ್ಯವಲ್ಲದೆ ದೇವ ಧ್ಯಾನವಿಲ್ಲ, ಧನವನಿರಿಸಿದಿರಾ,
ಇರಿಸಿದರೆ ಭವಬಪ್ಪುದು ತಪ್ಪದು, ಕೂಡಲ ಸಂಗನ ಶರಣನಿಗೆ ಸವೆಸಲಬೇಕು.

ಉಣ್ಣದ, ಬೇಡದ, ಲಿಂಗಮೂರ್ತಿಯನ್ನು ಶೋಡಶೋಪಚಾರಗಳಿಂದ ಪೂಜಿಸಿದೆವೆಂದು ಹೇಳುವವರೆಲ್ಲರೂ ಜಂಗಮಕ್ಕೆ ಧನ ಧಾನ್ಯಗಳನ್ನು ಸವಿಸಲೇಬೇಕು. ಹಾಗೆ ಸವಿಸದೆ ಲಿಂಗಪೂಜೆಯನ್ನು ಎಷ್ಟು ಮಾಡಿದರೂ ಅದು ಪಾದರಕ್ಷೆಗಳನ್ನು ಹೊರಗೆ ಬಿಟ್ಟು ದೇವರ ದರ್ಶನಕ್ಕೆ ಹೋದಾಗ ಪಾದರಕ್ಷೆಗಳನ್ನು ಯಾರು ತೆಗೆದುಕೊಂಡು ಹೋಗುವರೋ ಎಂದು ಅವುಗಳ ಕಡೆಗೇ ಮನಸ್ಸಿಡುವವನ ದೇವರದರ್ಶನವು ಹೇಗೆ ವ್ಯರ್ಥವಾದುದೋ ಹಾಗೆಯೇ ನಿರರ್ಥಕವಾದುದು. ಆದ ಕಾರಣ ಧನಧಾನ್ಯಗಳನ್ನು ಶಿವಶರಣರಿಗೆ ಅರ್ಪಿಸಲೇಬೇಕು.

ಉಂಬಾಗಳಿಲ್ಲೆನ್ನ, ಉಂಡುವಾಗಳಿಲ್ಲೆನ್ನ, ಬಂಧುಗಳು ಬಂದಾಗಳಿಲ್ಲೆನ್ನ,
ಲಿಂಗಕ್ಕೆ ಇಲ್ಲೆಂಬ ಜಂಗಮಕ್ಕೆ ಇಲ್ಲೆಂಬ ಬಂದ ಪುರಾತನರಿಗೆ ಇಲ್ಲೆಂಬ
ಸಾವಾಗ ದೇಹವ ದೇಗುಲಕ್ಕೆ ಒಯ್ಯಿ ಎಂಬ!
ದೇವರಿಗೆ ಹೆಣ ಬಿಟ್ಟ ಹೇಳಿತ್ತೇ ಕೂಡಲ ಸಂಗಮದೇವ?

ತನಗೂ ತನ್ನ ಹೆಂಡರು ಮಕ್ಕಳಿಗೂ, ಬಂಧುಭಾಂಧವರಿಗೂ ಧನಧಾನ್ಯಗಳನ್ನು ಬೇಕಾದ ಹಾಗೆ ವೆಚ್ಚ ಮಾಡಿ ಜಂಗಮ ಬಂದಾಗ ಮಾತ್ರ ಇಲ್ಲೆಂದು ವಂಚಕನಾಗಿ ನಡೆದವನು ಸಾಯುವಾಗ ಶಿವಾಲಯಕ್ಕೆ ಒಯ್ಯಿರೆಂದೂ ತನಗೆ ಶಿವನ ಕೃಪೆಯಾಗಲೆಂದೂ ಕೂಗಿಕೊಳ್ಳುತ್ತಾನಲ್ಲಾ! ದೇವರೇನು ಹಣವನ್ನು ಕಾಯುವ ಬಿಟ್ಟಿ ಕೆಸಲವನ್ನು ವಹಿಸಿಕೊಂಡಿದ್ಧಾನೆಯೇ?

ಜಂಗಮನಿಂದೆಯ ಮಾಡಿ ಲಿಂಗವ ಪೂಜಿಸುವ ಭಕ್ತನ ಅಂಗವಣಿಯೆಂತೋ ಶಿವ! ಶಿವ!
ನಿಂದಿಸುವ ಪೂಜಿಸುವ ಪಾತಕವ ಕೇಳಲಾಗದು.
ಗುರುವಿನ ಗುರು ಜಂಗಮವಿಂತೆಂದುದು ಕೂಡಲಸಂಗನ ವಚನ.

ಜಂಗಮರಿಗೆ ಧನಧಾನ್ಯಗಳನ್ನು ಅರ್ಪಿಸಿ ಲೋಕಸೇವೆಯ ಅವರ ಪವಿತ್ರ ಕಾರ್ಯಕ್ಕೆ ನೆರವಾಗದೆ ಅವರನ್ನು ನಿಂದಿಸುತ್ತಾ, ಲಿಂಗಪೂಜೆಯನ್ನು ಎಷ್ಟು ಮಾಡಿದರೇನು? ಅವರು ಪಾಪಿಗಳು ಲೋಕಸೇವಾನಿರತಾಗಿರುವ ಜಂಗಮರು ಗುರುವಿಗೂ ಕೂಡಾ ಗುರುವಾಗಿದ್ದಾರೆಂಬುದು ಆ ಲಿಂಗ ಪೂಜಕರಿಗೆ ಗೊತ್ತಿಲ್ಲ.

ಪ್ರಶ್ನೆ : ಲಿಂಗಪೂಜೆಗಿಂತ ಜಂಗಮರಿಗೆ ಧನಧಾನ್ಯಗಳನ್ನು ಅರ್ಪಿಸುವುದೇ ಹೆಚ್ಚಿನದೆಂದು ನಿಮ್ಮ ಅಭಿಪ್ರಾಯವೇ?

ಉತ್ತರ : ನಿಜ ಜಂಗಮ ಸೇವೆಯನ್ನು ಮಾಡಿದರೇನೇ ಲಿಂಗದೇವರಿಗೆ ತೃಪ್ತಿ ಇಲ್ಲದಿದ್ದರೆ ಬರೆ ಲಿಂಗಪೂಜೆಯಿಂದ ಫಲವಿಲ್ಲ. ಅದು ಢಂಭಾಚಾರ, ಇಂಥ ಠಕ್ಕು ಭಕ್ತಿಗೆ ದೇವರು ಮೆಚ್ಚುವುದಿಲ್ಲ. ಬಸವಣ್ಣನವರು ಇಂತ ಡಂಭಾಚಾರವನ್ನು ಹೇಗೆ ಖಂಡಿಸಿದ್ದಾರೆಂಬುದನ್ನು ಸ್ವಲ್ಪ ಕೇಳಿರಿ.

ಮಾತಿನ ಮಾತಿನಲ್ಲಿಪ್ಪುದೆ ಭಕ್ತಿ? ಮಾಡಿ ತನು ಸವೆಯದನ್ನಕ್ಕ? ಮನ ಸವೆಯದನಕ್ಕ?
ಧನ ಸವೆಯದನ್ನಕ್ಕ? ಅಪ್ಪುದಪ್ಪುದೆ ಭಕ್ತಿ?
ಕೂಡಲಸಂಗಮದೇವನೆಲುದೋರಿ ಸರಸವಾಡುವವನು ಸೈರಿಸದನ್ನಕ್ಕ ಅಪ್ಪುದೆ ಭಕ್ತಿ?

ತನು ಮನ ಧನಗಳನ್ನು ಸವಿಸದೆ ಬರೆ ಮಾತಿನಿಂದ ಎಷ್ಟು ಸಾರೆ ದೇವರನ್ನು ಹೊಗಳಿದರೇನು? ಅದು ಭಕ್ತಿಯಿಲ್ಲ. ದೇವರು ನನ್ನಲ್ಲಿರುವ ಭಕ್ತಿಯನ್ನು ನೋಡಲಿಕ್ಕಾಗಿಯೇ ತನು ಮನ ಧನಗಳ ಅನೇಕ ಕಷ್ಟಗಳನ್ನು ಕೊಡುತ್ತಾನೆ. ಆಗ ಅವೆಲ್ಲವುಗಳನ್ನೂ ಸೈರಿಸಿಕೊಂಡು ತನು ಮನ ಧನಗಳ ವಂಚನೆ ಮಾಡದೆ ಸವಿಸಿದರೇನೇ ನಿಜವಾದ ಭಕ್ತಿಯು. ಅಂಥ ಭಕ್ತಗೇನೇ ಶಿವನು ಮೆಚ್ಚುತ್ತಾನೆ.

ತನು ಮನ ಧನವ ಹಿಂದಿಕ್ಕಿಕೊಂಡು
ಮಾತಿನ ಬಣಬೆಯ ಲೊಳಲೊಟ್ಟೆಯ ನುಡಿಯುವರು ನೀವೆಲ್ಲ ಕೇಳಿರೆ.
ತಲೆ ಇಲ್ಲದ ಕೋಲು ಹೊಳ್ಳ ಹಾರುವುದಲ್ಲದೆ ಗುರಿಯ ತಾಗಬಲ್ಲುದೆ?
ಮಾಯಾ ಪಾಶವ ಹಿಂಗಿ ಮನದ ಗಂಟು ಬಿಡದನ್ನಕ್ಕ
ಕೂಡಲ ಸಂಗಮದೇವನೆಂತೊಲಿವನಯ್ಯಾ?

ತನು ಮನ ಧನಗಳನ್ನು ಶಿವಸಮಾಜಕ್ಕೂ ಶಿವಧ್ಯಾನಕ್ಕೂ ಸವಿಸದೆ ವಂಚಿಸಿ ಇಟ್ಟುಕೊಂಡು ಬಾಯಲ್ಲಿ ಬರೆ ಮಾತಿನಿಂದ ದೇವರನ್ನು ಹೊಗಳಿದರೇನು? ಶಾಸ್ತ್ರ ಪುರಾಣ ಹೇಳಿದರೇನು? ಗಂಟಿಲ್ಲದ ಕೋಲು ಗುರಿಗೆ ತಾಕದೆ ಗಾಳಿಗೆ ಹಾರಿ ಹೋಗುವಂತೆ ಇವರ ಎಲ್ಲ ಆಚಾರಗಳೂ ಶಿವನ ಕಡೆಗೆ ಹೋಗದೆ ವ್ಯರ್ಥವಾಗುತ್ತವೆ.

ಸರ್ವಭೂತಾತ್ಮನೆಂಬ ಮಾತಿನ ಮಾತಿನಲ್ಲಿ ಹೋಗದು.
ತನು ಮನ ಧನವ ಸವೆಸಲೇಬೇಕು.
ನಮ್ಮ ಕೂಡಲಸಂಗಮನ ಶರಣರಿಗೆ ಅಂಜಲೇಬೇಕು.

ಅಣು, ರೇಣು, ತೃಣ, ಕಾಷ್ಟಗಳಲ್ಲೆಲ್ಲಾ ಪರಮಾತ್ಮನೇ ಇದ್ದಾನೆ. ಕೊಡುವವರಾರು? ಕೊಂಬುವವರಾರು? ಎಲ್ಲರಲ್ಲಿಯೂ ಇರುವವನು ಒಬ್ಬನೇ ಪರಮಾತ್ಮನೆಂದು ಹೇಳುತ್ತ ತನ್ನ ತನುಮನ ಧನಗಳನ್ನು ಮಾತ್ರ ಸವಿಸದಿರುವ ವಾಗದ್ವೈತಿಯ ಜ್ಞಾನವು ವ್ಯರ್ಥವಾದುದು. ಲೋಕಸೇವೇಗೆ ತನು ಮನ ಧನಗಳನು ಸವಿಸದರೇನೇ ಆತನು ನಿಜವಾದ ಜ್ಞಾನಿಯೂ.

ದ್ವೈತಾದ್ವೈತವನೋದಿ ಏನು ಮಾಡುವಿರಯ್ಯಾ ನಮ್ಮ ಶರಣರಿಗುರಿಗರಗಾಗಿ ಕರಗದನ್ನಕ್ಕ?
ಸ್ಥಾವರ ಜಂಗಮವೊಂದೇ ಎಂದು ನಂಬದನ್ನಕ್ಕ?
ಕೂಡಲಸಂಗಮದೇವಾ ಬರಿಯ ಮಾತಿನ ಮಾಲೆಯಲೇನಹುದು?

ಶಿವಜೀವರು ಒಂದೋ, ಅಥವಾ ಭಿನ್ನವೋ, ಎಂಬ ಅದ್ವೈತ ಶಾಸ್ತ್ರಗಳನ್ನು ಓದಿ, ವಾದಿಸಿ ಏಕೆ ವ್ಯರ್ಥ ಕಾಲ ಕಳೆಯುತ್ತಿರುವಿರಿ? ಶಿವಶರಣರ ಇಚ್ಛೆ ಎಂಬ ಊರಿಗೆ ನಿಮ್ಮ ತನು ಮನ ಧನಗಳನ್ನು ಅರಗಿನಂತೆ ಕರಗಿಸಿರಿ. ಸಂಚರಿಸುವ ಜೀವಿಗಳ ತೃಪ್ತಿಯಿಂದಲೇ ಸ್ಥಾವರ ದೇವ ಮೂರ್ತಿಗಳೆಲ್ಲ. ಸಂತೋಷ ಹೊಂದುವವೆಂದು ತಿಳಿಯಿರಿ. ಲೋಕಸೇವೆಗೆ ನೀವು ಕರಗದೆ ಬರೆ ಮಾತಿನಲ್ಲಿ ಯಾವ ಶಾಸ್ತ್ರವನ್ನು ಎಷ್ಟು ಕಲಿತು ವಾದಿಸಿದರೂ ವ್ಯರ್ಥವೇ ಸರಿ.

ಆಡಿದರೇನು? ಹಾಡಿದರೇನು? ಓದಿದರೇನು? ತ್ರಿವಿಧದಾಸೋಹವಿಲ್ಲದನ್ನಕ್ಕ?
ಆಡದೇ ನವಿಲು? ಹಾಡದೇ ತಂತಿ? ಓದದೇ ಗಿಣೀ?
ಭಕ್ತಿಯಿಲ್ಲದವರನೊಲ್ಲ ಕೂಡಲಸಂಗಮದೇವ.

ದೇವರ ಮುಂದೆ, ಎಷ್ಟು ಕುಣಿದಾಡಿದರೇನು? ದೇವರ ನಾಮವನ್ನು ಎಷ್ಟು ಮಂಜುಳವಾಗಿ ಹಾಡಿದರೇನು? ದ್ವೈತಾದ್ವೈತ ಶಾಸ್ತ್ರಗಳನ್ನೆಲ್ಲಾ ಎಷ್ಟು ಓದಿದರೇನು? ತನು ಮನ ಧನಗಳನ್ನು ಸವಿಸದಿದ್ದರೆ ಅವೆಲ್ಲಾ ವ್ಯರ್ಥವೇ ಸರಿ. ಏಕೆಂದರೆ, ನಿನಗಿಂತ ನವಿಲು ಚೆನ್ನಾಗಿ ಕುಣಿಯುತ್ತದೆ. ತಂತಿಯು ಮಂಜುಳವಾಗಿ ಹಾಡುತ್ತದೆ. ಗಿಣಿಯೂ ಕಲಿಸಿದುದನ್ನೆಲ್ಲಾ ಹೇಳುತ್ತದೆ.

ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿದೆ.
ವೇದ ಘನವೆಂಬೆನೆ? ಪ್ರಾಣವಧೆಯ ಹೇಳುತ್ತಿದೆ
ಸ್ಮೃತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿದೆ ಅಲ್ಲೆಲ್ಲಿಯೂ ನೀವಿಲ್ಲದ ಕಾರಣ
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವನ.

ಧರ್ಮಶಾಸ್ತ್ರಗಳು ಹೆಚ್ಚಿನವುಗಳೆಂದು ಹೇಳಲೋ? ಅವು ನಾನಾ ಕರ್ಮಗಳನ್ನು ಹೇಳುತ್ತಲಿವೆ. ವೇದದಲ್ಲಿ ಹೇಳದಂತೆ ನಡೆದರೆ ಶಿವನ ಕೃಪೆಯಾಗುತ್ತದೆಂದು ಹೇಳಲೋ? ಅದರಲ್ಲಿ ನಾನಾ ಪ್ರಾಣಿಗಳ ಹಿಂಸೆಯನ್ನು ಹೇಳಿದೆ. ಸ್ಮೃತಿಗಳಿಗೆ ಶಿವನ ನಿಲವು ತಿಳಿದಿದೆಯೆಂದು ಹೇಳಲೋ? ಅವುಗಳಿಗೂ ಪರಮಾತ್ಮನ ಇರವು ತಿಳಿಯದೆ ಅವೇ ಹುಡುಕುತ್ತಲಿವೆ. ಆದ ಕಾರಣ ಅವುಗಳನ್ನೆಲ್ಲಾ ಬಿಟ್ಟು ಗುರುಲಿಂಗ ಜಂಗಮಗಳಿಗೆ ತನು ಮನ ಧನಗಳನ್ನು ಅರ್ಪಿಸುವ ಈ ಅರ್ಪಣಯೋಗವೊಂದರಲ್ಲಿಯೇ ಮಗ್ನರಾದರೆ ಶಿವನು ಆ ಅರ್ಪಣದಲ್ಲಿಯೇ ಇದ್ದನೆಂಬುದು ಮನವರಿಕೆಯಾಗುವುದು.

ಪ್ರಶ್ನೆ : ದೇಹದಿಂದ ಶಿವಸಮಾಜದ ಸೇವೆ ಮಾಡಬೇಕು. ಮನಸ್ಸನ್ನು ಲಿಂಗಧ್ಯಾನದಲ್ಲಿರಿಸಬೇಕು. ಧನವನ್ನು ಜಂಗಮರಿಗೆ ಸವಿಸಿ ಅವರ ಮೂಲಕ ಲೋಕಸೇವೆಗೆ ನೆರವಾಗಬೇಕು. ಇದೇ ನಿಮ್ಮ ಅರ್ಪಣ ಯೋಗದ ಮುಖ್ಯಾಂಶವಷ್ಟೇ. ಈ ಸಂಗತಿಗಳೇನೋ ಬಹು ಚೆನ್ನಾಗಿಯೇ ಇವೆ. ಆದರೆ ಲಿಂಗವೆಂಬ ದೇವರಿಗಿಂತ ಜಂಗಮರೆಂಬ ಮನುಷ್ಯರಿಗೇನೇ ಈ ಅರ್ಪಣಯೋಗದಲ್ಲಿ ಹೆಚ್ಚು ಮಹತ್ವ ಕೊಟ್ಟಿರುವುದೇಕೆ?

ಉತ್ತರ : ಅರ್ಪಣಯೋಗದ ಮುಖ್ಯಾಂಶವನ್ನೇನೋ ನೀವು ಸರಿಯಾಗಿಯೇ ತಿಳಿದುಕೊಂಡಿರಿ. ಆದರೆ ಲಿಂಗ ಮತ್ತು ಜಂಗಮಗಳ ತಾರತಮ್ಯ ಮಾತ್ರ ನಿಮಗೆ ಸರಿಯಾಗಿ ತಿಳಿದಂತೆ ತೋರುವುದಿಲ್ಲ. ನಿಮ್ಮ ಪ್ರಶ್ನೆಗೆ ಬಸವಣ್ಣನವರೇ ಹೀಗೆ ಉತ್ತರ ಹೇಳಿದ್ದಾರೆ.

ಮರಕ್ಕೆ ಬಾಯಿ ಬೇರೆಂದು, ತಳಕ್ಕೆ ನೀರನೆರೆದರೆ ಮೇಲೆ ಪಲ್ಲವಿಸಿತ್ತು ನೋಡಾ.
ಲಿಂಗದ ಬಾಯಿ ಜಂಗಮವೆಂದು ಪಡಿ ಪದಾರ್ಥವ ನೀಡಿದಡೆ,
ಮುಂದೆ ಸಕಲಾರ್ಥವನೀವನು.
ಆ ಜಂಗಮವ ಹರನೆಂದು ಕಂಡು ನರನೆಂದು ಭಾವಿಸಿದರೆ
ನರಕ ತಪ್ಪದು ಕಾಣಾ, ಕೂಡಲಸಂಗಮದೇವ

ಗಿಡಗಳಿಗೆ ಬೇರು ಬಾಯಿಯಾಗಿರುವಂತೆ ಲಿಂಗಮೂರ್ತಿಗೆ ಜಂಗಮವೇ ಬಾಯಿ. ಆದುದರಿಂದ ಜಂಗಮ ತೃಪ್ತಿಯಾದರೆ ಲಿಂಗಮೂರ್ತಿಗಳು ಸಂತೋಷ, ಬೇರಿಗೆ ನೀರನು ಹಾಕಿದರೆ ಗಿಡವು ಚಿಗಿತು ಹೂವು ಕಾಯಿಗಳನ್ನು ಬಿಡುವುದಿಲ್ಲವೆ? ಆದಕಾರಣ ಪವಿತ್ರಾತ್ಮರೂ ಲೋಕಸೇವಾ ನಿರತರೂ ಆದ ಜಂಗಮರು ಸಾಕ್ಷಾತ್ ಪರಮಾತ್ಮನೆಂದೇ ತಿಳಿಯಬೇಕು. ವಿನಾ ಅವರು ಸಾಮಾನ್ಯರಂತೆ ಮನುಷ್ಯನಲ್ಲ.

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುದಯ್ಯಾ
ಭೂಮಿಯಾಧಾತರದಲ್ಲಿ ವೃಕ್ಷ ನೀರುಂಬುದಯ್ಯಾ,
ಜಂಗಮವಾಪ್ಯಾಯನವಾದರೆ ಲಿಂಗಸಂತುಷ್ಟಿಯಹುದಯ್ಯ
ಇದು ಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗಸಂತುಷಿ.

ಕಾದ ಕಬ್ಬಿಣದ ಮೇಲೆ, ನೀರನ್ನು ಹಾಕಿದರೆ ಆ ಕಬ್ಬಿಣವು ನೀರನ್ನು ಹೀರಿಕೊಳ್ಳಲು ಅದರಲ್ಲಿದ್ದ ಬೆಂಕಿಯೇ ಕಾರಣವಲ್ಲನವೆ? ಹಾಗೆಯೇ ಜಂಗಮಮೂರ್ತಿಗಳ ಹೃದಯಾರವಿಂದದಲ್ಲಿರುವ ಪರಮಾತ್ಮನೇ ಎಂದರೆ ಲಿಂಗವೇ ಜಂಗಮದ ಮುಖದಿಂದ ಬಂದುದನೆಲ್ಲವನ್ನು ಹೊಂದಿ ಸಂತೋಷಿಸುತ್ತದೆ. ಗಿಡವು ಭೂಮಿಯ ಮೂಲಕ ನೀರನ್ನು ಹೀರುವಂತೆ ಪರಮಾತ್ಮನೇ ಜಂಗಮನ ಮುಖದಿಂದ ಭಕ್ತನ ಭಕ್ತಿಯನ್ನು ಹೊಂದುತ್ತಾನೆ. ಅಂತೆಯೇ ಜಂಗಮಕ್ಕೆ ಚರಲಿಂಗವೆಂದು ಹೇಳುವುದು.

ಕಲ್ಲುನಾಗರ ಕಂಡರೆ ಹಾಲನೆರೆ ಎಂಬರು.
ದಿಡದ ನಾಗರ ಕಂಡರೆ ಕೊಲ್ಲೆಂಬರಯ್ಯ
ಉಂಬ ಜಂಗಮ ಬಂದರೆ ನಡೆ ಎಂಬರು.
ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ
ನಮ್ಮ ಕೂಡಲಸಂಗನ ಶರಣರ ಕಂಡು ಉದಾಸೀನವ ಮಾಡಿದರೆ
ಕಲ್ಲ ತಾಗಿದ ಮಿಟ್ಟಿಯಂತಪ್ಪರಯ್ಯಾ

ಕಲ್ಲಿನಲ್ಲಿ ಕೊರೆದ ನಾಗರಹಾವಿಗೆ ಹಾಲನ್ನು ಎರೆಯಲು ಹೋಗುತ್ತಾರೆ. ಆಗ ನಿಜವಾಗಿಯೂ ನಾಗರಹಾವು ಬಂದರೆ ಅದಕ್ಕೆ ಕಲ್ಲಿನಿಂದ ಹೊಡೆಯುತ್ತಾರೆ. ಊಟ ಮಡದ ಲಿಂಗಮೂರ್ತಿಗೆ ಎಡೆಯನ್ನು ಹಿಡಿಯುತ್ತಾರೆ. ಊಟ ಮಾಡುವ ನಿಜವಾದ ಲಿಂಗಮೂರ್ತಿ ಎಂದರೆ ಜಂಗಮರು ಬಂದರೆ ಅವರಿಗೆ ನೀಡದೆ ನಡೆಯರೆಂದು ಹೇಳುತ್ತಾರೆ. ಹೀಗೆ ಮಾಡುವವರು ಕಲ್ಲಿನ ಏಟು ತಾಗಿದ ದಿನ್ನೆಯು ಪುಡಿ ಪುಡಿಯಾಗುವಂತೆ ನಾಶಹೊಂದುವರು.

ಎರೆದರೆ ನೆನೆಯದು. ಮರೆದರೆ ಬಾಡದು,
ಹುರುಳಿಲ್ಲ, ಹುರುಳಿಲ್ಲ, ಲಿಂಗಾರ್ಚನೆ,
ಕೂಡಲ ಸಂಗಮದೇವ ಜಂಗಮಕ್ಕೇರೆದರೆ ಸ್ಥಾವರ ನನೆಯಿತ್ತು.

ಸ್ಥಾವರ ಲಿಂಗಮೂರ್ತಿಗೆ ಎಷ್ಟು ಅಭಿಷೇಕ ಮಾಡಿದರೂ ಅದೇನಾದರೂ ನೆನೆಯುತ್ತದೆಯೇ? ಎಷ್ಟು ದಿನ ಅಭಿಷೇಕ ಮಾಡದಿದ್ದರೇನು ಬಾಡುತ್ತದೆಯೇ? ಇಲ್ಲವೆ ಇಲ್ಲ, ಆದ ಕಾರಣ ಜಂಗಮದ ಇಚ್ಛೆಯನ್ನು ಪೂರೈಸದೆ ಬರೆ ಲಿಂಗಪೂಜೆಯನ್ನು ಎಷ್ಟು ಮಾಡಿದರೂ ಫಲವಿಲ್ಲ. ಚರಲಿಂಗವಾದ ಜಂಗಮವನ್ನು ಸಂತೋಷಗೊಳಿಸಿದರೆ ಸ್ಥಾವರ ಲಿಂಗವು ತಾನೇ ಸಂತೋಷಹೊಂದುವುದು.

ಬಸವಣ್ಣನವರ ಈ ಮೇಲಣ ಸ್ಪಷ್ಟವಾದ ವಿವರಣೆಯಿಂದ ಲಿಂಗ ಜಂಗಮಗಳಲ್ಲಿಯ ತಾರತಮ್ಯವು ನಿಮಗೆ ಗೊತ್ತಾಗಿರಬಹುದು.

ನಮ್ಮ ಮನಸ್ಸನ್ನು ಪವಿತ್ರಗೊಳಿಸಿ ಅದು ಯಾವಾಗಲೂ ಲೋಕಸೇವೆಗೆ ಉತ್ಸಾಹವುಳ್ಳದ್ದಾಗುವಂತೆ ಮಾಡುವುದಕ್ಕಾಗಿಯೇ ಲಿಂಗಪೂಜೆ, ಲಿಂಗಧ್ಯಾನಾದಿಗಳು ಅವಶ್ಯಕವಾಗಿವೆ. ಸಕಲ ಪ್ರಾಣಿಗಳ ಹೃದಯದಲ್ಲಿಯೂ ವಾಸವಾಗಿರುವ ಪರಮಾತ್ಮನ ಅರುವು ಉಂಟಾಗಲಿಕ್ಕಾಗಿಯೇ ಲಿಂಗಮೂರ್ತಿಯೆಂಬ ಕುರುಹನ್ನು ಪೂಜಿಸಿ, ಧ್ಯಾನಿಸಿ, ಮನಸ್ಸು ಸವಿಸಬೇಕಾದುದು.

ಅಂಥ ಅರುವು ಉಂಟಾದುದಕ್ಕೆ ತನುವನ್ನೂ, ಧನವನ್ನೂ, ಪ್ರಾಣಿಗಳಲ್ಲಿರುವ ಚೈತನ್ಯವಾದ ಆ ಪರಮಾತ್ಮನ ಸೇವೆಗೆ ಅರ್ಪಿಸಿದುದೇ ಸಾಕ್ಷಿ. ಹಾಗೆ ಅರ್ಪಿಸುವ ಅರುವು ಸಾಮರ್ಥ್ಯಗಳನ್ನು ಹೊಂದುವುದಕ್ಕೋಸ್ಕರವಾಗಿಯೇ ಲಿಂಗಧ್ಯಾನಬೇಕು. ಅರ್ಪಣವು ಚೈತನ್ಯವಿಶಿಷ್ಟ ಪ್ರಾಣಿಗಳಿಗಾಗಿ ಸಂಭವಿಸುತ್ತದೆಯೇ ವಿನಾ ಸ್ಥಾವರ ಲಿಂಗಕ್ಕಲ್ಲ.

ಅಂತೆಯೇ ಯಜ್ಞದಲ್ಲಿಯ ಅಗ್ನಿಗೆ ತುಪ್ಪ ಮೊದಲಾದವುಗಳನ್ನು ಅರ್ಪಿಸದೆ ಹಸಿದು ಬಳಲುವ ಜನರ ಜಠರಾಗ್ನಿ ನಾರಾಯಣನಿಗೆ ಆಹಾರವನ್ನು ಅರ್ಪಿಸಿರೆಂದು ಶ್ರೀ ಸ್ವಾಮಿ ರಾಮತೀರ್ಥರು ಹೇಳಿದ್ಧಾರೆ. ಈ ದಿವ್ಯತತ್ವವನ್ನು ಬಸವಣ್ಣನವರು ಅರ್ಪಣಯೋಗದಲ್ಲಿ ಬಹು ವಿವರವಾಗಿ ತಿಳಿಸಿದ್ದಾರೆ.

ಪ್ರಶ್ನೆ: ಬಸವಣ್ಣನವರ ಈ ಅರ್ಪಣಯೋಗವು ನಮ್ಮ ಹಿಂದು ತತ್ವಜ್ಞಾನದ ಎಲ್ಲ ಯೋಗಗಳ ಸಾರವಾಗಿದೆಯೆಂದೇ ನನಗೆ ಈಗ ಮನವರಿಕೆಯಾಯಿತು. ಆದರೆ ಒಂದೇ ಒಂದು ಶಂಕೆ ಜಂಗಮ ಎಂಬುದು ಲಿಂಗಾಯತರಲ್ಲಿರುವ ಜಂಗಮರಿಗೆ ಮಾತ್ರ ಅನ್ವಯಿಸುತ್ತದೆಯೋ? ಅಥವಾ ನೀವು ಹೇಳುವಂತೆ ಸಕಲ ಪ್ರಾಣಿಗಳಿಗೂ ಅನ್ವಯಿಸುತ್ತದೆಯೋ?

ಉತ್ತರ : ಜಂಗಮರೆಂದರೆ ಲೋಕೋಪಕಾರಕ್ಕಾಗಿ ಸಂಚರಿಸುತ್ತಿರುವ ಪರಮ ಪವಿತ್ರವಾದ ಲಿಂಗಾಂಗಿಗಳೆಂಬುದೇನೋ ಮುಖ್ಯಾರ್ಥವಾಗಿದ್ದರೂ ಅಂಗದ ಮೇಲೆ ಲಿಂಗವುಳ್ಳವರೆಲ್ಲರೂ ಪೂಜ್ಯರೆಂದೇ ಅವರ ಸೇವೆಗೂ ತನು ಧನಗಳನ್ನು ಸವಿಸಬೇಕೆಂಬುದೇ ಬಸಣ್ಣವನವರು ಹೇಳಿದ್ದಾರೆ. ಈ ಪ್ರಕಾರ ಕೇವಲ ಶಿವಸಮಾಜವೇ ಅಲ್ಲದೆ ಎಲ್ಲ ಪ್ರಾಣಿಗಳೂ ಜಂಗಮವೆಂದೇ ತಿಳಿದು ಅವುಗಳ ಸೇವೆಗಾಗಿಯೂ ತನು ಧನುಗಳನ್ನು ಸವಿಸಬೇಕೆಂದು ಅವರ ಅಭಿಪ್ರಾಯ. ಆದರೆ ಇದು ಆಯಾಯ ಭಕ್ತನ ಭಕ್ತಿ ವಿಕಾಸವನ್ನು ಅವಲಂಬಿಸಿದೆ. ಬಸವಣ್ಣನವರ ಈ ಕೆಳಗಿನ ವಚನದಿಂದ ನಿಮ್ಮ ಈ ಶಂಕೆಯೂ ನಿವಾರಣೆಯಾಗುವುದು.

ಎಂಬತ್ತುನಾಲ್ಕು ಲಕ್ಷ ಮುಖದೊಳಗೊಂದೇ ಮುಖವಾಗಿ
ಕಾಡಿ ನೋಡೆನ್ನನು, ಬೇಡಿ ನೋಡೆನ್ನನು.
ಬೇಡದಿದ್ದರೆ ಅಯ್ಯಾ ನಿಮಗೆ ಪ್ರಮಥರಾಣೆ
ನೀನಾವ ಮುಖದಲ್ಲಿ ಬಂದು ಬೇಡಿದೊಡೀವೆನು ಕೂಡಲ ಸಂಗಮದೇವಯ್ಯಾ.

ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳಲ್ಲಿ ಯಾವುದರ ಮುಖಾಂತರ ನೀನು ಬಂದು ಕೇಳಿದರೂ ನಾನು ಕೊಡುವೆನೆಂದು ಬಸವಣ್ಣನವರು ಪ್ರತಿಜ್ಞಾನಪೂರ್ವಕ ಈ ವಚನದಲ್ಲಿ ಹೇಳಿದ್ದಾರೆ. ಆದಕಾರಣ ಪ್ರಾಣಿಗಳ ದೇಹವೇ ದೇವಾಲಯ. ಅದರಲ್ಲಿರುವ ಪ್ರಾಣವೇ ಶಿವಲಿಂಗ, ಅದರ

ತೃಪ್ತಿಗಾಗಿ ಸರ್ವವನ್ನು ಅರ್ಪಿಸುವುದೇ ಅರ್ಪಣಯೋಗ. ಇದರಲ್ಲಿಯೇ ಭಕ್ತಿಯೋಗ, ಜ್ಞಾನಯೋಗ, ಕರ್ಮಯೋಗ, ರಾಜಯೋಗಗಳು ಅಡಕವಾಗಿವೆ. ಇಂಥ ಅರ್ಪಣವೊಂದಿಲ್ಲದಿದ್ದರೆ ಎಲ್ಲ ಯೋಗಗಳೂ ವ್ಯರ್ಥ.

❖❖

ಬಹು ಚೆನ್ನಾಗಿದೆ. ಈ ಅರ್ಪಣಯೋಗ, ಈ ಯೋಗವೇ ಈಗ ಜಗತ್ತಿಗೆ ಅತ್ಯಗತ್ಯವಾಗಿದೆ. ಇದು ಆಚರಣೆಯಲ್ಲಿ ಬಂದು ಜಗತ್ತಿನಲ್ಲಿ ಸುಖ ಶಾಂತಿಗಳು ನೆಲೆಸಲಿ

ಅರ್ಪಣಯೋಗವ ಓದಿದಿರೋ?

ಹಾಗಾದರೆ,

ನಿಮ್ಮ ತನು ಮನ, ಧನಗಳನ್ನು ಲೋಕಸೇವೆಗೆ ಸವಿಸಿರಿ,

ಅನ್ಯರ ದುಃಖವೆಂಬ ಉರಿಗೆ

ನಿಮ್ಮ ತನು, ಮನ, ಧನಗಳು ಅರಗಾಗಿ ಕರಗಲಿ,

ನಿಮ್ಮ ಮನಸ್ಸು ಪರಮಾತ್ಮನ

ಧ್ಯಾನದಲ್ಲಿದ್ದು, ಪವಿತ್ರವಾಗಲಿ,

ಓದಿದಕ್ಕೆ ಇದೇ ಫಲ.

ಇಲ್ಲದಿದ್ದರೆ ಏನು ಓದಿ ಏನು ಕೇಳಿ ಏನು ಫಲ?

ಈ ಪುಸ್ತಕವು
ಆಲಮಟ್ಟಿ ಬಸವಲಿಂಗ ಮುದ್ರಣ ಮಂದಿರದಲ್ಲಿ
ಶ್ರೀ ಹರ್ಡೇಕರ ಮಂಜಪ್ಪನವರಿಂದ ಮುದ್ರಿಸಲ್ಪಟ್ಟು
ಇವರಿಂದ
ವೀರಶೈವ ವಿದ್ಯಾಲಯದಲ್ಲಿ
ಪ್ರಕಟಿಸಲ್ಪಟ್ಟಿತು.

ಶ್ರೀ ಬಸವಾದಿ ಪ್ರಮಥರ ತತ್ವಗಳನ್ನು

ಮತ್ತು

ಹಿಂದು ಸಮಾಜದೇಳಿಗೆಯ ರೀತಿ ನೀತಿಗಳನ್ನು

ಪ್ರಸಾರಗೊಳಿಸುವ

*

ಶರಣ ಸಂದೇಶ

ವಾರಪತ್ರಿಕೆ

ಕನ್ನಡದಲ್ಲಿ ಇದೊಂದೇ.

ಸಂಪಾದಕರು : **ಹರ್ಡೇಕರ ಮಂಜಪ್ಪನವರು**

ವಾರ್ಷಿಕ ಚಂದಾ :

ಅಂಚೆಯ ವೆಚ್ಚ ಸೇರಿ ೩ **ರೂಪಾಯಿಗಳು**

ಜಾಗ್ರತೆ ಚಂದಾದಾರರಾಗಿರಿ

ಮ್ಯಾನೇಜರ್ – **ಶರಣ ಸಂದೇಶ**

ಪೋ. ಆಲಮಟ್ಟಿ

ಜಿ. ವಿಜಾಪುರ

ಮಡಿವಾಳ ಮಾಚಿದೇವರ ಉಪದೇಶ

ಮಡಿವಾಳ ಮಾಚಿದೇವರ ಉಪದೇಶ

ಲೇಖಕರು

ಹರ್ಡೇಕರ ಮಂಜಪ್ಪನವರು

: ಮುದ್ರಕರು :

ಎಮ್. ಎಸ್. ಬಂಡರಗಲ್ಲ

ಬಾಲಗಕೋಟ ಪ್ರಿಂಟಿಂಗವರ್ಕ್ಸ

ಬಾಗಲಕೋಟ

: ಪ್ರಕಾಶಕರು :

ಹರ್ಡೇಕರ ಮಂಜಪ್ಪನವರು

ವೀರಶೈವ ವಿದ್ಯಾಲಯ. ಆಲಮಟ್ಟಿ

*

ಮುನ್ನುಡಿ

ಇಳಕಲ್ಲಿನ ಶ್ರೀಯುತ ಶಿವಬಲ್ಲ ಸಿದ್ಧಲಿಂಗಪ್ಪನವರು ಶಿವಶರಣರ ತತ್ವಗಳನ್ನು ಚಿಕ್ಕಚಿಕ್ಕ ಪುಸ್ತಕಗಳ ಮೂಲಕ ಪ್ರಚಾರಗೊಳಿಸಬೇಕೆಂಬ ಅತ್ಯಂತ ಅಭಿನಂದನೀಯವಾದ ನಮ್ಮ ಉದ್ದೇಶವನ್ನು ನನಗೆ ತಿಳಿಸಿ ಈ ಕಾರ್ಯಕ್ಕೆ ಪ್ರತಿವರುಷ ಇನ್ನೂರು ರೂಪಾಯಿಗಳನ್ನು ಕೊಡುವುದಾಗಿಯೂ ನನ್ನ ೬೧ನೆಯ ವರುಷದ ಹುಟ್ಟುದಿನದಲ್ಲಿಯೇ ಈ ಶಿವ ಸಂಕಲ್ಪವು ರೂಪುಗೊಳ್ಳಬೇಕಾಗಿಯೂ ಹೇಳಿದರ ಫಲವೇ ಈ ಚಿಕ್ಕಪುಸ್ತಕವು.

ಶ್ರೀ ಶಿವಬಲ್ಲ ಸಿದ್ಧಲಿಂಗಪ್ಪನವರು ಧನದಿಂದ ಧನಿಕರಲ್ಲದಿದ್ದರೂ ಮನದಿಂದ ಧನಿಕರಾಗಿರುವ ಮೂಲಕ ತಮ್ಮ ೫೦೦ ರೂ. ಗಳ ವಾರ್ಷಿಕಾದಾಯದಲ್ಲಿಯೇ ೨೦೦ ರೂ.ಗಳನ್ನು ಜನಸೇವೆಯ ಈ ಅತ್ಯುಪಯುಕ್ತವಾದ ಕಾರ್ಯಕ್ಕೆ ಸಲ್ಲಿಸಿ ಶಿವಶರಣರ ಒಂದು ಮುಖ್ಯ ತತ್ವವಾದ ಜಂಗಮಕ್ಕೆ ಧನವ ಸವಿಸಬೇಕೆಂಬುದನ್ನು ತಮ್ಮ ನಡವಳಿಕೆಯಿಂದಲೇ ತೋರಿಸಿದ್ದಾರೆ.

ಈ ಮಹಾಶಯರ ಇಷ್ಟದಂತೆ ಹನ್ನೆರಡನೆಯ ಶತಮಾನದಲ್ಲಿ ಒಬ್ಬ ಮಹಾಶಿವಶರಣರಾಗಿದ್ದ ಶ್ರೀ ಮಡಿವಳ ಮಾಚಿದೇವಯ್ಯನವರ ಕೆಲವು ಉಪದೇಶಗಳನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸಿದ್ದೇನೆ. ಆ ಮುಂಚೆ ಶಿವಶರಣರ ಕಾಯಕದ ರೀತಿ, ನೀತಿ ಮಹತ್ವಗಳನ್ನು ಶ್ರೀ ಮಡಿವಾಳ ಮಾಚಿದೇವರ ವಿಷಯಕವಾದ ಕೆಲವು ಸಂಗತಿಗಳನ್ನೂ ತಿಳಿಸಿದ್ದೇನೆ. ಇದರಲ್ಲಿಯ ಉದಾತ್ತ ವಿಚಾರಗಳು ವಾಚಕರ ಆಚರಣೆಯಲ್ಲಿ ಬಂದು ಈ ಶಿವಬಲ್ಲ ಪುಸ್ತಕಮಾಲೆಯ ಉತ್ಪಾದಕರ ಉದ್ದೇಶವು ನೆರವೇರಲಿ.

ಹರ್ಡೇಕರ ಮಂಜಪ್ಪ

❖❖

॥ಓಂ॥

ಶ್ರೀ ಮಡಿವಳ ಮಾಚಿದೇವರ ಉಪದೇಶ

ಕಾಯಕವೇ ಕೈಲಾಸ

ಜನ ಜೀವನಕ್ಕೆ ಅಗತ್ಯವಾಗಿರುವ ಎಲ್ಲ ಕಸಬು ಕೈಗಾರಿಕೆಗಳಿಗೂ ಶಿವಶರಣರು ಕಾಯಕವೆಂದು ಹೇಳಿದ್ದಾರೆ. ಕಾಯ ಪೋಷಣೆಗೆ ಆವುಗಳೆಲ್ಲ ಅವಶ್ಯಕವಾಗಿರುವುದರಿಂದ ಅವುಗಳಿಗೆ ಕಾಯಕವೆಂಬ ಹೆಸರಿದ್ದು ಯೋಗ್ಯವೇ ಆಗಿದೆ. ಈ ಕಾಯಕಗಳಲ್ಲಿ ಯಾವುದೂ ಮೇಲಲ್ಲವೆಂದೇ ತಮ್ಮ ನಡೆನುಡಿಗಳಿಂದ ಸಾರಿದ್ದಾರೆ. ಯಾವ ಕಾಯಕವನ್ನು ಮಾಡದ ಪರರ ಗಳಿಕೆಯನ್ನೇ ಬಳಸಿಕೊಳ್ಳುತ್ತಾ ಬದುಕಿರುವವರ ಬಾಳುವೆಯೇ ಕೀಳೆಂದು ಅವರ ಹೇಳಿಕೆ.

ಕಾಯಕವನ್ನು ಮಾಡದಿರುವವರ ಜೀವನದ ಭಾರವು ಅನ್ಯರ ಮೇಲೆ ಬೀಳುವುದರಿಂದ ಆರ್ಥಿಕ ಅವನತಿಯಾಗುತ್ತದಲ್ಲದೆ ಅವರ ಕಾಯ, ವಾಚ ಮತ್ತು ಮನಸ್ಸಗಳ ಶುದ್ಧತೆಗಳಿಗೂ ಕೊರತಯುಂಟಾಗುತ್ತದೆ. ಕಾಯಕದಲ್ಲಿ ಮೇಲು ಕೀಳುಗಳನ್ನು ಮಾಡಿದ್ದಾದರೆ ಜನತೆಯು ಅನೇಕ ಸಂಗತಿಗಳಲ್ಲಿ ಪರಾವಲಂಬಿಯಾಗಬೇಕಾಗುತ್ತದೆ. ಅಂತಯೇ ಶಿವಶರಣರು ಕಾಯಕಕ್ಕೆ ಬಹು ಮಹತ್ವವನ್ನು ಕೊಟ್ಟಿದ್ದಾನೆ.

ಅವರ ಈ ತತ್ವವು ಹಿಂದಿನ ಕಾಲದಲ್ಲಿಯೇ ವಿಹಿತವಾಗಿದ್ದಿತೆಂದಲ್ಲ; ಇಂದಿನ ನಾಗರೀಕ ಕಾಲದಲ್ಲಿಯೂ ಯೋಗ್ಯವಾಗಿದೆ. ಮುಂದಿನ ನವನಾಗರಿಕ ಕಾಲದಲ್ಲಿಯೂ ಅಗತ್ಯವಾಗಿಯೇ ಪರಣಮಿಸುವುದು. ಕಾಯಕ ಮಾಡದಿರುವುದು ಅನರ್ಥಕರವೆಂದು ಶಿವಶರಣರು ಹೇಳಿರುವಂತೆಯೇ ಕಾಯಕದಿಂದ ಹಣವನ್ನು ಕೂಡಿಡುವುದು ಅಹಿತಕರವೆಂದೇ ಹೇಳಿದ್ದಾರೆ.

ಇಂದಿನ ಗಳಿಕೆ ನಾಳೆಗೆ ತಂಗುಳೆಂದು ತಿಳಿಯಬೇಕಾಗಿಯೂ ಎಚ್ಚರಿಸಿದ್ದಾರೆ. ಎಂದರೆ ಗಳಿಸಿದುದನ್ನು ಪರಹಿತಕ್ಕಾಗಿ ಬಳಿಸಬೇಕೇಂಬುವುದೇ ಅವರ ಸಿದ್ಧಾಂತವು. ಹಾಗಾದರೆ ಜನತೆಯಲ್ಲಿ ಆರ್ಥಿಕ ವಿಷಮತೆಯುಂಟಾಗುವುದಿಲ್ಲ. ಈಗಿನ "ಬೋಲ್ಸೆವಿಜಂ" ದ ಅಗತ್ಯವೂ ತೋರುವುದಿಲ್ಲ. ಆದಕಾರಣ "ಗಳಿಸು, ಪರಹಿತಕೆ ಬಳಿಸು," ಎಂಬುವುದೇ ಶಿವಶರಣರ ಕಾಯಕದ ಗುಟ್ಟು.

ಇದನ್ನರಿತು ಆಚರಿಸಿದ್ಧಾದರೆ ಕೈಲಾಸಬೆಂಬುವುದು ಬೇರಿಲ್ಲ. ಈ ಕಾಯಕವೇ ಕೈಲಾಸವೆಂದು ಶಿವಶರಣರು ಸ್ವಾನುಭಾವದಿಂದ ಸಾರಿದರು. ಇವರು ಜನತೆಗೆ ಕೈಲಾಸಕ್ಕೆ ಹೋಗುವ ಮಾರ್ಗವನ್ನು ತೋರಿಸದೆ ಜನತೆಯ ನಿವಾಸಸ್ಥಾನವೇ ಕೈಲಾಸವಾಗುವಂತಹ ರೀತಿ ನೀತಿಗಳನ್ನು ತಿಳಿಸಿದರು. ಕಾಯಕದಿಂದ ಕೈಲಾಸವೆಂದು ತಿಳಿಯದೆ ಕಾಯಕವೇ ಕೈಲಾಸವೆಂದು ಅರಿತು ಆಚರಿಸಿರೆಂದು ಆ ಶಿವಶರಣರು ಸಾರಿ ಸಾರಿ ಹೇಳಿದರು. ಆ ಸಾವಿಲ್ಲದ ಮಾತು ಅಂದಿಗೆಷ್ಟು ಹೊಸದೋ ಇಂದಿಗೂ ಅಷ್ಟೇ ಹೊಸದು, ಮುಂದೆಯೂ ಹೊಸದು.

ಮಡಿವಾಳ ಮಾಚಿದೇವರು

ಹಿಂದಿನ ಕಾಲದ ಶರಣ ಶರಣೆಯರಲ್ಲಿ ಒಬ್ಬೊಬ್ಬರು ಒಂದೊಂದು ಕಾಯಕವನ್ನು ಕೈಕೊಂಡಿದ್ದರು. ಜೇಡರ ದಾಸಿಮಯ್ಯನವರು ನೇಯುವ, ಶಂಕರ ದಾಸಿಮಯ್ಯನವರು ಹೊಲಿಯುವ, ಹರಳಯ್ಯನವರು ಪಾದರಕ್ಷೆಗಳನ್ನು ಮಾಡುವ ಚಂದಯ್ಯನವರು ಹಗ್ಗಗಳನ್ನು ಮಾಡುವ ಮಾರಯ್ಯನವರು ಕಟ್ಟಿಗೆ ಹೊರೆಯನ್ನು ಮಾರುವ, ರೆಮ್ಮವ್ವೆಯವರು ನೂಲುವ, ಸೋಮವ್ವೆಯವರು ಕುಟ್ಟುವ ಕಾಯಕ ಮಾಡುತ್ತಿದ್ದರು. ಅದೇ ಪ್ರಕಾರ ಮಾಚಯ್ಯನವರು ಶಿವಭಕ್ತರ ವಸ್ತ್ರಗಳನ್ನು ತೊಳೆಯುವ ಕಾಯಕವನ್ನು ಕೈಕೊಂಡಿದ್ದರು. ಅಂತೆಯೇ ಅವರಿಗೆ ಮಡಿವಾಳ ಮಾಚಯ್ಯನವರೆಂದು ಹೇಳುತ್ತಿದ್ದರು.

ಇವರು ವಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಹಿಪ್ಪರಗಿ ಗ್ರಾಮದವರು. ಅಲ್ಲಿಂದ ಕಲ್ಯಾಣಪಟ್ಟಣಕ್ಕೆ ಹೋಗಿ ಬಸವ ಮಹಾನುಭಾವರು ಪ್ರಾರಂಭಿಸಿದ್ದ ಶಿವಮತ ಪ್ರಚಾರದ ಅತ್ಯದ್ಭುತ ಕಾರ್ಯದಲ್ಲಿ ಸೇರಿದರು. ಇವರು ಶಿವಶರಣರ ಪಂಚಾಚಾರಗಳಲ್ಲಿ ಒಂದಾದ ಗಣಾಚಾರವನ್ನು ಅನುಸರುಸುತ್ತಿದ್ದ ವೀರರಾಗಿದ್ದರು. ಶರಣರನ್ನೂ, ಶರಣತತ್ವಗಳನ್ನೂ, ಯಾರಾದರೂ ಅಲ್ಲಗಳೆದರೆ ಇವರು ಸಹಿಸದೆ ವೀರತನದಿಂದ ಪ್ರತಿಭಟಿಸುವವರಾಗಿದ್ದರು. ಅಂತೆಯೇ ಇವರು ಅನೇಕ ವಿರೋಧಿಗಳು ಶೌರ್ಯದಿಂದ ಪ್ರತಿಭಟಿಸಿದರೆಂದು ಪುರಾಣಗಳಲ್ಲಿ ಹೇಳಲಾಗಿದೆ.

ಇವರು ಶೂರರಿಂದ್ದಂತೆಯೇ ಶಿವ ತತ್ವಗಳಲ್ಲಿ ಬಹು ಬಲ್ಲಿದರೂ ಆಗಿದ್ದರು. ಶಿವಭಕ್ತರ ವಸ್ತ್ರಗಳನ್ನು ತೊಳೆದು ಜಳ ಜಳ ಮಾಡುತ್ತಿದ್ದಂತೆ ತಮ್ಮ ಅನುಭವದ ಉಪದೇಶದಿಂದ ಜನರ ಮನ, ಬುದ್ಧಿ ಭಾವಗಳಲ್ಲಿ ಮಲಿನವನ್ನೂ ಕಳೆಯುತ್ತಿದ್ದರು. ಅಂತೆಯೇ ಬಸವ ಮಹಾನುಭಾವರು ಇವರ ವಿಷಯವಾಗಿ ಹೀಗೆ ಹೇಳಿದ್ದಾರೆ.

"ಮಡಿವಾಳ ಮಡಿವಾಳನೆಂಬರು, ಮಡಿವಾಳನೆಂಬುವನಾರು ಅರಿಯರು.
ಮನದ ಮೈಲಿಗೆಯ ತೊಳೆದುಕೊಟ್ಟು, ನಿರ್ಮಲದ ಬೀಳುಗಡೆಯ ಹೊಂದುದುಕೊಂಡೆನಾಗಿ
ಮಡಿವಳ ಮಾಚಿದೇವನ ಕೃಪೆಯಿಂದ ನಾನು ಬದುಕಿದನಯ್ಯಾ ಕೂಡಲಸಂಗಮದೇವಾ"

"ಎನ್ನ ಕಾಯವ ಶುದ್ಧವ ಮಾಡಿದಾತ ಮಡಿವಾಳ ಎನ್ನ ಮನವ ನಿರ್ಮಳವ ಮಾಡಿದಾತ ಮಡಿವಾಳ
ಎನ್ನಂತರಂಗವ ಬೆಳಗಿದಾತ ಮಡಿವಾಳ, ಎನ್ನ ಬಹಿರಂಗದ ಬಿಡಿಸಿದಾತ ಮಡಿವಾಳ
ಕೂಡಲಸಂಗಮದೇವ ಎನ್ನ ನಿಮಗೆ ಯೋಗ್ಯವ ಮಾಡಿದಾತ ಮಡಿವಾಳ"

ಶ್ರೀ ಮಾಚಿದೇವರ ಉಪದೇಶ

ಚಂದಯ್ಯನವರೆಂಬ ಶರಣರು ಹುಲ್ಲಿನ ಹಗ್ಗ, ಕಣ್ಣಿ ಮೊದಲಾದವುಗಳನ್ನು ಮಾಡಿ ಶಿವಭಕ್ತರಿಗೆ ಒಂದು ಹಾಗಕ್ಕೆ ಮಾರಿ ಅದರಿಂದ ಜಂಗಮ ದಾಸೋಹವನ್ನು ಕಲ್ಯಾಣಪಟ್ಟಣದಲ್ಲಿ ಮಾಡುತ್ತಿದ್ದರು. ಹೀಗೆ ತಮ್ಮ ಕಾಯಕದಲ್ಲಿ ಇವರು ನಿರತರಾಗಿರುವಾಗ ಇವರ ಇಷ್ಟಲಿಂಗವು ಜಾರಿ ಬೀಳಲು ಆ ಲಿಂಗವನ್ನು ಧರಿಸದೆ ಹಾಗೆಯೇ ತನ್ನ ಕಾಯಕದಲ್ಲಿದ್ಧಾಗ ಅವರಿಗೂ ಮಡಿವಾಳ ಮಾಚಯ್ಯನವರಿಗೂ ನಡೆದ ಸಂವಾದವು ಬಹು ಮಹತ್ವವಾದುದು. ಮಾಚಿದೇವರ ಶಿವಾನುಭವದ ಆಳವನ್ನು ಆ ಸಂವಾದದಲ್ಲಿ ಕಾಣಬಹುದಾಗಿದೆ. ಇವರ ಉಪದೇಶದಿಂದ ಚಂದಯ್ಯನವರು ಲಿಂಗವನ್ನು ಧರಸಿಕೊಂಡರು. ಮಾಚಯ್ಯನವರ ಉಪದೇಶದ ಮುಖ್ಯ ಸಾರವು ಹೀಗಿದೆ.

ಅರಿವನರಿದಿಹೆನೆಂದು ಕ್ರಿಯೆಯ ಬಿಡಬಹುದೇ?
ಮಧುರಕ್ಕೆ ಮಧುರ ಒದಗಲಾಗಿ ಆ ಸವಿಗೆ ಸವಿಯ ಕೊರತೆಯುಂಟೆ?
ದ್ರವ್ಯಕ್ಕೆ ದ್ರವ್ಯ ಒದಗಲಾಗಿ ಬಡತನದವಧಿಯುಂಟೆ?
ಮಾಡುವ ಮಾಟ ಶಿವಪೂಜೆಯ ನೋಟ ಭಾವವಿರಬೇಕು.
ವಚ್ಚಿ ಹೊತ್ತಾದರೂ ಶಿವಪೂಜೆಯ ನಿಶ್ಚಯವಾಗಿ ಮಾಡಬೇಕು.
ಅದು ತನಗೆ ಸುಚಿತ್ತದ ಹಾದಿ ಕಲಿದೇವರ ದೇವನ ಒದಗು ಕಾಣಾ ಚಂದಯ್ಯ.

ಜಂಗಮ ಸೇವೆ ಲಿಂಗವಹಿತವಾಗಿರಬೇಕು. ಲಿಂಗವೆಂಬುದು ಜಂಗಮದಂಗ. ಆ ಅಂಗವಿಲ್ಲದೆ ಪ್ರಾಣವುಂಟೇ! ಹಣ್ಣಿಲ್ಲದೆರುಚಿಯರಸುವಂತ ನಿನ್ನ ಕಾಯಕದ ಕ್ರಿಯೆಲ್ಲವು.

ವಿವರಣೆ : ಶಿವ ತತ್ವದ ಜ್ಞಾನವಾಗಿದೆಯೆಂದು ಆ ಸಂಬಂಧವಾದ ಕ್ರಿಯೆಗಳನ್ನು ಮಾಡದೇ ಬಿಡಬಾರದು ಸಕ್ಕರೆಯು ಸವಿಯಿದೆಯೆಂದು ಸವಿಯಾಗಿದ್ದ ಜೇನುತುಪ್ಪವನ್ನು ಬೇಡವೆಂದು ಹೇಳಬಹುದೇ? ಅವೆರಡೂ ಕೂಡಿದರೆ ಸವಿಯೇನಾದರೂ ಕಡಿಮೆಯಾಗುತ್ತದೆಯೇ? ಒಂದು ಮಣ ಹೊನ್ನಿದೆಯೆಂದು ಮತ್ತೊಂದು ಮಣ ಚಿನ್ನ ಬಂದರೆ ಬೇಡವೆನ್ನಬೇಕೆ? ಅವೆರಡೂ ಕೂಡಿದರೆ ಬಡತನವೇನಾದರೂ ಬರಬಹುದೇ? ಅದೇ ಪ್ರಕಾರ ಕಾಯಕವನ್ನು ಮಾಡುತ್ತಿದ್ದರೂ ಲಿಂಗಪೂಜೆಯನ್ನು ಮಾಡುವುದರಿಂದ ಆಗುವ ಕೊರತೆಯೇನು? ಮತ್ತಿಷ್ಟು ಒಳ್ಳೆಯದೇ ಅಲ್ಲವೆ?

ಕಾಯಕ ಮಾಡುತ್ತಿರುವಾಗಲು ಕೂಡಾ ಅದರಲ್ಲಿ ಲಿಂಗಪೂಜೆ ಮಾಡಿದ ದೃಷ್ಟಿಯಿರಬೇಕು. ಸ್ವಲ್ಪು ಹೊತ್ತಾದರೂ ಲಿಂಗಪೂಜೆಯನ್ನು ತಪ್ಪದೇ ಮಾಡಬೇಕು. ಅದು ಚಿತ್ತವನ್ನು ಶುದ್ದಗೊಳಿಸಲು ಒಳ್ಳೆಯ ದಾರಿಯು, ಲಿಂಗವೆಂಬುದು ದೇಹದಂತೆ, ಜಂಗಮವೆಂಬುವುದು ಪ್ರಾಣದಂತೆ. ಪ್ರಾಣಕ್ಕೆ ದೇಹವೇ ಆಧಾರವಗಿಲ್ಲವೆ? ರುಚಿಮಾತ್ರ ಬೇಕು; ಹಣ್ಣು ಮಾತ್ತ ಬೇಡವೆನ್ನಬಹುದೆ? ಹಣ್ಣಿಲ್ಲದೆ ರುಚಿಯೆಲ್ಲಿಂದ ಬರುವುದು? ನನಗೆ ಕಾಯಕವೊಂದೇ ಸಾಕು, ಲಿಂಗಪೂಜೆ ಬೇಡವೆಂದು ಹೇಳುವುದು ಹಣ್ಣುಬೇಡ ರುಚಿಯೊಂದೇ ಸಾಕೆಂದು ಹೇಳುವಂಥೆಯೇ ಸರಿ. ಇಂಥ ಕಾಯಕ ಯೋಗ್ಯವಾದುದಲ್ಲ.

ತಾನು ಲಿಂಗದೇವನಿಗೆ ಒಪ್ಪಿಸಿದ ಕೆಲಸವನ್ನು ಸರಿಯಾಗಿ ಮಾಡದಿದ್ದುದರಿಂದ ಆತನು ತನಗೆ ಬೇಡವಾಗಿ ಚಂದಯ್ಯನವರು ಮಡಿವಾಳ ಮಾಚಿದೇವನಿಗೆ ತಿಳಿಸಲು ಆಗ ಅವರು ಹೀಗೆ ಹೇಳಿದರು.

ಕಾಯಕದಲ್ಲಿ ನಿಂದ ಶರಣಂಗೆ ಸೇವೆಯವರ ತಪ್ಪು ಹಿಡಿದಿಹೆನೆಂದರೆ ಕಾಯಕವೆಂತು ನಡೆವುದಯ್ಯಾ?
ಅವಗುಣಕ್ಕೆ ಮುನಿಯಬೇಕಲ್ಲದೆ ಲಾಂಛನಕ್ಕೆ ಮುನಿಯಬಹುದೇ?
ಮುಗ್ಗಿದ ತುರುಗವ ಕಾಲ ಕತ್ತರಿಸಿದವರುಂಟೆ? ಕಚ್ಚುವ ತಗುಣಿಗಾಗಿ ಮನೆಯ ಸುಟ್ಟವರುಂಟೇ?
ಕಲಿದೇವರ ದೇವನಲ್ಲಿ ತಪ್ಪು ಹಿಡಿಯಲಿಲ್ಲ ಕೇಳಾ ಚಂದಯ್ಯಾ.

ಗುರು ಪೂಜೆಯನರಿದೆನೆಂದು ಲಿಂಗಪೂಜೆಯ ಬಿಡಲಾಗದು.
ಲಿಂಗಪೂಜೆಯನರಿದೆನೆಂದು ಜಂಗಮಪೂಜೆಯ ಬಿಡಲಾಗದು.
ಜಂಗಮಪೂಜೆಯನರಿದೆನೆಂದು ಶರಣರ ಸಂಗವ ಬಿಡಲಾಗದು.
ಇದು ಕಾರಣ ಶರಣರ ಸಂಗದ ಸಮ್ಯಜ್ಞಾನದಲ್ಲಲ್ಲದೆ.
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು ಹೋಹ ಬಾರಾ ಚಂದಯ್ಯ

ವಿವರಣೆ : ಆಳು ತಪ್ಪು ಮಾಡಿದನೆಂದು ಆತನ ತಪ್ಪಿಗೆ ಸಿಟ್ಟು ಮಾಡಬೇಕೇ ವಿನಾ ಆತನನ್ನೇ ಬಿಟ್ಟು ಬಿಡಬಾರದು. ಹೀಗೆ ತಪ್ಪುಮಾಡಿದವರನ್ನೆಲ್ಲಾ ಬಿಡುತ್ತಾ ಹೋದರೆ ಕಾಯಕವನ್ನು ನಡೆಯಿಸುವ ನಿಮಗೆ ಕೆಲಸಗಾರರೆಲ್ಲಿ ದೊರೆಯುವರು? ನಿಮ್ಮ ಕಾಯಕವು ಹೇಗೆ ನಡೆಗೀತು? ಕುದುರೆ ಓಡುವಾಗ ಮುಕ್ಕರಿಸಿತೆಂದು ಅದರ ಕಾಲನ್ನೇ ಕಡಿದು ಬಿಡಬೇಕೆ? ಅದು ಮುಕ್ಕರಿಸದಂತೆ ನಡಿಗೆ ಕಲಿಸಬೇಕು! ಮನೆಯಲ್ಲಿ ತಗುಣಿ ಕಚ್ಚಿತೆಂದು ಸಿಟ್ಟಿನಿಂದ ಆ ಮನೆಗೆ ಬೆಂಕಿ ಹಚ್ಚುವವನ ರೀತಿಯಂತೆ ಈ ನಿಮ್ಮ ಕೆಲಸವಾಯಿತಲ್ಲಾ!

ತನು ಶುದ್ಧಿಗೆ ಗುರುಪೂಜೆ, ಮನ ಶುದ್ದಿಗೆ, ಲಿಂಗಪೂಜೆ, ಭಾವ ಶುದ್ಧಿಗೆ ಜಂಗಮಪೂಜೆ, ಮತ್ತು ಬುದ್ದಿಶುದ್ಧಿಗೆ ಶರಣರ ಸಂಗ ಇವು ಬೇಕೇ ಬೇಕು. ಇವುಗಳಲ್ಲಿ ಒಂದು ಇದೆಯೆಂದು ಇನ್ನೊಂದನ್ನು ಬಿಡಕೂಡದು. ಈ ನಾಲ್ಕು ಮನುಷ್ಯನ ಉನ್ನತಿಗೆ ಅತ್ಯಗತ್ಯವಾಗಿಯೇ ಬೇಕು. ನಮಗೆ ತಿಳಿಯದಿದ್ದುದನ್ನು ಅಥವಾ ನಮಗೆ ಸಂಶಯ ವಿದ್ದುದನ್ನು ಅರಿತುಕೊಳ್ಳಲಿಕ್ಕೆ ಶಿವಶರಣರಲ್ಲಿ ಹೋಗಲೇ ಬೇಕು. ಅಂತೆಯೇ ಬಸವ ಮಹಾನುಭಾವನು ಶಿವಾನುಭವ ಮಂಟಪವನ್ನು ಏರ್ಪಡಿಸಿಲ್ಲವೇ ಚಂದಯ್ಯನವರೇ? ಅಲ್ಲಿಗೆ ಹೋಗಿ ಈ ವಿಷಯವನ್ನು ಚರ್ಚಿಸೋಣ ಬನ್ನಿರಿ.

ಶ್ರೀ ಮಾಚೀದೇವರ ಇಷ್ಟದಂತೆ ಶ್ರೀ ಚಂದಯ್ಯನವರು ಶಿವಾನುಭವ ಮಂಟಪಕ್ಕೆ ಹೋದರು. ಅಲ್ಲಿ ಶ್ರೀಪ್ರಭು ಮೊದಲಾದ ಶರಣರು ಚಂದಯ್ಯನವರ ಕಾಯಕ ನಿಷ್ಠೆಯನ್ನು ಬಹಳವಾಗಿ ಕೊಂಡಾಡಿ ಲಿಂಗಪೂಜೆಯು ಅತ್ಯಗತ್ಯವೆಂದೇ ಮಾಚಿದೇವರಂತೆ ತಿಳಿಸಿದರು. ಚಂದಯ್ಯನವರ ಸಂಶಯ ನಿರಸನವಾಯಿತು. ಹೀಗೆ ಮಡಿವಳ ಮಾಚಿದೇವರು ತಮ್ಮ ಶಿವಾನುಭವಜ್ಞಾನದಿಂದ ಅನೇಕ ಉದಾತ್ತತತ್ವಗಳನ್ನು ಬೋಧಿಸಿದರು.

ಆ ಮೇಲೆ ಕಲ್ಯಾಣದಲ್ಲಿ ಕ್ರಾಂತಿಯಾಗಲು ಅಲ್ಲಿಂದ ತಮ್ಮ ಜನ್ಮ ಸ್ಥಳವಾದ ಹಿಪ್ಪರಿಗೆಗೆ ಬಂದರೆಂದೂ ಅಲ್ಲಿಯೇ ಲಿಂಗೈಕ್ಯರಾದರೆಂದೂ ಈ ಮಾಚಿದೇವರಿಂದ ಹಿಪ್ಪರಿಗೆಗೆ ಮಹತ್ವ

ಬಂದ ಕಾರಣ ಇದಕ್ಕೆ ದೇವರ ಹಿಪ್ಪರಿಗೆಯೇ ಹೆಸರು ಬಂದಿತೆಂದೂ ಹೇಳುತ್ತಾರೆ. ಇವರು ವಚನಕಾರರು ಇವರ ವಚನಗಳ ಕೊನೆಯಲ್ಲಿ 'ಕಲಿದೇವರ ದೇವ' ಎಂಬ ಮುದ್ರಿಕೆಯಿರುತ್ತದೆ.

ಶರಣರ ಶ್ರೇಷ್ಠತೆ

ಶರಣರು ಯಾವ ಕಾಯಕ ಮಾಡಿದರೂ ಅವರು ಶ್ರೇಷ್ಠರೆಂದು ತಿಳಿಯಬೇಕು ಅವರನ್ನು ಕೀಳರೆಂದು ತಿಳಿಯುವವರು ಮಹಾ ಪಾಪಿಗಳು ಜನತೆಯ ದ್ರೋಹಿಗಳು, ಶಾಂತಿ ಸುಖಗಳಿಗೆ ಕೊರತೆಯನ್ನು ಮಾಡುವರು. ಅಂತೆಯೇ ಮಹಾನುಭಾವಿಗಳಾದ ಬಸವಣ್ಣನವರು ಹೀಗೆ ಹೇಳಿದ್ದಾರೆ.

ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡನಾದರೆ'
ಆಣೆ ನಿಮ್ಮಾಣೆ, ಕೂಡಲ ಸಂಗಮದೇವ,
ಭಕ್ತರಲ್ಲಿ ಕುಲವನರಿಸಿದರೆ ನಿಮ್ಮ ರಾಣಿವಾಸದಾಣೆ.

ವಿವರಣೆ : ಲಿಂಗಧಾರಿಯಾದ ಭಕ್ತನು ಯಾವ ಕಾಯಕವನ್ನು ಮಾಡಿದರೂ ಆತನು ಕೀಳನೆಂದು ತಿಳಿಯಬಾರದು. ಆವ ಕುಲವೂ ಹೀನವೆಂದು ಹಳಿಯಬಾರದು. ಹಾಗೆ ನಿಂದಿಸುವವರು ಮಹಾಪಾಪಿಗಳು ಅವರು ಕೀಳು ಕುಲದವರೆಂದು ತಿಳಿದಿದ್ಧಾದರೆ ಶಿವನ ಸತಿಯಳಾದ ಪಾರ್ವತಿಗೆ ದ್ರೋಹವನ್ನು ಮಾಡಿದಂತೆಯೇ ಸರಿ ಎಂದರೆ, ತಾಯಿಯ ಸಹವಾಸ ಮಾಡಿದಂತಹ ಘೋರ ಪಾಪಕ್ಕೀಡಾಗಬೇಕಾಗುತ್ತದೆ.

ಜನ ಜೀವನಕ್ಕೆ ಅಗತ್ಯವಾಗಿರುವ ಎಲ್ಲ ಕಾಯಕಗಳನ್ನೂ ಜನರು ಮಾಡು ಪ್ರವೃತ್ತಿಯು ಉಂಟಾಗಲೆಂದೇ ಶಿವಶರಣರು ಈ ಪ್ರಕಾರ ಬೋಧಿಸಿದರು. ಇವರ ಈ ಉಪದೇಶವು ಆಗಿನ ಬ್ರಾಹ್ಮಣಾದಿ ಹೆಚ್ಚಿನ ವರ್ಗದವರಿಗೆ ಬಹು ವಿರೋಧವಾಗಿ ತೋರಿತು. ಇವೆ ಈ ಕ್ರಾಂತಿಕಾರಕ ವಿಚಾರಗಳು ವರ್ಣಸಂಕರಕ್ಕೆ ಕಾರಣವಾಗಿವೆಯೆಂದೂ ಇವರಿಂದ ಜನಾಂಗವು ಅಧೋಗತಿಗೀಡಾಗುತ್ತದೆಂದೂ ವರ್ಣವಾದಿಗಳು ಬಿಜ್ಜಳ ದೊರೆಯಲ್ಲಿ ದೂರಿಕೊಂಡರು. ಆಗ ಕಸಬುಗಳಿಂದಲೇ ಕುಲಗಳೆಂದು ತಿಳಿಯುತ್ತಿದ್ದರು. ಜನರು ಮಡಿಕೆ, ಹಗ್ಗ, ವಸ್ತ್ರ, ಎಣ್ಣೆ, ಒಕ್ಕಲುತನ, ಪಾದರಕ್ಷೆ ವ್ಯಾಪಾರ ಮೊದಲಾದ ಉದ್ಯೋಗಗಳನ್ನು ಮಾಡುವವರೆಲ್ಲ ಒಂದೊಂದು ಜಾತಿಯವರೆಂದೇ ತಿಳಿದು ಅವರ ಕುಲವು ಕೀಳೆಂದೇ ಭಾವಿಸಲಾಗಿದ್ದಿತು.

ಜನಾಂಗಕ್ಕೆ ಘಾತಕವಾದ ಆ ತಿಳುವಳಿಕೆಯನ್ನು ಈ ಶಿವಶರಣರು ಬಹು ಕಟುವಾಗಿ ನಿಷೇಧಿಸಿದರು. ಬಸವ ಮಹಾನುಭಾವರು ಅವರಲ್ಲಿ ಅಗ್ರಗಣ್ಯರು, ಅವರು ಈ ಸಂಬಂಧವಾಗಿ ಹೀಗೆ ಹೇಳಿದ್ದಾರೆ.

ದೇವ ದೇವ ಬಿನ್ನಪವ ಅವಧಾರು
ವಿಪ್ರಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರ ಒಂದೇ ಎಂಬೆ,
ಹಾರುವ ಮೊದಲು ಶ್ವಪಚ ಕಡೆಯಾಗಿ ಭವಿಯಾದವರನೆಲ್ಲರನು ಒಂದೇ ಎಂಬೆ,
ಹೀಗೆಂದು ನಂಬುವದೆನ್ನ ಮನವು,
ಈ ನುಡಿದ ನುಡಿದಯೊಳಗೆ ಎಳ್ಳು ಮೊನೆಯಷ್ಟು ಸಂದೇಹವುಳ್ಳರೆ
ನೀನಂದೇ ಮೂಗು ಕೊಯ್ಯು ಕೂಡಲಸಂಗಮದೇವಾ.

ಕೊಲ್ಲುವವನೆ ಮಾದಿಗನು ಹೊಸಲು ತಿಂಬುವವನೆ ಹೊಲೆಯ,
ಕುಲವೇನೋ, ಅವಂದಿರ ಕುಲವೇನು
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜನರು.

ವಿವರಣೆ : ಬ್ರಾಹ್ಮಣ ಮೊದಲುಗೊಂಡು ಚಂಡಾಲನವರೆಗಿರುವ ಎಲ್ಲ ಜನರೂ ಮನುಷ್ಯರೇ ಆಗಿದ್ದಾರೆ. ಅವರ ನಡೆ ನುಡಿ, ಆಚಾರ ವಿಚಾರಗಳು ಸಕಲ ಜೀವಗಳಿಗೆ ಹಿತಕರವಾದವುಗಳಾಗಿದ್ದರೆ ಅವನೇ ಹೆಚ್ಚಿನ ಕುಲದವರು ಯಾರು ಅನ್ಯರಿಗೆ ಹಿಂಸಕರಾಗಿದ್ದಾರೆಯೋ ಮತ್ತು ತಮ್ಮ ನಡೆ ನುಡಿಗಳಿಂದ ಹೀನರಾಗಿದ್ದಾರೆಯೋ ಅವರೇ ಕೀಳು ಕುಲದವರು. ಲಿಂಗಧಾರಿಗಳಾದ ಶಿಭಕ್ತರು ಶುದ್ಧ ಆಚಾರ ವಿಚಾರ ಶೀಲರಾಗುವ ಕಾರಣ ಅವರು ಯಾವ ಕಾಯಕವನ್ನು ಮಾಡಿದರೂ ಅವರನ್ನು ಕೀಳರೆಂದು ತಿಳಿಯುವುದು ವಿಹಿತವಲ್ಲ ನಡೆನುಡಿಗಳಲ್ಲಿ ಹೀನರಾಗಿರುವವರು ಹೆಚ್ಚಿನ ವರ್ಣದವರಲ್ಲಿ ಹುಟ್ಟಿದ ಮಾತ್ರದಿಂದಲೇ ಅವರು ಶ್ರೇಷ್ಠರೆಂದು ತಿಳಿಯುವುದು ನ್ಯಾಯವಲ್ಲ, ಗುಣ ಶೀಲಾಚಾರಗಳಗಿಗೇನೇ ಮಹತ್ವವನ್ನು ಕೊಡಬೇಕೆ ವಿನಾ ಜನ್ಮಕ್ಕೆ ಮಹತ್ವ ಕೊಡಬಾರದು.

ಕಮಲವು ಕೆಸರಲ್ಲಿ ಹುಟ್ಟಿತೆಂದು ಅದನ್ನು ದೂರೀಕರಿಸಬಹುದೇ? ಬಟ್ಟೆಯಲ್ಲಿ ಕೂರಿ ಹುಟ್ಟಿತೆಂದು ಆದರಿಸಬಹುದೇ? ಶಿವಶರಣರು ಜನ್ಮಕ್ಕೆ ಮಹತ್ವಕೊಡದೆ ಗುಣ, ಶೀಲಾಚಾರಗಳಿಗೇನೇ ಮಹತ್ವಕೊಟ್ಟರು. ಶಿವಭಕ್ತನಾಗುವಾತನು ಒಳ್ಳೆಯ ಗುಣ ಶೀಲಾಚಾರಗಳುಳ್ಳವನಾಗಬೇಕಾಗುವದರಿಂದ ಆತನು ಯಾವ ಕುಲದಲ್ಲಿ ಹುಟ್ಟಿ ಯಾವ ಕಾಯಕವನ್ನು ಮಾಡುವಾತನಾಗಿದ್ದರೂ ಪೂಜ್ಯನೆಂದೇ ಶಿವಶರಣರು ತಿಳಿಯುತ್ತಿದ್ದರು.

ಶ್ರೀ ಮಾಚೀದೇವರು ಶಿವಭಕ್ತರ ಬಟ್ಟೆಗಳನ್ನು ತೊಳೆಯುತ್ತಿದ್ದುದರಿಂದ ಅವರು ಮಡಿವಾಳರೆಂದು ಕರೆಯಲ್ಪಡುತ್ತಿದ್ದರೂ ಶಿವಶರಣರು ಅವರನ್ನು ಕೀಳಾಗಿ ಕಾಣದೆ ಮೇಲಾಗಿಯೇ ಭಾವಿಸಿದ್ದರು. ಶಿವಭಕ್ತರಲ್ಲದವರು ಅವರ ಕಾಯಕವನ್ನು ನೋಡಿ ಅವರು ಕೀಳರೆಂದು ಅಲ್ಲಗಳೆಯುತ್ತಿದ್ದುದನ್ನು ಶ್ರೀ ಬಸವಾದಿ ಶರಣರು ಮೇಲಿನಂತೆ ಕಟುವಾಗಿ ನಿಷೇಧಿಸಿದರು. ಅದರ ಪರಿಣಾಮವಾಗಿ ಜನತೆಯಲ್ಲಿ ಕಾಯಕದ ಪ್ರೇಮಾದರಗಳು ಹೆಚ್ಚಿದವು. ನಮ್ಮ ನಾಡು ಸ್ವಾವಲಂಬಿಯಾಯಿತು. ಇನ್ನೂ ಮೇಲಾದರೂ ಈಗಿನ ಪರಿಸ್ಥಿತಿಗೆ ತಕ್ಕಂತೆ ನಮ್ಮ ನಾಡು ಕಾಯಕದಲ್ಲಿ ಮುಂದುವರಿಯಲಿ.

❖❖

ಅನುಬಂಧ-೧

- ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು
- ಹರ್ಡೇಕರ ಮಂಜಪ್ಪನವರ ಕೃತಿಗಳು
- ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಹರ್ಡೇಕರ ಮಂಜಪ್ಪನವರ ಜೀವನದ ಪ್ರಮುಖ ಘಟನೆಗಳು

೧೮೮೬ : ಫೆಬ್ರುವರಿ ೧೮ ರಂದು ಬನವಾಸಿಯ ಒಂದು ಸಾಮಾನ್ಯ ಮನೆತನದಲ್ಲಿ ಜನನ.

೧೯೦೩ : ಮುಲಕಿ ಪರೀಕ್ಷೆ ತೇರ್ಗಡೆಯಾದುದು.

೧೯೦೩ : ಶಿರಸಿಯ ಕಲಿತ ಶಾಲೆಯಲ್ಲೇ ಅಧ್ಯಾಪಕನಾಗಿ ನೇಮಕವಾದುದು.

೧೯೦೬ : ಎಪ್ರಿಲ್‌ದಲ್ಲಿ ಶಿರಸಿಯಿಂದ ಹಾವೇರಿ, ಹುಬ್ಬಳ್ಳಿ ಮೂಲಕ ಡಾವಣಗೆರೆಗೆ ಪ್ರಯಾಣ.

೧೯೧೦ : ಜುಲೈ ೨೪ ರಂದು ಲಗ್ನವಾಗಬಾರದೆಂದು ನಿರ್ಧರಿಸಿ ೨೫ ರಂದು ಬ್ರಹ್ಮಚರ್ಯ ಜೀವನಕ್ಕೆ ಪೋಷಕವಾದ ಆಹಾರವನ್ನು ತೆಗೆದುಕೊಳ್ಳಲಾರಂಭಿಸಿದುದು.

೧೯೧೧ : ಜೂನ ೨೬ರಂದು ಭಜನಾಸಂಘ ಸ್ಥಾಪನೆ ಮಾಡಿದುದು.

೧೯೧೧ : ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶ್ರಾವಣಮಾಸೋಪನ್ಯಾಸ ಮಾಲೆಯನ್ನು ಸ್ಥಾಪಿಸಿದುದು.

೧೯೧೩ : ಬಸವ ಜಯಂತಿಯನ್ನು ಆಚರಿಸುವ ಸಂಪ್ರದಾಯವನ್ನು ಡಾವಣಗೆರೆಯಲ್ಲಿ ಪ್ರಾರಂಭಿಸಿದುದು.

೧೯೧೪ : ಪುಣೆಯಲ್ಲಿ ಗಣೇಶ ಉತ್ಸವ ಸಂದರ್ಭದಲ್ಲಿ ಲೋಕಮಾನ್ಯ ತಿಲಕರನ್ನು ಸಂದರ್ಶಿಸಿ ಚರ್ಚಿಸಿದುದು ಮತ್ತು ಗೀತಾರಹಸ್ಯವನ್ನು ಕನ್ನಡಕ್ಕೆ ಅನುವಾದಿಸಲು ಅನುಮತಿಯನ್ನು ಕೇಳಿದುದು.

೧೯೧೪ : ಮದ್ರಾಸಿನಲ್ಲಿ ಸೇರಿದ್ದ ಕಾಂಗ್ರೇಸ್ ಅಧಿವೇಶನಕ್ಕೆ ಹೋದುದು.

೧೯೧೪ : ಹಣದ ಕೊರತೆಯಿಂದ ಧನುರ್ಧಾರಿ ಪತ್ರಿಕೆಯನ್ನು ಸ್ಥಗಿತಗೊಳಿಸಿದುದು.

೧೯೧೫ : ಸ್ವಕರ್ತವ್ಯ ಸಿದ್ಧಾಂತ ಎಂಬ ತಮ್ಮ ಮೊದಲ ಕೃತಿಯನ್ನು ರಚಿಸಿ ಬೆಂಗಳೂರಿನ ಒಕ್ಕಲಿಗರ ಪ್ರೆಸ್ಸಿನಲ್ಲಿ ಮುದ್ರಿಸಿದುದು.

೧೯೧೫ : ಬೆಂಗಳೂರಿನಲ್ಲಿ ಗಾಂಧೀಜಿಯವರ ಭಾಷಣ ಕೇಳಿದುದು.

೧೯೧೬ : ಶಿರಸಿಯಲ್ಲಿ ಕೆಲ ದಿವಸ ಇದ್ದಾಗ ಒಂದು ವಾರದಲ್ಲೇ ಬುದ್ದಿಯ ಮಾತು ಎಂಬ ಪುಸ್ತಕ ರಚಿಸಿದುದು.

೧೯೧೭ : ವೀರಶೈವ ತರುಣ ಸಂಘ ಸ್ಥಾಪಿಸಿದುದು.

೧೯೧೭ : ಸೊಲ್ಲಾಪುರದಲ್ಲಿ ಅಪ್ಪಾಸಾಹೇಬ ವಾರದ ಅವರ ಜೀವನಚರಿತ್ರೆಯನ್ನು ಬರೆದು ಮುಗಿಸಿದುದು.

೧೯೧೮ : ಆಧುನಿಕ ಜರ್ಮನಿ ಎಂಬ ಕೃತಿಯನ್ನು ರಚಿಸಿದುದು.

೧೯೧೯ : ಗಾಂಧೀಜಿಯವರ ಜೀವನ ಚರಿತ್ರೆಯನ್ನು ಬರೆದುದು.

೧೯೨೦ : ಅಗಸ್ಟ ೧ ರಂದು ಖಾದಿ ಧರಿಸಲು ಆರಂಭಿಸಿದುದು ಹಾಗೂ ಖಾದಿ ಪ್ರಚಾರವನ್ನು ಮಾಡಿದುದು.

೧೯೨೧ : ರಾಷ್ಟ್ರಜೀವನ ಎಂಬ ಗ್ರಂಥಮಾಲೆಯನ್ನು ಪ್ರಾರಂಭಿಸಿ ಭಾರತೀಯರ ದೇಶಭಕ್ತಿ ಎಂಬ ಕೃತಿಯನ್ನು ಶ್ರೀ ಸ್ವಾಮಿ ರಾಮತೀರ್ಥರವರ ಉಪನ್ಯಾಸಗಳ ನಾಲ್ಕು ಭಾಗಗಳನ್ನು ಪ್ರಕಟಿಸಿದುದು.

೧೯೨೨ : ಗಾಂಧೀ ತತ್ವಗಳಿಗೆ ಬದ್ದರಾಗಿ ಗಾಂಧಿಶಕೆ ಆರಂಭಿಸಿದುದು.

೧೯೨೨ : ಸ್ತ್ರೀ ನೀತಿ ಸಂಗ್ರಹ ಕೃತಿ ಪ್ರಕಟಿಸಿದುದು.

೧೯೨೨ : ಸತ್ಯಾಗ್ರಹ ಧರ್ಮವೆಂಬ ಪುಸ್ತಕದ ಪ್ರಕಟಣೆ ಹಾಗೂ ಹುಬ್ಬಳ್ಳಿಯಲ್ಲಿ ಸತ್ಯಾಗ್ರಹ ಸಮಾಜದ ಸ್ಥಾಪನೆ ಮಾಡಿದುದು.

೧೯೨೩ : ಜನವರಿ ೨೫ ರಂದು ಹರಿಹರದ ಸಮೀಪದಲ್ಲಿ ತುಂಗಭದ್ರಾ ನದಿಯ ತೀರದ ಮೇಲೆ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದುದು.

೧೯೨೩ : ನವೆಂಬರದಲ್ಲಿ ಹಾವೇರಿಯಲ್ಲಿ ನಡೆದ ಧಾರವಾಡ ಜಿಲ್ಲಾ ರಾಷ್ಟ್ರೀಯ ಸಭೆಯ ಅಧ್ಯಕ್ಷ ಭಾಷಣ ಮಾಡಿದುದು.

೧೯೨೩ : ವಿಜಾಪುರದಲ್ಲಿ ಜರುಗಿದ ಪ್ರಾಂತೀಯ ಸಭೆಗೆ ಹೋಗಿ ಶ್ರೀ ರಾಜಗೋಪಾಲಚಾರ್ಯ ಅವರ ಅಧ್ಯಕ್ಷತೆಯಲ್ಲಿ ಭಾಷಣ ಮಾಡಿದುದು.

೧೯೨೩ : ಕರ್ನಾಟಕ ಗಾಂಧಿ ಎಂದು ದೇಶಪಾಂಡೆ ಗಂಗಾಧರರಾಯರಿಂದ ಕರೆಯಿಸಿ ಕೊಂಡುದುದು.

೧೯೨೪ : ಮಾರ್ಚದಲ್ಲಿ ಸಾಬರಮತಿಗೆ ಹೋಗಿ ಗಾಂಧೀಜಿಯವರಲ್ಲಿದ್ದುದು ಹಾಗೂ ಅವರೊಂದಿಗೆ ಅನೇಕ ವಿಷಯಗಳನ್ನು ಚರ್ಚಿಸಿದ್ದು.

೧೯೨೪ : ಬೆಳಗಾವಿ ಕಾಂಗ್ರೆಸ್ ಅಧಿವೇಶನಕ್ಕೆ ಬಸವೇಶ್ವರ ಸೇವಾದಳ ತೆಗೆದುಕೊಂಡು ಹೋದುದು.

೧೯೨೫ : ಮಾರ್ಚ ೨೭ ರಂದು ಮಾತೃವಿಯೋಗವಾದುದು.

೧೯೨೫ : ಶ್ರಾವಣ ಶುದ್ಧ ೬ ರಿಂದ ಭಾದ್ರಪದ ಶುದ್ಧ ೮ ರ ವರೆಗೆ ಇಂಡಿ ತಾಲೂಕಿನ ಬಂಥನಾಳದಲ್ಲಿ ಬಸವಣ್ಣನವರ ವಚನಗಳ ಮೇಲೆ ಒಂದು ತಿಂಗಳ ಕಾಲ ಪ್ರವಚನ ಮಾಡಿದುದು.

೧೯೨೫ : ವಿಜಾಪೂರ ಜಿಲ್ಲೆ ೭ ತಾಲೂಕುಗಳ ೫೫ ಹಳ್ಳಿಗಳ ಸಂಚಾರ ಕೈಕೊಂಡುದುದು.

೧೯೨೬ : ಇಳಕಲ್ಲ ಸಮೀಪದ ಚಿಕ್ಕಕೊಡಗಲಿ ಗವಿಯಲ್ಲಿ ವಾಸ ೧೦೮ ಬಸವಣ್ಣನವರ ವಚನಗಳಿಗೆ ಅರ್ಥ ವಿವರಣೆ ಬರೆದು ಬಸವ ಬೋಧಾಮೃತ ಎಂಬ ಹೆಸರಿನಲ್ಲಿ ಪ್ರಕಟಿಸಿದುದು.

೧೯೨೬ : ವಿಜಾಪೂರ ಜಿಲ್ಲೆಯ ಆಲಮಟ್ಟಿಯಲ್ಲಿ ಬಂದು ನೆಲೆಸಿ, ವೀರಶೈವ ವಿದ್ಯಾಲಯ ಸ್ಥಾಪಿಸಿದುದು.

೧೯೨೮ : ಅಗಸ್ಟ ೨೮ ರಂದು ಖಾದಿ ವಿಜಯ ಎಂಬ ಮಾಸ ಪತ್ರಿಕೆಯನ್ನು ರಂಗನಾಥ ದಿವಾಕರರ ಜೊತೆಗೆ ಪ್ರಾರಂಭಿಸಿದುದು.

೧೯೨೯ : ಅಕ್ಟೋಬರ್ ೧೩ ರಂದು ಆಲಮಟ್ಟಿಯಲ್ಲಿ ಮುದ್ರಣಾಲಯವನ್ನು ಸ್ಥಾಪಿಸಿದುದು.

೧೯೩೦ : ಫೆಬ್ರವರಿ ೧೩ ರಂದು ಉದ್ಯೋಗ ಮಾಸಪತ್ರಿಕೆಯನ್ನು ಆರಂಭಿಸಿದುದು ಹಾಗೂ ಮಕ್ಕಳ ಸಾಹಿತ್ಯ ಮಾಲೆಯನ್ನು ಆರಂಭಿಸಿದುದು.

೧೯೩೧ : ಆಗಸ್ಟ ೧೭ ರಂದು ಶರಣ ಸಂದೇಶ ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದುದು.

೧೯೩೪ : ಗಾಂಧೀಜಿಯವರು ಮುಂಬಯಿ ಕರ್ನಾಟಕ ಸಂಚಾರ ಕೈಕೊಂಡಾಗ ಅವರೊಂದಿಗೆ ಸಂಚರಿಸಿ, ಸತ್ಯದ ವಿನಾ ಬೇರೆ ಧರ್ಮವಿಲ್ಲ ಎಂಬ ಸಂದೇಶವನ್ನು ಗಾಂಧೀಜಿಯವರ ಹಸ್ತಾಕ್ಷರದೊಂದಿಗೆ ಪಡೆದು ಶರಣಸಂದೇಶದಲ್ಲಿ ಪ್ರಕಟಿಸಿದುದು.

೧೯೩೫ : ಸ್ತ್ರೀ ಸಮಾಜದಲ್ಲಿ ಜಾಗೃತಿಯಾಗಲೆಂದು ಅಕ್ಕಮಹಾದೇವಿ ಜಯಂತಿಯನ್ನು ಜಾರಿಯಲ್ಲಿ ತಂದುದು.

೧೯೩೬ : ನನ್ನ ಕಳೆದ ಮೂವತ್ತು ವರುಷಗಳ ಕಾಣಿಕೆ ಎಂಬ ಆತ್ಮಚರಿತ್ರೆಯನ್ನು ಪ್ರಕಟಿಸಿದುದು.

೧೯೪೧ : ಸುಬೋಧಸಾರ ಗ್ರಂಥ ಪ್ರಕಟಗೊಳಿಸಿದುದು.

೧೯೪೩ : ಯುದ್ಧಕಾಲದಲ್ಲಿ ಕಾಗದ ದೊರೆಯದೆ ಇದ್ದಾಗ ಕೈಕಾಗದವನ್ನೇ ತಯಾರಿಸಿ ಶರಣ ಸಂದೇಶ ಪತ್ರಿಕೆಯ ಪ್ರಕಟಣೆಯನ್ನು ಮುಂದುವರೆಸಿದುದು.

೧೯೪೫ : ಶ್ರೀ ಗುರು ಸಂಗನಬಸವ ಸ್ತುತಿ ಎಂಬ ೬೫ ನುಡಿಗಳ ಪದ್ಯಕೃತಿಯನ್ನು ಬರೆದು ಪ್ರಕಟಿಸಿದುದು.

೧೯೪೬ : ೬೧ ನೆಯ ಜನ್ಮದಿನೋತ್ಸವ ಮತ್ತು ಎಚ್ಚೆತ್ತ ಹಿಂದುಸ್ಥಾನದ ಪ್ರಕಟಣೆ ನಡೆದುದು.

೧೯೪೬ : ದೇಹ ಸ್ಥಿತಿಯಲ್ಲಿ ಅಸ್ವಸ್ಥತೆ ಕಾಣಿಸಿಕೊಂಡಿದುದು.

೧೯೪೭ : ಜನವರಿ ೩ ರಂದು ನಿಧನರಾದರು.

❖❖

ಹರ್ಡೇಕರ ಮಂಜಪ್ಪನವರ ಕೃತಿಗಳು

೧. ಅಕ್ಕನ ಉಪದೇಶ (೧೯೨೯)

೨. ಅಣ್ಣನ ಕ್ರಾಂತಿ

೩. ಅಣ್ಣನವರ ಅರ್ಪಣಯೋಗ

೪. ಅಪ್ಪಾಸಾಹೇಬ ವಾರದ (೧೯೦೯)

೫. ಅರವತ್ತುಮೂರು ಪುರಾತನರ ಚರಿತ್ರೆ (೧೯೩೧)

೬. ಅಹಿಂಸೆ (೧೯೨೩)

೭ ಆದಿಜನ ಸುಧಾರಣೆ (೧೯೩೪)

೮. ಆಧುನಿಕ ಜರ್ಮನಿ (೧೯೧೮)

೯. ಆರೋಗ್ಯ ಜೀವನ (೧೯೨೦)

೧೦. ಋಗ್ವೇದ ಸಾರ (ಅಪ್ರಕಟಿತ)

೧೧. ಎಚ್ಚೆತ್ತ ಹಿಂದುಸ್ಥಾನ (೧೯೪೬)

೧೨. ಏಕಲವ್ಯ (೧೯೨೯)

೧೩. ಕಚದೇವನ ಕಥೆ (೧೯೨೯)

೧೪. ಕನ್ನಡ ಒಂದನೆಯ ಪುಸ್ತಕದ ಶಬ್ದಾರ್ಥ (೧೯೦೫)

೧೫. ಕಾಯಕವೇ ಕೈಲಾಸ (೧೯೩೧)

೧೬. ಕೈ ಅಪ್ಪಾಸಾಹೇಬ ವಾರದ (೧೯೧೭)

೧೭. ಕೇರ್ ಹಾರ್ಡಿಯವರ ಭಾರತ ಪರ್ಯಟನ (೧೯೨೩)

೧೮. ಗಾಂಧಿ ಸಂದೇಶ

೧೯. ಗೃಹ ಶಿಕ್ಷಣ

೨೦. ಗೋ ಸೇವೆ (೧೯೪೧)

೨೧. ಖಾದಿ (೧೯೨೩)

೨೨. ಖಾದಿ ಶಾಸ್ತ್ರ (೧೯೩೩)

೨೩. ಚನ್ನಬಸವಣ್ಣನವರ ಉಪದೇಶ

೨೪. ಜನಸೇವಕನ ವಚನಗಳು

೨೫. ಜಾತಿವಾದದ ವಿಮರ್ಶೆ

೨೬. ಜಾತ್ರೆಗಳ ಸುಧಾರಣೆ (೧೯೪೧)

೨೭. ತರುಣರ ಕೈಪಿಡಿ

೨೮. ದಾಂಪತ್ಯ ಜೀವನ (೧೯೩೧)

೨೯. ದಾಂಪತ್ಯ ಧರ್ಮ (೧೯೩೧)

೩೦. ದೀನಬಂಧು ಆ್ಯಂಡ್ರೂಸ್

೩೧. ದೇವಯಾನಿ (೧೯೨೯)

೩೨. ನನ್ನ ಕಳೆದ ಮೂವತ್ತು ವರ್ಷಗಳ ಕಾಣಿಕೆ (೧೯೩೬)

೩೩. ನಿಜಗುಣರಾಧ್ಯರ ಸರ್ಪಭೂಷಣ ಶಿವಯೋಗಿಗಳ ಪದಗಳು (೧೯೧೧)

೩೪. ಪತಿತೋದ್ಧಾರ (೧೯೧೮)

೩೫. ಪ್ರಭುದೇವರ ಕಥೆ (೧೯೨೯)

೩೬. ಪ್ರಮಥಾಚಾರ ದೀಪಿಕೆ (೧೯೩೫)

೩೭. ಬಸವಚರಿತ್ರೆ (೧೯೨೪)

೩೮. ಬಸವಣ್ಣನವರ ಚರಿತ್ರೆ (೧೯೨೯)

೩೯. ಬಸವಣ್ಣನವರ ನೈತಿಕ ವಚನಗಳು (ಸಂಗ್ರಹ) (೧೯೧೩)

೪೦. ಬಸವ ಬೋಧಾಮೃತ (೧೯೨೬)

೪೧. ಬಸವ ಭಕ್ತಿ

೪೨. ಬಸವ ಸಂದೇಶ (೧೯೩೩)

೪೩. ಬಸವಣ್ಣನವರ ನೈತಿಕ ವಚನಗಳು

೪೪. ಬ್ರಹ್ಮಚರ್ಯೆ (೧೯೨೩)

೪೫. ಬುದ್ಧಿಯ ಮಾತು (೧೯೧೬)

೪೬. ಭಕ್ತಿಯ ಬೆಳಕು (೧೯೨೪)

೪೭. ಭಗವಾನ ಬುದ್ಧನ ಚರಿತ್ರೆ (೧೯೨೩)

೪೮. ಭಾಗ್ಯದ ಭೀಗದ ಕೈ

೪೯. ಭಾರತೀಯರ ಧೇಶಭಕ್ತಿ (೧೯೨೧)

೫೦. ಮಹಾತ್ಮಾಗಾಂಧೀಜಿಯವರ ಚರಿತ್ರೆ (೧೯೧೯)

೫೧. ಮಹಾತ್ಮಾಗಾಂಧೀ ಪ್ರಣೀತ ಸತ್ಯಾಗ್ರಹ ಧರ್ಮ (೧೯೨೨)

೫೨. ಮಹಾದೇವಿಯಕ್ಕನ ಚರಿತ್ರೆ (೧೯೨೯)

೫೩. ಮಹಾನುಭಾವರಾದ ಬಸವಣ್ಣನವರ ಉಪಮೆಗಳು

೫೪. ಲಜಪತರಾಯರ ಚರಿತ್ರೆ (೧೯೨೯)

೫೫. ರಾಷ್ಟ್ರಗೀತೆ (ಸಂಪಾದನೆ) (೧೯೪೧)

೫೬. ಲಿಂಗಪೂಜೆಯ ಐತಿಹಾಸಿಕ ವಿವೇಚನೆ

೫೭. ಲಿಂಗರಾಜರ ಚರಿತ್ರೆ

೫೮. ಲಿಂಗವಂತರ ಪ್ರಾಚೀನತೆ

೫೯. ವಚನಕಾರರ ಸಮಾಜ ರಚನೆ

೬೦. ವಿಜಯವಾಣಿ

೬೧. ವಿದ್ಯಾಲಯ ಭಜನಾವಳಿ (೧೯೨೯)

೬೨. ವೀರಶೈವ ಏಕೀಕರಣ (೧೯೩೩)

೬೩. ವೀರಶೈವ ಮತತತ್ವ

೬೪. ವೀರಶೈವ ಮತಬೋಧೆ

೬೫. ವೀರಶೈವಸಮಾಜ ಸುಧಾರಣೆ (೧೯೨೧)

೬೬. ಶರಣ ಬಸವೇಶ್ವರ ಚರಿತ್ರೆ (೧೯೨೯)

೬೭. ಶ್ರೀ ಸ್ವಾಮೀ ರಾಮತೀರ್ಥರವರ ಜೀವನ ಚರಿತ್ರೆ
ಹಾಗೂ ಉಪನ್ಯಾಸಗಳು (೧೯೨೧)

೬೮. ಶುದ್ಧಿ ಮತ್ತು ಸಂಘಟನೆ (೧೯೩೮)

೬೯. ಸಂಗನ ಬಸವನ ಸ್ತುತಿ (೧೯೪೫)

೭೦. ಸತ್ಯಾಗ್ರಹ (೧೯೨೩)

೭೧. ಸತ್ಯಾಗ್ರಹ ಧರ್ಮ (೧೯೨೨)

೭೨. ಸತ್ಯಾಗ್ರಹ ಪದ್ಯಾವಳಿ (೧೯೨೩)

೭೩. ಸತ್ಯಾರ್ಥ ಪ್ರಕಾಶಿಕೆ (ಅಪ್ರಕಟಿತ)

೭೪. ಸಿದ್ಧರಾಮ ಶಿವಯೋಗಿಗಳ ಉಪದೇಶ

೭೫. ಸುಬೋಧ ಸಾರ (ಸಂಗ್ರಹ) (೧೯೪೧)

೭೬. ಸ್ವ ಕರ್ತವ್ಯ ಸಿದ್ಧಾಂತ (೧೯೧೫)

೭೭. ಸ್ತ್ರೀನೀತಿ ಸಂಗ್ರಹ (೧೯೨೨)

೭೮. ಹಳ್ಳಿಯ ಸಂಚಾರ (ಅಪ್ರಕಟಿತ)

೭೯. ಹಿಂದುಗಳ ಕೈಗನ್ನಡಿ

೮೦. ಹಿಂದುತ್ವ

೮೧. ಹಿಂದು ಜಾಗೃತಿ ಅವಶ್ಯಕವೆ

೮೨. ಹಿಂದೂ ಸಂಘಟನೆ

ವಾರ್ಷಿಕ ಸಂಚಿಕೆಗಳು :

೧. ಆರ್ಯತೇಜ (೧೯೨೭)

೨. ಶಿಕ್ಷಣ (೧೯೨೮)

೩. ವ್ಯಾಪಾರ ಶಿಕ್ಷಕ (೧೯೩೩)

❖❖

ಹರ್ಡೇಕರ ಮಂಜಪ್ಪನವರನ್ನು ಕುರಿತ ಕೃತಿಗಳು

ಕನ್ನಡ ಕೃತಿಗಳು

೧. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು–ಡಾ. ಶಿವಾನಂದ ಗುಬ್ಬಣ್ಣವರ. ಪ್ರ ವೀರಶೈವ ವಿದ್ಯಾಲಯ ಸಂಘ, ಆಲಮಟ್ಟಿ, ಪುಟ, viii+೨೭

೨. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ–ಸಂ. ಡಾ. ಎಂ. ಎಂ. ಕಲಬುರ್ಗಿ. ಪ್ರ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು. ೧೯೮೯. ಪುಟ x+೪೪೨.

೩. ಕೈ. ವಾ. ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ ಪುಣ್ಯಸ್ಮರಣೆ–ವಿವಿಧ ಲೇಖಕರು. ಪ್ರ. ವಿಶ್ವನಾಥ ವಾಚನಾಲಯ ಆಡೂರು. ೧೯೬೭. ಪುಟ, ೮+೬೨.

೪. ನಿರಂಜನ ಶರಣ ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪನವರು ಸಿದ್ದಣ್ಣ ಲಂಗೋಟಿ. ಪ್ರ. ಧರ್ಮಪ್ರಸಾರಕ ಮಂಡಲ ಇಲಕಲ್. ೧೯೮೬. ಪುಟ. ೪೮.

೫. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಗ. ಸ. ಹಾಲಪ್ಪ. ಪ್ರ. ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥ ಮಾಲೆ, ಧಾರವಾಡ. ೧೯೬೬. ಪುಟ, vi+೧೩೪೮.

೬. ರಾಷ್ಟ್ರಧರ್ಮನಿಷ್ಠ ಹರ್ಡೇಕರ ಮಂಜಪ್ಪ ಡಾ. ಶಿವಾನಂದ ಗುಬ್ಬಣ್ಣವರ. ಪ್ರ. ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ ಬೆಂಗಳೂರು. ೧೯೭೭ ಪುಟ, vii+೧೨೮.

೭. ಲಿಂಗೈಕ್ಯರಾದ ಶ್ರೀ ಹರ್ಡೇಕರ ಮಂಜಪ್ಪನವರ ಸ್ಮಾರಕ ಗ್ರಂಥ–ಶಿ. ಚೆ. ನಂದಿಮಠ ಮತ್ತು ಇತರರು. ಪ್ರ. ಬಸವೇಶ್ವರ ಕಾಲೇಜು ಬಾಗಲಕೋಟ ೧೯೫೧. ಪುಟ, vi+೬೩+೧೨೩.

೮. ಸತತೋದ್ಯೋಗಿ ಮರೆಯದ ಕರುನಾಡ ಗಾಂಧಿ ಹರ್ಡೇಕರ ತೇಜಃಪುಂಜ ಮಂಜಣ್ಣ– ಹ. ರಂ. ಕುಲಕರ್ಣಿ. ಪ್ರ. ಕುಲಕರ್ಣಿ ಪ್ರಕಾಶನ ಶಾಸ್ತ್ರೀನಗರ ವಿಜಾಪುರ. ೧೯೯೩ ಪುಟ, vi+೮೬.

೯. ಹರ್ಡೇಕರ ಮಂಜಪ್ಪನವರು ಹಾಗೂ ಅವರ ಕೃತಿಗಳು–ಜಿ. ಎಸ್. ಹಾಲಪ್ಪ. ಪ್ರ, ಕ. ವಿ. ವಿ. ಧಾರವಾಡ. ೧೯೭೦. ಪುಟ, viii+೭೧

೧೦. ಹರ್ಡೇಕರ ಮಂಜಪ್ಪ– ಎಸ್. ಎಸ್. ಭೂಸರೆಡ್ಡಿ. ಪ್ರ. ಭಾರತ ಭಾರತಿ ಪುಸ್ತಕ ಸಂಪದ ಬೆಂಗಳೂರು. ೧೯೭೫, ಪುಟ iv+೪೮.

೧೧. ಹರ್ಡೇಕರ ಮಂಜಪ್ಪನವರು ಸಿದ್ದಯ್ಯ ಪುರಾಣಿಕ. ಪ್ರ. ವೀರಶೈವ ಅಧ್ಯಯನ ಸಂಸ್ಥೆ, ಗದಗ ೧೯೭೮. ೧೯೮೦ ಪುಟ, vii+೨೪.

೧೨. ಹರ್ಡೇಕರ ಮಂಜಪ್ಪನವರು ಜೀವನ ಹಾಗೂ ವ್ಯಕ್ತಿತ್ವ ವಿವಿಧ ಲೇಖಕರು. ಪ್ರ. ಕ. ವಿ. ವಿ. ಧಾರವಾಡ. ೧೯೮೦ ಪುಟ, v+೧೨೬.

೧೩. ಹರ್ಡೇಕರ ಮಂಜಪ್ಪನವರ ಆತ್ಮ ಚರಿತ್ರೆ–ಸಂ. ಜಿ. ಎಸ್. ಹಾಲಪ್ಪ. ಪ್ರ. ಹರ್ಡೇಕರ ಮಂಜಪ್ಪ ಸ್ಮಾರಕ ಗ್ರಂಥಮಾಲೆ ಧಾರವಾಡ. ೧೯೬೬ ಪುಟ, iii+೯೨.

೧೪. ಹರ್ಡೇಕರ ಮಂಜಪ್ಪನವರು–ಸಂ. ಪ್ರಾ. ಎ. ಬಿ. ಹಿರೇಮಠ, ಆರ್. ಎಲ್. ಪೋಲೀಸ ಪಾಟೀಲ. ಪ್ರ. ಶ್ರೀ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನಮಠ ಮುಂಡರಗಿ. ೧೯೮೯, ಪುಟ, viii+೮೭.

೧೫. ಹರ್ಡೇಕರ ಮಂಜಪ್ಪನವರು ಡಾ. ಶಿವಾನಂದ ಗುಬ್ಬಣ್ಣವರ. ಪ್ರ. ಐ. ಬಿ. ಎಚ್. ಪ್ರಕಾಶನ ಬೆಂಗಳೂರು ೧೯೭೯ ಪುಟ, ೪೨

೧೬. ಹರ್ಡೇಕರ ಮಂಜಪ್ಪ – ಡಾ. ಎಸ್. ಎಸ್. ಕೋತಿನ. ಪ್ರ. ಸಾಹಿತ್ಯ ಅಕಾಡೆಮಿ ಹೊಸದಿಲ್ಲಿ. ೧೯೯೩. ಪುಟ ೭೩.

೧೭. ಹರ್ಡೇಕರ ಮಂಜಪ್ಪ (ನಾಟಕ) ಡಾ. ಎಸ್. ಎಸ್. ಕೋತಿನ. ಅಪರ್ಣಾ ಪ್ರಕಾಶನ, ಧಾರವಾಡ, ೧೯೯೫ ಪುಟ xiii+೮೪.

೧೮. ಕರ್ನಾಟಕ ಗಾಂಧಿ–ಡಾ ಮಲ್ಲಿಕಾರ್ಜುನ ಸಂ. ಮೇತ್ರಿ. ಸಂಗಮ ಪ್ರಕಾಶನ, ವಿಜಾಪುರ. ೨೦೦೨, ಪುಟ xvi+೨೭೮.

೧೯. ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ ಮಂಜಪ್ಪ, ಸಂಪುಟ–೨, ಸಂಪಾದಕರು ಡಾ. ಎಂ.ಎಂ. ಕಲಬುರ್ಗಿ, ಡಾ ಮಲ್ಲಿಕಾರ್ಜುನ ಸಂ. ಮೇತ್ರಿ. ಪ್ರ. ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ–೨೦೦೬, ಪುಟ xvi+೧೦೭೪.

ಇಂಗ್ಲೀಷ ಕೃತಿಗಳು

1. Political Ideas of Hardekar Manjappa - Dr. Shivanand Gubbannavar. Pub. Karnatak University, Dharwad. 1977 Page, xxiv+222.

❖❖

ಅನುಬಂಧ : ೨

ಮಂಜಪ್ಪನವರ ಸ್ಮಾರಕದ ಪ್ರಮುಖ ಛಾಯಾಚಿತ್ರಗಳು
ಛಾಯಾಗ್ರಹಣ : ಡಾ. ಎಚ್. ಚಂದ್ರಶೇಖರ


ಮಂಜಪ್ಪನವರ ಸ್ಮಾರಕದ ಪ್ರಮುಖ ಛಾಯಾಚಿತ್ರಗಳು



ಬನವಾಸಿಯಲ್ಲಿ ಹರ್ಡೇಕರ ಮಂಜಪ್ಪನವರು ಹುಟ್ಟಿದ ಮನೆಯ ಮುಂದೆ ನಿಂತಿರುವವರು ಅವರ ಬಂಧು ವರ್ಗಕ್ಕೆ ಸೇರಿದವರೂ, ಗೆಸಿಟಿಯರ್ ಇಲಾಖೆಯ ಮುಖ್ಯಸ್ಥರೂ. ಸುಪ್ರಸಿದ್ಧ ಇತಿಹಾಸಜ್ಞರಾಗಿದ್ದ ದಿವಂಗತ ಅಭಿಶಂಕರ್ ಅವರು. ೧೯೬೭ರ ನವಂಬರ್ ೧೧ ರಂದು ತೆಗೆದ ಚಿತ್ರ.




ದಿನಾಂಕ : ೧೪-೧೨-೧೯೬೭ರಂದು ಹರ್ಡೇಕರ ಮಂಜಪ್ಪನವರ ಸಮಾಧಿ ಕೋಣೆಯ ಮುಂದೆ ಕಂಡನೋಟ.



ಸಮಾಧಿಯ ಮೇಲೆ ಮುಕ್ಕಾದ ಮಂಜಪ್ಪನವರ ಮೂರ್ತಿ
(೧೩-೧೨-೧೯೯೬)



ಹರ್ಡೇಕರ ಮಂಜಪ್ಪನವರ ಆಶ್ರಮದ ಪೂಜಾ ಗೃಹ(೧೪-೧೨-೧೯೯೬)



೨೮–೦೨–೧೯೬೮ ರಂದು ಮಂಜಪ್ಪನವರ ಸಮಾಧಿ ತೆರೆದ ನಂತರ ಸಿಕ್ಕ ಅವರ ದೇಹದ ಅಸ್ಥಿಗಳು ಮತ್ತು ಗದುಗಿನ ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಪಾದಪೂಜೆ.




ಗದುಗಿನ ಡಾ. ತೋಂಟದಾರ್ಯ ಸಿದ್ಧಲಿಂಗ ಮಹಾಸ್ವಾಮಿಗಳ ಎಡ ಕರಸ್ಥಳದಲ್ಲಿ ಪೀಠಸ್ಥವಾಗಿರುವ ಮಂಜಪ್ಪನವರ ಇಷ್ಟಲಿಂಗ(೨೮–೦೨–೧೯೬೮)



ಮಂಜಪ್ಪನವರ ಅಸ್ಥಿಗಳನ್ನು ಹೊಸ ಸಮಾಧಿಗೆ
ಕೊಂಡೊಯ್ಯುತ್ತಿರುವ ಮೆರವಣಿಗೆಯ ನೋಟ(೨೮-೦೨-೧೯೯೮)



ಗದುಗಿನ ಶ್ರೀಗಳು ಹಾಗೂ ಇಲಕಲ್ಲಿನ ಶ್ರೀ ಮಹಾಂತ ಶಿವಯೋಗಿಗಳು
ಇತರ ಮಠಾಧೀಶ್ವರರು ಮತ್ತು ಸ್ಥಳೀಯ ಧುರೀಣರು(೨೮-೦೨-೧೯೯೮)



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ.ಎಂ.ಎಂ.ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಮಾಜಿ ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359